Reg. No. B. 1270. Monday, 5-1-1948.

ಕಾನಡಾವೃತ್ತ

ವರ್ಷ ೪೦.] THE KANARA NEWS. [ಸಂಚಿಕೆ ೨೭.

ಕುಮಟಾ:- ಸೋಮವಾರ, ತಾ. ೫-೧-೧೯೪೮

[illegible]

ಸ್ಥಳಿಕ ವಿಷಯಗಳು.

(ಸ್ಥಳವಂಶಕನು ಬರೆದುದು.)

...ರೆಯುರೊಬ್ಬರು ಈ ಕೆಳಗಿನ ಉದಾಹರಣೆಯನ್ನು ...ಂದ್ದಾರೆ. ಅದಕ್ಕೆ ಅವರು "Fools rush in ...ere angels fear to tread." (ದೇವತೆಗಳು ...ಗಲು ಅಂಜುವಲ್ಲಿ ಮೂರ್ಖರು ನುಗ್ಗಿ ಹೋಗುತ್ತಾರೆ.) ...ಶಲಿ-ಬರಹವನ್ನೂ ಕೊಟ್ಟಿದ್ದಾರೆ.

ಎರಡನೆಯದಾಗಿ ಭಾರತ ಸರ್ಕಾರದ ನಮ್ಮ ಪ್ರಧಾನ ...ಂತ್ರಿಗಳ ಹೇಳಿಕೆಯ ಕಡೆಗೆ ನೋಡಿದಲ್ಲಿ ನಾನು ...ಂದೊನ್ನು ನಮ್ಮ ವಿಶಾಲ ಕರ್ನಾಟಕದ ಪತ್ರಿಕೆಯಲ್ಲಿ ...ಿದಂತೆ ನಮ್ಮ ಏಕೀಕರಣದ ...-ನೋತ್ರ, ...ದುಕು. ಬಾಳು ನಮ್ಮನ್ನೇ ಕೂಡಿದೆಯೆಂದು ಮತ್ತೊ... ...ಒತ್ತಿ ಹೇಳುತ್ತೇನೆ. ಪ್ರಧಾನ ಮಂತ್ರಿಗಳಾದ ...ನವರನ್ನಾಗಲಿ, ಉಪ-ಪ್ರಧಾನ ಮಂತ್ರಿಗಳಾದ ...ರನ್ನಾಗಲಿ ಏಕೀಕರಣವು ಅಂಟಿಕೊಂಡು ...ವದಿಲ್ಲ. ಅವರ ಮುಖ ನೋಡಿ ಭಜನೆ ಮಾಡುವ ... ಈಗಾಗಲೇ ಹೋಗಿ ಬಿಟ್ಟಿದೆ. ಕಾಳಿದಾಸನು ...ಿದಂತೆ "ಕ್ರಿಯಾ ಸಿದ್ಧಿಃ ಸತ್ವೇ ಭವತಿ ನೋಪ...

[illegible]

ESTD: 1931.

The Agricultural & Industrial Bank, Ltd.

(Incorporated in British India; Liability of Members Limited.)

Head Office: COONDAPOOR.

Authorised Capital	...	Rs. 25,00,000-0-0.
Issued Capital	...	„ 11,61,850-0-0.
Paid-up Capital & Reserves	„	8,48,256-2-0.

SAVINGS BANK ACCOUNTS are opened with the minimum amounts and interest allowed at 2%.

CURRENT ACCOUNTS are opened. Interest allowed at 1%.

SEASON DEPOSITS of 3 and 6 months are accepted.

For Terms, please apply to Head Office, or to our nearest Branch.

"Laxmi Nivas" Buildings, COONDAPOOR, 1-12-1947.

K. VAMAN SHENAI, CHAIRMAN.

ಗಳೂ ಮುಂಬಯಿಯಲ್ಲಿ ಕೂಡಿದಾಗ ಯಾವದೇ ನಿರ್ಣಯವಾಗಿದ್ದಿಲ್ಲ ನಡುವೆ ಹಿಂದುಸ್ಥಾನದ ರಾಜ್ಯಘಟನೆಯ ವಿಚಾರ ನಡೆದಿರುವದರಿಂದ ಈ ವಿಚಾರಕ್ಕೆ ತಡೆಬಿದ್ದಿದೆ ಹಿಂದುಸ್ಥಾನ ಸರಕಾರವು ಬಂದರ-ಶಾಸ್ತ್ರಜ್ಞರದೊಂದು ಮಂಡಳ ನೇಮಿಸಲಿದೆ ಭಟಕಳ ಬಂದರಕ್ಕೆ ಮೈಸೂರ ಸೀಮೆ ತೀರ ಸಮೀಪವಿರುವದರಿಂದ, ಮೈಸೂರ ಸಂಸ್ಥಾನದಿಂದ ವರ್ಷ ಒಟ್ಟಿಗೆ ೧ ಲಕ್ಷ ಟನ್ನ ಭಾರದ ಸರಕುಗಳು ಇತ್ತಕಡೆ ಬರಬಹುದೆಂದು ಎಣಿಸಲ್ಪಟ್ಟಿದೆ ಮಾರ್ಮಗೋವಾ ಮಾರ್ಗವಾಗಿ ಹೋಗುವ ೧ ಲಕ್ಷ ಟನ್ನಿನ ವ್ಯಾಪಾರವು ಭಟಕಳ ಬಂದರದ ಮುಖಾಂತರ ನಡೆಯಬಹುದು ಭಟಕಳ ಬಂದರ ಕಟ್ಟಲಿಕ್ಕೆ ಸಾಧಾರಣ ೧ ಕೋಟಿ ೪೪ ಲಕ್ಷ ರೂ ತಗಲುವದೆಂದು ಎಣಿಸಲಾಗಿದೆ ತಾಳಗುಪ್ಪೆಯಿಂದ ಭಟಕಳ ಬಂದರ ೪೯ ಮೈಲು ಅಂತರದಲ್ಲಿಯದು ಅಲ್ಲಿ ಉಗಿಬಂಡಿ ಕಟ್ಟಿಸಲು ೧ ಕೋಟಿ ೧೦ ಲಕ್ಷ ರೂ ತಗಲುವದು ಹೀಗೆ ಭಟಕಳ ಬಂದರ ಕಟ್ಟಲಿಕ್ಕೂ ಉಗಿಬಂಡಿ ಹಾಕಲಿಕ್ಕೂ ೨॥ ಕೋಟಿ ರೂ ತಗಲುವದೆಂದು ಹಿಂದುಸ್ಥಾನ ಸರಕಾರವು ಲೆಕ್ಕ ಮಾಡಿಟ್ಟಿದೆ ನಮ್ಮ ಜಿಲ್ಲೆ ತೀರ ಹಿಂದುಳಿದಿದ್ದು, ಅದನ್ನು ಅಭಿವೃದ್ಧಿಗೊಳಿಸುವ ಹೊಣೆ ಮುಂಬಯಿ ಸರಕಾರದ ಮೇಲೆ ಉಂಟು ಮುಂಬಯಿ ಸರಕಾರವು ಬಿಗಿ ಹಿಡಿದು ಹಿಂದುಸ್ಥಾನ ಸರಕಾರವು ಬಂದರ ರಚನೆಗಾಗಿ ಭಟಕಳವನ್ನೇ ಆರಿಸುವಂತೆ ಯತ್ನಿಸತಕ್ಕದ್ದು

***

ಶಾಲಿನ ಸಾಗುವಳಿಯು ಒಕ್ಕಲತನವಿದ್ದಲ್ಲಿ ಒಡೆಯರ ಪಾಲು ಬೆಳೆಯ ರೂಪದಿಂದ ಮುಟ್ಟಿಸುವ ಬದಲಿಗೆ ಹಣದ ರೂಪದಿಂದ ತಲ್ಪಿಸುವ ಹೊಸ ಕ್ರಮವನ್ನು ಮುಂಬಯಿ ಸರಕಾರವು ಜಾರಿಯಲ್ಲಿ ತರಬಯಸುತ್ತದೆ ಜೀನಸುಗಳ ಮಹರ್ಗತೆ ನೀಗಿಸುವದಕ್ಕಾಗಿ ದುಡ್ಡಿನ ವ್ಯವಹಾರವನ್ನು ಕಡಿಮೆ ಮಾಡಿಕೊಳ್ಳಬೇಕೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯವುಂಟು ಪ್ರಾಚೀನ ಕಾಲದಲ್ಲಿ ಜೀನಸುಗಳ ವಿನಿಮಯದಿಂದಲೇ ಜನರ ವ್ಯವಹಾರ ನಡೆಯುತ್ತಿತ್ತು ಅರಸರು ಲಕ್ಷಾವಧಿ ಗೋವುಗಳನ್ನು ಕಾಪಾಡುತ್ತಿದ್ದರು ಬೀದರಶಾಹಿಯ ಕಾಲದಲ್ಲಿ ಕಂದಾಯವನ್ನು ಕಾಳಿನ ರೂಪದಿಂದಲೇ ಸಂಗ್ರಹಿಸುವ ಕ್ರಮವಿತ್ತೆಂಬುದು ದಾಮಾಜಿಪಂತರ ಕಥೆಯಿಂದ ತಿಳಿಯುತ್ತದೆ ಈಗ ಹಳ್ಳಿಗಳಲ್ಲಿ ಸಾಮಾನ್ಯವಾಗಿ, ದುಡ್ಡಿನ ಮಧ್ಯಸ್ಥಿಕೆಯಿಲ್ಲದೆ, ಅಕ್ಕಿ ಭತ್ತವನ್ನು ಕೊಟ್ಟು ಪ್ರಪಂಚಕ್ಕೆ ಅವಶ್ಯವುಳ್ಳ ಬೇರೆ ಜೀನಸುಗಳನ್ನು ಪೂರೈಸಿಕೊಳ್ಳುವ ರೂಢಿಯುಂಟು ಜನರು ಸ್ವಯಂಪೂರ್ಣತೆಗಾಗಿ ಪ್ರಯತ್ನಪಡಬೇಕೆಂದೂ, ಅದೇ ನಿಜವಾದ ಸ್ವಾತಂತ್ರ್ಯದ ದಾರಿಯೆಂದೂ ಶ್ರೀ ಕುಮಾರಪ್ಪನವರು "ಹರಿಜನ" ಪತ್ರಿಕೆಯಲ್ಲಿ ಬರೆದು, ದುಡ್ಡಿನ ಆಶೆಯನ್ನು ಕಡಿಮೆ ಮಾಡಲು ಜನಾಂಗಕ್ಕೆ ಸಲಹೆಯನ್ನು ಕೊಟ್ಟಿದ್ದಾರೆ ಸರಕಾರವು ಭೂಕಂದಾಯದ ಎತ್ತುವಳಿಯನ್ನು ಕಾಳಿನ ರೂಪದಿಂದಲೇ ನಡೆಸಬೇಕಾಗಿಯೂ ಅವರು ಅಭಿಪ್ರಾಯ ಕೊಟ್ಟಿದ್ದಾರೆ ಒಕ್ಕಲಿಗರು ಒಡೆಯರಿಗೆ ಕಾಳನ್ನು ಕೊಡಬಾರದೆಂದೂ, ಒಡೆಯರು ಕಾಳನ್ನು ಪಡೆದರೆ ಅವರಿಗೆ ಶಿಕ್ಷೆಯಾಗುವದೆಂದೂ ಒಕ್ಕಲತನದ ಕಾನೂನಿನಲ್ಲಿ ಹೇಳಲ್ಪಟ್ಟಿದೆ ' ಇದರಲ್ಲಿಯ ನೀತಿಯು ಮತ್ತು ಅರ್ಥಶಾಸ್ತ್ರದ ತತ್ವವೆಂಬುದು ಒಕ್ಕಲತನದ ಕಾನೂನು ರಚಿಸಿದ ಪಂಡಿತರೇ ಬಲ್ಲರು !!

***

ಒಡೆಯರ ಪಾಲಿನ ಬೆಳೆಯ ಬೆಲೆ ನಿರ್ಣಯಿಸುವ ಕ್ರಮ ಎಂದರೆ ಬಹಳ ಸಂಕೀರ್ಣವುಂಟು ಮೊದಲು ಬೆಳೆಯನ್ನು ನಿರ್ಣಯಿಸಬೇಕು, ಆ ಮೇಲೆ ಜನವರಿಯಿಂದ ಮಾರ್ಚ ವರೆಗಿನ ೩ ತಿಂಗಳಲ್ಲಿ ಆಗುವ ಪೇಟೆಯ ದರಗಳನ್ನು ಸಂಗ್ರಹಿಸಬೇಕು, ಮತ್ತು ಅವುಗಳ ಸರಾಸರಿ ತೆಗೆದು, ಆ ದರದಂತೆ, ಸರಕಾರವು ನಿರ್ಣಯಿಸಿದ ಜೀನಸುಗಳ ಕ್ರಯ ನಿರ್ಣಯಿಸಬೇಕು ದರಗಳಲ್ಲಿ ಏರಿಳಿತಗಳಾಗುವದು ಸ್ವಾಭಾವಿಕ ದರಗಳೇರಿದರೆ ಒಡೆಯರಿಗೆ ನಷ್ಟವಾಗುವದು, ದರಗಳು ಇಳಿದರೆ ಒಕ್ಕಲಿಗರಿಗೆ ನಷ್ಟವಾಗುವದು ಮೇಲಾಗಿ ಒಕ್ಕಲಿಗರು ಬಡವರು ಬೆಳೆ ಕೈಸೇರಿದ ಹಾಗೆ ಅದರ ವಿಲೇವಾರಿ ಮಾಡಿ, ಆಗಿಂದಾಗ ಒಡೆಯರ ಪಾಲು ಒಡೆಯರಿಗೆ ಒಪ್ಪಿಸಿ, ತಮ್ಮ ಪಾಲನ್ನು ಅವರು ಇಟ್ಟುಕೊಳ್ಳುವದು ಯಾವಾಗಲೂ ಸುರಕ್ಷಿತವಾದದ್ದು ಒಡೆಯರ ಪಾಲು ಮಾರಲು ಒಕ್ಕಲಿಗನಿಗೆ ಸಾಧ್ಯವಿಲ್ಲ ಮಾರ್ಚ ತಿಂಗಳ ತನಕ ಸಂರಕ್ಷಣೆ ಮಾಡಿ ಆ ಮೇಲೆ ಅವರು ಮಾರಾಟ ಮಾಡಬೇಕಾಗುವುದು ಒಕ್ಕಲತನ ಕಾನೂನಿನ ೧೩(ಅ) ಕಲಮಿನನ್ವಯ ನಿಶ್ಚಯಿಸಿದ ಉತ್ಪತ್ತಿಯನ್ನು ಹಣದ ರೂಪದಿಂದ ಕೊಡುವದರಿಂದ ಒಕ್ಕಲಿಗನಿಗೆ ಏನು ಪ್ರಯೋಜನ ಸಿಕ್ಕೀತೆಂಬುದರ ಗ್ರಹಿಕೆ ಸಾಮಾನ್ಯರಿಗೆ ಆಗಲೊಲ್ಲದು ನಿಯಂತ್ರಣ ಕಾಲದಲ್ಲಿ ಕಳ್ಳ ಪೇಟೆಯ ವ್ಯಾಪ್ತಿಯನ್ನು ಒಕ್ಕಲಿಗರಿಗೆ ದೊರಕಿಸಿಕೊಡಲು ಸರಕಾರವು ಯೋಚಿಸಿದ್ದಿರಬಹುದು ಈಗ ನಿಯಂತ್ರಣ ಹೋಗಿರುವದರಿಂದ ಆ ಪ್ರಾಪ್ತಿಗೆ ಅವಕಾಶವಿಲ್ಲ ಒಡೆಯರಿಗೆ ಸಲ್ಲತಕ್ಕ ಬೆಳೆಯ ಪಾಲು ಆಗಿಂದಾಗ ಕೊಟ್ಟು ಸುರಕ್ಷಿತ ವ್ಯವಹಾರ ಮಾಡುವ ಅನುಕೂಲತೆ ಹೋಗಿ, ಮಾರ್ಚ ತಿಂಗಳ ಕೊನೆಯ ತನಕ ನಿರೀಕ್ಷಣೆ ಮಾಡಿ, ಹಣ ಒದಗದಿದ್ದಲ್ಲಿ ಒಕ್ಕಲತನ ಕಳಕೊಳ್ಳುವ ಪ್ರಸಂಗ ಒಕ್ಕಲಿಗರ ಮೇಲೆ ಬರುವದುಂಟು

***

ನಮ್ಮ ಜಿಲ್ಲೆಯ ಜನರು ಹಿಂದುಳಿದವರಿದ್ದಾರೆಂಬುದು ನಿಜ ಎರಡು ಶತಮಾನಗಳ ಕಾಲ ಸುಧಾರಿಸಿದ ಬ್ರಿಟಿಶ ರಾಜ್ಯ ನಡೆದರೂ ಹಿಂದುಸ್ಥಾನ ದೇಶ ಹಿಂದುಳಿದದ್ದು ಮುಂದುವರಿಯಲಿಲ್ಲ! ಗೇಣಿಯನ್ನು ಕಾಳಿನ ರೂಪದಿಂದ ಕೊಡಬಾರದೆಂದು ಒಕ್ಕಲತನದ ಕಾನೂನಿನಲ್ಲಿ ವಿಧಿಸಿಲ್ಲ ಒಕ್ಕಲತನ ಕಾನೂನು ಪ್ರಬಂಧದಲ್ಲಿ ಬಂದ ಒಂದು ವರ್ಷದಲ್ಲಿ ಒಡೆಯ-ಒಕ್ಕಲಿಗರೊಳಗೆ ಉಂಟಾದ ವೈಷಮ್ಯ ಇನ್ನೂ ಶಾಂತವಾಗಿಲ್ಲ ಹೊಸ ಕ್ರಮದಿಂದ ಅದನ್ನು ಇನ್ನಷ್ಟು ಕೆರಳಿಸುವದು ಜಾಣತನವಾಗದು

***

ಕಾಂಗ್ರೆಸ ಮಂತ್ರಿಗಳು ಪಾರ್ಲಮೆಂಟರಿ ಸೆಕ್ರೆಟರಿಗಳು ಎಂಬ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ ಅದರಿಂದ ರಾಷ್ಟ್ರೀಯ ಸಭೆಯ ಆದೇಶದಲ್ಲಿ ಹುದ್ದೇದಾರರ ಸಂಖ್ಯೆ ಕಡಿಮೆಯಾಗುವ ಬದಲು ಹೆಚ್ಚಾಗಿದೆ ಪಾರ್ಲಮೆಂಟರಿ ಸೆಕ್ರೆಟರಿಗಳು ಅವಶ್ಯವಿಲ್ಲೆಂದು ಮಹಾತ್ಮರು ಡಿಸೆಂಬರ ೨೨ ೧೯೪೭ರ ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಉದ್ಗರಿಸಿದ್ದುಂಟು ಇವರಿಗೆ ದೊಡ್ಡ ಸಂಬಳ ಕೊಡಕೂಡದೆಂದೂ ಮಹಾತ್ಮರು ನುಡಿದಿದ್ದಾರೆ ನಮ್ಮ ಜಿಲ್ಲೆಯ ಡಾ॥ ಗಾಂವಕಾರ ಕಣ್ಣಪ್ಪ ನಾಯ್ಕರಿಗೆ ಹಿಂದೆ ನೌಕರಿಯಲ್ಲಿದ್ದಾಗ ರೂ ೩೦೦ರೊಳಗೆ ಸಂಬಳ ಸಿಗುತ್ತಿತ್ತು ಪಾರ್ಲಮೆಂಟರಿ ಸೆಕ್ರೆಟರಿಯಾದಂದಿನಿಂದ ಸಂಬಳ, ಭತ್ಯೆ, ವಾಹನ-ಭತ್ಯೆ ಹೀಗೆ ಅವರಿಗೆ ಈಗ ರೂ ೧೦೦೦ದ ಮೇಲೆ ಮಾಸಿಕ ವೇತನ ಸಿಗುತ್ತಿದೆ. ಇಷ್ಟು ವೇತನ ಪಡೆಯುವ ಯೋಗ್ಯತೆ ಇವರಿಗೆ ಮುದಿ ಪ್ರಾಯದಲ್ಲಿ ಒಮ್ಮೆಲೇ ಪ್ರತ್ಯಕ್ಷವಾಯಿತೆಂದು ಹೇಳುವದು ದಿಟ್ಟತನ ದೊಡ್ಡ ಸಂಬಳ ಹುದ್ದೆಗೆ ಅವಶ್ಯವಿಲ್ಲೆಂದು ಮಹಾತ್ಮರು ಹೇಳುತ್ತಿರುವಾಗ, ಪಾರ್ಲಮೆಂಟರಿ ಸೆಕ್ರೆಟರಿಗಳಿಗೆ ಇಷ್ಟು ಸಂಬಳ ಕೊಡುವದು ಸಾರ್ವಜನಿಕ ಹಣದ ಅಪವ್ಯಯವೇ ಸರಿ ಮೇಲಾಗಿ ಈ ಸೆಕ್ರೆಟರಿಗಳ ಸ್ಥಾನಮಾನಗಳೇನೆಂಬುದೂ ತಿಳಿಯದು ಇವರು ಸರಕಾರಿ ನೌಕರರೋ ಸ್ವತಂತ್ರರೋ ತಿಳಿಯದು ಸರಕಾರದ ನೌಕರರಾಗಿರುತ್ತಿದ್ದರೆ ಪಂ॥ ಜವಾಹರಲಾಲ ನೆಹರು, ಸರದಾರ ವಲ್ಲಭಭಾಯಿ ಪಟೇಲರವರಂಥ ಮಂತ್ರಿ ಉಪ-ಮುಖ್ಯಮಂತ್ರಿಗಳಂಥ ಮೇಲಧಿಕಾರಿಗಳ ವಿರುದ್ಧ ಪ್ರಚಾರ ನಡಿಸಲಿಕ್ಕೆ ಇಲ್ಲವೆ ಅವರನ್ನು ಪ್ರತಿಪಕ್ಷಿಗಳಂತೆ ಪ್ರತಿಭಟಿಸಲಿಕ್ಕೆ ಬರುವದಿಲ್ಲವೆಂಬುದೊಂದು ಪ್ರಶ್ನೆಯುಂಟು ಇಂಥ ನಡತೆ ಅಧಿಕಾರಕ್ಕೆ ಅನುಚಿತವಾಗಿರುತ್ತಿದ್ದರೆ, ಡಾ॥ ಗಾಂವಕಾರರು ಪಂ॥ ಜವಾಹರಲಾಲರ ವಿರುದ್ಧ ಪತ್ರಿಕೆಗಳಲ್ಲಿ ಮಾಡಿದ ಟೀಕೆಯ ಬಗ್ಗೆ ಸರಕಾರವು ಯಾವ ಕ್ರಮ ಕೈಕೊಳ್ಳುವದೋ ನೋಡಬೇಕು

ಪತ್ರಿಕಾ ಪ್ರಕಟನೆ.

ಕಾನಡಾ ಜಿಲ್ಲೆಯಲ್ಲಿ ಮದ್ಯನಿರೋಧನದ ಕಾರ್ಯವನ್ನು ಒತ್ತರದಿಂದ ಸಾಗಿಸುವದಕ್ಕಾಗಿ ಮದ್ಯ-ಪ್ರತಿಬಂಧ ಸೈನಿಕ (ಗಾರ್ಡ್ಸ)ರೆಂಬ ಹೆಸರಿನ ಸ್ವಯಂಸೇವಕರದೊಂದು ದಲವನ್ನು ಏರ್ಪಡಿಸುವ ನಿರ್ಣಯವಾಗಿರುತ್ತದೆ ಈ ದಲದಲ್ಲಿ ಸೇರಬಯಸುವವರು ತಾ ೨೦-೧ ೧೯೪೮ರೊಳಗಾಗಿ ಕಾನಡಾ ಜಿಲ್ಲಾ ಮದ್ಯ-ನಿರೋಧನ ಸಮಿತಿಯ ಕಾರ್ಯದರ್ಶಿ, ಕಾರವಾರ ಇವರಿಂದ ಸೇರ್ಪಡೆಯ ಅರ್ಜಿಯ ಮಾದರಿ (ಫಾರ್ಮ) ಪಡಕೊಂಡು ಮತ್ತು ಅದನ್ನು ಸರಿಯಾಗಿ ತುಂಬಿ ಕಳಿಸಿಕೊಡಬೇಕಾಗಿ ವಿನಂತಿಯಿದೆ

ಕಾರವಾರ, ತಾ. ೩೦-೧೨-೪೭ } **R J Rebello,** ಕಲೆಕ್ಟರ ಮತ್ತು ಜಿಲ್ಲಾ ಮದ್ಯ ನಿರೋಧನ ಸಮಿತಿಯ ಅಧ್ಯಕ್ಷ

ಮಹಾಲಕ್ಷ್ಮೀ ಬುಕ್ ಡಿಪೋ,

ಕುಂದಾಪುರ, ದ ಕ

ನಮ್ಮಲ್ಲಿ **1948**ನೇ ಇಸ್ವಿಯ ಕೆಲೆಂಡರುಗಳು ಮಾರಾಟಕ್ಕೆ ಸಿಗುತ್ತವೆ ಇವುಗಳಲ್ಲಿ ರಜಾ-ದಿನಗಳು, ತಿಥಿಗಳು ವಗೈರೆ ಕಾಣಿಸಲ್ಪಟ್ಟಿವೆ. ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ವ್ಯವಸ್ಥಾಪಕ

ಕೆನರಾ ಕೊಲೇಜ.

ಸಹಾಯದ ಬಗ್ಗೆ ಯಾಚನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಉಚ್ಚ ಶಿಕ್ಷಣ ಕೊಡುವ ಒಂದೂ ಸಂಸ್ಥೆಯಿಲ್ಲ. ಆ ಕೊರತೆಯನ್ನು ನೀಗಿಸುವದಕ್ಕೆ ಕೆನರಾ ಕೊಲೇಜ ಸಮಿತಿಯವರು ಕುಮಟೆಯಲ್ಲಿ ಒಂದು ಆದರ್ಶಭೂತ ಆರ್ಟ್ಸ ಮತ್ತು ಸಾಯನ್ಸ ಕೊಲೇಜನ್ನು [ತೆರೆ]ಯಲು ಈಗ ೨ ವರ್ಷಗಳಿಂದ ಪ್ರಯತ್ನ ನಡಿಸಿದ್ದಾರೆ, [ಸಮಿ]ತಿಯ ಪ್ರಯತ್ನದ ಫಲವಾಗಿ ಈ ತನಕ ರೂ. ೧,೧೦,೦[..]ದಷ್ಟು ನಿಧಿಯೂ ೩೪ ಎಕರೆ ವಿಸ್ತೀರ್ಣವಾದ ಸ್ಥ[ಳವೂ] ದೊರೆತಿವೆ ಬೇರೆ ಕೆಲ ಅನುಕೂಲತೆಗಳೂ ಸಿ[ಕ್ಕಿವೆ] ಕೊಲೇಜ ಇಮಾರತಿನ ನೆಲಗಟ್ಟು ಈಗ ಪೂರ್ಣವಾ[ಗು]ತ್ತಿದ್ದು, ಮುಂದಿನ ಕೆಲಸ ಚಾಲೂ ಆಗಿದೆ. ಈ ಕಟ್ಟಡ ಪೂರ್ಣವಾಗಲು ಇನ್ನೂ ಒಂದು ಲಕ್ಷ ರೂ ತಗ[ಲುವ]ದೆಂದು ತಜ್ಞರು ಅಂದಾಜು ಮಾಡಿದ್ದಾರೆ

ಕಾರಣ ಈ ಬಡ ಜಿಲ್ಲೆಯ ಹಿತಕಾಂಕ್ಷಿಗಳೂ ಶಿಕ್ಷ[ಣ] ಪ್ರಸಾರದ ಬಗ್ಗೆ ಆಸ್ಥೆಯುಳ್ಳವರೂ ಉದಾರತನದಿಂದ ಆತ್ಮೀಯತೆಯಿಂದಲೂ ಸಮಿತಿಯ ಮಹಾಕಾರ್ಯ[ಕ್ಕೆ] ಶಕ್ಯವಿದ್ದಷ್ಟು ಕೂಡಲೇ ಸಹಾಯ ನೀಡಬೇಕಾಗಿ [ಬೇಡಿ]ಕೊಳ್ಳುತ್ತೇನೆ

ಕುಮಟಾ, ತಾ. ೧-೧-೪೮ } **L S Kama[t]** ಕಾರ್ಯದರ್ಶಿ, ಕೆನರಾ ಕೊಲೇಜ ಸಮಿ[ತಿ]

ಪತ್ರಿಕಾ-ಪ್ರಕಟನೆ.

ಮುಂಬಯಿ ಸರಕಾರವು ೧೯೪೪ರಲ್ಲಿ ಮುಂಬಯಿ ಆಹಾರ (ಭೋಜನಾಲಯಗಳಲ್ಲಿ ಪದಾರ್ಥಗಳನ್ನು ಒ[ದಗಿಸು]ವದರ ಮೇಲೆ ನಿಯಂತ್ರಣಗಳನ್ನಿಟ್ಟ) ಆಜ್ಞೆ [..] ("ಊಟಕ್ಕೆ ಎರಡೇ ಪದಾರ್ಥ ಬಡಿಸಬೇಕೆಂಬ ಆ[ಜ್ಞೆ]ಯೆಂದು ಜನರು ಹೆಸರಿಟ್ಟಿರುವ) ಆಜ್ಞೆಯನ್ನು ಜಾ[..]ಸಿತ್ತಷ್ಟೇ ಇತ್ತೀಚೆಗೆ ಸರಕಾರವು ೧೯೪೬ರ ಅವ[ಶ್ಯ] ವಸ್ತುಗಳ ಪೂರೈಕೆಯ (ತಾತ್ಪೂರ್ತಿಕ ಅಧಿಕಾರಗಳ) ಆಜ್ಞೆಯನ್ವಯ ಈ ಹಳೆಯ ಆಜ್ಞೆಯ ಸ್ಥಳದಲ್ಲಿ [..] ಹೊಸ ಆಜ್ಞೆಯನ್ನು ಹೊರಡಿಸಿ, ಅದರಲ್ಲಿ ಮು[..] (ಹಿಂದಿನ) ಆಜ್ಞೆಯಲ್ಲಿ ಈವರೆಗೆ ಮಾಡಲ್ಪಟ್ಟ ತಿದ್ದುಪಡಿಗಳನ್ನು ಸೇರಿಸುತ್ತದಲ್ಲದೆ, ವನಸ್ಪತಿ ಊಟಗಳಿಗೆ ಸಂಬಂಧಿಸಿದ ಇತರ (subsidiar[y]) ಪದಾರ್ಥಗಳ ಯಾದಿಯಲ್ಲಿ (ಬೇರೆ ಬೇರೆ ಜಾತಿಯ ಹಿಟ್ಟು ಮತ್ತು ಯಾವ ಪದಾ[ರ್ಥ] ಸರಕಾರಿಯ ಜೋಡು ಇವುಗಳಿಂದ ತಯಾರಿಸಲ್ಪ[ಟ್ಟ] ಮತ್ತು ಗುಜರಾಥದಲ್ಲಿ "ಥೇಪಾ" ಎಂದು ಕರೆಯಲ್ಪಡು[ವ] 'ಧಾರಿ ಸೀರ' ಎಂಬ ಪದಾರ್ಥವನ್ನೂ ಸೇರಿಸಿದ್ದಾರೆ ಹೊಸ ಆಜ್ಞೆಯು ತಾ ೨೧-೧೧-೪೭ರ ಮುಂಬಯಿ ಸರಕಾರದ ವಿಶೇಷ ಗೆಝೆಟಿನ ೧ನೇ ಭಾಗದಲ್ಲಿ ಪ್ರಕಟವಾಗಿರುತ್ತದ್ದು, ತಾ ೨೯-೧೧-೪೭ರಿಂದ ಇಡೀ ಪ್ರಾಂತಕ್ಕೆ ಜಾರಿ ಮಾಡಲ್ಪಟ್ಟಿದೆ

ಈ ಆಜ್ಞೆಯು ಖಾಸಗಿ ಮನೆಗಳಿಗೆ ಅನ್ವಯಿಸದಿದ್ದು ಭೋಜನಾಲಯಗಳಲ್ಲಿ ಊಟ ಬಡಿಸುವಾಗ ೨ ಪದಾರ್ಥಗಳಿಗಿಂತ ಹೆಚ್ಚಿಗೆ ಬಡಿಸತಕ್ಕದ್ದಲ್ಲೆಂದು ಹಾಕಿದ ನೇಮವನ್ನು ಎಲ್ಲ ಮನೆಗಳ ಹಾಗೂ ಸಂಸ್ಥೆಗಳ ಕಾರ್ಯ ಪಾಲಿಸಿ, ಆಹಾರ ಸಂಗ್ರಹವನ್ನು ಆದಷ್ಟು ಕಾರ್ಯದಲ್ಲಿ ನೆರವಾಗಬೇಕೆಂದು ಸರಕಾರವು ಬಯಸುತ್ತದೆ. (ಸರಕಾರಿ ಪ್ರಕಟ[ಣೆ])

ಜಿಲ್ಲಾ ಸಮಾಚಾರ.

ಕಾರವಾರ— ಇಲ್ಲಿಯ ನಾಗರಿಕ ರಾ॥ ವೆಂಕಟರಾವ ಅಚ್ಯುತ ಕಾಮತ ಇವರು ಟಪಾಲ ಇಲಾಖೆ ಟಪಾಲ-ಮಾಸ್ತರರಿರುತ್ತಾರೆ ಇವರು ಸರಕಾರಿ ನೌಕರಿಯನ್ನು ಸಾಗಿಸಿ, ಬಿಡುವಿದ್ದಾಗ ಕೊಂಕಣಿಯಿಂದ ಕೀರ್ತನ ಮಾಡುವ ಕ್ರಮ ಕೈಕೊಂಡಿದ್ದಾರೆ ಇವರ ಈ ಕೀರ್ತನೆಗಳು ಭಟಕಳದಲ್ಲಿ ಲೋಕಪ್ರಿಯವಾಗಿವೆ ಶ್ರೀ ಗೋಕರ್ಣ ಮಠಾಧೀಶ ಶ್ರೀ ದ್ವಾರಕಾನಾಥತೀರ್ಥ ಸ್ವಾಮಿಗಳು ರಾ॥ ವೆಂಕಟರಾಯರ ಕೀರ್ತನೆಗಳನ್ನು ಕೇಳಿ ಆನಂದಿಸಿ ಇವರ ಕೀರ್ತನೆಗಳಲ್ಲಿ ಭಕ್ತಿರಸ, ಗಾಯನ ಕಲೆ, ಮಾತಿನ ಚಾತುರ್ಯಗಳು ಕಂಡು ಬರುತ್ತವೆಂದೂ ಕೊಂಕಣಿ ಸತ್ವಪೂರ್ಣ ಭಾಷೆಯಾಗಿರುತ್ತದೆಂದು ಸಿದ್ಧವಾದಂತೆಂದೂ ಅಭಿಪ್ರಾಯ ವ್ಯಕ್ತಗೊಳಿಸಿರುವರಾಗಿಯೂ ವೆಂಕಟರಾಯರಿಗೆ ಆಶೀರ್ವಾದ ಕೊಟ್ಟರಾಗಿಯೂ ಗೆಳೆಯರೊಬ್ಬರು ತಿಳಿಸುತ್ತಾರೆ

ಸಾಮಾನ್ಯವಾಗಿ ಒಕ್ಕಲಿಗರು ಬಡವರೂ ಅಜ್ಞಾನಿಗಳೂ ಇರುವದರಿಂದ, ಉತ್ಪತ್ತಿಯನ್ನು ಕ್ಷಿಪ್ತ ಕಾಲದಲ್ಲಿ ಪಾಲು ಮಾಡಿ ಒಡೆಯರಿಗೆ ಮುಟ್ಟಿಸದಿದ್ದರೆ ಅದನ್ನು ಕಾಪಾಡಿಕೊಂಡು ಹಣದಲ್ಲಿ ರೂಪಾಂತರಿಸಿ ವಸೂಲ ಕೊಡುವದು ಕಷ್ಟವಾಗಿ ಅವರು ಭೂಮಿ ಕಳೆಕೊಳ್ಳುವ ಸಂಭವವಿದೆ. ಪ್ರಸಂಗಕ್ಕೆ ಅವಶ್ಯವಿರುವ ಕಾಳು ಮತ್ತು ಹುಲ್ಲು ಒಡೆಯರಿಗೆ ಪಾಲಿನ ಭೂಮಿಯಿಂದ ಸಿಗು ವದು ತಪ್ಪಿದಲ್ಲಿ ಅವರು ಉದರನಿರ್ವಾಹಕ್ಕಾಗಿ ಪೇಟೆಯನ್ನು ಆಶ್ರಯಿಸಬೇಕಾಗುವದು ಮತ್ತು ಒಕ್ಕಲತನದ ಕಾಯಿದೆಯಂತೆ ತೀರ್ವೆ ಕಿಸ್ತ, ಖಂತರ ಗೇಣಿ-ವಸೂಲಿಯ ವಾಯಿದೆ ಬರುವದರಿಂದ ಸುಗ್ಗಿಯ ವೇಳೆಯಲ್ಲಿ ಪಾಲಿನ ಧಾನ್ಯ ಅಥವಾ ಹಣ ಸಿಗದೆ ಮಳೆಗಾಲದ ವರೆಗೆ ಉತ್ಪತ್ತಿಯ ಹಾದಿ ನೋಡಬೇಕಾಗುವದು. ಟೆನನ್ಸಿ ಕಾಯಿದೆಯ ೧೦ ಮತ್ತು ೧೧ನೇ ನಿಯಮಗಳಂತೆ ಜನವರಿ ಯಿಂದ ಮಾರ್ಚದ ವರೆಗಿನ ೩ ತಿಂಗಳ ಸರಾಸರಿ ಧಾರಣೆಯಂತೆ ಉತ್ಪತ್ತಿ ನಿಶ್ಚಯಿಸಿಕೊಳ್ಳ ಲಿಕ್ಕೆ ಪ್ರತಿ ವರ್ಷ ಕ್ರಮ ನಡಿಸಬೇಕಾದ್ದರಿಂದ ಒಡೆಯ-ಒಕ್ಕಲಿಗರೊಳಗೆ ವ್ಯಾಜ್ಯಗಳುಂಟಾಗಿ ಉಭಯತರೂ ಕಷ್ಟ-ನಷ್ಟಗಳಿಗೆ ಗುರಿಯಾಗಬೇಕಾಗುವದು, ಹಾಗೂ ಜನವರಿಯಿಂದ ಮಾರ್ಚ ವರೆಗಿನ ದರಗಳ ಮಾನ ಸಾಮಾನ್ಯವಾಗಿ ಕಡಿಮೆ ಇರುತ್ತಿದ್ದು, ಆಗಿನ ಧಾರಣೆಯಂತೆ ಹಣ ತಕ್ಕೊಂಡರೆ, ಧಾರಣೆ ಏರಿಕೆಯಾಗುವ ಏಪ್ರಿಲ್-ಮೇ ತಿಂಗಳಲ್ಲಿ ಅಷ್ಟೇ ಕಾಳನ್ನು ಕೊಳ್ಳುವದು ಎಂದಿಗೂ ಶಕ್ಯವಾಗುವಂತಿಲ್ಲ. ಒಕ್ಕಲಿಗನ ಕಡೆಗೆ ಕಾಳು ಇರುವಾಗ ಕಾಳು ತಕ್ಕೊಳ್ಳುವ ಸೌಲಭ್ಯವೂ ಗೈರ ಹಂಗಾಮಿನಲ್ಲಿ ಹಣ ತಕ್ಕೊಳ್ಳುವದರಿಂದ ದೊರೆಯುವಂತಿಲ್ಲ ಭೂಮಿಯ ಒಡೆಯರು ಐಶ್ವರ್ಯವಂತರೆಂದೂ, ಪಾಲಿನ ಸಾಗ್ವಳಿಯ ಉತ್ಪತ್ತಿ ಅವರಿಗೆ ಅವಶ್ಯವಿಲ್ಲೆಂತಲೂ ಸರಕಾರದ ಗ್ರಹಿಕೆಯಾದಂತೆ ತೋರುತ್ತದೆ ಈ ಗ್ರಹಿಕೆ ತೀರ ತಪ್ಪು ಆದೆ ಸ್ವಂತ ಜೀವನದ ಬಗ್ಗೆ ಕಾಳು ಸಿಗು ತ್ತದೆಂತಲೇ ಅತಿಶಯ ಕಷ್ಟ ಮತ್ತು ವೆಚ್ಚದಿಂದ ಒಡೆಯರು ಭೂಮಿಯನ್ನು ಮಾಡಿಕೊಂಡಿ ದ್ದಾರೆ ಪಾಲಿನ ಸಾಗ್ವಳಿಯಲ್ಲಿ ಒಡೆಯನೂ ಕೂಡ ಭಾಗಿಯಾಗಿ ಕೆಲಸ ಮಾಡಬೇಕಾಗಿದ್ದು, ಬಹು ಜನ ಒಡೆಯರು ತೀರ ಬಡವರಿರುತ್ತಾರೆ. ತಮ್ಮ ಸಂಸಾರಕ್ಕೆ ತಗಲುವ ಕಾಳಿನ ಬಗ್ಗೆ ಪರಾವಲಂಬಿಯಾಗಿ ಉಳಿಯಬಾರದೆಂತಲೇ ಒಡೆಯರು ಭೂಮಿಯನ್ನು ಪಾಲಿನ ಸಾಗ್ವಳಿಗೆ ಕೊಡುತ್ತಾರೆ ಧಾನ್ಯದ ಉತ್ಪತ್ತಿಯನ್ನು ಹಣದಲ್ಲಿ ರೂಪಾಂತರಿಸುವದರಿಂದ ಹಿಂದುಳಿದ ಸಮಾ ಜದ ಹಿತವೇನೂ ಆಗದೆ, ಒಡೆಯರ ಜೀವನಕ್ಕೆ ಮಾತ್ರ ಬಲವಾದ ಆಘಾತವಾಗುವಂತಿದೆ ಕಾರಣ ಒಕ್ಕಲತನದ ಕಾನೂನಿನ ೧೫ ಆ ಕಲಮಿನಂತೆ ಪಾಲಿನ ಸಾಗ್ವಳಿ-ಉತ್ಪತ್ತಿಯನ್ನು ಹಣ ದಲ್ಲಿ ರೂಪಾಂತರಿಸುವ ಯೋಜನೆಯನ್ನು ಸರಕಾರವು ಕೈಕೊಳ್ಳಬಾರದಾಗಿ ಈ ಸಂಘವು ಆಗ್ರಹ ದಿಂದ ಬೇಡಿಕೊಳ್ಳುತ್ತದೆ

ಒಡೆಯರಿಗೆ ತೀರ್ವೆಯಲ್ಲಿ ಕೊಟ್ಟ ಸೂಟನ್ನು ರದ್ದುಪಡಿಸಲು ವಿನಂತಿ.

೩ ಕಳೆದ ಆಗಸ್ಟ ೧೫. ೧೫ನೇ ದಿವಸ ಹಿಂದುಸ್ಥಾನಕ್ಕೆ ದೊರೆತ ಸ್ವಾತಂತ್ರ್ಯೋತ್ಸವದ ಪ್ರೀತ್ಯರ್ಥವಾಗಿ ಮುಂಬಯಿ ಸರಕಾರವು ಒಡೆಯರಿಗೆ ೧/೧೦ ತೀರ್ವೆಯನ್ನು ಸೂಟ ಬಿಟ್ಟಿದೆ. ಆದರೆ ಒಕ್ಕಲತನದ ಕಾನೂನಿನ ೧೬ನೇ ಕಲಮಿನಂತೆ ಒಕ್ಕಲಿಗರಿಗೆ ಅದೇ ಪ್ರಮಾಣದಿಂದ ಒಡೆಯರು ಗೇಣಿಯಲ್ಲಿ ಸೂಟ ಬಿಡಬೇಕೆಂದು ವಿಧಿಸಿದೆ ಸ್ವಾತಂತ್ರ್ಯೋತ್ಸವದ ಬಗ್ಗೆ ತೀರ್ವೆ ಸೂಟ ಬಿಡಬೇಕೆಂತ ಒಡೆಯರು ಅಪೇಕ್ಷಿಸಿದ್ದಿರುವದಿಲ್ಲ. ಸರಕಾರವು ತಾನಾಗಿಯೇ ಈ ಸೂಟ ಕೊಟ್ಟಿದ್ದಿ ರುತ್ತದೆ. ಸರಕಾರವು ತನ್ನ ಸಂಭ್ರಮಕ್ಕಾಗಿ ಕೊಟ್ಟ ಈ ಸ್ವಾತಂತ್ರ್ಯೋತ್ಸವ ಕಾಲದ ದಾನದಿಂದ ಒಡೆ ಯರು ನಷ್ಟಪಡಬೇಕಾದ್ದರಿಂದ ಈ ನಷ್ಟವನ್ನು ಸಹಿಸುವದು ಬಡವರಾದ ಒಡೆಯರಿಗೆ ಭಾರವಾಗಿ ರುತ್ತದೆ ಕಾರಣ ದಯಾಳು ಸರಕಾರವು ಈ ತೀರ್ವೆಯ ಸೂಟನ್ನು ರದ್ದು ಮಾಡಬೇಕಾಗಿ ಈ ಸಂಘವು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತದೆ

೪. ಚೌಕ ಗ್ರಾಮದಲ್ಲಿ ಅಂದರೆ ಕೆಕ್ಕಾರ, ಕಡತೋಕಾ, ನವಿಲಗೋಣ, ವಾಡಗೇರಿ, ಅಂಸಳ್ಳಿ ಗ್ರಾಮಗಳಲ್ಲಿ ಬೆಳೆಯುವ ಹಿಂಗಾರಿ ಭತ್ತದ ಬೆಳೆಯು ನೀರಾವರಿ ಬೆಳೆಯೆಂದು ಅರ್ಥ ಮಾಡಲಿಕ್ಕೆ ಬರುವಂತಿಲ್ಲ. ಈ ಬೆಳೆಯನ್ನು ಹರಿ-ನೀರಿನಿಂದ ಮತ್ತು ಹೊಳೆಯ ನೀರಿನಿಂದ ಬೆಳೆಸುತ್ತಾರೆ. ಈ ಬೆಳೆ ೩ ತಿಂಗಳುಗಳಲ್ಲಿ ಬೆಳೆಯುತ್ತಿದ್ದು ಅದಕ್ಕೆ ಕೃತ್ರಿಮ ರೀತಿಯಿಂದ ನೀರು ಹಾಕಬೇಕಾದ ಪ್ರಸಂಗವಿಲ್ಲ. ಅದೇ ರೀತಿ ಇತ್ತ ಕಡೆಯ ತೆಂಗಿನ ಬಾಗಾಯತಗಳು ಹೆಚ್ಚಾಗಿ ಹೊಳೆಯ ದಂಡೆಯಲ್ಲಿ ಇರುತ್ತಿದ್ದು, ಅವುಗಳಿಗೆ ನೀರು ಹಾಕುವ ಪ್ರಸಂಗ ಬರುವದಿಲ್ಲ. ಸಾಮಾನ್ಯವಾಗಿ ಇತ್ತ ಕಡೆಯ ಬಾಗಾಯತುಗಳಿಗೆ ಜನವರಿಯಿಂದ ನೀರು ಹಾಕುವ ಪರಿಪಾಠ ವಿದ್ದು, ಮಾರ್ಚ, ಏಪ್ರಿಲ ತಿಂಗಳುಗಳಲ್ಲಿ ಹೊಳೆಯ ನೀರು ಬತ್ತಿ ಹೋಗುವದರಿಂದ ಆ ನಂತರ ಬಾಗಾಯತುಗಳಿಗೆ ನೀರು ಹಾಕುವದು ಶಕ್ಯವೇ ಇರುವದಿಲ್ಲ. ಸರಕಾರಿ ಪ್ರಕಟನೆಯಲ್ಲಿ ನಮೂದಿ ಸಿದಂತೆ ವರ್ಷದಲ್ಲಿ ೮ ತಿಂಗಳು ನೀರು ಹಾಕಲ್ಪಡುವ ಭೂಮಿಗಳು ಮಾತ್ರ ನೀರಾವರಿ ವ್ಯಾಖ್ಯೆ ಯಲ್ಲಿ ಬರಬಹುದಾದ್ದರಿಂದ ಇಂಥ ಜಮೀನುಗಳು ಅಂದರೆ ಇತ್ತ ಕಡೆಯ ಹಿಂಗಾರಿ ಭತ್ತದ ಭೂಮಿ ಮತ್ತು ತೆಂಗಿನ ಬಾಗಾಯತಗಳು ನೀರಾವರಿ ಜಮೀನುಗಳು ಅಲ್ಲೆಂತ ಸರಕಾರವು ಪ್ರಕಟಿಸಬೇಕಾಗಿ ಈ ಸಂಘವು ಬೇಡಿಕೊಳ್ಳುತ್ತದೆ

ಮುಳಗಾವಲು ಸಾಗುವಳಿಯಲ್ಲ

೫. ನಮ್ಮ ಜಿಲ್ಲಾಧಿಪರು ಎಸ್‌ಆರ್/೬-೧೦-೪೭ನೇಗೆ ಹೊರಡಿಸಿದ ಹುಕುಮನ್ನು ಈ ಸಂಘವು ಸ್ವಾಗತಿಸುತ್ತದೆ. ಮುಳ್ಳುಗಾವಲು ನಾತೆಯಿಂದ ಇರುವ ಇಲ್ಲವೆ ಉತ್ಪತ್ತಿಯಲ್ಲಿ ೧/೬ ಪಡೆಯುವ ಒಕ್ಕ ಲಿಗರು ಬರೇ ಕಾವಲು ಮಾಡುವ ಇಸಮುಗಳಾಗಿದ್ದು, ಕಾವಲಿನಲ್ಲಿ ಅವರಿಗೆ ಆಸಕ್ತಿಯಿರಬೇಕೆಂಬ ಹೇತುವಿನಿಂದ ಉತ್ಪತ್ತಿಯ ಸ್ವಲ್ಪಭಾಗ ಅವರಿಗೆ ಕೊಡುವ ರೂಢಿಯುಂಟು. ಕಾವಲಿನ ಹೊರತು ಇವರು ಯಾವದೇ ಕೃಷಿಕರ್ಮವನ್ನು ಮಾಡುವದಿಲ್ಲ. ಇಂಥ ಇಸಮುಗಳು ಒಕ್ಕಲತನದ ಕಾಯಿದೆಯಂತೆ ವಿಶೇಷವಾದ ಹಕ್ಕು ಪಡೆಯಲು ಅರ್ಹರಲ್ಲೆಂಬ ಸಂಗತಿಯು ಸರಕಾರಕ್ಕೆ ಮಾನ್ಯವಾಗಿದ್ದು ಈ ಸಂಘಕ್ಕೂ ಮಾನ್ಯವಿದೆ. ಕಾರಣ ಇದರಂತೆ ಒಕ್ಕಲತನದ ಕಾನೂನಿನಲ್ಲಿ ತಿದ್ದುಪಡಿ ಮಾಡಿ ಸ್ಪಷ್ಟತೆ ಮಾಡು ವದು ಅವಶ್ಯವಿರುವದರಿಂದ ಆ ಪ್ರಕಾರ ತಿದ್ದುಪಡಿ ಮಾಡಬೇಕಾಗಿ ಈ ಸಂಘವು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ

ಸ್ವಾಗಳ್ಳಿ ರೈತರಿಗೆ ಸಂರಕ್ಷಣೆ ಸಿಗಬಾರದು

೬ ಭೂಕಂದಾಯ ಮಂತ್ರಿಗಳು ಕುಮಟೆಯಲ್ಲಿ ಪರಿಷತ್ತು ಸೇರಿಸಿದಾಗ ಭೂಮಿಯ ಉತ್ಪ ತ್ತಿಯ ಖರ್ಚವನ್ನು ಸಾಗ್ವಳಿಯ ಖರ್ಚಿನ ಬಗ್ಗೆ ಒಕ್ಕಲಿಗರಿಗೆ ಕಾಯಿದೆಯಿಂದ ಕೊಟ್ಟಿರುತ್ತದಾಗಿ ಹೇಳಿದ್ದುಂಟು. ಸಾಗ್ವಳಿ ಖರ್ಚಿನ ಜವಾಬದಾರಿಯೆಂದರೆ ಸಾಮಾನ್ಯವಾದ ಲಾಗವಾಡು, ಗೊಬ್ಬರ ಹಾಕುವದು ಮುಂತಾದವುಗಳು ಇರುತ್ತವೆ ಸ್ಥಳ ರೂಪಿಸಿ ಇಡುವ ಜವಾಬದಾರಿ ಒಕ್ಕಲಿಗನ ಮೇಲೆ ಇರುವದರಿಂದ ಯೋಗ್ಯ ರೀತಿಯಿಂದ ಕೃಷಿಕರ್ಮ ಮಾಡುವದು ಆತನ ಕರ್ತವ್ಯವಾಗಿರು ತ್ತದೆ ಒಕ್ಕಲತನದ ಕಾನೂನಿನ ಮೂಲಕ ಒಕ್ಕಲಿಗನು ಒಡೆಯನನ್ನು ಹೇಳದೆ ಕೇಳದೆ ಮನಸ್ವಿ ನಡೆಯುವದರಿಂದ ಸಾಗ್ವಳಿ ಕೆಲಸದಲ್ಲಿ ಒಡೆಯರಿಗೆ ಕೈ ಹಾಕಲಿಕ್ಕೆ ಶಕ್ಯವಾಗುವದಿಲ್ಲ. ಒಕ್ಕಲಿಗರು ನ್ಯಾಯಕ್ಕೆ ಸರಿಯಾಗಿ ಮತ್ತು ರೀತಿಯಂತೆ ಸಾಗ್ವಳಿಯ ಕೆಲಸ, ಲಾಗವಾಡಿನ ಕೆಲಸ, ಗೊಬ್ಬರದ ಪೂರೈಕೆ ಮುಂತಾದವುಗಳನ್ನು ಮಾಡುವದಿಲ್ಲವಾದ್ದರಿಂದ ಭೂಮಿಯ ಉತ್ಪತ್ತಿ ಮೊದಲಿಗಿಂತಲೂ ಈಗ

ಕಠಿಣತೆಯಾದದ್ದು ಕಂಡು ಬರುತ್ತದೆ. ಕಾರಣ ತೀರ್ವೆಯ ಮಾನದಂತೆ ಬೆಳಸಬೇಕಾದ ಬೆಳೆಯ ಮಾನವನ್ನೂ ಸರಕಾರವು ನಿರ್ಧರಿಸಬೇಕಾಗಿಯೂ, ಆ ಪ್ರಕಾರ ಬೆಳೆ ಬೆಳಸದೆ ಇರುವ ಒಕ್ಕಲಿಗರಿಗೆ ಒಕ್ಕಲತನದ ಕಾನೂನಿನ ಪ್ರಯೋಜನ ಕೊಡಿಸಬಾರದಾಗಿಯೂ ನಮ್ಮ ಹೇಳಿಕೆ ಇದ್ದು, ಕಾಯಿದೆಯಲ್ಲಿ ಇಂತಹ ತಿದ್ದುಪಡಿ ಮಾಡಬೇಕಾಗಿ ಈ ಸಂಘವು ಬಿನ್ನವಿಸಿಕೊಳ್ಳುತ್ತದೆ.

ಕಬಜೆಯ ದಾವೆಗಳ ನಿಕಾಲಿ ಕೂಡಲೇ ಆಗಬೇಕು.

೭. ಸರಕಾರವು ಒಕ್ಕಲತನದ ಕಾನೂನಿನ ೧೫ನೇ ಕಲಮನ್ನು ತಾ. ೮-೧೧-೪೬ನೇಗೆ ಲಾಗು ಮಾಡಿದ್ದಾಗ್ಯೂ, ಆ ಕಲಮಿನಲ್ಲಿ ವಿಧಿಸಿದಂತೆ ಉತ್ಪನ್ನವನ್ನು ನಿಶ್ಚಯಿಸಿದ ಕೊನೆಯ ಪ್ರಕಟಣೆಯನ್ನು ಇನ್ನೂ ಹೊರಡಿಸಲಿಲ್ಲ. ಕಾರಣ ಗೇಣಿ ಕೊಡದ ಒಕ್ಕಲಿಗರಿಂದ ಕಾನೂನಿನಂತೆ ಕಬಜಾ ಪಡಕೊಳ್ಳಲಿಕ್ಕೆ ಮಾಡಿದ ದಾವೆಗಳು ತಹಕೂಬ ಆಗಿ ಉಳಿದಿವೆ. ೧೯೪೭-೪೮ನೇ ಸಾಲಿನ ಉತ್ಪನ್ನವು ಇಂಥ ಒಕ್ಕಲಿಗರಿಗೆ ಸಿಕ್ಕಿದಾಗ್ಯೂ ೧೯೪೬-೪೭ನೇ ಸಾಲಿನ ಗೇಣಿಯು ಒಡೆಯರಿಗೆ ಇನ್ನೂ ಸಂದಿರುವದಿಲ್ಲ. ಒಡೆಯರಿಂದ ಸರಕಾರವು ರಾಜಾರ್ಥವನ್ನು ತೆಗೆದುಕೊಳ್ಳುತ್ತಿದ್ದು, ಅವರಿಗೆ ಕಾಯಿದೆಯಂತೆ ಸಿಗತಕ್ಕ ಪರಿಣಾಮವನ್ನು ಕೊಡಿಸದಿರುವದು ಅನ್ಯಾಯವಾಗುವದರಿಂದ ಈ ದಾವೆಗಳನ್ನು ಕೂಡಲೇ ವಿಚಾರ ಮಾಡುವಂತೆ ಹುಕುಮು ಹೊರಡಿಸಬೇಕಾಗಿ ಈ ಸಂಘದ ಬೇಡುವಿಕೆಯಿದೆ

೮ ಈ ಠರಾವುಗಳ ಪ್ರತಿಗಳನ್ನು ಹೊನ್ನಾವರ ತಾಲೂಕಿನ ಒಡೆಯರ ಸಂಘಕ್ಕೂ, ಜಿಲ್ಹಾ ಒಡೆಯರ ಸಂಘಕ್ಕೂ, ಮುಂಬಯಿ ಸರಕಾರಕ್ಕೂ, ಜಿಲ್ಹಾಧಿಪತಿಗಳಿಗೂ, ವೃತ್ತಪತ್ರಿಕೆಗಳಿಗೂ, ಎಮ್. ಎಲ್ ಎ. ಮತ್ತು ಎಮ್ ಎಲ್. ಸಿ ಇವರಿಗೂ, ಇತರ ಮುಖಂಡರಿಗೂ ಕಳುಹಿಸಿಕೊಡುವದಕ್ಕೆ ಈ ಮಹಾ ಸಭೆಯು ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿರುತ್ತದೆ.

ಮೇಲಿನ ಯಾವತ್ತೂ ಠರಾವುಗಳು ಸರ್ವಾನುಮತದಿಂದ ಮನ್ನಿಸಲ್ಪಟ್ಟಿರುತ್ತವೆ

ನೋಟೀಸು.

ಸರಕಾರದ ಪರವಾಗಿ ಮಾಡಿದ ಆಹಾರ-ಧಾನ್ಯಗಳ ಖರೀದಿಯ ಹಾಗೂ ಸಾಗಾಟದ ಲೆಕ್ಕವನ್ನು ಬೇಗನೇ ಮುಗಿಸಬೇಕಾಗಿದೆ ಕಾರಣ ಈ ಕೆಳಗೆ ಕಾಣಿಸಿದ ಬಾಬುಗಳ ಬಾಬತು ಸರಕಾರದಿಂದ ತಮಗೆ ಹಣ ಬರತಕ್ಕದ್ದುಂಟೆಂದು ಹೇಳುವ ಯಾವತ್ತು ಜನರು ಇದೇ ಬರುವ ತಾ ೧೫-೧ ೧೯೪೮ರೊಳಗಾಗಿ ತಮ್ಮ ಬೇಡಿಕೆಗಳನ್ನು, ಅವಶ್ಯವುಳ್ಳ ದಾಖಲೆಗಳ ಸಹಿತ, ತಮ್ಮ ತಮ್ಮ ತಾಲೂಕಿನ ಮಾಮಲೇದಾರರ ಕಡೆಗೆ ಇಲ್ಲವೆ ಪೇಟೆಯ ಮಹಾಲಕರಿಗಳ ಕಡೆಗೆ ಒಪ್ಪಿಸಬೇಕು

(೧) ಸರಕಾರದವರು ಸ್ಥಳೀಕ ಖರೀದಿ ಮಾಡಿದ ಆಹಾರ ಧಾನ್ಯಗಳ ಬೆಲೆ (cost),

(೨) ಸಾಗಿಗೆಯ ಖರ್ಚು,

(೩) ಸೀಧಾ-ಅಂಗಡಿಗಳಿಗೆ ಸಲ್ಲತಕ್ಕ ದಲಾಲಿ,

(೪) ಭತ್ತದ ಅಕ್ಕಿ ಮಾಡಿಸಿದ್ದು, ಕಾಲು ಸ್ವಚ್ಛಗೊಳಿಸಿದ್ದು, ಸರಕು ಹೊರಗೆ-ಒಳಗೆ ಹಾಕಿದ್ದು ಇಲ್ಲವೆ ಮೇಲೆ-ಕೆಳಗೆ ಏರಿಳಿಸಿದ್ದು ಮುಂತಾದ ಕೆಲಸಗಳ ಬಗ್ಗೆ ಸಲ್ಲತಕ್ಕ ಹಣ

ತಾ ೧೫-೧-೧೯೪೮ರ ನಂತರ ಸಾದರಗೊಳಿಸಲ್ಪಟ್ಟ ಬೇಡಿಕೆಗಳ ವಿಚಾರವಾಗುವಂತಿಲ್ಲ

ಸೋಮವಾರ, ೨೯-೧೨-೪೭ }
R J Rebello,
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

ನಂ ೧೨೦ ಸೋಮವಾರ, ತಾ ೩೧-೧೨-೪೭

ಪತ್ರಿಕಾ ಪ್ರಕಟನೆ.

ಪ್ರಾಂತಿಕ ಟೆಕ್ಸ್‌ಟ್ಯಾಯಿಲ ಕಂಟ್ರೋಲರ, ಮುಂಬಯಿ ಇವರು ೧೯೪೭ನೇ ಇಸವಿಯ ನವಂಬರ ತಿಂಗಳ ಬಾಬತು ನಮ್ಮ ಜಿಲ್ಹೆಗೆ ಈ ಕೆಳಗೆ ಕಾಣಿಸಿದಷ್ಟು ಗಿರಣಿ ಬಟ್ಟೆ ಕೊಟ್ಟಿರುತ್ತಾರೆ ಅದು ಈ ಜಿಲ್ಹೆಗೆ ಬಂದು ಮುಟ್ಟಿದ ಮೇಲೆ ಆರಿಸಲ್ಪಟ್ಟ ಕಿರಕೋಳ ವ್ಯಾಪಾರಿಗಳಿಗೆ ಹಂಚಲ್ಪಡುವದು

ಕೇಂದ್ರದ ಹೆಸರು	ಬಂದ ಗಂಟ್ರಿಗಳ ಸಂಖ್ಯೆ	ಜನಗು ಖಾ ಆಕಿ ಜನಗು ಗಂಟ್ರಿಗಳೆಷ್ಟು?	ಇತರ ಗಂಟ್ರಿಗಳೆಷ್ಟು?
ಮುಂಬಯಿ	೧೦೮	೩೦	೭೮
ಜಳಗಾಂವ (ಖಾನದೇಶ ಜಿಲ್ಹೆ)	೮೧		೮೧
ಒಟ್ಟು ಗಂಟ್ರಿಗಳು	೧೮೯	೩೦	೧೫೯

R J Rebello.
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

— ೧೯೪೭ರ ಸಾವಕಾರಿ ಕಾಯಿದೆಯನ್ವಯ ಮುಂಬಯಿ ಸರಕಾರವು ಒಂದು ಪ್ರಕಟನೆ ಹೊರಡಿಸಿ, ಕಾರ್ಯವಿದ್ದ ಸಾಲಗಳಿಗೆ ನೂರಕ್ಕೆ ವರ್ಷಕ್ಕೆ ೬ಕ್ಕೆ ಮಿಕ್ಕ ಮತ್ತು ಸಾದಾ ಸಾಲಗಳಿಗೆ ೯ ಸಲಗೆ ಮಿಕ್ಕ ಬಡ್ಡಿ ಆಕರಿಸತಕ್ಕದ್ದಲ್ಲೆಂದು ವಿಧಿಸಿದೆ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮುಟೆಯಲ್ಲಿರುವ ತಮ್ಮ
"ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ಹೊನ್ನಾವರ ತಾಲೂಕ
ಚೌಕ ಗ್ರಾಮದ ಭೂಮಾಲೀಕರ ಸಂಘದ ತೀರ್ಮಾನಗಳು.

ಕಡತೋಕಾ ಗ್ರಾಮದ ಶ್ರೀ ಸ್ವಯಂಭೂ ದೇವಸ್ಥಾನದಲ್ಲಿ ತಾ ೩೧-೧೨-೪೭ನೇ ಬುಧವಾರ ಸಾಯಂಕಾಲ ೬ ಘಂಟೆಗೆ ಶ್ರೀ॥ ನರಸಿಂಹ ಗೋವಿಂದ ಶಾನಭಾಗ, ಬಿ. ಎ., ಎಲ್ ಎಲ್ ಬಿ, ವಕೀಲ, ಕುಮಟಾ ಇವರ ಅಧ್ಯಕ್ಷತೆಯಲ್ಲಿ ಸೇರಿದ ಹೊನ್ನಾವರ ತಾಲೂಕ ಚೌಕ ಗ್ರಾಮ ಭೂಮಾಲೀಕರ ಸಂಘದ ಮಹಾಸಭೆಯಲ್ಲಿ ಕೈಕೊಂಡ ತೀರ್ಮಾನಗಳು.

ಸಭಾಪತಿಗಳ ಆಯ್ಕೆ

೧. ಈ ಸಭೆಗೆ ಶ್ರೀ॥ ನರಸಿಂಹ ಗೋವಿಂದ ಶಾನಭಾಗ, ವಕೀಲ, ಕುಮುಟಾ ಇವರು ಸಭೆಯ ಅಧ್ಯಕ್ಷರಾಗಬೇಕೆಂದು ಬಂದ ಸೂಚನೆಯು ಸರ್ವಾನುಮತದಿಂದ ಮನ್ನಿಸಲ್ಪಟ್ಟಿತು

ಪಾಲಿನ ಸಾಗ್ವಳಿಯಿದ್ದಲ್ಲಿ ಒಡೆಯರ ಪಾಲು ನಗದಿಯಿಂದ ಕೊಡಿಸುವ ಯೋಜನೆಗೆ ವಿರೋಧ

೨. ಮುಂಬಯಿ ಸರಕಾರವು "ಟೆನನ್ಸಿ ಆಕ್ಟಿ"ನ ೧೫ ಅ ಕಲಮಿನನ್ವಯ ಪಾಲಿನ ಸಾಗ್ವಳಿ ಭೂಮಿಯ ಒಡೆಯನ ಪಾಲಿನ ಉತ್ಪನ್ನವನ್ನು ನಗದಿಯಿಂದ ಕೊಡಿಸುವ ಜಾಹೀರನಾಮೆಯನ್ನು ಹೊರಡಿಸುವ ವಿಚಾರ ನಡಿಸಿದ್ದು, ಈ ಬಗ್ಗೆ ಆಕ್ಷೇಪವಿದ್ದರೆ ತಾ. ೨೫ ೧-೪೮ರೊಳಗೆ ಸರಕಾರಕ್ಕೆ ತಿಳಿಸಬೇಕಾಗಿ ಪ್ರಕಟನೆ ಹೊರಡಿಸಿದೆ. ಸದರಿ ಪ್ರಕಟನೆಯಲ್ಲಿ ನಮೂದಿಸಿದ ಜಿಲ್ಹೆಗಳು ಹಿಂದುಳಿದ ಒಕ್ಕಲಿಗರ ಪ್ರದೇಶವಾದ್ದರಿಂದ, ಪಾಲಿನ ಉತ್ಪತ್ತಿಯನ್ನು ನಗದಿಯಿಂದ ರೂಪಾಂತರಿಸುವ ವಿಚಾರ ನಡೆದಿದೆಯಾಗಿ ಉಲ್ಲೇಖಿಸಲ್ಪಟ್ಟಿದೆ ಸಮಾಜವು ಹಿಂದುಳಿಯುವದಕ್ಕೂ, ನಗದಿ ಉತ್ಪತ್ತಿ-ನಿರ್ಣಯಕ್ಕೂ ಯಾವ ಸಂಬಂಧವಿರುತ್ತದೆಂಬದು ಈ ಸಂಘಕ್ಕೆ ಗ್ರಹಿಕೆಯಾಗುವದಿಲ್ಲ ಅರ್ಥ-ಶಾಸ್ತ್ರದ ತತ್ವದಂತೆ ಮತ್ತು ವ್ಯವಹಾರದ ದೃಷ್ಟಿಯಿಂದ ಪಾಲಿನ ಉತ್ಪತ್ತಿಯನ್ನು ನಗದಿಯಲ್ಲಿ ರೂಪಾಂತರಿಸುವದಕ್ಕಿಂತ ಅದನ್ನು ಧಾನ್ಯ ರೂಪದಲ್ಲಿ ಕೊಡಿಸುವದೇ ಯೋಗ್ಯ ತೋರುತ್ತದೆ ತಮ್ಮ ಉದರ-ನಿರ್ವಾಹಕ್ಕಾಗಿ ಕಾಳು ಸಿಗಬೇಕೆಂತಲೇ ಒಡೆಯರು ಭೂಮಿಯನ್ನು ಪಾಲಿನ ಸಾಗ್ವಳಿಗೆ ಕೊಡುವದು ಪರಂಪರೆಯಿಂದ ನಡೆದು ಬಂದಿರುತ್ತದೆ ಪ್ರಾಚೀನ ಕಾಲದಲ್ಲಿ ಭೂಕಂದಾಯವನ್ನು ಸಹ ಸರಕಾರವು ಕಾಳಿನ ರೂಪದಿಂದ ವಸೂಲ ಮಾಡುತ್ತಿತ್ತು ಮುಂಬಯಿ ಸರಕಾರದ ಅರ್ಥ ಇಲಾಖೆಯ ಈಗಿನ ಮಂತ್ರಿಗಳಾದ ಮಾನ್ಯ ವೈಕುಂಠಲಾಲ ಮೇಹತಾರವರು ಬರೆದ ಒಂದು ಪತ್ರವನ್ನು ಮಹಾತ್ಮರು ಹರಿಜನ ಪತ್ರಿಕೆಯಲ್ಲಿ ಪ್ರಕಟಿಸಿ, ಭೂಕಂದಾಯದ ವಸೂಲಿಯನ್ನು ಸರಕಾರವು ಕಾಳಿನ ರೂಪದಿಂದ ಮಾಡುವದಾಗಿ ಸೂಚಿಸಿ, ಆಯಾ ಗ್ರಾಮ-ಪಂಚಾಯತಿಗಳು ತಮ್ಮ ಊರ ಜನರ ನಿರ್ವಾಹಕ್ಕೆ ಬೇಕಾದಷ್ಟು ಕಾಳನ್ನು ಆಪದ್ಧನವೆಂದು ಸಂಗ್ರಹಿಸಿ ಇಡಬೇಕೆಂದು ಸೂಚಿಸಿದ್ದುಂಟು ಇದರ ಮೇಲಿಂದ ನಗದಿ-ವ್ಯವಹಾರಕ್ಕಿಂತ ಕಾಳಿನ ವ್ಯವಹಾರವೇ ಸಮಾಜ ಧಾರಣೆಗೆ ಅವಶ್ಯವೆಂತ ಸಿದ್ಧವಾಗುತ್ತಿದೆ ಒಕ್ಕಲಿಗರು ಹಿಂದುಳಿದವರಿದ್ದರೆ ದುಡ್ಡಿಗಿಂತ ಕಾಳಿನಿಂದ ಉತ್ಪತ್ತಿಯನ್ನು ಕೊಡುವದೇ ಸುಲಭವಾದದ್ದಿರುತ್ತದೆ. ದುಡ್ಡಿನ ವ್ಯವಹಾರವು ಸುಧಾರಣೆಯ ಲಕ್ಷಣವೆಂದು ಎಣಿಸಲ್ಪಡುತ್ತಿದ್ದರೂ ಸಮಾಜ ಧಾರಣೆಗಾಗಿ ಕಾಳಿನ ವ್ಯವಹಾರವನ್ನು ಪ್ರೋತ್ಸಾಹಿಸುವದು ಅವಶ್ಯವುಂಟು ಹಿಂದುಳಿದ ಸಮಾಜದವರಿಗೆ ದುಡ್ಡಿನ ವ್ಯವಹಾರಕ್ಕಿಂತ ಕಾಳಿನ ವ್ಯವಹಾರದ ಜ್ಞಾನ ಹೆಚ್ಚಿಗೆ ಇರುತ್ತದೆ

ಪಾಕಿಸ್ತಾನದ ದುಷ್ಕೃತಿ.

(ಸಂಲಕ್ಷಕನು ಬರೆದುದು)

[illegible]

ಕಾನಡಾ ಜಿಲ್ಲೆಯ

ದೈವಜ್ಞ ಬ್ರಾಹ್ಮಣ ಸಂಘದ ದುರವಸ್ಥೆ

[illegible]

ಜಿಲ್ಲಾ ಸಮಾಚಾರ.

ಕುಮಟಾ— [illegible]

[illegible]

NOTICE

Applications are invited for the post of the Secretary in the Municipal Office at Kumta. The scale of pay of the post is Rs 40-5/2-65-3/1-80-5/2-90 plus temporary additional pay at Rs 10/, dearness allowance at Rs 22/ and cycle allowance at Rs 3/- p m. Those who have passed Matriculation and hold diploma in L S G D or higher qualification should apply before 31-1-1943 stating full name age, caste qualifications and previous experience if any together with the testimonials of character and past service. Candidates knowing Kannada only should apply. The applicants will have to present themselves for interview if called, at their own expense.

Kumta, Municipal Offices, 5th January 1943 — Govind V Pai, President, Kumta Municipality

ತಂಬಾಕು ಸೇಲ ನೋಟು ಬೂಕುಗಳೂ

ಗೇಣಿ ರಶೀದಿ ಬೂಕುಗಳೂ

ನಮ್ಮಲ್ಲಿ ಮಾರಾಟಕ್ಕೆ ಸಿಗುತ್ತವೆ

ಬರೆಯಿರಿ

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಜಿಲ್ಲಾ ಸಮಾಚಾರ.

ಯಲ್ಲಾಪುರ— (ತಾ ೨೬-೧೨-೪೭) ಇದಗುಂದಿ ಸೀಮೆಯ ಅಡಿಕೆ ಸುಂಕದ ಅಧಿಕಾರಿಗಳ ಸಂಬಂಧವಲ್ಲಿ ತಾ ೧೫ ೧೨-೪೭ರ 'ವೃತ್ತ'ದಲ್ಲಿ ಪ್ರಕಟವಾದ ಟೀಕೆ ಅಯಥಾರ್ಥವಿರುತ್ತದೆಂದು ಆ ಸೀಮೆಯ ತೋಟಿಗರ ಬಾಂಧವರು ಕೆಲವರು ಬರೆಯುತ್ತಾರೆ ಇದಗುಂದಿಯಲ್ಲಿ ಅನುಕೂಲ ಬಿಡಾರ ಸಿಗದ ಮೂಲಕ ಸದರಿ ಅಧಿಕಾರಿಗಳು ಯಲ್ಲಾಪುರದಲ್ಲಿರುತ್ತಾರೆಂತಲೂ, ಯಲ್ಲಾಪುರದಲ್ಲಿ ಇರುವದೂ ತೋಟಿಗರಿಗೆ ಟಿ ಪಿ ಫಾರ್ಮ ಪರ್ಮಿಟ ಸಿಗಲು ತೊಂದರೆಯಾಗುವದಿಲ್ಲೆಂತಲೂ, ಸುಂಕದ ಹಣ ತುಂಬುವದೂ ಯಲ್ಲಾಪುರದಲ್ಲಿ ತುಂಬಬೇಕಾಗುವದರಿಂದಲೂ, ಇದಗುಂದಿಯಲ್ಲಿ ಅಡಿಕೆ ಕಲೆಕ್ಟ ಮಾಡಲಿಕ್ಕೆ ಸರಿಯಾದ ಕಂಟ್ರಾಕ್ಟರು ಇಲ್ಲದ್ದರಿಂದ ಅಡಿಕೆಯನ್ನು ಯಲ್ಲಾಪುರಕ್ಕೆ ಒಯ್ಯುವದು ಅನುಕೂಲವಾಗುತ್ತದೆಂತಲೂ ಅಡಿಕೆಯನ್ನು ಮುಂದೆ ಪೇಟೆಗೆ ಕಳಿಸುವದಾದರೆ ಯಲ್ಲಾಪುರದಿಂದಲೇ ಒಯ್ಯಬೇಕಾಗುತ್ತದೆಂತಲೂ, ಅಧಿಕಾರಿಗಳು ಯಲ್ಲಾಪುರದಲ್ಲಿರುವದರಿಂದ ತೋಟಿಗರಿಗೆ ಅನಾನುಕೂಲತೆಯಾಗುವ ಬದಲು ಅನುಕೂಲವೇ ಆಗುತ್ತದೆಂತಲೂ ಸದರಿ ಬಾಂಧವರು ತಿಳಿಸುತ್ತಾರೆ

ಕಳೆದ ತಾ ೧೭ನೇಗೆ ಈ ತಾಲೂಕಿನಲ್ಲಿ ಬೆಳೆ ಮಳೆಯಾಯಿತು ಅದರಿಂದ ಗದ್ದೆ ಕೊಯಿಲು ಪ್ರಾರಂಭಿಸಿದವರಿಗೆ ಹಾನಿಯಾಗಿದೆ

ಡೊಣಗಾರದಲ್ಲಿ ಹುಲಿ ಹಾವಳಿ ಇನ್ನೂ ನಡೆದಿದೆ ಕಳೆದವಾರ ಹುಲಿಯು ಒಂದು ಎತ್ತು ಮುರಿದಿದೆ ಇನ್ನೊಂದು ದಿನ ಒಂದು ಆಕಳು ಅದರ ಬಾಯಿಗೆ ಸಿಕ್ಕಿತ್ತು. ಅದರ ಸುದೈವದಿಂದ ಬಂದ ಸಂಕಟ ಅದರ ಕಾಲಿನ ಮೇಲೆಯೇ ಹೋಯಿತು ಇನ್ನೊಂದು ದಿನ ಇದಗುಂದಿಯ ಗೌಡರ ಹೋರಿಗೆ ರಕ್ತ ಒಡಿಸುವ ತನ್ನ ಕೋಣವನ್ನು ತಿರುಗಿ ಮನೆಗೆ ಹೊಡೆಕೊಂಡು ಹೋಗುವಾಗ ಹುಲಿಯು ಅದರ ಮೇಲೆ ಹಾರಿ ಬಂದು ಅದನ್ನು ಗಾಯಗೊಳಿಸಿತಂತೆ, ಮುಂದೆ ೨ ದಿವಸಗಳಲ್ಲಿ ಆ ಕೋಣ ಸತ್ತು ಹೋಯಿತು ಈ ಹುಲಿಯು ಪಿಶಾಚ್ಯವನ್ನು ಜನರು ಹೇಗಾದರೂ ಸಹಿಸುತ್ತಿದ್ದರು ಆದರೆ ಜಂಗಲ ಇಲಾಖೆಯವರ ಉಪದ್ರವಕ್ಕೆ ಅಂಜಿ ಅವರು ಸಾಕ್ಷ್ಯಗಳಿದ್ದು ಬಂದ ಕಷ್ಟ ಸಹಿಸಿಕೊಳ್ಳಬೇಕಾಗಿದೆ! ಒಂದು ತಿಂಗಳ ಹಿಂದೆ ಕಾಂಪಾರ್ಟಮೆಂಟಿನಲ್ಲಿ ಹಾವಳಿ ಮಾಡುತ್ತಿದ್ದ ಹಲಿಯನ್ನು ಕೊಂದ ಗಣಿ ನಾಯ್ಕನಿಗೆ ಅಧಿಕಾರಿಗಳು ಕಚೇರಿಗೆ ಕರೆದೊಯ್ದು, 'ನೀನು ಹುಲಿಯನ್ನು ಹ್ಯಾಗೆ ಹೊಡೆದೆ? ಕೋವಿ ಕೊಂಡು ಹೊಡೆದಿಯೋ, ಕಟ್ಟಿಹಾಕಿ ಹೊಡೆದ?' ಎಂದು ಮುಂತಾಗಿ ಪ್ರಶ್ನೆ ಮಾಡಿದರಂತೆ! ಇದರ ಮೇಲಿಂದ ಅಧಿಕಾರಿಗಳಿಗೆ ಹಳ್ಳಿಯವರ ಜೀವಿತಗಳಿಗಿಂತ ಜಂಗಲ ಪಶುಗಳ ಕಾಳಜಿ ಹೆಚ್ಚಿಗೆ ಇರುತ್ತದೆಂದು ಊಹಿಸಬೇಕಾಗುತ್ತದೆ!!

(ತಾ ೨೬ ೧೨-೪೭) ಮೊನ್ನೆ ಬುಧವಾರ ಮುಂಜಾನೆ ಧಾರವಾಡದಿಂದ ಹೊರಟು ಇಲ್ಲಿ ಬರುತ್ತಿದ್ದ ದಿ ಕೇ ಮೋಟರ ಸರ್ವೀಸಿನ ಗಾಡಿಯಲ್ಲಿ ರಾ ನಾಡಕರ್ಣಿಯವರೆಂಬ ಸೇವಾನಿವೃತ್ತ ಡಿಪ್ಯೂಟಿ ಪೋಲೀಸ ಸುಪರಿಂಟೆಂಡೆಂಟರು ಪ್ರಯಾಣ ಬೆಳೆಸಿದ್ದರು (ಡ್ರಾಯವ್ಹರನ ಎಡಬದಿಯ) ಅಗ್ರಾಸನವನ್ನು ಅವರು ಅಲಂಕರಿಸಿದ್ದರು ಗಾಡಿಯಲ್ಲಿ ೩೦ ೪೧ ಪ್ರಯಾಣಿಕರಿದ್ದರು ಗಾಡಿಯು ವಿಶಾಲವಿದ್ದುದರಿಂದ ಯಾರಿಗೂ ಕೂಡುಕೊಳ್ಳಲು ಅಡಚಣೆಯಾಗಿದ್ದಿಲ್ಲ ಮತ್ತು ಯಾರೂ ತಂಟೆ ತಕರಾರು ಮಾಡಿದ್ದಿಲ್ಲ ಆದರೂ ಅಗ್ರಾಸನದಲ್ಲಿ ಕೂತ ನಾಡಕರ್ಣಿ ಮಹಾಶಯರು ಪ್ರತಿ ೨ ಮೈಲಿಗೆ, ೪ ಮೈಲಿಗೆ ಗಾಡಿ ನಿಲ್ಲಿಸಹೇಳಿ ಪ್ರಯಾಣಿಕರನ್ನು ಎಣಿಸುತ್ತಿದ್ದರು! ಅದೇಕೋ ಅವರಿಗೇ ಗೊತ್ತು! ಕಿರವತ್ತಿಯಲ್ಲಿ ಅವರು ಪೋಲೀಸರ ಕಡೆಯಿಂದ ಪಂಚನಾಮೆಯನ್ನೂ ಮಾಡಿಸಿದರು! ಇವರ ಈ ವಿಕ್ಷಿಪ್ತ ನಡವಳಿಯಿಂದ ಗಾಡಿಗೆ ವಿಳಂಬವಾಗಿ ಜನರಿಗೆ ತೊಂದರೆಯಾಗುತ್ತದಾಗಿ ಒಬ್ಬಿಬ್ಬ ಪ್ರಯಾಣಿಕರು ಅವರಿಗೆ ಹೇಳಲಾಗಿ "ಈಗ ನಿಮಗೆ ಕಷ್ಟವಾದರೆ ಮುಂದೆ ಸುಖವಾಗುವದು" ಎಂದು ಹೇಳಿದರು! ಅದರ ಅರ್ಥ ಯಾರಿಗೂ ತಿಳಿಯಲಿಲ್ಲ! ಈ ಮಹಾಶಯರ ಪೂರ್ವಾಪರವಾಗಲಿ ಹೆಸರಾಗಲಿ ಯಾರಿಗೂ ಗೊತ್ತಿದ್ದಿಲ್ಲ ಒಮ್ಮೆ ಅವರು ಕೇಳಿದರು, "ನಾನು ಯಾರು ಬಲ್ಲಿರಾ? ನಾನು ಡಿ ಪೋಲೀಸ ಸುಪರಿಂಟೆಂಡೆಂಟ ಪದದಿಂದ ನಿವೃತ್ತನಾಗಿರುತ್ತೇನೆ ನಾನು ಅಧಿಕಾರದಲ್ಲಿದ್ದಾಗ ನಿನ್ನಂಥ (ಡ್ರಾಯವ್ಹರನನ್ನು ಅನುಲಕ್ಷಿಸಿ) ಎಷ್ಟೋ ಜನ ನನ್ನ ಬಾಗಿಲಲ್ಲಿ ಕಾದುಕೊಂಡುಕೊಳ್ಳುತ್ತಿದ್ದರು!" ಎಂದೂ, 'ನಾನು ನಾಡಕರ್ಣಿ ಮನೆತನದಲ್ಲಿ ಹುಟ್ಟಿದ್ದು ಹೌದಾದರೆ " ಎಂದು ಮುಂತಾಗಿ ಅವರು ಆರ್ಭಾಟ ಮಾಡಿದ್ದರಿಂದಲೇ ಅವರ ಪರಿಚಯ ಜನರಿಗಾಯಿತು ಅವರು ಆಡಿದ ಅಪಾತ್ರಗಳ ನ್ನು ಮಾಡಿದ ಕೃತಿಗಳನ್ನು ನೋಡಲಾಗಿ, ದೀರ್ಘಕಾಲ ಪರ ಮಾಡ ಗುನ್ಹೆಗಾರರ ಸಂಪರ್ಕವಾದ್ದರಿಂದ ಆ ಗುನ್ಹೆಗಾರರ ದುರ್ಗುಣಗಳು ಈ ಮಹಾಶಯರ ಮೈಯಲ್ಲಿ ಸೇರಿರಬೇಕೆಂದು ಜನರು ಊಹಿಸಿದರು ಅಂತು ನಾಡಕರ್ಣಿಯವರ ವಿಕ್ಷಿಪ್ತ ನಡಾವಳಿಯ ಮೂಲಕ ಮೋಟರು ಇಲ್ಲಿ ಬಂದು ಮುಟ್ಟಲು ೨ ೨ ತಾಸು ತಡವಾಯಿತು

ಶಿರಸಿ— (ತಾ ೨೧-೧೨-೪೭) ಕಳೆದ ತಾ ೧೫ರ "ವೃತ್ತ"ದಲ್ಲಿ ಮತ್ತಿಗಾರ ಶಾಲೆಯ ಶಿಕ್ಷಕ (ಆಗರಗೋಣದ ನಾಯ್ಕರ)ರ ವಿರುದ್ಧ ಪ್ರಕಟವಾದ ಟೀಕೆ ನಿರಾಧಾರವಿರುತ್ತದೆಂತಲೂ ಸದರಿ ಶಿಕ್ಷಕರು ಶಾಲೆಯಲ್ಲಿ ಮನಮುಟ್ಟಿ ದುಡಿದು ವಿದ್ಯಾರ್ಥಿಗಳಿಗೆ ಚಲೋ ಶಿಕ್ಷಣ ಕೊಡುತ್ತಾರೆಂತಲೂ ಸದರಿ ಶಾಲೆಯ ೪ ಮಂದಿ ಪಂಚರು ತಿಳಿಸುತ್ತಾರೆ

ಪತ್ರಿಕಾ-ಪ್ರಕಟನೆ.

ತಾ ೧೦ ೧ ೧೯೪೭ಕ್ಕೆ ಪ್ರಕಟಿಗೊಳಿಸಲ್ಪಟ್ಟ ಹೊಸ ತಿದ್ದುಪಡಿ ಹೊಂದಿದ ಆಹಾರ ಸಂಬಂಧಿ ಧೋರಣೆಗನುಸಾರವಾಗಿ ಮುಂಬಯಿ ಸರಕಾರವು ಈ ಕೆಳಗಿನ ಪ್ರಕಟನೆಗಳನ್ನು ಹೊರಡಿಸಿದ್ದುಂಟು —

(೧) ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ, ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಅಥವಾ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಮುಖ್ಯ ಆಹಾರ ಧಾನ್ಯಗಳ ಹಾಗೂ ಕಡಲೆಯ ಸಾಗಾಟವನ್ನು ಪ್ರತಿಬಂಧಿಸಲು ಹೊರಡಿಸಿದ ಆಜ್ಞೆಗಳು ರದ್ದುಗೊಳಿಸಲ್ಪಟ್ಟಿವೆ

(೨) ಆಹಾರ ಧಾನ್ಯಗಳ ಮಾರಿಗೆ ಪರ್ಮಿಟ ಇಲ್ಲದೆ ವಿಲೆವಾಟ ಮಾಡುವದನ್ನು ಪ್ರತಿಬಂಧಿಸುತ್ತಿದ್ದ ಆಜ್ಞೆಯು ರದ್ದುಗೊಳಿಸಲ್ಪಟ್ಟಿದೆ

(೩) ಮುಖ್ಯ ಆಹಾರ ಧಾನ್ಯಗಳ ಹಾಗೂ ಕಡಲೆಯ ಅಧಿಕ ಬೆಲೆ ನಿರ್ಧರಿಸಿದ ಸದ್ಯದ ಆಜ್ಞೆಗಳು ರದ್ದುಗೊಳಿಸಲ್ಪಟ್ಟಿವೆ

(೪) ಲೆವ್ಹಿ ಹಾಕುವ ರಿವಾಜು ರದ್ದುಗೊಳಿಸಲ್ಪಟ್ಟಿದೆ

(೫) ಬೇರೆ ವ್ಯಾಪಾರಿಗಳು ತಮ್ಮ ಸಂಗ್ರಹದಲ್ಲಿರುವ ಆಹಾರ ಧಾನ್ಯಗಳ ಹಾಗೂ ಕಡಲೆಯ ಪರಿಮಾಣವನ್ನು ನಿರ್ದಿಷ್ಟ ದಿವಸಗಳಲ್ಲಿ ಸರಕಾರಕ್ಕೆ ತಿಳಿಸಬೇಕೆಂದು ವಿಧಿಸಿದ ಆಜ್ಞೆಯೂ ರದ್ದುಗೊಳಿಸಲ್ಪಟ್ಟಿದೆ

ಈ ಎಲ್ಲ ವಿಷಯಗಳ ಬಗ್ಗೆ ಅವಶ್ಯವುಳ್ಳ ಕಾನೂನ ಬದ್ಧ ಪ್ರಕಟನೆಗಳು ತಾ ೧೫ ೧೨-೧೯೪೭ರ ಮುಂಬಯಿ ಸರಕಾರದ ವಿಶೇಷ ಗಾಝೇಟಿನಲ್ಲಿ ಪ್ರಕಟಗೊಳಿಸಲ್ಪಟ್ಟಿವೆ

೨ ಇನ್ನು ಮುಂದೆ ಉಳಿಯುವ ನಿರ್ಬಂಧಗಳು ಈ ಕೆಳಗಿನವು ಮಾತ್ರ ಅವು ಯಾವವೆಂದರೆ —

(೧) ಆಹಾರ-ಧಾನ್ಯಗಳ (I) ರೋಖ ವ್ಯಾಪಾರಕ್ಕೂ (II) ಕಿರಕೋಳ ವ್ಯಾಪಾರಕ್ಕೂ ಪರವಾನೆಗಳನ್ನು ಪಡಕೊಳ್ಳಬೇಕು ಈ ತರಹ ಇಂಥ ಪರವಾನೆಗಳು ೧೯೪೬ರ ಆಹಾರ ಧಾನ್ಯಗಳ ನಿಯಂತ್ರಣಾಜ್ಞೆ ಮತ್ತು ೧೯೪೬ರ ಕಿರಕೋಳ ವ್ಯಾಪಾರದ ನಿಯಂತ್ರಣ ಮತ್ತು ಪರವಾನೆ ಕೊಡುವ ಆಜ್ಞೆಗಳನ್ವಯ ಅವಶ್ಯವಿದ್ದವು ಈ ಎರಡೂ ಆಜ್ಞೆಗಳನ್ನು ಕೆಲವು ಚಿಕ್ಕ-ಪುಟ್ಟ ತಿದ್ದುಪಡಿಗಳೊಂದಿಗೆ ಪುನಃ ಹೊರಡಿಸಲಾಗಿದೆ ೧೯೪೬ರ ಆಹಾರ ಧಾನ್ಯಗಳ ನಿಯಂತ್ರಣಾಜ್ಞೆಯಂತೆ ಹಿಂದೆ ಕೊಡಲ್ಪಟ್ಟ ಹಾಗೂ ಇನ್ನೂ ಅಸ್ತಿತ್ವದಲ್ಲಿರುವ ಪರವಾನೆಗಳು ಹೊಸ ಆಜ್ಞೆಯನ್ವಯ ಕೊಡಲ್ಪಟ್ಟವುಗಳೆಂದು ಗಣಿಸಲ್ಪಡುವವು ಹೊಸ ಪರವಾನೆಗಳ ಬಗ್ಗೆ ಮಾಡತಕ್ಕ ಅರ್ಜಿಗಳನ್ನು ಮುಂದೆ ಬೃಹನ್-ಮುಂಬಯಿಯ ಸಂಬಂಧದಲ್ಲಿ ಮುಂಬಯಿಯ ನಾಗರಿಕ ಪೂರೈಕೆಗಳ ಡಾಯರೆಕ್ಟರರಿಗೆ ಇನ್ನಿತರ ಭಾಗಗಳ ಸಂಬಂಧದಲ್ಲಾದರೆ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರಿಗೂ ಮಾಡಬೇಕು ಈ ಸಂಬಂಧ ಪ್ರಕಟನೆಗಳು ಕೂಡ ತಾ ೧೫-೧೨-೧೯೪೭ರ ಮುಂಬಯಿ ಸರಕಾರದ ವಿಶೇಷ ಗಾಝೇಟಿನಲ್ಲಿ ಪ್ರಕಟವಾಗಿವೆ

(೨) ೧೯೪೩ರ ಆಹಾರ ಧಾನ್ಯಗಳ (ಚಲನ-ವಲನ ನಿಯಂತ್ರಣದ) ಆಜ್ಞೆಯಲ್ಲೂ ಕೆಲವು ಬದಲಾವಣೆಗಳು ಮಾಡಿ ಅದನ್ನು ಹೊಸದಾಗಿ ಹೊರಡಿಸಲಾಗಿದೆ ಹೊಸ ಆಜ್ಞೆಯಾದರೂ ತಾ ೧೫-೧೨-೧೯೪೭ರ ಮುಂಬಯಿ ಸರಕಾರದ ವಿಶೇಷ ಗಾಝೇಟಿನಲ್ಲಿ ಪ್ರಸಿದ್ಧಿಸಲ್ಪಟ್ಟಿದೆ ಈ ಆಜ್ಞೆಯನ್ವಯ ಕೊಡಲ್ಪಟ್ಟ ಅಪ್ಪಣೆ ಚೀಟಿ(ಪರವಾನೆ)ಗಳಿಲ್ಲದೆ ಯಾವದೇ ಆಹಾರ-ಧಾನ್ಯಗಳನ್ನಾಗಲಿ ಕಡಲೆಯನ್ನಾಗಲಿ ಮುಂಬಯಿ ಪ್ರಾಂತದಿಂದ ಹೊರಗೆ ನಿರ್ಯಾತ ಮಾಡಲು ಬರುವಂತಿಲ್ಲ

(೩) ಬೃಹನ್ ಮುಂಬಯಿ ಬಿಟ್ಟು ಇನ್ನುಳಿದ ಪ್ರಾಂತವನ್ನು ೨ ವಿಭಾಗಗಳಲ್ಲಿ ವಿಭಾಗಿಸಲಾಗಿದೆ ೧ ವಿಭಾಗದಲ್ಲಿ ಅಹಮದಾಬಾದ, ಖೇಡಾ, ಪಂಚಮಹಾಲ ಮತ್ತು ಸೂರತ ಜಿಲ್ಲೆಗಳು ಬರುತ್ತವೆ, ಇನ್ನೊಂದು ವಿಭಾಗದಲ್ಲಿ ಪ್ರಾಂತದ ಉಳಿದ ಪ್ರದೇಶ ಸೇರುತ್ತದೆ ಈ ಎರಡು ವಿಭಾಗಗಳ ಪ್ರತಿಯೊಂದರಲ್ಲಿ ಬೇಕಾದ ಆಹಾರ ಧಾನ್ಯಗಳನ್ನು ಸಾಗಿಸಬಹುದು ಸೀಧಾ ಕ್ಷೇತ್ರಗಳಲ್ಲದೆ ಅವುಗಳಲ್ಲಿ ಯಾವದೊಂದು ಅಸ್ತಿತ್ವದಲ್ಲಿರುವರೆಗೆ ಆ ಕ್ಷೇತ್ರಗಳಲ್ಲಿ ಹೊರಗಿಂದ ಆಹಾರ ಧಾನ್ಯಗಳ ಒಯ್ಯಲಿಕ್ಕೂ, ಆ ಕ್ಷೇತ್ರಗಳೊಳಗಿಂದ ಹೊರಗೆ ಅವು ಹೊರಗೆ ಒಯ್ಯಲಿಕ್ಕೂ ಸದ್ಯಕ್ಕೆ ಇರುವ ಪ್ರತಿಬಂಧ ಮಾತ್ರ ಹಾಗೆಯೇ ಉಳಿಯುವವು ಆದೇ ಮೇರೆಗೆ ಮೇಲೆ ಹೇಳಿದ ೧ ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಆಹಾರ ಧಾನ್ಯಗಳನ್ನು ಸಾಗಿಸಲಿಕ್ಕೆ, ಯಾವದೇ ಸಂದರ್ಭದಲ್ಲಿ ರೂ, ನಾಗರಿಕ ಪೂರೈಕೆಗಳ ಡಾಯರೆಕ್ಟರರ ಕಡೆಯಿಂದ ಅಪ್ಪಣೆ ಚೀಟಿ ಪಡಕೊಳ್ಳುವದು ಅವಶ್ಯವುಂಟು ಈ ಸಹ ಸದರಿ ಗಾಝೇಟಿನಲ್ಲಿ ಪ್ರಕಟವಾಗಿದೆ

(೪) ಆಹಾರ-ಧಾನ್ಯಗಳ ಸಂಬಂಧದಲ್ಲಿ ಇನ್ನು ಜಾರಿಯಲ್ಲಿರುವ ಆಜ್ಞೆಗಳು ಯಾವವೆಂದರೆ —

(I) ೧೯೪೭ರ ಮುಂಬಯಿಯ ಆವಶ್ಯಕ ವಸ್ತುಗಳ (ವಿಲೆವಾಟಿನ ನಿಯಮನ ಹಾಗೂ ಸಂಪಾದನೆಗಳ) ಆಜ್ಞೆ ಈ ಆಜ್ಞೆಯಂತೆ ನಾಗರಿಕ ಪೂರೈಕೆಗಳ ಡಾಯರೆಕ್ಟರ ಜಿಲ್ಲಾ ಮೆಜಿಸ್ಟ್ರೇಟರೂ

(ಅ) ವ್ಯಕ್ತಿಗಳಿಂದ ಇಲ್ಲವೆ ನಿರ್ದಿಷ್ಟ ವರ್ಗಗಳಿಂದ ಅವರ ಕಡೆ ಇರುವ ಸಂಗ್ರಹದ ಮಾಹಿತಿಯನ್ನು ಬೇಡಬಹುದು,

(ಬ) ಸಂಗ್ರಹಗಳ ವಿಲೆವಾಟಿನ್ನು ನಿರ್ಬಂಧಿಸಬಹುದು, ಮತ್ತು

(ಕ) ಸರಕಾರದ ಪರವಾಗಿ ಅವನ್ನು ಒತ್ತಾಯದಿಂದ ಖರೀದಿಸಬಹುದು

(II) ೧೯೪೨ನೇ ಇಸವಿಯ ಅಕ್ಕಿ ಗಿರಣಿಗಳಿಗೆ ಪರವಾನೆ ಕೊಡುವ ಸಂಬಂಧದ ಆಜ್ಞೆ

(III) ಗಿರಣಿಗಳಲ್ಲಾಗಲಿ ಕೈಯಿಂದ ಕುಟ್ಟಿ ಆಗಲಿ ಮಾಡುವಲ್ಲಾಗಲಿ ಅಕ್ಕಿಯನ್ನು ಪಾಲಿಶ ಮಾಡಕೂಡದೆಂದು ಪ್ರತಿಬಂಧಿಸುವ ಆಜ್ಞೆ

(ಜಿಲ್ಲಾಧಿಕಾರಿ ಅಪೇಕ್ಷೆಯಂತೆ ಪ್ರಕಟಿಸಿದ್ದು)

ಜಾಹೀರ ನೋಟೀಸು.

ಈ ಮೂಲಕ ಕಾನಡಾ ಜಿಲ್ಲಾ, ಲೋಕಲ್ ಬೋರ್ಡ ಹದ್ದಿನೊಳಗಿನ ಮತ್ತು ಕಾನಡಾ ಜಿಲ್ಲೆಯೊಳಗಿನ ಯಾವತ್ತೂ ನಾನ್-ಲೋಕಲ್ ಒಥೋರಿಟಿ ಮ್ಯುನಿಸಿಪಾಲಿಟಿ ಹದ್ದಿನೊಳಗಿನ ಯಾವತ್ತು ಜನರಿಗೆ ತಿಳಿಸಲ್ಪಡುವದೇನಂದರೆ —

೧೯೪೮ನೇ ಜನವರಿ ತಾ. ೧೯—೨೦—೨೧ನೇ ದಿವಸ ಕಾನಡಾ ಜಿಲ್ಲೆಯೊಳಗಿನ ೧೦೦೦ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ೬ ರಿಂದ ೧೧ ವರ್ಷದೊಳಗಿನ ಎಲ್ಲ ಹುಡುಗ-ಹುಡುಗಿಯರ ಖಾನೇಸುಮಾರಿಯನ್ನು ನಮ್ಮಿಂದ ಅಧಿಕಾರಪಟ್ಟ ಗಣತಿದಾರರು ತೆಗೆದುಕೊಳ್ಳುವರು ಅವರಿಗೆ ಯಾವತ್ತೂ ಮಕ್ಕಳ ಪಾಲಕರು ತಮ್ಮ ಸ್ವಂತ ಹಾಗೂ ತಮ್ಮ ಅಂಕಿತದಲ್ಲಿರುವ ಇತರ ಹುಡುಗ-ಹುಡುಗಿಯರಬಗ್ಗೆ ಅವರು ಕೇಳುವ ಎಲ್ಲ ಮಾಹಿತಿಯನ್ನು, (ಅವಶ್ಯವಿದ್ದಲ್ಲಿ ಲೇಖಿಯಿಂದ ಸಹ) ಪೂರೈಸತಕ್ಕದ್ದು. ಕಾರಣ ಸಂಬಂಧಪಟ್ಟವರೆಲ್ಲ ಈ ಕೆಲಸಕ್ಕೆ ನೆರವಾಗಬೇಕಾಗಿ ವಿನಂತಿ ಇದಕ್ಕೆ ತಪ್ಪಿದಲ್ಲಿ ಪ್ರಾಥಮಿಕ ಶಿಕ್ಷಣ ಕಾಯದೆಯನ್ವಯ ಅಪರಾಧವಾಗುವದು

ಕಾರವಾರ,
ತಾ ೩೧-೧೨-೪೭

G S BHAT,
ಚೇರಮನ್,
ಜಿಲ್ಲಾ ಸ್ಕೂಲ ಬೋರ್ಡ, ಕಾನಡಾ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270 Monday, 12-1-1948

ಕಾನಡಾವೃತ್ತ

THE KANARA NEWS.

ಕುಂದಾಪುರ – ಸೋಮವಾರ, ತಾ ೧೨—೧—೧೯೪೮

[illegible]

ಸ್ಥಳೀಕ ವಿಷಯಗಳು.

[illegible]

ESTD 1931

The Agricultural & Industrial Bank, Ltd.

(Incorporated in British India Liability of Members Limited.)

Head Office COONDAPOOR

Authorised Capital	..	Rs. 25 00 000-0-0
Issued Capital	,,	11,61 850-0-0
Paid-up Capital & Reserves		8 43 258-2 0

SAVINGS BANK ACCOUNTS are opened with the minimum amounts and interest allowed at 2%

CURRENT ACCOUNTS are opened Interest allowed at 1%

SEASON DEPOSITS of 3 and 6 months are accepted.

For Terms please apply to Head Office or to our nearest Branch

Laxmi Nivas Buildings
COONDAPOOR 1-12-1947

K. VAMAN SHENAI.
CHAIRMAN

ವೇತನವನ್ನು ಪಡೆಕೊಳ್ಳುತ್ತಾರೆ ಸರಕಾರದ ಲೆಕ್ಕ ತಪಾಸ ಕರು ಇದನ್ನು ಹೇಗೆ ಮನ್ನಿಸುತ್ತಾರೋ ತಿಳಿಯದು ಕಾಂಗ್ರೆಸ ಕೆಲಸಗಾರರು ತಮ್ಮ ತ್ಯಾಗದ ಪ್ರತಿಫಲ ಪಡೆ ಯುತ್ತಿರುವದರ ಇದೊಂದು ಮಾದರಿಯೆಂದೂ ಸದರಿ ಮಾತ್ರರು ಅನ್ನುತ್ತಾರೆ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಪುನಃ ಚಳಿಯು ಆರಂ ಭವಾಯಿತು! ಚಳಿಗಾಲದಲ್ಲಿ ಹೀಗೆ ಕಳೆ ಬೀಳುತ್ತಿರುವದ ರಿಂದ ನಾಡಿನ ಆರೋಗ್ಯ ಕೆಟ್ಟಿರುತ್ತಿದ್ದು ಅಲ್ಲಲ್ಲಿ ಬೇನೆ ಬೇಸರಿಕೆಗಳು ತಲೆದೋರಿವೆ

ಅಕ್ಕಿಯ ವ್ಯಾಪಾರದಲ್ಲಿ ಸರ್ಕಾರದೊಳಗೆ ಮೇಲಾಟಕ್ಕೆ ಪ್ರಾರಂಭವಾಗಿರುತ್ತಿದ್ದು, ಸದ್ಯ ಓವರ ವ್ಯಾಪಾರಿಗಳು ಬಿಳ್ಳಿಗೆ ಅಕ್ಕಿಯ ದರವನ್ನು ಖಾಯಲಿ ೧ಕ್ಕೆ ರೂ ೧ ಇಟ್ಟಿರುತ್ತಾರೆ

ಸಿರ್ಸಿವಿಭಾಗದ ಪ್ರಾಂತ ಸಾಹೇಬರ ಕಚೇರಿಯು ಈಗ ಕುಮಟೆಯಲ್ಲಿರುತ್ತಿದ್ದು ಜಮಾಬಂದಿಯ ಕೆಲಸ ನಡೆದಿದೆ

ಕಳೆದ ಬೇಸಿಗೆಯಿಂದ ಇಲ್ಲಿ ಫೌಜದಾರರಾಗಿದ್ದ ರಾ॥ ಶೇಖರನಿಗೆ ಸೊಪ್ಪಿನ ಹೊಸಕೇರಿಯೊಳಗಿನ ಯಾವದೋ ಒಂದು ಪ್ರಕರಣದ ನಿಮಿತ್ತವಾಗಿ ಪ್ರಾಂತದ ವರಿಷ್ಠ ಪೋಲೀಸ ಅಧಿಕಾರಿಗಳು ಬದಲಿ ಮಾಡಿರುತ್ತಾರೆ ಹೊನ್ನಾವರದಲ್ಲಿರುವ ರಾ॥ ಕುಲಕರ್ಣಿಯವರು ಇಲ್ಲಿ ಫೌಜದಾರರಾಗಿ ಬರುವರಂತೆ

ಹಿಂದೆ ನವಿನ್ನ ಪ್ರಾಂತದಲ್ಲಿ ಒನರರಿ ಮೆಜಿಸ್ಟ್ರೇಟರೂ ಬೆಂಚ ಮೆಜಿಸ್ಟ್ರೇಟರೂ ಇದ್ದರು ರಾಜಕಾರಣಗಳಿಂದ ಸಂಬಂಧವಿದ್ದವರು ಇತ್ತಲಾಗಿ ಆ ವರ್ಗ ನಷ್ಟಗೊಳಿಸಿದ್ದರು ಕಾಂಗ್ರೆಸ ಸರಕಾರವು ಅದನ್ನು ಈಗ ಪುನಃ ಊರ್ಜಿತಗೊಳಿಸಿದೆ ನವಿನ್ನ ಜಿಲ್ಲೆಯಲ್ಲಿ ಈ ಕೆಳಗಿನವರು (ಇನ್ನಿತರ ಕಡೆಯಂತೆ) ೨ನೇ ವರ್ಗದ ಒನರರಿ (ವೇತನವಿಲ್ಲದೆ ಕೆಲಸ ಮಾಡುವ) ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ (೧) ರಾ॥ ಬಿ ಗಣಪತರಾವ ಕೇಳಂಗ, ಕಾರವಾರ (೨) ರಾ॥ ಹರಿ ಅನಂತ ಶೆಟ್ಟಿ (೩) ರಾ॥ ಎನ್ ಜಿ ನಾಡಕರ್ಣಿ, ಅಂಕೋಲಾ. (೪) ರಾ॥ ಗೋಪಾಳ ಪದ್ಮನಾಭ ನಾಯಕ, (ಹೆರವಟ್ಟಾ) ಕುಮಟಾ (೫) ರಾ॥ ವ್ಹಿ ಎಮ್. ಸಂಶಿಹಿತ್ತಲ ಗೋಕರ್ಣ, ಹೊನ್ನಾವರ, (೬) ರಾ॥ ದುರ್ಗಪ್ಪ ಶಾಮಯ್ಯನ, ಸಿದ್ದಾಪುರ (೭) ರಾ॥ ಶೇಷಗಿರಿರಾವ ಕೇಶವೈನ, (೮) ರಾ॥ ತಿಮ್ಮಪ್ಪ ಹೆಗಡೆ ಮೋಟಿನಸರ, ಶಿರ್ಸಿ (೯) ರಾ॥ ಶ್ರೀನಿವಾಸರಾವ ನಾಡಿಗ, (ಮಳಗಿ) ಮುಂಡಗೋಡ (೧೦) ರಾ॥ ವ್ಹಿ ಆರ್, ಹೆಗಡೆ, ಯಲ್ಲಾಪುರ

ಗೋಕರ್ಣದೊಳಗೆ ಗಂಜಿಗದ್ದೆ ಪೇಟೆಯಿಂದ ಉತ್ತರಕ್ಕೆ ಒಂದು ಓಣಿ ಹೋಗುತ್ತದೆ ಗಂಜಿಗದ್ದೆ ಮಾರ್ಗದಿಂದ ೩-೪ ನೂರು ಅಂತರದಲ್ಲಿ ಈ ಓಣಿಯೊಳಗೆ ಇತ್ತಲಾಗಿ ವಿಸಾನ ಮಾರುವವರು, ವಿಸಾನಶೇಟಿ ಮಾಡುತ್ತಾರೆ! ವಿಸಾನ ಮಾರುವವರು, ಅವರ ಬುಟ್ಟಿಗಳು ಮತ್ತು ವಿಸಾನು ಕೊಂಡುಕೊಳ್ಳುವವರು ಇವರಿಂದ ಓಣಿಯು ತುಂಬಿ ಹೋಗಿ ರಹದಾರಿಗೆ ತೊಂದರೆಯಾಗುತ್ತಿದ್ದರೂ ಪೋಲೀಸರು ಯಾವದೇ ಕ್ರಮ ನಡಿಸುವದಿಲ್ಲ! ಗಂಜಿಗದ್ದೆಯಲ್ಲಿರುವ ಪೇದೆಗಳು ಈ ತೊಂದರೆಯನ್ನು ಮಿಕಿ ಮಿಕಿ ನೋಡುತ್ತಿರುತ್ತಾರಲ್ಲದೆ, ವಿಸಾನಗಾರರಿಗೆ ಅಲ್ಲಿಂದ ಎದ್ದು ಹೋಗಲು ಸಹ ಹೇಳುವದಿಲ್ಲ! ಮೇಲಧಿಕಾರಿಗಳಾದರೂ ಈ ತೊಂದರೆಯನ್ನು ನಿಲ್ಲಿಸಬಾರದೇ!

ಹೊನ್ನಾವರ— (ತಾ ೧೦-೧-೪೮)

ಶ್ರೀ ಚಿತ್ರಾಪುರ ಮಠಾಧೀಶರಾದ ಶ್ರೀಮದಾನಂದಾಶ್ರಮ ಗುರುಗಳು ಕಳೆದ ರವಿವಾರದಿಂದ ಇಲ್ಲಿನ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮುಕ್ಕಾಂ ಮಾಡಿರುತ್ತಾರೆ ಪ್ರತಿ ನಿತ್ಯ ಗುರುಗಳ ಪ್ರವಚನಗಳಾಗುತ್ತಿವೆ

ಬನವಾಸಿ ಸಿರ್ಸಿ ಮಾರ್ಗದಲ್ಲಿರುವ ಬದರಕ್ಕೆ ಸಂಕವು ಶೀರ್ಣವಾಗಿರುತ್ತದೆಂಬ ನವ ಹೇಳಿ, ಇಂಜನೀರ ಇಲಾಖೆಯವರು ಸದರಿ ಮಾರ್ಗದಲ್ಲಿ ಡಬ್ಬಲ ಜ್ಯೋಂಟಿ ಮೋಟಾರ ಬಂಡಿಗಳನ್ನು ನಡೆಸಕೂಡದೆಂದು ಇತ್ತ ಕೆಲವು ದಿನಗಳಿಂದ ಪ್ರತಿಬಂಧಕ ಹುಕುಮು ಹೊರಡಿಸಿ ಕೊಂಡಿದ್ದಾರೆ! ಈ ಸಂಕ ಕಟ್ಟಿ ಬಹಳ ಕಾಲವಾಗಿಲ್ಲ ಮೊನ್ನೆ ಮೊನ್ನೆ ಅದು ಕಟ್ಟಿದ್ದು ಇರುತ್ತದೆ ಮೊನ್ನೆಯ ವರೆಗೂ ಈ ರಸ್ತೆಯಿಂದ ಡಬ್ಬಲ-ಜ್ಯೋಂಟಿ ಗಾಡಿಗಳು ಓಡಾಡುತ್ತಿದ್ದವು ಅಧಿಕಾರಿಗಳು ಒಮ್ಮೆ ಈ ಸಂಕವನ್ನು ಸ್ವತಃ ನೋಡಿದಲ್ಲಿ ಸಂಕ ಶೀರ್ಣವಾಗಿರುತ್ತದೆಂಬ ವಿಷಯ ಸಟೆಯಿರುತ್ತದೆಂದು ಅವರಿಗೆ ಮನವರಿಕೆಯಾಗುವಂತಿದೆ

(ಮುಂದೆ ಪುರವಣಿ ನೋಡಿರಿ)

ಜಾಹೀರನಾಮೆ.

ಕಾನಡಾ ಜಿಲ್ಲಾ ಲೋಕಲ್ ಬೋರ್ಡ ಕಚೇರಿಯಿಂದ ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ

ಈ ಕೆಳಗೆ ನಮೂದಿಸಿದ ಯಲ್ಲಾಪುರ ತಾಲೂಕಿಗೆ ಸೇರಿದ ಕಾಮಗಾರಿಯನ್ನು ಗುತ್ತಿಗೆಗೆ ಕೊಡತಕ್ಕದ್ದಿರುತ್ತ ಸದರಿ ಕಾಮಗಾರಿಯ ಗುತ್ತಿಗೆ ಪಡೆಯಲಿಚ್ಛಿಸುವವರು ಇದೇ ತಾ ೧೦-೩-೧೯೪೮ನೇ ಮಂಗಳವಾರ ಸಾಯಂಕಾಲ ೪ ಘಂಟೆಯೊಳಗೆ ಈ ಕೆಳಗೆ ಸಹಿ ಮಾಡುವವರ ಕಚೇರಿಯಲ್ಲಿ ತಮ್ಮ ನೋಂದಣಿಯಿಂದ ಟೆಂಡರಗಳನ್ನು ಗುತ್ತಿಗೆ ರಕಮಿನ ನೂರಕ್ಕೆ ೧ರಷ್ಟು ಬಯಾನಾ ಹಣದ ಸಹಿತ, ತಂದು ಕೊಡತಕ್ಕದ್ದು ಟೆಂಡರ ಕೊಟ್ಟವರ ಸಮಕ್ಷಮ ಮಂಜೂರ ಮಾಡುವದು ಯಾ ಬಿಡುವದು ಜಿಲ್ಲಾ ಲೋಕಲ್ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟಿರುವದು ನಾ ಮಂಜೂರ ಮಾಡಿದ ಟೆಂಡರ ಬಾಬತು ಕಾರಣ ಕೊಡಲಿಕ್ಕೆ ಅವರು ಬದ್ಧರಿಲ್ಲ ಸವಾಲು ಮಂಜೂರಾದ ಕೂಡಲೆ ಮಂಜೂರಿಯ ಟೆಂಡರ ಅರ್ಜದಾರರಿಗೆ ತಿಳಿಸಲಾಗುವದು ಈ ಹುಕುಮು ತಲ್ಪಿದ ದಿನದಿಂದ ೭ ದಿನಗಳಲ್ಲಿ ಅವರು ನೂರಕ್ಕೆ ೧೦ ರಂತೆ ಠೇವಣಿಯ ಹಣ ಹಾಜರ ಮಾಡಬೇಕಾಗುವದು, ಮತ್ತು ಕಾಯಿದೆಯಂತೆ ಸ್ಟ್ಯಾಂಪ ಕಾಗದದ ಮೇಲೆ ಕರಾರು ಬರೆಕೊಡಬೇಕಾಗುವದು ಇದಕ್ಕೆ ಅವರು ತಪ್ಪಿದಲ್ಲಿ ಅವರ ಟೆಂಡರ ಕೂಡಲೆ ರದ್ದು ಮಾಡಲ್ಪಡುವದು, ಮತ್ತು ಬಯಾನಾ ಹಣ ಬೋರ್ಡಿಗೆ ಜಮಾ ಮಾಡಲ್ಪಡುವದು ಟೆಂಡರ ಫಾರ್ಮುಗಳನ್ನೂ ಕೆಲಸದ ಪರಿಮಾಣಗಳ ಹಾಗೂ ಸ್ಪೆಸಿಫಿಕೇಶನಗಳ ಪತ್ರಿಕೆಯನ್ನು ಕಾನಡಾ ಜಿಲ್ಲಾ ಲೋಕಲ್‌ಬೋರ್ಡ ಕಚೇರಿಯಿಂದ, ಅವುಗಳ ಕ್ರಯ ರೂ. ೧ ಕೊಟ್ಟು, ಪಡೆಯಬಹುದು ಪ್ಲಾನ್, ಎಸ್ಟಿಮೇಟ ವಗೈರೆ ಮಾಹಿತಿ ಬೇಕಾದಲ್ಲಿ ಅದನ್ನು ಜಿಲ್ಲಾ ಲೋಕಲ್‌ಬೋರ್ಡ ಕಚೇರಿಯಲ್ಲಿ ಬೋರ್ಡಿನ ಇಂಜನಿಯರರ ಕಡೆಯಿಂದ ಪಡೆಕೊಳ್ಳಬಹುದು

ಕಾಮಗಾರಿಯ ವಿವರ

ಅನು ಕ್ರಮಾಂಕ	ಕಾಮಗಾರಿಯ ಹೆಸರು	ಕಂಟಿಂಜನ್ಸಿ ಸಹಿತ ಎಸ್ಟಿಮೇಟಿನ ಪೂರ್ಣ ರಕಮು
೧	ಯಲ್ಲಾಪುರ—ಅರಗುಂದಿ ರಸ್ತೆ ಮೈಲ ನಂಬರ ೩೪/೧ ರಲ್ಲಿಯ ಕೋಡುವೆಗೆ ೧ ಹಚ್ಚಿನ ಗಾಳ ಪೂರೈಸುವದು.	ರೂ. ೭೧೩೦

ಕಾರವಾರ,
ತಾ ೯—೧—೧೯೪೮

D S. NAIK,
ಅಧ್ಯಕ್ಷ, ಜಿಲ್ಲಾ ಲೋಕಲ್ ಬೋರ್ಡ, ಕಾನಡಾ

NOTIFICATION.

Sealed quotations in schedule B to be issued by this office upto 19-1-1948 are invited separately for each of the works and will be received by the undersigned on 20-1-1948 upto 4 P M The schedules can be obtained from the office of the undersigned on payment of Re 1/- each

S No	Name of work.	Estimated Cost.	Earnest Money.	Security Deposit.
1.	S R to bad miles on Kumta Hubli road. (collection of laterite metal 3" gauge) in mile No. 2	Rs 2747/-	Rs 27/-	Rs 137/-
2	Do do (-do-do-) in mill No 9	Rs 4715/-	Rs 47/-	Rs 236/-
3	Do do (-do-of granite metal 1½" to 2 gauge) in mile No 10	Rs 4505/-	Rs 45/-	Rs 225/-
4	Do do (-do do) in mile No.11	Rs 4650/-	Rs 47/-	Rs 233/-
5	Do do (-do do) in mile No.13	Rs 2487/-	Rs 25/-	Rs 124/-
6	Do do (-do do) in mile No 14	Rs 5403/	Rs 54/-	Rs 270/-
7	Do do (-do do) in mile No 15	Rs 3163/-	Rs 32/-	Rs 158/-
8	Do do (-do do) in mile No 17	Rs 3715/-	Rs 37/-	Rs 186/-
9	Do do (-do do) in mile No 18	Rs 4187/-	Rs 42/-	Rs 209/
10	S R to Karwar Bhatkal Madras Frontier road (Collection of laterite metal 3 gauge) in mile No 53	Rs 4175/-	Rs 42/-	Rs 209
11	Do do do in mile No 54	Rs 2817/-	Rs 28/-	Rs 141
12	-Do-do-do-do-No 55	Rs 4277/	Rs 43/-	Rs 214
13	-Do-do-do-do-No 56	3143/-	31/	157/
14	-Do-do-do-do-No 57	4197/	42/	210
15	-Do-do-do-do-No 29	5792/-	58/-	290
16	-Do-do-do-do-No 30	5336/	54/	270
17	-Do-do-do-do-No 31	4480/	45/	224
18	Do do do do No 34	4034/-	40/	202
19	Do do do do No 46	7589/-	76	379
20	Do do do do No 50	7830/-	79/-	[illegible]
21	Do do do do No 51	6720/	67/-	336
22	Do do do do No 52	3443/-	34/-	172

Karwar,
7th January, 1948

L N KIKERI,
Executive Engineer K D

ಹಿಂದೀ ರಾಜಕಾರಣ.

(ನಿರೀಕ್ಷಕನು ಬರೆದುದು)

ದಿನಗಳು ಕಳೆದಂತೆ ಹಿಂದುಸ್ಥಾನದ ರಾಜಕಾರವು ಗಡುಚಾಗುತ್ತ ಹೋಗಿ, ಒಂದು ಸಮಸ್ಯೆ ಬಿಡಿಸುವಷ್ಟರಲ್ಲಿ ಇನ್ನೆರಡು ಸಮಸ್ಯೆಗಳು ಧುತ್ತೆಂದು ಮುಂದೆ ಬಂದು ತಲೆ ತಿನ್ನಹತ್ತುತ್ತಿವೆ ಕಾಶ್ಮೀರದ ವಾದವೀಗ ಜಾಗತಿಕ ಭದ್ರತಾ ಮಂಡಳದ ಮುಂದಿತ್ತಿದ್ದು, ಅದರ ವಿಚಾರಣೆಯು ಬರುವ ಗುರುವಾರ ತಾ. ೧೫ನೇಗೆ ನಡೆಯುವದೆಂದು ಪ್ರಕಟವಾಗಿದೆ. ಈ ವಿಚಾರಣೆ ತ್ವರ್ಯದಲ್ಲೇ ಆಗಬೇಕಾಗಿ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳಾದ ಶ್ರೀ ಸಿಕ್ಕಿಯವರು ಕಳೆದ ಮಂಗಳವಾರ ಸೇರಿದ ಮಂಡಳದ ಸಭೆಯಲ್ಲಿ ಆಗ್ರಹ ಹಿಡಿದಿದ್ದರು ಆದರೆ ಮಂಡಳದೆದುರು ಪಾಕಿಸ್ತಾನದ ಪಕ್ಷವನ್ನು ಮಂಡಿಸಲಿಕ್ಕೆ ಪಾಕಿಸ್ತಾನದ ಪರದೇಶ ಮಂತ್ರಿಗಳಾಗಿರುವ ಸರ್ ಜಾಫರುಲ್ಲಾಖಾನರು ಬರುವರೆಂದೂ, ಅವರು ಬ್ರಹ್ಮದೇಶದ ಸ್ವಾತಂತ್ರ್ಯೋತ್ಸವದಲ್ಲಿ ಭಾಗ ವಹಿಸಲು ರಂಗೂನಿಗೆ ಹೋಗಿರುತ್ತಾರೆಂದೂ, ವಿಮಾನ ಸೌಕರ್ಯ ಸಿಕ್ಕುವರು ಮಂಡಳದ ಸಭೆ ಕೂಡುವ ಲೇಕ ಸಕ್ಸೆಸ್ಸಿಗೆ ತಲ್ಪಲು ೬-೭ ದಿವಸಗಳಾದರೂ ಬೇಕೆಂದೂ ಪಾಕಿಸ್ತಾನ-ಪ್ರತಿನಿಧಿಗಳಾದ ಇಸ್ಪಹಾನಿಯವರು ಅಂಗಲಾಚಿ ಬೇಡಿಕೊಂಡಿದ್ದರಿಂದ ಮಂಡಳದ ಅಧ್ಯಕ್ಷರು ತಾ. ೧೫ರ ವರೆಗೆ ಅವಧಿ ಕೊಟ್ಟಿರುತ್ತಾರೆ ಮಂಡಳದ ಮುಂದೆ ಭಾರತದ ಪಕ್ಷ ಮಂಡಿಸುವದಕ್ಕಾಗಿ ಹಿಂದುಸ್ಥಾನ ಸರಕಾರದ ಮಂತ್ರಿಗಳಾಗಿರುವ ಶ್ರೀ॥ ಗೋಪಾಲಸ್ವಾಮಿ ಅಯ್ಯಂಗಾರರ ನಾಯಕತ್ವದಲ್ಲಿ ಶ್ರೀ॥ ಎಮ್ ಸಿ ಸೆಟ್ಲವಾಡ, ಪಿ ಎನ್ ಹಕ್ಸರ, ಕರ್ನಲ ಕೌಲ ಇವರು ಕಳೆದ ಗುರುವಾರ ಅಮೇರಿಕೆಗೆ ಹೊರಟು ಹೋಗಿದ್ದಾರೆ, ಮೊನ್ನೆ ಶನಿವಾರ ಪುನಃ ಕಾಶ್ಮೀರದ ಸರ್ವಾಧಿಕಾರಿಗಳಾಗಿರುವ ಶೇಕ ಅಬ್ದುಲ್ಲಾ ಅವರೂ ಭಾರತ ಸರಕಾರದ ವಿದೇಶ ಕಚೇರಿಯ ಶ್ರೀ॥ ವೆಲೋಡಿಯವರೂ ಹೋಗಿರುತ್ತಾರೆ. ಕಾಶ್ಮೀರದ ಮೇಲೆ ದಾಳಿ ಮಾಡಿರುವ ಪುಂಡರ ಮುಖಂಡರಾಗಿರುವ ಸರದಾರ ಮಹಮ್ಮದ ಇಬ್ರಾಹಿಮರೂ ಮಂಡಳದ ಸಭೆಗೆ ಹೋಗಲು ನಿಶ್ಚಯಿಸಿ, ತಮ್ಮ ಇಷ್ಟೆಯವನ್ನು ಪಾಕಿಸ್ತಾನ ಸರಕಾರಕ್ಕೆ ತಿಳಿಸಿರುತ್ತಾರೆಂದು ಲಂಡನದಿಂದ ಒಂದು ಸುದ್ದಿ ಬಂದಿದೆ ದಾಳಿಗಾರರು ಪಾಕಿಸ್ತಾನ ಸರಕಾರದ ತಂತ್ರದಿಂದ ನಡೆಯುತ್ತಿದ್ದಾರೆಂಬುದಕ್ಕೆ ಈ ಸುದ್ದಿಯು ಇನ್ನೊಂದು ನಿದರ್ಶನ. ಭದ್ರತಾ-ಮಂಡಳದಲ್ಲಿ ಯಾವ ಬಗೆಯ ನ್ಯಾಯವಾಗುವದೆಂಬುದು ತಿಳಿಯುವಂತಿಲ್ಲ ಅಮೇರಿಕೆಯು ಗ್ರೇಡಿ ಇವರು ಹಿಂದುಸ್ಥಾನ ಪಾಕಿಸ್ತಾನಗಳು ಕಾಶ್ಮೀರ ವಾದವನ್ನು ತಮ್ಮೊಳಗೇ ಬಗೆಹರಿಸಿಕೊಳ್ಳುವದುತ್ತಮವೆಂದು ಹೇಳುತ್ತಿದ್ದಾರೆ. ಹಿಂದುಸ್ಥಾನ ಪಾಕಿಸ್ತಾನಗಳ ನಡುವೆ ಯುದ್ಧ ಪೆಸಗಿದಲ್ಲಿ ಬ್ರಿಟನ್ನು ತಟಸ್ಥವಾಗುಳಿಯುವದೆಂದೂ, ಬ್ರಿಟಿಶ ರಾಷ್ಟ್ರ ಚಕ್ರದೊಳಗಿನ ಇನ್ನಿತರ ಘಟಕಗಳಾದರೂ ತಟಸ್ಥವಾಗುಳಿಯುವದು ಲೇಸೆಂದು ಅದು ಸಲಹೆ ಕೊಡುವದಾಗಿಯೂ "ಸಂಯುಕ್ತ-ಕರ್ನಾಟಕ"ದ ಲಂಡನ ಸುದ್ದಿಗಾರರು ತಿಳಿಸುತ್ತಾರೆ. ಇದೆಲ್ಲ ನೋಡಿದರೆ ಭದ್ರತಾ ಮಂಡಳವು ದೃಢ ಮನಸ್ಸಿನಿಂದ ನ್ಯಾಯ ನಿರ್ಣಯ ಮಾಡದೆ, 'ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ!" ಎಂದು ಹೇಳಿ ಬಿಡುಗಡೆ ಹೊಂದುವದೆಂದು ತೋರುತ್ತಿದೆ

ಕಾಶ್ಮೀರ ಪ್ರಕರಣವತ್ತ ನಡೆಯುತ್ತಿದ್ದಾಗ್ಯೂ ಇತ್ತ ದಿಲ್ಲಿಯಲ್ಲಿ ಹಿಂದುಸ್ಥಾನ-ಪಾಕಿಸ್ತಾನ ಸರಕಾರಗಳ ಪ್ರತಿನಿಧಿಗಳು ಕೂಡಿ ಇನ್ನಿತರ ವಿಷಯಗಳನ್ನು ಬಗೆಹರಿಸಿಕೊಳ್ಳುವ ನೋಟ ಈ ವರೆಗೆ ದೃಷ್ಟಿಗೆ ಬೀಳುತ್ತಿತ್ತು ೧-೧॥ ತಿಂಗಳ ಹಿಂದೆ ಈ ಉಭಯ ಸರಕಾರಗಳು ಅಖಂಡ ಹಿಂದುಸ್ಥಾನ ಸರಕಾರದ ಸಾಲ-ಮೂಲಗಳನ್ನು ತ್ರಯಸ್ಥರ ಸಹಾಯವಿಲ್ಲದೆ ಹಂಚಿಕೊಂಡ ಮಾತನ್ನು ಓದುಗರು ಮರೆತಿರಲಿಕ್ಕಿಲ್ಲ. ಇತ್ತಲಾಗಿ ಆ ಸೌಜನ್ಯ-ಸೌಹಾರ್ದಗಳು ಮಾಯವಾಗಿವೆ! ಆಹಾರ ಧಾನ್ಯಗಳ ವಿನಿಮಯದ ಮಾತು ಮಾಡಲಿಕ್ಕೆ ಆಚೆಯವಾರ ದಿಲ್ಲಿಗೆ ಬಂದ ಪಾಕಿಸ್ತಾನದ ಪ್ರತಿನಿಧಿಗಳು ಆ ಮಾತುಕತೆಗಳನ್ನು ಅರ್ಧಕ್ಕೇ ಮುಗಿಸಿ ಮರಳಿ ಹೋದರು! ಇದೀಗ, ಬ್ರಿಟಿಶ ಸರಕಾರವು ಹಿಂದುಸ್ಥಾನಕ್ಕೆ ಕೊಡತಕ್ಕ ಸ್ಟರ್ಲಿಂಗ ಸಾಲದ ಬಗ್ಗೆ ಮಾತುಕತೆಯಾಡಲು ಸರ್ ಜೆರೆಮಿ ರೇಜಮನ್ನರ ನೇತೃತ್ವದಲ್ಲಿ ಬ್ರಿಟಿಶ್ ನಿಷ್ಟರು ದಿಲ್ಲಿಗೆ ಬಂದಿರುತ್ತಾರೆ ಈ ಸಾಲದ ಪ್ರಶ್ನೆ ಪಾಕಿಸ್ತಾನ-ಹಿಂದುಸ್ಥಾನಗಳಿಗುಭಯತರಿಗೂ ಸಂಬಂಧವುಳ್ಳ ಸಮಾಯಿಕ ಪ್ರಶ್ನೆ ಉಭಯತರೂ ಕೂಡಿ ಸಾಲಗಾರರ ಶಿಷ್ಟರ ಕೂಡ ಮಾತುಕತೆಯಾಡುವದು ಹಿತ ಮತ್ತು ಉಚಿತವಿತ್ತು. ಆದರೆ ಪಾಕಿಸ್ತಾನಕ್ಕೆ ಕೊಡತಕ್ಕ ೫೫ ಕೋಟಿ ರೂ ಗಳನ್ನು ಹಿಂದುಸ್ಥಾನವು ಇದೀಗಲೇ ಕೊಡಲೊಪ್ಪದ್ದರಿಂದ ಕೋಪಗೊಂಡ ಪಾಕಿಸ್ತಾನ ಸರಕಾರವು ತನ್ನ ಪ್ರತಿನಿಧಿಗಳನ್ನು ದಿಲ್ಲಿಗೆ ಕಳಿಸಲು ನಿರಾಕರಿಸಿಬಿಟ್ಟಿದೆ! ಪಾಕಿಸ್ತಾನ ಸರಕಾರಕ್ಕೆ ಈಗ ಹಣದ ಅಡಚಣೆ ಬಹಳವಾಗಿದೆ ಹಿಂದುಸ್ಥಾನ ಸರಕಾರದಿಂದ ಸಲ್ಲತಕ್ಕ ೫೫ ಕೋಟಿ

ಬರು ಘಂಟೆಗೆ
ಸಾಧಯಿಸುದ.
ಅ ತಿ.ಉಾತಿನ
ಶಾ, ಅವರು
ಕೊಡಬೇಕು
ಯ ಬಾಂಚಿಂದ
ದರ ರಿಕಾಯು
ಶಯನಾಗಿ
ಮಾತ್ರ ಸದರ
ರ ಪಾದಲಿಕ್ಕೆ
,ಗೆ ಸುಖಾಂ.
ರನಾನೆಯಲ್ಲಿ
ಇಡಳದ್ದು
ಇಡಳದ್ದು,
,ಕಿ: ಮುತ್ತು
ಮುಖರು ವಾರ
ಶರ ಸಿವಾಲಾ
ಎಾದಲನೆಯು
ಗೆ ಒಂಗಿ
ರಾಗಲಿಕ್ಕಿಲ್ಲ
ಆದ ಎಂಬು
ಈ ಲಿರಾವಿಸ
ಬಾ ಎಂದು
ಟುಗಳನ್ನು
ಹೀವಿನಿಂದ
ಬಾದನೇ
ಬಾದಲ್ಲ
ಅತ ಖರ್ಚ
ಹೊಂದಲ್ಕೆ
ಸ್ವಾಂಡ
ಸರಮಾಸ
ಕರಸಾಧಾ
ತಾಮಯಾ
ತಾಡನಕ್ಕೆ
ತೋಗುವ
ಶಡಬೇಕ.
ಆಸವಾದ
ದ ಇದ್ದ
ತ.ನಾದ
ಕ್ಕದ್ದು
ಅವನ
ಎನ್ನಾನಿಗೆ
ಸ್ವಂತ
ಗ್ಗಿರಿಯು
ಸ್ವಾಮೀ
ಸರಕಾರ

ನ್ನು ಟ್ರಾಯಿಡ ೮೫ನೇ ವರ್ಷದಲ್ಲಿ, ತಮ್ಮ ಮನೆಯಲ್ಲಿ
ಬಾಸವಾಸಿಗಳಾದರೆಂದು ತಿಳಿಸಲು ದುಃಖವೆನಿಸುತ್ತಿದೆ

೧೬. ಸೇವ ನಂ ೧, ೨, ೩ ಮತ್ತು ೫ ನಂಬ್ರ ಶಾಲೆಯ ಬಗ್ಗೆ ಯಾವರ ಲೆಖಂಡ ಸರ್ವಿಸ ಅಥವಾ ವೇಟಿ
ಸರ್ವಿಸ ಎಂದೂ ಕರದಿಂದ ಹೊಸಲ ವಸೂಲ ಮಾಡುವ ಹಕ್ಕು ಲಿಲಾತ್ವ ಕಡಹಲ್ಪಡುವವು. ಲೆಖಂಡ ಸರ್ವಿಸ ಲಿಲಾತ್ವ

ವೇತನವನ್ನು ಪಡೆಕೊಳ್ಳುತ್ತಾರೆ. ಸರಕಾರದ ಲೆಕ್ಕ ತಪಾಸ ಕರು ಇದನ್ನು ಹೇಗೆ ಮನ್ನಿಸುತ್ತಾರೋ ತಿಳಿಯದು. " ಕೊಂಗ್ರೆಸ ಕೆಲಸಗಾರರು ತಮ್ಮ ತ್ಯಾಗದ ಪ್ರತಿಫಲ ಪಡೆ ಯುತ್ತಿರುವದರ ಇದೊಂದು ಮಾದರಿಯೆಂದೂ ಸದರಿ ಮಿತ್ರರು ಅನ್ನುತ್ತಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಪುನಃ ಚಂ ಡಾಯಿತು! ಚೆಳಿಗಾಲದಲ್ಲಿ ಹೀಗೆ ಶಕೆ ಬೀಳ ತೊಡಗಿದ ಆರೋಗ್ಯ ಕೆಟ್ಟಿರುತ್ತಿದ್ದು ಅಕ್ಕ ಬೇನೆಗಳು ಹಬ್ಬಿರುವವು.

ಅಕ್ಕಿಯ ವ್ಯಾಪಾರದಲ್ಲಿ ವರ್ತಕರೊಳಗೆ ಸ್ಪರ್ಧೆ ಪ್ರಾರಂಭವಾಗಿರುತ್ತಿದ್ದು, ನಿನ್ನೆ ಓರ್ವ ವ ರ್ತಕನೊಬ್ಬನು ಅಕ್ಕಿಯ ದರವನ್ನು ಕಡಿಮೆ ಗಳಿಸಿ ಇಟ್ಟಿರುತ್ತಾರೆ.

ಸಿರ್ಸಿ ವಿಭಾಗದ ಪ್ರಾಂತ ಸಾಹೇಬರ ಕಚೇರಿ ಕುಮಟೆಯಲ್ಲಿರುತ್ತಿದ್ದು ದಮಾಬಂದಿಯ ಕೆಲ.

ಕಳೆದ ಬೇಸಿಗೆಯಿಂದ ಇಲ್ಲಿ ಫೌಜದಾರ ರಾ| ಕೇಶವರಾವ ನೆಟ್ಟಿಪುರದೊಳಗಿನ ಒಂದು ಪ್ರಕರಣದ ನಿಮಿತ್ತವಾಗಿ ಪ್ರಾಂತ ಪೋಲೀಸ ಅಧಿಕಾರಿಗಳು ಬದಲಿ ಮಾ ಡೋಣಾವರದಲ್ಲಿರುವ ರಾ| ಕುಲಕರ್ಣಿಯವರು ಇದರಿಂದ ಬರುವರಂತೆ.

ಹಿಂದೆ ನವಿನ್ನ ಪ್ರಾಂತದಲ್ಲಿ ಒನರರಿ ಮೆ ಜಿಸ್ಟ್ರೇಟರೂ ಇದ್ದರು. ಕಾರಣಾಂತರ ಗಳಿಂದ ಅವರು ಇತ್ತಲಾಗಿ ಆ ಪದವಿ ನಷ್ಟಗೊಳಿಸಿ ಗ್ರೆಸ ಸರಕಾರವು ಅದನ್ನು ಈಗ ಪುನಃ ಉಜ್ಜೀ ವಿಸಿ ಜಿಲ್ಲೆಯಲ್ಲಿ ಈ ಕೆಳಗಿನವರು (ಇನ್ನಿತರ ೨ನೇ ವರ್ಗದ ಒನರರಿ (ವೇತನವಿಲ್ಲದ ಕೆಲಸ ಮಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ (೧) ಗಣಪತರಾವ ತೇಲಂಗ, ಕಾರವಾರ. (೨) ರಾ| ... (೩) ರಾ| ಎನ್ ಜಿ. ನಾಡಕರ್ಣಿ, ... (೪) ರಾ| ಗೋಪಾಳ ಪದ್ಮನಾಭ ನಾಯಕ, (೫) ... (೬) ರಾ| ವಿ. ಎಮ್. ಸಿಹಿಕಲ, ಹೊನ್ನಾವರ, (೭) ರಾ| ದುರ್ಗಪ್ಪ ... ಸಿದ್ದಾಪುರ. (೮) ರಾ| ಶೇಷಗಿರಿರಾವ ... (೯) ರಾ| ತಿಮ್ಮಪ್ಪ ಹೆಗಡೆ ಮೋಟಿನಸರ, ... ರಾ| ಶ್ರೀನಿವಾಸರಾವ ನಾಡಿಗ, (ಮಳಗಿ) ಮು... (೧೦) ರಾ| ವಿ. ಆರ್. ಹೆಗಡೆ, ಯಲ್ಲಾಪುರ.

ಗೋಕರ್ಣದೊಳಗೆ ಗಂಜಿಗದ್ದೆ ಪೇಟೆಯ ... ಕ್ಕೆ ಒಂದು ಓಣಿ ಹೋಗುತ್ತದೆ. ಗಂಜಿಗದ್ದೆ ಯಿಂದ ೩-೪ ಮಾರು ಅಂತರದಲ್ಲಿ ಈ ಓಣಿಯ ಲ್ಲಿಗೆ ಮೀನ ಮಾರುವವರು, ಮೀನಪೇಟೆ ದ್ದಾರೆ! ಮೀನ ಮಾರುವವರು, ಅವಾ ಬುಟ್ಟಿ ಮೀನು ಕೊಂಡುಕೊಳ್ಳುವವರು ಇವರಿಂದ ಓಣಿ ಹೋಗಿ ಬರುವರಿಗೆ ತೊಂದರೆಯಾಗುತ್ತಿದ್ದರೂ ನರು ಯಾವದೇ ಕ್ರಮ ನಡಿಸುವದಿಲ್ಲ! ನ ... ರುವ ಪೇದೆಗಳು ಈ ತೊಂದರೆಯನ್ನು ನೋಡುತ್ತಿಯುತ್ತಾರಲ್ಲದೆ, ಮೀನಗಾರರಿಗೆ ಎದ್ದು ಹೋಗಲು ಸಹ ಹೇಳುವದಿಲ್ಲ! ... ಗಳಾದರೂ ಈ ತೊಂದರೆಯನ್ನು ನಿಲ್ಲಿಸಬೇಕು.

ಹೊನ್ನಾವರ— (ತಾ ೧೧-೧-೪೮)

ಶ್ರೀ ಚಿತ್ರಾಪುರ-ಮಠಾಧೀಶರಾದ ಶ್ರೀಮತ್ ಪ್ರಭು ಗುರುಗಳು ಕಳೆದ ರವಿವಾರದಿಂದ ಇಲ್ಲಿ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮುಕ್ಕಾಂ ಮಾ ಡಿದ್ದಾರೆ ನಿತ್ಯ ಗುರುಗಳ ಪ್ರವಚನಗಳಾಗುತ್ತಿವೆ.

ಬನವಾಸಿ-ಸಿರ್ಸಿ ಮಾರ್ಗದಲ್ಲಿರುವ ಬಡಕಿ ಹೇರ್ಮವಾಗಿರುತ್ತದೆಂಬ ನೆವ ಹೇಳಿ, ಅಂಚೆ ಯವರು ಸದರ ಮಾರ್ಗದಲ್ಲಿ ಹುಬ್ಬಳ್ಳಿ-ಹೊನ್ನಾವ ರ ಬಂಡಿಗಳನ್ನು ನಡಿಸಕೂಡದೆಂದು ಇತ್ತ ಗೆಳಿಂದ ಪ್ರತಿಬಂಧಕ ಹುಕುಮು ಹೊರಡಿಸಿದೆ. ಈ ಸಂಗತಿ ಬಹಳ ಕಾಲವಾಗಿಲ್ಲ. ಮೊನ್ನೆ ಮೆ ಕೆಟ್ಟಿದ್ದು ಇರುತ್ತದೆ ಮೊನ್ನೆಯ ವರೆಗೂ ಈ ರಸ್ತೆಯಿಂದ ಹುಬ್ಬಳ್ಳಿ-ಹೊನ್ನಾವರ ಗಾಡಿಗಳು ಓಡಾಡುತ್ತಿದ್ದವು ಇಲ್ಲಾಧಿಕಾರಿ ಗಳು ಒಮ್ಮೆ ಈ ಸಂಕವನ್ನು ಸ್ವತಃ ನೋಡಿದಲ್ಲಿ ಸಂಕ ಹೇರ್ಮವಾಗಿರುತ್ತದೆಂಬ ಮಾತು ಸಟಿಯುರುತ್ತದೆಂದು ಅವರಿಗೆ ಮನವರಿಕೆಯಾಗುವಂತಿದೆ.

(ಮುಂದೆ ಪುರವಣಿ ನೋಡಿರಿ.)

ಜಾಹೀರನಾಮೆ.

ಕಾನಡಾ ಜಿಲ್ಲಾ ಲೋಕಲ್ ಬೋರ್ಡ ಕಚೇರಿಯಿಂದ ಈ ಮೂಲಕ ಸಾರ್ವಜನಿಕ ಜನರಿಗೆ ತಿಳಿಸುವದೇನಂದರೆ:-

ಈ ಕೆಳಗೆ ನಮೂದಿಸಿದ ಯಲ್ಲಾಪುರ ತಾಲೂಕಿಗೆ ಸೇರಿದ ಕಾಮಗಾರಿಯನ್ನು ಗುತ್ತಿಗೆಗೆ ಕೊಡಲ್ಪಡುತ್ತವೆ.

ರೂ. ಗಳ ಭದ್ರತೆಯ ಮೇಲೆ ತನಗೆ ಸಾಲ ಕೊಡಬೇಕೆಂದು ಅದು ರಿಝರ್ವ್ ಬೇಂಕಿನ ಕಡೆ ಪ್ರಸ್ತಾಪ ತೆಗೆದ ಸುದ್ದಿ ಯುಂಟು. ರಿಝರ್ವ್ ಬೇಂಕು ಪಕ್ಷಾತೀತವಾಗು ಳಿದು ತನ್ನ ಬೇಡಿಕೆಯನ್ನು ಮನ್ನಿಸಬೇಕಾಗಿ ಪಾಕಿ ಸ್ತಾನದ ಅರ್ಥ ಮಂತ್ರಿಗಳು ಹೇಳುತ್ತಾರೆ. ಆದರೆ ಬೇಂಕಿನವರು ಕಾಯದೆಯ ಅಡಚಣಿ ಮುಂದೊಡ್ಡಿ ದ್ದಾರೆ. ತನ್ಮಧ್ಯೇ ಹೈದರಾಬಾದದ ನಿಜಾಮರು, ಹಿಂದುಸ್ಥಾನ ಸರಕಾರದೊಡನೆ ಮಾಡಿಕೊಂಡ "ಯಥಾಸ್ಥಿತಿ" ಒಪ್ಪಂದಕ್ಕನುಸಾರವಾಗಿ ಆ ಸರ ಕಾರದ ಅನುಮತಿಯನ್ನು ಪಡಕೊಳ್ಳದೆ, ಅದಕ್ಕೆ ತಿಳಿಸದೆ ಸಹ ಪಾಕಿಸ್ತಾನ ಸರಕಾರಕ್ಕೆ ೨೫ ಕೋಟಿ ರೂ. ಸಾಲ ಕೊಟ್ಟ ವರ್ತಮಾನವು ಪ್ರಸಿದ್ಧವಾಗಿದೆ. ಪಾಕಿಸ್ತಾನ ಸರಕಾರಕ್ಕೆ ಹಣ ಕೊಡದೆ ಅದಕ್ಕೆ ಸಂಕಟದಲ್ಲಿ ನೂಕಬೇಕೆಂಬ ಆಶೆಯಾಗಲಿ ವಿಚಾರ ವಾಗಲಿ ಹಿಂದುಸ್ಥಾನ ಸರಕಾರಕ್ಕೆ ಇರುವದಿಲ್ಲ; ಇರುವಂತಿಲ್ಲ. ಹಿಂದುಸ್ಥಾನವು ಕೊಟ್ಟ ಹಣವನ್ನು ಹಿಂದುಸ್ಥಾನದ ವಿರುದ್ಧ ಯುದ್ಧ ಸಾಗಿಸಲಿಕ್ಕೆ ಉಪ ಯೋಗಿಸುವದಿಲ್ಲೆಂದು ಪಾಕಿಸ್ತಾನ ಸರಕಾರವು ಆಶ್ವಾಸನೆ ಕೊಟ್ಟರೆ ಹಿಂದುಸ್ಥಾನ ಸರಕಾರವು ಅದ ಕ್ಕೆ ಎಂದು ಬೇಕಾದಾಗ ಹಣ ಕೊಡಲು ಸಿದ್ಧವಿದೆ. ಆದರೆ ಪಾಕಿಸ್ತಾನಿಗಳು ಆ ಆಶ್ವಾಸನೆ ಕೊಡಲು ಸಿದ್ಧರಿಲ್ಲ! ಇದರ ಮೇಲಿಂದ ಸಿಕ್ಕ ಹಣವನ್ನು ಪಾಕಿಸ್ತಾನ ಸರಕಾರವು ಹಿಂದುಸ್ಥಾನದ ವಿರುದ್ಧ ಯುದ್ಧ ಸಾರಲಿಕ್ಕೆ ಇಲ್ಲವೆ ಪುಂಡರನ್ನು ಎಬ್ಬಿಸಿ ಹಿಂದುಸ್ಥಾನಕ್ಕೆ ಉಪದ್ರವ ಕೊಡಲಿಕ್ಕೆ ಉಪಯೋ ಗಿಸಲಿಚ್ಛಿಸುತ್ತದೆಂದು ಹೇಳಬಹುದು. ಇಂಥ ಪ್ರಸಕ್ತಿ ಯಲ್ಲಿ ನಿಜಾಮರು ಪಾಕಿಸ್ತಾನಕ್ಕೆ ಹಣದ ಅನು ಕೂಲತೆ ಮಾಡಿ ಕೊಡುವದೆಂದರೆ ಭಾರತದ ವಿದ್ರೋಹ ಮಾಡಿದಂತೆಯೇ ಸರಿ. ಆದರಿಂದ ನಿಜಾ ಮರ ಈ ದ್ರೋಹವನ್ನು ಭಾರತ ಸರಕಾರವು ಸಹಿ ಸುವದು ಸಾಧ್ಯವಿಲ್ಲ. ಈ ಕಾರಸ್ಥಾನವನ್ನು ಪೂರ್ತಿ ಗೊಳಿಸಲು ಅದು ಸರ್ವಥಾ ಇಂಬುಗೊಡುವಂತಿಲ್ಲ. ಈ ಸಾಲದ ಸಂಬಂಧದಲ್ಲಿ ನಿಜಾಮರ ಅಂಬೋಣವನ್ನೂ ಸಾಲದ ಪೂರ್ವಾಪರಗಳನ್ನೂ ತಿಳಕೊಳ್ಳುವದಕ್ಕಾಗಿ ಅವರ ವಿದೇಶಮಂತ್ರಿ ಮತ್ತು ಅರ್ಥಸಚಿವರಾಗಿರುವ ನವಾಬ ಮೊಯಿನ ನವಾಜ ಜಂಗರನ್ನು ಭಾರತ ಸರ ಕಾರವು ದಿಲ್ಲಿಗೆ ಕರೆಯಿಸಿಕೊಂಡಿದೆ. ನಿಜಾಮರು ತಮ್ಮ ಕಡೆಗೆ ಇರುವ ಹಿಂದುಸ್ಥಾನ ಸರಕಾರದ (೨೫ ಕೋಟಿ ರೂ. ಗಳ) ಸಾಲ-ಪತ್ರಗಳನ್ನು ಪಾಕಿಸ್ತಾ ನ ಸರಕಾರಕ್ಕೆ ಕೊಟ್ಟು, ಅವುಗಳ ಬದಲು ಆ ಸರ ಕಾರದ ಸಾಲಪತ್ರಗಳನ್ನು ಕೊಂಡುಕೊಳ್ಳಲು ಯೋಚಿ ಸಿರುತ್ತಾರೆ; ಇದರಲ್ಲಿ ಆಕ್ಷೇಪಾರ್ಹವೇನೂ ಇಲ್ಲ ವೆಂಬುದಾಗಿ ನಿಜಾಮರ ಈ ಅರ್ಥ ಮಂತ್ರಿಗಳು ನಮಗೆ ಸಮಾಧಾನ ಮಾಡಬಯಸುತ್ತಾರೆ. ನಿಜಾಮ ರ ರಾಜ್ಯದಲ್ಲಿ ನಡೆದಿರುವ ಪುಂಡಾಟಿಕೆ, ದಬ್ಬಾಳಿಕೆ ಮತ್ತು ಅರಾಜಕತೆ ಇವು ಸಂಭವಿಸುತ್ತಿದ್ದಿಲ್ಲವಾದ ರೆ ಅರ್ಥ ಮಂತ್ರಿಗಳ ಈ ಮಾತು ನಂಬಿ ನಾವು ನಿಜಾ ಮರಿಗೆ ದೋಷಮುಕ್ತ ಮಾಡಬಹುದಿತ್ತು. ಆದರೆ ನಿಜಾಮರು ಈಗ ಪಾಕಿಸ್ತಾನಿ ವೃತ್ತಿಯ ಮತ್ತು ಪಾಕಿಸ್ತಾನ ಸರಕಾರದ ಸೂತ್ರಗೊಂಬೆಯಾಗಿರು ಇತ್ತೆ ಹಾದುಲ್ ಮುಸಲ್ಮೀನ ಸಂಸ್ಥೆಯ ಕೈಯೊಳ ಗಿನ ಬಾವಲಿಗಳಾಗಿದ್ದಾರೆ! ಈ ಸಂಸ್ಥೆಯ ಸ್ವಯಂಸೇವಕರು ನಿಜಾಮರ ಅರಬ ಶಿಪಾಯಿಗಳೂ ರಾಜ್ಯದಲ್ಲಿ ಲೂಟಿ, ಅತ್ಯಾಚಾರಗಳನ್ನು ಮಾಡಲಾರಂಭಿಸಿದ್ದಾರೆ. ನಿಜಾಮರು ಕೂಡಲೇ ವಿವೇಕತಾಳಿ ಈ ಹಾವಳಿ ಯನ್ನು ನಿಲ್ಲಿಸಬೇಕಾಗಿ ಲಂಡನ್ನಿನ "ನ್ಯೂಜ ಕ್ರೋ ನಿಕಲ್" ಪತ್ರಿಕೆಯ ಹೈದರಾಬಾದದ ಸುದ್ದಿಗಾರರಾದ ಸೆರ್ಡನ್ ಕ್ಲಿಫ್ ಇವರು ಎಚ್ಚರಿಕೆಯನ್ನು ಕೊಡು ತ್ತಾರೆ. ನಿಜಾಮರನ್ನು ಭಾರತ ಸರಕಾರವು ಹತೋ ಟಿಯಲ್ಲಿಟ್ಟುಕೊಳ್ಳಬೇಕಾಗಿದೆ. ಇವರ ಪ್ರತಿಯೊಂ ದು ಕೃತಿಯನ್ನೂ ಕಣ್ಣಿನಲ್ಲಿ ಎಣ್ಣೆ ಹಾಕಿ ನೋಡ ಬೇಕಾಗಿದೆ. ಗೋವೆಯನ್ನು ಕೊಂಡುಕೊಳ್ಳುವ ದಕ್ಕಾಗಿ ನಿಜಾಮರು ಹೂಡಿದ ಯೋಜನೆಯು ಕ ಮಸ್ಸಾಗೂಡಿದಂತೆ ತೋರುತ್ತದೆ. ಹಿಂದುಸ್ಥಾನ ದೊಳಗಿನ ಎಲ್ಲ ಪೋರ್ತುಗೀಜ ವಸಾಹತುಗಳ (ಗೋವಾ, ದೀವ, ದಮಣ) ಹಿಂದುಸ್ಥಾನ ಸರ ಕಾರವು ಕೊಂಡುಕೊಳ್ಳಲು ಮುಂದಾದ ಹಾಗೂ ಅದು ಪೋರ್ತುಗಾಲ ಸರಕಾರದೊಡನೆ ಸಂಧಾನ ನ ಡೆಸುವದೆಂದು ಪ್ರಕಟವಾಗಿದೆ.

(೨ನೇ ಪುಟದಿಂದ ಮುಂದೆ)

ಹಳದೀಪುರ ದಕ್ಷಿಣ ಭಾಗಕ್ಕೆ ನೀಧಾ ಅಂಗಡಿಯ ... ರಾ| ಅನ್ನಪ್ಪ ನಾಯ್ಕರಿಂದ ... ಅಲ್ಲಿಯ ... ಸಹಕಾರಿ ಸಂಘದ ವಶಕ್ಕೆ ಕೊಟ್ಟಿರು ... ಈ ಬಗ್ಗೆ ಊರ ಜನರು ಸಂತೋಷಪಟ್ಟು, ಕಳೆದ ಸೋಮ ವಾರ ದೇವಸ್ಥಾನದ ಶ್ರೀ ಅನ್ನಸಂತರ್ಪಣ ... ಕೂಡ ಮಾಡಿದರಾಗಿ ಸುದ್ದಿಯುಂಟು.

ಸಿದ್ದಾಪುರ— (ತಾ. ೩-೧-೪೮) ಮಹಾತ್ಮಾ ಗಾಂಧಿಯ "ಸ್ವಾತಂತ್ರ್ಯ ಚೌಕ"ದಲ್ಲಿ ೧ ಅಡಿ ಎತ್ತರದ ಧ್ವಜಸ್ತಂಭ ಮತ್ತು ... ರಾಷ್ಟ್ರ-ನಾಯಕರ ... ವಿಗ್ರಹ ಸ್ಥಾಪಿಸಬೇಕೆಂದೂ, ೨ ಸೀರಿನ ಹಾದಿಗಳನ್ನು ... ಸೀರಿನ ಸಲ ಹಾಕಬೇಕೆಂದೂ ರಾತ್ರಿ ವಿದ್ಯುದ್ದೀಪ ವಿಪಾಟು ಮಾಡಬೇಕೆಂದೂ ಊರ ಜನರು ಸಂಕಲ್ಪಿಸಿ ದ್ದಾರೆ. ಜೋಗ ಜಲಪಾತ ನೋಡಬಂದ ಯಾತ್ರಿಕರು ಕಾರ್ಯಗಳಿಗಾಗಿ ಯಥಾಶಕ್ತಿ ವಂತಿಗೆಗಳನ್ನಿತ್ತು ಪ್ರೋತ್ಸಾ ಹಿಸಬೇಕೆಂದು ಈ ಕಾರ್ಯ ನೆರವೇರಿಸುವ ಬಗ್ಗೆ ನೇಮಿಸಲ್ಪ ಟ್ಟ ರಾ| ಆರ್. ಜಿ. ಹೆಗಡೆ ಬಸ್ತಿಬೈಲ ... ಬಿನ್ನವಿಸುತ್ತಾರೆ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವಾರ್ ಆಫ್ ಕೆನರಾ ಪ್ರೆಸ್"ದಲ್ಲಿ ಮುದ್ರಿಸಿ, ಪ್ರಕಟಿಸಿದರು.

19	Do	do	do	do	No 46	7589/-	76/-	379 -
20	Do	do	do	do	No 50	7830/-	79/-	3[illegible] -
21	Do	do	do	do	No 51	6720/	67/-	336-
22	Do	do	do	do	No 52	3843/-	38/-	192 -

Karwar,
7th January, 1948.

L. N. KIKERI,
Executive Engineer, K. D.

ಜಿಲ್ಲಾ ಸಮಾಚಾರ.

...ಮಟಾ— (ತಾ. ೨-೧-೧೯೪೮) ಕುಮಟಾ ...ನ್ ಬೇಂಕಿನವರು ತಮ್ಮ (ಸೀಧಾ) ಅಂಗಡಿಗಳಲ್ಲಿ ...ಮಾರಾಟಕ್ಕಿಟ್ಟಿರುತ್ತಾರೆ. ಹಳಿಯಾಳ ಬೆಣ್ಣಿಗ ದೊಡ್ಡ ...ು ಪಾಯಲಿ ೧ಕ್ಕೆ ರೂ. ೧-೬-೦ ದರವನ್ನಿಟ್ಟಿರು... ಪೇಟೆಯೊಳಗಿನ ಇತರ ವರ್ತಕರೂ ಅಕ್ಕಿ ತಂದಿರು... ಅಕ್ಕಿಯು ಜಾತಿ ಮತ್ತು ಗುಣಗಳಿಗನುಸಾರವಾಗಿ ...ಲಿ ೧ಕ್ಕೆ ರೂ. ೧-೬-೦ರಿಂದ ರೂ. ೨೦ ತನಕ ದರ ...ಟ್ಟಿದ್ದಾರೆ. ಈ ಅಕ್ಕಿ ಬಂದದ್ದರಿಂದ ಹಳ್ಳಿಗರೊಳಗಿನ ...ಯ ವ್ಯಾಪಾರವೀಗ ಸ್ತಬ್ಧವಾಗಿದೆ! ಹಿಂದೆ ಕುಂಬಳ... ...ಯನ್ನು (ಕಳ್ಳಪೇಟೆಯಲ್ಲಿ) ರೂ. ೨-೨-೦ಗಳಿಗೂ ...ಯಾಲಿಯಂತೆ ಮಾರುತ್ತಿದ್ದ ರೈತರಿಗೆ ಈಗ ಒಮ್ಮೆಲೇ ...ನ್ನು ಇಳಿಸುವದು — ಅದು ಕೂಡ ಅರ್ಧಕ್ಕೆ! — ...ಕಠಿಣವಾಗಿ ತೋರಿದೆ! ಬೆಲ್ಲದ ದರವಂತೂ ಕಲ್ಪನೆ ...ಮೀರಿ ಏರಿದೆ. ಸಾಧಾರಣ (ಕಪ್ಪು ಬಣ್ಣ...ದು) ಬೆಲ್ಲದ ಮಣ ೧ಕ್ಕೆ ರೂ. ೪೫ ಹೇಳುತ್ತಾರೆ. ...ಬೆಲ್ಲದ ದರ ಮಣ ೧ಕ್ಕೆ ೫೦-೫೦-೬ ರೂ. ...ಸಕ್ಕರೆಯು ಧಾರಣೆ ರತ್ತಲ ೧ಕ್ಕೆ ೧೦ ಆಣೆ ಇದೆ...

...ಸ್ತ್ರೀಯರ ಕನ್ನಡ ಶಾಲೆಯನ್ನು ಕಂಡವರೊಬ್ಬರ ...ಪಕ್ಕೆ ದನಗಳ ದೊಡ್ಡಿಯ ಉಪಮೆ ಕೊಡುತ್ತಾರೆ. ...ಯೊಳಗಿನ ನೆಲ ಅಷ್ಟು ಹೊಲಸಿರುವದಂತೆ! ಶಾಲೆಯ ...ಗಳಿಗೆ ಕುಳಿತುಕೊಳ್ಳುವದಕ್ಕೆ ಕಾಯಿಸಿ ಇಲ್ಲವೆ ನ್ಯಾಯ ...ಮಾಡಲಿಕ್ಕೆ ಇಂಬಿಲ್ಲ. ಆವಾರ ತುಂಬ ಕಟ್ಟಿಗೆಯ ...ಗಳು ತುಂಬಿ ಬಿದ್ದಿವೆ. ಶಾಲೆಮನೆಯ ಮಾಲಕರು ...ನ್ನು ತಂದು ತುಂಬಿದ್ದಾರೆಂದು ತಿಳಿಯುತ್ತದೆ. ಶಾಲೆಯ ...ವನ್ನು ಏಕೆ ಸರಿಗೊಳಿಸುವದಿಲ್ಲೆಂದು ಅವರಿಗೆ ಕೇಳಿ... ಬೋರ್ಡಿನವರು ಕೊಡುವ ಭಾಡಿಗೆ ತಮಗೆ ಪೂರೈಸು...ಲ್ಲೆಂದೂ, ಯೋಗ್ಯ ಭಾಡಿಗೆ ನಿಶ್ಚಯಿಸಿ ಕೊಟ್ಟರೆ ಎಲ್ಲ ...ಕೂಲತೆಗಳನ್ನು ಮಾಡಿ ಕೊಡುವೆನೆಂದೂ ಅವರು ...ತ್ತಾರಂತೆ. ಶಾಲಾಧಿಕಾರಿಗಳು ಒಮ್ಮೆ ಈ ಶಾಲೆ...ನ್ನು ನೋಡುವರೋ ಏನೋ.

...ಲ್ಲಿಯ ಸರಕಾರಿ ಕಂಟ್ರೋಲ ಗೋಡೌನದಲ್ಲಿ ಕಿಲು... ...ವ ೯೭೦ ಮಣ ಬೇಲಾಪುರ ಬೆಲ್ಲವನ್ನು ೯೧೪ ಮಣ ...ಸರಗಾಂವ ಬೆಲ್ಲವನ್ನೂ ಇದೇ ಬರುವ ಬುಧವಾರ ತಾ. ...ಕ್ಕೆ ಲಿಲಾಂವ ಮಾಡಲಾಗುವದೆಂದು ಪ್ರಕಟವಾಗಿದೆ ...ಂವು ಮುಗಿಯುತ್ತಲೇ ಮುಕಸ್ತಿ ಸವಾಲದಾರರು ...ರ ಹಣ ಕೊಟ್ಟು ಬೆಲ್ಲವನ್ನು ಕೂಡಲೇ ತಮ್ಮ ವಶಕ್ಕೆ ...ಕೊಳ್ಳಬೇಕಾಗುವದಾಗಿ ಪ್ರಕಟನೆಯಲ್ಲಿ ಹೇಳಲಾಗಿದೆ. ...ವನ್ನು ನೋಡಿಕೊಳ್ಳಬಯಸುವವರು ಉಗ್ರಾಣದ ...ದ್ದಾಗ ಅದನ್ನು ನೋಡಬಹುದಂತೆ.

...ನ್ನಾವರ— (ತಾ. ೩-೧-೪೮) ಇಲ್ಲಿಯ ...ಕನ್ನಡ ಶಾಲೆಯ ಶಿಕ್ಷಣವೆಷ್ಟು ಉತ್ತಮವಿರುವುದೆಂ... ...ಕಳೆದ ೪-೫ ವರ್ಷಗಳ ಮುಲ್ಕೀ ಪರೀಕ್ಷೆಯ ಪರಿ...ದಿಂದ ಒಳ್ಳೆಯಾಗಿ ವ್ಯಕ್ತವಾಗಿದೆ. ಈ ವರ್ಷದ ಮುಲ್ಕೀ ...ಕ್ಷೆಯ ಪರಿಣಾಮವು ಹಿಂದಿನ ಎಲ್ಲ ಪರಿಣಾಮಗಳಿಗೆ ...ತೂಗಿಬಿಡುವ ಭವಿಷ್ಯವನ್ನು ಈಗಾಗಲೇ ವರ್ತಿಸ ...ಲಾಗಿದೆ. ಯಾಕೆಂದರೆ ಈ ವರ್ಷ ಮುಲ್ಕಿಯ ವರ್ಗ ...ಸುವ ಶಿಕ್ಷಕ ರಾ॥ ಶೆಟ್ಟಿಯವರು ಮೇಲಿಂದ ಮೇಲೆ ...ರು ರಜೆ ಹೋಗುತ್ತಿದ್ದಾರೆ. ಈಗೀಗ ಅವರು ತಾ. ...-೨-೧೯೪೮ರ ತನಕ ರಜೆ ತಕ್ಕೊಂಡ ವರ್ತಮಾನ ...ದೆ. ರಾ॥ ಶೆಟ್ಟಿಯವರ ಗೈರಹಾಜರಿಯಲ್ಲಿ ಬೇರೊಬ್ಬ ...ನು ವರ್ಗವನ್ನು ಕಲಿಸಲಿಕ್ಕೆ ನೇಮಿಸಲ್ಪಡುತ್ತಿದ್ದರೆ ...ಲಿಕ್ಕೆ ಆಸ್ಪದವಿರುತ್ತಿದ್ದಿಲ್ಲ. ಆದರೆ ಶೆಟ್ಟಿ ...ಇಲ್ಲದಿದ್ದಾಗ ಯಾವ ಶಿಕ್ಷಕನೂ ಆ ವರ್ಗದಲ್ಲಿ ಕಲಿಸಲು ...ವದಿಲ್ಲ. ಆದರಿಂದ ಮುಲ್ಕಿ ಕಲಿಯುವ ಹುಡುಗರು ...ನ್ನು ಆಲೆದಾಡುತ್ತಿರುತ್ತಾರೆ. ಯಾವನೊಬ್ಬ ಶಿಕ್ಷಕ ...ದ್ದಾಗ ಮುಖ್ಯಾಧ್ಯಾಪಕರು ಅವನ ವರ್ಗವನ್ನು ...ಡಬೇಕಾಗಿ ಒಂದು ರೂಢ ನೇಮವುಂಟಂತೆ. ಆ ನೇಮ ...ಶಾಲೆಯ ಮುಖ್ಯಾಧ್ಯಾಪಕರಿಗೆ ಗೊತ್ತಿಲ್ಲವೋ ಏನೋ! ...ಅಧಿಕಾರಿಗಳಾದರೂ ಇತ್ತ ಲಕ್ಷ ಕೊಡಬಾರದೇ? ...ನ್ನಾವರ ಕಸಬಾ ಶಾಲೆ ಎಷ್ಟರಮಟ್ಟಿಗೆ ಸುಧಾರಿಸಲು ...ವಂತಿಲ್ಲವೆಂದು ಅವರು ಗ್ರಹಿಸಿಟ್ಟಿಲ್ಲವಷ್ಟೇ?

...ರವಾರ— (ತಾ. ೧-೧-೪೮) ಇಲ್ಲಿಯ ...ವಯೋವೃದ್ಧ-ಪಕೀಲರೂ ಜ್ಞಾನವೃದ್ಧ ನಾಗರಿಕರೂ ಆಗಿದ್ದ ...ದತ್ತಾತ್ರೇಯ ಭಾಸ್ಕರ ನಾಡಕರ್ಣಿ ಇವರು ತಮ್ಮ ...ವಯಸ್ಸಿನ ಆನೇ ವರ್ಷದಲ್ಲಿ, ತಮ್ಮ ಮನೆಯಲ್ಲಿ, ...ವಾಸಿಗಳಾದರೆಂದು ತಿಳಿಸಲು ದುಃಖವೆನಿಸುತ್ತದೆ.

ಜಾಹೀರನಾಮೆ

ಉತ್ತರ ಕಾನಡಾ ಜಿಲ್ಲಾ ಎಗ್ಜಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರ ರವರ ಕಚೇರಿಯಿಂದ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದರೆ:—

ಕೆಳಗೆ ತೋರಿಸಿದ ಈ ಜಿಲ್ಹೆಯೊಳಗಿನ ತಾರಿಗಳನ್ನು ಉತ್ತಮ ರೀತಿಯಿಂದ ನಡಿಸುವ ಮತ್ತು ತಾರಿ ಹಾಸಲು ವಸೂಲ ಮಾಡುವ ಹಕ್ಕಿನ ದೆಸೆಯಿಂದ ೧೯೪೮ ನೇ ಇಸ್ವಿ ಏಪ್ರಿಲ್ ತಾರೀಖು ೧ನೇಯಿಂದ ೧ ವರುಷದ ಮುದತು ಮಕ್ತಾ ಕೆಳಗೆ ತೋರಿಸಿದ ತಾರೀಖಿಗೆ, ಕೆಳಗೆ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾಹ್ನ ಮೂರು ಘಂಟೆಗೆ ಬಹಿರಂಗವಾಗಿ ಲಿಲಾಂವು ಮಾಡಲ್ಪಡುವವು. ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲು ಮಾಡಲಡ್ಡಿಯಿಲ್ಲ.

೨. ಮಕ್ತಾ ಬೇಡುವವರ ಸ್ವಂತ ತಮ್ಮ ಶಾಯಿಬೀ ಬಗ್ಗೆ ಅವರ ಸ್ಥಿರ ಆಸ್ತಿ ಎಲ್ಲಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಪೇಟೆಯ ಮಹಾಲಕರಿಯವರ ಸಹಿಯ ಸರ್ಟಿಫಿಕೇಟು ಇರಬೇಕು. ಮತ್ತು ಅವರು ಪ್ರತಿಯೊಂದು ಮಕ್ತೆಯ ಬಾಬತು ಇನ್ನೂರು (೨೦೦-೦-೦) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಬೇಕು. ಅಂದರೇನೆ ಅಂಥವರ ಸವಾಲು ಅವರ ಶಾಯಿಬಿ ರಕಮಿನ ವರೆಗೆ ಮಾತ್ರ ತಕ್ಕೊಳ್ಳಲಾದೀತು. ಸವಾಲು-ದಾರರು ಆಗದಿದ್ದರೆ ನಗದಿಯಾಗಿ ಹಾಜರ ಮಾಡಿದ ಹಣ ಪರತ್ ಕೊಡಲ್ಪಡುವದು. ಮಂಜೂರಾದರೆ ಸದರಿ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತು ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವ ಬಗ್ಗೆ ಅನಾಮತವಾಗಿ ಇಡಲ್ಪಡುವದು; ಮತ್ತು ಮಕ್ತೆಯ ಮುದ್ದತು ತೀರಿದ ಬಳಿಕ ಎಲ್ಲ ಶರ್ತುಗಳನ್ನು ಪಾಲಿಸಿದಲ್ಲಿ ಮಾತ್ರ ಸದರಿ ರಕಮು ಪರತ ಕೊಡಲ್ಪಡುವದು.

೩. ಸವಾಲು ಮೂರು ಸಾರ ಆದ ಕೂಡಲೆ ಸವಾಲಿನ ರಕಮಿನ ಒಂದು ಹತ್ತಾಂಶ ಹಣ ಹಾಜರ ಮಾಡಲಿಕ್ಕೆ ಸವಾಲದಾರರು ಸಿದ್ಧರಾಗಿರಬೇಕು. ಹೀಗೆ ಹಾಜರ ಮಾಡಿದ ಹಣ ಅವರು ಕೊಡತಕ್ಕ ಅಖೈರ ಕಿಸ್ತಿಗೆ ಮುಜರೆ ಹಿಡಿಯಲ್ಪಡುವದು.

೪. ಯಾವತ್ತು ತಾರಿಗಳಿಗೆ ಜಂಗಲ-ದೋಣಿಗಳು ಸರಕಾರದಿಂದ ಪೂರೈಸಲ್ಪಟ್ಟಿವೆ. ಆದರೆ ಕರಾರನಾಮೆಯಲ್ಲಿ ನಮೂದಿಸಿದಷ್ಟು, ಎಲ್ಲ ಪೆಸೆಂಜರ-ದೋಣಿಗಳನ್ನು ಪೂರೈಸತಕ್ಕವ ವ್ಯವಸ್ಥೆಯನ್ನು ಮಕ್ತೆದಾರರೇ ಮಾಡತಕ್ಕದ್ದು. ಮಳೆಗಾಲದಲ್ಲಿ ಹೆಚ್ಚಿನ ದೋಣಿಗಳನ್ನು ಮಕ್ತೆದಾರರು ತಮ್ಮ ಸ್ವಂತ ಖರ್ಚಿನಿಂದ ಹಾಲ್ಗಿನ ಹಪ್ಪರದಲ್ಲಿ ಇಡತಕ್ಕದ್ದು.

೫. ಮುಖ್ಯ ತಾರಿ ಮತ್ತು ಪೋಟ ತಾರಿಗೆ ಕೂಡಿ ಒಬ್ಬನೇ ಸವಾಲ ಮಾಡತಕ್ಕದ್ದು. ಮತ್ತು ಮುಖ್ಯ ತಾರಿ ಮತ್ತು ಪೋಟ ತಾರಿ ಕೂಡಿ ಒಂದೇ ತಾರಿ ಎಂದು ತಿಳಿಯಬೇಕು.

೬. ಮೇಲೆ ಮೂರನೇ ಕಲಮಿನಲ್ಲಿ ಹೇಳಿದಂತೆ ಒಂದು ಹತ್ತಾಂಶ ರಕಮು ಮಕ್ತೆಯ ಸವಾಲ ಮೂರು ಸಾರ ಆದ ಕೂಡಲೆ ಹಾಜರ ಮಾಡದಿದ್ದರೆ ಸವಾಲ ರದ್ದುಪಡಿಸಿ ಪುನಃ ಲಿಲಾಂವು ಮಾಡಲಾದೀತು ಮತ್ತು ಅವರ ಸವಾಲು ತೆಗೆದುಕೊಳ್ಳಲಿಕ್ಕಿಲ್ಲ. ಹೀಗೆ ಲಿಲಾಂವು ಮಾಡಿದ್ದರಿಂದ ಲುಕ್ಸಾನ ಆದರೆ ಅದು ಕಾಯದೆ ಪ್ರಕಾರ ಮೊದಲನೆಯ ಸವಾಲದಾರರ ಕಡೆಯಿಂದ ತುಂಬಿಕೊಳ್ಳಲಾದೀತು. ಲಾಭ ಆದರೆ ಅದರ ಮೇಲೆ ಅವರ ಹಕ್ಕು ಇಲ್ಲ.

೭. ಅಖೈರ ಸವಾಲ ಮೆ॥ ಎಗ್ಜಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಮಂಜೂರಿಗೆ ಒಳಗಾಗಿರುವದು. ಸವಾಲು ಯಾವದೇ ಕಾರಣದಿಂದ ಅವರು ನಿರಾಕರಿಸಿದರೆ ಅದರ ಕಾರಣ ತಿಳಿಸಲಿಕ್ಕೆ ಅವರು ಬದ್ಧರಾಗಲಿಕ್ಕಿಲ್ಲ.

೮. ಲಿಲಾಂವು ಒಮ್ಮೆ ತೀರಿದ ಬಳಿಕ ಅರ್ಜಿದ್ವಾರವಾಗಲಿ ತಾರಿನಿಂದ ಆಗಲಿ ಹೆಚ್ಚು ಸವಾಲು ಇದೆ ಎಂದು ತಿಳಿಸಿದರೆ ಆ ಸವಾಲು ತೆಗೆದುಕೊಳ್ಳಲಿಕ್ಕೆ ಬರಲಿಕ್ಕಿಲ್ಲ.

೯. ಕರಾರಿನಲ್ಲಿ ನಮೂದಿಸಿದ ಎಲ್ಲ ಶರ್ತುಗಳನ್ನು ಯೋಗ್ಯ ರೀತಿಯಿಂದ ಬಜಾಯಿಸುವ ಬಗ್ಗೆ ಹಾಗೂ ಲಿಲಾವಿನ ರಕಮುಗಳನ್ನು ತರಯಾದ ನಾಲ್ಕು ಕಂತುಗಳಿಂದ ಠರಾಯಿಸಿದ ಮುದ್ದತಿಗೆ ಕೊಡುವ ಬಗ್ಗೆ ಮಕ್ತೆದಾರರು ಎರಡು ಯೋಗ್ಯ ಜಾಮೀನದಾರರ, ಮೇಲಿನ ಎರಡನೇ ಕಲಮಿನಲ್ಲಿ ನಮೂದಿಸಿದ ಪ್ರಕಾರ, ಶಾಯಿಬೀ ಸರ್ಟಿಫಿಕೇಟುಗಳನ್ನು ಹಾಜರ ಮಾಡಿ, ತಾರಿಬಾಬತು ಕರಾರುಗಳಂತೆ ಸವಾಲು ಮಂಜೂರ ಮಾಡಿಯದೆ ಎಂದು ತಿಳಿಸಿದ ತಾರೀಖಿನಿಂದ ಒಂದು ತಿಂಗಳೊಳಗೆ ಪೂರಾ ಮಾಡಬೇಕು. ಇಲ್ಲದಿದ್ದರೆ ಸವಾಲು ರದ್ದುಪಡಿಸಿ ಮೇಲಿನ ಎರಡನೇ ಮತ್ತು ಮೂರನೇ ಕಲಮುಗಳಲ್ಲಿ ನಮೂದಿಸಿದ ಪ್ರಕಾರ ಹಾಜರ ಮಾಡಿದ ರಕಮುಗಳು ಜಪ್ತದ ಬಗ್ಗೆ ಸರಕಾರಕ್ಕೆ ಜಮಾ ಮಾಡಲ್ಪಡುವವು. ಮತ್ತು ಪುನಃ ಲಿಲಾವು ಮಾಡಿನ ಆದ ಲುಕ್ಸಾನಿಗೆ ಸವಾಲದಾರರು ಜವಾಬದಾರರಾಗುವರು.

೧೦. ತಾರಿಯ ಮಕ್ತೆ ಪಡೆದವರು ಪ್ರತಿ ಒಂದು ತಾರಿಯು ಪ್ರತಿ ಒಂದು ದೋಣಿಯ ಬಗ್ಗೆ ತಮ್ಮ ಸ್ವಂತ ಖರ್ಚಿನಿಂದ ಮೆ॥ ಎ. ಇಂ. ಸಾ॥ ಕಾನಡಾ, ಕಾರವಾರದವರಿಂದ ತಾರಿಯನ್ನು ನಡಿಸುವ ಮಂಜೂರವಾಗಿ ಪ್ರತಿಯೊಂದಕ್ಕೆ ಒಂದು ರೂಪಾಯಿ ಫೀ ಕೊಟ್ಟು ಲಾಯಸನ್ಸುಗಳನ್ನು ಪಡೆಯತಕ್ಕದ್ದು. ಮತ್ತು ಕರಾರನಾಮೆಗೆ ಬೇಕಾದ ಸ್ಟ್ಯಾಂಪ ರಕಮನ್ನು ಸವಾಲದಾರರೇ ಕೊಡಬೇಕು.

೧೧. ಅಪೇಕ್ಷೆಯಿದ್ದವರು ಹಿಂದಿನ ವರ್ಷಗಳಲ್ಲಿ ಆಯಾ ಪಬ್ ಡಿವ್ಹಿಜನದಲ್ಲಿಯ ತಾರಿ ಮಕ್ತೆಗೆ ಎಷ್ಟು ರಕಮಿನ ಸವಾಲು ಮಂಜೂರಾಗಿತ್ತು ಎಂಬ ಮಾಹಿತಿಯನ್ನು ಮೆ॥ ಎ. ಇಂ. ಸಾಹೇಬರವರ ಆಫೀಸಿನಲ್ಲಿ ಹಾಗೂ ಸವಿಸ್ತಾರವಾಗಿ ಲಿಲಾವಿನ ಶರ್ತುಗಳ ಏನು ಇವೆ ಎಂಬ ಮಾಹಿತಿಯನ್ನು ಸಬ್-ಡಿವ್ಹಿಜನಲ್ ಆಫೀಸರ, ಪ. ಪ. ಡಿ. ಕುಮಟಾ ಮತ್ತು ಶಿರ್ಸಿ ಇವರ ಕಚೇರಿಯಲ್ಲಿ, ಕಚೇರಿಯ ವೇಳೆಯಲ್ಲಿ ತಿಳಕೊಳ್ಳಬಹುದು. ಮತ್ತು ಲಿಲಾವಿನ ಯಾವತ್ತು ಶರ್ತುಗಳನ್ನು ಲಿಲಾವಿನ ಕಾಲದಲ್ಲಿ ಓದಿ ತಿಳಿಸುವದರಲ್ಲಿ ಬರುವದು.

೧೨. ಕೆಳಗೆ ಕಾಣಿಸಿದ ಪೈಕಿ ಸೀರ ನಂ. ೩, ೫, ೪ ಮತ್ತು ೫ನೇ ತಾರಿಯ ಮೇಲಿಂದ ಹಾಯ್ದು ಹೋಗುವ ಗಾಡಿಗಳ ಹಾಗೂ ಬೇರೆ ವಾಹನಗಳ ಮೇಲೆ ೨ನೇ ವರ್ಗದ ತಾರಿ ದರದಂತೆ ತಾರಿ ಹಾಸಲು ಆಕರಣೆ ಮಾಡಬೇಕು.

೧೩. ಯಾವದಾದರೊಂದು ತರದ ರಹದಾರಿ ಇಂತಿಷ್ಟೇ ಸಿಕ್ಕೀತೆಂದು ಹೇಳಲಿಕ್ಕೆ ಬರಲಾರದು. ಯಾವದಾದರೊಂದು ಕಾರಣದ ದೆಸೆಯಿಂದ ಯಾವದಾದರೂ ರಸ್ತೆಯ ಮೇಲಿನ ರಹದಾರಿ ಬಂದ ಮಾಡಿದರೆ ಅಥವಾ ಬಂದ ಇದ್ದ ರಹದಾರಿ ತೆರವು ಮಾಡಿದರೆ ಮತ್ತು ತಾರಿ ಮಕ್ತೆದಾರನಿಗೆ ಆತನ ತಿಳುವಳಿಕೆಯಂತೆ ಯಾವದಾದರೊಂದು ಕಾರಣದ ದೆಸೆಯಿಂದ ರಹದಾರಿ ಸಿಗದೆ ಇದ್ದಲ್ಲಿ ಆ ಬಗ್ಗೆ ಸದರಿ ಮಕ್ತೆದಾರನಿಗೆ ಸೂಟ ಅಥವಾ ರಿಫಂಡ ಸಿಗಲಾರದು.

೧೪. ತಾರಿಯನ್ನು ಉತ್ತಮ ರೀತಿಯಿಂದ (ತಾರಿಯ ಮಕ್ತೆ ಮುದ್ದತು ತೀರುವ ತನಕ) ನಡಿಸತಕ್ಕದ್ದು. ತಾರಿಯ ಮಕ್ತೆದಾರನು ತನ್ನ ಕಡೆಯಿಂದ ತಾರಿಯನ್ನು ನಡಿಸುವದು ಆಗುವದಿಲ್ಲ ಎಂದು ವ್ಯಕ್ತಪಡಿಸಿದರೆ ಅವನ ಸವಾಲು ರದ್ದುಪಡಿಸಿ ಮೇಲಿನ ೯ನೇ ಕಲಮಿನನ್ವಯ ಕಾರ್ಯವಾಹಿ ಮಾಡಲಾದೀತು ಮತ್ತು ಹಾಗೆ ಆದ ಲುಕ್ಸಾನಿಗೆ ಮಾತ್ರ ಮಕ್ತೆದಾರನು ಜವಾಬ್ದಾರನಾಗುವನು.

೧೫. ತಾರಿಯ ಮಕ್ತೆ ಪಡೆದವನು ತಾರಿಯ ಎರಡು ಬದಿಯಲ್ಲಿರುವ ವಿಶ್ರಾಂತಿ-ಗೃಹಗಳನ್ನು ತಮ್ಮ ಸ್ವಂತ ಖರ್ಚಿನಿಂದ ಪ್ರಯಾಣಿಕರಿಗೆ ಅನಾನುಕೂಲತೆ ಆಗದಂತೆ ಸ್ವಚ್ಛ ಇಡಬೇಕಾದೀತು.

೧೬. ಸರಕಾರಿ ದೋಣಿಗಳಿಗೆ ಮಕ್ತೆ ಪಡೆದವರು ಆಯಾ ವೇಳೆಯಲ್ಲಿ ಮಾಡತಕ್ಕ ದುರುಸ್ತಿ ವಗೈರೆಯ ಕ್ರಮ ಮೊದಲಾದವುಗಳನ್ನು ಸವಾಲು ಮಾಡುವವರು ತಮಗೆ ಬೇಕಾದಾಗ ಮೆ॥ ಎಗ್ಜಿಕ್ಯೂಟಿವ್ಹ ಇಂಜಿನಿಯರ ಸಾಹೇಬರವರ ಆಫೀಸಿನಲ್ಲಿ, ಆಫೀಸಿನ ವೇಳೆಯಲ್ಲಿ ತಿಳಕೊಳ್ಳತಕ್ಕದ್ದು. ಸರಕಾರಿ ಜಂಗಲ ದೋಣಿಗಳಿಗೆ ಗಲಗಲೆ, ಕಿರಾಣ ದಿಂದಲೇ ಮಾಡಲ್ಪಡುವದು.

೧೭. ಸೀರ ನಂ ೧, ೨, ೩ ಮತ್ತು ೫ ಮುಖ್ಯ ತಾರಿಯ ಬಗ್ಗೆ ಹಾವರ ಲಿಲಾಂವು ಸರ್ವಿಸ ಅಥವಾ ಮೋಟರ ಸರ್ವಿಸ ಎರಡೂ ತರದಿಂದ ಹಾಸಲ ವಸೂಲ ಮಾಡುವ ಹಕ್ಕು ಲಿಲಾವು ಮಾಡಲ್ಪಡುವವು. ಲಿಲಾಂವು ಸರ್ವಿಸ ಲಿಲಾವು

ಮಾಡಲಿಚ್ಛಿಸುವವರು ಎರಡು ಚಲೋ ಪಾವರ ಲೈಸಂಸುಗಳನ್ನು ಪೂರೈಸುವ ಯೋಗ್ಯ ವ್ಯವಸ್ಥೆ ಮಾಡುವ ಬಾಯ್ತಿ ಬಗ್ಗೆ ಮೆ॥ ಎ. ಇಂ. ಸಾಹೇಬರವರಿಗೆ ಲಿಲಾವಿನ ದಿವಸ ಮಾತ್ರ ಮಾಡಿದ್ದಲ್ಲಿ ಮಾತ್ರ ಅವರಿಗೆ ಪಾವರ ಲೈಸಂಸ ಸರ್ವಿಸಿನ ಬಾಬತು ಸವಾಲ ಮಾಡಲಿಕ್ಕೆ ಕೊಡಲ್ಪಡುವದು. ಪಾವರ ಲೈಸಂಸ ಇಲ್ಲದ ಜೋಗಿಗಳ ಸರ್ವಿಸು ಇಡುವ ಮನು ಮೆ॥ ಎ. ಇಂ. ಸಾಹೇಬರವರ ವಶಂಗೆ ಒಳಗಾಗಿರುವದು. ಪಾವರ ಲೈಸಂಸ ಸರ್ವಿಸದ ಬಗ್ಗೆ ಯಾರ ಸವಾಲು ಮಂಜೂರಾಗುತ್ತದೋ ಅವರು ಆ ತಾರಿಯು ಬಗ್ಗೆ ಎರಡು ಚಲೋ ಲೈಸಂಸಗಳನ್ನು ಲಿಲಾವು ತಾರೀಖಿನಿಂದ ಒಂದು ತಿಂಗಳೊಳಗೆ ಕಂಡು ಮೆ॥ ಎ. ಇಂ. ಸಾಹೇಬರ ಕಡೆಯಿಂದ ಪಾಸ ಮಾಡಿಸಿಕೊಳ್ಳಬೇಕು. ಹಾಗೂ ಸದ್ರಿ ಲೈಸಂಸುಗಳ ಬಾಬತ್ತು ಮೋಟಾರ ಮಾಲಿಯಿಂದ ತಾ ೨೦-೩-೪೮ ರೊಳಗೆ ಪಾಸ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಮೇಲಿನ ೯ನೇ ಕಲಮಿನ ಪ್ರಕಾರ ಕಜಾವೀಜ ಮಾಡಲಾಗುವದು. ಲಿಲಾವಿನ ತಾರಿಯು ಬಗ್ಗೆ ಪಾವರ ಲೈಸಂಸ ಸರ್ವಿಸ ಇಡುವವರಿಗೆ ಲಿಲಾವಿನಲ್ಲಿ ಪ್ರಾಶಸ್ತ್ಯ ಕೊಡಲಾಗುವದು.

೧೮ ತಾರಿ ನಂ ೬ (ಶಿರಸಿ) ಈ ತಾರಿಗೆ ಸರಕಾರದಿಂದ ಕಾಯಮಾಗಿ ಸಲ್ಪಟ್ಟ ಜಂಗಲ ಮೇಲಿಂದ ಸರಕಾರ ಅಥವಾ ಬೇರೆ ಪ್ರಯಾಣಿಕರ ಮೋಟಾರುಗಳು ಸದರ ತಾರಿಯಿಂದ ಗೇರಸಪ್ಪೆಗೆ ಒಯ್ಯುವ ವ ತರುವ ವ್ಯವಸ್ಥೆ ಮಾಲೀಕದಾರರು ಮಾಡತಕ್ಕದ್ದು. ಮತ್ತು ಈ ಬಗ್ಗೆ ನಿರ್ದಿಷ್ಟ ಮಾಡಿದ ಹಾಸಲು ಮತ್ತು ಇತರ ಶರ್ತುಗಳು ಲಿಲಾವಿನ ಕಾಲಕ್ಕೆ ಜಾಹೀರ ಮಾಡಲ್ಪಡುವವು. ಈ ಬಗ್ಗೆ ಸರಕಾರದಿಂದ ಇಟ್ಟ ಜಂಗಲ ಬೋಟಗಳಿಗೆ ಗಲಗಲೆ ಸರಕಾರದಿಂದಲೇ ಮಾಡಲ್ಪಡುವದು. ಶಿರಸಿ ತಾರಿಯು ಲೈಸಂಸ ಅಥವಾ ಡೋಣಿ ಸರ್ವಿಸ ಲಿಲಾವ ಮುಖ್ಯ ತಾರಿಯು ಬಗ್ಗೆ ಮತ್ತು ಗೇರಸಪ್ಪೆ ತಾರಿಯನ್ನು ನಡಿಸುವ ಶರ್ತಿನಿಂದ ಪ್ರತ್ಯೇಕವಾಗಿ ಲಿಲಾವ ಮಾಡಲ್ಪಡುವದು.

೧೯ ಲೈಸಂಸ ಸರ್ವಿಸದ ಸಲುವಾಗಿ ಸವಾಲ ಮಾಡಲಿಚ್ಛಿಸುವವರಿಗೆ, ಅವರ ಸವಾಲು ನೋಡಿ ತಾರಿಯು ಮಾಲ್ಕಿಯನ್ನು ೩ ರಿಂದ ೫ ವರುಷಗಳ ಕರಾರದಿಂದ ಕೊಡುವದನ್ನು ವಿಚಾರಿಸಲಾಗುವದು. ಈ ಮಕ್ತೆಯ ಕರಾರುಗಳು ಮೆ॥ ಎ. ಇಂ. ಸಾಹೇಬ, ಕಾನಡಾ, ಕಾರವಾರ ಇವರ ಕಚೇರಿಯ ಹೊತ್ತಿನಲ್ಲಿ ನೋಡಲಿಕ್ಕೆ ಸಿಗುವವು, ಮತ್ತು ಲಿಲಾವಿನ ವೇಳೆಯಲ್ಲಿ ಓದಿ ಹೇಳುವದರಲ್ಲಿ ಬರುವವು.

ಅ ನಂ	ತಾರಿಯು ಹೆಸರು	ತಾರಿಯು ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
೧	ಶಿರಸಿ (ಮಲ್ಲಾಪುರ ಪೋಟ ತಾರಿ ಸಹಿತ)	೨ನೇ	ಹೊನ್ನಾವರ	೩೦-೧-೪೮	ಕಾರವಾರ ಕಚೇರಿ	ಎಕ್ಸಿಕ್ಯೂಟಿವ ಇಂಜಿನಿಯರ
೨	ಹೆಗಡೆ-ಮಿರ್ಜಾನ (ಕೋಡ್ಕಣಿ ಪೋಟ ತಾರಿ ಸಹಿತ)	೩ನೇ	ಕುಮಟಾ			
೩	ದೀವಗಿ (ಮಣ್ಕಿ)	೩ನೇ	ಕುಮಟಾ			
೪	ಬೆಳಂಬಾರ (ಹಟ್ಟಿ ಮತ್ತು ತೆಂಗಿನಗುಂಡಿ ಪೋಟ ತಾರಿಗಳ ಸಹಿತ)	,,	ಭಟಕಳ ಪೇಟೆ			
೫	ಉಳವರೆ	,,	ಅಂಕೋಲಾ			
೬	ಬನವಾಸಿ	೪ನೇ	ಶಿರಸಿ	೨೬-೧-೪೮	ಸಬ್ ಡಿವ್ಹಿಜನಲ ಆಫೀಸ, ಪಿ. ಡಬ್ಲ್ಯು. ಡಿ., ಶಿರಸಿ	ಸಬ್ ಡಿವ್ಹಿಜನಲ ಆಫೀಸರ, ಪಿ. ಡಬ್ಲ್ಯು. ಡಿ., ಶಿರಸಿ.

ಜಾಹೀರನಾಮೆಯಲ್ಲಿಯ ಕರಾರುಗಳನ್ನು ಕರಾರನಾಮೆಯ ಕರಾರುಗಳಂತೆಯೇ ಪಾಲಿಸತಕ್ಕದ್ದು.

ಕಾರವಾರ,
ತಾ ೧—೧—೧೯೪೮.

L. N. KIKERI,
Executive Engineer,
Kanara Division.

The Presidency Provident &
General Insurance Co., Ltd.,
Mherwan Building, Sir P. M. Road
Fort, BOMBAY

NOTICE.

Notice is hereby given that the Policy No. 57463 granted by the above Company in the name of Mr. Rama Subraya Gangolli of Sirsi is lost or mislaid. Any person claiming the above policy should notify his claim with the Company within one month from this date, as otherwise the Company will issue the duplicate copy of the above policy to the Policy holder.

5—1—48.

N. J. GOR,
Managing Director

ವಾರ್ತೆಗಳು.

— ಮುಂಬಯಿಯ ಗವ್ಹರ್ನರ ಸರ್ ಜಾನ ಕೊಲವಿಲ್ಲೆ ರವರು ಇದೇ ಕಳೆದ ಮಂಗಳವಾರ ಅಧಿಕಾರ-ನಿವೃತ್ತರಾಗಿ ಸ್ವದೇಶಕ್ಕೆ ಹೊರಟುಹೋದರು. ಅವರ ಸ್ಥಳದಲ್ಲಿ ಭಾರತ ಸರಕಾರವು ಸರ್ ಮಹಾರಾಜಾಸಿಂಗ ಇವರನ್ನು ನೇಮಿಸಿರುತ್ತದೆ. ಈ ಹೊಸ ಗವ್ಹರ್ನರರು ಆಯ್. ಸಿ. ಎಸ್. ಆಗಿ ಬಹಳ ವರ್ಷ ಸರಕಾರ ನೌಕರಿ ಮಾಡಿದ್ದುಂಟು, ಕೆಲ ಕಾಲ ದಕ್ಷಿಣ ಆಫ್ರಿಕೆಯಲ್ಲಿ ಭಾರತ ಸರಕಾರದ ಪ್ರತಿನಿಧಿಯಾಗಿ ಕೆಲಸ ಮಾಡಿದ್ದುಂಟು.

— ಜಿಲ್ಲಾ ಲೋಕಲ ಬೋರ್ಡುಗಳ ಅಧಿಕಾರ ಸ್ಥಿರ ಮಾಡುವದಕ್ಕಾಗಿ ಮುಂಬಯಿ ಸರಕಾರವು ಈ ವರ್ಷದಿಂದ (ಹೊಸ ಕಾಯದೆಯು ಆಗುವ ವರೆಗೆ), ಬೋರ್ಡ ಕ್ಷೇತ್ರದಲ್ಲಿ (ನಗರ ಸಭೆ ಮತ್ತು ಗ್ರಾಮ ಪಂಚಾಯತಿಗಳ ಕ್ಷೇತ್ರ ಬಿಟ್ಟು) ವಸೂಲಿಯಾಗುವ ಭೂಕಂದಾಯದ ೧೦೦ಕ್ಕೆ ೧೫ರಂತೆ ಬೋರ್ಡುಗಳಿಗೆ ಕೊಡಬೇಕೆಂದು ನಿರ್ಧರಿಸಿದೆ.

THE BANK OF RURAL INDIA, LTD.,

[Incorporated in British India, Liability of Members limited]

HEAD OFFICE:— "**Satyabhama Bhavan**", **KARWAR**, N. K.

Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	..	**Rs. 10,00,000,**
Subscribed Capital	..	**Rs. 5,00,000;**
Paid-up Capital & Reserves	..	**Rs. 3,04,615;**
Working Capital	..	**Rs. 13,33,068-3-10**

Rates of Interest on Deposits:

Current a/c. @ 1% p. a. ***Savings Bank a/c @ 2½%***

Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "

All kinds of modern Banking business transacted

Karwar,
17-2-1947

P. X. GRACIOUS,
MANAGING DIRECTOR

ಜಿಲ್ಲಾ ಸಮಾಚಾರ.

(೩ನೇ ಪುಟದ ೧ನೇ ಕಾಲಮಿನಿಂದ ಮುಂದೆ.)

ಈ ಶತಮಾನದ ಪ್ರಥಮ ಚರಣದಲ್ಲಿ ವ್ಯಾಪಾರಸ್ಥರು ಇಲ್ಲಿಯ ವಕೀಲ ವರ್ಗದ ಅಗ್ರೇಸರರಲ್ಲಿ ಒಬ್ಬರಾಗಿದ್ದರು. ಆ ಕಾಲದಲ್ಲಿ ಅವರು ಮುಂದಾಳುತನ ವಹಿಸಿದ ಯಾವ ಸಾರ್ವಜನಿಕ ಕಾರ್ಯವೂ ಇಲ್ಲಿ ನಡೆಯುತ್ತಿದ್ದಿಲ್ಲ. ಬೇಸಾಯ ಸುಧಾರಣೆಯು ಕಡೆಗೂ ಅವರ ಲಕ್ಷವಿತ್ತು. ಜಗದೀಶ್ವರನು ಅವರಿಗೆ ಸದ್ಗತಿಯನ್ನೀಯಲಿ!

ಅಕ್ಕಿಯ ಮೇಲಿನ ನಿಯಂತ್ರಣ ಹೋಗುತ್ತಲೇ ಇಲ್ಲಿಯ ಸಂತೆ-ಪೇಟೆಯಲ್ಲಿ ಯಾರು ಮೊದಲು ತಮ್ಮ ಸ್ವಂತ ಭೂಮಿಯ ಅಕ್ಕಿಯನ್ನು ಬೇರೆಯವರಿಗಿಂತ ಅಗ್ಗವಾಗಿ ಮಾರುತ್ತಾರೋ ಅವರಿಗೆ ಬೆಳ್ಳಿಯ ಕಂದೀಲ ಇನಾಮು ಕೊಡಲಾಗುವದಾಗಿ ಇಲ್ಲಿಯ "ವಿಚಾರ" ಪತ್ರಿಕೆಯು ಜಾಹೀರ ಮಾಡಿದ್ದರು. ಆ ಇನಾಮವನ್ನು ಬೆಂಡಿಯ ಕ್ರಾಸ ರೋಡ ರಾ॥ ಗಣೇಶ ವಿಠೋಬ ನಾಯ್ಕರು ದೊರಕಿಸಿದ್ದು, ರಾ॥ ನಾಯ್ಕರು ೧ ರೂ.ಗೆ ೧ ಪಾಯಲಿಯಂತೆ ಅಕ್ಕಿ ಮಾರಿದ್ದರು. ಇನ್ನು ಮುಂದೆ ಇದಕ್ಕೂ ಕಡಿಮೆ ದರದಿಂದ ಮಾರುವೆವಾಗಿ ಅವರು ಹೇಳುತ್ತಿದ್ದಾರೆ. ಇದೇ ಬಗೆಯಾಗಿ ತಾ ೧೦ಕ್ಕೆ ದಕ್ಷಿಣ ಭಾಗದ ಕಮಿಶನರ ಶ್ರೀ ನ್ಯಾಸ್ ಇಲ್ಲವೆ ಜಿಲ್ಲಾಧಿಕಾರಿ ಶ್ರೀ ರೆಬೆಲೋ ಇವರ ಹಸ್ತದಿಂದ ರಾ॥ ನಾಯ್ಕರಿಗೆ ಇನಾಮು ಕೊಡಿಸಲಾಗುವದೆಂದು ತಿಳಿಯುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ಕೊಂಕಣಿ ಭಾಷೆಯ ದ್ವಾರಾ ಶಿಕ್ಷಣ ಕೊಡುವ ವ್ಯವಸ್ಥೆಗೆ ಮನ್ನಣೆ ಕೊಡಬೇಕೆಂದು ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳ ಬಳಿಗೆ ಸರಕಾರದ ಕಾರ್ಯದರ್ಶಿಗಳು ಕೊಂಕಣಿ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಮಾಧವ ಕಾನಭಾಗ ಇವರಿಗೆ ತಿಳಿಸಿದ್ದು (೧) ಖಾಸಗಿ ಜನರು ಕೊಂಕಣಿ ಶಾಲೆಗಳನ್ನು ತೆರೆದು ಅವುಗಳಿಗೆ ಧನಸಹಾಯ ಕೊಡಲಾಗುವದೆಂದು ೧೯೩೯ರಿಂದ ಸರಕಾರದವರು ಜಾಹೀರ ಮಾಡಿರುತ್ತಾರೆ. ದಕ್ಷಿಣ ಭಾಗದ ೫ ಜಿಲ್ಲೆಗಳಲ್ಲಿ ೧೯೪೬ರ ವರೆಗೆ ಒಂದು ಕೊಂಕಣಿ ಶಾಲೆಯು ನೋಂದಣಿಯ ಬಗ್ಗೆ ಅರ್ಜಿ ಬಂದಿರುವದಿಲ್ಲ. (೨) ಮುಂಬಯಿಯಲ್ಲಿ ಲಕ್ಷಾವಧಿ ಜನರು ಕೊಂಕಣಿ ಮಾತಾಡುವವರಿದ್ದಾಗ್ಯೂ, ಅವರು ಈ ವರೆಗೂ ಒಂದು ಕೊಂಕಣಿ ಶಾಲೆಯನ್ನು ತೆರೆದಿರುವದಿಲ್ಲ. (೩) ಕೊಂಕಣಿಯಲ್ಲಿ ಹಲವಾರು ಶಬ್ದಗಳಿರುತ್ತಿದ್ದು, ಆ ಭಾಷೆ ಕಲಿಕ್ಕೆ ಮಾತ್ರ ಅನುಕೂಲವಿರುತ್ತದೆಂದೂ ಬರೆಯಲಿಕ್ಕೆ ಅನುಕೂಲವಿಲ್ಲವೆಂದೂ ಓರ್ವ ಹೆಸರಾಂತ ಭಾಷಾಶಾಸ್ತ್ರಜ್ಞರು ಹೇಳುತ್ತಾರೆ. (೪) ಕೊಂಕಣಿಗ ಸಮಾಜದ ಪ್ರಮುಖರಾದ ಸರ್ ವಿಟ್ಠಲರಾವ ಚಂದಾವರಕರ ಮತ್ತು ಡಾ॥ ಮಂಗಳೂರಕರ ಇವರು ಕೂಡ ಕೊಂಕಣಿಯು ಶಿಕ್ಷಣದ ಮಾಧ್ಯಮವಾಗಲಾರದೆಂದು ಅಭಿಪ್ರಾಯಪಟ್ಟಿರುತ್ತಾರೆ. ಎಂಬ ಮುಂತಾದ ಸರಕಾರದ ನಿರ್ಣಯದ ಕಾರಣಗಳನ್ನು ಸರಕಾರ್ಯದರ್ಶಿಗಳು ಕಾನಭಾಗರಿಗೆ ಬರೆದ ಪತ್ರದಲ್ಲಿ ವಿವರಿಸಿರುತ್ತಾರೆ.

ಆಜ್ಞೆ.

ನಂ ೪೯೧೫
ಕಾರವಾರ,
ತಾ ೫-೧-೧೯೪೮

೧೯೪೬ರ ಮುಂಬಯಿಯ ಆವಶ್ಯಕ ವಸ್ತುಗಳ ಪಾಸಗಿ ದವಸಗಳ (ನಿಯಂತ್ರಣದ) ಕಾನೂನಿನ (೧೯೪೬ರ ಮುಂಬಯಿಯ ೨೨ನೆಯ ಕಾನೂನಿನ) ನ್ವಯ ಹಾಗೂ ತಾ ೧೮-೧೨-೧೯೪೬ಕ್ಕೆ ನಾಗರಿಕ ಪೂರೈಕೆ ಖಾತೆಯವರು ಹೊರಡಿಸಿದ ಅಂಕ ಎಸ್ಸ ನೇ ನಂಬರ ಸರಕಾರಿ ಪ್ರಕಟನೆಯನ್ವಯ ದೊರೆತ ಅಧಿಕಾರಗಳನ್ನು ಉಪಯೋಗಿಸಿ ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ ಇವರು ಈ ಕೆಳಗಿನ ಆಜ್ಞೆಗಳನ್ನು ಹೊರಡಿಸುತ್ತಾರೆ —

(೧) ಬೆಂಕಿ ಪೆಟ್ಟಿಗೆಗಳ ಕಾರಖಾನೆಯ ಅಧಿಕಾರಿ ಹಂಚುವಿಕೆಗಾರನ ವಿನಹ ಇನ್ನಿತರ ತೋಕ ವ್ಯಾಪಾರಿಗಳು ಬೆಂಕಿ ಪೆಟ್ಟಿಗೆಗಳ ಮಾರಾಟ ಮಾಡುವಾಗ ಆಕರಿಸಬೇಕಾದ ಕನಿಷ್ಠ ದರ ಮೊದಲಾದವುಗಳನ್ನು ನಿರ್ಣಯಿಸಿ ಜಿಲ್ಲಾ ಮೆಜಿಸ್ಟ್ರೇಟರು ತಾ ೧೩-೯-೧೯೪೭ಕ್ಕೆ ಹೊರಡಿಸಿದ ೪೯೧೫ನೇ ನಂಬರಿನ ಆಜ್ಞೆ (ತಾ ೨೧-೬-೧೯೪೭ ಮತ್ತು ತಾ ೨೧-೬-೧೯೪೭ಕ್ಕೆ ಹೊರಡಿಸಿದ ೪೯೧೫ ನಂಬರಿನ ಆಜ್ಞೆಗಳಿಂದ ಮಾಡಿದ ತಿದ್ದುಪಡಿಗಳ ಸಹಿತ)

(೨) ಬೆಂಕಿ ಪೆಟ್ಟಿಗೆಗಳು ಕಾನಡಾ ಜಿಲ್ಲೆಯಲ್ಲಿ ಬರುತ್ತಲೇ ತಮ್ಮ ಕಡೆಗೆ ಇರುವ ಬೆಂಕಿ ಪೆಟ್ಟಿಗೆಗಳ ಸಂಗ್ರಹವನ್ನು ತಿಳಿಸಬೇಕೆಂದು ವಿಧಿಸುವದಕ್ಕಾಗಿ ೧೩-೯-೧೯೪೭ಕ್ಕೆ ಜಿಲ್ಲಾ ಮೆಜಿಸ್ಟ್ರೇಟರು ಹೊರಡಿಸಿದ ೪೯೧೫ನೇ ನಂಬರಿನ ಆಜ್ಞೆ

R. J. Rebello
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಇದನ್ನು ಪಾಂಡುರಂಗ ಕೆ. ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸಾರಸ್ವತ ಪ್ರಕಾಶ ಪ್ರೆಸ್"ದಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B. 1270. Monday, 19-1-1948

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೯.

ಕುಂದಾಪುರ:- ಸೋಮವಾರ, ತಾ. ೧೯—೧—೧೯೪೮.

[illegible]

ಸ್ಥಳಿಕ ವಿಷಯಗಳು.

(ಸ್ವಂತ ವರದಿಗಾರರು ಬರೆಯುವುದು.)

[illegible]

...nerally speaking Mirasi right in ...d prevails wherever Tamil lan...ge is spoken and all terms, ex...ssive of the right and its incidents ...ong to this language; this spec...tion does not exclude the provinces ...w called Malabar and Kanara, for ...layalam The dialect of the former ...d Tuluv, the dialect of the latter ...r Kanarese is not the native tongue ...this country but of the conquerors ... the colonists of it), are ...mediate derivatives from the same ...rce as the modern Tamil

[illegible]

... ‘Quit Marathi’ ...

[illegible]

ESTD: 1934.

The Agricultural & Industrial Bank, Ltd.

(Incorporated in British India; Liability of Members Limited.)

Head Office: COONDAPOOR.

Authorised Capital	...	Rs. 25,00,000-0-0.
Issued Capital	...	„ 11,61,850-0-0.
Paid-up Capital & Reserves	„	8,43,258-2-0.

SAVINGS BANK ACCOUNTS are opened with the minimum amounts and interest allowed at 2%.

CURRENT ACCOUNTS are opened. Interest allowed at 1%.

SEASON DEPOSITS of 3 and 6 months are accepted.

For Terms, please apply to Head Office, or to our nearest Branch.

"Laxmi Nivas" Buildings, COONDAPOOR, 1-12-1947.

K. VAMAN SHENAI,
CHAIRMAN.

ಕರ್ನಾಟಕದ ನಿತ್ಯ-ಪತ್ರಿಕೆಗಳಲ್ಲಾಗಲಿ, ವಾರ ಪತ್ರಿಕೆಗಳಲ್ಲಾಗಲಿ ಈ ಹೇಯ ಕೃತ್ಯ. ನಿಷೇಧ ಮಾಡುವದೂ ಕಟ್ಟಿಗಿರಲಿ, ಉಲ್ಲೇಖ ಮಾಡುವ ಧೈರ್ಯ ಸಹ ಪತ್ರಕರ್ತರಿಗೆ ಆಗಲಿಲ್ಲ. ನಮ್ಮ ಜಿಲ್ಲೆಯ ಕೊಂಕಣ ಭಾಷೆಯವರಿಗೆ ಬೇಕಾದರೆ ಮರಾಠಿ ಶಾಲೆಗಳನ್ನು ತೆರೆಯಲಾಗದೆಂದು ಮುಖ್ಯ ಪ್ರಧಾನರು ಹೇಳಿದ ಮಾತ್ರಕ್ಕೆ ಕರ್ನಾಟಕ ಏಕೀಕರಣ ಸಂಘವು ಸಿಟ್ಟಿಗೆದ್ದು ಆ ಮಾತನ್ನು ಪ್ರತಿಭಟಿಸುತ್ತದೆ! ಸಂಯುಕ್ತ-ಕರ್ನಾಟಕ ಅಲ್ಲದೆ ವಿಶಾಲ-ಕರ್ನಾಟಕದಲ್ಲಿ ಅನ್ಯ ಭಾಷೆಯವರನ್ನು ಸಹ "ಕನ್ನಡಿಗರು" ಸಹಿಸಲಿಕ್ಕಿಲ್ಲೆಂದೂ, ಎಲ್ಲರ ಮೇಲೂ ಕನ್ನಡದ ಬಲಾತ್ಕಾರ ನಡೆಯುವದೆಂದೂ ಇದರ ಮೇಲಿಂದ ಸಿದ್ಧವಾಗುತ್ತದೆ ಇಂಥ ಮನೋವೃತ್ತಿ ಕರ್ನಾಟಕಕ್ಕೆ ಘಾತಕವಾದದ್ದು ಇಂಥ ಪುಂಡಾಟಿಕೆಗಳನ್ನು ಕಂಡು ಕನ್ನಡ ನುಡಿಯ ಬಗ್ಗೆ ಮಮತೆಯುಳ್ಳವರು ಸಹ ಮೂನಿಯುತ್ತಾರೆ ಈಗಿನ ದಿನ-ಮಾನ ವಿಚಾರ-ಪರತೆಯದು ದೇಶದಲ್ಲಿ ಶಾಂತಿ-ಸಮಾಧಾನಗಳಾದ ಮೇಲೆ ಪ್ರಾಂತ-ನಿರ್ಮಾಣದ ವಿಚಾರ ಮಾಡಲು, ಬೇಕಷ್ಟು ಅವಕಾಶವುಂಟು. ಬಿಸಿಯಾದಾಗಲೇ ಬೆಸಿಗೆ ಹಾಕಿಕೊಳ್ಳಬೇಕೆಂದು ಶ್ರೀ ದಿವಾಕರ ರಂಗನಾಥರಾಯರಂತಹ ವಿಚಾರವಂತರು ಬರೆದುದು ವಿಚಾರ-ರಮಣೀಯವಲ್ಲ ಈಗಿನ ಪರಿಸ್ಥಿತಿ ಬೆಂಕಿ ಹತ್ತಿದ ಮನೆಯಂತಾಗಿದೆ ಇಂಥ ಸಮಯದಲ್ಲಿ ಕರ್ನಾಟಕ ಪ್ರಾಂತ ನಿರ್ಮಾಣದ ಆಗ್ರಹ ಹಿಡಿಯುವದೆಂದರೆ ಮನೆ ಉರಿಯುತ್ತಿರುವಾಗಲೇ ಬೀಡಿಯನ್ನು ಹೊತ್ತಿಸಿಕೊಳ್ಳುವಾ ಎಂದು ಅಂದಂತೆಯೇ ಆಗುವದು

***

ಮುಂಬಯಿ ಸರಕಾರವು ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥ ಕೊಟ್ಟ ಸೀರೆಯ ನೋಟನ್ನು ಒಕ್ಕಲಿಗರು ಪಡೆಯಬಯಸುವದಿಲ್ಲವಾದರೆ ಅದು ಆ ಪ್ರಕಾರ ಮುಲ್ಕೀ ಅಧಿಕಾರಿಗಳಿಗೆ ತಿಳಿಸಬಹುದು. ಹಾಗೆ ಅವರು ತಿಳಿಸಿದಲ್ಲಿ ಸರಕಾರವು ಆ ನೋಟನ್ನು ಪರಸ್ಪರ ಒಕ್ಕಲಿಗರಿಗೆ ಕೊಡುವದು ಒಡೆಯರು ನೋಟ ಪಡೆಯುವಲ್ಲಿ ಮಾತ್ರ ಅವರು ಅದೇ ಪ್ರಮಾಣದಿಂದ ಗೇಣಿಯೊಳಗೆ ಸೂಟ ಕೊಡಬೇಕು ಅಂತು ಕೊನೆಗೆ ಸ್ವಾತಂತ್ರ್ಯೋತ್ಸವದ ಬಗ್ಗೆ ಬಡ ಒಡೆಯರಿಗೆ ಏನೂ ಸಿಗಲಾರದೆಂದು ಸ್ಪಷ್ಟವಾಯಿತು

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಮಧ್ಯದಲ್ಲಿ ೧೨ ದಿನ ಚಳಿಯೇ ಚಳಿ ಬಿದ್ದಿತ್ತು ಆದರೆ ಕೂಡಲೇ ಹವೆಯು ಮಾನ ಬದಲಾಗಿ ಮುಗಿಲನ್ನು ಮೋಡಗಳು ಮುಸುಕಿದವು! ಮತ್ತು ಶನಿವಾರ ಸಂಜೆಯಿಂದ ನಿನ್ನೆ ಮಧ್ಯಾನ್ಹದ ವರೆಗೂ ಮಳೆ ಹನಿಸಿತು! ಇಂತಹ ವಿಕ್ಷಿಪ್ತ ಹವೆಯಲ್ಲಿ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವದು ಕಷ್ಟವೇ ಸರಿ

ಅಕ್ಕಿಯ ಧಾರಣೆಗಳಲ್ಲಿ ಈ ವಾರದಲ್ಲಿ ವಿಶೇಷ ವ್ಯತ್ಯಾಸಗಳಾಗಿಲ್ಲ ಪಾಲಿಶ ಇಲ್ಲದ (ಬೆಣ್ತಿಗೆ) ಅಕ್ಕಿಯು ರೂ ೧೬ಕ್ಕೆ ಖಾಯಲಿ ೧೧ರಂತೆ ಮಾರಲ್ಪಡುತ್ತಿದೆ ಒಂದಿಷ್ಟು ಪಾಲಿಶ ಮಾಡಿದ ಅಕ್ಕಿಯ ಖಾಯಲಿ ೧೧ಕ್ಕೆ ೧೨ ಆಣೆ ಹೆಚ್ಚಿಗೆ ಹೇಳುತ್ತಾರೆ ಸಣ್ಣಕ್ಕಿಯ ಖಾಯಲಿ ೧ಕ್ಕೆ ರೂ ೧೧೨೦ ಹೇಳುತ್ತಾರೆ

ಪಂಜಾಬ ನಿರಾಶ್ರಿತರ ಸಹಾಯಕ್ಕಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಕಾರವಾರ ತಾಲೂಕಿನಲ್ಲಿ ರೂ ೩೮೩, ಅಂಕೋಲೆಯಲ್ಲಿ ರೂ ೪೬೨ ೧೦, ಕುಮಟೆಯಲ್ಲಿ ರೂ ೫೫೫, ಹೊನ್ನಾವರದಲ್ಲಿ ರೂ ೧೪೩ ೧೪ ೦ ಮತ್ತು ಘಟ್ಟದ ಮೇಲಿನ ತಾಲೂಕುಗಳಲ್ಲಿ ೨೦೨ ೧೪ ೦ ಹೀಗೆ ಅಂತು ರೂ ೧೭೧೬—೧೩ ೦ ಹಾಗೂ ೧೭೮೫ ಅಂಗಿಗಳು, ४೧೬ ಕೋಟುಗಳು, ೭೫ ಧೋತರಗಳು, ೧೪೧ ಬನಿಯನ್ನುಗಳು, ೯೧ ಚಡ್ಡಿ ಇಜಾರಗಳು, ೬೬ ಉಣ್ಣೆಯ "ಸ್ವೆಟರ"ಗಳು, ೬೧ ಕಂಬಳಿ ಚಾದರಗಳು ಮತ್ತು ೭೭೫ ಮಕ್ಕಳ ಮತ್ತು ಹೆಂಗಸರ ಬಟ್ಟೆಗಳು ಹೀಗೆ ಅಂತು ३೭೧೦ ಬಟ್ಟೆಗಳನ್ನು ಕೂಡಿಸಿ, ದಿಲ್ಲಿಯಲ್ಲಿರುವ "ಹಿಂದು ಸಹಾಯಕ ಸಮಿತಿ"ಗೆ ಕಳಿಸಿಕೊಟ್ಟಿರುತ್ತಾರೆಂದು ಸಂಘದ ಕಾರ್ಯಕರ್ತರೋರ್ವರು ತಿಳಿಸುತ್ತಾರೆ ಕಾರವಾರದ ವಕೀಲ ರಾ। ಉಪ್ರೋಣ, ಅಂಕೋಲೆಯ ರಾ। ಭವಾನಿಶಂಕರ ನಾಡಕರ್ಣಿ, ಕುಮಟೆಯ ರಾ। ರಾಮದಾಸ ಮಾಸೂರಕರ ಮತ್ತು ಭಟಕಳದ ರಾ। ಗಜಾನನ ನಾಯಕ ಇವರು ಈ ನಿಧಿ ಬಟ್ಟೆಗಳ ಸಂಗ್ರಹದ ಕಾರ್ಯದಲ್ಲಿ ಮುಂದಾಳುಗಳಾಗಿದ್ದರೆಂದೂ ತಿಳಿಯುತ್ತದೆ

ದಿಲ್ಲಿಯಲ್ಲಿ ದೇಶದ ಇನ್ನಿತರ ಭಾಗಗಳಲ್ಲಿಯೂ ಜಾತೀಯ ದ್ವೇಷವು ದಿನೇ ದಿನೇ ಹೆಚ್ಚುತ್ತ ಹೋಗುತ್ತಿರುವದನ್ನು ಕಂಡು ಉದ್ವೇಗಗೊಂಡ ಜಗದ್ವಂದ್ಯ ಮಹಾತ್ಮಾ ಗಾಂಧಿಯವರು ಕಳೆದ ಮಂಗಳವಾರ (ತಾ ೧೩) ಮಧ್ಯಾನ್ಹದಿಂದ "ಅನಿಶ್ಚಿತ ಅವಧಿಯ" ಉಪವಾಸ ವ್ರತ ಕೈಕೊಂಡಿರುತ್ತಾರೆ ಈ ಬಗ್ಗೆ ದೇಶ ವಿದೇಶಗಳಲ್ಲಿಯೂ, ಹಿಂದುಸ್ಥಾನ ಪಾಕಿಸ್ಥಾನಗಳಲ್ಲೂ ಕಳವಳವುಂಟಾಗಿರುತ್ತಿದ್ದು, ಮಹಾತ್ಮರ ಉಪವಾಸದ ಉದ್ದೇಶವನ್ನು ಶೀಘ್ರವೇ ಈಡೇರಿಸಿ ಅವರು ಉಪವಾಸ ನಿಲ್ಲಿಸುವಂತೆ ಮಾಡಲಿ ಎಂದು ಎಲ್ಲೆಲ್ಲಿಯೂ ದೇವರಲ್ಲಿ ಪ್ರಾರ್ಥನೆಗಳಾಗುತ್ತಿವೆ ಅದರಂತೆ ನಿನ್ನೆ ರವಿವಾರ ಬಾಡ, ಗುಡೇಅಂಗಡಿ, ಕಾಗಾಲ ಮತ್ತಿರೆ ಗ್ರಾಮಗಳ ಜನರು ತಮ್ಮ ಸೀಮೆಯ ದೇವರಾದ ಬಾಡದ ಶ್ರೀ ಕಾಂಚಿಕಾ ದೇವರ ಗುಡಿಯ ಮುಂದೆ ಸೇರಿ, ಮಹಾತ್ಮರ ಬಗ್ಗೆ ಭಕ್ತಿಯಿಂದ ಪ್ರಾರ್ಥನೆಮಾಡಿ, ಅವರಿಗೆ ದೀರ್ಘ ಆಯುರಾರೋಗ್ಯ ದಯಪಾಲಿಸಲು ಜಗದೀಶನ ಕಡೆ ಬೇಡಿಕೊಂಡರು

ಇತ್ತ ೬-೭ ದಿನಗಳ ಹಿಂದೆ ಮುಂಬಯಿ ಸರಕಾರದ ಕಂದಾಯ ಮಂತ್ರಿಗಳಾಗಿರುವ ರಾ। ಸಣ್ಣಪ್ಪ ಗಾಂವಕಾರರು ನಮ್ಮ ಜಿಲ್ಲೆಯ ಸಂಚಾರದಲ್ಲಿ ಅಲೆದಾಡುತ್ತಿದ್ದಾರೆ ಯಾವ ಸರಕಾರಿ ಕೆಲಸಕ್ಕಾಗಿ ಅವರು ಇತ್ತ ಬಂದಿರುತ್ತಾರೆಂಬುದು ಇನ್ನೂ ಸ್ಪಷ್ಟವಾಗಿಲ್ಲ ನಗರಗಳಲ್ಲಿ ಅವರ ಕಾರ್ಯಕ್ರಮ ಗೊತ್ತಾಗುವದಿಲ್ಲ! ಅವರೆಲ್ಲಿ ಕಾರ್ಯಕರ್ತರ ಕೂಡ ಸಹವಾಸ ಬೆಳೆಸಿದ್ದ ಬಗ್ಗೆ ಗ್ರಾಮಗಳಲ್ಲಿ ನಡೆಯುತ್ತಿವೆ! ಇವರಿಗೆ ಹಾಗೂ ವಿಠ್ಠಲ ರಾವ ಮುಂದೆ ಭಾಷಣಗಳನ್ನು ಮಾಡಲು ಅವರು ಇಚ್ಛಿಸುತ್ತಿದ್ದರು, ನಿನ್ನೆ ಕುಮಟೆ ಅವರನ್ನು ಕೆಲವು ಕಾರ್ಯಕರ್ತರು ... ಅವರು ಶ್ರೀ ಅಮ್ಮನವರ ದೇವಸ್ಥಾನದ ಮುಂದೆ ರೈತರ ಸಭೆಯೊಂದು ಕರೆಯಲ್ಪಟ್ಟಿತ್ತು ಸಭೆಗೆ ನ್ಯಾಯದಿಂದ ಅವಾಗಲೇ ... ಮಾಡುವ ವಾರದ ಕುಮಟಾ ತಾಲೂಕ ಕೊಂಕಣ ಕಮಿಟಿಯ ಅಧ್ಯಕ್ಷರು ... ಆ ಸಭೆಗೆ ಕರೆದೊಯ್ದರು ... ಬಾದಕ್ಕೆ ತಪ್ಪಿದರು ... ಸರಕಾರದ ಸಭೆಯ ಚಾಲಕರು ... ಸಭೆಯನ್ನು ನಡೆಸಿ ಅದನ್ನು ... ಕರೆದಿದ್ದರು! ... ಈ ಸಭೆಗೆ ಕರೆಯುವಷ್ಟು ಸ್ವತಂತ್ರತೆಯನ್ನು ... ಮಾಮಲೇದಾರರು ತೋರ್ಪಡಿಸಲಿಲ್ಲ "ಭೂಮಿಗಳ ಕಬಜೆ ಸರ್ವಥಾ ಬಿಡಬೇಡಿರಿ ಕಬಜೆ ಬಿಟ್ಟು ಕೊಡಬೇಕೆಂದು ಮಾಮಲೇದಾರರು ಹುಕುಮು ಮಾಡಿದರೂ ಬಿಡಬೇಡಿರಿ ಸತ್ಯಾಗ್ರಹ(!)ಮಾಡಿರಿ! ಎಲ್ಲರೂ ಒಕ್ಕಟ್ಟಿನಿಂದ ನಡೆಯಿರಿ ಒಡೆಯರು ತಮ್ಮ ಕಬಜೆಯಲ್ಲಿ ತೆಗೆದುಕೊಂಡ ಭೂಮಿಗಳನ್ನು ನಾಗ ಮಾಡಲಿಕ್ಕೆ ಯಾರೂ ಸಹಾಯ ಮಾಡಬೇಡಿರಿ" ಎಂಬುದೇ ಈ ಸಭೆಯಲ್ಲಿ ನಡೆದ ಭಾಷಣಗಳೊಳಗಿನ ಸೂತ್ರ ವಾಕ್ಯಗಳಿದ್ದವೆಂದು ಈ ಭಾಷಣಗಳನ್ನು ಕಿವಿ ಕೇಳಿದವರೊಬ್ಬರು ಹೇಳುತ್ತಾರೆ

ಕಳೆದ ತಾ ೧೨ಕ್ಕೆ ಕಡತೋಕೆಯ ಶ್ರೀ ರಾಮನಾಥ ದೇವಸ್ಥಾನದ ಎದುರಿಗಿರುವ ಪಟಾಂಗಣದಲ್ಲಿ ರಾ। ಜಾಲಿಸತಿಯವರ ಅಧ್ಯಕ್ಷತೆಯಲ್ಲಿ ಕೂಡಿದ ರೈತ ಸಂಘದ ಸಭೆಯಲ್ಲೂ ಇದೇ ಅರ್ಥದ ಭಾಷಣಗಳಾದ ವರದಿಯುಂಟು ರಾ। ಗಾಂವಕಾರರ ಸಮಕ್ಷಮ ರಾ। ಭಾವಿಕೇರಿ ರಾಮ ನಾಯ್ಕ, ಎಮ್ ಎಸ್ ಘಾರೀಕ್ಷ್ಟ್ರ, ಹೊನ್ನಪ್ಪ ನಾಯ್ಕ ಇವರು ಆವೇಶಯುಕ್ತ ಭಾಷಣಗಳನ್ನು ಮಾಡಿ, ಭೂಮಿಗಳ ಕಬಜೆಯನ್ನು ಸರ್ವಥಾ ಬಿಡಬೇಡಿರೆಂತಲೂ, ಸರಕಾರದವರು ಒಂದೊಮ್ಮೆ ಕಬಜೆ ಬಿಟ್ಟು ಕೊಡಬೇಕೆಂದು ನಿಕಾಲೆ ಮಾಡಿದಲ್ಲಿ ಆ ನಿಕಾಲೆಯ ವಿರುದ್ಧ ಹೋರಾಟ(?) ನಡಿಸಬೇಕೆಂತಲೂ ಮುಂದಿನ ಎಸೆಂಬ್ಲಿ ಚುನಾವಣೆಯಲ್ಲಿ ರೈತರು ತಮ್ಮ ಹಿತಕರ್ತರನ್ನೇ ಆರಿಸಿ ಕಳಿಸಿದಲ್ಲಿ ಭೂಮಿಗಳು ರೈತರವೇ ಆಗುವವೆಂತಲೂ ಪ್ರೋತ್ಸಾಹಿಸಿದ್ದರಾಗಿ ತಿಳಿಯುತ್ತದೆ

ರಾ। ಗಾಂವಕಾರರ ಕೂಟದವರ ಈ ಚಳವಳಿಯ ಪರಿಣಾಮದ ಒಂದು ದೃಶ್ಯ ೩ ೪ ದಿನಗಳ ಹಿಂದೆ ಕುಮಟಾ ತಾಲೂಕ ಕಚೇರಿಯಲ್ಲಿ ಕಾಣಸಿಕ್ಕಿತು ಜಂಬು ಗೋಮಲೇದಾರರ ಮುಂದೆ ಒಂದು ಟೆನನ್ಸಿ ದಾವೆಯ ವಿಚಾರ ನಡೆಯುತ್ತಿತ್ತು ಒಡೆಯನು ಹಳಕಾರ ಬದಿಯ ಓರ್ವ ನಾಮಧಾರಿ ರೈತನಾದ ಸುಕ್ರು ದುರ್ಗ ಎಂಬವನ ವಿರುದ್ಧ ಕಬಜೆಯ ದಾವೆ ಮಾಡಿದ್ದನು ದಾವೆಯು ಪೂರ್ಣ ಮಹಿತಕರು ಕೇಳಿಕೊಂಡ ಹೊಲದ ಕಬಜೆಯನ್ನು ಒಡೆಯನಿಗೆ ಬಿಟ್ಟುಕೊಡಬೇಕೆಂದು ಮಾಮಲೇದಾರರು ಆ ರೈತನಿಗೆ ಹೇಳಿದರು ಆ ರೈತನು ಸುಮ್ಮಗೆ ಆ ತೀರ್ಪು ಕೇಳಿಕೊಳ್ಳದೆ, ತಾ, ಕಬಜೆ ಬಿಡಲಾರೆನೆಂತಲೂ ಸರಕಾರದವರು ಹೇಗೆ ಕಬಜೆ ಹಿಡಿಸುತ್ತಾರೆಂದು ತಾನು ನೋಡಿಬಿಡುವೆನೆಂತಲೂ ದರ್ಪದಿಂದ ಉದ್ಗರಿಸಿದನು! "ಶಾಂತ ರೀತಿಯಿಂದ ನೀನು ಕಬಜೆ ಬಿಟ್ಟು ಕೊಡದಿದ್ದಲ್ಲಿ, ಪೋಲೀಸರ ಸಹಾಯದಿಂದ ನಿನಗೆ ಹೊರಗೆ ಹಾಕಿ ಕಬಜಾ ಕೊಡಲಾಗುವದು" ಎಂದು ಮಾಮಲೇದಾರರು ಅವನಿಗೆ ಹೇಳಿದರೇ ವಿನಹ ನ್ಯಾಯಾಸನದೆದುರು ನ್ಯಾಯಾಸನದ ಉಪಮರ್ದ ಮಾಡಿದ ಬಗ್ಗೆ ಆ ರೈತನ ವಿರುದ್ಧ ತಕ್ಕ ಕ್ರಮ ಕೈಕೊಳ್ಳಲಿಲ್ಲ ನ್ಯಾಯಾಸನಗಳು ಹೀಗೆ ದೌರ್ಬಲ್ಯ ತೋರಿಸುತ್ತಿರುವದರಿಂದಲೂ ಉಪಮಂತ್ರಿಗಳು ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ರೈತ ಸಂಘದವರಿಗೆ ಕಾನೂನ ಬದ್ಧ ನಿಕಾಲೆಗಳನ್ನು ಪ್ರತಿಭಟಿಸಲು ಪ್ರೋತ್ಸಾಹಿಸುತ್ತಿರುವದರಿಂದಲೂ ಈ ನಾಡಿನ ಈಗ ಕಾಯಿದೆಯ ರಾಜ್ಯ ಹೋಗಿ ಪುಂಡರ ರಾಜ್ಯ ಬರುವದೆಂಬಂತೆ ತೋರುತ್ತಿದೆ ಇದು ಇಷ್ಟವೇನೆಂಬುದರ ವಿಚಾರವನ್ನು ಸರಕಾರದವರು ಮಾಡಬೇಕು

ಕಳೆದ ತಾ ಆಕ್ಕೆ ವಾಲಗಳ್ಳಿ ಸೀಮೆಯ ಭೂಮಾಲಕರು ಊರಕೇರಿಯಲ್ಲಿ ಕೂಜಳ್ಳಿಯ ರಾ। ರಾಮಾ ಗಣಪ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ತಾ ೫-೧-೪೮ "ವೃತ್ತ"ದಲ್ಲಿ ಪ್ರಕಟವಾಗಿರುವ ಹೊನ್ನಾವರ ತಾಲೂಕ ಗ್ರಾಮದ ಭೂಮಾಲಿಕರ ಸಭೆಯ ಠರಾವುಗಳೇ ಠರಾವುಗಳನ್ನು ಮಾಡಿ, ಅವನ್ನು ಸರಕಾರಕ್ಕೆ ಜಿಲ್ಲಾಧಿಪರಿಗೂ ಕಳಿಸಿಕೊಟ್ಟಿರುತ್ತಾರೆ ಈ ಸಭೆಯಲ್ಲಾದ ೩ನೆಯ ಠರಾವಿನಲ್ಲಿ, ಒಡೆಯರ ಪಾಲನ್ನು ನಗದಿಯಲ್ಲಿ ಪರಿವರ್ತಿಸಬಾರದೆಂಬುದಕ್ಕೆ ಒಂದು ಹೆಚ್ಚಿನ ಕಾರಣ ಕೊಟ್ಟಿದ್ದುಂಟು ಈ ಸೀಮೆಯ ಭೂಮಾಲಿಕರ ಮನೆಗಳು ಹೆಚ್ಚಾಗಿ ಹುಲ್ಲು, ಮಡ್ಲು ಇಲ್ಲವೆ ಅಡಿಕೆ ಸೋಗೆ ಹೊದಿಕೆಯವಾಗಿರುತ್ತವೆ ತಮ್ಮ ಭೂಮಿಯಲ್ಲಿ ಹುಟ್ಟುವ ಹುಲ್ಲು ಮೊದಲಾದವುಗಳಿಂದಲೇ ಭೂಮಾಲಿಕರು ಅವನ್ನು ಹೊದಿಸಿಕೊಳ್ಳುತ್ತಾರೆ ಒಡೆಯರು ತಮ್ಮ ಪಾಲನ್ನು ನಗದಿಯಿಂದಲೇ ಕೊಳ್ಳಬೇಕಾಗಿ ಬಂದಲ್ಲಿ, ಮನೆಗಳ ಹೊದಿಕೆಯ ಕೆಲಸಕ್ಕೆ ಬೇಕಾದ ಹುಲ್ಲು, ಮಡ್ಲು, ಸೋಗೆಗಳು ಸಿಗದೆ— ಇವು ಪೇಟೆಯಲ್ಲಿ ಸಿಗುವ ವಸ್ತುಗಳಲ್ಲ— ಅವರು ಪೇಚಾಡುವ ಪ್ರಸಂಗ ಬರುವದೆಂದೂ ಸದರಿ ಗೊತ್ತುವಳಿಯಲ್ಲಿ ವಿವರಿಸಲಾಗಿದೆ.

ಕೋಡಕಣಿ ಶಾನಭೋಗರು ಗ್ರಾಮದಲ್ಲಿಲ್ಲದ್ದರಿಂದ ಜನರಿಗೆ ಬಹಳ ತೊಂದರೆಯಾಗಿದೆಯಂತೆ. ಕಳೆದ ವಾರ ಹಳಕಾರದ ಓರ್ವ ರೈತನಿಗೆ ರಿಕಾರ್ಡ ಉತಾರು ಬೇಕಿತ್ತು ಅವನು ಗ್ರಾಮಸ್ಥರನ್ನು ಎಷ್ಟು ಹುಡುಕಿದರೂ ಗ್ರಾಮಸ್ಥರ ಪತ್ತೆ ಸಿಗಲಿಲ್ಲವಂತೆ ಈ ಸ್ಥಿತಿ ಮೇಲಧಿಕಾರಿಗಳಿಗೆ ಒಪ್ಪಿಗೆಯುಂಟೇನು ?

ಆಜ್ಞೆ.

ನಂ ೧೨೬
ಕಾರವಾರ, ತಾ ೮-೧-೧೯೪೮

೧೯೪೭ರ ಮುಂಬಯಿ ಆವಶ್ಯಕ ವಸ್ತುಗಳ (ವಿಲೆ ಟನ್ನು ನಿಯಂತ್ರಿಸುವ ಮತ್ತು ಅವನ್ನು ಸಂಪಾದಿಸುವ ಸಂಬಂಧದ) ಆಜ್ಞೆಯ ೩ನೆಯ ಕಲಮಿನನುಸಾರವಾಗಿ ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ ಇವರು ತಾ ೨೧-೯-೧೯೪೭ಕ್ಕೆ ೧೨೬ನೇ ನಂಬರದ ಒಂದು ಆಜ್ಞೆ ಹೊರಡಿಸಿ, (ಆರಕ್ತಲ ಕೊಳದ ಮಾಲು ೧೭೦೫) ೫ ಖಂಡಿ ಯಾ ಹೆಚ್ಚು ಅಕ್ಕಿ (ಅಥವಾ ಪದಾರ್ಥಗಳು ಕೂಡಿ) ಮತ್ತು ಭತ್ತ ಇವುಗಳ ಸಂಗ್ರಹವುಳ್ಳವರು ಪ್ರತಿ ತಿಂಗಳು ತಮ್ಮ ಸಂಗ್ರಹದ ಮಾಹಿತಿಯನ್ನು ತಿಳಿಸಬೇಕಾಗಿ ವಿಧಿಸಿದ್ದರಷ್ಟೇ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ಆ ಆಜ್ಞೆಯನ್ನು ರದ್ದುಗೊಳಿಸಿರುತ್ತಾರೆ

R J Rebello
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ತಂಬಾಕು ಸೇಲ ನೋಟಬೂಕುಗಳು
ಗೇಣಿ ರಶೀದಿ ಬೂಕುಗಳೂ
ನಮ್ಮಲ್ಲಿ ಮಾರಾಟಕ್ಕೆ ಸಿಗುತ್ತವೆ
ಒರೆಯರ
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಆಜ್ಞೆ.

ನಾಗರಿಕ ಪೂರೈಕೆ ಖಾತೆ,
ಮುಂಬಯಿ ಕೆಸಲ್ಟಿ,
ತಾ ೧೨—೧—೧೯೪೮

ನಂ ೪೨/IV - ಡಿ —೧೯೪೬ ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೬೬ನೇ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರಗಳನ್ನುಪಯೋಗಿಸಿ, ಮುಂಬಯಿ ಸರಕಾರವು, ಈ ಆಜ್ಞೆಗೆ ಜೋಡಿಸಲ್ಪಟ್ಟಿರುವ ಪರಿಶಿಷ್ಟದಲ್ಲಿ ನಿರ್ದೇಶಿಸಿದ ಆಜ್ಞೆಗಳು ತಾ. ೧೫-೧-೧೯೪೮ ರಿಂದ ರದ್ದಾಗಬೇಕೆಂದು ಆಧಿಸಿದೆ

ಪರಿಶಿಷ್ಟ

೧ ಹಣಕಾಸಿನ ಖಾತೆ (ಪೂರೈಕೆ) ಯು ತಾ. ೨೬-೩-೧೯೪೪ರ ೪೨/IV ನೇ ನಂಬರದ ಸರಕಾರಿ ಹುಕುಮಿನಂತೆ ಹೊರಡಿಸಿದ, ೧೯೪೪ನೇ ಇಸವಿಯ ಮುಂಬಯಿಯ ಅದ್ದಲಿಯ ವ್ಯಾಪಾರದ ಪರವಾನೆ ಕೊಡುವ ಆಜ್ಞೆ.

೨ ಹಣಕಾಸಿನ ಖಾತೆ (ಪೂರೈಕೆ)ಯು ತಾ ೮-೧೧-೧೯೪೪ರ ೪೫/IV-ಡಿ ನಂಬರದ ಸರಕಾರಿ ಹುಕುಮಿನಂತೆ ಹೊರಡಿಸಿದ, ೧೯೪೪ನೇ ಇಸವಿಯ ಮುಂಬಯಿಯ ಉರುವಲ ವ್ಯಾಪಾರಕ್ಕೆ ಪರವಾನೆ ಕೊಡುವ ಆಜ್ಞೆ

೩. ಅಹಮ್ಮದನಗರ ಮತ್ತು ನಾಸಿಕ ಜಿಲ್ಹೆಗಳೊಳಗಿಂದ ಇದ್ದಲಿ (ಚಾರಕೋಲ) ಮತ್ತು ಉರುವಲಗಳನ್ನು ನಿರ್ಯಾತ ಮಾಡಬಾರದೆಂದು ವಿಧಿಸುವದಕ್ಕಾಗಿ ಹಣಕಾಸಿನ ಖಾತೆ (ಪೂರೈಕೆ)ಯವರು ತಾ ೧೬-೧೨-೧೯೪೬ಕ್ಕೆ ಹೊರಡಿಸಿದ ೪೫/IV ಡಿ ನಂಬರದ ಸರಕಾರಿ ಆಜ್ಞೆ

೪ ಕೊಲ್ಹಾಪುರ ಜಿಲ್ಹೆಯಿಂದ ಉರುವಲವನ್ನು ನಿರ್ಯಾತ ಮಾಡತಕ್ಕದ್ದಲ್ಲವೆಂದು ವಿಧಿಸುವದಕ್ಕಾಗಿ ಹಣಕಾಸಿನ ಖಾತೆ (ಪೂರೈಕೆ)ಯವರು ತಾ. ೧೬-೧-೧೯೪೬ಕ್ಕೆ ಹೊರಡಿಸಿದ ೪೫/IV-ಡಿ (ಅ) ನಂಬರದ ಸರಕಾರಿ ಆಜ್ಞೆ

೫ ಮುಂಬಯಿ ನಗರದಿಂದಲೂ ಮುಂಬಯಿ ನಗರದ ಹೊರವಲಯದ ಜಿಲ್ಹೆಯಿಂದಲೂ ಇದ್ದಲಿಯನ್ನು ನಿರ್ಯಾತ ಮಾಡಬಾರದೆಂದು ವಿಧಿಸುವದಕ್ಕಾಗಿ ಹಣಕಾಸಿನ ಖಾತೆ (ಪೂರೈಕೆ) ಯವರು ತಾ ೧೮-೧-೧೯೪೬ಕ್ಕೆ ಹೊರಡಿಸಿದ ೪೨/IV — ಡಿ ನಂಬರದ ಸರಕಾರಿ ಆಜ್ಞೆ.

೬ ಅಹಮದಾಬಾದ ಜಿಲ್ಹೆಯಿಂದ ಉರುವಲದ ನಿರ್ಯಾತವನ್ನು ಪ್ರತಿಬಂಧಿಸುವದಕ್ಕಾಗಿ ಹಣಕಾಸಿನ ಖಾತೆ (ಪೂರೈಕೆ) ಯವರು ತಾ ೨೯-೧-೧೯೪೬ಕ್ಕೆ ಹೊರಡಿಸಿದ ೪೫/IV - ಡಿ ನಂಬರದ ಸರಕಾರಿ ಆಜ್ಞೆ.

೭ ಮುಂಬಯಿ ನಗರದಿಂದಲೂ ಮುಂಬಯಿ ನಗರದ ಹೊರವಲಯದ ಜಿಲ್ಹೆಯಿಂದಲೂ ಉರುವಲದ ನಿರ್ಯಾತವನ್ನು ಪ್ರತಿಬಂಧಿಸುವದಕ್ಕಾಗಿ ಹಣಕಾಸಿನ ಖಾತೆ (ಪೂರೈಕೆ) ಯವರು ತಾ ೨೯-೧-೧೯೪೬ಕ್ಕೆ ಹೊರಡಿಸಿದ ೪೫/IV - ಡಿ (ಅ) ನಂಬರದ ಸರಕಾರಿ ಆಜ್ಞೆ

೮ ಮುಂಬಯಿ ನಗರ ಮತ್ತು ಮುಂಬಯಿ ನಗರದ ಹೊರವಲಯದ ಜಿಲ್ಹೆಗಳಿಂದ, ಸಮುದ್ರ ಮಾರ್ಗವಾಗಿ ಹಾಗೂ ಠಾಣೆ, ಸೂರತ, ಭಡೋಚ, ರತ್ನಾಗಿರಿ ಮತ್ತು ಕಾನಡಾ ಜಿಲ್ಹೆಗಳಿಂದ ಇದ್ದಲಿಯ ನಿರ್ಯಾತ ಪ್ರತಿಬಂಧಿಸಲು ನಾಗರಿಕ ಪೂರೈಕೆ ಖಾತೆಯವರು ತಾ. ೩೦-೪-೧೯೪೬ಕ್ಕೆ ಹೊರಡಿಸಿದ ೪೨/IV-ಡಿ ನಂಬರದ ಸರಕಾರಿ ಆಜ್ಞೆ

೯ ಕುಲಾಬಾ ಜಿಲ್ಹೆಯಿಂದ ಇದ್ದಲಿ ಮತ್ತು ಉರುವಲಗಳ ನಿರ್ಯಾತ ಪ್ರತಿಬಂಧಿಸುವದಕ್ಕಾಗಿ ನಾಗರಿಕ ಪೂರೈಕೆ ಖಾತೆಯವರು ತಾ. ೩೦-೪-೧೯೪೬ಕ್ಕೆ ಹೊರಡಿಸಿದ ೪೨/IV-ಡಿ (ಅ) ನಂಬರದ ಸರಕಾರಿ ಆಜ್ಞೆ,

೧೦ ನಾಗರಿಕ ಪೂರೈಕೆ ಖಾತೆಯ ತಾ. ೪-೧-೧೯೪೭ರ ೪೨/IV-ಡಿ ನಂಬರದ ಸರಕಾರಿ ಹುಕುಮಿನಂತೆ ಹೊರಡಿಸಿದ, ೧೯೪೭ರ ಮುಂಬಯಿಯ ಇದ್ದಲಿಯ ಸಂಪಾದನೆಯ (procurement) ಆಜ್ಞೆ

೧೧ ನಾಗರಿಕ ಪೂರೈಕೆ ಖಾತೆಯ ತಾ ೨೯-೧-೧೯೪೭ ರ ೪೨/ IV — ಡಿ ನಂಬರದ ಸರಕಾರಿ ಹುಕುಮಿನಂತೆ ಹೊರಡಿಸಿದ, ೧೯೪೭ರ ಠಾಣೆಯ ಇದ್ದಲಿ-ಸಂಪಾದನೆಯ ಆಜ್ಞೆ.

ಮುಂಬಯಿ ಗವ್ಹರ್ನರರ ಆಜ್ಞೆಯಂತೆ,

A L. DIAS,
ಸರಕಾರದ ಜೋಡ ಕಾರ್ಯದರ್ಶಿ.

— ಆಂಧ್ರ ಪ್ರಾಂತದ ಪ್ರತ್ಯೇಕೀಕರಣದ ಜೊತೆಗೇ ಕರ್ನಾಟಕ ಪ್ರಾಂತದ ಪ್ರತ್ಯೇಕೀಕರಣವಾಗಬೇಕೆಂದೂ, ಈ ಬೇಡಿಕೆಯನ್ನು ಕೇಂದ್ರ ಸರಕಾರವು ಮನ್ನಿಸದಿದ್ದಲ್ಲಿ ಕೇಂದ್ರವರ್ತಿ ಹಾಗೂ ಪ್ರಾಂತಿಕ ಕಾನೂನು ಮಂಡಳಗಳೊಳಗಿನ ಕರ್ನಾಟಕ ಸದಸ್ಯರಿಗೆ ರಾಜೀನಾಮೆ ಕೊಟ್ಟು, ಹೊರಬೀಳಲು ಆಜ್ಞಾಪಿಸಲಾಗುವದೆಂದೂ ಕಳೆದ ವಾರ ಸೇರಿದ ಕರ್ನಾಟಕ ಪ್ರಾಂ. ಕಾಂ. ಕಮಿಟಿಯಲ್ಲಿ ಠರಾವಾಗಿದೆ

ಜಾಹೀರನಾಮೆ

ಉತ್ತರ ಕಾನಡಾ ಜಿಲ್ಹಾ ಎಗ್ಸಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದರೆ:—

ಕೆಳಗೆ ತೋರಿಸಿದ ಈ ಜಿಲ್ಹೆಯೊಳಗಿನ ಬಂದರಗಳನ್ನು ಉತ್ತಮ ರೀತಿಯಿಂದ ನಡಿಸುವ ಮತ್ತು ತಾರಿ ಹಾಸಲು ಸವಾಲ ಮಾಡುವ ಹಕ್ಕಿನ ದೆಸೆಯಿಂದ ೧೯೪೮ ನೇ ಇಸ್ವಿ ಏಪ್ರಿಲ್ ತಾರೀಖು ೧ನೇಯಿಂದ ೧ ವರುಷ ಅವಧಿಯ ಮಕ್ತಗಳು ಕೆಳಗೆ ತೋರಿಸಿದ ತಾರೀಖಿಗೆ, ಕೆಳಗೆ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾನ್ಹ ಮೂರು ಘಂಟೆಗೆ ಬಹಿರಂಗವಾಗಿ ಲಿಲಾವು ಮಾಡಲ್ಪಡುವವು ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲು ಮಾಡಬಹುದು

೨ ಮಕ್ತೆ ಬೇಡುವವರ ಹತ್ತರ ತಮ್ಮ ಜಾಮೀನ ಬಗ್ಗೆ ಅವರ ಸ್ಥಿರ ಆಸ್ತಿ ಎಷ್ಟಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಪೇಟೆಯ ಮಹಾಲಕರಿಯವರ ಸಹಿಯ ಸರ್ಟಿಫಿಕೇಟು ಇರಬೇಕು ಮತ್ತು ಅವರು ಪ್ರತಿಯೊಂದು ಮಕ್ತೆಯ ಬಾಬತು ಇನ್ನೂರು (೨೦೦-೦-೦) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಬೇಕು ಅಂದರೇನೆ ಅಂಥವರ ಸವಾಲು ಅವರ ಜಾಮೀನ ರಕಮಿನ ವರೆಗೆ ಮಾತ್ರ ತಕ್ಕೊಳ್ಳಲಾದೀತು ಸವಾಲು ಮಂಜೂರ ಆಗದಿದ್ದರೆ ನಗದಿಯಾಗಿ ಹಾಜರ ಮಾಡಿದ ಹಣ ಪರತ್ ಕೊಡಲ್ಪಡುವದು ಮಂಜೂರಾದರೆ, ಸದರಿ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತು ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವ ಬಗ್ಗೆ ಅಮಾನತವಾಗಿ ಇಡಲ್ಪಡುವದು, ಮತ್ತು ಮಕ್ತೆಯ ಮುದ್ದತು ತೀರಿದ ಬಳಿಕ ಎಲ್ಲ ಶರ್ತುಗಳನ್ನು ಪಾಲಿಸಿದಲ್ಲಿ ಮಾತ್ರ ಸದರಿ ರಕಮು ಪರತ ಕೊಡಲ್ಪಡುವದು

೩ ಸವಾಲು ಮಾಡುವ ವಾರ ಆದ ಕೂಡಲೆ ಸವಾಲಿನ ರಕಮಿನ ಒಂದು ಪಂಚಾಂಶ ಹಣ ಹಾಜರ ಮಾಡಲಿಕ್ಕೆ ಸವಾಲದಾರರು ಸಿದ್ಧರಾಗಿರಬೇಕು ಹೀಗೆ ಹಾಜರ ಮಾಡಿದ ಹಣ ಅವರು ಕೊಡತಕ್ಕ ಆಖೇರ ಕಿಸ್ತಿಗೆ ಮುಜರೆ ಹಿಡಿಯಲ್ಪಡುವದು

೪ ಯಾವತ್ತು ತಾರಿಗಳಿಗೆ ಜಂಗಲ-ದೋಣಿಗಳು ಸರಕಾರದಿಂದ ಪೂರೈಸಲ್ಪಟ್ಟಿವೆ ಅದರ ಕರಾರನಾಮೆಯಲ್ಲಿ ನಮೂದಿಸಿದಷ್ಟು ಎಲ್ಲ ಪೆಸಂಜರ ದೋಣಿಗಳನ್ನು ಪೂರೈಸಿಕೊಳ್ಳುವ ವ್ಯವಸ್ಥೆಯನ್ನು ಮಕ್ತೆದಾರರೇ ಮಾಡತಕ್ಕದ್ದು. ಮಳೆಗಾಲದಲ್ಲಿ ಹೆಚ್ಚಿನ ದೋಣಿಗಳನ್ನು ಮಕ್ತೆದಾರರು ತಮ್ಮ ಸ್ವಂತ ಖರ್ಚಿನಿಂದ ಹುಲ್ಲಿನ ಚಪ್ಪರದಲ್ಲಿ ಇಡತಕ್ಕದ್ದು

೫ ಮುಷ್ಕಿ ತಾರಿ ಮತ್ತು ಫೂಟಿ ತಾರಿಗೆ ಕೂಡಿ ಒಬ್ಬನೇ ಸವಾಲ ಮಾಡತಕ್ಕದ್ದು ವಸ್ತುತಃ ಮುಷ್ಕಿ ತಾರಿ ಮತ್ತು ಫೂಟಿ ತಾರಿ ಕೂಡಿ ಒಂದೇ ತಾರಿ ಎಂದು ತಿಳಿಯಬೇಕು

೬ ಮೇಲೆ ಮೂರನೇ ಕಲಮಿನಲ್ಲಿ ಹೇಳಿದಂತೆ ಒಂದು ಪಂಚಾಂಶ ರಕಮು ಮಕ್ತೆಯ ಸವಾಲ ಮಾಡುವ ವಾರ ಆದ ಕೂಡಲೆ ಹಾಜರ ಮಾಡದಿದ್ದರೆ ಸವಾಲ ರದ್ದುಪಡಿಸಿ ಪುನಃ ಲಿಲಾವು ಮಾಡಲಾದೀತು ಮತ್ತು ಅವರ ಸವಾಲು ತೆಗೆದುಕೊಳ್ಳಲಿಕ್ಕಿಲ್ಲ ಹೀಗೆ ಲಿಲಾವು ಮಾಡಿದ್ದರಿಂದ ಲುಕ್ಸಾನ ಆದರೆ ಅದು ಕಾಯದೆ ಪ್ರಕಾರ ಮೊದಲನೆಯ ಸವಾಲದಾರರ ಕಡೆಯಿಂದ ತುಂಬಿಕೊಳ್ಳಲಾದೀತು. ಲಾಭ ಆದರೆ ಅದರ ಮೇಲೆ ಅವರ ಹಕ್ಕು ಇಲ್ಲ

೭ ಆಖೇರ ಸವಾಲ ಮೆ॥ ಎಗ್ಸಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಮಂಜೂರಿಗೆ ಒಳಗಾಗುವದು ಸವಾಲು ಯಾವದೇ ಕಾರಣದಿಂದ ಅವರು ನಾಮಂಜೂರಿಸಿದರೆ ಅದರ ಕಾರಣ ತಿಳಿಸಲಿಕ್ಕೆ ಅವರು ಬದ್ಧರಾಗಲಿಕ್ಕಿಲ್ಲ

೮. ಲಿಲಾವು ಮುಗಿದ ಬಳಿಕ ಅರ್ಜಿದ್ವಾರವಾಗಿ ಯಾರಿಂದ ಆಗಲಿ ಹೆಚ್ಚು ಸವಾಲು ಬಂದ ಎಂದು ತಿಳಿಸಿದರೆ ಆ ಸವಾಲು ತೆಗೆದುಕೊಳ್ಳಲಿಕ್ಕೆ ಬರಲಿಕ್ಕಿಲ್ಲ

೯ ಕರಾರಿನಲ್ಲಿ ನಮೂದಿಸಿದ ಎಲ್ಲ ಶರ್ತುಗಳನ್ನು ಯೋಗ್ಯ ರೀತಿಯಿಂದ ಬಜಾಯಿಸುವ ಬಗ್ಗೆ ಹಾಗೂ ಲಿಲಾವಿನ ರಕಮುಗಳನ್ನು ಕಾಯದ ನಾಲ್ಕು ಕಂತುಗಳಿಂದ ಠರಾಯಿಸಿದ ಮುದ್ದತಿಗೆ ಕೊಡುವ ಬಗ್ಗೆ ಮಕ್ತೆದಾರರು ಎರಡು ಯೋಗ್ಯ ಜಾಮೀನದಾರರ, ಮೇಲಿನ ಎರಡನೇ ಕಲಮಿನಲ್ಲಿ ನಮೂದಿಸಿದ ಪ್ರಕಾರ, ಜಾಮೀನ ಸರ್ಟಿಫಿಕೇಟುಗಳನ್ನು ಹಾಜರ ಮಾಡಿ, ತಾರಿಮಾಲಕರ ಕರಾರುಗಳಂತೆ ಸವಾಲು ಮಂಜೂರ ಮಾಡಿಯದೆ ಎಂದು ತಿಳಿಸಿದ ತಾರೀಖಿನಿಂದ ಒಂದು ತಿಂಗಳೊಳಗೆ ಪೂರಾ ಮಾಡಬೇಕು ಇಲ್ಲದಿದ್ದರೆ ಸವಾಲು ರದ್ದುಪಡಿಸಿ ಮೇಲಿನ ಎರಡನೇ ಮತ್ತು ಮೂರನೇ ಕಲಮುಗಳಲ್ಲಿ ನಮೂದಿಸಿದ ಪ್ರಕಾರ ಹಾಜರ ಮಾಡಿದ ರಕಮುಗಳು ದಂಡದ ಬಗ್ಗೆ ಸರಕಾರಕ್ಕೆ ಜಮಾ ಮಾಡಲ್ಪಡುವವು ಮತ್ತು ಪುನಃ ಲಿಲಾವು ಮಾಡಿಸಿ ಆದ ಲುಕ್ಸಾನಿಗೆ ಸವಾಲದಾರರು ಜವಾಬದಾರರಾಗುವರು:—

೧೦ ತಾರಿಯ ಮಕ್ತೆ ಪಡೆದವರು ಪ್ರತಿ ಒಂದು ತಾರಿಯ ಪ್ರತಿ ಒಂದು ದೋಣಿಯ ಬಗ್ಗೆ ತಮ್ಮ ಸ್ವಂತ ಖರ್ಚಿನಿಂದ ಮೆ॥ ಎ. ಇಂ ಸಾ॥ ಕಾನಡಾ, ಕಾರವಾರರವರಿಂದ ತಾರಿಯನ್ನು ನಡಿಸುವ ಮುಂಚಿತವಾಗಿ ಪ್ರತಿಯೊಂದಕ್ಕೆ ಒಂದು ರೂಪಾಯಿ ಫೀ ಕೊಟ್ಟು ಲಾಯಸನ್ಸುಗಳನ್ನು ಪಡೆಯತಕ್ಕದ್ದು. ಮತ್ತು ಕರಾರನಾಮೆಗೆ ಬೇಕಾದ ಸ್ಟ್ಯಾಂಪ ರಕಮನ್ನು ಸವಾಲದಾರರೇ ಕೊಡಬೇಕು.

೧೧. ಅವಶ್ಯವಿದ್ದವರು ಹಿಂದಿನ ವರ್ಷಗಳಲ್ಲಿ ಆಯಾ ಸಬ್ ಡಿವ್ಹಿಜನದಲ್ಲಿಯ ತಾರಿ ಮಕ್ತೆಗೆ ಎಷ್ಟು ರಕಮಿನ ಸವಾಲು ಮಂಜೂರಾಗಿತ್ತು ಎಂಬ ಮಾಹಿತಿಯನ್ನು ಮೆ॥ ಎ. ಇಂ. ಸಾಹೇಬರವರ ಅಫೀಸಿನಲ್ಲಿ ಹಾಗೂ ಸರ್ವಸಾಧಾರಣವಾಗಿ ಲಿಲಾವಿನ ಶರ್ತುಗಳು ಏನು ಇವೆ ಎಂಬ ಮಾಹಿತಿಯನ್ನು ಸಬ್-ಡಿವ್ಹಿಜನಲ್ ಆಫೀಸರ, ಪ ವ ಡಿ ಕುಮಟಾ ಮತ್ತು ಶಿರ್ಸಿ ಇವರ ಕಚೇರಿಯಲ್ಲಿ, ಕಚೇರಿಯ ವೇಳೆಯಲ್ಲಿ ತಿಳಕೊಳ್ಳಬಹುದು ಮತ್ತು ಲಿಲಾವಿನ ಯಾವತ್ತು ಶರ್ತುಗಳನ್ನು ಲಿಲಾವಿನ ಕಾಲದಲ್ಲಿ ಓದಿ ತಿಳಿಸಪಡಲ್ಪಡುವವು.

೧೨. ಕೆಳಗೆ ಕಾಣಿಸಿದ ಪೈಕಿ, ಸೀಜ ನಂ. ೨, ೩, ೪ ಮತ್ತು ೫ನೇ ತಾರಿಯ ಮೇಲಿಂದ ಹಾಯ್ದು ಹೋಗುವ ಗಾಡಿಗಳ ಹಾಗೂ ಬೇರೆ ವಾಹನಗಳ ಮೇಲೆ ೨ನೇ ವರ್ಗದ ತಾರಿ ದರದಂತೆ ತಾರಿ ಹಾಸಲು ಆಕರಣಿ ಮಾಡಬೇಕು

೧೩ ಯಾವದಾದರೊಂದು ಕರದೆಂಪದಾರಿ ಇಂತಿಷ್ಟೇ ಸಿಕ್ಕೀತೆಂದು ಹೇಳಲಿಕ್ಕೆ ಬರಲಾರದು, ಯಾವದಾದರೊಂದು ಕಾರಣದ ದೆಸೆಯಿಂದ ಯಾವದಾದರೂ ರಸ್ತೆಯ ಮೇಲಿನ ರಹದಾರಿ ಬಂದ ಮಾಡಿದರೆ ಅಥವಾ ಬಂದ ಇದ್ದ ರಹದಾರಿ ತೆರವು ಮಾಡಿದರೆ ಮತ್ತು ತಾರಿ ಮಕ್ತೆದಾರನಿಗೆ ಅವನ ತಿಳುವಳಿಕೆಯಂತೆ ಯಾವದಾದರೊಂದು ಕಾರಣದ ದೆಸೆಯಿಂದ ರಹದಾರಿ ಸಿಗದೆ ಇದ್ದಲ್ಲಿ ಅದರ ಬಗ್ಗೆ ಸದರಿ ಮಕ್ತೆದಾರನಿಗೆ ಸೂಟಿ ಅಥವಾ ರಿಫಂಡ ಸಿಗಲಾರದು

೧೪ ತಾರಿಯನ್ನು ಉತ್ತಮ ರೀತಿಯಿಂದ (ತಾರಿಯ ಮಕ್ತೆ ಮುದ್ದತ್ತು ತೀರುವ ವರೆಗೆ) ನಡಿಸತಕ್ಕದ್ದು ತಾರಿಯ ಮಕ್ತೆದಾರನು ತನ್ನ ಕಡೆಯಿಂದ ತಾರಿಯನ್ನು ನಡಿಸುವದು ಆಗುವದಿಲ್ಲ ಎಂದು ವ್ಯಕ್ತಪಡಿಸಿದರೆ ಅವನ ಸವಾಲು ರದ್ದುಪಡಿಸಿ ಮೇಲಿನ ೯ನೇ ಕಲಮಿನನ್ವಯ ಕಾರ್ಯವಾಹಿ ಮಾಡಲಾದೀತು ಮತ್ತು ಹಾಗೆ ಆದ ಲುಕ್ಸಾನಿಗೆ ಮಾತ್ರ ಮಕ್ತೆದಾರನು ಜವಾಬ್ದಾರನಾಗುವನು

೧೫. ತಾರಿಯ ಮಕ್ತೆ ಪಡೆದವರು ತಾರಿಯ ಎರಡು ಬದಿಯಲ್ಲಿರುವ ವಿಶ್ರಾಂತಿ-ಗೃಹಗಳನ್ನು ತಮ್ಮ ಸ್ವಂತ ಖರ್ಚಿನಿಂದ ಪ್ರಯಾಣಿಕರಿಗೆ ಅನಾನುಕೂಲತೆ ಆಗದಂತೆ ಸ್ವಚ್ಛ ಇಡಬೇಕಾದೀತು.

೧೬ ಸರಕಾರಿ ದೋಣಿಗಳಿಗೆ ಮಕ್ತೆ ಪಡೆದವರು ಆಯಾ ವೇಳೆಯಲ್ಲಿ ಮಾಡತಕ್ಕ ದುರುಸ್ತಿ ವಗೈರೆಯ ಕೃತು ಮೊದಲಾದವುಗಳನ್ನು ಸವಾಲು ಮಾಡುವವರು ತಮಗೆ ಬೇಕಾದಾಗ ಮೆ॥ ಎಗ್ಸಿಕ್ಯೂಟಿವ್ಹ ಇಂಜಿನಿಯರ ಸಾಹೇಬರವರ ಆಫೀಸಿನಲ್ಲಿ, ಆಫೀಸಿನ ಹೊತ್ತಿನಲ್ಲಿ ತಿಳಕೊಳ್ಳತಕ್ಕದ್ದು ಸರಕಾರಿ ಜಂಗಲ ದೋಣಿಗಳಿಗೆ, ಗಲಗಲಿ, ಸರಕಾರದಿಂದಲೇ ಮಾಡಲ್ಪಡುವದು.

೧೭ ಸೀಜ ನಂ. ೧, ೨, ೩ ಮತ್ತು ೫ ಮುಷ್ಕಿ ತಾರಿಯ ಬಗ್ಗೆ ಯಾವದೆ ಟೋಲ ಸರ್ವಿಸ ಅಥವಾ ಟೋಲ ಸರ್ವಿಸ ಎರಡೂ ಕಡೆಯಿಂದ ಹಾಸಲ ವಸೂಲ ಮಾಡುವ ಹಕ್ಕು ಲಿಲಾವು ಮಾಡಲ್ಪಡುವವು. ಟೋಲ ಸರ್ವಿಸ ಲಿಲಾವು

ಮಾಡಲಿಕ್ಕಿರುವವರು ಎರಡು ಚಕ್ರದ ಮೋಟಾರ ಕಾರುಗಳನ್ನು ಪ್ರತ್ಯೇಕ ಯೋಗ್ಯ ಸ್ಥಳಕ್ಕೆ ಕಾರಿಯ ಬಗ್ಗೆ ಮೆ॥ ಎ ಇಂ ಸಾಹೇಬರವರಿಗೆ ಲಿಖಿತ ವಿವರ ಕೊಟ್ಟು ತಮ್ಮ ಅವರಿಗೆ ದಾವೆ ಶಿಫಾರಸ ಸವಿಸ್ತರ ಮಾಡಿ ಸವಾಲ ಮಾಡಲಿಕ್ಕೆ ಕೊಡಲ್ಪಡುವವು ದಾವೆ ಶಿಫಾರಸ ಇಷ್ಟರ ಹೊರತು ಸವಿಸ್ತರ ಇರುವ ವವು ಮೆ॥ ಎ ಇಂ ಸಾಹೇಬರವರ ವಿಚಾರಕ್ಕೆ ಒಳಗಾಗಿರುವವು ದಾವೆ ಲಿಖಿತ ಸವಿಸ್ತರ ಬಗ್ಗೆ ಯಾರ ಸವಾಲು ಮುಂಚಿತವಾಗಿ ಬರುವದೋ ಅವರು ಆ ಕಾರಿಯ ಬಗ್ಗೆ ಎರಡು ಚಕ್ರದ ಮೋಟಾರುಗಳನ್ನು ಲಿಖಿತ ಕಾರ್ಯವಿಧಾನ ಒಂದು ತಿಂಗಳೊಳಗೆ ತಂದು ಮೆ॥ ಎ ಇಂ ಸಾಹೇಬರ ಕಚೇರಿಯ ಪಾಸ ಮಾಡಿಸಿಕೊಳ್ಳಬೇಕು ಹಾಗೂ ಸರ್ಕಾರಿ ಲೆಕ್ಕಗಳ ಬಾಬತ್ತು ಮೊದಲಿನ ಬಾಕಿಯಿಂದ ತಾ ೨೦-೩-೪೮ ರೊಳಗೆ ಪಾಸ ಮಾಡಿಸಿಕೊಳ್ಳತಕ್ಕದ್ದು ಇವತ್ತಿನವರೆಗೆ ಮೇಲಿನ ಕನೇ ಕಲಮಿನ ಪ್ರಕಾರ ತಕರಾರು ಮಾಡಲಾಗಿದ್ದರೆ ಶರಾವತಿ ಕಾರಿಯ ಬಗ್ಗೆ ದಾವೆ ಲಿಖಿತ ಸವಿಸ್ತರ ಇರುವವರಿಗೆ ಲಿಲಾವಿನಲ್ಲಿ ಪ್ರಾಶಸ್ತ್ಯ ಕೊಡಲಾಗುವದು

೧೮ ಕಾರಿ ನಂಬರ ನಂ ೧ (ಶರಾವತಿ) ಈ ಕಾರಿಗೆ ಸರಕಾರದಿಂದ ನಿಯಮಿಸಲ್ಪಟ್ಟ ದರಗಳ ಮೇಲಿಂದ ಸರ ಕಾರಿ ಅಥವಾ ಖಾಸಗಿ ಪ್ರಯಾಣಿಕರ ಮೋಟಾರುಗಳು ಸವರ ತಾರಿಯಿಂದ ಗೇರಸಪ್ಪೆಗೆ ಒಯ್ಯುವ ಮತ್ತು ತರುವ ವ್ಯವಸ್ಥೆ ಮಕ್ತೇದಾರರು ಮಾಡತಕ್ಕದ್ದು ಮತ್ತು ಈ ಬಗ್ಗೆ ನಿರ್ದಿಷ್ಟ ಮಾಡಿದ ಹಾಸಲು ಮತ್ತು ಇತರ ಶರ್ತುಗಳು ಲಿಲಾವಿನ ಕಾಲಕ್ಕೆ ಜಾಹೀರ ಮಾಡಲ್ಪಡುವವು ಈ ಬಗ್ಗೆ ಸರಕಾರದಿಂದ ಇಟ್ಟ ದರಗಳ ಬದಲಾವಣೆ ಸರಕಾರದಿಂದಲೇ ಮಾಡಲ್ಪಡುವದು ಶರಾವತಿ ಕಾರಿಯ ಲಿಲಾವ ಅಥವಾ ಹೊಳೆ ಸಾಗಿಸುವ ಮುಖ್ಯ ಕಾರಿಯ ಬಗ್ಗೆ ಮತ್ತು ಗೇರಸಪ್ಪಾ ಕಾರಿಯನ್ನು ನಡಿಸುವ ಶರ್ತುಗಳು ಪ್ರತ್ಯೇಕವಾಗಿ ಲಿಲಾವ ಮಾಡಲ್ಪಡುವದು

೧೯ ಲಿಲಾವ ಸವಿಸ್ತರ ಸಲುವಾಗಿ ಸವಾಲ ಮಾಡಲಿಕ್ಕಿರುವವರಿಗೆ, ಅವರ ಸವಾಲು ಸೋಡಿ ಕಾರಿಯ ಮಕ್ತೆಯನ್ನು ೩ ರಿಂದ ೫ ವರುಷಗಳ ಕಾಲದವರೆಗೆ ಕೊಡುವದನ್ನು ವಿಚಾರಿಸಲಾಗುವದು ಈ ಮಕ್ತೆಯ ಕರಾರುಗಳು ಮೆ॥ ಎ ಇಂ ಸಾಹೇಬ, ಕಾನಡಾ, ಕಾರವಾರ ಇವರ ಕಚೇರಿಯ ಹೊತ್ತಿನಲ್ಲಿ ನೋಡಲಿಕ್ಕೆ ಸಿಗುವವು, ಮತ್ತು ಲಿಲಾವಿನ ವೇಳೆಯಲ್ಲಿ ಓದಿ ಹೇಳುವದರಲ್ಲಿ ಬರುವವು

ಅ ನಂ	ಕಾರಿಯ ಹೆಸರು	ಕಾರಿಯ ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
೧	ಶರಾವತಿ (ಮಲ್ಲಾಪುರ ಪೋರ್ಟ ಕಾರಿ ಸಹಿತ)	೨ನೇ	ಹೊನ್ನಾವರ	[illegible]	[illegible]	[illegible]
೨	ಹೆಗಡೆ ಮಿರ್ಜಾನ (ಕೋಡಕಣಿ ಪೋರ್ಟ ಕಾರಿ ಸಹಿತ)	೩ನೇ	ಕುಮಟಾ			
೩	ದೀವಗಿ (ಮಣ್ಕೆ)	೩ನೇ	ಕುಮಟಾ			
೪	ವೆಂಕಟಾಪುರ (ಹೆಬಳೆ ಮತ್ತು ತೆಂಗಿನಗುಂಡಿ ಪೋರ್ಟ ಕಾರಿಗಳ ಸಹಿತ)	,,	ಭಟಕಳ ಪೇಟೆ			
೫	ಉಳವರೆ	,,	ಅಂಕೋಲಾ			
೬	ಬನವಾಸಿ	೪ನೇ	ಶಿರಸಿ	೨೮-೧-೪೮	ಸಬ್ ಡಿವ್ಹಿಜನಲ ಆಫೀಸ, ಪಿ ಡಬ್ಲ್ಯೂ ಡಿ, ಶಿರಸಿ	ಸಬ್ ಡಿವ್ಹಿಜನಲ ಆಫೀಸರ, ಪಿ ಡಬ್ಲ್ಯೂ ಡಿ, ಶಿರಸಿ

ಜಾಹೀರನಾಮೆಯಲ್ಲಿಯ ಕಾರುಗಳನ್ನು ಕಾರುಗಳ ನಾಮೆಯ ಕ್ರಮ ಗಣನೆಯ ಪಾಲಿಸತಕ್ಕದ್ದು

ಕಾರವಾರ,
ತಾ ೧೦-೧-೧೯೪೮

L. N. KIKERI,
Executive Engineer
Kanara Division

NOTICE

Due to critical situation of petrol, basic petrol ration for Goods vehicles was issued for this quarter at a reduced rate i e at ¼ of the rate allotted for the last quarter ended 31-10-1947 As per Government's recent instructions, it has been decided to issue some increased ration to the extent of 8 units to all such Goods vehicles which will however be done after verifying previous issue made during this quarter in each case and also after verifying the currency of the documents such as Fitness Certificate Permit, etc

All the owners of the Goods trucks in the Karnatak Region should therefore, apply (not necessarily in prescribed forms) to this Office *immediately*, together with Registration Certificate (s) and arrange to obtain their ration Applications received after 25-1-1948 are not likely to be entertained

R. A Mundkur,
(Capt)
Area Rationing Authority K R
15-1-48 Belgaum

ಆಜ್ಞೆ.

ನಾಗರಿಕ ಪೂರ್ತಿಕೆ ಖಾತೆ,
ಮುಂಬಯಿ ಕೋಟೆ,
ತಾ ೧೨-೧-೧೯೪೮

ನಂ ೪೫೫/IV ಡಿ ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣ) ಕಾನೂನಿನ (೧೯೪೬ರ ೨೨ನೇ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರಗಳನ್ನು ಉಪಯೋಗಿಸಿ, ಮುಂಬಯಿ ಸರಕಾರವು, ನಾಗರಿಕ ಪೂರ್ತಿಕೆ ಖಾತೆಯ ತಾ ೨೦ ೩ ೧೯೪೬ರ ೪೫೫ IV-ಡಿ ನಂಬರದ ಸರಕಾರ ಪ್ರಕಟನೆಯಲ್ಲಿ ತಾ ೧೫ ೧-೧೯೪೮ರಿಂದ ಈ ಕೆಳಗಿನಂತೆ ತಿದ್ದುಪಡಿ ಮಾಡಬೇಕೆಂದು ವಿಧಿಸುತ್ತದೆ —

ಸದರಿ ಪ್ರಕಟನೆಯ Iನೇ ಪರಿಚ್ಛೇದದಲ್ಲಿರುವ "ಕೊಲಾಬಾ ಜಿಲ್ಲೆಯ ವಿನಹ" ಎಂಬ ಶಬ್ದಗಳನ್ನು ತೆಗೆದುಹಾಕಬೇಕು

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,
A L Dias,
ಸರಕಾರದ ಜೊತೆ ಕಾರ್ಯದರ್ಶಿ

ಜಾಹೀರ ಪ್ರಕಟನೆ.

ಕುಮಟಾ ಅಡಿಕೆ ಮಾರಾಟದ ಸೊಸ್ಯಾಟಿಯಲ್ಲಿ ಈ ಕೆಳಗಿನ ಕೆಲಸಕ್ಕೆ ಸಾಮಾನು ಪತ್ರಿಗೆ ಬಂದಿರುತ್ತದೆ ಅಗತ್ಯವಿ ಕುಮಟಾ ತಾಲೂಕಿನ ರೈತರು ಗ್ರಾಮಸ್ಥರು ಸಹಿ ತಿಳಿಸಿ ಅಡಿಕೆ ಸೊಸ್ಯಾಟಿಯಲ್ಲಿ ಅದನ್ನು ಬೇಗನೆ ಅರ್ಜಿ ಕೊಡಬೇಕು ಸಾಮಾನಿನ ವಿವರ — ಗಾಡಿ ಹಾರೆ, ಗಾಡಿ ಹಳಿ, ಕಾಲದ ಪಟ್ಟಿ, ಕಬ್ಬಿಣ, ತಗಡು, ಪ ಕ್ಲೀನ ತಗಡು ಇ ಕುಮಟಾ ತಾ ೧೬ ೧ ೪೮

ಮೆನೇಜಿಂಗ ಡೈರೆಕ್ಟರ, ಅಡಿಕೆ ಸೊಸೈಟಿ

ಜಿಲ್ಲಾ ಸಮಾಚಾರ.

ಶಿರಸಿ— (ತಾ ೧೨-೧-೪೮) ಈ ಹಿಂದೆ ... ಕಿ ಸುಪ್ರಸಿದ್ಧ ನೇತ್ರವೈದ್ಯ ಡಾ॥ ಎಮ್ ಸಿ ಮೋದಿಯವರು ಕಳೆದ ವಾರದ ಪ್ರಾರಂಭಕ್ಕೆ ಇಲ್ಲಿ ಬಂದಿರುತ್ತಾರೆ ಈ ಒಂದೇ ವಾರದಲ್ಲಿ ೩೦೦ಕ್ಕಿಂತ ಹೆಚ್ಚು ನೇತ್ರ ರೋಗಿಗಳು ಅವರ ಕಡೆಯಿಂದ ಚಿಕಿತ್ಸೆಯನ್ನೋ ಶಸ್ತ್ರ ಚಿಕಿತ್ಸೆಯನ್ನೋ ಮಾಡಿಕೊಂಡಿರುತ್ತಾರೆ ಈ ಧನ್ವಂತರಿಗೆ ಬಡವರು, ಬಲ್ಲಿದರೆಂಬ ಭೇದಭಾವವಿಲ್ಲ, ಸ್ವಂತ ಆಯಾಸದ ಕಡೆಗೂ ಲಕ್ಷವಿಲ್ಲ ಬಂದ ಬಂದ ರೋಗಿಗಳನ್ನು ಸೇವಾಬುದ್ಧಿಯಿಂದ ಉಪಚರಿಸುತ್ತಾರೆ ನೇತ್ರ ಚಿಕಿತ್ಸೆಯ ಹೊಸ ಜ್ಞಾನ ಪಡೆಯುವದಕ್ಕಾಗಿ ಅವರು ಬೇಗನೇ ಅಮೇರಿಕೆಗೆ ಹೋಗಿ, ಅಲ್ಲಿಯ ಚಿಕಿತ್ಸಾಲಯಗಳೊಳಗಿನ ಪ್ರತ್ಯಕ್ಷದ ಅನುಭವ ಪಡೆಯಬೇಕೆಂದು ಸಂಕಲ್ಪಿಸಿದ್ದಾರೆ ಇನ್ನು ಅವರಿಗೆ ಇಲ್ಲಿಯ ನಾಗರಿಕರ ಪರವಾಗಿಯೂ ಕೊಂಗ್ರೆಸ ಕಾರ್ಯಕರ್ತರ ಪರವಾಗಿಯೂ ಮಾನಪತ್ರವನ್ನಿತ್ತು ಗೌರವಿಸಲಾಯಿತು.

ಈಗ ನಿಯಂತ್ರಣ ಹೋದ್ದರಿಂದ ಈ ಜಿಲ್ಲೆಯ ಸೀಥಾ-ಕಚೇರಿಗಳಲ್ಲೂ ಪೂರ್ತಿಕೆ ಇಲಾಖೆಯ ಕಚೇರಿಗಳಲ್ಲೂ ದುಡಿಯುತ್ತಿರುವ ನೌಕರರು ಸಂಗತಿಯನ್ನು ಕಂಡು ಮನೆಗೆ ಹೋಗುವ ಪ್ರಸಂಗ ಬಂದಿದೆ ಸರಕಾರದವರು ಈ ನೌಕರರಿಗೆ ಬೇರೆ ಇಲಾಖೆಗಳಲ್ಲಿ ಸೇರಿಸಿಕೊಳ್ಳುವ ಏರ್ಪಾಟು ಮಾಡದಿದ್ದರೆ ಅವರಲ್ಲಿ ಬಹುಕೇಳ ಮಂದಿ ನಿರ್ಗತಿಕರೂ ನಿರುದ್ಯೋಗಿಗಳೂ ಆಗುವ ಪ್ರಸಂಗವಿದೆ. ಕೆಲವು ಕಾಲವಾದರೂ ಸರಕಾರದ ಸೇವೆ ಮಾಡಿದ ಜನರ ಮೇಲೆ ಇಂತಹ ಪ್ರಸಂಗ ಬರುವದು ಸರಕಾರಕ್ಕೆ ಒಂದು ಬಗೆಯ ಲಾಂಛನವೇ ಸರಿ ಆ ಲಾಂಛನ ತಮ್ಮ ಮೇಲೆ ಬರದಂತೆ ಸರಕಾರವು ಜಾಗ್ರತೆ ಕೊಳ್ಳಬೇಕು ಸೂಚನೆಯಿದೆ

ಯಲ್ಲಾಪುರ— (ತಾ ೩೧ ೧೨-೪೭) ಶಿವರಾತ್ರಿ, ಶ್ರಾವಣಿ ಮತ್ತು ಮಾರ್ಚ ತಿಂಗಳಲ್ಲಿ ಜಿಲ್ಲಾಧಿಕಾರಿ ಈ ಕೆಳಗಿನಂತೆ ಸಂಚಾರ ಮಾಡುವರೆಂದು ತಿಳಿಯುತ್ತದೆ ತಾ ೯-೧ರಿಂದ ೧೪ ೧ ಕಾರವಾರ, ತಾ ೧೯-೧ರಿಂದ ೨೬-೧ ಮುಂಡಗೋಡ, ತಾ ೨೮-೧ರಿಂದ ೫-೨ ಕಾರವಾರ, ತಾ ೬-೨ರಿಂದ ೧೦-೨ ಎಲ್ಲಂಬಿ, ತಾ ೧೧ ೨ರಿಂದ ೧೫ ೨ ಸಿದ್ದಾಪುರ, ತಾ ೨೩-೨ರಿಂದ ೨೬-೨ ಜೋಯಿಡಾ, ತಾ ೨೭-೨ರಿಂದ ೪-೩ ಶಿರಸಿ, ತಾ ೫-೩ರಿಂದ ೧೦-೩ ಯಲ್ಲಾಪುರ, ತಾ ೧೧-೩ರಿಂದ ೧೬-೩ ದಾಂಡೇಲಿ, ತಾ ೧೭-೩ರಿಂದ ೨೪-೩ ಸುಪಾ, ತಾ ೨೫-೩ರಿಂದ ಮುಂದೆ ಕಾರವಾರ

(ತಾ ೧೨ ೧-೪೮) ಕಳೆದ ತಾ ೭ಕ್ಕೆ ದಕ್ಷಿಣ ಭಾರತ ವಿಹಾರಕರು ಇಲ್ಲಿಂದ ಹಾದು ಕಾರವಾರಕ್ಕೆ ಹೋದರು ಇಲ್ಲಿದ್ದಾಗ ಅವರು ಡಾ॥ ಗೋಖಲೆ ಹೆಂಡ್ರೆ ಇವರ ಸರಕಾರ ಇವರ ಅಂಗಡಿ ನೋಡಹೋಗಿದ್ದರು ಅವರಿಗೆ ಏನು ಆಶ್ಚರ್ಯ ಕಂಡು ಬಂತೋ ಏನೋ! ಹೆಂಡ್ರೆಯವರ ಪರವಾನೆಯನ್ನು ರದ್ದುಗೊಳಿಸಿದ ಹುಕುಮು ಈಗ ಕಾರವಾರದಿಂದ ಬಂದಿರುತ್ತದೆ

ಭಟಕಳ— (ತಾ ೧೨-೧-೪೮) ಇಲ್ಲಿ ಮ್ಯುನಿಸಿಪಾಲಿಟಿಯ ಚೀಫ್ ಆಫೀಸರರೆಂದು ಈಗ ಇಲ್ಲಿ ಸಬ್ಜ ಅಸಿಸ್ಟಂಟ ರಾ॥ ಎಸ್ ವಿ ಹಳದೀಪುರ ಇವರನ್ನು ನೇಮಿಸಲ್ಪಡುವರೆಂದು ಸುದ್ದಿಯುಂಟು

— **R** —

ಪ್ರಾಂತದ ಕೆಲವೊಂದು ಭಾಗಗಳನ್ನು ಬಿಟ್ಟು ಇನ್ನುಳಿದ ಭಾಗಗಳಲ್ಲೆಲ್ಲ ಆಹಾರ ವಸ್ತುಗಳ ಸೀಥಾ ಪದ್ಧತಿಯನ್ನು ನಿಲ್ಲಿಸಿ ಆಹಾರ ಧಾನ್ಯಗಳ ಬೆಲೆಗಳ ಮೇಲಿನ ಹಾಗೂ ಸಾಗಾಟದ ಮೇಲಿನ ನಿಯಂತ್ರಣ ತೆಗೆದುಹಾಕಿದ್ದರಿಂದ (೧) ೨೫ ಯಾ ಹೆಚ್ಚಿಗೆ ಜನರಿಗೆ ಅನ್ನ-ಸಂತರ್ಪಣೆ ಹಾಕಕೂಡದೆಂದೂ, (೨) ಒಂದೇ ಊಟಕ್ಕೆ ... ಪದಾರ್ಥ (courses) ಗಳಿಗಿಂತ ಹೆಚ್ಚಿಗೆ ಬಡಿಸಬಾರದೆಂದೂ, (೩) ಅಕ್ಕಿಯ ಗಿರಣಿಗಳು ಅಕ್ಕಿ ತಯಾರಿಕೆಗಾಗಿ ಪರವಾನೆ ಪಡೆಯಬೇಕೆಂದೂ, (೪) ಅಕ್ಕಿ ಗಿರಣಿಗಳಲ್ಲಿ ಅಕ್ಕಿಯನ್ನು ಪಾಲಿಶ ಮಾಡಕೂಡದೆಂದೂ ವಿಧಿಸಿದ ನಿರ್ಬಂಧಗಳು ಹಾಗೆಯೇ ಜಾರಿಯಲ್ಲಿರುತ್ತವೆಂದು ಕೆಲವು ಕಡೆಯಲ್ಲಿ ತಪ್ಪು ತಿಳುವಳಿಕೆಯುಂಟಾದದ್ದು ಸರಕಾರದ ತಿಳುವಳಿಕೆಗೆ ಬಂದಿರುವದರಿಂದ ಈ ಆಜ್ಞೆಗಳು ಇಡೀ ಪ್ರಾಂತದಲ್ಲಿ ಇನ್ನೂ ಜಾರಿಯಲ್ಲಿರುತ್ತವೆಂದು ಸರಕಾರವು ಸ್ಪಷ್ಟೀಕರಿಸಲಿಚ್ಛಿಸುತ್ತದೆ

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ಭಾರತ ಮಾತೆಯ ವಿಲಾಪದ ವಿಶೇಷ ಸಂಚಿಕೆ.

Reg. No. B 1270 Monday, 2-2-1948

ಕಾನಡಾವೃತ್ತ

ವರ್ಷ ೩೦] THE KANARA NEWS [ಸಂಚಿಕೆ ೩೦.

ಕುಮಟಾ.- ಸೋಮವಾರ, ತಾ. ೨—೨—೧೯೪೮

ಭಾರತಭೂಮಿಯ ಸೌಭಾಗ್ಯ ಲೋಪವಾಯಿತು !

ವಜ್ರಾಘಾತ !

ನಿನ್ನೆಯ ಸಂಜೆ ಭಗವಾನ್ ಸೂರ್ಯನಾರಾಯಣನು ಅಸ್ತಂಗತನಾಗುವ ಸಮಯದಲ್ಲಿ ಭಾರತಮಾತೆಯ ಸೌಭಾಗ್ಯದ ಸೂರ್ಯನೂ ದಿಲ್ಲಿಯಲ್ಲಿ ಕಲ್ಪಿತವಾಗಿ, ಅನಪೇಕ್ಷಿತವಾಗಿ, ಅನಿರೀಕ್ಷಿತವಾಗಿ ಅಸ್ತಂಗತನಾಗಿ ಭಾರತಮಾತೆಯನ್ನೂ ಅವಳ ೪೦ ಕೋಟಿ ಮಕ್ಕಳನ್ನೂ ಗಾಢಾಂಧಕಾರದಲ್ಲಿ ಬಿಟ್ಟು ಹೋದನೆಂದು ಸಮೂದಿಸಲು ನಮಗೆ ಅತ್ಯಂತ ದುಃಖವಾಗುತ್ತಿದೆ. ಜಗದ್ವಂದ್ಯ ಮಹಾತ್ಮಾಜಿಯವರು ನಿನ್ನೆ ಬಿರ್ಲಾ ಭವನದೊಳಗಿನ ಪಟಾಂಗಣದಲ್ಲಿ ಕೂಡಿದ ಪ್ರಾರ್ಥನಾ ಸಭೆಯಲ್ಲಿ ಭಾಗ ವಹಿಸುವದಕ್ಕಾಗಿ ತಮ್ಮ ಕೋಣೆಯಿಂದ ಹೊರಬಿದ್ದು ಬಂದು ಪ್ರಾರ್ಥನಾ ಸಭೆಯಲ್ಲಿ ತಮಗಾಗಿ ಏರ್ಪಡಿಸಿದ ವೇದಿಕೆಯ ಹಿಂಬದಿಯ ಮೆಟ್ಟಲುಗಳನ್ನು ಏರುತ್ತಿರುವಾಗ, ವೇದಿಕೆಯ ಮುಂಬದಿಯಿಂದ ಪ್ರಾರ್ಥನಾ ಸಭೆಯಲ್ಲಿದ್ದ ಓರ್ವ ಬುದ್ಧಿಭ್ರಷ್ಟ ಮರಾಠಿಯ ಹಿಂದು ನವಜವಾನನು ಅಡಗಿಸಿಟ್ಟಿದ್ದ ರಿವ್ಹಾಲ್ವರದಿಂದ ಅವರ ಮೇಲೆ ಒಂದೇ ಸವನೆ ೩ ಗುಂಡುಗಳನ್ನು ಹಾರಿಸಿದನಂತಲೂ, ಮಹಾತ್ಮರು ನಗಮೊಗದಿಂದ ಅಲ್ಲಿಂದಲೇ ಪ್ರಾಣ ಬಿಟ್ಟರೆಂತಲೂ ವಾರ್ತೆಯುಂಟು. ಕಲೆತಕನು ಹಾರಿಸಿದ ಮೊದಲನೇ ಗುಂಡು ಮಹಾತ್ಮರ ಎದೆಯಲ್ಲಿ ನಾಟಿತು, ಇನ್ನೆರಡು ಗುಂಡುಗಳು ಹೊಟ್ಟೆಯನ್ನು ಬೇಧಿಸಿದವು ! ೨ ವಾರಗಳ ಹಿಂದೆ ಮಾಡಿದ ಉಪೋಷಣದಿಂದ ಅಶಕ್ತರಾದ ಮಹಾತ್ಮರು ಮೊನ್ನೆಯ ತನಕ ಬೇರೆಯವರ ಹೆಗಲ ಮೇಲೆ ಕೈಗಳನ್ನಿಟ್ಟು, ಅವರ ಸಹಾಯದಿಂದ ಪ್ರಾರ್ಥನಾ ಸಭೆಗೆ ಬರುತ್ತಿದ್ದರು; ವೇದಿಕೆಯನ್ನೇರುತ್ತಿದ್ದರು. ನಿನ್ನೆಯೇ ಅವರು ಯಾರ ಸಹಾಯವೂ ಇಲ್ಲದೆ ವೇದಿಕೆಯತ್ತ ನಡೆದು ಬಂದಿದ್ದರು. ಹೀಗೆ ಬಂದವರೇ ಬಾಯಿತೆರೆದು ನಿಂತ ಯಮನ ಬಾಯೊಳಗೆ ಬಿದ್ದರು !

ಈ ವಾರ್ತೆ ವಿದ್ಯುದ್ವೇಗದಿಂದ, ೧-೨ ನಿಮಿಷಗಳಲ್ಲಿ, ವಿದ್ಯುಚ್ಛಕ್ತಿಯ ಸಹಾಯದಿಂದ, ಅಖಂಡ ಭಾರತದ ಮೂಲೆ-ಮೂಲೆಗಳಿಗೂ ದೇಶ-ವಿದೇಶಗಳಿಗೂ ಪಸರಿಸಿತು, ಮತ್ತು ಎಲ್ಲೆಲ್ಲೂ ವಜ್ರಾಘಾತವಾಯಿತು !

ಈ ಅತಿ ದಾರುಣ ವಾರ್ತೆ ಕಿವಿಗೆ ಬಿದ್ದೊಡನೆ ಸಮಸ್ತ ಭಾರತೀಯರಿಗಾದ ನೋವಿನ ತೀವ್ರತೆಯನ್ನು ಬಣ್ಣಿಸುವದಕ್ಕಾಗಿ ನಾವು ವಜ್ರಾಘಾತ ಶಬ್ದವನ್ನು ಉಪಯೋಗಿಸಿದ್ದೇವೆ ನಿಜ. ಆದರೆ ಆ ಶಬ್ದವು ಈ ನೋವಿನ ಪರಿಮಿತಿಯನ್ನು ಯಥಾರ್ಥವಾಗಿ ಸೂಚಿಸಲು ತೀರ ಅಸಮರ್ಥವಿರುತ್ತದೆಂದು ಹೇಳಬಹುದು.

ಭಾರತಕ್ಕೆ ಇಂತಹ ವಜ್ರಾಘಾತ ಹಿಂದೆಂದೂ ಆಗಿಲ್ಲ, ಮುಂದೆ ಸಹ ಆಗುವಂತಿಲ್ಲ ! ಭಾರತದ ಪ್ರಾಚೀನ, ಅರ್ವಾಚೀನ ಇತಿಹಾಸಗಳನ್ನು ನಾವು

ಎಲ್ಲೆಲ್ಲೂ ಕಗ್ಗತ್ತಲೆ !

ಮಾನವ ಜಾತಿಯ ದುರ್ದೈವ !

ಎಷ್ಟೇ ಪರಿಶೀಲಿಸಿದರೂ ಇಂದಿನಷ್ಟು ಹೃದಯವಿದಾರಕ ಪ್ರಸಂಗ ಭಾರತದ ಮೇಲೆ ಹಿಂದೆ ಬಂದದ್ದು ಎಲ್ಲೂ ಕಣ್ಣಿಗೆ ಬೀಳುವದಿಲ್ಲ. ಪಾಣಿಪತದ ರಣಸಂಗ್ರಾಮದಲ್ಲಿ ಮರಾಠರಿಗಾದ ಪರಾಜಯ, ರಕ್ತಸಂಗಡಿಯ ಕಾಳಗದಲ್ಲಾದ ರಾಮರಾಯರ ಕೊಲೆ ಮತ್ತು ವಿಜಯ ನಗರ ಸಾಮ್ರಾಜ್ಯ ಸೇನೆಯ ಪರಾಭವ ಮೊದಲಾದ ಐತಿಹಾಸಿಕ ದುರ್ಘಟನೆಗಳು ಕೂಡ ಸದ್ಯದ ದುರ್ಘಟನೆಯನ್ನು ಸಂಗಟ್ಟಲಾರವು. ಈ ದುರ್ಘಟನೆಯನ್ನು ಸರಿಗಟ್ಟಬಲ್ಲ ಒಂದೇ ಒಂದು ದುರ್ಘಟನೆ ನಮ್ಮ ಪುರಾಣಗಳಲ್ಲಷ್ಟೇ ಕಂಡುಬರುತ್ತಿದೆ. ಅದ್ಯಾವದೆಂದರೆ ದ್ವಾರಕಾಧೀಶ ಶ್ರೀಕೃಷ್ಣನ ನಿರ್ಯಾಣವು. ೫ ಸಾವಿರ ವರ್ಷಗಳ

ಅಸ್ತಂಗತ

ಭಾರತ-ಭಾಗ್ಯ-ವಿಧಾತಾ

ಹಿಂದೆ ಶ್ರೀ ಕೃಷ್ಣ ಪರಮಾತ್ಮನು ಅಡವಿಯೊಳಗೆ ಒಂದು ಮರದಡಿ ಕೂತಲ್ಲಿ ಯಾವನೋ ಒಬ್ಬ ಬೇಡನ ಬಾಣಕ್ಕೆ ತುತ್ತಾಗಿ ಇಹಲೋಕದ ಯಾತ್ರೆಯನ್ನು ಮುಗಿಸಿದಾಗ ಆರ್ಯಾವರ್ತಕ್ಕೆ ಎಷ್ಟು ತೀವ್ರ ವೇದನೆಗಳಾಗಿರಬಹುದೋ, ಅದಕ್ಕೂ ಮಿಗಿಲಾದ ವೇದನೆಗಳು ಇಂದು ಓರ್ವ ತಿಳಿಗೇಡಿ, ಬುದ್ಧಿಗೇಡಿ ಯುವಕನ ಗುಂಡಿಗೆ ಮಹಾತ್ಮರು ಬಲಿಯಾದಾಗ ಭಾರತ ಮಾತೆಗೆ ಆಗುತ್ತಿರಬೇಕು. ಆದರೆ ಶ್ರೀ ಕೃಷ್ಣನ ಅವಸಾನ ಕಾಲದಲ್ಲಿ ಅವನ ಅವತಾರ ಕಾರ್ಯ ಸಮಾಪ್ತಿಯಾಗಿತ್ತು. ಮಹಾತ್ಮರ ಅವತಾರ ಕಾರ್ಯವಿನ್ನೂ ಪೂರ್ತಿಯಾಗಿದ್ದಿಲ್ಲ. ೧೨೫ ವರ್ಷಗಳ ಕಾಲ ಬದುಕುಳಿದು ಭಾರತಕ್ಕೂ ಅಖಿಲ ಜಗತ್ತಿಗೂ ಸತ್ಯ, ಅಹಿಂಸೆ, ಸಮತೆ, ಬಾಂಧವ್ಯ

ಗಳ ದಿವ್ಯ ಸಂದೇಶವನ್ನಿತ್ತು, ನಮ್ಮೀ ಭಾರತ ವರ್ಷದಲ್ಲಿ ಜಗತ್ತಿಗೆ ಆದರ್ಶಭೂತ ರಾಷ್ಟ್ರವನ್ನೂ ಸಮಾಜವನ್ನೂ ರಚನೆ ಮಾಡಬೇಕೆಂಬ ಮಹತ್ವಾಕಾಂಕ್ಷೆಯನ್ನು ಮಹಾತ್ಮರು ತಳೆದಿದ್ದರು. ಮತ್ತು ಆ ದಿಶೆಯಿಂದ ಪ್ರಯತ್ನಗಳನ್ನೂ ನಡೆಸಿದ್ದರು. ಅವರ ಆ ಆಕಾಂಕ್ಷೆಯು ಇಂದು ಅಪೂರ್ಣ ಉಳಿದಿದೆ. ಅವರ ಆ ಸೇವೆಯ ಲಾಭವನ್ನು ಇಂದು ಸಮಸ್ತ ಮಾನವ ಜಾತಿಯು ಕಳಕೊಂಡು ಅನಾಥವಾಗಿ, ದುರ್ದೈವಿಯಾಗಿದೆಯೆಂದು ನಾವು ತಿಳಿಯುತ್ತೇವೆ.

ಮೇಲೆ ಹೇಳಿದಂತೆ ಮಹಾತ್ಮರ ಕಾರ್ಯ ಅಪೂರ್ಣವಾಗಿರುತ್ತಿದ್ದರೂ ಅವರು ಈ ತನಕ ಮಾಡಿರುವ ಕಾರ್ಯ ಸಾಮಾನ್ಯವಲ್ಲ. ಆ ಕಾರ್ಯವನ್ನು ಸಂಕ್ಷೇಪತಃ ಬರೆದಿಟ್ಟರೂ ಅದೊಂದು ಎರಡನೆಯ ಮಹಾಭಾರತವಾಗಬಲ್ಲದು. ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರಿಗೆ ಸಾಮಾನ್ಯ ನಾಗರಿಕತೆಯ ಹಕ್ಕುಗಳನ್ನು ದೊರಕಿಸಿಕೊಡುವದಕ್ಕಾಗಿ ಸತ್ಯಾಗ್ರಹದ ಅಸ್ತ್ರವನ್ನು ಹುಡುಕಿ ತೆಗೆದು, ಅದರ ಯಶಸ್ವಿ ಪ್ರಯೋಗ ಮಾಡಿ ತೋರಿಸಿದ ಕಥೆಯನ್ನು ಬಿಟ್ಟರೂ, ೧೯೧೫ನೇ ಇಸವಿಯ ಜನವರಿಯಲ್ಲಿ ಮಹಾತ್ಮರು ಹಿಂದುಸ್ಥಾನಕ್ಕೆ ಬಂದು, ರಾಷ್ಟ್ರೀಯ ಸಭೆಯ ರಾಜಕಾರಣಕ್ಕೆ ಹೊಸದೊಂದು ರೂಪ ಕೊಟ್ಟು, ನಿದ್ರಾವಶರಾಗಿದ್ದ, ನಿರ್ಜೀವರಾಗಿದ್ದ, ನಿರ್ಬಲರಾಗಿದ್ದ ಸಕಲ ಭಾರತೀಯ ಸ್ತ್ರೀ-ಪುರುಷರಿಗೆ ಸತ್ಯ, ಅಹಿಂಸೆ, ಸ್ವಾಭಿಮಾನ, ಧೈರ್ಯ, ತ್ಯಾಗ, ಕ್ಲೇಶ-ಸಹಿಷ್ಣುತೆ ಮೊದಲಾದ ಅಮೋಘ ಸದ್ಗುಣಗಳನ್ನು ಲೇಖನ-ಭಾಷಣಗಳಿಂದಲೂ ಸ್ವಂತ ಆಚರಣೆಯಿಂದಲೂ ಕಲಿಸಿಕೊಟ್ಟು, ಕೊನೆಗೆ ಜಗತ್ತಿನಲ್ಲಿ ಅತಿ ಬಲಾಢ್ಯವೆಂದು ಖ್ಯಾತಿಗೊಂಡ ಬ್ರಿಟಿಶ ಸಾಮ್ರಾಜ್ಯದಿಂದ ಭಾರತಕ್ಕೆ ಅಹಿಂಸೆಯ ಮಾರ್ಗದಿಂದಲೇ ಪೂರ್ಣ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಕಥೆ ಅದೊಂದು ಜಗತ್ತಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಸ್ವತಂತ್ರ ಪ್ರಕರಣವಾಗಿರುತ್ತದೆ. ಜಗತ್ತಿನಲ್ಲಿ ಹಿಂಸೆಯಿಂದ ಮತ್ತು ರಕ್ತದ ಹೊಳೆಗಳನ್ನು ಹರಿಸಿ ಸ್ವಾತಂತ್ರ್ಯ ದೊರಕಿಸಿದ ಕಥೆಗಳು ಬೇಕಷ್ಟಿವೆ. ಆದರೆ ನಿಃಶಸ್ತ್ರ ಪ್ರಜೆಗಳು ಅಹಿಂಸಾಸ್ತ್ರದ ಸಹಾಯದಿಂದ ಭಾರತದಂಥ ವಿಶಾಲ ಭೂಖಂಡವನ್ನು ಸ್ವತಂತ್ರಗೊಳಿಸಿದ ಒಂದೂ ದೃಷ್ಟಾಂತ ಜಗತ್ತಿನ ಇತಿಹಾಸದಲ್ಲೆಲ್ಲೂ ಕಂಡುಬರುವದಿಲ್ಲ. ಈ ೩೦ ೩೨ ವರ್ಷಗಳಲ್ಲಿ ಭಾರತದ ರಾಜಕಾರಣದ ಧುರೀಣತ್ವವು ಮಹಾತ್ಮರ ಕೈ ಸೇರುತ್ತಿದ್ದಿಲ್ಲವಾದರೆ ಭಾರತವಿಂದು ಸ್ವತಂತ್ರವಾಗುತ್ತಿತ್ತೆಂದು ಹೇಳಬರುವದಿಲ್ಲ. ಒಂದು ವೇಳೆ ಸ್ವತಂತ್ರವಾಗುತ್ತಿದ್ದರೂ ಆ ಬಗ್ಗೆ ಎಷ್ಟು ರಕ್ತಪಾತ ಮಾಡಬೇಕಾಗುತ್ತಿತ್ತೆಂಬುದರ ಕಲ್ಪನೆ ಸಹ ಮಾಡಬರುವದಿಲ್ಲ. ಇಂದು ನಮಗೆ ಸಿಕ್ಕ ಸ್ವಾತಂತ್ರ್ಯವು ದಿವಂಗತ (?) ಸುಭಾಷಚಂದ್ರ ಬೋಸರ ಆಝಾದ ಸೇನೆಯ ಘಟನೆಯ ಹಾಗೂ ಪರಾಕ್ರಮದ

ಫಲವೆಂದೂ, ಕಾಲಚಕ್ರದ ಲೀಲೆಯಿಂದ ಬ್ರಿಟಿಶ ಸಾಂಮ್ರಾಜ್ಯ ಸರಕಾರವು ದುರ್ಬಲಗೊಂಡದ್ದರ ಪರಿಣಾಮವೆಂದೂ ಹೇಳುವವರು ಕೆಲವರಿದ್ದಾರೆ ಆದರೆ ಸುಭಾಷರಂತಹ ನೂರಾರು, ಸಾವಿರಾರು ವೀರ, ಧೀರ ಸ್ವಾತಂತ್ರ್ಯ—ವೀರರನ್ನು ದೇಶದಲ್ಲಿ ನಿರ್ಮಾಣಗೊಳಿಸಿದ ಅಥವಾ ಅಝಾದ ಸೇನೆಯನ್ನು ಕಟ್ಟಲು ಬೇಕಾದ ಸಾಮಗ್ರಿಯನ್ನು ಸಿದ್ಧಗೊಳಿಸಿದ ಶ್ರೇಯಸ್ಸೂ, ಬ್ರಿಟಿಶ ಸರಕಾರದ ಸಾಮರ್ಥ್ಯವನ್ನು ನಿಃಶಕ್ತಗೊಳಿಸಿದ ಶ್ರೇಯಸ್ಸೂ ಮಹಾತ್ಮಾ ಗಾಂಧಿಯವರಿಗೇ ಸಲ್ಲಬೇಕು ಮತ್ತು ಸಲ್ಲುತ್ತಿದೆ ಎಂಬ ಮಾತನ್ನು ಈ ಅದೂರ ದರ್ಶಿಗಳು ಮರೆಯುತ್ತಾರೆ ಇಂದು ನಮ್ಮ ರಾಷ್ಟ್ರದ ಸ್ವತಂತ್ರ ಸರಕಾರದ ಸೂತ್ರಗಳನ್ನು ನಡಿಸುತ್ತಿರುವ ಪಂ|| ಜವಾಹಿರಲಾಲ ಸರದಾರ ವಲ್ಲಭಭಾಯಿ ಮೌಲಾನಾ ಅಝಾದ ಪ್ರಭೃತಿ ರಾಷ್ಟ್ರನಾಯಕರೆಲ್ಲ ಮಹಾತ್ಮರು ಘಟಿಸಿದ ಮೂರುತಿಗಳಿರುತ್ತವೆಂಬುದನ್ನೂ ನಾವು ಮರೆಯಕೂಡದು ಮಹಾತ್ಮರು ಮಾಡಿದ ಹರಿಜನ ಸೇವೆ, ಸ್ತ್ರೀ ಸಮಾಜದ ಸೇವೆ ದರಿದ್ರ ನಾರಾಯಣನ ಸೇವೆ, ಅಲ್ಪಸಂಖ್ಯ ಸಮಾಜಗಳ ಸೇವೆ ಇವು ಎಲ್ಲ ಒಂದೊಂದೇ ಸಹ ಯಾರೊಬ್ಬರಿಗೆ ಇತಿಹಾಸದಲ್ಲಿ ಅಜರಾಮರ ಸ್ಥಾನವನ್ನು ಕೊಡಬಲ್ಲವು ಹರಿಜನರ ಉದ್ಧಾರಕ್ಕಾಗಿ ಮಹಾತ್ಮರು ಹೆಣಗಿದಷ್ಟು ಬೇರೆಯಾರೂ ಹೆಣಗಿಲ್ಲ ಸ್ತ್ರೀಯರಿಗೆ ಹಿಂದೀ ರಾಜಕಾರಣದಲ್ಲೂ ಸಮಾಜ ಕಾರಣದಲ್ಲೂ ಪುರುಷರಿಗಿದ್ದಷ್ಟೇ ಗೌರವದ ಮತ್ತು ಸಮಾನತೆಯ ಸ್ಥಾನ ಕೊಟ್ಟು ಸ್ತ್ರೀ ಸಮಾಜವನ್ನು ದೇಶ ಸೇವೆ, ಸಮಾಜ ಸೇವೆಗಾಗಿ ಅಣಿ ಮಾಡಿದ ಪೂರ್ಣ ಪುಣ್ಯ ಮಹಾತ್ಮರದೇ ಎಂದು ನಾವು ನಿರ್ಧಾರದಿಂದ ಹೇಳಬಲ್ಲೆವು ದೀನ ದರಿದ್ರರಿಗಾಗಿ ಮಹಾತ್ಮರು ಎಷ್ಟು ತಳಮಳಗೊಳ್ಳುತ್ತಿದ್ದರೆಂಬುದನ್ನು ನಾವು ಹೇಳಬೇಕಾಗಿಲ್ಲ ಮಹಾತ್ಮರ ಸಕಲ ರಾಜಕಾರಣವು ಹೀನ ದೀನ ಹಳ್ಳಿಗರ ಹಿತದ ದೃಷ್ಟಿಯಿಂದ ದರಿದ್ರನಾರಾಯಣನ ಏಳ್ಗೆಯ ದೃಷ್ಟಿಯಿಂದ ನಡೆಯುತ್ತಿತ್ತು ಅವರ ಖಾದಿ ಆಂದೋಲನ ಗ್ರಾಮೋದ್ಯೋಗಗಳ ಪುನರುಜ್ಜೀವನದ ಆಂದೋಲನ ಅಥವಾ ರಚನಾತ್ಮಕ ಕಾರ್ಯಕ್ರಮ ಇವೆಲ್ಲ ಬಡಬಗ್ಗರ ಕಲ್ಯಾಣಕ್ಕಾಗಿಯೇ ನಡೆದಿದ್ದವು ಅಲ್ಪಸಂಖ್ಯಾಕ ಸಮಾಜಗಳ ಹಿತ ರಕ್ಷಣೆಯಂತೂ ಮಹಾತ್ಮರ ಜೀವಾಳದ ಪ್ರಶ್ನೆಯಾಗಿತ್ತು ಅಲ್ಪಸಂಖ್ಯಾಕರ ಹಿತಸಾಧನೆಗಾಗಿಯೇ ಅವರು ಹಗಲಿರುಳು ಹಿಂದು ಮುಸಲ್ಮಾನರ ಐಕ್ಯವಾಗಬೇಕೆಂದು ಕನವರಿಸುತ್ತಿದ್ದರು ಅವರು ಕೈಕೊಂಡ ೧೬ ೧೭ ಉಪವಾಸಗಳಲ್ಲಿ ಹಿಂದು-ಮುಸಲ್ಮಾನ ಐಕ್ಯಸಾಧನೆಗಾಗಿ ಕೈಕೊಂಡ ಉಪವಾಸಗಳೇ ಹೆಚ್ಚಾಗಿರುತ್ತವೆ ಅವರ ಕೊನೆಯ ಉಪವಾಸ ಕೂಡ ಈ ಬಗೆಯ ಇತ್ತೆಂಬುದನ್ನು ನಾವು ನೆನಪಿಡಬೇಕು ರಾಷ್ಟ್ರವಿಭಜನೆಯ ನಂತರ ಪಂಜಾಬದಲ್ಲಿ ಪ್ರಾರಂಭವಾದ ಮತ್ತು ಶೀಘ್ರವೇ ದಿಲ್ಲಿ ಪ್ರಾಂತಕ್ಕೆ ಹಬ್ಬಿದ ಅಭೂತಪೂರ್ವ ಹತ್ಯಾಕಾಂಡವು ಕೊಲೆ ಕೊಳ್ಳೆ ಸುಲಿಗೆ ಪ್ರಕಾರಗಳೂ ಅಷ್ಟುಹೊತ್ತಿಗೆ ಮಹಾತ್ಮರು ದಿಲ್ಲಿಗೆ ತಲ್ಪುತ್ತಿದ್ದಿಲ್ಲವಾದರೆ ಮತ್ತು ಈ ಅತ್ಯಾಚಾರಗಳನ್ನು ತಡೆಯಲು ತಮ್ಮ ದೈವೀ ಶಕ್ತಿಯನ್ನು ವಿನಿಯೋಗಿಸುತ್ತಿದ್ದಿಲ್ಲವಾದರೆ ಪೂರ್ವಕ್ಕೆ ಕಲಕತ್ತೆಯವರೆಗೂ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೂ ಹಬ್ಬಿ ಇಡೀ ದೇಶದಲ್ಲಿ ಹಾಹಾಕಾರವೇಳುತ್ತಿತ್ತೆಂದು ನಮ್ಮ ಮತ ಜಾತೀಯತೆಯ ಉನ್ಮಾದದ ಆ ತೆರೆಯನ್ನು ಮಹಾತ್ಮರು ದಿಲ್ಲಿಯಲ್ಲೇ ತಮ್ಮ ಅಲೌಕಿಕ ಆತ್ಮಬಲದಿಂದ ಹಾಗೂ ಪ್ರಭಾವಿ ತಪಶ್ಚರ್ಯೆಯಿಂದ ತಡೆಹಿಡಿದಿದ್ದರಿಂದಲೇ ಇನ್ನುಳಿದ ಪ್ರಾಂತಗಳೊಳಗಿನ ಅಲ್ಪಸಂಖ್ಯಾಕರು ಸುರಕ್ಷಿತ ಉಳಿದರೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಇಂದಿನ ವಾತಾವರಣದಲ್ಲಿ ಅಲ್ಪಸಂಖ್ಯಾಕರ ಸ್ಥಾನಮಾನಗಳನ್ನಾಗಲಿ ವಿತ್ತ ಜೀವಿತಗಳನ್ನಾಗಲಿ ರಕ್ಷಿಸುತ್ತಿದ್ದ ಉಕ್ಕಿನ ಕವಚವೇ ಮಹಾತ್ಮರಾಗಿದ್ದರು ಕೊನೆಗೆ ದೇಶವಿಭಜನೆಯಿಂದ ತಲೆಗೆಟ್ಟ ಜನರ ಹಾಗೂ ದೇಶಭ್ರಷ್ಟರಾಗಿ ಬಂದ ನಿರ್ವಾಸಿತ ತಲೆತಿರುಕರ ಕೈಯಿಂದ ಅಲ್ಪಸಂಖ್ಯಾಕರನ್ನು ರಕ್ಷಿಸಲು ಮುಂದಾದರಿಂದಲೇ ಮಹಾತ್ಮರ ಮೇಲೆ ಓರ್ವ ಕೊಲೆಗಡಕನ ರೋಷಕ್ಕೆ ಬಲಿಬೀಳುವ ಪ್ರಸಂಗ ಬಂತೆಂಬುದನ್ನು ಮರೆಯಲಾಗದು ಅಲ್ಪಸಂಖ್ಯಾಕರ ಆ ಕವಚವಿಂದು ಅದೃಶ್ಯವಾಗಿದೆ!

ಇದಲ್ಲದೆ ಇಂದು ನಮ್ಮ ದೇಶದಲ್ಲಿ ಮತ ಮತಾಂತರಗಳ ವಾದ ವಾದಾಂತರಗಳ ಗಲಿ-ಬಿಲಿಯುಂಟಾಗಿದೆ! ಹಿಂದೀ ರಾಷ್ಟ್ರೀಯ ಸಭೆಯಲ್ಲೂ ಪಕ್ಷ-ಪಂಗಡಗಳಾಗಿವೆ! ಎಲ್ಲೆಲ್ಲೂ ಅಶಾಂತಿ, ಅಸಂತೋಷ, ಅಸಮಾಧಾನಗಳು ನೆಲೆಗೊಂಡಿವೆ ಕೇಂದ್ರ ಸರಕಾರದಲ್ಲಿ ಸಹ ಇದೀಗ ಮತ ಭೇದಗಳು ತಲೆ ಎತ್ತಿದ ಸುದ್ದಿಗಳು ಪ್ರಕಟವಾಗಿವೆ ಈ ಎಲ್ಲ ಮತವಾದಗಳೊಳಗಿಂದ ಪಕ್ಷ ಪಂಗಡಗಳೊಳಗಿಂದ ಮತ್ತು ಮತಭೇದಗಳೊಳಗಿಂದ ಸರಿಯಾದ ದಾರಿಯನ್ನು ತೋರಿಸಿ ಭಾರತೀಯರಿಗೆ ಯೋಗ್ಯ ಮಾರ್ಗದರ್ಶನ ಮಾಡಬಲ್ಲ ಮತ್ತು ಅಶಾಂತಿಯನ್ನು ಶಾಂತಗೊಳಿಸಬಲ್ಲ ದಿವ್ಯ ಶಕ್ತಿಯು ಪೂಜ್ಯ ಮಹಾತ್ಮರಲ್ಲಿಷ್ಟೇ ಇತ್ತು ಆ ಶಕ್ತಿಯಿಂದು ಭಾರತಾಂಬೆಯ ದುರ್ದೈವದಿಂದ ಕಣ್ಮರೆಯಾಗಿದೆ! ಮತ್ತು ಎಲ್ಲೆಲ್ಲೂ ಕಗ್ಗತ್ತಲೆಯುಂಟಾಗಿ ದಾರಿ ಕಾಣದಂತಾಗಿದೆ! ಸಕಲರೂ ಧೈರ್ಯ ಕಳಕೊಂಡಿದ್ದಾರೆ ಭಾರತಮಾತೆಯಂತೂ ತನ್ನ ಸೌಭಾಗ್ಯದ ಸಂರಕ್ಷಕನು ತನ್ನನ್ನು ಒಮ್ಮೆಲೇ ಅಗಲಿ ಹೋದನೆಂಬ ಅಪಾರ ದುಃಖದಲ್ಲಿ ಮುಳುಗಿ ಹೋಗಿದ್ದಾಳೆ ಅವಳಿಗೆ ಧೈರ್ಯ ಕೊಟ್ಟು ಸಾಂತ್ವನ ಮಾಡುವ ಶಕ್ತಿ ಯಾರಿಗುಂಟು? ಆದರೂ ನಾವು ಪೂರ್ಣ ಧೃತಿಗೆಡಬಾರದು ಮಹಾತ್ಮಾಜಿಯವರು ನಮಗೆ ಕಲಿಸಿ ಕೊಟ್ಟ ತತ್ವಗಳೂ ಅವರು ಹಾಕಿಕೊಟ್ಟ ರಚನಾತ್ಮಕ ಕಾರ್ಯಕ್ರಮವೂ ನಮ್ಮ ಮುಂದುಂಟು ನಾವು ಸದಾ ಕಾಲ ಆ ತತ್ವಗಳನ್ನು ಮನಸ್ಸಿನಲ್ಲಿಟ್ಟು, ಅವರು ತೋರಿಸಿಕೊಟ್ಟ ಮಾರ್ಗದಿಂದ ನಡೆದರೆ ಮತ್ತು ಅವರು ಹಾಕಿಕೊಟ್ಟ ಕಾರ್ಯಕ್ರಮವನ್ನು ಶ್ರದ್ಧೆಯಿಂದ ಆಚರಣೆಯಲ್ಲಿ ತಂದರೆ ಖಂಡಿತವಾಗಿಯೂ ನಮ್ಮ ಉದ್ಧಾರವೂ ದೇಶದ ಉದ್ಧಾರವೂ ಆಗುವಂತಿದೆ ಮಹಾತ್ಮರ ಮಾರ್ಗವೊಂದೇ ನಮ್ಮ ತಾರಣ ಮಾಡಬಲ್ಲದು ಅದೊಂದೇ ಈಗ ನಮ್ಮ ಆಶಾಂಕುರ ಆದರಿಂದ ಸಮಸ್ತ ಭಾರತೀಯರೂ ಇಂದು ಈ ಸಂಕಟ ಕಾಲದಲ್ಲಿ ಮಹಾತ್ಮರ ಮಾರ್ಗದಿಂದಲೇ ನಡೆಯುವ ಪ್ರತಿಜ್ಞೆ ಮಾಡಿ ಅವರಿಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿ ಬಿನ್ನವಿಸುತ್ತೇವೆ ಈ ಪ್ರತಿಜ್ಞೆಯನ್ನು ತೊಟ್ಟರೆ ಮಾತ್ರ ಮಹಾತ್ಮರ ಆತ್ಮಕ್ಕೆ ಶಾಂತಿಯಾದೀತು

☞ ಶನಿವಾರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲೇಖವಿದು. ಅಂದು ಮಹಾತ್ಮರ ನಿಧನದ ಪೂರ್ಣ ವಿವರು ತಿಳಿದಿದ್ದಿಲ್ಲ, ಅದರಿಂದ ಈ ಲೇಖದಲ್ಲಿ ಕೆಲ ವಿವರಗಳು ತಪ್ಪಿವೆ — ಸಂಪಾದಕ

ಆಜ್ಞೆ.

ನಾಗರಿಕ ಪೂರೈಕೆ ಖಾತೆ
ಮುಂಬಯಿ ಕೋಟೆ
ತಾ ೨೭-೧ ೧೯೪೮

೧೯೪೬ರ ಅವಶ್ಯಕ ವಸ್ತುಗಳ (ತಾತ್ಪೂರ್ತಿಕ ಅಧಿಕಾರಗಳು) ಕಾನೂನು

ನಂ ೪೪೨/IV ಈ ೧೯೪೬ನೇ ಇಸವಿಯ ಅವಶ್ಯಕ ವಸ್ತುಗಳ (ತಾತ್ಪೂರ್ತಿಕ ಅಧಿಕಾರಗಳು) ಕಾನೂನು (೧೯೪೬ರ ೨೪ನೆಯ ಕಾನೂನಿನ) ೩ನೆಯ ಕಲಮಿನ ಹಾಗೂ ತಾ ೧೨ ೧೦-೧೯೪೬ಕ್ಕೆ ಹಿಂದುಸ್ಥಾನ ಸರಕಾರದ ಕಾಮ ಗಾರಿಗಳು, ಗಣಿಗಳು ಮತ್ತು ಶಕ್ತಿ ಇವುಗಳ ಖಾತೆಯವರು ಹೊರಡಿಸಿದ ಪಿ ೧೧೦ (೧) ನಂಬರದ ಪ್ರಕಟನೆಯನ್ವಯ ದೊರೆತ ಅಧಿಕಾರಗಳನ್ನು ಚಲಾಯಿಸಿ, ಮುಂಬಯಿ ಸರಕಾರವು ವಿಧಿಸುತ್ತದೇನೆಂದರೆ ಈ ಮುಂಬಯಿ ನಾಗರಿಕ ಪೂರೈಕೆಗಳ ಡಾಯರೆಕ್ಟರರ ಅಪ್ಪಣೆ ಚೀಟಿಯಿಲ್ಲದೆ ಮತ್ತು ಅದಕ್ಕೆ ವ್ಯತಿರಿಕ್ತವಾಗಿ ಈ ಮುಂಬಯಿ ಪ್ರಾಂತದೊಳಗಿನ ಯಾವದೇ ಸ್ಥಳದಿಂದ ಆ ಪ್ರಾಂತದ ಹೊರಗಿರುವ ಹಿಂದುಸ್ಥಾನದೊಳಗಿನ ಯಾವ ಸ್ಥಳಕ್ಕೆ ಚಿಮಣಿ ಎಣ್ಣೆಯನ್ನು ರೇಲ್ವೆಯಿಂದ, ನೆಲ ಮಾರ್ಗದಿಂದ ಯಾ ಸಮುದ್ರ-ಮಾರ್ಗವಾಗಿ ಒಯ್ಯತಕ್ಕದ್ದಲ್ಲ

ಆದರೆ (೧) ಬರ್ಮಾ—ಶೆಲ್ಲ ಒಯಿಲ್ ಸ್ಟೋರೇಜ ಎಂಡ್ ಡಿಸ್ಟ್ರಿಬ್ಯೂಟಿಂಗ ಕಂಪನಿ ಒಫ್ ಇಂಡಿಯಾ, ಲಿ ಕಂಪನಿಯವರೂ ಅವರ ಪ್ರತಿನಿಧಿಗಳೂ, (೨) ಇಂಡೋ—ಬರ್ಮಾ ಪೆಟ್ರೋಲಿಯಮ್ ಕಂಪನಿ, ಲಿ, ಕಂಪನಿಯವರೂ ಅವರ ಪ್ರತಿನಿಧಿಗಳೂ, (೩) ದಿ ಕಾಲ್ಟೆಕ್ಸ (ಇಂಡಿಯಾ) ಕಂಪನಿಯವರೂ ಅವರ ಪ್ರತಿನಿಧಿಗಳೂ, (೪) ಸ್ಟಾಂಡರ್ಡ್ ವ್ಯಾಕ್ಯೂಮ್ ಒಯಿಲ್ ಕಂಪನಿ, ಈ ಕಂಪನಿಯವರೂ ಅವರ ಪ್ರತಿನಿಧಿಗಳೂ, (೫) ನೌಕಾಸೇನೆಯು, ಭೂಸೇನೆಯ ಮತ್ತು ವಿಮಾನ ದಲದ ಅಧಿಕಾರಿಗಳೂ ಚಿಮಣಿ ಎಣ್ಣೆಯನ್ನು ಒಯ್ಯುವದಕ್ಕೆ ಅಥವಾ ಸದರಿ (ಪ್ರಾಂತದ) ಸರಹದ್ದುಗಳನ್ನು ದಾಟಿ ಹೋಗುವ ಯಾವದೇ ಒಂದು ವಾಹನವು ಯಾವನೊಬ್ಬ ರೇಲ್ವೆ ನೌಕರನು (ತನ್ನ ಕರ್ತವ್ಯ ಪಾಲಿಸುತ್ತಿರುವಾಗ) ಒಯ್ಯುವ ಕಂದೀಲುಗಳಲ್ಲಿ ಉಪಯೋಗಿಸುವ (೧ ಪ್ಯಾಂಟ)ಗೆ ಮಿಕ್ಕದಷ್ಟು ಚಿಮಣಿ ಎಣ್ಣೆಯ ಒಯ್ಯುವದಕ್ಕೆ ಇಂತಹ ಅಪ್ಪಣೆ ಚೀಟಿಯ ಅವಶ್ಯವಾಗುವದಿಲ್ಲ

ಮುಂಬಯಿ ಗವರ್ನರರ ಆಜ್ಞೆಯ
A L Dias
ಸರಕಾರದ ಜೊತೆ-ಕಾರ್ಯದರ್ಶಿ

ESTD 193

The Agricultural & Industrial Bank, Ltd

(Incorporated in British India Liability of Members Limited)

Head Office· COONDAPOOR.

Authorised Capital	**Rs 25 00 000-0-0**
Issued Capital	**11,61 850-0-0**
Paid-up Capital & Reserves	**8 43 253-2 0**

SAVINGS BANK ACCOUNTS are opened with the minimum amounts and interest allowed at %

CURRENT ACCOUNTS are opened Interest allowed at 1/

SEASON DEPOSITS of 3 and 6 months are accepted

For Term please apply to Head Office or to our nearest Branch

Laxmi Nivas Buildings
COONDAPOOR 1—12—1947

K. VAMAN SHENAI
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆ ಇನ್ನೂ ವಿಚಿತ್ರತರವಾಗುತ್ತಿದೆ [illegible] ನೋಡಿ ಒಬ್ಬ ಕವಿಯು ಕಲ್ಪಿಸಿದ ಕಾಲ್ಪನಿಕ ಉದ್ಯಾನ [illegible] ಋತುಗಳು ಒಂದೇ ಕಾಲಕ್ಕೆ ಕೆಲಸ ಮಾಡು[illegible]ಅಂತೆ ಈಗ ಈ ನಾಡಿನಲ್ಲಿ ಚಳಿ, ಮಳೆ, ಬಿಸಿಗಳು [illegible] ಕಾಲಕ್ಕೆ ದೊರೆಯುತ್ತಿವೆ! ಆಚೆಯ ವಾರ ಒಂದು [illegible] ರಾತ್ರಿ ಮಳೆ ಬಿತ್ತು! ಮರುದಿನವೇ ಚಳಿ ಬೀಳ[illegible]! ಅದೇ ಮರು ದಿನ ಪುನಃ ಬಿಸಿಯಾಗಲಾರಂಭಿ[illegible]! ನಿನ್ನೆ ಬಿಚ್ಚ ಕರಿ ನೋಡಿದರೆ ಬೇಗನೇ ಪುನಃ ಮಳೆ [illegible]ಗುವದೆಂದು ತೋರುತ್ತಿದೆ

[illegible] ಶುಕ್ರವಾರ ಸಂಜೆ ೫ ೪೦ಕ್ಕೆ ಮಹಾತ್ಮಾ ಗಾಂಧಿಯವ[illegible] ಒಬ್ಬ ಪತಿತನಾದ ದುರಾತ್ಮನು ಹಾರಿಸಿದ ಗುಂಡುಗಳಿಂ[illegible] ಬಲಿಬಿದ್ದು ನಿಧನ ಹೊಂದಿದ ಸುದ್ದಿ ಅಂದೇ ಸಂಜೆ [illegible]ಗಂಟೆಯ ಸುಮಾರಿಗೆ ಇಲ್ಲಿ ತಿಳಿದು ಬಂತು ಈ ಸುದ್ದಿ [illegible] ಕೇಳಿದವರಿಗೆಲ್ಲ ಸಿಡಿಲು ಬಡಿದಂತಾಯಿತು ಎಷ್ಟೋ [illegible]ರು "ಮಹಾತ್ಮಾಜಿಯವರಂತಹ ದೇವತಾ ಪುರುಷ[illegible]ಯಾಗುವದು ಎಂದಾದರೂ ಸಾಧ್ಯವೇ" ಎಂದು [illegible] ಸದರಿ ವಾರ್ತೆ ನಂಬಲಿಕ್ಕೆ ಸಹ ಸಿದ್ಧರಾಗಲಿಲ್ಲ! [illegible]ದ ರೇಡಿಯೋದಲ್ಲಿ ದಿಲ್ಲಿಯ ನಭೋವಾಣಿ ಕೇಂದ್ರದಿಂದ [illegible] ಪಂ॥ ಜವಾಹರಲಾಲರೂ ಸರದಾರ ವಲ್ಲಭಭಾಯಿ [illegible]ಲರೂ ಬಿತ್ತರಿಸಿದ ಸುದ್ದಿಯನ್ನೂ ಮಹಾತ್ಮರ ಅಂತ್ಯ [illegible]ರದ ಸಂಬಂಧದ ಯೋಜನೆಯ ವಿವರಗಳನ್ನೂ [illegible]ದ ಮೇಲೆ ಅವರಿಗೂ ಊರಲ್ಲಿ ಹಬ್ಬಿದ ದುರ್ವಾರ್ತೆಯು [illegible]ವಿರುತ್ತದೆಂದು ಖಾತ್ರಿಯಾಯಿತು ಕೂಡಲೆ ಅಂಗಡಿ[illegible]ರೆಲ್ಲ ತಮ್ಮ ಅಂಗಡಿಗಳನ್ನು ಮುಚ್ಚಿದರು, ಚಲಚ್ಚಿತ್ರ [illegible]ರ್ಶನ ನಿಂತಿತು, ಶ್ರೀ ಶಾಂತೇರಿ ಕಾಮಾಕ್ಷಿ ಮಂದಿರ [illegible] ಏಕಾಂಡದಾಯ ಶಿರಸಾಟ ಕೀರ್ತನೆ [illegible] (ತಾ ೧೯ನೇ ಸೋಮವಾರದಿಂದ ದಿನಾಲೂ ಇದರ [illegible]ರ್ತನೆಗಳು ನಡೆದಿದ್ದವು) ಮುಂದೂಡಲ್ಪಟ್ಟಿತು ಮರುದಿನ [illegible]ವಾರ) ಊರಲ್ಲಿ ಸಂಪೂರ್ಣ ಹರತಾಳ (ಸಂಜೆ ದೀಪ[illegible]ಲು ಸಹ ಅಂಗಡಿಗಳು ತೆರೆಯಲ್ಪಡಲಿಲ್ಲ) ಪಾಚಿಕ[illegible]ತು ಪಂ॥ ಜವಾಹರಲಾಲರು ಸೂಚಿಸಿದಂತೆ ಎಷ್ಟೋ [illegible]ರು ಉಪೋಷಣ ಮಾಡಿದ್ದರು ಅಂದು ಮುಂಬಯಿ [illegible]ಂದ ಅಪ್ಪಣೆಯಂತೆ ಎಲ್ಲ ಕೋರ್ಟ-ಕಚೇರಿಗಳೂ [illegible]ಗಳೂ ಮುಚ್ಚಲ್ಪಟ್ಟಿದ್ದವು (ರಾಷ್ಟ್ರೀಯ ಸ್ವಯಂ[illegible]ಕ ಸಂಘದ ಬುದ್ಧಿ-ಭ್ರಷ್ಟರು ಮಾತ್ರ [illegible]ಯಾರು ಹೇಳಿದ ಬುದ್ಧಿಯ ಮಾತುಗಳನ್ನು ಆಲಿಸದೆ [illegible] ದೈನಿಕ ಕವಾಯತು ಮುಂತಾದ ಕಾರ್ಯಕ್ರಮ ನಡಿ[illegible]ರು! ಕೆಲವು ಜನರು [illegible] ಸಂದೆಯ ಹೊತ್ತಿಗೆ [illegible] ಅವರ ಚಟುವಟಿಕೆಗಳನ್ನು ನಡೆಯಗೊಡಲಿಲ್ಲ) [illegible]ಧ್ಯಾಹ್ನಕ್ಕೆ ಇಲ್ಲಿಯ ಮುಸಲ್ಮಾನ ಬಾಂಧವರು ತಮ್ಮ [illegible]ಸೀದೆಯಲ್ಲಿ ಕೂಡಿ ಮಹಾತ್ಮಾಜಿಯವರ ಬಗ್ಗೆ ವಿಶೇಷ [illegible]ರ್ಥನೆಗಳನ್ನು ಸಲ್ಲಿಸಿದರು ಮಹಾತ್ಮರ ಗುಣಗೌರವ[illegible]ನ್ನು ಹೊಗಳುವ ಕೆಲ ಭಾಷಣಗಳೂ ಅಲ್ಲಿ ಆದವೆಂದು [illegible]ಯುತ್ತದೆ ಮಧ್ಯಾಹ್ನ ೩ ಘಂಟೆಯ ಹೊತ್ತಿಗೆ ಗಾಂಧಿ [illegible]ದಿಂದ ಸಾರ್ವಜನಿಕರ ಬೃಹತ್ತಲೆಯ ಮೆರವಣಿಗೆ [illegible]ಹೊರಟಿತು ಈ ಮೆರವಣಿಗೆಯು ಬಸ್ತಿಪೇಟೆ, ನೆಲ್ಲಿಕೇರಿ, [illegible] ಕಚೇರಿ ರಸ್ತೆ, ಗುಡಿಗಾರಗಲ್ಲಿ ತಾಂಬ್ರದ ಪೇಟೆ, [illegible]ಬಾಗಿಲು ರಸ್ತೆ, ಇವುಗಳ ಮೇಲಿಂದ ಹಾದು ದೊಡ್ಡ[illegible] ಸಮುದ್ರಕ್ಕೆ ಹೋಯಿತು ಮೆರವಣಿಗೆಯಲ್ಲಿ ಊರ [illegible]ಮುಖಂಡರೂ ಸಣ್ಣ-ದೊಡ್ಡ ಸ್ಥಾನಿಕ ಅಧಿಕಾರಸ್ಥರೂ [illegible]ದ್ದರು, ನೂರಾರು ಹೆಂಗಸರು-ಮಕ್ಕಳೂ ಸೇರಿದ್ದರು [illegible]ಸುಮಾರು ೫೦೦೦ ಜನರು ಈ ಸ್ಮಶಾನದಲ್ಲಿ ಕೂಡಿದ್ದರು [illegible]ಮೆರವಣಿಗೆಯು ಸಮುದ್ರ ದಂಡೆಗೆ ಮುಟ್ಟಿದ ಮೇಲೆ, ಅಲ್ಲಿ [illegible] ವೇದ ಮಂತ್ರಗಳಾದವು ಮುಸಲ್ಮಾನರ [illegible] ಪಠನವಾಯಿತು ರಾ॥ ಶಿರಸಾಟ ಬುವಾರವರ ಗೀತಾ[illegible] (ಪುರುಷೋತ್ತಮ ಯೋಗವೆಂಬ ೧೫ನೆಯ [illegible]ಧ್ಯಾಯದ) ವಾಯಿತು ಹಾಗೂ ಗಾಂಧಿಜಿಯವರ ಬಗ್ಗೆ ರಾ॥ ಶಿರಸಾಟ ಮತ್ತು ಶ್ರೀಧರ ಬಾಳಿಗಾ ಇವರ ಭಾಷಣಗಳಾದವು ಆಮೇಲೆ ಎಲ್ಲರೂ ೨ ನಿಮಿಷ ಸ್ತಬ್ಧರಾಗಿ ನಿಂತು ಮಹಾತ್ಮಾಜಿಯವರ ಬಗ್ಗೆ ಮೌನ ಪ್ರಾರ್ಥನೆ ಸಲ್ಲಿಸಿದರು ತದನಂತರ ಜನರು ಚದರಿ ಹೋಗಿ ಮನೆಗೆ ಮರಳಿದರು

[ಕಾರ್ಯಕ್ರಮದಲ್ಲೂ ಮೆರವಣಿಗೆಯಲ್ಲೂ ಕೆಲವು ವ್ಯಕ್ತಿಗಳಿಂದ ನಮ್ಮ ಜಿಲ್ಲೆಯೊಳಗೆ ಎಲ್ಲ ಕಡೆಯಲ್ಲೂ ಇದೇ ಬಗೆಯ ಹರತಾಳ, ಮೆರವಣಿಗೆ, ಸಭೆ, ಪ್ರಾರ್ಥನೆಗಳಾದ ವರದಿಗಳು ಬಂದಿವೆ ಸ್ಥಳ ಸಂಕೋಚದ ನಿಮಿತ್ತ ಇಲ್ಲಿ ಅವನ್ನು ಸಮಾವೇಶಿಸಿರುವದಿಲ್ಲವಷ್ಟೆ! ಆ ಬಗ್ಗೆ ಓದುಗರು ಹಾಗೂ ಸುದ್ದಿಗಾರರು ಕ್ಷಮಿಸಬೇಕಾಗಿ ವಿನಂತಿ — ಸಂಪಾದಕ]

ಇಲ್ಲಿಯ ದಿವಾಣಿ ನ್ಯಾಯಾಧೀಶ ರಾ॥ ಶಿರಶಿಕರ ಇವರಿಗೆ ವಿಜಾಪುರ ಕೋರ್ಟಿಗೆ ವರ್ಗವಾದಂತೆ, ರಾ॥ ಶಿರಶಿಕರ ಅವರು ಮೊನ್ನೆ ಅಧಿಕಾರ ಒಪ್ಪಿಸಿ ಬಿಡುಗಡೆ ಹೊಂದಿದ್ದಾರೆ ಇಲ್ಲಿ ಇನ್ನೂ ಯಾರದೂ ನೇಮಣೂಕಿಯಾಗಿರುವದಿಲ್ಲ "ಶಕ್ಯವಾದಷ್ಟು ಬೇಗ" ನೇಮಣೂಕಿ ಮಾಡಲಾಗುವದೆಂದಿಷ್ಟೇ ಸರಕಾರದವರ ಆಜ್ಞಾಪತ್ರದಲ್ಲಿಂತು

ಆಚೆಯ ವಾರ ಇತ್ತೀಚೆಗೆ ಇಲ್ಲಿ ಅಬಕಾರಿ ಇನ್ಸಪೆಕ್ಟರರಾಗಿ ಬಂದಿರುವ ರಾ॥ ಪೆಲ್ಯಾರಕರ ಇವರು ಬಹಳ ಸಾಹಸ ಮಾಡಿ ಗೋವೆಯ ಬದಿಯಿಂದ ಸರಾಯಿ ತಂದುಕೊಂಡು ಬರುತ್ತಿದ್ದ ೨ ದೋಣಿಗಳನ್ನು, ದೋಣಿಯಲ್ಲಿದ್ದವರ ಸಹಿತ, ನಡು ಸಮುದ್ರದಲ್ಲಿ ಹಿಡಿದರು ತಾ ೨೧ಕ್ಕೆ ಅವರೂ ಕುಮಟಾ ತಾಲೂಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷ ರಾ॥ ಶ್ರೀಧರ ಬಾಳಿಗಾ ಇವರೂ ಕೆಲವು ಮಂದಿ ಶಿಪಾಯಿ ಹಾಗೂ ಅಬಕಾರಿ ಶಿಪಾಯಿಗಳೂ ಸಹ ಮಧ್ಯರಾತ್ರಿಯ ಸುಮಾರಿಗೆ ಹೊಲನಗದ್ದೆಯಿಂದ ದೋಣಿ ಹತ್ತಿ ಸಮುದ್ರದಲ್ಲಿ ಹೋಗಿ, ೧ ಸರಾಯಿಯ ದೋಣಿಯನ್ನು ಹಿಡಿದರು ದೋಣಿಯವರು ಮೊದಮೊದಲು ಸುಮ್ಮಗೆ ಹಿಡಿಯಲು ಈ ಹೊಸ ದೋಣಿ ಬಂದಿರುತ್ತದೆಂದು ಭಾವಿಸಲಿಲ್ಲ [illegible]ಯ ಪಕ್ಷದಿಗೆ ಬಂದವರಿರಬೇಕೆಂಬ ಭ್ರಾಂತಿಯಲ್ಲೇ ಅವರು ಉಳಿದರು! ಹಿಂಬಾಲಿಸುತ್ತಿದ್ದ ದೋಣಿ ತೀರ ಹತ್ತಿರ ಬಂದ ಮೇಲೆ ಮಾತ್ರ ತಾವು ಬಲೆಯಲ್ಲಿ ಸಿಕ್ಕಿಬಿದ್ದ ಕಲ್ಪನೆ ಅವರಿಗೆ ಬಂತು! ಆಗ ಅವರು ಹಾಯಿ ಬಿಟ್ಟು ಮತ್ತು ಹುತ್ತರದಿಂದ ಹುಟ್ಟು ತೆಗೆದು ಪಲಾಯನ ಮಾಡಲು ಪ್ರಯತ್ನಿಸಿದರು ಆದರೆ ದೈವವು ಅವರ ಕೈಬಿಟ್ಟಿತು! ಗಾಳಿ ಅನುಕೂಲವಿಲ್ಲದ್ದರಿಂದಲೂ ಅಬಕಾರಿಯವರ ದೋಣಿಯಲ್ಲಿ ಹುಟ್ಟು ಹಾಕುವವರ ಸಂಖ್ಯೆ ಹೆಚ್ಚಿದ್ದದರಿಂದಲೂ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ ಅಬಕಾರಿ ಅಧಿಕಾರಿಗಳ ಕೈಯಲ್ಲಿ ಅವರು ಸಿಕ್ಕೇ ಸಿಕ್ಕರು ಸರಾಯಿಗಳ್ಳರ ಈ ದೋಣಿಯಲ್ಲಿ ೧೦೩ ಗೆಲನ್ನ ಸರಾಯಿ ತುಂಬಿದ ೯೯ ಕೊಡಗಳೂ ೮ ಸರಾಯಿಯ ಬಾಟಲಿಗಳೂ ಇದ್ದವು ೪ ಮಂದಿ ದೋಣಿಗಾರರಿದ್ದರು ತಾ ೨೪ ರಂದು ಪುನಃ ರಾ॥ ಪೆಲ್ಯಾರಕರರು ಕಡವಾಡದಿಂದ ಕಳ್ಳಸರಾಯಿ ತುಂಬಿಯ ಸಮಯದಿಂದ ಸಮುದ್ರಕ್ಕೆ ಹೋಗಿ ಇನ್ನೊಂದು ದೋಣಿಯನ್ನು ಹಿಡಿದರು ಅದರಲ್ಲೂ ೮೬ ಗೆಲನ ಸರಾಯಿ ೯೩ ಕೊಡ ಮತ್ತು ೧೬ ಬಾಟ್ಲಿ ಸರಾಯಿಯು ಸಿಕ್ಕಿತು! ಈ ಎರಡೂ ದೋಣಿಗಳಲ್ಲಿ ಸಿಕ್ಕ ಸರಾಯಿಯ ಬೆಲೆ ೮೦೦೦ ರೂ ಗಳಷ್ಟಾಗುತ್ತದೆಂತೆ ಸಿಕ್ಕ ಬಿದ್ದ ೮ ಸರಾಯಿಗಳ್ಳರಲ್ಲಿ ೭ ಮಂದಿ ಕುಮಟೆಯವರು ಇರುತ್ತಾರೆ ಮತ್ತು ಓರ್ವನು ಭಟಕಳದವನಿದ್ದಾನೆ

ನಿನ್ನೆಯಿಂದ ಸೀಧಾ ಅಂಗಡಿಗಳು ಪೂರ್ತ ಮುಚ್ಚಲ್ಪಟ್ಟಿವೆ ಆದರಿಂದ ಜನರು ತಮಗೆ ಬೇಕಾದ ಅಕ್ಕಿ ಮತ್ತು ಚಿಮಣಿ ಎಣ್ಣೆಗಳನ್ನು ಸಾಮಾನ್ಯ ಅಂಗಡಿಗಳಿಂದಲೇ ಪಡೆದುಕೊಳ್ಳಬೇಕಾಗಿದೆ ಚಿಮಣಿ ಎಣ್ಣೆಯ ಮೇಲಿನ ಹತೋಟಿಯ ನಿಯಂತ್ರಣವು ನಿನ್ನೆಯಿಂದ ರದ್ದುಗೊಳಿಸಲ್ಪಟ್ಟಿದೆ ಯಾರಿದ್ದರೂ ಪೇಟೆಯಲ್ಲಿ ತನಗೆ ಬೇಕಷ್ಟು ಎಣ್ಣೆಯನ್ನು ಕೊಂಡುಕೊಳ್ಳಬಹುದು ಆದರೆ ಬೆಲೆಯ ನಿಯಂತ್ರಣ ಮಾತ್ರ ತೆಗೆಯಲ್ಪಟ್ಟಿರುವದಿಲ್ಲ

(೫ನೇ ಪುಟದ ಮೇಲೆ ಮುಂದರಿಸಿದೆ)

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿದ ಶಂಕರ ಲಕ್ಷ್ಮಣ ಕುಮಟೆಕರ ಈತನು ಈ ಮೂಲಕ ಜಾಹೀರಪಡಿಸುವದೇನಂದರೆ —

ನಮ್ಮ ಕುಟುಂಬದ ಕುಮಟಾ ಗ್ರಾಮದ ಸ॥ ನಂ॥ ೪೬೭ ಅಕ್ಕೆ ಒಳ್ಪಡ ಬಾಗಾಯತ ಸ್ಥಳ ಹಾಗೂ ಅದರಲ್ಲಿರುವ ಕುಮಟಾ ಮ್ಯುನಿಸಿಪಲ್ ವಾರ್ಡ ೪ ರೊಳಗಿನ ಮನೆ ನಂಬರ ೨೪೩ ಕ್ಕೊಪ್ಪಿದ (ನಮ್ಮ ಕುಟುಂಬದ ಕಾಯಂ ವಾಸ್ತವ್ಯದ) ಮನೆ ಮತ್ತು ಅದಕ್ಕೊಪ್ಪಿದ ಉಪಗೃಹಗಳು ಇವುಗಳಲ್ಲಿ ನಾನು ಸಮಾಯಿಕ ಧಣಿ, ನನ್ನ ಸಹೋದರ ನಾರಾಯಣ ಲಕ್ಷ್ಮಣನು ಧಣಿ, ಬಚ್ಚಾಬಾಯಿ ಕೋಂ ಲಕ್ಷ್ಮಣ ಇವಳು ಧಣಿ ಹಣ್ಣುಮಾರಿರುತ್ತೇವೆ ಇತ್ಯಾಗಿ ನಮ್ಮ ನಮ್ಮೊಳಗೆ ವ್ಯವಸ್ಥೆಯಾಗಿದೆ ಕಾರಣ ನನ್ನ ಪರೋಕ್ಷ ಮತ್ತು ನನ್ನ ಅನುಮತಿಯಿಲ್ಲದೆ ಮೇಲ್ಕಾಣಿಸಿದ ಸಮಾಯಿಕ ಆಸ್ತಿಗಳ ಸಂಬಂಧದಲ್ಲಿ ನನಗೆ ಯಾ ನನ್ನ ಹಕ್ಕಿಗೆ ಹಾನಿಗೊಳಿಸುವಂಥ ಯಾವದೇ ವ್ಯವಹಾರವನ್ನು ಮಾಡಲಿಕ್ಕೆ ಸದರಿ ನಾರಾಯಣನಿಗೆ ಯಾ ಬಚ್ಚಾಬಾಯಿಗೆ ಹಕ್ಕಿಲ್ಲ ಎಂಬ ಮಾತನ್ನು ಈ ಮೂಲಕ ಜಾಹೀರಪಡಿಸುತ್ತೇನೆ ಮುಂಬಯಿ, ತಾ ೨೪–೧–೧೯೪೮

S L Kumthekar

ಜಾಹೀರ ನೋಟೀಸು.

ಕೆ ಎ ಜೋಶಿ, ಬಿ ಎ,ಎಲ್ ಎಲ್ ಬಿ , ವಕೀಲ, ಬೆಳಗಾಂವ ಇವರು ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ —

ನಮ್ಮ ಪಕ್ಷಗಾರ ರಾ॥ ರಾ॥ ಶಂಕರ ನಿಂಗಪ್ಪಾ ಮಾಲಶೇಟ ಸಾ॥ ಬೆಳಗಾಂವ ಮತ್ತು ಅವರ ಮಗಾ ಅಣ್ಣಾ ರಾ॥ ರಾ॥ ಗುಂಡೂ ನಿಂಗಪ್ಪಾ ಮಾಲಶೇಟ ಸಾ॥ ಕುಮಟಾ (ಉ ಕಾನಡಾ) ಇವರಿಬ್ಬರೂ ತಮ್ಮ ತಂದೆಯವರ ಹಯಾತಿಯಲ್ಲೇ ತಮ್ಮ ಅವಿಭಕ್ತ ಕುಟುಂಬದ ಆಸ್ತಿಯನ್ನು ಹಂಚಿಕೊಂಡು ಅಂದಿನಿಂದಲೂ ಪ್ರತ್ಯೇಕ ಇರುತ್ತಾ ಬಂದಿರುತ್ತಾರೆ ಹಾಗು ನಮ್ಮ ಪಕ್ಷಗಾರರು ತಮ್ಮ ಸ್ವಂತ ಹೊಣೆಗಾರಿಕೆಯಿಂದ ಮತ್ತು ಸ್ವತಂತ್ರ ರೀತಿಯಿಂದ ಬೆಳಗಾವಿಯಲ್ಲಿ ಒಂದು ದಲಾಲಿ ಪೇಢಿಯನ್ನು ನಡಿಸುತ್ತಿದ್ದಾರೆ ಅದೇ ರೀತಿ ನಮ್ಮ ಪಕ್ಷಗಾರರ ಅಣ್ಣಾ ರಾ॥ ರಾ॥ ಗುಂಡೂ ನಿಂಗಪ್ಪ ಮಾಲಶೇಟ ಇವರು ಕುಮಟೆಯಲ್ಲಿ ತಮ್ಮ ಸ್ವತಂತ್ರ ಹಕ್ಕಿನದೊಂದು ಅಂಗಡಿಯನ್ನು ಇಟ್ಟಿರುತ್ತಾರೆ ಇತ್ಯಾಗಿ ಅವರು ಬೇರೆಯವರ ಭಾಗೀದಾರಿಯಿಂದ ಮುಂಬಯಿಯಲ್ಲಿ ಒಂದು ಪೇಢಿಯನ್ನು ನಡಿಸಹತ್ತಿದ್ದಾರೆಂದು ತಿಳಿಯುತ್ತದೆ ಕಾರಣ ಈ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ, ರಾ॥ ರಾ॥ ಗುಂಡೂ ನಿಂಗಪ್ಪಾ ಮಾಲಶೇಟ ಇವರ ಯಾವದೇ ಬಗೆಯ ವ್ಯವಹಾರದಲ್ಲಿ ನಮ್ಮ ಪಕ್ಷಗಾರರ ಹಿತಸಂಬಂಧವಿರುವದಿಲ್ಲವಾದ್ದರಿಂದ, ಸದರಿ ಗುಂಡೂ ಮಾಲಶೇಟ ಇವರ ವ್ಯವಹಾರದ ಸಾಲ ಮೂಲಗಳಿಗೆ ನಮ್ಮ ಪಕ್ಷಗಾರರು ಯಾವ ಬಗೆಯಿಂದಲೂ ಜವಾಬದಾರರಾಗಲಾರರು ಎಂದು ಕೊಟ್ಟ ಜಾಹೀರ ನೋಟೀಸು

ದೇಶಪಾಂಡೇಗಲ್ಲಿ, ಬೆಳಗಾಂವ ತಾ ೨೭—೧—೧೯೪೮ } **K. A. Joshi,** ವಕೀಲ

—R—

ತಿದ್ದುಪಡಿ

ಈ ಪತ್ರಿಕೆಯ ತಾ ೨೯–೧–೧೯೪೮ರ ಸಂಚಿಕೆಯಲ್ಲಿ " ಬೇಸಾಯಗಾರರು ಆಹಾರ–ಧಾನ್ಯಗಳನ್ನು ಮಾರಬಹುದು ಸಂಗ್ರಹಿಸಬಹುದು " ಎಂಬ ತಲೆ ಬರಹದಿಂದ ಪ್ರಕಟವಾದ " R " ಜಾಹೀರಾತಿನಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡಿ ಓದಬೇಕಾಗಿ ಓದುಗರಿಗೆ ವಿನಂತಿಯಿದೆ

" ಸರಕಾರವು ಗೋಧಿ, ಅಕ್ಕಿ, ಭತ್ತ, ಜೋಳ ಮತ್ತು ಬಾಜರಿ ಇವುಗಳ ಖರೀದಿಯ ಬಗ್ಗೆ ಗೊತ್ತುಮಾಡಿದ ಹೆಚ್ಚಿನ (ಮಿತಿಯ) ದರಗಳು ಈ ಮುಂಚೆ ಪ್ರಕಟವಾದಂತೆ ತಾ ೧–೧೧–೧೯೪೭ ರ ಬದಲು ತಾ ೧–೧೦–೧೯೪೭ಕ್ಕೆ ಮತ್ತು ತದನಂತರ ಆದ ಎಲ್ಲ ಖರೀದಿಗಳಿಗೂ ಅನ್ವಯಿಸ ಪಡುವದು "

ಮಹಾತ್ಮರ ಕೊಲೆ ! ಜವಾಹರಲಾಲ ಪ್ರಭೃತಿಗಳ ಕೊಲೆಯ ಒಳಸಂಚು !!

ಮಹಾತ್ಮರ ನಿರ್ವಾಣ !

ಕಳೆದ ತಾ ೧೮ನೇಗೆ ಉಪೋಷಣದ ಮುಕ್ತಾಯವಾದ ನಂತರ ಮಹಾತ್ಮರ ಪ್ರಕೃತಿಯು ಸುಧಾರಿಸುತ್ತ ನಡೆದಿತ್ತು ಮತ್ತು ಪ್ರಕೃತಿ ಸುಧಾರಿಸಿದ ಮೇಲೆ ಜಾತೀಯ ಸೌಹಾರ್ದದ ಸಂದೇಶವನ್ನು ಪಾಕಿಸ್ತಾನದಲ್ಲಿ ಬೀರುವದಕ್ಕಾಗಿ ಪಾಕಿಸ್ತಾನಕ್ಕೆ ಹೋಗಬೇಕೆಂದು ಅವರ ಇಚ್ಛೆಯಿತ್ತು ಆದರೆ ಪಾಕಿಸ್ತಾನದವರಿಗೆ ನನಗೆ ಸಂಶಯವಾಗಿದೆ ಆದರಿಂದ ಪಾಕಿಸ್ತಾನಿನಂತೆ ತಕ್ಕ ಸರಕಾರದ ಅಪ್ಪಣೆಯಿಲ್ಲದೆ ಅಲ್ಲಿ ಹೋಗುವದು ಮಹಾತ್ಮರಿಗೆ ಸಂಭವವಿಲ್ಲ ಹೀಗಾಗಿ ಮಹಾತ್ಮರು ಇನ್ನು ಕೆಲವೇ ದಿನಗಳಲ್ಲಿ ಸೇವಾಗ್ರಾಮಕ್ಕೆ ಹಿಂತೆರಳಬೇಕೆಂದು ಯೋಚಿಸಿದ್ದರು ಆದರೆ ದೈವೇಚ್ಛೆ ಬೇರೆಯೇ ಇತ್ತು ಅದನ್ನು ತಪ್ಪಿಸುವವರಾರು.

೮-೧೦ ದಿನಗಳ ಹಿಂದೆ ಮಹಾತ್ಮರ ಸಂಜೆಯ ಪ್ರಾರ್ಥನೆ ನಡೆದಾಗ ಯಾರೋ ದುರಾತ್ಮನು ಪ್ರಾರ್ಥನೆಯ ಬೈಲಿಗೆ ಬಂದು, ಹಿಂದಿನ ತೋಟದ ಒಂದು ಬದಿಯಿಂದ ಮಹಾತ್ಮರು ಕೂತ ವೇದಿಕೆಯತ್ತ ಒಂದು ದೇಸಿ ಬಾಂಬು ಒಗೆದಿದ್ದನು ಮಹಾತ್ಮರಿಂದ ೪೦ ಮಾರು ಹಿಂದೆ ಅದು ಬಿದ್ದು ಸ್ಫೋಟವಾಯಿತು ಯಾರಿಗೂ ಗಾಯವಾಗಲಿಲ್ಲ ಮಹಾತ್ಮರು ಆ ಸ್ಫೋಟದಿಂದ ವಿಚಲಿತರಾಗದೆ, ತಮ್ಮ ಪ್ರಾರ್ಥನೋತ್ತರ ಭಾಷಣವನ್ನು ಹಾಗೆಯೇ ಮುಂದರಿಸಿ ಮುಗಿಸಿದರು ಈ ಘಟನೆಯಾದ ಮೇಲಾದರೂ ಮಹಾತ್ಮರ ಪ್ರಾಣ ಹಿಂಡಿಕೊಳ್ಳಲು ಯಮದೂತರು ಹೊರಟಿದ್ದಾರೆಂಬ ಗ್ರಹಿಕೆ ಸರಕಾರಕ್ಕೂ ಜನತೆಗೂ ಆಗಬಹುದಾಗಿತ್ತು ಮತ್ತು ಅವರ ಸಂರಕ್ಷಣೆಯ ವ್ಯವಸ್ಥೆಯನ್ನು ಮಾಡಬಹುದಾಗಿತ್ತು ಆದರೂ ಭವಿತವ್ಯ ಬೇರೆಯೇ ಇದ್ದುದರಿಂದ ಯಾರೂ ಈ ಘಟನೆಯಿಂದ ಬೋಧ ಪಡೆಯಲಿಲ್ಲ ಸಕಲರೂ ಮೈಮರೆತೇ ಉಳಿದರು !

ಕಳೆದ ಶುಕ್ರವಾರ ಸಹ ಬಿರ್ಲಾ ಭವನದಲ್ಲಿ ಮಹಾತ್ಮರ ದಿನಚರ್ಯೆ ಎಂದಿನಂತೆಯೇ ನಡೆದಿತ್ತು ಅಪರಾಹ್ಣ ೩||-೪ ಘಂಟೆಯ ಸುಮಾರಿಗೆ ಪೂರ್ವ ಭಾಗದ ಸಂಸ್ಥಾನಗಳ ಪ್ರಜಾ ಪರಿಷತ್ತಿನ ಶಿಷ್ಟರು ಮಹಾತ್ಮರನ್ನು ಕಂಡು ತಮ್ಮಲ್ಲಿಯ ಪರಿಸ್ಥಿತಿಯನ್ನು ನಿವೇದಿಸಿದರು ೪ ಘಂಟೆಯ ಸುಮಾರಿಗೆ ಭಾರತದ ಉಪಮುಖ್ಯ-ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಯಾವದೋ ಒಂದು ಮಹತ್ವದ ವಿಷಯದ ಮೇಲೆ ಮಹಾತ್ಮರ ಸಲಹೆ ಪಡೆಕೊಳ್ಳಲು ಬಂದು, ೫ ಘಂಟೆಯವರೆಗೆ ಅವರೊಡನೆ ಇದ್ದರು. ಪ್ರಾರ್ಥನೆಯ ಸಮಯ ಸಮೀಪ ಬಂದದ್ದರಿಂದ ಸರಿಯಾಗಿ ೫ ಘಂಟೆಗೆ ಅವರು ತಮ್ಮ ನಿವಾಸಕ್ಕೆ ಹೊರಟು ಹೋದರು; ಮತ್ತು ಮಹಾತ್ಮರು ತಮ್ಮ ಮೊಮ್ಮಕ್ಕಳಾದ ಸೌ|| ಅವಾ ಗಾಂಧಿ ಮತ್ತು ಮನು ಗಾಂಧಿ ಇವರಿಬ್ಬರ ಹೆಗಲ ಮೇಲೆ ತಮ್ಮ ಕೈಗಳನ್ನಿಟ್ಟು ಪ್ರಾರ್ಥನೆಯ ಪಟಾಂಗಣಕ್ಕೆ ತಮ್ಮ ವಾಡಿಕೆಯ ದ್ರುತಗತಿಯಿಂದ ನಡೆದು ಬಂದರು ಆಗ ಪಟಾಂಗಣದಲ್ಲಿ ಸುಮಾರು [illegible]೦೦ರಷ್ಟು ಜನರು ಕೂಡಿದ್ದರು ಮಹಾತ್ಮರು ಸಮೀಪ ಬಂದಂತೆ ಜನರು ಇಕ್ಕಡೆಗಳಲ್ಲಿ ಸರಿದು ನಿಂತು ಅವರಿಗೆ ದಾರಿ ಮಾಡಿಕೊಟ್ಟರು. ಹೀಗೆ ಅವರು ಜನ-ಸಮುದಾಯದಲ್ಲಿ ಪ್ರವೇಶ ಮಾಡಿ, ವೇದಿಕೆಯಿಂದ ೭-೮ ಮಾರು ದೂರದಲ್ಲಿದ್ದಾಗ, ಆ ಸಮುದಾಯದಲ್ಲಿದ್ದ ಓರ್ವ ಯುವಕನು ತನ್ನ ಕೈಯ್ಯಲ್ಲಿದ್ದ ರಿವ್ಹಾಲ್ವರದಿಂದ ಮೊದಲನೇ ಗುಂಡು ಹಾರಿಸಿದನು ಈ ಗುಂಡಿನ ಸಪ್ಪಳ ಕೇಳಿ ಚಕಿತರಾದ ಜನರು ಇದೇನೆಂದು ಗ್ರಹಿಸುತ್ತಿರುವಷ್ಟರಲ್ಲಿ ಸದರಿ ದುರಾತ್ಮನ ಕೋವಿಯಿಂದ ಮತ್ತೆ ೨ ಗುಂಡುಗಳು ಹಾರಿದವು! ಆ ಗುಂಡುಗಳೆಲ್ಲ ಮಹಾತ್ಮಾಜಿಯವರ ಹೊಟ್ಟೆಯನ್ನು ಬೇರಿದವು ಮತ್ತು ನೆತ್ತರವು ಹೊರಚಿಮ್ಮಹತ್ತಿತ್ತು! ಮಹಾತ್ಮರು ತತ್‌ಕ್ಷಣ "ರಾಮ ರಾಮ "ಎಂದು ಭಗವಂತನ ನಾಮಸ್ಮರಣ ಮಾಡುತ್ತ ಕೈಗಳನ್ನು ಜೋಡಿಸುತ್ತ ಬಿದ್ದುಬಿಟ್ಟರು ಆಗ ಜನಸಮುದಾಯದಲ್ಲಿ ಹಾಹಾಕಾರವುಂಟಾಯಿತು! ಕೊಲೆಗಡುಕನ ಹತ್ತರವಿದ್ದ ಜನರು ಅವನ ಮುಂಗೈಯನ್ನು ಬಲವಾಗಿ ಹಿಡಿದು ಅವನನ್ನು ಕಾವಲಿಗಿದ್ದ ಪೋಲೀಸರ ವಶಕ್ಕೆ ಕೊಟ್ಟರು ಅತ್ತ ಮಹಾತ್ಮರ ಪರಿವಾರದವರೂ ಬೇರೆಯವರೂ ಮಹಾತ್ಮರನ್ನು ಬಿರ್ಲಾ-ಭವನಕ್ಕೆ ಒಯ್ದು ಹಾಸಿಗೆಯ ಮೇಲೆ ಮಲಗಿಸಿದರು ಮಹಾತ್ಮರ ಹೊಟ್ಟೆಯಲ್ಲಿ ಗುಂಡುಗಳು ನೆಟ್ಟಿದ್ದುವು ೫ ಕ್ಕೆ ಆದರೆ ೫-೪೦ರ ವರೆಗೆ ಅವರು ಬದುಕಿಕೊಂಡಿದ್ದರು ಅವರಿಗಾದ ಗಾಯಗಳು ಪ್ರಾಣಾಪಾಯಕಾರಿಗಳಿದ್ದವು ಆದರೂ ಪರಿವಾರದವರು ಆಸೆ ಬಿಡದೆ ಡಾಕ್ಟರರಿಗೆ ಕರೆಕಳಿಸಿದರು ಆದಾಗಲೇ ಮೈಸೂರ ಸರಕಾರದ ಮಂತ್ರಿಗಳಾದ ಶ್ರೀ|| ದಾಸಪ್ಪನವರು ಮೋಟಾರ ಬಂಡಿಯಲ್ಲಿ ಮಹಾತ್ಮರ ಭೆಟ್ಟಿಗಾಗಿ ಬಂದಿದ್ದರು ಬಂಡಿಯು ಬಿರ್ಲಾ ಭವನದ ಆವಾರದ ಬಾಗಿಲಲ್ಲಿ ನಿಲ್ಲುತ್ತಲೇ ಓರ್ವನು ಬಂದು "ಬಾಪೂಜಿಯವರು ಗುಂಡಿನೇಟಿನಿಂದ ಸಾಯಬಿದ್ದಿದ್ದಾರೆ ಡಾಕ್ಟರರನ್ನು ಕರೆತರಬೇಕು "ನಿಮ್ಮ ಬಂಡಿ ತುಸು ಕೊಡುವಿರಾ?" ಎಂದು ಬಿನ್ನವಿಸಿದನು ದಾಸಪ್ಪನವರು ಒಮ್ಮೆಲೇ ಹೊರಜಿಗಿದು ಬಂಡಿಯನ್ನು ಆತನಿಗೆ ಒಪ್ಪಿಸಿ, ಗಾಂಧೀಜಿಯವರೆಡೆಗೆ ಓಡಿಹೋದರು ಆಗ ಗಾಂಧೀಜಿಯವರಿಗೆ ಇನ್ನೂ ಪ್ರಾಣವಿತ್ತು ನೀರಿಗಾಗಿ ಬಾಯಿ ತೆರೆದಿತ್ತು ದಾಸಪ್ಪನವರು ನೀರು ತಂದು ೨ ಗುಟುಕು ನೀರು ಹಾಕಿದರು ಒಳಗೆ ಹೋಯಿತು ಮರುಕ್ಷಣದಲ್ಲೇ ಮಹಾತ್ಮರ ಪ್ರಾಣಪಕ್ಷಿಯು ಹಾರಿ ಹೋಗಿ ಜಗದಾತ್ಮನಲ್ಲಿ ವಿಲೀನವಾಯಿತು !

ಈ ವಾರ್ತೆ ದಿಲ್ಲಿಯಲ್ಲೆಲ್ಲ ವಿದ್ಯುದ್ವೇಗದಿಂದ ಹಬ್ಬಿತು ಎಲ್ಲೆಲ್ಲೂ ದುಃಖವೇ ದುಃಖ! ಪಂ|| ಜವಾಹರಲಾಲರಂತೂ ಅಳಲಾರಂಭಿಸಿದರು ! ಅಂದು ದಿಲ್ಲಿಯ ನಭೋವಾಣಿ ಕೇಂದ್ರದಲ್ಲಿ ಅವರು ಸಣ್ಣದೊಂದು ಹೃದಯಸ್ಪರ್ಶಿ ಭಾಷಣ ಮಾಡಿ, ಆಗಿ ಹೋದ ಅಘಟಿತ ಘಟನೆಯಿಂದ ಯಾರೂ ಉದ್ರೇಕಗೊಳ್ಳಬಾರದೆಂದೂ ಎಲ್ಲರೂ ಶಾಂತ ರೀತಿಯಿಂದ ವರ್ತಿಸಬೇಕೆಂದೂ ಉಪದೇಶಿಸಿದರು, ಮತ್ತು ಮರುದಿನ ಮಹಾತ್ಮರ ಶವದ ಅಂತ್ಯಸಂಸ್ಕಾರದ ಕಾರ್ಯಕ್ರಮವನ್ನು ಜಾಹೀರಗೊಳಿಸಿದರು. ಆಗ ಅವರ ಬಿಗಿದು ಬಂದ ಕಂಠದ ಮೇಲಿಂದಲೂ ದನಿಯ ಮೇಲಿಂದಲೂ ಅವರಿಗೆ ಎಷ್ಟು ದುಃಖವಾಗಿತ್ತೆಂಬುದರ ಸ್ಪಷ್ಟ ಕಲ್ಪನೆ ಆಕಾಶವಾಣಿಯನ್ನು ಕೇಳಿದವರಿಗೆ ಬಂದಿವೆ ಮಹಾತ್ಮರ ನಿರ್ವಾಣದ ಸುದ್ದಿ ಕೇಳಿ ಹಿಂದೆ ಸರಕಾರದ ಎಲ್ಲ ಮಂತ್ರಿಗಳೂ ಗವ್ಹರ್ನರ ಜನರಲ್ಲರಾದ ಮೌಂಟಬೆಟನ್ನ ದೊರೆಗಳೂ ಬಂದು ಮಹಾತ್ಮರ ಅಂತ್ಯದರ್ಶನ ಪಡೆದರು ಲಕ್ಷಾಂತರ ಜನರಿಗೆ ಮಹಾತ್ಮಾಜಿಯವರ ಅಂತ್ಯದರ್ಶನ ಪಡೆಯಲು ಅನುಕೂಲವಾಗಬೇಕೆಂದು ಅವರ ಶವವನ್ನು ೪-೬ ದಿನ ಕಾದಿಟ್ಟು ಆ ನಂತರ ಅಂತ್ಯವಿಧಿಗಳನ್ನು ಜರುಗಿಸಬೇಕಾಗಿ ಮೌಂಟಬೆಟನ ದೊರೆಗಳ ಸೂಚನೆಯಿತ್ತು ! ಆದರೆ ಈ ಸೂಚನೆ ಮಹಾತ್ಮರ ಆಪ್ತರಿಗೂ ಪರಿವಾರದವರಿಗೂ ಮಾನ್ಯವಾಗಲಿಲ್ಲ. ಮರುದಿನ ಮಧ್ಯಾಹ್ನವೇ ಅಂತ್ಯವಿಧಿ ಮಾಡಬೇಕೆಂದು ನಿರ್ಣಯವಾಯಿತು

ಶುಕ್ರವಾರ ರಾತ್ರಿ ಮಹಾತ್ಮಾಜಿಯವರ ಕಿರಿಮಗಂದಿರಾದ ಶ್ರೀ ದೇವದಾಸ ಗಾಂಧಿಯವರೂ ಅವರ ಹೆಂಡರು-ಮಕ್ಕಳೂ ಮಹಾತ್ಮರ ಆಪ್ತೇಷ್ಟರೂ ಅವರ ಕಳೇಬರದ ಹತ್ತರ ಭಜನೆ ಮಾಡುತ್ತ ಜಾಗರಣೆ ಮಾಡಿದರು.

ಮರುದಿನ ನಿಶ್ಚಿತವಾದ ಕಾರ್ಯಕ್ರಮದಂತೆ ಶನಿವಾರ ೧೧|| ಘಂಟೆಗೆ ಸ್ಮಶಾನಯಾತ್ರೆ ಹೊರಡುವದಿತ್ತು ಆದರೆ ಮುಂಜಾನೆ ೬ ಘಂಟೆಯಿಂದಲೇ ಜನರಿಗೆ ಮಹಾತ್ಮರ ಅಂತ್ಯದರ್ಶನ ಪಡೆಯಲು ಅನುಕೂಲವಾಗುವಂತೆ ಬಿರ್ಲಾಭವನದ ದ್ವಾರಗಳನ್ನು ತೆರೆದಿಟ್ಟಿದ್ದರು ಲಕ್ಷಾವಧಿ ಸ್ತ್ರೀ ಪುರುಷರು ಬಂದು ಮಹಾತ್ಮರಿಗೆ ಕೊನೆಯ ಪ್ರಣಾಮಗಳನ್ನರ್ಪಿಸಿದರು

ಯಮುನಾ ನದಿಯ ದಂಡೆಯ ಮೇಲಿನ ಯಮುನಾಘಾಟದಲ್ಲಿ ಶವದಹನ ಮಾಡಬೇಕೆಂದು ಮೊದಲು ಗೊತ್ತಾಗಿತ್ತು ಆದರೆ ಮಹಾತ್ಮರಿಗೆ ಅಗ್ನಿಸಂಸ್ಕಾರ ಕೊಟ್ಟ ಸ್ಥಳದಲ್ಲಿ ಮುಂದೆ ವಿಶಾಲವಾದ ಸ್ಮಾರಕ ಮಾಡಲು ಅನುಕೂಲವಾಗಬೇಕೆಂಬ ವಿಚಾರದಿಂದ ಯಮುನಾ ನದಿಯ ಮೇಲಿನ ಸೇತುವೆಯ ಸಮೀಪವಿರುವ ರಾಜಘಾಟದಲ್ಲಿ ಶವದಹನ ಮಾಡತಕ್ಕದ್ದೆಂದು ಹಿಂದಿನಿಂದ ನಿಶ್ಚಯಿಸಲಾಯಿತು ಶವದಹನಕ್ಕಾಗಿ ಅಲ್ಲಿ ೩ ಅಡಿ ಎತ್ತರ ಮತ್ತು ೧೨ ಅಡಿ ಉದ್ದಗಲವಾದ ಇಟ್ಟಂಗಿಯ ವೇದಿಕೆ ಕಟ್ಟಲಾಗಿತ್ತು.

೧೧|| ಘಂಟೆಗೆ ರಾಜ ವೈಭವದೊಂದಿಗೆ ಬಿರ್ಲಾ ಭವನದಿಂದ ಹೊರಟ ಸ್ಮಶಾನ-ಯಾತ್ರೆಯು ಭಜನೆ ಮಾಡುತ್ತ ೫|| ಮೈಲುದ್ದ ದಾರಿ ಹಾದು, ೪|| ಘಂಟೆಗೆ ರಾಜಘಾಟಕ್ಕೆ ಮುಟ್ಟಿತು ೫-೬ ಲಕ್ಷ ಜನ ಮೆರವಣಿಗೆಯಲ್ಲಿ ಸೇರಿದ್ದರು ವಿಮಾನಗಳಿಂದ ಶವದ ಮೇಲೆ ಹೂ-ಮಳೆಯಾಗುತ್ತಿತ್ತು. ದಹನ ಭೂಮಿಯಲ್ಲಿ (ಮದ್ರಾಸದಲ್ಲಿ ಮಹಾತ್ಮರ ನಿಧನದ ಸುದ್ದಿ ಕೇಳಿ ವಿಮಾನ ಮಾರ್ಗವಾಗಿ ಹಾರಿ ಬಂದ) ಲೇಡಿ ಮೌಂಟ ಬೆಟನ್, ಲಾರ್ಡ ಮೌಂಟ ಬೆಟನ್, ದೇವಿ ಸರೋಜಿನಿ, ಸರ್ ಚಂದ್ರುಲಾಲ ತ್ರಿವೇದಿ, ಶ್ರೀ|| ಬಾಳಾ ಸಾಹೇಬ ಖೇರ, ಪಂ|| ಪಂತ, ಡಾ|| ರಾಜೇಂದ್ರ ಪ್ರಸಾದ ವಗೈರೆ ಪ್ರಮುಖರು ಸೇರಿದ್ದರು ಎಲ್ಲ ಧಾರ್ಮಿಕ ವಿಧಿಗಳಾಗಿ ಮಹಾತ್ಮರ ೩ನೆಯ ಮಕ್ಕಳಾದ ಶ್ರೀ|| ರಾಮದಾಸ ಗಾಂಧಿಯವರ ಹಸ್ತದಿಂದ ಶವಕ್ಕೆ ಅಗ್ನಿ ಕೊಡಿಸಲಾಯಿತು. ಮಹಾತ್ಮರ ಶವದ ದಹನಕ್ಕಾಗಿ ಒಂದು ಹಳ್ಳಿಯ ಗೌಳಿಗರು ೨ ಡಬ್ಬಿ ಶುದ್ಧ ತುಪ್ಪ ಪೂರೈಸಿದ್ದರು ಆ ತುಪ್ಪದಿಂದಲೂ ಗಂಧದ ಕಟ್ಟಿಗೆಯಿಂದಲೂ ಅಗ್ನಿ ಸಂಸ್ಕಾರ ಮಾಡಲಾಯಿತು ಮತ್ತು "ಮಹಾತ್ಮಾ ಅಮರ ಹೋಗಯೇ"

—ಮಹಾತ್ಮರಂತೆ ಪಂ|| ಜವಾಹರಲಾಲ ವಗೈರೆ ಪ್ರಮುಖ ಕಾಂಗ್ರೆಸ ಮುಂದಾಳುಗಳ ಕೊಲೆ ಮಾಡಲು ಒಂದು ತಂಡವು ಒಳಸಂಚು ನಡೆಸಿದ ಸುದ್ದಿ ಮುಂಬಯಿಯ ಗುಪ್ತ ಪೋಲೀಸ ಇಲಾಖೆಗೆ ಸಿಕ್ಕಿದ್ದು, ಅವರು ಈ ತಂಡದ ಕೆಲ ಸದಸ್ಯರನ್ನು ಮೊನ್ನೆಯೇ ಬಂಧಿಸಿದ್ದಾರೆ

— ಮಹಾತ್ಮರ ಕೊಲೆಗಡುಕನು ಪುಣೆಯವನು ಅವನ ಹೆಸರು ನಥುರಾಮ ವಿನಾಯಕ ಗೋಡಸೆ ಎಂದಿರುತ್ತದೆ ಅವನು ಮರಾಠನೆಂದು ಕೆಲವರನ್ನುತ್ತಾರೆ, ಚಿತ್ಪಾವನ ಬ್ರಾಹ್ಮಣನೆಂದು ಬೇರೆಯವರ ಅಂಬೋಣ ಅವನ ವಿಚಾರಗಳೂ ವಿಚಾರಸರಣಿಯೂ ತೀರ ವಿಕ್ಷಿಪ್ತವಿರುತ್ತಿದ್ದ ಹಿಂದೆ ಅವನು "ಅಗ್ರಣೀ" ಎಂಬ ಪತ್ರಿಕೆ ನಡೆಸುತ್ತಿದ್ದನಂತೆ ಸರಕಾರದವರು ಆ ಪತ್ರದ ಅನಾಮತಿನ ರೂ. ೧೫೦೦ ಸರಕಾರ ಜಪ್ತಾ ಮಾಡಿ, ರೂ ೩೦೦೦ದ ಹೊಸ ಠೇವು ಬೇಡಿದ ಕೂಡಲೇ ಆ ಪತ್ರ ನಿಲ್ಲಿಸಿ, ಅವನು "ಹಿಂದೂ ರಾಷ್ಟ್ರ" ವೆಂಬ ಹೊಸ ಪತ್ರಿಕೆ ಹೊರಡಿಸಿದನು ಈ ಪತ್ರದ ತಾ. ೨೪-೧-೪೮ರ ಸಂಚಿಕೆಯಲ್ಲಿ, ಮಹಾತ್ಮರು ಭಾರತ ವರ್ಷದ ೧ನೇ ನಂಬರದ ಶತ್ರುಗಳಿರುತ್ತಾರೆಂದು ಅವನು ಬರೆದು, ಮಹಾತ್ಮರ ಸಂರಕ್ಷಣೆಗಾಗಿ ಸರಕಾರದವರು ಸತತ ಕಾವಲು ಇಡಬೇಕಾಗಿಯೂ ಬರೆದಿದ್ದನು ಕಳೆದ ಶುಕ್ರವಾರವೇ ಡೆಲ್ಲಿಯ ೧ನೇ ವರ್ಗದ ಡಬ್ಬಿಯಲ್ಲಿ ಪ್ರವಾಸ ಮಾಡಿ ಅವ ದಿಲ್ಲಿಗೆ ತಲ್ಪಿದ್ದನಂತೆ !

ಇಲ್ಲಿಯ ಕಸಬಾ ಶಾಲೆಯ ಶಾಲೆಯಿಂದ ಕೆಲವು ಶಿಕ್ಷಕರು ನಂಬರ್ ಶಿಕ್ಷಣ ಪದ್ಧತಿ ಕಲಿಯುವದಕ್ಕಾಗಿ ಶಿಕ್ಷಕ ಶಾಲೆಗೆ ಹೋಗಿರುವರು. ಅವರ ಸ್ಥಾನದಲ್ಲಿ ಬದಲಿ ಶಿಕ್ಷಕರು ನೇಮಕವಾಗಿರುವುದಿಲ್ಲ. ಅದರಿಂದ ಅವರ ವರ್ಗಗಳ ಮಕ್ಕಳು ಕಲಿಯುವವರಿಲ್ಲದೆ ಶಾಲೆಯಲ್ಲಿ ಗಲ್ಲಿಗಳಲ್ಲಿ ಸುತ್ತುತ್ತಾ ಆಟಗಳನ್ನು ಆಡುತ್ತ ಕಾಲಕಳೆಯುವರು! ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಶಿಕ್ಷಣದ ವ್ಯವಸ್ಥೆ ಹೀಗಾಗುತ್ತಿರುವಾಗ ಸರಕಾರವು ಬುನಾದಿ ಶಿಕ್ಷಣದ ಯೋಜನೆ ಯಾಕೆ ಮಾಡುತ್ತಿರುವದೋ ದೇವರೇ ಬಲ್ಲ!

ಗೋವೆ ದೇಶದ ಶ್ರೀ ಪಂಢರೀನಾಥ ... ಇವರು ಕೆಲವು ದಿನ ಭಾರತ ಸರಕಾರದ ಉದ್ಯೋಗ ಮಾಡುತ್ತಿದ್ದರು. ಅಲ್ಲಿ ಅವರು ಬಟ್ಟೆಯ ಗಣತಿ (Textile Statistics) ಯನ್ನು ಕೈಯಲ್ಲಿ ಸಂಗ್ರಹಿಸುವ ಕೆಲಸದಲ್ಲಿ ಈಗ ಅವರಿಗೆ ವ್ಯಾಪಾರ ಖಾತೆಯಲ್ಲಿ ಹಿಂದೀ ಶಾಖೆ ಸಮಿತಿಯ ಗುಮಾಸ್ತ ಅಧಿಕಾರಿಗಳನ್ನಾಗಿ ನೇಮಿಸಿದೆ.

ಕಳೆದ ಆಧಿವೇಶನ ಕಾರ್ಯಕ್ಷದ ದೊಡ್ಡವರು. ಹೊಸಗೇರಿಗಳಿಗಾಗಿ ಪಡೆಯುತ್ತಿರುವರೆಂದೂ, ಆರು ವಾರ ಬಂದ ಪ್ರಯಾಣಿಕರನ್ನು ಕೊಡದೇ ಬಿಡುವದಿಲ್ಲೆಂದೂ, ಅದರಿಂದ ಇವರಿಯ ಕೆಲಸಕ್ಕಾಗಿ ಹೋದವರು ನಿಶ್ಚಿತ ವೇಳೆಗುತ್ತರಿಂದ ಹೋಗಲು ದೊರೆಯುತ್ತಾರೆ.

ಕಳೆದ ಶುಕ್ರವಾರ ಇಲ್ಲಿ ನಡೆದ ತಾರೀಗಳ ಲಿಲಾವಿನಲ್ಲಿ ಉಳವರೆ ತಾರಿಗೆ ರೂ. ೧೧೦೦೦, ಸಿದ್ದಾಪುರ ತಾರಿಗೆ ರೂ ೧೦೮೦೦, ದೀವಗಿ (ಮಣಕಿ) ತಾರಿಗೆ ರೂ ೧೧೨೦೦, ಇರಾವತಿ ತಾರಿಗೆ ರೂ. ೫೦೦೦ ಮತ್ತು ವೆಂಕಟಾಪುರ ತಾರಿಗೆ ರೂ. ೧೧೦೦೦ ಹೀಗೆ ಕೊನೆಯ ಸವಾಲುಗಳು ನಡೆದುವೆಂದು ತಿಳಿಯುತ್ತದೆ.

ಕಾರವಾರ— ಕಳೆದ ವಾರದ "ವೃತ್ತ" "ದೊಂಗಿನ ವ್ಯಾಸರ ಪ್ರಕಾಶ" ಲೇಖದಲ್ಲಿ ಕಾರವಾರದ ಮಹಾಸಭೆ ದಾರರ ಸಂಬಂಧದಲ್ಲಿ ಬಂದ ಉಲ್ಲೇಖಗಳನ್ನು ಕುರಿತು ನಮಗೆ ಮಹಾಸಭೆಯಿಂದ ಬಂದ ಪತ್ರ ... ಅವರು ತಿಳಿಸುತ್ತಾರೇನೆಂದರೆ — "ನಾನು ಆದರ ಅಧಿಕಾರಿಯಾದ ಸ್ನೇಹಿತರೆಂದು ನನ್ನಲ್ಲಿರುವ ಗುಣಗಳ ೧೦ನೇ ಪಾಲು ಸಹ ದಾರಿ ವ್ಯಾಸರಲ್ಲಿರುವದಿಲ್ಲವೆಂದು ನೀವು ಬರೆದಿದ್ದೀರಿ. ಈ ಅಂಬೋಣವು ಪೂರ್ಣ ಅನಧಿಕೃತ, ಹೊಣೆಗಾರಿಕೆಯಿಲ್ಲದ್ದು, ಮತ್ತು ಮುತ್ತು ತಪ್ಪು ತಿಳುವಳಿಕೆಯುಂಟು ಮಾಡುವಂತಹದು ಆಗಿದೆ. ನನ್ನ ಬಗ್ಗೆ ನಿಮಗೆಷ್ಟು ಪ್ರೇಮವುಂಟೆಂಬುದನ್ನು ನಾ ಬಲ್ಲೆ. ನಾನು ಹಳೆಯ ಮಹಾಸಭೆಯ ದಾರನಿದ್ದಾಗ ನನ್ನ ವಿರುದ್ಧ "ವೃತ್ತ"ದಲ್ಲಿ ಬಂದ ಕಳೆದ ಟೀಕೆ ಮತ್ತು ತುಚ್ಛ ಟೀಕೆಯನ್ನು ನಾ ಮರೆತಿಲ್ಲ! ಈಗ ಮಾತ್ರ ನೀವು ತಮ್ಮ ಅನುಕೂಲತೆಗಾಗಿ ನನಗೆ ಗುಣಗೌರವದ ಉದ್ಗಾರ ತೆಗೆಯುತ್ತ, ಕವೀಶನ ಸಾಹೇಬರನ್ನು ಹೀಯಾಳಿಸಲಿಕ್ಕೆ ನನ್ನ ಹೆಸರಿನ ಉಪಯೋಗ ಮಾಡುತ್ತಿದ್ದೀರಿ. ನನ್ನ ದೋಷಗಳನ್ನು ನಾ ಬಲ್ಲೆ. ನನ್ನ ವಿರುದ್ಧ ಯಾವದೇ ಬಗೆಯ ಕ್ರಮ ಕೈಕೊಳ್ಳುವ ವಿಷಯ ಕವಿಾಷನರರ ಸಂಪೂರ್ಣ ಸ್ವತಂತ್ರರು. ಯಾವದೇ ಘಟನೆಯಾದದ್ದು ಇಲ್ಲ. ಕವಿಾಷನರರಿಗೂ ನನಗೂ ಆ ಮಾತುಕತೆಯಲ್ಲಿ ಅಂತಹ ಮಾತು ಬರಲಿಲ್ಲವೆಂದು ನಾನು ನಿಶ್ಚಯವಾಗಿ ಧೈರ್ಯದಿಂದ ಹೇಳುತ್ತೇನೆ" ಇತ್ಯಾದಿ.

(ತಾ. ೨೮—೧—೪೮) ನಾಂಗರ ಭಾಗ ಸಿಮೆಂಟಿನ ಸಾವಿರಗಟ್ಟಲೆ ಚೀಲಗಳ ಕೊರತೆಯ ಬೇಡಿಕೆಯೇ ಇಲ್ಲಿ ಬಂದು ಇಳಿದಿದೆ. ಆದರೂ ಜನರಿಗೆ ಮನೆ ಕಟ್ಟಲಿಕ್ಕಾಗಿ ೪—೧೦ ಚೀಲ ಸಿಮೆಂಟ ಬೇಡಿದರೂ ಸಹ ಸಿಗುವದಿಲ್ಲ! "ಸಿಮೆಂಟ ಸಿಲ್ಲ, ಇಲ್ಲ" ಎಂದು ಸಿಮೆಂಟ ಕಂಟ್ರಾಕ್ಟರು ಹೇಳುತ್ತಾರೆ. ಹಾಗಾದರೆ ಉತ್ತರ ಕೊಡುತ್ತಾರೆ! ಕಳ್ಳವ್ಯಾಪಾರ ಕೊಡುವವರಿಗೆ ಮಾತ್ರ ಸಿಮೆಂಟ ಸಿಗುತ್ತಿದೆ. ಸಿಮೆಂಟಿನ ಮೇಲಿನ ನಿಯಂತ್ರಣ ತೆಗೆದರೆ ಜನರಿಗೆ ಅಷ್ಟು ಪೀಡೆ ಆಗುವದು. ಕಂಟ್ರಾಕ್ಟರರ ಅಧಿಕಾರಿಗಳ ಇತ್ತ ಗಮನ ಕೊಡಬೇಕಾಗಿ ಜನರು ವಿನಂತಿಸುತ್ತಾರೆ.

ಕಲ್ಲಿದ್ದಲು ಪೂರೈಕೆಗಳ ಅಧಿಕ ಸ್ಥಿತಿ ಸುಧಾರಿಸುವದಕ್ಕಾಗಿ, ಆಯಾ ಪೋರ್ಟುಗಳ ಹದ್ದಿನಲ್ಲಿ ಬರುವಂತಹ ಘಟಕಗಳ ದೂರದಿಂದ ೧೦೦೦ ಗಜದಷ್ಟು ದೂರದ ಬೋಟುಗಳಿಗೆ "ಮುಂದೆ ಪುನಃ ಮುಳುಗು ಅಗುವ ವರೆಗೆ" ಕೊಡಬೇಕೆಂದು ಈ ವರ್ಷದ ಪ್ರಾರಂಭದ ನಂತರ ನಿಲ್ಲ ಸುಂಬಯಿ ಸರಕಾರವು ಒಂದು ರೂಪದ ಮಾತಿರುವ ನಿಲ್ಲ. ಈ ಸಮಯ ಸಿಗದೇ ಇದರೆ ಬೋಟುಗಳು ಸ್ಥಳೀಯ ಸ್ಥಳಗಳನ್ನು ಬಿಡಬೇಕಾಗುವದು ಅಥವಾ ಮಾಡುವದೇನೆಂದರೆ — (೧) ಆಗ ಬಿಟ್ಟಿಯನ್ನು ಈ ಜನತೆ ಇ ಆಗಿನ ಕಾಣಿಕೆ ಇದ್ದ ಬೋಟುಗಳು ಅದನ್ನು ೬ ವಾರಗಳ ವರೆಗೆ ಮತ್ತು, (೨) ಆಯಾ ಸ್ಥಳದ ಅಧಿಕಾರಿಗಳಿಂದ (೧೦೦೦ ಗಜದಿಂದ) ಹೊರಗೆ ಅಂತಹ ಸ್ಥಿತಿ. ಹಾಗೆ ಆಯಾ ಸ್ಥಳದ ಪರವಾನಿಗೆ ತೆಗೆದುಕೊಳ್ಳಬೇಕು, (೩) ಈ ಥರ ಸಾಕಾಯದ ಹಣವನ್ನು ಬೇಕೆಂದು ಬೇರೆ ಬೇರೆ ಸ್ಥಳಗಳ ಕೆಲಸ ಮಾಡ ಬೇಕು, ಯಾ ಬೋಟುಗಳ ಮಾಲೀಕರು ಅವಶ್ಯಕ ಕಾಗದಪತ್ರಗಳನ್ನು ಗಳಿಗಾಗಿಯೇ ವಿನಂತಿಸಬೇಕು. ಈ ಸರಕಾರಿ ಧನ ಸಹಾಯ ನಮ್ಮ ಜಿಲ್ಲೆಯ ವಿಭಾಗಕ್ಕೆ ಸಿಗಲು ಅನುಕೂಲವಾಗುವಂತೆ ನಮ್ಮ ಜಿಲ್ಲೆಯ ಕರ ಅಡಕಟ್ಟಿ ... ಬೇರೆ ವಿನಿಯೋಗ ಮಾಡಬೇಕೆಂದು ವಿಚಾರ ಮಾಡುವ ದೆಹಲಿ ... ನಿಶ್ಚಯ ಮಾಡಿ ... ಮಾಡಬೇಕೆಂದು ... ಅನ್ನುವದು ... ಪ್ರಸಂಗ ... ಕರವಿಮುಕ್ತರೆ ... ಆಗೆ ... ಜಿಲ್ಲೆಯ ಸಂರಕ್ಷಣೆ ... ಪ್ರಮಾಣ ... ಕಾರಣಗಳನ್ನು ಕೊಟ್ಟು ನಮ್ಮ ಬೋರ್ಡ ಆಗ ಸರಕಾರದವರೇ ... ಪಟ್ಟಿಯ ಕಾಗದವನ್ನು ಕಿತ್ತುಹಾಕಿ ಮಾಡಿ ಅದನ್ನು ... ಗೆ ಕಳಿಸಿದರು. ಸರಕಾರದವರು ... ಮಾಡಿದರು ... ಅದನ್ನು ... ಆಗಲೇ ನಿಸುವ ಮುಂತಾದವುಗಳ ಸರಕಾರದ ಧನಸಹಾಯ ದೊರಕಿಸುವದಕ್ಕಾಗಿ, ಜಂಗಲದ ಮೊಟ್ಟಲಗದ ಭಾರವನ್ನು ಅವರ ಮೇಲೆ ಹೊರಿಸುವ ಅವಿಚಾರವನ್ನು ಬಿಟ್ಟು ನಿಶ್ಚಯಿಸಿದರು ಮಾಡುವ ದಾರಿ ಕಾಣಬೇಕಾಗುತ್ತದೆ.

ಹಳಿಯಾಳ— (ತಾ ೧೬—೧—೪೮) ಇಲ್ಲಿಯ ನಗರ ಸಭೆಯ ಅಧ್ಯಕ್ಷ ಪದವನ್ನು ಕಳೆದೊಂದ ರಾ. ಸಾ. ಅರವಿಂದ ಶಿಕ್ಷಣರು (ಅಧ್ಯಕ್ಷ ಸ್ಥಾನಾಪನ್ನರು) ಸಭೆಯಲ್ಲಿ ಕ್ಷಮಿಗೆ ಎರಡನೆ ದಿನ ಶಿಕ್ಷಕರು ... ಸ್ವಸ್ಥರಾಗಿ ಬರುತ್ತಲೇ ರಾ. ಸಾ. ಶಿವಪ್ಪಾದರು, ಸಭೆಯ ಕಾರ್ಯ ಅವರೇ ಸೂಚಿಸಿದ ಪ್ರಶ್ನೆಗಳನ್ನು ತಮ್ಮ ಕೈಕೊಳ್ಳಲಿಕ್ಕೆ ಕೊಂಡು ಸಭೆಯಿಂದ ಎದ್ದು ಹೋದದ್ದನ್ನು, ಆಗಿನ ಸದಸ್ಯರು ಸಭೆಯ ಕಾರ್ಯ ನಡೆಸಲು ನಿರಾಕರಿಸಿ ರಾ. ಮಹಾಜನರನ್ನು ಅಧ್ಯಕ್ಷಪದಕ್ಕೆ ಆರಿಸಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಮುಂದೆ ರಾ. ಸಾ. ಶಿವಪ್ಪಾದರು ಈ ಮಹಾಜನರ ಆಯ್ಕೆ ಅಸಿಂಧುವಿರುತ್ತದೆಂದು ನಿರ್ಣಯಿಸಿಕೊಳ್ಳಲು ಧಾರವಾಡದ ವಿಭಾಗ ನ್ಯಾಯ ಸಂದಿರದಲ್ಲಿ ಹೂಡಿದ ದಾವೆಯೂ ಇತ್ಯರ್ಥವಾಗಿಲ್ಲವೆಂಬ ಮಾತನ್ನೂ ವಾಚಕರು ಮರೆತಿರಲಾರರು. ಈಗ ಹೊಸ ನ್ಯಾಯ ಪತ್ರಿಕೆಯಲ್ಲಿ ತೀರ್ಪು ... ವಿವಾದ ನಿರ್ಣಯವು ತಮ್ಮ ವಿರುದ್ಧ ಬಂದಿರುವ ಶಿವಪ್ಪಾದರು ಅಧ್ಯಕ್ಷಪದವನ್ನು ರಾ. ಮಹಾಜನರಿಗೆ ಬಿಟ್ಟುಕೊಟ್ಟಿಲ್ಲ. ಧಾರವಾಡ ಕೋರ್ಟಿನ ನಿರ್ಣಯ ವಿರುದ್ಧ ಹೈಕೋರ್ಟಿನಲ್ಲಿ ಅಪೀಲು ಮಾಡಿದ್ದೇವೆಂದು ಹೇಳುತ್ತಾರೆ. ಬಹುತ್ವಾರದಿಂದ ಅಧ್ಯಕ್ಷರ ಅಧಿಕಾರ ನಡೆಸುವ್ವದು ಬಲವರು! ಆದರಿಂದ ಮಹಾಜನರು ಸರಕಾರದ ಸಹಾಯವನ್ನು ಕೇಳಿದ ಹಾಗೆ ನಿಶ್ಚಿತ ಸಮಯದಲ್ಲಿ ನಿಶ್ಚಯವಿಂದ ಎಂಬಂತೆ ಅಧ್ಯಕ್ಷಪದದ ಅಧಿಕಾರ ವಹಿಸಿಕೊಳ್ಳಲು ಡಾ. ಮಹಾಜನರು ಈಗ ಅಧಿಕಾರ ವಹಿಸಿದ್ದು ತಾ. ೨೬—೧—೪೮ನೇಕ್ಕೆ ಅಲ್ಲಿಯ ವರೆಗೆ ಮ್ಯುನಿಸಿಪಾಲಿಟಿಯ ಕಾರಭಾರದಲ್ಲಿ ಸರ್ವಾಧಿಕಾರಿ ಶಿವಪ್ಪಾದರು ಬಹಳಷ್ಟು ಹೋಲಿಸು ಮಾಡಿದ್ದರು. ಅವನ್ನೆಲ್ಲ ಡಾ. ಮಹಾಜನರು ತೊಳೆದುಕೊಳ್ಳಬೇಕಾಗಿದೆ. ಮಹಾಜನರು ಆ ಕಾರ್ಯವನ್ನು ತತ್ಪರತೆಯಿಂದ ಮಾಡುತ್ತಿದ್ದಾರೆ. ಅವರು ಅಧಿಕಾರ ವಹಿಸಿಕೊಂಡಂದಿನಿಂದ ಮಾರ್ಗಗಳ ಸ್ವಚ್ಛತೆಯ ಕೆಲಸ ಉತ್ತಮವಾಗಿ ನಡೆದಿದೆ, ಸುಂಕ ವಸೂಲಿಯ ಕೆಲಸವೂ ಪ್ರಾಮಾಣಿಕತನದಿಂದ ಸಾಗಿದೆ, ಸುಂಕದ ಉತ್ಪನ್ನ ಇತ್ತಲಾಗಿ ಹೆಚ್ಚಿದೆಯೆಂದು ಕಾಣುತ್ತದೆ. ಆದರೂ ರಾ. ಸಾ. ಶಿವಪ್ಪಾದರು ತಮ್ಮ ಬಗಲಬಾಸುಗಳ ಕಡೆಯಿಂದ ಮೇಲೆ ಮೇಲೆ ತಮ್ಮ ಬಗಲಿಂಗೆ ಸುಳ್ಳು ಸುಳ್ಳು ಅರ್ಜಿಗಳನ್ನು ಕಮಿಷನರ ಸಾಹೇಬರಿಗೆ ಸುಳ್ಳು ಆಧಾರವಿಲ್ಲ ಹಾಕಾ ಮಾಡಿ, ಮ್ಯುನಿಸಿಪಾಲಿಟಿಯ ಆಧಾರವಿಲ್ಲದೆ ಹಾಗೆ ಮಾಡಿ, ಮ್ಯುನಿಯ ಕೆಲಸಗಳು ಸರಿಯಾಗಿ ನಡೆಯುತ್ತಿರುವದಿಲ್ಲೆಂದೂ ದೂರಿಕೊಳ್ಳಲಾರಂಭಿಸಿದರು!

(ಈ ಅರ್ಜಿಗಳು ಹೇಗೆ ಸುಳ್ಳಿನ ದೃಷ್ಟಿ ಕಮಿಷನರ ಸಾಹೇಬರ ಕಚೇರಿಯವರು ತೀರ ಹೊಡೆದು ತಿಳಿದರು. ೧೯೪೭ರ ನವೆಂಬರದಿಂದ ೧೯೪೮ರ ಜನವರಿ ವರೆಗೆ ಮ್ಯುನಿಸಿಪಾಲಿಟಿಯ ಸಭೆಗಳನ್ನು ಕರೆಯದೆ ಕಾನೂನುಬಾಹಿರ ವರ್ತನೆ ಮಾಡುತ್ತಿದ್ದವರನ್ನು ಕಮಿಷನರ ಸಾಹೇಬರು ಪ್ರಶ್ನಿಸಿದಾಗ ಈ ಮ್ಯುನಿಸಿಪಲ್ ಅಧ್ಯಕ್ಷರೆಲ್ಲ ತಪ್ಪು ಮಾಡಿದವರೆಂದು ನಿಷೇಧಿಸಿದ ಅಧಿಕಾರಿ ಕೃತಕವಾಗಿ ಸರ್ವಾಧಿಕಾರಿ ಕಾರಭಾರ ನಡೆಸಿದ ರೀತಿ ಜನರು ಎಷ್ಟೇ ದೂರಿಕೊಂಡರೂ ಕಮಿಷನರ ಸಾಹೇಬರು ಕಣ್ಣುಮುಚ್ಚಿಕೊಂಡಿದ್ದರು!) ಈ ಹೊಸಗಳ ಬಗ್ಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರಭಾರದ ಮೇಲ್ವಿಚಾರಣೆ ಕೆಲಸ ನಿರ್ವಹಿಸುತ್ತಿರುವ ಅಸಿಸ್ಟೆಂಟ ಕಮಿಷನರರ ರಾ. ಹಿರೇಮಠ ಇವರನ್ನು ಬರುವಂತೆ ಇಲ್ಲಿಗೆ ಕಳಿಸಿದ್ದರು. ರಾ. ಹಿರೇಮಠರು ಇದೇ ತಿಂಗಳ ... ದಿನಗಳ ವರೆಗೆ ಇಲ್ಲಿದ್ದು ಬೆಳಿಗ್ಗಿನಿಂದ ಮಧ್ಯಾಹ್ನದ ವರೆಗೂ, ಅಪರಾಹ್ನದಿಂದ ಸಂಜೆಯ ವರೆಗೂ (ಒಂದೊಂದು ದಿನ ರಾತ್ರಿ ೧೦ ಘಂಟೆಯ ವರೆಗೂ) ಕೂತುಕೊಂಡು ಅನೇಕ ಜವಾಬಿಗಳನ್ನು ಬರೆದುಕೊಂಡು ನಡುನಡುವೆ ಆವರು ಊರೊಳಗೆ ಹೋಗಿ ಕೆಲವು ರಸ್ತೆಗಳನ್ನೂ ನೋಡಿಕೊಂಡರು. (ಈ ರಸ್ತೆಗಳ ಮೇಲಿನ ಹೊಲಸು ... ಹೋಗಿದ್ದದೆಂದರೆ ರಾ. ಸಾ. ಶಿವಪ್ಪಾದರ ಸೈರಣೆಯ ... ನ ಗುಡಿಸುವವರು ಆ ಕಾಲಕ್ಕೆ ಕೆಲಸಕ್ಕೆ ಬಾರದೆ ಕಸ ಕಡ್ಡಿಗಳನ್ನು ರಸ್ತೆಯಲ್ಲಿ ಹಾಗೆಯೇ ಇರಗೊಟ್ಟದ್ದರ ಪರಿಣಾಮ ಈಗ ತಿಳಿದು ಬಂದಿದೆ!) ರಾ. ಹಿರೇಮಠರು ಜವಾಬಿನ ಕರೆದ ಇಸಮುಗಳನ್ನೂ, ಜವಾಬಿಯ ಕಾಲಕ್ಕೆ ಕಲಸಕ್ಕೆ ಕೊಟ್ಟ ಪತ್ರಗಳನ್ನೂ, ಜವಾಬಿಯ ಕಾಲಕ್ಕೆ ನಡೆದ ಪ್ರಶ್ನೋತ್ತರಗಳನ್ನೂ ನೆನೆಸಿದರೆ, ಮ್ಯುನಿಯ ಮೇಲೆ ಆಪಾತ ತೆಯ ಶಿಕ್ಷೆಯಾಗಿ ಮ್ಯುನಿಯನ್ನು ಒಂದು ಪಾಸು (ಸುಪರಸೀಡ) ಮಾಡಲು ಕಮಿಷನರ ಕಚೇರಿಯವರು ಪುರಾವೆ ಸಂಗ್ರಹಿಸುತ್ತಿರಬೇಕೆಂದು ತೋರುತ್ತಿದೆ! ರಾ. ಹಿರೇಮಠರು ಊರಲ್ಲಿ ಆಡ್ಡಾಡಿ ಮ್ಯುನಿಯ ಈಗಿನ ಆಧಳಿತೆಯ ಬಗ್ಗೆ ಬಹುಸಂಖ್ಯಾಕ ಜನರ ಅಂಬೋಣವೇನುಂಟೆಂಬುದನ್ನು ತಿಳಕೊಳ್ಳಲು ಪ್ರಯತ್ನ ಮಾಡಿದ್ದು ತೋರುವದಿಲ್ಲ! ಸ್ಥಾನಿಕ ಅಧಿಕಾರಿಗಳ ಅಭಿಪ್ರಾಯವನ್ನೂ ಕೇಳಿಕೊಂಡದ್ದು ಕಾಣುವದಿಲ್ಲ! ರಾ. ಹಿರೇಮಠರ ವರದಿಯ ಪರಿಶೀಲನೆ ಮಾಡುವಾಗ ಮಿ. ಕಮಿಷನರರ ಸಾಹೇಬರೂ ಸ್ಥಾನಿಕ ಸ್ವರಾಜ್ಯ ಇಲಾಖೆಯ ಮಂತ್ರಿಗಳೂ ಈ ಎಲ್ಲ ಪೂರ್ವಾಪರಗಳನ್ನೂ, ಲೋಕಮತವನ್ನೂ ಯಥಾರ್ಥವಾಗಿ ತಿಳಕೊಂಡು ಆಮೇಲೆಯೇ ಯುಕ್ತ ಕಂಡ ತೀರ್ಮಾನ ಮಾಡಬೇಕಾಗಿ ಇಲ್ಲಿಯ ನಾಗರಿಕರ ಆರಿಕೆಯುಂಟು.

ಮಂಚಿಕೇರಿ— (ತಾ. ೨೮—೧—೪೮) ಇದು ಯಲ್ಲಾಪೂರ ತಾಲೂಕಿನಲ್ಲಿ ಯಲ್ಲಾಪೂರದಷ್ಟೇ ಪೂರ್ಣ ಪ್ರಾಥಮಿಕ ಶಾಲೆಯುಂಟು ನಮ್ಮ ಮಂಚಿಕೇರಿ ಊರು ಸಾಕಷ್ಟು ದೊಡ್ಡದಿರುತ್ತಿದ್ದಾಗ್ಯೂ ಇಲ್ಲಿ ಅಂಥ ಶಾಲೆಯು ದಿನವೊಂದು ಇಲ್ಲಿಯ ಶಾಲೆಯಲ್ಲಿ ಹಿಂದೆಒಂದೇ ಶಿಕ್ಷಕನಿದ್ದನು, ೪ ನೆಯ ಇಯತ್ತೆಯವರೆಗೆ ಕಲಿಸುವ ಏರ್ಪಾಟು ಇತ್ತು. ಇನ್ಸ್ಪೇಕ್ಟರ ಶಿಕ್ಷಕರಿಗೆ ನೇಮಿಸಿ ಮುಲ್ಕಿಯವರೆಗೆ ಕಲಿಸುವ ವ್ಯವಸ್ಥೆ ಮಾಡಬೇಕಾಗಿ ಜನರು ಶಾಲಾ ಬೋರ್ಡಿಗೆ ಅರುಹಿ ಅರುಹಿ ಬೇಸತ್ತರು. ಕೊನೆಗೆ ಊರ ಪ್ರಮುಖರು ಊರವರ ಖರ್ಚಿನಿಂದಲೇ ಕಳೆದ ವರ್ಷ ಒಬ್ಬ ಶಿಕ್ಷಕನನ್ನು ನೇಮಿಸಿದರು ಮತ್ತು ಶಾಲೆಯ ಬಗ್ಗೆ ೧ ವರ್ಷದ ಮಟ್ಟಿಗೆ ಭಾಡಿಗೆಯಿಲ್ಲದ ಒಂದು ಮನೆಯನ್ನೂ ಪೂರೈಸಿದರು. ಅದರಿಂದ ಈಗ ಶಾಲೆಯಲ್ಲಿ ೫ನೇ ಇಯತ್ತೆಯ ವರ್ಗವು ನಡೆಯುತ್ತಿದೆ. ಇತ್ತಲಾಗಿ ಬೋರ್ಡಿನವರೂ ಊರವರ ಅಗ್ರಹಕ್ಕೆ ಮನ್ನಣೆಯನ್ನಿತ್ತು ಇಲ್ಲಿಯ ಶಾಲೆಗೆ ೨ನೆಯ ಶಿಕ್ಷಕರನ್ನು ಕಳಿಸಿರುತ್ತಾರೆ. ಆದರೆ ಅಷ್ಟರಲ್ಲಿ ಇನ್ನೊಂದು ವಿಘ್ನವುಂಟಾಗಿದೆ. ಶಾಲೆಯ ಮುಖ್ಯಾಧ್ಯಾಪಕರು ಶಾರೀರಿಕ ಶಿಕ್ಷಣದ ಮೂಹಿತಿ ಪಡೆಯಲು ಕಾರವಾರಕ್ಕೆ ಹೊರಟು ಹೋಗಿದ್ದಾರೆ. ಅವರ ಸ್ಥಳದಲ್ಲಿ ಬದಲಿ ಶಿಕ್ಷಕರು ಯಾರೂ ಬಂದಿರುವದಿಲ್ಲ! ಅದರಿಂದ ವಿದ್ಯಾರ್ಥಿಗಳ ಅಭ್ಯಾಸ ಕೆಡುತ್ತಿದೆ. ಪರೀಕ್ಷೆಗಳು ಸಮೀಪ ಬಂದ ಕಾಲಕ್ಕೆ ಹೀಗಾಗುವದು ತೀರ ಶೋಚನೀಯ. ಶಾಲಾ ಬೋರ್ಡಿನವರು ಇತ್ತ ಲಕ್ಷಕೊಡಬೇಕಾಗಿ ಮಂಚಿಕೇರಿಯ ಕೆಲ ನಾಗರಿಕರು ಬೇಡಿಕೊಳ್ಳುತ್ತಾರೆ.

ಜಿಲ್ಲಾ ಸಮಾಚಾರ.

ಅಂಕೋಲಾ— ಮಾರ್ಕೆಟ ಕರದ ಯೋಜನೆಯಲ್ಲಿ ಒಂದ ದೋಷವುಂಟು ಅದರಿಂದ ಪರ ಸ್ಥಾಂತಗಳಿಂದ ತಂದ ಮಾಲು ಎಷ್ಟೇ ಕಠ್ವವ ಮಾಲಾನು ಮುಂತಾದ್ದನ್ನು ಮಾರ್ಕೆಟ ಕರದ ಕಾಯುತಿಯಂತೆ ನೋಡಿಂದ ಗದ ವರ್ತಕರು ನೋಡಿಂದಾದ ವರ್ತಕರಿಂಗಿಂತ ಅಗ್ಗದರದಿಂದ ಮಾರ್ಕೆಟ ಮಾಡುತ್ತಾರೆ ಮತ್ತು [illegible] … ವರ್ತಕರು ಅದನ್ನು ಅಸ್ಸಲ ಬೆಲೆಗೆ ಮಾಡಿದರೂ (ಅಸ್ಸಲ ಬೆಲೆ ರೂ ೧೦೦ ವಸ್ತು ಮಾರಾಟದ ಕರಗಿ ರೂ ೩ ೨ ೦ ಆದರೆ) [illegible] … ಮಾರ್ಕೆಟ ಕರವಿಷಯಗಿನ ಈ ದೋಷವನ್ನು ಸರಕಾರವು ದೂರಪಡಿಸ ವ್ಯವಸ್ಥೆ ಮಾಡಬೇಕಾಗಿ ನ್ಯಾಯವಾದ ವರ್ಗದವರ ಅಪೇಕ್ಷೆಯುಂಟು

[illegible] … ಜನಪ್ರಿಯ ಹಕ್ಕಿನ ಬಗ್ಗೆ ಹೊಲಗಳ ಕಬಜೆ ಬೇಡ ಸಾವಿರ ಗಟ್ಟಲೆ (೧೯೨೭೦ ನೋಟೀಸುಗಳು ಹೊರಬಿದ್ದವೆಂದು ರೈತ ಸಂಘದವರು ಹೇಳುತ್ತಾರೆ) ನೋಟೀಸು ಗಳನ್ನು ಕೊಟ್ಟಿರುವದರಿಂದ ರೈತ ವರ್ಗದಲ್ಲಿ [illegible] … ಶ್ರೀ ನಾಯಕರು [illegible] …

[illegible] … ಆಧಿಕಾರಿಗಳು [illegible] … ನೋಡಬೇಕಾಗಿದೆ

ಅವರ್ಸೆಯ ಶ್ರೀಲಕ್ಷ್ಮೀವೆಂಕಟರಮಣ ದೇವರ ಜೀರ್ಣೋದ್ಧಾರ ಪ್ರತಿಷ್ಠೆ ಮಾಡಿಸತಕ್ಕದ್ದಾಗಿ ೧೯೪೬ರಲ್ಲಿ [illegible] … ದೇವರ ಭಜಕರೋರ್ವರು ಮಾಡುತ್ತಾರೆ

ಶಿರಸಿ— (ತಾ ೧೫ ೧ ೪೮) ಈ ತಾಲೂಕ ಜನಸಾಮಾನ್ಯರ [illegible] … ಕೆಳಗಿನ ಗೊತ್ತುವಳಿಗಳನ್ನು [illegible] … ಹಿತಕರವೆಂದು ತೋರಿಬಂದ್ದದರಿಂದಲೇ ಈ ಪದ್ಧತಿ ಸಾವಿರಾರು ವರ್ಷಗಳಿಂದ ನಡೆದುಬಂದಿದೆ [illegible] … ವಿಧಿಸುವದು ಎಂದಿಗೂ ಕ್ಷೇಮಕರವಲ್ಲ (೨) [illegible] … ಸರಕಾರದವರು ದಯಮಾಡಿ [illegible] … ಒಡೆಯರು ರೈತರಿಗೆ [illegible] … (೩) ಸರಕಾರದವರು [illegible] … (೪) [illegible] … ಒಡೆಯರಿಗೆ [illegible] …

ಪತ್ರಿಕಾ ಪ್ರಕಟನೆ.

[illegible] … ಇಷ್ಟರಲ್ಲಿ ಈ ಕೆಳಗಿನ ಸ್ಥಳಗಳಿಗೆ ಅರ್ಜಿ ಮಾಡಬೇಕು

[illegible] …

ಸಂಬಳ — [illegible] … ಕೆಲಸ ಮಾಡ ಬೇಕಾಗುವದು

ಅರ್ಜಿಗಳು ಈ ಕೆಳಗೆ ಸಹಿ ಮಾಡಿದವರಿಗೆ ತಾ ೬—೨—೧೯೪೮ರ ಮುಂಚೆ ತಲ್ಪಬೇಕು

ಕಾ ೨೧—೧—೪೮ **R J Rebello,**

ಕಲೆಕ್ಟರ ಮತ್ತು ಕಾನಡಾ ಜಿಲ್ಲೆಯ ಮಧ್ಯ ನಿರೋಧನ ಸಮಿತಿಯ ಅಧ್ಯಕ್ಷ ಕಾರವಾರ

ಜಾಹೀರ ನೋಟೀಸಿಗೆ ಉತ್ತರ.

ಈ ಮೂಲಕ ಎಲ್ಲರಿಗೂ ತಿಳಿಸುವದೇನಂದರೆ —

ತಾ ೨೯ ೧೨ ೪೭ನೇ 'ಕಾನಡಾವೃತ್ತ'ದಲ್ಲಿ ರಾಮಾ ಬಾಯಿ [illegible] ಅಂಕೋಲೇಕರ ಇವರು ಕೊಟ್ಟ ನೋಟೀಸ ಮಜಕೂರು ಸಂಪೂರ್ಣ ಸುಳ್ಳು ಇರುತ್ತದೆ [illegible] … ನಮ್ಮ ತಂದೆ [illegible] … ಜಾಯಿ ಇವಳಿಗೆ ನಮ್ಮ ಕುಟುಂಬದ ಆಸ್ತಿಯಲ್ಲಿ ಏನೂ ಹಕ್ಕು ಇಲ್ಲ ನಾನೇ ಕುಟುಂಬದ ಎಲ್ಲ ಆಸ್ತಿಗೆ ಅಧಿಕಾರಪಟ್ಟವನಿದ್ದೇನೆ ಎಲ್ಲರೂ ಈ ಮಾತನ್ನು ತಿಳಿದಿರಬೇಕು

ಕಾರವಾರ, ೩೦ ೧ ೪೮ **D S. NAIK**

ಪತ್ರಿಕಾ ಪ್ರಕಟನೆ.

೧೯೪೭ರ ಮುಂಬಯಿಯ ಆಹಾರ ಧಾನ್ಯಗಳ ನಿಯಂತ್ರಣಾಜ್ಞೆಯ [illegible] … ಹಿಂದಿನ ತಿಂಗಳ ಪ್ರಾರಂಭಕ್ಕೆ ತನ್ನ ಕಡೆಗೆ ಆಹಾರ ಧಾನ್ಯಗಳ ಸಂಗ್ರಹವೆಷ್ಟು ಆ ತಿಂಗಳಲ್ಲಿ ಎಷ್ಟು ಬಂತು (receipt) ಮತ್ತು ಎಷ್ಟು ಕೊಟ್ಟು ಹೋಯಿತು ಎಂಬದರ ನಿಜವಾದ ಮಾಹಿತಿಯ ಪತ್ರಿಕೆಯನ್ನು, ಆಹಾರ ಧಾನ್ಯಗಳ ನಿಯಂತ್ರಣಾಜ್ಞೆಗೆ ಜೋಡಿಸಿದ [illegible] ನಮೂನೆಯ (ಫಾರ್ಮ) [illegible] … ಅಧಿಕಾರಿಗೆ ತಾ ೧೫ ರೊಳಗಾಗಿ [illegible] … ಕಳುಹಿಸಬೇಕೆಂತಲೂ, ಆದರಿಂದ ಪ್ರತಿಯನ್ನು ನಿರ್ದಿಷ್ಟ ಅವಧಿಯೊಳಗೆ ತಮ್ಮ ತಾಲೂಕಿನ ಪೇಟೆಯ [illegible] … ಕಳುಹಿಕೊಡಬೇಕೆಂತಲೂ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ತಿಳಿಸುತ್ತಾರೆ

[illegible] … ಇಂಗ್ಲಿಷ ದಲ್ಲಾಗಲಿ ಇರತಕ್ಕದ್ದು

ಕಾರವಾರ, ೨೭—೧ ೪೮ **R J Rebello**

ಜಿಲ್ಲಾ ಮೆಜಿಸ್ಟ್ರೇಟ ಕಾನಡಾ.

ಮುಂಬಯಿ ಸರಕಾರ

ನಾಗರಿಕ ಪೂರೈಕೆ ಖಾತೆ

ಮುಂಬಯಿ ಕೋಟೆ, ತಾ ೩೧ ೧ ೧೯೪೮

ಪ್ರಕಟನೆ.

ತಾ ೩೧ ೧೦—೧೯೪೮ಕ್ಕೆ ಅಂತ್ಯವಾಗುವ ತ್ರೈ-ಮಾಸಿಕ ಅವಧಿಯ ನೂಲಿನ ಸಂಗ್ರಹದ ಮಾಹಿತಿ ಪತ್ರಿಕೆಗಳು

೧೯೪೭ನೇ ಇಸವಿಯ ಅರಳೆ ನೂಲಿನ ವ್ಯಾಪಾರದ ನಿಯಂತ್ರಣಾಜ್ಞೆಯಂತೆ [illegible] … ತ್ರೈಮಾಸಿಕ ಅವಧಿಯ ನೂಲಿನ ಸಂಗ್ರಹದ ಮಾಹಿತಿ ಪತ್ರಿಕೆಗಳನ್ನು [illegible] … ಅರಳೆ ನೂಲಿನ ವ್ಯಾಪಾರದ ನಿಯಂತ್ರಣಾಜ್ಞೆಗೆ ಜೋಡಿಸಿರುವ [illegible] … ಕಂಟ್ರೋಲರ [illegible] … ಮುಂಬಯಿ [illegible] … (t lded) ನೂಲಿನ ಮಾಹಿತಿಯನ್ನು [illegible] … ಕೊಡಬೇಕು [illegible] … ಜಾಗ್ರತೆ ಕೊಳ್ಳಬೇಕಾಗಿ ವಿನಂತಿಸಲಾಗಿದೆ.

P J Chinmulgund,

[illegible] ಟೆಕ್ಸ್ಟೈಲ ಕಮಿಶನರ [illegible]

ಇದನ್ನು ಪಾಂಡುರಂಗ ಕೃಷ್ಣ ಕಾನಡಾಗ (ಸಂಪಾದಕ) ಇವರು ಕ ಮಟಿಯಲ್ಲಿನ ತಮ್ಮ "ಸ್ವತಂತ್ರ ಆರ್ಟ ಪ್ರಿಂಟಿಂಗ ಪ್ರೆಸ್"ನಲ್ಲಿ ಮುದ್ರಿಸಿ, ಪ್ರಕಾಶಿಸಿದರು

ಜಾಹೀ ರಾತುಗಳ ದರ
... ಗಳ ಬಗ್ಗೆ ಕನ್ನಡ ಅಥವಾ ಇಂಗ್ಲಿಷಿನಲ್ಲಿ ಬರೆಯಬೇಕು

Reg. No. B. 1270

Monday, 9-2-1948

ಕಾನಡಾವೃತ್ತ

ವರ್ಷ ೩೦] THE KANARA NEWS [ಸಂಖ್ಯೆ ೩೨

ಕುಮಟೆ - ಸೋಮವಾರ ತಾ ೯—೨—೧೯೪೮

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೨—೪—೦
ಬೇರೆ ಊರಿಗೆ ... ವರ್ಷಕ್ಕೆ ...
ಬಿಡಿ ಸಂಚಿಕೆಗೆ ೦ ೧ ೬
ಹಳೇ ಸಂಚಿಕೆಗೆ ...
ವ್ಹಿ ಪಿ ಯಿಂದ ಹಣ ಕಳಿಸುವವರು ವ್ಹಿ ಪಿ ವೆಚ್ಚ ... ಕೊಡಬೇಕು
ವರ್ಗಣಿ ಮುಂಗಡ ಕಳಿಸಬೇಕು

ಮಹಾತ್ಮರ ಕೊಲೆಯ ಪೂರ್ವಾಪರಗಳೂ ಪ್ರತಿಕ್ರಿಯೆಗಳೂ!

... ತಾ ೩೦ನೇ ದಿವಸ ಮಹಾತ್ಮಾಜಿಯವರ ... ಸಭೆಯಲ್ಲಿ ಬಾಂಬು ಒಗೆದವನ ಹೆಸರು ... ಎಂದು ತಿಳಿದುಬರುತ್ತದೆ. ಇವನ ಜೊತೆಗೆ ... ಮಹಾತ್ಮರ ಕೊಲೆಗಾರನ ... ಇದ್ದನಂತೆ ... ಅವನ ಕೈಯಲ್ಲಿ ... ಬಾಂಬು ಗುಂಡು ಇದ್ದವು ... ಒಡನೆಯೇ ... ಕೂಡಲೇ ... ಆಗೋದಲ್ಲದೆ ... ಸಭೆಯಲ್ಲಿ ... ಬಾಂಬು ಗುಂಡಗಳ ... ಪ್ರಾಣಹರಣ ಮಾಡಬೇಕೆಂದೂ ... ಕೂಡಿದ ಯೋಜನೆಯಂತೆ ... ಒಗೆದ ಬಾಂಬಿನ ... ಮಹಾತ್ಮರು ಕೂತಲ್ಲಿಂದ ... ಗೊಂದಲವಾಗಲಿಲ್ಲ! ... ಬಾಂಬು ಗುಂಡಿನದಿರುತ್ತದೆ ... ಪ್ರಾಂಗಣದಲ್ಲಿ ... ಪ್ರಾರ್ಥನೆಯಲ್ಲಿ ತಲ್ಲೀನರಾಗಿದ್ದ ಮಹಾತ್ಮರು ... ಹೋಗಲಿಲ್ಲ! ... ಅಭ್ಯಾಸ ಮಾಡುತ್ತಿರುವ ... ಬಿದ್ದ ... ಗುಂಡಿನದಿರಬಹುದೆಂದೂ ತಮ್ಮ ... ಮಹಾತ್ಮರು ಮರುದಿನದ ಪ್ರಾರ್ಥನೆಯಲ್ಲಿ ವಿವರಿಸಿದರು.

ಪ್ರಾರ್ಥನಾ ಸಭೆಯಲ್ಲಿ ಪೋಲೀಸ ಕಾವಲು. ಮಹಾತ್ಮರ ನಿವಾಸಸ್ಥಾನದಲ್ಲಾಗಲಿ ಅವರ ... ಪ್ರಾರ್ಥನೆಯ ಸ್ಥಳದಲ್ಲಾಗಲಿ ಪೋಲೀಸರ ... ಬಾಂಬು ... ನಿಜವಲ್ಲ. ಹಿಂದೆ ಕೆಲವು ... ಗಳೂ ಓರ್ವ ಜವಾಬದಾರನೂ ಕಾವಲಿ... ತಾ ೨೦ರ ಬಾಂಬು ಸ್ಫೋಟವಾದ ನಂತರ ಈ ... ಹೆಚ್ಚಿಸಲ್ಪಟ್ಟಿತು. ಪ್ರಾರ್ಥನಾ ... ಪ್ರಾಂಗಣದ ಸುತ್ತಲೂ ಪೋಲೀಸರು ಇರುತ್ತಿದ್ದರು ... ಪ್ರಾರ್ಥನಾ ಸಭೆಯಲ್ಲಿ ... ಪೋಲೀಸರು ಪೋಲೀಸ ಅಧಿಕಾರಿಗಳೂ ಇರುತ್ತಿ... ಮಹಾತ್ಮರ ಜೀವಕ್ಕೆ ಗಂಡ ತರವುಂಟೆಂದು ... ಪೋಲೀಸರಿಗೆ ... ಕಡೆಯ ಮೇಲಿಂದ ... ಬಂದಿತ್ತು. ಆದರಿಂದ ಪ್ರಾರ್ಥನಾ ಸಭೆಗೆ ... ಜನರ ... ಸಂಶಯಾಸ್ಪದ ಜನರ ... ಮಾಡಲು ಅಪ್ಪಣೆಯನ್ನೀಯಬೇಕೆಂದು ... ದಿಲ್ಲಿಯ ಪೋಲೀಸ ಸುಪರಿಂಟೆಂಡೆಂಟರೂ ... ಸಚಿವ ... ಜನರ ... ಮಹಾತ್ಮರನ್ನು ಕಂಡು ಬಹಳವಾಗಿ ಹೇಳಿ... ದರು. ಆದರೆ ಮಹಾತ್ಮರು ಒಪ್ಪಲಿಲ್ಲ. ಪ್ರಾರ್ಥನೆಗೆ ... ಬರುವ ಯಾರನ್ನೂ ಪೀಡಿಸಬಾರದೆಂದೂ, ... ಮೇಲೂ ಸಂಶಯ ಹಿಡಿಯಬಾರದೆಂದೂ, ... ಗೂ ಮುಕ್ತದ್ವಾರವಿರಬೇಕೆಂದೂ ಅವರು ನಿಗ್ರಹದಿಂದ ಹೇಳಿದರು! ಮುಂದೆ ಹಿಂದ ಸರಕಾರದ ... ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ... ಸ್ವತಃ ಮಹಾತ್ಮರನ್ನು ಕಂಡು, ಸಂಶಯಿತರನ್ನು ... ರು ... ಅದರ ... ತ್ತರು ಸಮ್ಮತಿಸಲಿಲ್ಲ! ... ಸಾಯಬೇಕೆಂದು ದೇವ ಇಚ್ಛಿಸಿದ್ದರೆ ಅದನ್ನು ತಪ್ಪಿಸಲು ಯಾರಿಂದಲೂ ... ನನ್ನ ಪ್ರಾಣ ದೇವರ ಕೈಯ...

ಗೋಕರ್ಣದಲ್ಲಿ ಮಹಾತ್ಮರ ಅಸ್ಥಿ-ನಿಕ್ಷೇಪಣ.

ಇನ್ನಿತರ ಪ್ರಖ್ಯಾತ ಕ್ಷೇತ್ರಗಳಲ್ಲೂ ಮಹಾನದಿಗಳಲ್ಲೂ ಮಹಾತ್ಮರ ಅಸ್ಥಿ-ಭಸ್ಮಾದಿಗಳ ನಿಕ್ಷೇಪಣ ಯಾನ ವಿಸರ್ಜನೆ ಮಾಡುವಂತೆ ನಮ್ಮಲ್ಲಿಯ ಶ್ರೀ ಕ್ಷೇತ್ರ ಗೋಕರ್ಣದಲ್ಲೂ ಅವುಗಳ ವಿಸರ್ಜನೆ ಮಾಡಬೇಕೆಂದು ಮುಂಬಯಿ ಸರಕಾರವು ನಿರ್ಣಯಿಸಿದೆ. ಮಹಾತ್ಮರ ಈ ಅವಶೇಷಗಳನ್ನು ತಕ್ಕೊಂಡು ಉಪಮಂತ್ರಿ ರಾ|| ಗ... ಅವರು ನಾಳೆ ಮಂಗಳವಾರ ಮುಂಜಾನೆ ಮುಂಬಯಿಯಿಂದ ಹೊರಟು ಹುಬ್ಬಳ್ಳಿ, ಯಲ್ಲಾಪುರ, ಅಂಕೋಲ ಮಾರ್ಗವಾಗಿ ನಾಡದು ೧೦ ಘಂಟೆಗೆ ಕಾರವಾರಕ್ಕೆ ತಲ್ಪುವರು. ಅಲ್ಲಿಂದ ಮುಂದೆ ಸದರಿ ಅಸ್ಥಿ ಭಸ್ಮಾದಿಗಳು ಗುರುವಾರ (ತಾ. ೧೨) ತಕ್ಕ ಗೌರವದಿಂದಲೂ ಸಡಗರದಿಂದಲೂ ಗೋಕರ್ಣಕ್ಕೆ ತಲ್ಪುವವು, ಮತ್ತು ಅಪರಾಹ್ಣ ೧೧ ಘಂಟೆಗೆ ಅವುಗಳ ವಿಸರ್ಜನೆಯಾಗುವದು.

(... ೨ ...)

... ದೆ" ಎಂದವರು ನಿಗ್ರಹದಿಂದ ನುಡಿದರು. ಅವರ ಈ ಮಾತು ಮೀರಿ ನಡೆಯುವದು ಸರದಾರರಿಗೂ ಪೋಲೀಸ ಅಧಿಕಾರಿಗಳಿಗೂ ಸಾಧ್ಯವಿದ್ದಿಲ್ಲ. ನದು ... ರಾಮನು ... ಹಾರಿಸಿದ ಸಭೆಯಲ್ಲಿ ಪೋಲೀಸರಿದ್ದರು ... ಆದರೆ ನಥೂರಾಮನು ಮಹಾತ್ಮರಿಗೆ ನಮಸ್ಕಾರ ಹಾಕುವ ಸೋಗು ಧರಿಸಿದ್ದರಿಂದ ಅವನ ನೀಚ ಉದ್ದೇಶದ ಸಂಶಯ ಯಾರಿಗೂ ಬರಲಿಲ್ಲ! ಅದರಿಂದಲೇ ಹತ್ತಿರ ಪೋಲೀಸರಿದ್ದಾಗ್ಯೂ ಅವನ ದುರುದ್ದೇಶ ಈಡೇರಿತು!

ಕೊಲೆಯ ಒಳಸಂಚು.

ಮಹಾತ್ಮರ ಕೊಲೆ ಮಾಡಿದ ನಥೂರಾಮ ಗೋಡಸೆ ಇವನೊಬ್ಬನೇ ತಲೆತಿರುಕನಾಗಿ ಈ ನೀಚಕೃತ್ಯ ಮಾಡಿದ್ದು ಇರುವದಿಲ್ಲ. ಮಹಾತ್ಮರ, ಕೇಂದ್ರ ಸರಕಾರದೊಳಗಿನ ನೆಹರೂ, ಪಟೇಲ ಪ್ರಭೃತಿ ಪ್ರಮುಖ ಮಂತ್ರಿಗಳ ಹಾಗೂ ರಾಷ್ಟ್ರೀಯ ಸಭೆಯ ಅಗ್ರೇಸರ ಮುಂದಾಳುಗಳ ಕೊಲೆ ಮಾಡಿ, ರಾಷ್ಟ್ರದ ಆಡಳಿತೆಯ ಸೂತ್ರಗಳನ್ನು ಬೇರೊಂದು ಪಕ್ಷಕ್ಕೆ ಒಪ್ಪಿಸುವದಕ್ಕಾಗಿ ಬಹಳ ದಿನಗಳಿಂದ ಒಂದು ದೊಡ್ಡ ಒಳಸಂಚು ನಡೆದದ್ದು ಈಗ ತಿಳಿದು ಬಂದಿದೆ. ಈ ಒಳಸಂಚಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಎಷ್ಟೋ ... ಹಿಂದು ಮಹಾಸಭೆಯ ಕಾರ್ಯಕರ್ತರೂ ಸೇರಿದ್ದಾರೆಂದು ಒಡೆದಿದೆ. ಮಹಾತ್ಮರ ಮೇಲೆ ಬಾಂಬು ಒಗೆದ ಮದನಲಾಲನು ಈ ಒಳಸಂಚಿನಲ್ಲಿ ಸೇರಿದವನೆಂಬ ಸಂಶಯದಿಂದ ಸಂಯುಕ್ತ ಪ್ರಾಂತದ) ಕಾನ್ಪೂರದಲ್ಲಿ ... ದಲ್ಲಿ ಪೋಲೀಸರಿಂದ ಬಂಧಿಸಲ್ಪಟ್ಟ ದೇವೇಂದ್ರಕುಮಾರ ಜಾದವ ಇವನೂ ಈ ಒಳಸಂಚಿನ ಸ್ಥೂಲರೂಪರೇಷೆಯನ್ನು ಈಗಾಗಲೇ ಪೋಲೀಸರೆದುರು ಉಸುರಿಬಿಟ್ಟಿದ್ದಾನೆ. ಮದನಲಾಲನ ಸಹಾಯದಿಂದ ಮುಂಬಯಿ ಪುಣೆಗಳಲ್ಲಿರುವ ಒಳಸಂಚುಗಾರರನ್ನು ಹಿಡಿಯುವದಕ್ಕಾಗಿ ಪೋಲೀಸರು ಅವನಿಗೆ ... ದಿವಸ ಹಿಂದೆ ಮುಂಬಯಿಗೆ ತಂದಿದ್ದರು. ಅಲ್ಲಿಂದ ಮುಂ... ಪ್ರಕಟಗೊಂಡ ವರ್ತಮಾನವಿದೆ. ದೇವೇಂದ್ರ ಕುಮಾರನ ... ಕೇಳಿದರೆ ಮೈಮೇಲೆ ಮುಳ್ಳೇಳುತ್ತವೆ! ಇವನು ಇವನ ಸಹಕಾರಿಗಳೂ ಈ ಹಿಂದೆ ಬಹಳಕ್ಕೂ ವಿಧ್ವಂಸಕ ಕಾರ್ಯ ಮಾಡಿದ ... ಕೊಲೆಗಡುಕರಿರುತ್ತಾರೆ. ಇತ್ತೀಚೆಗೆ ಇವರು ಕೇಂದ್ರ ಸರಕಾರದ ಪ್ರಮುಖ ವ್ಯಕ್ತಿಗಳ ಹಾಗೂ ಪ್ರಾಂತೀಯ ಸರಕಾರಗಳ ಅನೇಕ ಮಂತ್ರಿಗಳ ಕೊಲೆ ಮಾಡುವ ಯೋಜನ ಕೈಕೊಂಡಿದ್ದರಂತೆ, ... ತಮ್ಮ ... ರಾಕ್ಷಸೀ ಯೋಜನೆಯನ್ನು ಈಡೇರಿಸುವದಕ್ಕಾಗಿ ದಿಲ್ಲಿಗೆ ಹೋಗಿ ಬೀಡು ಹಾಕಿದ್ದರಂತೆ. ಅಲ್ಲಿ ಮಹಾತ್ಮರ ಕೊಲೆ ಮಾಡುವ ಯೋಜನೆಯ ಸಂಬಂಧದಲ್ಲಿ ದೇವೇಂದ್ರ ಕುಮಾರನಿಗೂ ನಥೂರಾಮ ಗೋಡಸೆ ವಗೈರೆ ಬೇರೆಯವರಿಗೂ ಮತಭೇದವುಂಟಾಯಿತು. ಮಹಾತ್ಮರ ಕೊಲೆ ಮಾಡುವದಕ್ಕೆ ದೇವೇಂದ್ರಕುಮಾರನು ವಿರೋಧ ಮಾಡಿದನು. ಆ ವಿರೋಧವೇ ದೇವೇಂದ್ರ ಕುಮಾರನಿಗೆ ಮುಳುವಾಯಿತು! ಇವನು ತಮ್ಮ ಪಕ್ಷದ ದ್ರೋಹಿಯಾಗಿದ್ದಾನೆಂದು ದರಾಯಿಸಿ ಇವನ ಸಂಗಡಿಗರು ಇವನನ್ನು ಯಮಸದನಕ್ಕೆ ಅಟ್ಟುವ ನಿರ್ಧಾರ ಮಾಡಿದರಂತೆ! ಆಗ ದೇವೇಂದ್ರಕುಮಾರನು ದಿಲ್ಲಿಯಿಂದ ಜಾರಿ ಹೋದನು. ಮತ್ತು ಮಿರ್ಝಾಪುರದಲ್ಲಿ ಪೋಲೀಸರ ಕೈಗೆ ಸಿಕ್ಕನು. ಇವನ ಹತ್ತಿರ ಮಹತ್ವದ ಕಾಗದ ಪತ್ರಗಳು ಸಿಕ್ಕಿವೆಯಂತೆ. ಕೇಂದ್ರ ಸರಕಾರದ ಗುಪ್ತ ಪೋಲೀಸರೂ ಪ್ರಾಂತಿಕ ಗುಪ್ತ ಪೋಲೀಸ ದಳಗಳೊಡನೆ ಸಹಕರಿಸಿ ಈ ವಿಶಾಲ ಒಳಸಂಚಿನ ಬೇರು ಬೇರುಗಳನ್ನೆಲ್ಲ ಶೋಧಿಸಹತ್ತಿದ್ದಾರೆ. ಎಲ್ಲ ಶೋಧನ ಸುಗುಪ್ತವಾಗಿ ನಡೆದಿದೆ. ಯಾವ ಮಾಹಿತಿಯು ಹೊರಬೀಳುವದಿಲ್ಲ. ಆದರೂ ಈ ತನಕ ಸಿಕ್ಕ ಮಾಹಿತಿಯನ್ನು ನೋಡಿದರೆ, ಈ ಒಳಸಂಚಿನ ಕಥೆ ಜಗನ್ನೇ ಅಚ್ಚರಿಗೊಳಿಸುವಂತಹದಿದೆಂದು ಮುಂಬಯಿಯ ಚಿತ್ರಗುಪ್ತರು ಹೇಳುತ್ತಾರೆ.

'ಕೊಲೆಗಡಕನಿಗೂ ನಮಗೂ ಸಂಬಂಧವಿಲ್ಲ'

ಮಹಾತ್ಮರ ಕೊಲೆ ಮಾಡಿದ ನಥೂರಾಮ ಗೋಡಸೆಯು ಪುಣೆಯ ಮಹಾರಾಷ್ಟ್ರೀಯ ಬ್ರಾಹ್ಮಣನಿರುತ್ತಾನೆ, ಹಿಂದು ಮಹಾಸಭೆಯ ಕಾರ್ಯಕರ್ತನಿರುತ್ತಾನೆ ಎಂದು ಪ್ರಕಟವಾದ ಕೂಡಲೇ ಮತ್ತು ಮುಂಬಯಿ ಮೊದಲಾದ ಕಡೆ ರಾಷ್ಟ್ರೀಯ ಸ್ವಯಂಸೇವಕ ಸಂಘದವರೂ ಹಿಂದು ಸಭೆಯ ಕೆಲವರೂ ಮಹಾತ್ಮರ ನಿಧನದ ಸುದ್ದಿ ಕೇಳಿದೊಡನೆ ಮಿಠಾಯಿ ಹಂಚಿದರೆಂದು ಪ್ರಸಿದ್ಧವಾದ ಕೂಡಲೇ ಹಿಂದು ಮಹಾಸಭೆಯ ಅಲ್ಲಲ್ಲಿಯ ಕಾರ್ಯಕರ್ತರೂ ರಾಷ್ಟ್ರೀಯ ಸ್ವಯಂಸೇವಕ ಸಂಘದವರೂ ಅಬ್ರಹ್ಮಣ್ಯಂ ಅಬ್ರಹ್ಮಣ್ಯಮ್ ಎಂದು ಕಿವಿಯ ಮೇಲೆ ಕೈಯಿಟ್ಟು 'ಗೋಡಸೆಗೂ ನಮಗೂ ಸಂಬಂಧವಿಲ್ಲ' ನಾವು ಅವನ ನೀಚ ಕೃತ್ಯವನ್ನು ಬಲವಾಗಿ ಖಂಡಿಸುತ್ತೇವೆ" ಎಂದು ಉಚ್ಚಸ್ವರದಿಂದ ಉದ್ಘೋಷಿಸಹತ್ತಿದರು! ಪ್ರಕಟನೆಗಳನ್ನೂ ಹೊರಡಿಸಹತ್ತಿದರು! ಆದರೆ ಈ ಪ್ರಕಟನೆ ಉದ್ಗಾರಗಳಿಂದ ಜನಸಾಮಾನ್ಯರನ್ನು ಸಮಾಧಾನಗೊಳಿಸುವದು ಶಕ್ಯವಿದ್ದಿಲ್ಲ. ಮಹಾತ್ಮರ ನಿಧನದ ಸುದ್ದಿ ಕೇಳಿ ಅಲ್ಲಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಮಾಡಿದ ಲೀಲೆಗಳನ್ನು ಕಂಡು ಕ್ಷುಬ್ಧಗೊಂಡ ಜನರು ಈ ಸಂಘದವರ ಹಾಗೂ ಅವರಿಗೆ ಪ್ರೋತ್ಸಾಹ ಕೊಡುತ್ತಿದ್ದ ಹಿಂದು ಮಹಾಸಭೆಯವರ ಬೆನ್ನು ಹಿಡಿದು ಅವರನ್ನು ಎಲ್ಲೆಲ್ಲೂ ಹಿಂಸಿಸಹತ್ತಿದರು. ಆಚೆಯ ಶನಿವಾರ ಪುಣೆಯಲ್ಲಿ ಹಿಂದು ಮಹಾಸಭೆಗೂ ಕೊಲೆಗಡಕ ಗೋಡಸೆಯ ಕೂಟಕ್ಕೂ ಸಂಬಂಧವಿದ್ದವರ ಎಷ್ಟೋ ಮನೆಗಳಿಗೆ ಕೊಳ್ಳಿ ಹಚ್ಚಲ್ಪಟ್ಟಿತು! ಹಿಂದು ಮಹಾಸಭಾವಾದಿ ಪತ್ರಿಕೆಗಳ ಕಚೇರಿಗಳಲ್ಲಿ ಜನಜಂಗುಳಿ ಗೊಂದಲ ಹಾಕಿ ಅಸ್ತವ್ಯಸ್ತ ಮಾಡಿತು. ಮುಂಬಯಿಯಲ್ಲೂ ದಂಗಾಮಸ್ತಿ ನಡೆಯಿತು.

ಈ ದಂಗಾಮಸ್ತಿಯಲ್ಲಿ ಹಿಂದು ಮಹಾಸಭೆಯ ಅಧ್ವರ್ಯುಗಳಾಗಿರುವ 'ಸ್ವಾತಂತ್ರ್ಯವೀರ" ಸಾವರಕರರಿಗೆ ತಲೆಗೆ ಪೆಟ್ಟಾಗಿ ಅವರು ಆಸ್ಪತ್ರೆ ಸೇರುವ ಪ್ರಸಂಗ ಬಂದಿತು. ನೂರಾರು ಕಡೆ ಹೀಗೆಯೇ ಕ್ಷುಬ್ಧ (ಮತ್ತು ಮಹಾತ್ಮಾಜಿಯವರ ಅಕಲ್ಪಿತ ಕೊಲೆಯಿಂದ ಸಂತಪ್ತರಾದ) ಜನರು ಹಿಂದು ಸಭಾವಾದಿಗಳ ಇಲ್ಲವೆ ರಾ। ಸ್ವ॥ ಸಂಘದವರ ಮನೆ ಕಚೇರಿಗಳನ್ನೂ ಧ್ವಂಸಗೊಳಿಸಿದ ವಾರ್ತೆಗಳು ಪ್ರಕಟವಾಗಿವೆ. ಹಿಂದ ಸರಕಾರದ ವಾಣಿಜ್ಯ ಮಂತ್ರಿಗಳಾಗಿರುವ ಡಾ॥ ಶ್ಯಾಮಪ್ರಸಾದ ಮುಕರ್ಜಿಯವರು ಹಿಂದು ಮಹಾಸಭಾವಾದಿಗಳಿರುತ್ತಾರೆ; ಆ ಸಂಸ್ಥೆಯ ಅಗ್ರಗಣ್ಯ ಮುಖಂಡರಲ್ಲಿ ಓರ್ವರಿರುತ್ತಾರೆ. ದಿಲ್ಲಿಯಲ್ಲಿ ಅವರ ನಿವಾಸಸ್ಥಳದ ಮುಂದೆ ಸಹ ಜನಜಂಗುಳಿಯು ಗೊಂದಲ ಹಾಕಿ, ಡಾ॥ ಮುಕರ್ಜಿಯವರನ್ನು ಮಂತ್ರಿಪದದಿಂದ ತಳ್ಳಿಹಾಕಬೇಕೆಂದು ಕೂಗಾಟ ನಡಿಸಿದ ಸುದ್ದಿಯಿದೆ! ಈ ಜನಜಂಗುಳಿಯಿಂದ ಡಾ॥ ಮುಕರ್ಜಿಯವರನ್ನೂ ಅವರ ನಿವಾಸವನ್ನೂ ರಕ್ಷಿಸಲು ಈಗ ಸೈನಿಕರನ್ನು ನೇಮಿಸಲಾಗಿದೆ. ಬೆಳಗಾಂವ ಮತ್ತು ಕೊಲ್ಹಾಪುರ ಇವುಗಳ ನಡುವಿನ ಪ್ರದೇಶದಲ್ಲಂತೂ ಜನಜಂಗುಳಿಯ ಕ್ರೋಧಾವೇಶವು ಭೀಷಣ ಪುಂಡಾಟಿಕೆಯಲ್ಲಿ ಪರಿಣಮಿಸಿದೆ. ೨೦-೨೫ ವರ್ಷಗಳ ಹಿಂದೆ ಈ ಭಾಗದಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ವೈರವನೆಮಾಡಿತ್ತು. ಇತ್ತಲಾಗಿ ಅದು ಶಾಂತವಾಗಿತ್ತು. ಮಹಾತ್ಮರ ಕೊಲೆಯಿಂದ ಈಗ ಅದಕ್ಕೆ ಪುನಃ ಕಳೆ ಬಂದಿದೆ! ಮಹಾತ್ಮರ ಕೊಲೆಗಡಕನು ಪುಣೇರಿ ಬ್ರಾಹ್ಮಣನಿರುತ್ತಾನೆಂದು ಹೇಳಿ, ಪುಂಡರು ಈ ಭಾಗದಲ್ಲಿ ಆ ಜಾತಿಯ ಬ್ರಾಹ್ಮಣರ ಹಿಂಸೆ ಮಾಡಲಾರಂಭಿಸಿದ್ದಾರೆ! ಅಲ್ಲಲ್ಲಿ ಕೊಳ್ಳಿ-ಲೂಟಿಗಳೂ ಕೊಲೆಗಳೂ ಉಗ್ರ ಅತ್ಯಾಚಾರಗಳೂ ನಡೆಯುತ್ತಿವೆ! ಸಾಂಗಲಿ ಸಂಸ್ಥಾನದ ತೇರದಾಳ ಎಂಬಲ್ಲಿ ಪುಂಡರು ೫ ಮಂದಿ ಬ್ರಾಹ್ಮಣರನ್ನು ಒಂದು ಮನೆಯಲ್ಲಿ ಹಾಕಿ ಸುಟ್ಟ ಸುದ್ದಿಯುಂಟು!! ಸಾತಾರೆ ಜಿಲ್ಹೆಯ ವಡೂಜ ಎಂಬ ಊರಲ್ಲಿ ಪುಂಡರು ಪ್ರತ್ಯಕ್ಷ ಫೌಜದಾರರನ್ನು ಕೊಂದುಹಾಕಿದ ವರ್ತಮಾನವಿದೆ! ಈ ಬೇಗೆ ಎಂದು ಶಾಂತವಾಗುವದೋ ದೇವರೇ ಬಲ್ಲ!

ರಾ॥ ಸ್ವ॥ ಸಂಘ ಅಕ್ರಮವಾಯಿತು

ಮಹಾತ್ಮಾಜಿಯವರ ಕೊಲೆಯ ಒಳಸೂತ್ರಗಳನ್ನು ತತ್ಪರತೆಯಿಂದ ಪರಿಶೀಲಿಸಿ, ಈ ಕೊಲೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದವರೇ ಮೂಲ ಕಾರಣರೆಂದೂ ಈ ಸಂಘದವರು ಬಾಹ್ಯತಃ ಹಿಂದುಗಳ ಶಾರೀರಿಕ, ಬೌದ್ಧಿಕ ಮತ್ತು ಸಾಂಸ್ಕೃತಿಕ ಸಂಘಟನೆಯನ್ನು ಸಾಧಿಸುವ ಸೋಗು ಹಾಕಿಕೊಂಡಿದ್ದರೂ ಇತ್ತಲಾಗಿ ಅವರು ಕೊಲೆ ಮುಂತಾದ ಹಿಂಸಾತ್ಮಕ ಮಾರ್ಗಗಳಿಂದ ರಾಜ್ಯಾಧಿಕಾರ ಮತ್ತು ಪ್ರತಿಷ್ಠೆಗಳನ್ನು ಗಳಿಸಲು ಅಂತರಂಗದಿಂದ ಪ್ರಯತ್ನಿಸುತ್ತಿದ್ದಾರೆ ದೂ ಕಂಡುಬಂದದ್ದರಿಂದ ಹಿಂದುಸ್ಥಾನ ಸರಕಾರವು ಈ ಸಂಸ್ಥೆಯನ್ನು ಅಕ್ರಮ ಯಾ ಕಾನೂನ-ಬಾಹ್ಯ ರಾಯಿಸಿವೆ. ಅದರಂತೆ ಎಲ್ಲ ಪ್ರಾಂತಿಕ ಸರಕಾರಗಳೂ ಕೆಲವು ಸಂಸ್ಥಾನಿಕ ಸರಕಾರಗಳೂ ಈ ಸಂಸ್ಥೆಯನ್ನೂ ಅದರ ಶಾಖೆಗಳನ್ನೂ ಅಕ್ರಮ ರಾಯಿಸಿ ಅದರ ಪ್ರಮುಖ ಕಾರ್ಯಕರ್ತರನ್ನು ಬಂಧಿಸಲು ಆಜ್ಞಾಪಿಸಿವೆ. ಅನೇಕ ಹಿಂದು ಸಭೆಯ ಕಾರ್ಯಕರ್ತರೂ ಬಂಧಿಸಲ್ಪಡುತ್ತಿದ್ದಾರೆ. ಮಹಾತ್ಮಾಜಿಯವರ ಕೊಲೆಯ ಪರಿಣಾಮವಾಗಿ ಹಿಂದು ಮಹಾಸಭೆಯ ಪ್ರತಿಷ್ಠೆ ಈಗ ಶೂನ್ಯಾಂಶಕ್ಕೆ ಇಳಿಯಹತ್ತಿದೆ. ಎಷ್ಟೋ ಕಡೆ ಅದರ ಪ್ರಾಂತಿಕ, ಜಿಲ್ಹಾ ಮತ್ತು ತಾಲೂಕ ಶಾಖೆಗಳು (ಮುಸ್ಲಿಮ ಲೀಗಿನ ಶಾಖೆಗಳಂತೆ) ವಿಸರ್ಜಿಸಲ್ಪಡಹತ್ತಿವೆ! ನೂರಾರು ಸದಸ್ಯರು ಕಾರ್ಯಕರ್ತರು ಸಭೆಯ ಸದಸ್ಯತ್ವ ಬಿಡಲು ಹತ್ತಿಕೊಳ್ಳಲಾರಂಭಿಸಿದ್ದಾರೆ. ಅ॥ ಭಾ॥ ಹಿಂದು ಮಹಾಸಭೆಯ ಸದ್ಯದ ಅಧ್ಯಕ್ಷ ಶ್ರೀ॥ ಭೋಪಟಕರ, ಹಿಂದಿನ ಅಧ್ಯಕ್ಷ ಡಾ॥ ಶ್ಯಾಮಪ್ರಸಾದ ಮುಕರ್ಜಿಯವರೂ ಮೊನ್ನೆ ಒಂದು ಪ್ರಕಟನೆ ಹೊರಡಿಸಿ ಹಿಂದು ಮಹಾಸಭೆಯು ಈಗ ಒಂದೇ ರಾಜಕಾರಣದಿಂದ ಅಲಿಪ್ತವಾಗಬೇಕು ಇಲ್ಲವೆ ಜಾತೀಯತೆಯನ್ನು ಬಿಟ್ಟು ಸರ್ವರಿಗೂ ತನ್ನೊಳಗೆ ಪ್ರವೇಶ ಕೊಡಬೇಕು ಎಂದು ಸಾರಿದ್ದಾರೆ.

ರಾ। ಸ್ವ। ಸಂಘದ ಕರಾಲ ರೂಪ

ರಾಷ್ಟ್ರೀಯ ಸ್ವಯಂಸೇವಕ ಸಂಘವು ಸುಮಾರು ೨೦ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತು. ಹಿಂದು ಸಂಘಟನೆ ಮಾಡಿ, ಅವರನ್ನು ಸ್ವಸಂರಕ್ಷಣಕ್ಕೆ ಸಮರ್ಥರನ್ನಾಗಿ ಮಾಡುವದೇ ಸಂಘದ ಮೂಲೋದ್ದೇಶವಿತ್ತು. ಈ ಕಾರ್ಯದಲ್ಲಿ ಮಹಾರಾಷ್ಟ್ರೀಯರು ಮುಂದಾಳುತ್ವ ವಹಿಸಿದ್ದು ತೋರುತ್ತಿದೆ. ಸಂಯುಕ್ತ ಪ್ರಾಂತದ ಜಲ್ಹಾ ಸಂಘಟಕರಲ್ಲಿ ೧೦೦ಕ್ಕೆ ೯೦ ಮಂದಿ ಮಹಾರಾಷ್ಟ್ರೀಯರಿದ್ದರೆಂಬುದು ಈಗ ಸ್ಪಷ್ಟವಾಗಿದೆ. ಮೊದಮೊದಲು ಈ ಸಂಘದ ವಿಸ್ತಾರ ಅಷ್ಟಾಗಿದ್ದಿಲ್ಲ. ಇತ್ತ ೩-೪ ವರ್ಷಗಳಲ್ಲಿ ಅದರ ವಿಸ್ತಾರ ಒಹಳವಾಗಿದೆ. ಹಳ್ಳಿಗಳಲ್ಲಿ, ಕೇರಿಕೇರಿಗಳಲ್ಲಿ ಅದರ ಶಾಖೆಗಳಿವೆ. ಸಾವಿರಾರು ತರುಣರು ಈ ಸಂಘಕ್ಕೆ ಸೇರಿದ್ದಾರೆ. ೨೦ ವರ್ಷ ಹಿಂದೆ ಹಿಟ್ಲರನು ಜರ್ಮನಿಯಲ್ಲಿ ತನ್ನ ನಾಜಿ ಯಾನೆ ರಾಷ್ಟ್ರೀಯ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿ ವಿಸ್ತರಿಸಿದಂತೆಯೇ ಹಿಂದೂಸ್ಥಾನದಲ್ಲಿ ಈ ಸಂಘ ಬೆಳವಣಿಗೆಯಾಗಿದೆ. ಈ ಸಂಘದವರ ಶಿಸ್ತು ಕವಾಯತು ಮುಂತಾದ್ದು ಕಂಡು ಸರದಾರ ಪಟೇಲ, ಶ್ರೀ॥ ದೇವದಾಸ ಗಾಂಧಿ ಮೊದಲಾದ ದೂರದರ್ಶಿಗಳು ಸಹ ಸಂಘದ ಚಟುವಟಿಕೆಗಳನ್ನು ಮನಸೋಕ್ತ ಹೊಗಳಿದ್ದರು. ಈ ಸಂಘವು ಭಾರತೀಯ ರಾ...

ಆಜ್ಞೆ

ರಾಜಕೀಯ ಮತ್ತು ನೌಕರಿಗಳ ಖಾತೆ,
ಮುಂಬಯಿ ಕೋಟೆ,
ತಾ ೩-೧-೧೯೪೮

೧೯೪೬ರ ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು

ನಂ ೯೪೬/೪೬ — ೧೯೪೬ನೇ ಇಸವಿಯ ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೩ನೇ ಮುಂಬಯಿಯ ಕಾನೂನಿನ) ೩ನೇಯ ಕಲಮಿನನ್ವಯ ದೊರೆತ ಅಧಿಕಾರಗಳನ್ನು ಉಪಯೋಗಿಸಿ ಮುಂಬಯಿ ಸರಕಾರವು, ತಾ ೨೪ ೭-೧೯೪೭ಕ್ಕೆ ರಾಜಕೀಯ ಮತ್ತು ನೌಕರಿಗಳ ಖಾತೆಯವರು ಹೊರಡಿಸಿದ ೯೪೬/೪೬ನೇ ನಂಬರದ ಆಜ್ಞೆಯಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡತಕ್ಕದ್ದೆಂದು ವಿಧಿಸಿರುತ್ತದೆ —

ಸದರಿ ಆಜ್ಞೆಯ ೧ನೇ ಪರಿಚ್ಛೇದ (ಪೆರಾ)ದ (೧)ನೇ ಉಪ-ಪರಿಚ್ಛೇದದಲ್ಲಿ (ಈಗ ಇರುವ) '೬೫"ಎಂಬ ಅಂಕಿಗಳ ಬದಲು "೪೭-೫-೦' ಎಂಬ ಅಂಕಿಗಳನ್ನು ಸೇರಿಸತಕ್ಕದ್ದು

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

L. R Dalal,

ಸರಕಾರದ ಕೆಳ ಕಾರ್ಯದರ್ಶಿ

ನೋಟೀಸಿಗೆ ಉತ್ತರ.

ಬುಚ್ಚಿಬಾಯಿ ಲಕ್ಷ್ಮಣ ಕುಮಟೇಕರ ಇವಳು, ಶಂಕರ ಲಕ್ಷ್ಮಣ ಕುಮಟೇಕರ, ಇವನು ತಾ ೨-೨-೧೯೪೮ರ "ವೃತ್ತ"ದಲ್ಲಿ ಕೊಟ್ಟ ನೋಟೀಸಿಗೆ ಉತ್ತರ ಕೊಡುವದೇನಂದರೆ —

ಕುಮಟಾ ಗಾವುದ ಸರ್ವೆ ನಂಬರ ೪೩೭ ದ ಅದರಲ್ಲಿರುವ ಮನೆ ಕೊಡಾ ಕ್ರಯದ ಹಕ್ಕಿನಿಂದ ನನ್ನ ಸ್ವತಂತ್ರ ಆಸ್ತಿಯಾಗಿದ್ದು, ಅದರಲ್ಲಿ ನನ್ನ ತಮ್ಮ ಶಂಕರ ಯಾ ನಾರಾಯಣ ಇವರಿಗೆ ಏನೂ ಹಕ್ಕು ಇರುವದಿಲ್ಲ. ಹಕ್ಕು ಸಾಧಿಸುವದಕ್ಕಾಗಿಯೇ ಈ ಸುಳ್ಳು ನೋಟೀಸು ಕೊಟ್ಟದ್ದಿರುತ್ತದೆ. ಅದರಿಂದ ಯಾರೂ ಮೋಸ ಹೋಗಕೊಡದು.

ಕುಮಟಾ, ತಾ ೮-೨-೧೯೪೮

बुचीबाई लक्ष्मण कुमटेकर.

—R—

ಬಟ್ಟೆಯ ಸೀಧಾ ರದ್ದಾಯಿತು

ಅರಳೆ ಬಟ್ಟೆಯ ಮೇಲಿನ ಸದ್ಯದ ನಿಯಂತ್ರಣಗಳ ಶಿಥಿಲಗೊಳಿಸಬೇಕೆಂದು ಹಿಂದುಸ್ಥಾನ ಸರಕಾರವು ಮಾಡಿದ ನಿರ್ಣಯಕ್ಕನುಸಾರವಾಗಿ ಮುಂಬಯಿ ಸರಕಾರ ಪ್ರಾಂತದೊಳಗೆ ಅರಳೆ-ಬಟ್ಟೆಯ ಮಾರಾಟ ಮತ್ತು ಹಂಚಿಕೆಯ ಮೇಲೆ ಹಾಕಿದ ವಿವಿಧ ನಿರ್ಬಂಧಗಳು ತಾ ೧-೨-೧೯೪೮ರಿಂದ ರದ್ದುಗೊಳಿಸಿರುತ್ತದೆ. ಅದರಂತೆ ೧೯೪೫ರ ಮುಂಬಯಿಯ ಅರಳೆ ಬಟ್ಟೆಯ ವ್ಯಾಪಾರ ನಿಯಂತ್ರಣ ಆಜ್ಞೆ, ೧೯೪೪ರ ಮುಂಬಯಿಯ ವ್ಯಾಪಾರಿ (ಬಟ್ಟೆಗೆ) ಅಚ್ಚು ಹಾಕುವವರಿಗೆ ಪರವಾನೆ ಕೊಡುವ ಸಂಬಂಧದ ಆಜ್ಞೆ, ೧೯೪೫ರ ಮುಂಬಯಿಯ ಬಟ್ಟೆ ಸೀಧಾ ಕ್ರಮದ ಆಜ್ಞೆ, ೧೯೪೭ರ ಮುಂಬಯಿಯ ಅರಳೆ ಬಟ್ಟೆಗಳ (ವ್ಯಾಪಾರದ-ನಿಯಂತ್ರಣದ ಮತ್ತು ವ್ಯಾಪಾರಿಗಳ ಪರವಾನೆ ಕೊಡುವ) ಆಜ್ಞೆ ಹಾಗೂ ಮುಂಬಯಿಯ ಅರಳೆ ಬಟ್ಟೆಯ ಮತ್ತು ನೂಲಿನ ದಲಾಲರಿಗೆ ಪರವಾನೆ ಕೊಡುವ ಸಂಬಂಧದ ಆಜ್ಞೆ ಇವೆಲ್ಲ ಈಗ ರದ್ದಾಗಿವೆ. ಈ ಬಗ್ಗೆ ಅವಶ್ಯವಿದ್ದ ಸರಕಾರಿ ಪ್ರಕಟನೆಗಳನ್ನು ತಾ ೩೧-೧-೧೯೪೮ರ ಮುಂಬಯಿ ಸರಕಾರದ (ವಿಶೇಷ) ಗಾಝೆಟಿನಲ್ಲಿ ಪ್ರಕಟಿಸಲಾಗಿದೆ.

ಮುಂಬಯಿ ನಗರದಲ್ಲೂ ಮುಂಬಯಿ ನಗರದ ಹೊರಭಾಗದ ಜಿಲ್ಹೆಯಲ್ಲೂ ಅಮಲಿನಲ್ಲಿದ್ದ ಬಟ್ಟೆಯ ಸೀಧಾ ಪದ್ಧತಿ ಸಹ ಇನ್ನು ಮುಂದೆ ಅಸ್ತಿತ್ವದಲ್ಲಿರಲಿಕ್ಕಿಲ್ಲ. ಇಂದಿನಿಂದ ಇಡೀ ಮುಂಬಯಿ ಪ್ರಾಂತದಲ್ಲಿ ಅರಳೆ ಬಟ್ಟೆಯ ಖರೀದಿ, ಹಂಚುವಿಕೆ ಮತ್ತು ಸಾಗಾಟವು ಅನಿರ್ಬಂಧವಾಗಿ ನಡೆಯಬಹುದಾಗಿದೆ. ಹಾಗೂ ಬಟ್ಟೆಯ ಮಾರಾಟ ಮಾಡಲಿಕ್ಕೆ ಇಲ್ಲವೆ ಸಂಗ್ರಹ ಮಾಡಲಿಕ್ಕೆ ಯಾರೂ ಪರವಾನಿಗೆ ಪಡೆಯುವ ಆವಶ್ಯಕತೆಯಿರುವದಿಲ್ಲ.

ನೂಲಿನ ಮೇಲೆ ಸದ್ಯಕ್ಕೆ ಇರುವ ನಿರ್ಬಂಧಗಳು ಮಾತ್ರ ಹಾಗೆಯೇ ಉಳಿಯುವವು.

…ರಣದಲ್ಲಿ ಪ್ರವೇಶ ಮಾಡಿದ್ದು (ಕನಿಷ್ಟ ಬಹಿರಂಗವಾಗಿ ಪ್ರವೇಶ ಮಾಡಿದ್ದು) ಇತ್ತಲಾಗಿಯೇ. ಕಳೆದ ಡಿಸೆಂಬರ ತಿಂಗಳಲ್ಲಿ ದಿಲ್ಲಿಯಲ್ಲಿ ಜಾತೀಯ ಗಲಭೆ ಉಂಟಾದಾಗ, ಹಿಂದ ಸರಕಾರವನ್ನು ಉರುಳಿಸಲು ಮುಂದಾದ ಪಾಕಿಸ್ತಾನಿ ಪುಂಡರನ್ನು ಎದುರಿಸಿ ಆವ ಯೋಜನೆ-ಯೋಚನೆಗಳನ್ನು ಮಣ್ಣುಗೂಡಿಸಿದ ಶ್ರೇಯಸ್ಸು ಕೆಲಮಟ್ಟಿಗೆ ಈ ಸಂಘಕ್ಕೆ ಸಲ್ಲುತ್ತಿದೆ ಯಂತೆ. ದಿಲ್ಲಿಯಲ್ಲಿ ತಮಗೆ ಸಿಕ್ಕ ಯಶಸ್ಸಿನಿಂದ ಉನ್ಮತ್ತರಾಗಿ ಈ ಸಂಘದವರು ಕಳೆದ ೪-೬ ತಿಂಗಳಲ್ಲಿ ಕೊಂಗ್ರೆಸ ಸರಕಾರವನ್ನು, ಕೊಂಗ್ರೆಸ್ಸನ್ನು ಉರುಳಿಸುವ ಹವ್ಯಾಸ ಹಿಡಿದದ್ದು ತೋರುತ್ತಿದೆ. ಅಧಿಕಾರ ವರ್ಗದಲ್ಲಿಯೂ ಈ ಸಂಘದ ಜಾಲ ವಿಸ್ತಾರವಾಗಿ ಹಬ್ಬಿದೆ. ಮೊನ್ನೆ ದಿಲ್ಲಿಯಲ್ಲಿ ಈ ಸಂಘದ ಸಂಬಂಧವಾಗಿ ಸೆರೆಹಿಡಿಯಲ್ಪಟ್ಟವರಲ್ಲಿ ಅರ್ಧದಷ್ಟು ಜನರು ಸರಕಾರಿ ಅಧಿಕಾರಿಗಳಿದ್ದಾರೆ! ಸರಕಾರದ ಸೆಕ್ರೆಟರಿಯಟ ಕಚೇರಿಯಲ್ಲಿಯೂ ಈ ಸಂಘದ ಭಕ್ತರಿದ್ದಾರಂತೆ! ಕೆಲವು ಸಂಸ್ಥಾನಗಳಲ್ಲಂತೂ ಈ ಸಂಘಕ್ಕೆ ಬಹಳ ಪ್ರೋತ್ಸಾಹ ಸಿಗುತ್ತಿದೆ. ಅಲ್ವಾರ ಸಂಸ್ಥಾನದಲ್ಲಿ ಈ ಸಂಘದ ಚಟುವಟಿಕೆಗಳು ಹೆಚ್ಚಿಗೆ ಇರುವದನ್ನು ಕಂಡು ಭಾರತ ಸರಕಾರವು ಮೊನ್ನೆ ಅಲ್ಲಿಯ ಮಹಾರಾಜರಿಗೂ ಅವರ ಅಮಾತ್ಯ ಡಾ॥ ನಾರಾಯಣರಾವ ಖರೇ ಇವರಿಗೂ ಸಂಸ್ಥಾನ ಬಿಟ್ಟು ಹೋಗಲು ಕಟ್ಟಪ್ಪಣೆ ಮಾಡಬೇಕಾಯಿತು. ಮಹಾತ್ಮಾಜಿಯವರ ಖೂನಿಯ ವಿಷಯದಲ್ಲಿ ಸಂಸ್ಥಾನದ ಅಧಿಕಾರಿಗಳ ಮೇಲೆ ... ಸ್ವತಃ ವಹಿಸಿಕೊಳ್ಳಬೇಕಾಯಿತು. ಈ ಅಪ್ಪಣೆ ಬಂದ ಕೂಡಲೇ ಅಲ್ವಾರ ಮಹಾರಾಜರು ಡಾ॥ ಖರೇಯವರಿಗೆ ಅಮಾತ್ಯಪದದಿಂದ ಬಡತರ್ಫ ಮಾಡಿದ್ದಾರೆ. ಖರೇಯವರು ಈಗ ದಿಲ್ಲಿಯಲ್ಲಿದ್ದು, ದಿಲ್ಲಿ ಪ್ರಾಂತದಿಂದ ಹೊರಗೆ ಹೋಗದಂತೆ ಅವರ ಮೇಲೆ ನಿರ್ಬಂಧ ಹಾಕಲಾಗಿದೆ. ಏನೇ ಇರಲಿ, ತಡವಾಗಿ ಆಗಲೊಲ್ಲದೇಕೆ, ಸರದಾರ ಪಟೇಲರ ನೇತೃತ್ವದಲ್ಲಿ ಸರಕಾರವು ರಾ॥ ಸ್ವ॥ ಸಂಘದ ಬೇರುಗಳನ್ನು ಕಿತ್ತು ತೆಗೆಯಲು ದೃಢನಿರ್ಧಾರ ಮಾಡಿದ್ದುದು ಅಭಿನಂದನೀಯ. ಇದೇ ರೀತಿಗೆ ದೇಶದಲ್ಲಿರುವ ಅನ್ಯ ಜಾತೀಯ ಸ್ವಯಂಸೇವಕ ಸಂಘಗಳ ಉಚ್ಚಾಟನೆಯೂ ಶೀಘ್ರವೇ ಆಗುವದೆಂದು ಜನತೆಯು ನಿರೀಕ್ಷಿಸುತ್ತಿದೆ. ಇವುಗಳ ವಿಸರ್ಜನೆಗೆ ಈಗಾಗಲೇ ಆರಂಭವಾದ ಸುದ್ದಿಗಳೂ ಬರುತ್ತಿವೆ.

ಮಹಾತ್ಮರ ನಿಧನದಬಗ್ಗೆ ದುಃಖೋದ್ಗಾರಗಳು

ಮಹಾತ್ಮಾಜಿಯವರ ನಿಧನದ ಸುದ್ದಿ ತಿಳಿದೊಡನೆ ಬ್ರಿಟಿಶ ಚಕ್ರವರ್ತಿಗಳು, ಅಮೇರಿಕೆಯ ಅಧ್ಯಕ್ಷ ಟ್ರುಮನ್ನರು ದರಂತೆ ಯುರೋಪ, ಆಫ್ರಿಕಾ, ಏಶಿಯಾ, ಅಮೇರಿಕಾ ಖಂಡಗಳೊಳಗಿನ ಹಲವು ರಾಷ್ಟ್ರಗಳ ಸರಕಾರಗಳ ಧುರೀಣರೂ ದುಃಖ ವ್ಯಕ್ತ ಮಾಡಿ, ಅ॥ ಜಗತ್ತಿಗೆ ಮಾರ್ಗದರ್ಶನ ಮಾಡಿದ ಮಹಾಪುರುಷನು ಕಣ್ಮರೆಯಾದನೆಂಬ ಅರ್ಥದ ಉದ್ಗಾರಗಳನ್ನು ತೆಗೆದಿರುವರು. ಬ್ರಿಟನ್, ಅಮೇರಿಕ ಮೊದಲಾದ ದೇಶಗಳೊಳಗಿನ ಸಾವಿರಾರು ಪತ್ರಕಾರರು ಲೇಖಕರೂ ನಿತಾಂತ ಸಂತಾಪ ವ್ಯಕ್ತಗೊಳಿಸುತ್ತಿದ್ದಾರೆ. ಪಾಕಿಸ್ತಾನದಲ್ಲೂ ಮಹಾತ್ಮರ ನಿಧನದ ಬಗ್ಗೆ ದುಃಖೋದ್ಗಾರಗಳು ಕೇಳಬರುತ್ತವೆ. ಸೂತಕವೂ ಆಚರಿಸಲ್ಪಟ್ಟ ವಾರ್ತೆಯುಂಟು. ಭಾರತದಲ್ಲಂತೂ ಇಡೀ ಜನಾಂಗವೇ ಅಳುತ್ತಿದೆ, ...ಶ ಅಶ್ರುಧಾರೆಗಳನ್ನು ಸುರಿಸುತ್ತಿದೆ.

ಯೋಗೀಂದ್ರ ಅರವಿಂದರ ಸಂದೇಶ

ಈ ಪರಿ ಮಹಾತ್ಮರ ನಿರ್ಯಾಣದಿಂದ ಪರದೇಶದ ಭಾರತೀಯರಿಗೆ ಪಾಂಡಿಚೇರಿಯಲ್ಲಿರುವ ಯೋಗೀಂದ್ರ ಅರವಿಂದ ಘೋಷರು ಆ॥ ಆಶಾ…

ಸ್ಥಾನಿಕ ವೃತ್ತಾಂತ.

ಕುಮಟಾ— ೪ ದಿನಗಳಿಂದ ಚಳಿಯು ಆಗ ಬೀಳುತ್ತಿದೆ.

ಪೂಜ್ಯ ಮಹಾತ್ಮಾಜಿಯವರ ಅಸ್ಥಿ ಭಸ್ಮಗಳು ಶ್ರೀಕ್ಷೇತ್ರ ಗೋಕರ್ಣಕ್ಕೆ ಬರಲಿವೆಯೆಂದೂ, ಅವನ್ನು ಬುಧವಾರ ಮುಂಜಾನೆ ಹುಬ್ಬಳ್ಳಿಯಿಂದ ನೇರವಾಗಿ ಕಾರವಾರಕ್ಕೆ ಒಯ್ಯುವ ಬದಲು, ಹುಬ್ಬಳ್ಳಿಯಿಂದ ಶಿರಸಿ ಕುಮಟಾ ಅಂಕೋಲಾ ಮಾರ್ಗವಾಗಿ ಒಯ್ಯುವ ವ್ಯವಸ್ಥೆ ಮಾಡಬೇಕೆಂದೂ, ಹಾಗೆ ಮಾಡಿದಲ್ಲಿ ಬುಧವಾರ ಸಾಯಂಕಾಲದೊಳಗೆ ...

ಪಾಕಿಸ್ತಾನಕ್ಕೆ ಸಾವಿರಾರು ಮಂದಿ ... ಒಂದು ಸಂದೇಶ ಕಳಿಸಿ, ಬಾರತಕ್ಕೆ ನಿರಾಶರಾಗದಿರಲು ಬೋಧಿಸಿದಾರೆ. 'ನಮ್ಮನ್ನು ಸ್ವಾತಂತ್ರ್ಯದ ಗುರಿ ಮುಟ್ಟಿಸಿದ ಜ್ಯೋತಿಯು ಇನ್ನೂ ಉರಿಯುತ್ತಿದೆ. ಅದು ಈಗಲೇ ಐಕ್ಯ ಸಾಧಿಸಲಿಲ್ಲವಾದರೂ, ಸಾಧಿಸುವ ವರೆಗೂ ಅದು ಪ್ರಜ್ವಲಿಸುತ್ತಲೇ ಇರುವದು. ಭಾರತದ ಭವಿತವ್ಯವು ಭವ್ಯವೂ ಉಜ್ವಲವೂ ಆಗುವದೆಂದು ನನಗೆ ವಿಶ್ವಾಸವುಂಟು' ಎಂದು ಅವರು ತಿಳಿಸಿರುವರೆ.

ರಾಜಘಾಟದಲ್ಲಿ ಏನು ನಡೆದಿದೆ ?

ದಿಲ್ಲಿಯ ರಾಜಘಾಟದಲ್ಲಿ ಮಹಾತ್ಮರಿಗೆ ಅಗ್ನಿ-ಸಂಸ್ಕಾರ ಕೊಟ್ಟ ಸ್ಥಳವೀಗ ಪುಣ್ಯಭೂಮಿಯಾಗಿದೆ, ದೊಡ್ಡದೊಂದು ಯಾತ್ರಾಸ್ಥಳವಾಗಿದೆ. ಅಗ್ನಿಸಂಸ್ಕಾರದ ವೇದಿಕೆಗೆ ಸಿಮೆಂಟಿನ ಹೊದಿಕೆ ಮಾಡಿದ್ದಾರೆ. ದಿನಾಲು ಅಲ್ಲಿ ಬೆಳಗಿನಿಂದ ಸಾಯಂಕಾಲದ ವರೆಗೆ ಗೀತಾ-ಪಠಣ, ಭಾಗವತ ಪಾರಾಯಣ, ಭಜನೆ, ಪ್ರಾರ್ಥನೆಗಳು ನಡೆಯುತ್ತಿವೆ. ಸಾವಿರಾರು ಮಂದಿ ದಿನಾಲೂ ಈ ದಹನಭೂಮಿಯ ದರ್ಶನ ಪಡೆಯಲು ಬಂದು ಹೂಗಳನ್ನು ಅರ್ಪಿಸಿ ಪಾವನರಾಗುತ್ತಿದ್ದಾರೆ.

ಗುರುವಾರ ಅಸ್ಥಿ-ಭಸ್ಮಗಳ ವಿಸರ್ಜನೆ

ಕಳೆದ ಸೋಮವಾರ ಮಹಾತ್ಮರನ್ನು ದಹನ ಮಾಡಿದಲ್ಲಿ ಅಸ್ಥಿ-ಭಸ್ಮಗಳ ಸಂಚಯನದ ವಿಧಿಯಾಯಿತು. ಹಿಂದ ಸರಕಾರದ ಮಂತ್ರಿಗಳೂ ಕೆಲವು ಪ್ರಾಂತಿಕ ಗವ್ಹರ್ನರರೂ ಆ ಕಾಲಕ್ಕೆ ಹಾಜರ ಇದ್ದರು. ಮಹಾತ್ಮರ ಈ ಅಸ್ಥಿ-ಭಸ್ಮಗಳ ವಿಸರ್ಜನೆಯನ್ನು ತ್ರಿವೇಣೀಕ್ಷೇತ್ರ ಪ್ರಯಾಗದಲ್ಲಿಯೇ ಮಾಡುವದರ ಬದಲು ಹಿಂದುಸ್ಥಾನದ ಎಲ್ಲ ಪ್ರಾಂತಗಳಲ್ಲಿರುವ ಪುಣ್ಯಕ್ಷೇತ್ರಗಳಲ್ಲೂ ಮಹಾನದಿಗಳಲ್ಲೂ ಮಾಡಬೇಕೆಂದು ನಿರ್ಣಯವಾಗಿದೆ. ಅದರಂತೆ ಪ್ರಯಾಗ, (ಕಲಕತ್ತೆಯ ಸಮೀಪದ) ... ತ್ರ್ಯಂಬಕೇಶ್ವರ, ನಾಸಿಕ, ರಾಮೇಶ್ವರ, ಶ್ರೀರಂಗಪಟ್ಟಣ, ಗೋಕರ್ಣ, ದ್ವಾರಕಾ ಮುಂತಾದ ಆಯಾ ಪ್ರಾಂತಗಳ ಪ್ರಖ್ಯಾತ ಪುಣ್ಯಕ್ಷೇತ್ರಗಳಲ್ಲಿರುವ ನದಿಗಳಲ್ಲಾಗಲಿ ಸಕಲ-ನದೀಶನಾದ ಸಾಗರದಲ್ಲಾಗಲಿ ಬರುವ ಗುರುವಾರ ೧೧ ಘಂಟೆಗೆ ಮಹಾತ್ಮರ ಅವಶೇಷಗಳ ವಿಸರ್ಜನೆಯ ಸಮಾರಂಭಗಳಾಗುವವು. ಅಸ್ಥಿ-ಸಂಚಯನದ ಕಾಲಕ್ಕೆ ದಿಲ್ಲಿಯಲ್ಲಿದ್ದ ಪ್ರಾಂತಾಧಿಪರೂ ಮಂತ್ರಿಗಳೂ ತಮ್ಮ ತಮ್ಮ ಪ್ರಾಂತದ ಪಾಲನ್ನು ಈಗಾಗಲೇ ಒಯ್ದಿದ್ದಾರೆ. ಪ್ರಯಾಗದ ತ್ರಿವೇಣೀಸಂಗಮದಲ್ಲಿ ವಿಸರ್ಜಿಸಲ್ಪಡುವ ಅಸ್ಥಿಗಳನ್ನು ಸ್ವತಃ ಪಂ॥ ಜವಾಹಿರಲಾಲರೂ ಮಹಾತ್ಮಾಜಿಯವರ ಕುಟುಂಬದವರೂ ನಾಡದು ಬುಧವಾರ ವಿಶೇಷ ರೇಲ್ವೆಗಾಡಿಯಿಂದ ಪ್ರಯಾಗಕ್ಕೆ ಒಯ್ಯುವವರಿದ್ದಾರೆ.

ಮಹಾತ್ಮರ ಸ್ಮಾರಕದ ಯೋಜನೆ

ಅಲ್ಲಲ್ಲಿ (ಬ್ರಿಟನ ಅಮೇರಿಕೆಗಳಲ್ಲಿ ಕೂಡ) ಮಹಾತ್ಮರ ಸ್ಮಾರಕಗಳ ಮಾಡುವ ಯೋಜನೆಗಳಾಗುತ್ತಿವ. ಮೊನ್ನೆ ಕೂಡಿದ ಅ॥ ಭಾ॥ ಕೊಂಗ್ರೆಸ ಕಾರ್ಯಸಮಿತಿಯಲ್ಲೂ ಮಹಾತ್ಮರ ಸ್ಮಾರಕದ ಪ್ರಶ್ನೆ ಬಂದಿತ್ತು. ಒಂದು ದೊಡ್ಡ ನಿಧಿಯನ್ನು ಕೂಡಿಸಿ, ಮಹಾತ್ಮರ ಲೇಖ-ಭಾಷಣಗಳ ಸಂಶೋಧನೆ ಮಾಡುವ, ಅವುಗಳನ್ನು ಎಲ್ಲ ಭಾಷೆಗಳಲ್ಲಿ ಪ್ರಕಟಿಸುವ ಮತ್ತು ಮಹಾತ್ಮರ ತತ್ವಜ್ಞಾನದ ಅಖಂಡ ಪ್ರಚಾರ ನಡೆಸುವ ಯೋಜನೆಯನ್ನು ಸಮಿತಿಯು ಸ್ವೀಕರಿಸಿದೆಂದೂ, ಈ ಸ್ಮಾರಕ ನಿಧಿಗೆ ಸಕಲ ಭಾರತೀಯರು ತಮ್ಮ ೧೧ ದಿನಗಳ ಪ್ರಾಪ್ತಿಯನ್ನು ಅರ್ಪಿಸಬೇಕೆಂದು ಪಂ॥ ನೆಹರೂರವರು ಬಿನ್ನವಿಸುವರೆಂದೂ ತಿಳಿಯುತ್ತದೆ.

ಕಗೆ ... ಕಳುಹಿಸುವರೆಂದೂ, ಈ ವ್ಯವಸ್ಥೆಯಿಂದ ಗುರುವಾರದ ವಿಸರ್ಜನೆಯ ಕಾರ್ಯಕ್ಕೆ ... ಅಸ್ಥಿಯಾತ್ರೆಯ ಮಹಾತ್ಮಾಜಿಯವರ ಅಭಿಮಾನಿಗಳಿಗೆ ದರ್ಶನಗಳನ್ನು ... ಶಿರಸಿ ಕುಮಟಾ ಅಂಕೋಲಾ ಮಾರ್ಗದ ಮೇಲಿನ ಜನತೆಗೆ ಅನುಕೂಲತೆ ಮಾಡಿಕೊಡಬೇಕೆಂದೂ ... ಇಲ್ಲಿಯ ... ಶಿರಸಿಯ ಕೆಲವರು ಮುಂಬಯಿ ಸರಕಾರಕ್ಕೆ ತಂತಿಯಿಂದ ಬೇಡಿಕೊಂಡಿದ್ದಾರೆ.

ಕಳೆದ ಗುರುವಾರ ತಾ ೧೨ನೇ ದಿನ ಪ್ರಯಾಗದೊಳಗೆ ತ್ರಿವೇಣಿ ಸಂಗಮದಲ್ಲೂ ಬೇರೆ ಅನೇಕ ಕ್ಷೇತ್ರಗಳಲ್ಲೂ ಮಹಾತ್ಮರ ಅಸ್ಥಿ ಭಸ್ಮಗಳ ನಿಕ್ಷೇಪಣೆಯ ಸಮಾರಂಭವಾಗಲಿರುವದರಿಂದ ಹಿಂದುಸ್ಥಾನ ಸರಕಾರವು ಅದಿನ ಸಾರ್ವಜನಿಕ ರಜೆಯ ದಿನವೆಂದು ಸಾರಿದೆ.

ಜಗತ್ತಿನಲ್ಲಿ ಶಾಂತಿ ಮತ್ತು ವಿಶ್ವಬಂಧುತ್ವ ಸ್ಥಾಪಿಸಲು ಹೆಣಗಾಡುತ್ತಿದ್ದ ಮಹಾತ್ಮಾ ಗಾಂಧಿಯವರು ಓರ್ವ ದುರಾತ್ಮನ ಗುಂಡಿಗೆ ಆಹುತಿಯಾದಾಗ ಇಲ್ಲಿಯ ಗೀತಾ ಪಾಠ ... ಸಂತಾಪ ಪ್ರದರ್ಶಿಸಿ, ಬರುವ ಗುರುವಾರ (ಅಸ್ಥಿ ನಿಕ್ಷೇಪಣೆಯ ದಿನ) ಪ್ರಾತಃ ಕಾಲದಿಂದ ಮಧ್ಯಾನ್ಹದ ವರೆಗೆ ಮಹಾತ್ಮರ ಸಕಲ ಭಕ್ತರೂ ಗೀತಾ ಭಕ್ತರೂ, ಅವರ ಆತ್ಮನ ಶ್ರೇಯಾರ್ಥ, ಗೀತೆಯ ಪಾರಾಯಣ ಮಾಡಬೇಕೆಂದು ಬಿನ್ನವಿಸಿರುತ್ತಾರೆ. ಇಲ್ಲಿಯ ಅಡಿಕೆಯ ದಲಾಲ ವ್ಯಾಪಾರಿಗಳು ದುಃಖಪ್ರದರ್ಶನ ಕರುತ್ತು ... ಮಾಡಿರುವದಲ್ಲದೆ, ತಾ. ೧೨ರ ವರೆಗೆ ಎಲ್ಲ ಅಡಿಕೆ ವ್ಯವಹಾರ ನಿಲ್ಲಿಸಿದ್ದಾರೆ.

ಹಿಂದು ಮಹಾಸಭೆಗೆ ಸಂಬಂಧಪಟ್ಟ ಜನರಿಂದ ಮಹಾತ್ಮಾಜಿಯವರ ಕೊಲೆಯಾದದ್ದು ಕಂಡು, ಇಲ್ಲಿಯ ಹಿಂದು ಮಹಾಸಭೆಯ ಕಾರ್ಯದರ್ಶಿಗಳಾದ ರಾ। ಹರಿ ಗೋಪಾಳ ... ಇವರು ತಮ್ಮ ಸದಸ್ಯತ್ವಕ್ಕೂ ಕಾರ್ಯದರ್ಶಿತ್ವಕ್ಕೂ ರಾಜೀನಾಮೆಯನ್ನಿತ್ತಿದ್ದಾರೆ.

೧೯೪೬ರ ಸಾರಾಯಿ ಬಂದಿಯು ತಾ ೧೬-೧೧-೪೭ರಿಂದ ಇಡೀ ಪ್ರಾಂತದಲ್ಲಿ ಜಾರಿಯಾಗಿದೆ. ಈ ಕಾನೂನಿನ ... ಕೆಲಮಿನನ್ನಿಯು ಪರವಾನೆ ಪಡೆಯದೆ ಹಂಗಾಮಿಯಾಗಿ ... (ನಾಲ ಕೆಡೆಯುವ) ... ಉದ್ಯೋಗ ಮಾಡಬಾರದಿಲ್ಲ. ಪರವಾನೆ ಇಲ್ಲದೆ ಮಾಡಿದ ವ್ಯವಹಾರ ಅಪರಾಧವಾಗುತ್ತದೆ. ... ಉದ್ಯೋಗ ಮಾಡುತ್ತಿರುವವರು ಕೂಡಲೇ ಪರವಾನಿಗೆಗಳ ಬಗ್ಗೆ ಅರ್ಜಿ ಮಾಡಬೇಕಾಗಿ ಜಿಲ್ಹಾಧಿಪರು ತಿಳಿಸುತ್ತಾರೆ.

ಇಲ್ಲಿ ಅನ್ನ ... ಇರುವ ಸರಕಾರಿ ... ಬುಧವಾರ ತಾ ೧೧ ೩-೩೦ನೇ ಮಧ್ಯಾನ್ಹ ೧೨ಕ್ಕೆ ತಾಲೂಕ-ಕಚೇರಿಯಲ್ಲಿ ನಡೆಯುವದು.

ರಾ॥ ಸ್ವ॥ ಸಂಘವು ಅಕ್ರಮವೆಂದು ಸಾರಲ್ಪಟ್ಟ ಮಾರನೆ ದಿವಸ (ಶುಕ್ರವಾರ) ಆ ಸಂಘಕ್ಕೆ ಸಂಬಂಧಪಟ್ಟ ಪ್ರಮುಖರನ್ನು ಸರಕಾರ ... ಸೆರೆಹಿಡಿಯುವ ಕ್ರಮ ನಡೆದಿದೆ (ಇಡೀ ಜಿಲ್ಹೆಯಲ್ಲಿ ಈ ತನಕ ಸುಮಾರು ೩೦ ಜನರಿಗೆ ಹಿಡಿದಿದ್ದಾರೆ) ಈ ಊರಲ್ಲಿ ಡಾ॥ ರಾಮಚಂದ್ರ ... ವರ್ನ್ನರೆ ೪ ಮಂದಿಗೆ ಹಿಡಿದು ಕಾರವಾರ ತುರಂಗಕ್ಕೆ ಕಳಿಸಿದ್ದಾರೆ. ಶಿರಸಿಯಲ್ಲಿ ಸಂಘದ ಕಾರ್ಯ ಮಾಡುತ್ತಿದ್ದ ... ಎಂಬವನು ತನ್ನ ಮೇಲೆ ಹಕ್ಕು ಬರುವದೆಂದು ಮುಂದಾಗಿ ತಿಳಿದು ಗೋವೆಗೆ ಓಡಿಹೋಗಲು ಇಲ್ಲಿಗೆ ಓಡಿ ಬಂದಿದ್ದನು! ಕಾರವಾರಕ್ಕೆ ಹೋಗುವ ಮೋಟಾರ-ಟಿಕೆಟ್ಟನ್ನ ಕೊಂಡುಕೊಂಡಿದ್ದನು!, ಆದರೆ ಪೋಲೀಸರು ಬೆನ್ನಟ್ಟಿ ಬಂದಿದ್ದರಿಂದ ಅವನ ಯೋಚನೆ ನಿಷ್ಫಲವಾಯಿತು. ಇಲ್ಲಿಯ ಸಂಘ ಚಾಲಕನೂ ಕೂಡ ಓಡಿಹೋಗಲು ಗಂಟು ಮೂಟೆ ಕಟ್ಟಿಕೊಂಡು ತಯಾರಾಗಿದ್ದನೆಂದು ಸುದ್ದಿ.

ಪತ್ರಿಕಾ ಪ್ರಕಟನೆ.

ಸರಕಾರದವರು ೧೯೪೮ರ ಮುಂಬಯಿಯ ಅರಳೆ ಬಟ್ಟೆಯ ವ್ಯಾಪಾರದ ನಿಯಂತ್ರಣಾಜ್ಞೆಯನ್ನು ತಾ ೧-೨-೧೯೪೮ರಿಂದ ರದ್ದುಗೊಳಿಸಿದವದರಿಂದ, ಸದರಿ ಆಜ್ಞೆಯನ್ವಯ ಜಿಲ್ಹಾ ಮ್ಯಾಜಿಸ್ಟ್ರೇಟ ಕಾನಡಾ, ಇವರು ಹೊರಡಿಸಿದ ಎಲ್ಲ ಆಜ್ಞೆಗಳೂ, ಕಾನಡಾ ಜಿಲ್ಹೆಯಲ್ಲಿ (ಬಿನ್ನ ಬಟ್ಟೆಯ ಸಹಿತ) ಬಟ್ಟೆಯ ವ್ಯಾಪಾರವನ್ನು ನಿಯಂತ್ರಿಸುವ ಬೇರೆ ಎಲ್ಲ ಆಜ್ಞೆಗಳೂ ತಾ ೧-೨-೧೯೪೮ರಿಂದ ರದ್ದಾಗಿರುತ್ತವೆ. ಈಗ ಈ ಪ್ರಾಂತದಲ್ಲಿ ಬಟ್ಟೆಯ ಕ್ರಯ-ವಿಕ್ರಯಗಳ ಮೇಲಾಗಲಿ, ಹಂಚುವಿಕೆ-ಸಾಗಾಟಗಳ ಮೇಲಾಗಲಿ ಯಾವದೇ ತರಹ ನಿರ್ಬಂಧಗಳಿರುವದಿಲ್ಲ, ಯಾವನೊಬ್ಬನು ಬಟ್ಟೆಯನ್ನು ಮಾರಲಿಕ್ಕೆ ಅಥವಾ ಸಂಗ್ರಹಿಸಲಿಕ್ಕೆ ಪರವಾನೆಯನ್ನು ಪಡೆಯುವ ಅಗತ್ಯವೂ ಇಲ್ಲ. ಸದ್ಯಕ್ಕೆ ನೂಲಿನ ಮೇಲೆ ಇರುವ ನಿರ್ಬಂಧಗಳು ಮಾತ್ರ ಹಾಗೆಯೇ ಉಳಿಯುವವು.

ಕಾರವಾರ, } R J Rebello
ತಾ ೭-೨-೪೮ } ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ.

ಶರಾವತೀ ಹೊಳೆಯ ದಂಡೆಯ ಮೇಲಿನ ಭೂಮಾಲಿಕರ ತೀರ್ಮಾನಗಳು.

ಇದೇ ಕಳೆದ ತಾ ೧೮ ೧ ೧೯೪೮ಕ್ಕೆ ಹೊನ್ನಾವರದಿಂದ ಗುಂಡಬಾಳೆ, ಗೇರಸಪ್ಪೆ ವರೆಗಿನ, ಶರಾವತಿ ನದಿಯ ದಂಡೆಯ ಮೇಲಿರುವ ಗ್ರಾಮಗಳ ಬೇಸಾಯ ಭೂಮಿಗಳ ಒಡೆಯರದೊಂದು ಸಭೆ, ಮುಂಬಯಿ ಸರಕಾರದ ಸದ್ಯದ ಧೋರಣೆಯಿಂದ ಒಡೆಯರಿಗಾಗುವ ಕಷ್ಟ ನಷ್ಟಗಳ ವಿಚಾರ ಮಾಡಲು, ಬಳಕೂರದಲ್ಲಿ ಕೂಡಿತ್ತು. ಸುಮಾರು ೪೦೦ರಷ್ಟು ಒಡೆಯರು ಸಭೆಗೆ ಬಂದಿದ್ದರು ಹೊನ್ನಾವರದ ವಕೀಲ ರಾ। ಆರ್ ಎಸ ಕಾಮತರು ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಮೇಲೆ ಈ ಕೆಳಗಿನ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು —

೧ ಪಾಲಿನ ಸಾಗುವಳಿಯದ್ದಲ್ಲಿ ಒಕ್ಕಲಿಗರು ಒಡೆಯರಿಗೆ ಸಲ್ಲಿಸತಕ್ಕ ಬೆಳೆಯ ಪಾಲನ್ನು ನಗದಿಯಲ್ಲಿ ಪರಿವರ್ತಿಸುವ ತಮ್ಮ ಉದ್ದೇಶವನ್ನು ಸ್ಪಷ್ಟಗೊಳಿಸಿ ಮತ್ತು ಆ ಬಗ್ಗೆ ಯಾರದಾದರೂ ತಕರಾರುಗಳಿದ್ದರೆ ಅವನ್ನು (ತಾ ೨೫ ೧ ೪೮ರೊಳಗೆ) ತಿಳಿಸಬೇಕೆಂದು ಸೂಚಿಸಿ ಸರಕಾರವು ಇತ್ತೀಚೆಗೆ ಹೊರಡಿಸಿದ ಪ್ರಕಟನೆಯ ಕೂಲಂಕಷ ವಿಚಾರವನ್ನು ಸಭೆಯಲ್ಲಿ ಮಾಡಲಾಯಿತು, ಮತ್ತು ಮುಂಬಯಿಯ ಒಕ್ಕಲತನದ ಕಾನೂನಿನ ೧೫ (ಅ) ನೇ ಕಲಮಿನ ಅಂಶಗಳನ್ನು ಉತ್ತರ ಕಾನಡಾ ಜಿಲ್ಲೆಯೊಳಗೆ ಕೂಡಲೆ ಅಮಲಿನಲ್ಲಿ ತರುವದಕ್ಕಾಗಿ ಸದ್ಯದ ಸರಕಾರವು ಗಾಬರಿಯಿಂದ ಕೈಕೊಳ್ಳಬಹುದಾದ ಅವಿಚಾರಿ ಕ್ರಮವನ್ನು ಬಲವಾಗಿ ನಿಷೇಧಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಯಿತು

ಅದಲ್ಲದೆ ಒಕ್ಕಲತನದ ಕಾನೂನಿನ ಕೆಲವೊಂದು ಅಂಶಗಳು ಅಸ್ಪಷ್ಟವಿರುವದರಿಂದಲೂ, ಕೆಲವೊಂದು ಮಹತ್ವದ ಶಬ್ದಗಳ ಸ್ಪಷ್ಟ ವ್ಯಾಖ್ಯೆಗಳು ಕಾನೂನಿನಲ್ಲಿರುವದಿಲ್ಲಾದ್ದರಿಂದಲೂ, ಈ ಕಾನೂನಿನ ಅಮಲಬಜಾವಣೆಯು ನಮ್ಮ ತಾಲೂಕಿನಲ್ಲಿ ತಾಳತಂತ್ರವಿಲ್ಲದೆ ನಡೆಯುತ್ತಿರುವದರಿಂದಲೂ ಭೂಮಾಲಿಕರು (ಜಮೀನದಾರರು) ಎಂದು ಸಂಬೋಧಿಸಲ್ಪಡುವ, ಸರಕಾರದ ಆಜ್ಞಾನುವರ್ತಿ ಪ್ರಜೆಗಳಿಗೆ ಆಗುತ್ತಿರುವ ಈ ಕೆಳಗಿನ ಕಷ್ಟಗಳನ್ನು ಸರಕಾರದ ಗಮನಕ್ಕೆ ತರಬೇಕೆಂದೂ ಸಭೆಯಲ್ಲಿ ನಿರ್ಣಯಿಸಲಾಯಿತು —

೧) ಈ ತಾಲೂಕಿನೊಳಗೆ ಬೇರೆ ಬೇರೆ ಜಾತಿಗಳ ಭೂಮಿಗಳಲ್ಲಿ ಬೇರೆ ಬೇರೆ ಬಗೆಯ ಒಕ್ಕಲತನಗಳಿವೆ ಅವುಗಳ ಕರಾರುಗಳೂ ಭಿನ್ನ ಭಿನ್ನವಿರುತ್ತಿದ್ದು, ಒಡೆಯ-ಒಕ್ಕಲಿಗರ ಹಕ್ಕು-ಬಾಧ್ಯತೆಗಳೂ ಕರ್ತವ್ಯ-ಕರ್ಮಗಳೂ ತೀರ ಭಿನ್ನಭಿನ್ನವಿರುತ್ತವೆ ಕೆಲವು ಸಂದರ್ಭಗಳಲ್ಲಿ ರೈತರೆನಿಸಿಕೊಳ್ಳುವವರು ಬೆಳೆಯ ಕಾವಲು ಮಾಡುವದಕ್ಕಾಗಿ ಬೇಸಾಯದ ಭೂಮಿಗಳಲ್ಲಿ ಉಳಕೊಳ್ಳುವದಷ್ಟೇ ಇರುತ್ತಿದೆ ಅವರು ಬೇಸಾಯದ ಕೆಲಸಗಳನ್ನೇನೂ ಮಾಡುವದಿರುವದಿಲ್ಲ ಕೆಲವರು ತರಿ-ಭೂಮಿಯಲ್ಲಿ ಇಲ್ಲವೆ ಬಾಗಾಯತಿನಲ್ಲಿ ಬೆಳೆ ಹುಟ್ಟಿಸುವದಕ್ಕಾಗಿ ಮಾಡಬೇಕಾದ ಹಲವಾರು ಕೆಲಸಗಳಲ್ಲಿ ಒಂದೆರಡು ಕೆಲಸಗಳನ್ನಷ್ಟೇ ಪೂರೈಸುವದಕ್ಕೆ ದುಡಿಯುವದುಂಟು, ಇನ್ನಿತರ ಕೆಲಸಗಳನ್ನೆಲ್ಲ ಒಡೆಯರೇ ಪೂರೈಸಿ, ಬೇಸಾಯಕ್ಕೆ ಅವಶ್ಯವುಳ್ಳ ಎಲ್ಲ ಸಾಹಿತ್ಯ-ಸಾಮಗ್ರಿಗಳನ್ನು ಒದಗಿಸುತ್ತಾರೆ ರೈತರು ಮಾಡುವ ಸದರಿ ಕೆಲಸಗಳ ಪ್ರತಿಫಲವೆಂದು, ಅವರ ದುಡಿಮೆಗೆ ಅನುಗುಣವಾಗಿ, ಅಂತು ಹುಟ್ಟುವಳಿಯಲ್ಲಿ ೧/೧೦ ದಿಂದ ೧/೫ದ ವರೆಗೆ ಪಾಲು ಕೊಡುವದುಂಟು ಇನ್ನಿತರ ಸಂದರ್ಭಗಳಲ್ಲಿ ಒಕ್ಕಲಿಗರೇ ತಮ್ಮ ಸಾಹಿತ್ಯ ತಂದು ಎಲ್ಲ ಬಗೆಯ ಬೇಸಾಯದ ಕೆಲಸ ಮಾಡುವದುಂಟು ಆ ಬಗ್ಗೆ ಅವರಿಗೆ ಪ್ರತಿಫಲವೆಂದು ಅವರು ಹುಟ್ಟಿಸಿದ ಬೆಳೆ ನೋಡಿ, ಅಂತು ಬೆಳೆಯಲ್ಲಿ ೧/೩ ದಿಂದ ೨/೩ ದ ವರೆಗೆ ಪಾಲು ಕೊಡಲಾಗುತ್ತಿದೆ ಅವರೆ ದುರ್ದೈವದಿಂದ ಒಕ್ಕಲತನದ ಕಾನೂನಿನಲ್ಲಿ ಒಕ್ಕಲಿಗ ಶಬ್ದದ ವ್ಯಾಖ್ಯೆಯು ತೀರ ಅಸ್ಪಷ್ಟವಿರುವದರಿಂದಲೂ ಮೇಲ್ಕಾಣಿಸಿದ ಎಲ್ಲ ಬಗೆಯ ರೈತರು ತಮಗೆ ೨/೩ ಯಾ ೩/೪ ಪಾಲು ಬೇಡುತ್ತಿರುವದರಿಂದಲೂ ಉಂಟಾಗಿರುವ ಅನ್ಯಾಯ್ಯ ವಿವಾದಗಳನ್ನು ಬಗೆಹರಿಸುವದು ಭೂಮಾಲಿಕರಿಗೂ ಒಕ್ಕಲತನದ ಕಾನೂನಿನ ಅಮಲಬಜಾವಣೆ ಮಾಡುವ ಅಧಿಕಾರಿಗಳಿಗೂ ಕಷ್ಟವಾಗಿದೆ ಅದರಿಂದ ಒಡೆಯರಾಗಲಿ ಒಕ್ಕಲಿಗರಾಗಲಿ ಹಾಜರಪಡಿಸಿರುವ ಎಷ್ಟೋ ದಾವೆಗಳು ಈ ತಾಲೂಕಿನಲ್ಲಿ ಬಹಳ ಕಾಲದಿಂದ ಹಾಗೆಯೇ ನಿಕಾಲಿಯಾಗದೆ ಬಿದ್ದಕೊಂಡಿವೆ ಮತ್ತು ಒಕ್ಕಲಿಗರೆನಿಸಿಕೊಳ್ಳುವ ಮಂದಿ ಇಡೀ ಬೆಳೆಯನ್ನು ತಾವೇ ತಕ್ಕೊಂಡು ಅನುಭವಿಸುತ್ತಿದ್ದಾರೆ ಇಂತಹ ಕಾಲಹರಣದಿಂದ ಒಡೆಯರಿಗೆ ತುಂಬಲಾರದಷ್ಟು ಹಾನಿಯಾಗುತ್ತಿದೆ (೨) ಮೇಲ್ಕಾಣಿಸಿದ ಯಾವತ್ತೂ ಗ್ರಾಮಗಳಲ್ಲಿ ಪರಿಸ್ಥಿತಿಗಳಲ್ಲಿಯ ಭೂಮಾಲಿಕರ ಸ್ಥಿತಿ ತೀರ ಕಠಿಣ ಒಕ್ಕಲತನದ ಕಾನೂನು ಬರುವ ಮುಂಚೆ ಒಡೆಯ ಒಕ್ಕಲಿಗರು ಸಹಕಾರದಿಂದ ದುಡಿದು ಹೊಲ ಭೂಮಿಗಳಲ್ಲಿ ತಮಗೆ ಅಗತ್ಯವುಳ್ಳ ಬೆಳೆಯನ್ನು ಹುಟ್ಟಿಸುತ್ತಿದ್ದರು ಅನಾದಿ ಕಾಲದಿಂದ ಒಡೆಯರು ತಮ್ಮ ಗ್ರಾಮಗಳಲ್ಲೇ ಉಳಿದು, ತಮ್ಮ ಭೂಮಿಗಳ ಬೆಳೆಯನ್ನು ಬೆಳಸಿನ ರೂಪದಿಂದಲೇ ಪಡಕೊಂಡು, ಅದರಿಂದ ನಮ್ಮ ಕುಟುಂಬದ ನಿರ್ವಾಹ ಸಾಗಿಸುತ್ತಿದ್ದರು ಹೊಲಗಳಲ್ಲಿ ಬೆಳೆಯುವ ಅಕ್ಕಿ ಭತ್ತ ಹುಲ್ಲು, ಕಬ್ಬು, ತೆಂಗಿನಕಾಯಿ, ಮಡ್ಲು, ಹೆಸರು, ಉದ್ದು, ಮುಂತಾದ ಬೆಳಸುಗಳಿಂದಲೇ ಒಡೆಯ ಒಕ್ಕಲಿಗರ ನಿರ್ವಹಣೆ ಸಾಗುತ್ತಿತ್ತು ನಮ್ಮ ಗ್ರಾಮಗಳೇನು ಉಳಿದ ಗ್ರಾಮಗಳಲ್ಲ ಬಹುತೇಕ ಭೂಮಾಲಿಕರು ಚಿಕ್ಕ ಪುಟ್ಟ ಜಮೀನದಾರರಿರುತ್ತಾರೆ ಅವರ ಹೊಲಭೂಮಿಗಳ ಬೆಳೆ ಅವರಿಗೆ ವರ್ಷದಲ್ಲಿ ೬ ತಿಂಗಳಿಗೂ ಸಾಕಾಗುವದಿಲ್ಲ ಅದರಿಂದ ನಮ್ಮ ಗ್ರಾಮಗಳ ಭೂಮಾಲಿಕರು ಗೇಣಿಯನ್ನು ಧಾನ್ಯದ ರೂಪದಿಂದಲೇ ವಸೂಲ ಕೊಳ್ಳುತ್ತಿದ್ದಾಗ್ಯೂ ಅದರ ಯಾವದೇ ಅಂಶವು ಪರಸ್ಥಳಗಳಿಗೆ ರಫ್ತಾಗುವದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಒಡೆಯರ ಪಾಲಿನ ಮತ್ತು ಅವರಿಗೆ ಅವಶ್ಯ ಬೇಕಾಗಿರುವ ಜಿನಸುಗಳ ಬದಲು ಅವರಿಗೆ ಕಡಿಮೆ ಬೆಲೆ ಕೊಡಿಸುವದು ಮತ್ತು ಆ ಜಿನಸುಗಳನ್ನು ಪೇಟೆಯಲ್ಲಿ ತುಟ್ಟಿ ದರದಿಂದ ಕೊಂಡುಕೊಳ್ಳಲು ಅವರನ್ನು ಒತ್ತಾಯಪಡಿಸುವದು ಅರ್ಥಶಾಸ್ತ್ರದ ಮೂಲಭೂತ ತತ್ವಗಳಿಗೆ ವಿರುದ್ಧವಾಗುತ್ತಿದೆ ಅದರಿಂದ ಬೆಳೆಯೊಳಗಿನ ಒಡೆಯರ ಪಾಲನ್ನು ನಗದಿಯಿಂದ ಕೊಡಿಸುವ ಸರಕಾರದ ಉದ್ದೇಶಕ್ಕೆ ಗೂಡಿದರೆ ಒಡೆಯರು ನಿಶ್ಚಯವಾಗಿಯೂ ಭಯಂಕರ ಕಷ್ಟದಲ್ಲಿ ಬೀಳುವರು (೩) ನಮ್ಮ ತಾಲೂಕಿನಲ್ಲಿ ಒಕ್ಕಲತನದ ಕಾಯದೆಯ ಅಮಲಬಜಾವಣೆ ಮಾಡುವ ಈಗಿನ ಅಧಿಕಾರಿಗಳು ಬರೀ ಯಾಂತ್ರಿಕ ಪದ್ಧತಿಯಿಂದ ಕೆಲಸ ಸಾಗಿಸುತ್ತಿದ್ದಾರೆ ೧೫ ಯಾ ೧೪ (ಅ) ಕಲಮಿನನ್ವಯ ಯೋಗ್ಯ ಖಂಡಣಿ ನಿಶ್ಚಯಿಸಿಕೊಳ್ಳುವ ಬಗ್ಗೆ ದಾಖಲಾದ ಎಷ್ಟೋ ದಾವೆಗಳು ಬಹಳ ಕಾಲದಿಂದ ನಿಕಾಲೆಯಾಗದೆ ಬಿದ್ದಿವೆ ನಿಕಾಲೆಯಾದ ಕೆಲವೊಂದು ದಾವೆಗಳಲ್ಲಿ ಅಸ್ತವ್ಯಸ್ತ ನಿರ್ಣಯಗಳಾಗಿವೆ, ವಿವಾದವುಂಟಾದ ಭೂಮಿಗಳ ವಾರ್ಷಿಕ ಹುಟ್ಟುವಳಿಯ ಪ್ರಮಾಣ ನಿರ್ಧರಿಸಲು ಅಧಿಕಾರಿಗಳು ಯಾವದೇ ತನಿಖೆಯ ಪ್ರಯೋಗ ಮಾಡಿದ್ದಿರುವದಿಲ್ಲ ಇಂತಹ ಅಧಿಕಾರಿಗಳಿಗೆ ೧೫ (ಅ) ಕಲಮಿನಂತೆ ಮಾಡಬೇಕಾದ ಕೆಲಸ ಒಪ್ಪಿಸಿದರೆ ಭೂಮಾಲಿಕರ ಹಿತಸಂಬಂಧ ಮಣ್ಣುಗೂಡಿದಂತೆಯೇ ಸರಿ ಕಾಯದೆಯ ನ್ಯಾಯ ಅಮಲಬಜಾವಣೆ ಮಾಡುವದಕ್ಕಾಗಿ ಸರಕಾರದವರು ಈವರೆಗೂ ನಿಷ್ಪಕ್ಷಪಾತ ತಜ್ಞರನ್ನು ನೇಮಿಸಿರುವದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಒಡೆಯರ ಪಾಲನ್ನು ನಗದಿಯಲ್ಲಿ ಪರಿವರ್ತಿಸುವ ಸರಕಾರಿ ಪ್ರಯೋಗದಿಂದ ತಮಗೆ ಅನನ್ವಿತ ಹಾನಿಯಾಗುವದೆಂದು ಭೂಮಾಲಿಕರು ಬೆದರಿಹೋಗಿರುತ್ತಾರೆ (೪) ನಮ್ಮ ಗ್ರಾಮಗಳಲ್ಲಿರುವ ಬಹುಸಂಖ್ಯಾಕ ಜಮೀನದಾರರ ಸ್ಥಿತಿಗತಿಯ ಬಗ್ಗೆ ಸರಕಾರಕ್ಕೆ ಬಹಳ ತಪ್ಪು ತಿಳುವಳಿಯುಂಟಾಗಿದೆ ಕಾರಣ ಈ ಜನರ ಸ್ಥಳಿಕ ಪರಿಸ್ಥಿತಿಯ ಪೂರ್ಣ ಅಭ್ಯಾಸ ಮಾಡುವ ಯೋಜನೆಯನ್ನು ಸರಕಾರವು ಕೈಕೊಳ್ಳಬೇಕೆಂತಲೂ, ನ್ಯಾಯ ನೀತಿಗಳ ತತ್ವಗಳಿಗೆ ವಿರುದ್ಧವಾಗಿ ಮತ್ತು ನಿರಪರಾಧಿ ಭೂಮಾಲಿಕರ ಹಿತಘಾತವಾಗುವಂತೆ ಗೇಣಿಯನ್ನು ನಗದಿಯಲ್ಲಿ ಪರಿವರ್ತಿಸುವಂತಹ ಹೊಸ ಹೊಸ ಪ್ರಯೋಗಗಳನ್ನು ಕೈಕೊಳ್ಳಬಾರದೆಂತಲೂ ಬಿನ್ನವಿಸುತ್ತಿದೆ

೨ ಇತ್ತೀಚೆಗೆ ಸರಕಾರದವರು ಹೊರಡಿಸಿದ ಪರಿಪತ್ರಗಳಲ್ಲಿ ನೀರಾವರಿ ಭೂಮಿಗಳೆಂದರೆ ವರ್ಷದಲ್ಲಿ ಸತತ ೮ ತಿಂಗಳು ಕಾಲ ಕೃತ್ರಿಮ ಮಾರ್ಗಗಳಿಂದ ನೀರುಣಿಸಿ ಬೆಳೆ ತಕ್ಕೊಳ್ಳುವ ಭೂಮಿಗಳೆಂದು ವಿವರಿಸಿದ್ದುಂಟು ನಮ್ಮ ತಾಲೂಕಿನಲ್ಲಿ ಈ ಬಗೆಯ ಭೂಮಿಗಳು ಇರುವದೇ ಇಲ್ಲ ಆದಾಗ್ಯೂ ವರ್ಷದಲ್ಲಿ ಬರೀ ೨-೩ ತಿಂಗಳು ಕೃತ್ರಿಮ ಮಾರ್ಗಗಳಿಂದ ಭೂಮಿಗೆ ನೀರು ಉಣಿಸುವ ಕೆಲವು ರೈತರು ತಾವು ಬೆಳಸಿದ ಬೆಳೆಯಲ್ಲಿ ತಮಗೆ ೩/೪ ಸಲ್ಲಬೇಕೆಂದು ಹಟ ಹಿಡಿದು, ನಮ್ಮ ಅನ್ಯಾಯ್ಯ ಅಂಬೋಣವನ್ನು ಒಡೆಯರು ಪ್ರತಿಭಟಿಸಿದರೆ ಇಡೀ ಗೇಣಿಯನ್ನು ಬಾಕಿಯಲ್ಲಿಟ್ಟುಕೊಂಡು ಸತಾಯಿಸುತ್ತಿದ್ದಾರೆ ಕಾರಣ, ಒಡೆಯರಿಗೆ ನ್ಯಾಯವಾಗುವಂತೆ, ಹೊನ್ನಾವರ ತಾಲೂಕಿನಲ್ಲಿ ನೀರಾವರಿ ಭೂಮಿಗಳಿರುವದಿಲ್ಲೆಂದು ತ್ವರ್ಯವೇ ಸಾರಬೇಕೆಂದು ಈ ಸಭೆ ಸರಕಾರಕ್ಕೆ ಬಿನ್ನವಿಸುತ್ತಿದೆ

೩ ಹಿಂದೀ ಸ್ವಾತಂತ್ರ್ಯದ ಸ್ಮರಣಾರ್ಥವಾಗಿ ಒಕ್ಕಲಿಗರಿಗಷ್ಟೇ ಒಳಿತು ಮಾಡುವ ಸರಕಾರದ ಉದ್ದೇಶವನ್ನು ಜಮೀನದಾರರ ಈ ಸಭೆಯು ಸ್ವಾಗತಿಸುತ್ತಿದೆ ಆದರೆ ಒಕ್ಕಲತನದ ಕಾನೂನಿನಿಂದ ಮೊದಲೇ ಜರ್ಜರಿತರಾಗಿರುವ ಒಡೆಯರೂ ಕೂಡ ಒಕ್ಕಲಿಗರಿಗೆ ಒಳಿತು ಮಾಡುವ ತನ್ನ ಯೋಜನೆಗೆ ಕೈನೀಡಬೇಕೆಂದು ಒತ್ತಾಯ ಮಾಡಕೂಡದೆಂದು ಸಭೆಯು ಸರಕಾರಕ್ಕೆ ವಿನಂತಿ ಮಾಡುತ್ತಿದೆ, ಮತ್ತು ಈ ವರ್ಷದ ಪೂರ್ಣ ತೀರ್ವೆಯನ್ನು ಭೂಮಾಲಿಕರಿಂದ ವಸೂಲ ಮಾಡಬೇಕೆಂತಲೂ, ಅವರಿಗೆ ತೀರ್ವೆಯಲ್ಲಿ ಕೆಲವೊಂದು ಸೂಟ ಬಿಟ್ಟು, ತಮಗೆ ಸಿಗುವದರಕ್ಕಿಂತ ಹೆಚ್ಚಿಗೆ (ಗೇಣಿಯಲ್ಲಿ) ಸೂಟನ್ನು ತಮ್ಮ ರೈತರಿಗೆ ಬಿಡಬೇಕಾದ ಪ್ರಸಂಗವನ್ನು ಅವರ ಮೇಲೆ ತರಬಾರದೆಂತಲೂ ಸಭಿಕರು ಏಕಕಂಠದಿಂದ ಸರಕಾರಕ್ಕೆ ಪ್ರಾರ್ಥನೆ ಮಾಡುತ್ತಾರೆ ಈ ಬಗ್ಗೆ ಸರಕಾರವು ಬೇಗನೇ ಒಂದು ಪ್ರಕಟನೆ ಹೊರಡಿಸಬೇಕಾಗಿಯೂ ಬೇಡಿಕೆಯಿದೆ

೪ ನಮ್ಮ ಸೀಮೆಯ ಹಳ್ಳಿಗಳಲ್ಲಿರುವ ಹಲವಾರು ಕಟ್ಟುಗಳನ್ನು ಹಾಕುವ ಮತ್ತು ಕಾಪಾಡುವ ಹೊಣೆ

ಯುಳ್ಳ ಜನರು ಇತ್ತ ೬-೭ ವರ್ಷಗಳಿಂದ ತವ್ಮ ಕೆಲಸದ ಕಡೆ ದುರ್ಲಕ್ಷ್ಯ ಮಾಡುತ್ತಿದ್ದಾರೆ, ಹಾಗೂ ಈ ದುರ್ಲಕ್ಷ್ಯತನವು ಪ್ರತಿವರ್ಷ ಹೆಚ್ಚುತ್ತ ಹೋಗುತ್ತಿದೆ ಆದರಿಂದ ಸುಗ್ಗಿ ಬೆಳೆಯುಷ್ಟೇ ಹುಟ್ಟುವ ಅನೇಕ ಹೊಲಗಳಲ್ಲಿ ಈಗ ಸುಗ್ಗಿ ಬೆಳೆಸುವ ಪ್ರಯತ್ನಗಳು ನಿರರ್ಥಕವಾಗುತ್ತಿವೆ, ಮತ್ತು ಒಡೆಯರಿಗೆ ಬಹಳಷ್ಟು ಕಷ್ಟ ಮತ್ತು ಆರ್ಥಿಕ ಹಾನಿಯಾಗುತ್ತಿದೆ. ಕಾರಣ ಹೊಣೆಗೇಡಿ ಜನರು ಈ ರೀತಿ ದುರ್ಲಕ್ಷ್ಯವನ್ನೇಕೆ ಮಾಡುತ್ತಿರುವರೆಂಬುದರ ಚೌಕಶಿ ನಡೆಸಿ ಸಂಬಂಧಪಟ್ಟ ಎಲ್ಲರ ಹಿತದ ದೃಷ್ಟಿಯಿಂದ ಅವರ ವಿರುದ್ಧ ಯುಕ್ತ ಕಂಡ ನ್ಯಾಯ್ಯ ಕ್ರಮ ಕೈಕೊಳ್ಳುವಂತೆ ಸ್ಥಾನಿಕ ಅಧಿಕಾರಿಗಳಿಗೆ ಸರಕಾರವು ಆಜ್ಞಾಪಿಸಬೇಕೆಂದು ಸಭೆಯು ವಿನಂತಿಯುಂಟು.

೫ ೧೯೪೬—೪೭ನೇ ಸಾಲಿನ ಹಾಗೂ ಅದರ ಹಿಂದಿನ ಗೇಣಿಯನ್ನು ಬಾಕಿಯಲ್ಲಿಟ್ಟುಕೊಂಡ ಒಕ್ಕಲಿಗರ ಕಡೆಯಿಂದ ಭೂಮಿಯು ಕಬಜೆ ಬಿಡಿಸುವ ಸಲುವಾಗಿ ಕೋರ್ಟಿನಲ್ಲಿ ಮಾಡಿದ ಎಷ್ಟೋ ಅರ್ಜಿಗಳು ಈ ತಿಂಗಳಿಂದ ಹಾಗೆಯೇ ಬಿದ್ದಿವೆ ಈ ಅರ್ಜಿಗಳ ತೀರ್ಮಾನ ಮಾಡಲು ಅಧಿಕಾರಿಗಳಿಗೆ ಏನೋ ತೊಂದರೆಯಾಗಿರಬೇಕೆಂದು ನಮಗನಿಸುತ್ತಿದೆ ಕಾರಣ ನ್ಯಾಯಾಸನಗಳಲ್ಲಿ ನ್ಯಾಯ ಬೇಡುವವರಿಗೆ ತ್ವರಿತ ನ್ಯಾಯದಾನ ಸಿಗುವಂತೆ ಸರಕಾರವು ಆಜ್ಞಾಪಿಸಬೇಕಾಗಿ ಬಿನ್ನಹವಿದೆ

೬ ಈ ಸಭೆಯಲ್ಲಾದ ಎಲ್ಲ ಗೊತ್ತುವಳಿಗಳ (೧) ಮುಂಬಯಿ ಸರಕಾರದ ಕಂದಾಯ ಮಂತ್ರಿಗಳಿಗೂ (೨) ಕಾನಡಾ ಜಿಲ್ಲೆಯ ಕಲೆಕ್ಟರರಿಗೂ (೩) "ಕಾನಡಾವೃತ್ತ" ಮುಂತಾದ ಪತ್ರಿಕೆಗಳಿಗೆ ಕಳಿಸಿ ಯುಕ್ತ ಕಂಡ ಬೇರೆಯವರಿಗೂ ಕಳಿಸಿಕೊಡಲು ಕಾರ್ಯದರ್ಶಿಗಳಿಗೆ ಅಧಿಕಾರ ಕೊಡಲಾಗಿದೆ

ಜಿಲ್ಲಾ ಸಮಾಚಾರ.

ಹೊನ್ನಾವರ— ಇದೇ ಕಳೆದ ಜನವರಿ ತಾ ೧೦ ನೇ ದಿನ ತಾಲೂಕಾ ಕೃಷಿಕರ ಸಭೆಯಲ್ಲಿ ಕೂಡಿದ ಜಿಲ್ಲಾ ಕಾಂಗ್ರೆಸ ಕೃಷಿಕರ ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಗಳಾದವು ಸಂಘದ ಅಧ್ಯಕ್ಷ ರಾ! ಎನ್ ಎಸ್ ಹಾಲಿಕಾವರು ಅಧ್ಯಕ್ಷತೆ ವಹಿಸಿದ್ದರು— (೧) ಈ ಸಂಘದ ಪ್ರತಿಯೊಬ್ಬ ಸಭಾಸದನು ಕಾಂಗ್ರೆಸ ಸದಸ್ಯನಾಗಬೇಕು (೨) ಮುಂದಿನ ವರ್ಷ ಈ ಸಂಘದ ಸದಸ್ಯರ ಸಂಖ್ಯೆ ೧೦೦೦ಕ್ಕೆ ಏರುವಂತೆ ಪ್ರಚಾರ ಮಾಡಬೇಕು (೩) ಈ ಜಿಲ್ಲೆಯಲ್ಲಿ ಮಳೆಗಾಲದ ಭೂಮಿಗಳ ಬೆಳೆಯಲ್ಲಿ ಬತ್ತ, ತೆಂಗು, ಅಡಿಕೆ ಮುಂತಾದವು ಬೆಳೆಯುತ್ತಿರುವ ಹಳಿಗೆ, ಮೆಣಸು, ಮುಂತಾದವುಗಳ ಒಕ್ಕಲಿಗರ ಕಾನೂನಿನ (೧) ನೇ ಕಲಮಿನನ್ವಯ ಬರುತ್ತಿದ್ದರೂ, ಅವರು ಕೃಷಿಕರಲ್ಲೆಂದು ಕೆಲವು ಕೋರ್ಟಿನವರು ಠರಾಯಿಸಿ, ಅವರ ಕಬಜೆ ಕಸಿಯುತ್ತಿರುವುದು ಅನ್ಯಾಯ್ಯವಾಗಿರುವದರಿಂದ ಜಿಲ್ಲಾಧಿಕಾರಿಗಳು ಈ ಅನ್ಯಾಯ ದೂರಮಾಡಬೇಕು (೪) ಈ ಜಿಲ್ಲೆಯ ಕರಾವಳಿಯ ತಾಲೂಕುಗಳಲ್ಲಿ ಸ್ವಂತ ಸಾಗುವಳಿಯ ಜಿಗ್ಗಿ ಭೂಮಿಯು ಬೀಳು ೧೫೦೦೦ ಎಕ್ರೆ ನೋಟೀಸುಗಳನ್ನು ಕೊಟ್ಟಿದ್ದುಂಟು, ಮತ್ತು ಸಾವಿರಾರು ಕಬಜೆ ದಾವೆಗಳು ನಡೆಯುತ್ತಿವೆ ಇದರಿಂದ ಸಾಗುವಳಿಯ ಸಂಸ್ಕೃತಿಯಲ್ಲಿರುವ ಬಂದ ರೈತರಿಂದ ಭೂಮಿಗಳು ಕಸ್ಸಿ ಆ ಸಂಸ್ಕೃತಿಯ ಒಡೆಯರ ಕೈ ಸೇರುವ ಭೀತಿಯುಂಟು ಈ ಜಿಲ್ಲೆಯಲ್ಲಿ ಆಹಾರ ಬೆಳೆಸುವ ಧೋರಣೆಗೆ ವಿಘಾತವಾಗಿದೆ ಕಳೆದ ೪—೫ ಸಾವಿರ ರೈತ-ಕುಟುಂಬಗಳು ಬ್ರಿಕನಾಗುವ ಪ್ರಸಂಗವಿದೆ ಕಾರಣ ಸರಕಾರದವರು ನೋಟೀಸುಗಳನ್ನು ಹಿಂತೆಗೆದುಕೊಳ್ಳಬೇಕಾಗಿಯೂ, ಅಲ್ಲಿವರೆಗೆ, ಕಬಜೆ ಪಡೆಯುವ ವರೆಗೆ, ಸ್ವಂತ ಸಾಗುವಳಿಗಾಗಿ ಒಡೆಯರಿಗೆ ಕಬಜೆ ಕೊಡತಕ್ಕ ಕೆಲಸವನ್ನು ತಡೆಹಿಡಿಯಬೇಕಾಗಿಯೂ ವಿನಂತಿ (೫) ಒಡೆಯರಿಗೆ ಬೇಕಾದ ೧೫ ನೇ ಕಲಮಿನಲ್ಲಿ ಗೇಣಿ ಸಲ್ಲಿಸಬೇಕೆಂಬ ವಿಧಿಯ ಬದಲು, ಫಸಲಿಂದಾಯದ ಇಂತಿಷ್ಟು ಪ್ರಮಾಣವನ್ನು ಗೇಣಿಯು ಎಂದು ನಿರ್ಧರಿಸಬೇಕೆಂದು ಕಾಯಿದೆ ಮಾಡುವದು ಯುಕ್ತವೆಂದು ಸರಕಾರಕ್ಕೆ ಸೂಚನೆ (೬) ಮುಂದಿನ ಅಭಿವ್ರದ್ಧಿಯಿಂದ ಎಷ್ಟೋ ಮಾಲಕರು ತೀರ ದಂಡ ತೆತ್ತು ಸಹ ತಮ್ಮ ಹೊಲಗಳನ್ನು ಪಡೆಯುತ್ತಿದ್ದುಂಟು ಅಂಥ ಭೂಮಿಗಳನ್ನು ಸರಕಾರವು ಅದರಿಂದ ಕಸ್ಸಿ ತಕ್ಕಂತೆ ಸಾಗುವಳಿಯು ರೈತರಿಗೆ ಕೊಡಬೇಕು ಅದೇ ಮೇರೆಗೆ ಇಂದಿನ ಯೋಜನೆಗನುಸಾರವಾಗಿ ಪ್ರತಿ ತಾಲೂಕಿನಲ್ಲಿ ಬಿದ್ದಿರುವ ಸರಕಾರಿ ಹೊಲಗಳನ್ನು ಸಾಗುವಳಿಯಲ್ಲಿ ತರುವ ಸಣ್ಣ ಸಣ್ಣ ಪ್ರಮಾಣದ ಯೋಜನೆಗಳನ್ನು ಕೈಕೊಳ್ಳಬೇಕಾಗಿ ವಿನಂತಿ (ಅಂಥ ಯೋಜನೆಗಳನ್ನು ತಯಾರಿಸಲು ಮತ್ತು ಸರಕಾರದಿಂದ ಮಾಡಿಸಿ ಕೊಟ್ಟು ಹಾಕಲು ಜನಸಂಘಟನೆ ಸೇವಿಸಲ್ಪಟ್ಟಿವೆ) (೭) ಒಕ್ಕಲು ಕೋರ್ಟುಗಳಲ್ಲಿ ಒಕ್ಕಲಿಗರಿಗೆ ಸಾಧ್ಯವಾಗದ ಪರಿಣಾಮವಿದ್ದರಿಂದ, ಅವರಿಗೆ ಸರಕಾರಿ ವಕೀಲರನ್ನು ಕೊಡಬೇಕಾಗಿ ಸೂಚನೆ (೮) ಒಕ್ಕಲಿಗರ ಕಾನೂನಿನಂತೆ ಸ್ವಂತ ಸಾಗುವಳಿಯ ನೋಟೀಸು ಕೊಟ್ಟ ೧ ವರ್ಷದ ನಂತರ ಕಬಜೆ ದಾವೆಗಳನ್ನು ದಾಖಲಿಸಬೇಕೆಂದಿರುವುದರಿಂದ ಈ ಮೊದಲು ದಾವೆಗಳನ್ನು ಸ್ವೀಕರಿಸಕೂಡದು ಬರುವುದಿಲ್ಲ ಆದರೂ ಕೆಲವು ಕೋರ್ಟಿನವರು ಅಂಥ ದಾವೆಗಳನ್ನು ಸ್ವೀಕರಿಸಿ ವಿಚಾರ ಮಾಡುತ್ತಿದ್ದುದು ಅಂತಿಮವಾಗಿ ಅನ್ಯಾಯ (೯) ಈ ಜಿಲ್ಲೆಯಲ್ಲಿ ಒಡೆಯರ ಮನೆಯ ನಗದಿ ಗೇಣಿ ದರವಾದೀತೆಂಬ ಭಯ ಕೇಳುವದ್ದು ಸ್ವಾಗತಾರ್ಹವಿದೆ (೧೦) ಒಕ್ಕಲಿಗರ ಕಾನೂನಿನ ಕೆಲವು ಕಲಮಿನ ಕಬಜಾ ಕೊಡಿಸುವ ಕರಾರುಗಳ ವಿರುದ್ಧ ಅಪೀಲ ಮಾಡುವ ಮುದ್ದತ್ತು ತೀರುವ ಮುಂಚೆಯೇ ಅಧಿಕಾರಿಗಳು ಕಬಜಾ ಕೊಡುತ್ತಿರುವದರಿಂದ ಉಭಯ ಪಕ್ಷದವರಿಗೂ ಹಾನಿಯಾಗುತ್ತದೆ ೯ ರ ಅಪೀಲ ಮುದ್ದತ್ತಿನಲ್ಲಿ ಯಾ ಅಪೀಲ ನಡೆದ ತನಕ ಕಬಜಾ ಕೊಡಿಸದಂತೆ ಏರ್ಪಾಡಾಗಬೇಕು (೧೧) ಕರ್ನಾಟಕ ಪತ್ರಿಕೆಯಕ್ಕೆ ಸಂಘದ ಪೂರ್ಣ ಬೆಂಬಲವುಂಟು ಸಂಘದ ಪ್ರಚಾರದ ಜೊತೆಗೆ ಪತ್ರಿಕೆಯದ ಪ್ರಚಾರವೂ ನಡೆಯಬೇಕು (೧೨) ರೈತರ ವಿರುದ್ಧ ಒಡೆಯರು ದಾವೆಗಳನ್ನು ನಡೆಸುವ ಭೂವಾಮಿಗಳಿಗೆ ಬದ್ಧ ಹೇಳುವ ಬದಲು ಅವರ ರೈತ ಪ್ರತಿನಿಧಿಗಳಿಗೆ ಸಂಘದ ಚಾಲಕರನ್ನು ಹೇಳಬೇಕು ಪತ್ರಿಕೆಯ "ಕಾನಡಾವೃತ್ತ"ದ ಧೋರಣೆಯ ಮನ್ನಣೆ (೧೩) ವರ್ತಮಾನದ ಮಾಜಿಸ್ಟ್ರೇಟರ ನೇಮಣೂಕಿಯಿಂದ ಜಿಲ್ಲೆಯಲ್ಲಿ ವರ್ಗಕಲಹ ಮತ್ತು ಬಂಡಗಳಿಂಥ ಹೆಚ್ಚು ಪಂಚಾಯತಿಯಿಂದ ಈ ನೇಮಣೂಕಿಗಳನ್ನು ರದ್ದುಗೊಳಿಸಬೇಕೆಂದು ಸಂಗ್ರಹ ಸೂಚನೆ (೧೪) ರೈತರಿಗೆ ದೊರೆತ ಪೂರ್ಣ ಲಾಭ ದೊರೆಯಲು ದೇಶೋದ್ಧಾರವಾಗಬೇಕಾದರೆ ದುಡಿಯುವ ರೈತನೇ ಭೂಸ್ವಾಮಿಯಾಗಬೇಕು ಅದೇ ಈ ಸಂಘದ ಅಂತಿಮ ಧ್ಯೇಯ ಅದನ್ನು ಸಾಧಿಸಲು ರೈತರ ಸಂಘಟನೆ ಶಕ್ತಿ ಬೆಳೆಯಬೇಕು (೧೫) ಹೊಸ ಒಕ್ಕಲಿಗರ ಕಾಯದೆಯಂತೆ ಕಾನೂ ಒಡೆಯರಿಗೆ ಎಷ್ಟು ಗೇಣಿ ಕೊಡಬೇಕೆಂಬುದು ಅಜ್ಞಾನಿ ರೈತರಿಗೆ ತಿಳಿಯುವದಿಲ್ಲ, ಕಾರಣ ಪ್ರತಿಯೊಬ್ಬ ರೈತನಿಗೆ ಗ್ರಾಮಸ್ಥರು ಈ ವಿಷಯವನ್ನು (ಪ್ರತಿ) ಫೆಬ್ರುವರಿ ತಿಂಗಳ ತಾ ೧೫ರೊಳಗೆ ಕೊಡುವಂತೆ ಎಲ್ಲ ತಿಂಗಳೊಳಗಾಗಿ ಜಿಲ್ಲಾಧಿಪರು ಹುಕುಮ ಮಾಡಬೇಕು ಅಲ್ಲದೆ ಬೇರೆ ಬೇರೆ ತಾಲೂಕುಗಳ ಕಾನೂನನ್ನು ತಿಳಿಸಿದರು, ಒಕ್ಕಲಿಗರ ಕಾಯದೆಯ ಸಂಘ ಚರ್ಚಿಸುವದಿಲ್ಲ, ಒಂದೇ ವಿಷಯದ ಮೇಲೆ ಬೇರೆ ಬೇರೆ ತೀರ್ಪುಗಳನ್ನು ಕೊಟ್ಟಿದ್ದುಂಟು ಈ ಎಲ್ಲ ಪ್ರಕರಣಗಳ ವಿಚಾರಣೆಯನ್ನು ಜಿಲ್ಲಾಧಿಪರು ಹೊಸದಾಗಿ ಮಾಡುವಂತೆ ವ್ಯವಸ್ಥೆ ಮಾಡಬೇಕು ಟೆನನ್ಸಿ ಅರ್ಜಿ ದಾವೆಗಳ ವಿಚಾರ ಮಾಡುವ ಅಧಿಕಾರವನ್ನು ಮಾಮಲೇದಾರ ವರ್ಗದವರಿಗೆ ಒಪ್ಪಿಸುವಂತೆಯೂ ಸರಕಾರಕ್ಕೆ ಅರಿಕೆ

ಭಟಕಳ— (ತಾ ೧೧—೧ ೪೭) ಒಕ್ಕಲಿಗರ ಕಾನೂನಿನಂತೆ ಈಗ ರೈತರಿಗೆ ಒಡೆಯರನ್ನು ಬೇಕಾದಂತೆ ಹೊರದೂಡಲು ಎಷ್ಟು ಅನುಕೂಲ ಅಸ್ತವಾಗಿದೆಯೆಂಬುದನ್ನು ತಿಳಿಸಲಿಕ್ಕೆ ಈ ಕೆಳಗಿನ ಕಥೆಯನ್ನು ಓದಿಕೊಳ್ಳತಕ್ಕದ್ದು

ಭಟಕಳ ಪೇಟೆಯ ಹತ್ತಿರ ಗ್ರಾಮದ ೩೭ ನಂಬರ ಅ ಕ್ಷೇತ್ರ ಎಕರೆ ೧ ಗುಂ ೩೦ ಆಕಾರ ರೂ ೧೧—೧೪—೦ ಕ್ಕೆ ಸ್ಥಿರ ಆಸ್ತಿ—ತಿಂಗಳ ಕೋರ್ಟಿನ ಹುಕುಮದಿಂದ ರಾ! ವಿಠಲ ಸುಬ್ರಾಯ ಭಟ್ಟರ ಮಾಲಕಿಯದಾಗಿರುತ್ತದೆ. ೧೯೪೩ರಿಂದ ಈ ತೋಟ ಅದೇ ಗ್ರಾಮದ ರಾ! ಗೋವಿಂದ ಯಾನೆ ವೆಂಕಟರಮಣ ಭಟ್ಟ ಸಳ್ಳೇಕರ ಅವರಿಗೆ ಖಾಲಿ ಗೇಣಿಗುಂಟು ಆದರೂ ಸದಾ ರೈತರು ತ್ತಾರೆಂದು ಇದೇ ಕಳೆದ ತಿಂಗಳಲ್ಲಿ ನೀಲಿಯಾಗಿದೆ ಈ ಖಾಲಿ ಗೇಣಿದಾರರು ಒಡೆಯ ವಿಠ್ಠಲ ಭಟ್ಟರಿಗೆ ನವಂಬರ ತಿಂಗಳ ಕೊನೆಗೆ ೧೫ ಮಣ (ಹಸಿಯ ಅಕ್ಕಿ) ಅಲ್ಲದೆ ಕೆಂಪು ಅಡಿಕೆ ಮತ್ತು ಹಿಡಿಯಂತೆ ಪಾಯದಿಗೆ ೩೦ ಕೊಡಬೇಕು ಗೇಣಿ ಕೊಡಬೇಕು. ಆದರೆ ಬಾಳಿಗೇನೆ ದೊರೆತ ಸ್ವಂತ ಗೇಣಿ ಕೊಡಲಿಲ್ಲ ೧೯೪೬—೪೭ನೇ ಸಾಲಿನ ಗೇಣಿಯಲ್ಲಿ ೧೪ ಮಣ ಅಕ್ಕಿ ಮತ್ತು ೩೦ ಕಾ ಬಾಕಿಯುಂಟು ಈ ಪೈಕಿ ಅಕ್ಕಿಯ ಪಡೆಯಲಿಕ್ಕಾಗಿ ವಿಠ್ಠಲ ಭಟ್ಟರು ಹೊನ್ನಾವರ ದಿವಾಣಿ ಕೋರ್ಟಿನಲ್ಲಿ ಮಾಡಿದ ದಾವೆ ಬಾಕಿಯಿದ್ದು ಕೋರ್ಟಿಗೆ ಹೋಗಿದೆ ಆಮೇಲೆ ಪಕ್ಕದ ಗೇಣಿಯಲ್ಲಿ ಪೈಸೆ ೧೭ ರೂ ಅಡಿಕೆ ಬಾಕಿಯುಳ್ಳುಂಟು ೩೦ ರೂ ಕಾಯಿಗಳು ಮಾತ್ರ ಈ ವಾರದ ಸಕಾಲ ಗೇಣಿ ಪಡೆಯಲಿಕ್ಕೆ ಒಂದು ಹೊಸ ಫೋನು (ಅಂದು ೪೫ ಮಣ ಅಕ್ಕಿ) ಗೇಣಿ ಸಕಾಲ ಕೊಟ್ಟಿದ್ದರಲ್ಲಿ ಒಂದು ಮಹಾರ ಪಿಡಿ

THE BANK OF RURAL INDIA, LTD.

[Incorporated in British India, Liability of Members limited]

HEAD OFFICE - 'Satyabhama Bhavan', KARWAR, N K

Offices at - KARWAR KUMTA SIRSI HONAVAR YELLAPUR, BHATKAL SIDDAPUR ANKOLA, HUBLI & DHARWAR

Authorised Capital	Rs 10 00,000,
Subscribed Capital	- Rs 5 00 000,
Paid-up Capital & Reserves	- Rs 3,04,615,
Working Capital	Rs 13,66,068-3-10.

Rates of Interest on Deposits

Current a/c @ 1% p a *Savings Bank a/c @ 2½%*

Fixed Deposits for 3 months @ 3% per annum
for 6 months @ 3½%
for 12 months or more @ 4%

All kinds of modern Banking business transacted

Karwar, 17-2-1947

P. X. GRACIOUS
MANAGING DIRECTOR

3

[illegible]

ಮುಂಡಗೋಡ—

[illegible]

ತಂಬಿಟಿ... ಸೇಲ ನೋಟಿಬುಕುಗಳು

ಗೇಣಿ ರಶೀದಿ ಬುಕುಗಳು

ನಮ್ಮಲ್ಲಿ ಮಾರಾಟಕ್ಕೆ ಸಿಗುತ್ತವೆ

ಬರೆಯಿರಿ

ಸ್ವರ ಆಫ್ ಕೆನರಾ-ಪ್ರೆಸ್, ಕುಮಟಾ.

ದೈವಜ್ಞ ಬ್ರಾಹ್ಮಣ ಸಂಘದ ದುರವಸ್ಥೆ ಯಾಕಾಯಿತು?

"ಓರ್ವ ನಿಜವಾದ ದೈವಜ್ಞನು" ಬರೆಯುತ್ತಾನೆ:—

ಈ ಸಂಘದ ಸ್ಥಾಪನೆಯ ಮೂಲ ಉದ್ದೇಶವನ್ನು ಜಿಲ್ಲೆಯೊಳಗಿನ ಸಮಸ್ತ ದೈವಜ್ಞರ ... [illegible]

ನೋಟೀಸು.

[illegible]

R. J. REBELLO,

[illegible]

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ:-
ಪತ್ರದಲ್ಲಿ ಪ್ರಕಟವಾಗುವ ೧ ಸಾಲಿಗೆ ೪ ಆಣೆಯಂತೆ.
ವಿಶಿಷ್ಟ ಸ್ಥಳ ಬೇಕಾದಲ್ಲಿ ಮತ್ತು ಜಾಹೀರಾತುಗಳ ಬಗ್ಗೆ ಹೆಚ್ಚಿನ
ಅಕ್ಷರ ಪತ್ರದ್ವಾರಾ ತಿಳಿಸಲಾಗುವದು.

Reg. No. B. 1270.

Monday, 16-2-1948

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೩.

ಕುಮಟಾ:- ಸೋಮವಾರ, ತಾ. ೧೬-೨-೧೯೪೮.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲಖರ್ಚಿನೊಡನೆ ೩-೧-೦
೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ... ೦-೪-೦
ವಿ. ಪಿ. ಯಿಂದ ತರಿಸುವವರು ವಿ. ಪಿ. ಖರ್ಚು ಕೊಡಬೇಕು.
ವರ್ಗಣಿಯು ಮುಂಗಡವಾಗಿ ಬರಬೇಕು.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಅಸ್ಥಿ-ವಿಸರ್ಜನೆಯ ಸಮಾರಂಭ

ಈ ಹಿಂದೆ ತಿಳಿಸಿದಂತೆ ಶ್ರೀ ಕ್ಷೇತ್ರ ಗೋಕರ್ಣದಲ್ಲಿ ವಿಸರ್ಜಿಸಲ್ಪಡುವ ಮಹಾತ್ಮಾಜಿಯವರ ಪವಿತ್ರ ಅಸ್ಥಿ ಸ್ಥಳದ ಕಲಶವನ್ನು ಉಪಮಂತ್ರಿಗಳಾದ ರಾ। ಸಣ್ಣಪ್ಪ [illegible]ವಕಾರರೂ ಕಲ್ಲನಗೌಡ ಪಾಟೀಲರೂ ಮಂಗಳವಾರ ಮುಂಜಾನೆ ಮುಂಬಯಿಯಿಂದ ತಕ್ಕೊಂಡು ಸ್ಪೇಶಲ [illegible]ಟಾರ ಬಂಡಿಗಳಿಂದ ಅದೇ ಸಾಯಂಕಾಲ ಹುಬ್ಬಳ್ಳಿ ತಲ್ಪಿದರು. ಈ ಕಲಶದೊಡನೆ ಶ್ರೀ ಹರಿಹರ ಕ್ಷೇತ್ರ [illegible] ತುಂಗಭದ್ರಾ ನದಿಯೊಳಗೆ ವಿಸರ್ಜನೆಯಾಗಬೇಕಿದ್ದ [illegible] ಭಸ್ಮಗಳೂ ಬಂದಿದ್ದವು. ಹುಬ್ಬಳ್ಳಿಯ ನಾಗರಿಕರು [illegible]ಪಾತ್ಮರ ಈ ಪವಿತ್ರ ಅಸ್ಥಿ ಭಸ್ಮಗಳಿಗೆ ಗೌರವದ [illegible]ತ ವಂದನೆಗಳನ್ನರ್ಪಿಸಿ ಕೃತಕೃತ್ಯರಾದರು.

ಗೋಕರ್ಣಕ್ಕೆ ಬರಬೇಕಿದ್ದ ಅಸ್ಥಿ-ಕಲಶವು ಹುಬ್ಬಳ್ಳಿ[illegible] ದ ಬುಧವಾರ ಮುಂಜಾನೆ ಹೊರಟು ಯಲ್ಲಾಪುರ ಮಾರ್ಗ ದಿಂದ ನೇರವಾಗಿ ಕಾರವಾರಕ್ಕೆ ೧೧ ಘಂಟೆಗೆ [illegible] ತಲುಪಬೇಕಿತ್ತು, ಯಲ್ಲಾಪುರಕ್ಕೆ ಅದು ಬೆಳಿಗ್ಗೆ [illegible]ಲ್ಪುವದೆಂದೂ ನಿರೀಕ್ಷಿಸಲಾಗಿತ್ತು. ಆದರೆ ಹುಬ್ಬಳ್ಳಿ [illegible] ಹೊರಡಲಿಕ್ಕೆ ತಡವಾದ್ದರಿಂದಲೂ, ಕಲಶವನ್ನು [illegible] ಊರೊಳಗಿಂದ ಹಾಯ್ದುಹೋಗಿ ತಮ್ಮನ್ನು [illegible]ನಗೊಳಿಸಬೇಕೆಂದು ಹಳಿಯಾಳದವರು ಆಗ್ರಹಪಡಿಸಿ[illegible] ಕಲಘಟಗಿಯಿಂದ ಕಲಶವಾಹಿ ಮೋಟಾರಬಂಡಿ[illegible] ಹಳಿಯಾಳಕ್ಕೆ ತಿರುಗಿ ಸಿಕೊಂಡು ಹೋದ್ದರಿಂದಲೂ, [illegible]ವು ಯಲ್ಲಾಪುರಕ್ಕೆ ಬಂದು ಮುಟ್ಟಲು ನಡಿಯಾರ [illegible]ಮ್ಯಾಹ್ನದ ೧॥ ಬಡಿಯಿತು. ಇದೇ ಯಲ್ಲಾಪುರ[illegible] ಮುಂಜಾನೆಯಿಂದ ಜಗದ್ವಂದ್ಯ ಗಾಂಧಿಜಿಯವರ [illegible]ಶೇಷಗಳನ್ನು ಸ್ವಾಗತಿ ಸತ್ಕರಿಸಲು ಅನಸೇಜಾಗಿ [illegible]ಕಡಿದಿತ್ತು ಮಾರ್ಗವೆಲ್ಲ ತಳಿರು-ತೋರಣಗಳಿಂದ ಶಿಂಗ[illegible] [illegible] ತ್ತು. ಒಂದೆ ಸವನೆ "ರಘುಪತಿ ರಾಘವ ರಾಜಾ [illegible]" ಭಜನೆ ನಡೆದಿತ್ತು. ಕಲಶವಾಹಿ ಮೋಟಾರು [illegible] ಮುಟ್ಟುತ್ತಲೇ ಜನರ ಉತ್ಸಾಹ ಪರಾಕಾಷ್ಠೆಗೆ [illegible]ತು 'ಭಜನೆಯ ರಂಗಕ್ಕೆ ಕಳೆಯೇರಿತು' ಜನ[illegible] ಆ ಕಲಶವನ್ನು ಎತ್ತಿಕೊಂಡು ಮೆರವಣಿಗೆಯಿಂದ [illegible]ಮದ ಘೋಷ ಮಾಡುತ್ತ ಸುಭಾಸ ಮೈದಾನಕ್ಕೆ [illegible]ರು. ಅಲ್ಲಿ ಕಲಶವನ್ನಿಡಲು ಒಂದು ಸುಂದರ ವೇದಿಕೆ [illegible]ಸಲ್ಪಟ್ಟಿತ್ತು. ವೇದಿಕೆಯಲ್ಲಿ ಮಹಾತ್ಮಾಜಿಯವರ [illegible] ಭಾವಚಿತ್ರವಿತ್ತು. ಅಲ್ಲಿ ಕಲಶವನ್ನಿಟ್ಟು ಎಲ್ಲರಿಗೂ [illegible] ದರುಶನ ತಕ್ಕೊಳ್ಳಲಿಕ್ಕೂ ಮಾಲೆಗಳನ್ನು ಹಾಕ[illegible] ಅನುವು ಮಾಡಿಕೊಡಲಾಯಿತು. ಸ್ತ್ರೀಯರಿಗಾಗಿ [illegible] ವ್ಯವಸ್ಥೆ ಮಾಡಿತ್ತು. ಮಹಾತ್ಮರ ಈ ಚಿತಾಭಸ್ಮ [illegible] ಸ್ಥಳದಲ್ಲಿ ಒಂದು ಶಾಶ್ವತ ಪೀಠವನ್ನು ಕಟ್ಟಿ [illegible] ಮೇಲೆ ಗಾಂಧಿಜಿಯವರ ಮೂರ್ತಿಯನ್ನು ಸ್ಥಾಪಿಸ[illegible] ನಾಗರಿಕರ ಸಂಕಲ್ಪವಾಗಿದೆಯಂತೆ. ಆ ಸ್ಮಾರ[illegible] ಅಡಿಗಲ್ಲನ್ನು ಇದೇ ಸಮಯದಲ್ಲಿ ಇಡಲಾಯಿತು. [illegible] ಘಂಟೆಯ ಸುಮಾರಿಗೆ ಕಲಶವು ಕಾರವಾರಕ್ಕೆ [illegible]

[illegible]ರದ ೪ ಘಂಟೆಯ ಸುಮಾರಿಗೆ ಕಲಶದ ಪವಿತ್ರ [illegible] ರವಾರ ಸೇರಿತು. ಇಲ್ಲಿ ಕಲಶವನ್ನು ಕಮಿಶನರ [illegible]ಪ್ಪಿಸಬೇಕೆಂದು ಸರಕಾರದವರ ಆದೇಶವಿದ್ದಂತೆ [illegible]ವಕಾರರು ಅದನ್ನು ರಾ। ವ್ಯಾಸರಿಗೆ ಒಪ್ಪಿಸಿ[illegible] ಮುಂದೆ ಕಲಶವನ್ನು ಶಿಂಗರಿಸಿದ ಪಲ್ಲಕ್ಕಿಯಲ್ಲಿಟ್ಟು [illegible]ರಿಗಳೂ ಆ ಬಾಲವೃದ್ಧ ಸ್ತ್ರೀ-ಪುರುಷ ನಾಗರಿಕರೂ [illegible] ಪಂಕ್ತಿಯಲ್ಲಿ ಒಯ್ದರು. ಅಲ್ಲಿ ಸಕಲ ನಾಗರಿ[illegible] ದರ್ಶನ ತಕ್ಕೊಂಡು ಭಸ್ಮೀಭೂತ ಮಹಾತ್ಮರಿಗೆ [illegible]ಪೂರ್ವಕ ತಮ್ಮ ವಂದನೆಗಳನ್ನರ್ಪಿಸಿದರು. [illegible] ತರುವಾಯ ಕಮಿಶನರ ಕಲೆಕ್ಟರರೂ [illegible] ರೂ ಕಲಶವನ್ನು ತಕ್ಕೊಂಡು ಮೂರು ಸಂ[illegible] ಕರಿಗೆ ಗೋಕರ್ಣಕ್ಕೆ ಹೊರಟರು.

ಹಾದಿಯಲ್ಲಿ ಬಿಣಗೆ, ಅಶ್ವಾಗ, ಅಂಕೋಲಾ ಮೊದ ಲಾದ ಊರುಗಳಲ್ಲಿ ಜನರು ಗುಂಪುಗಟ್ಟಿಕೊಂಡು ಕಲಶದರ್ಶನಕ್ಕಾಗಿ ಕಾದುಕೊಂಡಿದ್ದರು. ಅಂಕೋಲೆಯಲ್ಲಿ ಸುತ್ತು ಮುತ್ತಲಿನ ಹಳ್ಳಿಗಳಿಂದಲೂ ಜನರು ಕೂಡಿದ್ದರು. ಹಾಗೇನಿಲ್ಲೆಂದರೂ ೬-೭ ಸಾವಿರ ಜನರು ನೆರೆದಿದ್ದರು. ಹೀಗೆಲ್ಲ ಮಾರ್ಗದಲ್ಲಿ ಜನತಾ ಜನಾರ್ದನನ ಪ್ರಣಾಮಗಳನ್ನು ಸ್ವೀಕರಿಸುತ್ತ ಅಸ್ಥಿ-ಕಲಶವು ರಾತ್ರಿ ೯ಕ್ಕೆ ಗೋಕರ್ಣಕ್ಕೆ ಮುಟ್ಟಿತು. ಅಲ್ಲ ಮುಂದುಗಡೆ ಕ್ಷೇತ್ರವಾಸಿಗಳು ಆ ಕಲಶಕ್ಕೆ ಸಡಗರದ ಸ್ವಾಗತವನ್ನಿತ್ತರು ಊರ ತುಂಬ ತೋರಣಗಳು ಕಂಗೊಳಿಸುತ್ತಿದ್ದವು. ಕಮಿಶನರ ರಾ। ವ್ಯಾಸರು ಊರ ಹೆಬ್ಬಾಗಿಲಲ್ಲೇ ತಮ್ಮ ಕಡೆಗಿದ್ದ ಕಲಶವನ್ನು ಗೋಕರ್ಣಸ್ಥರ ಪರವಾಗಿ ರಾ। ಮಹಾಬಲೇಶ್ವರ ಭಟ್ಟ ಗೋಪಿಯವರ ಕಡೆಗೆ ಒಪ್ಪಿಸಿದರು. ಅದನ್ನು ಜನರು ಮೆರವಣಿಗೆಯಿಂದ ಸುಭಾಸ ಚೌಕದಲ್ಲಿ ತಯಾರಿಸಿಟ್ಟ ಮಂಟಪಕ್ಕೆ ಒಯ್ದು ಇಟ್ಟರು. ಅಲ್ಲಿ ಸಾವಿರಾರು ಜನರು (ವ್ಯಕ್ತಿಗತವಾಗಿ ಇಲ್ಲವೆ ಸಂಸ್ಥೆಗಳ ಪರವಾಗಿ) ಕಲಶಕ್ಕೆ ಪುಷ್ಪಮಾಲೆಗಳನ್ನರ್ಪಿಸಿದರು. ರಾತ್ರಿಯಲ್ಲಿ ಮಂಟಪದೆದುರು ಭಜನೆ ನಡೆಯಿತು. ಪೋಲೀಸರೂ ಸ್ವಯಂಸೇವಕರೂ ಕಾವಲಿದ್ದರು.

ಗುರುವಾರ ಮುಂಜಾನೆ ಆ ಪೋಲೀಸರೂ ರಾಷ್ಟ್ರಸೇವಾದಳದವರೂ ಕಲಶಕ್ಕೆ ಸಲಾಮಿಯನ್ನರ್ಪಿಸಿದ ಮೇಲೆ, ಮೆರವಣಿಗೆಯಿಂದ ಅದನ್ನು ಕೋಟಿತೀರ್ಥಕ್ಕೆ ಒಯ್ಯಲಾಯಿತು. ಸಾವಿರಾರು ಜನರು ಮೆರವಣಿಗೆಯಲ್ಲಿ ಸೇರಿದ್ದರು. ಕಲೆಕ್ಟರ ಕಮಿಶನರ ಪ್ರಭೃತಿ ಸಣ್ಣ-ದೊಡ್ಡ ಎಲ್ಲ ಅಧಿಕಾರಿಗಳೂ ಊರ-ಪರವೂರ ಕಾಂಗ್ರೆಸ ಪ್ರಮುಖರೂ ಮೆರವಣಿಗೆಯಲ್ಲಿದ್ದರು ಕೋಟಿತೀರ್ಥದಲ್ಲಿ ತೀರ್ಥದ ನಡುವಿರುವ ಕೋಟೀಶ್ವರನ ಸನ್ನಿಧಾನದಲ್ಲಿ ಮೋಕ್ಷದ ಅಸ್ಥಿಶ್ರಾದ್ಧಾದಿಗಳನ್ನು ಮಾಡುವ ಏರ್ಪಾಟು ಮಾಡಲಾಗಿತ್ತು. ಜನರೆಲ್ಲ ತೀರ್ಥದ ನಾಲ್ಕೂ ದಂಡೆಗಳ ಮೇಲೆ ನಿಂತು ಆ ವಿಧಿಗಳನ್ನು ಶ್ರದ್ಧೆಯಿಂದ ನೋಡುತ್ತಿದ್ದರು. ಅಲ್ಲಲ್ಲಿ ಭಜನೆಗಳಾಗುತ್ತಿದ್ದವು, ಬೇರೆ ಹಳ್ಳಿಗಳಿಂದ ಜನರು ಭಜನೆ ಮಾಡುತ್ತಾ ಬಂದು ಆ ಜನಸ್ತೋಮದಲ್ಲಿ ಸೇರುತ್ತಿದ್ದರು. ಶಿರ್ಸಿ, ಸಿದ್ದಾಪುರ, ಯಲ್ಲಾಪುರ, ಕಾರವಾರ, ಅಂಕೋಲಾ ಕಡೆಯಿಂದ ಸಹ ಸಾವಿರಾರು ಜನರು ಬಂದಿದ್ದರು. ಕುಮಟೆಯಿಂದ ಹಾಗೂ ಹಳ್ಳಿಗಳಿಂದ ಅಸಂಖ್ಯ ಜನ ಕೂಡಿದ್ದರು. ಹಾಗೇನಿಲ್ಲೆಂದರೂ ೧೫-೨೦ ಸಾವಿರ ಜನ ಕೂಡಿದ್ದರು.

ಮಹಾತ್ಮಾಜಿಯವರ ಅಸ್ಥಿ-ಶ್ರಾದ್ಧಾದಿಗಳನ್ನು ವೇ। ಮೂ। ವಿಶ್ವೇಶ್ವರಶಾಸ್ತ್ರಿಯವರು ಮಾಡಿದರು. ಊರೊಳಗಿನ ಪ್ರಮುಖ ಬ್ರಾಹ್ಮಣರು ಅವರಿಗೆ ನೆರವಾಗುತ್ತಿದ್ದರು. ಅತ್ತ ಈ ವಿಧಿಗಳು ನಡೆಯುತ್ತಿದ್ದಾಗ ಅಸ್ಥಿಗಳ ಕಲಶವನ್ನು ದೋಣಿಯಲ್ಲಿಟ್ಟು ಕೋಟೀಶ್ವರನಿಗೆ ಪ್ರದಕ್ಷಿಣೆ ಹಾಕುತ್ತಿದ್ದುದರಿಂದ ದಂಡೆಯ ಮೇಲಿನ ಜನರಿಗೆ ಅದರ ದರ್ಶನ ಸಿಗುತ್ತಿತ್ತು.

ಧಾರ್ಮಿಕ ವಿಧಿಗಳಾದ ಮೇಲೆ ಅಸ್ಥಿ-ಭಸ್ಮಗಳಿದ್ದ ಪುನಃ ಕಲಶದಲ್ಲಿಟ್ಟು ಜನರು ಮೆರವಣಿಗೆಯಿಂದ ಭಜನೆ ಮಾಡುತ್ತ ಸಮುದ್ರ ತೀರಕ್ಕೆ ಒಯ್ದರು. ಅಲ್ಲಿ ರಾ। ಗೋಪಿಯವರು ಚಿಕ್ಕ ಭಾಷಣ ಮಾಡಿ, ಮಹಾತ್ಮಾಜಿಯವರ ಪ್ರೀತ್ಯರ್ಥ ಅಂದಿನಿಂದ ಶ್ರೀಮಹಾಬಲೇಶ್ವರನ ಮಂದಿರದಲ್ಲಿ ಹರಿಜನರಿಗೆ ಪ್ರವೇಶ ಕೊಡಲಾಗುವದಾಗಿ ಸಾರಿದರು. ರಾ। ಕಲ್ಲನ ಗೌಡಾ ಪಾಟೀಲ, ಶಾಸ್ತ್ರಿ, ತಿಮ್ಮಪ್ಪ ನಾಯಕ ಇವರೂ ಕೆಲವು ಸಮಯೋಚಿತ ಮಾತುಗಳನ್ನು ಹೇಳಿದರು. ರಾ। ನಾಯಕರು ತಮ್ಮ ಭಾಷಣದಲ್ಲಿ, ಹರಿಜನರು ತಮಗೆ ಸಿಕ್ಕ ಮಂದಿರ-ಪ್ರವೇಶದ ಸವಲತ್ತಿನ ದುರುಪಯೋಗ ಮಾಡಕೂಡದೆಂದೂ ಇತರರಂತೆ ಸ್ನಾನಾದಿಗಳನ್ನು ಮಾಡಿ ಶುಚಿರ್ಭೂತರಾಗಿ ಗುಡಿಗೆ ಹೋಗಬೇಕೆಂದೂ ಬೋಧಿಸಿದರು. ಹಾಗೆಯೇ ಕಲಶವು ಶ್ರೀ ಮಹಾಬಲೇಶ್ವರನ ಗುಡಿಗೆ ಸಾಗಿತು. ಅಲ್ಲಿ ಮಹಾದ್ವಾರದಲ್ಲಿ ವೇ। ಹಿರೇಭಟ್ಟರು ದೇವರಿಗೂ ಕಲಶಕ್ಕೂ ಮಂಗಳಾರತಿಯನ್ನು ಮಾಡಿದರು. ತದನಂತರ ಕಲಶವನ್ನು ತಾಮ್ರಪರ್ಣ ತೀರ್ಥಕ್ಕೆ ಒಯ್ದು, ಮಧ್ಯಾಹ್ನ ೧ರ ಸುಮಾರಿಗೆ, ವಿಧಿವತ್ತಾಗಿ ಅಸ್ಥಿ ಭಸ್ಮಗಳನ್ನು ತೀರ್ಥೋದಕದಲ್ಲಿ ವಿಸರ್ಜಿಸಲಾಯಿತು. ಆ ಬಳಿಕ ಈ ಸಮಾರಂಭದ ಮುಕ್ತಾಯದಂದು ಶ್ರೀ ಮಹಾಬಲೇಶ್ವರನ ರಥೋತ್ಸವವೂ ಜರುಗಿತು.

(ಪುರವಣಿ ಮೇಲಿಂದ ಮುಂದರಿಸಿದ್ದು.)

ಹೋಗುತ್ತಿತ್ತು. ಅವ್ವ ಹೇಳುವಂತೆ ೧೫-೨೦ ದಿನಗಳ ಹಿಂದೆ ಬಿಟ್ಟಿದ್ದ ಹೋದ ಮುಲ್ಲಾನು ೩ ದಿನಗಳವರೆಗೂ ತಿರುಗಿ ಬರಲಿಲ್ಲ. ಅವನ ನಾಯಿಯೂ ಬರಲಿಲ್ಲ. ಆದೇ ದಿನ ನಾವು ಓದಿ ಬಂದು ಮುಲ್ಲಾನ ಮನೆಯಾತನನ್ನು ಎಳಕೊಂಡು (ಅಲ್ಲಿಂದ ಸುಮಾರು ೧॥ ಮೈಲು ದೂರದಲ್ಲಿರುವ) ಸಣ್ಣಸ್ಮಶಾನದ ಬೆಟ್ಟದ ಕೆಳಗಿನ ಒಂದು ಮಾರದಡಿಗೆ ಕರೆದೊಯ್ದೆವು! ಅಲ್ಲಿ ಮುಲ್ಲಾನ ಪ್ರೇತವು ಬಿದ್ದಿತ್ತು!! ಮುಲ್ಲಾನು ಮರದ ಮೇಲಿಂದ ಬಿದ್ದು ಸತ್ತಿರಬಹುದೆಂದು ಭಾವಿಸಿ ಜನರು ಆ ಶವವನ್ನು ಅಲ್ಲಿಯೇ ಒಂದು ಕಡೆ ದಫನ ಮಾಡಿದರು. ಆದರೆ [illegible] [illegible] [illegible] [illegible] [illegible] ಬಂತು! [illegible] ಮುಲ್ಲಾನು ಮರದಿಂದ ಬಿದ್ದು ಸತ್ತಿದ್ದಲ್ಲ [illegible] [illegible] [illegible] [illegible] [illegible] (ತಾಯಿಯ [illegible] [illegible] [illegible] [illegible]) [illegible] ಗಾಯದಿಂದ ಮುಲ್ಲಾನು [illegible] [illegible] [illegible]. ಮುಲ್ಲಾನನ್ನು [illegible] [illegible] ನಾಯಿಯನ್ನು (ಅದು ಒಂಟಿಯಾಗಿ ಮನೆಗೆ ಬಂದರೆ ಗುಟ್ಟು [illegible] [illegible] [illegible]) ಎಲ್ಲಿಯೋ [illegible] [illegible]. ಅದು ಊರಿಗೆ ಬಂದಾಗ ಅದರ [illegible] ಒಂದು [illegible]! ಊರಲ್ಲಿ [illegible] [illegible] [illegible] [illegible] [illegible] ಮುಲ್ಲಾ [illegible] [illegible] [illegible] [illegible] [illegible] ಅವರು [illegible] [illegible]! [illegible] [illegible] ಮುಲ್ಲಾನ [illegible] [illegible] [illegible] [illegible] [illegible] [illegible]

ESTD: 193 .

The Agricultural & Industrial Bank, Ltd

(Incorporated in British India. Liability of Members Limited.)

Head Office: COONDAPOOR.

Authorised Capital	...	Rs. 25,00,000-0-0.
Issued Capital	...	„ 11,61,850-0-0.
Paid-up Capital & Reserves		„ 8,48,256-2-0.

SAVINGS BANK ACCOUNTS are opened with the minimum amounts and interest allowed at 2%

CURRENT ACCOUNTS are opened Interest allowed at 1%.

SEASON DEPOSITS of 3 and 6 months are accepted.

For Terms, please apply to Head Office, or to our nearest Branch.

Nivas "Laxmi Buildings,"
COONDAPOOR, 1-12-1947.

K. VAMAN SHENAI,
CHAIRMAN

ಹುತಾತ್ಮ ಮಹಾತ್ಮರಿಗೆ
ನಮ್ಮ ಜಿಲ್ಲೆಯವರ ಶ್ರದ್ಧಾಂಜಲಿಗಳು

ಶ್ರೀ ಸ್ವರ್ಣವಲ್ಲೀ ಮಠ ... **ಶ್ರೀ ಸರ್ವಜ್ಞೇಂದ್ರ ಸ್ವಾಮಿಗಳು** [illegible]

ಕುಮಟೆ [illegible]

ಶ್ರೀ ಕ್ಷೇತ್ರ ಗೋಕರ್ಣದಲ್ಲಿ [illegible] ಪ್ರತಿ ದಿನ ಅಪರಾಹ್ನದಲ್ಲಿ [illegible] (ಶ್ರೀ ವೆಂಕಟರಮಣ ದೇವರ ಗುಡಿಯ ಮುಂದೆ [illegible]) [illegible]

ಭಟಕಳದಲ್ಲಿ [illegible]

(ಹೆನ್ನಾವರ ತಾಲೂಕಿನ) [illegible]

[illegible] ಮಹಾತ್ಮಾಜಿಯವರ [illegible]

ಸಿದ್ಧಾಪುರದಲ್ಲಿ ಮಹಾತ್ಮಾಜಿಯವರ ನಿಧನದ ಸುದ್ದಿ [illegible]

ಶಿರ್ಸಿಯಲ್ಲಿ [illegible]

ಅಂಕೋಲೆಯಲ್ಲಿ [illegible]

ಕಾರವಾರದಲ್ಲಿ [illegible]

—**R**—

[illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಒಂದು ದಿನ ಹೆಚ್ಚು! ಒಂದು ದಿನ ಕಡಿಮೆ!

[illegible]

ಆಜ್ಞೆ.

[illegible]

ಪರಿಶಿಷ್ಟ

[illegible]

A. L. Dia

[illegible]

[illegible]

A. L. DIAS.

[illegible]

ಹುತಾತ್ಮಾ ಮಹಾತ್ಮರಿಗೆ

ನಮ್ಮ ಜಿಲ್ಹೆಯವರ ಶ್ರದ್ಧಾಂಜಲಿಗಳು.

ಶ್ರೀ ಸ್ವರ್ಣವಲ್ಲೀ ಮಠಾಧೀಶ ಶ್ರೀ ಸರ್ವಜ್ಞೇಂದ್ರ ಸ್ವಾಮಿಗಳು [illegible] ದಿನ ಬಂದು ಸಂದೇಶ ಕಳಿಸಿ, ಮಹಾತ್ಮಾ ಗಾಂಧಿಯವರ ನಿಧನದಿಂದ ಸಂಪೂರ್ಣ ಜನಾಂಗವೇ ಶೋಕಸಾಗರದಲ್ಲಿ ಮುಳುಗಿದೆಯೆಂದೂ, ಒಬ್ಬನೇ ತನ್ನ ಕುಟುಂಬವೆಂದು ಭಾವಿಸಿದ [illegible] ಶರೀರದ ಯಾ ಅವರ [illegible] ಅವನ್ನು ಸವೆಯಿಸಿದ ಮತ್ತು ಭಾರತವರ್ಷಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ [illegible] ಮಹಾತ್ಮಾಜಿಯವರ [illegible] ಸತ್ಯ, ಅಹಿಂಸಾ, [illegible] ಗುಣಗಳನ್ನು ತಮ್ಮಲ್ಲಿ [illegible] ಮಹಾತ್ಮಾಜಿಯವರಿಗೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸುವ [illegible] ವಿರುತ್ತದೆಂದೂ [illegible].

ಕುಮಟೆ [illegible] ದಿನ [illegible] ಸುಮಿತ್ರಾಬಾಯಿ [illegible] ನವರ ಅಧ್ಯಕ್ಷತೆಯಲ್ಲಿ ಸಭೆ [illegible] ಮಹಾತ್ಮರ ಗುಣಗಾನ ಮಾಡಿದರು. ನಗರ ಸಭೆಯವರು [illegible] ಹಿಂದುಸ್ಥಾನ ಸರಕಾರಕ್ಕೆ ಶ್ರೀ ದೇವದಾಸ ಗಾಂಧಿಯವರಿಗೂ ಕಳಿಸಿಕೊಟ್ಟಿರುತ್ತಾರೆ. ವ್ಯಾಪಾರಿ ಸಂಘದವರು (ಮಹಾತ್ಮರ ನೆನಪಾಗುವಂತೆ) ಪ್ರತಿ ತಿಂಗಳ ತಾ [illegible] (ಫೆಬ್ರುವರಿ ತಿಂಗಳಲ್ಲಿ ಮಾತ್ರ ತಾ [illegible]) ದಿವಸ ತಮ್ಮಿಂದ ಅಂಗಡಿಗಳನ್ನು ಮುಚ್ಚಿಡಬೇಕೆಂದು ಠರಾಯಿಸಿವಾರೆ. ತಾ [illegible] ಗುರುವಾರ ಪೂರ್ವಾಹ್ನ [illegible] ಮಂದಿರದಿಂದ [illegible]

ವರೆಗೂ ಮಹಾತ್ಮಾಜಿಯವರ ಗುಣಗಾನ ಮೊದಲಾದವು ನಡೆದವು. [illegible] ಸಂತೆಗೋಳಿಯ ಶಾಲೆಯಲ್ಲಿ ತಾ [illegible] ದುಃಖಪ್ರದರ್ಶಕ ಸಭೆಯಾಯಿತೆಂದು ತಿಳಿಯುತ್ತದೆ.

ಸಿದ್ದಾಪುರದಲ್ಲಿ ಮಹಾತ್ಮಾಜಿಯವರ ನಿಧನದ ಸುದ್ದಿ ಕೇಳಿ ತಾ [illegible] ಹೀಗೆ [illegible] ದಿನ ಜನರು ಹರತಾಳ ಮಾಡಿದರು. ರಾತ್ರಿಯ ಕಾಲಕ್ಕೆ ಬೀದಿ-ದೀವಿಗೆಗಳು ಸಹ [illegible] ತಾ [illegible] ಮುಂಜಾನೆ [illegible] ಧ್ವಜವಂದನೆ ಮತ್ತು ಸಂಜೆ ಸರ್ವಧರ್ಮ [illegible] ಬಂದು ಮಾಧವ ಬಾಳಿಗ, [illegible] ಮೊದಲಾದವರ ಭಾಷಣಗಳಾದವು. ತಾ. [illegible] ವರೆಗೆ [illegible] ಸರ್ವರೂ ಪ್ರತಿ [illegible] ಸಂಜೆ [illegible] ಅಂಗಡಿಗಳನ್ನು ಮುಚ್ಚುತ್ತಿದ್ದರು, ಮತ್ತು ಎಲ್ಲರೂ ಸೇರಿ, ಸಭೆ, ಭಜನೆ, ಪ್ರಾರ್ಥನೆ, ಭಾಷಣಗಳ ಮೊದಲಾದ ಕಾರ್ಯಕ್ರಮ [illegible] ಈ ಸಭೆಗಳಲ್ಲಿ ಮುಸಲ್ಮಾನ ಬಾಂಧವರೂ ಭಕ್ತಿಯಿಂದ ಸೇರಿ ಕುರಾನ-ಪಠಣ ಮಾಡುತ್ತಿದ್ದರು. ಕೊನೆಗೆ ತಾ [illegible] ದಿನ ಸಂಪೂರ್ಣ ಹರತಾಳ [illegible] ಭಜನೆ ಪ್ರಾರ್ಥನೆ, ಸಭೆ ಮೊದಲಾದ ಕಾರ್ಯಕ್ರಮ ನಡೆಯಿತು. ಸಂಜೆಯ ಸಭೆ ನಡೆಯುತ್ತ [illegible] ಅಸ್ಥಿ-ವಿಸರ್ಜನ [illegible] ಅಕ್ಕಿ-ಕಲಶದ ಪ್ರಸಾದ [illegible] ಬಂದು [illegible] ಆ ಪ್ರಸಾದಕ್ಕೆ ಎಲ್ಲರೂ [illegible] ರಾತ್ರಿ ಆ ಪ್ರಸಾದದ [illegible] ಅನೇಕ ಜನರು ಅಂದು ಉಪವಾಸ ಮಾಡಿದ್ದರು.

ಸಿದ್ದಾಪುರ ತಾಲೂಕಿನ [illegible] ಕೇವಲ [illegible] ಶಾಲೆಯಲ್ಲೂ ತಾ [illegible] ಮಹಾತ್ಮರ ಬಗ್ಗೆ ಪ್ರಾರ್ಥನೆಗಳಾದವು. ತಾ [illegible] ಯಲ್ಲಿ ಪ್ರಭಾತ [illegible] ಸಭೆ ಮುಂತಾದ ಕಾರ್ಯಕ್ರಮ ನಡೆಯಿತಾಗಿ [illegible]

ಸ್ಥಾನಿಕ ವೃತ್ತಾಂತ.

ಕುಮಟೆ— [illegible] ಬೇಕಾದ್ದೆ ಅದರ ಒಂದು ದಿನ [illegible] ! ಒಂದು ದಿನ [illegible] !

[illegible] ಎರಡು ತಿಂಗಳ [illegible] ಪ್ರಾರಂಭವಾಗಿರುವ ಶ್ರೀ [illegible] ಕೀರ್ತನೆಗಳು (ಮಹಾತ್ಮಾಜಿಯವರ ನಿಧನದ ನಿಮಿತ್ತ ನಡುವೆ [illegible] ದಿನ ಬಿಟ್ಟು) [illegible] ನಡೆದಿವೆ. [illegible] ಕೀರ್ತನಕಾರರು [illegible] ಗುಣ ದೋಷಗಳನ್ನು [illegible] ತಿಳಿಸುತ್ತಿರುವದರಿಂದಲೂ, [illegible] ಈ [illegible] ಕೀರ್ತನೆಗಳು [illegible] ಒಳ್ಳೇ ಸಂಗೀತದ ಜೊತೆ [illegible] ದರಿಂದ [illegible] ರಂಜಕವೂ ಆಗುತ್ತಿವೆ. ಶ್ರೀ [illegible] ನೇ [illegible] ಕಂಪ್ಲ [illegible] ದವರೆಂದು ತಿಳಿಯುತ್ತದೆ.

ಸ್ವಾತಂತ್ರ್ಯೋತ್ಸವದ [illegible] ದಯಪಾಲಿಸಿದ [illegible] ಭೂಪಾಲಕರ [illegible] ([illegible]) [illegible] ಪ್ರಕಟವಾಗಿದೆ) [illegible]

[illegible]

ಹೋಲ್ಸೇಲದ ತಂಟೆಯನ್ನು [illegible] ನಾಗರಿಕರು ಒಂದು ಸುಲಭ ಉಪಾಯ [illegible] ಹೇಳಿದೆ.— [illegible]

[illegible]

ಜಾಹೀರಾತು

ಬುಧವಾರ ರಾತ್ರೆ ...ಪ್ರ, ದಶಾವತಾರ ಮಂಡಳಿ, ... ಹೊನ್ನಾವರ ... ಥಿಯೇಟರಿನಲ್ಲಿ

ಸಂಧಾನ ಮತ್ತು ಭೀಷ್ಮಪರ್ವ

...ನವನ್ನು ಮನೋಹರವಾಗಿ ಅಭಿನಯಿಸುವರು.

ಸಂಧಿ ಕಳಕೊಳ್ಳಬೇಡಿ ! ಮೆನೇಜರ.

THE BANK OF RURAL INDIA, LTD.

[Incorporated in British India. Liability of Members limited]

HEAD OFFICE :— "Satyabhama Bhavan", KARWAR. N. K.

...es at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	.. Rs 10,00,000;
Subscribed Capital	.. Rs 5,00,000,
Paid-up Capital & Reserves	.. Rs. 3,04,615;
Working Capital	. Rs. 13,66,063-3-10

Rates of Interest on Deposits.

Current a/c. @ 1% p. a *Savings Bank a/c @ 2½%.*

Fixed Deposits for 3 months @ 3% per annum.

" " for 6 months @ 3½% "

" " for 12 months or more @ 4% "

All kinds of modern Banking business transacted.

...war, 1947.

P. X. GRACIOUS.
MANAGING DIRECTOR.

4

[illegible]

A. L. DIAS.

—R—

ಮುಂಬಯಿ ಸರಕಾರವು ಹೊರಡಿಸಿದ ಹಾಗೂ ತಾ. ೬-೨-೧೯೪೮ರ ಮುಂಬಯಿ ಸರಕಾರದ ವಿಶೇಷ ಗಾಝೆಟಿನಲ್ಲಿ ಪ್ರಕಟವಾದ ಒಂದು ಆಜ್ಞೆಯನ್ನಯ ಆಹಾರ-ಧಾನ್ಯಗಳ ವ್ಯಾಪಾರಕ್ಕಾಗಿ ಪರವಾನೆ ಪಡಕೊಂಡ ಜನರು ತಮ್ಮ ಕಡೆಗೆ ಇರುವ ಸಂಗ್ರಹದ ಮಾಹಿತಿ-ಪತ್ರಿಕೆಯನ್ನು ಪ್ರತಿ ತಿಂಗಳು ತಮಗೆ ಪರವಾನೆ ಕೊಟ್ಟ ಅಧಿಕಾರಿಗೆ ಒಪ್ಪಿಸುವವಲ್ಲದೆ, ಮಾಹಿತಿ-ಪತ್ರಿಕೆಗೆ ಸಂಬಂಧಪಟ್ಟ ತಿಂಗಳಲ್ಲಿ ಬೇರೆ ಜಿಲ್ಲೆಗಳಲ್ಲಿಯ ತಮ್ಮ ಸಂಗ್ರಹವಿರುತ್ತಿದ್ದಲ್ಲಿ, ಹಾಗೆ ಸಂಗ್ರಹವಿರುವ ಪ್ರತಿಯೊಂದು ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರಿಗೂ ಮಾಹಿತಿ ಪತ್ರಿಕೆಯ ಒಂದೊಂದು ಪ್ರತಿಯನ್ನು ಕಳಿಸಿಕೊಡಬೇಕು. ಆ ಬೇರೆ ಜಿಲ್ಲಾ ಮೆಜಿಸ್ಟ್ರೇಟರಿಗೆ ಮೂಲ ಮಾಹಿತಿ-ಪತ್ರಿಕೆಯೊಳಗಿನ (ಆಯಾ ಜಿಲ್ಲೆಗೆ) ಸಂಬಂಧವುಳ್ಳಷ್ಟು ಭಾಗದ ಉತಾರಗಳನ್ನು ಕಳಿಸಿದರೂ ಸಾಕು.

ಮೇಲ್ಕಾಣಿಸಿದ ಆಜ್ಞೆಯಲ್ಲಿ ಇನ್ನೊಂದು ಏನಂಗೆಯೂ ಉಂಟು. ಅದ್ಯಾವದೆಂದರೆ, ಪರವಾನೆ ಪಡೆದವರು ತಮ್ಮ ಪರವಾನೆಯಲ್ಲಿ ಕಾಣಿಸಿದ ಆಹಾರ-ಧಾನ್ಯದ ವ್ಯಾಪಾರವನ್ನಷ್ಟೇ ಮಾಡಬೇಕು; ಮುಂಬಯಿಯ ಆಹಾರ-ಧಾನ್ಯಗಳ ನಿಯಂತ್ರಣಾಜ್ಞೆಯ ಕಕ್ಷೆಯಲ್ಲಿ ಬರುವ ಎಲ್ಲ ಧಾನ್ಯಗಳ ವ್ಯವಹಾರವನ್ನು ಅವರು ಮಾಡಲಾಗದು.

ಆಜ್ಞೆ.

ನಂ ೫೯

ಕಾನಡಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ ೧೦-೨-೪೮

೧೯೪೬ರ ಅವಶ್ಯಕ ವಸ್ತುಗಳ ಪೂರೈಕೆ (ತಾತ್ಕಾಲಿಕ ಅಧಿಕಾರಗಳು) ಕಾನೂನಿನ (೧೯೪೬ರ ೨೪ನೇ ಕಾನೂನಿನ) ೩ನೆಯ ಕಲಮಿನ (೨)ನೆಯ ಉಪಕಲಮಿನನ್ವಯ ಹಾಗೂ ಹಿಂದುಸ್ಥಾನ ಸರಕಾರದ ಕಾಮಗಾರಿಗಳು, ಗಣಿಗಳು ಮತ್ತು ಶಕ್ತಿ ಇವುಗಳ ಖಾತೆಯವರು ತಾ ೩-೩-೧೯೪೬ಕ್ಕೆ ಹೊರಡಿಸಿದ ೬ ೧೧೦ ನಂಬರದ ಸರಕಾರಿ ಪ್ರಕಟನೆಯನ್ವಯ ದೊರೆತ ಅಧಿಕಾರವನ್ನುಪಯೋಗಿಸಿ, ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ ಇವರು ತಮ್ಮ ಕಚೇರಿಯಿಂದ ತಾ ೫-೧೧-೧೯೪೭ನೇಗೆ ಹೊರಟ ೫೯ನೇ ನಂಬರದ ಆಜ್ಞೆಗೆ ಜೋಡಿಸಿರುವ ಪರಿಶಿಷ್ಟದಲ್ಲಿ ಇಮಾನ ಎಣ್ಣೆಯ ಕೋಟಾ ಹಾಗೂ ಚಿಲ್ಲರೆ ಮಾರಾಟದ ಬಗ್ಗೆ ಹಾಕಿಕೊಟ್ಟ ದರಗಳು ತಾ. ೧-೨-೧೯೪೮ರಿಂದ ಅಮುಶ್ರವಾಗಿ (ಇಂಪೀರಿಯಲ್ ಗೆಲನ್ನುಗಳ ಡಬ್ಬಿ ೧೯) ೯॥ ಆಣೆಗಳಿಂದ ಹೆಚ್ಚು (೨ ಪೈಂಟಗಳಿಗೆ) ೬ ಪೈಗಳಿಂದ ಏರಿಸಲ್ಪಡತಕ್ಕದ್ದೆಂದು ವಿಧಿಸುತ್ತಾರೆ. ಅದೇ ರೀತಿ ಸದರಿ ಆಜ್ಞೆಯಲ್ಲಿ ಸದ್ಯಕ್ಕಿರುವ ೨ನೆಯ ಕಟ್ಟಳೆ (ಕಲಮು) ಸ್ಥಳದಲ್ಲಿ ಈ ಕೆಳಗಿನ (ಹೊಸ) ಕಟ್ಟಳೆಯನ್ನು ಸೇರಿಸಬೇಕೆಂದು ಅವರ ಆಜ್ಞೆಯುಂಟು:—

"೨. ಇಮಾನ ಎಣ್ಣೆಯ ವ್ಯಾಪಾರಿಗಳು, ಯೋಗ್ಯ ಕಾರಣಗಳಿಲ್ಲದೆ, ಸದರಿ ದರದಂತೆ ಬೆಲೆ ಕೊಡುವವರಿಗೆ ಎಣ್ಣೆ ಬೇಡಿದ ಪ್ರಮಾಣದಲ್ಲಿ ಎಣ್ಣೆ ಕೊಡದೆ ಇರಕೂಡದು."

R. J. Rebello,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

ಜಾಹೀರ ನೋಟೀಸು.

ಶಿರ್ಸಿ ತಾಲೂಕ ಸಂಪಖಂಡ ಫಿರ್ಕಾ ಅಡಳ್ಳಿ ಗ್ರಾಮದ ಅಡಳ್ಳಿಯಲ್ಲಿರುವ ರಾಮಚಂದ್ರ ದೇವರ ಹೆಗಡೆ ಈತನು ಜಾಹೀರಪಡಿಸುವದೇನಂದರೆ:—

ನಮ್ಮ ಮನೆಯಲ್ಲಿ ನನ್ನ ತಂದೆ, ತಾಯಿ, ನಾನು ಮತ್ತು ನನ್ನ ಹೆಂಡತಿ ಹೀಗೆ ನಾಲ್ವರು ಏಕತ್ರರಾಗಿ ಬಾಳುತ್ತಿದ್ದೆವು. ಬಾಹಳ ವರ್ಷಗಳಿಂದ ನನ್ನ ತಂದೆ ತಾಯಿಗಳಿಗೂ, ಸದರಿಯವರ ನಡತೆ ನನಗೂ ಸರಿಬಾರದೆ ಮನಸ್ಸು ಕೆಟ್ಟು, ಪಿತ್ರಾರ್ಜಿತ ಸ್ಥಿರ-ಚರ ಸೊತ್ತುಗಳನ್ನು ಎರಡನೇಯವರ ದುರ್ಬೋಧನೆಯಿಂದ ನನಗೆ ಮೋಸಪಡಿಸುವ ದುಷ್ಟ ಹೇತುವಿನಿಂದ ಪರಾಧೀನಪಡಿಸುವ ವಿಚಾರ ನಡೆಸಿದ್ದಾರೆ. ಸದರಿ ಸ್ಥಿರ ಚರ ಸೊತ್ತುಗಳ ಮೇಲೆ ಯಾವದೇ ತರದ ಸಾಲ ಯಾ ಬೋಜಾ ಈ ವರೆಗೂ ಇರುವದಿಲ್ಲ; ಇನ್ನು ಮುಂದೆ ಮಾಡಬೇಕಾದ ಸಂದರ್ಭವೂ ಇಲ್ಲ. ಸದರಿ ಇಸ್ಟೇಟಿಗೆ ತಂದೆಯವರ ತರುವಾಯ ನಾನೇ ಹಕ್ಕುದಾರನು ಹೊರತು ಮತ್ತ್ಯಾರಿಗೂ ಹಕ್ಕು ಬರಲಾರದು. ಕಾರಣ ನನ್ನಂತವರ ಕಡೆಯಿಂದ, ಸದರಿ ಆಸ್ತಿಗಳ ಇನಾಮದಾರಿಯ ಮೇಲೆ ಸಾಲ ಕೊಟ್ಟಲ್ಲಿ ಯಾ ಅಡವು, ದಾನ, ಕ್ರಯ ವಗೈರೆ ರೀತಿಯಿಂದ ಹಕ್ಕು ಪಡಕೊಂಡಲ್ಲಿ ಅದು ಎಷ್ಟಕ್ಕೂ ಸಿಂಧುವಾಗಲಾರದ; ನನ್ನ ಹಕ್ಕಿಗೆ ಯಾವದೇ ರೀತಿಯಿಂದ ಬಾಧ ಬರುತ್ತಿದೆಂಬ ಸಂಗತಿಯನ್ನು ಚನ್ನಾಗಿ ಲಕ್ಷದಲ್ಲಿಟ್ಟು ವರ್ತಿಸತಕ್ಕದ್ದು ತಿಳಿಯುವದು.

ಅಡಳ್ಳಿ, ತಾ ೨೪-೧-೪೮

ರಾಮಚಂದ್ರ ದೇವರ ಹೆಗಡೆ, ಅಡಳ್ಳಿ

ನಂ ೧೪೨. **ಕುಮಟಾ ದಿವಾಣಿ ಕೋರ್ಟಿನಲ್ಲಿ.**

ಮೂಲ ನಂಬರ ೨೪೬-೧೯೪೩.

ವಾದಿ— ಮೆ॥ ಸುಬ್ರಾಯ ರಾಮ ಶೇಟ, ಗಾ. ಕಾ, ನ್ಯಾಟಾಂ, ಸಾ॥ ಹೆಗಡೆ

ವಿರುದ್ಧ

ಪ್ರತಿವಾದಿರು— ೧. ಮೆ॥ ತಿಮ್ಮಣ್ಣ ಬಟ್ಟುಗೌಡಾ, ಹಾಲಕ್ಕಿ, ರೈತ, ಕುಮಟಾ ತಾಲೂಕ ಹೆಗಡೆ ಪೈಕಿ ಕಣ್ಣೀರಕಾಳ ಕೂಡಾ.
ದಾವಾ ಆಕಾರ ರೂ. ೧೪೯-೦-೩.

ಕುಮಟಾ ತಾಲೂಕ ಹೆಗಡೆ ಗ್ರಾಮದ ಸ ನಂ. ೨೨೪ ಹಿಸ್ಸಾ ೨ ವಗೈರೆ ಸ್ಥಳಗಳು ಗ್ರಾಮ ದಪ್ತರದಲ್ಲಿ ಪ್ರತಿವಾದಿಯ ತಿಮ್ಮಣ್ಣ ಹನುಮು ಗೌಡನ ಹೆಸರಲ್ಲಿ (ಖಾತೆಗೆ) ನಮೂದ ಇದ್ದು ಅವುಗಳಲ್ಲಿ ೧ನೇ ಪ್ರತಿವಾದಿಯ ಅಣ್ಣ ಬೀರ ಗೌಡನು ೧/೧೦ನೇ ಅಂಶಕ್ಕೆ ಹಕ್ಕುದಾರನಿದ್ದು ಈತನ ಸೂಚಕರು ಸಾಕ್ಷಿ ಪೈಕಿ ಒಬ್ಬನಾದ ಪ್ರತಿವಾದಿ ಬಲಿಯಪ್ಪನ ಕ್ರಯದ ಅಂಶವನ್ನು ವಾದಿಯು ಕ್ರಯಕ್ಕೆ ಪಡೆದು ಅದನ್ನು ಸರಸ-ನಿರಸ ವಾಂಟಣಿಯಿಂದ ವಿಂಗಡಿಸಿಕೊಳ್ಳಲು ಈ ದಾವಾ ಮಾಡಿರುತ್ತಾನೆ. ಸದರಿ ಬೀರ ಗೌಡನ ಕ್ರಯದವನಾದ ೧ನೇ ಪ್ರತಿವಾದಿರು ಅನುಭವಿಸುತ್ತ ಬಂದ ಸ್ಥಳಗಳು ಅವರ ಒಟ್ಟು ಕುಟುಂಬದ ಒಂದು ವ್ಯವಸ್ಥೆ ಪ್ರಕಾರ ಅವರಿಗೆ ನಡೆದು ಬಂದಿದೆ. ಒಂದು ವೇಳೆ ಸದರಿ ಒಳ-ವ್ಯವಸ್ಥೆ ರದ್ದುಪಡಿಸಿದಲ್ಲಿ ವಾದಿಯು ಸದರಿ ತಿಮ್ಮಣ್ಣ ಹನುಮು ಗೌಡನ ಖಾತೆಗಿದ್ದ ಯಾವತ್ತೂ ಸ್ಥಳಗಳಲ್ಲಿ ೧/೪೦ನೇ ಅಂಶವನ್ನು ವಿಂಗಡಿಸಿಕೊಳ್ಳುವ ಬಗೆ ಬೇಡಿರುತ್ತಾನೆ. ಕಾರಣ, ಸದರ ಸ್ಥಳಗಳಲ್ಲಿ ಸಂಬಂಧವುಳ್ಳವರು ಯಾರಾದರೂ ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಲು ಇಷ್ಟಪಟ್ಟಲ್ಲಿ ಅವರಿಗೆ ಸಂಧಿ ಸಿಗಲೆಂದು ಈ ನೋಟೀಸು ಪ್ರಸಿದ್ಧಿಗೆ ಕೊಟ್ಟಿದೆ. ದಾವಾ ದಾಖಲ ತಾರೀಖು ೧-೯-೧೯೪೩

ಹಾ. ತಾ ೨೩-೧೨-೪೭

L. S. Kamat,
ವಾದಿಯ ವಕೀಲ

ಸಂಬಂಧವುಳ್ಳವರು ಇಷ್ಟವಿದ್ದರೆ ತಾ. ೧೫-೪ ೧೯೪೮ನೇ ಬೆಳಗಿನ ೧೧ ಘಂಟೆಯೊಳಗಾಗಿ ಈ ಕೋರ್ಟಿಗೆ ಸ್ವತಃ ಯಾ ವಕೀಲರ ಮುಖಾಂತರ ಹಾಜರ ಆಗಿ ಸದರ ದಾವೆಯಲ್ಲಿ ಪಕ್ಷಗಾರರಾಗಿ ಸೇರಿ ವ್ಯವಹರಿಸಬಹುದು.

ಕುಮಟಾ
ತಾ ೧೧-೨-೧೯೪೮

S. A. WAGH,
Clerk of the Court,
Court of the Civil Judge.

ಜಾಹೀರ ನೋಟೀಸು

ಈ ಮೂಲಕ ಯಾವತ್ತು ಜನರಿಗೆ ಜಾಹೀರಪಡಿಸುವದೇನಂದರೆ:—

ಕಾನಡಾ ಜಿಲ್ಲಾ ಯಲ್ಲಾಪುರ ತಾಲೂ, ಬಳಗಾರ ಗ್ರಾಮದ ರೆವಿನ್ಯೂ ಸರ್ವೇ ನಂಬರ ೧೪೯, ಕ್ಷೇತ್ರ ೦-೧೬-೦ ಆಕಾರ ೦-೨-೦ ನೇದರ ಮಾಲೀಕರಾದರು ಈ ಕೆಳಗೆ ಸಹಿ ಮಾಡಿದವರು ಇರುತ್ತಿದ್ದು, ಸದರಿ ಮಾಲೀಕಿಯಾದರ ವಿರುದ್ಧ ಗಣೇಶ ನಾರಾಯಣ ಹಳೇಮನೆ, ಬಳಗಾರ ಇವರು ತನ್ನದೂ ಸಹ ಈ ನಂಬರದಲ್ಲಿ ಹಕ್ಕು ಇರುತ್ತದೆಂದು ಅನ್ಯಾಯದ ಸಾಧನೆ ಮಾಡಿದ್ದೂ, ಯೋಗ್ಯ ಹಕ್ಕಿಲ್ಲದೆ, ಈ ಸ್ಥಳದೊಳಗಿನ ಸಾಗವಾನಿ ಮರಗಳನ್ನು ವಿಕ್ರಿಗೆ ಕೊಡಲಿಕ್ಕೆ ಕಂಟ್ರಾಕ್ಟರರ ಕಡೆ ಮಾತು ಮಾಡುವ ಬುದ್ಧಿಯಿಂದ ಸದರಿ ಗಣೇಶ ನಾರಾಯಣ ಹಳೇಮನೆ ಇವರಿಗೆ ಈ ನಂಬರದ ಸ್ಥಳದಲ್ಲಿ ಯಾ ಅದರೊಳಗಿನ ಗಿಡಗಳ ಮೇಲಾಗಲಿ ಏನೂ ಹಕ್ಕು ಇಲ್ಲ, ಹೀಗೆ ಹಕ್ಕಿಲ್ಲದವರ ಕಡೆಯಿಂದ ಹಕ್ಕು ಮಾಡಿಕೊಂಡು ಯಾವದೇ ಕಂಟ್ರಾಕ್ಟರರು ಈ ಸ್ಥಳದೊಳಗಿನ ಯಾವದೇ ತರದ ಗಿಡಗಳನ್ನು ಖರೇದಿಸಕೂಡದು. ಹಾಗೆ ಅವರಿಂದ ಖರೇದಿಸಿದರೆ ಸದರಿ ನಂಬರದೊಳಗಿನ ಗಿಡಗಳನ್ನು ಕಡಿಯಲು ಯಾ ಕಂಟ್ರಾಕ್ಟು ಪಡೆಯಲು ಯಾರಿಗೂ ಹಕ್ಕು ಬರಲಾರದು ಮತ್ತು ಹಾಗೆ ಯಾರಾದರೂ ಈ ನೋಟೀಸ ಮುಟ್ಟಿದಾಗ್ಯೂ ವ್ಯತಿರಿಕ್ತವಾಗಿ ಯಾವದೇ ತರದ ಗಿಡಗಳನ್ನು ಕಡಿದು ಖರೇದಿಸುವ ಕಂಟ್ರಾಕ್ಟ ಪಡಕೊಂಡರೆ ಅವರು ವ್ಯರ್ಥ ನಷ್ಟಕ್ಕೆ ಬೀಳುವರಲ್ಲದೆ, ನನಗಾಗುವ ನಷ್ಟ ಕೆಡಲು ಕಾಯಿದೆಯಂತೆ ಹಕ್ಕುದಾರರಾಗುವರೆಂಬ ಸಂಗತಿ ಎಲ್ಲರೂ ಚನ್ನಾಗಿ ತಿಳಿದಿರತಕ್ಕದ್ದು.

ಬಳಗಾರ (ತಾ ಯಲ್ಲಾಪುರ), ತಾ ೨೩-೧-೪೮

ಗಣಪತಿ ತಿಮ್ಮಣ್ಣ ಹಳೇಮನೆ

ಆಜ್ಞೆ.

ನಾಗರಿಕ ಪೂರೈಕೆ ಖಾತೆ
ಮುಂಬಯಿ ಕೋಟೆ,
ತಾ ೩೦-೧-೧೯೪೮

೧೯೪೬ರ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣ)ದ ಕಾನೂನು

ನಂ. ೪೧೮/ಈ/IV— ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೬ನೆಯ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರಗಳನ್ನುಪಯೋಗಿಸಿ, ೧೯೪೭ರ ಬೇಸಾಯೋಪಯೋಗಿ ಯಾಂತ್ರಿಕ ಸಾಹಿತ್ಯದ (ಬೆಲೆಗಳ ನಿಯಂತ್ರಣದ) ಆಜ್ಞೆಯಲ್ಲಿ (ಅಂದರೆ ತಾ ೨೧-೧೧-೧೯೪೭ರ ೪೧೮/ಈ/IV ನಂಬರದ ಆಜ್ಞೆಯಲ್ಲಿ) ಈ ಕೆಳಗಿನಂತೆ ತಿದ್ದುವ ತಿದ್ದುಪಡಿಯನ್ನು ಮಾಡಬೇಕಾಗಿ ಮುಂಬಯಿ ಸರಕಾರವು ಆಜ್ಞೆ ಮಾಡಿದೆ —

ಸದರಿ ಆಜ್ಞೆಗೆ ಜೋಡಿಸಿರುವ "ಅ", "ಬ" ಪರಿಶಿಷ್ಟಗಳ ಸ್ಥಳಗಳಲ್ಲಿ ಈ ಕೆಳಗಿನ (ಹೊಸ) ಪರಿಶಿಷ್ಟಗಳನ್ನು ಸೇರಿಸಬೇಕು.

"ಅ" ಪರಿಶಿಷ್ಟ

ಮೀದ್ಯೂಲ ಇದ್ದನೆ ಬರುಗ ಎಣ್ಣೆಯ ಸಹಾಯದಿಂದ ನಡಿಸಬರುವ ಹಾಗೂ ೮ ಯಾ ಹೆಚ್ಚಿಗೆ (ಅದರ ೬೦ಕ್ಕೆ ಮಿಕ್ಕದಷ್ಟು) ಅಶ್ವಶಕ್ತಿಯುಳ್ಳ ಇಂಜಿನುಗಳು

"ಬ" ಪರಿಶಿಷ್ಟ

ಅನು ಕ್ರಮಾಂಕ.	ಬೇಸಾಯೋಪಯೋಗಿ ಯಂತ್ರ-ಸಾಹಿತ್ಯದ ತರದ ವರ್ಣನೆಯು	ಮಾರಾಟದ ಪರಿಷ್ಟ ಧಾರಣೆ.
೧	೨	೩

ಮೀದ್ಯೂಲ ಯಾ ಕ್ರೂಡ ಎಣ್ಣೆಯಿಂದ ನಡಿಸಬರುವ ಇಂಜಿನುಗಳು—

(ಅ) ೫ರಿಂದ ೪೦ರ ವರೆಗೆ ಅಶ್ವಶಕ್ತಿಯುಳ್ಳವು.	ಬಂದಿಳದ ಬೆಲೆಯ ೧¼ ಪಟ್ಟು
(ಬ) ೪೧ರಿಂದ ೫೫ರ ವರೆಗೆ ಅಶ್ವಶಕ್ತಿಯುಳ್ಳವು,	ಬಂದಿಳದ ಬೆಲೆಯ ೧⅓ ಪಟ್ಟು
(ಕ) ೫೬ರಿಂದ ೬೦ರ ವರೆಗೆ ಅಶ್ವಶಕ್ತಿಯುಳ್ಳವು	ಬಂದಿಳದ ಬೆಲೆಯ ೧⅔ ಪಟ್ಟು

ಮುಂಬಯಿ ಗವ್ಹರ್ನರರ ಆಜ್ಞೆಯಂತೆ,

A L. Dias,
ಸರಕಾರದ ಜೋಂಟ-ಸೆಕ್ರೆಟರಿ

—R—

DERATIONING OF CLOTH

Following the decision of the Government of India to relax the existing controls on cotton cloth, the Government of Bombay have removed the various restrictions imposed by it on the distribution and sale of cotton cloth in the Province with effect from 1st February 1948. The Bombay Cotton Cloth Trade Regulation Order 1945, the Bombay Hand Printers' Licensing Order, 1944, the Bombay Cloth Ration ing Order 1945, the Bombay Ready-made Clothing (Trade Control and Licensing) Order, 1947 and the Bombay Cotton Cloth and Yarn Brokers Licensing Order in so far as it affects cotton cloth have, therefore, ceased to be operative The necessary notifications have been published in the Bombay Government Gazette (Extraordinary) dated 31-1-1948.

The rationing of cloth in the City of Bombay and Bombay Suburban District will also no longer be in force. The purchase, distribution and movement of cotton cloth in the province will accordingly be free, and there will be no licences required for the sale and storage of cloth

The existing restriction on yarn will however continue.

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Regd. No. B. 1270 Monday, 23-2-1948

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೪

ಕುಮಟಾ:- ಸೋಮವಾರ, ತಾ. ೨೩—೨—೧೯೪೮.

ಜಾಹೀರಾತುಗಳ ದರ:-

ಸ್ಥಳ ಒಪ್ಪಂದ ೧ ಇಂಚಿನ ಉದ್ದ ೧ ಸಾಲಿಗೆ ೮ ಆಣೆಯಂತೆ.

ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾಗುವುದು.

ವರ್ಗಣಿಯ ದರ:

ಕುಮಟೆಯಲ್ಲಿ ವರ್ಷಕ್ಕೆ ರೂ. ೨-೪-೦

ಟಪಾಲದ್ವಾರಾ ವರ್ಷಕ್ಕೆ ೩-೧-೦

,, ೬ ತಿಂಗಳಿಗೆ ೧-೧೦-೦

ಬಿಡಿ ಸಂಚಿಕೆಗೆ ೦-೧-೦

ಹಳೇ ಸಂಚಿಕೆಗೆ ೦-೪-೦

ವ್ಹಿ. ಪಿ. ಯಿಂದ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು

ವರ್ಗಣಿ ಮುಂಗಡವಾಗಿ ಕಳಿಸತಕ್ಕದ್ದು

ಮಹಾತ್ಮರ ಸಮಾಚಾರ.

ಮಹಾತ್ಮರು ಜಗದ್ವಂದ್ಯ ಪುರುಷರೂ ಇಡೀ ಜಗತ್ತಿನ ರಾಜಕಾರಣಿಗಳೂ ಆಗಿದ್ದರು. ಅವರ ನಿಧನವಾಗಿ ೧೮-೨೦ ದಿನಗಳಾದರೂ ಅವರಿಗೆ ಪತ್ರಗಳು ಬರುತ್ತಲೇ ಇವೆ. ದಿನಾಲು ಮಹಾತ್ಮರ ವಿಳಾಸದ ಟಪಾಲು ರಾಶಿರಾಶಿಯಾಗಿ ಬರುತ್ತದಾಗಿ ದಿಲ್ಲಿಯಿಂದ ಸುದ್ದಿ ಬಂದಿದೆ. ಆಸ್ಟ್ರೇಲಿಯಾದವರೊಬ್ಬರು ಜನವರಿ ತಾ. ೨೨ಕ್ಕೆ ಪರ್ಥಪಟ್ಟಣದಿಂದ ಮಹಾತ್ಮರಿಗೆ ಒಂದು ಪತ್ರ ಬರೆದಿದ್ದಾರೆ. ಮಹಾತ್ಮರ ಶಾಂತಿ ಪ್ರಚಾರದ ಮಾರ್ಗವನ್ನು ಲೇಖಕರು ಈ ಪತ್ರದಲ್ಲಿ ಮನಸದಣಿ ಹರಸಿ, ಅದನ್ನು ರಭಸದಿಂದ ಮುಂದರಿಸಲು ಮಹಾತ್ಮರಿಗೆ ಪ್ರಾರ್ಥಿಸಿಕೊಂಡಿದ್ದಾರೆ ಮಾನವ ಜಾತಿಯ ಸೇವೆ ಮಾಡಲು ೧೨೫ ವರುಷಗಳ ದೀರ್ಘಾಯುಷ್ಯವನ್ನು ಮಹಾತ್ಮರಿಗೆ ಜಗಚ್ಚಾಲಕನು ಅನುಗ್ರಹಿಸಲೆಂದೂ ಪ್ರಾರ್ಥಿಸಿ ಈ ಪತ್ರ ಓದಿ ಮಹಾತ್ಮರ ಆಪ್ತೇಷ್ಟ-ಮಿತ್ರರು ಕಣ್ಣೀರು ಸುರಿಸಿದರು.

ಮಹಾತ್ಮರ ಕೊಲೆಯಾದ ಬಗ್ಗೆ ಜನರು ಮರುಗುವದು ಸ್ವಾಭಾವಿಕ. ಕೊಲೆಗಡಕ ಪಾಪಿಯನ್ನು ಅಧಿಕ್ಷೇಪಿಸುವದೂ ನ್ಯಾಯದ ಮಾತು ಆದರೆ ಮಹಾತ್ಮರಿಗೆ ಅವರು ಅಪೇಕ್ಷಿಸಿದ ಸಾವು ಪ್ರಾಪ್ತವಾಯಿತೆಂದು ಹೇಳಬಹುದು. ೧೯೪೨ನೇ ಇಸ್ವಿಯ ಅಗಸ್ಟ ತಿಂಗಳಲ್ಲಿ ಮಹಾತ್ಮರು ಉಪೋಷಣ ಮಾಡಿದಾಗ ಮಹಾತ್ಮರು ಇನ್ನು ಬದುಕವಂತಿಲ್ಲೆಂದು ಹಿಂದುಸ್ಥಾನ ಸರಕಾರವು ಎಣಿಸಿ, ಸೆರೆಮನೆಯಿಂದ ಅವರ ಬಿಡುಗಡೆ ಮಾಡಿತು. ಆಗ ಮಹಾತ್ಮರ "ಹರಿಜನ" ಪತ್ರಿಕೆಯನ್ನು ನಡಿಸುವ ಭಾರ ಶ್ರೀ|| ಆನಂದ ಹಿಂಗುರಾಣಿಯವರ ಮೇಲಿತ್ತು. ಉಪೋಷಣ ಮಾಡಿ ತೀರಿಕೊಂಡರೆ ಅದೊಂದು ಕೀರ್ತಿಯುಕ್ತ ಮರಣವಾಗುತ್ತಿತ್ತೆಂದು ಶ್ರೀ|| ಹಿಂಗುರಾಣಿಯವರು ಒಂದು ದಿನ ಮಹಾತ್ಮರೊಡನೆ ಏಕಾಂತದಲ್ಲಿ ಮಾತಾಡುತ್ತಿದ್ದಾಗ ಉದ್ಗರಿಸಿದ್ದರಂತೆ. ಆಗ "ಅದರೊಳಗೆಂಥ ಕೀರ್ತಿಯುಂಟು." ವೀರರಿಗೆ ಉಚಿತವಾದ ಮರಣ ನನಗ ಬರುವದೆಂದು ನನ್ನ ಜಾತಕದಲ್ಲಿದೆ." ಎಂದು ಮಹಾತ್ಮರು ನುಡಿದರಂತೆ. ಉಪೋಷಣಮಾಡಿ ಕ್ರಮವಾಗಿ ಸಾಯಲಿಕ್ಕೆ ಉಚ್ಚ ಪ್ರತಿಯ ಧೈರ್ಯ ಬೇಕಾಗುತ್ತದೆಂದು ಶ್ರೀ|| ಹಿಂಗುರಾಣಿಯವರು ಪ್ರತಿಪಾದಿಸಲಾಗಿ, ಮಹಾತ್ಮರು ಪುನಃ ಹೇಳಿದ್ದೇನಂದರೆ:—

No, I do not think so My death is to come about either ow the gallons or by shooting and that indeed would be a truly heroic death, not one by fasting in bed " (ಇಲ್ಲ ! ನನಗೆ ಹಾಗೆ ತೋರುವದಿಲ್ಲ ಒಂದೇ ಗಲ್ಲಿಗೇರಿ ಇಲ್ಲವೆ ಗುಂಡಿನ ಹೊಡತದಿಂದ ನಾನು ಸಾಯುವೆನೆಂದು ನನಗನಿಸುತ್ತದೆ ಅಂಥ ಸಾವೇ ನಿಜವಾಗಿ ವೀರರಿಗೆ ಉಚಿತವಾದದ್ದು. ಹಾಸಿಗೆಯ ಮೇಲೆ ಉಪೋಷಿತ ಮಲಗಿ ಸಾಯುವದು ಎಂದೂ ವೀರಮರಣವಲ್ಲ.)

ಮಹಾತ್ಮರಿಗೆ ನಥುರಾಮ ಗೋಡಸೆಯು ಗುಂಡಿನಿಂದ ಹೊಡೆದದ್ದರ ವೃತ್ತಾಂತವನ್ನು 'ಹರಿಜನ' ಪತ್ರಿಕೆಯಲ್ಲಿ ಶ್ರೀ|| ಪ್ಯಾರೇಲಾಲರು, ಹೀಗೆ ಕೊಟ್ಟಿದ್ದಾರೆ "ಮಹಾತ್ಮರು ಆ ದಿವಸ ಪ್ರಾರ್ಥನಾಸ್ಥಳಕ್ಕೆ ಬರಲು ೧೦ ನಿಮಿಷ ವಿಳಂಬವಾಯಿತು. ಪ್ರಾರ್ಥನಾಸ್ಥಳದಲ್ಲಿ ಸರಿಯಾಗಿ ೫ ಘಂಟೆಗೆ ಹಾಜರ ಇರಬೇಕೆಂದು ತಮ್ಮ ಆಗ್ರಹ ಉಂಟೆಂದು ಮಹಾತ್ಮರು ತಮ್ಮ ಮೊಮ್ಮಕ್ಕಳಾದ ಆಭಾ ಮತ್ತು ಮನು ಗಾಂಧಿ ಇವರೊಡನೆ ಉದ್ಗರಿಸಿ ಉಭಯತರ ಹೆಗಲ ಮೇಲೆ ಕೈಗಳನ್ನಿಟ್ಟು, ಮೌನದಿಂದ ಪ್ರಾರ್ಥನಾಸ್ಥಳಕ್ಕೆ ಹೋದರು ಪ್ರಾರ್ಥನೆಗಾಗಿ ಸೇರಿದ ಜನಸ್ತೋಮವು ಅವರಿಗೆ ವಂದಿಸಿತು! ಮಹಾತ್ಮರು ಮಕ್ಕಳ ಹೆಗಲ ಮೇಲಿಟ್ಟ ಎರಡೂ ಕೈಗಳನ್ನು ತೆಗೆದು ಜನಸ್ತೋಮಕ್ಕೆ ವಂದಿಸಿ ಮುಂದಾದರು ಆಗ ಬಲಬದಿಯಿಂದ ಒಬ್ಬನು ಒಮ್ಮೆಲೇ ಜನರನ್ನು ತನ್ನ ಬಾಹುಬಲದಿಂದ ಬದಿಗೆ ಸರಿಸುತ್ತ ರಭಸದಿಂದ ಮಹಾತ್ಮರಿದ್ದಲ್ಲಿ ಸಾಗಿ ಬಂದನು. ಆತನು ಮಹಾತ್ಮರ ಚರಣಗಳಿಗೆ ಎರಗಲು ಬರುತ್ತಾನೆಂದು ಚಿಕ್ಕ ಮನುವು ಭಾವಿಸಿ, ಪ್ರಾರ್ಥನೆಯ ಸಮಯ ಮೊದಲೇ ಮೀರಿತೆಂದು ಹೇಳಿ, ಆತನ ಕೈ ಹಿಡಿದು ಬದಿಗೆ ಮಾಡಲು ಉದ್ಯುಕ್ತಳಾದಳು. ಆದರೆ ಆತ ಆಕೆ ಕೈಯನ್ನು ಜೋರಿನಿಂದ ಹಿಸುಕಿದನು. ಅದರಿಂದ ಮನುಳ ಕೈಯಲ್ಲಿದ್ದ ಆಶ್ರಮ ಭಜನಾವಳಿ, ಮಹಾತ್ಮರ ಎಂಜಲ ಪಾತ್ರ ಮತ್ತು ಮಣಿಮಾಲೆಗಳು ನೆಲಕ್ಕೆ ಬಿದ್ದವು ಅವನ್ನು ಹೆಕ್ಕಿಕೊಳ್ಳಲು ಮನು ಬಗ್ಗಿದಳು. ಇದೇ ಸಮಯದಲ್ಲಿ ನುಗ್ಗಿ ಬಂದ ಆ ದುರಾತ್ಮನು ಮಹಾತ್ಮರ ಮುಂಭಾಗದಲ್ಲಿ ತೀರ ಸಮೀಪ ನಿಂತುಕೊಂಡು ಕೈಯಲ್ಲಿದ್ದ ೭ ತೋಟೆಗಳ ಪಿಸ್ತೂಲಿನಿಂದ ಗುಂಡುಗಳನ್ನು, ಒಂದರ ಹಿಂದೊಂದರಂತೆ, ಹೊಡೆದನು ಮೊದಲನೇ ಗುಂಡು ಹೊಟ್ಟೆಯ ಬಲ ಬದಿಯಲ್ಲಿ ಸೇರಿ ಬೆನ್ನೊಳಗಿಂದ ಪಾರಾಯಿತು ೨ನೇ ಗುಂಡು ಎದೆಯ ಬಲ ಬದಿ ಸೇರಿ ಪಾರಾಯಿತು. ೩ನೇ ಗುಂಡು ಪುಪ್ಪುಸದಲ್ಲಿ ಸೇರಿ ಕೂತಿತು ೧ ಗುಂಡಿನ ಕವಚವು ಮಹಾತ್ಮರ ಹೊದಿಕೆಯ ನಿರಿಗೆಗಳಲ್ಲಿ ಸಿಕ್ಕಿಕೊಂಡಿತ್ತು. ಮೊದಲನೆಯ ಗುಂಡಿನ ಹೊಡತಕ್ಕೆ ಮಹಾತ್ಮರು ಮುಂದೆ ಹಾಕಿದ ಕಾಲನ್ನು ಹಿಂದೆಗೆದುಕೊಂಡು ನಿಂತರು. ೩ನೆಯ ಗುಂಡು ತಾಗಿದೊಡನೆ "ರಾಮ ರಾಮ" ಎಂದು ರಾಮಸ್ಮರಣೆ ಮಾಡುತ್ತ ಕೆಳಗೆ ಬಿದ್ದರು, ಮೋರೆ ನಿಳಿಯಾಗ ಹತ್ತಿತ್ತು, ಬೆಳ್ಳನ್ನ ಹೊದಿಕೆಗಳ ಮೇಲೆ ಹೊರ ಚಿಮ್ಮುವ ರಕ್ತದ ಕೆಂಪು ಕಲೆಗಳು ಹೆಚ್ಚಿದವು. ಜನಸ್ತೋಮವನ್ನು ವಂದಿಸುತ್ತಿ ಮಹಾತ್ಮರ ಕೈಗಳು ತಾವಾಗಿ ಮೆಲ್ಲಗೆ ಕುಸಿದವು ಒಂದು ಕೈ ಆಭಾಳ ಹೆಗಲ ಮೇಲೆ ಬಿತ್ತು. ಹಾಗೆಯೇ ಅವರ ಜಡದೇಹ ನೆಲಕ್ಕೆ ಉರುಳಿತು. ಆತನ ಮನು, ಆಭಾ ಇವರಿಗೆ ಏನಾಯಿತೆಂಬದು ತಿಳಿದಿಲ್ಲ, ಆಮೇಲೆ ಗೆಳೆಯರು ಮಹಾತ್ಮರನ್ನು ಒಳಗೊಯ್ದು, ಅವರು ಕೂತುಕೊಳ್ಳುವ ಚಾಪೆಯಮೇಲೆ ಮಲಗಿಸಿದರು. ಡಾಕ್ಟರರಿಗೆ ಕೂಡಲೇ ಕರೆ ಹೋಯಿತು ಒಂದು ಚಮಚೆಯಲ್ಲಿ ಜೇನುತುಪ್ಪ ಮತ್ತು ಬೇಸಿ ನೀರು ಕೂಡಿಸಿ ಮಹಾತ್ಮರ ಬಾಯೊಳ ಹಾಕಲಾಯಿತು. ಅದು ಗಂಟಲೊಳಗೆ ಇಳಿಯಲಿಲ್ಲ ಯಾವದೇ ವೈದ್ಯಕೀಯ ಉಪಚಾರ ಮಾಡುವ ಮುಂಚೆಯೇ ಮಹಾತ್ಮರ ಪ್ರಾಣ ಹಾರಿಹೋಯಿತು.

ಮಹಾತ್ಮರಿಗೆ ಗುಂಡು ಹಾಕಿದ ನಥುರಾಮನನ್ನು ಬಿರ್ಲಾ ಭವನದ ತೋಟಗಾರನು ಅಲ್ಲಿಂದಲ್ಲೇ ಹಿಡಿದನು. ಆತನ ಹಿಡಿತದಿಂದ ತಪ್ಪಿಸಿಕೊಳ್ಳಲು ಗೋಡಸೆಯು ಬಹಳ ಹೆಣಗಾಡಿದನು. ಆದರೆ ತೋಟಗಾರನು ಬಿಡಲಿಲ್ಲ. ಈ ಗುದ್ದಾಟದಲ್ಲಿ ತೋಟಗಾರನಿಗೆ ಚಲೋ ಪೆಟ್ಟಾಗಿದೆ. ಕೊಲೆಗಡಕನು ೩ ಹೆಜ್ಜೆಗಳ ದ ಭರಭರನೆ, ನಿಮಿಷಾರ್ಧದಲ್ಲಿ, ನುಗ್ಗಿ ಬಂದನೆಂದೂ ನೋಡನೋಡುವಷ್ಟರಲ್ಲಿ ಮಹಾತ್ಮರ ಮುಂಭಾಗದಲ್ಲಿ ನಿಂತು ಗುಂಡುಗಳನ್ನು ಹಾರಿಸಿದನೆಂದೂ ಆತನು ಹೇಳುತ್ತಾನೆ. ಈಗ ಆತ ಆಸ್ಪತ್ರೆಯಲ್ಲಿ ಉಪಚರಿಸಿಕೊಳ್ಳುತ್ತಿದ್ದಾನೆ. ಮೇಲಿಂದ ಮೇಲೆ ಆತನು ಎಚ್ಚರ ತಪ್ಪಿ, ತಾನು ನೋಡಿದ ದುಷ್ಟನ ಆರ್ಭಟವನ್ನು ಕನವರಿಸಿ ಗುಣುಗುಣುತ್ತಿರುತ್ತಾನೆ.

ನಥುರಾಮ ಗೋಡಸೆಯು ಪುಣೆಯಲ್ಲಿ "ಹಿಂದುರಾಷ್ಟ್ರ"ವೆಂಬ ಮರಾಠಿ ನಿತ್ಯಪತ್ರಿಕೆಯನ್ನು ಹೊರಡಿಸುತ್ತಿದ್ದನು. ಆ ಪತ್ರಿಕೆಯ ಮುಖಾಂತರ ಆತ ಮಹಾತ್ಮರ ಮೇಲೂ ರಾಷ್ಟ್ರೀಯ ಸಭೆಯವರ ಮೇಲೂ ವಿಷ ಕಾರುತ್ತಿದ್ದನು. ಮಹಾತ್ಮರು ಮುಸಲ್ಮಾನರ ಪಕ್ಷಪಾತಿಗಳೆಂದೂ ಹಿಂದು ಸಮಾಜದ ಕಡು ವೈರಿಗಳೆಂದೂ ಪ್ರಚಾರ ನಡೆಸಿದ್ದನು ಮಹಾತ್ಮರು ಸುರಕ್ಷಿತರಲ್ಲೆಂದೂ ಮಹಾತ್ಮರನ್ನು ಕಾಯಲು ಹಿಂದುಸ್ಥಾನ ಸರಕಾರವು ಸಶಸ್ತ್ರ ಕಾವಲು ಇಡಬೇಕೆಂದೂ ತಾ. ೨೮-೧-೪೮ರ "ಹಿಂದು-ರಾಷ್ಟ್ರ"ದಲ್ಲಿ ಬರೆದಿದ್ದನು ಆ ಪತ್ರಿಕೆಯ ಕೊನೆಯ ಸಂಚಿಕೆ ಜನ

ESTD: 193 .

The Agricultural & Industrial Bank, Ltd.

(Incorporated in British India, Liability of Members Limited)

Head Office: COONDAPOOR.

Authorised Capital	...	Rs. 25,00,000-0-0.
Issued Capital	...	,, 11,61,850-0-0.
Paid-up Capital & Reserves	,,	8,43,256-2-0

SAVINGS BANK ACCOUNTS are opened with the minimum amounts and interest allowed at 2%.

CURRENT ACCOUNTS are opened. Interest allowed at 1%.

SEASON DEPOSITS of 3 and 6 months are accepted.

For Terms, please apply to Head Office, or to our nearest Branch.

Nivas "Laxmy Buildings, COONDAPOOR, 1-12-1947.

K. VAMAN SHENAI, CHAIRMAN.

ವರಿತು ಬರೆದಿರುತ್ತದೆ. ಈ ಸಂಚಿಕೆಯಲ್ಲಿ ಪಂ॥ ಜವಾಹರಲಾಲರ ವಿರುದ್ಧ ಕಡುತರ ಟೀಕೆ ಪ್ರಕಟವಾಗಿದೆ.

ಗೋಡಸೆಯು ಮಾಡಿದ ಮಹಾತ್ಮರ ಕೊಲೆಯು ಒಂದು ದೊಡ್ಡ ವ್ಯೂಹದ ಅಂಗವಾಗಿರುತ್ತದೆಂದು ಎಣಿಸಲ್ಪಡುತ್ತಿದ ಮಹಾಂತ್ಮಾದಿ ಲೋಕನಾಯಕರು ಹಿಂದು ಜನಾಂಗದ ವಿರೋಧಿಗಳೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಾಗೂ ಹಿಂದು ಮಹಾಸಭೆಯ ಕೆಲವರು ಎಣಿಸಿ, ಅವರ ಕೊಲೆ ಮಾಡಲು ವ್ಯೂಹ ರಚಿಸಿದ್ದರೆಂದು ಹೇಳೋಣ ಗುತ್ತದ ಈ ವ್ಯೂಹಕ್ಕೂ ಒಳಸಂಚಿಗೂ ಸಂಬಂಧಪಟ್ಟ ಪುರಾವೆ ಸಂಗ್ರಹಿಸಲ್ಪಟ್ಟಿದೆ. ಸದ್ಯಕ್ಕೆ ದಿಲ್ಲಿಯ ಕಂಪ್ಲೀಟಿಯಲ್ಲಿ ನಥೂರಾಮ ಗೋಡಸೆಯು ಹಾಗೂ ಆತನ ಸಂಗಡಿಗರ ವಿಚಾರಣೆಯಾಗುವದಿದೆ. ನಥೂರಾಮನು ಕೊಲೆಯ ಕಪಟ ವ್ಯೂಹವನ್ನು ನಿಶ್ಚಯಿಸಿ ತನದಿಂದ ನ್ಯಾಯಸ್ಥಾನಕ್ಕೆ ಅರುಹಲಿದ್ದಾನೆಂದೂ ಸರಕಾರವು ಆತನಿಗೆ ರಾಜ ಕ್ಷಮೆಯನ್ನು ದಯಪಾಲಿಸುವದೆಂದೂ ವಾರ್ತೆಯುಂಟು.

ಮಹಾತ್ಮರ ಕೊಲೆಯಾದದ್ದು ಶುಕ್ರವಾರ. ಯೇಸು ಕ್ರಿಸ್ತನಿಗೆ ಗಲ್ಲಿಗೇರಿಸಿದ್ದೂ ಶುಕ್ರವಾರ. ಇದರಿಂದ ಅವತಾರಿ ಶಾಂತಿ-ದೂತರು ಅಂತರ್ಧಾನ ಹೊಂದುವ ದಿನ ಶುಕ್ರವಾರವೇ ಬೇಕೆಂಬದೊಂದು ಭಾವನೆ ರೂಢವಾಗುತ್ತಿದೆ.

ಜನವರಿ ೩೧ನೇ ಮುಂಬಯಿಯಲ್ಲಿ ಹಿಂದು-ಮಹಾವಿಯಗಳಿಂದ ದ್ವಾದಶವರೆಗೆ ನೂರಾರು ಮಂದಿ ಮುಸಲ್ಮಾನರು ಮಹಾತ್ಮರ ವಿಗ್ರಹದ ಮೆರವಣಿಗೆ ಮಾಡಿ, ಸಮುದ್ರ ದಂಡೆಯ ಮೇಲೆ ಸಭೆ ಮಾಡಿದ್ದರು. ಈ ಸಭೆ-ಮೆರವಣಿಗೆಗಳಲ್ಲಿ ಮಾಂಸ ಮಾರುವವರೂ ಕಿರಾಣಿ ಅಂಗಡಿಕಾರರೂ ಇತರರೂ ಇದ್ದರು. ಸಭಿಕರು ಪವಿತ್ರ ಕುರಾಣದೊಳಗಿನ ಫತೀಹಾ ಹಾಡನ್ನು ಹಾಡಿದ ಬಳಿಕ "ರಘುಪತಿ ರಾಘವ ರಾಜಾರಾಮ" ಎಂಬ ಮಹಾತ್ಮರ ಅತ್ಯಂತ ಪ್ರೀತಿಯ ಭಜನೆಯನ್ನು ಹಾಡಿದರು. ಕೆಲಹೊತ್ತಿನ ನಂತರ ನೆರೆಹೊರೆಯಲ್ಲಿದ್ದ ಹಿಂದುಗಳೂ ಸಿಖರೂ ಆ ಸಭೆಯಲ್ಲಿ ಸೇರಿ, ಒಂದೇ ದನಿಯಿಂದ "ರಘುಪತಿ ರಾಘವ ರಾಜಾರಾಮ" ಹಾಡಹತ್ತಿದರು. ಹೀಗೆ ಹಾಡುತ್ತಿರುವಾಗ ಹಿಂದು-ಮುಸಲ್ಮಾನ ಸಿಖ ಸಭಿಕರ ಕಣ್ಣುಗಳೊಳಗಿಂದ ಕಣ್ಣೀರು ಸುರಿಯುತ್ತಿತ್ತಾಗಿ "ಮುಂಬಯಿ ಕ್ರೊನಿಕಲ್" ಪತ್ರಿಕೆಯಲ್ಲಿ ಪ್ರತ್ಯಕ್ಷದರ್ಶಿಗಳೊಬ್ಬರು ಬರೆದಿದ್ದಾರೆ.

ಮಹಾತ್ಮರ ನಿಧನದಿಂದ ಲಾಹೋರ, ಕರಾಚಿ ಮೊದಲಾದ ಪಾಕಿಸ್ತಾನಿ ಪ್ರದೇಶಗಳಲ್ಲೂ ಶೋಕಪ್ರಳಯವುಂಟಾಗಿತ್ತು. ಕರಾಚಿಯೊಳಗೆ, ಗಡಿನಾಡಿನ ಪಠಾಣನೊಬ್ಬನು ಮಹಾತ್ಮರ ವಿಗ್ರಹದೆದುರಿಗೆ ಇಡೀ ರಾತ್ರಿ ನಿಷ್ಠೆಯಿಂದ ನಿಂತು ಕಣ್ಣೀರು ಸುರಿಸುತ್ತಿದ್ದನಂತೆ. ಕರಾಚಿಯ ಮುದ್ರಣಾಲಯಗಳಲ್ಲಿ ಕೆಲಸ ಮಾಡುವ ಮುಸಲ್ಮಾನ ಕೆಲಸಗಾರರು ವ್ಯಥಿತರಾಗಿ, ಆ ದಿವಸ ಏನೇನೂ ಕೆಲಸ ಮಾಡಲಿಲ್ಲ. ಹಿಂದುಸ್ಥಾನ-ಪಾಕಿಸ್ತಾನಗಳು ಬೇರೆಬೇರೆಯಾದಾಗ್ಯೂ ಮಹಾತ್ಮರ ನಿಧನದಿಂದ ಎರಡೂ ಪ್ರದೇಶಗಳು ಒಂದೇ ಎಂಬ ಭಾವನೆಯುಂಟಾಯಿತು.

ಮಹಾತ್ಮರ ನಿಧನದಿಂದ ವ್ಯಥೆಗೊಂಡು ಸುರತದ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ರತಿಲಾಲ ದಯಾಳ ಕನಾಲಿವಾಲಾ ಎಂಬವರು ಫೆಬ್ರುವರಿ ತಾ ೧೧ರಿಂದ ಉಪವಾಸ ವ್ರತ ಕೈಕೊಂಡಿದ್ದರು. ಕಳೆದ ಗುರುವಾರ ಅವರು ಸ್ವರ್ಗಸ್ಥರಾದರು.

ಮಹಾತ್ಮಾಜಿಯವರ ಜೀವನವನ್ನು ಚಿರ ಸ್ಮರಣೀಯವನ್ನಾಗಿ ಮಾಡುವದಕ್ಕಾಗಿ ಸಮಿತಿ ಮೈಸೂರ ತನಗಳಲ್ಲಿ ಮಹಾತ್ಮರ ಕಾಲಜೀವನ ಪ್ರತಿ ನಿಧಿ ರಾಜಮನವರು ...

ಜೋಗ ಜಲಪಾತದಿಂದ ಮೈಸೂರ ಸರಕಾರದವರು ಕಟ್ಟಿಸಿದ ವಿದ್ಯುಚ್ಛಕ್ತಿ ಕೇಂದ್ರದ ಪ್ರಾರಂಭೋತ್ಸವವು ಮೊನ್ನೆ ಮಧ್ಯಾಹ್ನ ಮೈಸೂರ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ ಹಸ್ತದಿಂದ ನೆರವೇರಿತು. ಮಹಾರಾಜರು ಕಾರ್ಯಾಗಾರವನ್ನು ಉದ್ಘಾಟನೆ ಮಾಡಿದರು. ಈ ಸ್ಥಾನದಲ್ಲಿ ಅತಿದೊಡ್ಡದಾದ ಈ ವಿದ್ಯುದುತ್ಪತ್ತಿ ಕೇಂದ್ರಕ್ಕೆ "ಮಹಾತ್ಮಾ ಗಾಂಧಿ ಜಲ ವಿದ್ಯುದಾಗಾರ" ವೆಂದು ನಾಮಕರಣ ಮಾಡಿದ್ದಾರೆ. ಮೊಟ್ಟಮೊದಲು ಈ ಕಾರ್ಯಾಗಾರದಲ್ಲಿ ವಿದ್ಯುತ್ ಉತ್ಪಾದಕ ಯಂತ್ರಗಳು ಕೆಲಸ ಮಾಡಹತ್ತಿವೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಒಂದೆರಡು ದಿನಗಳಿಂದ ಇಲ್ಲಿ ಏನೇನೂ ಇಳಿಕೆಯಾಗತೊಡಗಿದೆ.

ಇತ್ತೀಚೆ ಎರಡು ವಾರಗಳಿಂದ ಅಕ್ಕಿಯ ಧಾರಣೆ ಇಳಿಯುತ್ತಿದೆ! ಹಿಂದೆ ರೂ ೧೪೦, ಕಡೆ ೧೨೫ಕ್ಕೆ ೧ ಖಂಡಿಯಂತೆ ಸಿಗುತ್ತಿದ್ದ ಅಕ್ಕಿಗೆ ಈಗ ರೂ ೧೧೦ ಹೇಳುತ್ತಾರೆ! ಕೆಲವು ದೊಡ್ಡ ವ್ಯಾಪಾರಿಗಳು ಹೆಚ್ಚು ಬೆಲೆಗಾಗಿ ಅಕ್ಕಿಯನ್ನು ಶೇಖರಿಸಿದ್ದು, ಮಾರುತ್ತಿರಲಿಲ್ಲ. ಈ ದಸ್ತಗಿರಿ ಆದ ಕೂಡಲೇ ಅವರು ದೊಡ್ಡ ಪ್ರಮಾಣದಿಂದ ಅಕ್ಕಿಯ ಖರೀದಿ ಮಾಡುತ್ತಿರುವದರಿಂದಲೂ ಅಕ್ಕಿಯ ದರಗಳು ಇಳಿಯುತ್ತಿರುತ್ತವೆಂದು ಅಕ್ಕಿ-ಭತ್ತದ ಪೇಟೆಗಳ ನಿರೀಕ್ಷಕರು ಹೇಳುತ್ತಾರೆ. ವ್ಯಾಪಾರಿಗಳು ಈ ದುವ್ಯಾಪಾರವನ್ನು ಕೂಡಲೇ ನಿಲ್ಲಿಸದಿದ್ದರೆ ಜಿಲ್ಲಾಧಿಕಾರಿಗಳು ಪುನಃ ನಿಯಂತ್ರಣಗಳನ್ನು ಹಾಕುವ ಪ್ರಸಂಗ ಬರುವದು.

ಇಲ್ಲಿಯ ಶ್ರೀ ವೆಂಕಟರಮಣ ದೇವರ ರಥೋತ್ಸವವು ಕಳೆದ ಮಂಗಳವಾರ ಪೂರ್ವ ಪದ್ಧತಿಯಂತೆ ವಿಜೃಂಭಣೆಯಿಂದ ಸಾಂಗವಾಗಿ ನೆರವೇರಿತು.

ಜಿಲ್ಲಾಧಿಪತಿಗಳು ತಾ ೧೯ಕ್ಕೆ ಒಂದು ಪರಿಪತ್ರ ಹೊರಡಿಸಿ, ಇನ್ನುಮುಂದೆ ಸ್ವಂತ ಮೋಟಾರ-ಬಂಡಿಗಳಲ್ಲಿ ಆಹಾರ-ಧಾನ್ಯಗಳ ಸ್ಥಳಾಂತರ ಪರವಾನೆ-ದಾರರಿಗೆ ಪೆಟ್ರೋಲ ಕೊಡಲಾಗುವದೆಂದೂ, ಇನ್ನಿತರ ವ್ಯಾಪಾರಗಳ ಸಂಬಂಧದಲ್ಲಿಯ ಕೆ. ಟಿ. ಕಂಪನಿ, ಟಿಕ್ರಾಪುರ ಎಕ್ಸಪ್ರೆಸ್, ಜಿ ವ್ಹಿ ಪೈ ಮತ್ತು ಕಂಪನಿ, ಆರ್ ಎಚ್ ಶೆಟ್ಟಿ ಮತ್ತು ಬಂಧುಗಳು, ಎನ್ ವ್ಹಿ ನಾಯಕ ಮತ್ತು ಮಕ್ಕಳು (ಭಟಕಳ), ಏ ಬಿ ಕಂಪನಿ (ಹುಬ್ಬಳ್ಳಿ), ಹರಿಪುರಕರ ಮತ್ತು ಕಂಪನಿ (ಬೆಳಗಾಂವ), ಗುಡ್ಸ್ ಟ್ರಾನ್ಸಪೋರ್ಟ ಕಂಪನಿ (ಶಿರಸಿ) ಸಂಸ್ಥೆಗಳ ಕೆಲವೊಂದು ನಿರ್ದಿಷ್ಟ ಗಾಡಿಗಳಿಗೆ ಪೆಟ್ರೋಲ ಕೊಡಲಾಗುತ್ತದೆಂದೂ ತಿಳಿಸಿದ್ದಾರೆ. ಆಹಾರ-ಧಾನ್ಯಗಳ ಕೋಶ ವ್ಯಾಪಾರಿಗಳು ತಮಗೆ ಪೆಟ್ರೋಲ ಬೇಕಾದರೆ ಈ ಸಂಸ್ಥೆಗಳ ಮುಖಾಂತರವೇ ಅರ್ಜಿ ಮಾಡಬೇಕು. ಆಹಾರ-ಧಾನ್ಯಗಳ ಸಾಗಾಟಕ್ಕೆ, ಈ ಸಂಸ್ಥೆಗಳು ೧ ಟನ್ನ ಆಹಾರ ಧಾನ್ಯಕ್ಕೆ ೧ ಮೈಲಿಗೆ ೬೦ ಆಣೆಗಿಂತ ಮತ್ತು ಒಂದು (ಲೋಡ) ಗಾಡಿ ತುಂಬ ಆಹಾರ-ಧಾನ್ಯಕ್ಕೆ ಮೈಲಿಗೆ ೧೦ ಆಣೆಗಿಂತ ಹೆಚ್ಚಿಗೆ ಆಕಾರಣೆ ಮಾಡಕೂಡದೆಂದೂ ಜಿಲ್ಲಾಧಿಕಾರ ಅಪ್ಪಣೆಯಿದೆ.

ಕಳೆದ ತಾ ೧೨ನೇಗೆ ಮೂರೂರ ಶಾಲೆಯಲ್ಲಿ ಮಹಾತ್ಮಾಜಿಯವರ ಸ್ಮರಣಾರ್ಥ ಊರವರೂ ಶಾಲೆಯವರೂ ಸಭೆ ಸೇರಿದ್ದರಿಂದೂ, ಮಹಾತ್ಮರ ಭಾವಚಿತ್ರದ ಪೂಜೆ, ಅವರ ಗುಣಗಾನ, ಅವರ ತತ್ವಗಳ ವಿವರಣೆ ಮೊದಲಾದ ಕಾರ್ಯಗಳು ಜರುಗಿದವೆಂದೂ ವರದಿ ಬಂದಿದೆ.

ಹೆರವಟ್ಟೆಯ ರಾ॥ ಗೋಪಾಳ ನಾಯಕರು ಆಚೆಯ ಬುಧವಾರ (ತಾ ೧೧) ಮಧ್ಯಾಹ್ನ ಹೊನ್ನಾವರ ತಾಲೂಕ ಜಡ್ಡಿಗದ್ದೆಯಲ್ಲಿ ೧ ಚಿರ್ತೆಯನ್ನು ಗುಂಡು ಹಾಕಿ ಕೊಂದರು. ಆ ಚಿರ್ತೆ ೭ ಅಡಿ ಉದ್ದವಿತ್ತು, ಕೆಲದಿನಗಳನ್ನೂ ಕುಂದಿತು.

ಶ್ರೀ ಕ್ಷೇತ್ರ ಗೋಕರ್ಣದೊಳಗಿನ ಮಹಾಬಲೇಶ್ವರ ಉಪಾಧ್ಯರ ಮನೆತನದಲ್ಲಿ ಹಿಂದಿನಿಂದ ಅಗ್ನಿಹೋತ್ರ ನಡೆಸಬಂದಿದೆ. ಈ ಮನೆತನದ ಬ್ರಹ್ಮಶ್ರೀ ಮಹಾಬಲೇಶ್ವರ ಉಪಾಧ್ಯರೂ ಬ್ರಹ್ಮಶ್ರೀ ದತ್ತಾತ್ರಯ ಉಪಾಧ್ಯರೂ ಸೋಮಯಾಗ, ಗರುಡಚಯನ ಮೊದಲಾದ ಯಜ್ಞಗಳನ್ನು ಮಾಡಿಗ್ತಂಟು. ಕೈ. ವಾ. ದತ್ತಾತ್ರಯ ಉಪಾಧ್ಯರ ನಂತರ ಅವರ ಹಿರೀ ಮಗನಿಂದ ವೇ॥ ಮಹಾಬಲೇಶ್ವರ ಉಪಾಧ್ಯರು ಅಗ್ನಿ-ಹೋತ್ರ ನಡೆಸುತ್ತ ಬಂದಿದ್ದರು. ಕಳೆದ ವರ್ಷ ಅವರು ದಿವಂಗತರಾದರು. ಅಗ್ನಿ-ಹೋತ್ರದ ಈ ಪರಂಪರೆಯನ್ನು ಕೈ॥ ವಾ. ಮಹಾಬಲೇಶ್ವರ ಉಪಾಧ್ಯರ ಅನುಜರಾದ ಶ್ರೀ॥ ದಾಮೋದರ ಉಪಾಧ್ಯರು ನಡೆಸಬರಬೇಕೆಂದು ಶ್ರೀ ಸೋಂದಾ-ಸ್ವರ್ಣವಲ್ಲಿ ಮಠಾಧೀಶ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳ ಅಪ್ಪಣೆಯಾಗಿದೆ. ಗೋಕರ್ಣಸ್ಥ ಮಹಾಜನರೂ ಆಗ್ರಹ ಮಾಡುತ್ತಿದ್ದಾರೆ. ಈ ...

... ದ ಉಪಾಧ್ಯರು ಅಗ್ನಿಹೋತ್ರವನ್ನಿಟ್ಟು, ಸೋಮಯಾಗಾದಿಗಳನ್ನು ನಡೆಸಲು ಒಪ್ಪಿದ್ದಾರೆ. ಲೋಕ-ಕ್ಷೇಮಕ್ಕಾಗಿ ಇದೇ ಬರುವ ಚೈತ್ರದಲ್ಲಿ ಸೋಮಯಾಗವನ್ನು ಮಾಡಲಿಕ್ಕೆ ಸಿದ್ಧರಾಗಿದ್ದಾರೆ. ಸಕಲ ಆಸ್ತಿಕರೂ ಧರ್ಮಾಭಿಮಾನಿಗಳೂ ಶ್ರೀ॥ ಉಪಾಧ್ಯರಿಗೆ ಯಥಾಶಕ್ತಿ ಸಹಾಯ ಮಾಡಬೇಕಾಗಿ ವಿನಂತಿ.

ಕಾರವಾರ— ಈ ಹಿಂದೆ ತಿಳಿಸಿದಂತೆ ಇಲ್ಲಿಯ ಹರಿಜನ ಉನ್ನತಿ ಸಂಘದವರು ಕೋಡಿಬಾಗದಲ್ಲಿ ಕಟ್ಟಿಸಿದ ಉದ್ಘಾಟನಾ ಸಮಾರಂಭವು ತಾ ೧೭ನೇಗೆ ಕರ್ನಾಟಕ ಹರಿಜನ ಸೇವಾ ಸಂಘದ ಅಧ್ಯಕ್ಷ ರಾ॥ ಎಚ್. ಡಿ. ಕೋಲ್ಲೆಯವರ ಹಸ್ತದಿಂದ ಜರುಗಿತು. ಮುಂಜಾನೆ ಹೋಮ ಹವನ, ಮಧ್ಯಾಹ್ನದಲ್ಲಿ ಸತ್ಯನಾರಾಯಣ ಪೂಜೆ, ಅಪರಾಹ್ನದಲ್ಲಿ "ಗಾಂಧೀ ಬಾಲಕ ಮೋಹನದಾಸ, ಪತಿತ ಪಾವನ ಮೋಹನದಾಸ" ಭಜನೆ ಮತ್ತು ಸಂಜೆಯಲ್ಲಿ ಸಭೆ ಹೀಗೆ ಕಾರ್ಯಕ್ರಮ ನಡೆಯಿತು. ಸಭೆಯ ಪ್ರಾರಂಭಕ್ಕೆ ಸಂಘವು ಈ ವರೆಗೆ ಮಾಡಿದ ಕಾರ್ಯದ ಹಾಗೂ ಕೂಡಿಸಿದ ಹಣದ ವರದಿ ಓದಿ ಹೇಳಲ್ಪಟ್ಟಿತು. ಆಮೇಲೆ ಅಧ್ಯಕ್ಷರು ಬೋಧಪ್ರದ ಭಾಷಣ ಮಾಡಿ, ಸರಕಾರವು ಹರಿಜನರ ಉನ್ನತಿಗಾಗಿ ಸರ್ವಶಕ್ತ ಸಹಾಯ ಮಾಡುತ್ತದೆಂದೂ ಹರಿಜನರು ದುರ್ವ್ಯಸನಗಳನ್ನು ಬಿಟ್ಟು ಸದ್ಗುಣಗಳನ್ನು ಸಂಪಾದಿಸಿ ಮುಂದುವರಿಯಬೇಕೆಂದೂ ಬೋಧಿಸಿದರು. ಬೇರೆ ಕೆಲವರ ಭಾಷಣಗಳೂ ಜರುಗಿದವು. ಕೊನೆಗೆ ಸದರಿ ಕಟ್ಟಡಕ್ಕೆ "ಮೋಹನದಾಸ ಮಂದಿರ" ವೆಂದು ನಾಮಕರಣ ಮಾಡಲ್ಪಟ್ಟಿತು. ಈ ಮಂದಿರದಲ್ಲಿ [illegible] ದಿನದಿಂದ ಹರಿಜನ ವಿದ್ಯಾರ್ಥಿಗಳಿಗಾಗಿ ಒಂದು ವಸತಿಗೃಹ ನಡೆಯುವದು.

ಈ ಜಿಲ್ಲೆಯ ಸೀಧಾ ಮತ್ತು ಪೂರೈಕೆ ಖಾತೆಗಳೊಳಗಿನ ಕಾರಕೂನರದೊಂದು ಸಭೆ ಜಿಲ್ಲಾ ಪೂರೈಕೆಯ ಮೇಲ್ವಿಚಾರಕರಾದ ರಾ॥ ಕಾಯ್ಕಿಣಿ (ವಕೀಲ)ರ ಅಧ್ಯಕ್ಷತೆಯಲ್ಲಿ ತಾ ೨೩-೨-೪೮ಕ್ಕೆ ಸೇರಿತ್ತು. ಈ ಖಾತೆಗಳಲ್ಲಿ ದುಡಿಯುತ್ತಿದ್ದ ಒಬ್ಬರನ್ನು ಜನರಿಗೆ ಇದೇ ಕಳೆದ ತಾ ೧೫ರಿಂದ ಮನೆಗೆ ಹೋಗಲು ಅಪ್ಪಣೆಯಾಗಿದೆ. ಅದರಿಂದ ಅವರು ಕಷ್ಟದಲ್ಲಿ ಬಿದ್ದಿದ್ದಾರೆ. ನಿರುದ್ಯೋಗಿಗಳಾಗಿ ಅಲೆದಾಡುವ ಪ್ರಸಂಗ ಅವರ ಮೇಲೆ ಬಂದಿದೆ. ಆದ್ದರಿಂದ ಸರಕಾರದವರು ಈ ವರೆಗಿನ ಅವರ ಸೇವೆಯನ್ನು ನೆನೆಸಿ ಸಹಾನುಭೂತಿಯಿಂದ ಅವರಿಗೆ ಬೇರೆ ಬೇರೆ ಕಡೆಗೆ ಉದ್ಯೋಗ ಕೊಡಿಸಿಕೊಡಬೇಕೆಂದೂ, ಈ ಜನರನ್ನು ಬೇರೆ ಖಾತೆಗಳಲ್ಲಿ ಸೇರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕೆಂದೂ, ತಾ ೧೫ಕ್ಕೆ ಬಿಡುಗಡೆ ಮಾಡಲ್ಪಟ್ಟವರಲ್ಲಿ ಬಹಳ ಜನರು ತಮ್ಮ ಸಂಪಾದಿಸಿದ (earned) ರಜೆಯನ್ನು ಅನುಭವಿಸುವದಿಲ್ಲೆಂದೂ ಈ ರಜೆಯ ಅವಧಿಯ ಸಂಬಳವನ್ನು ಅವರಿಗೆ ಸಲ್ಲಿಸುವ ಏರ್ಪಾಟಾಗಬೇಕೆಂದು ಸಭೆಯಲ್ಲಿ ಒಂದು ಗೊತ್ತುವಳಿಯಾಗಿದೆ.

"ನಾಂಗರ ಛಾಪ" ಸಿಮೆಂಟಿಗೂ ತಮಗೂ ಸಂಬಂಧವಿಲ್ಲೆಂದೂ, ತಮ್ಮ ಸಿಮೆಂಟು "ಗಣಪತಿ" ಮುದ್ರೆಯದೆಂದೂ ತಾವು ಸಿಮೆಂಟ "ಬೇಡಿದವರಿಗೆ ಬೇಡಿದಷ್ಟು (ಶಿಲ್ಕು ಇರುವ ವರೆಗೆ) ಕೊಟ್ಟು, ಶಿಲ್ಕು ಇಲ್ಲದಿದ್ದಾಗ ಬಂದವರಿಗೆ ಶಿಲ್ಕು ಇಲ್ಲೆಂದು ಹೇಳಿದ್ದು ನಿಜ"ವೆಂದೂ ರಾ॥ ದಾಮೋದರ ನಾಗಪ್ಪಾ ಶಾನಭಾಗ ಇವರು ತಿಳಿಸುತ್ತಾರೆ.

(ತಾ ೨೩-೨-೪೮) ಕಾರವಾರ ತಾಲೂಕಿನಲ್ಲಿ ಸರಕಾರದ ಪರವಾಗಿ ಭತ್ತದ ಖರೀದಿಯ ಕಾರ್ಯ ನಡೆದಾಗ ಸರಕಾರ ಹಣದ ವಂಚನೆ ಮಾಡಿದ ಆರೋಪವನ್ನಿಟ್ಟು, ಸರಕಾರಿ ಉಗ್ರಾಣದಾರ ಎಸ್ ವ್ಹಿ ಹಬ್ಬು ಇವರ ವಿರುದ್ಧ ಇಲ್ಲಿಯ ಸೆಶನ್ಸ ಕೋರ್ಟಿನಲ್ಲಿ ಕಳೆದ ಸಪ್ಟಂಬರ ತಿಂಗಳಿಂದ ನಡೆಯುತ್ತಿದ್ದ ಖಟ್ಲೆಯಲ್ಲಿ ನ್ಯಾಯಾಧೀಶರು ಇಂದು ತಮ್ಮ ತೀರ್ಪು ಕೊಟ್ಟು, ಆರೋಪಿಗೆ ೩ ವರ್ಷಗಳ ಸಖ್ತ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಇಲ್ಲಿಯ ಹಿಂದು ಹಾಯಸ್ಕೂಲಿನ ಸಂಸ್ಥಾಪಕರೂ ಬಹಳ ವರ್ಷ ಶಾಲೆಯ ಮುಖ್ಯಾಧ್ಯಾಪಕರೂ ಆಗಿದ್ದ ಶ್ರೀ॥ ಎಸ್ ವ್ಹಿ ಕಾಲೇಕರ ಇವರ ನೆನಪಿಗಾಗಿ ಇವರ ಸ್ನೇಹಿತರು ಅವರ ಶಿಷ್ಯರಲ್ಲೊಬ್ಬರು ದತ್ತಿನಿಧಿಯನ್ನು ಕೊಟ್ಟು, ಪ್ರತಿ ವರ್ಷ ಶಾಲೆಯಲ್ಲಿ ವಿದ್ಯಾರ್ಥಿಗಳ ಭಾಷಣ ಸ್ಪರ್ಧೆ ನಡೆಸಿ ಗೆದ್ದವ ವಿದ್ಯಾರ್ಥಿಗೆ ಬಹುಮಾನ ಕೊಡುವಂತೆ ವ್ಯವಸ್ಥೆ ಮಾಡಿದ್ದುಂಟು. ಇತ್ತೀಚೆ ಈ ಸ್ಪರ್ಧೆಯು ಇಂಗ್ಲೀಷ ಭಾಷೆಯಲ್ಲಿ ನಡೆಯಿತು. ಈ ವರ್ಷ ಕೊಂಕಣಿಯಲ್ಲಿ ನಡೆದು, ಸದಾಶಿವಗಡದ ಒಬ್ಬ ವಿದ್ಯಾರ್ಥಿಗೆ ಈ ವರ್ಷದ ಪಾರಿತೋಷಿಕ ಸಿಕ್ಕಿರುತ್ತದೆ. ಸರಕಾರಿ ಹಾಯಸ್ಕೂಲಿನ ಅನೇಕ ವಿದ್ಯಾರ್ಥಿಗಳೂ ಈ ಸ್ಪರ್ಧೆಯಲ್ಲಿ ಸೇರಿದ್ದರು.

ಜಿಲ್ಲಾ ಸಮಾಚಾರ.

ಆನಸಾ— (ತಾ ೪-೨-೪೮) ಇಲ್ಲಿಯ ಲಕ್ಷ್ಮೀನಾರಾಯಣ ದೇವರ ಅಷ್ಟಬಂಧ-ಪ್ರತಿಷ್ಠೆಯನ್ನು ಕಳೆದ ವರ್ಷದ ಆರಂಭದಲ್ಲೇ ಮಾಡಬೇಕೆಂದು ಮೊಕ್ತೇಸರರು ನಿಶ್ಚಯಿಸಿದ್ದರಂತೆ, ಆದರೆ ಅವರು ತಯಾರಿಸಿದ ಪೀಠಿಯನ್ನು ಕೆಲವರು ನಾಪಸಂದ ಮಾಡಿ ಹೊಸ ಪೀಠಿಯನ್ನು ತಯಾರಿಸಿ ಕೊಡುತ್ತೇವೆಂದು ಹೇಳಿದ್ದರಿಂದ ಪ್ರತಿಷ್ಠೆಯನ್ನು ಮುಂದೂಡಬೇಕಾಯಿತೆಂದೂ, ಆ ಪೀಠಿ ತಯಾರಾಗಿ ಬಂದ್ದರಿಂದ ಪ್ರತಿಷ್ಠೆಯ ಕೆಲಸ ನೆನಗುದಿಗೆ ಬಿದ್ದಿರುತ್ತದೆಂದೂ ಮೊಕ್ತೇಸರ ರಾ॥ ಶಾಂತಾರಾಮ ಪ್ರಭು ಇವರು ತಿಳಿಸುತ್ತಾರೆ.

ಸಿದ್ದಾಪುರ— (ತಾ ೨೦-೨-೪೮) ಈ ತಾಲೂಕಿನಲ್ಲಿ ಪ್ರಸಿದ್ಧವಿರುವ ಭುವನಗಿರಿ ಕ್ಷೇತ್ರದೊಳಗಿನ ಶ್ರೀ ಭುವನೇಶ್ವರಿ ದೇವಾಲಯದಲ್ಲಿ ಇದೇ ಮಾಘ ಶು। ೧೫ ನೆಯ ದಿನ ಜರಗುವ ರಥೋತ್ಸವದ ಕಾಲಕ್ಕೆ ಹರಿಜನಬಾಂಧವರಿಗೆ ಮಂದಿರದಲ್ಲಿ ಪ್ರವೇಶ ಮಾಡಗೊಡಲಾದೀತೆಂದು ದೇವಸ್ಥಾನದ ಮೊಕ್ತೇಸರರು ತಿಳಿಸುತ್ತಾರೆ.

ಇತ್ತಲಾಗಿ ಹೊನ್ನಾವರ ಕಡೆಯ ವ್ಯಾಪಾರಿಗಳು ಇಲ್ಲಿ ಬಂದು ಅಕ್ಕಿ-ಭತ್ತಗಳ ಖರೇದಿಯನ್ನು ದೊಡ್ಡ ಪ್ರಮಾಣದಿಂದ ಮಾಡುತ್ತಿದ್ದಾರೆ. ಆದರಿಂದ ಅಕ್ಕಿ ಭತ್ತಗಳ ಧಾರಣೆಯು ಗಗನಕ್ಕೆ ಏರುತ್ತಿದೆ. ಒಂದು ಭತ್ತದ ಖಂಡಿ ೧೬೦-೧೭೫ ರೂ. ತನಕ ಧಾರಣೆಯಾಗಿದೆ। ಜಿಲ್ಹಾಧಿಪರು ದರ ನಿಯಂತ್ರಣೆ ಮಾಡಿ ಅಕ್ಕಿ-ಭತ್ತಗಳ ರಫ್ತಿಗೆ ತಡೆ ಹಾಕದಿದ್ದರೆ ಜನರು ಉಪವಾಸ ಬೀಳುವ ಪ್ರಸಂಗ ಬರುವದು ನಿಶ್ಚಿತ.

ಕೊಂಡ್ಲಿ ಗ್ರಾಮದಲ್ಲಿ ಯಾವದೇ ಬಗೆಯ ನಿರ್ಬಂಧವಿಲ್ಲದೆ ಹೊಸ ಇಮಾರತುಗಳು ಕಟ್ಟಲ್ಪಟ್ಟಷ್ಟು ಬಹಳಿಗೆ ಎಂದಿದೆ. ಜಿಲ್ಹಾಧಿಪರು ಈಗ ಇಲ್ಲಿ ಬಂದಿರುತ್ತಾರೆ. ಅವರ ಕಣ್ಣಿಗೆ ಈ ಅತಿಕ್ರಮ ಬೀಳದಂತೆ ಅಲ್ಲಲ್ಲಿ ಮನೆಗಳ ಮುಂದೆ ಹಾಕಿದ ಬೇಲಿಗಳನ್ನಷ್ಟು ತೆಗೆದಿದ್ದಾರೆ। ಇದಕ್ಕೆಲ್ಲ ಗ್ರಾಮಸ್ಥರೇ ಜವಾಬದಾರರೆಂದು ಜನರ ಅಂಬೋಣ. ಈ ಗ್ರಾಮಸ್ಥರು ಸ್ಥಾನಿಕ ಅಧಿಕಾರಿಗಳ ಲಕ್ಷಕ್ಕೆ ಬಾರದಂತೆ ಬಹಳ ಕೌಶಲ್ಯದಿಂದ ಅತಿಕ್ರಮಣದ ದಾಳಿ ಮಾಡಿಸುತ್ತಾರೆಂದು ಜನರು ಮಾತಾಡುತ್ತಾರೆ. ಅದರೆ ಅವರ ಈ ಕೌಶಲ್ಯದ ಈಗ ಎಲ್ಲರಿಗೆ ಬಂದು ಅತಿಕ್ರಮಣ ಮಾಡಿದ ಜನರು ಕಷ್ಟದಲ್ಲಿ ಬೀಳುವ ಪ್ರಸಂಗ ಬಂದಿದೆ।

ತಾ ೧೬-೨-೪೮ರ "ವೃತ್ತ" ದಲ್ಲಿ ಪ್ರಕಟವಾದಂತೆ ಕಾಗ್ರೆಸ್ಸಿನ ರಾ। ನಾಗಪ್ಪ ಹೆಗಡೆ ಸೋವಿನ ಇವರು ತಾರೀಖಿನಂದು ತಾಲೂಕಿಗೆ ಹಾಕಿದ ತೋರಣವು ಮಹಾತ್ಮಾಜಿಯವರ ಮರಣದ ಸುದ್ದಿ ಕೇಳಿ ಆನಂದಪಟ್ಟು ಹಾಕಿದ್ದೆಂಬದು ಪೂರ್ಣ ಸುಳ್ಳು ಇರುತ್ತದೆಂತಲೂ, ತಾ ೩ರಂದು ಕಮಿಶನರ ಸಾಹೇಬರು ಸಿದ್ದಾಪುರಕ್ಕೆ ಹೆಗಡೆಯವರ ಬೇಸಾಯದ ಸುಧಾರಣೆ ನೋಡಲು ಬರುವರೆಂದು ಸುದ್ದಿ ಬಂದಂತೆ ಕಮಿಶನರ ಸಾಹೇಬರ ಸ್ವಾಗತಕ್ಕಾಗಿ ರಾ। ಹೆಗಡೆಯವರು ಈ ತೋರಣಗಳನ್ನು ಮಹಾತ್ಮರ ನಿಧನದ ಸುದ್ದಿ ತಿಳಿಯುವ ಮುಂಚೆಯೇ ,

---

ಅಂಕೋಲಾ ತಾಲೂಕಿನ ಬೆಳೆಯ ಜಾಹೀರನಾಮೆ.

(೧೯೪೭-೪೮ನೇ ಸಾಲಿನ ಬಾಬತು)

ಸಂ ೧೯೩೯ ೧೯೪೭ನೇ ಇಸವಿಯ ಮುಂಬಯಿಯ ಗೇಣಿದಾರಿಕೆಯ ಕಾಯದೆಯ ೧೦ನೇ ಕಲಮಿನ ದನ್ವಯ ದೊರೆತ ಹಕ್ಕಿನ ಅಂಕೋಲಾ ತಾಲೂಕ ಮಾಮಲೇದಾರನಾದ ನಾನು ಈ ಕೆಳಗಿನ ಪರಿಶಿಷ್ಟದ ೨ನೇ ಸ್ತಂಭದಲ್ಲಿ ತೋರಿಸಿದ ಕ್ಷೇತ್ರದ ೫ನೇ ಸ್ತಂಭದಲ್ಲಿ ನಮೂದಿಸಿದ ಬೆಳೆಯ ೧ ಎಕರೆಯ ಸರಾಸರಿ ಉತ್ಪನ್ನ ೬ನೇ ಸ್ತಂಭದಲ್ಲಿ ನಿರ್ದೇಶ ಮಾಡಿದಷ್ಟು ಬಂದಿರುತ್ತದೆಂದು ಈ ಮೂಲಕ ಜಾಹೀರಪಡಿಸುತ್ತೇನೆ.

ಪರಿಶಿಷ್ಟ

ಅ. ನಂ.	ಯಾವ ಪ್ರದೇಶ	ಜಮಿನಿನ ನಮೂನೆ	ಜಮೀನಿನ ವರ್ಗ	ಬೆಳೆಯ ಹೆಸರು	ಒಂದು ಎಕರೆಯ ಸರಾಸರಿ ಉತ್ಪನ್ನ
೧	೨	೩	೪	೫	೬
೧ರಿಂದ ೪೦	**ಸರ್ವೇ ಗ್ರೂಪ ೧** ಅಡಿಗೋಣ, ಅಗ್ರಗೋಣ, ಅಲಗೇರಿ, ಅಂಕೋಲಾ, ಅವರ್ಸಾ, ಬಂಸಗೋಡ, ಬೆಳಂಬಾರ, ಬೆಲೇಕೇರಿ, ಭಾವಿಕೇರಿ, ಬೀಳೇಹೊಂಗಿ, ಬೊಬ್ರುವಾಡಾ, ಹಡವ, ಹಾರವಾಡಾ, ಹಗ್ರೆ, ಹಿಚ್ಕಡ, ಹೊನ್ನೆಬೈಲ, ಜೂಗ, ಕಣಗಿಲ, ಕೇಗ್ರೆ, ಲಕ್ಷ್ಮೇಶ್ವರ, ಮಂಜಗುಣಿ, ನದಿಬಾಗ, ಪೂಜಗೇರಿ, ಶಡಗೇರಿ, ಶಿರಕುಳಿ, ಶಿಂಗನಮಕ್ಕಿ, ಸೂರ್ವೆ, ಟೊಂಕಹೊಂಕೇರಿ, ವಾಸರೆಕುದ್ರಿಗೆ, ವಂದಿಗೆ,	ನೀರಾವರಿಯಿಲ್ಲದ ಜಮೀನು	ಕರಿ ಮಕ್ಕಿ ಗದ್ದುಪ ಫುಲಾ	ಮುಂಗಾರಿ ಭತ್ತ ,, ,, ,,	೩೨ ಖಂಡಿ ಭತ್ತ ೨೧ ,, ೧೧ ,, ೧೯ ,,
[illegible]	**ಸರ್ವೇ ಗ್ರೂಪ ೨** ಬೋಳೆ, ದೇವಿಗದ್ದೆ, ಹಟ್ಟಿಕೇರಿ, ಹೊಸಗದ್ದೆ, ಕಂಚುಗೆ, ಕೋಡ್ಸಣಿ, ಸಗಡಗೇರಿ, ಶಿಬಗೇರಿ, ಶಿರೂರ, ಉಳುವರೆ,	ನೀರಾವರಿಯಿಲ್ಲದ ಜಮೀನು	ಉತ್ತಮ ಕರಿ ಮಧ್ಯಮ ಕರಿ ಮಕ್ಕಿ ಫುಲಾ ಗದ್ದುಪ	ಮುಂಗಾರಿ ಭತ್ತ ,, ,, ,, ,,	೨೫ ಖಂಡಿ ಭತ್ತ ೧೯ ,, ೧೩ ,, ೧೩ ,, ೧೭ ,,
[illegible]	**ಸರ್ವೇ ಗ್ರೂಪ ೩** ಅಂದ್ಲೆ, ಬಳಲೆ, ಬಾಳೇಗುಳಿ, ಬೆಳ್ಸೆ, ಬೊಗ್ರಿಬೈಲ, ವೊಲ್ವಾ, ಶೇವಕಟ್ಟೆ, ತಳಗದ್ದೆ, ವಾಸರಕುದ್ರಿಗೆ,	ನೀರಾವರಿಯಿಲ್ಲದ ಜಮೀನು	ಕರಿ ಮಕ್ಕಿ ಫುಲಾ	ಮುಂಗಾರಿ ಭತ್ತ ,, ,,	೨೪ ಖಂಡಿ ಭತ್ತ ೧೫ ,, ೧೫ ,,
[illegible]	**ಸರ್ವೇ ಗ್ರೂಪ ೪** ಅಡ್ಲೂರ, ಬಗರಾಣಿ, ಬೆಲೆ, ಗುಂಡಬಾಳ, ಕಾರೇಬೈಲ, ಕೇಣಿಶಿವಪುರ, ಮೊರಳ್ಳಿ, ನವಗದ್ದೆ, ನೆಲ್ಲೂರಕಂಚಿನಬೈಲ, ಶಿರಗುಂಜಿ, ಡೋಂಗ್ರಿ,	ನೀರಾವರಿಯಿಲ್ಲದ ಜಮೀನು	ಕರಿ ಮಕ್ಕಿ ಫುಲಾ	ಮುಂಗಾರಿ ಭತ್ತ ,, ,,	೨೧ ಖಂಡಿ ಭತ್ತ ೧೨ ,, ೧೨ ,,
[illegible]	**ಸರ್ವೇ ಗ್ರೂಪ ೫** ಡೋಂಗ್ರಿ, ಹಿಲ್ಲೂರ, ಹಿಚ್ಕಡ, ಕಟ್ಟಿನಹಕ್ಕಲ, ಕೊಡ್ಲಗದ್ದೆ, ಕಂಟಗಿನ ಸುಂಕಸಾಳ	ನೀರಾವರಿಯಿಲ್ಲದ ಜಮೀನು	ಕರಿ ಮಕ್ಕಿ	ಮುಂಗಾರಿ ಭತ್ತ ,,	೨೩ ಖಂಡಿ ಭತ್ತ ೧೨ ,,
[illegible]	**ಸರ್ವೇ ಗ್ರೂಪ ೬** ಅಚವೆ, ಬ್ರಹ್ಮೂರ, ಗುಳೆ, ಹಳವಳ್ಳಿ, ಹೊನ್ನಳ್ಳಿ ರಾಮನಗದ್ದೆ, ಹೆಗ್ಗಾರ ಕೋಟೆಭಾವಿ, ಹೆಗ್ಗಾರ, ಕಲ್ಲೇಶ್ವರ, ಕನಕನಹಳ್ಳಿ, ಕಂಚಿನಮೂಲೆ, ಕವಳ್ಳಿ, ಕೇಂದಿಗೆ, ಲಕ್ಷ್ಮೇಗುಳಿ (ಘಾಟಿಪ್ಪು), ಮಲ್ಲಾಣಿ, ಮಾಣಿಗದ್ದೆ, ಮೋದಗದ್ದೆ, ಶಿವಪುರ, ಶೇವಿಗುಳಿ, ಶಿಶ್ಮಾಕ್ರಿ, ವರೀಲಬೇಣ	ನೀರಾವರಿಯಿಲ್ಲದ ಜಮೀನು	ಕರಿ	ಮುಂಗಾರಿ ಭತ್ತ	೨೧ ಖಂಡಿ ಭತ್ತ

ಟಿಪ್ಪಣಿ.— (೧ ಖಂಡಿ ಭತ್ತವೆಂದರೆ ೧ ಬಂಗಾರಿ ಮಣ)

ಅಂಕೋಲಾ,
ತಾ. ೧೩-೨-೧೯೪೮

ವ್ಹಿ. ಪಿ. ಪ್ರಭು,
ಮಾಮಲೇದಾರ, ಅಂಕೋಲಾ

ಪ್ರಕಟನೆ.

ಈ ಮೂಲಕ ಸರ್ವರಿಗೂ ತಿಳಿಸುವದೇನೆಂದರೆ —

ಇದೇ ಕಳೆದ ಆದಿತ್ಯವಾರ ತಾ. ೧೫ನೇ ಸಂಜೆ ನಮ್ಮ ಆಫೀಸಿನ ಕೆಲಬದಿಗೆ ಗಟಾರಿನಲ್ಲಿ ಆಗಲೇ ಇದ ಒಂದು ಕರು ಸಹಿತ ಆಕಳು ನಮ್ಮಲ್ಲಿ ಕಟ್ಟಿದ್ದೇವೆ. ಆಕಳು ಕರೇ ವರ್ಣದ್ದು, ಕೋಡಿಲ್ಲದ್ದು, ಗಿಡ್ಡವಾಗಿರುತ್ತದೆ. ಮೇಲ್ಕಂಡ ಲಕ್ಷಣಗಳುಳ್ಳ ನಮ್ಮ ಆಕಳು ಕಾಣೆಯಾಗಿರುವ ಬಗ್ಗೆ ಮಾಲೀಕರು ಕಕ್ಕ ಖಾತ್ರಿ ಮಾಡಿಕೊಟ್ಟು ೬ ದಿನಗಳಲ್ಲಿ ಸದರಿ ಆಕಳನ್ನು ತಕ್ಕೊಂಡು ಹೋಗತಕ್ಕದ್ದು.

ಕುಮಟಾ, ತಾ ೨೦-೨-೪೮

N. A. Karnam
ಡೆಪ್ಯುಟಿ ಇಂಜಿನಿಯರ, ಪ ವ ಡಿ., ಕುಮಟಾ.

ಜಾಹೀರ ಲಿಲಾಂವ.

ನಮ್ಮ ಅಂಬರಸ ಕಂಪನಿಯ ಹಳೇ ಇಮಾರತಿನ ಕೆಳಗಿನ ಸಾಮಾನುಗಳನ್ನು ತಾ. ೧೧-೩-೧೯೪೮ನೇ **ಗುರುವಾರ ಬೆಳಗಿನ ೯ ಘಂಟೆಗೆ** ಜಾಹೀರ ಲಿಲಾಂವದಿಂದ ಮಾರುವೆವು. ಲಿಲಾಂವಿನ ಶರ್ತುಗಳು ಆದೇ ಕಾಲಕ್ಕೆ ತಿಳಿಸಲ್ಪಡುವವು. ಮಾರಲ್ಪಡುವ ಸಾಮಾನು ಕಂಪನಿಯ ಪಟಾಂಗಣದಲ್ಲಿ ಇಟ್ಟಿರುತ್ತಿದ್ದು, ನೋಡಬಯಸುವವರು ಆಫೀಸ ಹೊತ್ತಿನಲ್ಲಿ ಬಂದು ನೋಡಬಹುದು.

ಮಾರತಕ್ಕ ಸಾಮಾನಿನ ವಿವರ -

ಗಾಂವಠಿ ಹಂಚು, ಗಳ, ಎಲ್ಲ, ಆದಿ ಡಬ್ಬಿ, ಹಳೇ ಕಟ್ಟಿಗೆ ಸಾಮಾನು ಇತ್ಯಾದಿ.

ಅಂಕೋಲಾ, ತಾ ೧೬-೨-೧೯೪೮

Basrur & Co.,
Managing Agents,
Oriental Canneries & Industries, Ltd.,
Ankola

ನಾಶಿಸಲ್ಪಡಲಿಕ್ಕಿಲ್ಲ ಮುಂದೆ ಆ ಪಾತ್ರಕ ಕೆಳಗಿನ ಹಾರ್ತ ತೆರೆದು ಬಂದೊಡನೆ ಆ ತೋರಣ ಬಗಳನ್ನು ದಾ ಹೇಳಿಯುವರು ತೆರೆಯ ಪರೆಂತು ತಾ ೧ರ ಆಸರು ಬ್ಬ ಮಾಡಿದರೆಂಬುದು ತಿರ ಒಸತ ಎರುತ್ತದೆಂತಲಾ ಸತ್ಯಸ್ಥಿತಿ ತಿಳಿಕೆಂದವನೋವ ರು ತಿಳಿಸುತ್ತಾರೆ ಗಾ ವಿ ಹಿಡಿಯುವದ ನಿಧನದಿಂದ ಇತರರಿಗಾದಷ್ಟು ದುಃಖವಷ್ಟೆ ಗುಡು ರಾ ಹೆಗಡೆಯವರಿಗೂ ಆಗಿದೆ ಹಿಂದು ಸಭೆಯ ... ಗಳಿ ದ ಸ್ವ ಸಂಘದ ... ಅವರನ್ನ ಎಳ್ಳಷ್ಟು ಅಭಿಮಾನವಿರುವದಿಲ್ಲ ಎಂದಲಾ ಸದರಿ ... ಪುಸ್ತಕರು ಬರೆದಿದ್ದಾರೆ

ಇಲ್ಲಿಯ ಅಬಕಾರಿ ಇನ್‌ಸ್ಪೆಕ್ಟರರು ... ತಿಂಗಳ ಹಿಂದೆ ಸಂಕಗೋಡ ಗ್ರಾಮದಲ್ಲಿ ಒಂದು ಅಬಕಾರಿ ಗುತ್ತಿ ಹಿಡಿದಿದ್ದರು ಈ ಗುತ್ತಿಗೆ ಸಂಬಂಧವಿದ್ದ ೧ ಎಂದು ೧ ಕೊಡ ... ಸಾರಾಯಿ ಪಾತ್ರೆಗಳು ಜಪ್ತಾಗಿದ್ದವು ... ಇನ್ನೂ ಯಾವ ವಿಚಾರವಾಗಿರುವದಿಲ್ಲ ಜಪ್ತಾದ ... ಡೆಯ ಈಗ ಇನ್ಸಪೆಕ್ಟರರ ಮನೆಯಲ್ಲಿ ಬಳಸಲ್ಪಡುತ್ತಿದ ದ್ದು ಕಂಡು ಬರುತ್ತಿದೆಯಂತೆ ಇದರ ಮೇಲಿಂದ ... ಯ ಪ್ರಕರಣ ಕತ್ತಲೆಯಲ್ಲಿ ಹೋಗಬಹುದೆಂದು ಜನರು ಹೇಳುತ್ತಾರೆ ಮೇಲಧಿಕಾರಿಗಳು ಇದರ ಬೆನ್ನಟ್ಟಬೇಕು

ಇದೇ ಶಳೆದ ಮಂಗಳವಾರ ತಾ ೧೭ಕ್ಕೆ ... ಗಿ ರಾತ್ರಿ ... ೧ನೆಯ ... ಉತ್ಸವವು ಬಲು ಉತ್ಸಾಹದಿಂದ ಆಚರಿಸಲ್ಪಟ್ಟಿತು ಭಜನೆ ... ಗಳ ಹಾಡು ಸಂಭಾಷಣ ಪಗೈರೆ ವಿನೋದಾವಳಿಗಳು ... ಯವರ ಸಕಲಿ ಳು ಭಾಷಣಗಳು "... " ನಾಟಕದ ಪ್ರಯೋಗ ಇತ್ಯಾದಿ ಕಾರ್ಯಕ್ರಮಗಳು ಮುಂಜಾನೆಯಿಂದ ಮಧ್ಯರಾತ್ರಿಯ ವರೆಗೆ ನಡೆದವು ನೆರೆಹೊರೆಯ ಹಳ್ಳಿಗಳಿಂದ ಬಹಳ ಜನರು ಈ ಉತ್ಸವ ನೋಡಬಂದಿದ್ದರು

ಪೂರ್ವಿಕ ... ತೆಯಲ್ಲಿ ೪ ... ವರ್ಷ ಮುದಿದು ಈಗ ... ಗಾಗಿರುವ ತರುಣರನ್ನು ಸರಕಾರದವರು ಬೇರೆ ಖಾತೆಗಳಲ್ಲಿ ಸೇರಿಸಿಕೊಳಬೇಕೆಂದೂ ಅವರ ಕೈ ಬಿಡಬಾರದೆಂದೂ ನಾಗರಿಕರೋರ್ವರು ಪ್ರತಿಪಾದಿಸುತ್ತಾರೆ

ಮುಂಬಯಿ ಸರಕಾರದವರು ಮೊನ್ನೆಯೇ ಪ್ರಕಟಿಸಿರುವ ಹೊಸ ವೇತನಗಳ ಪ್ರಮಾಣದ ಪಟ್ಟಿಯಲ್ಲಿ ಮುಲ್ಕೀ ಕಾಲೇಜಿನಲ್ಲಿ ತೇರ್ಗಡೆ ಹೊಂದಿದವರಿಗೂ ಹೊಂದದವರಿಗೂ ಒಂದೇ ತರಗತಿಯಲ್ಲಿ ಹಾಕಿರುತ್ತಾರೆಂದೂ ಈ ದೋಷವನ್ನು ಸರಕಾರವು ಹೋಗಲಾಡಿಸಬೇಕೆಂದೂ ಸದರಿ ಪಟ್ಟಿಯನ್ನು ಚಿಕಿತ್ಸಕ ದೃಷ್ಟಿಯಿಂದ ಅಭ್ಯಸಿಸಿದವರೊಬ್ಬರು ಸೂಚಿಸುತ್ತಾರೆ

ಶಿರಸಿ— (ತಾ ೧೨ ೨ ೪) ಇಂದು ಹೆಗಡೆಕಟ್ಟೆಯಲ್ಲಿ ಮಹಾತ್ಮಾಜಿಯವರ ಅಸ್ಥಿ ವಿಸರ್ಜನೆಯ ದಿನಾಚರಿಸಲ್ಪಟ್ಟಿತು ತಿಪಳ್ಳಿ ಶಾಲೆಯ ವಿದ್ಯಾರ್ಥಿಗಳು ಮೆರವಣಿಗೆಯಿಂದ ಹೆಗಡೆಕಟ್ಟೆಗೆ ಬಂದು ತಲ್ಪಿದ ಮೇಲೆ ಮಹಾತ್ಮರ ಭಾವಚಿತ್ರದ ಉತ್ಸವ ತೆಗೆಯಲ್ಪಟ್ಟಿತು ಸಂಜೆಯ ಕಡೆಗೆ ಸಭೆಯಾಯಿತು ರಾಷ್ಟ್ರಧ್ವಜದ ಕಂಬವಿದ್ದ ಬೈಲಲ್ಲಿ ಗಾಂಧಿಯವರ ಸ್ಮಾರಕವೆಂದು ಒಂದು ಕಟ್ಟೆ ಕಟ್ಟಲು ಜನರು ನಿರ್ಧರಿಸಿರುತ್ತಿದ್ದರು ಆ ಬಗೆ ಸಭೆಯಲ್ಲೇ ಒಂದು ೧೫೦ರವರೆಗೆ ವಂತಿಗೆಗಳು ಕೂಡಿದವು

ಯಲ್ಲಾಪುರ— (ತಾ ೧೨ ೨ ೪೮) ಇಂದು ಯಲ್ಲಾಪುರದಲ್ಲಿ ಮುಂಜಾನೆ ಬೊಕ್ಕತಲೆಯ ಮೆರವಣಿಗೆ ಭಜನೆ ... ಮಂದಿರ ಮಸೀದಿ ಚರ್ಚುಗಳಲ್ಲಿ ಪ್ರಾರ್ಥನೆ ಮುಂತಾದ ಕಾರ್ಯ ಕ್ರಮವೂ ಸಂಜೆಯಲ್ಲಿ ಮಹಾತ್ಮರ ನಿಧನದ ಬಗ್ಗೆ ದುಃಖಪ್ರದರ್ಶಕ ಸಭೆಯೂ ನಡೆದವು ಸಂಜೆಯಲ್ಲಿ ಯಲ್ಲೂ ಪ್ರಭಾತ ಫೇರಿ ಧ್ವಜವಂದನೆ ಗೀತೆಯ ಪ್ರವಚನ ಸೂತ್ರಯಜ್ಞ ಸಾರ್ವಜನಿಕ ಸಭೆ ಮಹಾತ್ಮಾಜಿಯವರ ತತ್ವಗಳ ಪಾಲನೆಯ ಪ್ರತಿಜ್ಞೆ ವಗೈರೆ ಕಾರ್ಯಕ್ರಮ ನಡೆದ ಸುದ್ದಿಯುಂಟು

(ತಾ ... ೪೮) ಕೆಂಪ್ಲ ಭಾಗಯಲ್ಲಿ ಇತ್ತ ೧೫ ... ದಿವಸ ಹುಲಿಯ ಹಾವಳಿ ನಡೆದಿದೆ ಈ ತಿಂಗಳ ... ಜನಗಳು ಅದಕ್ಕೆ ಆಹುತಿಯಾಗಿವೆ ಒಂದೊಂದು ದನದ ಬೆಲೆ ... ೧೦೦ಕ್ಕೂ ಮಿಕ್ಕಿರುತ್ತದೆ ಕಳೆದ ಶುಕ್ರವಾರ ... ಕ್ಕೆ ಹುಲಿ ... ದ ... ತಿನ ... ೫೦ಕ್ಕೆ ಮಿಕ್ಕುತ್ತಿದೆ ಇಷ್ಟೆಲ್ಲ ಹಾನಿಯನ್ನು ಹಳ್ಳಿ ... ರು ಸಹಿಸುವದು ಹ್ಯಾ ? ... ಅಧಿಕಾರಿಗಳು ಆಸ್ಥೆಯಿಟ್ಟು ... ಗಳು ... ದವರಿಂದ ... ವನ್ನು ಕೊಡಿಸ ... ಬೇಕೆಂದು ಅಗ್ರಹದ ಸ ... [ಮುಂದೆ ಪುಟ ನೋಡಿರಿ]

ಶಿರಸಿ ತಾಲೂಕಿನ ಬೆಳೆಯ ಪ್ರಕಟನೆ.

೧೯೪೭ನೇ ಇಸವಿಯ ಮುಂಬಯಿಯ ಒಕ್ಕಲತನದ ಕಾನೂನಿನ ನಿಯಮಾವಳಿಯ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನುಪಯೋಗಿಸಿ ಕಾನಡಾ ಜಿಲ್ಲೆಯೊಳಗಿನ ಶಿರಸಿ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ ನೆಯ ಸ್ತಂಭದಲ್ಲಿ ಕಾಣಿಸಿದ ಗ್ರಾಮಗಳಲ್ಲಿ ಅಡಿಕೆ ತೋಟಗಳಲ್ಲಿ ಮತ್ತು ಕರ ಭೂಮಿಗಳಲ್ಲಿ ಪ್ರತಿ ಎಕರೆಗೆ ೨ನೆಯ ಸ್ತಂಭದಲ್ಲಿ ಕಾಣಿಸಿದಷ್ಟು ಸರಾಸರಿ ಉತ್ಪನ್ನ ೧೯೪೭—೪೮ನೇ ಸಾಲಿನಲ್ಲಿ ಹುಟ್ಟಿರುತ್ತದೆಂದು ಈ ಮೂಲಕ ಜಾಹೀರಪಡಿಸುತ್ತಾರೆ

ಪರಿಶಿಷ್ಟ

ಗ್ರಾಮಗಳ ಹೆಸರು ೧	ಎಕರೆ ೧ಕ್ಕೆ ಸರಾಸರಿ ಬೆಳೆ ೨
ಸರ್ವೇ ಗ್ರೂಪ ೧ — ಅಗ್ಗಾಶೆ, ಬಚಗಾಂವ ಬದನಗೋಡ ಬಂಕನ ... ಬಕ್ಕಳಕೊಪ್ಪ ಚೆಲ್ಲನಕೇರಿ ಚಿಪ್ಪಿಮನೆ ಚಣಗಿ ಭರನಳ್ಳಿ ಬಿದ್ರಳ್ಳಿ ಬಿಳೆಗೇರಿಕೊಪ್ಪ, ಬಿಳೂರ ಬಿಸಲಕೊಪ್ಪ (ಫಿರ್ಕಾ) ಬುಗಡಿಕೊಪ್ಪ ಚಿಪಗಿ ದನಗನಹಳ್ಳಿ ದೊಡನಹಳ್ಳಿ ಗಾಣಗೇರಿ ಗೋಳಿಕಟ್ಟೆ ಗೋಳಿಸ ಧಪುರ ಗೌಡಳ್ಳಿ ಗುಡ್ನಾಪುರ ಹಳ್ಳಿಕೊಪ್ಪ ಹೆಬ್ಬಳ್ಳಿ, ಹೆಬ್ಬತ್ತಿ ಹೀಪನಳ್ಳಿ ಜೋಗಳ್ಳಿ ಹೊಸಕೊಪ್ಪ ಹುಡೇಲಕೊಪ್ಪ ಹುಲೇಕಲ್, ಹುಸರಿ, ಇಸಳೂರ ಜಾನ್ಮನೆ ಕಡಗೋಡ ಕಾಳಂಗಿ ಕಲಕರಡಿ ಕೆಂಗ್ರೆ, ಕೆರೆಕೊಪ್ಪ ಕೆರವಳ್ಳಿ ಕೋಟೆಕೊಪ್ಪ ಕುಪಗಡ್ಡೆ ಕುಪ್ಪಳ್ಳಿ ಲಿಂಡಕನಹಳ್ಳಿ ಮಾಳಂಜಿ ಮನಜವಳ್ಳಿ ಮತ್ತಿಘಟ್ಟ ಮಾವಿನಕೊಪ್ಪ ಮುರೇಗಾರ ನರೇಬೈಲ ನವಣಗೇರಿ ಪುರಾ ಸಟ್ಟನಮನೆ ಸಣ್ಣಕೇರಿ ಸಾಲ್ಕಣಿ ಶಿರಸಿ ಸೋಮನಳ್ಳಿ (ಸುಗಾವಿ ಫಿರ್ಕಾ), ಸೋವಿನಹಳ್ಳಿ (ನರೇಬೈಲ ಫಿರ್ಕಾ) ತಾರಗೋಡ ... ಯಡಳ್ಳಿ ಉಮ್ಮಡೆ ... ಕೊಪ್ಪ ಉಂಚಳ್ಳಿ ವಡ್ಡಿಲ ವಡಗೇರಿ ವೆಂಕಟಾಪುರ ಯಕ್ಕಂಬಿ ... ಹಳ್ಳಿ (೧ರಿಂದ ೭೦ನೇ ವರೆಗಿನ ಗ್ರಾಮಗಳು)	ಭತ್ತ ೨೬ ಬಂ ಮಣ ಅಡಿಕೆ ೧೩॥ ಬಂ ಮಣ (= ೨ ಖಂಡಿ) ಯಾ ಫಲ ಬಂದ ಪ್ರತಿ ಮಾರಕ್ಕೆ ೪॥ ರತ್ತಲ
ಸರ್ವೇ ಗ್ರೂಪ ೨ — ಅಜ್ಜಿಬಾಳ ಬಳ್ಳಕಮನೆ ದಾಸನಕೊಪ್ಪ ಹುಲಸೆ, ಹಸ್ರೂರ ದಗುಡ್ಡೆ ಹಡಗಿಮನೆ ಹೊಸಂತೋಟ (ಊರತೋಟ ಫಿರ್ಕಾ) ಜಾಣಸೆಕೊಪ್ಪ ... ಗನಳ್ಳಿ, ಕಲಕೆ ಕಲವೆ, ಕಣಗಿಮನೆ ಮಾಗಡ್ಡೆ ಸಣ್ಣಹಳ್ಳಿ ಸಂಕದಮನೆ ಶೀಗೇಹಳ್ಳಿ ಊರತೋಟ ಯಡಹಳ್ಳಿ (೭೧ರಿಂದ ೮೫ನೇ ವರೆಗಿನ ಗ್ರಾಮಗಳು)	ಭತ್ತ ೨೪ ಬಂ ಮಣ ಅಡಿಕೆ ೧೩॥ ಬಂ ಮಣ (೨ ಖಂಡಿ) ಯಾ ಫಲ ಬಂದ ಮಾರಕ್ಕೆ ೪॥ ರತ್ತಲ
ಸರ್ವೇ ಗ್ರೂಪ ೩ — ಆಚನಳ್ಳಿ ಅಡ್ಕಳ್ಳಿ ಅಡಕಳ್ಳಿ ಅಂಬಲಿಹೊಂಡ, ಅಂಡಗಿ, ಅನಗೋಡಕೊಪ್ಪ ಬಳಗಾರ ಬರನಳ್ಳಿ ಬಂಡಲ, ಬರೂರ ಬೇಗಡ್ಡೆ, ಬೆಂಗಳ ವಟಿಕೊಪ್ಪ ಭಾಶಿ, ಬಿಸಲಕೊಪ್ಪ (ಅಜ್ಜಿಬಾಳ ಫಿರ್ಕಾ) ಬೊಮ್ಮನಳ್ಳಿ (ಊರತೋಟ ಫಿರ್ಕಾ) ಬೊಪ್ಪನಳ್ಳಿ (ಊರತೋಟ ಫಿರ್ಕಾ) ಚಂದಗೇರಿ, ಚಿಕ್ಕದುಗ್ಲಿ ದೇವರಕೊಪ್ಪ ದೇವಿಮನೆ, ಧರಿ, ಗಾಡಗೇರಿ ಗಡಿಹಳ್ಳಿ ಗೋಣಗಟ್ಟೆ ಗೋಣೂರ ಹಣ್ಣಗಿ ಹಳ್ಳಗದ್ದೆ ಹುಲಗದ್ದೆ ಹಲಸಿನಕಟ್ಟೆ ಹಲಸಿನಕೊಪ್ಪ ಹಂದಿಮನೆ ಹಣಗಾರ ಹನುಮಂತಿ ಹಾರೇಗೊಪ್ಪ ಹೆಬ್ರೆ ಹೆಗ್ಗಾರ, ಹೆಗ್ಗರ್ಸ ಹೊಸೂರ ಜಡ್ಡಿಗದ್ದೆ (ಹುಣಸೆಕೊಪ್ಪ ಫಿರ್ಕಾ) ಜಾನಮನೆ (ಸಂಪಖಂಡ ಫಿರ್ಕಾ) ಕಬ್ಬೆ ಕಡಬಾಳ ಕಾಗೆರೆ, ಕಲಗಾರ ಕಲಗುಂಡಿಕೊಪ್ಪ ಕಲಕರ್ಡಿ ಕರಕೊಪ್ಪ ಕಳ್ಳಿ, ಕಾನಳ್ಳಿ ಕಾಂಡ್ರಾಜಿ ಕಾನಗೋಡ ಕನಕಪುರ, ಕಾನಕೊಪ್ಪ ಕರಸನಳ್ಳಿ ಕರೂರ (ಅಜ್ಜಿಬಾಳ ಫಿರ್ಕಾ), ಕೊಡಗಿಬೈಲ ಕೊಗೋಡ ಕೊಂಡಲಗಿ ಕೊಪ್ಪ ಕೋಟಗಿಹಳ್ಳಿ ಕುಗಿಕಿಮನೆ ಕುಕಡಿ ಕುಳವೆ ಖುರ್ಸೆ, ಕ್ಯಾದಗಿಕೊಪ್ಪ ಲಿಂಗನಮಕ್ಕಿ, ಮಾಡನಕೇರಿ, ಮದ್ರಳ್ಳಿ ಮಾರಗುಂಡಿ, ಮತ್ತಿಗಾರ, ಮೊಡೂರ, ಮುಡಗಾರ ಮುಗವಳ್ಳಿ ಮುಂಡಗೆಹಳ್ಳಿ ನಾಂಡಿಗೇಸರ ನೀರೂರ, ನೆಗ್ಗು ನೇರಲಹಳ್ಳಿ, ನಿರಕಲಕೊಪ್ಪ ಓಣಿಗದ್ದೆ ಪಡಗೇರಿ, ಸದಾಶಿವಳ್ಳಿ ಸಹಸ್ರಳ್ಳಿ ಸಾಲಕಣಿ ಸಂಪಖಂಡ ಶಿರಸಿ ಮಕ್ಕಿ, ಸುಗಾವಿ ತಟ್ಟಿಗೆ ತಟ್ಟೀಸರ ತವಡಕೊಪ್ಪ ತೆರಕನಹಳ್ಳಿ ತಡಿಣಿ ಉಲ್ಲಾಳ, ಉಪ್ಪಳಕೊಪ್ಪ ವಡ್ಡಿನಕೊಪ್ಪ, ಯಡಹಳ್ಳಿ (೮೬ರಿಂದ ೧೬೫ನೇ ವರೆಗಿನ ಗ್ರಾಮಗಳು)	ಭತ್ತ ೨೫ ಬಂಗಾಲಿ ಮಣ ಅಡಿಕೆ ೧೩॥ ಬಂ ಮಣ (೧೨ ಖಂಡಿ) ಯಾ ಫಲ ಬಂದ ಪ್ರತಿ ಮಾರಕ್ಕೆ ೪॥ ರತ್ತಲ
ಸರ್ವೇ ಗ್ರೂಪ ೪ — ಅಗಸಾಲ ಅಂಡೊಳ್ಳಿ ಅರಗಿನಮನೆ, ಅರಸಾಪುರ ಅವಘಾಲ, ಬದಗಿ, ಬಕ್ಕಳ, ಬಾಳೇಗದ್ದೆ, ಬರ್ಗಗುಣಿ, ಬೆಳಲೆ ಬೇಡಗಾಂವ, ಭೈರುಂಬೆ, ಬೊಮ್ಮನಳ್ಳಿ ಬೊಪ್ಪನಳ್ಳಿ (ಇಸಳೂರ ಫಿರ್ಕಾ) ಬುಗಡಿ, ದೇವನಹಳ್ಳಿ, ದೇವನನ ... ಗೋಳಿಕೊಪ್ಪ ಗುರವಳ್ಳಿ ಹಂಚರಟಾ, ಹಾರೇಪಾಲ ಹೊಸತೋಟ (ಮಂಜಗುಣಿ ಫಿರ್ಕಾ), ಹುಲೇಕಲ್ಲ, ಹುಲಗೋಳ, ಹುತಗಾರ, ಇಟಗುಳಿ ಜಡ್ಡಿಗದ್ದೆ, ಕಲ್ಲಳ್ಳಿ ಕಾಕಾರಾಂವ, ಕಂದಿಗಾಂವ ಕರೂರ, ಕೆಳಗಿನ ಓಣಿಕೇರಿ ಕೋಡಿಗಾರ ಕೋಳಗಿಬಿ ಕೊಪ್ಪ ಕುದ್ರಗೋಡ ಮಳೆನಹಳ್ಳಿ, ಮಣದೂರ ಮಂಜಗುಣಿ ಮಾರದೇವಳ ಮೇಲಿನ-ಓಣಿಕೇರಿ, ಮೋಟಗದ್ದೆ ಮುಗಿಲಕೊಪ್ಪ ಮುರೇಗಾರ ನೈಗಾರ, ನಕ್ಕೆ ನವಿಲಗಾರ ನೇಕಾರ, ಸೀಳಕಣೆ, ಸರಗುಪ್ಪೆ ಸವಳಿ, ಶಿಂಗನಹಳ್ಳಿ ಶಿವಳ್ಳಿ (ಬಿಸಲಕೊಪ್ಪ ಫಿರ್ಕಾ) ಶಿವಳ್ಳಿ (ಫಿರ್ಕಾ), ಶಿವಗಾಂವ, ಸೋಂದಾ, ತಾರಗೋಡ ತಿಪ್ಪುರ (೧೬೬ರಿಂದ ೨೪೩ರ ವರೆಗಿನ ಗ್ರಾಮಗಳು)	ಭತ್ತ ೨೫ ಬಂಗಾಲಿ ಮಣ ಅಡಿಕೆ ೧೩॥ ಬಂ ಮಣ (– ೨ ಖಂಡಿ) ಯಾ ಫಲ ಬಂದ ಪ್ರತಿ ಮಾರಕ್ಕೆ ೪॥ ರತ್ತಲ
ಸರ್ವೇ ಗ್ರೂಪ ೫. — ಬಳೇಕಾಯಿಮನೆ ಬೆಡಗದ್ದೆ, ಗದ್ದೆಹಳ್ಳಿ ಗೋಣಸರ, ಹಳ್ಳಿಗದ್ದೆ ಕೋಡಿನಗದ್ದೆ, ಕಲ್ಲಗದ್ದೆ-ಕಂಚಿಗದ್ದೆ, ಕಾನಮುಸ್ಕಿ, ಕೆಳಗಿನಕೇರಿ, ಕೆಳಗಿನ-ನಲಕಣ, ಕುಳವಳ್ಳಿ ಮೇಲಿನ, ಮುಂಡಗನಮನೆ ಸಂಜೋಗಿನಕೇರಿ ಸೋಮಗಿಮನೆ ಶಿಂಗನಮನೆ, ವಾನಳ್ಳಿ (೨೪೪ರಿಂದ ೨೬೦ರ ವರೆಗಿನ ಗ್ರಾಮಗಳು)	ಭತ್ತ ೨೧॥ ಬಂ ಮಣ ಅಡಿಕೆ ೧೩॥ ಬಂ ಮಣ (– ೨ ಖಂಡಿ) ಯಾ ಫಲ ಬಂದ ಪ್ರತಿ ಮಾರಕ್ಕೆ ೪॥ ರತ್ತಲ
ಸರ್ವೇ ಗ್ರೂಪ ೬ — ಧೋರಣಗಿರಿ ಕಕ್ಕಳ್ಳಿ ಮುಷ್ಕಿ, ಶಿರನಗಾಂವ ಶಿರಗಣಿ (೨೬೧ರಿಂದ ೨೬೫ನೇ ವರೆಗಿನ ಗ್ರಾಮಗಳು)	ಭತ್ತ ೨೪ ಬಂ ಮಣ ಅಡಿಕೆ ೧೩॥ ಬಂ ಮಣ (೨ ಖಂಡಿ) ಯಾ ಫಲ ಬಂದ ಪ್ರತಿ ಮಾರಕ್ಕೆ ೪॥ ರತ್ತಲ

ಶಿರಸಿ
ತಾ ೧೪ ೨ ೪೮

M H Farokhi,
ಮಾಮಲೇದಾರ, ಶಿರಸಿ

ಜಿಲ್ಹಾ ಸಮಾಚಾರ (೪ನೇ ಪುಟದಿಂದ ಮುಂದೆ

ಹೊನ್ನಾವರ— (ತಾ ೧೨-೨-೪೮) ಬ್ರಿಜ ಂಧಿಜಿಯವರ ಕೊಲೆಯಾದ ಸದ್ದಿ ಗೊತ್ತಾದ ತಾ ೩೧ನೇ ದಿನ ಅಪರಾಹ್ನ ೩ಕ್ಕೆ ನಲ್ಲಿತು ಊರಿನೇ ಎಲ್ಲ ವ್ಯಾಪಾರಿಗರೂ ಗಿರಣಿಯವರೂ ಹರತಾಳ ಮಾಡಿದರು ಅಂದು ಪುನಃ ಅಸ್ಥಿ ವಿಸರ್ಜನೆಯ ದಿನದ ನಿಮಿತ್ತ ಸಕಲರೂ ಹರತಾಳವನ್ನಾಚರಿಸಿದ್ದಲ್ಲದೆ, ಮುಂಜಾನೆ ಪ್ರಭಾತಫೇರಿ ವಿಸರ್ಜನೆ ಧ ಜವಂದನೆ, ಶಾಲೆಯಲ್ಲಿ ಸಾರ್ವಜನಿಕ ಸಭೆ ಮಹಾತ್ಮಾಜಿಯವರ ಗುಣಗಾನ, ದೀಪಪ್ರದರ್ಶನ ಹಾಗೂ ಕೊಲೆಯ ನಿಷೇಧ ಮಾಡುವ ಗೊತ್ತುವಳಿಗಳು ಕಾರ ವಗೈರೆ ಕಾರ್ಯಕ್ರಮ ನಡೆಯಿತು ಹಿಂದು ಂತೆ ಮುಸಲ್ಮಾನರೂ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು

ಎಣ್ಣೆಯ ನಿಯಂತ್ರಣ ಹೋದಂದಿನಿಂದ ಹಳ್ಳಿಗಳಲ್ಲಿ ಈ ಎಣ್ಣೆ ಸಿಗುವದು ಕಷ್ಟವಾಗುತ್ತದೆಂದು ಜಲವಳ್ಳಿಯವರೊಬ್ಬರು ಮೊನ್ನೆ ಹೊನ್ನಾವರಕ್ಕೆ ಬಂದು ಎಣ್ಣೆ ಕಂಪನಿಯ ಏಜಂಟರ ಕಡೆಗೆ ೧-೨ ಡಬ್ಬಿ ಎಣ್ಣೆ ಕೇಳಹೋದರೆ, "ಶಿಲ್ಕು ಇಲ್ಲ ಇನ್ನೊಮ್ಮೆ ಬಂದಾಗ ಕೊಡುತ್ತೇನೆ" ಎಂದು ಏಜಂಟರು ಉತ್ತರಿಸಿದರಂತೆ ಅಧಿಕಾರಿಗಳು ಇತ್ತ ಗಮನಿಸಬೇಕಾಗಿ ಅರಿಕೆಯುಂಟು

(ತಾ ೧೫-೨-೪೮) ಬಂಧಾರಾ ಯೋಜನೆಯ ಅಧಿಕಾರಿಗಳೊಬ್ಬರು ಕಳೆದ ತಾ ೧೦ಕ್ಕೆ ಜಲವಳ್ಳಿಯೊಳಗಿನ ಶಾಳ್ಕೋಡ ಕಟ್ಟಿನ ರಕ್ಷಣೆಯಲ್ಲಿದ್ದ ೨೦೦ ಎಕರೆ ಗದ್ದೆ ಸ್ಥಳದಲ್ಲಿ ಈ ವರ್ಷ ಉಪ್ಪು ನೀರು ಸೇರಿದ್ದರಿಂದ ಆದ ನಷ್ಟದ ತಪಾಸಿ ಮಾಡಲು ಹೋಗಿದ್ದರು ಈ ಬಗ್ಗೆ ಸರಕಾರಕ್ಕೆ ಒಂದು ಅರ್ಜಿ ಹೋಗಿತ್ತೆಂದು ತಿಳಿಯುತ್ತದೆ ಅವರು ರೈತರೆಲ್ಲರನ್ನು ಕೂಡಿಸಿ ಕಟ್ಟಿನ ಸಂಬಂಧದ ಮಾಹಿತಿಯನ್ನೆಲ್ಲ ಕೇಳಿಕೊಂಡರು ಅಷ್ಟರಲ್ಲಿ ಸಾಯಂಕಾಲವಾಯಿತು ಆದ ಕಾರಣ ಸದರಿ ಅಧಿಕಾರಿಗಳು ಆ ರಾತ್ರಿ ಸದರಿ ಕಟ್ಟಿನ ಸಂಘದ ಕಾರ್ಯದರ್ಶಿಗಳ ಮನೆಯಲ್ಲಿ ಉಳಿಯಬೇಕಾಯಿತು ಆಗ ಜನರು ಮಾಡಿದ ಅರ್ಜಿಯೂ ಆದರ ಮೇಲೆ ಇರುವ ಶೆರೆಯೂ ಕಾರ್ಯದರ್ಶಿಗಳಿಗೆ ನೋಡಲು ಸಿಕ್ಕಿತು ಅರ್ಜಿಯ ಮೇಲಿನ ಶೆರೆ ಕಾರ್ಯದರ್ಶಿಗಳಿಗೆ ಸರಿಬೀಳಲಿಲ್ಲವಂತೆ ಅದನ್ನು ಅಳಿದೊಗೆಯಲು ಅವರು ಅಧಿಕಾರಿಗಳಿಗೆ ಸೂಚಿಸಿದರಂತೆ! ಸರಕಾರಿ ಕಾಗದಪತ್ರ ಇರಿಸುವದು ತಯಾರಾದ ಈ ಕಾರ್ಯದರ್ಶಿಗಳ ಧಾರ್ಷ್ಟ್ಯ ನೋಡಿ ಜನರು ಬೆರಗಾದರು ಅಧಿಕಾರಿಗಳು ಈ ಕಾರ್ಯದರ್ಶಿಗಳ ನಡತೆಯ ಚೌಕಶಿ ಮಾಡಬೇಕಾಗಿ ಅರ್ಜಿಯ ಮೇಲೆ ಶೆರಾ ಬರೆದವರು ಬಿನ್ನವಿಸುತ್ತಾರೆ

ಮಂಕಿ— ಗುರುವಾರ ತಾ ೧೨ನೇ ಮಹಾತ್ಮಾಜಿಯವರ ಅಸ್ಥಿ ನಿಕ್ಷೇಪಣ ದಿನದ ನಿಮಿತ್ತ ಇಲ್ಲಿ ಸಂಪೂರ್ಣ ಹರತಾಳವಾಯಿತು ಪ್ರಾತಃಕಾಲಕ್ಕೆ ಮಂದಿರಗಳಿಂದ ಬೀದಿಗಳಲ್ಲಿ ವಿಶೇಷ ಪ್ರಾರ್ಥನೆಗಳಾದವು ಆಮೇಲೆ ಭಜನೆ ಮಾಡುತ್ತ ಪ್ರಭಾತಫೇರಿ ಮೆರವಣಿಗೆಯಾಯಿತು ಸಂಜೆ ಪುನಃ ಜನರು ಮೆರವಣಿಗೆಯಿಂದ ಶಾಲೆಯ ಮುಂದಿನ ಮೈದಾನದಲ್ಲಿ ಬಂದು ಸಭೆ ಸೇರಿದರು ಆನಂತರ ಡಾ ಬಾಲಕೃಷ್ಣ ನಾಯಕರು ಸಭಾಧ್ಯಕ್ಷರಾಗಿದ್ದರು ಸಭೆಯ ಪ್ರಾರಂಭಕ್ಕೆ ಗೀತೆ, ಕುರಾನ್, ಬಾಯಬಲಗಳೊಳಗಿನ ಕೆಲಕೆಲವು ಭಾಗಗಳು ಓದಲ್ಪಟ್ಟವು ಆನಂತರ ಹಲವರು ಮಾತಾಡಿ ಮಹಾತ್ಮಾಜಿಯವರು ಅವತಾರ ಪುರುಷರೆಂದೂ ಅವರು ಬೋಧಿಸಿದ ತತ್ವಗಳ ಆಚರಣೆಯ ಜಗತ್ತಿನಲ್ಲಿ ಶಾಂತಿ ಸುಖ ಸಮೃದ್ಧಿಗಳನ್ನು ನೆಲೆಸುವವೆಂದೂ ಪ್ರತಿಪಾದಿಸಿದರು ಆಮೇಲೆ ಎಲ್ಲರೂ ೨ ನಿಮಿಷ ಮೌನದಿಂದ ನಿಂತು ಪ್ರಾರ್ಥನೆ ಸಲ್ಲಿಸಿ ಮೃತಯಾತಕ ಗೊತ್ತುವಳಿಯನ್ನು ಸ್ವೀಕರಿಸಿದರು ಈ ಸಮಾರಂಭಕ್ಕಾಗಿ ಊರಲ್ಲಿ ವರ್ಗಣಿ ಕೂಡಿತ್ತು ಅದರೊಳಗಿಂದ ರೂ ೩೨ ವೆಚ್ಚವಾಗಿದ್ದು ಮತ್ತು ರೂ ೨೩೦| ಶಿಲ್ಕು ಉಳಿದಿದೆ ಈ ಹಣವನ್ನು ಮುಂದೆ ಸ್ವಾತಂತ್ರ್ಯೋತ್ಸವದ ಕಾಲಕ್ಕೆ ಕೂಡಿಸಿದ ಹಣದಲ್ಲಿ ಶಿಲ್ಕು ಉಳಿದಿರುವ ರೂ ೧೧೮ನ್ನೂ ವಿನಿಯೋಗಿಸಿ ಊರ ನಡುವೆ ಒಂದು ಪ್ರಶಸ್ತ ಸ್ಥಳದಲ್ಲಿ ಗಾಂಧಿಜಿಯವರ ಶಿಲಾ ಪ್ರತಿಮೆ ಸ್ಥಾಪಿಸಬೇಕೆಂದು ಜನರ ತೀರ್ಮಾನವಾಗಿದೆ ಸದರ ಸಭೆ ನಡೆದ ಬೈಲಿಗೆ ಇನ್ನು ಮುಂದೆ ಗಾಂಧಿ ಮೈದಾನ ಎಂದು ಕರೆಯಬೇಕೆಂದೂ ಗೊತ್ತಾಗಿದೆ

ಮುರ್ಡೇಶ್ವರ— (ತಾ ೬-೨-೪೮) ಕಳೆದ ತಾ ೧೨ಕ್ಕೆ ಇಲ್ಲಿ ಹಿಂದು ಮುಸಲ್ಮಾನ ಬಾಂಧವರು ಸಹಕಾರದಿಂದ ಪೂಜ್ಯ ಮಹಾತ್ಮಾ ಗಾಂಧಿಯವರ ಅಸ್ಥಿವಿಸರ್ಜನೆಯ ದಿನವನ್ನು ತಕ್ಕ ಗೌರವದಿಂದ ಆಚರಿಸಿದರು ಮುಂಜಾನೆ ಪ್ರಭಾತಫೇರಿ ಮತ್ತು ಪ್ರಾರ್ಥನೆಗಳು ನಡೆದವು ಮಧ್ಯಾಹ್ನದಲ್ಲಿ ಹರಿಜನರೊಳಗೊಂಡು ಎಲ್ಲ ಬಡಬಗ್ಗರಿಗೆ ಅನ್ನಸಂತರ್ಪಣೆಯಾಯಿತು ಸಾಯಂಕಾಲಕ್ಕೆ ಡಾ ಎಮ್ ವಿ ಹೆಗಡೆ ಪುರಸ್ಕೃತ ಇವರ ಅಧ್ಯಕ್ಷತೆಯಲ್ಲಿ ಬೃಹತ್ ಸಭೆಯಾಯಿತು ಮಹಾತ್ಮಾಜಿಯವರ ರಚನಾತ್ಮಕ ಕಾರ್ಯಕ್ರಮವನ್ನು ಎಲ್ಲರೂ ಶಕ್ತ್ಯನುಸಾರ ಆಚರಣೆಯಲ್ಲಿ ತರಬೇಕೆಂದೂ ಹಾಗೆ ಮಾಡಿದರೆ ಮಾತ್ರ ಮಹಾತ್ಮರ ಆತ್ಮಕ್ಕೆ ಶಾಂತಿಯಾಗುವದೆಂದೂ ಭಾಷಣಕಾರರು ವಿವರಿಸಿದರು ನಂತರ ಮಹಾತ್ಮರ ಬಗ್ಗೆ ಸಾಮುದಾಯಿಕ ಪ್ರಾರ್ಥನೆಯಾಯಿತು ಕಟ್ಟೆಯು ಪತ್ರರಿರುವ ಸಭೆಯ ಮೈದಾನದಲ್ಲಿ ಮಹಾತ್ಮರ ಸ್ಮರಣಾರ್ಥ ಪ್ರತಿ ನಿತ್ಯ ರಾತ್ರಿ ದೀಪ ಹಚ್ಚಬೇಕೆಂದು ನಿಶ್ಚಿತವಾಗಿದೆ

ಕೈ| ವಾ| ರಾ| ಬ| ತಾಳಮಕ್ಕಿಯವರು

ನಮ್ಮ ಜಿಲ್ಹೆಯ ಮೂಲ ನಿವಾಸಿಗಳಾಗಿದ್ದ ರಾ ಬ ಎಸ್ ಎಸ್ ತಾಳಮಕ್ಕಿ ಇವರು ಇದೇ ಕಳೆದ ತಾ ೨೮ ೧ ೪೮ನೇ ಧಾರವಾಡದಲ್ಲಿರುವ ಸಾರಸ್ವತಪುರದಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ ಕೈಲಾಸವಾಸಿಗಳು ವಕೀಲಿಯ ಪರೀಕ್ಷೆಯನ್ನು ಕೆಲವು ಕಾಲ ಕುಮಟೆಯಲ್ಲಿ ವಕೀಲಿಯನ್ನು ನಡೆಸಿದ್ದರು ಆ ಕಾಲದಲ್ಲಿ ಇಲ್ಲಿಯ ದಿವಾಣಿ ಕೋರ್ಟಿನ ನ್ಯಾಯಾಧೀಶರ ಗಿದ್ದ ರಾ ಬೆಳಕೆರಿ ಮುಂಬಯಿಯ ಹಾಯ ಕೋರ್ಟಿಗೆ ವರ್ಗವಾಯಿತು ಅವರು ಕೈ ವಾ ರಾ ಬ ತಾಳಮಕ್ಕಿಯವರ ಆಪ್ತ ಮಿತ್ರರಾಗಿದ್ದರು ಆದರಿಂದ ಅವರ ಹೆಸರಿನಾಗ ತಾಳಮಕ್ಕಿಯವರನ್ನೂ ಕರಕೊಂಡು ಮುಂಬಯಿಗೆ ಹೋದರು ಅಲ್ಲಿ ತಾಳಮಕ್ಕಿಯವರು ಹಾಯಕೋರ್ಟ ನಲ್ಲಿ ಹೆಚ್ಚಿನ ಹಿರಿಯ ಗ್ರೇಡಿನ ನೌಕರಿಯಲ್ಲಿದ್ದರು ಅವರು ಸೇವಾನಿವೃತ್ತರಾಗುವಾಗ ಹಾಯಕೋರ್ಟಿನ ಡೆಪ್ಯುಟಿ ರಜಿಸ್ಟ್ರಾರರಾಗಿದ್ದರು ತಾಳಮಕ್ಕಿಯವರು ಈ ನೌಕರಿಯ ಕೆಲಸವನ್ನು ಸಹಕಾರಿ ಸಹಕಾರಿ ಆಂದೋಲನದಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದುಂಟು ಮುಂಬಯಿಯ ವಿಟ್ಠಲ ಸಹಕಾರಿ ಬೇಂಕಿನ ಸಂಸ್ಥಾಪಕರಲ್ಲಿ ಇವರೂ ಒಬ್ಬರಾಗಿದ್ದರು ಮುಂಬಯಿಯ ತಲ್ಪೇವಾಡಿಯೊಳಗೆ ಸಹಕಾರಿ ಪದ್ಧತಿಯ ವಸತಿ ಸೊಸೈಟಿಯ (ಹೌಸಿಂಗ್) ಸಹಕಾರಿ ಸಂಘವನ್ನು ಸ್ಥಾಪಿಸುವದರ ಶ್ರೇಯಸ್ಸು ಇವರದೇ ಇನ್ನೂ ಅನೇಕ ಸಹಕಾರಿ ಸಂಸ್ಥೆಗಳೊಡನೆ ಅವರ ನಿಕಟ ಸಂಬಂಧವಿತ್ತು ಇದಲ್ಲದೆ ಮೃತರು ಸಾರಸ್ವತ ಸಮಾಜದ ಪೂರ್ಣ ಇತಿಹಾಸವನ್ನು ಸಂಶೋಧಿಸಿ ಪ್ರಕಟಿಸಿದ್ದುಂಟು ಕೊಂಕಣಿ ಭಾಷೆಯ ಅಭಿಮಾನ ಅವರಿಗೆ ಬಹಳವಿತ್ತು ಕೊಂಕಣಿಯೊಳಗಿನ ಗಾದೆಗಳನ್ನು ಸಂಗ್ರಹಿಸಿ ಅವರು ಪ್ರಕಟಿಸಿದ್ದಾರೆ ಕೊಂಕಣಿ ಭಾಷೆಯ ಸಂಬಂಧದಲ್ಲಿ ಅಧಿಕಾರವಾಣಿಯಿಂದ ಮಾತಾಡುವ ಯಾ ಬರೆಯುವ ಅಧಿಕಾರ ಅವರದಿತ್ತೆಂದು ಹೇಳಬಹುದು ಮೃತಾತ್ಮರಿಗೆ ಜಗದಾತ್ಮನು ಸದ್ಗತಿಯನ್ನೀಯಲಿ

ಹಳಿಯಾಳ ತಾಲೂಕಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು)

ಸನ್ ೧೯೪೭ನೇ ಮುಂಬಯಿ ಗೇಣಿದಾರಿಕೆಯ ೧೦ನೇ ನಿಯಮದಂತೆ ದೊರೆತ ಅಧಿಕಾರಗಳನ್ನು ಪ್ರಯೋಗಿಸಿ ಕಾನಡಾ ಜಿಲ್ಹೆಯ ಹಳಿಯಾಳ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೨ನೇ ಸ್ತಂಭದಲ್ಲಿ ತೋರಿಸಿದ ಸ್ಥಾನಿಕ ಕ್ಷೇತ್ರಗಳಲ್ಲಿ ೫ನೇ ಸ್ತಂಭದಲ್ಲಿ ತೋರಿಸಿದ ಪೈರಿನ ಉತ್ಪನ್ನ ಪ್ರತಿ ಎಕರೆಗೆ ೬ನೇ ಸ್ತಂಭದಲ್ಲಿ ನಮೂದಿಸಿದಷ್ಟು ಬಂದಿ ಎಂದು ಈ ಮೂಲಕ ಜಾಹೀರ ಮಾಡುತ್ತಾರೆ

ಪರಿಶಿಷ್ಟ

ಅ ನಂ	ಸ್ಥಾನಿಕ ಕ್ಷೇತ್ರ	ಜಮೀನಿನ ವರ್ಗ	ಜಮೀನಿನ ತರಗತಿ	ಪೈರಿನ ಹೆಸರು	ದರ ಎಕರೆಗೆ ಸರಾಸರಿ ಉತ್ಪನ್ನ
೧	(ಸರ್ವೇ ಗ್ರೂಪ ೧ ಮತ್ತು ೨ನೇದರಲ್ಲಿಯ ಗ್ರಾಮಗಳು) ಬಿ ದ್ಲಿಕೊಪ್ಪ, ಚನ್ನಾಪುರ ಭಾಗವತಿ, ಗುಡ್ಡಾಪುರ ಗುತ್ತಿಗೇರಿ ಹಳಿಯಾಳ ಹಲಸಿ, ಹಳ್ಳಿಟ್ಟಿ, ತಿಮ್ಮಾಪುರ, ಆಕ್ರಳ್ಳಿ, ಅರ್ಲವಾಡ ಬಾಣಸಗಿ ಹವಗಿ, ಹೋಮನಳ್ಳಿ ಹುಣಸವಾಡ ಕಲಶಾಪೂರ, ಕೇರವಾಡ, ಮಾಡನಳ್ಳಿ, ಮಂಗವಾಡ ಮುಂಡಕಿ ಸತ್ತಲಪುರ ಸಾತನಳ್ಳಿ ತೇರಗಾಂವ	ರಂಗಿ	೧	ಭತ್ತ	ಖಂಡು ೩೦
		ಮಧ್ಯಮ	೨		" ೨
		ಹುಕ್ಕಿ	೩		" ೧೪
೨	(ಸರ್ವೇ ಗ್ರೂಪ ೩ ಮತ್ತು ೪ರ ಹಳ್ಳಿಗಳು) ಅರೊಳ್ಳಿ ಬಲೋಗಾ ಎಮ್ಮೆಳ್ಳಿ ಬಸ್ವಣಕೊಪ್ಪ ದಾಂಡೇಲಿ, ಹಡವಳ್ಳಿ, ಕಲಕಟ್ಟಿ, ಗುಂಡೋಳಿಕೊಪ್ಪ, ಮಾಲವಾಡ, ಮೊದಲಗೇರಿ ನೀರಲಗಿ ಪಾಳಾ ಪೂರ ಸಾಂಬ್ರಾಣಿ, ತೇರನಳ್ಳಿ, ತಿಪ್ಪನಗೇರಿ ವಡಗೇರಾ ಬಸವಳ್ಳಿ ಬೆಳವಟಗಿ ಭಾಗವತಿ, ಗೋಲೇಹಳ್ಳಿ ಗುತ್ತಿಬೈಲ ಹಂಪೇಹಳ್ಳಿ ಜನಗಿ ಜಾವಳ್ಳಿ, ಮುರ್ಕವಾಡ ಭುವನೇಶ್ವರ, ಕಾವಲವಾಡ ಕೆಸರೊಳ್ಳಿ, ಕುರಿಗದ್ದಾ, ಮಾಗವಾಡ, ಮುರ್ಕವಾಡ, ನಾಗಶೆಟ್ಟಿಕೊಪ್ಪ, ಸಂದೀಗದ್ದೆ ರಾಮಪೂರ ಸಾತನೂರ ಅಟ್ಟಿ	ರಂಗಿ	೧	ಭತ್ತ	ಖಂಡು ೩೦
		ಮಧ್ಯಮ	೨	"	೨೨
		ಹುಕ್ಕಿ	೩	"	೧೪
೩	(ಸರ್ವೇ ಗ್ರೂಪ ೫ ಮತ್ತು ೬ರ ಹಳ್ಳಿಗಳು) ಅಡಿಕೆಹೊಸೂರ, ಅಗಸಲಕಟ್ಟಿ, ಅಜಗಾಂವ ಅಮಗಾಂವ ಹಳ್ಳಿ ಅಲೂರ, ಅಮ್ಮನಕೊಪ್ಪ ಆಡಿಸನಗೇರಿ, ಬೋಗಾರ, ಬಿಪ್ಪಲಗೇರಿ ದೊಡ್ಡಕೊಪ್ಪ ದೊಮ್ಮಗೇರಿ ದೊಂಗ್ರಿಕೊಪ್ಪ ಶಿವಪೂರ, ಗರಗೇರಿ ಗಡಿಯಾಳ, ಗಾಡೊಳ್ಳಿ, ಕೊಪೂರ ಜನಗೆ ಜನಗೆಕೊಪೂರ, ಜೋಗನಕೊಪ್ಪ ಕೇಗಿನಕೊಪ್ಪ ಮಾಮಡಳ್ಳಿ, ಕ್ಯಾಸನಗೇರಿ ಮಲವಡ ಮಾವಿನಕೊಪ್ಪ, ಮುಗದಕೊಪ್ಪ ಮುಂಡವಾಡ ನೀಲವಾಣ ಸಿದ್ದಾಪೂರ ಕಟ್ಟೀಗೇರಿ ಕಟಗೇರಿ, ಬಡ ಕಾನಶಿರಡಾ, ಬಡಾಶಿರಗೂರ ಬಾಳಕಟ್ಟಿಕೊಪ್ಪ ಭಾಗವತಿ, ಬಿಕ್ಕನಹಳ್ಳಿ, ದಾಂಡೇಲಿ ದೊಡ್ಡಕೇರಗಾಂವ ಹರನೋಡಾ ಕೇಗದಾಳ, ಕೇರವಾಡ (ದಾಂಡೇಲಿ) ರಾಯಪಟ್ಟಣ, ಜಾಮಗೆ	ರಂಗಿ	೧	ಭತ್ತ	ಖಂಡು ೨೮
		ಮಧ್ಯಮ	೨	"	" ೧೮
		ಹುಕ್ಕಿ	೩	"	" ೧೪

ಹಳಿಯಾಳ,
ತಾ ೭-೧-೪೮

T S Mohite
ಮಾಮಲೇದಾರ, ಹಳಿಯಾಳ

ವಾರ್ತೆಗಳು.

ಇಷ್ಟು ದಿನ ಪೂರೈಸುತ್ತ ಬಂದ ಪ್ರಮಾಣದಂತಲೇ ಹಿಂದುಸ್ಥಾನಕ್ಕೆ ಇನ್ನು ಮುಂದೆ ಪೆಟ್ರೋಲ ವಗೈರೆ ಖನಿಜ ಎಣ್ಣೆಗಳನ್ನು ಪೂರೈಸಲು ತಮಗೆ ಸಾಧ್ಯವಾಗಲಿಕ್ಕಿಲ್ಲೆಂದು ಬ್ರಿಟಿಶ ಮತ್ತು ಅಮೇರಿಕೆಯ ಎಣ್ಣೆಯ ಕಂಪನಿಗಳು ಹಿಂದುಸ್ಥಾನ ಸರಕಾರಕ್ಕೆ ತಿಳಿಸಿರುವವೆಂದೂ, ಆದರಿಂದ ಸರಕಾರವು ನೈಮಾನಿಕ ಸಂಸ್ಥೆ (ಕ್ಲಬ)ಗಳಿಗೆ ಪೆಟ್ರೋಲ ಕೊಡುವದನ್ನು ನಿಲ್ಲಿಸುವದೆಂದೂ, ಡೀಝೆಲ್ ಎಣ್ಣೆಯು ಈಗಾಗಲೇ ದುರ್ಮಿಳವಾಗಿರುವದರಿಂದ ವಿದ್ಯುತ್ತಿನ ಕಾರಖಾನೆಗಳಿಗೂ ಹೊಸ ಹೊಸ ಬೇನಾಯ್ತಿ ಸುಧಾರಣೆಯ ಕಾಮಗಾರಿಗಳಿಗೂ ತೊಂದರೆಯಾಗಹತ್ತಿದೆಯೆಂದೂ, ಸರಕಾರದವರು ಬೇಗನೇ ದೇಶದಲ್ಲೆಲ್ಲ ಕಡೋರವಾದ ಪೆಟ್ರೋಲ ಸೀಧಾಕ್ರಮ ಜಮಾಲಿನಲ್ಲಿ ತಂದು ಪೆಟ್ರೋಲ-ಸಂಗ್ರಹವನ್ನು ಕಾದಿಡಲು ಯೋಜನೆ ಮಾಡುವರೆಂದೂ "ಮುಂಬಯಿ ಕ್ರೊನಿಕಲ್" ಪತ್ರಿಕೆಯ ದಿಲ್ಲಿಯ ಸುದ್ದಿಗಾರರು ಬರೆದು ಕಳಿಸಿದ್ದಾನೆ. ಪೆಟ್ರೋಲ ಕೊರತೆಯಾಗುವದರಿಂದ ಹೆಚ್ಚೆಚ್ಚು ಪೆಟ್ರೋಲ ತಿನ್ನುವ ಮೋಟಾರ ಬಂಡಿಗಳ ಆಯಾತವನ್ನು ಸರಕಾರವು ನಿಲ್ಲಿಸುವದೆಂದೂ ಈ ಸುದ್ದಿಗಾರರ ಸುದ್ದಿ.

— ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳದಲ್ಲಿ ಕಾಶ್ಮೀರವಾದ ನಡೆದಿದೆಯಷ್ಟೇ. ಸದರಿ ಮಂಡಳದವರು ಪಾಕಿಸ್ತಾನ-ಪಕ್ಷಪಾತಿಗಳಾಗಿ ಬಹಿರಂಗದಿಂದ ಅಲ್ಲವಿದ್ದರೂ ಅಂತರಂಗದಿಂದ ಬೆಂಬಲ ಕೊಡುತ್ತಿರುವದೆಂದು ತಮಗೆ ವಿಶ್ವಸನೀಯವಾಗಿ ತಿಳಿದುಬಂದಿರುತ್ತದೆಂದು "ಸಂಯುಕ್ತ ಕರ್ನಾಟಕ"ದ ಲಂಡನ ಪ್ರತಿನಿಧಿಯು ತಿಳಿಸಿದ್ದಾನೆ.

WANTED efficient, hard working Agents throughout, on pay or commission basis, for our various modernised Fruit Products, Bala Sanjeevani, Perfumed Medicated Hair Oils, Vijayanjan etc etc Best Chance for the right persons. Apply immediately to—

VIJAYA CANNING WORKS,
Dajiban Peth, **HUBLI.**

ಕೆನರಾ ಕೊಲೇಜ ನಿಧಿ.

ಮೇಲಿನ ನಿಧಿಗೆ ತಾ ೧೫-೨-೪೭ರ ನಂತರ ಕೆಳಗಿನ ವಂತಿಗಳು ವಸೂಲ ಬಂದಿರುತ್ತವೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ (ಮುಂಬಯಿಯಲ್ಲಿ ದೊರೆತಿರುವ ವಂತಿಗೆಗಳು ಈ ಯಾದಿಯಲ್ಲಿ ಸೇರಿರುವದಿಲ್ಲ)

ಶ್ರೀ ವಾಮನ ನರಸಿಂಹ ನಾಯಕ ಮತ್ತು ಮಕ್ಕಳು, ಭಟಕಳ	ರೂ	೫೦೫
" ದಾಮೋದರ ಕಾಶಿ ಮೋಹಿದನ ಸಾಹೇಬ ಮತ್ತು ಮಕ್ಕಳು, ಭಟಕಳ.	"	೪೦೧
" ಎಸ್ ಎಸ್. ಸೈಯ್ಯದ ಅಬ್ದುಲ ಖಾದರ,	"	೩೦೧
" ಕಾಸರಕೋಡ ಮಹಮ್ಮದ ಹಸನ ಮತ್ತು ಬಂಧುಗಳು,	"	೨೦೧
" ನರಸಿಂಹ ಸುಬ್ರಾಯ ನಾಯಕ ಮತ್ತು ಬಂಧುಗಳು, ಕುಮಟಾ	"	೨೦೦
" ಚಂದ್ರಶೇಖರ ಎಸ್. ಕೋಡಿಕಣಿ, ಮುಂಬಯಿ.	"	೧೫೧
" ಜಿ. ಜಿ. ಭಟ್ಟ, ಬೈಲಕೊಂಗಲ	"	೧೫೦
" ಹಾವೇರಿ-ಹಾನಗಲ್ಲ-ಶಿರಸಿ ಮೋಟಾರ ಯೂನಿಯನ್ನ, ಶಿರಸಿ	"	೧೨೫
" ಕಾರವಾರ ಅರ್ಬನ್ ಸಹಕಾರಿ ಬ್ಯಾಂಕ	"	೧೧೧
" ಕೃಷ್ಣಾ ರಾಮ ಪೈ, ಹಳದೀಪುರ	"	೧೦೫
" ಗೋಪಾಲ ಅನಂತ ಭಟ್ಟ ಕವಡಿಕೇರಿ	"	೧೦೧
ವಿಷ್ಣು ಪರಮ ಭಟ್ಟ, ಕೊಂಕೇರಿ	"	೧೦೧
" ಮಹಾಲಕ್ಷ್ಮೀ ಮೋಟಾರ ಸರ್ವಿಸ, ಗುಳೇದಗುಡ್ಡ	"	೧೦೧
" ವ್ಹಿ. ಜಿ. ಶಾನಭಾಗ ಮತ್ತು ಮಕ್ಕಳು, ಭಟಕಳ	"	೧೦೧
ಗಣಪಯ್ಯ ರಾಮಕೃಷ್ಣ ಭಟ್ಟ ಗೋಳಿಕೆರೆ, ಬೆಂಗ್ರೆ	"	೧೦೧
ವ್ಹಿ. ಟಿ. ಜಗದ, ಕುಮಟಾ	"	೧೦೦
ಚಿಲ್ಲರೆ ವಸೂಲ ಬಂದದ್ದು.	"	೯೮೯-೬-೨
	ಒಟ್ಟು ರೂ	೫೧೪೪-೬-೨
	ಹಿಂದೆ ಒಟ್ಟಿದ್ದು ರೂ	೯೬೬೫೯-೧೧-೯
ಒಟ್ಟು ಈ ವರೆಗೆ ಕೂಡಿದ್ದು	ರೂ	೧೦೨೫೦೪-೨-೧೧

ಮುಂಡಗೋಡ ತಾಲೂಕಿನ ಬೆಳೆಯ ಪ್ರಕಟನೆ.

ನಂ ೧೨೯೨— ೧೯೪೭ನೇ ಇಸ್ವಿಯ ಒಕ್ಕಲತನದ ಕಾನೂನಿನ ನಿಯಮಾವಲಿಯ ೧೧ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಲಾ, ಮುಂಡಗೋಡ ತಾಲೂಕ ಮಾಮಲೇದಾರರು ಈ ಮೂಲಕ ಜಾಹೀರಪಡಿಸುವದೇನಂದರೆ — ಕೆಳಗಿನ ಪರಿಶಿಷ್ಟದ ೨ನೇ ಸ್ತಂಭದಲ್ಲಿ ತೋರಿಸಿದ ಸ್ಥಳಿಕ ಕ್ಷೇತ್ರಗಳೊಳಗಿನ ನೀರಾವರಿಯಲ್ಲದ ಭೂಮಿಗಳಲ್ಲಿ, ೧೯೪೭-೪೮ನೇ ಸಾಲಿನಲ್ಲಿ ಪ್ರತಿ ಎಕರೆಯ **ಭತ್ತದ** ಸರಾಸರಿ ಉತ್ಪನ್ನ ೪ನೇ ಸ್ತಂಭದಲ್ಲಿ ತೋರಿಸಿದಷ್ಟು ಬಂದಿದೆಯೆಂದು ಠರಾಯಿಸಲಾಗಿದೆ

ಅನುಕ್ರಮಾಂಕ ೧	ಸ್ಥಳಿಕ ಕ್ಷೇತ್ರ ೨	ಭೂಮಿಯ ಪ್ರಕಾರ ೩	ಪ್ರತಿ ಎಕರೆಯ ಉತ್ಪನ್ನ ೪
೧	ಸರ್ವೇ ಗ್ರೂಪ I ರಲ್ಲಿ ಬರುವ ಹಳ್ಳಿಗಳು	ಉತ್ತಮ	೪೮ ಬಂ ಮಣ
೨	ಡಿ	ಮಧ್ಯಮ	೨೯ "
೩	ಡಿ	ಕನಿಷ್ಠ	೨೦ "
೪	ಸ. ಗ್ರೂಪ II ರಲ್ಲಿ ಬರುವ ಹಳ್ಳಿಗಳು	ಉತ್ತಮ	೪೬ "
೫	ಡಿ	ಮಧ್ಯಮ	೨೬ "
೬	ಡಿ	ಕನಿಷ್ಠ	೧೮ "
೭	ಸ. ಗ್ರೂಪ III ರಲ್ಲಿ ಬರುವ ಹಳ್ಳಿಗಳು	ಉತ್ತಮ	೪೫ "
೮	ಡಿ	ಮಧ್ಯಮ	೨೬ "
೯	ಡಿ	ಕನಿಷ್ಠ	೧೮ "
೧೦	ಸ. ಗ್ರೂಪ IV ರಲ್ಲಿ ಬರುವ ಹಳ್ಳಿಗಳು	ಉತ್ತಮ	೪೪ "
೧೧	ಡಿ	ಮಧ್ಯಮ	೨೫ "
೧೨	ಡಿ	ಕನಿಷ್ಠ	೧೮ "

ಮುಂಡಗೋಡ,
ತಾ ೨೦-೨-೧೯೪೮

Y A. Sunthankar,
ಮಾಮಲೇದಾರ, ಮುಂಡಗೋಡ

ಭಟಕಳ ಪೇಟೆಯ ಬೆಳೆಯ ಜಾಹೀರನಾಮೆ.

(೧೯೪೭—೪೮ನೇ ಸಾಲಿನದು.)

ನಂ ೪೫೨ ಟಿ ಎನ್ ಸಿ — ೧೯೪೭ನೇ ಇಸವಿಯ ಮುಂಬಯಿಯ ಒಕ್ಕಲತನದ ಕಾನೂನಿನ ನಿಯಮಾವಲಿಯ ೧೧ನೇ ನಿಯಮದನ್ವಯ ದೊರೆತ ಅಧಿಕಾರವನ್ನುಪಯೋಗಿಸಿ, ಉತ್ತರ ಕಾನಡಾ ಜಿಲ್ಲೆಯ ಭಟಕಳ ಪೇಟೆಯ ಮಾಮಲೇದಾರರು, ೧೯೪೭-೪೮ನೇ ಸಾಲಿನಲ್ಲಿ ಈ ಕೆಳಗೆ ೧ನೇ ಸ್ತಂಭದಲ್ಲಿ ಕಾಣಿಸಿದ ಗ್ರಾಮಗಳ ೨ನೇಯ ಸ್ತಂಭದಲ್ಲಿ ನಿರ್ದೇಶಿಸಿದ ವರ್ಗದ, ಭತ್ತ ಬೆಳೆಯುವ ಭೂಮಿಗಳಲ್ಲಿ ಪ್ರತಿ ಎಕರೆಗೆ ೩ನೇಯ ಸ್ತಂಭದಲ್ಲಿ ಕಾಣಿಸಿದಷ್ಟು ಸರಾಸರಿ (ಭತ್ತದ) ಬೆಳೆಯು ಹುಟ್ಟಿರುತ್ತದೆಂದು ಜಾಹೀರಪಡಿಸುತ್ತಾರೆ. [ಕೆಳಗೆ ನಿರ್ದೇಶಿಸಿದ ೧ನೇ ತರಗತಿಯ ಭೂಮಿ ಅಂದರೆ ಎಕರೆ ೧ಕ್ಕೆ ರೂ ೬ ಯಾ ಹೆಚ್ಚಿಗೆ ತೀರ್ವೆಯುಳ್ಳದ್ದು, ೨ನೇ ತರಗತಿಯ ಭೂಮಿಯೆಂದರೆ ಎಕರೆ ೧ಕ್ಕೆ ರೂ ೪ರಿಂದ ರೂ. ೬ ರವರೆಗೆ ತೀರ್ವೆಯುಳ್ಳದ್ದು ಮತ್ತು ೩ನೇ ತರಗತಿಯ ಭೂಮಿಯೆಂದರೆ ಎಕರೆ ೧ಕ್ಕೆ ರೂ ೪ಕ್ಕಿಂತ ಕಡಿಮೆ ತೀರ್ವೆಯುಳ್ಳದ್ದು ಎಂದು ತಿಳಿಯಬೇಕು]

ಸ್ಥಾನಿಕ ಕ್ಷೇತ್ರ ಯಾನೆ ಗ್ರಾಮಗಳು (೧)	ಭೂಮಿಯ ವರ್ಗ (೨)	ಎಕರೆ ೧ಕ್ಕೆ ಸರಾಸರಿ ಬೆಳೆ [ಬಂ. ಮಣ](೩)
ಸರ್ವೇ ಗ್ರೂಪ I — ಕಾಯ್ಕಿಣಿ, ಮಾವಳ್ಳಿ, ಮುಂಡಳ್ಳಿ, ಪುರವರ್ಗ, ಶಿರಾಲಿ I ಮತ್ತು II ಬೆಂಗ್ರೆ I ಮತ್ತು II, ಬೈಲೂರ (ಒಟ್ಟು ೬ ಗ್ರಾಮಗಳು).	I ನೇ ತರಗತಿ ಕರಿ	೨೫
	II ನೇ ತರಗತಿ ಕರಿ	೨೩
	III ನೇ ತರಗತಿ ಕರಿ ಯಾನೆ ಮಕ್ಕಿ	೧೬
	ಮಕ್ಕಿ ಯಾನೆ ಫುಲಾ	೧೨
	ಗದ್ದೆ.	೨೦
ಸರ್ವೇ ಗ್ರೂಪ II — ಬೇಹಳ್ಳಿ, ಬಸ್ತಿಗಳಮಕ್ಕಿ, ಬೆಳ್ನಿ, ಚೌಥಣಿ, ಹಡೀನ, ಹೆಬಳೆ, ಜಾಲಿ, ಕಟಗಾಲ, ಮಾವಿನಕುರ್ವೆ, ಮೂಡಭಟಕಳ, ಮುಟ್ಟಳ್ಳಿ, ಸೂಸಗಡಿ, ತಗರಗೋಡ, ತಲಗೋಡ, ಬೆಳಕೆ, ಬೆಳಲಖಂಡ, ಹಡೀಲ, ತಲಸ, ವೆಂಕಟಾಪುರ, ಯಲವಡಿಕವೂರ (೨೦ ಗ್ರಾಮಗಳು)	I ನೇ ತರಗತಿ ಕರಿ	೨೪
	II ನೇ ತರಗತಿ ಕರಿ	೧೬
	ಮಕ್ಕಿ	೧೪
	ಮಕ್ಕಿ (ಫುಲಾ)	೧೨
	ಗದ್ದೆ	೨೦
ಸರ್ವೇ ಗ್ರೂಪ III — ಕೋಣಾರ, ಗೊರಟೆ, ಹೇರೂರ (೩ ಗ್ರಾಮಗಳು).	I ನೇ ತರಗತಿ ಕರಿ	೨೧
	II ನೇ ತರಗತಿ ಕರಿ	೧೪
	ಮಕ್ಕಿ	೧೨
ಸರ್ವೇ ಗ್ರೂಪ IV — ಬೇಂಗ್ರೆ, ಬೇರಿ, ಬೇಲೂರಮನೆ, ಬಸಲೂರ, ಕಿತ್ರೆ, ಕೊಣಾರ, ಕೊಪ್ಪ, ಕೊಟಖಂಡ, ಕುಂಟವಣಿ, ಮಾರುಕೇರಿ (೧೦ ಗ್ರಾಮಗಳು)	I ನೇ ತರಗತಿ ಕರಿ	೨೦
	II ನೇ ತರಗತಿ ಕರಿ	೧೪
	ಮಕ್ಕಿ	೧೨
ಸರ್ವೇ ಗ್ರೂಪ V — ಅಂತ್ರವಳ್ಳಿ, ಅರಮಕ್ಕಿ, ಬಸ್ತಿಗಳಮಕ್ಕಿ, ಹಾಡವಳ್ಳಿ, ಹಳ್ಳಿರ, ಹಲ್ಯಾಣಿ, ಹೆಗ್ಗಲ, ಹುಡೀಲ, ಕಗ್ಗಂಡಿ, ಕೆಕ್ಕೋಡ, ಕರಿಕಲ್ಲ, ಮುಠ್ಠಳ್ಳಿ, ಮುಗಳಿ, ಮಾವಿನಕೋಡ, ನೂರ್ಜು, ಒಣಿಬಾಗಿಲ (೧೬ ಗ್ರಾಮಗಳು)	I ನೇ ತರಗತಿ ಕರಿ	೧೫
	II ನೇ ತರಗತಿ ಕರಿ	೯
	III ನೇ ತರಗತಿ ಯಾ ಮಕ್ಕಿ	೬
ಸರ್ವೇ ಗ್ರೂಪ VI — ಅಗ್ರಾ, ಬಡಾಬಾಗ, ದೇವಸ್ಥಾನಮಕ್ಕಿ, ಹಾಡವಳ್ಳಿ, ಬೆಂಗ್ಲಿ, ಕುಂಬಾರಿ ಕೊರಂಡೂರ (೬ ಗ್ರಾಮಗಳು).	I ನೇ ತರಗತಿ ಕರಿ	೧೪
	II ನೇ ತರಗತಿ ಕರಿ	೮
	III ನೇ ತರಗತಿ ಯಾ ಮಕ್ಕಿ	೬

ಭಟಕಳ,
ತಾ ೧೭-೨-೪೮

K. H. Avarsekar,
ಮಾಮಲೇದಾರ, ಭಟಕಳ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಅಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B 1270. Monday, 1-3-1948

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೫

ಕುಮಟಾ:- ಸೋಮವಾರ, ತಾ ೧—೩—೧೯೪೮

ಜಾಹೀರಾತುಗಳ ದರ:-
[illegible]
ಇಲ್ಲವೆ ಪತ್ರದ್ವಾರ
[illegible]

ವರ್ಗಣಿಯ ದರ.
ಕುಮಟೆಯಲ್ಲಿ
[illegible]
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಸುದ್ದಿಗಳ ಸಂದೂಕ.

ಹಿಂದುಸ್ಥಾನ ಸರಕಾರದ ೧೯೪೮-೪೯ನೇ ಸಾಲಿನ ಆಯವ್ಯಯಗಳ ಅಂದಾಜ ಪತ್ರಿಕೆಯನ್ನು ಅರ್ಥ-ಮಂತ್ರಿ ಶ್ರೀ ಷಣ್ಮುಖಂ ಚೆಟ್ಟಿಯವರು ಮೊನ್ನೆ ಶನಿವಾರ ಕೇಂದ್ರ ಕಾನೂನ-ಮಂಡಳದಲ್ಲಿ ಮಂಡಿಸಿದರು. ಮುಂದಿನ ವರ್ಷ ಸಂರಕ್ಷಣ ಖಾತೆಯ ವೆಚ್ಚ ೧೨೧ ಕೋಟಿ ೧೮ ಲಕ್ಷ ರೂ ಮತ್ತು ಇತರ ವೆಚ್ಚ ೧೩೬ ಕೋಟಿ ೨೯ ಲಕ್ಷ ರೂ.ಗೆ ಅಂತು ವೆಚ್ಚವು ೨೫೭ ಕೋಟಿ ೪೭ ಲಕ್ಷ ರೂ ಬರುವದೆಂದೂ, ಸದ್ಯಕ್ಕೆ ಅಮಲಿನಲ್ಲಿರುವ ತೆರಿಗೆ-ಸುಂಕಗಳಿಂದ ೨೩೦ ಕೋಟಿ ೫೩ ಲಕ್ಷ ರೂ ಆದಾಯ ಬರುವದೆಂದೂ, ೨೬ ಕೋಟಿ ೮೫ ಲಕ್ಷ ರೂ ಗಳ ಕೊರತೆಯಾಗುವದೆಂದೂ ಮಂತ್ರಿಗಳು ಈ ಅಂದಾಜ ಪತ್ರಿಕೆಯಲ್ಲಿ ಕಾಣಿಸಿದ್ದಾರೆ. ಈ ಕೊರತೆಯನ್ನು ಕೆಲಮಟ್ಟಿಗೆ ತುಂಬಿ ತರಲು ಅವರು ಚಹಾ, ಕಾಫಿ, ತಂಬಾಕು, ಸಿಗರೇಟು, ವನಸ್ಪತಿ ತುಪ್ಪ, ಟಾಯರುಗಳು, ಬೆಂಕಿಪೆಟ್ಟಿಗೆಗಳು ಇವುಗಳ ಮೇಲಿನ ಅಬಕಾರಿ ಇಲ್ಲವೆ ಆಯಾತ ಸುಂಕಗಳನ್ನು ಏರಿಸಬೇಕೆಂದು ಸೂಚಿಸಿದ್ದಾರೆ. ಚಹಾ-ಕಾಫಿಗಳ ಮೇಲೆ ಈಗ ರತ್ತಲಿಗೆ ೨ ಆಣೆಯಂತೆ ಸುಂಕ ವಸೂಲಾಗುತ್ತಿದೆ. ಅದು ಇಮ್ಮಡಿಯಾಗುವದು. ಅಂಚೆಕಟ್ಟೆಗಳಲ್ಲಿ ಪತ್ರ ಮೊದಲಾದವನ್ನು ರಜಿಸ್ಟರ ಮಾಡಲಿಕ್ಕೆ ಈಗ ೩ ಆಣೆ ಕೊಡಬೇಕು. ಮುಂದಿನ ವರ್ಷ ೪ ಆಣೆ ಕೊಡಬೇಕಾಗುವದು. ಸೇದುವ ತಂಬಾಕು ಮೊದಲಾದವುಗಳ ಮೇಲೆ ಈಗ ರತ್ತಲಿಗೆ ೯ ಆಣೆಯಂತೆ ವಸೂಲಾಗುತ್ತಿರುವ ಸುಂಕ ಇನ್ನು ಮುಂದೆ ೧೫ ಆಣೆಯಂತೆ ವಸೂಲ ಮಾಡಲ್ಪಡುವದು. ನಿರ್ಯಾತವಾಗುವ ಬಟ್ಟೆ (ಕೈಮಗ್ಗದ ಬಟ್ಟೆ ಬಿಟ್ಟು), ಎಣ್ಣೆ-ಕಾಳು, ಶೇಂಗಬೀಜ ಇವುಗಳ ಮೇಲೂ ಕರ ಹೇರಲ್ಪಡುವದು. ನಮ್ಮ ಜಿಲ್ಲೆಯವರ ದೃಷ್ಟಿಯಿಂದ ಈ ಅಂದಾಜ-ಪತ್ರಿಕೆಯೊಳಗಿನ ಮಹತ್ವದ ಅಂಶವೆಂದರೆ ಅಡಿಕೆಯ ಮೇಲಿನ ಸುಂಕ ಪೂರ್ಣ ರದ್ದುಗೊಳಿಸಿದ್ದು.

ಮುಂಬಯಿಯ ಪ್ರಾಂತಿಕ ಸರಕಾರದ ಮುಂದಿನ ವರ್ಷದ ಆಯವ್ಯಯಗಳ ಅಂದಾಜ ಪತ್ರಿಕೆಯೂ ಕಳೆದ ಗುರುವಾರ ಎಸೆಂಬ್ಲಿಗೆ ಸಾದರಗೊಳಿಸಲ್ಪಟ್ಟಿದೆ. ಈ ಅಂದಾಜಪತ್ರಿಕೆಯಂತೆ ಮುಂದಿನ ವರ್ಷ ಪ್ರಾಂತಿಕ ಸರಕಾರದ ಖರ್ಚು ೪೪ ಕೋಟಿ ೩ ಲಕ್ಷ ರೂ ಬರುವದು, ಉತ್ಪನ್ನ ೪೧ ಕೋಟಿ ೩೮ ಲಕ್ಷ ರೂ ಬರುವದು, ಮತ್ತು ೨ ಕೋಟಿ ೬೪ ಲಕ್ಷ ರೂ ಗಳ ಕೊರತೆಯಾಗುವದು. ಈ ಕೊರತೆಯನ್ನು ತುಂಬಿ ತರುವದಕ್ಕಾಗಿ ಯುದ್ಧೋತ್ತರ ಪುನರ್ರಚನೆಯ ನಿಧಿಯೊಳಗಿಂದ (ಈ ನಿಧಿ ೧೯ ಕೋಟಿ ರೂ ಗಳಷ್ಟಿದೆ) ೧ ಕೋಟಿ ೭೦ ಲಕ್ಷ ರೂ ತೆಗೆಯುವೆನೆಂತಲೂ, ಪುನರ್ರಚನೆಯ ತೆರಿಗೆ, ಪೆಟ್ರೋಲ ಸುಂಕ, ವಿಲಾಸ-ವಸ್ತುಗಳ ಮಾರಾಟದ ಕರ ಇವುಗಳನ್ನು ಕೆಲವೊಂದು ಪ್ರಮಾಣದಿಂದ ಏರಿಸಿ ಮತ್ತು ಸಟ್ಟಾ ವ್ಯವಹಾರದೊಳಗಿನ ಕರಾರುಗಳಿಗೆ ೪ ಆಣೆಯ ಸ್ಟಾಂಪ-ಆಕಾರ ಮಾಡಿ ೧ ಕೋಟಿಯಷ್ಟು ಉತ್ಪನ್ನ ಹೆಚ್ಚಿಸಿಕೊಳ್ಳುವೆನೆಂತಲೂ ಅರ್ಥಮಂತ್ರಿ ಶ್ರೀ ವೈಕುಂಠಲಾಲ ಮೆಹತಾರವರು ಸೂಚನೆ ಮಾಡಿದ್ದಾರೆ.

ಜುನಾಗಡ ಸಂಸ್ಥಾನವು ಪಾಕಿಸ್ತಾನದಲ್ಲಿ ಸೇರುವದೋ ಹಿಂದುಸ್ಥಾನ ಒಕ್ಕೂಟದಲ್ಲಿ ಸೇರುವದೋ ಎಂಬುದನ್ನು ಅಲ್ಲಿಯ ಪ್ರಜೆಗಳೇ ನಿರ್ಣಯಿಸತಕ್ಕದ್ದೆಂಬ ತೀರ್ಮಾನಕ್ಕನುಗುಣವಾಗಿ ಆಚೆಯ ವಾರ ಅಲ್ಲಿ ಸಾರ್ವತ್ರಿಕ ಮತದಾನವಿಸಿಕೊಳ್ಳಲಾಗಿತ್ತು. ಈ ಮತಗಳ ಗಣನೆ ಕಳೆದ ಸೋಮವಾರ ಮುಗಿಯಿತು. ಹಿಂದುಸ್ಥಾನದಲ್ಲಿ ಸೇರ್ಪಡೆಯಾಗುವ ಬಗ್ಗೆ ೧೯೦೭೭೯ ಮತಗಳೂ ಪಾಕಿಸ್ತಾನದಲ್ಲಿ ಸೇರ್ಪಡೆಯಾಗುವ ಬಗ್ಗೆ ೯೧ ಮತಗಳೂ ಬಿದ್ದಿದ್ದವು. ಜುನಾಗಡದ ಶ್ರೀ ಸಾಮಳದಾಸ ಗಾಂಧಿಯವರು ಪಾಕಿಸ್ತಾನದ ಪರವಾಗಿ ಮತ ಕೊಟ್ಟವರ ಉಚ್ಚೇದ ಮಾಡಲಾಗುವದೆಂದು ಬೆದರಿಸುತ್ತಿದ್ದರೆಂದೂ ಆದರಿಂದ ಪಾಕಿಸ್ತಾನಪ್ರೇಮಿ ಜನರು ಸ್ವೇಚ್ಛೆಯಿಂದ ಮತದಾನ ಮಾಡಿಲ್ಲೆಂದೂ, ಸಂಸ್ಥಾನದಲ್ಲಿರುವ ಮುಸಲ್ಮಾನರ ಮೇಲೆ ಅತ್ಯಾಚಾರಗಳು ನಡೆದದ್ದರಿಂದ ಉಂಟಾದ ಭಯಗ್ರಸ್ತತೆಯ ವಾತಾವರಣದಲ್ಲಿ ಮಾಡಿದ ಮತನೋಂದಣಿಯು ನ್ಯಾಯಕವೆಂದು ಒಪ್ಪಿಕೊಳ್ಳಲಾಗದೆಂದೂ ಪಾಕಿಸ್ತಾನಿ ಅಧಿಕಾರಿಗಳು ಹುಯಿಲು ಎಬ್ಬಿಸುತ್ತಿದ್ದಾರೆ! ಅವರ ಹುಯಿಲಿನಲ್ಲಿ ಏನೇನೂ ಸ್ವಾರಸ್ಯವಿಲ್ಲೆಂದು ಜುನಾಗಡದೊಳಗಿನ ಪ್ರಮುಖ ಮುಸಲ್ಮಾನರೇ ಜಾಹೀರ ಮಾಡಿದ್ದಲ್ಲದೆ, ಭದ್ರತಾ ಮಂಡಳದಲ್ಲಿ ಜುನಾಗಡ ವಾದವನ್ನು ಮಂಡಿಸುತ್ತಿರುವ ಸರ್ ಜಾಫರುಲ್ಲಾ ಖಾನರಿಗೂ ತಿಳಿಸಿದ್ದಾರೆ. ಇಂದಿನಿಂದ ಜುನಾಗಡ ಸಂಸ್ಥಾನವು ಭಾರತದಲ್ಲಿ ಸೇರಿಸಿಕೊಳ್ಳಲ್ಪಡುವದು.

— ಹಿಂದೀ ಒಕ್ಕೂಟ ಯಾನೆ ಸಂಘರಾಜ್ಯದ ಘಟನೆಯ ಮಸೂದೆಯನ್ನು ಸಿದ್ಧಗೊಳಿಸುವದಕ್ಕಾಗಿ ಘಟನಾ-ಸಮಿತಿಯು ಡಾ| ಭೀಮರಾವ ಅಂಬೇಡಕರರ ಅಧ್ಯಕ್ಷತೆಯಲ್ಲಿ ಘಟನಾಶಾಸ್ತ್ರಜ್ಞ ಕಾಯದೆ-ಪಂಡಿತರದೊಂದು ಉಪಸಮಿತಿಯನ್ನು ನೇಮಿಸಿತ್ತು. ಈ ಉಪಸಮಿತಿಯು ತಯಾರಿಸಿದ ಮಸೂದೆಯನ್ನು ಕಳೆದ ವಾರ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಒಪ್ಪಿಸಿಕೊಂಡು, ಜನತೆಯ ತಿಳುವಳಿಕೆಗಾಗಿ ಅದನ್ನು ಪ್ರಕಟಗೊಳಿಸಿದ್ದಾರೆ. ಈ ಮಸೂದೆಯ ಪ್ರತಿಗಳು |ನಾಡಿನೊಳಗಿನ ಎಲ್ಲ ಸರಕಾರಿ ಪ್ರಕಟನೆಗಳ ಅಂಗಡಿಗಳಲ್ಲಿ ಮಾರಾಟಕ್ಕೆ ಇಡುವ ವ್ಯವಸ್ಥೆಯಾಗಿದೆ. ಪ್ರತಿಯ ಬೆಲೆ ಮೂ. ೧ ಇಡಲ್ಪಟ್ಟಿದೆ. ಈ ಮಸೂದೆಯಲ್ಲಿ ೩೧೫ ಕಲಮುಗಳವೆ, ೮ ಪರಿಶಿಷ್ಟಗಳವೆ. ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ವಗೈರೆ ಪ್ರಾಂತಗಳ ರಚನೆ ಇಲ್ಲವೆ ಪುನರ್ಘಟನೆ ಮಾಡಬೇಕೆಂದು ಘಟನಾ ಸಮಿತಿಯ ಅಭಿಪ್ರಾಯವಿರುತ್ತಿದ್ದರೂ ಆ ಸಮಸ್ಯೆಯನ್ನು ಪೂರ್ಣ ಪರಿಶೀಲಿಸಿ ವರದಿಯನ್ನೊಪ್ಪಿಸಲು ಒಂದು ಉಪ-ಸಮಿತಿಯನ್ನು ನೇಮಿಸಬೇಕಾಗಿ ಈ ಉಪ-ಸಮಿತಿಯು ಸೂಚಿಸಿರುತ್ತದೆ.

ಪತ್ರಿಕಾ ಪ್ರಕಟನೆ.

ಕೈಮಗ್ಗದ ಬಟ್ಟೆಯ ಅನಿರ್ಬಂಧ ನಿರ್ಯಾತ
ಮುಂಬಯಿ ಸರಕಾರದ ನಿರ್ಣಯ

ಗಿರಣಿಯ ಬಟ್ಟೆಯ ಮೇಲಿನ ನಿಯಂತ್ರಣವು ಈಗ ರದ್ದಾಗಿರುವದರಿಂದ ಮುಂಬಯಿ ಪ್ರಾಂತದೊಳಗಿಂದ ಹಿಂದೀ ಒಕ್ಕೂಟದೊಳಗಿನ ಯಾವದೇ ಸ್ಥಳಕ್ಕೆ ಕೈಮಗ್ಗದ ಹಾಗೂ ಯಾಂತ್ರಿಕ ಮಗ್ಗದ ಬಟ್ಟೆಯನ್ನು ನಿರ್ಯಾತ ಮಾಡಲು ಪ್ರತಿಬಂಧವಿರಕೂಡದೆಂದು ಮುಂಬಯಿ ಸರಕಾರವು ನಿರ್ಣಯಿಸಿರುತ್ತದೆಂದು ಮುಂಬಯಿಯೊಳಗಿನ ಪ್ರಕಟನಾಧಿಕಾರಿಗಳು ತಿಳಿಸುತ್ತಾರೆ. ಮುಂಬಯಿ, ಅಹಮದಾಬಾದ, ಸೊಲ್ಲಾಪುರ ಈ ೩ ಊರುಗಳನ್ನು ಬಿಟ್ಟು ಪ್ರಾಂತದ ಉಳಿದ ಯಾವದೇ ಭಾಗದಿಂದ ಇದರ ಬಟ್ಟೆಯ ನಿರ್ಯಾತದ ಬಗ್ಗೆ ಪರವಾನೆ ಬೇಕಾದವರು ಅರ್ಜಿ ಮಾಡುತ್ತಲೇ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರ, ಮುಂಬಯಿ ಇವರು ಯಾವದೇ ಬಗೆಯ ನಿರ್ಬಂಧ ಹಾಕದೆ ಅವನ್ನು ಕೊಡುವರು.

ಮುಂಬಯಿ, ಅಹಮದಾಬಾದ ಮತ್ತು ಸೊಲ್ಲಾಪುರ ನಗರಗಳಿಂದ ಬಟ್ಟೆ ಹೊರಗೆ ಕಳಿಸಬಯಸುವ ನಿರ್ಯಾತಗಾರರು ತಮ್ಮ ಅರ್ಜಿಗಳನ್ನು ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರ ಮುಖಾಂತರ ಟೆಕ್ಸಟೈಲ ಕಮೀಶನರಿಗೆ ಕಳಿಸಬೇಕು. ಕಂಟ್ರೋಲರರು ಸರ್ವಸಾಮಾನ್ಯವಾಗಿ (invariably) ಅಂಥ ಅರ್ಜಿಗಳನ್ನು ಮಂಜೂರ ಮಾಡಲು ಶಿಫಾರಸ ಮಾಡುವರು, ಮತ್ತು ಟೆಕ್ಸಟೈಲ ಕಮೀಶನರರು ಅವಶ್ಯವಿದ್ದ ಪರವಾನಿಗಳನ್ನು ಕೊಡುವರೆಂದು ಹೇಳಲಾಗಿದೆ.

A CORDIAL INVITATION

is extended to all past students of the NEW ENGLISH HIGH SCHOOL, BAAD, as well as the public sympathising with this institution to attend its SOCIAL GATHERING on Sunday the 7th March, 1948 at 9 A M. R J REBELLO, Esq B A, (Cantab), Collector of Kanara will preside over the function.

K R. Haldipurkar,
28-2-1948 Chairman,
Premier Education Society, Baad

ಜಾಹೀರನಾಮೆ.

ಹಳಿಯಾಳ ತಾಲೂಕ ಕಚೇರಿಯಿಂದ

ಯಾವತ್ತು ಜನರಿಗೆ ತಿಳಿಸುವದೇನಂದರೆ:—

[illegible] ೧೯೪೮ನೇ ಬುಧವಾರ ಮಧ್ಯಾಹ್ನ ೩ ಘಂಟೆಯೊಳಗೆ [illegible] ಹಳಿಯಾಳ ತಾಲೂಕ ಕಚೇರಿಯಲ್ಲಿ [illegible] ಟೆಂಡರುಗಳನ್ನು [illegible] ೧೦೦೦।— [illegible] ಟೆಂಡರ [illegible] ಪೆಟ್ರೋಲ [illegible] ಟೆಂಡರ [illegible] ದಿನಗಳಲ್ಲಿ. [illegible]

ಹಳಿಯಾಳ, ತಾ ೨೪-೨-೪೮

T. S. Mohite,
ಮಾಮಲೇದಾರ, ಹಳಿಯಾಳ

ESTD. 1934

The Agricultural & Industrial Bank, Ltd.

(Incorporated in British India, Liability of Members Limited.)

Head Office: COONDAPOOR.

Authorised Capital	...	Rs. 25,00,000-0-0.
Issued Capital	..	" 11,61,850-0-0
Paid-up Capital & Reserves	"	8,43,258-2-0.

SAVINGS BANK ACCOUNTS are opened with the minimum amounts and interest allowed at 2%

CURRENT ACCOUNTS are opened. Interest allowed at 1%.

SEASON DEPOSITS of 3 and 6 months are accepted.

For Terms, please apply to Head Office, or to our nearest Branch

Nivas "Luxury Buildings,"
COONDAPOOR, 1-12-1947.

K. VAMAN SHENAI,
CHAIRMAN.

ಸ್ಥಳಿಕ ವಿಷಯಗಳು.

(ಸ್ಥಳವಂತಿಕನು ಬರೆದುದು)

ನಮ್ಮ ಜಿಲ್ಹೆಯೊಳಗೆ ಕೊಂಗ್ರೆಸ ರಾಜ್ಯದಾಡಳಿತೆಯ ಬಗ್ಗೆ ಬಹಳೇ ತಿರಸ್ಕಾರವುಂಟಾಗಿದೆ ಜನರಿಂದ ಆರಿಸಿ ಹೋದ ಎಸೆಂಬ್ಲಿ, ಕೌನ್ಸಿಲ ಸಭಾಸದರ ಬಗ್ಗೂ ಅಸಮಾಧಾನವುಂಟಾಗಿದೆ ರಾ। ಗಾಂವಕಾರರು ಪಾರ್ಲಮೆಂಟರಿ ಸೆಕ್ರೆಟರಿಗಳಾದ ಬಗ್ಗೂ ಅಸಮಾಧಾನವುಂಟು ಇವರ್ಯಾರಿಂದಲೂ ನಮ್ಮ ಜಿಲ್ಹೆಯ ಉತ್ಕರ್ಷ ಸಾಧಿಸಿಕೊಳ್ಳಲಾಗಲಿಲ್ಲ ಬೇರೆ ಜಿಲ್ಹೆಯವರು ಕೊಂಗ್ರೆಸ ಸರಕಾರದ ಕಡೆಯಿಂದ ತಮ್ಮ ಉನ್ನತಿಯನ್ನು ಸಾಧಿಸಿಕೊಂಡಿದ್ದಾರೆ, ಸಾಧಿಸಿಕೊಳ್ಳುತ್ತಿದ್ದಾರೆ ರತ್ನಾಗಿರಿ ಜಿಲ್ಹೆಯೊಳಗೆ ೧೨ ದೊಡ್ಡ ದೊಡ್ಡ ಸಂಕಗಳಾದವು ಇವುಗಳ ವೆಚ್ಚದ ಅಂದಾಜು ೧೯೩೦ರಲ್ಲಿ ಮಾಡಲ್ಪಟ್ಟಿತ್ತು ನಮ್ಮ ಜಿಲ್ಹೆಯ ಕೆಲವು ಸಂಕಗಳ ಖರ್ಚಿನ ಅಂದಾಜು ಅವಕ್ಕೂ ಮುಂಚೆ ಅಂದರೆ ೧೯೨೭ರಲ್ಲಿ ಮಾಡಿದ್ದುಂಟು ಆದರೂ ನಮ್ಮಲ್ಲಿ ಸಂಕಗಳಾಗುವದಿಲ್ಲ। ಸರಕಾರವು ಎಲ್ಲ ಜಿಲ್ಹೆಗಳೊಡನೆ ನಮ್ಮ ಜಿಲ್ಹೆಗೂ ಕೆಲವು ಹಣ ಹಂಚಿ ಹಾಕುತ್ತಿದೆ ನಮ್ಮ ಜಿಲ್ಹೆ ಜಂಗಲ-ಪ್ರದೇಶವಾದ್ದರಿಂದ ಕೂಲಿಯಾಳುಗಳ ಮಜೂರಿಯ ಬಗ್ಗೆ ಹೆಚ್ಚಿನ ಹಣ ತಗಲುತ್ತದೆ ಅದನ್ನು ಸರಕಾರವು ಮಂಜೂರ ಮಾಡುವದಿಲ್ಲ। ಬೇಕಾದ ಇತರ ಸಾಧನ ಸಾಹಿತ್ಯಗಳ ಬಗ್ಗೆ ವ್ಯವಸ್ಥೆ ಮಾಡುವದಿಲ್ಲ। ಮೇಲಾಗಿ ಆರೋಗ್ಯ ಜನರು ಇಲ್ಲಿ ನೇಮಿಸಲ್ಪಡುತ್ತಾರೆ ಈ ಜನರಿಗೆ ಸರಕಾರವು ಕೊಟ್ಟ ಹಣದ ಪ್ರಯೋಜನ ಮಾಡಿಕೊಳ್ಳುವಷ್ಟು ಕುಶಲತೆಯಿರುವದಿಲ್ಲ ಆದರಿಂದ ವರ್ಷದ ಕೊನೆಗೆ, ಮಂಜೂರಾದ ಹಣ ಖರ್ಚಾಗಿಲ್ಲೆಂದು ಸರಕಾರವು ನೋಡಿ, ಅದನ್ನು ಧಾರವಾಡಕ್ಕೆ ವರ್ಗಾಯಿಸುತ್ತಿದೆ। ಧಾರವಾಡ ಜಿಲ್ಹೆಯ ದೆಸೆಗೆ ಸ್ಥಿತಿ ಬೆಳಸಬೇಕೆಂಬುದೊಂದು ವ್ಯೂಹ ನಡೆದಿದೆ। ನಮ್ಮ ಜಿಲ್ಹೆಯಲ್ಲಿ ಸರಕಾರಕ್ಕೆ ಹೇರಳ ಉತ್ಪನ್ನ ಸಿಗುತ್ತಿದೆ ಜಂಗಲ ಇಲಾಖೆಯಿಂದ ಲಕ್ಷಾವಧಿ ರೂಪಾಯಿ ಸಿಗುತ್ತಿದೆ ಅಡಿಕೆ ಸುಂಕವೆಂದು ಲಕ್ಷಾವಧಿ ರೂಪಾಯಿಗಳು ಎತ್ತುವಳಿಯಾಗುತ್ತಿವೆ ಆದರೂ ನಮ್ಮಲ್ಲಿಯ ಹೊಳೆಗಳಿಗೆ ಸಂಕಗಳಿಲ್ಲ। ಜೀರ್ಣ ಸಂಕಗಳ ದುರುಸ್ತಿಯಿಲ್ಲ। ಮುಖ್ಯ ಮುಖ್ಯ ರಸ್ತೆಗಳ ಮೇಲಿನ ಸಂಕಗಳಿಗೆ ಹಚ್ಚಿದ ಜೇಣಗೆಯ ಫಲಕಗಳು ಜೀರ್ಣವಾದರೂ ಆ ಸಂಕಗಳ ದುರುಸ್ತಿಯಾಗುವದಿಲ್ಲ। ಮೋಟಾರ ಬಂಡಿಗಳನ್ನು ಸಂಕದ ಆಚೆ-ಈಚೆ ನಿಲ್ಲಿಸಿ, ಪ್ರಯಾಣಿಕರು ಇಳಕೊಂಡು ಹೋಗಬೇಕು। ಸರಕುಗಳನ್ನು ಇಳಿಸಿ, ತುಟ್ಟಿ ಮಜೂರಿ ಕೊಟ್ಟು, ದಾಟಿಸಬೇಕು। ಗ್ರಾಮೋದ್ಧಾರ ಮಂಡಳದವರು ೫ ವರ್ಷಗಳಲ್ಲಿ ಶರಾವತಿ ನದಿಗೆ ಸಂಕ ಕಟ್ಟಬೇಕೆಂದು ಒಂದು ಠರಾವು ಮಾಡಿದ್ದಾರಂತೆ ಗಂಗಾವಳಿ, ಅಘನಾಶಿನಿ, ವೆಂಕಟಾಪುರ ಮೊದಲಾದ ಸಣ್ಣ ಹೊಳೆಗಳಿಗೆ ಮೊದಲು ಸಂಕ ಕಟ್ಟುವದನ್ನು ಬಿಟ್ಟು ಶರಾವತಿ ಹೊಳೆಗೆ ದೊಡ್ಡ ಸಂಕ ಕಟ್ಟುವ ವಿಚಾರ ನಡೆದದ್ದು ಕೇಳಿ ಜನರು ವಿಸ್ಮಯಗೊಂಡಿದ್ದಾರೆ ನಮ್ಮ ಜಿಲ್ಹೆಯಲ್ಲಿ ಉತ್ಪನ್ನ ಈಗ ಹೆಚ್ಚಿದ್ದು ಖರ್ಚು ಮಾತ್ರ ಕಡಿಮೆಯಾಗುತ್ತಿರುವ ವೈಷಮ್ಯವನ್ನು ಪರಿಹರಿಸುವದಕ್ಕಾಗಿ ರೇವಿನ್ಯೂ ಮತ್ತು ಜಂಗಲ ಇಲಾಖೆಗಳ ಮಂತ್ರಿಗಳಾದ ರಾ। ಮಲ್ಲಪ್ಪ ಗೌಡಾ ಪಾಟೀಲರು ಒಂದು ಹಂಚಿಕೆ ಮಾಡಿದ್ದಾರಾಗಿ ತಿಳಿಯುತ್ತದೆ ಸುಮಾರು ಕಡೆಯ ಹೆಚ್ಚು ಉತ್ಪನ್ನದ ಹಲವು ಅಡವಿ ಪ್ರದೇಶವನ್ನು ಧಾರವಾಡ ಜಿಲ್ಹೆಗೆ ಜೋಡಿಸಿ, ಧಾರವಾಡ ಜಿಲ್ಹೆಯ ಉತ್ಪನ್ನ ಹೆಚ್ಚಿರುತ್ತದೆಂದೂ ಅಲ್ಲಿ ಸರಕಾರವು ಹೆಚ್ಚು ಖರ್ಚು ಮಾಡುವದು ಅನುಚಿತವಲ್ಲೆಂದೂ ತೋರ್ಪಡಿಸುವ ಪ್ರಯತ್ನದಲ್ಲಿದ್ದಾರಾಗಿ ತಿಳಿಯುತ್ತದೆ। ಕರ್ನಾಟಕದ ಮುಂದಾಳುಗಳ ಈಗಿನ ಮನೋವೃತ್ತಿ ನಮ್ಮ ಜಿಲ್ಹೆಗೆ ಕ್ಷೇಮಕರವಾಗಿರುವದಿಲ್ಲ। ನಮ್ಮ ಜಿಲ್ಹೆಯನ್ನು ಸುಲಿದು ತಾವು ಪ್ರಯೋಜನ ಪಡೆಯಬೇಕೆಂಬ ದುರಭಿಲಾಷೆಯನ್ನು ಅವರು ತಳೆದಿದ್ದಾರೆ। ನಮ್ಮ ಜಿಲ್ಹೆಯ ಪಾಲಿಗೆ ಹಾಕಿದ ಹಣ ನಮ್ಮ ಜಿಲ್ಹೆಯಲ್ಲಿ ವಿನಿಯೋಗವಾಗುವಂತೆ ಮಾಡದಿದ್ದರೆ ಅಧಿಕಾರಿಗಳು ಅಯೋಗ್ಯರೆಂದು ಎಣಿಸಲ್ಪಡುವವರಾಗಿ ಸರಕಾರವು ವಿಧಿಸಿ ಅಧಿಕಾರಿಗಳಿಗೆ ಶಾಸನ ಮಾಡದಿದ್ದರೆ ನಮ್ಮ ಜಿಲ್ಹೆಯ ಉತ್ಕರ್ಷವಾಗುವ ಸಂಭವವಿಲ್ಲ ಗ್ರಾಮೋದ್ಧಾರ ಮಂಡಳದವರು ದೊಡ್ಡ ದೊಡ್ಡ ಕಾಮಗಾರಿಗಳನ್ನು ಪುರಸ್ಕರಿಸುವ

(೩ನೇ ಪುಟದ ಮೇಲೆ ಮುಂದರಿದಿದೆ)

ಕುಮಟಾ ತಾಲೂಕಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು.)

ನಂ ೪೪೩ — ನಮ್ಮ ಕಚೇರಿಯ ತಾ ೫ ೧೨-೧೯೪೭ರ ೪೪೩ನೇ ನಂಬರದ ಪತ್ರವನ್ನೂ ಮೆ॥ ಕಲೆಕ್ಟರ ಸಾಹೇಬ, ಕಾನಡಾ ಇವರಿಂದ ಬಂದ ತಾ ೧೨-೨-೧೯೪೮ರ ೮೫೪೩ನೇ ಪತ್ರವನ್ನೂ ಓದಿಕೊಂಡು, ೧೯೪೭ನೇ ಇಸವಿಯ ಮುಂಬಯಿಯ ಒಕ್ಕಲತನದ ಕಾನೂನಿನ ನಿಯಮಾವಲಿಯ ೧೦ನೆಯ ನಿಯಮದನ್ವಯ ದೊರೆತ ಅಧಿಕಾರವನ್ನುಪಯೋಗಿಸಿ ಕಾನಡಾ ಜಿಲ್ಹೆಯೊಳಗಿನ ಕುಮಟಾ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ತೋರಿಸಿದ ಭಾಗಗಳಲ್ಲಿರುವ (೧) ಭತ್ತ ಬೆಳೆಯುವ ಬೇರೆ ಬೇರೆ ಜಾತಿಯ ಭೂಮಿಗಳಲ್ಲಿ ಮತ್ತು (೨) ಬಾಗಾಯತುಗಳಲ್ಲಿ, ೧೯೪೭-೪೮ನೇ ಸಾಲಿನಲ್ಲಿ, ೪ನೆಯ ಸ್ತಂಭದಲ್ಲಿ ಕಾಣಿಸಿದಷ್ಟು (೧) ಭತ್ತದ, (೨) ಅಡಿಕೆಯ ಮತ್ತು (೩) ತೆಂಗಿನಕಾಯಿಗಳ ಸರಾಸರಿ ಉತ್ಪನ್ನ ಬಂದಿದೆಯೆಂದು ನಿರ್ದಿಷ್ಟಪಡಿಸಿರುತ್ತಾರೆ

ಪರಿಶಿಷ್ಟ.

ಅನುಕ್ರಮ ನಂಬರ (೧)	ಸ್ಥಾನಿಕ ಪ್ರದೇಶ ಯಾ ಗ್ರಾಮಗಳು. (೨)	ಭೂಮಿಯ ಜಾತಿ. (೩)	ಪ್ರತಿ ಎಕರೆಗೆ ಸರಾಸರಿ ಬೆಳೆ (೪)
	ಭತ್ತದ ಬೆಳೆಯ ಮಾನ		**ಭತ್ತ**
೧	**ಸರ್ವೇ ಗ್ರೂಪ I**— ಅಘನಾಶಿನಿ, ಬಾಡ, ಬಗ್ಗೋಣ, ಬಂಕಿಕೋಡ್ಲ, ಭಾವಿಕೋಡ್ಲ, ಬಿದ್ರಗೇರಿ, ಭತ್ರಕುರ್ವೆ, ಚಿಕ್ಕಳ್ಳಿ, ಚಿತ್ರಿಗಿ, ದೇವಗಿರಿ, ದೀವಗಿ, ಗೋಕರ್ಣ, ಗೊನೆಹಳ್ಳಿ, ಗುಡೇಅಂಗಡಿ, ಹಳೇಹೆರವಟ್ಟಾ, ಹಳಕಾರ, ಹಂದಿಗೋಣ, ಹನೇಹಳ್ಳಿ, ಹರನೀರ, ಹಾರೋಡಿ, ಹಾರುಮಾಸ್ಕೇರಿ, ಹೆಗಡೆ, ಹೊಲನಗದ್ದೆ, ಹೊಳೆಗದ್ದೆ, ಹೊರಬಾಗ, ಹೊಸಹೆರವಟ್ಟಾ, ಹೊಸಕೇರಿ, ಹುಬ್ಬಣಗೇರಿ, ಇಪ್ಪಿ, ಕಡೆಕೋಡಿ, ಕಡಮೆ, ಕಾಗಾಲ, ಕಲಭಾಗ, ಕಲ್ವೇರಿ, ಕೋಡಕಣಿ, ಕುಮಟಾ, ಕುಂದಗುಣಿ, ಲುಕ್ಕೇರಿ, ಮಾಣಿಕಟ್ಟಾ, ಮಣಕಿ, ಮರ, ಮಿರ್ಜಾನ, ನಾಡುಮಾಸ್ಕೇರಿ, ನಾಗರಬೈಲ, ನಾಕ್ಗಾಪುರ, ಸಡವಣ, ತಲಗೋಡ, ತೊರೆಗಜ್ನಿ, ತೊರ್ಕೆ, ವಾಲಗಳ್ಳಿ, ವನ್ನಳ್ಳಿ (ಅಂತು ೫೧ ಗ್ರಾಮಗಳು)	ತರಿ ಮಕ್ಕಿ ಗಜನಿ	೩೮ ಬಂ ಮಣ ೨೬ ಬಂ ಮಣ ೨೨ ಬಂ ಮಣ
೨	**ಸರ್ವೇ ಗ್ರೂಪ II**— ಐಗಳಕುರ್ವೆ, ಬರ್ಗಿ, ಬರ್ಗಿಗಜ್ನಿ, ಬೆಟ್ಕುಳಿ, ಹೆಗ್ಲೆ, ಹಿರೇಗುತ್ತಿ, ಹಿತ್ತಲಮಕ್ಕಿ, ಕರ್ಕಿಮಕ್ಕಿ, ಕೆಳಗಿನಸ್ಥಳ, ಕೆಪ್ಪೆಕುರ್ವೆ, ಕೋನಳ್ಳಿ, ಕೂಜಳ್ಳಿ, ಮಾದನಗೇರಿ, ಮಾಸೂರಕುರ್ವೆ, ಮಿರ್ಜಾನಗಜ್ನಿ, ಮೊರಬಾ, ಹಟ್ಟಿಕೇರಿ, ಸವಳಕುರ್ವೆ, ತಣ್ಣೀರಹೊಂಡ, ಊರಕೇರಿ, ಯಣ್ಕೆಮಡಿ, (ಅಂತು ೨೧ ಗ್ರಾಮಗಳು)	ತರಿ ಮಕ್ಕಿ ಪುಲಣ ಗಜನಿ	೩೮ ಬಂ ಮಣ ೨೩ ಬಂ ಮಣ ೨೫ ಬಂ ಮಣ ೧೮ ಬಂ ಮಣ
೩	**ಸರ್ವೇ ಗ್ರೂಪ III**— ಅಳಕೋಡ, ಅಳವಳ್ಳಿ, ಅಂತ್ರವಳ್ಳಿ, ಭಂಡಿವಾಳ, ಕಲ್ಲಬ್ಬೆ, ಕುರಿಗದ್ದೆ, ಮದ್ಗುಣಿ, ಮೂರೂರ, ಮಿರ್ಜಾನ, ಸಾಂತೂರ, ತೊಪ್ಪಲಗುತ್ತಾ, ಉಪ್ಪಿನಪಟ್ಟಣ, ಯತ್ತಿನಬೈಲ (ಅಂತು ೧೩ ಗ್ರಾಮಗಳು)	ತರಿ ಮಕ್ಕಿ	೨೫ ಬಂ ಮಣ ೧೯ ಬಂ ಮಣ
೪	**ಸರ್ವೇ ಗ್ರೂಪ IV**— ಅನೇಗುಂದಿ, ಹಂಟಾ, ಹೊಸಾಡ, ಕೋಳಿ, ಮಂಜಗುಣಿ, ಮುಗ್ವೆ ಕಾನಸಾರ ಶಿರಗುಂಜಿ, ಯರ್ಮುಂಡಿಮೂಲೆ (ಅಂತು ೯ ಗ್ರಾಮಗಳು)	ತರಿ ಮಕ್ಕಿ	೨೪ ಬಂ ಮಣ ೧೪ ಬಂ ಮಣ
೫	**ಸರ್ವೇ ಗ್ರೂಪ V**— ಬಾಸೊಳ್ಳಿ, ಬಸ್ತಿಕೇರಿ, ಬೆಳ್ಳಂಗಿ, ದೀವಳ್ಳಿ, ಹಾರವಳ್ಳಿ, ಹೆಗಡೆಹೊಸಳ್ಳಿ, ಹಿಂದಬೈಲ, ಕಂದವಳ್ಳಿ, ಕವಲಡಿ, ಕೊಡಂಬಳ್ಳಿ, ಮೂಲವಳ್ಳಿ, ನಾಗೂರ, ಸಂಡೊಳ್ಳಿ-ಮುರ್ಕಳ್ಳಿ, ಸಂತೆಗುಳಿ, ಸಾಂತಗಲ್ಲ, ಮಡತರ, ಯಲವಳ್ಳಿ (ಅಂತು ೧೭ ಗ್ರಾಮಗಳು).	ತರಿ ಮಕ್ಕಿ	೧೭ ಬಂ ಮಣ ೧೨ ಬಂ ಮಣ
೬	**ಸರ್ವೇ ಗ್ರೂಪ VI**— ಅಡ್ವಿಳ್ಳಿ, ಅಬಗಾರ, ಬಂಗಣೆ, ಬಿಸೊಳ್ಳಿ, ದೆಪ್ಪಿಲ, ಹಲವಳ್ಳಿ, ಹೊಂಗೇರಿ, ಕಡಕೋಡ, ಕಲ್ವೆ, ಕಂಕಲೆ, ನೋದಿಸಿ, ಮೊರ್ಸೆ, ಸಂತ್ಕಳ್ಳಿ, ಸಂತೆಗುಳಿ, ಸೋಪ್ಪಿನಹೊಸಳ್ಳಿ, ಉಳ್ಳೂರಮಠ, ಯಾಣ (ಅಂತು ೧೭ ಗ್ರಾಮಗಳು)	ತರಿ	೨೪ ಬಂ ಮಣ
	ಬಾಗಾಯತ— ಅಡಿಕೆ ಬೆಳೆಯ ಮಾನ		**ಅಡಿಕೆ**
೭	ತಾಲೂಕಿನ ಎಲ್ಲ ಹಳ್ಳಿಗಳು	ತೋಟ	೨೭ ಬಂ ಮಣ
	ಬಾಗಾಯತ— ತೆಂಗಿನ ಬೆಳೆಯ ಮಾನ.		**ತೆಂಗಿನಕಾಯಿ**
೮	(ಅ) **ಸಮುದ್ರದಂಡೆ ಯಾ ನದಿಕೊಳ್ಳಗಳಲ್ಲಿರುವ ಗ್ರಾಮಗಳು:**— ಅಘನಾಶಿನಿ, ಬಾಡ, ಬಂಕಿಕೋಡ್ಲ, ಭಾವಿಕೋಡ್ಲ, ಬಿದ್ರಗೇರಿ, ಭತ್ರಕುರ್ವೆ, ಚಿಕ್ಕಳ್ಳಿ, ಚಿತ್ರಿಗಿ, ದೇವಗಿರಿ, ದೀವಗಿ, ಗೋಕರ್ಣ, ಗೊನೆಹಳ್ಳಿ, ಗುಡೇಅಂಗಡಿ, ಹಳಕಾರ, ಹಂದಿಗೋಣ, ಹರನೀರ, ಹಾರುಮಾಸ್ಕೇರಿ, ಹೆಗಡೆ, ಹೊಲನಗದ್ದೆ, ಹೊಳೆಗದ್ದೆ, ಹೊರಬಾಗ, ಹುಬ್ಬಣಗೇರಿ, ಕಡೆಕೋಡಿ, ಕಾಗಾಲ, ಕಲಭಾಗ, ಕೋಡಕಣಿ, ಕುಮಟಾ, ಲುಕ್ಕೇರಿ, ಮಾಣಿಕಟ್ಟಾ, ಮಣಕಿ, ಮರ, ಮಿರ್ಜಾನ, ನಾಡುಮಾಸ್ಕೇರಿ, ನಾಗರಬೈಲ, ನಾಕ್ಗಾಪುರ, ಸಡವಣ, ತೊರೆಗಜ್ನಿ, ತೊರ್ಕೆ ವನ್ನಳ್ಳಿ ಐಗಳಕುರ್ವೆ ಬರ್ಗಿ, ಬರ್ಗಿಗಜ್ನಿ, ಬೆಟ್ಕುಳಿ, ಹಿರೇಗುತ್ತಿ ಹಿತ್ತಲಮಕ್ಕಿ, ಕರ್ಕಿ ಮಕ್ಕಿ ಕೆಳಗಿನಸ್ಥಳ ಕೆಪ್ಪೆಕುರ್ವೆ, ಮಾದನಗೇರಿ, ಮಾಸೂರಕುರ್ವೆ, ಮಿರ್ಜಾನಗಜ್ನಿ,	ತೋಟ	ಫಲ ಕೊಡುವ ಪ್ರತಿ ಮರಕ್ಕೆ ೩೦ ಕಾಯಿ

ಪೂರವಾ, ಘಟ್ಟಬೈಲ್, ಸವಳಕುಮ್, ತಣ್ಣೀರಹೊಂಡ, ಊರಕೇರಿ, ಯಮ್ಮಡಿ, ಕುರಿಗದ್ದೆ ಕೋಳಿಕುಂಜಗುಣಿ. (೪೯ ಗ್ರಾಮಗಳು) **(ಬ) ಘಟ್ಟದ ಬದಿಯ ಗ್ರಾಮಗಳು.—** ಅಳಕೋಡ, ಅಳವಳ್ಳಿ, ಅಂತ್ರವಳ್ಳಿ, ಭಂಡಿವಾಳ, ನೀಲಕೋಡ, ಸಾಂತೂರ, ತೊಪ್ಪಲಗುಡ್ಡಾ, ಆನೇಗುಂದಿ, ಪರಿಟಾ, ಮುಗ್ವೆಕಾನಸಾಡಿ, ಸಿರಗುಂಜಿ, ಯಕ್ಷಂಬಿಮುಕಳೆ, ಜಾಸೊಳ್ಳಿ, ಬಸ್ತಿಕೇರಿ, ಬಳ್ಳಂಗಿ, ದೀವಳ್ಳಿ, ಹಾರವಳ್ಳಿ, ಹೆಗ್ಗೆಹೊಸಳ್ಳಿ, ಹಿಂದಬೈಲ, ಕಂಡವಳ್ಳಿ, ಕೋಡಂಬಳೆ, ಕವಲಡಿ, ಮಲವಳ್ಳಿ, ನಾಗೂರ, ಸಂತೊಳ್ಳಿ-ಮುಕಲ್ಮಳ್ಳಿ, ಸಂತೇಗುಳಿ, ಸಾಂತಗಲ್ಲ, ಯಡತರೆ, ಯಲವಳ್ಳಿ, ಅಬ್ಜೊಳ್ಳಿ, ಅಲಗಾರ, ಬಂಗಣೆ, ಚವ್ವೊಳ್ಳಿ, ಹೆಬ್ಬೈಲ, ಹಳವಳ್ಳಿ, ಹೊಂಗೇರಿ, ಕಡಕೋಡ, ಕಲವೆ, ಕಣಕಳೆ, ನೀದಿನಿ, ಮೊರ್ಸೆ, ಮುದ್ವಳ್ಳಿ, ಮುಡಗಿ, ಸೊಪ್ಪಿನಹೊಸಳ್ಳಿ, ಉಳ್ಳೂರಮಠ, ಯಾಣ (೪೬ ಗ್ರಾಮಗಳು)	ತೋಟ	ಫಲ ಕೊಡುವ ಪ್ರತಿ ಮರಕ್ಕೆ ೨೦ ಕಾಯಿ
(ಕ) ಮೇಲೆ ಹೇಳಿದ (ಅ) ಮತ್ತು (ಬ) ಪ್ರದೇಶಗಳ ನಡುವಿನ ಗ್ರಾಮಗಳು:— ಬಗ್ಗೋಣ, ಹಳೇಹೆರವಟ್ಟಾ, ಹನೇಹಳ್ಳಿ, ಹಾರೋಡಿ, ಹೊಸಹೆರವಟ್ಟಾ, ಹೊಸಕೇರಿ, ಇಪ್ಪಿ, ಕಡತೋ, ಕಲ್ಲೇರಿ, ಕುಂದಗಣ, ತಲಗೋಡ, ವಾಲಗಳ್ಳಿ, ಹೆಗಲೆ, ಕೋಡ್ಕಣಿ, ಕೂಜಳ್ಳಿ, ಕಲ್ಲಬ್ಬೆ, ಮಿರ್ಜಾನಬೈಲ, ಮೂರೂರ, ಉಪ್ಪಿನಪಟ್ಟಣ, ಯತ್ತಿನಬೈಲ, ಹೊಸಾಡ (೨೧ ಗ್ರಾಮಗಳು)	ತೋಟ	ಫಲ ಕೊಡುವ ಪ್ರತಿ ಮರಕ್ಕೆ ೨೫ ಕಾಯಿ

ಕುಮಟಾ,
ತಾ ೧೭-೨-೪೮.

V. R. KITTUR,
ಮಾಮಲೇದಾರ, ಕುಮಟಾ

ಆಜ್ಞೆ.

ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆ,
ಮುಂಬಯಿ ಕೋಟೆ,
ತಾ ೧೬-೨-೧೯೪೮

ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ಪಶುಗಳ (ನಿಯಂತ್ರಣದ) ಕಾನೂನು, ೧೯೪೬

ನಂ ೨೦೪೮/II/ಎಫ್ — ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ಪಶುಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೨ನೇ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಮುಂಬಯಿ ಸರಕಾರವು ಆಜ್ಞಾಪಿಸುತ್ತದೇನೆಂದರೆ.—

೧ ಮುಂಬಯಿ ಪ್ರಾಂತದಲ್ಲಿ ಯಾವ ವ್ಯಾಪಾರಿಯ ಕಡೆಗೆ ಆವನು ಸ್ವತಃ ವಿದೇಶಗಳಿಂದ ಆಯಾತ ಮಾಡಿದ, ಡೀಝೆಲ ಅಥವಾ ಆಯಿಲ ಎಣ್ಣೆಯಿಂದ ನಡಿಸಬರುವ ಮತ್ತು ೫ ಕ್ಕಿಂತ ಯಾ ಹೆಚ್ಚಿಗೆ (ಆದರೆ ೬೦ಕ್ಕೆ ಮಿಕ್ಕಿರದಷ್ಟು) ಅಶ್ವಶಕ್ತಿಯುಳ್ಳ ಎಣ್ಣೆಯ ಇಂಜಿನ್ನುಗಳ (ಬೇರೆ ಯಂತ್ರಗಳಿಂದ ಒಡಗೂಡಿದವು ಕೂಡ) ಸಂಗ್ರಹವಿರುತ್ತದೋ— ಅದು ಅವನ ಸ್ವಂತದ್ದಿರಲಿ, ಬೇರೆಯವರ ಕಡೆಯಿಂದ ಅವನು ಇಟ್ಟುಕೊಂಡದ್ದಿರಲಿ ಯಾ ಬೇರೆಯವರೊಡನೆ ಮಾಡಿಕೊಂಡ ಭಾಗೀದಾರಿಯ ಮೂಲಕ ಇಟ್ಟುಕೊಂಡದ್ದಿರಲಿ — ಆತನು ಪ್ರತಿ ತಿಂಗಳ ತಾ. ೧೦ರೊಳಗಾಗಿ ಆದೇ ಹಿಂದಿನ ತಿಂಗಳ ಕೊನೆಯ ದಿನ ತನ್ನ ಕಡೆಗಿದ್ದ ಇಂಥ ಸಂಗ್ರಹದ ಪೂರ್ಣ ಮತ್ತು ನಿಜವಾದ ಮಾಹಿತಿಯನ್ನು, ಈ ಆಜ್ಞೆಗೆ ಜೋಡಿಸಿದ ಮಾದರಿಯಲ್ಲಿ, ಮುಂಬಯಿಯಲ್ಲಿರುವ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳಿಗೆ ಪೂರೈಸಬೇಕು

೨. (ಅದೇ ಮೇರೆಗೆ) ಬೇರೆಯವರಿಂದ ಎಣ್ಣೆಯ ಇಂಜಿನ್ನುಗಳ ಸಂಗ್ರಹವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ — ಹಾಗೆ ಆವನು ಪಡೆಕೊಂಡ ಸಂಗ್ರಹ ಅವನ ಸ್ವಂತದ ಬಗ್ಗೆ ಇರಲಿ, ಬೇರೆಯವರ ಬಗ್ಗೆ ಇರಲಿ ಯಾ ಬೇರೆಯವರೊಡನೆ ಮಾಡಿಕೊಂಡ ಭಾಗೀದಾರಿಯ ಬಗ್ಗೆ ಇರಲಿ—, ಅವನ್ನು ತೆಗೆದುಕೊಂಡ ೪ ದಿನಗಳಲ್ಲಿ, ಮುಂಬಯಿಯಲ್ಲಿರುವ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳಿಗೆ, ಆ ಸಂಗ್ರಹದ ಪೂರ್ಣ ಮತ್ತು ನಿಜವಾದ ಮಾಹಿತಿಯನ್ನು ಈ ಆಜ್ಞೆಗೆ ಜೋಡಿಸಿರುವ ಮಾದರಿಯಲ್ಲಿ ಪೂರೈಸಬೇಕು.

೩ ಈ ಆಜ್ಞೆಯು ಹಳೆಯ ಹಾಗೂ ಹೊಸ ಎಣ್ಣೆಯ ಇಂಜಿನ್ನುಗಳಿಗೆ ಅನ್ವಯಿಸುತ್ತದೆ

೧	ಅನುಕ್ರಮಾಂಕ
೨.	ತಯಾರಿಕೆಯ ಹೆಸರು (ಮೇಕ್) (ತಯಾರಿಸಿದವನ ಹೆಸರು ಯಾ ವ್ಯಾಪಾರಿ ಹೆಸರು.)
೩.	ಇಂಜಿನ್ನಿನ ಆಕಾರ (ನಿಲ್ಲಿಸಿ ನಿಲ್ಲುವದು ಯಾ ಅರ್ಧ ಸಾಗುವದು)
೪.	೨ ಚಕ್ರಗಳುಳ್ಳದ್ದೋ, ಯಾ ೪ ಚಕ್ರಗಳುಳ್ಳದ್ದು ?
೫.	ಇಂಜಿನ್ನಿಗೆ ಬೇಕಾಗುವ ಇಂಧನ (ಡೀಝೆಲ ಎಣ್ಣೆಯೋ ಆಯಿಲ ಎಣ್ಣೆಯೋ ?)
೬.	ಇಂಜಿನ್ನಿನ ಸ್ಥಿತಿ (ಹೊಸತು, ಹಳತು ಯಾ ದುರುಸ್ತ ಮಾಡಿದ್ದು)
೭	ಅಶ್ವಶಕ್ತಿ ಯಷ್ಟು ?
೮	ವೇಗ (ಪ್ರತಿ ಮಿನಿಟಿಗೆ ಎಷ್ಟು ಸುತ್ತು ?)
೯	ಸಂಗ್ರಹದಲ್ಲಿರುವ ಇಂಜಿನ್ನುಗಳ ಸಂಖ್ಯೆ
೧೦	ಪ್ರತಿ ಇಂಜಿನ್ನಿನ ಬಂದರಿನ ಬೆಲೆ
೧೧	ಉಗ್ರಾಣದ ಅಥವಾ ಬೇರೆ ಸಂಗ್ರಹಾಲಯದ ಸರಿಯಾದ ಪತ್ತೆ.
೧೨	ಸಂಗ್ರಹವು ಮಾಹಿತಿ ಪೂರೈಸುವವನ ಸ್ವಂತದ್ದು ಅಲ್ಲದಿದ್ದರೆ ಬೇರೆ ಯಾರ ಬಗ್ಗೆ ಯಾ ಬೇರೆ ಯಾವಾತನ ಮತ್ತು ತನ್ನ ಭಾಗೀದಾರಿಯ ಬಗ್ಗೆ ಇದು ಸಂಗ್ರಹ ಇಟ್ಟುಕೊಂಡಿರುತ್ತದೋ ಆ ಬೇರೆಯವರ ಹೆಸರು ಯಾ ಹೆಸರುಗಳು
೧೩	ಸಂಗ್ರಹವನ್ನು ಬೇರೆಯವರಿಗೆ ಕೊಡುವ ಮಾತು ಆಗಿದ್ದರೆ ಆ ಬೇರೆಯವರ ಹೆಸರು-ವಿಳಾಸಗಳು
೧೪	೧೩ನೆಯ ಸ್ತಂಭದಲ್ಲಿ ಹೇಳಿದ ವ್ಯಕ್ತಿಗಳು ಇಂಜಿನ್ನುಗಳನ್ನು ಯಾವ ಉಪಯೋಗಕ್ಕೆ ಬಳಸುವರಂತೆ ?
೧೫.	ಸಂಗ್ರಹವು ಆಗಾಗಲೇ ಕೊಟ್ಟು ಹೋಗಿರುತ್ತದರೆ ಆ ಬಗ್ಗೆ ಕೊಂಡ ಅಪ್ಪಣೆ ಚೀಟಿಯ ನಂಬರ ಮತ್ತು ತಾರೀಖು

ದಿನಾಂಕ-ಸ್ಥಳ ಸಹಿ-ಹಸ್ತಾಕ್ಷರ (ಮಾಹಿತಿ ಪೂರೈಸುವವನ) ಹೆಸರು ಮತ್ತು ಪತ್ತೆ

ಮುಂಬಯಿ ರಾಜ್ಯಪಾಲರ ಹುಕುಮಿನ ಮೇರೆಗೆ

D N Mahta,
ಮುಂಬಯಿ ಸರಕಾರದ ಉಪ ಕಾರ್ಯದರ್ಶಿ

ಕುಮಟಾ ಅಡಿಕೆ ಮಾರಾಟದ ಸೊಸೈಟಿ

ಯಲ್ಲಿ ಗಾಡಿ-ಹಳಿ, ಹಾರೆ, ಕುಳದ ಪಟ್ಟಿ, ಕುರಾಂ ತಗಡು ಪಗೈರೆ ಕಂಟ್ರೋಲ ದರದಿಂದ ಪಾಂಟಕ್ಟ್ರೈಡ ಅರ್ಜಿ ಮಾಡಿ ರೈತರು ಪಡೆಕೊಳ್ಳಬಹುದು ತಾ ೨೪-೨-೪೮

ಮೆನೆಜಿಂಗ ಡ್ಯಾರೆಕ್ಟರ,
ಅಡಿಕೆ ಸೊಸೈಟಿ, ಕುಮಟಾ

(ಸ್ಥಳೀಕ ವಿಷಯಗಳು ೨ನೇ ಪುಟದಿಂದ ಮುಂದೆ)
ಪೂರ್ವದಲ್ಲಿ ಸಣ್ಣ ಸಣ್ಣವುಗಳ ಪರಿಶೀಲನೆ ಮಾಡಿ ಅವುಗಳ ಯೋಜನೆಯನ್ನು ಮೊದಲು ಮಾಡಬೇಕು ಹಳ್ಳಿಗಳಲ್ಲಿ ಮಾರ್ಗಗಳಿಲ್ಲ, ಇದ್ದ ಮಾರ್ಗಗಳ ಮೇಲಿನ ಸಂಕಗಳೂ ಜೀರ್ಣವಾಗಿವೆ ! ಈ ಕೊರತೆಯನ್ನು ಮೊಟ್ಟಮೊದಲು ಸಂಪಾದಿಸಬೇಕು

ಪಶ್ಚಿಮಭಾಗದ ಕಮಿಶನರರಾದ ರಾ॥ ವ್ಯಾಸರು ಕಾರವಾರಕ್ಕೆ ಬಂದಾಗ ನಮ್ಮ ಜಿಲ್ಲಾ ಲೋಕಲ್ ಬೋರ್ಡ ಕಚೇರಿಗೆ ಭೆಟ್ಟಿಕೊಟ್ಟಿದರು ಆಣೆಪಟ್ಟಿಯ ಏರಿಕೆಯ ವಿಷಯವನ್ನು ಆಗ ಅವರು ಪ್ರಸ್ತಾಪಿಸಿದರು ಆಣೆಪಟ್ಟಿ ಒಂದಾಣೆಯಿಂದ ಎರಡಾಣೆಗೆ ಏರಿಸಲ್ಪಟ್ಟಿದೆ ಅದನ್ನು ಎರಡಾಣೆಗೆ ಏರಿಸಿಕೊಂಡನಕ ನಮ್ಮ ಜಿಲ್ಲಾ ಲೋಕಲ ಬೋರ್ಡಿಗೆ ಸರಕಾರದ ವಿಶೇಷ ಅಕ್ರಯ ಸಿಗಲಿಕ್ಕಿಲ್ಲೆಂದು ಆಗಿನ ಕಮಿಶನರರು ೨ ವರ್ಷಗಳ ಹಿಂದೆ ತಿಳಿಸಿದ್ದರು ಆದರೂ ಬೋರ್ಡಿನವರು ಆಣೆಪಟ್ಟಿಯನ್ನು ಏರಿಸಲು ಹಿಂದೆ ಮುಂದೆ ನೋಡುತ್ತಿದರು ಆಗ ಸರಕಾರವು ಅದನ್ನು ತನ್ನ ಅಧಿಕಾರದಿಂದ ಇಮ್ಮಡಿ ಮಾಡಿತು ! ಈಗ ಪುನಃ ಮುಮ್ಮಡಿ ಮಾಡಬೇಕಾಗಿ ಕಮಿಶನರರು ನಿರ್ಬಂಧಿಸುತ್ತಾರೆ! ನಮ್ಮ ಜಿಲ್ಲೆಯ ಪರಿಸ್ಥಿತಿ ವಿಚಿತ್ರವಿದೆ ನೆರೆಯ ಬೆಳಗಾಂವ, ಧಾರವಾಡ ಜಿಲ್ಲೆಗಳಲ್ಲಿ ಎಕರೆ ೧ಕ್ಕೆ ೧೨ ಆಣೆಯಷ್ಟು ತೀರ್ವೆಯುಂಟು ನಮ್ಮ ಜಿಲ್ಲೆಯಲ್ಲಿ ಎಕರೆ ೧ಕ್ಕೆ ರೂ. ೩ರಿಂದ ರೂ ೧೧ರವರೆಗೆ ತೀರ್ವೆಯುಂಟು ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿಗೂ ನಮ್ಮ ಮುಂಡಗೋಡ ತಾಲೂಕಿಗೂ ನಡುವೆ ಒಂದು ಮಾರ್ಗವಿದೆ ಆ ಮಾರ್ಗದ ಆಚೆಯ ಭೂಮಿಯ ತೀರ್ವೆ ಎಕರೆ ೧ಕ್ಕೆ ೧೨ ಆಣೆಯಿದ್ದರೆ ಈಚೆಯ ಭೂಮಿಯ ತೀರ್ವೆ ಎಕರೆ ೧ಕ್ಕೆ ರೂ. ೩ ಇರುತ್ತದೆ ! ಆದರಿಂದ ಧಾರವಾಡ ಜಿಲ್ಲೆಯವರು ಆಣೆಪಟ್ಟಿಯನ್ನು ರೂ ೧ಕ್ಕೆ ಪೂರ್ಣ ಮೂರಾಣೆಯಂತೆ ಮತ್ತು ನಮ್ಮ ಜಿಲ್ಲೆಯವರು ರೂ ೧ಕ್ಕೆ ಒಂದಾಣೆಯಂತೆ ತೆತ್ತರೂ ನಮ್ಮ ಜಿಲ್ಲೆಯ ಆಣೆಪಟ್ಟಿ ಎಕರೆ ೧ಕ್ಕೆ ೩ ಪೈ ಹೆಚ್ಚಾಗುತ್ತದೆ ಕಮಿಶನರರು ಈ ಲೆಕ್ಕವನ್ನು ಗ್ರಹಿಸದೆ ಬೋರ್ಡಿನ ಮೇಲೆ ಒತ್ತಾಯಿಸುವದು ಸರಿಯೋರುವದಿಲ್ಲ ಈಗ ಎತ್ತುವಳಿಯಾಗುವ ಆಣೆಪಟ್ಟಿ ೨ ಆಣೆಯಂತೆ ವಸೂಲ ಆಗುತ್ತಿದ್ದು ಎಕರೆ ೧ಕ್ಕೆ ಕನಿಷ್ಠ ೬ ಆಣೆಗಳಂತೆ ಆಣೆಪಟ್ಟಿ ವಸೂಲಾಗುತ್ತದೆ ಧಾರವಾಡ ಜಿಲ್ಲೆಯಲ್ಲಿ ಎಕರೆ ೧ಕ್ಕೆ ೨। ಆಣೆಗಳಿಗೆ ಮಿಕ್ಕಿ ವಸೂಲ ಆಗುವದಿಲ್ಲ ! ಅದನ್ನು ಇನ್ನೂ ಏರಿಸಬೇಕಾಗಿ ಕಮಿಶನರರು ಮಾಡಿದ ಸೂಚನೆಯನ್ನು ಸಭಾಸದರು ಮನ್ನಿಸಲೊಡದು ನಮ್ಮ ಜಿಲ್ಲೆಯಲ್ಲಿ ಎತ್ತುವಳಿಯಾಗುವ ಜಂಗಲ ಉತ್ಪನ್ನವನ್ನು ಕಮಿಶನರರಿಗೆ ಕೋರಿಸಿ, ನಮ್ಮ ಜಿಲ್ಲೆಗೆ ಆಗುವ ಅನ್ಯಾಯವನ್ನು ತೋರಿಸಿಕೊಟ್ಟು, ಇನ್ನಾದರೂ ಆ ಅನ್ಯಾಯವಾಗದಂತೆ ನೋಡಿಕೊಳ್ಳಲು ಅವರಿಗೆ ಬಿನ್ನವಿಸಬೇಕು

ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಶಿಕ್ಷಣ ಕೊಡುವ ಬಗ್ಗಾಗಿ ಧಾರವಾಡದಲ್ಲಿ ಒಂದು ಟ್ರೇನಿಂಗ ಕಾಲೇಜಿದೆ ರಾ॥ ಲಕ್ಮೊಳ್ಳಿ ಎಂಬವರು ಈಗ ಅಲ್ಲಿಯ ಮುಖ್ಯಾಧ್ಯಾಪಕರಿರುತ್ತಾರೆ ಸದ್ಯಕ್ಕೇ ಅವರು ಸೇವಾನಿವೃತ್ತರಾಗುವರು ಅವರ ಸ್ಥಳದಲ್ಲಿ ಬರುವ ಇಸಮುಗಳ ಹಕ್ಕನ್ನು ಮುಳುಗಿಸುವದಕ್ಕಾಗಿ ಒಂದು ಕಾರಸ್ಥಾನ ನಡೆದಿದೆ ! ಕನ್ನಡ ಮಾತೃಭಾಷೆಯುವರನ್ನೇ ಮುಖ್ಯಾಧ್ಯಾಪಕರನ್ನಾಗಿ ನೇಮಿಸುವಂತೆ ಮುಂಬಯಿ ಸರಕಾರದ ಕಡೆಯಿಂದ ಒಂದು ರಾಜಾಜ್ಞೆ ಹೊರಡಿಸುವ ವಿಚಾರ ಆಪ್ತ ಕನ್ನಡಿಗರಲ್ಲಿ ನಡೆದಿರುತ್ತದಂತೆ ! ಕನ್ನಡ ಭಾಷೆಯವರು ಬೇರೆ ಭಾಷೆಯುವರಿಗೆ ತಿರಸ್ಕರಿಸುವ ಧೋರಣೆಯನ್ನು ಹೀಗೆ ಈಗಲೂ ತಳೆಯುತ್ತಿದ್ದರೆ ಕರ್ನಾಟಕ ಪ್ರಾಂತ ಪ್ರತ್ಯೇಕವಾದ ಬಳಿಕ ಉಳಿದ ಭಾಷೆಯವರಿಗೆ ಕರ್ನಾಟಕದಲ್ಲಿ ಬಾಳ್ವೆ ಮಾಡುವದು ಕಠಿಣವಾಗುವದು ಖಂಡಿತ ಕನ್ನಡ ಮುಂದಾಳುಗಳ ಮನೋವೃತ್ತಿಯು ಯಾವ ಬಗೆಯದಿರುತ್ತದೆಂಬುದು ಇದರ ಮೇಲಿಂದ ಸ್ಫುಟವಾಗುತ್ತದೆ ಮುಂಬಯಿ ಸರಕಾರವು ಇಂಥ ಪ್ರವೃತ್ತಿಯನ್ನು ಪುರಸ್ಕರಿಸಿ ಅಪಕೀರ್ತಿ ಹೊಂದಬಾರದು ನಮ್ಮ ಜಿಲ್ಲೆ ಕರ್ನಾಟಕದಲ್ಲಿ ಸೇರದಿರಲಿಕ್ಕೆ ಇದೊಂದು ಬಲವಾದ ಕಾರಣವುಂಟು ಕನ್ನಡೇತರರು ಕನ್ನಡ ಕಲಿತರೂ ಅವರಿಗೆ ಕರ್ನಾಟಕದಲ್ಲಿ ಮಾನ್ಯತೆಯಿಲ್ಲ ! ಕೊಂಕಣ ಮೊದಲಾದ ಅನ್ಯ ಮಾತುಗಳನ್ನು ಮನೆಯಲ್ಲಿ ಸಹ ಆಡಕೂಡದು ಆಡಿದವರಿಗೆ ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಸಿಗುವಂತಿಲ್ಲ ! ಇಂಥ ರಾಜ್ಯಭಾರದಲ್ಲಿ ನಮ್ಮ ಕಾನಡಾ ಜಿಲ್ಲೆಯವರು ಸರ್ವಥಾ ಸೇರಬಯಸುವದಿಲ್ಲವಾಗಿ ನಿರ್ಧಾರದಿಂದ ಘೋಷಿಸುವದೇ ಕ್ಷೇಮಕರ

ಜಿಲ್ಲಾ ಸಮಾಚಾರ.

ಕುಮಟಾ— ಇದೇ ಕಳೆದ ತಾ ೨೨ಕ್ಕೆ ಪೂಜ್ಯ ಕಸ್ತೂರಬಾ ಗಾಂಧಿಯವರ ಪುಣ್ಯತಿಥಿಯಾಯಿತು ಅಂದಿನಿಂದ ಮಾರ್ಚ ತಾ ೯ (ಮಹಾ ಶಿವರಾತ್ರಿಯ ದಿನ)ರ ವರೆಗೆ ಈ ಜಿಲ್ಹೆಯಲ್ಲಿ ಬೇರೆ ಬೇರೆ ಊರುಗಳಲ್ಲಿರುವ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ದೊರಕಿಸಿಕೊಡುವ ಕಾರ್ಯಕ್ರಮವನ್ನು ಜಿಲ್ಹೆಯ ಅನೇಕ ಪ್ರಮುಖರು ಇಟ್ಟುಕೊಂಡಿದ್ದಾರೆ ಅದರಂತೆ ತಾ ೨೪ಕ್ಕೆ ಸಿದ್ದಾಪುರ ತಾಲೂಕಿನ ಭುವನಗಿರಿ ದೇವಸ್ಥಾನದಲ್ಲಿ, ತಾ ೨೬ಕ್ಕೆ ಸಿದ್ದಾಪುರ ಪಟ್ಟಣದೊಳಗಿನ ಎಲ್ಲ ದೇವಾಲಯಗಳಲ್ಲಿ, ತಾ ೨೭ಕ್ಕೆ ಬಳಗಿಯೊಳಗಿನ ಮಂದಿರಗಳಲ್ಲಿ, ತಾ. ೨೮ಕ್ಕೆ ಮಂಜಗುಣಿಯ ಶ್ರೀ ವೆಂಕಟರಮಣನ ಗುಡಿಯಲ್ಲಿ ದೊಡ್ಡ ಸಮಾರಂಭದಿಂದ ಹರಿಜನರು ಪ್ರವೇಶ ಮಾಡಿ, ಶ್ರೀ ದೇವರ ಸೇವೆ ಮಾಡಿದ ಸುದ್ದಿಯುಂಟು. ತಾ ೨೪ಕ್ಕೆ ಹಳಿಯಾಳ ತಾಲೂಕಿನ ಉಳವಿಕ್ಷೇತ್ರದಲ್ಲಿ ಸರದಾರ ವೀರನಗೌಡ ಪಾಟೀಲರು ಧಾರವಾಡದಿಂದ ಹರಿಜನರಿಗೆ ಕರೆದುಕೊಂಡು ಬಂದು, ಅರ್ಚಕರೂ ಪಂಚರೂ ಮುಂದೊಡ್ಡಿದ ವಿಘ್ನ ವ್ಯತ್ಯಯಗಳನ್ನು ನಿವಾರಿಸಿಕೊಂಡು, ಹರಿಜನರ ಸಹಿತ ಗುಡಿಯಲ್ಲಿ ಪ್ರವೇಶ ಮಾಡಿ, ದೇವರಿಗೆ ಹಾಲು-ಮೊಸರುಗಳ ಅಭಿಷೇಕ ಮಾಡಿದ ವಾರ್ತೆಯಿದೆ ನಿನ್ನೆ ಶಿರ್ಸಿಯ ದೇವಸ್ಥಾನಗಳಲ್ಲಿ ಹರಿಜನ ಪ್ರವೇಶವಾಗುವದಿತ್ತು. ನಾಳೆ ಇಲ್ಲಿಯ ದೇವಸ್ಥಾನಗಳಲ್ಲಿ ಹರಿಜನ ಪ್ರವೇಶದ ಸಂಭ್ರಮ ನಡೆಯುವದಂತೆ

ಅಜಿಯ ರವಿವಾರ ತಾ ೨೨ನೇ ಆವರಿಸದ್ದು ಗೋಕರ್ಣದಲ್ಲಿ, ಹಾಲಕ್ಕಿ ಒಕ್ಕಲ ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯ ಸೌ|| ಸುಕ್ರಿ ಮಾರು ಗೌಡಾ ಇವರ ನಿಮಂತ್ರಣೆಯಂತೆ, ಸೌ|| ಪುಟ್ಟವ್ವಾ ನಾಗಪ್ಪ ಗೌಡರ ಅಧ್ಯಕ್ಷತೆಯಲ್ಲಿ ಹಾಲಕ್ಕಿ ಜಾತಿಯ ಮಹಿಳೆಯರದೊಂದು ಸಭೆ ಕೂಡಿತ್ತು. ಕೊರಳು ತುಂಬ ಮಣಿ-ಮಾಲೆಗಳನ್ನು ಹಾಕಿಕೊಳ್ಳುವದು ಮುಂತಾದ ಅನಿಷ್ಟ ರೂಢಿಗಳನ್ನು ಬಿಟ್ಟುಬಿಡಲಿಕ್ಕೂ, ಉಡಿಗೆ-ತೊಡಿಗೆಯನ್ನು ಸುಧಾರಿಸಲಿಕ್ಕೂ, ಸ್ವಚ್ಛತೆಯಿಂದ ಇರಲಿಕ್ಕೂ, ನಾಗರಿಕತೆಯ ಪಾಠ ಕಲಿಸಲಿಕ್ಕೂ ಈ ಸಭೆ ಕರೆಯಲಾಗಿತ್ತೆಂದು ತಿಳಿಯುತ್ತದೆ ಸಭೆಯಲ್ಲಿ ಶ್ರೀಮತಿ ಶಾಂತಿಬಾಯಿ (ಮುಂಬಯಿ), ರಾ|| ಪಿಕಳೆ ಮಾಸ್ತರ, ಹೊಡಿಕೆ ಮಾಸ್ತರ, ಹರಿ ಪ್ರ ವಗೈರೆ ಕೆಲವರ ಭಾಷಣಗಳಾದವು ಶಿಕ್ಷಣದ ಮಹತ್ವ, ಸ್ವಚ್ಛತನ, ವಿಚಿತ್ರ ಉಡಿಗೆ-ತೊಡಿಗೆ-ಅಲಂಕಾರಗಳ ತ್ಯಾಗದ ಆವಶ್ಯಕತೆ, ನಾಗರಿಕ ನಡತೆ ಕಲಿಯುವ ಆವಶ್ಯಕತೆ ಇವೇ ಭಾಷಣಕಾರರು ವಿವರಿಸಿದ ವಿಷಯಗಳಾಗಿದ್ದವು ಸಭೆಯ ಕೆಲಸ ಮುಗಿದ ಮೇಲೆ ಎಲ್ಲರೂ ಕೂಡಿ ಶ್ರೀ ಮಹಾಬಲೇಶ್ವರ ದೇವಸ್ಥಾನಕ್ಕೆ ಹೋಗಿ ದೇವದರ್ಶನ ತಕ್ಕೊಂಡರು.

ಹೊನ್ನಾವರ— (ತಾ ೨೩ ೨ ೪೮) ಮಹಾತ್ಮರ ಕೊಲೆಯ ಸುದ್ದಿ ಗುಂಡಬಾಳೆಯವರಿಗೆ ತಾ ೩೦ನೇ ರಾತ್ರಿ ತಿಳಿಯಿತು ಮರು ದಿನ ಜನರು ಸಂಪೂರ್ಣ ಹರತಾಳ ಮಾಡಿ, ಬೊಕ್ಕತಲೆಯ ಮೆರವಣಿಗೆ ತೆಗೆದಿದ್ದರು ರಾ। ಮಾದನಗೇರಿ ಮಾಸ್ತರರು ಮಹಾತ್ಮರ ನಿಧನದಿಂದ ದೇಶಕ್ಕೆ ಉಂಟಾದ ಕಷ್ಟವನ್ನು ತಿಳಿಸಿ ಹೇಳಿದರು ನಿನ್ನೆ (ತಾ ೩೨ಕ್ಕೆ) ದುಃಖಪ್ರದರ್ಶಕ ಸಭೆಯಾಯಿತು ಪಾದ್ರಿ ಸಾಹೇಬರೂ ಪಟೇಲರೂ ಮಹಾತ್ಮರ ಮಹಿಮೆಯನ್ನು ಬಣ್ಣಿಸಿದರು

(ತಾ ೨೫ ೨-೪೮] ಇಂದು ಮಂಕಿಯ ಶ್ರೀ ಜನಾರ್ದನ ದೇವಸ್ಥಾನದಲ್ಲಿ ಗಾಂಧಿಜಿಯವರ ಸ್ಮಾರಕದ ಆಲೋಚನೆ ಮಾಡುವದಕ್ಕಾಗಿ ಊರವರದೊಂದು ಸಭೆಯಾಯಿತು ೭೩ ವರ್ಷ ಪ್ರಾಯದ ವಯೋವೃದ್ಧ ರಾ ಗಣಪತರಾವ ಮಂಕೀಕರ ಇವರು ಸಭಾಪತಿಗಳಾಗಿದ್ದರು ಗಾಂಧಿಜಿಯವರ ವಿಧಾಯಕ ಕಾರ್ಯಕ್ರಮದ ಆಚರಣೆಯೇ ಅವರ ಉತ್ತಮ ಸ್ಮಾರಕವೆಂದೂ ಆ ಕಾರ್ಯಕ್ರಮದ ಒಂದೊಂದೇ ಅಂಗವನ್ನು ಕಾರ್ಯರೂಪದಲ್ಲಿ ತರಬೇಕೆಂದೂ ಸಭೆಯಲ್ಲಿ ಗೊತ್ತಾಯಿತು ಪ್ರಥಮತಃ ಪ್ರತಿ ಮನೆಯಲ್ಲಿ ರಾಟಿಯನ್ನಿಟ್ಟು ನೂಲು ತೆಗೆಯಬೇಕೆಂದೂ, ಪ್ರತಿ ಶುಕ್ರವಾರ ಭಜನೆ ನಡಿಸಬೇಕೆಂತಲೂ, ಮದ್ಯನಿರೋಧನ ಕಾರ್ಯ ಉತ್ಸಾಹದಿಂದ ಕೈಕೊಳ್ಳಬೇಕೆಂತಲೂ, ಗ್ರಾಮದಲ್ಲಿ ಚಿಕ್ಕ ಚಿಕ್ಕ ಗ್ರಾಮೋದ್ಯೋಗಗಳನ್ನು ಆರಂಭಿಸಬೇಕೆಂತಲೂ ಸಭಿಕರು ನಿಶ್ಚಯಿಸಿ ಆ ಬಗ್ಗೆ ಒಂದು ಸಮಿತಿಯನ್ನು ಸಹ ನೇಮಿಸಿದ್ದಾರೆ

ಜಲವಳ್ಳಿ ಗ್ರಾಮದ ಸೀತಾ ಅಂಗಡಿಯಲ್ಲಿ ೨ ವರ್ಷಗಳ ಹಿಂದೆ ಕಳ್ಳತನ ಮಾಡಿದ್ದರ ಸಂಬಂಧದಲ್ಲಿ ಜಲವಳ್ಳಿ ಕರ್ಕಿ ಮತ್ತು ಪಡುಸಾಳಿ ಗ್ರಾಮಗಳ ಪಟೇಲರಿಗೆ ಈಗ ಅಧಿಕಾರ ಚ್ಯುತ ಮಾಡಿದ್ದಾರೆ ಅವರ ಮೇಲೆ ಖಟ್ಲೆಯೂ ನಡೆಯುವದಂತೆ

ಗೇರಸಪ್ಪೆಯ ಉರ್ದು ಗಾಂವಠಿ ಶಾಲೆಯು ಈಗ ಬಹಳ ನಿಕೃಷ್ಟಾವಸ್ಥೆಗೆ ಮುಟ್ಟಿದೆ ಶಿಕ್ಷಕರು ತಿಂಗಳಿಗೊಮ್ಮೆ ಇಲ್ಲವೆ ಪಕ್ಷದಲ್ಲಿ ಒಮ್ಮೆ ಶಾಲೆಗೆ ಬಂದು ಹಾಜರಿ ಪಟ್ಟಿ ತುಂಬುತ್ತಾರಂತೆ ಅಧಿಕಾರಿಗಳು ಚೌಕಸಿ ಮಾಡಬೇಕು

ಕಡತೋಕೆಯಲ್ಲಿ ಎಚ್ ಎಸ್. ನಾಯ್ಕನೆಂಬ ಟಪಾ

ಕಾರವಾರ ತಾಲೂಕಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು)

ನಂ ೫೪೭ — ೧೯೪೭ನೇ ಇಸವಿಯ ಒಕ್ಕಲತನದ ಕಾನೂನಿನ ನಿಯಮಾವಲಿಯ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಹೆಯ ಕಾರವಾರ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ನೇ ಸ್ತಂಭದಲ್ಲಿ ತೋರಿಸಿದ ಕ್ಷೇತ್ರಗಳೊಳಗಿನ ೨ನೇ ಸ್ತಂಭದಲ್ಲಿ ನಿರ್ದೇಶಿಸಿದ ಬೇರೆ ಬೇರೆ ತರಗತಿಯ ಜರ (ಭತ್ತದ) ಭೂಮಿಗಳಲ್ಲಿ, ಚಾಲೂ ೧೯೪೭-೪೮ನೇ ಸಾಲಿನಲ್ಲಿ, ಪ್ರತಿ ಎಕರೆಗೆ ೩ನೆಯ ಸ್ತಂಭದಲ್ಲಿ ಕಾಣಿಸಿದಷ್ಟು ಸರಾಸರಿ ಮುಂಗಾರಿ ಭತ್ತದ ಬೆಳೆ ಬಂದಿರುತ್ತದಾಗಿ ನಿರ್ದಿಷ್ಟ ಮಾಡಿ ಈ ಮೂಲಕ ಜಾಹೀರ ಮಾಡುತ್ತಾರೆ.

ಪರಿಶಿಷ್ಟ.

ಅನುಕ್ರಮಾಂಕ ಮತ್ತು ಕ್ಷೇತ್ರ (೧)	ಭೂಮಿಯ ತರಗತಿ (೨)	೧ ಎಕರೆಗೆ ಸರಾಸರಿ ಬೆಳೆ. (೩)
I— ೩೬ ಹಳ್ಳಿಗಳನ್ನೊಳಗೊಂಡ (ತಾಲೂಕಿನ ಪಶ್ಚಿಮಭಾಗದ ಗ್ರಾಮಗಳು — ಬಾಡ, ಬೈತಕೋಲ, ಬಿಣಗೆ, ಕೋಟೆ, ಅರ್ಗ, ಚೆಂಡಿಯ, ಕೊಡಾರ, ಕೋಡಾರ, ಅಮದಳ್ಳಿ, ಕೋಡಿಬಾಗ, ನಂದನಗದ್ದೆ, ಕರಿಕೋಣ, ಮುಂಕೇರಿ, ಮಾಜೇರಿ, ಶಿರವಾಡ, ಕಡವಾಡ, ಕಿನ್ನರ, ಚಿತಾಕುಲಾ, ಕಣಸಗೇರಿ, ಮಾಜಾಳಿ, ಮುಡಗೇರಿ, ಅಂಗಡಿ, ಹೊಸಾಳಿ, ಅರವ, ಕೋಣೆ, ಮುಧೇವಾಡಾ, ಸಾವಂತವಾಡಾ, ಹೋಟೆಗಾಳಿ, ಹಣಕೋಣ, ಗೋಟೆಗಿಟ್ಟಾ, ಘಾಡಸಾ, ಹಟಕೋಣ ಖಾಗ, ಹಳಗೆಜೂಗ, ಶೆಂಡಿ, ಉಳಗೆ, ಭೈರೆ	ಕೊಡ್ಲ (ಅತ್ಯುತ್ತಮ ಭೂಮಿ) ವರ್ಗೀಕರಣ ಕಿಮ್ಮತ್ತು, ಆಣೆ ೧೬ ರಿಂದ ಆಣೆ ೧೨ರ ವರೆಗೆ, ಆಕಾರದ ದರ ರೂ ೬ರಿಂದ ರೂ. ೪॥ ವರೆಗೆ	೩೦ ಖಂಡಿ (=೩೩ ೧ ಬಂ ಮಣ)
	ಅಡಕೋಡ್ಲ (ಮಧ್ಯಮ ಭೂಮಿ) ವರ್ಗೀಕರಣ ಕಿಮ್ಮತ್ತು:- ಆಣೆ ೧೧ರಿಂದ ಆಣೆ ೮ರ ವರೆಗೆ ಆಕಾರದ ದರ ರೂ. ೪-೨-೦ ರಿಂದ ರೂ. ೩ರವರೆಗೆ.	೨೧ ಖಂಡಿ (=೨೪ ೫೭ ಬಂ ಮಣ)
	ಮಕ್ಕಿ ಮತ್ತು ಗಜನಿ (ಕನಿಷ್ಠ ಭೂಮಿ) ವರ್ಗೀಕರಣ ಕಿಮ್ಮತ್ತು:- ಆಣೆ ೭ರಿಂದ ಆಣೆ ೫ರ ವರೆಗೆ - ಆಕಾರದ ದರ ರೂ. ೨-೧೦-೮ಕ್ಕಿಂತ ಕಡಿಮೆ	೧೩ ಖಂಡಿ (=೧೫ ೨೧ ಬಂ. ಮಣ)
II— ೨೫ ಹಳ್ಳಿಗಳನ್ನೊಳಗೊಂಡ ತಾಲೂಕಿನ ಪೂರ್ವ ಮತ್ತು ಅಡವಿ ಭಾಗದ ಗ್ರಾಮಗಳು — ಶಿದ್ದರ, ವೈಲವಾಡಾ, ನ್ಯಾತಿಸಾವರ, ದೇವಳಮಕ್ಕಿ, ಬರಗಲ್ಲ, ಕಡಿಯೇ, ಕಾತರ, ಗೋಟೇಗಾಳಿ, ಗೋಪಶಿಟ್ಟಾ, ಮ್ಹಾಂಗಿಣ, ಗೋಯಿರ, ಬಾಂಡೇ, ಕಮರಗಾಂವ, ಕಟ್ರಾ, ಬಾಳಮನೆ, ಮಲ್ಲಾಪುರ, ವಿರಜೆ, ಕಚೇಗಾರ, ಹಟ್ಟಾಟು ಕೈಗಾ, ದೇವಕಾರ, ಬೇಕೂರ, ನಗೇಕೋವೆ, ನಿವಳಿ, ಶಿರವೆ.	ಕೊಡ್ಲ (ಅತ್ಯುತ್ತಮ ಭೂಮಿ), ವರ್ಗೀಕರಣ ಕಿಮ್ಮತ್ತು ಆಣೆ ೧೬ ರಿಂದ ೧೨ ಆಣೆ ವರೆಗೆ ಆಕಾರದ ದರ ರೂ ೫ರಿಂದ ರೂ. ೩॥ ವರೆಗೆ	೧೭ ಖಂಡಿ (= ೨೦ ೪೭ ಬಂ ಮಣ)
	ಅಡಕೊಡ್ಲ (ಮಧ್ಯಮ ಭೂಮಿ) ವರ್ಗೀಕರಣ ಕಿಮ್ಮತ್ತು. ಆಣೆ ೧೧ರಿಂದ ಆಣೆ ೮ರವರೆಗೆ. ಆಕಾರದ ದರ ರೂ. ೩ ೭-೦ ರಿಂದ ರೂ. ೨॥ ವರೆಗೆ.	೧೨ ಖಂಡಿ (=೧೪-೦೪ ಬಂ. ಮಣ.)
	ಮಕ್ಕಿ ಮತ್ತು ಗಜನಿ (ಕನಿಷ್ಠ ಭೂಮಿ) ವರ್ಗೀಕರಣ ಕಿಮ್ಮತ್ತು. ಆಣೆ ೭ ರಿಂದ ಆಣೆ ೫ರ ವರೆಗೆ. ಆಕಾರದ ದರ ರೂ ೨-೩-೦ ಕ್ಕಿಂತ ಕಡಿಮೆ.	೮ ಖಂಡಿ (೯ ೩೬ ಬಂ ಮಣ.)

೩ನೇ ಸ್ತಂಭದಲ್ಲಿ ಕಾಣಿಸಿದ ಬೆಳೆಯು ಆಯಾ ತರಗತಿಯ ಸರಾಸರಿ ಆಕಾರದ ಭೂಮಿಯ ಬೆಳೆಯು ಇರುತ್ತದೆ, ಮತ್ತು ಯಾವದಾದರೂ ಭೂಮಿಯ ಬೆಳೆ ತಿಳಕೊಳ್ಳಬೇಕಾದರೆ ಆಯಾ ಭೂಮಿಯ ನಿರ್ದಿಷ್ಟ ಆಕಾರ ಪ್ರಮಾಣದಲ್ಲಿ, ತ್ರೈರಾಶಿಕದಿಂದ ಲೆಕ್ಕ ಹಾಕಿ, ತಿಳಕೊಳ್ಳಬೇಕು.

ಕಾರವಾರ,
ತಾ ೨೦-೨-೪೮.

A. S. JOSHI,
ಮಾಮಲೇದಾರ, ಕಾರವಾರ

THE BANK OF RURAL INDIA, LTD.
[Incorporated in British India Liability of Members limited.]
HEAD OFFICE – "Satyabhama Bhavan", **KARWAR.** N K
Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	-- Rs.	10,00,000,
Subscribed Capital	-- Rs	5,00,000,
Paid-up Capital & Reserves	-- Rs	5,08,502-8-0

Rates of Interest on Deposits
Current a/c @ 1% p a *Savings Bank a/c @ 2 %*
Fixed Deposits for 3 months @ 3% per annum
" " for 6 months @ 3½%
" " for 12 months or more @ 4%
All kinds of modern Banking business transacted

Karwar,
14-2-1948

P. X. GRACIOUS
MANAGING DIRECTOR

... ಬಟವಡೆಯ ಹೇಳಿಯಿದ್ದಾನೆ ಆವನಿಗೆ ಭಜನೆಯ ನಾದ ಬಹಳ ದಿನಾಲು ಸಂಜೆ ಭಜನ ಮಾಡುತ್ತಾನೆ ಕಳೆದ ರವಿವಾರ ರಾತ್ರೆ ಭಜನೆ ಮಾಡಿ ನಾನು ಮಲಗಿದಾಗ ಒಂದು ಸ್ವಪ್ನ ಬಿದ್ದಿತಲ್ಲ, ಆ ಸ್ವಪ್ನದಲ್ಲಿ, ಇನು ರಾಮನಾಮದ ಭಜನೆ ಮಾಡುತ್ತಿದ್ದಂತೆ, ಆಗ ಮಹಾತ್ಮಾಜಿಯವರು ನಗುತ್ತ ಬಂದು ರಾಮನಾಮದ ಭಜನೆಯನ್ನು ಉತ್ಸಾಹದಿಂದ ನಡಿಸಬೇಕೆಂದು ಬೋಧಿಸಿದಂತೆ ಕಂಡು ಬಂತೆಂದು ಸದರಿ ಹೇಳಿಯು ಬರೆಯುತ್ತಾನೆ ಮಹಾತ್ಮರು ಅವತಾರಿ ಪುರುಷರೆಂದು ಅವನ ಮನೋನಿಶ್ಚಯವಾಗಿದೆ

ಭಟಕಳ— ತಿದ್ದುಪಡಿ :- ಕಳೆದ ವಾರ ಪ್ರಕಟವಾದ ಭಟಕಳ ಪೇಟೆಯ ಬೆಳೆಯ ಜಾಹೀರನಾಮೆಯಲ್ಲಿ, Iನೇ ಸರ್ವೆ ಗ್ರೂಪಿನ Iನೇ ತರಗತಿಯ ಭೂಮಿಯ ಭತ್ತದ ಬೆಳೆ ೨೫ ಬಂಗಾಲಿ ಮಣಗಳೆಂದು ತಪ್ಪಿನಿಂದ ಅಚ್ಚಾಗಿದೆ ಅದು ೨೬ ಆಗಬೇಕಿತ್ತು ಓದುಗರು ೨೫ರ ಬದಲು ೨೬ ಮಾಡಿ ಓದಬೇಕಾಗಿ ಅರಿಕೆ

ಶಿರಸಿ— ಸ್ವಾತಂತ್ರ್ಯೋತ್ಸವದ ಬಗ್ಗೆ ಸೂಟ ಬಿಟ್ಟ ಘೋಷಣದಿಂದಾಯದ ಲಾಭ ರೈತರಿಗೆ ಸಿಗಬೇಕೆಂದು ವಿಧಿಸಿದ್ದರ ಸಂಬಂಧದಲ್ಲಿ ಕೆಲವೆಡೆ ಉಂಟಾದ ತಪ್ಪು ತಿಳುವಳಿಕೆಯನ್ನು ದೂರಪಡಿಸಲು ಮುಂಬಯಿ ಸರಕಾರವು ಕಳೆದ ವಾರ ಒಂದು ಪ್ರಕಟನೆ ಹೊರಡಿಸಿದೆ ಅದರಲ್ಲಿ ಸರಕಾರವು ಹೀಗೆ ಖುಲಾಸೆ ಮಾಡಿದೆ— ಸರಕಾರವು ಬಿಟ್ಟ ಸೂಟಿನ ಲಾಭ ಹೊಲದಲ್ಲಿ ದುಡಿಯುವವರಿಗೆ ಸಿಗತಕ್ಕದ್ದೆಂದು ಸರಕಾರದ ಕಟಾಕ್ಷವುಂಟು ಭೂಮಾಲಿಕನೇ ತನ್ನ ಭೂಮಿ ಸಾಗು ಮಾಡುತ್ತಿದ್ದಲ್ಲಿ ಸೂಟು ಅವನಿಗೆ ಸಿಗುವದು ಭೂಮಿ ರೈತನಿಗೆ ಗೇಣಿಗೆ ಕೊಟ್ಟಿದ್ದಿದ್ದಲ್ಲಿ, ತೀರ್ವೆಯ ಸೂಟನ್ನು ಒಡೆಯನು ಪಡಕೊಂಡು, ಆ ಪ್ರಮಾಣದಿಂದ ರೈತನಿಗೆ ಗೇಣಿಯಲ್ಲಿ (ಅಂದರೆ ೧/೧೦ ಗೇಣಿಯನ್ನು) ಬಿಟ್ಟು ಕೊಡಬೇಕು. ಕಾನೂನಿನ ೧೬ನೇ ಕಲಮಿನನ್ವಯ, ಸೂಟ ಬಿಡಬೇಕು ಆದರೆ ಹಾಳಿನ ರೂಪದಿಂದ ಗೇಣಿ ಕೊಡುವದಿದ್ದಲ್ಲಿ ಈ ನಿಯಮ ಅನ್ವಯಿಸುವದಿಲ್ಲ ತೀರ್ವೆಯಲ್ಲಿ ಸೂಟ ಸಿಕ್ಕಷ್ಟೇ ಹಣವನ್ನು ಒಡೆಯನು ರೈತನಿಗೆ ಕೊಟ್ಟರಾಯಿತು

ಇದಕ್ಕೆ ಒಪ್ಪಿಗೆಯಿಲ್ಲದ ಒಡೆಯನು ಪೂರ್ಣ ತೀರ್ವೆ ಸಲ್ಲಿಸಬೇಕು ಸೂಟಿನ ಹಣವನ್ನು ಸರಕಾರವು ರೈತನಿಗೆ ಪರಭಾರೆ ಕೊಡುವದು.

ಸಿದ್ದಾಪುರ— (೨೫-೩-೪೮) ನಿಯಂತ್ರಣ ಹೋಗುತ್ತಲೇ ಇಲ್ಲಿ ಅಕ್ಕಿಯ ದರ ಖಾಯಲಿ ೧೭ಕ್ಕೆ ರೂ ೯ ಆಗಿತ್ತು, ಇತ್ತ ೨ ವಾರಗಳಿಂದ ಹೊನ್ನಾವರ, ಗೇರಸಪ್ಪೆಯವರ ಖರೇದಿ ಹೆಚ್ಚಾದ್ದರಿಂದ ಭತ್ತದ ಚೀಲ ೧೮ ಭಾರದ ೬ ೮ ರೂ ಗಳಿಂದ ಏರಿತು! ಬಹಳಷ್ಟು ಅಕ್ಕಿ-ಭತ್ತವೂ ರಫ್ತಾಯಿತು! ಹೀಗೆ ಅಕ್ಕಿ-ಭತ್ತಗಳು ಹೊರಗೆ ಸಾಗಿದರೆ ಇಲ್ಲಿಯ ಜನರು ಉಪವಾಸ ಬಿದ್ದು ಸಾಯುವ ಪ್ರಸಂಗ ಖಂಡಿತವಾಗಿ ಬರುವದೆಂದು ಭಾವಿಸಿ ಇಲ್ಲಿಯ ವ್ಯಾಪಾರಿಗಳು ಈಗ ಪರಸ್ಥ ವ್ಯಾಪಾರಿಗಳಿಗೆ ಎಂದೆಂದೂ ಅಕ್ಕಿ-ಭತ್ತ ಕೊಡಬಾರದೆಂದೂ, ಅವರಿಗೆ ಒಯ್ಯಗೊಡಬಾರದೆಂದೂ ತೀರ್ಮಾನಿಸಿದ್ದಾರೆ

ರೈತರದೊಂದು ಸಂಘ ಮಾಡಿ, ಆ ಸಂಘದವರು ಅಕ್ಕಿ ಭತ್ತಗಳನ್ನು ಖರೇದಿಸಿ ಇಲ್ಲಿಯೇ (ಮಳೆಗಾಲದ ಬಗೆ) ಇಡುವಂತೆ ವ್ಯವಸ್ಥೆ ಮಾಡುವದುಚಿತವೆಂದು ಕಂಡುಬಂದದ್ದರಿಂದ ಅಂತಹದೊಂದು ಸಂಘ ನಿರ್ಮಿಸುವ ಪ್ರಯತ್ನಗಳೂ ನಡೆದಿವೆ.

೧೫ ದಿನಗಳ ಹಿಂದೆ ಸೆಂಟ್ರಲ ಎಕ್ಸ್ಸೈಜ ಖಾತೆಯ ಪೆಟ್ರೋಲ-ಪಾರ್ಟಿಯೊಂದು (ಈ ಪಾರ್ಟಿಯಲ್ಲಿ ಇಬ್ಬರಿದ್ದರಂತೆ) ಇಲ್ಲಿಂದ ಪಂಚಾನೆಗೆ ಹೋಗುತ್ತಿದ್ದಾಗ, ಶಿರೂರ ಸಮೀಪದ ರಸ್ತೆಯ ಮೇಲೆ ಅವರಿಗೆ ಕಟ್ಟಿಗೆ ತರಲು ಬೆಟ್ಟಕ್ಕೆ ಹೋಗುತ್ತಿದ್ದ ಇಬ್ಬರು ಹೆಂಗಸರು ಸಿಕ್ಕಿದರಂತೆ ಪಾರ್ಟಿಯೊಳಗಿನ ಜನರು ಆ ಹೆಂಗಸರನ್ನು ತಮ್ಮೊಳಗೆ ಹಂಚಿಕೊಳ್ಳುವ ಮಾತು ಆಡುತ್ತಿದ್ದದ್ದನ್ನು ಕೇಳಿ ಆ ಹೆಂಗಸರು ಓಡಲಾರಂಭಿಸಿದರು ಪಾರ್ಟಿಯವರು ಅವರನ್ನು ಬೆನ್ನಟ್ಟಿ, ತಮಗೆ ವಶವಾಗಲು ಒತ್ತಾಯ ಮಾಡಿದರಂತೆ! ಅಷ್ಟರಲ್ಲಿ ಆ ಹೆಣ್ಣು ಹುಡುಗಿಯರ ಕೂಗು ಕೇಳಿದ ಜನರು ಊರೊಳಗಿಂದ ಓಡಿ ಬಂದದ್ದರಿಂದ ಪಾರ್ಟಿಯವರು ಪಲಾಯನ ಮಾಡಬೇಕಾಯಿತು ಈ ಪಾರ್ಟಿಯಲ್ಲಿದ್ದವರಾರೆಂದು ಜಿಲ್ಹಾ ಪೋಲೀಸ ಅಧಿಕಾರಿಗಳು ಪತ್ತೆ ಮಾಡಿ, ಅವರಿಗೆ ಯೋಗ್ಯ ಶಾಸನ ಮಾಡಬೇಕಾಗಿ ಸೂಚನೆಯಿದೆ

ಕಳೆದ ತಾ ೧೩ಕ್ಕೆ ಬಿದ್ರಕಾನ ಗ್ರಾಮದಲ್ಲಿ ಪ್ರಭಾತ ಫೇರಿ, ಧ್ವಜವಂದನ ಮೊದಲಾದ ಪ್ರದರ್ಶಕ ಸಭೆ ಮುಂತಾದ ಕಾರ್ಯಕ್ರಮ ನಡೆದ ಸುದ್ದಿಯುಂಟು ಗಾಂಧೀಜಿಯವರ ಸ್ಮಾರಕಕ್ಕಾಗಿ ರೂ ... ಕೂಡಿದೆಯಂತೆ

ಮುಂಡಗೋಡ— (ತಾ ೨೭-೩-೪೮) ಕಳೆದ ಮಳೆಗಾಲದಲ್ಲಿ ಇಲ್ಲಿಯ ಆಸ್ಪತ್ರೆಯಲ್ಲಿ ಡಾಕ್ಟರರಿದ್ದಿಲ್ಲ ಹಸ್ತೇ ಜೂನಿಗೆ ಕಳೆದ ನವಂಬರ ತಿಂಗಳ ಕೊನೆಯ ವಾರದಲ್ಲಿ ಸರಕಾರದವರು ಸಿಂಧದಿಂದ ದೇಶತ್ಯಾಗ ಮಾಡಿ ಬಂದ ಡಾ॥ ಹಿರಾಸಿಂಗ ಕಹಟಿಯಾ ಎಂಬವರನ್ನು ಕಳಿಸಿ ಕೊಟ್ಟರು ಈ ಡಾಕ್ಟರರು ಬಹಳ ಚತುರರಿದ್ದಾರೆ, ದಯಾಳುಗಳಿದ್ದಾರೆ, ಮಿತ್ರಭಾವಿಗಳಿದ್ದಾರೆ ದಿನಾ ೧೦-೧೨ ತಾಸು ದುಡಿಯುತ್ತಾರೆ ಬಡಬಗ್ಗರ ಬಗ್ಗೆ ಅವರು ವಿಶೇಷ ಮಮತೆ ತೋರಿಸುತ್ತಾರೆ ಆದರಿಂದ ಈಗಾಗಲೇ ಅವರು ಲೋಕಪ್ರಿಯರಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ

ಈ ತಾಲೂಕಿನ ಬೇಡ್ಸಗಾಂವ ಗ್ರಾಮದಲ್ಲಿ ಶ್ರೀ ರಾಮಲಿಂಗ ದೇವರ ಗುಡಿಯುಂಟು ಇದು ಪುರಾತನ ಶಿಲಾಮಯ ದೇವಾಲಯ ಇದರೊಳಗಿನ ಲಿಂಗ ೧ ಆಳು ಎತ್ತರವುಂಟು ಬಹಳ ಸುಂದರ ಲಿಂಗ ಗುಡಿಯ ಹಿಂಬದಿಗೆ ರಾಮತೀರ್ಥವೆಂಬ ಜಲಾಶಯವಿದೆ ಪ್ರತಿ ಮಾಘ ವ ೧೪ ಕಿಗೆ ಇಲ್ಲಿ ಜಾತ್ರೆಯಾಗುತ್ತಿದೆ ಶಿರಸಿಯ ಮೇಲಿಂದ ಗೋಕರ್ಣ- ಶಿವರಾತ್ರಿಗೆ ಹೋಗುವ ಜನರು ಮಳಗಿಯಲ್ಲಿ ಇಳಿದು ಈ ದೇವಸ್ಥಾನವನ್ನೂ ದೇವರನ್ನೂ ನೋಡಿಕೊಳ್ಳಬಹುದು

ಅಂಕೋಲಾ— ಇಲ್ಲಿಯ ಕೊಂಕಣಿ ಭಾಷಿಕ ಜನರು ಕಳೆದ ತಾ ೧೭ ೧-೪೮ಕ್ಕೆ ಎಸ್ವರ್ಡ ಹಾಯ್‍ಸ್ಕೂಲಿನ ಸಭಾ-ಮಂದಿರದಲ್ಲಿ ಸಭೆಗೇರಿ, ಕಾನಡಾ ಜಿಲ್ಲೆಯು ಪ್ರತ್ಯೇಕ ಕರ್ನಾಟಕದಲ್ಲಿ ಇಲ್ಲವೆ ಪ್ರತ್ಯೇಕ ಮಹಾರಾಷ್ಟ್ರದಲ್ಲಿ ಸೇರಲೊಪ್ಪಲಾರದೆಂದೂ ಕರ್ನಾಟಕ, ಮಹಾರಾಷ್ಟ್ರಗಳನ್ನು ಪ್ರತ್ಯೇಕಿಸುವದಾದಲ್ಲಿ ಮುಂಬಯಿಯಿಂದ ಮಂಗಳೂರ ವರೆಗಿನ "ಕೊಂಕಣಪಟ್ಟಿ"ಯನ್ನು ಪ್ರತ್ಯೇಕಿಸಿ ಕೊಂಕಣ ಪ್ರಾಂತ ನಿರ್ಮಿಸುವದು ಅವಶ್ಯವಾದದ್ದೆಂದೂ ಒಂದು ಗೊತ್ತುವಳಿ ಮಾಡಿ, ಘಟನಾ ಸಮಿತಿಯ ಅಧ್ಯಕ್ಷರಿಗೂ, ಕೇಂದ್ರದ ಹಾಗೂ ಪ್ರಾಂತದ ಸರಕಾರಗಳಿಗೂ ಅದನ್ನು ಕಳಿಸಿರುತ್ತಾರೆ

Last Record of Nation's Father
Every Patriot should possess
Gandhi Souvenir Number of Forum
over 100 pages, profusely illustrated on art paper Price Rs 1-8-0 only,
Date of issue 14-3-48
Register orders with undersigned immediately to avoid disappointment

S A BHATKAL, KUMTA.	B N KOPPIKAR, BHATKAL.

ಆಜ್ಞೆ.

ಬೇಸಾಯ ಮತ್ತು ಗ್ರಾಮೋದ್ಯೋಗ ಖಾತೆ,
ಮುಂಬಯಿ ಕೋಟೆ,
ತಾ ೧೬-೨-೧೯೪೮

ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು, ೧೯೪೬

ನಂ ೨೮೮೮/I/ಎಫ್— ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೨ನೇ ಮುಂಬಯಿ ಕಾನೂನಿನ) ೩ನೆಯ ಕಲಮಿನನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಮುಂಬಯಿ ಸರಕಾರವು ಆಜ್ಞೆ ವಿಧಿಸುತ್ತದೇನೆಂದರೆ —

ಯಾವಾತನೂ ತಾನು ವಿದೇಶಗಳಿಂದ ಹಿಂದುಸ್ಥಾನಕ್ಕೆ ಆಮದು ಮಾಡಿದ ಮತ್ತು ದೀರ್ಘಕಾಲ ಎಣ್ಣೆ ಯಾ ಅದಾಗೆ ಎಣ್ಣೆಯಿಂದ ನಡಿಸಬಹುದಾದಂತಹ ಹಾಗೂ ೫ ಯಾ ಹೆಚ್ಚುಗೆ (ಅದರ ಟಂಕ ಸಾಮರ್ಥ್ಯ) ಅಶ್ವಶಕ್ತಿಯುಳ್ಳ ಯಾವದೇ ಎಣ್ಣೆಯ ಎಂಜಿನನ್ನು — ಬೇರೆ ಯಂತ್ರಗಳಿಂದ ಕೂಡಿದವುಗಳನ್ನು ಕೂಡ — ಮುಂಬಯಿಯ ಪ್ರಾಂತದ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಯೋಗದ ಖಾತೆಯ ಕಾರ್ಯದರ್ಶಿಯ ಲಿಖಿತ ಅಪ್ಪಣೆ-ಚೀಟಿಯಿಲ್ಲದೆ ಮತ್ತು ಅದರ ಶರ್ತುಗಳಿಗೆ ವ್ಯತಿರಿಕ್ತವಾಗಿ, ಬೇರೆಯವರಿಗೆ ಮಾರಕೂಡದು, ಭಾಡಿಗೆಗೆ ಕೊಡಕೂಡದು ಯಾ ಅನ್ಯ ರೀತಿಯಿಂದ ಅದರ ವಿಲೆವಾರಿ ಮಾಡಕೂಡದು.

ಮುಂಬಯಿಯ ಗವರ್ನರರ ಆಜ್ಞೆಯಂತೆ,

D N. Mahta,
ಸರಕಾರದ ಕಾರ್ಯದರ್ಶಿ.

ಜಾಹೀರ ಲಿಲಾಂವ.

ನಮ್ಮ ಅಂಬರಸ ಕಂಪನಿಯ ಹಳೇ ಇಮಾರತಿನ ಈ ಕೆಳಗಿನ ಸಾಮಾನುಗಳನ್ನು ತಾ. ೮೧-೩-೧೯೪೮ನೇ ಗುರುವಾರ ಬೆಳಗಿನ ೮ ಘಂಟೆಗೆ ಜಾಹೀರ ಲಿಲಾಂವದಿಂದ ಮಾರುವೆವು ಲಿಲಾಂವಿನ ಶರ್ತುಗಳು ಅದೇ ಕಾಲಕ್ಕೆ ತಿಳಿಸಲ್ಪಡುವವು. ಮಾರಲ್ಪಡುವ ಸಾಮಾನು ಕಂಪನಿಯ ಪಟಾಂಗಣದಲ್ಲಿ ಇಟ್ಟಿರುತ್ತಿದ್ದು, ನೋಡಬಯಸುವವರು ಆಫೀಸ ಹೊತ್ತಿನಲ್ಲಿ ಬಂದು ನೋಡಬಹುದು

ಮಾರತಕ್ಕ ಸಾಮಾನಿನ ವಿವರ:-
ಗಾಂಪರಿ ಹಂಚು, ಗಳ, ಬಳತ, ಅಡಿಕೆ ದಬ್ಬೆ, ಹಳೇ ಕಟ್ಟಿಗೆ ಸಾಮಾನು ಇತ್ಯಾದಿ

ಅಂಕೋಲಾ, ತಾ. ೨೩-೩ ೧೯೪೮

Basrur & Co.,
Managing Agents
Oriental Canneries & Industries, ...,
Ankola

ಸುಪಾ ಪೇಟೆಯ ಬೆಳೆಯ ಜಾಹೀರನಾಮೆ.
(೧೯೪೭-೪೮ನೇ ಸಾಲಿನದು)

ನಂ ೨೪೩—೧೯೪೭ನೇ ಇಸವಿಯ ಮುಂಬಯಿ ಒಕ್ಕಲತನದ ಕಾನೂನಿನ ನಿಯಮಾವಳಿಯ ೧೦ನೇ ನಿಯಮಾದನ್ವಯ ಕಾನಡಾ ಜಿಲ್ಲೆಯೊಳಗಿನ ಸುಪಾ ಪೇಟೆಯ ಮಾಮಲೇದಾರರು ಈ ಕೆಳಗಿನ (೧) "ಅ" ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ನಿರ್ದೇಶಿಸಿದ ಪ್ರಾದೇಶಿಕ ಕ್ಷೇತ್ರಗಳಲ್ಲಿರುವ ನೀರಾವರಿಯಿಲ್ಲದ ತರಿ ಭೂಮಿಗಳಲ್ಲಿ, ೧೯೪೭-೪೮ನೇ ಸಾಲಿನಲ್ಲಿ, ಪ್ರತಿ ಎಕರೆಗೆ ೩ನೆಯ ಸ್ತಂಭದಲ್ಲಿ ಕಾಣಿಸಿದಷ್ಟು ಸರಾಸರಿ ಭತ್ತದ ಬೆಳೆಯು ಹುಟ್ಟಿರುತ್ತದೆಂದೂ, (೨) "ಬ" ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ನಿರ್ದೇಶಿಸಿದ ಪ್ರಾದೇಶಿಕ ಕ್ಷೇತ್ರಗಳೊಳಗಿನ ನೀರಾವರಿಯ ತೋಟಗಳಲ್ಲಿರುವ ಅಡಿಕೆ ಮತ್ತು ತೆಂಗಿನ ಮರಗಳಿಗೆ ೩ನೆಯ ಸ್ತಂಭದಲ್ಲಿ ಕಾಣಿಸಿದಷ್ಟು ಸರಾಸರಿ ಅಡಿಕೆ-ತೆಂಗುಗಳ ಬೆಳೆಯು ಬಂದಿರುತ್ತದೆಂದೂ ಜಾಹೀರಪಡಿಸುತ್ತಾರೆ.

"ಅ" ಪರಿಶಿಷ್ಟ (ಭತ್ತದ ಬೆಳೆಯ ಪ್ರಮಾಣ)

ಅನುಕ್ರಮಾಂಕ	ಪ್ರಾದೇಶಿಕ ಕ್ಷೇತ್ರ.	೧ ಎಕರೆಯ ಸರಾಸರಿ ಬೆಳೆ
೧.	೬ನೇ ಸರ್ವೆ ಗ್ರೂಪದೊಳಗಿನ ಫಣಸೋಲಿ ಗ್ರಾಮವನ್ನುಳಿದು ೭ನೇ ಸರ್ವೆ ಗ್ರೂಪದೊಳಗಿನ ಯಾವತ್ತು ಗ್ರಾಮಗಳು	೧೩೪೮ ರತ್ತಲ.
೨.	೯ನೇ ಸರ್ವೆ ಗ್ರೂಪದೊಳಗಿನ ಅಂಬೋಳ್ಳಿ, ಬಿರೋಲಿ, ೩ ಜೋಯಿಡಾ ಮತ್ತು ಕುಣಗಿನಿ ಗ್ರಾಮಗಳನ್ನುಳಿದು ೮ನೇ ಸರ್ವೆ ಗ್ರೂಪದೊಳಗಿನ ಯಾವತ್ತು ಗ್ರಾಮಗಳು	೧೫೯೦ ರತ್ತಲ.
೩.	೯ನೇ ಸರ್ವೆ ಗ್ರೂಪದೊಳಗಿನ ಅಂಬೋಳ್ಳಿ, ಬಿರೋಲಿ, ಬಿರಖೋಲ ಮತ್ತು ಕುಣಗಿನಿ ಗ್ರಾಮಗಳನ್ನು ಬಿಟ್ಟು ಉಳಿದ ಯಾವತ್ತು ಗ್ರಾಮಗಳು.	೮೨೫ ರತ್ತಲ

"ಬ" ಪರಿಶಿಷ್ಟ (ಅಡಿಕೆ ತೆಂಗುಗಳ ಬೆಳೆಯ ಪ್ರಮಾಣ.)

ಅನುಕ್ರಮಾಂಕ	ಪ್ರಾದೇಶಿಕ ಕ್ಷೇತ್ರ	ಪ್ರತಿ ಮರಕ್ಕೆ ಸರಾಸರಿ ಬೆಳೆ: ೧ ತೆಂಗಿನ ಮರಕ್ಕೆ	ಪ್ರತಿ ಮರಕ್ಕೆ ಸರಾಸರಿ ಬೆಳೆ: ೧ ಅಡಿಕೆ ಮರಕ್ಕೆ
೧ ರಿಂದ ೭	ಶಿವಾಳ, ಯರಮುಖ, ಗುಂದ, ಚಿಂಚಖಂಡ, ನಂದಿಗದ್ದೆ, ಕರಿಯಾದಿ, ಭಿಸ್ಸಗದ್ದೆ.	೧೫ ಕಾಯಿ	೨ ರತ್ತಲ ಅಡಿಕೆ
೮ ರಿಂದ ೧೩	ನಿಗುಂಡಿ, ಬಿರಖೋಲ, ಶಿವಪುರ, ಡಬ್ಬಾಳ, ಕೋಡಿಬ್ಬೆ	೨೫ ಕಾಯಿ	೨ ರತ್ತಲ ಅಡಿಕೆ

ಸುಪಾ,
ತಾ ೨/೭—೧—೧೯೪೮.

Y. N. Mahajan,
ಮಾಮಲೇದಾರ, ಸುಪಾ.

ಆಜ್ಞೆ.

ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆ,
ಮುಂಬಯಿ ಕೋಟೆ,
ತಾ ೧೮-೨-೧೯೪೮

ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ಧನಗಳ (ನಿಯಂತ್ರಣದ) ಕಾನೂನು, ೧೯೪೬.

ನಂ ೨೦೮೮/III ಎಫ್ — ೧೯೪೬ನೇ ಇಸವಿಯ ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ಧನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೨ನೇ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಮುಂಬಯಿ ಸರಕಾರವು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿದೆ —

೧ ಆಜ್ಞೆಯ ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

(೧) ಈ ಆಜ್ಞೆಯು ೧೯೪೮ನೇ ಇಸವಿಯ ಎಣ್ಣೆಯ ಇಂಜಿನ್ನುಗಳ (ಬೆಲೆ-ನಿಯಂತ್ರಣದ) ಆಜ್ಞೆಯೆಂದು ಕರೆಯಲ್ಪಡುವದು

(೨) ಇದು ಇಡೀ ಮುಂಬಯಿ ಪ್ರಾಂತಕ್ಕೆ ವ್ಯಾಪಿಸುತ್ತದೆ

(೩) ಇದು ಕೂಡಲೆ ಅಮಲಿನಲ್ಲಿ ಬರುವದು

೨ ವ್ಯಾಖ್ಯೆಗಳು.- ಈ ಆಜ್ಞೆಯೊಳಗೆ, ವಿಷಯಕ್ಕೆ ಇಲ್ಲವೆ ಸಂದರ್ಭಕ್ಕೆ ವಿರೋಧಕವಾದ ಅಂಶವಿಲ್ಲದಿದ್ದರೆ

(೧) "ಎಣ್ಣೆಯ ಇಂಜಿನ್ನು" ಅಂದರೆ ಉತ್ಪಾದನೆಯ ದೇಶದಲ್ಲಿ ಯಂತ್ರ ತಯಾರಿಸಿದವನು ಸ್ವತಃ ಬೇರೆ ಬಗೆಯ ಯಂತ್ರ-ಸಾಮಗ್ರಿಗೆ ಜೋಡಿಸದಿದ್ದ, ಡೀಝೆಲ ಎಣ್ಣೆಯಿಂದ ಇಲ್ಲವೆ ಘಾಸಲೆಟ ಎಣ್ಣೆಯ ಉರುವಲದಿಂದ ನಡೆಸಬರುವಂತಹ ೫ ಯಾ ಹೆಚ್ಚಿಗೆ (ಆದರೆ ೬೦ಕ್ಕೆ ಮಿಕ್ಕದಷ್ಟು) ಅಶ್ವಶಕ್ತಿಯುಳ್ಳ ಹಾಗೂ ಹಿಂದುಸ್ಥಾನದಲ್ಲಿ ತಯಾರಾಗದಿದ್ದ ಇಂಜಿನ್ನು ಎಂದು ತಿಳಿಯತಕ್ಕದ್ದು

(೨) "ಆಯಾತಗಾರ"ನು ಅಂದರೆ ಹಿಂದುಸ್ಥಾನದಲ್ಲಿ ಮಾರಾಟ ಮಾಡುವದಕ್ಕಾಗಿ ಎಣ್ಣೆಯ ಇಂಜಿನ್ನುಗಳನ್ನು (ವಿದೇಶಗಳಿಂದ) ಆಯಾತ ಮಾಡುವ ವ್ಯವಹಾರ ನಡಿಸುವವನು ಎಂದು ತಿಳಿಯತಕ್ಕದ್ದು

(೩) "ವ್ಯಾಪಾರಿ" (ಡೀಲರ) ಅಂದರೆ ಎಣ್ಣೆಯ ಇಂಜಿನ್ನುಗಳ ಕ್ರಯ-ವಿಕ್ರಯದ ವ್ಯವಹಾರ ಮಾಡುವ ವ್ಯಕ್ತಿಯೆಂದು ತಿಳಿಯತಕ್ಕದ್ದು. ಸ್ವತಃ ಉಪಯೋಗಿಸದಿದ್ದ ಎಣ್ಣೆಯ ಇಂಜಿನ್ನುಗಳ ಸಂಗ್ರಹವಿಟ್ಟುಕೊಳ್ಳುವವನೂ "ವ್ಯಾಪಾರಿ" ವರ್ಗದಲ್ಲಿ ಸೇರ್ಪಡೆಯಾಗುತ್ತಾನೆ

(೪) ಎಣ್ಣೆಯ ಇಂಜಿನ್ನಿನ 'ಬಂದಿಳಿದ ಬೆಲೆ" (ಲೆಂಡೆಡ್ ಕೋಸ್ಟ) ಅಂದರೆ ಆಯಾತಗಾರನು ತೆರಬೇಕಾಗುವ ಅಸ್ಸಲ ಬೆಲೆಯೆಂದರ್ಥ. ಅದು ಈ ಕೆಳಗಿನ ಬಾಬುಗಳ ಬೇರಿಜು ಆಗಿರುತ್ತದೆ —

(I) ಆಯಾತಗಾರನು ಎಣ್ಣೆಯ ಇಂಜಿನನ್ನು ನೇರವಾಗಿ ಅದನ್ನು ತಯಾರಿಸಿದವನ ಕಡೆಯಿಂದ ಕೊಂಡುಕೊಂಡ ಸಂದರ್ಭದಲ್ಲಿ ಆ ಇಂಜಿನ್ನಿನ ಉತ್ಪಾದನೆಯ ದೇಶದಲ್ಲಿ ಉತ್ಪಾದಕನು ಆಕರಿಸುವ ಅಸ್ಸಲ ಬೆಲೆ, ಆಯಾತಗಾರನು ಎಣ್ಣೆಯ ಇಂಜನನ್ನು ಯಾರೊಬ್ಬ ನಿರ್ಯಾತಗಾರನ ಕಡೆಯಿಂದ ಕೊಂಡುಕೊಂಡಿರುವ ಸಂದರ್ಭದಲ್ಲಿ ಆ ನಿರ್ಯಾತಗಾರನು ಉತ್ಪಾದನೆಯ ದೇಶದಲ್ಲಿ ಅದರ ಬಗ್ಗೆ ಕೊಳ್ಳುವ ಅಸ್ಸಲ ಬೆಲೆ, ಮತ್ತು ಆಯಾತಗಾರನು ಸ್ವತಃ ಅದರ ಉತ್ಪಾದಕನಿರುತ್ತಿದ್ದಲ್ಲಿ ಆ ಆಯಾತಗಾರನು ಸಮುದ್ರದಾಟೆಯ ವ್ಯಾಪಾರಿಗೆ ಆಕರಿಸುವ ಅಸ್ಸಲ ಬೆಲೆ,

(II) ಆಯಾತಗಾರನು (ಇಂಜಿನ್ನು) ಕೊಂಡುಕೊಳ್ಳುವ ಬಗ್ಗೆ ಪ್ರತ್ಯಕ್ಷವಾಗಿ ಕೊಟ್ಟ ದಲಾಲಿ — ಮೇಲೆ (I)ರಲ್ಲಿ ಹೇಳಿದ ಬೆಲೆಯ ೧೦ಂಕ್ಕೆ ೩ಕ್ಕಿಂತ ಹೆಚ್ಚು ರಕಮಿಗೆ ಮಿಕ್ಕದಷ್ಟು,

(III) ಎಣ್ಣೆಯ ಇಂಜಿನ್ನು ನಿರ್ಯಾತಗಾರನ ವಖಾರಿಯನ್ನು ಬಿಟ್ಟು ಬಂದಿಳಿದ ಬಂದರದಲ್ಲಿರುವ ಇಳಕೊಳ್ಳುವ ಸ್ಥಳ (transit sheds)ಕ್ಕೆ ಮುಟ್ಟುವ ವರೆಗಿನ ಅವಧಿಯಲ್ಲಿ ಪ್ರತ್ಯಕ್ಷವಾಗಿ ತೆತ್ತ ವಿಮೆಯ ಹಣ,

(IV) ಪ್ರತ್ಯಕ್ಷವಾಗಿ ತೆತ್ತ ಸಾರಿಗೆಯ ವೆಚ್ಚ,

(V) ಎಣ್ಣೆಯ ಇಂಜಿನ್ನಿನ ಆಯಾತದ ಬಗ್ಗೆ ತೆರಬೇಕಾದ ಸುಂಕದ ಹಣ,

(VI) ಎಣ್ಣೆಯ ಇಂಜಿನನ್ನು ಆಯಾತಗಾರನ ವಖಾರಿಯಲ್ಲಿ ಯಾ ಬೇರೆ ಸಂಗ್ರಹಾಲಯದಲ್ಲಿ ತಂದಿಡುವ ವರೆಗೆ ಅದನ್ನು ಇಳಿಸಿಕೊಳ್ಳಲಿಕ್ಕೂ ಸ್ಥಳಾಂತರಿಸಲಿಕ್ಕೂ ಪ್ರತ್ಯಕ್ಷ ತಗಲುವ ವೆಚ್ಚ— ಮೇಲೆ (I)ರಲ್ಲಿ ಹೇಳಿರುವ ಬೆಲೆಯ ೧೦೦ಕ್ಕೆ ೨ಕ್ಕಿಂತ ಹೆಚ್ಚು ರಕಮಿಗೆ ಮಿಕ್ಕದಷ್ಟು ಮತ್ತು —

(VII) (ಇತರ) ತೆರಿಗೆ ಹತ್ತಿಸಿದ ದಾಖಲೆಗಳನ್ನು ಕಳಿಸಿಕೊಡುವ ಬಗ್ಗೆ ಬ್ಯಾಂಕುಗಳಿಗೆ ಪ್ರತ್ಯಕ್ಷ ಕೊಟ್ಟ ದಲಾಲಿ-ಹಣ

(೫) "ಪರಿಶಿಷ್ಟ" ಅಂದರೆ ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟವೆಂದು ತಿಳಿಯತಕ್ಕದ್ದು

೩ ಯಾವದೇ ಆಯಾತಗಾರನು ಇಲ್ಲವೆ ವ್ಯಾಪಾರಿಯು, ಮುಂಬಯಿಯಲ್ಲಿರುವ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳ ಲೇಖಿ ಸಮ್ಮತಿಯನ್ನು ಮುಂಚಿತವಾಗಿ ಪಡೆಕೊಂಡ ಹೊರತು, ಯಾವದೇ ಎಣ್ಣೆಯ ಇಂಜಿನನ್ನು ಪರಿಶಿಷ್ಟದಲ್ಲಿ ನಿರ್ದೇಶಿಸಿರುವ ಬೆಲೆಗಳಿಗಿಂತ ಹೆಚ್ಚಿಗೆ ಬೆಲೆಗೆ ಮಾರಕೂಡದು

ಆದರೆ ಯಾವದೊಂದು ಎಣ್ಣೆಯ ಇಂಜಿನ್ನಿನ ಬಂದಿಳಿದ ಬೆಲೆಗೂ ಅದೇ ಬಗೆಯ ಬೇರೆ ಎಣ್ಣೆಯ ಇಂಜಿನ್ನುಗಳ ಬಂದಿಳಿದ ಬೆಲೆಗೂ ಭಿನ್ನತೆಯಿರುತ್ತದೆಂದು ಮುಂಬಯಿಯಲ್ಲಿರುವ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳಿಗೆ ಕಂಡುಬಂದಲ್ಲಿ ಇಲ್ಲವೆ ಯಾವದೊಂದು ಎಣ್ಣೆಯ ಇಂಜಿನ್ನಿನ ಪರಿಷ್ಕೃತ ಬೆಲೆಯನ್ನು ಹೆಚ್ಚು ಕಡಿಮೆ ಮಾಡಲು ಸಾಕಷ್ಟು ಕಾರಣಗಳಿರುತ್ತವೆಂದು ಅವರಿಗೆ ಅನಿಸಿದಲ್ಲಿ, ಸದರಿ ಅಧಿಕಾರಿಗಳು ಯಾವದೊಂದು ಎಣ್ಣೆಯ ಇಂಜಿನನ್ನು ನಿರ್ದಿಷ್ಟ ವ್ಯಕ್ತಿಗೆ ಯಾ ವ್ಯಕ್ತಿ-ವರ್ಗಕ್ಕೆ ಅಥವಾ ನಿರ್ದಿಷ್ಟ ಪರಿಸ್ಥಿತಿಯಲ್ಲಿ ನಿರ್ದಿಷ್ಟ ಬೆಲೆಗೆ ಯಾ ಬೆಲೆಗಳಿಗೆ ಮಾರಾಟ ಮಾಡಲು ಯಾವನೊಬ್ಬ ಆಯಾತಗಾರನಿಗೆ ಯಾ ವ್ಯಾಪಾರಿಗೆ ಆಜ್ಞೆ ಕೊಡಬಹುದು

ಇನ್ನೂ ಗೊತ್ತುಪಡಿಸುವದೇನೆಂದರೆ — ಯಾವನೊಬ್ಬ ಆಯಾತಗಾರನು ಯಾ ವ್ಯಾಪಾರಿಯು ಯಾವದೊಂದು ಎಣ್ಣೆಯ ಇಂಜಿನ್ನಿನ ಕಬಜೆ (ಡಿಲಿವ್ಹರಿ)ಯನ್ನು ಬೃಹನ್-ಮುಂಬಯಿಯ ಗಡಿಗಳ ಹೊರಗೆ ಕೊಡುತ್ತಿದ್ದ ಪ್ರಸಂಗದಲ್ಲಿ, ಪರಿಶಿಷ್ಟದಲ್ಲಿ ನಿರ್ದೇಶಿಸಿರುವ ಆಯಾ ಬೆಲೆಗಳಿಗೆ ಈ ಕೆಳಗೆ ಕಾಣಿಸಿದ ವೆಚ್ಚವನ್ನು ಕೂಡಿಸಲಡ್ಡಿಯಿಲ್ಲ —

(I) ಎಣ್ಣೆಯ ಇಂಜಿನ್ನು ಬೃಹನ್ ಮುಂಬಯಿಯಲ್ಲಿರುವ ವಖಾರಿಯಿಂದ ಯಾ ಬೇರೆ ಸಂಗ್ರಹಾಲಯದಿಂದ ಕಬಜೆ ಕೊಡತಕ್ಕ ಸ್ಥಳಕ್ಕೆ ಒಯ್ಯಲು ಪ್ರತ್ಯಕ್ಷವಾಗಿ ತಗಲಿದ ಖರ್ಚು — ಆದರೆ ಈ ಖರ್ಚು ಬಂದಿಳಿದ ಬೆಲೆ ಮತ್ತು (ಇಂಜಿನ್ನು) ಬೃಹನ್-ಮುಂಬಯಿಯೊಳಗಿನ ಯಾವದೊಂದು ರೇಲ್ವೆ-ನಿಲ್ದಾಣದಿಂದ ಕಬಜೆ ಕೊಡತಕ್ಕ ಸ್ಥಳದ ಅತಿ ಸಮೀಪದಲ್ಲಿರುವ ರೇಲ್ವೆ-ನಿಲ್ದಾಣಕ್ಕೆ ಸರಕು ಒಯ್ಯುವ ರೇಲ್ವೆ-ಬಂಡಿಯಿಂದ ಕಳಿಸಿಕೊಡಲು ಬೀಳುವ ರೇಲ್ವೆ-ಸಾರಿಗೆಯ ವೆಚ್ಚ ಕೂಡಿ ಆಗುವ ಮೊಬಲಗಿನ ೧/೧೦೦ಕ್ಕಿಂತ ಹೆಚ್ಚಿಗೆಯಿರಕೂಡದು

(II) ಎಣ್ಣೆಯ ಇಂಜಿನ್ನು ಬೃಹನ್-ಮುಂಬಯಿಯಲ್ಲಿರುವ ಅನ್ಯ ವಖಾರಿಯಿಂದ ಯಾ ಬೇರೆ ಸಂಗ್ರಹಾಲಯದಿಂದ ಕಬಜೆ ಕೊಡತಕ್ಕ ಸ್ಥಳಕ್ಕೆ ಸಾಗಿಸುತ್ತಿದ್ದಾಗ ಪ್ರತ್ಯಕ್ಷವಾಗಿ ತೆತ್ತ ಆಕ್ಟ್ರಾಯ ಸುಂಕದ ಯಾ ಬೇರೆ ಬಗೆಯ ಸ್ಥಾನಿಕ ತೆರಿಗೆಗಳ ಮೊಬಲಗು

೪ (I) ಎಣ್ಣೆಯ ಇಂಜಿನ್ನು ಮಾರಾಟ ಮಾಡಿದ ಪ್ರತಿಯೊಂದು ವ್ಯವಹಾರದಲ್ಲಿ ಪ್ರತಿಯೊರ್ವ ಆಯಾತಗಾರನು ಯಾ ವ್ಯಾಪಾರಿಯು ಅದನ್ನು ಕೊಂಡುಕೊಂಡವನಿಗೆ ಅದರ ಕಬಜಾ ಕೊಡುವ ಕಾಲಕ್ಕೆ ಕ್ರಯ-ಚೀಟಿಯನ್ನು ಬರೆಕೊಡಬೇಕು, ಮತ್ತು ಈ ಕ್ರಯ-ಚೀಟಿಯಲ್ಲಿ ಕೊಂಡುಕೊಂಡವನ ಹೆಸರು ಮತ್ತು ವಿಳಾಸ, ಇಂಜಿನ್ನಿನ ಬಂದಿಳಿದ ಬೆಲೆ, ಆಕರಣೆ ಮಾಡಿದ ಕ್ರಯ, ಮಾರಿದ ಎಣ್ಣೆಯ ಇಂಜಿನ್ನಿನ ಸವಿಸ್ತರ ವರ್ಣನೆ ಮತ್ತು ಮಾರಾಟದ ಮಿತಿ ಇವುಗಳನ್ನು ಸ್ಪಷ್ಟವಾಗಿ ಬರೆಯಬೇಕು, ಮತ್ತು ಕ್ರಯ ಚೀಟಿಗೆ ಆಯಾತಗಾರನಾಗಲಿ ವ್ಯಾಪಾರಿಯಾಗಲಿ (ಹ್ಯಾಗೆ ಪ್ರಸಂಗವಿರುತ್ತದೋ ಹಾಗೆ), ಇಲ್ಲವೆ ಅವನ ತರ್ಫೆನಿಂದ ಬೇರೊಬ್ಬ ಹೊಣೆಗಾರ ವ್ಯಕ್ತಿಯಾಗಲಿ ಪೂರ್ಣ ಸಹಿ ಮಾಡಬೇಕು

(II) ತಾ ೨೧-೧೧-೧೯೪೭ರ ಮುಂಚೆ ತನ್ನ ಕಡೆಯಿಂದ ಎಣ್ಣೆಯ ಇಂಜಿನ್ನು ಕೊಂಡುಕೊಂಡ ಪ್ರತಿಯೊಬ್ಬ ಗಿರಾಕಿಗೆ, ಆ ಗಿರಾಕಿಯು ಹಾಗೆ ಬರಹ ಮೂಲಕ ಬಿನ್ನವಿಸಿದಲ್ಲಿ, ಅವನ ವಿನಂತಿ-ಪತ್ರ ಬಂದ ೭ ದಿನಗಳಲ್ಲಿ, ತಾನು ಮಾರಾಟ ಮಾಡಿದ ಎಣ್ಣೆಯ ಇಂಜಿನ್ನಿನ ಬಂದಿಳಿದ ಬೆಲೆಯನ್ನು ಪ್ರತಿಯೊರ್ವ ಆಯಾತಗಾರನು ತೋರಿಸಬೇಕು

೫ ಈ ಆಜ್ಞೆಯ ಪಾಲನೆಯನ್ನು ಸರಿಯಾಗಿ ಮಾಡಿಸಿಕೊಳ್ಳುವ ಬಗ್ಗೆ ಮುಂಬಯಿಯಲ್ಲಿರುವ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳಾಗಲಿ ಅವರಿಂದ ಈ ಬಗ್ಗೆ ಅಧಿಕಾರಪಟ್ಟ ಬೇರೊಂದು ವ್ಯಕ್ತಿಯಾಗಲಿ —

(ಅ) ಯಾರೊಬ್ಬ ವ್ಯಕ್ತಿಯ ಕಡೆಯಿಂದ, ಅವನು ಸ್ವತಃ ಯಾ ಬೇರೊಬ್ಬನು ನಡಿಸುತ್ತಿರುವ ವ್ಯಾಪಾರ-ವ್ಯವಹಾರದ ಸಂಬಂಧದಲ್ಲಿ ಆ ವ್ಯಕ್ತಿಯ ಕಡೆಗೆ ಇರುವ ಮಾಹಿತಿಯನ್ನು ಪಡಕೊಳ್ಳಬಹುದು,

(ಬ) ಯಾರೊಬ್ಬ ವ್ಯಕ್ತಿಯ ಯಾ ಅವನ ಆಧೀನವಿರುವ ಲೆಕ್ಕದ ಪುಸ್ತಕಗಳನ್ನಾಗಲಿ ಬೇರೆ ಕಾಗದಪತ್ರಗಳನ್ನಾಗಲಿ ತಪಾಸಿಸಬಹುದು ಯಾ ತಪಾಸಿಸಿಕೊಳ್ಳಬಹುದು,

(ಕ) ಯಾವನೊಬ್ಬ ವ್ಯಕ್ತಿಯು ಯಾ ಅವನ ಆಧೀನದಲ್ಲಿರುವ ಯಾವದೇ ಪುಸ್ತಕಗಳನ್ನು, ಲೆಕ್ಕ-ಪತ್ರಗಳನ್ನು ಯಾ ಕಾಗದ-ಪತ್ರಗಳನ್ನು, ತಪಾಸಣೆಗಾಗಿ ಹಾಜರಪಡಿಸಿಕೊಳ್ಳಬಹುದು.

೬ ಮುಂಬಯಿಯಲ್ಲಿರುವ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳ ಲೇಖಿ ಪೂರ್ವ-ಸಮ್ಮತಿಯಿಲ್ಲದೆ ಯಾವದೇ ಆಯಾತಗಾರನಾಗಲಿ ವ್ಯಾಪಾರಿಯಾಗಲಿ ಯಾವಾತನಿಗೂ ತನ್ನ ಕಡೆಗಿರುವ ಎಣ್ಣೆಯ ಇಂಜಿನ್ನು ಮಾರಾಟ ಮಾಡಲು ಅಲ್ಲಗಳೆಯಬಾರದು

೭ ಈ ಆಜ್ಞೆಯು ಯಾವದೇ ಅಂಶವು ಸರಕಾರದ ಕಡೆಗಿರುವ ಇಲ್ಲವೆ ಸರಕಾರದ ತರ್ಫೆನಿಂದ ಬೇರೊಬ್ಬರ ಕಡೆಗೆ ಇರುವ ಎಣ್ಣೆಯ ಇಂಜಿನ್ನಿಗೆ ಅಥವಾ ಸರಕಾರವು ಯಾ ಆ ಸರಕಾರದ ತರ್ಫೆನಿಂದ ಬೇರೊಬ್ಬರು ಎಣ್ಣೆಯ ಇಂಜಿನ್ನಿನ ಸಂಬಂಧದಲ್ಲಿ ಮಾಡಬಹುದಾದ ಯಾವದೇ ವ್ಯವಹಾರಕ್ಕೆ ಅನ್ವಯಿಸಲಾರದು.

ಪರಿಶಿಷ್ಟ

ಎಣ್ಣೆ ಇಂಜಿನ್ನುಗಳ ವರ್ಣನೆ	ಮಾರಾಟದ ಪರಮಾವಧಿಯ ಬೆಲೆ
(ಅ) ೫ರಿಂದ ೪೦ರ ವರೆಗೆ ಅಶ್ವಶಕ್ತಿಯುಳ್ಳವು	ಬಂದಿಳಿದ ಬೆಲೆಯ ೧। ಪಟ್ಟು
(ಬ) ೪೧ರಿಂದ ೫೫ರ ವರೆಗೆ ಅಶ್ವಶಕ್ತಿಯುಳ್ಳವು	ಬಂದಿಳಿದ ಬೆಲೆಯ ೧⅓ ಪಟ್ಟು
(ಕ) ೫೬ರಿಂದ ೬೦ರ ವರೆಗೆ ಅಶ್ವಶಕ್ತಿಯುಳ್ಳವು	ಬಂದಿಳಿದ ಬೆಲೆಯ ೧⅓ ಪಟ್ಟು

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

D N MAHTA,

ಸರಕಾರದ ಕಾರ್ಯದರ್ಶಿ

ಜಾಹೀರ ನೋಟೀಸು.

ಉತ್ತರ ಕನ್ನಡ ಜಿಲ್ಲಾ ಹಾಲಕ್ಕಿ ಒಕ್ಕಲ ಸಮಾಜದ ಯಾವತ್ತೂ ಜನರಿಗೆ—

ಈ ಕೆಳಗೆ ಸಹಿ ಮಾಡಿದವನು ಜಾಹೀರಪಡಿಸುವದೇನಂದರೆ —

ತಾರೀಖು ೧೬-೨-೧೯೪೮ರಲ್ಲಿ (ಹೆ)ಸರು ಮಿತ್ರ ಹೂವ ಗೌಡಾ ಇವರು, ಉತ್ತರ ಕನ್ನಡ ಜಿಲ್ಲಾ ಹಾಲಕ್ಕಿ ಒಕ್ಕಲ ಸಂಘದ ಮೆಂಬರ ಎಂಬ ನಾತೆಯಿಂದ, "ಜಯ ಹಿಂದ" ಎಂಬ ತಲೆಬರಹದ ಕೆಳಗೆ ಹಾಲಕ್ಕಿ ಒಕ್ಕಲ ಸಮಾಜದ ಮಾಹಿತಿಯನ್ನು ಸುಧಾರಕರನ್ನಾಗಿ ಮಾಡುವ ಸುವಿಚಾರದಿಂದ ಗೋಕರ್ಣ ಗ್ರಾಮದ ಬಜಾರ ಎಂಬಲ್ಲಿ ತಾರೀಖು ೨೨-೨-೧೯೪೮ನೇ ದಿವಸ ಸಭೆ ಕರೆದು ಹಸ್ತ ಪತ್ರಗಳನ್ನು ಹಂಚಿದ್ದಾರೆ

ಈ ಹಸ ಪತ್ರಿಕೆಯಲ್ಲಿಯ ಮಜಕೂರು ಅನ್ಯ ಜಾತಿಯವರ ಶಾಹಕತನಕ್ಕೆ ಒಳಗೊಂಡದ್ದಿದ್ದು, ಅದರಲ್ಲೂ ಗೋಕರ್ಣ ಸೀಮೆಯ ನನ್ನ ವಂಶಪರಂಪರೆಯ ಹಕ್ಕಿನದಾಗ ಹಾಗೂ ಮುಂಬಯಿ ಸಾಮುದಾರ ಹೈಕೋರ್ಟಿನಿಂದ ಮಾನ್ಯಸಲ್ಪಟ್ಟ ಗುರುಮನೆ ಗೌಡಾ ಊರ್ಫ ಅರಸು ಗೌಡನದ ಪರ ಮರೆಮಾಡಿ ಅನ್ಯರು ಗುರುಗೌಡರೆಂತ ಲೇಖಕರು ಸಾಹಸ ನಮೂದ ಮಾಡಿದ್ದಾರೆ

ಕಾರಣ ಹಾಲಕ್ಕಿ ಒಕ್ಕಲ ಸಮಾಜದ ಯಾವತ್ತೂ ಬಂಧು ಭಗಿನಿಯರಿಗೆ ಇದರ ಮೂಲಕ ತಿಳಿಸಬಯಸುವದೇನಂದರೆ — ಮೇಲೆ ನಮೂದಿಸಿದ ತಿಳಿಗೇಡಿ ಹಸ್ತಪತ್ರಗಳಿಂದ ನನ್ನ ಸಹಜವಾದ ಮತ್ತು ಶಾಶ್ವತವಾದ ಹಕ್ಕಿಗೆ ಯಾವದೇ ತರದಿಂದ, ಯಾವದೇ ಕಾಲದಲ್ಲಿ ಬಾಧ ಬರುವದಿಲ್ಲ ಇಷ್ಟೇ ಅಲ್ಲ— ನನ್ನ ಹಕ್ಕು ಅಬಾಧಿತವಿರುತ್ತದೆಂಬ ಸಂಗತಿ ಜಾಹೀರಪಡಿಸಿದ್ದೇನೆ

ಗೋಕರ್ಣ,
ತಾ ೨೫-೨-೧೯೪೮

ಈ ಎ ಪಿ ಗುರ್ತ
ಸುಕ್ರು ಬೀರ ಗೌಡಾ
ಅಶೋಕೆ ಗುರುಮನ ಗೌಡ
ಊರ್ಫ ಅರಸು ಗೌಡ, ಗೋಕರ್ಣ ಸೀಮೆ
ಅವನ ಮಾಗೌತ್ರದ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ.-
ಸ್ಥಳ, ಆವೃತ್ತಿ [illegible]
ಇವುಗಳ ಅನುಸಾರ
ವಿಶಿಷ್ಟ ಇನ್ನಿತರ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸವಿಸ್ತರ
ಪತ್ರವ್ಯವಹಾರ
ಮಾಡಲಾಗುವದು.

Reg. No. B 1270

Monday, 8-3-1948.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ ೩೩.

ಕುಂದಾಪುರ:- ಸೋಮವಾರ, ತಾ ೮-೩-೧೯೪೮.

ವರ್ಗಣಿಯ ದರ:
ಕುಂದಾಪುರದಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲಿನ ದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ,, ೦-೪-೦
ವಿ. ಪಿ ಯಿಂದ ಹಣಕಳುಹಿಸುವವರು
ವಿ. ಪಿ. ವೆಚ್ಚ [illegible]
ಕಳುಹಿಸಬೇಕು
ವರ್ಗಣಿ ಮುಂಗಡವಾಗಿ ಕಳುಹಿಸತಕ್ಕದ್ದು.

ಸ್ಥಳಿಕ ವಿಷಯಗಳು.

(ಸ್ಥಳಿಕ ವರದಿಗಾರನು ಬರೆದುದು)

ಲೋಕದಲ್ಲಿ ಇತ್ತಲಾಗಿ ಆಹಾರ ಧಾನ್ಯಗಳ ಕೊರತೆಯಾಗಿದೆ. ಮಹಾಯುದ್ಧದಿಂದ ಅಪರಿಮಿತ ಜನಘಾತವಾಗಿದೆಂದು ಎಣಿಸಲ್ಪಡುತ್ತಿದೆ. ಆದರೆ, ೧೨ ವರ್ಷದಿಂದಾದ ಜನನಷ್ಟ ಕಳೆದರೂ ಜಗತ್ತಿನ ಇಂದಿನ ಜನಸಂಖ್ಯೆ ಕಳೆದ ೯-೧೦ ವರುಷಗಳಲ್ಲಿ ೩೦ ಕೋಟಿಯಿಂದ ಬೆಳೆದಿದೆಂದು ಅಂಕಿ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಜನಸಂಖ್ಯೆ ಹೆಚ್ಚಿದಂತೆ ಅನ್ನಧಾನ್ಯಗಳ ಉತ್ಪತ್ತಿ ಹೆಚ್ಚಿಲ್ಲ. ತದ್ವಿರುದ್ಧ ೧೦೦ಕ್ಕೆ ೭ರಂತೆ ಆಹಾರ-ಸಾಮಗ್ರಿಗಳ ಹುಟ್ಟುವಳಿ ಕುಗ್ಗಿರುವದೆಂದು ಲೆಕ್ಕ ಹಾಕಲ್ಪಟ್ಟಿದೆ. ಅದರಿಂದ ಆಹಾರದ ಉತ್ಪತ್ತಿಯನ್ನು ಬೆಳೆಸುವದಕ್ಕಾಗಿ ಸಮಸ್ತರೂ ಸರ್ವಪ್ರಯತ್ನ ಮಾಡಬೇಕೆಂದು ಪಂ॥ ಜವಾಹರಲಾಲ ನೆಹರೂರವರು ಸಮಸ್ತರಿಗೆ ಆಜ್ಞೆ ಕೊಟ್ಟಿದ್ದಾರೆ. ಆಹಾರ ಧಾನ್ಯಗಳಿಗಾಗಿ ಭಾರತವು ವಿದೇಶಗಳ ಮೇಲೆ ಅವಲಂಬಿಸಿರಕೂಡದು. ವಿದೇಶಗಳಿಂದ ಆಹಾರಧಾನ್ಯಗಳನ್ನು ತರಿಸಲಿಕ್ಕೆ ಬೇಕಾದ ಹಣ ಪೂರೈಸಲು ಸರಕಾರಕ್ಕೆ ಅನುಕೂಲವಿಲ್ಲ. ಬ್ರಹ್ಮದೇಶದಿಂದ ಅಕ್ಕಿ ಆಮದು ಮಾಡಲು ಭಾರತ ಸರಕಾರವು ಏರ್ಪಾಟು ಮಾಡಿದೆ. ಆದರೆ ಅದರಿಂದ ಹಿಂದುಸ್ಥಾನದ ಕೊರತೆ ನೀಗುವಂತಿಲ್ಲ. ಮದ್ರಾಸ ಪ್ರಾಂತಕ್ಕೆ ೧೦ ಲಕ್ಷ ಟನ್ನ ಅಕ್ಕಿ ಹೊರ-ಪ್ರಾಂತ್ಯದಿಂದ ಬಂದರೆ ಮಾತ್ರ ಉಳಿಗಾಲವುಂಟು. ಆದರೆ ವಿಶೇಷ ಪ್ರಯತ್ನ ಮಾಡಿದರೆ ೪ ಲಕ್ಷ ಟನ್ನಿನವರೆಗೆ ಅಕ್ಕಿ ಪೂರೈಸಬಹುದು. ಇನ್ನೂ ೬ ಲಕ್ಷ ಟನ್ ಅಕ್ಕಿಯ ಕೊರತೆ ಬೀಳುತ್ತಿದೆ. ಜನರು ಗಡ್ಡೆ-ಗೆಣಸುಗಳನ್ನು ತಿಂದು ಪ್ರಾಣರಕ್ಷಣೆ ಮಾಡಿಕೊಳ್ಳುವ ಪ್ರಸಂಗ ಬರುವದಾಗಿ ಪ್ರಕಟವಾಗಿದೆ. ಇಂಥ ಪ್ರಸಂಗದಲ್ಲಿ ಅಕ್ಕಿಯ ದರ ಏರುವದು ಸ್ವಾಭಾವಿಕ. ಅಕ್ಕಿಯ ದರ ಏರಿಕೆಯ ಪಾಪ ವರ್ತಕರ ಮೇಲೆ ಹೊರಿಸಿ ದೇಶಭಕ್ತರಾಗುವದು ಸುಲಭ. ದರವನ್ನು ಏರಿಸುವ ಯಾ ಇಳಿಸುವ ಶಕ್ತಿ ವರ್ತಕರಲ್ಲಿಲ್ಲ. ಅದೊಂದು ಸೃಷ್ಟಿವ್ಯಾಪಾರ. ಕೃತ್ರಿಮ ನಿರ್ಬಂಧಗಳಿಂದ ಜೀನಸುಗಳ ದರಗಳನ್ನು ನಿಯಂತ್ರಿಸಲಾರಂಭಿಸಿದರೆ ಘಾತವಾಗುವ ಸಂಭವವಿದೆ. ನಿಯಂತ್ರಣ ಕಾಲದಲ್ಲಿ ಕಳ್ಳ ಪೇಟೆಗಳು ನಿರ್ಮಾಣವಾಗಿ ಜನಸಂಕಟವಾಗಿತ್ತು. ವ್ಯಾಪಾರ-ವ್ಯವಹಾರಗಳನ್ನು ಸ್ವತಂತ್ರಗೊಳಿಸುವ ಏರ್ಪಾಟುಗಳಿಂದ ಆಹಾರ ಧಾನ್ಯಗಳ ಬೆಲೆಗಳು ಇಳಿಯುವವಾಗಿ ಹಿಂದುಸ್ಥಾನದ ಅರ್ಥಸಚಿವರಾದ ಶ್ರೀ ಷಣ್ಮುಖಂ ಚೆಟ್ಟಿಯಾರರು ಲೋಕಸಭೆಯಲ್ಲಿ ಹೇಳಿದ್ದಾರೆ. ಆದರೂ ಸದ್ಯಕ್ಕೆ ಅಂಥ ಇಳಿಯುವ ಲಕ್ಷಣಗಳು ತೋರುತ್ತಿಲ್ಲ. ಅದರಿಂದ ಬಡಬಗ್ಗರು ಗೋಳಾಡುತ್ತಿದ್ದಾರೆ.

* * *

ಪ್ರಮಾಣಿತ ನಿಯಂತ್ರಣವನ್ನು ಹೇರುವದು ಕಷ್ಟ. ನಿಯಂತ್ರಣದ ಕಷ್ಟಗಳನ್ನು ಜನರು ಅನುಭವಿಸಿದ್ದಾರೆ. ಅಪರಿಮಿತ [illegible] ಹಿಡಿದು, ಕಷ್ಟದಿಂದ ಸಂಪಾದಿಸಿಕೊಂಡು ತಂದ ಅಕ್ಕಿಯನ್ನು ಕಳ್ಳರಂತೆ [illegible] ಪ್ರಸಂಗವನ್ನು ಜನರು ಕಂಡಿದ್ದಾರೆ! ಹಾದಿಯಲ್ಲಿ ಪೋಲೀಸರೂ ರಕ್ಷಕರೂ ಅಕ್ಕಿ ಹಿಡಿದು ಅದರಿಂದ ಅವರಿಗೆ ಲಾಭವಾದದ್ದುಂಟು! ಅಕ್ಕಿಯ ಮಿಲ್ಲುಗಳಿಂದ, ಅಕ್ಕಿ ಕಟ್ಟಿದ ಕಷ್ಟ ಜನಕ್ಕೆ ಸಂಬಳ ನಷ್ಟ ಕಳಕೊಂಡಿದ್ದಲ್ಲದೆ ವಿಧಿಸಿದ ದಂಡವನ್ನು ಕಟ್ಟಲಾರದೆ ಅನೇಕ ಬಡಬಗ್ಗರು ಸೆರೆಮನೆಯ ಕಷ್ಟ ಅನುಭವಿಸಿದ್ದಾರೆ! ನಿಯಂತ್ರಣ-ಯುಗದಲ್ಲಿ ಉಪವಾಸದ ಬೇಸರಿಗೆ ಜನರು ಇಂಥ ದುಃಖವನ್ನು ಸಹಿಸಿದ್ದರೆ! ಅದರಿಂದ ಬಡಬಗ್ಗರಿಗೆ ನೇರವಾಗಿ ಅನುಕೂಲವಾಗುವ ಪ್ರಮಾಣದ ಒಂದು ಯೋಜನೆ ಮಾಡಬಹುದು. ನಿಯಂತ್ರಣ ಕಾಲದಲ್ಲಿ ಸಾವಿರಾರು ರೂಪಾಯಿಗಳ ಲಾಭ ಪಡೆದ ಕೋ-ಆಪರೇಟಿವ ವಗೈರೆ ಸಂಸ್ಥೆಗಳೂ ಸೊಸಾಯಿಟಿ-ಅಂಗಡಿಗಳನ್ನು ನಡೆಸಿದ ವರ್ತಕರುಗಳೂ ತಮ್ಮ ಪ್ರಾಪ್ತಿಯ ಒಂದಂಶವನ್ನು ಈಗ ಧರ್ಮ ಮಾಡಬೇಕು. ಊರೂರಿನ ಸಾಹುಕಾರರಿಂದಲೂ ಕೆಲವು ನಿಧಿಯನ್ನು ಒಟ್ಟುಗೂಡಿಸಬೇಕು. ಪೇಟೆಯ ದರದಿಂದ ಅಕ್ಕಿ ಖರೀದಿ, ಕಡಿಮೆ ದರದಿಂದ ಅದನ್ನು ಬಡವರಿಗೆ ಮಾರಿ ಬರುವ ನಷ್ಟವನ್ನು ಈ ನಿಧಿಯೊಳಗಿಂದ ಪೂರೈಸಿಕೊಳ್ಳಬೇಕು. ಪ್ರತಿ ಊರಿನಲ್ಲಿ ಇಂಥ ಅಂಗಡಿಗಳು ತೆರೆಯಲ್ಪಡಬೇಕು. ನಿರ್ಬಂಧಗಳಿಂದ ಇದ್ದ ಅಕ್ಕಿ ಭೂಗತವಾಗುತ್ತಿದೆ! ಅಕ್ಕಿ ಇದ್ದವರು ಅದನ್ನು ಹೊರತಂದು ಪೇಟೆಗೆ ಹಾಕುವದಿಲ್ಲ. ಪರವಾನಿಗೆಯ ಆತಂಕದ ಜನರು ಅದನ್ನು ಬಚ್ಚಿಡುತ್ತಾರೆ. ಅಂಗಡಿಯವರು ಊರವರ ಮನವೊಲಿಸಿದಲ್ಲಿ ಈ ಅಕ್ಕಿ ಸಿಗುವಂತಿದೆ. ೧೯೧೪ರ ಮೊದಲನೇ ಮಹಾಯುದ್ಧದ ಕಾಲದಲ್ಲಿ ಅಕ್ಕಿ ತುಟ್ಟಿಯಾಗಿ ಬಡ-ಬಗ್ಗರಿಗೆ ಕಷ್ಟವಾದಾಗ ಕುಂದಾಪುರದಲ್ಲಿಯೂ [illegible] ಇಂತಹ ಧರ್ಮದ ಅಂಗಡಿಗಳು ತೆರೆಯಲ್ಪಟ್ಟಿದ್ದವು. ಅವುಗಳಿಂದ ಬಹಳ ಪ್ರಯೋಜನವಾಗಿತ್ತು. ಭೂಮಿಯ ಉತ್ಪತ್ತಿ ಸಿಗುವ ಶ್ರೀಮಂತರಾಗಲಿ ಒಡೆಯರಾಗಲಿ, ವರ್ತಕರಾಗಲಿ ಜನರಿಗಾಗಲಿ ಧರ್ಮದ ಅಂಗಡಿಗಳಿಂದ ಲಾಭ ಸಿಗಲಾರದು. [illegible] ಅಕ್ಕಿ ಒಯ್ಯುವ [illegible] ಬಡವರಿಗೂ ರೂ ೧೦೦ರೊಳಗೆ ಸಂಬಳವಿರುವ ಬಡ ನೌಕರರಿಗೂ ಈ ಅಂಗಡಿಗಳಿಂದ [illegible] ಪೂರೈಕೆಯಾಗಬೇಕು. ಹಳ್ಳಿ-ಹಳ್ಳಿಗಳಲ್ಲಿ ಧರ್ಮದ ಅಂಗಡಿಗಳ ಏರ್ಪಾಟು ಆದರೆ ದರ ಏರಿಕೆಗೆ ತಡೆ ಬೀಳುವಂತಿದೆ. ಧರ್ಮ-ಬುದ್ಧಿಯ ವಾತಾವರಣ ನಿರ್ಮಾಣವಾಗಿ ಊರೊಳಗೆ ಹಬ್ಬಿ, ಅಕ್ಕಿ ಇದ್ದವರು ತಮಗೆ ಬೇಕಾದಷ್ಟು ಇಟ್ಟುಕೊಂಡು ಉಳಿದದ್ದನ್ನು ಹೊರಗೆ ಹಾಕುವರು. ಮಾನವನು ಮೂಲತಃ ಒಳ್ಳೇ ಸ್ವಭಾವದವನೆಂದು ಮಹಾತ್ಮರು ಪ್ರತಿಪಾದಿಸಿದ್ದುಂಟು. ದುಷ್ಟರನ್ನು ಶಿಕ್ಷಿಸುವುದಕ್ಕಾಗಿ [illegible] ಈಗಿನ ದಿನಮಾನದಲ್ಲಿ [illegible] ಹೆಚ್ಚಾಗಿದೆ. ವ್ಯಾಪಾರ-ವ್ಯವಹಾರಗಳು ಆ ಧ್ಯೇಯದಿಂದ ನಡೆಯುತ್ತಿವೆ. ಊರೊಳಗಿನ ಶ್ರೀಮಂತರು ಧರ್ಮಬುದ್ಧಿಯಿಂದ ಒಟ್ಟಿಗೆ ಸೇರಿ ಊರೊಳಗಿನ ಹೀನ-ದೀನರಿಗೆ ಅನ್ನ-ಪೂರೈಕೆಯ ಏರ್ಪಾಟು ಮಾಡಿಕೊಡಬೇಕು, ಅದಕ್ಕೆ ಸಮಾಜದ ಬೆಂಬಲ ದೊರೆಯುವಂತಿದೆ.

* * *

ಅದೇ ರೀತಿ ಬೆಳೆಯನ್ನು ಹೆಚ್ಚಿಸಲಿಕ್ಕೂ ಊರವರು ಪ್ರಯತ್ನಪಡಬೇಕು. ಯುದ್ಧ-ಪೂರ್ವಕಾಲದ ಪ್ರಮಾಣದಿಂದ ಬ್ರಹ್ಮದೇಶದಿಂದ ಅಕ್ಕಿ ಬರಲಿಕ್ಕೆ ಇನ್ನೂ ೨ ವರ್ಷಗಳು ಬೇಕಾಗುವವೆಂದು [illegible] ರಲಾಲ ನೆಹರೂರವರು ಎಚ್ಚರಿಕೆ ಕೊಟ್ಟಿದ್ದಾರೆ. ಈ ಎರಡು ವರ್ಷಗಳ ಅವಧಿಯಲ್ಲಿ ಹಿಂದುಸ್ಥಾನದವರು ತಮ್ಮ ಉದರ-ನಿರ್ವಾಹವನ್ನು ಸ್ವದೇಶದೊಳಗಿನ ಉತ್ಪತ್ತಿಯಿಂದಲೇ ಮಾಡಿಕೊಳ್ಳುವ ಪ್ರಸಂಗವುಂಟು. ಉಗಿಬಂಡಿಯ ಮಾರ್ಗದ ಆಚೆ ಈಚೆ ಆಹಾರ-ಧಾನ್ಯಗಳನ್ನು ಬೆಳೆಸುವ ಏರ್ಪಾಟು ಮಾಡಲಾಗಿದೆಯೆಂದು ದಿಲ್ಲಿಯ ಲೋಕಸಭೆಯಲ್ಲಿ ಹಿಂದುಸ್ಥಾನ ಸರಕಾರವು ಪ್ರಕಟಿಸಿದೆ. ನಮ್ಮ ಜಿಲ್ಲೆಯೊಳಗೆ, ೮ ತಾಲೂಕು [illegible] ೨ ಲಕ್ಷ [illegible] ಎಕರೆ ಸಾಗ ಮಾಡಬಹುದಾದ ಕ್ಷೇತ್ರವಿದೆ. ಅದರಲ್ಲಿ ೩೪,೯೨೧ ಎಕರೆ ಕ್ಷೇತ್ರ ಸರಕಾರದ ವಶದಲ್ಲಿ ಇರುವದಾಗಿದೆ. ಅದನ್ನು ಸರಕಾರವು ಇದೀಗಲೇ ಸಾಗುವಳಿಯಲ್ಲಿ ತರಲು ಪ್ರಯತ್ನ ಮಾಡಬೇಕು. ಈ ಭೂಮಿ ಸಾಗುವಳಿಯಲ್ಲಿ ತರುವ [illegible] ದಾರರಿಗೆ ಒಳ್ಳೆ ಪ್ರತಿಫಲ ಸರಕಾರವು ಕೊಡಬಹುದು. ಕೊರತೆಯ ಕಾಲದಲ್ಲಿ ಹೆಚ್ಚು ಆಹಾರ-ಧಾನ್ಯಗಳನ್ನು ಹುಟ್ಟಿಸುವ ಪ್ರವೃತ್ತಿ ಜನರಲ್ಲುಂಟಾಗುತ್ತಿದೆ. ಆ ಪ್ರವೃತ್ತಿಯನ್ನು ಲೋಕ-ಪ್ರಮುಖರೂ ಅಧಿಕಾರಿಗಳೂ ಪ್ರೋತ್ಸಾಹಿಸಬೇಕು. [illegible] ಭೂಮಿ [illegible] ಬಿದ್ದ ಕಾರಣಗಳನ್ನು ತಿಳಕೊಂಡು ಅವನ್ನು ಪರಿಹರಿಸಲು ಇದೀಗಲೇ ಪ್ರಯತ್ನಪಡಬೇಕು. [illegible] ಭೂಮಿಗಳ ಸಾಗುವಳಿಯ ಏರ್ಪಾಟಾಗುವದು ಅವಶ್ಯ. ಜನರ ಪಾಲಿಗೆ ಭೂಮಿಯೂ ಬಹಳಷ್ಟು ಬಾಕಿ ಉಂಟು. ಎಲ್ಲ ತಾಲೂಕು ಪೇಟೆಗಳಲ್ಲಿ [illegible]

ESTD 1934.

The Agricultural & Industrial Bank, Ltd.

(Incorporated in British India, Liability of Members Limited.)

Head Office: COONDAPOOR.

Authorised Capital	..	Rs. 25,00,000-0-0.
Issued Capital	...	,, 11,61,850-0-0
Paid-up Capital & Reserves	,,	8,43,258-2-0

SAVINGS BANK ACCOUNTS are opened with the minimum amounts and interest allowed at 2%

CURRENT ACCOUNTS are opened. Interest allowed at 1%

SEASON DEPOSITS of 3 and 6 months are accepted

For Terms, please apply to Head Office, or to our nearest Branch

"Laxmi-Nivas" Buildings,
COONDAPOOR, 1-12-1947.

K. VAMAN SHENAI,
CHAIRMAN

ಎಕರೆಗಳಷ್ಟು ಭೂಮಿ ಸಾಗು ಮಾಡಲು ಈಗಲೇ ಸಾಧ್ಯವಿದೆ ಸರಕಾರವು ತನ್ನ ಭೂಮಿ ಸಾಗ ಮಾಡಿಸಲಿಕ್ಕೆ ಮುಂದಾದರೆ ಮುಕ್ತ ಸಾಗುವಳಿಗೆ ಬಿಟ್ಟು ತರುವ ಕೆಂದರೆ [illegible] ಈ ಮಾಳ್ಳ ಭೂಮಿ [illegible] ಸಾಗುವಳಿಯಾಗುವಂತಿದೆ [illegible] ಧಾನ್ಯಗಳ ಕೊರತೆ ಭಟ್ಕಳ ಮೇಲ್ಭಾಗಕ್ಕಿಂತ ಭಟ್ಕಳ ಕೆಳಭಾಗದಲ್ಲಿ ಮಿಗಿಲಾಗಿದೆ ಕಾರವಾರ, ಅಂಕೋಲಾ ಕುಮಟಾ, ಹೊನ್ನಾವರ ತಾಲೂಕುಗಳಲ್ಲೂ ಭಟ್ಕಳ ಸೇರಿ [illegible] ಭೂಮಿ [illegible] ಈ ಭಾಗದ [illegible] ಈ ಭಟ್ಕಳ ಮೇಲಿಂದ ಅಕ್ಕಿ [illegible] ಬಂದರೆ [illegible] ಭಟ್ಕಳ [illegible] ಈ ಕಡೆ [illegible] ಭೂಮಿಯಲ್ಲಿದೆ [illegible] ಸಾಗುವಳಿಯ ಅನುಕೂಲತೆಯನ್ನು [illegible] ಸರಕಾರವು ತನ್ನ [illegible] ಭೂಮಿಗಳನ್ನು [illegible] ಉತ್ತರ ಕಾನಡಾ ಜಿಲ್ಲೆಯ [illegible] ಭೂಮಿಗಳ ಬಗ್ಗೆ ಸಾಗುವಳಿಯ [illegible] ಅನುಕೂಲತೆಗಳನ್ನು [illegible] ಸಾಗುವಳಿ ಮಾಡಿಸಲು [illegible] ಉತ್ತರ ಕಾನಡಾ [illegible] ಕರುನಾಡಿನ [illegible] ಪ್ರಕಟಿಸ ಬೇಕು ಇಂಥ ಪ್ರಕಟಣೆ ಹೊರಡಿಸಿದಲ್ಲಿ ಸರಕಾರದ [illegible] ಉತ್ಪನ್ನ [illegible] ಈ [illegible] ಕೆಲಸ [illegible] ವಿಶ್ವಸಂಸ್ಥೆ [illegible] ಅಮೃತಂ [illegible] ಧನಗಳನ್ನು [illegible] ಕೊಡುವ ಪ್ರಸಂಗವಿದ್ದಲ್ಲಿ ಅದನ್ನು ಮಾಡಿ ಸ್ವಂತ ರಕ್ಷಣೆ ಮಾಡಿಕೊಳ್ಳಬಹುದೆಂದು ಋಷಿಗಳ ಆಜ್ಞೆಯುಂಟು ಆದ್ದರಿಂದ ಧಾನ್ಯಗಳ ಉತ್ಪಾದನೆಯ ಸಮಸ್ಯೆಯನ್ನು ಈ ದೃಷ್ಟಿಯಿಂದ [illegible] ಉತ್ತರ ಕಾನಡಾ ಜಿಲ್ಲೆಯ ಭಾಗಗಳನ್ನು ಅನ್ನ ಧಾನ್ಯಗಳ ಉತ್ಪತ್ತಿಗಾಗಿ ಉಪಯೋಗಿಸಬೇಕೆಂದು ಹಿಂದುಸ್ಥಾನ ಸರಕಾರವು ಮಾಡಿದ ನಿರ್ಧಾರದಿಂದ ಈಗಿನ [illegible] ಜ್ಞಾನವಾಗುವಂತಿದೆ [illegible] ದೇಶದಲ್ಲಿ [illegible] ಅಂಗವಿಗಳನ್ನಿಟ್ಟು, ಸಕಲ ಸುಖಗಳನ್ನು ಬಿಟ್ಟು [illegible] ಒಂದು ಪ್ರಸಂಗದಲ್ಲಿ ಹೇಳಿದ್ದಾರೆ "ಸನಕ್ಕಿಂತ ಅಧಿಕದ ದ್ರವ್ಯ ಹೆಚ್ಚಿನ ಆಗಕ್ಕಿದ್ದು [illegible] ಅಕ್ಕಿ ಬಾಳುಕೆದರೆ ಮಾತ್ರ ಧನದ ಉಪಯೋಗ ಆಗಬಲ್ಲದು

ನೋಟೀಸು.

ಹೊನ್ನಾವರ ರೇಂಜಿಗೊಳ್ಪಿದ ಹೈಗುಂದ ಫೊರೆಸ್ಟ ನಾಕೆ [illegible] ಪತ್ತರ ಬಾವಿ ಕಟ್ಟಿಕೊಡುವ ಕಾಮಗಾರಿಯ ಬಗ್ಗೆ ಟೆಂಡರಗಳನ್ನು ಕರೆಯಲಾಗಿದೆ ಸದರಿ ಕೆಲಸದ ಬಗ್ಗೆ ಅಂದಾಜಾದ ಅಂದಾಜ ಹಣ ರು. ೧೫೦ [illegible] ಇರುತ್ತದೆ [illegible]ಅವರನ್ನು ರಜಿಸ್ಟರ್ಡ ಇಲ್ಲವೆ ಎಕ್ಸಪ್ರೆಸ್ ಡಿಲಿವ್ಹರಿಯ ಮೂಲದಿಂದ ತಾ ೧೧—೩—೧೯೪೮ನೇ ದಿವಸ ಬೆಳಗಿನ [illegible] ಘಂಟೆಯೊಳಗಾಗಿ ಕಾರವಾರದಲ್ಲಿ ಕೆಳಗೆ ಸಹಿ ಮಾಡುವವರ ಕಡೆಗೆ ತಲಪುವಂತೆ ಕಳಿಸಬೇಕು ಟೆಂಡರಿನ [illegible] ಬಯಾನಾ ಹಣದ ಬಗ್ಗೆ ರೂ ೨೦೦ರ "ಮುದ್ದತ್ತು "ಜಮಾ ಪಾವತಿ, ಟ್ರೆಝರಿ ಚಲನನ್ನು ಕಳಿಸತಕ್ಕದ್ದು ಸದರಿ ಕಾಮಗಾರಿಯನ್ನು ತಾ ೩೧—೫—೧೯೪೮ರ [illegible] ಮುಗಿಸಿಕೊಡತಕ್ಕದ್ದಿರುತ್ತದೆ

ಕಟ್ಟಿಸತಕ್ಕ ಬಾವಿಯು ಆಳ ೨೬ ಫುಟು ಸುತ್ತು ವ್ಯಾಸ [illegible] ಇರುತ್ತದೆ

ಹೆಚ್ಚಿನ ವಿವರಗಳನ್ನು ಕೆಳಗೆ ಸಹಿ ಮಾಡಿದವರಿಂದ [illegible] ರೇಂಜ ಫೊರೆಸ್ಟ ಆಫೀಸರ, ಹೊನ್ನಾವರ ಇವರಿಂದ ತಿಳಿಯಬಹುದು

ಕಾರವಾರ,
೨-೩-೪೮

B F BRITTO,
ಡಿವ್ಹಿಜನಲ್ ಫೊರೆಸ್ಟ ಆಫೀಸರ
ಪಶ್ಚಿಮ ವಿಭಾಗ, ಕಾನಡಾ, ಕಾರವಾರ

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಬೇಗನೆ [illegible] ಯಾಗುವದಾಗಿ [illegible]

ಕಳೆದ ಮಂಗಳವಾರ ಇಲ್ಲಿಯ ಶ್ರೀ ಅನ್ನಪೂರ್ಣ ಗುಡಿ [illegible] ಶ್ರೀ ಶಾಂತೇಶ್ವರ ದೇವಸ್ಥಾನದಲ್ಲಿ ಹರಿಜನರು [illegible] ಪ್ರವೇಶ ಮಾಡಿ, ಭಜನೆ, [illegible] ಮುಂತಾದವುಗಳನ್ನು ಮಾಡಿದರು [illegible] ಗಾಂಧಿ [illegible] ಶ್ರೀ [illegible]

[illegible] ಅಕ್ಕಿ [illegible] ಗೇರಸಪ್ಪೆ [illegible] ಅಕ್ಕಿಯ [illegible] ಅಕ್ಕಿಯನ್ನು [illegible] ಅಕ್ಕಿಯ [illegible] ಅಕ್ಕಿ [illegible] ಅಕ್ಕಿಯು [illegible] ಅಕ್ಕಿಯ [illegible] ಅಕ್ಕಿಯು ನಿಯಮಿತಕ್ಕೆ ಅನ್ನ "ಅಕ್ಕಿಗೆ ಚೀಟಿ" ಕೊಡಬೇಕು [illegible] ಜಿಲ್ಲಾಧಿಕಾರಿ [illegible] ಆಜ್ಞೆಯಲ್ಲಿ ಅಸ್ಪದವಿಟ್ಟು ಕೊಂಡದ್ದೇಕೋ ತಿಳಿಯದಂತಾಗಿದೆ ಕೆಲವರು ಈ ಬಗ್ಗೆ [illegible] ಅಕ್ಕಿಯ [illegible] ಬಣ್ಣಿಗೆ ಅಕ್ಕಿ [illegible] ರೂ ೨ ಮತ್ತು [illegible] ಅಕ್ಕಿಯು [illegible] ೧೪—೦೦ ಆಗಿದೆ

ಇತ್ತೀಚಿಗೆ ನಮ್ಮ ಜಿಲ್ಲೆಯ ಹಿಂದುಗಳಿಗೆ ಮುದ್ರಾಸ ಹಿಂದು ಕಾಯಿದೆ ಅನ್ವಯಿಸುತ್ತದೋ ಮುಂಬಯಿ (ಮಹಾರಾಷ್ಟ್ರ) ಹಿಂದು ಕಾಯಿದೆ ಅನ್ವಯಿಸುತ್ತದೋ ಎಂಬುದೊಂದು ವಿಚಿತ್ರ ಪ್ರಶ್ನೆಯುಂಟಾಗಿದ್ದು, ನ್ಯಾಯಾಸನಗಳ ಮುಂದೆ ಹಲವಾರು ದಾವೆಗಳು ಸಹ ನಡೆದಿವೆ ಯಷ್ಟೇ. ಈ ಸಮಸ್ಯೆಯನ್ನು ಕೊನೆಯಾಗಿ ಬಿಡಿಸುವ ಬಗ್ಗೆ ರಾ| ಗೋಕುಲಿಯವರು ಮುಂಬಯಿ [illegible] ಮೋಲ್ಲನೆಯಲ್ಲಿ, ಕಾನಡಾ ಜಿಲ್ಲೆಯ ಹಿಂದುಗಳಿಗೆ ವಿವಾಹ-ವಿಛೇದ, ವಾರಿಸಾ-ಹಕ್ಕು ಮೊದಲಾದವುಗಳ ಸಂಬಂಧದಲ್ಲಿ ಮುಂಬಯಿಯ ಕಾಯಿದೆಯನ್ನೇ ಅನ್ವಯಿಸತಕ್ಕದ್ದೆಂಬರ್ಥದ ಒಂದು ಮಸೂದೆಯನ್ನು ಮಂಡಿಸಿದ್ದಾರೆ

ಜಾಹೀರ ವಿನಂತಿ

ಬಳಕೂರ [illegible] ಮನೆ ಶ್ರೀ ವಿಷ್ಣುಮೂರ್ತಿ ದೇವರ ರಥೋತ್ಸವವು ಇದೇ ಸರ್ವಜಿತು ಸಂ ದ ಫಾಲ್ಗುಣ ಶು। [illegible], ಬುಧವಾರ (ತಾ ೧೭ ೩ ೧೯೪೮) ಜರುಗಲಿದೆ ಶ್ರೀ ದೇವರ ಭಜಕರೆಲ್ಲರೂ ಸದರ ಉತ್ಸವ ಕಾಲಕ್ಕೆ ಬಂದು ಶ್ರೀ ದೇವರ ಮಂಡಿಗೆ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿಯಿದೆ

ಬಳಕೂರ ತಾ ೪ ೩ ೧೯೪೮

ಅನಂತ ರಂಗ ನಾಯಕ,
ಅಧ್ಯಕ್ಷ ವ್ಯವಸ್ಥಾಪಕ ಮಂಡಳ

೧೯೪೬—೪೭ನೇ ಸಾಲಿನ [illegible] ಗೇಣಿಯನ್ನು [illegible] ಭೂಮಿಯು [illegible] ದಾವೆಗಳನ್ನು [illegible] ೧೯೪೮ರೊಳಗೆ [illegible] ಅನಂತರ ಬಂದ ದಾವೆಗಳನ್ನು ಸ್ವೀಕರಿಸಬಾರದಾಗಿ ಸರಕಾರದವರು [illegible] ಅಧಿಕಾರಿಗಳಿಗೆ ಹುಕುಮ [illegible] ಸುದ್ದಿಯುಂಟು [illegible]

ತಿರ್ದುಪಡಿ [illegible] ಸಮುದ್ರ ದಂಡೆಯ [illegible] ಪ್ರದೇಶ [illegible]

ಹೊನ್ನಾವರ— [illegible] ಶ್ರೀ [illegible] ದೇವರ [illegible] ಪೂಜೆ, [illegible] ಪೂಜೆ, [illegible] ಸಂಕಲ್ಪ ಮಾಡಿದ್ದಾರೆ [illegible]

ಶಿರಸಿ— [illegible] ಶಾಲಾ ಶಿಕ್ಷಕ ರಾ| ವೆಂಕಟರಮಣ ನಾಯಕ, ಇವರಿಗೆ [illegible] ಎಂಬುದು [illegible] ಈ ಶಿಕ್ಷಕರೇ [illegible] ಈ ಪಟೇಲರು [illegible]

ಜಾಹೀರನಾಮು.

ಹಳಿಯಾಳ ತಾಲೂಕ ಕಚೇರಿಯಿಂದ —

ಬೆಲ್ಲದ ಮಾರಾಟದ ಬಗ್ಗೆ ಟೆಂಡರುಗಳನ್ನು ಕರೆದ, ಈ ಕಚೇರಿಯಿಂದ ಹೊರಡಿಸಿದ ಜಾಹೀರನಾಮೆಯನ್ನು ಮುಂದರಿಸಿ ಯಾವತ್ತೂ ಜನರಿಗೆ ತಿಳಿಸುವದೇನಂದರೆ

ಈ ಕೆಳಗಿನ ಶರ್ತುಗಳಿಗೆ ಒಪ್ಪಿ ಟೆಂಡರ ಕೊಡುವವರು ಟೆಂಡರ ಕೊಡಬೇಕು —

(೧) ಮಾರಾಟವಾಗತಕ್ಕ ಬೆಲ್ಲ ತೂಕ ಮಾಡಿ [illegible] ಲಿಕ್ಕಿಲ್ಲ

(೨) ಟೆಂಡರುಗಳಲ್ಲಿ ಬೇರೆ ಬೇರೆ ತರಗತಿಯ ಎಷ್ಟೆಷ್ಟು ಪೆಂಟಿಗಳು ಬೇಕೆಂಬದನ್ನು ನಮೂದಿಸತಕ್ಕದ್ದು ಹೊರತು ಬಂಗಾಲಿ ಮಣಗಳಲ್ಲಿ ನಮೂದಿಸ ಕೂಡದು

(೩) ಮಾರಾಟವಾಗತಕ್ಕ ಬೆಲ್ಲವು ಈ ಕೆಳಗಿನಂತಿದೆ

ಸ್ಪೇಶಲ್ ತರಗತಿ	೨೮೩೭	ಪೆಂಟಿಗಳು
೧ನೇ ತರಗತಿ	೧೨೧೩೭	,,
೨ನೇ ತರಗತಿ	೪೨೮೩	,,

(೪) ೨೦೦ ಬಂಗಾಲಿ ಮಣಗಳ ಒಂದೊಂದು ಗುಂಪಿನಲ್ಲಿ, ಈ ಕೆಳಗಿನ ತೋಕ್ತಕದಲ್ಲಿ ಕಾಣಿಸಿದಂತೆ ಬೇರೆ ಬೇರೆ ತರಗತಿಯ ಪೆಂಟಿಗಳು ಇರುತ್ತವೆಂದು ತಿಳಿಯತಕ್ಕದ್ದು

ಸ್ಪೇಶಲ್ ತರಗತಿಯದು	೩೭೫ ಪೆಂಟಿ
೧ನೇ ತರಗತಿಯದು	೪೮೪ ,,
೨ನೇ ತರಗತಿಯದು	೪೦೪ ,,

(೫) ಪೆಂಟಿಗಳನ್ನು ಕೊಳ್ಳುವಾಗ ಇವು ಸಣ್ಣವು ಇವು ದೊಡ್ಡವು ಎಂದು ತಕರಾರು ಮಾಡತಕ್ಕದ್ದಲ್ಲ

(೬) ಯಾವದೇ ಕಾರಣ ತೋರಿಸದೆ ಟೆಂಡರಗಳನ್ನು ರದ್ದುಗೊಳಿಸುವ ಅಧಿಕಾರ ಕಾಯ್ದಿಡಲ್ಪಟ್ಟಿದೆ

ಯಾರಾದರೂ ಮೇಲೆ ಕಾಣಿಸಿದ ಶರ್ತುಗಳಿಗೆ ಒಪ್ಪದೆ ಈಗಾಗಲೇ ಟೆಂಡರು ಕೊಟ್ಟಿದ್ದು ಇದ್ದಲ್ಲಿ ಮೇಲೆ ಕಾಣಿಸಿದ ಶರ್ತುಗಳಿಗೆ ಒಪ್ಪಿ ಇನ್ನೊಮ್ಮೆ ಟೆಂಡರ ಕೊಡಲಿಕ್ಕೆ ಅಂಥವರಿಗೆ ಆಸ್ಪದ ಸಿಗುವಂತೆ ಟೆಂಡರು ಕಳಿಸುವ ಅವಧಿ ತಾ ೨೦ ೩ ೪೮ರ ವರೆಗೆ ಬೆಳೆಸಲ್ಪಟ್ಟಿದೆ

ಹಳಿಯಾಳ,
ತಾ [illegible] ೩ ೪೮

T S Mohite,
ಮಾಮಲೇದಾರ, ಹಳಿಯಾಳ

ಸುದ್ದಿಗಳ ಸಂದೂಕ.

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವಕ್ಕಾಗಲಿ ಪ್ರಜಾ ಭಾವನೆಗಳಿಗಾಗಲಿ ಬೆಲೆ ಇಷ್ಟು ಮಹತ್ವ ಸಿಗಲಿಕ್ಕಿಲ್ಲವೆಂಬುದು ಮುಂದಿನ ಎರಡು ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ (೧) ಪಾಕಿಸ್ತಾನದಲ್ಲಿ ಪೂರ್ವ ಬಂಗಾಲವು ನಿಕಟದ ಭಾಗವಷ್ಟೇ ಅಲ್ಲದೆ, ಅಲ್ಲಿಯ ಜನಸಂಖ್ಯೆ ಪಾಕಿಸ್ತಾನದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿದೆ ಅಲ್ಲಿಯ ಜನರ ಭಾಷೆ ಬಂಗಾಲಿ ಮುಸಲ್ಮಾನರು ಕೂಡ ಹೆಚ್ಚಾಗಿ ಅದನ್ನೇ ಬಳಸುತ್ತಾರೆ ಮೇಲಾಗಿ ಬಂಗಾಲಿ ಭಾಷೆಯು ಹಿಂದೀ ಭಾಷೆಗಿಂತಲೂ ಹೆಚ್ಚು ಸುಸಂಸ್ಕೃತ ಭಾಷೆಯಾಗಿರುತ್ತದೆ ಆದರೂ ಕಳೆದ ವಾರ ಕೂಡಿದ ಪಾಕಿಸ್ತಾನ ಘಟನಾ ಸಮಿತಿಯು ಇಂಗ್ಲಿಶ (!) ಮತ್ತು ಉರ್ದು ಎರಡೆ ಪಾಕಿಸ್ತಾನದ ರಾಜಭಾಷೆಗಳಿರುತ್ತವೆಂದು ನಿರ್ಣಯಿಸಿದೆ !! ಬಂಗಾಲಿಗೆ ರಾಜಮಾನ್ಯತೆಯನ್ನು ಕೊಡಲು ಘಟನಾ ಸಮಿತಿಯು ಒಪ್ಪಲಿಲ್ಲ ! (೨) ಬಲುಚಿಸ್ತಾನದಲ್ಲಿ ಜನರು ಆರಿಸಿದ ಕಾನೂನ ಮಂಡಳವಿರಲಾರದೆಂದೂ, ಪಾಕಿಸ್ತಾನದ ಗವ್ಹರ್ನರ ಜನರಲ್ಲರಿಗೆ ಅಲ್ಲಿಯ ಆಡಳಿತ ಸಂಬಂಧದಲ್ಲಿ ಸಲಹೆ ಕೊಡಲು ಸರಕಾರವೇ ಆರಿಸಿದ (!) ಲೋಕ ಪ್ರತಿನಿಧಿಗಳದೊಂದು ಸಲಹೆಗಾರ-ಸಮಿತಿ ನೇಮಿಸಲ್ಪಡುವದೆಂದೂ ಕಾಯದೆ ಆಝಮ ಜಿನ್ನಾರವರು ಸಾರಿದ್ದಾರೆ ಕಾನೂನ ಸಭೆಗಳು ವಾಚಾಳರ ಕೂಟಗಳೆಂದೂ ಅವುಗಳಿಂದ ಹೇಳತಕ್ಕ ಪ್ರಯೋಜನವಾಗುವದಿಲ್ಲೆಂದೂ ಜಿನ್ನಾರವರು ಈಗ ಹೊಸ ಶೋಧ ಮಾಡಿದ್ದಾರೆ

— ಭದ್ರತಾ ಮಂಡಳದ ಮುಂದಿನ ಕಾಶ್ಮೀರವಾದವು ಇನ್ನೂ ನಡೆದಿದೆ ಹಿಂದುಸ್ತಾನಕ್ಕೆ ಮರಳಿ ಬಂದಿದ್ದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ ವಗೈರೆ ಹಿಂದೀ ಶಿಷ್ಟರು ಸರಕಾರದೊಡನೆ ಆಲೋಚನೆ ಮಾಡಿ ಈಗ ಪುನಃ ಲೇಕ ಸಕ್ಸೆಸ್ಸಿಗೆ ಹೋಗಿದ್ದಾರೆ ಆದರೆ ಈ ಮಂಡಳದಿಂದ ಹಿಂದುಸ್ತಾನಕ್ಕೆ ನ್ಯಾಯ ಸಿಗುವ ಆಶೆ ಹಿಡಿಯಕೂಡದು ಹಿಂದುಸ್ತಾನದ ಮೇಲೆ ಆರ್ಥಿಕ, ವ್ಯಾಪಾರಿ ಮತ್ತು ರಾಜಕೀಯ ಒತ್ತಾಯ ತಂದು ಕಾಶ್ಮೀರವನ್ನು ಭಾರತದಿಂದ ಕಸಿದುಕೊಳ್ಳುವ ಒಳಸಂಚನ್ನು ಬ್ರಿಟಿಶ-ಅಮೇರಿಕೆಯವರು ನಡಿಸಿದ್ದಾರೆಂದು ಲಂಡನದಿಂದ " ಯುನೈಟೆಡ್ ಪ್ರೆಸ್ " ಸುದ್ದಿ-ಸಂಸ್ಥೆಯ ಪ್ರತಿನಿಧಿಯು ತಿಳಿಸುತ್ತಾನೆ ಪೂರ್ಣ ಕಾಶ್ಮೀರವನ್ನು ಕಸಿದುಕೊಳ್ಳಲು ಸಾಧ್ಯವಾಗದಿದ್ದರೆ ಅದರ ವಿಭಜನೆಗಾದರೂ (ಜಮ್ಮು ಸಂಸ್ಥಾನ ಭಾರತಕ್ಕೆ ಕೊಟ್ಟು, ಖುದ್ದ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೊಡುವ ಯೋಜನೆಗೆ) ಭಾರತದ " ಒತ್ತಾಯದ ರುಜು " ಕೊಳ್ಳುವ ಪ್ರಯತ್ನ ನಡೆಯುವದಾಗಿಯೂ ಆತ ಹೇಳುತ್ತಾನೆ ಕಾಶ್ಮೀರದ ಬದಲಿಗೆ ಪೂರ್ವ-ಬಂಗಾಲವನ್ನು ಹಿಂದುಸ್ತಾನಕ್ಕೆ ಕೊಡುವ ಆಮಿಷವನ್ನೂ ಅವರು ತೋರಿಸಬಹುದಂತೆ

—ಇದೇ ಕಳೆದ ಫೆಬ್ರುವರಿ ತಿಂಗಳಲ್ಲಿ ಪ್ರೌಢ ಮತದಾನ ಪದ್ಧತಿಯಿಂದ ಮುಂಬಯಿ ನಗರ ಸಭೆಯ ಹೊಸ ಸಾರ್ವತ್ರಿಕ ಚುನಾವಣೆಗಳಾದವು ಆಜಿಯ ಶುಕ್ರವಾರ ಅವುಗಳ ಫಲಿತಾಂಶ ಪ್ರಕಟವಾಯಿತು ೧೦೬ ಚುನಾಯಿತ ಸ್ಥಳಗಳಲ್ಲಿ ೯೪ ಸ್ಥಳಗಳಿಗೆ ಕೊಂಗ್ರೆಸ ಪಕ್ಷದವರು ತಮ್ಮ ಹುರಿಯಾಳುಗಳನ್ನು ನಿಲ್ಲಿಸಿದ್ದರು. ಅವರಲ್ಲಿ ಬರೇ ೪೭ ಮಂದಿ ಆರಿಸಿಬಂದಿದ್ದಾರೆ ಹಿಂದೆ ಈ ನಗರ ಸಭೆಯಲ್ಲಿ ಕೊಂಗ್ರೆಸ ಪಕ್ಷದ ೭೬ ಸದಸ್ಯರಿದ್ದರು, ಮತ್ತು ನಗರ ಸಭೆಯ ಕಾರಭಾರವು ಅವರ ತಂತ್ರದಿಂದಲೇ ನಡೆಯುತ್ತಿತ್ತು ಹೊಸ ನಗರ ಸಭೆಯಲ್ಲಿ ಕೊಂಗ್ರೆಸ ಪಕ್ಷ ಅತಿ ದೊಡ್ಡ ಪಕ್ಷವಾಗಿರುತ್ತಿದ್ದರೂ ಅದಕ್ಕೆ ಬಹುಮತವಿಲ್ಲ ೧೨೭ ಸದಸ್ಯರಲ್ಲಿ ೪೭ ಮಂದಿಯಷ್ಟೇ ಈ ಪಕ್ಷದವರಿರುತ್ತಾರೆ ಕೊಂಗ್ರೆಸ್ಸಿಗರ ಗೌರವ, ಪ್ರತಿಷ್ಠೆ ಮತ್ತು ಲೋಕಪ್ರಿಯತೆ ಹಿಂದಿನಷ್ಟು ಉಳಿದಿಲ್ಲೆಂಬುದಕ್ಕೆ ಇದೊಂದು ಉದಾಹರಣೆ

— ಪಾಕಿಸ್ತಾನದ ಹುಟ್ಟಿನ ಗುಟ್ಟನ್ನು (೧೯೩೭-೩೯ರ ಮುಂಬಯಿಯ ಕೊಂಗ್ರೆಸ ಮಂತ್ರಿಮಂಡಳದಲ್ಲಿದ್ದ) ಡಾ॥ ನೂರಿಯವರು ಮೊನ್ನೆ ಬೆಳಗಾಂವಿಯಲ್ಲಿ ಕೊಟ್ಟ ಒಂದು ಭಾಷಣದಲ್ಲಿ ರಟ್ಟು ಮಾಡಿದ್ದಾರೆ ಮುಸ್ಲಿಮ್ ಲೀಗಿನ ಹಟವಾಗಲಿ ಕೊಂಗ್ರೆಸ್ಸಿನ ಸಮ್ಮತಿಯಾಗಲಿ ಪಾಕಿಸ್ತಾನವನ್ನು ನಿರ್ಮಿಸಿಲ್ಲವೆಂದು ಅವರು ಹೇಳುತ್ತಾರೆ ಆಜಿಯ ವರ್ಷ ಯುಕ್ತ ರಾಷ್ಟ್ರಸಂಘದ ಸಭೆಗಳಿಗೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತ

(ಮುಂದೆ ೪ನೇ ಪುಟ ನೋಡಿರಿ)

ಸಿದ್ದಾಪುರ ತಾಲೂಕಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು)

ಸನ್ ೧೯೪೭ನೇ ಇಸವಿಯ ಮುಂಬಯಿಯ ಒಕ್ಕಲತನದ ಕಾನೂನ ನಿಯಮದಲ್ಲಿಯ ನಿಯಮದಿಂದ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಹೆಯೊಳಗಿನ ಸಿದ್ದಾಪುರ ತಾಲೂಕಾ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ನೆಯ ಸ್ತಂಭದಲ್ಲಿ ತೋರಿಸಿರುವ ಸ್ಥಾನಿಕ ಕ್ಷೇತ್ರಗಳೊಳಗಿನ **ನೀರಾವರಿಯಲ್ಲದ ತರಿ** ಭೂಮಿಗಳಲ್ಲಿ, ೧೯೪೭-೪೮ನೇ ಸಾಲಿನಲ್ಲಿ, ೨ನೆಯ ಸ್ತಂಭದಲ್ಲಿ ತೋರಿಸಿದಷ್ಟು ಪ್ರತಿ ಎಕರೆಗೆ ಸರಾಸರಿ **ಭತ್ತದ ಬೆಳೆ** ಬಂದಿರುತ್ತದೆಂದು ಈ ಮೂಲಕ ಘೋಷಿಸುತ್ತಾರೆ (ಒಂದು ಚೀಲ ಎಂದರೆ ಕಳೆ ಹೊಡೆದು ಅಳೆದ ೩೨ ಪಾಯಲಿಗಳು)

ಪರಿಶಿಷ್ಟ.

	ಅನುಕ್ರಮಾಂಕ ಮತ್ತು **ಸ್ಥಾನಿಕ ಕ್ಷೇತ್ರ** (೧)	**೧ ಎಕರೆಗೆ ಸರಾಸರಿ ಭತ್ತದ ಬೆಳೆ** (೨)
I—	ಗಿಡಗದ್ದೆ, ಸಟ್ಟೀಕೆ, ಮಳೇಗೈ, ಅಡಕಳ್ಳಿ, ತಗ್ಗಿನಬಳಗಾರ, ಮುತ್ತಿಮುರ್ಡ, ಬಿಲಗಾರ, ಹಳೆ ಗ್ರಾಂ ಹಸರಗೋಡ, ಬಣ್ಣಗಿ, ಕೋಡ್ಸರ (ಹಾಲ್ಗಣೆ), ಕರಜಗಿ, ವಾಲೇಸರ, ಸೀಮಾಮನೆ, ಹಿರೇಕೈ (ಹಾಲ್ಗಣೆ), ಹಾಲಕಣಿ, ಗುಂಡಗಾಡ್ಡೆ, ದಂಗಾಲಮಂಡ, ಗುಂಜಗೋಡು, ತ್ಯಾಗರಿ, ಕಲ್ಲಗದ್ದೆ, ಬಾಳೇಕ್ಯಾ, ಸಲ್ಲಕಟ್ಟೆ (ಮುಕ್ತಿಕೊಪ್ಪ), ಹೊಸಕೊಪ್ಪ, ಮಾಲೋಬಳ್ಳಾರ, (೨೫ ಗ್ರಾಮಗಳು)	೧೨ ಚೀಲ
II	ಅರಹಳ್ಳಾ, ದೇವಿಸರ, ಮದನಕಾಲ, ಕಾನಗೋಡ-ಕಾನಸೂರ, ತಾರೇಹಳ್ಳಿ ಕಾನಸೂರ, ಹಳದೋಟ, ಶಿಂಗೇಹಳ್ಳಿ, ಕೀಲೂರ, ಕಲಗದ್ದೆ (೯ ಗ್ರಾಮಗಳು)	೧೪ ಚೀಲ
III	ಮಡಳ್ಳಿ, ಸುಗಿಬಾಕ್ಯ, ಕಾಳೇನಳ್ಳಿ, ಹಿರೇಕೈ, ಮತ್ತಿಹಳ್ಳಾ, ಕೋಡ್ಸರ (ಮುಟ್ಟಳ್ಳಿ), ಮುಟ್ಟಳ್ಳಿ, ಹಾರ್ಶಿಕಟ್ಟಾ, ಭಂಡಾರಕೇರಿ, ಮಾಣಿಕಮನೆ, ಮಾತಗಾರ (ಮುಟ್ಟಳ್ಳಿ), ಸುಪಗೋಡ (೧೨ ಗ್ರಾಮಗಳು)	೧೪ ಚೀಲ
IV	ತುಂಬರಗೋಡ, ಹೆಗ್ಗೋಡಮನೆ, ನೀಡಗೋಡ, ಮೊಂಡ್ಲಕೊಪ್ಪ, ಬಂದೀಸರ, ಉಪ್ಪಡಿ, ಮಲಗುಡೊಪ್ಪ, ಕಸ್ತೂರ, ಹಡಗೇರಿ, ಬಳ್ಳಟ್ಟೆ (೧೦ ಗ್ರಾಮಗಳು)	೧೦॥ ಚೀಲ
V—	ಕುಣಜಿ, ಕೋಲಶಿರ್ಸಿ, ಬಳಗುಳಿ, ಅವರೆಗುಪ್ಪಾ, ಬಾಳಿಕೊಪ್ಪ, ಹೊಸೂರ, ತ್ಯಾರ್ಸಿ, ವಾಡಕಣ, ಕೊಂಡ್ಲಿ, ಹಣಜಿಬೈಲ, ಕೊಳಗಿ, ಶಿರಳಗಿ, ಕಾನಗೋಡ, ಐಗೋಡ (೧೪ ಗ್ರಾಮಗಳು)	೧೪ ಚೀಲ ೨೦ ಪ್ಯಾಲಿ
VI—	ಗುಡೇಕೊಪ್ಪ, ಹಡವಣಬೈಲ, ನಾರಭಾವಿ, ಹಲಗೇರಿ, ಹುಸೂರ, ಹುಲೇಕೊಪ್ಪ, ಮತ್ತೀಗಾರ, ಅರೆಂದೂರ, ಕಾಂವಚೂರ, ಅಕ್ಕುಂಜಿ, ಮುಗಮೂರ, ಧಕ್ಕಳಸೆ, ಬಾಳೇಕೊಪ್ಪ (ಶಿರಳಗಿ) (೧೩ ಗ್ರಾಮಗಳು)	೯॥ ಚೀಲ
VII—	ಕಿಲಾರ, ಮೆಣಸಿ, ಮಲಸವಳ್ಳಿ, ಕೊರ್ಲಕೈ, ಮುಸವಳ್ಳಿ, ಮನ್ಮನೆ, ಮಲವಳ್ಳಿ, ಹೆಗ್ಗೆಕೊಪ್ಪ, ಕಲ್ಲೂರ (೯ ಗ್ರಾಮಗಳು)	೧೦॥ ಚೀಲ
VIII—	ಸುಳಲವಳ್ಳಿ, ಹಸವಂತೆ, ಮುಗಡಿಕೊಪ್ಪ, ನೆಜ್ಜೂರ (೪ ಗ್ರಾಮಗಳು)	೧೦ ಚೀಲ
IX—	ಕೋಡಕಣಿ, ಹೆಜನಿ, ಮಲೆಮನೆ (೩ ಗ್ರಾಮಗಳು)	೧೨ ಚೀಲ
X—	ಕುಳಿಬೀಡು, ಕುಡಗುಂಡ, ಹೇಮಗಾರ, ಚಂದ್ರಘಟಗಿ, ಅಳಗೋಡ, ಗುಂಜಗೋಡ, ಮುತ್ತಿ, ತಾರಗೋಡ, ಆಳವಳ್ಳಿ, ಹುಕಳಿ, ಸುತ್ಲಮನೆ, ಮುಸಳೆಮಕ್ಕಿ, ವಾಜಗೋಡ, ಕೆರೆಮನೆ (೧೪ ಗ್ರಾಮಗಳು)	೧೦ ಚೀಲ
XI—	ಕೆಳಗಿನಮನೆ, ಸಂಗೊಳ್ಳಿಮನೆ, ಇಟಗಿ, ಸಶಿಗುಳಿ ಕ್ಯಾದಗಿ (೫ ಗ್ರಾಮಗಳು)	೧೪ ಚೀಲ
XII—	ಇಳ್ಳಿಮನೆ, ಗುಬಗೋಡ, ಬೇಗಾರ, ಬಾಳಗೋಡ, ಲಕ್ಕಟ್ಟೆಕೇರಿ, ಕಿಬಳೆ ಕಲ್ಲಕೈ (೭ ಗ್ರಾಮಗಳು)	೧೨ ಚೀಲ
XIII	ಕಡಪಟಿ, ದೊಡ್ಡಮನೆ, ಬಳಗಾರ, ಉಪ್ಪಿನಗದ್ದೆ, ಗಜಗಿಕೆ, ಕಲ್ಲೂಳಿ, ನೇಗಾರ, ಹೊನ್ನೆಕೊಂಬು, ಹಾದ್ರಿಮನೆ (೯ ಗ್ರಾಮಗಳು)	೧೦ ಚೀಲ
XIV—	ಕೋಡಿಗದ್ದೆ, ನಿರಗೋಡ, ಕಂಸಲೆ, ಕುಡಗೋಡ, ಹೆಳಗುಬ್ಬಿ, ವಾನಮಾವ, ತಲೆಕೇರಿ (೭ ಗ್ರಾಮಗಳು)	೬ ಚೀಲ
XV	ಮಾವಿನಕೋಡ, ಹೂವಿನಮನೆ, ಚಪ್ಪರಮನೆ, ನೀರಗಾರ, ಪ್ರೋಡಗಾರ, ಸೊಂವಿನಕೊಪ್ಪ, ಹಾವಿನಬೀಳ, ತಾರಖಂಡ, ಗೋಂದ್ಲಬೀಳ, ಕರ್ಕಿಸವಲ, ಹೊಸ್ತೋಟ, ಹಾರ್ಶಿಮನೆ, ಹೀನಗಾರ, ವಾಲಿಗಾರ, ಕವಲಕೊಪ್ಪ, ಗೋಳಗೋಡ, ಮುತ್ತಿ (ಗೋಳಗೋಡ), ಬಿಪ್ರಕಾನ, ಕಪ್ಪಗಾರ, ಕೊಡಗಿಬೈಲ, ಹೆಗ್ಗದ್ದೆ, ಹೆನುಟೆಮನೆ, ಮಹೇಗಾರ, ಭಾನಕುಳಿ, ಹೊಸಮಂಜು, ಒಳಗಿ, ಕುರವಂತೆ, ಗೋಳಿಕೈ, ಕೂಟ್ಟಿಕೈ (೨೯ ಗ್ರಾಮಗಳು)	೧೨ ಚೀಲ
XVI	ಮುಕಳಿ (ಶಿವಳಮನೆ) ತಂಪಾಗುಂಡಿ, ಹಂದ್ಯಾನಪುರ, ಶಿವಳಮನೆ, ಹಳೇಹಳ್ಳ ಹೆಗ್ಗೆ, ಉಂಚಳ್ಳಿ ಹೊಸತೋಟ, ವಾಳೇಕೊಪ್ಪ, ಹರಿಗಾರ (೧೦ ಗ್ರಾಮಗಳು)	೧೩॥ ಚೀಲ
XVII—	ಹೆಗ್ಗರಣೆ, ಹುತ್ತಗಾರ (ಶಿವಳಮನೆ), ನಂದ್ಯಾನೆ, ನಿಲಕುಂದ, ಮುಳಗುಂದ, ಹಳ್ಳಿಬೈಲ, ಕಂಚಿಕೈ, ಹುಲ್ಲುಂಡೆ, ತಾರೀಸರ, ಐನಬೈಲ, ಹೆಗನೂರ, ಕಿಬ್ಬಳ್ಳಿ, ಆಕಬೈಲ, ಮುಠೂರ (೧೪ ಗ್ರಾಮಗಳು)	೧೩॥ ಚೀಲ
XVIII—	ಮನಗಾರ, ಶೀರಗಾನ, ಬಿಪ್ರಮನೆ, ಉಂಬಳಮನೆ, ಮೇಲಿನ ಸಕರ್ಲಿ, ಕೆಳಗಿನ ಸಕರ್ಲಿ, ಕೆರೆಗದ್ದೆ, ಅತ್ತಿಮುರ್ಡ (೮ ಗ್ರಾಮಗಳು)	೧೨। ಚೀಲ

ಸಿದ್ದಾಪುರ,
ತಾ ೩ ೧ ೧೯೪೮

P V JOSHI,
ಮಾಮಲೇದಾರ ಸಿದ್ದಾಪುರ

ಾ ಅವರ ಸಹಕಾರಿಗಳಾಗಿದ್ದ ಶ್ರೀ ಕೃಷ್ಣ ಮೆನನ್ನರು ಸಂಯುಕ್ತ ರಾಷ್ಟ್ರಸಂಘದ ಅಧಿವೇಶನ ನಡೆದಿದ್ದಾಗ ಮೇಲಿಂದ ಮೇಲೆ ರುಶ್ಯ ಪ್ರತಿನಿಧಿಗಳನ್ನು ಕಾಣುತ್ತಿದ್ದರು (ಅವರೊಳಗೆ ಅಂತರಂಗವೇನೂ ಇದ್ದಿಲ್ಲ ತನ್ನ ನೆರೆಯ ಮಹಾ-ರಾಷ್ಟ್ರವಾದ ರಶಿಯದೊಡನೆ ಭಾರತವು ಸ್ನೇಹದಿಂದಲೂ ಸಂಬಂಧವಿಟ್ಟುಕೊಂಡಲೂ ಇರುವದೆಂದೂ ರುಶ್ಯರ "ಬೊಲ್ಶೆವಿಝಮ್" ದ ಭೂತಕ್ಕೆ ಬೆದರಿ ಭಾರತವು ಅವರೊಡನೆ ಸಂಶಯದ ಇಲ್ಲವೆ ತಿರಸ್ಕಾರದೃಷ್ಟಿಯಿಂದ ವರ್ತಿಸಲಿಕ್ಕಿಲ್ಲೆಂದೂ ಸೂಚಿಸಲು ಮತ್ತು ಭಾರತಕ್ಕೆ ನ್ಯಾಯ ದೊರಕಿಸಲು ರುಶ್ಯರು ಸಹಾಯ ಮಾಡಬೇಕೆಂದು ಬಿನ್ನವಿಸಲು ಈ ಭೆಟ್ಟಿಗಳಿರುತ್ತಿದ್ದವು) ಅಮೇರಿಕೆಯವರಿಗೆ ಈ ಭೆಟ್ಟಿಗಳೂ ವಿಚಿತ್ರವೂ ರುಚಿಸಲಿಲ್ಲ! ಪೂರ್ಣ ಸ್ವತಂತ್ರರಾಗುವ ಮೊದಲೇ ಭಾರತೀಯರು ಈ ರೀತಿ ರುಶ್ಯ ರಾಜಕಾರಣಿಗಳೊಡನೆ ಪಟ್ಟ ಸ್ನೇಹದಿಂದ ಇರಹತ್ತಿದರೆ, ಪೂರ್ಣ ಸ್ವತಂತ್ರರಾದ ಮೇಲೆ ಭಾರತವು ರುಶ್ಯರ ತಂತ್ರದಿಂದ ನಡೆಯುವದೆಂಬ ಅಂಜಿಕೆ ಅಮೇರಿಕೆಯ ಮುತ್ಸದ್ದಿಗಳಿಗೂ ರಾಜಕಾರಣಿಗಳಿಗೂ ಉಂಟಾಯಿತು! ಕಾಶ್ಮೀರದ ಉತ್ತರಕ್ಕೆ ಹಿಂದುಸ್ತಾನ ಮತ್ತು ರುಶ್ಯ ದೇಶ ಹೊಂದಿಕೊಂಡಿವೆ ಆದರಿಂದ ಭಾವೀ ಯುದ್ಧದಲ್ಲಿ ಹಿಂದುಸ್ತಾನವು ರುಶ್ಯರನ್ನು ಕೂಡಿಕೊಂಡರೆ ಇಲ್ಲವೆ ರುಶ್ಯರಿಗೆ ಸಹಾಯ ಮಾಡಿದರೆ ಪರಮ ಕಷ್ಟವಾಗುವದೆಂಬ ಭೀತಿಯೂ ಅಮೇರಿಕೆಯವರಿಗೆ ಉಂಟಾಯಿತು. ಆದರಿಂದ ಅವರು ಹಿಂದುಸ್ತಾನಕ್ಕೂ ರುಶ್ಯ ದೇಶಕ್ಕೂ ನಡುವೆ ಒಂದು ಭದ್ರ ಗೋಡೆ ಹಾಕಿ ರುಶ್ಯ ಭಾರತಗಳೊಳಗಿನ ನಿಕಟ ಸಂಬಂಧವನ್ನು ತಪ್ಪಿಸುವದಕ್ಕಾಗಿ ಪಾಕಿಸ್ತಾನ ನಿರ್ಮಿತಿಯ ಸೂಚನೆಯನ್ನು ಬಲವಾಗಿ ಎತ್ತಿಹಿಡಿದರಂದೂ ಬ್ರಿಟಿಶರು ಅಮೇರಿಕೆಯ ನಿಗ್ರಹದ ಆಗ್ರಹಕ್ಕಾಗಿ ಪಾಕಿಸ್ತಾನ ರಚನೆಯನ್ನು ಮಾಡಬೇಕಾಯಿತೆಂದೂ ಬೆನೂರಿಯವರು ಹೇಳುತ್ತಾರೆ ಬ್ರಿಟಿಶ ವಿದೇಶ ಸಚಿವರಾದ ಮಿ ಬೆವಿನ್, ಹಿಂದದ ಹಿಂದಿನ ಸರ್ವಾಧಿಪತಿ ವೆವ್ಹೆಲ ದೊರೆಗಳು, ಸದ್ಯದ ಗವ್ಹರ್ನರ ಜನರಲ್ ಮೌಂಟಬೆಟನ್ನ ದೊರೆಗಳು ಮತ್ತು ಯುದ್ಧಕಾಲದಲ್ಲೂ ರಾಷ್ಟ್ರವಿಭಜನೆಯ ಕಾಲದಲ್ಲೂ ಹಿಂದುಸ್ತಾನದ ಸರ್ವಸೇನಾಪತಿಗಳಾಗಿದ್ದ ಸರ್ ಕ್ಲೋಡ ಅಚಿನಲೆಕ್ಕ ಇವರೆಲ್ಲ ಪಾಕಿಸ್ತಾನ ನಿರ್ಮಿತಿಗೆ ವಿರುದ್ಧರಿದ್ದರಂತೆ ಆದರೂ ಬ್ರಿಟಿಶ ಸರಕಾರವು ಅಮೇರಿಕೆಯ ಒತ್ತಾಯಕ್ಕೆ ತಲೆ ಬಗಿಸಿ ಹಿಂದ ರಾಷ್ಟ್ರವನ್ನು ಇಬ್ಭಾಗಗೊಳಿಸುವ ನಿರ್ಣಯ ಕೈಕೊಂಡಿತು. ಇದೀಗ ಭದ್ರತಾಮಂಡಳದಲ್ಲಿ ಅಮೇರಿಕೆಯ ಪ್ರತಿನಿಧಿಯು ಹಾಗೂ ಅಮೇರಿಕೆಯ ತಂತ್ರದಿಂದ ನಡೆಯುತ್ತಿರುವ ಬ್ರಿಟಿಶ ಪ್ರಭೃತಿಗಳು ಕಾಶ್ಮೀರ ಸಂಸ್ಥಾನವನ್ನು ಹಾಗೂ ಹೀಗೂ ಪಾಕಿಸ್ತಾನಕ್ಕೆ ಒಪ್ಪಿಸಲು ಪ್ರಯತ್ನಿಸುತ್ತಿರುವದಾದರೂ ರುಶ್ಯ-ಭಾರತಗಳನ್ನು ಪೃಥಕ್ ಪೃಥಕ್ ಇಡುವ ಸಲುವಾಗಿಯೇ ಇರುತ್ತದೆ!

— ಪಾಕಿಸ್ತಾನದಲ್ಲಿ ಪುಂಡರ ಹಾವಳಿಯು ಹ್ಯಾಗಿದೆಯೆಂಬುದನ್ನು ಇನ್ನೊಂದು ಸಭೆಯಲ್ಲಿ ಬೆ॥ ನೂರಿಯವರು ವಿವರಿಸಿದರು ಅವರ ಗೆಳೆಯನೊಬ್ಬನು ರಾವಳಪಿಂಡಿಯಲ್ಲಿದ್ದನಂತೆ ಆವನು ಆ ಹಾವಳಿ ಸಹಿಸಲಾಗದೆ ಅಲ್ಲಿಂದ ಹೇಗಾದರೂ ಜಾರಿ ಹಿಂದುಸ್ತಾನಕ್ಕೆ ಬಂದಿದ್ದಾನೆ ಆ ಗೆಳೆಯನು ಹೇಳಿದ ಕಥೆಯನ್ನೇ ಎತ್ತಿ ಬೆ॥ ನೂರಿಯವರು ಈ ವಿವರಣೆಯನ್ನು ಮಾಡಿರುತ್ತಾರೆ ಯಾರೊಬ್ಬ ಗೃಹಸ್ಥನು ತನ್ನ ಮೋಟಾರ ಬಂಡಿಯಲ್ಲಿ ಹೋಗುತ್ತಿರುವಾಗ ಈ ಪುಂಡರು ಬಂದು, ಎಲೋ ನಮಗೆ ಮೊದಲು ನಿನ್ನ ಬಂಡಿಯಲ್ಲಿ ಇಂಥಲ್ಲಿಗೆ ಮುಟ್ಟಿಸು ಆ ಮೇಲೆ ನೀನು ಬೇಕಾದಲ್ಲಿ ಹೋಗಬಹುದು, ಎಂದು ಮುಂತಾಗಿ ತಮ್ಮ ಕೈಯಲ್ಲಿದ್ದ ತುಬಾಕಿಯನ್ನು ಮೋಟರದಲ್ಲಿದ್ದ ಆ ಗೃಹಸ್ಥನ ಎದೆಗೆ ಗುರಿಯಿಟ್ಟು ಹಿಡಿದು ಬೆದರಿಸುತ್ತಾರಂತೆ ಪುಂಡರ ಮಾತಿನಂತೆ ನಡೆದರೆ ಆ ಗೃಹಸ್ಥನ ಬಾಳುವೆ ನೆಟ್ಟಗಾಯಿತು! ಇಲ್ಲದಿದ್ದರೆ ಅವನ ಬದುಕು ಮುಗಿಯಿತೆಂದೇ ಹೇಳಬೇಕು!! ಯಾವನೊಬ್ಬನ ಮೈಮೇಲೆ ಚಲೋ ಕೋಟು ಕಂಡರೆ ಅದನ್ನು ಈ ಪುಂಡರು ಕಸಿದುಕೊಳ್ಳುತ್ತಾರಂತೆ! ಬೆಳ್ಳಿ ಬಂಗಾರ ದೃಷ್ಟಿಗೆ ಬಿದ್ದರಂತೂ ತೀರಿತು! ಅದನ್ನು ಈ ಪುಂಡರು ಎಂದೂ ಬಿಟ್ಟು ಹೋಗುವಂತಿಲ್ಲ! ನೂರರ ಈ ಪೀಡೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿಯೇ ಹೆಚ್ಚಾಗಿ ಪಾಕಿಸ್ತಾನ ಅಧಿಕಾರಿಗಳು ಅವರಿಗೆ ಕಾಶ್ಮೀರದ ಪ್ರಲೋಭನ ತೋರಿಸಿ, ಕಾಶ್ಮೀರದ ಮೇಲೆ ದಾಳಿ ಮಾಡಲು ಕಳಿಸಿಕೊಟ್ಟಿರುತ್ತಾರೆಂದು ಬೆ ನೂರಿಯವರ ಮಿತ್ರರು ಹೇಳುತ್ತಾರಂತೆ ಒಮ್ಮೆ ಕಾಶ್ಮೀರ ಪ್ರಕರಣ ಮುಗಿದು ಅಲ್ಲಿಂದ ಮರಳುವ ಪ್ರಸಂಗ ಬಂದರೆ ಮುಂದೆ ಈ ಪುಂಡರು ಪಾಕಿಸ್ತಾನದಲ್ಲಿ ತಮ್ಮ ತಾಂಡವನೃತ್ಯ ಬಿಡಲಿಕ್ಕಿಲ್ಲೆಂದೂ ಅವರ ಮತವುಂಟು

ಬಾದಾಮಿ ತಾಲೂಕಿನ (ವಿಜಾಪುರ ಜಿಲ್ಹೆ) ಮಾಳಗಿ ಎಂಬ ಹಳ್ಳಿಯಲ್ಲೂ ಅದರ ಸುತ್ತುಮುತ್ತಲಿನ ಹಳ್ಳಿಗಳಲ್ಲೂ ೪ ೬ ವರ್ಷಗಳಿಂದ ಚಳಿಜ್ವರದ ಹಾವಳಿ ಭಯಂಕರವಾಗಿದೆ ಮಾಲಗಿಯಲ್ಲಿ ೧೯೨೧ರ ಜನ ಗಣತಿಯಂತೆ ೬೫೦ ಜನರಿದ್ದರು ಇಂದು ಬರೆ ೩೦೦ ಮಂದಿಯಿದ್ದಾರೆ! ಬಹುತೇಕ ಜನರು ರಕ್ತಕ್ಷಯ ಮಲೇರಿಯಾ ವಿಕಾರ ಮೊದಲಾದ ಬೇನೆಗಳಿಂದ ಬಳಲುತ್ತಿದ್ದಾರೆ ಜನರು ನಿಶಕ್ತರಾದ ಪರಿಣಾಮವಾಗಿ ಕಳೆದ ೬ ವರ್ಷಗಳಲ್ಲಿ ಈ ಹಳ್ಳಿಯಲ್ಲಿ ಒಂದೇ ಒಂದು ಜನನವಾಗಿರುತ್ತದೆ! ರೈತರು ಅಶಕ್ತರಾಗಿರುವದರಿಂದ ಎಷ್ಟೋ ಭೂಮಿಗಳು ಕೂಡ ಬಂಜರ ಬಿದ್ದಿವೆ ಹಳ್ಳಿಯ ಈ ದುಃಸ್ಥಿತಿ ಸುಧಾರಿಸಲು ಏನಾದರೊಂದು ಉಪಾಯ ಯೋಜನೆ ಮಾಡಿರೆಂದು ಜನರು ಸರಕಾರಕ್ಕೂ ಸರಕಾರಿ ಅಧಿಕಾರಿಗಳಿಗೂ ಬಿನ್ನವಿಸಿ ಬೇಸತ್ತರು ಆದರೆ ಯಾರೂ ಕಿವಿಗೊಡಲಿಲ್ಲವಂತೆ

ಹೊನ್ನಾವರ ತಾಲೂಕಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು)

ನಂ ರವಿ೩— ೧೯೪೭ನೇ ಇಸವಿಯ ಒಕ್ಕಲತನದ ಕಾನೂನಿನ ನಿಯಮಾವಳಿಯ ೧೦ನೇ ನಿಯಮದನ್ವಯ ಕಾನಡಾ ಜಿಲ್ಹೆಯೊಳಗಿನ ಹೊನ್ನಾವರ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ತೋರಿಸಿದ ಪ್ರದೇಶಗಳಲ್ಲಿರುವ ನೀರಾವರಿಯಲ್ಲದ ತರಿ, ಗಜನಿ ಮತ್ತು ಮಕ್ಕಿ (ಹುಲ್ಲು) ಭೂಮಿಗಳಲ್ಲಿ, ೩ನೆಯ ಸ್ತಂಭದಲ್ಲಿ ತೋರಿಸಿದಷ್ಟು ಕನಿಷ್ಠ ಭತ್ತದ ಬೆಳೆ ಹುಟ್ಟಿರುತ್ತದಾಗಿ ಈ ಮೂಲಕ ಜಾಹೀರಮಾಡುತ್ತಾರೆ

ಪರಿಶಿಷ್ಟ

ಅನುಕ್ರಮಾಂಕ	ಸ್ಥಾನಿಕ ಪ್ರದೇಶ	ಎಕರೆ ೧ಕ್ಕೆ ಕನಿಷ್ಠ ಭತ್ತದ ಬೆಳೆ (ಬಂಗಾಲಿ ಮಣಗಳಲ್ಲಿ) ತರಿ	ಗಜನಿ	ಮಕ್ಕಿ
(೧)	(೨)	(೩)		
	ಗ್ರೂಪ I			
೧	ಹಳದೀಪುರ ಹೊನ್ನಾವರ ಕರ್ಕಿ, ಪ.ಮನಕುರ್ವೆ	೩೦	೨೪	೨೪
೨	ಮಾವಿನಕುರ್ವೆ ಮಂಡಲಕುರ್ವೆ, ಮುಗ್ವ, ನಗರೆ, ಅರೆಅಂಗಡಿ— ಮುಂಡಗೋಡ, ಚೇರೊಳ್ಳಿ, ಹೊಸಾಡ ಕುಳಕೋಡ, ಪಡಕಲ	೨೩	—	೨೬
೩	ಮಂಕಿ ಗುಣವಂತೆ, ಹೊಸಪಟ್ಟಣ, ಕಡತೋಕಾ, ಕಾಸರಕೋಡ, ಕೆಳಗಿನೂರ, ಕೆಳಗಿನ ಇಡಗುಂಜಿ, ಮೇಲಿನಕೋಡ, ಮಾಗೋಡ ಅಪ್ಸರಕೊಂಡ	೩೦	೧೬	೧೬
	ಗ್ರೂಪ II.			
೪	ಅಣಿಲಗೋಡ, ಬಳಕೂರ, ಚೇರಂಕಿ, ಹೆಗ್ಗಾರ, ಹಿನ್ನೂರ, ಕೆಳಗಿನ ಮಣ್ಣಿಗೆ, ಮೇಲಿನ ಇಡಗುಂಜಿ	೨೪	೧೨½	—
೫	ಕೆರೆಕೋಣ, ದುಗ್ಗೂರ ಹೊನಾಕುಂ, ಕಡ್ಲೆ, ಕಾಕುರ್ವೆ, ಕೆಕ್ಕಾರ, ಮೂಡಗೇರಿ, ನವಿಲಗೋಣ, ಹಂದೂರ	೨೪	೨೫	—
೬	ಜಲವಳ್ಳಿ, ಹಡಿನಬಾಳ, ಜಲವಳಕರ್ಕಿ, ಕವಾರ, ಕೆಳಗಿನ ಮೂಡಕಣಿ, ಕೆರವಳ್ಳಿ, ಕಡ್ಲೆ, ನಿರವತ್ತಿಕೊಡ್ಲ	೩೦	೧೩	—
	ಗ್ರೂಪ III			
೭	ಕೊಡಾಣಿ, ಅಡಕಾರ, ಬರನಗೋಡ, ಹೇರಂಗಡಿ, ಮೇಲಿನ ಮಣ್ಣಿಗೆ, ಮೇಲಿನ ಮೂಡಕಣಿ, ಕಾಸರಬೇಳ, ಕಲಗೋಡ, ಕುಂದಬೀಳ, ಉಪ್ಪೋಣಿ	೩೧½	—	—
೮	ಚಂದಾವರ ಅಂಶಕ್ಕೆ ಮಾಲ್ಕಾಪುರ, ನೀಲಕೋಡ, ಸಾಲಕೋಡ	೩	೨೨	—
೯	ಚಿಕ್ಕನಕೋಡ, ಗುಂಡಬಾಳ, ಮುಟ್ಟಾ	೨೩½	—	—
	ಗ್ರೂಪ IV			
೧೦	ಕೋಟೆ, ಅಡುಕಳ, ಬಿಟ್ಟವೇಡ, ಗುಂಡಿಮಕ್ಕಿ, ಹೊಂಬಳಿ, ಹೊಂಡರೆ	೧೩½	೧೪	—
೧೧	ಕುದ್ರಿಗೆ, ಹುಕ್ಕೇರಿ ಮಾಗೋಡ, ಹುಡಿಮ, ನಗರಬಸ್ತಿಕೇರಿ, ಸರಳಗಿ	೨೩	೧೬	—
	ಗ್ರೂಪ V			
೧೨	ಖಾಂಬೊಳ್ಳಿ, ಬಾಳೆಮೇಟಿ, ಹಡಿಲ್ ಕೊಡಚಾದ್ರಿ ಸಂಶೊಳ್ಳಿ, ಶಿರಕೂರ, ಹನೇಹಳ್ಳಿ-ಕಟ್ಟಿನ ಹಕ್ಕಲ	೨೦	೯೪	—
೧೩	ಹೊದ್ಕೆ ಶಿರೂರ, ಕೆಳಗೇರಿ	೨೦	೧೨	—
	ಗ್ರೂಪ VI			
೧೪	ಹಾಡಗೇರಿ, ಜನ್ನಕಡಕಲ್ಲ, ಅಡ್ಕಳ, ಆಕಿನ, ಚಗೋಡಿ, ಮಂಕಿಕೋಡಿ, ಹಿರೇಬೈಲ, ಹೊಸಗೋಡ	೨೨	—	—

ಹೊನ್ನಾವರ,
ತಾ ೨೦-೨-೧೯೪೮

G. S BETIGERI,
ಮಾಮಲೇದಾರ, ಹೊನ್ನಾವರ

BUY

OR

SELL

"UNITED KARNATAK"
POLICIES

For particulars apply to:

Manager,
PRINCIPAL AGENCY OFFICE,
Post Box No 10,
UDIPI, S Kanara

ಮಾಂಗಿ ಹಳ್ಳಿ ತಗ್ಗಿನಲ್ಲಿರುವದರಿಂದ ಪಿನ್ನ ಪಿನ್ನ ಹತ್ತಿರದ ಚಳಿಜ್ವರ ಮುಂತಾದ ಪಿಡುಗುಗಳು ಅದನ್ನು ಬಿಡಲಿಕ್ಕಿಲ್ಲವೆಂದು, ಗ್ರಾಮದವರು ಸಮೀಪದಲ್ಲಿರುವ ವಿಶಾಲವಾದ ಎತ್ತರಗಟ್ಟು (ದಿಣ್ಣೆ) ಪ್ರದೇಶದಲ್ಲಿ ವಸತಿ ನಿರ್ಮಿಸುವದು ಹಿತಕರವೆಂದೂ ತಿಳಿದರು (ಬಹು ಗಿಬ್ಬಂದ ಕನ್ಯೆಯು ದೂರವಿದ್ದಳೆ, ವ ಕೃಷ್ಣ ವೈದ್ಯ ರಾದ ವಾ॥ ನರಗುಂದ ಇವರು ಈ ತಿಂಗಳ ವರ್ಷ ದಿಂದ ಬೋಧಿಸುತ್ತಿದ್ದರು ಆದರೆ ನಿರಕ್ಷರಾದ ಮತ್ತು ಬಡ ಹಳ್ಳಿಗರು ತಮ್ಮ ಆ ಹಳ್ಳಿಯನ್ನು ಒಂದು ಸ್ಥಳ ದಿಂದ ಇನ್ನೊಂದು ಸ್ಥಳಕ್ಕೆ ಸ್ಥಳಾಂತರಿಸುವದು ಹೇಗೆ? ಸರಕಾರವು ಒಂದಿಷ್ಟು ಸಹಾಯ ಮಾಡಿದರೆ ಈ ಯೋಜನೆಯನ್ನು ಕೈಕೊಳ್ಳಬಹುದಿತ್ತು. ಆದರೆ ಸರಕಾರ ದವರು ಏನೇನೂ ಸಹಾಯ ಮಾಡಲಿಲ್ಲ! ಕೊನೆ- ಹಳ್ಳಿ ಯ ಜನರು ನಿರಾಶರಾಗಿ, ಸರಕಾರದ ಮೇಲೆ ಅವಲಂಬಿ ಸಿರುವದು ಪ್ರಯೋಜನಕಾರಿಯಾಗಲಿಕ್ಕಿಲ್ಲೆಂದು ಮನ ಗಂಡು ಮತ್ತು "ಆತ್ಮೈವ ಹ್ಯಾತ್ಮನೋ ಬಂಧುಃ" ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ ವಾಕ್ಯವೇ ಸನಾತನ ಸತ್ಯವೆಂದು ಭಾವಿಸಿ, ಪರಸ್ಪರ ಸಹಾಯ-ಸಹಕಾರದಿಂದ ತಮ್ಮ ಹಳ್ಳಿಯನ್ನು ಡಾ॥ ನರಗುಂದಕರವರು ತೋರಿಸಿ ಕೊಟ್ಟ ಎತ್ತರಗಟ್ಟು ಪ್ರದೇಶಕ್ಕೆ ಸ್ಥಳಾಂತರಿಸಿ ಅಲ್ಲಿ "ಮೋಹನಪುರ" ಎಂಬ ಹೊಸ ಗ್ರಾಮವನ್ನು ನಿರ್ಮಿ ಸಲು ನಿರ್ಧರಿಸಿದ್ದಾರೆ. ಕಳೆದ ತಾ ೨೬ಕ್ಕೆ ಈ ಹೊಸ ಗ್ರಾಮದ ಶಂಕುಸ್ಥಾಪನೆಯ ಸಮಾರಂಭವು ವಾಮನ ರಾವ ಮಾಮಲೇದಾರ ರಾ॥ ನೀರ್ಲೆಯವರ ಹಸ್ತದಿಂದ ನಡೆದ ಸುದ್ದಿಯುಂಟು.

— ನಿಜಾಮರ ಹೈದರಾಬಾದವು ಸ್ವತಂತ್ರ ಭಾರತದ ಒಕ್ಕೂ ಟಕ್ಕೆ ಒಂದು ದೊಡ್ಡ ಹುಣ್ಣಾಗಿದೆ! ಆಗೋಸ್ತ ತಾ ೧೫ರ ನಂತರ ತಾವು ಸ್ವತಂತ್ರರಾದೆವೆಂದೂ, ಸ್ವತಂತ್ರರಾಗಿಯೇ ಉಳಿಯುವೆವೆಂದೂ, ಹಿಂದುಸ್ಥಾನ-ಪಾಕಿಸ್ತಾನಗಳಲ್ಲಿ ಯಾವುದಕ್ಕೂ ತಾವು ಕೂಡಬಯಸುವದಿಲ್ಲೆಂದೂ ನಿಜಾ ಮರು ಹೇಳಿ, ಕೆಲ ಕಾಲ ಮೀನ-ಮೇಷ ಮಾಡುತ್ತಲಿದ್ದು, ನವಂಬರ ತಿಂಗಳ ಕೂನೆಗೆ ಹಿಂದುಸ್ಥಾನ ಸರಕಾರದೊಡ ನೆ "ಒಂದು ವರ್ಷ ದ ಯಥಾ-ಸ್ಥಿತಿ ಒಪ್ಪಂದ" ಮಾಡಿ ಕೊಂಡರು ಇದರಿಂದ ನಿಜಾಮರ ಸಂಕಟ ದೂರವಾಯಿ ತೆಂದು ಹಿಂದುಸ್ಥಾನ ಸರಕಾರದವರ ಭಾವನೆಯಾಗಿತ್ತು ಆದರೆ ಭಾರತ ಸರಕಾರವು ಹೀಗೆ ಭಾವಿಸಿದ್ದು ಅಯುಕ್ತವೆಂ ದೂ, ನಿಜಾಮ ಪ್ರಭುಗಳು ಇತ್ತೆಹಾದುಲ್-ಮುಸಲ್ಮೀನ ಎಂಬ ಕಡು ಜಾತೀಯ ಸಂಸ್ಥೆಯ ಕೈಗೊಂಬೆಗಳಾಗಿರು ವರೆಂದೂ, ಅವರು ಒಂದಿಲ್ಲೊಂದು ದಿನ ಹಿಂದುಸ್ಥಾನದ ದ್ರೋಹ ಬಗೆದು, ಪಾಕಿಸ್ತಾನ ಪಕ್ಷಪಾತಿಗಳಾಗಿ, ಹಿಂದು ಸ್ಥಾನಕ್ಕೆ ಕಂಟಕಪ್ರಾಯರಾಗುವರೆಂದೂ, ಯಥಾಸ್ಥಿತಿ ಒಪ್ಪಂದದ ಒಂದು ವರ್ಷ ದ ಅವಧಿಯನ್ನು ಅವರು ತಮ್ಮ ಹುನ್ನಾರದ ಸಿದ್ಧತೆಗಾಗಿ ಪಡೆಯುತ್ತಿರುವರೆಂದೂ ನಮಗೆ ಸಂಸ್ಥಾನದ ನಿಕಟ ಪರಿಚಯವಿದ್ದ ಜನರು ಆಗಲೇ ಎಚ್ಚರಿಕೆ ಕೊಟ್ಟಿದ್ದರು ಒಪ್ಪಂದದ ನಂತರ ನಡೆದ ಅನೇಕ ಘಟನೆಗಳು ಹೈದರಾಬಾದ ಸಂಸ್ಥಾನದಲ್ಲಿ ನಿಜಾಮರ ಸೈನಿಕ ಪೋಲೀಸರೂ ಇತ್ತೆ ಹಾದುಲ್ ಸಂಸ್ಥೆಯ ಸ್ವಯಂಸೈನಿಕರೂ ನಡೆಸುವ ಅನಾಚಾರ-ಅತ್ಯಾಚಾರಗಳು ಈ ಎಚ್ಚರಿಕೆಯನ್ನು ಪೂರ್ಣ ಸಮರ್ಥಿಸುತ್ತಿವೆ (೧) ಹೈದರಾಬಾದದಲ್ಲಿ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳಾಗಿ ಹೋದ ಶ್ರೀ ಮುನಶಿಯವ ರಿಗೆ ಉಳಿದುಕೊಳ್ಳಲು ಹಿಂದೆ ಬ್ರಿಟಿಶರ ರೆಸಿಡೆಂಟರಿದ್ದ ಭವನವನ್ನು, ಕಂಟೋನ್ಮೆಂಟುಗಳನ್ನು ಮುಂದೆ ಮಾಡಿ, ನಿಜಾ ಮರು ಬಿಡಕೊಟ್ಟಿಲ್ಲ (೨) ಹಿಂದುಸ್ಥಾನ ಸರಕಾರ ಕ್ಕೆ ತಿಳಿಸದೆ ನಿಜಾಮರು ಪಾಕಿಸ್ತಾನಕ್ಕೆ ಸಾಲ ಕೊಟ್ಟಿ ರು (೩) ಹಿಂದೀ ನಾಣ್ಯಗಳ ಚಲಾವಣೆಗೆ ಸಂಸ್ಥಾನದಲ್ಲಿ ಪ್ರತಿಬಂಧ ಹಾಕಿದರು (೪) ಕೆಲವೊಂದು ಧಾನ್ಯಗಳನ್ನು ಹಿಂದುಸ್ಥಾನಕ್ಕೆ ಬರಗೊಡಲು ಅಡ್ಡಿ ಮಾಡಿದರು (೫) ಗೋವೆಯನ್ನು ಕೊಂಡ ಕೆಲವು ನಿಜಾಮರು ಬಯಸಿದ ಪ್ರಯತ್ನವಂತೂ ಸರ್ವವಿಸ್ತೃತವಿದೆ ಇದಲ್ಲದೆ ನಿಜಾಮರು ಸಂಸ್ಥಾನದಲ್ಲಿ ಜವಾಬದಾರ ರಾಜ್ಯಪದ್ಧತಿಯನ್ನು ದೊರಕಿ ಸುವದಕ್ಕಾಗಿ ಅಲ್ಲಿಯ ಪ್ರಜೆಗಳು, ಹೈದರಾಬಾದ ಸಂಸ್ಥಾ ನ ಕಾಂಗ್ರೆಸ್ಸಿನ ನೇತೃತ್ವದಲ್ಲಿ, ಆಂದೋಲನವನ್ನು ಹೂಡಿ ದ್ದಾರೆ ವಕೀಲರು ಕೋರ್ಟು ಕಚೇರಿಗಳ ಬಹಿಷ್ಕಾರ ಹಾಕುತ್ತಿದ್ದಾರೆ ಪಟೇಲ-ಪಟವಾರಿಗಳ ಮೊದಲಾದ ಗ್ರಾಮಾಧಿಕಾರಿಗಳು ರಾಜೀನಾಮೆ ಕೊಡುತ್ತಿದ್ದಾರೆ, ರೈತರು 'ಲೆವ್ಹಿ' ಯನ್ನು ಕೊಡಲು ನಿರಾಕರಿಸುತ್ತಿದ್ದಾರೆ ಈ ಆಂದೋಲನ ಹೂಡಿದವರನ್ನೂ ಅವರಿಗೆ ನೆರವಾಗುತ್ತಿರು ವವರನ್ನೂ ನಿಜಾಮರ ಪೋಲೀಸರೂ ಸೈನಿಕರೂ ಇತ್ತೆ ಹಾದುಲ್ ಸಂಸ್ಥೆಯವರೂ ಬಗೆಬಗೆಯಿಂದ ಪೀಡಿಸುತ್ತಿ ದ್ದಾರೆ! ಈ ಅತ್ಯಾಚಾರಿಗಳು ಹಿಂದುಸ್ಥಾನ ಸರಕಾರದ ಸೀಮೆಯಲ್ಲೂ ಸೇರಿ ಅತ್ಯಾಚಾರಗಳನ್ನು ಮಾಡುತ್ತಿರುವ ಮತ್ತು ಹಿಂದುಸ್ಥಾನ ಸರಕಾರದ ಪೋಲೀಸರ ಮೇಲೆ ಸಹ ಗುಂಡು ಹಾರಿಸಿದ ಸುದ್ದಿಗಳು ಕೇಳಬರುತ್ತಿವೆ ಮೊನ್ನೆ ಮೊನ್ನೆ ನಿಜಾಮ-ಪ್ರಭುಗಳು ಒಂದು "ನಡು-ಗಾಲ ಸರ ಕಾರ" ನೇಮಿಸಿಕೊಳ್ಳುವ ನಾಟಕವನ್ನಾಡಿದ್ದುಂಟು ಈ ನಡು-ಗಾಲ ಸರಕಾರದ ಒರ್ವ ಮಂತ್ರಿಗಳಾಗಿದ್ದ ಶ್ರೀ ಜಿ ರಾಮಾಚಾರ್ಯರು ಈ ಅತ್ಯಾಚಾರಗಳನ್ನು ತಡೆಯ ದಿದ್ದರೆ ತಾವು ಸರಕಾರದಲ್ಲಿ ಉಳಿಯುವದು ಸಾಧ್ಯವಿಲ್ಲೆಂದು ಮುಖ್ಯ ಮಂತ್ರಿ ಜನಾಬ ಲಾಯಿಕ ಅಲ್ಲಿಯವರಿಗೆ ಸಾರಿ- ಸಾರಿ ಹೇಳಿ ಮತ್ತು ಮುಖ್ಯ ಮಂತ್ರಿಗಳು ಅತ್ಯಾಚಾರ ಗಳಿಗೆ ತಡೆಹಾಕಲು ಯಾವ ಯೋಜನೆಯನ್ನೂ ಕೈಕೊಳ್ಳ ದಿದ್ದುದನ್ನು ನೋಡಿ ಬೇಸತ್ತು, ಕೊನೆಗೆ ಮಂತ್ರಿಪದಕ್ಕೆ ರಾಜೀನಾಮೆಯನ್ನಿತ್ತಿದ್ದಾರೆ ಇತ್ತೀಚೆಗೆ ನಿಜಾಮರ ಪ್ರತಿ ನಿಧಿಗಳು ಹಿಂದುಸ್ಥಾನ ಸರಕಾರದೊಡನೆ ಖಾಯಂ ಒಪ್ಪಂ ದದ ಮಾತುಕತೆಗಳನ್ನು ನಡೆಸುವದಕ್ಕಾಗಿ ದಿಲ್ಲಿಗೆ ಹೋಗಿ ದ್ದರು ಹಿಂದುಸ್ಥಾನ ಸರಕಾರವು ಈ ಸಾರೆ ನಿಜಾಮರ ಇಲ್ಲವೆ ಅವರ ಶಿಷ್ಟರ ಕಣ್ಣುಮುಚ್ಚಾಲೆಯ ಆಟಕ್ಕೆ ಬಲಿಯಾಗದೆ, ಅವರಿಗೆ ಈ ಕೆಳಗಿನ ಕರಾರುಗಳನ್ನು ತಿಳಿಸುತ್ತಾರೆಂದು "ಮುಂಬಯಿ ಕ್ರಾನಿಕಲ್" ಪತ್ರಿಕೆ ಯ ದಿಲ್ಲಿಯ ಪ್ರತಿನಿಧಿಗಳು ತಿಳಿಸುತ್ತಾರೆ — (೧) ಸಂ ಸ್ಥಾನದಲ್ಲಿ ಕೂಡಲೆ ಪ್ರಜೆಗಳಿಗೆ ಜವಾಬದಾರವಿರುವ ರಾಜ್ಯ ಪದ್ಧತಿ ರಚನೆಯಾಗಬೇಕು (೨) ಸರಕಾರದಲ್ಲೂ ಕಾನೂ ನ ಮಂಡಲದಲ್ಲೂ ಸಂಸ್ಥಾನದ ಪ್ರಜೆಗಳ ಪ್ರತಿಬಿಂಬ ಕಂಡು ಬರುವಂತೆ ವ್ಯವಸ್ಥೆಯಾಗಬೇಕು ಅಂದರೆ ಬಹುಸಂಖ್ಯ ಹಿಂದುಗಳ ಸಂಖ್ಯೆಯ ಮಾನದಿಂದ ಅವರಿಗೆ ಪ್ರಾತಿನಿಧ್ಯ ದೊರೆಯದೆ ಅಲ್ಪಸಂಖ್ಯ ಮುಸಲ್ಮಾನರಿಗೆ ಕೊಟ್ಟ ಅಪ್ರಶಸ್ತ ಪ್ರಾತಿನಿಧ್ಯವನ್ನು ಕಡಿಮೆಗೊಳಿಸತಕ್ಕದ್ದು (ಈ ಸಂಸ್ಥಾನ ದಲ್ಲಿ ೧೦೦ಕ್ಕೆ ೮ ರಷ್ಟು ಹಿಂದುಗಳೂ ೧೨ರಷ್ಟು ಮುಸ ಲ್ಮಾನರೂ ಇದ್ದಾರೆ ಆದರೂ ಕಾನೂನ ಮಂಡಲದಲ್ಲಿ ಮುಸಲ್ಮಾನರಿಗೆ ಸಮ ಪ್ರಾತಿನಿಧ್ಯ ಕೊಡಲ್ಪಟ್ಟಿದೆ! ಅಧಿಕಾರಸ್ಥಾನಗಳಲ್ಲಂತೂ ಮುಸಲ್ಮಾನರದೇ ಏಕ್ಕಮೇವಂ ಟು) (೩) ಎಂಜಲೀಸ ಎ ಇತ್ತೆಹಾದುಲ್ ಮುಸಲ್ಮೀ ನ ಸಂಸ್ಥೆಯನ್ನು ಕೂಡಲೆ ನಿರ್ನಾಮ ಗೊಳಿಸಿ, ಸರಕಾರ ದಲ್ಲಿದ್ದ ಅದರ ಪ್ರತಿನಿಧಿಗಳನ್ನು ಹೊರದೆಗೆಯಬೇಕು (೪) ಪಾಕಿಸ್ತಾನಕ್ಕೆ ಸಾಲ ಕೊಟ್ಟಿದ್ದು, ಹಿಂದೀ ನಾಣ್ಯಗಳ ಚಲಾ ವಣೆಯನ್ನು ಸಂಸ್ಥಾನದಲ್ಲಿ ಪ್ರತಿಬಂಧಿಸಿದ್ದು, ಧಾನ್ಯಗಳ ನಿರ್ಯಾತವನ್ನು ನಿಬಂಧಿಸಿದ್ದು ಮುಂತಾದ ಕೃತ್ಯಗಳನ್ನು ಕೂಡಲೆ ರದ್ದುಗೊಳಿಸಬೇಕು ಈ ಕರಾರುಗಳನ್ನು ಪಾಳ ದಿದ್ದರೆ, ಹೈದರಾಬಾದವು ಹಿಂದೀ ಒಕ್ಕೂಟದಲ್ಲಿ ಸೇರು ವದೇ ಇಲ್ಲ ಬಿಡುವದೋ ಎಂಬುದರ ನಿರ್ಣಯ ಮಾಡುವ ಅಧಿಕಾರವು ಪ್ರಜೆಗಳಿಗೆ ಜವಾಬದಾರ ವಿರುವ ಸರಕಾರದೇ ಇರುತ್ತದೆಂದೂ ಒಂದ ಸರಕಾರವು ನಿಜಾಮ ಪ್ರಭುಗಳಿಗೆ ಸ್ಪಷ್ಟ ತಿಳಿಸಿದೆಯಂತೆ ಹಿಂದು-ಸರ ಕಾರವು ಈ ಕರಾರುಗಳನ್ನು ತಿಳಿಸಿದ ಮೇಲೆ ನಿಜಾಮರ ಮುಖ್ಯಮಂತ್ರಿ ಲಾಯಿಕ ಅಲ್ಲಿಯವರು ಖಾಸಗಿ ಕಾರ ಣಗಳಿಗಾಗಿ (?) ಕರಾಚಿಗೆ ಹೋಗಿದ್ದಾರೆ, ಮತ್ತು ಅಲ್ಲಿ ಪಾಕಿಸ್ತಾನದ ರ-ಪಸರಲ್ಲ ಜಿನ್ನಾರವರ ಅರಮನೆಯಲ್ಲಿ ತಮ್ಮ ಮುಕ್ಕಾಮು ಮಾಡಿದ್ದಾರೆ! ಕಾಯದೆ ಆಜಂ ಜಿನ್ನಾ ರವರ ಸಲಹೆ ಪಡೆಯಲಿಕ್ಕೇ ಅವರು ಹೋಗಿರಬೇಕೆಂದು ಮಾರಿದ್ದಷ್ಟಿಗಳ ಊಹೆಯುಂಟು ಹಿಂದುಸ್ಥಾನ ಸರಕಾ ರದವರ ನಿಶ್ಚಯವನ್ನು ಮನ್ನಿಸಿ ನಿಜಾಮರು ಸದ್ಯದ ರಾಜ್ಯಘಟನೆಯಲ್ಲಿ ವಿಶೇಷ ಬದಲಾವಣೆಗಳನ್ನು ಮಾಡಿ ದರೆ ತಾವು ಪ್ರತ್ಯಕ್ಷ ಹೋರಾಟ (ಇತ್ತೆಹಾದುಲ್‌ದವರ ಸ್ವಯಂಸೇವಕರೆಲ್ಲ ಸೈನಿಕ ಶಿಕ್ಷಣ ಪಡೆದಿರುವದರಿಂದಲೂ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಿರುವದರಿಂದಲೂ ಈ ಪ್ರತ್ಯಕ್ಷ ಹೋರಾಟವು ರಕ್ತಲಾಂಛಿತ, ಹಿಂಸಾಮಯ ಹೋರಾಟ ವಾಗುವದೆಂದು ಬೇರೆ ಹೇಳಬೇಕಾಗಿಲ್ಲ!) ಹೂಡಲಾಗು ವದೆಂದು ನಿಜಾಮರಿಗೆ — ನಿಜಾಮರಿಗೆಂದು ಹೇಳುವ ದಕ್ಕಿಂತ ನಿಜಾಮರ ಮುಖಾಂತರ ಹಿಂದುಸ್ಥಾನ ಸರಕಾ ರಕ್ಕೆಂದು ಹೇಳುವದೇ ಸಯುಕ್ತಿಕವಾದುದು — ಬೆದರಿಕೆ ಹಾಕುವ ಗೊತ್ತುವಳಿಯೊಂದನ್ನು ಇತ್ತೆಹಾದುಲ್ ಸಂಸ್ಥೆಯ ಕಾರ್ಯಕಾರಿ ಮಂಡಳವು ಮಾಡಿರುತ್ತದೆಂದು ತಿಳಿಯುತ್ತದೆ ಈ ಇತ್ತೆಹಾದುಲ್ ಸಂಸ್ಥೆಯು ನಿರ್ನಾಮ ವಾಗುವ ವರೆಗೆ ಹೈದರಾಬಾದಕ್ಕೂ ಹಿಂದುಸ್ಥಾನಕ್ಕೂ ಸುಖವಾಗಲಿಕ್ಕಿಲ್ಲೆಂದು ಧಾರಾಳವಾಗಿ ಹೇಳಬಹುದು.

[illegible]

ಆದ್ದರಿಂದ [illegible]

[illegible]

ಕರ್ನಾಟಕ ಶಾಖೆ —
ಕೊಪ್ಪಿಕರ ರೋಡ, ಹುಬ್ಬಳ್ಳಿ.

ಯಲ್ಲಾಪುರ ತಾಲೂಕಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು.)

ನಂ. ೩೯೩— ೧೯೪೭ನೇ ಇಸವಿಯ ಒಕ್ಕಲತನದ ಕಾನೂನಿನ ನಿಯಮಾವಲಿಯ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಲೆಯೊಳಗಿನ ಯಲ್ಲಾಪುರ ತಾಲೂಕಿನ ಮಾಮಲೇದಾರರು, ಈ ಕೆಳಗಿನ ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ಕಾಣಿಸಿದ ಸ್ಥಾನಿಕ ಕ್ಷೇತ್ರ (ಗ್ರಾಮ) ಗಳಲ್ಲಿರುವ ನೀರಾವರಿ ಹಾಗೂ ನೀರಾವರಿಯಲ್ಲದ ಖರಿ ಭೂಮಿಗಳಲ್ಲಿ, ೧೯೪೭–೪೮ನೇ ಸಾಲಿನಲ್ಲಿ, ಅನುಕ್ರಮವಾಗಿ ೩ ಮತ್ತು ೪ನೇ ಸ್ತಂಭಗಳಲ್ಲಿ ಕಾಣಿಸಿದಷ್ಟು ಸರಾಸರಿ ಭತ್ತದ ಬೆಳೆಯೂ, ನೀರಾವರಿಯ ತೋಟಗಳಲ್ಲಿ ೫ನೇ ಸ್ತಂಭದಲ್ಲಿ ತೋರಿಸಿದಷ್ಟು ಸರಾಸರಿ ತೆಂಗಿನ ಬೆಳೆಯೂ ಹುಟ್ಟಿತ್ತೆಂದು ಜಾಹೀರ ಮಾಡುತ್ತಾರೆ. (ಭತ್ತದ ೧ ಖೇಲ ಎಂದರೆ ತೂಯ್ದು ಅಳೆದ ೩೨ ಪಾಯಲಿ ಭತ್ತ)

ಪರಿಶಿಷ್ಟ.

ಅನುಕ್ರಮಾಂಕ	ಸ್ಥಾನಿಕ ಕ್ಷೇತ್ರ.	ನೀರಾವರಿ ತರಿಯ ಬೆಳೆ ಎಕರೆ ೧ಕ್ಕೆ	ನೀರಾವರಿಯಿಲ್ಲದ ತರಿಯ ಬೆಳೆ ಎಕರೆ ೧ಕ್ಕೆ	ಪ್ರತಿ ತೆಂಗಿನ ಮರದ ಬೆಳೆ
೧	೨	೩	೪	೫
	ಗ್ರೂಪ I.	ಭತ್ತದ ಖೇಲ.	ಭತ್ತದ ಖೇಲ.	ತೆಂಗಿನ ಕಾಯಿ.
೧	ಹೊಸಳ್ಳಿ	ಸಾಗುವಳಿಯಿಲ್ಲ.		
೨	ಕಿರವತ್ತಿ	೧೬	....	....
೩	ಕೋಳಿಕೇರಿ	೧೬	...	...
೪	ಮದನೂರ	೧೬	....	....
	ಗ್ರೂಪ II.			
೫	ಬಾಳಗಿಮನೆ	...	೧೦	೧೫
೬	ಹಿತ್ಲಕಾರಗದ್ದೆ	—	೧೩	೧೫
೭	ಕನ್ನಡಗಲ	—	೧೦	೧೫
೮	ಕೊಂಡೆಮನೆ	—	೧೦	—
೧೧	ಶಿಗೇಪಾಲ	೧೫	—	೧೫
೧೨	ಶಿಕ್ರಮಾಡಿ	—	೧೦	೧೫
೧೩	ತಟಗಾರ	—	೧೦	೧೫
೧೪	ಯಲ್ಲಾಪುರ	—	೧೫	೧೫
	ಗ್ರೂಪ III.			
೧೫	ಕೃಂಚನಳ್ಳಿ	...	೬	...
	ಗ್ರೂಪ IV.			
೧೬	ಅಲವಾಡ	...	೮	೧೫
೧೭	ಬೈಲಗೋಡ	...	೧೧	...
೧೮	ಭಂಡಸಾಳ	...	೬	...
೧೯	ಬೆಳಂದಿ	೧೩	...	....
೨೦	ಭರತ	...	೯	೧೫
೨೧	ಭರ್ತನಳ್ಳಿ	...	೧೨	...
೨೨	ಭೆಂಡಿಗೇರಿ	...	೮	...
೨೩	ಭೋಗಮನಳ್ಳಿ	....	೮	....
೨೪	ಬಿದ್ರಳ್ಳಿ	...	೬	....
೨೫	ಬೀಜನಕೊಪ್ಪ	೧೩	...	...
೨೬	ಬಳಕೆ	...	೮	...
೨೭	ಚಾವತ್ತಿ	...	೯	...
೨೮	ಚಿಕ್ಕೊತ್ತಿ	....	೮	೧೫
೨೯	ದೇವರಕಲ್ಲಳ್ಳಿ	....	೮	....
೩೦	ಗಾಡಿಚೋಗದಮನೆ	ಸಾಗುವಳಿಯಿಲ್ಲ		
೩೧	ಗೋವನಮನೆ	....	೯	....
೩೨	ಹಳಗೋಡ	೧೫	...	...
೩೩	ಹಲಸಿನಕೊಪ್ಪ	...	೧೦	....
೩೪	ಹಾಂಗದ್ದೆ	...	೮	೧೫
೩೫	ಹಸಲ್ಮನೆ	೧೩	...	...
೩೬	ಹಾಸಣಗಿ	...	೮	೧೫
೩೭	ಹಿಟ್ಟಾಪುರ	೧೬	...	...
೩೮	ಹೆಮ್ಮಾಡಿ	...	೭	...
೩೯	ಹಿರೇಸರ	...	೮	೧೫
೪೦	ಹಿತ್ಲಳ್ಳಿ	...	೮	೧೫
೪೧	ಹಿತ್ಲಸರ	೧೩	....	..
೪೨	ಹುಲ್ಲಿರಮನೆ	ಸಾಗುವಳಿಯಿಲ್ಲ		
೪೩	ಹೊಣಸೇಮನೆ	೧೧	...	...
೪೪	ಮಲಮುಂಡ	...	೧೦	೧೫
೪೫	ಅರೇಹಳ್ಳಿ	...	೮	೧೫
೪೬	ಇಡ್ಗಿಗದ್ದೆ	೧೧	...	....
೪೭	ಜಕ್ಕನಳ್ಳಿ	ಸಾಗುವಳಿಯಿಲ್ಲ		
೪೮	ಕಳಸೂರ	೧೬	....	...
೪೯	ಕಂಚ್ಲಿ	...	೮	೧೫
೫೦	ಕಾನಗೋಡ–ಬಾಳೆಗದ್ದೆ		೯	೧೫
೫೧	ಕಾನೇನಹಳ್ಳಿ	೧೨	...	....
೫೨	ಕಣ್ಣಿಗೇರಿ	...	೧೦	೧೫
೫೩	ಕಾಳೂರಹೆಗ್ಗರಣಿ	....	೯	....
೫೪	ಕೆರೆಹೊಸಳ್ಳಿ	...	೯	೧೫
೫೫	ಕೋಟೆಮನೆ	...	೯	೧೫
೫೬	ಕವಡಿಕೇರಿ	...	೧೦	...
೫೭	ಕೊಂಡೂರ	...	೮	...
೫೮	ಕುಂದರಗಿ	೧೨	....	೧೫
೫೯	ಕುಣಗುಳ	....	೮	..
೬೦	ಮಾದಂಗಿ	ಸಾಗುವಳಿಯಿಲ್ಲ.		
೬೧	ಮಳಲಗಾಂವ	...	೧೦	...
೬೨	ಮಾಲಕೊಪ್ಪ	...	೯	....
೬೩	ಪುರತಭೊಮ್ಮನಳ್ಳಿ	ಸಾಗುವಳಿಯಿಲ್ಲ.		
೬೪	ಸಂಪೆಕೊಪ್ಪ	೧೩	...	...
೬೫	ಸಂಕದಗುಂಡಿ	....	೯	೧೫
೬೬	ಸವಣೆ	೧೧	....	....
೬೭	ಶಿಗೇಮನೆಉಮಚಿಗಿ	....	....	....
೬೮	ಶಿರನಳ್ಳಿ	....	೯	....
೬೯	ಸೋಮನಳ್ಳಿ	೧೨	...	೧೫
೭೦	ಹಾರೇಹಳ್ಳಿ	....	೯	೧೫
೭೧	ತೋಟದಕಲ್ಲಳ್ಳಿ	೧೨	....	೧೫
೭೨	ತೊಲಗೋಡ	....	೮	....
೭೩	ಉಚಗೇರಿ	....	೧೧	....
೭೪	ವಣಕೆಮನೆ	....	೯	....
೭೫	ವಾಟಗೇರಿ	ಸಾಗುವಳಿಯಿಲ್ಲ.		
೭೬	ಯಢಳ್ಳಿ	....	೮	....
	ಗ್ರೂಪ V			
೭೭	ಆನಗೋಡ	....	೧೦	೧೫
೭೮	ಅನಲಗಾವ	...	೧೦	೧೫
೭೯	ಬಾಳೇಕಣ	....	೧೦	೧೫
೮೦	ಬರಗದ್ದೆ	೧೪	....	....
೮೧	ಬೆಳಗೇರಿ	೧೪	...	....
೮೨	ಬೇಡಮುಂಡ	...	೧೦	೧೫
೮೩	ಚಂದಗುಳ	....	೧೦	೧೫
೮೪	ದೇವರಗದ್ದೆ	೧೪	....	....
೮೫	ಡೊಣಗಾರ	....	೮	೧೫
೮೬	ಗೇರಾಳ	....	೧೦	೧೫
೮೭	ಘಡವಾಸ	....	೮	೧೫
೮೮	ಗೋಟಗುಳ	....	೧೦	....
೮೯	ಹಂಸನಗದ್ದೆ	....	೮	....
೯೦	ಹಿತ್ಲಕಾರಗದ್ದೆ	....	೧೦	....
೯೧	ಹೊಳೆಮುಡು	೧೩	....	೧೫
೯೨	ಹುಲಗಾನ	೧೨	...	೧೫
೯೩	ಹ.ಕೆಕ	....	೧೦	೧೫
೯೪	ಹುಟಕಮನೆ	....	೧೦	೧೫
೯೫	ಇಡಗುಂದಿ	....	೮	....
೯೬	ಜೋಗಿದಮನೆ	...	೯	೧೫
೯೭	ಕೋಮಡ	....	೯	೧೫
೯೮	ಲಾಲಗುಳ	....	೧೦	೧೫
೯೯	ಲಿಂಗದಬೈಲ	....	೮	೧೫
೧೦೦	ಮಾಗೋಡ	....	೧೦	೧೫
೧೦೧	ನಂದೊಳ್ಳಿ	....	೧೨	೧೫
೧೦೨	ಸಾವಗದ್ದೆ	....	೧೦	೧೫
೧೦೩	ತೆಳಗಾರ	....	೧೨	....
	ಗ್ರೂಪ VI			
೧೦೪	ಅಡಿಗಾಂವ	೧೨	....	೧೫
೧೦೫	ಆರತಿಬೈಲ	೧೨	....	೨೫
೧೦೬	ಬಾಗಿನಕಟ್ಟಿ	೧೮	....	೨೫
೧೦೭	ಬಳಗಾರ	೧೩	....	೨೫
೧೦೮	ಬರಬಳ್ಳಿ	೧೦	....	೩೦
೧೦೯	ಬಿಗಾರ	೧೫	....	೨೫
೧೧೦	ಬೀಸಗೋಡ	೧೩	....	೧೫
೧೧೧	ಚಿಕ್ಕಮನೆ	೧೨	....	....
೧೧೨	ಚಿಮನಳ್ಳಿ	೧೨	....	...
೧೧೩	ಡಬ್ಗುಳ	೧೨	...	...
೧೧೪	ದೇಹಳ್ಳಿ	೧೩	...	೧೫
೧೧೫	ಗುಲ್ಲಾಪುರ	....	೯	...
೧೧೬	ಹೆಗ್ಗುಂಡಿ	೧೩	....	೧೫
೧೧೭	ಹೊಸಗದ್ದೆ	೧೫	...	೨೫
೧೧೮	ಹಿರಿಯಸಾಳ	೧೩	....	೧೫
೧೧೯	ಜೋಗಲೇಪಾಳ	೧೫	...	೧೫
೧೨೦	ಕಟ್ಟಿಗೆ	೧೩	...	೧೫
೧೨೧	ಕೇಕತ	೧೨	...	೧೫
೧೨೨	ಕೋಡಸಳ್ಳಿ	೧೦	...	೩೦
೧೨೩	ಕೊಡ್ಲಗದ್ದೆ	೧೨	...	೩೦
೧೨೪	ನಗರಬಾವ	೧೩	....	೧೫
೧೨೫	ತಾರಗಾರ	೧೫	....	೨೫
೧೨೬	ತೆಲಂಗೇರಿ	೧೨	....	೨೫
೧೨೭	ವಜ್ರಳ್ಳಿ	೧೨	....	೨೫
	ಗ್ರೂಪ VII.			
೧೨೮	ಖುರ	೯	...	೨೫
೧೨೯	ಬೇಡಸಗುಳ	೯	....	೨೫
೧೩೦	ಕಂಚಿ	೯	....	೩೦
೧೩೧	ಕಾನೂರ	೯	....	೧೫
೧೩೨	ಮಂಚಳ್ಳಿ	೯	...	೧೫
೧೩೩	ಮಾವಿನಮನೆ	೯	...	೨೫

ಯಲ್ಲಾಪುರ,
ತಾ. ೧೬–೨–೧೯೪೮.

K. R. NAIK,
ಮಾಮಲೇದಾರ, ಯಲ್ಲಾಪುರ.

ಮುಂಬಯಿ ಸರಕಾರ

ಪ್ರಾಂತಿಕ ಟೆಕ್ಸ್‌ಟೈಲ ಕಂಟ್ರೋಲರರ ಕಚೇರಿ,
೬–೪, ಕೂಪರೇಜ, ಕೋಟ,
ಮುಂಬಯಿ, ತಾ. ೨೪–೨–೧೯೪೮.

ಜಾಹೀರ ಸೂಚನೆ.

೧೯೪೬ರ ಮುಂಬಯಿಯ ಅರಳೆ ನೂಲಿನ ವ್ಯಾಪಾರದ ನಿಯಂತ್ರಣಾಜ್ಞೆಯನ್ವಯ ಮುಂಬಯಿ ಪ್ರಾಂತದಲ್ಲಿ ಪರವಾನೆ ಪಡೆಕೊಂಡಿರುವ ಎಲ್ಲ ಪರವಾನೆಧಾರಿಗಳಿಗೆ ಈ ಮೂಲಕ ತಿಳಿಸುವದೇನೆಂದರೆ:— ಪರವಾನೆ–ಧಾರಿಗಳ ಕಡೆಗಿರುವ ಪರವಾನೆಗಳ ಅವಧಿಯು ತಾ. ೩೧–೩–೪೮ ನೇಗೆ ಕೊನೆಗೊಳ್ಳುತ್ತದೆ. ತಮ್ಮ ಪರವಾನೆಗಳ ಪುನರುಜ್ಜೀವನ ಮಾಡಿಕೊಳ್ಳಬಯಸುವ ಪರವಾನೆಧಾರಿಗಳು (ಮೇಲ್ಕಾಣಿಸಿದ) ಆಜ್ಞೆಗೆ ಜೋಡಿಸಲ್ಪಟ್ಟಿರುವ IIIನೆಯ ಮಾದರಿ (ಫೋರ್ಮ)ಯಲ್ಲಿ ಅರ್ಜಿಗಳನ್ನು ಬರೆದು ಅವನ್ನು, ತಾ. ೩೧–೩–೧೯೪೮ರ ಒಳಗಾಗಿ ಅದರ ಮುಂಚೆ, ಪ್ರಾಂತಿಕ ಟೆಕ್ಸ್‌ಟೈಲ ಕಂಟ್ರೋಲರ, ೬–೪, ಕೂಪರೇಜ, ಕೋಟ, ಮುಂಬಯಿ ಇವರಿಗೆ [illegible]

ಹರಾಳೆ,	೧೬	೧೨	—
ಮುಡಿವೆ,	೨೩	೧೬	—
ಸಂಶೋಳ್ಳಿ,	೩೦	೯	—
	೩೦	೧೨	—
ಬಗೋಡ,	೨೨	—	—

G. S. BETIGERI,
ಮಾಮಲೇದಾರ, ಹೊನ್ನಾವರ.

SELL
RNATAK"
ES
GENCY OFFICE,
ra.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವರಾಜ್ಯ ಛಾ

[illegible]

Reg. No. B. 1270.

Mon lay, 15-3-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೧೭.

ಕುಮಟಾ:- ಸೋಮವಾರ, ತಾ. ೧೫—೩—೧೯೪೮.

[illegible]

ನಮ್ಮ ಜಿಲ್ಲೆಯಲ್ಲಿ ಮಹಾತ್ಮರ ಸ್ಮಾರಕವೇನು?

[illegible]

ಸ್ಥಾನಿಕ ವೃತ್ತಾಂತ.

ಕುಮಟಾ— ಮೊನ್ನೆ ಶನಿವಾರ ಸಂಜೆಯ ವರೆಗೆ ವಿಪರೀತ ಸೆಖೆಯಾಗುತ್ತಿತ್ತು. ಅಂದು ಮೂರು ಸಂಜೆಗೆ ಬಹಳ ಗಾಳಿ ಬೀಸಿತು. ಆ ನಂತರ [illegible] ಸಾಧಾರಣ ಚಳಿ ಬಿದ್ದಿತ್ತು.

[illegible]

ಶಿರಸಿ— [illegible]

[illegible]

ಮುಂಡಗೋಡ— [illegible]

ESTD: 1934.

The Agricultural & Industrial Bank, Ltd.

(Incorporated in British India; Liability of Members Limited.)

Head Office: COONDAPOOR.

Authorised Capital	...	Rs. 25,00,000-0-0.
Issued Capital	...	" 11,61,850-0-0.
Paid-up Capital & Reserves	"	8,43,251-2-0.

SAVINGS BANK ACCOUNTS are opened with the minimum amounts and interest allowed at 2%.

CURRENT ACCOUNTS are opened. Interest allowed at 1%.

SEASON DEPOSITS of 3 and 6 months are accepted.

For Terms, please apply to Head Office, or to our nearest Branch.

"Laxmi Nivas" Buildings, COONDAPOOR, 1-12-1947.

K. VAMAN SHENAI, CHAIRMAN.

ಸ್ಥಳಿಕ ವಿಷಯಗಳು.

([illegible] ಬರೆದುದು)

[illegible]

ಕೊನೆಯುಬ್ಬು.

ಸುಪ್ರಸಿದ್ಧ ಕಲಾಪಿ ಸೌಂದರ್ಯ ಪ್ರಸಾಧನಗಳು ಹಾಗೂ ಆಯರ್ನ್ ಹಲ್ಲಿನ-ಬ್ರಶ್, ಹೇರ-ಬ್ರಶ್ ಮೊದಲಾದವು ಗಳ ಬಗ್ಗೆ ಉತ್ತರ ಕನ್ನಡ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಡಿ ಕನ್ವಾಲಿಕ ಡಿಸ್ಟ್ರಿಬ್ಯೂಟರ ಮಂಗಳೂರು, (ಎಸ್. ಕೆ.) ಇವರನ್ನು ಏಕೈಕ ಪ್ರತಿನಿಧಿಗಳನ್ನಾಗಿ ನೇಮಿಸಲಾಗಿದೆ.

ವ್ಯವಹಾರಾರ್ಥಿಗಳು ಪತ್ರವ್ಯವಹಾರ ಮಾಡಬಹುದು.

Notice to Motor Owners in The Karnatak Region.

Owners of motor vehicles residing in the Karnatak Region are informed that the tax for one or more quarters in the next financial year 1948-49 has to be paid so as to reach this office on or before 15-4-1948, in respect of motor vehicles bearing regional registration marks; and on or before 31-3-48 in respect of vehicles registered elsewhere Tax can be paid (1) in Cash (2) by **Crossed Cheques drawn on the Imperial Bank of India Belgaum** only (3) Chalans or (4) by money orders at the Regional Transport Office Belgaum between A M and 3 P.M on week days and between 9-30 A M to 11 A.M on Saturdays.

(2) Payment of tax should be accompanied by (1) Registration Certificate of the vehicle (2) Certificate of Insurance as required by Chapter VIII of the Indian Motor Vehicles Act 1939 in respect of all types of vehicles either registered in this Province or elsewhere, covering third party risks and (3) a declaration in form 'AT' or 'FT' as the case may be No tax tokens or discs will be issued nor the registration certificates endorsed unless the above requirements are duly complied with.

(3) Non-use intimation of vehicles which are kept idle should be submitted before the date on which the tax tokens or discs already issued for such vehicles, expire as required by Rule 26 of the B M V Tax Rules, 1940, failing which owners will be liable to pay tax and penalty due until the date they notify the non-use of their vehicles to this office

Regional Transport Office
Belgaum, 12-3-48

R A Mundkur, (Capt)
Regional Transport Officer,
K R, Belgaum.

ಜಿಲ್ಲಾ ಸಮಾಚಾರ.

ಗೋಕರ್ಣ— (ತಾ ೧೨-೩-೪೮) ಇಲ್ಲಿಯ ಮಹಾಶಿವರಾತ್ರಿಯ ಜಾತ್ರೆಯೂ ಉತ್ಸವವೂ ನಿರ್ವಿಘ್ನವಾಗಿ ನೆರವೇರಿದವು. ಶಾಂತಿ ಜನರ ದಟ್ಟಣೆ ಅಷ್ಟೇನು ಹೆಚ್ಚಾಗಿಯಾದ್ದಿಲ್ಲ.

ಪಂಚಾಂಗ-ಪಂಚಾಂಗಗಳಲ್ಲಿ ಮಹಾಶಿವರಾತ್ರಿಯ ಸಂಬಂಧದಲ್ಲಿ ಮತಭೇದವಾದ್ದರಿಂದ ಈ ವರ್ಷ ೨ ಶಿವರಾತ್ರಿಗಳಾದವು. ಬಗಿಲ್ಗೀಟ ಪಂಚಾಂಗದ ಅಭಿಮಾನಿಗಳು ಸೋಮವಾರ ಶಿವಯೋಗದ ವ್ರತವನ್ನಾಚರಿಸಿದರೆ ಇನ್ನಿತರ ಪಂಚಾಂಗಗಳ ಅಭಿಮಾನಿಗಳು ಮಂಗಳವಾರ ಆ ವ್ರತವನ್ನಾಚರಿಸಿದರು. ಶಿವಯೋಗದ ದಿವಸ ಮಧ್ಯರಾತ್ರಿಯ ಮಹಾಪೂಜೆ, ಪ್ರಾತಃಕಾಲದ ಅಹಲ್ಯಾಬಾಯಿ ಕೋಟೆತೀರ್ಥದ ಗಂಗೆಯ ಕಲಶದ ಮಹಾಭಿಷೇಕ, ಕೋಟಿತೀರ್ಥದಲ್ಲಿ ತೀರ್ಥಸ್ನಾನ ಮೊದಲಾದ ವಿಶೇಷ ವಿಧಿಗಳು ಸೋಮವಾರ ಜರುಗಿದವು.

ಶ್ರೀ ಮಹಾಬಲೇಶ್ವರ ದೇವಸ್ಥಾನದೊಳಗಿನ ಅವ್ಯವಸ್ಥೆ ನೋಡಿ ಪರಸ್ಥಳದ ಯಾತ್ರಿಕರನೇಕರು ವ್ಯಸನಗೊಂಡರು. ಸೋಮವಾರದ ಮಹಾ ಪೂಜೆಯ ಮಹೋತ್ಸವದ ಕಾಲಕ್ಕೆ ದೇವಸ್ಥಾನದಲ್ಲಿ ಸಾಕಷ್ಟು ಬೆಳಕು ಬೀಳುವಂತೆ ವ್ಯವಸ್ಥೆ ಮಾಡಿದ್ದಿಲ್ಲ. ದೇವಸ್ಥಾನದಲ್ಲಿ ವಿದ್ಯುದ್ದೀಪಗಳನ್ನು ಹಚ್ಚುವದಕ್ಕೆಂದು ಒಂದು ಯಂತ್ರವನ್ನೂ ವಿದ್ಯುದ್ದೀಪಗಳ ಸಾಹಿತ್ಯವನ್ನೂ ತರಿಸಿಟ್ಟಿದ್ದು ಕೇಳಿದ್ದೇವೆ! ಆದರೆ ಆ ಯಂತ್ರವು ಕೆಲಸವನ್ನೇ ಮಾಡುವದಿಲ್ಲವಂತೆ! ಹಾಗಿರಲು ದೊಡ್ಡ ವೆಚ್ಚ ಮಾಡಿ ತಂದ ಆ ಯಂತ್ರವೂ ವಿದ್ಯುದ್ದೀಪದ ಸಾಹಿತ್ಯವೂ ಹಾಗೆಯೇ ಶ್ರೀ ದೇವರ ಭಂಡಾರಕ್ಕೆ ಹಾನಿಯಾಗುವ ಸಂಭವವುಂಟು. ಅದಕ್ಕೆ ಹೊಣೆಗಾರರಾರು?

ಶ್ರೀ ದೇವಸ್ಥಾನದಂತೆ ಊರೊಳಗೂ ಜನದಟ್ಟಣೆಯ ಕಾಲಕ್ಕೆ ಕಾಲ ಕಳೆಯುವ ಪ್ರಸಂಗವಿತ್ತು. ವ್ಯಾಪಾರಿಗಳು ತಮ್ಮಲ್ಲಿದ್ದ ಮತ್ತು ಮಾರಾಟಕ್ಕೆಂದು ಕಳೆದ ತಿಂಗಳಲ್ಲಿ ತಂದ ಜಿರುಗೆ ಎಣ್ಣೆಯನ್ನು ಮಾರಾಟಕ್ಕೆಂದ ಬಚ್ಚಿಟ್ಟರು! ಊರಲ್ಲಿ ಒಂದು ಪ್ಯಾಂಟ ಎಣ್ಣೆ ಸಹ ಸಿಗದಂತಾಗಿತ್ತು! ಈ ಸ್ಥಿತಿ ಮಾಮಲೇದಾರರ ದೃಷ್ಟಿಗೆ ಬೀಳುತ್ತಲೇ ಅವರು ಎಣ್ಣೆ ಅಂಗಡಿಗಳ ಪಟ್ಟಿಗೆ ಬರೆದು, ಈ ತಿಂಗಳ ಕೋಟಾ ವ್ಯಾಪಾರಿಗಳಿಗೆ ಕೊಡದೆ ಇಲ್ಲಿಯ ಕಾಂಗ್ರೆಸ ಕಮಿಟಿಗೋ ಮ್ಯುನಿಸಿಪಾಲಿಟಿಗೋ ಕೊಡಿಸಿ ಅವರ ಕಡೆಯಿಂದ ಎಣ್ಣೆಯ ಬಟವಡೆ ಮಾಡಿಸಿದರು. ಅದರಿಂದ ಜನರಿಗೆ ಎಣ್ಣೆ ಸಿಕ್ಕಿತು. ವ್ಯಾಪಾರಿಗಳ ಈ ಕಳ್ಳಾಟವನ್ನು ನೋಡಿದರೆ ಜನರು ಪುನಃ ನಿಯಂತ್ರಣವನ್ನು ಬಯಸುವ ಪ್ರಸಂಗ ಬರುವಂತೆ ತೋರುತ್ತಿದೆ.

ಅಂಕೋಲಾ— (ತಾ. ೧೨-೩-೧೯೪೮) ತಾ ೧೮ ಅಂಕದ "ವೃತ್ತ"ದಲ್ಲಿ ಅಂಕೋಲೆಯ ಗ್ರಾಮಸ್ಥರ ವಿರುದ್ಧ ಪ್ರಕಟವಾದ ಟೀಕೆ ಆಧಾರವಿರುತ್ತದೆಂದು ಜಿಲ್ಲಾಧಿಕಾರಿ ತಿಳಿಸುತ್ತಾರೆ. ತಾ ೨೯-೨-೪೮ಕ್ಕೆ ರಾತ್ರಿ ೮ ಅರತ ಅದರ. ಗ್ರಾಮ ಚಾವಡಿಗೆ ಹೋದಾಗ ಮುಖ್ಯ ಠಾಣೆದಾರರು ತಮ್ಮ ಕೆಲಸಕ್ಕಾಗಿ ಹೊರಗೆ ಹೋಗಿದ್ದರು. ಮದ್ದತ-ಠಾಣೆದಾರರು ಮಾತ್ರ ಚಾವಡಿ ಯಲ್ಲಿದ್ದರು. ರಾ॥ ಅರಸರು, ಮುಖ್ಯ ಠಾಣೆದಾರರ ಖುರ್ಚಿಯ ಮೇಲೆ ಕುಳಿತುಕೊಂಡು, ಯಾವ ಅಧಿಕಾರವಿಲ್ಲದೆ ಗ್ರಾಮದ ರೆಕಾರ್ಡ ನೋಡತೊಡಗಿದರು. ಹೀಗೆ ಮಾಡುತ್ತಿರುವಾಗ ಚಾವಡಿಗೆ ಬಂದ ಜನರಿಗಾಗಿ ಇಟ್ಟಿರುವ ಸ್ಥಳದಲ್ಲಿ ಕುಳಿತುಕೊಳ್ಳದೆ, ಮುಖ್ಯ ಠಾಣೆದಾರರು ಬಂದ ಮೇಲೆ ಅವರು ಬೇಕಾದ ಮಾಹಿತಿಯನ್ನು ಪೂರೈಸುವರೆಂದು ಮದ್ದತ-ಠಾಣೆದಾರರು ಆಗ ರಾ॥ ಅರಸರಿಗೆ ಹೇಳಿದರು. ಆ ಮಾತಿಗೆ, "ನೀನು ಆಗಿರೆ ಹಮಾಲ! ಮದ್ದತ ಠಾಣೆದಾರನಾದೆಯೆಂದು ಕಾಯುವೆ ಅಲಿಸುತ್ತೀಯಾ?" ಎಂದು ರಾ॥ ಅರಸರು ಸಿಟ್ಟಿನಿಂದ ಮಾತಾಡಿ, ತಮ್ಮ ಕಸರತ್ತಿಂದ ಏಳಲಿಲ್ಲ ಅಥವಾ ರೆಕಾರ್ಡ ನೋಡುವದನ್ನು ಬಿಡಲಿಲ್ಲ. ಮುಖ್ಯ ಠಾಣೆದಾರರು ಚಾವಡಿಗೆ ಮರಳಿ ಬಂದ ಮೇಲೆ ಅವರಿಗೆ ಇದೆಲ್ಲ ಕಂಡುಬಂತು. ಅವರು ತಮ್ಮನ್ನು ಬಹಳವಾಗಿ, "ನಮಗೆ ಈಗ ಸ್ವಾತಂತ್ರ್ಯ ಸಿಕ್ಕಿದೆ! ನೀವು ನಮ್ಮ ನೌಕರರು! ನಮ್ಮ ಗ್ರಿರಹಾಜರಿಯಲ್ಲಿ ನೀವು ರೆಕಾರ್ಡ ನೋಡಿದಾಗ್ಯೂ ನೀವು ನಮಗೆ ಕೇಳಕೂಡದು!" ಎಂದು ಮುಂತಾಗಿ ರಾ॥ ಅರಸರು ಹಾಂದರಂತೆ ಅರಸರಿಗೆ ಇವರೊಂದು ಉತಾರ ಬೇಕಾಗಿತ್ತು. ಆ ಉತಾರ ಒಡನೇ ಕೊಡಬೇಕೆಂದು ಅವರು ಸಗ್ರಹಿಸಿದರು. ಹಾಗೆ ರಾತ್ರಿ ಹೊತ್ತಿನಲ್ಲಿ ಉತಾರ ಕೊಡದೆ ಸಿಗುವದೆಂದು ಠಾಣೆದಾರರು ಅವರಿಗೆ ತಿಳಿಸಿದರು. ಗ್ರಾಮಚಾವಡಿಯಲ್ಲಿ ನಿಜವಾಗಿ ನಡೆದ ಕಥೆ ಹೀಗುಂಟು. ಮದ್ದತ-ಠಾಣೆದಾರ

ಮತ್ತು ಅಲ್ಲಿದ್ದ ಉಗ್ರಾಣಿ ಅವರ ಅವಾಚ್ಯಗಳಾದರೂ ಈ ಕಥೆಯನ್ನು ಪುಷ್ಟೀಕರಿಸುತ್ತಿವೆ. ರಾ॥ ಅರಸರು ಮೇಲಿನಂತೆ ಸ್ವತಃ ವರ್ತಿಸಿ ಗ್ರಾಮಸ್ಥರ ವಿರುದ್ಧ ದೂರುವದು ಎಂದೂ ನ್ಯಾಯ್ಯವಾಗಲಾರದು ಎಂದೂ ಜಿಲ್ಲಾಧಿಕಾರಿ ಬರೆಯುತ್ತಾರೆ.

ಕಾರವಾರ— (ತಾ ೧೬-೩-೪೮) ತಾ ೧೫-೩ ರ "ವೃತ್ತ"ದಲ್ಲಿ ಪ್ರಕಟವಾದ ಬ್ಯಾಂಕಿನ ಸಂಘದ ಅಧ್ಯಕ್ಷರ ಸಂಬಂಧದಲ್ಲಿ ಪ್ರಕಟವಾದ ಲೇಖವನ್ನು ಅನುಲಕ್ಷಿಸಿ, ರಾ॥ ಅಚರೇಕರ ಮತ್ತು ರಾ॥ ವ್ಹಿ. ಪಿ. ಭಟ್ಟ ಇವರನ್ನು ದೂಷಿಸಿದ್ದು ಸರಿಯಲ್ಲೆಂದೂ, ಇವರು ಮುಂದಾಗಿ ಪ್ರಯತ್ನಪಟ್ಟು ಸಂಘವನ್ನು ಸ್ಥಾಪಿಸಿ ಕೊಡಿಸುತ್ತಾರೆಂತಲೂ, ಇವರಿಲ್ಲದಿದ್ದರೆ ಸಂಘವು ನಾಮಶೇಷವಾಗುತ್ತಿತ್ತೆಂತಲೂ, ರಾ॥ ನಾಯಕರು ಮೊದಲು ಒಳ್ಳೇ ಪ್ರಯಾಸದಿಂದ ದುಡಿದರೂ ಅಧ್ಯಕ್ಷರ ಸ್ಥಾನಕ್ಕೆ ಅನರ್ಹರೆಂತಲೂ, ಒಂದೆ ಅವರು ಮಾಡುವ ಕಾರ್ಯದ ಮಾಡುವ ಮುನ್ನ ಅವರ ವರ್ತನೆ ನಡೆಸಿದ್ದರಿಂದ ಅಧಿಕಾರ ಮಂಡಳದಿಂದ ಅವರನ್ನು ದೂರ ಇಡಬೇಕಾಯಿತೆಂತಲೂ, ಅವರನ್ನು ಪುನಃ ಅವರಿಗೆ ಮುಂದಿನವರ್ಷ ಸೇರಿಸಿಕೊಳ್ಳುವದು ಅಸಾಧ್ಯವೆಂತಲೂ ಸದರ ಸಂಘದ ಉತ್ಸಾಹಿ ಮಂಡಳದೊಳಗಿನ ರಾ॥ ವೆಂಕಟೇಶ ಪಿಕಳೆ ಅವರು ಇದರ ಬಗ್ಗೆ ಬರೆಯುತ್ತಾರೆ.

(ತಾ ೯-೩-೧೯೪೮) ಇಂದು ಸುಂಕೇರಿಯ "ಕನ್ನಡದ ಮೂಲ ವಾಚನಾಲಯ"ದ ವತಿಯಿಂದ ಹೆಣ್ಣುಮಕ್ಕಳ ಶಾಲೆಯಲ್ಲಿ ದಾದರ ಪುಣ್ಯತಿಥಿಯು ಆಚರಿಸಲ್ಪಟ್ಟಿತು. ರಾ॥ ಮಧುವರದಾರ ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಅಧ್ಯಕ್ಷರು ಮಹಾತ್ಮಾ ಗಾಂಧಿ ಹಾಗೂ ಕಸ್ತೂರಬಾ ಇವರ ಭಾವಚಿತ್ರಗಳ ಅನಾವರಣವನ್ನು ಮಾಡಿದರು. ಈ ವಾಚನಾಲಯವು ಕಳೆದ ಅಕ್ಟೋಬರ ತಿಂಗಳಲ್ಲಿ ರಜಿಸ್ಟರ ಆಗಿರುತ್ತದ್ದು, ಇದಕ್ಕೆ ವಿದ್ಯಾಖಾತೆಯಿಂದ ರೂ ೫೬-೪-೦ ಮತ್ತು ಗ್ರಾಮಸೇವೋದ್ಧಾರ ಮತೆಯಿಂದ ರೂ ೫೦ ಧನಸಹಾಯ ಸಿಕ್ಕಿದೆ. ಈ ಹಣದಿಂದಲೂ ಬೇರೆ ಹಣದಿಂದಲೂ ೭೫ ಪುಸ್ತಕಗಳನ್ನು ಕೊಂಡುಕೊಳ್ಳಲಾಗಿದೆ. ಜನರು ಹೆಚ್ಚಾಗಿ ಈ ವಾಚನಾಲಯದ ಹೆಚ್ಚೆಚ್ಚು ಉಪಯೋಗ ಮಾಡಿಕೊಳ್ಳತಕ್ಕದ್ದು.

ಈ ವರ್ಷದ ಮೆಟ್ರಿಕ್ ಪರೀಕ್ಷೆಗೆ ಇಲ್ಲಿಯ ಕೇಂದ್ರದಲ್ಲಿ ೫೪೦ ವಿದ್ಯಾರ್ಥಿಗಳು ಕುಳಿತಿದ್ದಾರೆ. ಕಳೆದ ವರ್ಷ ೪೯೦ ಮಂದಿ ಕುಳಿತಿದ್ದರು.

ಕಳೆದ ತಾ ೬ಕ್ಕೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಹರಿಜನ ಸಭೆ ಕೂಡಿತ್ತು. ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ಹರಿಜನ ವಿದ್ಯಾರ್ಥಿಗಳಿಗೆ ಬಟ್ಟೆ ಮತ್ತು ಪುಸ್ತಕಗಳನ್ನು ಪುಕ್ಕಟೆಯಾಗಿ ಪೂರೈಸುವಂತೆ ಸರಕಾರಕ್ಕೆ ವಿನಂತಿಸಬೇಕೆಂದು ಸಭೆಯಲ್ಲಿ ಠರಾಯಿಸಲಾಯಿತು. ಹರಿಜನ-ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಹೆಚ್ಚಿನ ಧನಸಹಾಯವನ್ನು ಸರಕಾರವು ಮಾಡತಕ್ಕದ್ದೆಂದು ಇನ್ನೊಂದು ಠರಾವಾಗಿದೆ. ಕಳೆದ ತಿಂಗಳಲ್ಲಿ ಹಳೆಯ ವಿದ್ಯಾರ್ಥಿಗಳಿಗೆ ಸಂಗ್ರಹಿಸಲ್ಪಡುವದರಿಂದ ಹರಿಜನ ವಿದ್ಯಾರ್ಥಿಗಳಿಗೆ ಹೊರಡುವ ಯಾಗುತ್ತಿದೆ ಇತ್ಯ ವಿದ್ಯಾರ್ಥಿಗಳ ಲಕ್ಷವನ್ನು ಎಳೆಯಬೇಕೆಂದೂ ಠರಾಯಿಸಿದೆ.

ಇರಾಣದೊಳಗಿನ ಘಟನೆಗಳು ರಷ್ಯದಿಂದ ಬ್ರಿಟಿಶ ಅಮೇರಿಕೆಯವರಿಗೆ ಹೆಚ್ಚಿಗೆ ಅನಿಷ್ಟಕಾರಕ ತೋರುತ್ತಿವೆ. ಅಫಗಾಣಿಸ್ತಾನದ ಮೇಲೆ ರುಶ್ಯದ ಪ್ರಭಾವ ಹೆಚ್ಚಬೇಕೆಂಬ ಸಂಶಯು ಬರುತ್ತಿವೆ. ಪಾಕಿಸ್ತಾನ ಅಫಗಾಣಿಸ್ತಾನಗಳಲ್ಲಿ ಹಗೆ ಇಲ್ಲದಿದ್ದರೂ, ಅವುಗಳಲ್ಲಿ ಮಿತ್ರತ್ವಭಾವವೂ ಉಂಟಾಗಿಲ್ಲ ಗಡಿ

ದಿ ಎಗ್ರಿಕಲ್ಚರಲ್ ಎಂಡ್ ಇ

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟ

ಹೆಡ್ ಆಫೀಸು. "ಲಕ್ಷ್ಮೀ ನಿ-

ಶಿಕ್ತ ಮೂಲಧನ ರೂ ೩,೭೧,೦

ಶೇಖರಿಸಿಡಲ್ಪಟ್ಟ ನಿಧಿ ರೂ. ೧,೦

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು

ಅಂಗೀಕರಿಸಲ್

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫಿ

ಬರೆದು ತಿಳಿಯಿರಿ

ಕುಂದಾಪುರ,
ತಾ. ೧೫-೩-೧೯೪೮

ಕಳೆದ ಶನಿವಾರ ಸರಕಾರಿ ಹಾಯಸ್ಕೂಲಿನ ವಿದ್ಯಾರ್ಥಿಗಳ ಸಾಹಿತ್ಯಿಕ ಪಂದ್ಯಾಟಗಳು, ಶಿಕ್ಷಣ ವಿಭಾಗದ ಪ್ರಾಂತ ಸಾಹೇಬ ಶಾನಭಾಗರ ಅಧ್ಯಕ್ಷತೆಯಲ್ಲಿ ನಡೆದವು. ಈ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ಕೊಡಲು ಮುಂಬಯಿಯ ಡಾ॥ ರಾವ ಇವರು ಕೆಲವು ಹಣ ಕಳಿಸಿದ್ದರು.

ಕಳೆದ ರವಿವಾರ ಬಾಡ ವಸ್ತು ಇಂಗ್ಲಿಶ ಶಾಲೆಯ ವಾರ್ಷಿಕ ಸಮ್ಮೇಲನವು ಜಿಲ್ಲಾಧಿಕಾರಿಗಳಾದ ರಾ॥ ರೆಬೆಲೋ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೇಶಾಭಿಮಾನ, ಶಿಸ್ತು, ಸರಳತೆ ಇವೇ ಮೊದಲಾದ ಸದ್ಗುಣಗಳನ್ನು ಕಲಿಸುವದೇ ಶಿಕ್ಷಣದ ಮುಖ್ಯ ಉದ್ದೇಶವೆಂದು ಪ್ರತಿಪಾದಿಸಿದರು. ಈ ಶಾಲೆಗೆ ಆಟದ ಬಯಲಿನ ಕೊರತೆಯಿದೆ. ಆ ಕೊರತೆಯನ್ನು ಪರಿಹರಿಸುವ ಪ್ರಯತ್ನ ತಾವು ಮಾಡುತ್ತೇವಾಗಿಯೂ ಜಿಲ್ಲಾಧಿಕಾರಿ ಆಶ್ವಾಸನೆಯನ್ನಿತ್ತಿದ್ದಾರೆ. ಈ ಸಮಾರಂಭದ ಕಾಲಕ್ಕೆ ಶಾಲೆಗೆ ವಿಶೇಷ ಸಹಾಯ ಪ್ರೋತ್ಸಾಹಗಳನ್ನಿತ್ತ ದಿವಂಗತ ಸುಬ್ರಾಯ ಹಳದೀಪೂರ, ಮಂಜುನಾಥ ಜೋಶಿ, ಶ್ರೀನಿವಾಸ ಭಾಟಲೆ ಮತ್ತು ಮಹಾಬಲೇಶ್ವರ ಇವರ ಭಾವಚಿತ್ರಗಳ ಅನಾವರಣವೂ ಜಿಲ್ಲಾಧಿಕರ ಹಸ್ತದಿಂದ ಜರುಗಿತು.

ಶಿರಸಿ— (ತಾ ೬-೩-೪೮) ಇಲ್ಲಿಯ ಕೇಂದ್ರದಲ್ಲಿ ಕಳೆದ ಅಕ್ಟೋಬರ ತಿಂಗಳಲ್ಲಾದ ಜಿಲ್ಲಾ ಮುಲ್ಕಿ ಪರೀಕ್ಷೆಯಲ್ಲಿ, ಅಮೀನಾದಿ ಕಾಕಿನ ಶಾಲೆ ಮುಕ್ಕೆದ್ದಿ(೨೭೫) ಮತ್ತು ಅಮೀನಾದಿ ಅಲ್ಲದ ಬಹನಾನ (೨೪೫) ಇವರು ಉತ್ತೀರ್ಣರಾಗಿರುತ್ತಾರೆಂದು ಹೆಡ್ ಮಾಸ್ತರ ಶ್ರೀ ಇವರು ತಿಳಿಸುತ್ತಾರೆ.

ಸರಕಾರದವರು ಹಿಂದೆ ಭಟ್ಟಿ ಭತ್ತೆಯ ಪ್ರಮಾಣ ನಿರ್ಧರಿಸಿದ್ದ ಇದ್ದ ಮಹರ್ಗತಿಗಿಂತ ಈಗ ಜಾಸ್ತಿ ಹೆಚ್ಚಾಗಿದೆಯೆಂದೂ, ಈಗಿನ ಮಹರ್ಗತೆಯ ಮಾನದಿಂದ ಭಟ್ಟಿ-ಭತ್ತೆಯ ಪುನರ್ವಿಚಾರಣೆಯಾಗುವದು ಅವಶ್ಯವುಂಟೆಂದೂ ಇಲ್ಲಿಯ ಕೆಲವು ಸರಕಾರಿ ನೌಕರರು ದೂರುತ್ತಾರೆ.

ಸಿದ್ದಾಪುರ— (ತಾ. ೫-೩-೪೮) ಹೇರೂರಿನ ಸರಕಾರಿ ಉಗ್ರಾಣದೊಳಗೆ ೧೯೪೫ರ ಮಹಿನಾದಲ್ಲಿ ಕೆಲವು ಅಕ್ಕಿ ಚೀಲಗಳು ಕಾಣಗೆ ಹೋಗಿದ್ದವು. ಅದರಿಂದ ಅಕ್ಕಿಯ ಸಂಗ್ರಹದಲ್ಲಿ ಖಟ್ಟಿ ಬಂತು. ಈ ಅಕ್ಕಿ ಖಟ್ಟಿ ಬರಲು ಕಾರಣವೇನೆಂದು ಪರಿಶೋಧಿಸದೆ, ಕಲ್ಲೆಕ್ಟರಿಯಿಂದಲೇ ಅಕ್ಕಿಯ ಖಟ್ಟಿ ಬಂತೆಂದು ಭಾವಿಸಿ, ಅಲ್ಲಿನ ರಾ॥ ಗಣಪತಿ ಭಟ್ಟ ಸುಬ್ರಾಭಟ್ಟ ಹೊಲೆ ವಗ್ಯೆರಿ ಮೇಲೆ ಸರಕಾರದವರು ಖಟ್ಲೆ ಮಾಡಿಸಿಟ್ಟಿದ್ದರು. ಈ ಖಟ್ಲೆಯ ವಿಚಾರ ಕಳುಹಿಸಿದ್ದ ಜನರಲ್ ಮೆಜಿಸ್ಟ್ರೇಟರ ಮುಂದೆ ನಡೆದು ರಾ॥ ಗಣಪ

ಜಾಹೀರ ವಿನಂತಿ.

ನಾನು ಇದೇ ಫಾಲು ೯ ನೇ ತಾರೀಖಿನಿಂದ ಆರಂಭಿಸುವ ಸತ್ಯನಾರಾಯಣಾದಿ ವ್ರತಗಳು ಮತ್ತು ಅತಿರುದ್ರ ಹವನದ ಬಗ್ಗೆ ಯಾರನ್ನೂ ದೇಶಾವರಕ್ಕೆ ಕಳಿಸಿರುವದಿಲ್ಲ. ಕೆಲವು ನೀಚ ಸ್ವಾರ್ಥಿಗಳು ಹಳ್ಳಿಗಳಿಗೆ ಹೋಗಿ ಈ ಕಾರ್ಯಕ್ಕೆ ವರ್ಗಣಿ ಎತ್ತುತ್ತಿರುವಾಗಿ ನನ್ನ ತಿಳುವಳಿಕೆಗೆ ಬಂದಿದೆ. ಕಾರಣ ಈ ಕೆಲಸದ ಬಗ್ಗೆ ಯಾರೊಬ್ಬರೂ ಬೇರೆಯವರ ಕಡೆಗೆ ಹಣ ಕೊಡಬಾರದಾಗಿ ವಿನಂತಿ.

ತಾ ೧೨-೩-೧೯೪೮

ಗಣಪತಿ ತಿಮ್ಮಣ್ಣ ಹೆಗಡೆ, ಕಡತೋಕಾ

ನಮ್ಮ ಹಿಂದುಸ್ಥಾನಕ್ಕೆ ಏಕೆ, ಜಗತ್ತಿನ ಜ್ಞಾನಜ್ಯೋತಿ ಮಹಾತ್ಮರೆಂದು ಕೊಂಡಾಡಿದ ಪೇತಕ, ಚಿತ್ರರಂಜನ ಕಂಪನಿಯವರ, ಎಂಥವರ ಮನಸ್ಸನ್ನೂ ಮೆಚ್ಚಿಸುವಂಥ ಸುಗಂಧದ ಶ್ರೇಷ್ಠ ಊದಬತ್ತಿಗಳನ್ನು ನೋಡಲೇಬೇಕು!!

(೧) ಪಂಡಿತ ದರ್ಬಾರ್ ಬತ್ತಿ,
(೨) ಮಹಾವೀರ ಅಗರ ಬತ್ತಿ

ಮಹಾಶಯರೇ, ಮೇಲೆ ಪಳಕು, ಒಳಗೆ ಹುಳುಕು ಮಾಡಿದ ಪೆಕಿಂಗಗಳಿಗೆ ಮೋಸ ಹೋಗದೆ ನಮ್ಮ ಶ್ರೇಷ್ಠ ಮಾಲನ್ನೇ ಉಪಯೋಗಿಸಿ ನೋಡಿರಿ!

ಚಿತ್ತರಂಜನ ಕಂಪನಿ,
ಸಂತೇಪೇಟೆ, ತುಮಕೂರು, (Mysore).

[illegible]

ವಾರ್ತೆಗಳು

[illegible]

BUY

OR

SELL

"UNITED KARNATAK" POLICIES

For particulars apply to

AGENCY OFFICE.

Canara

...RAL INDIA, LTD.,

(Liability of Members limited)

...Bhavan', KARWAR, N. K.

...RSI, HONAVAR, YELLAPUR,
...OLA, HUBLI & DHARWAR

Rs 10,00,000.

Rs 5,00,000.

...rves – Rs 5,03,502-8-0

...on Deposits

Savings Bank a/c @ 2½%

...onths @ 3% per annum

...onths @ 3½% „

...hs or more @ 4% .

...ing business transacted

P. X. GRACIOUS.
MANAGING DIRECTOR

...48 is to be paid so as to rea... ...948, in respect of motor vehicles bear... ...nd on or before 31-3-48 in respect ... ...ax can be paid (1) in Cash (2) by C... ...mperial Bank of India Belgaum only ... ...t the Regional Transport Office Bel... ...n week days and between 9-30 A. M. ...

(2) Payment of tax should be ... ...ertificate of the vehicle (2) Certificate o... ...III of the Indian Motor Vehicles Ac... ...ehicles either registered in this Prov... ...arty risks and (3) a declaration in for... ...o tax tokens or discs will be issued ... ...ndorsed unless the above requirements ...

(3) Non-use intimation of vehicle... ...ubmitted before the date on which the... ...r such vehicles, expire as required by ... ...40, failing which owners will be liabl... ...e date they notify the non use of their ... ...egional Transport Office

...elgaum, 12-3-48

6

ಜಾಹೀರಾತುಗಳ ದರ:-
ಕಪ್ಪು ಅಕ್ಷರಗಳ ಜಾಹೀರಾತಿಗೆ ಒಂದು ಸಲಕ್ಕೆ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ಮುಖೇನ ಪತ್ರದ್ವಾರಾ
ತಿಳಿಸಲಾಗುವದು.

Reg. No. B. 1270 Monday, 22-3-1948

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೯.

ಕುಮಟಾ.– ಸೋಮವಾರ ತಾ ೨೨—೩—೧೯೪೮

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧ ೧೨-೦
ಬಿಡಿ ಸಂಚಿಕೆಗೆ ೦ ೧ ೦
ಹಳೇ ಸಂಚಿಕೆಗೆ ೦ ೪-೦
ವ್ಹಿ ಪಿ ಯಿಂದ ಹಣ ಕಳಿಸುವವರು
ವ್ಹಿ ಪಿ ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಎಲ್ಲೆಲ್ಲೂ ಯುದ್ಧದ ಮಾತು.

(ನಿರೀಕ್ಷಕನು ಬರೆದುದು)

ಯುದ್ಧದ ಮಾತನ್ನೆತ್ತಬಾರದೆಂದೂ ಶಾಂತ ಪರಿಸ್ಥಿತಿ ನಿರ್ಮಿಸಲು ಸಕಲರೂ ಪ್ರಯತ್ನಿಸಬೇಕೆಂದೂ ಫ್ರಾನ್ಸ ದೇಶದ ಹಿಂದಿನ ಮುಖ್ಯ ಪ್ರಧಾನರಾದ ಬ್ಲ್ಯೂಮರವರು ಪ್ಯಾರಿಸದೊಳಗಿನ "ಪೊಪ್ಯುಲೆ" ಪತ್ರಿಕೆಯಲ್ಲಿ ಬರೆಯುತ್ತಾರೆ 'ಬ್ರಿಟನ್ನು ಗಂಡಾಂತರದಲ್ಲಿದೆ, ೧೯೩೯ನೇ ಇಸವಿಯ ಪರಿಸ್ಥಿತಿಯಷ್ಟೇ ಗಂಡಾಂತರದ ಪರಿಸ್ಥಿತಿ ಉದ್ಭವಿಸಿದೆ" ಎಂಬುದಾಗಿ ಲಂಡನ್ನಿನ "ಒಬ್ಸರ್ವರ' ಪತ್ರಿಕೆಯು ಬರೆದು ಮುಂಬರುವ ಯುದ್ಧವನ್ನು ಪ್ರತಿಭಟಿಸುವದಕ್ಕಾಗಿ ಬ್ರಿಟಿಶರು ಈಗಿನಿಂದಲೇ ಸಜ್ಜಾಗಬೇಕೆಂದು ಮುಂಜಾಗ್ರತೆಯನ್ನಿತ್ತಿದೆ ಬ್ರಿಟಿಶ ಪಾರ್ಲಿಮೆಂಟಿನೊಳಗೆ ವಿದೇಶ ರಾಜಕಾರಣದ ಚರ್ಚೆ ನಡೆದಾಗ, ರುಶ್ಯ ದೇಶದ ಬಾಕೂ ಪಟ್ಟಣದ ಮೇಲೆ ದಾಳಿ ಮಾಡಬೇಕೆಂದು ಕೆಲವು ಸದಸ್ಯರು ಅರ್ಭಟಿಸಿದರು ರುಶ್ಯ ಜನಾಂಗದ ಬಗ್ಗೆ ಸಹಾನುಭೂತಿಯುಳ್ಳ ಇನ್ನೊಬ್ಬರು ಎದ್ದು, ಲಂಡನ್ನಿನ ಮೇಲೆ ದಾಳಿ ಮಾಡಬೇಕೆಂಬ ಮಾತು ರುಶ್ಯ ಲೋಕಸಭೆಯಲ್ಲಿ ನಡೆದರೆ ಬ್ರಿಟಿಶರಿಗೆ ಎಷ್ಟು ವೇದನೆಯಾದೀತೆಂಬುದರ ವಿಚಾರ ಮಾಡಿ ಇಂಥ ಚರ್ಚೆ ಮಾಡುವದು ವಿಹಿತವೆಂದರು ರುಶ್ಯ-ದ್ವೇಷವಿಂಗ ಪಶ್ಚಿಮ ಯುರೋಪದಲ್ಲಿ ಎಲ್ಲೆಲ್ಲೂ ಹಬ್ಬುತ್ತಲಿದೆ ಮೊನ್ನೆ ತಾ. ೧೭ನೇಗೆ ಬ್ರುಸೆಲ್ಸ ಪಟ್ಟಣದಲ್ಲಿ ಬ್ರಿಟನ, ಫ್ರಾನ್ಸ, ಬೆಲ್ಜಿಯಮ್, ಹೊಲಂಡ ಮತ್ತು ಲೆಕ್ಸೆಂಬರ್ಗ ಈ ೫ ರಾಷ್ಟ್ರಗಳ ಪ್ರತಿನಿಧಿಗಳು ಒಂದು ಒಡಂಬಡಿಕೆ ಮಾಡಿಕೊಂಡಿದ್ದಾರೆ. ೫೦ ವರುಷಗಳ ತನಕ ಈ ಒಡಂಬಡಿಕೆ ಊರ್ಜಿತವಿರಬೇಕೆಂದು ನಿರ್ಣಯವಾಗಿದೆ ಪಶ್ಚಿಮ ಯುರೋಪದೊಳಗಿನ ಎಲ್ಲ ರಾಜ್ಯಗಳನ್ನು ಈ ಒಪ್ಪಂದದಲ್ಲಿ ಸೇರಿಸಿಕೊಂಡು ರುಶ್ಯ ಜನಾಂಗವನ್ನು ಎದುರಿಸಬೇಕೆಂಬ ವಿಚಾರ ಪಾಶ್ಚಿಮಾತ್ಯ ರಾಷ್ಟ್ರಗಳ ರಾಜಕಾರಣಿಗಳಲ್ಲಿ ನೆಲೆಗೊಂಡಿದೆ ಇದಕ್ಕೆ ಪ್ರತಿಯಾಗಿ ರುಶ್ಯರು ಪೂರ್ವ ಯುರೋಪವನ್ನು ಸಂಘಟಿಸಿ, ಬ್ರಿಟಿಶ ಪ್ರಭೃತಿ ಪ್ರತಿಸ್ಪರ್ಧಿಗಳೊಡನೆ ಹೋರಾಡಬಯಸುತ್ತಾರೆ ಜರ್ಮನಿಯನ್ನು ಪುನರ್ಘಟಿಸಿ, ಅದನ್ನು ರುಶ್ಯ ಜನಾಂಗದ ಮಾಂಡಲೀಕ ರಾಷ್ಟ್ರವನ್ನಾಗಿ ಮಾಡುವ ಪ್ರಯತ್ನವೂ ನಡೆದಿದೆ ರುಶ್ಯರ ಈ ಕಾರಸ್ಥಾನ ಸಾಫಲ್ಯವಾಗುವದೆಂದು ಬರ್ಲಿನ್ ಪತ್ರಿಕೆಗಳ ಬರೆವಣಿಗೆಯಿಂದ ತೋರುತ್ತದೆ ಝೆಕೊಸ್ಲೋವ್ಹಾಕಿಯಾದಲ್ಲಿ ಬ್ರಿಟಿಶ ಅಮೇರಿಕೆಯವರ ಪ್ರಯತ್ನ ಕಡಿಮೆಯಾಗಿ ಮತ್ತು ರುಶ್ಯರ ಕುತಂತ್ರಗಳು ಸಫಲವಾಗಿ, ಝೆಕೊಸ್ಲೋವ್ಹಾಕಿಯಾ ಸರಕಾರದಲ್ಲಿ ಈಗ ಕಮ್ಯುನಿಸ್ಟರ ಮೇಲುಗೈ ಆಗಿದೆ ಫಿನಲಂಡವನ್ನು ತಮ್ಮ ಪಕ್ಷಕ್ಕೆ ಎಳೆಕೊಳ್ಳಲು ರುಶ್ಯರು ಯತ್ನಿಸುತ್ತಿದ್ದಾರೆ ಹೀಗೆ ಯುರೋಪ ಖಂಡದ ಪೂರ್ವಾರ್ಧವು ಪಶ್ಚಿಮಾರ್ಧಕ್ಕೆ ಎದುರಾಳಿಯಾಗಿ ನಿಲ್ಲುವ ನೋಟ ಬೇಗನೇ ಕಣ್ಣಿಗೆ ಬೀಳುವದು ಈ ಪರಿಣತಿ ಪೂರ್ಣವಾಗಲು ಇನ್ನೊಂದು ತಿಂಗಳು ಬೇಕು ಏಪ್ರಿಲ ತಾ ೧೮ಕ್ಕೆ ಇಟಾಲಿಯಲ್ಲಿ ಚುನಾವಣೆಗಳಾಗಲಿವೆ ಈ ಚುನಾವಣೆಯ ಸುತ್ತುಮುತ್ತು ಯುರೋಪದ ರಾಜಕಾರಣ ಸುತ್ತುವರಿಯುತ್ತಿದೆ ಒಂದು ಬದಿಯಿಂದ ರುಶ್ಯರೂ ಇನ್ನೊಂದು ಬದಿಯಿಂದ ಬ್ರಿಟಿಶ ಅಮೇರಿಕೆಯವರೂ ಇಟಾಲಿಯನ್ನು ಒಲಿಸಿಕೊಂಡು ತಮ್ಮ ಪಕ್ಷ ಭದ್ರಪಡಿಸಲು ಯತ್ನಿಸುತ್ತಿದ್ದಾರೆ ಎರಡೂ ಪಕ್ಷಗಳ ಯುಕ್ತಿ-ಪ್ರಯುಕ್ತಿಗಳು ನಡೆದಿವೆ ಇಟಾಲಿಯನ್ನು ಒಲಿಸಿಕೊಂಡ ಪಕ್ಷಕ್ಕೆ ಭೂಮಧ್ಯ ಸಮುದ್ರದ ಸ್ವಾಮಿತ್ವ ಸಿಗುತ್ತಿದೆ ತುರ್ಕಸ್ತಾನ, ಗ್ರೀಸ ದೇಶಗಳಿಗೆ ಅಮೇರಿಕೆಯು ವಿಪುಲ ಸೈನಿಕ ಸಹಾಯ ಪೂರೈಸಿ, ರುಶ್ಯರು ಆ ಬದಿಯಿಂದ ಭೂ ಮಧ್ಯಸಮುದ್ರದ ಕಡೆಗೆ ಸುಳಿಯದಂತೆ ಜಾಗ್ರತೆ ಕೊಂಡಿದ್ದಾರೆ ಮುಸಲ್ಮಾನ ಲೋಕವನ್ನು ಸಂತೈಸಲ ಬ್ರಿಟಿಶರೂ ಅಮೇರಿಕೆಯವರೂ ಪ್ರಯತ್ನ ಮಾಡುವ ಮುಖ್ಯ ಉದ್ದೇಶ ಅದನ್ನು ರುಶ್ಯರ ವಿರುದ್ಧ ಸಂಘಟಿಸಬೇಕೆಂಬುದು ಪ್ಯಾಲೆಸ್ತಾಇನವನ್ನು ವಿಭಾಗ ಮಾಡಿ, ಅರಬರಿಗೂ ಯಹೂದಿಗಳಿಗೂ ಅದನ್ನು ಹಂಚಿಹಾಕುವ ಅಮೇರಿಕೆಯ ಯೋಜನೆಯನ್ನು ಅರಬ ಜನಾಂಗಗಳು ನಿಗ್ರಹದಿಂದ ಪ್ರತಿಭಟಿಸಿದರೂ, ಅಮೇರಿಕೆಯವರು ಈ ವರೆಗೆ ಯಹೂದಿಗಳ ಪಕ್ಷವನ್ನು ಎತ್ತಿ ಹಿಡಿದಿದ್ದರು ಆದರೆ ಇತ್ತಲಾಗಿ ರುಶ್ಯರ ಭೀತಿ ಹೆಚ್ಚಾದ್ದರಿಂದ ಅಮೇರಿಕೆಯು ಆ ಪಕ್ಷದ ಕೈಬಿಟ್ಟಿದೆ। ಪ್ಯಾಲೆಸ್ತಾಇನದ ಪಾಲುಪಟ್ಟಿ ಮಾಡುವ ಯೋಜನೆಯನ್ನೂ ಅಮೇರಿಕೆಯು ಬಿಟ್ಟುಕೊಟ್ಟಿರುವದಾಗಿ ಮೊನ್ನೆಯೇ ಪ್ರಕಟವಾಗಿದೆ। ಇರಾಣದೊಳಗಿನ ಎಣ್ಣೆಯ ಗಣಿಗಳನ್ನು ಸ್ವಾಧೀನಪಡಿಸಿಕೊಳ್ಳಲು ರುಶ್ಯರೂ ಬ್ರಿಟಿಶ-ಅಮೇರಿಕೆಯವರೂ ಹೆಣಗಾಡುತ್ತಿದ್ದಾರೆ ಬ್ರಿಟಿಶ ಅಮೇರಿಕೆಯವರಿಗೂ ರುಶ್ಯರಿಗೂ ಇರಾಣದೊಳಗಿಂದ ಹೊರತಳ್ಳಬೇಕೆಂದು ಇರಾಣದ "ಮಜಲಿಸ" ಲೋಕಸಭೆಯಲ್ಲಿ ಒಂದು ತೀರ್ಮಾನವಾಗಿದೆ ಇರಾಣವು ಯಾವದೇ ಜನಾಂಗಕ್ಕೆ ಅಂಕಿತವಾಗಿ ವ್ಯವಹರಿಸದೆ, ಸ್ವತಂತ್ರವಾಗಿ ವರ್ತಿಸಬೇಕೆಂದು ಮಜಲಿಸದ ಅಭಿಮತವುಂಟು ಇರಾಣದೊಳಗಿನ ಘಟನೆಗಳು ರುಶ್ಯರಿಗಿಂತ ಬ್ರಿಟಿಶ ಅಮೇರಿಕೆಯವರಿಗೆ ಹೆಚ್ಚಿಗೆ ಅನಿಷ್ಟಕಾರಕ ತೋರುತ್ತಿವೆ ಅಫಗಾಣಿಸ್ತಾನದ ಮೇಲೆ ರುಶ್ಯರ ಪ್ರಭಾವ ಹೆಚ್ಚಬೇಕೆಂಬ ಸಂಶಯ ಬರುತ್ತಿದೆ ಪಾಕಿಸ್ತಾನ ಅಫಗಾಣಿಸ್ತಾನಗಳಲ್ಲಿ ಹಗೆ ಇಲ್ಲದಿದ್ದರೂ, ಅವುಗಳಲ್ಲಿ ಮಿತ್ರತ್ವಭಾವವೂ ಉಂಟಾಗಿಲ್ಲ ಗಡಿನಾಡಿನವರ ಪಠಾಣಿಸ್ತಾನದ ಬೇಡಿಕೆಯನ್ನು ಅಫಗಾಣಿಸ್ತಾನವು ಪುರಸ್ಕರಿಸುತ್ತಿರುವದರ ಮೇಲಿಂದ ಅಫಗಾಣಿಸ್ತಾನದೊಳಗೆ ರುಶ್ಯರ ರಾಜಕಾರಣ ಬೇಯುತ್ತಿರಬೇಕೆಂದು ಕೆಲವರು ಊಹಿಸುತ್ತಾರೆ ಪಾಕಿಸ್ತಾನವು ಬ್ರಿಟನ್ನ-ಅಮೇರಿಕೆಗಳ ಕೈಗೂಸೆಂಬುದು ಎಲ್ಲರಿಗೂ ಗೊತ್ತಿದೆ ಈ ಜನಾಂಗಗಳ ನೆರವಿನಿಂದಲೇ ಪಾಕಿಸ್ತಾನಿಗಳು ಪಾಕಿಸ್ತಾನವನ್ನು ಸಮೃದ್ಧಗೊಳಿಸುವ ಆಸೆ ತಳೆದಿದ್ದಾರೆ ಈ ಪಾರ್ಶ್ವಭೂಮಿಯಲ್ಲಿ ನಿಂತು ನೋಡಿದರೆ, ಕಾಶ್ಮೀರ ಪ್ರಕರಣದಲ್ಲಿ ಬ್ರಿಟಿಶರು ಪಾಕಿಸ್ತಾನದ ಪಕ್ಷವನ್ನು ಎತ್ತಿಹಿಡಿದು, ಕಾಶ್ಮೀರ ಸಂಸ್ಥಾನವನ್ನು ವಿಭಾಗಗೊಳಿಸಿ ರುಶ್ಯ ದೇಶದ ಬದಿಯ ಪಶ್ಚಿಮ ಭಾಗವನ್ನು ಪಾಕಿಸ್ತಾನಕ್ಕೆ ಒಪ್ಪಿಸಲು ಯಾಕೆ ಪ್ರಯತ್ನಪಡುತ್ತಿದ್ದಾರೆಂಬುದರ ಗೂಢ ತಿಳಿಯುವಂತಿದೆ. ಚೀನದಲ್ಲೂ, ರುಶ್ಯರ ಆಕ್ರಮಣ ಅನಿರೀಕ್ಷಿತವಾಗಿ ಸಾಗಿದೆ ಆ ಪುರಾತನ ರಾಷ್ಟ್ರವನ್ನು ದ್ವಿಖಂಡಗೊಳಿಸಿ ಒಂದು ಖಂಡವನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳುವ ಕಾರಸ್ಥಾನಗಳು ನಡೆದಿವೆ ಚೀನದೊಳಗೆ ಉಭಯ ಪಕ್ಷಗಳು ನಡೆಸಿರುವ ರಾಜಕಾರಣದ ವಾರ್ತೆಗಳು ಸರಿಯಾಗಿ ಪ್ರಕಟವಾಗುವದಿಲ್ಲ. ಆದರಿಂದ ಆ ಕಡೆಯ ಪರಿಸ್ಥಿತಿಯ ಪೂರ್ಣ ಜ್ಞಾನವಾಗುವಂತಿಲ್ಲ ಆದರೂ ಸಾಮಾನ್ಯ ಮಾತುಗಳನ್ನು ಹೀಗೆ ನಮೂದಿಸಬಹುದು: ಇದೀಗ ಜಗತ್ತಿನಲ್ಲಿ ರುಶ್ಯರ ಆಕ್ರಮಣವನ್ನು ಪ್ರತಿಭಟಿಸುವದಕ್ಕಾಗಿ ಬ್ರಿಟಿಶ-ಅಮೇರಿಕೆಯವರೂ, ಬ್ರಿಟಿಶ-ಅಮೇರಿಕೆಯವರ ಪ್ರಭುತ್ವವನ್ನು ಕುಗ್ಗಿಸುವದಕ್ಕೆ ರುಶ್ಯರೂ ಹೆಣಗಾಡುತ್ತಿದ್ದಾರೆ. ಅಮೇರಿಕೆಯ ವಿದೇಶ ಮಂತ್ರಿಗಳಾದ ಸೇ॥ ಜೊರ್ಜ ಮಾರ್ಶಲ್ಲರವರು ತಮ್ಮ ಪಕ್ಷಕ್ಕೆ ಸೇರುವ ಜನಾಂಗಗಳಿಗೆ ಅಮೇರಿಕೆಯ ಸರಕಾರದ ಬೊಕ್ಕಸದಿಂದ ದ್ರವ್ಯಸಹಾಯವನ್ನಿತ್ತು ಅವನ್ನು ಸಂಘಟಿಸುವ ಸಂಕಲ್ಪ ಮಾಡಿರುತ್ತಾರೆ ರುಶ್ಯ-ಪಕ್ಷಕ್ಕೆ ಸೇರುವ ಜನಾಂಗಗಳಿಗೆ ಅಮೇರಿಕೆಯ ಸಹಾಯ ಸಿಗಲಿಕ್ಕಿಲ್ಲವಾಗಿ ಮಾರ್ಶಲ್ಲರು ಕೆಲಿಫೋರ್ನಿಯಾದೊಳಗಿನ ಬರ್ಕಲೆ ವಿದ್ಯಾಲಯದಲ್ಲಿ ಮಾಡಿದ ಭಾಷಣದಲ್ಲಿ ಮುಂಜಾಗ್ರತೆ ಕೊಟ್ಟಿದ್ದಾರೆ ಚುನಾವಣೆಗಳಲ್ಲಿ ರುಶ್ಯ ಪಕ್ಷಪಾತಿ ಉಮೇದ್ವಾರರಿಗೆ ಮತ ಕೊಟ್ಟು ಪ್ರೋತ್ಸಾಹಿಸಿದರೆ ಅಮೇರಿಕೆಯ ದ್ರವ್ಯಸಹಾಯ ಒಮ್ಮೆಲೇ ನಿಲ್ಲುವದೆಂದೂ ಅವರು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯದಲ್ಲಿ ಸಾಂಘೀಕರಿಸಿದ್ದು)

ಹೆಡ್ ಆಫೀಸು "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಸಂದತ್ತ ಮೂಲಧನ ರೂ ೬,೭೧,೦೦೦/— ಕ್ಕೂ ಮಿಕ್ಕಿದೆ

ಕಾಯ್ದಿರಿಸಲ್ಪಟ್ಟ ನಿಧಿ ರೂ ೧,೦೦,೦೦೦/— ಕ್ಕೂ ಮೀರಿರುವದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ರಿಂದ ೩ ಸಲೆ ಬಡ್ಡಿಯಂತೆ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ ೧೫ ೩-೧೯೪೮

ಕೆ ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಇತರರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಇದರ ಮೇಲಿಂದ ಏಪ್ರಿಲ್ ತಾ ೧೮ಕ್ಕೆ ನಡೆಯುವ ಇಟಾಲಿಯೊಳಗಿನ ಚುನಾವಣೆಯ ಪರಿಣಾಮದ ಮೇಲೆ ಜಗತ್ತಿನ ಭವಿಷ್ಯ ಹೊಂದಿಕೊಂಡಿದೆಂದು ನಾನು ಎಣಿಸಿ ಆ ಚುನಾವಣೆಯನ್ನೇ ನಿರೀಕ್ಷಿಸುತ್ತಿದ್ದೇನೆ. ಜಗತ್ತಿಗೆ ಗಂಡಾಂತರ ಬಂದಿದೆಂದು ಮಾರ್ಶಲ್ಲರಂಥ ರಾಜಕಾರಣಧುರಂಧರರು ಘೋಷಿಸುವದರ ಮೇಲಿಂದ ಮುಂದೇನಾಗುವದೆಂದು ತಿಳಿಯದೆ ಒಮ್ಮೆಲೆ ಎದೆ ಹಾರುತ್ತಿದೆ. ಅಮೇರಿಕೆಯು ಪಶ್ಚಿಮ ಯುರೋಪದ ರಾಷ್ಟ್ರಗಳಿಗೆ ಸಕಲ ಸಹಾಯವನ್ನಿತ್ತು ರುಶ್ಯರನ್ನು ಪ್ರತಿಭಟಿಸಲು ಅವನ್ನು ಸಂಘಟಿಸುವದು ಸುರಕ್ಷಿತವೆಂದು ಅಮೇರಿಕೆಯೊಳಗೆ ಅನೇಕರ ಅಭಿಪ್ರಾಯವಿದೆ. ಬ್ರಿಟಿಶ ಸರಕಾರಕ್ಕೂ ರುಶ್ಯರನ್ನು ಹಣ್ಣು ಮಾಡಬೇಕೆಂಬ ಹುಮ್ಮಸ್ಸುಂಟು. ರುಶ್ಯರ ಪಂಥವು ಭೂಲೋಕದಲ್ಲಿ ವ್ಯಾಪಿಸಿದರೆ ಲೋಕಸಂಕಟವಾಗುವದೆಂಬ ಭೀತಿ ಬ್ರಿಟಿಶ ಸರಕಾರಕ್ಕೆ ಉಂಟಾಗಿದೆ. ಆದರಿಂದ ರುಶ್ಯ ಪಂಥದ ಬಗ್ಗೆ ಸಹಾನುಭೂತಿಯುಳ್ಳ ಜನರನ್ನು ಪ್ರೊಫೆಸರ ಮೊದಲಾದ ನಂಬಿಗಸ್ತ ಅಡಳಿತೆಯ ಇಲಾಖೆಯಲ್ಲಿ ಸೇರಿಸಿಕೊಳ್ಳಬಾರದೆಂದು ಬ್ರಿಟಿಶ ಮುಖ್ಯ ಪ್ರಧಾನರಾದ ಮಿ॥ ಅಟ್ಲೀಯವರು ನಿರ್ಧರಿಸಿದ್ದಾರೆ. ಆದರೆ ಬ್ರಿಟಿಷರ ಆರ್ಥಿಕ ಸ್ಥಿತಿ ನೆಟ್ಟಗಿಲ್ಲ. ಹಿಂದಿನ ಮಹಾಯುದ್ಧದ ಕಾಲಕ್ಕೆ ಇರಾಣದಲ್ಲಿ ನಡಿಸಿದ ಯೋಜನಗಳ ಸಂಬಂಧದಲ್ಲಿ ಇರಾಣ ಸರಕಾರಕ್ಕೆ ಸಲ್ಲತಕ್ಕ ಹಣ ಸಹ ಬ್ರಿಟನ್ನಿಗೆ ಈಗ ಸಲ್ಲಿಸಲಿಕ್ಕೆ ಅನುಕೂಲವಿಲ್ಲ! ರುಶ್ಯರಾದರೂ ಇರಾಣ ಸರಕಾರದ ಸಾಲಗಾರರೇ. ಹಿಂದಿನ ಸಾಲಗಳನ್ನು ತೀರಿಸುವ ತನಕ ಈ ಜನಾಂಗಗಳಿಗೆ ಇರಾಣ ಸರಕಾರವು ಆಶ್ರಯ ಕೊಡಬಾರದೆಂದು ಮಜಲಿಸ ಸಭೆಯ ಅನೇಕ ಸದಸ್ಯರು ಸೂಚಿಸಿದ್ದಾರೆ. ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ಕಳೆದ ಗುರುವಾರ ಲಗುಬಗೆಯಿಂದ ತಮ್ಮ ಸೀನೇಟ-ಎಸೆಂಬ್ಲಿಗಳ ಸಂಯುಕ್ತ ಸಭೆಯನ್ನು ಸೇರಿಸಿ, ನೆಲ-ಜಲ-ಮುಗಿಲು ಸೈನ್ಯ ಬಲವನ್ನು ಬೆಳಿಸಿ, ಭಾವೀ ಗಂಡಾಂತರವನ್ನು ಎದುರಿಸಲು ಅಮೇರಿಕೆಯನ್ನು ಸಂಘಟಿಸಬೇಕಾಗಿ ಸಾರಿದ್ದಾರೆ. ರುಶ್ಯರ ವಿರುದ್ಧ ಹಾರಿಸಿದ ಮೊದಲನೇ ಗುಂಡು ಇದೆಂದು ರುಶ್ಯರು ಅಭಿಪ್ರಾಯಪಟ್ಟು, ಅದನ್ನು ಪ್ರತಿಭಟಿಸಲು ಸಿದ್ಧರಾಗುತ್ತಿದ್ದಾರೆ. ಪಶ್ಚಿಮ-ಯುರೋಪದ ರಾಷ್ಟ್ರಗಳ ಸಂಘಕ್ಕೆ ಸೇರಿದ ಜನಾಂಗಗಳಿಗೆ ಅಮೇರಿಕೆಯ ಸರಕಾರವು ಕೊಡುಗೈಯಿಂದ ಹಣ ಕೊಟ್ಟು ಅವನ್ನು ಭದ್ರಪಡಿಸುವ ಯೋಜನೆ ಮಾಡಿದೆ. ಯುರೋಪದಲ್ಲಿ ರುಶ್ಯರನ್ನು ಅಮೇರಿಕೆಯು ಪ್ರತಿಭಟಿಸಬೇಕಾದರೆ ಪಶ್ಚಿಮ ಯುರೋಪದಲ್ಲೇ ರಣರಂಗ ಹೂಡಬೇಕು. ಬೇರೆಡೆ ರಣರಂಗ ಹೂಡಲು ಅನುಕೂಲವಿಲ್ಲ. ಆದರೆ ರುಶ್ಯರನ್ನು ಯುರೋಪದಲ್ಲಿ ಎದುರಿಸುವದಕ್ಕಿಂತ ಅಮೇರಿಕಾ ಖಂಡದ ವಾಯುವ್ಯಕ್ಕೆ ಇರುವ ಅಲಾಸ್ಕಾದಿಂದ ರುಶ್ಯರ ಸೈಬೇರಿಯಾದ ಪ್ರಾಂತದ ಮೇಲೆ ದಂಡೆತ್ತಿಕೊಂಡು ಹೋಗುವದು ಸುಲಭವೆಂದು ಹಲವರು ಅನ್ನುತ್ತಾರೆ. ಪಶ್ಚಿಮ ಯುರೋಪದ ಜನರನ್ನು ನಂಬುವದಕ್ಕಿಂತ ಸ್ವಂತ ಸ್ಥಳದಿಂದ ರುಶ್ಯರನ್ನು ಪ್ರತಿಭಟಿಸುವದು ಸುರಕ್ಷಿತವೆಂದೂ ಲಾಭದಾಯಕವೆಂದೂ ಅವರ ಪ್ರತಿಪಾದನೆಯಿದೆ. ರುಶ್ಯ ದೇಶಕ್ಕೂ ಅಲಾಸ್ಕಾ ನಡುಗಡ್ಡೆಗೂ ನಡುವೆ ಬೆಹರಿನ ಎಂಬ ಚಿಕ್ಕ ಸಾಮುದ್ರಧುನಿಯುಂಟು. ಅಲಾಸ್ಕಾ ಮೊದಲು ರುಶ್ಯರದಿತ್ತು. ೧೮೬೭ರಲ್ಲಿ ಅಮೇರಿಕೆಯವರು ರುಶ್ಯರಿಗೆ ೭೨ ಲಕ್ಷ ಡಾಲರು ಕೊಟ್ಟು ಅದನ್ನು ಕೊಂಡುಕೊಂಡರು. ಈ ಸಾಮುದ್ರಧುನಿಯಲ್ಲಿ ಜೂನದಿಂದ ನವಂಬರ ತನಕ ಮಾತ್ರ ನೀರು ಹರಿಯುತ್ತದೆ. ಉಳಿದ ೬ ತಿಂಗಳು ಅಲ್ಲಿಯ ನೀರು ಹೆಪ್ಪುಗಟ್ಟುತ್ತಿದೆ. ಆದರಿಂದ ಜೂನದಿಂದ ನವಂಬರ ವರೆಗಷ್ಟೇ ಈ ಪ್ರದೇಶದಲ್ಲಿ ಯುದ್ಧ ಮಾಡಬಹುದು. ರುಶ್ಯದೊಳಗೆ ಈಗ ೩೦ ಲಕ್ಷ ಸೈನಿಕರಿದ್ದಾರೆ. ಇಷ್ಟು ಸೈನ್ಯಬಲ ಲೋಕದೊಳಗೆ ಇನ್ನೆಲ್ಲೂ ಇಲ್ಲ. ಆದರಿಂದ ರುಶ್ಯರಿಗೆ ಭಾರಿಯಾಗುವಂಥ ಸೈನ್ಯವನ್ನು ನಿರ್ಮಿಸಬೇಕೆಂದು ಬ್ರಿಟಿಶ ಅಮೇರಿಕೆಯವರೂ ಅವರ [illegible] ರಾಷ್ಟ್ರಗಳ ಜನರೂ ಯೋಚಿಸುತ್ತಿದ್ದಾರೆ. ಅಮೇರಿಕೆಯ ಸಾವಕಾರಿಕೆಗೆ ಈಗ ಇಳಿಮುಖ ಬಂದಿರಬಹುದೆಂದು ನನಗನಿಸುತ್ತಿದೆ. ಅಮೇರಿಕೆಯ ಕೋಟ್ಯಾಧೀಶರೂ ಸರಕಾರದೂ ಮಾಡಿದ ಸಂಪಾದನೆ ಸುಳ್ಳಲ್ಲ. ಅಮೇರಿಕೆಯವರಿಗೆ ಜಗದೇಕವೀರರಾಗಬೇಕೆಂಬ ಅಭಿಲಾಷ ಇತ್ತೀಚಿಗೆ ಬೆನ್ನು ಹತ್ತಿದೆ! ಅದೇ ಪ್ರಕಾರ ರುಶ್ಯ ದೇಶದ ಸ್ಟೆಲಿನರಿಗೂ ಅಖಿಲ ಭೂಮಂಡಳದ ಚಕ್ರೇಶರಾಗಬೇಕೆಂಬ ಮಹತ್ವಾಕಾಂಕ್ಷೆಯುಂಟಾಗಿದೆ. ಈ ಉಭಯತರೊಳಗೆ ಉಂಟಾಗಿರುವ ಮತ್ಸರ, ಸಂಶಯ ಮತ್ತು ಭಯ ಇವುಗಳೊಳಗಿಂದ ೩ನೆಯ ಮಹಾಯುದ್ಧದ ಕಿಡಿಗಳು ಹಾರುವದು ಖಂಡಿತ. ಆದರಿಂದ ಈಗ ಎಲ್ಲೆಲ್ಲೂ ಯುದ್ಧದ ಮಾತುಗಳೇ ಕೇಳಿಬರುತ್ತಿವೆ. ಅಮೇರಿಕೆಯು ತನ್ನ ಅಣುಬಾಂಬುಗಳ ಸಂಗ್ರಹವನ್ನು ಹೆಚ್ಚಿಸುವದಕ್ಕಾಗಿ ಹೆಚ್ಚೆಚ್ಚು ಅಣುಬಾಂಬುಗಳನ್ನು ನಿರ್ಮಿಸತೊಡಗಿರುತ್ತದಾಗಿ ಮೊನ್ನೆ ನ್ಯೂಯೊರ್ಕದಿಂದ "ಇಂಡಿಯನ್ ಪ್ರೆಸ್ ಎಸೋಸಿಯೇಶನ್" ಈ ಸಂಸ್ಥೆಯ ಪ್ರತಿನಿಧಿಗಳು ಸುದ್ದಿ ಕಳಿಸಿದ್ದಾರೆ. ಈ ಅಣುಬಾಂಬುಗಳ ರಚನೆಯ ಕ್ರಮವಾಗಲಿ ಅಮೇರಿಕೆಯ ಬಳಿ ಈಗ ಎಷ್ಟು ಅಣುಬಾಂಬುಗಳು ಇರುತ್ತವೆಂಬುದಾಗಲಿ ಬಹಿರಂಗವಾಗಿಲ್ಲ. ಎಲ್ಲವೂ ಅಮೇರಿಕೆಯ ಗೌಪ್ಯವಾಗಿದೆ! ರುಶ್ಯರ ಕಡೆಗೂ ಹಲವಾರು ಹೊಸ ಗುಪ್ತಾಸ್ತ್ರಗಳುಂಟು. ಹೋದ ಮಹಾಯುದ್ಧದ ಕೊನೆಯ ಸುಮಾರಿಗೆ ಜರ್ಮನರು "[illegible]ನೇ ನಂಬರದ ಜಲಾಂತರ್ಗಾಮಿ" ಎಂಬ ಹೊಸ ಬಗೆಯ ಜಲಾಂತರ್ಗಾಮಿಗಳನ್ನು ಕಟ್ಟುವ ಯೋಜನೆ ಮಾಡಿದ್ದರಂತೆ. ಜರ್ಮನ ಯುದ್ಧ ಇನ್ನು ೬ ತಿಂಗಳು ಮುಂದರಿಯುತ್ತಿದ್ದರೆ ಈ ಹೊಸ ಜಲಾಂತರ್ಗಾಮಿಗಳು ಸಿದ್ಧವಾಗಿ, ಯುದ್ಧದ ರೂಪವೂ ಪರಿಣಾಮವೂ ಬೇರೆ ಬಗೆಯದಾಗುತ್ತಿತ್ತಾಗಿ ಬಲ್ಲವರು ಹೇಳುತ್ತಾರೆ. ಈ ಹೊಸ ಜಲಾಂತರ್ಗಾಮಿಗಳಿಂದ ಸಮುದ್ರದೊಳಗಿನ ಶತ್ರುಗಳ ವ್ಯವಹಾರವನ್ನು ಸಂಪೂರ್ಣ ನಿಲ್ಲಿಸಿ ಬಿಡಲು ಸಾಧ್ಯವುಂಟೆಂದೂ ಅವುಗಳ ಮಾಹಿತಿಯುಳ್ಳವರು ಅಭಿಪ್ರಾಯಪಡುತ್ತಾರೆ. ಈ ಜಲಾಂತರ್ಗಾಮಿಗಳ ರಚನೆಯ ಕ್ರಮವೂ ಅವನ್ನು ತಯಾರಿಸುವ ಯಾಂತ್ರಿಕ ಸಾಹಿತ್ಯದ ಮಾಹಿತಿಯೂ ರುಶ್ಯರಿಗೆ ಸಿಕ್ಕಿದೆ. ರುಶ್ಯರು ಅದನ್ನು ತಮ್ಮ ಗೌಪ್ಯವನ್ನಾಗಿ ಮಾಡಿಟ್ಟುಕೊಂಡಿದ್ದಾರೆ! ಈ ಹೊಸ ಮಾದರಿಯ ಎಷ್ಟು ಜಲಾಂತರ್ಗಾಮಿ ಹಡಗಗಳನ್ನು ರುಶ್ಯರು ಕಟ್ಟಿಸಿದ್ದಾರೆಂಬುದೂ ಬಹಳ ಗುಪ್ತವಿದೆ. ಜರ್ಮನರು ಈಗ ರುಶ್ಯರ ಪಕ್ಷಕ್ಕೆ ಸೇರಿರುವರೆಂದೇ ತಿಳಿಯಬಹುದು. ರುಶ್ಯರ ಅಂಕೆಯಲ್ಲಿರುವ ಪೂರ್ವ ಜರ್ಮನಿಯ ಜನರದೊಂದು ಕೊಂಗ್ರೆಸ್ಸು ಕಳೆದ ವಾರ ಬರ್ಲಿನದಲ್ಲಿ ಸೇರಿ, ಇಡೀ ಜರ್ಮನಿಯ ಬಗ್ಗೆ ಒಂದು ಜನತಾ ಸರಕಾರ ಸ್ಥಾಪಿಸುವ ತೀರ್ಮಾನ ಮಾಡಿದೆ. ರುಶ್ಯರು ಈ ತೀರ್ಮಾನಕ್ಕೆ ಪ್ರೋತ್ಸಾಹ ಕೊಟ್ಟು ಪೂರ್ವ ಬದಿಯ ಜರ್ಮನರ ಸಹಾಯದಿಂದ ಈಗ ಬ್ರಿಟಿಶ-ಅಮೇರಿಕೆಯವರ ಅಂಕೆಯಲ್ಲಿರುವ ಪಶ್ಚಿಮ ಜರ್ಮನಿಯನ್ನೂ ತಮ್ಮ ಬಲಿಯಲ್ಲಿ ಎಳಕೊಳ್ಳುವ ಸಾಹಸ ನಡಿಸಿದ್ದಾರೆ. ಜರ್ಮನರು ಪುನಃ ಸಂಘಟಿತರಾಗಿ ರುಶ್ಯರನ್ನು ಕೂಡಿಕೊಂಡರೆ ಪಶ್ಚಿಮ ಯುರೋಪದಲ್ಲಿ ಬ್ರಿಟಿಶ-ಅಮೇರಿಕೆಯವರು ಕಟ್ಟುವ ಗೋಡೆಯು ಗಾಳಿ-ಗೋಪುರವೇ ಆಗುವದೆಂಬುದಕ್ಕೆ ಸಂದೇಹವಿಲ್ಲ. ಯುರೋಪದೊಳಗಿನ ಎಲ್ಲ ಘಟನೆಗಳನ್ನು ಪರಿಶೀಲಿಸಿದರೆ ೩ನೆಯ ಮಹಾಯುದ್ಧ ಬಹಳ ಸಮೀಪದಲ್ಲೇ ಉಂಟೆಂದು ಹೇಳಬೇಕು. ಈ ಮಹಾಯುದ್ಧ ೧೯೫೦ರಲ್ಲಿ ಒದಗುವದೆಂದು ರುಶ್ಯ ಜನಾಂಗದ ನೆರೆಯಲ್ಲಿರುವ ಮತ್ತು ರುಶ್ಯರ ನಿಕಟ ಪರಿಚಯವುಳ್ಳ ಯುಗೋಸ್ಲಾವ್ಹಿಯಾ ಜನಾಂಗದವರು ನಂಬಿಕೊಂಡು, ಆದರಂತೆ ತಮ್ಮ ಸಿದ್ಧತೆಗಳನ್ನು ಮಾಡಹತ್ತಿದ್ದಾರೆ. ವಿದೇಶಗಳಲ್ಲಿರುವ ಯುಗೋಸ್ಲಾವ್ಹ ಜನರು ಸ್ವದೇಶಕ್ಕೆ ಮರಳಿ ಬರಬೇಕೆಂದೂ ಮಾತೃಭೂಮಿಗೆ ಸಕಲ ಯುಗೋಸ್ಲಾವ್ಹರ ಅವಶ್ಯಕತೆಯುಂಟೆಂದೂ ಯುಗೋಸ್ಲಾವ್ಹಿಯಾ ಸರಕಾರವು ಒಂದು ಆಜ್ಞಾರಾಯಸ ಹೊರಡಿಸಿ ಮತ್ತು ಸ್ವದೇಶಕ್ಕೆ ಮರಳಿ ಬರಲು ಹಣದ ಅಡಚಣೆಯಿರುವ ಪ್ರವಾಸದ ಸೌಕರ್ಯಗಳನ್ನು ಒದಗಿಸಿ, ಜನರಿಗೆ ತನ್ನ ಪ್ರಜೆಗಳನ್ನು ಸ್ವದೇಶಕ್ಕೆ ಬರಮಾಡಿಕೊಳ್ಳಹತ್ತಿದೆ. ಈ ಆಜ್ಞಾರಾಯಸದಂತೆ ೩ ವಾರಗಳ ಹಿಂದೆ ಅಸ್ಟ್ರೇಲಿಯಾದ ಸಿಡ್ನೀ ಮೊದಲಾದ ನಗರಗಳಲ್ಲಿರುವ ಯುಗೋಸ್ಲಾವ್ಹರು ಸ್ವದೇಶಕ್ಕೆ ಮರಳಿದ ವಾರ್ತೆಯುಂಟು. ಯುಗೋಸ್ಲಾವಿಯಾ ಜನಾಂಗವು ಭಾವೀ ಯುದ್ಧದಲ್ಲಿ ರುಶ್ಯರ ಪಕ್ಷಕ್ಕೆ ಸೇರಲು ಈಗಾಗಲೇ ನಿರ್ಧಾರ ಮಾಡಿದ್ದು ಈ ರಾಯಸದ ಮೇಲಿಂದ ಕಂಡುಬರುತ್ತದೆ. ಈ ಯುದ್ಧದಲ್ಲಿ ವಿಜಯಿಗಳಾಗುವರೆಂದು ಅವರು ಮನಗಂಡಿದ್ದಾರಂತೆ. ಇದನ್ನೆಲ್ಲ ನೋಡಿದರೆ, ಯುದ್ಧವು ಮತ್ತು ಯುದ್ಧದ ಕಷ್ಟಗಳು ಯಾರಿಗೂ ಬೇಡ ಎಂದೆನಿಸುತ್ತಿದ್ದರೂ, ೩ನೆಯ ಮಹಾಯುದ್ಧವು ತೀರ ಸಮೀಪದಲ್ಲೇ ಉಂಟೆಂದು ಹೇಳಬೇಕಾಗುತ್ತಿದೆ. ರುಶ್ಯ-ಅಮೇರಿಕೆಯವರೊಳಗೆ ಸಂಧಾನ ಮಾಡಿ, ಅವರೊಳಗಿನ ಅಸೂಯೆ-ಮತ್ಸರಗಳನ್ನು ಪರಿಹರಿಸಬಲ್ಲ ಮಹಾಪುರುಷನಾರಾದರೂ ಮುಂದೆ ಬಂದರೆ ಮಾತ್ರ ಈ ಯುದ್ಧ ತಪ್ಪುವದು. ಅನ್ಯಥಾ ತಪ್ಪುವಂತಿಲ್ಲ.

BUY

OR

SELL

"UNITED KARNATAK"
POLICIES

For particulars apply to.

Manager,
PRINCIPAL AGENCY OFFICE,
Post Box No 10,
UDIPI, S Kanara

ಸುದ್ದಿಗಳ ಸಂದೂಕ.

— ಪೂಜ್ಯ ಮಹಾತ್ಮಾ ಗಾಂಧಿಯವರ ಅಸ್ಥಿ ಭಸ್ಮಗಳನ್ನು ವಿದೇಶಗಳ ಜನರೂ ಪವಿತ್ರವೆಂದು ಅಪೂರ್ವ ಗೌರವ ಸತ್ಕಾರಗಳಿಂದ ಅವುಗಳ ಪೂಜೆಯನ್ನೆಸಗುತ್ತಿದ್ದಾರೆ. ಕಳೆದ ಬುಧವಾರ ರಂಗೂನದಲ್ಲಿ ಭಾರತದ ರಾಯಭಾರಿಗಳಾಗಿರುವ ಡಾ॥ ರಾವ್ ಇವರು ಕಲಕತ್ತೆಯಿಂದ ಮಹಾತ್ಮರ ಪವಿತ್ರ ಅಸ್ಥಿ-ಭಸ್ಮಗಳ ಕಲಶವನ್ನು ವಿಮಾನ ಮಾರ್ಗವಾಗಿ ರಂಗೂನಕ್ಕೆ ಒಯ್ದು, ರಂಗೂನದೊಳಗಿನ ವಿಮಾನ-ನಿಲ್ದಾಣದಲ್ಲಿ ಅದನ್ನು ಬ್ರಹ್ಮದೇಶದ ಮಹಾಮಂತ್ರಿ ಥಾಕಿನ್ ನೂ ಇವರ ವಶಕ್ಕೆ ಕೊಟ್ಟರು. ಮಹಾತ್ಮರ ಪವಿತ್ರ ಅವಶೇಷಗಳ ಗೌರವಾರ್ಥ ಅಂದು ಇಡೀ ಬ್ರಹ್ಮದೇಶದೊಳಗಿನ ಹಿಂದೀ ಜನರ ಅಂಗಡಿಗಳೂ ಕಾರ್ಯಾಲಯಗಳೂ ಮುಚ್ಚಲ್ಪಟ್ಟಿದ್ದವು. ಇರಾವತಿ ನದಿಯಲ್ಲಿ ಆ ಅವಶೇಷಗಳ ವಿಸರ್ಜನೆಯಾಯಿತು. ಸಿಂಗಾಪುರಕ್ಕೆ ಕಳಿಸಿಕೊಟ್ಟ ಮಹಾತ್ಮರ ಅಸ್ಥಿ ಭಸ್ಮಗಳ ಕಲಶವು ಕಳೆದ ಸೋಮವಾರ ರಾತ್ರಿ ಸಿಂಗಾಪುರಕ್ಕೆ ತಲ್ಪಿತು. ಅದನ್ನು ಅಲ್ಲಿಯ ನಗರಭವನದಲ್ಲಿ ಅಂದವಾಗಿ ರಚಿಸಲ್ಪಟ್ಟ ವೇದಿಕೆಯ ಮೇಲೆ ಇಡುವ ಏರ್ಪಾಟು ಮಾಡಲಾಗಿತ್ತು. ಮೊನ್ನೆ ಗುರುವಾರದ ವರೆಗೆ ಕಲಶವು ಅಲ್ಲೇ ಇತ್ತು. ಆಗ ನಗರ-ಭವನವು ಸಿಂಗಾಪುರ-ನಿವಾಸಿಗಳಿಗೆ ಒಂದು ದೊಡ್ಡ ಯಾತ್ರಾಸ್ಥಳವಾಗಿತ್ತು. ಶುಕ್ರವಾರ ಆ ಕಲಶವನ್ನು ಕೌಲಾ ಲಂಪುರ ಎಂಬ ನಗರಕ್ಕೆ ಒಯ್ಯಲಾಗಿದೆ. ಅಲ್ಲಿಂದ ಅದನ್ನು ಕೋಟಾಭಾರು ಮತ್ತು ಪೆನಾಂಗ ಪಟ್ಟಣಗಳಿಗೆ ಒಯ್ದು, ಅಲ್ಲಿಯ ಜನರಿಗೂ ಮಹಾತ್ಮರ ಅವಶೇಷಗಳ ದರ್ಶನ ಪಡೆದು ಪುನೀತರಾಗುವ ಸಂಧಿಯನ್ನೊದಗಿಸಿಕೊಟ್ಟು, ಕೊನೆಗೆ ಬರುವ ಶುಕ್ರವಾರ (ತಾ: ೨೬) ಸಿಂಗಾಪುರ ಸಮುದ್ರದಲ್ಲಿ ಆ ಪವಿತ್ರ ಅವಶೇಷಗಳ ವಿಸರ್ಜನೆ ಮಾಡಲ್ಪಡುವದು.

— ಭಾರತದ ಸರ್ವಾಧಿಕಾರಿಗಳಾದ ಮೌಂಟ ಬೆಟನ್ನ ದೊರೆಗಳು ಇದೇ ಬರುವ ಜೂನ ತಿಂಗಳ ಪ್ರಾರಂಭಕ್ಕೆ ಅಧಿಕಾರ-ಸನ್ಯಾಸ ಮಾಡಿ ತಮ್ಮ ಮಾತೃಭೂಮಿಗೆ ಮರಳಿ ಹೋಗುವವರಿದ್ದರು. ಆದರೆ ಇತ್ತಲಾಗಿ ಅವರು ಹೈದರಾಬಾದ ಸಂಸ್ಥಾನದ ಪ್ರಕರಣದಲ್ಲಿ ತಮ್ಮ ಮನಸ್ಸು ಹಾಕಿರುವ ರೀತಿಯೂ ಹೈದರಾಬಾದವು ಭಾರತದಲ್ಲಿ ಸೇರ್ಪಡೆಯಾಗುವ ವರೆಗೂ ಅವರು ಭಾರತದಲ್ಲಿ ಉಳಿಯುವರೆಂಬಲೂ ಸೂಚಿಸುತ್ತವೆ. "ಟೈಮ್ಸ" ಪತ್ರಿಕೆಯ ಲಂಡನ ಪ್ರತಿನಿಧಿಗಳು ತಿಳಿಸುತ್ತಾರೆ. ನಿಜಾಮರ ಪ್ರಕರಣದ ಇತ್ಯರ್ಥವಾಗುವ ವರೆಗೆ ಸರ್ವಾಧಿಕಾರಿಗಳಾಗಿರಬೇಕೆಂದು ದೊರೆಗಳು ಸಂಸ್ಥಾನದ ಸಚಿವರಾದ ಸರದಾರ ವಲ್ಲಭಭಾಯಿ ಪಟೇಲರಿಗೆ ಆಶ್ವಾಸನೆ ಕೊಟ್ಟಿದ್ದಾರಂತೆ. ನಿಜಾಮರ ಪ್ರತಿನಿಧಿಗಳೊಡನೆ ನಡೆದ ಮಾತುಕತೆಗಳನ್ನು ನಡಿಸಿ ಅವರಿಗೆ ಸಮ್ಮತಿಯ ಸೂಚನೆಗಳಾಗಿ ಮೌಂಟ ಬೆಟನ್ನ ದೊರೆಗಳು ಬೇಗನೇ ಹೈದರಾಬಾದಕ್ಕೆ ಹೋಗುವರೆಂದು "ಇಂಡಿಯನ್ ಪ್ರೆಸ ಏಸೋಸಿಯೇಶನ್" ಸುದ್ದಿ-ಸಂಸ್ಥೆಯ ದಿಲ್ಲಿಯೊಳಗಿನ ಪತ್ರಗುಪ್ತರು ತಿಳಿಸುತ್ತಾರೆ. ಹೈದರಾಬಾದ ರಾಜಕಾರಣದಲ್ಲಿ ಮಹತ್ವದ ಸ್ಥಿತ್ಯಂತರಗಳಾಗಲಿವೆಯಾದ್ದರಿಂದ ನಿಜಾಮರ ಮುಖ್ಯಮಂತ್ರಿ ಮೀರ ಲಾಯಿಕ ಅಲ್ಲಿಯವರು ನಿಜಾಮರ ನ್ಯಾಯಶಾಸ್ತ್ರ ಸಲಹೆಗಾರರಾಗಿರುವ ಸರ್ ವಾಲ್ಟರ ಮೊಂಕ್ಟನ್ ಇವರಿಗೆ (ಇವರು ಈಗ ಲಂಡನದಲ್ಲಿದ್ದಾರೆ) ಕೂಡಲೇ ಹೊರಟು ಹೈದರಾಬಾದಕ್ಕೆ ಬರಬೇಕಾಗಿ ಅವಸರದ ತಂತಿ ಕಳಿಸಿದ ಪ್ರಕಟವಾಗಿವೆಯಂತೆ.

— ಮಾರ್ಚ ತಾ ೧೫ ರಿಂದ ಏಪ್ರಿಲ್ ತಾ ೧೧ರ ವರೆಗೆ ಬ್ರಹ್ಮದೇಶದಿಂದ ಅಕ್ಕಿ, ಆಸ್ಟ್ರೇಲಿಯಾದಿಂದ ಗೋಧಿ ಮತ್ತು ಅರ್ಜೆಂಟಿನಾದಿಂದ ಜವೆಗೋಧಿ ಹಾಗೂ ಬೇರೆ ಕೆಲವು ದೇಶಗಳಿಂದ ಕೆಲವು ಆಹಾರ ಧಾನ್ಯಗಳನ್ನು ತುಂಬಿಕೊಂಡು ಭಾರತಕ್ಕೆ ಪ್ರತಿ ನಿತ್ಯ ಸರಾಸರಿ ೨-೨ ಹಡಗಗಳು ಬಂದು ತಲ್ಪುವವೆಂದು ದಿಲ್ಲಿಯಿಂದ ಪ್ರಕಟವಾಗಿದೆ. ಈ ಹಡಗಗಳಲ್ಲಿ ೧೧೫೦೦೦ ಟನ್ನು ಅಕ್ಕಿ, ೧೧೯೦೦ ಟನ್ನ ಗೋಧಿ ಮತ್ತು ೬೦೦೦೦ ಟನ್ನ ಜವೆಗೋಧಿ ಬರುವವಂತೆ. ಈ ವರ್ಷದ ಪೂರ್ವಾರ್ಧದಲ್ಲಿ ಭಾರತಕ್ಕೆ ೪.೫ ಲಕ್ಷ ಟನ್ ಅಕ್ಕಿ ಪೂರೈಸುವದಾಗಿ ಅಂತರ್-ರಾಷ್ಟ್ರೀಯ ಆಹಾರ ಮಂಡಳದವರ ತೀರ್ಮಾನವಾಗಿದೆ.

— ಅಖಂಡ ಹಿಂದುಸ್ಥಾನದ ವಿಭಜನೆಯ ನಂತರ ಪಾಕಿಸ್ಥಾನದಲ್ಲಿ ತಮ್ಮ ವಿತ್ತ-ಜೀವಿತಗಳು ಸುರಕ್ಷಿತವಾಗಿಯೆ ಉಳಿಯವೆಂದು ಭಾವಿಸಿ ಪಶ್ಚಿಮ ಪಂಜಾಬ, ಗಡಿನಾಡು ಮತ್ತು ಸಿಂಧ ಪ್ರಾಂತಗಳಿಂದ ಲಕ್ಷಾವಧಿ ಹಿಂದುಗಳೂ ಶೀಖರೂ ಸುರಕ್ಷಿತ ಆಶ್ರಯ ಹುಡುಕುತ್ತ ಭಾರತಕ್ಕೆ ಬಂದರಷ್ಟೇ! ಪೂರ್ವ ಬಂಗಾಲದಿಂದಲೂ ಲಕ್ಷಗಟ್ಟಲೆ ಹಿಂದುಗಳು ಪಶ್ಚಿಮ ಬಂಗಾಲಕ್ಕೆ ಓಡಿ ಬರುತ್ತಿದ್ದಾರೆ. ಹೀಗೆ ಪಾಕಿಸ್ಥಾನದಿಂದ ಓಡಿ ಬಂದ ಬಂಗಾಲಿಗಳು ಎಂಗಿಲದಲ್ಲಿ ಮತ್ತು ಪಂಜಾಬಿಗಳು ಹಾಗೂ ಗಡಿನಾಡಿನ ಜನರು ಪೂರ್ವ ಪಂಜಾಬದಲ್ಲಿ ಇಲ್ಲವೆ ದಿಲ್ಲಿ ಪ್ರಾಂತದಲ್ಲಿ ಆಶ್ರಯ ಪಡೆಯಬಹುದಾಗಿದೆ. ಈ ಹೊಸ ಪ್ರಾಂತಗಳಲ್ಲಿ ಅವರಿಗೆ ಧ-ಸಾಘೇವದ ಇಲ್ಲವೆ ಸಂಸ್ಕೃತಿಭೇದದ ತೊಡಕುಗಳು ಅಷ್ಟು ಒದಗಲಿಕ್ಕಿಲ್ಲ. ಆದರೆ ಸಿಂಧದಿಂದ ಓಡಿಬಂದ ಹಿಂದುಗಳು ಎಲ್ಲಿ ಯಾವದೇ ಪ್ರಾಂತಕ್ಕೆ ಹೋದರೂ ಅವರು ಅಲ್ಲಿಯ ಜನರೊಡನೆ ಸಮರಸರಾಗಿ ಬೆರೆತು ಹೋಗುವದು ಸಾಧ್ಯವಿಲ್ಲ. ಅವರ ಸಿಂಧಿ ಭಾಷೆ ಬೇರೆ ಯಾವ ಪ್ರಾಂತದಲ್ಲಿಯೂ ಪ್ರಚಾರದಲ್ಲಿಲ್ಲ. ಅವರ ಸಂಸ್ಕೃತಿಯೂ ಬೇರೆಡೆಯಲ್ಲಿ ಉಪಲಬ್ಧವಿಲ್ಲ. ಆದರಿಂದ ಸಿಂಧದಿಂದ ಓಡಿಬಂದ ನಿರಾಶ್ರಿತರಿಗಾಗಿ ಯಾವದೊಂದು ಕಡೆ ಒಂದು ಹೊಸ ನಗರ ಸ್ಥಾಪನೆ ನಿರ್ಮಿಸುವದು ಅವಶ್ಯಕವೆನಿಸಿತು. ಅಂತಹ ಕಾರ್ಯವು ವ್ಯಕ್ತಿಗಳಿಂದ ಸಾಧ್ಯವಾಗುವಂತಿಲ್ಲ. ಸಂಘಟಿತ ಸಾಮೂಹಿಕ ಪ್ರಯತ್ನಗಳಿಂದಲೇ ಅಂತಹ ನಿರ್ಮಾಣ ಕಾರ್ಯವಾಗಬಲ್ಲದು. ಅದರಿಂದ ಈ ಕಾರ್ಯಕ್ಕೆಂದು ಒಂದು ಕಾರ್ಪೊರೇಶನ್ ಎಂಬ ಸಂಘ ರಚಿಸುವ ಕಲ್ಪನೆಯನ್ನು ಶ್ರೀ ಪ್ರತಾಪ ದಯಾಳದಾಸ ಎಂಬ ಸಿಂಧ ಗೃಹಸ್ಥರು ಪ್ರಧಾನಿ ಪಂ. ನೆಹರೂ ಹಾಗೂ ಸರದಾರ ಪಟೇಲರ ಮುಂದಿಟ್ಟರು. ಅವರು ಈ ಕಲ್ಪನೆಯನ್ನು ಸ್ವಾಗತಿಸಿ ಆ ಬಗ್ಗೆ ತಮ್ಮಿಂದಾಗುವಷ್ಟು ಸಹಾಯ ಮಾಡಲು ಒಪ್ಪಿದರು. ಮುಂದೆ ಪುನರ್ವಸತಿ ಖಾತೆಯ ಮುಖ್ಯ ಅಧಿಕಾರಿಗಳು ಅದಕ್ಕಾಗಿ ಯೋಗ್ಯ ಸ್ಥಳ ಆರಿಸುವ ಪ್ರಶ್ನೆ ಹೊರಬಿದ್ದು ಕಛ್ಛ ಪ್ರಾಂತವು ಸಿಂಧಕ್ಕೆ ಸಮೀಪದಲ್ಲಿದ್ದು ಅಲ್ಲಿಯ ಹವೆ ಸಿಂಧಿಗಳಿಗೆ ಅನುಕೂಲವಿದ್ದು ಹಾಗೂ ಕಛ್ಛ ಪ್ರಾಂತದೊಳಗಿನ ಕಂಡ್ಲಾ ಬಂದರದ ಸಮೀಪದ ಸಕಲ-ನಿರ್ಮಾಣಕ್ಕೆ ಸಾಕಷ್ಟು ಸ್ಥಳ-ಸೌಕರ್ಯ ಸಿಗುವಂತಿರುವದು ಕಂಡುಬಂತು. ಕಛ್ಛದ ಮಹಾರಾವ ಶ್ರೀ ವಿಜಯರಾಜಜಿ, ಯುವರಾಜ ಶ್ರೀ ಮದನಸಿಂಹಜಿ, ಮತ್ತು ದಿವಾನ ಶ್ರೀ ತ್ರಿಭುವನದಾಸ ರಾವ ಇವರು ಈ ನಗರ ನಿರ್ಮಾಣಕ್ಕೆ ಅವಶ್ಯವುಳ್ಳ ಸಹಾಯ-ಸೌಕರ್ಯಗಳನ್ನು ಒದಗಿಸಿಕೊಡಲು ಒಪ್ಪಿಗೆ ಕೊಟ್ಟರು. ಅದರಂತೆ ಕಂಡ್ಲಾ ಬಂದರವನ್ನು ವಿಸ್ತರಿಸಿ ಅಲ್ಲಿ "ಗಾಂಧಿ ಗ್ರಾಮ"ವೆಂಬ ಹೊಸ ಮಾದರಿಯ ನಗರವನ್ನು ರಚಿಸುವ ಯೋಜನೆಯೊಂದು ಸಿದ್ಧವಾದ ಪ್ರಾರ್ಥನೆಯು ಜನವರಿ ತಾ ೨೮ಕ್ಕೆ ಅಂದರೆ ಮಹಾತ್ಮಾ ಗಾಂಧಿಯವರಿಗೆ ತಿಳಿಸಲ್ಪಟ್ಟಿತು. ಈ ಬಗ್ಗೆ ೨ ಕೋಟಿ ರೂ ಭಂಡವಾಳದ ಒಂದು ಕಾರ್ಪೊರೇಶನ್ ಎಂಬ ಕಂಪನಿಯನ್ನು ಸ್ಥಾಪಿಸಿ, ಅದಕ್ಕೆ ೧ ಕೋಟಿ ರೂ ಗಳ ಶೇರುಗಳನ್ನು ಮಾರಾಟಕ್ಕೆ ತೆಗೆಯಲು ಹಿಂದುಸ್ಥಾನ ಸರಕಾರದ ಸಮ್ಮತಿಯನ್ನು ದೊರಕಿಸಲಾಗಿದೆ. ಆಚಾರ್ಯ ಕೃಪಾಲಾನಿಯವರು ಈ ಕಂಪನಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಈ ಕಂಪನಿಯು ನೂರಕ್ಕೆ ೬ ಹಣಕ್ಕಿಂತ ಹೆಚ್ಚಿಗೆ ಲಾಭಾಂಶವನ್ನು ಕೊಡುವದಾಗಿ ಕೊಡಲಿಕ್ಕಿಲ್ಲ. ಹೆಚ್ಚಿಗೆ ಉಳಿಯುವ ಎಲ್ಲ ಲಾಭಾಂಶವನ್ನು ಹೊಸ ನಗರದ ಜನರಿಗೆ ಜೀವನದ ಸುಖ-ಸೌಕರ್ಯಗಳನ್ನು ಒದಗಿಸಿ ಕೊಡಲು ವಿನಿಯೋಗಿಸಲಾಗುವದು. ಈ ಕಂಪನಿಗೆ ಕಛ್ಛದ ಮಹಾರಾವರು ೧೫,೦೦೦ ಎಕರೆ ಭೂಮಿಯನ್ನು ಉಚಿತವಾಗಿ ಕೊಟ್ಟಿರುತ್ತಾರೆ. ಈ ಹೊಸ ನಗರದ ಶಂಕುಸ್ಥಾಪನೆಯ ಕಾರ್ಯ ಮಹಾತ್ಮಾ ಗಾಂಧಿಯವರ ಕರದ ಹಸ್ತದಿಂದ ಮಾಡಿಸಬೇಕಾಗಿ ಕಛ್ಛದ ಅಧಿಕಾರಿಗಳ ಹಾಗೂ ಪುನರ್-ವಸತಿ ಯೋಜನೆಯ ಯೋಜಕರ ಅಭಿಲಾಷೆಯಿತ್ತು. ಆದರೆ ಈ ಕೆಟ್ಟ ಬೇರೆಯೇ ಇದ್ದುದರಿಂದ ಕಂಪನಿಯು ಸ್ಥಾಪನೆ ಪೂರ್ಣವಾದ ಮರುದಿನವೇ ಮಹಾತ್ಮರ ನಿರ್ಯಾಣವಾಯಿತು! ಆಚಾರ್ಯ ಕೃಪಾಲಾನಿಯವರು ಫೇಬ್ರುವರಿ ತಾ ೧೨ಕ್ಕೆ ಮಹಾತ್ಮರ ಅವಶೇಷಗಳನ್ನು ರಾಜ ವೈಭವದಿಂದ ಕಂಡ್ಲಾ ಬಂದರಕ್ಕೆ ಒಯ್ದು, ಅಲ್ಲಿಯ ಆಖಾತದಲ್ಲಿ ವಿಸರ್ಜಿಸಿ, ಆ ಭಾಗದ ಸಮುದ್ರವನ್ನು ಪವಿತ್ರಗೊಳಿಸಿರುತ್ತಾರೆ. ಆ ಭಾಗದಲ್ಲೇ "ಗಾಂಧಿ-ಗ್ರಾಮ"ವೆಂಬ ನಗರದ ರೂಪದಿಂದ ಮಹಾತ್ಮರ ಅನುಪಮ ಸ್ಮಾರಕವು ಕಳೆಯುತ್ತಿರುವದು.

— ಮಹಾತ್ಮಾ ಗಾಂಧಿಯವರ ಕೊಲೆಯ ನಂತರ ಕೊಲ್ಹಾಪುರ ಸಂಸ್ಥಾನದಲ್ಲೂ ಈ ಸಂಸ್ಥಾನದ ನೆರೆ-ಹೊರೆಯ ಬ್ರಿಟಿಶ ಭಾಗಗಳಲ್ಲೂ ನಡೆದ ಘೋರವಾದ ಲೂಟಾಲೂಟಿಯು ಆಗ ಮಾವು ಕೊಲ್ಹಾಪುರ ಸಂಸ್ಥಾನದಲ್ಲುಂಟೆಂದು ಲೋಕ-ಭಾವನೆಯಾಗಿತ್ತು. ಬೆಳಗಾಂವ ಜಿಲ್ಹೆಯಲ್ಲಿ ನಡೆದ ಲೂಟಿ ಪುಂಡರಲ್ಲಿ ಕೊಲ್ಹಾಪುರದವರ ಸಂಖ್ಯೆಯೇ ಹೆಚ್ಚಿತ್ತೆಂದು ಪ್ರಕಟವಾದದ್ದುಂಟು. ಪುಂಡಾಟಿಕೆಗೆ ಪ್ರೋತ್ಸಾಹ ಕೊಡುತ್ತಿರುವ ಇಲ್ಲವೆ ಅವರಲ್ಲಿ ಭಾಗ ವಹಿಸುತ್ತಿರುವ ಗುಂಡಾ ಜನರ ಪಾರುಪತ್ಯದ ಸ್ವರೂಪವನ್ನು ಕೊಲ್ಹಾಪುರ ಸಂಸ್ಥಾನಿಕರು ಮಾಡಿದ್ದು ಕಂಡುಬರುವದಿಲ್ಲ. ಅದರಿಂದ ಈ ಲೂಟಾಲೂಟಿಯಲ್ಲಿ ಸಂಸ್ಥಾನದ ಅಧಿಕಾರಿಗಳ ಅಂಗವೂ ಇರಬೇಕೆಂಬ ಸಂಶಯ ಜನರಲ್ಲಿ ಬೇರೂರಿತು. ಈ ದೂರು ಮತ್ತು ಕೊಲ್ಹಾಪುರದ ಅಧಿಕಾರಿಗಳ ವಿರುದ್ಧ ಜನರು

The Karnatak Distributors,
Manufaturers' Rpresentatives,
Ankola. N K

Sole Agents for—

1 Kalapi Products & Aryan Brushes (N K. & S K)
2 Jayashree Teas (N K)
3. Kohinoor Brand Milk Toffees (N. K.)

Salesmen on tour. For special regional agenceis please contact

ಪ್ರಕಟನೆ.

ಮುಂಬಯಿ ಒಕ್ಕಲತನದ ಕಾನೂನಿನ ಅಮಲತೆ ಕಾನಡಾ ಜಿಲ್ಹೆಯಲ್ಲಿ ಹೇಗೆ ನಡೆದಿದೆ ಎಂಬುದರ ಸಂಬಂಧದಲ್ಲಿ ಜನವರಿ ಮತ್ತು ಫೇಬ್ರುವರಿ ತಿಂಗಳುಗಳಲ್ಲಿ ಆದ ಕೆಲಸದ ಸಂಕ್ಷಿಪ್ತ ಮಾಹಿತಿಯು

ವಿವರಗಳು	ಯಾವ ತಿಂಗಳ ಮಾಹಿತಿ? ಜನವರಿ	ಫೇಬ್ರುವರಿ
೧ ತಿಂಗಳ ಪ್ರಾರಂಭಕ್ಕೆ ಶಿಲ್ಕು ಇದ್ದ ಟೆನನ್ಸಿ ಅರ್ಜಿಗಳ ಸಂಖ್ಯೆ	೪೮೩೨	೩೯೮೭
೨ ತಿಂಗಳಲ್ಲಿ ಬಂದ ಹೊಸ ಅರ್ಜಿಗಳು	೪೮೩	೩೧೦
೩ ತಿಂಗಳಲ್ಲಿ ಫೈಸಲ ಮಾಡಿದ ಅರ್ಜಿಗಳ ಸಂಖ್ಯೆ	೧೩೨೮	೬೪೭
೪ ತಿಂಗಳ ಕೊನೆಗೆ ಶಿಲ್ಕು ಉಳಿದ ಟೆನನ್ಸಿ ಅರ್ಜಿಗಳ	೩೯೮೭	೩೬೫೦
೫ ಒಡೆಯರಿಗೆ ಕಬ್ಜಾ ಕೊಡಿಸಿ ಫೈಸಲ ಮಾಡಿದ ಅರ್ಜಿಗಳ ಸಂಖ್ಯೆ	೧೨೪	೮೪
೬ ರೈತರಿಗೆ ಕಬ್ಜಾ ಕೊಡಿಸಿ ಫೈಸಲ ಮಾಡಿದ ಅರ್ಜಿಗಳ ಸಂಖ್ಯೆ	೫೧೪	೩೭೬
೭ ಒಡೆಯರಿಗೆ ಸಲ್ಲತಕ್ಕ ಗೇಣಿ ನಿರ್ಧಾರ ಮಾಡಿದ ಅರ್ಜಿಗಳ ಸಂಖ್ಯೆ	೩೬೦	೨೩೩
೮ ಕಲಮು ೭ ರಲ್ಲಿ ನಿರ್ಧರಿಸಿ ಮಾಡಿದ ಗೇಣಿಯು ಮೊಬಲಗು	ರೂ ೧೪೩೮೪/-	ರೂ ೧೨೮೪೬/-

ಟಿಪ್ಪಣಿ - ಮೇಲೆ ಕೊಟ್ಟ ಅಂಕಿ ಸಂಖ್ಯೆಗಳಲ್ಲಿ ಮುಂಡಗೋಡ ತಾಲೂಕಿನ ಅಂಕಿ ಸಂಖ್ಯೆಗಳು ಸೇರಿಲ್ಲ

ಟಿಪ್ಪಣಿ - ಮೇಲೆ ಕೊಟ್ಟ ಮಾಹಿತಿಯಲ್ಲಿ ಸಿದ್ದಾಪುರ ಮತ್ತು ಮುಂಡಗೋಡ ತಾಲೂಕುಗಳ ಮಾಹಿತಿ ಸೇರಿಲ್ಲ.

ಕಾರವಾರ,
ತಾ ೧೦-೩-೧೯೪೮

R. J. Rebello,
ಕಲೆಕ್ಟರ, ಕಾನಡಾ

ಹೊಂದಿದ ಅಧಿಕಾರಿಗಳು ಹಿಂದುಸ್ಥಾನ ಸರಕಾರ ಅಕ್ಷತೆ ಬಂದು, ಹಿಂದುಸ್ಥಾನ ಸರಕಾರದ ಅಪ್ಪಣೆಯಂತೆ ಸಂಸ್ಥಾನ ಖಾತೆಯ ಕಾರ್ಯದರ್ಶಿಗಳಾದ ಶ್ರೀ ವಿ. ಪಿ. ಮೆನನ್ ಅವರು ಕೊಲ್ಹಾಪುರಕ್ಕೆ ಬಂದಿದ್ದರು. [illegible]

[illegible]

— ಹಿಂದುಸ್ತಾನ ಸ್ಟೀಮ ನೆವ್ಹಿಗೇಶನ್ ಕಂಪನಿಯವರು [illegible] ... "ಜಲ-ಉಷಾ" ಎಂದು ಅದರ ನಾಮಕರಣ ... [illegible] ... ದಲ್ಲಿ ಉಪಸ್ಥಿತರಿರುತ್ತಾರೆ.

ತಾ. ೧ — ೪ — ೧೯೪೮ ರಿಂದ
ಚಿಲ್ಲರೆ ಚಿಮಣಿ ಎಣ್ಣೆ
ನಮ್ಮಲ್ಲಿ ಮಾರಲ್ಪಡುವದು.
ವ್ಹಿ. ಎಮ್. ಮಿರ್ಜಾನಕರ,
ಏಜಂಟ, ಬರ್ಮಾಶೆಲ್ ಕುಮಟಾ.

Publication Date of
Gandhi Souvenir of Forum
Adjouened to 18—4—48
due to unprecedented demand
Send orders immedietaly.
S. A. Bhatkal, Kumta.

ಐಕ್ಯಯ ಕಷ್ಟದ ಸಂಬಂಧದಲ್ಲಿ

ಜಿಲ್ಲಾಧಿಪರ ನಿಲುಮೆ.

ಇಡೀ ಜಿಲ್ಲೆಯಲ್ಲೀಗ ಎಲ್ಲೆಲ್ಲಿಯೂ ಐಕ್ಯಯ ಕಷ್ಟದ್ದೇ ಮಾತು ಕೇಳಬರುತ್ತಿದೆ. ಐಕ್ಯವು ದರವೇರಿತು, ಇನ್ನೂ ಏರುವದು, ... [illegible] ... (monster petition) ... [illegible] ... (hoard) ... [illegible]

"ಘಟ್ಟದ ಮೇಲಿಂದ ..." [illegible]

[illegible] ... ಕೊಡುತ್ತೇನೆ."

— ಮುಂದಿನ ತಿಂಗಳಲ್ಲಿ ಮುಂಬಯಿ ಪ್ರಾಂತಾಧಿಪತಿಗಳಾದ ಸರ್ ಮಹಾರಾಜಾ ಸಿಂಗರವರು ಕಾರವಾರ ಜಿಲ್ಲೆಗೆ ಬರುವರೆಂದು ಸುದ್ದಿಯುಂಟು.

— [illegible]

— [illegible]

ಇವೂರಿನ ಕಟ್ಟಿಗೆಯ ಮಾರಾಟ

ಮಲ್ಲಾಪುರ ಶ್ರೀ ಮಹಾಗಣಪತಿ ದೇವಸ್ಥಾನದ ... [illegible] ... ದ ಕಾಲಕ್ಕೆ ಬಂದು ಸಮಾಲೋಚಿಸಬೇಕಾಗಿ ವಿನಂತಿ.

ಜಂತಿಗಳು ೫೦ರಿಂದ ೭೦ರ ವರೆಗೆ ... ೯೦, ... ೧೦೦, ರೀಪು, ಹಲಿಗೆ, ಬಾಗಿಲ ಜೋಡುಗಳು ವಗೈರೆ-

ಮಲ್ಲಾಪುರ } **Gopalkrishna S. Chandavarkar.**
೧೯-೩-೧೯೪೮ } Hon. Secretary Reconstruction Committee

ಹೊನ್ನಾವರ ತಾಲೂಕ ಪೈಕಿ ಚಂದಾವರ
ಮುಖ್ಯಪ್ರಾಣ ದೇವರ ನಿಧಿ.

ಶ್ರೀ ಚಂದಾವರ ಸೀಮೆಯ ಮುಖ್ಯ ಪ್ರಾಣ ದೇವರು ಸುಪ್ರಸಿದ್ಧ ಪುರಾತನ ದೇವರಾಗಿದ್ದು, ಶ್ರೀ ದೇವಸ್ಥಾನವು ಈಗ ಬಹಳೇ ಜೀರ್ಣವಾಗಿದ್ದು, ಕಟ್ಟಡದ ಜೀರ್ಣೋದ್ಧಾರವನ್ನು ಸಧ್ಯದಲ್ಲೇ ಮಾಡಬೇಕೆಂದು ನಿಶ್ಚಯಿಸಿದ್ದೇವೆ. ಕಾರಣ ಆಸ್ತಿಕ ಮಹಾಶಯರೆಲ್ಲರೂ ತಮ್ಮ ಶಕ್ತ್ಯನುಸಾರ ಈ ದೇವತಾ ಕಾರ್ಯಕ್ಕೆ ನೆರವಾಗಿ, ಜೀರ್ಣೋದ್ಧಾರ ಕಾರ್ಯವನ್ನು ಶೀಘ್ರದಲ್ಲೇ ಪೂರೈಸಿಕೊಟ್ಟು ಶ್ರೀದೇವರ ಕೃಪಾಪ್ರಸಾದಕ್ಕೂ ಶ್ರೇಯಃ-ಕೀರ್ತಿಗಳಿಗೂ ಭಾಗಿಗಳಾಗಬೇಕಾಗಿ ಆಗ್ರಹದ ವಿನಂತಿ.

ಮು|| ಚಂದಾವರ, ತಾ. ೧೩-೩-೧೯೪೮

(ಶ್ರೀ ದೇವರ ಪರಿಯಿಂದ)
ಹನುಮಂತ ನಾಗಪ್ಪ ದಾಕಯ್ಯ,
ಸಾ. ಕೆಸ:- ಚಂದಾವರ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ:-
ಕ್ಷಿಪ್ರಲಭ್ಯಾ ಬಗ್ಗೆ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

Reg. No. B. 1270. Monday, 29-3-1948

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೯.

ಕುಮಟಾ:- ಸೋಮವಾರ, ತಾ. ೨೯-೩-೧೯೪೮

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲಿನ್ಮೂಲಕ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೧-೦
ಹಳೇ ಸಂಚಿಕೆಗೆ ... ೦-೪-೦
ವ್ಹಿ.ಪಿ ಯಿಂದ ತರಿಸುವವರು
ವ್ಹಿ.ಪಿ ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು.
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಸ್ಥಳೀಕ ವಿಷಯಗಳು.

(ಸ್ವಸಂಪಾದಕರು ಬರೆದುದು)

ಮುಂಬಯಿಯ ಪೇಟೆಯೊಳಗೆ ಕಡಧಾನ್ಯಗಳ ಧಾರಣೆಗಳು ನಿಯಂತ್ರಣವಾದ ಮೇಲೆ ಇಳಿದಿರುವದಾಗಿ ಮುಂಬಯಿಯ ಧಾನ್ಯ ಮತ್ತು ಎಣ್ಣೆಕಾಳುಗಳ ವರ್ತಕ ಸಂಘದವರು ಅಂಕಿ-ಸಂಖ್ಯೆಗಳನ್ನು ಕೊಟ್ಟು ಪ್ರಕಟಿಸಿದ್ದಾರೆ. ಆಹಾರ ಧಾನ್ಯಗಳ ಮೇಲೆ ಇರುವ ನಿಯಂತ್ರಣವನ್ನು ತೆಗೆಯಬೇಕಾಗಿ ಈ ಸಂಘದ ಅಂಬೋಣವುಂಟು. ಆದರೆ ಆಹಾರ ಧಾನ್ಯಗಳ ನಿಯಂತ್ರಣ ಹೋದ ಮೇಲೆ ಅವುಗಳ ದರಗಳು ಇಳಿದಿರುವದಿಲ್ಲ, ಅಷ್ಟೇ ಅಲ್ಲ, ಬಹಳ ಪಟ್ಟಿಗೆ ಏರಿವೆ! ಪೇಟೆಯಲ್ಲಿ ಅಕ್ಕಿಯ ಸೇರಿಗೆ ಒಂದೆ ೭ ಆಣೆ ದರ ಇದ್ದದ್ದು ಈಗ ಆಣೆ ೧೩ ಕ್ಕೆ ಏರಿದೆ! ರೂ ೧೮ ರ ತನಕದರವೇ ರೂಢವಾಗಿಯೂ ವಾರ್ತೆಯಿದೆ. ಅದೇ ಪ್ರಕಾರ ನಮ್ಮ ಜಿಲ್ಹೆಯೊಳಗೂ ಇತರ ಜಿಲ್ಹೆಗಳೊಳಗೂ ಅಕ್ಕಿಯ ದರ ಏರಿಕೆಯಲ್ಲುಂಟು. ಸರಕಾರವು ಪುನಃ ನಿಯಂತ್ರಣವನ್ನು ಹೇರುವದಾದರೆ ಮುಂಚಿನ ಸಮಾನತೆಯಂಥ ದೋರುವಂತಿಲ್ಲ ದರ-ಏರಿಕೆಯನ್ನು ನಿರ್ಬಂಧಿಸುವದಕ್ಕಾಗಿ ಏನು ಉಪಾಯ ಮಾಡಬೇಕೆಂಬುದನ್ನು ಅದು ಪರಿಶೋಧಿಸುತ್ತಿದೆ. ಇನ್ನು ೧-೨ ವಾರಗಳಲ್ಲಿ ಸರಕಾರದ ಮನೋನಿರ್ಣಯವಾಗಬಹುದೆಂದು ಸುದ್ದಿಯುಂಟು. ಹಿಂದುಸ್ಥಾನ ಸರಕಾರವು ಆಹಾರ-ಧಾನ್ಯಗಳನ್ನು ದೊರಕಿಸುವದಕ್ಕಾಗಿ ವಿಶ್ವಪ್ರಯತ್ನ ಮಾಡುತ್ತಿದೆ. ಆಹಾರದ ಅಭಾವವಾಗಿ ಪ್ರಜೆಗಳು ಸಾಯದಂತೆ ಹಿಂದುಸ್ಥಾನ ಸರಕಾರವು ಪ್ರಯತ್ನಿಸುತ್ತಿದೆ. ಸಾಧಾರಣ ೧೫ ಸಾವಿರ ಟನ್ನ ಅಕ್ಕಿಯನ್ನು ಹಿಂದುಸ್ಥಾನ ಸರಕಾರವು ಖರೀದಿಯಾಗಿ ದಿಲ್ಲಿಯೊಳಗೆ ವಾರ್ತೆಯುಂಟು. ಸದ್ಯಕ್ಕೇ ದಿಲ್ಲಿಯೊಳಗೆ ಪ್ರಾಂತಿಕ ಆಹಾರ-ಮಂತ್ರಿಗಳ ಸಭೆ ಕೂಡಲಿದೆ. ಆಹಾರ-ಧಾನ್ಯಗಳನ್ನು ಪೂರೈಸಿಕೊಳ್ಳುವ ಸಂಬಂಧ ಸಕಲ ಪ್ರಯತ್ನ ನಡೆಯುವದಾಗಿ ಮದ್ರಾಸ ಶಾಸನ-ಸಭೆಯಲ್ಲಿ ವಂದಿಗೆ ಕೊಡಲಾಗಿದೆ. ಆಹಾರ-ಮಂತ್ರಿಗಳು ಪ್ರಾಂತಿಕ ಹಾಗೂ ಇಡೀ ದೇಶದ ಪರಿಸ್ಥಿತಿಯ ವಿಚಾರ ಮಾಡಿ, ಉಪಾಯಗಳನ್ನು ಕೈಕೊಳ್ಳತಕ್ಕದ್ದಿದೆ. ನಮ್ಮ ಜಿಲ್ಹೆಯ ಜಿಲ್ಲಾಧಿಪರು ಆಹಾರ ಪರಿಸ್ಥಿತಿಯ ಸಂಬಂಧದಲ್ಲಿ ತಮ್ಮ ಅಧಿಕಾರದ ನಿಲುವೆಯನ್ನು ತಿಳಿಸಿದ್ದಾರೆ. ಸರಕಾರವು ಈಗ ತಮ್ಮದೆಂದು ಹೇಳಿಸಿಕೊಳ್ಳಲು ಜನರು ಅಭಿಮಾನಪಡುತ್ತಾರೆ. ಅಂಥ ಜನರು ಸರಕಾರದಿಂದ ಹೊರಡುವ ಹುಕುಮುಗಳನ್ನು ವಿಧೇಯತನದಿಂದ ಪಾಲಿಸಲು ಬದ್ಧರಿದ್ದಾರೆ. ಆ ಪ್ರಕಾರ ನಡೆಸಿಕೊಳ್ಳದೆ ತಮ್ಮ ದೃಷ್ಟಿಯಿಂದ ಅನಿಷ್ಟ ಕಾಣುವ ಹುಕುಮುಗಳನ್ನು ಸತ್ಯಾಗ್ರಹದಿಂದ ವಿರೋಧಿಸತೊಡಗಿದರೆ ಜನರೊಳಗೆ ಅವಿಧೇಯತನ ಹುಟ್ಟಿ ಅರಾಜಕತೆಯುಂಟಾಗುವ ಭೀತಿಯುಂಟು. ಅಧಿಕಾರಿಗಳು ನಮ್ಮ ಜಿಲ್ಹೆಯ ಅಲ್ಲವೆ ನಮ್ಮ ಊರಿನ ಪ್ರಜೆಗಳದಷ್ಟೇ ಪರಿಪಾಲನೆ ಮಾಡತಕ್ಕದ್ದಲ್ಲ, ಇಡೀ ಪ್ರಾಂತದ ಪರಿಸ್ಥಿತಿಯನ್ನು ಅವಲಂಬಿಸಿ, ಇಡೀ ಪ್ರಾಂತಕ್ಕೆ ಕ್ಷೇಮವಾಗುವಂತೆ ಉಪಾಯ-ಯೋಜನೆ ಮಾಡಲು ಬದ್ಧರಿದ್ದಾರೆ. ಪ್ರತಿಯೊಂದು ಜಿಲ್ಹೆಯವರೂ ಪ್ರತಿಯೊಂದು ಗ್ರಾಮದವರೂ ಅಧಿಕಾರಿಗಳೊಡನೆ ಸಹಕರಿಸಬೇಕು. ಕುಮಟೆಗೆ ಬಂದ ಅಕ್ಕಿಯನ್ನು ನಿಯಮಿತ ಮಾಡಬಾರದೆಂದು ಹೇಳುವವರು ಆ ಅಕ್ಕಿ ಬಂದ ಮುಲ್ಕಿಯು ಮತ್ತು ತಂದ ಜನಗಳ ವಿಚಾರ ಮಾಡಿ, ಆ ಅಕ್ಕಿಗೆ ಧರ್ಮದಂತೆ ಅಲ್ಲವೆ ನೀತಿಯಂತೆ ತಮಗಿರುವ ಹಕ್ಕನ್ನು ಜಿಲ್ಲಾಧಿಪರ ಕಡೆ ಅರುಹಿಕೊಂಡು, ಜಿಲ್ಲಾಧಿಕಾರಿಗಳಿ ಪ್ರಾಂತಿಕ ಸರಕಾರವಾಗಲಿ ನಿರ್ಮಲ ಚಿತ್ತದಿಂದ ಕೊಡಬಹುದಾದ ನಿರ್ಣಯವನ್ನು ಸಂತೋಷದಿಂದ ಸ್ವೀಕರಿಸತಕ್ಕದ್ದಿದೆ. ಈಗಿನ ದಿನಮಾನಗಳಲ್ಲಿ ವಿಚಾರಶೂನ್ಯತೆ ವಿಕಾರದ ಪ್ರಾಬಲ್ಯ ಮಿಗಿಲಾಗಿದೆ. ಅಂಥ ಅಸಾಮಾನ್ಯ ಪರಿಸ್ಥಿತಿಯಲ್ಲಿ ವಿಚಾರವಂತ ಪ್ರಮುಖರು ಅವಿಚಾರಿಗಳಾಗಿ ಜನತೆ ಜಾಗೆಗೆ ಸತ್ಯಾಗ್ರಹವನ್ನು ಹೂಡಬಯಸಿದರೆ ಸಮಾಜದ ಕಟ್ಟು ಸಡಿಲಾಗಿ ಅನರ್ಥವುಂಟಾಗುವ ಭೀತಿಯುಂಟು.

*

ಅಕ್ಕಿಯನ್ನು ಪೂರೈಸಿಕೊಳ್ಳುವದಕ್ಕಾಗಿ ಜನರು ಸರಕಾರಕ್ಕೆ ಇಲ್ಲಿಯ ಪರಿಸ್ಥಿತಿಯನ್ನು ತಿಳಿಸಬೇಕು. ಈ ವಾರದ ಸಹಕಾರಿ ಬೇಂಕಿನವರು ಬ್ರಹ್ಮದೇಶದಿಂದ ಅಕ್ಕಿಯನ್ನು ಈ ಜಿಲ್ಹೆಗೆ ಪೂರೈಸಲು ಏನಂತ ಮಾಡಿಕೊಂಡಿದ್ದರಾಗಿ ತಿಳಿಯುತ್ತದೆ. ಅದು ಸದ್ಯಕ್ಕೆ ಸಾಧ್ಯವಿಲ್ಲವಾಗಿ ಪ್ರಾಂತಿಕ ಸರಕಾರವು ತಿಳಿಸಿರುತ್ತದ್ದಾಗಲೂ, ಇಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿ ಯೋಗ್ಯ ಕಂಡ ಉಪಾಯಗಳನ್ನು ಕೈಕೊಳ್ಳುವವಾಗಿ ಸರಕಾರವು ತಿಳಿಸಿದೆ. ಇದರ ಮೇಲಿಂದ ಪ್ರಾಂತಿಕ ಸರಕಾರವು ಇಲ್ಲಿಯ ಆಹಾರ ಪರಿಸ್ಥಿತಿಯ ಬಗ್ಗೆ ಜಾಗರೂಕವಿರುವದಾಗಿ ಸ್ಪಷ್ಟವಾಗುವಂತಿದೆ. ಬಡಬಗ್ಗರ ರಕ್ಷಣೆ ಮಾಡಬಯಸುವ ಪ್ರಮುಖರು ಸರಕಾರಕ್ಕೆ ಆಹಾರ-ಧಾನ್ಯಗಳನ್ನು ಪೂರೈಸಿಕೊಳ್ಳುವ ವಿಧಾಯಕ ಯೋಜನೆಗಳನ್ನು ಸೂಚಿಸಬೇಕು. ರತ್ನಾಗಿರಿ, ಕಾರೆ ಮೊದಲಾದ ಪ್ರಾಂತಿಕ ಅಧಿಕಾರಕ್ಕೆ ಒಪ್ಪಿದ ಪ್ರದೇಶಗಳಲ್ಲಿ ಆಹಾರ ಧಾನ್ಯಗಳನ್ನು ಪೂರೈಸುವದು ಪ್ರಾಂತಿಕ ಸರಕಾರದ ಕರ್ತವ್ಯವುಂಟು. ಆ ಕರ್ತವ್ಯಕ್ಕೆ ಬಾಧೆ ಬರದಂತೆ, ನಮ್ಮ ಜಿಲ್ಹೆಯ ರಕ್ಷಣೆಯಾಗುವಂತೆ ಯೋಜನೆಗಳನ್ನು ಪ್ರಮುಖರು ಸೂಚಿಸಬೇಕು. ಜಲಮಾರ್ಗದ ನಿರ್ಯಾತಕ್ಕೆ ನಿರ್ಬಂಧ ಹಾಕಿದರೆ ಸ್ಥಳವಾಗದ ನಿಯಾಂತ ಮುಗಿಲಾಗುವದು. ಹೊರಕ್ಕೆ ಹೋಗಕ್ಕೆ ಪ್ರಯೋಜನ ಆ ನಿರ್ಬಂಧದಿಂದ ದೊರೆಯುವಂತಿಲ್ಲ. ವರ್ತಕರನ್ನು ಹೆದರಿಸುವದರಿಂದ ಆಹಾರ-ಧಾನ್ಯಗಳನ್ನು ಕೊರತೆ-ಪ್ರದೇಶಕ್ಕೆ ತರುವ ಕ್ರಮಕ್ಕೆ ತಡೆ ಬಿದ್ದು, ಮುಂಗಾಲದಲ್ಲಿ ಎಷ್ಟು ಹಣ ಕೊಟ್ಟರೂ ಅಕ್ಕಿ ಸಿಗುವದು ದುರ್ಲಭವಾಗುವದು. ಅದರಿಂದ ಕೊರತೆಯ ಪ್ರದೇಶದೊಳಗಿನ ಪ್ರಮುಖರು ಮಳೆಗಾಲಕ್ಕೆ ತಗಲುವಷ್ಟು ಆಹಾರ-ಧಾನ್ಯಗಳನ್ನು ಹೊಟ್ಟಿಸಿಡಲು ತಮ್ಮಲ್ಲಿ ಕೂಡಿಸುವ ಕ್ರಮವನ್ನು ಕೈಕೊಳ್ಳುವದೊಳಿತು. ದರ ಹೆಚ್ಚಿಗೆ ಕೊಟ್ಟಾದರೂ ಆಹಾರ-ಧಾನ್ಯ ಕೊಂಡು ಕೊಂಡು ಇಡಬೇಕು. ದರ ಹೆಚ್ಚಿಗೆ ಇದ್ದಲ್ಲಿ ಮತ್ತು ಅದನ್ನು ಕೊಡುವ ಸಾಮರ್ಥ್ಯ ಬಡಬಗ್ಗರಿಗೆ ಇಲ್ಲದಿದ್ದಲ್ಲಿ ದ್ರವ್ಯಸಹಾಯ ಮಾಡಲು ಸರಕಾರಕ್ಕೆ ಕೇಳಿಕೊಳ್ಳಬೇಕು. ಪ್ರಜೆಗಳನ್ನು ಬದುಕಿಸಿಕೊಳ್ಳಲು ಸರಕಾರವು ಕರ್ತವ್ಯಬದ್ಧವಿದೆ. ಜನಪ್ರಮುಖರ ಯೋಜನೆ ಲೋಕ-ಕ್ಷೇಮವುಳ್ಳದೆಂದು ಸರಕಾರವು ಮನಗಂಡರೆ ಖಂಡಿತವಾಗಿ ಸರಕಾರವು ಸಿದ್ಧವಾಗುವದು. ಕೊರತೆಯ ಪ್ರದೇಶದೊಳಗಿನ ಧಾರ್ಮಿಕರು ಲೋಕ-ರಕ್ಷಣೆಯ ಕಾರ್ಯದಲ್ಲಿ ಸ್ಥಳೀಕ ಪ್ರಮುಖರಿಗೆ ಸಹಾಯವನ್ನೀಯಬೇಕು. ಮೇಲಾಗಿ ಜಿಲ್ಲಾಧಿಪರು ಸೂಚಿಸಿದಂತೆ, ಹಾಸುವಷ್ಟು ಹುಡಿದ ಜನರ ಕಡೆ ಅಕ್ಕಿ-ಭತ್ತಗಳ ಶಿಲ್ಕುಂಟು. ಹೆಚ್ಚಿನ ದರದ ಅಪೇಕ್ಷೆಯಿಂದ ಅವರು ಅವನ್ನು ಮಾರಾಟ ಮಾಡದೆ ತಂಬಬಹುದಿಲ್ಲ. ಇಂಥವರಿಗೆ ಬಡಬಾಂಧವರ ಗೋಳನ್ನು ತಿಳಿ ಹೇಳಿದರೆ ಬಹುಪಟ್ಟಿಗೆ ಅಕ್ಕಿ-ಭತ್ತಗಳ ಶಿಲ್ಕು ದೊರೆಯುವಂತಿದೆ. ದುಷ್ಟಿನ ದುರಾಶೆಯನ್ನು ಬಿಟ್ಟು ಲೋಕಕ್ಷೇಮಕ್ಕಾಗಿ ತ್ಯಾಗ ಮಾಡುವ ಬುದ್ಧಿಯನ್ನು ಜನಸಾಮಾನ್ಯರಲ್ಲಿ ಹುಟ್ಟಿಸಬೇಕು. ನಿಯಂತ್ರಣವನ್ನು ಪರಿಹಾರಗೆಯುವದಕ್ಕಾಗಿ ಮುಖಾಮುಖಿ ನಿಗ್ರಹ ಹಿಡಿದು ಅದನ್ನು ತೆಗೆದು ೩ ತಿಂಗಳುಗಳಾಗಲಿಲ್ಲ. ನಿಯಂತ್ರಣವನ್ನು ಪುನಃ ಹೊಡಗೊಳಿಸಬೇಕಾಗಿ ಹೇಳುವದು ಅಪ್ರಶಸ್ತವಾದುದು. ನಿಯಂತ್ರಣವನ್ನು ಹೇರಲು ಪ್ರಾಂತಿಕ ಸರಕಾರದ ಒಪ್ಪಿಗೆಯಿಲ್ಲವಾಗಿ ವಾರ್ತೆಯುಂಟು. ನಿಯಂತ್ರಣ ಹೇರದೆ ಆಹಾರ-ಧಾನ್ಯಗಳ ದರಗಳನ್ನು ಇಳಿಸಲು ಸರಕಾರವು ಬಯಸುತ್ತದೆ. ಪ್ರಮುಖರು ಸರಕಾರದೊಡನೆ ಸಹಕರಿಸಿ, ನಿಯಂತ್ರಣದ ಅಪೇಕ್ಷೆ ಮಾಡದೆ, ಆಹಾರ ಧಾನ್ಯಗಳ ದರಗಳನ್ನು ಇಳಿಸುವ ಕ್ರಮವನ್ನು ಸೂಚಿಸತಕ್ಕದ್ದು. ಸರಕಾರವು ನಮ್ಮದಿರುವಾಗ, ನಮ್ಮ ಬೇಡಿಕೆಗಳನ್ನು ಕೇಳಿಕೊಂಡು ವ್ಯವಹರಿಸಲು ಸಿದ್ಧವಿರುವಾಗ, ಆ ಸರಕಾರದ ವಿರುದ್ಧ ಸತ್ಯಾಗ್ರಹ ಮಾಡುವದು ದುರಾಗ್ರಹವಾಗುತ್ತಿದೆ.

*

ಶಿರ್ಸಿಯಲ್ಲಿ ಕಳೆದ ೧೦-೧೫ ದಿನಗಳಲ್ಲಿ ಗ್ರಾಮಾಧಿಕಾರಿಗಳ ಸಮ್ಮೇಲನಗಳು ಜರುಗಿದವು. ಪಟೇಲರೂ ಶಾನಭೋಗರೂ ಉಗ್ರಾಣಿಗರೂ ತಮಗೆ ಸಿಗುವ ವೇತನ ಜೀವನಕ್ಕೆ ಸಾಲುವದಿಲ್ಲೆಂದೂ ಅದನ್ನು ಏರಿಸಬೇಕೆಂದೂ ಠರಾವ ಮಾಡಿದ್ದಾರೆ. ಪಟೇಲರೂ ಉಗ್ರಾಣಿಗರೂ ಸರಕಾರದ ನೌಕರ-ವರ್ಗದಲ್ಲಿ ಸೇರುವದಿಲ್ಲವಂತೆ! ಸಂಬಳ ಪಡೆಯುತ್ತಿದ್ದರೂ ಅವರು ಸರಕಾರದ ನೌಕರರಲ್ಲ! ಕೆಲಸ ಮಾಡಲಿಕ್ಕೆ ಮಾತ್ರ ಪೂರ್ಣವಾಗಿ ಸರಕಾರದ ನೌಕರರು!! ಶಾನಭೋಗರ ಸಂಗಡ ಪಟೇಲರೂ ಉಗ್ರಾಣಿಗರೂ ಮುಂದು ದುಡಿಯಬೇಕಾಗುತ್ತದೆ. ಅಲ್ಲದಾಗಿ ಗ್ರಾಮದ ದಪ್ತರದ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯದಲ್ಲಿ ಸಾಂಘೀಕರಿಸಿದ್ದು)

ಹೆಡ್ ಆಫೀಸು: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಕೆತ್ತ ಮೂಲಧನ ರೂ ೭,೭೧,೦೦೦/—ಕ್ಕೂ ಮಿಕ್ಕಿದೆ.

ಕೇಖರಿಸಿದಲ್ಪಟ್ಟ ನಿಧಿ ರೂ. ೧,೦೦,೦೦/—ಕ್ಕೂ ಮಿಗಿರುವದು.

೩ ರಿಂದ ೭ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೩ ರಿಂದ ೩ ಸಲೆ ಬಡ್ಡಿಯಂತೆ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮.

ಕೆ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ.

ಕೆಲಸ ಹೇರಳವಾಗಿ ಬೆಳೆದಿದೆ ಅದೇ ಪ್ರಮಾಣದಿಂದ ಇವರ ಹೊಣೆಯೂ ಬೆಳೆದಿದೆ ಆದರೆ ಕೆಲಸ ಬೆಳೆದ ಹಾಗೆ ಸಂಬಳ ಬೆಳೆಯಲಿಲ್ಲ! ಉಗ್ರಾಣಿಗಳಿಗೆ ತಿಂಗಳೊಂದಕ್ಕೆ ರೂ ೧೦ ೧೨ ದೊರೆತರೆ ಹೆಚ್ಚು. ಈ ಪಟೇಲರಿಗೆ ಗ್ರಾಮದ ಕಂದಾಯ ಮಾನದಿಂದ ಸಂಬಳ ಸಿಗುತ್ತದೆ ಆದರೆ ಈ ಸಂಬಳ ಈಗ ಏನೇನೂ ಸಾಲುವದಿಲ್ಲ ಅದನ್ನು ಏರಿಸಬೇಕಾಗಿ ಹಿರಿಯ ಸಭೆಗಳಲ್ಲಿ ಅನೇಕರು ಕೈಕೊಂಡ ಠರಾವುಗಳನ್ನು ಪ್ರಾಂತಿಕ ಸರಕಾರವು ಸಹಾನುಭೂತಿಯಿಂದ ವಿಚಾರಿಸಲಿಲ್ಲವಷ್ಟೇ ಉಗ್ರಾಣಿಗಳ ಅಧಿಕಾರಿಗಳಿಗೆ ಮಾಡಿಕೊಂಡ ವಿನಂತಿ ನಿರರ್ಥಕವಾದ್ದರಿಂದ ಅವರು ಸಂಪು ಹೂಡುವ ನಿರ್ಧಾರ ಮಾಡಿದ್ದರು. ದಿನಗಳ್ಗೆ ರೂ ೧ ಮೇರೆಗಿನಂತೆ ಸರಕಾರವು ತಮಗೆ ಸಂಬಳ ಕೊಡದಿದ್ದರೆ ಮೇ ೩ ರಿಂದ ಸಂಪು ಹೂಡುವ ನಿರ್ಧಾರ ಮಾಡಿ, ಜಿಲ್ಲಾಧಿಪರಿಗೆ ಅದರಂತೆ ನೋಟೀಸು ಕೊಟ್ಟಿದ್ದರೆ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಬಾರದಾಗಿತ್ತು. ಅಧಿಕಾರಿಗಳು ಈ ಮೊದಲೇ ಇದರ ವಿಚಾರ ಮಾಡಬೇಕಾಗಿತ್ತು. ಈಗಲಾದರೂ ಔದಾರ್ಯ ಮಾಡಿದರೂ ಪಟೇಲರು ಸಂಪು ಹೂಡದಿದ್ದರೂ ಸರಕಾರವು ಅವರಿಂದ ಅಪೇಕ್ಷಿಸುವ ಕೆಲಸಕ್ಕೆ ತಕ್ಕ ಪ್ರತಿಫಲ ಅವರಿಗೆ ಸಿಗುವ ಯೋಜನೆಯಾಗಬೇಕು ಬೇರೆ ಬೇರೆ ಕೆಲಸಗಳಿಗಾಗಿ ಅವರು ತಾಲೂಕ ಕಚೇರಿಗಳಿಗೆ ಆಗಿಂದಾಗ ಬರಬೇಕಾಗುತ್ತದೆ ಅವರ ಪ್ರವಾಸದ ಖರ್ಚು, ಊಟ ಉಪಹಾರದ ಖರ್ಚು ಸಹ ಸಿಗುವ ವೇತನದಿಂದ ಸಾಗುವದಿಲ್ಲ! ಪಟೇಲ-ಕುಲಕರ್ಣಿಯ ಕೆಲಸಗಳನ್ನು ನಡಿಸುವದೂ ಕಠಿಣವಾಗುತ್ತದೆ. ಶಾನಭೋಗರು ಸರಕಾರದ ನೌಕರರಲ್ಲ ಕೇವಲ ಗ್ರಾಮದ ಆಳಿಕೆ ಇವರನ್ನು ಹೊಂದಿಕೊಂಡಿದೆ ನಮ್ಮ ದೇಶದ ಮೂಲಾಧಾರ ಗ್ರಾಮಗಳು ಅದೇ ಪ್ರಕಾರ ರಾಜ್ಯಾಡಳಿತೆಯ ಮೂಲಾಧಾರ ಗ್ರಾಮ-ದಪ್ತರ ಇದರಿಂದ ಸರಕಾರವು ಇದೇ ದಿನ ಕೆಲಸವನ್ನು ಅಪೇಕ್ಷಿಸುತ್ತದೆ ಶಾನಭೋಗರ ವ್ಯಾಪಾರಿಕ ಕಸದ ಮೇಲೆ ಇದೇ ಆಳಿಕೆ ಅವಲಂಬಿಸಿಕೊಂಡಿದೆ ಇಂಥ ಇಸಮುಗಳನ್ನು ಸರಕಾರವು ಅಸಮಾಧಾನದಲ್ಲಿಡಕೂಡದು ಕೆಲಸಕ್ಕೆ ತಕ್ಕ ವೇತನ ಕೊಡಬೇಕು ಹಿಂದುಸ್ಥಾನ ಸರಕಾರವು ನೇಮಿಸಿದ ಸಂಬಳ ಕಮಿಟಿಯವರು ನೌಕರರ ೪ ವರ್ಗಗಳನ್ನು ಕಲ್ಪಿಸಿದ್ದಾರೆ. ೧ ಮತ್ತು ೨ ನೇ ವರ್ಗಗಳಲ್ಲಿ ದೊಡ್ಡ ದೊಡ್ಡ ಸಂಬಳದ ಅಧಿಕಾರಿಗಳು ಬರುತ್ತಾರೆ, ೩ ನೇ ವರ್ಗದಲ್ಲಿ ಕಾರಕೂನರು ಸೇರುತ್ತಾರೆ ೪ನೇ ತರಗತಿಯಲ್ಲಿ ಶಿಪಾಯಿ ಮೊದಲಾದ ಕೆಳ-ನೌಕರರು ಬರುತ್ತಾರೆ ಶಾನಭೋಗರನ್ನು ಮುಂಬಯಿ ಸರಕಾರವು ಈ ಯಾವ ತರಗತಿಯಲ್ಲೂ ಸೇರಿಸದೆ ೩ನೇ ಮತ್ತು ೪ನೇ ತರಗತಿಗಳ ಮಧ್ಯದಲ್ಲಿ ಅವರನ್ನು ಹಾಕಿದೆ ಗ್ರಾಮಸ್ಥರು ಸಹಜವಾಗಿ ಕಾರಕೂನರ ತರಗತಿಗಿಂತ ಮಿಗಿಲಾದವರು ಶಾನಭೋಗರಿಗೆ ಸ್ವತಂತ್ರ ಅಧಿಕಾರ ಹಲವುಂಟು ಇಂಥ ಇಸಮುಗಳನ್ನು ಕಾರಕೂನರಿಗಿಂತಲೂ ಕಡಿಮೆ ಎಂದು ಎಣಿಸುವದು ಅಪ್ರಶಸ್ತ ಉತ್ತರ ಭಾಗದ ಕಮಿಶನರರು ಸರಕಾರಕ್ಕೆ ಸತ್ಯ ಪರಿಸ್ಥಿತಿಯನ್ನು ಅರಿಕೆ ಮಾಡಿಕೊಂಡಿರುತ್ತಾರೆಂದೂ ಸರಕಾರವು ಪುನರಾಲೋಚಿಸುತ್ತದೆಂದೂ ಶಾನಭೋಗರ ಸಭೆಯಲ್ಲಿ ಹೇಳಲ್ಪಟ್ಟಿದೆ ಸರಕಾರವು ಶೀಘ್ರವೇ ಗ್ರಾಮಾಧಿಕಾರಿಗಳ ಸಂಬಳದ ಹಾಗೂ ಭತ್ಯೆಗಳ ಯೋಗ್ಯ ಪ್ರಮಾಣಗಳನ್ನು ನಿರ್ಣಯಿಸಬೇಕಷ್ಟೇ ಈ ಅಧಿಕಾರಿಗಳ ಸುಖ ಸಮಾಧಾನಗಳ ಮೇಲೆಯೇ ಗ್ರಾಮದ ಸುಖ ಸಮಾಧಾನಗಳು ಅವಲಂಬಿಸಿಕೊಂಡಿವೆ ಉಗ್ರಾಣಿಗಳು ಸಂಪು ಹೂಡಿದ ಮೇಲೆ ಅವರ ಬಗ್ಗೆ ನಿರ್ಣಯವಾದರೆ ಅದರೊಳಗೆ ಸ್ವಾರಸ್ಯವಿಲ್ಲ

* * *

ನಮ್ಮ ಮುಂಬಯಿ ಪ್ರಾಂತದ ಗವ್ಹರ್ನರರಾದ ಸರ್ ಮಹಾರಾಜಸಿಂಗರವರು ಮುಂದಿನ ತಿಂಗಳಲ್ಲಿ ನಮ್ಮ ಜಿಲ್ಲೆಗೆ ಚಿತ್ತೈಸುವವರಿದ್ದಾರೆಂದು ತಿಳಿಯುತ್ತದೆ ಪ್ರಾಂತಾಧಿಪರ ಸಂಚಾರದಿಂದ ಒಮ್ಮೆ ಜನ ಸಮಾಜಕ್ಕೆ ಉಪಕಾರವಾಗುವ ಸಂಭವ ಹಿಂದೆ ಇರಲಿಲ್ಲ, ಈಗಲೂ ಇರುವದಿಲ್ಲ ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟವುಂಟು ಗವರ್ನರರ ಹಾದುಹೋಗುವ ಮಾರ್ಗಗಳು ಭದ್ರಪಡಿಸಲ್ಪಡುತ್ತವೆ ೧೮ ವರ್ಷಗಳ ಹಿಂದೆ ಪ್ರಾಂತಾಧಿಪತಿಗಳಾಗಿದ್ದ ಲ್ಯಾಬೋರ್ನ ದೊರೆಗಳು ಗೇರಸೊಪ್ಪೆ ಜಲಪಾತ ನೋಡಿಕೊಂಡು ಹೊನ್ನಾವರ, ಕುಮಟಾ ಮಾರ್ಗವಾಗಿ ಕಾರವಾರಕ್ಕೆ ಹೋಗಿದ್ದರು ಆ ಕಾಲದಲ್ಲಿ ಗೇರಸೊಪ್ಪೆ ಮಾವಿನಗುಂಡಿಯ ಮಾರ್ಗ ಭದ್ರಪಡಿಸಲ್ಪಟ್ಟಿತ್ತೆಂದೂ ಆಮೇಲೆ ಆ ಮಾರ್ಗದಿಂದ ಹಾದುಹೋಗುವ ಯೋಗ ಪ್ರಾಂತಾಧಿಪರಿಗೆ ಪ್ರಾಪ್ತವಾಗದ್ದರಿಂದ ಆ ಮಾರ್ಗ ಈಗ ಹಾಳು ಬಿದ್ದಿರುವದೆಂದೂ ತಿಳಿಯುತ್ತದೆ ಇದೇ ಸ್ಥಿತಿ ನಮ್ಮ ಜಿಲ್ಲೆಯೊಳಗಿನ ಅನೇಕ ಮಾರ್ಗಗಳದುಂಟು ಕೆಲವು ಬಿದ್ದ ಮಾರ್ಗಗಳುಂಟು, ಸಂಕ ಜೀರ್ಣ ಹೊಂದಿದ ಮಾರ್ಗಗಳುಂಟು ಸುರಕ್ಷಿತವಾಗಿ ಸುಖವಾಗಿ ಪ್ರಯಾಣ ಮಾಡಬಹುದಾದ ಮಾರ್ಗಗಳು ಸಿಗುವದು ಅಪರೂಪ ಜಿಲ್ಲಾ ಲೋಕಲ್ ಬೋರ್ಡಿನ ಮಾರ್ಗಗಳಂತೂ ತೀರ ಕೆಟ್ಟುಹೋಗಿವೆ ಅವನ್ನು ದುರುಸ್ತು ಮಾಡುವ ಶಕ್ತಿ ಬೋರ್ಡಿಗಿಲ್ಲ ತಮ್ಮ ಆಡಳಿತೆಗೆ ಒಪ್ಪಿದ ಮಾರ್ಗಗಳ ಮೇಲೆ ಓಡಾಡಲು ಸರಿಯಿನ ಮೋಟಾರುಗಳಿಗೆ ಅಪ್ಪಣೆ ಕೊಡಬಾರದಾಗಿ ಬೋರ್ಡಿನವರು ಜಿಲ್ಲಾಧಿಪರಿಗೆ ಅರಿಕೆ ಮಾಡಿಕೊಂಡಿದ್ದಾರಾಗಿ ತಿಳಿಯುತ್ತದೆ ಸರ್ ಮಹಾರಾಜಸಿಂಗರು ಜಿಲ್ಲೆಯೊಳಗಿನ ಯಾವ ಯಾವ ಮಾರ್ಗಗಳಮೇಲೆ ಸಂಚರಿಸಲು ಇಚ್ಛೆ ಅಪೇಕ್ಷೆಯಿರುವದಾಗಿ ಪ್ರಾಂತಿಕ ಸರಕಾರಕ್ಕೆ ತಿಳಿಸಬೇಕು. ಅಂದರೆ ನಮ್ಮ ಜಿಲ್ಲೆಯೊಳಗಿನ ಮಾರ್ಗಗಳು ಸ್ವಯಂ ಭದ್ರಪಡಿಸಲ್ಪಡುವವು ಪ್ರಾಂತಾಧಿಪರು ಹಾದು ಹೋಗುವಾಗ ತಾಂಗಿದ್ದ ಒಂದೇ ಒಂದು ಜಂಗಲನ್ನು ಆಚೆಯ ಭದ್ರಪಟ್ಟು ಕಾರಿಯಲ್ಲಿ ಜಂಗಲಿನ ಸಿರೀಕ್ಷಣ ಮಾಡುತ್ತ ಅವರನ್ನು ನಿಲ್ಲಿಸಿದರೆ ಪ್ರಯಾಣಿಕರಿಗೊದಗುವ ಕಷ್ಟಗಳ ಕಲ್ಪನೆಯು ಅವರಿಗಾಗಿ ಎಲ್ಲ ಹೊಳೆಗಳಿಗೆ ಸಂಕಗಳಾಗದೇ ಇರಾಗಿ ೦ ಜಾಲ್ಲೆ ಹಾರಿಡಬಹುದಾಗಿ ಜನರ ಸಿರೀಕ್ಷೆಯುಂಟು ದಟ್ಟ ವನರಾಜಿಯುಳ್ಳ ಪಟ್ಟಣಗಳಲ್ಲಿ ಸರ್ ಮಹಾರಾಜಸಿಂಗರ ಸತ್ಕಾರ ಮಾಡುವ ಅಭಿಲಾಷೆ ಬಿಟ್ಟು ನಿರ್ಜನ ಕುಗ್ರಾಮಗಳಲ್ಲಿ ಅಡವಿ ಪ್ರದೇಶಗಳಲ್ಲಿ, ವಾಸಿಸುವ ಜನರೊಳಗೆ ಪ್ರಾಂತಾಧಿಪರನ್ನು ಒಯ್ದು, ಅಲ್ಲಿಯ ಪರಿಸ್ಥಿತಿಯನ್ನು ಪ್ರಾಂತಾಧಿಪರಿಗೆ ತೋರಿಸಿದರೆ ಆ ಹಳ್ಳಿಗಳನ್ನು ಸುಧಾರಿಸಬೇಕೆಂಬ ಉತ್ಸುಕತೆ ಅಧಿಕಾರಿಗಳಲ್ಲಿ ಉಂಟಾಗುವದು ಅಧಿಕಾರಿಗಳಿಗೂ ಪ್ರಾಂತಾಧಿಪರಿಗೂ ಹಳ್ಳಿಗರಿಗೊದಗುವ ಕಷ್ಟಗಳ ಸರಿಯಾದ ಗ್ರಹಿಕೆಯಾದರೂ ಸಿಕ್ಕೀತು

* * *

ಒಂದು ವಿಷಯದ ಬಗ್ಗೆ ತಿಳಿಸುವದು ಅವಶ್ಯವುಂಟು ಹುಬ್ಬಳ್ಳಿಯ ಬಿ. ದಿಲಿಪೋರಿಯಾ ಎಂಬವರು ಮುಂಡಗೋಡ ತಾಲೂಕಿನ ಅತ್ತಿವೇರಿ ಗ್ರಾಮದಲ್ಲಿ ಸಕ್ಕರೆ ಕಾರಖಾನೆ ತೆಗೆದಿದ್ದಾರೆ ಕಾಡ ಕಡಿದು ನೆಲ ಸಮ ಮಾಡಲಿಕ್ಕೆ ಅವರು ಅಮೇರಿಕೆಯಿಂದ Bull Dosers (ಹೋರಿ ಮೋಟರುಗಳನ್ನು) ತರಿಸಿದ್ದಾರೆ ಇವು ಹಿಂದುಸ್ಥಾನ ಸರಕಾರದ ಸೈನ್ಯ ಇಲಾಖೆಯ ಕಡೆ ದೊರೆಯುತ್ತವೆ ಇವುಗಳ ಬೆಲೆ ೩೦-೪೦ ಸಾವಿರ ರೂಪಾಯಿ ಬ್ರಹ್ಮದೇಶದೊಳಗಿನ ಗುಡ್ಡಗಾಡು ಪ್ರದೇಶದಲ್ಲಿ ಯುದ್ಧಭೂಮಿ ಸರಿಪಡಿಸುವದಕ್ಕಾಗಿ ಈ ಮೋಟಾರುಗಳನ್ನು ಉಪಯೋಗಿಸುತ್ತಿದ್ದರಂತೆ ಇವು ೧೫೦ ಅಶ್ವಶಕ್ತಿಯುಳ್ಳವು ಇರುತ್ತಿದ್ದು ದೊಡ್ಡ ದೊಡ್ಡ ಮರಗಳನ್ನು ಬುಡಸಹಿತ ಕಡಿದು ಕೆಡವಿ ಗುಡ್ಡಗಾಡು ಪ್ರದೇಶವನ್ನು ಸಮನೆಲ ಮಾಡುತ್ತವೆ ಒಂದೊಂದು ಮೋಟಾರು ದಿನಾಲು ೬ ಎಕರೆ ಗುಡ್ಡಗಾಡು ಪ್ರದೇಶ ಸರಿಪಡಿಸಬಲ್ಲದು ಮುಂಡಗೋಡ ತಾಲೂಕಿನ ಇಂದೂರಿನಲ್ಲಿ ಇಂಥದೊಂದು ಮೋಟಾರನ್ನು ಪ್ರಾರ್ಥಿಸಿದರೆ ಅಲ್ಲಿಯ ೫ ಗಾವಳ್ಳಿಯ ಯೋಜನೆಗೆ ಬಹಳ ಅನುಕೂಲವಾಗಬಹುದಾಗಿ ದೇಸಾಯಿ ಮುಂತಾದವರು ಮುಲ್ಲಸಗೌಡಾ ಪಾಟೀಲರು ಅತ್ತ ಬರುವಾಗ ವಿನಂತಿ ಮಾಡಿಕೊಳ್ಳಬಹುದು ತಮಗೆ ಅವು ಸಿಗುವದಿಲ್ಲೆಂದೂ ಶ್ರೀ ದಿಲಿಪೋರಿಯಾರವರಿಂದ ಅವನ್ನು ಉದ್ರಿಯಾಗಿ ತಂದು ಕೆಲಸ ನಡಿಸಬಹುದೆಂದೂ ಮುಂತಾಗಿ ಹೇಳಿದರೆಂದು ತಿಳಿಯುತ್ತದೆ ಅಮೇರಿಕೆಯಲ್ಲಿ ಇಂಥ ಮೋಟಾರುಗಳು ಬಹಳಷ್ಟು ಇವೆ ಬಿ. ದಿಲಿಪೋರಿಯಾರಂಥವರಿಗೆ ಅವು ಸಿಗುತ್ತಿರುವಾಗ ಪ್ರಾಂತಿಕ ಸರಕಾರಕ್ಕೆ ಅವು ಸಿಗದಿರುವ ಕಾರಣವೇನೆಂಬು ಬಗ್ಗೆ ವಿಚಾರಿಸಬೇಕು ಗ್ರಾಮೋದ್ಧಾರದ ಕಾರ್ಯಕ್ಕೆ ಈ ಮೋಟಾರುಗಳಿಂದ ಬಹಳ ಅನುಕೂಲತೆಯಾಗುವಂತಿದೆ

* * *

ನಮ್ಮ ಜಿಲ್ಲೆಯ ಮುಕ್ಕಾಲು ಭಾಗ ಅಡವಿ ಪ್ರದೇಶವನ್ನು ಕಾಡಾನೆ ಹಂದಿ ಪಶುಗಳು ಹೊಲಗಳಲ್ಲಿ ಸೇರದಂತೆ ಮುಂಜಾಗ್ರತೆ ಕೊಳ್ಳಬೇಕಾಗಿರುತ್ತದೆ ಸಿದ್ದಾಪುರ ತಾಲೂಕಿನ ಕೋಡಶಿಯಲ್ಲಿ ಒಂದೇ ಒಂದು ರಾತ್ರಿ ೪ ಕಾಡಾನೆಗಳು ಹೊಲ ತೋಟಗಳಲ್ಲಿ ನುಗ್ಗಿ ೨ ಸಾವಿರ ರೂ ಬೆಲೆ ಬಾಳುವ ಪೈರನ್ನು ನಷ್ಟ ಮಾಡಿದವು ಬಸ್ತಿಬೈಲೊಳಗೆ ೬೦ ಬೆಳೆಯ ಒಗ್ಗೆ ಹಾಕಿದ ನೀರಿನ ನಳಿಗೆಗಳು ನಷ್ಟವಾದವು ಕಾಳಬೇಣದೊಳಗಿನ ೧-೧೦ ಎಕರೆ ತೋಟ ನೆಲಸಮ ವಾಯಿತು ಇಂಥ ಹಾವಳಿಯನ್ನು ತಡೆಗಟ್ಟುವದಕ್ಕಾಗಿ ಸರಕಾರವು ಅಡವಿ ಪ್ರದೇಶಗಳಲ್ಲಿ ವಾಸಿಸುವ ಗ್ರಾಮದವರಿಗೆ ಫ್ರೀ ಯಾಗಿ ಜಂಗಲ ಪಟ್ಟಿಯನ್ನು ಕೊಟ್ಟು ಅಲ್ಲಿ ಹೀರ್ಯಾದಿ ಮೊದಲಾದ ಮರಮಟ್ಟು ಬೆಳೆಯದಂತೆ ಕಾಪಾಡಬೇಕಾಗಿ ನಿರ್ಬಂಧ ಮಾಡಿದೆ ಅಡವಿ-ಪ್ರದೇಶದಲ್ಲಿ ಜನಬಲ ಕಡಿಮೆಯುಂಟು ಜಂಗಲ ಪಟ್ಟಿಯಲ್ಲಿ ಒಳ್ಳೇ ಮರಗಳಿದ್ದರೆ ಅವನ್ನು ಕಡಿದೊಯ್ದು ದುರುಸ್ತು ಮಾಡಿ ಆ ಪಟ್ಟಿಯ ನೀಗಾ ಮಾಡದೆ ಪುನಃ ಬೆಟ್ಟ ಬೆಳೆಯಗೊಟ್ಟ ಸರಕಾರದ ಸದ್ಧೇತುವನ್ನು ನಿರರ್ಥಕಗೊಳಿಸಿದ ಅನೇಕ ಉದಾಹರಣೆಗಳಿವೆ ಸರಕಾರವು ಸದರಿ ಮೋಟಾರುಗಳನ್ನು ತಂದು ಅವುಗಳಿಂದ ಬೆತ್ತಬಂದ ಅಡವಿ ಪ್ರದೇಶವನ್ನು ಸರಿಪಡಿಸುವ ಯೋಜನೆ ಮಾಡಿದರೆ ಕುಗ್ರಾಮಗಳಲ್ಲಿ ಜನವಸತಿ ಮಾಡಲು ಅನುಕೂಲವಾಗುವಂತಿದೆ ಜಂಗಲ ಪಟ್ಟಿಗಳನ್ನು ಕಡಿದು ಸರಿಪಡಿಸುವ ಸಮಸ್ಯೆಯೂ ದೂರವಾಗುವಂತಿದೆ ಹಲವೆಡೆ ಜಂಗಲ-ಪಟ್ಟಿಗಳನ್ನು ಸರಿಪಡಿಸಲಾಗದೆ ಜನರೆ ಸ್ಥಿತಿ ಹಿಂದೆ ಇದ್ದಂತೆಯೇ ಉಂಟು. ಹಲವೆಡೆ ಅಟ್ಟಿಗೆ ಗಾತ್ರಗೆದಾರರು ಅಜ್ಞ ಒಕ್ಕಲಿಗರಿಗೆ ಜಂಗಲ ಪಟ್ಟಿಗಳನ್ನು ಸಂಪಾದಿಸಿಕೊಡುವ ಅಭಿವಚನ ಕೊಟ್ಟು ಒಳ್ಳೊಳ್ಳೇ ಕಟ್ಟಿಗೆಯನ್ನು ಕಡಿದೊಯ್ದು ಒಳ ಜಂಗಲ ಪಟ್ಟಿಯ ನೀಗಾ ಕೊಳ್ಳದೆ ಒಕ್ಕಲಿಗರನ್ನು ಕಷ್ಟದಲ್ಲಿ ನೂಕಿದ್ದುಂಟು "ಬುಲ್-ಡೋಝರ"ದ ಮೋಟರನ್ನಿಟ್ಟರೆ ಸರಕಾರಕ್ಕೆ ನಷ್ಟವಿಲ್ಲ ಜಂಗಲ ಪಟ್ಟಿಗಳಲ್ಲಿ ಸಿಗುವ ಕಟ್ಟಿಗೆಯಿಂದ "ಬುಲ್-ಡೋಝರ"ದ ಖರ್ಚು ಸುಲಭವಾಗಿ ಸಾಗುವಂತುಂಟು. ಹಿಂದುಸ್ಥಾನ ಸರಕಾರದ ಕಡೆಗಿರುವ "ಬುಲ್ ಡೋಝರ"ಗಳನ್ನು ಪ್ರಾಂತಿಕ ಸರಕಾರಕ್ಕೆ ಪಡೆಕೊಳ್ಳಲು ಇರುವ ಅಡಚಣೆಗಳನ್ನು ಹಿಂದುಸ್ಥಾನ ಸರಕಾರವು ಪರಿಹರಿಸಿಕೊಡತಕ್ಕದ್ದು ನಮ್ಮ ಜಿಲ್ಲೆಯ ಆಹಾರ ಉತ್ಪತ್ತಿಗೆ ಈ ಮೋಟಾರುಗಳಿಂದ ಬಹಳ ಪ್ರಯೋಜನ ದೊರೆಯುವಂತಿದೆ

* * *

ಸರಕಾರವು ಆಹಾರ ಧಾನ್ಯಗಳನ್ನು ಬೆಳೆಸಲು ಬಳಕೆ ಬೇಕಾಗಿ ಬಾಹೀರನಾಮೆಗಳನ್ನು ಹೊರಡಿಸುತ್ತದೆ ಆದರೆ ಅದಕ್ಕೆ ತಕ್ಕ ಅಧಿಕಾರಿಗಳ ವರ್ತನವಿಲ್ಲ ಸಾಬಾ ಪೇಟೆಯೊಳಗೆ ಕೆಸಲ್‌ರೋಕ್‌ದಿಂದ ೮ ಮೈಲು ಅಂತರದಲ್ಲಿ ಅವೇಡಾ-ಪೊಟ್ಟೋಳಸಾವಿ ಎಂಬ ಗ್ರಾಮದಲ್ಲಿ ಕೊಂಕಣ ಮರಾಠಾ ಜಾತಿಯ ೧೦ ಮನೆಗಳಿವೆ ಈ ಗ್ರಾಮದೊಳಗೆ

[illegible]

ಕೆನರಾ ಕೊಲೇಜ ನಿಧಿ.

[illegible] ... ತಿಳಿಸುತ್ತಾರೆ —

[illegible]	ರೂ	[illegible]
ಡಾ ಎ [illegible] ಮುಂಬಯಿ (ಹಿಂದೆ ಕೊಟ್ಟ ರೂ [illegible] ವಿನಹ)	"	[illegible]
ಮುಂಬಯಿಯ [illegible]	"	[illegible]
ಡಾ ಸಿ ಡಿ [illegible], ಮುಂಬಯಿ	"	[illegible]
ಡಾ ಬಿ [illegible] ದೀವಗಿ	"	[illegible]
ಡಾ [illegible]	"	[illegible]
" ದಾಸಪ್ಪಾ ಎಮ್ [illegible] ಬಂ[illegible]	"	[illegible]
ಡಾ [illegible] ಮುಂಬಯಿ	"	[illegible]
ಡಾ [illegible]	"	[illegible]
ಡಾ [illegible] ಮುಂಬಯಿ	"	[illegible]
ಡಾ ಎಸ್ ಆರ್ [illegible]	"	[illegible]
" ಸುಬ್ರಾಯ [illegible]	"	[illegible]
([illegible])		
ಡಾ [illegible] ಕಲ್ಯಾಣಜಿ	"	[illegible]
" [illegible]	"	[illegible]
" [illegible]	"	[illegible]
" [illegible]	"	[illegible]
" [illegible] ಮುಂಬಯಿ	"	[illegible]
" [illegible]	"	[illegible]
" [illegible]	"	[illegible]
[illegible]	"	[illegible]
ಶ್ರೀ [illegible] ಮುಂಬಯಿ		[illegible]
" [illegible]	"	[illegible]
ಡಾ [illegible]	"	[illegible]
" [illegible]	"	[illegible]
" [illegible] ಮುಂಬಯಿ	"	[illegible]
ಡಾ [illegible]	"	[illegible]
ಡಾ [illegible] ಮುಂಬಯಿ	"	[illegible]
" ರಾಮಚಂದ್ರ ಎಸ್ [illegible]	"	[illegible]
" [illegible]	"	[illegible]
" [illegible]	"	[illegible]
" [illegible]	"	[illegible]
" [illegible]	"	[illegible]
ಡಾ [illegible]	"	[illegible]
" [illegible]	"	[illegible]
" [illegible]	"	[illegible]
" [illegible]	"	[illegible]
ಡಾ [illegible]	"	[illegible]
" [illegible]	"	[illegible]
" ಎಸ್ ಎಸ್ [illegible]	"	[illegible]
" [illegible]	"	[illegible]
[illegible]	ರೂ	[illegible]
ಜುಮ್ಲಾ	ರೂ	[illegible]
ಹಿಂದೆ [illegible]	ರೂ	[illegible]
[illegible]		[illegible]

ಸ್ಥಾನಿಕ ವೃತ್ತಾಂತ.

ಕುಮಟಾ — [illegible] (freeze) [illegible]

[illegible]

[illegible]

ಮರೆಯದೆ ಉಪಯೋಗಿಸಿ ನೋಡಿ!

ಹಿಂದುಸ್ಥಾನದ ಎಲ್ಲಾ ದೊಡ್ಡ ಪಟ್ಟಣಗಳಲ್ಲಿ ಪ್ರಸಿದ್ಧಿ ಪಡೆದು ಹೆಚ್ಚೆಚ್ಚು ಜನರು ಸಂತೋಷದಿಂದ ಉಪಯೋಗಿಸುತ್ತಿರುವ,

ಚಿತ್ತರಂಜನ ಕಂಪನಿಯವರ—

(೧) ಪಂಡಿತ ದರ್ಬಾರ್ ಬತ್ತಿ,

(೨) ಮಹಾವೀರ ಅಗರ ಬತ್ತಿ

ಕೊಳ್ಳಿರಿ! [illegible] ಮರುಳಾಗಬೇಡಿ!

ಚಿತ್ತರಂಜನ ಕಂಪನಿ,

[illegible], (Mysore)

The Karnatak Distributors,
Manufacturers' Representatives
Ankola N K

Sole Agents for—

1 Kalapi Products &
Aryan Brushes (N K & S K)
2. Jayashree Teas (N K)
3 Kohinoor Brand
Milk Toffees (N K)

Salesmen on tour For special regional agenceis please contact

BUY OR **SELL**

"UNITED KARNATAK" POLICIES

For particulars apply to

Manager,
PRINCIPAL AGENCY OFFICE,
Post Box No 10,
UDIPI, S Kanara

ಕೆಲಸ ಹೇರಳವಾಗಿ ಬೆಳೆದಿದೆ ಅದೇ ಪ್ರಮಾಣದಿಂದ ಅವರ ಹೊಣೆಯೂ ಬೆಳೆದಿದೆ ಆದರೆ ಕೆಲಸ ಬೆಳೆದ ಹಾಗೆ ಸಂಬಳ ಬೆಳೆಯಲಿಲ್ಲ! ಉಗ್ರಾಣಿಗಳಿಗೆ ತಿಂಗಳೊಂದಕ್ಕೆ ರೂ ೧೦–೧೨ ವರೆಗೆ ಹೆಚ್ಚಾಯಿತು ಪಟೇಲರಿಗೆ ಗ್ರಾಮದ ಕಂದಾಯ ಮಾನದಿಂದ ಸಂಬಳ ಸಿಗುತ್ತಿದೆ ಆದರೆ ಈ ಸಂಬಳ ಈಗ ಏತಕ್ಕೂ ಸಾಲುವದಿಲ್ಲ ಅದನ್ನು ಏರಿಸಬೇಕಾಗಿ ಹಿಂದಿನ ಸಭೆಗಳಲ್ಲಿ ಅವರು ಕೈಕೊಂಡ ತೀರ್ಮಾನಗಳನ್ನು ಪ್ರಾಂತಿಕ ಸರಕಾರವು ಸಹಾನುಭೂತಿಯಿಂದ ವಿಚಾರಿಸತಕ್ಕದ್ದು ಉಗ್ರಾಣಿಗಳ ಅಧಿಕಾರಿಗಳಿಗೆ ಮಾಡಿಕೊಂಡ ವಿನಂತಿ ನಿರರ್ಥಕವಾದ್ದರಿಂದ ಅವರು ಸಂಪು ಹೂಡುವ ನಿರ್ಧಾರ ಮಾಡಿದ್ದಾರೆ ದಿನಕ್ಕೆ ರೂ. ೧ ಮೀರುವಂತೆ ಸರಕಾರವು ತಮಗೆ ಸಂಬಳ ಕೊಡದಿದ್ದರೆ ಮೇ ತಾ ೧ರಿಂದ ಸಂಪು ಹೂಡುವ ನಿರ್ಧಾರ ಮಾಡಿ, ಜಿಲ್ಹಾಧಿಪರಿಗೆ ಅದರಂತೆ ನೋಟೀಸು ಕೊಟ್ಟಿದ್ದಾರೆ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಬಾರದಾಗಿತ್ತು. ಅಧಿಕಾರಿಗಳು ಈ ಮೊದಲೇ ಇದರ ವಿಚಾರ ಮಾಡಬೇಕಾಗಿತ್ತು. ಉಗ್ರಾಣಿಗರೂ ಕಾಲಹರಣ ಮಾಡಕೂಡದು ಪಟೇಲರು ಸಂಪು ಹೂಡದಿದ್ದರೂ ಸರಕಾರವು ಅವರಿಂದ ಅಪೇಕ್ಷಿಸುವ ಕೆಲಸಕ್ಕೆ ತಕ್ಕ ಪ್ರತಿಫಲ ಅವರಿಗೆ ಸಿಗುವ ಯೋಜನೆಯಾಗಬೇಕು ಬೇರೆ ಬೇರೆ ಕೆಲಸಗಳಿಗಾಗಿ ಅವರು ತಾಲೂಕ ಕಚೇರಿಗಳಿಗೆ ಆಗಿಂದಾಗ ಬರಬೇಕಾಗುತ್ತದೆ. ಅವರ ಪ್ರವಾಸದ ಖರ್ಚು, ಊಟ, ಉಳಕೊಳ್ಳುವ ಖರ್ಚು ಸಹ ಸಿಗುವ ವೇತನದಿಂದ ಸಾಗುವದಿಲ್ಲ! ಪಟೇಲ-ಹುದ್ದೆಯ ಕೆಲಸಗಳನ್ನು ನಡಿಸುವದೂ ಕಠಿಣವಾಗುತ್ತಿದೆ. ಶಾನಭೋಗರು ಸರಕಾರದ ನೌಕರರಲ್ಲಿ ಸೇರುತ್ತಾರೆ ಗ್ರಾಮದ ಆಡಳಿತ ಇವರನ್ನು ಹೊಂದಿಕೊಂಡಿದೆ ನಮ್ಮ ದೇಶದ ಮೂಲಾಧಾರ ಗ್ರಾಮಗಳು ಅದೇ ಪ್ರಕಾರ ರಾಜ್ಯದಾಡಳಿತೆಯ ಮೂಲಾಧಾರ ಗ್ರಾಮ-ದಪ್ತರ. ಇವರಿಂದ ಸರಕಾರವು ಇಡೀ ದಿನ ಕೆಲಸವನ್ನು ಅಪೇಕ್ಷಿಸುತ್ತಿದೆ ಶಾನಭೋಗರ ಪ್ರಾಮಾಣಿಕತನದ ಮೇಲೆ ಇಡೀ ಆಡಳಿತ ಅವಲಂಬಿಸಿಕೊಂಡಿದೆ ಇಂಥ ಇಸಮುಗಳನ್ನು ಸರಕಾರವು ಅಸಮಾಧಾನದಲ್ಲಿಡಕೂಡದು ಕೆಲಸಕ್ಕೆ ತಕ್ಕ ವೇತನ ಕೊಡಬೇಕು ಹಿಂದುಸ್ಥಾನ ಸರಕಾರವು ನೇಮಿಸಿದ ಸಂಬಳ ಸಮಿತಿಯವರು ನೌಕರರ ೪ ವರ್ಗಗಳನ್ನು ಕಲ್ಪಿಸಿದ್ದಾರೆ. ೧ ಮತ್ತು ೨ ನೇ ವರ್ಗಗಳಲ್ಲಿ ದೊಡ್ಡ ದೊಡ್ಡ ಸಂಬಳದ ಅಧಿಕಾರಿಗಳು ಬರುತ್ತಾರೆ, ೩ ನೇ ವರ್ಗದಲ್ಲಿ ಕಾರಕೂನರು ಸೇರುತ್ತಾರೆ, ೪ನೇ ತರಗತಿಯಲ್ಲಿ ಶಿಪಾಯಿ-ಪೇದೆ ವಗೈರೆ ಕೆಳ-ನೌಕರರು ಬರುತ್ತಾರೆ ಶಾನಭೋಗರನ್ನು ಮುಂಬಯಿ ಸರಕಾರವು ಈ ಯಾವ ತರಗತಿಯಲ್ಲೂ ಸೇರಿಸದೆ ೩ನೇ ಮತ್ತು ೪ನೇ ತರಗತಿಗಳ ಮಧ್ಯದಲ್ಲಿ ಅವರನ್ನು ಹಾಕಿದೆ ಗ್ರಾಮಸ್ಥರು ನಿಜವಾಗಿ ಕಾರಕೂನರ ತರಗತಿಗಿಂತ ಮಿಗಿಲಾದವರು. ಶಾನಭೋಗರಿಗೆ ಸ್ವತಂತ್ರ ಅಧಿಕಾರ ಹಲವುಂಟು. ಇಂಥ ಇಸಮುಗಳನ್ನು ಕಾರಕೂನರಿಗಿಂತಲೂ ಕಡಿಮೆ ಎಂದು ಎಣಿಸುವದು ಅಪ್ರಶಸ್ತ. ಉತ್ತರ ಭಾಗದ ಕಮಿಶನರರು ಸರಕಾರಕ್ಕೆ ಸತ್ಯ ಪರಿಸ್ಥಿತಿಯನ್ನು ಅರಿಕೆ ಮಾಡಿಕೊಂಡಿರುತ್ತಾರೆಂದೂ ಸರಕಾರವು ಪುನರಾಲೋಚಿಸುತ್ತಿದೆಂದೂ ಶಾನಭೋಗರ ಸಭೆಯಲ್ಲಿ ಹೇಳಲ್ಪಟ್ಟಿದೆ ಸರಕಾರವು ಶೀಘ್ರವೇ ಗ್ರಾಮಾಧಿಕಾರಿಗಳ ಸಂಬಳದ ಹಾಗೂ ಭತ್ಯೆಗಳ ಯೋಗ್ಯ ಪ್ರಮಾಣಗಳನ್ನು ನಿರ್ಣಯಿಸತಕ್ಕದ್ದು ಈ ಅಧಿಕಾರಿಗಳ ಸುಖ-ಸಮಾಧಾನಗಳ ಮೇಲೆಯೇ ಗ್ರಾಮದ ಸುಖ-ಸಮಾಧಾನಗಳು ಅವಲಂಬಿಸಿಕೊಂಡಿವೆ. ಉಗ್ರಾಣಿಗಳು ಸಂಪು ಹೂಡಿದ ಮೇಲೆ ಅವರ ಬಗ್ಗೆ ನಿರ್ಣಯವಾದರೆ ಅದರೊಳಗೆ ಸ್ವಾರಸ್ಯವಿಲ್ಲ

* * *

ನಮ್ಮ ಮುಂಬಯಿ ಪ್ರಾಂತದ ಗವ್ಹರ್ನರರಾದ ಸರ್ ಮಹಾರಾಜಸಿಂಗರವರು ಮುಂದಿನ ತಿಂಗಳಲ್ಲಿ ನಮ್ಮ ಜಿಲ್ಹೆಗೆ ಬರುವವರಿದ್ದಾರೆಂದು ತಿಳಿಯುತ್ತದೆ ಪ್ರಾಂತಾಧಿಪರ ಸಂಚಾರದಿಂದ ಜನಸಾಮಾನ್ಯ ಸಮಾಜಕ್ಕೆ ಉಪಕಾರವಾಗುವ ಸಂಭವ ಹಿಂದೆ ಇರಲಿಲ್ಲ, ಈಗಲೂ ಇರುವದಿಲ್ಲ ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟವುಂಟು, ಗವ್ಹರ್ನರರು ಅಡ್ಡಾಡುವ ಮಾರ್ಗಗಳು ಭದ್ರಪಡಿಸಲ್ಪಡುತ್ತವೆ ೧೪ ವರ್ಷಗಳ ಹಿಂದೆ ಪ್ರಾಂತಾಧಿಪತಿಗಳಾಗಿದ್ದ ಬ್ರೆಬೋರ್ನ ದೊರೆಗಳು ಗೇರಸಪ್ಪೆ ಧಬಧಬೆ ನೋಡಿಕೊಂಡು ಹೊನ್ನಾವರ, ಕುಮಟಾ ಮಾರ್ಗವಾಗಿ ಕಾರವಾರಕ್ಕೆ ಹೋಗಿದ್ದರು ಆ ಕಾಲದಲ್ಲಿ ಗೇರಸಪ್ಪೆ-ಮಾವಿನಗುಂಡಿಯ ಮಾರ್ಗ ಭದ್ರಪಡಿಸಲ್ಪಟ್ಟಿತ್ತೆಂದೂ ಆಮೇಲೆ ಈ ಮಾರ್ಗದಿಂದ ಅಡ್ಡಾಡುವ ಯೋಗ ಪ್ರಾಂತಾಧಿಪರಿಗೆ ಪ್ರಾಪ್ತವಾಗದ್ದರಿಂದ ಆ ಮಾರ್ಗ ಈಗ ಹಾಳು ಬಿದ್ದಿರುವದೆಂದೂ ತಿಳಿಯುತ್ತದೆ ಇದೇ ಸ್ಥಿತಿ ನಮ್ಮ ಜಿಲ್ಹೆಯೊಳಗಿನ ಅನೇಕ ಮಾರ್ಗಗಳದುಂಟು ಕೊರಕಲು ಬಿದ್ದ ಮಾರ್ಗಗಳುಂಟು, ಸಂಕ ಜೀರ್ಣ ಹೊಂದಿದ ಮಾರ್ಗಗಳುಂಟು ಸುರಕ್ಷಿತವಾಗಿ, ಸುಖರೂಪವಾಗಿ ಪ್ರಯಾಣ ಮಾಡಬಹುದಾದ ಮಾರ್ಗಗಳು ಸಿಗುವದು ಅಪರೂಪ ಜಿಲ್ಹಾ ಲೋಕಲ್ ಬೋರ್ಡಿನ ಮಾರ್ಗಗಳಂತೂ ತೀರ ಕೆಟ್ಟುಹೋಗಿವೆ ಅವನ್ನು ದುರುಸ್ತ ಮಾಡುವ ಶಕ್ತಿ ಬೋರ್ಡಿನಲ್ಲಿಲ್ಲ ತಮ್ಮ ಆಡಳಿತಕ್ಕೆ ಒಪ್ಪಿದ ಮಾರ್ಗಗಳ ಮೇಲೆ ಓಡಾಡಲು ಸರಕಾರಿ ಮೋಟಾರುಗಳಿಗೆ ಅಪ್ಪಣೆ ಕೊಡಬಾರದಾಗಿ ಬೋರ್ಡಿನವರು ಜಿಲ್ಹಾಧಿಪರಿಗೆ ಅರಿಕೆ ಮಾಡಿಕೊಂಡಿದ್ದಾರಾಗಿ ತಿಳಿಯುತ್ತದೆ ಸರ್ ಮಹಾರಾಜಸಿಂಗರು ಜಿಲ್ಹೆಯೊಳಗಿನ ಯಾವತ್ತೂ ಮಾರ್ಗಗಳ ಮೇಲೆ ಸಂಚರಿಸಲು ತಮ್ಮ ಅಪೇಕ್ಷೆಯಿರುವದಾಗಿ ಪ್ರಾಂತಿಕ ಸರಕಾರಕ್ಕೆ ತಿಳಿಸಬೇಕು, ಅಂದರೆ ನಮ್ಮ ಜಿಲ್ಹೆಯೊಳಗಿನ ಮಾರ್ಗಗಳು ತ್ವರಿತ ಭದ್ರಪಡಿಸಲ್ಪಡುವವು ಪ್ರಾಂತಾಧಿಪರು ಕಾರಿ ದಾಟಬಂದಾಗ ಕಾರಿಗಿದ್ದ ಒಂದೇ ಒಂದು ಜಂಗಲನ್ನು ಆಟೆಯ ಧರದಲ್ಲಿಟ್ಟು ಕಾರಿಯಲ್ಲಿ ಜಂಗಲಿನ ನಿರೀಕ್ಷಣ ಮಾಡುತ್ತ ಅವರನ್ನು ನಿಲ್ಲಿಸಿದರೆ ಪ್ರಯಾಣಿಕರಿಗೊದಗುವ ಕಷ್ಟಗಳ ಕಲ್ಪನೆಯು ಅವರಿಗಾಗಿ ಎಲ್ಲ ಹೊಳೆಗಳಿಗೆ ಸಂಕಗಳಾಗಬೇಕಾಗಿ ರಾಜಾಜ್ಞೆ ಹೊರಡಬಹುದಾಗಿ ಜನರ ನಿರೀಕ್ಷೆಯುಂಟು ದಟ್ಟ ವಸತಿಯುಳ್ಳ ಪಟ್ಟಣಗಳಲ್ಲಿ ಸರ್ ಮಹಾರಾಜಸಿಂಗರ ಸತ್ಕಾರ ಮಾಡುವ ಅಭಿಲಾಷೆ ಬಿಟ್ಟು ನಿರ್ಜನ ಕಾಡ್ಗ್ರಾಮಗಳಲ್ಲಿ, ಅಡವಿ-ಪ್ರದೇಶಗಳಲ್ಲಿ, ವಾಸಿಸುವ ಜನರೊಳಗೆ ಪ್ರಾಂತಾಧಿಪರನ್ನು ಒಯ್ದು, ಅಲ್ಲಿಯ ಪರಿಸ್ಥಿತಿಯನ್ನು ಪ್ರಾಂತಾಧಿಪರಿಗೆ ತೋರಿಸಿದರೆ ಆ ಹಳ್ಳಿಗಳನ್ನು ಸುಧಾರಿಸಬೇಕೆಂಬ ಉತ್ಸುಕತೆ ಅಧಿಕಾರಿಗಳಲ್ಲಿ ಉಂಟಾಗುವದು ಅಧಿಕಾರಿಗಳಿಗೂ ಪ್ರಾಂತಾಧಿಪರಿಗೂ ಹಳ್ಳಿಗರಿಗೊದಗುವ ಕಷ್ಟಗಳ ಸರಿಯಾದ ಗ್ರಹಿಕೆಯಾದರೂ ಸಿಕ್ಕೀತು.

* * *

ಒಂದು ವಿಷಯದ ಚೌಕಶಿಯಾಗುವದು ಅವಶ್ಯವುಂಟು ಹುಬ್ಬಳ್ಳಿಯ ಬಿ. ದಿವಿಮೋರಿಯಾ ಎಂಬವರು ಮುಂಡಗೋಡ ತಾಲೂಕಿನ ಅತ್ತಿವೇರಿ ಗ್ರಾಮದಲ್ಲಿ ಸಕ್ಕರೆ ಕಾರಖಾನೆ ತೆಗೆದಿದ್ದಾರೆ. ಕಾಡ ಕಡಿದು ನೆಲ ಸಮ ಮಾಡಲಿಕ್ಕೆ ಅವರು ಕಲಕತ್ತೆಯಿಂದ "Bull Dosers" (ಹೋರಿ ಮೋಟರುಗಳನ್ನು) ತರಿಸಿದ್ದಾರೆ ಇವು ಹಿಂದುಸ್ಥಾನ ಸರಕಾರದ ಸೈನ್ಯ ಇಲಾಖೆಯಿಂದ ದೊರೆಯುತ್ತವೆ ಅವುಗಳ ಬೆಲೆ ೩೦–೩೫ ಸಾವಿರ ರೂಪಾಯಿ. ಬ್ರಹ್ಮದೇಶದೊಳಗಿನ ಗುಡ್ಡಗಾಡು ಪ್ರದೇಶದಲ್ಲಿ ಯುದ್ಧಭೂಮಿ ಸರಿಪಡಿಸುವದಕ್ಕಾಗಿ ಈ ಮೋಟಾರುಗಳನ್ನು ಉಪಯೋಗಿಸುತ್ತಿದ್ದರಂತೆ ಇವು ೧೫೦ ಅಶ್ವಶಕ್ತಿಯುಳ್ಳವು ಇರುತ್ತಿದ್ದು ದೊಡ್ಡ ದೊಡ್ಡ ಮರಗಳನ್ನು ಬುಡಗಡಿ ಕಡಿದು ತೆಗೆದು ಗುಡ್ಡಗಾಡು ಪ್ರದೇಶವನ್ನು ಸಮನೆಲ ಮಾಡುತ್ತವೆ ಒಂದೊಂದು ಮೋಟಾರು ದಿನಾಲು ೬ ಎಕರೆ ಗುಡ್ಡಗಾಡು ಪ್ರದೇಶ ಸರಿಪಡಿಸಬಲ್ಲುದು ಮುಂಡಗೋಡ ತಾಲೂಕಿನ ಅಂಡೂರಿನಲ್ಲಿ ಇಂಥದೊಂದು ಮೋಟಾರನ್ನು ಪೂರೈಸಿದರೆ ಅಲ್ಲಿಯ ಸಾಗುವಳಿಯ ಯೋಜನೆಗೆ ಬಹಳ ಅನುಕೂಲವಾಗುವದಾಗಿ ದೇಸಾಯಿ ಮಂತ್ರಿ ಮಹಾಶಯ ಮಲ್ಲನಗೌಡಾ ಪಾಟೀಲರು ಅತ್ತ ಬಂದಾಗ ವಿನಂತಿ ಮಾಡಿಕೊಳ್ಳಲ್ಪಟ್ಟಿತ್ತು. ಅವರಿಗೆ ಅವು ಸಿಗುವದಿಲ್ಲೆಂದೂ ಶ್ರೀ ದಿವಿಮೋರಿಯಾರವರಿಂದ ಅವನ್ನು ಉದ್ರಿಯಾಗಿ ತಂದು ಕೆಲಸ ನಡಿಸಬಹುದೆಂದೂ ಮಂತ್ರಿಗಳು ಹೇಳಿದರಾಗಿ ತಿಳಿಯುತ್ತದೆ ಕಲಕತ್ತೆಯಲ್ಲಿ ಇಂಥ ಮೋಟಾರುಗಳು ಬಹಳಷ್ಟು ಇವೆ ಬಿ. ದಿವಿಮೋರಿಯಾರಂಥವರಿಗೆ ಅವು ಸಿಗುತ್ತಿರುವಾಗ ಪ್ರಾಂತಿಕ ಸರಕಾರಕ್ಕೆ ಅವು ಸಿಗದಿರುವ ಕಾರಣವೇನೆಂಬ ಚೌಕಶಿಯಾಗಬೇಕು ಗ್ರಾಮೋದ್ಧಾರದ ಕಾರ್ಯಕ್ಕೆ ಈ ಮೋಟಾರುಗಳಿಂದ ಬಹಳ ಅನುಕೂಲತೆಯಾಗುವಂತಿದೆ.

* * *

ನಮ್ಮ ಜಿಲ್ಹೆಯ ಮುಖ್ಯ ಸಮಸ್ಯೆ ಅಡವಿ ಪ್ರದೇಶವನ್ನು ಕಡಿದು ಕಾಡು-ಪಶುಗಳು ಹೊಲಗಳಲ್ಲಿ ಸೇರದಂತೆ ಮುಂದಾಗ್ರತೆ ಕೊಳ್ಳತಕ್ಕದ್ದಾಗಿರುತ್ತದೆ. ಸಿದ್ದಾಪುರ ತಾಲೂಕಿನ ಕೋಡಕಣಿಯಲ್ಲಿ ಒಂದೇ ಒಂದು ರಾತ್ರಿ ೪ ಕಾಡಾನೆಗಳು ಹೊಲ-ತೋಟಗಳಲ್ಲಿ ನುಗ್ಗಿ ೨ ಸಾವಿರ ರೂ. ಬೆಲೆ ಬಾಳುವ ಪೈರನ್ನು ನಷ್ಟ ಮಾಡಿದವು ಬತ್ತದ ಪೈರೊಳಗೆ ತಾರ ಬೆಳೆಯ ಬಗ್ಗೆ ಹಾಕಿದ ನೀರಿನ ನಳಿಗೆಗಳು ನುಚ್ಚುನೂರಾದವು ಕಾಲಬೇಧದೊಳಗಿನ ೧–೧½ ಎಕರೆ ತೋಟ ನೆಲಸಮ್ ಆಯಿತು ಇಂಥ ಹಾವಳಿಯನ್ನು ತಡೆಗಟ್ಟುವದಕ್ಕಾಗಿ ಸರಕಾರವು ಅಡವಿ ಪ್ರದೇಶಗಳಲ್ಲಿ ವಾಸಿಸುವ ಗ್ರಾಮದವರಿಗೆ ಸ್ವಂತ ಯಾನೆ ಜಂಗಲ-ಪಟ್ಟಿಯನ್ನು ಕೊಟ್ಟು, ಅಲ್ಲಿ ಗಿಡಗಂಟಿ ಮೊದಲಾದ ಮರಮುಟ್ಟು ಬೆಳೆಯದಂತೆ ಕಾಪಾಡಬೇಕಾಗಿ ನಿರ್ಬಂಧ ಮಾಡಿದೆ. ಅಡವಿ-ಪ್ರದೇಶದಲ್ಲಿ ಜನಬಲ ಕಡಿಮೆಯುಂಟು. ಜಂಗಲ-ಪಟ್ಟಿಯಲ್ಲಿ ಒಳ್ಳೇ ಮರಗಳಿದ್ದರೆ ಅವನ್ನು ಕಡಿದೊಯ್ದು ದುಡ್ಡು ಮಾಡಿ ಆ ಪಟ್ಟಿಯು ನೀಗಾ ಮಾಡದೆ ಪುನಃ ಬಿಟ್ಟು ಬೆಳೆಯಗೊಟ್ಟು ಸರಕಾರದ ಸದ್ಹೇತುವನ್ನು ನಿರರ್ಥಕಗೊಳಿಸಿದ ಅನೇಕ ಉದಾಹರಣೆಗಳಿವೆ ಸರಕಾರವು ಸದರಿ ಮೋಟಾರುಗಳನ್ನು ತಂದು ಅವುಗಳಿಂದ ಬಿಟ್ಟಿಬಂದ ಅಡವಿ ಪ್ರದೇಶವನ್ನು ಸರಿಪಡಿಸುವ ಯೋಜನೆ ಮಾಡಿದರೆ ಉಗ್ರಾಮಗಳಲ್ಲಿ ಜನವಸತಿ ಮಾಡಲು ಅನುಕೂಲವಾಗುವಂತಿದೆ. ಜಂಗಲ-ಪಟ್ಟಿಗಳನ್ನು ಕಡಿದು ಸರಿಪಡಿಸುವ ಸಮಸ್ಯೆಯೂ ದೂರವಾಗುವಂತಿದೆ ಹಲವಾರು ಜಂಗಲ-ಪಟ್ಟಿಗಳನ್ನು ಸರಿಪಡಿಸಲಾಗದ ಜನರ ಸ್ಥಿತಿ ಹಿಂದೆ ಇದ್ದಂತೆಯೇ ಉಂಟು. ಹಲವೆಡೆ ಕಟ್ಟಿಗೆ-ಗುತ್ತಿಗೆದಾರರು ಅಷ್ಟು ಒಕ್ಕಲಿಗರಿಗೆ ಜಂಗಲ-ಪಟ್ಟಿಗಳನ್ನು ಸರಿಪಡಿಸಿಕೊಡುವ ಅಭಿವಚನ ಕೊಟ್ಟು ಒಳ್ಳೊಳ್ಳೇ ಕಟ್ಟಿಗೆಯನ್ನು ಕಡಿದೊಯ್ದು ಬಳಿಕ ಜಂಗಲ-ಪಟ್ಟಿಯು ನೀಗಾ ಕೊಳ್ಳದೆ ಒಕ್ಕಲಿಗರನ್ನು ಕಷ್ಟದಲ್ಲಿ ನೂಕಿದ್ದುಂಟು "ಬುಲ್-ಡೋಝರ"ದ ಮೋಟರನ್ನಿಟ್ಟರೆ ಸರಕಾರಕ್ಕೆ ನಷ್ಟವಿಲ್ಲ. ಜಂಗಲ-ಪಟ್ಟಿಗಳಲ್ಲಿ ಸಿಗುವ ಕಟ್ಟಿಗೆಯಿಂದ "ಬುಲ್-ಡೋಝರ"ದ ಖರ್ಚು ಸುಲಭವಾಗಿ ಹುಟ್ಟುವಂತುಂಟು. ಹಿಂದುಸ್ಥಾನ ಸರಕಾರದ ಕಡೆಗಿರುವ "ಬುಲ್-ಡೋಝರ"ಗಳನ್ನು ಪ್ರಾಂತಿಕ ಸರಕಾರಕ್ಕೆ ಪಡೆಕೊಳ್ಳಲು ಇರುವ ಅಡಚಣೆಗಳನ್ನು ಹಿಂದುಸ್ಥಾನ ಸರಕಾರವು ಪರಿಹರಿಸಿಕೊಡತಕ್ಕದ್ದು ನಮ್ಮ ಜಿಲ್ಹೆಯ ಆಹಾರ-ಉತ್ಪತ್ತಿಗೆ ಈ ಮೋಟಾರುಗಳಿಂದ ಬಹಳ ಪ್ರಯೋಜನ ದೊರೆಯುವಂತಿದೆ

* * *

ಸರಕಾರವು ಆಹಾರ-ಧಾನ್ಯಗಳನ್ನು ಹೆಚ್ಚಿಸ್ಬ ಬೆಳೆಸಬೇಕಾಗಿ ಜಾಹೀರನಾಮೆಗಳನ್ನು ಹೊರಡಿಸುತ್ತಿದೆ ಆದರೆ ಅದಕ್ಕೆ ತಕ್ಕ ಅಧಿಕಾರಿಗಳ ವರ್ತನವಿಲ್ಲ ಸುಮಾರು ವರ್ಷದ ಹಿಂದೆ ಕೆಸಲ್‌ರೋಡಿಂದ ೯ ಮೈಲು ಅಂತರದಲ್ಲಿ ಆನೇಡಾ-ಹೊಸ್ಪಳವಾಡ ಎಂಬ ಗ್ರಾಮದಲ್ಲಿ ಕೊಂಕಣ ಮರಾಠಾ ಜಾತಿಯ ೧೦ ಮನೆಗಳಿವೆ, ಈ ಗ್ರಾಮದೊಳಗೆ

ಕಾಂಧಾರೀ ನದಿ ಹರಿಯುತ್ತದೆ. ಸುಮಾ ಪೇಟೆಯಲ್ಲಿ ಒಂದು ವಿಶೇಷವುಂಟು ಕಾಳೀ ಮತ್ತು ಗಂಧಾರೀ ಇವೆರಡೂ ನದಿಗಳಲ್ಲಿ ಒಂದಿಲ್ಲೊಂದು ಈ ಪೇಟೆಯು ಪ್ರತಿ ಗ್ರಾಮದ ಮೇಲಿಂದ ಹಾಯ್ದು ಹೋಗುತ್ತವೆ. ಇವೆರಡೂ ನದಿಗಳ ಸಂಗಮ ಸುಪೆಯಲ್ಲಾಗುತ್ತದೆ. ಇದೇ ಪಕ್ಕ ಎರಡೂ ನದಿಗಳು ಹರಿಯುತ್ತಿರುವದರಿಂದ ಇವುಗಳಿಗೆ ಅಲ್ಲಲ್ಲಿ ಒಡ್ಡು ಹಾಕಿದರೆ ಸುಮಾ ಪೇಟೆಯಲ್ಲಿ ವಿಪುಲ ಧಾನ್ಯ ಬೆಳೆಯುವದು ಇದಲ್ಲದೆ ಪ್ರಾಕೃತಿಕ ಸೌಂದರ್ಯ, ಸ್ವಾಭಾವಿಕ ಐಶ್ವರ್ಯ ಸುಮಾ ಪೇಟೆಯಲ್ಲಿ ತುಂಬಿ-ತುಳುಕುತ್ತಿದ್ದರೂ ಅದರ ಪ್ರಯೋಜನ ಪಡೆಯುವ ಬುದ್ಧಿ ಯಾರಿಗೂ ಆಗಲಿಲ್ಲವು. ಅವೇದಾ ಪೊಪ್ಪಳವಾಡಿಯ ಜನರು ೪೦ ಎಕರೆ ಭೂಮಿಯನ್ನು ಬಾಗು ಮಾಡಬಯಸಿ ೩೦೦ ರೂ. ಖರ್ಚು ಮಾಡಿ ಪಾಂಧಾರ ನದಿಗೆ ಒಡ್ಡು ಹಾಕಿದರು. ಮತ್ತು ನೀರನ್ನು ಹೊಲಕ್ಕೆ ಒಯ್ಯಲು ಬೆಲಗು ಗಳನ್ನು ಮಾಡಿದರು ಬೆಲಗುಗಳನ್ನು ಒಯ್ಯುವ ದಾರಿಯಲ್ಲಿ ಒಂದು ಆಳವಾದ ಹಳ್ಳವುಂಟು ಆ ಹಳ್ಳದ ಪಾತ್ರ ಸಾಧಾರಣ ೫೦ ಫೂಟು ಅಗಲವಿದೆ. ಈ ಹಳ್ಳದ ಮೇಲೆ ಸಿಮೆಂಟಿನ ನಳಿಗೆಗಳನ್ನು ಹಾಕಿದರೆ ಅವುಗಳೊಳಗಿನಿಂದ ನೀರು ಸುಸೂತ್ರವಾಗಿ ಹಾಯುತ್ತದೆಂದು ೪೦ ಎಕರೆ ಭೂಮಿಯಲ್ಲಿ ಕಾರ ಬೆಳೆ ಬೆಳೆಯಬಹುದು ಸಿಮೆಂಟಿನ ನಳಿಗೆಗಳು ಸರ ಕಾರದ ಇಂಜನಿಯರ ಇಲಾಖೆಯವರಿಗೆ ಮಾತ್ರ ಸಿಗುತ್ತವೆ. ಅವೇದಾ-ಪೊಪ್ಪಳವಾಡಿಯ ಜನರು ತಮ್ಮ ಪರಿಸ್ಥಿತಿಯನ್ನು ಅಧಿಕಾರಿಗಳಿಗೆ ಅರುಹಿಕೊಂಡು ೫೦ ಫೂಟು ಉದ್ದ ಸಿಮೆಂಟಿನ ನಳಿಗೆಗಳನ್ನು ಬೆಲೆ ಕೊಟ್ಟು ಕೊಂಡು ತಮಗೆ ಪೂರೈಸಬೇಕಾಗಿ ಅರಿಕೆ ಮಾಡಿ ಈಗ ೨ ವರ್ಷಗಳಾದವು ಆದರೂ ಅಧಿಕಾರಿಗಳು ಅತ್ತ ಲಕ್ಷ್ಯ ಕೊಡುವದಿಲ್ಲ ಇದರಿಂದ ಅವೇದಾ-ಪೊಪ್ಪಳವಾಡಿಯವರು, ರೂ. ೩೦೦ ಖರ್ಚು ಮಾಡಿ ಒಡ್ಡು ಕಟ್ಟಿಸಿದ ಬಗ್ಗೆ ಪಶ್ಚಾತ್ತಾಪಪಡುವ ಪ್ರಸಂಗ ಬಂದಿದೆ. ಗ್ರಾಮೋದ್ಧಾರ ಬಯಸುವವರು ಸುಮಾ ಪೇಟೆಯ ಪರೀಕ್ಷಣೆ ಮಾಡಿ, ಕಾಳೀ, ಗಾಂಧಾರೀ ನದಿಗಳಿಗೆ ಒಡ್ಡುಗಳನ್ನು ಕಟ್ಟುವ ಯೋಜನೆಗಳನ್ನು ಪ್ರೋತ್ಸಾಹಿಸಿದಲ್ಲಿ ನಮ್ಮ ಜಿಲ್ಲೆಯ ಆಹಾರ-ಪರಿಸ್ಥಿತಿ ಬಹು ಮಟ್ಟಿಗೆ ಸುಧಾರಿಸಬಹುದು. ಅನ್ನ-ಧಾನ್ಯಗಳ ಉತ್ಪತ್ತಿಯ ಮೇಲೆ ನಮ್ಮ ಜಿಲ್ಲೆಯ ಪ್ರಮುಖರು ಹೆಚ್ಚು ಲಕ್ಷ್ಯವನ್ನಿಟ್ಟು ಈಗ ದುಡಿಯಬೇಕು ಅನ್ನ ಧಾನ್ಯಗಳ, ಉತ್ಪತ್ತಿ ಹೆಚ್ಚುವ ಹಾಗೆ ಅನ್ನ-ಧಾನ್ಯಗಳ ದರ ಇಳಿಯುವದು ಉತ್ಪತ್ತಿಯನ್ನು ಹೆಚ್ಚಿಸುವದೇ ದರ ಇಳಿಸುವ ಉಪಾಯವಾಗಿದೆ

ಮರೆಯದೆ ಉಪಯೋಗಿಸಿ ನೋಡಿ!

ಹಿಂದುಸ್ಥಾನದ ಎಲ್ಲಾ ದೊಡ್ಡ ಪಟ್ಟಣಗಳಲ್ಲಿ ಪ್ರಸಿದ್ಧಿ ಪಡೆದು ಹೆಚ್ಚೆಚ್ಚು ಜನರು ಸಂತೋಷದಿಂದ ಉಪಯೋಗಿಸುತ್ತಿರುವ, ಚಿತ್ರರಂಜನ ಕಂಪನಿಯವರ—

(೧) ಪಂಡಿತ ದರ್ಬಾರ್ ಬತ್ತಿ,
(೨) ಮಹಾವೀರ ಅಗರ ಬತ್ತಿ

ಕೊಳ್ಳಿರಿ! ಬೇಸಾಯುವ ಪೆಕಿಂಗಿಗ ಮರುಳಾಗಬೇಡಿ!

ಚಿತ್ರರಂಜನ ಕಂಪನಿ,

ಸಂತೇಪೇಟೆ, ತುಮಕೂರು, (Mysore)

The Karnatak Distributors, Manufacturers' Representatives
Ankola N K

Sole Agents for—

1 Kalapi Products & Aryan Brushes (N. K. & S. K)
2. Jayashree Teas (N K)
3 Kohinoor Brand Milk Toffees (N. K.)

Salesmen on tour For special regional agencies please contact

ಕೆಸರಾ ಕೊಲೇಜ ನಿಧಿ.

ಮೊದಲಿನ ಸಿಸಿಗೆ ತಾ ೨೨-೩-೧೯೪೮ರ "ವೃತ್ತ"ದಲ್ಲಿ ಪ್ರಕಟವಾದ ಪಂಕ್ತಿಗಳ ವಿನಃ ಈ ಕೆಳಗಿನ ಪಂಕ್ತಿಗಳು ವಸೂಲ ಬಂದಿರುತ್ತವೆಂದು ಕಾಲೇಜ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ—

ಕುಮಟಾ ಮ್ಯುನಿಸಿಪಾಲಿಟಿ	ರೂ	೫೦೦೧
ಡಾ। ವಿ ವ್ಹಿ ಬಾಳಿಗಾ ಮುಂಬಯಿ (ಹಿಂದೆ ಕೊಟ್ಟ ರೂ ೫೦೦೦ರ ವಿನಹ)	"	೫೦೦೦
ಮುಂಬಯಿಯ "ಓರ್ವ ಮಿತ್ರ"ರು	"	೨೨೨೨
ರಾ। ಪಿ ಡಿ ದೇಸಾಯಿ, ಮುಂಬಯಿ	"	೧೨೦೦
ಡಾ। ಬಿ ಪಿ ದೀವಗಿ "	"	೫೦೦
ರಾ। ಎಮ್ ವಿ ಪವಾರಿವಾಲ "	"	೫೦೦
" ದಾಸಪ್ಪಾ ಎಮ್ ನಾಡಕರ್ಣಿ ಬಂಕಿಕೊಡ್ಲ	"	೫೦೦
ಡಾ। ಟಿ ಜಿ ಕಸಲೇಕರ, ಮುಂಬಯಿ	"	೩೦೦
ರಾ। ಸಾ ಪಿ ವ್ಹಿ ಷೆಣೈ, ಬೆಂಗಳೂರ	"	೨೫೧
ರಾ। ಗೆಸ್ಸಾಂಬ ಥಿಯೇಟರ್ಸ್ ಲಿ, ಮುಂಬಯಿ	"	೨೫೦
ಡಾ ಎಮ್ ಆರ್ ದಿನೇಕರ "	"	೨೫೦
ರಾ ಸುಬ್ರಾಯ ರಂಗ ಪೈ "	"	೨೫೦
(೨ನೇ ಕಂತು)		
ರಾ। ಲಕ್ಷ್ಮೀದಾಸ ಕಲ್ಯಾಣಜಿ "	"	೧೫೧
" ಬಿ ಡಿ ಭರೂಚಾ "	"	೧೦೩
" ಗೋಕರ್ಣ ಅಣ್ಣಪ್ಪ ನಾಯ್ಕ ಪಕ್ನಳ್ಳಿ	"	೧೦೧
" ಮಹಾದೇವ ತಿಮ್ಮಯ್ಯ ಕಾನಡೆ ಪಾಲ್ನಳ್ಳಿ		೧೦೧
" ವ್ಹಿ ವಿ ಕಾಮತ ಮುಂಬಯಿ "	"	೧೦೧
" ಜಿ ಪಿ ಕಾದರೆ ಕೋಲಂಬೋ	"	೧೦೧
" ವಿನಾಯಕ ದಿನಕರ, ಹೈದರಾಬಾದ	"	೧೦೦
ರಾ ಸಾ। ಜೀ ಜೇ ವಾಗ್ಳೆ, ಕರಾಚಿ		೧೦೧
ಶ್ರೀಮತಿ ಸತ್ಯಭಾಮಾಬಾಯಿ ನಾರ್ವೇಕರ, ಮುಂಬಯಿ		೧೦೧
" ಲೀಲಾಬಾಯಿ ಸುಬ್ರಾವ ನಮುಂಪಳ್ಳಿ	"	೧೦೧
ರಾ। ಆಬುಬಕರ ಎಮ್ ಚಪ್ರಾ "	"	೧೦೧
" ರಾಮಾ ತಿಮ್ಮಣ್ಣ ಪಂಡಿತ ಬಗೆನ್ಕರ	"	೧೦೧
" ಕುಲ್ಲಾ ಸುಬಿಯಾ ಮತ್ತು ಕಂ ಮುಂಬಯಿ	"	೧೦೧
ಡಾ। ಜಿ ಜಿ. ಭಟ್ಟ, ಬೈಲಹೊಂಗಲ	"	೧೦೦
ರಾ। ಮನು ಸುಬೇದಾರ, ಮುಂಬಯಿ	"	೧೦೦
" ರಾಮಚಂದ್ರ ಎಸ್ ಗೋರೆ "	"	೧೦೦
" ಎಚ್ ಬಿ ಪರೇಖ "	"	೧೦೦
" ಎಸ್ ಕೇ ಪವೇರ "	"	೧೦೦
" ಬಿ ಎಸ್ ನಾಡಕರ್ಣಿ "	"	೧೦೦
" ಎಸ್ ವ್ಹಿ ಪಾಲೇಕರ "	"	೧೦೦
ಡಾ। ಭಾತರಡೇಕರ "	"	೧೦೦
" ಬೇ ಕೇ ಬೋರಕರ "	"	೧೦೦
" ಜಿ ಆರ್ ಕರಂಬೇಳಕರ "	"	೧೦೦
" ವ್ಹಿ ವ್ಹಿ ಕಾಮತ, ಪುಣೆ	"	೧೦೦
ರಾ। ಎಸ್ ಎಮ್ ಬಸ್ರೂರ, ಬಡೋದಾ	"	೧೦೦
" ಮೋಹಿದಿನ ಪಿ ಕಾದರ, ಕೊಲಂಬೋ	"	೧೦೦
" ಎಮ್ ಎಮ್ ಯುಸೂಫ "	"	೧೦೦
" ರಾಜಿ ತಾನೇಜಾ, ಮಸೂರಿ	"	೧೦೦
ಚಿಲ್ಲರೆ ವಸೂಲ ಬಂದದ್ದು ರೂ		೬೫೦೪ ೨-೫
ಜುಮ್ಲಾ ರೂ		೨೧೦೭೫ ೨-೫
ಹಿಂದೆ "ವೃತ್ತ"ದಲ್ಲಿ ಪ್ರಸಿದ್ಧ ರೂ		೧೦೩೨೦೪-೨ ೧೧
ಅಂತು ಈತನಕ ವಸೂಲ ರೂ		೧೨೪೨೭೯ ೫-೪

ಸ್ಥಾನಿಕ ವೃತ್ತಾಂತ.

ಕುಮಟಾ— ಇತ್ತೀಚಿನ ದಿನ ಕಳೆಯಲಾಗುತ್ತಿದೆ ರಾತ್ರಿಯ ಕುಮಟೆಯ ಪ್ರಕರಣದಲ್ಲಷ್ಟೇ ಒಂದಿಷ್ಟು ತಂತ್ರ ಉಂಟಾಗುತ್ತಿದೆ

ಅಕ್ಕಿಯ ಕಣ್ಣದ ಗಲಭೆ ಅಧಿಕಾರಿಗಳ ಕಲೆ ತಿನ್ನಹತ್ತಿದೆ ಇಲ್ಲಿಯ ಮಾಮಲೇದಾರರು ಕಳೆದ ವಾರ ಉಪ್ಪಿನ ಪಟ್ಟಣದಲ್ಲಿರುವ ಅಕ್ಕಿಯ ಸಂಗ್ರಹಗಳ ಪತ್ತೆ ಹಚ್ಚಿ, ಅವುಗಳ ವಿಲೆಯನ್ನು ನಿಬಂಧ (freeze) ಹಿಡಿದರೆ ಉಪ್ಪಿನಪಟ್ಟಣದ ಮೇಲಿಂದ ಹಾಯ್ದು ತಪಾಸು ಬಂದರದ ಖಾಸಗೀ ವ್ಯಾಪಾರಿಗಳು ೮-೯ ಸಾವಿರ ಖಾಲಿ ಅಕ್ಕಿ ಪರ ಬಂದರಗಳಿಗೆ ಹೋದದ್ದು ಉಪ್ಪಿನಪಟ್ಟಣದ ಪಟೇಲರ ಲೆಕ್ಕದ ಮೇಲಿಂದ ಕಂಡು ಬರುತ್ತದಂತೆ. ಆದರೆ ಕಪಡಿಯ ಕಪ್ಪದ್ದು ಕಚೇರಿಯ ಲೆಕ್ಕದಲ್ಲಿ ಇಷ್ಟು ಅಕ್ಕಿ ನಿರ್ಯಾತ ವಾದದ್ದು ತೋರುವದಿಲ್ಲ!

ರತ್ನಾಗಿರಿ ಜಿಲ್ಲೆಯ ಒಂದು ಪರಿವಾರದ ಅಕ್ಕಿಯು, ಜಿಲ್ಲಾಧಿಕಾರಿಗಳು ಸಮುದ್ರ-ಮಾರ್ಗವಾಗಿ ಅಕ್ಕಿ ಹೊರಗೆ ಹೋಗುವದಕ್ಕೆ ಪ್ರತಿಬಂಧ ಹಾಕಿದ್ದರಿಂದ, ಉಪ್ಪಿನಪಟ್ಟಣದಲ್ಲಿ ಎಸ್ಟಕೊಂಡಿತ್ತು. ಮುಂಬಯಿ ಸರಕಾರವು ಆ ಅಕ್ಕಿ ಜೊತೆಗಿನ ೫೦೦ ಖಾಲಿ ಅಕ್ಕಿ ಕೊಡಲೇ ಬಿಟ್ಟುಕೊಡಬೇಕಾಗಿ ತಂತಿಯಿಂದ ಹುಕುಮು ಮಾಡಿದ್ದರಿಂದ ಆಷ್ಟು ಅಕ್ಕಿ ಬಿಟ್ಟುಕೊಡಲಾಗಿದೆ ಸ್ಥಳೀಯ ಅಧಿಕಾರಿಗಳಿಂದ ಸ್ಥಳೀಯ ಪರಿಸ್ಥಿತಿಯನ್ನು ಸಮಗ್ರವಾಗಿ ತಿಳಿಕೊಳ್ಳದೆ ಮುಂಬಯಿಯ ಜನಪ್ರಿಯ ಸರಕಾರವು ಈ ಪರಿ ತಂತಿ-ಹುಕುಮುಗಳನ್ನು ಹೊರಡಿಸಲಾರಂಭಿಸಿದ್ದು ಕಂಡು ಇಲ್ಲಿಯ ಅನೇಕ ನಾಗರಿಕರು ಚಕಿತರಾಗಿದ್ದಾರೆ ಸರಕಾರದವರ ಈ ಹುಕುಮಿನಿಂದ ಇಲ್ಲಿಯ ಪರಿಸ್ಥಿತಿಯು ಹಾಗೂ ಜನ ಸಾಮಾನ್ಯರ ಅಭಿಪ್ರಾಯದ ಯಥಾರ್ಥ ಜ್ಞಾನ ಪಡೆದುಕೊಳ್ಳಲು ಸತ್ಯಾಗ್ರಹವೇ ಏಕಮಾತ್ರ ಉಪಾಯವಿರುತ್ತದೆಂದು ಹೇಳಿ ಅವರು ಅಕ್ಕಿಯ ನಿರ್ಯಾತಕ್ಕೆ — ಸರಕಾರದವರ ಅಪ್ಪಣೆಯಿಂದ ಹೋಗಬಹುದಾದ ಅಕ್ಕಿಯ ನಿರ್ಯಾತಕ್ಕೆ ಕೂಡ — ಪ್ರತಿಕಾರವಾಗಿ ಸತ್ಯಾಗ್ರಹ ಕೈಕೊಳ್ಳಲು ನಿರ್ಧರಿಸಿದ್ದಾರೆ

ಸ್ವಾತಂತ್ರ್ಯೋತ್ಸವದ ತೀರ್ಥಯ ನಾಟಕದ ಲಾಭವಾಗಲ ವಲ್ಲವಾಗದೆ ತಮಗೆ ಬೇಕಾಗಿಲ್ಲೆಂದು ಹೇಳುತ್ತ ಒಬ್ಬರಿಂದ ಹೊರಡ ತೀರ್ಥ ಪಕ್ಷದ ಕೊಂಡು ನಾಟಕನ್ನು ಪ್ರತ್ಯೇಕ ಅವರದ್ದಕ್ಕಿಗೆ ಕೊಡಲಾದೀತೆಂದೂ, ನಾಟಕದವರಿಂದ ಒಡೆಯರು ತಮ್ಮ ರೈತರಿಗೆ ದರಾಂತ ಗೇಣಿಯನ್ನು ನಾಟಕ ಬಿಡಬೇಕೆಂದೂ ಕಳೆದ ತಿಂಗಳಲ್ಲಿ ಸರಕಾರವು ಹೊರಡಿಸಿದ ಪ್ರಕಟಣೆಯಲ್ಲಿ (ತಾ ೨೨-೩-೪೮ರ ಸಂಚಿಕೆಯ ಕನ್ನಡ ಟಿಕದಲ್ಲಿ ಇದು ಪ್ರಕಟವಾಗಿದೆ) ಸ್ವಾತಂತ್ರ್ಯೋತ್ಸವದ ನಾಟಕದ ಲಾಭ ಪಡೆಯದ ಒಡೆಯರೂ ತಮ್ಮ ರೈತರಿಗೆ ದರಾಂತ ಗೇಣಿಯನ್ನು ಬಿಡಬೇಕೆಂದು ಸರಕಾರದ ಹೇಳಿಕೆಯಿದ್ದುದು ಅದರಿಂದ ಕಂಡು ಬರುವದಿಲ್ಲ ಆದರೆ ಕಳೆದ ತಾ. ೧೨ಕ್ಕೆ ಕುಮಟಾ ತಾಲೂಕ ಕಚೇರಿಯವರು ಎಲ್ಲ ಗ್ರಾಮಾಧಿಕಾರಿಗಳಿಗೆ ಒಂದು ಪರಿಪತ್ರ ಹೊರಡಿಸಿ, ನಾಟಕದ

BUY

OR

SELL

"UNITED KARNATAK" POLICIES

For particulars apply to:

Manager,
PRINCIPAL AGENCY OFFICE,
Post Box No 10,
UDIPI, S Kanara.

...ಲಾಭ ಪಡೆಯಲಿಚ್ಛಿಸುವ ಒಡೆಯರ ಪೂರ್ಣ ತೀರ್ವೆಯನ್ನು ವಸೂಲ ಪಡೆಕೊಂಡು ಅವರ ದಶಾಂಶವನ್ನು "ಫಲ" ಬಾಕಿಗೆ ಜಮಾ ಮಾಡಬೇಕೆಂದೂ ಸೂಟಿನ ಲಾಭ ಪಡೆಯದ ಒಡೆಯರು ಕೂಡ ತಮ್ಮ ರೈತರಿಗೆ ದಶಾಂಶ ಗೇಣಿ ಸೂಟಿ ಕೊಡಲಿಕ್ಕೆ ಬದ್ಧರಿರುತ್ತಾರೆಂದೂ, ಅದರಂತೆ ಒಡೆಯರು ತಮ್ಮ ರೈತರಿಗೆ ಗೇಣಿಯಲ್ಲಿ ಸೂಟಿ ಕೊಟ್ಟಿದ್ದಾರೋ ಇಲ್ಲೋ ಎಂದು ಗ್ರಾಮಪಂಚರು ನೋಡಿಕೊಳ್ಳಬೇಕೆಂದೂ ಅಪ್ಪಣೆ ಮಾಡಿ ತ್ತಾರೆ ಆದರೂ ಕಚೇರಿಯವರ ಈ ಪರಿಪತ್ರದೊಳಗಿನ ಅಂಶಗಳು ಸರಕಾರಕ್ಕೆ ಮಾನ್ಯವಿದ್ದಿವೋ ಹೇಗೆ ಸರಕಾರದವರ ಸಲಹೆ ಇಲ್ಲದೆ ಅಪ್ಪಣೆಗನುಸಾರವಾಗಿ ಈ ಪರಿಪತ್ರ ಹೊರಡಿಸಲ್ಪಟ್ಟಿರುತ್ತದೋ ಹೇಗೆ ಎಂಬುದರ ಅಧಿಕೃತ ಖುಲಾಸೆಯನ್ನು ಜಿಲ್ಲಾಧಿಪರಾಗಲಿ ಸ್ವತಃ ಸರಕಾರದವರಾಗಲಿ ಕೊಡದೇ ಹೋಗುವದವಶ್ಯವುಂಟು ಸ್ವಾತಂತ್ರ್ಯೋತ್ಸವದ ಸೂಟಿನ ಹೆಸರಲ್ಲಿ ರೈತರಿಗೆ ಧರ್ಮ ಮಾಡಲು ಒಡೆಯರುಗಳಿಗೆ ಬೇರೆ ಯಾರಿಗೇ ಆಗಲಿ ಒತ್ತಾಯ ಮಾಡುವದು ಯಾವದೇ ಸುಸಂಸ್ಕೃತ ಸರಕಾರಕ್ಕೆ ಶೋಭಿಸುವಂತಿಲ್ಲೆಂದು ಸುಜ್ಞ ಜನರ ಅಂಬೋಣವಿದೆ

ಶ್ರೀ ಸ್ವರ್ಣವಲ್ಲೀ ಮಠಾಧೀಶ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಗುರುಗಳ ಮುಕ್ಕಾಮು ಈಗ ಹೆಗಡೆಯಲ್ಲಿದೆ ಗುರುಗಳು ನಾಳೆ ಅಲ್ಲಿಂದ ಚಂದಾವರಕ್ಕೂ, ಅಲ್ಲಿಂದ ಬುಧವಾರ ಹಳದೀಪುರಕ್ಕೂ, ಶುಕ್ರವಾರ ಹಳದೀಪುರದಿಂದ ಹೊನ್ನಾವರಕ್ಕೂ ಚಿತ್ತೈಸುವರೆಂದು ತಿಳಿಯುತ್ತದೆ ಹೊನ್ನಾವರದಿಂದ ಮುಂದೆ ಮಿರ್ಜಾನಕ್ಕೆ ಬರಬಹುದಾಗಿಯೂ ಇರುವರೆಂದೂ ವಾರ್ತೆಯುಂಟು

ಉಳ್ಳೇಗಡ್ಡೆ ಬೆಳೆಸುವ ಒಕ್ಕಲಿಗರಿಗೆ ಯೋಗ್ಯ ಬೆಲೆ ದೊರಕಿಸಿಕೊಡುವದಕ್ಕಾಗಿ ಪನ್ವೇಲದ "ಬಟಲ ಫಾರ್ಮಿಂಗ ಸೋಸೈಟಿ"ಯವರು ಒಕ್ಕಲಿಗರ ಉಳ್ಳೇಗಡ್ಡೆಯನ್ನು ಕೊಂಡುಕೊಂಡು ಸ್ವತಃ ಮುಂಗಳೂರಿಗೆ ಕಳಿಸುವ ಉದ್ಯೋಗ ಕೈಕೊಂಡಿದ್ದಾರೆ ಆಚೆಯ ವಾರ ಸೊಸೈಟಿಯವರು (೩೧ ಮಣಗಳ) ಖಂಡಿ ೧೯ ರೂ ೪೪ ರಂತೆ ದರ ಕೊಟ್ಟು ಕೆಲವು ಉಳ್ಳೇಗಡ್ಡೆ ಖರೀದಿಸಿದ ಸುದ್ದಿಯುಂಟು

ಅಂತ್ರವಳ್ಳಿಯಲ್ಲಿ ಇತ್ತೀಚಿಗೆ ಒಂದು ಹುಲಿಯು ಹಾವಳಿ ಹಾಕುತ್ತಿದೆ ಈಗಾಗಲೇ ೧೦ ೧೨ ದನಗಳು ಅದಕ್ಕೆ ಆಹುತಿಯಾಗಿವೆ ಈ ಹುಲಿಯನ್ನು ಕೊಂದು ತಮ್ಮ ದನಗಳ ರಕ್ಷಣೆ ಮಾಡುವಾ ಎಂದರೆ ಊರೊಳಗಿನ ಕೋವಿ ಪರವಾನೆಧಾರಿಗಳ ಕಡೆ ಮದ್ದು–ಗುಂಡು ಇಲ್ಲ, ಹೊಸ ಮದ್ದುಗುಂಡು ಈಗ, ಜಿಲ್ಲಾಧಿಪರ ಪ್ರತಿಬಂಧಕ ಹುಕುಮಿನ ಮೂಲಕ, ಸಿಗುವದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಜಿಲ್ಲಾಧಿಪರಿಗಳೇ ಈ ಹುಲಿಯ ಸಾಯುವಕ್ಕೆ ಮಾಡಿ ಜನ ರಕ್ಷಣೆ ಮಾಡಲು ಕರ್ತವ್ಯಬದ್ಧರಿರುತ್ತಾರೆಂದೂ ಆ ಕರ್ತವ್ಯವನ್ನು ಅವರು ಕೂಡಲೇ ಪಾಲಿಸಬೇಕೆಂದೂ ಅಂತ್ರವಳ್ಳಿಯ ನಾಗರಿಕರೊಬ್ಬರು ಬರೆಯುತ್ತಾರೆ

ಯಾಣವು ಕಾನಡಾ ಜಿಲ್ಲೆಯೊಳಗಿನ ಒಂದು ಪುರಾತನ ಮತ್ತು ಸುಪ್ರಸಿದ್ಧ ಕ್ಷೇತ್ರವಿರುತ್ತದೆ ಸಾವಿರಾರು ಜನರು ಪ್ರತಿ ವರ್ಷ ಈ ಕ್ಷೇತ್ರಕ್ಕೆ ಹೋಗಿ ದೇವರ ಪೂಜೆ ಮಾಡುತ್ತಾರೆ ಆದರೆ ಯಾಣಕ್ಕೆ ಹೋಗಲು ಒಂದು ಮಾರ್ಗವಿಲ್ಲ ಜಂಗಲದೊಳಗಿನ ಕಾಲುದಾರಿಯಿಂದ ಯಾಣಕ್ಕೆ ಹೋಗಬೇಕು ಅದಲ್ಲದೆ ಮಾರ್ಗ ಸೌಕರ್ಯವಿಲ್ಲದ್ದರಿಂದಲೂ ಅಡವಿ ಒತ್ತುವರಿ ಬಂದದ್ದರಿಂದಲೂ ಯಾಣ ಸೀಮೆಯ ಸಾವಿರಗಟ್ಟಲೆ ಎಕರೆ ಫಲವತ್ತರ ಭೂಮಿ ಬಂಜರ ಬಿದ್ದಿವೆ ಗ್ರಾಮೋದ್ಧಾರದ ಅಧಿಕಾರಿಗಳು ಯಾಣ ಸೀಮೆಯವರ ಕೊರತೆಗಳ ಕಡೆ ಲಕ್ಷ ಕೊಟ್ಟು ಅವರಿಗೆ ಬೇಕಾದ ಮಾರ್ಗ ಸೌಕರ್ಯ, ಜಂಗಲ ಕಟಾವ ಸೌಕರ್ಯ ಮೊದಲಾದವನ್ನು ಒದಗಿಸಿಕೊಟ್ಟು ಅವರ ಉದ್ಧಾರದ ಪ್ರಯತ್ನ ಮಾಡಬೇಕಾಗಿ ಸೂಚನೆಯಿದೆ

ಹನೇಹಳ್ಳಿ ಬಂಕಿಕೊಡ್ಲ ಸೀಮೆಯ ರೈತರೂ ಒಡೆಯರೂ ಈಗ ಸಂಕಟದಲ್ಲಿ ಬಿದ್ದಿದ್ದಾರೆ ಈ ಸೀಮೆಯ ರೈತ ಸಂಘದ ಅಧ್ಯಕ್ಷರು (ತಮಗೆ ಎರಡನೇ ಗೇಣಿಯನ್ನು ಈ [illegible] ಒಂದು ತಿಳಿಸುತ್ತಾರೆ) [illegible] ಸರಕಾರಿ ಅಧಿಕಾರಿ [illegible] (ಮಾಮಲೆದಾರ ಪ್ರಕಟಿಸಿದ ಪಟ್ಟಿಯ ಮಾಸದ [illegible]) [illegible]

[illegible]

[illegible] ಸ್ಥಾದಿ ಸುತ್ತಿಕೆ

ಒಕ್ಕಲಿಗರ [illegible] ಜಮೀನಿನಲ್ಲಿಯ [illegible] ಒಡೆಯನಿಗೆ [illegible] [illegible] ಮೇರೆಗೆ [illegible] ಎಂದು [illegible] ಹುಲ್ಲು [illegible] ತೆಯ [illegible] ಬೆಳೆದ [illegible] ಪಾಲನ್ನು ಅಂದರೆ ಭತ್ತದ [illegible] ಇತರ (ಹೆಸರು ಉದ್ದು ವಗೈರೆ) ಧಾನ್ಯಗಳನ್ನು ಒಕ್ಕಿದ್ದು ಇದ್ದರೆ ಅದರ [illegible] ಹುಲ್ಲಿನ [illegible] ಪಾಲು ಸಹ ಒಡೆಯನಿಗೆ ಒಕ್ಕಲಿಗರು [illegible] ಹೇಳಿರುತ್ತಾರಾಗಿ [illegible] ಜಿಲ್ಲೆಯ [illegible] ತಾಲೂಕಿನ [illegible] ಸಂಘದವರು ಹಸ್ತಪತ್ರಿಕೆಗಳನ್ನು [illegible] ಈ ಹಸ್ತಪತ್ರಿಕೆಗಳೊಳಗಿನ ವಿಧಾನಗಳು [illegible] ರದವರು [illegible] ಮಾಡಿ, ಈ [illegible] ಗಿನಂತೆ ಸ್ಪಷ್ಟೀಕರಣ ಮಾಡಿರುತ್ತಾರೆ

ರೂಢಿ, ಸಂಪ್ರದಾಯ ಮತ್ತು (ಗೇಣಿಯ) ಕರಾರಿನ ಪ್ರಕಾರ ಯಾವ ಧಾನ್ಯಗಳ ರೂಪದಲ್ಲಿ ಗೇಣಿಯನ್ನು ಕೊಡಲಾಗುತ್ತಿತ್ತೋ ಅದನ್ನು ಬೆಳೆಯ ೧/೩ದಷ್ಟು ಕೊಡಬೇಕೆಂದು ಕಂದಾಯ [illegible] ಹೇಳಿದ್ದರು ಒಬ್ಬ ರೈತನು ಒಡೆಯನಿಗೆ ಭತ್ತದಲ್ಲಿ ಅರ್ಧ ಪಾಲು ಮತ್ತು ಇಂತಿಷ್ಟು ಬೇಳೆಯ ಧಾನ್ಯಗಳು ಮತ್ತು ಇಂತಿಷ್ಟು ಹೊರೆ ಹುಲ್ಲು ಕೊಡುವ ಕರಾರು ಮಾಡಿಕೊಂಡಿರುತ್ತಿದ್ದರೆ [illegible] ೧೯೪೮ [illegible] ಹೊರಟ ಹೊಸ ಆಜ್ಞೆಯ ಪ್ರಕಾರ ಕೇವಲ ಭತ್ತದ ಪ್ರಮಾಣವಷ್ಟೆ ಕಡಿಮೆಯಾಗುವದೆಂದು ತಿಳಿಯಬೇಕು ಅಂದರೆ ರೈತನು ಒಡೆಯನಿಗೆ ಭತ್ತದಲ್ಲಿ ೧/೨ದ ಬದಲು ೧/೩ ಪಾಲು ಕೊಡಬೇಕು ಇತರ ಬೇಳೆಯ ಧಾನ್ಯಗಳನ್ನು ಮತ್ತು ಹುಲ್ಲನ್ನು ಕರಾರಿನ ಪ್ರಕಾರ ಕೊಡಲೇ ಬೇಕು ಅವನು ಕೇವಲ ಭತ್ತವನ್ನು ಕೊಡುತ್ತಿದ್ದರೆ ೧/೨ದ ಬದಲು ೧/೩ ಪಾಲು ಕೊಡಬೇಕು

[ಒಕ್ಕಲಿಗರ ಒಂದು ವಾಕ್ಯವನ್ನು ದೊಡ್ಡಕ್ಷರಗಳಲ್ಲ ಮುದ್ರಿಸಿದ್ದು [illegible] ಸರಕಾರದವರು [illegible] ಈ ಸ್ಪಷ್ಟೀಕರಣದಂತೆ — ಸರಕಾರದವರ [illegible] ರಾಜ್ಯ" ಪತ್ರಿಕೆಯ ತಾ ೧ [illegible] ೧ [illegible] ರ ಸಂಚಿಕೆಯ [illegible]ನೆಯ ಪುಟದಲ್ಲಿ ಇದು ಪ್ರಕಟವಾಗಿದೆ [illegible] ಹುಲ್ಲಿನ ಲಭಾ [illegible] ಬೇರೆ ಉತ್ಪತ್ತಿಯ ಪಾಲು ಹಿಂದೆ [illegible] ಯರಿಗೆ ಸಿಗುತ್ತಿದ್ದರೆ ಅದರಂತೆ ತೆಂಗಿನ ಮಾವಿನ ಮರಗಳಂತೆ [illegible]ಗಳಲ್ಲಿ ಬೆಳೆಯುವ "ಮೇಲ ಫಲ"ಗಳಲ್ಲಿ ಒಡೆಯನಿಗೆ [illegible] ಇಲ್ಲವೆ ಕರಾರಿನಂತೆ ಪಾಲು ಸಿಗುತ್ತಿತ್ತು [illegible] ಈಗಲೂ ಒಡೆಯನಿಗೆ ಆ ಪಾಲು ಸಿಗಲೇಬೇಕು ಮತ್ತು [illegible] ಎಂಬುದು [illegible] ಒಡೆಯ ಒಕ್ಕಲಿಗರೊಳಗಿನ [illegible] ಒಂದು ಮಹತ್ವದ ಅಂಶವನ್ನು ಸರಕಾರದವರು ಒಗೆರಿಸಿದ ಬಗೆ ಧನ್ಯವಾದಗಳು ಸಂಪಾದಕ]

೧೯೪೬ನೆ ಇಸವಿಯ ಸಾವಕಾರಿ ಕಾಯಿದೆ (ಮನಿ ಲೆಂಡಿಂಗ ಆಕ್ಟ) [illegible] ೧೯೪೭ರಿಂದ [illegible] [illegible] ಜಿಲ್ಲೆಯ [illegible] ವರೆಗೆ [illegible] ಜಾರಿಯಾಗಿದೆಯಂತೆ ಸದರಿ ಕಾನೂನಿನ (೫) ಕಲಮಿನನ್ವಯ ಎಂವಾದರೂ ಪರವಾನೆಯ [illegible] ಸಾವಕಾರಿ [illegible] ತಪ್ಪು ಕಲನೆ [illegible] ಮಾಡುವವರು ಮಾಡಿಕೊಂಡಿರಬೇಕೆಂದು [illegible] ಈ [illegible] ಇನ್ನು ಮುಂದೆ ಹೊಸದಾಗಿ ಸಾವಕಾರಿ ಉದ್ಯೋಗ ಕೈಕೊಳ್ಳ [illegible] ಹಿಂದಿನ [illegible] ಮಾಡುತ್ತ ಬಂದವರಿಗೆ [illegible] ೧೯೪೮ರ ನಂತರ ಕೊಟ್ಟ [illegible] ಇತರ ವ್ಯವಹಾರ ಮಾಡಿದವರು ಶಿಕ್ಷೆಗೂ ಪಾತ್ರರಾಗುವರು ಆದ್ದರಿಂದ ಸಾವಕಾರಿಯ ವ್ಯವಸಾಯ ಮಾಡುವ ಜನರು ಕೂಡಲೆ ಅರ್ಜಿ ಮಾಡಿ ಪರವಾನೆಗಳನ್ನು ಪಡೆಕೊಳ್ಳಬೇಕೆಂದು ಜಿಲ್ಲಾಧಿಕಾರರು ಸೂಚಿಸುತ್ತಾರೆ

[illegible] ಕಳೆದ [illegible] ರ ಇಲ್ಲಿಯ ಗಿಬ ಹಾಯಸ್ಕೂಲಿನ ಧೇಂಪೆ ಸಭಾಭವನದಲ್ಲಿ [illegible] ಶಿಕ್ಷಕರ ಪರಿಷತ್ತು ಗೋಕರ್ಣ ಹಾಯಸ್ಕೂಲಿನ ಮುಖ್ಯಾಧ್ಯಾಪಕರಾದ ರಾ। ಕಾಶೀನಾಥ [illegible] ಅವರ ಅಧ್ಯಕ್ಷತೆಯಲ್ಲಿ ಕೂಡಿತ್ತು ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ [illegible] ಪ್ರಾಥಮಿಕ ಶಿಕ್ಷಣವನ್ನು [illegible] ಮಾಡಲು ಯೋಜಿಸಿದ್ದನ್ನು ಸ್ವಾಗತಿಸಿ [illegible] ಶಿಕ್ಷಣ ಸುಧಾರಿಸಬೇಕಾದರೆ ಹೆಚ್ಚಿನ ಶಿಕ್ಷಣ [illegible] ಪಾತ್ರರನ್ನು ಶಿಕ್ಷಕರನ್ನಾಗಿ [illegible] ಬೇಕೆಂದು [illegible] ಸರಕಾರವು ಎಲ್ಲ ಶಿಕ್ಷಣದ [illegible] ಹೊರಬೇಕಾಗಿ ಅಭಿಪ್ರಾಯ ವ್ಯಕ್ತಗೊಳಿಸಿದರು ಮಾಧ್ಯಮಿಕ ಶಾಲೆಗಳೊಳಗಿನ [illegible] ಕ್ರಮದಲ್ಲಿ ಕೆಲವೊಂದು ಸುಧಾರಣೆಗಳಾಗಬೇಕೆಂದು ವಿವರಿಸಿದರು ಸ್ವತಂತ್ರ ಹಿಂದುಸ್ಥಾನದಲ್ಲಿ ಇಂಗ್ಲಿಷ ಭಾಷೆಗೆ ಈಗಿನಷ್ಟೇ ಮಾನ [illegible] ಕೊಡುವದು [illegible] ವಾದಿಸಿದರು [illegible] ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ ಕಡ್ಡಾಯವಿದ್ದದ್ದನ್ನಾಗಿ ಮಾಡಿದ [illegible] ಸರಕಾರವನ್ನು ಅಭಿನಂದಿಸಿದರು ಮತ್ತು ಎಲ್ಲ [illegible] ಸೇವಾಸಂಘ [illegible] ಒಂದಿಲ್ಲೊಂದು ರಾಜಕೀಯ ಪಕ್ಷ ಪಂಗಡಗಳ ನಿಯಂತ್ರಣಕ್ಕೆ ಇಲ್ಲವೆ ಪ್ರಭಾವಕ್ಕೆ ಒಳಪಟ್ಟ ಸಂಸ್ಥೆಗಳಿಂದ ಅಲಿಪ್ತವಿರಬೇಕೆಂದು [illegible] ಆ ನಂತರ ಶಿಕ್ಷಣ ಕ್ರಮ ಶಿಕ್ಷಕರ ವೇತನ ಮೊದಲಾದ [illegible] ಸಂಬಂಧಪಟ್ಟ ಕೆಲವೊಂದು ಗೊತ್ತುವಳಿಗಳಾಗಿ ಪರಿಷತ್ತು ಸಮಾಪ್ತಿಯಾಯಿತು

ಇದೇ ಬರುವ ಮೇ ತಿಂಗಳ [illegible]ನೇ ವಾರದಲ್ಲಿ ಇಲ್ಲಿ ಕೊಂಕಣ ಪರಿಷತ್ತು ಕೂಡಿಸುವ ನಿರ್ಧಾರವಾಗಿರುತ್ತಿದ್ದು ಅದರ ತಯಾರಿ ಸಹ ಪ್ರಾರಂಭವಾಗಿದೆ

ತಾ ೧ — ೪ — ೧೯೪೮ರಿಂದ

ಚಿಲ್ಲರೆ ಚಿಮಣಿ ಎಣ್ಣೆ

ನಮ್ಮಲ್ಲಿ ಮಾರಲ್ಪಡುವದು

ಮಾರಾಟದ ಸ್ಥಳಗಳು —

(೧) ಪೈರ ಮಠಾಕೀ
(೨) ಮಿರ್ಜಾನಕರ ಬಿಲ್ಡಿಂಗ
(೩) ಪೆಟ್ರೋಲ ದುಕಾನ (ಮೋಟರ ಸ್ಟಂಡ)

ಪ್ರೊ. ಎಮ್. ಮಿರ್ಜಾನಕರ,

ಏಜಂಟ, ಬರ್ಮಾ ಶೆಲ್, ಕುಮಟಾ

ಜವಳಿಯ ಮೇಲಿನ ನಿಯಂತ್ರಣ ಹೋಗುತ್ತಲೇ ಜವಳಿಯ ದರ ಏರುತ್ತ ಇದೆ! ಇನ್ನು ದಿನಾಗಿವೆಂದು ಹೇಳಿದರೂ ಹೇಳಬಹುದು. ಸಕ್ಕರೆಯ ಮೇಲಿನ ನಿಯಂತ್ರಣ ತೆಗೆಯುವ ಮೊದಲು ಸರಕಾರದವರು [illegible] ಮತ ಕರ ಕಡೆಗಿದ್ದ ನಿಯಂತ್ರಿತ ಸಕ್ಕರೆಯ ಸಂಗ್ರಹವನ್ನು ಪರಪಡಿಸಿಕೊಂಡಿತ್ತು. ಅದರಂತೆ ನಿಯಂತ್ರಣ ದರದಿಂದ ಆಯಾ ಜವಳಿ ವರ್ತಕರಿಗೆ ಪೂರೈಸಿದ ಜವಳಿಯ ಶಿಲನ್ನು ಸರಕಾರವು ಕೈವಶಪಡಿಸಿಕೊಂಡಿದ್ದರೆ ಮತ್ತು ಅದನ್ನು ಚಿಲ್ಲರೆಯಾಗಿ ಮಾರುವ ವ್ಯವಸ್ಥೆ ಮಾಡಿದ್ದರೆ ಒಳ್ಳೆ [illegible] ನಿಯಂತ್ರಿತ ಬೆಲೆಗೇ [illegible] ಮಾರುವಂತೆ ಶೋಕವತ ಕರ [illegible] ಅವರು ಹಾಗೆ ಮಾಡುವಂತೆ ನಿರ್ಬಂಧಿಸಬಹುದಿತ್ತು. ಹಾಗೆ ಮಾಡದ್ದರಿಂದ ಕೆಲವು ವರ್ತಕರು ಈಗ ದುಬಾರಿ ದರದಿಂದ ಜವಳಿ ಮಾರಿ ಕುಬೇರರಾಗಹತ್ತಿದ್ದಾರೆ. ಈ ಸುಲಿಗೆಯನ್ನು ನಿಲ್ಲಿಸುವ [illegible] ಕ್ರಮವನ್ನು ಸರಕಾರವು ಯೋಜಿಸಲಾರದೆ ?

ಹೊನ್ನಾವರ— (ತಾ ೨೭ ೩-೧೯೪೮) ಕಡತೋಕೆಯ ಶ್ರೀ [illegible] ತಿಮ್ಮಣ್ಣ ಹೆಗಡೆಯವರು ಈಗ ಕಳೆದ ಸಾಲಿನ [illegible] ದಿಂದ ಪ್ರಾರಂಭಿಸಿದ ಅತಿರುದ್ರ ಹವನ ೧೧ನೆ ಸಹಸ್ರಾವರ್ತನೆಯ ವಸ್ತ್ರ ವಿನಿಯೋಗಗಳು ಸೋಮವಾರ ದಿನ ಸಮಾಪ್ತಿಯಾದವು. ದೂರ ದೂರದ ಊರುಗಳಿಂದಲೂ ಘಟ್ಟದ ಮೇಲಿಂದಲೂ ಸಾವಿರಾರು ಜನರು ಈ ಕಾಲದಲ್ಲಿ ಕಡತೋಕೆಗೆ ಬಂದು ಅಲ್ಲಿ ನಡೆಯುತ್ತಿದ್ದ ಪೂಜೆ ಹವನಾದಿಗಳನ್ನು ನೋಡಿ ಹಾಗೂ ಈ ಸಮಾರಂಭಕ್ಕಾಗಿ ಮದ್ರಾಸಿನಿಂದ ಚಿತ್ತೈಸಿದ ಶ್ರೀ [illegible] ಪುಣ್ಯ ಶ್ರೀ ಕಾಮಕೋಟಿ ಮಠಾಧೀಶರ ಹಾಗೂ ಬೇರೆ ಮಹನೀಯ ವಿದ್ವಾಂಸರ ಪ್ರವಚನಾದಿಗಳನ್ನು ಕೇಳಿ ಪಾವನರೂ ಕೃತಾರ್ಥರೂ ಆಗುತ್ತಿದ್ದರು. ಉತ್ಸವಕ್ಕೆ ಬಂದ ಜನರಿಗೆ [illegible] ಚಾರಗಳನ್ನು ಮಾಡುವ ಇಲ್ಲವೆ ಸತ್ಕರಿಸುವ ವ್ಯವಸ್ಥೆಯನ್ನು ಶ್ರೀ ಹೆಗಡೆಯವರು ಒಳ್ಳೆ ರೀತಿಯಿಂದ ಮಾಡಿದ್ದರು. ಈಗಿನ ಮಹರ್ಗತೆಯ ಕಾಲದಲ್ಲಿ ಇಷ್ಟು ದೊಡ್ಡ ಸಮಾರಂಭವನ್ನು ಒಬ್ಬನೇ ವ್ಯಕ್ತಿಯು ನೆರವೇರಿಸುವುದು ಒಂದು ಸಾಹಸವೇ ಸರಿ. ಆ ಸಾಹಸವನ್ನು ಕೈಕೊಂಡು ಸುಸೂತ್ರವಾಗಿ ಮತ್ತು ನಿರಾತಂಕವಾಗಿ ಪಾರುಗಾಣಿಸಿದ ಬಗ್ಗೆ ಶ್ರೀ ಹೆಗಡೆಯವರನ್ನೂ ಅವರ ಪರಿವಾರದವರನ್ನೂ ಸಮಾರಂಭಕ್ಕಾಗಿ ಬಂದ ಮಹನೀಯರೂ ಜನಸಾಮಾನ್ಯರೂ ಮುಕ್ತಕಂಠದಿಂದ ಹೊಗಳುತ್ತಿದ್ದಾರೆ.

ಮೊದಲಿನ ಸಮಾರಂಭಕ್ಕೆ ಶ್ರೀ ಪ್ರಭೋಧಾನಂದ ಸರಸ್ವತೀ ಸ್ವಾಮಿಗಳೆಂಬವರೂ ಬಂದಿದ್ದರು. ಇವರು ಒಳ್ಳೆ ಶಾಸ್ತ್ರಜ್ಞರಿದ್ದಾರೆ, ಪ್ರವಚನ ಪಟುಗಳಿದ್ದಾರೆ. ಜನರ ಹೃದಯವನ್ನು ಆಕರ್ಷಿಸುವ ವಿಷ್ಣು ಶಕ್ತಿಯೂ ಇವರಲ್ಲಿದೆ. ಇವು [illegible] ಕಾಮಕೋಟಿ ಪೀಠದ ಉತ್ತರಾಧಿಕಾರಿಗಳೆಂದು ಅವರು ಹೇಳುತ್ತಾರೆ. ವೈದಿಕ ಧರ್ಮದ ಪುನರುಜ್ಜೀವನ ಮಾಡಲು ತಾವು ಒಂದು ಹೊಸ ಸಂಸ್ಥೆಯನ್ನು ಸ್ಥಾಪಿಸುವುದಾಗಿ ಒಂದು ಹೇಳಿ ಅವರು ಆ ಬಗ್ಗೆ ಧನ ಸಂಗ್ರಹ ಮಾಡುತ್ತಿದ್ದಾರೆ. ಶ್ರೀ ಕಾಮಕೋಟಿ ಪೀಠದ ಉತ್ತರಾಧಿಕಾರಿಯಾಗುವವರಿಗೆ ಧರ್ಮದ ಪುನರುಜ್ಜೀವನ ಮಾಡಲು ಹೊಸ ಸಂಸ್ಥೆ ಯಾಕೆ ಮತ್ತು ಅದಕ್ಕೆ ಧನ ಸಂಗ್ರಹ ಮಾಡುವ ಕಾರಣ ಏನು ಎಂಬುದೊಂದು ನಿಗೂಢ ಸಮಸ್ಯೆ ಅನೇಕರ ತಲೆ ಕೆಡಿಸುತ್ತಿದೆ. ಶ್ರೀ ಕಾಮಕೋಟಿ ಪೀಠದವರಾಗಲಿ, ಸ್ವತಃ ಶ್ರೀ ಪ್ರಬೋಧಾನಂದ ಸರಸ್ವತೀ ಸ್ವಾಮಿಗಳಾಗಲಿ ಈ ಶಂಕೆಯನ್ನು ಪರಿಹರಿಸಬೇಕಾಗಿ ಕಡತೋಕೆಯ ನಿವಾಸಿಗಳೊಬ್ಬರು ವಿನ್ನವಿಸುತ್ತಾರೆ.

ಇಲ್ಲಿಯ [illegible] ಹಾರೀಕ್ಷರ ಇವರು ಕಳೆದ ತಿಂಗಳಲ್ಲಾದ ಎಡ್ವೋಕೇಟ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕಡತೋಕೆಯೊಳಗಿನ ಅತಿರುದ್ರ ಹವನ ನೋಡ ಬಂದ ಇಬ್ಬ ಸಿದ್ದಾಪುರ ತಾಲೂಕ ನಿವಾಸಿಗಳು ಕಳೆದ ಬುಧವಾರ ಇಡಗುಂಜಿಯ ಶ್ರೀ ಮಹಾ ಗಣಪತಿಯ ದರ್ಶನಕ್ಕೆ ಹೊಗಿದ್ದರು. ಹೋಗುತ್ತಾ ಅವರು ದೇವರಿಗೆ [illegible] ಕಾಯಿ ಸಕ್ಕರೆ ಮುಂತಾದ್ದನ್ನು [illegible] ದ್ದರು. ದೇವರಿಗೆ ಅವನ್ನು ಅರ್ಪಿಸಿಯಾದ ಮೇಲೆ ಅರ್ಚಕರು ಆ ಪದಾರ್ಥದೊಡನೆ ಏನೇನೋ [illegible] ಅವರ ಗಂಟುಮೂಟೆಗಳನ್ನೂ ಸಾಮಾನನ್ನೂ ಕಸಿದು ಕೊಂಡದಾಗಿ ತಿಳಿಯುತ್ತದೆ. ರಾತ್ರಿ ಗ[illegible]

[illegible] ಕಲು ಅವರಿಗೆ [illegible] ದ ಮುಂದೆ ಹೇಗಾದರೂ [illegible] ಒಂದು [illegible] ಉಪರ [illegible] ಕಂಬ ಭೀತಿಯಿಂದ ಸ್ಪೆಷಲ್ ಪೋಲೀಸ ಮಾಡಿ ಒಂದು ಅದೇ ರಾತ್ರಿ ಹೊನ್ನಾವರಕ್ಕೆ ಬಂದು [illegible] ರಾತ್ರಿಯಲ್ಲಿ ಒಬ್ಬಂಟಿಗ [illegible] ದೇವಸ್ಥಾನದವರೇ ಸಂಘ ದೇವರ ಕಮಿಟಿಯವರೂ ಈ ಪ್ರಕರಣದ ಬಗ್ಗೆ ವಿಚಾರಣೆ ಮಾಡಿ ಅಲ್ಲಿ ಸರುದೇವಸ್ಥಾನಕ್ಕೆ ಬರುವ ಯಾತ್ರಿಕರನ್ನು ಕಾಡದಂತೆ ವ್ಯವಸ್ಥೆ ಮಾಡಬೇಕಾಗಿ ಅನೇಕ ಸ್ಥಳೀಯರೂ ಅಲ್ಲಿಯವರೂ ವಿನಂತಿ ಮಾಡುತ್ತಾರೆ.

(ತಾ ೨೭ ೩ ೪೮) ಮೈಸೂರ ಸರಕಾರವು ಕಟ್ಟಿಸಿದ [illegible] ಕಾರ್ಖಾನೆಯು ಎ ದಿವಸ ನಿರಿ [illegible] ದ ನದಿಯಗುಂಟ ಇರುವ ಗೇರುಸೊಪ್ಪೆ [illegible] ಈ ಸಾರೆ ಬಗೆ [illegible] ಮನೆಗಳು ಹರಿದುಹೋಗಿ [illegible] ಗಳಲ್ಲಿ ನೀರು ನಿಂ[illegible] ಅಪಾಯವಾಗಿದೆ. ಈ ನೀರಿನಲ್ಲಿ ಎಣ್ಣೆಯ ಅಂಶ ಏರುವದರಿಂದ ಬೆಳೆ ಹಾನಿಕರವಾಗುತ್ತದೆ. ಸಾವಿರಾರು ರೂಪಾಯಿ [illegible] ಸಸ್ಯವನ್ನು ಹ[illegible] ಕೊಡಲು ಮುಂದೆಯು ಸಂಕಷ್ಟವು ಮೈಸೂರ ಸರಕಾರ ಕೊಡದೆ [illegible] ಅಲೋಚನೆ ಮಾಡಿ ನಷ್ಟ ಹೊಂದಿದವರಿಗೆ ಯೋಗ್ಯ ಪರಿಹಾರ ಕೊಡಿಸುವ ಏರ್ಪಾಡು ಮಾಡಲು ಕೇಳಿಕೊಂಡರು.

ಒಳ [illegible] ಪ್ರಮುಖರಿಗೆ [illegible] ಕೊಡುವ ಪ[illegible] ಮನೆ ತಿದಿ [illegible] ಬರುವ ಮನೆಗಳಲ್ಲಿ ಅದು [illegible] ಬಂದು [illegible] ಸುಮ್ಮನೆ ಹೋ [illegible] ಹೊ [illegible] ಒ[illegible] ದ ಒಬ್ಬರು ಬಾಕ್ಸದಲ್ಲಿ ಎಷ್ಟರಿಗ [illegible] ಬಂದಿದೆ! [illegible] ಬಿಟ್ಟು ಇಲ್ಲಿಂದ ಹೋದ್ದಾರೆ. ಒಳಕೂ [illegible] ದಲ್ಲಿ [illegible] ಜನರಿದ್ದಾರೆ. ಹೊಸ ಯೋಜನೆ ಯಂತೆ ಅಲ್ಲಿ ಈಗ [illegible] ದ [illegible] ಕ್ರಮ [illegible] ಅದರ ಈಗ ಇಲ್ಲ [illegible] ಕೈಗಳ [illegible] ಕಟ್ಟಿಸಿಕೊಡಲಾ [illegible] ದು ಹೊಸ ಮಕ್ಕಳಿ[illegible] ನಡೆಸುವದೂ ದೇವರೇ ಬಲ್ಲನು.

ಹೊನ್ನಾವರ ದಿವಾಣಿ ಕೋರ್ಟಿಗೆ ರಾ ವೀರಭದ್ರ [illegible] ಕಾಮತ ಎಂಬವರು ಜಿಲ್ಲಾ ನ್ಯಾಯಾಧೀಶರಾಗಿ ಬಂದಿದ್ದಾರೆ. ಕೆಲಸಕ್ಕೆ [illegible] ನಂತರ ಇವರು ಭಟ [illegible] ಕಳ್ಳಸಾಗಣೆ [illegible] ಮಾಡಿ ಆ ಪೇಟೆಯ [illegible] ಜನರ ಪ್ರಕರಣಗಳನ್ನು ಬಗೆಹರಿಸುವರೆಂದು ತಿಳಿಯುತ್ತಿದೆ.

ಹೊನ್ನಾವರ ತಾಲೂಕಿನ ಜನರಿಗಾಗಿ ಬರುತ್ತಿರುವ (ರೇಷನಿನವರು ಹಾಗೆ [illegible]) ಎನೆಂಬುದನ್ನು [illegible] ಇಲ್ಲಿಯವರಿಗೆ [illegible] ತಿಳಿಯುವರಿಗೆ (ಉದಾಹರಣೆಗೆ ಭಟಕಳದಲ್ಲಿ ಎರಡು ಎಂಟಾದ್ದೂ ಮತ್ತು ಆ ಪ್ರದೇಶಕ್ಕಾಗಿ [illegible] ಬರುತ್ತಿದ್ದರೂ ಆ ಪೇಟೆಯವರಿಗೆ) [illegible] [illegible] ಎಂಬ [illegible] ಬಹಳ ದಿನಗಳಿಂದ ದೂರು ಕೇಳಿ ಬರುತ್ತಿದೆ. ಈ ದೂರು ಕಂಟ್ರೋಲ ಶಿವಿಗೆ ಮುಟ್ಟಿಲ್ಲವೆ ನು ?

ಮೊನ್ನೆ ಮಂಕಿಯಲ್ಲಿ ಒಂದು ಸೋಜಿಗವಾದ ಸುದ್ದಿ ಎಂದಿದೆ. ಕಿಂತಿಯಾದವನ ಹೆಣವನ್ನು ಮುಂಜಾನೆ ಪಡೆಗಾಗಿ ಪೈಲಿಸರು ಇಲ್ಲಿಯ ಚಿಕಿತ್ಸಾಲಯಕ್ಕೆ ತಂದಿದ್ದರು. ಕೊಲೆ ಮಾಡಿದವನು ಯಾರೆಂಬುದಾಗಲಿ ಕೊಲೆ ಮಾಡುವ ಕಾರಣವಾಗಲಿ ತಿಳಿದಿಲ್ಲ.

ಜನವರಿಯಲ್ಲಿ ಪಟ್ಟಿ [illegible] ಸಹಾಯಸಮಿತಿಯವರು ಅಳೆದ ಮನೆಗಳಲ್ಲಿ ಹಾಕಿದ ಕಟ್ಟು ಇತ್ತ ಭರತ ಗಳ ಸೆಳವಿಗೆ ಪಾಯಿ ಹಾಕಿದರಾದರೆ ಈಗ ಜಡ ದವಾಗಿ [illegible] ಗಿಯುತ್ತದೆಂದೂ ಗದ್ದೆಗಳಲ್ಲಿ ಉಪ್ಪು ನೀರು ಸೇರಿ ಸುಗಿ ಬೆಳೆ ಬಿಡದೆ ಹಾಗಿರುತ್ತದೆಂದೂ ಜಿಲ್ಲಾಧಿಕಾರಿಗಳು ಒಮ್ಮೆ ಈ ಪರಿಸ್ಥಿತಿಯನ್ನು ನೋಡಿಕೊಂಡು ಸಂತ್ರಸ್ತ ರೈತರಿಗೆ [illegible] ಕೊಡಿಸಬೇಕೆಂದೂ ಜಲವಳ್ಳಿಯವರೊಬ್ಬರು ಬರೆಯುತ್ತಾರೆ.

ಭಟಕಳ— (ತಾ ೧೯ ೩ ೪೮) [illegible] ಅಂಚಿನರುವ ಸರಕಾರಿ ಜಾಗೆಗಳನ್ನು ಮನೆ ಕಟ್ಟುವದಕ್ಕಾಗಿ ಹಿಂದು ಜನರು ಬೇಡಿದರೆ ಅವನ್ನು ಕೊಡಬಹುದಿಲ್ಲ ವಾಗಿ ಉತ್ತರ ಬರುತ್ತದೆ! ಮುಸಲ್ಮಾನ ಬಾಂಧವರು ಬೇಡಿದರೆ ಎಲ್ಲಿ ಬೇಕಾದಲ್ಲಿ ಅವರಿಗೆ ಜಾಗೆ ಸಿಗುತ್ತದೆ! ಮುಸಲ್ಮಾನರಿಗಾಗಿ ವಿಶಿಷ್ಟ ಭಾಗಗಳನ್ನು ಸರಕಾರದವರು ಕಾಯ್ದಿಟ್ಟಿದ್ದರೂ, ಬೇರೆ ಭಾಗಗಳಲ್ಲೂ ಅವರಿಗೆ ಕೊಡಲೇ ಜಾಗೆಗಳು ಸಿಗುತ್ತವೆ! ಹೀಗೆಂದು ಊರಲ್ಲಿ ಅನೇಕರ ಬಾಯಿಯಿಂದ ಒಂದು ದೂರು ಕೇಳಬರುತ್ತದೆ. ಮುಸಲ್ಮಾನರಿಗೆ ಜಾಗ ಕೊಡುವಾಗ ಅವರಿಗೆ [illegible] ಕೊಂಡವರ್ಅಧಿಕಾರಿಗಳಾಗಬಹುದೋ ಹೇಗೆ ಎಂಬುದರ ವಿಚಾರವನ್ನು ಕೂಡ ಅಧಿಕಾರಿಗಳು ಮಾಡುವದಿಲ್ಲವಂತೆ. ಉದಾಹರಣೆಗೆ, ಎಂಗ್ಲೋ-ಉರ್ದು ಶಾಲೆಗೆ ಕಟ್ಟ ಗ್ರಾಮಪಂಚಾಯ ಹಿಂದಿನ ಜಾಗೆ ಕೊಟ್ಟರು. ಆ ಜಾಗೆಯಿಂದ ಊರೊಳಗಿನ ಜನಗಳು ತಿರುಗಾಡುತ್ತಿದ್ದವು ಸ್ಮಶಾನಕ್ಕೆ ಹೋಗ ದಾರಿಯೂ ಆ ಜಾಗೆಯ ಮೇಲಿಂದ ಹಾದುಹೋಗುತ್ತಿದ್ದ. ಈಗ ಶಾಲೆಯವರು ಅಲ್ಲಿ ಸುತ್ತಲೂ ಬೇಲಿ ಹಾಕಿರುವದರಿಂದ ದಾರಿ ಕಟ್ಟಾಗಿದೆ! ಅಧಿಕಾರಿಗಳು ಇತ್ತ ಕಡೆ ಗಮನ ಕೊಟ್ಟು ಜನಸಾಮಾನ್ಯರ ಅನಾನುಕೂಲತೆ ತಪ್ಪಿಸಬೇಕಾಗಿ ಅರಿಕೆಯು ಇದೆ.

ಇಲ್ಲಿಯ ಮ್ಯುನಿಸಿಪಾಲಿಟಿಯ ಸರಾದ ನಾಶಿವಾರನ್ನು [illegible] ಹೊರಗಿಂದ ಬಂದಿಳಿದ ಪ್ರಯಾಣಿಕರಿಗೆ ಬಹಳ ತಪ್ಪ ಕೊಡುತ್ತದೆಂದೂ ಅದರಿಂದ ವಿಶೇಷ ಸುಂಕ ವಸೂಲ ಮಾಡಿದ್ದರಿಂದ ಪೂರ್ವಸ್ಥಿತಿಗೆ ನಗರದ ಅಧಿಕಾರಿಗಳು ಅಲ್ಲಿ ಒಳ್ಳೆ ಕಟ್ಟು ಪ್ರಯಾಣಿಕರಿಗೆ ಕಷ್ಟ ಕೊಡದಂತೆ ಆ ನಾಶಿವಾರನಿಗೆ ಎಚ್ಚರಿಸಬೇಕು.

ಶಿರಸಿ— ಇದೇ ಕಳೆದ [illegible] ಗಳಕ್ಕೆ ಇಲ್ಲಿ ಜಿಲ್ಲೆಯ ಉಪಾಧ್ಯಾಯರ ಪರಿಷತ್ತು ನಡೆಯಿತು ರಾ ಗಂಗೊಳ್ಳಿಯವರ ಅಧ್ಯಕ್ಷತೆಯಲ್ಲಿ ನೆರೆದ ಪರಿಷತ್ತಿನಲ್ಲಿ ಈ ಕೆಳಗಿನ ಗೊತ್ತುವಳಿಗಳಾದವು — (೧) ಮಹಾತ್ಮಾಜಿಯವರ ನಿಧನ ಕ್ಕೆ ಸಂತಾಪ ಮತ್ತು ನಿಷೇಧ ಪ್ರದರ್ಶನ (೨) ಮಹಾತ್ಮಾಜಿಯವರ ರಾಷ್ಟ್ರೀಯ ಸ್ಮಾರಕದ ನಿಧಿಗೆ ಪ್ರತಿಯೊಬ್ಬ ಉಪಾಧ್ಯಾಯನು ತನ್ನ ೧೦ ದಿನಗಳ ಸಂಬಳ ಭತ್ಯೆಯನ್ನು ಕೊಡಬೇಕಾಗಿ ತೀರ್ಮಾನ. (೩) (ಅ) ಉಪಾಧ್ಯಾಯರಿಗೆ ಕಾಲ [illegible] ದೆ ಇಡೀ ದಿನ ಕೆಲಸ ಮಾಡುತ್ತಿದ್ದಾಗ್ಯೂ ಅವರಿಗೆ ಸಂಕುಚಿತ ಹೊಟ್ಟೆಬಟ್ಟೆಗೂ ಸಂಸಾರಕ್ಕೂ ಸಾಕಷ್ಟು ಸಂಬಳ ಭತ್ಯೆ ಕೊಡುವದಿಲ್ಲವಾದ್ದರಿಂದ ಅವರು ಸಾಯುವ ಹೊತ್ತು ಬಂದಿದೆಯಾಗಿಯೂ ಕಳೆದ ೩ ವರ್ಷಗಳಿಂದಾದರೂ ಉಪಾಧ್ಯಾಯರಿಗೆ ಜೀವನ ಸಂಬಳ, ತುಟ್ಟಿಭತ್ಯೆ ಮತ್ತು ಖಾಯಂ ಸರಕಾರಿ ನೌಕರಿ ಎಂದು ದಯಪಾಲಿಸಬೇಕಾಗಿಯೂ ಸರಕಾರಕ್ಕೆ ವಿನಂತಿ (ಬ) ಮೇಲಿನಂತೆ ೧ ತಿಂಗಳಲ್ಲ ಸರಕಾರವು ಯೋಗ್ಯ ಪರಿಹಾರ ಕೊಡದಿದ್ದಲ್ಲಿ ತಾ ೧ ಜೂನಿಯಿಂದ ಎಲ್ಲ ಉಪಾಧ್ಯಾಯರು ಶಾಲೆಗೆ ಹೋಗದೆ ಮನೆಯಲ್ಲೇ ವಿಶ್ರಾಂತಿ ತೆಗೆದುಕೊಳ್ಳಬೇಕಾಗಿ ನಿರ್ಧಾರ. (೪) ಗೊತ್ತುವಳಿಗಳನ್ನು ಸಂಬಂಧಪಟ್ಟವರಿಗೆ ಕಳಿಸಿಕೊಡಲಿಕ್ಕೂ ಅವಶ್ಯವುಳ್ಳ ಪತ್ರವ್ಯವಹಾರವನ್ನು ಕಾಲಕಾಲಕ್ಕೆ ನಡೆಸಲಿಕ್ಕೂ ಅಧ್ಯಕ್ಷರಿಗೆ ಅಧಿಕಾರ—ಇತ್ಯಾದಿ. (೫) ಪತ್ರವ್ಯವಹಾರದ ಮಾರ್ಗ ವನ್ನೇ ಅವಲಂಬಿಸಿ ಸೋತರೆ ಕಾಲಹರಣವಾಗುತ್ತಿರುವದರಿಂದ ಶಿಕ್ಷಣ ಮಂತ್ರಿಗಳ ಕಡೆ ಒಂದು ನಿಯೋಗ ಕಳಿಸುವ ಯೋಜನೆ ಇತ್ಯಾದಿ.

ಜನವರಿ ತಿಂಗಳಲ್ಲಿ ೧೭ ರಾತ್ರಿ ಶಿರಸಿ ಪೇಟೆಯ [illegible] ಬಳಿಯಲ್ಲಿ ಮರಳಗುಂಡ ಇವರು ಒಂದು ರೈತ ಸಂಘ ಸ್ಥಾಪಿಸಿಕೊಂಡು, ರೈತರಿಗೆ ಅನ್ನ ದಾನಿಗೆ ಒಮ್ಮೊಮ್ಮೆ ಹಿಡಿದ್ದಾರೆ. ಮರಳಗುಂಡರು ಸಂಘದ ಅಧ್ಯಕ್ಷರಂತೆ ಸಂಘದ ಸಭೆಗಳು ಗುಪ್ತವಾಗಿ ನಡೆಯುತ್ತಿವೆ. ಅದರ ಒಂದು ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಗಳಾದ ಸುದ್ದಿಯುಂಟು. (೧) ರೈತರು ಒಡೆಯರಿಗೆ ಹಿಂದೆ ಕೊಡುತ್ತಿದ್ದ ಗೇಣಿಯನ್ನು ಇದಕ್ಕೇ ಗೇಣಿ ಕೊಡಬೇಕು. (೨) ಸರಕಾರವು ಎ ಕರೆಯಿಂದಗೆ ತೀರ್ವೆಯಲ್ಲಿ ದಶಾಂಶ ಸೂಟ ಬಿಟ್ಟಿರುವದರಿಂದ ರೈತರು ದಶಾಂಶ ಗೇಣಿಯನ್ನು ಕಳೆ ದುಕೊಳ್ಳಬೇಕು (೩) ಗೇಣಿಯನ್ನು ನಗದಿಯಿಂದ

ಸರಕಾರದವರ ದರದಿಂದ ಕೊಡಬೇಕು. ಒಡೆಯರು ಆಗಾಗ ಪಾವತಿ ಕೊಡದಲಿಕ್ಕೆ ಇಲ್ಲವೆ ನಗದಾಯಿಂದ ಗೇಣಿ ವಸೂಲ ಕೊಳ್ಳಲಿಕ್ಕೆ ಒಪ್ಪದಿದ್ದರೆ ಗೇಣಿ ಹಣವನ್ನು ಸಂಘದಲ್ಲಿ ಜಮಾ ಮಾಡಬೇಕು. (೪) ಹಂಚಿನ ಗೆ ಅಂಗಡಿಗಳಲ್ಲಾಗಲಿ ಉಳಿದ ವನಗಳಲ್ಲಾಗಲಿ ಪ್ರವೇಶ ಮಾಡ [illegible] ಯಾರಾದರೂ ಆತಂಕ ಮಾಡಿದರೆ ಸಂಘದ [illegible] ಅವರಿಗೆ [illegible] (೫) ಮಹಾತ್ಮಾ ಗಾಂಧಿಜಿಯವರ ಸ್ಮಾರಕವೆಂದು [illegible] ಗಾಂಧಿಜಿಯವರ [illegible] ಒಂದು [illegible] ಗಾಂಧಿಜಿಯವರ ಅನ್ಯಾ [illegible] ಒಂದು [illegible] ಬೇಕು, ಮತ್ತು ಒಂದು [illegible] ಮಹಾತ್ಮಾಜಿಯವರ ಸ್ಮಾರಕ ಮಾಡಲು [illegible] ದವರು [illegible] ಹಿಂದಿನ ವರ್ಷ [illegible] ಹಣವನ್ನೆಲ್ಲ [illegible] ಶ್ರೀಮಂತರು [illegible] ಬಸವಾಸಿ [illegible] ವಿದ್ಯಾರ್ಥಿಗಳು [illegible]

ಬನವಾಸಿ [illegible] ವಿದ್ಯಾರ್ಥಿ [illegible] ಶಿಕ್ಷಕರ [illegible] ಪ್ರದರ್ಶನ [illegible] ಶಾಲೆಯ [illegible] ಹಾಗೂ ವಿದ್ಯಾರ್ಥಿಗಳಿಗೆ ಹಂಚಿಕೊಟ್ಟರು.

(ತಾ ೨೦-೩-೪೮) [illegible] ಹಣವನ್ನು [illegible] ಅಧಿಕಾರ [illegible] ಸರ್ವರೂ ಒಪ್ಪಿಕೊಂಡು [illegible] ಸಂಘಟನೆ [illegible]

ಸಿದ್ದಾಪುರ— ಈ ಜಿಲ್ಲೆಯಲ್ಲಿ ಶಾಖೆ [illegible] ಮುಂದಿನ ಸರಕಾರದವರು [illegible] ಅಧಿಕಾರ [illegible] ವಿವರ [illegible] ಶಾಖೆ [illegible]

ಎಂಬ [illegible] ಕಾಂಗ್ರೆಸ್ [illegible] ಭೂಮಿ [illegible] ಏಪ್ರಿಲ್ [illegible] ಪ್ರದೇಶಗಳಲ್ಲಿ [illegible] ಪ್ರದೇಶಗಳು [illegible]

ಇದೇ ವೇಳೆ [illegible] ದೇವರ ಗುಡಿಯಲ್ಲಿ [illegible] ಪ್ರವೇಶ ಕೊಡಲಾಯಿತು.

[illegible]

ಹಾವೇರಿ— (ತಾ ೨೬-೩-೪೮) [illegible] ಜಿಲ್ಲಾ [illegible] ಅಭಿವೃದ್ಧಿ [illegible] ಅನುಕೂಲ [illegible]

[illegible] ಜಿಲ್ಲೆಯ [illegible] ಪರೀಕ್ಷೆಯಲ್ಲಿ [illegible] ಜನರು [illegible]

[illegible] ಸಂಘಟನೆ [illegible]

ಅಂಕೋಲಾ— ಈ ತಾಲೂಕಿನ ಹಿಲ್ಲೂರ ಮತ್ತು [illegible] ತಾಲೂಕಿನ [illegible] ಭೂಮಿಗಳನ್ನು [illegible] ಸರಕಾರದವರು [illegible]

ಕಳೆದ ಮಂಗಳವಾರ (ತಾ ೨೩) ಪ್ರಾಂತಸಾಹೇಬರು [illegible] ದರ್ಶನ [illegible] ವ್ಯಕ್ತಿಗಳ [illegible] ಕೈಕೊಂಡಿದ್ದಾರೆ.

ಮುಲ್ಲಾಪುರ— (ತಾ ೧೦-೩-೪೮) ಕಳೆದ [illegible] ಒಂದು [illegible] ಗಾಡಿಯು [illegible] ಬಂದಿಯನ್ನು [illegible] ಎಕ್ಸಪ್ರೆಸ್ ಮೋಟಾರಿಗೆ [illegible] ಈ ಎರಡನೇ ಗಾಡಿಯು [illegible] ಜನರು [illegible] ಒಂದು [illegible] ಕೊಂಡಾಡಿದ್ದಾರೆ.

[illegible]

ಮಂಗಳೂರು ಶಾಖೆ

ಈ [illegible] ಸಿಗುತ್ತದೆ. [illegible] (ಚೀಲ ಬಿಟ್ಟು) ರೂ [illegible] (ಚೀಲ ಸಹಿತ) ರೂ [illegible]

ವಿಮಲಾನಂದ ಮಂಗೇಶ ಮಿಜಾರನಕರ,

[illegible]

ಕರ್ನಾಟಕ ಶಾಖೆ —

ಕೊಪ್ಪಿಕರ ರೋಡ, ಹುಬ್ಬಳ್ಳಿ.

[illegible] "[illegible]" [illegible] ಪತ್ರಿಕೆ [illegible]

ಜಾಹೀರಾತುಗಳ ದರ.

ಸ್ಥಳ, ಅವಕಾಶ ಹಾಗೂ ಎರ್ಪಡಿಸ

ಲ ಸಬೇಕಾದ ಅವಧಿಯಂತೆ

ವಿಶಿಷ್ಟ ಇಲ್ಲವೆ ದೀರ್ಘಕಾಲೀನ

ಜಾಹೀರಾತುಗಳ ಬಗ್ಗೆ ಸಮಕ್ಷ

ಇಲ್ಲವೆ ಪತ್ರದ್ವಾರಾ

ತಿಳಿಸಲಾಗುವದು.

Reg. No. B. 1270 Monday, 5-4-1948.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ ೪೦.

ಕುಮಟಾ - ಸೋಮವಾರ, ತಾ ೫—೪—೧೯೪೮

ವರ್ಗಣಿಯ ದರ.

ಕುಮಟೆಯಲ್ಲಿ

ವರ್ಷಕ್ಕೆ ರೂ ೨-೪-೦

ಬಟವಡೆಯಾದರೆ ವರ್ಷಕ್ಕೆ ೩-೧-೦

" ೬ ತಿಂಗಳಿಗೆ ೧ ೧೦-೦

ಬಿಡಿ ಸಂಚಿಕೆಗೆ ೦ ೧-೦

ಹಳೇ ಸಂಚಿಕೆಗೆ ೦ ೪-೦

ವ್ಹಿ. ಪಿ. ಯಿಂದ ಹಣ ಕಳುಹುವವರು

ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ

ಕಳಿಸಬೇಕು

ವರ್ಗಣಿಯು ಮುಂಗಡವಾಗಿ ಬರತಕ್ಕದ್ದು

ಯುದ್ಧ ನಿಶ್ಚಿತವೇ?

(ನಿರೀಕ್ಷಕನು ಬರೆದುದು)

ಆಚೆಯ ವಾರ ನಾನು ಹೇಳಿರುವಂತೆ ಈಗೆಲ್ಲೂ ಯುದ್ಧದ ಮಾತು, ಯುದ್ಧದ ತಯಾರಿಯು ಕೇಳಬರುತ್ತಿದೆ ಯಾವ ಪತ್ರಿಕೆಯನ್ನು ತೆರೆದರೂ ಯುದ್ಧ ಸಂಬಂಧದ ಲೇಖಗಳು ಕಣ್ಣಿಗೆ ಬೀಳುತ್ತವೆ ಆದರಿಂದ ' ಯುದ್ಧವಾಗುವದು ನಿಶ್ಚಿತವೇನು ? ' ಎಂದು ಯಾರಾದರೂ ಕೇಳುವದು ಸಹಜವೇ ಸರಿ. ಆದರೆ ಈ ಪ್ರಶ್ನೆಗೆ ನಿಶ್ಚಿತ ಮತ್ತು ನಿಃಸಂದಿಗ್ಧ ಉತ್ತರ ಕೊಡುವದು ಮಾತ್ರ ಕಠಿಣ ನನಗಿಂತ ಬಲ್ಲವರು ಯುದ್ಧ ಅಸಂಭವವೆಂದು ಸಾರುತ್ತಾರೆ ಆಚೆಯ ಸೋಮವಾರ ಭಾರತದ ಮಹಾಮಂತ್ರಿಗಳಾದ ಪಂ|| ನೆಹರೂರವರು ದಿಲ್ಲಿಯಲ್ಲಿ ಸೈನ್ಯಪಥಕಗಳ ಸಲಾಮಿಯನ್ನು ಸ್ವೀಕರಿಸುವಾಗ ಯುದ್ಧವಾಗಲಿಕ್ಕಿಲ್ಲವಾಗಿ ಹೇಳಿದ್ದುಂಟು ರುಶ್ಯರ ಕಡೆಗೂ ಅಣು-ಬಾಂಬುಗಳುಂಟೆಂದು ಬಹಿರಂಗವಾದರೆ ಯುದ್ಧದ ಸದ್ದು ತಾನಾಗಿ ಅಡಗುವದೆಂದು ಆಝಾದ ಹಿಂದ ಸೇನೆಯ ಪ್ರಮುಖರಾಗಿದ್ದ ಸೇನಾಪತಿ ಮೋಹನಸಿಂಗರು ೪—೫ ದಿನಗಳ ಹಿಂದೆ ಮುಂಬಯಿಯಲ್ಲಿ 'ಇಂಡಿಯನ್ ಪ್ರೆಸ್ ಎಸೂಸಿಯೇಶನ್ " ಸುದ್ದಿಸಂಸ್ಥೆಯ ಪ್ರತಿನಿಧಿಗಳೊಡನೆ ಹೇಳಿದ ಮಾತು ಪ್ರಕಟವಾಗಿದೆ ಮೋಹನ ಸಿಂಗರ ಈ ಅಪೇಕ್ಷೆಯಂತೆ ರುಶ್ಯರ ಕಡೆಗೆ ಈಗ ಬೇರೆ ರಾಷ್ಟ್ರಗಳ ಕಡೆಗೆ ಇದ್ದವುಗಳಗಿಂತ ಹೆಚ್ಚಿಗೆ ಪ್ರಖರವಾದ ಅಣು-ಬಾಂಬುಗಳು ಇರುತ್ತವೆಂದು ಸುಪ್ರಸಿದ್ಧ ಬ್ರಿಟಿಶ ಗಣಿತಶಾಸ್ತ್ರಿ ಪ್ರಾಧ್ಯಾಪಕ ಲೆವ್ಹಿಯವರು ಮೊನ್ನೆಯೇ ಹೇಳಿರುವರಲ್ಲದೆ, ಇನ್ನೇ ಮಹಾಯುದ್ಧ ಸಂಭವಿಸುವದೋ ಎಂದು ನೇರವಾಗಿ ಕೇಳಿದ ಪ್ರಶ್ನೆಗೆ 'ಇಲ್ಲ' ಎಂದು ನಿಶ್ಚಯಾತ್ಮಕ ಉತ್ತರ ಕೊಟ್ಟಿರುತ್ತಾರೆ. ಪಶ್ಚಿಮ ಯುರೋಪದ ರಾಷ್ಟ್ರದವರು ರುಶ್ಯಾ ವಿರುದ್ಧ ಯುದ್ಧಕ್ಕೆ ನಿಲ್ಲಲಾರರೆಂದು ಅವರು ಕಾರಣವನ್ನೂ ಕೊಟ್ಟಿರುತ್ತಾರೆ ಯುದ್ಧದ ಮಾತುಗಳು ಹೆಚ್ಚಾಗಿ ಕೇಳಬರುತ್ತಿದ್ದುದು ಅಮೇರಿಕೆಯಲ್ಲಿ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರನ್ನೂ ಹಿಡಿದು ಅಲ್ಲಿಯ ವಿದೇಶ ಮತ್ತು ಸೈನ್ಯ ಇಲಾಖೆಗೆ ಸಂಬಂಧಪಟ್ಟ ಸಕಲ ಸಣ್ಣ ದೊಡ್ಡ ಅಧಿಕಾರಿಗಳು ಯುದ್ಧ ಅನಿವಾರ್ಯವೆಂದೂ, ಯುದ್ಧ ಬಾಗಿಲಿಗೆ ಬಂದಂತೆಯೇ ಸರಿ ಎಂದೂ, ಆ ಯುದ್ಧವನ್ನು ಎದುರಿಸಲು ಸಕಲ ಸನ್ನಾಹಗಳನ್ನು ಮಾಡದಿದ್ದರೆ ಸರ್ವಘಾತವಾಗುವದೆಂದೂ ಪ್ರವಚನಗಳ ಹಿಂದೆ ಘೋಷಣಗಳನ್ನು ಮಾಡುತ್ತಾ, ಯುದ್ಧ ಸಿದ್ಧತೆಯ ತಯಾರಿಗಾಗಿ, ಯುದ್ಧೋಪಯೋಗಿ ವಿಮಾನ ಹಡಗಗಳನ್ನು ಕಟ್ಟುವದಕ್ಕಾಗಿ ಮತ್ತು ಸಕಲ ಯುವಕರಿಗೆ ಒತ್ತಾಯದ ಸೈನ್ಯ ಶಿಕ್ಷಣ ಕೊಡುವದಕ್ಕಾಗಿ ಪ್ರಜಾಪ್ರತಿನಿಧಿ ಸಭೆಯಿಂದ ಅಧಿಕಾರವನ್ನೂ ಅಬ್ಜಾವಧಿ ಡಾಲರ ಹಣ ವಿನಿಯೋಗಿಸಲು ಮಂಜೂರಿಯನ್ನೂ ಪಡೆಕೊಳ್ಳುತ್ತಿದ್ದಾರೆ ಆಂದ ಆ ಅಮೇರಿಕೆಯಲ್ಲಿ ಸದ್ಯಕ್ಕೇ ಸಂಚಾರ ಮಾಡಿ ಬಂದ ಮುಂಬಯಿಯ ಬ್ಲಿಟ್ಜ್ " ವಾರ-ಪತ್ರಿಕೆಯ ಸಂಪಾದಕರಾದ ಶ್ರೀ ಕಾರಂಜಿಯಾರವರು ಅಮೇರಿಕೆಯ ಜನತೆ ಯುದ್ಧವನ್ನು ನಿಮಂತ್ರಿಸಲಿಕ್ಕಿಲ್ಲವಾಗಿ ಹೇಳುತ್ತಾರೆ ರುಶ್ಯರಿಗೂ ಯುದ್ಧ ಬೇಕಾಗಿಲ್ಲ ಹೋದ ಮಹಾಯುದ್ಧದಲ್ಲಿ ಕೊನೆಗೆ ವಿಜಯಿಯಾದರೂ ಅವರು ನಾನಾ ಬಗೆಯ ಕಷ್ಟ-ನಷ್ಟಗಳನ್ನು ಸಹಿಸಿ ಸುಗ್ಗುಸುಗ್ಗಾಗಿ ಹೋಗಿದ್ದಾರೆ ತಾವಾಗಿ ಕಾಲು ಕೆದರಿ ಅವರು ಎಂದೂ ಯುದ್ಧಕ್ಕೆ ಆಹ್ವಾನ ಕೊಡಲಿಕ್ಕಿಲ್ಲೆಂದು ರುಶ್ಯರ ಪರಿಸ್ಥಿತಿಯ ಪೂರ್ಣ ಪರಿಚಯವುಳ್ಳವರು ಭರವಸೆ ಕೊಡುತ್ತಿದ್ದಾರೆ ಆದರಿಂದ ಯುದ್ಧವೆಸಗಬಾರದೆಂದು ಲಂಡನದಲ್ಲಿರುವ ಒಕ್ಕೂಟದ ಘಾರಿಗಳು ಹೇಳುವ ಮಾತು ಮೋಸಗಾರಿಕೆಯದಿರಬೇಕೆಂದ ಹೇಳಬರುವಂತಿಲ್ಲ ಇವರೆಲ್ಲರ ಮಾತುಗಳನ್ನು ನಂಬಿಕೊಂಡು ಯುದ್ಧವಾಗಲಿಕ್ಕಿಲ್ಲೆಂದು ನಿಶ್ಚಿತ ಅಭಿಪ್ರಾಯ ನಮೂದಿಸಿ ಜನರಿಗೆ ನಿಶ್ಚಿಂತರಾಗುಳಿಯಲು ಹೇಳುವಾ ಎಂದರೆ ಯುರೋಪ, ಅಮೇರಿಕೆಗಳಲ್ಲಿ ನಡೆಯುವ ಸಕಲ ಘಟನಗಳೂ ಬೇರೆ ಬೇರೆ ಸರಕಾರಗಳ ಚಲನ-ವಲನಗಳೂ ಹಾಗೆ ಮಾಡಲು ನನಗೆ ಧೈರ್ಯ ಕೊಡುವದಿಲ್ಲ ಮುಗಿಲೊಳಗೆ ಮೋಡಗಳು ಕಲೆಯುತ್ತಿರುವಾಗ ಮತ್ತು ಅಲ್ಲಲ್ಲಿ ಮಿಂಚುತ್ತಿರುವಾಗ ' ಬೆದರಬೇಡಿರಿ ! ಮಳೆಯಾಗಲಿಕ್ಕಿಲ್ಲ ! " ಎಂದು ಹೇಳುವ ಎದೆಗಾರಿಕೆಯನ್ನು ನಾನೇತಕ್ಕೆ ಮಾಡಲಿ? ರುಶ್ಯರ ಕಮ್ಯುನಿಝಂ ತತ್ವದ ಪ್ರಚಾರವೂ ಪ್ರಸಾರವೂ ಅವ್ಯಾಹತವಾಗಿ ನಡೆದಿದೆ ಪ್ರತ್ಯಕ್ಷ ಶಸ್ತ್ರ-ಬಲದಿಂದ ಅಲ್ಲದಿದ್ದರೂ ಸ್ಥಾನಿಕ ಕಮ್ಯುನಿಸ್ಟ ಪಕ್ಷದವರಿಗೆ ಅಂತರಂಗವಾಗಿಯೂ ಬಹಿರಂಗವಾಗಿಯೂ ಸರ್ವವಿಧ ನೆರವನ್ನಿತ್ತು ಅವರು ಒಂದೊಂದೇ ರಾಷ್ಟ್ರವನ್ನು ತಮ್ಮ ಪ್ರಭಾವಳಿಯಲ್ಲಿ ಸೇರಿಸಿಕೊಳ್ಳುತ್ತಿದ್ದಾರೆ ಝೆಕೋಸ್ಲೋವ್ಹಾಕಿಯಾ ಜನಾಂಗ ಈಗಾಗಲೇ ಕವಂ ಅಂಕಿತವಾಗಿದೆ ಇದೀಗ ಫಿನಲಂಡವನ್ನು ಅವರು ತಮ್ಮ ಬಲಿಯಲ್ಲಿ ಸೆಳೆಕೊಳ್ಳುವ ಪ್ರಯತ್ನ ನಡಿಸಿದ್ದಾರೆ ಯುದ್ಧದ ಪ್ರಸಂಗ ಬಂದಲ್ಲಿ ಫಿನಲಂಡ, ರಶಿಯಾ ಜನಾಂಗಗಳು ಪರಸ್ಪರರಿಗೆ ನೆರವಾಗಬೇಕೆಂಬರ್ಥದ ಒಪ್ಪಂದ ಮಾಡಿಕೊಳ್ಳುವ ಬಗ್ಗಾಗಿ ಎರಡೂ ಸರಕಾರಗಳು ಮಾತುಕತೆಗಳನ್ನು ನಡೆಸಿವೆ ಯುದ್ಧದ ಪ್ರಸಂಗ ಒಂದಾಗ ಪರಸ್ಪರರ ಆಯಕಟ್ಟಿನ ಸ್ಥಳಗಳಿಗೆ ಸೈನ್ಯ ಕಳಿಸಲು ಪರಸ್ಪರರಿಗೆ ಮುಕ್ತದ್ವಾರವಿರಬೇಕೆಂದು ರುಶ್ಯರು ಸೂಚಿಸಿದ ಕರಾರಿಗೆ ಫಿನಲಂಡ ಸರಕಾರದ ಪ್ರತಿನಿಧಿಗಳು ಸಮ್ಮತಿ ಕೊಡಲು ಸಿದ್ಧರಿದ್ದಾರೆ ಆದರೆ ಇದರ ಜೊತೆಗೆ ತಾವು ಬಿನ್ನವಿಸಿದಾಗ ತಮಗೆ ಬೇಕಾದಷ್ಟು ಸೈನ್ಯವನ್ನು ರುಶ್ಯರು ಕೊಡಲು ಒಪ್ಪಿ ಹಾಗೆ ಒಪ್ಪಂದದಲ್ಲಿ ಸ್ಪಷ್ಟ ಮಾಡಬೇಕೆಂದು ಫಿನಲಂಡದ ಪ್ರತಿನಿಧಿಗಳ ಆಗ್ರಹವಿದೆ ಈ ಕರಾರಿಗೆ ರುಶ್ಯರ ಒಪ್ಪಿಗೆಯಿಲ್ಲದ್ದರಿಂದಲೋ ಏನೋ ರುಶ್ಯ-ಫಿನಲಂಡಗಳ ನಡುವೆ ನಡೆದ ಮಾತುಕತೆಗಳು ಮುರಿದು ಹೋಗುವ ಸಂಭವವುಂಟೆಂದು ಫಿನಲಂಡದ ರಾಜಧಾನಿಯಾದ ಹೆಲಸಿಂಕಿಗೆ ಮಾಸ್ಕೋದಿಂದ ಸುದ್ದಿ ಬಂದಿದೆಯಂತೆ ಸದ್ಯದ ಫಿನಲಂಡ ಸರಕಾರವು ಈ ಪರಿ ರುಶ್ಯರ ಮುಂದೆ ತಲೆ ಬಗ್ಗಿಸಿ ಅವರ ತಂತ್ರದಿಂದಲೇ ನಡೆಯಲು ಒಪ್ಪದ್ದನ್ನು ಕಂಡು ಫಿನಲಂಡದ ಕಮ್ಯುನಿಸ್ಟರು ' ಮತ-ಪ್ರದರ್ಶನಾರ್ಥ" ಹೆಲಸಿಂಕಿಯ ಮೇಲೆ ಏರಿಹೋಗಲು ಮೋಟಾರ ಬಂಡಿಗಳನ್ನು ಸಂಗ್ರಹಿಸಲಾರಂಭಿಸಿದ್ದಾರಂತೆ ! ಬಲಪ್ರಯೋಗದಿಂದ ಹೆಲಸಿಂಕಿಯನ್ನು ಕೈವಶಪಡಿಸಿಕೊಂಡು, ಸದ್ಯದ ಸರಕಾರವನ್ನು ಉರುಳಿಸಲು ಕಮ್ಯುನಿಸ್ಟರು ಹೊಂಚು ಹಾಕುತ್ತಿರಬೇಕೆಂದು ಇತರರಿಗೆ ಸಂಶಯ ಬಂದಿದೆ ಇಟಾಲಿಯೊಳಗಿನ ಚುನಾವಣೆಗಳಂತು ತೀರ ಸಮೀಪದಲ್ಲಿವೆ ಇಟಾಲಿಯ ಮತದಾರ-ಲೋಕವನ್ನು ಕಮ್ಯುನಿಸ್ಟ ಪಕ್ಷದ ಕಡೆ ಅದು ಒಲಿಯುವಂತೆ ರುಶ್ಯರೂ ಕಮ್ಯುನಿಸ್ಟರ ಕಡೆಗೆ ಒಲಿಯದಂತೆ ಬ್ರಿಟಿಶ-ಅಮೇರಿಕೆಯವರೂ ಯುಕ್ತಿಪ್ರಯುಕ್ತಿಗಳಿಂದ ಸಂತೈಸುತ್ತಿದ್ದಾರೆ ಯುದ್ಧದ ನಷ್ಟಭರಪಾಯಿಗಾಗಿ ಇಟಾಲಿಯು ಕೊಡತಕ್ಕ ಯುದ್ಧದ ಹಡಗಗಳ ಬೇಡಿಕೆಯನ್ನು ಒಬ್ಬರು ಬಿಟ್ಟುಕೊಟ್ಟರೆ, ಇಟಾಲಿಯಿಂದ ಕಸಿದುಕೊಂಡ ಟ್ರೀಸ್ಟ ಎಂಬ ಆಯಕಟ್ಟಿನ ಮಹತ್ವದ ಬಂದರವನ್ನು ಇನ್ನೊಬ್ಬರು ಇಟಾಲಿಗೆ ಬಿಟ್ಟುಕೊಡುತ್ತಿದ್ದಾರೆ ! ಇದಕ್ಕೆಲ್ಲ ಬ್ರಿಟಿಶ-ಅಮೇರಿಕೆಯವರ ಹಾಗೂ ಅವರ ತಂತ್ರದಿಂದ ನಡೆಯುತ್ತಿರುವ ಇತರರ " ಕಮ್ಯುನಿಝಂ " ತತ್ವಪ್ರಣಾಲಿಯ ಮೇಲಿನ ದ್ವೇಷವೇ ಮೂಲಕಾರಣವಾಗಿರುತ್ತದೆ ಒಂದೊಂದೇ ರಾಷ್ಟ್ರವು ರುಶ್ಯರ ಕಮ್ಯುನಿಝಂ ಧರ್ಮ ಸ್ವೀಕರಿಸಿ ಅವರ ಪ್ರಭಾವಳಿಗೆ ಸೇರುತ್ತಿದ್ದುದು ಬ್ರಿಟಿಶ-ಅಮೇರಿಕೆಯವರಿಗೆ ಸಹನವಾಗುವದಿಲ್ಲ ಅದನ್ನು ತಡೆಯಲು ಅವರು ವಿಶ್ವಸಾಹಸ ಮಾಡುತ್ತಿದ್ದಾರೆ ಈ ಘರ್ಷಣಯೊಳಗಿಂದ ಯುದ್ಧದ ಕಿಡಿಗಳು ಹಾರದೆ ಉಳಿಯುವೆಂದು ಉಭಯ ಪಕ್ಷೀಯರೂ ಭಾವಿಸಿ ಉಭಯತರೂ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಜವಾಬ್ದಾರಿಕೆ ಪರಿಮಿತಿಸಲ್ಪಟ್ಟು ಇಂಡಿಯದಲ್ಲಿ ಸಾಂಘೀಕರಿಸಿದ್ದು)

ಹೆಡ್ ಆಫೀಸು "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಪತ್ತ ಮೂಲಧನ ರೂ ೭ ೭೧,೦೦೦/—ಕ್ಕೂ ಮಿಕ್ಕಿದೆ

ಕಾಯ್ದಿರಿಸಿಡಲ್ಪಟ್ಟ ನಿಧಿ ರೂ ೧,೦೦,೦೦೦/—ಕ್ಕೂ ಮೀರುವದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ಸಲೆ ಬಡ್ಡಿಯಂತೆ

ಅಂಗೀಕರಿಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ

ಬರೆದು ತಿಳಿಯಿರಿ

ಕುಂದಾಪುರ,
ತಾ ೧೫ ೩-೧೯೪೮

ಕೆ ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ತಮ್ಮ ತಮ್ಮ ಆತ್ಮರಕ್ಷಣೆಯ ಯೋಜನೆಗಳನ್ನು ಮಾಡುತ್ತಿದ್ದಾರೆ. ಇತ್ತಲಾಗಿ ಅಮೇರಿಕೆಯ ಸಮೀಪ 'ಉಕ್ಕಿನ ಪರದೆಯ ಹಿಂಬದಿಯ ಜನಾಂಗದ" (ಅಂದರೆ ರುಶ್ಯರ) ಜಲಾಂತರ್ಗಾಮಿ ಹಡಗಗಳು ಸುಳಿಯುತ್ತಿವೆಯೆಂದು ಅಮೇರಿಕೆಯ ಕೆಲವು ಅಧಿಕಾರಿಗಳು ಗುಲ್ಲೆಬ್ಬಿಸಿ, ಅವುಗಳ ಪತ್ತೆ ಹಚ್ಚುವದಕ್ಕಾಗಿ ಕೆಲವು ಯುದ್ಧದ ಹಡಗಗಳಿಗೂ ವಿಮಾನಗಳಿಗೂ ಆಜ್ಞೆ ಮಾಡಿರುತ್ತಾರೆ. ಅಮೇರಿಕೆಯ ಪ್ರಜಾಪ್ರತಿನಿಧಿ ಸಭೆಯ ಕಡೆಯಿಂದ ತಮ್ಮ ಯುದ್ಧಸಿದ್ಧತೆಯ ಯೋಜನೆಗಳಿಗೆ ಸಮ್ಮತಿ ದೊರಕಿಸಿಕೊಳ್ಳುವದಕ್ಕಾಗಿ ಅಮೇರಿಕೆಯ ಸರಕಾರವು ಎಬ್ಬಿಸಿದ ಒಣ ಗುಲ್ಲು ಇದೆಂದು ಹೇಳುವವರೂ ಕೆಲವರಿದ್ದಾರೆ. ನಿಜ ಸಂಗತಿ ದೇವರಿಗೇ ಗೊತ್ತು. ಬರ್ಲಿನದಲ್ಲಿ ಇತ್ತಟ್ಟನವರಿಗೆ ಈಗ ಘೋರ ಘರ್ಷಣೆಯಾಗಹತ್ತಿದೆ. ಬರ್ಲಿನ್ನಿಗೆ ಬರುವ ಹಾಗೂ ಬರ್ಲಿನದಿಂದ ಹೋಗುವ ಪ್ರತಿಯೋರ್ವ ಪ್ರವಾಸಿಕನ ಸಾಮಾನುಗಳನ್ನೂ ಕಾಗದಪತ್ರಗಳನ್ನೂ ರುಶ್ಯ ಸೈನಿಕರು ಪರಿಶೋಧಿಸುವರೆಂದು ಜರ್ಮನಿಯಲ್ಲಿ ರುಶ್ಯರ ಲಷ್ಕರಿ ಗವ್ಹರ್ನರರಾಗಿರುವ ಮಾರ್ಶಲ್ ಸೊಕೊಲೊವ್ಸ್ಕಿಯವರು ಬ್ರಿಟಿಶ ಸರಕಾರಕ್ಕೂ ಅಮೇರಿಕೆಗೂ ತಿಳಿಸಿ ಇದೇ ಕಳೆದ ತಾ. ೧ರಿಂದ ಈ ಕ್ರಮವನ್ನು ಜಾರಿಯಲ್ಲಿ ತರಲಾರಂಭಿಸಿದ್ದಾರೆ. ಅಂದು ಬರ್ಲಿನದಿಂದ ಹೊರಟ ಹಾಗೂ ಬರ್ಲಿನ್ನಿಗೆ ಹೋಗಬಂದ ಬ್ರಿಟಿಶ ಅಮೇರಿಕೆಯವರ ಉಗಿಬಂಡಿಗಳನ್ನು ರಶ್ಯ ಸೈನಿಕರು ತಮ್ಮ ಗಡಿಯಲ್ಲಿರುವ ಮರಿನಬರ್ಗ ನಿಲ್ದಾಣದಲ್ಲಿ ತಡೆದು ನಿಲ್ಲಿಸಿದ ವಾರ್ತೆಯುಂಟು. ಅಮೇರಿಕೆಯ ಪ್ರವಾಸಿಕರು ತಮ್ಮ ಸಾಮಾನುಗಳ ಶೋಧನೆ ಮಾಡಲು ರುಶ್ಯ ಸೈನಿಕರಿಗೆ ಆತಂಕ ಮಾಡಲಿಲ್ಲ. ಬ್ರಿಟಿಶ ಪ್ರವಾಸಿಗಳು ಮಾತ್ರ ಶೋಧನೆ ಮಾಡಗೊಡಲಿಲ್ಲವಂತೆ. ಬರ್ಲಿನದಿಂದ ಬ್ರಿಟಿಶ-ಅಮೇರಿಕೆಯವರನ್ನು ಹೊರತಳ್ಳುವದಕ್ಕಾಗಿ ರುಶ್ಯರು ಈ ಆಟ ಹೂಡಿರುತ್ತಾರೆಂದು ಬ್ರಿಟಿಶ-ಅಮೇರಿಕೆಯವರ ಅಂಬೋಣವುಂಟು. ತದ್ವಿರುದ್ಧ, ಬ್ರಿಟಿಶ-ಅಮೇರಿಕೆಯವರು ಗುಪ್ತಚಾರರಾಗಿ ಬರ್ಲಿನದಲ್ಲಿ ನುಗ್ಗುತ್ತಿರುವರೆಂದೂ ಅದರಿಂದ ಈ ಕ್ರಮ ತೆಗೆದುಕೊಳ್ಳಬೇಕಾಗಿದೆಂದೂ ರುಶ್ಯರು ಅನ್ನುತ್ತಾರೆ. ರುಶ್ಯರ ಈ ನಿರ್ಬಂಧದ ಮೂಲಕ ಬ್ರಿಟಿಶ ಅಮೇರಿಕೆಯವರು ತಮ್ಮ ಗಾಡಿಗಳ ಓಡಾಟವನ್ನು ನಿಲ್ಲಿಸಿರುತ್ತಿದ್ದು, ಅವಶ್ಯವುಳ್ಳ ವ್ಯವಹಾರವನ್ನು ವಿಮಾನಗಳ ದ್ವಾರಾ ಮಾಡಲಾರಂಭಿಸಿದ್ದಾರೆ. ರುಶ್ಯರು ಈ ಪರಿ ಅಮೇರಿಕೆಗೆ ಬರ್ಲಿನ ಮಾರ್ಗವನ್ನು ಕಟ್ಟು ಮಾಡಿದರೆ ತಾವು ಬರ್ಲಿನದಲ್ಲಿ ನುಗ್ಗಬೇಕಾಗುವದೆಂದು ಅಮೇರಿಕೆಯ ಸೈನ್ಯ ಶಾಖೆಯ ಮಂತ್ರಿಗಳಾದ ಕೆನೆತ್ ರೊಯಲ್ಲರವರು ನಭೋವಾಣಿಯ ಮುಖಾಂತರ ಸಾರಿ, ಅಂತಹ ಪ್ರಸಂಗ ಬಂದರೆ ಎದುರಾಳಿಗಳಿಗೆ ಗುಂಡು ಹಾಕುವದಕ್ಕೆ ಜರ್ಮನಿಯಲ್ಲಿರುವ ತಮ್ಮ ಸೇನಾಪತಿಗಳಿಗೆ ಇವರಿಗೆ ಅಧಿಕಾರ ಕೊಡಲಾಗಿದೆಂದೂ ಜಾಹೀರ ಮಾಡಿದ್ದಾರೆ. ಇಲ್ಲಿಯೇ ಇತ್ತಟ್ಟನವರಿಗೆ ಘರ್ಷಣೆಯಾಗಿ ಆ ಘರ್ಷಣೆಯು ಕ್ರಮೇಣ ಯುದ್ಧದಲ್ಲಿ ಪರಿಣಮಿಸಿದರೂ ಪರಿಣಮಿಸಬಹುದು. ಇತ್ತಟ್ಟನವರೂ ಹಾಗೆ ಯುದ್ಧವೆಸಗಬಹುದೆಂಬ ನಿರೀಕ್ಷಣೆಯಿಂದ ತಮ್ಮ ತಮ್ಮ ತಯಾರಿಯನ್ನೂ ಇಟ್ಟಿರುವರೆಂದು ಜರ್ಮನಿಯಲ್ಲಿ ಪ್ರಕಟವಾಗುತ್ತಿರುವ "ಕ್ಯುರಿಯರ" ಎಂಬ ಫ್ರೆಂಚ ಪತ್ರಿಕೆಯು ಬರೆದಿದೆ. ರುಶ್ಯರ ದೊಡ್ಡ ದೊಡ್ಡ ಸೈನ್ಯ ಪಡೆಗಳು ಬರ್ಲಿನದಿಂದ ೭೦ ಮೈಲು ಅಂತರದಲ್ಲಿರುವ ಒಂದು ರೇಲ್ವೆ ನಿಲ್ದಾಣದಿಂದ ಅಮೇರಿಕೆಯ ಅಂಕೆಯಲ್ಲಿರುವ ಜರ್ಮನ ಪ್ರದೇಶದ ಗಡಿಯ ಕಡೆಗೆ ಸಾಗಿವೆಯೆಂದೂ, ರುಶ್ಯ-ಅಮೇರಿಕೆಯವರ ಗಡಿಯಿಂದ ೧೫ ಮೈಲು ದೂರವಿರುವ ಮೈನಿಂಗಜನ್ನದಲ್ಲಿ ಅವರ ಟೆಂಕುಗಳು ಕಲೆಯುತ್ತಿವೆಯೆಂದೂ ಸದರಿ ಪತ್ರಿಕೆಯು ಪ್ರಕಟಿಸಿದೆ. ಗಡಿಯ ಭಾಗಗಳಲ್ಲಿ ರುಶ್ಯರು ಕಂದಕಗಳನ್ನು ತೋಡಲಾರಂಭಿಸಿ, ನಾಗರಿಕ ಜನರನ್ನು ಸ್ಥಳಾಂತರಿಸಿ ಆ ಭಾಗಗಳನ್ನು ತೆರವು ಮಾಡುತ್ತಿದ್ದಾರೆಂದು ಪ್ರವಾಸಿಗಳು ಸುದ್ದಿ ತಂದಿರುವರೆಂದೂ ಆ ಪತ್ರಿಕೆಯು ತಿಳಿಸುತ್ತಿದೆ. ಇತ್ತ ಬ್ರಿಟಿಶರೂ ಬರ್ಲಿನದಿಂದ ೯೦ ಮೈಲು ಅಂತರದಲ್ಲಿರುವ ಅಪೋಟಹಾಸ ಎಂಬಲ್ಲಿ ತಮ್ಮ ಟೆಂಕುಗಳನ್ನು ಸಂಗ್ರಹಿಸುತ್ತಿದ್ದಾರಂತೆ. ಹೀಗೆ ಉಭಯ ಪಕ್ಷಗಳಲ್ಲಿ ತಿಕ್ಕಾಟ-ಸಂಘರ್ಷಗಳು ನಡೆಯುತ್ತಿರುವಾಗ ಮತ್ತು ಯುದ್ಧದ ಸಿದ್ಧತೆಗಳು ರಭಸದಿಂದ ಸಾಗಿರುವಾಗ ಯುದ್ಧವಾಗಲಿಕ್ಕಿಲ್ಲವಾಗಿ ನಾವು ಎದೆ ತಟ್ಟಿ ಹೇಳುವದಾದರೂ ಹೇಗೆ? ಹೇಳಿದರೆ ಕೇಳುವವರಾದರೂ ಯಾರು?

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆ ಐದಾರು ರಾತ್ರಿ ಮುಗಿಲೊಳಗೆ ಮೋಡಗಳಾಗುತ್ತಿವೆ. ಹೆಗಡೆ, ಹೊನ್ನಾವರ, ಶಿರಾಲಿ ವಗೈರೆ ಊರುಗಳಲ್ಲಿ ಮಳೆಯಾದ ವಾರ್ತೆಗಳುಂಟು. ನಿನ್ನೆ ರಾತ್ರಿ ಇಲ್ಲಿಯೂ ಮಳೆಯಾಗುತ್ತದೆಂಬಂತೆ ತೋರುತ್ತಿತ್ತು.

ಈ ಹೊತ್ತಿನಿಂದ ಗಂಡು ಹುಡುಗರ ಮುಲ್ಕೀ ಪರೀಕ್ಷೆಗೆ ಆರಂಭವಾಗುತ್ತಿದೆ. ಇಲ್ಲಿಯ ಕೇಂದ್ರದಲ್ಲಿ ೪೮೬ ವಿದ್ಯಾರ್ಥಿಗಳು ಕೂತಿರುತ್ತಾರೆ.

ಕಳೆದ ತಾ ೩೦ನೇ ಮಂಗಳವಾರ ಇಲ್ಲಿಯ ಅಂಗಡಿಕಾರರಲ್ಲಿ, ಈ ಹಿಂದೆಯೇ ವ್ಯಾಪಾರಿ ಸಂಘದವರು ಮಾಡಿರುವ ಗೊತ್ತುವಳಿಗನುಸಾರವಾಗಿ, "ಮಹಾತ್ಮರ ಸ್ಮರಣಾರ್ಥ" ಹರತಾಳವನ್ನಾಚರಿಸಿದರು. ಕಿರಾಣಿ, ಜವಳಿ ಅಂಗಡಿಗಳಂತೆ ಚಹಾ-ಕಾಫಿ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಅದರಿಂದ ಕಾರ್ಯಾರ್ಥಿಯಾಗಿ ಇಲ್ಲವೆ ಕೋರ್ಟು-ಕಚೇರಿಗಳ ಪ್ರಕರಣಗಾಗಿ ಇಲ್ಲಿಗೆ ಬಂದ ಪರಸ್ಥರು ಚಹಾ-ಕಾಫಿ ವಗೈರೆ ಸಿಗದೆ ತಳಮಳಿಸುವ ಪ್ರಸಂಗ ಬಂತು! ಜನರಿಗೆ ಸಂಕಟವಾಗುವಂತಹ ವಿಧಾನವನ್ನು — ಅದು ಕೂಡ ಪುಣ್ಯಶ್ಲೋಕ ಮಹಾತ್ಮಾ ಗಾಂಧಿಯವರ ಹೆಸರಲ್ಲಿ — ವ್ಯಾಪಾರಿಗಳು ಕೈಕೊಳ್ಳಕೂಡದಾಗಿತ್ತೆಂದು ಆ ಜನರು ಮಾತಾಡುತ್ತಿದ್ದರು. ವ್ಯಾಪಾರಿ ಬಂಧುಗಳು ಆ ಮಾತನ್ನು ಲಕ್ಷದಲ್ಲಿ ತಕ್ಕೊಂಡು ನಡೆಯಬೇಕಾಗಿ ಸೂಚನೆಯಾದೆ.

ಚಿಮಣಿ ಎಣ್ಣೆ ಊರಲ್ಲಿ ದುರ್ಮಿಳವಾಗಿದೆ. ಕೆಲವೊಂದು ಕಡೆ "ಚಿಮಣಿ ಎಣ್ಣೆ ಇಲ್ಲಿ ಚಿಲ್ಲರೆಯಾಗಿ ಮಾರಲ್ಪಡುತ್ತದೆ" ಎಂದು ಹೇಳುವ ಪಾಟಿಗಳು ಕಣ್ಣಿಗೆ ಬೀಳುತ್ತವೆ ವಿನಹ ಎಣ್ಣೆ ಸಿಗುವದಿಲ್ಲ! ಕೆಲವರು ಚಿಲ್ಲರೆ ಮಾರಾಟದ ನಾಟಕವನ್ನಷ್ಟು ಮಾಡಿ ತೋರಿಸುತ್ತಾರೆ! ಜಿಲ್ಲಾಧಿಕಾರಿಗಳೂ ಎಣ್ಣೆ ಕಂಟ್ರೋಲ ಅಧಿಕಾರಿಗಳೂ ಇತ್ತ ಲಕ್ಷ ಕೊಟ್ಟು, ಪ್ರಾಮಾಣಿಕತನದಿಂದಲೂ ಪ್ರಾಮಾಣಿಕಬುದ್ಧಿಯಿಂದಲೂ ವರ್ತಿಸುವ ವ್ಯಕ್ತಿಗಳ ಇಲ್ಲವೆ ಸಂಘಗಳ ಕಡೆಗೆ ಚಿಮಣಿ ಎಣ್ಣೆಯನ್ನಿಟ್ಟು ಚಿಲ್ಲರೆ ಮಾರಾಟ ಮಾಡಿಸುವ ವ್ಯವಸ್ಥೆ ಮಾಡುವದೊಳಿತು.

ರೂ. ೨೫ ಇನಾಮು !!

ನಮ್ಮ ದಂಟ್ರು "ಹರಕ್ಯುಲಿಸ" ಕಂಪನಿಯ GG/7145 ನಂಬರಿನ ಹೊಸ ಸೈಕಲನ್ನು, ೧ ದಿವಸದ ಬಾಡಿಗೆಯ ಬಗ್ಗೆಂದು, "ದತ್ತಾತ್ರಯ ಸುಬ್ಬಾ ಭಟ್ಟ ಸಾ॥ ಬಾಡ" ಎಂಬ ಹೆಸರು ಹೇಳಿ, ಒಬ್ಬರು ತಾ ೧-೪-೪೮ನೇ ಗುರುವಾರ ಬೆಳಿಗ್ಗೆ ತಕ್ಕೊಂಡು ಹೋದವರು ಇನ್ನೂ ಅದನ್ನು ತಂದು ಕೊಟ್ಟಿಲ್ಲ. ಪೋಲೀಸರಾಗಲಿ, ನಾಗರಿಕರಾಗಲಿ ಮೇಲ್ಕಂಡ ಈ ಸೈಕಲಿನ ಮತ್ತು ಅದನ್ನು ಒಯ್ದವರ ಪತ್ತೆ ಹಚ್ಚಿ ಕೊಟ್ಟಲ್ಲಿ ಅವರಿಗೆ ರೂ. ೨೫ ಇನಾಮು ಕೊಡಲಾಗುವದು.

ಅನಂತ ನಾರಾಯಣ ಶಾನಭಾಗ,

ಜೈಹಿಂದ ಸೋಡಾ ಫೆಕ್ಟರಿ ಮತ್ತು ಸ್ಟಾಲ್ ಸ್ಟೋರ್ಸ್,

ತಾ ೪-೪-೪೮. ಕುಮಟಾ

ಕಡತೋಕಾ— ಕಳೆದ ವಾರದ "ವೃತ್ತ"ದಲ್ಲಿ ಶ್ರೀ ಪ್ರಬೋಧಾನಂದ ಸರಸ್ವತೀ ಸ್ವಾಮಿಗಳನ್ನು ಕುರಿತು ಪ್ರಕಟವಾದ ಉತ್ಸಾಹ ಟೀಕೆಯನ್ನು ಕಂಡು ಇಡೀ ಕಡತೋಕೆಯ ಊರು ಉದ್ವೇಗಗೊಂಡಿದೆ. ಶ್ರೀ ಸ್ವಾಮಿಜಿಯವರಂತಹ ನಿರಿಚ್ಛ, ನಿರಹಂಕಾರಿ ಸತ್ಪುರುಷರ ವಿರುದ್ಧ ಧನಾಶೆಯ ಅಲ್ಲದ ಧಿಕ್ಕೃತದ ಆರೋಪ ಮಾಡುವ ಸಾಹಸವನ್ನಾರೂ ಕಡತೋಕೆಯಲ್ಲಿಲ್ಲೆಂದೂ ಹೊರಗಿನ ದುರಾತ್ಮನಾರೋ ಕಡತೋಕೆ-ನಿವಾಸಿಗಳ ಬಾರಾಗಿ ಹಾಕಿಕೊಂಡು ಸ್ವಾಮಿಜಿಯವರ ನಿಂದೆ ಮಾಡಿರಬೇಕೆಂದೂ ಕಡತೋಕೆಯ ಜನ ಮಾತಾಡುತ್ತಾರೆ. ಸ್ವಾಮಿಜಿಯವರು ಈ ಹಿಂದೆಯೇ ಹಿಂದುಪುರ ಎಂಬಲ್ಲಿ ಶಾಂತ ಶ್ರೀ ವೈದಿಕ ಧರ್ಮ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದುಂಟು. ಹೀಗಿರುವದರಿಂದ ಹೊಸ ಸಂಘ ಸ್ಥಾಪಿಸುವ ಮಾತು ಅವರು ಆಡಿದ್ದಾರೆಂಬ ಕಲ್ಪನೆ ಸಹ ಮಾಡಬರುವದಿಲ್ಲ. ಉಕ್ತ ಸಂಘದ ಯಾವತ್ತೂ ಖರ್ಚನ್ನು ಸ್ಥಾನಿಕ ಶಿಷ್ಯವೃಂದವು ನಿರ್ವಹಿಸುತ್ತಿದೆ. ಅದಕ್ಕಾಗಿ ಸ್ವಾಮಿಜಿಯವರು ಧನ-ಸಂಚಯ ಮಾಡುವ ಅಗತ್ಯವೇ ಇರುವದಿಲ್ಲ. ಅವರ ಕಡೆ ಒಂದು ಕಾಸು ಸಹ ಇಲ್ಲ; ಅವರು ಅಪೇಕ್ಷಿಸುವದೂ ಇಲ್ಲ. ಪಾದ ಕಾಣಿಕೆ ಬಂದ ಹಣವನ್ನು ಶ್ರೀ ಸ್ವಾಮಿಜಿಯವರು ಆಗಿಂದಾಗ ಮತ್ತು ಅಲ್ಲಿಂದಲ್ಲೇ ಅವರವರಿಗೆ ಸುವರ್ಣ ಮಂತ್ರಾಕ್ಷತೆಗಳನ್ನು ಕೊಟ್ಟು ವ್ಯಯಿಸಿ ಬಿಡುತ್ತಾರೆ. ಕಾರುಕೋಟೆ ಪೀಠದ ತಾವು ಉತ್ತರಾಧಿಕಾರಿಗಳಾಗುತ್ತೇನೆಂದು ಸ್ವಾಮಿಜಿಯವರು ಹೇಳಿ ಆತ್ಮಗೌರವ ಮಾಡಿಕೊಂಡದ್ದೂ ಇರುವದಿಲ್ಲ. ಸ್ವಯಂಪ್ರಕಾಶಿಯಾಗಿರುವ ಸ್ವಾಮಿಜಿಯವರಿಗೆ ಆ ಪೀಠದ ಪ್ರಕಾಶದಿಂದ ಬೆಳಗಬೇಕಾದ ಕಾರಣವಾದರೂ ಉಂಟೇ? ಇಂತಹ ಆದರ್ಶ-ಸನ್ಯಾಸಿಗಳ ವಿರುದ್ಧ ನಿರಾಧಾರ ಆರೋಪಗಳನ್ನು ಮಾಡಿದ ದುರಾತ್ಮನು ಇನ್ನಾದರೂ ಪಶ್ಚಾತ್ತಾಪಪಟ್ಟು, ಶ್ರೀ ಸ್ವಾಮಿಜಿಯವರ ಕ್ಷಮೆ ಬೇಡಿ ತನ್ನ ಪಾಪಕ್ಷಾಲನೆ ಮಾಡುವದುಚಿತವೆಂದು ಕಡತೋಕೆಯ ಜನರು ಸೂಚಿಸುತ್ತಾರೆ.

ಕಾರವಾರ— (ತಾ. ೪-೪-೪೮) ಇದೇ ಬರುವ ತಾ. ೧೬ನೇ ಶುಕ್ರವಾರ ಮುಂಬಯಿಯ ಗವ್ಹರ್ನರ ಸರ್ ಮಹಾರಾಜಾ ಸಿಂಗ ಇವರು ಉಗಿಹಡಗದಿಂದ ಇಲ್ಲಿಗೆ ಬರುವರು. ಆಗ ಇಲ್ಲಿ ಲೋಕಲ್ ಬೋರ್ಡಿನವರೂ ನಗರ ಸಭೆಯವರೂ ಅವರಿಗೆ ಬಿನ್ನವತ್ತಳೆಗಳನ್ನು ಅರ್ಪಿಸುವರೆಂದು ತಿಳಿಯುತ್ತದೆ. ಶುಕ್ರವಾರ ರಾತ್ರಿ ಹೊರಗಳು(?) ಬೆಲೇಕೇರಿ ಬಂಗಲೆಯಲ್ಲಿ ಉಳಿದು ಮರುದಿನ ತಾವು ಮಿಳಗಳ(?) ಬೇಟಿಯಾಗಲು ಯಲ್ಲಾಪುರಕ್ಕೆ ಹೋಗುವರು.

೪-೫ ದಿನಗಳಿಂದ ಈ ಊರಲ್ಲೂ ಸುತ್ತುಮುತ್ತಲಿನ ಹಳ್ಳಿಗಳಲ್ಲೂ ಒಂದು ಬಗೆಯ ಹೊಸ ಪಿಡುಗು ಪ್ರಾರಂಭವಾಗಿದೆ. ಕೈಕಾಲು ಒಮ್ಮೆಲೆ ಹಿಂಬಂದಂತಾಗಿ ಮುಂದೆ ಕಟ್ಟಗುತ್ತದೆ. ೨-೩ ತಾಸುಗಳಲ್ಲಿ ರೋಗಿಯು ನಿಃಶಕ್ತನಾಗಿ ಬೀಳುತ್ತಾನೆ. ಸಾಯುಯ ಸೆಳೆತ ಮತ್ತು ಮದರೆನದಿಂದ ಈ ರೋಗ ನಾಶಿಯಾಗುತ್ತದಾಗಿ ಸುದ್ದಿಯುಂಟು. ಕೆಲವು ರೋಗಿಗಳು ಡಾಕ್ಟರರ ಉಪಚಾರದಿಂದಲೂ ವಾಸಿಯಾಗಿದ್ದಾರೆ. ರೋಗವು ಅಷ್ಟೇನು ಅಸಾಧ್ಯವಲ್ಲ. ಆದರೆ

(೪ನೇ ಪುಟದ ಮೇಲೆ ಮುಂದರಿಸಿದೆ)

ಜಾಹೀರ ವಿನಂತಿ.

ನಮ್ಮಲ್ಲಿ ಅಕ್ಕಿ, ಭತ್ತ, ರಾಗಿ, ಜೋಳ ವಗೈರೆ ಆಹಾರ ಧಾನ್ಯಗಳು ಯೋಗ್ಯ ಧಾರಣೆಗೆ ರೋಕ ಮ ಚಿಲ್ಲರೆ ಮಾರಲ್ಪಡುತ್ತಿದ್ದು, ವಿಶೇಷವಾಗಿ ಕುಮಟಾ ತಾಲೂಕಿನವರು ಇದಕ್ಕೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಂಜುನಾಥ ವೈಕುಂಠ ಶ್ಯಾನಭಾಗ

ಬಾಡೇಕರ,

ಫುಡ್‌ಗ್ರೇನ್ಸ ಹೋಲಸೇಲ ಲೈ. ನಂ 90   ರಿಟೇಲ ಲೈ. ನಂ 103.

ನೋಹನಸಿಂಗರವು ಕ್ರಿಪ್ಸ್ ಧಿಲನ್ನರಾ ಜಟೆಯು ಮಾರ ಮುಂಬಯಿಗೆ ಬಂದಿದ್ದರು ಆಗ ಅವರಿಬ್ಬರಿಗೂ ಜನತೆಯು ಗೌರವದ ಸ್ವಾಗತವಿತ್ತಿತು. ಸೇಠ ಮೋಹನ ಸಿಂಗರೊಡನೆ ಒಂದು ದಿನ "ಇಂಡಿಯನ್ ಪ್ರೆಸ್ ಎಸೋಸಿಯೇಶನ್" ಸುದ್ದಿ ಸಂಸ್ಥೆಯ ರಾಜಕೀಯ ಪ್ರತಿನಿಧಿಯು ಮಾತಾಡುತ್ತ, "ಜಗತ್ತಿನ ಯುದ್ಧಶ್ಯಾರಂಭವಾದಲ್ಲಿ ಭಾರತವು ಯಾವ ಪಕ್ಷ ಸೇರುವದೆಂದು ತಮ್ಮ ಮತವಿದೆ?" ಎಂದು ಪ್ರಶ್ನೆ ಮಾಡಲಾಗಿ, ಈ ಭಾವಿ ಯುದ್ಧದಿಂದ ಭಾರತವು ಅಲಿಪ್ತ ಉಳಿಯಲಾಗದೆಂತಲೂ, ರಷ್ಯದ ಪಕ್ಷದಲ್ಲೇ ಇಂಗ್ಲಂಡ–ಅಮೇರಿಕೆಯ ಪಕ್ಷವು ಕೂಡ ಅನುಭವಿಸುವದಾದರೂ ಅಮೇರಿಕೆಯ ಆಧಿಪತ್ಯದೊಳಗಿನ ಬಾಸ್ತಿವಾತ್ಮ ಪ್ರಜಾಪ್ರಭುತ್ವ ರಾಷ್ಟ್ರಗಳ ಪಕ್ಷಕ್ಕೆ ಭಾರತವು ಸೇರುವದೆಂತಲೂ ನುಡಿದರು. ಮೂರನೇ ಮಹಾಯುದ್ಧದಲ್ಲಿ ಬ್ರಿಟಿಶ–ಅಮೇರಿಕೆಯವರಿಗೆ ಹಿತ ಮತ್ತು ಅನುಕೂಲವಾಗಬೇಕೆಂದೇ ಭಾರತದ ವಿಭಜನೆ ಮಾಡಲ್ಪಟ್ಟಿರುವದಾಗಿಯೂ ಭಾರತವು ಅಖಂಡ ಮತ್ತು ಸಂಯುಕ್ತವಾಗುಳಿದರೆ ಅದು ಬಲಿಷ್ಠವಾಗಿ ತನ್ನ ಅಧಿರಾಜ್ಯದ ಸುಖ-ಸ್ವಪ್ನಗಳನ್ನು ಮಣ್ಣುಗೂಡಿಸಿಬಿಟ್ಟೀತೆಂದು ಬ್ರಿಟಿಶ್-ಅಮೇರಿಕೆಯವರು ಅಂಜಿ ಭಾರತವನ್ನು ದ್ವಿಖಂಡ ಮಾಡಿರುತ್ತಾರೆಂದೂ ಅವರು ಹಾಗಿಸವರಲ್ಲದೆ, ತನಗೆ ಬೇಕಾಗುವ ಎಲ್ಲವನ್ನು ಭಾರತವು ಬ್ರಿಟಿಶ ಅಮೇರಿಕೆಯವರಿಂದಲೇ ಕೊಳ್ಳಬೇಕಾಗಿರುವದರಿಂದ, ಭಾರತವು ರಶಿಯಾದ ಬಗ್ಗೆ ವಿಶೇಷ ಪ್ರೇಮ ಇಲ್ಲದ ಸಹಾನುಭೂತಿ ತೋರಿಸಿದರೆ ಬ್ರಿಟಿಶ–ಅಮೇರಿಕೆಯವರು ಭಾರತವನ್ನು ದಿಗ್ಬಂಧಿಸಿ ಪಂಗುಗೊಳಿಸಬಹುದಾದ್ದರಿಂದಲೂ ಒಂದುವೇಳೆ ಭಾರತವು ಭಾವಿ ಯುದ್ಧದಲ್ಲಿ ತಟಸ್ಥವೃತ್ತಿಯು ಬಯಸುತ್ತಿದ್ದರೆ ಬ್ರಿಟಿಶ–ಅಮೇರಿಕೆಯವರ ಮರ್ಜಿಯ ಉಗ್ರಾಣವಾಗಿ ಉಳಿಯಲು ಒಪ್ಪಬೇಕಾಗುವದೆಂದೂ ಅವರು ಸ್ಪಷ್ಟ ಮಾಡಿದರು "೩ನೇ ಮಹಾಯುದ್ಧ ತಪ್ಪಿಸುವ ಮಾರ್ಗವ್ಯಾವದೂ ಇಲ್ಲವೇ?" ಎಂದು ಸುದ್ದಿಗಾರರು ಮಾಡಿದ ಕೊನೆಯ ಪ್ರಶ್ನೆಗೆ ಅವರು ಉತ್ತರ ಕೊಡುತ್ತ, ರಶ್ಯಾ ಕೂಡ ಅಣು ಬಾಂಬುಗಳ ರಚನೆಯ ಕ್ರಮ ಕಂಡುಹಿಡಿದು ಅವನ್ನು ತಯಾರಿಸಕೊಂಡಿಟ್ಟಿದ್ದೇನೆಂದು ಬಹಿರಂಗವಾಗಿ ಸಿದ್ಧವಾದರೆ ಮಾತ್ರ ೩ನೆಯ ಮಹಾಯುದ್ಧದ ಸದ್ದು ಅಡಗುವದೆಂದು ಅವರು ನುಡಿದರು.

ಶ್ರೀ ಗೋಕರ್ಣ ಮಠಾಧೀಶರು ಪರ್ತಗಾಳಿಗೆ

ಶ್ರೀ ಗೋಕರ್ಣ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಗುರುಗಳು ಈಗ ಮಂಗಳೂರದಲ್ಲಿರುತ್ತಾರಷ್ಟೇ! ಅವರ ಪ್ರಕೃತಿಯು ಬಹಳಷ್ಟು ಸುಧಾರಿಸಿದೆ ೪ ತಿಂಗಳ ಹಿಂದೆ ಅವರ ಪ್ರಕೃತಿ ಬಹಳ ಕೋಮಲವಿದ್ದುದರಿಂದಲೂ ದೇವರ ಪೂಜಾದಿ ವಿಧಿಯೋಗಗಳನ್ನು ಏಕಾಕಿಯಾಗಿ ನಿರ್ವಹಿಸುವದು ಶ್ರೀಗಳ ಪ್ರಕೃತಿಗೆ ಬಾಧಕವಿರುತ್ತದಾಗಿ ವೈದ್ಯರ ಅಭಿಪ್ರಾಯವಿದ್ದರಿಂದಲೂ ಶ್ರೀಗುರುಗಳ ಮೇಲಿನ ಭಾರವನ್ನು ಕಡಿಮೆ ಮಾಡುವದಕ್ಕಾಗಿ ಕೆಲವರು ಶಿಷ್ಯ-ಪರಿಗ್ರಹ ಮಾಡುವದುಚಿತವೆಂದು ಸೂಚಿಸುತ್ತಿದ್ದರು. ಆದರೆ ಆ ವಿಚಾರವೀಗ ರದ್ದಾಗಿದೆ ಶ್ರೀ ರಾಮನವಮಿಯ ಮಹೋತ್ಸವವು ಈಗ ಸಮೀಪಿಸಿ ಬಂದಿರುವದರಿಂದ ಶ್ರೀಗಳು ನಾಳೆ ಮೋಟಾರಿನೊಂದಿಗೆ ಶಿರಾಲಿಗೆ ಬಂದರೆ ಅಲ್ಲಿಂದ ಮುಂದೆ ಪರ್ತಗಾಳಿಗೆ ಹೋಗಲಿದ್ದಾರೆ ರಾಮನವಮಿಯ ಉತ್ಸವ ಮುಗಿದ ಮೇಲೆ ವೈದ್ಯರ ಉಪಚಾರವನ್ನು ಮುಂದರಿಸಿಕೊಳ್ಳುವದಕ್ಕಾಗಿ ಶ್ರೀಗಳು ಈ ತಿಂಗಳ ಕಡೆ ಸುಮಾರಿಗೆ ತಿರುಗಿ ಮಂಗಳೂರಿಗೆ ಹೋಗುವರೆಂದೂ ತಿಳಿಯುತ್ತದೆ

ಸ್ಥಾನಿಕ ವೃತ್ತಾಂತ (೨ ನೇ ಪುಟದಿಂದ ಮುಂದೆ) ಈ ಬೇಡಿಕೆಯು ನಾಮರೂಪಗಳು ಇನ್ನೂ ಗೊತ್ತಾಗಿಲ್ಲ ಮುಂಬಯಿ ಸರಕಾರದ "ಗ್ರಂಥಾಲಯಗಳ ಅಭಿವೃದ್ಧಿಯ ಯೋಜನೆ"ಯಂತೆ ಜಿಲ್ಹಾ ಗ್ರಂಥಾಲಯವನ್ನು ನಡೆಸುವ ಹೊಣೆಯನ್ನು ಇಲ್ಲಿಯ ಜನರಲ್ ಲೈಬ್ರರಿಯವರು ಹೊತ್ತಿದ್ದು, ತಮ್ಮ ಗ್ರಂಥಸಂಗ್ರಹವನ್ನು ಸಾರ್ವಜನಿಕರ

ಮಹತ್ವದ ನೋಟೀಸು.

ಮಾರಾಟದ ಮೇಲಿನ ಕರ.

ಸಂಬಂಧಪಟ್ಟ ಮಾಪಾರಸ್ಥರು ಜನರ ಮಾಹಿತಿಗೋಸ್ಕರ ಜಾಹೀರ ಮಾಡುವದೇನಂದರೆ —

ಸನ್ ೧೯೪೬ನೇ ಇಸವಿಯ ಏಪ್ರಿಲ್ ತಿಂಗಳ ೧ನೇ ತಾರೀಖಿನಿಂದ ಯಾವನೊಬ್ಬ ವ್ಯಾಪಾರಸ್ಥನು ತಾನು ಮಾಡಿದ ಯಾವದೇ ಮಾರಾಟಗಳ ಅಥವಾ ಪೂರೈಕೆಗಳ ಬಗ್ಗೆ ಸದರಿ ಸರಕುಗಳು ಕೊಂಡುಕೊಂಡವನಿಂದ ಅಥವಾ ಅವನ ಪರವಾಗಿ ಯಾವನೇ ಮನುಷ್ಯನಿಂದ ಮುಂಬಯಿ ಪ್ರಾಂತದ ಹೊರಗಿನ ವಿಳಾಸಕ್ಕೆ ಸದರಿ ಮಾರಾಟದ ಅಥವಾ ಪೂರೈಕೆಯ ತಾರೀಖಿನಿಂದ ಮೂರು ತಿಂಗಳ ಅವಧಿಯೊಳಗಾಗಿ ಒಯ್ಯಲ್ಪಟ್ಟಿರುವದೆಂದು ಮಾರಾಟಗಳ ಮೇಲಿನ ಕರದ ವಿಷಯದ ಅಧಿಕಾರಿಗಳಿಗೆ ಅವನು ಖಾತ್ರಿ ಮಾಡಿಕೊಟ್ಟಲ್ಲಿ ಸುಧಾರಿಸಲ್ಪಟ್ಟ ಪ್ರಕಾರ ಇರುವ ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟಿನನ್ವಯ ಮಾರಾಟಗಳ ಮೇಲಿನ ಕರದಿಂದ ವಸ್ತು ಮಾಡಲ್ಪಡಲು ಸಹ ಹಕ್ಕು ಹೇಳಬಹುದು

ಈ ಕೆಳಗಿನ ವರ್ಗಗಳ ಸುಗಂಧ-ದ್ರವ್ಯಗಳ ಹಾಗು ಶೃಂಗಾರ ಪಢಕ ಪದಾರ್ಥಗಳ ಸರಕುಗಳು ಪ್ರತಿ ರೂಪಾಯಿಯಲ್ಲಿ ಒಂದು ಆಣೆಯ ವಿಶಿಷ್ಟ ದರದಿಂದ ಪೂರ್ತಿ ಕಡಿಸಲ್ಪಟ್ಟವೆಯೆಂದು ಜಾಹೀರ ಮಾಡಲಾಗಿದೆ ಮತ್ತು ಅವುಗಳ ಮಾರಾಟಗಳು ಅವರಿಗೆ ಇದ್ದಂತೆ ಪ್ರತಿರೂಪಾಯಿಯಲ್ಲಿ ಅರ್ಧ ಆಣೆಯ ಸಾಮಾನ್ಯಕರಕ್ಕೆ ಒಳಪಡುವವು

(೧) ಅಗರಬತ್ತಿಗಳು ಹಾಗು ಊದುಬತ್ತಿಗಳು

(೨) ಧೂಪ

(೩) ಶೃಂಗಾರದ ಸಲುವಾಗಿ ಉಪಯೋಗಿಸಲ್ಪಡುವ ಎಣ್ಣೆಗಳು

(೪) ಕೂದಲಿನಲ್ಲಿ ಹಾಕಿಕೊಳ್ಳುವ ಉದ್ದೇಶವಿದ್ದಂಥವುಗಳ ಹೊರತಾಗಿ ಇತರ ಹಣಿಗೆಗಳು

(೫) ಹಲ್ಲು ತಿಕ್ಕುವ ಸಲುವಾಗಿ ಇರುವ ಪುಡಿಗಳು ಹಾಗು ಪೇಸ್ಟುಗಳು, ಪೌಡರ್ ಹಾಗೂ ಹಲ್ಲು ತಿಕ್ಕುವ ಬ್ರಶ್ಶುಗಳು

(೬) ಟೊಯಲೆಟ್ ಪೇಪರ

(೭) ರೇಝರುಗಳು, ಸೇಫ್ಟಿ ರೇಝರುಗಳು ಹಾಗು ರೇಝರ ಬ್ಲೇಡುಗಳು,

(೮) ಶೇವಿಂಗ ಸ್ಟಿಕ್ಕುಗಳು ಹಾಗು ಶೇವಿಂಗ ಬ್ರಶ್ಶುಗಳು

(೯) ಕುಂಕುಮ ಹಾಗು ಕುಂಕುಮ ಪೇಸ್ಟು

ಈ ಕೆಳಗಿನ ಒಕ್ಕಲತನದ ಉಪಕರಣಗಳು ಮತ್ತು ಕೈಯಿಂದ ನೂಲುವ ಹಾಗು ಕೈಯಿಂದ ನೇಯುವ ಉಪಕರಣಗಳು ಸದರಿ ಆಕ್ಟಿನ ೨ನೇ ಪರಿಶಿಷ್ಟದನ್ವಯ ಕರ ಮಾಫಿ ಇರುತ್ತವೆಂದು ಜಾಹೀರ ಮಾಡಲಾಗಿದೆ

(೧) ನಲಿಕೆಗಳು (ಎಲ್ಲ ಪ್ರಕಾರದವು),

(೨) ಗುದ್ದಲಿಗಳು (ಎಲ್ಲ ಪ್ರಕಾರದವು),

(೩) ಹಾರೆಗಳು, (೪) ಹಾಕು ಘಾವರಾಗಳು,

(೫) ನೇಗಿಲ ತುದಿಗಳು, (೬) ಕೊಯ್ಯ ಕತ್ತರಿಗಳು (ಎಲ್ಲ ಪ್ರಕಾರದವು), (೭) ಕಬ್ಬಿಣದ ನೇಗಿಲಗಳು, (೮) ಕುಂಟೆಗಳು (ಎಲ್ಲ ಪ್ರಕಾರದವು), (೯) ಉಜ್ಜುಗೊರಟುಗಳು (೧೦) ಬಿತ್ತು ಮಾಡುವ ಸಾಧನಗಳು, (೧೧) ಹೆಂಟೆ ಒಡೆಯುವ ಸಾಧನಗಳು, (೧೨) ಬೀಜ ಸ್ವಚ್ಛ ಮಾಡುವ ಸಾಧನಗಳು, (೧೩) ಸೋಸುವ ಸಾಧನಗಳು, (೧೪) ಕೊಯ್ಯುವ ಸಾಧನಗಳು, (೧೫) ಹುಲ್ಲು ಕೊಯ್ಯುವ ಸಾಧನಗಳು, (೧೬) ಸಾಗುವಳಿ ಮಾಡುವ ಸಾಧನಗಳು, (೧೭) ಕಾಳು ಬಡಿಯುವ ಸಾಧನಗಳು, (೧೮) ತೂರುವ ಯಂತ್ರಗಳು, (೧೯) ಧಾನ್ಯ ತಗೆಯುವ ಯಂತ್ರಗಳು, (೨೦) ನೀರು ಪಂಪು ಮಾಡುವ ಯಂತ್ರಗಳು, (೨೧) ಕಬ್ಬಿಣ ಹಾಗು ಚರ್ಮದ ಕಪ್ಪಲಿಗಳು, (೨೨) ಕೈ ಪಂಪುಗಳು, (೨೩) ರಹಾಟಗಳು, (೨೪) ಗೋವಿಲ ಕಡಿಯುವ ಸಾಧನಗಳು, (೨೫) ಮಡಿಕೆ ಊರುಗಳು, (೨೬) ಒಕ್ಕುವ ಟೂಲುಗಳು, (೨೭) ಕೊಡಲಿಗಳು, (೨೮) ಬಂಡಿಗಳು, (೨೯) ಎತ್ತುಗಳಿಂದ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ನಮೂನೆಯ ಬಂಡಿಗಳನ್ನು ಬಿಟ್ಟು ಒಯ್ಯುವದರ ಸಲುವಾಗಿ ಉಪಯೋಗಿಸುವ ಚಕ್ಕಡಿಗಳು

ಕೈಯಿಂದ ನೂಲುವ ಹಾಗು ಕೈಯಿಂದ ನೇಯುವ ಉಪಕರಣಗಳು.

(೧) ಹಿಂಜುವ ಬಿಲ್ಲು

(೨) ಕೈಯಿಂದ ಹಿಂಜುವ ಯಂತ್ರ

(೩) ಹಿಂಜುವ ಬಿಲ್ಲಿನ ದಾರಗಳು

(೪) ಕಟ್ಟಿಗೆಯ ಮಣಿಗೆ ಹಾಗು ಕಟ್ಟಿಗೆಯ ಸುತ್ತಿಗೆ

(೫) ಕೈಯಿಂದ ಹತ್ತಿಯನ್ನು ಕಾಳಿನಿಂದ ಬಿಡಿಸುವ ಸಾಧನಗಳು

(೬) ನೂಲುವ ರಾಟಿ ಹಾಗು ಅದರ ಭಾಗಗಳು

(೭) ತಕಲಿಗಳು

(೮) ಕ್ಯಾರೀಲುಗಳು (ಕಟ್ಟಿಗೆಯವು)

(೯) ಕೈಯಿಂದ ನಡಿಸಲ್ಪಡುವ ಉಂಕಿಗಳು

(೧೦) "ಪಿಟ್ ಲೂಮು" "ಫ್ರೇಮು ಲೂಮು" ಹಾಗು "ಸೇಮಿ ಒಟೋಮೆಟಿಕ್ ಲೂಮು" ಇವುಗಳನ್ನೊಳಗೊಂಡ ಕೈ ಮಗ್ಗಗಳು

ತಾ ೩೧-೩-೧೯೪೬ ವ್ಹಿ. ಎಲ್ ಗಿಡವಾನಿ.
ಡೆಪ್ಯುಟಿ ಕಮಿಶನರ ಆಫ್ ಸೇಲ್ಸ ಟಿಕ್ಸ ಮುಂಬಯಿ

ಗಷ್ಟು ಬಿಯಾಗಿ ಒದಗಿಸಲು ಅವರು ನಿರ್ಧರಿಸಿದ್ದಾರೆ ಸಾರ್ವಜನಿಕರು ಈ ಬಳಲಿಕೆಯ ಲಾಭ ಪಡಕೊಳ್ಳಬೇಕಾಗಿ ಲೈಬ್ರರಿಯ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ ಲೈಬ್ರರಿಗಾಗಿ ಸದಸ್ಯರನ್ನು ನೋಂದಿಸಿಕೊಳ್ಳುವ ಕ್ರಮ ಮಾತ್ರ ಹಿಂದಿನಂತೆಯೇ ಮುಂದರಿಯುವದೆಂತಲೂ ಸದಸ್ಯರ ಹಕ್ಕು-ಬಾಧ್ಯತೆಗಳು ಹಿಂದಿನಂತೆಯೇ ಅಬಾಧಿತವಿರುವವೆಂತಲೂ ಅವರು ತಿಳಿಸುತ್ತಾರೆ

ದೈವಜ್ಞ ಬ್ರಾಹ್ಮಣ ಸಂಘದ ಆಢಳಿತಿಯ ಸಂಬಂಧವಿಲ್ಲದೆ ರಾ ವಾಸುದೇವ ಮಾಸ್ತರರ ಸಂಬಂಧದಲ್ಲೂ ರಾ ವೆಂಕಟೇಶ ವರ್ಣೇಕರರು ತಾ ೧೫-೩-೧೯೪೬ರ "ವೃತ್ತ" ದಲ್ಲಿ ಮಾಡಿದ ವಿಧಾನಗಳು ಮತ್ತು ಎಲ್ಲದ ಹೊಳ್ಳ ವಿಧಾನಗಳಾಗಿರುತ್ತವೆಂದು "ಹಿಂದ ನಿಷ್ಪಕ್ಷಪಾತಿ ದೈವಜ್ಞ" ರು ಬರೆಯುತ್ತಾರೆ ಚಾಲಕರು ಅಯೋಗ್ಯರಿದ್ದರೆ ಸಂಘ ನೋಂದಾಗಿ ಪ್ರಯೋಜನವೇನೆಂದು ಅವರು ಕೇಳುತ್ತಾರೆ ರಾ ವಾಸುದೇವ ಮಾಸ್ತರರ ಕಡೆಯಿಂದ ಸಂಘದ ದಪ್ತರ ತಪ್ಪಿಸುವದರಲ್ಲಿ ಭಾಗ ವಹಿಸಿದ ರಾ ವರ್ಣೇಕರರು ರತ್ನಸಿಂಹ ಧರ್ಮಸಿಂಹ ಮಾಸ್ತರರ ಮೇಲೆ ವಿನಾಕಾರಣ ದೋಷಾರೋಪ ಮಾಡಬೇಕಾದುದು ಸಹಜವಿದೆ, ಮಾಸ್ತರರು ವೈಯಕ್ತಿಕವಾಗಿಯೂ ಸಂಘದ ಸ್ವರೂಪವನ್ನೂ ಅದರ ಈಗಿನ ಸ್ವರೂಪವನ್ನೂ ತುಲನೆ ಮಾಡಿ ನೋಡಿದರೆ ಈಗ ಸಂಘದ ಉನ್ನತಿಯಾಗಿದೆಯೇ ಅವನತಿಯಾಗಿದೆಯೇ ಎಂಬುದು ಯಾವಾತನಿಗೂ ತಿಳಿದು ಬರುವಂತಿದೆ, ಸಂಘದ ಸನ್ನದು ಚಾಲಕರು ಜಿಲ್ಲೆಯ ಮಧ್ಯಸ್ಥರೆಲ್ಲರೂ ಇದರೂ ಸಭೆಯನ್ನು ಕರೆದು, ಉಭಯ ಪಕ್ಷದವರಿಗೆ ತಮ್ಮ ಪಕ್ಷ ಮಂಡಿಸಲು ಸಂಪೂರ್ಣ ಸ್ವಾತಂತ್ರ್ಯ ಕೊಡುವ ಹಾಗೂ ಸದಸ್ಯರಿಗೆ ತಮ್ಮ ಮತ ಸ್ವತಂತ್ರವಾಗಿ ಪ್ರತಿಪಾದಿಸುವ ಅವಕಾಶವನ್ನು ರಾ ವರ್ಣೇಕರರು ತಮ್ಮ ಗೆಳೆಯರಾದ

ಯೋಗ್ಯ ದರದಿಂದ ಬಟ್ಟೆ ಬೇಕಾದರೆ,

ಕುಮಟೆಯ

ಶ್ರೀ ಸತ್ಯನಾರಾಯಣ ಸ್ಟೋರ್ಸನ್ನು

ಸಂದರ್ಶಿಸಿರಿ.

ಈಗ ಬಟ್ಟೆಯ ನಿಯಂತ್ರಣ ರದ್ದಾದ್ದರಿಂದ ಬಟ್ಟೆ ಅತಿ ತುಟ್ಟಿಯಾಗಿರುತ್ತದೆಂದೂ ಯೋಗ್ಯ ಬೆಲೆಗೆ ಉತ್ತಮ ಬಟ್ಟೆ ಸಿಗುವದಿಲ್ಲೆಂದೂ ಜನರು ದೂರುತ್ತಿದ್ದಾರಷ್ಟೇ! ನಮ್ಮ ಸ್ಟೋರ್ಸನ್ನು ಸಂದರ್ಶಿಸಿದವರು ಹೀಗೆ ದೂರಲಿಕ್ಕಿಲ್ಲವಾಗಿ ನಮಗೆ ಖಾತ್ರಿಯುಂಟು ಒಮ್ಮೆ ಬಂದು ನೋಡಿರಿ. ಮದುವೆ-ಮುಂಜವೆಗಳಿಗಾಗಿ ಬೇಕಾದ ಬಟ್ಟೆಯೂ ನೆಗಸಾದ ಹೊಸ ಬಟ್ಟೆಯೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತದೆಂದು ನಮಗೂ ಖಾತ್ರಿ ಯಾಗಿರುವದು

ಮಾಲಕರು — ವ್ಹಿ. ಎಸ್. ನಾಯಕ ಮತ್ತು ಕಂ.
ಕುಮಟಾ.

ಅಚರೇಕರ–ಭಟ್ಟರ ಸಹಾಯದಿಂದ ಮಾಡಿಸಬೇಕು, ಆಗ ಸತ್ಯವು ಬಯಲಿಗೆ ಬರುವದು, ಇತ್ಯಾದಿ ಸದರಿ ಲೇಖಕರು ಬರೆಯುತ್ತಾರೆ [ಈ ವಾದಕ್ಕೆ ಇನ್ನು ಮುಂದೆ "ವೃತ್ತ" ದಲ್ಲಿ ಎಡೆ ಸಿಗಲಾರದು — ಸಂಪಾದಕ]

ಲೋಕಲ್ ಫಂಡ ತೆರಿಗೆಯನ್ನು ಈಗ, ಕಾನೂನಿನಲ್ಲಿ ತಿದ್ದುಪಡಿ ಮಾಡಿ, ಸರಕಾರದವರು ೩ ಆಣೆಗೆ ಏರಿಸಿರುವದರಿಂದ ಜಿಲ್ಹಾ ಲೋಕಲ್ ಬೋರ್ಡಿನವರು ಏರಿಕೆಯ ವಿಧಾನ ಮಾಡುವದು ಶಕ್ಯ ಉಳಿದಿರುವದಿಲ್ಲ ಏಪ್ರಿಲ್ ತಿಂಗಳಲ್ಲಿ ವಸೂಲ ಆಗಬೇಕಾದ ಕಿಸ್ತಿನ ಪ್ರತಿ ರೂಪಾಯಿಗೆ ೩ ಆಣೆಯಂತೆ ಲೋಕಲ್ ಫಂಡ ವಸೂಲ ಮಾಡಲಾಗುವದೆಂದು ಹೇಳಲಾಗಿದೆ

ಮತ ಪತ್ರ

No.

(3) ಕುಮಟಾ ತಾಲೂಕು ಬೋರ್ಡ್ ಕಾಗಾಲ-ಬಾಡ ಚುನಾವಣಾ ಸ್ಥಾನ

ಮತ ಪತ್ರ

No.

(3) ಕುಮಟಾ ತಾಲೂಕು ಬೋರ್ಡ್ ಕಾಗಾಲ-ಬಾಡ ಚುನಾವಣಾ ಸ್ಥಾನ

ಅಭ್ಯರ್ಥಿಯ ಹೆಸರು	ಗುರುತು
ಉಸ್ಪರಕರ ಇಬ್ರಾಹಿಮ್ ಹುಸೇನ	
ನಾಯ್ಕ ಗಣಪಯ್ಯಾ ಕೃಷ್ಣಪ್ಪ	
ನಾಯ್ಕ ತಿಮ್ಮಣ್ಣ ಗೋವಿಂದ	
ನಾಯ್ಕ ಪಾಂಡುರಂಗ ದಾಸು	
ಪಟಗಾರ ದೇವಪ್ಪ ವೆಂಕಪ್ಪ	
ಪಟಗಾರ ವೆಂಕಟ್ರಮಣ ವೆಂಕಪ್ಪ	

ಮತ ಪತ್ರ

No.

(3) ಕುಮಟಾ ತಾಲೂಕು ಬೋರ್ಡ್ ಕಾಗಾಲ-ಬಾಡ ಚುನಾವಣಾ ಸ್ಥಾನ

ಮತ ಪತ್ರ

No.

(3) ಕುಮಟಾ ತಾಲೂಕು ಬೋರ್ಡ್ ಕಾಗಾಲ-ಬಾಡ ಚುನಾವಣಾ ಸ್ಥಾನ

ಅಭ್ಯರ್ಥಿಯ ಹೆಸರು	ಗುರುತು
ಉಸ್ಪರಕರ ಇಬ್ರಾಹಿಮ್ ಹುಸೇನ	
ನಾಯ್ಕ ಗಣಪಯ್ಯಾ ಕೃಷ್ಣಪ್ಪ	
ನಾಯ್ಕ ತಿಮ್ಮಣ್ಣ ಗೋವಿಂದ	
ನಾಯ್ಕ ಪಾಂಡುರಂಗ ದಾಸು	
ಪಟಗಾರ ದೇವಪ್ಪ ವೆಂಕಪ್ಪ	
ಪಟಗಾರ ವೆಂಕಟ್ರಮಣ ವೆಂಕಪ್ಪ	

ಮೋಹನಸಿಂಗರೂ ಕೆಪ್ಟನ್ ಧಿಲನ್ನರೂ ಆಚೆಯ ವಾರ ಮುಂಬಯಿಗೆ ಬಂದಿದ್ದರು. ಆಗ ಅವರಿಬ್ಬರಿಗೂ ಜನತೆಯು ಗೌರವದ ಸ್ವಾಗತವನ್ನಿತ್ತಿತು. ಸೇ॥ ಮೋಹನ ಸಿಂಗರೊಡನೆ ಒಂದು ದಿನ "ಇಂಡಿಯನ್ ಪ್ರೆಸ್ ಎಸೋಸಿಯೇಶನ್" ಸುದ್ದಿ ಸಂಸ್ಥೆಯ ರಾಜಕೀಯ ಪ್ರತಿನಿಧಿಯು ಮಾತಾಡುತ್ತ, "ಅಕಸ್ಮಾತ್ ಯುದ್ಧಪ್ರಾರಂಭವಾದಲ್ಲಿ ಭಾರತವು ಯಾವ ಪಕ್ಷ ಸೇರುವದೆಂದು ತಮ್ಮ ಮತವಿದೆ?" ಎಂದು ಪ್ರಶ್ನೆ ಮಾಡಲಾಗಿ, ಈ ಭಾವಿ ಯುದ್ಧದಿಂದ ಭಾರತವು ಅಲಿಪ್ತ ಉಳಿಯಲಾಗದೆಂತಲೂ, ರಷ್ಯರ ಪಕ್ಷದಲ್ಲೇ ಇಂಗ್ಲಂಡ-ಅಮೇರಿಕೆಯ ಪಕ್ಷವು ಕೂಡ ಆಸಾಧ್ಯವಿರುವದಾದರೂ ಅಮೇರಿಕೆಯ ಅಧಿಪತ್ಯದೊಳಗಿನ ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳ ಪಕ್ಷಕ್ಕೆ ಭಾರತವು ಸೇರುವದೆಂತಲೂ ನುಡಿದರು. ಮೂರನೇ ಮಹಾಯುದ್ಧದಲ್ಲಿ ಬ್ರಿಟಿಶ-ಅಮೇರಿಕೆಯವರಿಗೆ ಹಿತ ಮತ್ತು ಅನುಕೂಲವಾಗಬೇಕೆಂದೇ ಭಾರತದ ವಿಭಜನೆ ಮಾಡಲ್ಪಟ್ಟಿರುವದಾಗಿಯೂ ಭಾರತವು ಅಖಂಡ ಮತ್ತು ಸಂಯುಕ್ತವಾಗುಳಿದರೆ ಅದು ಬಲಿಷ್ಠವಾಗಿ ತಮ್ಮ ಅಧಿರಾಜ್ಯದ ಸುಖ-ಸ್ವಪ್ನಗಳನ್ನು ಮಣ್ಣುಗೂಡಿಸಬಹುದೆಂದು ಬ್ರಿಟಿಶ್-ಅಮೇರಿಕೆಯವರು ಅಂಥ ಭಾರತವನ್ನು ದ್ವಿಖಂಡ ಮಾಡಿದ್ದಾರೆಂದೂ ಅವರು ವಾದಿಸಿದರಲ್ಲದೆ, ತನಗೆ ಬೇಕಾಗುವ ಎಲ್ಲವನ್ನು ಭಾರತವು ಬ್ರಿಟಿಶ-ಅಮೇರಿಕೆಯವರಿಂದಲೇ ಪಡೆದುಕೊಳ್ಳಬೇಕಾಗಿರುವದರಿಂದ, ಭಾರತವು ರಶಿಯಾದ ಬಗ್ಗೆ ವಿಶೇಷ ಪ್ರೇಮ ಇಲ್ಲವೆ ಸಹಾನುಭೂತಿ ತೋರಿಸಿದರೆ ಬ್ರಿಟಿಶ-ಅಮೇರಿಕೆಯವರು ಭಾರತವನ್ನು ದಿಗ್ಬಂಧಿಸಿ ಸಂಗುಗೊಳಿಸಿಬಿಡುವರೆಂದೂ ಒಂದೊಮ್ಮೆ ಭಾರತವು ಭಾವಿ ಯುದ್ಧದಲ್ಲಿ ತಟಸ್ಥವುಳಿಯ ಬಯಸುತ್ತಿದ್ದರೆ ಬ್ರಿಟಿಶ-ಅಮೇರಿಕೆಯವರ ಮಧ್ಯಸ್ಥ ಉಗ್ರವಾಗಿ ಉಳಿಯಲು ಒಪ್ಪಬೇಕಾಗುವದೆಂದೂ ಅವರು ಸ್ಪಷ್ಟ ಮಾಡಿದರು. "೩ನೇ ಮಹಾಯುದ್ಧ ತಪ್ಪಿಸುವ ಮಾರ್ಗವ್ಯಾವದೂ ಇಲ್ಲವೇ?" ಎಂದು ಸುದ್ದಿಗಾರರು ಮಾಡಿದ ಕೊನೆಯ ಪ್ರಶ್ನೆಗೆ ಅವರು ಉತ್ತರ ಕೊಡುತ್ತ, ರಷ್ಯರು ಕೂಡ ಅಣು ಬಾಂಬುಗಳ ರಚನೆಯ ಕ್ರಮ ಕಂಡುಹಿಡಿದು ಅವನ್ನು ತಯಾರಿಸತೊಡಗಿದ್ದಾರೆಂದು ಬಹಿರಂಗವಾಗಿ ಸಿದ್ಧವಾದರೆ ಮಾತ್ರ ೩ನೆಯ ಮಹಾಯುದ್ಧದ ಸಿದ್ಧತೆ ಅಡಗುವದೆಂದು ಅವರು ನುಡಿದರು.

ಶ್ರೀ ಗೋಕರ್ಣ ಮಠಾಧೀಶರು ಪರ್ತಗಾಳಿಗೆ.

ಶ್ರೀ ಗೋಕರ್ಣ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಗುರುಗಳು ಈಗ ಮಂಗಳೂರದಲ್ಲಿರುತ್ತಾರಷ್ಟೇ! ಅವರ ಪ್ರಕೃತಿಯು ಬಹಳಷ್ಟು ಸುಧಾರಿಸಿದೆ. ೪ ತಿಂಗಳ ಹಿಂದೆ ಅವರ ಪ್ರಕೃತಿ ಬಹಳ ಕೋಮಲವಿದ್ದುದರಿಂದಲೂ ದೇವರ ಪೂಜಾದಿ ವಿನಿಯೋಗಗಳನ್ನು ನಿಯತಿಯಾಗಿ ನಿರ್ವಹಿಸುವದು ಶ್ರೀಗಳ ಪ್ರಕೃತಿಗೆ ಬಾಧಕವಿರುತ್ತದಾಗಿ ವೈದ್ಯರ ಅಭಿಪ್ರಾಯವಾದ್ದರಿಂದಲೂ ಶ್ರೀಗಳವರ ಮೇಲಿನ ಭಾರವನ್ನು ಕಡಿಮೆ ಮಾಡುವದಕ್ಕಾಗಿ ಕೆಲವರು ಶಿಷ್ಯ-ಪರಿಗ್ರಹ ಮಾಡುವದುಚಿತವೆಂದು ಸೂಚಿಸುತ್ತಿದ್ದರು. ಆದರೆ ಆ ವಿಚಾರವೀಗ ರದ್ದಾಗಿದೆ. ಶ್ರೀ ರಾಮನವಮಿಯ ಮಹೋತ್ಸವವು ಈಗ ಸಮೀಪಿಸಿ ಬಂದಿರುವದರಿಂದ ಶ್ರೀಗಳು ನಾಳೆ ಮೋಟಾರಿನಿಂದ ಕಾಣಕೋಣ ಬಂದರಕ್ಕೆ ಅಲ್ಲಿಂದ ಮುಂದೆ ಪರ್ತಗಾಳಿಗೂ ಹೋಗಲಿದ್ದಾರೆ. ರಾಮನವಮಿಯ ಉತ್ಸವ ಮುಗಿದ ಮೇಲೆ ವೈದ್ಯರ ಉಪಚಾರವನ್ನು ಮುಂದರಿಸಿಕೊಳ್ಳುವದಕ್ಕಾಗಿ ಶ್ರೀಗಳು ಈ ತಿಂಗಳ ತಾ. ೨೫ರ ಸುಮಾರಕ್ಕೆ ತಿರುಗಿ ಮಂಗಳೂರಿಗೆ ಹೋಗುವರೆಂದೂ ತಿಳಿಯುತ್ತದೆ.

ಸ್ಥಾನಿಕ ವೃತ್ತಾಂತ (೨ ನೇ ಪುಟದಿಂದ ಮುಂದೆ.)

ಈ ಬೇನೆಯ ನಾಮರೂಪಗಳು ಇನ್ನೂ ಗೊತ್ತಾಗಿಲ್ಲ.

ಮುಂಬಯಿ ಸರಕಾರದ "ಗ್ರಂಥಾಲಯಗಳ ಅಭಿವೃದ್ಧಿಯ ಯೋಜನೆ"ಯಂತೆ ಜಿಲ್ಲಾ ಗ್ರಂಥಾಲಯವನ್ನು ನಡಿಸುವ ಹೊಣೆಯನ್ನು ಇಲ್ಲಿಯ ಜನರಲ್ ಲ್ಯಾಬ್ರರಿಯವರು ಹೊತ್ತಿದ್ದು, ತಮ್ಮ ಗ್ರಂಥಸಂಗ್ರಹವನ್ನು ಸಾರ್ವಜನಿಕರ

ಮಹತ್ವದ ನೋಟೀಸು.

ಮಾರಾಟದ ಮೇಲಿನ ಕರ.

ಸಂಬಂಧಪಟ್ಟ ಯಾವತ್ತೂ ಜನರ ಮಾಹಿತಿಗೋಸ್ಕರ ಜಾಹೀರ ಮಾಡುವದೇನಂದರೆ.—

ಸನ್ ೧೯೪೮ನೇ ಇಸವಿಯ ಏಪ್ರಿಲ್ ತಿಂಗಳ ೧ನೇ ತಾರೀಖಿನಿಂದ ಯಾವನೊಬ್ಬ ವ್ಯಾಪಾರಸ್ಥನು ತಾನು ಮಾಡಿದ ಯಾವದೇ ಮಾರಾಟಗಳ ಅಥವಾ ಖರೀದಿಗಳ ಬಗ್ಗೆ ಸದರಿ ಸರಕುಗಳು ಕೊಂಡುಕೊಂಡವನಿಂದ ಅಥವಾ ಅವನ ಪರಿಯಿಂದ ಯಾವನೇ ಮನುಷ್ಯನಿಂದ ಮುಂಬಯಿ ಪ್ರಾಂತದ ಹೊರಗಿನ ಏಳಿಗೆ ಸದರಿ ಮಾರಾಟದ ಅಥವಾ ಖರೀದಿಯ ತಾರೀಖಿನಿಂದ ಮೂರು ತಿಂಗಳ ಅವಧಿಯೊಳಗಾಗಿ ಒಯ್ಯಲ್ಪಟ್ಟಿರುವದೆಂದು ಮಾರಾಟಗಳ ಮೇಲಿನ ಕರದ ವಿಷಯದ ಅಧಿಕಾರಿಗಳಿಗೆ ಅವನು ತೃಪ್ತಿ ಮಾಡಿಕೊಟ್ಟಲ್ಲಿ ಸುಧಾರಿಸಲ್ಪಟ್ಟ ಪ್ರಕಾರ ಇರುವ ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟಿನನ್ವಯ ಮಾರಾಟಗಳ ಮೇಲಿನ ಕರದಿಂದ ವಜಾ ಮಾಡಲ್ಪಡಲು ಸಹ ಕೇಳಬಹುದು.

ಈ ಕೆಳಗಿನ ವರ್ಗಗಳ ಸುಗಂಧ-ದ್ರವ್ಯಗಳ ಹಾಗೂ ಶೃಂಗಾರ-ಪರ್ದಕ ಪದಾರ್ಥಗಳ ಸರಕುಗಳು ಪ್ರತಿ ರೂಪಾಯಿಯಲ್ಲಿ ಒಂದು ಆಣೆಯ ವಿಶಿಷ್ಟ ಕರದಿಂದ ಜಾರಿಯ ಪಡಿಸಲ್ಪಟ್ಟಿವೆಯೆಂದು ಜಾಹೀರ ಮಾಡಲಾಗಿದೆ. ಮತ್ತು ಅವುಗಳ ಮಾರಾಟಗಳು ಇವರಿಗೆ ಇದ್ದಂತೆ ಪ್ರತಿ ರೂಪಾಯಿಯಲ್ಲಿ ಅರ್ಧ ಆಣೆಯ ಸಾಮಾನ್ಯಕರಕ್ಕೆ ಒಳಪಡುವವು.

(೧) ಅಗರಬತ್ತಿಗಳು ಹಾಗು ಊದುಬತ್ತಿಗಳು.
(೨) ಧೂಪ
(೩) ಶೃಂಗಾರದ ಸಲುವಾಗಿ ಉಪಯೋಗಿಸಲ್ಪಡುವ ಎಣ್ಣೆಗಳು.
(೪) ಕೂದಲಿನಲ್ಲಿ ಹಾಕಿಕೊಳ್ಳುವ ಉದ್ದೇಶವಿದ್ದಂಥವುಗಳ ಹೊರತಾಗಿ ಇತರ ಹಣಿಗೆಗಳು.
(೫) ಹಲ್ಲು ತಿಕ್ಕುವ ಸಲುವಾಗಿ ಇರುವ ಪುಡಿಗಳು ಹಾಗು ಪೇಸ್ಟುಗಳು, ಹಲ್ಲುಜ್ಜು ಹಾಗೂ ಹಲ್ಲು ತಿಕ್ಕುವ ಬ್ರಶ್ಶುಗಳು.
(೬) ಟೊಯಲೆಟ ಪೇಪರ
(೭) ರೇಝರುಗಳು, ಸೇಫ್ಟಿ ರೇಝರುಗಳು ಹಾಗು ರೇಝರ ಬ್ಲೇಡುಗಳು.
(೮) ಶೇವಿಂಗ ಸ್ಟಿಕ್ಕುಗಳು ಹಾಗು ಶೇವಿಂಗ ಬ್ರಶ್ಶುಗಳು.
(೯) ಕುಂಕುಮ ಹಾಗು ಕುಂಕುಮ ಪೇಸ್ಟ.

ಈ ಕೆಳಗಿನ ಒಕ್ಕಲತನದ ಉಪಕರಣಗಳು ಮತ್ತು ಕೈಯಿಂದ ನೂಲುವ ಹಾಗು ಕೈಯಿಂದ ನೇಯುವ ಉಪಕರಣಗಳು ಸದರಿ ಆಕ್ಟಿನ ೨ನೇ ಪರಿಶಿಷ್ಟದನ್ವಯ ಕರ ಮಾಫಿ ಇರುತ್ತವೆಂದು ಜಾಹೀರ ಮಾಡಲಾಗಿದೆ.

(೧) ಸಲಿಕೆಗಳು (ಎಲ್ಲ ಪ್ರಕಾರದವು),
(೨) ಗುದ್ದಲಿಗಳು (ಎಲ್ಲ ಪ್ರಕಾರದವು),
(೩) ಹಾರೆಗಳು, (೪) ಕೊಡಲಿ ಫಾವಡಾಗಳು,
(೫) ನೇಗಿಲ ತುದಿಗಳು. (೬) ಕೊಯ್ಯುತ್ರಿಗಳು (ಎಲ್ಲ ಪ್ರಕಾರದವು), (೭) ಕಬ್ಬಿಣದ ನೇಗಿಲುಗಳು, (೮) ಕುಂಟೆಗಳು (ಎಲ್ಲ ಪ್ರಕಾರದವು), (೯) ಉಜ್ಜುಗೊರಟುಗಳು (೧೦) ದಿಬ್ಬ ಮಾಡುವ ಸಾಧನಗಳು, (೧೧) ಹೆಂಟೆ ಒಡೆಯುವ ಸಾಧನಗಳು, (೧೨) ಬೀಜ ಸ್ವಚ್ಛ ಮಾಡುವ ಸಾಧನಗಳು, (೧೩) ನೆಡುವ ಸಾಧನಗಳು, (೧೪) ಕೊಯ್ಯುವ ಸಾಧನಗಳು, (೧೫) ಹುಲ್ಲು ಕೊಯ್ಯುವ ಸಾಧನಗಳು, (೧೬) ಸಾಗುವಳಿ ಮಾಡುವ ಸಾಧನಗಳು, (೧೭) ಕಾಳು ಬಡಿಯುವ ಸಾಧನಗಳು, (೧೮) ಕೇರುವ ಯಂತ್ರಗಳು, (೧೯) ಧೂಳು ತೆಗೆಯುವ ಯಂತ್ರಗಳು, (೨೦) ಸಿಂಪಡಿಸುವ ಯಂತ್ರಗಳು, (೨೧) ಕಬ್ಬಿಣ ಹಾಗು ಚರ್ಮದ ಕಪ್ಪಲಿಗಳು, (೨೨) ಕೈ-ಪಂಪುಗಳು, (೨೩) ರಹಾಟಗಳು, (೨೪) ಗೋಳಲಿ ಕಡಿಯುವ ಸಾಧನಗಳು, (೨೫) ಮಮೋಟುಗಳು, (೨೬) ಬಕೀಟುಗಳು, (೨೭) ಕುಡಗೋಲುಗಳು, (೨೮) ಮಾರ್ಪಿಗಳು, (೨೯) ಒಕ್ಕಲಿಗರಿಂದ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ನಮೂನೆಯ ಒಪ್ಪೆಗಳನ್ನು ಒಯ್ಯುವದರ ಸಲುವಾಗಿ ಉಪಯೋಗಿಸುವ ಚಕ್ಕಡಿಗಳು.

ಕೈಯಿಂದ ನೂಲುವ ಹಾಗು ಕೈಯಿಂದ ನೇಯುವ ಉಪಕರಣಗಳು.

(೧) ಹಿಂಜುವ ಬಿಲ್ಲು.
(೨) ಕೈಯಿಂದ ಹಿಂಜುವ ಯಂತ್ರ.
(೩) ಹಿಂಜುವ ಬಿಲ್ಲಿನ ದಾರಗಳು.
(೪) ಕಟ್ಟಿಗೆಯ ಮುಗೆ ಹಾಗು ಕಟ್ಟಿಗೆಯ ಸುತ್ತಿಗೆ
(೫) ಕೈಯಿಂದ ಹತ್ತಿಯನ್ನು ಕಾಳಿನಿಂದ ಬಿಡಿಸುವ ಸಾಧನಗಳು.
(೬) ನೂಲುವ ರಾಟೆ ಹಾಗು ಅದರ ಭಾಗಗಳು.
(೭) ತಕಲಿಗಳು.
(೮) ಕೈರೀಲುಗಳು (ಕಟ್ಟಿಗೆಯವು.)
(೯) ಕೈಯಿಂದ ನಡಿಸಲ್ಪಡುವ ಉಂಡಿಗಳು.

(೧೦) "ಪಿಟ್ ಲೂಮು" "ಫ್ರೇಮು ಲೂಮು" ಹಾಗು "ಸೇಮಿ ಒಟೊಮೆಟಿಕ್ ಲೂಮು" ಇವುಗಳನ್ನೊಳಗೊಂಡ ಕೈ ಮಗ್ಗಗಳು.

ತಾ. ೩೧-೩-೧೯೪೪. **ವ್ಹಿ. ಎಲ್. ಗಿಡವಾನಿ,**
ಡೆಪ್ಯುಟಿ ಕಮಿಶನರ ಆಫ್ ಸೇಲ್ಸ ಟೆಕ್ಸ ಮುಂಬಯಿ.

ಯೋಗ್ಯ ದರದಿಂದ ಬಟ್ಟೆ ಬೇಕಾದರೆ,
ಕುಮಟೆಯ
ಶ್ರೀ ಸತ್ಯನಾರಾಯಣ ಸ್ಟೋರ್ಸನ್ನು
ಸಂದರ್ಶಿಸಿರಿ.

ಈಗ ಬಟ್ಟೆಯ ನಿಯಂತ್ರಣ ರದ್ದಾದ್ದರಿಂದ ಬಟ್ಟೆ ಅತಿ ತುಟ್ಟಿಯಾಗಿರುತ್ತದೆಂದೂ ಯೋಗ್ಯ ಬೆಲೆಗೆ ಉತ್ತಮ ಬಟ್ಟೆ ಸಿಗುವದಿಲ್ಲೆಂದೂ ಜನರು ಹೆದರುತ್ತಿದ್ದಾರಷ್ಟೇ! ನಮ್ಮ ಸ್ಟೋರ್ಸನ್ನು ಸಂದರ್ಶಿಸಿದವರು ಹೀಗೆ ಹೆದರಲಿಕ್ಕಿಲ್ಲವಾಗಿ ನಮಗೆ ಖಾತ್ರಿಯಿದೆ. ಒಮ್ಮೆ ಬಂದು ನೋಡಿರಿ. ಮದುವೆ-ಮುಂಜಿಗಳಿಗಾಗಿ ಬೇಕಾದ ಬಟ್ಟೆಯೂ ಸೊಗಸಾದ ಹೊಸ ಬಟ್ಟೆಯೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತದೆಂದು ನಮಗೂ ಖಾತ್ರಿ ಯಾಗುವದು.

ಮಾಲಕರು:— ವ್ಹಿ. ಎಸ್. ನಾಯಕ ಮತ್ತು ಸನ್ಸ್, ಕುಮಟಾ.

ಗವ್ಹರ್ನಮೆಂಟಿಯಾಗಿ ಒದಗಿಸಲು ಅವರು ನಿರ್ಧರಿಸಿದ್ದಾರೆ. ಸಾರ್ವಜನಿಕರು ಈ ಏರ್ಪಾಟಿನ ಲಾಭ ಪಡೆಕೊಳ್ಳಬೇಕಾಗಿ ಲ್ಯಾಬ್ರರಿಯ ಕಾರ್ಯಕಾರಿಗಳು ಬಿನ್ನವಿಸುತ್ತಾರೆ. ಲ್ಯಾಬ್ರರಿಗಾಗಿ ಸದಸ್ಯರನ್ನು ನೋಂದಿಸಿಕೊಳ್ಳುವ ಕ್ರಮ ಮಾತ್ರ ಹಿಂದಿನಂತೆಯೇ ಮುಂದರಿಯುವದೆಂತಲೂ ಸದಸ್ಯರ ಹಕ್ಕು-ಬಾಧ್ಯತೆಗಳು ಹಿಂದಿನಂತೆಯೇ ಅಬಾಧಿತವಿರುವವೆಂತಲೂ ಅವರು ತಿಳಿಸುತ್ತಾರೆ.

ದೈವಜ್ಞ ಬ್ರಾಹ್ಮಣ ಸಂಘದ ಅಧ್ಯಕ್ಷತೆಯ ಸಂಬಂಧದಲ್ಲೂ ರಾ॥ ವಾಸುದೇವ ಶಾಸ್ತ್ರಿಗಳ ಸಂಬಂಧದಲ್ಲೂ ರಾ॥ ವೆಂಕಟೇಶ ಪಣ್ಶೀಕರರು ತಾ. ೧೫-೩-೧೯೪೮ರ "ವೃತ್ತ" ಪತ್ರದಲ್ಲಿ ಮಾಡಿದ ವಿಧಾನಗಳು ಹುಚ್ಚಿನಿಂದ ಕೂಡಿದ ವಿಧಾನಗಳಾಗಿರುತ್ತವೆಂದು "ಹಿರಿಯ ನಿಷ್ಪಕ್ಷಪಾತಿ ದೈವಜ್ಞ"ರು ಬರೆಯುತ್ತಾರೆ. ಬಾಲಕರು ಅಯೋಗ್ಯರಿದ್ದರೆ ಸಂಘ ನಡೆದಾಗಿ ಪ್ರಯೋಜನವೇನೆಂದು ಅವರು ಕೇಳುತ್ತಾರೆ. ರಾ॥ ವಾಸುದೇವ ಶಾಸ್ತ್ರಿಗಳ ಕಡೆಯಿಂದ ಸಂಘದ ದಪ್ತರ ತಪ್ಪಿಸುವದರಲ್ಲಿ ಭಾಗ ವಹಿಸಿದ ರಾ॥ ಪಣ್ಶೀಕರರು ಆತ್ಮಸಮರ್ಥನೆಗಾಗಿ ಶಾಸ್ತ್ರಿಗಳ ಮೇಲೆ ಏನಾದರೂ ದೋಷಾರೋಪ ಮಾಡಬೇಕಾದುದು ಸಹಜವಿದೆ; ಶಾಸ್ತ್ರಿಗಳು ಕೈಯಲ್ಲಿದ್ದಾಗಣ ಸಂಘದ ಸ್ವರೂಪವನ್ನೂ ಅದರ ಈಗಿನ ಸ್ವರೂಪವನ್ನೂ ತುಲನೆ ಮಾಡಿ ನೋಡಿದರೆ ಈಗ ಸಂಘದ ಉನ್ನತಿಯಾಗಿದೆಯೋ ಅವನತಿಯಾಗಿದೆಯೋ ಎಂಬುದು ಯಾವಾತನಿಗೂ ತಿಳಿದು ಬರುವಂತಿದೆ; ಸಂಘದ ಸಮ್ಮತಿ ಬಾಲಕರು ಜಲ್ಲಿಯ ಮಧ್ಯಸ್ಥರಲ್ಲಿದ್ದರೂ ಸಭೆಯನ್ನು ಕರೆದು, ಉಭಯ ಪಕ್ಷದವರಿಗೆ ತಮ್ಮ ಪಕ್ಷ ಮಂಡಿಸಲು ಸಂಪೂರ್ಣ ಸ್ವಾತಂತ್ರ್ಯ ಕೊಡುವ ಹಾಗೂ ಸದಸ್ಯರಿಗೆ ತಮ್ಮ ಮತ ಸ್ವತಂತ್ರವಾಗಿ ನೀಡುವ ವಿಚಾರ ಬಿಟ್ಟು ರಾ॥ ಪಣ್ಶೀಕರರು ತಮ್ಮ ಗೆಳೆಯರಿಂದ ಅವರೇ ಭಟ್ಟರ ಸಹಾಯದಿಂದ ಮಾಡಿಸಬೇಕು; ಆಗ ಸತ್ಯವು ಬಯಲಿಗೆ ಬರುವದು; ಇತ್ಯಾದಿ ಸದರಿ ಲೇಖಕರು ಬರೆಯುತ್ತಾರೆ. [ಈ ವಾದಕ್ಕೆ ಇನ್ನು ಮುಂದೆ 'ವೃತ್ತ' ದಲ್ಲಿ ಎಡೆ ಸಿಗಲಾರದು. —ಸಂಪಾದಕ.]

ಲೋಕಲ್ ಫಂಡ ತೆರಿಗೆಯನ್ನು ಈಗ, ಕಾನೂನಿನಲ್ಲಿ ತಿದ್ದುಪಡಿ ಮಾಡಿ, ಸರಕಾರದವರೇ ೩ ಆಣೆಗೆ ಏರಿಸಿರುವದರಿಂದ ಜಿಲ್ಲಾ ಲೋಕಲ್ ಬೋರ್ಡಿನವರು ಏರಿಕೆಯ ವಿಚಾರ ಮಾಡುವದು ಇಲ್ಲ ಉಳಿದಿರುವದಿಲ್ಲ ಎಪ್ರಿಲ್ ತಿಂಗಳಲ್ಲಿ ವಸೂಲ ಆಗಬೇಕಾದ ತೀರ್ವೆಯು ಪ್ರತಿ ೧ರೂಪಾಯಿಗೆ ೩ಆಣೆಯಂತೆ ಲೋಕಲ್ ಫಂಡು ವಸೂಲು ಮಾಡಲಾಗುವದೆಂದು ಹೇಳುತ್ತಾರೆ.

ಸುದ್ದಿಗಳ ಸಂಗ್ರಹ.

— ಭಾರತ ಸರಕಾರದ ಗೃಹ ಮಂತ್ರಿಗಳೂ ಸಂಸ್ಥಾನ ಖಾತೆಯ ಮಂತ್ರಿಗಳೂ ಆಗಿರುವ ಸರದಾರ ವಲ್ಲಭಭಾಯಿ ಪಟೇಲರು ಈಗ ಸುಮಾರು ೨ ತಿಂಗಳಿಂದ ಅಸ್ವಸ್ಥರಿದ್ದಾರೆ. ಸರದಾರರ ಮೇಲಿನ ಕಾರ್ಯಭಾರ ಬಹಳವಿದೆ. ಆದರಿಂದ ವಿಮಾನದಲ್ಲಿ ಸಹ ಪ್ರವಾಸ ಮಾಡುತ್ತಿರುವಾಗ ಕೂಡ ಅವರಿಗೆ ವಿಶ್ರಾಂತಿ ಸಿಗುತ್ತಿದ್ದಿಲ್ಲ. ವಿಮಾನದಲ್ಲಿ ಕೂತಾಗಲೂ ಅವರು ಮಹತ್ವದ ಕಾಗದಪತ್ರಗಳನ್ನು ಪರಿಶೀಲಿಸುವ ಪರಿಪಾಠವನ್ನಿಟ್ಟುಕೊಂಡಿದ್ದರು. ಕೆಲಸದ ಭಾರ ಹೀಗೆ ಹೆಚ್ಚಾದ್ದರಿಂದಲೇ ಅವರು ಹಾಸಿಗೆ ಹಿಡಿಯುವ ಪ್ರಸಂಗ ಬಂತೆಂದು ಹೇಳಬಹುದು. ಈ ಅಸ್ವಸ್ಥತೆಯ ಕಾರಣವಾಗಿ ಸರದಾರ ಪಟೇಲರು ಮಂತ್ರಿಪದಕ್ಕೆ ರಾಜೀನಾಮೆ ಕೊಡುವ ಸಂಭವವುಂಟೆಂದು ನಡುವೆ ಒಂದು ಸುದ್ದಿ ಹಬ್ಬಿದ್ದರಿಂದ ದೇಶದಲ್ಲಿ ಕೆಲ ಮಟ್ಟಿಗೆ ಕಳವಳವೂ ಚಿಂತೆಯೂ ಉಂಟಾಗಿತ್ತು. [illegible] ತನ್ನ ಚಾತುರ್ಯದಿಂದಲೂ [illegible] ಸ್ವಾತಂತ್ರ್ಯದಿಂದಲೂ ಸರದಾರರು [illegible] ನ್ನು ಒಂದೇ ಹಿಂದೀ ಒಕ್ಕೂಟಕ್ಕೆ ಒಳಪಡಿಸಿದ್ದಾರೆ (ಆ ಸಂಸ್ಥಾನಗಳ ನವಾಬರು ಹಾಗೂ ರಾಜರುಗಳ ಸಹ ಸಮ್ಮತಿಯಿಂದ) ಸೇರಿಸಿಕೊಂಡಿದ್ದಾರೆ, ಇಲ್ಲವೆ ಅವುಗಳ ಸಂಘರಾಜ್ಯಗಳನ್ನು ನಿರ್ಮಿಸಿದ್ದಾರೆ. ಇಂತಹ ದೊಡ್ಡ ಕಾರ್ಯ ಬೇರಾವ ಬರುವವರಿಂದ ೬ ತಿಂಗಳ ಒಳಗೆ ಯಾರೂ ಈ ವಿಷಯದಲ್ಲಿ ಇಷ್ಟೇ ಅಲ್ಲ, ಸಂಸ್ಥಾನಿಕರನ್ನು ಹಿಂದೀ ಒಕ್ಕೂಟಕ್ಕೆ ಅಂತಿಮವಾಗಿ ನಡೆಯುವಂತೆ ಮಾಡಲು ಸರದಾರರು ಹೂಡಿದ ಯೋಜನೆಯನ್ನು ಕಂಡು ಎಷ್ಟೋ ಬ್ರಿಟಿಶ ಉಪಹಾಸ ಸಹ ಮಾಡಿದ್ದುಂಟು! ಅವರಿಗೆಲ್ಲ ಸರದಾರರು ತಮ್ಮ ಕೃತಿಯಿಂದ ಉತ್ತರವನ್ನಿತ್ತಿದ್ದಾರೆ. ಆದರೆ ಸಂಸ್ಥಾನಗಳ ಸಮಸ್ಯೆ ಇನ್ನೂ ಪೂರ್ಣವಾಗಿ ಬಗೆಹರಿದಿರುವದಿಲ್ಲ. ಹೈದರಾಬಾದ ಮತ್ತು ಕಾಶ್ಮೀರ ಇವುಗಳ ಸಮಸ್ಯೆ ಇನ್ನೂ ಹಾಗೆಯೇ ಇವೆ. ಭಾರತೀಯ ಸಂಸ್ಥಾನಗಳ ಸಮಸ್ಯೆಯೂ ಪೂರ್ಣ ಬಗೆಹರಿದಿರುವದಿಲ್ಲ. ಇವೆಲ್ಲ ಜಟಿಲ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಿಡಿಸಲು ಸರದಾರ ಪಟೇಲರಂತಹ ಉತ್ಕೃಷ್ಟ ಮನುಷ್ಯರೇ ಬೇಕು. ಅವರಿಂದ ಈ ಜಟಿಲ ಸಮಸ್ಯೆಗಳು ಭಾರತ ಸರಕಾರದ ತಲೆ ತಪ್ಪುತ್ತಿರುವಾಗ ಸರದಾರ ಪಟೇಲರು ಮಂತ್ರಿಪದಕ್ಕೆ ರಾಜೀನಾಮೆ ಕೊಡಬೇಕಾದ ಪ್ರಸಂಗ ಬಂದರೆ ಯಾವ ದೇಶಪ್ರೇಮಿ ಭಾರತೀಯನಿಗೆ ಚಿಂತೆ ಉಂಟಾಗದಿರದು? ಭಾಗ್ಯವಶದಿಂದ ಈಗ ಆ ಪ್ರಸಂಗವಿಲ್ಲೆಂದು ಸಮಾಧಾನ ಸಂತೋಷವಾಗುತ್ತದೆ. ಸರದಾರರ ಜಯವು ಈಗ ಬಹಳ ಮಟ್ಟಿಗೆ ಸಾಸಿಯಾಗಿರುತ್ತದೆ. ಕೆಲವೇ ದಿನಗಳಲ್ಲಿ ಅವರು ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವರೆಂದು ತಿಳಿಯುತ್ತದೆ.

ಆದರೂ ಅವರ ಭಾರ ಕಡಿಮೆ ಮಾಡುವಂತೆ ಕೇಂದ್ರ ಮಂತ್ರಿಮಂಡಳದ ಪುನರ್ಘಟನೆಯೂ ದಪ್ತರಗಳ ಬದಲಾವಣೆಯೂ ಆಗುವದಾಗಿ ಬೇರೆ ಬೇರೆ ವಾರ್ತಾಪತ್ರಗಳು ವರದಿಗಳನ್ನು ಕಳಿಸುತ್ತಿದ್ದಾರೆ. ಶ್ರೀ ಕುಮಾರಪ್ಪ ಭಾಭಾರವರು ೩ ತಿಂಗಳ ಹಿಂದೆಯೇ ರಾಜೀನಾಮೆ ಬರೆದು ಪಂಡಿತ ನೆಹರೂರವರ ವಶಕ್ಕೆ ಕೊಟ್ಟಿದ್ದುಂಟು. ಕೇಂದ್ರ ಶಾಸನ ಸಭೆಯ ಆಯ-ವ್ಯಯದ ಅಧಿವೇಶನ ಮುಗಿಯುವ ವರೆಗಾದರೂ ಮಂತ್ರಿಗಳಾಗಿ ಉಳಿಯಬೇಕೆಂದು ಪಂಡಿತಜೀಯವರು ವಿನಂತಿಸಿಕೊಂಡದ್ದರಿಂದ ಅವರು ಈ ವರೆಗೆ ಅಧಿಕಾರದಲ್ಲಿ ಇದ್ದರು. ಅವರು ಬಿಡುಗಡೆ ಹೊಂದಲಿದ್ದಾರೆ. ಶ್ರೀ ಭಾಭಾರವರ ಈ ರಾಜೀನಾಮೆಯು ಖಾಸಗಿ ಕಾರಣಗಳಿಗಾಗಿ ಇರುತ್ತದೆಂದು ಕೆಲವರು ಹೇಳುತ್ತಾರೆ. ಮಂತ್ರಿಮಂಡಳದಲ್ಲಿ ಮತಭೇದಗಳು ಹುಟ್ಟಿದ ಕಾರಣದಿಂದ ಭಾಭಾರವರು ಆ ಮಂಡಳದಿಂದ ಹೊರಬೀಳುತ್ತಿದ್ದಾರೆಂದು ಬೇರೆ ಕೆಲವರು ನುಡಿಯುತ್ತಾರೆ. ಸಂಸ್ಥಿಕ ಪುನರ್ವಸತಿ ಖಾತೆಯ ಮಂತ್ರಿಗಳಾದ ಶ್ರೀ ಕ್ಷಿತೀಶಚಂದ್ರ ನಿಯೋಗಿಯವರೂ ರಾಜೀನಾಮೆ ಕೊಡಲಿದ್ದಾರೆ ಎನ್ನುವ ಸುದ್ದಿ ಕೇಳಿಬರುತ್ತದೆ. ಇನ್ನಿಬ್ಬರು ಮಂತ್ರಿಗಳು ಕೂಡ ಹೊರಬೀಳುವವರಿದ್ದಾರೆಂಬ ವಾರ್ತೆ ದಿಲ್ಲಿಯಲ್ಲಿ ಹರಡಿದೆ. ಅವರ ಹೆಸರುಗಳು ಮಾತ್ರ ನಿಶ್ಚಿತವಾಗಿ ತಿಳಿದಿಲ್ಲ. ಶ್ರೀ ರಫಿ ಅಹಮದ ಕಿದವಾಯಿಯವರು ಮಂತ್ರಿಮಂಡಳದಿಂದ ಹೊರಬಿದ್ದು, ಸಮಾಜ-ಸತ್ತಾವಾದಿ ಪಕ್ಷಕ್ಕೆ ಸೇರಿ, ಕೇಂದ್ರ ಶಾಸನಸಭೆಯಲ್ಲಿ ವಿರೋಧಿ ಪಕ್ಷದ ನಾಯಕರಾಗುವರೆಂದು "ಇಂಡಿಯನ್ ಪ್ರೆಸ್ ಎಸೋಸಿಯೇಶನ್" ಸುದ್ದಿ-ಸಂಸ್ಥೆಯು ಹೇಳುತ್ತದೆ. ಶಾಸನ ಸಭೆಯಲ್ಲಿ ಕೊಂಗ್ರೆಸ ಪಕ್ಷದ ಪ್ರತೋದರಾಗಿರುವ (ಬಿಹಾರದ) ಶ್ರೀ ಸತ್ಯನಾರಾಯಣ ಸಿಂಹರವರು ಮಂತ್ರಿಮಂಡಳದಲ್ಲಿ ಸೇರಿಸಿಕೊಳ್ಳಲ್ಪಡುವವರಾಗಿಯೂ ಅದೇ ಸುದ್ದಿ-ಸಂಸ್ಥೆಯು ವಾರ್ತೆಯನ್ನು ಹುಟ್ಟಿಸಿದೆ. ಈ ಎಲ್ಲ ವಾರ್ತೆಗಳನ್ನು ಪರಿಶೀಲಿಸಿದಲ್ಲಿ ೧-೨ ವಾರಗಳಲ್ಲಿ ಪಂಡಿತ ನೆಹರೂರವರು ತಮ್ಮ ಮಂತ್ರಿ ಮಂಡಳವನ್ನು ಪುನರ್ಘಟಿಸುವರೆಂದು ಧೈರ್ಯದಿಂದ ಹೇಳಬಹುದು. ಈ ಹೊಸ ಮಂತ್ರಿ ಮಂಡಳದಲ್ಲಿ ಸ. ಕೃಷ್ಣ ಮೇನನ್ನರವರು ಶಿಕ್ಷಣ ಮಂತ್ರಿಗಳಾಗುವರೆಂದೂ ಪಂ॥ ನೆಹರೂರವರ ಅತಿ ಹೇಳಿದ್ದರಿಂದಲೇ ಅವರು ಲಂಡನದಿಂದ ಭಾರತಕ್ಕೆ ಮರಳಿ ಬಂದಿರುವರೆಂದೂ ಲಂಡನದಲ್ಲಿ ಸುದ್ದಿ ಹಬ್ಬಿದೆಯಂತೆ.

— ಕಲಕತ್ತೆಯಲ್ಲಿ ಕೇಂದ್ರ ಸರಕಾರದ ೧೫ ಕಚೇರಿಗಳಿವೆ. ಇವುಗಳೊಳಗಿನ ನೌಕರರದೊಂದು ಮಹಾ ಮಂಡಳವುಂಟು. ೨೦೦೦೦ ನೌಕರರು ಅದರ ಸದಸ್ಯರಿದ್ದಾರೆ. ಈ ನೌಕರರಿಗೆ ಹೆಚ್ಚು ಸಂಬಳ ಮತ್ತು ಭತ್ತೆ ಸಿಗಬೇಕೆಂದೂ, ಕೆಲವೊಂದು ಕಾರಣದಿಂದ ಕೆಲಸವಿಂದ ತೆಗೆಯಲ್ಪಟ್ಟ ಕೆಲಸಗಾರರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ ಕೇಳುತ್ತಿರು ಮಾಡಿ, ಸದರಿ ಮಹಾ ಮಂಡಳವು ತನ್ನ ಸದಸ್ಯರಿಗೆ ಸಂಪು ಹೂಡಲು ಆದೇಶ ಕೊಟ್ಟಿರುತ್ತದೆ! ಬೇಗ ಸಂಪು ಹೂಡಿ ಕೆಲಸ ನಿಲ್ಲಿಸಬೇಡಿರೆಂದು ಬಂಗಾಲ ಸರಕಾರದ ಪ್ರಧಾನ ಮಂತ್ರಿ [illegible] ಮತ್ತು ನೆಹರೂರವರು ಸದರಿ ಮಹಾ ಮಂಡಳಕ್ಕೆ ಸೂಚನೆಯಿತ್ತಿದ್ದರು. ಆದರೂ ಕೆಲವು ಕಚೇರಿಗಳ ಕೆಲವು ನೌಕರರು ಕಳೆದ ಶುಕ್ರವಾರದಿಂದ ಅನ್ನ ಸತ್ಯಾಗ್ರಹವನ್ನು ಕೆಲವರು "ಲೇಖಣಿ ಕೆಳಗಿಟ್ಟು ಸುಮ್ಮನೆ ಕೂಡ್ರು"ವ ಸತ್ಯಾಗ್ರಹವನ್ನೂ ಪ್ರಾರಂಭಿಸಿರುತ್ತಾರೆ! ಸುಮಾರು ೩೦೦೦ ಜನರು ಈ ಸಂಪಿನಲ್ಲಿ ಸೇರಿದ ಸುದ್ದಿಯಿದೆ. ಸಂಪೂರ್ಣ ಅಹಿಂಸೆಯಿಂದ ಸಂಪು ಸಾಗಿಸಿಕೊಂಡು ಹೋಗುವವರಾಗಿ ಸಂಪುಗಾರರು ಸಾರುತ್ತಿದ್ದರೂ ಕೆಲವು ಸಂಪುಗಾರರು ಸಂಪಿನಲ್ಲಿ ಸೇರದವರಿಗೆ ಕೆಲಸಕ್ಕೆ ಹಾಜರಾಗಿ ಕೆಲಸ ಮಾಡಲು ತಡೆಯೊಡ್ಡುತ್ತಿದ್ದರಂತೆ. ಈ ಬಗ್ಗೆ ಶುಕ್ರವಾರ ದಿನ ೧೩೪ ಸಂಪುಗಾರರು ಬಂಧಿಸಲ್ಪಟ್ಟಿದ್ದಾರೆ. ಈ ಸಂಪಿನ ಸಂಬಂಧದಲ್ಲಿ ಪಶ್ಚಿಮ ಬಂಗಾಲದ ಪ್ರಾಂತಾಧಿಪತಿಗಳಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಒಂದು ವಿನಂತಿ-ಪತ್ರ ಹೊರಡಿಸಿ, 'ಇಂದು ಪಂ॥ ನೆಹರೂರವರ ಮಾತನ್ನು ಪಾಲಿಸಿ ಹಿಂದೀ ಸೈನಿಕರು ಪ್ರಾಣದ ಪರಿವೆ ಇಲ್ಲದೆ ರಣರಂಗದಲ್ಲಿ ಹೋರಾಡುತ್ತಿದ್ದಾರೆ. ಅಂಥವರ ಮಾತನ್ನು ಸರಕಾರಿ ನೌಕರರು ಕಷ್ಟ-ಶ್ರಮ-ವಿವಾದಗಳನ್ನೆಬ್ಬಿಸಿ, ಉಲ್ಲಂಘಿಸುವದೆಂದರೆ ನಾಲು ಹೊಡೆಯುವ ಆಳ ಕೆಟ್ಟ ಕೆಲಸದಂತೆಯೇ ಸರಿ!" ಎಂದೂ, ಸಂಪು ಬಿಟ್ಟು ಅವಿರೋಧವಾಗಿ ಕೆಲಸಕ್ಕೆ ತಿರುಗಿ ಹಾಜರಿ ತಮ್ಮ ಸ್ವಾಭಿಮಾನಕ್ಕೆ ಆದೊಂದು ಕಾರಣ ಬೇಡ. ಭಾವಿಸದೆ ತಮ್ಮ ತಮ್ಮ ಕೆಲಸಕ್ಕೆ ಮರಳುವದೇ ನಿಜವಾದ ದೇಶ ಭಿಮಾನದ ಮಾರ್ಗವೆಂದೂ ಬೋಧಿಸಿದ್ದಾರೆ. ಪಂ॥ ನೆಹರೂರವರ ಸರಕಾರದಂತಹ ಲೋಕಪ್ರಿಯ ಸರಕಾರದ ವಿರುದ್ಧ ಸಂಪು ಹೂಡುವದೆಂದರೆ ಅದೊಂದು ದೇಶದ್ರೋಹವೇ ಸರಿಯೆಂದು ದಿವಾಣ ಚಮನಲಾಲರೂ ಜಾಹೀರಪಡಿಸಿದ್ದಾರೆ.

— ಕಲಕತ್ತೆಯೊಳಗಿನ ಕೇಂದ್ರ ಸರಕಾರದ ಕೆಲಸಗಾರರ ಬೆನ್ನಿನಲ್ಲಿ ಕಮ್ಯುನಿಸ್ಟ (ಯಾನೆ ಸಾಮ್ಯವಾದಿ) ಪಕ್ಷದವರ ಕೈವಾಡವುಂಟೆಂಬ ಮಾತು ಜನ-ಜನಿತವಾಗಿದೆ. ಯಾರದಾದರೂ ಕೈಹಿಡಿದು ಮತ್ತು ಹೇಗಾದರೂ ಮಾಡಿ ಸರಕಾರವನ್ನು ಸಂಕಟದಲ್ಲಿ ನೂಕುವದು ಈ ಪಕ್ಷದ ಧ್ಯೇಯವಾಗಿರುತ್ತದೆ. ಹಿಂಸೆ-ಅತ್ಯಾಚಾರಗಳು ಈ ಪಕ್ಷಕ್ಕೆ ಪ್ರತಿಷಿದ್ಧವಿರುವದಿಲ್ಲ. ಆದರಿಂದ ಈ ಪಕ್ಷವನ್ನು ನಿರ್ಬಂಧಿಸಲು ಕೇಂದ್ರ ಸರಕಾರವೂ ಪ್ರಾಂತಿಕ ಸರಕಾರಗಳೂ ನಿರ್ಧರಿಸಿವೆ. ಪಶ್ಚಿಮ ಬಂಗಾಲ ಮತ್ತು ಪೂರ್ವ ಪಂಜಾಬ ಸರಕಾರಗಳು ಈಗಾಗಲೇ ಈ ಪಕ್ಷದ ಸಂಘ-ಸಂಸ್ಥೆಗಳನ್ನು ಕಾನೂನಬಾಹಿರ ಸಂಸ್ಥೆಗಳನ್ನಾಗಿ ಮಾಡಿವೆ. ಮುಂಬಯಿ ಸರಕಾರವು ಮೊನ್ನೆಯೇ ಕಮ್ಯುನಿಸ್ಟ ಪಕ್ಷದ ಮುಂದಾಳುಗಳನ್ನು ಸೆರೆಹಿಡಿದು ನಿರ್ಬಂಧದಲ್ಲಿಡಲು ಆಜ್ಞಾಪಿಸಿದೆ. ಮಧ್ಯಪ್ರಾಂತದಲ್ಲೂ ಪ್ರಮುಖ ಕಮ್ಯುನಿಸ್ಟರ ಬಂಧನವಾಗಹತ್ತಿದೆ. ಅಲ್ಲಿಯ ಕೆಲವು ಕಮ್ಯುನಿಸ್ಟ ಕಾರ್ಯಕರ್ತರು, ತಮಗೆ ಸೆರೆಹಿಡಿಯಲು ಆಜ್ಞಾಪತ್ರ ಹೊರಟ ಸಂಗತಿ ತಿಳಿದು, ತಲ್ಲೂರಿಯಾದ ವರದಿಯೂ ಉಂಟು. ಇನ್ನಿತರ ಪ್ರಾಂತಗಳಲ್ಲೂ ಕಮ್ಯುನಿಸ್ಟ ಪಕ್ಷದ ಮೇಲೆ ಗದೆಯೆತ್ತುವ ಪ್ರಸಂಗ ಬೇಗನೇ ಬರುವದೆಂದು ಕಾಣುತ್ತದೆ.

— ದೇಶಗೌರವ ಸುಭಾಷಚಂದ್ರ ಬೋಸರ "ಆಝಾದ ಹಿಂದ ಫೌಜ"ದ ಪ್ರಮುಖ ಸೇನಾಪತಿಗಳಾಗಿದ್ದ ಸೇ॥

ಪತ್ರಿಕಾ ಪ್ರಕಟನೆ.

೧೯೪೫ರ ಅರಳೆಯ ಬಟ್ಟೆ ಮತ್ತು ನೂಲು (ನಿಯಂತ್ರಣದ) ಆಜ್ಞೆ, ೧೯೪೫ರ ಅರಳೆ ಬಟ್ಟೆಯ (ಮೋಳೆ ಅಚ್ಚು ಹಾಕುವದನ್ನು ನಿಯಂತ್ರಿಸುವ) ಆಜ್ಞೆ, ೧೯೪೫ರ ಅರಳೆ ಅರಿವೆಯ ಆಕಾರ ಮತ್ತು ಭರಣಗಳನ್ನು (Sizing & Filling) ನಿಯಂತ್ರಿಸುವ ಆಜ್ಞೆ, ೧೯೪೫ರ ಅರಳೆ ಅರಿವೆಯ (ಕಚ್ಚಾ ಸಾಮಗ್ರಿ ಮತ್ತು ಸಂಗ್ರಹಗಳ) ಆಜ್ಞೆ ಮತ್ತು ೧೯೪೭ರ ಅರಿವೆ ಉದ್ದಿಮೆ (ನಿಯಂತ್ರಣ ಮತ್ತು ಉತ್ಪಾದನೆ) ಆಜ್ಞೆ ಇವುಗಳನ್ನೆಲ್ಲ ರದ್ದುಗೊಳಿಸಿ ಹಿಂದುಸ್ಥಾನ ಸರಕಾರವು ಅವುಗಳ ಸ್ಥಳದಲ್ಲಿ ೧೯೪೮ರ ಅರಳೆ ಬಟ್ಟೆಯ (ಟೆಕ್ಸ್‌ಟೈಲ್ಸ್) (ನಿಯಂತ್ರಣದ) ಆಜ್ಞೆಯನ್ನು ಹೊರಡಿಸಿದೆ. ಈ ಹೊಸ ಆಜ್ಞೆಯು ತಾ ೧೧-೩-೧೯೪೮ರ ಮುಂಬಯಿ ಸರಕಾರದ ಗಾಝೆಟಿನ IV-C ಭಾಗದ ೧೪೨ರಿಂದ ೧೪೫ನೇ ವರೆಗಿನ ಪುಟಗಳಲ್ಲಿ ಪುನಃ ಪ್ರಕಟಿಸಲ್ಪಟ್ಟಿದೆ. ಸದರಿ ಆಜ್ಞೆಯ ಕಡೆ ಸಾರ್ವಜನಿಕರು ಲಕ್ಷ ಕೊಡಬೇಕಾಗಿ ಸೂಚನೆಯುಂಟು.

ನಂ ೫೯

ಆಜ್ಞೆ.

ಕಾನಡಾ ಜಿಲ್ಲಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ, ಕಾರವಾರ, ತಾ. ೨೯-೩-೧೯೪೯

೧೯೪೬ನೇ ಇಸವಿಯ ಅವಶ್ಯಕ ವಸ್ತುಗಳ ಪೂರೈಕೆ (ತಾತ್ಪೂರ್ತಿಕ ಅಧಿಕಾರಗಳು) ಕಾನೂನಿನ (೧೯೪೬ರ ೨೪ನೆಯ ಕಾನೂನಿನ) ೩ನೇ ಕಲಮಿನ (೨)ನೆಯ ಉಪಕಲಮಿನನ್ವಯ ಹಾಗೂ ಹಿಂದುಸ್ಥಾನ ಸರಕಾರದ ಕಾಮಗಾರಿಗಳು, ಗಣಿಗಳು ಮತ್ತು ಶಕ್ತಿ ಇವುಗಳ ಖಾತೆಯವರು ತಾ ೩-೩-೧೯೪೭ಕ್ಕೆ ಹೊರಡಿಸಿದ ಪಿ-೧೫೦ ನಂಬರದ ಸರಕಾರಿ ಪ್ರಕಟನೆಯನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ಆಜ್ಞೆ ವಿಧಿಸುತ್ತಾರೇನೆಂದರೆ — ಎಲ್ಲ ಬಗೆಯ ಬಿಳೇ ಮತ್ತು ಕೆಂಪು ಬಣ್ಣದ ಎಲ್ಲ ಹಂಚಿನ ಮಾರಾಟದ ಧಾರಣೆಗಳನ್ನು ನಿರ್ಧರಿಸುವದಕ್ಕಾಗಿ ನನ್ನ ಕಚೇರಿಯಿಂದ ತಾ ೫-೧೧-೧೯೪೭ ಮತ್ತು ತಾ ೧೦-೨-೧೯೪೮ಕ್ಕೆ ಹೊರಟ ೫೯ನೇ ನಂಬರದ ಆಜ್ಞೆಗಳಿಂದ ನಿರ್ದಿಷ್ಟಗೊಳಿಸಿದ ಧಾರಣೆಗಳು ತಾ ೨೨-೩-೧೯೪೯ರಿಂದ ಮುಂದೆ, ೪ ಇಂಚಿನ ಮೇಲ್ ಗಲಸ ಎತ್ತರ, ಹೊರ್ ಪ್ರಾಕೃತಿಕ ಸಂಗದಿನ ಪ್ರತಿ ದಪ್ಪ, ಕಲ್ಲು ಜಗದಿನ ದಪ್ಪ ದರಕ್ಕಿಂತ ಒಂದಾಣೆ ಹೆಚ್ಚಿಗೆ ಆದವು. ಬರೇ ಎಲ್ಲ (bulk supply) ಮತ್ತು ಬರೇ ಜಗದಿನ ದಪ್ಪಗಳ ಧಾರಣೆಗಳು ಹಿಂದೆ ನಿರ್ದಿಷ್ಟಗೊಳಿಸಿದಷ್ಟೇ ಇರುತ್ತವೆ.

R. J. Rebello,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

ಮಾರುವದಿದೆ.

I ಚಾಲೂ ಸ್ಥಿತಿಯಲ್ಲಿರುವ ಒಂದು ಸ್ವಯಂಪೂರ್ಣ ಅಕ್ಕಿ-ಗಿರಣಿ. (ಮಾದನಗೇರಿಯ ಅಂಚಾ ಅಕ್ಕಿ-ಗಿರಣಿ ಮೂದು) — ಎಣ್ಣೆಯ ಗಾಣ (ರೋಟರಿ) ಮತ್ತು ಹಿಟ್ಟಿನ ಗಿರಣಿಗಳ ಸಹಿತ.

(೧) ಕ್ರೊಸಲಿ— ಕೋಲ್ಡ ಸ್ಟಾರ್ಟ ಕ್ರೂಡ ಒಯ್ಲ ಇಂಜಿನ್ನು — ೨೪-೨೫ ಅಶ್ವಶಕ್ತಿಯುಳ್ಳದ್ದು.

(೨) ಅಕ್ಕಿ ಮಾಡುವ ಯಂತ್ರದ ಪೂರ್ಣ ಸಾಹಿತ್ಯ

(೩) ಎಣ್ಣೆಯ ಗಾಣ (ರೋಟರಿ)

(೪) ೨ ಹಿಟ್ಟಿನ ಗಿರಣಿಗಳು.

II ಸರಕು ಒಯ್ಯುವ ಮೋಟಾರ-ಬಂಡಿ (ಬಡ್ಲರ್ ಕೆಂಯಾರ್) — ಶೆವ್ರೊಲೆಟ್ — ನಂ BYX 1161

III ಇತರೇ ಸಾಮಾನುಗಳು—

(೧) ಭತ್ತ ಬೇಯಿಸುವ ಟಾಕಿಗಳು,

(೨) ಕ್ರೂಡ ಒಯ್ಲದ ಡ್ರಮ್ಮುಗಳು (೩)

(೩) ಹಳೆಯ (ಉಪಯೋಗಿಸಿದ) ಚೀಲಗಳು (೩೫೦)

(೪) ಎಸಬೆಸ್ಟೋಸ ತಗಡುಗಳ ಛಾವಣಿಯುಳ್ಳ ಗಿರಣಿಯ ಇಮಾರತು.

ಇವನ್ನು ಬಹಳಷ್ಟು ಚಲ್ಲರೆ ಸಹಿತ್ಯಗಳಿವೆ.

ವಿವರಗಳು ಬೇಕಾದರೆ ಕುಮಟಾ ತಾಲೂಕ ಮಾಮಲೇದಾರರ ಕಚೇರಿಯಲ್ಲಿ ಚೌಕಸಿ ಮಾಡಿರಿ

ಮೇಲಿನ ಎಲ್ಲ ಸಾಮಾನುಗಳನ್ನು ಕುಮಟೆಯ ಮಾಮಲೇದಾರರು ಇದೇ ಬರುವ ತಾ. ೧೪-೪-೧೯೪೮ನೇ ಬುಧವಾರ ಮಧ್ಯಾಹ್ನ ೧೨ಕ್ಕೆ ಮಾದನಗೇರಿಯಲ್ಲಿ ಲಿಲಾಂವ ಮಾಡುವವರಿದ್ದಾರೆ.

ಕುಮಟಾ, } V R Kittur,
ತಾ. ೨೮-೩-೪೮ } ಮಾಮಲೇದಾರ, ಕುಮಟಾ

ಚಿಕ್ಕ ಉಳಿತಾಯಗಳ ಯೋಜನೆ.

ಚಿಕ್ಕ ಉಳಿತಾಯಗಳ ಯೋಜನೆಯ ಪ್ರಚಾರಕ್ಕಾಗಿ ಈ ಪ್ರಾಂತದ ಮುಂಬಯಿ ಸರಕಾರವು ಸದರಿ ಯೋಜನೆಯ ಸಪ್ತಾಹವನ್ನು ಆಚರಿಸಬೇಕೆಂದು ನಿರ್ಧರಿಸಿದೆ. ಈ ಸಪ್ತಾಹವು ೧೪ ದಿವಸಗಳದಿದ್ದು ಅದರ ೨ ಭಾಗಗಳನ್ನು ಮಾಡಿ, ಒಂದು ವಾರವನ್ನು ಇಡೀ ಪ್ರಾಂತದಲ್ಲಿ ಮತ್ತು ಇನ್ನೊಂದು ವಾರವನ್ನು ಪ್ರತಿ ಜಿಲ್ಲೆಯಲ್ಲಿ ಯಾ ತಾಲೂಕುಗಳ ಗುಂಪಿನಲ್ಲಿ ಆಚರಿಸಲಾಗುವದು (೧) ಈ ವಾರದ ಉದ್ಘಾಟನೆಗಾಗಿ, ಭಾರತದ ಮುಖ್ಯ ಮಂತ್ರಿಗಳೂ ಮುಂಬಯಿ ಸರಕಾರದ ಮಂತ್ರಿಗಳೂ ಸದರಿ ಯೋಜನೆಯ ಸಂಬಂಧದಲ್ಲಿ ಕೊಟ್ಟ ಸಂದೇಶಗಳನ್ನು ಆಚ್ಚುಹಾಕಿ ಪ್ರಾಂತದಲ್ಲೆಲ್ಲ ಹಂಚಲಾಗಿದೆ; ಹಾಗೂ ಚಲಚ್ಚಿತ್ರ ಮಂದಿರಗಳಲ್ಲಿ ಪ್ರದರ್ಶಿಸುವದಕ್ಕಾಗಿ ಸ್ಲೈಡ್ಸ ಮೊದಲಾದ ಸಾಹಿತ್ಯಗಳನ್ನು ಪ್ರಾಂತಿಕ ಅಧಿಕಾರಿಗಳು ಹಂಚುತ್ತಾರೆ (೨) ಎಲ್ಲ ಜಿಲ್ಲೆಗಳ ಹಾಗೂ ತಾಲೂಕುಗಳ ಕೇಂದ್ರಗಳಲ್ಲಿ ಕಲೆಕ್ಟರರೂ ತಾಲೂಕಾಧಿಕಾರಿಗಳೂ ಸ್ಥಾನಿಕ ಪ್ರಮುಖರ ಸಭೆಗಳನ್ನು ಕರೆದು, ಯೋಜನೆಯ ಲಾಭಗಳನ್ನು ಸಾರ್ವಜನಿಕರಿಗೆ— ವಿಶೇಷವಾಗಿ ಒಕ್ಕಲಿಗರು, ಕೂಲಿಕಾರರು ಮತ್ತು ಇತರರಿಗೆ — ತಿಳಿಸಿ ಹೇಳಿ, ಚಿಕ್ಕ ಉಳಿತಾಯದ ಸರ್ಟಿಫಿಕೇಟು ಗಳನ್ನು ಹೆಚ್ಚೆಚ್ಚು ಮಾರಾಟ ಮಾಡಿದವರಿಗೆ ಇನಾಮು ಗಳನ್ನು ಹಂಚುವರು. (೩) ಈ ಸಪ್ತಾಹದ ಕಾಲಕ್ಕೆ ಪ್ರಾಂತಿಕ ರಾಷ್ಟ್ರೀಯ ಉಳಿತಾಯಗಳ ಅಧಿಕಾರಿಗಳಾದ ರಾವ್ ಕೇ ಆರ್. ಮೆಹತಾರವರು ಆಯಾ ಜಿಲ್ಲೆಗಳಿಗೆ ಭೆಟ್ಟಿ ಕೊಟ್ಟು ಯೋಜನೆಯ ಪ್ರಚಾರ ಮಾಡಲಿದ್ದಾರೆ.

ಈ ಯೋಜನೆಯಿಂದ ಜನರಿಗೆ ವಿವಿಧ ಲಾಭವಿದೆ ಹಣಕ್ಕೆ ಪೂರ್ಣ ಭದ್ರತೆಯುಂಟು, ಹೆಚ್ಚಿನ ಬಡ್ಡಿ ಸಿಗುತ್ತದೆ, ಈ ಯೋಜನೆಯಲ್ಲಿ ತೊಡಗಿಸಿದ ಹಣಕ್ಕೆ ಆದಾಯ ತೆರಿಗೆಯ ಕಾನೂನು ಅನ್ವಯಿಸುವದಿಲ್ಲ ಮೇಲಾಗಿ ಈ ಯೋಜನೆಯಲ್ಲಿ ತೊಡಗಿಸಿದ ಹಣವನ್ನು ಸರಕಾರವು ರಾಷ್ಟ್ರದ ಪುನರ್ರಚನೆಯ ಕಾರ್ಯಕ್ಕೆ ಉಪಯೋಗಿಸುವವರಿದ್ದಾರೆ. ಈ ಯೋಜನೆಯು ಕಾರ್ಯದಲ್ಲಿ ಮುಂಬಯಿ ಪ್ರಾಂತವು ಉಳಿದೆಲ್ಲ ಪ್ರಾಂತಗಳಿಗಿಂತ ಮುಂದೆ ಇದ್ದಂತೆ ಮುಂದಾದರೂ ಅದು ತನ್ನ ಸ್ಥಾನವನ್ನು ಕಾಯ್ದು ಕೊಳ್ಳುವದೆಂದು ನಂಬಿಕೊಂಡಿದ್ದೇವೆ.

ಕೇ. ಆರ್. ಮೆಹತಾ,

ಪ್ರಾಂತಿಕ ರಾಷ್ಟ್ರೀಯ ಉಳಿತಾಯಗಳ ಅಧಿಕಾರಿ, ಮುಂಬಯಿ.

ಮುಂಬಯಿಯ ಮಾರಾಟ ಕರದ ಬಗ್ಗೆ ನೋಟೀಸು

ಇದರ ಮೂಲಕ ಯಾವತ್ತು ಸಂಬಂಧಪಟ್ಟವರಿಗೆ ತಿಳಿಸುವದೇನಂದರೆ.— ಕರ ಮಾಫಿ ಸರಕುಗಳನ್ನು ನಮೂದಿಸುವ ಎರಡನೇ ಶೆಡ್ಯೂಲದಲ್ಲಿ ಈ ಕೆಳಗಿನ ನೋಂದುಗಳು ೧ನೇ ಏಪ್ರಿಲ್ ೧೯೪೮ನೇ ಇಸವಿಯಿಂದ ಅಮಲಿನಲ್ಲಿ ಬರುವ ಮುಂಬಯಿ ಮಾರಾಟಗಳ ಮೇಲಿನ ಕರದ ಶಿಕ್ಷಾಯಂತ (ರದ್ದಾಯಿತಿಯು ಹಾಗೂ ಅದನ್ನು ಪುನಃ ಕಾಯದೆಯಾಗಿ ಮಾಡತಕ್ಕದರ) ಆಕ್ಟಿನನ್ವಯ ಕೆಳಗಿನಂತೆ ಸುಧಾರಿಸಲ್ಪಟ್ಟಿವೆ

ಅ. ನಂ.	ಸರಕುಗಳ ವಿವರಣೆ	ಯಾವ ಶರ್ತುಗಳಿಗೆ ಹಾಗೂ ಅಪವಾದಗಳಿಗೆ ಒಳಪಟ್ಟು ವಿನಾಯಿತಿಗಳನ್ನು ಕೊಟ್ಟಿರುವದೋ ಅಂಥ ಶರ್ತುಗಳು ಹಾಗೂ ಅಪವಾದಗಳು
೧	ಯಾವತ್ತು ನಮೂನೆಗಳ ಅಕ್ಕಿಯು ಸಹಿತವಾಗಿ ಯಾವತ್ತು ಧಾನ್ಯಗಳು ಮತ್ತು ಬೇಳೆಗಳು.	ಮೊಹರು ಮಾಡಿದ ಅವರಣಗಳಲ್ಲಿ ಮಾರಾಟ ಮಾಡಲ್ಪಟ್ಟವುಗಳ ಹೊರತಾಗಿ
೨	ಆಟಾ, ಮೈದಾ, ಸಜ್ಜಿಗೆ ಹಾಗೂ ಹೊಟ್ಟು ಇವುಗಳ ಸಹಿತವಾಗಿ ಹಿಟ್ಟು	— ಸದರ —
೩	ಮಾಂಸ	— ಸದರ —
೫.	ಮೀನು	— ಸದರ —
೮	ವೈದ್ಯಕೀಯ ರೀತಿಯಿಂದ ತಯಾರಿಸಲ್ಪಟ್ಟಂಥವುಗಳ ಹೊರತಾಗಿ ತಾಜಾ ಹಾಲು ಅಥವಾ ಒಣ ಹಾಲುಗಳು	— ಸದರ —
೯.	ಹಣ್ಣುಗಳು — ತಾಜಾ ಹಾಗೂ ಒಣಗಿದವು	— ಸದರ —
೧೦.	ಹೋಟೇಲಿನಲ್ಲಿ, ವಿಶ್ರಾಂತಿ ಗೃಹದಲ್ಲಿ, ರಿಫ್ರೆಶ್‌ಮೆಂಟ ರೂಮಿನಲ್ಲಿ, ಊಟದ ಮನೆಯಲ್ಲಿ ಅಥವಾ ಬೇರೆ ಇನ್ನಾವ ಇತರ ಆಹಾರವು ಪೂರೈಸಲ್ಪಡುವ ಸಂಸ್ಥೆಯ ಸ್ಥಳದಲ್ಲಿ ಸಿದ್ಧಪಡಿಸಿ ಬೇಯಿಸಿದ ಆಹಾರವು	ಒಂದು ಊಟದ ಖರ್ಚು ಒಂದು ರೂಪಾಯಿಗೆ ಮೀರದಿದ್ದಲ್ಲಿ
೧೪	ಪೂರ್ಣವಾದ ಅಥವಾ ಬೇರ್ಪಡಿಸಿದ ತಾಜಾ ಹಾಲು ಮತ್ತು ಹಾಲಿನ ಪುಡಿ	
೩೨	ಗಿರಣಿಯ ಸೂತ್ರಿಯ ನೂಲಿನಿಂದಲೇ ಅಥವಾ ಕೈಯಿಂದ ತೆಗೆದ ಸೂತ್ರಿಯ ನೂಲಿನಿಂದಲೇ ಕೈಮಗ್ಗದ ಮೇಲೆ ನೇಯಲಾದ ಅಂಚೆಯು ಮತ್ತು ಅಂಥ ಅರಿವೆಯಿಂದಲೇ ಅಥವಾ ನೂಲಿನಿಂದಲೇ ಮಾಡಲ್ಪಟ್ಟ ಟೊಪ್ಪಿಗೆಗಳು, ಟಾವೆಲುಗಳು ಹಾಗೂ ವಸ್ತ್ರಗಳು	
೩೬	ಪ್ರಾಂತಿಕ ಸರಕಾರದವರು ಸರಕಾರಿ ಗೆಜೆಟಿನಲ್ಲಿ ಪ್ರಸಿದ್ಧಪಡಿಸಿದ ನಮೂದಿಸಿದ ಮನುಷ್ಯನಿಂದಲೇ ಅಥವಾ ಪಶುಗಳ ಸಹಾಯದಿಂದಲೇ ನಡೆಸಲ್ಪಡುವ ಒಕ್ಕಲತನದ ಸಾಧನಗಳು.	
೩೮.	ಪಾಟಿ ಮತ್ತು ಪಾಟಿಯ ಪೆನ್ಸಿಲುಗಳು	
೩೯	ಮಸಿ ಮತ್ತು ಕ್ರೆಯಾನು (ಬಣ್ಣದ ಮಸಿ)	
೪೦	ಇಂಚಪಟ್ಟಿ.	
೪೧	ಎಸ್ಸರ್ಸಾಯಜ ಮತ್ತು ಡ್ರಾಯಿಂಗ ಪುಸ್ತಕಗಳು.	
೪೮.	ಯಾವತ್ತು ತನ್ನುವ ಎಣ್ಣೆಗಳು.	ಮೊಹರು ಮಾಡಲಾದ ಅವರಣಗಳಲ್ಲಿ ಮಾರಾಟ ಮಾಡಲ್ಪಟ್ಟವುಗಳ ಹೊರತಾಗಿ.
	ಕೆಳಗೆ ನಮೂದಿಸಿದ ಹೊಸ ನೋಂದು ಸದರಿ ಶೆಡ್ಯೂಲಕ್ಕೆ ಜೋಡಿಸಲ್ಪಡುವದು —	
೫೪.	ಪ್ರ. ಮು. ಹಾಗೂ ಪ್ರಾಂತಿಕ ಸರಕಾರದವರು ಸರಕಾರಿ ಗೆಜೆಟ್ಟಿನಲ್ಲಿ ಜಾಹೀರ ಮಾಡಿ ಕೊಟ್ಟು ನಿರ್ದಿಷ್ಟ ಮಾಡಬಹುದಾದಂಥ ಕೈಮಗ್ಗದ ನೂಲನ್ನು ಅಥವಾ ಕೈಯಿಂದ ನೇಯಲಾದ ಬಟ್ಟೆಯನ್ನು ತಯಾರಿಸುವ ಕೆಲಸದಲ್ಲಿ ಉಪಯೋಗಿಸಲಾಗುವ ಇತರ ಸಾಧನಗಳು	

"೨೩ ಬಂಗಾರ ಬೆಳ್ಳಿಗಳ ಪಟ್ಟಿಗಳು ಹಾಗೂ ನಾಣ್ಯಗಳು" ಎಂಬ ಈಗಿದ್ದ ನೋಂದು ಸದರಿ ಶೆಡ್ಯೂಲ ದಿಂದ ತೆಗೆದು ಹಾಕಲ್ಪಟ್ಟಿರುತ್ತದೆ, ಮತ್ತು ಬಂಗಾರ ಹಾಗೂ ಬೆಳ್ಳಿಯ ಮಾರಾಟಗಳ ಬಗ್ಗೆ ಇದ್ದ ಕರ ಮಾಫಿಯು ಮೊದಲನೇ ಏಪ್ರಿಲ್ ೧೯೪೮ನೇ ಇಸವಿಯಿಂದ ಬಂದಾಗುವದು.

"೩೩ ಪ್ರತಿಯೊಂದಕ್ಕೆ ೬ ರೂಪಾಯಿಗಳಿಗಿಂತ ಹೆಚ್ಚು ಬೆಲೆ ಇಲ್ಲದ ಉಣ್ಣೆಯ ಕಂಬಳಿಗಳು" ಎಂಬ ಸದ್ಯದ ನೋಂದನ್ನು ತೆಗೆದು ಹಾಕಲಾಗಿದೆ, "೩೩ ಅದರ ಕೈಯಿಂದ ತೆಗೆದ ಉಣ್ಣೆಯ ನೂಲಿನಿಂದಲೇ ಕೈಮಗ್ಗಗಳ ಮೇಲೆ ನೇಯಲಾದ ಅಂಚೆಯು" ಎಂಬ ನೋಂದಿನ ಕೆಳಗೆ ಬರುವ ಯಾವತ್ತು ಕಂಬಳಿ ಗಳು ಕರದಿಂದ ಮಾಫಿ ಉಳಿಯುವವು.

ವ್ಹಿ. ಎಲ್ ಗಿಡವಾನಿ,

ಡೆಪ್ಯುಟಿ ಕಮಿಶನರ್ ಆಫ್ ಸೇಲ್ಸ ಟ್ಯಾಕ್ಸ, ಮುಂಬಯಿ.

ಸಾಣೆಕಟ್ಟಾ ಕೋ-ಒಪರೇಟಿವ್ಹ ಸೊಲ್ಟ ಸೇಲ ಸೊಸಾಯಟಿಯ

ಕುಮಟಾ ಉಗ್ರಾಣ.

ಈ ಉಗ್ರಾಣದಲ್ಲಿ ಸಾಣೆಕಟ್ಟೆಯ ಉಪ್ಪು ಕೋರ ಹಾಗೂ ಚಿಲ್ಲರೆ ಮಾರಾಟಕ್ಕೆ ಸಿಗುತ್ತಿದೆ ದರ—
ಬಂಗಾಲಿ ಮಣ ೧ಕ್ಕೆ (ಚೀಲ ಬಿಟ್ಟು) ರೂ ೨-೨-೦
೨ ಬಂಗಾಲಿ ಮಣಗಳ ಚೀಲಕ್ಕೆ (ಚೀಲ ಸಹಿತ) ರೂ ೪॥

ವಿಮಲಾನಂದ ಮಂಗೇಶ ಮಿಜಾರಕರ,

ಉಗ್ರಾಣದ ಮೇಲ್ವಿಚಾರಕರು

The Karnatak Distributors, Manufacturers' Representatives Ankola. N. K.

Sole Agents for—

1. Kalapi Products & Aryan Brushes (N. K. & S. K
2. Jayashree Teas (N K)
3. Kohinoor Brand Milk Toffees (N. K.)

Salesmen on tour. For special regional agenceis please contact

ಸಾರ್ವಜನಿಕ ನೋಟೀಸು.

ಮುಂಬಯಿಯ ಮಾರಾಟದ ಮೇಲಿನ ಕರ

ಸಂಬಂಧಪಟ್ಟ ಎಲ್ಲರಿಗೂ ಈ ಮೂಲಕ ಜಾಹೀರಪಡಿಸುವದೇನಂದರೆ, ಸನ್ ೧೯೪೮ನೇ ಇಸವಿಯ ಮುಂಬಯಿಯ ಮಾರಾಟದ ಮೇಲಿನ ಕರದ ವಿಷಯದ (ದರ್ಜೆಯ ...) ಆಕ್ಟು ಅಮಲಿನಲ್ಲಿ ಬಂದ ಕೂಡಲೆ (...) ೧ನೇ ಪರಿಶಿಷ್ಟದಲ್ಲಿ ನಿರ್ದಿಷ್ಟ ಮಾಡಲ್ಪಟ್ಟ ... ಮಾರಾಟಗಳು ... ರೂಪಾಯಿಗೆ ... ಮಾರಾಟಗಳ ಮೇಲಿನ ... ಕರಕ್ಕೆ ... ಒಂದು ... ಮಾರಾಟಗಳ ಮೇಲಿನ ... ಕರ ...

೨ ... ಸನ್ ೧೯೪೮ನೇ ಇಸವಿಯ ಏಪ್ರಿಲ್ ೩ನೇ ... ಅಮಲಿನಲ್ಲಿ ... ಉದ್ದೇಶಿಸಿದೆ.

ಪರಿಶಿಷ್ಟ ೧

೧ (೧) ಮೋಟಾರ ಕಾರುಗಳು, ಮೋಟಾರ ಟ್ಯಾಕ್ಸಿ ಕ್ಯಾಬುಗಳು, ಮೋಟಾರ ಸೈಕಲ್ ... ಹಾಗೂ ಸೈಕಲ್ ಕಾಂಬಿನೇಶನ್, ಮೋಟಾರ ಸ್ಕೂಟರ್, ಮೋಟಾರೆಟ್ಸ್, ಮೋಟಾರ ಓಮ್ನಿಬಸ್, ಮೋಟಾರ ವ್ಯಾನುಗಳು ಹಾಗೂ ಮೋಟಾರ ಲಾರಿಗಳು ಕೂಡಿದ ಮೋಟಾರು ವಾಹನಗಳು

(೨) ಮೋಟಾರ ವಾಹನಗಳ ಚಾಸಿಸ್ಸುಗಳು

(೩) ಮೋಟಾರ ವಾಹನದ ಭಾಗಗಳೆಂದು ಅಥವಾ ಉಪಕರಣಗಳೆಂದು ... ಉಪಯೋಗಿಸಲ್ಪಡುವಂಥ ವಸ್ತುಗಳಾಗಿರದಂಥ, ಮೋಟಾರ ವಾಹನಗಳ ಭಾಗಗಳೆಂದು ಹಾಗೂ ಉಪಕರಣಗಳೆಂದು ಉಪಯೋಗಕ್ಕಾಗಿ ಸರಿಪಡಿಸಲಾದ (ರಬ್ಬರ ಹಾಗೂ ಇತರ ಟಾಯರುಗಳು ಮತ್ತು ಟ್ಯೂಬುಗಳು ಹಾಗೂ ಬ್ಯಾಟರಿಗಳು ಸಹಿತವಾಗಿ) ವಸ್ತುಗಳು.

೨. ರೆಫ್ರಿಜರೇಟರಗಳು ಹಾಗೂ ಹವೆಯನ್ನು ತಂಪಾಗಿಡುವ ಯಂತ್ರಗಳು.

೩. ವಾಯರಲೆಸ್ಸನ್ನು ಸ್ವೀಕರಿಸುವದರ ಸಲುವಾಗಿ ಅಲ್ಲದೆ ಇತರ ಉದ್ದೇಶಗಳ ಸಲುವಾಗಿ ವಿಶಿಷ್ಟವಾಗಿ ಯೋಜಿಸಲ್ಪಡದಂಥ ಎಲ್ಲ ವಿದ್ಯುತ್ಶಕ್ತಿಯ ವಾಲ್ವುಗಳು, ಅಕ್ಯುಮ್ಯುಲೇಟರುಗಳು, ಎಂಪ್ಲಿಫಾಯರಗಳು ಹಾಗೂ ಧ್ವನಿವರ್ಧಕ ಯಂತ್ರಗಳ ಸಹಿತವಾಗಿ ವಾಯರಲೆಸ್ಸನ್ನು ಸ್ವೀಕರಿಸುವ ಉಪಕರಣಗಳು ಹಾಗೂ ಸಾಧನಗಳು ಮತ್ತು ಅವುಗಳಲ್ಲಿ ಸೇರಿರುವ ಭಾಗಗಳು

೪. ಸಿನೆಮೆಟೋಗ್ರಾಫಿಕ, ಫೋಟೋಗ್ರಾಫಿಕ ಹಾಗೂ ಇತರ ಕ್ಯಾಮರಾಗಳು, ಪ್ರೊಜೆಕ್ಟರುಗಳು ಹಾಗೂ ಎನ್‌ಲಾರ್ಜರುಗಳು, ಅಂಥ ಕ್ಯಾಮರಾಗಳ ಪ್ರೊಜೆಕ್ಟರುಗಳ ಹಾಗೂ ಎನ್‌ಲಾರ್ಜರುಗಳ ಲೆನ್ಸುಗಳು ಹಾಗೂ ಇತರ ಭಾಗಗಳು ಹಾಗೂ ಉಪಕರಣಗಳು ಮತ್ತು ಅವುಗಳ ಸಂಬಂಧದಿಂದ ಉಪಯೋಗಕ್ಕಾಗಿ ಬೇಕಾಗುವ ಫಿಲ್ಮಗಳು, ಪ್ಲೇಟುಗಳು, ಕಾಗದವು ಹಾಗೂ ಅರಿವೆಯು.

೫. ಬೈನಾಕ್ಯುಲರುಗಳು ಹಾಗೂ ಅಪೆರಾ ಗ್ಲಾಸುಗಳು

೬. ಸಾಬೂಣಗಳ ಹಾಗೂ ಪ್ರಾಂತೀಯ ಸರಕಾರ, ಸರಕಾರೀ ಗ್ಯಾಝೆಟಿನಲ್ಲಿ ಜಾಹೀರನಾಮೆ ಕೊಟ್ಟು, ನಮೂದಿಸಬಹುದಾದಂಥ ಇತರ ವಸ್ತುಗಳ ಹೊರತಾಗಿ ಸುಗಂಧ ದ್ರವ್ಯಗಳು, ಅಲಂಕರಣ ದ್ರವ್ಯಗಳು ಹಾಗೂ ಶೃಂಗಾರದ ಸಾಮಗ್ರಿಗಳು

೭. ಕೃತ್ರಿಮ ರೇಶಿಮೆಯು ಸಹಿತವಾಗಿ ರೇಶಿಮೆಯು ಹಾಗೂ ಎಲ್ಲ ರೇಶಿಮೆಯ ಸರಕುಗಳು.

೮. ಫೌಂಟನ್‌ಪೆನ್ನುಗಳು, ಸ್ಟೈಲೋಗ್ರಾಫ ಪೆನ್ನುಗಳು ಹಾಗೂ ಪ್ರೊಪೆಲ್ಲಿಂಗ್ ಪೆನ್ಸಿಲುಗಳು

೯. ಎಲ್ಲ ಗಡಿಯಾರಗಳು, ಟೈಮ್ ಪೀಸುಗಳು, ಹಾಗೂ ವಾಚುಗಳು ಮತ್ತು ಅವುಗಳ ಭಾಗಗಳು

೧೦ ರತ್ನಗಂಬಳಿಗಳು

೧೧ ಗ್ರಾಮೋಫೋನುಗಳು, ರೇಡಿಯೋ ಗ್ರಾಮೊಫೋನುಗಳು ಹಾಗೂ ರೆಕಾರ್ಡುಗಳು

೧೨. ರೈಫಲುಗಳು, ರಿವಾಲ್ವರುಗಳು, ಪಿಸ್ತೂಲುಗಳ ಹಾಗೂ ಅವುಗಳಿಗೆ ಬೇಕಾಗುವ ಮದ್ದಿನ ಸಹಿತವಾಗಿ ಎಲ್ಲ ಆಯುಧಗಳು

೧೩ ರತ್ನಾಭರಣಗಳು, ಬೆಲೆಬಾಳುವ ಹರಳುಗಳು, ಕಟ್ಟದ ಅಂಥ ಬೆಲೆಬಾಳುವ ಹರಳುಗಳು ಮತ್ತು ನಿಜವಾದ ಹಾಗೂ ಕೃತ್ರಿಮ ಮುತ್ತುಗಳು .

ಟಿಪ್ಪಣಿ — ಕೆಳಗಿನ ಇಂಗ್ಲಿಷ ಭಾಷೆಯೊಳಗಿನ ಪರಿಶಿಷ್ಟವು ಪ್ರಮಾಣವಾಗಿರತಕ್ಕದ್ದು ಇರುತ್ತದೆ.

Schedule I

1 (i) Motor vehicles including motor cars, motor taxi cabs, motor cycles and cycle combinations, motor scooters, motorettes, motor omnibuses, motor vans and motor lorries

(ii) Chassis of motor vehicles.

(iii) Articles (including rubber and other tyres and tubes and batteries) adapted for use as parts and accessories of motor vehicles, not being such articles as are ordinarily also used for other purposes than as parts or accessories of motor vehicles.

2 Refrigerators and air-conditioning plants

3 Wireless reception instruments and apparatus and component parts thereof including all electrical valves, accumulators, amplifiers and loudspeakers which are not specially designed for purposes other than wireless reception.

4. Cinematographic, photographic and other cameras, projectors and enlargers, lenses and other parts of and accessories to such cameras, projectors and enlargers, and films, plates, paper and cloth required for use therewith

5 Binoculars and opera glasses

6 Perfumery, cosmetics and toilet articles, except soaps and other articles as may be specified by the Provincial Government by notification in the Official Gazette

7. Silk including artificial silk and all silk goods

8 Fountain pens, stylograph pens and propelling pencils.

9. All clocks, time-pieces and watches, parts thereof

10. Pile carpets

11 Gramophones, radio-gramophones and records

12. All arms including rifles, revolvers, pistols and ammunition for the same

13. Jewellery, precious stones unset precious stones and pearls, real and cultured.

V L GIDWANI,
Deputy Commissioner of Sales Tax
Bombay Province.

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಮಂಕಿ ಗ್ರಾಮದಲ್ಲಿರುವ ಗುರ್ಜೆದೇರಿಯಲ್ಲಿರುವ ಮಂಜಪ್ಪಾ ಬಾಬಯ್ಯ ನಾಯ್ಕ ಈತನು ಈ ನೋಟೀಸ ಮೂಲಕ ಜಾಹೀರಪಡಿಸುವದೇನಂದರೆ, ಅನಂತ ರಾಂಡುರಂಗ ಮಂಕೀಕರ ಸಾಕೀನ ಶಿರಾಲಿ ಇವರ ಮಾಲ್ಕಿಯ ಸರ್ವೆ ನಂಬರ ೯೩೨, ೯೩೩, ೯೩೪, ೯೩೬ನೇ ಸ್ಥಳಗಳು ನನಗೆ ಮೂಲಗೇಣಿ ಮತ್ತು ಅನಾದಿ ಗೇಣಿ ನಾತೆಯಿಂದ ಗೇಣಿಗೆ ಇರುತ್ತದ್ದು, ಅವುಗಳ ಬಾಗಾಯತ ಬಗ್ಗೆ ನಾನು ಬಹಳ ಲಾಗ್ವಡ ಮಾಡಿರುತ್ತೇನೆ. ರಕ್ಷಿತ ಮಾಡಿರುತ್ತೇನೆ ಮೂಲಗೇಣಿ ಮತ್ತು ಅನಾದಿ ಗೇಣಿ ಸ್ಥಳಗಳು ಒಂದೇ ಕಂಪೌಂಡಿನಲ್ಲಿ ಒಂದಕ್ಕೊಂದು ಹೊಂದಿಕೆಯಾಗಿದ್ದು ಅವು ಅತಿ ಬಾಗಾಯತವಾಗಿರುವದರಿಂದ ಮೂಲಗೇಣಿಯಾಂತ ಅನಾದಿ ಗೇಣಿ ಸ್ಥಳಗಳು ಸರಿಯಾಗಿ ನಾನು ಲಾಗ್ವಡ ಮಾಡಿ ಅನುಭವಿಸಿ ಬರುತ್ತೇನೆ. ಮಾಲ್ಕಿದಾರರಾದ ಅನಂತ ಪಾಂಡುರಂಗ ಮಂಕೀಕರ, ಸಾ॥ ಶಿರಾಲಿ ಇವರು ಆ ಮಾಲ್ಕಿ ಹಕ್ಕನ್ನು ಬೇರೆಯವರಿಗೆ ಮಾರಾಟ ಮಾಡುವದನ್ನು ಕೇಳಿ ಆ ಹಕ್ಕನ್ನು ನನಗೆ ಯೋಗ್ಯ ಕ್ರಯಕ್ಕೆ ಕೊಡಬೇಕಾಗಿ ನಾನು ತಾ. ೮-೩-೧೯೪೮ನೇದಿಗೆ ನೋಟೀಸು ಕೊಟ್ಟು ಅವರಿಗೆ ತಿಳಿಸಿದ್ದು ಇದೆ. ಈಗಿನ ಒಕ್ಕಲರಾದ ಕಾನೂನಿನಂತೆ ನಾನು ಸಂರಕ್ಷಿತ ಒಕ್ಕಲು ಸಹ ಆಗಿರುತ್ತೇನೆ. ಅದರಿಂದ ಯೋಗ್ಯ ಕ್ರಯಕ್ಕೆ ಆ ಮಾಲ್ಕಿ ಹಕ್ಕನ್ನು ಕ್ರಯಕ್ಕೆ ಕೊಡಬೇಕೆಂದು, ಆ ಹಕ್ಕು ನನಗೆ ಇರುತ್ತದೆ. ಅದು ಮಾಲ್ಕಿ ಹಕ್ಕನ್ನು ಅನಂತ ಪಾಂಡುರಂಗ ಮಂಕೀಕರ ಇವರಿಂದ ಕ್ರಯಕ್ಕೆ ಕೊಳ್ಳುವ ಪೂರ್ವದಲ್ಲಿ ನನ್ನನ್ನು ವಿಚಾರಿಸಿ ಕ್ರಯಕ್ಕೆ ಕೊಂಡಲ್ಲಿ ನನ್ನ ಕ್ರಯಕ್ಕೆ ಕೊಡುವದಕ್ಕೆ ನನ್ನ ಹಕ್ಕಿಗೆ ವಿರೋಧ ಮಾಡುವ ಹಕ್ಕು ಇರಲಿಕ್ಕಿಲ್ಲ. ಸದರಿ ಒಡೆಯರ ಸಂಬಂಧ ಅಕ್ಕ-ಪಕ್ಕದವರನ್ನು ಹೊಂದಿಕೆ ಇರುವ ಹೊನ್ ಸದರಿ ಕ್ರಯದಾರರ ಮೇಲೂ, ಸದರಿ ಅನಂತ ಪಾಂಡುರಂಗ ಮಂಕೀಕರ ಇವರ ಮೇಲು ಇರುತ್ತದೆ. ಮಂಕಿ, ತಾ ೨೩-೩-೧೯೪೮.

ಮಂಜಪ್ಪಾ ಬಾಬಯ್ಯ ನಾಯ್ಕ

THE BANK OF RURAL INDIA, LTD.,

(Incorporated in British India, Liability of Members limited.)

HEAD OFFICE:— 'Satyabhama Bhavan", **KARWAR.** N. K.
Offices at:— KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	.. **Rs. 10,00,000;**
Subscribed Capital	.. **Rs 5,00,000;**
Paid-up Capital & Reserves	.. **Rs. 5,08,502-8-0.**

Rates of Interest on Deposits:

Current a/c. @ 1% p a. ***Savings Bank a/c @ 2½%.***

Fixed Deposits for 3 months @ 3% per annum
„ „ for 6 months @ 3½% „
„ „ for 12 months or more @ 4% „

All kinds of modern Banking business transacted

Karwar, 14-2-1948.

P. X. GRACIOUS,
MANAGING DIRECTOR.

ಇದನ್ನು ಶಾ ದುರ್ಗಾ ಕೃಷ್ಣ ಕಾನಡಾಗ (ಸಂಪಾದಕ) ಇವರು ಕಾರವಾರದಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270.   Monday, 12-4-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೪೧.

ಕುಮಟಾ:- ಸೋಮವಾರ, ತಾ ೧೨-೪-೧೯೪೮.

ಜಾಹೀರಾತುಗಳ ದರ:-

ಸ್ಥಳೀಕ ಜಾಹೀರಾತುಗಳಿಗೆ ೧ ಸಾಲಿಗೆ ೮ ಆಣೆಯಂತೆ.

ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ದರವನ್ನು ಇಲ್ಲವೆ ಪತ್ರದ್ವಾರಾ ತಿಳಿಸಲಾಗುವದು.

ವರ್ಗಣಿಯ ದರ:

ಕುಮಟೆಯಲ್ಲಿ ವರ್ಷಕ್ಕೆ ರೂ. ೨-೮-೦

ಬಹಾರಗ್ರಾಮದವರಿಗೆ ವರ್ಷಕ್ಕೆ ೩-೧-೦

" ೬ ತಿಂಗಳಿಗೆ ೧-೧೦-೦

ಬಿಡಿ ಸಂಚಿಕೆಗೆ ೦-೧-೦

ಹಳೇ ಸಂಚಿಕೆಗೆ ೦-೪-೦

ವ್ಹಿ.ಪಿ.ಯಿಂದ ಕಳಿಸತಕ್ಕವರು ವ್ಹಿ.ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.

ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಹಿಂದಿನಂತೆ ಒಮ್ಮೊಮ್ಮೆ ಮೋಡ ಗಳಾಗುತ್ತವೆ. ಆದರೆ ಮಳೆ ಬೀಳುವದಿಲ್ಲ. ಕೆಲವು ಕಡೆ ಬಾವಿಗಳು ಬತ್ತಲಾರಂಭಿಸಿವೆ.

ಕುಮಟಾ ಮ್ಯುನಿಸಿಪಾಲಿಟಿಯ ಸಾರ್ವತ್ರಿಕ ಚುನಾವಣೆ ಯು ಕಳೆದ ಫೆಬ್ರುವರಿಯಲ್ಲಿ ಆಗಬೇಕಾಗಿತ್ತು. ಆದರೆ ಮುಸಲ್ಮಾನರ ಪ್ರತ್ಯೇಕ ಮತದಾರ ಸಂಘಗಳ ಉಚ್ಚಾಟನೆ ಮಾಡುವ ಹಾಗೂ ಮತಗಳನ್ನು ಹಂಚಿ ಹಾಕುವ ಪದ್ಧತಿ ಯ ಕಾನೂನಿನ ಘಟನೆಯಾದ ಮೇಲೆಯೇ ಈ ಚುನಾವಣೆ ಯಾಗುವದೊಳಿತೆಂದು ನಿರ್ಧರಿಸಿ ಸರಕಾರದವರು ಚುನಾ ವಣೆಯನ್ನು ಮುಂದೂಡಿದ್ದರು. ಅದು ಈಗ ಬರುವ ಜೂನ ತಾ. ೧೪ಕ್ಕೆ ಜರುಗುವದು. ಈ ಬಗ್ಗೆ ಅವಶ್ಯ ವಿದ್ದ ಮತದಾರ ಯಾದಿಗಳು ಈಗಾಗಲೇ ಪ್ರಕಟವಾಗಿವೆ ಸರಕಾರದವರು ಮುಸಲ್ಮಾನರ ೭ನೇ ವಾರ್ಡನ್ನು ರದ್ದುಗೊಳಿ ಸಿ, ೫ನೇ ವಾರ್ಡನಲ್ಲಿ ಅದರ ಬದಲಾಗಿ ೧ ಆಸನವನ್ನು (ಸ್ತ್ರೀಯರ ಬಗ್ಗೆ ಕಾದಿಟ್ಟಂತೆ) ಕಾದಿಟ್ಟಿದ್ದಾರೆ ಹಾಗೂ ೪ನೇ (ವಿಶಾಲ ಪೇಟೆಯ) ವಾರ್ಡಿನಲ್ಲಿ ಮತದಾರರ ಸಂಖ್ಯೆ ಹೆಚ್ಚಿಗೆ ಇದ್ದುದು ಕಂಡು ಬಂದದ್ದರಿಂದ ಆ ವಾರ್ಡಿಗೆ ೧ ಹೆಚ್ಚಿಗೆ ಆಸನವನ್ನು ದಯಪಾಲಿಸಿದ್ದಾರೆ. ಅದರಿಂದ ಮುಂದಿನ ಮ್ಯುನಿಸಿಪಾಲಿಟಿಯಲ್ಲಿ (೧ನೇ ವಾರ್ಡಿನ ೨, ೨ನೇ ವಾರ್ಡಿನ ೩, ೩ನೆಯ ವಾರ್ಡಿನ ೩, ೪ನೇ ವಾರ್ಡಿ ನ ೩, ೫ನೇ ವಾರ್ಡಿನ ೪, ೬ನೇ ವಾರ್ಡಿನ ೨ ಹೀಗೆ ಒಟ್ಟು) ೧೭ ಸದಸ್ಯರು ಇರುವರು. ಇನ್ನೊಂದು ಸಂಗತಿ ಯೆಂದರೆ, ಬರುವ ಚುನಾವಣೆಯಲ್ಲಿ ಹಿಂದಿನಂತೆ ಒಂದೇ ಉಮೇದವಾರನಿಗೆ ಎಲ್ಲ ಮತಗಳನ್ನು ಕೊಡಬರಲಾರದು ಮತದಾರನು ಉಮೇದವಾರರಿಗೆ ಒಂದೊಂದೇ ಮತ ಕೊಡಬೇಕು. ಉದಾ: ೩ ಆಸನಗಳುಳ್ಳ ವಾರ್ಡಿನಲ್ಲಿ ಇರುವ ೩ ಮತಗಳನ್ನು ಬೇರೆಬೇರೆ ೩ ಮಂದಿ ಉಮೇದವಾರರಿಗೆ ಹಂಚಿಹಾಕಬೇಕು ಈ ವ್ಯವಸ್ಥೆಯಿಂದ ಕೆಲವೇ ಮತದಾರರನ್ನು ಕಟ್ಟಿಕೊಂಡು ಆರಿಸಿ ಬರುವ ಪ್ರಘಾತಕ್ಕೆ ಇನ್ನು ಮುಂದೆ ತಡೆ ಬೀಳುವದು

ಮಾಡನಗೇರಿಯಲ್ಲಿರುವ ರಾ। ಶಾಸ್ತ್ರಿಯ ಭಟ್ಟ ಗೋಪಿ ಯವರ ಒಂದು ಅಕ್ಕಿ ಗಿರಣಿಯನ್ನೂ ಅದರ ಸಾಮಾನನ್ನೂ ಕಳೆದ ಬುಧವಾರ (ತಾ. ೧೪) ಲಿಲಾಂವ ಮಾಡಲಾ ದೀತಾಗಿ ಕುಮಟೆಯ ಮಾಮಲೇದಾರರು ಜಾಹೀರಮಾಡಿ ದ್ದರಷ್ಟೇ. ಆದರೆ ಆ ಲಿಲಾಂವವನ್ನು ಮಾಡಬಾರದೆಂ ದು ಸರಕಾರದಿಂದ ಅಪ್ಪಣೆ ಬಂದ ಮೂಲಕ ಅಂದು ಆ ಲಿಲಾಂವ ನಡೆಯಲಿಲ್ಲವೆಂದು ಮಾಮಲೇದಾರರು ತಿಳಿಸು ತ್ತಾರೆ

ಅಘನಾಶಿನಿಯಿಂದ ಕುಮಟೆಯ ವರೆಗೆ ಒಂದು ಮೋಟಾ ರು-ಸರ್ವೀಸನ್ನು ಅವಶ್ಯವಿರುತ್ತದಾಗಿ ಅಘನಾಶಿನಿ, ಬಾಗಿಲ ಎದಿಯುವರ ಅಗ್ರಹಾರದ ಮಾರ್ಗದಲ್ಲಿ ಕಾಂಹಿಯಿಂದ ಬದ್ದರೆ ಅಘನಾಶಿನಿ-ಕಾಗಾಲ ಕಡೆಯಿಂದ ಕುಮಟೆಗೆ ಬರ ಬೇಕಾಗ ಪ್ರತಿದಿನ ಹಿರೇಗುತ್ತಿಯ ವಾಹನ ಸೌಲಭ್ಯ ಸರಿಯಾದ ಸಮಯದಲ್ಲಿ ಔಷಧ ಒಯ್ಯಲಾಗುವದಿಲ್ಲೆಂದು ಅವರು ಹೇಳುತ್ತಾರೆ. ಅದೇ ರೀತಿ ಅಕ್ಕಿ, ಗೋದಿ, ಸಕ್ಕರೆ ವಗೈರೆ ಕುಮಟೆಯಿಂದ ಒಯ್ಯಲಿಕ್ಕೆ ಬಹಳ ಕಷ್ಟವಾಗುತ್ತದೆಂದೂ ಅವರು ಮರುಗುತ್ತಾರೆ ಒಂದು ಮೋಟಾರ ಸರ್ವೀಸನ್ನು ಆರಂಭಿಸಿದರೆ ಅವರ ಕಷ್ಟಗಳು ಕಡಿಮೆ ಯಾಗುವವೆಂದು ಅವರ ನಂಬಿಕೆಯಾದೆ

ತಾ. ೨೯-೩-೪೮ರ "ವೃತ್ತ"ದಲ್ಲಿ ಗೋಕರ್ಣ-ಬಂಕಿ ಕೊಡ್ಲ ಸೇವಾ ರೈತ-ಸಂಘದ ಹಾಗೂ ಅದರ ಅಧ್ಯಕ್ಷ ರಾ। ರಾಮಾನಂದ ನಾಡಕರ್ಣಿಯವರ ವಿರುದ್ಧ ಪ್ರಕಟವಾದ "ಒಬ್ಬ ನಾಗರಿಕ"ರ ಟೀಕೆಗೆ ಪ್ರತ್ಯುತ್ತರವೆಂದು ರಾ। ನಾಡ ಕರ್ಣಿಯವರು ಉದ್ದವಾದ ಒಂದು ಪ್ರತ್ಯುತ್ತರ ಬರೆ ದಿದ್ದಾರೆ. ಅದರಲ್ಲಿ ಅವರು ನಾಗರಿಕರ ಮುದ್ದೆಗಳಿಗಷ್ಟೇ ಸರಳ ವಾದ ಮತ್ತು ಸಮರ್ಪಕ ಉತ್ತರಗಳನ್ನು ಕೊಡದೆ ಬೇರೆ ಜಾಹೀರನಾಮೆಗಳು ಹೊರಬೀಳಲು ವಿಳಂಬವಾಯಿತೆಂ ದೂ, ಆ ಜಾಹೀರನಾಮೆಗಳಲ್ಲಿ ತಮ್ಮಿಂದ ಸಲ್ಲತಕ್ಕ ಗೇಣಿ ಎಷ್ಟೆಂದು ರೈತರಿಗೆ ಸುಲಭವಾಗಿ ತಿಳಿಯುವಷ್ಟು ಸ್ಪಷ್ಟತೆ ಇರಲಿಲ್ಲೆಂದೂ, ಒಡೆಯರು ತಮ್ಮ ರೈತರಿಗೆ ವಂಚಿಸುತ್ತಾ ರೆಂದೂ, ಅದರಿಂದ ತಮ್ಮ ಸಂಘದವರೇ ಆಯಾ ರೈತರಿಗೆ ಅವನಿಂದ ಸಲ್ಲತಕ್ಕ ಗೇಣಿ ಎಷ್ಟು, ಅವನಿಗೆ ಸ್ವಾತಂತ್ರ್ಯೋ ತ್ತರದ ಸರಕಾರದಿಂದ ಗೇಣಿಯಲ್ಲಿ ಕಡಿತ ಸಿಗಬೇಕಾದ್ದೆ ಷ್ಟು ಇತ್ಯಾದಿ ಇತ್ಯಾದಿ ಲೆಕ್ಕ ಮಾಡಿ ಹೇಳಬೇಕಾಗಿರುವದ ರಿಂದ ರೈತರು ಗೇಣಿ ಸಲ್ಲಿಸಲು ಕೊಡಲಿಕ್ಕೆ ತಡವಾಗಿರುತ್ತದೆಂ ದೂ, ರೈತರು ಒಡೆಯರ ಗೇಣಿ ಕೊಡದ ಬಾಕಿ ಇಟ್ಟುಕೊಂಡಲ್ಲಿ ಅವರು ಭೂಮಿ ಕಳೆದುಕೊಂಡು ಕಷ್ಟಕ್ಕೀಡಾಗಬೇಕಾದ ಪ್ರಸಂಗ ಬಂದೀತಾದ್ದರಿಂದ ರೈತ-ಸಂಘದವರು ರೈತರಿಗೆ ಗೇಣಿ ಸಲ್ಲಿಸಲು ಕೊಡದಿರಲು ಬೋಧಿಸುವದು ಅಸಂಭಾವ್ಯ ವಿರುತ್ತದೆಂದೂ ಬರೆದಿದ್ದಾರೆ

ಕಾರವಾರ— ಇಲ್ಲಿ ಬಂದ ಕೋಳಿ ಬೇನೆಯು ಸ್ವರೂಪ ಈಗ ತಿಳಿದು ಬಂದಿದೆ. ಕಾಲುಗಳಲ್ಲಿ ಜೋಮು ಬಂದಂತಾಗಿ ಸೊಂಟದ ಕೆಳಭಾಗ ಒಮ್ಮೆಲೇ ಗಟ್ಟಿಯಾಗಿ ಮನುಷ್ಯನು ನಿಶ್ಚೇಷ್ಟನಾಗುತ್ತಾನೆ. ಏನೂ ಉಪಚಾರ ಮಾಡದಿದ್ದರೂ ಈ ಬೇನೆಯಿಂದ ಭಯವಿಲ್ಲ. ೧-೨ ತಾಸು ಗಳಲ್ಲಿ ರೋಗಿಯು ಗುಣಹೊಂದುತ್ತಾನೆ ಆಹಾರದಲ್ಲಿ ಇರ ಬೇಕಾದ ಕೆಲವು ಅಂಶಗಳ ಕೊರತೆಯಾಗುವದರಿಂದ ಈ ರೋಗವಾಗುತ್ತದಾಗಿ ಡಾಕ್ಟರರ ಅಭಿಪ್ರಾಯವುಂಟು. ದೇಹ ಧಾರಣೆಗೆ ಸಾಮಾನ್ಯವಾಗಿ ೧ ರತ್ತಲ ಕಾಳ ಅನ್ನ ಧಾನ್ಯ ಅವಶ್ಯವುಂಟೆಂದು ಶರೀರ ಶಾಸ್ತ್ರಜ್ಞರ ಅಭಿಪ್ರಾಯ ವುಂಟು ಅಷ್ಟು ಆಹಾರ ಸಿಗದಿರುವದರಿಂದ ಈ ಬೇನೆ ಬಂದಿರಬಹುದೆಂದು ಅವರು ನುಡಿಯುತ್ತಾರೆ. ಈ ಬೇನೆಗೆ ಉತ್ತಮ ಉಪಚಾರಗಳು ಅಗತ್ಯವಿಲ್ಲ. ಮೈಗೆ ಸರಾ ಯಿ ತಿಕ್ಕುವದು, ರೋಗಿಗೆ ಸರಾಯಿ ಕುಡಿಸುವದು, ಹುಲ್ಲು ಕಟ್ಟುವದು, ಮೊದಲಾದ ಉಪಚಾರಗಳಿಂದ ರೋಗವು ಬಲ ಹೊಂದಿ, ರೋಗಿಯ ಪ್ರಾಣಕ್ಕೆ ಅಪಾಯವಾಗುತ್ತದೆ ಆದ್ದ ರಿಂದ ರೋಗಿಗೆ ಕಂಪ್ರ ಉಪಚಾರಗಳನ್ನು ಮಾಡುವವರು ಹುಷಾರು ಈ ರೋಗ ಅವಾದಕ್ಕೆ, ಬಿಡಿಯು ವಗೈರೆ ಗ್ರಾಮಗಳಲ್ಲಿ ಹಬ್ಬಿದೆ ಜನರು ಜಾಗ್ರತೆ ವಹಿಸಬೇಕು

ಟೆಂಡರ ನೋಟೀಸು.

ಕೆಳಗೆ ವಿವರಿಸಿದ ನಮೂನೆಯ ಪಾಲಿ ಗೋಣಿ-ಚೀಲ ಗಳನ್ನು ಮಾರತಕ್ಕದ್ದುಂಟು. ಸದರ ಚೀಲಗಳನ್ನು ಕೊಳ್ಳ ಬಿಚ್ಛಿಸುವವರು ತಮ್ಮ ಟೆಂಡರುಗಳನ್ನು ತಾ. ೨೮-೪-೪೮ ನೇ ದಿನ ಮಧ್ಯಾಹ್ನ ೨ ಘಂಟೆಯೊಳಗೆ ನಮ್ಮ ಕಚೇರಿಗೆ ಮುಟ್ಟುವಂತೆ ಮೊಹರಬಂದ ಮಾಡಿ ರಜಿಸ್ಟರ ಟಪಾಲ ಮೂಲಕ ಕಳಿಸತಕ್ಕದ್ದು.

ಮಾರತಕ್ಕ ಗೋಣಿ ಚೀಲಗಳ ವಿವರ.

ಚೀಲಗಳ ವರ್ಗವಾರಿ	ಸಂಖ್ಯೆ
I ಉಪಯೋಗಕ್ಕೆ ಬರುವ ಹಳೇ ಚೀಲಗಳು	೨೨೮೪೦
II ದುರುಸ್ತಿ ಮಾಡಲು ಬರುವಂಥ ಹಳೇ ಚೀಲಗಳು	೫೪೨೭
III ಉಪಯೋಗಕ್ಕೆ ಬಾರದಂಥ ಹಳೇ ಚೀಲಗಳು	೬೪೪೭

ಟೆಂಡರು ಕಳಿಸುವವರು ಸರಕಾರಿ ಖಜಾನೆಯಲ್ಲಿ ರೂ ೨೦೦ ಬಯಾನಾ ಹಣ ಭರಣಾ ಮಾಡಿ ಆ ಬಗ್ಗೆ ಸಿಕ್ಕ ಚಲನ-ಪಾವತಿಗಳನ್ನು ಟೆಂಡರ-ಪತ್ರದ ಜೊತೆಗೆ ಕಳಿಸಬೇಕು

ಟೆಂಡರ ರೇಟನ್ನು ೧-೨ನೇ ತರಗತಿಯ ಚೀಲಗಳ ಬಗ್ಗೆ ೧೦೦ಕ್ಕೆ ಇಂತಿಷ್ಟು ರೂಪಾಯಿ ಮತ್ತು ೩ನೇ ತರಗತಿಯವುಗಳ ಬಗ್ಗೆ ೧ ಟನ್ನಿನ ಮೂಲಕ್ಕೆ ಇಂತಿಷ್ಟು ರೂಪಾಯಿ ಅಂತಾದೆಂತಲೂ, ಎಲ್ಲ ತರಗತಿಯ ಚೀಲಗಳ ಬಗ್ಗೆ ಪ್ರತ್ಯೇಕ ಟೆಂಡರ ಆರ್ಜಿಯೆಂತಲೂ ವಿಶದವಾಗಿ ಬರೆಯಬೇಕು. ಹೆಚ್ಚಿನ ವಿವರಗಳು ಬೇಕಾದರೆ ಕುಮಟಾ ಮಾಮಲೇದಾರ ಕಚೇರಿಯಲ್ಲಿ ಸಿಗುವವು.

ಕುಮಟಾ, ತಾ ೧೦-೪-೧೯೪೮ } V. R Kittur, ಮಾಮಲೇದಾರ, ಕುಮಟಾ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು, ಇಂಡಿಯದಲ್ಲಿ ಸ್ಥಾಪಿತಗೊಳಿಸಿದ್ದು)

ಹೆಡ್ ಆಫೀಸು: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಶೇರ ಮೂಲಧನ ರೂ. ೬,೫೧,೦೦೦/— ಕ್ಕೂ ಮಿಕ್ಕಿದೆ

ಕಾಯ್ದಿರಿಸಿದಲ್ಪಟ್ಟ ನಿಧಿ ರೂ. ೧,೦೦,೦೦೦/— ಕ್ಕೂ ಮೀರುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ರಿಂದ ೩ ಸಲೆ ಬಡ್ಡಿಯಂತೆ ಅಂಗೀಕರಿಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ, ತಾ. ೧೫-೪-೧೯೪೮ } ಕೆ. ವಿಟ್ಠಲದಾಸ ಶೆಣೈ, ಮೆನೇಜಿಂಗ ಡ್ಯಾರೆಕ್ಟರ

ಈ ಜಿಲ್ಲೆಗೆ ೨೮೦೦ ಟನ್ನ ಆಹಾರ ಧಾನ್ಯಗಳನ್ನು ಮುಂಬಯಿ ಸರಕಾರವು ಕಳಿಸಿಕೊಡತಕ್ಕದ್ದಿದೆ ಅವುಗಳಲ್ಲಿ ೧೦೦೦ ಟನ್ನ ಅಕ್ಕಿ, ೬೦೦ ಟನ್ನ ಗೋದಿ ೭೦೦ ಟನ್ನ ಕೆಂಪು ಜೋಳ, ೫೦೦ ಟನ್ನ ಗೋವಿನಜೋಳ ಇರುವವು ಸರಕಾರವು ಮ್ಯುನಿಸಿಪಾಲಿಟಿ ಇದ್ದ ಸ್ಥಳಗಳಲ್ಲೂ, ತಾಲೂಕಿನ ಮುಖ್ಯ ಸ್ಥಳಗಳಲ್ಲೂ ಬಡ ಜನರ ಸಲುವಾಗಿ ಯೋಗ್ಯ ದರದ ಅಂಗಡಿಗಳನ್ನು ಸ್ಥಾಪಿಸುವ ಸಂಕಲ್ಪ ಮಾಡಿರುತ್ತದೆ

ರಾಷ್ಟ್ರೀಯ ಸ್ವಯಂಸೇವಕ ಸಂಘದೊಡನೆ ಸಂಬಂಧ ಇಟ್ಟುಕೊಂಡ ಬಗ್ಗೆ ಬಂಧಿಸಿಟ್ಟ ಈ ಜಿಲ್ಲೆಯ ಯಾವತ್ತೂ ಜನರನ್ನು ಜಿಲ್ಹಾಧಿಕಾರಿ ಈಗ ಬಿಟ್ಟುಕೊಟ್ಟಿದ್ದಾರೆ ದಕ್ಷಿಣ ಕಾನಡಾ ಜಿಲ್ಲೆಯ ಬಾಳರೆ ವಗೈರೆ ೪ ಜನರು ಮಾತ್ರ ಇನ್ನೂ ಬಂಧನದಲ್ಲಿದ್ದಾರೆ ಇವರ ವ್ಯವಸ್ಥೆಯೇನೆಂದು ತಿಳಿಯಲಿಲ್ಲ

ಮುಂಬಯಿಯ ಪ್ರಾಂತಾಧಿಪರಾದ ರಾಜಾ ಸರ್ ಮಹಾರಾಜಾ ಸಿಂಗರವರು ಸಪತ್ನೀಕರಾಗಿ ತಾ ೧೬ನೇಗೆ ಇಲ್ಲಿ ಬರುತ್ತಾರೆ ಅಂದೇ ಸಂಜೆ ೩ ಘಂಟೆಗೆ ಜಿ ಲೋಕಲ ಬೋರ್ಡದವರು ಅವರಿಗೆ ಮಾನಪತ್ರವನ್ನು ಅರ್ಪಿಸುವರು ಆಗ ದೊರೆಗಳು ಬೋರ್ಡಿನ ಕಾರ್ಯಾಲಯದಲ್ಲಿರಲಿರುವ ಮಹಾತ್ಮರ ತೈಲಚಿತ್ರದ ಅನಾವರಣವನ್ನೂ ಮಾಡುವರು ಬೋರ್ಡಿನವರು ರೂ ೪೦೦ ಕೊಟ್ಟು ಈ ತೈಲಚಿತ್ರ ತರಿಸಿದ್ದಾರೆ ತಾ ೧೭ಕ್ಕೆ ದೊರೆಗಳು ಯಲ್ಲಾಪುರಕ್ಕೆ ಹೋಗಿ, ಅಲ್ಲಿ ಭೇಟಿಯಾಗಿ, ತಾ ೧೮ಕ್ಕೆ ಇಲ್ಲಿಗೆ ಮರಳಿ ಬರುವರು, [illegible] ತದನಂತರ [illegible] ಹೋಗುವರು

ಅಕ್ಕಿ ಖಾಯಿಲಿ ೧ಕ್ಕೆ ಈಗ ಇಲ್ಲಿ ರೂ ೨೦ರಿಂದ ೨೨ ತನಕ ದರ ಉಂಟು

ಶಿರಸಿಯ ಶ್ರೀ ಮಾರಿಕಾಂಬಾ ದೇವಾ ಭಂಡಾರದಲ್ಲಿ ಪೋಲೀಸರೂ, ದೇವಾಲಯ ಆಢಳಿತೆಯ ಮಂಡಳದವರೂ ವಂಚನೆ ಮಾಡಿದ್ದಾರೆಂದು ಆರೋಪಗಳನ್ನು ಹೊರಿಸಿ ಇಲ್ಲಿಯ ಜಿಲ್ಹಾ ಜಜ್ಜ ಕೋರ್ಟಿನಲ್ಲಿ ಶಿರಸಿಯ ರಾ॥ ಕೃಷ್ಣ ಸುಬ್ರಾಯ ಖಾರಿ ಕೊಳದಾರ ಇವರು ೬ ವರುಷಗಳ ಹಿಂದೆ ದಾಖಲಪಡಿಸಿದ ದಾವೆಯ ವಿಚಾರ ಕಳೆದ ವಾರ ನಡೆದು, ವಾದಿ ಕಡೆಯ ಪುರಾವೆ ಮುಗಿದಿದೆ ಪ್ರತಿವಾದಿಗಳ ಕಡೆ ಪುರಾವೆಯನ್ನು ತಕ್ಕೊಳ್ಳುವ ಬಗ್ಗೆ ತಾ ೧೪ ೬-೪೮ ನೇಮಿಸಲ್ಪಟ್ಟಿದೆ ದೇವರ ಭಂಡಾರದ ಕೆಲವು ವರ್ಷಗಳ ಲೆಕ್ಕದ ಪುಸ್ತಕಗಳು ಕೋರ್ಟಿನಲ್ಲಿ ಹಾಜರ ಆಗಿರುವದಿಲ್ಲ ಗದ್ದಲ ತಿಂಬಾ ಅತ್ತ ಹಾಳಾಗಿರುತ್ತವೆಂದು ಮೊಕ್ತೇಸರರು ಹೇಳುತ್ತಾರೆ

ನಮ್ಮ ಜಿಲ್ಲೆಯೊಳಗಿನ ಜೀರ್ಣವಾದ ಮಾರ್ಗಗಳ ಬಗ್ಗೆ ಸಂಕಗಳ ಎಂದೂ ಎಸೆಂಬ್ಲಿ ಸದಸ್ಯರಾದ ರಾ॥ ರಾಮಚಂದ್ರ ಪ್ರಭುಗಳು ಸಾರ್ವಜನಿಕ ಕಾಮಗಾರಿಗಳ ಸಚಿವರಾದ ರಾ॥ ಗಿಲ್ಡರರಿಗೆ ಎಸೆಂಬ್ಲಿಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದರು ಸಚಿವರ ಉತ್ತರದ ಸಾರ ಮುಂದಿನಂತಿದೆ (೧) ಕಾನಡಾ ಜಿಲ್ಲೆಯೊಳಗಿನ ಮಾರ್ಗಗಳೂ ಕೆಲವು ಸಂಕಗಳೂ ಸುಸ್ಥಿತಿಯಲ್ಲಿಲ್ಲವೆಂದೂ ಅವುಗಳ ಜೀರ್ಣೋದ್ಧಾರ ಕೂಡಲೇ ಆಗುವದು ಅವಶ್ಯವೆಂದೂ ಸರಕಾರಕ್ಕೆ ಗೊತ್ತುಂಟು ನಿರ್ಬಲವಾದ ಸಂಕಗಳ ದುರಸ್ತಿ ಮಾಡಿ ಅವನ್ನು ಭದ್ರಗೊಳಿಸುವ ವಿಚಾರವೀಗ ಸರಕಾರದಲ್ಲಿ ನಡೆದಿದೆ (೨) ಕಾರವಾರ-ಹುಬ್ಬಳ್ಳಿ ಮಾರ್ಗದಲ್ಲಿರುವ ೪ ಸಂಕಗಳ ಸಮಾವೇಶ ಕಳೆದ ವರ್ಷದ ಆಯ-ವ್ಯಯ ಪತ್ರಿಕೆಯಲ್ಲಿ ಸೇರಿಸಿದ ಪುನರ್ರಚನೆಯ ಯೋಜನೆಯಲ್ಲಾಗಿತ್ತು (೩) ಆ ಸಂಕಗಳ ಪುನರ್ರಚನೆಯ ಕಾರ್ಯವನ್ನು ಪ್ರಾರಂಭಿಸಲು ಇತ್ತೀಚಿಗೆ ಗುತ್ತಿಗೆದಾರರಿಗೆ ಆರ್ಡರ ಕೊಡಲಾಗಿದೆ (೪) ಹಟ್ಟಿಕೇರಿಯ ಸಂಕ ಬಹಳ ಜೀರ್ಣವಾದ ಸಂಗತಿ ಸರಕಾರಕ್ಕೆ ತಿಳಿದಿದೆ ಅದರೂ ಈ ಸಂಕವು ಕಳೆದ ವರ್ಷ ಸಂಕಲ್ಪಿಸಿದ ಪುನರ್ರಚನೆಯ ಕಾರ್ಯಕ್ರಮದಲ್ಲಿ ಸೇರಿಸಲ್ಪಟ್ಟಿದ್ದಿಲ್ಲ (೫) ಈ ವರ್ಷದ ಆಯ-ವ್ಯಯ ಪತ್ರಿಕೆಯಲ್ಲೂ ಈ ಹಟ್ಟಿಕೇರಿ ಸಂಕದ ಪುನರ್ರಚನೆಯ ವ್ಯವಸ್ಥೆಯನ್ನು ಸರಕಾರವು ಮಾಡಿರುವದಿಲ್ಲ ಯಾಕೆಂದರೆ ಇತ್ತೀಚಿಗೆ ಆ ಸಂಕದ ದುರಸ್ತಿ ಮಾಡಿ ಅದನ್ನು ಭದ್ರಗೊಳಿಸಲಾಗಿದೆ, ಅದರ ಮೇಲಿಂದ ವಾಹನಗಳು ಹಾದು ಹೋಗುವಾಗ ತಮ್ಮ ಮೇಲಿನ ಭಾರವನ್ನು ಇಳಿಸಿಕೊಂಡು ಹೋಗಬೇಕೆಂದು ಹಿಂದೆ ಹಾಕಿರುವ ನಿಯಂತ್ರಣವನ್ನೂ ಈಗ ಶಿಥಿಲಗೊಳಿಸಲಾಗುತ್ತದೆ

ಪಾಲಿನ ಸಾಗುವಳಿ ಮುದ್ದತ್ತು ಒಡೆಯರ ಪಾಲನ್ನು ನಗದಿಯಲ್ಲಿ ಪರಿವರ್ತಿಸುವ ಕ್ರಮವನ್ನು ಕಾಂತ ೧೯೪೭ರ ಒಕ್ಕಲತನದ ನಿಬಂಧನಾವಳಿಯ ೧೧ನೇ ನಿಯಮವಾದದ್ದು ಸರಕಾರದವರು ತಿದ್ದುಪಡಿ ಮಾಡಲು ನಿರ್ಧರಿಸಿ, ಆ ತಿದ್ದುಪಡಿಯನ್ನು ತಾ ೨-೪-೧೯೪೮ ರ ವಿಶೇಷ ಸರಕಾರಿ ಗೆಝೆಟಿನಲ್ಲಿ ಪ್ರಕಟಿಸಿದ್ದಾರೆ ಈ ತಿದ್ದುಪಡಿಯ ಬಗ್ಗೆ ಸೂಚನೆ ಇಲ್ಲವೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ತಾ ೧೦-೪-೧೯೪೮ ರೊಳಗಾಗಿ (ಕಲ್ಪವಂತೆ) ಮುಂಬಯಿಯಲ್ಲಿರುವ ಭೂಕಂದಾಯ ಖಾತೆಯ ಸರಕಾರಿ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ತಾ ೮-೪-೧೯೪೮ಕ್ಕೆ ಸರಕಾರದ ಪ್ರಸಿದ್ಧ ಅಧಿಕಾರಿಗಳು ತೋರಿಸಿದ ಪತ್ರಿಕೆಯು ತಾ ೧೦-೪-೧೯೪೮ರ "ಸಂಯುಕ್ತ ಕರ್ನಾಟಕ"ದಲ್ಲಿ ಪ್ರಕಟವಾಗಿದೆ ಇದನ್ನೋದಿಕೊಂಡು ನಮ್ಮ ಜಿಲ್ಲೆಯ ಜನರಾಗಲಿ ಕರ್ನಾಟಕ ಬೇರೆ ಜಿಲ್ಲೆಗಳ ಜನರಾಗಲಿ ತಮ್ಮ ಆಕ್ಷೇಪಗಳನ್ನು ಸೂಚನೆಗಳನ್ನು ನಿರ್ದಿಷ್ಟ ಕಾಲದಲ್ಲಿ ಸರಕಾರಕ್ಕೆ ತಿಳಿಸುವ ಮಾರ್ಗವೆಂತೆಂಬುದು ಯಾರಿಗೆ ತಿಳಿಯದು! ಆಕ್ಷೇಪಗಳನ್ನೂ ಸೂಚನೆಗಳನ್ನೂ ಕರೆಯುವ ಈ ಶಾಸ್ತ್ರವನ್ನಾದರೂ ಸರಕಾರದವರು ಮಾಡುತ್ತಿರುವದೇಕೆ?

ಅಂಕೋಲಾ— (ತಾ ೨೨-೩-೪೮) ಈ ೧೫-೩-೪೮ರ 'ವೃತ್ತ'ದಲ್ಲಿ ಜಿಲ್ಹಾಧಿಕಾರ ಮಹಾಶಯರೊಂದು ಪ್ರಕಟವಾದ ಅಂಕೋಲಾ ಶಾನಭೋಗ ಮತ್ತು ರಾ॥ ಟಿ ಡಿ ಅರಸ ಇವರ ನಡುವಿನ ಘರ್ಷಣೆಯ ಕಥೆಯು ಪ್ರಾರಂಭದಿಂದ ಕೊನೆಯ ತನಕ ಅಸತ್ಯ ವಿಧಾನಗಳಿಂದ ತುಂಬಿರುತ್ತದೆ. ರಾ॥ ಅರಸರು ತಿಳಿಸುತ್ತಾರೆ ತಮ್ಮಂಥ ಸಾತ್ವಿಕ ಪದವೀಧರ ವಿರುದ್ಧ ಶಾನಭೋಗರು ಹಾಡುಗಾರಿಕೆಯ ನಡೆಸಿ ಆರೋಪಮಾಡಿದ್ದನ್ನು—ಪ್ರಧಾನ ಶಾನಭೋಗರ ಹಸ್ತಕನೂ ಅವರ ಕೈಕೆಳಗಿನ ಉಗ್ರಾಣಿಯೂ ಅವರನ್ನು ಎತ್ತಿಹಿಡಿಯುತ್ತಾರೆಂದು — ಜಿಲ್ಹಾಧಿಕಾರಿ ಸಂಬಂಧವಾದ ದೂರು ಹೇಗೆ ಮತ್ತು ನಂಬಿ ಅವನ್ನು ಪ್ರಕಟಿಸಿಗೆ ಕಳಿಸುವದು ದರೂ ಹೇಗೆಂದು ರಾ॥ ಅರಸರು ಕೇಳುತ್ತಾರೆ ತಾ. ೨೯-೬ ೧೯೪೭ನೇ ದಿನ ಪೂರ್ವಾಹ್ನದ ೧೧ ಘಂಟೆಗೆ ರಾ॥ ಅರಸರು, ಹಿಂದೆಯೇ ಪಡೆಕೊಂಡ ಒಂದು ರಿಕಾರ್ಡ ಉತಾರದಲ್ಲಿ ಇರುವ ಒಂದು ಅಕ್ಷರದೋಷವನ್ನು ಸರಿಪಡಿಸಿಕೊಳ್ಳಲು, ಗ್ರಾಮಚಾವಡಿಗೆ ಹೋಗಿದ್ದರು ಆಗ ಅಲ್ಲಿ ಇಬ್ಬರು ಇದ್ದರಂತೆ ಅವರಲ್ಲಿ ಒಬ್ಬರು ಶಾನಭೋಗರ ಗುರಬಿಸುವರೆಂದು ಭಾವಿಸಿ, ಅರಸರು ತಾವು ಬಂದ ಕಾರಣವನ್ನು ಅವರಿಗೆ ತಿಳಿಸಿದರಂತೆ ಆಗ ಆ ಇಬ್ಬರಲ್ಲೊಬ್ಬರು "ಅರ್ಜಿ ಬೇಕು" ಎಂದರಂತೆ ಅರಸರು ಅಲ್ಲೇ ಅರ್ಜಿಯನ್ನು ಬರೆದು ಕೊಡಬಹುದಿತ್ತು ಎಂದರು. ನಿ ತಪ್ಪೇ ಅರ್ಜಿ ಬರೆಯುತ್ತಿದ್ದರು ಅದನ್ನು ಕಂಡು ಅರ್ಜಿ ಬೇಕೆಂದು ಹೇಳಿದ ವ್ಯಕ್ತಿಯು ಹಸ್ತದ ಕಾಲಿಯಾದ್ದ ಮುರ್ಚಿಯ ಮೇಲೆ ಕೂತು ಅರ್ಜಿ ಬರೆಯಲು ತಿಳಿಸಿದನಂತೆ ಅದರಂತೆ ರಾ॥ ಅರಸರು ಆ ಮುರ್ಚಿಯ ಮೇಲೆ ಕೂಡ್ರಲು ಮುಂದಾಗುವಷ್ಟರಲ್ಲಿ ಅರ್ಜಿ ಬೇಡಿದ ವ್ಯಕ್ತಿಯ ಜೊತೆಗಿದ್ದ ಇನ್ನೊಂದು ವ್ಯಕ್ತಿಯು ಆಕ್ಷೇಪಿಸಿದನಂತೆ! ರಾ॥ ಅರಸರಿಗೆ ಈ ಹುಡುಗಾಟಿಕೆ ನೋಡಿ ಎಷ್ಟು ಕಡೆ ಕಸಿರಬಹುದೆಂಬುದನ್ನು ಓದುಗರೇ ಊಹಿಸಲಿ ಆದರೂ ರಾ॥ ಅರಸರು ಮಾತು ಎರಡು ಮಾಡದೆ ಆ ಮುರ್ಚಿ ಬಿಟ್ಟು ಬೇರೊಂದರಲ್ಲಿ ಕೂತು ಅರ್ಜಿ ಬರೆದರು. ಅಷ್ಟರಲ್ಲಿ ಮುಖ್ಯ ಶಾನಭೋಗರು ಬಂದರು. ರಾ॥ ಅರಸರು ಆಗ ತಮ್ಮ ಅರ್ಜಿಯನ್ನು ಹಿಂದಿನ ಉತಾರವನ್ನೂ ಅವರ ಕೈಯಲ್ಲಿಟ್ಟರು ಮುಖ್ಯ ಶಾನಭೋಗರು ಆಗ 'ಸಂಜೆಗೆ ಬನ್ನಿ' ಎಂದು ಹೇಳಿ ರಾ॥ ಅರಸರಿಗೆ ಕಳಿಸಿಕೊಟ್ಟರು ಮುಂಜಾನೆ ನಡೆದದ್ದು ಇಷ್ಟೇ ತಾ. ೧೫-೩-೪೮ರ "ವೃತ್ತ"ದಲ್ಲಿ ಪ್ರಕಟವಾದ ಕಥೆ ಸಂಜೆ ನಡೆದದ್ದು ಇರಬಹುದೆ. ಹೊರತು ರಾ॥ ಅರಸರು ಆಗೇರ ಶಾನಭೋಗರಿಗೆ ತಿರಸ್ಕಾರ ಮಾಡಿದದ್ದೂ ಇರುವದಿಲ್ಲ, ಅವರಾಗಿ ಮುರ್ಚಿಯನ್ನು ಆಕ್ರಮಿಸಿದ್ದೂ ಇಲ್ಲ, ಗ್ರಾಮಸ್ಥರ ರಿಕಾರ್ಡಗೆ ಕೈ ಹಚ್ಚಿದ್ದೂ ಇಲ್ಲ, ಸ್ವಾತಂತ್ರ್ಯ ಸಿಕ್ಕಿರುವದರಿಂದ ಗ್ರಾಮಸ್ಥರಿಗೆ ಕೇಳಬಾರದು ಎಂದು ಮುಂತಾಗಿ ಉದ್ಧಟತನದ ಮಾತುಗಳನ್ನು ಆಡಿದ್ದೂ ಇರುವದಿಲ್ಲ ಯಾಕೆಂದರೆ ಶಾನಭೋಗರ ಮಾತಿನ ಮೇಲೆ ಜಿಲ್ಹಾಧಿಕಾರಿ ಒರ್ವ ಪದವೀಧರ ವಿರುದ್ಧ ಇಂಥ ಆರೋಪಗಳನ್ನು ಹೊರಿಸುವದು ಎಂದೂ ಉಚಿತವಾಗಲಾರದು.

ಟೆಂಡರ ನೋಟೀಸು.

ಸುಪಾ ಪೇಟಾ ಸ್ಪೆಶಲ್ ಕೋರ್ಟ ಹಾಗು ಸುಪಾ ಗೋದಾಮುಗಳಲ್ಲಿ ಈಗ ಶಿಲ್ಕು ಇರುವ ಹಳೇ ಖಾಲಿ ಚೀಲಗಳ ಮಾರ್ಜಿನವಲ್ಲಿ ಕಾಣಿಸಿದ ತಪಶೀಲಿನ ಪ್ರಕಾರ ಇರುತ್ತದ್ದು ಅವುಗಳನ್ನು ಮಾರಾಟಕ್ಕೆ ಇಟ್ಟಿರುತ್ತದೆ

I	ಕೆಲಸಕ್ಕೆ ಯೋಗ್ಯವಾದಂಥವು	೨೪೦೩
II	ದುರಸ್ತಿ ಮಾಡಿದ್ದಲ್ಲಿ ಉಪಯೋಗಕ್ಕೆ ಬರುವಂಥವು	೫೬೬
III	ಸ್ವರ ಉಪಯೋಗಿ ಇರುವಂಥವು	೯೧೫

ಬೇಕಾದವರು ಅವನ್ನು ಯೋಗ್ಯ ಕಿಮ್ಮತ್ತಿಗೆ ಕೊಳ್ಳುವರೆ ಟೆಂಡರ ಕೊಡಬಹುದು ತಾ ೨೦-೪-೪೮ ನೇಗೆ ಟೆಂಡರು ಮುಟ್ಟುವ ಕೊನೆಯ ಮುದ್ದತ್ತಿರುತ್ತದೆ ಯಾವತ್ತೂ ಟೆಂಡರುಗಳನ್ನು ಮಹಾಲ್ಕರಿ, ಸುಪಾ ಇವರ ವಿಳಾಸಕ್ಕೆ ಕಳಿಸಬೇಕು, ಎಲ್ಲಕ್ಕೂ ಹೆಚ್ಚಿಗೆ ಟೆಂಡರು ಕೊಟ್ಟ ಮನುಷ್ಯನು ಸದ್ರಿ ಚೀಲಗಳನ್ನು ಕಿಮ್ಮತ್ತಿಗೆ ಪಡಕೊಳ್ಳುವನು. ಯಾರದಾದರೂ ಟೆಂಡರ ಸ್ವೀಕರಿಸುವದು ಇಲ್ಲವೆ ಬಿಟ್ಟುಕೊಡುವದು ಕೆಳಗೆ ಸಹಿ ಮಾಡಿದವರ ಮರ್ಜಿಯ ಮೇಲೆ ಇರುವದು ಸ್ವೀಕರಿಸಿದ ಟೆಂಡರದಾರನು ಅವನ ಟೆಂಡರ ರಕಮಿನ ಕನಿಷ್ಟ ೧/೪ದಷ್ಟು ಹಣ ಕೂಡಲೇ ಅಮಾನತು ಇಡಬೇಕಾಗುವದು

Supa 7-4-48 } Y N Mahajan, Mahalkary

BUY

OR

SELL

"UNITED KARNATAK" POLICIES

For particulars apply to

Manager,
PRINCIPAL AGENCY OFFICE,
Post Box No 10,
UDIPI, S Kanara

ಸುದ್ದಿಗಳ ಸಂದೂಕ.

— ಮುಂಬಯಿ ಎಸೆಂಬ್ಲಿಯೊಳಗಿನ ಕಾನಡಾ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ ಶಿವಾನಂದ ಶಾಸ್ತ್ರಿ ಮತ್ತು ರಾಮಚಂದ್ರ ಪ್ರಭು ಇವರು ಕಾನಡಾ ಜಿಲ್ಲೆಯ ಅಕ್ಕಿ ಪರಿಸ್ಥಿತಿಯನ್ನು ಕುರಿತು ಮುಂಬಯಿ ಸರಕಾರದ ಆಹಾರ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯಿಯವರಿಗೆ ಒಂದು ಪತ್ರ ಬರೆದು, ಜಿಲ್ಲೆಯಿಂದ ಅಕ್ಕಿಯ ನಿರ್ಯಾತವನ್ನು ಪ್ರತಿಬಂಧಿಸಲು ಬಿನ್ನವಿಸಿದ್ದರು. ಆ ಪತ್ರಕ್ಕೆ ಮಂತ್ರಿಯವರು ಬರೆದ ಪ್ರತ್ಯುತ್ತರದಲ್ಲಿ ಮುಂಬಯಿ ಸರಕಾರದ ಆಹಾರ ಧೋರಣೆ ದಿಗ್ದರ್ಶಿತವಾಗಿದೆ. ಮಂತ್ರಿಗಳು ಬರೆಯುತ್ತಾರೇನಂದರೆ— "ದೀರ್ಘ ವಿಚಾರ ಮಾಡಿ ಕೇಂದ್ರ ಸರಕಾರವು ಆಹಾರ, ಬಟ್ಟೆ, ನೂಲು ಮೊದಲಾದವುಗಳ ಮೇಲಿನ ನಿಯಂತ್ರಣಗಳನ್ನು ರದ್ದುಗೊಳಿಸಬೇಕೆಂಬ ನಿರ್ಣಯಕ್ಕೆ ಬಂದದ್ದುಂಟು. ನಮ್ಮ ಪ್ರಾಂತಿಕ ಸರಕಾರವು ಕೂಡ ಆ ನಿರ್ಣಯವನ್ನು ಮನ್ನಿಸಿ, ಆಹಾರ ಧಾನ್ಯಗಳ ಸಂಗ್ರಹಣೆ ಮಾಡುವ ಕ್ರಮವನ್ನೂ, ಮುಂಬಯಿ, ಅಹಮದಾಬಾದ, ಪುಣೆ ಮತ್ತು ಕೊಲ್ಲಾಪುರ ಈ ನಾಲ್ಕು ನಗರಗಳನ್ನು ಬಿಟ್ಟು ಉಳಿದ ಭಾಗಗಳಲ್ಲಿದ್ದ ಸೀಧಾ ಕ್ರಮವನ್ನೂ ಬಿಟ್ಟುಕೊಟ್ಟಿದೆ. ಈ ನಾಲ್ಕು ನಗರಗಳಲ್ಲಿ ಸೀಧಾ ಕ್ರಮ ಅಮಲಿನಲ್ಲಿಟ್ಟಿದ್ದರೂ ಪ್ರಾಂತದ ಉಳಿದ ಭಾಗಗಳಲ್ಲಿ ಸಿಗುವ ಆಹಾರ-ಧಾನ್ಯಗಳ ಸಂಗ್ರಹದ ಮೇಲೆ ಬೀಳಬಹುದಾದ ಭಾರವನ್ನು ಆದಷ್ಟು ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದಲೇ ಇರುತ್ತದೆ. ಈ ಹೊಸ ಧೋರಣೆಗನುಸಾರವಾಗಿ ಸರಕಾರವು, ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳು ಸಾಗುವದರ ಮೇಲಿನ ಪ್ರತಿಬಂಧವನ್ನು ಈಗ ರದ್ದುಗೊಳಿಸಿದೆ.

" ಜಿಲ್ಲೆಯ ಹೊರಗೆ ಆಹಾರ-ಧಾನ್ಯಗಳು ಹೋಗುವದಕ್ಕೆ ತಡೆ ಹಾಕಬೇಕಾಗಿ ಕಾನಡಾ ಜಿಲ್ಲೆಯಿಂದಲೂ ಬೇರೆ ಜಿಲ್ಲೆಗಳಿಂದಲೂ ನನಗೆ ಮನವಿಗಳು ಬಂದಿವೆ. ಆದರೆ ಹೀಗೆ ಮಾಡುವದು ಕೇಂದ್ರ ಸರಕಾರವೂ ನಮ್ಮ ಪ್ರಾಂತಿಕ ಸರಕಾರವೂ ಸ್ವೀಕರಿಸಿರುವ ಧೋರಣೆಗೆ ವಿಸಂಗತವಿರುತ್ತದೆಂಬುದನ್ನು ತಾವು ಒಪ್ಪುವಿರೆಂದು ನಂಬುತ್ತೇನೆ. ನಿಯಂತ್ರಣವು ಬರಖಾಸ್ತಿಯಾಗಬೇಕಾದರೆ ಅದಕ್ಕೆ ಅನಿರ್ಬಂಧವಾಗಿ ಕೆಲಸ ಮಾಡಲು ಅಸ್ಪದ ಮಾಡಿಕೊಡಬೇಕು. ಧಾರಣೆಗಳು ಏರುತ್ತಿರುವದನ್ನು ಕಂಡು ನಾವು ಭಯಗ್ರಸ್ತರಾಗಕೂಡದು. ಸದ್ಯದ ಪರಿಸ್ಥಿತಿಯಲ್ಲಿ ಕೆಲ ಕಾಲದ ವರೆಗೆ ಧಾರಣೆಗಳು ಏರುವದು ಸಾಹಜಿಕ. ಅದನ್ನು ತಡೆಯುವದು ಕಷ್ಟವಿಲ್ಲ. ಪ್ರಾಂತದ ಬೇರೆ ಬೇರೆ ಜಿಲ್ಲೆಗಳ ಪ್ರಚಲಿತ ಪರಿಸ್ಥಿತಿ ಸರಕಾರಕ್ಕೆ ಪೂರ್ಣ ಗೊತ್ತಿದೆ. ಅವಶ್ಯವೆಂದೆನಿಸಿದಾಗ ಜನರ ಕಷ್ಟ-ನಿವಾರಣೆಗಾಗಿ ಸರಕಾರವು ಶಕ್ಯವಿರುವ ಎಲ್ಲ ಕ್ರಮಗಳನ್ನು ಕೈಕೊಳ್ಳುವದೆಂದು ನಾನು ನಿಮಗೆ ನಂಬಿಗೆ ಕೊಡುತ್ತೇನೆ. ಆದರೆ ಜಿಲ್ಲೆ ಜಿಲ್ಲೆಗಳೊಳಗಿನ ಸಾಗಾಟವನ್ನು ಪ್ರತಿಬಂಧಿಸಲು ಮಾತ್ರ ಸರಕಾರವು ಒಪ್ಪುವಂತಿಲ್ಲ. ಅಂತಹ ಪ್ರತಿಬಂಧಗಳನ್ನು ಪುನಃ ಹೇರಿದರೆ ಆಹಾರದ

ಅನ್ನ-ಸಂತರ್ಪಣೆಗಳ ನಿರ್ಬಂಧ ರದ್ದಾಗಿಲ್ಲ.

ನಂ ೬೭— ಪ್ರಾಂತದೊಳಗಿನ ಕೆಲವೊಂದು ಕ್ಷೇತ್ರಗಳನ್ನು ಬಿಟ್ಟು ಇತರ ಕಡೆ ಈಗ ಆಹಾರ-ಧಾನ್ಯಗಳ ಸೀಧಾಕ್ರಮವೂ, ಬೆಲೆ ಸಾಗಣೆಗಳ ಮೇಲಿನ ನಿರ್ಬಂಧಗಳೂ ರದ್ದಾಗಿರುವದರಿಂದ ಎಷ್ಟು ಜನಕ್ಕೆ ಮುಂದಿಗೆ ಊಟ-ಉಪಚಾರ ಬಡಿಸತಕ್ಕದ್ದಲ್ಲೆಂಬ ನಿರ್ಬಂಧವೂ ಈಗ ರದ್ದಾಗಿರುವದಾಗಿ ಕೆಲವು ಕಡೆ ತಪ್ಪು ತಿಳುವಳಿಕೆಯುಂಟಾದುದು ಕಾನಡಾ ಜಿಲ್ಲೆಯ ಕಲೆಕ್ಟರ ಸಾಹೇಬರ ತಿಳುವಳಿಕೆಗೆ ಬಂದಿದೆ. ಕಾರಣ ಸದರಿ ನಿರ್ಬಂಧವು ಪ್ರಾಂತದಲ್ಲೆಲ್ಲ ಇನ್ನೂ ಅಮಲಿನಲ್ಲಿರುತ್ತದೆಂದು ಕಲೆಕ್ಟರ ಸಾಹೇಬರು ಈ ಮೂಲಕ ಜಾಹೀರಪಡಿಸುತ್ತಾರೆ.

ಕಾರವಾರ, ತಾ ೧೬-೪-೪೮ }
R J Rebello,
ಕಾನಡಾ ಜಿಲ್ಲೆಯ ಕಲೆಕ್ಟರರು

ಹೊನ್ನಾವರ ತಾಲೂಕ ಗುಂಡಬಾಳೆಯ ಶ್ರೀ ವೆಂಕಟರಮಣ ಮುಖ್ಯಪ್ರಾಣ ದೇವರ

ಸನ್ನಿಧಿಯಲ್ಲಿ ವಾಡಿಕೆಯಂತೆ ಹರಕೆಯ ಯಕ್ಷಗಾನ ಆಟಗಳು ಕಳೆದ ಫಾಲ್ಗುಣ ವದ್ಯ ದಶಮಿಗೆ ಪ್ರಾರಂಭವಾಗಿದ್ದು, ರಾತ್ರಿ ಆಟಗಳು ಚೈತ್ರ ಬಹುಳ ಪಂಚಮಿಯ ವರೆಗೆ ನಡೆಯಲಿವೆ. ಹರಕೆ ಸಲ್ಲಿಸುವವರು ಈ ಅವಧಿಯಲ್ಲಿ ಹರಕೆ ಸಲ್ಲಿಸಿ ಕೃತಾರ್ಥರಾಗಬೇಕಾಗಿ ವ್ಯವಸ್ಥಾಪಕ ರಾ|| ನೀಲಕಂಠ ವೆಂ. ಭಟ್ಟ ಇವರು ತಿಳಿಸುತ್ತಾರೆ.

ಇದಲ್ಲದೆ ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಕೆಲಸದ ವರ್ಗಣಿ ವಸೂಲಿ ಬಗ್ಗೆ ರಾ|| ನೀಲಕಂಠ ವೆಂಕಟರಮಣ ಪ್ರಭು, ರಾ|| ಶ್ರೀನಿವಾಸ ವಾಮನ ನಾಯಕ ಇವರಿಗೆ ... ಮಂಡಳದವರು ನೇಮಕ ಮಾಡಿದಂತೆ ಸದ್ರಿಯವರ ಬಳಿ ವರ್ಗಣಿ ಕೊಟ್ಟು ಪಾವತಿ ಪಡೆಯಬೇಕಾಗಿ ವಿನಂತಿ.

ಭಟಕಳ ಪೇಠೆಯ ತೆಂಗು-ಅಡಿಕೆ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು)

ನಂ ಟಿ ಎನ್ ಸಿ/೪೩೨ — ೧೯೪೭ನೇ ಇಸವಿಯ ಒಕ್ಕಲತನದ ಕಾನೂನಿನ ನಿಯಮಾವಳಿಯ ೧೦ನೆಯ ನಿಯಮದನ್ವಯ ದೊರೆತ ಅಧಿಕಾರವನ್ನುಪಯೋಗಿಸಿ, ಕಾನಡಾ ಜಿಲ್ಲೆಯೊಳಗಿನ ಭಟಕಳ ಪೇಠೆಯ ಮಹಾಲಕರಿಗಳು, ಈ ಕೆಳಗಿನ 'ಅ' ಮತ್ತು 'ಬ' ಪರಿಶಿಷ್ಟಗಳ ೨-೩ನೇ ಸ್ತಂಭಗಳೊಳಗೆ ನಿರ್ದೇಶಿಸಿದ ಸ್ಥಾನಿಕ ಕ್ಷೇತ್ರಗಳಲ್ಲಿರುವ ಫಲಕ್ಕೆ ಬಂದ ಪ್ರತಿ ತೆಂಗಿನ ಮರ ಅಡಿಕೆ ಮರಕ್ಕೆ ೧೯೪೭-೪೮ನೇ ಸಾಲಿನಲ್ಲಿ, ೪ನೇ ಸ್ತಂಭದಲ್ಲಿ ತೋರಿಸಿದಷ್ಟು ಬೆಳೆ ಬಂದಿರುತ್ತದೆಂದು ಜಾಹೀರ ಮಾಡುತ್ತಾರೆ.

"ಅ" ಪರಿಶಿಷ್ಟ

ಅನು ಕ್ರಮಾಂಕ	ಸ್ಥಾನಿಕ ಕ್ಷೇತ್ರ	ಆಯಾ ಸ್ಥಾನಿಕ ಕ್ಷೇತ್ರದಲ್ಲಿ ಬರುವ ಗ್ರಾಮಗಳು	ಫಲಕ್ಕೆ ಬಂದ ಪ್ರತಿ ತೆಂಗಿನ ಮರಕ್ಕೆ ಕಾಯಿಗಳು
೧	೨	೩	೪
೧	ಸಮುದ್ರ ದಂಡೆಯು ಇಲ್ಲವೆ ಸಮುದ್ರ ದಂಡೆಯು ಸಮೀಪದಲ್ಲಿರುವ ನದಿಯ ಕೊಲ್ಲಿಗಳ ಹತ್ತಿರ ಇರುವ ಪ್ರದೇಶ	ಒಡ್ಡಗಳಮಾಗಡಿ, ಬೆಳನಿ, ಬೆಂಗ್ರೆ, ಹಡೀನ, ಹೆಬಳೆ, ಜಾಲಿ, ಕೈಕಿಣಿ, ಕರಿಕಲ್ಲು, ಮಾವಳ್ಳಿ, ಮಾವಿನಕುರ್ವೆ, ಮುಂಡಳ್ಳಿ, ಶಿರಾಲಿ, ಸೂಸಗಡಿ (ಪಾಂಡಿ ಹೊಳೆ ಬದಿಯ ಭಾಗ), ಕಗದಗೋಡ, ತಲಗೋಡ, ಬೈಲೂರ, ಬೆಳ್ಕೆ, ವೆಂಕಟಾಪುರ, ಗೊರಟೆ (೧೯ ಗ್ರಾಮಗಳು)	೪೦ ಕಾಯಿ
೨	ಘಟ್ಟದ ಬದಿಯ ಪ್ರದೇಶ	ಹಡೀಲ, ಹೊಸೂರ, ಬೇಂಗಡೂರ, ಬೇಕೆ, ಬೆಳೂರಮನೆ, ಹಡವ್ಲೂರ, ಕಿತ್ರೆ, ಕೋಣಾರ, ಕೊಪ್ಪ, ಕೋಟಖಂಡ, ಕುಂಟವಾಣಿ, ಮಾರುಕೇರಿ, ಅಂತ್ರವಳ್ಳಿ, ಅರವತ್ತಿ, ಬಸ್ತಿಗಳಮಾಗಡಿ, ಹಾಡವಳ್ಳಿ, ಹಳ್ಳಿರ, ಹಲ್ಯಾಣಿ, ಹೆಗ್ಗಿಲ, ಹಾಡೀಲ, ಕಗ್ಗಂಡಿ, ಕಕ್ಕೋಡ, ಕೆರೆಹಿತ್ತಲ, ಮುಠಳ್ಳಿ ಮುಗಳಿ, ಮುಡಕೋಡಿ, ನೂಜ್ಞಿ, ಓಣಿಬಾಗಿಲ, ಅಗ್ಗಾ, ಬಡಾಬಾಗ, ದೇವಸ್ಥಾನಮಾಗಡಿ, ಹಸರವಳ್ಳಿ, ಹೆಂಜಲೆ, ಕೊಳವಾಡಿ, ಕವರಂದೂರ (೩೧ ಗ್ರಾಮಗಳು)	೨೦ ಕಾಯಿ
೩	ಮೇಲೆ ಅನುಕ್ರಮಾಂಕ ೧ ಮತ್ತು ೨ರಲ್ಲಿ ತೋರಿಸಿದ ಪ್ರದೇಶಗಳ ನಡುವಿನ ಪ್ರದೇಶ	ಸೂಸಗಡಿ (ರಂಗಿನಕಟ್ಟೆ ಬದಿ), ಬೇಹಳ್ಳಿ, ಚೌಥನಿ, ಮೂಡಭಟಕಳ, ಮುಟ್ಟಳ್ಳಿ, ಪುರವರ್ಗ, ಬೆಳಲಖಂಡ, ಕಲನ, ಯಲವಡಿಕವೂರ (೯ ಗ್ರಾಮಗಳು)	೨೫ ಕಾಯಿ

"ಬ" ಪರಿಶಿಷ್ಟ

ಅನು ಕ್ರಮಾಂಕ	ಭೂಮಿಯ ವರ್ಗ	ಗ್ರಾಮದ ಹೆಸರುಗಳು	ಫಲಕ್ಕೆ ಬಂದ ಪ್ರತಿ ಅಡಿಕೆ ಮರದ ಬೆಳೆ (ರತ್ತಲ ಲೆಕ್ಕದಲ್ಲಿ)
೧	೨	೩	೪
೧	ಅಡಿಕೆ ಬೆಳೆಸಲು ವಿಪುಲ ನೀರು ಸಿಗುವ ಗ್ರಾಮಗಳು	ಮಾರುಕೇರಿ, ಕೋಟಖಂಡ, ಕಿತ್ರೆ, ಕೋಣಾರ, ಹಡವ್ಲೂರ, ಕೊಪ್ಪ, ಹಡೀಲ, ಬೆಳೂರಮನೆ, ಕೆರೆಹಿತ್ತಲ, ಕುಂಟವಾಣಿ, ಹೊಸೂರ, ಬೇಂಗಡೂರ, ಬೇಕೆ (೧೩ ಗ್ರಾಮಗಳು)	೧½ ರತ್ತಲ ಒಣ ಅಡಿಕೆ
೨	ಅಡಿಕೆ ಬೆಳೆಸುವ ಪ್ರದೇಶ (ಸಮುದ್ರ ದಂಡೆಯ ಬದಿಯ ಕ್ಷೇತ್ರ ಸಹಿತ)	ಅಂತ್ರವಳ್ಳಿ, ಅರವತ್ತಿ, ಬಸ್ತಿಗಳಮಾಗಡಿ, ಹಾಡವಳ್ಳಿ, ಹಳ್ಳಿರ, ಹಲ್ಯಾಣಿ, ಹೆಗ್ಗಿಲ, ಹಾಡೀಲ, ಕಗ್ಗಂಡಿ, ಕಕ್ಕೋಡ, ಮುಠಳ್ಳಿ, ಮುಗಳಿ, ಮುಡಕೋಡಿ, ನೂಜ್ಞಿ, ಓಣಿಬಾಗಿಲ, ಅಗ್ಗಾ, ಬಡಾಬಾಗ, ದೇವಸ್ಥಾನಮಾಗಡಿ, ಹಸರವಳ್ಳಿ, ಹೆಂಜಲೆ, ಕೊಳವಾಡಿ, ಕವರಂದೂರ, ಬೆಳನಿ, ಬೆಂಗ್ರೆ, ಹಡೀನ, ಹೆಬಳೆ, ಜಾಲಿ, ಕೈಕಿಣಿ, ಕರಿಕಲ್ಲು, ಮಾವಳ್ಳಿ, ಮಾವಿನಕುರ್ವೆ, ಮುಂಡಳ್ಳಿ, ಶಿರಾಲಿ, ಸೂಸಗಡಿ, ಕಗದಗೋಡ, ತಲಗೋಡ, ಬೈಲೂರ, ಬೆಳ್ಕೆ, ವೆಂಕಟಾಪುರ, ಗೊರಟೆ, ಬೇಹಳ್ಳಿ, ಚೌಥನಿ, ಮೂಡಭಟಕಳ, ಮುಟ್ಟಳ್ಳಿ, ಪುರವರ್ಗ, ಬೆಳಲಖಂಡ, ಕಲನ, ಯಲವಡಿಕವೂರ, ಗೋರೆಬೈಲೂರ (೪೯ ಗ್ರಾಮಗಳು)	೧ ರತ್ತಲ ಹಸಿ ೧೦೦ ಒಣ ಅಡಿಕೆ

ಭಟಕಳ, ತಾ ೭-೪-೧೯೪೮ }
K H Aversekar,
ಮಹಾಲಕರಿ, ಭಟಕಳ

ಹಂತಿಕೆಯು ನಿಯಂತ್ರಣ ಜಾರಿಯಲ್ಲಿದ್ದಾಗ ಜನರು ಅನುಭವಿಸಿದ ಕಷ್ಟಗಳಿಗಿಂತ ಹೆಚ್ಚಿಗೆ ಕಷ್ಟಗಳು ಉಂಟಾಗುವದೆಂಬುದನ್ನು ಲಕ್ಷದಲ್ಲಿಡಿರಿ

"ಆದ್ದರಿಂದ, ನಿಮ್ಮ ಚಿಕ್ಕಿಯು ಸದ್ಯದ ಪರಿಸ್ಥಿತಿಯನ್ನು ಸರಕಾರವು ಪೂರ್ಣವಾಗಿ ಅರಿತಿದೆಯೆಂದೂ, ಉಪವಾಸ ಮತ್ತು ಬರಗಾಲಗಳು ನಿಮ್ಮಲ್ಲಿ ಬರದಂತೆ ಸರಕಾರವು ಅವಶ್ಯವಿದ್ದ ಎಲ್ಲ ಕ್ರಮಗಳನ್ನು ಕೈಕೊಳ್ಳುವದೆಂದೂ ನಿಮ್ಮ ಮಿತ್ರರಿಗೆ ತಿಳಿಸಿರಿ. ಹಲವಾರು ಜಿಲ್ಲೆಗಳಲ್ಲಿ ಯೋಗ್ಯ ಧಾರಣೆಯ ಅಂಗಡಿಗಳನ್ನು ತೆರೆಯುವದಕ್ಕಾಗಿ ಈಗಾಗಲೇ ಕಾಳು ರವಾನೆಯಾಗುತ್ತಿದೆ. ಅವಶ್ಯ ಬಿದ್ದರೆ ಇನ್ನೂ ಹೆಚ್ಚಿಗೆ ಕಾಳು ಕಳಿಸಲ್ಪಡುವದು. ಪ್ರಾಂತದ ಯಾವದೇ ಭಾಗದಲ್ಲಿ ಆಹಾರಧಾನ್ಯಗಳ ತೀವ್ರ ಕೊರತೆಯಾಗಲಿ ಬರಗಾಲದ ಪರಿಸ್ಥಿತಿಯಾಗಲಿ ಉಂಟಾಗದೆಂದು ಯಾರೂ ಹೆದರುವ ಕಾರಣವಿಲ್ಲ."

— ಕಳೆದ ತಾ ೩೦ರಿಂದ, ೧೯೩೦ರಿಂದ ನಡೆದು ಬಂದ ವಾಡಿಕೆಯಂತೆ, ಹಿಂದುಸ್ತಾನದಲ್ಲೆಲ್ಲ ರಾಷ್ಟ್ರೀಯ ಸಪ್ತಾಹ ಆಚರಿಸಲ್ಪಡುತ್ತಿದೆ. ಸ್ವಾತಂತ್ರ್ಯ ಪ್ರಾಪ್ತಿಯ ಹಾಗೂ ಮಹಾತ್ಮರ ನಿರ್ಯಾಣದ ನಂತರ ಆಚರಿಸಲ್ಪಡುವ ಈ ಸಪ್ತಾಹದಲ್ಲಿ ಮಹಾತ್ಮಾಜಿಯವರ ರಾಷ್ಟ್ರೀಯ ಸ್ಮಾರಕದ ರಚನೆಗಾಗಿ ಎಲ್ಲೆಲ್ಲೂ ನಿಧಿಸಂಗ್ರಹ ಮಾಡಬೇಕೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳದ ನಿರ್ಣಯವಾದಂತೆ ಎಲ್ಲ ಕಡೆಯಲ್ಲಿ ನಿಧಿಯ ಸಂಗ್ರಹವಾಗುತ್ತಲಿದೆ. ಪ್ರತಿಯೊಂದು ಭಾಷೆಯವನು ಈ ನಿಧಿಗೆ ತನ್ನ ೧೦ ದಿನಗಳ ಗಳಿಕೆಯನ್ನು ಒಪ್ಪಿಸಬೇಕೆಂಗಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಪೇಕ್ಷೆಯುಂಟು. ಇಡೀ ಭಾರತದಲ್ಲಿ ಕೂಡಿ ೧೪೦ ಕೋಟಿ ರೂಗಳಷ್ಟು ನಿಧಿಯ ಸಂಗ್ರಹ ಮಾಡಬೇಕೆಂದು ರಾಷ್ಟ್ರದ ಮುಂದಾಳುಗಳ ಸಂಕಲ್ಪವಾಗಿದೆ. ಅದರಂತೆ ತಮ್ಮ ಪ್ರಾಂತದ ಪಾಲಿಗೆ ಹಾಕಿದ ೧೫ ಕೋಟಿ ರೂಗಳನ್ನು ಸಂಗ್ರಹಿಸಲು ಬಿಹಾರ ಪ್ರಾಂ॥ ಕೊಂಗ್ರೆಸ ಸಮಿತಿಯವರು ನಿರ್ಧರಿಸಿದ್ದಾರೆ.

— ಮುದ್ರಾಸ ಪ್ರಾಂತದ ಗವ್ಹರ್ನರ ಸರ್ ಆರ್ಚಿಬೋಲ್ಡ್ ನೈ ಇವರು ಇನ್ನು ಕೆಲವೇ ದಿನಗಳಲ್ಲಿ ಅಧಿಕಾರ ಬಿಟ್ಟು ಸ್ವದೇಶಕ್ಕೆ ಹೋಗಲಿಕ್ಕಿರುತ್ತಾರೆ. ಅವರ ಸ್ಥಳದಲ್ಲಿ ಸದ್ಯಕ್ಕೆ ಕೇಂದ್ರ ಸರಕಾರದಲ್ಲಿ ಆರೋಗ್ಯ-ಮಂತ್ರಿಗಳಾಗಿರುವ

[ಪುರವಣಿ ೨ (ಅ) ನೋಡಿರಿ]

ಕಾನಡಾ ಜಿಲ್ಲಾ ಲೋಕಲ್ಬೋರ್ಡಿನ

೧೯೪೫—೪೬ರ ಲೆಕ್ಕ-ತಪಾಸಣೆ

ಲೆಕ್ಕ-ತಪಾಸಕರ ಆಕ್ಷೇಪಗಳೂ ಬೋರ್ಡಿನ ಉತ್ತರಗಳೂ

೧೯೪೫-೪೬ನೇ ಸಾಲಿನ ಕಾನಡಾ ಜಿಲ್ಲಾ ಲೋಕಲ್ ಬೋರ್ಡಿನ ಲೆಕ್ಕವನ್ನು ತಪಾಸಿಸಿ ತಪಾಸಕರು ಒಪ್ಪಿಸಿದ ವರದಿಯೊಳಗಿನ ಮಹತ್ವದ ಕೆಲವು ಆಕ್ಷೇಪಗಳೂ ಬೋರ್ಡಿನವರು ಅವುಗಳಿಗೆ ಕೊಟ್ಟ ಉತ್ತರಗಳೂ ಲೆಕ್ಕ-ತಪಾಸಕರು ಈ ಉತ್ತರಗಳನ್ನು ಪರಿಶೀಲಿಸಿ ಬರೆದ ಕೊನೆಯ ಶರೆಗಳೂ ಜನತೆಯ ಅವಲೋಕನೆಗಾಗಿ ಈ ಕೆಳಗೆ ಕೊಡಲ್ಪಟ್ಟಿವೆ

೨ (ಅ) ಪರಿಚ್ಛೇದ ೨ (ಅ)— ೧೯೪೪-೧೯೪೫ನೇ ಸಾಲಿನ ಲೆಕ್ಕ ತಪಾಸಕರ ವರದಿಯ ೧೫ನೆಯ ಪರಿಚ್ಛೇದ— ಬಾಲೂ ವರ್ಷದಿಂದ ಪ್ರತಿ ಭೂಮಿ ಹೆಚ್ಚಿಸಿದ ಪಂತಿಕೆಯನ್ನು ಕೊಡಲು ಭಟಕಳ ಮ್ಯುನಿಸಿಪಾಲಿಟಿಯು ಒಪ್ಪಿರುತ್ತದ್ದು, ಜಿಲ್ಲಾಧಿಕಾರಿ ಕೂಡ, ತಮ್ಮ ತಾ ೨-೧-೧೯೪೭ರ ಪತ್ರದಲ್ಲಿ, ಮ್ಯುನಿಸಿಪಾಲಿಟಿಯ ಮೇಲೆ ಬಾಕಿಯುರುವ ಹಿಂದಿನ ಪಂತಿಕೆಯ ರಕಮನ್ನು ಬಿಟ್ಟುಕೊಡಲು ಬೋರ್ಡಿಗೆ ತಿಳಿಸಿದ್ದಾರೆ. ಆದರೂ ಸದರಿ ಮ್ಯುನಿಸಿಪಾಲಿಟಿಯು ತನ್ನಿಂದ ಸಲ್ಲತಕ್ಕಾದ ಹಿಂದಿನ ವರ್ಷಗಳ ಬಾಕಿ ಪಂತಿಕೆ ತಪ್ಪಿದ ಸಂಗತಿಯನ್ನು, ಹಿಂದಿನ ಅವಧಿಯ ಬಗ್ಗೆ ರಜಾ ತಮ್ಮ ಚಿಕಿತ್ಸಾಲಯಕ್ಕೆ ಹೆಚ್ಚಿನ ಧನಸಹಾಯ ಕೊಡಬೇಕೆಂದು ಆ ಮ್ಯುನಿಸಿಪಾಲಿಟಿಯು ಮಾಡಿದ ಬೇಡಿಕೆಯ ವಿಚಾರ ಮಾಡುವಾಗ, ಬೋರ್ಡಿನವರು ಲಕ್ಷದಲ್ಲಿ ತಕ್ಕೊಳ್ಳಬೇಕಾಗಿ ಸೂಚನೆಯಾದೆ

ಬೋರ್ಡಿನ ಉತ್ತರ — ತಾ ೨೦ ೯-೧೯೩೯ರ ಜಿ ಆರ್, ಜಿ ಡಿ ನಂ ೧೯೦೮ನೇ ಸರಕಾರಿ ಠರಾವಿನಲ್ಲಿ ಹಿಂದಿನ ವರ್ಷಗಳ ಪಂತಿಕೆಯನ್ನು ಕೂಡ ಹೆಚ್ಚಿಸಿದ ದರದಿಂದ ವಸೂಲ ಮಾಡಬಹುದಾಗಿ ಹೇಳಲಾಗಿಲ್ಲವಾದ್ದರಿಂದ, ಭಟಕಳ ಮ್ಯುನಿಸಿಪಾಲಿಟಿಯಿಂದ ಹಿಂದಿನ ವರ್ಷ ೧೯ ಬಗ್ಗೆ ಹೆಚ್ಚಿಸಿದ ದರದಿಂದ ಪಂತಿಕೆ ಹಣ ವಸೂಲ ಮಾಡಲು ಬೋರ್ಡಿಗೆ ಎಷ್ಟರ ಮಟ್ಟಿಗೆ ಸಾಧ್ಯವಾದೀತೆಂಬುದು ಸಂಶಯಾಸ್ಪದವಿದೆ. ಆದರೂ ಈ ಪಂತಿಕೆ ಹಣ ವಸೂಲ ಮಾಡಿ ಕೊಡಲು ಸರಕಾರಕ್ಕೆ ಬಿನ್ನವಿಸಬೇಕೆಂದು ತಾ ೫-೬-೧೯೪೭ರ ಬೋರ್ಡಿನ ಸಭೆಯಲ್ಲಿ ಒಂದು ತೀರ್ಮಾನವಾಗಿರುತ್ತದ್ದು, ತಾ ೯-೧೦-೧೯೪೭ಕ್ಕೆ ೪೩೩೬ನೇ ನಂಬರದ ಪತ್ರ ಬರೆದು ಜಿಲ್ಲಾಧಿಕಾರಿಗಳೂ ಈ ಸಂಬಂಧದಲ್ಲಿ ಯೋಗ್ಯ ಕ್ರಮ ಕೈಕೊಳ್ಳಲು ಬಿನ್ನವಿಸಲಾಗಿದೆ

ಲೆಕ್ಕ-ತಪಾಸಕರ ಕೊನೆಯ ಶರೆ — ತಾ ೨೦-೯-೧೯೩೯ನೇ ನಂಬರದ ಠರಾವಿನಲ್ಲಿ ಸರಕಾರದವರು, ಹೆಚ್ಚಿಸಿದ ದರದಿಂದ ಪಂತಿಕೆ ಕೊಡತಕ್ಕಂಥ ಮ್ಯುನಿಸಿಪಾಲಿಟಿಗಳಿಂದ ಮಾತ್ರ ಜಿಲ್ಲಾ ಲೋಕಲ್ ಬೋರ್ಡಗಳು ಆ ದರದಿಂದ ಪಂತಿಕೆ ವಸೂಲ ಮಾಡಬಹುದಾಗಿ ವಿಧಿಸಿದ್ದಾರೆ. ಭಟಕಳ ಮ್ಯುನಿಸಿಪಾಲಿಟಿಯವರು ೧೯೪೬ ೪೭ನೇ ಸಾಲಿನಿಂದ ಮಾತ್ರ ಹೆಚ್ಚಿಸಿದ ದರದಿಂದ ಪಂತಿಕೆ ಕೊಡಲು ಒಪ್ಪಿಕೊಂಡಿದ್ದರೂ, ೧೯೪೧-೪೨ರಿಂದ ಈ ಹೆಚ್ಚಿನ ದರದಿಂದ ಆ ಮ್ಯುನಿಸಿಪಾಲಿಟಿಯವರು ಪಂತಿಕೆ ಕೊಡಬೇಕಾಗಿ ಜಿಲ್ಲಾ ಲೋಕಲ್ ಬೋರ್ಡಿನವರು ಹೇಳುವದು ನ್ಯಾಯ್ಯವಾಗಲಾರದು. ಕಾನಡಾ ಜಿಲ್ಲೆಯ ಜಿಲ್ಲಾಧಿಕಾರಿ ಕೂಡ ತಮ್ಮ ತಾ ೨-೧-೧೯೪೭ರ ಪತ್ರ (ಕ್ರಮಾಂಕವಿಲ್ಲದ್ದು) ದಲ್ಲಿ ಅದೇ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಬೋರ್ಡಿನವರಿಗೆ ಹಾಗೆಯೇ ತಿಳಿಸಬೇಕಾಗಿ ನಮ್ಮ ಸೂಚನೆಯುಂಟು

• • •

೨ (ಕ) ಪರಿಚ್ಛೇದ ೨ (ಈ).— ೧೯೪೩ ೪೪ನೇ ಸಾಲಿನ ಲೆಕ್ಕ-ತಪಾಸಣೆಯ ವರದಿಯ ೮ (ಅ) ನೇ ಪರಿಚ್ಛೇದ— ಭೈರೆ ಬಾವಿಯ ಶಿಲ್ಕು ಉಳಿದಿರುವ ಸಾಮಾನಿನ ಲಿಲಾಂವನ್ನು ಆದಷ್ಟು ತ್ವರಿತ ಮಾಡಬೇಕು

ಬೋರ್ಡಿನ ಉತ್ತರ:— ಭೈರೆ ಬಾವಿಯ ಬಾಬತು ಶಿಲ್ಕು ಉಳಿದಿರುವ ಕಲ್ಲುಗಳ ಲಿಲಾಂವ-ಮಾರಾಟವನ್ನು ಅಧ್ಯಕ್ಷರು ಆ ಬದಿಗೆ ಸಂಚಾರಕ್ಕೆ ಹೋದಾಗ ಸ್ವತಃ ಮಾಡಲಿದ್ದಾರೆ. ಇಲ್ಲದಿದ್ದರೆ ಒಂದು ಪಾಳಿಯಲ್ಲಿರುವ ಆ ಭಾಗದಲ್ಲಿ ಆ ಕಲ್ಲುಗಳಿಗೆ ಯೋಗ್ಯ ಸವಾಲ ಬರುವಂತಿಲ್ಲ

ಲೆಕ್ಕತಪಾಸಕರ ಕೊನೆಯ ಶರೆ.— "ಅಧ್ಯಕ್ಷರು ತಾವೇ ಸ್ವತಃ ಭೈರೆ ಗ್ರಾಮಕ್ಕೆ ಹೋದಾಗ ಸದರಿ ಶಿಲ್ಕು ಸಾಮಾನಿನ ಲಿಲಾಂವ ಮಾಡಲಿಚ್ಛಿಸುತ್ತಾರೆ. ಸದರಿ ಗ್ರಾಮಕ್ಕೆ ಅಧ್ಯಕ್ಷರು ಶೀಘ್ರದಲ್ಲೇ ಹೋಗಿ ಆ ಸಾಮಾನಿನ ವಿಲೆ ಮಾಡಬೇಕಾಗಿ ಅವರಿಗೆ ತಿಳಿಸೋಣಾಗಬಹುದು. ಇಲ್ಲದಿದ್ದರೆ ಕಾಲ ಕಳೆದಂತೆ ಆ ಸಾಮಾನಿನ ಸಂಗ್ರಹವೂ ಸೊರಗುತ್ತ ಹೋಗುವದು

• • •

೨ (ಡ) ಪರಿಚ್ಛೇದ ೨(ಹ)— ೧೯೪೨-೪೩ನೇ ಸಾಲಿನ ಲೆಕ್ಕ ತಪಾಸಣೆ ವರದಿಯ ೧೦ನೆಯ ಪರಿಚ್ಛೇದ— ಮೇಸ್ತ್ರಿಯ ವಿರುದ್ಧ ಬೋರ್ಡಿನವರು ಯಾವ ಕ್ರಮ ಕೈಕೊಳ್ಳುತ್ತಾರೆ ಬುದನ್ನು ತ್ವರಿತವೇ ತಿಳಿಸಬೇಕಾಗಿ ಸೂಚನೆಯುದೆ

ಬೋರ್ಡಿನ ಉತ್ತರ:— ತಾ ೪-೧೨-೧೯೪೭ಕ್ಕೆ ಕೂಡಿದ ಬೋರ್ಡಿನ ಸಭೆಯಲ್ಲಿ ರಾವ ಅಚಾರ್ಯರವರ ಸಂಪೂರ್ಣ ಪ್ರಕರಣವನ್ನು ಇಡಲಾಗಿತ್ತು. ಅಧ್ಯಕ್ಷರು ಲೆಕ್ಕ ತಪಾಸಕರಿಗೆ ಸಮಕ್ಷ ಭೆಟ್ಟಿಯಲ್ಲಿ ಹೇಳಿದುದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲು ಬೋರ್ಡಿಗೆ ಆಗ ಸಾಧ್ಯವಾಗಲಿಲ್ಲ. ಆದರೂ ಸದರಿ ಪ್ರಕರಣದ ವಿಚಾರವನ್ನು ಮುಂದಿನ ಸಭೆಯ ವರೆಗೆ ಮುಂದೂಡಲಾಗಿದೆ

ಲೆಕ್ಕ-ತಪಾಸಕರ ಕೊನೆಯ ಶರಾ – ಮುಂದಿನ ಸಭೆಯಲ್ಲಾದರೂ ಯಾವದೊಂದು ಕೊನೆಯ ನಿರ್ಣಯ ಮಾಡುವಂತೆ ಬೋರ್ಡಿಗೆ ತಿಳಿಸಬೇಕಾಗಿ ಅರಿಕೆಯುಂಟು

• • •

೨ (ಗ) ಪರಿಚ್ಛೇದ ೨ (ರ):– ೧೯೪೩-೪೪ನೇ ಸಾಲಿನ ಲೆಕ್ಕ-ತಪಾಸಣೆಯ ವರದಿಯ ೭ (ಅ), ೭ (ಬ), ೭ (ಕ) ಮತ್ತು ೯ನೆಯ ಪರಿಚ್ಛೇದಗಳು.— (ಕಂಟ್ರಾಕ್ಟರನು ತುಂಬಿದ) ರಕಮಿನ ಎಷ್ಟು ಹಣ ಅವರಿಗೆ ರಿಫಂಡ ಮಾಡಬಹುದೆಂದು, ಆ ಬಗ್ಗೆ ಸ್ಪಷ್ಟ ಕಾರಣಗಳನ್ನು ಕೊಟ್ಟು, ಸ್ಪಷ್ಟೀಕರಿಸಲು ಇಂಜಿನಿಯರರಿಗೆ ತಿಳಿಸಬೇಕು

ಬೋರ್ಡಿನ ಉತ್ತರ.— ಇಂಜಿನಿಯರರು ಇತ್ತಲಾಗಿ ಸ್ಥಳದ ಮೇಲೆ ಸತಃ ಹೋಗಿ ತಪಾಸಣೆ ಮಾಡಿ, ಅಧ್ಯಕ್ಷರ ಅಭಿಪ್ರಾಯದಂತೆಯೇ ತಮ್ಮ ಅಭಿಪ್ರಾಯವಿದ್ದುದಾಗಿ ತಾ ೪-೬-೧೯೪೭ರ ೩೯೦ನೇ ನಂಬರದ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಬೋರ್ಡಿನವರು ತಾ ೫-೬-೧೯೪೭ಕ್ಕೆ ಕೂಡಿದ ಸಭೆಯಲ್ಲಿ ಆ ಪತ್ರವನ್ನು ಓದಿ (೨೩ನೇ ಠರಾವ ನೋಡಿರಿ), ಹಿಂದಿನಷ್ಟು ನಿರ್ಣಯಿಸಿದಂತೆ, ಅಧ್ಯಕ್ಷರ ಅಭಿಪ್ರಾಯದಂತೆಯೇ ಕಂಟ್ರಾಕ್ಟರರಿಗೆ ಸಲ್ಲತಕ್ಕ ಹಣದ ನಿಕಾಲೆ ಮಾಡಬೇಕೆಂದು ತೀರ್ಮಾನಿಸಿರುತ್ತಾರೆ

ಲೆಕ್ಕ-ತಪಾಸಕರ ಕೊನೆಯ ಶರೆ:— ತಾ ೨೫-೭-೧೯೪೫ರ ಠರಾವು ನೋಡಿದಲ್ಲಿ, ಡಿವ್ಹಿಜನಲ್ ಓವ್ಹರಸೀಯರರು ಕಂಟ್ರಾಕ್ಟರನಿಗೆ ಸಹಾಯಮಾಡದಕ್ಕಾಗಿಯೇ, ಸಬ್-ಓವ್ಹರಸೀಯರರು ಪ್ರಥಮತಃ ಬರೆಕೊಂಡ ಅಳತೆಗಳಲ್ಲಿ ತಿದ್ದುಪಡಿ ಮಾಡಿದ್ದರೆಂಬುದು ಸ್ಪಷ್ಟವಾಗುತ್ತಿದೆ. ತಾ. ೫-೬-೧೯೪೭ರ ಗೊತ್ತುವಳಿಯಲ್ಲಾದರೂ ಬೋರ್ಡಿನವರು ಮೇಲ್ಕಾಣಿಸಿದ ಠರಾವನ್ನು ಅನೂರ್ಜಿತಗೊಳಿಸಿ, ಸಬ್-ಓವ್ಹರಸೀಯರರು ಪ್ರಥಮತಃ ಬರೆಕೊಂಡ ಅಳತೆಗಳನ್ನು ಆಧರಿಸಿಯೇ ಕಂಟ್ರಾಕ್ಟರನ ಕೆಲಸದ ಹಣ ತೀರಿಸಬೇಕೆಂದು ಹೇಳಿರುತ್ತಾರೆ. ಡಿವ್ಹಿಜನಲ್ ಓವ್ಹರಸೀಯರ ಈ ದುಷ್ಕೃತಿಯ ಬಗ್ಗೆ ಶಿಕ್ಷೆಯ ಶಾಸನ-ಕ್ರಮ ಕೈಕೊಳ್ಳುವದು ಅಗತ್ಯ ತೋರುತ್ತದೆ. ಬೋರ್ಡಿಗೆ ಹಾಗೆ ಅಪ್ಪಣೆ ಮಾಡಬೇಕಾಗಿ ಸೂಚನೆಯುಂಟು

• • •

ಕಾರವಾರ, ೭-೪-೪೮. } D. S NAIK. ಅಧ್ಯಕ್ಷ, ಜಿ ಲೋ ಬೋರ್ಡ, ಕಾನಡಾ.

ಯೋಗ್ಯ ದರದಿಂದ ಬಟ್ಟೆ ಬೇಕಿದ್ದರೆ,

ಕುಮಟೆಯ

ಶ್ರೀ ಸತ್ಯನಾರಾಯಣ ಸ್ಟೋರ್ಸನ್ನು

ಸಂದರ್ಶಿಸಿರಿ

ಈಗ ಬಟ್ಟೆಯ ನಿಯಂತ್ರಣ ರದ್ದಾದ್ದರಿಂದ ಬಟ್ಟೆ ಅತಿ ತುಟ್ಟಿಯಾಗಿರುತ್ತದೆಂದೂ ಯೋಗ್ಯ ಬೆಲೆಗೆ ಉತ್ತಮ ಬಟ್ಟೆ ಸಿಗುವದಿಲ್ಲೆಂದೂ ಜನರು ದೂರುತ್ತಿದ್ದಾರಷ್ಟೇ. ನಮ್ಮ ಸ್ಟೋರ್ಸನ್ನು ಸಂದರ್ಶಿಸಿದವರು ಹೀಗೆ ದೂರಲಿಕ್ಕಿಲ್ಲವಾಗಿ ನಮಗೆ ಖಾತ್ರಿಯುಂಟು. ಒಮ್ಮೆ ಬಂದು ನೋಡಿರಿ. ಮದುವೆ-ಮುಂಜಿಗಳಿಗಾಗಿ ಬೇಕಾದ ಬಟ್ಟೆಯೂ ಸೊಗಸಾದ ಹೊಸ ಬಟ್ಟೆಯೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತದೆಂದು ನಿಮಗೂ ಖಾತ್ರಿಯಾಗುವದು

ಮಾಲಕರ – ವ್ಹಿ. ಎಸ್ ನಾಯಕ ಮತ್ತು ಕಂ, ಕುಮಟಾ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270   Mcn ay, 19 4-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೪೩.

ಕುಮಟಾ.- ಸೋಮವಾರ, ತಾ ೧೯—೪—೧೯೪೮

ಜಾಹೀರಾತುಗಳ ದರ:-
ಸ್ಥಳಾವಕಾಶ ೧ ಇಂಚಿಗೆ
೧ ಸಲಿಗೆ ೮ ಆಣೆಯಂತೆ.
ವಿಶಿಷ್ಟ ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಕಮ್ಮಿ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦ ೧-೦
ಹಳೇ ಸಂಚಿಕೆಗೆ ,, ೦-೪-೦
ವ್ಹಿ. ಪಿ. ಯಿಂದ ಕಳುಹಿಸುವದಿಲ್ಲ
ವ್ಹಿ. ಪಿ. ವೆಚ್ಚ ... ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

ನಿಜಾಮರು
ಅಳಿಯುವರೋ ಉಳಿಯುವರೋ?

(ನಿರೀಕ್ಷಕನು ಬರೆದುದು)

ಕಳೆದ ೩-೪ ವಾರಗಳಿಂದ ನಿಜಾಮರ ಹೈದರಾಬಾದ ಸಂಸ್ಥಾನದಲ್ಲಿ ಇತ್ತೆಹಾದುಲ-ಮುಸಲ್ಮೀನ ಸಂಸ್ಥೆಯವರೂ ಆ ಸಂಸ್ಥೆಗೊಪ್ಪಿದ ರಜಾಕಾರ ಸ್ವಯಂಸೈನಿಕರೂ ಹೂಡುತ್ತಿರುವ ದಾವಳಿ ಮತ್ತು ನಡಿಸಿರುವ ಪುಂಡಾಟಿಕೆ ಇವೇ ಭಾರತದಲ್ಲೆಲ್ಲ ಚರ್ಚೆಯ ಮುಖ್ಯ ವಿಷಯವಾಗಿವೆ. ರಜಾಕಾರರ ಅತ್ಯಾಚಾರ-ಪುಂಡಾಟಿಕೆಯನ್ನೂ ಇತ್ತೆಹಾದುಲ್ಲಿದವರ ಕಾರಸ್ಥಾನಗಳನ್ನೂ, ನಿಜಾಮರೂ ಅವರ ಸರಕಾರದವರೂ ಈ ಪುಂಡಾಟಿಕೆ, ಕಾರಸ್ಥಾನ, ಅತ್ಯಾಚಾರಗಳಿಗೆ ಕೊಡುತ್ತಿರುವ ಪ್ರತ್ಯಕ್ಷಾಪ್ರತ್ಯಕ್ಷ ಬೆಂಬಲ ಮತ್ತು ಪ್ರೋತ್ಸಾಹಗಳನ್ನೂ ಕಂಡರೆ ಬೇಗನೆ ಹೈದರಾಬಾದದ ನಿಜಾಮರ ವಿರುದ್ಧ ಭಾರತ ಸರಕಾರವು ಶಸ್ತ್ರವನ್ನೆತ್ತುವ ಪ್ರಸಂಗ ಬರುವದೆಂದು ನನಗನಿಸುತ್ತದೆ ಆದರಿಂದ ಇಂದು ಹೈದರಾಬಾದದ ಸಮಾಚಾರವನ್ನು ವಿಸ್ತಾರವಾಗಿ "ವೃತ್ತ"ದ ವಾಚಕರಿಗೆ ತಿಳಿಸಲಪೇಕ್ಷಿಸುತ್ತೇನೆ.

ಹೈದರಾಬಾದ ಸಂಸ್ಥಾನವು ಹಿಂದುಸ್ಥಾನದಲ್ಲಿ ವಿಸ್ತಾರ, ಉತ್ಪನ್ನ ಮತ್ತು ಜನಸಂಖ್ಯೆ ಇವುಗಳ ದೃಷ್ಟಿಯಿಂದ ಪ್ರಥಮ ದರ್ಜೆಯ ಸಂಸ್ಥಾನವಾಗಿರುತ್ತದೆ ಈ ಸಂಸ್ಥಾನದ ಅಧಿಪತಿಗಳಾದ ನಿಜಾಮರು ಜಗತ್ತಿನಲ್ಲೆಲ್ಲ ೧ನೇ ನಂಬರದ ಶ್ರೀಮಂತರಿರುತ್ತಾರೆ ಇವರ ಭಂಡಾರದಲ್ಲಿ ಅಬ್ಜಗಟ್ಟಲೆ ರೂಪಾಯಿ ಬೆಲೆ ಬಾಳುವ ವಜ್ರ-ರತ್ನ-ಮುತ್ತುಗಳೂ ಚಿನ್ನದ ಗಟ್ಟಿಗಳೂ ಇರುತ್ತವಂತೆ. ಆ ಶ್ರೀಮಂತಿಕೆಯ ಕಥೆಯನ್ನು ಜನರು ಕಿವಿಯಿಂದ ಕೇಳಬೇಕೇ ವಿನಹ ಅದು ಯಾರ ದೃಷ್ಟಿಗೂ ಬೀಳುವಂತಿಲ್ಲ! ನಿಜಾಮರು ಅಷ್ಟು ಕೃಪಣರಿದ್ದಾರೆ! ವಿಸ್ತಾರ ಉತ್ಪನ್ನಾದಿಗಳ ದೃಷ್ಟಿಯಿಂದ ಹೈದರಾಬಾದವು ಹಿಂದೀ ಸಂಸ್ಥಾನಗಳ ಮಾಲಿಕೆಯಲ್ಲಿ ಪ್ರಥಮ ಸ್ಥಾನವನ್ನು ಆಕ್ರಮಿಸುತ್ತಿದ್ದರೂ ಪ್ರಗತಿಯ ದೃಷ್ಟಿಯಿಂದ ಇಷ್ಟು ಹಿಂದುಳಿದ ಸಂಸ್ಥಾನವು ಭಾರತದಲ್ಲೆಲ್ಲಿಯೂ ಸಿಗಲಿಕ್ಕಿಲ್ಲ. ಅಲ್ಲಿಯ ರಾಜ್ಯಭಾರವು ಹಳೆಯ ಕಾಲದ ಮೋಗಲಾಯಿಯ ರಾಜ್ಯಭಾರದಂತೆಯೇ ನಡೆದಿದೆ ಇನ್ನೂ ನಿಜಾಮರ ರಾಜ್ಯಭಾರಕ್ಕೆ ಜನರು ಮೋಗಲಾಯಿಯೆಂದೇ ಕರೆಯುತ್ತಾರೆ ಈ ಸಂಸ್ಥಾನದಲ್ಲಿ ೧ ಕೋಟಿ ೭೦ ಲಕ್ಷ ಜನಸಂಖ್ಯೆಯಿರುವದು ಇವರಲ್ಲಿ ನೂರಕ್ಕೆ ೧೩ ರಷ್ಟೇ ಮುಸಲ್ಮಾನರು, ಉಳಿದವರು ಮುಸಲ್ಮಾನೇತರರು, ಅಧಿಕ ಹಿಂದುಗಳು ಆದರೂ ಸರಕಾರ ದರಬಾರದಲ್ಲಿ ಮುಸಲ್ಮಾನರದೇ ಪ್ರಾಬಲ್ಯ ಹೆಚ್ಚಿದೆ ೨ ವರ್ಷಗಳಾಚೆ ನಿಜಾಮರು ರಾಜ್ಯದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿದರು ಆದರೆ ಅವರು ರಚಿಸಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮುಸಲ್ಮಾನರದೇ ಬಹುಮತವಿದೆ! ಇತ್ತ ಕೆಲವು ವರ್ಷಗಳಿಂದ ಮುಸ್ಲಿಮ್ ಲೀಗಿನ ಸರ್ವಾಧಿಕಾರಿಗಳಾದ ಬ್ಯಾ|| ಜಿನ್ನಾರವರ ತಂತ್ರದಿಂದಲೇ ನಿಜಾಮರ ಕಾರಭಾರ ನಡೆದಿದೆಂದೂ ಈಗಲೂ ನಡೆಯುತ್ತಿದೆಂದೂ ಹೇಳಬಹುದು. ಆದರಿಂದಲೇ ಈ ಸಂಸ್ಥಾನದ ದಿವಾಣರಾಗಿ ನೇಮಕಪಟ್ಟ ಸರ್ ಮಿರ್ಜಾ ಇಸ್ಮಾಯಿಲರೂ ಛತ್ತಾರಿಯ ನವಾಬರೂ ಅಧಿಕಾರ-ಸ್ವೀಕಾರ ಮಾಡಿದ ಕೆಲವೇ ದಿನಗಳಲ್ಲಿ ರಾಜೀನಾಮೆ ಕೊಟ್ಟು ಹೊರಟು ಹೋಗುವ ಪ್ರಸಂಗ ಬಂತೆಂಬುದನ್ನು ಮರೆಯಬಾರದು. ಈ ಸಂಸ್ಥಾನದಲ್ಲಿ ಹಿಂದುಗಳು ಬಹುಸಂಖ್ಯರಿದ್ದರೂ ಸಂಸ್ಥಾನದ ವಿಶಿಷ್ಟ ಪರಿಸ್ಥಿತಿಯ ದೃಷ್ಟಿಯಿಂದ ಮುಸಲ್ಮಾನರಿಗೆ ಸಂಸ್ಥಾನದ ಕಾಯದೆ-ಮಂಡಳದಲ್ಲೂ ಸರಕಾರದಲ್ಲೂ ಕನಿಷ್ಠ ಪಕ್ಷ ಸಮಪಾಲು ಸಿಗುವದು ಅವಶ್ಯ ಮತ್ತು ನ್ಯಾಯ್ಯವಿರುತ್ತದಾಗಿ ಬ್ಯಾ|| ಜಿನ್ನಾರವರು ೨ ವರ್ಷಗಳ ಹಿಂದೆ ವಾದಿಸಿದ್ದುಂಟು ಸಂಸ್ಥಾನದಲ್ಲಿ ಈ ಪರಿ ಮುಸಲ್ಮಾನರಿಗೆ ಸಿಕ್ಕಿರುವ ಪ್ರಾಬಲ್ಯ, ಪ್ರತಿಷ್ಠೆ ಮತ್ತು ಅಧಿಕಾರವನ್ನು ಕಾಯ್ದುಕೊಂಡು, ಈ ಸಂಸ್ಥಾನವನ್ನು ಮುಸಲ್ಮಾನಿ ರಾಜ್ಯವನ್ನಾಗಿ ಕಾಪಾಡಿಕೊಳ್ಳುವ ಉದ್ದೇಶದಿಂದ ಅಲ್ಲಿ ಇತ್ತೆಹಾದುಲ್-ಮುಸಲ್ಮೀನ ಎಂಬ ಸಂಸ್ಥೆ ಸಂಘಟಿಸಲ್ಪಟ್ಟಿದೆ ಇತ್ತೀಚೇಗೆ ಈ ಸಂಸ್ಥೆಯು ತನ್ನ ಸಂಘಟನೆಯನ್ನು ಪ್ರಬಲಗೊಳಿಸಿಕೊಂಡು ಯುದ್ಧಸ್ವರೂಪವನ್ನು ಧರಿಸಿದೆ. ಕಾಶಿಮ ರಝ್ವಿ ಎಂಬವರು ಅದರ ಅಧ್ಯಕ್ಷರಿದ್ದಾರೆ ಈ ಸಂಸ್ಥೆಯು ರಜಾಕಾರರೆಂಬ ಸ್ವಯಂಸೇವಕರ ಪಥಕಗಳನ್ನು ಸಂಘಟಿಸಿ ಅವರಿಗೆ ಶಸ್ತ್ರ ಶಿಕ್ಷಣವನ್ನು ಸಹ ಕೊಡುತ್ತದೆ ಆಚೆಯ ವಾರ ಈ ರಜಾಕಾರ ಸ್ವಯಂಸೈನಿಕರು "ರಜಾಕಾರ ದಿನ"ವನ್ನು ಆಚರಿಸಿ ಹೈದರಾಬಾದದಲ್ಲೂ, ಸಿಕಂದರಾಬಾದದಲ್ಲೂ ಕೂಚು ಕವಾಯತು, ಪ್ರದರ್ಶನ ಮೊದಲಾದವುಗಳನ್ನು ನಡಿಸಿದ್ದು ನೋಡಿದವರು ಕಾಶಿಮ ರಝ್ವಿಯವರಲ್ಲಿ ಹಿಟ್ಲರನ ಆವೇಶವನ್ನೂ, ಅವರ ಸ್ವಯಂಸೈನಿಕರಲ್ಲಿ ನಾಝಿ ಪಕ್ಷದ ಸ್ವಯಂಸೈನಿಕರ ಪ್ರತಿಬಿಂಬವನ್ನೂ ಕಾಣುತ್ತಿದ್ದರೆಂದು ಹೇಳುತ್ತಾರೆ. ಈ ರಝ್ವಿಯವರ ಬಗ್ಗೆ ಅವರ ಅನುಯಾಯಿಗಳ ಬಗ್ಗೆ ವಿಲಾಯತಿಯೊಳಗಿನ "ನ್ಯೂ ಸ್ಟೇಟ್ಸ್‌ಮನ್ ಎಂಡ್ ನೇಶನ್" ಎಂಬ ಪತ್ರಿಕೆಯಲ್ಲಿ ಕಿಂಗಸ್ಲೀ ಮಾರ್ಟಿನ ಎಂಬ ಪತ್ರಿಕಾ ಪ್ರತಿನಿಧಿಗಳು ಬರೆಯುತ್ತಾರೇನೆಂದರೆ — "ನಿಜಾಮರ ಸುತ್ತಲೂ ಧರ್ಮಾಂಧ ಮುಸಲ್ಮಾನರು ತುಂಬಿದ್ದಾರೆ ನಿಜಾಮರು ಭಾರತದ ಒಕ್ಕೂಟದಲ್ಲಿ ಸೇರಿದರೆ ಈ ಜನರು ಒಂದೊಮ್ಮೆ ನಿಜಾಮರ ಕೊಲೆ ಮಾಡಲಿಕ್ಕೂ ಹಿಂಜರಿಯುವಂತಿಲ್ಲ! ಹೈದರಾಬಾದದಲ್ಲಿ ಇಂದು ಸರ್ವಸತ್ತಾಧೀಶರು ನಿಜಾಮರಲ್ಲ ಇತ್ತೆಹಾದುಲ್ ಸಂಸ್ಥೆಯ ಮುಖಂಡ ರಝ್ವಿಯವರಿರುತ್ತಾರೆ ಇತ್ತೆಹಾದುಲದಲ್ಲಿ ಈಗಾಗಲೇ ೨ ಲಕ್ಷ ಸಶಸ್ತ್ರ ಮುಸಲ್ಮಾನರಿದ್ದಾರೆ ಈ ಇತ್ತೆಹಾದವೇ ಇಂದು ಹೈದರಾಬಾದದ ನಿಯಂತ್ರಣವನ್ನು ಮಾಡುತ್ತಿರುವಂತೆ ಕಂಡಿತು" ಕಿಂಗಸ್ಲೀಯವರಿಗೂ ರಝ್ವಿಯವರಿಗೂ ಒಂದು ದಿನ ಮಾತುಕತೆಯಾದಾಗ ರಝ್ವಿಯವರು ತಮ್ಮ ಹೃದ್ಗತವನ್ನು ಹೊರಗೆಡಹಿದರು "ಇಲ್ಲಿ (ಹೈದರಾಬಾದದಲ್ಲಿ) ಪ್ರಜಾಪ್ರಭುತ್ವಕ್ಕೆ ಅನುಕೂಲ ಪರಿಸ್ಥಿತಿಯಿಲ್ಲ ಹೈದರಾಬಾದವು ಭಾರತದ ಒಕ್ಕೂಟದಲ್ಲಿ ಸೇರುವದೂ ಬೇಡ, ಒಕ್ಕೂಟದವರು ಏನಾದರೊಂದು ಸೌಲಭ್ಯ ಕೊಟ್ಟರೂ ಕೂಡ ಇಲ್ಲಿಯ ಮುಸಲ್ಮಾನರ ಅಧಿಕಾರಕ್ಕೆ ಚ್ಯುತಿ ಬರುವದು, ಮುಸಲ್ಮಾನರು ದಾಳಿಗಾರರು ಮುಸಲ್ಮಾನರ ರಾಜಕೀಯ ಅಧಿಕಾರ ಕಸಿದುಕೊಂಡರೆ ಅವರ ಸರ್ವನಾಶ ಮಾಡಿದಂತೆಯೇ ಸರಿ" ಎಂದು ಮುಂತಾಗಿ ರಝ್ವಿಯವರು ತಮ್ಮ ಕಡೆ ನುಡಿದರೆಂದು ಕಿಂಗಸ್ಲೀ ಮಾರ್ಟಿನರು ಬರೆಯುತ್ತಾರೆ ರಝ್ವಿಯವರ ಅನುಯಾಯಿಗಳು ನಡಿಸಿದ ಕೊಲೆ-ಸುಲಿಗೆ ಅತ್ಯಾಚಾರಗಳನ್ನು ಕಿಂಗಸ್ಲೀ ಮಾರ್ಟಿನರು ಸ್ವತಃ ನೋಡಿರುತ್ತಾರಂತೆ ಹೈದರಾಬಾದದಲ್ಲಿ ನಡೆದಿರುವ ಅತ್ಯಾಚಾರಗಳಿಗೆಲ್ಲ ಹಿಂದುಗಳೂ ಸಾಮ್ಯವಾದಿಗಳೂ ಹೊಣೆಗಾರರಿರುತ್ತಾರೆಂದು ಇಂದು ನಿಜಾಮರ ಸರಕಾರ ಹೇಳುತ್ತಿದೆ! ರಝ್ವಿಯವರೂ ಮಾರ್ಟಿನರಿಗೆ ಹಾಗೆಯೇ ಹೇಳಿ, ಬೇಕಾದರೆ ಒಳದೇಶದಲ್ಲಿ ಸಂಚಾರ ಮಾಡಿ ಅನುಭವ ಕೊಳ್ಳಬಹುದಾಗಿ ಆಹ್ವಾನ ಕೊಟ್ಟರಂತೆ ಮಾರ್ಟಿನರು ಆ ಆಹ್ವಾನವನ್ನು ಸ್ವೀಕರಿಸಿ ನಿಜಾಮರಾಜ್ಯದಲ್ಲಿ ಸಂಚಾರ ಮಾಡಿದರು. ಆಗ ಕಂಡ ಅನುಭವಗಳನ್ನು ಅವರು ಈ ರೀತಿ ಬಣ್ಣಿಸಿದ್ದಾರೆ — ರಝ್ವಿಯವರು ಹೇಳಿದುದು ನಿಜವೆಂದು ಎಲ್ಲಿಯೂ ಕಂಡುಬರಲಿಲ್ಲ ನನ್ನೊಡನೆ ರಝ್ವಿಯವರು ಮಾಡಿದ ಶಾಂತಿಯ ಧ್ವನಿಯೇ ಬೇರೆ ತಮ್ಮ ಅನುಯಾಯಿಗಳೆದುರಾಗ ಅವರ ಕಡೆ ಮಾಡುವ ಧ್ವನಿಯೇ ಬೇರೆ, ನಾನು ಸಂಚರಿಸಿದಲ್ಲೆಲ್ಲ ಇತ್ತೆಹಾದದವರು ಸುಲಿಗೆ-ಅತ್ಯಾಚಾರಗಳನ್ನು ನಡಿಸಿದ್ದುದು ಕಂಡು ಬಂತು. ನಾನು ಕಂಡ ಒಂದು ಹಳ್ಳಿಯಲ್ಲಿ ೧೦೦೦ ಜನವಸತಿಯುಂಟು ಈ ಹಳ್ಳಿಯ ಮೇಲೆ ಮುಸಲ್ಮಾನರು ೩ ಸಲ ದಾಳಿ

(೪ನೇ ಪುಟದ ಮೇಲೆ ಮುಂದುವರಿದಿದೆ)

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು, ಇಂಡಿಯದಲ್ಲಿ ಸಾಂಘೀಕರಿಸಿದ್ದು)

ಹೆಡ್ ಆಫೀಸು: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, **ಕುಂದಾಪುರ.**

ತೆತ್ತ ಮೂಲಧನ ರೂ ೭ ೭೧,೦೦೦/— ಕ್ಕೂ ಮಿಕ್ಕಿದೆ

ಕೂಡಿರಿಸಲ್ಪಟ್ಟ ನಿಧಿ ರೂ ೧,೦೦,೦೦೦/— ಕ್ಕೂ ಮೀರುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ ರಿಂದ ೩ ವರೆ ಬಡ್ಡಿಯಂತೆ ಅಂಗೀಕರಿಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ ೧೫-೩-೧೯೪೮

ಕೆ ವಿಟ್ಠಲದಾಸ ಶೆಣೈ,
ಮೆನೇಜಿಂಗ ಡೈರೆಕ್ಟರ

ಸುದ್ದಿಗಳ ಸಂದೂಕ.

— ಕ್ಲೆಂಟಿಟ್, ಅಂಜನ ಮುಂತಾದ ಕೆಲವು ಸಾಧನಗಳ ದ್ವಾರಾ ಮೃತಾತ್ಮರನ್ನು ಕರೆಯಿಸಿ ಅವರ ಕಡೆ ಮಾತಾಡಬರುತ್ತದೆಂದು ಭಾವಿಕರು ನಂಬುತ್ತಾರೆ ಅದರಂತೆ ಕೆಲವು ಭಾವಿಕರು ಕರಾಚಿಯಲ್ಲಿ ಕಳೆದ ವಾರ ಪೂಜ್ಯ ಮಹಾತ್ಮಾ ಗಾಂಧಿಯವರ ಆತ್ಮಕ್ಕೆ ಆವ್ಹಾನ ಕೊಟ್ಟು, ಅವರೊಡನೆ ಮಾತುಕತೆಯಾಡಿದರೆಂಬ ಸುದ್ದಿ ಪ್ರಕಟವಾಗಿದೆ ಮಹಾತ್ಮಾಜಿಯವರು ಈ ಮಾತುಕತೆಯಲ್ಲಿ, ತಮ್ಮ ಶರೀರ ತೀರ ಜೀರ್ಣವಾಗಿತ್ತಾದ್ದರಿಂದ ಅದರ ನಾಶವಾದದ್ದು ಒಳಿತಾಯಿತೆಂದೂ, ತಮ್ಮ ಕರ್ತವ್ಯಕರ್ಮ ಮಾಡುತ್ತಿರುವಾಗಲೇ ತಮಗೆ ಮೃತ್ಯು ಬಂದುದು ಸಂತೋಷಪ್ರದವೆಂದೂ, ಸಾಯುವ ಮುಂಚೆ ತಮಗೆ ಪಾಕಿಸ್ತಾನಕ್ಕೆ ಹೋಗಬೇಕೆಂಬ ಇಚ್ಛೆಯಿದ್ದಿತ್ತೆಂದೂ, ಅದು ಸಾಧ್ಯವಾಗದ್ದರಿಂದ ಮುಂದೆ (ಪುನರ್ಜನ್ಮಕ್ಕೆ ಒದಗಿದಾಗ) ಸೂಫಿ ಸಾಧುಗಳ ಕರ್ಮಭೂಮಿಯಾಗಿ ಪವಿತ್ರವಾಗಿರುವ ಸಿಂಧ ಪ್ರಾಂತದಲ್ಲಿ ಹುಟ್ಟಿಬರಬೇಕೆಂದು ತಮ್ಮ ಇಚ್ಛೆಯಿರುತ್ತದೆಂದೂ ನುಡಿದರಾಗಿ ಅವರೊಡನೆ ಮಾತಾಡಿದವೆಂದು ಹೇಳುವ ಭಾವಿಕರು ಹೇಳುತ್ತಾರೆ

— ಮುಂದಿನ ಶನಿವಾರ, ರವಿವಾರ (ತಾ ೨೯ ಮತ್ತು ೩೦) ಮುಂಬಯಿಯಲ್ಲಿ ಅಖಿಲ ಭಾರತೀಯ ಕಾಂಗ್ರೆಸ ಸಮಿತಿಯ ಅಧಿವೇಶನ ಕೂಡಲಿದೆ ಕಾಂಗ್ರೆಸ್ಸಿನ ಹೊಸ ಘಟನೆಯ ವಿಚಾರ, ಸಮಾಜಸತ್ತಾವಾದಿಗಳು ಕಾಂಗ್ರೆಸ ಬಿಟ್ಟು ಪೃಥಕ್ ಆದುದರ ವಿಚಾರ ಮುಂತಾದ ಅತಿ ಮಹತ್ವದ ಪ್ರಶ್ನೆಗಳು ಈ ಅಧಿವೇಶನದಲ್ಲಿ ಚರ್ಚಿಸಲ್ಪಡುವವು ಈ ಅಧಿವೇಶನಕ್ಕಾಗಿ ಮುಂಬಯಿ ಪ್ರಾಂ। ಕಾಂ। ಸಮಿತಿಯವರು ಬಗೆಬಗೆಯ ಸೌಕರ್ಯಗಳುಳ್ಳ ಮತ್ತು ೫೦,೦೦೦ ಜನರಿಗೆ ಕೂತುಕೊಂಡು ಸಮಿತಿಯ ಕಾರ್ಯಕಲಾಪಗಳನ್ನು ನೋಡಲು, ಕೇಳಲು ಅನುಕೂಲವಾಗುವಂಥ ವಿಶಾಲ ಮಂಟಪವನ್ನು ನಿರ್ಮಿಸಿದ್ದಾರೆ "ಗಾಂಧಿನಗರ"ವೆಂದು ಅದಕ್ಕೆ ಹೆಸರನ್ನಿಡಲಾಗಿದೆ ಸಮಿತಿಯ ಅಧಿವೇಶನ ಮುಗಿದ ಮರುದಿನ ಈ ಮಂಟಪದಲ್ಲಿ ದಕ್ಷಿಣೋತ್ತರ ಭಾರತಗಳ ವಿಖ್ಯಾತ ಗಾಯಕ ವಾದಕರ ಗಾಯನ-ವಾದನಗಳ ಕಾರ್ಯಕ್ರಮಗಳನ್ನೇರ್ಪಡಿಸುವ ವ್ಯವಸ್ಥೆಯಾಗಿದೆ ಈ ಕಾರ್ಯಕ್ರಮಗಳಿಂದ ಹುಟ್ಟುವ ಉತ್ಪನ್ನವನ್ನೂ, ಕಾಂಗ್ರೆಸ ಸಮಿತಿಯ ಅಧಿವೇಶನದ ಪ್ರೇಕ್ಷಕರ ಕಡೆಯಿಂದ ವಸೂಲಾಗುವ ಶುಲ್ಕದೊಳಗಿಂದ ಅಧಿವೇಶನದ ವೆಚ್ಚ ತೆಗೆದು ಉಳಿಯಬಹುದಾದ ಉಳಿತಾಯದ ಹಣವನ್ನೂ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಅರ್ಪಿಸಲ್ಪಡುವದೆಂದು ಮುಂಬಯಿ ಪ್ರಾಂ। ಕಾಂ। ಸಮಿತಿಯವರು ಜಾಹೀರಪಡಿಸಿರುತ್ತಾರೆ

— ಅ। ಭಾ॥ ಕಾಂ॥ ಸಮಿತಿಯ ಪೂರ್ವಭಾವಿಯಾಗಿ ಕೂಡಬೇಕಾಗಿರುವ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆಯು ಇದೇ ಬರುವ ಗುರುವಾರ ಮುಂಬಯಿಯಲ್ಲಿ ಕೂಡುವದಾಗಿ ಒಮ್ಮೆ ಪ್ರಕಟವಾಗಿತ್ತು ಆದರೆ ಪಂ। ನೆಹರೂರವರಿಗೆ ಅನುಕೂಲವಿರುವ ಸ್ಥಳದಲ್ಲಿ ಸದರಿ ಮಂಡಳದ ಸಭೆ ಕೂಡಿಸುವದು ಇಷ್ಟ ಮತ್ತು ಹಿತಕರವಾಗುತ್ತದೆಂದು ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರ ಅಪ್ಪಣೆಯಾದಂತೆ ಪಂಡಿತಜಿಯವರ ಅನುಕೂಲತೆಗಾಗಿ ಮಂಡಳದ ಸಭೆಯು ನಾಡದು ದಿಲ್ಲಿಯಲ್ಲಿ ಕೂಡುವದು

— ಭಾರತವು ಬ್ರಿಟಿಶ ರಾಷ್ಟ್ರಗಳ ಭಾಗೀದಾರಿಯಲ್ಲಿ ಭಾಗಿದಾರವಾಗಿ ಉಳಿಯಬೇಕೋ ಬೇಡವೋ ಆ ಭಾಗೀದಾರಿಯ ಸಂಬಂಧವನ್ನು ಸಂಪೂರ್ಣವಾಗಿ ಕಡಕೊಂಡು ಸ್ವತಂತ್ರ ರಾಷ್ಟ್ರವಾಗಿ ಉಳಿಯಬೇಕೋ ಎಂಬ ಮಹತ್ವದ ಸಮಸ್ಯೆಯು ಈ ವಾರ ಕೂಡಲಿರುವ ಕಾಂಗ್ರೆಸ ಕಾರ್ಯಕಾರಿ ಮಂಡಳದ ಹಾಗೂ ಅ। ಭಾ। ಕಾಂ। ಸಮಿತಿಯ ಸಭೆಗಳಲ್ಲಿ ಚರ್ಚೆಗೆ ಬರುವದೆಂದು ಸುದ್ದಿಯುಂಟು ಕಳೆದ ವರ್ಷ ಹಿಂದಿ ಘಟನಾ ಸಮಿತಿಯು, "ಸ್ವತಂತ್ರ, ಅನಿಯಂತ್ರಿತ (sovereign) ಪ್ರಜಾಸತ್ತಾತ್ಮಕ ಜನತಾ ರಾಜ್ಯ (republic)ವನ್ನು ನಿರ್ಮಿಸಿಕೊಳ್ಳುವದೇ ಭಾರತದ ಧ್ಯೇಯವಿರುತ್ತದೆಂದು" ಒಂದು ಠರಾವನ್ನು ಮಾಡಿತ್ತು ಆದರೆ ಸ್ವತಂತ್ರ ಭಾರತದ ರಾಜ್ಯಘಟನೆ ನಿಶ್ಚಯಗೊಳಿಸಲು ಘಟನಾ ಸಮಿತಿಯಿಂದ ನೇಮಿಸಲ್ಪಟ್ಟ ಡಾ ಅಂಬೇಡಕರ ಸಮಿತಿಯು ತಯಾರಿಸಿರುವ ಘಟನೆಯ ಮಸೂದೆಯ ಪ್ರಾಸ್ತಾವಿಕ ಭಾಗದಲ್ಲಿ "ಸ್ವತಂತ್ರ, ಅನಿಯಂತ್ರಿತ, ಪ್ರಜಾಸತ್ತಾತ್ಮಕ ರಾಜ್ಯ (state) ನಿರ್ಮಿಸಿಕೊಳ್ಳುವದೇ ಭಾರತದ ಧ್ಯೇಯ" ವಿರುತ್ತದೆ ಎಂಬ ಹೊಸ ಶಬ್ದಯೋಜನೆಯನ್ನು ಸೇರಿಸಿದ್ದಾರೆ ಡಾ ಅಂಬೇಡಕರ ಸಮಿತಿಯವರು ಮೊದಲಿನ "ರಿಪಬ್ಲಿಕ" (ಜನತಾ ರಾಜ್ಯ) ಶಬ್ದವನ್ನು ಅಳಿಸಿ "ಸ್ಟೇಟ (ರಾಜ್ಯ) ಎಂಬ ಶಬ್ದವನ್ನು ಸೇರಿಸಿದ ಬಗ್ಗೆ ಎದುರಿಗೆ ಈಗ ನಾಡಿನಲ್ಲಿ ಸುದೀರ್ಘ ಚರ್ಚೆ ನಡೆದಿದೆ ಈ ಶಬ್ದಗಳಲ್ಲಿ ವಿಶೇಷ ಅಭ್ಯಂತರವಿಲ್ಲೆಂದು ಕೆಲವರು ವಾದಿಸಿದರೆ, ಅವುಗಳೊಳಗೆ ದಕ್ಷಿಣೋತ್ತರ ಧ್ರುವಗಳಷ್ಟು ಅಂತರವಿದೆಯೆಂದು ಮತ್ತೆ ಕೆಲವರು ಪ್ರತಿಪಾದಿಸುತ್ತಾರೆ ಸ್ವತಃ ಡಾ ಅಂಬೇಡಕರರು ಸ್ವತಃ ಮುಂದಾಗಿ ಈ ಶಬ್ದಪ್ರಯೋಗದ ಸ್ಪಷ್ಟೀಕರಣ ಮಾಡಿದ್ದಾರೆ ಭಾರತವು ಸ್ವತಂತ್ರವಾಗುವದು ನಿಜ ಆದರೆ ಭಾರತವು ಬ್ರಿಟಿಶರ ಸಂಬಂಧವನ್ನು ಕಡಕೊಂಡು ಪ್ರತ್ಯೇಕವಾಗಿ ಉಳಿಯಬೇಕೋ ಯಾ ಬ್ರಿಟಿಶ ರಾಷ್ಟ್ರಗಳ ಪಾಲುಗಾರಿಕೆಯಲ್ಲಿ ಇದ್ದಂತೆ ಬ್ರಿಟಿಶ ರಾಷ್ಟ್ರ ಸಂಘದಲ್ಲೇ ಉಳಿಯಬೇಕೋ ಎಂಬುದರ ನಿಷ್ಕರ್ಷವಿನ್ನೂ ಆಗಿಲ್ಲ, ಆದಿನ್ನೂ ಆಗುವದುಂಟು, "ರಿಪಬ್ಲಿಕ" ಶಬ್ದವನ್ನು ಬಳಸಿದರೆ ಬ್ರಿಟಿಶರ ಸಂಬಂಧ ಕಡಕೊಳ್ಳಬೇಕೆಂದು ನಿರ್ಣಯಿಸಿದಂತಾಗುತ್ತದೆ, ಅದಕ್ಕಾಗಿಯೇ ನಾವು ಆಯರ್ಲೆಂಡದ ರಾಜ್ಯಘಟನೆಯೊಳಗಿನ ಶಬ್ದಯೋಜನೆಯನ್ನು ಆರಿಸಿ, ಆ ಸಂಬಂಧ ಕಡಕೊಳ್ಳಬೇಕೋ ಇಟ್ಟುಕೊಳ್ಳಬೇಕೋ ಎಂಬ ಪ್ರಶ್ನೆಯು ಅನಿರ್ಣೀತ (open) ಉಳಿಯುವಂತೆ ಮಾಡಿರುತ್ತೇವೆ, ಎಂದು ಡಾ ಅಂಬೇಡಕರರು ಸ್ಪಷ್ಟ ಮಾಡಿದ್ದಾರೆ ನಾವು ಭಾರತೀಯರು ಬ್ರಿಟಿಶರ ಸಂಬಂಧ ಕಡಕೊಳ್ಳಬಾರದೆಂದೂ, ನಮ್ಮ ಮುಂದಿನ ಕಾಲವು ವಿವಿಧ ಗಂಡಾಂತರಗಳಿಂದ ತುಂಬಿರುವದರಿಂದ ಬ್ರಿಟಿಶ ರಾಷ್ಟ್ರಸಂಘದಲ್ಲಿ ಉಳಿಯುವದೇ ನಮಗೆ ಕ್ಷೇಮಕರವೆಂದೂ ಡಾ। ಅಂಬೇಡಕರರ ಅಭಿಪ್ರಾಯವುಂಟು ಡಾ॥ ಅಂಬೇಡಕರ (ಘಟನೆಯ ಮಸೂದೆ ತಯಾರಿಸಿದ) ಸಮಿತಿಯ ಓರ್ವ ಸದಸ್ಯರಾಗಿದ್ದ (ಸರ್) ಶ್ರೀ ಅಲ್ಲಾಡಿ ಕೃಷ್ಣಸ್ವಾಮಿಯವರು ವಿರುದ್ಧಾಭಿಪ್ರಾಯದವರಿದ್ದಾರೆ ಬ್ರಿಟಿಶ ರಾಷ್ಟ್ರ ಸಂಘದಲ್ಲಿ ಇನ್ನೂ ವರ್ಣಾಭಿಮಾನ ವರ್ಣದ್ವೇಷಗಳು ಜಾಗೃತವಿರುವದರಿಂದ ಆ ಸಂಘದಲ್ಲಿ ಭಾರತವು ಉಳಿಯಬಯಸುವದು ಉಚಿತವಲ್ಲೆಂದೂ ಉಳಿದರೆ ಕ್ಷೇಮವಾಗಲಿಕ್ಕಿಲ್ಲೆಂದೂ ಅವರು ಖಂಡತುಂಡವಾಗಿ ನುಡಿದಿದ್ದಾರೆ ಪಂ ಜವಾಹರರ ಭೂಮಿಕೆಯು ಇನ್ನೂ ಸ್ಪಷ್ಟವಾಗಿಲ್ಲ ಆದರೆ ಮುಂಬರುವ ಮಹಾಯುದ್ಧದಲ್ಲಿ, (ಅರ್ಥಾತ್ ಬ್ರಿಟಿಶ-ಅಮೇರಿಕೆಯವರಿಗೂ ರುಶ್ಯರಿಗೂ ಎಸಗುವ ಯುದ್ಧದಲ್ಲಿ ಇಲ್ಲವೆ ಅವರೊಳಗಿನ ತಂಟೆಯಲ್ಲಿ) ಭಾರತವು ಯಾವ ಪಕ್ಷವನ್ನೂ ಸೇರಲಿಕ್ಕಿಲ್ಲ ಅಥವಾ ಎತ್ತಿ ಹಿಡಿಯಲಿಕ್ಕಿಲ್ಲ ಎಂದು ಅವರು ಮೊನ್ನೆ ಮೊನ್ನೆ ಸಾರಿರುವದರಿಂದ, ಅವರು ಬ್ರಿಟಿಶರ ಸಂಬಂಧವನ್ನು ತುಂಡರಿಸಿಕೊಳ್ಳಬೇಕೆಂಬ ಮತದವರಿರುತ್ತಾರೆಂದು ತಿಳಿಯಬೇಕಾಗುತ್ತದೆ ಬ್ರಿಟಿಶರ ಸಂಬಂಧದ ಈ ಪ್ರಶ್ನೆಯು ಅ ಭಾ। ಕಾಂ। ಸಮಿತಿಯ ಮುಂದೆ ಬಂದಾಗ, ಅಲ್ಲಿ ಅದರ ಕೊನೆಯ ನಿರ್ಣಯ — ಘಟನಾ ಸಮಿತಿಯಲ್ಲಿ ಕಾಂಗ್ರೆಸ್ಸಿಗರ ಹೆಚ್ಚಳವಿರುವದರಿಂದ ಮತ್ತು ಅ। ಭಾ। ಕಾಂ। ಸಮಿತಿಯ ನಿರ್ಣಯವೇ ಅಲ್ಲಿ ಸ್ವೀಕೃತವಾಗುವದರಿಂದ ಅ॥ ಭಾ॥ ಕಾಂಗ್ರೆಸ ಸಮಿತಿಯ ನಿರ್ಣಯವೇ ಕೊನೆಯದೆಂದು ಹೇಳಬೇಕಾಗಿದೆ — ಆಗುವದು ಆದರೆ ಈ ನಿರ್ಣಯವು ಮುಂದೂಡಲ್ಪಡುವ ಸಂಭವವೂ ಉಂಟು ಇದೇ ಬರುವ ಜೂನ ತಿಂಗಳಲ್ಲಿ ಲಂಡನ್ನಿನಲ್ಲಿ ಸೈಮಿತ್ರ ಏಶಿಯಾದ ಸೈನ್ಯ ಒಪ್ಪಂದದ ಮಾತುಕತೆಯಾಗಲಿದೆಯೆಂದೂ ಬ್ರಿಟನ್ನ, ಭಾರತ ಮತ್ತು ಆಸ್ಟ್ರೇಲಿಯಾ ಈ ೩ ರಾಷ್ಟ್ರಗಳೊಳಗೆ, ಬಾಹ್ಯರ ಆಕ್ರಮಣವನ್ನು ಎದುರಿಸುವದಕ್ಕಾಗಿ, ಒಂದು ಒಪ್ಪಂದ ಮಾಡಿತರಲು ಮೌಂಟ-ಬ್ಯಾಟನ್ ದೊರೆಗಳು ಅಪೇಕ್ಷಿಸುತ್ತಾರೆಂದೂ, ಈ ಮಾತುಕತೆಗಳಲ್ಲಿ ಭಾಗ ವಹಿಸುವದಕ್ಕಾಗಿ ಪಂ॥ ಜವಾಹರಲಾಲರು (ಕಾರ್ಯಬಾಹುಳ್ಯದ ಮೂಲಕ ದೇಶ ಬಿಟ್ಟು ವಿದೇಶಗಳಿಗೆ ಹೋಗಲು ಪುರಸೊತ್ತು ಸಿಗದಿರುತ್ತಿದ್ದಾಗ್ಯೂ) ಲಂಡನ್ನಿಗೆ ಅಲ್ಪಾವಧಿಯ ಭೆಟ್ಟಿ ಕೊಡುವರೆಂದೂ "ಇಂಡಿಯನ್ ಪ್ರೆಸ್ ಎಸೋಸಿಯೇಶನ್" ಸುದ್ದಿ ಸಂಸ್ಥೆಯು ಸುದ್ದಿ ಕೊಟ್ಟಿದೆ ಲಂಡನ್ನಿನ ಈ ಮಾತುಕಥೆಗಳಲ್ಲಿ ಬ್ರಿಟನ ಭಾರತಗಳ ಸಂಬಂಧದ ಚರ್ಚೆಯೂ ಆಗುವದು ಸಾಹಜಿಕವಿದೆ ಈ ಮಾತುಕತೆಗಳಾಗಿ ಬ್ರಿಟಿಶ ರಾಜಕಾರಣಿಗಳ ಮತ್ತು ರಾಜ್ಯಧುರಂಧರರ ಅಂತರಂಗ ಚನ್ನಾಗಿ ತಿಳಿದು ಬರುವ ವರೆಗೆ ಕೊನೆಯ ನಿರ್ಣಯ ಮಾಡಬೇಡಿರೆಂದು ಪಂ। ನೆಹರೂರವರು ಕಾಂಗ್ರೆಸ ಸಮಿತಿಗಳಿಗೆ ಸೂಚಿಸಿದರೂ ಸೂಚಿಸಬಹುದು

— ಹಿಂದು ಕಾಯಿದೆಯಲ್ಲಿ ಕೆಲವೊಂದು ಕ್ರಾಂತಿಕಾರಕ ಬದಲಾವಣೆ ಯಾನೆ ತಿದ್ದುಪಡಿಗಳನ್ನು ಮಾಡುವ ಮಸೂ

ಬೇಕು!! ಏಜಂಟರು ಬೇಕು!!

ಕಿಪ್-ಕ್ಲೀನ್, ಹ್ಯಾಂಡಿ ಸೋಪ, ದೀಪಕ (ಮೆಟಲ್-ಪಾಲೀಸು) ಸಿಲ್ವರ ಶೈನ್, ಡಿ ಡಿ ಟಿ ಜಂತು-ನಾಶಕ, ನಿಷಫಲೀನ ತಯಾರಿಕೆಗಳು, ಸುವಾಸಿಕ ಪ್ರಸ್ಥಗಳು ಇತ್ಯಾದಿ ದೇಶ-ವಿದೇಶಗಳಲ್ಲಿ ಸಿದ್ಧವಾದ ಪ್ರಖ್ಯಾತ ವಸ್ತುಗಳನ್ನು ಮಾರಲು ಅಲ್ಲಲ್ಲಿ ಏಜಂಟರೂ ಹಂಚುವಿಕೆಗಾರರೂ ಬೇಕಾಗಿದ್ದಾರೆ ಇಂಥದ ಕೆಲಸದ ದೀರ್ಘಕಾಲೀನ ಅನುಭವವುಳ್ಳವರಷ್ಟೇ ಏಜನ್ಸಿಯ ಶರ್ತುಗಳಿಗಾಗಿ, ಪ್ರಶಸ್ತಿಪತ್ರಗಳ ಸಹಿತ, ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು—

ಹಿ ಕೇ ಏಜನ್ಸೀಜ,
ಕೋಠಾರಿ ಮೆನಶನ್, ಜನರಲ್ ಪೋಸ್ಟ ಒಫೀಸಿನ ಎದುರು, ಕೋಟಿ, ಮುಂಬಯಿ.



ಧಾರವಾಡದಲ್ಲಿ ಡಾ. ಮೋದಿಯವರ

ಧರ್ಮಾರ್ಥ ಕಣ್ಣಿನ ಶಸ್ತ್ರಕ್ರಿಯೆ.

ಇದೇ ಎಪ್ರಿಲ ತಾ ೨೬ನೇ ಸೋಮವಾರದಿಂದ ೯ ದಿನ ಧಾರವಾಡದೊಳಗಿನ ಲಿಂಗಾಯತ ಹೈಸ್ಕೂಲಿನಲ್ಲಿ ನೇತ್ರ ಚಿಕಿತ್ಸೆಗಾಗಿ ಕೀರ್ತಿವೆತ್ತ **ಡಾ ಮೋದಿಯವರು ಕಣ್ಣಿನ ಶಸ್ತ್ರಕ್ರಿಯ** ಮತ್ತು ಚಿಕಿತ್ಸೆ ಮಾಡಲಿದ್ದಾರೆ ರೋಗಿಗಳಿಗಾಗಿ ಎಲ್ಲ ತರದ ಸೌಕರ್ಯಗಳನ್ನು ಧರ್ಮಾರ್ಥ ಮಾಡಲಾಗುವದು ಕಣ್ಣಿನ ರೋಗವುಳ್ಳ ಎಲ್ಲ ಜನರು ಇದರ ಲಾಭ ಪಡೆಯಬೇಕಾಗಿ ವಿನಂತಿ

ಕಾರ್ಯದರ್ಶಿ,

ಅಖಿಲ ಕರ್ನಾಟಕ ಮಹಾಮಂಡಳ, ಧಾರವಾಡ.

ದೆಸೆಯಿಂದು ಕಳೆದ ವರ್ಷ ಕೇಂದ್ರ ಶಾಸನಸಭೆಯಲ್ಲಿ ಬಂದಿತ್ತು. ಅದನ್ನು ಸಭೆಯು ಪರಿಶೀಲಕ ಸಮಿತಿಗೆ ಒಪ್ಪಿಸಿರುತ್ತದೆ ಈ ಮಸೂದೆಯಲ್ಲಿ ಸೂಚಿಸಲ್ಪಟ್ಟ ಕೆಲವು ಅಂಶಗಳು ಹೀಗಿವೆ — (೧) ಈಗ ಹಿಂದು ಅವಿಭಕ್ತ ಕುಟುಂಬದಲ್ಲಿ ಜನ್ಮಪತ್ರ ಪುರುಷನಿಗೆ ಹುಟ್ಟಿದ ಕೂಡಲೆ ಕುಟುಂಬದ ಆಸ್ತಿಯಲ್ಲಿ ಹಕ್ಕು ಸಿಗುತ್ತದೆ ಅದರಂತೆ ಕುಟುಂಬದಲ್ಲಿ ಯಾವನೊಬ್ಬನು ಮೃತನಾದರೆ ಉಳಿದವರಿಗೆ "ಸರ್ವೈವರ್ಶಿಪ್" ರೀತಿಯಿಂದ ಅವನ ಆಸ್ತಿಯು ಹಕ್ಕು ಸಿಗುತ್ತದೆ ಈ ಕಾಯದೆಯನ್ನು ರದ್ದುಗೊಳಿಸುವ ಅಂಶ ಈ ಮಸೂದೆಯಲ್ಲಿ ಅಡಕವಾಗಿದೆ (೨) ಈಗಿದ್ದ ಹಿಂದು ಕಾಯದೆಯಂತೆ ಹಿಂದು ಸ್ತ್ರೀಯರಿಗೆ ತಂದೆಯ ಆಸ್ತಿಯಲ್ಲಿ ಪಾಲು ಸಿಗುವದಿಲ್ಲ ಲಗ್ನವಾಗುವ ವರೆಗೆ ತಂದೆಯ ಮನೆಯಲ್ಲುಳಿದು ಲಗ್ನ ಮಾಡಿಕೊಳ್ಳುವವಷ್ಟೇ ಅವರ ಹಕ್ಕು ಹೊಸ ಮಸೂದೆಯಲ್ಲಿ ಅವರಿಗೂ ಪಾಲು ಕೊಡುವ ಸೂಚನೆಯುಂಟು ಸಹೋದರನಿಗೆ ಸಿಗುವ ಪಾಲಿನ ಅರ್ಧದಷ್ಟು ಪಾಲು ಸಹೋದರಿಗೆ ಸಿಗಬೇಕೆಂದು ಮಸೂದೆಯಲ್ಲಿ ಹೇಳಲಾಗಿದೆ ಒಬ್ಬನಿಗೆ ೩ ಗಂಡು ಮಕ್ಕಳು ಮತ್ತು ೨ ಹೆಣ್ಣು ಮಕ್ಕಳು ಇದ್ದರೆ, ಅವನ ತರುವಾಯ ಅವನ ಆಸ್ತಿಯ ೮ ಪಾಲು ಮಾಡಿ, ಗಂಡು ಮಕ್ಕಳು ೨-೨ ಪಾಲುಗಳನ್ನೂ ಹೆಣ್ಣು ಮಕ್ಕಳು ೧-೧ ಪಾಲನ್ನೂ ತಕ್ಕೊಳ್ಳಬೇಕು ಎಂದು ಈ ತಿದ್ದುಪಡಿಯ ಅರ್ಥ (೩) ಸ್ತ್ರೀಯರಿಗೆ ಈಗ ಗಂಡನ ಕುಟುಂಬದಲ್ಲಿ ಕೆಲವೊಮ್ಮೆ ಆಸ್ತಿ ಸಿಗುತ್ತವೆ ಆದರೆ ಆ ಆಸ್ತಿಯನ್ನು ಪರಾಧೀನ ಮಾಡಕೂಡದು, ಇಲ್ಲವೆ ತನ್ನ ಇಚ್ಛೆಯಂತೆ ಅದರ ವಿಲೆ ಮಾಡಕೂಡದು ಎಂದು ಕೆಲವು ನಿರ್ಬಂಧಗಳಿವೆ ಆ ನಿರ್ಬಂಧಗಳನ್ನು ತಗದೊಗೆಯುವ ಸೂಚನೆಯೂ ಈ ಮಸೂದೆಯಲ್ಲುಂಟು (೪) ಈಗ ಇದ್ದ ಕಾಯದೆಯಂತೆ ತಾಯಿಯ ಸ್ತ್ರೀಧನವು ಹೆಣ್ಣು ಮಕ್ಕಳಿಗೆ ಸಿಗುತ್ತದೆ ಅದರಲ್ಲಿ ಗಂಡು ಮಕ್ಕಳಿಗೂ ಪಾಲು ಸಿಗಬೇಕೆಂದು ಈ ಮಸೂದೆಯು ಹೇಳುತ್ತದೆ ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸಹೋದರನಿಗೆ ಸಿಗುವ ಪಾಲಿನ ಅರ್ಧದಷ್ಟು ಪಾಲು ಸಿಗುವಂತೆ ತಾಯಿಯ ಆಸ್ತಿಯಲ್ಲಿ ಗಂಡಸಿಗೆ ಸಹೋದರಿಗೆ ಸಿಗುವ ಪಾಲಿನ ಅರ್ಧದಷ್ಟು ಪಾಲು ಸಿಗುವದು (೫) ಜಾತಿಭೇದಗಳನ್ನು ಮನ್ನಿಸದೆ ಯಾವ ಜಾತಿಯ ಕನ್ನಿಕೆಯನ್ನು ಲಗ್ನವಾದರೂ ಆ ವಿವಾಹವು ಕಾಯದೆಗೆ ಸಮ್ಮತವಾಗಬೇಕೆಂದು ಮಸೂದೆಯಲ್ಲಿ ಹೇಳಿದೆ (೬) ಬಹುಪತ್ನೀಕತ್ವವನ್ನು ಈ ಮಸೂದೆಯು ನಿಲ್ಲಿಸಲಪೇಕ್ಷಿಸುತ್ತದೆ (೭) ಗಂಡನಿಂದ ಬೇರೆ ಉಳಿಯುವ ಪತ್ನಿಗೆ ಈಗ ಜೀವನಾಂಶ ಸಿಗುವದಿಲ್ಲ ಯೋಗ್ಯ ಕಾರಣಗಳಿಗಾಗಿ ಅವಳು ಗಂಡನೊಡನೆ ಉಳಿಯಲು ನಿರಾಕರಿಸಿ ಅವನಿಂದ ಜೀವನಾಂಶ ಪಡೆಯಬಹುದಂತೆ ಈ ಮಸೂದೆಯಲ್ಲಿ ಏರ್ಪಾಟುಂಟು (೮) ಕೆಲವೊಂದು ಪ್ರಸಂಗಗಳಲ್ಲಿ ವಿವಾಹ-ವಿಚ್ಛೇದನ ಮಾಡಿಕೊಳ್ಳಲು ಆಸ್ಪದ ಮಾಡಿಕೊಡುವ ವ್ಯವಸ್ಥೆಯೂ ಈ ಮಸೂದೆಯಲ್ಲಿದೆ ವಿವಾಹ-ವಿಚ್ಛೇದನೆ ಮಾಡಿಕೊಂಡ ಸ್ತ್ರೀಯಾಗಲಿ ಪುರುಷನಾಗಲಿ ೩ ವರುಷಗಳ ನಂತರ ಬೇರೆ ಲಗ್ನ ಮಾಡಿಕೊಳ್ಳಬಹುದು (೯) ಕಾಯದೆಯಲ್ಲಿ ದತ್ತಕನನ್ನು ತೆಗೆದುಕೊಳ್ಳಬೇಕಾದರೆ ದತ್ತಕನಾಗಬಯಸುವ ಹುಡುಗನ ಜಾತಿ-ಗೋತ್ರ ಮೊದಲಾದವುಗಳನ್ನು ನೋಡಬೇಕಾಗುತ್ತದೆ ಈ ನಿಬಂಧನೆಗಳನ್ನೆಲ್ಲ ಮಸೂದೆಯು [illegible] ಇತ್ಯಾದಿ ಹಿಂದು ಸಮಾಜದವರು ಈ ಮಸೂದೆಯ ಪ್ರಗತಿಯನ್ನು ನಿರೀಕ್ಷಿಸುತ್ತಲಿದ್ದು, ಮಸೂದೆಯ ಬೇರೆ ಬೇರೆ ಕಲಮುಗಳ ಬಗ್ಗೆ ತಮ್ಮ ಅನುಕೂಲ, ಪ್ರತಿಕೂಲ ಮತಗಳನ್ನು ಇಲ್ಲವೆ ಸೂಚನೆಗಳನ್ನು ಸಕಾಲದಲ್ಲಿ ಯೋಗ್ಯ ಅಧಿಕಾರಿಗಳ ಮುಂದೆ ಇಡುವದುಚಿತ

— ಮುಂಬಯಿ ಸರಕಾರದವರು ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲಿಷ ಭಾಷೆಯ ಶಿಕ್ಷಣಕ್ಕೆ ಗೌಣತ್ವ ಕೊಡುವ ದೃಷ್ಟಿಯಿಂದ ಮಾಧ್ಯಮಿಕ ಶಾಲೆಗಳೊಳಗಿನ ಮೊದಲಿನ ಮೂರು ವರ್ಗಗಳಲ್ಲಿ ಇಂಗ್ಲಿಷ ಕಲಿಸಬಾರದೆಂದು ನೇಮ ಮಾಡಿದ್ದಾರೆ ೧೯೪೮-೪೯ನೇ ವರ್ಷದಲ್ಲಿ ೧ನೇ ಇಯತ್ತೆಯಲ್ಲಿ, ೧೯೪೯-೫೦ರಲ್ಲಿ ೧-೨ನೇ ಇಯತ್ತೆಗಳಲ್ಲಿ ಮತ್ತು ೧೯೫೦-೫೧ ರಿಂದ ಮುಂದೆ ೧-೨-೩ನೆಯ ಇಯತ್ತೆಗಳಲ್ಲಿ ಇಂಗ್ಲಿಷ ಭಾಷೆಯ ಶಿಕ್ಷಣ ನಿಲ್ಲಿಸಲ್ಪಡುವದು ಪ್ರಾದೇಶಿಕ ಭಾಷೆಯಿಂದಲೇ ವಿದ್ಯಾರ್ಥಿಗಳು ಎಲ್ಲ ವಿಷಯಗಳನ್ನು ಕಲಿಯಬೇಕು ಇಂಗ್ಲಿಷ ಭಾಷೆಯನ್ನು ಕಲಿಸಲು ೪ನೇ ಇಯತ್ತೆಯಿಂದ ಪ್ರಾರಂಭವು. ಇದರಿಂದ ಹೈಸ್ಕೂಲಗಳಲ್ಲಿ ಇಂಗ್ಲಿಷ ಭಾಷೆ [illegible] ಕಡಿಮೆಯಾದರೂ ಪ್ರಾದೇಶಿಕ ಭಾಷೆಯ ಶಿಕ್ಷಣದ ಮಹತ್ವ ಹೆಚ್ಚಾಗುವದು

— ಮಾಧ್ಯಮಿಕ ಶಾಲೆಗಳ ಅಭ್ಯಾಸ ಕ್ರಮದಲ್ಲಿ ಸುಧಾರಣೆ ಮಾಡುವ ಒಂದು ಯೋಜನೆಯನ್ನು ಮುಂಬಯಿ ಸರಕಾರದವರು ತಯಾರಿಸಿದ್ದು, ಆ ಬಗ್ಗೆ ಒಂದು ಕಾಯದೆಯನ್ನೇ ಮಾಡಿ, ಮಾಧ್ಯಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಮಂಡಳವೊಂದನ್ನು ನೇಮಿಸಬೇಕೆಂದು ಸಂಕಲ್ಪಿಸಿದ್ದಾರೆ ಈಗ ಎಲ್ಲ ಮಾಧ್ಯಮಿಕ ಶಾಲೆಗಳಲ್ಲಿಯೂ ಹೈಸ್ಕೂಲಗಳಲ್ಲಿಯೂ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಶಿಕ್ಷಣ ಕೊಡಲಾಗುತ್ತದೆ ಆ ಮೆಟ್ರಿಕ್ ಪರೀಕ್ಷೆಯನ್ನು ವಿಶ್ವವಿದ್ಯಾಲಯದವರು ಮುಂದಿನ ಕಾಲೇಜು ಶಿಕ್ಷಣಕ್ಕೆ ಹೋಗುವ ಹುಡುಗ-ಹುಡುಗಿಯರ ಪ್ರವೇಶ ಪರೀಕ್ಷೆಯನ್ನಾಗಿ ಮಾಡಿದೆ ಆದರಿಂದ ಹೈಸ್ಕೂಲ ಶಿಕ್ಷಣವು ಅಪೂರ್ಣವಿರುತ್ತದೆ ಮೆಟ್ರಿಕ್ ಪರೀಕ್ಷೆಗಿಷ್ಟು ಉಪಾಯವೆಂದು ವಿಷಯದಲ್ಲಿ ತೇರ್ಗಡೆಯಾಗದ ಕಾರಣದಿಂದ ಇಲ್ಲವೆ ಬೇರಾವ ಕಾರಣದಿಂದ ಕಾಲೇಜಿಗೆ ಹೋಗಲಾಗದ ವಿದ್ಯಾರ್ಥಿಗಳಿಗೆ ಅದೊಂದು ದೊಡ್ಡ ಹಾನಿಯಾಗುತ್ತದೆ ಆದ್ದರಿಂದ ಹೈಯಸ್ಕೂಲುಗಳ ಅಭ್ಯಾಸ ಕ್ರಮದಲ್ಲಿ ವ್ಯಾಪಾರ-ಉದ್ಯೋಗಗಳಲ್ಲಿ ಸೇರುವವರಿಗೂ, ಸರಕಾರಿ ನೌಕರಿಯಲ್ಲಿ ಸೇರಬಯಸುವವರಿಗೂ ಉಪಯುಕ್ತವಾಗುವಂತಹ ವಿಷಯಗಳನ್ನು ಕಲಿಸುವ ಏರ್ಪಾಟು ಮಾಡಲಾಗುವದಲ್ಲದೆ, ವಿದ್ಯಾರ್ಥಿಗಳಿಗೆ ಆವಶ್ಯವಿದ್ದ ವಿಷಯಗಳನ್ನು ಆರಿಸಿಕೊಳ್ಳಲಿಕ್ಕೆ ಸ್ವಾತಂತ್ರ್ಯ ಕೊಡಲಾಗುವದು ಆದರೆ ಮಾಧ್ಯಮಿಕ ಶಾಲೆಯ ಶಿಕ್ಷಣದ ಕೊನೆಗೆ ತಕ್ಕೊಳ್ಳಲ್ಪಡುವ ಪ್ರಮಾಣ ಪತ್ರ ಪರೀಕ್ಷೆಯ ದರ್ಜೆಯು ಈಗಿನ ಮೆಟ್ರಿಕ್ ಪರೀಕ್ಷೆಯ ದರ್ಜೆಯ ಮಟ್ಟದಲ್ಲೇ ಉಳಿಯುವದು ವಿಶ್ವವಿದ್ಯಾಲಯಗಳಾದರೂ ಈ ಪರೀಕ್ಷೆಯನ್ನೇ — ಅವಶ್ಯ ಕಂಡರೆ ಪರೀಕ್ಷೆಯ ವಿಷಯಗಳ ಸಂಬಂಧದಲ್ಲಿ ಕೆಲವೊಂದು ಮಿತಿ ಇಲ್ಲವೆ ನಿರ್ಬಂಧಗಳನ್ನು ಹಾಕಿ — ತಮ್ಮ ಪ್ರವೇಶ ಪರೀಕ್ಷೆಯನ್ನಾಗಿ ಮನ್ನಿಸುವಂತೆ ವ್ಯವಸ್ಥೆ ಮಾಡಲಾಗುವದೆಂತಲೂ ತಿಳಿಯುತ್ತದೆ ಹೊಸ ಕಾಯದೆಯಾದ ಮೇಲೆ ಮಾಧ್ಯಮಿಕ ಶಾಲೆ ಹಾಗೂ ಹೈಸ್ಕೂಲುಗಳ ಶಿಕ್ಷಣದ ಪೂರ್ಣ ನಿಯಂತ್ರಣ ಪ್ರಾಂತಿಕ ಸರಕಾರದ ಕಡೆಯಿಂದ ನಡೆಯುವದು

ರೂ. ೫೦ ಇನಾಮು !!

ಸಿದ್ದಾಪುರ ತಾಲೂಕ ಕೆಳಗಿನಮನೆಯ ಮಹಾಬಲೇಶ್ವರ ಸುಬ್ಬಯ್ಯ ಹೆಗಡೆ ಆದ ನಾನು ಈ ಮೂಲಕ ಪ್ರಕಟಿಸುವ ವಿಷಯವೇನಂದರೆ — ನಾನು ತಾ ೧೩-೪-೧೯೪೮ನೇ ಸಿ ಓ ನಂ ೨೪೯ ಪ್ರಕರಣದ ವಿಚಾರಕ್ಕಾಗಿ ಹೊನ್ನಾವರ ದಿವಾಣ ಕೋರ್ಟಿಗೆ ಹೋಗಿದ್ದೆ ಸದರಿ ಪ್ರಕರಣವು ಮುಂದೆ ತಾ ೧೬-೬-೧೯೪೮ಕ್ಕೆ ವಿಚಾರಕ್ಕೆ ಇಡಲ್ಪಟ್ಟಿತು ವಿಚಾರದ ತಾರೀಖು ತಿಳಿದ ಬಗ್ಗೆ ಸಹಿ ಕೊಡಲಿಕ್ಕೆ ನಾನು ಆ ಕೋರ್ಟಿನ ಒಳಗೆ ಹೋಗುವಾಗ ನನ್ನ ಕಾಗದ ಪತ್ರಗಳ ಗಂಟನ್ನು ಅಲ್ಲೇ ಒಂದು ಪೆಟ್ಟಿಗೆಯ ಮೇಲೆ ಇಟ್ಟಿದ್ದೆ ನಾನು ಸಹಿ ಮಾಡಿ ಹಿಂತಿರುಗುವಷ್ಟರಲ್ಲಿ ಆ ಗಂಟು ಅಲ್ಲಿ ಇಲ್ಲ. ಅದರ ಬಗ್ಗೆ ಎಷ್ಟೇ ಶೋಧ ಮಾಡಿದರೂ ಸಿಗಲಿಲ್ಲ ಅದನ್ನು ಈ ಹೊತ್ತಿನಿಂದ ೧ ತಿಂಗಳೊಳಗೆ ನನಗೆ ತಂದು ಕೊಡುವವರಿಗೆ ರೂ ೫೦ ಇನಾಮು ಕೊಡಲಾಗುವದು ಆ ಗಂಟಿನಲ್ಲಿ ೩ ಸ್ಟ್ಯಾಂಪ ನೋಟುಗಳು, ೧ ಕಂತ ಕರಾರು, ೨ ಪಾವತಿಗಳು ಮತ್ತು ನನ್ನ ಅಣ್ಣ ತಂದೆ ಸುಬ್ಬಯ್ಯ ರಾಮಯ್ಯ ಹೆಗಡೆ, ಅಣ್ಣ ಕೃಷ್ಣಯ್ಯ ಸುಬ್ರಾಯ ಹೆಗಡೆ, ಮಹಾಬಲಯ್ಯ ರಾಮಯ್ಯ ಹೆಗಡೆ ಮತ್ತು ಗೃಹಸ್ಥ ಗಣಪಯ್ಯ ಹೆಗಡೆ, ಇವರ ಸಹಿಗಳುಳ್ಳ ಕೋರ್ಟು ಕಾಗದಗಳು ಹೊನ್ನಾವರ ಕೋರ್ಟಿನ ದಾವೆ ನಂ ೧೭೮ ೧೯೪೩ರೊಳಗಿನ ಡಿಕ್ರಿ ಮತ್ತು ಜಜ್ಜಮೆಂಟುಗಳ ಉತಾರಗಳು, ದಿವಾಣ ಅಪೀಲುಗಳು ಹೊನ್ನಾವರ ಕೋರ್ಟಿನ ದರಖಾಸ್ತ ನಂ ೭೨ ೧೯೪೫ ರೊಳಗಿನ ಜಜ್ಜಮೆಂಟ ವಗೈರೆ ದಾಖಲೆಗಳು, ಹೊನ್ನಾವರ ಕೋರ್ಟಿನ ದಾವೆ ನಂ ೨೪೮, ೨೦೨, ೮೬೧, ೫೧೫೧, ೫೨೦೪, ೫೨೪೪, ಈ ಪ್ರಕರಣಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳು (ಹಸ್ತದಿಂದು ಬರೆಯಲ್ಪಟ್ಟಯಲ್ಲಿ ಕಟ್ಟಿಟ್ಟಂಥವು) ಇದ್ದವು ಈ ಗಂಟು ಯಾರಿಗಾದರೂ ಸಿಕ್ಕಿದ್ದು ಕೊಟ್ಟಲ್ಲಿ ಉಪಕಾರಸ್ಮರಣಪೂರ್ವಕ ರೂ ೫೦ ಇನಾಮು ಕೊಡಲಾಗುವದು

ತಾ ೧೬-೪-೧೯೪೮

M S Hegde Kelginamane

— ಈವರೆಗೆ ನಮ್ಮಲ್ಲಿದ್ದ ಪ್ರಾಥಮಿಕ ಹಾಗೂ ಮಾಧ್ಯಮಿಕ (ಹೈಸ್ಕೂಲುಗಳನ್ನು ಹಿಡಿದು) ಶಾಲೆಗಳಲ್ಲಿ ಜೂನ ತಿಂಗಳಿಂದ ದೀಪಾವಳಿಯ ಸೂಟಿಯ ವರೆಗೆ ಒಂದು ಮತ್ತು ದೀಪಾವಳಿಯ ಸೂಟಿಯಿಂದ ಬೇಸಿಗೆಯ ರಜೆಯ ವರೆಗೆ ಇನ್ನೊಂದು ಹೀಗೆ ವರ್ಷದಲ್ಲಿ ಎರಡೇ ಶಿಕ್ಷಣಾವಧಿ (ಟರ್ಮ)ಗಳು ಕಲ್ಪಿಸಲ್ಪಟ್ಟಿವೆ. ಬೇಸಿಗೆಯ ದೀರ್ಘ ರಜೆಯ ಪೂರ್ವದಲ್ಲಿ ವಾರ್ಷಿಕ ಪರೀಕ್ಷೆಗಳಾಗುತ್ತವೆ ಪರೀಕ್ಷೆಗಳಾದ ಮೇಲೆ ವಿದ್ಯಾರ್ಥಿಗಳು ಆ ರಜೆಯಲ್ಲಿ — ಕಳೆದ ಅಭ್ಯಾಸ ಮುಗಿದುಹೋದ್ದರಿಂದ ಮತ್ತು ಹೊಸ ವಿಷಯಗಳ ಅಭ್ಯಾಸಕ್ಕೆ ಇನ್ನೂ ಪ್ರಾರಂಭವಾಗಿಲ್ಲವಾದ್ದರಿಂದ — ಹೆಚ್ಚಾಗಿ ಸೋಮಾರಿತನದಿಂದ ಕಾಲಕಳೆ[illegible]ದ ದೋಷಗಳನ್ನು ಹೋಗಲಾಡಿಸುವದಕ್ಕಾಗಿ ಮುಂಬಯಿ ಸರಕಾರದವರು ಈಗ ಈ ಶಾಲೆಗಳ ಸಂಬಂಧದಲ್ಲಿ ವರ್ಷದ ೩ ವಿಭಾಗಗಳನ್ನು ಕಲ್ಪಿಸಿದ್ದಾರೆ ಜೂನ ತಾ ೧ ರಿಂದ ಏಪ್ರಿಲ್ ತಿಂಗಳ ಕೊನೆಯ ೩ನೇ ವಾರ ಬೇಸಿಗೆಯ ವಿರಾಮ ಕಾಲ ಪ್ರಾರಂಭವಾಗುವ ವರೆಗೆ ಮೊದಲನೇ ವಿಭಾಗ, ಬೇಸಿಗೆಯ ಸೂಟಿಯ ನಂತರ ದೀಪಾವಳಿಯ ಸೂಟಿಯ ವರೆಗೆ ೨ನೆಯ ವಿಭಾಗ, ಮತ್ತು ದೀಪಾವಳಿಯ ಸೂಟಿಯ ನಂತರ ಫೆಬ್ರುವರಿಯಲ್ಲಿ ವಾರ್ಷಿಕ ಪರೀಕ್ಷೆಗಳಾಗುವ ವರೆಗೆ ೩ನೆಯ ವಿಭಾಗ, ಹೀಗೆ ವರ್ಷದ ೩ ವಿಭಾಗಗಳು ಕಲ್ಪಿಸಲ್ಪಟ್ಟಿವೆ ವಾರ್ಷಿಕ ಪರೀಕ್ಷೆಗಳು ಫೆಬ್ರುವರಿಯಲ್ಲೇ ಆಗಬೇಕು ಆ ಪರೀಕ್ಷೆಗಳ ನಂತರ ಶಾಲೆಗಳಿಗೆ ೧೦ ದಿನಗಳ ಇಲ್ಲವೆ ೨ ವಾರಗಳ ಬಿಡುವು ಕೊಟ್ಟು ಮಾರ್ಚ ತಾ ೧ಕ್ಕೆ ಹೊಸ ಅಭ್ಯಾಸ ಕ್ರಮವನ್ನು ಪ್ರಾರಂಭಿಸಬೇಕು ಎಂದು ಸರಕಾರವು ನಿರ್ಧರಿಸಿದೆ ದೀಪಾವಳಿಯ ರಜೆಯು ಕೂಡ ೨ ವಾರಗಳಿಗಿಂತ ಹೆಚ್ಚಾಗಿ ಇರಕೂಡದು ಈ ಕ್ರಮದಿಂದ ಬೇಸಿಗೆ ರಜೆಯಲ್ಲಿ ವಿದ್ಯಾರ್ಥಿಗಳಿಗೆ ಅಭ್ಯಾಸದ ವಿಷಯಗಳು ಸಿಗುವವೆಂದು ಎಣಿಸಲಾಗಿದೆ

ಆಜ್ಞೆ

ನಾಗರಿಕ ಪೂರೈಕೆ ಖಾತೆ,
ಮುಂಬಯಿ ಕೋಟೆ,
ತಾ ೩೧-೩-೧೯೪೮

ನಂ ೩೪೭/IV—ಈ — ೧೯೪೬ನೇ ಇಸವಿಯ ಅವಶ್ಯಕ ವಸ್ತುಗಳ (ತಾತ್ಪೂರ್ತಿಕ ಅಧಿಕಾರಗಳು) ಕಾನೂನಿನ (೧೯೪೬ರ ೨೪ನೆಯ ಕಾನೂನಿನ) ೩ನೆಯ ಹಾಗೂ ೪ನೆಯ ಕಲಮುಗಳು ಮತ್ತು ಹಿಂದುಸ್ತಾನ ಸರಕಾರದ ಕಾಮಗಾರಿ, ಗಣಿಗಳು ಮತ್ತು ಶಕ್ತಿ ಇವುಗಳ ಖಾತೆಯವರು ತಾ ೧೨-೧೨-೧೯೪೬ಕ್ಕೆ ಹೊರಡಿಸಿದ ಪಿ ೧೧೦(೧)ನೇ ನಂಬರದ ಪ್ರಕಟನೆ ಇವುಗಳನ್ವಯ ದೊರೆತ ಅಧಿಕಾರವನ್ನುಪಯೋಗಿಸಿ, ಮುಂಬಯಿ ಸರಕಾರವು, ಈ ಕೆಳಗಿನ ಪರಿಶಿಷ್ಟದ ೨ನೇ ಸ್ತಂಭದೊಳಗೆ ನಿರ್ದೇಶಿಸಿರುವ ಅಧಿಕಾರಿಗಳು ಹೊರಡಿಸಿದ ಮತ್ತು ೧ನೇ ಸ್ತಂಭದೊಳಗೆ ಬಣ್ಣಿಸಿರುವ ಆಜ್ಞೆಗಳು ರದ್ದುಗೊಳಿಸಲ್ಪಟ್ಟಿರುತ್ತವಾಗಿ ವಿಧಿಸಿರುತ್ತಾರೆ

ಪರಿಶಿಷ್ಟ

ಅನು ಕ್ರಮಾಂಕ	ಆಜ್ಞೆಯ ವಿವರಗಳು (೧)	ಆಜ್ಞೆ ಹೊರಡಿಸಿದ ಅಧಿಕಾರಿ (೨)
೧	ಒತ್ತಡದ (pressure) ದೀಪಗಳಿಗಾಗಿ ಸೀಮೆ ಎಣ್ಣೆಯನ್ನು ಉಪಯೋಗಿಸಬಾರದಾಗಿ ತಾ ೨೦-೬-೧೯೪೭ಕ್ಕೆ ಹೊರಡಿಸಿದ ನಂ ೨೧೭ ನೇ ಆಜ್ಞೆ	ಜಿಲ್ಹಾ ಮ್ಯಾಜಿಸ್ಟ್ರೇಟ್, ಪೂರ್ವ ಖಾನದೇಶ
೨	ಕಾನಡಾ ಜಿಲ್ಹೆಯ ಸೀಮೆ ಎಣ್ಣೆಯ ವ್ಯಾಪಾರದ ಪರವಾನೆ ಕೊಡುವ ಆಜ್ಞೆಯೆಂಬ ಹೆಸರಿನಿಂದ ತಾ ೫ ೧೦ ೧೯೪೭ಕ್ಕೆ ಹೊರಡಿಸಿದ ೪೯೦೫ನೇ ನಂಬರದ ಆಜ್ಞೆ	ಜಿಲ್ಹಾ ಮ್ಯಾಜಿಸ್ಟ್ರೇಟ್, ಕಾನಡಾ
೩	ಸೀಮೆ ಎಣ್ಣೆಯ ಸಂಗ್ರಹ ಹಾಗೂ ಸಾಗಿಸುವ ಸಂಬಂಧದಲ್ಲಿ ತಾ ೫ ೧೧ ೧೯೪೭ಕ್ಕೆ ಹೊರಡಿಸಿದ ೪೯೦೫ನೇ ನಂಬರದ ಆಜ್ಞೆ	—ಡಿ

ಮುಂಬಯಿಯ ಗವರ್ನರರ ಆಜ್ಞೆಯಂತೆ,

A L Dias,
ಸರಕಾರದ ಜೊತೆ-ಕಾರ್ಯದರ್ಶಿ

— ಮುಂಬಯಿ ಸರಕಾರದವರು ಈ ವರೆಗೆ ವರ ಷ್ಟ ಗ ದಿನ (ಕೆಲವು ಹಿಂದೂ ದೇವರ ಹಬ್ಬಗಳ ದಿನ ಗಳು) ಸರಕಾರಿ ಕಚೇರಿಗಳಿಗೆ ಸಾರ್ವಜನಿಕ ರಜೆಯನ್ನು ಕೊಡುತ್ತ ಬಂದಿದ್ದರು ಇನ್ನು ಮುಂದೆ ಈ ರಜೆಯ ದಿನ ಗಳನ್ನು ೧೪ಕ್ಕೆ ಇಳಿಸಬೇಕೆಂದು ನಿರ್ಧರಿಸಿದ್ದಾರೆ ಈ ೧೪ ದಿನಗಳು ಯಾವೆಂದರೆ ರಾಮನವಮಿ ಕೃಷ್ಣಾಷ್ಟಮಿ, ಗಣೇಶ ಚತುರ್ಥಿ ದಸರೆ ಮತು ದೀಪಾವಳಿ ಹೀಗೆ ೫ ಹಿಂದೂ ಹಬ್ಬಗಳು ರಮಜಾನ ಮತು ಬಕ ರೀದ ಹೀಗೆ ೨ ಮುಸಲ್ಮಾನ ಹಬ್ಬಗಳು ಪಾರ್ಸಿ ನೂತನ ವರ್ಷ ಮತ್ತು ಗುರು ನಾನಕರ ಜನ್ಮ ದಿನ ಹೀಗೆ ೨ ಇತರ ಹಬ್ಬಗಳು ಮಹಾವೀರ ಜಯಂತಿಯೆಂಬ ಜೈನರ ಹಬ್ಬದ ದಿನ ಹಾಗೂ ಮಹಾತ್ಮಾ ಗಾಂಧಿಯವರ ಪುಣ್ಯತಿಥಿಯೆಂದ ಕ್ರಿಸ್ತಮಸ ಮತ್ತು ಕ್ರೈಸ್ತರ ಗುಡ್ ಫ್ರಾಯಿಡೆ ಈ ಕ್ರಿಸ್ತರ ಹಬ್ಬಗಳು, ಜನವರಿ ತಾ ೨೬ ಮತ್ತು ಭಾರತವು ಸ್ವಾತಂತ್ರ್ಯ ದೊರಕಿಸಿದ ದಿನವೆಂದು ಆಗಸ್ಟ ತಾ ೧೫ ಈ ಯೋಜನೆಯ ಬಗ್ಗೆ ಯಾರಾದರೂ ಸೂಚನೆಗಳನ್ನು ಮಾಡು ವದಿದ್ದಲ್ಲಿ ಅವನ್ನು ಬೇಗನೇ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಕಳಿಸಿಕೊಡಬೇಕಾಗಿ ಸರಕಾರ ಪ್ರಕಟಿಸಿದೆ

— ಮೈಸೂರಿನ ಕಾಂಗ್ರೆಸ ಮಂತ್ರಿಮಂಡಳವು ಭಟಕಳ ಬಂದರವನ್ನು ಮೈಸೂರಿಗಾಗಿ ಪಡೆಯಲು ಹಿಂದುಸ್ಥಾನ ಸರಕಾರದೊಡನೆ ಸಂಧಾನ ನಡಿಸುವದೆಂದೂ ಭಟಕಳವು ಮೈಸೂರಿಗೆ ಬರುತ್ತಿದ್ದರ ಹಿಂದೆ ಸರಕಾರದ ಸೈನ್ಯ ವನ್ನು ಇಡುವದಕ್ಕಾಗಿ ಬೆಂಗಳೂರದನ್ನು ಹಿಂದೀ ಸರಕಾರ ಕ್ಕೆ ಒಪ್ಪಿಸಲು ಮೈಸೂರ ಸರಕಾರದ ಒಪ್ಪಿಗೆಯಿದೆ ಎಂ ತಲೂ ಮೈಸೂರ ಸರಕಾರದ ಓರ್ವ ಮಂತ್ರಿಗಳಾದ ಶ್ರೀ ಛನ್ನಯ್ಯನವರು ಮೊನ್ನೆ ದಿಲ್ಲಿಯ ಪತ್ರ ಪ್ರತಿನಿ ಧಿಗಳಿಗೆ ತಿಳಿಸಿದ್ದಾರೆ ಭಟಕಳ ಬಂದರದ ಅಭಿವೃದ್ಧಿ ಯಾದಲ್ಲಿ ಮೈಸೂರ ಸಂಸ್ಥಾನದ ಪಶ್ಚಿಮೋತ್ತರ ಭಾಗ ಗಳ ಉತ್ಕರ್ಷ ಸಾಧಿಸಲು ಸಹಾಯವಾಗುವದೆಂದು ಮೈಸೂರಿನವರ ಅಂಬೋಣವುಂಟು

— ಹಿಂದೀ ಘಟನಾ ಸಮಿತಿಯು ಇದೇ ಬರುವ ಸೆಪ್ಟೆಂ ತಾ ೧೮ಕ್ಕೆ ಪುನಃ ಸೇರಿ ಡಾ ಅಂಬೇಡಕರ ಸಮಿ ತಿಯವರು ತಯಾರಿಸಿರುವ ರಾಜ್ಯಘಟನೆಯ ಮಸೂದೆ ಯನ್ನು ಚರ್ಚಿಸುವದಾಗಿಯೂ, ಜೂನ ತಿಂಗಳ ಕೊನೆಯೊ ಳಗಾಗಿ ಘಟನೆ ತಯಾರಾಗುವದೆಂದೂ, ಈ ಹೊಸ ಘಟ ನೆಯಂತೆ ಬೇಗನೇ ಚುನಾವಣೆಗಳನ್ನು ನಡಿಸಲು ಅನು ಕೂಲವಾಗುವಂತೆ ಮತದಾರ ಪತ್ರಿಕೆಗಳನ್ನು ತಯಾರಿಸು ವ ಕಾರ್ಯವನ್ನು ಈಗಿನಿಂದಲೇ ಕೈಕೊಳ್ಳಲು ಎಲ್ಲ ಪ್ರಾಂತಿಕ ಸರಕಾರಗಳಿಗೆ ತಿಳಿಸಲಾಗಿದೆಂದೂ ೧೯೪೯ರ ಜೂನದೊಳಗಾಗಿ ಚುನಾವಣೆಗಳು ಮುಗಿಯುವವೆಂದು ತಮ್ಮ ನಿರೀಕ್ಷೆಯಿರುತ್ತದೆಂದೂ ಘಟನಾ ಸಮಿತಿಯ ಅಧ್ಯಕ್ಷ ಡಾ ರಾಜೇಂದ್ರಪ್ರಸಾದರವರು ಜಾಹೀರಪಡಿಸಿರುತ್ತಾರೆ

—ಮೈಸೂರ ಸಂಸ್ಥಾನದ ಘಟನಾ ಸಮಿತಿಯ ಕಾರ್ಯ ಬಲು ಜೋರದಿಂದ ಸಾಗಿದೆ ಅಲ್ಲಿ ರಾಜ-ಪ್ರಜೆಗಳೊ ಳಗೆ ಸಂಧಾನವಾಗಿ ಪ್ರಜಾ ಪ್ರತಿನಿಧಿಗಳ ನಡುಗಾಲ ಸರಕಾರ ಅಸ್ತಿತ್ವದಲ್ಲಿ ಬಂದದ್ದು ಕಳೆದ ದಸರೆ ಹಬ್ಬದ ಕಾಲಕ್ಕೆ ಘಟನಾ ಸಮಿತಿಯ ಚುನಾವಣೆಗಳಾದದ್ದು ಕಳೆ ದ ತಿಂಗಳಲ್ಲಿ ಆದರೂ ಮುಂದಿನ ಮೇ ತಿಂಗಳ ಕೊನೆ ಯೊಳಗಾಗಿ ಘಟನೆಯನ್ನು ತಯಾರಿಸಿಕೊಂಡು ಸಪ್ಟಂಬರ ಸುಮಾರಕ್ಕೆ ಪ್ರೌಢ ಮತಾಧಿಕಾರ ಪದ್ಧತಿಯಿಂದ ಚುನಾ ವಣೆಗಳನ್ನು ನಡಿಸಿ, ಬರುವ ದಸರೆಯ ದಿವಸವೇ ಹೊಸ ಘಟನೆಯಿನ್ವಯ ಹೊಸ ಸರಕಾರವನ್ನು ಅಸ್ತಿತ್ವದಲ್ಲಿ ತರ ಬೇಕೆಂಬ ಉತ್ಕಂಠೆ ಮೈಸೂರ ಸರಕಾರಕ್ಕುಂಟು

ಸಾಣೆಕಟ್ಟಾ ಕೋ-ಓಪರೇಟಿವ್ಹ ಸೊಲ್ಟ ಸೇಲ ಸೊಸೈಟಿಯ ಕುಮಟಾ ಉಗ್ರಾಣ.

ಈ ಉಗ್ರಾಣದಲ್ಲಿ ಸಾಣೆಕಟ್ಟೆಯ ಉಪ್ಪು ಕೋಕ ಹಾಗೂ ಕಿರಕೋಳ ಮಾರಾಟಕ್ಕೆ ಸಿಗುತ್ತಿದೆ ದರ— ಬಂಗಾಲಿ ಮಣ ೧ಕ್ಕೆ (ಚೀಲ ಬಿಟ್ಟು) ರೂ ೩-೨-೦ ೩ ಬಂಗಾಲಿ ಮಣಗಳ ೧ ಲಗ್ಗೆ (ಚೀಲ ಸಹಿತ) ರೂ ೪॥

ವಿಮಲಾನಂದ ಮಂಗೇಶ ವಿಜಾಪೂರಕರ,
ಉಗ್ರಾಣದ ಮೇಲ್ವಿಚಾರಕರು

ನಿಜಾಮರು ಅಳಿಯುವರೋ ಉಳಿಯುವರೋ ?

(೧ನೇ ಪುಟದಿಂದ ಮುಂದರಿದದ್ದು)

ಮಾಡಿದರು ಓರ್ವನು ಗುಂಡಿಗೀಡಾಗಿ ಚಿಕಿತ್ಸಾ ಲಯದಲ್ಲಿದ್ದಾನೆ ಹೆಂಗಸರು ಹುಡುಗರು ಮನೆಯ ಲ್ಲೇ ಇರುತ್ತಾರೆ ಗಂಡಸರು ಹೊರಗೆ ಮನೆಗಳನ್ನು ಕಾಯುತ್ತಾರೆ ಜನರು ತಮ್ಮಲ್ಲಿದ್ದ ಕೋವಿಗಳನ್ನು ಪೋಲೀಸರಿಗೆ ಒಪ್ಪಿಸಬೇಕಾಗಿ ಸರಕಾರಿ ಅಧಿಕಾರಿಗಳು ಫರ್ಮಾನು ಮಾಡುತ್ತಾರೆ ಹಾಗೆ ಮಾಡಿದರೆ ಜನರ ಕಡೆ ಆತ್ಮರಕ್ಷಣೆಯ ಸಾಧನವುಳಿಯುವದಿಲ್ಲ ಇದ ರಿಂದ ಜನರು ಹಳ್ಳಿಗಳನ್ನು ಬಿಡುತ್ತಿದ್ದಾರೆ ಎಲ್ಲಿ ಹೋದರೂ ಇತ್ತೆಹಾದದ ಜನರ ದಾಳಿಗಳಾದ ಸುದ್ದಿ ಕೇಳಬರುತ್ತಿದೆ' ಕಿಂಗಸ್ಲೇ ಮಾರ್ಟಿನರೇನು ಹಿಂದು ಗಳಲ್ಲ, ಹಿಂದೀಯರೂ ಅಲ್ಲ. ಬ್ರಿಟಿಶ ಪತ್ರಿಕಾಪ್ರತಿ ನಿಧಿಗಳಾಗಿರುತ್ತಾರೆ ಇಂಥ ಪ್ರಾಯಸ್ಥರು ಸ್ವತಃ ಅನುಭವದಿಂದ ನುಡಿದ ಮಾತುಗಳು ಅಸತ್ಯವಿರುತ್ತ ವೆಂದು ನಿಜಾಮ ಸರಕಾರವು ಹೇಳಬಲ್ಲದೇ ?

ಕಿಂಗಸ್ಲೇ ಮಾರ್ಟಿನರು ನೋಡಿದ ಪರಿಸ್ಥಿತಿ ೩ ತಿಂಗಳ ಹಿಂದಿನದು ಇತ್ತೀಚೆಗೆ ಆ ಪರಿಸ್ಥಿತಿ ಇನ್ನೂ ಗಂಭೀರವಾಗಿರತಕ್ಕದ್ದು ರಝವಿಯವರೂ ಅವರ ಅನುಯಾಯಿಗಳೂ ಭಾರತಕ್ಕೆ ಯುದ್ಧದ ಆಹ್ವಾನವನ್ನೇ ಕೊಡುತ್ತಿದ್ದಾರೆಂದು ಹೇಳಬಹುದು. ಇದೇ ಕಳೆದ ಮಾರ್ಚ ತಾ ೩೧ಕ್ಕೆ ಕಾಸಿಮ ರಝ ವಿಯವರು ಒಂದು ಭಾಷಣ ಮಾಡಿದ್ದರು ಆ ಭಾಷ ಣವು ಬಹಳ ಹೊಲಸು ಮತ್ತು ಪ್ರಕ್ಷೋಭಕಾರಕ ವಿದ್ದುದರಿಂದ ಅದನ್ನು ಹಿಂದುಸ್ಥಾನದ ಮುಸಲ್ಮಾನ ಮುಖಂಡರನೇಕರು ನಿಷೇಧಿಸಿದ್ದರು ಕೇಂದ್ರ ಶಾಸ ನ ಸಭೆಯಲ್ಲೂ ಅದರ ಬಗ್ಗೆ ಚರ್ಚೆಯಾಯಿತು ರಝವಿಯವರು ಈ ಭಾಷಣ ಮಾಡಿದ್ದೇ ಸುಳ್ಳಿರು ತ್ತದಾಗಿ ನಿಜಾಮರ ಮುಖ್ಯ ಮಂತ್ರಿಗಳನ್ನುತ್ತಾರೆ! ನಿಜಾಮರ ಸರಕಾರಕ್ಕೆ ರಝವಿಯವರ ಮೇಲೆ ಅಷ್ಟು ಪ್ರೇಮ ಮತ್ತು ಭಕ್ತಿ ! ಮಾರ್ಚ ತಾ. ೩೧ಕ್ಕೆ ರಝವಿಯವರು ಭಾಷಣ ಮಾಡುವರೆಂದು ಪತ್ರಿಕೆ ಗಳಲ್ಲಿ ಮೊದಲೇ ಜಾಹೀರಾಗಿರುವಾಗ ಮತ್ತು ಅವ ರು ಭಾಷಣ ಮಾಡುವಂತಹ ಪ್ರಸಂಗವಿರುವಾಗ ಅವರು ಮಾತಾಡಿದ್ದಿಲ್ಲೆಂದು ನಿಜಾಮ ಸರಕಾರದವ ರು ಹೇಳಿದರೆ ಕೇಳಬೇಕು ಯಾರು ? ಇದೇ ಕಳೆದ ತಾ ೯ನೇಗೆ ರಜಾಕಾರರ ದಿನದ ಸಭೆಯಲ್ಲಿ ಮಾತಾ ಡುವಾಗ ವರಂಗಲ ಜಿಲ್ಹೆಯ ಮಜಲೀಸಿನ ಅಧ್ಯಕ್ಷ ರು ಭಾಷಣ ಮಾಡಿ, ' ಹೈದರಾಬಾದದ ಹುಲಿಯ ನ್ನು ಹಿಂದೀ ಸರಕಾರವು ಕೆರಳಿಸಿದರೆ ಈ ಹುಲಿ, ಬಂಗಾಲ (ಪೂರ್ವ ಪಾಕಿಸ್ತಾನ)ದ ಹುಲಿ, ಕಾಶ್ಮೀ ರದ ಹುಲಿ ಹೀಗೆ ಮೂರೂ ಹುಲಿಗಳು ದಿಲ್ಲಿಯಲ್ಲಿ ಕೂಡುವವು !' ಎಂದು ಗರ್ಜಿಸಿದರೆಂದು ವರದಿಯಾ ಗಿದೆ ರಝವಿಯವರು ಕೂಡ ಇನ್ನೊಂದು ಭಾಷಣ ದಲ್ಲಿ, ಬಂಗಾಲ ಉಪಸಾಗರದ ನೀರು ನಿಜಾಮರ ಕಾಲು ತೊಳೆಯುವ ವರೆಗೆ ಅಂದರೆ ಬಂಗಾಲ ಉಪ ಸಾಗರಕ್ಕೂ ಹೈದರಾಬಾದಕ್ಕೂ ನಡುವೆ ಇರುವ ಪ್ರದೇಶವು ನಿಜಾಮರ ವಶಕ್ಕೆ ಬರುವ ವರೆಗೆ ತಮಗೆ ಸಮಾಧಾನವಿಲ್ಲೆಂದು ಹೇಳಿದ್ದಾರೆ ಇತ್ತ ಗೋವೆ ಯನ್ನು ಹಸ್ತಗತ ಮಾಡಿಕೊಳ್ಳುವ ಕಾರಸ್ಥಾನವೂ ನಡೆದಿದೆ ನಿಜಾಮರ ನೊಸೆಯೇ ಲಿಸಬನದಲ್ಲಿ ಹೋದಾಗ ಈ ಕಾರಸ್ಥಾನದ ಅಡಿಗಲ್ಲು ಹಾಕಿ ದ್ದರೆಂದು ಈಗ ಬೆಳಕಿಗೆ ಬಂದಿದೆ ಹೈದರಾಬಾ ದ ಗೋವೆಗಳ ನಡುವಿನ ಪ್ರದೇಶವನ್ನು ಪ್ರಸಂಗ ಬಂದಾಗ ಹಸ್ತಗತ ಮಾಡಿಕೊಳ್ಳುವ ದೃಷ್ಟಿಯಿಂದ ಗೋವೆಯಲ್ಲೂ ಈ ಭಾಗದಲ್ಲೂ ಪಂಚಮ ದಳದವ ರಾಗಿ ಪ್ರಚಾರ ಮಾಡಲು ನಿಜಾಮರು ಮತ್ತು ಇತ್ತೆ ಹಾದ ಸಂಸ್ಥೆಯವರು ಅನೇಕ ಮುಸಲ್ಮಾನ ತರು ಣರಿಗೆ ಕಳಿಸಿಕೊಟ್ಟಿದ್ದಾರೆಂದು ತಿಳಿಯುತ್ತದೆ ಜಾತಿ ಮರು ಒಂದೆಡೆ ದಿಲ್ಲಿಯಲ್ಲಿ ಹಿಂದೀ ಸರಕಾರದೊಡನೆ ಮಾತುಕತೆ ನಡಿಸಿದ್ದಾರೆ ಇನ್ನೊಂದೆಡೆ ಯುದ್ಧದ ತಯಾರಿ ಮಾಡುತ್ತಿದ್ದಾರೆ ವಿದೇಶಗಳಿಂದ ಸೂರಾ ರು, ಸಾವಿರಾರು ಅರಬರು ಅಂತರಂಗದಿಂದ ಹಿಂದು ಸ್ಥಾನ ದಂಡೆಯ ಮೇಲೆ ಇಳಿದು ಹೈದರಾ ಬಾದಿಗೆ ಹೋಗುತ್ತಿದ್ದುದು ಕಂಡುಬರುತ್ತಿದೆ ಮೊನ್ನೆಯೇ ಮುಂಬಯಿಯ ಹತ್ತಿರ ಇಂಥ ಅರಬ ರ ತಂಡಗಳನ್ನು ಪೋಲೀಸರು ಹಿಡಿದಿದ್ದಾರೆ ನಿಜಾ ಮರ ಪೋಲೀಸರು ಮತ್ತು ಸೈನಿಕರು ಕೂಡ ಪೆಂಢಾ ರಿಗಳಿಗಿಂತ ಕಡೆಯಾಗಿದ್ದಾರೆ! ಹಿಂದೀ ಒಕ್ಕೂಟದ ಪ್ರದೇಶದಲ್ಲಿ ಸೇರಿ ಲೂಟಿ, ಅತ್ಯಾಚಾರ ಮಾಡ ಲಿಕ್ಕೂ ಅವರು ಸಿದ್ಧರು ! ಆದರಿಂದ ಮುಂಬಯಿ, ಮದ್ರಾಸ ಮತ್ತು ಮಧ್ಯಪ್ರಾಂತ ಸರಕಾರಗಳು ತಮ್ಮ ಗಡಿಯ ರಕ್ಷಣೆಗೆ ಸೈನ್ಯವನ್ನು ತಂದಿಟ್ಟುಕೊಳ್ಳ ಬೇಕಾಗಿದೆ ರಜಾಕಾರರ ಹಾವಳಿಯ ಮೂಲಕ ಸಾ ವಿರಗಟ್ಟಲೆ ನಿಜಾಮಿ ಪ್ರಜೆಗಳು ದೇಶ ತ್ಯಾಗ ಮಾಡ ಲಾರಂಭಿಸಿದ್ದಾರೆ ಭಾರತ ಸರಕಾರದ ಪ್ರತಿನಿಧಿಗಳಾ ಗಿ ಹೈದರಾಬಾದದಲ್ಲಿರುವ ಶ್ರೀ॥ ಮುನಷಿ ಯವರ ಕೊಲೆ ಮಾಡಲಿಕ್ಕೂ ರಜಾಕಾರರು ತಯಾರಾದುದು ತಿಳಿದು ಮುನಷಿಯವರ ಸುತ್ತಲೂ ಈಗ ಸೈನಿಕರ ಕಾವಲು ಇಡಲಾಗಿದೆ. ನಿಜಾ ಮರ ಕೂಡ ಈಗ ಸಾಮ ಉಪಯೋಗವಿಲ್ಲೆಂದೂ ದಾನ - ದಂಡಗಳಿಂದಲೇ ಅವರನ್ನು ಮಣಿಸಬೇಕೆಂದೂ ಸಮಾಜಸತ್ತಾವಾದಿ ಪಕ್ಷದ ಶ್ರೀ॥ ಜಯಪ್ರಕಾಶ ನಾರಾಯಣರವರೂ ಶ್ರೀಮತಿ ಅರುಣಾ ಅಸಫ ಅಲ್ಲಿಯವರೂ ಸಾರುತ್ತಿದ್ದಾರೆ ನಿಜಾಮ ರನ್ನೂ ಅವರ ಇತ್ತೆಹಾದ ಸಂಸ್ಥೆಯವರ ನ್ನೂ ನಿಯಂತ್ರಿಸುವ ಕೆಲಸವನ್ನು ಆದ್ಯಾದ ಹಿಂದ ಸೇನೆಯವರಿಗೆ ಒಪ್ಪಿಸಿರೆಂದು ಆ ಸೇನೆಯ ಪ್ರಮುಖ ಕರ್ನಲ್ ಭೋಸಲೆಯವರು ಸೂಚಿಸುತ್ತಾರೆ ಹಿಂದುಸ್ಥಾನದಲ್ಲಿ ಎದ್ದಿರುವ ಕ್ಷೋಭವನ್ನೂ ರೋಷ ವನ್ನೂ ಅನುಲಕ್ಷಿಸಿ ನಿಜಾಮರು ಸಕಾಲದಲ್ಲಿ ರಜಾ ಕಾರ ಮತ್ತು ಇತ್ತೇಹಾದ ಸಂಸ್ಥೆಗಳನ್ನೂ ನಿರ್ಮೂ ಲನಗೊಳಿಸದಿದ್ದರೆ ನಿಜಾಮರು ಸ್ವತಃ ನಿರ್ನಾಮವಾ ಗಬೇಕಾದೀತೆಂದು ಮೊನ್ನೆಯೇ ಪಂಜಾಬದ ರಾಷ್ಟ್ರೀ ಯ ಮುಸಲ್ಮಾನ ಮುಂದಾಳುಗಳಾದ ಡಾ॥ ಕಿಚ ಲೂರವರು ಎಚ್ಚರಿಕೆ ಕೊಟ್ಟಿದ್ದಾರೆ ರಜಾಕಾರರನ್ನು ನಿರ್ಬಂಧಿಸದಿದ್ದರೆ ನಿಜಾಮರು ಅಳಿಯುವದು ಖಂಡಿತ.

(ಸ್ಥಾನಿಕವೃತ್ತಾಂತ ೫ನೇ ಪುಟದಿಂದ ಮುಂದರಿದದ್ದು)
ಬಹುದೆಂಬುದಕ್ಕೆ ವ್ಯಕ್ತಿತ್ವದ ಜೀವನಶಕ್ತಿಯು ಒಂದು ಒಳ್ಳೇ ನಿದರ್ಶನವಾಗುತ್ತದೆ ಜಗದೀಶನು ಅವರ ಆತ್ಮ ಕ್ಕೆ ಸದ್ಗತಿಯನ್ನೀಯಲಿ!

ಭಟಕಳ— (ತಾ ೬-೪-೪೮) ಇಲ್ಲಿಯ ಮಹಾ ಲಕರಿಗಳಾದ ರಾ॥ ಅವರ್ಸೇಕರರಿಗೆ ವಿಜಾಪುರದ ಮಹಾದೇವ ದಾರರಾಗಿ ನೇಮಿಸಿದ ಸುದ್ದಿಯುಂಟು

ಮೋಟಾರ ಬಂಡಿಗಳ ನಿಲ್ದಾಣವನ್ನು ಊರ ಹೊರಗೆ ಒಯ್ದುದ್ದರಿಂದ ಪ್ರವಾಸಿ ಜನರಿಗೆ ಬಹಳ ಕಷ್ಟವಾಗಿದೆ ಬಂಡಿಗಳು ಊರೊಳಗೆ ಬರುತ್ತಿದ್ದರೂ ಊರಲ್ಲಿ ಇಳಿಯ ಲ್ಪಡ ಪ್ರಯಾಣಿಕರು ಊರ ಹೊರಗೇ ಇಳಿದು, ತಮ್ಮ ಸಾಮಾನು ಹೊತ್ತುಕೊಂಡು ಊರಿಗೆ ಬರಬೇಕು ಊರೊ ಳಗಿಂದ ಮೋಟಾರ ಹೋಗುತ್ತಿದ್ದರೂ ಅದರೊಳಗೆ ಹೋಗುವವರು ಊರಹೊರಗೆ ಸಾಮಾನು ಹೊತ್ತುಕೊಂಡು ಹೋಗಿ ಅಲ್ಲಿ ಮೋಟಾರ ಹತ್ತಬೇಕು! ನಿಲ್ದಾಣದಲ್ಲಿ ಜನರಿಗೆ ಕೂಡ್ರಲು ಆಶ್ರಯ ಸಹ ಇಲ್ಲ! ಅಧಿಕಾರಿಗಳು ಸ್ವತಃ ಈ ಕಷ್ಟಗಳನ್ನು ಕಂಡು ಪರಿಹಾರ ಮಾಡಬೇ ಕಾಗಿ ಅರಿಕೆ. ಚಿಟ

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಬಿಸಿಲ ಬೇಗೆ—ಮುಂಜಾನೆ ೧೦ ಕ್ಕೆ ತಂಪು ಉಂಟಾಗುವದಿಲ್ಲ! ಮುಗಿಲೊಳಗೆ ಮೇಲಿಂದ ಮೇಲೆ ಮೋಡಗಳು ಮುಸುಕಿದರಂತೂ ತೀರ ಸೆಕೆ! ಮೈಮೇಲಿದ್ದ ಬಟ್ಟೆಗಳನ್ನು ಬಿಚ್ಚಿ ಯಾವಾಗಲೂ ಜಲಾಶಯದಲ್ಲಿ ಮುಳುಗಿ ಕೂಡ್ರುವಾ ಎಂದೆನಿಸುತ್ತದೆ! ಕಳೆದ ಗುರುವಾರ ಮಧ್ಯರಾತ್ರಿ ಮಳೆ ಹನಿಸಿತ್ತು. ಶುಕ್ರವಾರ ಉಷಃಕಾಲದಲ್ಲಿ ಬಹಳಷ್ಟು —ಸುಮಾರು ೩೦ ನಿಮಿಷ— ಮಳೆ ಸುರಿಯಿತು. ಘಟ್ಟದ ಬದಿಯಲ್ಲಿ ಅಂದು ಇದಕ್ಕೂ ಹೆಚ್ಚಿಗೆ ಮಳೆ ಬಿದ್ದಿತ್ತೆಂಗಿ ತಿಳಿಯುತ್ತದೆ. ಈ ಮಳೆಯಿಂದ ತಂಪು ಉಂಟಾಗುವ ಬದಲು ಈಗ ಉಷ್ಣತೆ ಏರಿದಂತಿದೆ.

ಧಾರೇಶ್ವರ ಬದಿಗೆ ಪ್ಲೇಗಿಯು ಉದ್ಭವಿಸಿದ ಕಳೆದ ೩ ವಾರಗಳಿಂದ ಧಾರೇಶ್ವರ ಊರೆಯನ್ನು ಮುಕ್ತಲಾಗಿತ್ತು.

ಕಾರವಾರದಲ್ಲಿ ಬಂದ ಹೊಸ ಬೇನೆಯು ೬—೮ ದಿನಗಳ ಹಿಂದೆ ಅಂಕೋಲೆಗೂ, ೪—೫ ದಿನಗಳ ಹಿಂದೆ ಅಲ್ಲಿಂದ ಗೋಕರ್ಣಕ್ಕೂ, ಅಲ್ಲಿಂದ ಮುಂದೆ ನಿನ್ನೆ ಕುಮಟೆಯ ವರೆಗೂ ಬಂದು ತಲ್ಪಿದೆ. ಕಳೆದ ಬುಧವಾರ ಗೋಕರ್ಣದೊಳಗೆ ಸಿನೆಮಾ ನೋಡಹೋದ ಓರ್ವ ಹೆಂಗಸಿಗೆ ಈ ರೋಗದ ಲಕ್ಷಣಗಳು ಕಂಡುಬಂದುವೆಂದು ಜನರು ಮುಂಜಾಗ್ರತೆಯೆಂದು ಗಟಬಿಯಿಂದ ಬೆಳ್ಳುಳ್ಳಿ ಮತ್ತು ಸಾಸಿವೆ ಖರೀದಿಸಿ ಮನೆಯಲ್ಲಿ ಸಂಗ್ರಹಿಸಿಡುವ ಉದ್ಯೋಗವನ್ನಾರಂಭಿಸಿದರಾಗಿ ತಿಳಿಯುತ್ತದೆ. ಬುಧವಾರ ರಾತ್ರಿಯೇ ಒಂದು ಅಂಗಡಿಯೊಳಗಿನ ಎಲ್ಲ ಬೆಳ್ಳುಳ್ಳಿಯು ಎಪ್ಪು ಹೋಯಿತಂತೆ! ಈ ರೋಗಕ್ಕೆ ಸಾಸಿವೆ, ಬೆಳ್ಳುಳ್ಳಿ, ನುಗ್ಗಿ ಕಾಯಿ ಮದರ ಬೆಲ್ಲ (ಇವೆಲ್ಲ ತೀರ ಉಷ್ಣ ಪದಾರ್ಥಗಳಿರುತ್ತವೆ) ಇವನ್ನು ಅರೆದು ಮೈಗೆ ಲೇಪ ಮಾಡಬೇಕೆಂದೂ ರೋಗಿಗೆ ಬ್ರಾಂದಿ ಇಲ್ಲವೆ ಬ್ರಾಂದಿಯಷ್ಟೇ ಉಷ್ಣ ದ್ರವ್ಯವನ್ನು ಕುಡಿಸಬೇಕೆಂದೂ ಅಂಕೋಲೆಯವರನ್ನಾರೋ ಈ ರೋಗಕ್ಕೆ ಉಷ್ಣ ಉಪಚಾರವೇ ರಾಮಬಾಣವಾಗಿರುತ್ತದೆಂದೂ ಪ್ರತಿ ಮನೆಯಲ್ಲಿ ಸಾಸಿವೆ, ಬೆಳ್ಳುಳ್ಳಿ, ನುಗ್ಗಿ—ಬೆಲ್ಲ ಮುಂತಾದವನ್ನು — ರೋಗವು ಎಲ್ಲಾದರೂ ರಾತ್ರಿಯ ಕಾಲಕ್ಕೆ ಪ್ರಾರಂಭವಾದಲ್ಲಿ ಕೂಡಲೇ ಉಪಚಾರ ಮಾಡಲು ಅನುಕೂಲತೆಯಿರಬೇಕೆಂಬ ದೃಷ್ಟಿಯಿಂದ — ಸಂಗ್ರಹಿಸುವದು ಒಳಿತೆಂದೂ ಅಂಕೋಲೆಯವರು ಇಲ್ಲಿಯ ತಮ್ಮ ಆಪ್ತೇಷ್ಟರಿಗೆ ತಿಳಿಸಿದ್ದಾರೆ. ಅದರಂತೆ ಇಲ್ಲಿಯ ಅನೇಕರು ವರ್ತಿಸುತ್ತಿದ್ದಾರೆ. ಅದರಿಂದ ಪೇಟೆಯಲ್ಲಿ ಈಗ ಬೆಳ್ಳುಳ್ಳಿ ಮತ್ತು ಸಾಸಿವೆ ಕಾಳುಗಳು ದುರ್ಲಭವಾಗಹತ್ತಿವೆ.

(ಆದರೆ ಕಳೆದ ವಾರ ಕಾರವಾರದಿಂದ ಬಂದ ವರದಿಯಂತೆ ಈ ಹೊಸ ರೋಗಕ್ಕೆ ಉಷ್ಣ ಉಪಚಾರ ಮಾತ್ರ ವದು ಸರಿಯಲ್ಲೆಂದೇ ಕೆಲವರು ಸ್ವೀಕರಿಸುತ್ತಾರೆ. ಕಾರವಾರದೊಳಗಿನ ಸಿವಿಲ ಸರ್ಜನರೂ ಡಾಕ್ಟರರೂ ಇದೇ ಅಭಿಪ್ರಾಯದವರಿರುತ್ತಾರೆಂದು ತಿಳಿಯುತ್ತದೆ. ಈ ರೋಗಕ್ಕೆ ಅಷ್ಟೇನು ಬೆದರುವ ಕಾರಣ ಇಲ್ಲ. ಕಾರವಾರದಲ್ಲಿ ಓರ್ವ ಮುದುಕಿಯಷ್ಟೇ ಈ ರೋಗದಿಂದ ಮೇಲೆ ಸತ್ತ ಸುದ್ದಿಯುಂಟು.)

ಇಲ್ಲಿಯ ಮಾಮಲೇದಾರ ರಾ|| ವೆಂಕಟೇಶರಾವ ಶಿರ್ಸಿಕ್ಕರ ಇವರಿಗೆ ಬಾಗೇವಾಡಿಗೆ ವರ್ಗವಾದ ಸುದ್ದಿಯುಂಟು. ಧಾರವಾಡದ ಜಿಲ್ಹಾಧಿಕಾರ ಹೆಡ್ ಕ್ಲಾರ್ಕರಾಗಿರುವ ರಾ|| ಸಬನೀಸರು ಇಲ್ಲಿ ಮಾಮಲೇದಾರರಾಗಿ ಬರುತ್ತಾರಂತೆ. ರಾ|| ಶಿರ್ಸಿಕ್ಕರರು ಇಲ್ಲಿ ಬಂದು ಇನ್ನೂ ೧½ ವರ್ಷವಾಗಿಲ್ಲ. ಇಷ್ಟು ಬೇಗ ಅವರಿಗೆ ವರ್ಗವಾದದ್ದು ಆಶ್ಚರ್ಯಕರ! ಬಜಾರ ಎಣ್ಣೆಯ ಗಲಾಟಿ ಹೇಳತೀರದು! ದಿನ ಬಿಟ್ಟು ದಿನ ಇಲ್ಲವೆ ೩—೪ ದಿನಗಳಿಗೊಮ್ಮೆ ಇಲ್ಲಿಗೆ ಮಾರಾಟಕ್ಕೆಂದು ಬರುವ ಎಣ್ಣೆಯ ಡಬ್ಬಿಗಳನ್ನು ಕೊಂಡು ಕೊಂಡ ವ್ಯಾಪಾರಿಯು ಕೊಂಗ್ರೆಸ ಕಮಿಟಿ ಯ ಪರ ಮುಂದೆ ಡಬ್ಬಿಗಳನ್ನು ಒಡೆದು ಎಣ್ಣೆಯ ಮಾರಾಟ ಮಾಡುತ್ತಾನೆ! ಅದು ಸಂಜೆಯ ಸಮಯ ೧—೨ ಅಥವಾ ೩—೪ ತಾಸು! ಆಗ ನೂರಾರು ಜನರು ಬಾಟ್ಲಿಗಳನ್ನು ಹಿಡಿದುಕೊಂಡು ಮುತ್ತುತ್ತಾರೆ! ಬಂದ ಬಂದ ಜನರು ಸಾಲಾಗಿ ಬಾಟ್ಲಿಗಳ ನ್ನಿಟ್ಟು ತಮ್ಮ ಪಾಳಿ ಎಂದು ಬರುವದೆಂದು ನೋಡುತ್ತ ಬಹಳ ಹೊತ್ತು ನಿಲ್ಲಬೇಕಾಗುತ್ತದೆ! ಮೇಲಾಗಿ ಎಲ್ಲ ಜನರಿಗೆ ಎಣ್ಣೆ ಸಿಗುತ್ತದೆಂಬ ಖಾತ್ರಿಯಿಲ್ಲ! ತಂದ ಡಬ್ಬಿಗಳೊಳಗಿನ ಎಣ್ಣೆ ಖರ್ಚಾದ ಮೇಲೆ ಎಣ್ಣೆಯ ಹಂಚುವಿಕೆ ನಿಂತು ಹೋಗುತ್ತದೆ! ಎಣ್ಣೆಯ ಈ ಹಂಚುವಿಕೆಯನ್ನು ಹೀಗೆ ೩—೪ ತಾಸು ಮಾಡುವದಕ್ಕಿಂತ ಮುಂಜಾನೆಯಿಂದ ದಿನ—ಮಾನದಲ್ಲಿ ಒಂದು ದಿನ ನಿರ್ದಿಷ್ಟಮಾಡಿ—ಸಂಜೆವರೆಗೆ ಅಥವಾ ಸಂಜೆಯ ವರೆಗೆ ನಡಿಸುವದು, ಬಂದ ಎಲ್ಲ ಜನರಿಗೆ ಎಣ್ಣೆ ಹಂಚುವದು ಮತ್ತು ಆ ಹಂಚುವಿಕೆಗಾಗಿ ಅವಶ್ಯ ಬೀಳುವಷ್ಟು ಎಣ್ಣೆಯ ಡಬ್ಬಿಗಳನ್ನು ಏಜಂಟರಿಂದ ಪೂರೈಸಿಕೊಳ್ಳುವದು ಉತ್ತಮ ಪದ್ಧತಿಯೆಂದಾಗಿ ಕೆಲವರ ಸೂಚನೆಯಿದೆ. ಹೀಗೆ ಮಾಡಿದಲ್ಲಿ ಗಲಾಟೆಯೂ ಆಗುವಂತಿಲ್ಲ. ಕೆಲವರ ಎಣ್ಣೆಯಿಲ್ಲದೆ ತಿರುಗಿ ಹೋಗುವ ಪ್ರಸಂಗವೂ ಬರುವಂತಿಲ್ಲ.

ಇವತ್ತಿನ ಎಣ್ಣೆಯ ಈ ಕೊರತೆಗೆ ಎಣ್ಣೆಯ ಕೊರತೆಯೇ ಮೂಲ ಕಾರಣವಿರುತ್ತದೆಂದು ತಿಳಿದು ಬಂದಿದೆ. ಹಿಂದು ಸ್ಥಾನ ಸರಕಾರದವರೇ ಎಣ್ಣೆಯ ಪೂರೈಕೆಯಲ್ಲಿ ಕಾಟಂಛೇದ ಕತ್ತರಿ ಮಾಡಿದ್ದಾರೆ. ಈಗ ದೇಶದಲ್ಲಿ ಪೆಟ್ರೋಲಿನ ಕೊರತೆ ತೋರುವದರಿಂದ ಕಾರಖಾನೆಗಳೂ ಮೋಟಾರಗಳೂ ಪೆಟ್ರೋಲಿನ ಬದಲು ಬೇರೊಂದು ದ್ರವ ಎಣ್ಣೆ ತಯಾರಿಸಿಕೊಳ್ಳುವದಕ್ಕಾಗಿ ಬಜಾರ ಎಣ್ಣೆಯ ವಿನಿಯೋಗವಾಗುತ್ತಿರುವದರಿಂದ ಸರಕಾರದವರು ಮೇಲಿನಂತೆ ಎಣ್ಣೆಯ ಪೂರೈಕೆಗೆ ಕತ್ತರಿ ಹಾಕಿದ್ದಾರೆಂದು ತಿಳಿಯುತ್ತದೆ. ಕುಮಟೆಯ ಏಜಂಟರಿಗೆ ಹಿಂದೆ ಸಿಗುತ್ತಿದ್ದಷ್ಟು ಎಣ್ಣೆ ಈಗ ಮಾರಾಟಕ್ಕೆ ಸಿಗುವದಿಲ್ಲ. ಈ ತಿಂಗಳಲ್ಲಿ ಸ್ಟಾಂಡರ್ಡ ಕಂಪನಿಯ ಹಾಗೂ ಬರ್ಮಾ ಶೆಲ್ಲ ಕಂಪನಿಯ ಏಜಂಟರಿಗೆ ಬರೇ ೧೦೦೦ ಡಬ್ಬಿ ಎಣ್ಣೆ ಸಿಕ್ಕಿದಂತೆ. ಮಾರ್ಚದಲ್ಲಿ ಶೆಲ್ಲ ಕಂಪನಿಯ ಏಜಂಟರಿಗೆ ಎಣ್ಣೆ ಸಿಕ್ಕಿದಿಯೋ ಇಲ್ಲವೋ ಎಂಬುದು ತಿಳಿಯದು. ಈ ಕಂಪನಿಯ ಹೊಸ ಏಜಂಟ, ಶಿರ್ಸಿಯವರ ಶ್ರೀ. ಶಿರ್ಸಿಕರರು ಅವರು ಇಲ್ಲಿ ತಮ್ಮ ಅಂಗಡಿಯನ್ನು ಇನ್ನೂ ತರೆಗೆ ತೆರೆದಿರುವದಿಲ್ಲ. ಅದರಿಂದ ಅಲ್ಲಿ ಎಂದು ಕಂಪನಿಗಳ ಎಣ್ಣೆ ಯಿಂದಲೇ ನಿರ್ವಾಹವಾಗಬೇಕಾಗಿದೆ. ಮೇಲೆ ಹೇಳಿದ ೧೦೦೦ ಡಬ್ಬಿಗಳು ಕುಮಟಾ ಮತ್ತು ಶಿರ್ಸಿ ತಾಲೂಕಗಳ ಜನರಿಗಾಗಿರುತ್ತವೆಂಬುದನ್ನು ಓದುಗರು ಲಕ್ಷದಲ್ಲಿಡಬೇಕು.

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ೧೯೪೭—೪೮ನೇ ವರ್ಷದ ವಾರ್ಷಿಕ ಸಭೆಯು ತಾ. ೨೩—೩—೧೯೪೮ನೇ ರವಿವಾರ ಅಪರಾಹ್ನ ೩ ಘಂಟೆಗೆ ಹೊಲನಗದ್ದೆ ಗ್ರಾಮದ ಶ್ರೀ ಶಿವ ಸಿದ್ಧ ಶ್ರೀ ನಾರಸಿಂಹ ದೇವರ ಗುಡಿಯಲ್ಲಿ ಕೂಡುವದೆಂದೂ ಸಂಘದ ಸದಸ್ಯರೆಲ್ಲ ಸಭೆಗೆ ಹಾಜರ ಬರಬೇಕೆಂತಲೂ ಸಂಘದ ಅಧ್ಯಕ್ಷರು ಬಿನ್ನವಿಸುತ್ತಾರೆ.

ಗೋಕರ್ಣದಲ್ಲಿ ಈ ವರ್ಷ ರೈತರು ೧—೧½ ಸಾವಿರ ಖಂಡಗ ಉಳ್ಳೇಗಡ್ಡೆಯನ್ನು ಬೆಳೆಸಿದ್ದಾರೆ. ತಮ್ಮ ಬಾಳು ಮಾತಿಯ ದಿನಸ ಯಾದಿಗ ಉಳ್ಳೇಗಡ್ಡೆಯನ್ನು ಮಾರದ ಕೂಡದೆಂದೂ, ಯೋಗ್ಯ ಧಾರಣೆ ಸಿಗುವಂತಿದ್ದಾಗ ತಾವು ಮಾರಾಟ ಮಾಡುತ್ತೇವೆಂತಲೂ ಗೋಕರ್ಣ—ಬಂಕಿಕೊಡ್ಲ ಸೀಮೆಯ ರೈತ ಸಂಘದ ಅಧ್ಯಕ್ಷರು ತಿಳಿಸಿದ್ದರಿಂದ ಅಮುಕೀಲ ರೈತರು ತಮ್ಮ ಉಳ್ಳೇಗಡ್ಡೆಯನ್ನು ಮಾರದೆ ಸುಗ್ಗಿಯ ಬೆಟ್ಟಕೊಂಡಿದ್ದರು. ಆದರೆ ಅವರ ಮುಖ್ಯ ಸರದಿಂದ ಈಗ ದರ ಏರುವದರ ಬದಲು ಇಳಿದ ಹೋಗಿದೆ. ಅದರಿಂದ ಕೆಲವರು ಅಲ್ಪಸ್ವಲ್ಪ ಹಣದ ಕೊರತೆ ತಮ್ಮ ಉಳ್ಳೇಗಡ್ಡೆಯನ್ನು ಕಾ—ಸ್ತು ಇದರ ಮಾರಾಟ ಮಾಡಹತ್ತಿದ್ದಾರೆ. ಇದರಿಂದ ರೈತ ಸಂಘದ ಪ್ರಮುಖರ ಮಾತು ಕೇಳಿಕೊಂಡು ಉಳ್ಳೇಗಡ್ಡೆ ಮಾರದಿದ್ದವರಿಗೆ ವರು ಸಂಕಟವಾಗಿಯೂ ಉಳ್ಳೇಗಡ್ಡೆ ಮಾರಿದವರಿಗೆ ಕೊಂಡವರಿಗೂ ಪಶ್ಚಾತ್ತಾಪವಾದಂತಾಗಿದೆ ಸುದ್ದಿಯುಂಟು. ಕಳೆದ ಮುಂಗಾರಿನ ರಕ್ಷಣೆಯನ್ನೇ ಕೇಳಿದ. ಎಂದ ವ್ಯಾಪಾರಿಯು ಒಬ್ಬ ಒಕ್ಕಲಿಗನ ಉಳ್ಳೇಗಡ್ಡೆಯನ್ನು ಕೊಂಡುಕೊಂಡು, ಚಕ್ಕಡಿಯಲ್ಲಿ ಹೇರಿ, ತನ್ನ ಅಂಗಡಿಗೆ ಒಯ್ಯುತ್ತಿದ್ದನು. ಆಗ ರೈತ ಸಂಘದ ಪ್ರಮುಖರು ಕೆಲವರು ಓಡಿ ಬಂದು, ಆ ಗಾಡಿಯನ್ನು ತಡೆದು, ವ್ಯಾಪಾರಿಯು ಕೊಂಡ ಉಳ್ಳೇಗಡ್ಡೆಯ ಮೊತ್ತದ ಮೇಲೆ ರೂಪಾಯಿಗೆ ೧ ಆಣೆಯಂತೆ ತಮ್ಮ ಸಂಘಕ್ಕೆ ದಂಡವನ್ನೇ ದಲಾಲಿಯನ್ನೇ ಕೊಟ್ಟನಂತರ ಗಾಡಿ ಬಿಡುವದಿಲ್ಲೆಂದು ಅಡ್ಡಗಟ್ಟಿದರಂತೆ! ವ್ಯಾಪಾರಿಯು ಆಗ ಪೋಲೀಸರಲ್ಲಿ ಓಡಿಹೋಗಿ ಅವರಿಗೆ ವರದಿಯನ್ನಿತ್ತನು. ಆ ಪೋಲೀಸರನ್ನು ಕಂಡ ಕೂಡಲೇ ಸಂಘದವರು ಕಾಲಿಗೆ ಬುದ್ಧಿ ಹೇಳಿದರಂತೆ!! ರೈತ ಸಂಘದ ಈ ಲೀಲೆಗಳನ್ನು ಕಾಲದಲ್ಲಿ ಹಿಡಿಯಲಿಕ್ಕೆ ಯತ್ನಿಸಿದಲ್ಲಿ, ಮುಂದೆ ಸಾಮಾನ್ಯ ಜನತೆಗೆ ಅನಿಷ್ಟಕರ ಪರಿಣಾಮಗಳಾಗುವವೆಂದು ಜಿಲ್ಹಾಧಿಕಾರ ಸರಕಾರದವರು ಲಕ್ಷದಲ್ಲಿಡಬೇಕಾಗಿ ಸೂಚನೆಯಿದೆ.

ಅದ್ದವಣಿ— ಕಳೆದ ವಾರದ "ವೃತ್ತ"ದಲ್ಲಿ ೧೯೪೭—೪೮ನೇ ಸಾಲಿನ ಕುಮಟಾ ತಾಲೂಕಿನ ಬೆಳೆಯ ಪ್ರಕಟನೆ ಪ್ರಕಟವಾಗಿರುತ್ತದಷ್ಟೇ. ಆ ಪ್ರಕಟನೆಯೊಳಗಿನ ಭತ್ತದ ಬೆಳೆಯ ಮಾನದ ಕೆಳಗೆ ಕೊಟ್ಟ ಕರೆಯಲ್ಲಿ "ಬೇಳೆ" ಎಂದು ಅಚ್ಚಾಗುವದರ ಬದಲು "ಬೆಲೆ" ಎಂದು ಹಸ್ತದೋಷದಿಂದ ತಪ್ಪು ಅಚ್ಚಾಗಿದೆ. ವಾಚಕರು ಅದನ್ನು "ಬೆಳೆ" ಎಂದು ತಿದ್ದಿಕೊಂಡು ಓದಬೇಕಾಗಿ ವಿನಂತಿಯುಂಟು.

ಕಳೆದ ವಾರದ "ವೃತ್ತ"ದಲ್ಲಿ ಪ್ರಕಟವಾದ ಕಾರವಾರದೊಳಗಿನ ಹೊಸ ಬೇನೆಯ ಕತೆಯನ್ನು ಓದಿ ಕಳವಳಗೊಂಡು, ಬರೋಡಾ ಸರಕಾರದ "ಉದ್ಯಾನ—ಶಾಸ್ತ್ರಜ್ಞ" ರಾದ ರಾ|| ಎಸ್. ಎಸ್. ಭಟ್ಟರು ಬರೋಡೆಯಿಂದ ಬರೆಯುತ್ತಾರೆ — "ಗುಜರಾಥದ ಈ ದಿನಗಳಲ್ಲಿ ಜನರು ಕಕ್ಕ ವಿದ್ದುವನ್ನು ಹೆಚ್ಚಿಗೆ ಉಪಯೋಗಿಸುತ್ತಾರೆ. ಕೊಟ್ಟಿನ ಪಲ್ಲೆಗಳನ್ನು ಉಪಯೋಗಿಸುವದೊಳಿತು. ತಮ್ಮ ಕಡೆಗೆ (ಕಾನಡಾ ಜಿಲ್ಹೆ) ಹರಿವೆ ಸೊಪ್ಪು, ಬಸಳೆ ಸೊಪ್ಪು, ಗೋಲಿ ಸೊಪ್ಪು ಮುಂತಾದವು ಬೇಕಷ್ಟು ಸಿಗುವಂತಿವೆ. ಬೇಕಾದಷ್ಟು ಬೆಳೆಸಿಕೊಳ್ಳಲು ಅನುಕೂಲವಿದೆ. ಈ ಸೊಪ್ಪಿನ ಪಲ್ಲೆಗಳನ್ನೂ ಕಾಯಿಪಲ್ಲೆಗಳನ್ನೂ ಬೇಯಿಸದೆ ತಿಂದರೆ ಶರೀರಕ್ಕೆ ಲಾಭವಿದೆ. ಅವನ್ನು ಕೊಚ್ಚಿ, ಉಪ್ಪು ಹಾಕಿ, ಬೆಣ್ಣೆ—ಗೊಜ್ಜಿಗಳನ್ನು ಮಾಡಿ ತಿನ್ನಬಹುದು. ಇವುಗಳಲ್ಲಿ ಶರೀರಪೋಷಕ ಅಂಶಗಳೂ, ಕ್ಷಾರ—ದ್ರವ್ಯಗಳೂ ವಿಪುಲವಾಗಿರುವದರಿಂದ ಇತರ ಆಹಾರದಲ್ಲಿ ಕಡಿಮೆಯಾಗುವ ತತ್ವಗಳನ್ನು ಇವು ಪೂರೈಸಿ ಶರೀರವನ್ನು ನಿರೋಗಿ ಮಾಡಬಲ್ಲವು. ಸರಕಾರಿ ಡಾಕ್ಟರ—ವೈದ್ಯರು ಈ ವಿಷಯವನ್ನು ಜನರಿಗೆ ತಿಳಿಸುವದು ಅವಶ್ಯವಿದೆ" ಇತ್ಯಾದಿ.

ಹೊನ್ನಾವರ— (ತಾ. ೧೮—೪—೧೯೪೮) ಇಲ್ಲಿಯ ಮುಖ್ಯ ವಿಮಾಕಿನರಾಗಿ ಕಳೆದ ೨೪ ವರ್ಷಗಳಿಂದ ಹಲವರೆ ಸಜ್ಜನ, ಯಾ ೧೯ನೇ ವರ್ಗದ ಸಜ್ಜನರಾಗಿ ಕೆಲಸ ಮಾಡಿದ ಮತ್ತು ಇತ್ತೀಚೆಗೆ ಅಸಿಸ್ಟಂಟ ಚೇರ್ಮನರಾಗಿ ನೇಮಕ ಪಟ್ಟ ಶ್ರೀ ತ್ರಿವಿಕ್ರಮ ಬಾಬ ಕಾನಡೆ ಇವರು ಕೆಲವು ದಿನ ಜ್ವರದಿಂದ ಬಳಲಿ ಮೊನ್ನೆ ಮುಂಜಾನೆಯಲ್ಲಿ ದೈವಾಧೀನರಾದರೆಂದು ನಮೂದಿಸಲು ಅತ್ಯಂತ ವ್ಯಸನವಾಗುತ್ತದೆ. ಮೃತರಾದವರು ತೀರ ಬಡ ಕುಟುಂಬದಲ್ಲಿ ಹುಟ್ಟಿದ್ದರು. ಆದರೂ ಸ್ವಂತ ಬುದ್ಧಿಶಕ್ತಿಯ ಬಲದಿಂದ ಅವರು ಹಾಯಿಸ್ಕೂಲ ಶಿಕ್ಷಣವನ್ನು ಕಾಲೇಜ ಶಿಕ್ಷಣವನ್ನೂ ಪಡೆದು, ವಕೀಲಿಯ ಪರೀಕ್ಷೆ ಕೊಟ್ಟು ವಕೀಲರಾದರು. ೨—೩ ವರ್ಷ ಅವರು ಇಲ್ಲಿ ವಕೀಲರಾಗಿದ್ದರು. ಆದರೆ ವಕೀಲಿಯಲ್ಲಿ ಅವರಿಗೆ ಅಷ್ಟು ಪ್ರೀತಿಯು ಹುಟ್ಟಲಿಲ್ಲ. ಅದರಿಂದ ಅವರು ನೌಕರಿ ಹಿಡಿದರು. ಮುಂಬಯಿಗೆ ಕೆಲವೊತ್ತಿದ್ದರು. ನ್ಯಾಯದಿಂದ ಅವರು ಅಧ್ಯಾಪಕರ ಸಜ್ಜನ ಸ್ವಭಾವ ಮಾಡಿದ ಅಳತೆಯು ಮುಂತಾದ ಆಗಿ ಅವರು ಸಜ್ಜನರಾಗಿ ನೇಮಿಸಲ್ಪಟ್ಟರು. ಒಡನೆಯೇ ಪ್ರಯತ್ನಪೂರ್ವಕವಾಗಿ ಉಚ್ಚ ಪದವಿಯನ್ನು ಪಡೆದರು.

(೬ನೇ ಪುಟದ ಮೇಲೆ ಮುಂದರಿದಿದೆ)

ಡಿಸ್ಟ್ರಿಕ್ಟ ಬೋರ್ಡ ಆಫ್ ಸುಪರಿಂಟೆಂಡಿಂಗ ಯೂನಿಯನ್ಸ ಲಿ
ಎಜ್ಯುಕೇಶನ್ ಕಮಿಟಿ, ಉ ಕನ್ನಡ

ತಾ ೧೨-೪-೧೯೪೮

ಸರಕ್ಯೂಲರ ನಂ ೩

ಬರುವ ಮೇ ತಿಂಗಳ ೭ನೇ ತಾರೀಕಿನಿಂದ ಜೂನ ತಿಂಗಳ ೧೫ನೇ ತಾರೀಕಿನ ವರೆಗೆ ಒಕ್ಕಲತನದ ಸಹಕಾರಿ ಸಂಘಗಳ ಸೆಕ್ರೆಟರಿ ಜನರ ಸಲುವಾಗಿ ಒಂದು ಟ್ರೇನಿಂಗ ಕ್ಲಾಸನ್ನು ಹಳಿಯಾಳದಲ್ಲಿ ಏರ್ಪಡಿಸುವದು ಗೊತ್ತಾಗಿದೆ ಕಾರಣ ಹಳಿಯಾಳ ತಾಲೂಕ ಹಾಗೂ ಯಲ್ಲಾಪುರ ತಾಲೂಕಿನಲ್ಲಿರುವಂತಹ ರೂರಲ್ ಸೆಕ್ರೆಟರಿಗಳ ಸರ್ಟಿಫಿಕೇಟ ಪರೀಕ್ಷೆಯನ್ನು ಪಾಸಾಗದೆ ಇದ್ದಂತಹ ಎಲ್ಲ ಸೆಕ್ರೆಟರಿ ಜನರು ಈ ಕ್ಲಾಸಿಗೆ ಬರಲು ಅರ್ಜಿಯನ್ನು ಮಾಡಬೇಕು ಸದರ ಕ್ಲಾಸಿಗೆ ಬರುವಂತಹ ಸೆಕ್ರೆಟರಿ ಜನರ ಸಾಧಾರಣ ವೆಚ್ಚವನ್ನು ಆಯಾ ಸಂಘಗಳು ವಹಿಸಲು ಅಡ್ಡಿ ಇರುವದಿಲ್ಲ ಕ್ಲಾಸಿಗೆ ಹಾಜರು ರಹಾಯು ಫೀಯನ್ನು ಇಡಲಾಗಿದೆ ಸಹಕಾರಿ ಚಳವಳಿಯಲ್ಲಿ ಅಭಿರುಚಿಯುಳ್ಳ ಬೇರೆ ಹೊರಗಿನವರು ಸಹ ಈ ಕ್ಲಾಸಿಗೆ ಬರಲು ಅವಕಾಶವಿದೆ ಆದುದರಿಂದ ಹಳಿಯಾಳ ತಾಲೂಕ ಮತ್ತು ಯಲ್ಲಾಪುರ ತಾಲೂಕುಗಳಲ್ಲಿರುವಂತಹ ಎಲ್ಲ ಮಾದರಿಯ ಒಕ್ಕಲತನದ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರುವಂತಹ ಸೆಕ್ರೆಟರಿ, ಅಸಿಸ್ಟಂಟ ಸೆಕ್ರೆಟರಿ, ಕಾರಕೂನ ಮೊದಲಾದವರೂ ಹಾಗೂ ಹೊರಗಿನಿಂದ ಬರಲಿಚ್ಛಿಸುವವರೂ ಎಪ್ರಿಲ ತಿಂಗಳ ೩೦ನೇ ತಾರೀಕಿನ ಒಳಗಾಗಿ ಕೆಳಗಿನ ವಿಳಾಸಕ್ಕೆ ಅರ್ಜಿಗಳನ್ನು ಕಳಿಸಬೇಕಾಗಿ ವಿನಂತಿಯು ಉಮೇದವಾರರು ಅರ್ಜಿಯಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು

ಕ್ಲಾಸಿನ ಬೆಟ್ಟಿನ ವಿವರಗಳು ಹಿಂದಿನಿಂದ ತಿಳಿಸಲ್ಪಡುವವು

R. V. PANDIT,
B.A., LL.B
ಚೇರಮನ್, ಎಜ್ಯುಕೇಶನ್ ಕಮಿಟಿ, ಉ ಕ

ಟೆಂಡರ ನೋಟೀಸು.

ಭಟಕಳ ಮಹಾಲ ಆಫೀಸಿನಿಂದ—

ಯಾವತ್ತೂ ಜನರಿಗೆ ತಿಳಿಸುವದೇನಂದರೆ

ನಂ O/A ೮೮೬೧ ಭಟಕಳ, ೧೭-೪-೪೮

ಮೆ॥ ಕಲೆಕ್ಟರ ಸಾಹೇಬರ ಹುಕುಮು ನಂ ೮೬ ತಾ ೩-೪-೪೮ನೇದರ ಪ್ರಕಾರ ಭಟಕಳ ಗೋಡೌನದಲ್ಲಿ ಶಿಲ್ಕು ಇದ್ದ ಕೆಳಗೆ ಕಾಣಿಸಿದ ಗೋಣಿ-ಚೀಲಗಳನ್ನು ಟೆಂಡರ ಮೂಲಕವಾಗಿ ಜಾಹೀರ ಲಿಲಾಂ ಮಾಡತಕ್ಕದ್ದಿದೆ

ಉಪಯೋಗಕ್ಕೆ ಬರುವ ಖಾಲೀ ಚೀಲಗಳು	ದುರುಸ್ತ ಮಾಡಲು ಬರುವಂಥ ಹಳೇ ಚೀಲಗಳು	ಉಪಯೋಗಕ್ಕೆ ಬಾರದೇ ಇರುವಂಥ ಹಳೇ ಖಾಲೀ ಚೀಲಗಳು.
೧	೨	೩
೧೫,೩೫೬	೧೧,೧೧೦	೭,೮೯೩

೨. ಚೀಲಗಳನ್ನು ಪಡೆಯಲಿಚ್ಛಿಸುವವರು ತಾ ೬-೫-೪೮ನೇದರೊಳಗಾಗಿ ಮೋಹರಬಂದ ಮಾಡಿದ ಟೆಂಡರುಗಳನ್ನು ಮೆ॥ ಮಹಾಲ್ಕರಿ ಭಟಕಳರವರಿಗೆ ಮುಟ್ಟುವಂತೆ ಕಳಿಸತಕ್ಕದ್ದು. ಅದರ ನಂತರ ಬಂದ ಟೆಂಡರುಗಳನ್ನು ಸ್ವೀಕರಿಸುವದರಲ್ಲಿ ಬರಲಾರದು ಟೆಂಡರುಗಳನ್ನು ಸ್ವತಃ ಇಲ್ಲವೆ ಪೋಸ್ಟಿನ ಮೂಲಕವಾಗಿ ನಮಗೆ ಮುಟ್ಟಿಸಬಹುದು ಕವರಿನ ಮೇಲೆ "ಖಾಲೀ ಚೀಲಗಳ ಬಗ್ಗೆ ಟೆಂಡರ" ಎಂತ ಬರೆಯತಕ್ಕದ್ದು.

೩. ಟೆಂಡರು ಕೊಡುವವರು ಯಾವ ಜಾತಿಯ ಖಾಲೀ ಚೀಲಗಳು ಎಷ್ಟು ಎಂಬುದನ್ನು ಯಾವ ದರದಿಂದ ತೆಗೆದು ಕೊಳ್ಳಲಿಚ್ಛಿಸುತ್ತಾರೆಂಬುದನ್ನು ಸ್ಪಷ್ಟ ತೋರಿಸತಕ್ಕದ್ದು. ಟೆಂಡರುಗಳನ್ನು ಯಾವದೇ ಕಾರಣಗಳನ್ನು ತೋರಿಸದೆ ನಾಮಂಜೂರ ಮಾಡಬಹುದು

೪ ಟೆಂಡರು ಕಳಿಸುವವರು ಅದರ ಸಂಗಡ ಸರಕಾರಿ ಟ್ರೆಝರಿಯಲ್ಲಿ ಠಾರಣ ಹಣ ರೂಪಾಯಿ ೨೦೦/- ಭರಣ ಮಾಡಿದ ಚಲನುಗಳನ್ನು ಲಗ್ತ ಇಡತಕ್ಕದ್ದು. ಹಾಗೆ ಚಲನ ಲಗ್ತ ಇಲ್ಲದೆ ಬಂದ ಟೆಂಡರುಗಳನ್ನು ಸ್ವೀಕರಿಸುವದರಲ್ಲಿ ಬರಲಾರದು. ಟೆಂಡರ ಮಂಜೂರ ಮಾಡಿದವರಿಗೆ ಚೀಲಗಳನ್ನು ಕೊಡಲಾಗುವದು ಟೆಂಡರ ಮಂಜೂರ ಮಾಡಿದ ನಂತರ ಮೆ॥ ಕಲೆಕ್ಟರ ಸಾ॥ ಬಾಕಿರವರು ನಿರ್ದೇಶಿಸಿದ ಅವಧಿಯಲ್ಲಿ ಅಂದರೆ ಸಾಧಾರಣ ೧೦ ದಿವಸಗಳಲ್ಲಿ ಖಾಲಿ ಚೀಲಗಳ ಪೂರ್ತಿ ಹಣವನ್ನು ತುಂಬಿ ಒಯ್ಯದಿದ್ದಲ್ಲಿ ಅವರ ಠಾರಣ ಹಣವನ್ನು ಸರಕಾರಕ್ಕೆ ಜಮಾ ಮಾಡಲಾಗುವದು

K. H. Averseker,
ಮಹಾಲಕರಿ, ಭಟಕಳ

ಯೋಗ್ಯ ದರದಿಂದ ಬಟ್ಟೆ ಬೇಕಾದರೆ,
ಕುಮಟೆಯ

ಶ್ರೀ ಸತ್ಯನಾರಾಯಣ ಸ್ಟೋರ್ಸನ್ನು

ಸಂದರ್ಶಿಸಿರಿ

ಈಗ ಬಟ್ಟೆಯ ನಿಯಂತ್ರಣ ರದ್ದಾದ್ದರಿಂದ ಬಟ್ಟೆ ಅತಿ ತುಟ್ಟಿಯಾಗಿರುತ್ತದೆಂದೂ ಯೋಗ್ಯ ಬೆಲೆಗೆ ಉತ್ತಮ ಬಟ್ಟೆ ಸಿಗುವದಿಲ್ಲೆಂದೂ ಜನರು ದೂರುತ್ತಿದ್ದಾರೆ ಸ್ವೇ ನಮ್ಮ ಸ್ಟೋರ್ಸನ್ನು ಸಂದರ್ಶಿಸಿದವರು ಹೀಗೆ ದೂರಲಿಕ್ಕಿಲ್ಲವಾಗಿ ನಮಗೆ ಖಾತ್ರಿಯುಂಟು ಒಮ್ಮೆ ಬಂದು ನೋಡಿರಿ ಮದುವೆ-ಮುಂಜಿಗಳಿಗಾಗಿ ಬೇಕಾದ ಬಟ್ಟೆಯೂ ನೂಗಸಿಂದ ಹೊಸ ಬಟ್ಟೆಯೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತದೆಂದು ನಿಮಗೂ ಖಾತ್ರಿಯಾಗುವದು

ಮಾಲಕರು - ವ್ಹಿ. ಎಸ್. ನಾಯಕ ಮತ್ತು ಕನ್ನ,
ಕುಮಟಾ.

WANTED

Immediately from 1-5-48 for the New English High School, Baad (Karwar) graduates (2 Arts & one Science) on permanent basis B Ts. or S. T. Cs. preferred. Candidates should apply to the undersigned before 25-4-48 stating remuneration expected

K. R. Haldipurkar,
Chairman,
Premier Education Society,
10-4-1948. BAAD (Karwar)

ಪ್ರಕಟನೆ.

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನ ಕನ್ನಡ, ಮರಾಠಿ ಮತ್ತು ಉರ್ದು ಶಾಲೆಗಳಲ್ಲಿ ಶಿಕ್ಷಕ ಶಿಕ್ಷಕಿಯರಾಗಿ ಕೆಲಸ ಮಾಡಲಿಚ್ಛಿಸುವ ಉಮೇದವಾರರು ತಾ ೧೦-೫-೧೯೪೮ರೊಳಗಾಗಿ ನಮ್ಮ ಕಚೇರಿಗೆ ಮುಟ್ಟುವಂತೆ ಮುದ್ರಿತ ಫಾರ್ಮುಗಳಲ್ಲಿ ಅರ್ಜಿ ಮಾಡತಕ್ಕದ್ದು ಸದರಿ ಅರ್ಜಿ ಫಾರ್ಮುಗಳು ಎಲ್ಲ ತಾಲೂಕ ಮಾಸ್ತರರ ಬಳಿ ಸಿಗುವವು ಪ್ರತಿ ಫಾರ್ಮಿಗೆ ಅರ್ಧ ಆಣೆ ಬೆಲೆ ಬೀಳುವದು ಮುದ್ರಿತ ಫಾರ್ಮಿನಲ್ಲಿಲ್ಲದ ಅರ್ಜಿಯನ್ನು ಸ್ವೀಕರಿಸಲಿಕ್ಕಿಲ್ಲ ಉಮೇದವಾರರು ಕಾನಡಾ ಜಿಲ್ಲೆಯ ನಿವಾಸಿಗಳಿರಬೇಕು

ಉಮೇದವಾರರಲ್ಲಿ ಬೇಕಾದ ಗುಣಗಳ ಪಾತ್ರತೆ.

	ಪ್ರಾಥಮಿಕ ಶಾಲಾ ಪ್ರಮಾಣ ಪರೀಕ್ಷೆಯಲ್ಲಿ—	ಶೇತಕಿ ಪ್ರಾಥಮಿಕ ಪ್ರಮಾಣ ಪರೀಕ್ಷೆಯಲ್ಲಿ—
ಮುಂದುವರಿದ ವರ್ಗದವರು	೧೦೦ಕ್ಕೆ ೫೫ರಂತೆ ಗುಣಗಳನ್ನು ಪಡೆದಿರಬೇಕು	೧೦೦ಕ್ಕೆ ೫೦ರಂತೆ ಗುಣಗಳನ್ನು ಪಡೆದಿರಬೇಕು.
ಮಧ್ಯಮ ವರ್ಗದವರು	೧೦೦ಕ್ಕೆ ೫೦ರಂತೆ ಗುಣಗಳನ್ನು ಪಡೆದಿರಬೇಕು	೧೦೦ಕ್ಕೆ ೪೫ರಂತೆ ಗುಣಗಳನ್ನು ಪಡೆದಿರಬೇಕು
ಹಿಂದುಳಿದ ವರ್ಗದವರು	೧೦೦ಕ್ಕೆ ೪೫ರಂತೆ ಗುಣಗಳನ್ನು ಪಡೆದಿರಬೇಕು	೧೦೦ಕ್ಕೆ ೪೦ರಂತೆ ಗುಣಗಳನ್ನು ಪಡೆದಿರಬೇಕು

ವಿ ಸೂ ೧೦೦ಕ್ಕೆ ಕನಿಷ್ಠ ೪೦ರಷ್ಟು ಗುಣಗಳನ್ನು ಪಡೆದ ಉರ್ದು ಉಮೇದವಾರರು ಅರ್ಜಿ ಮಾಡಬಹುದು. ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೂ ಟ್ರೇನಿಂಗ ಕೊಲೇಜಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೂ ಗುಣಗಳ ನಿರ್ಬಂಧವಿಲ್ಲ

ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದವರು, ಇಂಗ್ಲಿಷ ಭಾಷಾವಿಷಯ ಒಂದನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಲ್ಲಿ ಉತ್ತೀರ್ಣರಾಗಿ, ೧೦೦ಕ್ಕೆ ೪೦ರಂತೆ ಗುಣಗಳನ್ನು ಪಡೆದಿರುತ್ತಿದ್ದಲ್ಲಿ, ಅರ್ಜಿ ಮಾಡಬಹುದು ಅಂಥವರು ರಮಗೆ ಪರೀಕ್ಷೆಯಲ್ಲಿ ಸಿಕ್ಕ ಗುಣಗಳನ್ನು ತೋರಿಸುವ ಅಧಿಕೃತ ಪ್ರಶಸ್ತಿಪತ್ರವನ್ನು ಅರ್ಜಿಯ ಸಂಗಡ ಕಳಿಸಬೇಕು

ಬೇರೆ ಯಾವದೊಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದವರು ಅರ್ಜಿ ಮಾಡಬಯಸುತ್ತಿದ್ದರೆ ಅವರು ತಮ್ಮ ಅರ್ಜಿಗಳನ್ನು ತಮ್ಮ ಸಂಸ್ಥೆಯ ಮುಖ್ಯಾಧಿಕಾರಿಯ ವಿದ್ಯಮಾನ ಕಳಿಸಬೇಕು

ಕಾನಡಾ ಡಿ ಸ್ಕೂ ಬೋ ಕಚೇರಿ,
ಕಾರವಾರ, ತಾ. ೧೫-೪-೪೮

G. J. GUNJIKAR.
ಎಡ್ಮಿನಿಸ್ಟ್ರೇಟಿವ್ಹ ಒಫಿಸರ, ಡಿ. ಸ್ಕೂ ಬೋ ಕಾನಡಾ

BUY
OR
SELL
"UNITED KARNATAK" POLICIES

For particulars apply to:

Manager,
PRINCIPAL AGENCY OFFICE,
Post Box No 10,
UDIPI, S. Kanara.

THE BANK OF RURAL INDIA, LTD.,

(Incorporated in British India, Liability of Members limited)

HEAD OFFICE — "Satyabhama Bhavan", KARWAR, N K

Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR.

Authorised Capital	Rs. 10,00,000;
Subscribed Capital	Rs 5,00,000;
Paid-up Capital & Reserves	Rs. 5,08,502-8-0

Rates of Interest on Deposits:

Current a/c. @ 1% p. a ***Savings Bank a/c @ 2½%.***

Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "

All kinds of modern Banking business transacted.

Karwar,
14-2-1948

P. X. GRACIOUS.
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಕಾನಡಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ:-
ಸ್ಥಳದ ಪ್ರಮಾಣ ನೋಡಿ ಪ್ರತಿ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಕಮ್ಮಿ
ಅಲ್ಲಿನ ಪತ್ರದ್ವಾರಾ
ತಿಳಿಸಲಾಗುವುದು.

Reg. No. B 1270. Monday, 26-4-1948.

ಕಾನಡಾವೃತ್ತ.

ವರ್ಷ ೩೦.] THE KANARA NEWS. [ಸಂಚಿಕೆ ೪೪.

ಕುಮಟಾ:- ಸೋಮವಾರ, ತಾ. ೨೬—೪—೧೯೪೮.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ . ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ.ಯಿಂದ ಕಳುಹಿಸುವದರಿಂದ
ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿಯು ಮುಂಗಡವಾಗಿರತಕ್ಕದ್ದು

ಸ್ಥಾನಿಕ ವೃತ್ತಾಂತ.

ಕಳೆದ ವಾರದಿಂದ ಮುಂದರಿದದ್ದು.)

ಸೋಮವಾರ (ತಾ. ೨೬—೪—೪೮) ಜಾಗರ-ಜಗರಣಗಳನ್ನು ಮಾಡುವವರಿದ್ದಾರೆ.

ಕಾರವಾರ— ಈ ಹಿಂದೆ ತಿಳಿಸಿದಂತೆ-ಮುಂಬಯಿಯ ಪ್ರಾಂತಾಧಿಪತಿಗಳಾದ ರಾಜಾ ಸರ್. ಮಹಾರಾಜಸಿಂಗರವರು ಸಪತ್ನೀಕರಾಗಿ ತಾ ೧೬ನೇ ಶುಕ್ರವಾರ ಮುಂಜಾನೆ ೮ ಘಂಟೆಗೆ ಸರಿಯಾಗಿ "ಕೃಷ್ಣಾ" ಹಡಗದಿಂದ ಇಲ್ಲಿ ಬಂದಿಳಿದರು ಕಮೀಶನರ ರಾ॥ ನ್ಯಾಸ ಜಿಲ್ಹಾಧಿಪತಿ ರಾ॥ ರೆಬೆಲೋ, ನಗರಾಧ್ಯಕ್ಷ ರಾ। ಕಸಬೇಕರ ವಗೈರೆ ಅಧಿಕಾರಿಗಳೂ ಅಧಿಕಾರೇತರ ಪ್ರಮುಖರೂ ಅವರನ್ನು ಸ್ವಾಗತಿಸಿದರು ಪೋಲೀಸರೂ ಗೃಹರಕ್ಷಕದಳದವರೂ ದೊರೆಗಳಿಗೆ ಸಲಾಮಿಯನ್ನು ಕೊಟ್ಟು ಗೌರವಿಸಿದರು. ಹಾಗೆಯೇ ಸಾಹೇಬರು ಮೀನುಗಾರಿಕೆಯ ಶಾಲೆಯನ್ನು ಸಂದರ್ಶಿಸಿ, ಈ ಶಾಲೆಯಿಂದ ತಮಗೆ ಪ್ರಯೋಜನ ಸಿಕ್ಕಿದೆಯೆಂಬ ಮಾತನ್ನು ಅಲ್ಲಿಯ ವಿದ್ಯಾರ್ಥಿಗಳ ಕಡೆಯಿಂದಲೂ ಅವರ ಪಾಲಕರ ಕಡೆಯಿಂದಲೂ ತಿಳಕೊಂಡು ಸಂತೋಷಪಟ್ಟರು ಈ ಶಾಲೆಯಿಂದ ಹೊರಬಿದ್ದು ದೊರೆಗಳೂ ಅವರ ಸಹಧರ್ಮಚಾರಿಣಿಗಳೂ ಸಿವ್ಹಿಲ್ ಆಸ್ಪತ್ರಿಗೆ ಹೋದರು ಇಬ್ಬರೂ ಅಲ್ಲಿದ್ದ ರೋಗಿಗಳ ಮಾಹಿತಿಯನ್ನು ಆತ್ಮೀಯತೆಯಿಂದ ಕೇಳಿಕೊಂಡದ್ದಲ್ಲದೆ, ಹೆರಿಗೆ-ಮನೆಯ ಕಾರ್ಯ ನೋಡಿ ಸಮಾಧಾನ ವ್ಯಕ್ತಗೊಳಿಸಿದರು. ಆಸ್ಪತ್ರಿಯಿಂದ ಮುಂದೆ ದೊರೆಗಳು ಪೋಲೀಸರ ಕೇಂದ್ರಕ್ಕೆ ಭೆಟ್ಟಿ ಕೊಟ್ಟು ಪೋಲೀಸರ ಕವಾಯತು ಮತ್ತು ಶಾರೀರಿಕ ಶಿಕ್ಷಣದ ಪ್ರಯೋಗಗಳನ್ನು ನೋಡಿದರು ಇಲ್ಲಿ ದೊರೆಗಳ ಚಿಕ್ಕದೊಂದು ಭಾಷಣವಾಯಿತು "ಈಗ ದೇಶದಲ್ಲಿ ನಮ್ಮದೇ ಸರಕಾರವಾಗಿದೆ. ಹಿಂದೆ ಪರಕೀಯ ಆಳಿಕೆಯಿದ್ದಾಗ ನಿಮ್ಮ ಕೈಯಿಂದ ಜನತೆಯ ವಿರುದ್ಧ ಕೃತಿಗಳಾಗಿರಬಹುದು ಈಗ ನಿಮ್ಮ ವರ್ತನೆಯನ್ನು ಸುಧಾರಿಸಿ, ನಿಜವಾದ ಲೋಕಸೇವಕರಾಗಿ, ನಾಡಿನ ಸುವ್ಯವಸ್ಥೆಯನ್ನು ದಕ್ಷತೆಯಿಂದ ಕಾಪಾಡಿಕೊಂಡು ಆ ಕಳಂಕವನ್ನು ತೊಳೆದೊಗೆಯಿರಿ" ಎಂದು ದೊರೆಗಳು ಪೋಲೀಸರಿಗೆ ಬೋಧಿಸಿದರು ಇಲ್ಲಿಯ ಸುಭೇದಾರ ಹರೂನಖಾನರು ಕಳೆದ ಯುದ್ಧದಲ್ಲಿ ತಮ್ಮ ೪ ಮಂದಿ ಮಕ್ಕಳನ್ನು ಯುದ್ಧಕ್ಕೆ ಕಳಿಸಿಕೊಟ್ಟಿದ್ದರು ಅಬಗ್ಗೆ ಅವರಿಗೆ ಹಿಂದುಸ್ಥಾನ ಸರಕಾರದವರು ಒಂದು ಪದಕ ಕೊಟ್ಟಿರುತ್ತಾರೆ ಆ ಪದಕವನ್ನು ಪ್ರಾಂತಾಧಿಪರು ಸುಭೇದಾರರಿಗೆ .ಅರ್ಪಿಸಿದರು. ಮುಂದೆ ದೊರೆಗಳು "ಶಿವಾಜಿ ಹೋಮ ಸಂದರ್ಶಿಸಿ ಮತ್ತು ಅಲ್ಲಿಯ ಕಾರ್ಯವನ್ನೂ ಕಾರ್ಯಾಧ್ಯಕ್ಷ ರಾ॥ ಪುರಾಣಿಕರನ್ನೂ ಕೊಂಡಾಡಿ ಕಾರವಾರ ನಗರ ಸಭೆಯ ಮಾನಪತ್ರವನ್ನು ಸ್ವೀಕರಿಸಲು ಮಿತ್ರ-ಸಮಾಜದ-ಮಂದಿರಕ್ಕೆ ಬಂದರು.

ಮಿತ್ರ ಸಮಾಜದ ಮಂದಿರದಲ್ಲಿ ನಗರಾಧ್ಯಕ್ಷ ರಾ॥ ಕಸಬೇಕರರು ಅವರನ್ನು ಸ್ವಾಗತಿಸಿ, ಮಾನಪತ್ರವನ್ನು ಓದಿ ಅದನ್ನು ಅರ್ಪಿಸಿದರು. ಮತ್ತು ತಮ್ಮ ಸಹಕಾರಿಗಳ ಪರಿಚಯ ಮಾಡಿ ಕೊಟ್ಟರು. ನಗರ ಸಭೆಯ ಓರ್ವ ಸದಸ್ಯರಾಗಿರುವ ರಾ। ಥಾಕು ಹುವಾ ಹರಕಂತ್ರ ಇವರ ಪರಿಚಯ ಮಾಡಿಕೊಡುವಾಗ ನಗರಾಧ್ಯಕ್ಷರು, ೧। ತಿಂಗಳ ಹಿಂದೆ ಸಮುದ್ರ ದಂಡೆಯ ಮೇಲಿರುವ ಮೀನುಗಾರರ ಕೇರಿಯಲ್ಲಿ ಅಕಸ್ಮಾತ್ ಬೆಂಕಿಬಿದ್ದು ಕೆಲವು ಗುಡಿಸಲುಗಳೂ, ೩ ದೊಡ್ಡ ರಂಪಣಿ ಬಲೆಗಳೂ ಸುಟ್ಟುಹೋಗಿದ್ದರಿಂ ಹರಕಂತ್ರ ಸಮಾಜಕ್ಕೆ ಸುಮಾರು ಮುಕ್ಕಾಲು ಲಕ್ಷ ರೂಪಾಯಿಗಳ ಹಾನಿಯಾಗಿದೆಯೆಂತಲೂ ಸರಕಾರದವರು ಅವರಿಗೆ ಸಹಾಯ ಮಾಡಬೇಕೆಂತಲೂ ನಿವೇದಿಸಿದರು ತಾವು ಅವಶ್ಯ ಸಹಾಯ ಕೊಡಿಸುವೆವೆಂದು ದೊರೆಗಳು ಅಗ ಆಶ್ವಾಸನ ಕೊಟ್ಟರು

ನಗರ ಸಭೆಯವರ ಮಾನಪತ್ರಕ್ಕೆ ಪ್ರತ್ಯುತ್ತರ ಕೊಡುತ್ತಾ ದೊರೆಗಳು ಹೇಳಿದ್ದೇನಂದರೆ - "ಜೋಗ-ಜಲಪಾತದ ವಿದ್ಯುತ್ತಶಕ್ತಿಯ ಪ್ರಯೋಜನ ಈ ಜಿಲ್ಲೆಯವರಿಗೆ ದೊರಕಿಸಿ ಕೊಡಲು ಸರಕಾರವು ಯತ್ನಿಸುತ್ತಿದೆ ಕಾಳಿ ನದಿಯ ವಿದ್ಯುತ್ಕಾರಖಾನೆಯ ಯೋಜನೆಯ ವಿಚಾರ ನಡೆದಿದೆ ಈ ಯೋಜನೆಗಳು ಪೂರ್ಣವಾಗುವವರೆಗೆ ಜನರು ಸಹಕಾರಿ ಪದ್ಧತಿಯಿಂದ ಯಾ ಬೇರೆ ಪದ್ಧತಿಯಿಂದ ವಿದ್ಯುತ್ತ ಶಕ್ತಿಯ ನಿರ್ಮಾಣದ ಪ್ರಯತ್ನ ಮಾಡಿದು ಬೆಳೆತಾಗುವದು, ಸರಕಾರವು ಈ ಪ್ರಯತ್ನಗಳಿಗೆ ಅವಶ್ಯವುಳ್ಳ ಸಹಾಯವನ್ನು ನಿಶ್ಚಯವಾಗಿಯೂ ಮಾಡುವದು ಅಳನಾವರ-ಕಾರವಾರ ರೇಲ್ವೆ ರಚನೆಯ ಯೋಜನೆಯನ್ನು ಕುರಿತು ನಮ್ಮ ಸರಕಾರಕ್ಕೂ ಹಿಂದ ಸರಕಾರಕ್ಕೂ ಪತ್ರವ್ಯವಹಾರ ನಡೆದಿದೆ ಸದ್ಯಕ್ಕೆ ಬಂದರಗಳ ಅಭಿವೃದ್ಧಿಯ ಪ್ರಶ್ನೆಯ ವಿಚಾರವೂ ನಡೆದಿದೆ ನಿಮ್ಮ ಜಿಲ್ಲೆಯಲ್ಲಿ ಕಾರವಾರ ಮತ್ತು ಭಟಕಳ ಇವುಗಳಲ್ಲೊಂದು ಬಂದರ ಅಭಿವೃದ್ಧಿಗಾಗಿ ಆರಿಸಲ್ಪಡುವದು ಆ ಆಯ್ಕೆಗನುಗುಣವಾಗಿ ರೇಲ್ವೆ-ರಚನೆಯ ಯೋಜನೆಯಾಗುವದು. ಜಂಗಲ ಸಂಶೋಧನೆಯ ಒಂದು ಕೇಂದ್ರವನ್ನು ಇಲ್ಲಿ ತೆರೆಯಬೇಕಾಗಿ ನೀವು ಮಾಡಿದ ಬೇಡಿಕೆಯು ಸದ್ಯದ ಪರಿಸ್ಥಿತಿಯಲ್ಲಿ ಮಾನ್ಯವಾಗುವಂತಿಲ್ಲ ಜಿಲ್ಹಾ ಲೋಕಲ್ ಬೋರ್ಡುಗಳ ನೌಕರರ ತುಟ್ಟಿ ಭತ್ತೆಯ ಅಂಶವನ್ನು ಸರಕಾರವು ಕೊಡುತ್ತಿರುವಂತೆ ಮ್ಯುನಿಸಿಪಾಲಿಟಿಗಳ ನೌಕರರ ತುಟ್ಟಿಭತ್ತೆಯ ಅಂಶವನ್ನೂ ಸರಕಾರವು ಕೊಡಬೇಕೆಂದು ನೀವು ಮಾಡಿದ ಬೇಡಿಕೆಯೂ ಒಪ್ಪಿಗೆಯಾಗುವಂತಿಲ್ಲ ಬೋರ್ಡುಗಳ ಪರಿಸ್ಥಿತಿಗೂ ಮ್ಯುನಿಸಿಪಾಲಿಟಿಗಳ ಪರಿಸ್ಥಿತಿಗೂ ಬಹಳ ಅಭ್ಯಂತರವುಂಟು ಮ್ಯುನಿಸಿಪಾಲಿಟಿಗಳು ಹೊಸ ಹೊಸ ಕರಗಳನ್ನು ಹೇರಿ ಈ ವೆಚ್ಚವನ್ನು ಪೂರೈಸಿಕೊಳ್ಳಲು ಸಾಧ್ಯವಿದೆ ಅದರೂ ನಿಮ್ಮ ಬೇಡಿಕೆಯ ವಿಚಾರವನ್ನು ಸರಕಾರವು ಮಾಡುತ್ತಿದೆಯೆಂದು ನಿಮಗೆ ಹೇಳಬಯಸುತ್ತೇನೆ ಈಗ ನಿಮ್ಮ ಪಕ್ಕದಲ್ಲಿರುವ ಕೋಡಿ-ಕೇಣಿವಾಡ ಮಾರ್ಗವನ್ನು ಹಿಂದಿನಂತೆ ಈಗ ಪುನಃ ಸರಕಾರದವರೇ ತಮ್ಮ ವಶಕ್ಕೆ ತಕ್ಕೊಂಡು ಅದನ್ನು ಸುಧಾರಿಸಬೇಕಾಗಿ ನೀವು ಬಿನ್ನವಿಸಿದ್ದೀರಿ. ಈ ವಿಷಯವು ಯುದ್ಧೋತ್ತರ ಪುನರ್ರಚನೆಯ ಯೋಜನೆಯೊಳಗಿನ ಮಾರ್ಗರಚನೆಯ ಕಾರ್ಯಕ್ರಮದಲ್ಲಿ ಸೇರಿಸಲ್ಪಟ್ಟಿರುವದೆಂದೂ ಸರಕಾರವು ಬೇಗನೇ ಅದರ ವಿಚಾರ ಮಾಡುವದೆಂದೂ ನಿಮಗೆ ಭರವಸೆ ಕೊಡುತ್ತೇನೆ ಆಹಾರಧಾನ್ಯಗಳ ಬೆಲೆಗಳು ವಿಪರೀತ ಏರಿದೆಯೆಂದು ನೀವು ದೂರುತ್ತಿದ್ದೀರಿ ಈ ಏರಿಕೆಯು ನಿಮ್ಮಲ್ಲಿಷ್ಟೇ ಆಗಿದೆಯೆಂದು ತಿಳಿಯಬೇಡಿರಿ ನಿಯಂತ್ರಣಗಳು ರದ್ದಾದ ಮೇಲೆ ಎಲ್ಲ ಜಿಲ್ಹೆಗಳಲ್ಲೂ ಇದೇ ಸ್ಥಿತಿಯಾಗಿದೆ ಸರಕಾರವು ಈ ಪರಿಸ್ಥಿತಿಯನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಾ ಇದೆ ಆಹಾರಧಾನ್ಯಗಳ ಕೊರತೆಯು ಉಂಟಾದರೆ ಅಲ್ಲಲ್ಲಿ ಸರಕಾರವು ಹೊರಗಿನಿಂದ ಆಹಾರಧಾನ್ಯಗಳನ್ನು ತರಿಸಿಕೊಡುವದು ಮತ್ತು ಕೆಲವು ಕೇಂದ್ರಗಳಲ್ಲಿ ಯೋಗ್ಯ ಧಾರಣೆಯ ಅಂಗಡಿಗಳನ್ನು ತೆರೆಯುವದು ಈಗಾಗಲೇ ನಿಮ್ಮ ಜಿಲ್ಹೆಗೆ-೧೦೦೦ ಟನ್ನ ಅಕ್ಕಿ ಮತ್ತು ೧೯೦೦ ಟನ್ನ ಗೋದಿ ಜೋಳಗಳನ್ನು ಕಳಿಸಿಕೊಡುವ ವ್ಯವಸ್ಥೆ ಮಾಡಲಾಗಿದೆ ಅವಶ್ಯ ಬಿದ್ದರೆ ಹೆಚ್ಚಿಗೆ ಧಾನ್ಯ ಕಳಿಸಿಕೊಡಲ್ಪಡುವದು. ಈ ಪೂರೈಕೆಯಿಂದ ಆಹಾರ-ಪರಿಸ್ಥಿತಿ ಸುಧಾರಿಸಿ ದರಗಳೂ ಇಳಿಯುವವೆಂದು ಹಾರೈಸುತ್ತೇನೆ" ತಮ್ಮ ಭಾಷಣದ ಕೊನೆಗೆ ದೊರೆಗಳು ಕಾರವಾರ ನಗರ ಸಭೆಯ ಕಾರಭಾರವನ್ನು ಅಧ್ಯಕ್ಷ ರಾ। ಕಸಬೇಕರರು ಉತ್ತಮವಾಗಿ ನಡಿಸಿರುತ್ತಾರೆಂದು ತಮಗೆ ದಕ್ಷಿಣ ಭಾಗದ ಕಮೀಶನರರೂ ಸ್ಥಾನಿಕ ಸ್ವರಾಜ್ಯ ಇಲಾಖೆಯ ಸಚಿವರೂ ಹೇಳಿದುದರ ಉಲ್ಲೇಖ ಮಾಡಿ ರಾ। ಕಸಬೇಕರರನ್ನು ಹೃತ್ಪೂರ್ವಕ ಅಭಿನಂದಿಸಿದರು ಆಭಾರಮನ್ನಣೆ, ನೊಪಲಾದವಾಗಿ ಈ ಸಮಾರಂಭ ಮುಗಿಯಿತು

ಮಿತ್ರ ಸಮಾಜದೊಳಗಿನ ಸಮಾರಂಭ ಮುಗಿಸಿಕೊಂಡು ಪ್ರಾಂತಾಧಿಪರ ಪತ್ನಿಗಳಾದ ರಾಣಿ ಮಹಾರಾಜಸಿಂಗ ಇವರು ಮಹಿಳಾ ಪರಿಷತ್ತಿನ ಬಿನ್ನವತ್ತಳೆಯನ್ನು ಸ್ವೀಕರಿಸಲು ಶಿರೀನ ಕಲೆಕ್ಟ್ರಪಟ-ಮಂದಿರಕ್ಕೆ ಹೋದರು. ಬಿನ್ನವತ್ತಳೆಗೆ ಉತ್ತರ ಕೊಡುವಾಗ ರಾಣೀಸಾಹೇಬರು ಸ್ಥಾನಿಕ ಮಹಿಳೆಯರೊಳಗೆ ಕಂಡುಬರುವ ಸಹಕಾರಿ ಪ್ರವೃತ್ತಿಯನ್ನೂ, ಸ್ಥಾನಿಕ ಸ್ತ್ರೀಯರು ತೆರೆದಿರುವ ಸಹಕಾರಿ ಅಂಗಡಿಯನ್ನೂ ಕುರಿತು ಆನಂದ ವ್ಯಕ್ತಗೊಳಿಸಿ, ಶಿಶುವಿಹಾರ-ಸಂಸ್ಥೆ, ಪ್ರಥಮ ಚಿಕಿತ್ಸೆ ಕಲಿಸುವ ವರ್ಗ, ರೋಗಿ ಶುಶ್ರೂಷೆ ಮಾಡುವವರದೊಂದು ದಲ, ದುಗ್ಧಾಲಯ ಇವುಗಳ ಅವಶ್ಯಕತೆಯನ್ನು ವಿವರಿಸಿದರು ಸಮಾಜ ಸೇವೆಯ ಕಾರ್ಯಗಳಿಗೆ ಹಣದ ಕೊರತೆಯೆಂದೂ ಅಡ್ಡ ಬರುವದಿಲ್ಲವಾಗಿ ಅವರು ಸಾರಿದರು; ಶುಶ್ರೂಷೆಯ ಶಿಕ್ಷಣ ಪಡೆಯಲು ೨೦-೨೫ ಮಂದಿ ಹೆಂಗಳೆಯರು ಮುಂದೆ ಬಂದಲ್ಲಿ ಅವರ ಶಿಕ್ಷಣದ ವ್ಯವಸ್ಥೆ ತಾವು ಮಾಡಿಸುವೆವೆಂದು ಆಶ್ವಾಸನ ಕೊಟ್ಟರು. ಗೌಳಿಗರಿಂದ ಹಾಲು ಕೊಂಡುಕೊಂಡು, ದುಗ್ಧಾಲಯದಲ್ಲಿಟ್ಟು, ಹಂಚಲಾರಂಭಿಸಿದರೆ, ಜನರಿಗೆ ಶುದ್ಧ ಹಾಲು ಸಿಗುವದೆಂದೂ ಜನರೂ ಸರಕಾರವೂ ಈ ಸಂಸ್ಥೆಗೆ ಕೈತುಂಬ ಸಹಾಯ ಮಾಡುವರೆಂದೂ ನುಡಿದರು.

(ಪ್ರಾಂತಾಧಿಪರ ಭೆಟ್ಟಿಯ ಇತರ ವೃತ್ತಾಂತ ಮುಂದಿನ ಸಂಚಿಕೆಯಲ್ಲಿ ಬರುವದು)

ಶೇತಕೀ ಶಾಲೆ, ಕುಮಟಾ.

ಕುಮಟಾ ಶೇತಕೀ ಶಾಲೆಯು ಇದೇ ಜೂನ ೧೫ನೇ ತಾರೀಖಿನಿಂದ ಶುರು ಆಗುವದು. ಅರ್ಜಿ ಕಳಿಸುವವರು ಕನ್ನಡ ಮುಲ್ಕಿ ಪರೀಕ್ಷೆ ಪಾಸಾದವರು ಅಥವಾ ಇಂಗ್ಲಿಷ ೩ನೇ ಇಯತ್ತೆ ಪಾಸಾದವರಿರಬೇಕು. ವಯಸ್ಸು ೧೬ಕ್ಕಿಂತ ಹೆಚ್ಚು, ೩೫ಕ್ಕಿಂತ ಕಡಿಮೆ ಇರತಕ್ಕದ್ದು. ಶಿಕ್ಷಣ ಫೀ ಕೊಡಬೇಕಾಗಿಲ್ಲ ಮತ್ತು ವಸತಿ-ವ್ಯವಸ್ಥೆ ಪುಕ್ಕಟೆ ಮಾಡಲಾಗುವದು. ವರ್ಷದಲ್ಲಿ ೧೦ ತಿಂಗಳ ತನಕ ಪ್ರತಿ ತಿಂಗಳಿಗೆ ರೂ ೨೦ ವಿದ್ಯಾರ್ಥಿ-ವೇತನ ಕೊಡಲಾಗುವದು. ಅರ್ಜಿಯ ನಮೂನೆಗಳನ್ನು ಕುಮಟಾ ಶೇತಕೀ ಶಾಲೆಯಲ್ಲಿ ಪಡೆಯಬಹುದು ಹಾಗೂ ಅರ್ಜಿಗಳು, ಮೇ ೧೫ನೇ ತಾರೀಖಿನೊಳಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ತಲ್ಪತಕ್ಕದ್ದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರಿಗೆ ಬರೆದು ತಿಳಿದುಕೊಳ್ಳತಕ್ಕದ್ದು.

ಎಮ್. ವ್ಹಿ. ಭಾಗವತ,
ಶೇತಕೀ ಶಾಲೆ, ಕುಮಟಾ. ಸುಪರಿಂಟೆಂಡೆಂಟ,
ತಾ. ೨೬-೪-೪೮ - ಶೇತಕೀ ಶಾಲೆ, ಕುಮಟಾ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು, ಇಂಡಿಯದಲ್ಲಿ ಸಾಂಘೀಕರಿಸಿದ್ದು)

ಹೆಡ್ ಆಫೀಸು: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಶೇರು ಮೂಲಧನ ರೂ. ೭,೫೧,೦೦೦/—ಕ್ಕೂ ಮಿಕ್ಕಿದೆ.

ಕಾಯ್ದಿರಿಸಿಡಲ್ಪಟ್ಟ ನಿಧಿ ರೂ. ೧,೫೦,೦೦೦/—ಕ್ಕೂ ಮಿಕ್ಕುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ಸಲೆ ಬಡ್ಡಿಯಂತೆ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೦೫-೩-೧೯೪೮.

ಕೆ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡೈರೆಕ್ಟರ

NOTICE

To

All owners of Motor Vehicles in the Karnatak Region.

Basic ration for motor vehicles for the quarter ending 31-7-1948 will be issued at the following centres on the dates and places shown against each centre.

Sr No	District	Centre	Place	Date	Time
1	Dharwar	Hubli	Inspection bungalow	28th 29th 30th April 1948 and 1st May 1948	9 A M to 12 A M Cars and Motor Cycles 2-30 P M to 5 P M – Goods vehicles and others
2	Karwar	Karwar	-do-	28th, 29th and 30th April 1948	-do-
3.	Bijapur	Bijapur	-do-	27th 28th, and 29th April 1948	-do-
4	Belgaum	Belgaum	Office of the Area Rationing Authority Belgaum.	From 26th April 1948 onwards	**Between 11 A M. and 3 P.M**

1 Application forms can be had at each centre

2 ***Cars, Motor-cycles and Motor Boats*** – Basic ration – "H" forms Supplementary ration – 'K' forms

Applications shall be signed by the Registered Owner and accompany with the Registration Books **and Insurance Certificates,** without these, the applications will not be accepted

3. **Goods trucks** : *On petrol and Taxi cabs* – Application in 'H' form signed by the Registered Owner shall accompany with the copy of the log of the previous Quarters, Registration certificate valid permit, valid certificate of fitness and **Insurance certificate**

4. **Goods trucks on** *Producer Gas Plants* – Application as in para 3 along with a valid certificate of gas plant

5. **General** – Registration certificate without tax entry by the Regional Transport Officer and accompanied by a challan will not be accepted for issue of any ration

Application by post at centres will not be entertained and if received, will only receive attention after the return of Camp office to Head quarters

6 **Stage Carriages** – Provisional quota as per directions to the Camp officers

7 Ration for Trade certificates will only be issued from the Head Office, Belgaum. Copies of the Trade certificate Register along with the Register will have to be produced, for scrutiny

8 **Supplementary ration** – Arrangements are being made to issue supplementary ration to normal cases at the camp centres A list of members who may draw their supplementary ration will be pasted at the camp notice board *Those persons drawing* supplementary ration whose names do not appear therein will apply to the Head quarters

9 Persons deputing others for receiving coupons will carry an authority from the owners and in no case will these deputies be allowed to sign for the owner on the application form

10 This office will not be responsible for any impersonations

Quantum –

Basic ration for cars and Motor cycles and Motor-boats	50% of the previous quarter
Goods Vehicles	54 gallons as aganist 60 gallons per quarter – R L W 5080
	73 gallons as against 80 gallons per quarter – R L W 14590
	100 gallons as against 110 gallons per quarter – R L W 14500

Note – Inspection of vehicles fixed at Dandeli for 28th & 29th instant is postponed to 2nd and 3rd May 48

Inspection of vehicles fixed at Haveri for 23th & 29th instant is postponed to 2nd and 3rd May 48

Inspection of vehicles will take place at Bijapur on 27th, 28th & 29 instant

Inspection of vehicles will take place at Athani on 4th and 5th May 48

Inspection of vehicles will take place at Bagalkot on 30th April, 1st & 2nd May 48 and the tour programme for May already published is cancelled

R. D E OBED
For Area Rationing Authority, K R
Belgaum

ಜಾಹೀರನಾಮೆ.

[illegible]

V R. Dalvi,

ಜಾಹೀರನಾಮೆ

[illegible]

M. H. Farokhi,

NOTICE.

It has been noticed that the drivers of goods vehicles are carrying passengers in the goods trucks or they are carrying more persons than the number allowed to do so under Rule 93 of the B M V Rules 1940 Any drivers found guilty of the above offence will be considered as driving motor vehicles dangerously and hence they will be liable to be punished by the licensing authority in addition to the punishment inflicted on them by the court on being prosecuted under Sec 112 of the I M V Act 1939, for breach of Rule 93 of the B M V Rules 1940

Also carrying more than one person by the side of the driver shall also be considered as dangerous driving and will be dealt with as above

Belgaum, 22-4-48 × × Regional Transport Officer, K R, Belgaum

ಕೊಂಕಣಿ ಭಾಷೆಯ ಬಗ್ಗೆ ತಾತ್ಸಾರ ತಳೆಯುವದು ಬೇಡ.

(ಶ್ರೀ॥ ವೆಂಕಟೇಶ ರಾ ಪ್ರಭುದೇವರು ಬರೆದುದು)

"ರಾಜಾನ ಕೇಲಿಲಿ ಪೂರ್ವದಿಶಾ ಆನಿ ಭಟಾನ ಕೇಲಿಲಿ ಅಮಾಸಪುನವ" ಎಂಬುದಾಗಿ ಕೊಂಕಣಿಯಲ್ಲಿ ಒಂದು ಗಾದೆಯುಂಟು ರಾಜನು (ರಾಜಾಧಿಕಾರದಲ್ಲಿದ್ದವನು) ಹೇಳಿದ್ದೇ ಶಾಸನ, ಅದಕ್ಕೆ ಯಾರೂ ಆಕ್ಷೇಪ ಎತ್ತತಕ್ಕದ್ದಲ್ಲ ಎಂದು ಅದರ ತಾತ್ಪರ್ಯ ರಾಜನು ನಡಿಸಿದಂತೆ ಪ್ರಜೆ ನಡೆದುಕೊಳ್ಳಬೇಕು, ತಂದೆ ಹೇಳಿದಂತೆ ಮಗ ನಡೆಯಬೇಕು, ಪತಿಯು ಇಚ್ಛೆಯಂತೆ ಪತ್ನಿ ಆಚರಿಸಬೇಕು ಎಂಬ ನೀತಿ ಸತ್ಪ್ರದರ್ಶನಕ್ಕೆ ಸರಿ ಕಂಡುಬರುತ್ತಿದೆ ದೊರೆ-ತಂದೆ ಪತಿಗಳು ನಿಃಸ್ವಾರ್ಥಿಗಳಾಗಿ, ತಮ್ಮ ಪ್ರಜೆಯನ್ನು ಕರುಣೆಯಿಂದ, ಮಕ್ಕಳನ್ನು ವಾತ್ಸಲ್ಯದಿಂದ, ಪತ್ನಿಯನ್ನು ಪ್ರೇಮದಿಂದ ನೋಡುತ್ತಿರುವ ವರೆಗೆ ಈ ನೀತಿ ಪ್ರಸಂಶೆದ ಧಾರಣೆಗೆ ಸಹಾಯಕಾರಿಯಾಗುವದು. ಅದೇ ಇವರಲ್ಲಿ ದೃಷ್ಟಿಭೇದವುಂಟಾದರೆ ಆ ನೀತಿ ಉಭಯತರಲ್ಲಿಯ ವಿರಸವನ್ನುಂಟು ಮಾಡುತ್ತಿದೆ ಪ್ರಜೆಗಳು ಇಷ್ಟೇ ಉಣಬೇಕು, ಇಂಥಲ್ಲಿಯೇ ವಸತಿ ಮಾಡಬೇಕು, ಇಂತಿಷ್ಟೇ ಸಂಪಾದನೆ ಮಾಡಬೇಕು, ಇಷ್ಟೇ ಮಾತನಾಡಬೇಕು, ಹೀಗೆಯೇ ಬರೆಯಬೇಕು, ಈ ಈ ಭಾಷೆಯನ್ನೇ ಬಳಸಬೇಕು, ಇಂಥಿಂಥ ವಸ್ತುಗಳನ್ನೇ ಬೆಳಸಬೇಕು ಎಂದು ಮುಂತಾಗಿ ಪ್ರಜೆಗಳ ಸಹಜ ಸ್ವಾತಂತ್ರ್ಯಕ್ಕೆ ಬಾಧೆಯನ್ನುಂಟು ಮಾಡುವ ಶಾಸನಗಳನ್ನು ಹೊರಡಿಸಿದರೆ, ಪ್ರಜೆಗಳು ಅದಕ್ಕೆ ಕೆಲ ಕಾಲ ತಲೆ ತಗ್ಗಿಸಿದರೂ, ಯೋಗ್ಯ ಸಮಯ ಬಂದ ಕೂಡಲೇ ಜನರು ತಮ್ಮ ಸ್ವಾತಂತ್ರ್ಯ ಸಾಧಿಸಿಕೊಳ್ಳುವದಕ್ಕೆ ಹೆಣಗಾಡುವರು, ಮಕ್ಕಳು ತಮ್ಮ ತತ್ತ್ವಕ್ಕೋಸ್ಕರ ಪ್ರತಿಭಟಿಸುವರು, ಹೆಂಡಂದಿರು ತಮ್ಮ ಪರಾಧೀನತೆಯನ್ನು ದೂರ ಎಸೆದುಬಿಡುವರು

ಶ್ರೀ॥ ಬಾಳಾಸಾಹೇಬ ಖೇರರು ಈಗ ಮುಂಬಯಿ ಸರಕಾರದ ಪ್ರಧಾನ ಸಚಿವರಿರುತ್ತಾರೆ ಪ್ರಾಂತದ ರಾಜ್ಯ ಸೂತ್ರಗಳು ಅವರ ಕೈಯಲ್ಲಿವೆ ಕಳೆದ ಡಿಸೆಂಬರದಲ್ಲಿ ಇವರು ಪುಣೆಯಲ್ಲಿ ಜರುಗಿದ ಗೋಮಂತಕ ಮರಾಠಿ ಸಮ್ಮೇಲನದಲ್ಲಿ ಸನ್ಮಾನ್ಯ ಅತಿಥಿಗಳಾಗಿ ನಿಂತು, ಕೊಂಕಣ ಭಾಷೆಯನ್ನು ಕುರಿತು ಕೆಲವು ನೂತನ ವಿಧಾನಗಳನ್ನು ಮಾಡಿದರು ಬಾಳಾಸಾಹೇಬರು ಯಥಾರ್ಥವಾದಿಗಳು, ಸತ್ಯಾಸತ್ಯತೆಯನ್ನು ತೂಗಿ ನಿಜವಾದುದನ್ನೇ ನುಡಿಯುವವರು, ಹೊಳ್ಳು ಮಾತುಗಳನ್ನು ಹೇಳಿ ಜನಗಳನ್ನು ವಂಚಿಸುವವರಲ್ಲ, ಎಂದು ಪ್ರಖ್ಯಾತಿಯುಂಟು "ಕೊಂಕಣಿ-ಮರಾಠಿ ವಾದ ಬೆಳಸುತ್ತ ಹೋಗಬೇಡಿ ಕೊಂಕಣಿಯು ಮರಾಠಿಯ ಅಪಭ್ರಷ್ಟ ರೂಪವಿರುತ್ತದಾಗಿ ಬಲ್ಲವರು ಹೇಳುತ್ತಾರೆ" ಎಂದು ಇವರು ವ್ಯಾಖ್ಯಾನಿಸಿದ ಸಮ್ಮೇಲನದಲ್ಲಿ ಹೇಳಿದರು ಆಮೇಲೆ ಕೊಂಕಣಿ ಬೋಧ ಭಾಷೆಯಾಗಲು ಅರ್ಹತೆಯುಳ್ಳದ್ದಲ್ಲ ಎಂಬುದಾಗಿ ಭಾಷಾ-ಶಾಸ್ತ್ರಜ್ಞರೊಬ್ಬರು ಅಭಿಪ್ರಾಯಪಡುತ್ತಾರೆಂತಲೂ, ಕೊಂಕಣಿಯಲ್ಲಿ ಅನೇಕ ಭಾಷಾ-ಭೇದಗಳಿರುವದರಿಂದ ಇದು ಗ್ರಂಥಸ್ಥ ಭಾಷೆಯಾಗಲಾರದೆಂದು ಕೊಂಕಣಿ ಬಲ್ಲ ಇಬ್ಬ ದೊಡ್ಡ ವಿದ್ವಾಂಸರು ಹೇಳಿದ್ದಾರೆಂತಲೂ ಮುಂಬಯಿ ಸರಕಾರವು ತಮ್ಮದೊಂದು ಪ್ರಕಟನೆಯಲ್ಲಿ ಪ್ರಕಟಿಸಿದೆ ಸರಕಾರದವರ ಈ ವಿಧಾನಗಳು ಕೊಂಕಣಿ ಭಾಷೆಯ ಭವಿತವ್ಯವನ್ನು ರೂಪಿಸುವಂತಹವಿರುವದರಿಂದ ಅವುಗಳನ್ನು ಒಳಿತಾಗಿ ಪರೀಕ್ಷಿಸಬೇಕಾಗಿದೆ ಸರಕಾರದ ಪ್ರಕಟನೆಯನ್ನು ಪೃಥಕ್ಕರಿಸಿ ನೋಡಲಾಗಿ ಅದರಲ್ಲಿ ಈ ಕೆಳಗಿನ ಅಂಶಗಳು ಕಾಣುತ್ತಿವೆ

(೧) ಕೊಂಕಣಿ ಭಾಷೆ ಮರಾಠಿಯ ಅಪಭ್ರಂಶವಿರುವದರಿಂದ ಅದನ್ನು ಪುರಸ್ಕರಿಸುವ ಅವಶ್ಯಕತೆ ಕಾಣುವದಿಲ್ಲ,

(೨) ಕೊಂಕಣಿಗೆ ಬೋಧ ಭಾಷೆಯಾಗುವ ಅರ್ಹತೆಯಿಲ್ಲ,

(೩) ಕೊಂಕಣಿ ಭಾಷೆ ಗ್ರಂಥಸ್ಥ ಭಾಷೆಯಾಗಲಾರದು

ಈ ವಿಧಾನಗಳು ಎಷ್ಟು ಸರಿ ಮತ್ತು ಎಷ್ಟು ತಪ್ಪಾಗಿರುತ್ತವೆಂಬುದನ್ನು ಪರೀಕ್ಷಿಸುವಾ

೧. ಕೊಂಕಣಿಯು ಮರಾಠಿಯ ಅಪಭ್ರಂಶವೇ?— ಕೊಂಕಣಿಯನ್ನು ಕುರಿತು ಕೆಲ ಕಾಲದ ಹಿಂದೆ ೨ ಬೇರೆ ಆಕ್ಷೇಪಗಳಿದ್ದವು (೧) ಕೊಂಕಣಿಯು ಸ್ವತಂತ್ರವಾದ ಒಂದು ಭಾಷೆಯಲ್ಲ, ಅದೊಂದು ಕನ್ನಡ-ಮರಾಠಿಗಳ ಮಿಶ್ರಣವಿರುತ್ತದೆಂದು ಕೆಲವರೂ (೨) ಕೊಂಕಣಿಯು ಅದೊಂದು ಮರಾಠಿಯ ಪ್ರಾದೇಶಿಕ ಭೇದವೇ ಹೊರತು ಸ್ವತಂತ್ರ ಭಾಷೆಯಲ್ಲೆಂದು ಹೀಗೆ ಕೆಲವರೂ ವಾದಿಸುತ್ತಿದ್ದರು ಕನ್ನಡದ ಲವಲೇಶವೂ ಅರಿಯದ ಜನ ಕೊಂಕಣಿ ಆಡುತ್ತಾರೆ, ಕನ್ನಡ ಜನರ ಸಹವಾಸದ ಪರಿಣಾಮವಾಗಿ ಕೆಲವರು ಕನ್ನಡ ಮಾತುಗಳನ್ನು ಕೊಂಕಣಿಯಲ್ಲಿ (ಈಗ ಬಹಳ ಜನರು ಇಂಗ್ಲಿಷ, ಹಿಂದುಸ್ತಾನಿ ಮಾತುಗಳನ್ನು ಬೆರಸಿಕೊಳ್ಳುವಂತೆ) ಬೆರಸಿಕೊಂಡಿದ್ದರೂ ಕೊಂಕಣಿಗೂ ಕನ್ನಡಕ್ಕೂ ಸಂಬಂಧವಿಲ್ಲವೆಂಬುದು ಸ್ಪಷ್ಟವಿದೆ ಕೊಂಕಣಿಯಲ್ಲಿ ಕಂಡುಬರುವ ಲಿಂಗಭೇದವೊಂದೇ ಈ ಮಾತನ್ನು ದೃಢಪಡಿಸಬಲ್ಲದು ಅದರಂತೆ ಕೊಂಕಣಿಯು ಮರಾಠಿಯ ಪ್ರಾದೇಶಿಕ ರೂಪವಲ್ಲ ಎಂಬದನ್ನು ಸುಲಭವಾಗಿ ಮನಗಾಣಿಸಬಹುದು ಕೊಂಕಣಿಯಲ್ಲಿರುವ ನಿತ್ಯದ ಬಳಕೆಯ ಅನೇಕ ಶಬ್ದಗಳು ಮರಾಠಿಯ ಶಬ್ದಗಳಿಂದ ತೀರ ಭಿನ್ನವಿವೆ ಉದಾಹರಣಾರ್ಥ —

ನಾಮವಾಚಕಗಳು

ಕೊಂಕಣಿ	ಮರಾಠಿ	ಕೊಂಕಣಿ	ಮರಾಠಿ
ಹಾಂವ	ಮೀ	ಫಾತರ	ದಗಡ
ಉದಕ	ಪಾಣೀ	ಸುಣೆ	ಕುತ್ರಾ
ರೂಕ	ಝಾಡ	ಕೀರ	ಪೋಪಟ
ಬಾಂಯು	ವಿಹೀರ	ಆಯದನ	ಭಾಂಡೇಂ
ಉಜೊ	ವಿಸ್ತವ	ರಾಗ್ಗಿಂ	ಜವಳ
ಕಾಂಕಣ	ಬಾಂಗಡಿ	ಬಿವಲೊ	ರವೀ

ಕ್ರಿಯಾವಾಚಕಗಳು

ಉಂಬಳಪ	ಧಾಡಣೇಂ	ಹಾಡಪ	ಆಣಣೇಂ
ಉಲಪಪ	ಬೋಲಣೇಂ	ಉಡಪ	ಫೇಕಣೇಂ
ವೆಚಪ	ಜಾಣೇಂ	ಲುಸಪ	ಕಾಪಣೇಂ

ಇಂತಹ ನೂರಾರು ಶಬ್ದಗಳನ್ನು ತೋರಿಸಬಹುದು

ಇದರ ಮೇಲಿಂದ ಕೊಂಕಣಿಗೂ ಮರಾಠಿಗೂ ಜನ್ಯ-ಜನಕ ಸಂಬಂಧವಿಲ್ಲೆಂಬದು ಸ್ಪಷ್ಟವಾಗುತ್ತಿದೆ ಕೊಂಕಣಿಯು ಮರಾಠಿಯ ಮೂಲಪ್ರಕೃತಿಯೆಂತಲೂ, ಕಾಲಾಂತರದಿಂದ ಅದು ಮಿಶ್ರಿತವಾಗಿ ಈಗಿನ ಮರಾಠಿ ರೂಪಕ್ಕೆ ಬಂದಿದೆಯೆಂತಲೂ, ಅದ್ದರಿಂದ ಕೊಂಕಣಿಗೆ ಪ್ರೋತ್ಸಾಹನೆ ಕೊಡುವದೆಂದರೆ ನವ ನಾಗರಿಕತೆಯನ್ನು ಬಿಟ್ಟು ಹಿಂದಿನ ಕಾಡು ಸ್ಥಿತಿಗೆ ಮರಳಿ ಹೋಗುವಂತೆ ಆಗುವದೆಂತಲೂ ಕೆಲವರು ವಾದಿಸುತ್ತಿದ್ದರು ಆದರೆ ಇವೆರಡೂ ಭಾಷೆಗಳಲ್ಲಿ ಜನ್ಯ-ಜನಕ ಸಂಬಂಧವೇ ಇಲ್ಲವೆಂದು ಸಿದ್ಧವಾದ ಮೇಲೆ ಆ ತರ್ಕವೂ ನಿರಾಧಾರವೆಂಬುದು ತಾನೇ ಸಿದ್ಧವಾಗುತ್ತಿದೆ ಇದಲ್ಲದೆ ಕೊಂಕಣಿ ಮರಾಠಿಗಳು ಮೂಲ ಸಂಸ್ಕೃತ-ಪ್ರಾಕೃತ ಭಾಷೆಯ ಸ್ವತಂತ್ರ ರೆಂಬೆಗಳೆಂದು ಪಂಡಿತ ಮಂಗೇಶ ರಾಮಕೃಷ್ಣ ತೇಲಂಗರವರು, ಮುಂಬಯಿಯ "ಶಾರದಾ" ಪತ್ರಿಕೆಯಲ್ಲಿ ಒಂದು ಲೇಖ ಬರೆದು, ಸಾಧಾರವಾಗಿ ತೋರಿಸಿಕೊಟ್ಟಿರುತ್ತಾರೆ ಆದಕಾರಣ ಕೊಂಕಣಿಯು ಮರಾಠಿಯ ಅಪಭ್ರಂಶವೆಂದಾಗಲಿ ಮರಾಠಿಯು ಕೊಂಕಣಿಯ ಸುಸಂಸ್ಕೃತ ರೂಪವೆಂದಾಗಲಿ ಹೇಳುವದು ಎಂದೂ ಸತ್ಯವಾಗಲಾರದು

೨ ಕೊಂಕಣಿ ಬೋಧ ಭಾಷೆಯಾಗಲಾರದೇ?— ಕೊಂಕಣಿಯಲ್ಲಿ ವಿವಿಧತೆ ಇರುವದರಿಂದ ಇದು ಬೋಧ-ಭಾಷೆಯಾಗಲಾರದೆಂಬ ಮಾತನ್ನು ಪರೀಕ್ಷಿಸುವಾ ಪ್ರಚಾರದಲ್ಲಿರುವ ಯಾವ ಭಾಷೆಯಲ್ಲೂ ವಿವಿಧತೆ ಉಂಟೇ ಉಂಟು ಹಿಂದೀ, ಮರಾಠಿ ಭಾಷೆಗಳಲ್ಲೂ ಪ್ರಾದೇಶಿಕ ಭೇದಗಳು ಇದ್ದೇ ಇವೆ ಬಲ್ಲವರಿಗೆ ಈ ಮಾತು ಮನಗಾಣಿಸಿಕೊಡಬೇಕಾದ ಆಗತ್ಯ ಕಾಣುವದಿಲ್ಲ. ಇಂತಹ ಭೇದಗಳು ಹಿಂದೀ ಮೊದಲಾದ ಭಾಷೆಗಳು ಬೋಧ-ಭಾಷೆಗಳಾಗಲು ಅಡ್ಡಬರದಿದ್ದಾಗ ಕೊಂಕಣಿಗೆ ಮಾತ್ರ ಅವು ಯಾಕೆ ಅಡ್ಡ ಬರಬೇಕು? ಕ್ರಿಸ್ತೀ ಧರ್ಮಗ್ರಂಥವಾದ ಬಾಯಬಲ್ಲು ಪೂರ್ಣವಾಗಿಯೂ ಪ್ರಕರಣಾತ್ಮಕವಾಗಿಯೂ ಕೊಂಕಣಿಯಲ್ಲಿ ಪ್ರಕಟವಾಗಿದೆ "ವನೌಷಧಿ ಗುಣಾದರ್ಶ" (ಪದೇಶಾಸ್ತ್ರಿ ಕೃತ)ವೆಂಬ ಮರಾಠಿ ವೈದ್ಯಕ ಗ್ರಂಥದಲ್ಲಿ ವನಸ್ಪತಿಗಳ ಹೆಸರುಗಳನ್ನು ಕೊಡುವಾಗ, ಪ್ರತಿಯೊಂದು ವನಸ್ಪತಿಗೆ ಕೊಂಕಣಿ ಹೆಸರುಗಳನ್ನು ಕೊಟ್ಟದ್ದುಂಟು "ಅಮರವಿವೇಕ" ಟೀಕೆಯನ್ನು ರಚಿಸಿದ ಮಹೇಶ್ವರ ಭಟ್ಟರು ಅಲ್ಲಲ್ಲಿ, "ಇತಿ ಗೋಮಾಂತಕ ಭಾಷಾಯಾಂ," "ಇತಿ ಕೊಂಕಣಿ ಭಾಷಾಯಾಂ," "ಇತಿ ಲೌಕಿಕ ಭಾಷಾಯಾಂ," ಎಂದು ಮುಂತಾಗಿ ಕೊಂಕಣಿಯೊಳಗಿನ ಕೇಳಾ, ಗೆಂಡ್ಳಿ, ಗಂಟಿ, ಸಾಸಂವ ಇತ್ಯಾದಿ ಅನೇಕ ಪರ್ಯಾಯ ಪದಗಳನ್ನು ಕೊಟ್ಟಿದ್ದಾರೆ ಕೊಂಕಣಿಯು ಬೋಧ-ಭಾಷೆಯುಳ್ಳದಿದ್ದರೆ ಮಹಸ್ರ ಜನರಕ್ಕೂ ಜ್ಞಾನಪ್ರಚಾರಕ್ಕೂ ಅದನ್ನು ಉಪಯೋಗಿಸಿಕೊಳ್ಳುವ ಆಯಾಸವನ್ನು ಇವರೆಲ್ಲ ಯಾಕೆ ಮಾಡುತ್ತಿದ್ದರು?

೩. ಕೊಂಕಣಿ ಗ್ರಂಥಸ್ಥ ಭಾಷೆಯಾಗಲಾರದೇ?— ಕೊಂಕಣಿ ಗ್ರಂಥಸ್ಥ ಭಾಷೆಯಾಗಲಾರದು ಎಂದು ಇಬ್ಬ ಕೊಂಕಣಿ ವಿದ್ವಾಂಸರ ಗ್ರಹಿಕೆಯಾಗಿದೆಂಬುದು ಎಷ್ಟರ ಮಟ್ಟಿಗೆ ನಿಜವೋ ತಿಳಿಯದು ಯಾವದೊಂದು ಭಾಷೆ ಗ್ರಂಥಸ್ಥವಾದೀತೋ ಆಗಲಾರದೋ ಎಂದು ಯೋಚನೆ ಮಾಡುತ್ತ ಯಾರೂ ಕೂತದ್ದು ಕಂಡುಬರುವದಿಲ್ಲ ಆಯಾ ಭಾಷೆಯನ್ನು ಬಳಸುವ ಜನರ ಬುದ್ಧಿಪ್ರಭಾವ, ಕರ್ತೃತ್ವಶಕ್ತಿ, ಸ್ವಭಾಷಾಭಿಮಾನ ಇವುಗಳ ಬಲದಿಂದಲೇ ಆ ಭಾಷೆ ಗ್ರಂಥಸ್ಥವಾಗಬೇಕು ನಮ್ಮಲ್ಲಿ ಸಮೃದ್ಧವಾದ ಸಂಸ್ಕೃತ ಭಾಷೆ ಗ್ರಂಥಸ್ಥವಾಗಿರುತ್ತಿದ್ದಾಗ್ಯೂ ಇತರ ವ್ಯವಹಾರಸ್ಥ ಭಾಷೆಗಳು ಕಾಲಕ್ರಮೇಣ ಗ್ರಂಥಸ್ಥವಾಗಲಿಲ್ಲವೇ? ಅದರಂತೆ ಕೊಂಕಣಿಯೂ ಯಾಕೆ ಗ್ರಂಥಸ್ಥವಾಗಲಾರದು?

ಪ್ರಜೆಗಳನ್ನು ಸಂತೈಸುವದು ಆಧುನಿಕ ಸರಕಾರದ ಕರ್ತವ್ಯವಿರುತ್ತದೆ. ಕನ್ನಡ ಮರಾಠಿಗಳನ್ನು ಎತ್ತಿಹಿಡಿದು ಕೊಂಕಣಿಯನ್ನು ಸರಕಾರವು ನಿರ್ನಾಮಗೊಳಿಸಬೇಕು ಎಂದು ಯಾರೂ ಹೇಳರು ಕೊಂಕಣಿಯನ್ನಾಡುವವರು ತಮಗೆ ತಮ್ಮ ಭಾಷೆ ಬೇಕೆಂದು ಹೇಳಿದರೆ ಅವರ ಕೊರಳು ಹಿಸುಕಿರಿ ಎಂಬ ಕಲಿಸೀತಿ ಹೇಳಿಕೊಡುವವನು ರಾಜಕಾರಣಿಯಾಗಲಾರನು "ಅರ್ಥಸ್ಯ ಪುರುಷೋ ದಾಸಃ" ಎಂಬಂತೆ ಕನ್ನಡ-ಮರಾಠಿ ಮಾತುಗಳಲ್ಲಿ ತಮ್ಮ ಪ್ರಾವೀಣ್ಯ ತೋರಿ ಮೆರೆಯಲಿಚ್ಛಿಸುವ ಮಹಾನುಭಾವ ಕೊಂಕಣಿಕಾವುಗಳು ತಮ್ಮ ತಾಯ್ನುಡಿಯಾದ ಕೊಂಕಣಿಯನ್ನು ಸವರುವದಕ್ಕೆ ಅಣಿಯಾದದ್ದು ಸೋಜಿಗವಲ್ಲ ತಾಯಿಯ ಹತ್ಯೆ ಮಾಡಿದ ಪರಶುರಾಮನ ಸೃಷ್ಟಿಯಲ್ಲಿ ಇದು ನಡೆಯತಕ್ಕದ್ದೇ!

ಕೊಂಕಣಿ ಭಾಷೆಯ ಜೀವನ ವೃತ್ತಾಂತ ಸೀತೆ-ದಮಯಂತಿಯರ ಚರಿತ್ರೆಯಂತೆಯೇ ಅತ್ಯಂತ ಶೋಚನೀಯವಾಗಿದೆ ಉತ್ತಮ ಕುಲದಲ್ಲಿ ಹುಟ್ಟಿ, ಉತ್ತಮರಕೈ ಹಿಡಿದು ಇವರು ಉತ್ತಮರನ್ನು ಪಡೆದರೂ ನಿಯತಿಕಲ್ಪಿತ ಕಷ್ಟಪರಂಪರೆ ಇವರಿಗೆ ಕೊನೆಯ ವರೆಗೂ ತಪ್ಪಲಿಲ್ಲ ಕೊಂಕಣಿಯ ಕಥೆಯಾದರೂ ಅದೇ ಬಗೆಯದಾಗಿದೆ ಈ ಭಾಷೆಯು ಸಂಸ್ಕೃತದಿಂದ ಹುಟ್ಟಿದೆ, ಅದರ ಅಧಿಷ್ಠಾನ ಸಪ್ತಕೊಂಕಣದಲ್ಲಿದೆ, ಅದರ ಸಂತತಿ ದೇಶವಿದೇಶಗಳಲ್ಲಿ ಖ್ಯಾತಿಯನ್ನೂ ಪಡೆದಿದೆ ಆದರೂ ಕೊಂಕಣಿ ಮಾತನ್ನು ಕೇಳುವವರಿಲ್ಲ! ಅದರ ಸ್ವಂತ ಮಕ್ಕಳಿಗೇ ಅವಳ ಪರಿಚಯ ಸಾಕಷ್ಟಿಲ್ಲ! ನಿರಾಶ್ರಿತರಿಗೆ ರಾಜನೇ ಆಶ್ರಯವೆನ್ನೋಣವೆಂದರೆ, ರಾಜಮಂದಿರದಲ್ಲಿ ಈ ನುಡಿಗೆ ಪ್ರವೇಶವಿಲ್ಲ!

ಹೀಗೆ ದೈವಕೃಪೆಗೂ ರಾಜಕೃಪೆಗೂ ಹೊರತಾಗಿದ್ದರೂ ಈ ಭಾಷೆ ಒಂದು ಪ್ರಮುಖ ಜನಾಂಗದ ಭಾಷೆಯಾಗಿದೆ, ಇದೂ ಊರ್ಜಿತವಾಗಬೇಕು, ಎಂಬ ಧ್ಯೇಯವನ್ನು ಕೊಂಕಣಿ ಪರಿಷತ್ತು ತನ್ನ ಮುಂದೆ ಇಟ್ಟುಕೊಂಡಿದೆ ಮುಂಬಯಿ ಸರಕಾರವೂ ಶ್ರೀ॥ ಖೇರರೂ ಇನ್ನಾದರೂ ಕೊಂಕಣಿಯ ಬಗ್ಗೆ ತಾತ್ಸಾರದ ಇಲ್ಲವೆ ಉದಾಸೀನತೆಯ ದೃಷ್ಟಿಯನ್ನು ಬಿಟ್ಟುಕೊಟ್ಟು, ವಿಶಾಲ ದೃಷ್ಟಿಯಿಂದ ಕೊಂಕಣಿಗೆ ಇನ್ನುಳಿದ ಭಾಷೆಗಳಂತೆ ಮಾನ್ಯತೆಯನ್ನೀಯಬೇಕಾಗಿ ಅರಿಕೆಯುಂಟು

ಗಿಬ್ಬ ಹಾಯಸ್ಕೂಲ, ಕುಮಟಾ.

ಮುಂಬಯಿ ವಿದ್ಯಾ ಖಾತೆಯವರ ಅಪ್ಪಣೆಗಿನ ಹುಕುಮಿಗನುಸಾರವಾಗಿ ಶಾಲೆಯು ಹೊಸ ವರ್ಷ ಅದೇ ಮೇ ೩೧ ರಿಂದ ಪ್ರಾರಂಭವಾಗುತ್ತಿರುವದರಿಂದ ಹಮ್ಮು ಶಾಲೆಗೆ ಹೊಸತಾಗಿ ಸೇರಬಯಸುವ ವಿದ್ಯಾರ್ಥಿಗಳು ತಮ್ಮ ಪ್ರಾಥಮಿಕ ಶಾಲೆಯ ಲೀವಿಂಗ ಸರ್ಟಿಫಿಕೇಟು ಸಹಿತ ಈ ಮೇ ತಿಂಗಳಲ್ಲೇ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಬೇಕು ಹಾಗು ದಾಖಲ ಮಾಡಿಸಿಕೊಳ್ಳಬಯಸುವವರು ಮುಂಜಾನೆ ೮ರಿಂದ ೧೧ ಘಂಟೆಯ ವರೆಗೆ ತಮ್ಮ ಪಾಲಕರೊಡನೆ ಬರಬೇಕು ತಡವಾಗಿ ಬಂದವರಿಗೆ ಶಾಲೆಯಲ್ಲಿ ಪ್ರವೇಶ ಸಿಗಲಿಕ್ಕಿಲ್ಲ

ಗಿಬ್ಬ ಹಾಯಸ್ಕೂಲ, ಕುಮಟಾ, ತಾ ೨೪-೪-೪೮	J V Gavaskar, ಹೆಡ್ ಮಾಸ್ತರ

ಸ್ಥಾನಿಕ ವೃತ್ತಾಂತ.

ಕುಮಟಾ— ವಿಪರೀತ ಸೆಕೆಯಾಗುತ್ತಿದೆ ರೋಗ ಗಳೂ ಆಗುತ್ತವೆ. ಮೋಡ ಕವಿದದ್ದರಿಂದ ಶುಕ್ರವಾರದ ಚಂದ್ರಗ್ರಹಣ ಯಾರಿಗೂ ನೋಡಸಿಗಲಿಲ್ಲ

ಕುಮಟಾ ಟೌನದಲ್ಲಿ ಕೋರ್ಟಿನಲ್ಲಿ ಕಬಜೆಯ ಬಗೆ ಮಾಡಿದ ದಾವೆಗಳು ವಿಚಾರಕ್ಕೇ ಬರುವದಿಲ್ಲೆಂದು ಭೂಮಾಲಿಕರು ದೂರುತ್ತಾರೆ ಕಚೇರಿಯಲ್ಲಿ ಚೌಕಸಿ ಮಾಡಿದರೆ, ಬಹಳಷ್ಟು ಕಬಜೆ ದಾವೆಗಳ ವಿಚಾರವೂ ನಿಕಾಲೆಯೂ ಆಗಿರುತ್ತವೆಂದು ಹೇಳುತ್ತಾರೆ ೧೯೪೭ರಲ್ಲಿ ದಾಖಲ ಆದ ಕಬಜೆಯ ದಾವೆಗಳು ಎಷ್ಟು ಮತ್ತು ಅವುಗಳಲ್ಲಿ ನಿಕಾಲಿ ಯಾದವು ಎಷ್ಟು ಎಂದು ಅಂಕಿ ಸಂಖ್ಯೆಗಳಿಂದ ಪ್ರಕಟವಾಗುತ್ತಿದ್ದರೆ ಭೂಮಾಲಿಕರ ದೂರು ಎಷ್ಟರಮಟ್ಟಿಗೆ ಸಾಧಾರ ಇಲ್ಲವೆ ನಿರಾಧಾರ ಇರುತ್ತದೆಂಬುದು ತಿಳಿಯುತ್ತಿತ್ತು ಜಿಲ್ಲಾಧಿಪರು ಈ ಅಂಕಿ ಸಂಖ್ಯೆಗಳನ್ನು ಪ್ರಕಟಗೊಳಿಸುವ ವ್ಯವಸ್ಥೆ ಮಾಡುವರೇ ?

ರೈತರು ಕಾಯದೆಗೆ ಸರಿಯಾಗಿ ಗೇಣಿ ವಸೂಲ ಕೊಡದಿದ್ದಲ್ಲಿ ಮುಂದೆ ಅವರು ಕಂಟ್ರಾಕ್ಟ ಕಾಯದೆಯಂತೆ ಆ ವಾಯದೆಯ ಬಾಜಾರಿ ಧಾರಣೆಯಂತೆ (ಬಡ್ಡಿಯ ಮಾತು ಇತ್ತಲ್ಲಿ ಬಡ್ಡಿ ಸಹಿತ) ಹಣ ಸಲ್ಲಿಸ ಬೇಕಾಗುತ್ತದೆ ಬಾಜಾರಿ ಧಾರಣೆಯೆಂದರೆ ಒಡೆಯನು ಗೇಣಿ ವಾಯದೆಗೆ, ತನಗೆ ಬರಬೇಕಾಗಿದ್ದ ಅಕ್ಕಿ, ಕಾಯಿ, ಬೆಲ್ಲ ಮುಂತಾದ ಜಿನಸು ಪೇಟಿಯಲ್ಲಿ ಕೊಂಡುಕೊಳ್ಳಹೋದರೆ ಯಾವ ಧಾರಣೆ ಅವನು ಕೊಡಬೇಕಾಗುತ್ತದೋ ಅದು ಎಂಬರ್ಥ, ಆದರೆ ಟೌನದ ಕೋರ್ಟುಗಳಲ್ಲೂ ಗೇಣಬಾಕಿ ದಾವೆಯ ಕೋರ್ಟುಗಳಲ್ಲೂ ಈ ಸರ್ವಸಾಮಾನ್ಯ ಕಾಯದೆ ಮನ್ನಿಸಲ್ಪಡುವದಿಲ್ಲ ! ಒಡೆಯರ ಗೇಣಿ ಅಕ್ಕಿ ವಸೂಲ ಬಾರದ್ದರಿಂದ ಅವರು ಸೀಧಾ ಅಕ್ಕಿ ಕೊಂಡುಕೊಳ್ಳ ಬೇಕಾದ ಪ್ರಸಂಗ ಬಂದಿದ್ದರೂ ಈ ಕೋರ್ಟುಗಳಲ್ಲಿ ಹಿಂದೆ ಸರಕಾರದವರ ಖರೀದಿಯ ದರದಿಂದ ಗೇಣಿ ಕೊಡಿಸುತ್ತಿದ್ದರು! ಅದರಲ್ಲಿ ಈಗ ಹುಸ ದುರುಸ್ತಿ ಮಾಡಿದ್ದಾರೆ— ತಾಲೂಕ ಕಚೇರಿಯಲ್ಲಿ "ನಿರಖ ಪಟ್ಟಿ" ಯೆಂಬದೊಂದು ಪ್ರತಿ—ತಿಂಗಳ ಬಾಜಾರಿ ಧಾರಣೆಯ ಪಟ್ಟಿಯನ್ನಿಡುತ್ತಾರೆ ಆ ಪಟ್ಟಿಯೊಳಗಿನ ಜನವರಿ, ಫೇಬ್ರುವರಿ, ಮಾರ್ಚ ತಿಂಗಳುಗಳ ಧಾರಣೆಗಳ ಸರಾಸರಿ ತೆಗೆದು ಆ ಧಾರಣೆಯಂತೆ ಒಡೆಯರ ಗೇಣಿ ಕೊಡಿಸಬೇಕೆಂದು ಈಗ ನಿಯಮವಾಗಿದೆಯಂತೆ, ಪರ್ಷದ ನಿರಖ—ಪಟ್ಟಿಯ ಧಾರಣೆ ಅಕ್ಕಿಯ ಪಾಯಲಿ ೧೬ ರೂ ೧! (ಸುಮಾರು) ಇರುತ್ತದಂತೆ ಬಹುತೇಕ ಗೇಣಿ ಕೊಡುವ ವಾಯದೆಯು ಸಾಮಾನ್ಯವಾಗಿ ಶಿವರಾತ್ರಿ ಅಮಾವಾಸ್ಯೆಯಾಗಿರುತ್ತಿದೆ ಆ ವಾಯದೆಗೆ ಅಕ್ಕಿಯ ದರ ಪಾಯಲಿ ೧೬ ರೂ ೧ ೧೪—೦ರಿಂದ ರೂ. ೨ ೨ ೦ರ ವರೆಗಿತ್ತು ಈಗ ಸಹ ಅದೇ ದರವಿದೆ ಹೀಗೆ ದರವಿರುವಾಗ (ಮತ್ತು ಮೇಲೆ ಪ್ರಾರಂಭದಲ್ಲಿ ವಿವರಿಸಿದ ಸರ್ವಸಾಮಾನ್ಯ ಕಾಯದೆಯಂತೆ ಅಷ್ಟು ದರ ಸಿಗಬೇಕಾಗಿದ್ದಾಗ) ತಾಲೂಕ ಕಚೇರಿಯವರು ಪಾಯಲಿ ೧೬ ರೂ ೧! ಯಂತೆ ಹಣ ಕೊಡಿಸಿದಲ್ಲಿ ಒಡೆಯರಿಗೆ ಸಲ್ಲತಕ್ಕ ಗೇಣಿ ಯಲ್ಲಿ ಕೋರ್ಟಿನವರು ಅನ್ಯಾಯವಾಗಿ ನೂರಕ್ಕೆ ೨೫ರಂತೆ ಕತ್ತರಿ ಹೊಡೆದಂತೆ ಆಗುವದಿಲ್ಲವೇ ? ಇದು ಕಾಯದೆಗೂ ಆಧಳತಿಯ ಗೌರವಕ್ಕೂ ಒಪ್ಪತಕ್ಕದ್ದೋ ಹೇಗೆಂಬುವದು ವಿಚಾರವಾಗುವದವಶ್ಯವುಂಟು ಇನ್ನೊಂದು ಮಜಾ ಎಂದರೆ ಟೌನದ ದಾವೆಗಳ ವಿಚಾರ ಮಾಡುವ ಕೆಲವು ಅಧಿಕಾರಿಗಳು "ನಿರಖ—ಪಟ್ಟಿಯ" ಈ ಧಾರಣೆಯಂತೆ ಸಹ ಒಡೆಯರ ಗೇಣಿ ಕೊಡಿಸದೆ, ತಾವು ಭತ್ತವನ್ನು ಸರಕಾರಕ್ಕೆ ಕೊಟ್ಟಿದ್ದೇವೆಂದು ರೈತರು ಹೇಳುತ್ತಾರೆಂದು, ಸರಕಾರದವರ ಖರೀದಿಯ ದರದಂತೆ ಕೊಡಿಸುತ್ತಾರಂತೆ ! ಜಿಲ್ಲಾಧಿಪರೂ ಸರಕಾರದವರೂ ಇತ್ತ ಲಕ್ಷ ಕೊಟ್ಟು ಕಾಯದೆಗೂ ನೀತಿಗೂ ಸಮ್ಮತವಾದ ಒಂದು ನಿರ್ದಿಷ್ಟ ಮಾರ್ಗದಂತೆ ವರ್ತಿಸಲು ಎಲ್ಲ ಅಧಿಕಾರಿಗಳಿಗೆ ಆಜ್ಞಾಪಿಸಬೇಕಾಗಿ ಅರಿಕೆಯುಂಟು

(ಮುಂದೆ ೫ನೇ ಪುಟ ನೋಡಿರಿ)

ಯಲ್ಲಾಪೂರ ತಾಲೂಕಿನ ಅಡಿಕೆ-ಕಬ್ಬುಗಳ ಬೆಳೆಯ ಮಾನ.

(೧೯೪೭—೪೮ನೇ ಸಾಲಿನದು)

ನಂ ೩೯೩ — ೧೯೪೪ನೇ ಸಾಲಿನ ಒಕ್ಕಲತನದ ಆಸಾಮಿಯ ಸಂರಕ್ಷಣ ನಿಯಮದ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಪಯೋಗಿಸಿ, ಕಾನಡಾ ಜಿಲ್ಹೆಯ ಯಲ್ಲಾಪುರ ತಾಲೂಕಿನ ಮಾಮಲೇದಾರರು ತಮ್ಮ ತಾ ೧೯—೨—೧೯೪೮ರ ೩೯೩ನೇ ನಂಬರದ ಪ್ರಕಟನೆಯನ್ನು ಮುಂದರಿಸಿ, ೧೯೪೭—೪೮ನೇ ಸಾಲಿನಲ್ಲಿ, ಈ ಕೆಳಗಿನ ಪರಿಶಿಷ್ಟದ ೨ನೇ ಸ್ತಂಭದಲ್ಲಿ ಕಾಣಿಸಿರುವ ಕ್ಷೇತ್ರಗಳೊಳಗಿನ, ೩ನೇ ಸ್ತಂಭದಲ್ಲಿ ಹೇಳಿದ ತರಗತಿಯ ನೀರಾವರಿ ಭೂಮಿಗಳಲ್ಲಿ (ಕಬ್ಬಿನ ಗದ್ದೆಗಳಲ್ಲಿ ಯಾ ಅಡಿಕೆ ತೋಟಗಳಲ್ಲಿ) ೪ನೇ ಸ್ತಂಭದಲ್ಲಿ ನಿರ್ದೇಶಿಸಿದಷ್ಟು ಸರಾಸರಿ ಅಡಿಕೆಯ ಬೆಳೆ ಹುಟ್ಟಿರುತ್ತದೆಂದು ಜಾಹೀರಪಡಿಸುತ್ತಾರೆ

ಪರಿಶಿಷ್ಟ

ಅನು ಕ್ರಮಾಂಕ	ಸ್ಥಾನಿಕ ಕ್ಷೇತ್ರ	ಭೂಮಿಯ ತರಗತಿ	ಪ್ರತಿ ಎಕರೆಗೆ ಕಬ್ಬಿನ ಸರಾಸರಿ ಬೆಳೆ	ಅಡಿಕೆ ತೋಟದೊಳಗಿನ ಪ್ರತಿ ಮರದ ಸರಾಸರಿ ಬೆಳೆ
(೧)	(೨)	(೩)	(೪)	(೫)
೧	ಸರ್ವೇ ಗ್ರೂಪ Iರೊಳಗಿನ ಎಲ್ಲ ಗ್ರಾಮಗಳು	ಹಗುರು (light)	೩೦೦೦ ರತ್ತಲ	—
			(ಈ ಭಾಗದಲ್ಲಿ ಅಡಿಕೆಯ ತೋಟಗಳಿಲ್ಲ)	
೨	(೧) ಶಿರ್ತಮುಡಿ, ಕಟಗಾರ ಮತ್ತು ಯಲ್ಲಾಪುರ ಬಿಟ್ಟು ಸರ್ವೇ ಗ್ರೂಪ IIರೊಳಗಿನ ಉಳಿದ ಎಲ್ಲ ಗ್ರಾಮಗಳು	ಭಾರವಾದದ್ದು (heavy)	೬೦೦೦ ರತ್ತಲ	—
		— ಡಿ —	—	೧೫ ರತ್ತಲ
	(೨) ಸರ್ವೇ ಗ್ರೂಪ IIರೊಳಗಿನ ಶಿರ್ತಮುಡಿ, ಕಟಗಾರ ಮತ್ತು ಯಲ್ಲಾಪುರ ಗ್ರಾಮಗಳು	ಭಾರವಾದದ್ದು	೬೨೦೦ ರತ್ತಲ	
		ಮಧ್ಯಮ	—	೧೨½ ರತ್ತಲ
೩	ಸರ್ವೇ ಗ್ರೂಪ III ರೊಳಗಿನ ಕಂಚನಳ್ಳಿ ಗ್ರಾಮ	ಹಗುರು	೨೮೦೦ ರತ್ತಲ	—
			(ಈ ಗ್ರಾಮದಲ್ಲಿ ಅಡಿಕೆ ತೋಟಗಳಿಲ್ಲ)	
೪	(೧) ಸರ್ವೇ ಗ್ರೂಪ IVರೊಳಗಿನ ಅರವಾಡ ಭರ್ಕನಳ್ಳಿ, ಹಾಸಣಗಿ, ಕಂಪ್ಲಿ ಕಾನಗೋಡ ದಾಳೀಗದ್ದೆ, ಕೋಟೆಮನೆ, ಶಿಗೇಮನೆ ಉಮಚಗಿ, ತಿರನಳ್ಳಿ ಗ್ರಾಮಗಳು	ಭಾರವಾದದ್ದು	೬೦೦೦ ರತ್ತಲ	—
		ಮಧ್ಯಮ	—	೧೫ ರತ್ತಲ
	(೨) ಸರ್ವೇ ಗ್ರೂಪ IVರೊಳಗಿನ ಹಿತ್ಲಳ್ಳಿ, ಕುನೇನಹಳ್ಳಿ, ಕುಂದರಗಿ ಗ್ರಾಮಗಳು	ಭಾರವಾದದ್ದು	೬೦೦೦ ರತ್ತಲ	—
		— ಡಿ —		೨೧½ ರತ್ತಲ
	(೩) ಸರ್ವೇ ಗ್ರೂಪ IVರೊಳಗಿನ ಬದ್ರಳ್ಳಿ, ಬೀಚನಕೊಪ್ಪ, ಬಿಳ್ಕಿ, ಚಾವಡಿ, ಚಿಕ್ಯಾತಿ, ಹಾರಿಗದ್ದೆ, ಹಿರೇಸರ, ಹುತಖಂಡ, ಇಡೇಹಳ್ಳಿ, ಕರಿಹೊಸಳ್ಳಿ, ಕಮಡೊಳ್ಳಿ, ಕುಸಗಾಳಿ, ಮಾವಲಗಾಂವ, ಮಾಲಕೊಪ್ಪ, ಸಂಕದಗುಂಡಿ, ಸೋಮನಳ್ಳಿ, ತಾರೀಹಳ್ಳಿ, ತೋಟದಕಲ್ಲಳ್ಳಿ, ತೊಲಗೋಡ, ಗ್ರಾಮಗಳ	ಭಾರವಾದದ್ದು	೬೦೦೦ ರತ್ತಲ	—
		ಮಧ್ಯಮ	—	೧೫ ರತ್ತಲ
	(೪) ಸರ್ವೇ ಗ್ರೂಪ IVರೊಳಗಿನ ಬೈಚಗೋಡ, ಬೆಳಂಬಿ, ಭರತ, ಗೋಪಡಮನೆ, ಹೆಮ್ಮಾಡಿ, ಕಣ್ಣಿಗೇರಿ, ಮಹಳ್ಳಿ, ಗ್ರಾಮಗಳು	ಭಾರವಾದದ್ದು	೬೦೦೦ ರತ್ತಲ	—
		ಮಧ್ಯಮ	—	೧೨½ ರತ್ತಲ
	(೫) ಸರ್ವೇಗ್ರೂಪ IVರೊಳಗಿನ ಕುಂದೂರ, ಪೊನಕಮನೆ ಗ್ರಾಮಗಳು	ಭಾರವಾದದ್ದು	೬೦೦೦ ರತ್ತಲ	—
		ಹಗುರು	—	೧೦ ರತ್ತಲ
	(೬) ಸರ್ವೇ ಗ್ರೂಪ IVರೊಳಗಿನ ಭೋಮನಳ್ಳಿ, ದೇವರಕಲ್ಲಳ್ಳಿ, ಮಲಗೋಡ, ಹಲಸಿನಕೊಪ್ಪ, ಹೊನ್ನಮನೆ, ಕಾಜೂರ—ಹೆಗ್ಗರಣಿ, ಸವಣ, ಉಮಗೇರಿ ಗ್ರಾಮಗಳು	ಭಾರವಾದದ್ದು	೬೦೦೦ ರತ್ತಲ	—
			(ಈ ಭಾಗದಲ್ಲಿ ಅಡಿಕೆ ತೋಟಗಳಿಲ್ಲ)	
೫	(೧) ಸರ್ವೇ ಗ್ರೂಪ Vರೊಳಗಿನ ಹೊಂದಗುಳಿ, ಹೊರಮಾಸ, ಹಂಸನಗದ್ದೆ, ಹತ್ತಾರಗದ್ದೆ, ಇಡಗುಂದಿ, ಜೋಗದಮನೆ, ಕೋಮಾಡಿ, ಲಿಂಗದಬೈಲ ಗ್ರಾಮಗಳು	ಭಾರವಾದದ್ದು	೬೦೦೦ ರತ್ತಲ	—
		ಮಧ್ಯಮ	—	೧೫ ರತ್ತಲ

	( )	ಸವೇಶ ಗ್ರಾಮದ ಆರೋಳಗಿನ ಅವಗೋಡ, ಅಸಲಗಾರ, ಬಾರೆಕಣ, ಬೇಮಂಡ, ದೇವನಗಿ, ಡೋರಗಾರ, ಗೇರಾಳ, ಹೊಳೆಮಾವು, ಹುಲಗಾನ, ಹುಳಕ, ಹುಬ್ಬೇಮನೆ, ಬಾಲಗಾರ, ಮಾಗೋಡ, ಸಂದೊಳ್ಳಿ, ಕಾನಗದ್ದೆ, ಮತ್ತು ಸೋಳಗಾರ ಗ್ರಾಮಗಳು	ಭಾ ಸಾವದ್ದು	೬೦೦೦ ರೂಪಾಯಿ	—
			ಅಧ್ಯಕ್ಷ	—	೧೫ ರೂಪಾಯಿ
	(೩)	ಸವೇಶ ಗ್ರಾಮದ ಆರೋಳಗಿನ ಬರಗದ್ದೆ ಗ್ರಾಮ	ಭಾಗವಾದದ್ದು	೬೦೦೦ ರೂಪಾಯಿ	—
			ಹಗುರು	—	೧೧ ರೂಪಾಯಿ
	(೪)	ಬೇಗೇರಿ, ಗೋರಗ ಗ್ರಾಮಗಳು	ಭಾಗವಾದದ್ದು (ಅಡಿಕೆತೋಟಗಳಲ್ಲಿ)	೬೦೦೦ ರೂಪಾಯಿ	—
೫	(೧)	ಅಮಗಾಂವ, ಆರತ್ಬೈಲ ಚಿವನಳ್ಳಿ, ದೇಹಳ್ಳಿ, ಹೆಗ್ಗಳ್ಳಿ, ಹೊಸಗದ್ದೆ, ಹಿರಿಯಾಳ, ಜೋಗಿಬೈಲು, ಕಟ್ಟಿಗೆ, ಕೆಳಗಿ, ಕೊಡಸಳ್ಳಿ, ಕೊಡ್ಲಗದ್ದೆ, ನಗರಬೈಲ ತೋರಗಾರ, ಶಿಲಗೇರಿ, ವೈನಳ್ಳಿ ಗ್ರಾಮಗಳು	ಹಗುರು	೨೮೦೦ ರೂಪಾಯಿ	—
			ಅಧ್ಯಕ್ಷ	—	೧೩ ರೂಪಾಯಿ
	(೨)	ದಗನಕಟ್ಟೆ, ಎಲಗಾಂವ, ಬಾಳಿಗಳ್ಳಿ, ಬಿಗಾರ, ಮಬಗುಳಿ, ಗಲ್ಲಾಪುರ ಗ್ರಾಮಗಳು	ಹಗುರು	೨೮೦೦ ರೂಪಾಯಿ	—
			– ಡಿ –	—	೬ ರೂಪಾಯಿ
೬	(೧)	ಬಾರೆ, ಬೇಡಸಗುಳಿ, ಕಲ್ಲಿ, ಮಾವಿನಮನೆ ಗ್ರಾಮಗಳು	ಹಗುರು	೨೫೦೦ ರೂಪಾಯಿ	—
			– ಡಿ	—	೧೫ ರೂಪಾಯಿ
	(೨)	ಕಿರವತ್ತಿ ಮತ್ತು ಮದನೂರು	ಹಗುರು	೨೫೦೦ ರೂಪಾಯಿ	—
			– ಡಿ –	—	೬ ರೂಪಾಯಿ

ಯಲ್ಲಾಪುರ,
ತಾ. ೧೫—೪—೧೯೪೮

K R NAIK,
ಮಾಮಲೇದಾರ, ಯಲ್ಲಾಪುರ

ಗೋಕರ್ಣ— ಇಲ್ಲಿಯ ಹಾಲಕ್ಕಿ ಒಕ್ಕಲ ಜಾತಿಯವರಲ್ಲಿ ಬಿಜ್ಜೂರಪಕ್ಷ ಮತ್ತು ಮುಳಸೇರಿಪಕ್ಷ ಎಂಬ ೨ ಪಕ್ಷಗಳಿವೆ ೫೦ ವರ್ಷಗಳ ಹಿಂದಿನಿಂದ ಈ ಪಕ್ಷಗಳು ನಡೆದು ಬಂದಿವೆ ಅವುಗಳೊಳಗೆ ಒಕ್ಕಟ್ಟುಂಟು ಮಾಡಲು ಸುಮಾರು ೧೫ ವರ್ಷಗಳ ಹಿಂದೆ ಒರ್ವ ಸಾಧುಗಳು ಪ್ರಯತ್ನ ನಡೆಸಿದ್ದರು ಆ ಪ್ರಯತ್ನ ಸಫಲವಾಗುವ ಲಕ್ಷಣ ಕಂಡು ಬಂದಿತ್ತು, ಆದರೆ ಈ ಪಕ್ಷಗಳ ಅಸ್ತಿತ್ವದಿಂದ ಲಾಭ ಪಡೆಯುತ್ತಿದ್ದ ಜನರು ಬೇರೆಯ ಹಂಬಲದಿಂದ ಕುತಂತ್ರಗಳನ್ನು ನಡೆಸಿ ಆ ಒಕ್ಕಟ್ಟಿನ ಸಾಧನೆಗೆ ಕಲ್ಲು ಹಾಕಿದ್ದರಿಂದ ಸಾಧುಗಳ ಪ್ರಯತ್ನ ನಿಷ್ಫಲವಾಯಿತು ಮತ್ತು ಆ ಪಕ್ಷಗಳು ಇನ್ನೂ ಹಾಗೆಯೇ ಉಳಿದಿವೆ! ಅಷ್ಟೇ ಅಲ್ಲದೆ ಎರಡೂ ಪಕ್ಷಗಳೊಳಗಿನ ವೈಷಮ್ಯದ ಅಗ್ನಿಯು ಕಾಲಗತಿಯಿಂದ ಶಾಂತವಾಗುವದರ ಬದಲು ಮೇಲೆ ಹೇಳಿದ ಕುಪ್ರವೃತ್ತಿಗಳು ಆಗಾಗ ಗಾಳಿ ಹಾಕುತ್ತಿರುವದರಿಂದ, ಪ್ರಜ್ವಲವಾಗಿದೆಯೆಂದು ಹೇಳಬಹುದು ಈ ಪಕ್ಷಗಳು ತಮ್ಮ ಸುಗ್ಗಿಗಳನ್ನ ಪ್ರತ್ಯೇಕವಾಗಿ ಕಟ್ಟುತ್ತಾರೆ ಅದರ ಕಂದೀಲುಗಳು ಕೂಡ ಪ್ರತ್ಯೇಕವಾಗಿವೆ ಸುಗ್ಗಿಗೆ ಸಂಬಂಧಪಟ್ಟ ಜಾಗರ, ಹಗರಣ ಮುಂತಾದವುಗಳನ್ನು ಅವರು ಪ್ರತ್ಯೇಕ ಮಾಡುತ್ತಾ ಬಂದಿದ್ದಾರೆ ಅದರಿಂದ ಸುಗ್ಗಿಯ ಸಂಬಂಧದಲ್ಲಿ ಅವರೊಳಗೆ ಯಾವದೇ ಬಗೆಯ ಘರ್ಷಣೆ ಆಗುವ ಸಂಭವವಿರುವದಿಲ್ಲ ಘರ್ಷಣೆಯಾಗುವ ಒಂದೇ ಒಂದು ಕಾಲವೆಂದರೆ ಶ್ರೀ ಮಹಾಬಲೇಶ್ವರ ದೇವರ ಹೋಳಿ ಉತ್ಸವದ ಕಾಲವಾಗಿರುತ್ತದೆ ಈ ಹೋಳಿಯು ಪ್ರತಿ ವರ್ಷ ಫಾಲ್ಗುನ ಶು॥ ೧೫ಕ್ಕೆ ಆಗುತ್ತದೆ ಈ ಹೋಳಿ ಉತ್ಸವ ಹೊರಡುವ ಮೊದಲು ತೀರ್ಥೆಯ ಅರಸ ಗೌಡನು ದೇವರಿಗೆ ನಮಸ್ಕರಿಸುತ್ತಾನೆ, ಸುಗ್ಗಿ ಕುಣಿಸುವ ಪ್ರಾರಂಭವಿದೆ ಆಗ ದೇವರ ಭಂಡಾರದಿಂದ ಅವನಿಗೆ ಒಂದು ವಸ್ತ್ರ ಉಡುಗೊರೆ ಸಿಗುತ್ತದೆ ಆ ನಂತರ (ಸಾಯಂಕಾಲದ ಶ್ರೀ ಬಲಿಗಳ ನಂತರ) ಉತ್ಸವ ಹೊರಡುತ್ತದೆ ಸುಗ್ಗಿಯು ಮೊದಲು ಆ ಪಲ್ಲಕ್ಕಿಯ ಸಂಗಡ ಕುಣಿಯುತ್ತ ಹೋಗುತ್ತದೆ ಥೇರು ಕೊಂಡ ಬದಿಯ ತೋಟದಿಂದ ಹೋಳಿಗೆ ಬೇಕಾದ ಅಡಿಕೆ ಮರ ತರುವದು ಈ ಸುಗ್ಗಿಯವರ ಕೆಲಸ ಪಲ್ಲಕ್ಕಿಯು ತಿರುಗಿ ಬಂದ ಮೇಲೆ ಶ್ರೀ ದೇವಾಲಯದ ಮುಂದೆ ಹೋಳಿ ಸುಡುತ್ತಾರೆ ಆ ಹೋಳಿಯ ಸುತ್ತಲು ಸುಗ್ಗಿ ಮೇಳವು ಕುಣಿಯುತ್ತದೆ ಹಿಂದಿನ ಅರಸ ಗೌಡನು ಬಿಜ್ಜೂರ ಪಕ್ಷಕ್ಕೆ ಸೇರಿದ್ದನು ಆಗ ಅವನು ದೇವರ ಮುಂದೆ, ಪಲ್ಲಕ್ಕಿಯ ಸಂಗಡ ಹಾಗು ಹೋಳಿಯ ಸುತ್ತ ಬಿಜ್ಜೂರ ಪಕ್ಷದ ಸುಗ್ಗಿಯನ್ನು ಕುಣಿಸುತ್ತಿದ್ದನು. ಮುಳಸೇರಿ ಪಕ್ಷದವರು ಶ್ರೀ ದೇವಸ್ಥಾನದಲ್ಲಿ ಕೆಲಸ ಮಾಡುವವರಿರುತ್ತಾರೆ ಅದರಿಂದ ದೇವಸ್ಥಾನದವರಿಗೆ ಅವರು ಹತ್ತಿರದವರು ಆದ್ದರಿಂದ ಹೋಳಿಯ ಉತ್ಸವದ ಕಾಲಕ್ಕೆ ಅವರ ಸುಗ್ಗಿಯೂ ಇರುತ್ತಿತ್ತು ಆ ಕಾಲದಲ್ಲಿ ತಮ್ಮ ಸುಗ್ಗಿ ಮೊದಲು ಕುಣಿಯಬೇಕು, ದೇವರ ಪಲ್ಲಕ್ಕಿಯ ಮುಂದೆ ತಮ್ಮ ಸುಗ್ಗಿಯಿರಬೇಕು ಎಂದು ಸ್ಪರ್ಧೆಯಾಗಿ ಎರಡೂ ಪಕ್ಷಗಳಲ್ಲಿ ತಿಕ್ಕಾಟ ನಡೆಯುತ್ತಿತ್ತು ಆದರೆ ಈಗಿನ ಅರಸ ಗೌಡನು ಬಿಜ್ಜೂರ ಪಕ್ಷ ಬಿಟ್ಟು ಮುಳಸೇರಿ ಪಕ್ಷಕ್ಕೆ ಸೇರಿದ್ದಾನೆ ಆ ಪಕ್ಷದ ಸುಗ್ಗಿಯನ್ನೇ ಅವನು ಕುಣಿಸುತ್ತಾನೆ ಬಿಜ್ಜೂರ ಪಕ್ಷದವರು ಈ ಅರಸ ಗೌಡನನ್ನು ಒಪ್ಪುವದಿಲ್ಲ ಅವನ ಅಧ್ಯಕ್ಷತೆಯಲ್ಲಿ ಸುಗ್ಗಿ ಕುಣಿಯಲಿಕ್ಕೆ ಅವರು ಸಿದ್ಧರಿಲ್ಲ. ಪೂರ್ವಪ್ರಥಾನುಸಾರ ಬಿಜ್ಜೂರದವರು ಉತ್ಸವದ ಕಾಲಕ್ಕೆ ಸುಗ್ಗಿ ಕುಣಿಯುವ ಅಗ್ರಮಾನ ತಮಗೆ ಬೇಕೆಂದು ಕೇಳುತ್ತಿದ್ದರೆ ಮತ್ತು ಅರಸ ಗೌಡನು ಮುಳಸೇರಿ ಪಕ್ಷದ ಸುಗ್ಗಿಗೆ ಆ ಅಗ್ರಮಾನ ಕೊಡಲು ಉದ್ಯುಕ್ತನಾದರೆ ಘರ್ಷಣೆಯಾಗಿ ಶಾಂತತಾ ಭಂಗವೂ ಆದೀತೆಂದು ಭಾವಿಸಿ, ಆ ೧೦ ವರ್ಷಗಳಿಂದಲೂ ಬಿಜ್ಜೂರ ಪಕ್ಷದವರು ಅರಸ ಗೌಡನ ಮುಳಸೇರಿ ಪಕ್ಷದ ಸುಗ್ಗಿಗೆ ಆರಂಭ ಮಾಡದಂತೆ ಪೋಲೀಸರು ಪ್ರತಿ ವರ್ಷ ಕೋಡಿನ ಕಲಮು ೧೪೪ರಂತೆ ಇಂಜಂಕ್ಷನ್ ಕೊಡುತ್ತಿದ್ದಾರೆ ಅದರಿಂದ ಬಿಜ್ಜೂರ ಪಕ್ಷದವರು ಹೋಳಿ ಉತ್ಸವಕ್ಕೆ ಹೋಗುವದನ್ನೇ ಬಿಟ್ಟುಕೊಟ್ಟಿದ್ದಾರೆ ಹೋಳಿಯ ದಿನ ಮರುದಿನ ಸಂಜೆಗೇ ಅವರು ಸುಗ್ಗಿ ತಕ್ಕೊಂಡು, ಶ್ರೀ ಮಹಾಬಲೇಶ್ವರ ದೇವರ ದರ್ಶನ ಪಡೆದು, ದೇವರ ಮುಂದೆ ಸುಗ್ಗಿ ಕುಣಿಸಿ, ಪ್ರಸಾದ ಪಡೆಕೊಂಡು ಹೋಗುತ್ತಾರೆ ಇತ್ತ ೬ ೭ ವರ್ಷಗಳಿಂದ ಇದೇ ಕ್ರಮ ನಡೆದು ಬಂದಿದೆ ಈ ಕ್ರಮದಿಂದ ಯಾರಿಗೂ ತೊಂದರೆ ಇಲ್ಲ, ಶಾಂತತಾಭಂಗವಾಗುವ ಸಂಭವವೂ ಇಲ್ಲ ಆದರೂ ಪೋಲೀಸರು ಮಾರ್ಚ ೧೬ ವಾರ ಈ ವರ್ಷ ಶಾಂತತಾ ಭಂಗವಾಗುವ ಭೀತಿಯುಂಟೆಂದು ಸರಕಾರಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಿಂದ ಬಿಜ್ಜೂರಪಕ್ಷದವರ ವಿರುದ್ಧ ಇಂಜಂಕ್ಷನ್ ಹುಕುಮನ್ನು ಪಡೆದುಕೊಂಡು ಬಂದಿರುತ್ತಾರೆ! ಅವರೀಗ ತಮ್ಮ ಬಾಧ್ಯತೆಗಳು ನಿಶ್ಚಿತವಿರುವಾಗ, ಆ ಹಕ್ಕು ಬಾಧ್ಯತೆಗಳ ಸಂರಕ್ಷಣೆ ಮಾಡುವದರ ಬದಲು ಪೋಲೀಸರು ಪ್ರತಿವರ್ಷ ಅದೇ ಶಸ್ತ್ರ ಅಸ್ತ್ರವನ್ನು ಕೇವಲ ಅನುಕೂಲದಲ್ಲಿಷ್ಟೇ ಉಪಯೋಗಿಸಿಕೊಳ್ಳಬೇಕೆಂದರೆ ಆ ೧೪೪ನೇ ಕಲಮಿನ ಪ್ರಯೋಗ ಮಾಡಿಸುತ್ತಿರುವದು ಮತ್ತು ಮ್ಯಾಜಿಸ್ಟ್ರೇಟರೂ ಕಣ್ಮುಚ್ಚಿ ಆ ಅಸ್ತ್ರವನ್ನು ಪ್ರಯೋಗಿಸುವದು ಕಾಯದೆಗೆ ಅಸಮ್ಮತವಾದದ್ದಾಗಿ ಬಲ್ಲವರ ಅಭಿಪ್ರಾಯ. ಪೋಲೀಸರು ಈ ವರ್ಷ ಮುಳಸೇರಿ ಪಕ್ಷದವರಿಗೆ ಕಟ್ಟಿಕೊಂಡು, ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಬಿಜ್ಜೂರ ಪಕ್ಷದವರು ಸುಗ್ಗಿ ಕಟ್ಟದಂತೆ, ಒಂದೊಮ್ಮೆ ಕಟ್ಟಿದರೂ ಶ್ರೀಮಹಾಬಲೇಶ್ವರನ ದರ್ಶನಕ್ಕೆ ಬರದಂತೆ ಪ್ರಯತ್ನ ಪಡಿಸಿದ್ದರು ಅದರಿಂದ ಸೋಮವಾರದ ವರೆಗೆ ಬಿಜ್ಜೂರ ಪಕ್ಷದವರ ಸುಗ್ಗಿಯು ನಿಶ್ಚಯವಾಗಿದ್ದಿಲ್ಲ ಅಂದು ಪ್ರಾಂತ ಸಾಹೇಬರು ಪೋಲೀಸರ ಕುತಂತ್ರಗಳನ್ನು ಕಂಡು ಹಿಡಿದು ಬಿಜ್ಜೂರದವರ ಸುಗ್ಗಿಗೆ ಆರಂಭ ಮಾಡುವದಾಗಿಯೂ ಹೋಳಿಯ ದಿನ ಮಾರರ ಸಂಜೆಗೆ ಅವರು ದೇವರ ದರ್ಶನ ಪಡೆದು ಹೋಗಲಿಕ್ಕೆ ಅಡ್ಡಿ ಮಾಡಲಾಗದೆಂದೂ ಘೋಷಣೆಯಾಗಿ ಸ್ಪಷ್ಟ ಹುಕುಮು ಮಾಡಿದ್ದರಿಂದ ಬಿಜ್ಜೂರದವರು ಅಷ್ಟು ಹೊತ್ತಿಗೆ ಸುಗ್ಗಿ ಕಟ್ಟಿ, ಬುಧವಾರ ರೀತಿಯಂತೆ ಇತ್ತ ೬-೭ ವರ್ಷಗಳಿಂದ ಅವರು ನಡೆದುಕೊಂಡು ಬಂದಂತೆ ಸುಗ್ಗಿ ಕಟ್ಟಿಕೊಂಡು, ತ್ರಿಸಂಧ್ಯಾ ಕಾಲದಲ್ಲಿ ದೇವರ ದರ್ಶನ ಪಡೆದರು ಮತ್ತು ವಾಡಿಕೆಯಂತೆ ಇದೇ ರವಿವಾರ

(೧೩ನೇ ಪುಟದ ಮೇಲೆ ಮುಂದರಿಸಿದೆ)

ಹೊನ್ನಾವರ ತಾಲೂಕ ಗುಂಡಬಾಳೆಯ ಶ್ರೀ ವೆಂಕಟರಮಣ ಮುಖ್ಯಪ್ರಾಣ ದೇವರ

ಸನ್ನಿಧಿಯಲ್ಲಿ ವಾಡಿಕೆಯಂತೆ ಹರಕೆಯ ಯಕ್ಷಗಾನ ಆಟಗಳು ಕಳೆದ ಫಾಲ್ಗುಣ ಶುದ್ಧ ದಶಮಿಗೆ ಪ್ರಾರಂಭವಾಗಿದ್ದು, ಸದ್ರಿ ಆಟಗಳು ಚೈತ್ರ ಬಹುಳಂತ್ಯದ ವರೆಗೆ ನಡೆಯುವವು ಹರಕೆ ಸಲ್ಲಿಸುವವರು ಈ ಅವಧಿಯಲ್ಲಿ ಹರಕೆ ಸಲ್ಲಿಸಿ ಕೃತಾರ್ಥರಾಗಬೇಕಾಗಿ ವ್ಯವಸ್ಥಾಪಕ ರಾ॥ ನೀಲಕಂಠ ವೆಂ ಪ್ರಭು ಇವರು ತಿಳಿಸುತ್ತಾರೆ

ಇದಲ್ಲದೆ ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಕೆಲಸದ ವರ್ಗಣಿ ವಸೂಲಿ ಬಗ್ಗೆ ರಾ॥ ನೀಲಕಂಠ ವೆಂಕಟರಮಣ ಪ್ರಭು ರಾ॥ ಶ್ರೀನಿವಾಸ ವಾಮನ ನಾಯಕ ಇವರಿಗೆ ಕಾರ್ಯಕಾರಿ ಮಂಡಳದವರು ನೇಮಕ ಮಾಡಿದಂತೆ ಸದ್ರಿಯವರ ಕಡೆಗೆ ವರ್ಗಣಿ ಕೊಟ್ಟು ಪಾವತಿ ಪಡೆಯಬೇಕಾಗಿ ವಿನಂತಿ

ಧಾರವಾಡದಲ್ಲಿ ಡಾ॥ ಮೋದಿಯವರ

ಧರ್ಮಾರ್ಥ ಕಣ್ಣಿನ ಶಸ್ತ್ರಕ್ರಿಯೆ.

ಇದೇ ಎಪ್ರಿಲ ತಾ॥ ೨೬ನೆ ಸೋಮವಾರದಿಂದ ೫ ದಿನ ಧಾರವಾಡದೊಳಗಿನ ಲಿಂಗಾಯತ ಹೈಸ್ಕೂಲಿನಲ್ಲಿ ನೇತ್ರ ಚಿಕಿತ್ಸೆಗಾಗಿ ಕೀರ್ತಿವೆತ್ತ **ಡಾ॥ ಮೋದಿಯವರು ಕಣ್ಣಿನ ಶಸ್ತ್ರಕ್ರಿಯೆ** ಮತ್ತು ಚಿಕಿತ್ಸೆ ಮಾಡಲಿದ್ದಾರೆ ರೋಗಿಗಳಿಗಾಗಿ ಎಲ್ಲ ತರದ ಸೌಕರ್ಯಗಳನ್ನು ಧರ್ಮಾರ್ಥ ಮಾಡಲಾಗುವದು ಕಣ್ಣಿನ ರೋಗವುಳ್ಳ ಎಲ್ಲ ಜನರು ಇದರ ಲಾಭ ಪಡೆಯಬೇಕಾಗಿ ವಿನಂತಿ

ಕಾರ್ಯದರ್ಶಿ,

ಅಖಿಲ ಕರ್ನಾಟಕ ವ ಪ ಮಂಡಳಿ, ಧಾರವಾಡ

ಜಿಲ್ಲಾ ಸಮಾಚಾರ.

ಹೊನ್ನಾವರ— ಊರಲ್ಲ ಚಿಮಣಿ ಎಣ್ಣೆ ಸಿಗುವದು ಕಷ್ಟವಾಗಿದೆ. ಏಜಂಟರ ಅಪ್ರೇಕ್ಷೆಗೆ ಮಾತ್ರ ಕೆಲವು ಡಬ್ಬಿಗಳು ಸಿಗುತ್ತವೆಂಬಲೂ ಊರಿನ ಎಣ್ಣೆಯಕ್ಕೆ ಕಳ್ಳತನದಿಂದ ಘಟ್ಟ ಹತ್ತುತ್ತದೆಂಬಲೂ ಪ್ರವಾದವುಂಟು. ಸರಕಾರದವರು ಮುಂದಾಗಿ ಎಣ್ಣೆಯ ಹಂಚಿಕೆಯನ್ನು ನಿಯಂತ್ರಿಸದಿದ್ದರೆ ಜನರಿಗೆ ಅತ್ಯಂತ ಕಷ್ಟವಾಗುವದು.

ಹಾವಿನಕುಸೇಯಲ್ಲಿ ಕೆಲವೆಡೆ ಹೊಳೆಯ ಉಪ್ಪು ನೀರ ಗದ್ದೆಗಳಲ್ಲಿ ಸೇರದಂತೆ ಕಟ್ಟು ಹಾಕಬೇಕಾಗುತ್ತದೆ. ಬೆಳೆಯ ಇನೇ ೧ ಅಂಶ ಕಡ್ಡಾಯ ಈ ಕಟ್ಟು ಹಾಕುವದು. ತಮ್ಮಿಂದ ಸಾಧ್ಯವಿಲ್ಲೆಂದು ಒಡೆಯರು ಈ ವರ್ಷ ಕಟ್ಟು ಹಾಕಿಸಲು ಮುಂದಾಗಲಿಲ್ಲ! "ಬಂಗ ಮೋಹನರಿಗಾಗಿ ೧ ಅಂಶ ಮತ್ತು ಸಾಗುವಳಿಯ ಖರ್ಚಿಗಾಗಿ ೧ ಅಂಶ ಹೀಗೆ ೩ ಅಂಶ" ಪಡೆದ ಒಕ್ಕಲಿಗರೂ ಕಟ್ಟು ದುರುಸ್ತಿಯ ವ್ಯವಸ್ಥೆ ಮಾಡಿರುವದಿಲ್ಲ!! ಅದರಿಂದ ಮುಂದಿನ ವರ್ಷ ಅಕ್ಕಪಕ್ಕದ ಗದ್ದೆಯಲ್ಲಿ ಸೇರುವ ಉಪ್ಪು ನೀರನ್ನು ಪಾಲು ಮಾಡಿಕೊಂಡು ಕುಡಿಯುವ ಪ್ರಸಂಗ ಬರುವದೆಂದು ತೋರುತ್ತದೆ! ಹಿಂದಿನ ಮುಂದಿನ ವಿಚಾರ ಮಾಡದೆ ಮತ್ತು ಒಕ್ಕಲಿಗರಿಗೆ ಹಕ್ಕುಗಳನ್ನು ನಿರ್ಮಿಸಿಕೊಡ... ವಾಗ ಅದರ ಮೇಲೆ ಕೆಲವೊಂದು ಜೋಖಿಗಳನ್ನು ಹಾಕಿ ಆ ಜೋಖಿಗಳನ್ನು ಅವರು ತಪ್ಪದೆ ನಿರ್ವಹಿಸುವಂತೆ ಏರ್ಪಾಟು ಮಾಡದೆ ಗಾಬರಿಯಿಂದ ರಚಿಸಿದ ಟೆನನ್ಸಿ ಕಾಯಿದೆಯ ಪರಿಣಾಮವಿದು!

ಸಿದ್ದಾಪುರ ತಾಲೂಕಿನಿಂದ ಈಗ ಅಲ್ಲಿ ಭಕ್ತ ಬರುವದಿಲ್ಲ. ಮೈಸೂರ ಸೀಮೆಯಿಂದ ಬರುವ ಭಕ್ತವನ್ನೂ ಸಿದ್ದಾಪುರದವರು ಅಲ್ಲಿ ಬರಗೊಡುವದಿಲ್ಲ! ತಾವೇ ಅದನ್ನು ಕೈವಶ ಮಾಡಿಕೊಳ್ಳುತ್ತಾರೆ!!

ಶಿರಸಿಪುರದಿಂದಲೂ ಬಿಮಾಣಿ ಎಣ್ಣೆಯ ವ್ಯಾಪಾರಿಗಳ ವಿರುದ್ಧ ದೂರು ಬಂದಿದೆ. ಈ ವ್ಯಾಪಾರಿಗಳು ೧–೨ ಡಬ್ಬಿ ಎಣ್ಣೆಯನ್ನು ಮಾರಿ, ಉಳಿದದ್ದನ್ನು ಕಳ್ಳಪೇಟೆಗೆ ಕಳಿಸಿಕೊಡುತ್ತಾರಂತೆ.

(ತಾ. ೧೩-೪-೧೯೪೮) ಕಲ್ಲೆ ಗ್ರಾಮದ ಕೆಲವರು ಕುಗ್ಗಿಯ ಬೆಳೆ ತಯಾರಾದ ಮೇಲೆ ಸರ್ವೆ ನಂ. ೨೭೯, ೨೮೦ರಲ್ಲಿ ಉತ್ತಿ ಹಾಳಲು ಪರವಾನಿಗಿ ಕೊಡಬೇಕೆಂದು ಬೇಡಿದ್ದರು. ಮಾಮಲೇದಾರರಾದರೂ ಹಾಗೆ ಪರವಾನಿಗಿ ಕೊಟ್ಟಿದ್ದರು. ಆದರೆ ಮಾಮಲೇದಾರರ ಹುಕುಮು ಗ್ರಾಮಕ್ಕೆ ತಲ್ಪುವದರೊಳಗಾಗಿ ಗುಡ್ಡಕಟ್ಟು—ಹಳದೀಪುರ ...ದಿಯ ರೈತ ಸಂಘದ ೭೦ ೮೦ ಜನರು ಬಂಗು ಗಣಪ, ...ವಪ್ಪ ಶೆಟ್ಟಿ ವಗೈರೆ ಮುಖಂಡರ ನೇತೃತ್ವದಲ್ಲಿ ಕೆಂಪು ನಿಶಾನೆಯನ್ನು ಕೈಯಲ್ಲಿ ಹಿಡಕೊಂಡು ಮತ್ತು ಘೋಷಣೆಗಳನ್ನು ಮಾಡುತ್ತಾ ಬಂದು, ಒಕ್ಕಲಿಗರು ಕೊಯ್ದು ಹಾಕಿದ ಬೆಳೆಯನ್ನೆಲ್ಲ ಬರೇ ಬಲಾತ್ಕಾರದಿಂದ ಮಾಲೀಕ ಮಾಡಿ, ಒಂದು ...ರಲ ಗದ್ದೆಯಲ್ಲಿ ಒಯ್ದು ಹಾಕಿದ್ದಾರೆ! ಅಲ್ಲಿ ಬೆಳೆಯ ರಕ್ಷಣೆಗೆ ಬೇಲಿಯಿಲ್ಲ, ಕಾವಲಿಲ್ಲ! ಇವರ ಬಗ್ಗೆ ಫೋಜದಾರಿ ...ರು ಹಿಂದಿನಿಂದ ಪಂಚನಾಮೆ ಮಾಡಿಸಿದ್ದಾರೆಂದು ... ಯುತ್ತದೆ. ರೈತ ಸಂಘದ ಪುಂಡಗುಂಡರ ಈ ದಾಂಡಿಗಾಯನ್ನು ಸರಕಾರವು ಸಹಿಸುವದೇನು?

...ರಾವಿ— (ತಾ. ೯–೪–೪೮) ಅಕ್ಕಿ ಸಿಗುವದು ಕಷ್ಟವಾಗಿದೆ. ಶಾಯಲಿ ೧೯ ೨ ರೂ ಹೇಳುತ್ತಾರೆ. ಅದೂ ...ದೊಂದು ದಿನ ಸಿಗುವದಿಲ್ಲ! ಮಳೆಗಾಲದಲ್ಲಿ ಉಪವಾಸ ...ವ ಪ್ರಸಂಗ ಬರುವದೆಂದು ಜನರು ಭಯ ...ಗೊಂಡಿದ್ದಾರೆ.

ಚಿಮಣಿ ಎಣ್ಣೆಯ ಕಷ್ಟವಂತೂ ಹೇಳ ತೀರದು! ಎಣ್ಣೆ ... ಸಿಗುವದಿಲ್ಲವಾಗಿ ಅಂಗಡಿಕಾರರ ದೂರು

ಸಾರದ ಹೊಳೆಯ ಸಂಕ ತೀರ ಜೀರ್ಣವಾಗಿದೆ. ಮಳೆಗಾಲದಲ್ಲಿ ಅದು ಉಳಿಯಲಾರದು! ಅದರ ದುರುಸ್ತಿಯನ್ನು ಮಾಡಿಸಬಾರದೇ?

ಇಲ್ಲಿಯ ಮಾರ್ಗ ೯-೧೦ ಅಡಿ ಅಗಲವಿದೆ. ಅದರೂ ... ಡೆಯವರು ಮಾರ್ಗದ ಮೇಲೆ ಮಡಿ ಹಾಕಿದ್ದಾರೆ! ಇದರಿಂದ ಬರ-ಹೋಗುವ ವಾಹನಗಳು ಬಹಳ ಕಷ್ಟದಿಂದ ಹಾಯಬೇಕಾಗಿದೆ

ಮುರ್ಡೇಶ್ವರ— (ತಾ. ೧೪-೪-೪೮) ಚಿಮಣಿ ಎಣ್ಣೆ ಕಂಟ್ರೋಲ ಏಜಂಟರು ತಮ್ಮ ಬಳಗದವರಿಗಷ್ಟೇ ಕೆಲವು ಡಬ್ಬಿಗಳನ್ನು ಕೊಟ್ಟು ಕಳ್ಳಪೇಟೆ ಮಾರಾಟ ಅನುಕೂಲ ಮಾಡಿಕೊಟ್ಟಿದ್ದಾರೆಂದು ಜನರು ದೂರುತ್ತಾರೆ.

ಬೇಕು!! ಏಜಂಟರು ಬೇಕು!!

ಕಿಪ್-ಕ್ಲೀನ್, ಹ್ಯಾಂಡಿ ಸೋಪು, ದೀಪಕ (ಮೆಟಲ್ ಪಾಲೀಸು) ಸಿಲ್ವರ ಬ್ರಾಸ್, ಡಿ ಡಿ ಟಿ ಜಂತು ನಾಶಕ, ನೆಪಥಲೀನ ಗುಳಿಗೆಗಳು, ಸುವಾಸಿಕ ಪ್ರಸ್ಯಗಳು ಇತ್ಯಾದಿ ಗೃಹ ವಿದೇಶಗಳಲ್ಲಿ ಸಿದ್ಧವಾದ ಪ್ರಖ್ಯಾತ ವಸ್ತುಗಳನ್ನು ಮಾರಲು ಅಲ್ಲಲ್ಲಿ ಏಜಂಟರೂ ಪಂಚಾಯತೆಗಾರರೂ ಬೇಕಾಗಿದ್ದಾರೆ. ಇಂತಹ ಕೆಲಸದ ದೀರ್ಘಕಾಲೀನ ಅನುಭವವುಳ್ಳವರಷ್ಟೇ ಸವಿಸ್ತರ ಶರತುಗಳಿಗಾಗಿ, ಪ್ರಶಸ್ತಿಪತ್ರಗಳ ಸಹಿತ, ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿದೆ.

ಸಿ ಕೇ ವಿಜಾಸ್ಸಿಕ,
ಕೋರಾರಿ ಮೆನಶನ್, ಜನರಲ್ ಪೋಸ್ಟ ಓಪಿಸಿನ
ಎದುರು, ಕೋಟೆ, ಮುಂಬಯಿ

ಯೋಗ್ಯ ದರದಿಂದ ಬಟ್ಟೆ ಬೇಕಾದರೆ,

ಕುಮಟೆಯ
ಶ್ರೀ ಸತ್ಯನಾರಾಯಣ ಸ್ಟೋರ್ಸನ್ನು
ಸಂದರ್ಶಿಸಿರಿ

ಈಗ ಬಟ್ಟೆಯ ನಿಯಂತ್ರಣ ರದ್ದಾದ್ದರಿಂದ ಬಟ್ಟೆ ಅತಿ ಸುಟ್ಟಿಯಾಗುತ್ತದೆಂದೂ ಯೋಗ್ಯ ಬೆಲೆಗೆ ಉತ್ತಮ ಬಟ್ಟೆ ಸಿಗಲಿಕ್ಕಿಲ್ಲೆಂದೂ ಜನರು ದೂರುತ್ತಾರೆ. ನಮ್ಮ ಸ್ಟೋರಸನ್ನು ಸಂದರ್ಶಿಸಿದವರು ಹೀಗೆ ದೂರಲಿಕ್ಕಿಲ್ಲವಾಗಿ ನಮಗೆ ಖಾತ್ರಿಯುಂಟು. ತಮ್ಮ ಬಂದು ನೋಡಿರಿ. ಮದುವೆ ಮುಂಜಿಗಳಿಗಾಗಿ ಬೇಕಾದ ಬಟ್ಟೆಯೂ ಸೊಗಸಾದ ಹೊಸ ಬಟ್ಟೆಯೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತವೆಂದು ನಿಮಗೂ ಖಾತ್ರಿಯಾಗುವದು

ಮಾಲಕರು.– ವ್ಹಿ. ಎಸ್. ನಾಯಕ ಮತ್ತು ಕಂ.
ಕುಮಟಾ.

ಗೋಣಿ ಚೀಲಗಳ ಮಾರಾಟ.

ಯಲ್ಲಾಪುರ ಮಾಮಲೇದಾರರು ೮೦೦೦ ಉಪಯೋಗಿ ಮತ್ತು ೨,೨೦೦ ಗೈರ ಉಪಯೋಗಿ ಗೋಣಿ ಚೀಲಗಳ ಮಾರಾಟ ಮಾಡುವವರಿದ್ದಾರೆ. ಇವನ್ನು ಕೊಂಡುಕೊಳ್ಳಲಿಚ್ಛಿಸುವವರು ರೂ ೧೦೦ಗಳನ್ನು ಸರಕಾರಿ ಟ್ರೆಝುರಿಯಲ್ಲಿ ರೇವು ಇಟ್ಟು ಟೆಂಡರುಗಳನ್ನು ತಾ. ೨೦–೪–೪೮ ರೊಳಗೆ ಕಳಿಸಬೇಕೆಂದು ಪ್ರಕಟಿಸುತ್ತಾರೆ

ಯಲ್ಲಾಪುರ, ತಾ. ೭–೪–೪೮

NOTICE.

The public are hereby notified that the two *Powers of attorney* given by the undersigned individually in favour of Mr Dayanand Sarveshwar Nadkarni are hereby revoked

Mangesh Sarveshwar Nadkarni
Ramdas Sarveshwar Nadkarni

Bombay 23, 30-3-1948

ಟೆಂಡರ ನೋಟೀಸು.

ಹೊನ್ನಾವರ ಗೋಡಾವನದಲ್ಲಿರುವ ಈ ಕೆಳಗಿನ ತರಗಳ ಸುಮಾರು ೬೦,೩೦೦ ಹಳೇ ಗೋಣಿ ಚೀಲಗಳನ್ನು ಟೆಂಡರ ಬೇಡಿ ಮಾರಾಟ ಮಾಡುವದುಂಟು.—

೧ ಉಪಯೋಗಕ್ಕೆ ಬರುವ ಹಳೇ ಚೀಲಗಳು		೩೪,೫೦೦
೨ ಸ್ವಲ್ಪ ದುರುಸ್ತಿಯಿಂದ ಉಪಯೋಗಕ್ಕೆ ಬರುವಂಥ ಚೀಲಗಳು,		೧೯,೫೪೦
೩ ಹರಕು ಚೀಲಗಳು		೬,೯೬೦
	ಒಟ್ಟು	೬೧,೩೦೦

ಟೆಂಡರ ಕೊಡುವವರು ತಾ. ೧೬–೫–೧೯೪೮ನೇ ಮಧ್ಯಾಹ್ನ ೧೨ ಘಂಟೆಯೊಳಗೆ ರಿಜಿಸ್ಟರ್ಡ ಪೋಸ್ಟ ದ್ವಾರಾ ಯಾ ಸಮಕ್ಷ ಟೆಂಡರುಗಳನ್ನು ಮಾಮಲೇದಾರ, ಹೊನ್ನಾವರ ಇವರ ಕಡೆಗೆ ಮುಟ್ಟಿಸತಕ್ಕದ್ದು. ಟೆಂಡರಿನ ಸಂಗಡ, ಸರಕಾರಿ ಖಜಾನೆಯಲ್ಲಿ ಬಯಾನಾ ರೂ ೨೦೦ ಜಮಾ ಮಾಡಿದ ಚಾಲನು ಇಡಬೇಕು. ಮುದ್ದತ್ತು ಮೀರಿ ಬಂದ ಟೆಂಡರುಗಳು ಸ್ವೀಕರಿಸಲ್ಪಡಲಿಕ್ಕಿಲ್ಲ.

೧ನೇ ಮತ್ತು ೨ನೇ ವರ್ಗದ ಹಾಗೂ ಚೀಲಗಳ ಸಂಬಂಧದಲ್ಲಿ ಟೆಂಡರ ದರವನ್ನು ನೂರಕ್ಕೆ ಇಂತಿಷ್ಟು ರೂಪಾಯಿ ಎಂತಲೂ ೩ನೇ ವರ್ಗದ ಬಗ್ಗೆ ಟನ್ನಿಗೆ ಇಂತಿಷ್ಟು ಎಂತಲೂ ಸ್ಪಷ್ಟ ನಮೂದಿಸಬೇಕು.

ಆವಶ್ಯವುಳ್ಳ ಹೆಚ್ಚಿಗೆ ಮಾಹಿತಿಯನ್ನು ಹೊನ್ನಾವರ ತಾಲೂಕ ಕಚೇರಿಯಲ್ಲಿ ಸಮಕ್ಷ ವಿಚಾರಿಸಿ ತಿಳಕೊಳ್ಳಬಹುದು

ಹೊನ್ನಾವರ, ೧೬–೪–೧೯೪೮.

G S Betigeri,
ಮಾಮಲೇದಾರ, ಹೊನ್ನಾವರ

ಜಾಹೀರ ನೋಟೀಸು.

ನಮ್ಮ ಕುಟುಂಬದ ಪಿತ್ರಾರ್ಜಿತ ಸ್ಥಿರ ಆಸ್ತಿಯು ಕುಮಟಾ ತಾಲೂಕ ಉಪ್ಪಿನಪಟ್ಟಣ ಗ್ರಾಮದಲ್ಲಿ ಬಹಳ ಇದ್ದು ಅದರಲ್ಲಿ ಮನೆ, ಬಚ್ಚಲಕೊಟ್ಟಿಗೆ, ದನಗಳ ಕೊಟ್ಟಿಗೆ, ದನಗಳು, ಚರ—ಜಂಗಮ ಸಾಮಾನುಗಳೂ ಬಹಳ ಇವೆ. ನನ್ನ ತಂದೆ ದಾಮೋದರ ವೆಂಕಟೇಶ ನಾಯಕ ಮತ್ತು ದೊಡ್ಡತಂದೆ ನರಸಿಂಹ ವೆಂಕಟೇಶ ನಾಯಕ ಇವರಿಗೆ ರಾಮಾ ಅಣ್ಣಾ ನಾಯಕ ಇವರು ದುರ್ಬೋಧನೆ ಮಾಡಿ ಈ ಆಸ್ತಿಗಳನ್ನು ಸ್ವಾಧೀನ ಪಡಿಯುವ ಕಾವೀಲ ಮಾಡಿದ್ದಾರಾಗಿ ನಾನು ಕೇಳುತ್ತೇನೆ. ಅದ್ದರಿಂದ ಈ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ — ಮೇಲಿನಂತೆ ಚರ—ಸ್ಥಿರ ಆಸ್ತಿಗಳನ್ನು ಸದರಿಯವರಿಂದ ಕ್ರಯಕ್ಕೆ ಯಾ ಅಡವು ವಗೈರೆ ಮಾಡಿಕೊಂಡರೆ ಯಾ ಮಾಡಿಕೊಂಡದ್ದು ಇದ್ದಲ್ಲಿ ನನ್ನ ಅಜ್ಜನಾದ ವೆಂಕಟೇಶ ವಾಸುದೇವ ನಾಯಕರ ಅಂಶಕ್ಕೆ ಆ ಸಂಬಂಧ ಬಾಧಕವಾಗತಕ್ಕದ್ದಲ್ಲ. ಆ ಅಂಶಕ್ಕೆ ನಾನೂ ನನ್ನ ತಮ್ಮಂದಿರೂ ಹಕ್ಕುದಾರರಾಗಿರುತ್ತೇವೆ

ತಾ ೧೯–೪—೧೯೪೮

ವೆಂಕಟೇಶ ದಾಮೋದರ ನಾಯಕ,
ಉಪ್ಪಿನಪಟ್ಟಣ (ಹಾಲಿ ಮುಂಬಯಿ.)

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

(ಸ್ಥಾಪನೆ: ೧೯೨೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡುಪಿ ಆಫೀಸು.—
Post Box No 10,
UDIPI, S Kanara

ಇದನ್ನು ಹಂಡುರಂಗ ಕೃಷ್ಣ ಕಾನಡಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಕ್ಯಾನರ ಅಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ಜಾಹೀರಾತುಗಳ ದರ:-
ಸ್ಥಳವನ್ನು ಅನುಸರಿಸಿ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ಇಲ್ಲವೆ ಪ್ರತ್ಯಕ್ಷ
ತಿಳಿಸಲಾಗುವುದು.

Reg. No. B. 1270. Monday, 3-5-1948.

ಕಾನಡಾವೃತ್ತ.

ವರ್ಷ ೩೦] THE KANARA NEWS. [ಸಂಚಿಕೆ ೪೫

ಕುಮಟಾ:- ಸೋಮವಾರ, ತಾ. ೩-೫-೧೯೪೮.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ತರಿಸುವವರು
ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಜಂಗಲ ಸವಲತ್ತುಗಳಲ್ಲಿ ಸುಧಾರಣೆ

ಹೊಸ ಸರಕಾರಿ ಠರಾವು

ಮುಂಬಯಿ ಸರಕಾರದ ಅರಣ್ಯ ಇಲಾಖೆಯ ಮಂತ್ರಿಗಳಾದ ಮಾನ್ಯ ಮಲ್ಲನಗೌಡ ಪಾಟೀಲರು ೧೯೪೬ನೇ ಇಸವಿಯ ಸೆಪ್ಟಂಬರ ತಿಂಗಳಲ್ಲಿ ನಮ್ಮ ಜಿಲ್ಲೆಯ ಸಂಚಾರ ಕೈಕೊಂಡಾಗ ಜನ ಮುಖಂಡರನ್ನು ಕುರಿತು ಬೋಲ್-ಪ್ರಮುಖರೊಡನೆ ಚರ್ಚೆ ಮಾಡುವದಕ್ಕಾಗಿ ಅವರು ಶಿರ್ಸಿಯಲ್ಲಿ ಒಂದು ಪರಿಷತ್ತು ಕರೆದದ್ದನ್ನು ಆ ಪರಿಷತ್ತಿನಲ್ಲಿ, ಜನರ ದೂರುಗಳನ್ನು ಕೇಳಿಕೊಂಡು ಅವುಗಳ ಪರಿಹಾರಕ್ಕಾಗಿ ಸರಕಾರಕ್ಕೆ ತಕ್ಕ ಸೂಚನೆಗಳನ್ನು ಮಾಡಲು ರಾವ ಸಾಹೇಬ ಮಹಾಬಲೇಶ್ವರ ಭಟ್ಟ ಗೋಕರ್ಣ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಿದ್ದನ್ನು "ವೃತ್ತ" ದ ವಾಚಕರು ಅರಿತಿರಬೇಕು ಗೋಕಣಂಣವರ ವರದಿಯು ಸರಕಾರಕ್ಕೆ ಸೇರಿ ಹೋದ ನಂತರ ೧೯೪೭ರ ಡಿಸೆಂಬರ ತಿಂಗಳ ೩೦ ತಾರೀಕು ಅರಣ್ಯ-ಮಂತ್ರಿಗಳು ಮುಂಬಯಿಯೊಳಗಿನ ಸರಕಾರ ಕಚೇರಿಯಲ್ಲಿ ಮುಲ್ಕೀ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳ ಹಾಗೂ ನಮ್ಮ ಜಿಲ್ಲೆಯ ಕೆಲವೊಂದು ಪ್ರಮುಖ ಲೋಕನಾಯಕರ ಒಂದು ಪರಿಷತ್ತನ್ನು ಕೂಡಿಸಿದ್ದರು ಆ ಪರಿಷತ್ತಿನಲ್ಲಿ ನಡೆದ ಚರ್ಚೆಯಾನಿಮಿತ್ತ ಅದರಲ್ಲಿ ಪ್ರಕಟವಾದ ಅಭಿಪ್ರಾಯಗಳನ್ನೂ ಅನುಲಕ್ಷಿಸಿ ಮುಂಬಯಿ ಸರಕಾರವು ನಮ್ಮ ಕಾನಡಾ ಜಿಲ್ಲೆಯವರ ಪರ-ದುಃಖಗಳ ಪರಿಹಾರಕ್ಕಾಗಿ ಇದೇ ಕಳೆದ ತಾ. ೬-೪-೧೯೪೮ನೇಗೆ ಜಿ. ಆರ್. ಆರ್. ಡಿ ನಂ. ೩೦೪೨/೪೫ನೇ ಸರಕಾರಿ ಠರಾವು ಮಾಡಿದೆ ಸದರಿ ಠರಾವಿನಲ್ಲಿ, ಜನ-ವಸತಿಯ ಹಾಗೂ ಸಾಗುವಳಿ-ಭೂಮಿಯ ಸುತ್ತ ಕಡಕೊಳ್ಳಬಹುದಾದ ಜಂಗಲ-ಪಟ್ಟಿಯ ಅಗಲಳತೆ, ತೋಟಗಳಿಗೆ ಕೊಡುವ ಹಾಡಿ-ಬೆಟ್ಟಗಳ ಪ್ರಮಾಣ, ಜಾನುವಾರುಗಳ ಬೇಟೆಯ ಸವಲತ್ತು, ಬೇಟೆಗಾರರಿಗೆ ಸರಕಾರದಿಂದ ಸಿಗುವ ಇನಾಮು ಮುಂತಾದವುಗಳ ಉಲ್ಲೇಖವುಂಟು. ಈ ಠರಾವಿನಿಂದ ತಾ ೨೫-೧೧-೧೯೩೪, ತಾ. ೬-೮-೧೯೩೯ ಮತ್ತು ತಾ. ೧೫-೯-೧೯೪೨ರ ೮೬೯೧/೩೩ನೇ ಸರಕಾರಿ ಠರಾವುಗಳು ರದ್ದುಗೊಳಿಸಲ್ಪಟ್ಟಿವೆ, ಮತ್ತು ತಾ ೨೪-೨-೧೯೩೪ರ ಮುಲ್ಕಿ ಖಾತೆಯ ೩೪೪೯/೩೩ನೇ ಠರಾವನ್ನು ಊರ್ಜಿತಗೊಳಿಸಿ, ಆ ಠರಾವಿಗೆ ಪೂರಕ ಮತ್ತು ಪೋಷಕವಾಗಿ ಈ ಠರಾವು ಮಾಡಲ್ಪಟ್ಟಿದೆ. ಠರಾವಿನ ಅಂಶಗಳು ನಮ್ಮ ಜಿಲ್ಲೆಯ ರೈತರಿಗೆ ಮಹತ್ವದವು ಆದುದರಿಂದ ಅವುಗಳ ವಿಸ್ತೃತ ಸಾರಾಂಶವನ್ನು ಇದರ ಕೆಳಗೆ ಕೊಡಲಾಗಿದೆ

ಸರಕಾರಿ ಹುಕುಮುಗಳ ಸಾರ

೧. ಜಂಗಲಪಟ್ಟಿ ಕಡಕೊಳ್ಳುವ ಸಂಬಂಧದಲ್ಲಿ ಜಿಲ್ಲೆಯ ಜಂಗಲ ಕ್ಷೇತ್ರದ ೫ ವಿಭಾಗಗಳು ಮಾಡಲ್ಪಟ್ಟಿವೆ ಅವು ಯಾವುವೆಂದರೆ:— (೧) ಸಾಗವಾನಿ ಗಿಡಗಳು ಸಮೃದ್ಧಿಯಾಗಿರುವ ಅಡವಿಯನ್ನು ಬಿಟ್ಟು ಉಳಿದ ಅಡವಿಯ ಭಾಗಗಳು, (೨) ಹಳಿಯಾಳ, ಮುಂಡಗೋಡ ತಾಲೂಕುಗಳ ಸಾಗವಾನಿ ಎಲೆಗಳ ಪ್ರದೇಶಗಳು. (೩) ಸಾಗವಾನಿ ಗಿಡಗಳನ್ನು ಬೆಳೆಸುವ ಗಂಧ ಮತ್ತು ನೀಲಗಿರಿ ವಿಭಾಗಗಳು; (೪) ಸಮುದ್ರ ದಂಡೆಯ ಹತ್ತಿರವಿರುವ ಗ್ರಾಮಗಳ ಭಾಗಗಳು; ಮತ್ತು (೫) ಜನಗಳು "ಕಾನು ಹಸಿರು" ಅಡವಿಗಳೂ ಇರುವ ಭಾಗಗಳು. ಈ ವಿಭಾಗಗಳಲ್ಲಿ ನಿರ್ದಿಷ್ಟ ಪ್ರಮಾಣದಿಂದ ಜಂಗಲ ಪಟ್ಟಿಗಳನ್ನು ಕಡಕೊಳ್ಳಬಹುದು. ಆದರೆ ದಟ್ಟಡವಿಗಳಲ್ಲೂ (high-forests) ಹೊರತಾಗಿಸಲ್ಪಡುವ ಬೇರೆ ಕೆಲವು ಭಾಗಗಳಲ್ಲೂ (ಅಧಿಕಾರಿಗಳ ಹಾಗೂ ಅಧಿಕಾರೇತರ ಜನರ ಅಭಿಪ್ರಾಯ ತಿಳಿಕೊಂಡು ಸರಕಾರದವರು ಹೊರಟು ಬಿಡಿಸಿದ ಕ್ಷೇತ್ರಗಳನ್ನು ರೀತಿಯಂತೆ ಜಾಹೀರಪಡಿಸುವರು) ಜಂಗಲ ಪಟ್ಟಿಗಳನ್ನು ಕಡಕೊಳ್ಳಲು ಬರುವಂತಿಲ್ಲ.

೨. ವಸತಿ-ಪ್ರದೇಶದ ಹಾಗೂ ಸಾಗುವಳಿ ಭೂಮಿಯ ಸುತ್ತ ಕಡಕೊಳ್ಳಬರುವ ಜಂಗಲ ಪಟ್ಟಿಯ ವಿಸ್ತಾರ:— ಜನತೆಯ ಆರೋಗ್ಯಕ್ಕಾಗಿ ಹಾಗೂ ಬೆಳೆಯ ರಕ್ಷಣೆಗಾಗಿ ವಿಸ್ತೃತ ಜಂಗಲ ಪಟ್ಟಿಗಳನ್ನು ಕಡಕೊಳ್ಳುವದು ಅವಶ್ಯವಿರುತ್ತದೆಂದು ಒಪ್ಪಿ ಸರಕಾರವು ಜಂಗಲ ಪಟ್ಟಿಗಳ ವಿಸ್ತಾರದ ಸಂಬಂಧದಲ್ಲಿ ಈ ಕೆಳಗಿನ ನಿಯಮಗಳನ್ನು ಮಾಡಿದೆ. ಈ ನಿಯಮಗಳು ಘಟ್ಟದ ಮೇಲಿನ ಎಲ್ಲ ತಾಲೂಕುಗಳಿಗೂ, ಜಿಲ್ಲಾಧಿಪತಿ, ಜಂಗಲ ಅಧಿಕಾರಿಗಳ ಸಲಹೆಯಿಂದ ನಿರ್ದಿಷ್ಟಗೊಳಿಸಬಹುದಾದ, ಘಟ್ಟದ ಕೆಳಗಿನ ತಾಲೂಕುಗಳ ನಿರ್ದಿಷ್ಟ ಭಾಗಗಳಿಗೂ ಅನ್ವಯಿಸುತ್ತವೆ

(೧) ಸಾಗುವಾನಿ ಗಿಡಗಳು ಬೆಳೆಯುವ ಅಡವಿ ಬಿಟ್ಟು ಉಳಿದ ಅಡವಿಯ ಪ್ರದೇಶಗಳಲ್ಲಿ, "ಕಷ್ಟು ದೊಡ್ಡ" ದಿರುವ (substantial) ವಸತಿಯ ಪ್ರದೇಶದ ಸುತ್ತಲು ಅರ್ಧ ಮೈಲು ಅಗಲವಾದ ಮತ್ತು "ಕಷ್ಟು ದೊಡ್ಡ" ದಿರುವ ಸಾಗುವಳಿ ಕ್ಷೇತ್ರದ ಸುತ್ತಲೂ ಕಾಲು ಮೈಲು ಅಗಲವಾದ ಜಂಗಲ ಪಟ್ಟಿಗಳನ್ನು ಕಡಕೊಳ್ಳಬಹುದು. ಕಷ್ಟು ದೊಡ್ಡದಾಗಿರದ, ಅದರೆ ೫ ಎಕರೆಯ ಮೇಲ್ಪಟ್ಟ ಕ್ಷೇತ್ರವುಳ್ಳ ಬಾಗಾಯತ ಭೂಮಿ ಇಲ್ಲವೆ ೨೫ ಎಕರೆ ಯ ಮೇಲ್ಪಟ್ಟ ಕ್ಷೇತ್ರವುಳ್ಳ ತರಿ ಭೂಮಿ ಇರುವ ಪ್ರದೇಶಗಳಲ್ಲಿ, ವಾಸ್ತವ್ಯ-ಪ್ರದೇಶದ ಸುತ್ತಲು ೨ ಫರ್ಲಾಂಗದಷ್ಟು ಮತ್ತು ಸಾಗುವಳಿ ಕ್ಷೇತ್ರದ ಸುತ್ತಲು ೧ ಫರ್ಲಾಂಗದಷ್ಟು ಜಂಗಲ-ಪಟ್ಟಿಯನ್ನು ಕಡಕೊಳ್ಳಬಹುದು ಈ ಸದರುಗಳಲ್ಲಿ ಬಾರದ ಸಣ್ಣ-ಸಣ್ಣ ವಸತಿಯ ಕ್ಷೇತ್ರಗಳ ಮತ್ತು ಸಾಗುವಳಿ ಭೂಮಿಗಳ ಸುತ್ತ ಜನರಿಗೆ ಇಲ್ಲಿಯ ಜಂಗಲ ಹಕ್ಕುಗಳ (privileges) ನಿಯಮಗಳಲ್ಲಿ ಹೇಳಿರುವಷ್ಟೇ ಜಂಗಲ ಕಡಕೊಳ್ಳತಕ್ಕದ್ದು. ಮೇಲಿನಂತೆ ಕಡಕೊಳ್ಳುವ ಜಂಗಲ ಪಟ್ಟಿ ಎಷ್ಟಿರಬೇಕೆಂದು ನಿರ್ಣಯಿಸುವ ಬಗ್ಗಾಗಿ ಸಾಗ ಭೂಮಿಯ ಸಂಲಗ್ನ ಭಾಗಗಳನ್ನು ತೆಗೆದುಕೊಳ್ಳಬೇಕು ಪ್ರತಿಯೊಂದು ಸಂದರ್ಭದಲ್ಲಿ ಈ ಸಂಲಗ್ನ ಭಾಗದ (block) ಪರಿಮಿತಿ ಎಷ್ಟಿರಬೇಕೆಂಬುದನ್ನು ಜಿಲ್ಲಾಧಿಪರು ನಿರ್ಧರಿಸಲ್ಪಡುತ್ತಲೆ ಸಾಗ ಕ್ಷೇತ್ರವು ಕಷ್ಟು ದೊಡ್ಡದಿರುತ್ತದೋ ಹೇಗೆಂಬುದನ್ನು ನಿರ್ಧರಿಸುವಾಗ ಸರಕಾರ ದ.ತೀರ್ನ ಕೆರುವ ಬಂಜರ ಭೂಮಿಯನ್ನೂ ಲೆಕ್ಕದಲ್ಲಿ ಹಿಡಿಯಬೇಕು. ಕಷ್ಟು ದೊಡ್ಡ ಪ್ರದೇಶದ ವ್ಯಾಪ್ತಿಯನ್ನು ಈ ಠರಾವಿನಲ್ಲಿ ಕೊಡಲಾಗಿದೆ. ೫೦ ಎಕರೆ ಬಾಗಾಯತ ಭೂಮಿ ಇಲ್ಲವೆ ೧೦೦ ಎಕರೆ ತರಿ ಭೂಮಿ (ಕನಿಷ್ಠ ತೋಟಗಳಿದ್ದರೂ ಇದ್ದಲ್ಲಿ ಪ್ರತಿ ಒಂದು ಎಕರೆ ತೋಟವು ೫ ಎಕರೆ ತರಿಗೆ ಸರಿಯಾಗುತ್ತದೆಂದು ಹಿಡಿದು ಲೆಕ್ಕ ಮಾಡಬೇಕು) ಕಷ್ಟು ದೊಡ್ಡ ಸಾಗುವಳಿ ಕ್ಷೇತ್ರವಿರುತ್ತದೆಂದೂ, ಇಷ್ಟು ಸಾಗ-ಭೂಮಿಯುಳ್ಳ ಪ್ರತಿಯೊಂದು ಗ್ರಾಮವು — ಅದರಲ್ಲಿ ಜನರು ಎಷ್ಟೇ ಇರಲಿ ಅಥವಾ ಮನೆಗಳು ಎಷ್ಟೇ ಇರಲಿ — ಕಷ್ಟು ದೊಡ್ಡ ವಸತಿ-ಪ್ರದೇಶವಿರುತ್ತದೆಂದು ಎಣಿಸಬೇಕೆಂದೂ, ೫ ಫರ್ಲಾಂಗ ಅಂತರದೊಳಗೆ ೧೦ ಮನೆಗಳಿದ್ದಲ್ಲಿ ಅವು ವಸತಿಯ ಭಾಗವೆಂದೆಣಿಸಲ್ಪಡಬೇಕೆಂದೂ ಠರಾವಿನಲ್ಲಿ ಹೇಳಿರುತ್ತದೆ.

(೨) ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳಲ್ಲಿ ಸಾಗವಾನಿ ಎಲೆಗಳು ಬೆಳೆಯುವ ಪ್ರದೇಶದಲ್ಲಿ, ವಾಸ್ತವ್ಯ-ಪ್ರದೇಶದ ಹಾಗೂ ಸಾಗ ಪ್ರದೇಶದ ಸುತ್ತ ೧ ಫರ್ಲಾಂಗ ಅಂತರದಲ್ಲಿರುವ ಎಲ್ಲ ಗಿಡ-ಮರಗಳನ್ನು — ಸಾಗವಾನಿ ಗಿಡಗಳನ್ನು ಸಹಿತ — ಕಡಿದು ಜಂಗಲ ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಬಹುದು. (ಸರಕಾರಿ ಠರಾವಿನಲ್ಲಿ ಸಾಗವಾನಿ, ಗಂಧ, ಅಬನೂಸ ಮತ್ತಿರೆ ಕೆಲ ಜಾತಿಯ ಉಂಚ ಗಿಡ-ಮರಗಳ ಸಂಬಂಧದಲ್ಲಿ ವಿನಾಯಿತಿ ಉಂಟು ಆದರೆ ಮುದ್ರಣ-ದೋಷದಿಂದ ಈ ವಿಷಯ ಅಸ್ಪಷ್ಟವಾಗಿ ಮುದ್ರಿತವಾಗಿದೆ. ಅದರ ಅರ್ಥ ಸರಿಯಾಗಿ ತಿಳಿಯದು)

(೩) ಸಾಗವಾನಿ ಗಿಡಗಳಿಂದ ತುಂಬಿದ ಗಂಧ ಮತ್ತು ನೀಲಗಿರಿ ಬೆಟ್ಟಗಳ ಭಾಗಗಳಲ್ಲಿ ೧ ಫರ್ಲಾಂಗ ಅಗಲ ಜಂಗಲ-ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಬಹುದು. ಈ ಪಟ್ಟಿಯಲ್ಲಿರುವ ಎಲ್ಲ ಗಿಡ-ಮರಗಳನ್ನು ಕಡಿದು ತೆಗೆಯಬಹುದು ಆದರೆ ಸ್ವಚ್ಛತೆಯ ಪರಿಣಾಮವಾಗಿ ನೆಲ ಕೊರೆದು ಹೋಗದಂತೆ ಎಚ್ಚರಿಕೆ ಕೊಳ್ಳಬೇಕು.

(೪) ಸಮುದ್ರ ದಂಡೆಯ ಭಾಗಗಳಲ್ಲಿ ಕಡಕೊಳ್ಳಬಹುದಾದ ಜಂಗಲ ಪಟ್ಟಿ ಕೆಳಗಿಂದ ೨೦೦ ಯಾರ್ಡುಗಳ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯದಲ್ಲಿ ಸಾಂಘೀಕರಿಸಿದ್ದು)

ಹೆಡ್ ಆಫೀಸು: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಕೆತ್ತ ಮೂಲಧನ ರೂ. ೬,೭೧,೦೦೦/— ಕ್ಕೂ ಮಿಕ್ಕಿದೆ.

ಶೇಖರಿಸಿಡಲ್ಪಟ್ಟ ನಿಧಿ ರೂ. ೧,೦೦,೦೫೦/— ಕ್ಕೂ ಮಿಕ್ಕುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ಸಲೆ ಬಡ್ಡಿಯಂತೆ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗೆ ಹೆಡ್ ಆಫೀಸಿಗೆ ಯಾ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩ ೧೯೪೮.

ಕೆ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡಾಯರೆಕ್ಟರ

ಷ್ಟು ಇರುವದು. ಆದರೆ ಪ್ರತಿಯೊಂದು ಕಡೆಯಲ್ಲೂ ೨೦೦ ಯಾರ್ಡುಗಳಷ್ಟು ಜಂಗಲ-ಪಟ್ಟಿ (ಸ್ಟ್ರಿಪ್) ಕಡಿಕೊಳ್ಳಲು ಬರುವಂತಿಲ್ಲ.

(ಕ) ಕಾನಗಳೂ "ಸದಾ ಹಸರು" ಬೆಟ್ಟಗಳೂ ಇರುವ ಭಾಗಗಳಲ್ಲಿ, (ಅ) ಜನವಸತಿಯ ಪ್ರದೇಶಕ್ಕೆ ಹೊಂದಿಕೊಂಡಿರುವ ಕಾನಗಳಲ್ಲಿರುವ ಗಿಡ-ಗಂಟಿಗಳನ್ನು (under growth) ೨ ಫರ್ಲಾಂಗುಗಳ ವರೆಗೆ ಸ್ವಚ್ಛಗೊಳಿಸಿಕೊಂಡು, ಅಲ್ಲಿ ಕಿರ್ ಇಲ್ಲವೆ ಆಹಾರ ತರದ ಕಾಳು ಮೊದಲು ಬೆಳಸಬಹುದು. ಹೀಗೆ ಕಾಳು ಮೊದಲು ಬೆಳಸಬಹುದಾದ ಕ್ಷೇತ್ರ ಜನವಸತಿಯ ಕ್ಷೇತ್ರದ ಅರ್ಧಕ್ಕೂ ಮಿಕ್ಕಿರಬಾರದೆಂಬದೊಂದು ನಿರ್ಬಂಧವುಂಟು. ಇಂಥ ಜಂಗಲ ಪಟ್ಟಿಯಲ್ಲಿ ಜನರು ನೀಲಗಿರಿ ಎಣ್ಣೆಯ (ಯುಕೆಲಿಪ್ಟಸ್) ಗಿಡಗಳನ್ನೂ ಬೆಳಸಬಹುದು. ಈ ಬಗ್ಗೆ ಅವಶ್ಯವುಳ್ಳ ಸಸಿಗಳನ್ನು ಜಂಗಲ ಇಲಾಖೆಯವರು ಪೂರೈಸಬೇಕೆಂದು ಠರಾವಿನಲ್ಲಿ ಹೇಳಿದೆ. (ಬ) ತೋಟಿಗರಿಗಾಗಿ ಬಿಟ್ಟುಕೊಟ್ಟ ಬೆಟ್ಟ ಕಡಿಮೆ ಇರುವ ಪ್ರದೇಶದಲ್ಲಿ ತೋಟಿಗರಿಗೆ ಹೊಂದಿ ಕಾನಗಳನ್ನು ಕೊಡಬೇಕೆಂದೂ ಸರಕಾರವು ನಿರ್ಧರಿಸಿದೆ (ಕ) ಕಾನಗಳಲ್ಲಿದ್ದರೆ ಜನವಸತಿಯ ಪ್ರದೇಶದ ಸುತ್ತು ೨ ಫರ್ಲಾಂಗ ಮತ್ತು ಸಾಗ-ಭೂಮಿಯ ಸುತ್ತು ೧ ಫರ್ಲಾಂಗ ಜಂಗಲ ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಬಹುದು. ಜಂಗಲ ಪಟ್ಟಿಯು ಜನ-ವಸತಿಯ ಭಾಗದ ಸುತ್ತು ಇದ್ದದ್ದಿರಲಿ ಯಾ ಸಾಗುವಳಿ ಭೂಮಿಯ ಸುತ್ತು ಇದ್ದದ್ದಿರಲಿ, ಅದರ ಅರ್ಧ ಭಾಗವನ್ನಷ್ಟೇ ಪೂರ್ಣ ಸ್ವಚ್ಛಗೊಳಿಸಿಕೊಳ್ಳಬೇಕು; ಇನ್ನುಳಿದ ಅರ್ಧ ಭಾಗದಲ್ಲಿರುವ ಗಿಡ-ಗಂಟಿಗಳನ್ನಷ್ಟೇ ಕಡಿದು, ಉಳಿದ ಮರಗಳನ್ನು — ಪ್ರತಿ ಎಕರೆಗೆ ಕನಿಷ್ಠ ೩೦ರಷ್ಟು ಉಪಯುಕ್ತ ಜಾತಿಯ ಮರಗಳನ್ನು — ಹಾಗೆಯೇ ಉಳಿಯಗೊಡಬೇಕು. ಜನರ ಆರೋಗ್ಯದ ದೃಷ್ಟಿಯಿಂದ ಇಲ್ಲವೆ ಸಾಗುವಳಿಯ ಅನುಕೂಲತೆಯ ದೃಷ್ಟಿಯಿಂದ ಈ ಗಿಡ-ಮರಗಳನ್ನೂ ಕೂಡ ಕಡಿದು ತೆಗೆಯುವದು ಅವಶ್ಯವಿರುತ್ತದೆಂದು ಜಿಲ್ಲಾಧಿಪರಿಗೆ ಅನಿಸಿದರೆ ಅವರು ಅವನ್ನು ಕಡಿಯಲು ಅಪ್ಪಣೆ ಕೊಡಬಹುದು.

೩. ಜಂಗಲ-ಪಟ್ಟಿಗಳ ಗಡಿ-ನಿರ್ದೇಶ.

ಜಂಗಲ ಪಟ್ಟಿಗಳನ್ನು ಸ್ವಚ್ಛಗೊಳಿಸಿಕೊಳ್ಳುವ ಬಗೆ ಅಪ್ಪಣೆ ಬೇಡಿ ಬಂದ ಅರ್ಜಿಗಳನ್ನು ವಿಳಂಬ ಮಾಡದೆ ನಿಕಾಲಿಯಲ್ಲಿ ತರುವ ವ್ಯವಸ್ಥೆಯನ್ನು ಜಿಲ್ಲಾಧಿಪರು ಮಾಡಬೇಕೆಂತಲೂ, ಏನೇನು ವ್ಯವಸ್ಥೆ ಮಾಡಲಾಗಿದೆಯೆಂಬುದನ್ನು ಆಗಾಗ ಸರಕಾರಕ್ಕೆ ತಿಳಿಸುತ್ತಿರಬೇಕೆಂದೂ ಸರಕಾರದವರ ಅಪ್ಪಣೆಯುಂಟು.

೪. ಜಂಗಲ ಪಟ್ಟಿಗಳನ್ನು ಯಾರು ಸ್ವಚ್ಛಗೊಳಿಸಬೇಕು ?

ಜಂಗಲ-ಪಟ್ಟಿಗಳನ್ನು ಸ್ವಚ್ಛಗೊಳಿಸುವ ಕೆಲಸವನ್ನು ಯಾರು ಮಾಡಬೇಕೆಂಬುದನ್ನು ತಾ ೨೦-೩-೪೭ ರ ಹಾಗೂ ತಾ. ೧೭-೪-೪೭ ರ ೮೭೯೧/೩೩ನೇ ಸರಕಾರಿ ಠರಾವುಗಳಲ್ಲಿ ವಿವರಿಸಿದ್ದುಂಟು. ಜಂಗಲ ಪಟ್ಟಿಗಳನ್ನು ಪಡಕೊಂಡವರು ಪಟ್ಟಿಯ ವಿಭಾಗಗಳನ್ನು (sub-coupes) ಮಾಡಿ ಆ ವಿಭಾಗಗಳನ್ನು ಒಂದರ ಹಿಂದೆ ಒಂದರಂತೆ ಕ್ರಮವಾಗಿ ಸ್ವಚ್ಛಗೊಳಿಸಬೇಕೆಂದಷ್ಟೇ ಪ್ರಸ್ತುತ ಠರಾವಿನಲ್ಲಿ ಹೇಳಿದೆ

೫. ಜಂಗಲ ಪಟ್ಟಿಗಳಲ್ಲಿ ಬೆಂಕಿ ಹಾಕಬಹುದೋ ?

(ಅ) ಎಲ್ಲ ಬೆಟ್ಟಗಳ ಪ್ರದೇಶದಲ್ಲಿ ೩ ವರ್ಷಗಳಿಗೊಮ್ಮೆ ೧ ಮೈಲು ಅಗಲವಾದ ಜಂಗಲ ಪಟ್ಟಿಯನ್ನು ಸುಟ್ಟು ಅಲ್ಲಿ ಕುಂಬ್ರಿ ಬೆಳಸಬಹುದಾಗಿ ಠರಾವಿನಲ್ಲಿ ಹೇಳಿದೆ. ಜಂಗಲ ಸುಡುವ ವ್ಯವಸ್ಥೆಯನ್ನು ಜಂಗಲ ಅಧಿಕಾರಿಗಳು ಗ್ರಾಮಸ್ಥ ಜನರ ಆಲೋಚನೆ ಪಡಕೊಂಡು ಮಾಡತಕ್ಕದ್ದಿರುತ್ತದೆ. ಈ ಕುಂಬ್ರಿ ಬೆಳೆಯ ಮೇಲ್ವಿಚಾರಣೆಗಾಗಿ ಅಲ್ಲಲ್ಲಿ ಗ್ರಾಮ-ಮಂಡಳ, ಜಂಗಲ ಪಂಚಾಯತ ಇಲ್ಲವೆ ಸುಧಾರಿತ ಸಾಗುವಳಿ ಸಂಘಗಳನ್ನು ಸಂಘಟಿಸಲಾಗುವದು. ಇವು ಕಾರ್ಯನಿರ್ವಹಣೆಯ ಖರ್ಚಿಗಾಗಿ ವಂತಿಗೆಗಳನ್ನು ವಸೂಲ ಮಾಡಲಿಕ್ಕೂ ತಪ್ಪುಗಾರರಿಗೆ ದಂಡ ವಿಧಿಸಲಿಕ್ಕೂ ಈ ಸಂಸ್ಥೆಗಳಿಗೆ ಅಧಿಕಾರ ಕೊಡಲ್ಪಡುವದು.

(ಬ) ಇನ್ನು ಕಿರಿ (minor) ಬೆಟ್ಟಗಳೊಳಗಿನ ಬಯಲು ಪ್ರದೇಶ (bare) ವನ್ನು ಗ್ರಾಮದ ಜನರು ಏಪ್ರೀಲ್ ಇಲ್ಲವೆ ಮೇ ತಿಂಗಳಲ್ಲಿ ಸುಟ್ಟು ಅಲ್ಲಿ ಒಳ್ಳೇ ಹುಲ್ಲು ಬೆಳೆಯುವಂತೆ ಮಾಡಬಹುದು.

(ಕ) ಇಜಾರು ಅಲ್ಲದ ಜಂಗಲ ಬೆಟ್ಟಗಳಲ್ಲಿ, ಜಂಗಲ ಪಟ್ಟಿ ಸ್ವಚ್ಛಗೊಳಿಸಿ ಆದ ನಂತರದ ಮೊದಲಿನ ೩ ವರ್ಷಗಳಲ್ಲಿಷ್ಟೇ ಕುಂಬ್ರಿ ಬೆಳೆ ಬೆಳಸಬಹುದು; ಮುಂದೆ, ಗ್ರಾಮದ ಜನರಿಗೆ ಅವಶ್ಯವೆನಿಸಿದರೆ ಮಾತ್ರ ೫ ವರ್ಷ ಬಿಟ್ಟು ೫ ವರ್ಷ ಕುಂಬ್ರಿ ಮಾಡಬಹುದು. ಅನಂತರ ಜಂಗಲ-ಪಟ್ಟಿಗಳಲ್ಲಿ ಗ್ರಾಮಸ್ಥ ಜನರು ರಾಗಿ ಇಲ್ಲವೆ ತಮಗೆ ಇಷ್ಟ ಬಂದ ಬೇರೆ ವಾರ್ಷಿಕ ಬೆಳೆಯನ್ನು ಬೆಳಸಬಹುದು. ಅಥವಾ ಹುಲ್ಲುಗಾವಲನ್ನಾಗಿ ಮಾರ್ಪಡಿಸಬಹುದು.

೬. ಹೊಸ ಸಾಗವಾನಿ ಬೆಟ್ಟಗಳು

ಇನ್ನು ಮುಂದೆ ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳೊಳಗಿನ ಸಾಗವಾನಿ ಎಲೆಗಳ ಪ್ರದೇಶವನ್ನು ಬಿಟ್ಟು ಉಳಿದ ಅಡವಿ ಪ್ರದೇಶಗಳಲ್ಲಿ, ಜನವಸತಿಯ ಗಡಿಯಿಂದ ೧ ಮೈಲು ಅಂತರದೊಳಗೆ ಮತ್ತು ಸಾಗವಳಿ ಭೂಮಿಯಿಂದ ಅರ್ಧ ಮೈಲು ಅಂತರದಲ್ಲಿ ಸಾಗವಾನಿ ಗಿಡಗಳನ್ನು ಜಂಗಲ ಇಲಾಖೆಯವರು ನೆಡಕೂಡದೆಂದೂ, ಹಳಿಯಾಳ-ಮುಂಡಗೋಡ ತಾಲೂಕುಗಳ ಸಾಗವಾನಿ ಎಲೆಗಳ ಪ್ರದೇಶಗಳಲ್ಲಿ ಹಳ್ಳಿಗಳ ಗಡಿಯಿಂದ ಅರ್ಧ ಮೈಲು ಅಂತರದೊಳಗೆ ಮತ್ತು ಸಾಗುವಳಿ ಭೂಮಿಯಿಂದ ಕಾಲು ಮೈಲು ಅಂತರದೊಳಗೆ ಹೊಸ ಸಾಗವಾನಿ ಬೆಟ್ಟ ರಚಿಸಕೂಡದೆಂದೂ ಸರಕಾರದವರು ನಿರ್ಧರಿಸಿದ್ದಾರೆ. ದಟ್ಟಡವಿಯ (high forests) ಪ್ರದೇಶದಲ್ಲಿ ಜಂಗಲ-ಪಟ್ಟಿಗಳನ್ನು ಬಿಟ್ಟುಕೊಡಲಾಗದೆಂಬ ಅಪವಾದ ಇಲ್ಲೂ ಅನ್ವಯಿಸುತ್ತದೆ.

೭. ಬೆಟ್ಟಗಳೂ ಹಾಡಿಗಳೂ.

ಪ್ರತಿಯೊಂದು ಎಕರೆ ತೋಟಕ್ಕೆ ೯ ಎಕರೆಗಳ ಪರ್ಯಂತ ಬೆಟ್ಟ ನೇಮಿಸಿಕೊಡುವದಿರುತ್ತದೆ. ಇಷ್ಟು ಬೆಟ್ಟ ನೇಮಿಸಿಕೊಡಲು ಸಾಧ್ಯವಿಲ್ಲದಿದ್ದಲ್ಲಿ, ಬೆಟ್ಟದ ಕೊರತೆಯನ್ನು ಕಾನ ಇಲ್ಲವೆ ಬೇರೆ ಜಂಗಲ ಕ್ಷೇತ್ರ ನೇಮಿಸಿಕೊಟ್ಟು ನೀಗಿಸಬೇಕು. ಬೆಟ್ಟ ನೇಮಿಸಿಕೊಡುವಾಗ ಪ್ರತಿಯೊಂದು ಪ್ರಕರಣವನ್ನು ಸ್ವತಂತ್ರವಾಗಿ ಮತ್ತು ಅದರ ಗುಣದೋಷಗಳಿಗನುಸಾರವಾಗಿ ನಿರ್ಣಯಿಸಲಾಗುವದು. ಘಟ್ಟದ ಕೆಳಗಿನ ತಾಲೂಕುಗಳಲ್ಲಿ ತೋಟದ ಪ್ರತಿಯೊಂದು ಎಕರೆಗೆ ೪ ಎಕರೆ ಬೆಟ್ಟ ಕೊಡಲಾಗುವದು; ಮತ್ತು ಪ್ರತಿಯೊಂದು ತರಿಗೆ ೨ ಎಕರೆ ಬೆಟ್ಟ, ಶಕ್ಯವಿದ್ದಲ್ಲಿ ಮಾತ್ರ, ಬಿಟ್ಟುಕೊಡಲಾಗುವದು

ಬೆಟ್ಟಗಳೊಳಗಿನ ಜೇನು-ಹುಟ್ಟುಗಳ ಮಾಲ್ಕಿಯು ಬೆಟ್ಟಗಳ ಕಬಜದಾರರದೇ ಇರುತ್ತದೆ ಈ ಬೆಟ್ಟಗಳಲ್ಲಿ ಕಬಜದಾರರು ಹಣ್ಣು-ಹಂಪಲುಗಳನ್ನು ಬೆಳಸಬಹುದು. ಬೆಟ್ಟಕ್ಕೊಪ್ಪಿದ ಸವಲತ್ತುಗಳು ಹಾಡಿಗಳಿಗೂ ಅನ್ವಯಿಸುತ್ತವೆ. ತೋಟಿಗಾರರಿಗೆ ನೇಮಿಸಿಕೊಟ್ಟ ಬೆಟ್ಟಗಳು ತೋಟಿಗರಿಂದ ಬಹಳ ದೂರವಿರುತ್ತಿದ್ದಲ್ಲಿ ಆ ಬೆಟ್ಟಗಳ ಬದಲು ಆ ತೋಟಗಾರರಿಗೆ ತೋಟಕ್ಕೆ ಸಮೀಪವಿರುವ ಕಾನಗಳನ್ನಾಗಲಿ ಇತರ ಜಂಗಲ ಪ್ರದೇಶವನ್ನಾಗಲಿ ನೇಮಿಸಿಕೊಡಲಾಗುವದು. ಜನರಲ್ಲಿ ಅಸಂತೋಷವುಂಟಾಗದಂತೆ ಹಿಂದೆ ಮಾಡಿದ ಬೆಟ್ಟಗಳ ಹಂಚುವಿಕೆಯನ್ನು ಪರಿಶೀಲಿಸುವ ವಿಚಾರವುಂಟು. ಶಕ್ಯವಿರುವ ಮಟ್ಟಿಗೆ ಎಲ್ಲ ತೋಟಿಗರಿಗೆ ಹತ್ತಿರದ ಬೆಟ್ಟಗಳನ್ನು ತೋಟಗಳ ಉಪಯೋಗಕ್ಕಾಗಿ ಅವಶ್ಯವುಳ್ಳ ಮಟ್ಟಿಗೆ ಪೂರೈಸಲಾಗುವದು. ಬೆಟ್ಟಗಳು ಜನವಸತಿಯ ಭಾಗಗಳಿಗೆ ಇಲ್ಲವೆ ಸಾಗ ಭೂಮಿಗೆ ಹೊಂದಿಕೊಂಡಿರುವಲ್ಲಿ ಮತ್ತು ಜನರು ಆ ಬೆಟ್ಟಗಳಲ್ಲಿ ಜಂಗಲ ಪಟ್ಟಿಗಳನ್ನು ಪಡೆಯಲು ಅಪೇಕ್ಷಿಸಿದಲ್ಲಿ, ಅವರಿಗೆ ಜಂಗಲ ಪಟ್ಟಿಗಳನ್ನು ಬಿಟ್ಟುಕೊಟ್ಟು ಬೆಟ್ಟಗಳ ಬದಲು ತೋಟಿಗಾರರಿಗೆ ಬೇರೆ ಜಂಗಲ ಪ್ರದೇಶ ನೇಮಿಸಿಕೊಡಲ್ಪಡುವದು. ಆರೋಗ್ಯದ ದೃಷ್ಟಿಯಿಂದ ಇಷ್ಟ ಇಲ್ಲವೆ ಸಾಗುವಳಿಯ ದೃಷ್ಟಿಯಿಂದ ಅನುಕೂಲವಿರುತ್ತಿದ್ದರೆ ಬೆಟ್ಟದಲ್ಲಿ ಗುಡಿಸಲುಗಳನ್ನು ಇಲ್ಲವೆ ಪಕ್ಕಾ ಮನೆಗಳನ್ನು ಕಟ್ಟಿಕೊಳ್ಳಲು ಪರವಾನಗೆ ಕೊಡಲಾಗುವದು. ಹಾಗೂ ಬೆಟ್ಟದಲ್ಲಿರುವ ಯಾವತ್ತು ಜಾತಿಯ ಮರಗಳು ತೋಟಿಗರ ಸ್ವಂತದ ಉಪಯೋಗಕ್ಕಾಗಿ ಮುಕ್ತವಾಗಿ (ಮಸೂಲ ರಾಜಾರ್ಥ ಇಲ್ಲವೆ ರಾಯಲ್ಟಿ ವಸೂಲ ಮಾಡದೆ) ಕೊಡಲ್ಪಡುವವು.

೮. ಕಾಡು ಮೃಗಗಳ ಹಾವಳಿ.

ಬೆಳೆಯ ಇಲ್ಲವೆ ದನಗಳ ಸಂರಕ್ಷಣೆಯ ಬಗ್ಗಾಗಿ ಕೋವಿಯ ಪರವಾನೆ ಪಡಕೊಂಡಿರುವ ಯಾವನೇ ಕಾನಡಾ

ಜಾಹೀರ ನೋಟೀಸು.

ಟೆನನ್ಸಿ ಕಾಯಿದೆಯಂತೆ ಕೃಷಿಕರಿಗೆ ೧ ವರ್ಷದ ಅವಧಿಯ ನೋಟೀಸ ಕೊಟ್ಟು ಸ್ವಂತ ಸಾಗುವಳಿಗೆ ಭೂಮಿ ಬೇಡಿದ ಒಡೆಯರಿಗೆ ಕಬಜಾ ಕೊಡಿಸಬೇಕೆಂತ ಕಾಯಿದೆಯಿದ್ದು ಅದರಂತೆ ಕಬಜಾ ಕೊಡಿಸದಿದ್ದಲ್ಲಿ ಒಡೆಯರಿಗಾದ ಲುಕ್ಸಾನಿಗೆ ಕೃಷಿಕರು ಮತ್ತು ಸರಕಾರವು ಜವಾಬದಾರರಾಗಬೇಕಾಗುವದು ಎಂತ ಈ ಮೂಲಕ ಎಚ್ಚರಿಕೆ ಕೊಡಬಯಸುತ್ತೇನೆ.

ಕುಮಟಾ, ತಾ. ೨—೫—೧೯೪೮.

ಮಹಾಬಲೇಶ್ವರ ರಾಮ ಭಟ್ಟ, ಚಿತ್ರಗಿ.

ಮಾರುವದಿದೆ!

ಸಿದ್ದಾಪುರ ತಾಲೂಕ ಕೋಲಶಿರ್ಸಿ ಫಿರ್ಕಾ ಮುತ್ತಿಗೆ ಗ್ರಾಮದ ಐನಕ್ಕೆ ಮಾಲಕಿಯ ಈ ಕೆಳಗೆ ಕಾಣಿಸಿದ ನನ್ನ ಸ್ವಂತ ಖಾತೆ ಆಸ್ತಿ ಕ್ರಯಕ್ಕೆ ಕೊಡತಕ್ಕದ್ದಿದೆ.

ಸ. ನಂ.	ಕ್ಷೇತ್ರ.	ಆಕಾರ.
೯೩	೬-೩೬-೦	೧೪-೦-೦

ಬೇಕಾದವರು ಈ ಕೆಳಗಿನ ಪತ್ತೆಗೆ ಪತ್ರ-ವ್ಯವಹಾರ ಮಾಡಬೇಕು. ಇಲ್ಲವೆ ಸಮಕ್ಷಮ ಭೆಟ್ಟಿಯಾಗತಕ್ಕದ್ದು.

ರಾಮಚಂದ್ರ ಗಣಪತಿ ಹೆಗಡೆ ಕರ್ಕಿಸವಲ,

ತಾ ೨೬-೪-೪೮ ಪೋ. ಸಿದ್ದಾಪುರ.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೩೯— ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡುಪಿ ಆಫೀಸು:—

Post Box No 10,

UDIPI, S Kanara

ಜಿಲ್ಹಾ-ನವಾಗಿಯೂ ತನ್ನ ಗ್ರಾಮದಿಂದ ಇಲ್ಲವೆ ತನ್ನ ಭೂಮಿಯಿರುವ ಗ್ರಾಮದಿಂದ ೩ ಮೈಲ ತ್ರಿಜ್ಯದಲ್ಲಿರುವ ಎಲ್ಲ ಬೆಟ್ಟಗಳಲ್ಲಿ ಬೇಟೆಯಾಡಬಹುದು. ಸಂರಕ್ಷಿತ ಬೆಟ್ಟಗಳಲ್ಲಿ ಬೇಟೆಯಾಡಲಿಕ್ಕೆ ಫ್ರೀ ಪರವಾನೆ (free license) ಕೊಡಲ್ಪಡುತ್ತಿದ್ದು ಅವನಿಗೆ ಹಕ್ಕುಂಟು. ಅಂಥ ಹುಲಿ ಮುಂತಾದವುಗಳಿಗೆ ಕನ್ಸರ್ವೇಟರು ಕೊಡುವ ಪರವಾನೆ ಕೊಡುವಂತೆ ವಿಧಿಸಲಾಗಿದೆ. ಜನಗಳ ಸಂಚಾರ ಇಲ್ಲದೆ ಬೆಳೆಯ ನಾಶವನ್ನು ಮಾಡುವ ಕಾಡು-ಪಶುಗಳ (ಬೆಂಗ ಹನ್ನು ಅಥವಾ ಜಾತಿಯನ್ನು ನೋಡಿ) ಬೇಟೆಯಾಡುವ ಅವರ ಮೇಲಿದ್ದ ಎಲ್ಲ ನಿರ್ಬಂಧಗಳು ರದ್ದುಗೊಳಿಸಲ್ಪಟ್ಟಿವೆ. ಬೇಟೆಯಾಡಲಿಕ್ಕೆ ಪ್ರತಿಬಂಧವಿದ್ದ ಸಂಗಾತಿ ಬೆಟ್ಟು ಬಿಟ್ಟ ಯಾವತ್ತೇ ದಿನಗಳಲ್ಲಿ ಪರವಾನೆಯಿಲ್ಲದೆಯೂ ಬೇಟೆಯಾಡಬಹುದು. ಗ್ರಾಮದಿಂದ ೩ ಮೈಲು ಅಂತರದೊಳಗಿದ್ದ ಎಲ್ಲ ಜಂಗಲ ಅರಣ್ಯಗಳಲ್ಲಿ ಗ್ರಾಮಸ್ಥರು ಬಲೆ ಹಾಕಿ ಕಾಡು-ಪಶುಗಳನ್ನು ಹಿಡಿಯಬಹುದು. ಪರವಾನೆ ಕೊಡುವ ಅರಣ್ಯ ಯೋಗ್ಯ ಕಾರಣಗಳಿಲ್ಲದಿದ್ದರೆ ಜಿಲ್ಹಾಧಿಪರು ಕೋವಿ-ಪರವಾನೆ ಬೇಡುವ ಎಲ್ಲ ಜನರಿಗೂ ಪರವಾನೆ ಕೊಡಬೇಕಾಗಿ ಸೂಚಿಸಲಾಗಿದೆ. ಯಾರೊಬ್ಬನು ಹುಲಿ ಅಥವಾ ಚಿರತೆಯನ್ನು ಕೊಂದರೆ ರೂ. ೨೫ರಂತೆ, ಹಂದಿಯನ್ನು ಕೊಂದರೆ ರೂ. ೨ ರಂತೆ ಮತ್ತು ಕೋತಿಯನ್ನು ಕೊಂದರೆ ರೂ. ೧ ರಂತೆ ಸರಕಾರವು ಇನಾಮು ಕೊಡುವದು. ಬೆಳೆಯ ರಕ್ಷಣೆಗಾಗಿ ಬೇಲಿ, ಬಾಗಾಯ ಬಗ್ಗೆ ಹಾಕಿಕೊಳ್ಳುವವರಿಗೆ ೩ ಸಲ ಬಡ್ಡಿ ದರದಿಂದ ತಗಾವಿ-ಸಾಲ ಕೊಡಲಿಕ್ಕೂ, ಅವಶ್ಯವಿದ್ದಲ್ಲಿ ಶಿಕಾರಿಗೆ ನೇಮಿಸುವ ಬಗ್ಗೆ ಸರಕಾರಕ್ಕೆ ಶಿಫಾರಸು ಮಾಡಲಿಕ್ಕೂ ಜಿಲ್ಹಾಧಿಪರಿಗೆ ತಿಳಿಸಲಾಗಿದೆ.

೯. ಹುಲ್ಲುಬನ್ನಿ

ಹುಲ್ಲುಬನ್ನಿಯ ಉಪಯೋಗಕ್ಕಾಗಿ ಬಿಟ್ಟುಕೊಟ್ಟ ಕಿರು-ಬೆಟ್ಟಗಳೊಳಗಿನ ಗಿಡಗಂಟಿಗಳನ್ನು ಕಡಿದು ಸ್ವಚ್ಛಗೊಳಿಸುವ ಹೊಣೆ ಸಂಬಂಧಪಟ್ಟ ಗ್ರಾಮವಾಸಿಗಳದಿರುತ್ತದೆ.

೧೦. ಸಂರಕ್ಷಿತ ಬೆಟ್ಟಗಳ ರೂಪಾಂತರ.

ಜಂಗಲ ಪಟ್ಟಿಗಳಿಗೆ ಹೊಂದಿಕೊಂಡಿದ್ದ ಸಂರಕ್ಷಿತ ಅಡವಿಯನ್ನು, ಇಷ್ಟು ಮತ್ತು ಅವಶ್ಯವೆನಿಸಿದಾಗ, ಕಿರು ಬೆಟ್ಟದಲ್ಲಿ ರೂಪಾಂತರಿಸಲಿಕ್ಕೆ ಕನ್ಸರ್ವೇಟರರಿಗೆ ಅಧಿಕಾರ ಕೊಡಲಾಗಿದೆ.

೧೧. ಕರಾವಳಿಯ ಕಿರಿ-ಬೆಟ್ಟಗಳ ಪುನರುಜ್ಜೀವನ

೧. ಕಿರಿ-ಬೆಟ್ಟಗಳ ಪುನರುಜ್ಜೀವನದ ಪ್ರಯೋಗಗಳನ್ನು ಮಾಡಿಕೊಳ್ಳಲಿ, (೨) ಗ್ರಾಮದ ಗೋಚರಾದಿಗೆ ಬಾಧೆಯಾಗದಂತೆ ಕಿರು-ಬೆಟ್ಟಗಳನ್ನು ವ್ಯಕ್ತಿಗಳಿಗೆ (ಪತ್ತೆ ಕಾಣದಾ ಹಕ್ಕುಯಲ್ಲಿ ಬೆಳೆಸುವಂತೆ) ಹಂಚಿಕೊಟ್ಟಿಲ್ಲವೆ (೩) ಬೆಟ್ಟ ಸುಧಾರಣಾ ಸಂಸ್ಥೆಗಳನ್ನು ಸಂಘಟಿಸಿ ಈಗ ಬಯಲು ಬಿದ್ದಿರುವ (denuded) ಕರಾವಳಿಯ ಕಿರಿ ಬೆಟ್ಟಗಳನ್ನೆಲ್ಲ ಪುನರುಜ್ಜೀವನಗೊಳಿಸುವ ಯೋಜನೆ ಮಾಡಲಿಕ್ಕೆ ಜಂಗಲ ಅಧಿಕಾರಿಗಳಿಗೆ ಆಜ್ಞೆ ಮಾಡಲಾಗಿದೆ

ಗಿಬ್ಬ ಹಾಯಸ್ಕೂಲ, ಕುಮಟಾ.

ನಮ್ಮ ಶಾಲೆಯ ವಾರ್ಷಿಕ ಸಮ್ಮೇಲನವನ್ನು ಆನಂದ ಹಂಚುವ ಸಮಾರಂಭವನ್ನು ತಾ ೨೦-೩-೧೯೪೮ನೇ ಗುರುವಾರ ಸಂಜೆ ೬ಕ್ಕೆ ಜರುಗಿಸಬೇಕೆಂದು ನಿಶ್ಚಯಿಸಿದ್ದೇನೆ. ಸ್ವರ್ಗಸ್ಥ ರಾ|| ಸಾ|| ನಾರಾಯಣ ಸುಬ್ರಾಯ ರಾನಡೆ ಮತ್ತು ಅವರ ಪತ್ನಿ ಶ್ರೀಮತಿ ರಮಾಬಾಯಿ ಇವರ ಸ್ಮರಣಾರ್ಥ ಕಟ್ಟಿಸಿರುವ ಹೊಸ ಪ್ರಯೋಗ ಶಾಲೆಯ ಉದ್ಘಾಟನೆಯ ಸಮಾರಂಭವೂ ಅದೇ ವೇಳೆಕ್ಕೆ ಜರಗುವದು. ಈ ಎರಡೂ ಸಮಾರಂಭಗಳ ಅಧ್ಯಕ್ಷತೆಯನ್ನು ವಹಿಸಲು ಶ್ರೀ|| ಶೇಷಗಿರಿರಾವ ಕೇಶವೈನ, ಅಧ್ಯಕ್ಷ, ಜಿಲ್ಹಾ ಕೊಂಗ್ರೆಸ ಕಮಿಟಿ, ಶಿರಸಿ, ಇವರು ಒಪ್ಪಿರುತ್ತಾರೆ. ಶಾಲೆಯ ಇಂದಿನ ಹಾಗೂ ಹಿಂದಿನ ಎಲ್ಲ ವಿದ್ಯಾರ್ಥಿಗಳೂ, ಪಾಲಕರು ಮತ್ತು ಬಾಲಾ ಶಿಕ್ಷಣದ ಅಭಿಮಾನಿಗಳು ದೊರಕಿಸಿದವರೂ ಈ ಸಮಾರಂಭಗಳಿಗೆ ಅವಶ್ಯ ಬರಬೇಕಾಗಿ ಬಿನ್ನವಿಸುತ್ತೇನೆ.

ಕುಮಟಾ,
ತಾ ೩-೩-೪೮ } J. V. Gavaskar,
ಹೆಡ್-ಮಾಸ್ತರ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಸೋಮವಾರ ಮಧ್ಯಾಹ್ನ ೧ ಘಂಟೆಯ ಸುಮಾರಿಗೆ ಅಂದರೆ ಅಶ್ವಿನೀ ನಕ್ಷತ್ರವು ಅಂತ್ಯವಾಗುವ ಕೆಲವು ಕಾಲ ಮುಂಚೆ ೧ ತಾಸಿನ ತನಕ ಚಕೋರ ಮಳೆಯಾಯಿತು. ಮಂಗಳವಾರದ ಅಪರಾತ್ರಿಯಲ್ಲೂ ಶುಕ್ರವಾರ ಸಂಜೆಯ ಕಡೆಗೂ ಮಳೆಯಾದದ್ದುಂಟು. ಈ ಮಳೆಗಳು ದಕ್ಷಿಣ ದಿಕ್ಕಿನಿಂದ ಬರುವ ಮಳೆಗಾಲದ ಮಳೆಗಳಲ್ಲಿಂದೂ ಈ ಮಳೆ-ಕಾಲದ ಮೂರ್ತಕ್ಕೆ ಮಳೆಗಾಲಕ್ಕೆ ಪ್ರಾರಂಭವಾಯಿತೆಂದು ತಿಳಿಯಲಾಗದೆಂದೂ ಬಲ್ಲವರು ಹೇಳುತ್ತಾರೆ. ಸೆಕೆಯ ತೀವ್ರತೆ ಏನೇನೂ ಕಡಿಮೆಯಾಗಿರುವದಿಲ್ಲ

ಸರಕಾರದವರ/೩೦೦೦ ಚೀಲ ಆಹಾರ ಧಾನ್ಯ (ಅಕ್ಕಿ, ಗೋದಿ, ಜೋಳಗಳು) ಕುಮಟೆಗೆ ಬಂದಿದೆ. ಅದನ್ನು ಹೇರಿಕೊಂಡು ಬಂದ ಹಡಗವು ಮಂಗಳವಾರ ಇಲ್ಲಿ ತಲ್ಪಿತು. ಇನ್ನೂ ಅದರೊಳಗಿನ ಎಲ್ಲ ಸರಕು ಇಳಿದಿರುವದಿಲ್ಲ ದಿನಾ ಸುಮಾರು ೧೨೦೦ ಚೀಲಗಳಂತೆ ಸರಕು ಇಳಿದು ಧಕ್ಕೆಗೆ ಬರುತ್ತಿದೆ. ಸರಕು ಇಳಿಸಿಕೊಂಡ ಪಡಾವುಗಳು ಒಮ್ಮೊಮ್ಮೆ ಒಳಗೆ ಬರಲು ಭರತದ ಹಾದಿ ಕಾಯುತ್ತ ಸಮುದ್ರದಲ್ಲೇ ಉಳಿಯಬೇಕಾಗುತ್ತಿದೆ. ಅಕ್ಕಿ ಇಳಿಸಿ ಕೊಂಡ ೧-೨ ಪಡಾವುಗಳು ಈ ರೀತಿ ಭರತದ ಹಾದಿ ಕಾಯುತ್ತ ಮೊನ್ನೆ ಸಮುದ್ರ ದಂಡೆಯ ಹತ್ತಿರ ಲಂಗರ ಹಾಕಿ ತಂಗಿಕೊಂಡಾಗ, ಅಳ್ವೆಕೋಡಿ, ಪನ್ನಪೈ ಪಗ್ಯದ ಹಳ್ಳಿಗಳ ಪುಂಡರು ಆ ಪಡಗಗಳೊಳಗಿನ ಬಹಳಷ್ಟು ಅಕ್ಕಿಯನ್ನು— ಸುಮಾರು ೧೦೦-೧೨೫ ಚೀಲ ಅಕ್ಕಿಯಾಗಿರಬೇಕೆಂದು ಕೆಲವರನ್ನುತ್ತಾರೆ. — ಸೂರೆ ಮಾಡಿಕೊಂಡು ಹೋದರು! ಇದರ ಮೊದಲು ಕೂಡ ಕೆಲವು ಅಕ್ಕಿ ಸೂರೆಯಾಗಿರಬೇಕು ಯಾಕೆಂದರೆ ಸರಕಾರದ ಅಕ್ಕಿಯ ನಮೂನೆಯ ಅಕ್ಕಿ ಚಿತ್ರಿಗಿ ಬದಿಗೆ ಶನಿವಾರದ ಲೂಟಯಾಗುವ ಮುಂಚೆಯೇ ಮಾರಾಟಕ್ಕೆ ಸಿಗುತ್ತಿತ್ತೆಂದು ಒಂದು ವಾರ್ತೆಯಿದೆ. ಲೂಟಿಯಾದ ಈ ಅಕ್ಕಿ ಈಗ ಊರ ತುಂಬ ಹರಡಿದೆ. ಪೋಲೀಸರೂ ಮೆಜಿಸ್ಟ್ರೇಟರೂ ನಿನ್ನೆಯಿಂದ ಅಲ್ಲಲ್ಲಿ ಝಡತಿ-ಶೋಧಗಳನ್ನು ಮಾಡಿ ಕಳವಿಗೆ ಹೋದ ಅಕ್ಕಿಯನ್ನು ಜಪ್ತ ಮಾಡುತ್ತಿದ್ದಾರೆ; ಲೂಟಿಯಲ್ಲಿ ಭಾಗ ವಹಿಸಿದ ಇಲ್ಲವೆ ಲೂಟಿಯಾದ ಅಕ್ಕಿಯನ್ನು ಕೊಂಡುಕೊಂಡ ಅಪರಾಧ ಮಾಡಿದ ಸಂಶಯದಿಂದ ಜನರನ್ನೂ ಬಂಧಿಸುತ್ತಿದ್ದಾರೆ. ಅಕ್ಕಿಯ ಝಡತಿಗೆ ಹೋದಾಗ ಕೆಲವೆಡೆ ಸರಾಯಿಯ ಕೊಡಗಳೂ ಬಾಟ್ಲಿಗಳೂ ಸಿಕ್ಕಿವೆಯಂತೆ! ಈ ತನಕ ಸುಮಾರು ೨೦-೨೨ ಚೀಲ ಕಳವಾದ ಅಕ್ಕಿ ಸಿಕ್ಕಿದೆಯಂತೆ. ಲೂಟಿಗಾರರ ಮತ್ತು ಲೂಟಿಯಾದ ಸರಕಿನ ಶೋಧ ಮಾಡುವಲ್ಲಿ ಸ್ಥಾನಿಕ ಪೋಲೀಸರು ಪೂರ್ಣ ಅಂತಃಕರಣದಿಂದ ದುಡಿಯುವದಿಲ್ಲೆಂಬದೊಂದು ಆರೋಪವಿದೆ. ಪೋಲೀಸರು ಒಮ್ಮೆ ಝಡತಿ ಮಾಡಿ ಬಂದ ಮನೆಗಳಲ್ಲಿ ಹಿಂದಿನಿಂದ ಮೆಜಿಸ್ಟ್ರೇಟರು ಝಡತಿ ಮಾಡಿಸಿದಾಗ ಕಳವಿನ ಅಕ್ಕಿ ಸಿಕ್ಕಿದ್ದುಂಟಂತೆ! ಕಸ್ಟಮ್ಸ ಜನರೂ ಲೂಟಿಗಾರರಿಗೆ ಅನುಕೂಲರಿದ್ದಾರೆಂಬ ಆರೋಪವುಂಟು. ದಂಡೆಯ ಮೇಲೆ ಕಾವಲಿಗಿರುವ ಕಸ್ಟಮ್ಸ ಜನರು ಲೂಟಿಯಾಗುವದನ್ನು ಯಾಕೆ ತಡೆಯಲಿಲ್ಲ ಅಥವಾ ಲೂಟಿಯಾಗುತ್ತಿದೆ ಎಂಬ ಸುದ್ದಿಯನ್ನು ಪೋಲೀಸ ಕಚೇರಿಗೂ ಮೆಜಿಸ್ಟ್ರೇಟರಿಗೂ ಕೂಡಲೆ ಕೊಟ್ಟು ಅವರನ್ನು ಯಾಕೆ ಕರೆಯಿಸಲಿಲ್ಲ? ಎಂದು ಕಸ್ಟಮ್ಸನವರ ಮೇಲೆ ಆರೋಪ ಹೊರಿಸುವವರು ಪ್ರಶ್ನೆ ಮಾಡುತ್ತಾರೆ. ಸೂರೆಯಾದ ಅಕ್ಕಿಯ ಬಗ್ಗೆ ನಡೆಯುತ್ತಿರುವ ಶೋಧಗಳು ಮುಗಿದ ಮೇಲೆ ಎಷ್ಟು ಜನರ ಮೇಲೆ ಪೋಲೀಸರು ಖಟ್ಲೆಗಳನ್ನು ಮಾಡಿ ಕೊಡಬೇಕಾಗುತ್ತದೋ ತಿಳಿಯದು

ಉಂಡಗೊಳತನಕ್ಕಾಗಿ ಖಟ್ಲೆಗೆ ಗುರಿಮಾಡಲ್ಪಟ್ಟ ಇಲೆಕ್ಟ್ರಿಕ್ ಇಂಜನಿಯರ ಪೋಸ್ಟವಾಲಾ ಇವರ ಖಟ್ಲೆಯ ತೀರ್ಪನ್ನು ಕಳೆದ ಶುಕ್ರವಾರ ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟ ರಾ॥ ನವಾಬ ಇವರು ಕುಮಟೆಯ ಮುಕ್ಕಾಮಿನಲ್ಲಿ ಕೊಟ್ಟು ಆರೋಪಿಗೆ ೬ ತಿಂಗಳ ಶಿಕ್ಷೆ ಮತ್ತು ೫೦೦ ರೂ ದಂಡ ವಿಧಿಸಿದರು

ಬಗ್ಗೋಣ-ಕಲಭಾಗ ಗ್ರಾಮಗಳಲ್ಲೊಂದು ರೈತ ಸಂಘ ಸ್ಥಾಪಿಸಲ್ಪಟ್ಟಿದೆ ಈ ಸಂಘದ ಗೊತ್ತುಗುರಿಗಳೇನು ಎಂಬುದು ಯಾರಿಗೂ ತಿಳಿಯದು. ಊರಲ್ಲಿ ಮನೆ-ಮೊದಿಕೆ ಮಾಡಿಕೊಡಲು ಸಂಘದವರ್‍ಯಾರೂ ಹೋಗಬಾರದೆಂದು ಈ ಸಂಘದ ಮುಖ್ಯನು ಒಂದು ಕಟ್ಟು ಮಾಡಿರುತ್ತಾನಂತೆ! ಅದರಿಂದ ಬ್ರಾಹ್ಮಣರು ಮನೆ-ಮೊದಿಕೆಯ ಕೆಲಸಕ್ಕಾಗಿ ಬೇರೂರುಗಳಿಂದ ಕೂಲಿಯಾಳುಗಳನ್ನು ತರಿಸಿಕೊಳ್ಳಬೇಕಾಗಿದೆ! ಇದೂ ಸಂಘದವರಿಗೆ ಒಪ್ಪಿಗೆಯಿಲ್ಲ! ಮೊನ್ನೆ ದೇವಗುಂಡಿಯ ೯-೧೦ ಜನರು ಬಗ್ಗೋಣದಲ್ಲಿ ಕೆಲವು ಮನೆಗಳನ್ನು ಹೊದಿಸಿಕೊಟ್ಟು ಸಂಜೆಯಲ್ಲಿ ತಿರುಗಿ ಮನೆಗೆ ಹೋಗುತ್ತಿದ್ದಾಗ ಈ ರೈತ-ಸಂಘದ ೫೦-೬೦ ಪುಂಡರು ಅವರ ಮೈಮೇಲೆ ಬಿದ್ದು, ಎಚ್ಚರ ತಪ್ಪುವ ವರೆಗೂ ಅವರನ್ನು ಹೊಡೆದರಂತೆ! ಈ ಪುಂಡರ ಪಾರುಪತ್ಯವನ್ನು ಕೂಡಲೆ ಮಾಡುವದು ಅವಶ್ಯವಿರುವದೆಂದೂ, ಮಾಡದಿದ್ದರೆ ರೈತ-ಸಂಘವು ಪುಂಡಾಂಗಳ ಸಂಘವಾಗಿ ಊರಲ್ಲೆಲ್ಲ ಹಾವಳಿ ಹಾಕುವದೆಂದೂ ಕೆಲವರು ಜಿಲ್ಹಾಧಿಪರಿಗೂ ಪೋಲೀಸ ಸಾಹೇಬರಿಗೂ ತಂತಿಯಿಂದ ತಿಳಿಸಿದ್ದಾರೆಂದೂ ತಿಳಿಯುತ್ತದೆ.

ಇಲ್ಲಿ ಬಂದು ಇಳಿದ ಸರಕಾರಿ ಅಕ್ಕಿಯ ಕೆಲವು ಚೀಲಗಳು ಶುಕ್ರವಾರ ಸಂಜೆಯ ಮಳೆಯಲ್ಲಿ ತೊಯ್ದಿವೆಯಂತೆ ಈ ಚೀಲಗಳನ್ನು ಅಧಿಕಾರಿಗಳು ಕೂಡಲೇ ಪ್ರತ್ಯೇಕಿಸಿಟ್ಟು ಅವುಗಳನ್ನು ಬಿಸಿಲೊಳಗೆ ಚನ್ನಾಗಿ ಒಣಗಿಸಿಕೊಳ್ಳಬೇಕಾಗಿ ಸೂಚನೆಯಿದೆ. ಒಣಗಿಸಿದ ಮೇಲೆ ಸಹ ತೊಯ್ದ ಈ ಅಕ್ಕಿಯನ್ನು ಬೇರೆಯೇ ಇಟ್ಟು ಅದರ ವಿಲೆ ಮೊದಲು ಮಾಡುವದು ಉಚಿತವಿರುತ್ತದೆ.

ಕುಮಟಾ-ತಾಲೂಕ ಕಚೇರಿಯವರ ಪಿರಖು-ಪಟ್ಟಿಯ ಮೇಲಿಂದ ಜನವರಿ-ಫೇಬ್ರುವರಿ-ಮಾರ್ಚ ತಿಂಗಳುಗಳ ಸರಾಸರಿ ದರ ಭತ್ತದ ಪಾಯಲಿ ೧ಕ್ಕೆ ೧೨ ಆಣೆ ಮತ್ತು ಅಕ್ಕಿಯ ಪಾಯಲಿ ೧ಕ್ಕೆ ರೂ ೧-೮-೯ ಹೊರಡುತ್ತದೆಂತಲೂ ಅದೇ ದರದಿಂದ ಕಚೇರಿಯವರು ಗೇಣಿ ವಸ್ಲಿ ಕೊಡಿಸುವರೆಂದೂ ತಿಳಿಯುತ್ತದೆ.

ಮಾಮಲೇದಾರ ರಾ॥ ಕಿತ್ತೂರರಿಗೆ ಒಮ್ಮೆಲೇ ವರ್ಗವಾದದ್ದು ನೋಡಿ ತಾಲೂಕಿನ ಬಹುಜನ-ಸಮಾಜವು ಅಸಮಾಧಾನಗೊಂಡಿದೆ ಒಡೆಯ-ಒಕ್ಕಲಿಗರೊಳಗಿನ ವಿವಾದವೈಷಮ್ಯಗಳನ್ನು ಸಾಮರಸ್ಯಭಾವದಿಂದ ಬಗೆಹರಿಸಲಿಕ್ಕೆ ರಾ॥ ಕಿತ್ತೂರರು ನಿಪುಣರಿದ್ದರೆಂದು ಆಹಾರಪರಿಸ್ಥಿತಿ ಚಿಂತಾಜನಕವಿರುವ ಈ ಸಮಯದಲ್ಲಿ ಸಂಪೂರ್ಣ ಪರಿಸ್ಥಿತಿಯ ಅಭ್ಯಾಸ ಮಾಡಿದ ಮಾಮಲೇದಾರರೇ ಇಲ್ಲಿ ಇರುವದು ಅವಶ್ಯವಿರುತ್ತದೆಂದೂ, ಹೊಸಬರು ಈ ಪರಿಸ್ಥಿತಿಯಲ್ಲಿ ಸರಿಯಾದ ಮಾರ್ಗ ಅನುಸರಿಸಿಕೊಂಡು ಹೋಗಲಾರರೆಂದೂ ಕೆಲವು ರೈತ ಸಂಘಗಳ ಪ್ರಮುಖರು ಸರಕಾರಕ್ಕೆ ಅರುಹಿ, ರಾ॥ ಕಿತ್ತೂರರ ವರ್ಗಾವರ್ಗಿಯನ್ನು ರದ್ದುಗೊಳಿಸಬೇಕಾಗಿ ವಿನಂತಿಸಿದ್ದಾರೆಂದು ತಿಳಿಯುತ್ತದೆ.

ಶಿರ್ಶಿಯ ಡಾ॥ ರಾಮರಾವ ಭಟ್ಟ ಇವರು ಇಲ್ಲಿ ಸರಕಾರಿ ಆಸ್ಪತ್ರೆಯ ಸಮೀಪ ತಮ್ಮ ದವಾಖಾನೆ ತೆರೆದಿದ್ದಾರೆ. ಕಳೆದ ರವಿವಾರ ಅದರ ಉದ್ಘಾಟನೆಯಾಯಿತು. ಆಗ ಕೂಡಿದ ಸಭೆಯಲ್ಲಿ ಡಾ॥ ವಾಗಳೇ, ಮಾಸೂರ ಇವರೂ ಸಭಾಧ್ಯಕ್ಷರಾಗಿದ್ದ ಪಾದ್ರಿ ಸಾಹೇಬರೂ ಡಾ॥ ಭಟ್ಟರನ್ನು ಪ್ರೇಮಪೂರ್ವಕ ಆಶೀರ್ವದಿಸಿದರು.

ಹೊನ್ನಾವರ— (ತಾ. ೧-೩-೧೯೪೮) ಇಲ್ಲಿಯ ಓರ್ವ ಸಾರಸ್ವತ ತರುಣಿಯೂ ಓರ್ವ ದೈವಜ್ಞ ತರುಣನೂ ಕಳೆದ ರವಿವಾರ ರಾತ್ರೆ ವಿಷ ತಿಂದು ಆತ್ಮಘಾತ ಮಾಡಿಕೊಂಡರು ಇವರಿಬ್ಬರೊಳಗೆ ಪ್ರೇಮಸಂಬಂಧವುಂಟಾಗಿತ್ತೆಂದೂ, ಆ ಸಂಬಂಧಕ್ಕೆ ತರುಣಿಯ ಹಿರಿಯರು ಆಕ್ಷೇಪ ತಕ್ಕೊಂಡದ್ದರಿಂದ ಮತ್ತು ತರುಣಿಯನ್ನು ಸ್ಥಳಾಂತರಿಸಲು ಯೋಚಿಸಿದ್ದರಿಂದ ಇಬ್ಬರೂ ಆತ್ಮಹತ್ಯೆ ಮಾಡಿಕೊಂಡರೆಂದೂ ಊರೊಳಗೆ ಸುದ್ದಿ!

ಹೆಬ್ಬಾರನಕೆರೆ-ಸಾಂತಗಲ್ಲ ರಸ್ತೆಯಲ್ಲಿ ಮೈಲ ನಂ. ೨ ರಲ್ಲಿರುವ ಒಂದು ಪೂಲು ಮತ್ತು ಮೈಲ ನಂ. ೪ ರಲ್ಲಿರುವ ಒಂದು ಪೂಲು ಹೀಗೆ ೨ ಪೂಲುಗಳು ಹಾಳಾಗಿ ಈಗ ಸುಮಾರು ೨ ವರ್ಷಗಳಾದವು ಇನ್ನೂ ಅವುಗಳ ದುರುಸ್ತಿಯಿಲ್ಲ! ದುರಸ್ತಿಯ ವ್ಯವಸ್ಥೆಯೂ ಆಗಿರುವದಿಲ್ಲ!

ಹೊಸ್ಸಬೇನೆಗೆ ಹೊಸ ಔಷಧಿ!

ವೈ ಝುಂವಾಗಿ ಬರುವ ಹೊಸ ಬೇನೆಗೆ ಹೊರಗಿನಿಂದ ಹಚ್ಚುವದಕ್ಕೆ—

ಶೇಲಧಾ ನವನಾರಾಯಣ ತೈಲ

ಖಾತ್ರಿಯಾಗಿ ಗುಣ ಮಾಡುತ್ತದೆ.

ಶೇಲಧಾ ಕೆಮಿಕಲ್ ಕಂ., ಸಿರಸಿ.

ಈ ರಸ್ತೆಯನ್ನು ನೋಡಲಿಕ್ಕೆಂತೂ ೨ ಕಣ್ಣುಗಳು ಸಾಲಲಾರವು! ಲೋಕಸೇವೆ ಮತ್ತು ತಾಲೂಕಿನ ಜನಸೇವೆ ಮಾಡುವ ಹಂಬಲ ಹಿಡಿದು, ಜಿ ಬೋರ್ಡ ಚುನಾವಣೆಗೆ ನಿಂತು ಮತ್ತು ಜನರು ವಿಶ್ವಾಸದಿಂದ ಆರಿಸಿಕೊಟ್ಟ ಬೋರ್ಡ ಸದಸ್ಯರು ಒಮ್ಮೆಯಾದರೂ ಈ ರಸ್ತೆಯನ್ನು ನೋಡಿರುತ್ತಾರೋ ಇಲ್ಲವೋ ತಿಳಿಯದು! ಇನ್ನು ಮುಂದಿನ ಸದಸ್ಯರನ್ನು ಬೋರ್ಡಿಗೆ ಆರಿಸಿ ಕಳಿಸಿದರೆ ಹಳ್ಳಿಗಳ ಸ್ಥಿತಿ ಎಂದೂ ಸುಧಾರಿಸಲಿಕ್ಕಿಲ್ಲೆಂದೂ ಮುಂದಿನ ಚುನಾವಣೆಗಳಲ್ಲಿ ತಮ್ಮಂತೆ ರಸ್ತೆಗಳಿಂದಲೇ ಇಂಜನೇರ ಇಲಾಖೆಯವರ ಮೋಟಾರ ರಸ್ತೆಗಳಿಂದಲೂ ದೂರದಲ್ಲಿ ಉಳಿಯುವ ಜನರನ್ನೇ ತಾವು ಆರಿಸಿಕಳಿಸಿದರೆ ಮಾತ್ರ ಏನಾದರೊಂದು ಸುಧಾರಣೆಯಾಗಬಹುದೆಂದೂ ಕಡತೋಕೆಯವರೊಬ್ಬರು ಬರೆಯುತ್ತಾರೆ.

ಕಾರವಾರ— ಗ್ರಂಥಾಲಯಗಳ ಅಭಿವೃದ್ಧಿಯ ಯೋಜನೆಯನ್ವಯ ಮುಂಬಯಿ ಸರಕಾರವು ರೊಯಲ್ ಏಶ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆಯನ್ನು ಮಧ್ಯವರ್ತಿ ಗ್ರಂಥಾಲಯವನ್ನಾಗಿಯೂ, ಪುಣೆಯ ಗೋಖಲೆ ಹೊಲದೊಳಗಿನ ಗ್ರಂಥಾಲಯ, ಅಹಮದಾಬಾದದಲ್ಲಿರುವ ಗುಜರಾಥ ವಿದ್ಯಾಪೀಠದ ಗ್ರಂಥಾಲಯ, ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಗ್ರಂಥಾಲಯ ಇವುಗಳನ್ನು ಪ್ರಾದೇಶಿಕ ಗ್ರಂಥಾಲಯಗಳನ್ನಾಗಿಯೂ ಮಾನ್ಯ ಮಾಡಿದ್ದಾರೆ ಹಾಗೂ ಪುಣೆ, ಅಹಮದಾಬಾದ ಮತ್ತು ಧಾರವಾಡ ಈ ೩ ಜಿಲ್ಲೆಗಳನ್ನು ಬಿಟ್ಟು ಉಳಿದ ೧೩ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿರುವ ವಾಚನಾಲಯಗಳನ್ನು ಜಿಲ್ಹಾ ಗ್ರಂಥಾಲಯಗಳನ್ನಾಗಿ ಮಾರ್ಪಡಿಸಿದ್ದಾರೆ ಇಲ್ಲಿಯ ಜನರಲ್ ಲಾಯಬ್ರರಿಯೂ ಜಿಲ್ಹಾ ಗ್ರಂಥಾಲಯವೆಂದು ಮನ್ನಣೆಪಟ್ಟಿದೆ

ಯಲ್ಲಾಪುರ— (ತಾ ೧೯-೨ ೧೯೪೮) ಪ್ರಾಂತಾಧಿಪತಿಗಳಾದ ರಾಜಾ ಸರ್ ಮಹಾರಾಜ ಸಿಂಗರು ಕಳೆದ ಶುಕ್ರವಾರ ಸಂಜೆ ಸಪರಿವಾರ ಇಲ್ಲಿಗೆ ಬಂದು ಮುಟ್ಟಿದರು ಆಗ ಸುಭಾಸ ಮೈದಾನದಲ್ಲಿ ಶ್ರೀ ಅಮ್ಮನವರ ಗದ್ದಿಗೆಯಿತ್ತು, ಜನರೂ ಗದ್ದಿಗೆಯ ಸುತ್ತು ನೆರೆದಿದ್ದರು ದೊರೆಗಳು ಈ ಜನಸ್ತೋಮ ಕಂಡು ಬಂಡಿಯಿಂದ ಕೆಳಗಿಳಿದರು; ಮತ್ತು ಜನರೊಡನೆ ಮಾತುಕತೆಯಾಡಿ ಮೈದಾನದಲ್ಲಿ ಏನು ನಡೆದಿದೆಯೆಂಬುದನ್ನು ತಿಳಕೊಂಡರು

ಶನಿವಾರ ಬೇಟೆಯ ಕಾರ್ಯಕ್ರಮವಿತ್ತು ಕಟಗಾರ ಬೆಟ್ಟದಲ್ಲಿ ಬೇಟೆಯ ಏರ್ಪಾಟು ಮಾಡಲಾಗಿತ್ತು ದೊರೆಗಳೂ ಕನ್ಸರ್ವೇಟರರೂ ಮಧ್ಯಾಹ್ನದ ಸುಮಾರಿಗೆ ಬೆಟ್ಟಕ್ಕೆ ಹೋಗಿ ಅಲ್ಲಿ ಮರಗಳ ಮೇಲೆ ಕಟ್ಟಿಟ್ಟ ಮಂಚಗಳನ್ನು ಅಲಂಕರಿಸಿದರು ಅವರು ಅಲ್ಲಿ ಹೋಗಿ ಕೂತ ೨ ಗಳಿಗೆಗಳಲ್ಲಿ ಜನರು ತಿವರಿಕೊಂಡು ಬಂದ ಹುಲಿಯು ದೊರೆಗಳು ಕೂತ ಮರದ ಮುಂದೆ ಬಂತು. ಕೂಡಲೆ ದೊರೆಗಳು ಗುಂಡಿಟ್ಟು ಅದನ್ನು ಉರುಳಿಸಿದರು. ಈ ಹುಲಿಯು ೯। ಅಡಿ ಉದ್ದವಿತ್ತು

ರವಿವಾರ ಮುಂಜಾನೆ ಡಾ॥ ಅನಂತ ಭಟ್ಟರೂ ಡಾ॥ ಗಣಪತಿ ಗಾಂವಕಾರರೂ ದೊರೆಗಳ ಸಂದರ್ಶನಕ್ಕೆ ಹೋಗಿದ್ದರು ಡಾ॥ ಭಟ್ಟರು ಈ ಸಂದರ್ಶನದ ಕಾಲಕ್ಕೆ ಯಲ್ಲಾಪುರ ತಾಲೂಕಿನ ಅಳಿಗಾಲದ ಕಥೆಯನ್ನೆಲ್ಲ ನಿವೇದಿಸಿ, ಸರಕಾರವು ಈ ತಾಲೂಕಿನ ಸಂಬಂಧದಲ್ಲಿ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುವದಿಲ್ಲವಾಗಿ ಹೇಳಿದರು. ಈ ತಾಲೂಕಿನ ಹಳ್ಳಿಗಳಲ್ಲಿ ಗರ್ಭಿಣಿಯರಿಗೆ "ಬಿಳೀ ಜಡ್ಡು" ಎಂಬ ರೋಗವಾಗುತ್ತದೆಂದೂ, ಈ ರೋಗವಾದ ೧೦೦ ಮಂದಿಯಲ್ಲಿ ೬೦ ಮಂದಿ ಸಾಯುತ್ತಾರೆಂದೂ, ಈ ರೋಗದ ಸಂಶೋಧನ ಮಾಡಿ, ಈ ರೋಗದ ಚಿಕಿತ್ಸೆಗಾಗಿ ಒಂದು ದವಾಖಾನೆ ತೆರೆಯುವದು ಅವಶ್ಯವಿರುತ್ತದೆಂದೂ, ಇಂಥ ದವಾಖಾನೆಯ ಆವಶ್ಯಕತೆಯಿರುವಾಗ ಈ ತಾಲೂಕಿನಲ್ಲಿ ತೆರೆಯಬೇಕೆಂದು ಸಂಕಲ್ಪಿಸಿದ "ಕೊಟೇಜ ಹೊಸ್ಪಿಟಲ್" ಆಸ್ಪತ್ರೆಯ ಯೋಜನೆಯನ್ನು ಮುಂದೂಡಿದ್ದು ಅನ್ಯಾಯವಿರುತ್ತದೆಂದೂ ಹೇಳಿಕೊಂಡರು ಸಂದರ್ಭಾನುಸಾರವಾಗಿ ಈಗಿರುವ ಚಿಕಿತ್ಸಾಲಯದ ಮಾತು ಬಂತು ಆಗ ಈ ಚಿಕಿತ್ಸಾಲಯವು ದೊಡ್ಡಿಯಕ್ಕಿಂತ ಕಡೆಯಾಗಿದೆಯೆಂದು ಉದ್ಗರಿಸಿದರು ದೊರೆಗಳಿಗೆ ಇದೊಂದು ಅತಿಶಯೋಕ್ತಿಯೆಂದು ತೋರಿತು ! ಡಾ। ಭಟ್ಟರು ಆಗ ದಿಗ್ದರ್ಶಿಸಿದರು, ದೊರೆಗಳು ಆದರಂತೆ ಚಿಕಿತ್ಸಾಲಯಕ್ಕೆ ಭೆಟ್ಟಿ ಕೊಟ್ಟು ಎಲ್ಲ ಪರಿಸ್ಥಿತಿಯನ್ನೂ ನೋಡಿಕೊಳ್ಳಲಾಗಿ ಭಟ್ಟರು ಹೇಳಿದ ಮಾತು ಯಥಾರ್ಥವಿರುತ್ತದೆಂದು ಅವರಿಗೆ ಮನವರಿಕೆಯಾಯಿತು, ಮತ್ತು ಯಲ್ಲಾಪುರದಲ್ಲಿ ಕೂಡಲೇ "ಕೊಟೇಜ ಹೊಸ್ಪಿಟಲ್" ತೆರೆಯುವಂತೆ ತಾವು ವ್ಯವಸ್ಥೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು.

ಹಾಗೆಯೇ ಮಧ್ಯಾಹ್ನದ ಊಟ ಮುಗಿಸಿಕೊಂಡು ದೊರೆಗಳು ತಮ್ಮ ಪರಿವಾರ ಸಹಿತ ಕಾರವಾರಕ್ಕೆ ಹೊರಟು ಹೋದರು

ಸುದ್ದಿಗಳ ಸಂದೂಕ.

— ಅಖಿಲ ಭಾರತ ಕಾಂಗ್ರೆಸ ಸಮಿತಿಯ ಅಧಿವೇಶನವು ಶನಿವಾರ ರವಿವಾರ ಮುಂಬಯಿಯಲ್ಲಿ ಜರುಗಿತು. ಈ ಅಧಿವೇಶನಕ್ಕಾಗಿ "ಮಾಧವ ಬಾಗ" ಭಾಗದೊಳಗಿನ ವಿಶಾಲ ಬೈಲಲ್ಲಿ "ಗಾಂಧಿ-ನಗರ"ವೆಂಬ ಸುಂದರ ಸಭಾಮಂಟಪ ಹಾಕಲ್ಪಟ್ಟಿತ್ತು ಮಂಟಪವು ಪ್ರೇಕ್ಷಕರಿದ್ದಲ್ಲದೆ ಸುಮಾರು ೬,೦೦೦ ಜನರನ್ನು ಹಿಡಿಯುವಷ್ಟು ವಿಶಾಲವಿತ್ತು ಶನಿವಾರ ಮಧ್ಯಾಹ್ನ ೨॥ ಘಂಟೆಗೆ ಸರಿಯಾಗಿ ಅಧಿವೇಶನಕ್ಕೆ ಆರಂಭವಾಯಿತು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪ್ರಾಸ್ತಾವಿಕ ಭಾಷಣ ಮಾಡಿ, ಈಗ ಪರಿಸ್ಥಿತಿ ಬದಲಾಗಿದೆಂದೂ ಬದಲಿದ ಪರಿಸ್ಥಿತಿಗೆ ತಕ್ಕಂತೆ ರಾಷ್ಟ್ರೀಯ ಸಭೆಯ ಘಟನೆಯನ್ನೂ ಕಾರ್ಯಪದ್ಧತಿಯನ್ನೂ ಬದಲಿಸುವದು ಅವಶ್ಯವಿರುತ್ತದೆಂದೂ ಬೋಧಿಸಿದರು; ಮತ್ತು ಕಾಶ್ಮೀರ ಮತ್ತು ಹೈದರಾಬಾದ ಸಂಸ್ಥಾನಗಳ ಸಂಬಂಧದಲ್ಲಿ ಸರದಾರ ಪಟೇಲರು ದಿಲ್ಲಿಯಿಂದ ಬರೆದು ಕಳಿಸಿದ ಸಂದೇಶವನ್ನು ಓದಿ ತೋರಿಸಿದರು. ಈ ಸಂದೇಶದಲ್ಲಿ ಜನರು ದುಡುಕಬಾರದೆಂದೂ ಹಿಂದುಸ್ಥಾನ ಸರಕಾರವು ಹೈದರಾಬಾದ ಮತ್ತು ಕಾಶ್ಮೀರ ಸಮಸ್ಯೆಗಳನ್ನು ರಾಷ್ಟ್ರದ ಗೌರವಕ್ಕೆ ಒಪ್ಪುವಂತೆ ಬಿಡಿಸುವದೆಂದೂ ಸರಕಾರದ ಮೇಲೆ ವಿಶ್ವಾಸವಿಟ್ಟು ತಾಳ್ಮೆಯಿಂದಿರಬೇಕೆಂದೂ ಬಿನ್ನವಿಸಿದ್ದರು ಈ ಸಂದೇಶದ ವಾಚನ ಮುಗಿದ ನಂತರ ಭಾರತದ ಮುಖ್ಯ ಮಂತ್ರಿ ಪಂ॥ ಜವಾಹರಲಾಲ ನೆಹರು ಇವರ ಭಾಷಣವಾಯಿತು. ಅವರು ಕಾಶ್ಮೀರ ಸಮಸ್ಯೆಯನ್ನೂ ಹೈದರಾಬಾದ ಸಮಸ್ಯೆಯನ್ನೂ ಕುರಿತು ಸರಕಾರದ ಧೋರಣೆಯನ್ನು ವಿವೇಚಿಸಿದರು. ಕಾಶ್ಮೀರದ ವಾದದಲ್ಲಿ ಜಾಗತಿಕ ಭದ್ರತಾ ಮಂಡಳವು ವಾದದ ಮೂಲ ಮುದ್ದೆಗಳನ್ನು ಬದಿಗೊತ್ತಿ, "ರಾವಣಾಯ ಸ್ವಸ್ತಿ ರಾವಣಾಯ ಸ್ವಸ್ತಿ" ಪ್ರಕಾರದ ಗೊತ್ತುವಳಿಯನ್ನು ಮಾಡಿದೆಂದೂ ಆ ಗೊತ್ತುವಳಿಯನ್ನು ಭಾರತವು ಒಪ್ಪಲಾರದೆಂತಲೂ, ಅಮೇರಿಕೆಗೆ ಹೋದ ನಮ್ಮ ಶಿಷ್ಟರು ತಿರುಗಿ ಬಂದ ಮೇಲೆ ಕಾಶ್ಮೀರದ ಸಂಬಂಧದ ಸ್ವತಂತ್ರ ಧೋರಣೆಯನ್ನು ನಿರ್ಣಯಿಸಲಾಗುವದೆಂದೂ ಪಂಡಿತಜಿಯವರು ತಿಳಿಸಿ ಹೇಳಿದರು. ಹೈದರಾಬಾದದ ಸಂಬಂಧದಲ್ಲಿ ಎಲ್ಲ ವಿವರಗಳನ್ನು ಬಹಿರಂಗವಾಗಿ ಹೇಳಬರಲಾರದೆಂದು ಅವರು ನುಡಿದು, ಹೈದರಾಬಾದದ ನಿಜಾಮರು ಹಿಂದೀ ಒಕ್ಕೂಟದಲ್ಲಿ ಸೇರಲೊಪ್ಪದಿದ್ದರೆ ಹಿಂದುಸ್ಥಾನಕ್ಕೂ ಹೈದರಾಬಾದಕ್ಕೂ ಸಂಘರ್ಷಣೆಯುಂಟಾಗುವದೆಂದೂ, ನಿಜಾಮರು ಜವಾಬ್ದಾರಿ ಈಗ ನಿಜಾಮರ ರಾಜ್ಯ ಹೋಗಿ ಪ್ರಜಾ ರಾಜ್ಯ ನಡೆದಂತೆ ತೋರುತ್ತದೆಂದೂ, ಹೈದರಾಬಾದದಲ್ಲಿ ನಡೆದಿರುವ ಗುಂಡಾಗಿರಿಯು ಕಡೆಗೆ ಹಿಂದೀ ಸರಕಾರದ ಪೂರ್ಣ ಲಕ್ಷ್ಯವುಂಟೆಂದೂ ವಿವರಿಸಿದರು ಅನಂತರ ಹೊಸ ಘಟನೆಯ ಮಸೂದೆಯನ್ನು ಸಮಿತಿಯ ಮನ್ನಣೆಗಾಗಿ ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಶ್ರೀ॥ ಜುಗಲ ಕಿಶೋರರು ಮುಂದಿಟ್ಟರು ಈ ಪ್ರಕಟನೆಯಲ್ಲ ೩೦ ಕಲಮುಗಳಿವೆ ಬೇರೆ ಬೇರೆ ಕಲಮುಗಳ ಮೇಲೆ ಸದಸ್ಯರಿಂದ ತಿದ್ದುಪಡಿಗಳು ಸೂಚನೆಗೊಂಡವು ಶನಿವಾರ ರಾತ್ರೆ ೮॥ ಘಂಟೆಯ ವರೆಗೆ ಚರ್ಚೆಯಾಗಿ ಘಟನೆಯ ೬-೭ ಕಲಮುಗಳಷ್ಟೇ ಮಂಜೂರ ಆದವು ಮರುದಿನ ರವಿವಾರ ಮುಂಜಾನೆ ೯ರಿಂದ ೧೨ರ ವರೆಗೆ ಘ.ತ [illegible]

ಚರ್ಚೆಯಾಯಿತು. ಅನಂತರ ರಾಷ್ಟ್ರೀಯ ಸಭೆಯ ಆರ್ಥಿಕ ಧೋರಣೆಯ ಕುರಿತು ಬಗ್ಗೆ ಚರ್ಚೆಯಾಯಿತು. ಈ ಧೋರಣೆಯನ್ನು ಕಾಲಕಾಲಕ್ಕೆ ರೂಪಿಸುವದಕ್ಕಾಗಿ ಪಂ॥ ಜವಾಹರಲಾಲರ ಅಧ್ಯಕ್ಷತೆಯಲ್ಲಿ ೯ ಜನರದೊಂದು ಸ್ಥಾಯಿ ಸಮಿತಿ ನೇಮಿಸಲ್ಪಟ್ಟಿತು ಮತ್ತು ರವಿವಾರ ರಾತ್ರಿ ೮ಕ್ಕೆ ಸಮಿತಿಯ ಅಧಿವೇಶನ ಮುಗಿಯಿತು ಮರುದಿನ (ಸೋಮವಾರ) ಮುಂಜಾನೆ ಹೈದರಾಬಾದ ಸಂಸ್ಥಾನದ ಸಂಬಂಧದಲ್ಲಿ ಚರ್ಚೆ ಮಾಡುವದಕ್ಕಾಗಿ ಸಮಿತಿಯ ಗುಪ್ತ ಅಧಿವೇಶನ ಕೂಡಿತ್ತು ಅದರಲ್ಲಿ ಸರಕಾರದವರು ಅನುಸರಿಸಿದ ಮಾರ್ಗಕ್ಕೆ ಬೆಂಬಲ ಕೊಡುವ ಗೊತ್ತುವಳಿಯಾಯಿತಂತೆ. ತಿಳಿಯುವ.

— ಕಳೆದ ವಾರ ಡಾ॥ ಅಂಬೇಡಕರರು ಲಖನೌದಲ್ಲಿ ಕೂಡಿದ ದಲಿತ ವರ್ಗಗಳ ಜನರ ಪರಿಷತ್ತಿನಲ್ಲಿ ಒಂದು ಭಾಷಣ ಮಾಡಿ, ದಲಿತ ವರ್ಗದವರು ರಾಷ್ಟ್ರೀಯ ಸಭೆಯಲ್ಲಿ ಸೇರಬಾರದೆಂದೂ, ರಾಷ್ಟ್ರೀಯ ಸಭೆಯ ಪಕ್ಷ, ರಾಷ್ಟ್ರೀಯ ಸಭೆಯಂಥ ಈಗ ಹೊರ ದ್ವಿರಾಷ್ಟ್ರ ಸಮಾಜವಾದಿ ಪಕ್ಷ ಇವುಗಳ ಜೊತೆಗೆ ತಮ್ಮದೊಂದು ತೃತೀಯ ಪಕ್ಷವನ್ನು ಸಂಘಟಿಸುವದು ಯುಕ್ತವೆಂದೂ, ರಾಷ್ಟ್ರೀಯ ಸಭೆಯ ಮಹಾಸಾಗರದಲ್ಲಿ ದಲಿತ ವರ್ಗದವರ ಕಲ್ಯಾಣವಾಗುವಂತಿಲ್ಲೆಂದೂ ಭಾಷಣ ಮಾಡಿದರು ಈ ಭಾಷಣದಿಂದ ದೇಶದಲ್ಲೆಲ್ಲ ಆಶ್ಚರ್ಯವೂ ಉದ್ವೇಗವೂ ಉಂಟಾಗಿದೆ ಡಾ॥ ಅಂಬೇಡಕರರಿಗೆ ನೆಹರು ಮಂತ್ರಿಮಂಡಳದಿಂದ ಹೊರಹಾಕಬೇಕೆಂಬ ಸೂಚನೆಯೂ ಮುಂದೆ ಬಂದಿದೆ

— ಸಮಾಜ ಸತ್ತಾವಾದಿಗಳಂತೆ ಶ್ರೀ॥ ಜಿಥೇ, ಮೋರೆ ಪಗ್ರೆ ಕೆಲವು ಮಹಾರಾಷ್ಟ್ರೀಯ ಕಾಂಗ್ರೆಸ್ಸಿಗರೂ ರಾಷ್ಟ್ರೀಯ ಸಭೆಯಿಂದ ಹೊರಬಿದ್ದು ಸ್ವತಂತ್ರ "ರೈತ ಪಕ್ಷ ರಚಿಸಲು ಅಣಿಯಾಗಿದ್ದಾರೆ ಕಾಂಗ್ರೆಸ್ಸು ಈಗ ಬಂಡವಾಳಗಾರರನ್ನು ಎತ್ತಿಹಿಡಿಯುತ್ತದೆಂದೂ ರೈತರ ಕೈಬಿಟ್ಟಿದೆಂದೂ ಈ ಮರಾಠಿಗರ ಆರೋಪವಿದೆ !

— ಪಂ॥ ಜವಾಹರಲಾಲರು ಮುಂಬಯಿಯೊಳಗಿನ ತಮ್ಮ ಭಾಷಣಗಳಲ್ಲಿ ಹೈದರಾಬಾದಕ್ಕೆ ಕೊಟ್ಟ ಎಚ್ಚರಿಕೆಗಳಿಂದ ಇತ್ತೇಹಾದುಲ್-ಮುಸಲ್ಮೀನ ಸಂಸ್ಥೆಯ ಕಾಸಿಮ ರಝ್ವಿಯವರು ಉದ್ರೇಕಗೊಂಡಿದ್ದಾರೆ ! ಮತ್ತು ಹೈದರಾಬಾದದಲ್ಲಿ ಸ್ವತಂತ್ರ ನಿಜಾಮರ ರಾಜ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಹೈದರಾಬಾದದ ಪ್ರತಿಯೊಬ್ಬ ಮುಸಲ್ಮಾನನು ತನ್ನ ದೇಹದಲ್ಲಿ ಪ್ರಾಣವಿರುವ ವರೆಗೆ ಕಾದಾಡುವನೆಂದು ಗರ್ಜಿಸುತ್ತಿದ್ದಾರೆ.

— ಸಿಂಧದ ಮುಖ್ಯಮಂತ್ರಿಗಳಾಗಿದ್ದ ಮಿ॥ ಖ॥ ಖುರೋಶಿಯವರನ್ನು ಗವ್ಹರ್ನರ ಸರ್ ಘುಲಾಮ ಹುಸೇನರು ಪಾಕಿಸ್ತಾನದ ಸರ್ವಾಧಿಕಾರಿ ಸರ್ವಾಧಿಕಾರಿಗಳಾದ ಕ್ವಾಯದೇ ಆಝಮ ಜಿನ್ನಾರವರ ಸೂಚನೆಯಂತೆ ಬಡತರ್ಫ ಮಾಡಿದ್ದಾರೆ. ಮಿ॥ ಖ॥ ಖುರೋಶಿಯವರ ವಿರುದ್ಧ ಲಂಚಗೊಳ್ಳತನ ಮುಂತಾದ ಆರೋಪಗಳುಂಟೆಂದೂ ಅವುಗಳ ವಿಚಾರಣೆಗಾಗಿ ಒಂದು ನ್ಯಾಯಮಂಡಳ ನೇಮಿಸಲ್ಪಡುವದೆಂದೂ ಗವ್ಹರ್ನರರು ತಿಳಿಸಿದ್ದಾರಂತೆ ಮಿ॥ ಖ॥ ಖುರೋಶಿಯವರು ಪಾಕಿಸ್ತಾನದ ಸರ್ವಾಧಿಕಾರಿಗಳ ಮಾತಿನಂತೆ ನಡೆಯಲು ಒಪ್ಪದ್ದರಿಂದಲೇ ಅವರಿಗೆ ಅರ್ಧಚಂದ್ರ-ಪ್ರಧಾನವಾಗಿರಬೇಕೆಂದು ಕೆಲವರ ತರ್ಕವಿದೆ ಸಿಂಧ ಸರಕಾರವು ತಮ್ಮ ರಾಜಧಾನಿಯನ್ನು ಕರಾಚಿಯಿಂದ ಸ್ಥಳಾಂತರಿಸಬೇಕೆಂದು ಜಿನ್ನಾರವರ ಇಚ್ಛೆಯುಂಟು ಖುರೋಶಿಯವರು ಈ ಸೂಚನೆಯನ್ನು ವಿರೋಧಿಸುತ್ತಾರೆ. ಸಿಂಧೇತರ ನಿರಾಶ್ರಿತರಿಗೆ ಸಿಂಧದಲ್ಲಿ ಪರಿಹಾರ ಸವಲತ್ತು ಕೊಡಲಿಕ್ಕೂ ಖುರೋಶಿಯವರು ಒಪ್ಪುತ್ತಿದ್ದಿಲ್ಲ ಈ ಮತಭೇದಗಳೇ ಅವರನ್ನು ಬಡತರ್ಫಿಗೆ ಕಾರಣವಾಗಿರಬೇಕೆಂದು ಸಿಂಧ ರಾಜಕೀಯ ಅಭಿಪ್ರಾಯ ಪಡುತ್ತಾರೆ

— ಪಾಕಿಸ್ತಾನಿಗಳು ಈಗ ಗಾಂಧಿ-ಮಾರ್ಗವನ್ನು ಅನುಸರಿಸುತ್ತಿದ್ದಾರೆ ಪಾಕಿಸ್ತಾನದ ಬಟ್ಟೆಯ ಕೊರತೆಯನ್ನು ದೂರಗೊಳಿಸಲು ಪಾಕಿಸ್ತಾನ ಪ್ರಧಾನಿ ಮಿ॥ ಲಿಯಾಕತ ಅಲಿಯವರು ಖಾದಿಯ ಉದ್ಯೋಗಕ್ಕೆ ಪ್ರೋತ್ಸಾಹನ ಕೊಡತೊಡಗಿದ್ದಾರೆ. ಕ್ವಾಯದೆ ಆಝಮ ಜಿನ್ನಾ ನಿಗ್ರಹ ಜನರು ಪಾಕಿಸ್ತಾನಿ ಬಟ್ಟೆಗಳ ವಿನಹ ಬೇರೆ ವಿದೇಶಿ ಬಟ್ಟೆಗಳನ್ನು ಧರಿಸಕೂಡದೆಂಬ ನಿರ್ಧಾರವೂ ಆಗುತ್ತಿದೆ ! [illegible] ಲೀಗ ಅಗಾಧವಿರುತ್ತದೆಂಬುದು ಸುಳ್ಳಲ್ಲ !

ಜಿಲ್ಲಾ ಸಮಾಚಾರ.

(ಹಿಂದಿನ ಶಿಲ್ಕು)

ಕಾರವಾರ— ಕಳೆದ ತಾ. ೧೬ನೇ ಶುಕ್ರವಾರ ಮಧ್ಯಾಹ್ನ ೪ ಘಂಟೆಗೆ ಜಿಲ್ಲಾ ಲೋಕಲ್ ಬೋರ್ಡಿನ ಕಚೇರಿಯಲ್ಲಿ ಪ್ರಾಂತಾಧಿಪರಿಗೆ ಮಾನಪತ್ರ ಕೊಡುವ ಸಮಾರಂಭವೂ ದೊರೆಗಳ ಹಸ್ತದಿಂದ ಬೋರ್ಡಿನ ಕಚೇರಿಯಲ್ಲಿ ಇಡಲ್ಪಡುವ ಜಗದ್ವಂದ್ಯ ಮಹಾತ್ಮಾ ಗಾಂಧಿಯವರ ತೈಲಚಿತ್ರದ ಅನಾವರಣ-ಸಮಾರಂಭವೂ ಜರುಗಿದವು. ಗಾಂಧೀಜಿಯವರು ತೋರಿಸಿಕೊಟ್ಟ ಸತ್ಯ-ಅಹಿಂಸೆ-ತ್ಯಾಗ-ಸೇವೆಗಳ ಮಾರ್ಗವನ್ನು ನಿಷ್ಠೆಯಿಂದ ಅನುಸರಿಸಲು ದೊರೆಗಳು ಬೋಧಿಸಿ ಚಿತ್ರದ ಅನಾವರಣ ಮಾಡಿದರು.

ಸಂಜೆಯ ಕಡೆಗೆ ದೊರೆಗಳು ಸಪರಿವಾರ ಯಲ್ಲಾಪುರಕ್ಕೆ ಹೊರಟು ಹೋದರು. ಅಲ್ಲಿ ಶನಿವಾರ ದಿನ ಬೇಟೆಯ ಕಾರ್ಯಕ್ರಮವಿತ್ತು. ಆಗ ದೊರೆಗಳು ಯಲ್ಲಾಪುರದಲ್ಲೇ ಇರುವ ಕಲ್ಲರಮನೆ ಘಟ್ಟದಲ್ಲಿ ೮। ಅಡಿ ಉದ್ದವಿರುವ ಒಂದು ಹುಲಿಯನ್ನು ಗುಂಡಿಟ್ಟು ಕೊಂದರಂತೆ. ದೊರೆಸಾನಿಗಳು ದೊರೆಗಳು ಕೂತ ಮರದ ಸಮೀಪದಲ್ಲೇ ಇರುವ ಇನ್ನೊಂದು ಮರದ ಮೇಲೆ ಕೂತು ಹುಲಿ-ಬೇಟೆಯ ಪ್ರಕಾರವನ್ನು ಕಣ್ತುಂಬ ನೋಡಿಕೊಂಡರೆಂತಲೂ ತಿಳಿಯುತ್ತದೆ. ರವಿವಾರ ದೊರೆಗಳ ಪರಿವಾರವು ಯಲ್ಲಾಪುರದಿಂದ ತಿರುಗಿ ಇಲ್ಲಿ ಬಂದು ಸಂಜೆ ಆಕ್ಟ್ರೆ ಹಡಗ ಹತ್ತಿ ರತ್ನಾಗಿರಿಗೆ ತೆರಳಿತು. ರಾಜಾ ಮಹಾರಾಜಸಿಂಗರು ಜನಸಮುದಾಯ ನೆರೆದಲ್ಲೆಲ್ಲ ತಮ್ಮ ಬಂಡಿ ನಿಲ್ಲಿಸಿ, ಆ ಜನರ ಸಮಾಚಾರ ತಿಳಕೊಳ್ಳುತ್ತಿದ್ದುದರಿಂದಲೂ, ಅವರೊಡನೆ ಅತ್ಮೀಯತೆಯಿಂದ ಮಾತಾಡುತ್ತಿದ್ದುದರಿಂದಲೂ ಅವರ ಬಗ್ಗೆ ಜನಸಾಮಾನ್ಯರಲ್ಲಿ ಗಾಢ ಆದರವೂ ಅಪ್ಯತೆಯೂ ಅಂಕುರಿಸಿದೆಂದು ನಮೂದಿಸಲು ಆನಂದವಾಗುತ್ತದೆ.

ಇದೇ ಎಪ್ರಿಲ್ ತಾ. ೧ ರಿಂದ ಪಾಕಿಸ್ತಾನ ಸರಕಾರವು ತನ್ನ ಸ್ವಂತ ಕರನ್ಸಿ ನೋಟುಗಳನ್ನೂ ರೂಪಾಯಿ ವಗೈರೆ ನಾಣ್ಯಗಳನ್ನೂ ಹೊರಡಿಸಿದೆ. ಪಾಕಿಸ್ತಾನದ ಒಂದು ರೂಪಾಯಿಯ ನೋಟುಗಳು ಹಿಂದಿನ ಸರಕಾರದ ಸದ್ಯದ ನೋಟುಗಳಂತೆಯೇ ಇವೆ. ಅವುಗಳ ಮೇಲೆ "ಪಾಕಿಸ್ತಾನ ಸರಕಾರ" ಎಂಬ ಶಬ್ದಗಳನ್ನು ಇಂಗ್ಲೀಷದಲ್ಲೂ ಉರ್ದುವಿನಲ್ಲೂ ಅಚ್ಚು ಮಾಡಿದ್ದುಂಟು. ಈ ನಾಣ್ಯಗಳಾಗಲಿ ನೋಟುಗಳಾಗಲಿ ಭಾರತದಲ್ಲಿ ಕಾಯದೆಬದ್ಧ ಚಲನವಾಗಲಿಕ್ಕಿಲ್ಲೆಂದು ರಿಝರ್ವ ಬೇಂಕಿನವರು ಎಚ್ಚರಿಕೆ ಕೊಟ್ಟಿರುತ್ತಾರೆ.

ಅಂಕೋಲಾ— ಇದೇ ಬರುವ ಮೇ ತಿಂಗಳ ತಾ. ೮-೯ (ಶನಿ-ರವಿವಾರ)ಕ್ಕೆ ಭಾವಿಕೇರಿಯಲ್ಲಿ, ಕುಮಟೆಯ ವಕೀಲ ರಾ। ಆರ್. ಬಿ ನಾಯಕ ಇವರ ಅಧ್ಯಕ್ಷತೆಯೊಳಗೆ ನಾಡವರ ಸಂಘದ ವಾರ್ಷಿಕ ಮಹಾಧಿವೇಶನ ಕೂಡಲಿದೆ. ಶನಿವಾರ ಸಂಜೆ ೪ ಕ್ಕೆ ಸಭೆಯ ಕೆಲಸಕ್ಕೆ ಪ್ರಾರಂಭ ಮಾಡಬೇಕೆಂದು ಸಂಕಲ್ಪವಾಗಿದೆ. ಈ ಸಭೆಗೆ ಹೆಚ್ಚೆಚ್ಚು ಜನರು ಬಂದು ಸಂಘದ ಕಾರ್ಯಕ್ಕೆ ಸಹಾಯ ಮಾಡಬೇಕೆಂದು ಸಂಘದ ಪರವಾಗಿ ಸಂಘದ ಉಪಾಧ್ಯಕ್ಷ ರಾ। ಪೋ ಮಾ. ನಾಯಕರೂ ಸ್ವಾಗತಾಧ್ಯಕ್ಷ ರಾ॥ ರಾ. ವಿ. ನಾಯಕರೂ ಬಿನ್ನವಿಸುತ್ತಾರೆ. ಅಂಕೋಲೆಯಲ್ಲಿ ತಮ್ಮ ಸಮಾಜದ ವಿದ್ಯಾರ್ಥಿಗಳ ಬಗ್ಗೆ ಒಂದು ವಸತಿಗೃಹ ಕಟ್ಟುವ ವಿಚಾರ ಸಂಘದವರದುಂಟು. ಸಂಘದ ಕಾರ್ಯಕಾರಿ ಮಂಡಳವನ್ನು ವರ್ಷವರ್ಷಕ್ಕೆ ಆರಿಸುವದರ ಬದಲು ೩ ವರ್ಷಗಳಿಗೊಮ್ಮೆ ಆರಿಸುವಂತೆ ನಿಯಮಾವಲಿಯಲ್ಲಿ ತಿದ್ದುಪಡಿ ಮಾಡುವ ಸೂಚನೆಯೊಂದು ಈ ಸಭೆಯ ಮುಂದೆ ಬರುವದೆಂದು ತಿಳಿಯುತ್ತದೆ.

ಇದೇ ಬರುವ ವೈಶಾಖ ಶುಕ್ಲ ಪಕ್ಷದಲ್ಲಿ ೩ ಯೂ ೧೫ ಯೂ ಕ್ಷಯ-ತಿಥಿಗಳಾಗಿವೆ. ನಡುವೆ ಯಾವ ತಿಥಿಯೂ ವೃದ್ಧಿಹೊಂದಿರುವದಿಲ್ಲ. (ಬಗ್ಲೋಣ ಪಂಚಾಂಗದಲ್ಲಿ ಮಾತ್ರ ವದ್ಯ ೧೪ಯು ಕ್ಷಯ ತಿಥಿಯಾಗಿರುತ್ತದೆ) ಆದರಿಂದ ಈ ಪಕ್ಷವು ೧೩ ದಿನಗಳ ಪಕ್ಷವಾಗುತ್ತಿದೆ. ಇದಕ್ಕೆ ಕ್ಷಯಪಕ್ಷವೆಂತಲೂ ಘಸ್ರ ಪಕ್ಷವೆಂತಲೂ ಹೆಸರುಂಟು. ಇಂತಹ ಕ್ಷಯ-ಪಕ್ಷಗಳಲ್ಲಿ ವಿವಾಹಾದಿ ಶುಭಶೋಭನ ಕಾರ್ಯಗಳನ್ನು ಮಾಡಬಾರದಾಗಿ ಶಾಸ್ತ್ರವಿದೆಯೆಂದು ವೇ॥ ಶಾ॥ ಸಂ॥ ನಾರಾಯಣ ಶರ್ಮಾ ಗದ್ದೇಮನೆ ಇವರು ಹಸ್ತಪತ್ರಿಕೆಗಳನ್ನು ಹೊರಡಿಸಿ ಜಾಹೀರ ಮಾಡಿದ್ದಾರೆ.

[ಈ ಬಗ್ಗೆ ವಿದ್ವಾಂಸರಲ್ಲಿ ಮತಭೇದಗಳಿದ್ದುದು ಕಂಡು ಬರುತ್ತಿದೆ. ಅದೇನಿದ್ದರೂ ಸದರಿ ಪಕ್ಷದಲ್ಲಿ ಮಂಗಲ ಕಾರ್ಯ ಮಾಡಿಸುವವಾದಲ್ಲಿ ಭಾವಿಕರು ಯುಕ್ತಾಯುಕ್ತತೆಯ ವಿಚಾರ ಮಾಡುವದು ಉಚಿತವೆಂದು ಭಾವಿಸುತ್ತೇವೆ. —ಸಂಪಾದಕ]

ಇದೇ ಕಳೆದ ತಾ. ೧೯ನೇಗೆ ಶಿರೂರ ಶಾಲೆಯ ಹುಟ್ಟುಹಬ್ಬ ಹಗಡೆಯ ರಾ॥ ವೈಕುಂಠ ಶಾನಭಾಗರ ಒಡೆಯತನದಲ್ಲಿ ಆಚರಿಸಲ್ಪಟ್ಟಿತ್ತು. ಅಗರಗೋಣ ಶಾಲೆಯ ರಾ॥ ನಾಯ್ಕರೂ ಅಧ್ಯಕ್ಷರೂ ವಿದ್ಯಾರ್ಥಿಗಳಚಟುವಟಿಕೆಗಳನ್ನೂ ಶಾಲಾ ಶಿಕ್ಷಕರ ಕಾರ್ಯದಕ್ಷತೆಯನ್ನೂ ಕೊಂಡಾಡಿದರು.

ಹಳಿಯಾಳ— (ತಾ. ೨೪-೩-೪೮) ರಾ॥ ಸಾ॥ ಕಿತ್ತೂರರ ಕಾರಕೀರ್ದಿಯೊಳಗಿನ ಎಷ್ಟೋ ಮ್ಯುನಿಸಿಪಲ್ ಬಿಲುಗಳು ಹಾಗೆಯೇ ಬಿದ್ದಿವೆಯೆಂದು ಸುದ್ದಿ! ಬಿಲು ಕೊಟ್ಟ ಜನರು ತಮ್ಮ ಹಣ ಸಿಗಲಿಲ್ಲೆಂದು ಗೋಳಾಡುತ್ತಿದ್ದಾರೆ. ಅವರಿಗೆ ಪರಿಹಾರ ಕೊಡುವದು ಹೊಸ ಮ್ಯುನಿಸಿಪಲ್ ಬೋರ್ಡಿಗೆ ಇಲ್ಲವೆ ಅಧ್ಯಕ್ಷರಿಗೆ ಸಾಧ್ಯವಿಲ್ಲ. ಯಾಕೆಂದರೆ ಆ ಕಾಲದ ಕೆಲವು ರೆಕಾರ್ಡುಗಳೂ ಕಾಗದ-ಪತ್ರಗಳೂ ಕಚೇರಿಯಲ್ಲಿ ಕಾಣುವದಿಲ್ಲ! ಅವುಗಳ ಅಭಾವದಲ್ಲಿ ಬಿಲುಗಳ ಹಣ ನಿಜವಾಗಿಯೂ ಬಾಕಿಯುಂಟೋ ಹೇಗೆಂಬುವದನ್ನು ಪರಿಶೀಲನೆ ಮಾಡಿಕೊಳ್ಳಲು ಅನುಕೂಲವಿಲ್ಲ.

೨ ತಿಂಗಳ ಹಿಂದೆ ಪರಶುರಾಮ ಪವಾರ ಎಂಬ ರೈತನ ಛತ್ತದಬಣವೆಗಳಿಗೆ ಆಕಸ್ಮಾತ್ ಬೆಂಕಿ ಬಿದ್ದು ೨ ಬಣವೆಗಳು ಪೂರ್ಣ ಸುಟ್ಟುಹೋಗಿದ್ದವು. ಅವನಿಗೆ ಈ ಅಪಘಾತದಿಂದ ಕನಿಷ್ಠ ೬೦೦-೭೦೦ ರೂ ಹಾನಿಯಾಗಿರಬೇಕೆಂದು ಪಂಚರು ಲೆಕ್ಕ ಹಾಕಿದ್ದಾರೆ. ಸರಕಾರದವರು ಈ ಬಡವನಿಗೆ ಸಹಾಯ ದೊರಕಿಸಿಕೊಡದಿದ್ದರೆ ಅವನು ಮುಂದೆ ಬಾಳ್ವೆ ಮಾಡುವದಾಗಲಿ ಬೇಸಾಯದ ಉದ್ಯೋಗ ಮಾಡುವದಾಗಲಿ ಸಾಧ್ಯವಿಲ್ಲ. ಜಿಲ್ಲಾಧಿಪರು ಈ ಬಡವನನ್ನು ಕರುಣೆಯಿಂದ ಕಾಯಬೇಕಾಗಿ ಸೂಚನೆಯಿದೆ.

ಮುಂಡಗೋಡ— (ತಾ ೧೮-೩-೪೮) ತನ್ನ ಕಂಟ್ರಾಕ್ಟರ ರಾ॥ ಬಿ. ಎಲ್. ಸಾವಂತ ಇವರು ಇಲ್ಲಿಯ ಚಿಕಿತ್ಸಾಲಯದಲ್ಲಿ ಬಡವರಿಗೆ ಬೇಕಾಗುವ ಔಷಧಗಳನ್ನು ಖರೀದಿಸುವದಕ್ಕಾಗಿ ರೂ ೧೦೦ ದಾನ ಕೊಟ್ಟಿದ್ದಾರೆ. ಸ್ತುತ್ಯ!

ಮುಂಚಿಕೇರಿ— (ತಾ ೧೩-೪-೪೮) ಇಷ್ಟು ದಿನ ಇಲ್ಲಿ ಚಿಮಣಿ ಎಣ್ಣೆಯು, ತುಸು ತುಟ್ಟಿಯಾದರೂ, ಸರಾಗವಾಗಿ ಸಿಗುತ್ತಿತ್ತು. ಕೆಲವು ದಿನಗಳ ಹಿಂದೆ ಪೋಲೀಸರು ಬಂದು ಅಂಗಡಿಕಾರರಿಗೆ "ಚಿಮಣಿ ಎಣ್ಣೆಯನ್ನು ಯಾರಿಂದ ಕೊಳ್ಳುತ್ತೀರಿ? ಯಾವ ದರದಿಂದ ಮಾರುತ್ತೀರಿ?" ಎಂದು ಮುಂತಾಗಿ ಚೌಕಶಿ ಮಾಡಿದರಂತೆ. ಅಂದಿನಿಂದ ವರ್ತಕರು ಚಿಮಣಿ ಎಣ್ಣೆಯ ವ್ಯಾಪಾರವನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದ ಈಗ ಊರಲ್ಲಿ ಎಣ್ಣೆ ಸಿಗುವದು ಕಷ್ಟವಾಗಿದೆ. ಜನರ ಕಷ್ಟ ಹೇಳಲಾಸಲ್ಲ!

ಶಿರಸಿ— (ತಾ ೯-೩-೪೮) ಅಂಕೋಲಾ-ಕಾರವಾರ ಬದಿಯ ಟಪಾಲು ಈಗ ಯಲ್ಲಾಪುರ ಮಾರ್ಗವಾಗಿ ಮಧ್ಯಾಹ್ನಕ್ಕೆ ಬರುತ್ತದೆ. ಮಲಬಾರ, ಮಂಗಳೂರು, ಭಟಕಳ, ಹೊನ್ನಾವರ ಕಡೆಯ ಟಪಾಲು ಕುಮಟೆಯಿಂದ ಮಧ್ಯಾಹ್ನ ೩ರ ಸುಮಾರಿಗೆ ಬರುತ್ತದೆ. ಆದರಿಂದ ಸಾಯಂಕಾಲಕ್ಕೇ ಈ ಟಪಾಲುಗಳ ಬಟವಡೆ ಮಾಡಲು ಅನುಕೂಲವುಂಟು. ಹಾಗೆ ವ್ಯವಸ್ಥೆಯಾಗುವದೆಂದು ಸುದ್ದಿಯೂ ಇತ್ತು. ಆದರೆ ಇನ್ನೂ ಆ ವ್ಯವಸ್ಥೆಯಾಗಿಲ್ಲ! ಯಾಕೆ?

ಚಿಮಣಿ ಎಣ್ಣೆಯ ಕಳ್ಳ-ಸಂತೆ ಮಿಗಿಲಾಗಿದೆ. ವ್ಯಾಪಾರಿಗಳು ಕಳ್ಳರೆಂದು ಏಜಂಟರು ದೂರುತ್ತಾರೆ; ಏಜಂಟರೇ ಕಳ್ಳ ವ್ಯಾಪಾರ ಮಾಡಿ ತಮ್ಮ ಮೇಲೆ ಹುಳ್ಳು ಆರೋಪ ಹೊರಿಸುತ್ತಾರೆಂದು ವರ್ತಕರು ದೂರುತ್ತಾರೆ. ಯಾರು ಕಳ್ಳರೋ ಯಾರು ಸುಳ್ಳರೋ ದೇವರಿಗೇ ಗೋಚರ! ಜನರಿಗೆ ಚಿಮಣಿ ಎಣ್ಣೆ ಸಿಗುವದಿಲ್ಲೆಂಬುದು ಮಾತ್ರ ನಿರ್ವಿವಾದ. ಈ ಎಣ್ಣೆಯ ಹಂಚುವಿಕೆಯನ್ನು ನಿಯಂತ್ರಿಸಿ

ಮುಂಬಯಿ ಸರಕಾರ

ನಾಗರಿಕ ಪೂರೈಕೆ ಖಾತೆ,

ಮುಂಬಯಿ ಕೋಟೆ, ತಾ. ೩೦-೪-೧೯೪೮.

ತಾ. ೩೦-೪-೧೯೪೮ನೇಗೆ ಅಂತ್ಯವಾಗುವ ತ್ರೈ-ಮಾಸಿಕ ಅವಧಿಯ ನೂಲಿನ ಸಂಗ್ರಹದ ಮಾಹಿತಿ ಪತ್ರಿಕೆಗಳು.

೧೯೪೬ನೇ ಇಸವಿಯ ಮುಂಬಯಿಯ ಅರಳೆ ನೂಲಿನ ವ್ಯಾಪಾರದ ನಿಯಂತ್ರಣಾಜ್ಞೆಯನ್ವಯ, ತಾ. ೩೦-೪-೧೯೪೮ನೇಗೆ ಕೊನೆಗೊಳ್ಳುವ ತ್ರೈಮಾಸಿಕ ಅವಧಿಯ ನೂಲಿನ ಸಂಗ್ರಹದ ಮಾಹಿತಿ-ಪತ್ರಿಕೆಗಳನ್ನು ತಾ. ೧೦-೫-೧೯೪೮ನೇ ದಿನ ಅಥವಾ ಅದರ ಮುಂಚೆ ಒಪ್ಪಿಸಬೇಕಾಗಿರುತ್ತದೆ. ಸದರಿ ಮಾಹಿತಿ ಪತ್ರಿಕೆಗಳು ೧೯೪೬ರ ಅರಳೆ ನೂಲಿನ ವ್ಯಾಪಾರದ ನಿಯಂತ್ರಣಾಜ್ಞೆಗೆ ಜೋಡಿಸಲ್ಪಟ್ಟ IVನೇ ಅನುಸೂಚಿಯಲ್ಲಿ ಇರಬೇಕು; ಮತ್ತು ಅವನ್ನು ಪ್ರಾಂತಿಕ ಟೆಕ್ಸ್‌ಟೈಲ ಕಂಟ್ರೋಲರ, ೩-೮, [illegible], ಕೋಟೆ, ಮುಂಬಯಿ ಇವರಿಗೆ ಕಳಿಸಬೇಕು. ಒಂಟಿ ಹಾಗೂ ಜೋಡಿಸಿದ (folded) ನೂಲಿನ ಸಂಬಂಧವಾಗಿ, ಸದರಿ ಅನುಸೂಚಿಯಲ್ಲಿ ಹೇಳಿರುವಂತೆ, ಪ್ರತ್ಯೇಕ-ಪ್ರತ್ಯೇಕ ಮಾಹಿತಿ ಪತ್ರಿಕೆಗಳನ್ನು ಒಪ್ಪಿಸಬೇಕು. **ಮಾಹಿತಿ-ಪತ್ರಿಕೆಯ ಅವಧಿಯಲ್ಲಿ ಏನೂ ವ್ಯವಹಾರ ಮಾಡಿರದಿದ್ದರೆ ನದಾರ ಮಾಹಿತಿ-ಪತ್ರಿಕೆಗಳನ್ನು ಕಳಿಸಬೇಕು.** ನಿರ್ದಿಷ್ಟ ಅವಧಿಯೊಳಗಾಗಿ ಈ ಮಾಹಿತಿ-ಪತ್ರಿಕೆಗಳನ್ನು ಕಳಿಸುವುದರ ದಕ್ಷತೆಯನ್ನು ಎಲ್ಲ ಪರವಾನೆಧಾರರೂ ಕೊಳ್ಳಬೇಕಾಗಿ ವಿನಂತಿಯುಂಟು.

G. L. Sheth,

ಪ್ರಾಂತಿಕ ಟೆಕ್ಸ್‌ಟೈಲ ಕಂಟ್ರೋಲರ, ಮುಂಬಯಿ.

THE BANK OF RURAL INDIA, LTD.,

[Incorporated in British India, Liability of Members limited]

HEAD OFFICE.— "Satyabhama Bhavan", **KARWAR, N. K.**

Offices at:— KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR.

Authorised Capital	.. **Rs. 10,00,000;**
Subscribed Capital	.. **Rs 5,00,000;**
Paid-up Capital & Reserves	.. **Rs. 5,08,502-8-0.**

Rates of Interest on Deposits:

Current a/c. @ 1% p. a *Savings Bank a/c @ 2½%.*

Fixed Deposits for 3 months @ 3% per annum.

" " for 6 months @ 3½% "

" " for 12 months or more @ 4% "

All kinds of modern Banking business transacted.

Karwar, 14-2-1948

P. X. GRACIOUS,
MANAGING DIRECTOR

9

ಎಲ್ಲರಿಗೂ, ಕೆಲಸ್ಕೊಂದು ಪ್ರಮಾಣದಿಂದಾದರೂ, ಎಣ್ಣೆ ಸಿಗುವಂತೆ ಮಾಡುವದು ಅಗತ್ಯವಿದೆ

(ತಾ ೨೪-೪ ೪೮) ಸಾಣೇಕಟ್ಟೆಯ ಉಪ್ಪು ಇಷ್ಟು ದಿನ ಸೊಸಾಯಿಟಿಯ ಅಂಗಡಿಯಲ್ಲಿ, ೨ ಮಣ್ಣಿನ ೩ ಲಿಂಕ್ಕೆ ರೂ. ೫ ೨ ೦ ದರದಿಂದ ಸಿಗುತ್ತಿತ್ತು ೫ ೬ ದಿನದಿಂದ ಅಂಗಡಿಯಲ್ಲಿ ನರಧ ಬೋರ್ಡು ದೃಷ್ಟಿಗೆ ಬೀಳುವದಿಲ್ಲ ! ಉಪ್ಪು ತಿರ್‍ಕಿಲ್ಲೆಂದು ಹೇಳುತ್ತಾರೆ ! ಅಂಗಡಿಯ ಕಾರಕೂನನು ಬೇರೊಂದು ಕಡೆ ಕೆಲವು ಉಪ್ಪಿನ ಚೀಲಗಳನ್ನಿಟ್ಟು ರೂ ೬ಕ್ಕೊಂದು ಚೀಲದಂತೆ ಮಾರುತ್ತಾನೆ ! ಸೊಸಾಯಿಟಿಯವರಿಗೆ ಇದು ಒಪ್ಪಿಗೆಯುಂಟೇನು?

ಲೋಕಲ್ ಬೋರ್ಡಿನ ಕಾಮಗಾರಿಗಳನ್ನು ಗುತ್ತಿಗೆಗೆ ತಕ್ಕೊಂಡು ಕೆಲಸ ಮಾಡಿಕೊಟ್ಟವರಿಗೆ ಹಣ ಸರಿಯಾಗಿ ಸಿಗುವದಿಲ್ಲೆಂದು ದೂರು ಕೇಳಬರುತ್ತದೆ ಮುಲೇಕಟ್ಟೆ ಮಣ್ಣು ಮಾಗ ದೊಳಗಿನ ಒಂದು ಮೋರಿಯನು ದುರುಸ್ತು ಮಾಡಿಕೊಟ್ಟದ್ದರ ಬಾಬತು ತನ್ನ ಹಣ ಸಿಗಲಿಲ್ಲೆಂದು ರಾ। ವೆಂಕಟರಮಣ ಸುಬ್ರಾಯ ಹೆಗಡೆ ಇವರು ಜಿಲ್ಲಾಧಿಪರು ಇತ್ತ ಬಂದಾಗ ದೂರುತ್ತಿದ್ದರು ತನ್ನಲ್ಲಿಯು ೪ ವರ್ಷದ ಹಳ್ಳಿ-ರಸ್ತೆಯಲ್ಲಿ ದುರುಸ್ತಿ ಕೆಲಸ ಮಾಡಿಕೊಟ್ಟದ್ದರ ಬಗ್ಗೆ ತಮಗೆ ಸಲ್ಲಬೇಕಾದ ರೂ ೧೬೦ ಇನ್ನೂ ಸಂದಿಲ್ಲವೆಂದು ಗೋಣಸರ ಗ್ರಾಮದ ರಾ ರಾಮಕೃಷ್ಣ ನಾರಾಯಣ ಭಟ್ಟ ಇವರೂ ದೂರುತ್ತಿದ್ದಾರೆ ಬೋರ್ಡಿನಿಂದ ಹಣ ಮಂಜೂರಾಗಿ ಬಾರದ್ದರಿಂದ ಈ ಹಣ ಸಿಗಲಿಕ್ಕೆ ವಿಳಂಬವಾಗುತ್ತದೋ ಅಥವಾ ಹಣ ಬಂದರೂ ಸಬ್-ಓವ್ಹರಸೀಯರರು ಅವರ ಬಟವಡೆ ಮಾಡದೆ ಇಟ್ಟುಕೊಳ್ಳುತ್ತಾರೋ ಎಂಬುವರ ಚೌಕಶಿಯಾಗುವದವಶ್ಯ

ಕೆಲವೊಂದು ಹಳ್ಳಿಗಳಲ್ಲಿ ಗ್ರಾಮೀಣ ಜನರ ಮನರಂಜನೆ ಮತ್ತು ಶಿಕ್ಷಣಕ್ಕಾಗಿ ರೇಡಿಯೋ ಇಡಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದ್ದು, ಈ ಯೋಜನೆಯಂತೆ ಬನವಾಸಿ ಗ್ರಾಮದಲ್ಲೂ ಒಂದು ರೇಡಿಯೋ ಇಡುವ ವಿಚಾರ ಸರಕಾರದಲ್ಲಿ ನಡೆದಿತ್ತೆಂದು ತಿಳಿಯುತ್ತದೆ ಬನವಾಸಿಯ ಕೆಲವು ಪ್ರಮುಖರಿಗೆ ಸರಕಾರದವರ ಈ ಯೋಜನೆ ಮಾನ್ಯವಾಗಿಲ್ಲವಂತೆ ! ಈ ಪ್ರಮುಖರು ತಾವೇ ಒಂದು ಸ್ವತಂತ್ರ ರೇಡಿಯೋ ತರಬೇಕೆಂದು ಮಾಡಿರುತ್ತಾರಂತೆ. ಸರಕಾರದವರ ರೇಡಿಯೋ ಬಂದಲ್ಲಿ ತಮ್ಮ ರೇಡಿಯೋವನ್ನು ಯಾರೂ ಕೇಳಲಿಕ್ಕಿಲ್ಲೆಂದು ಅವರು ಅಂಜಿ, ಸರಕಾರದವರ ರೇಡಿಯೋ ಬನವಾಸಿಯಲ್ಲಿ ಅವಶ್ಯವಿಲ್ಲೆಂದೂ ಜನರಿಗೆ ಅದು ಬೇಕಾಗಿಲ್ಲೆಂದೂ ಈ ಸ್ವಯಂಮನ್ಯ ಮುಂದಾಳುಗಳು ಸರ್ಕಲ್ ಇನ್ಸ್‌ಪೆಕ್ಟರ ರಾ। ಯಾರ್ಡಿಯವರ ಕಡೆಯಿಂದ ಸರಕಾರಕ್ಕೆ ವರದಿ ಮಾಡಿಸಿದ್ದಾರೆಂದು ವರದಿಯುಂಟು ! ಸರಕಾರವು ಇಂತಹ ಕುತಂತ್ರಗಳಿಗೆ ಮೋಸಹೋಗದೆ ತನ್ನ ಸಂಕಲ್ಪದಂತೆ ಬನವಾಸಿಗೆ ರೇಡಿಯೋ ದಯಪಾಲಿಸಬೇಕಾಗಿ ಗ್ರಾಮಸ್ಥ ಜನರು ಪ್ರಾರ್ಥಿಸುತ್ತಾರೆ.

ಸಿದ್ದಾಪುರ— (ತಾ. ೨೮-೩-೪೮) ಇಲ್ಲಿ ವಿವಿಧೋದ್ದೇಶಗಳ ರೈತರ ಸಹಕಾರಿ ಸಂಘವೆಂಬ ಸಂಸ್ಥೆ ಸ್ಥಾಪಿಸಲ್ಪಟ್ಟಿದೆ ಈ ಸಂಘದವರು ಅಡಿಕೆ, ಕಾಳ ಮೆಣಸು ಮುಂತಾದವುಗಳ ವ್ಯಾಪಾರ (ದಲಾಲಿ) ಮಾಡುತ್ತಾರೆ ಈ ಸಂಘದವರ ವ್ಯಾಪಾರದ ನಮೂನೆಯೇ ತಿಳಿಯುವದಿಲ್ಲ. ಸಂಘದಲ್ಲಿ ಚಲೋ ಮ್ಹಾಲು ಬಂದರೆ ಅದು ಸಂಘದವರ ಬಳಗದವರಿಗೇ ಸಿಗುತ್ತದೆ ! ಹೊರಗಿನವರಿಗೆ ಆಗ ಕರೆಯುವದೂ ಇಲ್ಲ, ಮ್ಹಾಲು ತೋರಿಸುವದೂ ಇಲ್ಲ, ಹೆಚ್ಚಿನ ಧಾರಣೆ ಅವರು ಕೊಡಲಿಕ್ಕೆ ತಯಾರ ಇದ್ದಾರೋ ಹೇಗೆಂದು ನೋಡುವದೂ ಇಲ್ಲ ! ತನ್ನವರಿಗೆ ಬಾಯಿಸ ಇಲ್ಲದ ಮ್ಹಾಲು ಬಂದರೆ ಹೊರಗಿನವರಿಗೆ ಕರೆಯುತ್ತಾರೆ ! ಸಂಘದ ಕೆಲಸಗಾರರಲ್ಲಿ ಪ್ರಾಮಾಣಿಕತನವೂ ಕಡಿಮೆ ಎಂದು ಈಗ ಅಲ್ಲಲ್ಲಿ ದೂರು ಕೇಳಬರುತ್ತಿದೆ ಕೊಂಡ ಸರಕಿಗಿಂತ ಹೆಚ್ಚಿಗೆ ಸರಕಿನ ಬೀಲುಗಳು ಹಿಂದಿನಿಂದ ಬರುತ್ತವಂತೆ ! ೬೦ ಮಣ ಅಡಿಕೆ ಕೊಂಡವನಿಗೆ ೬೪ ಮಣ ಅಡಿಕೆಯ ಬೀಲು ಬರುತ್ತಿದೆ ! ಮೊದಮೊದಲು ಇದು ವ್ಯಾಪಾರಿಗಳ ಲಕ್ಷ್ಯಕ್ಕೆ ಬಂಗಿದ್ದಿಲ್ಲ ಬೀಲು (ಪಟ್ಟಿ) ಗಳು ಸರಿಯಿರುವದೆಂಬ ವಿಶ್ವಾಸದಿಂದ ಅವನು ಅವನ್ನು ತೆಗೆದಿಟ್ಟು, ಅವುಗಳಂತೆ ಜಮಾ ಖರ್ಚು ಮಾಡುತ್ತಿದ್ದರು ಇತ್ತಲಾಗಿ ಈ ವಂಚನೆ ಹೊರಬಿದ್ದಿದೆ ಅದರಿಂದ ಸಂಘದ ಅಂಗಡಿಯವರ ಬಗ್ಗೆ ವ್ಯಾಪಾರಿ ವರ್ಗದೊಳಗೆ ಅವಿಶ್ವಾಸವೂ ಅಸಮಂಧಾನವೂ ಹುಟ್ಟಿದೆ. ಸಂಘದವರು ಇತ್ತ ಲಕ್ಷ್ಯ ಕೊಟ್ಟು ತಮ್ಮೊಳಗಿನ ಹೊಲೆಯನ್ನು ತೊಳೆದುಹೋಗಿಸುವ ಪ್ರಯತ್ನ ಮಾಡಬೇಕಾಗಿ ಸೂಚನೆಯಿದೆ.

ಈ ತಾಲೂಕಿನ ಕೆಲವೊಂದು ಭಾಗವು, ಸಿವ್ಹಿಲ ವ್ಯವಹಾರಗಳಿಗಾಗಿ, ಹೊನ್ನಾವರ ಕೋರ್ಟಿಗೆ ಒಳಪಟ್ಟಿರುತ್ತದೆ ಆ ಭಾಗದಿಂದ ಕಳೆದ ವರ್ಷ ನೂರಾರು ಸಿವ್ಹಿಲ ಖಟ್ಲೆಗಳು ದಾಖಲಾದದ್ದುಂಟು ಅವು ಈ ಮಳೆಗಾಲದಲ್ಲಿ ವಿಚಾರಕ್ಕೆ ಬಂದರೆ ಪಕ್ಷಕಾರ ಜನರಿಗೆ ಅತಿ ಕಷ್ಟವಾಗುವದು ವ್ಯವಹಾರಗಳಿಗಾಗಿ ಜನರು ಹೊನ್ನಾವರಕ್ಕೆ ಹೋಗುತ್ತಿರುವ ಪ್ರಸಂಗ ಬಂದರೆ ಇಲ್ಲಿ ಬೇಸಾಯ ಹಾಳಾಗುವದು ನೇರ ಮಳೆಗಾಲದಲ್ಲಿ ಇಲ್ಲಿಂದ ಹೊನ್ನಾವರಕ್ಕೆ ಹೋಗುವದು ಅತಿ ಕಷ್ಟ ! ದೊಡ್ಡ ಗೇರಸಪ್ಪಾ, ಇಟಗಿ ಗೇರಸಪ್ಪಾ ಮಾರ್ಗಗಳ ಮೇಲೆ ಮಳೆಗಾಲದಲ್ಲಿ ತುಂಬಳ ಹೊಳೆಗಳ ಕಾಟವಿದೆ ಗೇರಸಪ್ಪೆಯಿಂದ ಹೊನ್ನಾವರಕ್ಕೆ ಹೋಗಲು ದೋಣಿಗಳೂ ಸರಿಯಾಗಿ ಸಿಗುವದಿಲ್ಲ ಹೊಳೆಗೆ ನೆರೆ ಕಟ್ಟಿದರೆ ದೋಣಿಗಳ ವ್ಯವಹಾರ ಕಟ್ಟಾಗುತ್ತದೆ ಅದ್ದರಿಂದ ಸಿದ್ದಾಪುರ ಬದಿಯ ಪಕ್ಷಕಾರರ ಪ್ರಕರಣಗಳನ್ನು ಮಳೆಗಾಲದಲ್ಲಿ ಅಂದರೆ ಜೂನ-ಜುಲಾಯ-ಆಗೋಸ್ಟ-ಸಪ್ಟಂಬರ ತಿಂಗಳುಗಳಲ್ಲಿ ವಿಚಾರಕ್ಕೆ ತಕ್ಕೊಳ್ಳದಂತೆ ಹೊನ್ನಾವರ ದಿವಾಣಿ ಕೋರ್ಟಿಗೆ ಜಿಲ್ಲಾ ಜಡ್ಜರೇ ಸರಕಾರದವರೇ ಅಪ್ಪಣೆ ಮಾಡಬೇಕೆಂದು ಸಿದ್ದಾಪುರ ತಾಲೂಕಿನ ನಾಗರಿಕರು ಪ್ರಾರ್ಥಿಸುತ್ತಾರೆ

(ತಾ ೩೨-೪ ೪೮) ವೀರ-ಸ್ವಾತಂತ್ರ್ಯದ ಸಂಪಾದನೆಯ ಸಂಗ್ರಾಮದಲ್ಲಿ ತಾಲೂಕಿನವರು ಮಾಡಿದ ತ್ಯಾಗದ ಪ್ರತೀಕವಾಗಿ ಇಲ್ಲಿ ಒಂದು "ಸ್ಮಾರಕ ಭವನ" ಕಟ್ಟಿಸಬೇಕೆಂದು ನಿಶ್ಚಯವಾಗಿರುತ್ತಿದ್ದು, ಈ ಬಗ್ಗೆ ರಾ। ಗೋಪಾಳ ಮಡಗಾಂವಕರ ಇವರ ಅಧ್ಯಕ್ಷತೆಯಲ್ಲಿ ಒಂದು ವಿಶ್ವಸ್ತ ಮಂಡಳವೂ ನೇಮಿಸಲ್ಪಟ್ಟಿದೆ

ಹೊನ್ನಾವರ ತಾಲೂಕ ಮಂಕಿಯೊಳಗಿನ ಒಂದು ದೇವಾಲಯದ ಜೀರ್ಣೋದ್ಧಾರಕ್ಕೆಂದು ಸೇವಾನಿವೃತ್ತ ಶಾನಭೋಗ ರಾ। ತಿಮ್ಮಪ್ಪಾ ಮಂಜಪ್ಪಾ ನಾಯ್ಕ ಇವರು ಈ ತಾಲೂಕಿನ ಹಳ್ಳಿಗಳಲ್ಲಿ ವಂತಿಗೆಗಳನ್ನು ಕೂಡಿಸುತ್ತಾರೆ ಈ ಜೀರ್ಣೋದ್ಧಾರಕ್ಕೆ ೧೫-೨೦ ಸಾವಿರ ರೂ ತಗಲುವದೆಂದು ಅವರ ಅಂದಾಜು ಹಳ್ಳಿಗಳೊಳಗಿನ ಕೆಲವು ಶಾನಭೋಗ ಪಟೇಲರು ಅವರಿಗೆ ನೆರವಾಗಿ ಕೆಲವೆಡೆ ಜನರಿಂದ ಒತ್ತಾಯದ ವಂತಿಗೆಗಳನ್ನು ಕೊಡಿಸುತ್ತಿದ್ದಾರೆಂಬ ದೂರುಂಟು ಮಂಕಿಯು ದಟ್ಟವಸತಿಯ ಊರೆಂದೂ ಅಲ್ಲಿ ಒಳ್ಳೊಳ್ಳೆ ಶ್ರೀಮಂತರಿದ್ದಾರೆಂದೂ ಹೇಳುತ್ತಾರೆ ಅಂತಹ ಊರೊಳಗಿನ ದೇವಾಲಯದ ಜೀರ್ಣೋದ್ಧಾರಕ್ಕೆ ರಾ। ನಾಯ್ಕರು ಇಲ್ಲಿಯ ಹಳ್ಳಿಗಳ ಜನರಿಂದ ಹಣ ಸಂಗ್ರಹಿಸುವ ಪ್ರಸಂಗ ಯಾಕೆ ಬಂತೆಂಬದು ಒಂದು ಗೂಢ ಸಮಸ್ಯೆಯಾಗಿದೆ ಅಧಿಕಾರಿಗಳೂ ದೇವಾಲಯ ಕಮಿಟಿಯವರೂ ಇದೆಂತಹ ಜೀರ್ಣೋದ್ಧಾರವೆಂಬುದರ ಚೌಕಶಿ ಮಾಡಬೇಕಾಗಿ ಅಪೇಕ್ಷೆಯಿದೆ

(ತಾ ೨೯-೪-೪೮) ರಾಗಿಹೊಸಳ್ಳಿ ಗ್ರಾಮದ ಸ। ನಂ। ೧೧ನ್ನು ಕಾಯಂ ಲಾಗಣಿಗೆ ಬೇಡಿದ ರಾ। ರಂಗಪ್ಪ ನಾಯಕರಿಗೆ ಸ್ಥಳದಲ್ಲಿರುವ ಗಿಡಗಳ ಕಿಮ್ಮತ್ತು ಮತ್ತು ವಾರ್ಷಿಕ ಆಕಾರ ರೂ ೨೫ ಕೊಡುವ ಶರ್ತದಿಂದ ಸದರ ಸ್ಥಳ ಲಾಗಣಿಗೆ ಕೊಡಲ್ಪಟ್ಟಿದೆ ಅದರೆ ಲಾಗಣಿಗೆ ಬೇಡಿ ಅರ್ಜಿಮಾಡಿ ಅರ್ಜಿ ಮಂಜೂರ ಆಗುವ ನಿರೀಕ್ಷಣೆಯಿಂದ ಅವರು ಕಳೆದ ಮಳೆಗಾಲದಲ್ಲಿ ಅಲ್ಲಿ ಸಾಗುವಳಿ ಕೆಲಸ ನಡಿಸಿದ ಅಪರಾಧಕ್ಕಾಗಿ (?) ಅವರು ೩ ವರ್ಷಗಳ ತೀರ್ವೆ ಮತ್ತು ೧ ರೂ. ದಂಡ ತೆರಬೇಕಾಗಿ ಈಗ ಪುನಃ ಹುಕುಮು ಬಂದಿದೆ ! ಬಂಜರ ಬಿದ್ದ ಸ್ಥಳಗಳನ್ನು ಸಾಗುವಳಿ ಮಾಡಲು ಮುಂದಾದವರಿಗೆ ಮೊದಲನೇ ಒಂದು ವರ್ಷದ ಆಕಾರ ಮಾಫಿ ಕೊಡಲಾಗುವದೆಂದು ಸರಕಾರವು ಮೊನ್ನೆಯೇ ಜಾಹೀರ ಮಾಡಿದ್ದುಂಟು ಸರ್ಕಾರದ ಸದ ಈ ಘೋಷಣೆ ರಾ। ರಂಗಪ್ಪ ನಾಯಕರಿಗೆ ವಿಧಿಸಿದ ದಂಡ ಮತ್ತು ದಂಡಾತ್ಮಕ ತೀರ್ವೆಯ ಆಕರಣೆ ಅನ್ಯಾಯವಾಗುವದಿಲ್ಲವೇನು? ಜಿಲ್ಲಾಧಿಪರು ಈ ಪ್ರಕರಣವನ್ನು ಪರಿಶೀಲಿಸಿ ರಾ। ನಾಯಕರಿಗೆ ಯೋಗ್ಯ ನ್ಯಾಯ ಕೊಡಬೇಕಾಗಿ ಸೂಚನೆಯಿದೆ

NOTICE.

Separate sealed tenders in schedule 'B' to be issued by this office are invited for the following works and will be received by the undersigned.

2 Application for schedules "B" will be entertained upto 26-5-1948

Group No.	Name of work	Estimated amount	Earnest money	Security deposit.	Last date for issuing schedules.	Last date & time for receiving schedules
(1)	S R to Sirsi-Kodkani road, miles 2, 3, 4 (Metal & murum collection)	14690/-	147/-	735/-	17 5-48	20 5-48 4 P. M
(2)	S R to Sirsi-Kodkani road miles 5, 6 7. (Metal & murum collection).	15 540/-	155/-	777/-	do-	-do-
(3)	S R to Sirsi-Kodkani road, miles 8, 9, 12/4-8 (Metal & murum collection)	15286/-	153/-	764/-	-do-	-do-
(4)	S R to Sirsi-Kodkani Road. miles 11 & 10/4-3 (Metal & murum collection)	7066/-	71/-	354/-	-do-	-do-

3 Schedules for each work can be obtained on payment of Rs 2/- Other particulars are given in the regular notice issued separately which can be obtained if necessary

Karwar, 30th April 1948

G. N. GODSE,
Executive Engineer, Kanara Division

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವಾರಜ್ಯ" ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ, ಪ್ರಕಟಿಸಿದರು

Reg. No. B. 1270 | Mon ay, 10-5-1948.

ಕಾನಡಾವೃತ್ತ

ವರ್ಷ ೩೬] THE KANARA NEWS. [ಸಂಖ್ಯೆ ೪೫.

ಕುಮಟಾ:- ಸೋಮವಾರ, ತಾ. ೧೦—೫—೧೯೪೮

ಜಾಹೀರಾತುಗಳ ದರ .

ಸ್ಥಳಾವಕಾಶ ಮತ್ತು ಸಮಯ ಅವಲಂಬಿಸಿ ೧ ಸಾಲಿಗೆ ೮ ಆಣೆಯಂತೆ. ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಇಲ್ಲವೆ ಪ್ರತ್ಯಕ್ಷ ತಿಳಿಸಲಾಗುವುದು.

ವರ್ಗಣಿಯ ದರ:

ಕುಮಟೆಯಲ್ಲಿ

ವರ್ಷಕ್ಕೆ ರೂ ೨-೮-೦

ಟಪಾಲದ್ವಾರ ವರ್ಷಕ್ಕೆ ೩-೧-೦

" ೬ ತಿಂಗಳಿಗೆ ೧-೧೦-೦

ಬಿಡಿ ಸಂಚಿಕೆಗೆ ... ೦-೧-೦

ಹಳೇ ಸಂಚಿಕೆಗೆ ... ೦-೪-೦

ವಿ. ಪಿ. ಯಿಂದ ತರಿಸುವವರು ವಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು.

ವರ್ಗಣಿಯು ಮುಂಗಡವಾಗಿ ಸಲ್ಲತಕ್ಕದ್ದು

ಸ್ಥಳೀಕ ವಿಷಯಗಳು.

(ಸ್ಥಳವರ್ತಕನು ಬರೆದುದು)

ದೇಶಾಯಿ ಮತ್ತು ಜಂಗಲ ಅಲಂಪೆಗಳ ಮಂತ್ರಿಗಳಾದ ಮಾನ್ಯ ಮಲ್ಲಿನಗೌಡ ಪಾಟೀಲರು ಕಳೆದ ವಾರ ನಮ್ಮ ಊರಿಗೆ ಬಂದಿದ್ದರು ಶನಿವಾರ ತಾ ೧ನೇ ಮಧ್ಯಾಹ್ನ ೨ ಘಂಟೆಗೆ ಅವರು ಮಾಸ್ತಿಗೋಡ ಕಾಲಕಟ್ಟೆ ಇಂದೂರಿಗೆ ಬರತಕ್ಕವರಿದ್ದರು ಆದರೆ ಅವರು ಪ್ರತ್ಯಕ್ಷ ಬಂದದ್ದು ೪ ಘಂಟೆಗೆ! ಅಲ್ಲಿಯ ವರೆಗೆ ಅಧಿಕಾರಿಗಳೂ ಜನರೂ ಅವರ ಬರವನ್ನು ಕಾಯುತ್ತಿರಬೇಕಾಯಿತು ಮಂತ್ರಿಗಳು ಬಂದವರೇ ಗ್ರಾಮೋದ್ಧಾರ ಮಂಡಲದ ಸಭೆಗಾಗಿ ಈಶ್ವರ ದೇವಸ್ಥಾನಕ್ಕೆ ಹೋದರು ಉಪಹಾರದ ನಂತರ ಅಲ್ಲಿ ಸಭೆಗೆ ಆರಂಭವಾಯಿತು ಮಂತ್ರಿಗಳು ಸಭಾಕಾರ್ಯವನ್ನು ಅರ್ಧ ತಾಸಿನೊಳಗೆ ಮುಗಿಸಿಕೊಂಡರು ! ಸಭೆಯ ಕೆಲಸ ಗಾಂಭೀರ್ಯದಿಂದ ನಡೆಯಿತು ! ಯಾರೂ ಸಭಾಸ್ಥಾನದ ಸಮೀಪ ಸುಳಿಯದಂತೆ ಪೋಲೀಸರ ಕಾವಲು ಇಡಲ್ಪಟ್ಟಿತ್ತು ! ಮಂಡಲದ ಸಭೆ ಮುಗಿದ ಬಳಿಕ ಮಂತ್ರಿಗಳು ಸಾರ್ವಜನಿಕ ಸಭೆಗೆ ಹೋದರು ಇಂದೂರ ಯೋಜನೆಗಾಗಿ ಪ್ರಾಂತಿಕ ಸರಕಾರವು ೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಸಂಕಲ್ಪಿಸಿದೆ, ಈ ಯೋಜನೆಯಂತೆ ಪ್ರತಿ ಎಕರೆಗೆ ರೂ ೩೦೦ ಖರ್ಚು ಬರುತ್ತಿದೆ, ಈಗ ೩೨೦ ಎಕರೆ ಭೂಮಿ ಸಿದ್ಧವಾಗಿದೆ, ಇನ್ನೂ ೯೦೦ ಎಕರೆ ಸಿದ್ಧಮಾಡಲಾಗುವದು, ನಿರಾಶ್ರಿತರನ್ನು ನೆಲಿಸಲು ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರವೂ ಹಲವು ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ, ನಿರಾಶ್ರಿತರ ಅನ್ನ-ವಸ್ತ್ರವನ್ನು ಹಿಂದುಸ್ಥಾನ ಸರಕಾರವು ಪೂರೈಸುವದು, ಕೃಷಿಯ ಖರ್ಚನ್ನು ಪ್ರಾಂತಿಕ ಸರಕಾರವು ಪೂರೈಸುವದು, ನಿರಾಶ್ರಿತರ ಪಿನತ ವೇರೆಯವರಿಗೆ ಈ ಅನುಕೂಲತೆಗಳು ಸಿಗಲಾರವು, ನಿರಾಶ್ರಿತರೂ ಊರವರೂ ಸಹಕಾರ ಮತ್ತು ಸ್ನೇಹದಿಂದ ಉಳಕೊಂಡು ಈ ಯೋಜನೆಯನ್ನು ಸಾರ್ಥಕಗೊಳಿಸಬೇಕು, ನಿರಾಶ್ರಿತರು ಊರವರಿಗೆ ಉಪದ್ರವ ಕೊಡದೆ ಶಾಂತತೆಯಿಂದಲೂ ಸಮಾಧಾನದಿಂದಲೂ ನಡೆಕೊಳ್ಳಬೇಕು. ಊರವರಾದರೂ ಪರಿಸ್ಥಿತಿಯ ಅರಿವು ಪರಿಸ್ಥಿತಿಯನ್ನು ಗ್ರಹಿಸಿ ಅವರನ್ನು ಪ್ರೀತಿಯಿಂದ ನಡಿಸಬೇಕು, ಎಂದು ಮುಂತಾಗಿ ಮಂತ್ರಿಗಳ ಭಾಷಣವಾಯಿತು. ಆ ಮೇಲೆ ಊರವರು ಮಂತ್ರಿಗಳಿಗೆ ಒಂದು ಅರ್ಜಿಯನ್ನು ಸಾದರಪಡಿಸಿ ಕೆಲವೊಂದು ಕ್ಷೇತ್ರವನ್ನು ಸಾಗುವಳಿಯ ಬಗ್ಗೆ ತಮಗೆ ಕೊಡಬೇಕಾಗಿ ಅರಿಕೆ ಮಾಡಿಕೊಂಡರು ಮತ್ತೆ ೧೦ ಎಕರೆಗಳಂತೆ ಹರಿಜನರಿಗೆ ಭೂಮಿ ಸಿಗುವದಾಗಿ ಮಂತ್ರಿಗಳ ಅಪ್ಪಣೆಯಾಯಿತು ಹರಿಜನೇತರ ದೇಶಾಯಿಗಾರರ ಬಗ್ಗೆ ಮಂತ್ರಿಗಳು ಏನೂ ಹೇಳದೆ ಸಭೆಯನ್ನು ವಿಸರ್ಜಿಸಿ ಲಗುಬಗೆಯಿಂದ ಧಾರವಾಡಕ್ಕೆ ಹೊರಟು ಹೋದರು ನಮ್ಮ ಜಿಲ್ಲೆಯಲ್ಲಿ ನಡೆದ ಮಂತ್ರಿಗಳ ಕಾರ್ಯಕ್ರಮವಿಷ್ಟೇ!

⁂

ಇಂದೂರಿಗೆ ೩೫ ಸಿಂಧೀ ನಿರಾಶ್ರಿತ ಕುಟುಂಬಗಳ ೧೦೮ ಜನ ಬಂದಿದ್ದಾರೆ ಇವರಿಗಾಗಿ ೩೫ ಗುಡಿಸಲುಗಳು ಕಟ್ಟಲ್ಪಟ್ಟಿವೆ ಪ್ರತಿಯೊಂದು ೨-೨ ಅಂಕಣಗಳನ್ನು ಹೊಂದಿದ್ದುಂಟು ನಡುವೆ ತಟ್ಟಿ ಕಟ್ಟಿ ಒಂದು ಒಳಗೆ ವಿಭಾಗ ಮಾಡಿದ್ದಾರೆ ಬಾಗಿಲುಗಳೂ ಕಟ್ಟಿಯವೇ ಎಲ್ಲ ಗುಡಿಸಲುಗಳು ಹುಲ್ಲುಹೊದಿಕೆಯವಿರುತ್ತವೆ ಗುಡಿಸಲುಗಳಿಗೆ ತಗಲಿದ ಸಾಹಿತ್ಯವನ್ನು ಜಂಗಲ ಇಲಾಖೆಯವರು ಕೊಟ್ಟಿದ್ದಾರೆ ಆದರೂ ಇವುಗಳಿಗೆ ರೂ ೧೪೦೦ ರಷ್ಟು ಮೇಲು ಖರ್ಚು ಬಂದಿದೆ! ಇಷ್ಟಾಗಿ ಇವು ಜಂಗಾಮಿ ರಷ್ಟು ಗುಡಿಸಲುಗಳಂತೆ. ಹಿತ್ತಲ ಇಲಾಖೆಯವರ ಗುಡಿಸಲುಗಳನ್ನು ಹಿಂದಿನಿಂದ ಕಟ್ಟುವ ಆಲೋಚನೆ ಸರಕಾರಕ್ಕುಂಟು ಮಾರ್ಚ ತಿಂಗಳಲ್ಲಿ ಒಂದು ಮಳೆ ಗಾಳಿ ಬೀಸಿದಾಗ ಈ ಗುಡಿಸಲುಗಳ ಒಳಗೆ ನೀರು ಸೋರಿ ಹುಲ್ಲು ಹಾರಿಹೋದ್ದರಿಂದ ನೀರು ಒಳಗೆ ಸೇರಿ, ಒಳಗಿದ್ದ ನಿರಾಶ್ರಿತರಿಗೆ ಬಹಳ ಕಷ್ಟವಾಯಿತು.

⁂

ಈ ನಿರಾಶ್ರಿತರು ಯಾವಾಗಲೂ ಗುಣುಗುಣುತ್ತಿದ್ದಾರೆ ಅವರಿಗೆ ಸಮಾಧಾನವೆಂಬುದು ಗೊತ್ತೇ ಇಲ್ಲ ಅವರೊಡನೆ ಬಂದ ಅವರಿಗೆ ಮಾರ್ಗದರ್ಶಕರಾಗಿ ನಡೆಯಲು ಇಲ್ಲಿ ಜಂಗಲ ಇಲಾಖೆಯವರು ಇವರಿಗಾಗಿ ಉರುವಲ ಕಡಿದಿಟ್ಟಿದ್ದಾರೆ ಆದರೆ ಅದನ್ನು ಒಡೆದುಕೊಳ್ಳಬೇಕು ಹೊಡೆದೊಯ್ಯುವ ಬದಲು ಈ ಜನರು ಅಡವಿಯಲ್ಲಿ ಸಸಿಗಳನ್ನು ಯಾ ಜಂಗಲದ ಗಿಡಗಳ ಬೇರುಗಳನ್ನು ಕಡಿದು ಗಂಟು ಗಂಟುಗಳನ್ನು ಕಟ್ಟಿಕೊಂಡು ಹೋಗುತ್ತಾರೆ! ಈ ೧೦೮ ಜನರಿಗಾಗಿ ಪ್ರತಿ ದಿನ ೧-೧ ಹಸ್ತ ಹುಲ್ಲು ಬರುತ್ತಿದೆ ಈ ಜನರಿಗೆ ಕೃಷಿಯ ಮಾಹಿತಿ ಇರುವ ೧೦-೧೨ ಮಂದಿಗಳಷ್ಟೇ ಕೃಷಿ ಗೊತ್ತುಂಟು ಉಳಿದವರಲ್ಲ ಅಂಗಡಿಕಾರರು ಇವರಿಗೆ ಬೇಸಾಯದ ಕ್ರಮ ಗೊತ್ತಿಲ್ಲ ಅದನ್ನು ಮಾಡುವ ಅಪೇಕ್ಷೆಯೂ ಇಲ್ಲ! ಈ ಜನರಿಗೆ ಸಿಂಧಿಭಾಷೆಯೊಂದು ಬರುತ್ತದೆ. ಇಬ್ಬರು ಮಾತ್ರ ಹರಕು ಮುರುಕು ಇಂಗ್ಲಿಷ ಮಾತಾಡುತ್ತಾರೆ. ಒಪ್ಪ ಇಲ್ಲ ಹುಡುಗರು ಶಾಲೆಗೆ ಇಲ್ಲಿ ಸಾಲೆ ಇಲ್ಲದಿದ್ದಲ್ಲಿಂದಲೂ ಇವರು ದೂರುತ್ತಾರೆ, ಮಂತ್ರಿಗಳು ಹೊರಟು ಹೋದ ನಂತರ ಇವರು ಜಿಲ್ಹಾಧಿಕಾರಿಗೆ ಹತ್ತಿರ ಕೇಳಿಕೊಂಡು, ತಮಗೆ ಬಹಳ ಕಷ್ಟವಾಗುತ್ತದೆಂದು ದೂರಿಕೊಂಡರು ತಮ್ಮ ಮೇಲ್ವಿಚಾರದ ಬಗ್ಗೆ ಒಬ್ಬ ಅಧಿಕಾರಿಯನ್ನು ನೇಮಿಸಬೇಕೆಂದೂ ಒತ್ತಾಯಿಸಿ ಹೇಳಿದರು! ಇವರ ಮೇಲ್ವಿಚಾರಕ್ಕಾಗಿ ಮುಂಡಗೋಡದಲ್ಲಿರುವ (ನಿರಾಶ್ರಿತ ಶಿಬಿರ) ಮ್ಯಾನೇಜರು ಆಗಾಗ ಇಂದೂರಿಗೆ ಹೋಗುತ್ತಿರುತ್ತಾರೆ

⁂

ನಿರಾಶ್ರಿತರು ಇಂದೂರದಲ್ಲಿ ನೆಲಿಸಲು ಒಪ್ಪಲಿಕ್ಕಿಲ್ಲ ಅವರಿಗೆ ಇಷ್ಟವಿಷ್ಟ ಬೇರೆ ಪ್ರದೇಶಕ್ಕೆ ರವಾನಿಸಿ ಇನ್ನಾವ ಜಾಗಕ್ಕಾಗಿ ತಯಾರಿಸಿದ ಸ್ಥಳಗಳನ್ನು ಊರವರಿಗೆ ಹಂಚಿಕೊಡುವದು ಉಚಿತ ಮಂಡನಗೋಡಕ್ಕೆ ಭೂಮಿ ಕೊಡಬೇಕೆಂದು ನಿರ್ಧರಿಸಿದರೆ, ೧೫ ಹರಿಜನ ಕುಟುಂಬಗಳಿಗೆ ೧೫೦ ಎಕರೆ ಭೂಮಿ ಸಿಗುವದು, ಸರಕಾರದ ಕಟುಕ್ಷವೇಗ ಉತ್ಪತ್ತಿ ಹೆಚ್ಚಿಸುವದರ ಮೇಲೆ ಅದೆ ಸದ್ಯಕ್ಕೆ ಹಿಂದುಸ್ಥಾನದಲ್ಲಿ ಹುಟ್ಟುವ ಆಹಾರ-ಧಾನ್ಯ ಹಿಂದ ಸ್ಥಾನದವರಿಗೆ ಸಾಲುವದಿಲ್ಲ ಅದರಿಂದ ಆಹಾರ ಹುಟ್ಟಿಗೆ ಹೆಚ್ಚು ಬೆಳೆಯನ್ನು ಬೆಳೆಸುವದರ ಮೇಲೆ ಲಕ್ಷವಿಡಬೇಕು ನಿರಾಶ್ರಿತರು ಉದ್ದಿಮೆ ಇದ್ದರು ಮುಸಲ್ಮಾನರು ಕಳಕೊಂಡು ಹಿಂದುಸ್ಥಾನಕ್ಕೆ ಒಂದು ಬಡತನದ್ದೇ ಬಂದು ಇಲ್ಲಾರೆ! ತಮ್ಮ ಜೀವನಕ್ಕೆ ಅವಶ್ಯವುಳ್ಳ ಉತ್ಪತ್ತಿ ಮಾಡಬೇಕೆಂಬ ಗ್ರಹಿಕೆ ಅವರಿಗೆ ಇಲ್ಲ ಈ ನಿರಾಶ್ರಿತರು ಭೂಮಿ ಸರಿಯಾಗಿ ಸಾಗುವಳಿ ಮಾಡದಿದ್ದರೆ ಸಾಗುವಳಿ ಮಾಡಲೊಪ್ಪುವ ಬೇರೆ ಜನರಿಗೆ ಭೂಮಿ ಕೊಡಬೇಕು ಈಗಿನ ದಿನಮಾನದಲ್ಲಿ ಅನ್ನ ಧಾನ್ಯಗಳನ್ನು ಹುಟ್ಟಿಸುವವನೇ ನಿಜವಾದ ದೇಶಭಕ್ತನು ಭೂಮಿ ಸಾಗುವಳಿ ಮಾಡಲು ಒಪ್ಪಿಕೊಳ್ಳುವವರಿಗೆ ಬೇಕಾದ ಅನುಕೂಲತೆಗಳನ್ನು ಸರಕಾರವು ಒದಗಿಸಿಕೊಡಬೇಕು ನಿರಾಶ್ರಿತರನ್ನು ಸರಕಾರವು ಅಲ್ಲಿಯಿಂದಿರಿಂತೆ ನಡಿಸಲು ಯಾರದ್ದೂ ಆಕ್ಷೇಪವಿಲ್ಲ ಆದರೆ ಆದರಿಂದಾಗಿದ ಇಲ್ಲವೆ ಅದಾಗು ಮಾಡಲೊಡಂಬಡದ ಬೇಸಾಯದ ಕೆಲಸವನ್ನು ಅವರಿಂದಲೇ ಮಾಡಿಸುವ ಆಗ್ರಹ ಹಿಡಿದು ಸಾಗುವಳಿಯಾಗಬಹುದಾದ ಭೂಮಿಯನ್ನು ಬಂಜರ ಕೆಡಹುವದು ಶೋಚನೀಯವಾದೀತು ಇದೀಗ ಸಾಗುವಳಿಯ ಕ್ರಿಯಾಕಾಲ್ಯೆ ಹೋದರೆ ಇನ್ನೊಂದು ವರುಷ ಕಾದು ನೋಡಬೇಕಾಗುವದು ಮಾನ್ಯ ಮಂತ್ರಿಗಳು ಇಂದೂರಿನಲ್ಲಿ ಒಂದು ದಿನ ಇದ್ದು, ಸಕಲ ಪರಿಸ್ಥಿತಿ ಪರಾಂಬರಿಸಿ ೧೨೦೦ ಎಕರೆ ಭೂಮಿ ಇದೇ ವರ್ಷದಲ್ಲಿ ಸಾಗುವಳಿಯಾಗುವಂತೆ ವ್ಯವಸ್ಥೆ ಮಾಡಿ ಹೋಗುವರೆಂದು ಜನರು ಎಣಿಸಿದ್ದರು ಆದರೆ ಮಂತ್ರಿಗಳು ವಿಳಂಬದಿಂದ ಬಂದು, ಗಾಬರಿಯಿಂದ ಹೊರಟು ಹೋದರು! ಇಂತಹ ಸಂಚಾರಿ ಕಾರ್ಯಕ್ರಮದಿಂದ ಹೇಳತಕ್ಕ ಪ್ರಯೋಜನವೆಂದೂ ಆಗದು ಸಂಚಾರ ಮಾಡಬಂದ ಅಧಿಕಾರಿಗಳು ಸಂಚಾರದ ಊರಲ್ಲಿ ರಾತ್ರಿ ಕಳೆಯಬೇಕೆಂದು ಒಂದು ನೇಮವುಂಟು ಆ ನೇಮ ಮುರಿದು ಮಂತ್ರಿಗಳು ಸ್ವಲ್ಪ ಕಾಲದಲ್ಲಿ ಬಹಳ ಊರುಗಳನ್ನು ಸುತ್ತುವ ಹವ್ಯಾಸವನ್ನು ಹಿಡಿಯಬಾರದು ಮಾದರಿ ಗ್ರಾಮಗಳನ್ನು ಸಂದರ್ಶನಕ್ಕಾಗಿ ಆರಿಸಿ, ಆ ಗ್ರಾಮಗಳಲ್ಲಿ ಒಂದು ದಿವಸ ಉಳಿಯಬೇಕು, ಮತ್ತು ಆ ಗ್ರಾಮದವರ ಮತ್ತು ಸುತ್ತುಮುತ್ತಲಿನ ಪ್ರದೇಶದ ಜನರ ಹೇಳಿಕೆಗಳನ್ನು ಕೇಳಿಕೊಳ್ಳಬೇಕು. ಅವರ ಕಷ್ಟ-ತೊಂದರೆಗಳನ್ನು ಪರಿಹರಿಸುವ ಉಪಾಯಗಳನ್ನು ಅವರಿಂದ ತಿಳಿದುಕೊಂಡು, ಪರಿಹಾರದ ವ್ಯವಸ್ಥೆ ಮಾಡಬೇಕು ಈಗಿನ ಸಮಯಸಾಧು ಸಂಚಾರದಿಂದ ಜನಸಾಮಾನ್ಯರಿಗೆ ಪ್ರಯೋಜನ ದೊರೆಯುವದಿಲ್ಲ

⁂

ನಮ್ಮ ಜಿಲ್ಲೆಯು ಸಹ್ಯಾದ್ರಿ ಕೊರತೆಯಿಂದರೆ ವಾಹನ ಸೌಕರ್ಯಗಳ ಅಭಾವ ಘಟ್ಟದ ಮೇಲೆ, ಘಟ್ಟದ ಕೆಳಗೆ, ಗ್ರಾಮಾಂತರಗಳಲ್ಲಿ ಸಾಕಷ್ಟು ಕೊರತೆಗಳಿವೆ ಇದರಿಂದ ಗ್ರಾಮಗಳ ಜನರಿಗೆ ಬಹಳ ಕಷ್ಟವಾಗುತ್ತದೆ. ಕೆಲವು ಹಳ್ಳಿಗಳಿಗೆ ಹೋಗಬೇಕಾದರೆ ಸಾಕುಬೇಕಾಗುತ್ತದೆ! ದವಾಖಾನೆ-ಮಹಾಲಕರಿಗಳಿಗೂ ಗ್ರಾಮಾಧಿಕಾರಿಗಳಿಗೂ ಇದರ ಅನುಭವವುಂಟು. ಕಿರ್ಗಿ ಕಾಲದಿನ ಮಾಡು ಬೇಡಾದರು ಕೆಲವು ದಿನಗಳಾದ ಬಳಿಕ್ಕೆ ಹೊಡೆಲಾದ ಗ್ರಾಮಗಳ ಸಂಚಾರಕ್ಕೆ ಹೋಗಿದ್ದರು ಆಗ ಒಬ್ಬನು ಮಾಡುಬೇಕಾದರಿಗೆ ಕಾಣ ಬಂದನು ಮುಖ್ಯಗಳು ಮುಚ್ಚಿ ಆತನ ಕಾಲು ಬೀಗಿತ್ತು! ಹೀಗೆ ಕಾಲು ಬೀಗಿ ೧೦-೧೫ ದಿವಸಗಳಾಗಿದ್ದವು ಸರಕಾರಿ ಗ್ರಾಮ-ಚಿಕಿತ್ಸಾಲಯಕ್ಕೆ ಹೋಗಿ ಉಪಚಾರ ಮಾಡಿಕೊಂಡಿಲ್ಲೇಕೆಂದು ಮಾಮಲೇದಾರರು ಆತಗೆ ಕೇಳಲು, "ಸರಕಾರಿ ಚಿಕಿತ್ಸಾಲಯವುಂಟೆಂಬದು ನನಗೆ ಗೊತ್ತುಂಟು ಆದರೆ ಅಲ್ಲಿ ನಡೆದು ೮ ಮೈಲು ದೂರ ಹೋಗಬೇಕು! ಗಾಡಿಯ ಮೇಲೆ ಹೋಗಲು ಮಾರ್ಗವಿಲ್ಲ ೮ ಮೈಲು ನಡಕೊಂಡು ಹೋಗಿ ಹೊರಟರೆ ಚಿಕಿತ್ಸಾಲಯಕ್ಕೆ ತಲ್ಪುವ ಮುಂಚೆಯೇ ಪ್ರಾಣ ಬಿಡಬೇಕಾಗುವದು! ನೀವು ನಮ್ಮ ಸ್ಥಿತಿ ನೋಡುತ್ತೀರಿ ಒಂದು ಬಿಡಾಗ ಎಲ್ಲೂ ಹಚ್ಚಿ ಅಲೆಯಬೇಕಾದರೆ ನಮಗೆ ಆರೂ ಕಾಲಿ ಕೊಡಬೇಕಾಗುತ್ತದೆ. ಸರಕಾರದಿಂದ ನಮಗೆ ಏನೊಂದೂ ಪ್ರಯೋಜನ ದೊರೆಯುವದಿಲ್ಲ ಇದ್ದಲ್ಲೇ ನಾನಿದ್ದೇನೆ" ಇತ್ಯಾದಿ ಆತ ತನ್ನ ಗೋಳು ಬಿಚ್ಚಿದನು ಆತನನ್ನು ಸಮಾಧಾನಿಸಿದ್ದೇ ಆಶ್ಚರ್ಯ, ಮಾಮಲೇದಾರರಿಗೆ ತಿಳಿದಿತು! ಗ್ರಾಮ ಚಿಕಿತ್ಸಾಲಯದ ಪ್ರಚಾರವನ್ನು ಅವರ ಪ್ರದೇಶದಲ್ಲಿ ಮಾಡಿಸ ಬಡ ಜನರ ಪರಿಂತೆ ಮಾಡುವದು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಭಾರತೀಯರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಕೈತು ಮೂಲಧನ ರೂ ೭,೭೧,೦೦೦/—ಕ್ಕೂ ಮಿಕ್ಕಿದೆ

ಕ್ಷೇಮನಿಧಿಯಲ್ಲಿಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮೀರುವದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೩ರಿಂದ ೩ ವರೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ, ತಾ. ೧೫-೩-೧೯೪೮. | ಕೇ. ವಿಠ್ಠಲದಾಸ ಶೆಣೈ, ಮೆನೇಜಿಂಗ ಡ್ಯಾರೆಕ್ಟರ

ಅಪ್ರಸ್ತುತವೆಂದೂ ಅನಿಸಿಗಬಹುದು! ಸರಕಾರವು ಇದರ ಮೇಲಿಂದ ತಕ್ಕ ಪಾಠ ಕಲಿಯಬೇಕು ಮಾಮಲೇದಾರ-ಮಹಾಲಕರಿಂದಲೂ ಕಾನಫೋರಿಂದಲೂ ಗ್ರಾಮಗಳಲ್ಲಿ ಆಗಬೇಕಾದ ವಾಹನ-ಸೌಕರ್ಯಗಳ ಬಗ್ಗೆ ವರದಿ ತರಿಸ್ಕೊಂಡು ವಾಹನ ಸೌಕರ್ಯ ಕಲ್ಪಿಸುವ ಉದ್ಯೋಗಕ್ಕೆ ತೊಡಗಬೇಕು ಮಾರ್ಗ-ಸೌಕರ್ಯವಿಲ್ಲದ್ದರಿಂದ ಗ್ರಾಮ-ವಾಸಿಗಳು ಹೇಳದ, ಕೇಳದ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ

* * *

ಕಾರವಾರ-ಬಳ್ಳಾರಿ ಮಾರ್ಗದ ಮೇಲಿನ ಸಂಕಗಳ ಜೀರ್ಣೋದ್ಧಾರ ಈ ವರ್ಷ ಆಗುವದಾಗಿ ಪ್ರಾಂತಾಧಿಪರು ಹಾಕಿರುವವರ ಮೇಲಿಂದ ಉಳವರೆ, ಅಘನಾಶಿನಿ ಶರಾವತಿ ವೆಂಕಟಾಪುರ ಹೊಳೆಗಳ ಸಂಕಗಳು ಈಗಾಗಲಾರವೆಂದು ತಿಳಿಯದೇಕಾಗುತ್ತದೆ ಈ ಹೊಳೆಗಳಲ್ಲಿ ದಾಟುವ ಜನ ವಾಹನಗಳಿಗೆ ಈಗ ಬಹಳ ಕಷ್ಟವಾಗುತ್ತಿದೆ ಪ್ರತಿ ಹೊಳೆಗೆ ೨-೩ ಜಂಗಲುಗಳಿರಬೇಕೆಂಬ ನಿಯಮವಿದೆ ಆದರೆ ಇಂಜನೀರ ಇಲಾಖೆಯ ಅಧಿಕಾರಿಗಳ ದೀರ್ಘಸ್ವಪ್ನದ ಪ್ರಭಾವದಿಂದ ಈ ಹೊಳೆಗಳಲ್ಲಿ ಒಂದೊಂದೇ ಜಂಗಲ ಇವೆ! ಇಂಜನೀರ ಇಲಾಖೆಯವರು ೧೯೪೭ರಲ್ಲಿ ಕಟ್ಟಿಸಿಕೊಟ್ಟ ಜಂಗಲುಗಳು ೧೯೪೮ರ ಪ್ರಾರಂಭಕ್ಕೇ ಜೀರ್ಣವಾಗಿ ಹೋಗಿವೆ! ಇಂಜನೀರ ಇಲಾಖೆಯವರು ಕಟ್ಟಿಸಿದ ಜಂಗಲುಗಳು ಅಷ್ಟು ಭದ್ರ ಮತ್ತು ಘಟ್ಟಿಯಿದ್ದಿವೆ ಹೊಸ ಜಂಗಲುಗಳ ಆಯುಷ್ಯಮಾನವನ್ನು ಸರಕಾರವು ನಿರ್ಧರಿಸಿ, ಅಷ್ಟು ಕಾಲ ಯಾವದೇ ಜಂಗಲು ಬಾಳುತ್ತಿಯಾದಿದ್ದರೆ ಆ ಜಂಗಲ ಕಟ್ಟಿಸಿಕೊಟ್ಟ ಅಧಿಕಾರಿಯು ಏನೋ ವಂಚನೆ ಅಲ್ಲವೆ ದುರ್ಲಕ್ಷ ಮಾಡಿರುತ್ತಾನೆಂದು ಹಿಡಿದು ನಡೆಯಬೇಕು ಮತ್ತು ಹೊಸ ಜಂಗಲು ಕಟ್ಟಲು ಬೇಕಾದ ಹಣವನ್ನು ಆ ಅಧಿಕಾರಿಯಿಂದ ವಸೂಲ ಮಾಡುವ ಶಿರಸ್ತೆ ಮಾಡಬೇಕು ಅಂದರೆ ಮಾತ್ರ ಜಂಗಲುಗಳು ಸರಿಯಾಗಿ ಕಟ್ಟಲ್ಪಡುವವು ಮತ್ತು ದೀರ್ಘ ಕಾಲ ಬಾಳುವವು

* * *

ಘಟ್ಟದ ಕೆಳಗಿನ ಸದರಿ ಹೊಳೆಗಳಿಗೆ ಬೇಗನೇ ಸಂಕಗಳನ್ನು ಕಟ್ಟಿಸುವದು ಅಗತ್ಯವಿದೆ ವಾಹನ ಸೌಕರ್ಯದ ಸಮಸ್ಯೆ ನಮ್ಮ ಜಿಲ್ಲೆಗೆ ಜೀವಾಳದ ಸಮಸ್ಯೆಯಾಗಿದೆ ಏಕೀಕರಣ, ಪ್ರಾಂತೀಕರಣ ಮೊದಲಾದ ಆಡಂಬರಗಳನ್ನು ನಮ್ಮ ಜಿಲ್ಹೆಯು ಅಪೇಕ್ಷಿಸುವದಿಲ್ಲ ಗ್ರಾಮೋದ್ಧಾರವನ್ನು ಬಯಸುವ ಸರಕಾರವು ಮೊಟ್ಟಮೊದಲು ಈ ಸಮಸ್ಯೆಯನ್ನು ಬಗೆಹರಿಸಬೇಕು ಅದು ಬಗೆಹರಿದರೆ ಮಾತ್ರ ಈಗ ದೇಶದಲ್ಲಿ ಜನತಾ-ಸರಕಾರವು ಬಂದಿದೆಯೆಂದು ಜನಸಾಮಾನ್ಯರಿಗೆ ಮನವರಿಕೆಯಾಗುವಂತಿದೆ

* * *

ನಮ್ಮ ಜಿಲ್ಹೆಯೊಳಗಿನ ರೈತ ಸಂಘಗಳು "ಕಾಂಗ್ರೆಸ ರೈತ ಸಂಘ"ಗಳೆಂಬ ಹೆಸರಿಟ್ಟುಕೊಂಡು ಮೆರೆಯುತ್ತಿದ್ದವೆ ಕಾಂಗ್ರೆಸ-ಸಂಸ್ಥೆಗಳಿಗೂ ಈ ರೈತ-ಸಂಘಗಳಿಗೂ ಸಂಬಂಧವಿಲ್ಲ! ರಾಷ್ಟ್ರೀಯ ಸಭೆಯ ನಿಯಮಗಳಾಗಲಿ ಶಿಸ್ತಾಗಲಿ ಈ ಸಂಘಗಳಿಗೆ ಗೊತ್ತಿಲ್ಲ! ರಾಷ್ಟ್ರೀಯ ಸಭೆಯ ತತ್ವಗಳನ್ನು ಅಲಕ್ಷಿಸಿ ಈ ಸಂಘಗಳು ವ್ಯವಹರಿಸುತ್ತಿವೆ ಇಂಥ ಸಂಸ್ಥೆಗಳಿಗೆ 'ಕಾಂಗ್ರೆಸ'ಪದವನ್ನು ಹಚ್ಚಿಕೊಳ್ಳುವ ಅರ್ಹತೆಯಾಗಲಿ ಅಧಿಕಾರವಾಗಲಿ ಇರುವದಿಲ್ಲ ಆಚಾರ್ಯ ಕೃಪಾಲಾನಿಯವರು ಒಂದು ಪ್ರಕಟನೆ ಹೊರಡಿಸಿ "ಮಹಾತ್ಮಾ, ಗಾಂಧಿ' ಎಂಬ ಶಬ್ದಗಳನ್ನು ಕಂಡಕಂಡ ವರ್ತಕರು ಉಪಯೋಗಿಸಿ ಪ್ರಯೋಜನ ಪಡೆಯುತ್ತಿರುವದು ಅತ್ಯಂತ ಅನುಚಿತವೆಂದೂ ಹಾಸ್ಯಾಸ್ಪದವೆಂದೂ ಸಾರಿದ್ದಾರೆ 'ಕಾಂಗ್ರೆಸ' ಶಬ್ದದ ಅವಸ್ಥೆಯಾದರೂ ಈಗ ಅದೇ ಬಗೆಯದಾಗಿದೆ ಕಾಂಗ್ರೆಸಿನ ತತ್ವ ಪಾಲಿಸದ ಮತ್ತು ಕಾಂಗ್ರೆಸ್ಸಿನ ಅಂಕೆಯಲ್ಲಿಲ್ಲದ ಬಹುತರ ಸಂಸ್ಥೆಗಳು ಕಾಂಗ್ರೆಸ ಶಬ್ದವನ್ನು ಉಪಯೋಗಿಸಿ ಬಹುಜನಸಮಾಜದಲ್ಲಿ ರಾಷ್ಟ್ರೀಯ ಸಭೆಗಿರುವ ಗೌರವದ ಪ್ರಯೋಜನವನ್ನು ಪಡೆಯ ತೊಡಗಿರುವದರಿಂದ ರಾಷ್ಟ್ರೀಯ ಸಭೆಯ ಗೌರವ ಕುಂದತೊಡಗಿದೆ. ಕಾಂಗ್ರೆಸ ಸರಕಾರಗಳು ಅಧಿಕಾರಕ್ಕೆ ಬಂದಂದಿನಿಂದಲೇ ಕಾಂಗ್ರೆಸ ಶಬ್ದದ ದುರುಪಯೋಗವು ಹೆಚ್ಚಾಗಿದೆ ಇಂಥ ದುರುಪಯೋಗವನ್ನು ಕಾಂಗ್ರೆಸ ಸರಕಾರಗಳು ನಿರ್ಬಂಧಿಸತಕ್ಕದ್ದು ರಾಷ್ಟ್ರೀಯ ಸಭೆಯ ಮನ್ನಣೆ ಪಡೆಯದೆ ಕಾಂಗ್ರೆಸ ಶಬ್ದವನ್ನು ತಮ್ಮ ಹೆಸರುಗಳಲ್ಲಿ ಸೇರಿಸಬಾರದೆಂದೂ ರಾಷ್ಟ್ರೀಯ ಸಭೆಯ ಮನ್ನಣೆಯಿಲ್ಲದೆ ಕಾಂಗ್ರೆಸ ಉಪನಾಮ ಧರಿಸುವ ಸಂಸ್ಥೆಗಳಿಗೆ ದಂಡವನ್ನು ಸಿಗಲಿಕ್ಕಿಲ್ಲೆಂದೂ ರಾಜಾಜ್ಞೆ ಹೊರಡಿಸಬೇಕು

* * *

ಹಿಂದುಸ್ಥಾನ ಸರಕಾರವು ನೇಮಿಸಿದ ಬಂದರ ಸಮಿತಿಯ ಶ್ರೀ ಮರೀ ಮತ್ತು ಮಿತ್ರ ಇವರು ಕಳೆದ ಬುಧವಾರ ಕಾರವಾರಕ್ಕೆ ಬಂದು ಆ ಬಂದರವನ್ನು ಪರೀಕ್ಷಿಸಿದರು ಕಾರವಾರಕ್ಕೆ ಬಂದರ ದೃಷ್ಟಿಯಿಂದ ಅನುಕೂಲತೆಗಳುಂಟೆಂದು ಇವರಿಗೂ ಒಪ್ಪಿಗೆಯಾದಂತೆ ಆದರೆ ನೆರೆಯಲ್ಲಿ ಮುರಗಾಂವ ಬಂದರವಿದ್ದುದರಿಂದ ಕಾರವಾರ ಬಂದರಕ್ಕೆ ಅಷ್ಟು ವ್ಯಾಪಾರ ದೊರೆಯಲಾರದೆಂದೂ ಕಾರವಾರದ ಅಭಿವೃದ್ಧಿ ಮಾಡಿ ಅಷ್ಟೇನು ಲಾಭವಾಗಲಿಕ್ಕಿಲ್ಲೆಂದೂ ಅವರ ಅಭಿಪ್ರಾಯವಾದಂತೆ ಕಂಡು ಬಂತು ಶ್ರೀ ವಾಂದ ನಗರಾಧ್ಯಕ್ಷರೂ ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರೂ ಬಂದರ ಸಮಿತಿಯವರನ್ನು ಕಂಡು, ಕಾರವಾರ ಬಂದರವನ್ನು ಅಭಿವೃದ್ಧಿಗೊಳಿಸಿ ಅದಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿದರೆ ಕಾರವಾರವು ಇಡೀ ಹಿಂದುಸ್ಥಾನದಲ್ಲಿ ಪ್ರಥಮ ತರಗತಿಯ ಬಂದರವಾಗುವದೆಂದು ವಾದಿಸಿದರು ಈ ಅಭಿಪ್ರಾಯ ವ್ಯಕ್ತ ಮಾಡಿದರಿಂದಲೂ ಭಾವನ ಪ್ರೇರಿತವಾದದ್ದರಿಂದಲೂ ಶ್ರೀ ಮಿತ್ರರು ಅದಿ ತೋರಿಸಿದರಂತೆ ಗುರುವಾರ ಉಭಯತರೂ ಗೋವೆಗೆ ಹೋಗಿ ರೇಲ್ವೆ ಅಧಿಕಾರಿಗಳಿಂದ ಈ ಬದಿಯ ವ್ಯಾಪಾರ-ವ್ಯವಹಾರಗಳ ಪರಿಮಿತಿಯನ್ನು ತಿಳಕೊಂಡರು ಇಂದು ನಾಳೆ ಅವರು ಭಟಕಳಕ್ಕೆ ಹೋಗುವವರಿದ್ದಾರೆ ಹಾಗೆಯೇ ಮುಂದೆ ಮಲ್ಪೆ, ಮಂಗಳೂರ ಬಂದರಗಳನ್ನು ನೋಡಹೋಗುವರೆಂದು ತಿಳಿಯುತ್ತದೆ ಸಮಿತಿಯವರಲ್ಲಿ ಭಟಕಳ ಬಂದರದ ಅಭಿವೃದ್ಧಿಯ ಬಗ್ಗೆ ಹೆಚ್ಚಿಗೆ ಆಸ್ಥೆ ತೋರುತ್ತದೆ! ಕೆಲವರು ಊಹಿಸುತ್ತಾರೆ ಮುರಗಾಂವ ಬಂದರಗಳಲ್ಲಿದ್ದರೆ ಕಾರವಾರವನ್ನೇ ಸಮಿತಿಯವರು ಎತ್ತಿ ಹಿಡಿಯುತ್ತಿದ್ದರಂತೆ ಅಂತು ಇಂತು ಮುರಗಾಂವ ಬಂದರ ಕಾರವಾರಕ್ಕೆ ಮುಳುವಾಗಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಈ ಕಡಿಮೆಯಾಗಿಲ್ಲ ಕಳೆದ ಮಂಗಳವಾರ ರಾತ್ರಿಯಲ್ಲೂ ಜನ್ಮಾಗಿ ಮಳೆ ಸುರಿಯಿತು ಮೊನ್ನೆ ಶನಿವಾರ ರಾತ್ರಿ ೨-೩॥ ಘಂಟೆಯ ಸುಮಾರಿಗೆ ಬೀಸಿದ ಗಾಳಿಯನ್ನೂ ಮೋಡಮಂಡಲದೊಳಗೆ ನಡೆದ ಗುಡುಗಿನ ಆರ್ಭಟವನ್ನೂ ಕಂಡು ಅಂದು ಬಹಳ ಮಳೆ ಸುರಿಯುವದಾಗಿ ಜನರು ತರ್ಕಿಸಿದ್ದರು ಆದರೆ ಅಷ್ಟು ಮಳೆಯಾಗಲಿಲ್ಲ! ಒಂದಿಷ್ಟು ಮಳೆ ಹನಿಸಿತು ಮಾತ್ರ!

ತಾಲೂಕ ಅಧಿಕಾರಿಗಳೂ ತಾಲೂಕ ಕಾಂಗ್ರೆಸ ಕಮಿಟಿಯವರೂ ಸಹಾಯ ಮಾಡುವ ಎಲ್ಲ ಕೆಲಸಗಳ ಪ್ರತಿನಿಧಿಗಳೂ ಕೂಡಿ ಹಿಂದಿನ ಎಲ್ಲ ಹಂಚುವಿಕೆಯ ಒಂದು ಕ್ರಮವನ್ನು—ಒಂದಿಷ್ಟು ಸೀಧಾ ಕ್ರಮದಂತೆ ಸೀಧಾ ಕ್ರಮವನ್ನು—ಜಾರಿಯಲ್ಲಿ ತರಬೇಕೆಂದು ನಿಶ್ಚಯಿಸಿದ್ದಾರೆ ಪ್ರತಿ ಪೇಟೆಯ ಸೀಧಾ ಕಾರ್ಡುಗಳಂತೆ ಕಾರ್ಡುಗಳು ಕೊಡಲ್ಪಟ್ಟಿವೆ ಎಲ್ಲ ಸಾಮಾನುಗಳ ಅಂಗಡಿಕಾರರಿಗೆ ಕೆಲಕೆಲವು ಮನೆಗಳನ್ನು ನೇಮಿಸಿಕೊಡಲಾಗಿದೆ ಹಳ್ಳಿಗಳಲ್ಲೂ ಇದೇ ಕ್ರಮ ಅನುಸರಿಸುವ ವಿಚಾರವುಂಟು ಆದರೆ ಸೀಧಾ ಪದ್ಧತಿ ಕಾಲದಲ್ಲಿ ಬಂದಷ್ಟು ಎತ್ತುವ ಅಧಿಕಾರವು ಕಡಿಮೆ ಎಲ್ಲ ಈಗ ಒದಗಿರುವದರಿಂದ ಆಯಾ ಹಳ್ಳಿಗಳ ಎಲ್ಲ ಎಷ್ಟು ಕೊಡಬೇಕು ಮತ್ತು ಅದನ್ನು ಹಂಚಿ ಕೊಡುವದು ಹೇಗೆ ಎಂದು ನಿರ್ಧರಿಸುವದು ಕಷ್ಟ! ಜಾತಿಯ ಎಲ್ಲ ಪೂರೈಕೆಯು ಇನ್ನು ಕೆಲ ಕಾಲವಾದರೂ ಹೆಚ್ಚುವಂತಿಲ್ಲ ಇನ್ನೂ ಕಡಿಮೆಯಾಗುವ ಲಕ್ಷಣಗಳೇ ಕಾಣುತ್ತಿವೆ ಆದ್ದರಿಂದ ಹಳ್ಳಿಗರು ಜಾತಿ ಎಲ್ಲೆಯ ಮೇಲೆ ಅವಲಂಬಿಸಿರದೆ ಹಿರಿಯರ ಕಾಲದ ಸ್ವದೇಶಿ ಎಲೆಗಳ ಮೇಲೆ ಅವಲಂಬಿಸಿರುವದು ಉತ್ತಮ ಜಾತಿ ಎಲ್ಲೆಯ ಮೇಲೆಯೇ ಅವಲಂಬಿಸಿರುವವರಿಗೆ ಸಮರ್ಥ ಕಷ್ಟ ತಪ್ಪಿದ್ದಿಲ್ಲ

ರಾ॥ ಶಿಕಾರ್ಪುರ ಮಹಾದೇವರು ಕಳೆದ ಸೋಮವಾರವೇ ಅಧಿಕಾರವನ್ನು ರಾಮಾ ಶಿರಸ್ತೇದಾರರ ಕಡೆಗೆ ಒಪ್ಪಿಸಿ ರಜೆಯ ಮೇಲೆ ಹೊರಟು ಹೋಗಿದ್ದಾರೆ ಹೊಸ ಮಾಮಲೇದಾರರು ಇನ್ನೂ ಬಂದಿಲ್ಲ

ಸರಕಾರದವರ ಅನ್ನ ಧಾನ್ಯಗಳನ್ನು ಹೇರಿಕೊಂಡು ಇನ್ನೊಂದು ಹಡಗ ೪ ೫ ದಿನಗಳ ಹಿಂದೆ ಇಲ್ಲಿ ಬಂದಿತ್ತು ಆದರೆ ಸಾಗು ಇಳಿಸಿಕೊಳ್ಳುವ ಅನುಕೂಲತೆಗಳು ಇಲ್ಲಿ ಕಡಿಮೆಯಿದ್ದುದರಿಂದ ಅದು ಮಂಗಳೂರಿಗೆ ಸಾಗಿತು ತಿರುಗಿ ಬರುವಾಗ ಇಲ್ಲಿಯ ಸರಕು ಇಳಿಸುವದಂತೆ ಇನ್ನೂ ೨ ಹಡಗಗಳು ಸಂಬಯಿಯಿಂದ ಬರಲಿವೆಯೆಂದು ಸುದ್ದಿಯಿದೆ

ಹಡ ಪ್ರಗಳಲ್ಲಿ ಕಳವಾದ ಸರಕಾರಿ ಅಕ್ಕಿಯ ಬಗ್ಗೆ ಪೋಲೀಸರು ಇನ್ನೂ ವನ್ನಳ್ಳಿ, ಹೆಗ್ಗಿ ಹೊಳೆನಗಡ್ಡೆ ಹಗ್ರೆ ಹಳ್ಳಿಗಳಲ್ಲಿ ಝಡತಿಗಳನ್ನು ಮಾಡುತ್ತಿದ್ದಾರೆ, ಕೆಲಕೆಲವೆಡೆ ಅಕ್ಕಿ ಸಿಗುತ್ತಿದೆ

ಇದೇ ಕಳೆದ ತಾ ೨ನೇ ಹೊಳೆಗದ್ದೆಯಲ್ಲಿ ಗುಡ್ಡಕಟ್ಟೆ ವೆಂಕಟರಮಣ ನಾಯ್ಕ, ಹರನೀರ ಶಿವಪ್ಪ ನಾಯ್ಕ ಹಗ್ರೆ ರೈತ ಸಂಘದ ಪ್ರಮುಖರು ಕಾಲಪ್ಪ, ಮುಕ್ರಿ, ಪಾಮಧಾರಿ ಮೊದಲಾದ ರೈತರ ಸಭೆ ಸೇರಿಸಿ ಸಂಘಶಕ್ತಿಗೆ ಹಣ ಎತ್ತು ನೀವು ಮಾಡಿದರೆಂತಲೂ, ಸ್ವಂತ ಸಾಗುವಳಿಯ ಬಗ್ಗೆ ಭೂಮಿ ಬಿಡಿಸಿಕೊಂಡ ಇಲ್ಲವೆ ಇನ್ನು ಮುಂದೆ ಬಿಡಿಸಿಕೊಳ್ಳುವ ಒಡೆಯರಿಗೆ ರೈತರು ಕೊಳಿಯಾಳುಗಳನ್ನು ಒದಗಿಸಿಕೊಡಬಾರದಾಗಿ ಮತ್ತು ಯಾವದೇ ಬಗೆಯಿಂದ ಅವರಿಗೆ ಸಹಾಯ ನೀಡಬಾರದಾಗಿ ಬೋಧಿಸಿದರೆಂತಲೂ ತಿಳಿಯುತ್ತದೆ ರೈತರ ಕಬ್ಜಾ ತಪ್ಪಿಸಿದ ಹೊಲ-ಭೂಮಿಗಳೊಳಗಿನ ಬೆಳೆಯನ್ನು ಒಡೆಯರಿಗೆ ಒಪ್ಪಿಗೊಡಬಾರದೆಂದೂ, ಸಂಘಶಕ್ತಿಯಿಂದ ಅವರಿಗೆ ಅಡಿಯಾಗಬೇಕೆಂದೂ, ಪ್ರಸಂಗ ಬಂದರೆ ಹೊಡೆದಾಟ ಬಡಿದಾಟ ಮಾಡಲು ಸಿದ್ಧರಿರಬೇಕೆಂದೂ ಅವರು ಉಪದೇಶ ಮಾಡಿದ ಪ್ರಕಾರ ದೆ ಒಡೆಯರಿಗೆ ಬೆಳೆ ಒಪ್ಪಿಗೊಡದೆ ಅವರನ್ನು ಇಳಿಸಿದರೆ ಆ ಹೊಲಗಳ ಮುಂದೆ ರೈತರ ಹೆಸರಲ್ಲೇ ಬೀಳುವದೆಂದು ಅವರು ಆಶೆ ತೋರಿಸಿದ್ದಾರಂತೆ! ಈ ಪ್ರಚಾರ ಇಷ್ಟಪ್ರೇ ಅನಿಷ್ಟಪ್ರೇ ಎಂಬುದರ ವಿಚಾರವನ್ನು ಸರಕಾರವು ಮಾಡಿ, ಅನಿಷ್ಟವಿರುತ್ತದೆಂದು ಅನಿಸಿದರೆ ಅದಕ್ಕೆ ತಡೆಹಾಕುವ ಕ್ರಮ ಕೈಕೊಳ್ಳಬೇಕೆಂದು ಹೊಳೆಗದ್ದೆ ಗ್ರಾಮದ ಹಲವು ನಾಗರಿಕರು ಬಿನ್ನವಿಸುತ್ತಾರೆ

ಗಂಗಾವಳಿಯ ರಾ॥ ಹೊನ್ನಪ್ಪ ಗಾಂವಕಾರರು ಸ್ಥಾನಿಕ ಮಿಠಾಗಾರರನ್ನು ಸಂಘಟಿಸಿ 'ಗಂಗಾವಳಿ ಸೀಮೆಯ ಮಿಠಾಗಾರಿಕೆಯ ಸಹಕಾರಿ ಸಂಘ' ವೆಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ಈ ಸಂಘದ ಮೊದಲನೇ ಮಹಾಸಭೆಗೆ ಪ್ರಾಂತ ಸಾಹೇಬ ರಾ॥ ನಾಯಕರು ಅಧ್ಯಕ್ಷರಾಗಿ, ಸಭಿಕರಿಗೆ ಸಂಘ ಶಕ್ತಿಯ ಮಹತ್ವ ತಿಳಿಸಿ ಹೇಳಿದರೆಂದು ತಿಳಿಯುತ್ತದೆ

ಕಾರವಾರ— (ತಾ ೪-೫-೧೯೪೮) ಇಲ್ಲಿಯ ಕನ್ನಡ ಟ್ರೇನಿಂಗ ಕಾಲೇಜಿನ ವಾರ್ಷಿಕ ಸಮ್ಮೇಲನವು ಕಳೆದ ತಾ ೩ನೇಯಗೆ ರಾ॥ ಮಾಮಲೇದಾರ ನಾಯಕರ ಅಧ್ಯಕ್ಷತೆಯಲ್ಲಿ ಜರುಗಿತು ಮುಂಜಾನೆ ವಿದ್ಯಾರ್ಥಿಗಳ ಆಟ ಪಂದ್ಯಾಟಗಳು ನಡೆದವು, ಸಂಜೆ ಸಭೆಯಲ್ಲಿ ವಿವಿಧ ವಿನೋದ ಪ್ರವೇಶಗಳು ನಡೆದವು, ರಾತ್ರಿ ಕೆಲವು ನಾಟ್ಯಪ್ರಯೋಗಗಳಾದವು ತಾ ೧ರಿಂದ ಈ ಕಾಲೇಜಿಗೆ ಬೇಸಿಗೆಯ ರಜೆ ದೊರೆತಿದೆ ಜೂನ ತಾ ೧ಕ್ಕೆ ಅದು ತಿರುಗಿ ತೆರೆಯಲ್ಪಡುವದು

ಸುದ್ದಿಗಳ ಸಂದೂಕ.

— ಹಿಂದುಸ್ಥಾನದ ಸದ್ಯದ ಗವರ್ನರ-ಜನರಲ್ಲರಾಗಿರುವ ಮೌಂಟ-ಬೆಟನ್ ದೊರೆಗಳು ಇದೇ ಬರುವ ಜೂನ ತಿಂಗಳಲ್ಲಿ ಅಧಿಕಾರ-ತ್ಯಾಗ ಮಾಡಿ ಸ್ವದೇಶಕ್ಕೆ ಮರಳಿ ಹೋಗಲು ನಿಶ್ಚಯಿಸಿರುವದರಿಂದ ಅವರ ಸ್ಥಳದಲ್ಲಿ, ಭಾರತ ಸರಕಾರದ ಸಲಹೆ ತೆಗೆದುಕೊಂಡು, ಈಗ ಪಶ್ಚಿಮ ಬಂಗಾಲದ ಪ್ರಾಂತಾಧಿಪರಾಗಿರುವ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯರನ್ನು ಬ್ರಿಟಿಶ ಭೂಪತಿಗಳು ನೇಮಿಸಿರುತ್ತಾರೆ. ಈ ನೇಮಣೂಕಿಗೆ ಭಾರತದಲ್ಲಿ ಎಲ್ಲರೂ ತಲೆದೂಗುತ್ತಾರೆ. ರಾಜಾಜಿಯವರು ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯರಾಗಿದ್ದಾರೆ, ಗಾಂಧಿ ತತ್ವಗಳ ಸರಿಯಾದ ವಿವರಣೆಯನ್ನು ಮಾಡಬಲ್ಲವರಿದ್ದಾರೆ, ಬುದ್ಧಿವಂತರಿದ್ದಾರೆ ಸ್ವತಂತ್ರ ವಿಚಾರ ಮಾಡಿ ಅದರಂತೆ ನಡೆಯುವವರಿದ್ದಾರೆ. ೧೯೨೦ರಿಂದ ೧೯೪೨ರ ವರೆಗೆ ಗಾಂಧೀಜಿಯವರ ತಂತ್ರದಂತೆ ನಡೆಯುತ್ತಿದ್ದರೂ ೧೯೪೨ರಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದೊಡನೆ ಮತಭೇದ ಬಂದದ್ದರಿಂದ ಹಾಗೂ ಗಾಂಧೀಜಿಯವರು ಆಗ ಹಾಕಿಕೊಟ್ಟ ಮಾರ್ಗ ತಮ್ಮ ಬುದ್ಧಿಗೆ ಒಪ್ಪಿಗೆಯಾಗದ್ದರಿಂದ ರಾಜಾಜಿಯವರು ಕೊಂಗ್ರೆಸ್ಸಿನಿಂದ ಸರಿದು ಹೋಗಿದ್ದರು. ೧೯೪೨ರ ಆಂದೋಲನದಲ್ಲಿ ಅವರು ಸೇರಲಿಲ್ಲ. ಆದರೆ ಗಾಂಧೀಜಿಯವರೂ ಕೊಂಗ್ರೆಸ ಕಾರ್ಯಕಾರಿ ಮಂಡಳದವರೂ ಅವರನ್ನು ಪರಕೀಯರನ್ನಾಗಿ ಎಣಿಸಲಿಲ್ಲ. ಆಗಾಗ ಅವರ ಸಲಹೆಗಳನ್ನು ಕೇಳುತ್ತಿದ್ದರು. ೧೯೪೫ರ ಸಿಮ್ಲಾ ಪರಿಷತ್ತಿನ ನಂತರ ರಾಜಾಜಿಯವರು ಪುನಃ ಕೊಂಗ್ರೆಸ್ಸಿನಲ್ಲಿ ಸೇರಿ ಕೊಂಗ್ರೆಸ್ಸಿನ ಮುಂದಾಳುಗಳಾದರು. ೧೯೪೬ರಲ್ಲಾದ ಮದ್ರಾಸ ಪ್ರಾಂತಿಕ ಚುನಾವಣೆಗಳಲ್ಲಿ ಶ್ರೀ ಆಚಾರ್ಯರು ಆರಿಸಿ ಬಂದು ಮದ್ರಾಸ ಪ್ರಾಂತದ ಮುಖ್ಯ ಮಂತ್ರಿಗಳಾಗಬೇಕೆಂದು ಕೊಂಗ್ರೆಸ ಪಾರ್ಲಮೆಂಟರಿ ಬೋರ್ಡಿನ ಅಪೇಕ್ಷೆಯಿತ್ತು. ಆದರೆ ಮದ್ರಾಸ ಪ್ರಾಂತದ ಕೊಳಕು ಪ್ರಾಂತಿಕ ರಾಜಕಾರಣ ಅಡ್ಡ ಬಂತು! ಆದರಿಂದ ರಾಜಾಜಿಯವರು ಕೆಲ ಕಾಲ ರಾಜಕಾರಣದಿಂದ ಅಲಿಪ್ತರಾಗುಳಿದಿದ್ದರು. ರಾಜಕಾರಣದಿಂದ ನಿವೃತ್ತರಾಗುವ ನಿಶ್ಚಯವನ್ನು ಅವರು ಮಾಡಿದ್ದರು. ಆದರೆ ೧೯೪೬ರ ಸಪ್ಟಂಬರದಲ್ಲಿ ಪಂ|| ನೆಹರೂರವರು ಕೇಂದ್ರ ಸರಕಾರದ ಸೂತ್ರಗಳನ್ನು ಕೈಕೊಂಡು ತಮ್ಮ ಮಂತ್ರಿಮಂಡಳದಲ್ಲಿ ಸೇರಲು ಆಚಾರ್ಯರಿಗೆ ಬಿನ್ನವಿಸಿದಾಗಲೇ ಅವರು ಒಪ್ಪಿಕೊಂಡರು. ಮತ್ತು ಮುಂದೆ ಭಾರತವು ಸ್ವತಂತ್ರವಾದ ಮೇಲೆ ಪಶ್ಚಿಮ ಬಂಗಾಲದ ಗವರ್ನರರಾದರು. ೧೯೪೨ರಿಂದ ೧೯೪೫ರ ವರೆಗೆ ರಾಜಾಜಿಯವರು ನಡೆಸಿದ ರಾಜಕಾರಣವನ್ನು ನೋಡಿ ಬಂಗಾಲಿಗಳು ಮೊದಮೊದಲು ಅವರ ನೇಮಕಕ್ಕೆ ವಿರೋಧ ಪ್ರದರ್ಶಿಸಿದ್ದರು. ಆದರೆ ಮುಂದೆ ರಾಜಾಜಿಯವರ ಪ್ರತ್ಯಕ್ಷ ಆಚಾರ-ವಿಚಾರ ಉಚ್ಚಾರಗಳನ್ನು ಕಂಡು ಪವಿತ್ರರಾದ ಬಂಗಾಲಿಗಳು ತಮ್ಮ ವಿರೋಧವನ್ನು ಕೆಲವೇ ದಿನಗಳಲ್ಲಿ ಸಂಪೂರ್ಣ ಮರೆತು ಬಿಟ್ಟರು. ಇಂತಹ ಸ್ವತಂತ್ರ ವ್ಯಕ್ತಿಯು ಮೇಧಾವಿ ತ್ಯಾಗಿಗಳು ಭಾರತದ ಸರ್ವೋಚ್ಚ ಪದಗಳಾಗುತ್ತಿದ್ದುದು ಸಮಸ್ತರಿಗೂ ಸಂತೋಷವನ್ನುಂಟುಮಾಡುವದರಲ್ಲೇನಾಶ್ಚರ್ಯ ?

— ಪಾಕಿಸ್ತಾನ ರೇಲ್ವೆಗಳಲ್ಲಿ ಕೆಲಸ ಮಾಡಲಿಚ್ಛಿಸುತ್ತೇವೆಂದು ಹೇಳಿ ಪಾಕಿಸ್ತಾನಕ್ಕೆ ಹೋಗಿದ್ದ ೧೮೦೦೦ ಮುಸ್ಲಿಮ ನೌಕರರು ಈಗ ಪಾಕಿಸ್ತಾನ ನೌಕರಿ ತಮಗೆ ಸಾಕು ಎಂದು ಹೇಳುತ್ತ, ಹಿಂದುಸ್ಥಾನಕ್ಕೆ ಮರಳಿ ಬಂದಿದ್ದಾರೆ! ಸಿಂಧ ಪ್ರಾಂತದೊಳಗಿನ ಸರಕಾರಿ ಇಲಾಖೆಯ ಹಿಂದು ಅಧಿಕಾರಿಗಳು ಸಿಂಧ ಪ್ರಾಂತ ಬಿಟ್ಟು ಭಾರತಕ್ಕೆ ಬಂದಿರುವದರಿಂದ ಆ ಪ್ರಾಂತದ ಸರಕಾರಿ ಸಂಸ್ಥೆಗಳು ಮುಚ್ಚುವ ಪ್ರಸಂಗ ಬಂದಿದೆ. ಭಾರತವನ್ನು ಬಿಟ್ಟುಹೋದವರಿಗೆ ಆ ಕಚೇರಿಗಳಲ್ಲಿ ನೇಮಿಸಿಕೊಳ್ಳುತ್ತಾರೆ. ಆದರೆ ಅವರಿಗೆ ಸಿಂಧೀ ಭಾಷೆ ಬರುವದಿಲ್ಲ! ಅವರೊಡನೆ ತರು ಬರೆದು ವ್ಯವಹಾರ ಮಾಡಲಿರವು !!

(೬ನೇ ಪುಟದ ಮೇಲೆ ಮುಂದುವರಿದಿದೆ)

ಕೆನರಾ ಕೊಲೇಜ ಸೊಸಾಯಟಿ, ಕುಮಟಾ.

೧೯೪೫ರ ಮೇ ತಿಂಗಳಿಂದ ೧೯೪೮ರ ಮಾರ್ಚ ಕೊನೆಯ ವರೆಗೆ ಸೊಸಾಯಟಿಯು ಮಾಡಿದ ಪ್ರಗತಿಯೂ, ಈ ಅವಧಿಯೊಳಗಿನ ಆದರ ಆಯ-ವ್ಯಯಗಳ ತಕ್ತೆಯೂ

ಸೊಸಾಯಟಿಯ ಕಾರ್ಯದ ಪ್ರಗತಿ

ಉತ್ತರ ಕಾನಡಾ ಜಿಲ್ಲೆಯಲ್ಲಿ ಉಚ್ಚ ಶಿಕ್ಷಣದ ಸಂಸ್ಥೆಗಳನ್ನು ತೆರೆಯುವಬಗ್ಗೆ ನಮ್ಮ ಸೊಸಾಯಟಿಯು ಈವರೆಗೆ ಮಾಡಿದ ಕಾರ್ಯದ ವರದಿಯನ್ನು ಸಾರ್ವಜನಿಕರ ಮುಂದೆ ಇಡಲು ನಮಗೆ ಅತ್ಯಾನಂದವಾಗುತ್ತಿದೆ. ನಮ್ಮ ಕಾನಡಾ ಜಿಲ್ಲೆಯಲ್ಲಿ ಸದ್ಯಕ್ಕೆ ೧೪ ಹಾಯಸ್ಕೂಲುಗಳಿವೆ, ಪ್ರತಿ ವರ್ಷ ಈ ಶಾಲೆಗಳಿಂದ ೩೦೦ಕ್ಕೂ ಹೆಚ್ಚು ತರುಣ-ತರುಣಿಯರು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುತ್ತಾರೆ. ಆದರೆ ಮೆಟ್ರಿಕ್ ತರಗತಿಗಿಂತ ಹೆಚ್ಚಿನ ಶಿಕ್ಷಣ ಕೊಡುವ ಒಂದೂ ಸಂಸ್ಥೆ ಜಿಲ್ಲೆಯಲ್ಲಿರುವದಿಲ್ಲವಾದ್ದರಿಂದ ಮತ್ತು ಪರ ಜಿಲ್ಲೆಗಳಿಗೆ ಹೋಗಿ ಕಲಿಯುವಷ್ಟು ಸಾಂಪತ್ತಿಕ ಸ್ಥಿತಿ ಅನುಕೂಲವಿಲ್ಲದ್ದರಿಂದ ನೂರಾರು ಬುದ್ಧಿಶಾಲಿ, ಉತ್ಸಾಹಿ ಮತ್ತು ತೇಜಸ್ವಿ ತರುಣ-ತರುಣಿಯರು ತಮ್ಮ ಜ್ಞಾನ ಪಿಪಾಸೆಯನ್ನು ನಡವೆಯೇ ಬಿಟ್ಟುಕೊಡಬೇಕಾಗುತ್ತದೆಂಬುದು ಜನ ಜನಿತ ಸಂಗತಿಯಾಗಿದೆ. ಉಚ್ಚ ಶಿಕ್ಷಣ-ಸಂಸ್ಥೆಯ ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಜಿಲ್ಲೆಯಲ್ಲಿ ಒಂದು ಕೊಲೇಜು ತೆರೆಯುವ ಯೋಜನೆಯನ್ನು ಸಿದ್ಧಗೊಳಿಸಲಿಕ್ಕೆ ಮತ್ತು ಆ ಕೊಲೇಜಿನ ಸ್ಥಳ ಮತ್ತು ರೂಪರೇಷೆ ಇವುಗಳ ವಿಚಾರ ಮಾಡಲಿಕ್ಕೆ ೧೯೪೫ರ ಮೇ ತಿಂಗಳ ಕೊನೆಯ ವಾರದಲ್ಲಿ ಜಿಲ್ಲೆಯ ಎಲ್ಲ ಭಾಗಗಳ ಪ್ರಮುಖರದೊಂದು ಸಭೆ ಕುಮಟೆಯಲ್ಲಿ ಕೂಡಿಸಲ್ಪಟ್ಟಿತ್ತು. ಈ ಸಭೆಯಲ್ಲಿ ಕೊಲೇಜ ತೆರೆಯುವ ಕಲ್ಪನೆ ಮಾನ್ಯವಾಯಿತಲ್ಲದೆ, ಅವಶ್ಯವಾಗಿ ಕೊಲೇಜು ತೆರೆದು ನಡಿಸಲಿಕ್ಕೂ ಜಿಲ್ಲೆಯ ಜನರ ಶೈಕ್ಷಣಿಕ ಪ್ರಗತಿಯನ್ನು ಕ್ರಮಬದ್ಧ ಪದ್ಧತಿಯಿಂದ ಸಾಧಿಸಲಿಕ್ಕೂ ಒಂದು ಸಂಘಟಿತ ಸಂಸ್ಥೆಯನ್ನು ಸ್ಥಾಪಿಸುವದು ಉಚಿತವೆಂದು ಭಾವಿಸಿ ಇಂಥ ಸಂಸ್ಥೆಯ ಘಟನೆಯನ್ನು ತಯಾರಿಸುವದಕ್ಕಾಗಿ ಸಭಿಕರು ಒಂದು ಸಮಿತಿಯನ್ನು ನೇಮಿಸಿದರು. ಈ ಸಮಿತಿಯು ಸಿದ್ಧಪಡಿಸಿದ ಘಟನೆಯನ್ನು ಪರೀಕ್ಷಿಸಿ ಮನ್ನಿಸುವದಕ್ಕಾಗಿ ತಾ ೧೪-೧೦-೧೯೪೫ಕ್ಕೆ ಮೇ ತಿಂಗಳ ಸಭೆಗಿಂತ ಹೆಚ್ಚಿಗೆ ಪ್ರಾತಿನಿಧಿಕ ಸ್ವರೂಪದ ಇನ್ನೊಂದು ಸಭೆ ಅದೇ ಕುಮಟೆಯಲ್ಲಿ ಕೂಡಿತ್ತು. ಈ ಸಭೆಯು ಘಟನಾ-ಸಮಿತಿಯು ರಚಿಸಿದ ಘಟನೆಯನ್ನು ಮಾನ್ಯ ಮಾಡಿ, ಅಂದೇ ನಮ್ಮ ಸೊಸಾಯಟಿಯ ಶಂಕು ಸ್ಥಾಪನೆಯನ್ನು ಮಾಡಿತು. ಹೀಗೂ ಸೊಸಾಯಟಿಯು ಪ್ರಥಮತಃ ಕುಮಟೆಯಲ್ಲಿ ಆಗಮ ಶಾಸ್ತ್ರ (ಆರ್ಟ್ಸ) ಮತ್ತು ವಿಜ್ಞಾನ ಶಾಸ್ತ್ರ (ಸಾಯನ್ಸ) ಕೊಲೇಜು ತೆರೆಯತಕ್ಕದ್ದೆಂದು ಈ ಸಭೆಯಲ್ಲಿ ತೀರ್ಮಾನವಾಯಿತು. ಸೊಸಾಯಟಿಯ ಸ್ಥಾಪನೆಯಾದ ಕೂಡಲೆ ಕೊಲೇಜಿನ ಕಟ್ಟಡಗಳಿಗೆ ಒಪ್ಪುವಂತಹ ಮತ್ತು ಅನುಕೂಲವಾದ ಒಂದು ಸ್ಥಳವನ್ನು ಹುಡುಕಿ ತೆಗೆಯಲು ಕಾರ್ಯಕರ್ತರು ಮುಂದಾದರು. ದೇವರ ದಯೆಯಿಂದಲೂ ಸರಕಾರದವರ ಅನುಗ್ರಹದಿಂದಲೂ ಕೆಲವೇ ದಿನಗಳಲ್ಲಿ ಕಾರ್ಯಕರ್ತರ ಪ್ರಯತ್ನಗಳು ಸಫಲವಾಗಿ, ಕುಮಟಾ-ಶಿರ್ಶಿ ಮಾರ್ಗಕ್ಕೆ ಕಾರವಾರ ಕುಮಟಾ ಮಾರ್ಗವು ಕೂಡುವ ಸಂಗಮ ಸ್ಥಳದ ಬಳಿಯಲ್ಲಿ ಇರುವ ಎತ್ತರಗಟ್ಟ ಬೆಟ್ಟದ ಮೇಲೆ ೩೮ ಎಕರೆಗಳಷ್ಟು ವಿಸ್ತೀರ್ಣ ಮತ್ತು ಉತ್ಕೃಷ್ಟ ಸ್ಥಳವು ಸರಕಾರದಿಂದ ಸೊಸಾಯಟಿಗೆ ಉಚಿತವಾಗಿ ಸಿಕ್ಕಿತು. ಈ ಸ್ಥಳದಿಂದ ೩/೪ ಫರ್ಲಾಂಗ ಅಂತರದೊಳಗೆ ಅಘನಾಶಿನಿ ನದಿಯು ಹರಿಯುತ್ತಿದೆ. ಇಂತಹ ಅನುಕೂಲತೆಗಳುಳ್ಳ ಸ್ವರ್ಗ-ಸುಂದರ ಸ್ಥಳವು ಸೊಸಾಯಟಿಗೆ ಸಿಕ್ಕಿದ್ದು ಒಂದು ಸುದೈವವೆಂದೇ ಹೇಳಬೇಕು.

ನಮ್ಮ ಸೊಸಾಯಟಿಯು ತಾ ೪-೧-೧೯೪೬ಕ್ಕೆ ೧೮೬೦ನೇ ಇಸವಿಯ ಸಂಘ-ಸಂಸ್ಥೆಗಳ ನೋಂದಣಿಯ (೨೧ನೇ) ಕಾನೂನಿಗನುಸಾರವಾಗಿ ನೋಂದಿಸಲ್ಪಟ್ಟಿದೆ.

ಸೊಸಾಯಟಿಯ ಪ್ರಗತಿಯ ಇತಿಹಾಸದೊಳಗಿನ ಕೆಲವು ಮಹತ್ವದ ದಿನಗಳನ್ನು ಈ ಕೆಳಗೆ ಕೊಡಲಾಗಿದೆ —

ತಾ ೧-೩-೧೯೪೬	ಕಾನಡಾ ಜಿಲ್ಲೆಯ ಜಿಲ್ಹಾಧಿಪರು ಸೊಸಾಯಟಿಗೆ ೩೮ ಎಕರೆಗಳಷ್ಟು ವಿಸ್ತೀರ್ಣ ಭೂಮಿಯನ್ನು ದಾನ ಮಾಡಿ ಕೊಡಲು ಶಿಫಾರಸು ಮಾಡಿ, ಈ ದಾನಕ್ಕೆ ಸರಕಾರದವರ ಸಮ್ಮತಿ ಬೇಡಿದರು
ತಾ ೧೮-೭-೧೯೪೬	ಮೇಲ್ಕಾಣಿಸಿದ ಭೂದಾನಕ್ಕೆ ಅನುಕೂಲವಾಗುವಂತೆ ದಾನ್ಯ ಮಾಡಿಕೊಡಬೇಕೆಂದು ಸಂಕಲ್ಪಿಸಿದ ಕ್ಷೇತ್ರವನ್ನು ಜಿಲ್ಹಾಧಿಪರು ಜಂಗಲ ಕ್ಷೇತ್ರದಿಂದ ಮುಲ್ಕೀ ಕ್ಷೇತ್ರಕ್ಕೆ ಪರಿವರ್ತಿಸಿಕೊಂಡರು.
ತಾ ೩೧-೧೨-೧೯೪೬	ವಸೂಲ ಬಂದ ಕೊಲೇಜ ನಿಧಿಯು ರೂ ೫೭,೪೦೦ಕ್ಕೆ ಮಿಕ್ಕಿತು
ತಾ ೨೯-೩-೧೯೪೭	ಸೊಸಾಯಟಿಗೆ ೩೦ ಎಕರೆ ಭೂಮಿಯನ್ನು ಉಚಿತವಾಗಿ ದಾನ ಕೊಡಲು ಮುಂಬಯಿ ಸರಕಾರವು ಮಂಜೂರಿ ಕೊಟ್ಟಿತು
ತಾ ೧೩-೭-೧೯೪೭	ಮುಂಬಯಿಯ ಸುಪ್ರಸಿದ್ಧ ಶಸ್ತ್ರಚಿಕಿತ್ಸಾ-ವಿಶಾರದ ಡಾ|| ಅಣ್ಣಪ್ಪಾ ವಿ ಬಾಳಿಗಾ ಇವರ ಅಮೃತ ಹಸ್ತದಿಂದ ಕೊಲೇಜಿನ ಮುಖ್ಯ ಕಟ್ಟಡದ ಶಂಕುಸ್ಥಾಪನೆಯಾಯಿತು
ತಾ ೨೭-೭-೧೯೪೭	ಮುಂಬಯಿಯಲ್ಲಿ ಸೊಸಾಯಟಿಯ ಕೊಲೇಜಿನ ಬಗ್ಗೆ ನಿಧಿ ಸಂಗ್ರಹಿಸಲಿಕ್ಕೂ ಸೊಸಾಯಟಿಯ ಕಾರ್ಯಕ್ಕೆ ಇನ್ನಿತರ ಮಾರ್ಗಗಳಿಂದ ನೆರವಾಗಲಿಕ್ಕೂ ಮುಂಬಯಿಯ ವರ್ಚಸ್ವಿ ಗೃಹಸ್ಥರಿಂದ ಒಡಗೂಡಿದ ಒಂದು " ಮಧ್ಯವರ್ತಿ ನಿಧಿ ಸಂಗ್ರಹ ಸಮಿತಿ " ಯನ್ನು ನಿರ್ಮಿಸಲಾಯಿತು
ತಾ ೨-೮-೧೯೪೭	ಪೇಟೆಯ ಧಾರಣೆಯಲ್ಲಿ ಪ್ರತಿ ಟನ್ನಿಗೆ ರೂ ೫೦ರಂತೆ ಸೂಟ ಬಿಟ್ಟು ಸೊಸಾಯಟಿಯ ಕಟ್ಟಡಗಳಿಗೆ ಅವಶ್ಯವಿರುವ ೨೦೦ ಟನ್ನು ಸಿಮೆಂಟನ್ನು ಪೂರೈಸಲು ಸಿಮೆಂಟ ಮಾರ್ಕೆಟಿಂಗ ಕಂಪನಿ ಒಫ್ ಇಂಡಿಯಾ ಇವರು ಒಡಂಬಟ್ಟರು
ತಾ ೩-೮-೧೯೪೭	ಸೊಸಾಯಟಿಯ ಬೇಡಿಕೆಯಂತೆ ಸೊಸಾಯಟಿಯ ಕಟ್ಟಡಗಳ ಉಪಯೋಗಕ್ಕಾಗಿ ೫೦೦ ಖಂಡಿಗಳಷ್ಟು ಕಾದಿಟ್ಟ ಜಾತಿಗಳ ಇಮಾರತಿ-ಕಟ್ಟಿಗೆಯನ್ನು ಉಚಿತವಾಗಿ ಕೊಡಬೇಕೆಂದು ಮುಂಬಯಿ ಸರಕಾರವು ಮಂಜೂರ ಮಾಡಿತು
ತಾ ೩೧-೧೨-೧೯೪೭	ವಸೂಲ ಬಂದ ಕೊಲೇಜ ನಿಧಿಯು ರೂ ೧,೦೯,೫೦೦ಕ್ಕೆ ಮಿಕ್ಕಿತು

ಕಟ್ಟೋಣದ ಕೆಲಸಕ್ಕೆ ಬೇಕಾಗುವ ಉಕ್ಕು ಮುಂತಾದ ಸಾಹಿತ್ಯ ಸಕಾಲಕ್ಕೆ ಸಿಗುವದು ಕಠಿಣವಾಗಿರುವದರಿಂದ ಕೊಲೇಜಿನ ಮುಖ್ಯ ಮಂದಿರದ ಕಟ್ಟೋಣವನ್ನು ಮುಂದೂಡಿ, ತತ್ಕಾಲಕ್ಕೆ ಒಂದು ಸಾದಾ, ಚತುಷ್ಕೋಣಾಕಾರದ, ಹೊರಭಾಗದಲ್ಲಿ ೧೫೦'×೧೩೭ ಉದ್ದಗಲವಿರುವ, ಮಾಳಿಗೆಯಿಲ್ಲದ ಕಟ್ಟಡವನ್ನು ಕಟ್ಟಿಸ

ಮುಂಬಯಿ ಪ್ರಾಂತ್ಯ ಸರಕಾರ ಡೆಪ್ಯುಟಿ ರಜಿಸ್ಟ್ರಾರ ಮಂಡಳವನ್ನು ಪುನರ್ಘಟಿಸಿ ಈ ಕೆಳಗಿನ ಅಧಿಕಾರಿಗಳನ್ನೂ ಜನರನ್ನೂ ಅದರ ಸದಸ್ಯರನ್ನಾಗಿ ನೇಮಿಸಿದೆ.—

ಅಧಿಕಾರಿಗಳು:— ಜಿಲ್ಹಾ ಡೆಪ್ಯುಟಿ ರಜಿಸ್ಟ್ರಾರ ಸಾಹೇಬರು, ಎಗ್ರಿಕಲ್ಚರಲ್ ಅಸಿಸ್ಟಂಟ ಡಾಯರೆಕ್ಟರರು, ಬೆಳಗಾಂವ ವಿಭಾಗದ ಸೀಡ್‍ಡೆವಲಪಮೆಂಟ ಆಫೀಸರರು, ಸಹಕಾರಿ ಸಂಘಗಳ ಅಸಿಸ್ಟಂಟ ರಜಿಸ್ಟ್ರಾರರು, ಸಿವ್ಹಿಲ ಸರ್ಜನರು, ಕನ್ಸರ್ವೇಟರರು, ಜಿಲ್ಹಾ ವ್ಯವಸಾಯ ಅಧಿಕಾರಿಗಳು ಮತ್ತು ಜಿಲ್ಹಾ ಸಹಕಾರಿ ಅಧಿಕಾರಿಗಳು (೧೦ ಮಂದಿ).

ಅಧಿಕಾರೇತರ ಸದಸ್ಯರು:— ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರು, ಜಿಲ್ಹಾ ಸೆಂಟ್ರಲ್ ಸಹಕಾರಿ ಬ್ಯಾಂಕಿನ ಅಧ್ಯಕ್ಷರು, ರಾ|| ರಾ|| ಶಿವರಾವ ಶಾಸ್ತ್ರಿ, ದಯಾನಂದ ಪ್ರಭು, ಖಾನಸಾಹೇಬ ಮಹಮ್ಮದ್‍ಹುಸೇನ, ಮಹಾಬಲೇಶ್ವರ ಭಟ್ಟ ಗೋಕರ್ಣ, ವಿ. ಡಿ. ಪಾಲೇಕರ, ಎಸ್. ಜೀ. ಹಬ್ಬು (ಕಾರವಾರ), ಹರಿ ಪ್ರಭು ವಿ. ಬಿ. ನಾಯ್ಕ ಸಗಡಗೇರಿ (ಅಂಕೋಲಾ), ವಿಶ್ವೇಶ್ವರ ಕೆ. ಹೆಗಡೆ, ಸದಾಶಿವ ಪಡುಕೋಣೆ (ಕುಮಟಾ) ಎಸ್. ಎಸ್. ಚಾಲಿಸಗಿ, ಎಸ್. ವಿ. ಫರ್ನಾಂಡಿಸ (ಹೊನ್ನಾವರ), ಕೆ. ಎಸ್. ಯಾಜಿ (ಭಟಕಳ), ಗೋಪಾಳ ದೊಡಗಣಪತಿ, ಪುಟ್ಟಪ್ಪಯ್ಯ ಹೆಗ್ಡೇರ ಮನೆ (ಸಿದ್ದಾಪುರ), ಟಿ. ಆರ್. ಹೆಗಡೆ ಸೋಳಗಾರು, ಎಸ್. ಕೆ. ಹೇಮಂತಶೆಟ್ಟಿ (ಶಿರ್ಸಿ), ಶ್ರೀನಿವಾಸರಾವ ನಾಡಿಗೇರ (ಮುಂಡಗೋಡ), ಆರ್. ಟಿ. ಕಾಮತ (ಹಳಿಯಾಳ), ಟಿ. ಡಿ. ಹೆಗಡೆ, ವ್ಹಿ. ಕೆ. ಶಾಮಂತ (ಸುಪಾ) ಮತ್ತು ಸಂಜೀವರಾವ ಕಲ್ಲಾಪುರ (೨೪ ಮಂದಿ). ಜಿಲ್ಹಾ ಧಿಕಾರಿ ಈ ಸಂಘದ ಅಧ್ಯಕ್ಷರಾಗಿಯೂ, ರಾ|| ಕಲ್ಲಾಪುರ ಉಪಾಧ್ಯಕ್ಷರಾಗಿಯೂ, ರಾ|| ಸೋಳಗಾರ ಹೆಗಡೆಯವರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಇದೇ ಕಳೆದ ಜನವರಿಯ ಪ್ಲಾದೆ ಸರಕಾರ ಶಾಲಾ-ಶಿಷ್ಯವೃತ್ತಿಗಳ ಪರೀಕ್ಷೆಗೆ ಕೂತ ಈ ಕೆಳಗಿನ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಗಳು ಸಿಕ್ಕಿವೆ.—

ಹಾಯಸ್ಕೂಲ ಶಿಷ್ಯವೃತ್ತಿಗಳು:— ಕುಮಾರಿ ನಲಿನೀ ವೈಕುಂಠ ಶಾನಭಾಗ (ಗಿಬ್ಬ), ೨. ವಿಟ್ಠಲ ರಾಮಚಂದ್ರ ಗಾಂವಕಾರ (ಆನಂದಾಶ್ರಮ), ೩. ವಿಶ್ವಂಭರ ಬಾಳಕೃಷ್ಣ ರಾಣೇ (ಸದಾಶಿವಗಡ), ೪. ಉಮೇಶ ಸುಬ್ರಾವ ದುರ್ಗಾಸ್ಕೇರಿ (ಗಿಬ್ಬ), ೫. ಶಾಂತಾ ವೆಂಕಟರಮಣ ಶಟಗಿ (ಎಡ್ವರ್ಡ), ೬. ವಿಶ್ವನಾಥ ಮಹಾಬಲೇಶ್ವರ ವಾಗಳ (ಟೀಪಲ್ಸ, ಅಂಕೋಲಾ), ೭. ಶೇಡಗಿರಿ ಗಣಪತಿ ನಾಯ್ಕ (ಟೀಪಲ್ಸ), ೮. ಮಹಮ್ಮದಖಾನ ಅಬ್ದುಲ ಮುನಾಫಖಾನ (ಶಿವಾಜಿ ಸ್ಕೂಲ, ಹಳಿಯಾಳ), ೯. ಅಬ್ದುಲ ಲತೀಫ ಯಾಕೂಬ ಶೇಖ (ಇಸ್ಲಾಮಿಯಾ).

ಮಾಧ್ಯಮಿಕ ಶಾಲಾ-ಶಿಷ್ಯವೃತ್ತಿಗಳು:— ೧. ಪಾಂಡುರಂಗ ಅಪ್ಪಾ ಮಹಾಲೆ (ಅಂಕೋಲಾ), ೨. ವಸಂತ ರಾಮಚಂದ್ರ ಪೈ (ಹಳಗೆ), ೩. ಗಜಾ

ನನ ಮಹಾಬಲೇಶ್ವರ ಶೆಟ್ಟಿ (ಅಂಕೋಲಾ ೧), ೪ ನೋಬನ ರಾಮಾ ತಳೇಕರ (ಕಾರವಾರ), ೫ ಅನಂತ ರಾಮಚಂದ್ರ ಗಾಂವಕಾರ (ಹೆಗರೆ), ೬. ಪೀತಾಂಬರ ನಾರಾಯಣ ತಾಂಡೇಲ (ಬೇಲೆ), ೭. ಚನ್ನಪ್ಪಾ ವೆಂಕಣ್ಣ ನಾಯಕ (ಅಂಕೋಲಾ ೨), ೮. ಶಾಂತಾ ಗುಲಾಬಿ ಕರಿಯಪ್ಪ ನಾಯ್ಕ (ಅಂಕೋಲಾ ಹೆಣ್ಣು ಶಾಲೆ), ೯. ಶಂಕರ ರಾಮಾ ಕಾರವಾರಕರ (ಕಾರವಾರ ಉರ್ದು ಶಾಲೆ) ೧೦ ಅಹಮ್ಮದಖಾನ ಉಸ್ಮಾನಖಾನ ಮುಲ್ಲಾ (ದಿಬಗಿ), ೧೧ ಮಹಮ್ಮದ ಇಬ್ರಾಹಿಮ ಅಬ್ದುಲ್ ಗಫೂರ ಶೇಖ (ಕಡವಾಡ ಉರ್ದು), ೧೨. ಕುಮಾರಿ ಶರೀಫಾಬಿ ಮಹಮದ ಓಮರ ಶೇಖ (ಸಾಂಕೇರಿ ಉರ್ದು)

ಹೊನ್ನಾವರ— ಹೊನ್ನಾವರದ "ಬಂಗ ಫರಾಸ್ಕ" ಎಂಬವನು ತನ್ನ ಮನೆಯಲ್ಲಿ ಹಗಲಿರುಳು ಸರಾಯಿಯ ವ್ಯಾಪಾರ ನಡೆಸಿದ್ದಾನೆಂತಲೂ, ಅವನಿಗೆ ಹಿಡಿಯಬಂದ ಅಧಿಕಾರಿಗಳು ಬರಿಗೈಯಿಂದ ತಿರುಗಿ ಹೋಗುತ್ತಾರೆಂತಲೂ, ತನ್ನ ವಿರುದ್ಧ ಅಧಿಕಾರಿಗಳಿಗೆ ವರದಿ ಕೊಡುವವರ ಮೇಲೆ ಫಿರ್ಯಾದು ಹಗೆ ಹಿಡಿದು ಕಾಡುತ್ತಾನೆಂತಲೂ, ಅದೇ ರೀತಿ ತನ್ನ ವಿರುದ್ಧ ವರದಿ ಕೊಟ್ಟ ಧುಂಡಿ ಪಟ್ಕರೆ ಮಾಡಿಸಿದನೆಂಬ ಗ್ರಹಿಕೆಯಿಂದ ಕುಳಕೋಡ ಗೋವಿಂದ ದೇಶ ಭಂಡಾರಿ ಅವನಿಗೆ ಕೊಲೆ ಮಾಡುವ ಧಮಕಿ ಹಾಕಿರುತ್ತಾನೆಂತಲೂ ಹೊನ್ನಾವರ ಫೌಜದಾರದಲ್ಲಿ ಒಂದು ದೂರು ದಾಖಲಾಗಿದೆ. ಜಿಲ್ಹಾ ಮೆಜಿಸ್ಟ್ರೇಟರಿಗೂ ಜಿಲ್ಹಾ ಪೋಲೀಸ ಸಾಹೇಬರಿಗೂ ದೂರುಗಳು ಹೋಗಿವೆಯಂತೆ.

ಜಿಲ್ಹಾ ಲೋಕಲ್ ಬೋರ್ಡಿನವರು ಕಳೆದ ಏಪ್ರಿಲ್ ತಿಂಗಳಲ್ಲಿ ತಮ್ಮ ನೌಕರರ ಸಂಬಳದ ಪ್ರಮಾಣ-ಪಟ್ಟಿಯಲ್ಲಿ ಕೆಲವೊಂದು ಸುಧಾರಣೆ ಮಾಡಿದ ಸುದ್ದಿಯುಂಟು. ಈ ಸುಧಾರಣೆಯಲ್ಲಿ ಮಾಸ್ತರಿಂದ ಕ್ಲಾರ್ಕ, ಮೇಸ್ತ್ರಿ, ಸಬ್ ಓವ್ಹರಸೀಯರ ವಗೈರೆ ನೌಕರರಿಗೆ ಬಹಳ ಅನ್ಯಾಯ ಮಾಡಿರುತ್ತಾರಂತೆ. ಬೋರ್ಡ ಕಚೇರಿಯ ಶಿಪಾಯಿಗೆ ಕೊಟ್ಟ ಸಂಬಳದ ಪಟ್ಟಿಗೂ ಅವರ ಸಂಬಳದ ಪಟ್ಟಿಗೂ ಬಹಳ ಅಭ್ಯಂತರ ವಿಲ್ಲವಂತೆ! ಬೋರ್ಡಿನವರು ಪುನಃ ಆಲೋಚನೆ ಮಾಡಬೇಕಾಗಿ ಅರಿಕೆಯಿದೆ.

(೬ನೇ ಪಾನಿನಿಂದ ಮುಂದರಿಸಿದ್ದು.)

ಶಾಮೆಯ ಪೋಲೀಸರು ಮುಂಬಯಿಯ ಕೋಟ್ಯಾಧೀಶರಾಗಿರುವ ಶ್ರೀ ಲಿಂಗೋಜಿಲಾಲಜಿಂದ ಮೋರಾರಜಿ ಇವರನ್ನು, ಅವರ ಸಹಕಾರಿಗಳಾಗಿ ಮಿರಾಂಡಾ ಇವರಿಗೆ ಲಂಚ ಕೊಡಹೋದ ರಾ|| ಬ|| ದಾದಾಭಾಯಿ ಶಹಾ ಇವರನ್ನು ಕಳೆದ ಬುಧವಾರ ಸೆರೆಹಿಡಿದು ಮೆಜಿಸ್ಟ್ರೇಟರ ಮುಂದೆ ಹಾಜರಪಡಿಸಿದ್ದರು. ಮೆಜಿಸ್ಟ್ರೇಟರು ಮೋರಾರಜಿ ಇವರಿಂದ ಹಲ ಲಕ್ಷ ರೂ.ಗಳ ಮತ್ತು ಶಹಾ ಇವರಿಂದ ೧ ಲಕ್ಷ ರೂ.ಗಳ ಜಾಮೀನು ತೆಗೆದುಕೊಂಡು ಬಿಟ್ಟಿರುತ್ತಾರೆ. ಇವರ ಮೇಲಿನ ಖಟ್ಲೆಯ ಕಥೆ ಹೀಗಿದೆ: ಶ್ರೀ ಮೋರಾರಜಿ ಇವರು ೨ ವರ್ಷಗಳ ಹಿಂದೆ ರಿಝರ್ವ ಬ್ಯಾಂಕಿನಲ್ಲಿ ಸಾವಿರ ರೂಪಾಯಿಗಳ ಕೆಲವು ನೋಟುಗಳನ್ನು ಹಾಜರಪಡಿಸಿದ್ದರು ಈ ನೋಟುಗಳು ಕೊಲ್ಹಾಪುರ ಬಟ್ಟೆ ಗಿರಣಿಯವರವೆಂದು ಅವರು ತಿಳಿಸಿದ್ದರಂತೆ ಈ ಮಾತಿನ ಸತ್ಯಾಸತ್ಯತೆಯ ಪತ್ತೆ ಹಚ್ಚಲು ಸರಕಾರವು ಮುಂಬಯಿಯ ಪೋಲೀಸರಿಗೆ ಆಜ್ಞಾಪಿಸಿದಂತೆ, ಡೆ|| ಕಮಿಶನರ ಶ್ರೀ ಮೋರೇ ಮತ್ತು ಶ್ರೀ ಮಿರಾಂಡಾ ಇವರು ಕಳೆದ ಜನವರಿಯಲ್ಲಿ ಕೊಲ್ಹಾಪುರ ಗಿರಣಿಯ ಮುಂಬಯಿ ಆಫೀಸಿನ ಮೇಲೆ ಧಾಡಿ ಮಾಡಿ, ಅಲ್ಲಿದ್ದ ಲೆಕ್ಕದ ಪುಸ್ತಕಗಳನ್ನು ಜಪ್ತ ಮಾಡಿದ್ದರು. ಮೇಲೆ ಹೇಳಿದ ನೋಟುಗಳು ಶ್ರೀ ಮೋರಾರಜಿ ಇವರ ಸ್ವಂತದವಿದ್ದವೆಂದೂ, ಆ ಬಾಬತು ಬ್ಯಾಂಕಿನವರು ವಿಶೇಷ ಚೌಕಶಿ ಮಾಡುವದನ್ನು ತಪ್ಪಿಸಿಕೊಳ್ಳಲು ಮೋರಾರಜಿ ಶೆಟ್ಟರು ಗಿರಣಿಯ ಲೆಕ್ಕದಲ್ಲಿ ಸುಳ್ಳು ಜಮಾ-ಖರ್ಚು ಬರೆದು, ಆ ನೋಟುಗಳು ಗಿರಣಿಯವುಗಳೆಂದು ಕೃತ್ರಿಮ ಕಥೆ ರಚಿಸಿದ್ದರೆಂದೂ ಪೋಲೀಸರು ಕಂಡು ಹಿಡಿದು ಶ್ರೀ ಮೋರಾರಜಿ ಶೆಟ್ಟರ ಮೇಲೂ ಅವರ ಸಹಕಾರರ ಮೇಲೂ ಒಂದು ಖಟ್ಲೆ ಮಾಡಿ ಕೊಟ್ಟಿದ್ದರು. ಈ ಖಟ್ಲೆಯ ಮೂಲ ಪುರುಷರಾದ ಶ್ರೀ ಮಿರಾಂಡಾ ಇವರಿಗೆ ಲಂಚ ಹಾಕಿ ಖಟ್ಲೆಯನ್ನು ಹಸಿದಿ ಮಾಡಿಸಿಕೊಳ್ಳಬೇಕೆಂದು ಮೋರಾರಜಿ ಶೆಟ್ಟರು ಈಗ ೨-೩ ತಿಂಗಳಿಂದ ಪ್ರಯತ್ನ ನಡಿಸಿದ್ದರಂತೆ. ೧೦ ಲಕ್ಷ ರೂ. ಗಳನ್ನು ಲಂಚ ಕೊಡಲಿಕ್ಕೂ ಅವರು ತಯಾರಾಗಿದ್ದರಂತೆ! ಶ್ರೀ|| ಮಿರಾಂಡಾ ಇವರು ಈ ಆಮಿಷಕ್ಕೆ ಬಲಿಯಾಗಲಿಲ್ಲ. ಆದರೆ ಮೋರಾರಜಿ ಶೆಟ್ಟರು ಪುನಃ ಪುನಃ ಕಾಡತೊಡಗಿದ್ದರಿಂದ ಶ್ರೀ|| ಮಿರಾಂಡಾ ಇವರು ತಮ್ಮ ಮೇಲಧಿಕಾರಿಗಳಿಗೆ ಸಾದ್ಯಂತ ವಸ್ತುಸ್ಥಿತಿಯನ್ನು ತಿಳಿಸಿ, ಮೋರಾರಜಿ ಶೆಟ್ಟರನ್ನು ಅವರ ಸಹಕಾರರನ್ನೂ ಬಲೆಯಲ್ಲಿ ಸಿಲುಕಿ ಹಾಕುವ ವ್ಯೂಹ ರಚಿಸಿದರು ಮತ್ತು ಲಂಚ ತಕೊಳ್ಳಲು ಒಪ್ಪಿಗೆಯುಂಟೆಂಬಂತೆ ನಟಿಸಿದರು. ಶ್ರೀ ಮಿರಾಂಡಾ ಇವರು ಲಂಚ ತಕೊಳ್ಳಲು ತಯಾರಾದದ್ದು ಕಂಡು ಶೆಟ್ಟರು ಹಿಗ್ಗಿದರು! ಅಲ್ಲದೆ ಪುನಃ ಧನಾಶೆ ಅವರನ್ನು ಬಿಡಲಿಲ್ಲ. ಹಿಂದೆ ೧೦ ಲಕ್ಷ ರೂ ಕೊಡಲು ತಯಾರಾದ ಶೆಟ್ಟರು ಈಗ ಅದಕ್ಕೆ ಕೃಪಣತೆ ಚೌಕಶಿ ಮಾಡಿ ಕೊನೆಗೆ ೧ ಲಕ್ಷ ರೂ. ಲಂಚ ಕೊಡಲು ಒಪ್ಪಿದರು! ಮತ್ತು ಯಾರಿಗೂ ಸಂಶಯ ಬರಬಾರದೆಂದು ೧ ಲಕ್ಷ ರೂ ಗಳ ದೊಡ್ಡ ಗಂಟು ಕೊಟ್ಟು ರಾ|| ಬ|| ದಾದಾಭಾಯಿ ಶಹಾ ಇವರನ್ನು ಶ್ರೀ|| ಮಿರಾಂಡಾ ಇವರ ಬಂಗಲೆಗೆ ಕಳಿಸಿಕೊಟ್ಟರು. ಅಲ್ಲಿ ಅವರನ್ನು ಗುಪ್ತವೇಷದಿಂದ ಬಂದ ಗುಪ್ತ ಪೋಲೀಸರು ಎತ್ತಿದ ಜಾಲ ಸಹಿತ ಬಂಧಿಸಿ, ಕೊನೆಗೆ ಶ್ರೀ|| ಮೋರಾರಜಿ ಶೆಟ್ಟರನ್ನೂ ಸೆರೆಹಿಡಿದರು.

(ಈ ಕೆಳಗಿನ ೨ ಸಾಲುಗಳು ೬ನೇ ಪುಟದ ೧ನೇ ಕಾಲಮಿನಲ್ಲಿ ಮೊದಲು ಬರತಕ್ಕವಿರುತ್ತವೆ.)

ಹಿರಿಯರ ಆಜ್ಞೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬೇಕೆಂದೂ ಅವರು ಬೋಧಿಸುತ್ತಾರೆ.

ಜೀರ್ಣೋದ್ಧಾರಕ್ಕೆ ನೆರವಾಗಿರಿ.

ಹೊನ್ನಾವರ ತಾಲೂಕ ಮಂಕಿಯ ಶ್ರೀ ವೆಂಕಟರಮಣ ಮತ್ತು ಶ್ರೀ ಹನುಮಂತ ದೇವಸ್ಥಾನಗಳ ಜೀರ್ಣೋದ್ಧಾರದ ಕೆಲಸ ನಡೆದಿದೆ. ಇನ್ನೂ ಬಹಳ ಕೆಲಸ ಆಗುವದುಂಟು. ಸಕಾಲದಲ್ಲಿ ಅವನ್ನು ಮುಗಿಸಬೇಕಾಗಿದೆ ಈ ಮಹಗರ್ಘತೆಯ ಮೂಲಕ ಕಟ್ಟೋಣದ ಸಾಹಿತ್ಯವೆಲ್ಲ ಈಗ ತುಟ್ಟಿಯಾಗಿರುವದರಿಂದ ಸ್ಥಳಿಕರೇ ಈ ಕೆಲಸ ಪೂರೈಸಲಾರರು. ಕಾರಣ ಸ್ಥಳಿಕ, ಪರಸ್ಥಳಿಕರು ಶಕ್ತ್ಯನುಸಾರ ಧನಸಹಾಯ ನೀಡಿ ಪ್ರಾರಂಭಿಸಿದ ಕಾರ್ಯ ಪೂರ್ಣಪಡಿಸಲು ನೆರವಾಗಬೇಕಾಗಿ ಪ್ರಾರ್ಥನೆ. ಈ ಬಗ್ಗೆ ಹಿಂದು ದೇವಳ ಕಮಿಟಿಯವರೂ ಬೇರೆ ಬೇರೆ ಜಾತಿ-ಪಂಗಡಗಳ ಮುಖಂಡರೂ ಹಿಂದೆಯೇ ವಿನಂತಿಪತ್ರ ಹೊರಡಿಸಿದ್ದುಂಟು.

ಮಂಕಿ, ತಾ. ೮-೩-೪೧.

ತಿಮ್ಮಣ್ಣ ಮಂಜಪ್ಪ ನಾಯ್ಕ ಕರ್ಕಿ,
ವ್ಯವಸ್ಥಾಪಕ—ದೇವಳ.

ರೂ. ೫. ಇನಾಮು !!

ಇಂದು ಬೆಳಗ್ಗೆ ೧೦|| ಘಂಟೆಯ ಸುಮಾರಿಗೆ ನಾನು ಸಿದ್ದೀಕ್ ಸ್ಟೋರ್ಸದಲ್ಲಿ ಜವಳಿ ಖರೇದಿಯ ಬಗ್ಗೆ ಹೋದಾಗ ಕಿಸೆಯಲ್ಲಿದ್ದ ಹಣದ (ರೂ. ೫೫ರಷ್ಟು ಇರುತ್ತದೆ) ಪಾಕೀಟು ಕಳವಾಗಿದೆ. ಸದರ ಪಾಕೀಟನ್ನು ಪತ್ತೆಹಚ್ಚಿ ತಂದುಕೊಟ್ಟವರಿಗೆ ರೂ. ೫ ಇನಾಮು ಕೊಡುತ್ತೇವೆ. ಕುಮಟಾ, ತಾ. ೧೦-೫-೧೯೪೧.

ಗಣೇಶ ಪರಮೇಶ್ವರ ಭಟ್ಟ ಕೇದಿಗೆಮನೆ,
ಮೂರೂರ.

ಹೊಸ ಬೇನೆಗೆ ಹೊಸ ಔಷಧಿ !

ಪ್ರಕೃತಿ ಧರ್ಮವಾಗಿ ಬರುವ ಹೊಸ ಬೇನೆಗೆ ಹೊರಗಿನಿಂದ ಹಚ್ಚುವದಕ್ಕೆ—

ಶೇಲಥಾ ನವನಾರಾಯಣ ತೈಲ

ಖಾತ್ರಿಯಾಗಿ ಗುಣ ಮಾಡುತ್ತದೆ.

ಶೇಲಥಾ ಕೆಮಿಕಲ್ ಕಂ., ಸಿರಸಿ.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೩೯ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸು:—

Post Box No. 10,
UDIPI, S. Kanara.

ಲು ಪ್ರಾರಂಭ ಮಾಡಿದೆ. ಈ ಕಟ್ಟಡದಲ್ಲಿ ೩೦'×೨೦' ಉದ್ದಗಲದ ೭ ದೊಡ್ಡ ಕೋಣೆಗಳೂ, ೨೦'×೨೦' ಉದ್ದಗಲದ ೬ ದೊಡ್ಡ ಕೋಣೆಗಳೂ, ೨೦'×೧೦' ಉದ್ದಗಲವಿರುವ ೬ ಸಣ್ಣ ಕೋಣೆಗಳೂ ಇರುತ್ತವೆ. ಕಲ್ಲಿನ ಕೆಲಸವೀಗ ಬಹುತೇಕ ಮುಗಿದಿದೆ; ಮತ್ತು ತಳಪಾಯಕ್ಕೆ ಮಾಡು ಹಾಕುವ ಕೆಲಸವೀಗ ನಡಿಯುತ್ತಿದೆ. ಕೊಲೇಜಿನ ಆವಾರದಲ್ಲಿ ೩ ಉತ್ತಮ ಬಾವಿಗಳನ್ನು ತೋಡಿಸಿದ್ದೇವೆ. ಅವುಗಳಲ್ಲಿ ವಿಪುಲ ನೀರು ಸಿಕ್ಕಿದೆ. ವಿದ್ಯಾರ್ಥಿ-ವಿದ್ಯಾರ್ಥಿನಿಗಳ ಬಗ್ಗೆ ವಸತಿಗೃಹಗಳನ್ನು ಹಾಗೂ ಕೊಲೇಜಿನ ಪ್ರಧಾನಾಧ್ಯಾಪಕರ ಬಗ್ಗೆ ಇತರ ಶಿಕ್ಷಕರ ಬಗ್ಗೆ ಬಿಡಾರಗಳನ್ನು ಕಟ್ಟಿಸುವ ಕೆಲಸವನ್ನು ಬರುವ ಮಳೆಗಾಲದಲ್ಲಿ ಕೈಕೊಳ್ಳುವ ವಿಚಾರವುಂಟು.

ಇವರೆಗೆ ಸೊಸೈಟಿಯು ಮಾಡಿದ ಕಾರ್ಯವು ಬಹಳಷ್ಟು ಇರದಿದ್ದರೂ, ಕೊಲೇಜ-ನಿರ್ಮಾಣದಂತಹ ಮಹಾಕಾರ್ಯ ನಿರ್ವಹಿಸುವ ಶಕ್ತಿಯಿಲ್ಲದ ನಮ್ಮ ಬಡ ಜಿಲ್ಲೆಯ ಸ್ಥಿತಿಗತಿಯ ದೃಷ್ಟಿಯಿಂದ, ಆಶಾದಾಯಕವಿರುವದೆಂದು ಧಾರಾಳವಾಗಿ ಹೇಳಬಹುದು. ಈ ಕಾರ್ಯವನ್ನು ನೆರವೇರಿಸುವದಕ್ಕಾಗಿ, ಇಂದಿನ ಕಠಿಣ ಕಾಲದಲ್ಲಿ ನಮಗೆ ಸಂತೋಷದಿಂದ ಸಹಾಯ ಮಾಡಿದ ದಾತೃಗಳಿಗೂ ಹಲವಾರು ಕಾರ್ಯಕರ್ತರಿಗೂ ನಾವು ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಅದೇ ಮೇರೆಗೆ ಜಿಲ್ಲಾಧಿಕಾರಿಗಳಿಂದ ಮಂತ್ರಿಗಳ ವರೆಗಿನ ಸಕಲ ಸರಕಾರಿ ಅಧಿಕಾರಿಗಳು ಸೊಸೈಟಿಯು ಕೈಕೊಂಡ ಕಾರ್ಯದ ಮಹತ್ವವನ್ನೂ, ಅವಶ್ಯಕತೆಯನ್ನೂ, ಲೋಕ-ಹಿತಕಾರಿತ್ವವನ್ನೂ ಮನಗಂಡು, ಸೊಸೈಟಿಯು ಕಾಲ-ಕಾಲಕ್ಕೆ ಬೇಡಿದ ಸವಲತ್ತುಗಳನ್ನೂ ಸಹಾಯವನ್ನೂ ಔದಾರ್ಯದಿಂದ ಕೊಟ್ಟು ನೆರವಾದ ಬಗ್ಗೆ ಅವರೆಲ್ಲರಿಗೂ ನಮ್ಮ ಮನಃಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಕುಮಟಾ, L. S. KAMAT, G. P. MURDESHWAR.
ತಾ. ೬—೫—೧೯೪೮. ಕಾರ್ಯದರ್ಶಿ. ಅಧ್ಯಕ್ಷ.

ಕೆನರಾ ಕೊಲೇಜ ಸೊಸೈಟಿ, ಕುಮಟಾ.

ತಾ. ೬—೫—೧೯೪೫ರಿಂದ ತಾ. ೩೧—೩—೧೯೪೮ರ ವರೆಗಿನ ಜಮಾ-ಖರ್ಚಿನ ಯಾದಿ

ಜಮಾ	ರೂ. ಆ. ಪೈ.	ಖರ್ಚು	ರೂ. ಆ. ಪೈ.
ಸಾಮಾನ್ಯ ವಂತಿಕೆಗಳು	೧,೧೬,೮೦೮—೪—೫	ಕಟ್ಟಡದ ಕಾರ್ಯ ಕೈಕೊಂಡ ಗುತ್ತಿಗೆದಾರನಿಗೆ ಕೊಟ್ಟ ಮುಂಗಡ	೨೦,೦೦೦—೦—೦
ದಸರೆಯ ಕಾಣಿಕೆಗಳು	೪,೮೮೯—೦—೦	ಪೂರ್ಣಗೊಳಿಸಿದ ಕಾಮಗಾರಿಗಳ ವೆಚ್ಚ	೪,೯೭೨—೧೫—೦
ವಸೂಲ ಬಂದ ಬಡ್ಡಿ	೩೮೦—೧—೭	ಕಟ್ಟಡದ ಸಾಹಿತ್ಯ	೩೬,೪೮೧—೧೩—೯
ಗುತ್ತಿಗೆದಾರನಿಂದ ತಕ್ಕೊಂಡ ಭದ್ರತೆಯ ಇಡಗಂಟು	೫೦೦—೦—೦.	ಕೆಲಸಗಾರರಿಗೆ ಕೊಟ್ಟ ಸಂಬಳ ಮತ್ತು ಕೂಲಿ	೩,೪೫೨—೧೦—೬
		ಡೆಡ್‌ಸ್ಟೋಕ್ ಸಾಹಿತ್ಯ	೩೭—೨—೦
		ಗ್ರಂಥಾಲಯದ ಪುಸ್ತಕಗಳ ಖರೀದಿಗೆ	೭೫—೦—೦
		ಮುದ್ರಣ ಮತ್ತು ಕಚೇರಿಯ ಸಾಹಿತ್ಯ	೭೩೫—೮—೯
		ಪ್ರವಾಸ ವೆಚ್ಚ.	೧,೩೮೬—೧೫—೩
		ಕಂಟಿಂಜನ್ಸಿ ಖರ್ಚು	೭೬—೧೧—೦
		ಟಪಾಲ-ತಂತಿ ವೆಚ್ಚ	೯೫—೧—೯
		ಸಂಕೀರ್ಣ ವೆಚ್ಚ	೫೬೩—೦—೬
		ಬೇಂಕಿಗೆ ಕೊಟ್ಟ ದಲಾಲಿ	೧೬—೧೧—೦
		ನಗದಿ ಶಿಲ್ಕು :— ರೂ. ಆ. ಪೈ.	
		ಖಜಿನದಾರರ ಕೈಯಲ್ಲಿ ೪೫೯—೧೧—೬.	
		ಕಾರ್ಯದರ್ಶಿಗಳ ಕಡೆ ೩೪—೮—೮.	
		ಕುಮಟೆಯ ಬೇಂಕುಗಳಲ್ಲಿ ೫೩,೦೧೫—೯—೪.	
		ಮುಂಬಯಿಯ ಮಧ್ಯವರ್ತಿ ಸಮಿತಿಯ ಕಡೆ ೧೬,೫೧೬—೦—೦.	೭೦,೦೨೫—೧೩—೬
ರೂ.	೧,೨೨,೫೭೭—೬—೦.	ರೂ.	೧,೨೨,೫೭೭—೬—೦

ತಾ. ೩೧—೩—೧೯೪೮ಕ್ಕೆ ಕುಮಟೆಯ ಬೇಂಕುಗಳಲ್ಲಿದ್ದ ಶಿಲ್ಕುಗಳ ವಿವರ.

ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ. ಕುಮಟಾ.	೪೬,೮೫೭—೦—೧.
ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿ., ಕುಮಟಾ.	೭೪೪—೨—೪.
ಕುಮಟಾ ಅರ್ಬನ್ ಕೋ. ಬೇಂಕ, ಲಿ, ಕುಮಟಾ.	೫೧೨೦—೩—೩.
ಬೇಂಕ ಒಫ್ ಸಿಟಿಝನ್ಸ, ಲಿ., ಕುಮಟಾ	೧೮೫—೬—೦.
ಬೇಂಕ ಒಫ್ ರೂರಲ್ ಇಂಡಿಯಾ, ಲಿ, ಕುಮಟಾ.	೧೦೨-೧೪—೦.
ಕಾಮಧೇನು ವಿಟ್ಠಲ ಕೋ. ಬೇಂಕ, ಲಿ., ಬಂಕಿಕೊಡ್ಲ	೬—೦—೦.
	ರೂ. ೫೩,೦೧೫—೯—೪.

ಮೇಲಿನ ತಕ್ತೆಯನ್ನು ಸೊಸೈಟಿಯು ಕಡೆಗಿದ್ದ ಪಾವತಿಗಳು, ಯಾದಿಗಳು, ಬೇಂಕುಗಳ ಪಾಸ-ಬುಕ್ಕುಗಳಲ್ಲಿ ತೋರುವ ಶಿಲ್ಕುಗಳು ಮತ್ತು ಬೇಂಕ ಸರ್ಟಿಫಿಕೇಟುಗಳು ಇವುಗಳೊಡನೆ ಸಂಪೋಲಿಸಿ ನೋಡಲಾಗಿ, ಇದು ಸರಿ ಇರುತ್ತದೆಂದು ಕಂಡು ಬಂದಿದೆ.

ಮಂಗಳೂರ, ತಾ. ೧೭-೪-೧೯೪೮.

B. SHANTARAM RAO,
ಬಿ. ಎ., ಜಿ. ಡಿ. ಎ., ಆರ್. ಎ.,
ಲೆಕ್ಕ-ತಪಾಸಕರು.

(ಮುಂದೆ ೬ನೇ ಪುಟ ನೋಡಿರಿ.)

(೪ನೇ ಪಾನಿನಿಂದ ಮುಂದರಿದದ್ದು.)

— ಹೈದರಾಬಾದದ ನಿಜಾಮರಿಗೆ ತಮ್ಮ ಸ್ಥಾನದ ಹಾಗೂ ಅಧಿಕಾರದ ಶಾಶ್ವತಿಯ ಮತ್ತು ಭದ್ರತೆಯ ಬಗೆ ವಿಶ್ವಾಸವೂ ಇಲ್ಲದಂತೆ ತೋರುತ್ತದೆ. ಅವರು ತಮ್ಮ ಭಾಂಡಾರದೊಳಗಿನ ರತ್ನಾದಿಗಳನ್ನೂ ಭಂಗಾರವನ್ನೂ ವಿಮಾನ ಮಾರ್ಗವಾಗಿ ಅಮೇರಿಕೆಗೆ ಕಳಿಸಲಾರಂಭಿಸಿದ್ದಾರೆಂದೂ ದಕ್ಷಿಣ ಅಮೇರಿಕೆಯ ಅರ್ಜೆಂಟಿನಾ ದೇಶದಲ್ಲಿ ಆಸ್ತಿಯನ್ನು ಕೊಂಡುಕೊಳ್ಳಲು ಉಪಕ್ರಮಿಸಿದ್ದಾರೆಂದೂ ಸುದ್ದಿಗಳು ಬರುತ್ತಿವೆ. (ಕಾಳಸನ್ಮಾನಕ್ಕೆಂದು ಕೆಲ ಸುದ್ದಿಗಾರರು ಇತ್ತೀಚೆಗೆ ಸುದ್ದಿ ತಂದಿದ್ದಾರೆ).

— ಮುಂಬಯಿಯ ಒಕ್ಕಲತನದ (ಟೆನನ್ಸಿ) ಕಾಯದೆಯಲ್ಲಿ ಭೂಮಾಲೀಕರಿಗಾಗಿ ಕಾದಿಟ್ಟ ಕೆಲವು ಸವಲತ್ತು ಇಲ್ಲವೆ ಹಕ್ಕುಗಳನ್ನು ಸಂಪೂರ್ಣದಲ್ಲಿ ತರುವ ಉದ್ದೇಶದಿಂದ ಕೊಂಗ್ರೆಸ ಪಕ್ಷೀಯ ಎಸೆಂಬ್ಲಿ ಸದಸ್ಯರಾಗಿರುವ ಶ್ರೀ ಬಾಬುಭಾಯಿ ಪಟೇಲರು ಸದರಿ ಕಾಯಿದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿಸಿಕೊಳ್ಳಲಿಚ್ಛಿಸುತ್ತಾರೆ. ಈ ಬಗೆ ಕೆಲವು ತಿದ್ದುಪಡಿಯ ಮಸೂದೆಯನ್ನು ತಯಾರಿಸಿ ಸರಕಾರಕ್ಕೆ ಕಳಿಸಿಕೊಟ್ಟಿದ್ದಾರೆ; ಮತ್ತು ಆ ಮಸೂದೆಯನ್ನು ಎಸೆಂಬ್ಲಿಯ ಮುಂದಿನ (ಮಳೆಗಾಲದ) ಅಧಿವೇಶನದಲ್ಲಿ ತಾವು ಎಸೆಂಬ್ಲಿಯ ಮುಂದೆ ಇಡುವೆವೆಂದು ಪೂರ್ವಸೂಚನೆಯನ್ನೂ ಕೊಟ್ಟಿರುತ್ತಾರೆ. ಶ್ರೀ ಪಟೇಲರ ಆ ಮಸೂದೆಯು ತಾ. ೨೧—೪—೧೯೪೮ರ ಮುಂಬಯಿ ಸರಕಾರದ ಗಾಝೆಟಿನಲ್ಲಿ ಪ್ರಕಟವಾಗಿದೆ. ಶ್ರೀ ಪಟೇಲರು ಸೂಚಿಸಿದ ತಿದ್ದುಪಡಿಗಳ ಸಾರ ಇಂತಿದೆ:— (೧) ಸದ್ಯದ ಕಾಯದೆಯಂತೆ ಸಂರಕ್ಷಿತ ಒಕ್ಕಲಿಗರು ಎಂದು ಹೆಸರು ಕೊಡಲ್ಪಟ್ಟವರು "ಸ್ವಂತ ಸಾಗುವಳಿ"ಯಲ್ಲಿ ಬರುತ್ತದೆ. ಅಂತಹ ಸಾಗುವಳಿಯು ಸ್ವಂತ ಸಾಗುವಳಿಯೆಂದೆನಿಸಲ್ಪಡಬಾರದಾಗಿ ಶ್ರೀ ಪಟೇಲರ ಮಸೂದೆ ಸೂಚಿಸುತ್ತದೆ. (೨) ಈಗಿನ ಕಾಯಿದೆಯಂತೆ ಒಡೆಯರು ಎಂದು ಬೇಕಾದಾಗ ೧ ವರ್ಷದ ನೋಟೀಸ ಕೊಟ್ಟು ತಮ್ಮ ಭೂಮಿಯ ಕಬಜೆಯನ್ನು ಪಡೆಯಬಹುದಾಗಿದೆ. ಅಂತಿಷ್ಟೇ ಅವಧಿಯಲ್ಲಿ ಕಬಜೆ ಪಡೆಯಬೇಕೆಂದು ಏನೂ ನಿರ್ಬಂಧವಿಲ್ಲ. ಸ್ವಂತ ಸಾಗುವಳಿಗೆ ಭೂಮಿ ಬೇಕಾದ ಒಡೆಯರು ತಾ. ೧—೧—೧೯೪೯ರೊಳಗೇ ಕಬಜೆ ಬೇಡಬೇಕೆಂದೂ ಆ ನಂತರ ಬೇಡಕೂಡದೆಂದೂ ಶ್ರೀ ಪಟೇಲರು ಕಾಯದೆ ಮಾಡಬಯಸುತ್ತಾರೆ. (೩) ಒಕ್ಕಲಿಗನ ಮನೆಯಿರುವ ಭೂಮಿಯನ್ನು ಒಡೆಯನು ಮಾರುವದಾದಲ್ಲಿ ಅದನ್ನು ಅವನು ಆ ಒಕ್ಕಲಿಗನಿಗೇ — ಆ ಒಕ್ಕಲಿಗನು ಅದನ್ನು ಕೊಳ್ಳಬಯಸುತ್ತಿದ್ದರೆ — ಮಾರಬೇಕಾಗಿ ಸದ್ಯದ ಕಾನೂನಿನಲ್ಲಿದೆ. ಆ ಶರ್ತವನ್ನು ವಿಸ್ತರಿಸಿ, ಭೂಮಿಯನ್ನು ಮಾರಬಯಸುವ ಒಡೆಯನು ಅದನ್ನು ಸಂರಕ್ಷಿತ ರೈತನಿಗೇ ಮಾರಬೇಕೆಂದು ಹೊಸ ನಿಯಂತ್ರಣ ಹಾಕಲು ಶ್ರೀ ಪಟೇಲರು ಮುಂದಾಗಿದ್ದಾರೆ. (೪) ಗೇಣಿಯ ಹಾವತಿಗಳನ್ನು ಕೊಡದಿದ್ದ ಒಡೆಯರ ವಿರುದ್ಧ ಖಟಲೆ ಹೂಡುವ ಕೆಲಸದ — ಪ್ರತ್ಯಕ್ಷ ರೈತನ ಕಳಕಳಿ ಇಲ್ಲದಿದ್ದಾಗ್ಯೂ — ಕ್ರಮ ನಡಿಸಬೇಕೆಂದು ಶ್ರೀ ಪಟೇಲರು ಸೂಚಿಸುತ್ತಾರೆ. ಪಟೇಲರ ಮಸೂದೆಯು ಕಾನೂನ-ಸಭೆಗಳಿಗೆ ಮಾನ್ಯವಾಗಿ ಕಾಯಿದೆಯಾದರೆ ಒಡೆಯರ ಒಡೆತನವೆಂಬುದು ನಷ್ಟವಾಗುವದೆಂದೂ ಪ್ರಾಂತದೊಳಗಿನ ಒಡೆಯರು ಕೂಡಲೇ ಎಚ್ಚೆತ್ತು, ಸಂಘಟಿತರಾಗಿ ಆ ಮಸೂದೆಯನ್ನು ವಿರೋಧಿಸಬೇಕೆಂದೂ ಧಾರವಾಡ ಜಿಲ್ಲೆಯ ಭೂಮಾಲೀಕರ ಸಂಘದ ಕಾರ್ಯದರ್ಶಿಗಳಾದ ಶ್ರೀ ದೇಸಾಯಿ ವಕೀಲರು ಭೂಮಾಲೀಕರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ. ಪಟೇಲರ ಮಸೂದೆಯು ಖಾಸಗಿ ಮಸೂದೆಯಾಗಿರುವದರಿಂದ, ಸರಕಾರಿ ಮಸೂದೆಯಾಗಿಲ್ಲದ್ದರಿಂದ, ಅದ ಕಾಶಾ ವಿರೋಧ ಪ್ರದರ್ಶಿಸಿ ಪ್ರಯೋಜನವಾಗಲಿಕ್ಕಿಲ್ಲೆಂದು ಒಡೆಯರು ತಿಳಿಕೊಳ್ಳಬಾರದೆಂದೂ, ಸಂಘಟಿತರಾಗಿ ತಮ್ಮ

— ಬಟ್ಟೆಯ ನಿಯಂತ್ರಣವು ದ ಮೇಲೆ ಬಟ್ಟೆಯ ವ್ಯಾಪಾರಿಗಳು ಬಟ್ಟೆಯ ಬೆಲೆಗಳನ್ನು ವಿಪರೀತ ಏರಿಸಿ ಕೊಟ್ಟದ್ದರಿಂದ ಸರಕಾರವು ಪುನಃ ಬಟ್ಟೆಯ ನಿಯಂತ್ರಣ ಮಾಡುವ ವಿಚಾರದಲ್ಲಿದೆ. ಬಟ್ಟೆಯ ನಿಯಂತ್ರಣ ಮಾಡುವ ಅಧಿಕಾರಿಗಳ ಕಚೇರಿಯ ಸಿಬಂದಿಯ ವಿಸರ್ಜನೆ ಇಷ್ಟು ದಿನ ನಡೆದಿತ್ತು. ಸರಕಾರದವರು ಆ ವಿಸರ್ಜನೆಯನ್ನು ಈಗ ನಿಲ್ಲಿಸಿ ಆ ಸಿಬಂದಿಯನ್ನು —ಎಂದು ಬೇಕಾದಾಗ ಉಪಯೋಗಕ್ಕೆ ಬರುವದೆಂಬ ದೃಷ್ಟಿಯಿಂದ— ಪೂರ್ವವತ್ ಇಡಲು ಅಪ್ಪಣೆ ಕೊಟ್ಟಿದ್ದಾರೆ. ಸರಕಾರದವರು ಬಟ್ಟೆಯ ಮತ್ತು ನೂಲಿನ ಬೆಲೆಗಳ ಚೌಕಶಿ ಮಾಡಿ ವರದಿಯನ್ನೊಪ್ಪಿಸಲು ಶ್ರೀ ಜಿ ಎಲ್ ಮೆಹತಾ ಇವರ ಅಧ್ಯಕ್ಷತೆಯೊಳಗಿನ ಸಂಶೋಧನ ಸಮಿತಿಗೆ ಆಜ್ಞಾಪಿಸಿರುತ್ತಾರೆ. ಈ ಸಮಿತಿಯ ವರದಿಯ ಹಾದಿಯನ್ನೇ ಸರಕಾರದವರು ನೋಡುತ್ತಿದ್ದರಂತೆ. ಭಾರತ ಸರಕಾರವು ಪುನಃ ನಿಯಂತ್ರಣ ಹೇರಬಹುದೆಂಬ ಸುದ್ದಿ ಪ್ರಕಟವಾದೊಡನೆಯೇ ಮುಂಬಯಿಯ ಮತ್ತು ಅಹ್ಮದಾಬಾದಿನೊಳಗಿನ ಜವಳಿ ಪೇಟೆ ನಡುಗುತ್ತಿದೆ! ಬಟ್ಟೆಯನ್ನು ರಾಶಿ ರಾಶಿಯಾಗಿ ಸಂಗ್ರಹಿಸಿಟ್ಟ ವ್ಯಾಪಾರಿಗಳು ತಮ್ಮ ಸಂಗ್ರಹವನ್ನು ಮಾರಾಟಕ್ಕೆ ತೆಗೆದಿದ್ದಾರೆ! ಆದರೆ ಕೊಳ್ಳುವವರು ಸಿಗುವದಿಲ್ಲ! ಅದರಿಂದ ಜವಳಿಯ ಬೆಲೆಗಳು ಧಡಧಡನೆ ಇಳಿಯುತ್ತಿವೆ. ಬಟ್ಟೆಯ ಸಟ್ಟಾ ಆಡಿದವರು ದಿವಾಳಿ ತೆಗೆಯುವ ಪ್ರಸಂಗ ಬರುತ್ತದೊ ಏನೋ!

— ಕಚ್ಛ ಸಂಸ್ಥಾನದ ಅಧಿಪತಿಗಳೂ ಕಚ್ಛೀ ಪ್ರಜೆಗಳೂ ತಮ್ಮ ಸಂಸ್ಥಾನವನ್ನು ಹಿಂದುಸ್ಥಾನ ಸರಕಾರಕ್ಕೆ ಒಪ್ಪಿಸಲು ಒಪ್ಪಿಕೊಂಡಂತೆ ಇದೇ ಬರುವ ಜೂನ ತಾ ೧ರಿಂದ ಆ ಸಂಸ್ಥಾನದ ಕಾರಭಾರವನ್ನು ಭಾರತ ಸರಕಾರವು ತನ್ನ ಕೈಕ್ಕೆ ತಕ್ಕೊಳ್ಳುವದು. ಈ ಸಂಸ್ಥಾನದ ಆಡಳಿತೆಯನ್ನು ಸಂಸ್ಥಾನದೊಳಗಿನ ಪ್ರಜಾ ಮಂಡಲದ ಸಲಹೆಯಿಂದ ಹಿಂದ-ಸರಕಾರದಿಂದ ನೇಮಕವಾಗುವ ಚೀಫ್ ಕಮಿಶನರನು ನಡಿಸಬೇಕೆಂದು ಗೊತ್ತಾಗಿದೆ. ಕಚ್ಛದ ಮಹಾರಾಜರಿಗೆ ಸದ್ಯಕ್ಕೆ ಇರುವ ಬಿರುದು-ಬಾವಲಿಗಳೂ ವೈಯಕ್ತಿಕ ಹಕ್ಕು-ಬಾಧ್ಯತೆಗಳೂ ಮುಂದೆ ಸಹ ಅಬಾಧಿತವಾಗಿಯೇ ಇರುವವು. ಬಜೆಟಿನ ಬಗ್ಗೆ ಅವರಿಗೆ ನಿರ್ದಿಷ್ಟ ರಕಮು ಕೊಡಲ್ಪಡುವದು.

— ಪಶ್ಚಿಮ ಪಾಕಿಸ್ತಾನದಿಂದ ಓಡಿ ಬಂದ ಮುಸ್ಲಿಮೇತರರು ಅಲ್ಲಿ ಬಿಟ್ಟು ಬಂದ ಸ್ಥಾವರಾಸ್ತಿಯ ಬೆಲೆ ೧೬ ಅಬ್ಜ ರೂಪಾಯಿಗಳಷ್ಟು ಆಗುತ್ತದೆಂದು ಪಾಕಿಸ್ತಾನದಲ್ಲಿ ಭಾರತದ ಹಾಯ ಕಮಿಶನರರಾಗಿರುವ ಶ್ರೀ ಶ್ರೀಪ್ರಕಾಶರು ತಿಳಿಸುತ್ತಾರೆ.

— ಮುಂಬಯಿಯ ಪೋಲೀಸರು ಕಳೆದ ವಾರ ಧನರಾಜ ಬಟ್ಟೆ ಗಿರಣಿಯ ಡಾಯರೆಕ್ಟರರಾದ ಶ್ರೀ ರಾಮ ಗೋಪಾಲ ರುಯಿಯಾ ಎಂಬ ಧನಾಢ್ಯರ ಮೇಲೂ ಸದರಿ ಗಿರಣಿಯ ಮೆನೇಜರ ಮತ್ತು ಕಾರ್ಯದರ್ಶಿ ಇವರ ಮೇಲೂ "ದೊಡ್ಡ ಬೆಲೆಯ ನೋಟುಗಳ ರದ್ದಾತಿಯ ರಾಜಶಾಸನ"ದನ್ವಯ ಖಟ್ಲೆ ಹಾಕಿದ್ದಾರೆ. ರುಯಿಯಾ ಶೆಟ್ಟರು ೧೯೪೬ರ ಜನವರಿಯಲ್ಲಿ ೨೬೬ ಸಾವಿರ ರೂಪಾಯಿಗಳ ನೋಟುಗಳನ್ನು ರಿಝರ್ವ ಬೇಂಕಿನಲ್ಲಿ ಹಾಜರಪಡಿಸಿ, ಅವು ಗಿರಣಿಯ ಮಾಲ್ಕಿಯಾಗಿರುತ್ತವೆಂದು ಪ್ರತಿಜ್ಞಾಲೇಖ ಬರೆದಿಟ್ಟಿದ್ದರಂತೆ. ಈ ಪ್ರತಿಜ್ಞಾ-ಲೇಖವು ಸಂಪೂರ್ಣ ಸುಳ್ಳಿರುತ್ತದೆಂದೂ ನೋಟುಗಳು ರುಯಿಯಾ ಶೆಟ್ಟರ ಸ್ವಂತ ಮಾಲ್ಕಿಯಾಗಿದ್ದವೆಂದೂ ಪೋಲೀಸರ ಅಂಬೋಣವುಂಟು. ಮೆಜಿಸ್ಟ್ರೇಟರು ರುಯಿಯಾ ಶೆಟ್ಟರನ್ನು ೧ ಲಕ್ಷ ರೂಪಾಯಿಗಳ ಜಾಮೀನಿನ ಮೇಲೂ, ಉಳಿದಿಬ್ಬರನ್ನು ೧೦-೧೦ ಸಾವಿರ ರೂಪಾಯಿಗಳ ಜಾಮೀನಿನ ಮೇಲೂ ಬಿಡುಗಡೆ ಮಾಡಿದ್ದಾರೆ.

— ಮುಂಬಯಿಯ ಲಂಚ-ನಿರ್ಮೂಲನ ಖಾತೆಯ ಡೆ|| ಇನ್ಸಪೆಕ್ಟರ ಶ್ರೀ|| ಮಿರಾಂಡಾ ಇವರಿಗೆ ಲಂಚ ಕೊಡ ಮಾಡಿದ ಬಗ್ಗೆ ಮುಂಬಯಿಯ ಲಂಚ-ನಿರ್ಮೂಲನ

(೩ನೇ ಪುಟದ ಮೇಲೆ ಮುಂದರಿಸಿದೆ)

ಕೆನರಾ ಕಾಲೇಜ ಸೊಸೈಟಿ, ಕುಮಟಾ.

ಸನ್ ೧೯೪೮ ಮತ್ತು ೧೯೪೯ನೇ ಇಸವಿಗಳ ಅಧಿಕಾರಸ್ಥರು.

(ತಾ ೬—೫—೧೯೪೮ನೇಗೆ ಕೂಡಿದ ವಾರ್ಷಿಕ ಸಾಧಾರಣ ಸಭೆಯಲ್ಲಿ ಆರಿಸಲ್ಪಟ್ಟಂತೆ)

ಕೌನ್ಸಿಲಿನ ಅಧ್ಯಕ್ಷರು :—

ಡಾ|| ಏ. ವಿ ಬಾಳಿಗಾ, ಎಫ್ ಆರ್ ಸಿ ಎಸ್. (ಇಂಗ್ಲಂಡ), ಪಟೀಲ ಚೇಂಬರ್ಸ, ಸೆಂಡ್ಹರ್ಸ್ಟ ಬ್ರಿಜ್ಜ, ಮುಂಬಯಿ ೪.

ಉಪಾಧ್ಯಕ್ಷರು :—

ಶ್ರೀ|| ಎಮ್ ಜಿ ಗೋಪಿ, ಎಮ್. ಎಲ್ ಸಿ, ಗೋಕರ್ಣ.

ಸಾಮಾನ್ಯ ಸಭಾಸದರು:—

೧ ಸೌ|| ಗಿರಿಜಾಬಾಯಿ ಮಹಾಬಲೇಶ್ವರ ಮಾಸೂರಕರ, ಕುಮಟಾ
೨ ಶ್ರೀ|| ಜಿ ಜಿ ಭಟ್ಟ ಚಿತ್ರಿಗಿ, ಜಮೀನದಾರ, ಕುಮಟಾ
೩ ಮಿ|| ಬಸ್ತಿ ಅಲಿ ಅಹಮದ ಸಾಹೇಬ, ಜಮೀನದಾರ, ಕುಮಟಾ
೪. ವೆಂಕಟೇಶ ಆರ್. ದೇಶಪಾಂಡೆ, ಫೊರೆಸ್ಟ ಕಂಟ್ರಾಕ್ಟರ, ಹಳಿಯಾಳ
೫ ಡಾ|| ವಿ ವಿ. ಕಾಮತ, ಬಿ. ಏ, ಪಿಎಚ್ ಡಿ ಪ್ರಿನ್ಸಿಪಾಲ, ಟಿಳಕ ಕಾಲೇಜ ಆಫ್ ಎಜ್ಯುಕೇಶನ್, ಪುಣೆ
೬ ಡಾ|| ಬಿ. ಪಿ ದೀವಗಿ, ಎಮ್ ಬಿ ಬಿ ಎಸ್, ಕಾಳಮುಕ್ಕಿವಾಡಿ, ತಾಡದೇವ, ಮುಂಬಯಿ
೭. ಡಾ|| ಆರ್ ಎಮ್ ನಾವೇಲಕರ, ಎಮ್. ಬಿ ಬಿ ಎಸ್, ಈಶ್ವರದಾಸ ಮೆನ್ಶನ್, ಗಾಮದೇವಿ, ಮುಂಬಯಿ ೭.
೮ ಶ್ರೀ|| ಎಚ್ ಗಣಪತರಾವ, ಜನರಲ್ ಸೇಲ್ಸ-ಮೆನೇಜರ, ಟ್ವೆಂಟಿಯೆತ್ ಸೆಂಚುರಿ ಫೋರ್ಕ್ಸ ಕೊರ್ಪೊರೇಶನ್ ಲಿಮಿಟೆಡ್, ಮುಂಬಯಿ.
೯. ಶ್ರೀ|| ಎಮ್ ವ್ಹಿ. ನಾಯಕ, ಬಿಲ್ಡಿಂಗ ಕಂಟ್ರಾಕ್ಟರ, ಪ್ರೊಸ್ಪೆಕ್ಟ ಚೇಂಬರ್ಸ ಎನ್ನೆಕ್ಸ, ಹೊರ್ನಬಿ ರೋಡ, ಮುಂಬಯಿ ೧
೧೦ ಶ್ರೀ|| ಜಿ. ಎಮ್. ಪೈ, ಬಿ ಈ, ಎ ಎಮ್ ಆಯ್ ಇ, ಬಿಲ್ಡಿಂಗ ಕಂಟ್ರಾಕ್ಟರ, ಲಕ್ಷ್ಮಿ ಬಿಲ್ಡಿಂಗ, ಸರ್ ಪಿ ಎಮ್. ರೋಡ, ಮುಂಬಯಿ ೧.
೧೧ ಶ್ರೀ|| ಸಿ ಎಸ್ ಕೋಡ್ಯಣ, ಬಿ ಎ, ಬಿ. ಟಿ, ಹೆಡ್‌ಮಾಸ್ತರ, ರೊಬರ್ಟ ಮನಿ ಸ್ಕೂಲ, ಮುಂಬಯಿ ೭
೧೨ ಶ್ರೀ|| ಜಿ ಪಿ ಮುರ್ಡೇಶ್ವರ, ಬಿ ಎ, ಎಲ್ ಎಲ್ ಬಿ, ಎಡ್ವೊಕೇಟ್, ಸಾರಸ್ವತ ಕೊಓಪರೇಟಿವ್ ಬಿಲ್ಡಿಂಗ್ಸ, ಗಾಮದೇವಿ, ಮುಂಬಯಿ ೭.

ಗವ್ಹರ್ನಿಂಗ ಬೋಡಿಯ ಸಭಾಸದರು :—

೧ ಶ್ರೀ|| ಎನ್. ಟಿ ಹೆಗಡೆ, ರಿಟಾಯರ್ಡ ಪೋಲೀಸ ಪ್ರೊಸಿಕ್ಯೂಟರ, ಕುಮಟಾ
೨ ರಾ|| ಸಾ|| ವಿ. ಆರ ಶೈ ಜಮೀನದಾರ, ಕುಮಟಾ.
೩ ಶ್ರೀ|| ವಿ ಟಿ ಹೆಗಡೆ, ವಕೀಲ, ಕುಮಟಾ
೪ ಶ್ರೀ|| ವಿ. ಆರ್ ಕಾಮತ, ಬಿ.ಎ, ಎಲ್ ಎಲ್. ಬಿ, ವಕೀಲ, ಹೊನ್ನಾವರ.
೫ ಶ್ರೀ|| ಎಲ್ ಎಸ್. ಕಾಮತ, ಎಮ್ ಎ, ವಕೀಲ, ಕುಮಟಾ
೬ ಶ್ರೀ|| ಬಿ ಜೆ ಭಾಟಿಯಾ, ಮರ್ಚಂಟ, ಕುಮಟಾ.
೭ ಡಾ|| ಆರ್. ಆರ್ ನಾಡ್ಕರ್ಣಿ, ಎಲ್ ಸಿ ಪಿ ಎಸ್, ಕುಮಟಾ
೮ ಮಿ|| ಆಲ್ಫ್ರೆಡ್ ಈ ಫರ್ನಾಂಡೀಸ, ಏಜಂಟ, ಬಿ ಎಸ್ ಎನ್ ಕಂಪನಿ, ಕುಮಟಾ
೯ ಶ್ರೀ|| ಎಸ್ ಎಮ್ ಮಾಸೂರಕರ, ಜಮೀನದಾರ, ಕುಮಟಾ

THE BANK OF CITIZENS LTD.

[Established 1937]

(HEAD OFFICE — **1514 Maruti Galli, BELGAUM**)

CHAIRMAN — Dr **R. V Shiveshwarkar,** B A, M B B S, D T M, A D P H

Authorised Capital - Rs. 10,000,00
Subscribed Capital - Rs 7,000,00
Paid-up Capital & Reserve exceeds - Rs 4,500,00

All kinds of Banking business transacted

Season Deposits For 4 months @ 2½% & For 6 months @ 3% p a will be accepted

For particulars apply to or call at the following Branches
ALNAVAR ANKOLA, BAGALKOT, BAIL-HONGAL, BIJAPUR, CHIKODI, DHARWAR GADAG, GOKAK, HALIYAL, HUBLI, KARWAR, KHANAPUR KUMTA NANDGAD NIPANI, SANKESHWAR and SIRSI

Or **N S Pai,** Development Officer

ಇದನ್ನು ಪಾಂಡು ರಂಗ ಕೃಷ್ಣ ಕಾನಧಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರ

ಜಾಹೀರಾತುಗಳ ದರ:-
ಸ್ವಲ್ಪ ಅವಧಿಯ ಜಾಹೀರಾತುಗಳಿಗೆ
೧ ಸಾಲಿಗೆ ೮ ಆಣೆಯಂತೆ.
ಹೆಚ್ಚು ಅವಧಿಯ ದೀರ್ಘಕಾಲದ
ಜಾಹೀರಾತುಗಳ ಬಗ್ಗೆ ಹೆಚ್ಚಿನ
ವ್ಯವಸ್ಥಾಪಕರಿಂದ
ತಿಳಿಸಲಾಗುವುದು.

Reg. No. B 1270   Monday, 17-5-1948.

ಕಾನಡಾವೃತ್ತ.

ವರ್ಷ ೩೦] THE KANARA NEWS. [ಸಂಚಿಕೆ ೪೩.

ಕುಮಟಾ.- ಸೋಮವಾರ, ತಾ. ೧೭—೫—೧೯೪೮

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಹೊರಊರಿನವರಿಗೆ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ,, ೦-೧-೦
ಹಳೇ ಸಂಚಿಕೆಗೆ ,, ೦-೪-೦
ವರ್ಗಣಿ ಮುಂಗಡ ಕೊಡತಕ್ಕದ್ದು
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಕೇಳಿದ್ದು, ಕಂಡದ್ದು.

(ಜಿಲ್ಲಾ ಸಂಚಾರಿಯು ಬರೆದುದು.)

ಹೊನ್ನಾವರದೊಳಗಿನ ಉರುವಲ ಉಗ್ರಾಣದಲ್ಲಿ ಉಗ್ರಾಣದಾರರು ಬರೀ ಬೆಂಡು, ಮುರಡು ಮುತ್ತು ಗಂಟುಗಳಿದ್ದ ಕಟ್ಟಿಗೆಯನ್ನು ಮಾರಾಟಕ್ಕಿಟ್ಟು, ಚಲೋ ಕಟ್ಟಿಗೆಯನ್ನೆಲ್ಲ ಬೇರೆ ತೆಗೆದಿಟ್ಟಿದ್ದಾರೆ! ಈ ಮುರಡು ಕಟ್ಟಿಗೆ ಕಡಿ ಬೇಕಷ್ಟು ಸಿಗುವದಿಲ್ಲ! ಎರಡೆರಡು ಮಣ ಸಿಗುತ್ತಿದೆ! ಹೆಚ್ಚಿಗೆ ದರ ಕೊಟ್ಟರೆ ಉಗ್ರಾಣದವರು ಚಲೋ ಕಟ್ಟಿಗೆ ಒದಗಿಸಿಕೊಡುತ್ತಾರೆ! ಉಗ್ರಾಣದಾರರ ಈ ನಡತೆಯು ಜಂಗಲ ಖಾತೆಯ ಉಗ್ರಾಣದ ನಿಯಮಗಳಿಗೂ ಕಾಯದೆಗಳಿಗೂ ಸರಿಹೋಗುತ್ತದೋ ಎಂಬುದರ ಚೌಕಶಿಯನ್ನು ಜಂಗಲ ಮಂತ್ರಿಗಳು ಮಾಡುವರೇ?

* * *

ಜಂಗಲ ಮಂತ್ರಿಗಳೇ ಚೌಕಶಿ ಮಾಡಬೇಕೆಂದು ನಾನು ಸೂಚಿಸಲು ಕಾರಣವು ಕಾರಣನಂತೆ ಕೆಳ-ಅಧಿಕಾರಿಗಳಿಂದ ಈ ಕೆಲಸ ಆಗುವಂತಿಲ್ಲ ಅವರು ತಮ್ಮ ಗುತ್ತಿಗೆದಾರ-ಗಳೆಯರ ಪಕ್ಷವನ್ನು ಎಂದೂ ಬಿಟ್ಟು ಕೊಡುವಂತಿಲ್ಲ! ಹೊನ್ನಾವರ ಉಗ್ರಾಣದಲ್ಲಿ ಬೆಂಡು-ಮುರಡುಗಳನ್ನಷ್ಟೇ ಮಾರಾಟಕ್ಕಿಟ್ಟಿದ್ದಾರೆಂಬ ಸಂಗತಿಯನ್ನು ಊರವರು ಸ್ಥಾನಿಕ ರೇಂಜರರಿಗೆ ಅರುಹಿಕೊಂಡಾಗ, ಅವರು ಉಗ್ರಾಣದಾರರ ಪಕ್ಷವನ್ನು ಎತ್ತಿ ಹಿಡಿದು, "ಉಗ್ರಾಣದಾರರಿಗೆ ನೇಮಿಸಿಕೊಟ್ಟ ಬೆಟ್ಟದಲ್ಲಿ ಬೆಂಡು ಜಾತಿಯ ಕಟ್ಟಿಗೆಯುಂಟು, ಮುರಡುಗಳೂ ಬರುತ್ತವೆ ಆ ಕಟ್ಟಿಗೆಯನ್ನು ಮಾರಾಟಕ್ಕಿಡದೆ ಅವರೇನು ಮಾಡಬೇಕು?" ಎಂದು ಪ್ರಶ್ನಿಸಿದರೆಂದು ಕೇಳುತ್ತೇನೆ! "ಜಂಗಲ ಇಲಾಖೆಯವರೂ ಉಗ್ರಾಣದಾರರೆ ನೆಂಟರಿದ್ದರೂ ಸತ್ತಾಗ ಅವರನ್ನು ಸುಡಲಿಕ್ಕೆ ಈ ಕಟ್ಟಿಗೆಯ ಉಪಯೋಗ ಮಾಡಬೇಕು!" ಎಂದು ರೇಂಜರರಿಗೆ ಪ್ರತ್ಯುತ್ತರ ಕೊಡಲು ಒಬ್ಬರು ತಯಾರಾಗಿದ್ದರಂತೆ, ಬೇರೊಬ್ಬರು ಅವನ ಬಾಯಿ ಮುಚ್ಚಿದನಂತೆ ಇದೇ ತಪ್ಪಾಯಿತೆಂದು ನನ್ನ ಭಾವನೆ ಈ ಪ್ರತ್ಯುತ್ತರ ರೇಂಜರರ ಕಿವಿಯಲ್ಲಿ ಬೀಳುತ್ತಿದ್ದರೆ ಕದಾಚಿತ್ ಅವರ ಕಣ್ಣು ತೆರೆಯುತ್ತಿತ್ತು

* * *

ಕುಮಟೆಯ ಉರುವಲ ಉಗ್ರಾಣದಲ್ಲಿ ಕೂಡ ಒಡೆಯಲಾಗದ ಜಾತಿಯ— ಸಾಗಡಿ, ಭರಣಿ ಮೊದಲಾದ— ಉರುವಲವನ್ನಷ್ಟೇ ಮಾರಾಟಕ್ಕಿಟ್ಟಿದ್ದಾರೆ! ಕಳೆದ ವಾರ ಓರ್ವನು ೫ ಮಣ ಉರುವಲ ಕೊಂಡುಕೊಳ್ಳಲೆಂದು ಈ ಉಗ್ರಾಣಕ್ಕೆ ಹೋಗಿದ್ದನಂತೆ ಅವರೆ ಅಲ್ಲಿರುವ ಕಟ್ಟಿಗೆ ನೋಡಿ ಆತ ಎರಡೇ ಮಣ ಕೊಂಡುಕೊಂಡನು ಈ ಎರಡು ಮಣ ಸೌದಿಯನ್ನು ಒಡೆಯಲಿಕ್ಕೆ ಯಾರೂ ಒಪ್ಪದಿದ್ದಿಲ್ಲವಂತೆ ಕಟ್ಟಿಗೆ ಅಷ್ಟು ಗಂಟೋಗಿದೆ!

* * *

ಕುಮಟೆಯ ಉಗ್ರಾಣದಾರರು ಜನರ ಉಪಕಾರಕ್ಕಾಗಿ ಚಲೋ ಸೌದಿಯನ್ನೆಲ್ಲ ಮಡಿಕೆಯಲ್ಲಿಟ್ಟಿದ್ದಾರೆ! ಬೇಕಾದವರು ಮಾಗಿಗೆ ಹೋಗಿ ಬೇಕಷ್ಟು ಕಟ್ಟಿಗೆಯನ್ನು ಬೇಕಾದಂತೆ ಆರಿಸಿ ತರಬಹುದು! ಮಣ ೧ಕ್ಕೆ ಬರೇ ೮ ಆಣೆ ದರವಿಟ್ಟಿದ್ದಾರೆ (ಉಗ್ರಾಣದೊಳಗಿನ ದರ ಮಣ ೧ಕ್ಕೆ ೭ ಆಣೆಯುಂಟು)

* * *

ಉಗ್ರಾಣದಾರರ ಈ ಯೋಜನೆ ಬಹಳ ಬುದ್ಧಿವಂತಿಕೆಯದಿದೆ! ಬೇಕಾದಂತಹ ಕಟ್ಟಿಗೆಯನ್ನು ಆರಿಸಿಕೊಳ್ಳಲಿಕ್ಕೆ ಜನರಿಗೆ ಮಾತ್ರ ಸವಲತ್ತು ಕೊಟ್ಟು, ಆ ಬಗ್ಗೆ ೧೬ ಮಣಗಳ ಗಾಡಿಯೊಂದಕ್ಕೆ ಬರೀ ೮ ಆಣೆ ಹೆಚ್ಚಿಗೆ ಕೊಳ್ಳುತ್ತೇವೆಂದು ಈ ಉಗ್ರಾಣದಾರರು ಹೇಳುತ್ತಾರೆ ಆದರೆ ಅವರು ನಿಜವಾಗಿಯೂ ೧೬ ಮಣಗಳ ಗಾಡಿಯೊಂದಕ್ಕೆ ರೂ ೩-೧೦-೦ ಹೆಚ್ಚಿಗೆ ಕೊಳ್ಳುತ್ತಿದ್ದಾರೆ! ಮಾಗಿಯಿಂದ ಕುಮಟೆಯ ಉಗ್ರಾಣಕ್ಕೆ ಈ ಸೌದಿಯನ್ನು ತರಲು ಬೀಳುತ್ತಿದ್ದ ಗಾಡಿ-ಭಾಡಿಗೆಯೂ ರೂ ೩ ಮತ್ತು ಮ್ಯುನಿಸಿಪಾಲಿಟಿಯ ಸುಂಕದ ಆಣೆ ೩ ಇವನ್ನು ತಾವು ತೆರಬೇಕಾಗುತ್ತಿದ್ದುದನ್ನು ತಾವು ತಪ್ಪಿಸಿಕೊಳ್ಳುತ್ತೇವೆಂಬ ಮಾತನ್ನು ಉಗ್ರಾಣದಾರರು ಬಚ್ಚಿಡುತ್ತಾರೆ! ಉಗ್ರಾಣದಾರರ ಈ ಕಳ್ಳ-ಕುಯುಕ್ತಿಗಳು ಜಂಗಲ ಇಲಾಖೆಯವರಿಗೆ ಮಾನ್ಯವಿರುತ್ತವೇನೆಂಬುವದರ ಖುಲಾಸೆಯಾಗುವದು ಅವಶ್ಯವುಂಟು

* * *

ಈಗ ಜಿಲ್ಲೆಯಲ್ಲಿ ಹಲವಾರು ರೈತ ಸಂಘಗಳಾಗಿವೆ ಹಿಂದೆ ನಿರುದ್ಯೋಗಿಗಳಾಗಿ ಅಲೆದಾಡುತ್ತಿದ್ದ ಹಲ ಕೆಲವರಿಗೆ ದುಡ್ಡು ಮಾಡಲು ಇಲ್ಲವೆ ವಿಲಾಸಿ-ಜೀವನ ಸಾಗಿಸಲು ಈ ಸಂಘಗಳು ಸಹಾಯಕಾರಿಯಾಗಿವೆ! ಪ್ರತಿ ಸಂಘಕ್ಕೆ ಓರ್ವ ಕಾರ್ಯದರ್ಶಿ ಬೇಕು, ಓರ್ವ ಕಾರಕೂನ ಬೇಕು, ಒಂದು ಕಚೇರಿ ಬೇಕು, ಮತ್ತು ಆ ಕಚೇರಿಗೆ ಕಚೇರಿಯ ಸಾಹಿತ್ಯ ಬೇಕು! ಕುಮಟಾ ತಾಲೂಕಿನೊಳಗಿನ ಒಂದು ರೈತ ಸಂಘದ ಕಾರ್ಯದರ್ಶಿಯ ಮಾಸಿಕ ಸಂಬಳ ರೂ ೬೦ ಇರುತ್ತದಂತೆ, ಕಾರಕೂನನ ಸಂಬಳ ರೂ ೩೦, ಕಚೇರಿಯ ಬಾಡಿಗೆ ರೂ ೮ ಕೊಡುತ್ತಾರಂತೆ! ಈ ಎಲ್ಲ ವೆಚ್ಚವನ್ನು ಸಂಘದ ಸದಸ್ಯರಾಗಿರುವ ಬಡ ರೈತರು ತೆರಬೇಕು! ಸಂಘದವರು ಕೆಲವು ಕಡೆ ದರ ಸಾಲ ರೂ ೧ರಂತೆ ಸದಸ್ಯರಿಂದ ವಂತಿಗೆ ಎತ್ತುವರಿ ಮಾಡುತ್ತಾರಂತೆ! ಕೆಲವು ಕಡೆ ಸದಸ್ಯ ರೈತರು ಸಾಗುವಳಿ ಮಾಡುವ ಪ್ರತಿ ಎಕರೆಗೆ ರೂ ೧ರಂತೆ ವರ್ಗಣಿ ತೆರಬೇಕಾಗುತ್ತದಂತೆ ಈ ಸಂಘಗಳಲ್ಲಿ ಲೆಕ್ಕ-ಪತ್ರವಿಡುವವರ್ಯಾರು ಮತ್ತು ಅವುಗಳ ತಪಾಸಣೆ ಮಾಡುವವರಾರು ಎಂಬುದು ಸದಸ್ಯರಿಗೆ ಗೊತ್ತಿಲ್ಲ! ಸಂಘಗಳ ಹಣ ಎಲ್ಲಿರುತ್ತದೆಂಬುದರ ಪತ್ತೆಯೂ ತಿಳಿಯಲೊಲ್ಲದು! ಸಂಘಗಳ ಅಧ್ಯಕ್ಷ-ಕಾರ್ಯದರ್ಶಿಗಳು ಇಟ್ಟದ್ದೇ ಲೆಕ್ಕ! ಈ ಲೆಕ್ಕದ ತಪಾಸಣೆ ಮಾಡಿಸುವ ಮತ್ತು ಸಂಘಗಳ ಹೆಸರಲ್ಲಿ ನಡಿಯುತ್ತಿರುವ ಸುಲಿಗೆಯನ್ನು ನಿಲ್ಲಿಸುವ ಕ್ರಮವನ್ನು ಸರಕಾರವು ಕೈಕೊಳ್ಳಬೇಕಾಗಿ ಅರಿಕೆಯುಂಟು

* * *

ಹೊಲಗಳಲ್ಲಿ ಸುಧಾರಣೆ ಮಾಡಿ ಉತ್ಪತ್ತಿ ಹೆಚ್ಚಿಸಲು ಅವರಿಗೆ ಪ್ರೋತ್ಸಾಹ ಕೊಡುವದೇ ಒಕ್ಕಲತನದ ಕಾನೂನಿನ ಮೂಲ ಉದ್ದೇಶವಿರುತ್ತದೆಂದು ಸರಕಾರವು ಸಾರುತ್ತಿದೆ ಆದರೆ ಸರಕಾರದವರ ಈ ಸದುದ್ದೇಶ ನಮ್ಮ ಜಿಲ್ಲೆಯಲ್ಲಂತೂ ಸಫಲವಾದುದು ಕಂಡು ಬರುವದಿಲ್ಲ ಉಪಮಂತ್ರಿ ಶ್ರೀ ಕಂಬ್ಳೀಯವರು ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದಾಗ, ಹೊಲಗಳ ಸುಧಾರಣೆಯ ಬಗ್ಗೆ ಮತ್ತು ಸಾಗುವಳಿಯ ಖರ್ಚು-ವೆಚ್ಚಗಳ ಬಗ್ಗೆ ೧ ಪಾಲು ಮತ್ತು ರೈತರ ಪರಿಶ್ರಮದ ಬಗ್ಗೆ ೧ ಪಾಲು ಹೀಗೆ ರೈತರಿಗೆ ೪ರಲ್ಲಿ ೨ ಪಾಲು ಸಲ್ಲಬೇಕೆಂದು ಸರಕಾರವು ನಿರ್ಧರಿಸಿದೆ ಎಂದು ಮುಂತಾಗಿ ಸರಕಾರದವರು ರಚಾಯಿಸಿದ ಪಾಲಿನ ವ್ಯವಸ್ಥೆಯ ಭಾಷ್ಯವನ್ನು ಮಾಡಿದ್ದರು ಈ ಭಾಷ್ಯದಂತೆ ಗದ್ದೆ ಭೂಮಿಗಳ ಕಟ್ಟುಗಳನ್ನು ದುರಸ್ತಿ ಇಡುವ ಇಲ್ಲವೆ ದುರಸ್ತಿಗೊಳಿಸುವ ಹೊಣೆ ರೈತರದಿರುತ್ತದೆಂದು ತಿಳಿಯಬೇಕಾಗುತ್ತದೆ ಆದರೆ ರೈತರಿಂದ ಈ ಹೊಣೆ ನಿರ್ವಹಿಸಿಕೊಳ್ಳುವ ಬಗ್ಗೆ ಒಕ್ಕಲತನದ ಕಾನೂನಿನಲ್ಲಿ ಏನೂ ವ್ಯವಸ್ಥೆಯಿಲ್ಲದ್ದರಿಂದ ಕುಮಟಾ ತಾಲೂಕಿನ ಬಹುತೇಕ ಗದ್ದೆ ಭೂಮಿಗಳು ಈಗ ಹಾಳುದೇಳುತ್ತಿವೆ! ಸಾಗುವಳಿ ಖರ್ಚಿನ ಮತ್ತು ಗಜನಿಗಳ ನಿಗಾ ಮಾಡುವ ವೆಚ್ಚದ ಪಾಲನ್ನು ರೈತರೇ ಪಡೆಕೊಳ್ಳುತ್ತಿರುವದರಿಂದ ಗಜನಿಗಳ ಒಡೆಯರು ಕಟ್ಟುಗಳ ದುರುಸ್ತಿಯ ಕೆಲಸ ಮಾಡಲು ಇಲ್ಲವೆ ಮಾಡಿಸಲು ತಯಾರಿಲ್ಲ ಉತ್ಪತ್ತಿಯ ೧/೪ ಪಾಲು ತಕ್ಕೊಂಡು ಆ ಕೆಲಸ ಅವರು ಮಾಡಿಸುವದು ಸಾಧ್ಯವೂ ಇಲ್ಲ ರೈತರಂತೂ ಸಿಕ್ಕ ಪಾಲನ್ನು ನುಂಗಿಕೊಂಡು ಕೂಡ್ರುತ್ತಾರೆ! ಕಟ್ಟುಗಳ ದುರುಸ್ತಿಯನ್ನು ಹಿಂದಿನಂತೆ ಒಡೆಯರೇ ಮಾಡಿಸಬೇಕೆಂದು ಅವರ ಆಂಬೋಣ! ಹಿಂದೆ ಒಡೆಯರು ಹೆಚ್ಚಿನ ಪಾಲು — ಕಟ್ಟುಗಳ ದುರುಸ್ತಿಯ ಸಂಬಂಧದ ಪಾಲು ಕೂಡಿ — ತಕ್ಕೊಳ್ಳುತ್ತಿದ್ದರೆಂಬುದನ್ನು ಅವರಿಂದ ಅವರಿಗೆ ಕಟ್ಟು

⇛ ಗಾಯನ-ಪ್ರೇಮಿಗಳಿಗೆ ಅತ್ಯಾನಂದದ ಸುದ್ದಿ! ⇚

— ಅಖಿಲ ಭಾರತದಲ್ಲೆಲ್ಲ ಗಾನ-ಕೋಕಿಲೆಯೆಂದು ಪ್ರಖ್ಯಾತಿಪಟ್ಟಿರುವ —

ಶ್ರೀಮತಿ ಹಿರಾಬಾಯಿ ಬಡೋದೆಕರ

ಇವರ ಗಾಯನದ ಜಲಸೆಯು ಕುಮಟೆಯ ರಸಿಕರ ಪ್ರೀತಿಯ ಚಿತ್ತರಂಜನ ನಾಟ್ಯಮಂದಿರದಲ್ಲಿ ನಡೆಯುವದು.

ಜಲಸೆಯ ತಾರೀಖನ್ನು ನಿರೀಕ್ಷಿಸಿರಿ! (ಬಹುಶಃ ಶನಿವಾರ ತಾ ೨೨-೫-೧೯೪೮ಕ್ಕೆ ನಡೆಯುವದು!)

ಸಾರಂಗಿ- ಶ್ರೀ[illegible]ಬಾಬುರಾವ ಕುಮರೇಕರ.   ತಬಲಜಿ- ಖಾನ ಸಾಹೇಬ ಶಮಸುದ್ದೀನ.

ಕಾರವಾರದ ಕಾರ್ಯಕ್ರಮ- ಮಂಗಳವಾರ ತಾ ೨[illegible]-೫-೧೯೪೮ಕ್ಕೆ ಶಿರೀನ ನಾಟ್ಯಮಂದಿರದಲ್ಲಾಗುವದು.

ಉಮಾಕಾಂತ ವಾಗಳೇ,
ವ್ಯವಸ್ಥಾಪಕ

ಗಳ ದುರುಸ್ತಿ ಮಾಡಿಸಲು ಸಾಧ್ಯವಾಗುತ್ತಿತ್ತೆಂಬುದನ್ನೂ ಅವರು ಮರೆಯುತ್ತಾರೆ! ಮಾವಿನಗಟ್ಟೆಯ ಸಮೀಪ ಇರುವ ಸಿದ್ಧೇಶ್ವರ ಗಜನಿಯೂ ಅದರ ನೆರೆಹೊರೆಯಲ್ಲಿ ಇರುವ ಬೇರೆ ಗಜನಿಗಳೂ ಕಟ್ಟುಗಳು ದುರಸ್ತಿಯಿಲ್ಲದೆ ಕಳೆದ ವರ್ಷ ಬಂಜರ ಬಿದ್ದಿದ್ದವು! ಈ ವರ್ಷ ಕೂಡ ಅವು ಸಾಗುವಳಿಯಾಗುವ ಲಕ್ಷಣಗಳಿಲ್ಲ. ರೈತರಿಗೆ ಅದರ ಪರಿವೆಯಿಲ್ಲ! ಕಟ್ಟುಗಳು ಸರಿಯಿಲ್ಲದ್ದರಿಂದ ಅವರು ಸಾಗುವಳಿಯನ್ನೇ ಮಾಡುವದಿಲ್ಲ, ಆ ಬಗ್ಗೆ ವೆಚ್ಚವನ್ನೂ ಮಾಡುವದಿಲ್ಲ! ಆದದ್ದರಿಂದ ಅವರಿಗೆ ಯಾವದೇ ಬಗೆಯ ಹಾನಿಯಿಲ್ಲ! ಒಡೆಯರಿಗೆ ಹಾಗಲ್ಲ ಅವರು ಹಿಂದೆ ಈ ಗಜನಿಗಳನ್ನು ತಯಾರಿಸಿ ರೂಪಿತ ಮಾಡಲಿಕ್ಕೆ ಇಲ್ಲವೆ ಹೆರವರಿಂದ ಅವನ್ನು ಕೊಂಡುಕೊಳ್ಳಲಿಕ್ಕೆ ಸಾವಿರಗಟ್ಟಲೆ ರೂಪಾಯಿ ತೊಡಗಿಸಿದ್ದರುಂಟು, ಅವರ ಜೀವನವೂ ಈ ಗಜನಿಗಳ ಉತ್ಪತ್ತಿಯಿಂದ ಸಾಗಬೇಕು ಗಜನಿಗಳಲ್ಲಿ ಬೆಳೆ ಬರದಿದ್ದರೆ ಅವರ ಸಂಸಾರ ಕೆಟ್ಟಂತೆಯೇ ಸರಿ ಈ ಪರಿಸ್ಥಿತಿಯನ್ನರಿತ್ತ ರೈತರು "ಒಡೆಯರು ಬೇಕಾದರೆ ಕಟ್ಟುಗಳ ದುರುಸ್ತಿ ಮಾಡಿಸಲಿ!" ಎಂದು ಹೇಳಿ ಸುಮ್ಮಗುಳಿಯುತ್ತಾರೆ! ಹೀಗಾಗಿ ಕುಮಟಾ ತಾಲೂಕಿನಲ್ಲಿ ಸಾವಿರಾರು ಎಕರೆ ಗಜನಿ ಭೂಮಿಗಳು ಹಾಳಾಗಹತ್ತಿವೆ! ಒಕ್ಕಲತನದ ಕಾನೂನಿನ ದುಷ್ಟ ಪರಿಣಾಮಗಳಲ್ಲಿ ಇದೊಂದು ಮುಖ್ಯವಾದದ್ದು.

***

ಈ ಸ್ಥಿತಿ ಸುಧಾರಿಸಬೇಕಾದರೆ ಒಕ್ಕಲತನದ ಕಾನೂನಿನಲ್ಲಿ ತಿದ್ದುಪಡಿಗಳನ್ನು ಮಾಡಿ ರೈತರ ಮೇಲೆ ಕೆಲವೊಂದು ಹೊಣೆಗಳನ್ನು ಸ್ಪಷ್ಟವಾಗಿ ಹೇರಬೇಕು, ಮತ್ತು ಅವುಗಳನ್ನು ಅವರು ತಪ್ಪದೆ ನಿರ್ವಹಿಸುವಂತೆ ಸಕ್ರಿಯ ಕ್ರಮಗಳನ್ನು ಕಲ್ಪಿಸಬೇಕು ಗಜನಿಯ ಕಟ್ಟುಗಳನ್ನು ನಿರ್ದಿಷ್ಟ ಅವಧಿಯಲ್ಲಿ ಸರಿಗೊಳಿಸದಿರುವ ರೈತರ ಒಕ್ಕಲತನದ ಹಕ್ಕು ನಷ್ಟವಾಗುವದೆಂದೂ, ಒಡೆಯರು ಅವರನ್ನು ಹೊರಗೆ ಹಾಕಿ ಸ್ವತಃ ಇಲ್ಲವೆ ಬೇರೆ ರೈತರ ಸಹಾಯದಿಂದ ಗಜನಿಗಳ ಸಾಗುವಳಿ ಮಾಡಬಹುದೆಂದೂ ವಿಧಿಸಿದರೆ ಮಾತ್ರ ತಲೆಕೆಟ್ಟ ರೈತರು ಸರಿಮಾರ್ಗಕ್ಕೆ ಬರುವರು ಇಂತಹ ರೈತರನ್ನು ಹೊರತಳ್ಳುವ ಪ್ರಕರಣಗಳ ವಿಚಾರದ ಕ್ರಮವೂ ಕೂಡ ಅಷ್ಟೇ ಲಘು ಇರಬೇಕು ತಾಲೂಕಿನ ಮಾಮಲೇದಾರರಾಗಲಿ ಬೇರೊಬ್ಬ ಅಧಿಕಾರಿಯಾಗಲಿ ತಪ್ಪು ಕಡೆ ದೂರು ಬಂದ ಒಂದೇ ವಾರದಲ್ಲಿ ಸ್ಥಳಿಕ ಚೌಕಶಿ ಮಾಡಿ, ತಪ್ಪಿತಸ್ಥ ರೈತರಿಂದ ಗಜನಿಗಳನ್ನು ತಪ್ಪಿಸಿ ಒಡೆಯರಿಗೆ ಒಪ್ಪಿಸಬೇಕೆಂದು ಕಾನೂನಿನಲ್ಲಿ ವಿಧಿಸಬೇಕು ಅಂಥ ವ್ಯವಸ್ಥೆ ಮಾಡಿದರೆ ಮಾತ್ರ ಗಜನಿಗಳ ಸಾಗುವಳಿಯು ಸರಿಯಾಗಿ ಸಾಗುವದು ಈ ವ್ಯವಸ್ಥೆಯಾದರೂ ಶೀಘ್ರದಲ್ಲಾಗುವದು ಅಗತ್ಯವಿದ್ದೆ ಇಲ್ಲದಿದ್ದರೆ ಕಟ್ಟುಗಳು ಕಾಲಕ್ರಮದಿಂದ ಸವೆದು ಯಾ ಬಳಿದು ಹೋಗಿ ಗಜನಿಗಳು ಕೆಲವೇ ಕಾಲದಲ್ಲಿ ಹೊಳೆಯು ಪಾಲಾಗಿ ಹೋಗುವವು !

***

ಮೇಳಿ ನಿಂತರೂ ಮರದ ಹಣ್ಣು ನಿಲ್ಲುವದಿಲ್ಲೆಂಬದೊಂದು ಗಾದೆಯುಂಟಷ್ಟೇ. ಯಲ್ಲಾಪುರ ತಾಲೂಕ ಕಚೇರಿಯಲ್ಲಿ ಇದರ ಪ್ರತ್ಯಯ ಸಿಗುತ್ತದೆ ನಿಯಂತ್ರಣಗಳು ಹೋದರೂ, ಅವುಗಳೊಂದಿಗೆ ತಮ್ಮ ಕೈಯ್ಯಲ್ಲಿದ್ದ ಸತ್ತೆ ಮತ್ತು ಅಧಿಕಾರಗಳು ನಷ್ಟವಾದರೂ ಅಲ್ಲಿಯ ಅಧಿಕಾರಿಗಳು ಇನ್ನೂ ಆ ಅಧಿಕಾರಸತ್ತೆಗಳು ತಮ್ಮ ಕೈಯ್ಯಲ್ಲಿವೆಯೆಂಬ ಭಾವನೆಯಿಂದ ವರ್ತಿಸುತ್ತಿದ್ದಾರೆ! ಕಾರವಾರದಲ್ಲಿರುವ ಚಿಮಣಿ ಎಣ್ಣೆ ಕಂಪನಿಗಳ ಏಜಂಟರು ಸೂಚಿಸಿದಂತೆ ಯಲ್ಲಾಪುರದೊಳಗಿನ ಚಿಮಣೀ ಎಣ್ಣೆಯ ವ್ಯಾಪಾರಿಗಳು ಬಂದ ಚಿಮಣಿ ಎಣ್ಣೆಯು ಎಲ್ಲರಿಗೂ ಸಿಗುವಂತೆ ಕೂಪನ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂದು ನಿರ್ಧರಿಸಿದ್ದಾರೆ ಈ ಕೆಲಸಕ್ಕೆ ತಾಲೂಕಾಧಿಕಾರಿಗಳ ಸಹಕಾರ ಅವರಿಗೆ ಬೇಕಾಯಿತು ಅದನ್ನು ಅವರು ಪಡಕೊಂಡು ಹಳ್ಳಿಗಳಲ್ಲೂ ಪಟ್ಟಣದಲ್ಲೂ ಸೀಧಾ-ಚೀಟಿಗಳನ್ನು ಕೊಟ್ಟು ಸೀಧಾ-ಕ್ರಮದಿಂದ ಎಣ್ಣೆ ಮಾರಲಾರಂಭಿಸಿದರು ಈಗ ಬಂದ ಎಣ್ಣೆ (೧೫೦ ಡಬ್ಬಿ) ಹಿಂದೆ ಬರುತ್ತಿದ್ದ ಎಣ್ಣೆಯ ಅರ್ಧದಷ್ಟಿರುವದರಿಂದ ಹಿಂದೆ ಸರಕಾರಿ ಕೂಪನ್ನ ಪದ್ಧತಿ ಅಮಲಿನಲ್ಲಿದ್ದಾಗ ಕೊಡುತ್ತಿದ್ದ ಎಣ್ಣೆಯ ಅರ್ಧದಷ್ಟು ಎಣ್ಣೆ ಕೊಡಬೇಕೆಂದು ವ್ಯಾಪಾರಿಗಳು ಅಧಿಕಾರಿಗಳು ಕೂಡಿ ನಿರ್ಧರಿಸಿದ್ದರು ಅದರಂತೆ ವ್ಯಾಪಾರಿಗಳು ಅಷ್ಟು ಪಾಲು ಎಣ್ಣೆ ಕೊಡಲಾರಂಭಿಸಿದರು, ಮತ್ತು ಕೆಲವು ಎಣ್ಣೆಯ ಬಟವಡೆಯೂ ಆಗಿಹೋಯಿತು ಆ ಕಾಲಕ್ಕೆ ಮಾಮಲೇದಾರರು ಹಳ್ಳಿಗಳ ಸಂಚಾರಕ್ಕೆ ಹೋಗಿದ್ದರು ಅವರ ಪರವಾನಗಿಯಿಲ್ಲದ ಎಣ್ಣೆ ಹಂಚುವಿಕೆಯು ಅನಧಿಕೃತ ಮತ್ತು ಕಾನೂನವಿರುದ್ಧವಿರುತ್ತದಾಗಿ ಸಾಧಿಸಿ ಯಲ್ಲಾಪುರ ತಾಲೂಕ ಕಚೇರಿಯ ಕೋಶಪಾಲಕ ಶಿರಸ್ತೇದಾರ ರಾ॥ ಸರದಾರರು, "ನಾವು ಪುನಃ ತಿಳಿಸುವ ವರೆಗೆ ಚಿಮಣಿ ಎಣ್ಣೆ ನೀವು ಮಾರಾಟ ಮಾಡತಕ್ಕದ್ದಲ್ಲ" ಎಂದು ವ್ಯಾಪಾರಸ್ಥರಿಗೆ ಅಧಿಕಾರ ದರ್ಪದ ಹುಕುಮು ಮಾಡಿದ್ದಾರೆ! ಯಾವ ಕಾಯಿದೆಯ ಯಾವ ಕಲಮಿನಂತೆ ಅವರು ಈ ಹುಕುಮು ಹೊರಡಿಸಿದ್ದಾರೆಂಬುದು ತಿಳಿದಿಲ್ಲ! ರಾ॥ ಸರದಾರರ ಈ ಕಟ್ಟಾಜ್ಞೆಯ ಪರಿಣಾಮವಾಗಿ ಬಹಳ ಜನರು ದೀಪ ಉರಿಸಲು ಎಣ್ಣೆಯಿಲ್ಲದೆ ಕತ್ತಲೆಯಲ್ಲಿ ಕಾಲ ಕಳೆಯುವ ಪ್ರಸಂಗ ಬಂದಿದೆಯಂತೆ !

***

ಯಲ್ಲಾಪುರದೊಳಗಿನ ಸರಕಾರಿ ಚಿಕಿತ್ಸಾಲಯದ ಆವಾರದಲ್ಲಿ ೬ ಹಲಸಿನ ಮರಗಳೂ ೪ ಮಾವಿನ ಮರಗಳೂ ಇವೆ ಈ ಆವಾರದ ಮೇಲ್ವಿಚಾರವನ್ನೂ ಆಧಿಕತೆಯನ್ನೂ ಜಿಲ್ಲಾ ಲೋಕಲ್ ಬೋರ್ಡಿನವರು ನಡಿಸುತ್ತಾರೆ ಅವರು ಈ ಮರಗಳನ್ನು ಪ್ರತಿ ವರ್ಷ ಏಪ್ರಿಲ ತಿಂಗಳಲ್ಲಿ ಲಿಲಾಂವ ಮಾಡಿ ಫಲಗುತ್ತಿಗೆಗೆ ಕೊಡುತ್ತಾರೆ ಸದರಿ ಹಲಸಿನ ಮರಗಳಲ್ಲಿ ಒಂದು ಮರದ ಹಣ್ಣುಗಳು (ಬೊಕ್ಕೆ ಜಾತಿಯವು) ಬಹು ರುಚಿಯುಳ್ಳವದರಿಂದಲೂ ಅವಕ್ಕೆ ಬೇಡಿಕೆ ಬಹಳ ಇರುವದರಿಂದಲೂ ಲಿಲಾಂವಿನಲ್ಲಿ ಎಲ್ಲ ಮರಗಳಿಗೆ ಕೂಡಿ ೩೦ ೫೫ ರೂ ಸವಾಲು ಬರುತ್ತಿದ್ದಂತೆ ಸದರಿ ಬೊಕ್ಕೆ ಹಲಸಿನ ಮರ ಬಿಟ್ಟರೆ ಉಳಿದ ಮರಗಳ ಫಲಗಳಿಗೆ ೬ ಆ ರೂ. ಕೂಡ ಹುಟ್ಟುವಂತಿಲ್ಲವಂತೆ ಈ ವರ್ಷ ಈ ಮರಗಳ ಲಿಲಾಂವು ಇನ್ನೂ (ತಾ ೧೦-೫ ೪೮) ಆಗಿಲ್ಲ! ಅದೇಕೋ ತಿಳಿಯದು! ಕವಾಚಿತ್ ಮೇಲೆ ಹೇಳಿದ ಬೊಕ್ಕೆ ಹಲಸಿನ ಮರದ ಪ್ರಖ್ಯಾತಿಯು ಜಿಲ್ಲಾ ಲೋಕಲ್ ಬೋರ್ಡಿನ ಕಾರವಾರ ಕಚೇರಿಯ ವರೆಗೂ ಮುಟ್ಟಿರಬಹುದು, ಮತ್ತು ಆ ಕಚೇರಿಯವರು ಅದರ ಹಣ್ಣುಗಳನ್ನು ತಮ್ಮೊಳಗೆ ಹಂಚಿಕೊಳ್ಳುವ ಆಲೋಚನೆಯನ್ನೂ ಮಾಡಿರಬಹುದು ಅದಕ್ಕಾಗಿಯೇ ಈ ವರ್ಷ ಮರಗಳ ಲಿಲಾವು ಆಗಿಲ್ಲೆಂಬಂತೆ ಕಾಣುತ್ತಿದೆ! ಇದೇ ಕಳೆದ ತಾ ೩ಕ್ಕೆ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರು ಇಂದೂರದಿಂದ ಶಿರಸಿಗೆ ಹೋಗುವಾಗ ಹಾದಿಯಲ್ಲಿ ಯಲ್ಲಾಪುರದೊಳಗಿಳಿದು, ಯಲ್ಲಾಪುರ ಚಿಕಿತ್ಸಾಲಯದ ತಪಾಸಣೆಯನ್ನು ಮಾಡಿ, ಕಾರವಾರಕ್ಕೆ ಮರಳಿ ಹೋಗುತ್ತಾಗ ಸದರಿ ಬೊಕ್ಕೆ ಹಲಸಿನ ಮರದ ೧೦ ರು ಬೆಳೆದ ಹಣ್ಣುಗಳನ್ನು ತಮ್ಮ ಬಂಡಿಯಲ್ಲಿ ಹಾಕಿಕೊಂಡು ಹೋಗಿದ್ದಾರೆಂದು ಕೇಳುತ್ತೇನೆ ಅವರು ಈ ಹಣ್ಣುಗಳನ್ನು ಪುಕ್ಕಟೆ ಒಯ್ದರು ತ್ತಾರೋ ಅವುಗಳ ಬೆಲೆಯನ್ನು ಬೋರ್ಡಿಗೆ ಜಮಾ ಮಾಡಿ ಒಯ್ದಿರುತ್ತಾರೋ ಎಂಬದು ಮಾತ್ರ ತಿಳಿದಿಲ್ಲ

***

ತೀರ್ವೆಯ ಹಂಗಾಮು ಮುಗಿದ ದಿನದಿಂದ ೧೫ ದಿನಗಳಲ್ಲಿ ಒಡೆಯನ ಗೇಣಿಯನ್ನು ಸಲ್ಲಿಸಿ ಪಾಲನ್ನು ಹೊತ್ತು ಮುಟ್ಟಿಸದ ಒಕ್ಕಲಿಗನು ತನ್ನ ಒಕ್ಕಲತನ ಕಳಕೊಳ್ಳುತ್ತಾನೆಂದು ಒಕ್ಕಲತನದ ಕಾನೂನಿನ ಕಲಮು ೫ (೨) ರಲ್ಲಿ ಹೇಳಿರುತ್ತದೆ. ಇಂತಹ ಒಕ್ಕಲಿಗರಿಂದ ಸಾಗುವಳಿ ಭೂಮಿಯ ಕಬಜೆಯನ್ನು ಪಡೆಯಲಿಕ್ಕೆ ಒಡೆಯರು ಹಕ್ಕುದಾರರಾಗುತ್ತಾರೆ. ಅದರಂತೆ ಈಗ ಒಂದು ವರ್ಷದಿಂದ ಗೇಣಿಯನ್ನು ಏನಷ್ಟೂ ಸಲ್ಲಿಸದ ಇಲ್ಲವೆ ಪೂರ್ಣವಾಗಿ ಸಲ್ಲಿಸದ ರೈತರಿಂದ ಭೂಮಿಯ ಕಬಜಾ ಕೊಡಿಸಬೇಕಾಗಿ ನೂರಾರು, ಸಾವಿರಾರು ಒಡೆಯರು ನಮ್ಮ ಜಿಲ್ಲೆಯೊಳಗಿನ ಟೆನನ್ಸಿ ಕೋರ್ಟುಗಳಲ್ಲಿ ಅರ್ಜಿಗಳನ್ನು ಮಾಡಿರುತ್ತಾರೆ (ಬೇರೆ ಜಿಲ್ಹೆಗಳಲ್ಲೂ ಇಂತಹ ಅರ್ಜಿಗಳಾಗಿರಬೇಕು) ಮತ್ತು ಇಂತಹ ಎಷ್ಟೋ ಅರ್ಜಿಗಳ ನಿಕಾಲೆಯನ್ನು, ದಾವೆಯ ಖರ್ಚು ಸಹಿತ ಬಾಕಿ ಬಿದ್ದ ಗೇಣಿಯನ್ನು ಕೊಡಿಸಿ ಇಲ್ಲವೆ ಕಬಜೆಯನ್ನು ಕೊಡಿಸಿ, ಟೆನನ್ಸಿ ಕೋರ್ಟಿನವರು ಈಗಾಗಲೇ ಮಾಡಿರುತ್ತಾರೆ. ಟೆನನ್ಸಿ ಕೋರ್ಟುಗಳಿಗೆ ಇಂತಹ ಅರ್ಜಿಗಳನ್ನು ಸ್ವೀಕರಿಸಲಿಕ್ಕೂ ಅವುಗಳ ನಿಕಾಲೆ ಮಾಡಲಿಕ್ಕೂ ಅಧಿಕಾರವುಂಟೆಂದು ಸರಕಾರದವರದಾದರೂ ಇಷ್ಟು ದಿನ ತಿಳುವಳಿಕೆಯಿದ್ದಿರಬೇಕು ಇಲ್ಲದಿದ್ದರೆ ೧೯೪೬-೪೭ರ ಗೇಣಿ ಬಾಕಿ ಬಿದ್ದ ಬಗ್ಗೆ ಕಬಜಾ ಬೇಡುವ ಟೆನನ್ಸಿ ದಾವೆಗಳು ತಾ ೩೧-೩-೧೯೪೮ರೊಳಗೆ ದಾಖಲ ಆದರೆ ಮಾತ್ರ ಅವುಗಳನ್ನು ವಿಚಾರಕ್ಕೆ ತಕ್ಕೊಳ್ಳಬೇಕೆಂದೂ ಆ ನಂತರ ದಾಖಲ ಆಗುವ ದಾವೆಗಳನ್ನು ತಿರಸ್ಕರಿಸಬೇಕೆಂದೂ ಅವರು "ಅಂತರಂಗದ ಪರಿಪತ್ರ"ವನ್ನು ಹೊರಡಿಸುತ್ತಿದ್ದಿಲ್ಲ ಈಗ ಮಾತ್ರ ಸರಕಾರವು ಟೆನನ್ಸಿ ಕೋರ್ಟುಗಳಿಗೆ ಇಂತಹ ದಾವೆ-ಅರ್ಜಿಗಳನ್ನು ಸ್ವೀಕರಿಸುವ ಅಧಿಕಾರವಿಲ್ಲವಾಗಿ ಹೇಳಲಾರಂಭಿಸಿದೆ! ಇದೇ ಕಳೆದ ತಾ ೮-೫-೧೯೪೮ಕ್ಕೆ ಮುಂಬಯಿ ಸರಕಾರದ ಪ್ರಸಿದ್ಧಿ ಇಲಾಖೆಯವರು ಒಂದು ಪ್ರಕಟನೆ ಹೊರಡಿಸಿ, ಗೇಣಿ ಬಾಕಿಯುಳ್ಳ ಕೊಂಡ ರೈತನ ಒಕ್ಕಲತನವನ್ನು ಅಂತ್ಯಗೊಳಿಸಿ ಕಲಮು ೫ ಮತ್ತು ೬ (೧-ಅ) ಗಳನ್ವಯ ಬಾಕಿ ಬಿದ್ದ ಗೇಣಿಯನ್ನು ಇಲ್ಲವೆ ಕಬಜೆಯನ್ನು ಕೊಡಿಸುವ ಅಧಿಕಾರ ಟೆನನ್ಸಿ ಕೋರ್ಟುಗಳಿಗೆ (ಮಾಮಲೇದಾರರಿಗೆಯೂ ಟೆನನ್ಸಿ ಶಿರಸ್ತೇದಾರರಿಗೆ) ಇರುವದಿಲ್ಲೆಂದೂ, ಒಡೆಯನು ನೋಟೀಸ ಕೊಟ್ಟು ಒಕ್ಕಲಿಗನ ಒಕ್ಕಲತನ ಅಂತ್ಯಪಡಿಸಿ ಕಬಜಾ ಬೇಡಬೇಕೆಂದೂ, ಒಕ್ಕಲಿಗನು ಒಪ್ಪದಿದ್ದರೆ ಒಡೆಯನು ದಿವಾಣಿ ಕೋರ್ಟಿನಲ್ಲಿ ಇಲ್ಲವೆ ೧೯೦೬ರ ಮಾಮಲೇದಾರರ ಕೋರ್ಟುಗಳ ಕಾಯಿದೆಯನ್ವಯ ಮಾಮಲೇದಾರರ ಕೋರ್ಟಿನಲ್ಲಿ ದಾವೆ ದಾಖಲಪಡಿಸಿ ಡಿಕ್ರಿ ಪಡಕೊಳ್ಳಬೇಕೆಂದೂ, ಆ ಡಿಕ್ರಿಯನ್ನು ಒಕ್ಕಲತನದ ಕಾನೂನಿನ ಕಲಮು ೨೫ (೧-ಅ) ದನ್ವಯ ಟೆನನ್ಸಿ ಮಾಮಲೇದಾರರ ಕಡೆಗೆ ದಾಖಲಪಡಿಸಿ ಕಬಜಾ ಪಡಕೊಳ್ಳಬೇಕೆಂದೂ ಜಾಹೀರ ಮಾಡಿರುತ್ತಾರೆ.

***

ಕಾಯ್ದೆಯನ್ನು ಮಾಡುವ ಅಧಿಕಾರವಷ್ಟೇ ಸರಕಾರಕ್ಕೆ ಮತ್ತು ಕಾಯಿದೆ-ಮಂಡಳಿಗಳಿಗೆ ಇರುತ್ತದೆ ವಿನಾ ಅವರು ಮಾಡಿರುವ ಕಾಯಿದೆಗಳ ಅರ್ಥ ಹೇಳುವ ಅಧಿಕಾರ ಅವುಗಳಿಗೆ ಇಲ್ಲವಾಗಿ ಕಾಯಿದೆ ಪಂಡಿತರು ಹೇಳುತ್ತಾರೆ (ಭಾಡಿಗೆ ನಿಯಂತ್ರಣ ಕಾಯಿದೆಯ ಸಂಬಂಧದಲ್ಲಿ ಮೊನ್ನೆ ತಾ ೧೫ಕ್ಕೆ ಹೊರಡಿಸಿರುವ ಪ್ರಕಟಣೆಯಲ್ಲಿ ಸರಕಾರವೇ ಈ ಮಾತನ್ನು ಒಪ್ಪಿ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿ.

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಕುಂದಾಪುರದಲ್ಲಿ ಸಂಘಟಿಸಲ್ಪಟ್ಟಿದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್ ಕುಂದಾಪುರ.

ವಸೂಲಾದ ಮೂಲಧನ ರೂ ೬ ೭೧ ೦೦೦/— ಕ್ಕೂ ಮಿಕ್ಕಿದೆ.

ಕಾದಿರಿಸಲ್ಪಟ್ಟ ನಿಧಿ ರೂ. ೧,೦೦,೦೦೦/- ಕ್ಕೂ ಮೀರುವದು

೧೨ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ಸೆರೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡಾಯರೆಕ್ಟರ

[illegible]

ಕಾರವಾರ— [illegible]

ಅಂಕೋಲಾ— [illegible]

[illegible]

ನೆಗೆ ಹೊಸ ಔಷಧಿ!

ನವನಾರಾಯಣ ತೈಲ

ಕೆಮಿಕಲ್ ಕಂ., ಸಿರಸಿ.

THE BANK OF CITIZENS LTD;

[Established 1937]

(HEAD OFFICE — 1514 Maruti Galli, **BELGAUM**)

CHAIRMAN — Dr. R. V. Shiveshwarkar, B.A., M.B.B.S. D.T.M. A.D.P.H.

Authorised Capital :-	Rs. 10,000,00
Subscribed Capital :-	Rs 7,000,00
Paid-up Capital & Reserve exceeds :-	Rs 4 500,00

All kinds of Banking business transacted

Season Deposits For 4 months @ 2½% p. a.

For 6 months @ 3% p. a. will be accepted

For particulars apply to or call at the following Branches

ALNAVAR, ANKOLA, BAGALKOT, BAIL-HONGAL, BIJAPUR, CHIKODI, DHARWAR, GADAG, GOKAK, HALIYAL, HUBLI, KARWAR, KHANAPUR, KUMTA, NANDGAD, NIPANI, SANKESHWAR and SIRSI

Or **N. S. Pai**, Development Officer

NDIA, LTD.,

[...]

KARWAR. N. K.

[...]AVAR, YELLAPUR,

[...]LI & DHARWAR.

[...] 10,00,000;

[...] 5,00,000;

[...] 5,08,502-8-0.

Bank a/c @ 2½%.

% per annum.

½% "

@ 4% "

[...] transacted.

P. X. GRACIOUS,
MANAGING DIRECTOR.

ಗಳ ದುರುಸ್ತಿ ಮಾಡಿಸಲು ಸಾಧ್ಯವಾಗದಿತ್ತೆಂಬುದನ್ನೂ ಅವರು ಮರೆಯುತ್ತಾರೆ ಮಾವಿನಗೆರೆಯ ಸಮೀಪ ಇರುವ ಸಿದ್ಧೇಶ್ವರ ಗಜನಿಯೂ ಅದರ ನೆರೆಹೊರೆಯಲ್ಲಿರುವ ಬೇರೆ ಗಜನಿಗಳೂ ಕಟ್ಟುಗಳ ದುರುಸ್ತಿಯಿಲ್ಲದೆ ಕಳೆದ ವರ್ಷ ಬಂಜರ ಬಿದ್ದಿದ್ದವು ! ಈ ವರ್ಷ ಕೂಡ ಅವು ಸಾಗುಗುವ ಲಕ್ಷಣಗಳಿಲ್ಲ. ರೈತರಿಗೆ ಅದರ ಪರಿವೆಯಿಲ್ಲ ! ಕಟ್ಟುಗಳು ಸರಿಯಿಲ್ಲದ್ದರಿಂದ ಅವರು ಸಾಗುವಳಿಯನ್ನೇ ಮಾಡುವದಿಲ್ಲ ಆ ಬಗೆ ವೆಚ್ಚವನ್ನೂ ಮಾಡುವದಿಲ್ಲ ! ಆದರಿಂದ ಅವರಿಗೆ ಯಾವದೇ ಬಗೆಯ ಹಾನಿಯಿಲ್ಲ ಒಡೆ ಆವರು ಹಿಂದೆ ಈ ಗಜನಿ ರೀತಿ ರೂಪಿತ ಮಾಡಲಿಕ್ಕೆ ಇಲ್ಲವೆ ತ ಕೊಂಡುಕೊಳ್ಳಲಿಕ್ಕೆ ಸಾವಿರಗಟ್ಟಲೆ ಗಿಸಿದ್ದುಂಟು ಅವರ ಜೀವನವೂ ತ್ರಿಯಿಂದ ಸಾಗಬೇಕು ಗಜನಿಗಳ ಅವ್ಯಕ ಸಂಸ್ಕಾರ ಕೆಟ್ಟಂತೆಯೇ ಸರಿ ರಿತ್ನ ರೈತರು "ಒಡೆಯರು ಬೇಕಾದ ಸ್ತಿ ಮಾಡಿಸಲಿ ! " ಎಂದು ಹೇಳಿ ರೆ ಹೀಗಾಗಿ ಕುಮಟಾ ತಾಲೂ ಎಕರೆ ಗಜನಿ ಭೂಮಿಗಳು ಹಾಳ ತನದ ಕಾನೂನಿನ ವೃಕ್ಷ ಪರಿಣಾಮ ಮುಖ್ಯವಾದದ್ದು

* *

ಈ ಸ್ಥಿತಿ ಸುಧಾರಿಸಬೇಕಾದರೆ ನಿನಲ್ಲಿ ತಿದ್ದುಪಡಿಗಳನ್ನು ಮಾಡಿ ರೈತ ದು ಹೊಣೆಗಳನ್ನು ಸ್ಪಷ್ಟವಾಗಿ ಅವುಗಳನ್ನು ಅವರು ತಪ್ಪದೆ ನಿರ್ವ ಕ್ರಮಗಳನ್ನು ಕಲ್ಪಿಸಬೇಕು ಗಜ ನಿರ್ದಿಷ್ಟ ಅವಧಿಯಲ್ಲಿ ಸರಿಗೊಳಿಸ ಲತನದ ಹಕ್ಕು ನಷ್ಟವಾಗುವದೆ ಅವರನ್ನು ಹೊರಗೆ ಹಾಕಿ ಸ್ವತಃ ಸಹಾಯದಿಂದ ಗಜನಿಗಳ ಸಾಗು ವೆಂದೂ ವಿಧಿಸಿದರೆ ಮಾತ್ರ ತಲೆ ಮಾರ್ಗಕ್ಕೆ ಬರುವರು ಇ ಹೊರತಳ್ಳುವ ಪ್ರಕರಣಗಳ ವಿ ಕೆಪಿಡ ಅಷ್ಟೇ ಲಘು ಇರಬೆ ಮಾಮಲೇದಾರರಾಗಲಿ ಬೇರೊಬ್ಬ ತಮ್ಮ ಕಡೆ ದೂರು ಬಂದ ಒಂದೇ ಚೌಕಶಿ ಮಾಡಿ, ಪಟ್ಟಿಗಳ್ಳ ರೈತರಿಂದೆ ಸಿ ಒಡೆಯರಿಗೆ ಒಪ್ಪಿಸಬೇಕೆಂದು ಕಾ ಕು ಅಂಥ ವ್ಯವಸ್ಥೆ ಮಾಡಿದರೆ ಮಾ ಪಳ್ಳಿಯು ಸರಿಯಾಗಿ ಸಾಗುವದು ಈ ಶೀಘ್ರದಲ್ಲಾಗುವದು ಆಗತ್ಯದ್ದಿದ್ದೆ ಇ ಕಾಲಕ್ರಮದಿಂದ ಸವೆದು ಯಾ ಬ ಗಳು ಕೆಲವೇ ಕಾಲದಲ್ಲಿ ಹೋಗುವವು !

* *

ಮೇಲೆ ನಿಂತರೂ ಮರೆದ ಹಾ ನಿಲ್ಲ ಬಾಡಿಯುಂಟಷ್ಟೇ ಯಲ್ಲಾಪುರ ತಾ ಲ್ಲಿ ಇದರ ಪ್ರತ್ಯಯ ಸಿಗುತ್ತದೆ ರೂ ಅಂಗಗಳೊಂದಿಗೆ ತಮ್ಮ ಕೈಯ ಅಧಿಕಾರಗಳು ನಷ್ಟವಾದರೂ ಅಲ್ಲಿ ಇನ್ನೂ ಆ ಅಧಿಕಾರಸತ್ತೆಗಳು ಯೆಂಬ ಭಾವನೆಯಿಂದಿವೆ ಸರ್ರಿ ದಲ್ಲಿರುವ ಚಿಮಣ ಎಣ್ಣೆ ಕಂಪನಿಗಳ ಸಿದಂತೆ ಯಲ್ಲಾಪುರದೊಳಗಿನ ವ್ಯಾಪಾರಿಗಳು ಬಂದ ಚಿಮಣಿ ಸಿ ನಂತೆ ಕೂಪನ ಪದ್ಧತಿಯನ್ನು ಕೆಂದು ನಿರ್ಧರಿಸಿದ್ದಾರೆ ಈ ಕೆಲಸ ಗಳ ಸಹಕಾರ ಅವರಿಗೆ ಬೇಕಾ ರು ಪಡೆಕೊಂಡು ಹಳ್ಳಿಗಳಲ್ಲೂ ಚೀಟಿಗಳನ್ನು ಕೊಟ್ಟು ಸೀಧಾ ಕ್ರಮ ಲಾರಂಭಿಸಿದರು ಈಗ ಬಂದ ಎಣ್ಣೆ ಬರುತಿದ್ದ ಎಣ್ಣೆಯ ಅರ್ಧದಷ್ಟಿರುವದರಿಂದ ಕಾರಿ ಕೂಪನ ಪದ್ಧತಿ ಆಮಲಿನಲ್ಲಿಲ್ಲದ್ದಾಗ ಕೊಡುತ್ತಿದ್ದ ಎಣ್ಣೆಯ ಅರ್ಧದಷ್ಟು ಎಣ್ಣೆ ಕೆ ಭಜೇಕೆಂದು ವ್ಯಾ ಪಾರಿಗ

ಳು ಅಧಿಕಾರಿಗಳೂ ಕೂಡಿ ನಿರ್ಧರಿಸಿದ್ದರು ಅದರಂತೆ ವ್ಯಾಪಾರಿಗಳು ಆಷ್ಟೇ ಪಾಲ್ಗ ಎಣ್ಣೆ ಕೊಡಲಾರಂಭಿಸಿದರು ಮತ್ತು ಕೆಲವು ಎಣ್ಣೆಯ ಬಟ್ಟೆಯೂ ಆಗಿಹೋಯಿತು ಆ ಕಾಲಕ್ಕೆ ಮಾಮಲೇದಾರರು ಹಳ್ಳಿಗಳ ಸಂಚಾರಕ್ಕೆ ಹೋಗಿದ್ದರು ಅವರ ಮಂಜೂರಿಯಿಲ್ಲದ ಎಣ್ಣೆ ಪರಚು ವಿಕೆಯು ಆನಧಿಕೃತ ಮತ್ತು ಕಾನೂನವಿರುದ್ಧವಿರುತ್ತ ದಾಗ್ಗಿ ವಾದಿಸಿ ಯಲ್ಲಾಪುರ ತಾಲೂಕ ಕಚೇರಿಯ ಕೌ ಶ ಪಾಲಕ ಶಿರಸ್ತೇದಾರ ದಾ ಸರದಾರರು " ನಾವು ಪುನಃ ತಿಳಿಸುವ ವರೆಗೆ ಚಿಮಣಿ ಎಣ್ಣೆ ನೀವು ಮಾರಾಟ ಮಾಡ

ಬೇಕಾಗಿ ಮುಟ್ಟಿಸದ ಒಕ್ಕಲಿಗನು ತನ್ನ ಒಕ್ಕಲತನ ಕಳಕೊಳ್ಳುತ್ತಾನೆಂದು ಒಕ್ಕಲತನದ ಕಾನೂನಿನ ಕಲಮ ೫ (೨) ರಲ್ಲಿ ಹೇಳಿರುತ್ತದೆ ಇಂತಹ ಒಕ್ಕಲಿಗರಿಂದ ಸಾಗುವಳಿ ಭೂಮಿಯ ಕಬಜೆಯನ್ನು ಪಡೆಯಲಿಕ್ಕೆ ಒಡೆಯರು ಹಕ್ಕುದಾರರಾಗುತ್ತಾರೆ ಅದರಂತೆ ಈಗ ಒಂದು ವರ್ಷದಿಂದ ಗೇಣಿಯನ್ನು ಏನಷ್ಟೂ ಸಲ್ಲಿಸದ ಇಲ್ಲವೆ ಪೂರ್ಣವಾಗಿ ಸಲ್ಲಿಸದ ರೈತರಿಂದ ಭೂಮಿಯ ಕಬಜಾ ಕೊಡಿಸಬೇಕಾಗಿ ನೂರಾರು, ಸಾವಿರಾರು ಒಡೆಯರು ನಮ್ಮ ಜಿಲೆಯೊಳಗಿನ ಸಿವಿಲ ಕೋರ್ಟು

ಪುರವಣಿ, ಕಾನಡಾವೃತ್ತ— ಸೋಮವಾರ ತಾ ೧೬-೫-೧೯೪೫ನೇ ಇಸವಿ

(೩ನೇ ಪಾನಿನಿಂದ ಮುಂದರಿಸಿದ್ದು)

ಭರತದಲ್ಲೆಲ್ಲ " ಗಾನ ಕೋಕಿಲೆ " ಎಂದು ವಿಖ್ಯಾತಿ ಹೊಂದಿರುವ ಶ್ರೀಮತಿ ಹಿರಾಬಾಯಿ ಬಡೋದೆಕರ ಇವರು ಈ ವಾರದಲ್ಲಿ ನಮ್ಮ ಜಿಲ್ಹೆಗೆ ಬರುವವರಿದ್ದಾರೆ ಆಗ ಇಲ್ಲೂ ಕಾರವಾರದಲ್ಲೂ ಅವರ ಜಲಸೆಗಳನ್ನು ಏರ್ಪಡಿಸಿ ಸ್ಥಾನಿಕ ಸಂಗೀತ-ಪ್ರೇಮಿಗಳಿಗೆ ಸ್ವರ್ಗೀಯ ಸಂಗೀತದ ಸವಿಯನ್ನುಣಿಸುವ ವ್ಯವಸ್ಥೆಯನ್ನು ವಾಂಬಯಿಯ ಶ್ರೀ ಉಮಾಕಾಂತ ವಾಗಳೇ ಇವರು ಮಾಡಿದ್ದಾರೆ ಕುಮಟೆಯಂತಹ ಎಡೆ ಊರುಗಳಲ್ಲಿ ಹಿರಾಬಾಯಿಯವರ ಸಂಗೀತ-ಕಚೇರಿಗಳು ಆಗುವದು ತೀರ ವಿರಳ

ಹೊನ್ನಾವರ— (ತಾ ೯—೫ ೪೫) ಇಲ್ಲಿಯ ಮ್ಯುನಿಸಿಪಾಲಿಟಿಯವರು ಮಾಗರಗಳಿಗೆ ನೀರು ಹಂಚಿಸುತ್ತಿದ್ದಾರೆ ದಿನ ೧೮ ರಿಂ ೧೫ ವೇಳೆ ಬರುತ್ತದಂತೆ ನಾಕಷ್ಟು ನೀರು ಮಾತ್ರ ಬೀಳುವದಿಲ್ಲ ! ಬಂದರ ಬದಿಯ ರಸ್ತೆಗಳಲ್ಲಿ ಆಸಕಡ್ಡಿಗಳ ೦ ತಿಗಳು ಬಿದ್ದಿವೆ ಅವನ್ನು ತೆಗಿಸುವ ವ್ಯವಸ್ಥೆಯಾಗುವದಿಲ್ಲ !

ಮ್ಯುನಿಸಿಪಾಲಿಟಿಯವರು ಒಂದು ರೇಡಿಯೋ ತರಿಸುವ ವಿಚಾರದಲ್ಲಿದ್ದಾರೆಂದು ತಿಳಿಯುತ್ತದೆ

ಶಹರದೊಳಗಿನ ಜನರಿಗೆ ಚಿಮಣಿ ಎಣ್ಣೆ ನಿಯಂತ್ರಣ ಪದ್ಧತಿಯಿಂದ ಹಂಚುವ ಏರ್ಪಾಟಾಗಿದೆ ಹಳ್ಳಿಗಳಲ್ಲಿ ಇನ್ನೂ ಯಾವ ವ್ಯವಸ್ಥೆಯೂ ಆಗಿರುವದಿಲ್ಲ ಹಳ್ಳಿಗರಿಗಾಗಿ ಕೊಟ್ಟ ಡಬ್ಬಿಗಳು ಶಿರ್ಶಿ, ಸಿದ್ದಾಪುರ, ಸಾಗರ ಆತ್ತ ಕಡೆಗೆ ಹೋಗುತ್ತಿದೆಯಂತೆ ! ಅಲ್ಲಿ ಎಣ್ಣೆ ಡಬ್ಬಿ ೧೫ ರೂ ೧೫ರಿಂದ ರೂ ೨೦ರ ವರೆಗೆ ದರ ಸಿಗುತ್ತದಂತೆ !

ಸಿಮೆಂಟಿನ ಕಳ್ಳಪೇಟೆ ಮುಗಿಲಂಗಿದೆ ಸಿಮೆಂಟಿನ ಅಗತ್ಯವಿದ್ದ ಜನರು ತಾಲೂಕ ಅಧಿಕಾರಿಗಳ ಶಿಫಾರಸ ಪತ್ರ ಪಡೆಕೊಂಡು ಬಂದರೂ ಪಿಡಬ್ಲ್ಯೂಡಿ ಯವರು "ಸಿಮೆಂಟು ಶಿಲ್ಕು ಇಲ್ಲ !" ಎಂದು ಹೇಳುತ್ತಾರೆ ಬಂದ ಬಂದ ಸಿಮೆಂಟು ಕತ್ತಲೆಯಲ್ಲಿ ಗಾಡಿತುಂಬಿ ಹೊರನಾಡಿಗೆ ಹೋಗುತ್ತಿದೆ

ಸಿದ್ದಾಪುರ ತಾಲೂಕಿನಲ್ಲೀಗ ಒಂದು ಪ್ರತಿ ಸರಕಾರ ಸ್ಥಾಪನೆಯಾಗಿದೆ ! ಈ ಸರಕಾರದವರು ತಮ್ಮ ತಾಲೂಕಿನ ಅಕ್ಕಿಯನ್ನು ಹೊರಹೋಗಗೊಡುವದಿಲ್ಲ ಸಾಗರ ಬದಿಯಿಂದ ಬಂದ ಅಕ್ಕಿಯನ್ನೂ ಗೇರಸಪ್ಪೆಗೆ ತರಗೊಡುವದಿಲ್ಲ ! ಮಾವಿನಗುಂಡಿ ಮಾರ್ಗದಲ್ಲಿ ಬಂಡಿಗಳನ್ನು ನಿಲ್ಲಿಸಿ ಅಕ್ಕಿಯನ್ನು ಇಸ್ತ ಮಾಡುತ್ತಾರೆ ! ಸ್ವಂತ ಖರ್ಚಿಗಾಗಿ ಅಕ್ಕಿ ತರುವವರು ಈ ಸರಕಾರದವರ ಪರವಾನೆ ಚೀಟಿಗಳನ್ನು ಪಡೆಯಬೇಕಂತೆ ! ಅಂಥ ಪರವಾನೆ ಚೀಟಿಯುದ್ದವರಿಗೇ ಮಾವಿನಗುಂಡಿಯ ಮಾರ್ಗದ ಕಾವಲುಗಾರರು ಅಕ್ಕಿ ತರಗೊಡುತ್ತಾರೆ ! ಪ್ರತಿ ಸರಕಾರದ ಈ ಉಪಟಳದಿಂದ ಇಲ್ಲಿ ಅಕ್ಕಿ ಅಭಾವ ಹೆಚ್ಚಿಗೆಯಾಗಿದೆ ಬೆಸ್ತಗೆ ಅಕ್ಕಿಯ ದರ ಹಾಯಲಿ ೧೫ ರೂ ೨ ೨ ೦ರಿಂದ ೨ ೬೦ರ ವರೆಗೂ ಏರಿತು, ಕುಚಿಗೆ ಅಕ್ಕಿಯ ದರ ರೂ ೨–೧ ೦ ೨–೨–೦ ಉಂಟು

ಇಲ್ಲಿ ಗ್ರಾಮ ಪೊಳಗೆ ರೈತ ಸಂಘದವರು ನಡಿಸಿದ ಚಟುವಟಿಕೆಗಳ ಸಂಬಂಧದಲ್ಲಿ ತಾ ೨೬—೪—೪೫ ರ " ಪ್ರಜಾ ಮತ"ದಲ್ಲಿ ಪ್ರಕಟವಾದ ವರದಿ ವಿಪರ್ಯಾಸವಿರುತ್ತದಾಗಿ ಹಳದೀಪುರದ ರಾ|| ದೀಪಣ್ಣಶೆಟ್ಟಿ ಮತ್ತು ಲಿಂಗಾಗೌಡಾ ಇವರು ತಿಳಿಸುತ್ತಾರೆ ತಾಲೂಕಾಫೀಸಿನ ಅಪ್ಪಣೆಯಂತೆ ಅಲ್ಲಿಯ ಕೆಲವು ರೈತರು ಹುಗ್ಗಿ ಬೆಳೆಯನ್ನು ಸ್ಪೆಶಲ್ ಸಂ|| ೨೭೫ರಲ್ಲಿ ಗೊಬ್ಬರ ಹಾಕುತ್ತಿದ್ದಾಗ ಇಮಾನದಾರರು ವಿರೋಧಿಸಿದರೆಂದೂ, ಅವರು ಬಂದಗಟ್ಟಿಕೊಂಡು ಬಂದು ಗೊಬ್ಬರ ಹಾಕಿದ ಬೆಳೆಯನ್ನು ಕೊರಲಾರಂಭಿಸಿದರೆಂದೂ ಕಡೆಗೆ ಈ ಸುದ್ದಿ ತಿಳಿದು ತಾವು ಅಲ್ಲಿಗೆ ಹೋಗಿದ್ದೆವೆಂದೂ ಅವರು ತಿಳಿಸುತ್ತಾರೆ ತಮ್ಮ ಕೈಯಲ್ಲಿ ಕಂತು ಸಹ ಇದ್ದಿಲ್ಲೆಂದೂ ಅವರು ಹೇಳುತ್ತಾರೆ ಅವರ ಕೈಯಲ್ಲಿದ್ದದ್ದು ಸಂಸ್ಕೃತ್ಯವಂತೆ

ಭಟಕಳ— (ತಾ ೧೪—೫—೪೫) ಬಂದರ ಸಮಿತಿಯ ರಾ|| ಮಿತ್ರ ಮತ್ತು ರಾ|| ಮರೇ ಇವರು ತಾ. ೮ಕ್ಕೆ ಇಲ್ಲಿಗೆ ಬಂದು, ಇಡೀ ಬಂದರ ಸ್ಥಳವನ್ನು ನೋಡಿ.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನಾಯ್ಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ ೧೯೩೪ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ —

Post Box No 10,

UDIPI, S. Kanara

ತಾ ೧೫ ೩ ೧೯೪೫

ಮೊನೆಹಂಗ ಡಾ ರಿಕ್ಷ

ಕ ಬರುತ್ತಿದ) ಯಾವ ಒಂದು ಕಾಯಿದೆಯ ಅರ್ಥ ಮಾಡುವಾಗ ಆ ಕಾಯಿದೆಯೊಳಗಿನ ಶಬ್ದಾರ್ಥ ಇಲ್ಲವೆ ಶಬ್ದಸಮೂಹಗಳ ಅರ್ಥ ಮಾತ್ರವೇ ಪರಿಗ್ರಹಿಸಬೇಕೆಂದೂ ಅದರ ಅರ್ಥ ತಿಳಿದುಕೊಳ್ಳಲು, ಕಾಯಿದೆ ಮಾಡುವಾಗ ಕಾಯಿದೆ ಮಂಡಳಿಯೊಳಗಿನ ಸದಸ್ಯರು ಮಾಡಿದ ಭಾಷಣಗಳನ್ನಾಗಲಿ ಅವರು ವ್ಯಕ್ತಗೊಳಿಸಿದ ಉದ್ದೇಶ ಅಭಿಪ್ರಾಯಗಳನ್ನಾಗಲಿ ನೋಡಕೂಡದೆಂದೂ ಅನೇಕ ನ್ಯಾಯಾಸನಗಳು ಒತ್ತಿ ಒತ್ತಿ ಹೇಳಿವೆಯೆಂದು ಕೇಳುತ್ತೇನೆ. ಪರಿಸ್ಥಿತಿಯೂ ಪರಿಣಾಮವೂ ಹೀಗಿರುವಾಗ ಮುಂಬಯಿಯ ಈಗಿನ ಜನತಾ ಸರಕಾರವು ಆ ಪರಿಣಾಮವನ್ನೆಲ್ಲ ಮರೆತು ಬಿಟ್ಟು ಒಕ್ಕಲತನದ ಕಾಯಿದೆಯ ಅರ್ಥವನ್ನು ವಿವರಿಸಲು ಮುಂದಾದದ್ದೂ, ಸಾವಿರಾರು ಜನರು ಕಾಯಿದೆ ಪಂಡಿತರು ಕೂಡ ಈ ತನಕ ಮಾಡುತ್ತ ಬಂದ ಅರ್ಥ ಸರಿಯಲ್ಲೆಂದು ಸಾರಲಿಕ್ಕೆ ಮುಂದೆ ಬಂದದ್ದೂ ಸರಿಯಿರುತ್ತದೇನ್ ?

* *

[illegible]

* *

[illegible]

[illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

(ಪುರವಣಿ ನೋಡಿರಿ)

ಹೊಸ ಬೇನೆಗೆ ಹೊಸ ಔಷಧಿ !

ಪ್ಪೈ ಥ್ರುಂವಾಗಿ ಬರುವ ಹೊಸ ಬೇನೆಗೆ ಹೊರಿ ನಿಂದ ಹಚ್ಚುವದಕ್ಕೆ—

ಶೀಲಧಾ ನವನಾರಾಯಣ ತೈಲ

ಖಾತ್ರಿಯಾಗಿ ಗುಣ ಮಾಡುತ್ತದೆ

ಶೀಲಧಾ ಕೆಮಿಕಲ್ ಕಂ , ಸಿರಸಿ

THE BANK OF RURAL INDIA, LTD.,

[Incorporated in B[illegible] I[illegible], Liability of Members li[illegible]]

HEAD OFFICE— 'Satyabhama Bhavan , KARWAR. N K

Offices at — KARWAR, KUMTA, SIRSI HONAVAR YELLAPUR, BHATKAL SIDDAPUR ANKOLA, HUBLI & DHARWAR

Authorised Capital	Rs. 10,00,000,
Subscribed Capital	Rs 5 00 000,
Paid-up Capital & Reserves	Rs. 5,06 502-8-0

Rates of Interest on Deposits.

Current a/c @ 1% p a *Savings Bank a/c @ 2½%*

Fixed Deposits for 3 months @ 3% per annum

for 6 months @ 3½%

, , for 12 months or more @ 4%

All kinds of modern Banking business transacted

Karwar
14-2 1948

P. X. GRACIOUS.
MANAGING DIRECTOR

10

ಈ ವರ್ಷದ ಮಳೆಯ ಭವಿಷ್ಯ.

ಪ್ರತಿವರ್ಷದಂತೆ ಪುಣೆಯ "ಕೇಸರಿ"ಯಲ್ಲಿ, ಮಳೆಯ ಜ್ಯೋತಿಷದ ದೀರ್ಘ ಅಭ್ಯಾಸ ಮಾಡಿರುವ ಶ್ರೀ ಜನಾರ್ದನ ಸಖಾರಾಮ ಕರಂದೀಕರ ಇವರು ಈ ವರ್ಷದ ಮಳೆಯ ಭವಿಷ್ಯವನ್ನು ಪ್ರಕಟಿಸಿದ್ದಾರೆ ಅವರ ಭವಿಷ್ಯವು ಮುಖ್ಯತಃ ಮಹಾರಾಷ್ಟ್ರ ದೇಶದ್ದಿರುತ್ತಿದ್ದಾಗ್ಯೂ ಮಹಾರಾಷ್ಟ್ರ ದೇಶದ ಸಂಸರ್ಗದಲ್ಲಿರುವ ಕೊಂಕಣ ಪಟ್ಟಿಗೂ ಉತ್ತರ ಕರ್ನಾಟಕಕ್ಕೂ ಸರ್ವಸಾಧಾರಣವಾಗಿ ಅದು ಅನ್ವಯಿಸುತ್ತದೆ ಆದ್ದರಿಂದ ಶ್ರೀ ಕರಂದೀಕರರ ಭವಿಷ್ಯದ ಮುಖ್ಯಾಂಶಗಳನ್ನು ಇದರಡಿ ಎತ್ತಿ ಕೊಟ್ಟಿದ್ದೇವೆ

ಶ್ರೀ ಕರಂದೀಕರರು ರವಿ ಬುಧ ಗ್ರಹಗಳ ಯುತಿಗಳನ್ನೂ ಬೇರೆ ಗ್ರಹಗಳ ಯುತಿ ಪ್ರತಿಯುತಿಗಳನ್ನೂ ಆಧರಿಸಿ ಮಳೆಗಾಲದ ಅನುಮಾನ ಮಾಡುತ್ತಾರೆ ಈ ವರ್ಷದಲ್ಲಿ ತಾ ೨೯-೪, ತಾ ೨೪-೬, ತಾ ೧೧-೮, ತಾ ೨೦-೧೧, ತಾ ೧೨-೧೨, ಮತ್ತು ತಾ ೨-೩-೪೯ ಹೀಗೆ ೬ ಮಿತಿಗಳಿಗೆ ರವಿ-ಬುಧ ಗ್ರಹಗಳ ಯುತಿ (ಅದೇ ರಾಶಿಯ ಅದೇ ಅಂಶದಲ್ಲಿ ೨ ಗ್ರಹಗಳು ಬಂದಾಗ ಅವುಗಳ ಯುತಿ ಯಾನೆ ಯೋಗವಾಯಿತೆಂದು ಹೇಳುತ್ತಾರೆ) ಗಳಾಗುತ್ತವೆ ಈ ಯೋಗಗಳನ್ನೂ ಇನ್ನಿತರ ಗ್ರಹಗಳ ಯೋಗ ಪ್ರತಿಯೋಗಗಳನ್ನೂ ಲೆಕ್ಕಕ್ಕೆ ಹಿಡಿದು ರಾ। ಕರಂದೀಕರರು ಈ ವರ್ಷ ಈ ಕೆಳಗಿನಂತೆ ಮಳೆಯಾಗುವದೆಂದು ಲೆಕ್ಕ ಹಾಕಿರುತ್ತಾರೆ

ಜೂನ ತಿಂಗಳ ೨ನೇ ವಾರದಲ್ಲಿ (ನಿಜವಾದ) ಮಳೆಗಾಲಕ್ಕೆ ಪ್ರಾರಂಭವಾಗುವದು ಜೂನ ಕೊನೆಯ ವಾರದಲ್ಲಿ ಮಳೆಗೆ ಕಳೆಯೇರಿ ಜುಲೈ ೩ನೆಯ ವರೆಗೆ ಬಹಳ ಮಳೆ ಸುರಿಯುವದು ಜುಲಾಯಿ ತಿಂಗಳ ಪ್ರಥಮಾರ್ಧದಲ್ಲಿ ಮಳೆಯ ಜೋರು ಕಡಿಮೆಯಾಗುವದು ಆ ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವದೆಂದು ಹೇಳಿಯದು ಅಗೋಸ್ತ ತಿಂಗಳ ಪ್ರಾರಂಭಕ್ಕೆ (ರವಿಯು ಇನ್ನೂ ಕರ್ಕ ರಾಶಿಯಲ್ಲಿರುವಾಗ) ತುಫಾನಿ ಮಳೆಯಾಗುವದು ಸಪ್ಟಂಬರ ತಿಂಗಳ ಮೊದಲಿನ ವಾರಗಳಲ್ಲೂ ಅತಿವೃಷ್ಟಿಯ ಯೋಗಗಳಿವೆ ಅಕ್ಟೋಬರ ತಿಂಗಳ ಪೂರ್ವಾರ್ಧದಲ್ಲೂ ಸಮಾಧಾನಕರ ಮಳೆಯಾಗುವದು ಉತ್ತರಾರ್ಧದಲ್ಲಿ ಜಾಸ್ತಿ ಮಳೆ ಬೀಳುವದು. ನವಂಬರ ತಿಂಗಳಲ್ಲಿ ಸಹ ಮಳೆಯ ಯೋಗಗಳಿವೆ ಡಿಸೆಂಬರ ತಿಂಗಳಲ್ಲಿ ಮಳೆಯಾಗುವ ಲಕ್ಷಣಗಳು ಕಾಣುವದಿಲ್ಲ. ಸಾರಾಂಶ ಈ ವರ್ಷ ಉಷ್ಣತೆಯ ಮಾನ ಹೆಚ್ಚಿಗೆ ಇದ್ದು, ಮಳೆಯ ಪ್ರಮಾಣ ಮಧ್ಯಮವಿದೆ

ಮಳೆಯಾಗಬಹುದಾದ ದಿನಗಳು ಈ ಕೆಳಗೆ ಕೊಡಲ್ಪಟ್ಟಿವೆ —

ಜೂನ — ತಾ ೪, ೯, ೧೨, ೧೭ರಿಂದ ೨೭, ೨೯–೩೦

ಜುಲೈ — ತಾ ೨, ೫ರಿಂದ ೯, ೧೫, ೧೯ರಿಂದ ೨೨, ೨೬, ೩೦–೩೧

ಅಗೋಸ್ತ — ತಾ ೧, ೪ರಿಂದ ೯, ೧೩ ೧೬, ೧೯–೨೦ ೨೪, ೨೯–೩೦.

ಸಪ್ಟೆಂಬರ:— ತಾ ೧ರಿಂದ ೫, ೧೨, ೧೫, ೧೮–೧೯, ೨೩, ೨೯–೩೦

ಅಕ್ಟೋಬರ — ತಾ. ೨ರಿಂದ ೪, ೮, ೧೩–೧೪, ೧೮, ೨೦, ೨೬–೨೭

ನವಂಬರ — ತಾ ೧೨–೧೩, ೧೮, ೨೫–೨೬

The Presidency Provident and General Insurance Co Ltd ,
Meherwan Building,
Sir P Mehta Road, Fort, Bombay.

NOTICE

Notice is hereby given that the Policy No 57563 granted by the above Company in the name of Mrs Parameshwaribai Sanbhadti of Gokarn is reported to be lost or mislaid Any person claiming the above policy should notify his claim to the Company within one month from this date Otherwise the Company will issue a duplicate copy of the policy to the policy holder

Bombay, 15-5 48

N. J. GOR.
Managing Director

ಉಮೇದವಾರ ಯೋಜನೆ.
ಉದ್ಯೋಗಗಳ ಖಾತೆ, ಮುಂಬಯಿ.

೧೯೪೮—೪೯ನೇ ಸಾಲಿನಲ್ಲಿ, ಮುಂಬಯಿ ಸರಕಾರದ ಉಮೇದವಾರ ಯೋಜನೆಯನ್ವಯ, ಮುಂಬಯಿ ನಗರದಲ್ಲಿ ಇಲ್ಲವೆ ಅಹಮದಾಬಾದದಲ್ಲಿ ಇರುವ ಬಟ್ಟೆಯ ಗಿರಣಿಗಳಲ್ಲೂ ಬೇರೆ ಔದ್ಯೋಗಿಕ ಸಂಸ್ಥೆಗಳಲ್ಲೂ ಉಮೇದವಾರರಾಗಿ ಸೇರಬಯಸುವ ಧಷ್ಟಪುಷ್ಟ ಮತ್ತು ಸದ್ವರ್ತನಿ ತರುಣರು — ಈ ಕೆಳಗೆ ಕಾಣಿಸಿದ ಪಾತ್ರತೆಗಳುಳ್ಳವರು ಮಾತ್ರ — ಅರ್ಜಿ ಮಾಡಬೇಕಾಗಿ ಸೂಚನೆಯಿದೆ —

(೧) ಅರ್ಜದಾರರು ಮೆಟ್ರಿಕ್-ಪೂರ್ವ ವರ್ಗದ (Pre Matriculation) ಶಿಕ್ಷಣವನ್ನು ಮುಗಿಸಿದವರಿರಬೇಕು

(೨) ಪ್ರವೇಶದ ಕಾಲಕ್ಕೆ ಅರ್ಜದಾರರ ಪ್ರಾಯ ೧೬ ವರ್ಷಗಳಿಗೂ ಕಡಿಮೆ ಮತ್ತು ೨೦ ವರ್ಷಗಳಿಗೂ ಹೆಚ್ಚಿಗೆ ಇರಕೂಡದ

(೩) ಅರ್ಜದಾರರು ನಿಜವಾಗಿ ಮುಂಬಯಿ ಪ್ರಾಂತದಲ್ಲಿ ವಾಸ್ತವ್ಯ ಮಾಡಿಕೊಂಡವರು (domiciled) ಇರಬೇಕು ಪಾಕಿಸ್ಥಾನ ಪ್ರಾಂತಗಳಿಂದ ಬಂದಿರುವ ಮುಸಲ್ಮಾನೇತರ ಆಶ್ರಯಾರ್ಥಿ (refugee)ಗಳ ಸಂಬಂಧದಲ್ಲಿ ವಾಸ್ತವ್ಯದ ಈ ಶರತ್ತನ್ನು ಶಿಥಿಲಗೊಳಿಸಲಾಗುವದು

ಅರ್ಜದಾರರು ಜೂನ ತಿಂಗಳ ತಾ ೨೮, ೨೯ಕ್ಕೆ, ಮುಂಬಯಿಯಲ್ಲಿ ಇಲ್ಲವೆ ಅಹಮದಾಬಾದದಲ್ಲಿ, ಆಯಾ ಸಮಿತಿಯ ಮುಂದೆ ಸಂದರ್ಶನಕ್ಕಾಗಿ, ತಮ್ಮ ಸ್ವಂತ ವೆಚ್ಚದಿಂದ, ಹಾಜರ ಆಗಬೇಕಾಗುವದು

ಈ ಯೋಜನೆಯನ್ವಯ ಕೆಳಮಟ್ಟದ ಹಿಂದುಳಿದ ವರ್ಗಗಳ ಉಮೇದವಾರರಿಗಾಗಿ ಪ್ರತಿ ತಿಂಗಳು ರೂ ೨೫ ರಂತೆ ವಿದ್ಯಾರ್ಥಿ ವೇತನ ಕೊಡುವ ಸರಕಾರಿ ಶಿಷ್ಯವೃತ್ತಿಗಳು ೨೫ ಇವೆ ಯೋಜನೆಯನ್ವಯ ಪ್ರವೇಶ ದೊರಕಿಸಿಕೊಂಡ ಉಮೇದವಾರರಲ್ಲಿ ಶಿಷ್ಯವೃತ್ತಿ ಪಡೆಯಲು ಪಾತ್ರರಿರುತ್ತಾರೆಂದು ಕಂಡು ಬಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಈ ಶಿಷ್ಯವೃತ್ತಿಗಳು ಕೊಡಲ್ಪಡುವವು

ಪ್ರವೇಶಕ್ಕಾಗಿ ಮಾಡಬೇಕಾದ ಅರ್ಜಿಯ ಫಾರ್ಮಗಳೂ ಯೋಜನೆಯ ರೂಪರೇಷೆಯನ್ನು ತಿಳಿಸುವ ಮಾಹಿತಿಪತ್ರಿಕೆಯೂ (ಬೇಡಿದವರಿಗೆ) ಡಾಯರೆಕ್ಟರ ಒಫ್ ಇಂಡಸ್ಟ್ರೀಜ, ಓಲ್ಡ ಕಸ್ಟಂ ಹೌಸ ಯಾರ್ಡ, ಮುಂಬಯಿ ೧ ಇವರಿಂದ ದೊರೆಯುವವು

ಪ್ರವೇಶಕ್ಕಾಗಿ ಅರ್ಜಿಗಳನ್ನೊಪ್ಪಿಸುವ ಕೊನೆಯ ದಿನ ತಾ ೮—೬—೧೯೪೮ನೇದು ಇರುತ್ತದೆ

(ಸರಕಾರಿ ಪ್ರಕಟನೆ)

ಜಾಹೀರ ನೋಟೀಸು.

ಈ ಕೆಳಗೆ ಕಾಣಿಸಿದ ಸರ್ವೆ ನಂಬರಗಳನ್ನು ಸಿದ್ದಾಪುರ ತಾಲೂಕ ಹಸವಂತ ಗ್ರಾಮದ ಹೆಗ್ಗರಣಿಯಲ್ಲಿ ಇರುವ ಮಹಂಕಾಳಮ್ಮ ಕೋಂ ಶಿವರಾಮ ಹೆಗಡೆ ಇವಳು ತಾ ೧೫-೫-೧೯೪೬ನೇ ದಿವಸ ನನಗೆ ರಜಿಸ್ಟರ ಭಕ್ಷೀಸ-ಪತ್ರ ಮಾಡಿಕೊಟ್ಟಿರುತ್ತಾಳೆ ಇತ್ತಲಾಗಿ ಅವಳು ಬೇರೆಯವರ ದುರ್ಬೋಧನೆಯಿಂದ ಸದರಿ ಸ್ಥಳಗಳನ್ನು ಪರಾಧೀನ ಮಾಡಬಯಸುತ್ತಾಳೆಂದು ಕೇಳುತ್ತೇನೆ. ಆದರೆ ಹಾಗೆ ಪರಾಧೀನ ಮಾಡಲಿಕ್ಕೆ ಅವಳಿಗೆ ಹಕ್ಕು ಇರುವದಿಲ್ಲ ಕಾರಣ ಸದರಿ ಜಮೀನುಗಳನ್ನು ಯಾರಾದರೂ ಪಡೆದಲ್ಲಿ ಅವರಿಗೆ ಏನೂ ಹಕ್ಕು ದೊರೆಯಲಾರದು ಅವರ ಉಪಟಳ ತಪ್ಪಿಸಿಕೊಳ್ಳಲು ನನಗಾಗುವ ಖರ್ಚು ವೆಚ್ಚಕ್ಕೆ ಮಾತ್ರ ಅವರು ಬಾಧ್ಯರಾಗುವರು ಎಲ್ಲರೂ ತಿಳಿದಿರಬೇಕು

ನನಗೆ ಭಕ್ಷೀಸ ಕೊಟ್ಟ ಸ್ಥಳಗಳು

ಹಸವಂತ ಗ್ರಾಮದ ಹೆಗ್ಗರಣಿ ಮಜರೆಯ ಸ ನಂ ೪೯/೬, ೫೧/೬ ೪೯/೩, ೬೧/೨, ೬೨/೨, ೬೩/೯, ೬೪/೨, ೬೪/೪, ೬೨/೩, ೬೧/೪, ೬೩/೫, ೨೭/೨, ೪೧/೧, ೪೧/೩, ೪೨/೨, ೪೩/೩, ೪೫/೨ ೪೭/೫,

ತಾ ೧೧-೫-೪೮ **G S Hegde Ainkar**

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಕೆರೆಗದ್ದೆ ಗ್ರಾಮದ ಗಣಪಿ ಕೋಂ ಲಕ್ಷ್ಮೀನಾರಾಯಣ ಹೆಗಡೆ ಇವಳು ಈ ಮೂಲಕ ಜಾಹೀರ ಪಡಿಸುತ್ತಾಳೇನೆಂದರೆ —

ನನ್ನ ಪತಿಗಳಾದ ಲಕ್ಷ್ಮೀನಾರಾಯಣ ಶಂಕರಪ್ಪ ಹೆಗಡೆ ಇವರು ಒಮ್ಮೊಮ್ಮೆ ಭ್ರಾಂತರಾಗಿ ಊರೂರು ತಿರುಗುತ್ತಿರುತ್ತಾರೆ ಹಿಂದೆ ಒಂದೆರಡಾವರ್ತಿ ಅವರು ಈ ರೀತಿ ಭ್ರಾಂತರಾಗಿ ಮನೆ ಬಿಟ್ಟುಹೋಗಿದ್ದರು ತಾ ೨ ೨-೧೯೪೮ಕ್ಕೆ ಪುನಃ ಮನೆ ಬಿಟ್ಟುಹೋಗಿದ್ದಾರೆ ಅವರ ಪತ್ತೆ ಕೂಡ ಇಲ್ಲವಾಗಿದೆ ಹೀಗೆ ಅವರು ಭ್ರಾಂತ ಸ್ಥಿತಿಯಲ್ಲಿದ್ದಾಗ ಕೆಲವು ವಂಚಕರು ನಮ್ಮ ಕುಟುಂಬದ ಮಾಣಿಗಾನೆ ಮಜರೆಯ ಭೂಮಿಗಳನ್ನು ಕ್ರಯಕ್ಕೆ ಬರಸಿಕೊಂಡದ್ದುಂಟು ಹಾಲಿ ಕೆರೆಗದ್ದೆ ಮಜರೆಯಲ್ಲಿಷ್ಟೇ ಕುಟುಂಬದ ಜೀವನಕ್ಕೆ ಸಾಕಾಗುವಷ್ಟು ಜಮೀನು ಆಸ್ತಿಯಿದೆ ಈ ಆಸ್ತಿಯನ್ನೂ ಬೇರೆ ಸೊತ್ತನ್ನೂ, ನನ್ನ ಪತಿಗಳ ಭ್ರಾಂತತ್ವದ ದುರ್ಲಾಭ ಪಡೆದುಕೊಂಡು, ದುರ್ಲೋಭಿಗಳು ಬರಸಿಕೊಳ್ಳುವ ಸಂಭವವಿದೆ ಆದರೆ ಇಂಥಹ ಪರಾಧೀನತೆಗಳು ಕಾಯದೆಯಂತೆ ಸಿಂಧುವಾಗಲಾರವೆಂದೂ ಅವನ್ನು ನಾನು ಆಕ್ಷೇಪಿಸುವೆನೆಂದೂ ಈ ಮೂಲಕ ಜಾಹೀರ ಎಚ್ಚರಿಕೆ ಕೊಟ್ಟಿರುತ್ತೇನೆ

ತಾ ೨೫-೪-೪೮

● ಇದು ಗಣಪಿ ಕೋಂ ಲಕ್ಷ್ಮೀನಾರಾಯಣ ಹೆಗಡೆ, ಸಾ॥ ಕೆರೆಗದ್ದೆ ಇವರ ಎ ಹೆ ಮುದ್ರೆ

ಕಾನಡಾ ಜಿಲ್ಲಾ ಪ್ರಾ॥ ಶಿಕ್ಷಕ ಸಂಘ, ಮುಖ್ಯ ಕಚೇರಿ ಅಂಕೋಲಾ.

ನೋಟೀಸು.

ಯಾವತ್ತೂ ಮೆಂಬರರ ಬಳಿಗೆ ವಿನಂತಿಗಳು

ಉತ್ತರ ಕನ್ನಡ ಜಿಲ್ಲಾ ಪ್ರಾ॥ ಶಿಕ್ಷಕ ಸಂಘದ ೧೯೪೮ನೇ ಮಾರ್ಚ ೩೧ಕ್ಕೆ ಮುಗಿಯುವ ವರ್ಷದ ವಾರ್ಷಿಕ ಅಧಿವೇಶನವು ತಾ ೨೩-೫-೧೯೪೮ನೇ ರವಿವಾರ ಮುಂಜಾನೆ ೮-೩೦ರಿಂದ ಅಂಕೋಲಾ ೧ನೇ ನಂಬರ ಕನ್ನಡ ಶಾಲೆಯಲ್ಲಿ ಶ್ರೀಮಾನ್ ಯಶವಂತರಾವ ತ್ರ್ಯಂಬಕರಾವ ನಾಡಕರ್ಣಿ, B A , LL.B , ವಕೀಲ, ಕಾರವಾರ ಇವರ ಹಿರಿಯತನದಲ್ಲಿ ನೆರೆಯುವದು ಸಭೆಯಲ್ಲಿ ತಾಲೂಕ ಸಂಘಗಳಿಂದ ಬಂದ ಹಾಗೂ ವಿಷಯ ನಿಯಾಮಕ ಸಮಿತಿಯವರು ಇಟ್ಟ ವಿಷಯಗಳು, ೧೯೪೬–೪೭ ಮತ್ತು ೧೯೪೭–೪೮ನೇ ವರ್ಷಗಳ ಒಡಿಟ್ ರಿಪೋರ್ಟ ವಾಚನ ಹಾಗೂ ಅದರ ಚರ್ಚೆ, ಪ್ರಾಂತಿಕ ಸಂಘದಿಂದ ಬಂದ ಕಾಗದಗಳ ವಿಚಾರ, ಮಾ॥ ಶಂ ನಾ ಕೃ ಭಟ್ಟ ಇವರು ನಿಧಿಯ ಲೆಕ್ಕ ಹಾಗೂ ಹಣ ಒಪ್ಪಿಸದ ಬಗ್ಗೆ ವಿಚಾರ, ನಿಧಿಯ ಖಾತೆ ಪುಸ್ತಕ ನಂ ೮, ೧೪ ಬಾರದ್ದರ ವಿಚಾರ, ಸಂಘದ ಅಧಿಕಾರಿಗಳ ಮತ್ತು ಕೆಲಸಗಾರ ಇತರ ಆಯ್ಕೆ ಮೊದಲಾದ ಸಂಗತಿಗಳು ಚರ್ಚಿಸಿ ನಿರ್ಣಯಿಸಲ್ಪಡುವವು

ಕಾರಣ ಶಿಕ್ಷಣಾಭಿಮಾನಿಗಳೂ, ಎಲ್ಲ ಮೆಂಬರರೂ ಸಭೆಗೆ ಬರಬೇಕಾಗಿ ವಿನಂತಿ

ಅಂಕೋಲಾ,
ತಾ ೮–೫–೧೯೪೮

ಮಾ ರಾ. ಶೆಟ್ಟಿ
ಉಪಾಧ್ಯಕ್ಷ, ಜಿಲ್ಲಾ ಶಿಕ್ಷಕ ಸಂಘ, ಅಂಕೋಲಾ

ಜಮೀನು ಮಾರುವದಿದೆ.

ಹಳಿಯಾಳ ತಾಲೂಕ ಶೀರಗಾಂವ ಮತ್ತು ಸಾತನಳ್ಳಿ ಗ್ರಾಮಗಳ ಈ ಕೆಳಗೆ ನಮೂದಿಸಿದ ಆಸ್ತಿ ಕ್ರಯಕ್ಕೆ ಕೊಡುವದಿದೆ.

ಗ್ರಾಮ	ಸ ನಂ	ಕ್ಷೇತ್ರ	ಆಕಾರ	ಹಕ್ಕು
ಶೀರಗಾಂವ	೨೮೫	೧–೧೭	೦–೮–೦	ಗಣಪತಿ ಶಂಕರರಾವ ಲಾಡ ಇವರ ಮಾಲ್ಕಿ
ಸಾತನಳ್ಳಿ	೨	೫–೩೪	೮–೦–೦	ನನ್ನ ಹಾಗೂ ಸದರಿ ಗಣಪತಿ ಇವರಿಬ್ಬರ ಮಾಲ್ಕಿ

ಸಾತನಳ್ಳಿ ಗ್ರಾಮದ ಆಸ್ತಿ ಗಾಂವಠಾಣಾ ಗಡಿಯಿಂದ ಸಮೀಪವಿದೆ ಬೇಕಾದವರು (ಅಲ್ಲಿಗೆ ಹೋಗಿ ಸ್ಥಳ ನೋಡಿಕೊಂಡು) ನನಗೆ ಭೆಟ್ಟಿಯಾಗಬಹುದು ಯಾ ಪತ್ರ-ವ್ಯವಹಾರ ಮಾಡಬಹುದು ತಾ ೮–೫–೪೮.

ಅಚ್ಯುತ ವಾಮನರಾವ ಲಾಡ
ಹಾಲಿ ಮುಕ್ಕಾಂ ಧಾರವಾಡ ಮಾಣಿಕಿಲ್ಲಾ (ಮನೆ ನಂ ೨೨೭೧ರಲ್ಲಿ)

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ:-
ಸ್ಥಳ, ಪ್ರಕಾರ, ಅವಧಿಯನ್ನನುಸರಿಸಿ
೧ ಸಾಲಿಗೆ ೪ ಆಣೆಯಂತೆ
ವಿಶಿಷ್ಟ ಇದ್ದರೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇದ್ದರೆ ಪತ್ರದ್ವಾರಾ
ತಿಳಿಸಲಾದೀತು.

Reg. No. B. 1270 Monday, 24-5-1948.

ಕಾನಡಾವೃತ್ತ.

ವರ್ಷ ೩೦.] THE KANARA NEWS. [ಸಂಚಿಕೆ ೪೭.

ಕುಮಟಾ - ಸೋಮವಾರ ತಾ ೨೪—೫—೧೯೪೮

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ೦ ೧-೦
ಹಳೇ ಸಂಚಿಕೆಗೆ ೦ ೪-೦
ವಿ. ಪಿ ಯಿಂದ ಹಣ ಕಳಿಸುವವರು ವಿ. ಪಿ ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

ಹೈದರಾಬಾದ.

(ನಿರೀಕ್ಷಕನು ಬರೆದುದು)

ನಿಜಾಮರ ಹೈದರಾಬಾದದ ಸಮಸ್ಯೆ ಇಂದು ಘೋರತರ ತಲೆ ತಿನ್ನಹತ್ತಿದೆ ಅದನ್ನು ಉಪೇಕ್ಷಿಸಲಿಕ್ಕಾಗಲಿ ಮುಂದೂಡಲಿಕ್ಕಾಗಲಿ ಒರುವಂತಿಲ್ಲ ಹಿಂದುಸ್ಥಾನದ ಗವ್ಹರ್ನರ ಜನರಲ್ಲರಾಗಿರುವ ಮೌಂಟಬೆಟನ್ನ ದೊರೆಗಳು ಇನ್ನೊಂದು ತಿಂಗಳಲ್ಲಿ ಅಧಿಕಾರ-ಸನ್ಯಾಸ ಮಾಡಿ ಸ್ವದೇಶಕ್ಕ ಮರಳುವವರಿದ್ದಾರೆ ಅಷ್ಟರೊಳಗೆ ನಿಜಾಮರಿಗೆ ಏನಾದರೂ ಬುದ್ಧಿ ಹೇಳಿ, ಹೈದರಾಬಾದದ ಪ್ರಶ್ನೆಯನ್ನು ಸಾಮೋಪಚಾರದಿಂದ ಬಿಡಿಸಬೇಕೆಂದು ದೊರೆಗಳ ಮನೀಷೆಯಿತ್ತು ಅದಕ್ಕಾಗಿ ದೊರೆಗಳು ಸ್ವತಃ ಮಾತುಕತೆಯಾಡಲು ನಿಜಾಮರಿಗೆ ದಿಲ್ಲಿಗೆ ಬರಬೇಕೆಂದು ನಿಮಂತ್ರಿಸಿದ್ದರು ನಿಜಾಮರು ಈ ನಿಮಂತ್ರಣೆಯನ್ನು ನಿರಾಕರಿಸಿ ಸಾಮೋಪಚಾರದ ಮಾರ್ಗವನ್ನೇ ಮುಚ್ಚಿಬಿಟ್ಟರು ಆದರೂ ಇನ್ನೊಮ್ಮೆ ಪ್ರಯತ್ನ ಮಾಡಿ ನೋಡುವಾ ಎಂಬ ವಿಚಾರದಿಂದ ಮೌಂಟಬೆಟನ್ನ ದೊರೆಗಳು ೬ ೧೦ ದಿನಗಳ ಹಿಂದೆ ಇನ್ನೊಂದು ಪತ್ರ ಬರೆದು, ಅದನ್ನು ನಿಜಾಮರಿಗೆ ಮುಟ್ಟಿಸಲಿಕ್ಕೂ ಅದರ ಪ್ರತಿಕ್ರಿಯು ಏನಾಗುತ್ತದೆಂದು ತಿಳಕೊಂಡು ಬರಲಿಕ್ಕೂ ತಮ್ಮ ಸುದ್ದಿ-ಸಲಹೆಗಾರರಾದ ಮಿ। ಕೆಂಬೆಲ್ಲ-ಜೊನಸನ್ ಇವರಿಗೆ ನಿಜಾಮರ ಕಡೆ ಕಳಿಸಿಕೊಟ್ಟಿದ್ದರು ದೊರೆಗಳು ನಿಜಾಮರಿಗೆ ಬರೆದ ಪತ್ರದಲ್ಲಿ ಏನಿತ್ತೆಂಬುದು ಪ್ರಕಟವಾಗಿಲ್ಲ ಅದೇನಿದ್ದರೂ ನಿಜಾಮರು ದೊರೆಗಳ ಸೂಚನೆಯನ್ನು ಪುನಃ ತಿರಸ್ಕರಿಸಿ ಸಂಧಾನದಿಂದ ತಮ್ಮ ಸಂಸ್ಥಾನದ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲಿಕ್ಕೆ ತಾವು ಸಿದ್ಧರಿಲ್ಲೆಂದು ಪರ್ಯಾಯದಿಂದ ಸೂಚಿಸಿದ್ದಾರೆ ಅದರಿಂದ ಭಾರತ ಸರಕಾರವು ಸಂಧಾನೇತರ ಮಾರ್ಗದಿಂದ ಹೈದರಾಬಾದವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಮಾರ್ಗವನ್ನು ಹುಡುಕಬೇಕಾಗಿದೆ ಹೈದರಾಬಾದದ ಪ್ರಶ್ನೆಯು ಈಗ ಒಬ್ಬರೇ ಸಂಸ್ಥಾನ-ಮಂತ್ರಿಗಳ ಕೈಯೊಳಗಿನ ಪ್ರಶ್ನೆಯಾಗಿ ಉಳಿದಿರುವದಿಲ್ಲ ಅರ್ಥಮಂತ್ರಿಗಳೂ, ವಿದೇಶ ಮಂತ್ರಿಗಳೂ, ವ್ಯಾಪಾರ ವ್ಯವಹಾರ ಮಂತ್ರಿಗಳೂ, ಗೃಹಮಂತ್ರಿಗಳೂ ಕೂಡಿ ನಿಜಾಮರ ಹಾಗೂ ನಿಜಾಮರು ಎಬ್ಬಿಸಿರುವ ರಝಾಕಾರ ರಕ್ಕಸರ ಪಾರುಪತ್ಯವನ್ನು ಹೇಗೆ ಮಾಡತಕ್ಕದ್ದು ಎಂಬುದರ ವಿಚಾರವನ್ನು ಮಾಡತೊಡಗಿದ್ದಾರೆ ಈ ಬಗ್ಗೆ ಬೇಗನೇ ದಿಲ್ಲಿಯಲ್ಲಿ ಕೇಂದ್ರ ಮಂತ್ರಿಮಂಡಳದ ಸಭೆಯು ಸೇರಿ ಹೈದರಾಬಾದವನ್ನು ಹಣ್ಣಿಗೆ ತರುವ ನಿಶ್ಚಿತ ಯೋಜನೆಯಾಗುವದೆಂದು ಹೇಳುತ್ತಾರೆ ಅದರಿಂದ ಇಂದು ಹೈದರಾಬಾದದಲ್ಲಿ ನಡೆದಿರುವ ಘಟನೆಗಳ ವಿಸ್ತೃತ ಸಮಾಚಾರವನ್ನು "ವೃತ್ತ"ದ ಓದುಗರಿಗೆ ತಿಳಿಸಬಯಸುತ್ತೇನೆ.

ಹೈದರಾಬಾದದಲ್ಲಿ ಇಂದು ನಿಜಾಮರ ರಾಜ್ಯ ನಡೆಯುವದಿಲ್ಲ ಹೈದರಾಬಾದ ಸರಕಾರದ ಸೂತ್ರಗಳು ಇಂದು ಕಲ್ಲಿಯ ಇತ್ತೆಹಾದುಲ್-ಮುಸಲ್ಮೀನ ಸಂಸ್ಥೆಯ ನಾಯಕರಾದ ಕಾಶಿಮ ರಝುವಿಯವರ ಮತ್ತು ಅವರ ರಝಾಕಾರ ಸೈನಿಕರ ಕೈಯ್ಯಲ್ಲಿವೆ ಈ ಇತ್ತೆಹಾದುಲ್ ಮುಸಲ್ಮೀನ ಸಂಸ್ಥೆಯು ೧೯೩೮ರಲ್ಲಿ ಜನ್ಮವೆತ್ತಿತು ಮೂಲತಃ ಈ ಸಂಸ್ಥೆ ಮುಸಲ್ಮಾನಿ ಧರ್ಮದ ಪ್ರಚಾರ ಮಾಡಲಿಕ್ಕೆ ಹೊರಟಿತ್ತು ಹೈದರಾಬಾದ ಸಂಸ್ಥಾನದಲ್ಲಿರುವ ಹರಿಜನರನ್ನು ಮತಾಂತರಗೊಳಿಸಿ ಮುಸಲ್ಮಾನರನ್ನಾಗಿ ಮಾಡುವದು ಈ ಸಂಸ್ಥೆಯ ಮೂಲ ಉದ್ದೇಶವಾಗಿತ್ತು ಅದರಂತೆ ಈ ಸಂಸ್ಥೆಯವರು ೧೯೩೮ರಿಂದ ೧೯೪೦ರ ವರೆಗೆ ೧೬೦೦೦ ಹರಿಜನರನ್ನು ನಾನಾ ತರದಿಂದ, ಬಗೆಬಗೆಯ ಆಶೆಗಳನ್ನು ತೋರಿಸಿ, ಮುಸಲ್ಮಾನ ಧರ್ಮದಲ್ಲಿ ಸೇರಿಸಿಕೊಂಡರು ಹಿಂದು ಮಹಾಸಭೆಯವರೂ ಆರ್ಯ ಸಮಾಜದವರೂ ಆಗ ಈ ಪ್ರಯತ್ನವನ್ನು ವಿರೋಧಿಸಿ ಮುಸಲ್ಮಾನರಾದ ಹಿಂದುಗಳನ್ನು ಪುನಃ ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳುವ ಆಂದೋಲನವನ್ನು ಹೂಡಿದ್ದರು ಆ ಬಗ್ಗೆ ಸತ್ಯಾಗ್ರಹವನ್ನೂ ಹೂಡಿದ್ದರು. ಅದು ಭಾಗಾನಗರದ ಸತ್ಯಾಗ್ರಹವೆಂದು ಹೈದರಾಬಾದ ಸಂಸ್ಥಾನದ ಅರ್ವಾಚೀನ ಇತಿಹಾಸದಲ್ಲಿ ಪ್ರಸಿದ್ಧವಿದೆ ಮುಂದೆ ೧೯೪೬ರಲ್ಲಿ ಹೈದರಾಬಾದ ಸಂಸ್ಥಾನದಲ್ಲಿ ರಾಜಕೀಯ ಜಾಗೃತಿಯಾಯಿತು ಪ್ರಜಾ-ಪ್ರತಿನಿಧಿ ಸರಕಾರ ಬೇಡುವ ಉಪಕ್ರಮಕ್ಕೆ ಪ್ರಾರಂಭವಾಯಿತು ಆಗ, ಅಂದರೆ ೧೯೪೬ರಲ್ಲಿ, ಇತ್ತೆಹಾದುಲ್ ಸಂಸ್ಥೆಯವರು ರಾಜಕಾರಣದಲ್ಲಿ ಪ್ರವೇಶ ಮಾಡಿ, ಹಿಂದು ಪ್ರಜೆಗಳ ವಿರುದ್ಧ ಮುಸಲ್ಮಾನರ ಪಕ್ಷವನ್ನು ಕಟ್ಟಲಾರಂಭಿಸಿತು ನಿಜಾಮರಿಗೆ ಬೇಕಾದದ್ದು ಇದೇ ಅವರು ಈ ಇತ್ತೆಹಾದುಲ್ ಸಂಸ್ಥೆಗೆ ವಿಪುಲ ಧನಸಹಾಯ ಮಾಡಿ, ಅದನ್ನು ಬಲಿಷ್ಠಗೊಳಿಸಲು ನೆರವನ್ನಿತ್ತರು. ಬಹಾದ್ದೂರ ಯಾರಜಂಗ, ಅಬದುಲ ಅಜೀಝು ಮತ್ತು ಈಗ ಪ ಕಿಸ್ತಾನ ಸರಕಾರದಲ್ಲಿ ಅರ್ಥಸಚಿವರಾಗಿರುವ ಗುಲಾಮ ಮಹಮ್ಮದ ಇವರು ಆಗ ಈ ಸಂಸ್ಥೆಯ ನಾಯಕರಾಗಿದ್ದರು ಇತ್ತ ೧॥ ವರ್ಷದಿಂದ ಕಾಶಿಮ ರಝುವಿಯವರು ಅದರ ಸೂತ್ರಗಳನ್ನು ತಮ್ಮ ಕೈಯ್ಯಲ್ಲಿ ತಕ್ಕೊಂಡು, 'ಭಾರತದ ಮುಸಲ್ಮಾನರನ್ನು ಮುಕ್ತಮಾಡುವ ಕಾರ್ಯ"ವನ್ನು ಕೈಕೊಂಡಿದ್ದಾರೆ ಈ ರಝುವಿಯವರು ಮೂಲದಲ್ಲಿ ಸಂಯುಕ್ತ ಪ್ರಾಂತದವರು ಇವರು ಸಂಘಟನಾ-ಚತುರರಿದ್ದಾರೆ, ಪ್ರಚಾರ-ಪ್ರವೀಣರಿದ್ದಾರೆ ಇತ್ತೆಹಾದುಲ್ ಸಂಸ್ಥೆಯ ಕಾರ್ಯವನ್ನು ಮಾಡುವದಕ್ಕಾಗಿ ರಝಾಕಾರರು ಎಂಬ ಸ್ವಯಂಸೇವಕರನ್ನು ತಯಾರಿಸಿಕೊಂಡಿದ್ದಾರೆ ಹಿಟ್ಲರನ ನಾಝಿ ಸ್ವಯಂಸೇವಕರಂತೆಯೇ ಈ ಸ್ವಯಂಸೇವಕರು — ಇವರಿಗೆ ಸ್ವಯಂಸೇವಕರೆಂದು ಕರೆಯುವದಕ್ಕಿಂತ ಸ್ವಯಂ ಸೈನಿಕರೆಂದು ಕರೆಯುವದೇ ಸರಿಯಾದೀತು — ಶಸ್ತ್ರಾಸ್ತ್ರಗಳನ್ನು ಉಪಯೋಗಿಸಲು ಕಲಿಯುತ್ತಾರೆ! ನಿರ್ದಯರಾಗಿ ಹಿಂಸೆ ಮಾಡುವ ಅಭ್ಯಾಸವನ್ನೂ ಮಾಡುತ್ತಿರುತ್ತಾರೆ! ಈ ರಝಾಕಾರರು ಸಂಸ್ಥೆಯಲ್ಲಿ ಪ್ರವೇಶ ಮಾಡುವ ಮೊದಲು, "ನಮ್ಮ ಪಕ್ಷಕ್ಕಾಗಿ ಮತ್ತು ಹೈದರಾಬಾದಕ್ಕಾಗಿ, ನಮ್ಮ ಮುಂದಾಳುಗಳ ಆದೇಶದಂತೆ, ಬೇಕಾದ ಬಲಿದಾನ ಮಾಡಲು ನಾನು ಸಿದ್ಧನಿದ್ದೇನೆಂದು ಅಲ್ಲಾನ ಹೆಸರು ತಕ್ಕೊಂಡು ನಾನು ಪ್ರತಿಜ್ಞೆ ಮಾಡುತ್ತೇನೆ, ದಕ್ಷಿಣದಲ್ಲಿ ಮುಸಲ್ಮಾನರ ವರ್ಚಸ್ಸು ಬೆಳಿಸುವದಕ್ಕಾಗಿ ನನ್ನಲ್ಲಿ ಉಸಿರು ಇರುವ ವರೆಗೂ ನಾನು ಹೋರಾಡುವೆನು' ಎಂದು ಪ್ರತಿಜ್ಞೆ ಮಾಡಬೇಕಾಗುತ್ತದೆ ಈ ಪ್ರತಿಜ್ಞೆಯು ಪೂರ್ತಿ ಮಾಡುವ ಮಾರ್ಗಗಳನ್ನು ಇತ್ತೆಹಾದುಲ್ಲ ಸಂಸ್ಥೆಯವರು ಅವರಿಗೆ ಕಲಿಸಿಕೊಡುತ್ತಾರೆ ರಝಾಕಾರ ಸ್ವಯಂಸೇವಕರ ಸಂಖ್ಯೆ ಈಗ ೧ ಲಕ್ಷಕ್ಕೆ ಏರಿರುತ್ತದೆಂದು ಬಲ್ಲವರು ಹೇಳುತ್ತಾರೆ ಅವರ ಕಡೆ ೬೦ ಸಾವಿರಕ್ಕೆ ಮಿಕ್ಕಿ ಕೋವಿಗಳುಂಟಂತೆ ಹೈದರಾಬಾದ ಸರಕಾರವೇ ಅವರಿಗೆ ಈ ಕೋವಿಗಳನ್ನು ಪೂರೈಸಿದೆ ಪೋಲೀಸರಿಗೆ ಹೊಸ "ಒಟೋಮೆಟಿಕ್" ಕೋವಿಗಳನ್ನು ಕೊಟ್ಟಾಗ ಅವರ ಕಡೆಗಿದ್ದ ಹಳೆಯ ಕೋವಿಗಳನ್ನೆಲ್ಲ ಒಟ್ಟುಗೂಡಿಸಿ, ಹೈದರಾಬಾದ ಸರಕಾರವು ಅವನ್ನೆಲ್ಲ ಹೆಸರಿಗೆ ಪೂರ್ತ ಬೆಲೆ ತಕ್ಕೊಂಡು ಇತ್ತೆಹಾದುಲ್ಲ ಸಂಸ್ಥೆಗೆ ಮಾರಿದ್ದಾರೆಂದು ತಿಳಿಯುತ್ತದೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟದ್ದು)

ಮುಖ್ಯ ಕಚೇರಿ "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಶಿಲ್ಕು ಮೂಲಧನ ರೂ ೭ ೭೧ ೦೦೦/—ಕ್ಕೂ ಮಿಕ್ಕಿದೆ

ಕಾಯ್ದಿರಿಸಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮಿಗಿಲಾದುದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ವರೆಗೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ

ಅದೇ ಮೇರೆಗೆ ಹಿಂದುಗಳ ಕಡೆಗಿದ್ದ ಕೋವಿಗಳನ್ನು ಕಸಿದುಕೊಂಡು ರಝಾಕಾರರಿಗೆ ಕೊಟ್ಟಿದ್ದಾರಂತೆ! ಈ ರಝಾಕಾರರಿಗೆ ಮೋಟಾರ, ರೇಲ್ವೆ ವಗೈರೆ ವಾಹನಗಳನ್ನು ನಡಿಸುವ ಶಿಕ್ಷಣವನ್ನೂ ಕೊಡುತ್ತಾರೆ ಅವರ ಕಡೆ ಈಗಾಗಲೇ ಎಷ್ಟೋ ಮೋಟಾರ-ಲೋರಿಗಳೂ ಜೀಪ ಗಾಡಿಗಳೂ ಉಂಟು ನಿಜಾಮರು ಈ ಸಂಸ್ಥೆಯವರಿಗೆ ಬೇ ಪೆಟ್ರೋಲ ಎಷ್ಟೆ ಪೂರೈಸುತ್ತಾರೆ! ಇತ್ತೆಹಾದುಲ್ ಸಂಸ್ಥೆಯವರು ಅಲ್ಲಲ್ಲಿ ಪೆಟ್ರೋಲ ಸಂಗ್ರಹಿಸಿದ್ದುಂಟು ಹೀಗೆಯೇ ಅವರು ಪೆಟ್ರೋಲ ಸಂಗ್ರಹಿಸಿಟ್ಟ ಒಂದು ಮನೆಗೆ ಕಳೆದ ವಾರ ಬೆಂಕಿ ಬಿದ್ದು ಅನರ್ಥವಾಯಿತು ಹೇರಳ ಅನ್ನ-ಸಾಮಗ್ರಿಯನ್ನು ಕೂಡ ಈ ರಝಾಕಾರರು ಸಂಗ್ರಹಿಸಿಟ್ಟ ವಾರ್ತೆಗಳಿವೆ ಇದೆಲ್ಲ ಯುದ್ಧದ ತಯಾರಿಯೆಂದು ಹೇಳಬಹುದು

ಖಾಸಿಮ ರಝ್ವಿಯವರು ಒಳ್ಳೇ ಪ್ರಚಾರಕರಿದ್ದಾರೆಂದು ನಾನು ಮೊದಲೊಂದು ಕಡೆ ಹೇಳುತ್ತೇನೆ ಅವರ ಇತ್ತೆಹಾದುಲ್ ಸಂಸ್ಥೆಯವರು ಸಧ್ಯಕ್ಕೆ ಹೈದರಾಬಾದ ಸಂಸ್ಥಾನದಲ್ಲಿ ೧ ಇಂಗ್ಲಿಷ ದೈನಿಕವನ್ನೂ, ೭ ಉರ್ದು ದಿನಪತ್ರಿಕೆಗಳನ್ನೂ, ೬ ಉರ್ದು ಪತ್ರಿಕೆಗಳನ್ನೂ ನಡಿಸುತ್ತಿದ್ದಾರೆ ಈ ಎಲ್ಲ ಪತ್ರಿಕೆಗಳು ಹಗಲಿರುಳು ಹಿಂದೂಗಳ, ಹಿಂದೂ ಸಂಘ-ಸಂಸ್ಥೆಗಳ ಹಾಗೂ ಹಿಂದುಸ್ಥಾನ ಸರಕಾರದ ವಿರುದ್ಧ ಪ್ರಚಾರ ನಡಿಸುತ್ತಲಿವೆ ಹೈದರಾಬಾದವು ಸ್ವತಂತ್ರವುಳಿಯಬೇಕು, ನಿಜಾಮರು ಸಾರ್ವಭೌಮರಾಗಿರಬೇಕು, ಹೈದರಾಬಾದದಲ್ಲಿ ಪ್ರಜಾಪ್ರಭುತ್ವ ಹೇಳಿದ್ದಲ್ಲ, ಹೈದರಾಬಾದ ಸರಕಾರದಲ್ಲಿ ಮುಸಲ್ಮಾನರ ಪ್ರಾಬಲ್ಯವಿರಬೇಕು ಎಂದು ಮುಂತಾಗಿ ಈ ಪತ್ರಿಕೆಗಳು ಏಕಕಂಠದಿಂದ ಪ್ರಚಾರ ಮಾಡುತ್ತಲಿವೆ

ಮೇಲಿಂದ ಮೇಲೆ ರಝಾಕಾರರ ಸಮ್ಮೇಲನ ಸಭೆಗಳೂ ಕೂಚು-ಕವಾಯತುಗಳೂ ನಡೆಯುತ್ತಿವೆ ಹೈದರಾಬಾದ ಸರಕಾರದ ಅಧಿಕಾರಿಗಳೂ ಮಂತ್ರಿಗಳೂ ಈ ಸಮಾರಂಭಗಳಲ್ಲಿ ಬಹಿರಂಗವಾಗಿ ಸೇರುತ್ತಿದ್ದಾರೆ ಒಮ್ಮೊಮ್ಮೆ ಈ ಸಂಸ್ಥೆಯವರ ಗುಪ್ತ ಸಭೆಗಳೂ ನಡೆಯುತ್ತವಂತೆ ಹೈದರಾಬಾದ ಸಂಸ್ಥಾನದ ಕೊಂಗ್ರೆಸ್ಸಿನ ಆಂದೋಲನಕ್ಕೆ ಇಲ್ಲವೆ ಹಿಂದುಸ್ಥಾನ ಸರಕಾರದ ನಿಗ್ರಹಕ್ಕೆ ತಲೆಬಾಗಿ ನಿಜಾಮರು ಒಂದೊಮ್ಮೆ ಸಂಸ್ಥಾನದ ಮುಸಲ್ಮಾನೇತರ ಪ್ರಜೆಗಳಿಗೆ ಸಂಖ್ಯಾನುಗುಣ ಪ್ರಾತಿನಿಧ್ಯವನ್ನು ಕೊಟ್ಟು ರಾಜಕೀಯ ಸುಧಾರಣೆಗಳನ್ನು ಕೈಕೊಳ್ಳಲೊಪ್ಪಿದರೆ ರಝಾಕಾರರು ಈ ಕೆಳಗಿನ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿ ೨॥ ತಿಂಗಳ ಹಿಂದೆ ಕಮರುದ್ದೀನ ಮಂತ್ರಿಗಳ ಮನೆಯಲ್ಲಿ ಕೂಡಿದ ಒಂದು ಗುಪ್ತ ಸಭೆಯಲ್ಲಿ ನಿರ್ಣಯವಾದ ಸಂಗತಿ ಹೊರಬಿದ್ದಿದೆ ಇದು ಅವರ "ಸಾದಾ ಕಾರ್ಯಕ್ರಮ"ವಂತೆ! ಅವರ ಕಾರ್ಯಕ್ರಮವು ಇಂತಿದೆ — (೧) ಮೌಲ್ವಿ ಬಶೀರ ಮಹಮ್ಮದರ ನೇತೃತ್ವದಲ್ಲಿ ಪ್ರತಿ ಸರಕಾರ ಸ್ಥಾಪಿಸುವದು, (೨) ಒಂದು ನಿರ್ದಿಷ್ಟ ದಿನ ಎಲ್ಲ ಸರಕಾರಿ ಕಟ್ಟಡಗಳಿಗೆ ಕೊಳ್ಳಿಯಿಟ್ಟು ಸರಕಾರಿ ಕಾಗದ-ಪತ್ರಗಳನ್ನು ಸುಟ್ಟು ಹಾಕುವದು, (೩) ಸರಕಾರಿ ನೌಕರಿಯಲ್ಲಿದ್ದ ರಝಾಕಾರರೆಲ್ಲ ರಾಜೀನಾಮೆ ಕೊಡುವದು, (೪) ಸರಕಾರಿ ನೌಕರಿಯಲ್ಲಿದ್ದ ಮುಸಲ್ಮಾನರನ್ನೆಲ್ಲ ನೌಕರಿಯಿಂದ ಬಿಡಿಸುವದು, (೫) ಕೊಂಗ್ರೆಸ ಕಾರ್ಯಕರ್ತರ ಕೊಲೆ ಮಾಡುವದು ಮತ್ತು (೬) ಹಿಂದು ವ್ಯಾಪಾರಿಗಳ ಹಾಗೂ ಧನಿಕರ ಸಂಪತ್ತನ್ನು ಸೂರೆ ಮಾಡುವದು ಸಭಿಕರು ಇದಕ್ಕೂ ಮುಂದೆ ಹೋಗಿ, ಭಾರತ ಸರಕಾರದೊಡನೆ ದಿಲ್ಲಿಯಲ್ಲಿ ನಡೆದ ಮಾತುಕತೆಗಳು ಮುರಿದು ಹೋದಲ್ಲಿ ಭಾರತ ಸರಕಾರದೊಡನೆ ಹೋರಾಟಕ್ಕೆ ತಾವು ಸಿದ್ಧರಿರುತ್ತೇವೆಂದು ನಿಜಾಮರಿಗೆ ರಝಾಕಾರರು ತಿಳಿಸಿ, ಯುದ್ಧದ ಪ್ರಸಂಗಕ್ಕೆ ಇದಿರಾಗಲು ಈ ಕೆಳಗಿನ ಯೋಜನೆಯನ್ನು ಮಾಡಿರುತ್ತಾರೆಂದು ಪ್ರಕಟವಾಗಿದೆ — (೧) ಪ್ರತಿಯೊಂದು ಊರಲ್ಲಿ ಇತ್ತೆಹಾದುಲ್ ಸಂಸ್ಥೆಯ ಶಾಖೆಯನ್ನು ಸ್ಥಾಪಿಸಿ ಸ್ಥಾನಿಕ ಮುಸಲ್ಮಾನರ ಹಿತರಕ್ಷಣೆ ಮಾಡುವದು (೨) ಸಂಸ್ಥಾನದ ಗಡಿಯಲ್ಲಿರುವ ರಝಾಕಾರರು ಪೋಲೀಸರೊಡನೆ ಸಹಕರಿಸುವದು, (೩) ಹಿಂದು ಸರಕಾರಿ ನೌಕರರ ಮೇಲೆ ಕಣ್ಣಿಡುವದು, (೪) ಯುದ್ಧಕ್ಕೆ ಪ್ರಾರಂಭವಾಗುವ ಮುಂಚೆಯೇ ಸಂಸ್ಥಾನದೊಳಗಿನ ಎಲ್ಲ ಕೊಂಗ್ರೆಸ ಕಾರ್ಯಕರ್ತರನ್ನೂ ಅವರಿಗೆ ಅನುಕೂಲರಾಗಿ ವರ್ತಿಸುತ್ತಿರುವ ಜನರನ್ನೂ ಯಮಸದನಕ್ಕಟ್ಟುವದು (೫) ಕೊಂಗ್ರೆಸ್ಸಿನ ಕಾಗದಪತ್ರಗಳನ್ನು ಸುಟ್ಟು ಬೂದಿ ಮಾಡುವದು ಮತ್ತು ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿರುವ ಕಮ್ಯುನಿಸ್ಟ ಪಕ್ಷಗಳನ್ನು ತಯಾರಿಸಿ ಅವರನ್ನು ನಿರ್ನಾಮ ಮಾಡುವದು ಗುಪ್ತ ಸಭೆಯ ಈ ವೃತ್ತಾಂತ ಸುಳ್ಳಿದ್ದೀತೆಂದು ಹೇಳಲಿಕ್ಕೆ ಬರುವಂತಿಲ್ಲ ಖಾಸಿಮ ರಝ್ವಿಯವರೂ ಇತ್ತೆಹಾದುಲ್ ಸಂಸ್ಥೆಯ ಬೇರೆ ಪ್ರಮುಖರೂ ಗ ಮಾಡುತ್ತಿರುವ ಬಹಿರಂಗ ಭಾಷಣಗಳು ಕೂಡ ಅವರು ಹಿಂದುಸ್ಥಾನದ ವಿರುದ್ಧ ಕೈಯೆತ್ತುವ ಹಾದಿಯನ್ನೇ ನೋಡುತ್ತಿರುವಂತೆ ಸೂಚಿಸುತ್ತಿವೆ ಅಖಿಲ ಭಾರತೀಯ ಕೊಂಗ್ರೆಸ ಸಮಿತಿಯ ಅಧಿವೇಶನದ ಕಾಲಕ್ಕೆ ಭಾರತದ ಮುಖ್ಯ ಮಂತ್ರಿ ಪಂ|| ಜವಾಹರಲಾಲ ನೆಹರೂರವರು ಹೈದರಾಬಾದದ ರಝಾಕಾರರ ಹಾವಳಿಯೂ ಹಿಂಸಾಚಾರಗಳೂ ಮೀರಿವೆ, ಹಿಂದುಸ್ಥಾನ ಸರಕಾರವು ಕಣ್ಮುಚ್ಚಿ ಕೂತು ಅವನ್ನು ಸಹಿಸಲಾರದು ಎಂದು ಕೊಟ್ಟ ಗಂಭೀರ ಎಚ್ಚರಿಕೆಗೆ, 'ಇಂತಹ ಎಚ್ಚರಿಕೆಗಳಿಗೆ ನಾವು ಸಪ್ಪ ಹಾಕಲಾರೆವು ಹಿಂದುಸ್ಥಾನವು ದೊಡ್ಡ ಪರ್ವತದಂತಿರಬಹುದು ಆದರೂ ಸಣ್ಣ ಸಣ್ಣ ಝುರಿಗಳು ಪರ್ವತವನ್ನು ಸಚ್ಛಿದ್ರಗೊಳಿಸಿ ಜರ್ಜರಿತ ಮಾಡಬಲ್ಲವೆಂಬುದನ್ನು ಪಂಡಿತಜಿಯವರು ನೆನಪಿನಲ್ಲಿಡಬೇಕು' ಎಂದು ಮುಂತಾಗಿ ಉಪಹಾಸಾತ್ಮಕವಾಗಿ ರಝ್ವಿಯವರು ಉತ್ತರ ಕೊಟ್ಟಿದ್ದರು! ರಝಾಕಾರರ ಕೊಲೆ-ಸುಲಿಗೆಗಳಂತೂ ದಿನಾಲು ನಡೆದಿವೆ ಹಳ್ಳಿಗಳಲ್ಲಿ ದಾಳಿ ಮಾಡಿ ಲೂಟಿ ಮಾಡುವದು, ಮನೆಗಳನ್ನು ಸುಡುವದು ಅಡ್ಡ ಬಂದವರನ್ನು ತುಂಡರಿಸುವದು, ಮನೆಗಳಿಗೆ ಕೊಳ್ಳಿಯಿಟ್ಟಾಗ ಜೀವದಾಸೆಗೆ ಹೊರಬಿದ್ದ ಹೆಂಗಸರ ಮೇಲೆ ಅತ್ಯಾಚಾರ ಮಾಡುವದು ಇದು ರಝಾಕಾರ ರಕ್ಕಸರ ನಿತ್ಯಕ್ರಮವಾಗಿದೆಯೆಂದು ಹೇಳಬಹುದು ಅವರ ಈ ದುರಾಚಾರಗಳನ್ನು ಹೈದರಾಬಾದದ ಪೋಲೀಸರು ತಡೆಯುವದಿಲ್ಲವಷ್ಟೇ ಅಲ್ಲ, ರಝಾಕಾರರೊಡನೆ ಅವರು ಸಹಕರಿಸುತ್ತಿದ್ದುದು ಕಂಡುಬಂದಿದೆ ಆದ್ದರಿಂದ ಹೈದರಾಬಾದದ ಹಳ್ಳಿಗಳಲ್ಲಿ ಇಂದು ಸುಖವಿಲ್ಲ, ಸ್ವಾಸ್ಥ್ಯವಿಲ್ಲ, ಸುರಕ್ಷಿತತೆಯಿಲ್ಲ! ಹಳ್ಳಿಗಳೊಳಗಿನ ಗಂಡಸರು ರಾತ್ರಿಯು ಹಗಲು ಮಾಡಿ ಊರಲ್ಲಿ ಕಾವಲು ಇಡುವ ಪ್ರಸಂಗ ಬಂದಿರುತ್ತದೆಂದು ಎಷ್ಟೋ ಕಡೆಯಿಂದ ವರದಿಗಳು ಬಂದಿವೆ ಹೈದರಾಬಾದ ಸಂಸ್ಥಾನದ ಹಿಂದುಗಳು ಸಾಮಾನ್ಯವಾಗಿ ಅಂಜುಬುರುಕರೂ ಅಳ್ಳೆದೆಯವರೂ ಇರುತ್ತಾರೆ. ರಝಾಕಾರರ ಹಿಂಸೆ ಅತ್ಯಾಚಾರಗಳು ಹೆಚ್ಚಲಾಗಿ ಅವರಲ್ಲಿ ತೇಜಸ್ಸುಂಟು ಮಾಡಿವೆ! ಎಷ್ಟೋ ಹಳ್ಳಿಗಳಲ್ಲಿ ಏರಿಬಂದ ರಝಾಕಾರರಿಗೆ ಹಳ್ಳಿಗರು ಒಟ್ಟುಗೂಡಿ ಒಳಿತಾಗಿ ಕೈತೋರಿಸಿದ ಸುವಾರ್ತೆಗಳೂ ಒಮ್ಮೊಮ್ಮೆ ಕಿವಿಗೆ ಬೀಳುತ್ತಿವೆ ರಝಾಕಾರರು ತಮ್ಮ ಈ ಹಾವಳಿಯನ್ನು ಸಂಸ್ಥಾನದ ಹಳ್ಳಿಗಳಲ್ಲಿಷ್ಟೇ ನಡಿಸಿದ್ದಾರೆಂತಲ್ಲ, ಸಂಸ್ಥಾನದ ಗಡಿಗೆ ಹೊಂದಿರುವ ಭಾರತದ ಹಳ್ಳಿಗಳಲ್ಲೂ ಅವರೂ ನಿಜಾಮರ ಪೋಲೀಸರೂ ದಾಳಿಗಳನ್ನು ಮಾಡಿ ಕೊಲೆ-ಸುಲಿಗೆಗಳನ್ನು ಮಾಡುತ್ತಾರೆ! ಹೈದರಾಬಾದ ಸರಕಾರವು ಇವನ್ನು ತಡೆಯುವದಿಲ್ಲ! ತಡೆಯುವ ಸಾಮರ್ಥ್ಯವಾದರೂ ಅದಕ್ಕುಂಟೋ ಇಲ್ಲವೋ ದೇವರೇ ಬಲ್ಲ! ಈ ಬಗ್ಗೆ ಮುಂಬಯಿ-ಮಧ್ಯಪ್ರಾಂತ-ಮದ್ರಾಸ ಸರಕಾರಗಳೂ ಹಿಂದ-ಸರಕಾರವೂ ನಿಜಾಮ ಸರಕಾರಕ್ಕೆ ಎಚ್ಚರಿಕೆ ಕೊಟ್ಟು ಕೊಟ್ಟು ಬೇಸತ್ತು ಹೋಗಿವೆ, ಮತ್ತು ಈಗ ರಝಾಕಾರರ ಕಾರುಕ್ಯ ಮಾಡಲು ಗಡಿಗಳಲ್ಲೆಲ್ಲ ಸಶಸ್ತ್ರ ಪೋಲೀಸ ದಳಗಳನ್ನೂ ಸೈನಿಕ-ದಳಗಳನ್ನೂ ನಿಲ್ಲಿಸಿವೆ ಮುಂಬಯಿ ಪ್ರಾಂತ ಮತ್ತು ಹೈದರಾಬಾದ ಸಂಸ್ಥಾನ ಇವುಗಳ ನಡುವಿನ ಗಡಿಯಲ್ಲಿ ಭದ್ರ ಕಾವಲಿಡುವ ವ್ಯವಸ್ಥೆಗಾಗಿ ಪೋಲೀಸ ಇಲಾಖೆಯ ರಾ|| ವಿಶ್ವನಾಥ ಶಾನಭಾಗರ ನೇಮಣೂಕಿಯಾದ ಸುದ್ದಿಯಿದೆ ಇದಕ್ಕೂ ಮುಂದೆ ಹೋಗಿ ಹಿಂದುಸ್ಥಾನ ಸರಕಾರವು ಹೈದರಾಬಾದ ಸಂಸ್ಥಾನದ ಸುತ್ತಲಿನ ತಮ್ಮ ಗಡಿ ಭಾಗಗಳನ್ನು ಸೈನ್ಯದ ಅಧೀನತೆಗೆ ಒಪ್ಪಿಸುವ ವಿಚಾರದಲ್ಲಿದೆಯೆಂಬ ವಾರ್ತೆಯೂ ಉಂಟು

ಹೈದರಾಬಾದದ ನಿಜಾಮರ ಮನಸ್ಸಿನಲ್ಲಿ ಏನುಂಟೆಂಬುದು ತಿಳಿಯದು ಹಿಂದೆ ಅವರು ಒಮ್ಮೆ ಸಾರಿದಂತೆ ಸ್ವತಂತ್ರವಾಗಿ ಉಳಿಯಬೇಕೆಂಬುದಿಷ್ಟೇ ಅವರ ಉದ್ದೇಶವಿರುತ್ತದೋ ಹಿಂದುಸ್ಥಾನದ ಸಾರ್ವಭೌಮರಾಗಬೇಕೆಂಬ ದುರಾಲೋಚನೆಯನ್ನು ಅವರು ತಳೆದಿರುವರೋ ತಿಳಿಯದು! ಹೈದರಾಬಾದದ ಸೈನ್ಯವೂ ರಝಾಕಾರರೂ ಪಾಕಿಸ್ತಾನದ ಸಹಾಯದಿಂದ ಹಿಂದುಸ್ಥಾನವನ್ನು ಗೆದ್ದು ದಿಲ್ಲಿಯಲ್ಲಿ ನಿಜಾಮರಿಗೆ ಚಕ್ರವರ್ತಿಯ ಪಟ್ಟ ಕಟ್ಟಬೇಕೆಂಬ ದೂರಾ

(೪ನೇ ಪುಟದ ಮೇಲೆ ಮುಂದರಿಸಿದೆ)

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ. ೧೯೨೯ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡುಪಿ ಆಫೀಸ —

Post Box No 10,

UDIPI, S Kanara

ಜಿಲ್ಹಾ ಸಮಾಚಾರ.

(ಹಿಂದಿನ ಶಿಲ್ಕು)

ಕಾರವಾರ— ಮೈಸೂರ ಪ್ರಾಂತದಿಂದ ದನಗಳ ನಿರ್ಯಾತ ಮಾಡತಕ್ಕದ್ದಲ್ಲೆಂದು ಈ ತನಕ ಜಾರಿಯಲ್ಲಿದ್ದ ಪ್ರತಿಬಂಧಕ ಆಜ್ಞೆಯನ್ನು ತಾ ೬-೪-೧೯೪೮ರಿಂದ ಮೈಸೂರ ಸರಕಾರವು ರದ್ದುಗೊಳಿಸಿದೆ ಆದ್ದರಿಂದ ಮೈಸೂರಿನಲ್ಲಿ ಬೇಕಾದ ದನಗಳನ್ನು ಖರೀದಿ ಮಾಡಬಹುದಾಗಿ ಸರಕಾರವು ತಿಳಿಸುತ್ತದೆ

(ತಾ ೧೬ ೫ ೪೮) ಕಳೆದ ೨೫ ವರ್ಷಗಳಿಂದ ಸಾಂಕೇರಿ-ಕಾರವಾರ ರಸ್ತೆಯಲ್ಲಿ ರಾತ್ರಿ-ದೀಪಗಳನ್ನು ಹಚ್ಚುವ ಕಾರ್ಯ ಮಾಡುತ್ತ ಬಂದಿರುವ "ಕೆನರಾ ಫಂಡ" ಸಂಸ್ಥೆಯ ವಾರ್ಷಿಕ ಸಭೆ ನಿನ್ನೆಯಾಯಿತು ಸಂಸ್ಥೆಗೆ ಗ್ರಾಮೋದ್ಧಾರ ಮಂಡಳದಿಂದ ಪ್ರತಿ ವರ್ಷ ರೂ ೩೦ ಸಿಗುತ್ತಿದೆ ಒಂದು ದೀಪದ ವೆಚ್ಚವನ್ನು ರಾ ಜನಾರ್ದನ ಸಾವಕಾರರು (ತಮ್ಮ ತಂದೆಯ ಸ್ಮರಣಾರ್ಥ) ಕೊಡುತ್ತಾರೆ ಕಳೆದ ವರ್ಷ ಸಂಸ್ಥೆಗೆ ರೂ ೯೭೬ ಖರ್ಚು ಬಂತು ವರ್ಷಾಂತ್ಯದ ಶಿಲ್ಕು ರೂ ೨೧ ಉಳಿದಿದೆ

ಬನವಾಸಿ— (ತಾ ೭ ೫ ೪೮) ಇಲ್ಲಿಯ ಹೆಣ್ಣು ಮಕ್ಕಳ ಶಾಲೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಒಂದು ವಾಚನಾಲಯ ತೆರೆಯಲ್ಪಟ್ಟಿದೆ ಕಳೆದ ತಾ ೨೯ಕ್ಕೆ ಅದರ ಉದ್ಘಾಟನೆಯನ್ನು ಶಿರ್ಸಿಯ ಮಾಮಲೇದಾರ ರಾ। ಘೋರ್ಪಡೆಯವರು ಮಾಡಿದರು ವಾಚನಾಲಯಕ್ಕೆ ಕೊಡತಕ್ಕ ದಿನ್ನ ಹಣವನ್ನು ರಾ। ರಾ। ಮುಳಗುಂದ, ಕೆರೋಡಿ ಬಳ್ಳಪ್ಪ, ಉಳ್ಳಾಗಡ್ಡಿ ಚಂದ್ರಶೇಖರಪ್ಪ, ಸ್ಥಳ ಹಾರೂನ ಸಾಹೇಬ ಮತ್ತು ಮೌಲಾನಾ ಸಾಹೇಬ ಇವರು ಕೊಟ್ಟಿರುತ್ತಾರೆ ರಾ। ಘೋರ್ಪಡೆಯವರು ತಮ್ಮ ಭಾಷಣದಲ್ಲಿ ಬನವಾಸಿ ಸೀಮೆಯಲ್ಲಿ ನಡೆದ ಪ್ರೌಢ ಶಿಕ್ಷಣದ ಪ್ರಗತಿಯನ್ನು ಕೊಂಡಾಡಿದರು

ಸಿದ್ದಾಪುರ— (ತಾ ೧೨-೫-೪೮) ತಾ ೩ ೫ ೪೮ರ "ವೃತ್ತ" ದಲ್ಲಿ ಮಂಕಿಯ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ರಾ। ತಿಮ್ಮಪ್ಪ ಮಂಜಪ್ಪ ನಾಯ್ಕ ಮೊಕ್ತೇಸರ, ಇವರು ಈ ತಾಲೂಕಿನಲ್ಲಿ ಜನರಿಂದ ವಂತಿಗೆ ವಸೂಲ ಮಾಡುತ್ತಿದ್ದ ಬಗ್ಗೆ ಕೆಲವೊಂದು ಟೀಕೆ ಬಂದಿರುತ್ತದಷ್ಟೇ ಆ ಟೀಕೆ ಅಸಮಂಜಸವಾದದ್ದೆಂದು ಮೂಲದ ಗೃಹಸ್ಥರು ಬರೆಯುತ್ತಾರೆ ಸದರಿ ದೇವಸ್ಥಾನವು ಜೀರ್ಣೋದ್ಧಾರ ಮಾಡುವುದಕ್ಕೆ ಒಳಪಟ್ಟಿದ್ದಿರುತ್ತದೆ ರಾ। ತಿಮ್ಮಪ್ಪ ನಾಯಕರು ೧೫ ವರ್ಷಗಳಿಂದ ಅದರ ಮೊಕ್ತೇಸರರಾಗಿ ದೇವಾಲಯ ಕಮಿಟಿಯವರ ಹಾಗೂ ಅನ್ಯ ಜಾತಿಗಳ ಗೃಹಸ್ಥರ ಪ್ರೋತ್ಸಾಹದಿಂದ ಅವರು ಗುಡಿಯ ಜೀರ್ಣೋದ್ಧಾರ ಕಾರ್ಯವನ್ನು ಪ್ರಾರಂಭಿಸಿರುತ್ತಾರೆ ಸ್ಥಳೀಯರೂ ಪರಸ್ಥಳೀಯರೂ ಈ ಕಾರ್ಯಕ್ಕೆ ಮುಕ್ತ ಮನಸ್ಸಿನಿಂದ ಸಹಾಯ ಮಾಡಬೇಕಾಗಿ ಸದರಿ ಗೃಹಸ್ಥರು ಬಿನ್ನವಿಸುತ್ತಾರೆ

ಪತ್ರಿಕಾ ಪ್ರಕಟನೆ.

ಚಿಮಣಿ ಎಣ್ಣೆಯ ಪೂರೈಕೆಯನ್ನು ಹೆಚ್ಚಿಸಿಕೊಳ್ಳಲು ಸರಕಾರವು ಸರ್ವ ಪ್ರಯತ್ನ ಮಾಡುತ್ತಿದೆ ಆದರೂ ಚಿಮಣಿ ಎಣ್ಣೆಯ ಬೆಲೆಗಳನ್ನು ಈ ಪ್ರಾಂತದಲ್ಲಿ ನಿಯಂತ್ರಿಸಬೇಕಾಗಿದೆ ಆದರಿಂದ ಹಿಂದಿನ ಬೆಲೆ ನಿಯಂತ್ರಣವು ಇನ್ನೂ ಜಾರಿಯಲ್ಲಿದೆ ಯಾರಾದರೂ ಈ ಎಣ್ಣೆಯ ಕಳ್ಳ ಸಂತೆ ಮಾಡುತ್ತಿರುವುದು ಜನರ ದೃಷ್ಟಿಗೆ ಬಿದ್ದರೆ ಅವರು ಕೂಡಲೆ ಸಂಬಂಧಪಟ್ಟ ಸ್ಥಾನಿಕ ಅಧಿಕಾರಿಗಳಿಗೆ ತಿಳಿಸಬೇಕು

ಹೊಸ ಬೇನೆಗೆ ಹೊಸ ಔಷಧಿ !

ಪ್ರಮುಖವಾಗಿ ಬರುವ ಹೊಸ ಬೇನೆಗೆ ಹೊರಗಿನಿಂದ ಹಚ್ಚುವದಕ್ಕೆ—

ಶೀಲಧಾ ನವನಾರಾಯಣ ತೈಲ

ಖಾತ್ರಿಯಾಗಿ ಗುಣ ಮಾಡುತ್ತದೆ

ಶೀಲಧಾ ಕೆಮಿಕಲ್ ಕಂ , ಸಿರಸಿ

ಆಜ್ಞೆ.

ನಂ ೫೯

ಕಾನಡಾ ಜಿಲ್ಹಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ ೧೩-೫-೧೯೪೮

೧೯೪೬ರ ಅವಶ್ಯಕ ವಸ್ತುಗಳ ಪೂರೈಕೆ (ತಾತ್ಪೂರ್ತಿಕ ಅಧಿಕಾರಗಳು) ಕಾಯದೆಯ (೧೯೪೬ರ ೨೪ನೆಯ ಕಾಯದೆಯ) ಕಲಮು ೩ರ (೨)ನೆಯ ಉಪಕಲಮಿನನ್ವಯ ಹಾಗೂ ಹಿಂದುಸ್ಥಾನ ಸರಕಾರದ ಕಾಮಗಾರಿಗಳು, ಗಣಿಗಳು, ಮತ್ತು ಶಕ್ತಿ ಇವುಗಳ ಖಾತೆಯವರು ತಾ ೩-೪-೧೯೪೭ಕ್ಕೆ ಹೊರಡಿಸಿದ ಪಿ ೧೧೦ ನಂಬರದ ಸರಕಾರಿ ಪ್ರಕಟನೆಯನ್ವಯ ದೊರೆತ ಅಧಿಕಾರಗಳನ್ನು ಉಪಯೋಗಿಸಿ ಮತ್ತು ಕಾನಡಾ ಜಿಲ್ಹೆಯ ಜಿಲ್ಹಾ ಮೆಜಿಸ್ಟ್ರೇಟರು ಚಿಮಣಿ ಎಣ್ಣೆಯ ಮಾರಾಟದ ಬೆಲೆಗಳನ್ನು ನಿರ್ಧರಿಸುವದಕ್ಕಾಗಿ ತಾ ೫-೧೧-೧೯೪೭ಕ್ಕೆ ಹೊರಡಿಸಿದ ೫೯ನೇ ನಂಬರದ ಆಜ್ಞೆಯನ್ನು— ತಾ ೧೦-೨-೧೯೪೮ ಮತ್ತು ತಾ ೨೯-೩-೧೯೪೮ಕ್ಕೆ ಅವರೇ ಹೊರಡಿಸಿದ ೫೯ನೇ ನಂಬರದ ಆಜ್ಞೆಗಳಿಂದ ತಿದ್ದುಪಡಿ ಮಾಡಲ್ಪಟ್ಟ ಆಜ್ಞೆಯನ್ನು — ರದ್ದುಗೊಳಿಸಿ, ಕಾನಡಾ ಜಿಲ್ಹೆಯ ಜಿಲ್ಹಾ ಮೆಜಿಸ್ಟ್ರೇಟರು ಅದರ ಸ್ಥಳದಲ್ಲಿ ಈ ಕೆಳಗಿನ ಆಜ್ಞೆಯನ್ನು ಮಾಡಿರುತ್ತಾರೆ ಈ ಆಜ್ಞೆಯು ತಾ ೧೨-೪-೪೮ರಿಂದ ಅಮಲಿನಲ್ಲಿ ಬರತಕ್ಕದ್ದು ಆಜ್ಞೆಯು ಇಂತಿದೆ —

(೧) ಈ ಆಜ್ಞೆಗೆ ಜೋಡಿಸಿರುವ ಪರಿಶಿಷ್ಟದ ೧ನೇ ಸ್ತಂಭದಲ್ಲಿ ಕಾಣಿಸಿರುವ ಸ್ಥಳಗಳಲ್ಲಿ ಅವುಗಳ ಮುಂದುಗಡೆಯೇ ೨, ೩, ೪ನೇ ಸ್ತಂಭಗಳಲ್ಲಿ ತೋರಿಸಿರುವ ಬೆಲೆಗಳಿಗಿಂತ ಹೆಚ್ಚಿಗೆ ಬೆಲೆ ತಕ್ಕೊಂಡು ಬಿಳೇ ಚಿಮಣಿ ಎಣ್ಣೆಯನ್ನು ಯಾರೂ ಸಾರ್ವಜನಿಕರಿಗೆ ಮಾರತಕ್ಕದ್ದಲ್ಲ,

(೨) ಯಾರೊಬ್ಬರು ಸದರಿಯಂತೆ ಬೆಲೆ ಕೊಡಲೊಪ್ಪಿ ಎಣ್ಣೆ ಬೇಡಿದಾಗ, ಯೋಗ್ಯ ಕಾರಣದ ಅಭಾವದಲ್ಲಿ, ಅವರಿಗೆ ಚಿಮಣಿ ಎಣ್ಣೆಯ ವ್ಯಾಪಾರ ಮಾಡುವ ಯಾವಾತನೂ ತನ್ನಲ್ಲಿರುವ ಎಣ್ಣೆಯನ್ನು ಮಾರಾಟ ಮಾಡದೆ ಇರಲಾಗದು

(೩) ಚಿಮಣಿ ಎಣ್ಣೆಯ ವ್ಯಾಪಾರ ಮಾಡುವ ವ್ಯಾಪಾರಿಗಳು ತಮ್ಮ ವ್ಯವಹಾರದ ಸ್ಥಳದಲ್ಲಿ ಸದರಿ ಪರಿಶಿಷ್ಟದ ಒಂದು ಪ್ರತಿಯನ್ನು ಎಲ್ಲರಿಗೂ ಕಾಣುವಂತಹ ಸ್ಥಳದಲ್ಲಿ ತೂಗಿ ಇಲ್ಲವೆ ಹಚ್ಚಿ ಇಡಬೇಕು, ಮತ್ತು

(೪) ಗಿರಾಕಿಯು ಬೇಡಿದಲ್ಲಿ ಆ ಗಿರಾಕಿಗೆ, ಅಂತಹ ವ್ಯಾಪಾರಿಗಳು ಅವನಿಗೆ ಮಾರಾಟ ಮಾಡಿದ ಎಣ್ಣೆಯ ಸಂಬಂಧದಲ್ಲಿ ನಗದಿ ಪಾವತಿಯನ್ನಾಗಲಿ ಬೇರೆ ದಾಖಲೆಯನ್ನಾಗಲಿ ಕೊಡಬೇಕು ಮತ್ತು ಆ ಪಾವತಿ-ದಾಖಲೆಗಳಲ್ಲಿ (೧) ಗಿರಾಕಿಗೆ ಕೊಟ್ಟ ಎಣ್ಣೆಯ ಜಾತಿ, (೨) ಅವನಿಗೆ ಕೊಟ್ಟ ಎಣ್ಣೆಯ ಪರಿಮಾಣ ಮತ್ತು (೩) ಆಕರಿಸಿದ ಬೆಲೆ ಯಾ ಬೆಲೆಗಳು ಇವುಗಳ ಪೂರ್ಣ ಮತ್ತು ನಿಜವಾದ ವಿವರಗಳನ್ನು ಕಾಣಿಸಬೇಕು

ಈ ಆಜ್ಞೆಯ ಉಲ್ಲಂಘನೆ ಮಾಡಿದ ಯಾವದೇ ಅಪರಾಧದ ವಿಚಾರಣೆ ಮಾಡುವ ಯಾವದೇ ನ್ಯಾಯಾಸ್ಥಾನವು, ಆರೋಪಿಗೆ ವಿಧಿಸಬಹುದಾದ ಬೇರೆ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ, ಯಾವ ಚಿಮಣಿ ಎಣ್ಣೆಯ ಸಂಗ್ರಹದ ಸಂಬಂಧದಲ್ಲಿ ಅವನ ಅಪರಾಧ ಸಂಭವಿಸಿರುತ್ತದೆಂದು ನ್ಯಾಯಾಸ್ಥಾನಕ್ಕೆ ಮನವರಿಕೆಯಾಗುತ್ತದೋ ಆ ಸಂಗ್ರಹವನ್ನು, ಎಣ್ಣೆಯಿರುವ ಪಾತ್ರೆಗಳನ್ನೂ ಅವರ ಆಚ್ಛಾದನಗಳನ್ನು ಸಹಿತವಾಗಿ, ಸರಕಾರ-ಜಪ್ತಿ ಮಾಡಲು ಆಜ್ಞಾಪಿಸಬಹುದು

ಇನ್ನೂ ವಿಧಿಸುವದೇನೆಂದರೆ,—

(೫) ಎಲ್ಲ ಮುದ್ರೆಗಳ ಕೆಂಪು ಚಿಮಣಿ ಎಣ್ಣೆಯ ೪ ಇಂಪೀರಿಯಲ್ ಗೆಲನ್ನುಗಳ ಪ್ರತಿಯೊಂದು ಡಬ್ಬಿಯ ಚಿಲ್ಲರೆ ಮಾರಾಟದ ಬೆಲೆಯು (ಸದರಿ) ಪರಿಶಿಷ್ಟದ ೨ನೆಯ ಸ್ತಂಭದಲ್ಲಿ ಕಾಣಿಸಿರುವ ಬೆಲೆಗಿಂತ ೧ (ಒಂದು) ಆಣೆ ಕಡಿಮೆಯಿರತಕ್ಕದ್ದು

(೬) ಎಲ್ಲ ಮುದ್ರೆಗಳ ಬಿಳೇ ಮತ್ತು ಕೆಂಪು ಎಣ್ಣೆಯ ಸಂಬಂಧದಲ್ಲಿ, ಕಪ್ಪು ತಗಡಿನ (೪ ಇಂಪೀರಿಯಲ್ ಗೆಲನ್ನುಗಳ) ಡಬ್ಬಿಯ ಕೋಣೆ ಬೆಲೆ ಬಿಳೇ ತಗಡಿನ ಡಬ್ಬಿಯ ಬೆಲೆಗಿಂತ ೩॥ ಆಣೆ ಕಡಿಮೆ ಇರಬೇಕು

(೭) ಚಿಮಣಿ ಎಣ್ಣೆಯ ಪ್ರತಿಯೊಂದು ಮಾರಾಟದಲ್ಲಿ ಆಕರಿಸತಕ್ಕ ಅಂತಿಮ ಬೆಲೆಯು ಸಮೀಪದ ಪೈಗೆ ಹೊಂದಿಸಿ ಪರಿವರ್ತಿಸಲ್ಪಡತಕ್ಕದ್ದು. ಈ ಬಗ್ಗೆ ಲೆಕ್ಕದಲ್ಲಿ ಬರುವ ಅರ್ಧ ಪೈ ಇಲ್ಲವೆ ಹೆಚ್ಚಿಗೆ ಇರುವ ಅಂಶವು ಪೂರ್ಣ ಪೈ ಎಂದು ಮಾಡಲ್ಪಡತಕ್ಕದ್ದು, ಅರ್ಧ ಪೈಗಿಂತ ಕಡಿಮೆ ಇರುವ ಅಂಶವು ಬಿಟ್ಟು ಬಿಡಲ್ಪಡತಕ್ಕದ್ದು

ಪರಿಶಿಷ್ಟ.

ಎಲ್ಲ ಮುದ್ರೆಗಳ ಬಿಳೇ ಎಣ್ಣೆ

ತಾಲೂಕ, ಪೇಟೆ ಯಾ/ಸ್ಥಳ	೪ ಇಂ ಗೆ ಎಣ್ಣೆಯುಳ್ಳ ಹೊಸ ಬಿಳೇ ತಗಡಿನ ಡಬ್ಬಿ ೧ (ಡಬ್ಬಿ ಸಹಿತ)ರ ನಿಶ್ಚಿತ ಬೆಲೆ	ಪ್ರತಿ ೨ ಪಿಂಟುಗಳ ಚಿಲ್ಲರೆ ಕಿಮ್ಮತ್ತು: ೧ನೇ ಸ್ತಂಭದಲ್ಲಿ ತೋರಿಸಿದ ಸ್ಥಳಗಳಲ್ಲೂ ಅವುಗಳಿಂದ ೫ ಮೈಲು ಅಂತರದಲ್ಲಿರುವ ಸ್ಥಳಗಳಲ್ಲೂ	ಪ್ರತಿ ೨ ಪಿಂಟುಗಳ ಚಿಲ್ಲರೆ ಕಿಮ್ಮತ್ತು: ೩ನೆಯ ಸ್ತಂಭದಲ್ಲಿ ಕಾಣಿಸಿದ ಸ್ಥಳಗಳನ್ನು ಬಿಟ್ಟು ಉಳಿದ ಭಾಗಗಳಲ್ಲಿ
೧	೨	೩	೪
ಕಾರವಾರ ..	೫—೧೦—೬	೦—೫—೯	೦—೬—೩
ಕೋಡಿಬಾಗ, ಕುಮಟಾ, ಹೊನ್ನಾವರ	೫—೧೦—೩	೦—೫—೯	೦—೬—೩
ಸದಾಶಿವಗಡ, ಕದರ, ವೆಂಕಟಾಪುರ, ಶಿರಾಲಿ, ಮುರ್ಡೇಶ್ವರ	೫—೯—೯	೦—೫—೯	೦—೬—೩
ಉಪ್ಪಿನಪಟ್ಟಣ, ಭಟಕಳ	೫—೧೧—೯	೦—೫—೯	೦—೬—೩
ಅಂಕೋಲಾ	೫—೧೦—೦	೦—೫—೯	೦—೬—೩
ಸಿದ್ದಾಪುರ, ಯಲ್ಲಾಪುರ	೬—೧೦—೯	೦—೬—೯	೦—೭—೩
ಶಿರ್ಸಿ	೬—೧—೯	೦—೬—೩	೦—೬—೯
ಮುಂಡಗೋಡ	೬—೮—೩	೦—೬—೯	೦—೭—೩
ಹಳಿಯಾಳ	೬—೨—೦	೦—೬—೩	೦—೬—೯
ಸುಪಾ	೭—೨—೩	೦—೭—೩	೦—೭—೯

ಶರಾ.- (ಡಬ್ಬಿಗಳಲ್ಲಿ ಅಲ್ಲದ) ಸೂಟಿ ಎಣ್ಣೆಯನ್ನು ಕೊಡುವದಾದಲ್ಲಿ ಪ್ರತಿ ೪ ಇಂಪೀರಿಯಲ್ ಗೆಲನ ಎಣ್ಣೆಯ ಬೆಲೆ ಮೇಲ್ಕಾಣಿಸಿದ ಬೆಲೆಗಿಂತ ರೂ ೧-೨-೦ ಕಡಿಮೆ ಇರತಕ್ಕದ್ದು

R. J Rebello,
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ

ಹೈದರಾಬಾದ.

(೨ನೇ ಪುಟದಿಂದ ಮುಂದರಿಸಿದ್ದು)

ಲೋಚನೆಯು ಕಾಶಿಮ ರಝ್ವಿಯವರ ಇತ್ತೆಹಾದುಲ್ಲ ಸಂಸ್ಥೆಯವರಲ್ಲಿ ಬೇರೂರಿದೆಯೆಂದು ಕೆಲವರು ಹೇಳುತ್ತಾರೆ ರಝಾಕಾರರು ವಂಪ್ಲಾಡದ ಮೇಲೂ ನಿಜಾಮರ ಅರಬೀ ಸೈನ್ಯವು ಕರ್ನಾಟಕದ ಮೇಲೂ ದಾಳಿ ಮಾಡಬೇಕು ಹಿಟ್ಲರನ 'ಬ್ಲಿಟ್ಝ್‌ಕ್ರೀಗ್' ಕ್ರಮದಿಂದ ಹೈದರಾಬಾದ ಮತ್ತು ಗೋವಾಪ್ರಾಂತಕ ಪ್ರಾಂತ ಇವುಗಳ ನಡುವಿನ ೧೨೦ ಮೈಲು ಅಂತರವನ್ನು ದಿನ-ಒಪ್ಪತ್ತಿನಲ್ಲಿ ನಿಜಾಮರ ಸೈನಿಕರು ಆಕ್ರಮಿಸಿ ಗೋವೆಯನ್ನು ಕೈವಶಪಡಿಸಿಕೊಳ್ಳಬೇಕು ಇದೇ ಕಾಲಕ್ಕೆ ಪಾಕಿಸ್ತಾನವು ದಿಲ್ಲಿಯ ಮೇಲೆ ದಾಳಿ ಮಾಡಬೇಕು ಎಂದು ಮುಂಚಾಗಿ ನಿಜಾಮರ ಕುತಂತ್ರಿಗಳು ವ್ಯೂಹ ರಚಿಸಿರುವರೆಂದು ಕೆಲವರು ಹೇಳುತ್ತಾರೆ ವಿಲಾಯಿತಿಯ ಚರ್ಚಿಲಪಕ್ಷವು ನಿಜಾಮರಿಗೆ ಅನುಕೂಲವಾಗಿ ವ್ಯವಹರಿಸುತಿದೆ ೨ ವಾರಗಳ ಹಿಂದೆ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ವಿದೇಶ-ವ್ಯವಹಾರದ ಚರ್ಚೆ ನಡೆದಾಗ, ಚರ್ಚಿಲ್ಲ ಸರಕಾರದಲ್ಲಿ ಭಾರತದ ಉಪಮಂತ್ರಿಗಳಾಗಿದ್ದ ಬಟ್ಲರರು ತಮ್ಮ ಭಾಷಣದಲ್ಲಿ ಅಸಂಬದ್ಧವಾಗಿ ಹೈದರಾಬಾದದ ಪ್ರಶ್ನೆಯನ್ನೆತ್ತಿ ಹೈದರಾಬಾದ ಸಂಸ್ಥಾನಕ್ಕೆ ಸ್ವತಂತ್ರ ಉಳಿಯುವ ಹಕ್ಕುಂಟೆಂದೂ ನಿಜಾಮರ ಇಷ್ಟವಿದ್ದರೆ ಹೈದರಾಬಾದವನ್ನು ಬ್ರಿಟಿಶ ರಾಷ್ಟ್ರಮಂಡಳದಲ್ಲಿ ಸೇರಿಸಿಕೊಳ್ಳಬೇಕೆಂದೂ, ಹೈದರಾಬಾದದ ಮೇಲೆ ಯಾವದೇ ಬಗೆಯ ಒತ್ತಾಯವನ್ನು ಭಾರತ ಸರಕಾರವು ಮಾಡದಂತೆ ಬ್ರಿಟಿಶರು ನೋಡಿಕೊಳ್ಳಬೇಕೆಂದೂ ಉದ್ಗರಿಸಿದ್ದುಂಟು ಪೋರ್ತುಗಾಲದ ಸರ್ವಾಧಿಕಾರಿ ಸಾಲಾಝಾರರ ಸರಕಾರವು ನಿಜಾಮರಿಗೆ ಗುಪ್ತ ರೀತಿಯಿಂದ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಾರೆಂಬ ಆರೋಪ ಕೇಳಬರುತ್ತಿದೆ ನಿಜಾಮರ ಸೈನ್ಯದಲ್ಲಿ ಸೇರಬಯಸುವ ಅರಬರು ಹೆಚ್ಚಾಗಿ ಗೋವೆಯಲ್ಲಿಳಿದು ಗೋವೆಯಿಂದ ನೆಲಮಾರ್ಗವಾಗಿ ಹೈದರಾಬಾದಕ್ಕೆ ಹೋಗುತ್ತಿದ್ದುದು ಕಂಡುಬಂದಿದೆ ಆದರಿಂದ ಹಿಂದುಸ್ಥಾನ ಸರಕಾರವು ಗೋವಾ ಗಡಿಯಲ್ಲಿ ಇತ್ತೀಚೆಗೆ ಕಾವಲಿಡುವ ಪ್ರಸಂಗ ಬಂದಿದೆ ಇತ್ತಲಾಗಿ ಈ ಕಾವಲಿನವರು ಗುಪ್ತರೀತಿಯಿಂದ ಹಿಂದುಸ್ಥಾನ ಪ್ರದೇಶದಲ್ಲಿ ಪ್ರವೇಶ ಮಾಡಿದ ಎಷ್ಟೋ ಅರಬರನ್ನು ಸೆರೆಹಿಡಿದದ್ದುಂಟು ಕಳ್ಳತನದಿಂದ ಗೋವೆಗೆ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿದ್ದ ವರ್ತಕರನ್ನೂ ಹಿಡಿದದ್ದುಂಟು ಗೋವೆಯಲ್ಲೀಗ ಅರಾಜಕತೆಯುಂಟಾಗದೆಯೆಂದು ಹೇಳಬಹುದು ಪ್ರಜೆಗಳ ಸ್ವರಾಜ್ಯದ ಚಳವಳಿಯನ್ನು ಹತ್ತಿಕ್ಕುವದಕ್ಕಾಗಿ ಪೋರ್ತುಗಾಲ ಸರಕಾರವು ಆಫ್ರಿಕೆಯಿಂದ ನಿಗ್ರೋ ಸೈನಿಕರನ್ನು ತಂದು, ಗೋವೆಯಲ್ಲಿ ಅವರನ್ನು ಹರಿಬಿಟ್ಟಿದೆ! ಈ ಸೈನಿಕರ ಮೇಲೆ ಯಾವ ನಿಯಂತ್ರಣವೂ ಇಲ್ಲ! ಪ್ರಸಂಗ ಬಂದರೆ ಪೋರ್ತುಗಾಲ ಸರಕಾರವು ಇತ್ತ ಹೈದರಾಬಾದಕ್ಕೂ ಅತ್ತ ಪಾಕಿಸ್ತಾನಕ್ಕೂ ಕೂಡಿಕೊಂಡು ಭಾರತದ ವಿರುದ್ಧ ಶಸ್ತ್ರವನ್ನು ಎಸೆಯಲಿಕ್ಕೆ ಸಿದ್ಧವಿರುತ್ತದೆಂಬುದಾಗಿ ಸಂಶಯ ಬರಹತ್ತಿದೆ ಆದರಿಂದ ಹೈದರಾಬಾದ ಸಮಸ್ಯೆಯನ್ನು ಬಿಡಿಸುವಾಗ ಭಾರತ ಸರಕಾರವು (೧) ಪಾಕಿಸ್ತಾನಿಗಳು ಹೈದರಾಬಾದದ ನಿಜಾಮರಿಗೂ ಕಾಶಿಮ ರಝ್ವಿಯವರ ಇತ್ತೆಹಾದುಲ್ಲ ಸಂಸ್ಥೆಗೂ ಈಯುತ್ತಿರುವ ಪ್ರೋತ್ಸಾಹ ಸಹಾನುಭೂತಿಗಳನ್ನೂ, (೨) ಗೋವೆಯಿಂದ ಪೋರ್ತುಗೀಜರು ಕೊಡುತ್ತಿರುವ ನೆರವನ್ನೂ, (೩) ಹಿಂದುಸ್ಥಾನದಲ್ಲಿರುವ ಮುಸಲ್ಮಾನರು ಹಿಂದುಸ್ಥಾನ ಹೈದರಾಬಾದ ಹೋರಾಟದಲ್ಲಿ ತಳೆಯಬಹುದಾದ ಧೋರಣೆಯನ್ನೂ ಲಕ್ಷ್ಯದಲ್ಲಿಟ್ಟು ವರ್ತಿಸಬೇಕಾಗಿದೆ ಪಾಕಿಸ್ತಾನವು ಹೈದರಾಬಾದಕ್ಕೆ ಶಾಬ್ದಿಕ ಸಹಾನುಭೂತಿಗಿಂತ ಹೆಚ್ಚಿಗೆ ಸಹಾಯ ನೀಡಲಾರದೆಂದು ಪ್ರಾಜ್ಞರ ಅಂಬೋಣವಿದೆ ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿ ಮೊದಲೇ ನೆಟ್ಟಗಿಲ್ಲ ಹಿಂದುಸ್ಥಾನ ಬಿಟ್ಟು ಪಾಕಿಸ್ತಾನಕ್ಕೆ ಹೋದ ಜನರ ವ್ಯವಸ್ಥೆ ಇನ್ನೂ ಆಗಿರುವದಿಲ್ಲ, ಪ್ರಾಂತಿಕ ಮತ-ರಗಳೆ ಅಧಿಕಾರಲೋಲುಪರ ಒಳಜಗಳಗಳೂ ಪಾಕಿಸ್ತಾನಿ ಪ್ರಮುಖರ ತಲೆ ಕೆಡಿಸಹತ್ತಿವೆ ಇಂತಹ ಪರಿಸ್ಥಿತಿಯಲ್ಲಿ ಪಾಕಿಸ್ತಾನಿಗಳು ಹೈದರಾಬಾದಕ್ಕೆ ನೆರವಾಗಲೆಂದು ಇಲ್ಲವೆ ಹೈದರಾಬಾದದ ನಿಜಾಮರಿಗೆ ಹಿಂದುಸ್ಥಾನದ ಸಾರ್ವಭೌಮರನ್ನಾಗಿ ಮಾಡಲು ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದಾರೆಂದು ಭಾವಿಸುವದು ತಪ್ಪೆಂದು ಪಾಕಿಸ್ತಾನದ ಅಂತಃಸ್ಥಿತಿಯ ಪರಿಚಯವುಳ್ಳವರು ಹೇಳುತ್ತಾರೆ ಗೋವೆಯಿಂದ ನಿಜಾಮರಿಗೆ ಸಹಾಯ ಬರಬಹುದಾದರೂ ಅದು ಅಷ್ಟಕ್ಕಷ್ಟೇ ಮೇಲಾಗಿ ಹಿಂದುಸ್ಥಾನ ಸರಕಾರವು ಗೋವೆ, ಹೈದರಾಬಾದಗಳ ನಡುವೆ ಗೋಡೆ ಹಾಕಿ ಸುಲಭವಾಗಿ ಅವನ್ನು ನಿಲ್ಲಿಸಬಹುದು ಹಿಂದುಸ್ಥಾನದ ಮುಸಲ್ಮಾನರು ಮಾತ್ರ ಏನು ಮಾಡ್ಯಾರೆಂಬುದ ನಿಶ್ಚಯವಾಗಿ ಹೇಳಬರುವದಿಲ್ಲ ಕಾಶಿಮ ರಝ್ವಿಯವರಂತೂ ಹಿಂದೀ-ಮುಸಲ್ಮಾನರು ಪಂಚಮ-ದಳದವರಂತೆ ವರ್ತಿಸಿ ತಮಗೆ ಪೂರ್ಣ ನೆರವನ್ನೀಯುವರೆಂಬ ಆಶೆ ತಳೆದಿದ್ದಾರೆ ಆದರೆ ಹಿಂದುಸ್ಥಾನದ ಪ್ರಮುಖ ಮುಸಲ್ಮಾನರನೇಕರು ರಝ್ವಿಯವರಿಗೆ ಈ ಹುಚ್ಚಾಟ ನಿಲ್ಲಿಸಲು ಬೋಧಿಸುತ್ತಿದ್ದಾರೆ ಹಿಂದುಸ್ಥಾನದಲ್ಲಿರ ಮುಸಲ್ಮಾನರು ಹಿಂದೀ ರಾಷ್ಟ್ರಕ್ಕೆ ಏಕನಿಷ್ಠರಾಗುಳಿದು, ಹಿಂದ-ಹೈದರಾಬಾದ ಹೋರಾಟವಾಗಿದರೆ ಹಿಂದದ ಪರವಾಗಿ ಹೋರಾಡುವರೆಂದು ಅವರು ಘಂಟಾಘೋಷವಾಗಿ ಸಾರುತ್ತಿದ್ದಾರೆ ಆದರೆ ಕೃತಿಯ ಕಾಲ ಬಂದಾಗ ಈ ಉಕ್ತಿಗಳು ಬರೀ ಉಕ್ತಿಗಳಾಗಿ ಉಳಿಯುವವೋ ಕೃತಿಯಲ್ಲಿಳಿಯುವವೋ ಎಂಬುದನ್ನು ನಿಶ್ಚಿತವಾಗಿ ಹೇಳುವದು ಕಠಿಣ.

ಈ ಸಮಸ್ಯೆಗಳಿಗಿಂತ ಇನ್ನೊಂದು ತೀರ ಜಟಿಲವಾದ ಸಮಸ್ಯೆಯುಂಟು ಹಿಂದುಸ್ಥಾನ ಸರಕಾರವು ಕೂಡಲೆ ತತ್ಪೂರ್ತಿಕ ಒಪ್ಪಂದವನ್ನು ಅಂತ್ಯಗೊಳಿಸಿ ಹೈದರಾಬಾದಕ್ಕೆ ಆರ್ಥಿಕ ದಿಗ್ಬಂಧನ ಹಾಕಬೇಕೆಂದು ಕೆಲವರು, ರಝಾಕಾರರ ಹಾವಳಿಯನ್ನು ಅಡಗಿಸುವದಕ್ಕಾಗಿ ಮತ್ತು ಸಂಸ್ಥಾನದಲ್ಲಿ ಸ್ವಸ್ಥತೆ-ಸುವ್ಯವಸ್ಥೆಗಳನ್ನು ಸ್ಥಾಪಿಸುವದಕ್ಕೆ ದಂಡಯಾತ್ರೆ ಕೈಕೊಳ್ಳಬೇಕೆಂದು ಬೇರೆ ಕೆಲವರು ಸೂಚಿಸುತ್ತಾರೆ ಆದರೆ ಆರ್ಥಿಕ ದಿಗ್ಬಂಧನ ಹಾಕಿ ಹೊರಗಿಂದ ಹೈದರಾಬಾದಕ್ಕೆ ಹೋಗಬೇಕಾದ ಪೂರೈಕೆಗಳನ್ನು ನಿಲ್ಲಿಸಿದರೆ ಅದರ ಪರಿಣಾಮವು ರಝಾಕಾರರನ್ನು ಕಷ್ಟಕ್ಕೀಡು ಮಾಡುವದರ ಬದಲು ಯಾವ ಸಂತ್ರಸ್ತ ಪ್ರಜಾ-ಜನರ ವಿಮೋಚನೆಗಾಗಿ ಭಾರತವು ಈ ಯತ್ನ ಪ್ರವೃತ್ತವಾಗಬೇಕಾಗಿರುತ್ತದೋ ಆ ಮೂಕ ಪ್ರಜೆಗಳಿಗೇ ಹೆಚ್ಚಿಗೆ ಕಷ್ಟವಾಗುವದು ಹೊರಗಿಂದ ಅನ್ನ ಸಾಮಗ್ರಿಗಳಾಗಲಿ, ಬಟ್ಟೆಬರೆಗಳಾಗಲಿ ಹೈದರಾಬಾದಕ್ಕೆ ಹೋಗದಿದ್ದರೆ, ಮೊದಲೇ ರಾಕ್ಷಸವೃತ್ತಿಯಿಂದ ವರ್ತಿಸುವ ರಝಾಕಾರರು ಸಂಸ್ಥಾನದ ಹುಟ್ಟುವಳಿಯನ್ನೆಲ್ಲ ತಾವೇ ಕೈವಶಪಡಿಸಿಕೊಂಡು ಮುಸಲ್ಮಾನೇತರ ಪ್ರಜೆಗಳಿಗೆ (೧೦೦ಕ್ಕೆ ೮೭ರಷ್ಟು ಜನರಿಗೆ) ಉಪವಾಸ ಹಾಕಿ ಕೊಲ್ಲುವರೆಂದು ಬೇರೆ ಹೇಳಬೇಕಾಗಿಲ್ಲ ದಂಡಯಾತ್ರೆಯ ಕ್ರಮದಿಂದಲೂ ಪ್ರಜೆಗಳಿಗೆ ಕಷ್ಟವಾಗುವದು ಆದರಿಂದ ನಿಜಾಮರ ಮೂಕ ಅಸಹಾಯ, ಸಂತ್ರಸ್ತ ಪ್ರಜೆಗಳನ್ನು ವಿಶೇಷ ಕಷ್ಟಗಳಿಗೆ ಈಡು ಮಾಡದಂತಹ ಉಪಾಯ ಯೋಜನೆಯನ್ನು ಭಾರತ ಸರಕಾರವು ಮಾಡಬೇಕಾಗಿದೆ ನಿಜಾಮರನ್ನು ಬಗ್ಗಿಸಲು ಮೊದಲಿನ ಮೆಟ್ಟಿಲೆಂದು ಆರ್ಥಿಕ ದಿಗ್ಬಂಧನವನ್ನು ಹಾಕುವ ವಿಚಾರ ಸರಕಾರಕ್ಕೆ ಮಾನ್ಯವಾಗಿರಬೇಕೆಂದು ತೋರುತ್ತಿದೆ ಮೊನ್ನೆ ಮದರಾಸದಿಂದ ಉಪ್ಪು ಹೇರಿಕೊಂಡು ಹೈದರಾಬಾದಕ್ಕೆ ಹೊರಟ ೧೩೦ ರೇಲ್ವೆ-ಬಂಡಿಗಳನ್ನು ಮುಂಬಯಿ ಸರಕಾರವು ತಡೆಹಿಡಿದ ವಾರ್ತೆ ಬಂದಿದೆ ಇನ್ನು ಒಂದೆರಡು ವಾರಗಳಲ್ಲಿ ಹಿಂದ ಸರಕಾರವು ಹೈದರಾಬಾದದ ವಿರುದ್ಧ ಯೋಜಿಸಲು ನಿಶ್ಚಯಿಸಿದ ಉಪಾಯ ಯೋಜನೆಯ ರೂಪರೇಷೆಗಳು ತಿಳಿದು ಬರುವವು, ಇಲ್ಲವೆ ಹಿಂದ-ಹೈದರಾಬಾದಗಳ ಕಸ್ತಿಗಾರಂಭವಾದ ನೋಟವು ಕಣ್ಣಿಗೆ ಬೀಳುವದು ಈ ಕುಸ್ತಿಯಲ್ಲಿ ನಿಜಾಮರ ಗತಿಯೇನಾಗುವದೆಂಬುದು ಯಾರು ಹೇಳಬಲ್ಲರು? ಸ್ವತಃ ನಿಜಾಮರಿಗೆ ದುಃಸ್ವಪ್ನಗಳು ಬೀಳಹತ್ತಿವೆ! ಹೈದರಾಬಾದದಲ್ಲಿ ತಮ್ಮ ಸಂಪತ್ತು ಸುರಕ್ಷಿತ ಉಳಿಯಲಾರದೆಂದು ಭಾವಿಸಿ ಅದನ್ನು ಅವರು ದೇಶಾಂತರಗಳಿಗೆ ಕಳಿಸಿಕೊಡುತ್ತಿದ್ದ ವಾರ್ತೆಗಳನ್ನು ನಾವು ಕೇಳಿದ್ದೇವೆ ಹಿಂದ-ಹೈದರಾಬಾದ ಯುದ್ಧ ಪ್ರಾರಂಭವಾದಲ್ಲಿ ಸ್ವತಃ ನಿಜಾಮರು ಕೂಡ ತಮ್ಮ ಹೆಂಡರು-ಮಕ್ಕಳೊಂದಿಗೆ ದೇಶತ್ಯಾಗ ಮಾಡಿ ಪಾಕಿಸ್ತಾನಕ್ಕೋ ತುರ್ಕಸ್ತಾನಕ್ಕೋ ಹೋಗುವರೆಂದೂ ಕಾಶಿಮ ರಝ್ವಿಯವರಿಗೆ ಸರ್ವಾಧಿಕಾರ ಒಪ್ಪಿಸಿ ಹೊರಟು ಹೋಗುವರೆಂದೂ ಚಿತ್ರಪ್ರಸ್ತರು ವರದಿ ಮಾಡಿದ್ದಾರೆ ನಿಜಾಮರಿಗೆ ಪಾಕಿಸ್ತಾನದ "ಚಕ್ರಾಧಿಪತ್ಯದ ಪಟ್ಟಗಟ್ಟಿ, ಅವರನ್ನು ಇಡೀ ಮುಸಲ್ಮಾನ-ಲೋಕದ ಖಲೀಫರನ್ನಾಗಿ ಮಾಡುವ ಆಲೋಚನೆ ಮುಸಲ್ಮಾನ-ಲೋಕದಲ್ಲಿ ನಡೆದಿದೆಯೆಂದು ಇದೀಗ ಒಂದು ಹೊಸ ವರ್ತಮಾನವೂ ಬಂದಿದೆ ನಿಜಾಮರ ಅದೃಷ್ಟದಲ್ಲಿ ಏನೇನಿದೆಯೋ ಆ ಸರ್ವಸಾಕ್ಷಿ ಪರಮಾತ್ಮನಿಗೇ **ಗೋಚರ**!

ಪ್ರಕಟನೆ.

೧೯೩೯ರ ಮುಂಬಯಿಯ ಬೇಸಾಯದ ಉತ್ಪತ್ತಿಯ ಪೇಟೆಗಳ ಕಾನೂನು

ಮುಲ್ಕೀ ಖಾತೆ, ಮುಂಬಯಿ ಕೋಟೆ,

ತಾ ೭-೫-೧೯೪೮

ನಂ ೫೭೫೮/೩೯ — ೧೯೩೯ನೇ ಇಸವಿಯ ಮುಂಬಯಿಯ ಬೇಸಾಯದ ಉತ್ಪತ್ತಿಯ ಪೇಟೆಗಳ ಕಾನೂನಿನ (೧೯೩೯ರ ೨೨ನೇ ಮುಂಬಯಿ ಕಾನೂನಿನ) ೩ನೆಯ ಕಲಮಿನನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಉತ್ತರ ಕಾನಡಾ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಶಿರಸಿ ಪೇಟೆಯಲ್ಲಿ ಅಡಿಕೆ, ಯಾಲಕ್ಕಿ ಮತ್ತು ಕಾಳುಮೆಣಸುಗಳ ಕ್ರಯ-ವಿಕ್ರಯಗಳ ವ್ಯವಹಾರವನ್ನು ಕ್ರಮಗೊಳಿಸುವ ಆಲೋಚನೆ ಮುಂಬಯಿ ಸರಕಾರದಲ್ಲಿ ನಡೆದಿರುತ್ತದೆಂದು ಸರಕಾರವು ಈ ಮೂಲಕ ಜಾಹೀರಪಡಿಸುತ್ತಿದೆ

೨ ಈ ಸಂಬಂಧದಲ್ಲಿ ತಾ ೧೨-೬-೧೯೪೮ನೇಯದಕ್ಕೆ ಯಾ ಅದರ ಮುಂಚೆ ಮುಂಬಯಿ ಸರಕಾರದ ಮುಲ್ಕೀ (ರೆವಿನ್ಯೂ) ಖಾತೆಯ ಕಾರ್ಯದರ್ಶಿಗಳ ಕಡೆ ಕಳಿಸಬಹುದಾದ ತಕರಾರುಗಳನ್ನೂ ಸೂಚನೆಗಳನ್ನೂ ಸರಕಾರವು ಲಕ್ಷ್ಯಕ್ಕೆ ತೆಗೆದುಕೊಳ್ಳುವದು

ಮುಂಬಯಿಯ ಗವರ್ನರ ಅಜ್ಞೆಯಂತೆ,

V N Sardesai,

ಸರಕಾರಿ ಅಂ. ಸೆಕ್ರೆಟರಿ

ಸ್ಥಾನಿಕ ವೃತ್ತಾಂತ.

ಕುಮಟಾ— ಆಗಿಂದಾಗ ಮೋರ್ಚರಗಳೇನೋ ಆಗುತ್ತಿವೆ ಆದರೆ ಮಳೆಯಾಗಲಿಲ್ಲ! ಸೆಕೆ ಮಾತ್ರ ತೀವ್ರತರವಾಗುತ್ತಿದೆ!

ಗಿಬ್ಸ ಹಾಯಸ್ಕೂಲಿನ ಸ್ಥಾಪನೆಗೆ ಮೂಲ ಕಾರಣರಾಗಿದ್ದ ಹಾಗೂ ಅದನ್ನು ೨೪–೨೫ ವರ್ಷಗಳವರೆಗೆ ಕಾಲ ಸಲಹಿದ ದಿವಂಗತ ರಾ| ಸಾ| ನ ದಾಮಲ ಮುಖ್ಯಾಧ್ಯಾಪಕ ಹಾಗೂ ಅವರ ಪತ್ನಿ ದಿವಂಗತ ರಮಾಬಾಯಿ ಇವರ ಸ್ಮರಣಾರ್ಥ ಅವರ ಮಕ್ಕಳು ಗಿಬ್ಸ ಹಾಯಸ್ಕೂಲಿಗೆ ಒಂದು ವಿಜ್ಞಾನ ಪ್ರಯೋಗ ಶಾಲೆಯನ್ನು ಕಟ್ಟಿಸಿಕೊಟ್ಟಿರುತ್ತಾರೆ. ಅದರ ಉದ್ಘಾಟನೆ–ಸಮಾರಂಭವು ಕಳೆದ ಗುರುವಾರ ೩ನೇ ಸಂಜೆ ಜಿಲ್ಲಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾಗಿರುವ ಶ್ರೀ ಶೇಷಗಿರಿರಾವ ಶೇಣ್ವೆ ಇವರ ಹಸ್ತದಿಂದ ನೆರವೇರಿತು. ಅದೇ ಕಾಲಕ್ಕೆ ಶಾಲೆಯ ವಿದ್ಯಾರ್ಥಿಗಳ ಪಾರಿತೋಷಕ ವಿತರಣೆ ಸಮಾರಂಭವೂ, ಇನಾಮು ಹಂಚುವ ಸಮಾರಂಭವೂ ಶ್ರೀ ಶೇಣ್ವೆಯವರ ಅಧ್ಯಕ್ಷತೆಯಲ್ಲೇ ಜರುಗಿದವು.

ಪೇಟೆಯಲ್ಲಿ ಅಕ್ಕಿಯ ದರಗಳೇಗ ವಿಪರೀತವಾಗಿ ಏರುತ್ತಿವೆ. ಅಕ್ಕಿಯ ದರ ಪ್ರತಿ ಗಿಣ್ಣೆ ರೂ ೨–೨ ೦ ರಿಂದ ೨–೮–೦ ರ ವರೆಗೆ ಉಂಟು. ಬೆಸ್ತಗೆ ಅಕ್ಕಿಯ ಧಾರಣೆ ರೂ ೨೪ರಿಂದ ೨೫ ರ ವರೆಗೆ ಇದೆ. ಕಳೆದ ಮಂಗಳವಾರ ಶಿರಶಿಯ ಸಂತೆಯಲ್ಲಿ ಅಕ್ಕಿಯ ಧಾರಣೆಗಳು ವಿಪರೀತ ಏರಿದ್ದರ ಪರಿಣಾಮವಿದು. ಈ ದರಗಳನ್ನು ಕಂಡು ಬಡ ಜನರು ಮಧ್ಯಮ ವರ್ಗದವರೂ ಹೌಹಾರಿ ಹೋಗಿದ್ದಾರೆ. ಸರಕಾರದವರ ಅಗ್ಗ ದರದ ಅಂಗಡಿ ಎಂದು ಬರುವದೋ ಎಂದು ಅವರು ಚಾತಕ ಪಕ್ಷಿಗಳಂತೆ ದಾರಿ ಕಾಯುತ್ತಿದ್ದಾರೆ. ಕುಮಟಾ ಮ್ಯುನಿಸಿಪಾಲಿಟಿಯ ಕ್ಷೇತ್ರದಲ್ಲಿ ೩ ಅಗ್ಗ ದರದ ಅಂಗಡಿಗಳನ್ನು ತೆರೆಯಲು ಜಿಲ್ಲಾಧಿಕಾರಿಗಳು ನಿರ್ಧರಿಸಿ, ೧ ಅಂಗಡಿಯನ್ನು ಕುಮಟಾ ಅರ್ಬನ ಬ್ಯಾಂಕಿಗೂ, ೧ ಅಂಗಡಿಯನ್ನು ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ್ ಬ್ಯಾಂಕಿನ ಕುಮಟಾ ಶಾಖೆಗೂ, ಇನ್ನೊಂದು ಅಂಗಡಿಯನ್ನು ಗಿಂಡಿಕೇಟಿಗ (ಕೆನರಾಮಾರ್ಕೆಟ) ಸರಕಾರಿ ಸಂಘಕ್ಕೂ ಒಪ್ಪಿಸುವ ಯೋಜನೆ ಮಾಡಿದ್ದಾರೆ. ರೇಶನ್–ಚೀಟಿಗಳನ್ನು ಜನರಿಗಿನ್ನೂ ಈ ಅಂಗಡಿಗಳಲ್ಲಿ ಕಾಳು ಸಿಗುವದು ಊರಲ್ಲಿ ಜನಗಣನೆ ಪೂರೈಸಿ ಮಾಡಿ ರೇಶನ್–ಚೀಟಿಗಳನ್ನು ಕೊಡುವದಕ್ಕಾಗಿ ಡಿಸ್ಟ್ರಿಬ್ಯೂಟಿಂಗ್ ಸುಪರವೈಝರ್ ಎಂಬ ಓರ್ವ ಅಧಿಕಾರಿಯು ಕೆಲವು ಸಿಬ್ಬಂದಿಯನ್ನು ನೇಮಿಸಿದ್ದಾರೆ. ಈ ಅಗ್ಗ ದರದ ಅಂಗಡಿಗಳಲ್ಲಿ, ನೇಮಿಸಿಕೊಟ್ಟ ರೇಶನ ಧಾನ್ಯಗಳ ಪರಿಮಾಣದ ಅರ್ಧದಷ್ಟು ಗೋದಿಯ ಜೋಳ (ಜೋಳ) ಸಿಗುವದು. ಅದನ್ನು ಒಪ್ಪದಿದ್ದರೆ ಉಳಿದ ಧಾನ್ಯ ಅಂದರೆ ಅಕ್ಕಿ, ಗೋದಿ ಇಲ್ಲವೆ ಜೋಳ ಸಿಗುವದು. ಗೋದಿಯ ಜೋಳ ಒಪ್ಪದೆದ್ದವರಿಗೆ ಬೇರೆ ಧಾನ್ಯ ಸಿಗಲಿಕ್ಕಿಲ್ಲವಂತೆ. ಇದು ಅಗ್ಗ ದರದ ಅಂಗಡಿಗಳು ಎಂದಿನಿಂದ ಕೆಲಸ ಆರಂಭಿಸುವ ವಾರ್ತೆ ಲಭ್ಯವಾಗಿಲ್ಲ. ಅನ್ನ ನಿಶ್ಚಿತವಾಗಿರುವದಿಲ್ಲ. ಗೋದಿಯ ಜೋಳದ ಪಾರಾಟಕ್ಕೆ ಮಾತ್ರ ಅರ್ಬನ ಬ್ಯಾಂಕಿನಲ್ಲಿ ಈಗಾಗಲೇ ಆರಂಭವಾಗಿದೆ. ಮ್ಯುನಿಸಿಪಲ ಕ್ಷೇತ್ರದ ಹೊರಗಿನವರಿಗೂ ಸಹ ಈ ಜೋಳ ಸಿಗುತ್ತದೆ.

ಕಳೆದ ಬುಧವಾರ (ಸಾಂತಗಲ್ಲ ಸೀಮೆಯಲ್ಲಿರುವ) ಮೋರ್ಡಿಸ ಗ್ರಾಮದಲ್ಲಿ ಓರ್ವ ಒಕ್ಕಲಿಗನ ಹುಲ್ಲು ಹೊದಿಕೆಯ ಮನೆಯು ಅಗ್ನಿಪ್ರಳಯಕ್ಕಾಗಿ ಆಹುತಿಯಾಗಿ ಒಳಗಿದ್ದ ಅಕ್ಕಿ, ಬಟ್ಟೆ, ಬೆಳ್ಳಿ–ಬಂಗಾರ ವೊದಲಾದ ಬೆಲೆಬಾಳುವ ಸೊತ್ತೆಲ್ಲ ಸುಟ್ಟುಹೋಯಿತು. ಈ ಅನಾಹುತದಿಂದ ಆ ಒಕ್ಕಲಿಗನಿಗೆ ಸುಮಾರು ೨೦–೨೫ ಸಾವಿರ ರೂ ನಷ್ಟವಾಗಿರುತ್ತದಂತೆ.

ಹೊನ್ನಾವರ— (ತಾ. ೨೦–೫–೪೮) ಊರು ನಲ ಉಗ್ರಾಣಿಗಾರರು ಈಗ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಜನ ಹಾದಿಯನ್ನು ಕಂಡು ಪಾರಾಟಕ್ಕಿಟ್ಟಿದ್ದಾರೆ! ಉಗ್ರಾಣದಲ್ಲಿ ಹಳೆಯ ಒಂದು ಚಟ್ಟಿಗೆ ಇಲ್ಲದಿದ್ದ ಅದನ್ನು ಉಗ್ರಾಣದಾರರು ಗೊಂಡೆ ಮಾರಿಟ್ಟಿದ್ದಾರೆ! ಅದನ್ನು ಮಾರಾಟಕ್ಕೆ ಕೊಟ್ಟರೆ ಜನಸಾಮಾನ್ಯರಿಗೆ ಒಂದು ಸಹಾಯವಾಗುವದು, ಸಿಗುವ ಲಾಭ ಕಡಿಮೆಯಾಗುವದು ಎಂದು ಲಕ್ಷ್ಯ ಹಾಕಿಯೇ ಈ ಎಲ್ಲ ಆಟ ನಡೆದಿರುತ್ತದೆ! ಅದಕ್ಕೆ ಉಪಾಯವಿಲ್ಲ! ನಮ್ಮ ಜಂಗಲ ಅಧಿಕಾರಿಗಳು ನಿಟ್ಟಿಗರಾಗಿದ್ದರ ಇಂತಹ ಅನಾಚಾರ–ಅನ್ಯಾಯಗಳು ನಡೆಯುತ್ತಿದ್ದವೇನು?

ಇಲ್ಲಿಯ ಸಿದ್ಧೇಶ್ವರದವರ ಬಾಲಕರು ಕಡಿಮೆ ಕಟ್ಟ ಅಕ್ಕಿಯನ್ನು (ಸುಮಾರು ೨೦ ನಾರಿನ ಚೀಲ) ಜಿಲ್ಲಾಧಿಕಾರಿ ಆರ್ಬನ ಬ್ಯಾಂಕಿನವರಿಗೆ ಒಪ್ಪಿಸಿದ್ದಾರೆ. ಬ್ಯಾಂಕಿನವರು ಸ್ಥಳೀಯರಿಗೆ ಪ್ರತಿ ಗಿಣ್ಣೆ ರೂ ೧–೧೫–೦ ರಂತೆ ಹಣ ಕೊಡಬೇಕೆಂದು ಅವರ ತಿಕ್ಕಿಂದು ಜನಾಪ್ರಿಯವಾಗಿ ಜನರಿಗೆ ಪಾರಾಟ ಮಾಡಬೇಕೆಂದೂ ಜಿಲ್ಲಾಧಿಕಾರಿಗಳು ಬ್ಯಾಂಕಿನವರಿಗೆ ಕರಾರು ಹಾಕಿದ್ದಾರೆ. ಅದರಂತೆ ಈಗ ಬ್ಯಾಂಕಿನವರು ಅಕ್ಕಿಯನ್ನು ಪಾರಾಟಕ್ಕೆ ತೆಗೆದಿದ್ದಾರೆ. ಅದರಿಂದಲೇ ಊರಲ್ಲಿ ಅಕ್ಕಿಯ ಗಾಭರಿ ಕೊಂಚ ಕಡಿಮೆಯಾಗಿದೆ.

ಹಿಂದೆ ಕಡೆಯ ರಾ| ಗೋಪಾಲ ಹೆಗಡೆ ಇವರು ಭಟ್ಕಳ ಪೇಟೆಯ ವಿಷ್ಣು ಶೆಣ್ವಿ ರಂಗರಾವ ಇವರ ಹಸ್ತ ಇಂದ ಇಂದು ಅಂದಾಜ (ಸ–೫ ರೂಪಾಯಿಗಳ ೧೩೦೦) ನೋಟುಗಳಲ್ಲಿ ಕಳವಾದದ್ದು ಇಲ್ಲಿಯ ಪೊಲೀಸ ರಾ| ಮಾಸ್ತರ ಭಟ್ಟ ಕರ ಮತ್ತು ಶ್ರೀ ವಿ| ಪರಮೇಶ್ವರ ಜೆ ಕರ ಇವರಲ್ಲಿ ಇರುವದರಿಂದ ಹೆಚ್ಚು ಸಂಶಯದಿಂದ ಗುಪ್ತ ಪೋಲೀಸ ಇಲಾಖೆಯವರು ಸ್ಪೆಶಲ ಪೋಲೀಸ ಅಧಿಕಾರಿಗಳ ಜೊತೆ ಕಳೆದ ತಾ ೯ನೇ ತಾರೀಖಿನಲ್ಲಿ ಮನೆ ಗಳನ್ನೆಲ್ಲ ಝಡತಿ ಶೋಧ ಮಾಡಿದ್ದರಂತೆ. ಅದರ ಫಲದಿಂದ ಶೋಧದ ಒಂದು ನೋಟು ಸಹ ಸಿಗಲಿಲ್ಲ.

ಕೆಕ್ಕಾರದ ಪ್ರೌಢ ಶಿಕ್ಷಣ ವರ್ಗದ ವಿದ್ಯಾರ್ಥಿಗಳಿಗೆ ರಾ| ಕೋಟಿಗದ್ದೆ ವಿಷ್ಣು ಹೆಗಡೆ ಇವರು ಯಕ್ಷಗಾನ ಕಲೆ ಯುತ್ತಾರಂತೆ ಇದೇ ಕಳೆದ ತಾ ೧೫ನೇಗೆ ವರ್ಗದವರ ದೊಂದು ಆಟವಾಯಿತು. ಹೊನ್ನಾವರ ಮಾಮಲೇದಾರರು ಆ ಸಮಾರಂಭದ ಅಧ್ಯಕ್ಷರಾಗಿದ್ದರು.

ಟೆಂಡರ ನೋಟೀಸು.

ಮುಂಡಗೋಡದ ತಾಲೂಕಿನ ಸರಕಾರಿ ಗೋದಾಮಿನಲ್ಲಿ ಶಿಲ್ಕು ಇರುವ, ಈ ಕೆಳಗೆ ನಮೂದಿಸಿದ ಖಾಲಿ ಚೀಲಗಳನ್ನು ತಾ ೧೫–೬–೧೯೪೮ನೇ ದಿನ ಮಧ್ಯಾಹ್ನ ೧೨ ಘಂಟೆ ಟೆಂಡರ ಮೂಲಕ ಪಾರಾಟ ಮಾಡಲಾಗುವದು —

ಉಪಯೋಗಕ್ಕೆ	ಬರುವಂಥ	ಹರಿದುಹೋದ
ಬರುವ	ಉಪಯೋಗಿಸ	ಚೀಲಗಳು.
ಚೀಲಗಳು	ಬರುವ ಚೀಲಗಳು	
೩೯೮೩	೨೪೮೫	೪೮೮೦

ಖರೀದಿ ಇಚ್ಛೆಯವರು ಮುಂಡಗೋಡದ ತಾಲೂಕ ಕಚೇರಿಯಲ್ಲಿ, ಕಚೇರಿಯ ಹೊತ್ತಿಗೆ, ನೋಡಬಹುದು, ಸಿಗುವ ಚೀಲಗಳನ್ನು ಇದ್ದಂತೆ ನೋಡಿ ಟೆಂಡರ ಕೊಡಬಹುದು.

ಟೆಂಡರ ಕಳಿಸುವವರು ಮಾಮಲೇದಾರ, ಮುಂಡಗೋಡ ಇವರ ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲ್ಗಡೆ “ಖಾಲಿ ಚೀಲಗಳ ಬಗ್ಗೆ ಟೆಂಡರ” ಎಂದು ಸ್ಪಷ್ಟ ಬರೆಯಬೇಕು. ಟೆಂಡರ ಕಳಿಸುವವರು ಅನಾಮತ ಹಣವೆಂದು ಯಾವದೊಂದು ಸರಕಾರಿ ಟ್ರೆಝರಿಯಲ್ಲಿ ರೂ ೨೦೦ ಜಮಾ ಮಾಡಿ, ಚಲನ ಪಾವತಿಯನ್ನು ಟೆಂಡರಿನ ಬಗ್ಗೆ ಇಟ್ಟು ಜೋಡಿಸಬೇಕು. ಜೋಡಿಸದಿದ್ದರೆ ಟೆಂಡರ ಸ್ವೀಕರಿಸಲ್ಪಡಲಿಕ್ಕಿಲ್ಲ ಟೆಂಡರುಗಳು ತಾ ೧೦–೬–೪೮ರ ಸಂಜೆಯೊಳಗಾಗಿ ನಮಗೆ ಮುಟ್ಟಬೇಕು.

ಮುಂಡಗೋಡ,
ತಾ ೨೧–೫–೪೮
Y. A Sunthankar,
ಮಾಮಲೇದಾರ, ಮುಂಡಗೋಡ

ಶಿರಾಲಿ— (ತಾ ೧೮–೫–೪೮) ಕಳೆದ ಶನಿವಾರ ಸಂಜೆ ಇಲ್ಲಿಯ ಪೇಟೆಯ ಬಳಿಯಲ್ಲಿ ಬೈಲಲ್ಲಿ ರೈತರ ಸಭೆ ಕೂಡಿತ್ತು. ರಾ| ದಿನಕರ ದೇಸಾಯಿ (ಭಾರತ–ಸೇವಕ ಸಮಾಜದವರಂತೆ) ಅವರದೊಂದು ಭಾಷಣವಾಯಿತು. ರಾ| ದೇಸಾಯಿಯವರ ಉದ್ದುದ್ದ ಬರಿ ಮಾತುಗಳನ್ನು ನೋಡಿ, ಸಭೆ ನೆರೆದಿದ್ದ ಜನರು ಅವರ ಭಾಷಣದಲ್ಲಿ ಉದ್ವೇಗದ ಮಾತುಗಳಿರಬಹುದು ಕೇಳಬೇಕೆಂದು ಅಪೇಕ್ಷಿಸಿದ್ದರು. ಆದರೆ ಅವರಿಗೆ ಪೂರ್ಣ ನಿರಾಶೆಯಾಯಿತು! ರಾ| ದೇಸಾಯಿಯವರು ರೈತ–ಸಂಘದ ಇತರೇ ಅಗ್ರಗಣ್ಯ ಪ್ರಮುಖರಂತೆ ತಮ್ಮ ಭಾಷಣದಲ್ಲಿ ಬರೇ ಭೂಮಾಲಕರ ನಿಂದೆ ಮಾಡಿದರು! ಎಸೆಂಬ್ಲಿ ಕೌನ್ಸಿಲುಗಳಲ್ಲಿರುವ ತಮ್ಮ ಪ್ರತಿನಿಧಿಗಳನ್ನು ಹೀಗಳೆದರು!! ಸಭೆಯಲ್ಲಿ ವರ್ಗದ್ವೇಷ ಹುಟ್ಟಿಸುವದೇ ಅವರ ಉದ್ದೇಶವಿದ್ದಂತೆ ಕಾಣುತ್ತಿದೆ! ಸಭೆಯಲ್ಲಿ ವರ್ಗ–ಕಲಹಗಳನ್ನು ಎಬ್ಬಿಸುವದು ಕೂಡ ಇಂಥವರಿಗಿ ಭಾರತ ಸೇವಕ ಸಮಾಜದ ಧ್ಯೇಯ–ಧೋರಣೆಗಳಲ್ಲಿ ಸೇರಿಸಲ್ಪಟ್ಟಿರುತ್ತದೋ ಏನೋ ತಿಳಿಯದು!

ಇಲ್ಲಿಯ ಗ್ರಾಮ ಪಂಚಾಯತದವರು ಜಿಲ್ಲಾಧಿಕಾರಿ ಅಪ್ಪಣೆ ಪಡೆದೊಂದು ಪಟ್ಟಿಸ್ಪರ್ಧೆಯ ಸಾಹಸದಲ್ಲಿ ಒಂದು ಸ್ಟೇಶನ್ ಕಟ್ಟಿಸಲಿದ್ದಾರೆ. ನಾಗರಿಕರು ಈ ಕೆಲಸಕ್ಕೆ ಯಥಾಶಕ್ತಿ ಸಹಾಯ ಮಾಡಬೇಕಾಗಿ ಪಂಚಾಯತದವರ ಅಪೇಕ್ಷೆಯುಂಟು.

ಪ್ರಕಟನೆ.

ಧಾರವಾಡದಲ್ಲಿರುವ ಕರ್ನಾಟಕ ಸಹಕಾರಿ ಶಾಲೆಯ ೧೯೪೮–೪೯ನೇ ಸಾಲಿನ ಮೊದಲನೆ ವರ್ಗವು ತಾ ೬–೬–೧೯೪೮ರಿಂದ ಪ್ರಾರಂಭವಾಗುವದು.

ಈ ಶಾಲೆಯಲ್ಲಿ ಸುಪರವೈಝರ, ಬ್ಯಾಂಕ್–ಇನಸ್ಪೆಕ್ಟರ, ಅಸಿಸ್ಟಂಟ ಸೆಕ್ರೆಟರಿ, ಒಡಿಟರ, ವಿವಿಧೋದ್ದೇಶ ಸಂಘಗಳ, ಖರೀದಿ–ವಿಕ್ರಿ ಸಂಘಗಳ, ಅನಿಸಿಕಾರ ಸಂಘಗಳ ಹಾಗೂ ಅರ್ಬನ ಕ್ರೆಡಿಟ್ ಸೊಸಾಯಿಟಿಗಳ ಸೆಕ್ರೆಟರಿಗಳು ಮೊದಲಾದವರನ್ನು ತರಬೇತು ಮಾಡಲಾಗುವದು. ಇದಲ್ಲದೆ ಡಿಸ್ಟ್ರಿಕ್ಟ ಇಂಡಸ್ಟ್ರಿಯಲ್ ಎಸೋಸಿಯೇಶನ ಮತ್ತು ತಾಲೂಕಾ ಡೆವ್ಹಲಪಮೆಂಟ ಎಸೋಸಿಯೇಶನ್ನುಗಳ ನೌಕರ ವರ್ಗದವರನ್ನು ತರಬೇತ ಮಾಡಲಾಗುವದು.

ಶಿಕ್ಷಣದ ಅವಧಿ ೬ ತಿಂಗಳದ್ದಿರುತ್ತದೆ. (೪ ತಿಂಗಳು ಥಿಯರೆಟಿಕಲ್ ಶಿಕ್ಷಣವನ್ನು, ೨ ತಿಂಗಳು ಪ್ರಾತ್ಯಕ್ಷಿಕ ಶಿಕ್ಷಣವನ್ನು ಕೊಡಲಾಗುವದು) ೬ ತಿಂಗಳ ಶಿಕ್ಷಣದ ಫೀ ರೂ ೩೦ ಇರುತ್ತದೆ (ಪ್ರವೇಶವಿದ್ದರೆ ಇದನ್ನು ರೂ ಅಂಕ್ಕೆ ಏರಿಸಲಾಗುವದು) ಈ ವಿಷಯ ಪರೀಕ್ಷೆಯ ಫೀ ರೂ ೫ ಬೇರೆಯಾಗಿ ಕೊಡಬೇಕು. ಈ ಪೀ ಕೊಡುವ ವ್ಯವಸ್ಥೆಯೂ ಉಂಟು.

ಎಲ್ಲ ಶಿಕ್ಷಣ ಕನ್ನಡದಿಂದಲೇ ಕೊಡಲ್ಪಡುವದು.

ಸರಕಾರಿ ಸಂಘಗಳಿಂದ ಬರುವ ಶಿಕ್ಷಣಾರ್ಥಿಗಳು ತಮ್ಮ ಪರಿಶಿಷ್ಟ ಮುಖಾಂತರ ಈ ಶಾಲೆಯ ಸುಪರಿಂಟೆಂಡೆಂಟರಿಗೆ ಅರ್ಜಿ ಕೊಡಬೇಕು. ಇಲ್ಲಿ ಖಾಸಗಿ ಶಿಕ್ಷಣಾರ್ಥಿಗಳು ಮೆಟ್ರಿಕ್ ಇಲ್ಲವೆ ತತ್ಸಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿರಬೇಕು. ಅರ್ಜಿದಾರರು ತಮ್ಮ ಅರ್ಜಿಗಳಲ್ಲಿ ತಮ್ಮ ಪೂರ್ಣ ಹೆಸರು, ವಿಳಾಸ, ಧರ್ಮ, ಶೈಕ್ಷಣಿಕ ಪಾತ್ರತೆ, ಅನುಭವ ಮುಂತಾದವನ್ನು ನಮೂದಿಸಬೇಕು. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನ ತಾ ೧೫–೬–೧೯೪೮ ಇರುತ್ತದೆ.

ಈ ಶಾಲೆಯಲ್ಲಿ ತರಬೇತ ಹೊಂದಿದವರಿಗೆ ಸರಕಾರಿ ಖಾತೆಯಲ್ಲೂ ಸಂಘಗಳಲ್ಲೂ ನೌಕರಿ ಕೊಡುವಾಗ ಪ್ರಾಶಸ್ತ್ಯ ಕೊಡಲಾಗುವದು.

ಧಾರವಾಡ,
ತಾ ೧೮–೫–೧೯೪೮
ಜಿ ಆರ್ ನಲವಡಿ,
ಚೇರಮನ್

ಭಟಕಳ—(ತಾ. ೨೭-೩-೪೮) ೪-೫ ದಿನಗಳ ಹಿಂದೆ ಅಬಕಾರಿಯವರು ಮುಂಡಳ್ಳಿಯಲ್ಲಿ ಒಂದು ಸರಾಯಿಯ ಭಟ್ಟಿಯನ್ನು ಹಿಡಿದಿದ್ದರು. ಪಟೇಲ ರಾ॥ ವಿಠಾರಾ ಸಾಹೇಬರು ಅಬಕಾರಿಯವರನ್ನು ಎಬ್ಬಿಸಿ ಈ ಭಟ್ಟಿಯನ್ನು ಹಿಡಿಸಿರಬೇಕೆಂಬ ಸಂಶಯದಿಂದ, ಮೊನ್ನೆ ಪಟೇಲರು ಮುಂಡಳ್ಳಿಯ ದಾರಿಯಿಂದ ಮನೆಗೆ ಬರುತ್ತಿದ್ದಾಗ ಕೆಲವು ಸರಾಯಿಗಳ್ಳರು ಅವರನ್ನು ಹಿಡಿದು ಬಹಳ ಹೊಡೆದಿರುತ್ತಾರೆ. ಅವರ ಒಂದು ಕೈ ಸಂದು ಕಳಚಿಹೋಗಿರುತ್ತದೆಂದು ಹೇಳುತ್ತಾರೆ. ಈ ದಂಗೆಯ ಸಂಬಂಧದಲ್ಲಿ ಪೋಲೀಸರು ಈ ವರೆಗೆ ೫-೬ ಮಂದಿಗೆ ಹಿಡಿದು ಬಂಧನದಲ್ಲಿಟ್ಟಿದ್ದಾರೆ.

ದಾಂಡೇಲಿಯಿಂದ ಬಂದಬಸ್ತಿಗೆ ಹೋಗುವ ಮಾರ್ಗದ ಅಂಚಿಗೆ ಹೊಲಸು ನೀರು ನಿಂತು ನಾರುತ್ತಿದೆ! ಈ ಅನಾರೋಗ್ಯಕರ ಅಸಹ್ಯ ಪ್ರಕಾರ ನಿಲ್ಲಿಸಲು ಮ್ಯು॥ಗೆ ಪುನಃ ಪುನಃ ಹೇಳಿಕೊಂಡರೂ ಮ್ಯು॥ ಯವರು ಕಿವಿಗೊಡುವದಿಲ್ಲವಂತೆ! ಆರೋಗ್ಯಾಧಿಕಾರಿಗಳಾದರೂ ಈಗ ಮುಂದಾಗುವರೇ?

ಶಿರಸಿ— ಇದೇ ಬರುವ ಮೇ ತಾ ೩೦, ೩೧ನೇಗೆ ಬೆಳಗಾಂವಿಯಲ್ಲಿ (ಲಿಂಗರಾಜ ಕಾಲೇಜಿನ ಆವಾರದಲ್ಲಿ), ಹುಬ್ಬಳ್ಳಿಯ ವೈದ್ಯಗುರು ಡಾ॥ ಪಲಸೀಕರ ಇವರ ಅಧ್ಯಕ್ಷತೆಯೊಳಗೆ ೧೬ನೆಯ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನವು ಜರುಗಲಿದೆ. ಅದರ ಜೊತೆಗೆ ಒಂದು ಕಲಾ-ಪ್ರದರ್ಶನವೂ ನಡೆಯುವದು. ಈ ಸಮ್ಮೇಲನಕ್ಕೆ ನಮ್ಮ ಜಿಲ್ಲೆಯಿಂದ ಹೆಚ್ಚೆಚ್ಚು ವೈದ್ಯರು ಉಪಸ್ಥಿತರಾಗಿ ಆಯುರ್ವೇದದ ಏಳ್ಗೆಗೆ ನೆರವನ್ನೀಯಬೇಕೆಂದು ಶಿರ್ಸಿಯ ಡಾ॥ ಪಟವರ್ಧನರು ಬಿನ್ನವಿಸುತ್ತಾರೆ.

ಬೆಟ್ಟದಲ್ಲಿ ಮಳೆಗಾಲದ ಆರಂಭಕ್ಕೆ "ಕುರುಡ ನೊಣ" ಗಳೆಂಬ ಜಾತಿಯ ನೊಣಗಳು ಹುಟ್ಟಿ ದನಗಳಿಗೆ ಬಹಳ ಕಾಡುತ್ತವೆ! ಈ ನೊಣಗಳ ಕಾಟ ಸಹಿಸಲಾಗದೆ ಎಷ್ಟೋ ದನಗಳು ಸಾಯುತ್ತವೆ! ಚಂದಾವರ ಬೆಟ್ಟದಲ್ಲಿರುವ ಬೇರೊಂದು ಜಾತಿಯ ನೊಣಗಳು ಈ ಕುರುಡ ನೊಣಗಳ ಸಂಹಾರ ಮಾಡುತ್ತವಂತೆ. ಸರಕಾರದವರು ಈ ಮಾತಿನ ಚೌಕಶಿ ಮಾಡಿಸಿ, ಅದು ಸತ್ಯವೆಂದು ಕಂಡು ಬಂದರೆ ಚಂದಾವರ ಬೆಟ್ಟದೊಳಗಿನ ಕೆಲವು ನೊಣಗಳನ್ನು ಹಿಡಿಸಿತರುವ ಮತ್ತು ಅವನ್ನು ಘಟ್ಟದ ಮೇಲಿನ ಬೆಟ್ಟಗಳಲ್ಲಿ ಬಿಡುವ ವ್ಯವಸ್ಥೆ ಮಾಡಬೇಕಾಗಿ ಅರಿಕೆಯುಂಟು. ಗ್ರಾಮೋನ್ನತಿ ಮಂಡಳದವರು ಈ ಕಾರ್ಯ ಕೈಕೊಂಡರೆ ಒಳ್ಳೆದಾಗುವದು.

ಕಾರವಾರ—(ತಾ ೨೦-೩-೪೮) ಕಳೆದ ರವಿವಾರ ಸಂತೆಯಲ್ಲಿ ದೊಡ್ಡಕ್ಕಿ (ಬೆಣ್ತಿಗೆ) ಯ ಧಾರಣೆ ರೂ. ೨॥ ಮತ್ತು ಸಣ್ಣಕ್ಕಿಯ ಧಾರಣೆ ರೂ. ೩ ಆಗಿತ್ತು. ಅಕ್ಕಿಯ ಸಂಗ್ರಹವುಳ್ಳ ಒಡೆಯ-ಒಕ್ಕಲಿಗರು ದರಗಳು ಇನ್ನೂ ಏರುವವೆಂಬ ನಿರೀಕ್ಷೆಯಿಂದ ತಮ್ಮ ಅಕ್ಕಿಯನ್ನು ಹೊರಗೆ ತರುವದಿಲ್ಲ! ಹಳಿಯಾಳದಲ್ಲಿ ಜೋಲ ೧೫ಕ್ಕೆ ರೂ. ೪೮ ಹೇಳುತ್ತಾರಂತೆ.

ಸರಕಾರದವರ ಅಗ್ಗ ಧಾನ್ಯದ ಅಂಗಡಿಗಳು ತಾ ೧-೬-೧೯೪೮ರಿಂದ ತೆರೆಯಲ್ಪಡುವವೆಂದು ತಿಳಿಯುತ್ತದೆ. ಹೊಲ-ಭೂಮಿಗಳಿಲ್ಲದ ಹಾಗೂ ತಿಂಗಳೊಂದಕ್ಕೆ ರೂ ೧೦೦ಕ್ಕಿಂತ ಕಡಿಮೆ ಉತ್ಪನ್ನವುಳ್ಳ ಜನರಿಗಷ್ಟೇ ಈ ಅಂಗಡಿಗಳಲ್ಲಿ ಕಾಳು ಸಿಗುವವೆಂದು ಹೇಳುತ್ತಾರೆ.

ಮುಂಬಯಿ ಸರಕಾರದ ಮುಲ್ಕೀ ಇಲಾಖೆಯವರು ತಾ ೨೮-೪-೧೯೪೮ಕ್ಕೆ ಒಂದು ಸರಕಾರಿ ಕರಾವು ಮಾಡಿ, ಈ ಹಿಂದೆ ಬಂಜರ ಬಿದ್ದಿದ್ದ (ಅವು ಬೇಕಾದರೆ ಖಾತೇದಾರರ ಕಬಜೆಯೊಳಗಿನವಿರಲಿ ಇಲ್ಲವೆ ಸರಕಾರಿ ಪಡ ನಂಬರಗಳಾಗಿರಲಿ) ಸ್ಥಳಗಳನ್ನು ಈ ವರ್ಷ ಪ್ರಥಮತಃ ಸಾಗುವಳಿಗೆ ತಂದು ಅವುಗಳಲ್ಲಿ ಆಹಾರ-ಧಾನ್ಯಗಳನ್ನು ಬೆಳೆಸಿದರೆ, ಅವುಗಳ ಬಾಬು, ೧೯೪೮-೪೯ನೇ ಸಾಲಿನ ತೀರ್ವೆ ಮಾಫಿ ಕೊಡಲಾದೀತೆಂದು ಅಪ್ಪಣೆ ಹೊರಡಿಸಿದ್ದಾರೆ. ಆಹಾರಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವ ಮತ್ತು ಪಡ ಭೂಮಿಗಳ ಸಾಗುವಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಸರಕಾರವು ಈ ಕ್ರಮ ಕೈಕೊಂಡಿರುತ್ತದೆಂದು ಹೇಳಲಾಗುತ್ತಿದೆ.

ಕಳೆದ ವಾರದ "ವೃತ್ತ"ದಲ್ಲಿ ಯಲ್ಲಾಪೂರ ಚಿಕಿತ್ಸಾಲಯದ ಆವಾರದೊಳಗಿನ ಹಲಸಿನ ಮರಗಳ ಸಂಬಂಧದಲ್ಲಿ ಜಿಲ್ಲಾ ಸಂವಾದಿಯು ಬರೆದ ಟೀಕೆಗೆ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರು ಒಂದು ಉದ್ದ ಪ್ರತ್ಯುತ್ತರ ಕಳಿಸಿದ್ದಾರೆ. ಈ ಆವಾರದೊಳಗಿನ ಮರಗಳನ್ನು ಫಲಗುತ್ತಿಗೆಗೆ ಕೊಟ್ಟಿದ್ದರಿಂದ ೧೯೪೫-೪೬ರಲ್ಲಿ ರೂ. ೨೮॥, ೧೯೪೬-೪೭ರಲ್ಲಿ ರೂ ೪೪, ೧೯೪೭-೪೮ರಲ್ಲಿ ರೂ ೪೨, ಮತ್ತು ಈ ವರ್ಷ ಅಂದರೆ ೧೯೪೮-೪೯ರಲ್ಲಿ, (೩ ಮರಗಳಿಗೆ ರೂ. ೪೦ ಮತ್ತು ಇನ್ನುಳಿದ ೩ ಮರಗಳಿಗೆ ರೂ. ೪೧ ಹೀಗೆ ಅಂತು) ರೂ ೮೧ ಬೋರ್ಡಿಗೆ ಜಮಾ ಆಗಿರುತ್ತವೆಂದು ಅಧ್ಯಕ್ಷರು ಹೇಳುತ್ತಾರೆ. ತಾ. ೩-೫-೪೮ನೇ ದಿನ ಮುಂಜಾನೆ ೧೧॥ ಘಂಟೆಗೆ ಅಧ್ಯಕ್ಷರು ದವಾಖಾನೆಯ ಡಾಕ್ಟರರ ವಿರುದ್ಧ ಬಂದ ದೂರುಗಳ ಚೌಕಶಿಗಾಗಿ ದವಾಖಾನೆಗೆ ಹೋಗಿದ್ದರು. ಅಲ್ಲಿ ಆಗ ದವಾಖಾನೆ ಸಮಿತಿಯ ಸದಸ್ಯರೂ ದೂರುಗಾರ ಜನರೂ ಕೂಡಿದ್ದರು. ಆಕಾಲದಲ್ಲಿ ಆವಾರದೊಳಗಿನ ಮರಗಳ ಬಗ್ಗೆ ಯಾರೂ ತಕರಾರು ಮಾಡಿದ್ದಿಲ್ಲವಂತೆ. ಈ ಚೌಕಶಿ ಮುಗಿದ ಕೂಡಲೇ ಅಧ್ಯಕ್ಷರು ಮೋಟಾರ ಹತ್ತಿ ಕಾರವಾರಕ್ಕೆ ತೆರಳಿದರು. ಅಧ್ಯಕ್ಷರು ಇನ್ನೂ ಬರೆಯುತ್ತಾರೇನೆಂದರೆ,— "ನಾವು ಬಂದಾಗ ೧೨-೧೩ ಬೆಳೆದ ಹಲಸಿನ ಹಣ್ಣುಗಳನ್ನು ನಾವು ಬಂದ ಮೋಟಾರದಲ್ಲಿ ನಾನಾಗಲಿ, ಬೇರೆ ಯಾವದೇ ಮೆಂಬರರಾಗಲಿ ಹಾಕಿದ್ದು ಇಲ್ಲ" "ಬೋರ್ಡಿನ ಮರಗಳ ಫಲಗುತ್ತಿಗೆ ಲಿಲಾವಿನಿಂದ ಹಣ ಜಮಾ ಆಗಿರುತ್ತಾ, ನಾವು ಹಣ್ಣುಗಳನ್ನು ಪ್ರುಕ್ಕಟೆ ಒಯ್ದರೆಂಬ ದೋಷವಾಗಲಿ ಅದರ ಕಿಮ್ಮತ್ತು ಬೋರ್ಡಿಗೆ ಜಮಾ ಮಾಡಬೇಕೆಂಬ ಪ್ರಶ್ನೆಯಾಗಲಿ ಉದ್ಭವಿಸುವದಿಲ್ಲ" ಎಂತಲೂ ಅಧ್ಯಕ್ಷರು ಬರೆದಿರುತ್ತಾರೆ.

ತಾ. ೩೧-೫-೪೮ನೇ ಮುಂಜಾನೆ "ವೃತ್ತ"ದ ಮುಲ್ಕೀ ಪರೀಕ್ಷೆಯ ಫಲಿತಾಂಶದ ವಿಶೇಷ ಸಂಚಿಕೆ ಪ್ರಕಟವಾಗುವದು.

ತಾ ೧೦ ೫-೪೮ರ "ವೃತ್ತ"ದಲ್ಲಿ ಜಿಲ್ಲಾ ಲೋಕಲ್ ಬೋರ್ಡಿನ ಸುಧಾರಿಸಿದ ಸಂಬಳದ ಪ್ರಮಾಣದ ಬಗ್ಗೆ ಹೊನ್ನಾವರ ಸುದ್ದಿಯಲ್ಲಿ ಪ್ರಕಟವಾದ ಟೀಕೆ ನಿರಾಧಾರವಿರುವದಾಗಿ ಜಿಲ್ಲಾ ಬೋರ್ಡಿನ ಅಧ್ಯಕ್ಷರು ತಿಳಿಸುತ್ತಾರೆ. ಮುಖ್ಯೋಪಾಧ್ಯಾಯರಿಗೆ, ಮಾಸ್ತರರಿಗೆ ಮತ್ತು ಸಿವ್ಹಿಲ ಶಿಕ್ಷಕರಿಗೆ ಕೊಡಮಾಡಿದ ಹೊಸ ಸಂಬಳದ ಪ್ರಮಾಣಗಳು ಅನುಕ್ರಮವಾಗಿ ೩೦-೨-೫೦, ೩೫-೨-೫೫-೩-೬೫ ಮತ್ತು ೪೦-೩-೭೦ ಇರುತ್ತವೆಂತಲೂ (ಈ ಪ್ರಮಾಣಗಳು ಹಾಲಿ ಬೋರ್ಡಿನ ನೌಕರಿಯಲ್ಲಿರುವ ನೊನ್-ಕೊಲಿಫಾಯ್ಡ ಜನರಿಗೆ ಅನ್ವಯಿಸುತ್ತವೆ.) ಕಚೇರಿ ಶಿಪಾಯಿಗಳ ಸಂಬಳದ ಪ್ರಮಾಣ ೩೦-೧-೪೦ ರಾಗಿಯಲ್ಪಟ್ಟಿದೆಂದೂ ಅವರು ಬರೆಯುತ್ತಾರೆ.

ಕಚೇರಿಯ ಶೇದಗಳಿಗೆ ಮತ್ತು ಮಕ್ತಿಂಗ ಕಾರಕೂನ ಮೊದಲಾದ ನೌಕರರಿಗೆ ಒಂದೇ ಪದವಿಯಲ್ಲಿ ಹಾಕಿರುತ್ತಾರೆಂಬುದು ನಿಜವಲ್ಲೆಂದು ಮೇಲೆ ಕೊಟ್ಟ ಸಂಬಳದ ಪ್ರಮಾಣಗಳಿಂದ ಸ್ಪಷ್ಟವಾಗುತ್ತದೆಂದು ಅವರ ಅಂಬೋಣ.

ಅಂಕೋಲಾ— ಇದೇ ಬರುವ ತಾ. ೨೬ಕ್ಕೆ ಸಮಾಜವಾದಿ ಪಕ್ಷದ ಪ್ರಮುಖರಾಗಿರುವ ಶ್ರೀ॥ ಜಯಪ್ರಕಾಶ ನಾರಾಯಣ ಇವರು ಕರ್ನಾಟಕದ ಸಮಾಜವಾದಿಗಳ ಸಂಪತ್ತಿಗಾಗಿ ಬೆಳಗಾಂವ ಜಿಲ್ಲೆಯ ಖಾನಾಪುರಕ್ಕೆ ಬರಲಿದ್ದಾರೆ. ಆಗ ಅವರನ್ನು ಒಪ್ಪಲಿಸಿ ಇಲ್ಲಿ ತಾ. ೨೯ (ಬರುವ ಶನಿವಾರ) ಕ್ಕೆ ಕೂಡಲಿರುವ ಒಕ್ಕಲಿಗರ ಸಮ್ಮೇಲನಕ್ಕೆ ಕರೆತರಬೇಕೆಂದು ಸ್ಥಾನಿಕ ಸಮಾಜವಾದಿಗಳ ಪ್ರಯತ್ನ ನಡೆದಿದೆ. ಶ್ರೀ॥ ಜಯಪ್ರಕಾಶರು ಖಂಡಿತ ಇಲ್ಲಿ ಬರಲೊಪ್ಪುವರೆಂದು ಅವರು ಹೇಳುತ್ತಾರೆ.

ಇಲ್ಲಿಯ ನಾಗರಿಕ ರಾ॥ ಬಾಬಜಿ ಶೇಣಗಿರಿ ಪ್ರೈ, ಬಿ. ಎ., ಬಿ. ಎಸ್‌. ಸಿ (ಇಂಜನಿಯರಿಂಗ) ಇವರಿಗೆ ಕಾಶಿಯ ಹಿಂದು ವಿಶ್ವವಿದ್ಯಾಲಯದ ಸ್ಥಾಪತ್ಯ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡಿದ್ದಾರೆಂದು ತಿಳಿಯುತ್ತದೆ.

ಸುದ್ದಿಗಳ ಸಂದೂಕ.

— ೬-೮ ತಿಂಗಳ ಹಿಂದೆಯೇ ಬ್ರಿಟಿಶರು ಜಾಹೀರ ಮಾಡಿದಂತೆ ಇದೇ ಕಳೆದ ತಾ. ೧೫ನೇಗೆ ಬ್ರಿಟಿಶರು ಪಾಲಿಸ್ತಾನದಿಂದ ತಮ್ಮ ಕಾಲವನ್ನು ಕಿತ್ತಿಕೊಂಡು ಹೋಗಿರುತ್ತಾರೆ. ಬ್ರಿಟಿಶರು ಹೀಗೆ ಪಾಲಿಸ್ತಾನವನ್ನು ತೆರವು ಮಾಡುವ ಮುನ್ನಾದಿನ ಯಹೂದಿಗಳು ಪಾಲಿಸ್ತಾನ ವಿಭಜನೆಯ ಯೋಜನೆಯಂತೆ ತಮ್ಮ ಪಾಲಿಗೆ ಬಂದ ಭಾಗದಲ್ಲಿ ಇಸ್ರಾಯೇಲ ಎಂಬ ರಾಷ್ಟ್ರವನ್ನು ಸ್ಥಾಪಿಸಿ ತಮ್ಮ ಹೊಸ ಸರಕಾರವನ್ನೂ ರಚಿಸಿರುತ್ತಾರೆ. ಈ ನೂತನ ರಾಷ್ಟ್ರಕ್ಕೆ ಅದು ಜನ್ಮವೆತ್ತ ಕೆಲವೇ ತಾಸುಗಳಲ್ಲಿ ಅಮೇರಿಕೆಯು ಮನ್ನಣೆ ಯಿತ್ತಿತು. ಹಿಂದಿನಂತೆ ರಶ್ಯ ಯುರೋಪದ ಕೆಲವು ಸರಕಾರಗಳೂ ಮನ್ನಣೆಯನ್ನಿತ್ತಿವೆ. ಬ್ರಿಟಿಶ ಸರಕಾರವು ಮಾತ್ರ ಈ ಹೊಸ ಸರಕಾರಕ್ಕೆ ಮನ್ನಣೆ ಕೊಡಲು ನಿರಾಕರಿಸಿಬಿಟ್ಟಿದೆ! ಈ ಸರಕಾರವು ಇನ್ನೂ ಪೂರ್ಣಾವಸ್ಥೆಗೆ ಬಂದಿಲ್ಲವಂತೆ. ಬ್ರಿಟಿಶರು ಪಾಲಿಸ್ತಾನದಿಂದ ಕಾಲು ಕಿತ್ತಿದ ಮರುಕ್ಷಣವೇ ಇಸ್ರಾಯೇಲ ರಾಷ್ಟ್ರದ ದಕ್ಷಿಣ ಬದಿಯಿಂದ ಇಜಿಪ್ತದ ಸೇನೆಯೂ, ಪೂರ್ವದಿಂದ ಟ್ರಾನ್ಸ-ಜೋರ್ಡನ ರಾಷ್ಟ್ರದ ಸೇನೆಯೂ ಉತ್ತರದಿಂದ ಇರಾಕ ಮತ್ತು ಲೆಬನಾನ ರಾಷ್ಟ್ರಗಳ ಸೇನೆಗಳೂ ಇಸ್ರಾಯೇಲ ರಾಷ್ಟ್ರದ ಮೇಲೆ ದಾಳಿ ಮಾಡಿದವು. ಯಹೂದಿಗಳೂ ಈ ಎಲ್ಲ ಸೇನೆಗಳನ್ನು ಎದುರಿಸಬೇಕಾಗಿದೆ. ಇಸ್ರಾಯೇಲ ರಾಷ್ಟ್ರವು ಈ ದಾಳಿಗಾರರ ವಿರುದ್ಧ ಹಾಗೂ ತನ್ನ ಮೇಲೆ ಅಭಿಯೋಗ ಮಾಡಲೆಳಸುವ ಅರಬ ರಾಷ್ಟ್ರಗಳ ವಿರುದ್ಧ ಸಂಯುಕ್ತ ರಾಷ್ಟ್ರಸಂಘದ ಕಡೆ ದೂರು ದಾಖಲಪಡಿಸಿದೆ. ಆ ಸಂಘವು ಪಾಲಿಸ್ತಾನದ ಪರವಾಗಿ ತನ್ನ ತೀರ್ಪು ಕೊಡುವ ಲಕ್ಷಣಗಳು ತೋರುತ್ತಿವೆ. ಅರಬ-ಯಹೂದಿಗಳ ಈ ಯುದ್ಧವು ಮುಂದೆ ಎಲ್ಲೆಲ್ಲಿ ವ್ಯಾಪಿಸುತ್ತಿದೆ; ಯಾರು ಯಾರು ಈ ರಣಕಂದದಲ್ಲಿ ಹಾರುವರು; ಯಾರು ಯಾರು ದೂರದಿಂದ ಅದಕ್ಕೆ ಗಾಳಿ-ತುಪ್ಪಗಳನ್ನು ಹಾಕುವರು ಎಂಬುದು ಇನ್ನು ೧-೨ ವಾರಗಳಲ್ಲಿ ತಿಳಿದುಬರುವದು.

— ಮಹಾತ್ಮಾ ಗಾಂಧಿಯವರ ಕೊಲೆ ಮಾಡಿದ ನಥುರಾಮ ಗೋಡಸೆ ಇವನ ಮೇಲೂ ಇವನ ಕೂಡ ಕೊಲೆಯ ಒಳಸಂಚು ಮಾಡಿದವರೆಂಬ ಆಪಾದನೆಗೆ ಗುರಿಯಾದ ಬೇರೆ ೮ ಜನರ ಮೇಲೂ ಹಾಕಲಾದ ಖಟ್ಲೆಯ ವಿಚಾರಕ್ಕೆ ಇದೇ ವಾರ (ಬಹುಶಃ ಇಂದಿನಿಂದ) ದಿಲ್ಲಿಯ ಕೆಂಪು ಕೋಟೆಯಲ್ಲಿ ಪ್ರಾರಂಭವಾಗುವದು. ಹಲವಾರು ವರ್ಷ ಹಿಂದು ಮಹಾಸಭೆಯ ಅಧ್ಯಕ್ಷರಾಗಿದ್ದ ಸುಪ್ರಸಿದ್ಧ ಸ್ವಾತಂತ್ರ್ಯವೀರ ಬ್ಯಾ॥ ವಿನಾಯಕ ದಾಮೋದರ ಸಾವರಕರರೂ ಈ ಖಟ್ಲೆಯಲ್ಲಿ ಆರೋಪಿಗಳಾಗಿರುತ್ತಾರೆ. ಶಾಸನದಿಂದ ದಿಲ್ಲಿಗೆ ನಿಯೋಜಿಸಲ್ಪಟ್ಟಿರುವ ಜಿಲ್ಲಾ ನ್ಯಾಯಾಧೀಶ ಶ್ರೀ॥ ಆತ್ಮಚರಣ ಇವರ ಮುಂದೆ ಈ ಖಟ್ಲೆ ನಡೆಯುವದು. ಖಟ್ಲೆ ನಡೆಯುವಾಗ ನ್ಯಾಯಮಂದಿರದಲ್ಲಿ ಪರವಾನೆ ಪಡೆದ ಪ್ರೇಕ್ಷಕರಿಗೆ ಮತ್ತು ಪತ್ರಿಕಾ-ಪ್ರತಿನಿಧಿಗಳಿಗೆ ಮಾತ್ರ ಬಿಡಲಾಗುವದು.

— ಬಟ್ಟೆಯ ಬೆಲೆಗಳು ಗಗನಕ್ಕೆ ಹಾರುತ್ತಿರುವದನ್ನು ಕಂಡು ಸಂತಪ್ತವಾದ ಹಿಂದುಸ್ಥಾನ ಸರಕಾರವು ಆದಷ್ಟು ಉದ್ಯೋಗ-ವ್ಯಾಪಾರಗಳನ್ನು ತನ್ನ ವಶಕ್ಕೆ ಕೊಳ್ಳುವ ವಿಚಾರ ನಡೆಸಿರುವದಾಗಿ ದಿಲ್ಲಿಯಿಂದ ಸುದ್ದಿ ಬಂದಿದೆ.

— ಭಾರತದ ಬೇಸಾಯದ ಉತ್ಪತ್ತಿಯನ್ನು ಆದಷ್ಟು ಬೇಗ ೧ ಕೋಟಿ ಟನ್ನುಗಳಿಂದ ಹೆಚ್ಚಿಸುವ ಪ್ರಯತ್ನ ಮಾಡಬೇಕೆಂದೂ ಹಾಗೆ ಮಾಡಿದರೆ ಮಾತ್ರ ಬರಗಾಲದ ಭಯಗಳಿಂದ ಭಾರತವು ಮುಕ್ತವಾಗುವದೆಂದೂ ಹಿಂದುಸ್ಥಾನ ಸರಕಾರದ ಆಹಾರ-ಧಾನ್ಯಗಳ ನೀತಿಯ ಸಮಿತಿಯವರು ವರದಿ ಮಾಡಿರುತ್ತಾರೆ. ನೀರಾವರಿಗಳ ಬೆಳವಣಿಗೆ, ಈಗಾಗಲೇ ಸಾಗಾಗುವ ಭೂಮಿಗಳಲ್ಲಿ ಸುಧಾರಿಸಿದ ಗೊಬ್ಬರ ಮತ್ತು ಬೀಜಗಳ ಉಪಯೋಗ, ಪಡಭೂಮಿಗಳ ಸಾಗುವಳಿ ಇವೇ ಮೊದಲಾದ ಉಪಾಯಗಳನ್ನು ಅವರು ಸೂಚಿಸಿದ್ದಾರೆ.

— ಸಿಂಧದ ಬರತರ್ಫ ಆದ ಮಂತ್ರಿ ಖುರೋಜ್ರರವರಂತೆ ಇನ್ನೊಬ್ಬರ ಪಾಕಿಸ್ತಾನಿ ಮಂತ್ರಿಗಳ ಮೇಲೆ ಸಹ ಲಂಚಗುಳಿತನದ ಆರೋಪ ಬಂದಿದೆ. ಈ ಮಂತ್ರಿಗಳು ಜಿನ್ನಾರವರ ಜೀವದ ಗೆಳೆಯರಿದ್ದಾರಂತೆ. ಹೀಗಾದರೂ ಮಾಡಿ ತಮ್ಮನ್ನು ಕಾಪಾಡಬೇಕೆಂದು ಜಿನ್ನಾರವರಿಗೆ ಶರಣು ಹೋದರಂತೆ! ಕಾಯದೆ-ಆಜಮ ಜಿನ್ನಾರವರು ಅವರ ಮೇಲಿನ ಪ್ರಕರಣ ಮುಚ್ಚಿಗೊಳ್ಳುತ್ತಾರಂತೆ!

— ಭಾರತದ ಭಾವಿ ಗವ್ಹರ್ನರ ಜನರಲ್ಲ ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೆ ಬಂಗಾಲದ ಒಂದು ಸೈನಿಕ ದಳದ (ಗೌರವ) ಕರ್ನಲರನ್ನಾಗಿ ಮಾಡಿರುತ್ತಾರೆ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕೋಡಿಬಾಗದಲ್ಲಿರುವ ತಮ್ಮ "ಸ್ಪಿರಿಟ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ:-
ಸ್ಥಳವನ್ನಾಶ್ರಯಿಸಿ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪ್ರತ್ಯಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬಹುದು.

Reg. No. B. 1270 Monday, 31-5-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೪೨.

ಕುಮಟಾ:- ಸೋಮವಾರ, ತಾ ೩೧—೫—೧೯೪೮

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಹೊರಊರಿನವರಿಗೆ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೩-೦
ವ್ಹಿ.ಪಿ.ಯಿಂದ ತರಿಸುವವರು
ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕಳಿಸಬೇಕು.
ವರ್ಗಣಿ ಮುಂಗಡವಾಗಿ ಕಳಿಸಬೇಕು

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಶುಕ್ರವಾರ ಉಷಃಕಾಲದ ಸುಮಾರಿಗೆ ೧-೩॥ ತಾಸು ಚಳೋ ಮಳೆಯಾಯಿತು ಆದರೂ ಶೆಕೆ ಕಡಿಮೆಯಾಗಿಲ್ಲ. ಊರಲ್ಲಿ ನೀರಿನ ಅಡಚಣೆ ಹೆಚ್ಚಾಗಿದೆ.

ಕುಮಟಾ ಮ್ಯುನಿಸಿಪಾಲಿಟಿಯ ಸಾರ್ವತ್ರಿಕ ಚುನಾವಣೆಯ ಕಾರ್ಯಕ್ರಮದಂತೆ ಉಮೇದವಾರಿ-ಪತ್ರಗಳನ್ನು ಸಾದರಪಡಿಸುವ ಕೊನೆಯ ದಿನ ಗುರುವಾರ ತಾ. ೨೭ನೇ ದು ಇತ್ತು. ಅದರಂತೆ ಕಳೆದ ಗುರುವಾರ ಸಂಜೆಯೊಳಗೆ ಆರೂ ವಾರ್ಡುಗಳ ೧೭ ಆಸನಗಳಿಗಾಗಿ ೪೦ ಅರ್ಜಿಗಳು ದಾಖಲ ಆಗಿದ್ದವು. ಶುಕ್ರವಾರ ಮಧ್ಯಾಹ್ನದಲ್ಲಿ ಇವುಗಳಲ್ಲಿ ಕೆಲವು ಅರ್ಜಿಗಳು ಹಿಂತಗೆದುಕೊಳ್ಳಲ್ಪಟ್ಟವು. ಅಷ್ಟರಲ್ಲಿ ಜೂನ ತಾ. ೧೪ಕ್ಕೆ ನಡೆಯಬೇಕೆಂದು ಹಿಂದೆ ನಿರ್ಣಯಿಸಿದ ಚುನಾವಣೆಯು ಮುಂದೂಡಲ್ಪಟ್ಟಿದೆಂದೂ ಚುನಾವಣೆಯ ಕಾರ್ಯಕ್ರಮ ರದ್ದುಗೊಳಿಸಲ್ಪಟ್ಟಿದೆಂದೂ ಜಿಲ್ಲಾಧಿಪರಿಂದ ತಂತಿ ಬಂತು. ನೇಮಣೂಕಿ-ಪತ್ರಗಳ ಪರಿಶೀಲನೆಯಾಗಿ ಉಮೇದವಾರರ ಯಾದಿ ನಿಶ್ಚಿತವಾಗುವ ಮಿತಿಗೂ ಚುನಾವಣೆಯ ಮಿತಿಗೂ ನಡುವೆ ೩ ವಾರಗಳ ಅವಧಿಯಿರಬೇಕೆಂದು ನಿಯಮವುಂಟು. ಚುನಾವಣೆಯ ಕಾರ್ಯಕ್ರಮ ರಚಿಸುವಾಗ ಈ ನಿಯಮ ಲಕ್ಷಕ್ಕೆ ಬರಲಿಲ್ಲವಂತೆ. ಮ್ಯುನಿಸಿಪಾಲಿಟಿಯವರು ಗುರುವಾರ ಜಿಲ್ಲಾಧಿಪರಿಗೆ ತಂತಿ ಮಾಡಿ, ಈ ನಿಯಮವನ್ನು ಅವರ ಲಕ್ಷಕ್ಕೆ ತಂದರಂತೆ. ಜಿಲ್ಲಾಧಿಪರು ಹಿಂದಿನ ಕಾರ್ಯಕ್ರಮ ರದ್ದುಗೊಳಿಸಿ ಚುನಾವಣೆಯನ್ನು ಮುಂದೂಡಲಿಕ್ಕೆ ಇದೇ ಕಾರಣವಾಯಿತು. ಜಿಲ್ಹಾಧಿಪತಿಗಳು ಈಗ ಹೊಸ ಕಾರ್ಯಕ್ರಮ ಮಾಡಿ ಕಳಿಸಿಕೊಟ್ಟಿದ್ದಾರೆ. ಈ ಹೊಸ ಕಾರ್ಯಕ್ರಮದಂತೆ ಉಮೇದವಾರಿ-ಪತ್ರಗಳು ಬರುವ ೯ ತಾ ಹನ್ನೊಂದರೊಳಗಾಗಿ ಸಾದರಗೊಳಿಸಲ್ಪಡಬೇಕು. ಮರುದಿನ ಅವುಗಳ ಪರಿಶೀಲನೆಯಾಗುವದು. ಚುನಾವಣೆಯು ಜೂನ ತಾ. ೨೯ನೇ ಮಂಗಳವಾರ ನಡೆಯುವದು.

ಬೇಸಿಗೆಯ ಬಿಡುವಿಗಾಗಿ ಮುಚ್ಚಲ್ಪಟ್ಟ ದಿವಾಣಿ ಕೋರ್ಟುಗಳು ಇಂದಿನಿಂದ ತೆರೆಯಲ್ಪಡುವವು. ಇಲ್ಲಿಯ ಕೋರ್ಟಿನ ನ್ಯಾಯಾಧೀಶರ ಸ್ಥಳಕ್ಕೆ ಇನ್ನೂ ಯಾರದೂ ನೇಮಣೂಕಿಯಾಗಿಲ್ಲ. ಮುಂದಿನ ವಾರ ನಾನು ವಾರ ಹಾಯಕೋರ್ಟು ತೆರೆಯಲ್ಪಟ್ಟ ನಂತರ ನೇಮಣೂಕಿಯಾಗುವದೆಂದೂ ತಾ. ೨೦ರ ನಂತರ ಹೊಸ ನ್ಯಾಯಾಧೀಶರು ಬರುವರೆಂದೂ ಹೇಳಲಾಗುತ್ತಿದೆ.

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ೯ನೇ ವಾರ್ಷಿಕ ಮಹಾಸಭೆ ಕಳೆದ ತಾ. ೨೭ಕ್ಕೆ ಹೊಲನಗದ್ದೆಯ ತೆಪ್ಪದ ಮಠದಲ್ಲಿ ಹೊನ್ನಾವರದ ವಕೀಲ ಶ್ರೀ ಶಿವರಾಮ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿ ವಾರ್ಷಿಕ ವರದಿಯ ವಾಚನ, ಲೆಕ್ಕದ ಸ್ವೀಕಾರ ವಗೈರೆ ವಾಡಿಕೆಯ ಕಾರ್ಯಕ್ರಮಗಳಾದವು. ಚಾಲೂ ಸಾಲಿನಲ್ಲಿ ಸಂಘವು ಈ ಕೆಳಗಿನಂತೆ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮಂಜೂರಿ ಕೊಟ್ಟಿದೆ. ಕನ್ನಡ, ಇಂಗ್ಲಿಷ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ರೂ. ೧೪೦; ಸ್ವಂತ ಖರ್ಚಿನಿಂದ ಕನ್ನಡ ಟ್ರೇನಿಂಗ ಕೊಲೇಜಿಗೆ ಹೋಗುವಾತನಿಗೆ ಪುಸ್ತಕಗಳ ಬಗ್ಗೆ ರೂ. ೧೦; ಇಂಗ್ಲಿಷ ಕಲಿಯುವ ವಿದ್ಯಾರ್ಥಿಗಳಿಗೆ ಅರ್ಧದಷ್ಟು ಫೀ ಹಣ ಪೂರೈಸಲಿಕ್ಕೆ ರೂ. ೧೭೫, ಇಂಜನಿಯರಿಂಗ ಕೊಲೇಜಿನಲ್ಲಿ ೩ನೇ ವರ್ಷದ ಅಭ್ಯಾಸ ಮಾಡುವ ಒಬ್ಬ ವಿದ್ಯಾರ್ಥಿಗೆ ಶಿಷ್ಯವೃತ್ತಿ ಕೊಡಲು ರೂ. ೧೦೦; ಹೊಸವಾಗಿ ಸಾಯನ್ಸ ಕೊಲೇಜಿಗೆ ಹೋಗುವವನೊಬ್ಬನಿಗೆ ಶಿಷ್ಯವೃತ್ತಿ ಕೊಡಲು ರೂ. ೧೪೪; ಹೊಸವಾಗಿ ಧಾರವಾಡದ ಕನ್ನಡ ಟ್ರೇನಿಂಗ ಕೊಲೇಜಿಗೆ ಹೋಗುವವನೊಬ್ಬನಿಗೆ ಶಿಷ್ಯವೃತ್ತಿ ಕೊಡಲು ರೂ. ೭೨; ಸ್ವದೇಶ ವಿದ್ಯಾರ್ಥಿಗೆ ಉತ್ತೇಜನ ಕೊಡಲು ರೂ ೯. (ಅಂದರೆ ರೂ. ೬೭೫) ಇದಲ್ಲದೆ ಮುಲ್ಕೀ, ಕನ್ನಡ ಮುಲ್ಕಿ ಪರೀಕ್ಷೆಗಳಲ್ಲೂ ಇಂಗ್ಲೀಶ ಶಾಲೆಗಳ ವಾರ್ಷಿಕ ಪರೀಕ್ಷೆಗಳಲ್ಲೂ ಸಂಸ್ಕೃತ, ಕನ್ನಡ, ಗಣಿತ ವಗೈರೆ ವಿಷಯಗಳಲ್ಲಿ ಹೆಚ್ಚಿಗೆ ಗುಣಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ (೧೬) ಗಳನ್ನು ಕೊಡುವದಕ್ಕಾಗಿ ಸಂಘದ ಕಡೆ ರೂ ೧೨೮ ಬಂದಿವೆ. ಇವುಗಳಿಗಾಗಿ ಅರ್ಜಿ ಮಾಡುವವರು ಸಂಘದ ಕಛೇರಿಯಿಂದ ಮುದ್ರಿತ ಅರ್ಜಿಯ ಮಾದರಿಗಳನ್ನು ಪಡೆದುಕೊಂಡು, ತಮ್ಮ ಅರ್ಜಿಗಳನ್ನು ತಾ. ೧೧ ೬ ಯೊಳಗಾಗಿ ಅಧ್ಯಕ್ಷರಿಗೆ ಒಪ್ಪಿಸಬೇಕು. ಬಹುಮಾನಗಳಿಗಾಗಿ ಅರ್ಜಿ ಮಾಡುವವರು ಸಾದಾ ಕಾಗದದ ಮೇಲೆ ಪರೀಕ್ಷೆಯಲ್ಲಿ ತಾವು ಪಡೆದ ಗುಣಗಳನ್ನು ನಮೂದಿಸಿ ಶಾಲೆಯ ಮುಖ್ಯಾಧ್ಯಾಪಕರ ಪ್ರಶಸ್ತಿ ಪತ್ರ ಸಹಿತ ಅರ್ಜಿ ಮಾಡತಕ್ಕದ್ದು. ಮುಲ್ಕೀ ಮತ್ತು ಮುಲ್ಕಿ ಪರೀಕ್ಷೆಗಳಲ್ಲಿ ಸಂಸ್ಕೃತ, ಕನ್ನಡ ವಿಷಯಗಳಲ್ಲಿ ಪ್ರಶಸ್ತಿ ಪಡೆದವರಿಗೆ ಕೊಡತಕ್ಕ ಬಹುಮಾನಗಳಿಗಾಗಿ ಮಾತ್ರ ಅರ್ಜಿ ಮಾಡತಕ್ಕ ಕೊನೆಯ ದಿನ ತಾ ೨೦-೯-೧೯೪೮ನೇದು ಇರುತ್ತದೆ ಎಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಅಕ್ಕಿಯ ಭಾರಗಳು ಗಗನಕ್ಕೆ ಏರಿವೆ ಬಡ ಜನರು ಕಂಗಾಲ ಆಗಿದ್ದಾರೆ ಸರಕಾರದ ಅಗ್ಗ ದರದ ಅಂಗಡಿಗಳು ಎಂದು ತೆರೆಯಲ್ಪಡುವವೋ ಎಂದು ನಿರೀಕ್ಷಿಸುತ್ತಿದ್ದಾರೆ.

ಜವಳಿಯಂತೆ ನೂಲಿನ ದರಗಳೂ ಈಗ ಇಷ್ಟಾಗಿ, ಮುಷ್ಕಿಲಿಯಾಗಿದೆ ಹಿಂದೆ ನಿಯಂತ್ರಣವಿದ್ದಾಗ ರೂ. ೧೬ ೫೦ ಕ್ಕೆ ಸಿಗುತ್ತಿದ್ದ ೪೦ನೇ ನಂಬರದ ನೂಲಿಗೆ ಈಗ ರೂ ೪೦ ಕೊಡಬೇಕಾಗುತ್ತಿದೆ. ಆದರಿಂದ ಕೈಮಗ್ಗದ ಉದ್ದಿಮೆಯವರು ಪುನರ್ನಿಯಂತ್ರಣವನ್ನು ಬಯಸುತ್ತಾರೆಂದು ವರ್ನೇಕಲ್ಲಿಯ ಶ್ರೀ ಗಜಾನನ ನೇಕಾರ ಕಾರ್ಯಾಲಯದವರು ಬರೆಯುತ್ತಾರೆ.

ಕಾರವಾರ— (ತಾ. ೨೮-೫-೧೯೪೮) ವರ್ಗವಾಗಿ ಹೋಗಲಿರುವ ಡಾ॥ ಡಿಸೋಜಾ ಇವರ ಸ್ಥಳದಲ್ಲಿ ಹಿಂದೆ ಇಲ್ಲಿ ಪ್ರಾಂತಿಕ ಅಧಿಕಾರಿಗಳಾಗಿದ್ದ ಡಾ॥ ಸಾಲಿಯಾನಾ ಇವರು ಈ ಜಿಲ್ಹೆಯ ಕಲೆಕ್ಟರರಾಗಿ ಬರುವರೆಂದು ಒಂದು ವಾರ್ತೆಯುಂಟು.

ಕಳೆದ ಮಂಗಳವಾರ ಜಿ ಲೋ ಬೋರ್ಡಿನ ಸಾಧಾರಣ ಸಭೆ ಸೇರಿತ್ತು. ೧೦೦೦ ಯಾ ಹೆಚ್ಚಿಗೆ ಜನಸಂಖ್ಯೆಯುಳ್ಳ ಈ ಜಿಲ್ಹೆಯೊಳಗಿನ ೬೭ ಗ್ರಾಮಗಳಲ್ಲಿ ಕಡ್ಡಾಯದ ಪ್ರಾಥಮಿಕ ಶಿಕ್ಷಣ ಕೊಡಬೇಕೆಂದು ಸಭೆಯಲ್ಲಿ ತೀರ್ಮಾನವಾಯಿತು. ಈ ಯೋಜನೆ ಕಾರ್ಯರೂಪದಲ್ಲಿ ಬಂದರೆ ೩೬೦ ಹೊಸ ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ದಾಖಲ ಮಾಡಿಕೊಳ್ಳಬೇಕಾಗುವದರಿಂದ ಈ ಬಗ್ಗೆ ೫೦ ಹೊಸ ಶಾಲೆಗಳನ್ನು ತೆರೆಯಬೇಕಾಗಿದ್ದು ೫೫ ಹೊಸ ಶಿಕ್ಷಕರನ್ನು ನೇಮಿಸಿಕೊಳ್ಳಬೇಕೆಂದೂ ನಿರ್ಣಯವಾಗಿದೆ. ಈ ಯೋಜನೆಗೆ ೨೫೦ ಸಾವಿರ ರೂ ವಾರ್ಷಿಕ ವೆಚ್ಚ ಬರುವದೆಂದು ಅಂದಾಜು ಮಾಡಲ್ಪಟ್ಟಿದೆ.

ಮುಡ್ಗೇರಿಯಲ್ಲಿ ಒಂದು ವೈದ್ಯಕೀಯ (ಮೆಡಿಕಲ್) ಕೊಲೇಜು ತೆರೆಯುವ ಬಗ್ಗೆ ನಡೆದ ಪ್ರಯತ್ನದ ಬಗ್ಗೆ ಜಿ ಲೋ ಬೋರ್ಡಿನ ಸಭೆಯು ತನ್ನ ಸಂಪೂರ್ಣ ಸಹಾನುಭೂತಿ ತೋರ್ಪಡಿಸುವ ಒಂದು ಗೊತ್ತುವಳಿಯನ್ನೂ ಮಾಡಿದೆ.

ಈ ವಾರದ ಪ್ರಾರಂಭಕ್ಕೆ ಮಹಾತ್ಮಾ ಗಾಂಧಿಯವರ ಅನುಯಾಯಿಗಳೂ ವಿಧಾಯಕ ಕಾರ್ಯಕರ್ತೆಗಳೂ ಆಗಿರುವ ಶ್ರೀಮತಿ ಪ್ರೇಮಾ ಕಂಟಕ ಇವರು ಇಲ್ಲಿಗೆ ಆಗಮಿಸಿದ್ದರು. ಮಂಗಳವಾರ ಮಹಿಳಾ ಮಂಡಳದ ಸಭೆಯಲ್ಲಿ ಅವರದೊಂದು ಭಾಷಣವಾಯಿತು "ದೇಶಕ್ಕೆ ಈಗ ಸ್ವಾತಂತ್ರ್ಯ ಸಿಕ್ಕಿರುತ್ತಿದ್ದರೂ ಸುಖ ಸಿಕ್ಕಿಲ್ಲ ಸಮಾಜದ ಚಾರಿತ್ರ್ಯಹೀನತೆಯೇ ಅದಕ್ಕೆ ಮುಖ್ಯ ಕಾರಣ. ಸಮಾಜದಲ್ಲಿ ಬೇರೂರಿರುವ ಜಾತೀಯತೆ, ಮತಾಂಧತೆ, ಸ್ವಾರ್ಥ, ಕಳ್ಳ ಸಂತೆ ಮೊದಲಾದ ದುರ್ಗುಣಗಳು ನಾಶವಾಗಿ, ನಾಗರಿಕರು ಸಮದೃಷ್ಟಿ-ಸಮಬುದ್ಧಿಗಳಿಂದ ವ್ಯವಹರಿಸಲು ಕಲಿಯುವ ವರೆಗೆ ಸಮಾಜಕ್ಕೆ ನೆಮ್ಮದಿ ಸ್ವಾಸ್ಥ್ಯ ಸಿಗುವಂತಿಲ್ಲ. ಮುಂದಿನ ಪೀಳಿಗೆಯಾದರೂ ನಿರೋಗಿ ಮತ್ತು ದಾಸ್ಯ-ನಿರ್ಮುಕ್ತವಾಗುವಂತೆ ನಾವು ಪ್ರಯತ್ನಿಸಬೇಕು" ಎಂದು ಶ್ರೀಮತಿಯವರು ಬೋಧಿಸಿದರು.

ಕಳೆದ ಮಾರ್ಚ ತಿಂಗಳಲ್ಲಿ ಒಂದು ದಿನ ಇಲ್ಲಿಯ ಮೀನುಗಾರರ ಕೇರಿಯಲ್ಲಿ ಅಕಸ್ಮಾತ್ ಬೆಂಕಿ ಬಿದ್ದು ಕೆಲವು ಗುಡಿಸಲುಗಳೂ ೩ ದೊಡ್ಡ ದೋಣಿ ಬಲೆಗಳೂ ಸುಟ್ಟು ಹೋಗಿದ್ದವಷ್ಟೇ. ಈ ಅನಾಹುತದಿಂದ ಸುಮಾರು ೭೮ ಸಾವಿರ ರೂಗಳ ಆಸ್ತಿಯ ನಾಶವಾಗಿತ್ತು. ಅನಾಹುತದಲ್ಲಿ ನಷ್ಟಕ್ಕೀಡಾದ ಮೀನುಗಾರರಿಗೆ ೧೦। ಸಾವಿರ ರೂ.ಗಳಷ್ಟು ಪರಿಹಾರ-ದ್ರವ್ಯವನ್ನೂ ೪೯। ಸಾವಿರ ರೂಪಾಯಿಗಳನ್ನು ಸಾಲವನ್ನೂ ಸರಕಾರವು ಕೊಡಬೇ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ತಾನದಲ್ಲಿ ಸಂಘಟಿಸಲ್ಪಟ್ಟದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಕೊಟ್ಟ ಮೂಲಧನ ರೂ ೭,೭೦,೦೦೦/—ಕ್ಕೂ ಮಿಕ್ಕಿದೆ.

ಶೇಖರಿಸಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮೀರಿರುವದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ ರಿಂದ ೩ ಸಲೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣೈ
ಮೆನೆಜಿಂಗ ಡ್ಯಾರೆಕ್ಟರ.

ಕೆಂದು ಇಲ್ಲಿಯ ಮಾಸುಗಾರ ಜಾತಿಯ ಅಧಿಕಾರಿಗಳು ಸರಕಾರಕ್ಕೆ ಶಿಫಾರಸು ಮಾಡಿದ್ದರು ಮುಂಬಯಿ ಸರಕಾರದ ವಿಶೇಷ ಪರಿಹಾರ ಸಮಿತಿಯವರು ರೂ ೬೯೭೦ ಪರಿಹಾರ ಕೊಡಲು ಈ ಮಂಜೂರಿ ಕೊಟ್ಟಿದ್ದಾರೆಂದು ತಿಳಿಯುತ್ತದೆ ಮುಂಬಯಿಯ ಸುಪ್ರಸಿದ್ಧ ವಾಡಿಯಾ ದಾನ-ಧರ್ಮ ಸಂಸ್ಥೆಯಿಂದ ಈ ಸಂತ್ರಸ್ತರಿಗೆ ರೂ ೧೪೪೯ ಸಿಕ್ಕಿವೆಯೆಂತೆ ಜಿಲ್ಹೆಯೊಳಗಿನ ಸ್ಥಾನಿಕ ಸಂಸ್ಥೆಗಳಿಂದಲೂ ಕೆಲವು ಧನಸಹಾಯ ಜೋಡಿಸುವ ಪ್ರಯತ್ನವನ್ನು ಜಿಲ್ಹಾಧಿಪತಿಗಳು ನಡಿಸಿದ್ದಾರೆ

ಅಂಕೋಲಾ— (ತಾ ೨೫-೫ ೪೮) ಇಲ್ಲಿಯ ಶಾನಭೋಗರು ರಾ॥ ತ್ರ್ಯಂಬಕರಾವ ಅರಸ ಇವರ ವಿರುದ್ಧ ಒಂದು ಬಿನ್-ಶೇತ್ಕಿ ಪ್ರಕರಣ ಮಾಡಿದ್ದರು ಸೇಡಿನ ಬುದ್ಧಿಯಿಂದ ಈ ಪ್ರಕರಣವೆಬ್ಬಿಸಲ್ಪಟ್ಟಿರುತ್ತದಾಗಿ ರಾ। ಅರಸ ಇವರ ದೂರಿತ್ತು ಈ ದೂರು ನಿರಾಧಾರವಿರುತ್ತದೆಂದು ಜಿಲ್ಹಾಧಿಪರ ಅಂಬೋಣ ರಾ। ಅರಸರು ತಮ್ಮ ಮನೆಯನ್ನು ಬಹಳ ಕಾಲದಿಂದ ಜನರಿಗೆ ಭಾಡಿಗೆ ಕೊಡುತ್ತಾ ಬಂದಿರುವರೆಂದೂ, ಈ ಬಗೆ ಅವರು ಮನೆ ದಾಣ ಸ್ಥಳದ ಬಗ್ಗೆ ಬಿನ್ ಶೇತಕಿ ಆಕಾರ ಕೊಡಬೇಕೆಂದೂ, ಹಿಂದಿನ ಶಾನಭೋಗರ ಉದಾಸೀನತೆಯ ಮೂಲಕ ಸದರಿ ಸ್ಥಳಕ್ಕೆ ಬಿನ್ ಶೇತಕಿ ಆಕರಣೆಯಾಗುವದು ಬಾಕಿ ಉಳಿದಿತ್ತೆಂದೂ, ಸದ್ಯದ ಶಾನಭೋಗರ ದೃಷ್ಟಿಗೆ ಈ ಸಂಗತಿ ಬಂದ ಮೇಲೆ ಬಿನ್ ಶೇತಕಿ ಪ್ರಕರಣ ಮಾಡುವದು ಅವರ ಕರ್ತವ್ಯವಿತ್ತೆಂದೂ, ಆ ಕರ್ತವ್ಯ ಅವರು ಮಾಡಿರುತ್ತಾರೆ ಎಂದೂ ಜಿಲ್ಹಾಧಿಪರು ಪ್ರತಿಪಾದಿಸುತ್ತಾರೆ

ಮುಂಡಗೋಡ— (ತಾ ೨೭ ೫ ೪೮) ಇಂದೂರ ಗ್ರಾಮದಲ್ಲಿ ನೆಲಿಸಲು ಒಂದು ಸಿಂಧಿ ನಿರಾಶ್ರಿತರ ಕುಟುಂಬಗಳಲ್ಲಿ ೧೫ ಕುಟುಂಬಗಳು ಇಲ್ಲಿಯ ಹವೆಯೂ ಜೀವನವೂ ತಮಗೆ ಮೆಚ್ಚುವದಿಲ್ಲೆಂದು ಹೇಳಿ ಹೊರಟು ಹೋಗಿವೆ ಮಳೆಗಾಲಕ್ಕೆ ಪ್ರಾರಂಭವಾದ ಮೇಲೆ ಇನ್ನೂ ಕೆಲವರು ಹೊರಟು ಹೋಗುವ ಸಂಭವವುಂಟೆಂದು ಕೆಲವರು ಊಹಿಸುತ್ತಾರೆ

ಹಳ್ಳಿ ಭಾಗಗಳಲ್ಲಿ ರೇಡಿಯೋ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಮುಂಬಯಿ ಸರಕಾರದವರು ಮಾಡಿದ ಯೋಜನೆಯಂತೆ ಈ ಜಿಲ್ಹೆಗೆ ಈಗಾಗಲೇ ೧೪ ರೇಡಿಯೋ ಸಲಕರಣೆಗಳು ಸಿಕ್ಕಿವೆಯಂತೆ ಇಂದೂರದಲ್ಲಿ ನೆಲಿಸಿರುವ ನಿರಾಶ್ರಿತರ ಬಗ್ಗಾಗಿ ಆ ಗ್ರಾಮದಲ್ಲೂ ಒಂದು ರೇಡಿಯೋ ಬರುವದೆಂದು ಹೇಳುತ್ತಾರೆ

ಶಿರಸಿ— (ತಾ ೨೯ ೫-೪೮) ಊರೊಳಗೆ ಬಡವರ ಎಣ್ಣೆಯ ಹಂಚುವಿಕೆಯನ್ನು ಸರಿಗೊಳಿಸುವದಕ್ಕಾಗಿ ಇಲ್ಲಿಯ ಮ್ಯುನಿಸಿಪಾಲಿಟಿಯವರು (ಎಣ್ಣೆ ಕಂಪನಿಗಳ ಏಜಂಟರ ಸಹಕಾರದಿಂದ) ಸೀಘಾ ಚೀಟಿಗಳ ಯೋಜನೆಯನ್ನು ಅಮಲಿನಲ್ಲಿ ತಂದಿದ್ದಾರ ಸೀಘಾ-ಚೀಟಿ ಪಡಕೊಳ್ಳುವವರು ಪ್ರತಿ ಚೀಟಿಗಾಗಿ ೨ ಆಣೆ ಮ್ಯು॥ಗೆ ತೆರಬೇಕಾಗುತ್ತಿದೆ ಹೆಚ್ಚು-ಕಡಿಮೆ ೧ ದಿಲ್ಲಿ ಬೆಲೆಯ ಚೀಟಿಗಾಗಿ ಮ್ಯು॥ಯವರು ೨-೩ ಆಣೆ ವಸೂಲ ಮಾಡುವದು ಅಯುಕ್ತವೆಂದು ನಾಗರಿಕರೊಳಗಿನವರು ದೂರುತ್ತಾರೆ.

ಕಾನಗೋಡದ " ಮಕ್ಕಳ ಕಲಾ ಕೂಟ " ದವರು ಕಳೆದ ಮಂಗಳವಾರ ತಾ ೨೫ಕ್ಕೆ ತಮ್ಮಲ್ಲಿಯ ಶಾಲೆಯ ಹುಟ್ಟು ಹಬ್ಬವನ್ನು ಆಚರಿಸಿದರು ಸಂಜೆಯಲ್ಲಿ " ಕುರು-ಕ್ಷೇತ್ರ " ವೆಂಬ ನಾಟಕವನ್ನೂ ಆಡಿದರು

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಕೇಲಬರದಲ್ಲಿರುವ ಲಕ್ಷ್ಮೀ ಕೋಂ ಕೃಷ್ಣ ಶೆಟ್ಟಿ ಅಸ್ಪೇಕರ ಇವಳು ಈ ಮೂಲಕ ಜಾಹೀರ ಪಡಿಸುವದೇನಂದರೆ... ಸಿದ್ದಾಪುರ ತಾಲೂಕ ಕೋಂಡ್ಲಿ ಗ್ರಾಮದ ಸರ್ವೇ ನಂಬರ ೫೯೯/೨ ಕ್ಷೇತ್ರ ೦-೩-೦ ಪ ೦-೦-೫ ಕರೇದು ಮುಕ್ತ ಇದರಲ್ಲಿದ್ದ ಇದರಲ್ಲಿ ಬೇರೆ ಕೆಲವು ಆಸ್ತಿಗಳು ನನ್ನ ಮಾಲ್ಕಿಯವು ಮತ್ತು ಹಕ್ಕಿನವು ಇರುತ್ತವೆ ಈ ಸ್ಥಾವರಾಸ್ತಿಗಳು ನನ್ನ ಒಪ್ಪಿಗೆಯಿಲ್ಲದ ಯಾರಾದರೂ ವ್ಯಕ್ತಿ ಖರೆಕೊಂಡಲ್ಲಿ ಅಥವಾ ಯಾವದೇ ಒಂದು ಬೋಜಾಕ್ಕೆ ಗುರಿ ಮಾಡಿದ್ದಲ್ಲಿ ಅದು ಅಸಿಂಧುವಾಗುವದು, ಮತ್ತು ನನ್ನ ಹಕ್ಕು-ಬಾಧ್ಯತೆಗೆ ಬಾಧೆ ಬರಲಾರದು. ಜನರಿಗೆ ಮುಂದಾಗ್ರತೆ ಮಾಡಲು ಇದನ್ನು ಜಾಹೀರ ಮಾಡಿದ್ದೇನೆ ತಾ. ೨೫ ೫-೪೮

○ ಈ ಎ ಡೆ ಗುರ್ತ ಲಕ್ಷ್ಮೀ ಕೋಂ ಕೃಷ್ಣ ಶೆಟ್ಟಿ
ಇವಳದು ಇರುತ್ತದೆ

ಮುಲ್ಕೀ ಪರೀಕ್ಷೆಯ ಫಲಿತಾಂಶ.

ಇಂದು ಪ್ರಕಟವಾಗಬೇಕಿತ್ತು ಆದರೆ ಕೆಲವೊಂದು ತೊಂದರೆಗಳ ಮೂಲಕ ಅದು ಇಂದು ಪ್ರಕಟವಾಗಿಲ್ಲ ಆದರಿಂದ ಸದರಿ ಫಲಿತಾಂಶದ ವಿಶೇಷ ಸಂಚಿಕೆ ಇಂದು ಹೊರಡಿಸಲಾಗಿಲ್ಲ ಈ ಫಲಿತಾಂಶ ಎಂದು ಹೊರಬೀಳುವದೆಂಬುದೂ ತಿಳಿದುಬಂದಿಲ್ಲ

ಮೆಟ್ರಿಕ್ ಪರೀಕ್ಷೆಯ ಫಲಿತಾಂಶ.

(ಮುಂಬಯಿ ವಿಶ್ವವಿದ್ಯಾಲಯದ್ದು) ಇದೇ ಬರುವ ಶನಿವಾರ ತಾ ೫ನೇ ಮುಂಜಾನೆ ೫। ಘಂಟೆಗೆ ಮುಂಬಯಿಯಲ್ಲಿ ಪ್ರಕಟವಾಗುವದು ನಮ್ಮ ಜಿಲ್ಹೆಯಿಂದ ಸದರಿ ಪರೀಕ್ಷೆಗೆ ಕೂತವರ ಪರಿಣಾಮವನ್ನು ತಂತಿಯಿಂದ ತರಿಸಿಕೊಂಡು ಅದರ ಪ್ರಕಟನೆಗಾಗಿ "ವೃತ್ತ"ದ ವಿಶೇಷ ಸಂಚಿಕೆಯನ್ನು ಶನಿವಾರ ಮುಂಜಾನೆ ಹೊರಡಿಸುವ ವ್ಯವಸ್ಥೆಯನ್ನಿಟ್ಟಿದ್ದೇವೆ ಬೆಲೆ ೪ ಆಣೆ

— ಸಂಪಾದಕ

ಮಹತ್ವದ ವಾರ್ತೆಗಳು

ನೋಬೆಲ್ ಪಾರಿತೋಷಿಕ ಸಂಸ್ಥೆಯವರು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗಾಗಿ ವಿಶೇಷ ಪರಿಶ್ರಮಪಟ್ಟವರಿಗೂ ಬಹುಮಾನ ಕೊಡುವ ಪರಿಪಾಠವನ್ನಿಟ್ಟಿರುತ್ತಾರೆ ಈ ಪಾರಿತೋಷಿಕವನ್ನು ಪಡೆಯಲು ಮಹಾತ್ಮಾ ಗಾಂಧಿಯವರಿಗಿಂತ ಹೆಚ್ಚಿನ ಅರ್ಹತೆಯುಳ್ಳವರು ಇತ್ತ ೧೦-೨೦ ವರ್ಷಗಳಲ್ಲಿ ಜಗತ್ತಿನೊಳಗೆ ಬೇರೆ ಯಾರೂ ಇದ್ದಿಲ್ಲ ಆದರೂ ಪಾರಿತೋಷಿಕ ಕೊಡುವವರಿಗೆ ಈ ಶಾಂತಿ-ಪಾರಿತೋಷಿಕವನ್ನು ಮಹಾತ್ಮರಿಗೆ ಅರ್ಪಿಸುವ ಬುದ್ಧಿ ಈ ವರೆಗೂ ಹುಟ್ಟಿದ್ದಿಲ್ಲ! ಮಹಾತ್ಮರಿಗೆ ಈ ಬಹುಮಾನ ಕೊಟ್ಟಲ್ಲಿ ಬ್ರಿಟಿಶ ಸಾಮ್ರಾಜ್ಯ ಸರಕಾರವೆಲ್ಲಾದರೂ ಅಸಮಾಧಾನಗೊಂಡೀತೆಂಬ ಭಯವಿದ್ದುದರಿಂದಲೇ ಪಾರಿತೋಷಿಕ ಸಮಿತಿಯವರು ಮಹಾತ್ಮರನ್ನು ಈ ಬಹುಮಾನಕ್ಕೆ ಆರಿಸಲು ಹಿಂಜರಿದರೆಂದು ಹೇಳಲಾಗುತ್ತಿದೆ (ಮಹಾತ್ಮರ ಹೆಸರನ್ನು ಪ್ರಮುಖರನೇಕರು ತಿರುತಿರುಗಿ ಸೂಚಿಸಿದಾಗ್ಯೂ) ಮಹಾತ್ಮರಂಥ ಲೋಕೋತ್ತರ ಶಾಂತಿದೂತರಿಗೆ ಸಮಿತಿಯವರು ತಕ್ಕ ಗೌರವವನ್ನು ಸಲ್ಲಿಸದಿದ್ದುದು ಬಹಳ ದೊಡ್ಡ ತಪ್ಪಾಯಿತೆಂದು ಈಗ ಯುರೋಪದಲ್ಲಿ ಲೋಕಭಾವನೆಯಾಗಿರುತ್ತದೆಂದೂ, ಈ ವರ್ಷವಾದರೂ ಅದನ್ನು ಮಹಾತ್ಮರಿಗೆ ಅರ್ಪಿಸಿ ಅವರನ್ನು ಗೌರವಿಸಬೇಕೆಂದೂ ನಾರ್ವೇದೇಶದಲ್ಲಿ — ಆ ದೇಶದ ಲೋಕ ಸಭೆಯವರು ಪಾರಿತೋಷಿಕಗಳನ್ನು ಕೊಡುವದಿರುತ್ತದೆ — ಪ್ರಮುಖರ ಪ್ರಯತ್ನಗಳು ನಡೆದಿರುತ್ತವೆಂದೂ, ಪಾರಿತೋಷಿಕದ ಹಣವನ್ನು ಗಾಂಧಿ-ಸ್ಮಾರಕ ನಿಧಿಗೆ ಅರ್ಪಿಸಲು ಅವರ ಸೂಚನೆಯುಂಟೆಂದೂ ನಾರ್ವೇದೇಶದಲ್ಲಿ ಪ್ರವಚನಗಳನ್ನು ಕೊಡುವದಕ್ಕಾಗಿ ಕಳೆದ ವರ್ಷ ಅಲ್ಲಿಗೆ ಹೋಗಿದ್ದ ಮತ್ತು ಇದೀಗ ಹಿಂದುಸ್ಥಾನಕ್ಕೆ ಮರಳಿ ಬಂದಿರುವ ಢಾಕಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ। ಸಮದರನೇರರು ಹೇಳುತ್ತಾರೆ

— ದಕ್ಷಿಣ ಆಫ್ರಿಕೆಯಲ್ಲಿ ಕಳೆದ ವಾರ ಅಲ್ಲಿಯ ಪಾರ್ಲಮೆಂಟಿನ ಸಾರ್ವತ್ರಿಕ ಚುನಾವಣೆಯಾಯಿತು ಈ ಚುನಾವಣೆಯಲ್ಲಿ ಸೇನಾಪತಿ ಸ್ಮಟ್ಸರ ಪಕ್ಷಕ್ಕೆ ಸೋಲುಂಟಾಗಿದ್ದು ಡಾ॥ ಮಾಲನರ ರಾಷ್ಟ್ರೀಯ ಪಕ್ಷಕ್ಕೆ ಬಹುಮತ ಸಿಕ್ಕಿದೆ. ಸೇ॥ ಸ್ಮಟ್ಸರು ಸ್ವತಃ ಉರುಳಿ ಹೋಗಿದ್ದಾರೆ! ಯಾವ ಮತದಾರ ಸಂಘದಿಂದ ಕಳೆದ ೩೪ ವರ್ಷಗಳಿಂದ ಅವರು ಅಖಂಡವಾಗಿ ಆರಿಸಿಬರುತ್ತಿದ್ದರೋ ಆ ಮತದಾರ ಸಂಘವು ಅವರ ಕೈಬಿಟ್ಟುಬಿಟ್ಟಿದೆ! ಡಾ॥ ಮಾಲನರೂ ಅವರ ಪಕ್ಷದವರೂ ಬ್ರಿಟಿಶರ ಅಭಿಮಾನಿಗಳಲ್ಲ ಆದರಿಂದ ದಕ್ಷಿಣ ಆಫ್ರಿಕೆಯು ಬ್ರಿಟಿಶ ರಾಷ್ಟ್ರಸಂಘದಿಂದ ಎಲ್ಲಿ ಹೊರಬಿದ್ದು ಹೋಗುತ್ತದೋ ಎಂದು ಆಸ್ಟ್ರೇಲಿಯಾ, ಕಾನಡಾ ಮೊದಲಾದ ದೇಶಗಳ ರಾಜಕಾರಣಿಗಳಿಗೆ ಭೀತಿಯುಂಟಾಗಿದೆ! ಸೇ॥ ಸ್ಮಟ್ಸರಿಗಿಂತ ಡಾ। ಮಾಲನರ ರಾಷ್ಟ್ರೀಯ ಪಕ್ಷದಲ್ಲಿ ವರ್ಣಾಭಿಮಾನ-ವರ್ಣದ್ವೇಷಗಳು ಹೆಚ್ಚಿಗೆ ಇರುತ್ತವೆ ಹಿಂದೀಯರನ್ನು ಓಡಿಸುವದೇ ನಮ್ಮ ಧ್ಯೇಯವಿರುತ್ತದಾಗಿ ಅವರು ಚುನಾವಣೆಯ ಕಾಲಕ್ಕೆ ಅಖಂಡ ಪ್ರಚಾರ ನಡಿಸಿದ್ದರೆಂದು ವಾರ್ತೆಯುಂಟು

— ಪಾಲಿಸ್ತಾನದಲ್ಲಿ ಅರಬೀ ಸರಕಾರಗಳು ದಾಳಿ ಮಾಡಿದ್ದು ಅನುಚಿತವೆಂದು ನಿರ್ಣಯಿಸಿ, ಜಾಗತಿಕ ರಾಷ್ಟ್ರ ಸಂಘದ ಭದ್ರತಾ ಮಂಡಳವು ಇತ್ತಟ್ಟಿನವರಿಗೂ ಕೂಡಲೆ ಯುದ್ಧ ನಿಲ್ಲಿಸಬೇಕಾಗಿ ಆದೇಶ ಕೊಟ್ಟಿತ್ತು ಆದರೆ ಅರಬರೂ ಇಜಿಪ್ತ ಸರಕಾರವೂ ಈ ಆದೇಶದಂತೆ ನಡೆಯಲು ನಿರಾಕರಿಸಿವೆ! ಅದರಿಂದ ರಾಷ್ಟ್ರ ಸಂಘದವರು ಅರಬ ರಾಷ್ಟ್ರಗಳಿಗೆ ಆರ್ಥಿಕ ದಿಗ್ಬಂಧನ ಹಾಕುವ ವಿಚಾರದಲ್ಲಿದ್ದಾರೆ ಆದರೆ ಇಂತಹ ದಿಗ್ಬಂಧನಕ್ಕೆ ತಾವು ಸೊಪ್ಪು ಹಾಕಲಾರೆವೆಂದೂ, ಎಣ್ಣೆಯ ನಿರ್ಯಾತವನ್ನು ತಾವು ತಡೆದು ದಿಗ್ಬಂಧನ ಹಾಕುವವರಿಗೆ ಬಹಿಷ್ಕಾರ ಹಾಕುವೆವೆಂದೂ ಅರಬ (ಮುಸಲ್ಮಾನ) ರಾಷ್ಟ್ರಗಳು ಪ್ರತಿ-ಬೆದರಿಕೆ ಹಾಕಹತ್ತಿವೆ!!

— ಮಹಾತ್ಮರ ಕೊಲೆಯ ಪ್ರಕರಣದಲ್ಲಿ ಈಗ ವಿಚಾರಣೆಗೆ ಗುರಿ ಮಾಡಲ್ಪಟ್ಟಿರುವ ೯ ಆರೋಪಿಗಳಲ್ಲದೆ. ಇನ್ನೂ ೩ ಮಂದಿ ಆರೋಪಿಗಳಿದ್ದಾರೆಂತೆ. ಅವರ ಪತ್ತೆ ಸರಕಾರಕ್ಕೆ ಇನ್ನೂ ಸಿಕ್ಕಿಲ್ಲ.

ಗೌ॥ ಸಾ॥ ಬ್ರಾಹ್ಮಣ ಸ್ಕೊಲರ್ಶಿಪ ಲೀಗ, ಮುಂಬಯಿ.

ಮೇಲಿನ ಸಂಸ್ಥೆಯಿಂದ ಸಹಾಯ ಪಡೆಯಬಿಚ್ಛಿಸುವ (ದಕ್ಷಿಣೋತ್ತರ ಕಾನಡಾ ಜಿಲ್ಹೆಗಳ) ಗೌ। ಸಾ॥ ಬ್ರಾಹ್ಮಣ ಜಾತಿಯ ಹಾಯಸ್ಕೂಲ ವಿದ್ಯಾರ್ಥಿಗಳು ತಾ. ೩೦-೬-೧೯೪೮ರೊಳಗಾಗಿ ಗೌರವ ಕಾರ್ಯದರ್ಶಿಗಳು, ಗೌ॥ ಸಾ। ಬ್ರಾ॥ ಸ್ಕೊ। ಲೀಗ c/o ಸಾರಸ್ವತ ಸಮಾಜ, ಖೇಟವಾಡಿ ಲೇನ, ಮುಂಬಯಿ ೪, ಈ ಪತ್ತೆಗೆ ತಮ್ಮ ಅರ್ಜಿಗಳನ್ನು ಕಳಿಸಿ ಕೊಡಬೇಕಾಗಿ ಸಂಸ್ಥೆಯವರು ತಿಳಿಸುತ್ತಾರೆ ಸಂಸ್ಥೆಯು ಉದ್ಯೋಗಿಕ ಇಲ್ಲವೆ ಕಲಾ ಶಾಲೆಯಲ್ಲಿ ಇಲ್ಲವೆ ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ. ೫ ರಂತೆ ವಿದ್ಯಾರ್ಥಿವೇತನ ಕೊಡುತ್ತದೆ. ಇದೇ ಮಾರ್ಚ ತಿಂಗಳಲ್ಲಾದ ಮೆಟ್ರಿಕ್ ಪರೀಕ್ಷೆಯಲ್ಲಿ ಎಲ್ಲರಿಗಿಂತ ಹೆಚ್ಚಿಗೆ ಗುಣಗಳನ್ನು ಪಡೆದಿರುವ ವಿದ್ಯಾರ್ಥಿಗೆ ಡಾಂಗಿ ಸ್ಮಾರಕ ನಿಧಿಯಿಂದ ರೂ ೨೦ರ ಇನಾಮು ಕೊಡುವದು ಇವುಗಳ ಬಗ್ಗೆ ಅರ್ಜಿ ಮಾಡುವವರು ಕೂಡ ಸಕಾಲದಲ್ಲಿ ಅರ್ಜಿ ಮಾಡಬೇಕಂತೆ

NOTICE.

Applications received after 3rd June 1948 for permits for public Carriers or Private Carriers in respect of vehicles fitted with Producer Gas Plant or otherwise will not be considered until further notice

Belgaum, **D K Sukthankar,** Capt
29-5-48 Secretary,
Regional Transport Authority,
Karnatak Region, Belgaum

ವಿಮ ತೆಗೆಯುಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

(ಸ್ಥಾಪನೆ: ೧೯೩೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ —

Post Box No 10.

UDIPI, S Kanara

ಸುದ್ದಿಗಳ ಸಂಗ್ರಹ (೬ನೇ ಪುಟದಿಂದ ಮುಂದೆ)

— ಪಶ್ಚಿಮ ಬಂಗಾಲದ ಸರಕಾರ ಹೆಚ್ಚುವರಿ ಪಂಗಡಗಳ ಪ್ರಾರಂಭಕ್ಕೆ ಮುಂಚೆ ಪಂಗಡವಾಗಿತ್ತು. ಈ ಪಂಗಡವನ್ನು ಸರಕಾರವು ಕೊನೆಗೆ ಕಾನೂನಿಗೆ ವಿರುದ್ಧವಾದುದೆಂದು ಘೋಷಿಸಿ ಬಹಿಷ್ಕರಿಸಿ ಬಿಟ್ಟಿತು. ಮುಸ್ಲಿಂ ಲೀಗಿನ ಈ ಭಾಗದಲ್ಲಿ ಸಂಚಾರ ಮಾಡಿ, ಸರಕಾರವು ಸ್ಥಾಪಿಸಿದ ಮುಸಲ್ಮಾನರನ್ನು ಒಟ್ಟಾಗಿ ಸಮಿತಿ ಸ್ಥಾಪನೆಯನ್ನು ಒಪ್ಪಿಕೊಂಡು ಬರುತ್ತಿದ್ದಾರಲ್ಲದೆ, ಈ ಬಗ್ಗೆ ಬಂಗಾಲದ ಪ್ರಾಂತಾಧಿಕಾರಿಯಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರನ್ನು ಬೆಂಬಲಿಸುವಂಥ ಕೆಲಸಮಾಡಿದ್ದಾರೆ. ಅದೇ ವೇಳೆಗೆ ದಿಲ್ಲಿ ಪ್ರಾಂತದಲ್ಲಿ ಮುಸಲ್ಮಾನರುಗಳನ್ನು ಮನೆಮಾರುಗಳನ್ನು ಬಿಟ್ಟು ಓಡಿಹೋದ ಮುಸಲ್ಮಾನರು ಈಗ ತಿರುಗಿ ಬಂದು ತಮ್ಮ ಆಸ್ತಿ-ಪಾಸ್ತಿಗಳ ಉಪಭೋಗ ಮಾಡುತ್ತಿದ್ದಾರೆಂದೂ ಅವರಿಗಾದ (ಅಲ್ಪ ಸ್ವಲ್ಪ) ಹಾನಿಯನ್ನು ಸರಕಾರದವರೂ ಬಹುಸಂಖ್ಯಾತರಾಗಿರುವ ಹಿಂದುಗಳೂ ತುಂಬಿಕೊಡುತ್ತಿದ್ದಾರೆಂದೂ "ಯುನೈಟೆಡ್ ಪ್ರೆಸ್" ಸಂಸ್ಥೆಯ ದಿಲ್ಲಿಯ ಪ್ರತಿನಿಧಿಗಳು ತಿಳಿಸುತ್ತಾರೆ. ಈ ವೃತ್ತಿಯ ಒಂದಾದರೂ ಉದಾಹರಣೆಯು ಪಾಕಿಸ್ತಾನದಲ್ಲಿ ಕಂಡು ಬರುವದೇನೆಂದು ಪುಣೆಯ "ಕೇಸರಿ" ಪತ್ರಿಕೆಯ ಪ್ರಶ್ನೆಯುಂಟು.

—ಸಂಯುಕ್ತ ಪ್ರಾಂತದ ಸರಕಾರವು "ಹಿಂದೀ" ಭಾಷೆಯೇ ಸರಕಾರ-ದರಬಾರದ ಭಾಷೆಯಾಗಬೇಕೆಂದು ನಿರ್ಧರಿಸಿದ ಸರಕಾರಿ ಕಚೇರಿಗಳಲ್ಲಿದ್ದ ಹಿಂದಿನ ಇಂಗ್ಲಿಷ ಫಲಕಗಳಿಗೆ ಈಗ ಪರ್ಯಾಯವಾಗಿ ಅವುಗಳ ಸ್ಥಳದಲ್ಲಿ ಹಿಂದೀ ಭಾಷೆಯ ಫಲಕ (ಬೋರ್ಡ) ಗಳು ಬಂದಿವೆ. ಹಿಂದೀ ಮಾತಾಡುವಾಗ ಅನ್ಯ ಭಾಷೆಗಳ ಶಬ್ದಗಳನ್ನು ಉಪಯೋಗಿಸಕೂಡದೆಂದು ಅಲ್ಲಿಯ ನಾಗರೀ-ಪ್ರಚಾರಿಣೀ ಸಭೆಯು ಕಟ್ಟು ಮಾಡಿದೆ. ಸಂಯುಕ್ತ ಪ್ರಾಂತದ ಶಿಕ್ಷಣ ಮಂತ್ರಿಗಳಾದ ಶ್ರೀ ಸಂಪೂರ್ಣಾನಂದರು ಈ ಸಭೆಯ ಅಧ್ಯಕ್ಷರಿರುತ್ತಾರೆ. ಕೆಲವು ದಿನಗಳಿಂದ ಶ್ರೀ ಸಂಪೂರ್ಣಾನಂದರು ಈ ಸಭೆಯ ಒಂದು ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ೫ ಕಡೆ ಇಂಗ್ಲಿಷ ಶಬ್ದಗಳನ್ನು ಉಪಯೋಗಿಸಿದರಂತೆ. ಈ ಬಗ್ಗೆ ಅವರು, ಸಭೆಯವರು ಮಾಡಿದ ಕಟ್ಟಳೆಯಂತೆ, ೫ ಆಣೆ ದಂಡ ತೆರಬೇಕಾಯಿತು!

— ಹಿಂದುಸ್ಥಾನ ಸರಕಾರವು ೬೫ ಕೋಟಿ ರೂಪಾಯಿಗಳ ಹೊಸ ಸಾಲ ಕೊಳ್ಳುವ ಸಂಕಲ್ಪ ಮಾಡಿದೆ. ಬಡ್ಡಿಯ ದರ ೩॥ ರೂ. ಉಂಟು. ಈ ಸಾಲವು ೧೯೬೦-೬೩ರಲ್ಲಿ ತೀರಿಸಿ ಕೊಡಲ್ಪಡುವದು. ೧೯೪೮-೪೯ರಲ್ಲಿ ಮುಗಿಯುವ ಸಾಲ-ಪತ್ರಗಳನ್ನು ಸರಕಾರವು ಸ್ವೀಕರಿಸಿ, ಅವುಗಳ ಬದಲಿಗೆ ಹೊಸ ಸಾಲದ ಸಾಲ-ಪತ್ರಗಳನ್ನು ಕೊಡುವದು. ನಾಳೆಯಿಂದ ಬರುವ ಈ ಜನವರಿಗೆ ಈ ಸಾಲ-ಪತ್ರಗಳು ಸಿಗುವವು.

— ಮುಂಬಯಿಯ ಮುಖ್ಯ ಮಂತ್ರಿಗಳಾಗಿರುವ ಮಾನ್ಯ ಬಾಳಾಸಾಹೇಬ ಖೇರ ಇವರು ತಮ್ಮ ಜನ್ಮಭೂಮಿಯಾದ ರತ್ನಾಗಿರಿಯಲ್ಲಿರುವ ಮನೆಯನ್ನೂ ಹೊಲಭೂಮಿಗಳನ್ನೂ ಒಂದು ವಿಶ್ವಸ್ತ-ಮಂಡಳಕ್ಕೆ ದಾನ-ಪತ್ರ ಮಾಡಿಕೊಟ್ಟು, ಈ ಆಸ್ತಿಯ ಉತ್ಪನ್ನದಿಂದ ಬಡ ಜನರಿಗೆ ವೈದ್ಯಕೀಯ ಮತ್ತು ಶೈಕ್ಷಣಿಕ ಸಹಾಯ ಮಾಡಬೇಕೆಂದು ವಿಧಿಸಿರುತ್ತಾರೆ. ಬಾಳಾಸಾಹೇಬರ ರತ್ನಾಗಿರಿ ಆಸ್ತಿಯ ಬೆಲೆ ರೂ. ೩೦೦೦೦ ರಷ್ಟು ಆಗುತ್ತದಂತೆ.

— ಕರಾಚಿಯೇ ಪಾಕಿಸ್ತಾನದ ರಾಜಧಾನಿಯಾಗಬೇಕೆಂದು ಪಾಕಿಸ್ತಾನಿ ಘಟನಾ ಸಮಿತಿಯ ನಿರ್ಣಯವಾಗಿದೆ. ಆದರೆ ಬಹುಸಂಖ್ಯ ಸಿಂಧಿಗಳು ಇದನ್ನು ವಿರೋಧಿಸುತ್ತಾರೆ. ಕ್ವಾಯಿದೆ-ಆಝಂ ಜಿನ್ನಾರವರೂ ಒಲವು ತೋರಿದ ಸಿಂಧದ ಮಹಾಮಂತ್ರಿ ಖುರ್ರೋ ಇವರೂ ಕರಾಚಿಯನ್ನು ಪಾಕಿಸ್ತಾನದ ರಾಜಧಾನಿಯ ಬಗ್ಗೆ ಪ್ರತ್ಯೇಕಿಸಿ ಪಾಕಿಸ್ತಾನಿ ಕೇಂದ್ರ ಸರಕಾರಕ್ಕೆ ಒಪ್ಪಿಸಲು ಸಿದ್ಧರಿದ್ದಿಲ್ಲ. ಖುರ್ರೋ ರವರ ಸ್ಥಳದಲ್ಲಿ ಬಂದ ಹೊಸ ಮುಖ್ಯ ಮಂತ್ರಿ ಪೀರ ಇಲಾಹಿ ಬಕ್ಷ ರವರು ಸಹ ಇದೇ ಹಟ ಹಿಡಿದಿರುವರೆಂದು ಕೇಳಬರುತ್ತದೆ.

— ಮಹಾರಾಷ್ಟ್ರದ ಸಭೆಯ ನಂತರ ಕೊಲ್ಹಾಪುರ ಸಂಸ್ಥಾನದಲ್ಲಿಯೂ, ಆ ಸಂಸ್ಥಾನದ ಆಶ್ರಯದಲ್ಲಿದ್ದ ಜಹಗೀರುಗಳಲ್ಲಿಯೂ ಸಂಭವಿಸಿದ ಗಲಭೆಗಳಲ್ಲಿ ಆದ ಹಾನಿ-ಜೀವಹಾನಿಗಳ ಸಂಬಂಧವಾಗಿ ಈಗ ಪ್ರಕಟವಾಗಿದೆ. ಕೊಲ್ಹಾಪುರ ಸಂಸ್ಥಾನದ ೨೩೩ ಹಳ್ಳಿಗಳಲ್ಲಿ ದಂಗೆ-ಅತ್ಯಾಚಾರಗಳಾಗಿದ್ದವು, ೮೭೬ ಮನೆಗಳಿಗೆ ಕೊಳ್ಳಿಯ ಇಡಲಾಗಿತ್ತು, ೩೬ ಲಕ್ಷ ರೂಪಾಯಿಗಳ ಆಸ್ತಿ ನಷ್ಟವಾಯಿತು, ೧೯॥ ಲಕ್ಷ ರೂ.ಗಳ ಆಸ್ತಿಯ ಲೂಟಿಯಾಯಿತು. ಜಹಗೀರುಗಳಲ್ಲಿ ೩೦೫ ಹಳ್ಳಿಗಳಿಗೆ ಗಲಭೆಯಾಗಿತ್ತು, ೫೦ ಮನೆಗಳಿಗೆ ಬೆಂಕಿ ಹಾಕಲ್ಪಟ್ಟಿತ್ತು, ೫೬ ಸಾವಿರ ರೂ.ಗಳ ಆಸ್ತಿ ನಷ್ಟವಾಯಿತು, ೪೦೪ ಸಾವಿರ ರೂ.ಗಳ ಆಸ್ತಿಯ ಲೂಟಿಯಾಯಿತು. ಈ ಸಂಬಂಧದಲ್ಲಿ ಇತ್ತಲಾಗಿ (ಅಂದರೆ ಸಂಸ್ಥಾನದ ಕಾರಭಾರವನ್ನು ಮುಂಬಯಿ ಸರಕಾರವು ತಾತ್ಪೂರ್ತಿಕವಾಗಿ ಕೈವಶಮಾಡಿಕೊಂಡ ಮೇಲೆ) ಕೊಲ್ಹಾಪುರ ಸಂಸ್ಥಾನದಲ್ಲಿ ೮೮೭ ಜನರನ್ನೂ ಜಹಗೀರುಗಳಲ್ಲಿ ೬೪೧ ಜನರನ್ನೂ (ಕೆಲವರನ್ನು ಫೌಜದಾರಿ ಕಾನೂನಿನನ್ವಯ ಮತ್ತು ಕೆಲವರನ್ನು ಗವರ್ನಮೆಂಟ ಸಂರಕ್ಷಣ ಕಾನೂನಿನನ್ವಯ) ಬಂಧಿಸಲಾಗಿದೆ.

— ಹೈದರಾಬಾದ ಸಂಸ್ಥಾನದಲ್ಲಿ ಕಾಸಿಮ ರಜವಿಯವರ ರಝಾಕಾರರ ಸೈನಿಕರ ಅತ್ಯಾಚಾರಗಳು ಕಳೆದ ವಾರ ಹೆಚ್ಚಾಗಿರುವವೆ! ಕಳೆದ ೫೫ ದಿವಸಗಳ ಹಿಂದೆ ಪುಣೆಯಿಂದ ಮುಂಬಯಿಗೆ ಬರುತ್ತಿದ್ದ ಟೆಲಿಫೋನ ರೈಲ್ವೆ ಬಂಡಿಯು ಹೈದರಾಬಾದ ಸಂಸ್ಥಾನದ ಪತ್ತೂರ-ಗಾಜೀಪುರ ಎಂಬ ರೈಲ್ವೆ-ನಿಲ್ದಾಣದಲ್ಲಿ ಬರುತ್ತಲೇ ಸುಮಾರು ೨೦೦ ರಝಾಕಾರರು ಬಂಡಿಯಲ್ಲಿ ನುಗ್ಗಿ ಪ್ರವಾಸಿಗರನ್ನು ಚೂರಿ-ಚಾಕುಗಳಿಂದಲೂ ಬೇರೆ ತೀಕ್ಷ್ಣ ಶಸ್ತ್ರಗಳಿಂದಲೂ ಇರಿದು ಕೊಂದರು! ಸ್ತ್ರೀಯರ ಮೇಲೂ ಅತ್ಯಾಚಾರಗಳನ್ನು ಮಾಡಹತ್ತಿದರು! ಈ ಗಲಾಟೆಯಲ್ಲಿ ಎಷ್ಟೋ ಪ್ರವಾಸಿಗಳು ಬಲಿಯಾದರು. ಓಡಿಹೋಗುವ ಜನರನ್ನು ಅಡ್ಡಗಟ್ಟಿ ಹಿಂಸಿಸಲಾಯಿತು. ಸಿಲ್ಲಾಣದ ಹೊರಗೂ ಸಹ ಜನರು ಕೊಲ್ಲಲ್ಪಟ್ಟರಂತೆ! ಈ ಅತ್ಯಾಚಾರ ನಡೆದಲ್ಲಿ ನಿಜಾಮರ ಪೋಲೀಸರೂ ಅಧಿಕಾರಿಗಳೂ ಕಣ್ಣುಮುಚ್ಚಿಕೊಂಡು ಕುಳಿತಿದ್ದರೆಂದು ಕೆಲವರು ಹೇಳುತ್ತಾರೆ. ರೈಲ್ವೆ ಗಾಡಿಯ ಮೇಲಾದ ಈ ಘೋರ ಅಭಿಯೋಗದಿಂದ ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರಗಳೂ ಸಂತಪ್ತವಾಗಿ, ಹೈದರಾಬಾದ ಸಂಸ್ಥಾನದೊಳಗಿಂದ ಹಾದು ಹೋಗುವ ಎಲ್ಲ ಗಾಡಿಗಳನ್ನು ೩ ದಿನ ನಿಲ್ಲಿಸಿದವು, ಮತ್ತು ಇತ್ತಲಾಗಿ ಸೈನಿಕರನ್ನು ಕಾವಲಿಗಿಟ್ಟು ಗಾಡಿಗಳನ್ನು ಬಿಡುವ ವ್ಯವಸ್ಥೆ ಮಾಡಿವೆ. ಗಾಡಿಗಳ ಮೇಲೆ ಆಕ್ರಮಣವಾಗಿ ಹತ್ಯೆ ನಡೆದರೆ ಗಾಡಿಗಳ ಸಂರಕ್ಷಣ ಒದಗಿಸುವ ಸೈನಿಕರು ಗುಂಡು ಹಾರಿಸುವ ಅಪ್ಪಣೆಯನ್ನು ಹೊಂದಿರುವರು. ಹೈದರಾಬಾದಕ್ಕೆ ಈಗ ಆರ್ಥಿಕ ದಿಗ್ಬಂಧನ ಬಿದ್ದಂತೆಯೇ ಆಗಿದೆ. ಮುಂಬಯಿಯಿಂದ ಉಪ್ಪು, ಸಕ್ಕರೆ ಇತ್ಯಾದಿ ಹೈದರಾಬಾದಕ್ಕೆ ಹೋಗದಂತೆ ಮುಂಬಯಿ ಸರಕಾರವು ಪ್ರತಿಬಂಧಿಸಿದೆ. ವಿಜಾಪುರ ಜಿಲ್ಲೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಕೂಡ ಕಳೆದ ವಾರ ಶ್ರೀ. ಪ್ರಿ. ಕೋಡಿನ ಗಳ ಸನಿಹ ಕಲಬುರ್ಗಿಯ ಒಂದು ಹಳ್ಳಿಯ ಹೊರಡಿಸಿ

ಕಾನಡಾ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘ,
ಮುಖ್ಯ ಕಚೇರಿ — ಅಂಕೋಲಾ.

ಜಾಹೀರ ವಿನಂತಿ.

ಉತ್ತರ ಕನ್ನಡ ಜಿಲ್ಲಾ ಶಿಕ್ಷಕ ಸಂಘದವರು ಹೊರಡಿಸಿದ ನಿಧಿಯ ಮಾಸಿಕ ಪುಸ್ತಕ ನಂ. ೧೯೮೮ರ— ೩೫ರಿಂದ ೪೦೦ರ ವರಿಗಿನ ಪಾವತಿಗಳುಳ್ಳ ಪುಸ್ತಕ ಕಳೆದು ಹೋಗಿರುವದರಿಂದ, ಆ ಪುಸ್ತಕದ ಆಧಾರದಿಂದ ಅನಧಿಕೃತ ಜನರು ಇನ್ನು ಮುಂದೆ ಅದರ ದುರುಪಯೋಗ ಮಾಡಬಾರದೆಂದು ಸದರಿ ಪಾವತಿ ಪುಸ್ತಕವನ್ನು ರದ್ದು ಮಾಡಲಾಗುತ್ತದೆ. ಈ ಪುಸ್ತಕವು ಯಾರಿಗಾದರೂ ಸಿಕ್ಕಿದರೆ ಅದನ್ನು ಅವರು ದಯಮಾಡಿ ಸಂಘದ ಕಚೇರಿಗೆ ಪರತ್ ಮಾಡಬೇಕು. ಸದರ ಪುಸ್ತಕದ ಮೇಲೆ ಯಾರೂ ಹಣ ಕೊಡಬಾರದೆಂದು ಈ ಸಭೆಯು ಜನರಿಗೆ ವಿನಂತಿ ಮಾಡಿಕೊಳ್ಳುತ್ತದೆ. ಮತ್ತು ಸದರ ಪಾವತಿ ಪುಸ್ತಕದ ಮೇಲೆ ಹಣ ಕೊಟ್ಟಿದ್ದು ಇದ್ದರೆ ಅದನ್ನು ಈ ಸಂಘದ ಸೆಕ್ರೆಟರಿ ಶ್ರೀ ಅ. ಶಿ. ಶೆಟ್ಟಿ ಹೆಡಮಾಸ್ತರ ಅಂಕೋಲಾ ಇವರಿಗೆ ತಿಳಿಸಬೇಕೆಂದು ತಾರೀಖು ೨೩-೩-೧೯೪೮ನೇ ದಿವಸ ಅಂಕೋಲೆಯಲ್ಲಿ ಕೂಡಿದ ಸದರ ಸಂಘದ ಸಾಮಾನ್ಯ ಜನರಲ್ ಸಭೆಯಲ್ಲಿ ಸರ್ವಾನುಮತದಿಂದ ಠರಾವು ಆಗಿರುತ್ತದೆ. ಅಂಕೋಲಾ, ತಾ ೨೬-೩-೪೮

ಅನಂತ ಶಿವರಾಮ ಶೆಟ್ಟಿ, ಮ. ರಾ. ಶೆಟ್ಟಿ,
ಸೆಕ್ರೆಟರಿ ಅಧ್ಯಕ್ಷರು.

ನಂ. ೩೨೨

ಜಾಹೀರನಾಮೆ.

೧೯೪೭-೪೮ನೇ ಸಾಲಿನ ಬೆಲ್ಲದ ಬೆಳೆಯ ಬಾಬತು.

೧೯೪೭ನೇ ಇಸವಿಯ ಮುಂಬಯಿ ಗೇಣಿದಾರಿಕೆಯ ವಿಷಯದ ೧೭ನೇ ಕಾನೂನಿನನ್ವಯ ಉತ್ತರ ಕಾನಡಾ ಜಿಲ್ಹೆಯೊಳಗಿನ ಅಂಕೋಲಾ ತಾಲೂಕಿನ ಮಾಮಲೇದಾರರು, ಈ ಕೆಳಗಿನ ಪರಿಶಿಷ್ಟದ ೨ನೇ ಸ್ತಂಭದಲ್ಲಿ ತೋರಿಸಿದ ಕ್ಷೇತ್ರದ ೫ನೇ ಸ್ತಂಭದಲ್ಲಿ ನಮೂದಿಸಿದ ಬೆಲ್ಲದ ಬೆಳೆಯ ಒಂದು ಎಕರೆಯ ಉತ್ಪನ್ನ ಎಷ್ಟೆಂತ ೬ನೇ ಸ್ತಂಭದಲ್ಲಿ ನಿರ್ದಿಷ್ಟ ಮಾಡಿ ಈ ಕೆಳಗಿನಂತೆ ಜಾಹೀರಪಡಿಸಿರುತ್ತಾರೆ.

ಪರಿಶಿಷ್ಟ.

ಅನು ಕ್ರಮಾಂಕ	ಕ್ಷೇತ್ರ	ಜಮೀನಿನ ಸಮೂನೆ	ಬೆಳೆಯ ಪ್ರಕಾರ	ಬೆಳೆ	ಒಂದು ಎಕರೆಯ ಸರಾಸರಿ ಉತ್ಪನ್ನ
೧	೨	೩	೪	೫	೬
೧	ಸರ್ವೇ ಗ್ರೂಪ Iರಲ್ಲಿಯ ಗ್ರಾಮಗಳು	ನೀರಾವರಿ	ತರಿ	ಕಬ್ಬು	೯೭ ಬಂಗಾಲಿ ಮಣ ಬೆಲ್ಲ
೨	ಸರ್ವೇ ಗ್ರೂಪ IIರಲ್ಲಿಯ ಗ್ರಾಮಗಳು	"	"	"	೮೧ ಬಂಗಾಲಿ ಮಣ ಬೆಲ್ಲ
೩	ಸರ್ವೇ ಗ್ರೂಪ IIIರಲ್ಲಿಯ ಗ್ರಾಮಗಳು	"	"	"	೬೮ ಬಂಗಾಲಿ ಮಣ ಬೆಲ್ಲ
೪	ಸರ್ವೇ ಗ್ರೂಪ IVರಲ್ಲಿಯ ಗ್ರಾಮಗಳು	"	"	"	೧೦೬ ಬಂಗಾಲಿ ಮಣ ಬೆಲ್ಲ
೫	ಸರ್ವೇ ಗ್ರೂಪ Vರಲ್ಲಿಯ ಗ್ರಾಮಗಳು	"	"	"	೬೪ ಬಂಗಾಲಿ ಮಣ ಬೆಲ್ಲ
೬	ಸರ್ವೇ ಗ್ರೂಪ VIರಲ್ಲಿಯ ಗ್ರಾಮಗಳು	"	"	"	೯೬ ಬಂಗಾಲಿ ಮಣ ಬೆಲ್ಲ

ಅಂಕೋಲಾ,
ತಾ ೧೩ ೩ ೧೯೪೮

V. R. Dalvi,
ಮಾಮಲೇದಾರ, ಅಂಕೋಲಾ.

ತನ್ನ ಅಪ್ಪಣೆಯ ವಿನಹ ಯಾರೂ ಯಾವದೇ ಬಗೆಯ ಸರಕುಗಳನ್ನು ವಿಜಾಪೂರ ಜಿಲ್ಲೆಯಿಂದ ಹೈದರಾಬಾದ ಸಂಸ್ಥಾನಕ್ಕೆ ಕಳಿಸಕೂಡದೆಂದ. ವಿಧಿಸಿದ್ದಾರೆ ಹಿಂದೆ ಸ್ಥ... ಸರಕಾರವು ಕೊನೆಗೆ ಸಂಸ್ಥಾನದ ವಿರುದ್ಧ ಉಗ್ರ ಕ್ರಮಗಳನ್ನು ಕೈಕೊಳ್ಳಲು ನಿರ್ಧರಿಸಿದ್ದುದನ್ನು ಕಂಡು ನಿಜಾಮರ ಈಗ ಹುಸಿ ಸತ್ತಗಂಡಂತೆ ತೋರುತ್ತಿದೆ ಕಳೆದ ವಾರ ಅವರ ಮುಖ್ಯಮಂತ್ರಿ ಮೀರ ಲಾಯಿಕ ಅಲ್ಲಿಯ ಪರು ದಿಲ್ಲಿಗೆ ಹೋಗಿದ್ದರು ಅಲ್ಲಿ ಅವರಿಗೂ ಭಾರತದ ಮುಖ್ಯ ಮಂತ್ರಿ ಪಂಡಿತ ನೆಹರು, ಸಂಸ್ಥಾನ ಖಾತೆಯ ಕಾರ್ಯದರ್ಶಿಗಳು ದ ಶ್ರೀ ಮೆನನ ಇವರುಗಳು ಗವರ್ನರ ಜನರಲ್ಲ ... ಬೆಟನ ದೊರೆಗಳ ನಡುವೆ ಮಾತುಕತೆಗಳು ನಡೆದವು ಈ ಮಾತುಕತೆಗಳ ಸ್ವರೂಪ ಪೂರ್ಣ ಗುಪ್ತವಿರಲಾಗಿದ ದರೂ ಭಾರತ ಸರಕಾರವು ನಿಜಾಮರಿಗೆ ಲಾಯಿಕ ಅಲ್ಲಿ ಗಳ ಮುಖಾಂತರ ಕೊನೆಯ ಕರಾರುಗಳನ್ನು ತಿಳಿಸಿದ್ದಾರೆಂದು ತಜ್ಞರು ಊಹಿಸುತ್ತಾರೆ ಈ ಕರಾರುಗಳಿಗೆ ನಿಜಾಮರು ಈಗ ಒಂದೇ "ಒಪ್ಪಿಗೆ" ಇಲ್ಲವೆ "ಒಪ್ಪಲಾರೆ" ಎಂದಷ್ಟೇ ಉತ್ತರ ಕೊಡಬೇಕು, ಬೇರೆ ಉತ್ತರವನ್ನು ಭಾರತ ಸರಕಾರವು ಕೇಳಿಕೊಳ್ಳಲಿಕ್ಕೆ ಸಿದ್ಧವಿಲ್ಲ ಎಂದು ಸ್ಪಷ್ಟ ... ದೇಶದಿಂದೂ ಅವರ ತಿಳಿಸಿದೆ. ಮೀರ ಲಾಯಿಕ ಅಲ್ಲಿಯವರು ಈಗ ಹೈದರಾಬಾದಿಗೆ ತಿರುಗಿ ಬಂದಿದ್ದಾರೆ ... ಗಳಲ್ಲಿ ಅವರು ಏನು ಮರು-ಪ್ರತ್ಯುತ್ತರ ತರುವರೋ ... ದಿಲ್ಲಿಗೆ ಮರಳಲಿದ್ದಾರೆ ಸಂಗ್ರಾಮವೋ ಸಂಧಾನವೋ ಎಂಬುದರ ನಿರ್ಣಯ ಅವರಿಂದ ಬರುವ ಉತ್ತರವನ್ನು ಅವಲಂಬಿಸಿ... ತ್ತದೆ ಮೀರ ಲಾಯಿಕ ಅಲ್ಲಿಯವರ ಈ ದಿಲ್ಲಿ ಯಾತ್ರೆಯು ವಾತಾವರಣದ ಹುಂಬತೆಯ ತದಂದೂ ನಿಜಾಮರು ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರಿಂದ ತಮಗೆ ಪೆಟ್ಟಿಗೆ ಸವಲತ್ತು-ಸೌಕರ್ಯಗಳ ಸಿಗುವವೆಂಬ ಇರಾ ನ್ನು ತಳೆದಿದ್ದು ರಾಜಾಜಿಯವರು ಗವರ್ನರ ಜನರಲ್ಲರಾದ

ಮೇಲೆಯೇ ಸಂಧಾನದ ಮಾತುಕತೆಗಳನ್ನು ಮುಂದ ರಿಸುವಾ ಎಂದು ಅಪೇಕ್ಷಿಸುತ್ತಿರುವರೆಂದೂ ಕೆಲವು ಪತ್ರಿಕಾವ್ಯವಸಾಯಿಗಳು ಪ್ರತಿಪಾದಿಸುತ್ತಾರೆ ಇತ್ತ ಸಂಧಾನದ ಮಾತುಗಳು ನಡೆದಿರುವಾಗ ಅತ್ತ ಯುದ್ಧದ ತಯಾರಿಯನ್ನೂ ನಿಜಾಮರು ನಡಿಸುತ್ತಿರುವಂತೆ ಕಾಣುತ್ತಿದೆ ಕಳ್ಳ ತನದಿಂದ ಶಸ್ತ್ರಗಳನ್ನೂ ಯಂತ್ರಗಳನ್ನೂ ತರಿಸಿಕೊಳ್ಳುವ ಅವರ ವ್ಯಾಪಾರ ಎಂದಿನಂತೆಯೇ ಸಾಗಿದೆ ೩-೪ ದಿನಗಳ ಹಿಂದೆ ಗೋವೆಯಿಂದ ಹೈದರಾಬಾದಕ್ಕೆ ಹೋಗ ಹೊರಟ, ಯಾಂತ್ರಿಕ ಸಾಮಗ್ರಿಗಳಿಂದ ತುಂಬಿದ ನೂರಾರು ಪೆಟ್ಟಿಗೆಗಳನ್ನು ಹಿಂದೀ ಪೋಲೀಸರು ಕೆಸಲ್-ರೋಕ ರೇಲ್ವೆ-ನಿಲ್ದಾಣದಲ್ಲಿ ಹಿಡಿದಿಟ್ಟಿದ್ದಾರೆ!

NOTICE.

All owners of Transport Vehicles are hereby informed that it is obligatory on them to produce Registration Certificate, Permit, Insurance Certificate, and Certificate of Fitness in respect of each vehicle produced for inspection at various centres in the Region. Failure to comply with the above instructions will result in refusal of the vehicle for inspection. No complaints will be entertained.

Belgaum — Regional Transport
26-5-48 — Officer, K. R., Belgaum

ನೀರಾ ತೆಗೆದು ಕೊಡುವವರು ಬೇಕು.

ಮುಂಬಯಿ ಸರಕಾರದವರ ನೀರಾ-ಯೋಜನೆಯಂತೆ ೧೯೪೮-೪೯ನೇ ಸಾಲಿನಲ್ಲಿ ಮುಂಬಯಿ ಪ್ರಾಂತದೊಳಗಿನ ಬೇರೆ ಬೇರೆ ಭಾಗಗಳಲ್ಲಿ ಸಿಂದಿ, ಬಾಳಾ ಮತ್ತು ತಾಗೋ ಮರಗಳಿಂದ ನೀರಾ ತೆಗೆದುಕೊಡುವ ಕೆಲಸ ಕೈಕೊಳ್ಳುವವರು (tappers) ಸರಕಾರಕ್ಕೆ ಬೇಕಾಗಿದ್ದಾರೆ ಅಂತಹ ಜನರನ್ನು ಪೂರೈಸಲಿಚ್ಛಿಸುವವರು — ಭಂಡಾರಿ ಟ್ಯಾಪರ ಎಸೋಸಿಯೇಶನ್ ಮತ್ತಿತರ ಸಂಸ್ಥೆಗಳೂ ವ್ಯಕ್ತಿಗಳೂ — ಪ್ರಾಂತಿಕ ಪಾನನಿರೋಧ ಸಂಘ (ಬೋರ್ಡ), ದ ಕಾರ್ಯದರ್ಶಿ, ಹಳೇ ಕಸ್ಟಮ ಕಚೇರಿ (house) ಮುಂಬಯಿ, ಇವರಿಗೆ ಪತ್ರ ಬರೆದು ಅದರ ಸಂಬಂಧದಲ್ಲಿ ಭೆಟ್ಟಿಯಾಗಿ ನೀರಾ ತೆಗೆದುಕೊಡುವವರಿಗೆ ಸಿಗುವ ಸಂಬಳ, ಅವರ ನೌಕರಿಯ ಕರಾರುಗಳು ಮುಂತಾದವುಗಳ ಮಾಹಿತಿಯನ್ನು ಪಡೆಕೊಳ್ಳಬಹುದು

(ಸರಕಾರಿ ಪ್ರಸಿದ್ಧಿ ಖಾತೆಯ ಪ್ರಕಟನೆ.)

ಆಜ್ಞೆ.

ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆ,
ಮುಂಬಯಿ ಕೋಟೆ, ತಾ ೨೪ ಮೇ, ೧೯೪೮.

೧೯೪೬ರ ಮುಂಬಯಿ ಆವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು

ನ ... ೧ — ೧೯೪೬ನೇ ಇಸವಿಯ ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ದನಗಳ (...) ಕಾನೂನಿನ (೧೯೪೬ರ ...ನೇ ಮುಂಬಯಿ ಕಾನೂನಿನ) ೪ನೇ ಕಲಮಿನನ್ವಯ ದೊರತ ... ಉಪಯೋಗಿಸಿ, ಮುಂಬಯಿ ಸರಕಾರವು ಆಜ್ಞೆ ವಿಧಿಸುತ್ತವೇನೆಂದರೆ —

... ತಿಂಗಳ ... ಯಾ ... ಮುಂಚೆ ಅದರ ಹಿಂದಿನ ತಿಂಗಳಲ್ಲಿ ತಾನು ಮಾರಾಟ ಮಾಡಿದ ಎಣ್ಣೆ ಇಂಜಿನ್ನುಗಳ ಪೂರ್ಣ ಮತ್ತು ನಿಜವಾದ ಮಾಹಿತಿಯನ್ನು, ಈ ಆಜ್ಞೆಗೆ ಜೋಡಿಸಿದ ಮಾದರಿಯಲ್ಲಿ, ಮುಂಬಯಿಯಲ್ಲಿರುವ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ ಕಾರ್ಯದರ್ಶಿಗಳಿಗೆ ಪೂರೈಸತಕ್ಕದ್ದು

ವಿವರಣೆ — ಈ ಆಜ್ಞೆಯ ಸಂಬಂಧವಾಗಿ, ಎಣ್ಣೆ ಇಂಜಿನ್ನು ಅಂದರೆ ಡೀಝೆಲ ಎಣ್ಣೆಯ ಇಲ್ಲವೆ ... ನಡಿಸಲ್ಪಡುವ ಹಾಗೂ ... ಯಾ ಪೆಟ್ಟಿಗೆ (ಅಂದರೆ ಎಂಜಿನ ಮಿಕ್ಕದನ್ನು) ಅಶ್ವಶಕ್ತಿಯುಳ್ಳ ... ಹಿಂದುಸ್ಥಾನದ ಹೊರಗೆ ತಯಾರಾದ, ಹೊಸ ಅಥವಾ ಹಳೆಯ ಎಣ್ಣೆಯ ಇಂಜಿನ್ನು ಎಂದು ತಿಳಿಯತಕ್ಕದ್ದು

ಮಾಹಿತಿ-ಪತ್ರಕದ ಮಾದರಿ.

ತಾ — —೧೯೪ ಕ್ಕೆ ಅಂತ್ಯವಾಗುವ ತಿಂಗಳ ಮಾಹಿತಿ-ಪತ್ರಿಕೆ
ಮಾಹಿತಿಯನ್ನು ಒಪ್ಪಿಸುವವನ ಪೂರ್ಣ ಹೆಸರು ಮತ್ತು ವಿಳಾಸ —

ಅನುಕ್ರಮಾಂಕ	ತಿಂಗಳಲ್ಲಿ ಮಾರಿದ ಎಣ್ಣೆ ಇಂಜಿನ್ನಿನ ತಯಾರಕನಾರು? ಮಾದರಿ ಯಾವದು? ಮತ್ತು ಅಶ್ವಶಕ್ತಿಯೆಷ್ಟು?	ಮಾರಿದ ಇಂಜಿನ್ನುಗಳ ಸಂಖ್ಯೆ	ಪ್ರತಿ ಇಂಜಿನ್ನಿನ ಬಂದಿಳಿದ ಬೆಲೆ	ಪ್ರತಿ ಇಂಜಿನ್ನಿಗೆ ಆಕರಣೆ ಮಾಡಿದ ವಾಸ್ತವಿಕ ಬೆಲೆ	ಮಾರಾಟ ಮಾಡಿದ ತಾರೀಕು ಯಾ ತಾರೀಕುಗಳು	ಇಂಜಿನ್ನು ಕೊಂಡುಕೊಂಡವರ ಹೆಸರುಗಳೂ ವಿಳಾಸಗಳೂ
೧	೨	೩	೪	೫	೬	೭

ತಾರೀಖು — ಸಹಿ

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

D. N. MAHTA.
ಸರಕಾರದ ಕಾರ್ಯದರ್ಶಿಗಳು

THE BANK OF RURAL INDIA, LTD.,

(Incorporated in British India Liability of Members limited)

HEAD OFFICE - 'Satyabhama Bhavan', KARWAR, N. K.
Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	..	Rs. 10,00,000;
Subscribed Capital	..	Rs. 5,00,000;
Paid-up Capital & Reserves	-	Rs. 5,08,502-8-0.

Rates of Interest on Deposits

Current a/c @ 1% p. a. — *Savings Bank a/c @ 2%*

Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "

All kinds of modern Banking business transacted

Karwar, 14-2-1948 — P. X. GRACIOUS. MANAGING DIRECTOR



ಕರ್ನಾಟಕ ಶಾಖೆ.—
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಸುದ್ದಿಗಳ ಸಂದೂಕ.

— ಮಹಾತ್ಮಾ ಗಾಂಧಿಯವರ ಕೊಲೆಯ ಮೊಕದ್ದಮೆಯ ವಿಚಾರಣೆಗೆ ಇದೇ ಗುರುವಾರ ದಿಲ್ಲಿಯ ಕೆಂಪು ಕೋಟೆಯಲ್ಲಿ ಪ್ರಾರಂಭವಾಯಿತು. ಈ ಮೊಕದ್ದಮೆಯು ಸಾಮಾನ್ಯ ಫೌಜದಾರಿ ಕಾನೂನಿನಂತೆ ನಡೆಯದೆ ಮುಂಬಯಿಯ ಸಾರ್ವಜನಿಕ ರಕ್ಷಣಾ ಕಾನೂನಿನನ್ವಯ, ವಿಶೇಷ ನ್ಯಾಯಾಲಯದ ಮುಂದೆ, ವಿಶಿಷ್ಟ ವಿಚಾರ-ಪದ್ಧತಿಯಿಂದ ನಡೆಯತಕ್ಕದ್ದೆಂದು ಹಿಂದುಸ್ಥಾನ ಸರಕಾರವು ಆಜ್ಞಾಪಿಸಿದೆ. ಸಾಮಾನ್ಯ ಕಾಯಿದೆಯಂತೆ ಕೊಲೆಪಾತಕವೇ ಮೊದಲಾದ, ಸೆಶನ್ಸ ಜಜ್ಜರ ಮುಂದೆ ನಡೆಯತಕ್ಕ ಮಹಾಪರಾಧಗಳ ಪೂರ್ವ-ವಿಚಾರಣೆ ೧ನೇ ದರ್ಜೆಯ ಮ್ಯಾಜಿಸ್ಟ್ರೇಟರ ಮುಂದೆ ನಡೆದು, ಅಲ್ಲೇ ಆರೋಪಗಳ ಪಟ್ಟಿ ತಯಾರಾಗುತ್ತದೆ, ಫಿರ್ಯಾದಿ ಪಕ್ಷದ ಪುರಾವೆಯು ಆರೋಪಿತರಿಗೆ ತಿಳಿಯುತ್ತದೆ. ಬೇಕಾದಷ್ಟು ಪುರಾವೆಯುಂಟೆಂದು ಕಂಡು ಬಂದರೆ ಮ್ಯಾಜಿಸ್ಟ್ರೇಟರು ಆರೋಪಿಗಳ ಮೇಲೆ ಬೇರೆ ಬೇರೆ ಆರೋಪಗಳನ್ನಿಟ್ಟು ಸೆಶನ್ಸ ಜಜ್ಜರ ಮುಂದೆ ಅವುಗಳ ವಿಚಾರಣೆ ಮಾಡಿಸಿಕೊಳ್ಳಬೇಕೆಂದು ಹುಕುಮು ಮಾಡುತ್ತಾರೆ. ಇದಕ್ಕೆ ಕಾಯಿದೆಯ ಭಾಷೆಯಲ್ಲಿ 'ಕಮಿಟ್ಮೆಂಟ್ ಪ್ರೊಸೀಡಿಂಗ್ಸ' ಎಂದು ಅನ್ನುತ್ತಾರೆ. ಸದ್ಯದ ಖಟ್ಲೆಯಲ್ಲಿ ಈ ಪೂರ್ವ-ವಿಚಾರಣೆಯ ಕ್ರಮ ನಡೆಯಲಾರದು. ಖಟ್ಲೆಯ ಆಮೂಲಾಗ್ರ ವಿಚಾರವು ಸೆಶನ್ಸ ಜಜ್ಜರ ದರ್ಜೆಯ ವಿಶೇಷ ನ್ಯಾಯಾಧೀಶರ ಮುಂದೆಯೇ ನಡೆಯುವದು. ಇನ್ನೊಂದು ವಿಶೇಷವೆಂದರೆ ಸಾಮಾನ್ಯ ನ್ಯಾಯಾಸನಗಳ ಮುಂದೆ ನಡೆಯುವಂತೆ ಈ ಖಟ್ಲೆಯಲ್ಲಿ ಸಾಕ್ಷಿದಾರರ ಜಬಾನಿಗಳನ್ನು ವಿಸ್ತಾರವಾಗಿ ಬರೆಯಲಾಗದೆ, ಅವುಗಳ ಸಾರವನ್ನಷ್ಟೇ ಬರೆಯಲ್ಪಡುವದು. ಕಾನಪುರದಲ್ಲಿ ಸೆಶನ್ಸ ಜಜ್ಜರಾಗಿದ್ದ ಶ್ರೀ ಆತ್ಮಾಚರಣ (ಆಯ್ ಸಿ ಎಸ್) ಇವರು ಈ ಖಟ್ಲೆಯ ವಿಚಾರಕ್ಕಾಗಿ ದಿಲ್ಲಿಯಲ್ಲಿ ವಿಶೇಷ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿದ್ದಾರೆ. ಫಿರ್ಯಾದಿಯ ಪರವಾಗಿ ಮುಂಬಯಿಯ ಎಡ್ವೋಕೇಟ್-ಜನರಲ್ಲ ಶ್ರೀ ಸಿ ಕೆ ದಫ್ತರಿಯವರು ಕೆಲಸ ಮಾಡುವರು. ೯ ಜನ ಆರೋಪಿತರ ಪೈಕಿ ೭ ಮಂದಿ ಆರೋಪಿತರು ವಕೀಲರನ್ನು ಕೊಟ್ಟಿರುತ್ತಾರೆ. ಪುಣೆಯ ಶ್ರೀ ಎಲ್. ಬಿ ಭೋಪಟಕರ, ಮುಂಬಯಿಯ ಬೆ [illegible] ಇವರು ಸ್ವಾತಂತ್ರ್ಯವೀರ ಸಾವರಕರರ ವಕಾಲತು ತಕ್ಕೊಂಡಿದ್ದಾರೆ. ಪಿ ಬ್ಯಾನರ್ಜಿ ಎಂಬವರೂ ಅವರ ತರ್ಫೆನಿಂದ ಹಾಜರಾಗಿದ್ದಾರೆ. ಡಿ. ಆರ್. ಬಡಗೆ ಮತ್ತು ಮದನಲಾಲ ಈ ೨ ಜನ ಆರೋಪಿತರು ಸ್ವತಃ ವಕೀಲರನ್ನು ಕೊಟ್ಟಿಲ್ಲ. ಕಾಯಿದೆಯಂತೆ ನ್ಯಾಯಾಸನದವರೇ ಅವರ ಸಂರಕ್ಷಣೆಗಾಗಿ ಯಾರಾದರೊಬ್ಬ ವಕೀಲರನ್ನು ನೇಮಿಸಬೇಕಾಗುವದು. ೨೭ನೇ ತಾರೀಖು ವಿಶೇಷ ಕೆಲಸವೇನೂ ನಡೆಯಲಿಲ್ಲ. ವಿಚಾರಣೆಗೆ ಪ್ರಾರಂಭವಾಗುವ ಮೊದಲೇ ಆರೋಪಿಗಳ ವಕೀಲರು ಈ ಖಟ್ಲೆಯ ವಿಚಾರವನ್ನು ೨ ತಿಂಗಳು ಮುಂದೆ ಹಾಕಬೇಕೆಂದೂ, ಪೂರ್ವ-ವಿಚಾರಣೆಯ ಕ್ರಮ ನಡಿಸಿ ಆಮೇಲೆಯೇ ಈ ಖಟ್ಲೆಯ ವಿಚಾರವಾಗುವದವಶ್ಯವುಂಟೆಂದೂ ಸೂಚಿಸಿದರು. ನ್ಯಾಯಾಧೀಶರು ಪೂರ್ವ ವಿಚಾರಣೆಯ ಬೇಡಿಕೆಯನ್ನು ತಿರಸ್ಕರಿಸಿ, ತಾ ೧೪-೬-೧೯೪೮ರ ವರೆಗೆ ಅವಧಿ ಕೊಟ್ಟರು. ವಕೀಲರನ್ನು ಕೊಡುವದುಂಟೋ ಎಂದು ಪ್ರಶ್ನೆ ಮಾಡಿದಾಗ ಆರೋಪಿ ಮದನಲಾಲನು (ಮಹಾತ್ಮರ ಕೊಲೆಯ ಪೂರ್ವದಲ್ಲಿ ಒಂದು ದಿನ ಪ್ರಾರ್ಥನಾ ಸಭೆಯ ಸನಿಯದಲ್ಲಿ ಬಾಂಬು-ಗುಂಡು ಒಗೆದಾಗ ಬಂಧಿಸಲ್ಪಟ್ಟವನು) "ಗುಪ್ತವಾಗಿ" ನನ್ನ ಹೇಳಿಕೆ ಕೊಡಬಯಸುತ್ತೇನೆಂದು ಕೇಳಿದನು. ನ್ಯಾಯಾಧೀಶರು ಆದಾಗಲೇ ಅವನ ಹೇಳಿಕೆ ಕೇಳಲು ಬರುವದಿಲ್ಲೆಂದೂ ತಾ. ೧೪ಕ್ಕೆ ಪುನಃ ಖಟ್ಲೆಯ ವಿಚಾರಕ್ಕೆ ಪ್ರಾರಂಭವಾದಾಗ ಆ ಹೇಳಿಕೆ ಕೊಡಬಹುದೆಂದೂ ತಿಳಿಸಿದರು. ಈ ಖಟ್ಲೆಯ ಆರೋಪಿಗಳ ಪೂರ್ವ-

(೪ನೇ ಪುಟದ ಮೇಲೆ ಮುಂದರಿಸಿದೆ)

ಶಿರ್ಶಿ ತಾಲೂಕಿನ ಕಬ್ಬಿನ ಬೆಳೆಯ ಪ್ರಕಟನೆ.

(೧೯೪೭-೪೮ನೇ ಸಾಲಿನದು.)

೧೯೪೭ನೇ ಇಸವಿಯ ಒಕ್ಕಲತನದ ಕಾನೂನಿನ ನಿಯಮಾವಳಿಯ ೧೨ನೆಯ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಲೆಯೊಳಗಿನ ಶಿರ್ಶಿ ತಾಲೂಕಿನ ಮಾಮಲೇದಾರರು, ಇದರ ಕೆಳಗೆ ಕೊಟ್ಟ ಪರಿಶಿಷ್ಟದ ೧ನೆಯ ಸ್ತಂಭದಲ್ಲಿ ನಿರ್ದೇಶಿಸಿದ ಸ್ಥಾನಿಕ ಕ್ಷೇತ್ರಗಳಲ್ಲಿ, ೧೯೪೭-೪೮ನೇ ಸಾಲಿನಲ್ಲಿ, ೨ನೆಯ ಸ್ತಂಭದಲ್ಲಿ ತೋರಿಸಿದಷ್ಟು ಸರಾಸರಿ ಕಬ್ಬಿನ ಬೆಳೆ ಹುಟ್ಟಿರುತ್ತದೆಂದು (ಪ್ರತ್ಯಕ್ಷ ಪ್ರಯೋಗಗಳನ್ನು ಮಾಡಿ ಕಂಡು ಹಿಡಿದು) ಜಾಹೀರ ಮಾಡುತ್ತಾರೆ. ೨ನೆಯ ಸ್ತಂಭದಲ್ಲಿ ಕೊಟ್ಟ ಬೆಳೆ ಪ್ರತಿ ಎಕರೆಯದಿರುತ್ತದೆ

ಪರಿಶಿಷ್ಟ

ಸ್ಥಾನಿಕ ಕ್ಷೇತ್ರ (೧)	ಪ್ರತಿ ಎಕರೆಯ ಸರಾಸರಿ ಕಬ್ಬಿನ ಬೆಳೆ (೨)
ಸರ್ವೇ ಗ್ರೂಪ I — ಅಜ್ಜರಣಿ, ಬಚಗಾಂವ, ಬದನಗೋಡ, ಬಂಕನಾಳ, ಬನವಾಸಿ, ಬಕ್ಕಳಕೊಪ್ಪ, ಬೆಳ್ಳನಕೇರಿ, ಬೆಳ್ಳಮನೆ, ಬೆಡಸಗಿ, ಭಾಶಿ, ಬಿಸಲಕೊಪ್ಪ, ಬಿಳಗೀಕೊಪ್ಪ, ದಾಸನಕೊಪ್ಪ (ಫೀರ್ಕಾ), ಬಂಡಿಕೊಪ್ಪ, ದಾಸಗಿ, ದನಗನಹಳ್ಳಿ, ದೊಡ್ಡನಹಳ್ಳಿ, ಗಾಣಗೇರಿ, ಗೋಳಿಕಟ್ಟಾ, ಗೋಳಿನ ಫಸರ, ಗುಡ್ಡಳ್ಳಿ, ಗುಡ್ನಾಪುರ, ಹಳ್ಳೀಕೊಪ್ಪ, ಹಬ್ಬಳ್ಳಿ, ಹೆಬ್ಬತ್ತಿ, ಹೀಪನಳ್ಳಿ, ಹೊಳೆಬೈಲ, ಹೊಸಕೊಪ್ಪ, ಹಾರೇಲಕೊಪ್ಪ, ಹುಲದೇವನಸರ, ಹುಸರಿ, ಇಸಳೂರ, ಜೀನಮನೆ, ಕಾನಗೋಡ, ಕಾಳಂಗಿ, ಕಲಕರಡಿ, ಕಂತ್ರಾಜಿ, ಕೆರೆಕೊಪ್ಪ, ಕಿರವತ್ತಿ, ಕೋಟಿಕೊಪ್ಪ, ಕೊಪ್ಪಗದ್ದೆ, ಕುಪ್ಪಳ್ಳಿ, ಲಂಡಕನಹಳ್ಳಿ, ಮಳಲಗಾಂವ, ಮಾಕಂಜಿ, ಮಾಸಡವಳ್ಳಿ, ಮತ್ತಿಹಳ್ಳಿ, ಮಾವಿನಕೊಪ್ಪ, ಮುಡಬೈಲ, ನರೆಬೈಲ, ನವಣಗೇರಿ, ಪುರ, ಪುಟ್ಟನಮನೆ, ಸಣ್ಣಕೇರಿ, ಸಾಂತವಳ್ಳಿ, ಶಿರ್ಶಿ, ಸೋಮನಹಳ್ಳಿ (ಸುಗಾವಿ ಫೀರ್ಕಾ), ಸೋಮನಹಳ್ಳಿ (ನರೇಬೈಲ ಫೀರ್ಕಾ), ಸುಗಾವಿ, ತಿಗಣಿ, ತುಡುಗುಣಿ, ಉಮ್ಮಚಗಿ, ಉಂಬಳೆಕೊಪ್ಪ, ಉಂಚಳ್ಳಿ, ವಡ್ಡಿ, ವದಗೇರಿ, ವೆಂಕಟಾಪುರ, ಯಕ್ಕಂಬಿ, ಯಡಳ್ಳಿ (೭೦ ಗ್ರಾಮಗಳು).	೭೪ ಬಂ ಮಣ
ಸರ್ವೇ ಗ್ರೂಪ II:— ಅಜ್ಜಿಬಳ, ಬೀಳಗಲಮನೆ, ದಾಸನಕೊಪ್ಪ, ಹಲಸರಗಿ, ಹನಮ್ಮಂದು ಗುಡ್ಡ, ಹರಗಿಮನೆ, ಹೊಸಕೋಟೆ (ಹೂರಕೋಟೆ ಫೀರ್ಕಾ), ಹುಣಸೆಕೊಪ್ಪ, ಜಾಗನಳ್ಳಿ, ಕಲ್ಲಳ್ಳಿ, ಕಲವೆ, ಕಡಗಿಮನೆ, ಮಾಳಗದ್ದೆ, ಸಣ್ಣಳ್ಳಿ, ಸಂಕದಮನೆ, ಶಿಗೇಹಳ್ಳಿ, ಹೂರಕೋಟೆ, ಯಡಹಳ್ಳಿ (೭೧ರಿಂದ ೮೮ರ ವರೆಗಿನ ೧೮ ಗ್ರಾಮಗಳು).	೮೧ ಬಂ. ಮಣ
ಸರ್ವೇ ಗ್ರೂಪ III — ಅಜನಳ್ಳಿ, ಅಗಸಳ್ಳಿ, ಅಡಳ್ಳಿ, ಅಂಬಲಿಹೊಂಡ, ಅಂಡಗಿ, ಬನಗೋಡಕೊಪ್ಪ, ಬಳಗಾರ, ಬಳವಳ್ಳಿ, ಬಂಡಲ, ಬಾಳೂರ, ಬೇಗದ್ದೆ, ಬೆಂಗಳ, ಬಿಟ್ಟಕೊಪ್ಪ, ಭಾಶಿ, ಬಿಸಲಕೊಪ್ಪ (ಅಜ್ಜಿಬಳ ಫೀರ್ಕಾ), ಬೊಮ್ಮನಳ್ಳಿ (ಹೂರಕೋಟೆ ಫೀರ್ಕಾ), ಬೊಪ್ಪನಳ್ಳಿ (ಹೂರಕೋಟೆ ಫೀರ್ಕಾ), ಚಂದಗೇರಿ, ಚಿಕ್ಕದಾಗ್ಲಿ, ದೇವರಕೊಪ್ಪ, ದೇವಿಮನೆ, ಫಕೀರ, ಗಾಣಗೇರಿ, ಗಡಿಹಳ್ಳಿ, ಗೋಣಗಟ್ಟಿ, ಗೋಳಿಕೊಪ್ಪ, ಹಳ್ಳಿಗಿ, ಹಕ್ಕಿಗದ್ದೆ, ಹಾಲಗದ್ದೆ, ಹಲಸಿನಕಟ್ಟೆ, ಹಲಸಿನಕೊಪ್ಪ, ಹಂದಿಮನೆ, ಹರಗಾರ, ಹನಮಂತಿ, ಹಾರೇಗೊಪ್ಪ, ಹೆಬ್ರೆ, ಹೆಗ್ಗರ, ಹೆಗ್ಗರ್ಸಿ, ಹೊಸೂರ, ಹಾರಮನೆ (ಹುಣಸೆಕೊಪ್ಪ ಫೀರ್ಕಾ), ಜಾನಮನೆ (ಸಂಪಖಂಡ ಫೀರ್ಕಾ), ಕಬ್ಬೆ, ಕಡಬಾಳ, ಕಾನಗೋಡ, ಕೆಲಗಾರ, ಕಲ್ಲಗುಂಡಿಕೊಪ್ಪ, ಕಲ್ಲಕಸರ, ಕೆಲಕೊಪ್ಪ, ಕಳ್ಳಿ, ಕಾನಳ್ಳಿ, ಕಂಡ್ರಾಜಿ, ಕಾನಗೋಡ, ಕನಕಾಪುರ, ಕಾನಕೊಪ್ಪ, ಕರ್ಕಳ್ಳಿ, ಕರೂರ (ಅಜ್ಜಿಬಾಳ ಫೀರ್ಕಾ), ಕೊಡಗಿಬೈಲ, ಕೊಡಗೋಡ, ಕೊಂಡಲಗಿ, ಕೊಪ್ಪ, ಕೊಟಗಿಹಳ್ಳಿ, ಕುಗಡಿಮನೆ, ಕುತ್ರಿ, ಕುಳವೆ, ಮುರ್ಕಿ, ಮತ್ತಿಗಾರ, ಲಿಂಗನಮಕ್ಕಿ, ಮಾದನಕೇರಿ, ಮುಷ್ಕಳ್ಳಿ, ಮಾರಗುಂಡಿ, ಮತ್ತಿಗಾರ, ಮೋಗದೂರ, ಮುಂಡಗಾರ, ಮುಗದಳ್ಳಿ, ಮುಂಡಗೇಹಳ್ಳಿ, ಮುಂಡಗೇಸರ, ನರೂರ, ನೆಗ್ಗು, ನೀರಲವಳ್ಳಿ, ನಾರಕಲ್ಲಕೊಪ್ಪ, ಓಣೇಗದ್ದೆ, ಪಡಗೇರಿ, ಸದಾಶಿವಳ್ಳಿ, ಸಹಸ್ರಳ್ಳಿ, ಸಾಲ್ಕಣಿ, ಸಂಪಖಂಡ, ಶಿರ್ಶಿವಾಕಿ, ಸುಗಾವಿ, ತಟ್ಟಿಕೈ, ತಟ್ಟೀಸರ, ತವರಕೊಪ್ಪ, ತೆಕಳ್ಳಿ, ಠಾಣಗುಂಡಿ, ಉಂಚಳ್ಳಿ, ಉಪಲೇಕೊಪ್ಪ, ವಡ್ಡಿನಕೊಪ್ಪ, ಯಾಡಳ್ಳಿ (೮೯ರಿಂದ ೧೮೫ನೇ ವರೆಗಿನ ೯೭ ಗ್ರಾಮಗಳು)	೭೩ ಬಂ. ಮಣ
ಸರ್ವೇ ಗ್ರೂಪ IV·— ಅಗಸಾಲ, ಅಂಡಳ್ಳಿ, ಅರಗಿನಮನೆ, ಅಕ್ಕಾಪುರ, ಅಡಗೋಡ, ಬಡಗಿ, ಬಕ್ಕಳ, ಬಾಳೇಗದ್ದೆ, ಬಸಗಣಿ, ಬೆಳಲೆ, ಬೇಡಗಾಂವ, ಧೈಲಂಬೆ, ಬೊಮ್ಮನಳ್ಳಿ, ಬೊಪ್ಪನಳ್ಳಿ (ಇಸಳೂರ ಫೀರ್ಕಾ), ಬಂಗಡಿ, ದೇವನಹಳ್ಳಿ, ದೇವನಮನೆ, ಗೋಳಕೊಪ್ಪ, ಗುರವಳ್ಳಿ, ಹರಡಸೆ, ಹಾರೇಪಾಲ, ಹೊಸಕೋಟೆ (ಮಂಜಗುಣಿ ಫೀರ್ಕಾ), ಹುಲೇಕಲ್ಲ, ಹುಲಗೋಡ, ಹುತ್ತಗಾರ, ಇಟಗಿ, ಜಡ್ಡಿಗದ್ದೆ, ಕಲ್ಲಳ್ಳಿ, ಕಾಳಂಗಾರ, ಕಂಡಿಗಾರ, ಕಂಚಾರ, ಕೆಳಗಿನ-ಓಣಿಕೇರಿ, ಕೋಡಿಗಾರ, ಕೋಲಗಾರ, ಕೊಪ್ಪ, ಕುದ್ರಗೋಡ, ಮಾಳೇನಹಳ್ಳಿ, ಮಾಡನೂರ, ಮಂಜಗುಣಿ, ಮತ್ತಿಘಟ್ಟ, ಮೇಲಿನ-ಓಣಿಕೇರಿ, ಮೋರೆಗದ್ದೆ, ಮಾಗಿಲಕೊಪ್ಪ, ಮುರೇಗಾರ, ನ್ಯಾಸರ, ಸತ್ತಿ, ಸವಿಲಗಾರ, ಸಾಲಕಣಿ, ಸೀಲಕಣ, ಸರಗುಪ್ಪ, ಸಾಲೆ, ಶಿಂಗನಳ್ಳಿ, ಶಿವಳ್ಳಿ (ಬಿಸಲಕೊಪ್ಪ ಫೀರ್ಕಾ), ಶಿವಳ್ಳಿ (ಫೀರ್ಕಾ), ಶಿವಗಾಂವ, ಸೋಂದಾ, ತಾರಗೋಡ, ತೆಪ್ಪಾರ (೧೮೬ರಿಂದ ೨೪೩ರ ವರೆಗಿನ ೫೮ ಗ್ರಾಮಗಳು)	೬೮ ಬಂ ಮಣ
ಸರ್ವೇ ಗ್ರೂಪ V:— ಬಾಳೇಕೈಮನೆ, ಬಿಡಗದ್ದೆ, ಗದ್ದೆಹಳ್ಳಿ, ಗೋಳಿಸರ, ಹಳ್ಳಗದ್ದೆ, ಹೊಸನಗದ್ದೆ, ಕಲ್ಲಗದ್ದೆ-ಕಂಚಿಗದ್ದೆ, ಕಾನಮುಸ್ಕಿ, ಕೆಳಗಿನಕೇರಿ, ಕೆಳಗಿನ-ನೀಲಕಣಿ, ಕಾಳಹಕ್ಕಲ, ಮುಡಸಿ, ಮುಂಡಗನಮನೆ, ಸಂಪೆಗೆನಕೇರಿ, ಸೋಮಗಿಮನೆ, ತಂಗಿನಮುಡಿ, ವಾನಳ್ಳಿ (೨೪೪ರಿಂದ ೨೬೦ರ ವರೆಗಿನ ೧೭ ಗ್ರಾಮಗಳು)	೬೪ ಬಂ ಮಣ
ಸರ್ವೇ ಗ್ರೂಪ VI:— ಧೋರಣಗಿರಿ, ಕಳ್ಳಳ್ಳಿ, ಮತ್ತಿ, ಶಿರಸಗಾಂವ, ಶಿರಗಣೆ (೨೬೧ರಿಂದ ೨೬೫ರ ವರೆಗಿನ ೫ ಗ್ರಾಮಗಳು.)	೬೬ ಬಂ ಮಣ

ಶಿರ್ಶಿ,

ತಾ ೨೦-೫-೧೯೪೮

M. H. Farokhi,
ಮಾಮಲೇದಾರ, ಶಿರ್ಶಿ

ಸುದ್ದಿಗಳ ಸಂದೂಕ (೫ನೇ ಪುಟದಿಂದ ಮುಂದೆ.) ವೃತ್ತಾಂತಗಳು ಹೀಗಿವೆ:- (೧) ನಥೂರಾಮ ವಿನಾಯಕ ಗೋಡಸೆ (ಪ್ರಾಯ ೩೭)ಯು ಹಿಂದೆ ದರ್ಜಿಯಾಗಿದ್ದನು. ೧೯೩೫ರಲ್ಲಿ ಅವನು ಸ್ವಾತಂತ್ರ್ಯವೀರ ಸಾವರಕರರ ಕಾರ್ಯದರ್ಶಿಯಾಗಿ ಭಾರತವನ್ನೆಲ್ಲ ಸಂಚರಿಸಿದನು. ೧೯೪೪ರಲ್ಲಿ ಪುಣೆಯಲ್ಲಿ "ಅಗ್ರಣೀ" ಎಂಬ ದಿನಪತ್ರಿಕೆ ಹೊರಡಿಸಿದನು. ಅದರ ಮೇಲೆ ಗದೆ ಬರುತ್ತಲೇ ಕಳೆದ ವರ್ಷ "ಹಿಂದು ರಾಷ್ಟ್ರ" ಎಂಬ ದಿನಪತ್ರಿಕೆ ಹೊರಡಿಸಿದನು. ಮಹಾತ್ಮರ ಪ್ರತ್ಯಕ್ಷ ಕೊಲೆ ಮಾಡಿದ ಆರೋಪ ಇವನ ಮೇಲುಂಟು. (೨) ನಾರಾಯಣದತ್ತಾತ್ರಯ ಆಪಟೇ (ಪ್ರಾಯ ೩೫) ಇವರು ಅಹಮ್ಮದನಗರದಲ್ಲಿ ಶಿಕ್ಷಕರಾಗಿದ್ದಾರೆ. ಅಲ್ಲಿ ಇವರೊಂದು ಕೋವಿ-ಸಂಘ ಸ್ಥಾಪಿಸಿದ್ದರು. (೩) ವಿಷ್ಣು ದಿಗಂಬರ ಕರಕರ (೩೫) ಇವರೂ ಅಹಮ್ಮದನಗರದವರು. ಅವರದೊಂದು ಖಾನಾವಳಿಯುಂಟು. (೪) ದಿಗಂಬರ ರಾಮಚಂದ್ರ ಬಡಗೆ (೩೮) ಇವರು ಪುಣೆಯಲ್ಲಿ ಶಸ್ತ್ರಾಸ್ತ್ರಗಳದೊಂದು ಅಂಗಡಿಯನ್ನಿಟ್ಟಿದ್ದರು. (೫) ಮದನಲಾಲ ಕಾಶ್ಮೀರಿಲಾಲ ಪಾಹವಾ (ಪ್ರಾಯ ೨೩) ಇವನು ಪಂಜಾಬಿ ನಿರಾಶ್ರಿತನು. ಜನವರಿಯಲ್ಲಿ ಅಹಮ್ಮದನಗರದ ಸಮೀಪದ ವಿಸಾಪೂರದಲ್ಲಿರುವ ನಿರಾಶ್ರಿತರ ಶಿಬಿರದಲ್ಲಿದ್ದನು. ಜನವರಿ ೨೦ ರಂದು ಪ್ರಾರ್ಥನಾ ಸಭೆಯಲ್ಲಿ ಬಾಂಬುಗುಂಡು ಒಗೆದವನು ಇವನೇ. (೬) ಶಂಕರ ಕಿಷ್ಟಯ್ಯಾ ಇವನು ತೆಲಗು ದೇಶದವನು. ರಿಕ್ಷಾಗಾಡಿ ಎಳೆಯುತ್ತಿದ್ದನಂತೆ. ಬಡಗೆಯವರ ಸೇವಕನಿದ್ದನಂತೆ. (೭) ಗೋಪಾಳ ವಿನಾಯಕ ಗೋಡಸೆ (೨೭) ಇವನು ನಥೂರಾಮ ಗೋಡಸೆಯ ತಮ್ಮನು. ಕಳೆದ ಮಹಾಯುದ್ಧದಲ್ಲಿ ಸೈನ್ಯದಲ್ಲಿ ಸೇರಿದ್ದನಂತೆ. (೮) ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರಕರ (ಪ್ರಾಯ ೬೫) ಇವರ ಚರಿತ್ರೆ ಬಹಳ ಅದ್ಭುತವಿದೆ; ರೋಮಾಂಚಕಾರಿಯಾಗಿರುತ್ತದೆ. ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ಕ್ರಾಂತಿಕಾರಿ ರಾಜಕಾರಣದಲ್ಲಿ ಸೇರಿದ್ದರು. ಮುಂದೆ ವಿಲಾಯತಿಗೆ ಹೋಗಿ ಬೆರಿಸ್ಟರರಾದರು. ಆದರೆ ವಿಲಾಯತಿಯಲ್ಲಿಯೂ ವಕೀಲಿ ಮಾಡಲಿಕ್ಕೆ ಪರವಾನಿಗೆ ಸಿಗಲಿಲ್ಲ. ವಿಲಾಯತಿಯಲ್ಲಿದ್ದಾಗ ಭಾರತವನ್ನು ಸ್ವತಂತ್ರಗೊಳಿಸುವದಕ್ಕಾಗಿ ಒಂದು ವ್ಯೂಹ ರಚಿಸಿದರು. ೧೯೧೦ರಲ್ಲಿ ಹಿಡಿಯಲ್ಪಟ್ಟ ನಾಶಿಕದ ಒಳಸಂಚಿನ ಖಟ್ಲೆಯ ಸಂಬಂಧದಲ್ಲಿ ಇವರಿಗೆ ವಿಲಾಯತಿಯಲ್ಲಿ ಸೆರೆಹಿಡಿದು, ಖಟ್ಲೆಯ ವಿಚಾರಣೆಗಾಗಿ ಮುಂಬಯಿಗೆ ತರುತ್ತಿದ್ದಾಗ, ಮಾರ್ಸೆಲಿ ಎಂಬ ಫ್ರೆಂಚ ಬಂದರದ ಸಮೀಪ ಹಡಗದಿಂದ ಕಡಲೊಳಗೆ ಜಿಗಿದು ಈಸಿ, ದಂಡೆಗೆ ಹೋದರು! ಪೋಲೀಸರು ಬೆನ್ನಟ್ಟಿ ಹೋಗಿ ಇವರನ್ನು ದಂಡೆಯ ಮೇಲೆ ಪುನಃ ಹಿಡಿದರು. ಈ ಬಂಧನ ಅಂತರರಾಷ್ಟ್ರೀಯ ಕಾನೂನಿನಂತೆ ಅನ್ಯಾಯ್ಯ ಮತ್ತು ಆಕ್ಷೇಪಣೀಯವಿರುತ್ತದೆಂದು ಸಾವರಕರರು ವಾದಿಸಿ ಹೇಗ (ಹೊಲಂಡ)ದಲ್ಲಿರುವ ಅಂತರರಾಷ್ಟ್ರೀಯ ನ್ಯಾಯಸ್ಥಾನದ ವರೆಗೆ ತಮ್ಮ ದೂರು ಒಯ್ದರು. ಆದರೆ ಬ್ರಿಟಿಶ ಸರಕಾರದ ವಿರುದ್ಧ ಪರತಂತ್ರ ಭಾರತದ ಓರ್ವ ಪ್ರಜಾಜನನಿಗೆ ಅಲ್ಲಿ ನ್ಯಾಯ ಸಿಗುವದೆಂತು? ಕೊನೆಗೆ ಸಾವರಕರರ ಬಂಧನ ಕಾನೂನ-ಬದ್ಧವಿರುತ್ತದೆಂದು ನಿಕಾಲಿಯಾಗಿ, ಮುಂಬಯಿಯ ಹಾಯಕೋರ್ಟಿನಲ್ಲಿ ಅವರ ಮೇಲಿನ ಖಟ್ಲೆಯ ವಿಚಾರ ನಡೆಯಿತು; ಮತ್ತು ಅವರಿಗೆ ಕರಿ ನೀರಿನ ೨ ಶಿಕ್ಷೆಗಳಾದವು! ಅದಾಗಲೇ ಇವರ ಅಣ್ಣ ಗಣೇಶ ಸಾವರಕರರಿಗೂ ರಾಜದ್ರೋಹದ ಅಪರಾಧದ ಬಗ್ಗೆ ಜನ್ಮ ಕರಿ ನೀರಿನ ಶಿಕ್ಷೆಯಾಗಿತ್ತು. ಇಬ್ಬರೂ ಅಣ್ಣ-ತಮ್ಮಂದಿರು ೧೯೧೧ರಿಂದ ಅಂದಮಾನದಲ್ಲಿದ್ದರು. ಅಲ್ಲಿಯ ಅನುಭವಗಳನ್ನು ವಿನಾಯಕರಾಯರು "ಅಂದಮಾನಚ್ಯಾ ತುರಂಗಾಂತೂನ" ಎಂಬ ಪುಸ್ತಕದಲ್ಲಿ ಬಹಳ ಹೃದಯಂಗಮವಾಗಿ ಬಣ್ಣಿಸಿದ್ದಾರೆ. ಗಣೇಶ ಸಾವರಕರರಿಗೆ ಅಂದಮಾನದಲ್ಲಿ ಕ್ಷಯದ ವಿಕಾರವಾದ್ದರಿಂದ ೧೯೨೧ರಲ್ಲಿ ಬಿಡುಗಡೆ ಮಾಡಲಾಯಿತು. ೧೯೨೪ರಲ್ಲಿ ವಿನಾಯಕರಾಯರಿಗೆ ಅಂದಮಾನದಿಂದ ರತ್ನಾಗಿರಿ ತುರಂಗಕ್ಕೆ ತರಲಾಯಿತು; ಮುಂದೆ ಅವರ ಬಿಡುಗಡೆಯಾದರೂ ಸರಕಾರವು ಅವರನ್ನು ಸ್ಥಾನಬದ್ಧರನ್ನಾಗಿ ಮಾಡಿಟ್ಟಿತು; ಬೇರೆ ಕೆಲವು ನಿರ್ಬಂಧಗಳನ್ನೂ ಹಾಕಿತು. ೧೯೩೭ರಲ್ಲಿ ಕಾಂಗ್ರೆಸ ಸರಕಾರ ಬಂದ ಮೇಲೆ ಆ ನಿರ್ಬಂಧಗಳು ಹೋದವು. ಆ ನಂತರ ಸ್ವಾತಂತ್ರ್ಯವೀರ ಸಾವರಕರರು ಹಿಂದು ಮಹಾಸಭೆಯ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಂಡು, ಅದರ ರಾಜಕಾರಣಕ್ಕೆ ಯುಯುತ್ಸು ರೂಪವನ್ನು ಕೊಟ್ಟರು. ಹಲವಾರು ವರ್ಷ ಹಿಂದು ಮಹಾಸಭೆಯ ಅಧ್ಯಕ್ಷರು ಇವರೇ ಆಗಿದ್ದರು. ಮುಂದೆ ಅನಾರೋಗ್ಯದ ಮೂಲಕ ಅದನ್ನು ಅವರು ಬಿಟ್ಟುಗೊಟ್ಟರು. ಈಗಲೂ ಅವರ ಪ್ರಕೃತಿ ನೆಟ್ಟಗಿಲ್ಲ; ಇತ್ತ ೧-೨ ವರ್ಷದಿಂದ ಅವರು ಬಹಿರಂಗ ರಾಜಕಾರಣದಲ್ಲಿ ದೃಷ್ಟಿಗೆ ಸಹ ಬೀಳುತ್ತಿದ್ದಿಲ್ಲ. ಮರಾಠಿಯಲ್ಲೂ ಇಂಗ್ಲಿಶ ಭಾಷೆಯಲ್ಲೂ ಇವರು ಅನೇಕ ಪ್ರಭಾವಿ ಗ್ರಂಥಗಳನ್ನು ಬರೆದಿದ್ದಾರೆ. (೯) ಡಾ. ದತ್ತಾತ್ರಯ ಸದಾಶಿವ ಪರಚುರೇ (೪೫) ಇವರು ಗ್ವಾಲ್ಹೇರದಲ್ಲಿ ಡಾಕ್ಟರಿ ವ್ಯವಸಾಯ ಮಾಡುತ್ತಿದ್ದರು. ಇವರಿಗೂ ಸಾವರಕರ-ಗೋಡಸೆಯವರಿಗೂ ದಟ್ಟ ಗೆಳೆತನವಿರುತ್ತದಂತೆ. ಈ ೯ ಆರೋಪಿತರ ಪೈಕಿ ಕೆಲವರ ಮೇಲೆ ಕೊಲೆ ಮಾಡಿದ, ಕೆಲವರ ಮೇಲೆ ಕೊಲೆಯ ಒಳಸಂಚಿನಲ್ಲಿ ಸೇರಿದ, ಕೆಲವರ ಮೇಲೆ ಕೊಲೆಗೆ ಸಹಾಯ ಮಾಡಿದ, ಕೆಲವರ ಮೇಲೆ ಅಕ್ರಮ ಶಸ್ತ್ರಾಸ್ತ್ರಗಳನ್ನೂ ಸ್ಫೋಟಕಗಳನ್ನೂ ಇಟ್ಟುಕೊಂಡ ಆರೋಪಗಳಿವೆ! ಫಿರ್ಯಾದಿಯ ಪರವಾಗಿ ಈ ಖಟ್ಲೆಯಲ್ಲಿ ೨೫೦ ಸಾಕ್ಷಿದಾರರಿದ್ದಾರಂತೆ. ಅವರಲ್ಲಿ ಅನೇಕ ಸ್ತ್ರೀಯರೂ ಇದ್ದಾರೆ.

(೩ನೇ ಪುಟದ ಮೇಲೆ ಮುಂದರಿಸಿದೆ.)

ಪ್ರಕಟನೆ.

ಮುಂಬಯಿ ಒಕ್ಕಲತನದ ಕಾನೂನಿನ ಆಧಳಿತದ ಸಂಬಂಧದ ಮಾರ್ಚ ಮತ್ತು ಎಪ್ರಿಲ್ ತಿಂಗಳುಗಳ ಬಾಬತು ಮಾಹಿತಿ ತಿಳಿಸುವ ಪತ್ರಿಕೆಯು.

ಕಾನಡಾ ಜಿಲ್ಲಾ.

ವಿವರಗಳು	ಯಾವ ತಿಂಗಳ ಬಗ್ಗೆ.	
	ಮಾರ್ಚ	ಎಪ್ರಿಲ್
೧ ತಿಂಗಳ ಮೊದಲಿಗೆ ಶಿಲ್ಕು ಇದ್ದ ಟೆನನ್ಸಿ ಅರ್ಜಿಗಳ ಸಂಖ್ಯೆ	೪೮೬೫	೫೬೭೭
೨ ಹೊಸದಾಗಿ ಬಂದ ಅರ್ಜಿಗಳು	೧೬೧೦	೧೮೩೮
೩ ತಿಂಗಳಲ್ಲಿ ನಿಕಾಲೆಯಾದ ಅರ್ಜಿಗಳ ಸಂಖ್ಯೆ.	೭೯೮	೧೬೮೪
೪ ತಿಂಗಳ ಕೊನೆಗೆ ಶಿಲ್ಕು ಉಳಿದ ಅರ್ಜಿಗಳು.	೫೬೭೭	೫೮೩೧
೫ ಒಡೆಯರಿಗೆ ಕಬಜಾ ಕೊಡಿಸುವ ವಿಷಯದಲ್ಲಿ ನಿಕಾಲಿಯಾದ ಅರ್ಜಿಗಳ ಸಂಖ್ಯೆ.	೧೮೦	೧೯೯
೬ ರೈತರಿಗೆ ಕಬಜಾ ಕೊಡಿಸುವ ವಿಷಯದಲ್ಲಿ ನಿಕಾಲೆಯಾದ ಅರ್ಜಿಗಳ ಸಂಖ್ಯೆ.	೩೬೩	೨೫೨
೭ ಹೊಲದೊಡೆಯರಿಗೆ ಕಬಜೆಯ ಬದಲು ಗೇಣಿ ಕೊಡಿಸಿದ ಅರ್ಜಿಗಳ ಸಂಖ್ಯೆ.	೧೯೪	೧೪೩
೮ ಗೇಣಿ ಕೊಡಿಸಿದ್ದರ ಮೊಬಲಗು.	ರೂ. ೧೦೩೩೭/-	ರೂ. ೮೨೨೮/-

ಟಿಪ್ಪಣಿ:- ಸಂರಕ್ಷಿತ ರೈತರ ಹಕ್ಕು ಸಂಬಂಧಗಳನ್ನು ಗ್ರಾ. ನ. ನಂ. VIರಲ್ಲಿ ನೋಂದಿಸುವ ಕೆಲಸವು ಮಾರ್ಚ, ಎಪ್ರಿಲ್ ತಿಂಗಳುಗಳಲ್ಲಿ ಭರದಿಂದ ಸಾಗಿದ್ದು, ಮೇ ತಿಂಗಳಲ್ಲಿ ಅದು ಪೂರ್ತಿಗೊಂಡಿದೆ.

ಮಾರ್ಚ, ತಿಂಗಳಲ್ಲಿ ಟೆನನ್ಸಿ ಕಾಯದೆಯ ಕಲಮು ೪, ೭ ಮತ್ತು ೫ ಹಾಗೂ ೨೦, ಇವುಗಳನ್ವಯ ಭೂಮಿಗಳ ಕಬಜಾ ಕೊಡಿಸುವ ಸಂಬಂಧದ ೫೫೩ ಅರ್ಜಿಗಳು ನಿಕಾಲೆಯಲ್ಲಿ ಬಂದಿವೆ. ೩೬೮ ಪ್ರಕರಣಗಳಲ್ಲಿ ವಿಚಾರ ನಡೆದು ಭೂಮಿಗಳು ರೈತರ ಕಬಜೆಯಲ್ಲೇ ಇಡಗೊಡಲ್ಪಟ್ಟಿವೆ. ಉಳಿದ ಪ್ರಕರಣಗಳಲ್ಲಿ ಹೊಲಗಳ ಕಬಜೆ ಒಡೆಯರಿಗೆ ಕೊಡಿಸಿದೆ. ಈ ಪೈಕಿ ೭೭ ಪ್ರಕರಣಗಳಲ್ಲಿ ರೈತರು ತಾವಾಗಿಯೇ ಕಬಜಾ ಬಿಟ್ಟು ಕೊಟ್ಟಿದ್ದುಂಟು. ಎಪ್ರಿಲ್ ತಿಂಗಳಲ್ಲಿ ೪೫೨ ಕಬಜಾ-ಅರ್ಜಿಗಳ ನಿಕಾಲಿಯಾಗಿರುತ್ತಿದ್ದು, ೩೧೩ ಪ್ರಕರಣಗಳಲ್ಲಿ ರೈತರ ಕಬಜೆಯೇ ಊರ್ಜಿತ ವಿಡಲ್ಪಟ್ಟಿದೆ; ೮೧ ಪ್ರಕರಣಗಳಲ್ಲಿ ರೈತರು ಸ್ವ-ಖುಷಿಯಿಂದ ಕಬಜಾ ಬಿಟ್ಟುಕೊಟ್ಟಿರುತ್ತಾರೆ. ಇಂತಹ ಅರ್ಜಿಗಳು ಹೆಚ್ಚಾಗಿ ಅಂಕೋಲಾ, ಯಲ್ಲಾಪುರ, ಹಳಿಯಾಳ, ಮುಂಡಗೋಡ ಮತ್ತು ಸಿದ್ದಾಪುರ ತಾಲೂಕಿನವಿರುತ್ತವೆ.

ಮಸೂಲ ಬಂದ ಗೇಣಿಯ ಬಗ್ಗೆ ಪಾವತಿ ಕೊಡದ ಇಬ್ಬ ಜಮೀನದಾರರ ವಿರುದ್ಧ ಅಂಕೋಲಾ ತಾಲೂಕಿನಲ್ಲಿ ಟೆನನ್ಸಿ ಕಾಯದೆಯ ಕಲಮು ೨೨ರನ್ವಯ ಪ್ರಕರಣ ನಡಿಸಲಿಕ್ಕೆ ತಿಳಿಸಿದ್ದುಂಟು.

ಕಲಮು ೭ರನ್ವಯ ಒಡೆಯರು ಸ್ವಂತ ಸಾಗುವಳಿಯ ದೆಸೆಯಿಂದ ಯಾ ಇತರ ಕಾರಣಕ್ಕಾಗಿ ಕಬಜಾ ಬೇಡಿದ ಪ್ರಕರಣಗಳಲ್ಲಿ ಬಳ್ಳೇ ಕಾಳಜಿಯಿಂದ ವಿಚಾರ ಮಾಡಿ, ಯೋಗ್ಯ ಕಂಡಲ್ಲಿ ಮಾತ್ರ ಹೊಲದೊಡೆಯರಿಗೆ ಕಬಜಾ ಕೊಡಿಸಲಾಗುತ್ತದೆ.

ಮಾಮಲೇದಾರರೂ ಟೆನನ್ಸಿ ಅವ್ವಲ ಕಾರಕೂನರೂ ಸಂಚಾರಕ್ಕೆ ಹೋದಾಗ ಹಳ್ಳಿ-ಹಳ್ಳಿಗಳಲ್ಲಿ ಒಡೆಯ-ಒಕ್ಕಲಿಗರ ಸಭೆಗಳನ್ನು ಕೂಡಿಸಿ, ಅವರಿಗೆ ಹೊಲ-ಸಾಗುವಳಿ ಕಾನೂನಿನ ಪೂರ್ಣ ಮಾಹಿತಿ ಕೊಡುತ್ತಾರೆ. ಗೇಣಿಯ ಪರಿಮಾಣದ ಬಗ್ಗೆ ಹಾಗೂ ಲಾವಣಿಯ ಅವಧಿಯ ಬಗ್ಗೆ ಹೆಚ್ಚಾಗಿ ಜನರಲ್ಲಿ ತಪ್ಪು ತಿಳುವಳಿಕೆಯುಂಟು. ಇದನ್ನು ಹೋಗಲಾಡಿಸಿ ಅಧಿಕಾರಿಗಳು ಸರಿಯಾದ ಮಾಹಿತಿ ಕೊಡುತ್ತಾರೆ. ಯೋಗ್ಯ ಅವಧಿಯಲ್ಲಿ ಗೇಣಿ ಸಲ್ಲಿಸಲಿಕ್ಕೆ ರೈತರಿಗೆ ಬೋಧಿಸುತ್ತಾರೆ. ಆದರೂ ಅವಧಿಯಲ್ಲಿ ಗೇಣಿ ಸಲ್ಲಿಸದ ರೈತರ ವಿರುದ್ಧ ಕರಾವಳಿಯ ಪ್ರದೇಶದಲ್ಲಿ, ಅಂದರೆ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟಕಳ ತಾಲೂಕ-ಪೇಟೆಗಳಲ್ಲಿ ಹೊಲದೊಡೆಯರು ಬಹಳಷ್ಟು ಅರ್ಜಿಗಳನ್ನು ಮಾಡಿರುತ್ತಾರೆ. ಈ ಅರ್ಜಿಗಳ ವಿಚಾರವನ್ನು ಆಯಾ ತಾಲೂಕಿನ ಮಾಮಲೇದಾರರ ಮತ್ತು ಅವ್ವಲ ಕಾರಕೂನರು ಮಾಡುತ್ತಿದ್ದುದರ ಜೊತೆಗೆ ಜಕೋಟಿಯಲ್ಲಿರುವ ಬೇರೆ ತಾಲೂಕುಗಳೊಳಗಿನ ಟೆನನ್ಸಿ ಅವ್ವಲ ಕಾರಕೂನರೂ ಅವರ ಸಹಾಯಕ್ಕೆ ಒಂದು ಇನಸಾಫ ಮಾಡುತ್ತಾರೆ

ಕಾರವಾರ,
ತಾ ೨೫-೫-೧೯೪೮.

R. J. Rebello,
ಕಲೆಕ್ಟರ, ಕಾನಡಾ.

ಇದನ್ನು ಪಾಂಡುರಂಗ ಕೃಷ್ಣ ಕಾನಫಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg No. B 1271

Special Number:

Price: As -

THE KANARA NEWS, KUMTA.

5th JUNE, 1948.

Matriculation Examination, 1948.

The result of the Matriculation examination held by the Bombay University in March last is declared this morning. Herebelow is given the list of the students (Seat Nos only) who appeared at the Karwar centre and have passed the examination. The figures in brackets against the numbers of some students are the marks obtained by them. We offer our hearty congratulations to all the successful students.

41715, 41713, 41721 (352), 41722, 41723 (372), 41730 (361), 41733, 41734 (413), 41736, 41737 (410), 41739 (456), 41740, 41741, 41743 (391), 41744, 41745, 41746 (377), 41747, 41749, 41751 (417), 41752 (385), 41753 (320), 41754 (470), 41755 (374), 41756, 41758, 41759, 41763, 41765 (481), 41768 (386), 41769 (454), 41770, 41771 (358), 41772 (527), 41773 (441), 41774 (374), 41777 (558), 41778, 41780 (521), 41781, 41785 (358), 41789, 41790, 41797, 41799 (459), 41801 (360), 41804, ,,819 (37[illegible]), ,,824, (359), ,,826, ,,838 (451), ,,839 (388), ,,841, ,,842 (358), ,,843, ,,845 (411), ,,846 (472), ,,848, ,,850 (393), 853, 41855 (366), ,,860, ,,861, ,,862 (436), ,,863 (365), ,,864 (547), ,,867 (423), ,,868 (442), ,,872, ,,873, ,,875 (485), ,,876 (501), 877 (461), ,,878 (359), ,,880, ,,883, ,,884, ,,886, ,,888, ,,890, 891 (379), ,,893 (398), ,,896, ,,897 (419), ,,898, ,,899, ,,902 (374), ,,908, ,,909 (531), 910, ,,915, ,,916 (353), ,,917 (413), ,,918, ,,920 (508), ,,921 (379), ,,923 (368), ,,925 (405), ,,926, ,,931, ,,935, ,,936, ,,937 (439), ,,939, ,,941 (402), ,,942 (451), ,,943 (386), ,,949 (400), ,,950, ,,952, (382), ,,961, ,,965 (370), ,,971, ,,972, ,,974 (370), ,,975, ,,977, ,,978 (439), ,,979 (450), ,,980 (37[illegible]), ,,981 (401), ,,982, ,,985 (437), ,,990 (374), ,,996 (354), ,,997 (430), ,,998 (438).

42009 (371), 42011 (370), ,,42012 (373), ,,42014 (355), ,,005 (360), ,,006 (377), ,,017 (373), ,,018, ,,012 (407), ,,016 (390), ,,015, ,,029 (517), ,,035 (413), ,,036, ,,039 (363), ,,044 (343), ,,046 (390), ,,049 (465), ,,050, 353, ,,052 (396), ,,053 (386), ,,054, ,,058, ,,059 (449), ,,068, ,,069 (450), ,,072 (360), ,,076 (479), (364), ,,08[illegible], ,,086 (428), ,,090 (419), ,,091 (457), ,,096 (441), ,,097 (373), ,,100 (414), ,,103, ,,106, ,,107 (359), ,,109, ,,111 (478), ,,112 (359), ,,113 (414), ,,114 (395), ,,115 (357), ,,116, ,,117, ,,119, ,,121, ,,123, ,,138 (373), ,,139 (355), ,,140 (373), ,,141, ,,142 (414), ,,143 (472), ,,146 (356), ,,150, ,,156 (355), ,,157, ,,159 (433), ,,160 (420), 161, ,,164, ,,165 (409), ,,166, ,,171, ,,172 (383), ,,177 (372), ,,183, ,,189, 202 (499), ,,212 (361), ,,215 (472), ,,216 (362), ,,217 (47[illegible]), ,,218 (363), 42219 (451), ,,220, ,,221 (411), ,,222, ,,236, ,,238, ,,241, ,,245, ,,248, ,,249, ,,251, ,,262 (407), ,,266, ,,272, ,,276, ,,278, ,,280, ,,281, ,,282, ,,283, ,,284, ,,286, ,,290, ,,291, ,,292, ,,294, ,,295, ,,2[illegible].

NOTE:- As the University list of students appearing for the examination has not been received till today, we regret we could not decode the seat Nos. in names or classify the students according to school. In the absence of the list we could not also secure the results of students who appeared at centres other than Karwar.

[illegible]

[illegible]

ಕುದ್ದಿಗಳ ಸಂದೂಕ (ಸನೇ ಪುಟದಿಂ ವೃತ್ತಾಂತಗಳು ಹೀಗಿವೆ – (೧) ನಥುರಾಮ ಗೋಡಸೆ (ಪ್ರಾಯ ೩೬)ಯು ಹಿಂದೆ ೧೯೩೩ರಲ್ಲಿ ಅವನು ಸ್ವಾತಂತ್ರ್ಯವೀರ ಸಾವರ ದರ್ಶಿಯಾಗಿ ಭಾರತವನ್ನೆಲ್ಲ ಸಂಚರಿಸಿದನು. ಪುಣೆಯಲ್ಲಿ "ಅಗ್ರಣೀ" ಎಂಬ ದಿನಪತ್ರಿಕೆ ನು ಆದರ ಮೇಲೆ ಗವ ಬರುತ್ತಲೇ ಕಳೆದ ದೂ ರಾಷ್ಟ್ರ" ಎಂಬ ದಿನಪತ್ರಿಕೆ ಹೊರಡಿಸಿದನ ರ ಪ್ರತ್ಯಕ್ಷ ಕೊಲೆ ಮಾಡಿದ ಆರೋಪ ಇವನ (೨) ನಾರಾಯಣದತ್ತಾತ್ರಯ ಆಪಟೇ (ಪ್ರಾಯ ರು ಅಹಮ್ಮದನಗರದಲ್ಲಿ ಶಿಕ್ಷಕರಾಗಿದ್ದಾರೆ ಅ ದು ಕೋವಿ-ಸಂಘ ಸ್ಥಾಪಿಸಿದ್ದರು. (೩) ವಿಷ ಕರಕರ (೩೫) ಇವರೂ ಅಹಮ್ಮದನಗರದ ದೊಂದು ಖಾನಾವಳಿಯುಂಟು (೪) ದಿಗಂಬ ದ್ರ ಬಡಗೆ (೩೮) ಇವರು ಪುಣೆಯಲ್ಲಿ ಶಸ್ತ್ರಾಸ್ತ್ರ ಅಂಗಡಿಯನ್ನಿಟ್ಟಿದ್ದರು (೫) ಮದನಲಾಲ ಪಾಹವಾ (ಪ್ರಾಯ ೨೩) ಇವನು ಪಂಜಾಬಿ ನ ಜನವರಿಯಲ್ಲಿ ಅಹಮ್ಮದನಗರದ ಸಮೀಪದ ವಿ ದ ನಿರಾಶ್ರಿತರ ಶಿಬಿರದಲ್ಲಿದ್ದನು ಇನವರಿ ತಾ. ೨೦ ನಾ ಸಭೆಯಲ್ಲಿ ಬಾಂಬುಗುಂಡು ಒಗೆದವನು ಇವ ಶಂಕರ ಕ್ರಿಷ್ಟಯ್ಯಾ ಇವನು ತೆಲಗು ದೇಶದವನು ಎಳೆಯುತ್ತಿದ್ದನಂತೆ. ಬಡಗೆಯವರ ಸೇವಕ. (೭) ಗೋಪಾಳ ವಿನಾಯಕ ಗೋಡಸೆ (೨೭ ನಥುರಾಮ ಗೋಡಸೆಯ ತಮ್ಮ. ಕಳೆ ಯುದ್ಧದಲ್ಲಿ ಸೈನ್ಯದಲ್ಲಿ ಸೇರಿದ್ದನಂತೆ. (೮) ಸ ವೀರ ವಿನಾಯಕ ದಾಮೋದರ ಸಾವರಕರ (ಪ್ರಾ ಇವರ ಚರಿತ್ರೆ ಬಹಳ ಅದ್ಭುತವಿದೆ, ರೋಮಾಂ ಯಾಗಿರುತ್ತದೆ. ಕಾಲೇಜಿನಲ್ಲಿ ಕಲಿಯುತ್ತಿರುವಾಗ ಕಾರಿ ರಾಜಕಾರಣದಲ್ಲಿ ಸೇರಿದ್ದರು ಮುಂದೆ ವಿ ಹೋಗಿ ಬಾರಿಸ್ಟರರಾದರು ಆದರೆ ವಿಲಾಯತಿಯ ವಕೀಲಿ ಮಾಡಲಿಕ್ಕೆ ಪರವಾನಗಿ ಸಿಗಲಿಲ್ಲ. ವಿಲಾಯ ದ್ದಾಗ ಭಾರತವನ್ನು ಸ್ವತಂತ್ರಗೊಳಿಸುವದಕ್ಕಾಗಿ ವ್ಯೂಹ ರಚಿಸಿದರು. ೧೯೧೦ರಲ್ಲಿ ಹಿಡಿಯಲ್ಪಟ್ಟನಾಸಿ ಸಂಚಿನ ಖಟ್ಲೆಯ ಸಂಬಂಧದಲ್ಲಿ ಇವರಿಗೆ ವಿಲಾಯ ಕರೆಹಿಡಿದು, ಖಟ್ಲೆಯ ವಿಚಾರಣೆಗಾಗಿ ಮುಂಬಯಿ ದ್ದಾಗ, ಮಾರ್ಸೇಲಿ ಎಂಬ ಫ್ರೆಂಚ ಬಂದರದ ಸಮೀ ಗದಿಂದ ಕಡಲೊಳಗೆ ಜಿಗಿದು ಈಸಿ, ದಂಡೆಗೆ ಹೋ ಪೋಲೀಸರು ಬೆನ್ನಟ್ಟಿ ಹೋಗಿ ಇವರನ್ನು ದಂಡೆಯ ಪುನಃ ಹಿಡಿದರು. ಈ ಬಂಧನ ಅಂತರರಾಷ್ಟ್ರೀಯ ನಂತೆ ಅನ್ಯಾಯ್ಯ ಮತ್ತು ಆಕ್ಷೇಪಣೀಯವೆಂದು ಸಾವರಕರರು ವಾದಿಸಿ ಹೇಗ (ಹಾಲಂಡ) ಅಂತರರಾಷ್ಟ್ರೀಯ ನ್ಯಾಯಸ್ಥಾನದ ವರೆಗೆ ತಮ್ಮ ಒಯ್ದರು. ಆದರೆ ಬ್ರಿಟಿಶ ಸರಕಾರದ ವಿರುದ್ಧ ಭಾರತದ ಓರ್ವ ಪ್ರಜಾಜನನಿಗೆ ಅಲ್ಲಿ ನ್ಯಾಯ ಸಿ ತು ? ಕೊನೆಗೆ ಸಾವರಕರರ ಬಂಧನ ಕಾನೂನ-ಬ ದ್ಧವೆಂದು ನಿಕಾಲೆಯಾಗಿ, ಮುಂಬಯಿಯ ಹಾಯ ನಲ್ಲಿ ಅವರ ಮೇಲಿನ ಖಟ್ಲೆಯ ವಿಚಾರ ನಡೆ ಮತ್ತು ಅವರಿಗೆ ಕರಿ ನೀರಿನ ೨ ಶಿಕ್ಷೆಗಳು ಆದಾಗಲೇ ಇವರ ಅಣ್ಣ ಗಣೇಶ ಸಾ ರಿಗೂ ರಾಜದ್ರೋಹದ ಅಪರಾಧದ ಬಗ್ಗೆ ಕರಿ ನೀರಿನ ಶಿಕ್ಷೆಯಾಗಿತ್ತು, ಇಬ್ಬರೂ ಅಣ್ಣ-ತಮ್ಮ ೧೯೧೧ರಿಂದ ಅಂದಮಾನದಲ್ಲಿದ್ದರು ಅಲ್ಲಿಯ ಅ ಗಳನ್ನು ವಿನಾಯಕರಾಯರು "ಅಂದಮಾನಚ್ಯಾ ತುರುಂಗಾತೂನ" ಎಂಬ ಪುಸ್ತಕದಲ್ಲಿ ಬಹಳ ಹೃದಯಂಗ ಬಣ್ಣಿಸಿದ್ದಾರೆ. ಗಣೇಶ ಸಾವರಕರರಿಗೆ ಅಂದಮಾ ಕ್ಷಯದ ವಿಕಾರವಾದ್ದರಿಂದ ೧೯೨೧ರಲ್ಲಿ ಬಿಡುಗಡೆ ಯಾಯಿತು ೧೯೨೪ರಲ್ಲಿ ವಿನಾಯಕರಾಯರಿಗೆ ಅಂ ಮಾನದಿಂದ ರತ್ನಾಗಿರಿ ತುರಂಗಕ್ಕೆ ತರಲಾಯಿತು; ಕ

ಇದನ್ನು ಪಾಂಡುರಂಗ ಕೃಷ್ಣ [illegible] ಭಾಗ(

Reg. No. B. 1270. Monday, 7-6-1948.

ಜಾಹೀರಾತುಗಳ ದರ:-
ಸ್ಥಳಾವಕಾಶ ೧ ಇಂಚು ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಕಾನಡಾವೃತ್ತ.

ವರ್ಷ ೩೦.] THE KANARA NEWS. [ಸಂಚಿಕೆ ೪೯.

ಕುಮಟಾ:- ಸೋಮವಾರ, ತಾ ೭—೬—೧೯೪೮.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ಪತ್ರಿಕೆ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ತರಿಸುವವರು
ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ತೆರಬೇಕು.
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಸ್ಥಾನಿಕ ವೃತ್ತಾಂತ.

ಕುಮಟಾ— ನಿನ್ನೆಯಿಂದ ಮಳೆಗಾಲದ ದಕ್ಷಿಣ ಗಾಳಿ ಬೀಸಹತ್ತಿದೆ. ನಿನ್ನೆ ಮಧ್ಯಾಹ್ನದ ಸುಮಾರಿಗೆ ೨-೩ ತಾಸು ಒಂದಿಷ್ಟು ಮಳೆಯೂ ಹನಿಸಿತು. ಇಂದು ಮಧ್ಯಾಹ್ನದಲ್ಲಿ ಮೃಗಶಿರಾ ಪ್ರವೇಶವಾದ ಮೇಲೆ ಮಳೆಗೆ ಆಳ ಜೋರಾಗುವದೆಂದು ಜಾಣರು ಹೇಳುತ್ತಾರೆ. ಊರೊಳಗೆ ನೀರಿನ ಅರಲು ಬಹಳವಾಗಿದ್ದು ಕೆಲವೆಡೆ ನೀರಿನ ಬಗ್ಗೆ ಕಿತ್ತಾಟ ನಡೆಯುತ್ತಿವೆ!

ಜಿಲ್ಹಾಧಿಕಾರ ಹೊಸ ಚುನಾವಣ-ಕಾರ್ಯಕ್ರಮದಂತೆ ಕುಮಟೆಯ ನಗರ ಸಭೆಯ ತ್ರೈವಾರ್ಷಿಕ ಚುನಾವಣೆ (ಇದೇ ಬರುವ ೩೦ ರಂದು ನಡೆಯಲಿದೆ) ಗಾಗಿ ಉಮೇದುವಾರಿ-ಪತ್ರಗಳನ್ನು ದಾಖಲಪಡಿಸುವ ಕೊನೆಯ ದಿನ ಮೊನ್ನೆ ಆಯಿತು. ೧೬ ಸ್ಥಾನಗಳಿಗೆ ಅಂತು ೩೭ ಅರ್ಜಿಗಳು ದಾಖಲಾಗಿವೆಯಂತೆ. ಇಂದು ಅವುಗಳ ಪರಿಶೀಲನೆಯಾಗುವದು.

೨ ವಾರಗಳ ಹಿಂದೆ ಕುಮಟೆಯ ಉರುವಲ ಉಗ್ರಾಣದ ಸಂಬಂಧವಲ್ಲಿ ಜಿಲ್ಹಾ ಸಂಚಾರಿಯು "ವೃತ್ತ" ದಲ್ಲಿ ಮಾಡಿದ ಟೀಕೆಯು ಅಪೂರ್ಣ ಮಾಹಿತಿಯ ಮೇಲೆ ಆಧರಿಸಿದ್ದು ಇರುತ್ತದೆಂದು "ಬಲ್ಲವ" ರೊಬ್ಬರು ಬರೆಯುತ್ತಾರೆ. ಇಲ್ಲಿಯ ಉಗ್ರಾಣದಲ್ಲಿ ಮೇ ತಿಂಗಳ ಪ್ರಾರಂಭಕ್ಕೆ ಉರುವಲದ ಶಿಲ್ಕು ಸ್ವಲ್ಪ ಕಡಿಮೆಯಾಯ್ತು; ಹೊಸ ಉರುವಲವನ್ನು ತರಿಸಲಿಕ್ಕೆ ಬೇಕಾದ ವಾಹನಗಳೂ ವಾಹನ ಸೌಕರ್ಯಗಳೂ ಆಗ ಉಗ್ರಾಣದಾರರಿಗೆ ಸಿಕ್ಕಿದ್ದಿಲ್ಲ; ಆದರಿಂದ ಅವರು ಅರಿಸಿ ಅರಿಸಿ ಬಿಟ್ಟು ಕಾದಿಯನ್ನೇ ಕೆಲವು ದಿನ ಅವರು ಮಾರಬೇಕಾಯಿತು; ಆ ಶಿಲ್ಕು ಕಟ್ಟಿಗೆಯೂ ದರೂ ಜಿಲ್ಹಾ ಸಂಚಾರಿಯು ಹೇಳುವಷ್ಟು ಹಾಳಿದ್ದಿಲ್ಲ. ಮಾರ್ಕೆಟಿಯಲ್ಲಿ ಉಗ್ರಾಣದಾರರು ಮಾರುವ ಉರುವಲವು ಉಗ್ರಾಣಕ್ಕೊಪ್ಪಿದ್ದಲ್ಲ; ಅದು ಉಗ್ರಾಣದಾರರು ಸ್ವತಂತ್ರವಾಗಿ ಪರ ಬಂದರಗಳಿಗೆ ರವಾನೆ ಮಾಡುವದಕ್ಕಾಗಿ ಸಂಗ್ರಹಿಸಿದ್ದು ಇರುತ್ತದೆ; ಜನರ ಅತ್ಯಾಗ್ರಹಕ್ಕಾಗಿ ಅವರು ಅದನ್ನು ಮಾರುತ್ತಿದ್ದಾರೆ; ಕುಮಟೆಯ ಉಗ್ರಾಣದಲ್ಲಿ ಉರುವಲ ಕೊಂಡು ಕೊಂಡಲ್ಲಿ ಅದನ್ನು ಮನೆಗೆ ಒಯ್ಯಲು ದುಬಾರಿ ಕೂಲಿ ಕೊಡಬೇಕಾಗುತ್ತಿದ್ದದ್ದರಿಂದ, ಜನರು (ಮಾರ್ಕೆಟಿಯಲ್ಲಿ ಅಗ್ಗ ಭಾಡಿಗೆ ದರದಿಂದ ಉರುವಲ ತಂದು ಕೊಡುವ ಬೈಲ್ಗಾಡಿಗಳು ಸಿಗುತ್ತಿರುವದರಿಂದ) ಮಾರ್ಕೆಟಿಯಿಂದ ಉರುವಲ ತರುತ್ತಿದ್ದಾರೆ, ಮಾರ್ಕೆಟಿಯಿಂದ ತಂದ ಉರುವಲವು ಉಗ್ರಾಣದ ಉರುವಲಕ್ಕಿಂತ ಅಗ್ಗ ಬೀಳುತ್ತದ್ದರಿಂದ ಜನರು ಮಾರ್ಕೆಟಿಗೆ ಓಡುತ್ತಾರೆ. ಇತ್ಯಾದಿ ಸಂಗತಿ "ಬಲ್ಲವ"ರು ಬರೆಯುತ್ತಾರೆ.

ದಾರುಮಾಸ್ಕೇರಿಯ ಜನರಿಗೆ ಚಿಮಣಿ ಎಣ್ಣೆ ಸಿಗದೆ ಬಹಳ ಕಷ್ಟವಾಗಿದೆಯೆಂದು ಓರ್ವರು ದೂರುತ್ತಾರೆ. ತಮ್ಮ ಊರಿಗೆ ಚಿಮಣಿ ಎಣ್ಣೆ ಕೊಟ್ಟಿಲ್ಲೆಂದು ಹಿಂದೆ ಚಿಮಣಿ ಎಣ್ಣೆ ಮಾರುತ್ತಿದ್ದ ವ್ಯಾಪಾರಿಗಳು ಹೇಳುತ್ತಾರಂತೆ! ಆದರೆ ಅದೇ ವ್ಯಾಪಾರಿಗಳು ದುಬಾರಿ ಬಾಡಿಗೆ ತಕ್ಕೊಂಡು ದಿನಾ ೪-೬ ಗ್ಯಾಸ-ದೀಪಗಳನ್ನು ಬಾಡಿಗೆಗೆ ಕೊಡುತ್ತಾರಂತೆ! ಹಳ್ಳಿಯವರಿಗೆ ಕೊಟ್ಟ ಚಿಮಣಿ ಎಣ್ಣೆ ಯನ್ನೆಲ್ಲ ಗ್ಯಾಸ-ದೀಪಗಳು ಕುಡಿಯುತ್ತಿರಬೇಕೆಂದು ಒಂದು ಊಹೆಯುಂಟು.

ಹೊನ್ನಾವರ— (ತಾ. ೬-೬-೧೯೪೮) ಸಕೆ ಬಹಳ. ರೈತರು ಮಳೆಯ ಹಾದಿ ನೋಡುತ್ತಿದ್ದಾರೆ ಹಿಂದೆ ಅಗೆ ಹಾಕಿದ ಬೀಜವೆಲ್ಲ ಸುಟ್ಟು ಹೋಗಿರುವವಂತೆ

ಅಕ್ಕಿಯ ದರ ಇನ್ನೂ ಏರುತ್ತಿದೆ. ಕಾಯಿಲಿ ೧೯ ರಿಂದ ೨೪ ರೂ. ಗಳ ವರೆಗೆ ದರ ಹೇಳುತ್ತಾರೆ! ಅರ್ಬನ ಬೇಂಕಿನವರ ದರ ರೂ ೨ ಉಂಟು, ಆದರೆ ಅಕ್ಕಿ ಸಿಗುವದು ಒಂದೊಂದೇ ಕಾಯಿಲಿ ಅಕ್ಕಿ.

ಚಿಮಣಿ ಎಣ್ಣೆಯ ಕಷ್ಟ ಇನ್ನೂ ಕಡಿಮೆಯಾಗಿಲ್ಲ. ಇನ್ನೂ ಎಣ್ಣೆ ಬಂದಿದ್ದಿಲ್ಲೆಂದು ಅಂಗಡಿಕಾರರು ಹೇಳುತ್ತಾರೆ. ಕಳ್ಳ ಪೇಟೆಯಲ್ಲಿ ಚಿಮಣಿ ಎಣ್ಣೆಯು ಡಬ್ಬಿ ೧೯ ರೂ. ೨೦ ರವರೆಗೆ ದರವಿರುವದರಿಂದ ಈ ಅಭಾವಾಗಿರಬಹುದಲ್ಲವೇ!

ಕಳೆದ ಮಾರ್ಚ ತಿಂಗಳಲ್ಲಾದ ಮೆಟ್ರಿಕ್ ಪರೀಕ್ಷೆಗೆ ಇಲ್ಲಿಯ ಸೇಂಟ ಥೋಮಸ್ ಹಾಯಸ್ಕೂಲಿನಿಂದ ಶಾಲೆಯ ೩೦ ವಿದ್ಯಾರ್ಥಿಗಳೂ ಹೊರಗಿನ ೨ ವಿದ್ಯಾರ್ಥಿಗಳೂ ಕೂತಿದ್ದರು. ಅವರಲ್ಲಿ ಅನುಕ್ರಮವಾಗಿ ೨೬ ಮತ್ತು ೧ ಮಂದಿ ತೇರ್ಗಡೆ ಹೊಂದಿದ್ದಾರೆ. ೮ ಮಂದಿ ವಿದ್ಯಾರ್ಥಿಗಳು ೧ನೇ ವರ್ಗದ (ನೂರಕ್ಕೆ ೬೦ ಯಾ ಹೆಚ್ಚು) ಗುಣಗಳನ್ನು ದೊರಕಿಸಿದ್ದಾರೆ ನ್ಯೂ ಇಂಗ್ಲಿಷ ಶಾಲೆಯಿಂದ ೨೬ ಮಂದಿ ವಿದ್ಯಾರ್ಥಿಗಳು ಕೂತಿದ್ದರು ಅವರಲ್ಲಿ ೯ ಮಂದಿ ಉತ್ತೀರ್ಣರಾಗಿರುವರಂತೆ.

ಶಿರಾಲಿ— (ತಾ ೩-೬-೪೮) ಅಕ್ಕಿ ಬಹಳ ತುಟ್ಟಿಯಾಗಿದೆ. ಸಾವಿರಾರು ಜನರು ಅರೆಹೊಟ್ಟೆಯಿಂದ ಹುಟ್ಟಿ ಕಳೆಯುತ್ತಿದ್ದಾರೆ!

ಹಿಂದಿನ ಸೀರಾ-ಪತ್ರಗಳ ಆಧಾರದಿಂದ ಜನರಿಗೆ ಚಿಮಣಿ ಎಣ್ಣೆ ಕೊಡುವ ಏರ್ಪಾಟಾಗಿದೆ. ಆದರೆ ಈಗ ಸಿಗುವ ಎಣ್ಣೆ ಹಿಂದಿನದರ ಕಾಲಂಶ ಮಾತ್ರ!

ಪೇಟೆಯೊಳಗಿಂದ ಹಾದು ಹೋಗಿ-ವಾಗಲೂ ಮೋಟಾರ ಬಂಡಿಗಳು (ವರಕು ತುಂಬಿದ ಗಾಡಿಗಳು ಸಹ) ಬಹಳ ವೇಗದಿಂದ ಓಡುತ್ತವೆ! ಪೋಲೀಸರು ಇತ್ತ ಲಕ್ಷ ಕೊಡಬೇಕು.

ಭಟಕಳ— (ತಾ.೩-೬-೪೮) ಮಳೆಗಾಲ ಬಂತು. ಆದರೂ ಹೊಸ ಮೋಟಾರ-ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ಒಂದು ಆಶ್ರಯ ಸ್ಥಾನದ ವ್ಯವಸ್ಥೆಯಾಗಿರುವದಿಲ್ಲ. ಈ ವ್ಯವಸ್ಥೆಯಾಗುವ ವರೆಗೆ ಹಿಂದಿನಂತೆಯೇ ಪ್ರಯಾಣಿಕರನ್ನು ಬಂದರಿನ ಊರೊಳಗೆ ತಲುಪಿಸುವಂತೆಯೂ ಹತ್ತಿಸಿಕೊಳ್ಳುವಂತೆಯೂ ಏರ್ಪಾಟು ಮಾಡುವದೊಳಿತು.

ಇತ್ತೀಚೆಗೆ ಇಲ್ಲಿಯ ಕನ್ನಡ ಶಾಲೆಗಳಲ್ಲಿ ಅವ್ಯವಸ್ಥೆಯಾಗಿದೆ. ಗಂಡು ಮಕ್ಕಳ ಶಾಲೆಯಲ್ಲಿ ೪ನೇ ಇಯತ್ತೆ ಹಿಡಿದು ಮೇಲಿನ ವರ್ಗಗಳಷ್ಟೇ ಇವೆ. ಕೆಳಗಿನ ಇಯತ್ತೆಗಳ ಹುಡುಗರು ಹೆಣ್ಣುಮಕ್ಕಳ ಶಾಲೆಗೆ ಹೋಗಬೇಕು, ಇಲ್ಲವೆ ಗಾಂವಠಿ ಶಾಲೆಗಳಿಗೆ ಹೋಗಬೇಕು! ಅದರಿಂದ ಹೆಣ್ಣುಮಕ್ಕಳ ಶಾಲೆಯಲ್ಲೀಗ ಹೆಣ್ಣುಮಕ್ಕಳಿಗಿಂತ ಗಂಡು ಹುಡುಗರೇ ಹೆಚ್ಚಾಗಿದ್ದಾರೆ!

ಮಾರ್ಗಗಳ ಅಂಚಿಗೆ ಅಲ್ಲಲ್ಲಿ ಹೊಲಸು ನೀರು ನಿಂತು ನಾರುತ್ತಿದೆ! ಅದಕ್ಕೆ ಕಡೆಹೋಗುವ ವ್ಯವಸ್ಥೆ ಯಾರೂ ಮಾಡುವದಿಲ್ಲ! ಇದರಿಂದ ಊರಿನ ಜನರ ಆರೋಗ್ಯಕ್ಕೆ ಬಾಧಕವಿಲ್ಲೆಂದು ಅಧಿಕಾರಿಗಳು ನಂಬಿರುವರೋ ಏನೋ!

ಸರಕಾರದವರು ಅತ್ತಲಾಗಿ ಫೂರ್ತಿಕ ಮಾತ್ರ ಮುಂತಾದ ಜಾತಿಗಳಲ್ಲಿ ಹೊಸಬರನ್ನು ನೇಮಿಸಿಕೊಂಡಿದ್ದಾರೆ. ಈ ನೇಮಣೂಕಿಗಳನ್ನು ಮಾಡುವಾಗ ಹಿಂದೆ ೨-೩-೪ ವರ್ಷ ನೌಕರಿ ಮಾಡಿದವರಿಗೆ ನೇಮಿಸಿಕೊಳ್ಳದೆ ತೀರ ಹೊಸಬರಾದ ಕೆಲವರನ್ನು ನೇಮಿಸಿಕೊಂಡಿದ್ದು ಇಂತು ಹಳಬರಲ್ಲಿ ಬಹಳ ಅಸಮಾಧಾನವುಂಟಾಗಿದೆ.

(ತಾ. ೫-೬-೪೮) ೨-೩ ದಿನಗಳ ಹಿಂದೆ ಇಲ್ಲಿಯ ಸಮುದ್ರದಲ್ಲಿ ಒಂದು ಮಚವೆ ಮುಳುಗಿದೆ. ಅದು ೬೦೦೦ ಗೆಲನ್ನ ಪೆಟ್ರೋಲ ಎಣ್ಣೆಯನ್ನು ೫೦೦೦ ಗೆಲನ್ನ ಮೋಟಾರ ಎಣ್ಣೆಯನ್ನು ಹೇರಿಕೊಂಡು ತಾ. ೧೧-೫-೪೮ಕ್ಕೆ ಮುಂಬಯಿಯಿಂದ ಹೊರಟಿತ್ತು. ಅದರಲ್ಲಿ ಅರ್ಧ ಸರಕು ಕಾರವಾರದಲ್ಲಿ ಮತ್ತು ಉಳಿದ ಅರ್ಧ ಸರಕು ಕುಂದಾಪುರ ಬಂದರದಲ್ಲಿ ಇಳಿಯಬೇಕಿತ್ತು. ಮಚವೆಯವರು ಕಾರವಾರ ಬಂದರದಲ್ಲಿ ಪ್ರವೇಶ ಮಾಡದೆ ನೆಟ್ಟಗೆ ದಕ್ಷಿಣಕ್ಕೆ ಬಂದರು! ಕಾರವಾರವು ಅವರ ಕಣ್ಣಿಗೆ ಕಾಣಿಸಲಿಲ್ಲವೋ ಏನೋ! ಅಂತು ಇಂತು ಕಾರವಾರದವರಿಗೂ ಸರಕು ಮುಟ್ಟಿಲ್ಲ; ಕುಂದಾಪುರದವರಿಗೂ ಮುಟ್ಟಿಲ್ಲ! ಮಚವೆ ಮುಳುಗಿದಲ್ಲಿ ಸಹ ಪೆಟ್ರೋಲ ಎಣ್ಣೆಯ ಡಬ್ಬಿ (ಕ್ಯಾನ)ಗಳಾಗಲಿ ಮೋಟಾರ ಎಣ್ಣೆಯ ಪೀಪಾಯಿ (ಡ್ರಮ್)ಗಳಾಗಲಿ ದೃಷ್ಟಿಗೆ ಬೀಳುವದಿಲ್ಲವಂತೆ! ಪೆಟ್ರೋಲಿಗೆ ಈಗ ಕಳ್ಳ ಪೇಟೆಯಲ್ಲಿ ಕಲ್ಪನಾತೀತ ಬೆಲೆ ಸಿಗುತ್ತಿದೆ. ಅದ್ದರಿಂದ ಕಾಂಡೇಲನು ಎಲ್ಲಿಯೋ ಒಂದು ಕಳ್ಳ ಬಂದರದಲ್ಲಿ ಪೆಟ್ರೋಲ ಮತ್ತು ಮೋಟಾರ ಎಣ್ಣೆಯನ್ನು ವಿಲೇವಾರಿ ಮಾಡಿ, ಸಣ್ಣ ಕಲ್ಲಿನ ಮುಚ್ಚಲು (ಹಾಲಿ) ಮಚವೆಯನ್ನು ಮುಳುಗಿಸಿರಬೇಕೆಂದು ಜನರು ತರ್ಕಿಸುತ್ತಾರೆ. ಈ ಮಚವೆಯು ಮೊನ್ನೆ ಮುಂಬಯಿಯಿಂದ ಹೊರಡುವಾಗ, ೧೨ ಮಂದಿ ಖಲಾಸಿಗಳಿದ್ದರಂತೆ. ಮಚವೆ ಮುಳುಗಿದ ಮೇಲೆ ಇಲ್ಲಿ ಪತ್ತೇ

(೪ನೇ ಪುಟದ ಮೇಲೆ ಮುಂದುವರಿದಿದೆ.)

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ಶೇರು ಮೂಲಧನ ರೂ ೭,೭೧,೦೦೦/—ಕ್ಕೂ ಮಿಕ್ಕಿದೆ.

ಕಾಯ್ದಿರಿಸಿಡಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮೀರುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ಸಲೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ, ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ.

ಸುದ್ದಿಗಳ ಸಂದೂಕ.

— ಮಹಾತ್ಮಾಜಿಯವರ ಕೊಲೆಯ ಪ್ರಕರಣದ ಕೆಲವೊಂದು ಅವಾಂತರ ಮತ್ತು ಔಪಚಾರಿಕ ವಿಷಯಗಳ ನಿರ್ವಹಣೆಗಾಗಿ ಕಳೆದ ಗುರುವಾರ ನ್ಯಾಯಾಸನವು ಕೂಡಿತ್ತು. ಸೆರೆಮನೆಯಲ್ಲಿ ಆರೋಪಿಗಳ ಸಂದರ್ಶನ ತೆಗೆದುಕೊಳ್ಳಲು ತಮಗೂ ತಮ್ಮ ಸಹೋದ್ಯೋಗಿಗಳಿಗೂ ಪೂರ್ಣ ಅವಕಾಶ ಕೊಡಬೇಕೆಂದು ಶ್ರೀ ಸಾವರಕರ ಪ್ರಭೃತಿ ಆರೋಪಿಗಳ ವಕೀಲರಾದ ಶ್ರೀ ಭೋಪಟಕರರು ಬೇಡಿಕೊಂಡರು. ನ್ಯಾಯಾಧೀಶರು ಅದಕ್ಕೆ ಒಪ್ಪಿದರು. ಖಟ್ಲೆಯ ವಿಚಾರಣೆಯ ಕೆಲಸವನ್ನು ಪೂರ್ವಾಹ್ನದ ೧೦ ಘಂಟೆಯಿಂದ ೪ರ ವರೆಗೆ ನಡಿಸುವದಕ್ಕಿಂತ ಮುಂಜಾನೆ ೭॥ ಯಿಂದ ಅಪರಾಹ್ನದ ೧ರ ವರೆಗೆ ನಡಿಸುವದು ಒಳಿತಾಗಿ ಭೋಪಟಕರರ ಇನ್ನೊಂದು ಬೇಡಿಕೆಯಿತ್ತು. “ಖಟ್ಲೆಯ ವಿಚಾರಣೆಯ ಪ್ರಾರಂಭದ ದಿನ ನ್ಯಾಯಾಸನವು ಎಂದಿನಂತೆ ೧೦ ಘಂಟೆಗೇ ಸೇರಲಿ. ಆ ಮುಂದೆ ಯಾವ ಹೊತ್ತಿಗೆ ವಿಚಾರ ನಡಿಸಬಹುದೆಂಬುದನ್ನು ಎಲ್ಲರೂ ಕೂಡಿ ನಿರ್ಧರಿಸೋಣ” ಎಂದು ನ್ಯಾಯಾಧೀಶರು ಉತ್ತರ ಕೊಟ್ಟರು. ಆ ಬಳಿಕ ಅವರು (೧) ಆರೋಪಿಗಳು ತಮಗೆ ತುರಂಗದಲ್ಲಿ ಒಳ್ಳೆ ರೀತಿಯಿಂದ ನಡಿಸುವಂತೆಯೂ ಕೆಲವೊಂದು ಸವಲತ್ತುಗಳನ್ನು ಕೊಡುವಂತೆಯೂ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದರು (ದಿಗಂಬರ ಬಡಗೆಯವರು ಮಾತ್ರ ತಂಪು ಯಾವದೇ ಹೆಚ್ಚಿನ ಸೌಕರ್ಯ ಬೇಡುವದಿಲ್ಲವೆಂದರು) (೨) ಆರೋಪಿಗಳಿಗೆ ಒಂದೆಡೆ ಸೇರಲಿಕ್ಕೆ ಅವಕಾಶ ಕೊಡಬಾರದು, (೩) ಸೆರೆಮನೆಯ ಕೆಲಸಿಗರ ಕಣ್ಣಿಂದಲೇ ಅವರು ಮುಖಿತ್ಕಾರ ಮಾಡಿಸಿಕೊಳ್ಳಬೇಕು, ಮತ್ತು (೪) ಹೊರಗಿಂದ ಅನ್ನ ತರಿಸಲು ಅಪ್ಪಣೆ ಕೊಡಬಾರದು ಈ ಮೂರು ಶರ್ತುಗಳಿಗೆ ಒಳಪಟ್ಟು, ಕಾಯದೆಗನುಸಾರವಾಗಿ ಆರೋಪಿತರಿಗೆ ಬೇಕಾದ ಸವಲತ್ತು ಇಲ್ಲವೆ ಸೌಕರ್ಯ ಕೊಡಲು ತಮ್ಮ ತಕರಾರು ಇರುವದಿಲ್ಲೆಂದು ಸರಕಾರಿ ವಕೀಲರು ಅಂದರು. ನ್ಯಾಯಾಧೀಶರು ಆಗ ಆರೋಪಿತರನ್ನು ವಿಶೇಷ ವರ್ಗದಲ್ಲಿಡುವಂತೆ ತಾವು ವಿಧಿಸುತ್ತೇವೆಂತಲೂ, ಆರೋಪಿತರು ಇನ್ನು ಮುಂದೆ ತಮ್ಮ ಬೇಡಿಕೆಗಳನ್ನು ತುರಂಗದ ಮೇಲಧಿಕಾರಿಗಳ ಮುಖಾಂತರ ತಮಗೆ ಬರೆದದ್ದಲ್ಲಿ ಕಳಿಸಿ ಕೊಟ್ಟರೆ ತಾವು ಆವಶ್ಯವಾಗಿ ಅವುಗಳ ವಿಚಾರ ಮಾಡುವೆವೆಂದೂ ಸಮಾಧಾನ ಹೇಳಿದರು. ೪ ಮಂದಿ ಆರೋಪಿಗಳಿಗೆ ತಲುಗು ಮತ್ತು ಮರಾಠಿ ಭಾಷೆಗಳ ವಿನಹ ಬೇರೆ ಭಾಷೆ ಬರುವದಿಲ್ಲ. ಅವರ ಬಗ್ಗೆ ಮುಂಬಯಿಯಿಂದ ತೆಲಗು ಮತ್ತು ಮರಾಠಿ ದುಭಾಷಿಗಳನ್ನು ತರಿಸಿಕೊಳ್ಳಬೇಕಾಗಿ ಸರಕಾರಿ ವಕೀಲರು ಸೂಚಿಸಿದರು. ಖಟ್ಲೆಯ ವಿಚಾರಣೆ ಯಾವ ಭಾಷೆಯಲ್ಲಿ ನಡೆಯಬಹುದೆಂಬುದರ ಸಂಬಂಧದಲ್ಲೂ ಕೆಲ ಕಾಲ ಚರ್ಚೆಯಾಗಿ, ವಿಚಾರ ಇಂಗ್ಲಿಷದಲ್ಲಿ ನಡೆಯಬೇಕೆಂದೂ, ಸಾಕ್ಷಿಗಾರರ ಪುರಾವೆಗಳನ್ನು ಪೂರ್ಣವಾಗಿ ಬರೆದುಕೊಳ್ಳಬೇಕೆಂದೂ ನ್ಯಾಯಾಧೀಶರ ಅಪ್ಪಣೆಯಾಯಿತು. ಕೊನೆಗೆ ಖಟ್ಲೆಯ ವಿಚಾರವನ್ನು ತಾ ೧೪ಕ್ಕೆ ಪ್ರಾರಂಭಿಸಲೆ ೧ ವಾರವಾದರೂ ಮುಂದೂಡಿದರೆ ಆರೋಪಿತರ ಸಂರಕ್ಷಣೆಯ ಏರ್ಪಾಟು ಮಾಡಲಿಕ್ಕೆ ಅನುಕೂಲವಾಗುತ್ತಿತ್ತೆಂದು ಶ್ರೀ ಭೋಪಟಕರರು ಹೇಳಿಕೊಂಡದ್ದಕ್ಕೆ ನ್ಯಾಯಾಧೀಶ ಶ್ರೀ ಆತ್ಮಚರಣರು ಮನ್ನಣೆ ಕೊಟ್ಟು, ತಾ ೨೨ ರಿಂದ ಖಟ್ಲೆಗೆ ಪ್ರಾರಂಭವಾಗುವದಾಗಿ ಹೇಳಿದರು. ಆದರೂ ತಾ ೧೪ ಕ್ಕೆ ಪೂರ್ವ ಸಂಕೇತದಂತೆ ನ್ಯಾಯಾಸನವು ಕೂಡಿ ಕೆಲವು ಕಿರಕೋಳ ವಿಧಿಗಳನ್ನು ಪಾರಗಾಣಿಸುವದು.

— ಹಿಂದ-ಭೂಮಿಯು ಹೋಳುಗಳಾಗುವ ಪೂರ್ವದಲ್ಲಿ ಅವಿಭಕ್ತ ಬಂಗಾಲದ ಮುಖ್ಯ ಮಂತ್ರಿಗಳಾಗಿದ್ದ ಜನಾಬ ಸುಹ್ರವರ್ದಿಯವರು ಇತ್ತ ಒಂದು ವರ್ಷದಿಂದ ಮಹಾತ್ಮಾಜಿಯವರ ಮಾರ್ಗ ಹಿಡಿದು ಹಿಂದುಸ್ತಾನ-ಪಾಕಿಸ್ತಾನಗಳಲ್ಲಿ ಜಾತೀಯ ಸೌಹಾರ್ದ ನೆಲೆಸಲು ಹೆಣಗಾಡುತ್ತಿದ್ದಾರಷ್ಟೇ ಈ ಕಾರಣದಿಂದಲೋ, ಅಥವಾ ಬೇರಾವ ಕಾರಣದಿಂದಲೋ ಪಾಕಿಸ್ತಾನಿ ಅಗ್ರೇಸರ ಮಂಡಳದಲ್ಲಿ ಅವರಿಗೆ ಅಷ್ಟು ಗೌರವ ಇಲ್ಲವೆ ಮನ್ನಣೆ ಸಿಗುವದಿಲ್ಲ. ಕೆಲವು ದಿನಗಳಾಚೆ ಪಾಕಿಸ್ತಾನದ ಕೇಂದ್ರವರ್ತಿ ಶಾಸನ ಸಭೆಯಲ್ಲಿ, ಯಾವನೊಬ್ಬನು ಒಂದೇ ರಾಷ್ಟ್ರದ (ಹಿಂದುಸ್ತಾನದ ಯಾ ಪಾಕಿಸ್ತಾನದ) ನಾಗರಿಕನಾಗಬೇಕೆಂದೂ ಎರಡೂ ರಾಷ್ಟ್ರಗಳ ನಾಗರಿಕನಾಗಲಾರನೆಂದೂ ಹಿಂದುಸ್ತಾನದ ನಾಗರಿಕನು ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಉಳಿಯಲಾಗದೆಂದೂ ಒಂದು ಗೊತ್ತುವಳಿಯಾಯಿತು. ಆ ಗೊತ್ತುವಳಿಯನ್ನು ಜನಾಬ ಸುಹ್ರವರ್ದಿಯವರು ಬಹಳ ವಿರೋಧಿಸಿದರು. ಎರಡೂ ರಾಷ್ಟ್ರಗಳಲ್ಲಿ ಸೌಹಾರ್ದ-ಸೌಭ್ರಾತ್ರವನ್ನುಂಟು ಮಾಡುವದಕ್ಕೆ ಹೆಣಗಾಡುವ ತಮ್ಮ ತರದ ಜನರ ಪಾಕಿಸ್ತಾನಿ ನಾಗರಿಕತ್ವವನ್ನು ಕಸಿದುಕೊಳ್ಳಬೇಡಿರೆಂದು ಅವರು ಅಂಗಲಾಚಿ ಬೇಡಿಕೊಂಡರು. ಆದರೆ ಸದಸ್ಯರು ಅವರ ಮಾತಿಗೆ ಕಿವಿಗೊಡಲಿಲ್ಲ. ಗೊತ್ತುವಳಿಯನ್ನು ಪ್ರಚಂಡ ಬಹುಮತದಿಂದ ಸ್ವೀಕರಿಸಿಯೇ ಬಿಟ್ಟರು. ಜನಾಬ ಸುಹ್ರವರ್ದಿಯವರು ಆಚೆ ಮೊನ್ನೆ ಜಾತೀಯ ಸೌಹಾರ್ದದ ಪ್ರಚಾರಕ್ಕಾಗಿ ಪೂರ್ವ ಬಂಗಾಲಕ್ಕೆ ಹೋಗಿದ್ದರು. ಆಗ ಪೂರ್ವ ಬಂಗಾಲ (ಪಾಕಿಸ್ತಾನ) ಸರಕಾರದವರು ಅವರನ್ನು ಒಮ್ಮೆಲೇ ಬಂಧಿಸಿ ಗಡಿ ದಾಟಿಸಿಬಿಟ್ಟಿದ್ದಾರೆ. ಜನಾಬ ಸುಹ್ರವರ್ದಿಯವರು ಜಾತೀಯ ಸೌಹಾರ್ದದ ಪ್ರಚಾರ ಮಾಡುವದು ಉಚಿತವಿಲ್ಲೆಂದೂ, ಬಂಗಾಲ ಪ್ರಾಂತದ ವಿಭಜನೆಯಾದಂದಿನಿಂದ ಅವರ ರಾಷ್ಟ್ರ-ನಿಷ್ಠೆ-ಕುರಿತು ಸುಹ್ರವರ್ದಿಯವರು ಸಂಬಂಧವನ್ನು ಇಟ್ಟುಕೊಂಡು ಸಾರ್ವಜನಿಕರಲ್ಲೂ — ಪಾಕಿಸ್ತಾನ ಸರಕಾರಿ ನೌಕರರಲ್ಲೂ ಅಸಂತೋಷವನ್ನು ಹುಟ್ಟಿಸುತ್ತಿದ್ದಾರೆಂದೂ, ವಿಭಕ್ತ ಬಂಗಾಲವನ್ನು ಪುನಃ ಒಂದಾಗಿಸಿ ಅದನ್ನು ಹಿಂದೀ ಒಕ್ಕೂಟಕ್ಕೆ ಜೋಡಿಸಬೇಕೆಂಬುದು ಸುಹ್ರವರ್ದಿಯವರ ಪ್ರಚಾರದ ಒಳ ಉದ್ದೇಶವಾಗಿರುತ್ತದೆಂದೂ, ಸುಹ್ರವರ್ದಿಯವರು ಪಾಕಿಸ್ತಾನದ ಹಿತದ ಮಾನಹಾನಿ ಮಾಡುತ್ತಿದ್ದಾರೆಂದೂ, ‘ರಾಷ್ಟ್ರಹಿತದ ದೃಷ್ಟಿಯಿಂದ’ ಅವರನ್ನು ಬಂಧಿಸಬೇಕಾಯಿತೆಂದೂ ಪೂರ್ವ ಬಂಗಾಲ ಸರಕಾರವು ಒಂದು ಪ್ರಕಟಣೆಯಲ್ಲಿ ಹೇಳಿದೆ.

—ಹಿಂದುಸ್ತಾನದ ಜನಸಂಖ್ಯೆಯೀಗ ವಿಪರೀತ ಬೆಳೆದಿದೆ, ಈ ಬೆಳೆದ ಜನಸಂಖ್ಯೆಯೇ ಹಿಂದೀಯರ ಹಲವಾರು ಕಷ್ಟಗಳಿಗೆ ಕಾರಣವಾಗಿದೆ ಎಂದು ವಾದಿಸುವವರಿಗೆ ಪಂ. ಜವಾಹರಲಾಲರು ಮೊನ್ನೆ ಲಖನೌದಲ್ಲಾದ ಒಂದು ಭಾಷಣದಲ್ಲಿ ಸ್ಪಷ್ಟ ಉತ್ತರ ಕೊಟ್ಟಿದ್ದಾರೆ. “ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯಬೇಕೆಂದು ಬಯಸುವವರಲ್ಲಿ ನಾನೊಬ್ಬನಿರುತ್ತಿದ್ದಾಗ್ಯೂ, ಈಗಿದ್ದ ಜನಸಂಖ್ಯೆ ತಲೆಭಾರವಾಗಿದೆ ಎಂದು ನಾನು ಒಪ್ಪಲಾರೆ. ಭಾರತದ ಎಷ್ಟೋ ಭಾಗಗಳು ನಿರ್ಜನವಿವೆ. ಅದರಿಂದ ಈಗ ಇದ್ದ ಜನಸಂಖ್ಯೆ ಕಡಿಮೆಯಿರುತ್ತದೆಂದು ಹೇಳಿದರೂ ಹೇಳಬಹುದು. ನಮ್ಮ ಉತ್ಪಾದನೆಯ ದೃಷ್ಟಿಯಿಂದ ಮಾತ್ರ ಈಗಣ ಜನಸಂಖ್ಯೆ ಹೆಚ್ಚಿಗೆಯಿದೆ. ಆ ಉತ್ಪಾದನೆಯನ್ನು ಹೆಚ್ಚಿಸಬೇಕು ಮತ್ತು ಜನರನ್ನು ಆ ಕಾರ್ಯದಲ್ಲಿ ತೊಡಗಿಸಬೇಕು. ಅಂದರೆ ಜನಸಂಖ್ಯೆಯು ಹೆಚ್ಚಳದ ಭೀತಿ ಬಯಲಾಗುವದು” ಎಂದು ಪಂಡಿತಜಿಯವರು ವಿಸ್ತಾರವಾಗಿ ವಿವರಿಸಿದರು.

— ಕರಾಚಿಯನ್ನು ಪಾಕಿಸ್ತಾನದ ಕೇಂದ್ರ ರಾಜಧಾನಿಗಾಗಿ ಬಿಟ್ಟು ಕೊಟ್ಟು ಸಿಂಧದ ರಾಜಧಾನಿಯನ್ನು ಬೇರೊಂದೆಡೆ ಒಯ್ಯಲಿಕ್ಕೆ ತಾವು ಸಮ್ಮತಿಸಲಾರೆವೆಂದು ಸಿಂಧದ ಸದ್ಯದ ಮುಖ್ಯ ಮಂತ್ರಿ ಪೀರ ಇಲಾಹಿ ಬಕ್ಷರು ಬಾಯಿಯಿಂದ ಹೇಳುತ್ತಿದ್ದರೂ ಪಾಕಿಸ್ತಾನಿ ವರಿಷ್ಠರ ಆಜ್ಞೆಗೆ ತಲೆ ಬಾಗಿಸಿ ಅವರು ತಮ್ಮ ಪ್ರಾಂತಿಕ ರಾಜಧಾನಿಯನ್ನು ಸಕ್ಕರಕ್ಕೋ ಹೈದರಾಬಾದಕ್ಕೋ ಸ್ಥಳಾಂತರಿಸುವ ಸಿದ್ಧತೆಗಳನ್ನು ನಡಿಸಿದ್ದಾರೆಂದು ತಿಳಿಯುತ್ತದೆ. ಸಿಂಧಿ ವಿದ್ಯಾರ್ಥಿಗಳು ಕರಾಚಿಯನ್ನು ಬಿಟ್ಟುಕೊಡಲಿಕ್ಕೆ ವಿರುದ್ಧರಿದ್ದಾರೆ. ಪಾಕಿಸ್ತಾನಿ ವರಿಷ್ಠರು ಕರಾಚಿಯನ್ನೇ ಪಾಕಿಸ್ತಾನದ ರಾಜಧಾನಿಯನ್ನಾಗಿ ಮಾಡುವ ಹಟ ಹಿಡಿದರೆ ಪಾಕಿಸ್ತಾನ ಶಾಸನ ಸಭೆಯಲ್ಲಿ (ಪಾಕಿಸ್ತಾನ ಘಟನಾ ಸಮಿತಿಯಲ್ಲಿ) ರುವ ಸಿಂಧಿ ಪ್ರತಿನಿಧಿಗಳು ಶಾಸನ ಸಭೆಗೆ ಬಹಿಷ್ಕಾರ ಹಾಕಬೇಕೆಂದು ಈ ವಿದ್ಯಾರ್ಥಿಗಳು ಹೇಳುತ್ತಾರೆ. ಹಿಂದ ಮುಸ್ಲಿಮ್ ಲೀಗ ಮತ್ತು ಕಾಂಗ್ರೆಸ ಪಕ್ಷ ಇವುಗಳೊಡನೆ ಕಣ್ಣುಮುಚ್ಚಾಲೆಯ ಆಟವನ್ನಾಡಿ ಸ್ವಪ್ರತಿಷ್ಠೆ ಬೆಳಸಬಯಸುತ್ತಿದ್ದ ಜನಾಬ ಗಝುದರ ಇವರಂತೂ ಕರಾಚಿಯನ್ನು ಸಿಂಧ ಪ್ರಾಂತದಿಂದ ಪ್ರತ್ಯೇಕಿಸಿ ಅದನ್ನು ಸಿಂಧಿಗಳ ಸಮ್ಮತಿಯಿಲ್ಲದೆ ಪಾಕಿಸ್ತಾನದ ರಾಜಧಾನಿಯನ್ನಾಗಿ ಮಾಡುವದು ಮುಸ್ಲಿಮ್ ಲೀಗಿನ ಪ್ರತಿಜ್ಞಾತ ಧೋರಣೆಗೆ— ಪ್ರಾಂತಗಳಿಗೆ ಪೂರ್ಣ ಸ್ವಾಯತ್ತತೆ ಕೊಡಲಾಗುವದೆಂಬ ವಚನಕ್ಕೆ — ವಿಸಂಗತವಿರುತ್ತದೆಂದು ಕೂಗನ್ನೆಬ್ಬಿಸಿದ್ದಾರೆ. ಪಾಕಿಸ್ತಾನಿ ಪ್ರಮುಖರು ಈ ಕೂಗು-ನಿಷೇಧಗಳಿಗೆ ಅಷ್ಟೊಂದು ಬೆಲೆ ಕೊಡುವ ಲಕ್ಷಣಗಳು ತೋರ್ಪಡಿಸುವದಿಲ್ಲ.

— ಪಶ್ಚಿಮ ಪಾಕಿಸ್ತಾನದ ಇತರ ಭಾಗಗಳಲ್ಲಿ ಆಗೋಸ್ತ ತಾ ೧೫ರ ನಂತರದ ಜಾತೀಯ ದ್ವೇಷ, ದಂಗೆ, ಅತ್ಯಾಚಾರಗಳಾದಾಗ್ಯೂ, ಸಿಂಧದಲ್ಲಿ, ಅದರಲ್ಲೂ ಕರಾಚಿಯಲ್ಲಿ, ಅಷ್ಟೊಂದು ಅಶಾಂತತೆಯುದ್ಭವಿಸಿದ್ದಿಲ್ಲ. ಕೊನೆಗೆ ಕಳೆದ ಜನವರಿಯಲ್ಲಿ ಅಲ್ಲೂ ಜಾತೀಯ ಕಲಹದ ಬೇಗೆಗಳು ಪಸರಿಸಿದವು. ಆಗ ಎಷ್ಟೋ ಹಿಂದುಗಳು ಕರಾಚಿಯನ್ನು ಬಿಡಬೇಕಾಯಿತು. ಕರಾಚಿಯ ನಗರ ಸಭೆಯ ಹಲವಾರು ಸದಸ್ಯರೂ ಊರು ಬಿಟ್ಟು ಹೋಗಿದ್ದರು. ಇವರು ತಾವು ನಿರುಪಾಯವಾಗಿ ಊರು ಬಿಟ್ಟು ಹೋಗಬೇಕಾಗಿದೆಯೆಂತಲೂ, ನಗರ-ಸಭೆಯ ಸಭೆಗಳಿಗೆ ಕೆಲವೊಂದು ಕಾಲದ ವರೆಗೆ— ಊರಿಗೆ ಸುರಕ್ಷಿತ ಮರಳಿ ಬಂದು ಸುರಕ್ಷಿತವಾಗಿ ಉಳಿಯಬಹುದಾದಂತಹ ಶಾಂತ ಪರಿಸ್ಥಿತಿಯುಂಟಾಗುವ ವರೆಗೆ — ಹಾಜರಾಗುವದು ಅಸಾಧ್ಯವಿರುತ್ತದೆಂತಲೂ, ಆದ್ದರಿಂದ ತಮಗೆ ರಜೆ ಕೊಡಬೇಕೆಂತಲೂ ಅರ್ಜಿ ಮಾಡಿದ್ದರಂತೆ. ಈ ಅರ್ಜಿಗಳಲ್ಲಿ ಕೆಲವು ಕಾಣೆಯಾದವು! ಕೆಲವು ನಿರಾಕರಿಸಲ್ಪಟ್ಟವು!! ಮತ್ತು ೩ ತಿಂಗಳ ಕಾಲ ಸಭೆಗಳಿಗೆ ಬರಲಿಲ್ಲೆಂಬ ನೆವ ಹೇಳಿ, ನಗರ ಸಭೆಯ ಅಧಿಕಾರಿ ಪಕ್ಷವು ಆಚೆಯ ವಾರ ೧೬ ಮುಸ್ಲಿಮೇತರ ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಿದೆ!! ಪಾಕಿಸ್ತಾನಿ ನ್ಯಾಯದ ಇದೊಂದು ಮಾದರಿ!

— ಕರಾಚಿಯಲ್ಲಿ ಹಿಂದೆ (ಅಂದರೆ ಹಿಂದ-ಭೂಮಿಯು ಇಬ್ಭಾಗವಾಗಿ ಪಾಕಿಸ್ತಾನವು ತಲೆಯೆತ್ತುವ ಮೊದಲು) ಮುಸ್ಲಿಮೇತರ ಜನಸಂಖ್ಯೆಯೇ ಹೆಚ್ಚಿತ್ತು. ಅಲ್ಲಿಯ ದೊಡ್ಡ ದೊಡ್ಡ ವ್ಯಾಪಾರ-ಉದ್ಯೋಗಗಳು ಕೂಡ ಮುಸ್ಲಿಮೇತರರ ಕೈಯಲ್ಲಿದ್ದವು. ಆದರೂ ಮುಸ್ಲಿಮೇತರರು ಮುಸ್ಲಿಮರೊಡನೆ ಸೌಹಾರ್ದದಿಂದ ಉಳಿದು, ಕರಾಚಿ ನಗರ ಸಭೆಯ ಅಧ್ಯಕ್ಷಪದವು ಪಾಳಿಯಿಂದ ಒಮ್ಮೆ ಹಿಂದುಗಳಿಗೆ, ಒಮ್ಮೆ ಮುಸ್ಲಿಮರಿಗೆ ಮತ್ತು ಒಮ್ಮೆ

THE BANK OF RURAL INDIA, LTD.,

(Incorporated in British India, Liability of Members limited)

HEAD OFFICE.—"Satyabhama Bhavan", KARWAR. N. K.

Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	.. **Rs. 10,00,000.**
Subscribed Capital	.. **Rs 5,00,000.**
Paid-up Capital & Reserves	.. **Rs 5,08,602-8-0.**

Rates of Interest on Deposits:

Current a/c @ 1% p. a. - ***Savings Bank a/c @ 2½%.***

Fixed Deposits for 3 months @ 3% per annum

" " for 6 months @ 3½% "

" " for 12 months or more @ 4% "

All kinds of modern Banking business transacted.

Karwar, 14-2-1948

P X GRACIOUS. MANAGING DIRECTOR

ಕೊಳ್ಳುತ್ತಾರೆ ಒಕ್ಕಲತನದ ಕಾನೂನಿನಲ್ಲಿ ಒಡೆಯರಿಗೆ ಮಾಡಿಕೊಟ್ಟ ಅನುಕೂಲತೆಯನ್ನು ಸರಕಾರವು ಪ್ರಾಮಾಣಿಕತನದಿಂದ ನಡಿಸುವದಿಲ್ಲೆಂದು ಒಡೆಯ-ಸಮಾಜದ ಗ್ರಹಿಕೆಯಾಗಿರುತ್ತದೆ. ಕಾರಣ ಒಡೆಯರಿಗೆ ತಮ್ಮ ಆಸ್ತಿಯ ಕಬಜಾ ಪಡಕೊಳ್ಳುವಂತೆ ಕಾಯಿದೆಯಿಂದ ಒದಗಿಸಿಕೊಟ್ಟ ಅನುಕೂಲತೆಗಳನ್ನು ಪ್ರತ್ಯಕ್ಷವಾಗಿ ಒಡೆಯರ ಕೈಸೇರುವಂತೆ ತಕ್ಕ ಹುಕುಮುಗಳನ್ನು ಹೊರಡಿಸಬೇಕಾಗಿಯೂ ಕಬಜಾ ಪ್ರಕರಣಗಳನ್ನು ತ್ವರ್ಯದಿಂದ ವಿಚಾರ ನಡಿಸಿ ಕಬಜಾ ಸಿಗುವಂತೆ ಹುಕುಮು ಆಗಬೇಕಾಗಿಯೂ ಕಬಜಾ ಹುಕುಂಗಳನ್ನು ನಾಹಕ್ಕ ತಡೆಹಿಡಿಯುವಂತೆ ಮಾಡಿದ ಹುಕುಮುಗಳನ್ನು ರದ್ದು ಪಡಿಸಬೇಕಾಗಿಯೂ ಈ ಸಭೆಯು ಈ ಮೂಲಕ ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತದೆ

ಸೂಚಕರು:- ಮಂಜನಾಥ ವೆಂಕಟ್ರಮಣ ಭಟ್ಟ.

ಅನುಮೋದಕರು.- ಶಿವರಾಮ ಲಕ್ಷ್ಮೀನಾರಾಯಣ ಭಟ್ಟ.

೪ ಗೇಣಿಯನ್ನು ಒಡೆಯರಿಗೆ ಸಲ್ಲಿಸುವ ಧಾರಣೆಯನ್ನು ನಿಶ್ಚಯಿಸಿದ ಕುರಿತು ಒಡೆಯ ಒಕ್ಕಲಿಗರೊಳಗೆ ವಿವಾದವುಂಟು. ಧಾರಣೆ ಹೆಚ್ಚೆಂದು ಒಕ್ಕಲಿಗರೂ ಕಡಿಮೆಯೆಂದು ಒಡೆಯರೂ ಆಕ್ಷೇಪಿಸುತ್ತಾರೆ. ಗೇಣಿಯನ್ನು ಜೀನಸು-ರೂಪದಿಂದ ಸಲ್ಲಿಸಿದ್ದಲ್ಲಿ ಈ ವಿವಾದಕ್ಕೆ ಆಸ್ಪದವಿಲ್ಲ. ಭೂಮಿಯ ಹುಟ್ಟುವಳಿಯನ್ನು ಹೆಚ್ಚಿಸಬೇಕಾಗಿ ಒಕ್ಕಲತನದ ಕಾನೂನಿನ ಉದ್ದೇಶವುಂಟು ಒಡೆಯರಿಗೆ ಸಲ್ಲತಕ್ಕದ್ದು ಉತ್ಪನ್ನವನ್ನು ಜೀನಸು-ರೂಪದಿಂದ ಕೊಡಬೇಕಾಗಿ ವಿಧಿಸಿದ್ದಲ್ಲಿ ಒಕ್ಕಲಿಗರಿಗೆ ಹೆಚ್ಚಿನ ಉತ್ಪತ್ತಿ ಬೆಳೆಸಲಿಕ್ಕೆ ಒತ್ತಾಯವಾಗುವಂತೆ ಅದೆ ಮೇಲಾಗಿ ಒಡೆಯರಿಗೆ ತಮ್ಮ ಪ್ರಪಂಚಕ್ಕೆ ತಗಲುವ ಜೀನಸು ತಮ್ಮ ಭೂಮಿಯಿಂದ ಒದಗಿಸಿ ಕೊಟ್ಟಂತಾಗುತ್ತದೆ. ಒಡೆಯರ ಉತ್ಪತ್ತಿಯನ್ನು ಹೆಚ್ಚಿನ ದರದಿಂದ ಮಾರಾಟ ಮಾಡಿ ಒಡೆಯರ ಪ್ರತಿಫಲವನ್ನು ಮತ್ತಿಷ್ಟು ಕುಗ್ಗಿಸಿ ದುರ್ಲಾಭ ಪಡೆಯುವ ಒಕ್ಕಲಿಗರಿಗೆ ದುರಾಶೆ ತಪ್ಪುವಂತಿದೆ ಕಾರಣ ಜೀನಸುವಾರಿಯಿಂದ ಗೇಣಿಯನ್ನು ಒಡೆಯರಿಗೆ ಸಲ್ಲಿಸುವಂತೆ ಒಕ್ಕಲತನದ ಕಾನೂನಿನಲ್ಲಿ ವಿಧಿಸಬೇಕಾಗಿಯೂ, ಆ ಪ್ರಕಾರ ಜೀನಸು-ರೂಪದಿಂದ ಗೇಣಿಯನ್ನು ಸಲ್ಲಿಸದಿದ್ದ ಒಕ್ಕಲಿಗರಿಗೆ ಶಾಸನ ವಿಧಿಸಬೇಕಾಗಿಯೂ ಒಕ್ಕಲಿಗರಿಂದ ಪೇಟೆಯಲ್ಲಿ ರೂಢವಾಗಿದ್ದ ಪರಮಾವಧಿಯ ದರ ಪಡೆಯುವಂತೆ ಹುಕುಮುಗಳಾಗಬೇಕಾಗಿಯೂ ಈ ಸಭೆಯು ಸರಕಾರಕ್ಕೆ ನಮ್ರತೆಯಿಂದ ಸೂಚಿಸುತ್ತದೆ

ಸೂ.— ಸೀತಾರಾಮ ನರಸಿಂಹ ಭಟ್ಟ   ಅ - ಲಕ್ಷ್ಮೀನಾರಾಯಣ ಕೃಷ್ಣ ಭಟ್ಟ.

೫. ಒಕ್ಕಲತನದ ಕಾನೂನಿನಲ್ಲಿ ಹುಟ್ಟುವಳಿಯ ೩ ಪಾಲು ರೈತರಿಗೆ ಸಿಗಬೇಕೆಂದು ವಿಧಿಸಿದ ಉದ್ದೇಶ ಸಾಗುವಳಿಗೆ ಬೇಕಾಗುವ ಬೀಜ, ಗೊಬ್ಬರ, ಕಟ್ಟು, ಕಂಟ ಮೊದಲಾದ ಲಾಗ್ವಾಡಿನ ಯಾವತ್ತೂ ಖರ್ಚು ಸಾಗುವಳಿ ಮಾಡುವ ಒಕ್ಕಲಿಗನೇ ಸಹಿಸಬೇಕೆಂದು ಇರುತ್ತದೆ ಈ ಸಂಗತಿಯನ್ನು ೧೯೫೭ನೇ ಇಸವಿಯ ಮೇ ತಿಂಗಳಲ್ಲಿ ಕುಮಟೆಯೊಳಗೆ ಸೇರಿದ ಪರಿಷತ್ತಿನಲ್ಲಿ ಕಂದಾಯ ಮಂತ್ರಿಗಳಾದ ಮಾನ್ಯ ಮಾರಾರಜಿ ದೇಸಾಯಿಯವರು ಸ್ಪಷ್ಟಪಡಿಸಿದ್ದುಂಟು. ಆದರೆ ಈ ಕುರಿತು ಕಾನೂನಿನಲ್ಲಾಗಲಿ ನಿಯಮಗಳಲ್ಲಾಗಲಿ ಉಲ್ಲೇಖವಿಲ್ಲ ಆದ್ದರಿಂದ ಒಡೆಯ ಒಕ್ಕಲಿಗರೊಳಗೆ ವಿವಾದವುಂಟಾಗಿ ಸಾಗುವಳಿ ಸರಿಯಾಗಿ ಆಗುವದಿಲ್ಲ. ಆದ್ದರಿಂದ ಒಕ್ಕಲತನದ ಕಾನೂನಿನಲ್ಲಿ ಪಾಲು ಪಡೆಯುವ ಸಾಗುವಳಿದಾರರ ಹೊಣೆಯನ್ನು ಸ್ಪಷ್ಟಪಡಿಸಿ ಅವಶ್ಯವುಳ್ಳ ತಿದ್ದುಪಡಿ ಮಾಡಬೇಕಾಗಿ ವಿನಂತಿ ಅದೆ

ಸೂ.— ವಾಮನ ಹನುಮಂತ ಶ್ಯಾನಭಾಗ,   ಅ:— ಮಹಾಬಲೇಶ್ವರ ರಾಮ ಭಟ್ಟ ಅತ್ತಿಬೈ.

೬. ಮೂರರಲ್ಲಿ ಎರಡು ಪಾಲು ಉತ್ಪತ್ತಿ ಪಡೆಯಬೇಕಾದರೆ ಸಾಗುವಳಿದಾರರು ಹುಟ್ಟಿಸಬೇಕಾದ ಹುಟ್ಟುವಳಿಯ ಪರಿಮಾಣವನ್ನು ಸರಕಾರವು ಕಾನೂನಿನಲ್ಲಿ ನಿರ್ದೇಶಿಸಿದ್ದು ಇರುವದಿಲ್ಲ. ಆದರಿಂದ ಸಾಗುವಳಿದಾರರು ಕಷ್ಟ-ಕೃಷಿ ಮಾಡುವದಿಲ್ಲ. ಸಾಮಾನ್ಯ ಸೃಷ್ಟಿಕ್ರಮದಿಂದ ಹುಟ್ಟಿದ

ಹುಟ್ಟುವಳಿಯಲ್ಲಿ ತಮಗೆ ನಿರ್ವಿವಾದವಾಗಿ ೩ ಪಾಲು ಸಿಗುತ್ತದೆಂಬ ಗ್ರಹಿಕೆಯ ಮೇಲೆ ಉತ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನಪಡುವದಿಲ್ಲ ಪ್ರಾಯಕ್ಕೆ ಸರಿಯಾಗಿ ಹೂಟೆ ಮಾಡುವದಿಲ್ಲ, ತಕ್ಕಷ್ಟು ಗೊಬ್ಬರ ಹಾಕುವದಿಲ್ಲ, ಕಳೆ ತೆಗೆಯುವ ವಗೈರೆ ಕಾಲ-ಕಾಲಕ್ಕೆ ಕೈಕೊಳ್ಳಬೇಕಾದ ನೀಗಾ ಕೆಲಸಗಳನ್ನು ಮಾಡುವದಿಲ್ಲ ಒಕ್ಕಲತನದ ಕಾನೂನಿನಿಂದ ಒಡೆಯರಿಗೆ ತಿರಸ್ಕಾರ ಮಾಡಬೇಕೆಂಬ ಬುದ್ಧಿ ಒಕ್ಕಲಿಗ-ಸಮಾಜದಲ್ಲಿ ತಲೆದೋರಿದ್ದರಿಂದ ಸಾಗುವಳಿ ಕೆಲಸದಲ್ಲಿ ಈ ತನಕ ಒಡೆಯನು ಇಡುತ್ತಿದ್ದ ಮೇಲ್ವಿಚಾರಿಸಿನ ಕೆಲಸ ಇಡಲಿಕ್ಕೆ ಆತನಿಗೆ ಸಾಧ್ಯವಾಗುವದಿಲ್ಲ. ಕಾರಣ ಸರಕಾರದವರು ನಿರ್ದಿಷ್ಟಪಡಿಸಿದ ಉತ್ಪನ್ನಕ್ಕೆ ಕಡಿಮೆಯಾಗದಷ್ಟು ಉತ್ಪನ್ನ ಬೆಳೆಸುವ ಒಕ್ಕಲಿಗರಿಗೆ ಮಾತ್ರ, ಒಕ್ಕಲತನದ ಕಾನೂನಿನಲ್ಲಿ ವಿಧಿಸಿದ ಪಾಲು ಸಿಗುವಂತೆಯೂ, ಅಷ್ಟು ಹುಟ್ಟುವಳಿ ಮಾಡದ ಒಕ್ಕಲಿಗ-ಇಸಮುಗಳಿಂದ ನಿರ್ದಿಷ್ಟಪಡಿಸಿದ ಉತ್ಕೃಷ್ಟದ ಪ್ರಮಾಣದ ಮೇಲೆ ಒಡೆಯ-ಒಕ್ಕಲಿಗರೊಳಗೆ ಮುಂಚೆ ಆದ ಕರಾರಿನ ಪ್ರಕಾರ ಉತ್ಪನ್ನ ಕೊಳ್ಳುವಂತೆಯೂ ಕಾನೂನಿನಲ್ಲಿ ತಿದ್ದುಪಡಿಯಾಗಬೇಕಾಗಿ ಸರಕಾರದ ಕಡೆ ವಿನಂತಿ ಅದೆ.

ಸೂ — ಗಣೇಶ ನರಸ ಹೆಗಡೆ.   ಅ.— ಕೃಷ್ಣ ಶ್ರೀಧರ ಭಟ್ಟ.

೭. ಒಕ್ಕಲತನದ ಕಾನೂನಿನಲ್ಲಿ ನೀರಾವರಿ ಮತ್ತು ಇತರ ಎಂಬ ಶಬ್ದಗಳುಂಟು. ಆದರೆ ಅವುಗಳ ವ್ಯಾಖ್ಯೆ ಕಾನೂನಿನಲ್ಲಾಗಲಿ ನಿಯಮಗಳಲ್ಲಾಗಲಿ ಮಾಡಿರುವದಿಲ್ಲ. ಮಳೆಗಾಲದ ೪ ತಿಂಗಳು ಬಿಟ್ಟು ಉಳಿದ ೮ ತಿಂಗಳ ಸತತವಾಗಿ ನೀರು ಹಾಕುವ ಭೂಮಿಗೆ ನೀರಾವರಿ ಎಂದು ಎಣಿಸತಕ್ಕದ್ದೆಂದು ಸರಕಾರದ ಹುಕುಮು ಉಂಟು ಈ ಕಡೆ ಪ್ರದೇಶದಲ್ಲಿ ಸತತ ೮ ತಿಂಗಳು ನೀರು ಹಾಕುವ ಭೂಮಿ ಇರುವದಿಲ್ಲ ನೀರಾವರಿ ಭೂಮಿ ಎಂದರೆ ಸರಕಾರದ ನೀರಾವರಿ ಕಾನೂನಿಗೆ ಒಳಪಟ್ಟ ಭೂಮಿಯೆಂದು ಜನರ ಗ್ರಹಿಕೆಯುಂಟು ಸರಕಾರದ ಖರ್ಚಿನಿಂದ ತೆಗೆದ ಕಾಲುವೆಗಳ ನೀರು ಸಾಗುವಳಿಗೆ ಪೂರೈಸುವ ಭೂಮಿ ನೀರಾವರಿ ಭೂಮಿಯೆಂದು ಎಣಿಸುವ ಪ್ರಘಾತ ಉಂಟು. ಆದರಿಂದ ನೀರಾವರಿ ಕಾನೂನಿ (Irrigation Act) ಗೆ ಒಳಪಟ್ಟ ಭೂಮಿ ಮಾತ್ರ ನೀರಾವರಿ ಭೂಮಿಯೆಂದು ಎಣಿಸಬೇಕಾಗಿಯೂ ನೀರಾವರಿ ಕಾನೂನು ಜಾರಿಯಿಲ್ಲದ ಪ್ರದೇಶದ ಭೂಮಿ ಇತರ ಭೂಮಿಯೆಂದು ಎಣಿಸಬೇಕಾಗಿಯೂ ಅದರಂತೆ ಒಕ್ಕಲತನದ ಕಾನೂನಿನಲ್ಲಿ ಸ್ಪಷ್ಟತೆ ಮಾಡಬೇಕಾಗಿಯೂ ಈ ಸಭೆಯು ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತದೆ

ಸೂಚಕರು - ರಾಮಕೃಷ್ಣ ಗೋಪಾಳ ಹೆಗಡೆ

ಅನುಮೋದಕರು:- ವೆಂಕಟ್ರಮಣ ಮಂಜ ಹೆಗಡೆ

೮ ಒಕ್ಕಲತನದ ಕಾನೂನಿನಲ್ಲಿ ಸಂರಕ್ಷಿತ ಒಕ್ಕಲುಗಳ ಕಡೆಯಿಂದ ಸ್ವಂತ ಸಾಗುವಳಿಯಬಗ್ಗೆ ಕಬಜಾ ಪಡಕೊಳ್ಳಲು ಅನುಕೂಲತೆಯನ್ನು ಒದಗಿಸಿ ಕೊಟ್ಟಿದ್ದಿದೆ. ಒಕ್ಕಲತನದ ಕಾನೂನು ಜಾರಿಯಲ್ಲಿ ಬರುವ ಕಲ್ಪನೆಯಿಲ್ಲದೆ ೧—೩ ವರ್ಷಗಳ ಪೂರ್ತ ಗೇಣಿಗೆ ಕೊಟ್ಟ ಸಂಗತಿಗಳುಂಟು ಇಂಥವರು ಒಕ್ಕಲತನದ ಕಾನೂನಿನಲ್ಲಿ ವಿಧಿಸಿದಂತೆ ೧೦ ವರ್ಷಗಳ ಒಕ್ಕಲಿಗರಾಗುತ್ತಾರೆ. ಈ ಇಸಮುಗಳ ಕಡೆಯಿಂದ ಸ್ವಂತ ಸಾಗುವಳಿಯ ಬಗ್ಗೆ ಭೂಮಿ ಪಡಕೊಳ್ಳಲು ಒಡೆಯರಿಗೆ ಅನುಕೂಲವಿಲ್ಲ. ಇದರಿಂದ ಬಹಳ ಬಡ ಒಡೆಯರಿಗೆ ತಮ್ಮ ಜೀವನದ ಸಾಹಿತ್ಯಗಳನ್ನು ಪೂರೈಸಿಕೊಳ್ಳಲು ಕಷ್ಟವಾಗುತ್ತದೆ. ಕಾರಣ ಸಾಮಾನ್ಯ ರೈತರಿಂದ ಸಹ ಸ್ವಂತ ಸಾಗುವಳಿಯಬಗ್ಗೆ ಭೂಮಿ ಪಡಕೊಳ್ಳಲು ಒಡೆಯರಿಗೆ ಹಕ್ಕು ಇರುವಂತೆ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕಾಗಿ ಈ ಸಭೆಯು ಭೂಕಂದಾಯ ಮಂತ್ರಿಗಳಿಗೆ ಬಿನ್ನವಿಸಿಕೊಳ್ಳುತ್ತದೆ.

ಸೂ:- ಸೂರ್ಯನಾರಾಯಣ ನಾರಾಯಣ ಹೆಗಡೆ   ಅ - ಕೃಷ್ಣ ಶಂಭು ಭಟ್ಟ, ಬಾವಿಕಟ್ಟೆ

೯ ಒಕ್ಕಲತನದ ಕಾನೂನು ಮತ್ತು ನಿಯಮಗಳ ಮಾರ್ಗದರ್ಶನ (Guide) ವೆಂದೂ ಅರ್ಥ ವಿವರಣೆ (Interpretation) ಎಂದೂ ಸರಕಾರವು ಕೆಳ-ಅಧಿಕಾರಿಗಳಿಗೆ ಪರಿಪತ್ರಗಳನ್ನೂ ಹುಕುಮುಗಳನ್ನೂ ಹೊರಡಿಸಿ ಒಕ್ಕಲತನದ ಕಾನೂನಿನ ಅಮಲಬಜಾವಣೆಗಾಗಿ ನೇಮಿಸಿದ ಅಧಿಕಾರಿಗಳಿಗೆ ಸ್ವತಂತ್ರವಾಗಿ ನ್ಯಾಯದಾನ ಕೊಡಲು ಆತಂಕಗಳನ್ನು ಏರ್ಪಡಿಸಿದ್ದು ಕಂಡುಬರುತ್ತದೆ. ಹೀಗೆ ಅಂತರಂಗ

ಬಹಿರಂಗ ಹುಕುಂಗಳನ್ನು ಹೊರಡಿಸುವದು ನ್ಯಾಯದಾನದ ಮೂಲ ತತ್ವಗಳಿಗೆ ವಿಸಂಗತವಾಗಿರುತ್ತದೆ. ಇಂಥ ಅಂತರಂಗ-ವ್ಯವಹಾರದಿಂದ ಟೆನನ್ಸಿ ಅವಲ್-ಕಾರಕೂನರಿಗೆ ಭ್ರಷ್ಟರಾಗಲು ಅವಕಾಶ ದೊರೆಯುತ್ತದೆ. ಕಾನೂನು ಮತ್ತು ನಿಯಮಗಳು ಅಸ್ಪಷ್ಟವಿದ್ದಲ್ಲಿ ಅವುಗಳ ಅರ್ಥ ಮಾಡುವದು ಅವಶ್ಯವಿದ್ದಲ್ಲಿ ಅವನ್ನು ಕಾಯಿದೆ ಮಾಡುವ ಲೋಕಸಭೆಗಳಲ್ಲಿ ಸೂಚಿಸಿ ನಿರ್ಧರಿಸಿಕೊಳ್ಳತಕ್ಕದ್ದು, ಹೊರತು ಈಗಿನಂತೆ ಹುಕುಂಗಳನ್ನು ಹೊರಡಿಸಿ ಕಾಯಿದೆ ಮತ್ತು ನಿಯಮಗಳ ಅರ್ಥವ್ಯಾಪ್ತಿ ಇಲ್ಲವೆ ಅರ್ಥ-ಸಂಕೋಚ ಮಾಡಬಾರದೆಂದೂ, ಸರಕಾರವು ಈ ವಿಷಯಗಳಲ್ಲಿ ಹೊರಡಿಸಿದ ಮಾರ್ಗದರ್ಶನ, ಹುಕುಮುಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಈ ಸಭೆಯು ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತದೆ.

ಸೂ:- ಕೃಷ್ಣ ಶ್ರೀಧರ ಭಟ್ಟ. ಅ:- ಬಾಬಣ್ಣ ರಾಮಕೃಷ್ಣ ಪೈ.

೧೦. ಕಂದಾಯ ಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯಿಯವರು ಮೇ ೨೫ನೇ ತಾರೀಖಿಗೆ ಅಹಮ್ಮದಾಬಾದ ಜಿಲ್ಹೆಯ ಧಂಧೂಕಾ ಗ್ರಾಮದಲ್ಲಿ ಸಾರ್ವಜನಿಕ ಸಭೆಯೊಳಗೆ ಮಾತಾಡುವಾಗ ಒಡೆಯರ ಮೇಲೆ ಒಕ್ಕಲತನದ ಕಾನೂನನ್ನು ಪಾಲಿಸುವದಿಲ್ಲವೆಂದು ಆರೋಪ ಹೊರಿಸಿ ಮಾಡಿದ ಭಾಷಣವನ್ನು (ಮುಂಬಯಿಯ "ಟ್ಯಾಯ್ಸ" ಪತ್ರಿಕೆಯೊಳಗಿನದು) ಈ ಸಭೆಯು ಪರಾಂಬರಿಸಿತು. ಕಂದಾಯ ಮಂತ್ರಿಗಳು ಒಡೆಯರ ಸಮಾಜದಮೇಲೆ ವಿಕಾರ್ಥಿಯಾಗಿ ಮತ್ತು ಸಾಮೂಹಿಕವಾಗಿ ಹೊರಿಸಿದ ಆರೋಪವನ್ನು ಈ ಸಭೆಯು ನಿರ್ಧಾರದಿಂದ ನಿರಾಕರಿಸುತ್ತದೆ. ಒಕ್ಕಲಿಗರು ಒಡೆಯರಿಗೆ ದಣಿಸಿದ ಅನುಭವ ವಿರುವದಾಗಿ ಮುಂಬಯಿ ಇಲಾಖಾ ಒಡೆಯರ ಪರಿಷತ್ತಿನ ಪುಣೆಯ ಅಧಿವೇಶನದಲ್ಲಿ ಅಧ್ಯಕ್ಷಸ್ಥಾನದಿಂದ ಸ್ವಾ॥ ಮೂ॥ ನಾರಾಯಣರಾವ ಸ್ವಾಮಿರಾವ ಲೋಕೂರರವರು ಸಾರಿದ ಸಂಗತಿಯನ್ನು ಈ ಸಭೆಯು ಬಹು ನಮ್ರತೆಯಿಂದ ಮಾನ್ಯ ಮುರಾರಜಿ ದೇಸಾಯಿಯವರಿಗೆ ಅರುಹಬಯಸುತ್ತದೆ. ಪ್ರತಿಯೊಂದು ಸಮಾಜದಲ್ಲಿ ಕೆಟ್ಟ ಜನರು ಇದ್ದೇ ಇರುತ್ತಾರೆ. ಅದರ ಮೇಲಿಂದ ಇಡೀ ಸಮಾಜದ ಮೇಲೆ ಆರೋಪ ಹೊರಿಸುವದು ಅನ್ಯಾಯವಾದದ್ದೂ ಅಪಾಯಕರವೂ ಇರುತ್ತದೆ. ಇದರಿಂದ ಒಕ್ಕಲಿಗ-ಸಮಾಜದೊಳಗಿನ ಕಿಡಿಗೇಡಿಗಳು ತಮಗೆ ಸರಕಾರದ ಬೆಂಬಲವುಂಟೆಂದು ಗ್ರಹಿಸಿ ಒಡೆಯ-ಸಮಾಜವನ್ನು ನಾಹಕ್ಕ ದಣಿಸಲು ಪ್ರೇರಿತರಾಗುತ್ತಾರೆ; ವರ್ಗ-ದ್ವೇಷಕ್ಕೆ ಪುಟ ದೊರಕಿ ಪುಂಡಾಟಿಕೆಗೆ ಪ್ರೋತ್ಸಾಹ ದೊರೆತು ಅರಾಜಕತೆ ಉಂಟಾಗುವ ಸಂಭವವುಂಟು. ಮಾನ್ಯ ಮುರಾರಜಿ ದೇಸಾಯಿಯವರು ಪ್ರಾಂತದಲ್ಲಿ ಕಾಯಿದೆ ಮತ್ತು ವ್ಯವಸ್ಥೆಯನ್ನು ಕಾಪಾಡುವ ಇಲಾಖೆಯ ಮಂತ್ರಿಗಳಾಗಿದ್ದಾರೆ. ಕಾರಣ ಭಾಷಣಗಳನ್ನು ಮಾಡುವಾಗ ಬಹು ಜಾಗ್ರತೆಯಿಂದ ನಡಕೊಳ್ಳಬೇಕಾಗಿಯೂ ಉದ್ರೇಕಗೊಳಿಸುವಂಥ ಭಾಷಣ ಮಾಡುವ ಪರಿಪಾಠವನ್ನು ನಿಲ್ಲಿಸಬೇಕಾಗಿಯೂ, ಒಕ್ಕಲತನದ ಕಾನೂನಿನನ್ವಯ ತಪ್ಪು ಮಾಡುವ ಒಡೆಯ-ಇಸಮುಗಳ ಮೇಲೆ ಸರಕಾರವು ಆ ಕಾನೂನಿನಲ್ಲಿ ವಿಧಿಸಿದ ಮೇರೆಗೆ ಯುಕ್ತ ಕಂಡ ಶಾಸನ ಕ್ರಮವನ್ನು ಕೈಕೊಳ್ಳಬಹುದೆಂದೂ, ತಪ್ಪು ಮಾಡುವ ಒಡೆಯರ ಪಾಪವನ್ನು ಇಡೀ ಒಡೆಯ-ಸಮಾಜದ ಮೇಲೆ ಹೊರಿಸಿ ಇಡೀ ಒಡೆಯ-ಸಮಾಜಕ್ಕೆ ಬೆದರಿಕೆ ಹಾಕುವದೂ, ಕಾಡುವದೂ ಮಾನ್ಯ ಮಂತ್ರಿಗಳಿಗೆ ಹೇಳಿದ್ದಲ್ಲವೆಂದೂ ಈ ಸಭೆಯು ವಿನಯಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತದೆ.

ಸೂ:- ಗಣಪತಿ ಗಣೇಶ ಶಾಸ್ತ್ರಿ, ವಕೀಲ, ಕುಮಟಾ. ಅ:- ಸುಬ್ರಾಯ ಗಣಪತಿ ಭಟ್ಟ.

೧೧. ಈ ಠರಾವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ವರ್ತಮಾನಪತ್ರದವರಿಗೆ ಕಳಿಸಲು ಈ ಸಭೆಯು ಈ ಮೂಲಕ ಅಧ್ಯಕ್ಷರಿಗೆ ಅಧಿಕಾರ ಕೊಡುತ್ತದೆ.

ಸೂ:— ಕೃಷ್ಣ ಶ್ರೀಧರ ಭಟ್ಟ. ಅ:— ಗಣೇಶ ನರಸ ಹೆಗಡೆ, ಚಿಟ್ಟೆ.

ಎಲ್ಲ ಠರಾವುಗಳು ಸರ್ವಾನುಮತದಿಂದ ಕೈಕೊಳ್ಳಲ್ಪಟ್ಟವು.

ಅಧ್ಯಕ್ಷರ ಮತ್ತು ಸಭಿಕರ ಆಭಾರ ಮನ್ನಣೆಯಾದ ಬಳಿಕ ಸಭೆ ವಿಸರ್ಜಿಸಲ್ಪಟ್ಟಿತು.

ತಾ. ೩೦—೫—೧೯೪೮.
ಹೊಳೆಗದ್ದೆ

N. G. Shanbhag,
ಅಧ್ಯಕ್ಷ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಜ್ಞಾನ ಅರ್ಥ ಕೆನರಾ ಪ್ರೆಸ್ಸಿ"ನಲ್ಲಿ

ಕುಮಟಾ ತಾಲೂಕ ಹೊಳೆಗದ್ದೆ ಗ್ರಾಮದಲ್ಲಿ ಸೇರಿದ ಭೂಮಿಯೊಡೆಯರ ಸಭೆಯ ತೀರ್ಮಾನಗಳು.

ತಾರೀಖು ೩೦-೫ ೧೯೪೮ನೇಗೆ ಹೊಳೆಗದ್ದೆ ಕನ್ನಡ ಶಾಲೆಯಲ್ಲಿ ಕೂಡಿದ ಕುಮಟಾ ತಾಲೂಕ ದೇವಗಿರಿ, ಮಿರ, ಹೊಳೆಗದ್ದೆ, ಹೊರಬಾಗ, ಹರನೀರ, ಊರಕೇರಿ, ಹಂದಿಗೋಣ, ಕಡೆಕೋಡಿ ಮತ್ತು ಹೊನ್ನಾವರ ತಾಲೂಕ ಹಳದೀಪೂರ ಮತ್ತು ಕಡತೋಕೆ ಗ್ರಾಮಗಳ ಭೂಮಿಯೊಡೆಯರ ಸಭೆಯಲ್ಲಿ ಕೈಕೊಂಡ ತೀರ್ಮಾನಗಳು.

೧ ಈ ಹೊತ್ತಿನ ಸಭೆಗೆ ಶ್ರೀ॥ ನರಸಿಂಹ ಗೋವಿಂದ ಶಾನಭಾಗ ವಕೀಲ, ಕುಮಟಾ ಇವರು ಅಧ್ಯಕ್ಷರಾಗತಕ್ಕದ್ದು

ಸೂಚಕರು - ಶ್ರೀ॥ ಗಣಪತಿ ಗಣೇಶ ಶಾಸ್ತ್ರಿ, ವಕೀಲ, ಕುಮಟಾ.

ಅನುಮೋದಕರು - ಗಣೇಶ ನರಸ ಹೆಗಡೆ, ಚಿಟ್ಟೆ.

೨. ಮುಂಬಯಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಸಭಾಸದರಾದ ರಾ॥ ಬಾಬುಭಾಯಿ ಪಟೇಲರವರು ಒಕ್ಕಲತನದ ಕಾನೂನಿನಲ್ಲಿ ಸೂಚಿಸಿದ ತಿದ್ದುಪಡಿಗಳನ್ನು ಈ ಸಭೆಯು ಪರಾಂಬರಿಸಿತು. ಈ ತಿದ್ದುಪಡಿಗಳು ಒಡೆಯರ ಆಸ್ತಿಗಳನ್ನು ಏನೊಂದೂ ಪರಿಹಾರ ಕೊಡದೆ ಅಪಹರಿಸುವಂಥವು ಇರುವದರಿಂದಲೂ ಜೀವಿತ ಮತ್ತು ಆಸ್ತಿಯ ಸಂರಕ್ಷಣೆ ಕೊಡಲಿಕ್ಕೆ ಸರಕಾರವು ಬದ್ಧವಿರುವದರಿಂದಲೂ, ಪರಿಹಾರ ಕೊಡದೆ ಆಸ್ತಿಯ ಅಪಹಾರ ಮಾಡುವದು ರಾಜ-ಧರ್ಮಕ್ಕೆ ಅಯೋಗ್ಯವಾಗಿರುವದರಿಂದಲೂ, ಆ ಸೂಚನೆಗಳನ್ನು ಮನ್ನಿಸಬಾರದಾಗಿಯೂ ಅವನ್ನು ವಿರೋಧಿಸಬೇಕಾಗಿಯೂ ಸರಕಾರದ ಕಡೆ ಈ ಸಭೆಯು ಈ ಮೂಲಕ ಬಿನ್ನವಿಸಿಕೊಳ್ಳುತ್ತದೆ.

ಸೂಚಕರು:- ತಿಮ್ಮಣ್ಣ ಸೀತಾರಾಮ ಹೆಗಡೆ.

ಅನುಮೋದಕರು:- ರಾಮಚಂದ್ರ ಮಂಜನಾಥ ಭಟ್ಟ.

೩. ಈಗಿನ ಒಕ್ಕಲತನದ ಕಾನೂನಿನಲ್ಲಿ ಸ್ವಂತ ಸಾಗುವಳಿಯ ಮೇಲೆ ಸರಕಾರದ ಕಟಾಕ್ಷವುಂಟು ಒಡೆಯರು ಸ್ವಂತ ಸಾಗುವಳಿ ಮಾಡಬೇಕೆಂದು ಸರಕಾರದ ಅಪೇಕ್ಷೆಯುಂಟು. ಒಡೆಯರು ಸ್ವಂತ ಸಾಗುವಳಿ ಮಾಡಿದ್ದಲ್ಲಿ ಉತ್ಪತ್ತಿ ಹೆಚ್ಚಾಗುವದೆಂಬ ಕಲ್ಪನೆಯುಂಟು. ರೈತರಿಗೆ ರಕ್ಷಣೆ ಕೊಟ್ಟು ಒಡೆತನ ಕೊಡುವ ಉದ್ದೇಶವಾದರೂ ಇದೇ ಇರುತ್ತದೆ. ಒಡೆಯರು ಆದಷ್ಟರ ಮಟ್ಟಿಗೆ ಸ್ವಂತ ಸಾಗುವಳಿಯನ್ನು ಕೈಕೊಂಡು ಉತ್ಪತ್ತಿ ಹೆಚ್ಚಿಸುವ ರಾಜಕಾರ್ಯದಲ್ಲಿ ನೆರವಾಗಬೇಕೆಂಬ ವಿಚಾರ ಸರಕಾರಕ್ಕಿದೆ. ಇದೇ ಉದ್ದೇಶದಿಂದ ಒಕ್ಕಲತನದ ಕಾನೂನಿನಲ್ಲಿ ಸ್ವಂತ ಸಾಗುವಳಿಯ ಹಕ್ಕು ಒಡೆಯರಿಗೆ ಕೊಡಲ್ಪಟ್ಟಿದೆ. ಆದರೆ ಸದರ ಹಕ್ಕಿನಂತೆ ಒಡೆಯರಿಗೆ ತಮ್ಮ ಆಸ್ತಿಯ ಕಬಜೆ ಪಡಕೊಳ್ಳಲು ಕೆಳ-ಅಧಿಕಾರಿಗಳು ಬಹಳ ಆತಂಕಗಳನ್ನು ಉಂಟುಮಾಡುತ್ತಾರೆ. ಕಬಜೆ ಕೊಡಿಸುವ ಹುಕುಮುಗಳನ್ನು ಹೊರಡಿಸಲಿಕ್ಕೆ ವಿಳಂಬವಾಗುತ್ತದೆ. ಟೆನನ್ಸಿ ಅವಲ್-ಕಾರಕೂನರಿಂದ ಆದ ಕಬಜಾ ಹುಕುಮುಗಳು ಅಪೀಲ ದಾಖಲಾದ ಕಾರಣಗಳ ಮೇಲಿಂದ ತಡೆಹಾಕಲ್ಪಡುತ್ತವೆ. ಇದರಿಂದ ಸಾಗುವಳಿಯ ಬಗ್ಗೆ ಒಡೆಯರು ಪ್ರೋತ್ಸಾಹಿಸಿಕೊಂಡ ಸಾಹಿತ್ಯ ನಿರರ್ಥಕವಾಗುತ್ತದೆ. ಕಬಜಾ ಹುಕುಂ ಆದ್ದರಿಂದ ಒಕ್ಕಲಿಗನು ಸಾಗುವಳಿಯಲ್ಲಿ ಆಸಕ್ತಿ ತಳೆಯುವದಿಲ್ಲ. ಒಡೆಯನಿಗೆ ನಷ್ಟಪಡಿಸಬೇಕೆಂಬ ಒಂದೇ ಉದ್ದೇಶದಿಂದಲೂ ತನ್ನಿಂದಾದ ನಷ್ಟವನ್ನು ತುಂಬಿಕೊಳ್ಳಲಿಕ್ಕೆ ತನ್ನ ಜಿಪತ್ತಿನ ಅಭಾವದ ಮೂಲಕ ಎಷ್ಟರೂ ಒಡೆಯರಿಗೆ ಸಾಧ್ಯವಿಲ್ಲವೆಂಬ ನಿರ್ಧಾರದಿಂದಲೂ ಒಕ್ಕಲಿಗರು ಕಬಜಾ ಹುಕುಂಗಳಿಗೆ ತಡೆಹಾಕಿ

ಇತರರಿಗೆ (ಅಂದರೆ ಪಾರ್ಶಿ, ಕ್ರಿಸ್ತಿ ಮೊದಲಾದವರಿಗೆ) ಸಿಗಬೇಕೆಂದು ಒಂದು ರೂಢಿಯ ನಿಯಮ ಮಾಡಿದ್ದರು. ಮೊನ್ನೆಯ ವರೆಗೂ ಈ ನಿಯಮವನ್ನು ಎಲ್ಲರೂ ಪಾಲಿಸುತ್ತ ಬಂದಿದ್ದರು. ಆದರೆ ಕಳೆದ ವಾರ ನಡೆದ ಅಧ್ಯಕ್ಷ ಚುನಾವಣೆಯ ಕಾಲಕ್ಕೆ ಈ ನಿಯಮ ಗಾಳಿಗೆ ಹಾರಿಹೋಯಿತು! ಈ ಸಾರೆ "ಇತರ"ರ ಪಾಳಿಯಿತ್ತಂತೆ. ಆದರೂ ಸಭೆಯಲ್ಲಿ ಪ್ರಾಬಲ್ಯವಿದ್ದ ಮುಸಲ್ಮಾನ ಸದಸ್ಯರು ಪಾಕಿಸ್ತಾನಿ ಪ್ರಮುಖರ ಪ್ರೀತಿಪಾತ್ರರೋರ್ವರಿಗೆ ಅಧ್ಯಕ್ಷ ಪದದ ಪಟ್ಟ ಕೊಟ್ಟು "ಪಾಕಿಸ್ತಾನವು ಪಾಕಿಸ್ತಾನಿಗಳಿಗಾಗಿ" ಎಂಬ ಮಾತನ್ನು ವ್ಯಕ್ತಪಡಿಸಿದರು!

— ಹಿಂದ ಸರಕಾರವು ಹೈದರಾಬಾದಕ್ಕೆ ವಿಶೇಷ ಸವಲತ್ತು ಕೊಡುತ್ತಿರುವದನ್ನು ಕಂಡು ಹಿಂದೀ ಒಕ್ಕೂಟಕ್ಕೆ ಸೇರಿದ ಸಂಸ್ಥಾನಿಕರು ಅಸಮಾಧಾನಗೊಳ್ಳುತ್ತಿದ್ದಾರೆಂದು ಈಗ ವಿಲಾಯತಿಗೆ ಹೋಗಿರುವ ಓರ್ವ ಸಂಸ್ಥಾನಾಧೀಶರು ಹೇಳುತ್ತಾರಾಗಿ ವಿಲಾಯತಿಯಿಂದ ವರದಿ ಬಂದಿದೆ.

— ಮೇಲಧಿಕಾರಿಗಳು ಸಂಚಾರಕ್ಕೆ ಹೋದಾಗ ಸವಲತ್ತುಗಳನ್ನು ಸ್ವೀಕರಿಸಕೂಡದೆಂದೂ ತಾವು ಕೈಕೆಳಗಿನವರ ಕಡೆಯಿಂದ ತರಿಸಿಕೊಂಡ ಜೀನಸುಗಳ ಬೆಲೆಯನ್ನು ತಪ್ಪದೆ ಕೊಡತಕ್ಕದ್ದೆಂತಲೂ ಮುಂಬಯಿ ಸರಕಾರದವರು ವಿಧಿಸಿರುತ್ತಾರೆ. ಮೇಲಧಿಕಾರಿಗಳ ಮರ್ಜಿ ಸಂಪಾದಿಸುವದಕ್ಕೆಂದಾಗಲಿ, ಪೂರ್ಣ ಬೆಲೆ ಬೇಡಲು ಭೀತಿಯಾಗುತ್ತದೆಂದಾಗಲಿ ಕೆಳ-ಅಧಿಕಾರಿಗಳು ತಾವು ಪೂರೈಸಿದ ಜೀನಸುಗಳ ಪೂರ್ಣ ಬೆಲೆ ಬೇಡದೆ ರಿಯಾಯತಿ ತೋರುವದುಂಟು; ಇದನ್ನು ತಡೆಯುವದಕ್ಕೆಂದು ಸರಕಾರವು ಒಂದು ಹೆಜ್ಜೆ ಮುಂದೆ ಹೋಗಿ, ತಾವು ಪೂರೈಸಿದ ಜೀನಸುಗಳ ಪೂರ್ಣ ಬೆಲೆಯನ್ನು, ಜೀನಸು ಪಡೆದ ಅಧಿಕಾರಿಗಳಿಂದ ಕೆಳ-ಅಧಿಕಾರಿಗಳು ವಸೂಲ ಮಾಡದಿದ್ದರೆ ಅದೊಂದು ಅಪರಾಧವೆಂದು ಎಣಿಸಲಾದೀತಾಗಿ ಎಚ್ಚರಿಕೆಯನ್ನೂ ಕೊಟ್ಟಿದೆ.

— ಮ್ಯುನಿಸಿಪಾಲಿಟಿಗಳ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ (ಅಹಮದಾಬಾದ, ಪುಣೆ, ಹುಬ್ಬಳ್ಳಿ ವಗೈರೆ ದೊಡ್ಡ ಪಟ್ಟಣಗಳ ಮ್ಯುನಿಸಿಪಾಲಿಟಿಗಳನ್ನು ಬಿಟ್ಟು ಬೇರೆ) ಎಲ್ಲ ಮ್ಯುನಿಸಿಪಾಲಿಟಿಗಳಿಗೆ, (೧) ಅವು ತಮ್ಮ ನೌಕರರಿಗೆ ಕೊಡುತ್ತಿರುವ ತುಟ್ಟಿ ಭತ್ತೆಯ ಅರ್ಧದಷ್ಟು ಹಣವನ್ನು ಸರಕಾರದಿಂದ ಕೊಡಲಾಗುವದೆಂದೂ, (೨) ಚಾಲೂ ವರ್ಷದಲ್ಲಿ ಎಲ್ಲ ಮ್ಯುನಿಸಿಪಾಲಿಟಿಗಳಿಗೆ ಆಯಾ ಮ್ಯು॥ಯ ಕ್ಷೇತ್ರದೊಳಗೆ ಚಾಲೂ ವರ್ಷದಲ್ಲಿ ವಸೂಲ ಬರುವ ಭೂಕಂದಾಯದ ನೂರಕ್ಕೆ ೧೫ರಷ್ಟು ಪಾಲನ್ನು ಮತ್ತು ಬಿನ್-ಶೇತಕಿ ಕಂದಾಯದ ನೂರಕ್ಕೆ ೭೫ರಷ್ಟು ಪಾಲನ್ನು ಧನಸಹಾಯವೆಂದು ಕೊಡಲಾಗುವದೆಂದೂ ಮುಂಬಯಿ ಸರಕಾರವು ಜಾಹೀರ ಪಡಿಸಿದೆ. ಇನ್ನು ಮುಂದೆ ಸಹ ಸರಕಾರವು ಈ ಧನಸಹಾಯವನ್ನು ಮ್ಯು॥ಗಳಿಗೆ ಕೊಡಲು ಸಿದ್ಧವಿದೆ. ಆದರೆ ಆ ಧನಸಹಾಯದಷ್ಟೇ ಮ್ಯು॥ಗಳು ತಮ್ಮ ವಾರ್ಷಿಕ ಉತ್ಪನ್ನವನ್ನು ಸೂಕ್ತ ಉಪಾಯಗಳಿಂದ ಬೆಳೆಸಬೇಕೆಂದು ಸರಕಾರವು ಕರಾರು ಹಾಕಿರುತ್ತದೆ.

— ಮಹಾರಾಷ್ಟ್ರದಲ್ಲಿ ಕೋಯನಾ ನದಿ (ಕೃಷ್ಣಾ ನದಿಯ ಒಂದು ಶಾಖೆ) ಗೆ ಒಡ್ಡು ಹಾಕಿ ಒಂದು ದೊಡ್ಡ ನೀರಾವರಿಯ ಕೆರೆಯನ್ನು ನಿರ್ಮಿಸಿ, ಸಾತಾರಾ, ಸೊಲ್ಲಾಪುರ, ವಿಜಾಪುರ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಬರಗಾಲ ಬರುವ ಭೀತಿಯನ್ನು ತಪ್ಪಿಸಬೇಕೆಂದೂ ಈ ಕೆರೆಯ ನೀರಿನ ಸಹಾಯದಿಂದ ಸಹ್ಯಾದ್ರಿ ಪರ್ವತದ ಪಶ್ಚಿಮ ಘಟ್ಟದಲ್ಲೊಂದು ಕಡೆ ವಿದ್ಯುಚ್ಛಕ್ತಿಯ ಕಾರಖಾನೆಯನ್ನು ನಡಿಸಬೇಕೆಂದೂ ಮುಂಬಯಿ ಸರಕಾರದ ವಿಚಾರವುಂಟು. ಈ ಯೋಜನೆ ಕೈಗೂಡಿದರೆ ಮಹಾರಾಷ್ಟ್ರದ ದಕ್ಷಿಣ ಭಾಗಕ್ಕೆ — ಸೊಲ್ಲಾಪುರದೊಳಗಿನ ಗಿರಣಿಗಳಿಗೆ ಕೂಡ — ಸಾಕಷ್ಟು ವಿದ್ಯುಚ್ಛಕ್ತಿಯ ಪೂರೈಕೆಯಾಗುವದಂತೆ. ಕೆಲವು ದಿನಗಳಾಚೆ ಮಹಾರಾಷ್ಟ್ರದೊಳಗಿನ ಕೆಲವು ಪ್ರಮುಖ ಉದ್ದಿಮೆಗಾರರು ಒಡ್ಡು ಹಾಕುವ ಸ್ಥಳವನ್ನೂ, ಅದರ ಸುತ್ತಮುತ್ತಲಿನ ಪ್ರದೇಶವನ್ನೂ ಸ್ವತಃ ನೋಡಿ ಮತ್ತು ಯೋಜನೆಯ ಪೂರ್ಣ ಮಾಹಿತಿಯನ್ನು ತಿಳಕೊಂಡು ಅದನ್ನು ತುಂಬಾ ಹರಸಿದ್ದಾರೆ. ಮತ್ತು ಈ ಯೋಜನೆಯನ್ನು ಕೃತಿಯಲ್ಲಿಳಿಸಲು ಸರಕಾರಕ್ಕೆ ಆಗ್ರಹ ಮಾಡಹತ್ತಿದ್ದಾರೆ. ಈ ನೀರಾವರಿ ಯೋಜನೆಯಿಂದ ವಿಜಾಪುರ ಜಿಲ್ಲೆಯು ಮೇಲಿಂದ ಮೇಲೆ ಬರಗಾಲದ ಭವಣೆಯನ್ನು ಅನುಭವಿಸುತ್ತಿರುವದು ತಪ್ಪುವದೆಂದು ಹೇಳಲಾಗುತ್ತಿದೆ

— ಹಿಂದುಸ್ಥಾನದ ಹೊಸ ಗವರ್ನರ ಜನರಲ್ಲರಾದ ಶ್ರೀ ರಾಜಗೋಪಾಲಾಚಾರ್ಯರು ಇದೇ ಬರುವ ೨೧ನೇ ತಾರೀಖಿಗೆ ಮೌಂಟಬ್ಯಾಟನ್ ದೊರೆಗಳಿಂದ ಅಧಿಕಾರ ವಹಿಸಿಕೊಳ್ಳುವರು. ಆಚಾರ್ಯರು ಕಳೆದ ವಾರ ದಿಲ್ಲಿಗೆ ಹೋಗಿ ತಮಗೆ ಬೇಕಾದ ತಿಳುವಳಿಕೆಯನ್ನು ಆರಿಸಿಕೊಂಡಿದ್ದಾರೆಂದು ತಿಳಿಯುತ್ತದೆ.

— ಬ್ರಿಟಿಶ ಸಾಮ್ರಾಜ್ಯದಲ್ಲಿ ಸದ್ಯಕ್ಕೆ ೪॥ ಕೋಟಿ ಜನಸಂಖ್ಯೆಯಿದೆ. ಈ ಜನಸಂಖ್ಯೆ ಹೆಚ್ಚುತ್ತಿದೆ, ಸಾಮ್ರಾಜ್ಯದ ಹೊರಗೆ ಹೋದರೆ ೩ ಕೋಟಿ ಜನರಿಗೆ ಸ್ವಸ್ಥ ಜೀವನ ಪೂರೈಸಬಹುದೆಂದು ೮-೧೦ ದಿನಗಳ ಹಿಂದೆ ವಿಲಾಯತಿಯ ದೊರೆಗಳ ಸಭೆಯಲ್ಲಿ ವ್ಹೈಕೌಂಟ ಎಡಿಸನ್ ದೊರೆಗಳು ತಮ್ಮದೊಂದು ಭಾಷಣದಲ್ಲಿ ಹೇಳಿದರು. ಸುಮಾರು ೧೮ ಕೋಟಿ ಬ್ರಿಟಿಶರು ದೇಶಾಂತರ ಮಾಡಲು ಮುಂದೆ ಬರಬೇಕೆಂದೂ ಅವರು ಹಾರೈಸಿದರು. ಆಸ್ಟ್ರೇಲಿಯಾ ದೇಶವು ಒಂದು ವಿಶಾಲ ಖಂಡವಾಗಿದ್ದು ಕೋಟ್ಯಂತರ ಪ್ರಜೆಗಳಿಗೆ ಆಶ್ರಯ ಕೊಡಬಲ್ಲದು. ಈ ಖಂಡದಲ್ಲಿ ಸಮುದ್ರ ಕಿನಾರೆಯ ಮೇಲಷ್ಟೇ ಈಗ ಜನವಸತಿಯಿದೆ. ಒಳ-ಪ್ರದೇಶಗಳೆಲ್ಲ ನಿರ್ಜನವಾಗಿವೆ. ಆದ ಕಾರಣ ಬ್ರಿಟಿಶರು ಆಸ್ಟ್ರೇಲಿಯಾ ದೇಶಕ್ಕೆ ಹೋಗಿ ನೆಲಸುವಂತೆ ಬ್ರಿಟಿಶ ಸರಕಾರದ ಪ್ರಯತ್ನಗಳು ನಡೆದಿವೆ. ಈ ವರ್ಷ ೫೫ ಸಾವಿರ ಜನರನ್ನು ಅಲ್ಲಿಗೆ ಕಳಿಸಿಕೊಡಲಾಗುವದೆಂದು ಎಡಿಸನ್ ದೊರೆಗಳು ಹೇಳಿದರು

— ಏಶಿಯಾ ಖಂಡದ ಹಾಗೂ ಅತಿ ಪೂರ್ವದೇಶಗಳ ಆರ್ಥಿಕ ಉದ್ಧಾರದ ಯೋಜನೆಯನ್ನು ಸಿದ್ಧಗೊಳಿಸಲು ಕಳೆದ ವಾರದಿಂದ ಮದ್ರಾಸ ಪ್ರಾಂತದ ಉದಕಮಂಡದಲ್ಲಿ (ಕಂಟ ಹವೆಯ ಗಿರಿಶಿಖರ) ಸಂಯುಕ್ತ ರಾಷ್ಟ್ರಸಂಘದ ವಿದ್ಯಮಾನ ಒಂದು ಪರಿಷತ್ತು ಕೂಡಿದೆ. ಈ ಪರಿಷತ್ತಿನ ಉದ್ಘಾಟನೆಯನ್ನು ಭಾರತದ ಮುಖ್ಯ ಪ್ರಧಾನರಾದ ಪಂಡಿತ ಜವಾಹರಲಾಲರು ಮಾಡಿದರು. ಪಂಡಿತಜಿಯವರು ತಮ್ಮ ಭಾಷಣದಲ್ಲಿ, ಏಶಿಯಾ ಖಂಡದ ಬಡ ರಾಷ್ಟ್ರಗಳ ಸಾಂಪತ್ತಿಕ ಸ್ಥಿತಿ ಸುಧಾರಿಸುವ ಪ್ರಯತ್ನ ಸ್ವಾಗತಾರ್ಹವಿರುತ್ತದೆ, ಪರಕೀಯರ ಆರ್ಥಿಕ ಸಹಾಯ ದೊರೆತರೆ ನೋಗಿನಿಂದ ತಮ್ಮ ಅರ್ಥವನ್ನು ಮತ್ತು ಸ್ವತಂತ್ರ ಬೆಳಸಲು ಯುಕ್ತವಿದ್ದರೆ ಆ ಸಹಾಯವನ್ನು ಏಶಿಯಾದ ರಾಷ್ಟ್ರಗಳು ಸ್ವೀಕರಿಸಲಿಕ್ಕಿಲ್ಲೆಂದು ಶ್ರೋತೃಗಳಿಗೆ ಎಚ್ಚರಿಕೆ ಕೊಟ್ಟರು. ಹಿಂದ ಸರಕಾರದ ವಾಣಿಜ್ಯ-ಕೈಗಾರಿಕಾ ಮಂತ್ರಿಗಳಾದ ಡಾ॥ ಚೆಟ್ಟಿಯವರು ಈ ಪರಿಷತ್ತಿನ ಅಧ್ಯಕ್ಷರು. ಏಶಿಯಾ ಆರ್ಥಿಕ ಸಹಾಯ ಸಮಿತಿಯ ಚಾಲೂ ವರ್ಷದ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ; ಬ್ರಹ್ಮದೇಶದ ಪ್ರತಿನಿಧಿಗಳಾದ ಸೋಬೆಶ್ಟ ಅವರನ್ನು ಉಪಾಧ್ಯಕ್ಷ ಪದಕ್ಕೆ ಆರಿಸಲಾಗಿದೆ. ಈ ಸಮಿತಿಯಲ್ಲಿ ಇಂಡೋನೇಶಿಯಾದ ಪ್ರಜಾರಾಜ್ಯದ (ಜಾವಾ, ಸುಮಾತ್ರಾ ದ್ವೀಪಗಳನ್ನು ಆಳುತ್ತಿದ್ದ ಡಚ್ಚರು ಹಿಂದೆ ಸರಿದುದರಿಂದ, ಮುಂದೆ ಜಪಾನಿಗಳ ಪತನವಾದ ವೇಳೆ ಅಲ್ಲಿಯ ಪ್ರಜೆಗಳು ಸ್ವತಂತ್ರ ಪ್ರಜಾರಾಜ್ಯ ಸ್ಥಾಪಿಸಿಕೊಂಡಿದ್ದರು; ಮುಂದೆ ಈ ಪ್ರಜಾರಾಜ್ಯವನ್ನು ಮುರಿಯಲು ತಮ್ಮ ಸತ್ತೆಯನ್ನು ಪುನಃ ಸ್ಥಾಪಿಸಿಕೊಳ್ಳಲು ಡಚ್ಚರು ಹೋರಾಡುತ್ತಿದ್ದಾರೆ) ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂದು ಭಾರತದ ಪ್ರತಿನಿಧಿಗಳು ತಂದ ಸೂಚನೆಯ ಮೇಲೆ ಈಗ ಭಿನ್ನಮತ ವಾದ ನಡೆದಿದೆ. ಪ್ರಜಾರಾಜ್ಯದ ಪ್ರತಿನಿಧಿಗೆ ಸ್ಥಾನ ಕೊಟ್ಟಲ್ಲಿ ತಾವು ಪರಿಷತ್ತು ಬಿಟ್ಟು ಹೋಗುವೆವೆಂದು ಡಚ್ಚ ಸರಕಾರದ ಪ್ರತಿನಿಧಿಯು ಬೆದರಿಸುತ್ತಿದ್ದಾನೆ!!

— ಏಶಿಯಾ ರಾಷ್ಟ್ರಗಳ ಆರ್ಥಿಕ ಉದ್ಧಾರದ ಪರಿಷತ್ತಿಗಾಗಿ ಪಂ॥ ಜವಾಹರಲಾಲರು ಉದಕಮಂಡಕ್ಕೆ ಹೋದ ಸಮಯದಲ್ಲಿ, ಕೊಯಿಮತ್ತೂರದಲ್ಲಿ ದಕ್ಷಿಣ ಭಾರತದ ಗಿರಣಿ ಮಾಲಿಕರ ಸಂಘದವರು ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗಾಗಿ ರೂ. ೧೧,೧೧,೧೧೧ ಗಳ ಥೈಲಿಯೊಂದನ್ನು ಪಂಡಿತಜಿಯವರ ಕೈಯಲ್ಲಿತ್ತರು. ಈ ಹಣವನ್ನು ಕೊಯಿಮತ್ತೂರ ಜಿಲ್ಲೆಯೊಳಗಿನ ಗಿರಣಿ ಕೆಲಸಗಾರರಿಗೆ ಜೀವನ ಸುಖ-ಸೌಕರ್ಯಗಳನ್ನು ಒದಗಿಸಲಿಕ್ಕೆ ವಿನಿಯೋಗಿಸಬೇಕಾಗಿ ಸಂಘದವರು ಬಿನ್ನವಿಸಿದ್ದಾರೆಂದು ತಿಳಿಯುತ್ತದೆ.

— ಮ್ಹೈಸೂರ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಳೆದ ೨೧ನೇ ಸಂಸ್ಥಾನದಲ್ಲಿ ಎಲ್ಲಾ ಗೋವಧೆ ಬರೆಯು ಕೂಡದೆಂದೂ, ಸ್ವಾದೇಶಿ ಕೂಡುವ ಪ್ರವೇಶ ನಿಷ್ಟಸಬೇಕೆಂದೂ, ಈ ಎರಡೂ ಪ್ರಕಾರಗಳನ್ನು ಕಾಯದೆಯಿಂದ ಪ್ರತಿಬಂಧಿಸಬೇಕೆಂದೂ ಬೇಡಿದಾಗ ಮಂತ್ರಿಗಳಾದ ಶ್ರೀ ಸಿದ್ಧಯ್ಯನವರು ಮಂಡಿಸಿದ ಗೊತ್ತುವಳಿಯು ಪ್ರಚಂಡ ಬಹುಮತದಿಂದ ಸ್ವೀಕೃತವಾಯಿತು. ಕೆಲವೊಂದು ಮುಸಲ್ಮಾನರಿಗೆ ಹಾನಿಯಾಗುತ್ತದೆಂಬ ಕಾರಣ ಹೇಳಿ ಕೆಲವು ಮುಸಲ್ಮಾನ ಸದಸ್ಯರು ಗೊತ್ತುವಳಿಗೆ ಮಾಡಿದ ವಿರೋಧಕ್ಕೆ ಯಾರೂ ಬೆಲೆ ಕೊಡಲಿಲ್ಲ.

— ಹೊಸ-ಹಳೆಯ ಮಹಾರಾಷ್ಟ್ರ (ಕೊಕಣ) ಪ್ರಾಂತದಲ್ಲಿ ಇನ್ನು ಕೆಲವು ಪ್ರಾಂತಿಕ ಪದ್ಧತಿಗಳನ್ನು ಜಾರಿಗೆ ತರುವ ದಿನವೊಂದು ಸಿದ್ಧವಾಗಿದೆ. ಮೊನ್ನೆ ಶನಿವಾರ ಮುಂಬಯಿಯಲ್ಲಿ ಸೇರಿದ ಮುಂಬಯಿ ಶಾಸನ ಸಭೆಗಳ ಕಾಂಗ್ರೆಸ ಪಕ್ಷದ ವಾರ್ಷಿಕ ಸಭೆಯಲ್ಲಿ ಈ ಮಸೂದೆಯ ವಿಷಯಗಳನ್ನು ಮುಖ್ಯಮಂತ್ರಿ ಮಾನ್ಯ ಖೇರರೂ ಕಂದಾಯ ಮಂತ್ರಿ ಶ್ರೀ ಮೊರಾರಜಿ ದೇಸಾಯಿಯವರೂ ಪ್ರಕಟಗೊಳಿಸಿದರು; ಆ ವಿಷಯಗಳು ಇಂತಿವೆ.— ಬೇಸಾಯದ ಭೂಮಿಯನ್ನು ಒಡೆಯನು ಮಾರಬಯಸಿದ್ದರೆ ಅದರ ಕೈಕ ನಿಗೇ ಮಾರಬೇಕು, ಕೈಕನು ಕೊಳ್ಳಲೊಪ್ಪದಿದ್ದರೆ ನೆರೆಯ

ಕಟ್ಟಿಗೆ ಜಾಹೀರ ಲಿಲಾಂವ.

ತಾ. ೯ ಜೂನ ಬುಧವಾರ ಸಂಜೆ ೫ ಘಂಟೆಗೆ ಕಾಲೇಜ ಜಾಗಾದಲ್ಲಿ ಹೊರಾಟಿ (೬-೮ ಗಾಡಿಗಳಾಗುವಷ್ಟು) ಜಾಹೀರ ಲಿಲಾಂವಿನಿಂದ ಮಾರಲ್ಪಡುವವು. ಸವಾಲು ಮಂಜೂರ ಆದಲ್ಲಿ ಸವಾಲಿನ ರಕಮು ಕೂಡಲೇ ಕೊಡಬೇಕಾಗುವದು.

ಎಸ್. ಬಿ. ಹೆಗಡೆ,
ತಾ ೩-೬-೪೮. ಚೇರಮನ್,
ಕೆನರಾ ಕಾಲೇಜ ಸಮಿತಿ, ಕುಮಟಾ.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೩೮ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಬ್ರಾಂಚ ಆಫೀಸು:—
Post Box No. 10,
UDIPI, S. Kanara.

ಹೊಲದೊಡೆಯರಿಗೆ ಮಾರಬೇಕು. ಒಕ್ಕಲತನದ ಉದ್ಯೋಗ ಮಾಡದಿದ್ದವನಿಗೆ ಬೇಸಾಯದ ಭೂಮಿಯನ್ನು ಇನ್ನು ಮುಂದೆ ಮಾರಬಾರದಂತಲ್ಲ ಯಾವದೇ ಹೊಲದೊಡೆಯನು ೫೦ ಎಕರೆಗಳಿಗಿಂತ ಹೆಚ್ಚಿಗೆ ಭೂಮಿಯನ್ನು ಧಾರಣ ಮಾಡಕೂಡದು. ೫೦ ಎಕರೆಗಿಂತ ಹೆಚ್ಚಿಗೆ ಇರುವ ಭೂಮಿಯನ್ನು ಹೊಲದೊಡೆಯರು ತಮ್ಮ ಸಂರಕ್ಷಿತ ರೈತರಿಗೆ ಮಾರಬೇಕು. ಈ ಮಾರಾಟದ ಬೆಲೆ ನಿರ್ಧರಿಸಲು ಒಂದು ನ್ಯಾಯಮಂಡಳ ನೇಮಿಸಲ್ಪಡುವದು. ಈಗ ಸಾಗುವಳಿಯಾಗದೆ ಬಂಜರ ಬಿದ್ದಿರುವ ಖಾಸಗಿ ಭೂಮಿಗಳನ್ನು ಸರಕಾರವು ತನ್ನ ಸ್ವಾಧೀನ ಪಡಕೊಂಡು, ಅವನ್ನು ರೈತರಿಗೆ ಹಂಚಿಕೊಡುವದು. ಈ ರೈತರು ಸರಕಾರಕ್ಕೆ ಭೂಕಂದಾಯವನ್ನಷ್ಟು ತೆತ್ತರಾಯಿತು. ಸಾಗುವಳಿಯ ಅನುಕೂಲತೆಗಾಗಿ ಇವರಿಗೆ ಹಣದ ಸಹಾಯ ಬೇಕಾದಲ್ಲಿ ಅದನ್ನು ಅವರು ಭೂಭದ್ರ ಬೇಂಕಿನಿಂದಾಗಲಿ ಸರಕಾರಿ ಬೇಂಕುಗಳಿಂದಾಗಲಿ ಪಡಕೊಳ್ಳಬಹುದು. ಇದಲ್ಲದೆ ತಾಲೂಕದಾರಿ, ಖೋತಿ ಮೊದಲಾದ ಭೂಧಾರಣ ಪದ್ಧತಿಗಳನ್ನು ರದ್ದುಗೊಳಿಸುವ ಕಲಮುಗಳೂ ಮಸೂದೆಯಲ್ಲಿವೆ. ಜಹಾಗೀರದಾರ, ಇನಾಮದಾರ, ಕುಲಕದಾರ ಇವರ ಹೊಲ ಭೂಮಿಗಳ ವಹಿವಾಟನ್ನು ಸರಕಾರವೇ ಮಾಡಿ, ಜಹಾಗೀರದಾರ ವಗೈರೆಗೆ ನಿವ್ವಳ ಉತ್ಪನ್ನವನ್ನಷ್ಟು ಕೊಡುವದೆಂದೂ ತಿಳಿಯುತ್ತದೆ.

— ಇದೇ ಬರುವ ಜೂನ ತಾ. ೧೫ಕ್ಕೆ ಹಿಂದುಸ್ಥಾನ-ಪಾಕಿಸ್ತಾನಗಳ ನಡುವೆ ಯುದ್ಧಕ್ಕೆ ಪ್ರಾರಂಭವಾಗುವದೆಂದೂ, ಅಂದು ದಿಲ್ಲಿ ಪ್ರಾಂತದಲ್ಲಿ ಉಗ್ರ ಸ್ವರೂಪದ ದಂಗೆ, ಗಲಭೆ ಅತ್ಯಾಚಾರಗಳು ನಡೆಯುವವೆಂದೂ ಕೆಲವು ಕಿಡಿಗೇಡಿಗಳು ಸುದ್ದಿಯನ್ನೆಬ್ಬಿಸಿದ್ದಾರೆ! ಇಂತಹ ಹಾರಿಕೆಯ ಸುದ್ದಿಗಳನ್ನು ನಂಬಿ ಜನರು ಬುದ್ಧಿ-ಭ್ರಷ್ಟ ಇಲ್ಲವೆ ಚಂಚಲಮನಸ್ಕರಾಗಕೂಡದೆಂದೂ, ಗಲಭೆಯುಂಟಾದರೆ ಅದನ್ನು ಹತ್ತಿಕ್ಕಲು ಸರಕಾರವು ಸದಾ ಸಿದ್ಧವಿರುತ್ತದೆಂದೂ ದಿಲ್ಲಿಯ ಕಮಿಶನರರು ಒಂದು ಪ್ರಕಟನೆ ಹೊರಡಿಸಿ ಜಾಹೀರ ಮಾಡಿದ್ದಾರೆ. ಹಾಗೂ ಮೇಲಿನಂತಹ ಹಾರಿಕೆಯ ಸುದ್ದಿಗಳನ್ನು ಬಿತ್ತರಿಸುವ ಜನರನ್ನು ಪೋಲೀಸರ ಕಡೆ ಹಿಡಿದು ಕೊಡಬೇಕೆಂದು ಬಿನ್ನವಿಸಿದ್ದಾರೆ.

— ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಮಂಡಳವು ಕೊನೆಗೆ ಕಳೆದ ಎಪ್ರಿಲ ತಿಂಗಳ ಕೊನೆಗೆ "ರಾಮಾಯ ಸ್ವಸ್ತಿ! ರಾವಣಾಯ ಸ್ವಸ್ತಿ!" ಎಂಬರ್ಥದ ಒಂದು ಗೊತ್ತುವಳಿಯನ್ನು ಮಾಡಿತು! ಕಾಶ್ಮೀರದ ಮೇಲೆ ದಾಳಿ ಮಾಡಿದ ದಾಳಿಗಾರರನ್ನು ಹಿಂದೆಗೆಯಲು ಪಾಕಿಸ್ತಾನವು ಪ್ರಯತ್ನಿಸಬೇಕು; ದಾಳಿಗಾರರು ಹಿಂದೆ ಸರಿದು ಹೋದಂತೆ ಹಿಂದುಸ್ಥಾನ ಸರಕಾರವು ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕು, ಕಾಶ್ಮೀರದಲ್ಲಿ ಪಾಕಿಸ್ತಾನ-ಹಿಂದುಸ್ಥಾನಗಳ ಪ್ರತಿನಿಧಿಗಳಿಂದ ಒಡಗೂಡಿದ ನಡುಗಾಲ ಸರಕಾರ ಸ್ಥಾಪಿಸಬೇಕು; ಭದ್ರತಾ-ಮಂಡಳದ ಪ್ರತಿನಿಧಿ-ಸಮಿತಿಯವರ ಮೇಲ್ವಿಚಾರಣೆಯಲ್ಲಿ ಜನಮತ ಗಣನೆ (ಕಾಶ್ಮೀರವು ಹಿಂದುಸ್ಥಾನವನ್ನು ಸೇರಬೇಕೋ ಪಾಕಿಸ್ತಾನವನ್ನು ಸೇರಬೇಕೋ ಎಂಬ ಪ್ರಶ್ನೆಯ ಮೇಲೆ) ನಡೆಯಬೇಕು; ಎಂದು ಮುಂತಾಗಿ ಭದ್ರತಾ-ಮಂಡಳದ ಗೊತ್ತುವಳಿಯಲ್ಲಿದೆ. ಈ ಗೊತ್ತುವಳಿಯು ಪಾಕಿಸ್ತಾನಕ್ಕೂ ಸಮ್ಮತವಾಗಲಿಲ್ಲ ಹಿಂದುಸ್ಥಾನಕ್ಕೂ ಸಮ್ಮತವಾಗಲಿಲ್ಲ. ಆ ಗೊತ್ತುವಳಿಯಂತೆ ವರ್ತಿಸಲು ಇಕ್ಕಟ್ಟಿನವರೂ ನಿರಾಕರಿಸಿದ್ದಾರೆ. ಆದರೂ ಭದ್ರತಾ-ಮಂಡಳವು ತನ್ನ ಗೊತ್ತುವಳಿಯನ್ನು ಕಾರ್ಯರೂಪದಲ್ಲಿ ತರುವದಕ್ಕಾಗಿ ಕಾಶ್ಮೀರ ಸಮಿತಿಯನ್ನು ನೇಮಿಸಿದೆ! ಮತ್ತು ಆ ಸಮಿತಿಯು ಹಿಂದುಸ್ಥಾನಕ್ಕೆ ಬರಲು ಮೊನ್ನೆ ಅಮೇರಿಕೆಯಿಂದ ಹೊರಟಿದೆ! ಈ ಸಮಿತಿಯು ಕಾಶ್ಮೀರದ ಪ್ರಶ್ನೆಯನ್ನಷ್ಟೇ ಪರಿಶೀಲಿಸದೆ, ಪಾಕಿಸ್ತಾನದ ಪಕ್ಷವಾದಿ ಸರ್ ಜಾಫರುಲ್ಲಾ ಖಾನರು ಮುಂದೊಡ್ಡಿದ ಜುನಾಗಢ, ಮುಸಲ್ಮಾನರ ಹತ್ಯೆಯ ಆರೋಪ ಮೊದಲಾದ ಪ್ರಶ್ನೆಗಳನ್ನೂ ಪರಿಶೀಲಿಸಬಹುದಾಗಿ ಭದ್ರತಾ ಮಂಡಳವು ಈ ಸಮಿತಿಗೆ ಮೊನ್ನೆ ಆದೇಶ ಕೊಟ್ಟಿದೆ! ಭದ್ರತಾ ಮಂಡಳದ ಈ "ಅವ್ಯಾಪಾರೇಷು ವ್ಯಾಪಾರ" ವನ್ನು ಕಂಡು ಹಿಂದುಸ್ಥಾನ ಸರಕಾರವು ಸಂತಾಪಗೊಂಡಿದೆ. ಭದ್ರತಾ ಮಂಡಳವು ಗೊತ್ತುವಳಿಯ ಸಂಬಂಧದಲ್ಲಿ ಹಿಂದುಸ್ಥಾನ ಸರಕಾರದ ಎತ್ತಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳು ಸಿಗದಿದ್ದಲ್ಲಿ ಸಮಿತಿಯೊಡನೆ ಹಿಂದುಸ್ಥಾನ ಸರಕಾರವು ಸಹಕರಿಸಲಿಕ್ಕಿಲ್ಲೆಂದು ಮುಖ್ಯ ಮಂತ್ರಿಗಳು ಮಂಡಳಕ್ಕೆ ತಿಳಿಸಿದ್ದಾರೆ.

ಸ್ಥಾನಿಕ ವೃತ್ತಾಂತ.

(೧ನೇ ಪುಟದಿಂದ ಮುಂದರಿಸಿದ್ದು.

ಮಂದಿ ಬಂಧಿಸಿದ್ದಾರೆ! ಉಳಿದ ಇಬ್ಬರು ಎಲ್ಲಿ ಹೋದರು ಎಂದು ಕೇಳಿದರೆ ಸಮಾಧಾನಕರ ಉತ್ತರ ಸಿಗುವದಿಲ್ಲ! ಪೆಟ್ರೋಲ ಮಾರಾಟದಿಂದ ಸಿಕ್ಕ ಗಂಟನ್ನು ಹೊತ್ತುಕೊಂಡು ಅವರು ನಡುವೆ ಎಲ್ಲಾದರೂ ಇಳಿದು ಓಡಿಹೋಗಿರಬೇಕೆಂದು ಜನರು ಊಹಿಸುತ್ತಾರೆ. ವಾಹನವು ಮೇಲಿನ ತಾಂಡೇಲನೂ ಸಿಪಾಯಿಗಳೂ ಕೊಂಬಿನ ಕಾಸರಕೋಡಿನ ಮಾಲಿಕ್ಕೆಯವನಂತೆ ಅವರೀಗ ಪೋಲೀಸರ ಕಾವಲಿನಲ್ಲಿದ್ದಾರೆ

ಶಿರಸಿ — (ತಾ. ೫-೬-೪೮) ಇಲ್ಲಿಯ ಒಂದು ಮೋಟಾರ ಕಂಪನಿಯವರು ತಮ್ಮಲ್ಲಿ ಆರೇ (೬) ಸರಕು ಒಯ್ಯುವ ಗಾಡಿಗಳಿದ್ದಾಗ್ಯೂ ಎಂಟು (೮) ಗಾಡಿಗಳಿರುತ್ತವೆಂದು ಹೇಳಿ, ೮ ರಜಿಸ್ಟ್ರೇಶನ್ ಸರ್ಟಿಫಿಕೇಟುಗಳನ್ನು ಪಡಕೊಂಡು ಮತ್ತು ಅದರಂತೆ ೮ ಗಾಡಿಗಳ ವಾಹನ ತೆರಿಗೆ ತುಂಬಿ, ೮ ಗಾಡಿಗಳ ಪೆಟ್ರೋಲ ಎಷ್ಟು ಪಡೆದದ್ದು ಇದೀಗ ಬೆಳಕಿಗೆ ಬಂದಿದೆ. ಹೆಚ್ಚಿಗೆ ಪೆಟ್ರೋಲ ಪಡೆಯುವ ಉದ್ದೇಶದಿಂದಲೇ ಇಷ್ಟೆಲ್ಲ ಕಳ್ಳತನ ನಡೆದಿತ್ತೆಂದು ಹೇಳುತ್ತಾರೆ. ಕಂಪನಿಯವರ ವಂಚನೆ ಗೊತ್ತಾದ್ದು ಯಾರೋ ಕೊಟ್ಟ ವರದಿಯ ಆಧಾರದಿಂದ ಲಂಚ ನಿರ್ಮೂಲನ ಶಾಖೆಯ ಅಧಿಕಾರಿಗಳು ಅಕಸ್ಮಾತ್ ಇಲ್ಲಿ ಬಂದು, ರಜಿಸ್ಟರ ಮಾಡಲ್ಪಟ್ಟ ಎಂಟೂ ಗಾಡಿಗಳನ್ನು ಕೂಡಲೇ ತಮ್ಮ ಮುಂದೆ ಹಾಜರಪಡಿಸಬೇಕೆಂದು ಕಂಪನಿಯವರಿಗೆ ಹುಕುಮು ಮಾಡಿದಮೇಲೆ ಎಲ್ಲ ಗುಟ್ಟು ರಟ್ಟಾಯಿತು! ಕಳೆದ ೬-೮ ತಿಂಗಳಿಂದ ಈ ವಂಚನೆ ನಡೆದಿತ್ತಾಗಿ ಸುದ್ದಿಯಿದೆ. ಮೋಟಾರ ಇನ್ಸಪೆಕ್ಟರರೂ ಈ ವಂಚನೆಯಲ್ಲಿ ಸೇರಿರಬೇಕೆಂದೂ ಅವರ ಸಹಿಯ ವಿನಹ ೬ ಬಂಡಿಗಳಿಗೆ ೮ ರಜಿಸ್ಟ್ರೇಶನ್ ಸರ್ಟಿಫಿಕೇಟುಗಳು ಸಿಗಲಾರವೆಂದೂ ಮೋಟಾರ ಬಂಡಿಗಳ ಮಾಹಿತಿಯುಳ್ಳವರು ಹೇಳುತ್ತಾರೆ. ಬೆಳಗಾಂವಿಯ ವಾಹನ ನಿಯಂತ್ರಣಾಧಿಕಾರಿಗಳ ಕಚೇರಿಯ ಕೆಲವರ ಅಂಗವೂ ಈ ಒಳಸಂಚಿನಲ್ಲುಂಟೆಂದು ಒಳಗುಟ್ಟು ಬಲ್ಲವರು ಹೇಳುತ್ತಾರೆ. ಪೋಲೀಸರು ಯಾರಯಾರಿಗೆ ಬಿಡುತ್ತಾರೆ ಮತ್ತು ಯಾರಯಾರಿಗೆ ಹಿಡಿಯುತ್ತಾರೆ ನೋಡಬೇಕು

(ತಾ. ೪-೬-೪೮) ಕಳೆದ ಸೋಮವಾರ ತಾ. ೩೧ಕ್ಕೆ ಇಲ್ಲಿಯ ಅಡಿಕೆ ಧರ್ಮಶಾಲೆಯ ಅಟ್ಟದ ಮೇಲೆ ಜಿಲ್ಲಾ ಕೊಂಗ್ರೆಸ ಸಮಿತಿಯ ಸಭೆ ಸೇರಿತ್ತು. ರಾ|| ವಾಮನ ಹೊದಿಕೆ ಅವರು ಸಭಾಧ್ಯಕ್ಷರಾಗಿ ಆರಿಸಲ್ಪಟ್ಟ ಬಳಿಕ, ವರದಿ ಮತ್ತು ಆಯ-ವ್ಯಯ ಪತ್ರದ ವಾಚನ, ಅಧಿಕಾರಿಗಳ ಆಯ್ಕೆ ಮೊದಲಾದ ಕಾರ್ಯಕ್ರಮಗಳು ನಡೆದವು. ಹೊಸ ವರ್ಷದ ಬಗ್ಗೆ ಶ್ರೀ ಶೇಷಗಿರಿರಾವ ಕೇಶವೈನರು ಸಮಿತಿಯ ಅಧ್ಯಕ್ಷರಾಗಿಯೂ, ಶ್ರೀ ಹರಿ ಅನಂತ ಪೈ ಮತ್ತು ದೇವರು ಕೃಷ್ಣ ಹೆಗಡೆ ಅವರು ಉಪಾಧ್ಯಕ್ಷರಾಗಿಯೂ, ಶ್ರೀ ಭೂಮಾ ಬಸೆಟ್ಟಪ್ಪಾ ಅವರು ಕೋಶಪಾಲಕರಾಗಿಯೂ ಆರಿಸಲ್ಪಟ್ಟಿರುತ್ತಾರೆ. ಕಾರ್ಯದರ್ಶಿಗಳನ್ನು ಆಯ್ದುಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಕೊಡಲಾಗಿದೆ. ಕಾರ್ಯಕಾರಿ-ಸಮಿತಿಗೆ (ಈ ೫ ಮಂದಿ ಅಧಿಕಾರಸ್ಥರಲ್ಲದೆ) ಯಲ್ಲಾಪುರದ ರಾ|| ಗಣಪತಿ ಗಾಂವಕಾರ, ಕುಮಟೆಯ ರಾ|| ನಾಸರುಲ್ಲಾ ಮತ್ತು ಹೊನ್ನಾವರದ ರಾ|| ರಾಮಕೃಷ್ಣ ಭಟ್ಟ ಕಾಶಿ ಈ ಮೂವರನ್ನು ಆರಿಸಲಾಗಿದೆ; ಕಾರವಾರ, ಮುಂಡಗೋಡ, ಹಳಿಯಾಳ ತಾಲೂಕುಗಳ ೩ ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿದ್ದಾರೆ. ಪ್ರಾಂತಿಕ ಕೊಂ| ಸಮಿತಿಯಲ್ಲಿ ತೆರವು ಬಿದ್ದ (ಈ ಜಿಲ್ಲೆಯ ಪ್ರತಿನಿಧಿಗಳ) ೫ ಸ್ಥಳಗಳಿಗೆ ರಾ|| ಚನ್ನಪ್ಪಾ ಮುಳಗುಂದ, ವಾಮನ ಹೊದಿಕೆ, ಗಣಪತಿ ಗಾಂವಕಾರ, ಶ್ರೀಧರ ಬಾಳಗಿ ಇವರನ್ನು ಆರಿಸಲಾಗಿದೆ. ಮುಂಬಯಿ ಸರಕಾರದ ಒಕ್ಕಲತನದ ಕಾನೂನಿನಿಂದ ಜಿಲ್ಲೆಯ ಒಡೆಯ-ಒಕ್ಕಲಿಗರೊಳಗೆ ಉಂಟಾದ ವೈಮನಸ್ಯವನ್ನು ಪರಿಹರಿಸಲು ರಾ| ರಾ| ತಿ. ಶ್ರೀ. ನಾಯಕ, ವಾಮನ ಹೊದಿಕೆ ಮತ್ತು ಮೋನಪ್ಪಾ ಬಾಳಿಗೋಡ ಇವರ ಉಪಸಮಿತಿಯನ್ನು ನೇಮಿಸಲಾಗಿದೆ. ಇವರು ಜಿಲ್ಲೆಯಲ್ಲೆಲ್ಲ ಸಂಚಾರ ಮಾಡಿ ಒಡೆಯ-ಒಕ್ಕಲಿಗರೊಳಗೆ ಸದ್ಭಾವನೆಯ ಪ್ರಚಾರ ಮಾಡಬೇಕಾಗಿರುತ್ತದೆ. ಹೆಗಡೆಯ ಕೊಂಗ್ರೆಸ-ನಿಷ್ಠ ಗಾಂಧಿ ಭಕ್ತ ರಾ| ತಿಮ್ಮಪ್ಪಾ ಹೆಗಡೆಕಟ್ಟೆಯವರು ಈಗ ಅರ್ಧಾಂಗವಾತದ ವಿಕಾರದಿಂದ ಬಳಲುತ್ತಿರುವದರಿಂದ ಅವರ ಜೀವನ-ವೆಚ್ಚಕ್ಕಾಗಿ ಸಮಿತಿಯ ಬೊಕ್ಕಸದಿಂದ ರೂ. ೧೨೦ ರಾ| ತಿ. ಶ್ರೀ. ನಾಯಕರ ಮುಖಾಂತರ ಹೆಗಡೆಕಟ್ಟೆಯವರಿಗೆ ಕಳಿಸಿಕೊಡಬೇಕೆಂದು ಒಂದು ಠರಾವನ್ನೂ ಆಗಿದೆ.

ಇಲ್ಲಿಯ ಕಿರಾಣಿ ದಲಾಲಿ ವ ವ್ಯಾಪಾರ ಸಂಘದಲ್ಲಿ ಕಳೆದ ಡಿಸೆಂಬರದಲ್ಲಿ ಕೂಡಿದ ಮಹಾಸಭೆಯಲ್ಲಿ ಠರಾವ ಆದಂತೆ, ಈ ಸಾಲ ರಾ| ವಿಠ್ಠಲ ಪಂಡಿತರು ರೂ. ೩೨೫, ರಾ|| ಮಹಾಲಿಂಗಪ್ಪ ಭೂಮಾ ಇವರು ರೂ. ೫೦೦, ರಾ|| ಶಿವಮೂರ್ತೆಪ್ಪ ಘಂಟಿ ಇವರು ರೂ. ೨೦೦, ರಾ| ಬಸಪ್ಪ ಕೆರಜಗಿಯವರು ರೂ ೧೦೧ ರಾ|| ತಿಮ್ಮಪ್ಪ ಮುತಕ್ಕದ ಇವರು ರೂ. ೫೫, ರಾ|| ಪದ್ಮನಾಭ ಬಿಳಗಿಯವರು ರೂ. ೫೦, ರಾ| ಎಸ್. ಎಸ್. ಭಟ್ಟ ಕಂಪನಿಯವರು ರೂ ೨೫ (ಒಟ್ಟು ರೂ. ೧೨೫೬) ಧರ್ಮದಾಯ ಸಹಾಯ ಕೊಟ್ಟಿದ್ದಾರೆಂದು ಸಂಘದವರು ತಿಳಿಸುತ್ತಾರೆ.

(ಇಂದಿನ ಪುರವಣಿ ನೋಡಿರಿ)

ಮೆಟ್ರಿಕ್ ಪರೀಕ್ಷೆಯ ಫಲಿತಾಂಶ.

ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯ ಫಲಿತಾಂಶ ಮೊನ್ನೆ ಮುಂಜಾನೆ ಪ್ರಕಟವಾಗಿದೆ. ಈ ವರ್ಷದ ಪರೀಕ್ಷೆಗೆ ೪೩೬೪೫ (ಸಿಂಧದಿಂದ ಬಂದ ೧೩೪೬ ಮಂದಿ ನಿರಾಶ್ರಿತರನ್ನೊಳಗೊಂಡು) ಮಂದಿ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ೧೮೬೫೦ ಮಂದಿ (೧೦೦ಕ್ಕೆ ೪೨.೯ ರಷ್ಟು) ಉತ್ತೀರ್ಣರಾಗಿರುತ್ತಾರೆ. ನಮ್ಮ ಕಾರವಾರ ಕೇಂದ್ರದಲ್ಲಿ ೫೪೧ ಮಂದಿ ಕುಳಿತಿದ್ದರು. ಅವರಲ್ಲಿ ೨೧೬ ಮಂದಿ (ಅಂದರೆ ೧೦೦ಕ್ಕೆ ೩೯.೮ ರಷ್ಟು) ಯಶಸ್ವಿಯಾಗಿರುತ್ತಾರೆ.

ಮುಂಬಯಿಯ ಶಾ| ನರಸಿಂಹ ಲವಂದೇ ಎಂಬಾತನು (೭೦೦ರಲ್ಲಿ) ೫೮೮ ಗುಣಗಳನ್ನು ದೊರಕಿಸಿ ಇಡೀ ಪ್ರಾಂತದಲ್ಲಿ ಪ್ರಥಮಸ್ಥಾನ ಪಡೆದಿರುತ್ತಾನೆ. ಆತನಿಗೆ ದೋಸಾಭಾಯಿ ಲಾಮಾ ಮತ್ತು ಸೀತಾಬಾಯಿ ನಾಯಕ ಶಿಷ್ಯವೃತ್ತಿ (೨) ಗಳೂ ದಿನಾನಾಥ ಮಾನಕರ ಸುವರ್ಣ ಪದಕವೂ ಸಿಕ್ಕಿವೆ.

ಈ ಪರೀಕ್ಷೆಯಲ್ಲಿ ಮೊದಲಿನ ೧೦ ಸ್ಥಾನಗಳನ್ನು ಆಕ್ರಮಿಸಿದವರಲ್ಲಿ ಇಬ್ಬರು ಮುಂಬಯಿಯವರು, ಐವರು ಪುಣೆಯವರು ಮತ್ತು ಉಳಿದ ಮೂವರು ಆನಂದ, ಭಡೋಚ ಮತ್ತು ರಾಜಕೋಟ ಕೇಂದ್ರದವರಿರುತ್ತಾರೆ.

ಕಾರವಾರ ಕೇಂದ್ರದಲ್ಲಿ ಕೂಡ ಹಿಂದೂ ಹಾಯಸ್ಕೂಲಿನ ಕುಮಾರ ಸುರೇಶ ಕೃಷ್ಣ ಉಪ್ಪೋಣಿ ಇವನು ೫೫೪ ಗುಣಗಳನ್ನೂ ಸದಾಶಿವಗಡ ಹಾಯಸ್ಕೂಲಿನ ಶಾ|| ಅನಂತ ನಾಗೇಶ ಸಲಗರ ಇವನು ೫೫೭ ಗುಣಗಳನ್ನೂ, ಗಿಬ್ಬ ಹಾಯಸ್ಕೂಲಿನ ಶಾ|| ರಾಜಾರಾಮ ಗಣಪತಿ ಭಟ್ಟ ಇವನು ೫೪೭ ಗುಣಗಳನ್ನೂ ದೊರಕಿಸಿದ್ದಾರೆ

ಕಾರವಾರ ಕೇಂದ್ರದಲ್ಲಿ ಶ್ರೀ ಅಸಂದಾತ್ರು ಹಾಯಸ್ಕೂಲಿನಿಂದ ೪೧೪೧೨ನೇ ನಂಬರಕ್ಕೆ ಕೂತ ಶಾ|| ನಾರಾಯಣ ಶಿವಾ ಬೈಲಕೇರಿ ಇವನು ೩೦೦ ಗುಣಗಳನ್ನು ದೊರಕಿಸಿ ಯಶಸ್ವಿಯಾಗಿದ್ದಾನೆ. ಅವನ ಕ್ರಮಾಂಕವು "ವೃತ್ತ"ದ ವಿಶೇಷ ಸಂಚಿಕೆಯಲ್ಲಿ ದೃಷ್ಟಿದೋಷದಿಂದ ಪ್ರಕಟವಾಗದೆ ಉಳಿಯಿತು.

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270. Monday, 14-6-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೫೦.

ಕುಮಟಾ:- ಸೋಮವಾರ, ತಾ. ೧೪—೬—೧೯೪೮.

ಜಾಹೀರಾತುಗಳ ದರ:-
ಸ್ವಲ್ಪ ಅವಧಿಯ ಜಾಹೀರಾತು ೧ ಕಾಲಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ.... ೦-೪-೦
ವ್ಹಿ. ಪಿ. ಯಿಂದ ಪಡೆಯುವವರು ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ ತೆರಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು.

ನಿಜಾಮರ ಹೆಬ್ಬಾಶೆ.

(ನಿರೀಕ್ಷಕನು ಬರೆದುದು)

ನಿಜಾಮರ ಹೈದರಾಬಾದದ ಪ್ರಶ್ನೆಯೀಗ ತೀರ ಕಠಿಣತರಕ್ಕೆ ಬಂದಿದೆ! ನಿಜಾಮರ ಹಸ್ತಕರಾದ ರಝ್ವಿಯವರು ಸಮರದ ಮಾತುಗಳನ್ನಾಡ ಹತ್ತಿದ್ದಾರೆ! ಅದರಿಂದ ಇಡೀ ಭಾರತದ ದೃಷ್ಟಿಯು ಇಂದು ಹೈದರಾಬಾದದತ್ತ ತಿರುಗಿದೆ. ದಕ್ಷಿಣ ಭಾರತದ ಪ್ರಜೆಗಳ ಸುಖ-ಶಾಂತಿಗಳು ಈವಾಗ ನಿಜಾಮರ ನಿರ್ಣಯವನ್ನವಲಂಬಿಸಿವೆ. ಆದರಿಂದ ಇಂದು ನಾವು ತಿರುಗೊಮ್ಮೆ ಹೈದರಾಬಾದದೊಳಗಿನ ಘಟನೆಗಳತ್ತ "ವೃತ್ತ"ದ ವಾಚಕರ ಲಕ್ಷವನ್ನೆಳೆಯು ಬಯಸಿದ್ದೇನೆ.

ನಿಜಾಮರ ಪ್ರಶ್ನೆಯನ್ನು ಆದಷ್ಟು ಸಾಮೋಪಚಾರದಿಂದ ಬಿಡಿಸಲು ಉತ್ಸುಕರಾಗಿ ಕಳೆದ ತಿಂಗಳಲ್ಲಿ ಮೌಂಟ-ಬೆಟನ್ನ ದೊರೆಗಳು ನಿಜಾಮರಿಗೆ ದಿಲ್ಲಿಗೆ ಬರಲು ನಿಮಂತ್ರಿಸಿದ ಸಂಗತಿಯನ್ನೂ, ನಿಜಾಮರು ನಿಮಂತ್ರಣೆಯನ್ನು ನಿರಾಕರಿಸಿದಾಗ್ಯೂ ದೊರೆಗಳು ಅವರ ಕಡೆ ತಮ್ಮ ಸ್ವಂತ ಪ್ರತಿನಿಧಿಗಳನ್ನು ಕಳಿಸಿಕೊಟ್ಟ ಸಂಗತಿಯನ್ನೂ ನಾನು ಈಹಿಂದೆಯೇ ಉಲ್ಲೇಖಿಸಿದ್ದೇನೆ. ದೊರೆಗಳ ಆ ಪ್ರಯತ್ನ ಕೂಡ ವಿಫಲವಾಯಿತು. ಅಷ್ಟರಲ್ಲಿ ಇತ್ತೆಹಾದುಲ ಮುಸಲ್ಮೀನ ಸಂಸ್ಥೆಯ ರಝಾಕಾರ ಸೈನಿಕರು ಗಾಣಗಾಪುರ ರೇಲ್ವೆ ನಿಲ್ದಾಣದಲ್ಲಿ, ಮದ್ರಾಸದಿಂದ ಮುಂಬಯಿಗೆ ಹೋಗುತ್ತಿದ್ದ ಟಪಾಲ ಬಂಡಿಯಲ್ಲಿ ನುಗ್ಗಿ ಪ್ರಯಾಣಿಕರ ಮೇಲೆ ನಡಿಸಿದ ಘೋರ ಅತ್ಯಾಚಾರಗಳ ಕಥೆ ಪ್ರಕಟವಾಯಿತು. ಅದರಿಂದ ಭಾರತದ ಸರಕಾರವು ನಿಜಾಮರ ವಿರುದ್ಧ ಉಗ್ರ ಕ್ರಮಗಳನ್ನು ಕೈಕೊಳ್ಳುವ ಆಲೋಚನೆ ನಡಿಸಿತು. ಆಗ ನಿಜಾಮರು ಪುನಃ ಭಾರತ ಸರಕಾರದೊಡನೆ ಸಂಧಾನದ ಮಾತುಕತೆ ನಡಿಸಲು ತಮ್ಮ ಮುಖ್ಯ ಮಂತ್ರಿಗಳಾದ ಮೀರ ಲಾಯಕ ಅಲ್ಲಿಯವರನ್ನು ದಿಲ್ಲಿಗೆ ಕಳಿಸಿಕೊಟ್ಟರು. ಭಾರತ ಸರಕಾರವು ಆಗ ಅವರಿಗೆ ತನ್ನ ಸ್ಪಷ್ಟ ಸೂಚನೆಗಳನ್ನು ತಿಳಿಸಿತು. ನಿಜಾಮರು ಆ ಸೂಚನೆಗಳಿಗೆ ಒಪ್ಪುವದಾದರೆ ಮಾತ್ರ ಮುಂದಿನ ವಿಚಾರಗಳನ್ನು ಕುರಿತು ಮಾತಾಡೋಣ ಎಂದು ಹಿಂದುಸ್ಥಾನ ಸರಕಾರದವರು ಅವರಿಗೆ ತಿಳಿಸಿದರು. ಹಿಂದುಸ್ಥಾನ ಸರಕಾರದ ಸೂಚನೆಗಳು ಮುಂದಿನಂತಿದ್ದವೆಂದು ತಿಳಿಯುತ್ತದೆ:- (೧) ವಿದೇಶ-ಕಾರಣ, ಸಂರಕ್ಷಣೆ ಮತ್ತು ಸಾರಿಗೆ-ಸಂಪರ್ಕ ಈ ೩ ವಿಷಯಗಳನ್ನು ಭಾರತ ಸರಕಾರಕ್ಕೆ ಬಿಟ್ಟು ಕೊಡಬೇಕು. (೨) ನಿಜಾಮರ ಸೈನ್ಯ ೨೦೦೦೦ಕ್ಕೆ ಮಿಕ್ಕಕೂಡದು. ಆ ಸೈನ್ಯವನ್ನು ಆಗಾಗ ಪರಿಶೀಲಿಸುವ ಅಧಿಕಾರ ಹಿಂದ-ಸರಕಾರಕ್ಕಿರಬೇಕು. (೩) ಸಂಸ್ಥಾನದೊಳಗಿನ ಖಾಸಗಿ ಸೈನ್ಯಗಳನ್ನೆಲ್ಲ (ಅಂದರೆ ರಝಾಕಾರ ಸೈನ್ಯದಂಥ ಸೈನ್ಯಗಳನ್ನು) ನಿಜಾಮರು ವಿಸರ್ಜಿಸಬೇಕು. (೪) ಗಂಡಾಂತರದ ಪರಿಸ್ಥಿತಿಯನ್ನು ಎದುರಿಸುವದಕ್ಕಾಗಿ ಹಿಂದಸರಕಾರಕ್ಕೆ ಅವಶ್ಯವೆನಿಸಿದಾಗ ಹೈದರಾಬಾದ ಸಂಸ್ಥಾನದಲ್ಲಿ ತನ್ನ ಸೈನ್ಯವನ್ನಿಡಲು ಅವಕಾಶ ಸಿಗಬೇಕು. (೫) ಮುಸಲ್ಮಾನೇತರರಿಗೆ ನೂರಕ್ಕೆ ೬೦ರಷ್ಟು ಮತ್ತು ಮುಸಲ್ಮಾನರಿಗೆ ೪೦ರಷ್ಟು ಪ್ರಾತಿನಿಧ್ಯ ಕೊಟ್ಟು ನಿಜಾಮರು ತಮ್ಮ ರಾಜ್ಯದಲ್ಲಿ ಪ್ರಜೆಗಳಿಗೆ ಹೊಣೆಗಾರವಿರುವ ಸರಕಾರವನ್ನು ಸ್ಥಾಪಿಸಬೇಕು. (ಹೈದರಾಬಾದದಲ್ಲಿ ಮುಸಲ್ಮಾನರ ಸಂಖ್ಯೆ ೧೦೦ಕ್ಕೆ ೧೩ರಷ್ಟೇ ಇದ್ದಾಗ್ಯೂ ಮತ್ತು ಸಾಮಾನ್ಯ ನೀತಿಯಂತೆ ಸರಕಾರದಲ್ಲಿ ಅಷ್ಟೇ ಪ್ರಾತಿನಿಧ್ಯ ಪಡೆಯಲು ಅವರು ಬಾಧ್ಯಸ್ಥರಿದ್ದಾಗ್ಯೂ, ಹೈದರಾಬಾದದ ಮುಸಲ್ಮಾನರ ಮತ್ತು ಸ್ವತಃ ನಿಜಾಮರ ಸಮಾಧಾನಕ್ಕಾಗಿ ಅವರಿಗೆ ನೂರಕ್ಕೆ ೪೦ರಷ್ಟು ಪ್ರಾತಿನಿಧ್ಯ ಕೊಡಲು ಹಿಂದುಸ್ಥಾನ ಸರಕಾರದವರು ಒಪ್ಪಿದರು!) ಈ ಸೂಚನೆಗಳ ಬಗ್ಗೆ ನಿಜಾಮರ ಮತವೇನೆಂಬದನ್ನು ಮೇ ತಾ. ೩೧ರೊಳಗಾಗಿ ತಿಳಿಸಬೇಕೆಂದು ಮೀರ ಲಾಯಕ ಅಲ್ಲಿಯವರಿಗೆ ತಿಳಿಸಲಾಗಿತ್ತು. ಆದರೆ ಆ ದಿನದೊಳಗಾಗಿ ಲಾಯಕ ಅಲ್ಲಿಯವರು ಯಾವ ಉತ್ತರವನ್ನೂ ತಕ್ಕೊಂಡು ದಿಲ್ಲಿಗೆ ಮರಳಲಿಲ್ಲ! ಸಂಧಾನ ಶಕ್ಯವಿಲ್ಲೆಂಬ ಮಾತನ್ನು ಅವರು ತಿಳಿಸಲಿಲ್ಲ. ನಿಜಾಮರು ಒಳ್ಳೇ ರಾಜಕಾರಣ-ಪಟುಗಳಿದ್ದಾರೆ. ರಾಜಕಾರಣದ ಚದುರಂಗದಾಟವನ್ನು ಬಹಳ ಕೌಶಲ್ಯದಿಂದ ಅವರು ಆಡುತ್ತಿದ್ದಾರೆಂದು ನಾವು ಹೇಳಬಲ್ಲೆವು. ಮೌಂಟ-ಬೆಟನ್ನ ದೊರೆಗಳ ನಿಮಂತ್ರಣೆಯನ್ನು ತಾವು ನಿರಾಕರಿಸಿದ್ದರಿಂದ ಉಂಟಾಗಬಹುದಾದ ಸಂಶಯಜಾಲವನ್ನು ಹೋಗಲಾಡಿಸುವದಕ್ಕಾಗಿ ಅವರು, ಏಶಿಯಾ ಆರ್ಥಿಕ ಪರಿಷತ್ತಿಗಾಗಿ ಉದಕಮಂಡಲಕ್ಕೆ ಹೋಗುವಾಗ ಇಲ್ಲವೆ ಅಲ್ಲಿಂದ ತಿರುಗಿ ದಿಲ್ಲಿಗೆ ಮರಳುವಾಗ ದಾರಿಯಲ್ಲಿ ಹೈದರಾಬಾದದಲ್ಲಿಳಿದು ತಮ್ಮ ಆತಿಥ್ಯ ಸ್ವೀಕರಿಸಬೇಕೆಂದೂ ಆಗ ಹಿಂದ ಹೈದರಾಬಾದ ವಿವಾದದ ಬಗ್ಗೆ ಪರಸ್ಪರ ವಿಚಾರ-ವಿನಿಮಯ ಮಾಡಲಿಕ್ಕೆ ಸುಲಭವಾಗುವದೆಂದೂ ಭಾರತದ ಮುಖ್ಯ ಮಂತ್ರಿಗಳಾದ ಪಂ॥ ಜವಾಹರಲಾಲ ನೆಹರುರವರಿಗೆ ಪತ್ರ ಬರೆದಿದ್ದರೆಂದು ಪ್ರಕಟವಾಗಿದೆ. ಪಂಡಿತಜಿಯವರು ಈ ನಿಮಂತ್ರಣೆಯನ್ನು ನಿರಾಕರಿಸಿ ಬಿಟ್ಟರೆಂದು ಹೇಳುವದು ಅನಗತ್ಯ. ಇದೇ ಕಾಲಕ್ಕೆ ನಿಜಾಮರು ವಿಲಾಯತಿಯಲ್ಲಿದ್ದ ತಮ್ಮ ಸಲಹೆಗಾರ ಸರ್ ವಾಲ್ಟರ ಮೊಂಕಟನ್ನರಿಗೆ ಕೂಡಲೇ ಹಿಂದುಸ್ಥಾನಕ್ಕೆ ಬರಬೇಕೆಂದು ತಂತಿಕಳಿಸಿದ್ದರು. ಈ ಯಾತ್ರೆಗಾಗಿ ಸರ್ ವಾಲ್ಟರರಿಗೆ ನಿಜಾಮರು ೧ ಲಕ್ಷ ಪೌಂಡು ವೇತನ ಕಳಿಸಿಕೊಟ್ಟಿದ್ದರೆಂದೂ ಕೆಲವು ಚಿತ್ರಗುಪ್ತರು ಪತ್ತೆ ಹಚ್ಚಿದ್ದಾರೆ! ನಿಜಾಮರ ಪರವಾಗಿ ಹಿಂದು-ಸರಕಾರದೊಡನೆ ಮಾತುಕತೆಗಳನ್ನಾಡಲು ಸರ್ ವಾಲ್ಟರ ಮೊಂಕಟನ್ನರೇ ಬೇಕೇಕೋ ಎಂಬುದೊಂದು ನಿಗೂಢ ಸಮಸ್ಯೆ! ಹಿಂದ-ಸರಕಾರದ ಮಂತ್ರಿಗಳನ್ನಾಗಲಿ ಗವರ್ನರ ಜನರಲ್ ಮೌಂಟ-ಬೆಟನ್ನ ದೊರೆಗಳನ್ನಾಗಲಿ ತಮ್ಮ ವಾಕ್ಚಾತುರ್ಯದಿಂದ ಇಲ್ಲವೆ ವಿಷಯ ಪ್ರತಿಪಾದನೆಯಿಂದ ಮರುಳುಗೊಳಿಸುವ ಮಂತ್ರ-ಶಕ್ತಿ ಅಥವಾ ತಂತ್ರಶಕ್ತಿ ಸರ್ ವಾಲ್ಟರರಲ್ಲಿರುತ್ತದೆಂದು ಹೇಳಲಾಗದು. ಸರ್ ವಾಲ್ಟರರು ವಿಲಾಯತಿಯೊಳಗಿನ ಚರ್ಚಿಲ್ಲರ ಪ್ರಾಣಮತವಾದಿ ಪಕ್ಷದ ಪ್ರತಿನಿಧಿಗಳಾಗಿ ನಿಜಾಮರ ಕೂಡ ವ್ಯವಹರಿಸುತ್ತಿರಬೇಕೆಂದು ನನಗೊಂದು ಸಂಶಯ ಬರುತ್ತದೆ. ಮೇಲಿಂದ ಮೇಲೆ ಅವರು ವಿಲಾಯತಿಗೆ ಹೋಗುತ್ತಿದ್ದುದರ ಕಾರಣ ಇಲ್ಲೇ ಉಳಿದು. ಚರ್ಚಿಲ್ಲ ಪಕ್ಷದ ಪ್ರಮುಖರ ಹೃದ್ಗತವನ್ನು ಆಗಾಗ ತಿಳಕೊಳ್ಳಲಿಕ್ಕೂ, ಆಗಾಗ ಇಲ್ಲಿಯ ಪರಿಸ್ಥಿತಿಯನ್ನು ಅವರಿಗೆ ತಿಳುಹಿಸಿ ಅವರ ಸಲಹೆ ಪಡಕೊಳ್ಳಲಿಕ್ಕೂ ಅವರು ಮೇಲಿಂದ ಮೇಲೆ ವಿಲಾಯತಿಗೆ ಹೋಗುತ್ತಿರಬೇಕೆಂದು ನನ್ನ ಮತ. ಅದರಂತೆ ಸರ್ ವಾಲ್ಟರರು ಇತ್ತೀಚಿಗಿನ ಸ್ಥಿತ್ಯಂತರಗಳನ್ನು ಚರ್ಚಿಲ್ಲ ಪ್ರಭೃತಿಗಳಿಗೆ ನಿವೇದಿಸಿ ಮತ್ತು ಮುಂದಿನ ಚದುರಂಗ ದಾಟ ಹೇಗೆ ಆಡಬೇಕೆಂದು ಅವರ ಸಲಹೆ ತಕ್ಕೊಂಡು ಈ ತಿಂಗಳ ಪ್ರಾರಂಭಕ್ಕೆ ಹೈದರಾಬಾದಕ್ಕೆ ಮರಳಿ ಬಂದರು; ಮತ್ತು ನಿಜಾಮರ ಕೂಡ ಆಪ್ತಾಲೋಚನೆ-ಮಂತ್ರಾಲೋಚನೆಗಳನ್ನು ನಡಿಸಿ, ಇದೇ ಕಳೆದ ತಾ. ೩ಕ್ಕೆ ನಿಜಾಮರ ಶಿಷ್ಟರಾಗಿ ಮೀರ ಲಾಯಕ ಅಲ್ಲಿಯವರೊಡನೆ ದಿಲ್ಲಿಗೆ ಹೊರಟರು! ದಿಲ್ಲಿಗೆ ಹೋಗುವಾಗ ಅವರು ಈ ಮುಂದೆ ವಿವರಿಸಿದ ಪ್ರತಿ ಸೂಚನೆಗಳನ್ನು ತಕ್ಕೊಂಡು ಹೋಗಿದ್ದರೆಂದು ತಿಳಿಯುತ್ತದೆ:-

(೧) ಹಿಂದ ಸರಕಾರದ ಸೂಚನೆಯಂತೆ ವಿದೇಶ-ಕಾರಣ, ಸಂರಕ್ಷಣ ಮತ್ತು ಸಾರಿಗೆ-ಸಂಪರ್ಕ ಈ ಮೂರು ವಿಷಯಗಳನ್ನು ಹಿಂದುಸ್ಥಾನಕ್ಕೆ ಒಪ್ಪಿಸಲು ನಿಜಾಮರ ಒಪ್ಪಿಗೆಯುಂಟು ಆದರೆ ಈ ಸಂಬಂಧದಲ್ಲಿ ಹೈದರಾಬಾದವು ಹಿಂದುಸ್ಥಾನ ಸರಕಾರದ ಕಾಯದೆಗಳಂತಹ ಕಾಯದೆಗಳನ್ನೇ ಮಾಡಬೇಕು ಇಲ್ಲವೆ ಹಿಂದುಸ್ಥಾನ ಸರಕಾರದ ಕಾಯದೆಗಳನ್ನೇ ಅನ್ವಯಿಸಿಕೊಳ್ಳಬೇಕು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟಿದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ತೆತ್ತ ಮೂಲಧನ ರೂ. ೩,೩೧,೦೦೦/—ಕ್ಕೂ ಮಿಕ್ಕಿದೆ.

ಕೇಖರಿಸಿಡಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮಿಗಿಲುವದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ದ್ದರಿಂದ ೩ ವರೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣ್ವೈ,
ಮನೆಜಿಂಗ ಡೈರೆಕ್ಟರ.

ಎಂಬ ಮಾತು ನಿಜಾಮರಿಗೆ ಒಪ್ಪಿಗೆಯಿಲ್ಲ. ಹಿಂದೀ ಕಾಯದೆಗಳು ಹೈದರಾಬಾದದ ಜನರ ಹಿತಕ್ಕೆ ಬಾಧಕವಿರುತ್ತದೆಂದು ಹೈದರಾಬಾದದೊಳಗಿನ ಕಾನೂನ ಮಂಡಳಕ್ಕೆ ಅನಿಸಿದಲ್ಲಿ ಆ ಕಾಯದೆಗಳನ್ನು ತಿರಸ್ಕರಿಸಲಿಕ್ಕೆ ನಿಜಾಮರ ಸರಕಾರಕ್ಕೆ ಸ್ವಾತಂತ್ರ್ಯವಿರಬೇಕು. (೨) ಹೈದರಾಬಾದದ ಅಂತರ್ಗತ ಕಾರಭಾರದಲ್ಲಿ ಕೈಹಾಕಲು ಹಿಂದ ಸರಕಾರಕ್ಕೆ ಅಧಿಕಾರವಿಲ್ಲ, ಆದರೂ ಹಿಂದ-ಹೈದರಾಬಾದ ಒಪ್ಪಂದದ ಮಾರ್ಗವನ್ನು ಸುಗಮಗೊಳಿಸುವ ದೃಷ್ಟಿಯಿಂದ ನಿಜಾಮರು ತಮ್ಮ ಕಾನೂನ-ಮಂಡಳದಲ್ಲೂ ಘಟನಾ-ಸಮಿತಿಯಲ್ಲೂ, ನಡಗಾಲ ಮಂತ್ರಿ ಮಂಡಳದಲ್ಲೂ ಹಿಂದು-ಮುಸಲ್ಮಾನರಿಗೆ ಸಮ-ಪ್ರತಿನಿಧ್ಯ ಕೊಡಲಿಕ್ಕೆ ಒಪ್ಪುವರು ಹಿಂದ-ಸರಕಾರಕ್ಕೆ ಈ ಪ್ರತಿ-ಸೂಚನೆಗಳು ಒಪ್ಪಿಗೆಯಾಗದಿದ್ದಲ್ಲಿ, ಹೈದರಾಬಾದವು ಹಿಂದೀ ಒಕ್ಕೂಟದಲ್ಲಿ ಸೇರದೆ ಉಳಿಯಬೇಕೋ ಯಾ ಸ್ವತಂತ್ರ್ಯವಾಗಿ ಉಳಿಯಬೇಕೋ ಎಂಬ ಪ್ರಶ್ನೆಯು ಮೇಲೆ ಸಾರ್ವಜನಮತ ತೆಗೆದುಕೊಂಡು ಆ ಪ್ರಶ್ನೆಯನ್ನು ನಿರ್ಣಯಿಸತಕ್ಕದ್ದೆಂದು ನಿಜಾಮರ ಅಂಬೋಣವಿದೆ. ಈ ಪ್ರತಿಸೂಚನೆಗಳನ್ನು ಹಿಂದುಸ್ಥಾನ ಸರಕಾರವು ಮನ್ನಿಸಲಿಲ್ಲ, ಹನ್ನಸುವಂತೆಯೂ ಇದ್ದಿಲ್ಲ. ನಿಜಾಮರ ಜನಮತಗಣನೆಯ ಸೂಚನೆ ಆದೊಂದು ಮಾಟದ ಮನೆ ಇರುತ್ತದೆಂದು ಹಿಂದುಸ್ಥಾನ ಸರಕಾರವು ಕೂಡಲೇ ಎಣಿಸಿತು ಜನಮತಗಣನೆಯ ತತ್ವ ಆದಕ್ಕೆ ಮಾನ್ಯವಿದೆ ಆದರೆ ಮತದಾರ-ಯಾದಿಗಳು ಸಿದ್ಧವಾಗಿ ಆ ಮತಗಣನೆಯಾಗುವ ವರೆಗೆ ೧-೧½ ವರ್ಷವಾದರೂ ಕಳೆಯುವದು ಅಲ್ಲಿಯ ತನಕ ಕಾಶಿಮ ರಿಝ್ವಿಯವರ ರಝಾಕಾರರ ಹಾವಳಿಯನ್ನು ಸಹಿಸುವದೇತು? ನಿಜಾಮರು ಒಳಗಿಂದೊಳಗೆ ನಡೆಸುತ್ತಿರುವ ಕುತಂತ್ರಗಳನ್ನೂ ನಡೆಯಗೊಡುವದೆಂತು? ಆದರಿಂದ ಹಿಂದುಸ್ಥಾನ ಸರಕಾರವು ಜನಗಣನೆಯ ಸೂಚನೆಯನ್ನು ಕೆಲವೊಂದು ಶರ್ತುಗಳಿಗೊಪ್ಪಿ ಸ್ವೀಕರಿಸುವದಾಗಿ ನಿಜಾಮರಿಗೆ ತಿಳಿಸಲಾಗಿದೆ. ಆ ಶರ್ತುಗಳು ಯಾವವೆಂಧರೆ — (೧) ರಝಾಕಾರರ ಸೈನ್ಯವನ್ನು ಕೂಡಲೇ ಚದುರಿಸಿ ಬಿಡಬೇಕು (೨) ಹೈದರಾಬಾದವು ಹಿಂದೀ ಒಕ್ಕೂಟದಲ್ಲಿ ತಾತ್ಪೂರ್ತಿಕವಾಗಿ (ಶಾಸ್ತ್ರತಃ ಸೇರ್ಪಡೆಯಾಗದಿದ್ದರೂ) ತತ್ವತಃ ಸೇರ್ಪಡೆಯಾಗಬೇಕು. (೩) (ಪ್ರಜೆಗಳ ಪ್ರತಿರೂಪವಾದ ನಡಗಾಲ ಸರಕಾರವನ್ನು ಕೂಡಲೇ ರಚಿಸಬೇಕು. ಕಳೆದ ವಾರ ನಡದ ಮಾತುಕತೆಗಳಲ್ಲಿ ಭಾರತ ಸರಕಾರದ ಪ್ರತಿನಿಧಿಗಳು ತಮ್ಮ ಕೊನೆಯ ನಿರ್ಣಯಗಳನ್ನು ನಿಜಾಮರ ಪ್ರತಿನಿಧಿಗಳಿಗೆ ಸ್ಪಷ್ಟ ಶಬ್ದಗಳಲ್ಲಿ ತಿಳಿಸಿ, ಇನ್ನು ಮುಂದಿನ ಹಾದಿಯನ್ನು ಹುಡುಕಲು ನಿಜಾಮರಿಗೇ ಬಿಟ್ಟಿರುತ್ತಾರೆ. ನಿಜಾಮರ ಶಿಷ್ಟರು ಈಗ ಹೈದರಾಬಾದಿಗೆ ಮರಳಿ ಬಂದಿದ್ದಾರೆ. ಸಂಧಾನವು ಮೇಲಿನಂತೆ ವಿಫಲವಾದ ಕೂಡಲೆ ಹಿಂದುಸ್ಥಾನ ಸರಕಾರವು ಬಿಗಿತನ ಹಿಡಿದು, ಇನ್ನು ಮುಂದೆ ನಿಜಾಮರ ಸೈನಿಕರಾಗಲಿ ಪೋಲಿಸರಾಗಲಿ, ರಝ್ವಿಯವರ ರಝಾಕಾರರಾಗಲಿ ಹಿಂದುಸ್ಥಾನ ಸರಕಾರದ ಪ್ರದೇಶದಲ್ಲಿ ನುಗ್ಗಿಬಂದು ದಾವಳಿ ಹಾಕಿದರೆ ಅವರ ಯೋಗ್ಯ ಪಾರುಪತ್ಯ ಮಾಡುವದಲ್ಲದೆ, ಅವರು ದಾವಳಿ ಹಾಕಿ ಹೈದರಾಬಾದದ ಸೀಮೆಗೆ ಓಡಿಹೋದರೆ ಅಲ್ಲೂ ಅವರನ್ನು ಬೆನ್ನಟ್ಟಿ ಹೋಗಿ ಅವರ ಸಮಾಚಾರ ತಕ್ಕೊಳ್ಳತಕ್ಕದ್ದೆಂದು ಹಿಂದ-ಹೈದರಾಬಾದ ಗಡಿಗಳಲ್ಲಿರುವ ಎಲ್ಲ ಪೋಲೀಸ ಪಡೆಗಳಿಗೂ ಸೈನಿಕ-ದಳಗಳಿಗೂ ಕಟ್ಟಾಜ್ಞೆಯನ್ನು ಕೊಟ್ಟಿದೆ.

(ಮುಂದೆ ೩ನೇ ಪುಟ ನೋಡಿರಿ)

ಹೊನ್ನಾವರ ತಾಲೂಕಿನ ಬೆಳೆಯ ಪ್ರಕಟನೆ.

೧೯೪೮ನೇ ಇಸವಿಯ ಮುಂಬಯಿಯ ಒಕ್ಕಲತನದ ಕಾನೂನಿನ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ ಕಾನಡಾ ಜಿಲ್ಲೆಯೊಳಗಿನ ಹೊನ್ನಾವರ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ನೇ ಸ್ತಂಭದಲ್ಲಿ ಕಾಣಿಸಿದ ಗ್ರಾಮಗಳಲ್ಲಿಯ ತೆಂಗು, ಅಡಿಕೆ, ಮೆಣಸು ಬಳ್ಳಿ ಇವುಗಳ ಬೆಳೆಯ ಸರಾಸರಿ ಉತ್ಪನ್ನ, ೧೯೪೭-೪೮ನೇ ಸಾಲಿನಲ್ಲಿ, ಪ್ರತಿ ಎಕರೆಗೆ ೨-೩-೪ನೇ ಸ್ತಂಭಗಳಲ್ಲಿ ಕಾಣಿಸಿದಷ್ಟು ಹುಟ್ಟಿರುತ್ತದೆಂದು ಈ ಮೂಲಕ ಜಾಹೀರಪಡಿಸುತ್ತಾರೆ.

ಪರಿಶಿಷ್ಟ

ಗ್ರಾಮಗಳ ಹೆಸರು	ತೆಂಗು ಫಲಕ್ಕೆ ಬಂದ ಪ್ರತಿ ಮರಕ್ಕೆ	ಅಡಿಕೆ ಫಲಕ್ಕೆ ಬಂದ ಪ್ರತಿ ಮರಕ್ಕೆ	ಮೆಣಸು ಬಳ್ಳಿ ಪ್ರತಿ ಎಕರೆಗೆ ೨೮ ರತ್ತಲಿನ ಮಣ	ಶರಾ
ಸರ್ವೇ ಗ್ರೂಪ I				
೧ ಅಪ್ಸರಕೊಂಡ, ೨ ಅರೆಅಳ್ಳಿ ಮುಂಡಗೋಡ, ೩ ಚೇರೊಳ್ಳಿ, ೪ ಗುಣವಂತೆ, ೫ ಹಳದೀಪುರ, ೬ ಹೊನ್ನಾವರ, ೭ ಹೊಸಾಡ, ೮ ಹೊಸಪಟ್ಟಣ, ೯ ಕಡತೋಕ, ೧೦ ಕರ್ಕಿ, ೧೧ ಕಾಸರಕೋಡ, ೧೨ ಕೆಳಗಿನೂರ, ೧೩ ಕೆಳಗಿನ ಇಡಗುಂಜ, ೧೪ ಕುಲಕೋಡ, ೧೫ ಮಾಳಕೋಡ ೧೬ ಮುಂಡಳಕುರ್ವೆ, ೧೭ ಮಂಕಿ, ೧೮ ಮಾವಿನಕುರ್ವೆ, ೧೯ ಮಾಳಕೋಡ, ೨೦ ಮುಗ್ವಾ, ೨೧ ನಗರೆ, ೨೨ ಹಡಿನಬಾಳ, ೨೩ ಹಡಿನಕುರ್ವೆ.	೪೦	೨ ರತ್ತಲು	೧೪೦	
ಸರ್ವೇ ಗ್ರೂಪ II ಭಾಗ i				
೧ ಅಡಬಗೋಡ, ೨ ಬಳಕೂರ, ೩ ಚೀರಂಕಿ, ೪ ದುಗ್ಗೂರ್, ೫ ಹಡಿನಬಾಳ, ೬ ಹೆಗ್ಗಾರ, ೭ ಹೊಸಾಕುಳಿ, ೮ ಜಲವಳ್ಳಿ, ೯ ಜಲವಳ್ಳಕರ್ಕಿ, ೧೦ ಕಾಸರ್ವೆ, ೧೧ ಖರ್ವಾ, ೧೨ ಕೆಳಗಿನ ಮುಗ್ಗಿಗೆ ೧೩ ಕೆಳಗಿನಮೂಡ್ಕಣಿ, ೧೪ ಕೆರವಳ್ಳಿ, ೧೫ ಕೂಡ್ಲ, ೧೬ ವಂದೂರ.	೪೦	೨ ರತ್ತಲು	೧೪೦	
ಡಿ ಭಾಗ ii				
೧ ಒನ್ನೂರಿ, ೨ ಕಡ್ಲೆ, ೩ ಕಡತೋಕಾ, ೪ ಕೆಕ್ಕಾರ, ೫ ಮಾಡಗೇರಿ, ೬ ಮೇಲಿನ ಇಡಗುಂಜ, ೭ ನವಿಲಗೋಣ, ೮ ನರವತ್ತಿಕೊಡ್ಲ,	೨೦	೨ ರತ್ತಲು	೧೪೦	
ಸರ್ವೇ ಗ್ರೂಪ III ಭಾಗ i				
೧ ಆಡಕಾರ, ೨ ಬೀರಣ್ಣಗೋಡ, ೩ ಚಿಕ್ಕನಕೋಡ, ೪ ಹೇರಂಗಡಿ, ೫ ಕೊಡಾಣಿ, ೬ ಮುಟ್ಟಾ, ೭ ನೀಲಕೋಡ, ೮ ಸಾಲಕೋಡ, ೯ ಉಪ್ಪೋಣಿ.	೪೦	೨ ರತ್ತಲು	೧೪೦	
ಡಿ ಭಾಗ ii				
೧ ಅಂಕಳ್ಳಿ, ೨ ಗುಂಡಬಾಳಾ, ೩ ಚಂದಾವರ, ೪ ಮಲ್ಲಾಪುರ, ೫ ಮೇಲಿನ ಮುಗ್ಗಿಗೆ, ೬ ಮೇಲಿನ ಮೂಡ್ಕಣಿ, ೭ ಸುಳೇಬೀಳ, ೮ ತಲಗೋಡ, ೯ ತುಂಬದೇವಿ.	೨೫	೨ ರತ್ತಲು	೧೪೦	
ಸರ್ವೇ ಗ್ರೂಪ IV ಭಾಗ i				
೧. ಬೂಗೋಡ, ೨ ಕಾದ್ರಿಗೆ, ೩ ನಗರಬಸ್ತಿಕೇರಿ, ೪ ಸರಳಗಿ.				
ಡಿ ಭಾಗ ii				
೧ ಅಡುಕಳ, ೨ ದಬ್ಬೋಡ, ೩ ಗುಡಮಕ್ಕಿ, ೪ ಹೆರಾಳ, ೫ ಹೆರವಲಿ, ೬ ಹುಳಿಗಾರ, ೭ ಕೋಟಿ, ೮ ಮುಹಿವೆ.	೨೫	೨ ರತ್ತಲು	೧೪೦	
ಸರ್ವೇ ಗ್ರೂಪ V				
೧ ಬಾಳೆಮಟ್ಟ, ೨ ಹಡಿಲ, ೩ ಹನೆಹಳ್ಳಿ ಅಬ್ಬಿನಹಕ್ಕಲು, ೪ ಹೊದಕೆ ಶಿರೂರ, ೫ ಕರ್ಣೀರ, ೬ ಕೊಟೆಬೈಲ, ೭ ಸಂತೆಗುಳಿ, ೮ ಶಿರೂರ, ೯ ತುಂಬೊಳ್ಳಿ.	೨೫	೧ ರತ್ತಲು	೧೨೦	
ಸರ್ವೇ ಗ್ರೂಪ VI				
೧ ಅಡಿಕೆಕುಳ, ೨ ಅತಕೇರಿ, ೩ ಬೇಗೊಡ, ೪ ಜಾಡಗೇರಿ, ೫ ಹಿರೇಬೈಲ, ೬ ಹೊಸಗೋಡ, ೭ ಜನ್ನಕಡಕಲ, ೮ ಖಂಡಗೋಡ.	೨೫	೧ ರತ್ತಲು	೧೪೦	

ಟೀಪು:— ಮುಗ್ವಾ, ಹೊಸಾಕುಳಿ, ಸಾಲಕೋಡ, ನೀಲಕೋಡ, ಮತ್ತು ವಂದೂರ ಗ್ರಾಮಗಳಲ್ಲಿಯ ಅಡಿಕೆ ಪೀಕು ಪ್ರತಿ ಮರಕ್ಕೆ ಮೂರು ರತ್ತಲಿನಂತೆ ಇರುತ್ತದೆ.

G. S. Betigeri,
ಮಾಮಲೇದಾರ, ಹೊನ್ನಾವರ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಶುಕ್ರವಾರದಿಂದ ಮಳೆಗೆ ಕಳೆ ಕಾಣಬಿದೆ. ಶುಕ್ರವಾರ ಮಧ್ಯರಾತ್ರಿಗೆ ಹಿಡಿದ ಮಳೆ ನಿನ್ನೆ ಮಧ್ಯರಾತ್ರಿಯ ವರೆಗೆ ಬಿಡಲಿಲ್ಲ! ಈ ಎರಡು ದಿನಗಳಲ್ಲಿ ಸಾಗೇಯಿಲ್ಲೆಂದರೂ ೧೨-೧೪ ಇಂಚು ಮಳೆ ಸುರಿದಿರಬೇಕು. ಹೊಳೆ-ಹಳ್ಳಗಳೆಲ್ಲ ತುಂಬಿತುಳುಕುತ್ತಿವೆ. ಕೆಲವೆಡೆ ಹಳ್ಳಗಳಂಚಿನಲ್ಲಿ ಗದ್ದೆ-ಬೈಲುಗಳು ಜಲಮಯವಾಗಿದ್ದು ವಿಸ್ತೀರ್ಣ ಸರೋವರಗಳಂತೆ ಕಾಣಲಾರಂಭಿಸಿವೆ. ಕುಮಟಾ ಹೊಳೆಯ ನೀರು ಮೊನ್ನೆ ಶನಿವಾರ ಸಂಜೆ ಒಮ್ಮೆಲೇ ಉಬ್ಬಿ, ಕುಮಟಾ-ಅಳ್ವೆಕೋಡಿ ಸಂಕ (ಕೋಜವೇ) ದ ಮೇಲೆ ೩-೪ ಅಡಿಗಳಷ್ಟು ನೀರು ಏರಿತು! ಅದರಂತೆ ಅಂದು ೪-೬ ತಾಸು ಆ ಸಂಕದ ಮೇಲಿನ ರಹದಾರಿಯು ಕಟ್ಟಾಗಿತ್ತು! ಇಷ್ಟು ಮಳೆಯಾಗಿರುತ್ತಿದ್ದರೂ ಬತ್ತಿ ಹೋದ ಬಾವಿಗಳಿಗೆ ಇನ್ನೂ ನೀರು ಆಗಿಲ್ಲ! ಅದರಿಂದ ಮಳೆ ಬೇಡೆಂದು ಹೇಳುವ ಧೈರ್ಯ ಜನರಿಗೆ ಆಗುವದಿಲ್ಲ.

ಕುಮಟೆಯಲ್ಲಿ ಹಾಗೂ ಕುಮಟೆಯಿಂದ ೫ ಮೈಲುಗಳ ಒಳಗಿನ ಅಂತರದಲ್ಲಿರುವ ಗ್ರಾಮಗಳಲ್ಲಿ ಚಿಮಣಿ ಎಣ್ಣೆಯನ್ನು ೫½ ಆಣೆಗಳಿಗೆ ೨ ಪ್ಯಾಂಟುಗಳಂತೆ ಮಾರಬೇಕೆಂದು ಜಿಲ್ಲಾಧಿಕಾರಿ ಆಜ್ಞೆ ಮಾಡುತ್ತಿದ್ದರೂ ಅಂಗಡಿಕಾರರು ೩ ಆಣೆಗೆ ೧ ಪ್ಯಾಂಟ, ೬ ಆಣೆಗೆ ೨ ಪ್ಯಾಂಟ, ಈ ರೀತಿ ಮಾರುತ್ತಿದ್ದುದು ಜಿಲ್ಲಾಧಿಕಾರಿ ತಿಳುವಳಿಕೆಗೆ ಬಂದಿದೆ. ಈ ಬಗ್ಗೆ ಅವರು ಚೌಕಶಿ ಮಾಡಿದಾಗ, ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ಹೇಳಿದಂತೆ, ತಾವು ಎಣ್ಣೆ ಮಾರುತ್ತಿದ್ದೇವೆಂದು ಕೆಲವು ಅಂಗಡಿಕಾರರು ಹೇಳುತ್ತಾರಂತೆ! ಜಿಲ್ಲಾಧಿಕಾರಿಗಳು ಈಗ ತಾಲೂಕ ಕೊಂಗ್ರೆಸ ಕಮಿಟಿಗೆ ಪತ್ರ ಬರೆದು, ೧ ಪ್ಯಾಂಟಿಗೆ ೧೧॥ ಪೈಗಳಂತೆ ಬೆಲೆ ತಕ್ಕೊಳ್ಳುವ ಹಾಗೆ ಎಲ್ಲ ಅಂಗಡಿಕಾರರಿಗೂ ಎಚ್ಚರಿಸಬೇಕೆಂದು ತಿಳಿಸಿದ್ದಾರಂತೆ. ಚಿಮಣಿ ಎಣ್ಣೆಯ ವ್ಯಾಪಾರಿಗಳು ಇತ್ತ ಗಮನಿಸಬೇಕಾಗಿ ಸೂಚನೆಯಿದೆ.

ಕುಮಟಾ ನಗರ ಸಭೆಯ ಚುನಾವಣೆಗಾಗಿ ೩೪ ಜನರು ೩೭ ಉಮೇದುವಾರಿ ಪತ್ರಗಳನ್ನು ದಾಖಲಿಸಿದ್ದರು. ಕಳೆದ ಸೋಮವಾರ ಅವುಗಳಲ್ಲಿ ೩ ಅರ್ಜಿಗಳು ತಿರಸ್ಕರಿಸಲ್ಪಟ್ಟವು. ಉಳಿದ ಅರ್ಜಿಗಳ ಪರಿಶೀಲನೆ ಮಂಗಳವಾರ ಮಧ್ಯಾಹ್ನದಲ್ಲಿ ನಡೆಯಿತು. ಎಲ್ಲ ಅರ್ಜಿಗಳೂ ಮಂಜೂರ ಆಗಿವೆ. ೧ನೇ ವಾರ್ಡಿನ ೨ ಆಸನಗಳಿಗಾಗಿ ೫ ಉಮೇದುವಾರರುಗಳು, ೨ನೇ ವಾರ್ಡಿನ ೩ ಆಸನಗಳಿಗಾಗಿ ೬ ಉಮೇದುವಾರರುಗಳು, ೩ನೇ ವಾರ್ಡಿನ ೩ ಆಸನಗಳಿಗಾಗಿ ೭ ಉಮೇದುವಾರರುಗಳು, ೪ನೇ ವಾರ್ಡಿನ ೩ ಆಸನಗಳಿಗೆ ೫ ಉಮೇದುವಾರರುಗಳು, ೫ನೇ ವಾರ್ಡಿನ ೪ ಆಸನಗಳಿಗೆ ೭ ಉಮೇದುವಾರರುಗಳು ಮತ್ತು ೬ನೇ ವಾರ್ಡಿನ ೨ ಆಸನಗಳಿಗಾಗಿ ೪ ಉಮೇದುವಾರರುಗಳು ನಿಂತಂದ್ದುಕೊಂಡಿರುತ್ತಾರೆ. ಈ ಪೈಕಿ ೫ನೇ ವಾರ್ಡಿನಲ್ಲಿ ಮುಸಲ್ಮಾನರಿಗಾಗಿ ಕಾದಿಟ್ಟ ೧ ಆಸನಕ್ಕಾಗಿ ರಾ। ಬಿ. ಮಹಮೂದ ಸಾಹೇಬರೊಬ್ಬರೇ ನಿಂತಿದ್ದಾರೆ; ಅದೇ ರೀತಿಗೆ ೪ನೇ ವಾರ್ಡಿನಲ್ಲಿ ಕ್ರಿಸ್ತೀ ಬಾಂಧವರಿಗಾಗಿ ಕಾದಿಟ್ಟ ೧ ಆಸನದ ಬಗ್ಗೆ ರಾ। ಆಲ್ಫ್ರೆಡ್ ಫರ್ನಾಂಡೀಸ ಇವರದೊಂದೇ ಉಮೇದುವಾರಿ ಪತ್ರ—ಈಗ ಉಳಿದಿರುವದು. ಇದರಿಂದ ಇವರಿಬ್ಬರೂ ಬಿನ್ನ ವಿರೋಧ ಚುನಾಯಿತರಾದಂತೆಯೇ ಸರಿ. ೫ನೇ ವಾರ್ಡಿನಲ್ಲಿ ಹೆಂಗಸರಿಗಾಗಿ ಕಾದಿಟ್ಟ ೧ ಆಸನಕ್ಕಾಗಿ ಇಬ್ಬರು ಸ್ತ್ರೀಯರು ಉಮೇದವಾರರಾಗಿ ನಿಂತಿದ್ದಾರೆ. ಅದರಿಂದ ಈ ಸಲದ ಚುನಾವಣೆಯಲ್ಲಿ (೧ ಸ್ತ್ರೀಯರದು ಮತ್ತು ೧೪ ಸಾಮಾನ್ಯ ಹೀಗೆ ೧೫) ೧೫ ಆಸನಗಳಿಗಾಗಿ ೩೧ ಉಮೇದುವಾರರೊಳಗೆ ಹೋರಾಟ ನಡೆಯಲಿದೆ. ಪ್ರತಿಯೊಂದು ಮತದಾನ ಕಟ್ಟೆಯಲ್ಲಿ ಅತ್ಯಂತ ಕುರಿತಿನ ಹೋರಾಟ ನಡೆಯುವದೆಂದು ಹೇಳುತ್ತಾರೆ. ಒಂದೊಂದೇ ಮತ ಕೊಡುವ ಹೊಸ ಮತದಾನ ಪದ್ಧತಿ ಅಮಲಿನಲ್ಲಿ ಬಂದಿರುವ ಕಾರಣದಿಂದ ಮತ ಉಮೇದುವಾರರು ಈಗ ಹಿಂತೆಗೆ ಆಗಿಸಿ ಬರುವನೆಂದು ಎದುರಿಟ್ಟು ಕೇಳಲಾರರು.

ಇಲ್ಲಿಯ ಸಿವಿಲ ಕೋರ್ಟಿನ ನ್ಯಾಯಾಧೀಶರ ಸ್ಥಳಕ್ಕೆ ಇನ್ನೂ ಯಾರದೂ ನೇಮಣೂಕಿ ಯಾಗಿರುವದಿಲ್ಲ.

ಅಕ್ಕಿಯ ದರಗಳು ಇನ್ನೂ ಏರುತ್ತಲಿವೆ. ಸರಕಾರದವರ ಅಗ್ಗದರದ ಅಂಗಡಿಗಳು ಇನ್ನೂ ತೆರೆಯಲ್ಪಟ್ಟಿಲ್ಲ. ಕೇಡು ಚೀಟಿಗಳು ಸಹ ಹಂಚಲ್ಪಟ್ಟಿಲ್ಲ. ಜುಲಾಯಿ ತಾ. ೧ರ ಮೊದಲು ಸರಕಾರದ ಅಂಗಡಿಗಳು ತೆರೆಯಲ್ಪಡುವ ಲಕ್ಷಣಗಳು ತೋರುವದಿಲ್ಲ.

ಸಿದ್ದೇಶ್ವರ ಗಜಾನನ ಕಟ್ಟೆ ಕೆಲವು ದಿನಗಳ ಹಿಂದೆ ಪುನಃ ಒಡೆದು ಹೋಗಿ ಆ ಗಜಾನನನೂ ಅವರ ನೆರೆಹೊರೆಯಲ್ಲಿರುವ ಬೇರೆ ಕೆಲವು ಗಜಾನನರೂ ಇಲ್ಲದಾಯುವಾಗಿ ಹೋಗಿದೆ. ಈ ವರ್ಷ ಇಷ್ಟೆಲ್ಲ ಬಂದರ ಹೇಳುವಂತೆ, ಆಹಾರ ಧಾನ್ಯಗಳ ಕೊರತೆಯು ಈ ಕಾಲದಲ್ಲಿ ಸಾವಿರಾರು ಎಕರೆ ಗದ್ದೆ ಭೂಮಿಯು ಬಂಜರ ಬೀಳುತ್ತಿರುವದು ನಿಜವಾಗಿಯೂ ಶೋಚನೀಯ ಸಂಗತಿಯಾಗಿದೆ!

ಅಂಕೋಲಾ— (ತಾ ೧೬-೬-೪೮) ಇದೇ ಕಳೆದ ತಾ ೭ಕ್ಕೆ ಇಲ್ಲಿಯ ತಾಲೂಕ ಪತ್ರಿಯ ಮುಂದಿನ ಪ್ರೈಮರಿ ಶಿಕ್ಷಕರ ಸಂಘದವರದೊಂದು ಸಭೆಯಾಯಿತು. ಈ ಸಭೆಗೆ ಸಮಾಜ-ಸ್ವಾತಂತ್ರ್ಯವಾದಿ ಪಕ್ಷದ ಶ್ರೀ ಜಯಪ್ರಕಾಶ ನಾರಾಯಣ, ಶ್ರೀಮತಿ ಅರುಣಾ ಅಸಫ ಅಲ್ಲಿ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರು ಬರುವರೆಂದು ಸಭೆಯ ನಿಮಂತ್ರಕರೂ ಬಾಲಕರೂ ನಾಡಿನಲ್ಲೆಲ್ಲ ಗುಲ್ಲನ್ನು ಎಬ್ಬಿಸಿದ್ದರು! ಹೊತ್ತಿಗಾಗಿಯೇ ಜನ್ಮದಿಂದ ಅನಾಮಿಕ ಜನರ ನಿಮಂತ್ರಣೆಯನ್ನು ಸ್ವೀಕರಿಸಿ, ಮೇಲಿನಂತಹ ಅವ್ಯಕ್ತ ಸಭೆಗಳಿಗಾಗಿ ಜಯಪ್ರಕಾಶರಂತಹ ಮುಖಂಡರು ಬರುವದು ಅಸಂಭವವೆಂದು ಜನಸಾಮಾನ್ಯರಿಗೇನು ಗೊತ್ತು! ಆ ಮುಖಂಡರನ್ನು ನೋಡುವ ಕುತೂಹಲದಿಂದ ಬಹಳಷ್ಟು ಜನರು ಈ ಸಭೆಗೆ ಬಂದಿದ್ದರು. ಬೇರೂರುಗಳಿಂದಲೂ ಬಹಳಷ್ಟು ಜನರು ಕೂಡಿದ್ದರು. ಅವರೆಲ್ಲರೂ ನಿರಾಶರಾಗಿ ತಿರುಗಿ ಹೋಗುವ ಪ್ರಸಂಗ ಬಂತು! ಆದರೂ ಜಾಹೀರ ಅದರಂತೆ ಸಭೆ ಕೂಡಿತ್ತು. ಜಿಲ್ಲಾ ರೈತ ಸಂಘದ ಓರ್ವ ಮುಖಂಡರಾದ ರಾ। ಕೊ. ರಾ, ನಾಯ್ಕರು ಸಭಾಧ್ಯಕ್ಷರಾಗಿದ್ದರು. ಮ್ಯಸೂರಿನ ಕಡೆಯ ಕೆಲವು ಸಮಾಜ ಸತ್ತಾವಾದಿಗಳೂ ಸಭೆಗೆ ಬಂದಿದ್ದರು. ಸಭೆಯಲ್ಲಿ ಮುಖ್ಯ ಭಾಷಣ ಮಾಡಿದವರೂ ಸಭೆಯ ಗೊತ್ತುವಳಿಗಳನ್ನು ಪ್ರಸ್ತಾಪಿಸಿದವರೂ ರಾ। ದಿನಕರ ದೇಸಾಯಿಯವರು. ಅವರು ತಮ್ಮ ಭಾಷಣದಲ್ಲಿ, ಹಳೆಯ ಮಾನ ಕಳೆದುಕೊಂಡಿದು ಅದನ್ನು ರೀತಿಯಂತೆ ಜಾಹೀರ ಮಾಡಿದ ಮಾಲುಕಿದಾರರನ್ನೂ ನಮ್ಮ ಜಿಲ್ಲೆಯ ಎಸೆಂಬ್ಲಿ-ಕೌನ್ಸಿಲ ಸದಸ್ಯರನ್ನೂ, ಭೂಮಾಲಿಕರನ್ನೂ ಮನಸ್ಸಿಗೆ ಬಂದಂತೆ ಟೀಕಿಸಿದರು! ಗ್ರಾಮಸ್ಥರ ದಪ್ತರಗಳನ್ನು ಸುಡಬೇಕೆಂದರು! ಮುಂಬರುವ ಚುನಾವಣೆಯಲ್ಲಿ ರೈತರು ಕಮ್ಯುನಿಸ್ಟರಿಗೇ ಮತ್ತೆ ಕೊಟ್ಟು ಆರಿಸಿ ತರಬೇಕೆಂದರು! ಊಳುವವನೇ ಹೊಲದೊಡೆಯನಾಗಬೇಕೆಂದರು! ರಾ। ದೇಸಾಯಿಯವರ ಈ ಮಾತುಗಳನ್ನು ಕೇಳಿದ ಕೆಲವರು ಇಂತಹ ವರ್ಗಕಲಹವನ್ನು ಹಬ್ಬಿಸುವವರ ವಿರುದ್ಧ ಸರಕಾರವು ಯಾಕೆ ಕ್ರಮ ಕೈಕೊಳ್ಳುವದಿಲ್ಲೆಂದು ಪ್ರಶ್ನಿಸುತ್ತಾರೆ.

ಕಾರವಾರ— ಇಲ್ಲಿಯ ಸಕಾರಿ ಅರ್ಬನ್ನ ಬೇಂಕಿನಲ್ಲಿ ದೊಡ್ಡದೊಂದು ಗಲಿಬಿಲಿಯುಂಟಾಗಿದೆ. ಬೇಂಕಿನಿಂದ ಸಾಲ ಪಡೆಕೊಂಡ ಹಾಗೂ ಬೇಂಕಿನ ಅಗ್ಗ ದರದ ಅಂಗಡಿಗಾಗಿ ಅಕ್ಕಿ ಖರೀದಿಸರೆಂದು ಬೇಂಕಿನಿಂದ ಹಣ ಇಳಿಕೊಂಡ ಮುಸಲ್ಮಾನ ಗೃಹಸ್ಥನೊಬ್ಬನು ಈಗ ಪಾಕಿಸ್ತಾನಕ್ಕೆ ಓಡಿಹೋಗಿದ್ದಾನಂತೆ! ಆ ಗೃಹಸ್ಥನಿಂದ ಸುಮಾರು ೨೫, ೦೦೦ ಬೇಂಕಿಗೆ ಬರಬೇಕಂತೆ!

ಸ್ವೀಕಾರ ಮತ್ತು ವಿಮರ್ಶೆ

ಸಂಜೀವನ— (ಇಂಗ್ಲಿಶ ಭಾಷೆಯ, ಮಾಸಪತ್ರಿಕೆ)— ಮದ್ಯಪಾನನಿರೋಧ ಪ್ರಚಾರಕ್ಕಾಗಿ ಮುಂಬಯಿ ಸರಕಾರದ ಪ್ರಾಂತಿಕ ಮದ್ಯನಿಷೇಧನ ಸಮಿತಿಯವರು ಕಳೆದ ಏಪ್ರಿಲ್ ತಿಂಗಳಿಂದ ಈ ಮಾಸಿಕವನ್ನು ಪ್ರಕಟಿಸುತ್ತಿದ್ದಾರೆ. ಮದ್ಯಪಾನದ ಅನಿಷ್ಟತೆಯನ್ನೂ, ಅದರ ನಿರೋಧನದ ಆವಶ್ಯಕತೆಯನ್ನೂ ಕುರಿತು ಪ್ರಮುಖರು ಬರೆದ ಬೋಧಪ್ರದ ಲೇಖನಗಳೂ ಹೊರಡಿಸಿದ ಸಂದೇಶಗಳೂ ಈ ಮಾಸಿಕದಲ್ಲಿ ಪ್ರಕಟವಾಗುತ್ತವೆ. ವಾರ್ಷಿಕ ಚಂದಾ ರೂ. ೩.

ಸಂದೇಶ— ಬೆಳಗಾಂವಿಯ ಅರ್ಧಮಾಸಿಕ « ಸಂದೇಶ » ಪತ್ರಿಕೆಯು ತಾ. ೨೦-೫-೪೮ಕ್ಕೆ ೩೪ ಪುಟಗಳುಳ್ಳ ಒಂದು ಗ್ರಾಂಥಿಕ ಸಂಚಿಕೆಯನ್ನೊಂದು ಹೊರಡಿಸಿದೆ. ಈ ಸಂಚಿಕೆಯಲ್ಲಿ ವಿವಿಧ ವಿಷಯಗಳ ಮೇಲೆ ತಜ್ಞರು ಬರೆದ ಲೇಖನಗಳಿವೆ; ವಿಸ್ತೃತ ವರ್ಷ-ಭವಿಷ್ಯವಿದೆ. ಸುಂದರ ಮುಖಪುಟದ ಜೊತೆ ವಿವಿಧ ಚಿತ್ರಗಳಿವೆ. ಒಂದು ಚಿಕ್ಕ ಏಕಾಂಕ ನಾಟಕವಿದೆ; ಬೇರೆ ಕೆಲವು ಚಿಕ್ಕ ಕತೆಗಳೂ ಇವೆ. ಸಂಚಿಕೆಯ ಬೆಲೆ ೧೨ ಆಣೆ.

ಸುದರ್ಶನ— ಇದೇ ಕಳೆದ ಮೇ ತಿಂಗಳಿಂದ ಬೆಂಗಳೂರಿನಿಂದ ಹೊರಡುತ್ತಿರುವ ಈ ಕನ್ನಡ ಮಾಸ ಪತ್ರಿಕೆ ಸರ್ವಾಂಗ-ಸುಂದರವಿದೆ. ವಿವಿಧ ವಿಷಯಗಳ ಮೇಲೆ ಪ್ರಮುಖ ಲೇಖಕರು ಬರೆದ ಲೇಖನಗಳು ಈ ಮಾಸಿಕದಲ್ಲಿ ಪ್ರಕಟವಾಗುತ್ತವೆ. ಬಿಡಿ ಸಂಚಿಕೆಯ ಬೆಲೆ ಆರು ಆಣೆ.

ಕರ್ನಾಟಕ ವಾರು:—
ಕೊಪ್ಪೀಕರ ರೋಡ್, ಹುಬ್ಬಳ್ಳಿ

ಯುವಕರಿಗೆ ಸೈನ್ಯ ಶಿಕ್ಷಣ ಕೊಟ್ಟು ಸೈನಿಕ ಬಲವನ್ನು ಬೆಳಸುತ್ತಿದ್ದ ಸುದ್ದಿಗಳೇನೋ ಬರುತ್ತಿವೆ. ೨೦ ಲಕ್ಷ ಸೈನ್ಯವನ್ನು ಅವಶ್ಯವಿದ್ದಾಗ ರಣಾಂಗಣದಲ್ಲಿ ಇಳಿಸ ಬರುವಷ್ಟು ತಯಾರಿಯನ್ನು ಅವರು ನಡಿಸಿದ್ದಾರಂತೆ. ಆದರೆ ಬರೇ ಜನಬಲದಿಂದ ಯುದ್ಧ ನಡೆಯುವದಿಲ್ಲ! ಯುದ್ಧಕ್ಕೆ ಬಗೆಬಗೆಯ ಸಾಹಿತ್ಯ ಬೇಕು. ಆ ಸಾಹಿತ್ಯವನ್ನು ಪೂರೈಸುವಷ್ಟು ಸಾಂಪತ್ತಿಕ ಸಾಮರ್ಥ್ಯ ನಾಡಿನಲ್ಲಿರಬೇಕು. ಪಾಕಿಸ್ತಾನದಲ್ಲಾಗಲಿ ಹೈದರಾಬಾದದಲ್ಲಾಗಲಿ ಈ ಸಾಂಪತ್ತಿಕ ಸಮೃದ್ಧಿ ದೃಗ್ಗೋಚರವಾಗುವದಿಲ್ಲ. ಪಾಕಿಸ್ತಾನದ ಸಹಾಯವನ್ನು ನಂಬಿ ನಿಜಾಮರು ಸಾಮ್ರಾಜ್ಯ ಕಟ್ಟುವ ಹೆಬ್ಬಾಸೆಯನ್ನು ತಳೆಯುತ್ತಿದ್ದರೆ ಅವರಷ್ಟು ಮೂರ್ಖರು ಅವರೇ ಎಂದು ನಾನು ಧಾರಾಳವಾಗಿ ಹೇಳಬಲ್ಲೆ. ಮೇಲಾಗಿ ಯುದ್ಧಕ್ಕೆ ಹೊರಟ ರಾಜ್ಯದಲ್ಲಿ ಒಕ್ಕಟ್ಟು ಇರಬೇಕು, ಸರಕಾರಕ್ಕೆ ಪ್ರಜೆಗಳ ಸಂಪೂರ್ಣ ಸಹಕಾರವಿರಬೇಕು, ಹೈದರಾಬಾದದಲ್ಲಿ ಈ ಒಕ್ಕಟ್ಟು ಎಲ್ಲುಂಟು? ಹೈದರಾಬಾದದಲ್ಲಿ ಈಗ, ನಿರಾಶ್ರಿತರೆಂದು ನೆರೆಹೊರೆಯ ನಾಡುಗಳಿಂದ ಬಂದ ೫-೬ ಲಕ್ಷ ಮುಸಲ್ಮಾನರನ್ನು ಹಿಡಿದು ಒಟ್ಟು ಮುಸಲ್ಮಾನರ ಸಂಖ್ಯೆ ೨೫ ಲಕ್ಷಕ್ಕೆ ಮಿಕ್ಕುವದಿಲ್ಲ. ಇವರಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಮಂದಿ ಶಹರಗಳಲ್ಲಿರುತ್ತಾರೆ. ಉಳಿದವರು ಹಳ್ಳಿಗಳಲ್ಲಿ ಹಂಚಿ ಹೋಗಿದ್ದಾರೆ. ಈ ಹಳ್ಳಿಗಳಲ್ಲಿರುವ ಮುಸಲ್ಮಾನರು ಎಷ್ಟೆಂದರೂ ಅಲ್ಪಸಂಖ್ಯಾಕರು. ಅಲ್ಲಿ ಹಿಂದುಗಳದೇ ಪ್ರಾಬಲ್ಯವಿದೆ; ಮುಸಲ್ಮಾನರ ೧೩-೧೪ ಪಟ್ಟು ಹಿಂದುಗಳಿದ್ದಾರೆ. ಈ ಹಿಂದುಗಳು ನಿಜಾಮರಿಗೆ ಅನುಕೂಲರಿಲ್ಲ. ಸಾಧ್ಯವಿದ್ದರೆ ನಿಜಾಮರನ್ನು ಪಾಕಿಸ್ತಾನಕ್ಕೆ ಇಲ್ಲವೆ ತುರ್ಕಸ್ತಾನಕ್ಕೆ ಓಡಿಸಲು ಅವರು ಒಗ್ಗಾಲ ಮೇಲೆ ಸಿದ್ಧರು! ಹಿಂದ-ಹೈದರಾಬಾದ ಹೋರಾಟ ವೆಸಗಿದಲ್ಲಿ ಈ ಹಿಂದುಗಳು— ಹೈದರಾಬಾದ ಹಳ್ಳಿಗಳಲ್ಲಿರುವ ಹಿಂದುಗಳು— ಹಿಂದುಸ್ಥಾನದ ಪಕ್ಷ ಎತ್ತಿ ಹಿಡಿಯುವರೆಂದು ನಿಃಸಂಶಯವಾಗಿ ಎಣಿಸಬಹುದು. ಆಗ ಅಲ್ಲಿಯ ಮುಸಲ್ಮಾನರು ತಮ್ಮ ಸುರಕ್ಷಿತತೆಗಾಗಿ ಶಹರಗಳಿಗೆ ಇಲ್ಲವೆ ಸೈನಿಕ ಶಿಬಿರಗಳ ಕಡೆ ಓಡಬೇಕಾಗುವದು, ಈ ಮುಸಲ್ಮಾನರನ್ನೂ ಶಹರದಲ್ಲಿರುವ ಮುಸಲ್ಮಾನರನ್ನೂ ನಿಜಾಮರು ಅಥವಾ ಇತ್ತೇಹಾದುಲ್ ಮುಸಲ್ಮೀನ ಸಂಸ್ಥೆಯವರು ಹೇಗೆ ಸಾಕುವರು! ಅವರಿಗೆ ಬೇಕಾಗುವ ಆಹಾರಾದಿಗಳು ಹಳ್ಳಿಗಳಿಂದ ಸಿಗುವವೆಂದು ತಿಳಿಯಲಾಗದು. ನಿಜಾಮರ ಪರಿಸ್ಥಿತಿಯಂತು ಗಾಜಿನ ಮನೆಯಲ್ಲಿರುವ ಶ್ರೀಮಂತನ ಪರಿಸ್ಥಿತಿಯಂತಾಗಿದೆ. ಗಾಜಿನ ಮನೆಯಲ್ಲಿದ್ದವರು ನೆರೆಯ ಮನೆಯ ಮೇಲೆ ಕಲ್ಲುಗಳನ್ನು ಎಸೆಯಕೂಡದೆಂದೂ, ಎಸೆದರೆ ಗಾಜಿನ ಮನೆಯವರೇ ಅಪಾರ ಕಷ್ಟಕ್ಕೆ ಗುರಿಯಾಗುತ್ತಾರೆಂದೂ ಇಂಗ್ಲಿಷ ಭಾಷೆಯೊಳಗಿನ ಒಂದು ಸೂಕ್ತಿ ಹೇಳುತ್ತಿದೆ. ಹೈದರಾಬಾದದ ಹಳ್ಳಿಗಳಲ್ಲಿ ಈಗ ಸಾಕಷ್ಟು ಜಾಗೃತಿಯಾಗಿದೆ. ನಿಜಾಮರ ಗುಲಾಮರಾಗಿರಲು ಹಳ್ಳಿಗರು ಈಗ ಸಿದ್ಧರಿಲ್ಲ. ಈಗಾಗಲೇ ಎಷ್ಟೋ ಹಳ್ಳಿಗಳು ಸ್ವಾತಂತ್ರ್ಯವನ್ನು ಸಾರಲಾರಂಭಿಸಿವೆ. ಈ ಹಳ್ಳಿಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿ, ಅವರು ನಿಜಾಮರ ನೊಗವನ್ನು ಬಿಸುಡಿಬಿಡುವಂತೆ ಪ್ರೋತ್ಸಾಹಿಸಬೇಕೆಂದು ಸಮಾಜಸತ್ತಾವಾದಿ ಪಕ್ಷದ ಮುಂದಾಳುಗಳಾದ ಶ್ರೀ|| ಜಯಪ್ರಕಾಶ ನಾರಾಯಣ, ಅಚ್ಯುತ ಪಟವರ್ಧನ ಪ್ರಭೃತಿಗಳು ಹೇಳುತ್ತಾರೆ. (ಪಂ|| ಜವಾಹರಲಾಲರು ಕೂಡ ಈ ಕ್ರಮಕ್ಕೆ ಸಮ್ಮತಿಯಿತ್ತಿದ್ದಾರೆಂದು ಕೆಲವು ದಿನಗಳ ಹಿಂದೆ ಮುಂಬಯಿ ನಗರ ಸಭೆಯಲ್ಲಿ ಪ್ರಮುಖ ಸಮಾಜಸತ್ತಾವಾದಿ ಶ್ರೀ|| ಅಶೋಕ ಮೆಹತಾ ಇವರು ಸಾರಿದ್ದರು. ಆದರೆ ಅದು ಸುಳ್ಳೆಂದೂ ಈ ಕ್ರಮ ಅಯುಕ್ತವಿರುತ್ತದೆಂದು ತಾವು ಸ್ಪಷ್ಟ ಹೇಳಿದ್ದುಂಟೆಂದೂ ಪಂ|| ಜವಾಹರಲಾಲರು ಈಗ ಪ್ರಕಟಗೊಳಿಸಿದ್ದಾರೆ.) ಮತ್ತು ಸಮಾಜಸತ್ತಾವಾದಿಗಳು ಆ ದಿಶೆಯಿಂದ ತಮ್ಮ ಕಾರ್ಯ ನಡಿಸಿದ್ದಾರೆ. ಶ್ರೀ|| ಜಯಪ್ರಕಾಶ ನಾರಾಯಣರು ಮೊನ್ನೆಯೇ ಹೈದರಾಬಾದ ಸಂಸ್ಥಾನದ ಕೊಂಗ್ರೆಸ ಕಾರ್ಯಕರ್ತರನ್ನು ಕೂಡಿಸಿ ಅವರಿಗೆ ಏನೇನೋ ಕಾರ್ಯಕ್ರಮ ಹಾಕಿಕೊಟ್ಟ ವಾರ್ತೆಯಿದೆ. ಪಾನಿಪತ ಸಂಗ್ರಾಮ ಹೂಡಲು ಮುಂದಾಗುವ ಮೊದಲು ತಮ್ಮ ಹಿಂದೆ ತಮ್ಮ ಮನೆ ನೆಟ್ಟಗುಳಿಯುವದೋ ಅಥವಾ ನೆಲಸಮವಾಗುವದೋ ಎಂಬುದನ್ನು ರಝ್ವಿಯವರೂ ನಿಜಾಮರೂ ಆಲೋಚಿಸಬೇಕು. ದಿಲ್ಲಿಯನ್ನು ಗೆಲ್ಲಲು ಹೋಗಿ ನಿಜಾಮರು ಹೈದರಾಬಾದವನ್ನು ಕಳಕೊಳ್ಳದಿದ್ದರೆ ಸಾಕು!

ನಿಜಾಮರಿಗೆ ಇದೀಗ ತಮ್ಮ ಈ ದೌರ್ಬಲ್ಯದ ಅರಿವಾಗಲಿಕ್ಕೆ ಹತ್ತಿರಬೇಕು. ಮುರಿದು ಹೋದ ಹಿಂದ-ಹೈದರಾಬಾದ ಸಂಬಂಧವನ್ನು ಸರಿಗೊಳಿಸುವದಕ್ಕೆ ಮನಸ್ಸು ಮಾಡಿ ಅವರು ಸರ್. ಮಿರ್ಝಾ ಇಸ್ಮಾಯಿಲರವರಿಗೆ ಶರಣು ಹೋಗಿದ್ದಾರೆ. ಸರ್ ಮಿರ್ಝಾರವರು ಈಗ ಬೆಂಗಳೂರಿನಲ್ಲಿದ್ದಾರೆ. ನಿಜಾಮರ ದೂತನೊಬ್ಬನು ಅವರ ಪತ್ರ ತಕ್ಕೊಂಡು ಬೆಂಗಳೂರಿಗೆ ಲಗುಬಗೆಯಿಂದ ಹೊರಟ ಸುದ್ದಿಯುಂಟು. ಮಿರ್ಝಾ ಇಸ್ಮಾಯಿಲರು ೨ ವರ್ಷಗಳ ಹಿಂದೆ ಅಲ್ಪಕಾಲ ನಿಜಾಮರ ಮುಖ್ಯ ಮಂತ್ರಿಗಳಾಗಿದ್ದರು. ಆದರೆ ಅವರ ಸೂಕ್ತ ರಾಜನೀತಿಯು ನಿಜಾಮರಿಗೂ ನಿಜಾಮರ ಆಪ್ತ ಸಲಹೆಗಾರರಿಗೂ ಸರಿದೋರದ್ದರಿಂದ ಮಿರ್ಝಾ ಇಸ್ಮಾಯಿಲರು ಹೈದರಾಬಾದವನ್ನು ಬಿಟ್ಟು ತೆರಳಬೇಕಾಯಿತು. ಹಿಂದ-ಹೈದರಾಬಾದಗಳ ನಡುವಿನ ಸಂಬಂಧವನ್ನೂ ನಿಜಾಮರ ಹಾಗು ಅವರ ಹಿಂದು ಪ್ರಜೆಗಳ ನಡುವಿನ ಸಂಬಂಧವನ್ನೂ ಸರಿಗೊಳಿಸಲಿಕ್ಕೆ ಮತ್ತು ಇಕ್ಕೆಲದವರಲ್ಲೂ ಸೌಹಾರ್ದವನ್ನುಂಟು ಮಾಡಲಿಕ್ಕೆ ಸರ್ ಮಿರ್ಝಾರವರ ವಿನಹ ಬೇರೆಯವರಿಂದ ಆಗದೆಂದು ನಿಜಾಮರು ಮನಗಂಡು ಈಗ ಮಿರ್ಝಾರವರ ಮರೆ ಹೊಕ್ಕಿದ್ದಾರೆ! ಅದೇ ವೇಳೆಗೆ ಪುನಃ ಹಿಂದ-ಸರಕಾರದೊಡನೆ ಸಂಧಾನ ಮಾಡಿಕೊಳ್ಳಲು ಸರ್ ವಾಲ್ಟರ ಮೊಂಕ್ಟನರಿಗೆ ದಿಲ್ಲಿಗೆ ಕಳಿಸುತ್ತಾರಂತೆ. ಹಿಂದೀ ಒಕ್ಕೂಟ ಸರಕಾರಕ್ಕೆ ಬಿಟ್ಟುಕೊಟ್ಟ ವಿಷಯಗಳ ಸಂಬಂಧದಲ್ಲಿ ಹಿಂದ-ಸರಕಾರದ ಕಾಯಿದೆಗಳು ಹೈದರಾಬಾದ ಕಾನೂನ ಮಂಡಳಕ್ಕೆ ಮಾನ್ಯವಾಗದಿದ್ದರೆ ಅವನ್ನು ತಿರಸ್ಕರಿಸಲಿಕ್ಕೆ ಹೈದರಾಬಾದಕ್ಕೆ ಸ್ವಾತಂತ್ರ್ಯವಿರತಕ್ಕದ್ದೆಂದು ನಿಜಾಮರು ಪ್ರತಿ-ಸೂಚನೆ ಕಳಿಸಿಕೊಟ್ಟ ಮಾತನ್ನು ನಾನು ಮೇಲೆ ಉಲ್ಲೇಖಿಸಿದ್ದೇನೆ. ಹೈದರಾಬಾದಕ್ಕೆ ಈ ಸ್ವಾತಂತ್ರ್ಯ ಕೊಡಲು ಹಿಂದ-ಸರಕಾರವು ಒಪ್ಪಲಿಲ್ಲ. ದಿಲ್ಲಿಯ ಸಂಧಾನದ ಮಾತುಕತೆಗಳು ಮುರಿದುಹೋದದ್ದು ಮುಖ್ಯವಾಗಿ ಈ ಪ್ರಶ್ನೆಯ ಮೇಲೆಯೇ ಎಂದು ಹೇಳುತ್ತಾರೆ. ಸರ್ ವಾಲ್ಟರರು ಈಗ ಹೊಸ ಸೂತ್ರವನ್ನು ಹುಡುಕಿದ್ದಾರೆ. ಒಕ್ಕೂಟ ಸರಕಾರಕ್ಕೆ ಬಿಟ್ಟುಕೊಟ್ಟ ವಿಷಯಗಳಿಗೆ ಸಂಬಂಧಿಸಿದ ಹಿಂದ-ಸರಕಾರದ ಕಾಯಿದೆಗಳನ್ನು ಹೈದರಾಬಾದದ ಕಾನೂನ ಮಂಡಳವು ಮಾನ್ಯ ಮಾಡದಿದ್ದಲ್ಲಿ ನಿಜಾಮರು ತಮ್ಮ ಸ್ವತಂತ್ರ ಅಧಿಕಾರದಿಂದ ರಾಜಶಾಸನ ಹೊರಡಿಸಿ ಹಿಂದ-ಸರಕಾರದ ಕಾಯಿದೆಗಳನ್ನು ತಮ್ಮ ರಾಜ್ಯದಲ್ಲಿ ಜಾರಿಯಲ್ಲಿ ತರತಕ್ಕದ್ದು ಎಂಬುದಾಗಿ ಒಪ್ಪಂದದ ಕರಾರಿನಲ್ಲಿ ತಿದ್ದುಪಡಿ ಮಾಡಬಹುದಾಗಿ ಸರ್ ವಾಲ್ಟರರ ಸೂಚನೆಯುಂಟು. ಈ ತಿದ್ದುಪಡಿಯಿಂದ ಹಿಂದುಸ್ತಾನ ಸರಕಾರದ ಉದ್ದೇಶವಂತೂ ಸಾಧ್ಯವಾಗುತ್ತದೆ, ನಿಜಾಮರ ಗೌರವವೂ ಅಬಾಧಿತ ಉಳಿಯುತ್ತದೆ, ಎಂದು ಸರ್ ವಾಲ್ಟರರ ಪ್ರತಿಪಾದನೆಯಿದೆ. ಈ ತಿದ್ದುಪಡಿಗೆ ಭಾರತ ಸರಕಾರವು ಒಪ್ಪಿಗೆ ಕೊಡಬಹುದು. ಆದರೆ ಇಷ್ಟರಿಂದಲೇ ಭಾರತ ಸರಕಾರವು ಸಮಾಧಾನಗೊಳ್ಳಲಿಕ್ಕಿಲ್ಲ. ರಝ್ವಿಯವರ ರಝಾಕಾರರನ್ನು ನಿಜಾಮರು ರಸಾತಳಕ್ಕೆ ಅಟ್ಟಿದ ವಿನಹ ಮತ್ತು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸರಕಾರವನ್ನು ರಚಿಸುವ ವ್ಯವಸ್ಥೆ ಕೈಕೊಂಡ ವಿನಹ ಹಿಂದುಸ್ಥಾನ ಸರಕಾರಕ್ಕೆ ಪೂರ್ಣ ಸಮಾಧಾನವಾಗುವಂತಿಲ್ಲ. ನಿಜಾಮರು ಸಾಮ್ರಾಜ್ಯ ಕಟ್ಟುವ ಹೆಬ್ಬಾಸೆಯನ್ನು ಬಿಟ್ಟು ಈ ಸಾಧುಮಾರ್ಗವನ್ನು ಹಿಡಿಯುವರೆಂದು ಆಶಿಸಬಹುದೇ?

ವಾರ್ತೆಗಳು

— ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರು ಗವರ್ನರ ಜನರಲ್ಲರಾಗಿ ಹೋಗುವದರಿಂದ ತೆರವಾಗುವ ಪಶ್ಚಿಮ ಬಂಗಾಲದ ಗವರ್ನರರ ಸ್ಥಳಕ್ಕೆ ಭಾರತ ಸರಕಾರವು ಈಗ ಒರಿಸಾ ಪ್ರಾಂತದ ಗವರ್ನರರಾಗಿರುವ ಡಾ|| ಕೈಲಾಸನಾಥ ಕಾಟಜು ಇವರನ್ನು ನೇಮಿಸಿದೆ; ಮತ್ತು [illegible] ಈ ಹಿಂದೆ ಹಿಂದದ ರಾಯಭಾರಿಗಳಾಗಿದ್ದ [illegible] ಆಸಫ ಅಲ್ಲಿಯವರನ್ನು ಒರಿಸಾ ಪ್ರಾಂತದ ಗವರ್ನರರನ್ನಾಗಿ ನೇಮಿಸಿದೆ.

— ಸಂಯುಕ್ತ ರಾಷ್ಟ್ರಸಂಘದ ಆದೇಶಕ್ಕನುಸಾರವಾಗಿ ಮತ್ತು ಅದರ ಪ್ರತಿನಿಧಿಗಳಾಗಿ [illegible] ಪಾಲಿಸ್ತಾನಕ್ಕೆ ಬಂದಿರುವ (ಸ್ವೀಡನ್ನಿನ) [illegible] ಪ್ರಯತ್ನದಿಂದ ಪಾಲೆಸ್ತಾನ ಸಂಗ್ರಾಮವು [illegible] ೪ ವಾರಗಳ ಪರ್ಯಂತ ನಿಂತಿದೆ, ಮತ್ತು ಉಭಯ ಪಕ್ಷಗಳಲ್ಲಿ ಸಂಧಾನ ಮಾಡಿಸುವ ಬಗ್ಗೆ [illegible] ಉಭಯ ಪಕ್ಷಗಳ ಪ್ರತಿನಿಧಿಗಳ ಸಭೆ ಕೂಡುವ ಏರ್ಪಾಟು ನಡೆದಿದೆ

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೨೯ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡುಪಿ ಆಫೀಸು—

Post Box No. 10.

UDIPI, S. Kanara.

ದೆ. ಅದೇ ಮೇರೆಗೆ ಭಾರತದಿಂದ ಹೈದರಾಬಾದಕ್ಕೆ (ಹಾಗೂ ಪಾಕಿಸ್ತಾನಕ್ಕೆ) ಕಳ್ಳತನದಿಂದ ಶಸ್ತ್ರಾಸ್ತ್ರಾದಿಗಳನ್ನು ಕಳಿಸಿಕೊಡುವ ಹಿಂದೀ ಜನರಿಗೆ ದೇಹಾಂತ ಶಿಕ್ಷೆಯನ್ನು ವಿಧಿಸಬರುವಂತೆ ಒಂದು ರಾಜಶಾಸನವನ್ನು ಹೊರಡಿಸುವ ಸಂಕಲ್ಪವನ್ನೂ ಮಾಡಿರುತ್ತದೆಂದು ಸುದ್ದಿಯುಂಟು

ಹಿಂದುಸ್ಥಾನ ಸರಕಾರದ ಈ ಬಿಗಿತನವನ್ನು ನೋಡಿ ಕಾಶಿಮ ರಝವಿಯವರು ಯುದ್ಧದ ಮಾತು ಗಳನ್ನು ಆಡಹತ್ತಿದ್ದಾರೆ. ಹಿಂದುಸ್ಥಾನ ಸರಕಾರದ ಆಹ್ವಾನವನ್ನು ಸ್ವೀಕರಿಸಲಿಕ್ಕೆ ಹೈದರಾಬಾದದ ಮುಸಲ್ಮಾನರು ಸಿದ್ಧರಿದ್ದಾರಂತೆ! ಹೈದರಾಬಾದವು ಹಿಂದದಲ್ಲಿ ಸೇರ್ಪಡೆ ಹೊಂದುವದನ್ನು ಇತ್ತೆಹಾದುಲ್ ಮುಸಲ್ಮೀನ ಸಂಸ್ಥೆಯವರು ರಝಾಕಾರರರೂ ಸರ್ವಥಾ ಒಪ್ಪಲಿಕ್ಕಿಲ್ಲೆಂದು ಅವರು ತಿರುತಿರುಗಿ ಘೋಷಿಸುತ್ತಿದ್ದಾರೆ. ಸಮರವನ್ನು ಹೂಡಿ ದಿಲ್ಲಿಯ ಕೆಂಪು ಕೋಟೆಯ ಮೇಲೆ ನಿಜಾಮರ ಅಸಫಶಾಹಿ ಧ್ವಜವನ್ನು ಹಚ್ಚಬೇಕೆಂಬ ಹುಚ್ಚು ಕಲ್ಪನೆ ಕಾಶಿಮ ರಝವಿಯವರ ತಲೆಯಲ್ಲಿ ಬೇರೂರಿದೆ! ಹಿಂದೀ ಒಕ್ಕೂಟದ ಪ್ರದೇಶದಲ್ಲಿರುವ ೪॥ ಕೋಟಿ ಮುಸಲ್ಮಾನರ ಬಿಡುಗಡೆ ಮಾಡುವ ಹವ್ಯಾಸವನ್ನೂ ಅವರು ಹಿಡಿದಿದ್ದಾರೆ! ಕಾಶಿಮ ರಝವಿಯವರ ಈ ನಿರರ್ಗಲ ಪ್ರಲಾಪಗಳನ್ನು ನಿಲ್ಲಿಸುವ ಪ್ರಯತ್ನ ನಿಜಾಮರಿಂದ ಆಗಲೊಲ್ಲದು! ರಝಾಕಾರರ ಅತ್ಯಾಚಾರಗಳಿಗೆ ತಡೆಹಾಕುವ ಪ್ರಯತ್ನವನ್ನೂ ಅವರು ಮಾಡಲೊಲ್ಲರು! ನಿಜಾಮರೂ ಅವರ ಸರಕಾರವೂ ದುರ್ಬಲವಾಗಿರುವದರಿಂದ ಈ ಹಾಡಾಗಿರಬಹುದೆಂದು ಯಾರೂ ತಿಳಿಯಬಾರದು. ನಿಜಾಮರ ಸಂಪೂರ್ಣ ಸಹಕಾರದಿಂದಲೇ ಕಾಶಿಮ ರಝವಿಯವರ ಲೀಲೆಗಳು ನಡೆದಿವೆಯೆಂದೂ, ಆಗಾಗ ರಝವಿಯವರು ನಿಜಾಮರನ್ನು ಕಂಡು ಅವರ ಸಲಹೆ-ಸೂಚನೆಗಳನ್ನು ಪಡೆಯುತ್ತಾರೆಂದೂ ನಿಜಾಮ ಪ್ರಭುಗಳ ಅಂತಃಕರಣದ ಮರ್ಮ ಬಲ್ಲವರು ಹೇಳುತ್ತಾರೆ. ಆದರಿಂದ ಕಾಶಿಮ ರಝವಿಯವರು ನಿಜಾಮರ ಹಸ್ತಕರೆಂದೂ ನಿಜಾಮರ ಅಂತರ್ಯಾದ ವಿಚಾರಗಳ ಪ್ರಚಾರಕರೆಂದೂ ನಾನು ತಿಳಿಯುತ್ತೇನೆ. ದಿಲ್ಲಿಯ ಕೆಂಪು ಕೋಟೆಯ ಮೇಲೆ ಆಸಫ ಶಾಹಿ ನಿಶಾನೆಯನ್ನು ಹಚ್ಚುವ ಅಂದರೆ ಹಿಂದ ಭೂಮಿಯಲ್ಲೆಲ್ಲ ತಮ್ಮ ಸಾಮ್ರಾಜ್ಯ ಸ್ಥಾಪಿಸುವ ಹೆಬ್ಬಯಕೆಯನ್ನು ನಿಜಾಮರು ಹಿಡಿದಿರಬೇಕೆಂದೂ ಅವರ ಆ ಬಯಕೆಯನ್ನು ಕಾಶಿಮ ರಝವಿಯವರು ಮಾತಿನ ಭರದಲ್ಲಿ ಉಸುರಿರಬೇಕೆಂತಲೂ ನಾನು ಊಹಿಸುತ್ತೇನೆ.

ಕಾಶಿಮ ರಝವಿಯವರು ಪಾಣಿಪತ್ ಸಂಗ್ರಾಮದ ಪುನರಾವೃತ್ತಿಯಾಗುವದೆಂದು ಹಿಂದ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ! ಇದು ಬರೀ ಹುಚ್ಚನ ಬಡಬಡಿಕೆಯೆಂದು ನನಗನಿಸುವದಿಲ್ಲ. ಪಾಣಿಪತದಂತಹ ಘನ-ಘೋರ ಸಂಗ್ರಾಮ ಮಾಡುವ ಯೋಜನೆ ತನ್ನ ಕಿಸೆಯಲ್ಲಿ ತಯಾರಿಸಿಟ್ಟುಕೊಳ್ಳದೆ ರಝವಿಯವರು ಹಿಂದ-ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆಂದು ನನಗನಿಸುವದಿಲ್ಲ. ಹೈದರಾಬಾದದಲ್ಲೀಗ ನಿಜಾಮರ ಬಳಿ ೩೦೦೦೦ ಸೈನ್ಯವಿದೆ. ರಝಾಕಾರ ಸ್ವಯಂಸೈನಿಕರ ಸಂಖ್ಯೆ ಇತ್ತೀಚೆಗೆ ೨ ಲಕ್ಷಕ್ಕೆ ತಲ್ಪಿದೆಯೆಂದು ಸುದ್ದಿಯುಂಟು ಈ ಬಲದ ಸಹಾಯದಿಂದ ರಝವಿಯವರು ಸಂಸ್ಥಾನದ ನಾಲ್ಕೂ ಕಡೆಗೆ ಮಿಂಚಿನ ವೇಗದ ದಾಳಿಗಳನ್ನು ಮಾಡುವ ವ್ಯೂಹ ರಚಿಸಿದ್ದಾರೆಂದು ಒಂದು ಸುದ್ದಿಯುಂಟು ಇತ್ತ ಹಿಂದ-ಹೈದರಾಬಾದ ಹೋರಾಟಕ್ಕೆ ಪ್ರಾರಂಭವಾಗುತ್ತಲೇ ಅತ್ತ ಪಾಕಿಸ್ತಾನಿ ಸೇನೆಗಳು ದಿಲ್ಲಿಯ ಕಡೆ ಕೂಚು ಮಾಡಿ ಬರುವವಂತೆ! ಈಗಿನ ಯುದ್ಧಗಳಲ್ಲಿ ವಿಮಾನಗಳ ಬಲವೇ ಮುಖ್ಯವಾದದ್ದು ಅದನ್ನು ನಿಜಾಮರು ತಯಾರಿಸಿಟ್ಟ ವರ್ತಮಾನವಿದೆ. ನಿಜಾಮರ ಹಸ್ತಕರು ವಿಲಾಯತಿಯಲ್ಲಿ ನಿಜಾಮರ ಬಗ್ಗೆ ಯುದ್ಧೋಪಯೋಗಿ ವಿಮಾನಗಳ ಪಡೆಯನ್ನು ಸಿದ್ಧ ಮಾಡಿಟ್ಟಿರುವರೆಂದೂ, ನಿಜಾಮರ ಆಜ್ಞೆಯಾಗುತ್ತಲೆ ನುರಿತ ಬ್ರಿಟಿಶ ವೈಮಾನಿಕರು (ವಿಮಾನದಿಂದ ಬಾಂಬು ಗುಂಡುಗಳನ್ನು ಎಸೆಯುವ ಕಲೆಯಲ್ಲಿ ನಿಪುಣರಿದ್ದವರು) ಈ ವಿಮಾನಗಳನ್ನು ಹೈದರಾಬಾದಕ್ಕೆ ಸಾಗಿಸುವ ಏರ್ಪಾಟು ಮಾಡಲಾಗಿದೆಯೆಂದೂ "ಇಂಡಿಯನ್ ಪ್ರೆಸ್ ಏಸೋಸಿಯೇಶನ್" ಸುದ್ದಿ ಸಂಸ್ಥೆಯು ಸಾರುತ್ತಿದೆ. ಇದೆಲ್ಲ ಕಟ್ಟು ಕಥೆಯೆಂದು ಹೇಳಲಾಗದು. ಪಾಕಿಸ್ತಾನ ಸರಕಾರವು ನಿಜಾಮರ ಬೆಂಬಲಕ್ಕಿದ್ದ ಸಂಗತಿ ಜಗಜ್ಜಾಹೀರವಿದೆ. ಮೊನ್ನೆಯೇ ಪಾಕಿಸ್ತಾನದ ಸರ್ವಾಧಿಕಾರಿ ಕ್ವಾಯದೆ-ಆಝಮ ಜಿನ್ನಾರವರು ಹೈದರಾಬಾದದ ಸಂಬಂಧದಲ್ಲಿ ತಮ್ಮ ಹೃದ್ಗತವನ್ನು ಹೊರಗೆಡವಿದ್ದಾರೆ. ಹಿಂದುಸ್ಥಾನ ಒಕ್ಕೂಟದಲ್ಲಿ ಸೇರಲಿಕ್ಕೆ ಯಾ ಸೇರದೆ ಉಳಿಯಲಿಕ್ಕೆ ನಿಜಾಮರು ಸ್ವತಂತ್ರರಿದ್ದಾರೆಂದೂ, ಆ ಪ್ರಶ್ನೆಯನ್ನು ತೀರ್ಮಾನಿಸುವ ಅಧಿಕಾರ ಹೈದರಾಬಾದ ಸರಕಾರದ್ದು (ಕಾಶ್ಮೀರದಂತೆ ಪ್ರಜೆಗಳದಲ್ಲ!) ಇರುತ್ತದೆಂದೂ ಹಿಂದ-ಸರಕಾರವು ನಿಜಾಮರ ಮೇಲೆ ಯಾವದೇ ಬಗೆಯ ಒತ್ತಾಯ ನಡಿಸಲಾಗದೆಂದೂ ಬ॥ ಜಿನ್ನಾರವರ ಪ್ರತಿಪಾದನೆಯುಂಟು! ನಿಜಾಮರ ಶಿಷ್ಟರು ಶಿಷ್ಟಾಯಿಗಾಗಿ ದಿಲ್ಲಿಗೆ ಹೋದಾಗ, ಅಲ್ಲಿರುವ ಪಾಕಿಸ್ತಾನ ಪ್ರತಿನಿಧಿಗಳನ್ನು ಮೇಲಿಂದ ಮೇಲೆ ಕಾಣುತ್ತಿರುತ್ತಾರೆಂದು ವರದಿಯಾಗಿದೆ. ಈ ಭೆಟ್ಟಿಗಳು ಸಾಹಜಿಕವಾಗಲಾರವು ಆ ಪ್ರತಿನಿಧಿಗಳ ಮುಖಾಂತರ ಪಾಕಿಸ್ತಾನ-ಪ್ರಭುಗಳ ಸಲಹೆಗಳನ್ನು ಪಡೆಕೊಳ್ಳಲಿಕ್ಕೆ ಮತ್ತು ಅವರಿಗೆ ಶಿಷ್ಟಾಯಿಯ ವಿವರಗಳನ್ನು ತಿಳಿಸುತ್ತಿರಲಿಕ್ಕೆ ಈ ಭೆಟ್ಟಿಗಳಾಗುತ್ತಿವೆಯೆಂದು ಹೇಳಿದರೆ ತಪ್ಪಾಗುವಂತಿಲ್ಲ. ಬ್ರಿಟಿಶರೂ ನಿಜಾಮರ ಬೆಂಬಲಕ್ಕಿದ್ದಾರೆ. ಚರ್ಚಿಲ್ಲರ ಪ್ರಾಚೀನ ಮತವಾದಿ ಪಕ್ಷವು ಬಹಿರಂಗವಾಗಿ ನಿಜಾಮರ ಪಕ್ಷವನ್ನು ಎತ್ತಿ ಹಿಡಿಯುತ್ತಿದೆ ಮೊನ್ನೆ ಪಾಲಿಸ್ತಾನವನ್ನು ಬ್ರಿಟಿಶರವು ಮಾಡಿ ಹೊರಟು ಹೋದಮೇಲೆ ಯಹೂದಿಗಳ ವಿರುದ್ಧ ಅರಬೀ ರಾಷ್ಟ್ರಗಳು ಹೂಡಿದ ಯುದ್ಧದಲ್ಲಿ ಅನೇಕ ಬ್ರಿಟಿಶ ಅಧಿಕಾರಿಗಳು ಅರಬೀ ಸೇನೆಗಳ ನಾಯಕರಾಗಿ ಕೆಲಸ ಮಾಡಿದ್ದನ್ನು ನಾವು ಕೇಳಿದ್ದೇವೆ ಅದೇ ಮೇರೆಗೆ ನಿಜಾಮರಿಗೆ ಅವಶ್ಯವುಳ್ಳ ಲಷ್ಕರೀ ಅಧಿಕಾರಿಗಳನ್ನೂ ತಜ್ಞರನ್ನೂ ತಂತ್ರಜ್ಞರನ್ನೂ ಬ್ರಿಟನ್ನು ಪೂರೈಸಬಹುದು. ಕಾಶ್ಮೀರದ ಮೇಲಿನ ದಾಳಿಗಳಲ್ಲಿ ಪಾಕಿಸ್ತಾನಿ ದಾಳಿಗಾರರಿಗೆ-ಪಾಕಿಸ್ತಾನ ಸರಕಾರವೇ "ಆಝಾದ"-ಕಾಶ್ಮೀರ ಸರಕಾರ"ದ ಕೃತಕ ಹೆಸರಿನಲ್ಲಿ ಮತ್ತು ಗಡಿಯಾಚೆಯ ಗುಡ್ಡಗಾಡು ಪಠಾಣರ ಸಹಾಯದಿಂದ ಕಾಶ್ಮೀರವನ್ನು ಮಿಂಚಿನ ವೇಗದಿಂದ ಹಸ್ತಗತ ಮಾಡಿಕೊಳ್ಳುವ ವ್ಯೂಹ ರಚಿಸಿತ್ತೆಂದೂ, ಆ ಸರಕಾರವೇ ತನ್ನ ಜನ-ಧನಬಲ ಪೂರೈಸಿ ಆ ಹೋರಾಟವನ್ನು ಸಾಗಿಸಿದೆಯೆಂದೂ, ಪಾಕಿಸ್ತಾನ-ಪ್ರಭುಗಳ ಈ ಕುತಂತ್ರದಲ್ಲಿ ನಿರುಪಾಯವಾಗಿ ಭಾಗ ವಹಿಸಿದ ಮತ್ತು ಇತ್ತೀಚೆಗೆ ಅವರ ಕೈಯೊಳಗಿಂದ ಪಾರಾಗಿ ಹಿಂದುಸ್ಥಾನಕ್ಕೆ ಓಡಿಬಂದಿರುವ ಸುಪ್ರಸಿದ್ಧ ಪತ್ರಿಕಾ-ಪ್ರತಿನಿಧಿಗಳಾದ ಶ್ರೀ॥ ಜಿ. ಕೇ. ರೆಡ್ಡಿ ಇವರು ಮುಂಬಯಿಯ "ಬ್ಲಿಟ್ಝ್" ಪತ್ರಿಕೆಯಲ್ಲಿ ಸ್ಪಷ್ಟ ತೋರಿಸಿಕೊಟ್ಟಿದ್ದಾರೆ. ಆದರಿಂದ ಕಾಶ್ಮೀರದ ಮೇಲಿನ ದಾಳಿಗಾರರಿಗೆ ಪಾಕಿಸ್ತಾನಿ ದಾಳಿಗಾರರೆಂದು ನಾನು ಸಂಬೋಧಿಸಿದ್ದೇನೆ ಅನೇಕ ಬ್ರಿಟಿಶರು ಸಹಾಯ ಮಾಡುತ್ತಿದ್ದಂತೆ ನಿಜಾಮರಿಗೂ ಅವರು ಸಹಾಯವನ್ನಿತ್ತು ಸ್ವತಂತ್ರ ಹಿಂದುಸ್ಥಾನಕ್ಕೆ ಅಪಶಕುನ ಮಾಡಲು ಹೇಸುವಂತಿಲ್ಲ. ಹಿಂದುಸ್ಥಾನ ಸರಕಾರವು ಈ ಎಲ್ಲ ಪರಿಸ್ಥಿತಿಯನ್ನು ಆಲೋಚಿಸಿ ಮತ್ತು ಅದು ಪ್ರೈಮೇಲೆ ಬಂದರೆ ಅದಕ್ಕೆ ಇದಿರಾಗುವ ಪೂರ್ಣ ತಯಾರಿಯನ್ನು ಮಾಡಿ ಮುಂದಡಿಯಿಡಬೇಕಾಗಿದೆ.

ಆದರೂ ಭಾರತವು ಎದೆಗುಂದುವ ಕಾರಣವಿಲ್ಲ. ಸದ್ಯಕ್ಕೆ ಹಿಂದೀ ಒಕ್ಕೂಟದಲ್ಲಿರುವ ೪॥ ಕೋಟಿ ಮುಸಲ್ಮಾನರು ಕಾಶಿಮ ರಝವಿಯವರ ಅಪೇಕ್ಷೆಯಂತೆ ಹಿಂದುಸ್ಥಾನದ ದ್ರೋಹ ಬಗೆದು ಹೈದರಾಬಾದಕ್ಕಾಗಲಿ ಪಾಕಿಸ್ತಾನಕ್ಕಾಗಲಿ ಸಹಾಯ ಮಾಡ್ಯಾರೆಂದು ನಾನು ಭಾವಿಸಲಾರೆ! ಹಿಂದ-ವಿದ್ರೋಹಿ. ಪಾಕಿಸ್ತಾನ ಪಕ್ಷಪಾತಿಗಳು ಈ ಹಿಂದೆಯೇ ಹಿಂದ-ಭೂಮಿಯನ್ನು ಬಿಟ್ಟು ಪಾಕಿಸ್ತಾನಕ್ಕೆ ಇಲ್ಲವೆ ಹೈದರಾಬಾದಕ್ಕೆ ಓಡಿಹೋಗಿದ್ದಾರೆ. ಹಿಂದ-ಭೂಮಿಯ ಪ್ರೇಮವುಳ್ಳ ಜನರು ಮಾತ್ರ ಈಗ ಹಿಂದುಸ್ಥಾನದಲ್ಲಿದ್ದಾರೆ ಆದರೂ ಪಾಕಿಸ್ತಾನಕ್ಕೆ ಓಡಿಹೋದ ಲಕ್ಷಾವಧಿ ಮುಸಲ್ಮಾನರು ಅಲ್ಲಿಯ ಸುಖ-ಸೌಕರ್ಯಗಳಿಗೆ ಬೇಸತ್ತು ಹಿಂದುಸ್ಥಾನಕ್ಕೆ ಮರಳಿ ಬಂದು ಅಲ್ಲಿಯ ಯಥಾರ್ಥ ಪರಿಸ್ಥಿತಿಯನ್ನು ಇಲ್ಲಿಯ ತಮ್ಮ ಬಾಂಧವರಿಗೆ ತಿಳಿಸುತ್ತಿದ್ದಾರೆ. ಆ ಪರಿಸ್ಥಿತಿ ತಿಳಕೊಂಡ ಯಾವ ಮುಸಲ್ಮಾನನೂ ಈಗ ಪಾಕಿಸ್ತಾನದ ಅಭಿಮಾನ ಹಿಡಿಯುವಂತಿಲ್ಲ. ಪೋರ್ತುಗೀಸರು ನಿಜಾಮರಿಗೆ ನೆರವಾಗುವ ಪರಿಯೂ ಈಗ ಬಯಲಾಗಿದೆ ನಿಜಾಮರು ಮತ್ತು ಪೋರ್ತುಗಾಲ ಸರಕಾರ ಇವರ ನಡುವೆ ನಡೆದ ಗುಪ್ತ ಪತ್ರವ್ಯವಹಾರದ ಹಾಗೂ ಸಂಧಾನದ ಪರಿಸ್ಫೋಟವಾದ ಮೇಲೆ ಪೋರ್ತುಗಾಲ ಸರಕಾರವು ಆ ವಾಮ ಮಾರ್ಗವನ್ನು ಬಿಟ್ಟುಕೊಟ್ಟು ಗೋವೆಯ ಭವಿತವ್ಯದ ಸಂಬಂಧದಲ್ಲಿ ಭಾರತ ಸರಕಾರದೊಡನೆ ಮಾತುಕತೆ ನಡೆಸಲು ಮುಂದಾಗಿದೆ. ಫ್ರೆಂಚರ ಹೇಗೆ ತಮ್ಮ ಹಿಂದೀ ಪ್ರದೇಶಗಳನ್ನು, ಅಲ್ಲಿಯ ಜನರು ತಾವು ಹಿಂದುಸ್ಥಾನವನ್ನು ಸೇರಲು ಬಯಸುತ್ತೇವೆಂದು ಹೇಳಿದರೆ — ಈ ಬಗ್ಗೆ ಜನಮತ ತೆಗೆದುಕೊಳ್ಳುವ ಏರ್ಪಾಟು ಮಾಡಲಾಗುವದು — ಅವನ್ನು ಹಿಂದುಸ್ಥಾನಕ್ಕೆ ಬಿಟ್ಟುಕೊಡಲು ಒಪ್ಪಿರುವರೋ ಹಾಗೆಯೇ ಪೋರ್ತುಗೀಸರೂ ಜನಮತ ತೆಗೆಕೊಂಡು ಗೋವಾ, ದೀವ, ದಮನಗಳ ಭವಿತವ್ಯವನ್ನು ನಿರ್ಧರಿಸತಕ್ಕದ್ದೆಂದು ಭಾರತ ಸರಕಾರವು ಮಾಡಿದ ಸೂಚನೆಯನ್ನು ಪೋರ್ತುಗಾಲ ಸರಕಾರವು ಸ್ವೀಕರಿಸಲು ಸಿದ್ಧವಾಗಿದೆಯೆಂದು ಕೇಳಬಹುದು ವಿಲಾಯತಿಯಲ್ಲಿ ಹಿಂದುಸ್ಥಾನದ ಪ್ರತಿನಿಧಿಗಳಾದ ಶ್ರೀ ಕೃಷ್ಣ ಮೆನನ್ನರು ಬೇಗನೇ ಈ ಬಗ್ಗೆ ಮಾತುಕತೆಯಾಡಲು ಲಿಸ್ಬನ್ನಿಗೆ ಹೋಗುವವರಿದ್ದಾರೆ. ಸ್ವತಃ ಮಾತುಕತೆ ನಡಿಸಲು ಇದೇ ಫೆಬ್ರುವರಿಯ ಸುಮಾರಿಗೆ ಲಿಸ್ಬನ್ನಿಗೆ ಬರಬೇಕೆಂದು ಪೋರ್ತುಗಾಲದ ಅಧ್ಯಕ್ಷ ಸಾಲಾಝಾರರು ಪಂ॥ ಜವಾಹರಲಾಲರಿಗೂ ನಿಮಂತ್ರಣೆಯನ್ನು ಕೊಟ್ಟಿರುತ್ತಾರೆ ಇದರಿಂದ ನಿಜಾಮರು ಪೋರ್ತುಗೀಸರ ಸಹಾಯದ ಅಪೇಕ್ಷೆಯನ್ನು ಬಿಡಬೇಕಾಗಿದೆ ಪಾಕಿಸ್ತಾನವು ನಿಜಾಮರಿಗೆ ಸಹಾಯ ಮಾಡಲಿಕ್ಕೆ ಮುಂದಾಗಲಿಕ್ಕಿಲ್ಲೆಂದು ನಾನು ಹೇಳುವದಿಲ್ಲ. ಆದರೆ ಪಾಕಿಸ್ತಾನದ ಅಂತಃಸ್ಥಿತಿ ನೆಟ್ಟಗಿಲ್ಲದಿದ್ದಾಗ ಅದು ನಿಜಾಮರಿಗೆ ಎಂತಹ ಸಹಾಯ ಮಾಡಬಲ್ಲದು ಎಂಬುದೇ ಮುಖ್ಯ ಪ್ರಶ್ನೆ. ಪಾಕಿಸ್ತಾನ-ಪ್ರಭುಗಳು ತಮ್ಮ

ಜಿಲ್ಲಾ ಸಮಾಚಾರ.

ಸಿರಸಿ— (ತಾ. ೫-೬-೧೯೪೮) ಈ ಬಾರಿಯು ಮುಂಗಾರಿ ಭತ್ತವೆಲ್ಲ ಹಿಂದೆಯೇ ಬೆಳಗಾಂವ ಬದಿಗೆ ಹೋಗಿದೆ. ಈಗ ಹಿಂಗಾರಿ ಭತ್ತವೂ ಹೋಗಹತ್ತಿದೆ! ದಿನಾಲು ಮೋಟಾರ ಬಂಡಿಗಳೂ ಚಕ್ಕಡಿಗಳೂ ಭತ್ತ ಹೇರಿಕೊಂಡು ಹೋಗುತ್ತಿವೆ! ಆದರಿಂದ ಇಲ್ಲಿ ಮಳೆಗಾಲದಲ್ಲಿ ಆಹಾರದ ಪರಿಸ್ಥಿತಿ ಕಠಿಣವಾಗುವದೆಂದು ತೋರುತ್ತಿದೆ. ಚಿಮಣಿ ಎಣ್ಣೆಯಂತೂ ಈಗ ಸಿಗುವದು ತೀರ ಕಷ್ಟವಾಗಿದೆ! ಹಿಂದೆ ನಿಯಂತ್ರಣಗಳಿದ್ದಾಗ ನಿಯಂತ್ರಿತ ಸರಕುಗಳು ಬರಲಿಕ್ಕೆ ಇಲ್ಲವೆ ಅವನ್ನು ಹಂಚಲಿಕ್ಕೆ ತುಸು ವಿಳಂಬವಾದಲ್ಲಿ ಸರಕಾರಕ್ಕೆ ತಂತಿಗಳನ್ನೂ ಅರ್ಜಿಗಳನ್ನೂ ಕಳಿಸುತ್ತಿದ್ದ ವರ್ತಕರೇ ಈಗ ಅಕ್ಕಿಯನ್ನೂ ಚಿಮಣಿ ಎಣ್ಣೆಯನ್ನೂ ಇಮ್ಮಡಿ, ಮುಮ್ಮಡಿ ಬೆಲೆಗೆ ಮಾರುತ್ತಿದ್ದಾರೆ! ಕೆಂಪು (ಪ್ರಾಮ್) ದೊಡ್ಡಕ್ಕಿಯು ಈಗ ೧ ರೂಪಾಯಿಗೆ ೧½ ಸೇರು ಸಿಗುತ್ತಿದೆ! ಚಿಮಣಿ ಎಣ್ಣೆಯು ಕಳ್ಳ ಪೇಟೆಯಲ್ಲಿ ೧ ರೂಪಾಯಿಗೆ ೧ ಪ್ಯಾಂಟಿನಂತೆ ಮಾರಲ್ಪಡುತ್ತಿದೆ! ಚಿಮಣಿ ಎಣ್ಣೆಯ ಬೆಲೆಯ ನಿಯಂತ್ರಣ ಇನ್ನೂ ಇದೆ. ಹೀಗೆಂಬ ಮಾತು ಸ್ಥಾನಿಕ ಪೋಲೀಸರಿಗೆ ಗೊತ್ತಿಲ್ಲವೆಂಬಂತೆ ಕಾಣುತ್ತದೆ!

ಯಲ್ಲಾಪುರ— (ತಾ. ೭-೬-೪೮) ತಾ. ೧೭-೫-೪೮ರ "ವೃತ್ತ"ದಲ್ಲಿ ಜಿಲ್ಲಾ ಸಂಚಾರಿಯು ಯಲ್ಲಾಪುರ ತಾಲೂಕ ಕಚೇರಿಯೊಳಗಿನ ಶಿರಸ್ತೇದಾರ ರಾ॥ ಸರದಾರ ಇವರ ವಿರುದ್ಧ ಮಾಡಿದ ಟೀಕೆಯೂ ತೋರಿಸಿದ ಆಪಾದನೆಗಳೂ ಅವಾಸ್ತವವಿರುತ್ತವೆಂದು ಜಿಲ್ಲಾಧಿಪತಿಗಳು ತಿಳಿಸುತ್ತಾರೆ. ಮೇ ತಿಂಗಳಲ್ಲಿ ಕೂಪನ ಪದ್ಧತಿಯಿಂದ ಚಿಮಣಿ ಎಣ್ಣೆ ಹಂಚಬೇಕೆಂದು ನಿರ್ಧರಿಸಲಾಗಿತ್ತು. ತಾ. ೯ಕ್ಕೆ ಮುದ್ರಿತ ಕೂಪನುಗಳು ಬಂದು ತಲ್ಪಿದವು. ಅವನ್ನು ತುಂಬಿ ಕೊಡುವ ಕೆಲಸಕ್ಕೆ ಶಾನಭೋಗರನ್ನು ಹಚ್ಚಲಾಯಿತು. ಆಗ ಮಾಮಲೇದಾರರು ಹೊರಗೆ ಹೋಗಿದ್ದರು, ಕಚೇರಿಯಲ್ಲಿರಲಿಲ್ಲ. ಅವರು ಬರುವ ಪೂರ್ವದಲ್ಲೇ ಅಂದರೆ ತಾ. ೧೩ನೇ ಯಲ್ಲಾಪುರ ಶಹರದೊಳಗಿನ ಕೂಪನುಗಳ ಬಟವಡೆಯಾಗಿತ್ತು. ಈ ಕೂಪನುಗಳಲ್ಲಿ ಕೂಪನಧಾರಿಗೆ ಕೊಡತಕ್ಕ ಎಣ್ಣೆಯ ಪರಿಮಾಣವನ್ನು "ಯುನಿಟ"ಗಳಲ್ಲಿ ಕಾಣಿಸತಕ್ಕದ್ದಿತ್ತು. ಶಾನಭೋಗರು ತಪ್ಪಿನಿಂದ ಯುನಿಟ ಬರೆಯುವದರ ಬದಲು ಪ್ಯಾಂಟ ಎಂತಾ ಬರೆದಿದ್ದರು. ಆದರಿಂದ ಹಂಚಿಹೋದ ಕೂಪನುಗಳ ಧಾರಕರಿಗೆ, ಅವರಿಗೆ ನಿಜವಾಗಿ ಸಿಗಬೇಕಾದ ಎಣ್ಣೆಯ ಇಮ್ಮಡಿ ಎಣ್ಣೆ ಕೊಡುವ ಪ್ರಸಂಗ ಬಂತು. ತಾ. ೯ನೇ ಸಂಜೆಗೆ ಈ ತಪ್ಪು ಶಿರಸ್ತೇದಾರ ರಾ॥ ಸರದಾರರ ದೃಷ್ಟಿಗೆ ಬಂತು. ಆದರೆ ಆಗಿಂದಾಗ ತಪ್ಪು ಸುಧಾರಿಸಲು ಬರುವಂತಿದ್ದಿಲ್ಲ. ಅದರಿಂದ ಆದಾಗಲೇ ಹಂಚಿ ಹೋದ ಕೂಪನುಗಳಲ್ಲಿ ದುರುಸ್ತಿ ಮಾಡಬೇಕಾಗಿ ಬಂದುದರಿಂದ ಅವನ್ನು ತಾತ್ಪೂರ್ತಿಕವಾಗಿ ಮಾನ್ಯ ಮಾಡಬಾರದು ಎಂದಿಷ್ಟೇ ರಾ॥ ಸರದಾರರು ಎಣ್ಣೆಯ ಮಾರಾಟಗಾರರಿಗೆ ತಿಳಿಸಿದ್ದರು. ಇದರಲ್ಲಿ ಅಧಿಕಾರದ ದರ್ಪವಿದ್ದಿಲ್ಲ; ಶಕ್ತಿ ನಡೆಸುವ ಕಲ್ಪನೆಯೂ ಇದ್ದಿಲ್ಲ. ಕೂಡಲೇ ಕೂಪನುಗಳ ದುರುಸ್ತಿಯಾಗಿ ಎಣ್ಣೆಯ ಬಟವಡೆಗೆ ತಾ. ೧೧ರಿಂದಲೇ ಪ್ರಾರಂಭವಾದ್ದರಿಂದ ಯಾರೂ ಎಣ್ಣೆಯ ಬಗ್ಗೆ ಅಡಚಣೆ ಪಡುವ ಪ್ರಸಂಗ ಸಹ ಬರಲಿಲ್ಲ. ಇತ್ಯಾದಿ ಜಿಲ್ಲಾಧಿಪರ ಪತ್ರದಲ್ಲಿದೆ.

ಇದೇ ಕಳೆದ ತಾ. ೧೦ರಿಂದ ಆನಗೋಡ ಗ್ರಾಮದಲ್ಲಿ ೧ ಮತ್ತು ಬೀಸಗೋಡ ಗ್ರಾಮದಲ್ಲಿ ೧ ಹೀಗೆ ೨ ಹೊಸ ಗಾಂವಠಿ ಶಾಲೆಗಳು ಜಿಲ್ಲಾ ಲೋಕಲ್ ಬೋರ್ಡ ಸದಸ್ಯ ರಾ॥ ಗಣಪತಿ ಗಾಂವಕಾರ ಇವರ ಪ್ರಯತ್ನದಿಂದ ತೆರೆಯಲ್ಪಟ್ಟವೆ. ಮೊದಲನೇ ಶಾಲೆಯ ಉದ್ಘಾಟನೆ ಮಾಮಲೇದಾರ ಸಾಹೇಬರ ಹಸ್ತದಿಂದ ನೆರವೇರಿತು. ಶಾಲೆಯ ಬಡ ಹುಡುಗರಿಗೆ ಪುಸ್ತಕಗಳನ್ನು ಖರೀದಿಸುವದಕ್ಕಾಗಿ ಮಾಮಲೇದಾರರು ಬಾಲಕರಿಗೆ ರೂ. ೧೦ ಕೊಟ್ಟಿರುತ್ತಾರೆ. ೨ನೆಯ ಶಾಲೆಯ ಉದ್ಘಾಟನೆಯ ಸಮಾರಂಭದ ಅಧ್ಯಕ್ಷರು ರಾ॥ ಗಣಪಯ್ಯಾ ಕೃಷ್ಣಪ್ಪಾ ಇವರಾಗಿದ್ದರು. ಎರಡೂ ಶಾಲೆಯ ಬಡ ಹುಡುಗರಿಗೆ ರಾ॥ ಗಾಂವಕಾರರು ಪಾಟಿ-ಪುಸ್ತಕಗಳನ್ನು ಹಂಚಿದರು.

ಅಂಕೋಲಾ— (ತಾ. ೧-೬-೪೮) ತಾ. ೧೧-೫-೪೮ರ "ವೃತ್ತ"ದಲ್ಲಿ, ರಾ॥ ತ್ರ್ಯಂಬಕರಾವ ಅರಸ ಇವರ ವಿರುದ್ಧ ಅಂಕೋಲೆಯ ಗ್ರಾಮಸ್ಥರು ಮಾಡಿದ ದಿ. ೫-೪-೪೮ರ ಪ್ರಕರಣದ ಸಂಬಂಧದಲ್ಲಿ ಜಿಲ್ಲಾಧಿಪರು ಮಾಡಿದ ಕೆಲವು ಖುಲಾಸೆ ಪ್ರಕಟವಾಗಿರುತ್ತದಷ್ಟೇ. ಸದರಿ ಗ್ರಾಮಸ್ಥರ ವಿರುದ್ಧ ತಾವು ಮುಂದೊಡ್ಡಿದ ದೂರು "ವೃತ್ತ"ದಲ್ಲಿ ಪ್ರಕಟವಾಗಿದ್ದಿಲ್ಲವಾದ್ದರಿಂದ ಜಿಲ್ಲಾಧಿಪರು ಸದರಿ ಖುಲಾಸೆಯನ್ನು "ವೃತ್ತ"ಕ್ಕೆ ಕಳಿಸಿಕೊಡುವದು ಅವಶ್ಯವಿದ್ದಿಲ್ಲವಾಗಿ ರಾ॥ ಅರಸರು ಅನ್ನುತ್ತಾರೆ. ಮೇಲಾಗಿ ತಮ್ಮಂತೆಯೇ ತಮ್ಮ ಮನೆಗಳನ್ನು ಹೊರವರಿಗೆ ಬಾಡಿಗೆಗೆ ಕೊಟ್ಟ ಬೇರೆ ಕೆಲವು ಜನರೂ ಅಂಕೋಲಾ ಶಹರದಲ್ಲಿರುತ್ತಾರೆಂದೂ, ಅವರ ವಿರುದ್ಧ ಸದರಿ ಗ್ರಾಮಸ್ಥರು ಪ್ರಕರಣ ಮಾಡದೆ ತಮ್ಮ ವಿರುದ್ಧ ಮಾತ್ರ ಪ್ರಕರಣ ಮಾಡಿದುದರ ಮೇಲಿಂದ ಗ್ರಾಮಸ್ಥರು ಬರೇ ಕಕ್ಷ್ಯ-ಬುದ್ಧಿಯಿಂದ ಕೆಲಸ ಮಾಡಿರುತ್ತಾರೆಂದು ಸಾಧಿಸಲು ಬರಬಾರದೆಂದೂ ರಾ॥ ಅರಸರು ತಿಳಿಸುತ್ತಾರೆ. ರಾ॥ ಅರಸರು ತಮ್ಮ ಮನೆ ಮಾತ್ರವೇ ಬಾಡಿಗೆಗೆ ಕೊಟ್ಟಿಲ್ಲ, ಮನೆಯ ಹಿತ್ತಲ ಸಹಿತ ವನೆಯನ್ನು "ಗೇಣಿಗೆ" ಕೊಟ್ಟಿರುತ್ತಾರೆ. ಅವರ ಮನೆಯಲ್ಲಿ ಈಗ ಉಳಿದಿರುವವರು ಆ ಬಾಗಾಯತದಲ್ಲಿ ಬೇಸಾಯದ ಕೆಲಸ ಮಾಡುತ್ತಾರೆ. ಅದ್ದರಿಂದ ತಮ್ಮ ಮನೆಯು ಬಿನ್-ಶೇತಕಿ ಮನೆಯಾಗಲಾರದೆಂತಲೂ ರಾ॥ ಅರಸರ ಪ್ರತಿಪಾದನೆಯುಂಟು.

ಕಾರವಾರ— (ತಾ. ೨೯-೫-೪೮) ಸಣ್ಣ ಉಳಿತಾಯಗಳ ಯೋಜನೆಗನುಸಾರವಾಗಿ ನಾಡಿನಲ್ಲೆಲ್ಲ ರಾಷ್ಟ್ರೀಯ ಉಳಿತಾಯದ ಪತ್ರಗಳನ್ನು (N. S. Cs.) ಮಾರಾಟ ಮಾಡಲು ಸರಕಾರದವರು ಅಲ್ಲಲ್ಲಿ ಅಧಿಕೃತ ಪ್ರತಿನಿಧಿಗಳನ್ನು ನೇಮಿಸಿದ್ದರಷ್ಟೇ. ತಾ. ೧-೬-೧೯೪೮ರಿಂದ ಸರಕಾರವು ಈ ಅಧಿಕೃತ ಪ್ರತಿನಿಧಿಗಳ ನೇಮಣೂಕಿಯನ್ನು ರದ್ದುಗೊಳಿಸಿ, ಇನ್ನು ಮುಂದೆ ಈ ಉಳಿತಾಯದ ಪತ್ರಗಳ ಮಾರಾಟದ ಕಾರ್ಯವನ್ನು ಅಂಚೆಕಛೇರಿಯವರಿಗಷ್ಟೇ ಒಪ್ಪಿಸಿದೆ. ಆದರಿಂದ ಈಗ ಇರುವ ಅಧಿಕೃತ ಪ್ರತಿನಿಧಿಗಳು ತಮ್ಮ ಕಡೆಯಿರುವ ಎಲ್ಲ ಪತ್ರಗಳನ್ನೂ ಪತ್ರಗಳ ಪುಸ್ತಕಗಳನ್ನೂ ಅವುಗಳ ನೇಮಿಸಿದ ಅಧಿಕಾರಿಗಳಿಗೆ ಜೂನ ತಿಂಗಳ ಕೊನೆಯೊಳಗಾಗಿ ತಿರುಗಿ ಕೊಡಬೇಕೆಂದು ಸರಕಾರವು ಜಾಹೀರ ಮಾಡಿದೆ.

ಸಿದ್ದಾಪುರ— (ತಾ. ೭-೬-೪೮) ಈ ಇಲ್ಲಿಯಲ್ಲಿ ಜಿಲ್ಲಾ ಲೋಕಲ್ ಬೋರ್ಡಿನವರು ಸರಕಾರಿ ಧನಸಹಾಯದ ಸಹಾಯದಿಂದ ೩ ಕಡೆ ಇಂಗ್ಲಿಷ ವರ್ಗಗಳನ್ನು (ಮಾಧ್ಯಮಿಕ ಶಾಲೆಗಳನ್ನು) ನಡೆಸುತ್ತಿದ್ದಾರೆ. ಅವುಗಳಲ್ಲಿ ಒಂದು ಶಾಲೆ ಸಿದ್ದಾಪುರದಲ್ಲುಂಟು. ಈ ಶಾಲೆಯನ್ನು ತೆರೆದದ್ದು ೧೯೦೬ರಲ್ಲಿ. ೧೯೨೩ರ ವರೆಗೆ ಸರಕಾರವೇ ಅದನ್ನು ನಡೆಸಿ ಬಂದಿತ್ತು. ಆ ವರ್ಷ ಅದು ಲೋಕಲ್ ಬೋರ್ಡಿಗೆ ಒಪ್ಪಿಸಲ್ಪಟ್ಟಿತು. ಸರಕಾರದವರು ಈ ಶಾಲೆಗಾಗಿ ಪ್ರತಿ ವರುಷ ರೂ. ೬೦೦ ಬೋರ್ಡಿಗೆ ಕೊಡುತ್ತಾ ಬಂದಿರುತ್ತಾರೆ. ವಿದ್ಯಾರ್ಥಿಗಳಿಂದ ವಸೂಲ ಆಗುವ ಶುಲ್ಕ (ಫೀ) ದ ಉತ್ಪನ್ನ ಬೇರೆ ಉಂಟು. ಬೋರ್ಡಿನವರು ತಮ್ಮ ಬೊಕ್ಕಸದಿಂದ ವಿಶೇಷ ಹಣ ಈ ಶಾಲೆಗಾಗಿ ಖರ್ಚು ಮಾಡಬೇಕಾಗಿಲ್ಲ. ಆದರೂ "ಬರೇ ವಿದ್ಯಾರ್ಥಿ-ಶುಲ್ಕದ ಸಹಾಯದಿಂದ ಈ ಶಾಲೆ ನಡೆಸಲು ನಿಮ್ಮಿಂದ ಸಾಧ್ಯವಿದೆಯೋ ಹೇಗೆ?" ಎಂದು ಶಿಕ್ಷಕರಿಗೆ ಮೊನ್ನೆ ಬೋರ್ಡಿನವರು ಕೇಳಿರುತ್ತಾರಂತೆ! ಅದೇಕೋ ತಿಳಿಯದು. ತಾವು ಕೊಡುತ್ತಿದ್ದ ಧನಸಹಾಯ ಇನ್ನು ಮುಂದೆ ಕೊಡಲಾರೆವೆಂದು ಸರಕಾರದವರು ಬೋರ್ಡಿಗೆ ತಿಳಿಸಿದ್ದಾರೇನು? ಅದೇನಿದ್ದರೂ, ಶಿಕ್ಷಣದ ಅಭಿವೃದ್ಧಿ ಮಾಡಬೇಕೆಂಬ ಉತ್ಸಾಹದ ಮಾತುಗಳು ಈಗ ಎಲ್ಲೆಲ್ಲೂ ಕೇಳಬರುತ್ತಿರುವಾಗ, ಬಹಳ ವರ್ಷಗಳಿಂದ ನಡೆದು ಬಂದ ಶಾಲೆಗಳನ್ನೂ ವರ್ಗಗಳನ್ನೂ ಮುಚ್ಚುವ ಆಲೋಚನೆ ಯುಂಟಾದದ್ದು ಒಂದು ಸೋಜಿಗದ ಸಂಗತಿಯೇ ಸರಿ!

ಭಟಕಳ— (ತಾ. ೮-೬-೪೮) ಕಳೆದ ತಾ. ೫ಕ್ಕೆ ಅಬಕಾರಿಯವರು ಕೊಪ್ಪಯ್ಯಾ ಮಂಜಯ್ಯಾ ಎಂಬಾತನನ್ನು ಸರಾಯಿ ಮಾರುತ್ತಿದ್ದನೆಂಬ ಸಂಶಯದಿಂದ ಸೆರೆಹಿಡಿದಿದ್ದರು. ಕೂಡಲೇ ಇಬ್ಬರು ಕೊಪ್ಪಯ್ಯಾನಿಗೆ ಜಾಮೀನ ನಿಂತು ಅವನ ಬಿಡುಗಡೆ ಮಾಡಿಸಿದರು. ಅದೇ ಕೆಲಹೊತ್ತಿನ ಮೇಲೆ ಅಬಕಾರಿ ಇನ್ಸ್‌ಪೆಕ್ಟರರು ಕೊಪ್ಪಯ್ಯಾನಿಗೆ ತಿರುಗಿ "ಬಾ, ನಿನಗೆ ತಿಂಗಳ್ಗೇ ಕಳಿಸುತ್ತೇನೆ" ಎಂದು ಮುಂತಾಗಿ ಹೆದರಿಸಿ, ಅವನನ್ನು ತಿರುಗಿ ಬಂಧಿಸಿರುತ್ತಾರೆಂದು ತಿಳಿಯುತ್ತದೆ! ಒಮ್ಮೆ ಜಾಮೀನ ಮೇಲೆ ಬಿಟ್ಟ ಇಸಮನ್ನು ತಿರುಗಿ ಸೆರೆ ಹಿಡಿಯುವ ಅಧಿಕಾರ ಈ ಇನ್ಸ್‌ಪೆಕ್ಟರರಿಗೆ ಎಲ್ಲಿಂದ ಬಂತು ಎಂದು ಜನರು ಕೇಳುತ್ತಾರೆ. ಕೊಪ್ಪಯ್ಯಾನು ಕೂಡ ಇನ್ಸ್‌ಪೆಕ್ಟರರ ವಿರುದ್ಧ ಕಾನೂನು ಕ್ರಮ ಕೈಕೊಳ್ಳುವವನಿದ್ದಾನಂತೆ.

ಕೆಕ್ಕಾರ— (ತಾ. ೨೬-೫-೪೮) ಇಂದು ಇಲ್ಲಿಯ ಶ್ರೀ ಸಿದ್ಧಿವಿನಾಯಕ ವಿದ್ಯಾಲಯದ ಹಳೆಯ ವಿದ್ಯಾರ್ಥಿಗಳು ರಾ॥ ವ್ಹಿ. ಆರ್. ಭಟ್ಟ, ಎಮ್. ಎ., ಎಲ್. ಎಲ್. ಎಮ್., ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಒಂದು ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದವರು ಮುಂದಿನ ಸಭೆಯೊಳಗಾಗಿ ಒಂದು ನಿಧಿಯನ್ನು ಕೂಡಿಸಿ ಅದನ್ನು ವಿದ್ಯಾಲಯದ ಗುರುವರ್ಯ ರಾ॥ ಗಣೇಶ ಭಟ್ಟ ಇವರಿಗೆ ಅರ್ಪಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಸಿದ್ದಾಪುರ ತಾಲೂಕಿನ ಬೆಲ್ಲದ ಬೆಳೆಯ ಪ್ರಕಟನೆ.

ನಂ. ೧೯೦—೧೯೪೬ನೇ ಇಸವಿಯ ಮುಂಬಯಿಯ ಒಕ್ಕಲತನದ ಉತ್ಪನ್ನದ ನಿಯಮಾವಳಿಯ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಲೆಯೊಳಗೆ ಸಿದ್ದಾಪುರ ತಾಲೂಕಿನ ಮಾಮಲೇದಾರರು, ಈ ಕೆಳಗಿನ ಪರಿಶಿಷ್ಟದ ೧ನೇ ಸ್ತಂಭದಲ್ಲಿ ಕಾಣಿಸಿದ ಸ್ಥಾನಿಕ ಕ್ಷೇತ್ರದೊಳಗಿನ ನೀರಾವರಿಯಲ್ಲದ ತರಿ ಹಾಗೂ ಬಾಗಾಯತ ಭೂಮಿಗಳಲ್ಲಿ (ಕಬ್ಬು ಬೆಳೆಸಿದಲ್ಲಿ), ೧೯೪೭-೪೮ನೇ ಸಾಲಿನಲ್ಲಿ, ಪ್ರತಿ ಗುಂಟೆಗೆ (ಅದೇ ಪರಿಶಿಷ್ಟದ) ೨ನೇ ಸ್ತಂಭದಲ್ಲಿ ತೋರಿಸಿದಷ್ಟು ಸರಾಸರಿ ಬೆಲ್ಲದ ಉತ್ಪನ್ನ ಬಂದಿರುತ್ತದೆಂದು ಜಾಹೀರ ಮಾಡುತ್ತಾರೆ.

ಪರಿಶಿಷ್ಟ.

ಸ್ಥಾನಿಕ ಕ್ಷೇತ್ರ (೧)	ಪ್ರತಿ ಗುಂಟೆಗೆ ಸರಾಸರಿ ಬೆಲ್ಲದ ಉತ್ಪನ್ನ (೨೮ ರತ್ತಲಿನ ಮಣಗಳಲ್ಲಿ) (೨)
ಸಿದ್ದಾಪುರ ತಾಲೂಕಿನ ಎಲ್ಲ ಗ್ರಾಮಗಳು	೬ ಮಣ

ಸಿದ್ದಾಪುರ, ತಾ. ೭-೬-೧೯೪೮

P. V. Joshi,
ಮಾಮಲೇದಾರ, ಸಿದ್ದಾಪುರ.

ಹುರಿ-ಹಗ್ಗಗಳು ಬೇಕೇ?

ನಮ್ಮಲ್ಲಿ ಕಾಯರ ಹುರಿ ಮತ್ತು ಹಗ್ಗಗಳು ಯೋಗ್ಯ ದರದಲ್ಲಿ ಸಿಗುತ್ತವೆ. ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಪತ್ತೆ:— ದಿ. ಕೊಯ್ರ ಸ್ಪಿನ್ನಿಂಗ ಎಂಡ್ ವೀವಿಂಗ ಕೋ-ಒಪರೇಟಿವ್ ಸೊಸೈಟಿ, ಹೊನ್ನಾವರ. (ಉ. ಕ.)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

“ಕಾನಡಾ ವೃತ್ತ ದ” ವಿಶೇಷ ಸಂಚಿಕೆ.

ಬೆಲೆ ೪ ಆಣೆ.

THE KANARA NEWS, KUMTA, Reg. No. B. 1270.

ಕಾನಡಾವೃತ್ತ— ಶನಿವಾರ, ತಾರೀಖು ೧೯ ಮಾಹೆ ಜೂನ ಸನ್ ೧೯೪೮ನೇ ಇಸವಿ.

ಕನ್ನಡ ಮುಲ್ಕಿ ಪರೀಕ್ಷೆಯ ಪರಿಣಾಮ, ೧೯೪೮.

ಕಾರವಾರ ಕೇಂದ್ರ

೧೯೪೮ನೆಯ ಏಪ್ರಿಲ ತಿಂಗಳಲ್ಲಿ ಜರುಗಿದ ಮರಾಠಿ **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ಯಲ್ಲಿ** ತೇರ್ಗಡೆ ಹೊಂದಿದ ಉಮೇದವಾರರ ಯಾದಿಯು

ಸಾಸಾರ ವಿದ್ಯಾರ್ಥಿಯ ಹೆಸರು	ಪಡೆದ ಗುಣಗಳು
ಪರಶುರಾಮ ಗೋಪಾಲ ಫಳ	೩೩೩
ಕಮಲಾ ಮುಕುಂದ ನಾಯ್ಕ	೪೦೬
ಕಾಮಾಕ್ಷಿ ವಾಮನ ನಾಯ್ಕ	೬೨೦
ಕುಸುಮಾ ರಾಮಚಂದ್ರ ಕಾಮತ	೩೨೦
ಗಿರಿಜಾ ಅಡಗಿಂಡಾ ಪಾಟೀಲ	೬೬೭
ಮುಕ್ತಾಬಾಯಿ ನಾರಾಯಣ ಭಟ್ಟ	೪೧೩
ವಿಮಲಾಬಾಯಿ ಪದ್ಮನಾಭ ಮಹಾಲೆ	೩೩೮
ಹೀರಾಬಾಯಿ ವಿನಾಯಕ ಆರಸ	೩೬೨
ಅನಸೂಯಾ ವಿಠ್ಠಲ ಶೇಟ	೫೧೭
ಅನಸೂಯಾ ಬಾಲಚಂದ್ರ ಜೋಶಿ	೨೮೧
ಕಲಾವತಿ ಜಗನ್ನಾಥ ವೆರ್ಣೇಕರ	೨೯೬
ಕಮಲ ಶಂಕರ ಆಚಾರಿ	೩೪೩
ಶಾಂತಿ ಪುತ್ತು ಬಾಂದೇಕರ	೩೩೩
ಕುಮುದ ಬೊಮ್ಮಯ್ಯಾ ವೆರ್ಣೇಕರ	೩೩೪
ಕುಸುಮ ರಾಮಕೃಷ್ಣ ನಾಡಕರ್ಣಿ	೩೪೧
ಗೌರಿ ದತ್ತಾ ಬಾಂದೇಕರ	೩೩೨
ಚಂದ್ರಭಾಗಿ ಅನಂತ ಪೈ	೨೯೮
ಪ್ರೇಮಾ ಶಾಂತಾರಾಮ ಯರಂಡೇಕರ	೩೦೩
ಪ್ರೇಮಾ ಶಾಂತಯ್ಯಾ ಕುಮಟಾಕರ	೩೨೪
ಮಮತಾ ಸೋಮಾ ಬಾಂದೇಕರ	೨೭೮
ಮಿನಾಂಕ್ಷಿ ಬಾಳಿನಿ ಬ್ಯಾಕೋಡಿಕರ	೨೮೭
ಮೈನಾ ಮ್ಹಾಬಳಪ್ಪಾ ನಾಯ್ಕ	೩೩೧
ಮುಕ್ತಾಬಾಯಿ ವಾಮನ ಕುಲಕರ್ಣಿ	೩೭೫
ಭಾಗೀರಥಿ ವಿಷ್ಣು ಪೈ	೩೩೫
ಯಮುನಾ ಘರ್ಮ ಸಾವಂತ	೩೦೭
ರಮಾ ಅರ್ಜುನ ಕೆಲಗುಟಕರ	೩೦೪
ಲಲಿತಾ ಮುರಾರಿ ಪವಾರ	೩೩೭
ಲಲಿತಾ ವೆಂಕಟೇಶ ನಾಯ್ಕ	೩೨೮
ವತ್ಸಲಾ ಶ್ರೀಧರ ಶೇಟಿಯಾ	೨೮೦
ವಿಜಯಾ ಪಂಢರಿನಾಥ ಜಾಂಬಾವಲಿಕರ	೨೯೨
ವಿಜಯಾ ವಾಮನ ಫಲಾರ	೩೩೦
ವಿಮಲ ಲಕ್ಷ್ಮಣ ಮಹಾಲೆ	೩೭೫
ಸರೋಜನಿ ವಿಠ್ಠಲ ಕಾಕೊಡೆ	೨೮೭
ಸರೋಜನಿ ಮಂಗೇಶ ಕೇಶರಕರ	೩೧೭
ಸಿಂಧು ವಿಷ್ಣು ಕೇರ್ಕನೆ	೩೯೪
ಸುಮನ ಸಗುಣ ನಾಯ್ಕ	೩೧೦
ಸುಮತಿ ಸದಾನಂದ ನಾಯ್ಕ	೩೧೭
ಸುಶಿಲಾ ಶೇಷಗಿರಿ ಕುಡೇಕರ	೩೫೦
ಶಾಲಿನಿ ಪುಂಡಲೀಕ ಶಾನಭಾಗ	೩೬೬

(ಹಳೇ ನಿಯಮದಂತೆ)

೧೯೪೮ನೆಯ ಏಪ್ರಿಲ ತಿಂಗಳಲ್ಲಿ ಜರುಗಿದ **ಪ್ರಾಥಮಿಕ ಪ್ರಮಾಣಪತ್ರ ಪರೀಕ್ಷೆಯಲ್ಲಿ** ತೇರ್ಗಡೆ ಹೊಂದಿದ ಉಮೇದವಾರರ ಯಾದಿಯು.

ಅತ್ಮಾ ಶಿವಾ ಕಡವಾಡಕರ	೨೬೩
ಓಮು ದೇವು ಅಂಕೋಲೇಕರ	[illegible]
ಕುರಾಲಿ ಶಾಬಾ ಗುರವ	೨೬೩
ಕೇಶವ ನಾರಾಯಣ ಭಟ	೩೦೭
ಕೃಷ್ಣಾ ಫಕಾ ನಾಯ್ಕ	೨೦೬
ಗಣಪತಿ ಲಕ್ಷ್ಮಣ ನಾಯ್ಕ	೨೩೫
ಗಣಪತಿ ಲಕ್ಷ್ಮಣ ಆಚ್ಯಾರಿ	೨೫೫
ಗಣಪತಿ ಅರ್ಜುನ ಪಕ್ರೇಕರ	೨೬೬
ಗಣಪತಿ ತಿಮ್ಮಣ್ಣ ಮಿರಾಶಿ	೩೪೨
ಜಟ್ಟಿ ಬುದ್ದು ಹರಿಜನ	೨೬೧
ಜಗನ್ನಾಥ ಯಾನೆ ಗೋಪಿನಾಥ ಗೋವಿಂದ ಟಂಕಣಕೇರಿ	೨೬೯
ಡೋಂಗು ಭಿಕಾರ್‍ಯಾ ನಾಯ್ಕ	೨೩೯
ಧಾಕು ನಾರಾಯಣ ನಾಯ್ಕ	೨೧೬
ದುರ್ಗಪ್ಪಾ ನಾಗಪ್ಪಾ ಶೆಟ್ಟಿ	೨೬೯
ನಾಗೇಶ ಪೊಕ್ಕಾ ಮಡಿವಾಳ	೨೬೭
ಪಾರ್ವತಿ ರಾಮಕೃಷ್ಣ ನಾಯ್ಕ	೨೭೯
ಫರಾಸಿಸ್ ಜುಂವಾಂವ ರುದ್ರೂರಿಯೊ	೨೭೦
ಬೀರಣ್ಣಾ ರಾಮಾ ನಾಯ್ಕ	೨೪೮
ಬೊಮ್ಮಯ್ಯಾ ಗೋವಿಂದ ನಾಯ್ಕ	೨೭೩
ಮಹಾಬಲೇಶ್ವರ ಲಕ್ಷ್ಮಣ ನುಹಾಲಕ್ಷ್ಮೀಕರ	೨೪೬
ಮಾಧವ ಶ್ರೀನಿವಾಸ ಭಟ್ಟ	೨೬೩
ಮಂಜುನಾಥ ಗೋಪಾಲ ನಾಯ್ಕ	೩೪೪
ರಾಮಾ ನಾಗಣ್ಣಾ ನಾಯ್ಕ	೨೩೨
ರಾಮಚಂದ್ರ ಕೇಶು ನಾಯ್ಕ	೨೮೪
ಲಲಿತಾ ಶಿವು ನಾಯ್ಕ	೩೬೬
ವಿಠೋಬಾ ತಿಮ್ಮಣ್ಣ ನಾಯ್ಕ	೩೩೨
ವೆಂಕಟ್ರಾಯ ವಿಠ್ಠಲ ನಾಯ್ಕ	೩೩೫
ವೆಂಕಮ್ಮಾ ಕುಪ್ಪಯ್ಯ ನಾಯ್ಕ	೩೭೦
ವೆಂಕಟೇಶ ಮಂಜನಾಥ ಕಸಬೇಕರ	೩೦೭
ವೆಂಕಟ್ರಮಣ ಬೊಮ್ಮಯ್ಯ ನಾಯ್ಕ	೨೭೦
ಶಿವರಾಮ ಯೇಸು ಗೌಡಾ	೨೪೦
ಶಿವಾಜಿ ಪಿರು ಅಜಗಾಂವಕರ	೩೩೩
ಶಿವಾನಂದ ಚೂಡಾಮಣಿ	೨೩೬
ಶ್ರೀನಿವಾಸ ಗಣಪು ನಾಯ್ಕ	೬೬೪
ಸುಬ್ರಾಯ ಬೀರಣ್ಣ ನಾಯ್ಕ	೨೫೭
ಸುಶಿಲಾಬಾಯಿ ಶೇಷಗಿರಿ ಶೆಣ್ವೈ	೨೯೭
ಹರಿ ರಾಮ ನಾಯ್ಕ	೨೭೦
ಹರಿ ಕೃಷ್ಣ ದೇಸಾಯಿ	೨೫೧
ಹೊನ್ನಪ್ಪಾ ಬೊಮ್ಮಯ್ಯಾ ನಾಯ್ಕ	೨೮೯

೧೯೪೮ನೇಯ ಎಪ್ರಿಲ್ ತಿಂಗಳಲ್ಲಿ ಜರುಗಿದ ಕನ್ನಡ **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ಯಲ್ಲಿ** ತೇರ್ಗಡೆ ಹೊಂದಿದ ಉಮೇದವಾರರ ಯಾದಿಯು :—

ಅನಂತ ಗೋವಿಂದ ಪ್ರಭು	೪೦೬
ಅತ್ಮಾರಾಮ ಭಾಸ್ಕರ ಹಬ್ಬು	೩೩೩
ಉಮಾಬಾಯಿ ರಾಮಕೃಷ್ಣ ಕಾಮತ	೪೨೦
ಕಮಲಾಕರ ಮಾರಪ್ಪ ದೇಸಾಯಿ	೩೬೭
ಕೃಷ್ಣಾ ವೆಂಕಟೇಶ ಕುಮಾಲೇಕರ	೩೭೭
ಗಣಪತಿ ಬೊಮ್ಮಯ್ಯ ಶೇಟ ಪಾಲನಕರ	೩೭೬
ಗಣಪತಿ ಹನುಮಂತ ಶೆಟ್ಟಿ	೩೧೮
ದತ್ತಾತ್ರೇಯ ವಿಠ್ಠಲ ನಾಯ್ಕ	೩೨೨
ದಯಾನಂದ ಸುಬ್ಬಯ್ಯ ಗಾಂವಕರ	೩೩೧
ದಾಮೋದರ ಲಕ್ಷ್ಮಣ ನಾಯ್ಕ	೨೯೪
ದೇವು ಜಟ್ಟಿ ಹರಿಕಾಂತ	೩೩೮
ದೇವರಾಯ ಹೊನ್ನಯ್ಯ ನಾಯ್ಕ	೩೧೩
ಪಾಂಡು ಪಾಯ್ಕ ಕದಮ	೨೭೨
ಪಾಂಡುರಂಗ ವಿಠೋಬ ಗಾಂವಕಾರ	೨೯೭
ಪ್ರಭಾಕರ ನೀಲಕಂಠ ದೇಸಾಯಿ	೪೨೯
ಬಸ್ತ್ಯಾಂವ ಅಂತೋನ ಆಲ್ಮೇಡಾ	೨೯
ಬಸ್ತ್ಯಾಂವ ಜಾಕುಬ ಸಿಲ್ವಾ	೩೩
ಬಾಬಣಿ ಲಕ್ಷ್ಮಣ ನಾಯ್ಕ	೩೬
ಮಧುಸೂದನ ಮಂಜನಾಥ ದೇಸಾಯಿ	೬೪
ಮನೋಹರ ಬಾಬು ರಾಣೆ	೬೩
ರಾಮಾ ವಿಠೋಬ ನಾಯ್ಕ	೩೫
ರಾಮದಾಸ ಶಂಕರ ಆಚಾರಿ	೬೩
ರಾಯಪ್ಪಾ ವೈಕುಂಠ ಕಾಮತ	೩೩೨
ವಸಂತ ಮ್ಹಾಬಲ ನಾಯ್ಕ	೪೦೭
ವಿನಾಯಕ ಶೇಷಗಿರಿರಾವ ಕುಲಕರ್ಣಿ	೩೪
ವಿಠೋಬಾ ಬೊಮ್ಮ ದೇಸಾಯಿ	೩೦
ವಿಠೋಬಾ ಜೇವಪ್ಪ ಭಂಡಾರಿ	೩೦
ವಿಘ್ನೇಶ್ವರ ಲಕ್ಷ್ಮಣ ಶೆಟ್ಟಿ	೪೦೨
ವಿಶ್ವನಾಥ ಸದಾಶಿವ ರಾಣೆ	೩೪
ಸಾಮಲೊ ಓಬು ರಾಣೆ	೩೨
ಸಿಸ್ತಿನ ಸಂತಾನ ಸಿಲ್ವಾ	೨೯
ಸುಧಾಬಾಯಿ ಮಂಜನಾಥ ಪೈ	೩೩೭
ಸುರೇಶ ಯಶವಂತ ಪಿಂಗೇಕರ	೩೭೬
ಶಿವಾನಂದ ವಾಸುದೇವ ಶೇಟ ಅಣವೇಕರ	೨೬
ಶೇಖಸ್ಲ ಶೇಖ ಅಶೀಮ	೩೧೯
ಶ್ರೀಕಾಂತ ಶೇಷಗಿರಿ ಶೇಟ	೩೧
ಹೇಮನಾಥ ಫಕೀರ ನಾಯ್ಕ ರಾಣೆ	೪೩೩
ಅಬ್ದುಲಕಾದರ ಇಸ್ಮಾಯಿಲ ಮುಜಾವರ	೩೧೯
ದಾಮೋದರ ರಾಮಚಂದ್ರ ನಾಯ್ಕ	೩೨
ಪಾಂಡುರಂಗ ಕೃಷ್ಣ ನಾಯ್ಕ	೩೭
ಬಾಬುರಾವ ಭಿಕ್ಕು ರಾಣೆ	೪೦೭
ಮಹಾದೇವ ದೇವಪ್ಪ ನಾಯ್ಕ	೨೯
ಮಹಾಬಲೇಶ್ವರ ಫಾಕು ಮೇಸ್ತ್ರಿ	೩೪೩
ಯಾದು ಶಿವಾ ನಾಯ್ಕ	೪೪
ಲಕ್ಷ್ಮಣ ನೀಲಪ್ಪಾ ನಾಯ್ಕ	೨೫
ವಿಠ್ಠಲ ರಾಮಚಂದ್ರ ಭಟ್ಟ	೩೪೬
ವಿಶ್ವೇಶ್ವರ ವೆಂಕಟ್ರಮಣ ಭಟ್ಟ	೩೩೬
ಹೊನ್ನಪ್ಪಾ ರಾಮು ನಾಯ್ಕ	೩೪೬
ಕುಸುಮ ದತ್ತಾತ್ರಯ ಭಟ್ಟ	೨೮೮
ಪ್ರೇಮಾ ಗೋವಿಂದ ಕಾಮತ	೩೪೦
ರತ್ನಾವತಿ ರಾಮಚಂದ್ರ ಶೆಟ್ಟಿ	೩೩೬
ರಾಧಾಬಾಯಿ ಬಂಟು ಶೆಟ್ಟಿ	೩೧೬

೧೯೪೮ನೆಯ ಎಪ್ರಿಲ್ ತಿಂಗಳಲ್ಲಿ ಜರುಗಿದ ಒಕ್ಕಲ **ತನದ ಒಲವಿನ ಪ್ರಾಥಮಿಕ ಶಾಲಾ ಪ್ರಮಾಣಪತ್ರ** ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಉಮೇದವಾರರ ಯಾದಿಯು.—

ಹಳೇ ಪದ್ಧತಿಯಂತೆ.

ಆದಿರಾಜ ರಘುಪತ್ಯಪ್ಪಾ ರಿತ್ತಿ	೨೬೭
ಅನಂತ ಕೇಶವ ಆಚಾರಿ	೨೬೭
ಕೃಷ್ಣ ಗಣಪತಿ ಶೆಟ್ಟಿ	೨೬೪
ಗಣಪತಿ ಶಂಕರ ದೇಸಾಯಿ	೨೫೯
ದತ್ತಾ ಸೋಮಾ ನಾಯ್ಕ	೨೬೯
ದತ್ತಾತ್ರಯ ನಾರಾಯಣ ಶೆಟ್ಟಿ	೨೬೪
ದತ್ತಾತ್ರಯ ಶೇಷಗಿರಿ ಭಟ್ಟ	೨೯೭
ದಾನು ಬೀರಪ್ಪ ನಾಯ್ಕ	೩೦೭
ದಾಮೋದರ ಗೋಪಾಲ ಮಾಜಾಳಿಕರ	೨೯೭
ದೇವಣ್ಣ ದುಗ್ಗು ನಾಯ್ಕ	೩೦೧
ದುರ್ಗಾ ಲೋಕಪ್ಪ ಗುನಗಿ	೨೭೮
ನಾರಾಯಣ ಕಂತ್ರಿ ನಾಯ್ಕ	೨೯೩
ನಾರಾಯಣ ವಿಷ್ಣು ರೇವಣಕರ	೨೬೪
ಫಕೀರ ಸಣ್ಣಕರಿಯ ನಾಯ್ಕ	೩೧೯
ಭಾಸ್ಕರ ಓನಮ್ಮ ಶೆಟ್ಟಿ	೨೮೫

ಭೀಮಪ್ಪ ತ್ರ್ಯಂಬಕ ಪತ್ತಾರ	೨೮೨
ರಾಮರಾವ ಕೃಷ್ಣ ಭಟ್ಟ	೨೯೪
ರಾವೂ ಓಮು ಗುನಗಿ	೨೫೪
ವೆಂಕಟ್ರಮಣ ಏಕನಾಥ ಶೆಟ್ಟಿ	೩೫೧
ಸುಬ್ರಾಯ ಗೋವಿಂದ ಶೆಟ್ಟಿ	೨೪೧
ಸುಶಿಲಾ ಮುಕುಂದ ನಾಯ್ಕ	೨೯೬

ಹೊಸ ಪದ್ಧತಿಯಂತೆ

ಕಲ್ಯಾಣಿ ದತ್ತಾ ನಾಯಕ	೩೫೦
ಗಣಪತಿ ಅನಂತ ಹಬ್ಬು	೩೩೬
ಜುಜೆ ಫ್ರಾನ್ಸಿಸ ಫರ್ನಾಂಡಿಸ	೩೩೨
ದತ್ತಾರಾಮ ಲಕ್ಷ್ಮಣ ನಾಯ್ಕ	೩೪೬
ದತ್ತಾತ್ರೆಯ ವೆಂಕಟ್ರಮಣ ಶೇಟ	೨೭೮
ಪದ್ಮನಾಭ ವಾಸುದೇವ ಶೆಟ್ಟಿ	೩೦೪
ಭೈರವ ದಾಸ ನಾಯ್ಕ	೩೨೦
ರುದ್ರಗೌಡ ಗವಿಯಪ್ಪ ಗೌಡ ಪಾಟೀಲ	೩೩೪
ಶಿವಪ್ಪಾ ಜಡಿಯ ಅಗೇರ	೨೮೪

ಕುಮಟಾ ಕೇಂದ್ರ

ಪ್ರಾಥಮಿಕ ಪ್ರಮಾಣಪತ್ರ ಪರೀಕ್ಷೆಯ ಪರಿಣಾಮ. ೧೯೪೮

ಹೆಣ್ಣು ಮಕ್ಕಳ ಪುರವಣಿ ಪರೀಕ್ಷೆ

ಮಂಗಳಾ ಮಂಜನಾಥ	೩೫೫
ರತ್ನಾವತಿ ಶೇಷ ಹಂಡೇ	೩೧೩
ಸುಶೀಲಾ ಆನಂದಿ	೩೧೬

ಸಿರ್ಸಿ ಉಪ ಕೇಂದ್ರ

ಕಲ್ಯಾಣಿ ನಾರಾಯಣ ಶೇಟ	೩೨೩
ಮಾಸ್ತಿಮ್ಮಾ ಧರ್ಮು ಬೋರಕರ	೩೩೫
ಸುಶೀಲಾ ಸುಬ್ರಾವ ಗುಡವಿ	೩೨೩

ಉರ್ದು

ರಹಮತುಲ್ಲಾ ಅಬ್ದುರ್ ರಹಿಮಾನ ಭರತನಳ್ಳಿ	೨೭೩

ಕುಮಟಾ ಕೇಂದ್ರದ ಪರಿಣಾಮ ಇನ್ನೂ ನಮ್ಮ ಕೈಸೇರಿಲ್ಲ.

ಮುಂಜಾನೆ
೧೦-೩೦ ಘಂಟೆ,
ತಾ. ೧೯-೬-೪೮. } ಸಂಪಾದಕ.

ಶಿರ್ಸಿ ಉಪಕೇಂದ್ರ

ಕನ್ನಡ (ಹೊಸ ಅಭ್ಯಾಸ ಕ್ರಮ)

ಅ ಗ. ಪೈ	೩೯೬
ಅ. ರಾ. ಭಟ್ಟ	೩೯೪
ಚಿ ಚ. ಹಿರೇಮಠ	೩೬೫
ಗ. ಶಂ ಹೆಗಡೆ	೨೭೯
ಗ. ಗೋ. ಮಿರಾಶಿ	೪೩೭
ಚ. ಗ. ಲಕ್ಕಪ್ಪನ	೩೩೧
ಶಾ. ಶಿ. ಹೆಗಡೆ	೩೦೬
ಮಾ. ನಾ. ಬೆಟಗೇರಿ	೩೩೦
ಮ ಶ ಕಳವಾರ	೩೧೩
ಮೋ. ಬಾ. ಭಟ್ಟ	೩೦೫
ನಿಂ. ಗ. ಅರ್ಕಸಾಲಿ	೩೯೨
ಸಿ. ರಾ. ಪಾಟೀಲ	೩೫೭
ಶ್ರೀ. ರಾ. ಘೋಂಗಡೇಕರ	೩೦೩
ಭು. ಅ. ಪೈ	೪೩೦
ದಿ. ಪ. ಮುಂಗರಸಿ	೨೭೯
ಹೇ. ರಾ. ಕಲಾಲ	೩೧೦
ಕೃ. ವೆಂ. ಹೆಗಡೆ	೩೫೨
ಮೋ. ಗು. ಶೆಟ್ಟಿ ರಾಯಕರ	೩೪೫
ನಾ. ನಾ ನಾಯಕ	೪೧೯
ವೆಂ. ಸ. ಮುರ್ಡೇಶ್ವರ	೨೮೩
ಅನಪೂರ್ಣಾ ಖಟಾಂವಕರ	೩೨೯
ದುರ್ಗಾಬಾಯಿ ಸಂಶಿಕರ	೨೭೨
ಸುನಂದಾ ಪೈಜಪ್ಪನ	೩೫೧

೨ನೇ ಪುರವಣಿ

ಬೀ. ಶಿ. ಪಾಲೇಕರ	೨೪೬
ಭಿ ತ್ರಿ. ವರ್ಸ್ನೇಡಿ	೨೮೮
ಪ್ರಾ. ಪು. ಕುರಾಯಿ	೨೯೩
ಗ ಸ. ಭಟ್ಟ	೨೪೪
ಗ. ಧಾ. ಅಂಕೋಲೇಕರ	೨೬೭
ಜು. ಅಂ. ದಾಲವಡಾಂಡೇ	೨೭೦
ಕ. ಶಿ. ಶಿರೂರ	೫೨೨
ಕೃ. ರಾ. ಪೈ	೨೫೨
ಲ. ಗೋ. ಪೈ	೨೪೬
ಮಿಂ. ಸ. ಡಿಸೋಜಾ	೨೬೪
ನೋ. ಮ. ಗಾಂವಕರ	೨೭೧
ನ. ತಿ. ಭಟ್ಟ	೨೯೪
ನಾ. ಘೊಂ. ಚುಡೆ	೨೮೦
ನಾ. ಬೀ. ನೇತ್ರಗಾರ	೨೩೩
ಸು. ಗೋ. ಭಟ್ಟ	೨೯೩
ಸು. ಅ. ಭಟ್ಟ	೨೮೦
ಸ್ಕಿ. ಉ. ಖಾಜ	೨೭೮

ಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

"ಕಾನಡಾ ವೃತ್ತ" ದ ವಿಶೇಷ ಸಂಚಿಕೆ. ಬೆಲೆ ೪ ಆಣೆ.

THE KANARA NEWS, KUMTA, Reg. No. B. 1270

ಕಾನಡಾವೃತ್ತ— ಬುಧವಾರ, ತಾರೀಖು ೨೩ ಮಾಹೆ ಜೂನ ಸನ್ ೧೯೪೮ನೇ ಇಸವಿ.

ಕನ್ನಡ ಮುಲ್ಕಿ ಪರೀಕ್ಷೆಯ ಪರಿಣಾಮ, ೧೯೪೮.

ಕುಮಟಾ ಕೇಂದ್ರ

ಹೊಸ ಅಭ್ಯಾಸಕ್ರಮ

ಪಾಸಾದ ವಿದ್ಯಾರ್ಥಿಯ ಹೆಸರು	ಪಡೆದ ಗುಣಗಳು
ಅನಂತ ದುರ್ಗಾ ಶಿರಾಲಿಕರ	೩೧೭
ಅಬ್ದುಲ ರಹೆಮಾನ ನಸ್ಸೇಸಾಬ	೩೩೯
ಅಬ್ದುಲ ರಹೂಫ ಶೇಖ ಹಸನಸಾಬ	೪೧೧
ಏಕನಾಥ ನಾರಾಯಣ ಮಡಿವಾಳ	೩೫೪
ಚಿದಂಬರ ವೆಂಕಪ್ಪ ಹೆಗಡೆ	೪೩೨
ದಯಾನಂದ ಅಚ್ಯುತ ಶಾನಭಾಗ	೩೯೯
ಗಣಪತಿ ನರಸಿಂಹ ಭಟ್ಟ	೩೮೦
ಗಣಪಯ್ಯ ಭಗವಂತ ಶಾನಭಾಗ	೩೫೩
ಗೋವಿಂದ ಬಬ್ಬು ನಾಯಕ	೩೮೭
ಗೋಪಾಲಕೃಷ್ಣ ಗಣೇಶ ಹೆಗಡೆ	೩೭೧
ಗೋಪಾಲಕೃಷ್ಣ ವೆಂಕಟರಮಣ ನಾಯಕ	೩೦೭
ಕೃಷ್ಣ ಬಬ್ಬು ನಾಯಕ	೪೨೫
ಲಕ್ಷ್ಮಣ ಹರಿ ಪ್ರಭು	೩೫೬
ಲಕ್ಷ್ಮಣ ತಾಕು ನಾಯಕ	೩೦೧
ಮಹಾಬಲೇಶ್ವರ ನರಸಿಂಹ ಉಪಾಧ್ಯ	೩೪೯
ನರಸಿಂಹ ವೆಂಕಟರಮಣ ಪೈ	೨೭೭
ನಾರಾಯಣ ಮಂಜಯ್ಯಾ ನಾಯಕ	೩೭೬
ನಾರಾಯಣ ನಾಗಪ್ಪಾ ರಾಯಕರ	೩೬೭
ನಾರಾಯಣ ಗಣಪಯ್ಯ ಶೆಟ್ಟಿ	೩೨೦
ನಾರಾಯಣ ಲಕ್ಷ್ಮಣ ನಾಯಕ	೨೮೧
ಪರಮೇಶ್ವರ ಆನಂದ ಭಟ್ಟ	೩೮೨
ಪರಮೇಶ್ವರ ರಾಮಚಂದ್ರ ಶಾನಭಾಗ	೫೧೦
ಪ್ರಭಾಕರ ಗಣಪತಿ ಭಟ್ಟ	೩೩೦
ಪುಂಡಲೀಕ ಮುಕುಂದ ಕಾಮತ	೩೩೭
ರಾಮ ಪರಮೇಶ್ವರ ನಾಯಕ	೩೩೦
ರಾಮದಾಸ ವೈಕುಂಠ ದೇಸಾಯಿ	೩೩೮
ರಾಮ ನಾರಾಯಣ ಶಾನಭಾಗ	೪೭೮
ರಾಮ ಜನಾರ್ದನ ಹೆಗಡೆ	೩೪೨
ರಾಮದಾಸ ಮಲ್ಲಗಿರಿ ಶಾನಭಾಗ	೩೦೦
ಸತ್ಯನಾರಾಯಣ ಗೋಪಿನಾಥ ಹೆಗಡೆ	೩೧೩
ಸೀತಾರಾಮ ವೆಂಕಟರಮಣ ದೀಕ್ಷಿತ	೩೪೧
ಸೀತಾರಾಮ ಕೃಷ್ಣ ಹೆಗಡೆ	೩೦೬
ಸುಬ್ರಾಯ ತಿಮ್ಮಣ್ಣ ಶೀರನಮಕ್ಕಿ	೩೮೩
ಶಂಕರ ಗಣಪಯ್ಯ ಬಲ್ಸೆ	೨೮೮
ಶಿವು ಪರಮೇಶ್ವರ ಹರಿಕಾಂತ್ರ	೩೦೧
ಶೇಷಗಿರಿ ಅಣ್ಣಪ್ಪ ನಾಯಕ	೩೦೯
ಶೇಕ ಮಹಮ್ಮದ ಶೇಕ ಇಸ್ಮಾಯಿಲ ಸಾಬ	೨೮೦
ವೆಂಕಟೇಶ ಶ್ರೀನಿವಾಸ ಶಾನಭಾಗ	೩೭೭
ವೆಂಕಟೇಶ ಶೇಷಗಿರಿ ಪೈ	೩೨೪
ತಿಮ್ಮಣ್ಣ ಕೃಷ್ಣ ಪಂಡಿತ	೨೮೮
ತಮ್ಮಣ್ಣ ತಿಮ್ಮಣ್ಣ ಹೆಗಡೆ	೪೧೨
ಭಾಗೀರಥಿ ಗೋಪಾಲ ಹೆಗಡೆ	೨೮೭
ಶಿವರಾಮ ನಾರಾಯಣ ಶೆಟ್ಟಿ	೩೫೨
ದತ್ತಾತ್ರಯ ಕೇಶವ ಸಣ್ಣ ಭಡತಿ	೪೯೭
ದಾಮೋದರ ಯಶವಂತ ಶೇಟ	೩೧೩
ಹರಿಹರ ಗಣಪತಿ ಭಟ್ಟ ಕೊಡ್ಲೆಕೆರೆ	೩೨೪
ಜೈರಾಮ ಗಣಪಿ	೨೯೪
ನಾರಾಯಣ ಗಣೇಶ ಭಟ್ಟ ಕೊಡ್ಲೆಕೆರೆ	೨೮೬
ರತ್ನಾಕರ ಸುಬ್ರಾಯ ನಾಡಕರ್ಣಿ	೩೫೮
ಶಾಂಬಾ ವೆಂಕಟ್ರಮಣ ಭಟ್ಟ ರವಣೆ	೩೬೯
ಸುಬ್ರಾಯ ನಾರಾಯಣ ಶಾಸ್ತ್ರಿ ಭಡತಿ	೩೧೯
ಶಾಂತಾರಾಮ ಹೊನ್ನಪ್ಪ ಶೆಟ್ಟಿ	೩೮೫
ವೆಂಕಟೇಶ ಬೀರಪ್ಪಾ ನಾಯಕ	೩೦೪
ಅನಸೂಯಾ ಗಣಪತಿ ಪಂಡಿತ	೨೭೫
ಭವಾನಿಬಾಯಿ ಗಣಪತಿ ಶೆಟ್ಟಿ	೩೨೧
ಕಾವೇರಿ ಗಣಪತಿ ಮಡಿವಾಳ	೨೮೫
ಮೋಹಿನಿ ವೈಕುಂಠ ಪ್ರಭು	೩೧೪
ಪರಮೇಶ್ವರ ಅನಂತ ಹೆಗಡೆ	೩೭೩
ಪಾರ್ವತಿ ನಾರಾಯಣ ರಾವ	೩೧೨
ಸುಮಿತ್ರಾ ನಾರಾಯಣ ತಾಂಡೇಲ	೨೭೮

ಪುರವಣಿ ಪರೀಕ್ಷೆ, ೧೯೪೮.

ವೆಂಕಪ್ಪಾ ಸುಬ್ರಾಯ ಚಮಗಾರ	೩೦೫
ವೆಂಕಟರಮಣ ಬೀರಣ್ಣಾ ನಾಯಕ ಗಾಂಮನೆ	೨೭೫
ಬೀರಪ್ಪಾ ಗೌರಪ್ಪಾ ನಾಯಕ	೨೪೭
ಭೈರಾ ಗೋವಿಂದ ನಾಯಕ	೨೭೦
ದತ್ತಾತ್ರಯ ವಿಠ್ಠಲ ಶೆಟ್ಟಿ	೨೯೫
ದತ್ತಾತ್ರಯ ಪುಂಡಲೀಕ ಶೇಟ	೨೭೭
ದತ್ತಾತ್ರಯ ತಿಮ್ಮಣ್ಣಾ ಭಟ್ಟ ಕಟ್ಟೆ	೨೩೬
ದಿವಾಕರ ಮಂಜಪ್ಪಾ ಹೆಗಡೆ	೩೨೬
ಗಣಪತಿ ರಾಮಚಂದ್ರ ಶಾನಭಾಗ	೩೨೨
ಗಣಪತಿ ಉದ್ದಂಡ ನಾಯಕ	೩೦೦
ಹೇಮಯ್ಯ ನರಸಿಂಹ ನಾಯಕ	೨೯೩
ಹೇಮಯ್ಯ ಪರಮೇಶ್ವರ ನಾಯಕ	೩೦೩
ಲಿಯಾಂವ ದುಮಿಂಗ ಡೊತ್ರಿಸ್	೨೭೩
ಮಹಮ್ಮದ ಇಲಿಯಾಸ ಯುಸಫಸಾಬ ಮುಲ್ಲಾ	೨೭೬
ಮಹಾಬಲೇಶ್ವರ ಗಣಪಾ ಭಟ್ಟ	೨೩೯
ಮಂಜನಾಥ ಗಣಪಾ ಯಾಜಿ	೪೨೩
ಮಂಜಾ ಸೋಮು ಚಮಗಾರ	೨೭೪
ಮಂಜಯ್ಯಾ ನಾಗಪ್ಪಾ ಹೆಗಡೆ	೨೬೫
ಮಹಾಬಲೇಶ್ವರ ಗೋಪಾಲ ಶಾಸ್ತ್ರಿ	೨೬೨
ಮಂಜನಾಥ ಅಣ್ಣಪ್ಪಾ ನಾಯಕ	೨೪೨
ನರಸಿಂಹ ಗಜಾನನ ಭಟ್ಟ ಗುಣೆ	೨೪೯
ನರಸಿಂಹ ಸೀತಾರಾಮ ವಿಳೆ	೨೭೭
ನಾಗೇಶ ಶಿವಪ್ಪ ನಾಯಕ	೨೮೪
ನಾಗಪ್ಪಾ ಮುಕುಂದ ನಾಯಕ	೨೩೫
ನಾರಾಯಣ ಗಣೇಶ ಭಟ್ಟ	೨೩೮
ನಾರಾಯಣ ಶಂಕರ ಭಟ್ಟ	೨೯೪
ನಾರಾಯಣ ವೆಂಕಣ್ಣ ನಾಯಕ ಗಾಂವಕಾರ	೨೭೦
ನಾರಾಯಣ ಕೃಷ್ಣ ಅಂಗಡಿ	೩೬೯
ನಾರಾಯಣ ನಾಗಪ್ಪ ಹಿಣಿ	೩೭೪
ಪ್ರಭಾಕರ ಗಣಪತಿ ಮಾಬನಗೇರಕರ	೩೭೬
ರಾಮನಾಥ ಮಂಜನಾಥ ನಾಯಕ	೨೯೨
ರಾಮನಾಥ ವಿಷ್ಣು ನಾಯಕ	೨೫೩
ರಾಮಚಂದ್ರ ಗುಲಾಬಿ	೩೦೭
ರಾಮಕೃಷ್ಣ ಪರಮೇಶ್ವರ ಪಂಡಿತ	೨೪೩
ರಾಜಾರಾಮ ಶ್ರೀನಿವಾಸ ಪೈ	೨೯೮
ರಾಮಾ ಜಟ್ಟಿ ಪಟಗಾರ	೨೪೦
ರಾಮದಾಸ ಶಿವರಾಮ ಕರ್ನಾಡ	೨೫೫
ಸಂಜೀವ ಜಾನ ಕೈರಾನ	೨೫೨
ಸಂತ್ಯಾಗ ಜುವಾವ ಉದ್ರಿಗ	೨೪೮
ಶಿವರಾಮ ಮಂಜನಾಥ ಹೆಗಡೆ	೨೮೨
ಶಿವರಾಮ ನಾರಾಯಣ ಭಟ್ಟ	೨೬೯
ಶಿವಾ ರಾಮಾ ಹೆಗಡೆ	೨೫೫
ಶ್ರೀಪಾದ ಗಣಪತಿ ಭಟ್ಟ	೩೪೪
ಶಿವರಾಮ ತಿಮ್ಮಣ್ಣಾ ಹೆಗಡೆ	೩೩೩
ಸೀತಾರಾಮ ಗೋವಿಂದ ಶೆಟ್ಟಿ	೨೭೩
ಸುಬ್ರಾಯ ನಾರಾಯಣ ಭಟ್ಟ	೨೫೯
ಸೂರ್ಯನಾರಾಯಣ ನಾರಾಯಣ ಹೆಗಡೆ	೨೮೩
ಶೇಕ ಯಾಕೂಬ ಅಬ್ದುಲಗಫಾರ	೨೪೩
ತಿಮ್ಮಣ್ಣಾ ಹೊನ್ನಯ್ಯಾ ಕೊರ್ಕೆ	೨೭೫
ತಿಮ್ಮಣ್ಣಾ ರಾಮ ನಾಯಕ	೨೯೨
ವಸಂತ ಕೃಷ್ಣ ನಾಯಕ	೨೬೩
ವಾಮನ ಗಣಪಯ್ಯ ನಾಯಕ	೨೩೬
ಹೊನ್ನಮ್ಮ ಶಾಂತು ನಾಯಕ	೩೨೩
ಭವಾನಿ ಅಣ್ಣಪ್ಪಾ ಶೆಟ್ಟಿ	೨೬೧
ರಮಾಬಾಯಿ ಪಾರ್ವತಿ ಹೊಸಡೇಕರ	೩೬೯
ರಾಧಾಬಾಯಿ ನಾರಾಯಣ ನಾಯಕ	೨೫೯
ಸರಸ್ವತಿ ಬಾಬುರಾವ ಉಪ್ರೇಕರ	೨೮೧
ಉಮಾಬಾಯಿ ವೆಂಕಟರಮಣ ನಾಯಕ	೩೦೧
ವಿಮಲ ಸದಾಶಿವ ಕೂಷ್ಟಿಕರ	೨೭೧
ಕೃಷ್ಣಾ ಮಂಜನಾಥ ಕುಮುಟಾ	೨೩೧

ಮರಾಠಿ

ಹೊಸ ಅಭ್ಯಾಸಕ್ರಮ.

ಯಮುನಾ ಲಕ್ಷ್ಮಣ ನಾಯ್ಕ	೩೪೫
ಕಮಲಾ ನಾಗಪ್ಪಾ ಬಾಳಗಿ	೩೯೧
ರಮಾ ಮಂಜಯ್ಯಾ ನಾಯ್ಕ	೩೬೨
ಪಂಢರಿ ವಿಠೋಬಾ ಶಾನಭಾಗ	೩೭೭
ಅಹಲ್ಯಾ ಗಣೇಶ ವಾಗಿ	೨೮೬
ಪ್ರೇಮಾ ಗೋವಿಂದ ವ್ಯಾಸಭಾಗ	೩೭೭
ಉಮಾ ಮುಕುಂದ ಪೈ	೩೭೨
ಪುತಳಿ ಗೋವಿಂದ ಭಟ್ಟ	೩೩೩

—※—

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ಜಾಹೀರಾತುಗಳ ದರ:-
ಸ್ಥಳವಿಲ್ಲಾ ಕಾ ೧೪ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

Reg. No. B. 1270. Monday, 23-6-1948.

ಕಾನಡಾವೃತ್ತ

ವರ್ಷ ೪೦.] THE KANARA NEWS. [ಸಂಚಿಕೆ ೫೨

ಕುಮಟಾ:- ಸೋಮವಾರ, ತಾ. ೨೩—೬—೧೯೪೮

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಪಡೆಯುವವರು
ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡವಾಗಿ ಸಲ್ಲತಕ್ಕದ್ದು.

ಸ್ಥಳೀಕ ವಿಷಯಗಳು.

(ಲೇಖಕ:- ಸ್ಥಾನಿಕ)

ಹಿಂದುಸ್ಥಾನ ಸರಕಾರದವರು ನೇಮಿಸಿದ ಬಂದರ ಸಮಿತಿಯ ವರದಿ ಇನ್ನೊಂದು ತಿಂಗಳಲ್ಲಿ ತಯಾರಾಗುವದಾಗಿ ಸುದ್ದಿಯುಂಟು. ಸಮಿತಿಯು ನಮ್ಮ ಜಿಲ್ಹೆಯ ಕಾರವಾರ ಬಂದರವನ್ನಾಗಲಿ ಭಟ್ಕಳ ಬಂದರವನ್ನಾಗಲಿ ಆರಿಸುವ ಆಶೆಯಿಲ್ಲೆಂದು ಅಂತರಂಗ ಬಲ್ಲವರು ಕೆಲವರು ಹೇಳುತ್ತಾರೆ. ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ॥ ನಿಜಲಿಂಗಪ್ಪನವರೂ ಮುಂಬಯಿ ಸರಕಾರದ ಬೆಟ್ಟ ಮತ್ತು ಬೇಸಾಯ ಇಲಾಖೆಗಳ ಮಂತ್ರಿಗಳಾಗಿರುವ ಶ್ರೀ॥ ಮಲ್ಲನಗೌಡಾ ಪಾಟೀಲರೂ ಕಾರವಾರದ ಅಭಿವೃದ್ಧಿಗೆ ಪ್ರತಿಕೂಲರಿದ್ದಾರಂತೆ. ಕರ್ನಾಟಕ ಮಹಾಮಂಡಳದವರು ಕಾರವಾರದ ಪಕ್ಷವನ್ನು ಎತ್ತಿಹಿಡಿದು, ಕಾರವಾರದ ಅಭಿವೃದ್ಧಿಯಾದಲ್ಲಿ ಈಗ ಮುಂಬಯಿಯನ್ನು ಕಾಡುತ್ತಿರುವ ಜನದಟ್ಟಣೆಯ ಸಮಸ್ಯೆಯು ಹಗುರಾಗುವದೆಂದೂ, ಕಾರವಾರ ಬಂದರದ ನೈಸರ್ಗಿಕ ಅನುಕೂಲತೆಗಳು ಅದರ ಅಭಿವೃದ್ಧಿಗೆ ಸಹಾಯಕವಿರುತ್ತವೆಂದೂ ದಿಲ್ಲಿಯ ಅಧಿಕಾರಿಗಳಿಗೆ ತಿಳಿಸಿಹೇಳಿದ್ದರು ಆದರೆ ಶ್ರೀ॥ ನಿಜಲಿಂಗಪ್ಪನವರಿಗೆ ಭಟಕಳದ ಮೇಲೆ ಮಮತೆ ಹೆಚ್ಚು! ಕಾರವಾರದ ಅಭಿವೃದ್ಧಿಯಾದಲ್ಲಿ ಮುಂಬಯಿಯ ಮಹತ್ವ ಕಡಿಮೆಯಾಗಿ ಘಾತವಾದೀತೆಂದು ಶ್ರೀ॥ ಪಾಟೀಲರು ಅಂಜುತ್ತಾರೆ! ಮುಂಬಯಿಯಲ್ಲೀಗ ಜನಸಂಖ್ಯೆ ೩೦ ಲಕ್ಷಕ್ಕೆ ಮಿಕ್ಕಿದೆ. ಲಕ್ಷಾವಧಿ ಜನರಿಗೆ ಉಳಕೊಳ್ಳಲು ಸ್ಥಳವಿಲ್ಲ! ಸುಖದಿಂದ ಒರಗಿಕೊಳ್ಳಲು ಸಹ ಅವಕಾಶವಿಲ್ಲದೆ ಸಹಸ್ರಾವಧಿ ಜನರು ಮಾರ್ಗಗಳ ಅಕ್ಕ-ಪಕ್ಕಗಳಲ್ಲಿ ಹೇಗಾದರೂ ಒರಗಿಕೊಂಡು ದಿನಗಳೆಯುತ್ತಾರೆ! ಈ ಜನರಿಗೆ ವಾಸ್ತವ್ಯದ ಅನುಕೂಲತೆ ಮಾಡಿಕೊಡುವ ಹೊಣೆಯನ್ನು ಸರಕಾರವು ಹೊರಲು ಸಿದ್ಧವಿಲ್ಲ. ಬಂದ ಬಂದ ಜನರಿಗೆಲ್ಲ ವಾಸ್ತವ್ಯದ ಅನುಕೂಲತೆ ಮಾಡಿಕೊಡುವದು ಅಸಾಧ್ಯ ಹಾಗೂ ಅವ್ಯವಹಾರಿಕವಿರುತ್ತದೆಂದು ಮುಂಬಯಿ ಸರಕಾರದ ಗೃಹ ಮಂತ್ರಿಗಳಾದ ಶ್ರೀ॥ ಮುರಾರಜಿ ದೇಸಾಯಿಯವರು ಇದೇ ಕಳೆದ ತಾ. ೧೫ನೇಗೆ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಖಂಡತುಂಡವಾಗಿ ಹೇಳಿದ್ದಾರೆ. ಮುಂಬಯಿಯಂಥ ದೊಡ್ಡ ನಗರಗಳ ಮೇಲಿನ ಭಾರ ಕಡಿಮೆಯಾಗಬೇಕಾದರೆ ವ್ಯಾಪಾರ-ವ್ಯವಹಾರದ ಸೌಕರ್ಯಗಳುಳ್ಳ ಬೇರೆ ಕೆಲವು ದೊಡ್ಡ ಪಟ್ಟಣಗಳು ಅಲ್ಲಲ್ಲಿ ಅಸ್ತಿತ್ವದಲ್ಲಿ ಬರಬೇಕು. ಕನಿಷ್ಠ ಪಕ್ಷಕ್ಕೆ ೫೦ ಹೊಸ ನಗರಗಳನ್ನು ನಿರ್ಮಿಸಿ ಅವುಗಳಲ್ಲಿ ನಗರವಾಸಿಗಳಿಗೆ ಬೇಕಾದ ಸುಖ-ಸೌಕರ್ಯಗಳನ್ನು ಒದಗಿಸಿ ಕೊಟ್ಟನಕ ಈಗ ಮುಂಬಯಿ, ಕಲಕತ್ತಾಗಳಂತಹ ಮಹಾನಗರಗಳ ಮೇಲಿನ ಭಾರವು ಕಡಿಮೆಯಾಗುವಂತಿಲ್ಲೆಂದು ಶ್ರೀ॥ ಕಿಶೋರಿಲಾಲ ಮಶ್ರುವಾಲಾ ಇವರು ಹಿಂದೊಮ್ಮೆ "ಹರಿಜನ" ಪತ್ರಿಕೆಯಲ್ಲಿ ಬರೆದಿದ್ದರು. ಮುಂಬಯಿಯ ಈ ಕಷ್ಟಗಳನ್ನು ಅರಿಯದವರಂತೆ ಶ್ರೀ॥ ಪಾಟೀಲರು ಕಾರವಾರದ ಅಭಿವೃದ್ಧಿಯಿಂದ ಮುಂಬಯಿಯ ಗೌರವಕ್ಕೆ ಹಾನಿಯಾಗುವದೆಂದು ಹ್ಯಾಗೆ ವಾದಿಸುತ್ತಿರುವರೋ ತಿಳಿಯದು! ಮೈಸೂರಿನವರಿಗೂ ಮೈಸೂರ ಸರಕಾರಕ್ಕೂ ಭಟಕಳ ಬಂದರದ ಮೇಲೆ ಕಣ್ಣುಂಟು. ಭಟಕಳವನ್ನೇ ಅಭಿವೃದ್ಧಿಗಾಗಿ ಆರಿಸಬೇಕೆಂದು ಮೈಸೂರ ಸರಕಾರವು ಹಿಂದುಸ್ಥಾನ ಸರಕಾರಕ್ಕೆ ಆಗ್ರಹ ಮಾಡುತ್ತಿದೆಂದು ಮೈಸೂರ ಸರಕಾರದ ಗೃಹ ಮಂತ್ರಿಗಳು ಕಳೆದ ವಾರ ನ್ಯಾಯ ವಿಧಾಯಕ ಸಭೆಯಲ್ಲಿ ಹೇಳಿದ್ದಾರೆ. ಆದರೆ ಭಟಕಳದ ಅಭಿವೃದ್ಧಿಯಿಂದ ಮೈಸೂರಿನವರಿಗೆ ಮಾತ್ರ ಪ್ರಯೋಜನವಾಗುವದು, ಉಳಿದ ನಾಡುಗಳಿಗೆ ಅಷ್ಟೊಂದು ಪ್ರಯೋಜನವಾಗಲಿಕ್ಕಿಲ್ಲ ಎಂಬದೊಂದು ವಿಚಾರ ಮುಂದೆ ಬಂದಿರುವದರಿಂದ ಬಂದರ ಸಮಿತಿಯು ಭಟಕಳವನ್ನು ತಿರಸ್ಕರಿಸಿರುತ್ತದಾಗಿ ನಂಬಿಗಸ್ತ ವರ್ತಮಾನವಿದೆ. ಬಹುಶಃ ದಕ್ಷಿಣ ಕಾನಡಾ ಜಿಲ್ಹೆಯ ಮಲ್ಪೆ ಬಂದರದ ಭಾಗ್ಯೋದಯದ ಸೂಚನೆಯನ್ನೇ ಬಂದರ ಸಮಿತಿಯವರು ಮಾಡುವರೆಂದು ಊಹೆಯುಂಟು. ಅಂತು ಇಂತು ಕುಂಟೀ ಮಕ್ಕಳಿಗೆ ಉಪವಾಸವೆಂಬಂತೆ ಕಾರವಾರ ಜಿಲ್ಹೆಯ ಅಭಿವೃದ್ಧಿಗೆ ಕಲ್ಲು ಹಾಕುವವರೇ ಬಹಳವಾಗಿದ್ದಾರೆ! ಲೋಕರಾಜ್ಯದಲ್ಲೂ ಕೂಡ ಇವಕ್ಕೆ ಕೈಕೊಟ್ಟು ಮುಂದಕ್ಕೆ ತರುವವರಿಲ್ಲ!

* * *

ಸರಕಾರದವರ ಯೋಗ್ಯ ದರದ ಅಂಗಡಿಗಳಲ್ಲಿ ಕಳೆದ ವಾರದಿಂದ ಕಾಳುಕಡಿ ಕೊಡಬಾರಂಭಿಸಿದ್ದಾರೆ. ಭೂಮಿ ಸಾಗುವಳಿ ಮಾಡುವವರಿಗೆ, ಜಮೀನದಾರರಿಗೆ ಮತ್ತು ಆಹಾರ-ಧಾನ್ಯಗಳ ವ್ಯಾಪಾರ ಮಾಡುತ್ತಿರುವವರಿಗೆ ಹಾಗೂ ರೂ. ೧೫೦ಕ್ಕಿಂತ ಹೆಚ್ಚಿಗೆ ಮಾಸಿಕ ಉತ್ಪನ್ನವುಳ್ಳವರಿಗೆ ಈ ಅಂಗಡಿಗಳಲ್ಲಿ ಸೀಧಾ ಸಿಗುವದಿಲ್ಲ. ಅಕ್ಕಿ-ಭತ್ತಗಳ ಸಂಗ್ರಹವುಳ್ಳವರಿಗೂ ಈ ಅಂಗಡಿಗಳಲ್ಲಿ ಕಾಳು ಸಿಗಲೊಲ್ಲದು. ಸದ್ಯಕ್ಕೆ ಈ ಅಂಗಡಿಗಳಲ್ಲಿ (ಸೀಧಾ ಪಡೆಯಲು ಪಾತ್ರನೆಂದು ಎಣಿಸಲ್ಪಟ್ಟು ಸೀಧಾ-ಚೀಟಿ ಕೊಡಲ್ಪಟ್ಟ) ಪ್ರತಿ ಪ್ರಾಯಸ್ಥನಿಗೆ ಪ್ರತಿ ಪಕ್ಷಕ್ಕೆ ೧೧। ರತ್ತಲ ಆಹಾರ ಧಾನ್ಯ ಕೊಡುತ್ತಾರೆ. ಅದರಲ್ಲಿ ಗೋದಿ ೧ ರತ್ತಲ ೫ ತೊಲೆ, ಅಕ್ಕಿ ೨ ರತ್ತಲ ೧೦ ತೊಲೆ, ಕೆಂಪು ಜೋಳ ೩ ರತ್ತಲ ೧೫ ತೊಲೆ ಮತ್ತು ಮೆಕ್ಕೆ ಯಾನೆ ಗೋವಿನ ಜೋಳ ೪ ರತ್ತಲ ೨೦ ತೊಲೆ ಇರುತ್ತದೆ. ಮೆಕ್ಕೆ ಜೋಳ ಒಯ್ಯುವವರಿಗೆ ಮಾತ್ರ ಇತರ ಧಾನ್ಯಗಳು ಸಿಗುತ್ತವೆ; ಅದನ್ನು ಒಯ್ಯದಿದ್ದವರಿಗೆ ಅವು ಸಿಗಲಾರವು. ಮೆಕ್ಕೆ ಜೋಳ ತಿನ್ನುವ ಕ್ರಮ ನಮ್ಮಾ ಜಿಲ್ಹೆಯವರಿಗೆ ಗೊತ್ತಿಲ್ಲೆಂಬುದು ಸರಕಾರಕ್ಕೆ ಗೊತ್ತಿದೆ. ಆದರೆ ಜನರಿಗೆ ಇಷ್ಟವಿರುವ ಇಲ್ಲವೆ ಒಪ್ಪಿಗೆಯಾಗುವ ಧಾನ್ಯಗಳ ಪುರವಟೆ ಸಾಕಷ್ಟಿಲ್ಲದ್ದರಿಂದ ಸರಕಾರವು ಈ ಜೋಳವನ್ನು ಕಳಿಸಿಕೊಟ್ಟಿದೆ. ಇಜಿಪ್ತದಿಂದ ೬॥ ಸಾವಿರ ಟನ್ನ ಅಕ್ಕಿ ಬಂದಿದೆ, ಬ್ರಹ್ಮದೇಶದಿಂದ ೯॥ ಸಾವಿರ ಟನ್ನ ಅಕ್ಕಿ ಬಂದಿದೆ. ಜುಲಾಯಿ ತಾ. ೧ಕ್ಕೆ ಅಂತ್ಯವಾಗುವ ತಿಂಗಳಲ್ಲಿ ೧ ಲಕ್ಷ ೩೦ ಸಾವಿರ ಟನ್ನ ಅಕ್ಕಿ ಬರುತ್ತಿದೆ ಎಂದು ನಮ್ಮ ಮುಂತಾಗಿ ಜನರು ಪತ್ರಿಕೆಗಳಲ್ಲಿ ಓದಿ, ಈ ಅಕ್ಕಿಯನ್ನೇಕೆ ಸರಕಾರವು ಇತ್ತ ಕಳಿಸಿಕೊಡುವದಿಲ್ಲೆಂದು ಪ್ರಶ್ನೆ ಮಾಡುತ್ತಾರೆ. ಸರಕಾರದವರು ತರಿಸುವ ಈ ಅಕ್ಕಿಯು ವಿಶಾಲ ದೇಶದ ಬಗ್ಗೆ ಇರುತ್ತದೆಂಬುದನ್ನು ಅವರು ಲಕ್ಷದಲ್ಲಿಡಬೇಕು ಅದನ್ನು ಸಮಪ್ರಮಾಣದಿಂದ ಎಲ್ಲ ಜಿಲ್ಹೆಗಳಿಗೆ ಹಂಚಬೇಕಾದರೆ ಒಟ್ಟೇ ೪। ಲಕ್ಷ ಜನ ವಸತಿಯ ನಮ್ಮ ಜಿಲ್ಹೆಯ ಪಾಲಿಗೆ ಎಷ್ಟು ಬರುವದೆಂಬುದನ್ನೂ ಅವರು ಲೆಕ್ಕ ಹಾಕಿ ನೋಡಿಕೊಳ್ಳಬಹುದು. ಅಕ್ಕಿ ಪೂರೈಸಲು ಸಾಧ್ಯವಿರುತ್ತಿದ್ದರೆ ಸರಕಾರವು ಈ ಜೋಳವನ್ನು ವಿದೇಶಗಳಿಂದ ತರಿಸುತ್ತಿದ್ದಿಲ್ಲ; ಮತ್ತು ನಮ್ಮಲ್ಲಿ ಕಳಿಸುತ್ತಿದ್ದಿಲ್ಲ. ನಾಡಿನಲ್ಲೀಗ ಅಕ್ಕಿಯ ಸಂಗ್ರಹವಿಲ್ಲೆಂದಲ್ಲ. ಆದರೆ ಹುಟ್ಟುವಳಿದಾರರು (ಸಾಗುವಳಿದಾರರು ಮತ್ತು ಜಮೀನದಾರರು) ಅದನ್ನು ಹೊರಗೆ ಹಾಕುವದಿಲ್ಲ! ಮಾನ್ಯ ಮುರಾರಜಿಯವರೇ ಈ ಮಾತನ್ನು ತಾ. ೧೫ರ ಪತ್ರಿಕಾ-ಪ್ರತಿನಿಧಿಗಳ ಸಭೆಯಲ್ಲಿ ಸಾರಿ, ದೇವರ ದಯೆಯಿಂದ ಈ ಮಳೆಗಾಲದಲ್ಲಿ ಸರಿಯಾಗಿ ಮಳೆಯಾಗಿ ಬೆಳೆ ಚನ್ನಾಗಿ ಬಂದರೆ ಅಕ್ಕಿಯ ಧಾರಣೆ ತಾನಾಗಿ ಇಳಿಯುವದೆಂದು ಧೈರ್ಯ ಕೊಟ್ಟಿದ್ದಾರೆ. ದರಗಳ ಏರಿಳತಗಳು ಯಾವದೊಂದು ವಸ್ತುವಿನ ಪೂರೈಕೆ ಮತ್ತು ಬೇಡಿಕೆ (demand and supply)ಗಳ ಮೇಲೆ ಅವಲಂಬಿಸಿರುತ್ತದೆ. ಪೂರೈಕೆಗಿಂತ ಬೇಡಿಕೆ ಹೆಚ್ಚಾದರೆ ದರಗಳು ಏರುತ್ತವೆ; ಬೇಡಿಕೆ ಕಡಿಮೆಯಾದರೆ ದರಗಳು ಇಳಿಯುತ್ತವೆ. ಆದರಂತೆ ಅಕ್ಕಿಯ ದರವಿಳಿಯಬೇಕಾದರೆ ಅದರ ಬೇಡಿಕೆ ಕಡಿಮೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟಿದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ತೆತ್ತ ಮೂಲಧನ ರೂ. ೭,೭೧,೦೦೦/—ಕ್ಕೂ ಮಿಕ್ಕಿದೆ.

ಕಾಯ್ದಿರಿಸಿದಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮಿಗುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ರಿಂದ ೩ ವರೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೬-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಬೂಾಗಬೇಕು ಜನರು ಅಕ್ಕಿಯನ್ನೇ ಅವಲಂಬಿಸಿರದೆ ಮೆಕ್ಕೆ ಜೋಳದಂತಹ ಇನ್ನಿತರ ಧಾನ್ಯಗಳನ್ನು ಉಪಯೋಗಿಸಲಾರಂಭಿಸಿದರೆ ಅಕ್ಕಿಯ ದರ ತೀವ್ರವಾಗಿ ಇಳಿಯತೊಡಗುವದು. ಅದರಿಂದ ಅಕ್ಕಿಯ ದರ ಇಳಿಯಬೇಕೆನ್ನುವ ಜನರು ಕೆಂಪು ಜೋಳವನ್ನೂ ಗೋದಿಯ ಜೋಳವನ್ನೂ ತಿನ್ನಲು ಕಲಿಯಬೇಕಾದುದು ಅಗತ್ಯವಿದೆ. ಗೋವಿನ ಜೋಳವನ್ನು ಗಸಿ ನೀರಿನಲ್ಲಿ ಹಾಕಿ ೩-೪ ತಾಸು ನೆನಸಿದರೆ, ಅದನ್ನು ಅರೆದು ರೊಟ್ಟಿ ಮಾಡಬರುತ್ತದೆಂತಲೂ, ರೊಟ್ಟಿಗಳು ರುಚಿಕರವಾಗುತ್ತವೆಂತಲೂ ಈ ಜೋಳದ ರುಚಿಯುಳ್ಳವರು ಹೇಳುತ್ತಾರೆ.

* *

ಡಿ. ಡಿ. ಟಿ. ದ್ರವ್ಯದ ಪ್ರಯೋಗದಿಂದ ಚಳಿಜ್ವರವು ಕಮ್ಮಿಯಾಗುತ್ತದೆಂದು ಈಗ ಅನುಭವಕ್ಕೆ ಬಂದಿದೆ. ನಮ್ಮ ಜಿಲ್ಲೆಯ ಹಳ್ಳಿಗಳಲ್ಲೂ ಈಗ ಡಿ. ಡಿ. ಟಿ. ಯ ಪ್ರಯೋಗದಿಂದ ಚಳಿಜ್ವರದ ಬಾಧೆ ಬಹಳಷ್ಟು ಕಡಿಮೆಯಾಗಿದೆ. ಆದರೆ ಸರಕಾರದವರ ಡಿ. ಡಿ. ಟಿ. ಪ್ರಯೋಗ ಮಾಡುವ ಸಿಬ್ಬಂದಿಯವರು ಒಂದಕ್ಕಿಂತ ಮಿಕ್ಕಿ ಜನವಸತಿಯುಳ್ಳ ಗ್ರಾಮಗಳಲ್ಲಿಯೇ ತಮ್ಮ ಪ್ರಯೋಗ ಮಾಡುತ್ತಾರೆ. ಅದಕ್ಕೆ ಕಡಿಮೆ ಜನವಸತಿಯುಳ್ಳ ಗ್ರಾಮಗಳಿಗೆ ಅವರು ಹೋಗುವದಿಲ್ಲವಂತೆ. ಇಂತಹ ಸಣ್ಣ ಹಳ್ಳಿಗಳೇ ನಮ್ಮ ಜಿಲ್ಲೆಯಲ್ಲಿ ಹೆಚ್ಚಿವೆ. ವಿಶೇಷವಾಗಿ ಘಟ್ಟದ ಮೇಲಿನ ತೋಟಗಳ ಸೀಮೆಯಲ್ಲಿರುವ ಬಹಳಷ್ಟು ಹಳ್ಳಿಗಳಲ್ಲಿ ೧೦೦ಕ್ಕೆ ಮಿಕ್ಕಿ ಜನವಸತಿಯಿಲ್ಲ. ಇಂಥ ಹಳ್ಳಿಗಳಿಗೆ ಡಿ. ಡಿ. ಟಿ. ಯ ಪ್ರಯೋಜನ ಸಿಗದಿರುವದು ಶೋಚನೀಯ. ಈ ಹಳ್ಳಿಗಳು ನಿರ್ಜನವಾಗಲಿಕ್ಕೂ, ಅಲ್ಲಿಯ ಹೊಲ-ತೋಟಗಳು ಪಡ ಬೀಳಲಿಕ್ಕೂ ಚಳಿಜ್ವರವೇ ಮುಖ್ಯ ಕಾರಣವಾಗಿದೆ. ಡಿ. ಡಿ. ಟಿ. ಯ ಪ್ರಯೋಜನ ಸಿಗಬೇಕಾದದ್ದು ಮುಖ್ಯವಾಗಿ ಈ ಹಳ್ಳಿಗಳಿಗೆ. ಡಿ. ಡಿ. ಟಿ. ಪ್ರಯೋಗದ ದೊಡ್ಡ ಸಿಬ್ಬಂದಿಯನ್ನು ಈ ಹಳ್ಳಿಗಳಿಗೆ ಕಳಿಸಿಕೊಡುವದು ಸಾಧ್ಯವಿಲ್ಲದಿದ್ದಲ್ಲಿ, ಆ ದ್ರವ್ಯದ ಉಪಯೋಗ ಹೇಗೆ ಮಾಡಬೇಕೆಂಬದನ್ನು ಸ್ಥಾನಿಕ ಜನರಿಗೆ ಕಲಿಸಿಕೊಡುವ ಹಾಗೂ ಅವರಿಗೆ ಅವಶ್ಯವುಳ್ಳ ದ್ರವ್ಯಗಳನ್ನೂ ಅದರ ಪ್ರಯೋಜನ ಮಾಡುವ ಸಾಹಿತ್ಯವನ್ನೂ ಪೂರೈಸುವ ಏರ್ಪಾಡು ಸರಕಾರದವರು ಮಾಡಬೇಕು. ಸಣ್ಣ ಹಳ್ಳಿಗಳ ಕಡೆ ದುರ್ಲಕ್ಷ ಮಾಡುವದು ಎಂದೆಂದೂ ನ್ಯಾಯ್ಯವಾಗದು. ಈ ಹಳ್ಳಿಗಳ ಜೀವನ ಸುಖಮಯವಾದರೆ ಮಾತ್ರ ರಾಷ್ಟ್ರದ ಜೀವನ ಸುಖಮಯವಾಗುವದೆಂಬದನ್ನು ಮರೆಯಲಾಗದು.

* *

ಪೆಟ್ರೋಲ ಎಣ್ಣೆಯ ಕಡಿತದಿಂದ ನಮ್ಮ ಜಿಲ್ಲೆಗೆ ಬಹಳ ಕಷ್ಟವಾಗುತ್ತದೆ. ಪೆಟ್ರೋಲ ಸಿಗುವದು ಕಡಿಮೆಯಾದೊಡನೆ ಮೋಟಾರ ಕಂಪನಿಯವರು ಮೋಟಾರ ಓಡಾಟಕ್ಕೆ ಕತ್ತರಿ ಹಾಕಿಬಿಡುತ್ತಾರೆ. ಅದರಿಂದ ಪ್ರವಾಸಿಗಳಿಗೆ ಹೇಳತೀರದಷ್ಟು ತೊಂದರೆಯಾಗುತ್ತದೆ. ಜಲಮಾರ್ಗವಾಗಿ ನಮ್ಮ ಜಿಲ್ಲೆಗೆ ಬರುತ್ತಿದ್ದ ಪೆಟ್ರೋಲ ಎಣ್ಣೆಯು ಹಾದಿಯಲ್ಲಿ ಸಮುದ್ರಗಳ್ಳರ ಪಾಲಾದ್ದರಿಂದ ಜಿಲ್ಲೆಯೊಳಗಿನ ಪೆಟ್ರೋಲ ಶಿಲ್ಕು ಈಗ ಕಡಿಮೆಯಾಗಿದೆ, ಆದರಿಂದ ಮೋಟಾರಗಳಿಗೆ ತಕ್ಕಷ್ಟು ಎಣ್ಣೆ ಸಿಗುವದಿಲ್ಲ. ಆದೇ ಧಾರವಾಡ ಜಿಲ್ಲೆಯೊಳಗ ಪೆಟ್ರೋಲ ಎಣ್ಣೆಯ ಕೊರತೆಯಿಲ್ಲ. ಹುಬ್ಬಳ್ಳಿ ತನಕ ಹೋಗುವ ಮೋಟಾರ ಬಂಡಿಗಳಿಗೆ ತುಂಬಾ ಪೆಟ್ರೋಲ ಸಿಗುತ್ತದೆ. ನಮ್ಮ ಜಿಲ್ಲೆಯ ಗಡಿದಾಟಿ ಹೋಗದ ಮೋಟಾರಬಂಡಿಗಳಿಗೆ ಮಾತ್ರ ಪೆಟ್ರೋಲ ದೊರೆಯುವದಿಲ್ಲ. ಆದರಿಂದ ಪೆಟ್ರೋಲಿನ ಸಕಳ್ಳ-ಸಂತೆಗೆ ಅನುಕೂಲವಾಗಿದೆ. ಧಾರವಾಡ ಜಿಲ್ಲೆಯಿಂದ ಪೆಟ್ರೋಲ ತರಲು ಪ್ರತಿಬಂಧವುಂಟು. ಆ ಪ್ರತಿಬಂಧ ಶಿಥಿಲಗೊಳಿಸಿ ಇಲ್ಲಿಯ ಪೆಟ್ರೋಲ ಕೂಪನ್ನುಗಳಿಗೆ ಧಾರವಾಡ ಜಿಲ್ಲೆಯಲ್ಲಿ ಎಣ್ಣೆ ಕೊಡುವಂತೆ ಪ್ರಾಂತಿಕ ಸರಕಾರವು ಆಜ್ಞೆ ಹೊರಡಿಸಬೇಕು. ಪೆಟ್ರೋಲ ಕಂಪನಿಗಳೂ ಪ್ರಾಂತಿಕ ಸರಕಾರವೂ ಒಂದೇ ಇರುವಾಗ ಒಂದೇ ಪ್ರಾಂತದೊಳಗಿನ ಮೋಟಾರಗಳಿಗೆ ಪೆಟ್ರೋಲ ಕೊಡುವಲ್ಲಿ ಭೇದಭಾವವಿರಕೂಡದು. ನಮ್ಮ ಜಿಲ್ಲೆಯೊಳಗೆ ಉಗಿಬಂಡಿಯಿಲ್ಲದ್ದರಿಂದ ಮೋಟಾರ ಸಾರಿಗೆ ನಿಂತೊಡನೆ ಸಕಲ ಸಾರಿಗೆ ವ್ಯವಹಾರ ಥಕ್ಕನೆ ನಿಂತುಬಿಡುತ್ತದೆ.

* *

ಮೋಟಾರ ವ್ಯವಸಾಯದಲ್ಲಿ ತೊಡಗಿದ ನೌಕರರಿಗೆ ಮೋಟಾರ ಕಂಪನಿಯವರು ಔದಾರ್ಯದಿಂದ ನಡಸಿಕೊಳ್ಳಬೇಕು. ಈಗಿನ ಕಠಿಣ ದಿನಮಾನಗಳಲ್ಲಿ ನೌಕರರಿಗೆ ಜೀವನ ಸಾಗಿಸಲು ಕಷ್ಟವಾಗುತ್ತದೆ. ಹಿಂದುಸ್ಥಾನ ಸರಕಾರವು ವೇತನ ಚೌಕಶಿ ಮಂಡಳದ ಶಿಫಾರಸುಗಳಂತೆ ಸರಕಾರಿ ನೌಕರರ ಸಂಬಳ-ಭತ್ತೆಗಳನ್ನು ಕಲ ಮಟ್ಟಿಗೆ ಏರಿಸಿದೆ. ಸರಕಾರದ ಈ ಧೋರಣವನ್ನು ಅನುಕರಿಸಿ ಅನೇಕ ಕಂಪನಿಗಳೂ ತಮ್ಮ ತಮ್ಮ ನೌಕರರ ಸಂಬಳ-ಭತ್ತೆಗಳನ್ನು ಏರಿಸಿವೆ. ನಮ್ಮ ಜಿಲ್ಲೆಯೊಳಗಿನ ಮೋಟಾರ ಕಂಪನಿಗಳಿಗೆ ಚಲೋ ಪ್ರಾಪ್ತಿಯುಂಟು. ಈ ಪ್ರಾಪ್ತಿಗೆ ಕಾರಣರಾದ ಡ್ರೈವರ, ಕ್ಲೀನರ, ಕಾರಕೂನ ಮೊದಲಾದ ನೌಕರ ಜನರಿಗೆ ಹೆಚ್ಚಿಚ್ಚು ವೇತನ ಕೊಟ್ಟು, ಮರ್ಯಾದೆಯಿಂದ ಜೀವನ ಸಾಗಿಸಲು ಅವರಿಗೆ ಕಂಪನಿಗಳು ನೆರವಾಗಬೇಕು. ಮನೇಜಿಂಗ ಪ್ರೊಪ್ರೈಟರರೂ ಡಾಯರೆಕ್ಟರರೂ ತಮ್ಮ ತಮ್ಮ ಕಂಪನಿಗಳ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿ ನೌಕರರಿಗೆ ಯೋಗ್ಯ ಪರಿಹಾರ ಕೊಡಬೇಕಾಗಿ ಸೂಚನೆಯಿದೆ.

ಆಜ್ಞೆ.

ಕಲೆಕ್ಟರ ಖಾತೆ,
ಮುಂಬಯಿ ಕೋಟೆ, ತಾ. ೭-೬-೪೮.

೧೯೪೬ರ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು.

ನಂ. ೯೮೩/೪೬. — ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೨ನೇ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರವನ್ನು ನಯೋಗಿಸಿ, ಮುಂಬಯಿ ಸರಕಾರವು ರೇಶನಿಂಗ ಮತ್ತು ನೌಕರಿಗಳ ಖಾತೆಯವರು ತಾ. ೨೪-೭-೪೭ಕ್ಕೆ ಹೊರಡಿಸಿದ ೯೮೬/೪೬ನೇ ನಂಬರದ ಆಜ್ಞೆಯಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡಬೇಕಾಗಿ ವಿಧಿಸಿದೆ.—

ಸದರಿ ಆಜ್ಞೆಯ ೧ನೇ ಪರಿಚ್ಛೇದ (ಪೆರಾ)ದ (೧)ನೆಯ ಉಪ ಪರಿಚ್ಛೇದದಲ್ಲಿ "೬೭-೮-೦" ಎಂದಿದ್ದ ಅಂಕೆಗಳನ್ನು ತೆಗೆದು, ಅವುಗಳ ಸ್ಥಳದಲ್ಲಿ "೮೩" ಈ ಅಂಕಿಯನ್ನು ಸೇರಿಸಬೇಕು.

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,
C. K. Maru,
ಸರಕಾರದ ಕೆಳ-ಕಾರ್ಯದರ್ಶಿ

WANTED a financier to invest Rs25000/- within the end of this month, for a Hindi film under production.
Apply :— **SHIRALI,**
C/o "KANARA NEWS", KUMTA.

ಶ್ರೀ ಗೋಕರ್ಣ ಮಠಾಧೀಶರ ಯೋಗಕ್ಷೇಮ ವಾರ್ತೆ.

ಪರ್ತಗಾಳಿಯಲ್ಲಿ ಶ್ರೀ ರಾಮನವಮಿಯ ಉತ್ಸವದ ಕಾರ್ಯವನ್ನು ಮುಗಿಸಿಕೊಂಡು ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್-ದ್ವಾರಕಾನಾಥತೀರ್ಥ ಗುರುಗಳು ಕಳೆದ ಚೈತ್ರ ವದ್ಯದಲ್ಲಿ ಮಂಗಳೂರಿಗೆ ಮರಳಿ ಹೋಗಿ, ವೈದ್ಯಕೀಯ ಉಪಚಾರಗಳನ್ನು ಪುನಃ ಚಾಲು ಮಾಡಿಸಿಕೊಂಡಿದ್ದರಷ್ಟೇ. ಬೇಸಿಗೆಯಲ್ಲಿ ಶ್ರೀಗಳ ಮುಕ್ಕಾಮು ಊರ ಹೊರಗಿನ ಒಂದು ಬಂಗಲೆಯಲ್ಲಿತ್ತು. ಗುರುಗಳ ಪ್ರಕೃತಿ ಈಗ ಪೂರ್ಣ ಸುಧಾರಿಸಿದ್ದು, ೨ ವಾರಗಳ ಹಿಂದೆ ಗುರುಗಳು ಮಂಗಳೂರ ರಥಬೀದಿಯಲ್ಲಿರುವ ತಮ್ಮ ಸ್ವಂತ ಮಠಕ್ಕೆ ಬಂದು ಅಲ್ಲೇ ಉಳಿಯುತ್ತಿದ್ದಾರೆ. ಮುಂಬರುವ ಚಾತುರ್ಮಾಸವನ್ನು ಈ ಮಠದಲ್ಲೇ ಕಳೆಯಬೇಕೆಂದು ಶ್ರೀಪಾದಂಗಳ ಸಂಕಲ್ಪವಾಗಿರುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆಯ ಜೋರು ತುಸು ಕಡಿಮೆಯಾಗಿತ್ತು. ಮೊನ್ನೆಯಿಂದ ಪುನಃ ಮಳೆಗಾಲ ತುಂಬಿದೆ. ಕಳೆದ ವಾರ ೧೯-೧೪ ಇಂಚು ಮಳೆಯಾಗಿರುತ್ತದೆ.

ಇಲ್ಲಿಯ ದಿವಾಣಿ ಕೋರ್ಟಿನ ಹೊಸ ನ್ಯಾಯಾಧೀಶ ರಾ॥ ಲಮಾಯೇ ಇವರು ಕಳೆದ ಮಂಗಳವಾರದಿಂದ ಕೆಲಸ ನಡಿಸಲಾರಂಭಿಸಿದ್ದಾರೆ.

ಮ್ಯುನಿಸಿಪಾಲಿಟಿಯ ಚುನಾವಣೆ ನಾಳೆ ನಡೆಯಲಿದೆ. ಹುರಿಯಾಳುಗಳೂ ಅವರ ಗೆಳೆಯರೂ ಭರದಿಂದ ಮತಸಂಗ್ರಹ ಮಾಡತೊಡಗಿದ್ದಾರೆ. ಪ್ರತಿಯೊಂದು ಮತಗಟ್ಟೆಯಲ್ಲೂ ಕುರಸಿನ ಮೇಲಾಟ ನಡೆಯುವದು.

ಕಳೆದ ಗುರುವಾರದಿಂದ ಇಲ್ಲಿಯ ಪೂರೈಕೆ ಅಗ್ಗದರದ ಅಂಗಡಿಗಳಲ್ಲಿ ಕಾಳು ಕಡಿ ಕೊಡಲಾರಂಭಿಸಿದ್ದಾರೆ. ಪ್ರತಿ ಪಕ್ಷದಲ್ಲಿ ಪ್ರೌಢರಿಗೆ ೧೧ ರತ್ತಲು ಮತ್ತು ಚಿಕ್ಕ ಮಕ್ಕಳಿಗೆ ೫ ರತ್ತಲ ೨ ಔನ್ಸ ಆಹಾರಧಾನ್ಯ ಕೊಡುತ್ತಾರೆ. ಈ ಆಹಾರ-ಧಾನ್ಯಗಳಲ್ಲಿ ೬/೧೦ ಗೋವಿನ ಜೋಳ, ೩/೧೦ ಕೆಂಪು ಜೋಳ, ೩/೧೦ ಅಕ್ಕಿ, ೧/೧೦ ಗೋದಿ ಇರುತ್ತದೆ. ಗೋದಿಯ ದರ ರತ್ತಲ ೧ಕ್ಕೆ ೨ ಆ. ೯ ಪೈ, ಅಕ್ಕಿಯ ದರ ರತ್ತಲ ೧ಕ್ಕೆ ೪ ಆ. ೮ ಪೈ, ಕೆಂಪು ಜೋಳದ ದರ ರತ್ತಲ ೧ಕ್ಕೆ ೧ ಆ. ೧೧ ಪೈ ಮತ್ತು ಗೋವಿನ-ಜೋಳದ ದರ ರತ್ತಲ ೧ಕ್ಕೆ ೧ ಆ. ೪ ಪೈ ಇರುತ್ತದೆ.

ಬಹಳ ವರ್ಷಗಳಿಂದ "ಒಗ್ಗೋಲ ಪಂಚಾಂಗ" ವೆಂದು ಸಂಬೋಧಿಸಲ್ಪಡುತ್ತಿರುವ ಸುಪ್ರಸಿದ್ಧ ದೃಕ್-ಸಿದ್ಧಾಂತ

NOTICE.

In view of the concession grantec by Government to carry 25% overloac in both goods and passenger vehicles owners of such vehicles are hereb directed to take temporary insuranc cover for the additional load to b carried until such time as the abov concession is in force. Non-compli ance of the above requirements wi result in withholding Registratio Certificates and Discs which ma cause inconvenience for obtainin petrol coupons etc.

Belgaum,
25-6 1948.

D. K. Sutkhankar,
(Capt
Regional Transport
Officer, K R, Belgau

ಸ್ಥಾನಿಕ ವೃತ್ತಾಂತ (೨ನೇ ಪುಟದಿಂದ ಮುಂದೆ.)
ದ ಪಂಚಾಂಗವನ್ನು ತಯಾರಿಸಿ ಪ್ರಕಟಿಸುತ್ತಿದ್ದ ಜ್ಯೋತಿರ್ವಿದ್ವಾನ್ ಶ್ರೀ ರಾಮ ತಮ್ಮಣ್ಣ ಪಂಡಿತ ಇವರು ಆಚೆಯ ಶನಿವಾರ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರು ವಿದ್ವಾಂಸರಾಗಿದ್ದರೂ ವಿನಯಸಂಪನ್ನರೂ ಋಗ್ವೇದಿಗಳೂ ಸಾಧುಸ್ವಭಾವದವರೂ ಆಗಿದ್ದರು. ಮರಣಸಮಯದಲ್ಲಿ ಅವರಿಗೆ ೭೦ ವರ್ಷ ವಯಸ್ಸಾಗಿತ್ತೆಂದು ತಿಳಿಯುತ್ತದೆ. ಮೃತರಿಗೆ ಕೈಲಾಸ ನಾಥನು ಸದ್ಗತಿಯನ್ನೀಯಲಿ!

ಬಾರದೇಶಕರ ಗೌಡ ಬ್ರಾಹ್ಮಣ ಫಂಡ್, ಮುಂಬಯಿ (ಬಂಡೀರಾಮ ಬಿಲ್ಡಿಂಗ್ಸ್, ಠಾಕೂರದ್ವಾರ, ಚಿಕ್ಕಲವಾಡಿ ಪಟೇಲ ರೋಡ, ಗಿರಗಾಂವ, ಮುಂಬಯಿ) ಈ ಸಂಸ್ಥೆಯು ಇದೆಯಂತೆ ಕಳೆದ ಬೇಸಿಗೆಯಲ್ಲಾದ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಬೇರೆಯವರಿಗಿಂತ ಹೆಚ್ಚಿಗೆ ಗುಣಗಳನ್ನು ದೊರಕಿಸಿ ಯಶಸ್ವಿಯಾಗಿರುವ ಬಾರದೇಶಕರ ಗೌಡ ಬ್ರಾಹ್ಮಣ ಜಾತಿಯ ವಿದ್ಯಾರ್ಥಿನಿಗೆ ಕುಮಾರಿ ಗಂಗಾಬಾಯಿ ಆತ್ಮಾರಾಮ ಭೋಂಸುಲೆ ಪಾರಿತೋಷಿಕ ಸಿಗುವದು. ಕಾರಣ ಸದರಿ ಪರೀಕ್ಷೆಗೆ ಕುಳಿತ ಸದರಿ ಜ್ಞಾತಿಯ ವಿದ್ಯಾರ್ಥಿನಿಗಳು ತಮ್ಮ ಹೆಸರು-ವಿಳಾಸಗಳನ್ನೂ, ಪಾಸಾದ ನಂಬರ ಮತ್ತು ದೊರಕಿಸಿದ ಗುಣಗಳನ್ನೂ ಕೂಡಲೆ ಬೇಗನೇ ತಿಳಿಸಬೇಕಾಗಿ ಸಂಸ್ಥೆಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹೊನ್ನಾವರ— (ತಾ. ೨೬-೭-೪೮) ಇಲ್ಲಿಯ ಗ್ರಾಮದಲ್ಲಿ ಟಿಮಾಣಿ ಎಣ್ಣೆ ಹಂಚುವ ಕೆಲಸವನ್ನು ಅಲ್ಲಿಯ ಯಾದವನೊಬ್ಬ ಅಂಗಡಿಕಾರನಿಗೆ ಒಪ್ಪಿಸದೆ ಅಂಗಡಿಯಿಲ್ಲದ ಓರ್ವ ಭಟ್ಟರಿಗೆ ಒಪ್ಪಿಸಿದ್ದಾರಂತೆ! ಈ ಭಟ್ಟರು ಟಿಮಾಣಿ ಎಣ್ಣೆಯಲ್ಲಿ ನೀರು ಬೆರಸಿ ಮಾರುತ್ತಾರೆಂದು ಒಂದು ಪ್ರವಾದ ಕೇಳಲಿರುತ್ತದೆ. ಅಧಿಕಾರಿಗಳು ಚೌಕಶಿ ಮಾಡ ಬೇಕು.

ಮುರ್ಡೇಶ್ವರ— (ತಾ. ೨೪-೬-೪೮) ಇಲ್ಲಿ ಕೋಟಾ ಪದ್ಧತಿಯಿಂದ ಟಿಮಾಣಿ ಎಣ್ಣೆ ಕೊಡಲಾರಂಭಿಸಿದ್ದಾರೆ. ಆದರೆ ಏಜಂಟರು ೨೦-೨೫ ವರ್ಷಗಳಿಂದ ವ್ಯಾಪಾರ ಮಾಡುತ್ತಾ ಬಂದ ಅಂಗಡಿಕಾರರಿಗೆ ಎಣ್ಣೆಯ ಹಂಚುವಿಕೆಯ ಕಾರ್ಯವನ್ನು ಒಪ್ಪಿಸದೆ, ಇತ್ತೀಚಿಗೆಯೇ ಅಂಗಡಿಯಿಟ್ಟವರಿಗೆ ಒಪ್ಪಿಸಿದ್ದಾರೆಂದು ಓರ್ವ ವರ್ತಕರು ದೂರುತ್ತಾರೆ.

ಭಟಕಳ— (ತಾ. ೨೫-೬-೪೮) ಇಲ್ಲಿ ಹಮಿಳು ಗಿದ ಪಟ್ರೋಲ ಪಂಚನಿಯೊಳಗಿನ ಜನರು ಇವರನ್ನು ಬಂಧಿಸಿದ್ದಾರೆ. ಅವರ ಕಳ್ಳಬಟ್ಟೆಯ ವ್ಯಾಪಾರ ಕಾಯಿದೆ ಕಾಡಿಲು ಗುಪ್ತ ಪೋಲೀಸ ಖಾತೆಯವರ ಸಹಾಯ ಬೇಕೆಂದು ಫೌಜದಾರರು ಮೇಲಧಿಕಾರಿಗಳಿಗೆ ಬರೆದು ಹಾಕಿದ್ದಾರೆಂದು ತಿಳಿಯುತ್ತದೆ.

ಅಗ್ಗ ದರದ ಅಂಗಡಿಗಳಲ್ಲಿ ಕಾಳು ಕೊಡಲು ಆರಂಭ ಮಾಡಿದ್ದಾರೆ. ಆದರೆ ಅವರು ಕೊಡುವ ಕಾಳಿನಲ್ಲಿ ನುಚ್ಚು ಜೋಳ ಹೆಚ್ಚಿಗೆ ಇರುತ್ತದೆ. ಈ ಜೋಳದ ಉಪಯೋಗ ಹ್ಯಾಗೆ ಮಾಡಬೇಕೆಂಬುದು ಜನರಿಗೆ ತಿಳಿಯದು. ಈ ಜೋಳದ ಬದಲು ಬಿಳೇ ಜೋಳ ಕಳಿಸಿಕೊಡಬೇಕಾಗಿ ಜನರು ಜಿಲ್ಲಾಧಿಪರಿಗೆ ಅರ್ಜಿ ಮಾಡಿಕೊಳ್ಳುವವರಾಗಿದ್ದಾರೆ.

ಮಂಕಿ— (ತಾ. ೨೪-೬-೧೯೪೮) ಇಲ್ಲಿಯ ಅರಬ್ಬಿಯಲ್ಲಿ ಮಳೆಗಾಲದೊಳಗೆ ಹೊಳೆ ದಾಟುವದಕ್ಕೆ ದೋಣಿಯನ್ನಿಡುವ ಪ್ರಘಾತವಿದೆ. ಈ ವರ್ಷ ಇನ್ನೂ ದೋಣಿಯ ವ್ಯವಸ್ಥೆಯಾಗಿರುವದಿಲ್ಲ! ಆದರಿಂದ ಹೊಳೆ ದಾಟುವ ಜನರಿಗೆ ಕಷ್ಟವಾಗಿದೆ.

ಸಿದ್ದಾಪುರ— (ತಾ. ೨೬-೬-೪೮) ಇಲ್ಲಿಯ ಗಂಡು ಹುಡುಗರ ಶಾಲೆಯಿಂದ ಹೊಸ ಅಭ್ಯಾಸಕ್ರಮದ ಮುಲ್ಕೀ ಪರೀಕ್ಷೆಗೆ ೧೧ ಮಂದಿ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ೮ ಮಂದಿ ಉತ್ತೀರ್ಣರಾಗಿದ್ದಾರೆ.

ಅಂಕೋಲಾ— ಕಳೆದ ಮೇ ತಾ. ೨೧ಕ್ಕೆ ಇಲ್ಲಿ ಕೂಡಿದ ಗ್ರಾಮ ಸಭೆಯಲ್ಲೂ ಬೇರೆ ಸಭೆಗಳಲ್ಲೂ ರಾಷ್ಟ್ರೀಯ ದಿನಕರ ದೇಸಾಯಿಯವರು ಮಾಡಿದ ಹಿಂಸಾ-ಪ್ರಚೋದಕ ಭಾಷಣಗಳ ಬಗ್ಗೆ ಅವರ ವಿರುದ್ಧ ಕ್ರಮ ಕೈಕೊಳ್ಳುವ ಆಲೋಚನೆಯನ್ನು ಅಧಿಕಾರಿಗಳು ನಡಿಸಿದ್ದಾರೆಂದು ತಿಳಿಯುತ್ತದೆ. ಈ ಆಲೋಚನೆಯ ಸುಳಿವು ತಿಳಿದ ಕೂಡಲೇ ರಾಷ್ಟ್ರೀಯ ದೇಸಾಯಿಯವರು ಮುಂಬಯಿಗೆ ಪಲಾಯನ ಮಾಡಿಬಿಟ್ಟರು!

ಸುದ್ದಿಗಳ ಸಂದೂಕ.

ಹೈದರಾಬಾದದ ನಿಜಾಮರು ಈಗ ದ್ವಿಮುಖ ಧೋರಣವನ್ನಿಟ್ಟುಕೊಂಡಿದ್ದಾರೆ. ಒಂದು ಬದಿಗೆ ಅವರು ಯುದ್ಧದ ತಯಾರಿಯನ್ನು ನಡಿಸಿದ್ದಾರೆ. ಹೊರಗಿಂದ ಶಸ್ತ್ರಾಸ್ತ್ರಗಳನ್ನು ತರಿಸುವ ಪ್ರಯತ್ನವನ್ನೂ ಅವರು ಮಾಡುತ್ತಿದ್ದಾರೆ. ಕಳೆದ ವಾರ ೪ ದಿನ ರಾತ್ರಿಯ ಕಾಲಕ್ಕೆ ಬಾಂಬರ ವಿಮಾನಗಳು ಸಿಂಧದಿಂದ ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡು ಬಂದು ರಾತ್ರಿ ಬೆಳಗಾಗುವದರೊಳಗಾಗಿ ಹೈದರಾಬಾದದಲ್ಲಿ ಇಳಿಯುತ್ತಿದ್ದವೆಂದು "ಇಂಡಿಯನ್ ಪ್ರೆಸ್ ಎಸೋಸಿಯೇಶನ್" ಸುದ್ದಿ ಸಂಸ್ಥೆಯು ಪ್ರಕಟಿಸಿತು. ಹಿಂದುಸ್ಥಾನ ಸರಕಾರಕ್ಕೂ ಈ ಮಾತಿನ ಖಾತ್ರಿಯಾಗಿ, ಹೀಗೆ ಕಳ್ಳತನದಿಂದ ಕತ್ತಲೆಯೊಳಗೆ ಪಾಕಿಸ್ತಾನಿ ವಿಮಾನಗಳು ಹಿಂದ-ಪ್ರದೇಶದ ಮೇಲಿಂದ ಹಾದು ಹೋಗುತ್ತಿರುವದು ಹಿಂದ-ಪಾಕಿಸ್ತಾನಗಳಲ್ಲಿ ಆಗಿರುವ ವಿಮಾನ-ಸಾಗಿಗೆಯ ಕರಾರಿಗೆ ವಿರುದ್ಧವಿರುತ್ತದೆಂದು ಹಿಂದುಸ್ಥಾನ ಸರಕಾರವು ಪಾಕಿಸ್ತಾನ ಸರಕಾರಕ್ಕೆ

ಹೊನ್ನಾವರ— (ತಾ. ೧೬-೬-೪೮) ಇದೇ ಕಳೆದ ತಾ. ೩ಕ್ಕೆ ಜಿಲ್ಲಾ ಗ್ರಾಮೋದ್ಧಾರ ಮಂಡಳದ ಸಭೆ ಈ ತಾಲೂಕಿನ ಕೆಳಗಿನೂರ ಗ್ರಾಮದಲ್ಲಿ ಕೂಡಿತ್ತು. ಮಂಡಳದ ಸಭೆ ಒಂದು ಹಳ್ಳಿಯಲ್ಲಿ ಕೂಡಿದ್ದು ಇದೇ ಮೊದಲನೇ ಸಲವಾಗಿರುತ್ತದೆ. ಈ ಸಭೆ ಮುಗಿದ ಮೇಲೆ ಉತ್ತರ ಗ್ರಾಮೋದ್ಧಾರದ ಕಾರ್ಯ ಮಾಡಿದಬಗ್ಗೆ ಕೆಳಗಿನೂರಕ್ಕೆ ಶಿಲ್ಡ್‌ನ್ನು ಜಿಲ್ಲಾ ಗ್ರಾಮೋದ್ಧಾರ ಮಂಡಳಕ್ಕೆ ಒಪ್ಪಿಸುವ ಸಮಾರಂಭವು ಜಿಲ್ಲಾಧಿಕಾರಿಗಳಾದ ರಾವ್ ರಬೆಲೋ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಳಗಿನೂರ ಗ್ರಾಮ ಸುಧಾರಣಾ ಮಂಡಳದವರು ಇತ್ತ ೫-೬ ವರ್ಷಗಳಿಂದ ಪರಿಶ್ರಮಪಟ್ಟು ಗ್ರಾಮದಲ್ಲಿ ಬಗೆಬಗೆಯ ಸುಧಾರಣೆ ಮಾಡಿ ತೋರಿಸಿದ್ದಾರೆ. ಒಳ್ಳೇ ಸುಧಾರಿಸಿದ ಬೀಜ ಮತ್ತು ಗೊಬ್ಬರ ಉಪಯೋಗಿಸಿ ಹಳ್ಳಿಯವರು ಬೇಸಾಯದ ಉತ್ಪನ್ನ ಬೆಳಸಿದ್ದಾರೆ; ಊರಲ್ಲಿ ಕಾಯಿಪಲ್ಲೆ ಬೆಳೆಸುತ್ತಾರೆ; ಇತ್ತಲಾಗಿ ಊರಲ್ಲಿ ಸುಮಾರು ೧೨೦೦ ತೆಂಗಿನ ಸಸಿಗಳು ಬೆಳೆಯುತ್ತಿವೆ; ಅದನ್ನೆಲ್ಲ ಪರಸ್ಪರಲ್ಲೇ ರಕ್ಷಣೆ ಮಾಡುತ್ತಾರೆ, ಆದರಿಂದ ಸುಮಾರು ೬೦೦೦೦ ರೂ. ಹಳ್ಳಿಯವರಿಗೆ ಸಿಗುತ್ತಿದೆ. ಊರವರು ಹಣ್ಣು-ಹಂಪಲ ಬೆಳೆಸುವ ಉದ್ಯೋಗವನ್ನು ಕೈಕೊಂಡಿದ್ದಾರೆ. ಗ್ರಾಮದಲ್ಲೊಂದು ಸಹಕಾರಿ ಸಂಘ ಸ್ಥಾಪಿಸಲ್ಪಟ್ಟಿದ್ದು, ಆ ಸಂಘವು ಬೇಸಾಯಗಾರರ ಸರಕುಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವ ಹಾಗೂ ಅವರಿಗೆ ಬೇಕಾಗುವ ಸಾಹಿತ್ಯವನ್ನು ಅಗ್ಗ ದರದಿಂದ ತಂದುಕೊಡುವ ಕಾರ್ಯವನ್ನು ಮಾಡುತ್ತಿದೆ. ಈ ಎಲ್ಲ ಸಂಗತಿಗಳನ್ನು ರಾವ್ ವಿನಾಯಕರಾವ ಹಬ್ಬು ಮತ್ತು ರಾವ್ ಸಾಹೇಬ ವೆಂಕಟರಮಣ ಹೆಗಡೆ ಇವರು ತಮ್ಮ ಭಾಷಣಗಳಲ್ಲಿ ಉಲ್ಲೇಖಿಸಿ ಗ್ರಾಮದವರ ಚಟುವಟಿಕೆಗಳನ್ನು ಕೊಂಡಾಡಿದರು. ಗ್ರಾಮಸುಧಾರಣಾ ಮಂಡಳದ ಹಿರಿಯರು ತಮ್ಮ ಕಾರ್ಯಕ್ಕೆ ಸರಕಾರದವರು ಸಲ್ಲಿಸಿದಬಗ್ಗೆ ಧನ್ಯವಾದಗಳನ್ನರ್ಪಿಸಿ,

೧೯೪೭ರ ಡಿಸೆಂಬರ ತಿಂಗಳ ಕೊನೆಯೊಳಗಾಗಿ ಅತ್ತ ಕೈಬಿಟ್ಟುಕೊಟ್ಟರೆ ಅವರ ವಿರುದ್ಧ ಕ್ರಮ ನಡೆಸಲಿಕ್ಕಿಲ್ಲವಾಗಿ ಕಳೆದ ವರ್ಷ ಸರಕಾರದವರು ಜಾಹೀರ ಮಾಡಿದ ದಷ್ಟೇ. ಆದರೆ ಅತ್ಯಲ್ಪವಾಗಿದೆಯೋ ಇಲ್ಲವೋ ಎಂಬುದು ವೇಳೆಯೇ ಮಾಡಿಸಿದ ವಿಷಯ ಹ್ಯಾಗೆ ತಿಳಿಯ

ಉತ್ತಮ ಬೆಳೆ ಬೆಳಸಿದ ರೈತರಿಗೆ ಇನಾಮುಗಳು.

ನಾಡಿನಲ್ಲಿ ಹೆಚ್ಚೆಚ್ಚು ಆಹಾರ-ಧಾನ್ಯ ಬೆಳೆಸಲು ಬೇಸಾಯಗಾರರಿಗೆ ಉತ್ತೇಜನ ಕೊಡುವದಕ್ಕೆ ಮುಂಬಯಿ ಸರಕಾರವು ಒಂದು ಯೋಜನೆಯನ್ನು ಮಾಡಿದೆ. ಮಳೆಯ ನೀರಿನಿಂದ ಬೆಳೆಸಿದ ಬೆಳೆ ಮತ್ತು ಕಾಲುವೆಯ ನೀರಿನಿಂದ ಬೆಳೆಸಿದ ಬೆಳೆ ಇವೆರಡಕ್ಕೂ ಕೂಡಿ ಪ್ರತಿ ತಾಲೂಕಿನಲ್ಲಿ ಆಹಾರ ಧಾನ್ಯಗಳ ಉತ್ತಮ ಬೆಳೆ ಬೆಳೆಸಿದ ೬ ಮಂದಿ ರೈತರಿಗೆ ಇನಾಮುಗಳನ್ನು ಕೊಡಲಾಗುವದೆಂದು ಸರಕಾರವು ಜಾಹೀರಪಡಿಸಿದೆ. ಗೊಬ್ಬರದ ಉಪಯೋಗದಲ್ಲಿ ಹೆಚ್ಚಳ ತೋರಿಸಿದ ಹಳ್ಳಿಗಳಿಗೂ ಪಾರಿತೋಷಿಕ ಕೊಡಲಾಗುವದು. ದನಗಳ ಸೆಗಣಿ, ಕಸಕಡ್ಡಿ ಮತ್ತು ಸೊಪ್ಪುಗಳಿಂದ ದೊಡ್ಡ ಪ್ರಮಾಣದಿಂದ ಗೊಬ್ಬರ ತಯಾರಿಸುವ ಬಗ್ಗೆ ಹಳ್ಳಿಗಳಲ್ಲಿ ದೊಡ್ಡ ಪ್ರಮಾಣದ ಗೊಬ್ಬರದ ಗುಂಡಿಗಳನ್ನು (compost pits) ಯಾರು ತೆಗೆದರೋ ಧನಸಹಾಯ ಕೊಡುವದಾಗಿಯೂ ಸರಕಾರವು ಜಾಹೀರಪಡಿಸಿದೆ. ಈ ಇನಾಮು, ಧನ-ಸಹಾಯಗಳ ಯೋಜನೆ ಜುಲೈ ೧೯೪೮-೪೯ನೇ ವರ್ಷದಿಂದಲೇ ಜಾರಿಯಲ್ಲಿ ಬರುವದು. ಉತ್ತಮ ಬೆಳೆ ಬೆಳೆಸುವ ಇಚ್ಛೆಯುಳ್ಳವರಿಗೆ ರಾಸಾಯನಿಕ ಗೊಬ್ಬರಗಳು ಬೇಕಾದಷ್ಟು ಸುಲಭವಾಗಿ ಸಿಗುವಂತೆ, ಅಲ್ಲಲ್ಲಿ ಇವುಗಳ ಸಂಗ್ರಹವನ್ನು ಇಡಲಾಗಿದೆ. ಬೇಸಾಯಗಾರರು ಈ ಯೋಜನೆಯ ಲಾಭ ತೆಕ್ಕೊಂಡು ಆಹಾರ-ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವ ದೇಶಕಾರ್ಯದಲ್ಲಿ ಸಹಾಯ ಮಾಡಿದ ಪುಣ್ಯವನ್ನು ಸಂಪಾದಿಸಬೇಕಾಗಿ ಸೂಚನೆಯಿದೆ.

ಗಾಗಿ ಕೇವು ಹಿಂದೆ ಪಡೆಯಬೇಕು. ಆ ತಂಗಿನ ಬಂದ ಅರ್ಜಿಗಳನ್ನು ನಾವು ಮಾನ್ಯ ಮಾಡಲಿಕ್ಕಿಲ್ಲ. ತಾ. ೩೦-೬-೧೯೪೮ರೊಳಗೆ ಅರ್ಜಿಗಳು ಬಾರದಿದ್ದಲ್ಲಿ ಸದರಿ ಕೇವುಗಳನ್ನು ಯಾರಿಗೂ ಕೊಡತಕ್ಕದ್ದಿಲ್ಲವೆಂದು ತಿಳಿದು ಸಂಘದ ನಿಧಿಗೆ ಅವನ್ನು ಕೂಡಿಸಲಾಗುವುದು ತಿಳಿಯುವುದು.

ಠೇವುದಾರರ ಹೆಸರು.	ಠೇವಿನ ರಕಮು.
ಸುಬ್ರಾಯ ಮಲ್ಲಪ್ಪಾ ಹೆಗಡೆ	ರೂ. ೫-೦-೦
ಗಣಪತಿ ನಾಗಪ್ಪಾ ಅಗಸೇ ಬಾಗಿಲ	,, ೧೨-೦-೦
ಭರಮು ಬಂಡ್ ಮಲ್ಲಪ್ಪಾ ಅಜ್ಜಿಹಳ್ಳಿ	,, ೨-೮-೦
ಅಡಿವೆಪ್ಪಾ ಗು.ರು.ಲಿಂಗಯ್ಯಾ, ಹೊಸಕೇರಿ	೧೮-೧-೩
ಸದಾನಂದ ಬಸ್ ಯಲ್ಲಪ್ಪಾ ಅಜ್ಜಿಹಳ್ಳಿ ,,	೧೨-೦-೦

B. G. Acharya.
ಲಿಕ್ವಿಡೇಟರ್,
ಬಾಗ್ಲಿ ಗ್ರಾಮ ಸೇವಾ ಸಹಕಾರಿ ಪತಪೇಢಿ ಸಂಘ ಮತ್ತು ಅಸಿಸ್ಟಂಟ್ ಕೋ-ಓಪರೇಟಿವ್ ಆಫೀಸರ್, ಕಾರವಾರ.

ಜಾಹೀರ ನೋಟೀಸು

ಈ ಮೂಲಕ ಎಲ್ಲ ಜನರಿಗೆ ತಿಳಿಸುವದೇನಂದರೆ— ನನ್ನ ಮಗ ಕೃಷ್ಣ ಸುಬ್ರಾಯ ಹೆಗಡೆ ಸಾ॥ ಕರ್ಕಿಸವಲ, ತಾಲೂಕ ಸಿದ್ದಾಪುರ ಇವನಿಗೆ ಪರಿಣಾಮದ ಬುದ್ಧಿ ಜನರ ಸಹವಾಸಕ್ಕೆ ಬಿದ್ದು ತನ್ನ ಹಿತಾಹಿತದ ಕಲ್ಪನೆ ಇರುವದಿಲ್ಲ. ಮತ್ತು ಊರವರು ತಿಳಿದುಕೊಳ್ಳಬೇಕು ಇರುತ್ತಾನೆ. ಕಾರಣ ಸಾರ್ವಜನಿಕರು ಈತನ ಕಡೆಯಿಂದ ನನ್ನ ಮನೆತನದ ಆಸ್ತಿಯ ಕೊಡು-ಕೊಳ್ಳುವ ವ್ಯವಹಾರ ಮಾಡಬಾರದು ಮಾಡಿದಲ್ಲಿ ಅದು ನನ್ನ ಆ ಅವನ ಆಸ್ತಿಗೆ ಬಾಧಿಸಲಾರದು. ಕರ್ಕಿಸವಲ, ತಾ. ೧೪-೬-೪೮.

ಸುಬ್ರಾಯ ಕೃಷ್ಣಯ್ಯಾ ಹೆಗಡೆ,
ಕರ್ಕಿಸವಲ, ತಾ. ಸಿದ್ದಾಪುರ.

ಲಿಕ್ನೊ ಚಳಿಜ್ವರವ ಮುಖ್ಯ ಕಾರಣವಾಗಿದೆ ಡಿ ಡಿ ಟಿ ಯ ಪ್ರಯೋಜನ ಸಿಗಬೇಕಾದದ್ದು ಮುಖ್ಯವಾಗಿ ಈ ಹಳ್ಳಿಗಳಿಗೆ ಡಿ ಡಿ ಟಿ ಪ್ರಯೋಗದ ದೊಡ್ಡ ಏಬಂದಿಯನ್ನು ಈ ಹಳ್ಳಿಗಳಿಗೆ ಕಳಿಸಿಕೊಡುವದು ಸಾಧ್ಯವಿಲ್ಲದಿದ್ದಲ್ಲಿ, ಆ ದ್ರವ್ಯದ ಉಪಯೋಗ ಹೇಗೆ ಮಾಡಬೇಕೆಂಬದನ್ನು ಸ್ಥಾನಿಕ ಜನರಿಗೆ ಕಲಿಸಿಕೊಡುವ ಹಾಗೂ ಅವರಿಗೆ ಅವಶ್ಯವುಳ್ಳ ದ್ರವ್ಯಗಳನ್ನು ಅವರ ಪ್ರಯೋಜನ ಮಾಡುವ ಸಾಹಿತ್ಯವನ್ನು ಪೂರೈಸುವ ಏರ್ಪಾಡು ಸರಕಾರದವರು ಮಾಡಬೇಕು ಸಣ್ಣ ಹಳ್ಳಿಗಳ ಕಡೆ ದುರ್ಲಕ್ಷ್ಯ ಮಾಡುವದು ಎಂದೆಂದೂ ನ್ಯಾಯ್ಯವಾಗದು ಈ ಹಳ್ಳಿಗಳ ಜೀವನ ಸುಖಮಯವಾದರೆ ಮಾತ್ರ ರಾಷ್ಟ್ರದ ಜೀವನ ಸುಖಮಯವಾಗುವದೆಂಬದನ್ನು ಮರೆಯಲಾಗದು.

* * *

ಪೆಟ್ರೋಲ ಎಣ್ಣೆಯು ಕಡಿತದಿಂದ ನಮ್ಮ ಜಿಲ್ಲೆಗೆ ಬಹಳ ಕಷ್ಟವಾಗುತ್ತದೆ ಪೆಟ್ರೋಲ ಸಿಗುವದು ಕಡಿಮೆಯಾದೊಡನೆ ಮೋಟಾರ ಕಂಪನಿಯವರು ಮೋಟಾರ ಒಡಾಟಕ್ಕೆ ಕತ್ತರಿ ಹಾಕಿಬಿಡುತ್ತಾರೆ ಅದರಿಂದ ಪ್ರವಾಸಿಗಳಿಗೆ ಹೇಳತೀರದಷ್ಟು ತೊಂದರೆಯಾಗುತ್ತದೆ ಜಲಮಾರ್ಗವಾಗಿ ನಮ್ಮ ಜಿಲ್ಲೆಗೆ ಬರುತ್ತಿದ್ದ ಪೆಟ್ರೋಲ ಎಣ್ಣೆಯು ಹಡಗಿಯಲ್ಲಿ ಸವಂದ್ರಗ್ಯರ ಪಾಲು ದ್ದರಿಂದ ಜಿಲ್ಲೆಯೊಳಗಿನ ಪೆಟ್ರೋಲ ಶಿಲ್ಕು ಈಗ ಕಡಿಮೆ ಯಾಗಿದೆ, ಅದರಿಂದ ಮೋಟಾರಗಳಿಗೆ ತಕ್ಕಷ್ಟು ಎಣ್ಣೆ ಸಿಗುವದಿಲ್ಲ ಅದೇ ಧಾರವಾಡ ಜಿಲ್ಲೆಯೊಳಗೆ ಪೆಟ್ರೋಲ ಎಣ್ಣೆಯ ಕೊರತೆಯಿಲ್ಲ ಹುಬ್ಬಳ್ಳಿ ತನಕ ಹೋಗುವ ಮೋಟಾರ ಬಂಡಿಗಳಿಗೆ ತುಂಬಾ ಪೆಟ್ರೋಲ ಸಿಗುತ್ತದೆ ನಮ್ಮ ಜಿಲ್ಲೆಯ ಗಡಿ ದಾಟಿ ಹೋಗದ ಮೋಟಾರಬಂಡಿಗಳಿಗೆ ಮಾತ್ರ ಪೆಟ್ರೋಲು ದೊರೆಯುವದಿಲ್ಲ ಅದರಿಂದ ಪೆಟ್ರೋಲಿನ ಸ್ಥಿತಿ ಗತಿಗಳನ್ನು ಪರ್ಯಾಲೋಚಿಸಿ ನೌಕರರಿಗೆ ಯೋಗ್ಯ ಪರಿಹಾರ ಕೊಡಬೇಕಾಗಿ ಸೂಚನೆಯಿದೆ

ಆಜ್ಞೆ.

ಕೂಲಿಕಾರ ಖಾತೆ,

ಮುಂಬಯಿ ಕೋಟೆ, ತಾ ೭–೬–೪೮

೧೯೪೬ರ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು

ನಂ ೯೮೬/೪೬ — ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ೨೭ನೇ ಮುಂಬಯಿ ಕಾನೂನಿನ) ೪ನೆಯ ಕಲಮಿನನ್ವಯ ದೊರೆತ ಅಧಿಕಾರವನ್ನು ನಡೆಸಿ, ಮುಂಬಯಿ ಸರಕಾರವು ರಾಜಕೀಯ ವ ಸ್ತು ನೌಕರಿಗಳ ಖಾತೆಯವರು ತಾ ೨೪–೭–೪೬ಕ್ಕೆ ಹೊರಡಿಸಿದ ೯೮೬/೪೬ನೇ ನಂಬರದ ಆಜ್ಞೆಯಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡಬೇಕಾಗಿ ವಿಧಿಸಿದೆ —

ಸದರಿ ಆಜ್ಞೆಯ ೧ನೇ ಪರಿಚ್ಛೇದ (ಪೆರಾ)ದ (೧)ನೆಯ ಉಪ ಪರಿಚ್ಛೇದದಲ್ಲಿ "೭೭–೮–೦" ಎಂದಿದ್ದ ಅಂಕೆಗಳನ್ನು ತೆಗೆದು, ಅವುಗಳ ಸ್ಥಳದಲ್ಲಿ ೮೫ ಈ ಅಂಕಿಯನ್ನು ಸೇರಿಸಬೇಕು

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

C K Maru,

ಸರಕಾರದ ಕೆಲ–ಕಾರ್ಯದರ್ಶಿ

WANTED a financier to invest Rs 25000/- within the end of this month, for a Hindi film under production

Apply — **SHIRALI,**
C/o 'KANARA NEWS', KUMTA

ಕುರಸಿನ ಮೋಲಾಟ ನಡೆಯುವದು

ಕಳೆದ ಗುರುವಾರದಿಂದ ಇಲ್ಲಿಯ ಮಾರ್ಕೆಟ ಅಗ್ಗದರದ ಅಂಗಡಿಗಳಲ್ಲಿ ಕಾಳು ಕಡಿ ಕೊಡಲಾರಂಭಿಸಿದ್ದಾರೆ ಪ್ರತಿ ಪಕ್ಷದಲ್ಲಿ ಪ್ರಾಯಸ್ಥರಿಗೆ ೧೧। ರತ್ತಲು ಮಕ್ಕಳಿಗೆ ಮಗುವಿಗೆ ೫ ರತ್ತಲ ೨ ಔಂಸ ಆಹಾರಧಾನ್ಯ ಕೊಡುತ್ತಾರೆ ಈ ಆಹಾರ–ಧಾನ್ಯಗಳಲ್ಲಿ $\frac{\text{೪}}{\text{೯}}$ ಗೋದಿಜೋಳ, $\frac{\text{೩}}{\text{೧೦}}$ ಕೆಂಪು ಜೋಳ, $\frac{\text{೩}}{\text{೧೦}}$ ಅಕ್ಕಿ, $\frac{\text{೧}}{\text{೧೦}}$ ಗೋದಿ ಇರುತ್ತದೆ ಗೋದಿಯ ದರ ರತ್ತಲ ೧ಕ್ಕೆ ೨ ೪ ಸ್ಪೆ, ಅಕ್ಕಿಯ ದರ ರತ್ತಲ ೧ಕ್ಕೆ ೩ ಆ ೮ ಪೈ, ಕೆಂಪು ಜೋಳದ ದರ ರತ್ತಲ ೧ಕ್ಕೆ ೧ ೪ ೧೧ಪೈ ಮತ್ತು ಗೋದಿ ಜೋಳದ ದರ ರತ್ತಲ ೧ಕ್ಕೆ ೧ ೪ ೩ ಪೈ ಇರಲಾಗಿದೆ.

ಬಹಳ ವರ್ಷಗಳಿಂದ " ಒಗ್ಗೋಡ ಪಂಚಾಂಗ " ವೆಂದು ಸಂಬೋಧಿಸಲ್ಪಡುತ್ತಿರುವ ಸುಪ್ರಸಿದ್ಧ ದೃಕ್ ಸಿದ್ಧಾಂತ

NOTICE.

In view of the concession granted by Government to carry 25% overload in both goods and passenger vehicles, owners of such vehicles are hereby directed to take temporary insurance cover for the additional load to be carried until such time as the above concession is in force Non-compliance of the above requirements will result in withholding Registration Certificates and Discs which may cause inconvenience for obtaining petrol coupons etc

Belgaum
25-6 1948

D K Sutkhankar,
(Capt
Regional Transport Officer K R Belgaum

ಜಿಲ್ಲಾ ಸಮಾಚಾರ.

ಸಿದ್ದಾಪುರ— ಇಲ್ಲಿಯ ಇಂಗ್ಲೀಷ ವರ್ಗಗಳನ್ನು ಜಿಲ್ಲಾ ಲೋಕಲ್ ಬೋರ್ಡಿನವರು ನಿಲ್ಲಿಸುವ ಆಲೋಚನೆ ನಡೆಸಿದ್ದಾರೆಂದು ಮುಂಚಾಗಿ "ವೃತ್ತ"ದಲ್ಲಿ ಈ ಹಿಂದೆ ಬಂದ ಟೀಕೆಯ ಸಂಬಂಧದಲ್ಲಿ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರು ಈ ಕೆಳಗಿನಂತೆ ಖುಲಾಸೆ ಮಾಡಿದ್ದಾರೆ— ಈ ಇಂಗ್ಲೀಷ ವರ್ಗಗಳ ಬಗ್ಗೆ ಸರಕಾರವು ಪ್ರತಿ ವರ್ಷ ರೂ. ೬೪೦ರಷ್ಟು ಧನ ಸಹಾಯ ಕೊಡುತ್ತಾರೆಂಬುದು ನಿಜವಲ್ಲ. ೧೯೪೭-೪೮ರಲ್ಲಿ ಬರೇ ೧೧೦ರಷ್ಟು ಧನಸಹಾಯ ಸಿಕ್ಕಿದೆ. ಈ ವರ್ಗಗಳನ್ನು ನಡೆಸಿ ಬೋರ್ಡು ಕೆಲವೊಂದು ಹಣ ಉಳಿತಾಯ ಮಾಡಿಟ್ಟಿದೆಂಬುದೂ ನಿಜವಲ್ಲ. ಹಲವಾರು ವರ್ಷ ಬೋರ್ಡಿನ ಬೊಕ್ಕಸದಿಂದ ಹಣ ಖರ್ಚು ಮಾಡಿಯೇ ಬೋರ್ಡು ಈ ವರ್ಗಗಳನ್ನು ನಡೆಸಿರುತ್ತದೆ. ಇದೀಗ ವರ್ಗಗಳನ್ನು ಮುಚ್ಚುವ ಪ್ರಸಂಗ ಬಂದದ್ದು ಮಾಧ್ಯಮಿಕ ಶಾಲೆಗಳ ಮೊದಲಿನ ೩ ವರ್ಗಗಳಲ್ಲಿ ಇಂಗ್ಲೀಷ ಕಲಿಸುವುದನ್ನು ನಿಲ್ಲಿಸಬೇಕೆಂದು ಸರಕಾರವು ಮಾಡಿದ ಹೊಸ ನಿರ್ಣಯದ ಮೂಲಕವಾಗಿರುತ್ತದೆ. ಈ ವರ್ಷದಿಂದ ಇಂಗ್ಲೀಷ ೧ನೇ ಇಯತ್ತೆಯಲ್ಲಿ ಇಂಗ್ಲೀಷ ಕಲಿಸತಕ್ಕದ್ದಿಲ್ಲ, ಮುಂದಿನ ವರ್ಷದಿಂದ ೨ನೇ ಇಯತ್ತೆಯಲ್ಲೂ, ಅದರ ಮುಂದಿನ ವರ್ಷದಿಂದ ೩ನೇ ಇಯತ್ತೆಯಲ್ಲೂ, ಕೂಡ ಇಂಗ್ಲೀಷ ಶಿಕ್ಷಣ ಇಲ್ಲದಿರುವುದು. ಅದರಿಂದ ಈ ವರ್ಷ ಬರೇ ೨ ವರ್ಗ ಮತ್ತು ಮುಂದಿನ ವರ್ಷ ಒಂದೇ ವರ್ಗ ನಡೆಸಬೇಕಾಗುವದು. ವರ್ಗಗಳು ಕಡಿಮೆಯಾದಂತೆ ಸರಕಾರಿ ಧನ ಸಹಾಯ ಕಡಿಮೆಯಾಗುವದು. ಹೀಗಿರುವಾಗ ಆಗ ಕಡಿಮೆ ಬೀಳುವ ಹಣವನ್ನು ಪೂರೈಸುವವರಾರು? ಊರವರು ಪೂರೈಸಲೊಪ್ಪಿದಲ್ಲಿ ಬೋರ್ಡಿನವರು ವರ್ಗಗಳನ್ನು ನಡೆಸಲು ಸಿದ್ಧರಿದ್ದಾರೆ ಇತ್ಯಾದಿ.

ಹೊನ್ನಾವರ— (ತಾ ೧೬-೬-೪೮) ಇದೇ ಕಳೆದ ತಾ ೨೭ಕ್ಕೆ ಜಿಲ್ಲಾ ಗ್ರಾಮೋದ್ಧಾರ ಮಂಡಳದ ಸಭೆ ಈ ತಾಲೂಕಿನ ಕೆಳಗಿನೂರ ಗ್ರಾಮದಲ್ಲಿ ಕೂಡಿತ್ತು. ಮಂಡಳದ ಸಭೆ ಒಂದು ಹಳ್ಳಿಯಲ್ಲಿ ಕೂಡಿದ್ದು ಇದೇ ಮೊದಲನೇ ಸಲವಾಗಿರುತ್ತದೆ. ಈ ಸಭೆ ಮುಗಿದ ಮೇಲೆ ಉತ್ಕೃಷ್ಟ ಗ್ರಾಮೋದ್ಧಾರದ ಕಾರ್ಯ ಮಾಡಿದಬಗ್ಗೆ ಕೆಳಗಿನೂರಕ್ಕೆ ಶಿಕ್ಷ ಸ್ಪಾಂಡ್ ಶೀಲ್ಡನ್ನು ಸ್ಥಾನಿಕ ಗ್ರಾಮೋದ್ಧಾರ ಮಂಡಳಕ್ಕೆ ಒಪ್ಪಿಸುವ ಸಮಾರಂಭವು ಜಿಲ್ಲಾಧಿಕಾರಿಗಳಾದ ರಾ|| ರಬೆಲೋ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಳಗಿನೂರ ಗ್ರಾಮ ಸುಧಾರಣಾ ಮಂಡಳದವರು ೨೩ ವರ್ಷಗಳಿಂದ ಪರಿಶ್ರಮಪಟ್ಟು ಗ್ರಾಮದಲ್ಲಿ ಬಗೆಬಗೆಯ ಸುಧಾರಣೆ ಮಾಡಿ ತೋರಿದ್ದಾರೆ. ಒಳ್ಳೇ ಸುಧಾರಿಸಿದ ಬೀಜ ಮತ್ತು ಗೊಬ್ಬರ ಉಪಯೋಗಿಸಿ ಹಳ್ಳಿಯವರು ಬೇಸಾಯದ ಉತ್ಪನ್ನ ಬೆಳೆಸಿದ್ದಾರೆ. ಊರಲ್ಲಿ ಕಾಯಿಪಲ್ಲೆ ಬೆಳೆಸುತ್ತಾರೆ. ಇತ್ತೀಚಿಗೆ ಊರಲ್ಲಿ ಸುಮಾರು ೧೦೦೦ ತೆಂಗಿನ ಸಸಿಗಳಿದ್ದು ಬೆಳೆಯುತ್ತಿವೆ. ಅದನ್ನೆಲ್ಲ ಪರವೂರಿಗೆ ರಫ್ತು ಮಾಡುತ್ತಾರೆ. ಅದರಿಂದ ಸುಮಾರು ೩೦೦೦೦ ರೂ ಹಳ್ಳಿಯವರಿಗೆ ಸಿಗುತ್ತದೆ. ಊರವರು ಹಲ್ಲು ಹಂಚಿನ ಬೇಸಾಯ ಉದ್ಯೋಗವನ್ನೂ ಕೈಕೊಂಡಿದ್ದಾರೆ. ಗ್ರಾಮದಲ್ಲೊಂದು ಸಹಕಾರಿ ಸಂಘ ಸ್ಥಾಪಿಸಲ್ಪಟ್ಟಿದ್ದು, ಆ ಸಂಘವು ಬೇಸಾಯಗಾರರ ಸರಕುಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವ ಹಾಗೂ ಅವರಿಗೆ ಬೇಕಾಗುವ ಸಾಹಿತ್ಯವನ್ನು ಅಗ್ಗ ದರದಿಂದ ಪೂರೈಸುವ ಕಾರ್ಯವನ್ನು ಮಾಡುತ್ತದೆ. ಈ ಎಲ್ಲ ಸಂಗತಿಗಳನ್ನು ರಾ|| ವಿನಾಯಕರಾವ ಹಬ್ಬು ಮತ್ತು ರಾ|| ಸೂಳಗಾರ ವೆಂಕಟರಮಣ ಹೆಗಡೆ ಇವರು ತಮ್ಮ ಭಾಷಣಗಳಲ್ಲಿ ಉಲ್ಲೇಖಿಸಿ ಗ್ರಾಮದವರ ಚಟುವಟಿಕೆಗಳನ್ನು ಕೊಂಡಾಡಿದರು. ಗ್ರಾಮಸುಧಾರಣಾ ಮಂಡಳದ ಹಿರಿಯರು ತಮ್ಮ ಕಾರ್ಯಕ್ಕೆ ಸರಕಾರದವರು ಮೆಚ್ಚಿದಬಗ್ಗೆ ಧನ್ಯವಾದಗಳನ್ನರ್ಪಿಸಿ, ತಮ್ಮ ಊರಲ್ಲಿ ಒಂದು ಬಾವಿ ತೋಡಿಸಿ ಕೊಡಬೇಕೆಂಬುದೂ ಒಂದು ರಸ್ತೆಯನ್ನು ಮಾಡಿಸಿ ಕೊಡಬೇಕೆಂಬುದೂ ಬೇಡಿಕೊಂಡರು. ಜಿಲ್ಲಾಧಿಕಾರಿಗಳು ತಮ್ಮ ಸಮಾರೋಪದ ಭಾಷಣದಲ್ಲಿ, ಇನ್ನಿತರ ಗ್ರಾಮಗಳು ಕೂಡ ಕೆಳಗಿನೂರ ಗ್ರಾಮದವರ ಅನುಕರಣೆ ಮಾಡಿ ಅಭ್ಯುದ್ಧಾರ ಮಾಡಿಕೊಳ್ಳಬೇಕೆಂದು ನುಡಿದರು ಮತ್ತು ಗ್ರಾಮ ಸುಧಾರಣಾ ಮಂಡಳದ ಹಿರಿಯರ ಬೇಡಿಕೆಗಳ ವಿಚಾರ ಅವಶ್ಯ ಮಾಡಲಾಗುವದೆಂದು ಆಶ್ವಾಸನೆ ಕೊಟ್ಟರು. ತಾಂಬೂಲ ವಿತರಣೆ ಮತ್ತು ರಾಷ್ಟ್ರಗೀತೆಗಳಾಗಿ ಸಮಾರಂಭದ ಮುಕ್ತಾಯವಾಯಿತು.

ಭಟಕಳ— (ತಾ ೨೪-೬-೧೯೪೮) ಇಲ್ಲಿಯ ಕಾಂಗ್ರೆಸ ಸಂಘದ ಯೋಗ್ಯ ದರದ ಅಂಗಡಿಯಲ್ಲಿ ಹಿಂದುಗಳಿಗೆ ಅಕ್ಕಿ ಸರಿಯಾಗಿ ಸಿಗುವದಿಲ್ಲ ಎಂದು ಮುಂಚಾಗಿ ಕಳೆದ ವಾರದ 'ವೃತ್ತ'ದಲ್ಲಿ ಪ್ರಕಟವಾದ ಟೀಕೆ ನಿರಾಧಾರವಾದದ್ದೆಂದು ಕಾಂಗ್ರೆಸ ಸಂಘದ ಗೌರವ ಕಾರ್ಯದರ್ಶಿಗಳು ಬರೆದಿದ್ದಾರೆ. ಈ ಅಂಗಡಿಯು ಬೇರೆ ಬೇರೆ ಗಿರಾಕಿಗಳ ಜಾತಿ ಮತ-ಸಂಘಗಳನ್ನು ನೋಡದೆ ಎಲ್ಲರಿಗೂ ಒಂದೇ ದೃಷ್ಟಿಯಿಂದ ನಡೆಸುತ್ತಿರೆಂಬುದೂ, ಅಧಿಕಾರಿಗಳು ಆಗಾಗ್ಗೆ ಅಂಗಡಿಯನ್ನು ಸಂದರ್ಶಿಸಿ ಬರೆದಿಟ್ಟ ಶರೆಗಳು ಈ ಮಾತನ್ನು ದೃಢಪಡಿಸುತ್ತವೆಂಬುದೂ ಕಾರ್ಯದರ್ಶಿಗಳು ಪ್ರತಿಪಾದಿಸುತ್ತಾರೆ. ಸಂಘವು ಲಾಭದ ಉದ್ದೇಶದಿಂದ ಈ ಅಂಗಡಿಯನ್ನು ನಡೆಸುತ್ತಿರುವದಿಲ್ಲವೆಂದೂ, ಯಾವಾಗಲೂ ನಷ್ಟ ಸಹಿಸಿ ಕೇವಲ ಜನರ ಹಿತ ಮಾಡುವ ಉದ್ದೇಶದಿಂದ ಈ ಅಂಗಡಿಯನ್ನು ನಡೆಸುತ್ತ ಬಂದಿದೆಂದೂ ಅವರ ಅಂಬೋಣವಿದೆ.

ಯಲ್ಲಾಪುರ— (ತಾ ೧೯-೬-೪೮) ಸರಕಾರಿ ಜಾಗಗಳ ಮೇಲೆ ಅತಿಕ್ರಮಣ ಮಾಡಿದವರು ೧೯೪೭ರ ಡಿಸೆಂಬರ ತಿಂಗಳ ಕೊನೆಯೊಳಗಾಗಿ ಅತಿಕ್ರಮಣ ಬಿಟ್ಟುಕೊಟ್ಟರೆ ಅವರ ಪರ ಕ್ರಮ ನಡೆಸಲಾಗುವದಿಲ್ಲವಾಗಿ ಕಳೆದ ವರ್ಷ ಸರಕಾರದವರು ಘೋಷಣೆ ಮಾಡಿದ್ದರಷ್ಟೇ. ಆದರೆ ಅತಿಕ್ರಮಣವಾಗಿದೆಯೋ ಇಲ್ಲವೋ ಎಂಬುದು ನೋಟೀಸ ಮಾಡಿಸದ ವಿನಹ ಹ್ಯಾಗೆ ತಿಳಿಯಬೇಕು? ಅದರಿಂದ ಇಲ್ಲಿಯ ಹಿಂದಿನ ಮಾಮಲೇದಾರರು ಮಾರ್ಚ ಏಪ್ರಿಲ್ ತಿಂಗಳಲ್ಲಿ ಮುದ್ದಾಮ ನೋಟೀಸ ಮಾಡಿಸಿ ಅನೇಕ ಅತಿಕ್ರಮಣಗಳನ್ನು ಖುಲ್ಲಾ ಮಾಡಿಸಿಕೊಂಡಿದ್ದರು. ಆ ಮಾಮಲೇದಾರರು ಈಗ ವರ್ಗವಾಗಿ ಹೋಗಿದ್ದಾರೆ. ಅದರಿಂದ ಅತಿಕ್ರಮಣ ಬಿಟ್ಟುಕೊಟ್ಟ ಜನರು ಆ ಸ್ಥಳಗಳ ಮೇಲೆ ಇತ್ತೀಚಿಗೆ ಪುನಃ ಬಗೆಬಗೆಯ ಚಪ್ಪರಗಳನ್ನು ಹಾಕಿಸಿ, ಪುನಃ ಅತಿಕ್ರಮಣ ಮಾಡ ಹತ್ತಿದ್ದಾರೆ! ಅಧಿಕಾರಿಗಳು ಇತ್ತ ಗಮನ ಕೊಡಬೇಕು.

(ತಾ ೧೬-೬-೪೮) ಯಾರೊಬ್ಬನನ್ನು ತನ್ನ ತಾಲೂಕಿನಲ್ಲಿ ಶಾನಭೋಗನನ್ನಾಗಿ ಇಡಬಾರದೆಂದು ಜಿಲ್ಲಾಧಿಕಾರಿಗಳು ಇತ್ತೀಚೆಗೆ ಒಂದು ಹುಕುಮು ಮಾಡಿದ್ದಾರೆ. ಅದರಂತೆ ತಮ್ಮ ತಮ್ಮ ತಾಲೂಕಿನಲ್ಲಿದ್ದ ಎಷ್ಟೋ ಮಂದಿಗೆ ವರ್ಗಗಳಾದವು. ಆದರೂ ಇತ್ತೀಚಿಗೆ ರಾ|| ಕೃಷ್ಣಾ ಈಶ್ವರ ಎಂಬವರ ಸಂಬಂಧದಲ್ಲಿ ಸದರಿ ಹುಕುಮಿನ ಉಲ್ಲಂಘನೆಯಾಗುತ್ತಿದ್ದುದು ಕಂಡು ಬಂದಿದೆ. ಈ ಕೃಷ್ಣ ಈಶ್ವರರು ಯಲ್ಲಾಪುರದವರು. ಅವರು ಹಿಂದೆ ಯಲ್ಲಾಪುರದಲ್ಲೇ

ಉತ್ತಮ ಬೆಳೆ ಬೆಳೆಸಿದ ರೈತರಿಗೆ ಇನಾಮುಗಳು

ಪ್ರಾಂತದಲ್ಲಿ ಹೆಚ್ಚೆಚ್ಚು ಆಹಾರ ಧಾನ್ಯ ಬೆಳೆಸಲು ಬೇಸಾಯಗಾರರಿಗೆ ಉತ್ತೇಜನ ಕೊಡುವದಕ್ಕಾಗಿ ಮುಂಬಯಿ ಸರಕಾರವು ಒಂದು ಯೋಜನೆಯನ್ನು ಹಾಕಿದೆ. ಈ ಯೋಜನೆಯಂತೆ ಬೆಳೆಸಿದ ಬೆಳೆ ಮತ್ತು ಕಾಯಿಪಲ್ಯ ಸೀರಿಯಿಂದ ಪ್ರತಿ ತಾಲೂಕಿನಲ್ಲಿ ಅಧಿಕ ಉತ್ಪನ್ನ ಬೆಳೆ ಬೆಳೆದ ೩ ಮಂದಿ ರೈತರಿಗೆ ಇನಾಮುಗಳನ್ನು ಕೊಡಲಾಗುವದೆಂದು ಸರಕಾರವು ಜಾಹೀರಪಡಿಸಿದೆ. ಗೊಬ್ಬರದ ತಯಾರಿಕೆಯಲ್ಲಿ ಹೆಚ್ಚಿನ ಕೆಲಸ ಮಾಡಿದ ಹಳ್ಳಿಗಳಿಗೂ ಬಹುಮಾನಗಳನ್ನು ಕೊಡಲಾಗುವದು. ಪದವು, ಕೊಪ್ಪ, ಕಸದ್ದು ಮತ್ತು ನಗರ ಕಾಶಿ ಮೊದಲಾದ ಪ್ರಕಾರದಿಂದ ಗೊಬ್ಬರ ತಯಾರಿಸುವ ಬಗ್ಗೆ ಹಳ್ಳಿಗಳಲ್ಲಿ ದೊಡ್ಡ ಪ್ರಮಾಣದ ಗೊಬ್ಬರದ ಗುಂಡಿಗಳನ್ನು (compost pits) ಮಾಡಿಸುವವರಿಗೆ ಧನಸಹಾಯ ಕೊಡುವದಾಗಿಯೂ ಸರಕಾರವು ಜಾಹೀರಪಡಿಸಿದೆ. ಈ ಇನಾಮು, ಧನಸಹಾಯಗಳ ಯೋಜನೆ ೧೯೪೮-೪೯ನೇ ವರ್ಷದಿಂದಲೇ ಜಾರಿಯಲ್ಲಿ ಬರುವದು. ಉತ್ತಮ ಬೆಳೆ ಬೆಳೆಸುವ ಇಚ್ಛೆಯುಳ್ಳವರಿಗೆ ಸಹಾಯಕ ಗೊಬ್ಬರಗಳು ದೊರೆಯದಿದ್ದಲ್ಲಿ ಅವು ಸುಲಭವಾಗಿ ಸಿಗುವಂತೆ, ಅಲ್ಲಲ್ಲಿ ಇವುಗಳ ಸಂಗ್ರಹ ಮಾಡಲಾಗಿದೆ. ಬೇಸಾಯಗಾರರು ಈ ಯೋಜನೆಯ ಲಾಭ ತೆಗೆದುಕೊಂಡು ಆಹಾರ ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವ ದೇಶಕಾರ್ಯದಲ್ಲಿ ಸಹಾಯ ಮಾಡಿದ ಪುಣ್ಯವನ್ನು ಸಂಪಾದಿಸಬೇಕಾಗಿ ಸೂಚನೆಯಿದೆ.

ನೋಟೀಸು.

ಕಾರವಾರ, ತಾ ೨೦-೬-೧೯೪೮

ಕಾರವಾರ ಜಿಲ್ಲಾ ಗ್ರಾಮ ಸೇವಕ ಪತ್ತಿನ ಸಹಕಾರಿ ಸಂಘದಿಂದ ಕೆಳಗೆ ಕಾಣಿಸಿದವರಿಗೆ ಸಾಲದ ರಕಮು ಕಟ್ಟತಕ್ಕದ್ದಿದ್ದು, ಸದರ ಸಾಲವನ್ನು ಸಂಬಂಧ ಪಟ್ಟವರು ಈವರೆಗೂ ತೀರಿಸಿರುವದಿಲ್ಲ. ಈ ಬಗ್ಗೆ ಬಾಕಿ ಸದರಿ ಸಾಲದ ಸಾಲಗಾರರು ಮೃತಪಟ್ಟಿದ್ದಾರೆಂಬುದೂ ಅವರ ಪ್ರತಿನಿಧಿಗಳು ಯಾರಾದರೂ ಇದ್ದಲ್ಲಿ ಅವರು ರೀತಿಯಂತೆ ತಮ್ಮ ಹಕ್ಕು ಸಿದ್ಧಪಡಿಸಿ ತಾ ೩೦-೬-೧೯೪೮ರೊಳಗಾಗಿ ಕೇವು ಹಿಂದೆ ಪಡೆಯಬೇಕು. ಆ ನಂತರ ಬಂದ ಅರ್ಜಿಗಳನ್ನು ನಾವು ಮಾನ್ಯ ಮಾಡಲಿಕ್ಕಿಲ್ಲ. ತಾ ೩೦-೬-೧೯೪೮ರೊಳಗೆ ಅರ್ಜಿಗಳು ಬಾರದಿದ್ದಲ್ಲಿ ಸದರ ಕೇವುಗಳನ್ನು ಯಾರಿಗೂ ಕೊಡತಕ್ಕದ್ದಿಲ್ಲವೆಂದು ತಿಳಿದು ಸಂಘದ ನಿಧಿಗೆ ಅವನ್ನು ಕೂಡಿಸಲಾಗುವದು ತಿಳಿಯುವದು.

ಠೇವುದಾರರ ಹೆಸರು	ಠೇವಿನ ರಕಮು.
ಮುಕುಂದಪ್ಪ ಯಲ್ಲಪ್ಪಾ ಬಿಗಳ್ಳಿ	ರೂ ೫-೦-೦
ಗಣಿಗೆಪ್ಪಾ ನಿಂಗಪ್ಪಾ ಅಗಸೇ ಬಾಗಿಲ	,, ೧೨-೦-೦
ಧರಮು ಬಿಂನ್ ಮುಲ್ಲಪ್ಪಾ ಅಚ್ಚಕಳ್ಳಿ	,, ೨-೮-೦
ಅಡಿವೆಪ್ಪಾ ಗರಲಿಂಗಯ್ಯಾ ಹೊಸಕೊಪ್ಪ	೧೮-೧-೩
ಸಣ್ಣಪ್ಪಾ ಬಿನ್ ಯಲ್ಲಪ್ಪಾ ಅಚ್ಚಕಳ್ಳಿ	,, ೧೨-೦-೦

B G Acharya
ಲಿಕ್ವಿಡೇಟರ್,
ಜಿಲ್ಲಾ ಗ್ರಾಮ ಸೇವಕ ಸಹಕಾರಿ ಪತ್ತಿನ ಸಂಘ
ಮತ್ತು ಅಸಿಸ್ಟಂಟ್ ಕೋ ಆಪರೇಟಿವ್ ಆಫಿಸರ,
ಕಾರವಾರ

ಜಾಹೀರ ನೋಟೀಸು

ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ — ನನ್ನ ಚಿ|| ಕೃಷ್ಣ ಸುಬ್ರಾಯ ಹೆಗಡೆ ಸಾ|| ಕಲ್ಕೆಸವಲ್ಲಿ, ತಾಲೂಕ ಸಿದ್ದಾಪುರ ಇವನಿಗೆ ಎಳಕತನದಿಂದ ದುಷ್ಟ ಜನರ ಸಹವಾಸಕ್ಕೆ ಬಿದ್ದು ತನ್ನ ಹಿತಾಹಿತದ ಕಲ್ಪನೆ ಇರುವದಿಲ್ಲ ಮತ್ತು ಊರೂರು ತಿರುಗುತ್ತಾ ಇರುತ್ತಾನೆ. ಕಾರಣ ಸಾರ್ವಜನಿಕರೂ ಈತನ ಕಡೆಯಿಂದ ನನ್ನ ಮನೆತನದ ಆಸ್ತಿಯ ಕೊಡು-ಕೊಳ್ಳುವ ವ್ಯವಹಾರ ಮಾಡಬಾರದು. ಮಾಡಿದಲ್ಲಿ ಅದು ನನ್ನ ಹಾಗೂ ಅವನ ಆಸ್ತಿಗೆ ಬಾಧಿಕವಾಗದು.
ಕಲ್ಕೆಸವಲ್ಲಿ, ತಾ ೧೯-೬-೪೮

ಸುಬ್ರಾಯ ಕೃಷ್ಣಯ್ಯಾ ಹೆಗಡೆ,
ಕಲ್ಕೆಸವಲ್ಲಿ, ತಾ ಸಿದ್ದಾಪುರ

ಮುದ್ದತ-ಉಪಭೋಗದಾರಾಗಿದ್ದರು. ಆಗ ಅವರ ನಡತೆ ಸಮಾಧಾನಕರವಿಲ್ಲದ್ದರಿಂದ ಮಾಮಲೇದಾರರು ಮೇಲಧಿಕಾರಿಗಳಿಗೆ ಬರೆದು ಅವರಿಗೆ ಬೇರೆ ತಾಲೂಕಿಗೆ ವರ್ಗ ಮಾಡಿಸಿದ್ದರು. ಮೇಲೆ ಹೇಳಿರುವ ಜಿಲ್ಲಾಧಿಕಾರ ಹುಕುಮಿನಿಂದಂತೂ ಅವರು ತಿರುಗಿ ಯಲ್ಲಾಪುರ ತಾಲೂಕಿಗೆ ಬರುವದು ಅಶಕ್ಯವಾಗಿತ್ತು. ಆದರೂ ಕೃಷ್ಣ ಈಶ್ವರ ಇವರು ತಾವು ಹಳಿಯಾಳ ತಾಲೂಕಿನಲ್ಲಿ ಹುಟ್ಟಿದವರು ಎಂದು ಹೇಳಿ ಆ ತಾಲೂಕಿನ ಕಾರೇಹಳ್ಳಿಗೆ ವರ್ಗ ಮಾಡಿಸಿಕೊಂಡಿದ್ದಾರೆ. ಕೃಷ್ಣ ಈಶ್ವರರ ಮನೆಯವರು ೧೫-೨೦ ವರ್ಷಗಳಿಂದ ಯಲ್ಲಾಪುರದಲ್ಲಿ ಕಾಯಂ ವಾಸ್ತವ್ಯ ಮಾಡಿಕೊಂಡಿರುವಾಗ ಮತ್ತು ವ್ಯಾಪಾರ-ಉದ್ಯೋಗ ಮಾಡುತ್ತಿರುವಾಗ ಕೃಷ್ಣ ಇವರು ಯಲ್ಲಾಪುರ ತಾಲೂಕಿನವರಲ್ಲೆಂದು ಪ್ರಾಂತ ಕಚೇರಿಯವರು ಭಾಸ್ಯ ಮಾಡಿ ಅವರಿಗೆ ಪುನಃ ಯಲ್ಲಾಪುರ ತಾಲೂಕಿಗೆ ವರ್ಗ ಮಾಡುತ್ತಿರುವದನ್ನು ನೋಡಿದರೆ ಪ್ರಾಂತ ಕಚೇರಿಯಲ್ಲಿಯೂ ಕೆಲವು ಹುಂಬೆರಟೀಕೆಂಬ ಸಂಶಯ ಬರುತ್ತದೆ. ಪ್ರಾಂತ ಸಾಹೇಬರೂ ಜಿಲ್ಲಾಧಿಕಾರರೂ ಆ ಕೊಳೆಯನ್ನು ತೆಗೆಯುವ ವ್ಯವಸ್ಥೆ ಮಾಡಬೇಕಾಗಿ ಅರಿಕೆಯಿದೆ.

ಸದರಿ ಕೃಷ್ಣ ಈಶ್ವರ ಇವರು ಇತ್ತೀಚೆಗೆ ಸರಕಾರದ ಬಾಬತು ರೂ. ೬೦೦ ಬಳಸಿಕೊಂಡಿದ್ದರಂತೆ ! ಅದನ್ನು ಮಾಮಲೇದಾರರು ಕಂಡುಹಿಡಿದು ಆ ಹಣವನ್ನು ಕೃಷ್ಣ ಇವರಿಂದ ತುಂಬಿಕೊಂಡಿದ್ದಾರಂತೆ; ಮತ್ತು ನಡೆದ ಸಂಗತಿಯನ್ನು ಮೇಲಧಿಕಾರಿಗಳಿಗೆ ತಿಳಿಸಿದ್ದಾರಂತೆ. ಮುಂದೇನಾಗುತ್ತದೆಂದು ನೋಡಬೇಕು.

ಬೇಹಳ್ಳಿ ಗ್ರಾಮದಲ್ಲಿ ತಾ. ೧-೬-೪೮ರಿಂದ ಒಂದು ನಾಂಪರಿ ಶಾಲೆ ತೆರೆಯಲ್ಪಟ್ಟಿದೆ. ರಾ॥ ಶಿವರಾಮ ಅರೇ ಗಾರ ಇವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಅದರ ಉದ್ಘಾಟನೆಯ ಸಮಾರಂಭವಾಯಿತು.

ಡಿಸ್ಟ್ರಿಕ್ಟ ಬೋರ್ಡ ಅಫ್ ಸುಪರವಾಯಜಿಂಗ ಯೂನಿಯನ್ಸ, ಲಿ.

ಎಜ್ಯೂಕೇಶನ್ ಕಮಿಟಿ, ಉ. ಕನ್ನಡ

ತಾ. ೨೫-೬-೧೯೪೮

ಸರಕ್ಯೂಲರ ನಂ. ೪

ಬರುವ ಜುಲೈ ತಿಂಗಳ ೧೫ನೇ ತಾರೀಖಿನಿಂದ ಆಗೋಸ್ಟ ತಿಂಗಳ ೩೧ನೇ ತಾರೀಖಿನವರೆಗೆ ಹೊನ್ನಾವರದಲ್ಲಿ ಒಕ್ಕಲತನದ ಸಹಕಾರಿ ಸಂಘಗಳ ಸೆಕ್ರೆಟರಿ ಜನರಿಗಾಗಿ ಒಂದು ಟ್ರೇನಿಂಗ ಕ್ಲಾಸನ್ನು ಏರ್ಪಡಿಸುವದು ಗೊತ್ತಾಗಿದೆ. ಕಾರಣ ಹೊನ್ನಾವರ ತಾಲೂಕ ಹಾಗೂ ಭಟಕಳ ಪೇಟಾದಲ್ಲಿರುವಂತಹ ಹಾಗೂ ರೂರಲ್ ಸೆಕ್ರೆಟರಿಗಳ ಸರ್ಟಿಫಿಕೇಟ ಪರೀಕ್ಷೆಯನ್ನು ಪಾಸಾಗದೆ ಇದ್ದಂತಹ ಎಲ್ಲ ಸೆಕ್ರೆಟರಿ ಜನರು ಈ ಕ್ಲಾಸಿಗೆ ಬರಲು ಅರ್ಜಿಯನ್ನು ಮಾಡಬೇಕು. ಸದರ ಕ್ಲಾಸಿಗೆ ಬರುವಂತಹ ಸೆಕ್ರೆಟರಿ ಜನರ ಸಾಧಾರಣ ವೆಚ್ಚವನ್ನು ಆಯಾ ಸಂಘಗಳು ವಹಿಸಲು ಅಡ್ಡಿ ಇರುವದಿಲ್ಲ. ಕ್ಲಾಸಿಗೆ ಮಾಸಿಕ ಶಿಷ್ಯವೃತ್ತಿಯನ್ನು ಇಡಲಾಗಿದೆ. ಸಹಕಾರಿ ಚಳವಳಿಯಲ್ಲಿ ಅಭಿರುಚಿಯುಳ್ಳ ಬೇರೆ ಹೊಸಬರಿಗೂ ಸಹ ಈ ಕ್ಲಾಸಿಗೆ ಬರಲು ಅವಕಾಶವಿದೆ. ಆದುದರಿಂದ ಹೊನ್ನಾವರ ತಾಲೂಕ ಮತ್ತು ಭಟಕಳ ಪೇಟಾದಲ್ಲಿರುವಂತಹ ಎಲ್ಲ ಮಾದರಿಯ ಒಕ್ಕಲತನದ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರುವಂತಹ ಸೆಕ್ರೆಟರಿ, ಅಸಿಸ್ಟಂಟ ಸೆಕ್ರೆಟರಿ, ಕಾರಕೂನ ಮೊದಲಾದವರೂ ಹಾಗೂ ಹೊರಗಿನಿಂದ ಬರಬಿಚ್ಛಿಸುವವರೂ ಜುಲೈ ತಿಂಗಳ ೧೦ನೇ ತಾರೀಖಿನ ಒಳಗಾಗಿ ಕೆಳಗಿನ ವಿಳಾಸಕ್ಕೆ ಅರ್ಜಿಗಳನ್ನು ಕಳಿಸಬೇಕಾಗಿ ವಿನಂತಿಯಿದೆ. ಉಮೇದವಾರರು ಅರ್ಜಿಯಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ಕ್ಲಾಸಿನ ಹೆಚ್ಚಿನ ವಿವರಗಳು ಹಿಂದಿನಿಂದ ತಿಳಿಸಲ್ಪಡುವವು.

R. V. PANDIT,

ಚೆಅರಮನ್, ಎಜ್ಯೂಕೇಶನ್ ಕಮಿಟಿ, ಉ. ಕ.

ಕಾರವಾರ— (ತಾ. ೨೬-೮೬-೧೯೪೮) ಕಳೆದ ತಾ. ೨೦ನೇ ರವಿವಾರದಿಂದ ಸರಕಾರದವರ ಯೋಗ್ಯದರದ ಅಂಗಡಿಗಳಲ್ಲಿ ಕಾಳು ಕೊಡಲಾರಂಭಿಸಿದ್ದಾರೆ.

ಹಳ್ಳಿಗಳಲ್ಲಿ ಕಮ್ಯುನಿಸ್ಟ ಪ್ರಚಾರ ಮಾಡುತ್ತಿದ್ದರೆಂಬ ಸಂಶಯದಿಂದ ಪೋಲೀಸರು ಜಿಲ್ಲಾ ಮೆಜಿಸ್ಟ್ರೇಟರ ಆಜ್ಞೆ ತಕ್ಕೊಂಡು ಈ ತಾಲೂಕಿನಲ್ಲಿ ಮುಕುಂದ ದುದು, ಸೆಯ್ಯದ ಈದ್ರು, ದಾದು ಜೂನ್ಜಿ ಮತ್ತು ಪ್ರೊಮಗೋ ಟೀಪು ಎಂಬ ನಾಲ್ವರನ್ನು ಬುಧವಾರ ಸೆರೆಹಿಡಿದು ಬಂಧನದಲ್ಲಿಟ್ಟಿರುತ್ತಾರೆ.

ಸವಯದ್ರವ್ಯಾಗರ್ಯವಾಗಿ ಕಳ್ಳತನದಿಂದ ಬಟ್ಟೆ ರಫ್ತು ಮಾಡುತ್ತಿದ್ದ ಆರೋಪ ಸಿದ್ಧವಾಗಿ ೧ ವರ್ಷದ ಕಠಿಣ ಶಿಕ್ಷೆ ಮತ್ತು ರೂ. ೧೦೦೦ ದಂಡ ವಿಧಿಸಲ್ಪಟ್ಟ ಕಾಶಿನಾಥ ಉಪರನು ತನಗಾದ ಶಿಕ್ಷೆಯ ವಿರುದ್ಧ ನಾ॥ ಮುಂಬಯಿ ಹಾಯಕೋರ್ಟಿಗೆ ಅಪೀಲು ಮಾಡಿದ್ದನು. ನ್ಯಾಯಮೂರ್ತಿಗಳು ಅವನ ಅಪೀಲನ್ನು ತಿರಸ್ಕರಿಸಿ ಕೆಳಕೋರ್ಟಿನವರು ವಿಧಿಸಿದ ಶಿಕ್ಷೆಯನ್ನು ಸ್ಥಿರಪಡಿಸಿದ್ದಾರೆ. ಹಾಯಕೋರ್ಟ ನ್ಯಾಯಮೂರ್ತಿಗಳು ಕಾಶಿನಾಥ ಶಿಕ್ಷೆಯನ್ನು ಹೆಚ್ಚಿಸದಿದ್ದುದು ಕಾಶಿನಾಥನ ಸುದೈವವೆನಬೇಕು.

ಇಲ್ಲಿಯ ಅರ್ಬನ ಬೇಂಕಿಗೆ ಸುಮಾರು ೫೫೦೦ ರೂಪಾಯಿಗಳ ಮೋಸ ಮಾಡಿ ನಾಕೆಲ್ಲಸಕ್ಕೋ ಬೇರಾವ ಅಜ್ಞಾತ ಸ್ಥಳಕ್ಕೋ ಓಡಿಹೋಗಿರುವ ಮತ್ತು ಈಗ ತನ್ನ ಪತ್ತೆಯನ್ನೇ ಹತ್ತಗೊಡದಿರುವ ಸಯ್ಯದ ಅಬ್ದುಲ ಕರೀಮ ಅವರ ಕೃತಿಯಿಂದ ಬೇಂಕಿನ ಶೇರುದಾರರು ಚಿಂತೆಗೊಳಗಾಗುವ ಕಾರಣವಿಲ್ಲೆಂದೂ ಕರೀಮನಿಂದ ಬರಬೇಕಾಗುವ ಸಾಲದ ರೂ. ೯೫೦೦ನ್ನು ಬುಡಿತ ಸಾಲಗಳ ನಿಧಿಯೊಳಗಿಂದ ತುಂಬಿಕೊಳ್ಳಲು ಬರುವದೆಂದೂ ಅಕ್ಕಿ ಖರೀದಿಗಾಗಿ ಅವರು ಒಟ್ಟು ಘರಾರಿ ಮಾಡಿರುವ ರೂ. ೫೦೦೦ಗಳನ್ನು ಬೇಂಕಿನವರು ಯೋಗ್ಯದರದ ಅಂಗಡಿ ನಡೆಸಿ ಸಂಪಾದಿಸಿದ ಲಾಭಾಂಶಗಳಿಂದ ತುಂಬಿಕೊಳ್ಳಲು ಸಾಧ್ಯವಿರುತ್ತದೆಂದೂ, ಕಾಶಿನಾಥ ಮೋಸಗಾರಿಕೆಯಿಂದ ಶೇರುದಾರರಿಗೆ ಹಾನಿಯಾಗದೆಂದೂ ಬೇಂಕಿನ ಅಧ್ಯಕ್ಷ ರಾ॥ ದತ್ತಾ ಸುಬ್ಬು ನಾಯ್ಕರು ಭರವಸೆ ಕೊಡುತ್ತಾರೆ ! ಅಧ್ಯಕ್ಷರ ಈ ಖುಲಾಸೆ ಕೇಳಿ ಬೇಂಕಿನ ಶೇರುದಾರರು ಗೊಂದಲದಲ್ಲಿ ಬಿದ್ದಿದ್ದಾರೆ. ಬುಡಿತ ಇಲ್ಲವೆ ಸಂಶಯಿತ ಸಾಲಗಳ (Bad debts) ನಿಧಿಯೆಂಬುದು ಶೇರುದಾರರ ಹಣವಲ್ಲೆಂದೂ ಅದೇ ಮೇರೆಗೆ ಬೇಂಕಿನ ಹಣ ತೊಡಗಿಸಿ ನಡೆಸಿದ ಯೋಗ್ಯದರದ ಅಂಗಡಿಯ ವ್ಯವಹಾರದೊಳಗಿನ ಮುನಾಫೆಯೂ ಶೇರುದಾರರದಲ್ಲೆಂದೂ ಅಧ್ಯಕ್ಷರು ತಮ್ಮ ಖುಲಾಸೆಯಲ್ಲಿ ಸ್ಪಷ್ಟಪಡಿಸುತ್ತಾರೆ ಎಂದ ಮೇಲೆ ಶೇರುದಾರರು ಗೊಂದಲದಲ್ಲಿ ಬಿದ್ದರೆ ಆಶ್ಚರ್ಯವೇನು ? ಕರೀಮನಿಂದ ಏನೂ ಭದ್ರತೆ ತಕ್ಕೊಳ್ಳದೆ, (ಅಕ್ಕಿಯ ಖರೀದಿಗೆಂದಾಗಲಿ ಗೋದಿ-ಜೋಳಗಳ ಖರೀದಿಗೆಂದಾಗಲಿ) ರೂ. ೬೦೦೦ಗಳಷ್ಟು ದೊಡ್ಡ ಗಂಟನ್ನು ಆತನ ವಶಕ್ಕೆ ಒಪ್ಪಿಸಿದ ಅಧ್ಯಕ್ಷರು ಆ ಹಣವನ್ನು ವಸೂಲ ಮಾಡಿಕೊಡಲಿಕ್ಕೆ ಇಲ್ಲವೆ ತುಂಬಿಕೊಡಲಿಕ್ಕೆ ಬಾಧ್ಯಸ್ಥರಾಗುವದಿಲ್ಲವೇನೆಂದು ಕೆಲವು ಶೇರುದಾರರು ಕೇಳುತ್ತಾರೆ. ಬೇಂಕಿನ ಶೇರುದಾರರ ಮುಂದಿನ ಮಹಾಸಭೆಯಲ್ಲಿ ಶೇರುದಾರರು ಅಧ್ಯಕ್ಷರಿಂದ ಈ ಪ್ರಶ್ನೆಗಳ ಖುಲಾಸೆ ಮಾಡಿಕೊಳ್ಳುವದು ವಿಹಿತ.

ಕುಮಟಾ— (ತಾ. ೧೫-೬-೧೯೪೮) ಕಡತೋಕ ರಾ॥ ವೆಂಕಟೇಶ ಸುಬ್ಬ ಶೆಟ್ಟಿಯವರಿಗೆ ಹಿಂದೆ ಚಿಮಣಿ ಎಣ್ಣೆ, ಸಕ್ಕರೆ ಮೊದಲಾದವುಗಳನ್ನು ಕಳ್ಳತನದಿಂದ ಗೋವೆಗೆ ರಫ್ತು ಮಾಡುವದಕ್ಕಾಗಿ ಬಟ್ಟಿಪ್ಪಬಗ್ಗೆ ಕುಮಟೆಯ ಮೆಜಿಸ್ಟ್ರೇಟರು ವಿಧಿಸಿದ ದಂಡದ ಶಿಕ್ಷೆ ಕಾಯಮ್ಮಾಗಿಯಿತೆಂದು ನಿರ್ಣಯಿಸಿ, ಮುಂಬಯಿಯ ನಾ॥ ಹಾಯಕೋರ್ಟಿನವರು ಅವರ ದಂಡದ ಶಿಕ್ಷೆಯನ್ನು ರೂ. ೪೨೦ಕ್ಕೆ ಏರಿಸಿದ ಸಂಗತಿಯನ್ನು ಜನರು ಮರೆತಿರಲಿಕ್ಕಿಲ್ಲ. ಈ ಪ್ರಕರಣವಾದ ಮೇಲೆ ರಾ॥ ವೆಂಕಟೇಶ ಶೆಟ್ಟಿಯವರಿಗೆ ಸರಕಾರದಿಂದ ಪರವಾನೆ ಮಗ್ಗೆರೆ ಸಿಗುವದು ಕಷ್ಟವಾಯಿತು. ಆದರಿಂದ ಅವರು ತಮ್ಮ ತಮ್ಮ ಕೇಶವ ಶೆಟ್ಟಿ ಇವರ ಹೆಸರಲ್ಲಿ ಪರವಾನೆ ಪಡೆದುಕೊಂಡು ವ್ಯವಹಾರ ಮಾಡಹತ್ತಿದರು. ಆದರೂ ತಮ್ಮ ಹಿಂದಿನ ರೀತಿ-ನೀತಿಗಳನ್ನು ಅವರು ಬಿಡಲಿಲ್ಲ ! ಕಳೆದ ಜನವರಿ ಫೇಬ್ರುವರಿಯಲ್ಲಿ ಇವರು ಸುಮಾರು ೫೦೦ ಚೀಲ ಅಕ್ಕಿ ಖರೀದಿಸಿದ್ದರು. ಅದರಲ್ಲಿ ೩೦೦-೩೫೦ ಚೀಲಗಳನ್ನು ಅವರು ಪರ ಬಂದರಗಳಿಗೆ — ಗೋವೆಗೆಂದು ಕೆಲವರ ಅಂಬೋಣ — ಕಳಿಸಿಕೊಟ್ಟರು. ಉಳಿದ ಅಕ್ಕಿಯನ್ನು ದಸ್ತಾಗಿ ಬಚ್ಚಿಟ್ಟರು ! ಊರಲ್ಲಿ ಅಕ್ಕಿ, ಅಕ್ಕಿಯೆಂದು ಜನರು ಬೊಬ್ಬೆಯನ್ನೆಬ್ಬಿಸಿದಾಗಲೂ ಅದನ್ನು ಹೊರಗೆ ತೆಗೆಯಲಿಲ್ಲ ! ಅದರಿಂದ ಊರವರಿಗೇ ಜಿಲ್ಲಾಧಿಕಾರಿಗೆ ಅರ್ಜಿ ಹಾಕಿ, ಇವರಲ್ಲಿ ಕಳ್ಳ ಅಕ್ಕಿಯ ಸಂಗ್ರಹವುಂಟೆಂದೂ ಅದನ್ನು ಹೊರತೆಗೆಯ ಬೇಕೆಂದೂ ವಿನಂತಿಸಿದರೆಂದು ತಿಳಿಯುತ್ತದೆ. ಜಿಲ್ಲಾಧಿಕಾರು ಕೂಡಲೇ ರಾ॥ ಶೆಟ್ಟರಲ್ಲಿ ಝಡತಿ ಮಾಡಬೇಕಾಗಿ ನಿಯಂತ್ರಣ ಪೋಲೀಸರಿಗೆ ಹುಕುಮು ಕೊಟ್ಟರು. ಅದರಂತೆ ನಿಯಂತ್ರಣ-ಫೌಜದಾರ ರಾ॥ ಎಲ್. ಆರ್. ನಾಯ್ಕರು ತಾ ೨೨-೫-೪೮ಕ್ಕೆ ಒಮ್ಮೆಲೇ ಕಡತೋಕಕ್ಕೆ ಹೋಗಿ ರಾ॥ ಶೆಟ್ಟರ ಅಂಗಡಿಯಲ್ಲಿ ತಪಾಸಣೆ ಮಾಡಲಾಗಿ, ಆಹಾರ ಧಾನ್ಯಗಳ ಸಂಗ್ರಹದ ರಜಿಸ್ಟರದಲ್ಲಿ ನಮೂದ ಇದ್ದಕ್ಕಿಂತ ಹೇರಳ ಹೆಚ್ಚಿಗೆ ಅಕ್ಕಿ ಅಲ್ಲಿದ್ದದ್ದು ಕಂಡುಬಂತಂತೆ. ದಫಳಷ್ಟು ಗೋದಿ-ರಾಗಿ ಸಹ ಸಂಗ್ರಹದಲ್ಲಿದ್ದದ್ದು ಕಂಡು ಬಂತು. ಪೋಲೀಸರು ಅಆಕ್ಕಿಯನ್ನೆಲ್ಲ ಜಪ್ತ ಮಾಡಿಟ್ಟು ಈಗ ಪ್ರಕರಣ ನಡಿಸುತ್ತಾರೆಂದು ತಿಳಿಯುತ್ತದೆ.

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆದೊಂದಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮತಾನುಸಾರ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾತಕತ್ತ ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,

ಛತ್ತರಗಲ್ಲಿ, ಬನಾರಸ.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೩೯ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡುಪಿ ಆಫೀಸು:—

Post Box No. 10,

UDIPI, S. Kanara.

ಇವನ್ನು ಸಾಂತೂರು ರಂಗ ಕೃಷ್ಣ ನಾಡಭಾಗ(ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

1948-49

Reg. No. B. 1270. Monday, 5-7-1948.

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೧.

ಕುಮಟಾ:- ಸೋಮವಾರ, ತಾ ೫—೭—೧೯೪೮

ಜಾಹೀರಾತುಗಳ ದರ:-

ಸ್ಥಳಪ್ರಾಕಾರ ಎರಡು ಕಾಲಮ್ಮು ೧ ಸಾಲಿಗೆ ೮ ಆಣೆಯಂತೆ.

ನಿಶ್ಚಿತ್ತ ಇಲ್ಲದ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ವರ್ಗಣಿಯ ದರ:

ಕುಮಟೆಯಲ್ಲಿ ವರ್ಷಕ್ಕೆ ರೂ. ೨-೪-೦

ಟಪಾಲದ್ವಾರ ವರ್ಷಕ್ಕೆ ೩-೧-೦

" ೬ ತಿಂಗಳಿಗೆ ೧-೧೦-೦

ಬಿಡಿ ಸಂಚಿಕೆಗೆ ೦-೧-೦

ಹಳೇ ಸಂಚಿಕೆಗೆ ೦-೪-೦

ವ್ಹಿ.ಪಿ. ಯಿಂದ ಹಣ ಕಳಿಸುವವರು ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ ತರಬೇಕು

ವರ್ಗಣಿ ಮುಂಗಡ ಕೊಡತಕ್ಕದ್ದು

ಸುದ್ದಿಗಳ ಸಂದೂಕ.

— ಹಿಂದುಸ್ಥಾನದ ಆಳಿತೆಯನ್ನು ೧೮೫೭ರ "ಶಿಪಾಯಿಗಳ ಬಂಡಾಯ"ವೆಂದು ಬ್ರಿಟಿಶರು ಹೆಸರಿಟ್ಟ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದ ತರುವಾಯ ೧೮೫೮ರಲ್ಲಿ ಬ್ರಿಟಿಶ ಸರಕಾರವು ಈಸ್ಟ ಇಂಡಿಯಾ ಕಂಪನಿಯ ಕಡೆಯಿಂದ ತನ್ನ ವಶಕ್ಕೆ ತಕ್ಕೊಂಡಾಗ್ಯೂ ಹಿಂದುಸ್ಥಾನದ ಸಮ್ರಾಜ್ಞೀ ಎಂಬ ಬಿರುದನ್ನು ದಿವಂಗತ ವಿಕ್ಟೋರಿಯಾ ಮಹಾರಾಣಿಯವರು ಧರಿಸಿದ್ದು ೧೮೭೭ರಲ್ಲಾಗಿರುತ್ತದೆ. ಬ್ರಿಟಿಶ ಚಕ್ರಾಧಿಪತ್ಯದೊಳಗಿನ ಇನ್ನಿತರ ದೇಶಗಳ ಅರಸ ಇಲ್ಲವೆ ಅರಸಿಯರೆಂದು ಸಂಬೋಧಿಸಲ್ಪಡುತ್ತಿದ್ದ ಬ್ರಿಟಿಶ ರಾಜ-ರಾಣಿಯರು ಹಿಂದುಸ್ಥಾನದ ಅರಸ-ಅರಸಿಯರೆನಿಸಿಕೊಳ್ಳದೆ ಸಮ್ರಾಟ ಸಮ್ರಾಜ್ಞಿಗಳೆಂದು ಎನಿಸಿಕೊಳ್ಳುತ್ತಿದ್ದುದರಲ್ಲಿ ಒಂದು ಬಗೆಯ ಪಂಕ್ತಿಪ್ರಪಂಚವೂ ವರ್ಣಾಭಿಮಾನವೂ ಕಂಡುಬರುತ್ತಿತ್ತು. ಅದೇನಿದ್ದರೂ ಹಿಂದುಸ್ಥಾನವು ಈಗ ಸ್ವತಂತ್ರವಾದ ಮೇಲೆ ಬ್ರಿಟಿಶ ಅರಸರು ಈ ಸಮ್ರಾಟ್ ಬಿರುದನ್ನು ಇಟ್ಟುಕೊಳ್ಳುವದು ಉಚಿತವೆನಿಸುತ್ತಿದ್ದಿಲ್ಲ. ಆದರಿಂದ ಆ ಬಿರುದನ್ನು ಜೋರ್ಜ ಭೂಪತಿಗಳು ಈಗ ತ್ಯಜಿಸಿರುವರೆಂದು ಲಂಡನ್ನಿನ ಸರಕಾರಿ ಗಾಝೆಟನಲ್ಲಿ ಪ್ರಕಟವಾಗಿದೆ. ಇನ್ನುಮುಂದೆ ಭೂಪತಿಗಳ ಅಂಕಿತವು G R I ಎಂದಿರದೆ ಬರೀ G. R. ಎಂದಿರುವದಾಗಿಯೂ ಪ್ರಕಟವಾಗಿದೆ. ನಾಣ್ಯ-ನೋಟುಗಳಲ್ಲೂ ಸರಕಾರಿ ಕಾಗದ-ಪತ್ರಗಳಲ್ಲೂ ರಾಜಮುದ್ರೆಗಳಲ್ಲೂ ಕಂಡುಬರುತ್ತಿದ್ದ 'ಭಾರತದ ಚಕ್ರವರ್ತಿ" ಎಂಬ ಬಿರುದು ಇನ್ನು ಮುಂದೆ ಅಳಿಸಲ್ಪಡುವದು

— ಸ್ವತಂತ್ರ ಭಾರತದ ರಾಜ್ಯಘಟನೆಯ ಮಸೂದೆ ತಯಾರಾಗಿ ಈಗ ೫-೬ ತಿಂಗಳಾದವು. ಆ ಮಸೂದೆಯ ಚರ್ಚೆ ಮಾಡಿ ಅದಕ್ಕೆ ಕೊನೆಯ ರೂಪ ಕೊಡುವದಕ್ಕಾಗಿ ಘಟನಾ ಸಮಿತಿಯು ಈ ಜುಲಾಯಿ ತಿಂಗಳಲ್ಲಿ ಸೇರಬೇಕಿತ್ತು. ಆದರೆ ಭಾರತವು ಬ್ರಿಟಿಶ ರಾಜಚಕ್ರದಲ್ಲಿ ಉಳಿಯಬೇಕೋ ಅಥವಾ ಬ್ರಿಟಿಶರ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಂಡು ಅಲಿಪ್ತವಾಗುಳಿಯಬೇಕೋ ಎಂಬ ಮೂಲಭೂತ ಪ್ರಶ್ನೆಯ ನಿರ್ಣಯವನ್ನೊಂದು ಹಿಂದುಸ್ಥಾನ ಸರಕಾರವೂ ಘಟನಾ-ಸಮಿತಿಯೂ ಮಾಡಬೇಕಾಗಿರುತ್ತದೆ. ಬ್ರಿಟಿಶ ರಾಜಚಕ್ರದಲ್ಲಿ ಉಳಿಯುವದು ಭಾರತಕ್ಕೆ ಹಿತಪ್ರದವೆಂದು ನೇ|| ನಾ|| ಮುಕುಂದರಾವ ಜಯಕರ ಪ್ರಭೃತಿ ಅನೇಕ ಪ್ರಮುಖ ಭಾರತೀಯರ ಅಂಬೋಣವಿದೆ. ಆದರೆ ಆ ರಾಜಚಕ್ರದೊಳಗಿನ ಒಂದು ಘಟಕವಾದ ದಕ್ಷಿಣ ಆಫ್ರಿಕೆಯ ಸರಕಾರವು ವರ್ಣದ್ವೇಷದಿಂದ ಭಾರತೀಯರನ್ನು ಕಡೆಗಣಿಸುತ್ತಿರುವಾಗ ಮತ್ತು ಇನ್ನಿತರ ಘಟಕಗಳು ದಕ್ಷಿಣ ಆಫ್ರಿಕೆಯ ಆ ನಿಂದ್ಯ ನಡತೆಯನ್ನು ನಿಷೇಧಿಸದೆ ಸುಮ್ಮಗುಳಿಯುತ್ತಿರುವಾಗ, ಆ ರಾಜ-ಚಕ್ರದಲ್ಲಿ ಉಳಿಯುವದು ಭಾರತದ ಸ್ವಾಭಿಮಾನಕ್ಕೆ ಒಪ್ಪದೆಂದು ಒಂದು ಸರ್ವಸಾಮಾನ್ಯ ವಿಚಾರ-ಪ್ರವಾಹವಿದೆ. ಈ ಸಮಸ್ಯೆಯ ನಿರ್ಣಯವನ್ನು ಪಂ|| ಜವಾಹರಲಾಲ ನೆಹರುರವರು ಇದೇ ಬರುವ ಸಪ್ಟಂಬರ ತಿಂಗಳಲ್ಲಿ ವಿಲಾಯತಿಗೆ ಹೋಗಿ ಬಂದ ಮೇಲೆ (ಅಂದರೆ ಬ್ರಿಟಿಶ ರಾಜ್ಯಕರ್ತರ ನಿಲುವೆಯನ್ನೂ ಅವರ ಹೃದಯವನ್ನೂ ಪಂ|| ನೆಹರುರವರು ಪ್ರತ್ಯಕ್ಷ ಕಂಡುಹಿಡಿದು ಬಂದ ಮೇಲೆ) ಮಾಡಬಹುದೆಂದು ಹಿಂದುಸ್ಥಾನ ಸರಕಾರದ ಹಾಗೂ ಘಟನಾ-ಸಮಿತಿಯವರ ಅಭಿಪ್ರಾಯವಾಗಿರುತ್ತಿದ್ದು, ಅದಕ್ಕನುಕೂಲವಾಗುವಂತೆ ಘಟನಾ-ಸಮಿತಿಯ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಘಟನಾ-ಸಮಿತಿಯ ಅಧಿವೇಶನವನ್ನು ಸದ್ಯಕ್ಕೆ ಮುಂದೂಡಿದ್ದಾರೆ. ಸಮಿತಿಯು ಬರುವ ಅಕ್ಟೋಬರ ತಿಂಗಳ ಕೊನೆಗೆ ಕರೆಯಲ್ಪಡುವದೆಂದೂ, ಡಿಸೆಂಬರ ತಿಂಗಳ ಕೊನೆಯೊಳಗಾಗಿ ಘಟನೆಯು ಸಿದ್ಧವಾಗುವದೆಂದೂ ಸಮಿತಿಯ ಕಚೇರಿಯವರು ತಿಳಿಸಿದ್ದಾರೆ. ಪ್ರೌಢ ಮತದಾನ ಪದ್ಧತಿಯಿಂದ ಚುನಾವಣೆಗಳು ನಡೆಯುವವೆಂಬ ಕಲ್ಪನೆಯಿಂದ ಪ್ರಾಂತಿಕ ಸರಕಾರಗಳು ಈಗಾಗಲೇ ಮತದಾರ ಯಾದಿಗಳನ್ನು ತಯಾರಿಸ ತೊಡಗಿರುವದರಿಂದ, ಮುಂದಿನ ವರ್ಷವೇ ಹೊಸ ಚುನಾವಣೆಗಳಾಗಿ ಹೊಸ ಘಟನೆಯು ಅಮಲಿನಲ್ಲಿ ಬರುವದೆಂದೂ ಸಮಿತಿಯ ಕಚೇರಿಯವರು ಭರವಸೆ ಕೊಟ್ಟಿದ್ದಾರೆ.

— ಹಿಂದುಸ್ಥಾನದ ಹಿಂದಿನ ನಕಾಶೆಯಲ್ಲಿ ಬ್ರಿಟಿಶರ ಆಧಿಪತ್ಯದೊಳಗಿದ್ದ ಹಿಂದುಸ್ಥಾನವನ್ನು ಕೆಂಪು ಬಣ್ಣದಿಂದಲೂ ಬ್ರಿಟಿಶರಿಗೆ ಅಂಕಿತರಾಗಿರುವ ಸಂಸ್ಥಾನಿಕರ ಆಧಿಪತ್ಯದಲ್ಲಿದ್ದ ಹಿಂದುಸ್ಥಾನವನ್ನು ಆರಶಿಣ ಬಣ್ಣದಿಂದಲೂ ತೋರಿಸುತ್ತಿದ್ದರು. ನಕಾಶೆಯಲ್ಲಿ ಅಲ್ಲಲ್ಲಿ ಹಳದಿ ಬಣ್ಣದ ಪ್ರದೇಶಗಳು ಎದ್ದು ಕಾಣುತ್ತಿದ್ದವು. ನಕಾಶೆಯ ಸುಮಾರು ⅖ ಭಾಗವು ಹಳದಿ ಬಣ್ಣದ್ದು ಇದ್ದುದು ಕಾಣಿಸುತ್ತಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ ಕರಾಚಿಯಿಂದ ಪೂರ್ವಕ್ಕೆ ಬ್ರಹ್ಮದೇಶದ ಗಡಿಯ ವರೆಗೂ ೬೦೦ರಷ್ಟು ಸಣ್ಣ-ದೊಡ್ಡ ಸಂಸ್ಥಾನಗಳಿದ್ದವು. ಭಾರತವು ಸ್ವತಂತ್ರವಾದ ಮೇಲೆ ಈ ಸಂಸ್ಥಾನಗಳು ಬಾಳಿಕೊಂಡು ಉಳಿಯುವದು ಕಷ್ಟವಾಯಿತು. ಈ ಸಂಸ್ಥಾನಗಳ ನೆರೆಯಲ್ಲಿರುವ ಜನರು ಸ್ವತಂತ್ರರಾಗಿ ಪ್ರಜಾಪ್ರಭುತ್ವದ ಸುಖ-ಸೌಕರ್ಯಗಳನ್ನು ಅನುಭವಿಸುತ್ತಿರುವಾಗ ಸಂಸ್ಥಾನಗಳ ಪ್ರಜೆಗಳು ಏಕತಂತ್ರ ಆಧಿಪತ್ಯದಲ್ಲಿ ಉಳಿಯಲೊಪ್ಪುವದು ಸಂಭಾವ್ಯವಿದ್ದಿಲ್ಲ. ಸಂಸ್ಥಾನಾಧೀಶರು ತಮ್ಮ ತಮ್ಮ ಸಂಸ್ಥಾನಗಳಲ್ಲೂ ಪ್ರಜಾಪ್ರಭುತ್ವವುಳ್ಳ ರಾಜ್ಯಪದ್ಧತಿಯನ್ನು ಅಮಲಿನಲ್ಲಿ ತರಬೇಕಾದುದು ಅವಶ್ಯವಾಯಿತು. ಆದರೆ ಪ್ರಜಾಪ್ರಭುತ್ವವುಳ್ಳ ಸಂಸ್ಥೆಗಳನ್ನು (ಕಾನೂನು ಮಂಡಳ, ಮಂತ್ರಿಮಂಡಳ, ನ್ಯಾಯಾಸನಗಳು ಮುಂತಾದವುಗಳನ್ನು) ನಡಿಸಿಕೊಂಡು ಹೋಗುವಷ್ಟು ಸಾಂಪತ್ತಿಕ ಸುಸ್ಥಿತಿ ಈ ಸಂಸ್ಥಾನಗಳದಿದ್ದಿಲ್ಲ. ಆದರಿಂದ ಎಷ್ಟೋ ಸಂಸ್ಥಾನಿಕರೂ ಅವರ ಪ್ರಜೆಗಳೂ ಕಾಲ ಮಹಿಮೆಯನ್ನು ಅರಿತುಕೊಂಡು, ತಮ್ಮ ಸಂಸ್ಥಾನಗಳನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಲು ಒಪ್ಪಿಗೆ ಕೊಟ್ಟರು. ಬೇರೆ ಕೆಲವು ಸಂಸ್ಥಾನಿಕರು ತಮ್ಮ ಸಂಸ್ಥಾನಗಳನ್ನು ಹತ್ತಿರವಿರುವ ಇಲ್ಲವೆ ತಮ್ಮ ಸಂಸ್ಥಾನಗಳಿಗೆ ಹೊಂದಿಕೊಂಡಿರುವ ಸಂಸ್ಥಾನಗಳೊಡನೆ ಕೂಡಿ ಒಕ್ಕೂಟಗಳನ್ನು ರಚಿಸಿಕೊಂಡರು. ಇದರ ಸಂಪೂರ್ಣ ಶ್ರೇಯಸ್ಸು ಸಂಸ್ಥಾನ-ಖಾತೆಯ ಮಂತ್ರಿಗಳಾಗಿರುವ ಸರದಾರ ವಲ್ಲಭಭಾಯಿ ಪಟೇಲರಿಗೂ ಅವರ ಜಾಣ್ಮೆಗೂ ಸಲ್ಲುತ್ತದೆ. ಸರದಾರರ ಪ್ರಯತ್ನಗಳ ಫಲವಾಗಿ ೧೯೪೮ರ ಮೇ ತಿಂಗಳ ಕೊನೆಯವರೆಗೆ ಆಯಾ ಪ್ರಾಂತಗಳಲ್ಲಿ ವಿಲೀನವಾದ ಸಂಸ್ಥಾನಗಳ ಸಂಖ್ಯೆಯನ್ನೂ, ಅವುಗಳ ಕ್ಷೇತ್ರಫಲವನ್ನೂ ಜನಸಂಖ್ಯೆಯನ್ನೂ ಈ ಕೆಳಗೆ ಕೊಟ್ಟಿದೆ:— (೧) ಮುಂಬಯಿ ಪ್ರಾಂತದಲ್ಲಿ ೩೦೫ ಸಂಸ್ಥಾನಗಳು (ಜಹಾಗೀರಿಗಳು ಮತ್ತು ತಾಲೂಕದಾರಿಗಳು ಕೂಡಿ) ವಿಲೀನವಾಗಿವೆ. ಅವುಗಳ ವಿಸ್ತಾರ ೩೪೨೯೪ ಚದುರ ಮೈಲು ಜನ ಸಂಖ್ಯೆ ೪೩,೧೭,೦೦೦ (೨) ಮದ್ರಾಸ ಪ್ರಾಂತದಲ್ಲಿ ಬಂಗನಪಲ್ಲಿ ಮತ್ತು ಪುದುಕೋಟೆ ಈ ೨ ಸಂಸ್ಥಾನಗಳು ವಿಲೀನವಾಗಿವೆ. ಅವುಗಳ ಕ್ಷೇತ್ರಫಲ ೧೪೪೪ ಚ. ಮೈಲು; ಜನಸಂಖ್ಯೆ ೪,೮೩,೦೦೦. (೩) ಮಧ್ಯಪ್ರಾಂತದಲ್ಲಿ ೧೫ ಸಂಸ್ಥಾನಗಳು ವಿಲೀನವಾಗಿವೆ. ಅವುಗಳ ವಿಸ್ತಾರ ೩೮೧೫೧ ಚ. ಮೈಲು; ಜನಸಂಖ್ಯೆ ೪೦,೬೪,೦೦೦. (೪) ಒರಿಸಾ ಪ್ರಾಂತದಲ್ಲಿ ೨೫ ಸಂಸ್ಥಾನಗಳು ಲೀನವಾಗಿವೆ. ಅವುಗಳ ವಿಸ್ತಾರ ೧೮೦೦೦ ಚದುರ ಮೈಲು, ಜನಸಂಖ್ಯೆ ೩೦,೨೫,೮೦೦ (೫) ಪೂರ್ವ ಪಂಜಾಬದಲ್ಲಿ ೨೨೬ ಚದುರ ಮೈಲು ವಿಸ್ತಾರವುಳ್ಳ ಮತ್ತು ೨೮೦೦೦ದಷ್ಟು ಜನಸಂಖ್ಯೆಯ ಲೋಹಾರೂ ಎಂಬ ಒಂದೇ ಸಂಸ್ಥಾನ ವಿಲೀನಗೊಂಡಿದೆ (೬) ಸಿಮುಲಾ ಮತ್ತು ಕಾಶ್ಮೀರ ಇವುಗಳ ನಡುವಿನ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುವಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟದ್ದು)

ಮುಖ್ಯ ಕಚೇರಿ: "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ತೆತ್ತ ಮೂಲಧನ ರೂ. ೭,೭೧,೦೦೦/— ಕ್ಕೂ ಮಿಕ್ಕಿದೆ.

ಕಾಯ್ದಿರಿಸಿಡಲ್ಪಟ್ಟ ನಿಧಿ ರೂ. ೧,೦೦,೦೦೦/— ಕ್ಕೂ ಮಿಗಿಲಾಗುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ರಿಂದ ೩ ಸಲೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣೈ
ಮೆನೆಜಿಂಗ ಡ್ಯಾರೆಕ್ಟರ

ರು ಹರತಾಳವನ್ನಾಚರಿಸುವ ಪರಿಣಾಮ ಹಾಕಿಕೊಂಡಿರುತ್ತಾರಷ್ಟೇ, ಈ ಹರತಾಳದಿಂದ ಸರಕಾರಿ ವಗೈರೆ ಕೆಲಸಗಳಿಗಾಗಿ ಬಂದ ಪರಸ್ಥ ಜನರಿಗೆ ಚಹಾ ತಿಂಡಿ ಮೊದಲಾದವು ಸಿಗದೆ ಬಹಳ ಕಷ್ಟವಾಗುತ್ತದೆಂತಲೂ, ಹೊಟ್ಟೆ ಹೊಟ್ಟೆಗೆ ಕಾಳು ಮುಂತಾದ್ದು ಒಯ್ದು ಜೀವನ ಮಾಡಬೇಕಾದ ಬಡ ಜನರು ಸಹ ಬಳಲಬೇಕಾಗುತ್ತದೆಂತಲೂ, ಮಹೇಶ್ವರ ಸ್ವರದಾರ್ಥ ಕ್ರೈರಾಟಿಯ ಮೇಲೆ ನಡೆಯುವ ಅಥವಾ ದುಷ್ಟಾತ್ಮರು ಹಾಕಿಕೊಟ್ಟಿರುವ [illegible] ವಿಧಾಯಕ [illegible] ಮಾಡುವ ಇಲ್ಲವೆ ಮಹಾತ್ಮರ [illegible] ಮಾಡುವ [illegible] ಸುಬುದ್ಧ ವರ್ತಕರ [illegible] ಕೊಳ್ಳದೆ ಜನೋಪದ್ರವಿ ಹರತಾಳವನ್ನಾಚರಿಸುವುದು ಅನುಚಿತವೆಂತಲೂ [illegible] ವರ್ತಕ ಸಂಘದವರು [illegible] ವಿಚಾರ ಶೀಲರಾಗಿ ಅವರ ಸೂಚನೆಯಿದೆ

ಹೊನ್ನಾವರ— (೩ ೪ ೭ ೪೮)

ಇಲ್ಲಿಯ ರೆಸಿಡೆಂಟ ಮ್ಯಾಜಿಸ್ಟ್ರೇಟ [illegible] ಒಂದು [illegible] ಬಂಧದಲ್ಲಿ [illegible] ಮಾಡಿದ್ದಾರೆಂದು ಸುದ್ದಿ [illegible]

[illegible] ವದಿಲ್ಲೆಂದು ದೂರು ಕೇಳಿ ಬರುತ್ತಿದೆ

[illegible] ಕೊಲೆಗಾರನ [illegible] ಈ [illegible] ಪೋಲೀಸರ ದಕ್ಷತೆಯಿಂದಿರಬೇಕು

(ತಾ ೨೯ ೬-೪೮) [illegible] ಇಲ್ಲಿಯ [illegible] ಕಟಿನ [illegible] ಕೋಟಿಯ [illegible] ಅಧಿಗಳಿಗೆ [illegible]

ಗೇರಸಪ್ಪೆ— (೩ ೭ ೬)

ಇಲ್ಲಿಯ [illegible] ಲೋಕಲ್ ಬೋರ್ಡ ಧರ್ಮ [illegible] ಗಳು ಒಡೆದು ಹೋಗಿವೆ ಒಳಗೆಲ್ಲ ಸೋರುತ್ತಿವೆ ಬೋರ್ಡಿನವರ ಲಕ್ಷ ಅತ್ತ ಹೊರಳುವದಿಲ್ಲವೇಕೆ?

ಇಲ್ಲೊಂದು ಚಿಕಿತ್ಸಾಲಯ ತೆರೆಯಬೇಕೆಂದು ಆಲೋಚಿಸಿ ಹೋದ ವರ್ಷ ಅಧಿಕ [illegible] ಹೋಗಿದ್ದರು ಮುಂದೇನಾಯಿತೆಂಬುದು ತಿಳಿದಿಲ್ಲ ಈ ಸೀಮೆಯಲ್ಲಿ ಒಂದು ಚಿಕಿತ್ಸಾಲಯದ ಆವಶ್ಯಕತೆ ಬಹಳ ಇಂಟು

ಇಲ್ಲಿಯ ಟಪಾಲ ಬಟವಡೆ ಹೊನ್ನಾವರದಿಂದಆಗುತ್ತಿದೆ ಇಲ್ಲಿಯ ಬಹಳಷ್ಟು ಜನರು ಪರಸ್ಥಳಗಳಲ್ಲಿರುತ್ತಾರೆ ಅವರು ತಮ್ಮ ಮನೆಯವರಿಗೆ [illegible] ಮಾಡಿ [illegible] ಆದರೆ ಟಪಾಲ ಬಟವಡೆಯು [illegible] ಒಂದಾವರ್ತಿ [illegible] ಹೆಚ್ಚಿಗೆ [illegible] ಗಳು ಸಿಗಲಿಕ್ಕೆ ವಾರಗಟ್ಟಲೆ [illegible] ಸರಕಾರದವರು ಇಲ್ಲಿಂದ ಟಪಾಲಕಟ್ಟೆ ತೆರೆದರೆ ಬಹಳ ಅನುಕೂಲವಾದೀತು

ಭಟಕಳ— (೩ ೩೦ ೬-೪೮)

ಮೊನ್ನೆ ಸಂಜೆ ಇಲ್ಲಿಯ [illegible] ಅಂಗಡಿಯ [illegible] ದೀಪ ಹಚ್ಚುವದಕ್ಕಾಗಿ ನರೆಯ ಅಂಗಡಿಯೊಂದರಿಂದ ಬಂದಿಷ್ಟು ಸ್ಪಿರಿಟ ತರತಿದ್ದಾಗ ಆಕಸ್ಮಾತ್ [illegible] ಅವನನ್ನು ನಡುಮಾರ್ಗದಲ್ಲಿ ಹಿಡಿದು [illegible] ಮಾಡಿದ್ದಾರಂತೆ [illegible] ಹಿಡಿಯುವದನ್ನು ಬಿಟ್ಟು [illegible] ಸ್ಪಿರಿಟ ಹಿಡಿಯು[illegible] ಕಂಡು ಜನರು ಚಕಿತರಾಗಿದ್ದಾರೆ

ಕಾರವಾರ— (೩ ೧-೭ ೪೮)

ಈ ಜಿಲ್ಲೆಯಲ್ಲಿ ೧೦೦೦೦ ಯಿಂದ ಹೆಚ್ಚಿಗೆ ಜನಸಂಖ್ಯೆಯುಳ್ಳ [illegible] ಗ್ರಾಮಗಳಲ್ಲಿ [illegible] ಬೋರ್ಡಿನವರು ತಾ ೧-೬ ೧೯೪೮ರಿಂದ ಒತ್ತಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ಅಮಲಿನಲ್ಲಿ ತಂದಿದ್ದಾರೆ [illegible] ಪದ್ಧತಿಯಲ್ಲಿ ಈ ಯೋಜನೆ ಅಮಲಿನಲ್ಲಿ [illegible] ಆದಕ್ಕೆ [illegible] ವಯಸ್ಸಿನ [illegible] ಮಕ್ಕಳನ್ನು ಶಾಲೆಗೆ ಕಳಿಸಬೇಕು. ಒತ್ತಟ್ಟಿಗೆ ಜಿಲ್ಲೆಯೊಳಗಿನ ಎಲ್ಲ ಮಕ್ಕಳು ಬೇಗನೆ [illegible] ತಮ್ಮ ಒಪ್ಪಿಗೆ ಕೊಡಬೇಕೆಂದು ಜಿಲ್ಲಾ ಲೋಕಲ ಬೋರ್ಡಿನವರು ಬಿನ್ನೈಸುತ್ತಾರೆ

ಈ ಜಿಲ್ಲೆಯಲ್ಲಿ, ಪಟ್ಟಣಗಳೊಳಗಾಗಿ ೧೭ ಮತ್ತು [illegible] ೪ ಹೀಗೆ ಅಂತು ೧೧೩ ಅಗ್ಗದರದ ಅಂಗಡಿಗಳು ತೆರೆಯಲ್ಪಟ್ಟಿವೆ ಇಷ್ಟುದಿನ ಈ ಅಂಗಡಿಗಳಲ್ಲಿ ರೂ ೧೫೦ ಕ್ಕಿಂತ ಕಡಿಮೆ ಮಾಸಿಕ ಸಂಬಳ ಇಲ್ಲವೆ [illegible] ಉತ್ಪನ್ನವಿದ್ದವರಿಗೆ ಮಾತ್ರ ಕಾಳು ಸಿಗುತ್ತಿತ್ತು [illegible] ಈ [illegible] ಮಾಸಿಕ ಉತ್ಪನ್ನವಿರುವವರಿಗೂ [illegible] ಕೊಡತಕ್ಕದ್ದೆಂದು [illegible] ಇನ್ನೊಂದು ಸಂಗತಿಯೆಂದರೆ, ಈ [illegible] ಮಕ್ಕೆ ಜೋಳದ ವಿರುದ್ಧ [illegible] ಅಂತು [illegible] ಅರ್ಧದಷ್ಟು ಅಕ್ಕಿ ಕೊಡಬೇಕೆಂದು [illegible] ಆಜ್ಞೆ ಮಾಡಿರುತ್ತಾರೆ

ಯಲ್ಲಾಪುರ— (ತಾ ೧-೭-೧೯೪೮)

ಇಲ್ಲಿಯ [illegible] ತಾ [illegible] ೧೯೪೮ನೇ ದಿನ [illegible] ಅಧ್ಯಕ್ಷತೆಯಲ್ಲಿ ಸೇರಿದ ನಾಗರಿಕರ [illegible] ನೇಮಿಸಲ್ಪಟ್ಟಿದೆ [illegible] ಸಮಿತಿಯ ಅಧ್ಯಕ್ಷರಿ [illegible] ಕಾರ್ಯದರ್ಶಿ [illegible] ಕಟ್ಟಿಸಬೇಕೆಂದೂ ಸಭೆಯಲ್ಲಿ ನಿರ್ಣಯವಾಗಿದೆ

ಮುಂಡಗೋಡ— (೩ ೧-೭-೪೮)

ಇಲ್ಲಿಯ [illegible] ಶಾಲೆಯ [illegible] ವಿದ್ಯಾರ್ಥಿ [illegible] ಮಕ್ಕಳು [illegible] ಮನೆಯ [illegible] ವಿಚಾರಿಸುವದು ಆಗತ್ಯವಿದೆ ಬೋರ್ಡಿನವರು ಇತ್ತ ಲಕ್ಷ ಕೊಡುವರೇ? [illegible] ಆಗತ್ಯವಿದೆ [illegible] ಬೋರ್ಡಿನವರು [illegible]

ಈ [illegible] ಬೋರ್ಡ [illegible] ಕಳೆದ ವರ್ಷದ ವರೆಗೆ [illegible] ಹೆಚ್ಚಿಗೆ ಕಲಿಸುವ ಏರ್ಪಾಟು [illegible] ಶಾಲೆಯಲ್ಲಿ ಇದಿಲ್ಲ ಕಳೆದ ವರ್ಷ ಮಾತ್ರ [illegible] ಫಲವಾಗಿ ಇಲ್ಲಿಯ ಶಾಲೆಯಲ್ಲಿ [illegible] ಈ ವರ್ಷ [illegible] ಆಯಿತು [illegible] ಆದರೆ ಬೋರ್ಡಿನವರು ಅದಕ್ಕೆ ಒಪ್ಪುವದಿಲ್ಲ! ಹೀಗಾಗಿ [illegible] ಆಯಿತು, [illegible] ವಿದ್ಯಾರ್ಥಿಗಳು [illegible] ಕಲಿಯುವ ಅನುಕೂಲತೆಯಿಲ್ಲದೆ [illegible] ಗಳಾಗಿ ಮನೆಯಲ್ಲೇ ಕೂಡ್ರುವ ಪ್ರಸಂಗ ಬಂದಿದೆ ವಿದ್ಯಾಧಿಕಾರಿಗಳು ಇಲ್ಲಿಯ ಶಾಲೆಯಲ್ಲಿ ಮುಲ್ಕಿಯ ವರೆಗೆ [illegible] ಏರ್ಪಾಟು ಮಾಡಬಾರದೇ?

ಮುಂಡಗೋಡ— (೩ ೩-೬-೧೯೪೮)

ಇಂದೂರ ಗ್ರಾಮದಲ್ಲಿ ಅಂತು ೧೨೦೦ ಎಕರೆ ಪಡ ಬಿದ್ದಿತ್ತು, ಸರಕಾರದವರು ಟ್ರೈಕ್ಟರದ ಸಹಾಯದಿಂದ ಈ ವರ್ಷ ೨೫೦ ಎಕರೆ ಪಸನಗೊಳಿಸಿ ಸಾಗುವಳಿಗೆ ತಯಾರಿ [illegible] ಅದರಲ್ಲಿ ಸಿಂಧ ನಿರಾಶ್ರಿತರು ಈಗಾಗಲೇ ೨೦೦ ಎಕರೆ ಭೂಮಿಯಲ್ಲಿ ಬಿತ್ತಿಗೆ ಮಾಡಿರುತ್ತಾರೆ ಉಳಿದ ೫೦ ಎಕರೆ ಭೂಮಿಯಲ್ಲಿ ಜೋಳ, ತೊಗರಿ, ಮುಂತಾದ್ದು ಬೆಳೆಸುವ ಸಂಕಲ್ಪವನ್ನು ಈ ನಿರಾಶ್ರಿತರು ಮಾಡಿದ್ದಾರೆ ಇಂದೂರ ಗ್ರಾಮದಲ್ಲಿ ನೆಲಸಲು ಬಂದ [illegible] ನಿರಾಶ್ರಿತರು [illegible] ಹೋದದ್ದು ನಿಜ ಆವಾಗ ಬೇಸಾಯದ ಹೋರೆ [illegible] ಅವರು [illegible] ಈಗ ಉಳಿದವರು [illegible] ಸ್ಥಾನಿಕ [illegible] ಸಮಾಧಾನದಿಂದ ಅವರು ಬೇಸಾಯವನ್ನು ಯಶಸ್ವಿಯಾಗಿ ಮಾಡಲು ನಿರ್ಧರಿಸಿದ್ದಾರೆ, ಮತ್ತು ಸಹಕಾರದಿಂದ ವರ್ತಿಸುತ್ತಿದ್ದಾರೆ ಎಂದು ಮುಂತಾಗಿ ಜಿಲ್ಲಾ [illegible] ಮಂಡಳದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಹೈದರಾಬಾದದಲ್ಲಿ.

(ನಿರೀಕ್ಷಕನು ಬರೆದುದು)

ನಿಜಾಮರು ಪುನಃ ಹಿಂದ ಸರಕಾರದೊಡನೆ ಮಾತುಕತೆ ನಡಿಸಬಯಸುತ್ತಾರೆಂಬುದು ದಿಟವಲ್ಲ ಇತ್ತ ಸಂಧಾನದ ಸೋಗು ನಡಿಸಿ ಅವರು ಅತ್ತ ಯುದ್ಧದ ಸಿದ್ಧತೆ ಮಾಡುತ್ತಿದ್ದಾರೆ ಪಾಕಿಸ್ತಾನದಿಂದ ಅವರು ಕಳ್ಳತನದಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳುತ್ತಿದ್ದಾರೆಂದು ಪ್ರಕಟವಾದ ಸುದ್ದಿಯನ್ನು ನಿಜಾಮರ ಸರಕಾರವು ನಿರಾಕರಿಸಿತ್ತು. ಆದರೆ ಜೂನ ತಾ ೨ರಿಂದ ಜೂನ ತಾ ೧೪ರ ವರೆಗೆ ೬-೭ ವಿಮಾನಗಳು ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡು ಹೈದರಾಬಾದದಲ್ಲಿ ಇಳಿದದ್ದರ ವಿವರಗಳನ್ನು ಎಸೋಸಿಯೇಟೆಡ್ ಪ್ರೆಸ್ ಸುದ್ದಿ ಸಂಸ್ಥೆಯು ಹೊರಗೆಡಹಿದೆ! ಹಿಂದುಸ್ಥಾನ ಸರಕಾರವು ಈಗ ಹೈದರಾಬಾದದ ವಿರುದ್ಧ ಉಗ್ರ ಕ್ರಮಗಳನ್ನು ಕೈಕೊಳ್ಳಲಾರಂಭಿಸಿದೆ ನಿಜಾಮರನ್ನು ಹಣ್ಣಿಗೆ ತರಲು ಕೂಡಲೆ ಕ್ರಮ ಕೈಕೊಳ್ಳದಿದ್ದರೆ ಅನರ್ಥವಾದೀತೆಂದೂ, ಹಿಂದುಮುಂದಿನ ವಿಚಾರದಲ್ಲಿ ಕಾಲಹರಣ ಮಾಡದೆ ಹಿಂದ ಸರಕಾರವು ಕೂಡಲೇ ಉಗ್ರ ಉಪಾಯಗಳನ್ನು ಯೋಜಿಸುವದು ಅವಶ್ಯವಿರುತ್ತದೆಂದೂ ನೇಮಸ್ತ ಪಕ್ಷದ ಮುಂದಾಳುಗಳಾದ ಪಂ| ಹೃದಯನಾಥ ಕುಂಝ್ರುರು ಇವರು ಸದ್ಯಕ್ಕೇ ಹೈದರಾಬಾದ ಗಡಿಯ ಮೇಲಿನ ಪರಿಸ್ಥಿತಿಯನ್ನು ಸ್ವತಃ ಅಭ್ಯಸಿಸಿ ಘೋಷಿಸಿದ್ದಾರೆ ಹಿಂದುಸ್ಥಾನ ಸರಕಾರವು ಈಗಾಗಲೇ ಹೈದರಾಬಾದಕ್ಕೆ ಆರ್ಥಿಕ ದಿಗ್ಬಂಧನ ಹಾಕಿದ್ದುಂಟು ಈಗ ಭಾರತ ಸರಕಾರವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಿಂದುಸ್ಥಾನದ ಯಾವದೇ ವಿಮಾನವು ಹೈದರಾಬಾದದಲ್ಲಿ ಇಳಿಯಕೂಡದೆಂದು ಕಟ್ಟಪ್ಪಣೆ ಮಾಡಿ, ಹೈದರಾಬಾದದಲ್ಲಿರುವ "ಡೆಕ್ಕನ ಏರವೇಸ್" ಎಂಬ ವಿಮಾನ ಕಂಪನಿಗೆ ಕೊಟ್ಟ ವಿಮಾನಗಳ ಓಡಾಟದ ಪರವಾನೆಯನ್ನೂ ರದ್ದುಗೊಳಿಸಿದೆ ಆದರಿಂದ ಹೊರಗಿನ ವಿಮಾನಗಳು ಹೈದರಾಬಾದಕ್ಕೆ ಹೋಗುವಂತಿಲ್ಲ, ಹೈದರಾಬಾದದ ವಿಮಾನಗಳು ಹೊರಬರಲೊಲ್ಲವು ಈ ದಿಗ್ಬಂಧನದಿಂದ ಹೈದರಾಬಾದದಲ್ಲಿ ಈಗ ಕಲ್ಲೆಣ್ಣೆಯ ಕೊರತೆ ವಿಶೇಷವಾಗಿದೆ ಕಳೆದ ಡಿಸೆಂಬರ ತಿಂಗಳಲ್ಲಿ ನಿಜಾಮರು ಒಂದು ಫರ್ಮಾನು ಹೊರಡಿಸಿ ತಮ್ಮ ರಾಜ್ಯದಲ್ಲಿ ಹಿಂದೀ ಚಲನದ ವ್ಯವಹಾರವನ್ನು ನಿರ್ಬಂಧಿಸಿದ್ದರು ಹಿಂದ ಸರಕಾರವು ಪ್ರತಿಬಂಧಿಸಿದರೂ ನಿಜಾಮರು ಆ ನಿರ್ಬಂಧ ಹಿಂತೆಗೆದುಕೊಂಡಿಲ್ಲ ನಿಜಾಮರು ಪಾಕಿಸ್ತಾನಕ್ಕೆ ಕಡಕೊಟ್ಟ ೨೫ ಕೋಟಿ ರೂ ಗಳ ಹಿಂದ-ಸರಕಾರದ ಸಾಲ-ಪತ್ರಗಳನ್ನು ತಾವು ವಟಾಯಿಸಲಿಕ್ಕಿಲ್ಲೆಂದು ನಿಜಾಮರು ವಚನ ಕೊಟ್ಟಿದ್ದರು ಆದರೆ ಅವು ಈಗ ಮಾರಾಟವಾದ ಸುದ್ದಿಯುಂಟು ಆದರಿಂದ ಹಿಂದ-ಸರಕಾರವು ಸಂತಾಪಗೊಂಡು ನಿಜಾಮರ ಹಾಗೂ ನಿಜಾಮ ಸರಕಾರದ ಹೆಸರಲ್ಲಿರುವ ೧೦೦ ಕೋಟಿ ರೂ ಗಳ ಸಾಲ ಪತ್ರಗಳನ್ನು ವಟಾಯಿಸಕೂಡದೆಂದು ರಿಝರ್ವ ಬೇಂಕಿಗೆ ಕಟ್ಟಪ್ಪಣೆ ಮಾಡಿದೆ ಅದೇ ಮೇರೆಗೆ ಹೈದರಾಬಾದಕ್ಕೆ ಹೊರಗಿಂದ ಚಿನ್ನ-ಬೆಳ್ಳಿಗಳೂ, ಹಿಂದೀ ಚಲನವೂ ಹೋಗದಂತೆ ತಡೆಹಾಕಿಟ್ಟಿದೆ ನಿಜಾಮರ ಶಿಷ್ಟರ ಸಮ್ಮತಿಯಿಂದ ಕಳೆದ ತಿಂಗಳಲ್ಲಿ ಭಾರತ ಸರಕಾರವು ಸಿದ್ಧಪಡಿಸಿದ ಒಪ್ಪಂದದ ಕರಡನ್ನು ತಾವು ಹಿಂತೆಗೆದುಕೊಳ್ಳಲಿಲ್ಲೆಂದೂ ನಿಜಾಮರು ಎಂದು ಬೇಕಾದಾಗ ಅದಕ್ಕೆ ಸಹಿ ಹಾಕಬಹುದೆಂದೂ ಪಂ|| ಜವಾಹರಲಾಲರು ಹಿಂದೆ ಹೇಳಿದ್ದರಷ್ಟೇ ಆ ಕರಡನ್ನು ಹಿಂತೆಗೆದುಕೊಳ್ಳುವ (ಅಂದರೆ ನಿಜಾಮರಿಗೆ ಹಿಂದ ಸರಕಾರವು ಕೊಡ ಬಯಸಿದ ಸವಲತ್ತುಗಳನ್ನು ರದ್ದುಗೊಳಿಸುವ) ವಿಚಾರ ದಿಲ್ಲಿಯಲ್ಲಿ ನಡೆದ ಸುದ್ದಿಯೂ ಉಂಟು ಒಟ್ಟಾರೆ ಹಿಂದ ಹೈದರಾಬಾದ ಕುಸ್ತಿಗೆ ಈಗ ಪ್ರಾರಂಭವಾಗಿದೆ ಆ ಕುಸ್ತಿಯ ಪರಿಣಾಮವನ್ನೂ, ಸ್ಥಿತ್ಯಂತರಗಳನ್ನೂ ನಾವು ನಿರೀಕ್ಷಿಸುತ್ತಿರುವೆವು

ಸ್ವೀಕಾರ ಮತ್ತು ವಿಮರ್ಶೆ

ಉಡುಪಿಯ ಶ್ರೀ ಕೃಷ್ಣಾಪುರ ಮಠದ ಗುರುಪರಂಪರೆ. (ಪ್ರಕಾಶಕರು — ಶ್ರೀ ಕೆ. ರಾಜಗೋಪಾಲಾಚಾರ್ಯರು, ಕರಂಬಳ್ಳಿ, ಉಡುಪಿ) ಅಂದವಾಗಿ ಮುದ್ರಿಸಿದ ಹಾಗೂ ಕೆಲವು ದರ್ಶನೀಯ ಛಾಯಾ ಚಿತ್ರಗಳಿಂದ ಒಡಗೂಡಿದ ಈ ಚಿಕ್ಕ ಹೊತ್ತಗೆಯಲ್ಲಿ ಶ್ರೀ ಕೃಷ್ಣಾಪುರ ಮಠದ ಎಲ್ಲ ಗುರುಗಳ ಇತಿಹಾಸ ಕೊಡಲಾಗಿದೆ. ಆಯಾ ಗುರುಗಳು ಮಾಡಿದ ಕಾರ್ಯ, ಅವರ ನಿರ್ಯಾಣ ತಿಥಿ, ವೃಂದಾವನಸ್ಥರಾದ ಸ್ಥಳ ಮುಂತಾದ ಮಾಹಿತಿಯೂ ಇದರಲ್ಲಿ ಕೊಡಲ್ಪಟ್ಟಿದೆ. ಈ ಪುಸ್ತಕ ಬೇಕಾದವರು ೧ ಆಣೆಯ ಅಂಚೆ-ಚೀಟಿಗಳನ್ನು ಪ್ರಕಾಶಕರಿಗೆ ಕಳಿಸಿಕೊಟ್ಟು ಇದನ್ನು ಉಚಿತವಾಗಿ ಪಡೆಯಬಹುದು

ಪ್ರೊಪ್ರೈಟರ ಇನ್ಶ್ಯುರನ್ಸ ಕಂಪನಿ, ಮಂಗಳೂರ ಈ ಸಂಸ್ಥೆಯ ೧೯೪೭ನೇ ಸಾಲಿನ ಕಾರ್ಯದ ವರದಿ— ವರದಿಯ ವರುಷದಲ್ಲಿ ಕಂಪನಿಯು ರೂ ೨೮,೬೬,೫೦೦ ಮೊತ್ತದ ೧೭೪೬ ಹೊಸ ವಿಮಾ-ಪತ್ರಗಳನ್ನು ಕೊಟ್ಟಿದೆ. ೧೯೪೭ರಲ್ಲಿ ರೂ ೨೧,೬೬,೧೦೦ರ ಕಾರ್ಯವಾಗಿತ್ತು. ಕಂತಿನ ಹಣ, ಬಡ್ಡಿಯ ಉತ್ಪನ್ನ ವಗೈರೆ ಆಯಾದ ಮೊತ್ತವು ಈ ವರದಿಯ ವರುಷದಲ್ಲಿ ಹಿಂದಿನ ವರ್ಷಕ್ಕಿಂತ ರೂ ೧,೦೭,೩೫೦ ರಷ್ಟು ಹೆಚ್ಚಾಗಿದೆ. ಕಂಪನಿಯ ಜೀವ ವಿಮಾ ನಿಧಿಯು ತಾ ೩೧-೧೨-೪೭ಕ್ಕೆ ರೂ ೧೦,೭೦,೯೦೭ ರಷ್ಟಿತ್ತು. ಕಂಪನಿಯು ಭರದಿಂದ ಪ್ರಗತಿ ಹೊಂದುತ್ತಿರುವದೆಂದು ಹೇಳಲಡ್ಡಿಯಿಲ್ಲ

ಸಂಘಟನೆಯ ಗುಟ್ಟು — (ಲೇಖಕರು ಡಾ॥ ಸು. ಹರೀಶ್ವರ. ಪ್ರಕಾಶಕರು, ರಾ॥ ಕಂ ಬಾ ಮನಗೋಳಿ, ಹುಬ್ಬಳ್ಳಿ, ಬೆಲೆ ೧೨ ಆ.) ಸಂಘಟನೆಯ ಮಹತ್ವವನ್ನು ಕುರಿತು ಈಗ ಯಾರಿಗೂ ಹೇಳಬೇಕಾಗಿಲ್ಲ ಎಲ್ಲಾ ಕಾರ್ಯಕ್ಷೇತ್ರದಲ್ಲಿ ಸಂಘಟನೆ ಬೇಕು. ಆದರೆ ಆ ಸಂಘಟನೆ ಮಾಡುವದು ಹೇಗೆ ಎಂಬುದೇ ಒಂದು ಪ್ರಶ್ನೆ. ಹಿಂದೂ-ಸ್ವಾತಂತ್ರ್ಯದ ಸಂಗ್ರಾಮಕ್ಕಾಗಿ ಹಿಂದುಸ್ಥಾನ ಸೇವಾದಳದಂಥ ಸುಸಂಘಟಿತ ಸಂಸ್ಥೆಯನ್ನು ಕಟ್ಟಿದ ಮತ್ತು ಯಶಸ್ವಿ ಸಂಘಟಕರೆಂದು ಕೀರ್ತಿಪಡೆದಿರುವ ಡಾ॥ ಹರ್ಡೀಕರವರು ೬೨ ಪುಟಗಳ ಈ ಚಿಕ್ಕ ಪುಸ್ತಕದಲ್ಲಿ ಸಂಘಟನೆಯ ಗುಟ್ಟನ್ನು ತಿಳಿಸಿದ್ದಾರೆ. ಗ್ರಂಥದ ಪೂರ್ವಾರ್ಧದಲ್ಲಿ ಸಂಸ್ಥೆ ಕಟ್ಟುವ ಕ್ರಮವನ್ನು ವಿವರಿಸಿದ್ದಾರೆ, ಉತ್ತರಾರ್ಧದಲ್ಲಿ, ಅನೇಕರನ್ನು ಅಲಿಸಿಕೊಂಡು ಸಂಸ್ಥೆಯನ್ನು ಬೆಳಸಲಿ ಮಾಡುವ ರೀತಿಗಳನ್ನು ತೋರಿದ್ದಾರೆ. ಸಂಘಟನಾ ಕಾರ್ಯ ಮಾಡಬಯಸುವವರಿಗೆ ಒಳ್ಳೇ ಮಾರ್ಗದರ್ಶಕ ಪುಸ್ತಕವಿದು

ಜಾಹೀರ ನೋಟೀಸಿಗೆ ಉತ್ತರ.

ಗಣಪತಿ ಶಿವರಾಮ ಹೆಗಡೆ ಐನಕೈ (G S Hegde Ainkai) ಇವರು "ಕಾನಡಾವೃತ್ತ"ದ ತಾ ೧೭-೫-೪೮ನೇ ಸಂಚಿಕೆಯಲ್ಲಿ ಪ್ರಕಟಿಸಿದ ಜಾಹೀರ ನೋಟೀಸಿನಲ್ಲಿ ಆಧಾರಿತ ಭಕ್ತೀಗಪತ್ರವು ನಿಮಿತ್ತವಾಗಿ ನಿರ್ಮಿಸಿದ ಅನಿಂಥು ದಸ್ತಾಗಿರುತ್ತದೆ ಇದನ್ನು ಹೊನ್ನಾವರ ಸಿವ್ಹಿಲ ಕೋರ್ಟ ದಾವಾ ನಂ ೨೪೫/೧೯೪೫ನೇದರ ಕಾಗದ ಪತ್ರಗಳಲ್ಲಿ ಹಾಜರುಮಾಡಿ ಒಪ್ಪಿರುವರು ಭೂಮಿಯು ಖಾತೆ, ಕಬಜಾ ನನ್ನದೇ ಇರುತ್ತದೆ. ಸದರಿ ವ್ಯಾಜ್ಯದ ಮತ್ತು ನನ್ನ ಅವರ ಮಧ್ಯದ ನಂತರದ ವ್ಯವಹಾರಗಳ ಸಂದರ್ಭದಲ್ಲಿ ಮತ್ತು ನನ್ನ ಜೀವನಕ್ರಮ ಸದರಿ ಅಂದ ಪ್ರಸಕ್ತಿಯಲ್ಲಿ ನನಗೆ ಈಗಾಗಲೇ ನನ್ನ ಭೂಮಿಗೆ ಬಾಧಕವಾದ ರೂ ೪ ಸಾವಿರಗಳ ವರೆಗೆ ಸಾಲವಾಗಿದೆ. ಆ ಸಾಲಕ್ಕೆ ನನ್ನ ಭೂಮಿ ಮಾರಲು ನನಗೆ ಅಧಿಕಾರವಿದೆ ಆವತ್ತಿನಲ್ಲಿ ನೇರವಾಗದ ಆಕ್ಷೇಪ ಉಪಟಳದಿಂದ ಈ ಹಕ್ಕಿಗೆ ಬಾಧೆ ಬರಲಾರದು

ಹೆಗ್ಗಾರಕೈ (ತಾ ಸಿದ್ದಾಪುರ), ತಾ. ೨೯-೬-೪೮

● ಈ ಎ ಕೆ ಗುರ್ಜರ ಮಹಾಂಕಾಳಿ ಕೋಂ ಶಿವರಾಮ ಹೆಗಡೆ ಇವರದಾಗಿರುತ್ತದೆ.

ಬ್ರಾಹ್ಮಣನು ಯಾರು? ಯಾರಲ್ಲ? (ಸಂಗ್ರಹ ಮತ್ತು ಪ್ರಕಾಶಕ — ಶ್ರೀ ಐಲ್ಯಂಡ ಸುಬ್ಬರಾಯರು, ಧಿವಾನ್‌ಸೊಸೈಟಿ, ಮುದ್ರಣ ೨೩೪ ಆ) ಶ್ರೀ ಸುಬ್ಬರಾಯರು ಮಹಾಭಾರತಾದಿ ಪ್ರಾಚೀನಗಳೊಳಗಿಂದಲೂ, ಬೇರೆ ಬೇರೆ ಸ್ಮೃತಿಗಳಿಂದಲೂ ಗೀತೆಗಳಿಂದಲೂ ೧೪೧ ವಚನಗಳನ್ನು ಉದ್ಧರಿಸಿ ಮತ್ತು

An Explanatory Note on Special Tax under the Bombay Sales Tax Act.

ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಅಕ್ಟನ್ವಯ ವಿಶಿಷ್ಟ ಕರದ ಮೇಲಿನ ವಿವರಣಾತ್ಮಕ ಟಿಪ್ಪಣಿಯು

ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯಕ ಆಕ್ಟಿನಲ್ಲಿ ಸನ್ ೧೯೪೮ನೇ ಇಸ್ವಿಯ ಎಪ್ರಿಲ್ ತಿಂಗಳ ೧ನೇ ತಾರೀಖಿನಿಂದ ಮಾಡಲಾದ ಸುಧಾರಣೆಗಳಿಗನುಸಾರವಾಗಿ—

(೧) ಕೃತ್ರಿಮ ರೇಶಿಮೆಯನ್ನು ಹಾಗೂ ರೇಶಿಮೆಯ ಪದಾರ್ಥಗಳನ್ನು ಒಳಗೊಂಡು ರೇಶಿಮೆ, ಹಾಗೂ

(೨) ರತ್ನಾದಿಗಳು ಅಮೌಲ್ಯ ಹರಳುಗಳು ಮತ್ತು ನಿಜವಾದ ಹಾಗೂ ಕಲ್ಚರ ಮುತ್ತುಗಳು ಇವುಗಳನ್ನೊಳಗೊಂಡ ಕೆಲವೊಂದು ಸರಕುಗಳ ಮಾರಾಟಗಳ ಮೇಲೆ ರೂಪಾಯಿಗೆ ಒಂದು ಆಣೆಯ ದರದಂತೆ ಒಂದು ವಿಶಿಷ್ಟ ಕರವನ್ನು ಕೊಡಬೇಕಾಗುತ್ತದೆ ಈ ಸರಕುಗಳ ವರ್ಗಗಳ ನಿಜವಾದ ವ್ಯಾಪ್ತಿಯು ಈ ಕೆಳಗಿನಂತೆ ಇರುತ್ತದೆ —

(೧) ರೇಶಿಮೆಯ ಪದಾರ್ಥ ಮುಂತಾಗಿ —

ಈ ಕೆಳಗಿನ ರೇಶಿಮೆಯ ಪದಾರ್ಥಗಳು ರೂಪಾಯಿಗೆ ಒಂದು ಆಣೆಯ ದರದಂತೆ ವಿಶಿಷ್ಟ ಕರಕ್ಕೆ ಪಾತ್ರವಿರುವವು

(ಅ) ರೇಶಿಮೆಯ ನೂಲಿನಿಂದ, ಕೃತ್ರಿಮ ರೇಶಿಮೆಯ ನೂಲಿನಿಂದ ಅಥವಾ ಇತರ ನೂಲಿನಿಂದ ತಯಾರಿಸಲಾದ ಯಾವ ಅರಿವೆಯಲ್ಲಿ, ಕಾಲುಚೀಲಗಳಲ್ಲಿ ಅಥವಾ ಇತರ ಪದಾರ್ಥಗಳಲ್ಲಿ ಉಪಯೋಗಿಸಲಾದ ರೇಶಿಮೆಯ ಹಾಗೂ ಕೃತ್ರಿಮ ರೇಶಿಮೆಯ ಪ್ರಮಾಣವು ನೂರಕ್ಕೆ ೫೦ಕ್ಕಿಂತ ಕಡಿಮೆ ಇರುವದಿಲ್ಲವೋ ಅಂಥ ಯಾವದೇ ಅರಿವೆಯು ಇಲ್ಲವೆ ಕಾಲುಚೀಲಗಳು ಅಥವಾ ಇತರ ಪದಾರ್ಥಗಳು

(ಬ) ಯಾವತ್ತೂ "ಬನಾರಸೀ" ರೇಶಿಮೆಯಿಂದ ಅಥವಾ ಕೃತ್ರಿಮ ರೇಶಿಮೆಯಿಂದ ತಯಾರಿಸಲಾದ ವಸ್ತುಗಳು ಹಾಗೂ ಅಂಚುಗಳು ಮತ್ತು ಯಾವ ವಸ್ತ್ರಗಳಲ್ಲಿ ಬೆಳ್ಳಿಯ, ಬಂಗಾರದ ಅಥವಾ ಬಂಗಾರದ ಮುಲ್ಲಾಮಿನ ಎಳೆಯನ್ನು ರೇಶಿಮೆಯ ಅಥವಾ ಕೃತ್ರಿಮ ರೇಶಿಮೆಯ ಮೇಲ್ಮೈಯಲ್ಲಿ ಸುಂಡಿಸಲಾಗಿ ಅಥವಾ ಅಷ್ಟೇಯಾಗಿ ಹೆಣೆಯಲಾಗಿದೆಯೋ ಅಂಥ ಯಾವತ್ತೂ ಪ್ರಕಾರಗಳ ವಸ್ತುಗಳು

(ಕ) ಯಾವ ಇಂಡೋರಿನ ಹಾಗೂ ಜರಿಯ ಅಂಚುಗಳಲ್ಲಿ ಹಾಗೂ ಜರಿಯ ಪದಾರ್ಥಗಳಲ್ಲಿ ರೇಶಿಮೆಯ ಅಥವಾ ಕೃತ್ರಿಮ ರೇಶಿಮೆಯ ನೂಲಿನ ಮೇಲ್ಮೈಯನ್ನೊಳಗೊಂಡ ಬಂಗಾರದ ಹಾಗೂ ಬೆಳ್ಳಿಯ ಎಳೆಗಳು ಮತ್ತು ಸಾದಾ ರೇಶಿಮೆಯ ಹಾಗೂ ಕೃತ್ರಿಮ ರೇಶಿಮೆಯ ಎಳೆಗಳ ಪ್ರಮಾಣವು ಅಂಚಿಯ ಬಾಬತಿನಲ್ಲಿ ತೂಕದಲ್ಲಿ ನೂರಕ್ಕೆ ೫೦ಕ್ಕಿಂತ ಕಡಿಮೆ ಮತ್ತು ಅಂಚಿಯ ಬಾಬತಿನಲ್ಲಿ ಎಳೆಗಳ ಸಂಖ್ಯೆಗನುಸಾರವಾಗಿ ನೂರಕ್ಕೆ ೫೦ಕ್ಕಿಂತ ಕಡಿಮೆ ಇರುವದಿಲ್ಲವೋ ಅಂಥ ಇಂಡೋರಿನ ಹಾಗೂ ಜರಿಯ ಅಂಚುಗಳು ಹಾಗೂ ಜರಿಯ ಪದಾರ್ಥಗಳು

(ಡ) ರೇಶಿಮೆಯ ಅಥವಾ ಕೃತ್ರಿಮ ರೇಶಿಮೆಯ ಎಳೆಯನ್ನೊಳಗೊಂಡ ಯಾವ ಕಸೂತಿಯಲ್ಲಿ—ಅದರಲ್ಲಿ ಬೆಳ್ಳಿಯ ಹಾಗು ಇತರ ಎಳೆಗಳು ಹೆಣೆಯಲ್ಪಟ್ಟಿರಲಿ ಅಥವಾ ಹೆಣೆಯಲ್ಪಟ್ಟಿರದಿರಲಿ—ಉಪಯೋಗಿಸಲಾದ ರೇಶಿಮೆಯ ಅಥವಾ ಕೃತ್ರಿಮ ರೇಶಿಮೆಯ ಎಳೆಯ ಪ್ರಮಾಣವು ನೂರಕ್ಕೆ ೫೦ಕ್ಕಿಂತ ಕಡಿಮೆ ಇರುವದಿಲ್ಲವೋ ಅಂಥ ಕಸೂತಿಯು

(೨) ರತ್ನಾದಿಗಳು ಮುಂತಾಗಿ:—

ಕಂಕಣಾ, ಕಡಗ ಅಥವಾ ಬಳೆ, ಬಂಗಾರದ ಕಪ್-ಗುಂಡಿಗಳ ಜೋಡಣೆಗಳು, ಕೀಲಿಕೈ, ಸರ ಮುಂತಾದವುಗಳು ಅಥವಾ ಕೇವಲ ಧಾತುಗಳಿಂದ ಮಾಡಲ್ಪಟ್ಟ ಹಾಗೂ ಯಾವದೇ ಹರಳು ಅಥವಾ ಮುತ್ತುಗಳನ್ನೊಳಗೊಂಡಿರದ ಪಾತ್ರಗಳು "ರತ್ನಾದಿಗಳು" ಎಂಬ ಶಬ್ದದ ವ್ಯಾಪ್ತಿಯೊಳಗೆ ಬರುವದಿಲ್ಲ ಮತ್ತು ಅವುಗಳ ಮಾರಾಟಗಳು ರೂಪಾಯಿಗೆ ಅರ್ಧ ಆಣೆಯಂತೆ ಸಾಮಾನ್ಯ ಮಾರಾಟಗಳ ಮೇಲಿನ ಕರಕ್ಕೆ ಒಳಪಡುವವು ಆದರೆ ಒಂದು ಅಥವಾ ಹೆಚ್ಚು ಅಮೌಲ್ಯ ಹರಳುಗಳನ್ನು ಅಥವಾ ಮುತ್ತುಗಳನ್ನು (ಕೃತ್ರಿಮ ಹಾಗೂ ತಯಾರಿಸಿದ ಹರಳುಗಳನ್ನು ಹಾಗೂ ಕಲ್ಚರ ಮುತ್ತುಗಳನ್ನು ಹಿಡಿದು) ಒಳಗೊಂಡಿರುವ ಹಾಗೂ ವೈಯಕ್ತಿಕ ಅಲಂಕಾರದ ಸಲುವಾಗಿ ಉಪಯೋಗಿಸಲಾಗುವ "ಕೃತ್ರಿಮ ರತ್ನಾದಿಗಳ ಸಹಿತವಾದ ಬಂಗಾರದ ಅಥವಾ ಬೆಳ್ಳಿಯ ಅಥವಾ ಇತರ ಯಾವದೇ ಧಾತುವಿನ ಯಾವದೇ ಪದಾರ್ಥವು ಮತ್ತು ಕೇವಲ ಅಂಥ ಅಮೌಲ್ಯ ಹರಳುಗಳು ಹಾಗು ಮುತ್ತುಗಳು ರೂಪಾಯಿಗೆ ಒಂದು ಆಣೆಯ ದರದಂತೆ ವಿಶಿಷ್ಟ ಮಾರಾಟಗಳ ಮೇಲಿನ ಕರಕ್ಕೆ ಪಾತ್ರವಿರುವವು

ಮುಂಬಯಿ,
ತಾ ೨೮-೬-೪೮.

V. L. Gidwani.
ಡೆಪ್ಯುಟಿ ಕಮಿಶನರ, ಸೇಲ್ಸ ಟ್ಯಾಕ್ಸ.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೨೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬನ್ನಿ

ಉಡುಪಿ ಆಫೀಸು—
Post Box No. 10,
UDIPI, S Kanara

ಅನುವಾದಿಸಿ, ಬ್ರಾಹ್ಮಣನು ಯಾರು, ಅವನ ಧರ್ಮವೇನು ಅವನು ಏನು ತಿನ್ನಬಹುದು ಏನೂ ತಿನ್ನಬಾರದು ಇತ್ಯಾದಿ ವಿಷಯಗಳನ್ನು ೧೧ ಪ್ರಕರಣಗಳಲ್ಲಿ ವಿವರಿಸಿದ್ದಾರೆ ೧೨ನೇ ಪ್ರಕರಣ (ಪರಿಶಿಷ್ಟ)ದಲ್ಲಿ ಸಾತ್ವಿಕ ಭೋಜನ ಮಾತ್ತು ತಾಮಸ ಆಹಾರ ವಸ್ತುಗಳ ವಿವರಗಳನ್ನು ಕೊಟ್ಟಿದ್ದಾರೆ ಪ್ರತಿಯೊಬ್ಬ ಬ್ರಾಹ್ಮಣನು ಈ ಪುಸ್ತಕವನ್ನು ತನ್ನ ಬಳಿಯ ಲ್ಲಿಟ್ಟುಕೊಂಡು ಅದರಲ್ಲಿ ಹೇಳಿರುವ ಬ್ರಾಹ್ಮಣರ ಆದರ್ಶ ವನ್ನು ಸಾಧಿಸಲು ಪ್ರಯತ್ನಿಸಬೇಕಾಗಿ ಆರಿಕೆಯದೆ

ನಮ್ಮ ಆಹಾರ — (ಮುಂಬಯಿ ಸರಕಾರದ ನಗರಿಕ ಪೂರೈಕೆ ಇಲಾಖೆಯವರು ಪ್ರಕಟಿಸಿರುವ Our Diet ಎಂಬ ಪುಸ್ತಿಕೆಯ ಕನ್ನಡ ಅನುವಾದ, ಬೆಲೆ ೧ ಆಣೆ) ಹೊಟ್ಟೆ ತುಂಬ ಏನಾದರೊಂದು ತಿಂದರಾಗಲಿಲ್ಲ ನಾವು ತಿನ್ನುವ ಆಹಾರದಲ್ಲಿ ಶರೀರದ ಬೇರೆ ಬೇರೆ ಘಟಕಗಳಿಗೆ ಪೋಷಕವಾದ ದ್ರವ್ಯಗಳಿದ್ದರೆನೇ ಅದರ ಸೇವನೆಯಿಂದ ನಮ್ಮ ದೃಢಕಾಯರಾಗುದು ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬಹುದು ಆಹಾರ ಶಾಸ್ತ್ರದ ಮೋಟ ಇತ್ತೀಚೆಗೆ ಬಹಳ ಶೋಧನೆಗಳಾಗಿವೆ ಅವುಗಳಿಗೆ ಸಂಬಂಧ ಪಟ್ಟ ಕೆಲವು ಬೋಧಪ್ರದ ವಿಷಯಗಳನ್ನು ಚಿತ್ರ ಗಳನ್ನೂ ಈ ಪುಸ್ತಿಕೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ ನಾವು ಏನೇನು ತಿನ್ನಬೇಕು ಹ್ಯಾಗೆ ತಿನ್ನಬೇಕು ಎಂಬ ಬಗ್ಗೆ ಮಹತ್ವದ ಮಾಹಿತಿ ಈ ಪುಸ್ತಿಕೆಯ ಓದಿನಿಂದ ಓದುಗರಿಗೆ ಬರುವಂತಿದೆ ಈ ಪುಸ್ತಕೆಯಲ್ಲಿ ಹೇಳಿದ ಆಹಾರವನ್ನು ಸೇವಿಸುವದು ಇಂದಿನ ಭಾರತದಲ್ಲಿ ಸಾಮಾನ್ಯ ಮನುಷ್ಯನಿಗೆ ಸಾಧ್ಯವಾಗುವಂತಿಲ್ಲವೆಂದು ನಾವು ಒಪ್ಪುತ್ತೇವೆ ಆದರೂ ಪ್ರತಿಯೊಬ್ಬರೂ ಆಹಾರ ಶಾಸ್ತ್ರದ ಮೇಲಿನ ಈ ಪುಸ್ತಕವನ್ನು ಚೆನ್ನಾಗಿ ಅಭ್ಯಸಿಸಿ ಶಕ್ಯವಾಗ ವನುಟ್ಟಿಗೆ ತನ್ನ ಆಹಾರವನ್ನು ಸಮತೋಲ ಮಾತ್ತು ಆರೋಗ್ಯವರ್ಧಕ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬೇಕಾದುದು ಅವಶ್ಯವಿದೆ

ಧರ್ಮಬೋಧ — (ಮಾಸ ಪತ್ರಿಕೆ ಪ್ರಕಾಶಕರು ಧರ್ಮಬೋಧ ಕಾರ್ಯಾಲಯ ಉಡುಪಿ ವಾರ್ಷಿಕ ಚಂದಾ ರೂ ೩) ಉಡುಪಿಯ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯ ಪ್ರಾಕ್ತನ (ಹಳೆಯ) ವಿದ್ಯಾರ್ಥಿ ಸಂಘದವರು ಕಳೆದ ಸೌರ ಯುಗಾದಿಯಿಂದ ಈ ಪತ್ರಿಕೆಯನ್ನು ಹೊರಡಿಸಿದ್ದಾರೆ ಪಾಠಶಾಲೆಯ ಕೆಲವು ಪಂಡಿತರು ಈ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿದ್ದಾರೆ ಧರ್ಮ ಸಂಸ್ಕೃತಿಗಳ ಹಿತರಕ್ಷಣೆ ಮಾಡುವದೂ ಧರ್ಮಪ್ರಚಾರ ಮಾಡುವದೂ ಪತ್ರಿಕೆಯ ಉದ್ದೇಶ ಶ್ರೀಕೃಷ್ಣನ ಕೃಪೆಯಿಂದ ಪತ್ರಿಕೆಯ ಉದ್ದೇಶ ಸಫಲವಾಗಲಿವದೆಂದೂ ಪತ್ರಿಕೆ ಚಿರಾಯುವಾಗುವದೆಂದೂ ಹಾರೈಸುತ್ತೇವೆ

ಗಾಂಧೀ-ದರ್ಶನ— (ಧಾರವಾಡದ ಸಮಾಜ ಪತ್ರಿಕೆಯ ವಿಶೇಷ ಸಂಚಿಕೆ ಬೆಲೆ ರೂ ೧) ಸಮಾಜ ಪತ್ರಿಕೆಯು ಹೊರಡಿಸಿರುವ ಈ ವಿಶೇಷ ಸಂಚಿಕೆಯಲ್ಲಿ (೪೦ ಪುಟಗಳದು) ಮಹಾತ್ಮಾ ಗಾಂಧಿಯವರ ಬೇರೆ ಬೇರೆ ಕಾಲ-ಅವಸ್ಥೆಗಳ ಛಾಯಾ ಚಿತ್ರಗಳೂ, ಹಲವಾರು ಸನ್ನಿವೇಶಗಳ ಚಿತ್ರಗಳೂ, ಮಹಾತ್ಮರ ಅಂತ್ಯದರ್ಶನದ ಕೆಲವು ಚಿತ್ರಗಳೂ ಈ ಸಂಚಿಕೆಯಲ್ಲಿ ಕೊಡಲ್ಪಟ್ಟಿವೆ ಎಲ್ಲ ಚಿತ್ರಗಳು ಅಂದವಾಗಿ ಅಚ್ಚುಹಾಕಲ್ಪಟ್ಟಿವೆ ಮಹಾತ್ಮರ ಸಂಕ್ಷಿಪ್ತ ಜೀವನ ಚರಿತ್ರೆ ಅವರ ಬೋಧಾಮೃತದ ಕೆಲವು ಅಂಶಗಳು ಅವರ ಉಪವಾಸಗಳ ಪಟ್ಟಿ ಮೊದಲಾದ ಕೆಲವು ಉಪಯುಕ್ತ ಮಾಹಿತಿಯು ಈ ಸೊತ್ತಿಗೆಯಲ್ಲಿರುವದರಿಂದ ಇದು ಸಂಗ್ರಾಹ್ಯವಾಗಿದೆ

ಕಲಾವಿದ— (ಕಲೋಪಾಸಕರ ಕನ್ನಡ ಮಾಸ ಪತ್ರಿಕೆ ಸಂಪಾದಕರು — ಶ್ರೀ ಎಮ್ ಎಸ್ ಶೆಟ್ಟಿ, ಪ್ರಕಾಶಕರು — "ಕಲಾವಿದ" ಕಚೇರಿ, ಮಂಗಳೂರು ಬಿಡಿ ಸಂಚಿಕೆಯ ಬೆಲೆ ಆ, ೬ ಈ ಹೊಸ ಪತ್ರಿಕೆಯ ೧ನೆಯ ಸಂಪುಟದ ೩ನೆಯ (ಫೆಬ್ರುವರಿ-ಮಾರ್ಚ, ೧೯೪೮) ಸಂಚಿಕೆಯು ದಿವಂಗತ ಪೂಜ್ಯ ಮಹಾತ್ಮಾ ಗಾಂಧಿಯವರ ಚರಣಾರವಿಂದಗಳಿಗೆ ಹಲವಾರು ಸುರಿತ ಬರಹಗಾರರು ಅರ್ಪಿಸಿದ (ಗದ್ಯ-ಪದ್ಯಾತ್ಮಕ) ಕಣ್ಣೀರ ಕಾಣಿಕೆಗಳಿಂದ ತುಂಬಿದೆ ಮಂಗಳೂರಿನಲ್ಲಿ ಮಹಾತ್ಮರ ಅಸ್ಥಿ-ನಿಕ್ಷೇಪ ಮಾಡಿದ ಕಾಲಕ್ಕೆ ತೆಗೆದಂಥ ಹಲವಾರು ಛಾಯಾ ಚಿತ್ರಗಳೂ ಈ ಸಂಚಿಕೆಯಲ್ಲಿವೆ ಸಂಚಿಕೆಯು ಸರ್ವಾಂಗ ಸುಂದರವಾಗಿದ್ದು ಸಂಗ್ರಾಹ್ಯವಾಗಿದೆ

ಪ್ರಕಟನೆ.

ಒತ್ತಾಯದ ಪ್ರಾಥಮಿಕ ಶಿಕ್ಷಣ ಯೋಜನೆಯಂತೆ ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನವರು ಸಮೀಪದಲ್ಲೇ ಅವುಗಳಲ್ಲಿ ಬರಬಹುದಾದ ೧೯೪೭ನೆಯ ಪ್ರಾಯ್ಮರಿ ಎಜ್ಯುಕೇಶನಲ್ ಆಕ್ಟದಂತೆ ರಚಿಸಲ್ಪಡಲಿರುವ, ಸ್ಟಾಫ್ ಸಿಲೆಕ್ಶನ್ ಕಮಿಟಿಗೆ ಒಳಪಟ್ಟು ಹೆಸ್ಮಿನ ಮುಖವರು ಎಟೆಂಡೆನ್ಸ್ ಆಫೀಸರರನ್ನೂ ಒಬ್ಬ ಕಾರಕೂನನನ್ನೂ ಈ ಕೆಳಗೆ ಕಾಣಿಸಿದ ಪಗಾರ ಸ್ಕೇಲಿನ ಮೇಲೆ ತಾತ್ಪೂರ್ತಿಕವಾಗಿ ನೇಮಿಸುವವರಿದ್ದಾರೆ ಈ ಸ್ಥಳಗಳಿಗೆ ಉಮೇದವಾರರಾಗಲಿಚ್ಛಿಸುವವರು ಸ್ವಹಸ್ತಾಕ್ಷರದಲ್ಲಿ ಬರೆದ ಅರ್ಜಿಗಳನ್ನು ಕಳ್ಳಿಯು ತಮ್ಮ ಸ್ವಂತ ಖರ್ಚಿನಿಂದ ತಾ ೧೨ ೭ ೧೯೪೮ನೆಯ ದಿನ ಬೆಳಗಿನ ೧೧ ಘಂಟೆಗೆ, ಡಿಸ್ಟ್ರಿಕ್ಟ ಸ್ಕೂಲ ಬೋರ್ಡ ಆಫೀಸಿನಲ್ಲಿ ಮೆ॥ ಎಡ್ಮಿನಿಸ್ಟ್ರೇಟಿವ್ ಆಫೀಸರ್ ಡಿ ಎಸ್ ಬಿ ಕಾನಡಾ ಇವರನ್ನು ಭೆಟ್ಟಿಯಾಗತಕ್ಕದ್ದು ಅನ್‌ಟ್ರೇಂಡ ಶಿಕ್ಷಕರು ಅರ್ಜಿ ಮಾಡುವ ಅವಶ್ಯವಿಲ್ಲ ಉಳಿದವರ ಅರ್ಜಿಗಳನ್ನು ವಿಚಾರಿಸುವಾಗ ಅವರ ವಯೋಮಾನ, ನೌಕರಿಯ ಮುದ್ದತ್ತು, ಇವುಗಳನ್ನೂ ಗಣಿಸಲಾಗುವದು

ಅರ್ಜಿಯ ನಮೂನೆ

(೧) ಉಮೇದವಾರರ ಪೂರ್ಣ ಹೆಸರು ಮತ್ತು ಪತ್ತೆ, (೨) ಜಾತಿ, (೩) ಜನ್ಮ ತಾರೀಖು, (೪) ಶೈಕ್ಷಣಿಕ ಯೋಗ್ಯತೆ ಮತ್ತು ಶಿಕ್ಷಕನಾಗಿ ಕೆಲಸ ಮಾಡಿದ ಅವಧಿ, (೫) ಗೊತ್ತಿದ್ದ ಭಾಷೆಗಳು, (೬) ಹಿಂದಿನ ಅನುಭವ, (೭) ಟೈಪಿಂಗ ಮಾಡುವದರಲ್ಲಿನ್ನ ವೇಗ (ಕಾರಕೂನಿಯ ವಿಷಯದಲ್ಲಿ ಮಾತ್ರ)

ಎಟೆಂಡೆನ್ಸ್ ಆಫೀಸರರ ಪಗಾರ ಸ್ಕೇಲು

(೧) ಟ್ರೇಂಡ ಗ್ರೆಜ್ಯುಯೇಟರು ರೂ ೪೫-೫-೧೧೫ ಇ ಬಿ ೫-೧೪೫ ಇ ಬಿ ೬-೧೭೫

( ) ಟ್ರೇಂಡ ಆಗದ ಗ್ರೆಜ್ಯುಯೇಟರು ರೂ ೪೫ ೫-೧೧೫ ಇ ಬಿ ೫-೧೩೫

(೩) ಮೆಟ್ರಿಕ್ಯುಲೇಶನ್ ಅಥವಾ ಎಸ್ ಎಲ್ ಸಿ ಪಾಸಾದವರಿದ್ದು ಕಲಿಸುವ ಯೋಗ್ಯತೆಯುಳ್ಳವರು ಅಥವಾ ಸ್ಕೂಲ ಬೋರ್ಡ ಅಕೌಂಟಂಟ ಕ್ಲರ್ಕ ಪರೀಕ್ಷೆ ಪಾಸಾದವರು } ರೂ. ೪೦-$\frac{5}{೨}$-೧೦೦

(೪) ಟ್ರೇಂಡ ಪ್ರಾಥಮಿಕ ಶಿಕ್ಷಕರು ರೂ ೩೦-೧-೫೦, ೫/೨-೭೫ + ಗ್ರೇಡ್ ಅಲಾವನ್ಸ ೧೦-೫/೨-೨೫

ಕಾರಕೂನರ ಪಗಾರ ಸ್ಕೇಲು

(೧) ಮೆಟ್ರಿಕ್ಯುಲೇಶನ್ ಅಥವಾ ಎಸ್ ಎಲ್ ಸಿ ಪಾಸಾದವರು ರೂ ೩೦-೫/೨-೫೫

(ಟೀಪು - ಪಗಾರ ಸ್ಕೇಲು ಪುನರ್ನಿಶ್ಚಿತವಾಗುವದಿದೆ)

ಡಿ ಸ್ಕೂ ಬೋರ್ಡ ನೌಕರರಿಗೆ ಲೋಕಲ್ ಅಥಾರಿಟಿಯವರು ಪಗಾರ ಸ್ಕೇಲಿನ ಹೊರತಾಗಿ ಕೊಡುವ ತುಟ್ಟಿ ಭತ್ತೆ ವಗೈರೆ ಸಹ ಮೇಲ್ಕಾಣಿಸಿದ ಪಗಾರಿನ ಜೊತೆಗೆ ಕೊಡಲ್ಪಡುವದು

ಸೂಚನೆ — ಯಾರೂ ಯಾವದೇ ತರಹದ ವಶೀಲಿಯನ್ನು ಹಚ್ಚಕೂಡದು ಯಾರಾದರೂ ಹಾಗೆ ಮಾಡಿದಲ್ಲಿ ಅಂಥವರ ಅರ್ಜಿಯನ್ನು ವಿಚಾರಿಸಲಿಕ್ಕೆ ಬರಲಾರದು

ಜಿಲ್ಲಾ ಸ್ಕೂಲ ಬೋರ್ಡ ಕಾನಡಾ
ಕಾರವಾರ ೧ ೭ ೧೯೪೮ }

G S Bhat, Kekkar,
ಚೆಅರಮನ್, ಜಿಲ್ಲಾ ಸ್ಕೂಲ ಬೋರ್ಡ, ಕಾನಡಾ

ಜಾಹೀರ ನೋಟೀಸು.

ಅಂಕೋಲಾ ಶಹರ ಬಾಜಾರದಲ್ಲಿರುವ ಶ್ರೀ ಗಣಪತಿ ದೇವಸ್ಥಾನದ ಭಕ್ತ ಜನರಿಂದ ಅಲ್ಲಿಯ ವರ್ತಕರಿಗೆ ವ ಸಿದಾರಿ ದೇವಸ್ಥಾನಕ್ಕೆ ಕಾಣಿಕೆ ಕೊಡುವಂಥ ಇತರ ಭಕ್ತರಿಗೆ ಈ ಮೂಲಕ ತಿಳಿಸುವದರಲ್ಲಿ ಬರುತ್ತದಲ್ಲಾ-ಕಾನಡಾ ಡಿಸ್ಟ್ರಿಕ್ಟ ಕೋರ್ಟಿನಿಂದಾ ಸದರಿ ದೇವಸ್ಥಾನದ ಆಡಳಿತ ಬಗ್ಗೆ ತಾ ೧೬ ೬-೧೯೪೮ನೇ ದಿವಸ ಪಂಚರನ್ನು ನೇಮಿಸಿತ್ತು ಆ ಪಂಚರ ಮುದ್ದತ ತೀರಿಹೋಗಿವೆ ಹೊಸ ಪಂಚರನ್ನು ನೇಮಣೂಕ ಮಾಡಬೇಕಾಗಿದೆ ಹೊಸ ಪಂಚರ ಹೆಸರುಗಳನ್ನು ಸೂಚಿಸಲಿಚ್ಛಿಸುವವರು ಈ ಹೊತ್ತಿನಿಂದ ಎರಡು ತಿಂಗಳೊಳಗಾಗಿ ಕಾರವಾರ ಡಿಸ್ಟ್ರಿಕ್ಟ ಕೋರ್ಟಿಗೆ ಬರಹಿನಿಂದ ಅಗರ ಖುದ್ದ ಹಾಜರಾಗಿ ತಿಳಿಸತಕ್ಕದ್ದು

ಡಿಸ್ಟ್ರಿಕ್ಟ ಕೋರ್ಟ,
ಕಾನಡಾ
ತಾ ೩೦ ೬ ೪೮ }

N V Ransubhe
ಡಿಸ್ಟ್ರಿಕ್ಟ ಜಡ್ಜ ಕಾನಡಾ.

THE BANK OF RURAL INDIA LTD,

(Incorporated in British India, Liability of Members limited)

HEAD OFFICE — "Satvabhama Bhavan, **KARWAR.** N K

Offices at — KARWAR KUMTA SIRSI, HONAVAR YELLAPUR BHATKAL SIDDAPUR ANKOLA HUBLI & DHARWAR

Authorised Capital , **Rs 10 00 000**
Subscribed Capital **Rs 5,00 000**
Paid-up Capital & Reserves **Rs 5 08 502-8-0**

Rates of Interest on Deposits

Current a/c @ 1% p a. ***Savings Bank a/c @ 2½%***

Fixed Deposits for 3 months @ 3% pe annum.
for 6 months @ 3½%
, for 12 months or more @ 4%

All kinds of modern Banking business transacted

Karwar
14 2 1948 }

P X GRACIOUS
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಕಾನಫಾಗ (ಕುಂಟಾವ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ಜಾಹೀರಾತುಗಳ ದರ:-
ಒಂದ್ಸಾರೆ ೧ ಕಾಲಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು

Reg. No. B. 1270 Monday, 12-7-1948.

ಕಾನಡಾವೃತ್ತ

ವರ್ಷ ೩೧] THE KANARA NEWS. [ಸಂಚಿಕೆ ೨.

ಕುಮಟಾ - ಸೋಮವಾರ, ತಾ ೧೨—೭—೧೯೪೮

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩ ೦
" ೬ ತಿಂಗಳಿಗೆ ೧ ೧೨-೦
ಬಿಡಿ ಸಂಚಿಕೆಗೆ ೦ ೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

ಕೇಳಿದ್ದು, ಕಂಡದ್ದು.

(ಜಿಲ್ಹಾ ಸಂವಾದಿಯು ಬರೆದುದು)

ಮೊನ್ನೆ ಯಾದ ಕುಮಟಾ ನಗರಸಭೆಯ ಚುನಾವಣೆಯಲ್ಲಿ ಒಂದು ಬೋಧಪ್ರದ ಸಂಗತಿ ಕಂಡು ಬರುತ್ತಿದೆ. ಅದ್ಯಾವದೆಂದರೆ ಮುಂಬಯಿ ಸರಕಾರವು ಸದ್ಯಕ್ಕೇ ಅಮಲಿನಲ್ಲಿ ತಂದ ಹೊಸ ಮತದಾನ ಪದ್ಧತಿಯದೆಂದು ಮಹಾದೋಷ. ಮತದಾರ ಸಂಘದಲ್ಲಿ ಕೆಲವೊಂದು ಜಾತಿಯ ಅಥವಾ ಬೇರಾವ ಕಾರಣದಿಂದ ಗುಂಪುಗಟ್ಟಿಕೊಂಡ ಪಂಗಡವನ್ನು ಕಟ್ಟಿಕೊಂಡು ಯಾರೂ ಚುನಾವಣೆಯಲ್ಲಿ ಆರಿಸಿ ಬರಕೂಡದೆಂದೂ, ಆರಿಸಿ ಬರಬಯಸುವ ಹುರಿಯಾಳುವು ಹೆಚ್ಚೆಚ್ಚು ಮತದಾರರ ಸಹಾಯ-ಬೆಂಬಲಗಳನ್ನು ಕೋರಬೇಕೆಂದೂ ಮುಂಬಯಿ ಸರಕಾರವು ವಾದಿಸಿ, ಈ ಹೊಸ ಮತದಾನ ಪದ್ಧತಿಯನ್ನು — ಒಂದು ಉಮೇದವಾರನಿಗೆ ಒಂದೇ ಮತ ಕೊಡಬೇಕೆಂದೂ ಮತಗಳನ್ನು ಹಂಚಿಹಾಕಕೂಡದೆಂದೂ ವಿಧಿಸುವ ಮತದಾನಪದ್ಧತಿಯನ್ನು — ಅಮಲಿನಲ್ಲಿ ತಂದಿದೆ. ತನ್ನ ಎಲ್ಲ ಮತಗಳನ್ನು ಒಬ್ಬನಿಗೇ ಕೊಡಬಹುದು ಇಲ್ಲವೆ ಹಂಚಿಹಾಕಬಹುದು ಎಂದಿದ್ದ ಹಿಂದಿನ ಮತದಾನ-ಪದ್ಧತಿಯಲ್ಲಿ ಸರಕಾರವು ಹೇಳಿದ ದೋಷವಿತ್ತು, ನಿಜ. ಒಂದು ಉದಾಹರಣೆಯನ್ನು ಕೊಟ್ಟಲ್ಲಿ ಓದುಗರಿಗೆ ಸುಗಮವಾಗಿ ಆ ದೋಷ ತಿಳಿದು ಬರಬಹುದು. ಒಂದು ಮತದಾರ-ಸಂಘದಲ್ಲಿ ೫೫೦ ಮತದಾರರಿದ್ದಾರೆಂದೂ, ಆ ಮತದಾರ ಸಂಘದಿಂದ ೩ ಮಂದಿ ಸದಸ್ಯರನ್ನು ಆರಿಸಿ ಕಳಿಸತಕ್ಕದ್ದುಂಟೆಂದೂ ತಿಳಿಯುವಾ. ಈ ೫೫೦ ಮತದಾರರಲ್ಲಿ (ಎಷ್ಟೋ ಮತದಾರರು ಪರಸ್ಥಳಗಳಲ್ಲಿರುವದರಿಂದಲೂ, ಕೆಲವರು ಸತ್ತಿರುವದರಿಂದಲೂ, ಬೇರೆ ಕೆಲವರು ಮತಗಟ್ಟೆಗೆ ಬರಲು ಅಶಕ್ತರು ಯಾ ಅನಾಸಕ್ತರು ಇರುವದರಿಂದಲೂ) ೪೦೦ ಮಂದಿ ಮತ ಕೊಡುವರೆಂದೂ ತಿಳಿಯುವಾ. ಈ ೪೦೦ ರ ಸಂಖ್ಯೆಯನ್ನು ೪ (ಆಸನಗಳ ಸಂಖ್ಯೆ + ೧)ರಿಂದ ಭಾಗಿಸಿ ಮತ್ತು ಅದರಲ್ಲಿ ೧ ಕೂಡಿಸಿ, ೧೦೧ ಮತದಾರರು ತಮ್ಮ ಸಂಪೂರ್ಣ ಮತಗಳನ್ನು ತನಗೆ ಕೊಟ್ಟರೆ ತಾನು ಖಂಡಿತವಾಗಿಯೂ ಆರಿಸಿ ಬರುತ್ತೇನೆ ಎಂದು ಯಾವನೊಬ್ಬ ಹುರಿಯಾಳುವು ಲೆಕ್ಕ ಹಾಕಿ ತನಗೇ ಪೂರ್ಣ ಮತಗಳನ್ನು ಕೊಡಲೊಪ್ಪುವಂತಹ ೧೦೧ ಜನರನ್ನು ಆತ ಹುಡುಕುತ್ತಾನೆ ಮತ್ತು ಅವರನ್ನಷ್ಟೇ ಕಟ್ಟಿಕೊಳ್ಳುತ್ತಾನೆ. ಇನ್ನಿತರ ಮತದಾರರ ಕಡೆ ಅವನು ಹಾಗೆ ಸಹ ನೋಡುವದಿಲ್ಲ! ಯಾವ ಮತದಾರ-ಸಂಘದ ಪ್ರತಿನಿಧಿಯಾಗಿ ಈ ಹುರಿಯಾಳುವು ನಗರ ಸಭೆಗೆ (ಅಥವಾ ಬೇರಾವ ಚುನಾಯಿತ ಸಂಸ್ಥೆಗೆ) ಹೋಗಬಯಸುತ್ತಾನೋ ಆ ಮತದಾರ-ಸಂಘದ ಬಹುಸಂಖ್ಯ ಜನರನ್ನು ಕಾಯುವದೇ ಇಲ್ಲ! ಅವರ ಸುಖ-ದುಃಖಗಳನ್ನೂ, ಅವರ ಬೇಕು-ಬೇಡಗಳನ್ನೂ, ಅವರ ಆಶೆ-ಆಕಾಂಕ್ಷೆಗಳನ್ನೂ ಆತ ತಿಳಕೊಳ್ಳುವದೂ ಇಲ್ಲ! ಹಳೆಯ ಮತದಾನ-ಪದ್ಧತಿಯೊಳಗಿನ ಈ ದೋಷವನ್ನು ಸರಕಾರವು ಕಂಡು ಹಿಡಿದು, ಆ ಪದ್ಧತಿಯನ್ನು ರದ್ದುಗೊಳಿಸಿ ಮತ್ತು ಹೊಸ ಪದ್ಧತಿಯನ್ನು ಅಮಲಿನಲ್ಲಿ ತಂದಿದೆ. ಹಿಂದೆ ೧೦೧ ಮತದಾರರ ೩೦೧ ಮತಗಳನ್ನು ದೊರಕಿಸಿ ಆರಿಸಿಬರಲು ಯತ್ನಿಸುತ್ತಿದ್ದ ಉಮೇದವಾರನು ಈಗ ಅಷ್ಟು ಮತಗಳನ್ನು ದೊರಕಿಸಲು ೩೦೧ ಕ್ಕಿಂತ ಹೆಚ್ಚು ಜನರನ್ನು ಕಾಣುವನು, ಅವರ ಕಡೆ ಮತಯಾಚನೆ ಮಾಡುವನು ಮತ್ತು ಹೀಗೆ ಮತಯಾಚನೆ ಮಾಡುವಾಗ ಅವರ ಕಷ್ಟ-ತೊಂದರೆಗಳನ್ನೂ ಅವಶ್ಯಕತೆಗಳನ್ನೂ ಅರಿತುಕೊಳ್ಳುವನು ಎಂದು ಸರಕಾರದವರ ಮತ್ತು ಈ ಹೊಸ ಮತದಾನ—ಪದ್ಧತಿಯ ಬೆಂಬಲಿಗರ ಪ್ರತಿಪಾದನೆಯಿದೆ

***

ಆದರೆ ಮೇಲಿನ ಮತದಾನ ಪದ್ಧತಿಯಿಂದ ಅಲ್ಪಸಂಖ್ಯಾಕರಿಗೆ ತಕ್ಕಷ್ಟಿಲ್ಲದಿದ್ದರೂ ಸಾಕಷ್ಟು ಪ್ರಾತಿನಿಧ್ಯ ಸಿಗುತ್ತಿತ್ತು. ಮೇಲೆ ಕೊಟ್ಟ ಉದಾಹರಣೆಯೊಳಗಿನ ಮತದಾರ-ಸಂಘದಲ್ಲಿ ೧೨೦ ಯಾ ೧೫೦ರಷ್ಟು ಮತದಾರರಿಂದೊಡಗೂಡಿದ ಯಾವದೊಂದು ಜಾತಿಗಾಗಲಿ ಪಂಗಡಕ್ಕಾಗಲಿ ತನ್ನ ಕಡೆಯ ಒಬ್ಬ ಪ್ರತಿನಿಧಿಯನ್ನು ಆರಿಸಿ ಕಳಿಸಲು ಮತ್ತು ತನ್ನ ಹಿತಸಂರಕ್ಷಣೆ ಮಾಡಿಕೊಳ್ಳಲು ಅನುವು ಸಿಗುತ್ತಿತ್ತು. ಹೊಸ ಮತದಾನ-ಪದ್ಧತಿಯು ಅಲ್ಪಸಂಖ್ಯಾಕರ ಆ ಹಕ್ಕನ್ನು ಅಥವಾ ಅಧಿಕಾರವನ್ನು ಕಸಿದುಕೊಂಡಿದೆ. ಅದು ಹೇಗೆಂದು ನೋಡಿರಿ. ಮೇಲೆ ಹೇಳಿದ ಮತದಾರ ಸಂಘದಲ್ಲಿ ಎರಡು ಪಂಗಡಗಳು— ಅವು ಬೇಕಾದರೆ ಜಾತಿನಿಷ್ಠರದು, ತತ್ವನಿಷ್ಠರದು ಯಾ ವಿಶಿಷ್ಟ ಸ್ಥಾನಿಕ ಪರಿಸ್ಥಿತಿಯಿಂದ ಉತ್ಪನ್ನಗೊಂಡವೇ ಇರಲಿ — ಇರುತ್ತವೆಂದು ತಿಳಿಯಿರಿ. ಇನ್ನೂ ಮುಂದೆ ಹೋಗಿ ೫೫೦ ಮತದಾರರಲ್ಲಿ ೩೦೦ ಮಂದಿ ಒಂದು (ಕ್ಷ) ಪಂಗಡಕ್ಕೂ, ಉಳಿದ ೨೫೦ ಜನರು ಇನ್ನೊಂದು (ಯ) ಪಂಗಡಕ್ಕೂ ಸೇರಿರುತ್ತಾರೆಂದು ತಿಳಿಯಿರಿ. ಮತದಾನ ಮಾಡಲು ಬರುವ ಮತದಾರರಲ್ಲಿಯೂ ಸಾಮಾನ್ಯವಾಗಿ ಇದೇ ಪ್ರಮಾಣ (೩೦೦ ೨೫೦) ಕಂಡು ಬರುವದು. ಅಂದರೆ ಮತಗಳನ್ನು ಕೊಟ್ಟ ೪೦೦ ಜನರಲ್ಲಿ ೨೧೮ ಜನರು "ಕ್ಷ" ಪಂಗಡದ ಅನುಯಾಯಿಗಳೂ ೧೮೨ ಜನರು "ಯ" ಪಂಗಡದ ಬೆಂಬಲಿಗರೂ ಇರುವರು. "ಕ್ಷ" ಪಂಗಡದ ೨೧೮ ಜನರು ತಮ್ಮ ಪಂಗಡದ ಮೂವರ ಹುರಿಯಾಳುಗಳನ್ನು ನಿಲ್ಲಿಸಿ, ತಮ್ಮ ಮತಗಳನ್ನು ಈ ಮೂವರೊಳಗೆ ಸಮವಾಗಿ ಹಂಚಿಹಾಕಿದರೆ, ಆ ಮೂರೂ ಹುರಿಯಾಳುಗಳು ಪ್ರತಿಯೊಬ್ಬನೂ ೨೧೮ ೨೧೮ ಮತಗಳನ್ನು ಸಂಪಾದಿಸಿ, ನಿಸ್ಸಂಶಯವಾಗಿ ಆರಿಸಿಬರುತ್ತಾರೆ. "ಯ" ಪಕ್ಷದ ೧೮೨ ಜನರು ಒಬ್ಬ ಹುರಿಯಾಳನ್ನು ನಿಲ್ಲಿಸಲಿ ಇಬ್ಬರನ್ನು ನಿಲ್ಲಿಸಲಿ ಯಾ ಮೂವರನ್ನು ನಿಲ್ಲಿಸಲಿ, ಅವರಲ್ಲಿ ಯಾರಿಗೂ ೧೮೨ಕ್ಕಿಂತ ಹೆಚ್ಚಿಗೆ ಮತಗಳು ದೊರಕಲಾರವು! ಆ ಪಕ್ಷದ ಉಮೇದವಾರರು ಸೋಲಲೇ ಬೇಕು! ಅರ್ಥಾತ್ ಮತದಾರ-ಸಂಘದಲ್ಲಿ ೫/೧೧ ದಷ್ಟು ಜನರ ಪ್ರೀತಿ-ವಿಶ್ವಾಸಗಳಿಗೆ ಪಾತ್ರವಾದ "ಯ" ಪಕ್ಷವು ನಗರ ಸಭೆಯಲ್ಲಿ ಎಳ್ಳಷ್ಟೂ ಪ್ರಾತಿನಿಧ್ಯ ಸಿಗದೆ ಕೊರಗುವ ಪ್ರಸಂಗ ಬರುತ್ತದೆ! ಹಿಂದಿನ ಪದ್ಧತಿಯೊಳಗಿನ ದೋಷಕ್ಕಿಂತಲೂ ಈ ದೋಷ ಹೆಚ್ಚಿಗೆ ಅನಿಷ್ಟವಿರುತ್ತದೆಂದು ಯಾರೂ ಒಪ್ಪುವರು. ಆದ್ದರಿಂದ ಸರಕಾರದವರು ಈ ಹೊಸ ಮತದಾನ ಪದ್ಧತಿಯನ್ನು ತಿರಸ್ಕರಿಸಿ ಬೇರೊಂದು ಪದ್ಧತಿಯನ್ನು ಕಲ್ಪಿಸುವದು ಅವಶ್ಯವಿರುತ್ತದೆ. ಅದಾಗದಿದ್ದರೆ ಹಿಂದಿನ ಪದ್ಧತಿಯನ್ನೇ ಪುನಃ ರೂಢಗೊಳಿಸುವದೊಳಿತು.

***

ಕಳೆದ ವರ್ಷ (೧೯೪೭)ದ ಫೆಬ್ರುವರಿ ತಾ ೧೭ ಕ್ಕೆ ಈ ಜಿಲ್ಹೆಯಲ್ಲಿ ಮುಂಬಯಿಯ ಒಕ್ಕಲಿಗರ ಸಾಲ ವಿಮೋಚನೆಯ ಕಾನೂನು ಅಮಲಿನಲ್ಲಿ ಬಂತು. ಮತ್ತು ಜಿಲ್ಹೆಯೊಳಗಿನ ಎಲ್ಲ ದಿವಾಣಿ ಜಜ್ಜರಿಗೆ ತಮ್ಮ ತಮ್ಮ ಅಧಿಕಾರ ಕ್ಷೇತ್ರದೊಳಗಿನ ಒಕ್ಕಲಿಗರ ಸಾಲ-ವಿಮೋಚನೆ ಮಾಡುವ ಪಂಚ (ನ್ಯಾಯಾಧೀಶ)ರನ್ನಾಗಿ ನೇಮಿಸಲಾಯಿತು. ಸಾಲ-ಮುಕ್ತರಾಗಬಯಸುವ ಒಕ್ಕಲಿಗರು ತಾ ೧೭-೨-೧೯೪೭ರಿಂದ ಮುಂದೆ ೬ ತಿಂಗಳುಗಳೊಳಗೆ ಅಂದರೆ ತಾ ೩೧-೭-೧೯೪೭ರೊಳಗಾಗಿ ಕಾಯಿದೆಯಲ್ಲಿ ವಿಧಿಸಲ್ಪಟ್ಟ ಮೇರೆಗೆ ತಮ್ಮ ಅರ್ಜಿಗಳನ್ನು ಮಾಡಬೇಕೆಂದು ಸರಕಾರವು ಎಲ್ಲೆಲ್ಲೂ ಪ್ರಕಟಿಸಿತು. ತಮ್ಮ ಒಕ್ಕಲಿಗ-ಸಾಲಗಾರರ ಸಾಲಗಳನ್ನು ಸಂಪಾದಿಸಿಕೊಳ್ಳಲು ಸಾವಕಾರರೂ ಅರ್ಜಿ ಮಾಡಬಹುದೆಂದು ಹಿಂದಿನ ಕಾನೂನಿನಲ್ಲಿತ್ತು. ಆದರೆ ಅರ್ಜಿ ಮಾಡಲೇ ಬೇಕೆಂಬ ಒತ್ತಾಯವಿದ್ದಿಲ್ಲ. ಆದರೆ ೧೯೪೭ರ ಬೇಸಿಗೆಯಲ್ಲಿ ಮುಂಬಯಿ ಸರಕಾರವು ಹಿಂದಿನ ಕಾಯಿದೆಯನ್ನು ರದ್ದುಗೊಳಿಸಿ ಅದರ ಸ್ಥಳದಲ್ಲಿ, ಹಿಂದಿನ ಕಾಯಿದೆಗಳ ಅಂಶಗಳನ್ನೂ ಬೇರೆ ಕೆಲವು ಹೊಸ ಅಂಶಗಳನ್ನೂ ಸೇರಿಸಿ, ಈಗ ಜಾರಿಯಲ್ಲಿರುವ ಹೊಸ ಕಾಯಿದೆಯನ್ನು ರಚಿಸಿತು. ಸಾವಕಾರರೂ ಕೂಡ ತಮ್ಮ "ಒಕ್ಕಲಿಗ ಸಾಲಗಾರರ ಸಾಲಗಳನ್ನು ಸಂಪಾದಿಸಿಕೊಳ್ಳಲು ತಾ ೩೧-೭-೧೯೪೭ರೊಳಗಾಗಿ ಅರ್ಜಿ ಮಾಡಬೇಕೆಂದೂ, ಹಾಗೆ ಅರ್ಜಿ ಮಾಡದಿದ್ದಲ್ಲಿ (ಸಾಲಗಾರನು ಸಹ ಅರ್ಜಿ ಮಾಡಿರದಿದ್ದಲ್ಲಿ ಮಾತ್ರ) ಸಾವಕಾರರ ಸಾಲಗಳು ಮಾಫಾಗಿ ಹೋಗುವವೆಂದೂ ಈ ಹೊಸ ಕಾಯಿದೆಯಲ್ಲಿ ವಿಧಿಸಿದ್ದರಿಂದ ಕಳೆದ ವರ್ಷ ಜೂನ್, ಜುಲಾಯಿ ತಿಂಗಳುಗಳಲ್ಲಿ ಸಾವಕಾರರ ಅರ್ಜಿಗಳೂ ಬೇರೆ ಬೇರೆ ಕೋರ್ಟುಗಳಿಗೆ ಸಾದರಗೊಳಿಸಲ್ಪಟ್ಟವು. ಯಾವನೊಬ್ಬ ಸಾಲಗಾರನು ಸದರಿ ಕಾನೂನಿನ ಕಕ್ಷೆಯಲ್ಲಿ ಬರುತ್ತಾನೋ ಬರುವದಿಲ್ಲವೋ ಎಂಬುದನ್ನು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುದಾರರ ಹೊಣೆಗಾರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟಿದ್ದು)

ಮುಖ್ಯ ಕಚೇರಿ "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ತೆತ್ತ ಮೂಲಧನ ರೂ. ೭ ೭೧,೦೦೦/—ಕ್ಕೂ ಮಿಕ್ಕಿದೆ

ಕಾಯ್ದಿರಿಸಿಡಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮೀರಿರುವದು

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨½ರಿಂದ ೩ ಸಲೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡ್ಯಾರೆಕ್ಟರ

ನಿರ್ಣಯಿಸಲಾಗದ ಇಷ್ಟೆ ಕೋರ್ಟಿಗೆ ಅರ್ಜಿ ಮಾಡಿರುವದು ಸುರಕ್ಷಿತವೆಂಬ ಭಾವನೆಯಿಂದ ಎಷ್ಟೋ ಸಾವಕಾರರು ನಿಜವಾಗಿ ಒಕ್ಕಲಿಗರಾದ ಸಾಲಗಾರರ ವಿರುದ್ಧ ಕೂಡ ಅರ್ಜಿಗಳನ್ನು ಮಾಡಿದ್ದುಂಟು ಹೀಗೆ ಅರ್ಜಿ ಮಾಡುವಾಗ ತಾ ೧-೨-೧೯೪೭ ಮತ್ತು ತಾ ೩೧-೬ ೧೯೪೭ ಇವುಗಳ ನಡುವೆ ವಸೂಲ ಬರಬೇಕಾದ ೧೯೪೬-೪೭ರ ಗೇಣಿಯ ಮೊಬಲಗನ್ನು ಅರ್ಜಿಯಲ್ಲಿ ಸೇರಿಸಬೇಕೋ ಹೇಗೆಂಬುದೊಂದು ಕೂಟ ಪ್ರಶ್ನೆ ಉದ್ಭವಿಸಿತು ಯಾವ ಸಾಲಗಳನ್ನು (ಅಂದರೆ ಯಾವ ದಿನದ ಹಿಂದಿನ ಸಾಲಗಳನ್ನು) ಸಾಲಗಾರರಿಂದ ಸಾವಕಾರರಿಗೆ ಸಾಲ ಪರಿಹಾರ ಒಪ್ಪಿಸುವ ನ್ಯಾಯಾಸನದ ಮುಂದಿಡಬೇಕೆಂಬುದು ಕಾನೂನಿನಲ್ಲಿ ಸ್ಪಷ್ಟವಿಲ್ಲದ್ದರಿಂದ ತಾ ೧ -೧೯೪೭ರ ನಂತರ ಮತ್ತು ಅರ್ಜಿ ಮಾಡುವ ದಿನದ ಪೂರ್ವದಲ್ಲಿ ಸಾಲಗಾರರು ಕೊಡತಕ್ಕದ್ದಾಗಿ ಬಂದ ಸಾಲಗಳನ್ನು ಅರ್ಜಿಯಲ್ಲಿ ಸೇರಿಸಬೇಕೋ ಅಥವಾ ಬೇಡವೋ ಎಂಬುದು, ಸಾವಕಾರರಿಗೆ ತಿಳಿಯಲಿಲ್ಲ! [illegible] ವಕೀಲರು ಈ ಪ್ರಶ್ನೆಯ ಮೇಲೆ ತಮ್ಮೊಳಗೆ ಚರ್ಚೆ ಮಾಡಿ, ತಾ ೧-೨-೧೯೪೭ರ ಮೊದಲು ಅಸ್ತಿತ್ವದಲ್ಲಿದ್ದ ಸಾಲಗಳಷ್ಟೇ ಕಾನೂನಿನ ಕಕ್ಷೆಯಲ್ಲಿ ಬರುತ್ತವೆಂದೂ ಆ ನಂತರದ ಸಾಲಗಳು ಬರಲೊಲ್ಲವೆಂದೂ ಅವನ್ನು ಅರ್ಜಿಯಲ್ಲಿ ಸೇರಿಸುವದು ಅಗತ್ಯವಿಲ್ಲೆಂದೂ ನಿಶ್ಚಯಿಸಿ ಆ ಪ್ರಕಾರ ತಮ್ಮ ಪಕ್ಷಕಾರರಿಗೆ ಸಲಹೆ ಕೊಟ್ಟರು ಅದರಂತೆ ಬಹುತೇಕ ಸಾವಕಾರರು (ಸಾವಕಾರಿ ವ್ಯವಸಾಯ ಮಾಡುವವರಲ್ಲಿ, ಧೈರ್ಯದಿಂದ ಗೇಣಿ ಒರಬೇಕಾದ ಒಡೆಯರ) ೧೯೪೬-೪೭ರ ಗೇಣಿಯ ವಸೂಲಿಯ ಬಗ್ಗೆ ರೀತಿಯಂತೆ ೧೯೪೭ರ ಜೂನದಲ್ಲಿಯೂ ಜುಲೈ ತಿಂಗಳಲ್ಲಿ ರೆವ್ಹಿನ್ಯೂ ಕೋರ್ಟುಗಳಲ್ಲಿ ಗೇಣಿ-ಬಾಕಿ ದಾವೆಗಳನ್ನು ದಾಖಲು ಮಾಡಿಸಿದ್ದರು ಈ ದಾವೆಗಳಿಗೆ ಈಗ ಒಂದು ವರ್ಷವಾಯಿತು ಆದರೂ ಅವುಗಳಲ್ಲಿ ಒಂದೂ ದಾವೆ ವಿಚಾರಕ್ಕೆ ಬರಲಿಲ್ಲ! ಒಡೆಯರು ತಮ್ಮ ದಾವೆಗಳ ಗತಿಯೇನಾಯಿತೆಂದು ಚೌಕಸಿ ಮಾಡಲಾಗಿ, ಜಿಲ್ಲಾಧಿಕಾರ ಅಪ್ಪಣೆಯಂತೆ ಆ ದಾವೆಗಳೆಲ್ಲ ಋಣ-ಪರಿಹಾರ ಕೋರ್ಟಿಗೆ ಕಳಿಸಿ ಕೊಡಲ್ಪಟ್ಟಿವೆಯೆಂದು ತಿಳಿಯಿತು! ಆ ಕೋರ್ಟಿನಲ್ಲಿ ಈ ದಾವೆಗಳ ವಿಚಾರವೆಂದು ನಡೆಯುವದೋ ಮತ್ತು ಗೇಣಿ ಹಣ ಎಂದು ಮತ್ತು ಎಷ್ಟು ಕೈಗೆ ಬರುವದೋ ಎಂಬ ವಿವಂಚನೆ ಒಡೆಯರಿಗೆ ಉಂಟಾಗಿದೆ

* *
*

ಸದರಿ ಗೇಣಿ-ಬಾಕಿ ದಾವೆಗಳನ್ನು ರೆವ್ಹಿನ್ಯೂ ಕೋರ್ಟಿನವರು ಋಣ-ಪರಿಹಾರ ಕೋರ್ಟಿಗೆ ಕಳಿಸಿ ಕೊಟ್ಟದ್ದು ತೀರ ಅಸಮರ್ಥನೀಯವಾಗಿದೆಂದು ಕಾಯದೆ ಬಲ್ಲವರು ಹೇಳುತ್ತಾರೆ ತಾ ೧-೨-೧೯೪೭ರ ನಂತರ ಉಂಟಾದ ಸಾಲಗಳು ಋಣ-ವಿಮೋಚಕ ಕೋರ್ಟುಗಳ ಕಕ್ಷೆಯಲ್ಲಿ ಬರುವದಿಲ್ಲೆಂದು ಕಾರವಾರದ ವಕೀಲರು ನಿರ್ಣಯಿಸಿದ್ದನ್ನು ನಾವು ಮೇಲೆಯೇ ಹೇಳಿದ್ದೇವೆ ಈ ಮಾಟಿಯು ಹೊಸ ನ್ಯಾಯಾಧೀಶ ಶ್ರೀ [illegible] ಲಿವದೇ ಅವರೂ ಹಾಗೆಯೇ ನಿರ್ಣಯ ಕೊಟ್ಟು, ೧೯೪೬-೪೭ರ (ಫೆಬ್ರುವರಿ ತಾ ೧೮ ನಂತರದ ಕೊಡತಕ್ಕದ್ದಾದ) ಗೇಣಿಯ ಬಾಕಿ ತಮ್ಮ ವಿಚಾರದ ಕಕ್ಷೆಯಲ್ಲಿ ಬರುವದಿಲ್ಲೆಂದು ಅಧಿಕಾರಿ ವಾಣಿಯಿಂದ ಹೇಳಿ ಅದರ ವಸೂಲಿಯ ಬಗ್ಗೆ ಅಲಾಹಿದಾ ದಾವೆಗಳನ್ನು ಮಾಡಲು ಒಡೆಯ-ಸಾವಕಾರರಿಗೆ ತಿಳಿಸಿದ್ದಾರೆ ೧೯೪೬-೪೭ರ ಗೇಣಿ-ಬಾಕಿ ದಾವೆಗಳನ್ನು ಸಾಲ-ಪರಿಹಾರ ನ್ಯಾಯಾಸನಗಳಿಗೆ ಕಳಿಸಿಕೊಟ್ಟದ್ದು ತಪ್ಪೆಂದ ಇದರ ಮೇಲಿಂದ ಸ್ಪಷ್ಟವಾಗುತ್ತದೆ

* *
*

ಇನ್ನೆರಡು ದೃಷ್ಟಿಗಳಿಂದಲೂ ರೆವ್ಹಿನ್ಯೂ ಅಧಿಕಾರಿಗಳು ಅನುಸರಿಸಿದ ಮಾರ್ಗ ತಪ್ಪಿರುತ್ತದೆ ಯಾವದೆಂದ- ಕೋರ್ಟಿನ ಮುಂದೆ ಊರ್ಜಿತ ರೂಪದಲ್ಲಿ ಇರುವ ದಾವೆ ಮುಕದ್ದಮೆಗಳನ್ನು, ಪ್ರತಿವಾದಿಯು ಇಲ್ಲವೆ ಏದುರುದಾರನು ಒಕ್ಕಲಿಗರ ಸಾಲ ವಿಮೋಚನೆಯ ಕಾನೂನಿನಂತೆ ತಾನು "ಸಾಲಗಾರ ನಾಗುತ್ತೇನೆಂದು ತಕರಾರು ಮಾಡಿದಲ್ಲಿ, ಸಾಲ-ಪರಿಹಾರ ಮಾಡುವ ನ್ಯಾಯಾಸನಕ್ಕೆ ಕಳಿಸಿಕೊಡಬೇಕೆಂದು ಸದರಿ ಕಾಯದೆಯಲ್ಲಿ ಉಂಟು ಆದರೆ ಯಾವ ದಿನಕ್ಕೆ ಊರ್ಜಿತವಿರುವ ದಾವೆಗಳನ್ನು ಕಳಿಸಿಕೊಡಬೇಕೆಂಬುದು ಮಾತ್ರ ಈ ಕಾಯದೆಯಲ್ಲಿ ಹೇಳಿಲ್ಲ! (ನಮ್ಮ ಮುಂಬಯಿಯ ಕೊಂಗ್ರೆಸ ಸರಕಾರವು ರಚಿಸುವ ಹಲವಾರು ಮಹತ್ವದ ಕಾಯದೆಗಳಲ್ಲಿ ಇಂಥಹ ಅಸ್ಪಷ್ಟತೆಗಳು ಹೆಚ್ಚಾಗಿರುತ್ತವೆಂತಲೂ ಅದರಿಂದ ಈ ಕಾಯದೆಗಳ ಸಂಬಂಧದಲ್ಲಿ ನಿಶ್ಚಿತ ಅಭಿಪ್ರಾಯ ಹೇಳಲು ಸಾಧ್ಯವಿರುವದಿಲ್ಲೆಂತಲೂ ನುರಿತ ವಕೀಲರ ಕೂಡ ಉದ್ಗಾರ ಹುತಾರೆ!) ಅದರಿಂದ ಸಾಲ ಪರಿಹಾರ ಮಾಡುವ ನ್ಯಾಯಾಸನಗಳು ಅಸ್ತಿತ್ವದಲ್ಲಿ ಬಂದ ತಾ ೧ ೩ ೧೯೪೭ ನೇ ದಿನ ಊರ್ಜಿತವಿದ್ದ ದಾವೆ ಮುಕದ್ದಮೆಗಳಷ್ಟೇ ಆ ನ್ಯಾಯಾಸನಕ್ಕೆ ಕಳಿಸಲ್ಪಡತಕ್ಕವುಗಳೆಂದು ಕೆಲವು ವಕೀಲ [illegible] ಯುಕ್ತಿವಾದ [illegible] ಆದದರಿಂದ ಆ ಕಾಯದೆಯ [illegible] ಪ್ರಕಟವಾಗಿ [illegible] ಕಾಯದೆ ಯಾದ [illegible] ೧೯೪೭ಕ್ಕೆ ಕೋರ್ಟುಗಳ ಮುಂದೆ ಊರ್ಜಿತವಿದ್ದ ದಾವೆಗಳು ಋಣ-ವಿಮೋಚನೆಯ ನ್ಯಾಯಾಸನಗಳಿಗೆ ಕಳಿಸಲ್ಪಡತಕ್ಕದ್ದೆಂದು ಸೇರಿ ಕೆಲವು ವಕೀಲರು ವಾದಿಸುತ್ತಿದ್ದರು ಕುಮಟೆಯ ಹಿಂದಿನ ಸಿವಿಲ್ ಜಡ್ಜರ ಈ ಎರಡನೆ ಪಕ್ಷವನ್ನು ಎತ್ತಿ ಹಿಡಿದಿದ್ದರಾಗಿ ತಿಳಿಯುತ್ತದೆ ಆದೇನಾದರೂ ತಾ ೨೭-೫-೧೯೪೭ಕ್ಕೆ (ಅಂದರೆ ಹೊಸ ಕಾಯದೆ ಬಂದ ದಿನ) ಊರ್ಜಿತವಿದ್ದದಿದ್ದ, ಅಥವಾ ಹಿಂದಿನಿಂದ ದಾಖಲಾದ ದಾವೆಗಳು ಸಾಲ-ಪರಿಹಾರ ಕೋರ್ಟುಗಳಿಗೆ ಹೋಗಲಾರವೆಂಬುದ ಎಲ್ಲರಿಗೂ ಒಪ್ಪಿಗೆಯಾದ ಇಂತಹ ಪರಿಸ್ಥಿತಿಯಲ್ಲಿ ೧೯೪೭ರ ಜೂನ್-ಜುಲೈ ತಿಂಗಳಲ್ಲಿ ದಾಖಲಾದ ಗೇಣಿಬಾಕಿ-ದಾವೆಗಳನ್ನು ರೆವ್ಹಿನ್ಯೂ ಅಧಿಕಾರಿಗಳು ಆ ಕೋರ್ಟಿಗೆ ಕಳಿಸಿದ್ದು ತಪ್ಪಲ್ಲವೇ? ಅದಲ್ಲದೆ ಪ್ರತಿವಾದಿಯು ತಾನು "ಸಾಲಗಾರ" ನಿರುತ್ತೇನೆಂದು ತಕರಾರು ಉಂಟು ಮಾಡಿದರೆ ಮಾತ್ರ ಅವನ ಮೇಲಿನ ದಾವೆಯನ್ನು ಸಾಲಪರಿಹಾರ ಕೋರ್ಟಿಗೆ ಕಳಿಸಬಹುದಿತ್ತು ಆ ತಕರಾರು ಉಂಟಾಗುವ ಮೊದಲೇ ಎಲ್ಲ ದಾವೆಗಳನ್ನು ಸಾಲ-ವಿಮೋಚನೆಯ ಕೋರ್ಟುಗಳಿಗೆ ಕಳಿಸಿಕೊಟ್ಟದ್ದು ತಪ್ಪಲ್ಲವೇ!

* *
*

ಇದರಿ ತಮ್ಮ ಗೇಣಿ ಬಾಕಿ-ದಾವೆಗಳ ವಿಚಾರವಿಲ್ಲದ, ಗೇಣಿ ವಸೂಲ ಬರದೆ ಸಾವಿರಾರು ಒಡೆಯರು ತಪ್ಪದಲ್ಲಿ ಬಿದ್ದಿದ್ದಾರೆ ಆ ದಾವೆಗಳನ್ನೆಲ್ಲ ಜಿಲ್ಲೆಯೊಳಗಿನ ಎಲ್ಲ ಸಾಲ-ಪರಿಹಾರ ಕೋರ್ಟಿನವರು ಕೂಡಲೇ ಹುಡುಕಿ ತೆಗೆದು ಆಯಾ ರೆವ್ಹಿನ್ಯೂ ಕೋರ್ಟಿಗೆ ತಿರುಗಿ ಕಳಿಸಿ ಕೊಡುವಂತೆ ಜಿಲ್ಲಾ ನ್ಯಾಯಾಧೀಶರೂ, ಆ ದಾವೆಗಳ ವಿಚಾರವನ್ನು ರೆವ್ಹಿನ್ಯೂ ಕೋರ್ಟುಗಳು ತ್ವರಿತಯಿಂದ ಮಾಡುವಂತೆ ಜಿಲ್ಲಾಧಿಕಾರಿಗಳೂ ಅಪ್ಪಣೆಮಾಡಬೇಕಾಗಿ ಒಡೆಯ ವರ್ಗದ ಪ್ರಾರ್ಥನೆಯಾದೆ

* *
*

ಕುಮಟಾ ಪೇಟೆಯಲ್ಲಿ ಈಗೊಂದು ದೊಡ್ಡ ಗಲಭೆ ಕುಮಟೆಯಿಂದ ಹೊನ್ನಾವರಕ್ಕೆ ಹೋಗುತ್ತಿದ್ದ ಇಲ್ಲವೆ ಹೊನ್ನಾವರದಿಂದ ಕುಮಟೆಗೆ ಬರುತ್ತಿದ್ದ ಮೋಟಾರ ಬಂಡಿಗಳು ಕುಮಟೆಯ ಮುಖ್ಯ ಪೇಟೆಯ ಸಮಿಪದ (ಹಿಂದೆ ಪೋಲೀಸ ಲೈನ ಇದ್ದ ಸ್ಥಳದ ಎದುರಿನ ಮಾರ್ಗದಲ್ಲಿ) ೧-೨ ಯಾ ೨-೩ ನಿಮಿಷ ನಿಂತು ಅಲ್ಲಿಳಿಯಬಯಸುವ ಪ್ರಯಾಣಿಕರನ್ನು ಇಳಿಸುತ್ತಿದ್ದವು ಇಲ್ಲದೆ ಹತ್ತಬಯಸುತ್ತಿದ್ದ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿದ್ದವು ನೆಲ್ಲೀಕೇರಿಯ ಭಾಗವೊಂದನ್ನು ಬಿಟ್ಟು ಉಳಿದ ಕುಮಟೆಯ ಭಾಗಗಳ ಜನರೂ ಕುಮಟೆಯಲ್ಲಿ ಪೇಟೆ ಹಿಡಿಯುವ ಇಲ್ಲವೆ ಬಿಡುವ ಹಳ್ಳಿಗರೂ ಮೋಟಾರ ಬಂಡಿಗಳಲ್ಲಿ ಹತ್ತುವದು ಇಲ್ಲವೆ ಬಂಡಿಗಳಿಂದ ಇಳಿಯುವದು ಈ ಭಾಗದಲ್ಲೇ ಇರುತ್ತಿತ್ತು ಇತ್ತಲಾಗಿ ಪೋಲೀಸರು ಈ ಕ್ರಮಕ್ಕೆ ಆಕ್ಷೇಪ ತೆಗೆದು, ಬಂಡಿಗಳನ್ನು ಆ ಭಾಗದಲ್ಲಿ ನಿಲ್ಲಿಸಗೊಡುವದಿಲ್ಲ! ಎಲ್ಲ ಪ್ರಯಾಣಿಕರನ್ನು ನೆಲ್ಲೀಕೇರಿಯ ಮೋಟಾರ-ನಿಲ್ದಾಣದಲ್ಲೇ ಇಳಿಸಬೇಕೆಂದೂ, ಹತ್ತುವ ಪ್ರಯಾಣಿಕರನ್ನು ಅಲ್ಲೇ ಹತ್ತಿಸಿಕೊಳ್ಳಬೇಕೆಂದೂ ಪೋಲೀಸರು ಹೇಳುತ್ತಾರೆ! ಈ ಭಾಗದಲ್ಲಿ ಮೋಟಾರ ಬಂಡಿಗಳನ್ನು ನಿಲ್ಲಿಸಕೊಡಬಾರದೆಂದು ಅವರಿಗೆ ಮೋಟಾರ ವಾಹನಗಳ ಕಮಿಸನರರೊಬ್ಬರು ತಿಳಿಸಿದ್ದಾರಂತೆ! ನೆಲ್ಲೀಕೇರಿಯ ನಿಲ್ದಾಣವಷ್ಟೇ ಅಧಿಕೃತ ನಿಲ್ದಾಣವಿರುತ್ತದೆ, ಪೇಟೆಯ ಹತ್ತಿರದ ಭಾಗ ನಿಲ್ದಾಣವೆಂದು ಸರಕಾರದಿಂದ ಮನ್ನಣೆ ಹೊಂದಿಲ್ಲ, ಆದ್ದರಿಂದ ಪೇಟೆಯ ಸಮಿಪ ಮೋಟಾರ ಬಂಡಿಗಳು ನಿಲ್ಲಕೂಡದು ಎಂದು ಮುಂಚಾಗಿ ಆ ಕಮಿಸನರರು ಪೋಲೀಸರಿಗೂ ಮೋಟಾರ ಕಂಪನಿಯ ಕಂಪನಿಗಳಿಗೂ ಬರೆದಿರುವರೆಂದು ಸುದ್ದಿಯುಂಟು ಅವರ ಈ ಪತ್ರದ ಆಧಾರ ತೆಗೆದು ಪೋಲೀಸರು ಸದರಿ ಮಾರ್ಗದಲ್ಲಿ ಮೋಟಾರ ಬಂಡಿಗಳಿಗೆ ನಿಲ್ಲಗೊಡದೆ ಮತ್ತು ಪ್ರಯಾಣಿಕರಿಗೆ ಹತ್ತಿಳಿಯಗೊಡದೆ ಪ್ರಯಾಣಿಕರನ್ನು ದಣಿಸಲಾರಂಭಿಸಿದ್ದಾರೆ! ಪೋಲೀಸರ ಈ ಕಾಟದ ಮೂಲಕ ಈಗ ಕುಮಟೆಯ ನಡುಭಾಗದ ಜನರೂ ಚಿತ್ರಿಗಿ, ಹೊನ್ಮಾವ, ಹೆರವಟ್ಟಾ, [illegible] ಜನರೂ ೧-೧½ ಮೈಲು ನಡೆದುಕೊಂಡು ಮತ್ತು ತಮ್ಮ ಸಾಮಾನು ಹೊತ್ತುಕೊಂಡು ನೆಲ್ಲೀಕೇರಿಯ ನಿಲ್ದಾಣಕ್ಕೆ ಹೋಗಬೇಕಾಗಿದೆ, ಮತ್ತು ಅಲ್ಲಿ ಮೋಟಾರ ಬಂಡಿಗಳಲ್ಲಿ ಹತ್ತಬೇಕಾಗಿದೆ! ಅದೇ ರೀತಿ ಹೊರಗಿಂದ ಬಂದ ಜನರು ಆ ನಿಲ್ದಾಣದಲ್ಲಿ ಇಳಿದುಕೊಂಡು, ತಿರುಗಿ ಕಾಲ್ನಡಿಗೆಯಿಂದ ಮನೆಗಳಿಗೆ ಹೋಗಬೇಕಾಗಿದೆ! ೪-೬ ದಿನಗಳ ಹಿಂದೆ ಹಳದೀಪುರದಿಂದ ಬಂದ ಓರ್ವ ಹೆಂಗಸು ಮುಖ್ಯ ಪೇಟೆಯ ಸಮಿಪವೇ ಇರುವ ಒಂದು ಮನೆಯಲ್ಲಿ ಇಳಿಕೊಳ್ಳಬೇಕಿದ್ದಳು ಅವಳು ಪೇಟೆಯ ಸಮಿಪ ಇಳಿಯುತ್ತಿದ್ದರೆ ಒಂದು ಅರ್ಧ ಫರ್ಲಾಂಗು ನಡೆದು ಅವಳು ತನ್ನ ಗುರಿಯನ್ನು (destination) ಸೇರಬಹುದಿತ್ತು ಆಕೆಯು

ಅರಿಯದವರು ಮರೆಯದೆ ನೋಡಿ !!

ಹಿಂದೂ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ !

ಬುದ್ಧಿವಂತರು ಪರೀಕ್ಷಿಸುವ ಶ್ರೇಷ್ಠ, ಬಹಳ ಸಂತೋಷ ವನ್ನೀಯುವ ಪರಿಮಳ !!

	ಚಿಲ್ಲರೆ ವಿಕ್ರಿ ದರ	ವ್ಯಾಪಾರಸ್ಥರಿಗೆ
ಮಹಾವೀರ ಅಗರಬತ್ತಿ	ತೋಲೆ ೧ಕ್ಕೆ ೦-೫-೦	ಡಜನಿಗೆ ರೂ ೩-೦-೦
ಸುರಂಗಿ ಜವಾಜಿ ಬತ್ತಿ	— ೩ — ೦-೩-೬	— ೩ — ,, ೨ ೦-೦

ಈಗಿನ ಬತ್ತಿಗಳು ಇನ್ನೂ ಶ್ರೇಷ್ಠವಾಗಿ ತಯಾರಿಸಿರುತ್ತವೆ ಒಮ್ಮೆ ಪರೀಕ್ಷಿಸಿ ನೋಡಿ !!

ವ್ಯಾಪಾರಸ್ಥರು (ರೂ ೧-೦-೦ ಅಂಚೆ ಚೀಟಿಯೊಂದಿಗೆ) ಮುಂಚಿತವಾಗಿ ಆರ್ಡರ ಕೊಡಿ

ಚಿತ್ತರಂಜನ ಕಂಪನಿ, ಸಂತೆಪೇಟೆ, ತುಮಕೂರು. (MYSORE)

ಸಾವಜಾನು ಸಹ ೧–೧ರ ಅಹ (ಕೂಲಿಗಾಗಿ) ಯಲ್ಲಿ ಗುಂಡಿಯನ್ನು ಕಲ್ಲುತ್ತಿತ್ತು. ಆಷರ ಪೋಲೀಸರು ಅವಳದ್ದ ಮೋಟಾರ ಬಂಡಿಯನ್ನು ಪೇಟೆಯ ಹತ್ತಿರ ನಿಲ್ಲಿಸಿದರ ಲಿಲ್ಲ ಆದರಿಂದ ಅವಳು ನೆಲ್ಲೀಕೇರಿಯ ನಿಲ್ದಾಣದಲ್ಲಿಳಿದು, ಸಾಮಾನು ತಂದುಕೊಂಡ ವ ಕೂಲಿಯವಳಿಗೆ ರೂ ೧ ಕೂಲಿ ಕೊಟ್ಟು ಮತ್ತು ೧ ಮೈಲು ಅಂತರ ಮಳೆಯಲ್ಲಿ ನಡ ಕೊಂಡು ಬಂದು ಮನೆ ಸೇರಬೇಕಾಯಿತು! ಹೇಗಿದೆ, ನೋಡಿರಿ, ಪೋಲೀಸರ ಪ್ರತಾಪ!

* *

ಪೋಲೀಸರ ಈ ನಡಾವಳಿ ಎಷ್ಟರ ಮಟ್ಟಿಗೆ ಕಾನೂನು-ಬದ್ಧ ಯಾ ಕಾನೂನ-ಮಾನ್ಯವಿರುತ್ತದೆಂಬುದು ಒಂದು ಪ್ರಶ್ನೆ. ಪ್ರಯಾಣಿಕರನ್ನು ಅವರಿಗೆ ಇಷ್ಟವಿದ್ದ ಸ್ಥಳದಲ್ಲಿ ಇಳಿಸುವುದಕ್ಕಾಗಿ ಇಲ್ಲವೆ ಹತ್ತಿಸಿಕೊಳ್ಳುವುದಕ್ಕಾಗಿ ಬಂಡಿಗಳು ೧–೨ ನಿಮಿಷ ಮಾರ್ಗದ ಮೇಲೆ ನಿಂತರೆ ಪೋಲೀಸರು ಯಾವ ಕಾಯಿದೆಯಂತೆ ಆಕ್ಷೇಪ ತೆಗೆದುಕೊಳ್ಳಬಲ್ಲರೆಂಬುದು ಯಾರಿಗೂ ತಿಳಿಯದು! ಅದೇ ಮೇಲಿಗೆ ಮೋಟಾರ ಬಂಡಿಗಳು ಪೇಟೆಯ ಸಮೀಪ ನಿಲ್ಲತಕ್ಕ ಸಂಬಂಧ ವಿಧಿಸಲು ಮೋಟಾರ ಬಂಡಿಗಳ ತಪಾಸಕ (Inspector)ರಿಗೆ ಅಧಿಕಾರ ಎಲ್ಲಿಂದ ಬಂತು ಎಂಬುದೂ ತಿಳಿಯದು! ಯಾವದೊಂದು ಸ್ಥಳದಲ್ಲಿ ಇಳಿಯಬಯಸುವ ಪ್ರಯಾಣಿಕರನ್ನು ಇಳಿಸಲು ಇಲ್ಲವೆ ಬಂಡಿಯಲ್ಲಿ ಹತ್ತಲು ಕಾದುಕೊಂಡು ನಿಂತಿದ್ದ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಕ್ಷಣ ಕಾಲ ಬಂಡಿಗಳು ನಿಂತರೆ ಅವು ಆ ಸ್ಥಳವನ್ನು ನಿಲ್ದಾಣದಂತೆ ಉಪಯೋಗಿಸಿದ ಹಾಗೆ ಆಗ ಬಹುದೆಂದು ಈ ತಪಾಸಕರು ಬರೆಯುವ ರೀತಿಯನ್ನು ನೋಡಿದರೆ ಅವರಿಗೆ ತಾವು ಬರೆದ ಬರವಣಿಗೆಯ ಅಥವಾ ಶಬ್ದಗಳ ಯಥಾರ್ಥ ಜ್ಞಾನವುಂಟೆಂದು ಹೇಳಬರುವಂತಿಲ್ಲ! ಅದೇ ಪ್ರಕಾರ ಮೇಲಧಿಕಾರಿಗಳು— ಜಿಲ್ಹಾಧಿಕಾರಿ, ಜಿಲ್ಹಾ ಪೋಲೀಸ ಸಾಹೇಬರು, ಮೋಟಾರ-ತಪಾಸಕರ ಪತ್ರದ ಆಧಾರದಿಂದ ಕುಮಟೆಯ ಪೋಲೀಸರು ಮುಂದೊತ್ತುತ್ತಿರುವ ಸಹಜ ಸಂಬಂಧದಿಂದ ಕುಮಟೆಯ ಮೋಟಾರ-ಪ್ರವಾಸಿಗಳಿಗಾಗುವ ಅನಿಷ್ಟ ತೊಂದರೆಗಳ ಕಡೆಗೆ ಗಮನ ಕೊಟ್ಟು, ಅವುಗಳನ್ನು ಕೂಡಲೇ ಪರಿಹರಿಸುವ ವ್ಯವಸ್ಥೆ ಮಾಡುವದುಚಿತ.

* *

ಕುಮಟೆಯ ಮಾಮಲೇದಾರರು ಸರಕಾರಿ ಜಾಹೀರು ಗೆಜೆಟಿನಲ್ಲಿ ಪ್ರಸಿದ್ಧಿಪಡಿಸಿದ ೧೯೪೭–೪೮ರ ಬೆಳೆಯ ಪ್ರಕಟನೆಯಲ್ಲಿ, ಆ ಭೂಮಿಗಳ ಭತ್ತದ ಬೆಳೆಯ ಪ್ರಮಾಣವನ್ನು ತೀರ್ವೆಯ ಮಾನದ ಮೇಲೆ ಆಧರಿಸಿ ಬರೆದಿದ್ದರೆ, ಆಯಾ ವರ್ಗಗಳ ಭೂಮಿಯ ೧೦ಖಣ ಪ್ರಕಟನೆಯಲ್ಲಿ ನಿರ್ದೇಶಿಸಿದ ಬೆಳೆಯ ಮಾನ ಹಾಗೂ ತೀರ್ವೆಯ ಪ್ರಮಾಣವುಳ್ಳ ಭೂಮಿಯದಿರುತ್ತದೆಂದೂ, ಯಾವದೊಂದು ಭೂಮಿಯ ಬೆಳೆಯ ಮಾನ ತಿಳಕೊಳ್ಳಬೇಕಾದರೆ ಅದರ ತೀರ್ವೆ ನೋಡಿ ಮತ್ತು ತ್ರೈರಾಶಿಕದ ಲೆಕ್ಕ ಹಾಕಿ ತಿಳಕೊಳ್ಳಬೇಕೆಂದೂ ಕೊನೆಗೊಂದು ಟಿಪ್ಪಣಿಯುಂಟು. ಈ ಟಿಪ್ಪಣಿಯಿಂದ ಎಷ್ಟು ಅನ್ಯಾಯವಾಗುವದೆಂಬ ಕಲ್ಪನೆ ಮಾಮಲೇದಾರರಿಗೆ ಇಲ್ಲವೆ ಅವರಿಗೆ ಜಾಹೀರು ಕೊಟ್ಟ ಸರಕಾರಕ್ಕೆ ಅಗಿತ್ತೋ ಇಲ್ಲವೋ ತಿಳಿಯದು. ಈ ಜಿಲ್ಹೆಯ ಕರಾವಳಿ ಭಾಗದಲ್ಲಿ ಈಗಿನ ತೀರ್ವೆ ಕಟ್ಟಿಸಿದ್ದು ಸುಮಾರು ೭೦–೮೦ ವರ್ಷಗಳ ಹಿಂದೆ. ಆ ನಂತರ ತೀರ್ವೆಯ ಪುನರಾಕರಣೆಯಾಗಿಲ್ಲ. ಈ ೭೦–೮೦ ವರ್ಷಗಳಲ್ಲಿ ಎಷ್ಟೋ ಕಡೆ ಅವಗಣಾಂತರ ಸ್ಥಿತ್ಯಂತರಗಳಾಗಿವೆ. ಹಿಂದೆ ಉತ್ತಮ ಬೆಳೆಯದಲ್ಲಿ ಈಗ ಉತ್ಕೃಷ್ಟ ಬೆ ಹೊಲಗಳೂ ಹಿತ್ತಲುಗಳೂ ಕಂಗೊಳಿಸುತ್ತಿವೆ! ಬೇಕಾಗಿಟ್ಟ ಭೂಮಿಯದ್ದಲ್ಲಿ ಸಹ ಹೊಲಗಳು ಇಲ್ಲವೆ ಬಾಗಾಯತಗಳುಂಟಾದದ್ದುಂಟು! ಈ ಭೂಮಿಗಳ ತೀರ್ವೆ ಬಹಳ ಹಚ್ಚಿಯದೆ. ಇವುಗಳ ಬೆಳೆಯ ಪ್ರಮಾಣವನ್ನು ತೀರ್ವೆಯ ಮಾನ ನೋಡಿ ಮತ್ತು ತ್ರೈರಾಶಿಕ ಹಾಕಿ ನಿರ್ಧರಿಸಬೇಕೆಂದು ಹೇಳುವದು ಬುದ್ಧಿ ಪೂರ್ವಕವಲ್ಲವೇ? ಸಂಯುಕ್ತ ಗ್ರಾಮದಲ್ಲಿ ಒಂದು ಕಡೆ ಸುಮಾರು ೩೪ ಎಕರೆ ಕ್ಷೇತ್ರದ ೩ ಸರ್ವೇ ನಂಬರಗಳ ತೀರ್ವೆ ಹೆಚ್ಚು ಕಡಿಮೆ ರೂ ೩೦ ಉಂಟು. ಹಿಂದಿನ ತೀರ್ವೆ ಆಕರಣೆಯ ಕಾಲಕ್ಕೆ ಈ ನಂಬರುಗಳು ಬರೇ ಉಸುಕಿನ ಬಯಲುಗಳಾಗಿದ್ದವು. ಆ ಸರ್ವೇ ನಂಬರುಗಳನ್ನ ಓರ್ವರು ಮೂಲಗೇಣಿಗೆ ಪಡೆದುಕೊಂಡು, ಅವುಗಳಲ್ಲಿ ತಮ್ಮ ದೇಹವನ್ನು ಸವೆಸಿ ಮತ್ತು ಸಾವಿರಾರು ರೂಪಾಯಿ ವೆಚ್ಚ ಮಾಡಿ, ೬ ಎಕರೆ ತರಿ ಮತ್ತು ಸುಮಾರು ೩ ಎಕರೆ ತೆಂಗಿನ ಬಾಗಾಯತ ಮಾಡಿದ್ದಾರೆ, ಮತ್ತು ಅವನ್ನು ಬೇರೆ ರೈತರಿಗೆ ಯೋಗ್ಯ ಗೇಣಿ ನಿರ್ಧರಿಸಿ ಗೇಣಿಗೆ ಕೊಟ್ಟಿದ್ದಾರೆ. ಈ ತರಿಯ ಬೆಳೆಯನ್ನು ತ್ರೈರಾಶಿಕದಿಂದ ನಿರ್ಧರಿಸಿ, ರೈತರ ಗೇಣಿ ಪಸಲು ಪಡಿಯಬೇಕೆಂದು ಹೇಳುವದು ಕೇವಲ ಅನ್ಯಾಯವೆಂದು ಒಂದು ಚಿಕ್ಕ ಮಗುವು ಕೂಡ ಹೇಳೀತು! ಗೋಕರ್ಣದ ಗಂಗಾವಳಿ ಮನೆತನದವರು ಈ ೫೦ ವರುಷಗಳಲ್ಲಿ ಸ್ವಂತ ಗಟ್ಟಿ ಹಣ ವಿನಿಯೋಗಿಸಿ ಗೋಕರ್ಣದ ಸಮುದ್ರದ ದಂಡೆಯಗುಂಟ ಎಷ್ಟೋ ಎಕರೆ ಗದ್ದೆಗಳನ್ನ ಬಾಗಾಯತಗಳನ್ನ ಮಾಡಿದ್ದುಂಟು. ಈ ಗದ್ದೆಗಳು ಉತ್ಕೃಷ್ಟ ಪ್ರತಿಯ ಹೊಲಗಳೆಂದು ಆ ಸೀಮೆಯಲ್ಲಿ ಪ್ರಖ್ಯಾತಿಯವೆ. ಮಳೆಗಾಲದಲ್ಲಿ ಅಲ್ಲಿ ಭತ್ತ ಚನ್ನಾಗಿ ಹುಟ್ಟುವದಲ್ಲದೆ, ಚಳಿಗಾಲದಲ್ಲಿ ತರತರದ ತರಕಾರಿ, ಉಳ್ಳೇಗಡ್ಡೆ, ಮಗೇಕಾಯಿ ಮುಂತಾದ್ದು ವಿಪುಲವಾಗಿ ಬೆಳೆಯುತ್ತವೆ. ಅವುಗಳ ತೀರ್ವೆ ಬಹಳ ಕಡಿಮೆಯುಂಟು. ಉಸುಕಿನ ಬೈಲುಗಳಿಗೆ ಆಕರಿಸಿದ ತೀರ್ವೆಯದು! ಆ ತೀರ್ವೆಮಾನದಿಂದ ರೈತರ ಗೇಣಿ ಪಸಲು ಪಡೆಯಬೇಕೆಂದು ಹೇಳಿದರೆ ಅದು ಧರ್ಮ್ಯವಾದೀತೇ? ಕಡಮೆ ಗ್ರಾಮದಲ್ಲಿ ಒಂದು ಕಡೆ ಹನೇಹಳ್ಳಿಯ ಅಜ್ಜುಲ ಮನೆತನದವರು ಹೀಗೆಯೇ ಹೇರಳ ಹಣ ಸುರಿದು ಮತ್ತು ರಕ್ತದ ನೀರು ಮಾಡಿ, ಹಿಂದೆ ನೀರಾವರಿಯಲ್ಲಿ ಹೊಲ-ಹಿತ್ತಲಗಳನ್ನು ಮಾಡಿರುತ್ತಾರೆ. ಹಿಂದೆ ಆ ಬೇಣಕ್ಕೆ ಎಕರೆ ೧ಕ್ಕೆ ೪ ಆಣೆಯಂತೆ ತೀರ್ವೆ ಕಟ್ಟಿಸಲ್ಪಟ್ಟಿತ್ತು. ಆ ತೀರ್ವೆ ಇನ್ನೂ ಹಾಗೆಯೇ ಉಂಟು. ಅಲ್ಲಿ ತರಹಾಂದ ಹೊಲಗಳಲ್ಲಿ ಕಬ್ಬು ಬೆಳೆಯಲಿಕ್ಕೂ ಸಾಧ್ಯವಿದೆ, ಮತ್ತು ಕೆಲವೊಂದು ಭಾಗದಲ್ಲಿ ಕಬ್ಬು ಬೆಳೆಸುತ್ತಾರೆ. ಇಂತಹ ಹೊನ್ನಿನ ಹೊಲದ ಒಳಿಯನ್ನು ಆ ತೀರ್ವೆಯ ಪ್ರಮಾಣದಿಂದ ನಿರ್ಧರಿಸಿ ಒಡೆಯರು ಗೇಣಿ ಪಸಲು ಪಡೆಯಬೇಕೆಂದು ಹೇಳಿದರೆ ಅನ್ಯಾಯದ ಪರಮಾವಧಿಯಾಗಲಿಕ್ಕಿಲ್ಲವೇ? (ಇಲ್ಲಿ ನಾನು ಮೂರೇ ಉದಾಹರಣೆಗಳನ್ನ ಕೊಟ್ಟಿದ್ದೇನೆ. ಇಂತಹ ಪ್ರಕರಣಗಳು ಇನ್ನೂ ಎಷ್ಟೋ ಇವೆ) ಬರೇ ತೀರ್ವೆಯ ಮಾನದ ಮೇಲೆ ಬೆಳೆಯ ಪ್ರಮಾಣ ರಚಿಸಿದರೆ ಮತ್ತು ಆಯಾ ಭೂಮಿಯ ಬೆಳೆಯನ್ನು ಪುನಃ ತ್ರೈರಾಶಿಕದ ಲೆಕ್ಕ ಹಾಕಿ ನಿರ್ಧರಿಸಬೇಕೆಂದು ಹೇಳುವರೆ ಅದಕ್ಕಿಂತ ಹುಚ್ಚುತನ ಇನ್ನಾವದು? ನ್ಯಾಯನಿಷ್ಠರಾಗಲಿ, ವ್ಯವಹಾರ-ಬುದ್ಧಿಗಳಾಗಲಿ ಒಪ್ಪಿಗೆಯಾದೀತೆಂಬುದನ್ನು ಸರಕಾರವೂ ಬೆಳೆಯ ಮಾನ ನಿರ್ಧರಿಸುವ ಅಧಿಕಾರಿ-ವರ್ಗವೂ ಆಲೋಚಿಸಬೇಕಾಗಿ ಸೂಚನೆಯಿದೆ.

* *

ಇತ್ತ ಕೆಲವು ಕಾಲದಿಂದ ಶಿರ್ಸಿ ವಿಭಾಗದ ಸಬ್-ಡಿವ್ಹಿಜನಲ್ ಮ್ಯಾಜಿಸ್ಟ್ರೇಟರ ಹಾಗೂ ಬೇರೆ ಕೆಲವು ಮ್ಯಾಜಿಸ್ಟ್ರೇಟರ ಮುಂದೆ ಕೆಲವು ಲಂಚಗೊಳಿತನದ ಮೊಕದ್ದಮೆಗಳು ನಡೆಯುತ್ತಿವೆ. ೭–೮ ಮೊಕದ್ದಮೆಗಳ ವಿಚಾರ ಸದ್ಯಕ್ಕೆ ಪೂರ್ಣವಾಗಿ ವಕೀಲರ ಪ್ರತಿಪಾದನೆಗಳೂ ಮುಗಿದಿವೆ. ಈ ಪ್ರತಿಪಾದನೆಗಳ ಕಾಲಕ್ಕೆ, ಸದರಿ ಮೊಕದ್ದಮೆಗಳನ್ನು ಹೂಡಲು ಸರಕಾರದವರ ಸೆಂಕ್ಶನ್ ಯಾನೆ ಅನ್ನುಮತಿಯನ್ನು ಫಿರ್ಯಾದಿ-ಪಕ್ಷವು ಪಡಕೊಂಡಿಲ್ಲೆಂದು ಹೂರಬಿತ್ತು! (ಸರಕಾರಿ ನೌಕರರು ಸರಕಾರಿ ಕೆಲಸ ಮಾಡುತ್ತಿರುವಾಗ ಏನಾದರೊಂದು ಅಪರಾಧ ಮಾಡಿದರೆ, ಆ ಅಪರಾಧದ ಬಗ್ಗೆ ಖಟ್ಲೆ ಹೂಡುವ ಮೊದಲು ಸರಕಾರದ ಅಪ್ಪಣೆ ಪಡಕೊಳ್ಳಬೇಕೆಂದು ಕ್ರಿಮಿನಲ್ ಪ್ರೊಸೀಜರ ಕೋಡಿನ ಕಲಮು ೧೯೭ರಲ್ಲಿ ವಿಧಿಸಲಾಗಿದೆ.) ಅದರಿಂದ ಮ್ಯಾಜಿಸ್ಟ್ರೇಟರು ಈಗ ಖಟ್ಲೆಗಳನ್ನು ತೀರ್ಮಾನಿಸದೆ ಆರೋಪಿತರ ಬಿಡುಗಡೆ ಮಾಡುವ ಪ್ರಸಂಗವುಂಟಾಗಿದೆ.

* *

ಮೇಲ್ಕಾಣಿಸಿದ ಪ್ರಕರಣಗಳಲ್ಲಿ ಆರೋಪಿತರ ವಿರುದ್ಧ ಖಟ್ಲೆಗಳನ್ನು ಹೂಡಲು ಸರಕಾರದವರ ಅಪ್ಪಣೆ ಬೇಕೆಂಬುದರ ಮರೆವು ಸರಕಾರಿ ವಕೀಲರಿಗೂ ಖಟ್ಲೆ ಹಾಕಿದ ಅಧಿಕಾರಿಗಳಿಗೂ ಆದದ್ದು ಹೇಗೆ? ಇದರ ಅಜಾಗ್ರತೆಯ ಮೂಲಕ ಇಷ್ಟು ದಿನ ಫಿರ್ಯಾದಿ ಪಕ್ಷದವರೂ ಆರೋಪಿಗಳ ಪಕ್ಷದವರೂ ಮಾಡಿದ ಪರಿಶ್ರಮವೂ ವೆಚ್ಚವೂ ನಿರರ್ಥಕವಾಯಿತಲ್ಲವೇ? ಆ ವೆಚ್ಚವನ್ನು ತುಂಬಿ ಕೊಡುವರಾರು? ಸರಕಾರಿ ವಕೀಲರು ಈಗೇನೋ ಸರಕಾರಕ್ಕೆ ಬರೆದು, ಆರೋಪಿತರ ವಿರುದ್ಧ ಖಟ್ಲೆ ಹೂಡಲು ಅಪ್ಪಣೆ ಪಡಕೊಂಡು, ಪುನಃ ಖಟ್ಲೆ ಹೂಡಿ ಆ ಆರೋಪಣೆ ನಡೆಸಿದ್ದಾರೆಂದು ಒಂದು ಗಾಳಿ ವಾರ್ತೆಯಿದೆ. ಪುನಃ ಖಟ್ಲೆ ಹೂಡಲು ಸರಕಾರದವರು ಅಪ್ಪಣೆ ಕೊಟ್ಟಲ್ಲಿ ಆರೋಪಿತರು ತಮ್ಮ ಸಂರಕ್ಷಣೆಗಾಗಿ ತಿರುಗಿ ಹಣವೆಚ್ಚ ಮಾಡಬೇಕಾಗುವದು. ಅದನ್ನು ಅವರು ಎಲ್ಲಿಂದ ತರಬೇಕು? ಸರಕಾರವು ಪುನಃ ಖಟ್ಲೆ ಹೂಡುವದೇ ಆದಲ್ಲಿ ಈ ಆರೋಪಿತರಿಗೆ ಈ ವರೆಗೆ ಆದ ಖರ್ಚನ್ನು ಸರಕಾರವು ಕೊಡಲು ತರಬೇಕು ಮತ್ತು ಆ ಮೇಲೆ ಇಷ್ಟವಿದ್ದಂತೆ ಖಟ್ಲೆ ನಡೆಸಬೇಕಾಗಿ ಒಂದು ಸೂಚನೆಯುಂಟು. ಈ ಸೂಚನೆ ಸಮಯೋಚಿತವಲ್ಲೆಂದು ಹೇಳಲಾಗದು.

ಮೈಸೂರ ಗವ್ಹರ್ನಮೆಂಟ ಸೋಪ ಫೆಕ್ಟರಿ, ಬೆಂಗಳೂರ.
ಇವರಲ್ಲಿ ತಯಾರಾದ
ಈ ಕೆಳಗಿನ ಲೋಕಪ್ರಿಯ ಮತ್ತು ಸುಪ್ರಸಿದ್ಧ
ಮೈಸೂರ ಸೆಂಡಲ್ ಸೋಪ,
ಮೈಸೂರ ಬಾರ ಸೋಪ,
ಮೈಸೂರ ವಾಶಿಂಗ ಕೇಕ್ಸ,
ಇವು ಇನ್ನು ಮುಂದೆ ಎಲ್ಲ ವ್ಯಾಪಾರಸ್ಥರಿಗೂ, ಗಿರಾಕಿಗಳಿಗೂ
ನಮ್ಮಲ್ಲಿ ಸಂತತವಾಗಿ ಸಿಗುವವೆಂದು ತಿಳಿಸಲು ಆನಂದವಾಗುತ್ತಿದೆ.
ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಸೋಮವಾರ ಮಧ್ಯಾಹ್ನ ಪುನರ್ವಸು ನಕ್ಷತ್ರಕ್ಕೆ ಪ್ರಾರಂಭವಾಗುತ್ತಲೇ ಮಳೆಯ ರೂಪ ಒಮ್ಮೆಲೇ ಬದಲಾಯಿತು ! ಸೋಮವಾರ ಸಾಯಂಕಾಲದಿಂದ ಮೊನ್ನೆ ಶನಿವಾರದ ವರೆಗೂ ಬಹಳ ಮಳೆ ಸುರಿಯಿತು, ಗಾಳಿ ಬೀಸಿ ಮಳೆ ಘಟ್ಟಕ್ಕೂ ಹೋಯಿತು ಆದರಿಂದ ಹೊಳೆಗಳಿಗೆ ೩ ದಿನ ನೆರೆ ಕಟ್ಟಿತ್ತು. ನಿನ್ನೆಯ ದಿನ ಮಳೆ ಕಡಿಮೆಯಾಗಿ ಬಿಸಿಲು ಬೀಳಲಾರಂಭಿಸಿದೆ ಕಳೆದ ವಾರ ೧೬—೧೭ ಇಂಚು ಮಳೆಯಾಗಿರುತ್ತಿದ್ದು, ಜೂನ ತಿಂಗಳ ಪ್ರಾರಂಭದಿಂದ ಈವರೆ ವರೆಗೆ ಒಟ್ಟು ಮಳೆ ೭೦—೭೧ ಇಂಚು ಆಗಿದೆ

ಈ ತಿಂಗಳಲ್ಲಿ ಚಿಮಣಿ ಎಣ್ಣೆ ಕಂಟ್ರೋಲಿನ ಹಿಂದಿನ ತ್ರೈಮಾಸಿಕ ಹಂಚಿಕೆಗೆ ಎಣ್ಣೆ ಮಾರಾಟವಾಗದೆ ಉಳಿದಿದೆ ಆದರಿಂದ ಈ ತಾಲೂಕಿನ ಎಲ್ಲ ಹಳ್ಳಿಗಳಲ್ಲಿರುವ ಚಿಮಣಿ ಎಣ್ಣೆಯ ಕೋಟಾ ಸ್ಥಾನಗಳಿಗೆ ಕಳೆದ ತಿಂಗಳ ಕೊಟ್ಟ ಎಣ್ಣೆಯು ಅಷ್ಟು ಎಣ್ಣೆ ಕೊಡಬೇಕೆಂದು ಹಳ್ಳಿಗಳಲ್ಲಿ ಆ ಎಣ್ಣೆ ಮಾರುವ ಅಂಗಡಿಕಾರರಿಗೆ ತಿಳಿಸಿದ್ದಲ್ಲದೆ, ಅವರ ಅನುಕೂಲವಾಗುವಂತೆ ಕಂಟ್ರೋಲ ಹಿಡಿದಿರುವ ಕಳೆದ ತಿಂಗಳಲ್ಲಿ ಒಯ್ಯದ ಎಣ್ಣೆ ಡಬ್ಬಿಗಳ ಇಷ್ಟು ಡಬ್ಬಿಗಳನ್ನು ಪಡೆದುಕೊಂಡು ಒಯ್ಯಲು ಆ ಅಂಗಡಿಕಾರರಿಗೆ ಮಾಮಲೇದಾರ ಕಚೇರಿಯಿಂದ ಸೂಚನೆ ಹೋಗಿರುತ್ತದೆಂದು ತಿಳಿಯುತ್ತದೆ ಕುಮಟಾ ಮ್ಯುನಿಸಿಪಲ್ ಕ್ಷೇತ್ರದಲ್ಲಿರುವ ಜನರ ಎಣ್ಣೆಯ ಸಿ.ಪಿ. ೧೦ ಪಟ್ಟಿಗೆ ಏರಿಸಲ್ಪಟ್ಟಿದೆ ಆದರೆ ಸ್ಪೆಶಲ್ ಕೋಟಾ ಗಳಿಗೆ ಈ ವರೆಗೆ ಅನ್ವಯಿಸಿಲ್ಲ

ಸರಕಾರದ ಯೋಗ್ಯ ದರದ ಅಂಗಡಿಗಳಲ್ಲಿ ಈಗ ಚೀಟಿ ಹಚ್ಚಿಗೆ ಸಿಗುತ್ತಿದೆ ಆಹಾರ ಧಾನ್ಯಗಳ ಹೊಸ ಪ್ರಮಾಣ ಈ ಮುಂದಿನಂತಿದೆ — ಕಲಾ ೧ ರಕ್ತಲ ೫ ತೊಲೆ ಗೋಧಿ, ೩ ರ ೧೨ ತೊ ಕೆಂಪು ಜೋಳ, ೩ ರ ೧೫ ತೊ. ಮೆಕ್ಕೆ ಜೋಳ, ಮತ್ತು ೪ ರ ೨೨ ತೊ ಅಕ್ಕಿ

ಸೀಧಾ ಅಂಗಡಿಗಳಲ್ಲಿ ಆಹಾರ ಧಾನ್ಯಗಳನ್ನು ಕೊಡಲಾರಂಭಿಸಿದಂದಿನಿಂದ ಪೇಟೆಯಲ್ಲಿ ಅಕ್ಕಿಯ ದರಗಳು ಇಳಿಮುಖವಾಗಿವೆ. ಈಗ ಹೆಚ್ಚಿಗೆ ಸೀಧಾ ಅಕ್ಕಿ ಸಿಗುತ್ತಿದ್ದರ ಪರಿಣಾಮವಾಗಿ ಆ ದರಗಳು ಇನ್ನೂ ಇಳಿಯುವವೆಂದು ಬಲ್ಲವರು ಹೇಳುತ್ತಾರೆ.

ಮೂರೂರಿನಲ್ಲಿ ಕಳೆದ ವಾರ ಒಂದು ರಾತ್ರಿ ಕಳ್ಳರು ಬಂದು ಅಂಗಡಿಯ ಬೀಗವನ್ನು ಕತ್ತರಿಸಿ ಕೊಯ್ದು ತೆಗೆದು, ಒಳಗಿನ ನಗದಿ ಹಣವನ್ನೂ ಕೆಲವೊಂದು ಜಿನಸುಗಳನ್ನೂ ಅಪಹರಿಸಿಕೊಂಡು ಹೋಗಿರುವರಂತೆ. ಕಳವಿಗೆ ಹೋದ ಸಾಮಾನಿನ ಬೆಲೆ ಸುಮಾರು ೭-೮ ನೂರು ರೂಪಾಯಿಯಷ್ಟು ಆದೀತಂತೆ.

ಆಚೆಯ ವಾರ ನಡೆದ ಕುಮಟಾ ನಗರಸಭೆಯ ಚುನಾವಣೆಯ ಕಾಲಕ್ಕೆ ಕೆಲವೊಂದು ಅಕ್ರಮಗಳಾಗಿವೆಯೆಂದೂ, ಆ ಕಾರಣದಿಂದ ಚುನಾವಣೆಯನ್ನು ರದ್ದುಗೊಳಿಸಬೇಕೆಂದೂ ೨ನೇ ವಾರ್ಡಿನಲ್ಲಿ ಉಮೇದವಾರರಾಗಿದ್ದ ರಾ॥ ಸೀತಾರಾಮ ಭಾಗ್ವತರ ಪಕ್ಷದಿಂದ ರಾ॥ ರಾಜಾರಾಮ ಭಾಗ್ವತರು ಕಾರವಾರದ ಜಿಲ್ಲಾ ಕೋರ್ಟಿನಲ್ಲಿ ಜಿಲ್ಲಾ ಮ್ಯುನಿಸಿಪಾಲಿಟಿಗಳ ಕಾನೂನಿನನ್ವಯ ಅರ್ಜಿ ದಾಖಲ ಮಾಡಿರುತ್ತಾರೆಂದು ಸುದ್ದಿ ಬಂದಿದೆ

ತಾ ೨೮-೬-೧೯೪೮ರ " ವೃತ್ತ " ದಲ್ಲಿ ಕಡವಿನ ರಾ॥ ಕೇಶವ ಸುಬ್ಬ ಶೆಟ್ಟಿಯವರ ಸಂಬಂಧದಲ್ಲಿ ಪ್ರಕಟವಾದ ಮಜಕೂರು ಬಹಳಷ್ಟು ವಿಪರ್ಯಾಸ ಮತ್ತು ನಿರಾಧಾರ ವಿರುತ್ತದೆಂದು ಗೃಹಸ್ಥರೊಬ್ಬರು ಬರೆಯುತ್ತಾರೆ ರಾ॥ ಶೆಟ್ಟಿಯವರು ಗೋವೆಗೆ ಅಕ್ಕಿ ಕಳಿಸಿಕೊಟ್ಟಿದ್ದೆಂಬುದೂ ಉಳಿದ ಅಕ್ಕಿಯನ್ನು ಅವರು ಅಡಗಿಸಿಟ್ಟಿದ್ದೆಂಬುದೂ ಸುಳ್ಳಿರುತ್ತದೆ. ತಾ. ೨೨-೫-೪೮ಕ್ಕೆ ಆಹಾರ ನಿಯಂತ್ರಣ ಫೌಜದಾರ ರಾ॥ ನಾಯ್ಕರು ರಾ॥ ಶೆಟ್ಟಿಯವರ ಅಂಗಡಿಯಲ್ಲಿ ಝಡತಿ ಮಾಡಿದ್ದು ನಿಜ. ರಾ॥ ನಾಯ್ಕರು ಅಂಗಡಿಯಲ್ಲಿ ಶಿಲ್ಲಕ ಅಕ್ಕಿಗೂ ರಜಿಸ್ಟರದಲ್ಲಿ ತೋರಿಸುವ ಸಂಗ್ರಹಕ್ಕೂ ವ್ಯತ್ಯಾಸವಿರುತ್ತದೆಂದು ಕಂಡು ಹಿಡಿದದ್ದು ನಿಜ. ಆದರೆ ಇದರಲ್ಲಿ ಕಳ್ಳತನವೇನೂ ಇಲ್ಲವಂತೆ ರಾ॥ ಶೆಟ್ಟರು ತಾ. ೨೨ ನೇಗೆ ಕೊಂಡುಕೊಂಡ ಅಕ್ಕಿಯನ್ನು ಲೆಕ್ಕದಲ್ಲಿ ಇನ್ನೂ ಬರೆದಿದ್ದಿಲ್ಲ ರಾತ್ರೆ ಅಂಗಡಿ ಮುಚ್ಚುವ ಸಮಯದಲ್ಲಿ ೮-೮॥ ಘಂಟೆಗೆ ಆ ಲೆಕ್ಕವನ್ನು ಬರೆದು ಮುಗಿಸುವದು ರಾ॥ ಶೆಟ್ಟರ ಪರಿಪಾಠವಂತೆ ಹೀಗೆ ಅವರು ಲೆಕ್ಕ ಬರೆದು ಪೂರ್ಣ ಪಡಿಸುವ ಮೊದಲೇ (ಅಂದರೆ ಸಂಜೆಯ ೫ಕ್ಕೆ) ಫೌಜದಾರರು ಬಂದು ಝಡತಿ ತಕ್ಕೊಂಡದ್ದರಿಂದ ಮತ್ತು ಲೆಕ್ಕ ಬರೆದು ಸರಿ ಮಾಡಿಕೊಡಲು ಅವಕಾಶ ಕೊಡದ್ದರಿಂದ ಮೇಲಿನಂತೆ ಲೆಕ್ಕದ ಶಿಲ್ಕಿಗೂ ಪ್ರತ್ಯಕ್ಷ ಶಿಲ್ಕಿಗೂ ವ್ಯತ್ಯಾಸ ಕಂಡುಬಂತಂತೆ ಫೌಜದಾರರು ರಾ॥ ಶೆಟ್ಟರ ವಿವರಣೆ ಕೇಳಿಕೊಂಡಿದ್ದರೆ ಅವರಿಗೂ ಕಳ್ಳತನವಿಲ್ಲೆಂದು ಖಾತ್ರಿಯಾಗುತ್ತಿತ್ತೆಂದು ಸದರಿ ಗೃಹಸ್ಥರು ಹೇಳುತ್ತಾರೆ.

ಹೊನ್ನಾವರ— (ತಾ ೧೦-೭-೪೮) ಮಳೆ ಬಹಳ ಜೋರಿನಿಂದ ನೆರೆ ಕಟ್ಟಿದೆ

ಎಂ. ಕೇ. ಟಿ ಕಂಪನಿಯ ಇಲ್ಲಿಯ ಮೋಟಾರ ಏಜಂಟರಾಗಿದ್ದ ರಾ. ಕೃಷ್ಣ ನಾಗಪ್ಪ ಶಾನಭಾಗರು ಇವರು ಕಳೆದ ಸೋಮವಾರ ಸಂಜೆ ತ ಮುಖ್ಯ ಮೋಟಾರ ನಿಲ್ದಾಣಕ್ಕೆ ಹೋಗುತ್ತಿರುವಾಗ ಮರಿಯವರಿಗೆ ಹೇಳಿ ಮನೆಯಿಂದ ಹೊರಟವರು ನಟ್ಟಿಗೆ ಬಟ್ಟೆ ಕೆರೆಗೆ ಹೋಗಿ, ಕುತ್ತಿಗೆ ಕಲ್ಲು ಕಟ್ಟಿಕೊಂಡು ಕೆರೆಯಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡರು. ಇಲ್ಲಿನ ಮ್ಯುನಿಸಿಪಾಲಿಟಿಯಿಂದ ಯುನಿಯನ್ ಬ್ಯಾಂಕಿನ ಶಾಖೆಗೆ ಕಟ್ಟಲು ಕೊಟ್ಟ ಕೆಲವು ಹಣವನ್ನು ಇವರು ಬಳಸಿಕೊಂಡಿದ್ದರಂತಲೂ, ಆ ಸಂಗತಿ ಹೊರಬಿದ್ದು ತನ್ನ ಪತ್ತು ಹೋಯಿತೆಂಬ ಪಶ್ಚಾತ್ತಾಪದಿಂದಲೂ ಇವರು ಆತ್ಮಹತ್ಯೆ ಮಾಡಿಕೊಂಡಿರಬೇಕೆಂದೂ ಜನರ ಊಹೆ

ಈ ತಿಂಗಳಲ್ಲಿ ಚಿಮಣಿ ಎಣ್ಣೆಯ ಕೋಟಾ ಹೆಚ್ಚಿಗೆ ಬಂದಿದೆಯಂತೆ ಕಳೆದ ತಿಂಗಳ ಕೋಟಾದ ೧॥ ಪಟ್ಟು ಕೋಟಾ ಬಂದಿದೆಯೆಂದು ವಿಶ್ವಸನೀಯ ಸುದ್ದಿಯಿದೆ. ಅದರಿಂದ ಜನರಿಗೆ ಈವರೆಗೆ ಕೊಡುತ್ತಿದ್ದದ್ದರ ೧॥ ಪಟ್ಟು ಎಣ್ಣೆ ಕೊಡಲು ಅನುಕೂಲವಿದೆ ಆದರಂತೆ ಕೊಡುವ ವ್ಯವಸ್ಥೆಯಾದರೆ ಜನರ ಕಷ್ಟ ಕೆಲ ಮಟ್ಟಿಗಾದರೂ ಕಡಿಮೆಯಾಗುವದು

ಪೇಟೆಯಲ್ಲೂ ಹಳ್ಳಿಗಳಲ್ಲೂ ಅಕ್ಕಿಯ ಧಾರಣೆಗಳು ಇಳಿಯುತ್ತಿವೆ ಸೀಧಾ ಅಂಗಡಿಗಳಲ್ಲಿ ಸರಕಾರವು ಕೊಡುವ ಅಕ್ಕಿಯ ಪ್ರಮಾಣ ಮತ್ತಷ್ಟು ಹೆಚ್ಚಾದರೆ ಈ ಧಾರಣೆಗಳು ಇನ್ನೂ ಇಳಿಯುವವೆಂಬ ಆಶೆಯುಂಟು.

ಇಲ್ಲಿಯ ಕೆಸಬಾ ಶಾಲೆಯಲ್ಲಿ ಏನೇನೂ ವ್ಯವಸ್ಥೆಯಿಲ್ಲ ! ಶಾಲೆಯು ನೆಲ ದನವಿನ ಕೊಟ್ಟಿಗೆಯ ನೆಲಕ್ಕೆ ಸಮಾನವಾಗಿದೆ ! ಶಾಲೆಯು ಶಿಕ್ಷಣದ ಗತಿಯೂ ಅದೇ ! ಹುಡುಗರು ಶಾಲೆಯಲ್ಲಿ ಕಲಿಯಲು ಹೋಗುತ್ತಾರೋ ಆಡಲು ಹೋಗುತ್ತಾರೋ ತಿಳಿಯದು !

ಹೊನ್ನಾವರ—ಕುಮಟಾ ಮಾರ್ಗ ಬಹಳ ನಿಕೃಷ್ಟಾವಸ್ಥೆಗೆ ಮುಟ್ಟಿದೆ ! ಇನ್ನೂ ಅದು ಕೆಡಲಿಕ್ಕೆ ಅವಕಾಶವಿಲ್ಲ !! ಮಳೆ ಬಿದ್ದರೆ ಕೆಲವೆಡೆ ಮಾರ್ಗದ ಮೇಲೆ ಹಳ್ಳವಾಗುತ್ತದೆ. ಎಷ್ಟೋ ಕಡೆ ಮಾರ್ಗಕ್ಕೆ ಕಾಲುವೆಗಳೇ ಇಲ್ಲ ! ಮಾರ್ಗ ತುಂಬ ಕೊರಕಲುಗಳು ! ನಮ್ಮ ಬದಿಯ ಇಂಜನೀರ ಇಲಾಖೆಯವರ ಕಾರ್ಯದಕ್ಷತೆಯನ್ನೂ ಕಾರ್ಯ-ತತ್ಪರತೆಯನ್ನೂ ಯಥಾರ್ಥವಾಗಿ ತಿಳಕೊಳ್ಳಬಯಸುವವರು ಈ ಮಾರ್ಗವನ್ನು ನೋಡಿಕೊಳ್ಳಬೇಕು

ಭಟಕಳ— (ತಾ. ೮-೭-೪೦) ಪೇಟೆಯಲ್ಲಿ ಕಳವುಗಳಾಗುತ್ತಿವೆ. ಪೋಲೀಸರೆಲ್ಲಿದ್ದಾರೆ !

ಭಟಕಳ-ಶಿರಾಲಿ ಮಾರ್ಗ ಪೂರ್ಣ ಕೆಟ್ಟು ಹೋಗಿದೆ. ಎಲ್ಲೆಲ್ಲೂ ಹೊಂಡಗಳು, ಕೊರಕಲುಗಳು ! ಈ ಮಾರ್ಗಗಳಲ್ಲಿ ವಾಹನಗಳನ್ನು ನಡೆಸುವದೆಂದರೆ ಅದೊಂದು ದಿವ್ಯವೇ ಸರಿ ! ಮಾರ್ಗದ ದುರುಸ್ತಿ ಎಂದಾಗುವದೋ ದೇವರೇ ಬಲ್ಲನು !

ಅಬಕಾರಿ ಖಾತೆಯವರು ಕಳೆದ ವಾರ ಬೈಲೂರ, ಬಲಸೆ, ಮಾವಳ್ಳಿ, ಶ್ಯಾಡಿ, ಶಿರಾಲಿ ಹಳ್ಳಿಗಳಲ್ಲಿ ಸಂಚಾರ ಮಾಡಿ ಕೆಲವು ಸರಾಯಿಯ ಪತ್ತೆ ಹಚ್ಚಿದ ವರದಿಯುಂಟು

ಶಿರಸಿ— (ತಾ ೮-೭-೧೯೪೮) ಇಲ್ಲಿಯ " ಅರ ದಾಂಡೇಲಿ ಕಂಪನಿ "ಯ ಮ್ಯಾನೇಜರಾಗಿದ್ದ ರಾ॥ ವಿಷ್ಣು ಶಾಸ್ತ್ರಿಯವರ ಹೆಗಡೆ ಕಡತೋಕೆ ಇವರು ಕೆಲವು ದಿನಗಳಿಂದ ಕಾಣುತ್ತಿಲ್ಲ ಕಂಪನಿಯ ಬಾಬತು ಸುಮಾರು ೮೦ ಸಾವಿರ ರೂಪಾಯಿಗಳ ಪತ್ತೆ ಲೆಕ್ಕದಲ್ಲಿ ಹತ್ತುತ್ತಿದಿಲ್ಲವಂತೆ !

(ತಾ. ೧೦-೭-೪೮) ಚಿಮಣಿ ಎಣ್ಣೆಯ ಹಂಚುವಿಕೆ ಸರಿಯಾಗಿ ನಡೆಯುವದಿಲ್ಲ. ಜುಲೈಯ ತಿಂಗಳ ಎಣ್ಣೆ ಇನ್ನೂ ಬಂದಿಲ್ಲವಂತೆ ಜೂನ ತಿಂಗಳ ೨ನೇ ವಾರದ ಎಣ್ಣೆಯನ್ನು ಜನರಿಗೆ ಕೊಡಲೇ ಇಲ್ಲ ! ಅಧಿಕಾರಿಗಳು ಈ ಹಂಚುವಿಕೆಯನ್ನು ಸರಿಗೊಳಿಸುವ ಏನಾದರೊಂದು ವ್ಯವಸ್ಥೆ ಮಾಡಬೇಕಾಗಿ ಅರಿಕೆಯಿದೆ.

ಸಿದ್ಧಾಪುರ— ಸಿದ್ದಾಪುರ ತಾಲೂಕಿನ ಮತ್ತಿಹಳ್ಳಿ ಗ್ರಾಮದ ಈಶ್ವರ ಗಣಪಯ್ಯ ಹೆಗಡೆ ಎಂಬಾತನು ಇತ್ತ ೧೦ ವರ್ಷಗಳಿಂದ ಹುಚ್ಚನಾಗಿ ಊರಲ್ಲೂ ಬೇರೂರುಗಳಲ್ಲೂ ಸಿಕ್ಕ ಹಾಗೆ ಅಲೆದಾಡುತ್ತಿದ್ದನು, ಕಳೆದ ಫಾಲ್ಗುಣ

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಸ್ಸಿನಾಸಾರ ಸ್ವತಃ ಮಾಡಿಸಿಕೊಡುತ್ತೇವೆ ನಮ್ಮಲ್ಲಿಂದ ಪಟ್ಟೆ ಪೀತಾಂಬರ,ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತು ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಛತ್ರರಗಲ್ಲಿ, ಬನಾರಸ

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೨೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸು:—

Post Box No 10,
UDIPI, S. Kanara.

ದಲ್ಲಿ ಅವನು ಕಡಕೋಳೆಯಲ್ಲಿದ್ದನಂತೆ ಅಲ್ಲಿಂದ ಮುಂದೆ ಅವನ ಪತ್ತೆಯಿಲ್ಲ ಅವನು ಎಲ್ಲೋ ತೀರಿಕೊಂಡಿರುತ್ತಾನೆಂಬ ಗಾಳಿವಾರ್ತೆಯೊಂದು ಈಗ ಬಂದಿದೆ ಈ ವಾರ್ತೆ ಕೇಳಿ ಈಶ್ವರನ ಮನೆಯವರೂ ಅವನ ಹೆಂಡತಿಯೂ ಗಾಬರಿಗೊಂಡಿದ್ದಾರೆ ಈ ವಾರ್ತೆ ಸಟಿಯೋ ದಿಟವೋ ಎಂಬುದು ತಿಳಿಯದೆ ಅವರು ಇರುತಿನಲ್ಲಿ ಸಿಕ್ಕಿ ಬಿದ್ದಿದ್ದಾರೆ. ಈಶ್ವರನು ೩೦ ವರ್ಷ ಪ್ರಾಯದ, ಗೌರ ವರ್ಣದ, ಸದೃಢ ಪ್ರಕೃತಿಯುಳ್ಳವನಾಗಿದ್ದನು ಅವನ ಮಾಹಿತಿಯನ್ನು — ಅವನು ಇನ್ನೂ ಬದುಕಿಕೊಂಡಿದ್ದರೆ ಎಲ್ಲಿದ್ದಾನೆಂಬುದನ್ನು ಮತ್ತು ಸತ್ತಿದ್ದರೆ ಎಲ್ಲಿ, ಎಂದು ಮತ್ತು ಹ್ಯಾಗೆ ಸತ್ತನೆಂಬುದನ್ನು —— ಯಾರಾದರೂ ತಮಗೆ ದಯಮಾಡಿ ತಿಳಿಸಿದರೆ ಬಹಳ ಉಪಕಾರವಾದೀತೆಂದು ರಾ॥ ರಾಮಕೃಷ್ಣ ಗಣಪಯ್ಯ ಹೆಗಡೆ ಬೆಳ್ಳ ಮತ್ತಿಹಳ್ಳಿ, (ಪೋ. ಹ್ಯಾಗ್ಲಿ, ತಾ. ಸಿದ್ದಾಪುರ ಇವರು ತಿಳಿಸುತ್ತಾರೆ.

(ತಾ. ೮-೭-೪೮) ಕಳೆದ ತಾ. ೨೨ನೇ ರಾತ್ರಿ ಸಿದ್ದಾಪುರದ ನಡು-ಪೇಟೆಯೊಳಗೆ ಯಾರೋ ರಾ॥ ಶ್ರೀನಿವಾಸ ಅಣ್ಣಪ್ಪ ದೇವನಳ್ಳಿ ಇವರ ಕೊಲೆ ಮಾಡಿದ್ದಾರೆಂದು ತಿಳಿಯುತ್ತದೆ ಪೋಲೀಸರು ಅವರ ಶವದ ಪಂಚನಾಮೆಯನ್ನೂ ಶರೀರಕೋಶ ಪರೀಕ್ಷೆಯನ್ನೂ ಮಾಡಿಸಿದ್ದರು. ಇನ್ನೂ ಅವರು ಕೊಲೆಗಡಕನ ತಪಾಸಣೆ ಮಾಡುತ್ತಿದ್ದಾರೆ. ಮೃತರು ಒಬ್ಬರೇ ಇರುತ್ತಿದ್ದರು. ಅವರು ಮಲಗಿಕೊಂಡಾಗ, ಅವರ ಕಡೆಗಿದ್ದ ಗಂಟು ಎಬ್ಬಿಸಲು, ಕೊಲೆಪಾತಕಿಯು ಅವರನ್ನು ಕೊಂದಿರಬೇಕೆಂದು ಜನರ ತರ್ಕವುಂಟು.

ಅಂಕೋಲಾ— ಬೇಸಾಯದ ಭೂಮಿಗಳ ಸುಧಾರಣೆಯ ಯೋಜನೆಯೊಂದನ್ನು ಸಿದ್ಧಗೊಳಿಸಲು ಕೊಂಗ್ರೆಸ್ಸಿನವರು ಒಂದು ಸಮಿತಿಯನ್ನು (ಕೊಂಗ್ರೆಸ ಅಗ್ರೇರಿಯನ್ ರಿಫೋರ್ಮ್ಸ ಕಮಿಟಿ) ನೇಮಿಸಿದ್ದಾರೆ. ಈ ಕಮಿಟಿಯ ಮುಖ್ಯ ಕಾರ್ಯಾಲಯವು ಮುಂಬಯಿ ಸರಕಾರದ ಕಚೇರಿಯಲ್ಲೇ ಉಂಟು. ಕಮಿಟಿಯವರ ಕಾರ್ಯ-ಪದ್ಧತಿ ಎಂತಹದೆಂಬುದು ಗೊತ್ತಿಲ್ಲ. ಅವರು ಪ್ರತಿ ಜಿಲ್ಲೆಯಲ್ಲಿ ಸಂಚಾರ ಮಾಡಿ, ಅಲ್ಲಲ್ಲಿಯ ಒಕ್ಕಲತನದ ಪದ್ಧತಿಗಳನ್ನು ಅಭ್ಯಸಿಸಿ, ಆ ಮೇಲೆ ತಮ್ಮ ಯೋಜನೆ ರೂಪಿಸುವರೋ ಅಥವಾ ಸರಕಾರಿ ಕಚೇರಿಯಲ್ಲಿದ್ದ ಕಟ್ಟ (?) ರು ಹೇಳುವ ಮಾಹಿತಿಯನ್ನು (?) ನಂಬಿ ಮುನ್ನಡೆಯುವರೋ ತಿಳಿಯದು. ಅದರಿಂದ ಇಲ್ಲಿಯ ಭೂಮಾಲೀಕ ಸಂಘದವರು ಸದರಿ ಕಮಿಟಿಯ ಅಧ್ಯಕ್ಷರಿಗೆ ಮೊನ್ನೆಯೇ ಒಂದು ತಂತಿ ಕಳಿಸಿ, ಈ ಜಿಲ್ಲೆಯ ಒಕ್ಕಲತನದ ಪ್ರಕಾರಗಳು ಬಹಳ ಸಂಕೀರ್ಣ ಸ್ವರೂಪದವಿರುತ್ತವೆಂದೂ ಇನ್ನಿತರ ಜಿಲ್ಲೆಗಳೊಳಗಿನ ಪ್ರಕಾರದವಲ್ಲೆಂದೂ, ಒಕ್ಕಲತನದ ಕಾನೂನಿಂದ ಈ ಜಿಲ್ಲೆಗೆ ಬಹಳ ಅನ್ಯಾಯಕ್ಕೆ ಅವಕಾಶವಾಗಿರುತ್ತದೆಂದೂ ಬೇಸಾಯದ ಭೂಮಿಗಳು ಹಾಳಾಗುತ್ತವೆಂದೂ, ಈ ಜಿಲ್ಲೆಯ ಪರಿಸ್ಥಿತಿಯನ್ನು ಪ್ರತ್ಯಕ್ಷ ಮತ್ತು ನಿರ್ವಿಕಾರ ದೃಷ್ಟಿಯಿಂದ ನೋಡಿಕೊಳ್ಳಬೇಕೆಂತಲೂ ಬಿನ್ನವಿಸುತ್ತಾರೆ.

ಈ ಜಿಲ್ಲೆಯಲ್ಲಿ ಈ ವರ್ಷ ೧೨೦೦ ಎಕರೆಗಳಿಗಿಂತ ಹೆಚ್ಚಿಗೆ ಗದ್ದೆ ಭೂಮಿಗಳು ಮುಂಬಯಿ ಸರಕಾರದವರ ಒಕ್ಕಲತನದ ಕಾನೂನು ಎಬ್ಬಿಸಿರುವ ಕೋಲಾಹಲಗಳ ಪರಿಣಾಮವಾಗಿ ಈ ವರ್ಷ ಬಂಜರ ಬಿದ್ದು, ಜಿಲ್ಲೆಯ ಆಹಾರೋತ್ಪತ್ತಿಯು ಬಹಳಷ್ಟು ಕುಗ್ಗುವಂತಾಗಿದೆಂದೂ, ಈ ಪರಿಸ್ಥಿತಿಯನ್ನು ಸುಧಾರಿಸಲು ಮುಂಬಯಿ ಸರಕಾರವು ಏನೇನೂ ಪ್ರಯತ್ನ ಮಾಡದೆ ತಣ್ಣಗೆ ಕೂತುಕೊಂಡಿರುತ್ತದೆಂದೂ, ಮುಂಬಯಿ ಸರಕಾರವು ಹೀಗೇಕೆ ಮಾಡುತ್ತಿರೆಂಬುವದರ ಚೌಕಶಿಯನ್ನು ಹಿಂದುಸ್ಥಾನ ಸರಕಾರವು ಮಾಡಬೇಕೆಂದೂ ಇಲ್ಲಿಯ ಗದ್ದೆಗಳ ಒಡೆಯರು ಭಾರತ ಸರಕಾರದ ಆಹಾರ ಮಂತ್ರಿಗಳಿಗೆ ಒಂದು ಮನವಿ ಕಳಿಸಿದ್ದಾರೆ.

ಕಾರವಾರ— ಈಚನ ಮುಂಬಯಿ ಸರಕಾರವು ಪ್ರತಿ ವರ್ಷ ಪ್ರತಿ ಜಿಲ್ಲೆಯಲ್ಲಿ ಉತ್ತಮ ಗ್ರಾಮಸುಧಾರಣಾ ಕಾರ್ಯ ಮಾಡಿ ತೋರಿಸಿದ ಒಂದು ಹಳ್ಳಿಗೆ ರೂ. ೧೦೦೦ ರ ಪಾರಿತೋಷಿಕ ಕೊಡುತ್ತ ಬಂದಿದೆಯಷ್ಟೇ! ಸರಕಾರವು ಈಗ ಈ ಪಾರಿತೋಷಿಕಗಳ ಸಂಖ್ಯೆಯನ್ನು ಹೆಚ್ಚಿಸಿ, ಪ್ರತಿ ಜಿಲ್ಲೆಗೆ ರೂ ೨೦೦೦ ಮೊದಲ, ೧೫೦೦ ಎರಡನೆ, ಮತ್ತು ರೂ. ೧೦೦೦ರದೊಂದು ಹೀಗೆ ೩ ಪಾರಿತೋಷಿಕಗಳನ್ನು ಕೊಡಬೇಕೆಂದು ನಿರ್ಧರಿಸಿದೆ ಚಾಲೂ ವರ್ಷದಿಂದಲೇ ಈ ಯೋಜನೆ ಅಮಲಿನಲ್ಲಿ ಬರುವದು. ಜಿಲ್ಲಾ ಗ್ರಾಮೋದ್ಧಾರ ಮಂಡಳದವರ ಸಹಾಯದಿಂದ ಗ್ರಾಮಸುಧಾರಣೆ ಮಾಡಿದ ಗ್ರಾಮಕ್ಕೂ ಅಂತಹ ಸಹಾಯವಿಲ್ಲದೆ ಸುಧಾರಣೆ ಮಾಡಿದ ಗ್ರಾಮಕ್ಕೂ ಪಾರಿತೋಷಿಕ-ವಿತರಣದ ಸಂಬಂಧದಲ್ಲಿ ತುಲನೆ ಮಾಡುವಾಗ ಜಿಲ್ಲಾ ಮಂಡಳದ ನೆರವಿಲ್ಲದೆ ಕಾರ್ಯ ಮಾಡಿದ ಗ್ರಾಮಕ್ಕೆ ಪ್ರಾಶಸ್ತ್ಯ ಕೊಡಬೇಕೆಂದೂ ಸರಕಾರವು ತೀರ್ಮಾನಿಸಿದೆ.

ಮುಂಬಯಿ ಸರಕಾರವು ಈ ಜಿಲ್ಲೆಯ ಗ್ರಾಮೋದ್ಧಾರ ಮಂಡಳಕ್ಕೆ ಈ ಕೆಳಗಿನಂತೆ ಹಣ ಖರ್ಚು ಮಾಡಲಿಕ್ಕೆ ಮಂಜೂರಿ ಕೊಟ್ಟಿದೆಯೆಂದು ಮಂಡಳದ ಕಾರ್ಯದರ್ಶಿಗಳು ತಿಳಿಸುತ್ತಾರೆ.

೧.	ಮಾದರಿ ಗ್ರಾಮಗಳಿಗೆ ಧನಸಹಾಯ	ರೂ. ೩೪೦೦
೨	ವ್ಯಕ್ತಿಸ್ವರೋದಯ ಕಾರ್ಯಕ್ಕೆ	ರೂ. ೬೦೦
೩.	ಬೇಸಾಯ ಮತ್ತು ದನಗಳ ಪ್ರದರ್ಶನಕ್ಕೆ	ರೂ. ೨೪೦೦
೪.	ಗ್ರಾಮ ಸುಧಾರಣಾ ಕಾರ್ಯದ ಪ್ರಚಾರಕ್ಕೆ	ರೂ. ೧೨೦೦
೫.	ಗ್ರಾಮೋದ್ಧಾರ ವಸ್ತುಸಂಗ್ರಹಾಲಯ ಮತ್ತು ವಾಚನಾಲಯಗಳಿಗಾಗಿ	ರೂ. ೫೦೦
೬	ಹಳ್ಳಿಯ ಕೆಲಸಗಾರರ ತರಬೇತಿಗಾಗಿ	ರೂ. ೨೦೦೦
೭	ಇನ್ನಿತರ ಕೆಲಸಗಳಿಗಾಗಿ	ರೂ. ೧೦೦೦
೮.	ಅನಿರೀಕ್ಷಿತ ವೆಚ್ಚ	ರೂ. ೧೯೦೦
	ಒಟ್ಟು	ರೂ. ೧೩೦೦೦

ಶೆರಾ:— ಈಹಿಂದೊಂದು ಮಾದರಿ ಗ್ರಾಮಕ್ಕೆ ರೂ. ೨೫೦ಕ್ಕಿಂತ ಹೆಚ್ಚಿಗೆ ಧನಸಹಾಯ ಕೊಡಕೂಡದೆಂದು ಸರಕಾರವು ಮಿತಿ ಹಾಕಿಕೊಟ್ಟಿದೆ.

ಯಲ್ಲಾಪುರ— (ತಾ. ೫-೭-೪೮) ಒತ್ತಾಯದ ಶಿಕ್ಷಣದ ಯೋಜನೆ ಯಲ್ಲಾಪುರ ಗ್ರಾಮಕ್ಕೆ ಅನ್ವಯಿಸುತ್ತಿತ್ತು ಅದರಿಂದ ಇಲ್ಲೊಂದು ಹೆಣ್ಣು ಮಕ್ಕಳ ಶಾಲೆಯ ಅವಶ್ಯಕತೆಯುಂಟಾಗಿದೆ. ಆ ಅವಶ್ಯಕತೆಯನ್ನು ಪೂರೈಸುವದಕ್ಕಾಗಿ ಇಲ್ಲಿ ಒಂದು ಹೊಸ ಶಾಲೆ (ಹೆಣ್ಣು ಮಕ್ಕಳಿಗಾಗಿ) ತೆರೆಯಲ್ಪಟ್ಟಿದೆ. ಅದರ ಉದ್ಘಾಟನೆಯನ್ನು ಶ್ರೀ ಮತಿ ಹೆಗಡೆಶೆಟ್ಟಿಯವರು ಮಾಡಿದರು. ಈ ಸಮಾರಂಭಕ್ಕೆ ಊರ-ಪ್ರಮುಖರೂ ಅಧಿಕಾರಿಗಳೂ ಬಂದಿದ್ದರು. ಮಾಮಲೇದಾರರಾದ ರಾ॥ ಮಹಾಜನರು ಅಧ್ಯಕ್ಷಸ್ಥಾನ ವಹಿಸಿದ್ದರು. ಸಭೆಯಲ್ಲಿ ಹಲವರ ಭಾಷಣಗಳಾದವು.

ಸುದ್ದಿಗಳ ಸಂದೂಕ.

— ಹೈದರಾಬಾದದ ನಿಜಾಮರ ಸಂಬಂಧದಲ್ಲಿ ಬಹಳಷ್ಟು ವಾರ್ತೆಗಳು ಕೇಳಬರುತ್ತಿವೆ! (೧) ನಿಜಾಮರು ಮು.ಸಲ್ಮಾನಧರ್ಮದ ಖಲೀಫರಾಗಲಿಚ್ಛಿಸುತ್ತಾರೆಂಬುದೊಂದು ವಾರ್ತೆಯುಂಟು. ಕೊನೆಯ ಖಲೀಫರಾದ ತುರ್ಕಸ್ಥಾನದ ಕೊನೆಯ ಅರಸರ ಮಗಳು ನಿಜಾಮರ ಸೊಸೆಯಾಗಿರುತ್ತಾಳೆ. ಅವಳ ಸಂತತಿಯಲ್ಲಿ ಖಲೀಫರ ರಕ್ತವಿರುವದರಿಂದ ಜಗತ್ತಿನೊಳಗಿನ ಅಖಿಲ ಮುಸಲ್ಮಾನ ಸಮಾಜವು ತಮ್ಮ ವಂಶಜರನ್ನು ಖಲೀಫರನ್ನಾಗಿ ಮನ್ನಿಸಲು ಆಕ್ಷೇಪಿಸಲಿಕ್ಕಿಲ್ಲೆಂದು ನಿಜಾಮರಿಗೆ ಆಶೆಯುಂಟಂತೆ. (೨) ನಿಜಾಮರು ಯುವರಾಜನಿಗೆ ರಾಜಪದ ಬಿಟ್ಟುಕೊಟ್ಟು ತುರ್ಕಸ್ಥಾನಕ್ಕೋ ಪಾಕಿಸ್ಥಾನಕ್ಕೋ ಹೋಗ ಬಯಸುತ್ತಾರೆಂದು ಇನ್ನೊಂದು ವಾರ್ತೆಯಿದೆ. (೩) ನಿಜಾಮರ ಕೈಯಲ್ಲೀಗ ಏನೂ ಸತ್ತೆ ಅಥವಾ ಸ್ವಾತಂತ್ರ್ಯವಿಲ್ಲೆಂದೂ, ಎಲ್ಲ ಸತ್ತೆಯು ಇತ್ತಹಾದುಲ್-ಮುಸಲೀನ ಸಂಸ್ಥೆಯ ಮುಖಂಡರಾದ ಕಾಸಿಮರಿಝ್ವಿ ಮತ್ತು ಸದ್ಯದ ಮುಖ್ಯ ಮಂತ್ರಿ ಮೀರ ಲಾಯಕ ಅಲ್ಲಿಯವರ ಕೈಯಲ್ಲುಂಟೆಂದೂ ಅವರು ಹೇಳಿದಂತೆ ನಿಜಾಮರು ಕುಣಿಯಬೇಕಾಗಿದೆಂದೂ, ಬೇರೊಂದು ಸುದ್ದಿಯುಂಟು. (೪) ನಿಜಾಮರು ಪಾಕಿಸ್ತಾನದ ಬಾದಶಹರಾಗಬಯಸುತ್ತಿರುವರೆಂದು ಮಗದೊಂದು ಸುದ್ದಿ! (೫) ಖಾಕಸಾರ ಸಂಸ್ಥೆಯ ಅಲ್ಲಾ ಮಶ್ರಿಕಿಯವರಂತೂ ಲಾಹೋರದಿಂದ ನಿಜಾಮರಿಗೆ ಒಂದು ತಂತಿ ಕಳಿಸಿ, ಧಾವಂದಿರು ಅಖಿಲ ಮುಸಲ್ಮಾನ ಸಮಾಜದ ಮುಖಂಡತ್ವವನ್ನು ವಹಿಸಿ ಭಾರತ-ಪಾಕಿಸ್ತಾನಗಳೊಳಗಿನ ೯ ಕೋಟಿ ಮುಸಲ್ಮಾನರ "ತಾರಕ" ರಾಗಬೇಕೆಂದು ಬಿನ್ನವಿಸಿದ್ದಾರೆ.

— ಕಾಶ್ಮೀರ ರಣ-ಭೂಮಿಯಲ್ಲಿ ಭಾರತೀಯ ಸೈನ್ಯದ ಸೇನಾಪತಿತ್ವವನ್ನು ವಹಿಸಿ, ಯಶಸ್ವಿಯಾಗಿ ದಾಳಿಗಾರರನ್ನು ಹಿಮ್ಮೆಟ್ಟಿಸಿದ ವೀರ ಬ್ರಿಗೇಡಿಯ ಉಸ್ಮಾನರು ಕಳೆದ ಮಂಗಳವಾರ ಕಾಶ್ಮೀರ ರಣ-ಭೂಮಿಯಲ್ಲಿ, ಶತ್ರುಗಳ ತೋಫಿನಿಂದ ಹಾರಿಬಂದ ೧೫ ರತ್ತಲ ತೂಕದ ಒಂದು ಗುಂಡಿಗೆ (೮ ಮಂದಿ ಸಂಗಡಿಗರೊಂದಿಗೆ) ಆಹುತಿಯಾದರೆಂದು ನಮೂದಿಸಲು ವ್ಯಸನವಾಗುತ್ತಿದೆ. ಬ್ರಿಗೇಡಿಯರ ಉಸ್ಮಾನರು ರಾಷ್ಟ್ರವಿಚ್ಛೇದನೆಯನ್ನು ಬಲವಾಗಿ ವಿರೋಧಿಸಿದ್ದರು ಪಾಕಿಸ್ತಾನಿಗಳು ಕೊಡಮಾಡಿದ ದೊಡ್ಡ ಹುದ್ದೆಯನ್ನು ಅವರು ತಿರಸ್ಕರಿಸಿ, ಭಾರತದ ಸೇವೆಯನ್ನೇ ಏಕನಿಷ್ಠೆಯಿಂದ ಮಾಡುತ್ತಿದ್ದ ಇವರನ್ನು ಪಾಕಿಸ್ತಾನಿಗಳು "ಕಾಫರ"ರೆಂದು ಕರೆಯುತ್ತಿದ್ದರು; ಇವರನ್ನು ಹಿಡಿದುಕೊಟ್ಟವರಿಗೆ ರೂ. ೫೦೦೦೦ ಇನಾಮು ಕೊಡಲಾದೀತೆಂದು ಸಹ ಪಾಕಿಸ್ತಾನ-ಪ್ರಣೀತ ಆಝಾದ ಕಾಶ್ಮೀರ ಸರಕಾರವು ಜಾಹೀರ ಮಾಡಿತ್ತು! ಉಸ್ಮಾನರ ಶವವನ್ನು ದಿಲ್ಲಿಗೆ ತರಿಸಿ, ಹಿಂದುಸ್ಥಾನ ಸರಕಾರವು ರಾಜಗೌರವದಿಂದ ಅವರ ದಫನವಿಧಿಯನ್ನು ಜರುಗಿಸಿದೆ.

— ಭದ್ರತಾ-ಮಂಡಳದ ಕಾಶ್ಮೀರ ಸಮಿತಿಯು ಕಳೆದ ಮಂಗಳವಾರ ಕರಾಚಿಗೆ ಬಂದು, ಅಲ್ಲಿಯ ಪ್ರಮುಖರನ್ನು ಕಂಡು, ಮೊನ್ನೆ ಶನಿವಾರ ದಿಲ್ಲಿಗೆ ಬಂದಿದೆ. ತಾವು ಯಾವದೇ ಪೂರ್ವಗ್ರಹ ಮಾಡಿಕೊಂಡಿಲ್ಲೆಂದೂ, ಪ್ರಾಮಾಣಿಕ ಬುದ್ಧಿಯಿಂದಲೂ ಸರಳತನದಿಂದಲೂ ಭಾರತ-ಪಾಕಿಸ್ತಾನಗಳೊಳಗಿನ ವಿವಾದವನ್ನು ಬಗೆಹರಿಸಲು ಪ್ರಯತ್ನಿಸುವವೆಂದೂ ಸಮಿತಿಯ ಪ್ರಮುಖರು ಹೇಳಿದ್ದಾರೆ.

— ಪಾಲೆಸ್ಟೈನ ಯುದ್ಧದಲ್ಲಿ ತೊಡಗಿದ ಇತ್ತಂಡ್ಡನವರಲ್ಲೂ (ಯಹುದಿಗಳು ಮತ್ತು ಅರಬರು ಇವರೊಳಗೆ) ಮಧ್ಯಸ್ಥಿಕೆ ಮಾಡಬಂದ ಕೌಂಟ ಫೋಕ್ ಬರ್ನಾಡೊಟ್ಟರು ಮಧ್ಯಸ್ಥಿಕೆ ಮಾಡಲಾಗದೆ ಮರಳಿ ಹೋಗಿದ್ದಾರೆ. ಯುದ್ಧತಹಕೂಬಿಯ ಅವಧಿ ಕಳೆದ ಗುರುವಾರ ಮುಗಿಯಿತು. ಶುಕ್ರವಾರದಿಂದ ಪುನಃ ಯುದ್ಧಕ್ಕಾರಂಭವಾಗಿದೆ.

— ಬರ್ಲಿನದ ಬಿಕ್ಕಟ್ಟು ಇನ್ನೂ ಹಾಗೆಯೇ ಉಂಟು. ಪಾಶ್ಚಾತ್ಯ ಮಿತ್ರರು ರಶಿಯಕ್ಕೆ ನಿಷೇಧಪತ್ರ ಕಳಿಸಿದ್ದಾರೆ. ರುಶ್ಯರ ಉತ್ತರವಿನ್ನೂ ಅವರಿಗೆ ಬಂದಿಲ್ಲ

— ಬ್ರಿಗೇಡಿಯರ ಉಸ್ಮಾನರು ಮೃತ್ಯುದಂಡಿತ ಅಪರಾಧಿಯನ್ನಾಗಿ ಮಾಡುವ ಅಭಕ್ಷ್ಯಗಳನ್ನಾಗಿ ಸೇವಿಸುತ್ತಿದ್ದಿಲ್ಲ; ಬ್ರಹ್ಮಚಾರಿಗಳಾಗಿದ್ದರು.

ಜಿಲ್ಲಾ ಸಮಾಚಾರ.

ಕಾರವಾರ— ಮುಂಬಯಿ ಸರಕಾರವು ಕೆಲವು ದಿನಗಳ ಹಿಂದೆ ಒಂದು ಪ್ರಕಟನ ಹೊರಡಿಸಿ ಉತ್ತರ ಕಾನಡಾ ಜಿಲ್ಲೆಯ ವಿಸ್ತಾರ ಪ್ರದೇಶಗಳಲ್ಲಿ ಎದಿರು ಬರುವ ಕಾರಖಾನೆಯನ್ನು ಇಲ್ಲಿನ ಬಿದಿರಿನಿಂದ ಕಾಗದ ತಯಾರಿಸುವ ಕಾರಖಾನೆಯನ್ನು ಇಲ್ಲಿಯೇ ಸ್ಥಾಪಿಸಲಿಕ್ಕೆ ಅಪ್ಪಣೆ ಕೊಡಲಿಕ್ಕೂ ಈ ಕಾರಖಾನೆಗಳಿಗೆ ಬೇಕಾದ ನೆರವನ್ನೀಯಲಿಕ್ಕೂ ಸರಕಾರವು ಸಿದ್ಧವಿರುತ್ತದೆಂದು ಜಾಹೀರಪಡಿಸಿದೆ. ಸರಕಾರವು ಬಿದಿರು ಬೆಳೆಯುವ ಭಾಗಗಳ ಸಂಶೋಧನೆಯನ್ನು ಮಾಡಿಸಿ ಗಂಗಾವಳಿ ನದಿಯ ಭಾಗದಲ್ಲಿ ಪ್ರತಿ ವರ್ಷ ೩೦೦೦೦ ಟನ್ನು, ಕಾಳೀ ನದಿಯ ಭಾಗದಲ್ಲಿ ೧೦೦೦೦ ಟನ್ನು ಮುಂಡಗೋಡ ಪೇಟೆಯಲ್ಲಿ ೬೦೦೦೦ ಟನ ಗುಂಡ ತಪ್ಪಲ ಭಾಗದಲ್ಲಿ ೮೦೦೦ ಟನ್ನು ಜಿಲ್ಲೆಯ ದಕ್ಷಿಣ ಭಾಗ (ಕುಂಭಕರ್ಣ ಪರ್ವತದಿಂದ ಉತ್ತರ ದಿಕ್ಕಿನ ವರೆಗೆ)ದಲ್ಲಿ ೨೦೦೦೦ ಟನ್ನು ದಾಂಡೇಲಿ, ಜಗಲಬೇಟ, ಕುಳಗಿ ಮತ್ತು ಭಾಗವತಿ ಪೇಟೆಗಳಲ್ಲಿ ೧೦,೦೦೦ ಟನ್ನು ಹಾಗೂ ಜಿಲ್ಲೆಯ ಉತ್ತರ ಭಾಗದಲ್ಲಿ ೨೦೦೦೦ ಟನ್ನು ಬಿದಿರು (ಗಿಡಗಳಿಂದ) ಬರುತ್ತದೆ ಮತ್ತು ಅದರಲ್ಲಿ ಇಂಥಾ ಕಾರಖಾನೆಗೆ ಬೇಕಾದಷ್ಟು ಬಿದಿರನ್ನು ಮಿತವ್ಯಯದಿಂದ ಉಪಯೋಗಿಸಿಕೊಳ್ಳಬಹುದು ಎಂಬ ಮಾಹಿತಿಯನ್ನು ಕೊಟ್ಟು ಪ್ರಕಟಿಸಿದ ಕಾಗದದ ಕಾರಖಾನೆಗಳನ್ನು ತೆರೆಯಲು ಗುಂಡಬಾಳ, (ತಾ. ಅಂಕೋಲಾ), ಸುಲಗೇರಿ, ವಿಲಗುಂಡಿ, ದಾಂಡೇಲಿ, ಬೊಮ್ಮನಹಳ್ಳಿ ಮತ್ತು ದಾಂಡೇಲಿ ಗುಂದ ರಸ್ತೆಯ ಕಾಳೀ ಹೊಳೆಯನ್ನು ದಾಟುವ ಸ್ಥಳ ಈ ಸ್ಥಳಗಳು ಅನುಕೂಲವಾಗಿರುತ್ತವೆಂದೂ ಇಲ್ಲಿಯ ಹಳ್ಳ ಹೊಳೆಗಳಲ್ಲಿ ವರ್ಷದ ೧೨ ತಿಂಗಳು ನೀರು ವಿಪುಲವಾಗಿ ಹರಿಯುತ್ತಿರುವದರಿಂದ ಕಾಗದದ ಕಾರಖಾನೆಗೆ ಬೇಕಾಗುವ ನೀರಿನ ಅನುಕೂಲತೆಯುಂಟೆಂದೂ ಸರಕಾರದ ಈ ಪ್ರಕಟನೆಯಲ್ಲಿ ಹೇಳಿದೆ. ನಮ್ಮ ಜಿಲ್ಲೆಯಲ್ಲಿ ವಿಪುಲವಾಗಿ ೨ ಜಾತಿಯ ಬಿದಿರುಗಳು (೧ ಮೇವಾರ ೨ ಡೊಗ್ಗ) ಬೆಳೆಯುತ್ತಿವೆ. ಈ ಎರಡೂ ಜಾತಿಗಳ ಬಿದಿರುಗಳ ರಾಸಾಯನಿಕ ಸಂಶೋಧನೆ ಇದೀಗ ಡೆಹರಾಡೂನದಲ್ಲಿರುವ ವನ–ಸಂಶೋಧನ ಸಂಸ್ಥೆಯಲ್ಲಿ ನಡೆಯುತ್ತಿದ್ದು ಆ ಸಂಬಂಧದ ಮಾಹಿತಿ ಬೇಕಾದವರು ಪುಣೆಯಲ್ಲಿರುವ ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಯುಟಿಲಿಝೇಶನ್ ಎಂಡ ಇಂಜಿನಿಯರಿಂಗ ಸರ್ಕಲ್ ಇವರಿಂದ ಪಡಕೊಳ್ಳಬಹುದೆಂದು ಪ್ರಕಟನೆಯು ಹೇಳುತ್ತಿದೆ. ಕಾರಖಾನೆ ತೆರೆಯಬಯಸುವ ವ್ಯಕ್ತಿಗಳು ಇಲ್ಲವೆ ಕಂಪನಿಗಳು ಪುಣೆಯಲ್ಲಿರುವ ಚೀಫ್ ಕನ್ಸರ್ವೇಟರ ಆಫ್ ಫಾರೆಸ್ಟ್ಸ್ ಇವರಿಗೆ ಅರ್ಜಿ ಮಾಡಬೇಕಂತೆ. ನಮ್ಮ ಜಿಲ್ಲೆಯ ಉದ್ಯೋಗಪ್ರಿಯ ಧನವಂತರೂ ಮುಂದಾಗಿ ಈ ಉದ್ಯಮವು ಜಿಲ್ಲೆಯವರ ಕೈಯಲ್ಲೇ ಉಳಿಯುವಂತೆ ಯತ್ನಿಸಬೇಕಾಗಿ ಸೂಚನೆಯು. ನಾವು ದುರ್ಲಕ್ಷ ಮಾಡಿದರೆ ಪರಸ್ಥರು ಬಂದು ಅದನ್ನು ಕೈವಶಪಡಿಸಿಕೊಳ್ಳುವರು.

(ತಾ. ೭–೭–೪೮) ರಾ। ದೇಶಪಾಂಡೆ ವರ್ಗವಾದ ಕಾರಣದಿಂದ ತೆರವಾದ ಇಲ್ಲಿಯ ಜಿಲ್ಲಾ ಜಜ್ಜರ ಸ್ಥಳಕ್ಕೆ ರಾ। ಮಿರಜಕರ ಇವರ ನೇಮಣೂಕಿಯಾಗಿದೆ. ರಾ। ಮಿರಜಕರರು ೫ನೇ ಸೋಮವಾರ ಇಲ್ಲಿ ಬಂದು ಹಾಜರಾದರೆಂದು ಕೇಳುತ್ತೇವೆ.

ಶಿರ್ಸಿ ವಿಭಾಗದ ಪ್ರಾಂತ ಸಾಹೇಬ ರಾ। ನಾಯಕ ಇವರು ಹುಬ್ಬಳ್ಳಿಯ ರೆಸಿಡೆಂಟ ಮೆಜಿಸ್ಟ್ರೇಟರ ಸ್ಥಳಕ್ಕೆ ವರ್ಗವಾಗಿದ್ದಾರೆಂದು ಒಂದು ಸುದ್ದಿ ಹಬ್ಬಿದೆ.

ಜಿಲ್ಲೆಯಲ್ಲಿಲ್ಲ ಅನುಕೂಲವಿದ್ದ ಕೇಂದ್ರ–ಸ್ಥಳಗಳಲ್ಲಿ ಯೋಗ್ಯ ಧಾರಣೆಯ ಅಂಗಡಿಗಳನ್ನು ತೆರೆದು ಬಡವರಿಗೂ ಕೆಳವರ್ಗದ ಜನರಿಗೂ ಆಹಾರ ಧಾನ್ಯಗಳ ಪೂರೈಕೆ ಮಾಡತಕ್ಕದ್ದೆಂದು ಸರಕಾರದವರ ಅಜ್ಞೆಯಾದಂತೆ ಅಲ್ಲಲ್ಲಿ ಅಂಗಡಿಗಳನ್ನು ತೆರೆಯುವ ವ್ಯವಸ್ಥೆ ಮಾಡಲಾಗಿದೆಂದೂ ಆಹಾರ ಧಾನ್ಯಗಳ ಆವಶ್ಯಕತೆಯುಳ್ಳ ಜನರು ಗ್ರಾಮಸ್ಥರಿಗೆ ಹೇಳಿಕೊಂಡು ಸೀಧಾ ಚೀಟಿಗಳನ್ನು ಪಡಕೊಳ್ಳಬೇಕೆಂದೂ ಜಿಲ್ಲಾಧಿಪರು ಒಂದು ಪ್ರಕಟನೆ ಹೊರಡಿಸಿದ್ದಾರೆ.

— ಯಾರೂ ತನಗೆ ಪ್ರಯೋಜನವಿರುವ ಕ್ಷೇತ್ರದಲ್ಲಿ ಪ್ರವೇಶ ಮಾಡಿ ೧೦ ಎಕರೆ ಸ್ಥಳದಲ್ಲಿ ಉಪ್ಪು ಮಾಡಬಹುದೆಂದೂ, ಅದಕ್ಕೆ ಸರಕಾರದ ಅಪ್ಪಣೆ ಬೇಡಬೇಕಾಗಿಲ್ಲೆಂದೂ ಮುಂಬಯಿ ಸರಕಾರವು ಜಾಹೀರ ಮಾಡಿದೆ.

ಜಾಹೀರನಾಮೆ.

ನಂ ೫೩೪ (ಖಾಲಿ ಚೀಲ)

ಕಾರವಾರ ತಾಲೂಕ ಕಚೇರಿಯಿಂದ ಯಾವತ್ತೂ ಜನರಿಗೆ ತಿಳಿಸುವದೇನಂದರೆ —

ಕಾರವಾರ ಗೋಡಾವನದಲ್ಲಿರುವ ಈ ಕೆಳಗೆ ಕಾಣಿಸಿದಷ್ಟು ಖಾಲಿ ಚೀಲಗಳನ್ನು ಮಾರುವದಿದೆ. ಅವನ್ನು ಖರೀದಿಸ ಬಯಸುವವರು ತಾ. ೨೦–೭–೧೯೪೮ರೊಳಗಾಗಿ ಕಾರವಾರ ತಾಲೂಕ ಕಚೇರಿಯಲ್ಲಿ ಮೊಹರಬಂದ ಟೆಂಡರುಗಳನ್ನು ಕಳಿಸಬೇಕು

(೧)	ಉಪಯೋಗಕ್ಕೆ ಬರುವಂತಹ ಹಳೇ ಖಾಲಿ ಚೀಲಗಳು	೨೬೩೩೯
(೨)	ಸ್ವಲ್ಪ ದುರುಸ್ತಿಯಿಂದ ಉಪಯೋಗಿಸಲು ಬರಬಹುದಾದ ಚೀಲಗಳು	೬೫೩೩
(೩)	ಹಳೇ ಹರಕು ಚೀಲಗಳು (ಸ್ಕ್ರ್ಯಾಪ್) ..	೫೩೪೯

ಟೆಂಡರುಗಳನ್ನು ಕಳಿಸುವವರು ಲಕ್ಷದಲ್ಲಿಡತಕ್ಕ ಸಂಗತಿಗಳು.

(೧) ಟೆಂಡರುಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ತಾ. ೨೦–೭–೪೮ರೊಳಗಾಗಿ ರಜಿಸ್ಟ್ರಿಯಿಂದ ಮುಟ್ಟಿಸತಕ್ಕದ್ದು ಯಾ ಸಮಕ್ಷಮ ಹಾಜರಾಗಿ ಕೊಡತಕ್ಕದ್ದು. ಆ ನಂತರ ಬಂದ ಟೆಂಡರುಗಳನ್ನು ಸ್ವೀಕರಿಸಲಿಕ್ಕಿಲ್ಲ. ಕವಚದ ಮೇಲೆ "ಖಾಲಿ ಚೀಲಗಳ ಟೆಂಡರ" ಎಂದು ನಮೂದಿಸಬೇಕು.

(೨) ಟೆಂಡರು ಕೊಡುವವರು ಯಾವ ವರ್ಗದ ಎಷ್ಟು ಚೀಲಗಳು ಬೇಕು ಎಂಬದನ್ನು ಸ್ಪಷ್ಟ ಬರೆದು, ಅಂಥ ಚೀಲಗಳ ಬಗ್ಗೆ ಬೇರೆ ಬೇರೆ ಟೆಂಡರ ದರ ತೋರಿಸಬಹುದು. ಟೆಂಡರದಾರರು, ನೂರು ಚೀಲಗಳಿಗೆ ಇಂತಿಷ್ಟು ರೂಪಾಯಿಗಳ ದರದಂತೆ ಇಂತಿಷ್ಟು ಚೀಲ ತಕ್ಕೊಳ್ಳಲಿಕ್ಕೆ ಕಬೂಲ ಇದ್ದೇನೆ ಎಂದು ಬರೆಯಬೇಕು.

(೩) ಟೆಂಡರಿನ ಸಂಗಡ ಸರಕಾರಿ ಖಜಾನೆಯಲ್ಲಿ ರೂ ೧೦೦/– ತುಂಬಿದ ಬಾಬತು ಚಲನ ಇಡತಕ್ಕದ್ದು.

(೪) (೧) ವ (೨)ನೇ ವರ್ಗದ ಖಾಲಿ ಚೀಲಗಳ ಟೆಂಡರದ ದರವನ್ನು ನೂರು ಚೀಲಗಳಿಗೆ ಇಂತಿಷ್ಟು ರೂಪಾಯಿ ಎಂತಲೂ (೩)ನೇ ವರ್ಗದ ಚೀಲಗಳಿಗೆ ಇಂತಿಷ್ಟು ರೂಪಾಯಿ ಎಂತಲೂ ಬರೆಯಬೇಕು.

(೫) ಯಾವದೇ ಟೆಂಡರ ಕಾರಣ ತೋರಿಸದೆ ನಾಮಂಜೂರ ಮಾಡಬಹುದು.

(೬) ಟೆಂಡರ ಮಂಜೂರ ಮಾಡಿದೆ ಎಂತಾ ತಿಳಿಸಿದ ೭ ದಿವಸಗಳಲ್ಲಿ ಪೂರ್ತಿ ರೂಪಾಯಿ ಖಜಾನೆಯಲ್ಲಿ ತುಂಬಿ ಮಾಲು ಒಯ್ಯತಕ್ಕದ್ದು. ತಪ್ಪಿದಲ್ಲಿ ಡಿಪಾಜಿಟ್ಟು ಹಣ ಸರಕಾರಕ್ಕೆ ಜಮಾ ಮಾಡಲಾಗುವದು.

(೭) ಖಾಲೀ ಚೀಲಗಳನ್ನು ನೋಡಬಯಸುವವರು ಕಚೇರಿ ವೇಳೆಯಲ್ಲಿ ಸೆಂಟ್ರಲ್ ಗೋಡಾವನ ಮ್ಯಾನೇಜರರ ಪರವಾನಗಿಯಿಂದ ನೋಡಬಹುದು. ಟೆಂಡರುಗಳು ಮಾ। ಡಾಯರೆಕ್ಟರ ಆಫ್ ಸಿವ್ಹಿಲ ಸಪ್ಲಾಯ್ಸ ಇವರ ಮಂಜೂರಿಗೆ ಒಳಪಟ್ಟಿರುತ್ತವೆ.

ತಾ. ೧೦–೭–೪೮

V NARVEKAR,
ಮಾಮಲೇದಾರ, ಕಾರವಾರ

ಪ್ರಕಟನೆ.

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನ ಕನ್ನಡ, ಮರಾಠಿ ಮತ್ತು ಉರ್ದು ಶಾಲೆಗಳಲ್ಲಿ ಶಿಕ್ಷಕ–ಶಿಕ್ಷಕಿಯರಾಗಿ ಕೆಲಸ ಮಾಡಬಯಸುವ ಉಮೇದವಾರರು ತಾ. ೨೬–೭–೧೯೪೮ನೇ ದಿವಸ ನನ್ನನ್ನು ಕಾರವಾರ ಸ್ಕೂಲ ಬೋರ್ಡ ಆಫೀಸಿನಲ್ಲಿ ಮಧ್ಯಾಹ್ನ ೧೨ ಘಂಟೆಗೆ, ತಮ್ಮ ಸ್ವಂತ ಖರ್ಚಿನಿಂದ ಭೆಟ್ಟಿಯಾಗತಕ್ಕದ್ದು. ಈ ಮೊದಲು ನನ್ನನ್ನು ಭೆಟ್ಟಿಯಾದವರು ಮತ್ತೆ ನನ್ನ ಭೆಟ್ಟಿಗೆ ಬರಬಾರದು, ಸದ್ರಿ ತಾರೀಖಿನ ನಂತರ ಭೆಟ್ಟಿಗೆ ಬಂದಲ್ಲಿ ಭೆಟ್ಟಿ ಸಿಗಲಾರದು.

ಉಮೇದವಾರರಲ್ಲಿರಬೇಕಾದ ಗುಣಗಳ ಪಾತ್ರತೆ

ಪ್ರಾಥಮಿಕ ಶಾಲಾ ಪ್ರಮಾಣ ಪರೀಕ್ಷೆಯಲ್ಲಿ—

ಮುಂದುವರಿದ ವರ್ಗದವರು	೧೦೦ಕ್ಕೆ ೫೦ರಂತೆ ಗುಣಗಳನ್ನು ಪಡೆದಿರಬೇಕು
ಮಧ್ಯಮ ವರ್ಗದವರು	೧೦೦ಕ್ಕೆ ೪೫ರಂತೆ ಗುಣಗಳನ್ನು ಪಡೆದಿರಬೇಕು
ಹಿಂದುಳಿದ ವರ್ಗದವರು	೧೦೦ಕ್ಕೆ ೪೦ರಂತೆ ಗುಣಗಳನ್ನು ಪಡೆದಿರಬೇಕು

ವಿ. ಸೂ. — ಹೆಂಗಸರು ಮತ್ತು ಉರ್ದು ಉಮೇದವಾರರು ೧೦೦ಕ್ಕೆ ೪೦ರಷ್ಟು ಗುಣಗಳನ್ನು ಪಡೆದಿದ್ದಲ್ಲಿ ಭೆಟ್ಟಿಗೆ ಬರಲಿಕ್ಕೆ ಅಡ್ಡಿ ಇಲ್ಲ. ಮೆಟ್ರಿಕ್ ಪಾಸಾದವರಿಗೂ ಟ್ರೇನಿಂಗ ಕಾಲೇಜಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೂ ಗುಣಗಳ ನಿರ್ಬಂಧವಿಲ್ಲ.

೧ ಉಮೇದವಾರರು ಭೆಟ್ಟಿಗೆ ಬರುವಾಗ ತಮ್ಮ ಸಂಗಡ ತಾವು ಪಾಸಾದ ಪರೀಕ್ಷೆಗಳ ಸರ್ಟಿಫಿಕೇಟುಗಳನ್ನು (ಮುಲ್ಕೀ ವಗೈರೆ) ಮತ್ತು ಸ್ಕೂಲ ಲೀವ್ಹಿಂಗ ಸರ್ಟಿಫಿಕೇಟನ್ನು ತರಬೇಕು. ಸನ್ ೧೯೪೮ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಪ್ರಮಾಣ ಪರೀಕ್ಷೆಯಲ್ಲಿ ಪಾಸಾದ ಉಮೇದವಾರರು ತಾವು ಪರೀಕ್ಷೆಗೆ ಹೋದ ಶಾಲಾ ಹೆಡ್‌ಮಾಸ್ತರರ ಕಡೆಯಿಂದ ಪರೀಕ್ಷೆಯಲ್ಲಿ ದೊರೆತಿದ್ದ ಗುಣಗಳ ಬಗ್ಗೆ ಸರ್ಟಿಫಿಕೇಟನ್ನು ತರಬೇಕು. ಸರ್ಟಿಫಿಕೇಟುಗಳನ್ನು ತರದೆ ಇದ್ದ ಉಮೇದವಾರರಿಗೆ ಭೆಟ್ಟಿ ಸಿಗಲಾರದು.

೨ ಇದರ ಹೊರತು ಉಮೇದವಾರರು ಭೆಟ್ಟಿಗೆ ಬರುವಾಗ ಈ ಕೆಳಗಿನ ಮಾಹಿತಿಯುಳ್ಳ ಅರ್ಜಿಯನ್ನು ಬರೆದುಕೊಂಡು ತಮ್ಮ ಸಂಗಡ ತರತಕ್ಕದ್ದು.

೧ ಪೂರ್ತಿ ಹೆಸರು, ೨ ಜಾತಿ, ೩ ಲೀವ್ಹಿಂಗ ಸರ್ಟಿಫಿಕೇಟಿನ ಪ್ರಕಾರ ಜನ್ಮ ತಾರೀಖು,
೪ ಪಾಸಾದ ಪರೀಕ್ಷೆ ಮತ್ತು ಅದರಲ್ಲಿ ದೊರೆತಿದ್ದ ಗುಣಗಳು ೫ ವಿಳಾಸ

೪ ಭೆಟ್ಟಿಯ ತಾರೀಖಿನ ಮೊದಲು ಮೇಲಾಧಿಕಾರಿಗಳನ್ನು ಯಾರೂ ಭೆಟ್ಟಿಯಾಗತಕ್ಕದ್ದಿಲ್ಲ. ಯಾರೂ ಯಾವದೇ ತರದ ವಶೀಲಿಯನ್ನು ಹಚ್ಚಕೂಡದು.

ಕಾನಡಾ ಜಿ. ಸ್ಕೂ. ಬೋ. ಕಚೇರಿ,
ಕಾರವಾರ, ತಾ. ೧೦–೭–೧೯೪೮

G J GUNJIKAR,
ಎಡ್ಮಿನಿಸ್ಟ್ರೇಟಿವ್ಹ ಆಫೀಸರ, ಜಿ. ಸ್ಕೂ. ಬೋ., ಕಾನಡಾ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರ ತಮ್ಮ "ಸ್ಟಾರ ಆಫ್ ಕೆನರಾ, ಪ್ರೆಸ್ಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು

ಜಾಹೀರಾತುಗಳ ದರ:-
ಸ್ಟ್ಯಾಂಡರ್ಡ ಕಾಲಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

Reg. No. B. 1270 — Monday, 19-7-1948.

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೩.

ಕುಮಟಾ.- ಸೋಮವಾರ, ತಾ ೧೯—೭—೧೯೪೮

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಹೊರಊರಿನವರಿಗೆ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦ ೧-೦
ಹಳೇ ಸಂಚಿಕೆಗೆ ,, ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕೊಡಬೇಕು
ವರ್ಗಣಿಯು ಮುಂಗಡವಾಗಿರತಕ್ಕದ್ದು

ಕೇಳಿದ್ದು, ಕಂಡದ್ದು.

(ಹಲ್ದಾ ಸಂಚಾರಿಯು ಬರೆದುದು.)

ಇದೇ ಕಳೆದ ಗುರುವಾರ ತಾ ೧೫ನೇಗೆ ಹಳಿಯಾಳ ಮ್ಯುನಿಸಿಪಾಲಿಟಿಯು ಕಾರಭಾರವನ್ನು ರಾವ್ ಪೋತದಾರ ವಹಿಸಿಕೊಂಡಿದ್ದಾರೆ. ವಹಿಸಿಕೊಂಡಿರುತ್ತಾರೆ! ಮ್ಯುನಿಸಿಪಾಲಿಟಿಯು ಅಧ್ಯಕ್ಷ ಡಾ॥ ಮಹಾಜನರಿಗೆ ಮ್ಯುನಿಸಿಪಾಲಿಟಿಯು ಮೇಲೆ ಗಂಡಾಂತರ ಬಂದದ್ದರ ಯಾವದೇ ಬಗೆಯ ಪೂರ್ವ ಸೂಚನೆಯಿದ್ದಿಲ್ಲ ಸರಕಾರದವರು ಮಾಡಿದ ನಿರ್ಣಯದ ಅಥವಾ ಹುಕುಮಿನ ಸುದ್ದಿ ಅವರಿಗೆ ಯಾರೂ ತಿಳಿಸಿದ್ದಿಲ್ಲ! ಸರಕಾರವೂ ತಿಳಿಸಿದ್ದಿಲ್ಲ!! ಕಾರಭಾರ ಒಪ್ಪಿಸಿಕೊಳ್ಳಲು ಬಂದ ರಾವ್ ಪೋತದಾರರು ತೋರಿಸಿದ ಸರಕಾರಿ ಹುಕುಮ ನ ಮೇಲಿಂದಲೇ, "ಹಳಿಯಾಳ ಮ್ಯುನಿಸಿಪಾಲಿಟಿಯನ್ನು ತಾ ೧೩ ೭-೧೯೪೮ರಿಂದ ೨ ವರ್ಷಗಳ ಕಾಲ ರದ್ದುಗೊಳಿಸಲು ಮುಂಬಯಿ ಸರಕಾರವು ಸಂತಸಪಡುತ್ತದೆ (the Government of Bombay is pleased to supercede the said Municipality for a period of two years) ಎಂದು ಡಾಕ್ಟರರಿಗೆ ತಿಳಿಯಿತು! ಹಳಿಯಾಳದ ಮ್ಯುನಿಸಿಪಾಲಿಟಿಯನ್ನು ರದ್ದುಪಡಿಸಲಿಕ್ಕೆ ಸರಕಾರಕ್ಕೆ ಉಂಟಾದ ಸಂತೋಷ ನೋಡಿ ಹಳಿಯಾಳದ ನಾಗರಿಕರಿಗೆ ಬಹಳ ವ್ಯಸನವಾಗಿದೆ

***

ಮ್ಯುನಿಸಿಪಾಲಿಟಿಯನ್ನು ರದ್ದುಗೊಳಿಸಲಿಕ್ಕೆ ಸರಕಾರವು ಕೊಟ್ಟಿರುವ ಕಾರಣಗಳು ಬಹಳ ಮೋಜಿನವು ಇವೆ ಅವುಗಳನ್ನು ಓದಿದಲ್ಲಿ ನಮಗಂತೂ — ಪ್ರತ್ಯಕ್ಷ ಬೃಹಸ್ಪತಿಗೂ ಕೂಡ — ಸರಕಾರದ ದೃಷ್ಟಿಯಿಂದ ಹಳಿಯಾಳದ ಸದ್ಯದ ಮ್ಯುನಿಸಿಪಾಲಿಟಿಯು ಯಾವ ಅಪರಾಧಗಳನ್ನು ಮಾಡಿದೆ, ಅಥವಾ ಯಾವ ಕರ್ತವ್ಯಗಳನ್ನು ಪಾಲಿಸುವದರಲ್ಲಿ ಚ್ಯುತಿ ಮಾಡಿದೆ ಎಂಬುವದರ ಕಲ್ಪನೆಯಾಗಲಿ ತಿಳುವಳಿಕೆಯಾಗಲಿ ಬರುವಂತಿಲ್ಲ! ಸರಕಾರದ ಹುಕುಮಿನ ಪೂರ್ವಾರ್ಧದ ಪೂರ್ಣಪಾಠವನ್ನೇ ಓದುಗರ ಅವಗಾಹನೆಗಾಗಿ ಇಲ್ಲಿ ಎತ್ತಿಕೊಡುತ್ತೇನೆ ಅದು ಹೀಗಿದೆ — "Whereas in the opinion of the Government of Bombay the Haliyal Municipality (herein-after referred to as "the said Municipality") is not competent to perform the duties imposed on it by or under the Bombay District Municipal Act, 1901 (Bom III of 1901) or otherwise by law and has persistently made default in the performance of such duties " (ಕೆಲವು ಭಾಗಕ್ಕೆ ಅಧೋರೇಖೆ ಹಾಕಿದ್ದು ನಾನು.) ಮ್ಯುನಿಸಿಪಾಲಿಟಿಯವರು ಯಾವ ಯಾವ ಕರ್ತವ್ಯ ಮಾಡಲು ಅಸಮರ್ಥರಿದ್ದುದು ಸರಕಾರಕ್ಕೆ ಕಂಡು ಬಂತು ಇಲ್ಲವೆ ಯಾವ ಯಾವ ಕರ್ತವ್ಯ ಪಾಲಿಸುವದರಲ್ಲಿ ಮ್ಯುನಿಸಿಪಾಲಿಟಿಯವರು ಪುನಃ ಪುನಃ ಅಥವಾ ಸಾರಿ ಸಾರಿ ಹಠಹಿಡಿದಾಗಲೂ (persistently) ಚ್ಯುತರಾದರು ಎಂಬುದರ ಸಂಬಂಧದ ಕಲ್ಪನೆ ಸರಕಾರದ ಈ ಹುಕುಮಿನ ಮೇಲಿಂದ "ವೃಕ್ಷ'ದ ವಾಚಕರಿಗಾದರೂ ಬರುತ್ತದೆ ಅವರು ನನಗೆ ದಯಮಾಡಿ ತಿಳಿಸಬೇಕಾಗಿ ಅರಿಕೆಯಿದೆ

***

ಸರಕಾರದವರ ಹುಕುಮಿನಲ್ಲಿ "Persistently" ಎಂಬದೊಂದು ಶಬ್ದವಿದೆ ಈ ಶಬ್ದದಿಂದ "ಪುನಃ ಪುನಃ ತಿರುತಿರುಗಿ, ಮೇಲಿಂದ ಮೇಲೆ, ಆಗಾಗ ಎಚ್ಚರಿಕೆ ಕೊಟ್ಟಾಗ್ಯೂ, ಬುದ್ಧಿಪೂರ್ವಕವಾಗಿ" ಎಂಬ ಅರ್ಥಗಳು ಧ್ವನಿತವಾಗುತ್ತವೆ ಸರಕಾರದವರು ಇಲ್ಲವೆ ಮ್ಯುನಿಸಿಪಾಲಿಟಿಗೆ ಎಚ್ಚರಿಕೆ ಕೊಡಲು ಅಧಿಕಾರವುಳ್ಳ ಅಧಿಕಾರಿಗಳು ಮ್ಯುನಿಸಿಪಾಲಿಟಿಗೆ ಅವರ ತಪ್ಪುಗಳನ್ನು ಪುನಃ ಪುನಃ ತೋರಿಸಿಕೊಟ್ಟದ್ದರಿಂದಲೂ, ಮ್ಯುನಿಸಿಪಾಲಿಟಿಯವರು ಆ ಎಚ್ಚರಿಕೆಗಳನ್ನು ಬುದ್ಧಿಪೂರ್ವಕವಾಗಿ ಅಲಕ್ಷಿಸಿದರೆಂದೂ ಈ ಶಬ್ದದಿಂದ ಧ್ವನಿತವಾಗುತ್ತವೆ ಆದರೆ ಅಂತಹ ಎಚ್ಚರಿಕೆಗಳು ಸದ್ಯದ ಮ್ಯುಕೆಗೆ ಎಂದೂ ಬಂದಿಲ್ಲೆಂದೂ, ತಾವು ಯಾವ ಎಚ್ಚರಿಕೆಯನ್ನೂ ಅಲಕ್ಷಿಸಿ ನಡೆದಿರುವದಿಲ್ಲೆಂದೂ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಡಾ॥ ಮಹಾಜನರು ಹೇಳುತ್ತಾರೆ ಸರಕಾರದವರ ಕಡೆ ಅಂತಹ ಎಚ್ಚರಿಕೆ ಕೊಟ್ಟ, ಮತ್ತು ಮ್ಯುನಿಸಿಪಾಲಿಟಿಯವರು ಆ ಕಡೆ ದುರ್ಲಕ್ಷ ಮಾಡಿದ್ದರ ದಾಖಲೆಗಳು ಇರುತ್ತಿದ್ದರೆ ಸರಕಾರದವರು ಅವನ್ನು ಪ್ರಕಟಗೊಳಿಸಬೇಕಾಗಿ ಹಳಿಯಾಳದ ನಾಗರಿಕರು ಅವರಿಗೆ ಆಹ್ವಾನ ಕೊಡುತ್ತಾರೆ ಸರಕಾರವು ಈ ಆಹ್ವಾನವನ್ನು ಸ್ವೀಕರಿಸುವದೇನು ?

***

ಮ್ಯುನಿಸಿಪಾಲಿಟಿಯ ರದ್ದುಯಾತಿಯು ಅದೊಂದು ಶಿಕ್ಷೆ ಯಾರಿಗೆ ಏನೂ ಶಿಕ್ಷೆ ವಿಧಿಸಬೇಕಾದರೆ, ಅವನಿಗೆ ಅವನ ವಿರುದ್ಧ ಬಂದ ಆರೋಪಗಳ ಪಟ್ಟಿಯನ್ನು ಪೂರೈಸಿ, ಆ ಆರೋಪಗಳ ಸಂಬಂಧದಲ್ಲಿ ಅವನ ಹೇಳಿಕೆಯೇನುಂಟು, ಆ ಆರೋಪಗಳ ನಿರಾಕರಣ ಮಾಡುವಂತಹ ಪುರಾವೆ ಅವನ ಬಳಿಯಲ್ಲಿ ಏನುಂಟು ಎಂಬುವದನ್ನು ತಿಳಕೊಳ್ಳುವದು ಒಂದು ನ್ಯಾಯಸಮ್ಮತ, ಶಿಷ್ಟಸಮ್ಮತ ರಾಜಮಾರ್ಗ ಹಾಗೇನೂ ಮಾಡದೆ ಏಕತರ್ಫ ಶಿಕ್ಷೆ ವಿಧಿಸುವದು ಕಾಡುತನವೆಂದೆನಿಸಲ್ಪಡುತ್ತದೆ! ಮುಂಬಯಿಯ ಕಾಂಗ್ರೆಸ ಸರಕಾರವು ಶಿಷ್ಟ-ಸಮ್ಮತ ಮಾರ್ಗವನ್ನನುಸರಿಸಿ, ಹಳಿಯಾಳ ಮ್ಯುನಿಸಿಪಾಲಿಟಿಯ ವಿರುದ್ಧ ಬಂದ ದೂರುಗಳ್ಯಾವವು ಎಂಬುದನ್ನು ಮ್ಯುನಿಸಿಪಾಲಿಟಿಗೆ ತಿಳಿಸಿದ್ದು ಇಲ್ಲವಂತೆ, ಅವುಗಳ ಸಂಬಂಧದಲ್ಲಿ ಮ್ಯುನಿಸಿಪಾಲಿಟಿಯ ಅಂಬೋಣವೇನುಂಟು ಎಂಬುದನ್ನು ಮ್ಯುನಿಸಿಪಾಲಿಟಿಯ ಕಡೆಯಿಂದ ಕೇಳಿಕೊಂಡದ್ದೂ ಇಲ್ಲವಂತೆ!

***

೧೯೪೬ರಲ್ಲಿ ಹೊಸ ಮ್ಯುನಿಸಿಪಾಲಿಟಿಯು ಚುನಾವಣೆಯಾಗಿ, ರೀತಿಯಂತೆ ಹೊಸ ನಗರಾಧ್ಯಕ್ಷರ ಆಯ್ಕೆಯೂ ದಾಗಲ್ಯೂ ರಾ॥ ಸಾ॥ ಅಡಿವೆಪ್ಪಾ ಶಿಕ್ಕಾರಿ ಇವರು ಹೊಸ ನಗರಾಧ್ಯಕ್ಷರಿಗೆ ಅಧಿಕಾರ ಒಪ್ಪಿಸಿಕೊಡದೆ ೧। ವರ್ಷದ ವರೆಗೆ ಸ್ವೈರ ರೀತಿಯಿಂದ ಮ್ಯುನಿಸಿಪಾಲಿಟಿಯ ಆಡಳಿತ ನಡಿಸುತ್ತಾ ಉಳಿದರು! ಆಗ ಮ್ಯುನಿಸಿಪಾಲಿಟಿಯ ಸಭೆಗಳು ಕೂಡುತ್ತಿದ್ದಿಲ್ಲ! ಮ್ಯುನಿಸಿಪಾಲಿಟಿಯ ಖರ್ಚಿನ ಬಾಬುಗಳಿಗೆ ಯಾರದೂ ಮಂಜೂರಿ ಸಿಗುತ್ತಿದ್ದಿಲ್ಲ! ೧೯೪೭-೪೮ನೇ ಸಾಲಿನ ಆಯ ವ್ಯಯ ಪತ್ರಿಕೆಯನ್ನು ತಯಾರಿಸಿ ಯಾರೂ ಅದನ್ನು ಮಂಜೂರ ಮಾಡಿದ್ದಿಲ್ಲ! ಇವೆಲ್ಲ ಸಂಗತಿಗಳನ್ನು ಹೊಸ ನಗರಾಧ್ಯಕ್ಷ ಡಾ॥ ಮಹಾಜನರೂ ಬೇರೆ ಊರ ಪ್ರಮುಖರೂ ಪುನಃ ಪುನಃ ಕಲೆಕ್ಟರ-ಕಮಿಶನರರ ಲಕ್ಷ್ಯಕ್ಕೂ, ಮುಂಬಯಿ ಸರಕಾರದ ದೃಷ್ಟಿಗೂ ತಂದಿರುತ್ತಿದ್ದರೂ ಮುಂಬಯಿ ಸರಕಾರವು ಸುಮ್ಮಗಾಯಿತು! ಅಧ್ಯಕ್ಷಾಧಿಕಾರ ಕಳಕೊಂಡು ಬಂದಾರಿತನದಿಂದ ಮ್ಯುನಿಸಿಪಾಲಿಟಿಯ ಕಾರಭಾರ ಮಾಡುತ್ತಿದ್ದ ಶಿಕ್ಕಾರಿಯ ಕಡೆಯಿಂದ ಅಧಿಕಾರವನ್ನು ತಪ್ಪಿಸಿ, ಕಾನೂನ ಸಮ್ಮತ ಮಾರ್ಗದಿಂದ ಆರಿಸಿ ಬಂದ ಹೊಸ ನಗರಾಧ್ಯಕ್ಷರಿಗೆ ಒಪ್ಪಿಸುವ "ಕಾರ್ಯಕ್ಷಮತೆ (competence)" ಸರಕಾರವು ತೋರಲಿಲ್ಲ! ಧಾರವಾಡದ ದಿವಾಣಿ-ಕೋರ್ಟಿನಲ್ಲಿ ಡಾ॥ ಮಹಾಜನರು ಕಾನೂನ ಎದ್ದ ರೀತಿಯಿಂದ ಆರಿಸಿಬಂದ ಅಧ್ಯಕ್ಷರಾದ್ದರಿಂದ ನಿರ್ಣಯವಾದ ಮೇಲೆ ಕೂಡ ರಾ॥ ಸಾ॥ ಶಿಕ್ಕಾರಿಯವರು ಅಧಿಕಾರ ಬಿಟ್ಟುಕೊಡಹತ್ತಿದ್ದದ್ದನ್ನು ಡಾ॥ ಮಹಾಜನರು ಸರಕಾರದ ಲಕ್ಷ್ಯಕ್ಕೆ ತಂದು ತಮಗೆ ಅಧಿಕಾರ ಒಪ್ಪಿಸಿಕೊಡಿರೆಂದು ಬಿನ್ನವಿಸಿದರೆ 'ನೀವು ಯುಕ್ತ ಕಂಡ ಕಾಯದೆ ಶೀರ ನಡಿಸಿ ಅಧಿಕಾರ ಒಪ್ಪಿಸಿಕೊಳ್ಳಬಹುದು' ಎಂದು ಸರಕಾರವು ಬರೆದಿತ್ತಂತೆ! ಕಳೆದ ನವಂಬರ ತಿಂಗಳಲ್ಲಿ ಡಾ॥ ಮಹಾಜನರು ಸ್ವಾವಲಂಬನ ಮಾರ್ಗದಿಂದ ಮ್ಯು॥ಯ ಆಡಳಿತವನ್ನು ತಮ್ಮ ಕೈಯಲ್ಲಿ ತಕೊಂಡ ನಂತರ ರಾ॥ ಸಾ॥ ಶಿಕ್ಕಾರಿಯವರು ಅನಧಿಕೃತವಾಗಿ ಮತ್ತು ಕಾಯದೆಗೆ ವಿರುದ್ಧವಾಗಿ ಮ್ಯು॥ಯ ಕೇವೊಂದು ಹಣವನ್ನೂ, ಮಹತ್ವದ ಕಾಗದ ಪತ್ರ-ದಫ್ತರಗಳನ್ನೂ, ನಿತ್ಯ ಬಳಕೆಯ (ಟೈಪರೈಟರ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.
(ಶೇರುದಾರರ ಜೋಖೆ-ಎರಿಕೆಗೆ ಮಿತಿ ಹಾಕಿ ಹಿಂದುಸ್ಥಾನದಲ್ಲಿ ಸಂಘಟಿಸಲ್ಪಟ್ಟದ್ದು)
ಮುಖ್ಯ ಕಚೇರಿ "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.
ಕೆತ್ತ ಮೂಲಧನ ರೂ. ೬,೭೧,೦೦೦/—ಕ್ಕೂ ಮಿಕ್ಕಿದೆ
ಕಾಯ್ದಿರಿಸಿಡಲ್ಪಟ್ಟ ನಿಧಿ ರೂ. ೧,೦೦,೦೦೦/—ಕ್ಕೂ ಮಿಗಿರುವದು
೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ಸಲೆ ಬಡ್ಡಿ ದರಗಳಿಂದ ಅಂಗೀಕರಿಸಲ್ಪಡುವವು.
ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.
ಕುಂದಾಪುರ, ತಾ. ೧೫-೩-೧೯೪೮. }
ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡ್ಯಾರೆಕ್ಟರ

ಪಕ್ಕೆ) ಸ್ಥಾನವನ್ನೂ ತಾವೇ ಇಟ್ಟುಕೊಂಡು ಮ್ಯುನಿಸಿಪಾಲಿಟಿಯ ವ್ಯವಹಾರಕ್ಕೆ ತೊಂದರೆಯನ್ನುಂಟುಮಾಡಿದಾಗ ಕೂಡ ಸರಕಾರವು ಸಿಟ್ಟಿಂದು ಬಾಯಿ ತೆರೆಯಲಿಲ್ಲ! ಡಾ|| ಸಾ|| ಶಿಕ್ಕೂರರ ವಿರುದ್ಧ ಯಾವ ಕ್ರಮವನ್ನೂ ಕೈಕೊಳ್ಳಲಿಲ್ಲ! ಇದು ನಮ್ಮ ಮುಂಬಯಿ ಸರಕಾರದ ಕಾರ್ಯಕ್ಷಮತೆ ಕರ್ತವ್ಯತತ್ಪರತೆ ಮತ್ತು ಜ್ಞಾನದ ಪಾಲನೆ ಮಾಡಿಸಿಕೊಳ್ಳುವ ಯೋಗ್ಯತೆ!

* * *

ಧಾರವಾಡದ ನ್ಯಾಯಾಸನದಲ್ಲಿ ಡಾ|| ಸಾ|| ಶಿಕ್ಕೂರರ ದಾವೆ ತೀರ್ಮಾನವಾಗಿ ಡಾ|| ಮಹಾಜನರ ಆಯ್ಕೆ (ನಗರಾಧ್ಯಕ್ಷ ಪದಕ್ಕೆ) ವ್ಯರ್ಥಪಡಿಸಲ್ಪಟ್ಟ ನಂತರ ಡಾ|| ಕೃಷ್ಣರು ಹಣಕ್ಕಾಗಿ ಎಂಬಂತೆ ಅಧ್ಯಕ್ಷಪದವನ್ನು ವಹಿಸಿಕೊಂಡ ಕೂಡಲೆ ಮ್ಯುನಿಸಿಪಲ್ ಕಾರಭಾರವು ಅಸಮಾಧಾನಕರವಿರುತ್ತದೆಂದು ಶಿಕ್ಕೂರರ ಗೆಳೆಯರು ಕೆಲವರು ಕಮಿಶನರರಿಗೆ ಅರ್ಜಿ ಮಾಡಿದ್ದರು! ಈ ಅರ್ಜಿಯ ಚೌಕಶಿಗಾಗಿ ಅಸಿಸ್ಟೆಂಟ ಕಮಿಶನರ ರಾ|| ಹಿರೇಮಠ ಇವರು ಬಂದಿದ್ದರು. ಅವರು ರಾತ್ರಿ ೧೦ ೧೧ ಘಂಟೆಯವರೆಗೆ ಕಚೇರಿ ಮಾಡಿ ಡಾ|| ಸಾ|| ಶಿಕ್ಕೂರರ ಒಗಲಗೂಸುಗಳ ಪ್ರಾರ್ಥನೆಗಳನ್ನು ಬರಕೊಂಡರು ಮತ್ತು ಊರೊಳಗಿನ ಬೇರೆ ಓಣಿಗಳಲ್ಲಿ ಸಂಚಾರ ಚೌಕಶಿ ಮಾಡಿ ಕಮಿಶನರರಿಗೆ ಏನೇನೋ ವರದಿ ಮಾಡಿದ್ದರಂತೆ. ರಾ|| ಹಿರೇಮಠರು ಈ ಚೌಕಶಿಯಲ್ಲಿ ಕೇವಲ ಕಡೆ ಕೊಳೆಯನ್ನು ಕಂಡಿರಬಹುದು. ಆ ಕೊಳೆಯನ್ನು ಅವರು ತಮ್ಮ ವರದಿಯಲ್ಲಿ ಬೃಹದಾಕಾರವಾಗಿ ಬಣ್ಣಿಸಿ ಅದರ ಹೊಣೆಯನ್ನೆಲ್ಲ ಡಾ|| ಮಹಾಜನರ ಮ್ಯುನಿಸಿಪಾಲಿಟಿಯ ಮೇಲೆ ಹೊರಿಸಿರಬೇಕೆಂದೂ, ಆ ವರದಿಯನ್ನು ಸರಕಾರವು ಕಣ್ಣುಮುಚ್ಚಿ ನಂಬಿ ಮ್ಯುನಿಸಿಪಾಲಿಟಿಯನ್ನು ರದ್ದುಗೊಳಿಸಿರಬೇಕೆಂದೂ ಊರ ಜನರ ಊಹೆಯುಂಟು. ರಾ|| ಹಿರೇಮಠರು ತಾವು ಕಂಡ ಕೊಳೆಯನ್ನು ನಿರ್ಮಾಣಮಾಡಿದವರು ಅಥವಾ ಯಾರ ಕಾಲದಲ್ಲಿ ಕಲೆಯಾದ ಕೊಳೆಯಿದು ಎಂಬುದ ವಿಚಾರ ಮಾಡಿದ್ದಾರೋ ಇಲ್ಲವೋ ಎಂದು ತಿಳಿಯುವ ಮಾರ್ಗವಿಲ್ಲ! ರಾ|| ಹಿರೇಮಠರು ಚೌಕಶಿಯ ಕಾಲಕ್ಕೆ ಡಾ|| ಮಹಾಜನರು ಅಧ್ಯಕ್ಷತೆ ವಹಿಸಿ ಬಹಳ ಕಾಲವಾಗಿದ್ದಿಲ್ಲ! ಡಾ|| ಸಾ|| ಶಿಕ್ಕೂರರ ಏಕತಂತ್ರ ಕಾರಭಾರದಲ್ಲಿ ಸಂಚಯವಾಗಿ ಬಿದ್ದ ಕೊಳೆಯ ರಾಶಿಯನ್ನು ಸ್ವಚ್ಛಗೊಳಿಸಲು ಡಾ|| ಮಹಾಜನರಿಗೂ ಅವರ ಸಹಕಾರಿಗಳಿಗೂ ಸಾಕಷ್ಟು ಸಮಯಾವಕಾಶ ಸಿಕ್ಕಿದ್ದಿಲ್ಲ ಎಂಬ ಮಾತನ್ನು ಸರಕಾರದವರಾದರೂ ನೆನೆದಿರಬಹುದೋ ಇಲ್ಲವೋ ಎಂಬುದೂ ತಿಳಿಯದು.]

* * *

ಜಾಹೀರ ನೋಟೀಸಿನ ಉತ್ತರಕ್ಕೆ ಪ್ರತ್ಯುತ್ತರ.

ಸಿದ್ದಾಪುರ ತಾಲೂಕ ಕರ್ಜಗಿ ಪಿಕಾರ್ ಕೆರೆಗದ್ದೆ ಗ್ರಾಮದ ಕೆರೆಗದ್ದೆಯಲ್ಲಿರುವ ಗಣಪಿ ಕೋಂ ಲಕ್ಷ್ಮೀನಾರಾಯಣ ಹೆಗಡೆ ಇವಳು ತಿಳಿಸುವದೇನಂದರೆ — ಮಂಜಪ್ಪ ಗಣಪಯ್ಯ ಹೆಗಡೆ ವಾಗೆಮನೆ ಇವರು ತಾ ೧೪ ೬ ೪೮ ನೇ "ಕಾನಡಾವೃತ್ತ"ದ ಸಂಚಿಕೆಯಲ್ಲಿ ಜಾಹೀರಪಡಿಸಿದ್ದು ಪೂರ್ತ ಸುಳ್ಳು. ನನ್ನ ಪತಿಗಳಾದ ಲಕ್ಷ್ಮೀನಾರಾಯಣ ಹೆಗಡೆಯವರಿಗೆ ಏನೂ ಸಂಬಂಧವಿಲ್ಲವೆಂಬುದು ನಿಜವಿದ್ದರೂ ನಾನು ನಿಶ್ಚಿಂತಳೆಂಬುದು ಸುಳ್ಳು. ಈ ಮೊದಲು ನನಗೆ ೧-೨ ಪುತ್ರ ಸಂತತಿಯಾಗಿದ್ದು ನಷ್ಟವಾಗಿದೆ. ನಮ್ಮ ದಂಪತಿಗಳ ಪಾಲನ್ನು ಸಹ ತೀರ ಕಡಿಮೆಯಿದೆ, ನಾನು ದುರಾಚಾರಿಯೆಂಬುದು ಬರೀ ದುರಾರೋಪವಾಗಿದೆ. ನಮ್ಮ ಸೊತ್ತಿಗೆ ನಾನೇ ಬಾಧ್ಯಸ್ಥಳಿದ್ದು ಅನ್ಯರಿಗೂ ಹಕ್ಕು ಬರಲಾರದು. ತಿಳಿಯಬೇಕು. ತಾ ೧೧ ೭-೪೮

● ಈ ಎ ಹೆ ಗುರ್ತು ಗಣಪಿ ಕೋಂ ಲಕ್ಷ್ಮೀನಾರಾಯಣ ಹೆಗಡೆ ಕೆರೆಗದ್ದೆ ಇವಳದಾಗಿದೆ

ಹಳಿಯಾಳ ಮ್ಯುನಿಸಿಪಾಲಿಟಿಯ ಈ ರದ್ದಾಯತಿಯ ಪ್ರಕರಣದಲ್ಲಿ ಡಾ|| ಸಾ|| ಶಿಕ್ಕೂರರ ಗೆಳೆಯರ — ಕಮಿಶನರ ಕಚೇರಿಯಲ್ಲೂ ಸರಕಾರದ ಕಚೇರಿಯಲ್ಲೂ ಈ ಗೆಳೆಯರ ಪ್ರಸ್ಥ ದೊಡ್ಡದಿರಬೇಕೆಂಬ ಸಂಶಯ ಜನರಿಗೆ ಬರುತ್ತಿದೆ! — ಕೈವಾಡ ಮತ್ತು ಕುತಂತ್ರ ಕಂಡು ಬರುತ್ತಿದೆ. ಸರಕಾರವು ಈ ಕುತಂತ್ರಗಳ ಕುಹಕಗಳಿಗೆ ಬಲಿಯಾಗಿ ನ್ಯಾಯ ನೀತಿಗಳ ಕೊಲೆ ಮಾಡಿರುತ್ತದೆಂದು ಜನರು ಮುಚ್ಚುಮರೆಯಿಲ್ಲದೆ ಆರೋಪಿಸುತ್ತಾರೆ. ಇಂಥಹ ಆರೋಪವನ್ನು "ಕಾಂಗ್ರೆಸ ಸರಕಾರವು ಸಹಿಸಲಾಗದು. ಕಾರಣ ಮುಂಬಯಿ ಸರಕಾರವು ಒಂದೇ ಈ ಪ್ರಕರಣದಲ್ಲಿ ತಮ್ಮ ವರ್ತನೆಯು ನಿರ್ದೋಷವಿರುತ್ತದೆಂದು ಸಾರ್ವಜನಿಕರಿಗೆ ಮನಗಾಣ ಕೊಡಬೇಕು ಇಲ್ಲವೆ ತಮ್ಮ ತಪ್ಪನ್ನು ಒಪ್ಪಿ ಅದನ್ನು ಸುಧಾರಿಸುವ "ಗಾಂಧಿ ಮಾರ್ಗ" ವನ್ನು ಅನುಸರಿಸಬೇಕಾಗಿದೆ. ಸಾಕಷ್ಟು ಮ್ಯುನಿಸಿಪಾಲಿಟಿಯವರು ಮಾಡಿದ ಅಪಕೃತ್ಯಗಳನ್ನು ತಾರೀಖುವಾರ ಬರೆಸಿ ಜನರಿಗೆ ಸರಕಾರವು ಸಮಾಧಾನ ಮಾಡಿದ್ದರೆ ಡಾ|| ಸಾ|| ಶಿಕ್ಕೂರರ ಭೂಮಿಗತ ಕಾರಸ್ಥಾನದ ಗುಟ್ಟನ್ನು ಪಡೆಯುವಷ್ಟು ಯೋಗ್ಯತೆ ಸರಕಾರದವರಲ್ಲಿಲ್ಲೆಂದು ಜನರು ಎಣಿಸುವರು.

* * *

ಮುಂಬಯಿ ಸರಕಾರವು ಕೆಲವು ದಿನಗಳ ಹಿಂದೆ ಪ್ರಾಥಮಿಕ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಒತ್ತಾಯದಿಂದ ಕಲಿಸಬೇಕು ಎಂದು ಮುಂಚಾಗಿ ಮಾಡಿದ ತೀರ್ಮಾನದಿಂದ ಕಾರವಾರದ ಹಾಗೂ ಇನ್ನಿತರ ಕಡೆಯ ಕೊಂಕಣಿ ಸಮಾಜಗಳಲ್ಲಿ ತೀವ್ರವಾದ ಅಸಂತೋಷವುಂಟಾಗಿದೆ. ಜಿಲ್ಲಾ ಬೋರ್ಡುಗಳು ತಮ್ಮ ಪ್ರಾಥಮಿಕ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಯನ್ನಷ್ಟೇ ಕಲಿಸುವ ಏರ್ಪಾಟು ಮಾಡತಕ್ಕದ್ದೆಂದೂ, ಪ್ರಾದೇಶಿಕೇತರ ಭಾಷೆಗಳ ಶಾಲೆಗಳನ್ನು ಖಾಸಗಿ ಜನರು ಯಾ ಸಂಸ್ಥೆಗಳು ತೆರೆದಲ್ಲಿ ಅವುಗಳಿಗೆ ಸರಕಾರವು ಧನಸಹಾಯವನ್ನೀಯುವದೆಂದೂ, ಆದರೆ ಈ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಒತ್ತಾಯದಿಂದ (Compulsarily) ಕಲಿಸುವ ಏರ್ಪಾಟಿದ್ದರೆ ಮಾತ್ರ ಸರಕಾರದ ಧನಸಹಾಯ ಸಿಗುವದೆಂದೂ ಸರಕಾರದವರ ಸದರಿ ತೀರ್ಮಾನದಲ್ಲುಂಟು.

* *

ಸರಕಾರದವರು ತಮ್ಮ ತೀರ್ಮಾನದಲ್ಲಿ ಪ್ರಾದೇಶಿಕ ಭಾಷೆ ಎಂಬ ಸಂದೇಹಾಸ್ಪದ ಶಬ್ದಪ್ರಯೋಗವನ್ನು ಮಾಡಿದ್ದಾರೆ. ಈ ಶಬ್ದಗಳ ಅರ್ಥವನ್ನು ಬೇಕಾದವರು ಬೇಕಾದಂತೆ ಮಾಡಬಹುದು. ಪ್ರಾದೇಶಿಕ ಭಾಷೆ ಅಂದರೆ ಆಯಾ ಪ್ರದೇ

ಪ್ರಕಟನೆ.

ನಂ ೦/೪೯೪೬

ಸನ್ ೧೯೪೪ ನೇ ಇಸ್ವಿಯ ಗೇಣಿದಾರಿಕೆ ವಿಷಯದ ಕಾಯದೆಯ ೧೨ನೇ ಕಲಮಿನ ಅನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ ಕಾನಡಾ ಜಿಲ್ಲೆಯ ಮುಂಡಗೋಡ ತಾಲೂಕ ಮಾಮಲೇದಾರರು ಈ ಮೂಲಕ ಪ್ರಸಿದ್ಧಪಡಿಸುವದೇನಂದರೆ —

ಕೆಳಗೆ ಬರೆದ ಪರಿಶಿಷ್ಟದ ೨ನೇ ಕೋಷ್ಟಕದಲ್ಲಿ ತೋರಿಸಿದ ಸ್ಥಳಿಕ ಕ್ಷೇತ್ರದಲ್ಲಿ ೫ನೇ ಕೋಷ್ಟಕದಲ್ಲಿ ನಮೂದಿಸಿದ ಬೆಳೆಯ ಪ್ರತಿಯೊಂದು ಎಕರೆಯ ಸರ್ವಸಾಧಾರಣ ಉತ್ಪನ್ನವು ೬ನೇ ಕೋಷ್ಟಕದಲ್ಲಿ ತೋರಿಸಿದಂತೆ ಬಂದಿರುತ್ತದೆಂದು ಠರಾಯಿಸಿಯದೆ

ಪರಿಶಿಷ್ಟ

ಅನುಕ್ರಮ ನಂ ೧	ಸ್ಥಳಿಕ ಕ್ಷೇತ್ರ ೨	ಜಮೀನಿನ ಲಕ್ಷಣ ೩	ಜಮೀನಿನ ಪ್ರಕಾರ ೪	ಬೆಳೆಯ ಹೆಸರು ೫	ಪ್ರತಿಯೊಂದು ಎಕರೆಯ ಸರ್ವಸಾಧಾರಣ ಉತ್ಪನ್ನ ೬	ಶೆರಾ ೭
೧	ಸರ್ವೇ ಗ್ರೂಪ I ರಲ್ಲಿ ಬರುವ ಹಳ್ಳಿಗಳು	ಇತರ ಭೂಮಿ	ತರಿ	ಭತ್ತ	ಪೌಂಡು ೭,೭೬೦	
	ಸರ್ವೇ ಗ್ರೂಪ II ರಲ್ಲಿ ಬರುವ ಹಳ್ಳಿಗಳು	— ಡಿ —	— ಡಿ —	— ಡಿ —	೭,೪೪೦	
೩	ಸರ್ವೇ ಗ್ರೂಪ III ರಲ್ಲಿ ಬರುವ ಹಳ್ಳಿಗಳು	— ಡಿ —	— ಡಿ —	— ಡಿ —	೭,೬೪೦	
೪	ಸರ್ವೇ ಗ್ರೂಪ IV ರಲ್ಲಿ ಬರುವ ಹಳ್ಳಿಗಳು	— ಡಿ —	— ಡಿ —	— ಡಿ —	೭,೮೪೦	

ಮುಂಡಗೋಡ
ತಾ. ೧೮ ೬ ೧೯೪೮

Y. A. Sunthankar,
ಮಾಮಲೇದಾರ, ಮುಂಡಗೋಡ

THE BANK OF RURAL INDIA LTD.
[I corporated i Br t sh In lia Liab lity of Mem bers l mite l]
HEAD OFFICE — "Satyabhama Bhavan , KARWAR N K
Offices at — KARWAR KUMTA SIRSI HONAVAR YELLAPUR BHATKAL SIDDAPUR ANKOLA HUBLI & DHARWAR
Authorised Capital . Rs 10 00 000
Subscribed Capital Rs 5 00 000,
Paid up Capital & Reserves . Rs. 5,08 502-8-0
Rates of Interest on Deposits
Current a/c @ 1% p a, Savings Bank a/c @ 2½%
Fixed Deposits for 3 months @ 3% per annum
for 6 months @ 3½%
for 12 months or more @ 4%
All kinds of modern Banking business transacted
Karwar 14 2 1948
P X GRACIOUS,
MANAGING DIRECTOR

ಶದ ಭಾಷೆ ಆಯಾ ಪ್ರದೇಶದಲ್ಲಿ ಪ್ರಾಯಃಪ್ರವಾಗಿ ಪ್ರಚಲಿತವಿರುವ ಭಾಷೆ ಎಂಬ ಅರ್ಥವಾಗುತ್ತದೆ. ಕಾರವಾರ ತಾಲೂಕಿನಲ್ಲಿ ಹೆಚ್ಚು ಬಳಕೆಯಲ್ಲಿರುವ ಭಾಷೆ ಕೊಂಕಣಿ. ಅಂಕೋಲಾ, ಕುಮಟಾ, ಭಟಕಳ, ಹೊನ್ನಾವರ ತಾಲೂಕುಗಳ ಕೆಲವು ಪಟ್ಟಣಗಳಲ್ಲೂ ಕೊಂಕಣಿಯೇ ಬಹುಸಂಖ್ಯಾತ ಜನರ ಭಾಷೆ. ಹೀಗೆ ಕೊಂಕಣಿಯು ಪ್ರಾಬಲ್ಯವಿದ್ದ ಪ್ರದೇಶಗಳ ಪ್ರಾದೇಶಿಕ ಭಾಷೆ ಕೊಂಕಣಿ ಇರುತ್ತದೆಂಬುದು ನಿರ್ವಿವಾದ. ಆ ಪ್ರದೇಶಗಳಲ್ಲಿ ಕೊಂಕಣಿ ಶಾಲೆಗಳನ್ನು ತೆರೆಯಬೇಕಾದ್ದರಿಂದ, ಆ ಪ್ರದೇಶಗಳೊಳಗಿನ ಕೊಂಕಣಿಗರು ತಮ್ಮ ಶಾಲೆಗಳಲ್ಲಿ ಕೊಂಕಣಿಯನ್ನು ಕಡ್ಡಾಯದಿಂದ ಕಲಿಸುವ ಏರ್ಪಾಟು ಬೇಕೆಂದೂ ಸರಕಾರದ ಅಂಗೀಕಾರವಿರುವುದರಿಂದ ಅದಕ್ಕೆ ನನ್ನ ಆಕ್ಷೇಪವಿಲ್ಲ.

*

ಆದರೆ ಕೊಂಕಣಿಯು ಸ್ವತಂತ್ರ ಭಾಷೆಯಲ್ಲೆಂದೂ, ಅದಕ್ಕೆ ಬೋಧ ಭಾಷೆಯಾಗುವ ಅರ್ಹತೆಯಿಲ್ಲೆಂದೂ ಮುಂಬಯಿ ವಿದ್ಯಾಮಂತ್ರಿಗಳಾಗಿರುವ ಮಾನ್ಯ ಬಾಳಾಸಾಹೇಬ ಖೇರರು ಈ ಹಿಂದೆಯೇ ಒಂದು ತೀರ್ಮಾನ ಕೊಟ್ಟಿದ್ದಾರೆ. ಆ ತೀರ್ಮಾನವೆಷ್ಟರ ಮಟ್ಟಿಗೆ ಸುಸಂಬದ್ಧವಲ್ಲವೆ ತರ್ಕಶುದ್ಧವಿರುತ್ತದೆಂಬುದು ಬೇರೊಂದು ಪ್ರಶ್ನೆ. ಕೊಂಕಣಿಯು ಸ್ವತಂತ್ರ ಸುಂದರ ಭಾಷೆ ಇರುತ್ತದೆಂಬುದನ್ನೂ ಕೊಂಕಣಿಯಲ್ಲಿ ಸುಂದರ ಸಾಹಿತ್ಯ ನಿರ್ಮಾಣವಾಗಬಲ್ಲದೆಂಬುದನ್ನೂ ಬಾಳಾಸಾಹೇಬರಿಗೆ ಮನವರಿಕೆ ಮಾಡಿಕೊಟ್ಟು, ತಮ್ಮ ತೀರ್ಮಾನವನ್ನು ಸಿದ್ಧಾಂತವನ್ನು ಅವರು ಹಿಂತೆಗೆದುಕೊಳ್ಳುವಂತೆ ಮಾಡುವ ಭಾರ ಕೊಂಕಣಿಗರ ಮೇಲಿದೆ. ಅದನ್ನು ಅವರು ನಿರ್ವಹಿಸುವರೆಂಬ ವಿಶ್ವಾಸ ನನಗುಂಟು. ಆದರೆ ಸದ್ಯಕ್ಕೆ ಕೊಂಕಣಿಯು ಬೋಧಭಾಷೆಯೆಂದು ಮಾನ್ಯತೆ ಹೊಂದಿರುವದಿಲ್ಲ. ಎಂದ ಮೇಲೆ ಕೊಂಕಣಿ ಮಕ್ಕಳ ಪ್ರಾಥಮಿಕ ಶಿಕ್ಷಣ [illegible] ಭಾಷೆಯಲ್ಲಿ ನಡೆಯತಕ್ಕದ್ದು ಎಂಬ [illegible] ನಮಗೆ ಸಹಜವಾಗಿ ಉಂಟಾಗುತ್ತದೆ.

ಕೊಂಕಣಿ ಮಕ್ಕಳ [illegible] ಭಾಷೆಗಳೂ [illegible] ಕೊಂಕಣಿ ಮಂ[illegible] ಭಾಷೆ [illegible] ಕೊಂಕಣಿಗರು [illegible] ಕಲಿಯುವಲ್ಲಿ [illegible] ದ್ರವಿಡ "ಬಳಗದ ಭಾಷೆ [illegible] ಯಾವದೇ ಸಂಬಂಧವಿಲ್ಲ, ಅಷ್ಟೇ ಅಲ್ಲ [illegible] ಆದರಿಂದ ಕನ್ನಡ ಕಲಿಯುವದು ಕೊಂಕಣಿಗರಿಗೆ ಕಷ್ಟವಾಗುತ್ತದೆ. [illegible] ಅಂಕೋಲಾ, ಕಾರವಾರ ಶಾಲೆಗಳಲ್ಲಿ [illegible] ಬಂದಿವೆ. ಸರಕಾರದವರ ಹೊಸ ತೀರ್ಮಾನದಂತೆ, ಕೊಂಕಣಿಯು [illegible] ಭಾಷೆಯಾಗಲಿದ್ದರಿಂದ ಮತ್ತು ಕನ್ನಡವೇ [illegible] ಭಾಗದ ಪ್ರಾದೇಶಿಕ ಭಾಷೆಯಾಗುವದರಿಂದ ಆ ಭಾಗದ ಶಾಲೆಗಳನ್ನು [illegible] ಮುಚ್ಚುವ ಪ್ರಸಂಗ ಬಂದಿದೆ! ಮತ್ತು ಕೊಂಕಣಿ ಹುಡುಗರು ತಮ್ಮ ಪ್ರಾಥಮಿಕ ಜ್ಞಾನವನ್ನು ಪ್ರಥಮ ಭಾಷೆಯಿಂದಲಿದ್ದರೂ ತಮಗೆ ಸುಲಭವಾಗುವಂಥ ಸಾಹಿತ್ಯ ಭಾಷೆಯಿಂದ ಸಂಪಾದಿಸುತ್ತ ಬಂದ ಕಥ ಕ್ರಮವನ್ನು ಬಿಟ್ಟು ತಮಗೆ ಕಲಿಯಲು ಕಷ್ಟವಾಗುವ ಕನ್ನಡವನ್ನು ಶಿಶುವಿಹಾರದಿಂದ ಒತ್ತಾಯದ ಮೂಲಕ ಕಲಿಯುವ ದುರ್ಧರ ಪ್ರಸಂಗ ಬಂದಿದೆ! ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಿಂದಲೇ ಸಾಗತಕ್ಕದ್ದೆಂಬುದು ಈಗ ಸರ್ವಸಮ್ಮತವಾಗಿರುವ ಸಿದ್ಧಾಂತ. ಪ್ರಾಥಮಿಕ ಶಾಲೆಗಳೊಳಗಿನ ಅಕ್ಷ

ಓದಿ ಯಾ ... ಎಲ್ಲ ಪ್ರಾಯದ ಮಕ್ಕಳ ಮೇಲೆ ಹೇರಿ ಯ ಭಾಷೆ ಕಲಿಯುವ ಹಾಗೂ ಪ್ರಾಥಮಿಕ ಜ್ಞಾನವ ಆ ಪರಕೀಯ ಭಾಷೆಯಿಂದ ಸಂಪಾದಿಸುವ ಕಷ್ಟಕರ ಪ್ರಸಂಗ ಬರಮಾಡಿದ್ದುದೂ ಒಂದು ಸರಕಾರವನ್ನು ಸಮ್ಮತ ಶಿಕ್ಷಣ ಸಂಬಂಧಿ ತೀರ್ಮಾನವನ್ನು ಹೊರಡಿಸುವ ಸಮಯ ಮಾನ್ಯ ಖೇರರು ಈ ಸಿದ್ಧಾಂತಗಳನ್ನು ಪೂರ್ತಿ ಮರೆತು ಬಿಟ್ಟಿದ್ದಾರೆಂದು ಹೇಳದೆ ಗತ್ಯಂತರವಿಲ್ಲ. ಕೊಂಕಣಿ ಮಕ್ಕಳಂತೆ ಕಾರವಾರ ಜಿಲ್ಲೆಯಲ್ಲಿ ಕೆಲವೇ ಕೆಲವ ವರ್ಷಗಳಾಗಿ ಈ ಜಿಲ್ಲೆಗೆ ಅಥವಾ ಕನ್ನಡ ನಾಡಿಗೆ ಬಂದ ಮರಾಠಿ ಭಾಷೆಯವರ ಮಕ್ಕಳ ಮೇಲೂ ಕರ್ನಾಟಕದ ಉತ್ತರ ಸೀಮೆಗೆ ಹೊಂದಿರುವ ಮರಾಠಿ ಪ್ರಧಾನ ಕನ್ನಡ ಪ್ರದೇಶಗಳಲ್ಲಿರುವ ಮರಾಠಿ ಮಕ್ಕಳ ಮೇಲೂ ಮಾಧ್ಯಮದಲ್ಲಿ ಅವುಗಳಿಗೆ ಆವಶ್ಯವಿಲ್ಲದ ಅಲ್ಲದೆ ಇಷ್ಟವಿಲ್ಲದ ಭಾಷೆಯನ್ನು ಕಲಿಯುವ ಬಲಾತ್ಕಾರವನ್ನು ಸರಕಾರಿ ತೀರ್ಮಾನವು ಮಾಡುತ್ತದೆಂಬುದರ ಅರಿವು ಮಾನ್ಯ ಖೇರರಿಗೆ ಇರುತ್ತದೇನು?

*

ಇತ್ತೀಚೆಗೆ ಶಾಲೆಗಳ ವಿದ್ಯಾರ್ಥಿಗಳಿಗೆ (ಪ್ರಾಥಮಿಕ ಹಾಗೂ ಮಾಧ್ಯಮಿಕ) ಕಾಗದ ಬಹಳ ಬೇಕಾಗುತ್ತದೆ! ಕಾಗದವೀಗ ದುರ್ಮಿಳವಾಗಿದೆ, ಎಷ್ಟು ತುಟ್ಟಿಯಾಗಿದೆ, ಸರಕಾರಿ ಕಚೇರಿಗಳಲ್ಲಿ ಕೂಡ ಕಾಗದವನ್ನು ಬಹಳ ಮಿತವ್ಯಯದಿಂದ ಉಪಯೋಗಿಸತಕ್ಕದ್ದೆಂಬ ಸುತ್ತೋಲೆಗಳು ಆಗಾಗ ಬಂದಿವೆ, ಅದರಂತೆ ಸಾಧ್ಯವಾದಷ್ಟು ಕಾಗದವನ್ನು ಮಿತಿಯಿಂದ ಉಪಯೋಗಿಸಬೇಕು ಎಂಬ ಸೂಚನೆ ಶಾಲೆಗಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಗೊತ್ತಾಗಲೆಂದು ಕೊಡುತ್ತದೆ! ಕನ್ನಡ ಶಾಲೆಗಳಲ್ಲಿ ಹಿಂದೆ ಆರನೇ ಇಯತ್ತೆಯವರೆಗಿನ ವಿದ್ಯಾರ್ಥಿಗಳಿಗೆ ಪಾಟಿ ಬರೆಯಲಿಕ್ಕೆ ಕಲಿಸಿ ಕೆಲವೊಂದು ಕಾಗದ ಹಾಗೂ ಮಾಡಿನ ಕಡಿತಗಳ ಅಭ್ಯಾಸ ಬರೆದುಕೊಳ್ಳಲಿಕ್ಕೆ ಕೆಲವೊಂದು ಕಾಗದ ಮಾತ್ರ ಬೇಕಾಗುತ್ತಿತ್ತು. ಮೇಲಿನ ಇಯತ್ತೆಗಳ ವಿದ್ಯಾರ್ಥಿಗಳು ವಾಚನ ಗಣಿತಗಳನ್ನಾಗಲಿ ನಿಬಂಧ ಪತ್ರಗಳನ್ನಾಗಲಿ ಬರೆದಿಟ್ಟುಕೊಳ್ಳುವದಕ್ಕೆ ಒಂದಿಷ್ಟು ಹೆಚ್ಚು ಕಾಗದವನ್ನು ಉಪಯೋಗಿಸುತ್ತಿದ್ದರು. ಇನ್ನು ಅದರ ಅರ್ಥಭಾವವನ್ನು ಈ ವಿದ್ಯಾರ್ಥಿಗಳು [illegible] ಕ್ರಮದಲ್ಲಿ [illegible] ವಿದ್ಯಾರ್ಥಿ [illegible] ಲೆಕ್ಕಗಳನ್ನು ಪಟ್ಟಿಗಳ ಮೇಲೆ ಮಾಡಬೇಕೆಂದೂ, ತಾವು ಹೇಳುವ ಪ್ರತಿಯೊಂದು [illegible] ಬರೆದುಕೊಳ್ಳಬೇಕೆಂದೂ ಮೇಲಿನ ಇಯತ್ತೆಗಳ ವಿದ್ಯಾರ್ಥಿಗಳಿಗೆ [illegible] ಶಿಕ್ಷಕರು ಒತ್ತಾಯ ಮಾಡುತ್ತಾರಂತೆ! ಈ ಶಿಕ್ಷಕರು ಹೇಳಿದಷ್ಟನ್ನು ಬರೆದರೆ ಪ್ರತಿ ವಿದ್ಯಾರ್ಥಿಗೆ ಒಂದೊಂದು ದಿನ ಕ್ಕೆ ಕಾಗದ ಬೇಕಾಗುವಂತಿಲ್ಲ! ಕಲಿಸಬೇಕಾದ ವಿಷಯಗಳನ್ನು ಶಿಕ್ಷಕರ ಜೇಗೂ ಕಲಿಸಿ, ... ಮನವರಿಕೆ ಮಾಡಿ

ಅವರಿಗೆ ಕಾಗದವನ್ನು ಮಿತಿಯಲ್ಲಿಟ್ಟು ಅನವಶ್ಯವಾಗಿ ಖರ್ಚು ಮಾಡುವದಕ್ಕೆ [illegible] ಶಿಕ್ಷಣ [illegible] ಇಲ್ಲವೆ? [illegible] ಕಾಗದ ದುರ್ಭಿಕ್ಷವಾಗುತ್ತಿದೆ [illegible] ಕಾರಣವೆಂದು ಧಾರಾಳವಾಗಿ ಹೇಳಬಹುದು! ವಿದ್ಯಾರ್ಥಿಗಳಿಗೆ ಈ ಶಿಕ್ಷಕರಿಗೆ [illegible] ಬುದ್ಧಿ ಹೇಳಿ [illegible] ಪ್ರಸಂಗದಲ್ಲಿ ಮಾತ್ರ [illegible] ಉಪಯೋಗಿಸಲು ವಿದ್ಯಾರ್ಥಿಗಳಿಗೆ ಹೇಳತಕ್ಕದ್ದೆಂದೂ, ಪ್ರತಿಯೊಂದು ವಿಷಯದಲ್ಲೂ ವಿದ್ಯಾರ್ಥಿಗಳಿಗೆ ಮಿತವ್ಯಯದ ಪಾಠವನ್ನು ಕಲಿಸತಕ್ಕದ್ದೆಂದೂ ಅವರಿಗೆ ಹೇಳಿಕೊಡಬೇಕಾಗಿ ಸೂಚನೆಯುಂಟು.

*

ಕಳೆದ ಆಗೋಸ್ಟ ೧೫ ನೆಯ ಹಿಂದೆ ನಮ್ಮ ಸ್ವಾತಂತ್ರ್ಯ ೧೫೦ ವರ್ಷಗಳಿಂದ ಬ್ರಿಟಿಶರ ಸಂಕೋಲೆಗಳಿಂದ ನಿಗಡಿತವಾಗಿ ಬಂಧನದಲ್ಲಿದ್ದ ಭಾರತಾಂಬೆಯು ಅಂದು ದಾಸ್ಯದ ಶೃಂಖಲೆಗಳಿಂದ ವಿಮುಕ್ತಳಾದಳು. ಆ ದಿನವು ಇನ್ನು ಮುಂದೆ ಭಾರತೀಯರಿಗೆ ಒಂದು ಹಬ್ಬದ ದಿನವಾಗುವದು. ಈ ಹಬ್ಬವನ್ನು ಭಾರತೀಯರು ಅದರ ಮಹತ್ವಕ್ಕನುಗುಣವಾಗಿ ಆಚರಿಸಬೇಕೆಂದೂ ಆ ದಿನ ಬರೀ ತೋರಿಕೆಯನ್ನುಂಟು ಕಾರ್ಯ ... ಏನೋ ಮಾಡಿದರಷ್ಟೇ ... ಹೇಳದರ ಅಭಾವವಿಲ್ಲ ... ಸ್ವಾತಂತ್ರ್ಯ ... ಆದರ ಉತ್ಕರ್ಷ ಸಾಧನೆಗೆ ... ಜನತೆಯು ಸದಾ ... ಆನುಕೂಲಕರ ... ಇರುವದೆಂಬುದನ್ನು ... ಅಂತಃ ಸ್ಫೂರ್ತಿ ... ಉತ್ಕರ್ಷ ಸಾಧಿಸುವಂಥ ... ಯೋಜನೆಯಾದ ... ಕಾರ್ಯಕ್ರಮವನ್ನು ... ಈ ಹಬ್ಬದ ದಿನ ಇಟ್ಟುಕೊಳ್ಳಬೇಕು. ಅಂದರೆ ಮಾತ್ರ ಸ್ವಾತಂತ್ರ್ಯದಿನದ ಆಚರಣೆಯನ್ನು ನಾವು ಯಥೋಚಿತವಾಗಿ ಮಾಡಿದಂತಾಗುವದು. ಈ ವಿಚಾರಸರಣಿಗನುಸಾರವಾಗಿ ಮುಂಬಯಿ ಸರಕಾರವು ಪ್ರಾಂತದಲ್ಲಿ ಮುಂಬರುವ ಸ್ವಾತಂತ್ರ್ಯ ದಿನದಂದು ಪ್ರತ್ಯೇಕ ಕಾರ್ಯಕ್ರಮವನ್ನು ಆಚರಿಸಬೇಕೆಂದು ನಿರ್ಧರಿಸಿದೆ ... ಮರಗಳ ... ಮಾನವನಿಗೂ ಮಾನವ ಜೀವನಕ್ಕೂ ಬಹಳ ... ಮರಗಳು ಮನುಷ್ಯನಿಗೆ ಉಪಯೋಗ ... ಹಣ್ಣು ಹೂಗಳನ್ನು ಪೂರೈಸುತ್ತವೆ, ಹೆರಳ ನೆರಳು ... ಕೊಡುತ್ತವೆ ... ದನಕರುಗಳಿಗೆ ತಂಪಾದ ನೆಳಲನ್ನು ಕೊಡುತ್ತವೆ, ಕೆಲ ಧರ್ಮಗಳಿಗೆ ಅವಶ್ಯವುಳ್ಳ ಗೊಬ್ಬರವನ್ನು ಕಾರಿಸ್ಸು ಬೇಕಾಗುವ ಸೊಪ್ಪನ್ನು ಪೂರೈಸುತ್ತವೆ, ಉರವಲವನ್ನೂ ಕಟ್ಟಿಗೆಯನ್ನೂ ಕೊಡುತ್ತವೆ. ನಮ್ಮಲ್ಲಿ ಈಗ ಇಂಥ ಉಪಯುಕ್ತ ಮರಗಳು ಕಡಿಮೆಯಾಗಿವೆ. ಇರುವ ಮರಗಳನ್ನು ನಾವು ಕಡಿದು ತೆಗೆದಿದ್ದೇವೆ. ವಿನಹ ಅವುಗಳ ಸ್ಥಳದಲ್ಲಿ ಹೊಸ ಮರಗಳನ್ನು ನೆಡುವದು ನಮ್ಮಿಂದಾಗಿಲ್ಲ! ಆದರಿಂದಲೇ ನಾವಿಂದು ಎಷ್ಟೋ

(೬ನೇ ಪುಟದಲ್ಲಿ ಮುಂದರಿಸಿದೆ)

ಮೈಸೂರ ಗವ್ಹರ್ನಮೆಂಟ ಸೋಪ ಫೆಕ್ಟರಿ, ಬೆಂಗಳೂರು

ಇದರಲ್ಲಿ ತಯಾರಾದ

ಈ ಕೆಳಗಿನ ಲೋಕಪ್ರಿಯ ಮತ್ತು ಸುಪ್ರಸಿದ್ಧ

ಮೈಸೂರ ಸೆಂಡಲ್ ಸೋಪ,

ಮೈಸೂರ ಬಾರ ಸೋಪ,

ಮೈಸೂರ ವಾಶಿಂಗ ಕೇಕ್ಸ,

ಇವು ಇನ್ನು ಮುಂದೆ ಎಲ್ಲ ವ್ಯಾಪಾರಸ್ಥರಿಗೂ, ಗಿರಾಕಿಗಳಿಗೂ

ನಮ್ಮಲ್ಲಿ ಸಂತತವಾಗಿ ಸಿಗುವವೆಂದು ತಿಳಿಸಲು ಆನಂದವಾಗುತ್ತದೆ

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಸ್ಥಾನಿಕ ವೃತ್ತಾಂತ.

ಕುಮಟಾ— ಇಂದು ಸಂಜೆ ಪುನರ್ವಸು ಮುಗಿದು ಪುಷ್ಯ ನಕ್ಷತ್ರಪ್ರಾರಂಭವಾಗುತ್ತಿದೆ. ಕಳೆದ ವಾರ ಕೂಡ ಪುನರ್ವಸುವು ಚೆನ್ನಾಗಿ ಮಳೆ ಸುರಿದಿದೆ. ಹ್ಯಾಗೇನಲ್ಲಿಂದರೂ ೧೨–೧೩ ಇಂಚು ಮಳೆಯಾಗಿದೆ. ನಟ್ಟಿ ಕೆಲಸವು ಮುಗಿದಂತೆಯೇ!

ಪೇಠೆ ಸರಿಯಾಗಿ ನಡೆಯುವದರಿಂದಲೂ ಸರಕಾರಿ ಅಂಗಡಿಗಳಲ್ಲಿ ಅಕ್ಕಿ ಹೆಚ್ಚು ದೊರೆಯಲಾರಂಭಿಸಿರುವದರಿಂದಲೂ ಈಗ ಹಳ್ಳಿಗಳಲ್ಲಿ ಅಕ್ಕಿಯ ಧಾರಣೆ ಭರಭರನೆ ಇಳಿಯತೊಡಗಿದೆ! ಅಕ್ಕಿಯ ದರ ಹಾಯಲ ೧೯ ೩ ೪ ರೂ ಆಗುವದು ಎಂಬ ಅಪೇಕ್ಷೆಯಿಂದ, ಅಕ್ಕಿ ಬೇಡ ಬಂದ ಗಿರಾಕಿಗಳನ್ನು ಹಿಂದೆ ಉಗ್ರ್ಯದಿಂದ ಕಳಿಸಿಕೊಟ್ಟು ಮತ್ತು ಅಕ್ಕಿಯನ್ನು ಹಾಗೆಯೇ ಭದ್ರವಾಗಿಟ್ಟುಕೊಂಡ ಜನರು ಈಗ ಪೇಟೆಗೆ ಬಂದು ಗಿರಾಕಿಗಳನ್ನು ಹುಡುಕುತ್ತಿದ್ದಾರೆ! ಹಳ್ಳಿಗಳಲ್ಲಿ ಈ ಹಿಂದೆ ಅಕ್ಕಿಯ ದರ ಮಾನಗಿ ೧೯ ರೂ ೩ರಿಂದ ೩೯ರ ವರೆಗೆ ಇದ್ದುದು ಈಗ ರೂ ೨೮ ೩ಂಕ್ಕೆ ಇಳಿದಿವೆ! ನಾಗರಪಂಚಮಿಯ ಸುಮಾರಿಗೆ ಈ ದರ ರೂ ೨೩–೨೫ಕ್ಕೆ ಇಳಿಯುವದೆಂದು ಓಪಾರಿ ಭವಿಷ್ಯ ಹೇಳಿಸಿದ್ದಾರೆ.

ಹೋದ ತಿಂಗಳಲ್ಲಾದ ನಗರ ಸಭೆಯ ಚುನಾವಣೆಯ ಸಂಬಂಧದಲ್ಲಿ ರಾ॥ ರಾಜಾರಾಮ ಭಾಗವತರು ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಹಾಜರಪಡಿಸಿದ ತಕ್ರಾರ–ಅರ್ಜಿಯಲ್ಲಿ ಈ ಕೆಳಗಿನ ಆಕ್ಷೇಪಗಳನ್ನು ಮುಂದೊಡ್ಡಲಾಗಿದೆ (೧) ಜಿಲ್ಲಾಧಿಕಾರಿ ಚುನಾವಣೆಯ ವೇಳಾಪತ್ರಿಕೆಯನ್ನು ಒದಗಿಸುವ್ದು ತಪ್ಪು (೨) ಜಿಲ್ಲಾಧಿಕಾರು ಹಿಂದೆ ಪ್ರಕಟಿಸಿದ ವೇಳಾಪತ್ರಿಕೆ ಒಂತೆ ಮೇ ತಿಂಗಳ ೬ನೇ ವಾರದಲ್ಲಿ ಉಮ್ಮೇದುವಾರರ ನೇಮಣೂಕಿಗಳಾಗಿದ್ದವು. ಮೇ ತಾ ೬ಕ್ಕೆ ಆ ಪೈಕಿ ಕೆಲವು ಹುರಿಯಾಳುಗಳು ತಮ್ಮ ಉಮೇದವಾರಿಕೆಯನ್ನು ಹಿಂತೆಗೆದುಕೊಂಡಿದ್ದರು, ಆದರಿಂದ ಕೆಲವು ವಾರ್ಡಗಳಲ್ಲಿ ಉಳಿದ ಉಮೇದವಾರರು ಅವಿರೋಧ ಆರಿಸಿಬಂದಂತಾಗಿದ್ದರು. ಆ ವಾರ್ಡುಗಳಲ್ಲಿ ಪುನಃ ಹುರಿಯಾಳು ಪತ್ರಗಳನ್ನು ಹಾಜರಪಡಿಸಿಕೊಂಡು ಚುನಾವಣೆ ಮಾಡಿಸಿದ್ದು ತಪ್ಪು (೩) ಕೆಲವು ಜನರ ಹೆಸರುಗಳನ್ನು ಎಸೆಂಬ್ಲಿ ಮತದಾರರೆಂಬ ನಾತೆಯಿಂದ, ಮ್ಯುನಿಸಿಪಾಲಿಟಿಗೆ ಮನೆ ತೆರಿಗೆ ಕೊಡುತ್ತಾರೆಂಬ ನಾತೆಯಿಂದ, ವಿಶ್ವವಿದ್ಯಾಲಯದ ಪದವೀಧರರು ಇಲ್ಲವೆ ಸನದಿ ವಕೀಲರು ಎಂಬ ನಾತೆಯಿಂದ ಮತದಾರ–ಯಾದಿಗಳಲ್ಲಿ ೩ ೩ ಬಾರಿ ಸೇರಿಸಲಾಗಿದೆ. ಇದ್ದುಂಟು. ಆದರಂತೆ ಈ ಜನರು ಚುನಾವಣೆಯಲ್ಲಿ ೨–೩ ಮತಪತ್ರಿಕೆಗಳನ್ನು ಪಡೆಕೊಂಡ ಮತಗಳನ್ನು ಕೊಟ್ಟದ್ದುಂಟು. ಹಾಗೆ ಮಾಡಿದ್ದು ಅಕ್ರಮ (೪) ಕೆಲವಡೆ ಮತಪಾರ್ಪತ್ರಿಕೆಯಲ್ಲಿ ನವ ಜಾದ ಇದ್ದ ಜನರಿಗಿಂತ ಭಿನ್ನ ಜನರು ತಾವೇ ಆ ಮತದಾರರೆಂದು ಹೇಳಿ ಮತ ಕೊಟ್ಟಿರುತ್ತಾರೆ ಇತ್ಯಾದಿ.

ಭೂಮಾಲೀಕರಲ್ಲಿ ಇಲ್ಲವೆ ಒಕ್ಕಲಿಗರಲ್ಲಿ ಹಬ್ಬಿರುವ ಅಸಮಾಧಾನದ ಲಾಭ ಪಡೆಯಲೆಂದು ತಮ್ಮ ಸ್ವಾರ್ಥಸಾಧನೆಗಾಗಿ ಕೆಲವೊಂದು ಜನರು ಇನ್ನೂ ಆ ವರ್ಗಗಳಲ್ಲಿ ಇಲ್ಲದ ಸಲ್ಲದ ಪ್ರಚಾರ ಮಾಡಿ ಆ ಅಸಂತೋಷವನ್ನು ಬೆಳಸುತ್ತಿದ್ದುದು ತಮ್ಮ ದೃಷ್ಟಿಗೆ ಬಂದಿರುತ್ತದೆಂದೂ, ಒಡೆಯ ಒಕ್ಕಲಿಗರು ಈ ಪ್ರಚಾರಕ್ಕೆ ಕಿವಿಗೊಡದೆ ಒಕ್ಕಲತನದ ಕಾನೂನಿನಂತೆ ನಡೆಯಬೇಕೆಂದೂ, ಆ ಕಾಯದೆಯಂತೆ ವರ್ತಿಸದಿದ್ದಲ್ಲಿ ಇಕ್ಕಟ್ಟಿನವರಿಗೂ ಹಿತವಾಗುವದೆಂದೂ ಜಿಲ್ಲಾಧಿಕಾರು ಒಂದು ಪ್ರಕಟನೆ ಹೊರಡಿಸಿ ಜಾಹೀರಪಡಿಸಿದ್ದಾರೆ.

ಆಹಾರಪದಾರ್ಥಗಳಿಂದ ಹೆಚ್ಚಿಚ್ಚು ಆಹಾರ ಧಾನ್ಯಗಳ ಬೆಳೆ ಬೆಳಸುವ ಪ್ರವೃತ್ತಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಪ್ರತಿ ತಾಲೂಕಿನಲ್ಲಿ ಉತ್ಕೃಷ್ಟ ಒಳೆ ಬೆಳಸಿದ ಸಾಗುವಳಿದಾರರಿಗೆ ಈ ವರ್ಷ ೩ ಇನಾಮುಗಳನ್ನು (ರೂ ೭೫ ರದೊಂದು ರೂ ೫೦ ರದೊಂದು ಮತ್ತು ರೂ ೨೫ ರದೊಂದು) ಕೊಡಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದೆ. ಇನಾಮು ಕೊಡುವ ಯೋಜನೆಯನ್ನು ಕಾರ್ಯರೂಪದಲ್ಲಿ ತರುವ ಹೊಣೆ ಜಿಲ್ಲಾ ಗ್ರಾಮೋದ್ಧಾರ ಮಂಡಳಗಳಿಗೆ ಒಪ್ಪಿಸಲಾಗಿದೆ.

ಕುಮಟಾದ ಸೀಮೆಯಲ್ಲಿ ಕೂಲಿಕೆಲಸ ಮಾಡಿ ಜೀವಿಸುವ ಜನ ಬಹಳವಿದ್ದಾರೆ. ಅವರಿಗೆ ಸರಕಾರಿ ಅಗ್ಗ ದರದ ಅಂಗಡಿಗಳಿಂದ ಕಾಳು ಬೇಕಾಗಿದೆ. ಆ ಬಗ್ಗೆ ಸೀಧಾ–ಚೀಟಿಗಳು ಬೇಕು. ಆ ಚೀಟಿಗಳನ್ನು ಮಾಡಿಸಿಕೊಳ್ಳುವಾ ಎಂದರೆ ಅನೇಕರು ಕುಮಟೆಯಲ್ಲಿರುತ್ತಾರೆ! ಸೀಧಾ–ಚೀಟಿ ಬೇಕಾದವರು ಕಟ್ ಓಗೆ ಒಂದು ಮಾಡಿಸಿಕೊಳ್ಳಬೇಕೆಂದು ೮ ೧೦ ದಿನಗಳ ಹಿಂದೆ ಊರವರಿಗೆ ಅವರು ತಿಳಿಸಿದ್ದಾರಂತೆ! ಸೀಧಾ–ಚೀಟಿಗಳ ಬಗ್ಗೆ ಈ ಬಡವರು ಕುಮಟೆಗೆ ಬಂದರೆ, ಅವರಿಗೆ ಒಂದು ದಿನ ಉಪವಾಸವಾಗುತ್ತದೆ, ಒಂದ ದಿನದ ಕೂಲಿ ನಷ್ಟವಾಗುತ್ತದೆ! ಕಾರಣ ಗ್ರಾಮಸ್ಥರು ಗ್ರಾಮಕ್ಕೆ ಹೋಗಿ ಸೀಧಾ ಚೀಟಿಗಳನ್ನು ಮಾಡಿಕೊಡುವಂತೆ ಮಾಮಲೇದಾರರು ಪ್ರಕಟನೆ ಮಾಡಬೇಕಾಗಿ ಅರಿಕೆಯುಂಟು.

ಹೊನ್ನಾವರ— (ತಾ ೧೫ ೭–೪೮) ಒಳಕೊರಗ್ರಾಮದಲ್ಲಿ ಒಬ್ಬರಿಗ ಶಿಕ್ಷಕ ಅಮಲಿನಲ್ಲಿ ಬಂದಿದ ಅದರಂತೆ ಈವರೆಗೆ ೮೦ ಹುಡುಗ ಹುಡುಗಿಯರು ಶಾಲೆಯಲ್ಲಿ ದಾಖಲಿಗರಾಗಿದ್ದರೆ ಇನ್ನೂ ಕೆಲವರು ದಾಖಲ ಆಗುವದುಂಟು. ಆದರೆ ಈ ಹುಡುಗ ಹುಡುಗಿಯರಿಗೆ ಸಾಲುವಷ್ಟು ಶಾಲೆ ಮನೆ ವಿಶಾಲವಿಲ್ಲ! ಆದರಿಂದ ದೇವಸ್ಥಾನದ ಚಂದ್ರಶಾಲೆಯೊಂದನ್ನು ಶಾಲೆಯ ಉಪಯೋಗದ ಬಗ್ಗೆ ಓದಿಗೆಗೆ ಕೊಳ್ಳಲಾಗಿದೆ. ಆದರೆ ಈಗ ಓರ್ವನೇ ಶಿಕ್ಷಕನಿದ್ದಾನೆ. ಆವನು ಎರಡೂ ಕಡೆ (ಶಾಲೆ ಮತ್ತು ಚಂದ್ರಶಾಲೆಯಲ್ಲಿ) ಕಾರ್ಯ ಮಾಡುವದೆಂತು? ಬೋರ್ಡಿನವರು ಸದರ ಶಾಲೆಗೆ ಇನ್ನೊಬ್ಬ ಶಿಕ್ಷಕರನ್ನು ಬೇಗನೇ ಕಳಿಸಿಕೊಡ ಲರದೇ?

ಈಗ ೫ ವರ್ಷಗಳಿಂದ ಒಳಕೊರ ಗ್ರಾಮದವರು ಶಾಳಿಷ್ಟು ವಿಶಾಲ ಶಾಲೆಮನೆಯನ್ನು ಕಟ್ಟಿಸುವ ವ್ಯವಸ್ಥೆಯಾಗಿ ಬೇಕೆಂದೂ ತಾವು ೧/೪ ಖರ್ಚು ಪೂರೈಸಲು ಸಿದ್ಧರಿದ್ದೇವೆಂದೂ ಬೋರ್ಡಿಗೆ ತಿಳಿಸುತ್ತಿದ್ದಾರೆ. ಈ ಬಗ್ಗೆ ನಡೆದಿರುವ ಪತ್ರವ್ಯವಹಾರವೂ ಪ್ರಕರಣವೂ ಈಗ ಎಲ್ಲಿದೆ ಎಂಬುದರ ಪತ್ತೆಯೇ ಹತ್ತುವದಿಲ್ಲವಂತೆ! ಶಾಲಾ–ಬೋರ್ಡಿನವರು ಹೀಗೇಕೆ ಮಾಡುತ್ತಿರುವರು ದೇವರೇ ಬಲ್ಲ!

ಬೈಲೂರ— (ತಾ ೭–೭–೪೮) ಇಲ್ಲಿಯ ಚಿದಾನಂದೇಶ್ವರ ವಾಚನಾಲಯದ ೭ನೇ ವಾರ್ಷಿಕ ಸಭಾರಂಭ ಸಭೆ ಮೊನ್ನೆ ಆಯಿತು. ವಾಚನಾಲಯಕ್ಕೆ ೧೯೪೭–೪೮ರಲ್ಲಿ ವರ್ಗಣಿಯಿಂದ ರೂ ೫೭॥ ದಾನಗಳಿಂದ ರೂ ೨೫, ಸರಕಾರಿ ಧನಸಹಾಯದಿಂದ ರೂ ೧೮ ಮತ್ತು ಇತರ ಉತ್ಪನ್ನದಿಂದ ರೂ ೧॥ ಹೀಗೆ ಅಂತು ರೂ ೯೭॥ ಉತ್ಪನ್ನವಾಗಿದ್ದು, ಪುಸ್ತಕ–ಪತ್ರಿಕೆ ಮೊದಲಾದವುಗಳ ಬಗ್ಗೆ ಅಂತು ರೂ ೮೦–೧೧–೯ ಖರ್ಚು ಆಗಿದೆ ಮತ್ತು (ಹಿಂದಿನ ಶಿಲ್ಕು ರೂ ೮ ಹಿಡಿದು) ಈಗ ರೂ ೨೪–೫–೯ ಶಿಲ್ಕು ಉಳಿದಿರುತ್ತದೆ. ಉತ್ಪನ್ನ ಸಾಕಷ್ಟಿಲ್ಲದ್ದರಿಂದ ವಾಚನಾಲಯದ ಅಭಿವೃದ್ಧಿ ಮಾಡಲು ಇಂಬಿಲ್ಲ. ಕಾರಣ ಸುವರ್ಣಾಕ್ಷರಿಗೂ ಪರಸ್ಥಳಗಳಲ್ಲಿರುವ ಬೈಲೂರ ಜನರೂ ಔದಾರ್ಯದಿಂದ ವಾಚನಾಲಯಕ್ಕೆ ಸಹಾಯ ಮಾಡಬೇಕೆಂದು ಚಾಲಕರ ವಿನಂತಿಯಿದೆ.

ಮುರುಡೇಶ್ವರ— (ತಾ ೧೩–೭–೪೮) ಊರಲ್ಲಾಗುವ ಬಹಳಷ್ಟು ಚಿಕ್ಕ–ಪುಟ್ಟ ಕಳವುಗಳಿಗೆ ಮಾಸ್ತಿ ಮಂಜು ಹರಿಕಂತ್ರ ಇವನೇ ಕಾರಣನೆಂದೂ, ಕಂಡು ಹಿಡಿದು ಪೋಲೀಸರು ಅವನ ಮೇಲೆ ಚಿಪ್ಪರ ಖಟ್ಲೆ ಹಾಕಿದ್ದರು. ಅದರಲ್ಲಿ ಮಾಸ್ತಿಗೆ ೧ ವರ್ಷದ ಜಾವಿತಾನ ಶಿಕ್ಷೆ ನಾಮೆಯು ಜಾಮೀನು ಕೊಡಲು ಯಾರೂ ಸಿಗದ್ದರಿಂದ ಮಾಸ್ತಿಯು ತುರಂಗಕ್ಕೆ ಹೋಗಿದ್ದಾನೆ.

(ಮುಂದೆ ೬ನೇ ಪುಟ ನೋಡಿರಿ)

ಜಾಹೀರ ವಿನಂತಿ.

ಶಿರ್ಸಿ ಮಾರಿಕಾಂಬಾ ದೇವಸ್ಥಾನದ ಮೊಕ್ತೇಸರರು ಶ್ರೀ ದೇವಿಯ ಹಣ ದುರುಪಯೋಗಪಡಿಸಿದ ಬಗ್ಗೆ ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ನಡಿಸಿದ ದಾವೆ ಸಧ್ಯದಲ್ಲಿಯೇ ಪುನಃ ವಿಚಾರ ಆಗುವದಿದೆ. ಸದರಿ ದಾವೆಯ ಖರ್ಚಿಗೆ ಹಣದ ಅಗತ್ಯವಿರುವದರಿಂದ ಯಾವತ್ತೂ ಭಕ್ತ ಜನರು ಮುಕ್ತಹಸ್ತದಿಂದ ಸಹಾಯ ನೀಡಬೇಕು. ಹಣ ಕೊಟ್ಟವರು ಲೇಖೀ ಪಾವತಿ ಪಡಕೊಳ್ಳಬೇಕು. ಪರಸ್ಥಳದವರು ಕೆಳಗಿನ ಪತ್ತೆಗೆ ಮನಿ ಆರ್ಡರ ಮೂಲಕ ಧನಸಹಾಯ ಕಳಿಸಬೇಕು. ಶಿರ್ಸಿ, ತಾ ೧೯—೭—೪೮

ತೋಟದಾರ ಕೃಷ್ಣರಾವ ಮುರಾರೀ.

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಸ್ಸಿನಂತೆ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತೂ ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಪತ್ಥರಗಲ್ಲಿ, ಬನಾರಸ



ಕರ್ನಾಟಕ ಶಾಖೆ —
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಸುದ್ದಿಗಳ ಸಂಪೂಟ.

— ಹೊಸ ದಿಲ್ಲಿಯಲ್ಲಿರುವ 'ವ್ಹೈಸರಾಯರ ಭವನ"ವನ್ನು ಇನ್ನು ಮುಂದೆ ಬರೇ ಗವ್ಹರ್ನರ ಜನರಲ್ಲರ ವಾಸಸ್ಥಾನವನ್ನಾಗಿಡದೆ, ಅದನ್ನು ನಿಜವಾಗಿಯೂ 'ಸರಕಾರಿ ಭವನ"ವನ್ನಾಗಿ ಮಾರ್ಪಡಿಸುವ ವ್ಯವಸ್ಥೆ ಈಗ ನಡೆದಿದೆ. ಈ ವಿಶಾಲ ಭವನದಲ್ಲಿ ನೂರಾರು ಕೋಣೆಗಳಿವೆ ಈ ಭವನದ ಕೆಲವೊಂದು ಭಾಗವನ್ನಷ್ಟೇ ಗವ್ಹರ್ನರ-ಜನರಲ್ಲರ ವಾಸಕ್ಕಾಗಿ ಉಪಯೋಗಿಸಿ, ಇನ್ನುಳಿದ ಕೋಣೆಗಳನ್ನು ಮಂತ್ರಿಮಂಡಳದ ವಿಶಿಷ್ಟ ಕಾರ್ಯಕಲಾಪಗಳಿಗಾಗಿ ಉಪಯೋಗಿಸತಕ್ಕದ್ದೆಂದೂ, ಈ ಭವನದ ಪರಿಸರದಲ್ಲಿರುವ ಮತ್ತು ಈ ವರೆಗೆ ಸರ್ವಾಧಿಪತಿಗಳ ಖಾಸಗಿ ನೌಕರರು ಉಳಕೊಳ್ಳುತ್ತಿದ್ದ ಬಂಗಲೆಗಳನ್ನು ಮಂತ್ರಿಗಳ ವಾಸ್ತವ್ಯಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದೂ ಗವ್ಹರ್ನರ-ಜನರಲ್ಲರಾಗಿರುವ ಶ್ರೀಮಾನ್ ರಾಜಾಜಿಯವರೂ ಹಿಂದುಸ್ಥಾನ ಸರಕಾರವೂ ನಿರ್ಧರಿಸಿ, ಈಗಾಗಲೇ ಮುಖ್ಯ ಮಂತ್ರಿಗಳ ಕಚೇರಿಯ ಕೆಲ ಭಾಗವನ್ನು ಈ ಕೇಂದ್ರಭುವನಕ್ಕೆ ಸಾಗಿಸಿರುತ್ತಾರೆ ಇದೇ ಬರುವ ಅಕ್ಟೋಬರ-ನವಂಬರ ತಿಂಗಳಲ್ಲಿ ಕೇಂದ್ರ ಸರಕಾರದ ಶಿಕ್ಷಣ ಖಾತೆಯವರು ನೆರೆಸಬೇಕೆಂದಿರುವ ಕಲಾ-ಪ್ರದರ್ಶನವನ್ನು ಈ ಭವನದಲ್ಲಿ ನೆರೆಸಲಾಗುವದೆಂದೂ ತಿಳಿಯುತ್ತದೆ ಈ ಸರಕಾರಿ ಭವನದಲ್ಲಿ ಸಾರ್ವಜನಿಕರಿಗೆ ಪ್ರವೇಶ ದೊರೆಯುವ ಮೊದಲನೇ ಸಂದರ್ಭ ಇದೇ ಎಂದು ಹೇಳುತ್ತಾರೆ

— ಬಟ್ಟೆ ಮತ್ತು ನೂಲಿನ ಮೇಲೆ ಪುನಃ ನಿಯಂತ್ರಣವನ್ನು ಹೇರಬೇಕೇ ಹೇಗೆ, ನಿಯಂತ್ರಣ ಹೇರುವದಾದಲ್ಲಿ ಯಾವ ಬಗೆಯ ನಿಯಂತ್ರಣ ಹೇರಬೇಕು ಎಂಬ ಪ್ರಶ್ನೆಯ ಮೇಲೆ ವಿಚಾರ-ವಿನಿಮಯ ಮಾಡುವದಕ್ಕಾಗಿ ಇದೇ ವಾರ ದಿಲ್ಲಿಯಲ್ಲಿ ಪ್ರಾಂತಿಕ ಆಹಾರ ಮತ್ತು ಪೂರೈಕೆ ಮಂತ್ರಿಗಳ ಪರಿಷತ್ತೊಂದು ಕೂಡಲಿದೆ ಆ ಪರಿಷತ್ತಿಗೆ ಹೋಗುವಾಗ ಪ್ರಾಂತದ ಅಭಿಮತವನ್ನು ತಿಳಕೊಳ್ಳುವದಕ್ಕಾಗಿ ಕಳೆದ ಗುರುವಾರ ಮುಂಬಯಿಯ ಆಹಾರ-ಪೂರೈಕೆಗಳ ಮಂತ್ರಿಗಳಾಗಿರುವ ಶ್ರೀ॥ ದಿನಕರರಾವ ದೇಸಾಯಿಯವರು ಪ್ರಾಂತೀಯ ಆಹಾರ ಸಲಹೆ ಮಂಡಳದ ಸಭೆಯನ್ನು ಕರೆದಿದ್ದರು ಬಟ್ಟೆಯ ನಿಯಂತ್ರಣ ಬೇಡೆಂದು ಮಂಡಳವು ಅಭಿಪ್ರಾಯ ವ್ಯಕ್ತಪಡಿಸಿತೆಂದು ತಿಳಿಯುತ್ತದೆ ಆಹಾರ-ಧಾನ್ಯಗಳ ನಿಯಂತ್ರಣ ಸಹ ಪುನಃ ಬೇಕಾಗಿಲ್ಲೆಂದೂ ಮಂಡಳವು ಮಂತ್ರಿಗಳಿಗೆ ತಿಳಿಸಿದೆಯಂತೆ ಆದರೂ ವರ್ತಕರು ವಿಪರೀತ ಲಾಭಬಡಕರಾದಲ್ಲಿ ಮತ್ತು ಅಂತಹ ಪ್ರಸಂಗ ಬಂದಲ್ಲಿ ವರ್ತಕರ ಕಡೆಗಿರುವ ಸಂಗ್ರಹವನ್ನೆಲ್ಲ ಸರಕಾರವು ಸ್ವಾಧೀನಪಡಿಸಿಕೊಂಡು ಅದನ್ನು ಸರಕಾರ-ನಿರ್ದಿಷ್ಟ ದರಗಳಿಂದ ಯೋಗ್ಯ ಧಾರಣೆಯ ಅಂಗಡಿಗಳ ಮುಖಾಂತರ ಮಾರುವ ವ್ಯವಸ್ಥೆಯನ್ನು ಸರಕಾರವು ಮಾಡುವದೆಂದೂ ಹಾಗೆ ಮಾಡುವ ಅಧಿಕಾರವನ್ನು ಸರಕಾರವು ಕಾದಿಟ್ಟುಕೊಂಡಿದೆಂದೂ ಶ್ರೀ॥ ದೇಸಾಯಿಯವರು ವರ್ತಕ-ಲೋಕಕ್ಕೆ ಎಚ್ಚರಿಕೆ ಕೊಟ್ಟಿರುತ್ತಾರೆ

— ಸರಕಾರಿ ನೌಕರಿಗಳಲ್ಲಿ ಸ್ತ್ರೀಯರಿಗೆ ಪ್ರವೇಶ ಕೊಡಬೇಕೋ ಕೊಡಬಾರದೋ, ಕೊಡುವದಾದಲ್ಲಿ ಎಷ್ಟು ಮಿತಿಯ ವರೆಗೆ ಕೊಡಬಹುದು ಎಂಬ ಪ್ರಶ್ನೆಯು ಹಿಂದುಸ್ಥಾನ ಸರಕಾರದ ಮುಂದೆ ಕೆಲವು ಕಾಲದಿಂದ ಇತ್ತು ಈ ಪ್ರಶ್ನೆಯ ಮೇಲೆ ಮಂತ್ರಿಮಂಡಳದಲ್ಲಿ ಭಿನ್ನಾಭಿಪ್ರಾಯಗಳಾಗಿದ್ದವೆಂದೂ, ಕೆಲವರು ಸ್ತ್ರೀಯರಿಗೆ ಎಲ್ಲ ಬಗೆಯ ನೌಕರಿಗಳಲ್ಲಿ ಪ್ರವೇಶ ಕೊಡಕೂಡದೆಂಬ ಅಭಿಪ್ರಾಯ ವ್ಯಕ್ತಗೊಳಿಸಿದ್ದರೆಂದೂ, ಶ್ರೀಮತಿ ರಾಜಕುಮಾರಿ ಅಮೃತ ಕೌರ ಇವರು ಸಭೆಯಲ್ಲಿದ್ದದರಿಂದ ಸ್ತ್ರೀ-ದಕ್ಷಿಣ ಸದಸ್ಯರು ಈ ಅಭಿಪ್ರಾಯವನ್ನು ಎತ್ತಿ ಹಿಡಿಯಲಿಲ್ಲೆಂದೂ ಕೆಲವು ದಿನಗಳ ಹಿಂದೆ ಒಂದು ಸುದ್ದಿ ಪ್ರಕಟವಾಗಿತ್ತು. ಇದೀಗ ಈ ಪ್ರಶ್ನೆಯ ಕೊನೆಯ ನಿರ್ಣಯವನ್ನು ಹಿಂದುಸ್ಥಾನ ಸರಕಾರವು ಇತ್ಯರ್ಥ ಮಾಡಿ, ಸ್ತ್ರೀತ್ವವು ಸರಕಾರಿ ನೌಕರಿಗಳ ಪ್ರವೇಶಕ್ಕೆ ಯಾರಿಗೂ ಅಡ್ಡಬರಕೂಡದೆಂದು ನಿರ್ಣಯಿಸಿದೆ, ಹಾಗೂ ಹಿಂದಿನ ಆಯ್. ಸಿ ಎಸ್ ನೌಕರವರ್ಗದ ಸ್ಥಳದಲ್ಲಿ ಈಗ ನಿರ್ಮಾಣ ಹೊಂದಿರುವ ಆಯ್ ಏ ಎಸ್ (ಇಂಡಿಯನ್ ಎಡ್ಮಿನಿಸ್ಟ್ರೇಟಿವ್ಹ ಸರ್ವ್ಹಿಸ್) ಹಾಗೂ ಆಯ್ ಪಿ ಎಸ್ (ಪೋಲಿಸ) ನೌಕರಿಗಳಿಗಾಗಿ ಅವಶ್ಯವುಳ್ಳ ಶೈಕ್ಷಣಿಕ ಪಾತ್ರತೆಯುಳ್ಳ ತರುಣಿಯರು ಕೂಡ ಅರ್ಜಿ ಕಳಿಸಬಹುದೆಂದು ಪ್ರಕಟಗೊಳಿಸಿದೆ. ಮತ್ತು ಈ ವರ್ಷದ ಆಯ್ಕೆಗಳಿಗಾಗಿ ಅರ್ಜಿ ಹಾಕಲು ಹೆಣ್ಣುಮಕ್ಕಳಿಗೆ ಅನುಕೂಲವಾಗಬೇಕೆಂದು ಅರ್ಜಿಹಾಕುವ ಅವಧಿಯನ್ನು ತಾ ೧-೮-೪೮ರ ವರೆಗೆ ಬೆಳೆಸಿದೆ.

— ಮದ್ರಾಸ ಸರಕಾರವು ಇದೇ ಬರುವ ಅಕ್ಟೋಬರ ತಿಂಗಳ ಪ್ರಾರಂಭದಿಂದ ಇಡೀ ಪ್ರಾಂತವನ್ನು ನಿರ್ಮದ್ಯವನ್ನಾಗಿ ಮಾಡುವದೆಂದು ಪ್ರಕಟವಾದ ವಾರ್ತೆಯ ನಿನಾದವು ಕಡಿಮೆಯಾಗುವಷ್ಟರಲ್ಲಿ "ಹರಿಜನ" ಪತ್ರಿಕೆಯು ಆ ಸರಕಾರದ ಗುಪ್ತ ಪರಿಪತ್ರವನ್ನೊಂದು ಪ್ರಕಟಿಸಿದೆ ಸರಕಾರಿ ಪೋಲೀಸ ಖಾತೆಯು ಭಾರತೀಯರಿಗೂ,ಎಂಗ್ಲೋ ಇಂಡಿಯನ್, ಪಾರ್ಸಿ ಮತ್ತು ಯಹೂದಿ ಜನರಿಗೂ ವಿದೇಶಿ ಮದ್ಯದ ಅಪ್ಪಣೆ-ಚೀಟಿಗಳನ್ನು ಕೊಡಲು ಪಾನ-ನಿರೋಧನ ಮಂಡಳಕ್ಕೆ ತಿಳಿಸಲಾಗಿದೆಂದೂ, ಭಾರತೀಯ ಅಧಿಕಾರಿಗಳು ಈ ಅಪ್ಪಣೆ-ಚೀಟಿಗಳಿಗಾಗಿ ಬಹಿರಂಗವಾಗಿ ಅರ್ಜಿಗಳನ್ನು ಮಾಡಲು ನಾಚಿಕೆ ಪಡುತ್ತಿದ್ದಲ್ಲಿ ಅವರು ಪಾನನಿರೋಧ ಮಂಡಳದ ಮುಖಾಂತರ ಅರ್ಜಿಗಳನ್ನು ಕಳಿಸಬಹುದೆಂದೂ, ಮಂಡಳವು ಅವನ್ನು ಸುಗುಪ್ತವಾಗಿ ಕಂದಾಯದ ಜೊತೆ-ಕಾರ್ಯದರ್ಶಿಗಳ ಮುಖಾಂತರ ಪಾನ-ನಿರೋಧನ ಸಚಿವರ ಕಡೆಗೆ ಕಳಿಸಿಕೊಡುವರೆಂದೂ ಈ ಗುಪ್ತ ಪತ್ರದಲ್ಲುಂಟು! ಈ ಪತ್ರದ ಆಶಯವನ್ನು ಮದ್ಯ-ಪ್ರತಿಬಂಧ ಕ್ಷೇತ್ರದಲ್ಲಿರುವ ಎಲ್ಲ ಭಾರತೀಯ ಅಧಿಕಾರಿಗಳಿಗೆ ತಿಳಿಸಬೇಕೆಂದೂ ಸರಕಾರವು ಆಯಾ ಖಾತೆಯ ಮೇಲಧಿಕಾರಿಗಳಿಗೆ ವಿಧಿಸಿದೆ! ಇಂತಹ ಗುಪ್ತ ಪರಿಪತ್ರವನ್ನು ಹೊರಡಿಸಿ, ಪಾನ-ನಿರೋಧನ ಅಪರಾಧಿಗಳನ್ನು ಹಿಡಿದುಕೊಡಲು ಬದ್ಧರಾಗಿರುವ ಪೋಲೀಸ ಅಧಿಕಾರಿಗಳಿಗೆ ಪಾನ-ಸೌಕರ್ಯವನ್ನು ಒದಗಿಸಿಕೊಡುವ ಮದ್ರಾಸ ಸರಕಾರವು ಪಾನ-ನಿರೋಧನ ಕಾರ್ಯವನ್ನು ಹೇಗೆ ಯಶಸ್ವಿಗೊಳಿಸಬಲ್ಲದೆಂದು ಶ್ರೀ॥ ಕಿಶೋರಿಲಾಲ ಮಶ್ರುವಾಲಾ ಇವರು ಪ್ರಶ್ನೆ ಮಾಡಿದ್ದಾರೆ

— ಈಗೊಂದು ವರುಷದಿಂದ ಬಿಹಾರಪ್ರಾಂತದ ಸರಕಾರವು ಜಮೀನದಾರಿ-ನಿರ್ಮೂಲನೆಯ ಯೋಜನೆಯನ್ನು ರೂಪಿಸುವದರಲ್ಲಿ ತೊಡಗಿತ್ತು ಈ ಯೋಜನೆಯು ಅಚೆಯ ವಾರ ಕಾಯದೆಯ ಸ್ವರೂಪವನ್ನು ತಳೆದದ್ದು, ಪೂರ್ಣ ಕಾಯದೆಯಾಗಲು ಭಾರತದ ಗವ್ಹರ್ನರ ಜನರಲ್ಲರ ಸಮ್ಮತಿಯನ್ನು ನಿರೀಕ್ಷಿಸುತ್ತಿದೆ ಈ ಯೋಜನೆಯನ್ನೊಳಗೊಂಡ ಮಸೂದೆಯ ಮೇಲೆ ಬಿಹಾರದ ಎಸೆಂಬ್ಲಿಯಲ್ಲಿ ೧೬ ದಿನ ಮತ್ತು ಕೌನ್ಸಿಲದಲ್ಲಿ ೬ ದಿನ ಘನಘೋರ ಚರ್ಚೆಯಾಯಿತಂತೆ ಜಮೀನದಾರರ ಭೂಮಿಗಳನ್ನು ಕಸಕೊಳ್ಳುವಾಗ ಅವರಿಗೆ ಈ ಕೆಳಗಿನಂತೆ ಪರಿಹಾರ ಕೊಡಬೇಕೆಂದು ಕಾನೂನಿನಲ್ಲಿ ಹೇಳಲಾಗಿದೆ -:ರೂ ೫೦೦ರಿಂದ ರೂ ೧೨೫೦ರ ವರೆಗೆ ವಾರ್ಷಿಕ ಉತ್ಪನ್ನವಿದ್ದ ಒಡೆಯರಿಗೆ ಉತ್ಪನ್ನದ ೨೦ ಪಟ್ಟು, ರೂ ೧೨೫೦ರಿಂದ ರೂ ೨೦೦೦ದ ವರೆಗೆ ಉತ್ಪನ್ನವಿದ್ದವರಿಗೆ ಉತ್ಪನ್ನದ ೧೮ ಪಟ್ಟು, ರೂ. ೨೦೦೦ ದಿಂದ ರೂ ೨೭೫೦ರ ವರೆಗೆ ಉತ್ಪನ್ನವಿದ್ದವರಿಗೆ ೧೬ ಪಟ್ಟು, ರೂ ೨೭೫೦ರಿಂದ ರೂ ೩೫೦೦ರ ವರೆಗೆ ಉತ್ಪನ್ನವಿದ್ದವರಿಗೆ ೧೪ ಪಟ್ಟು, ರೂ ೩೫೦೦ ರಿಂದ ರೂ ೪೨೫೦ರ ವರೆಗೆ ಉತ್ಪನ್ನವಿದ್ದವರಿಗೆ ೧೨ ಪಟ್ಟು, ರೂ ೪೨೫೦ ರಿಂದ ರೂ ೫೦೦೦ದ ವರೆಗೆ ಉತ್ಪನ್ನವಿದ್ದವರಿಗೆ ೧೦ ಪಟ್ಟು; ರೂ ೫೦೦೦ ದಿಂದ ರೂ ೧೦೦೦೦ದ ವರೆಗೆ ಉತ್ಪನ್ನವಿದ್ದವರಿಗೆ ೯ ಪಟ್ಟು, ರೂ ೧೦೦೦೦ ದಿಂದ ರೂ ೨೦೦೦೦ದ ವರೆಗೆ ಉತ್ಪನ್ನವಿದ್ದವರಿಗೆ ೮ ಪಟ್ಟು, ರೂ ೨೦೦೦೦ದಿಂದ ರೂ ೫೦೦೦೦ದ ವರೆಗೆ ಉತ್ಪನ್ನವಿದ್ದವರಿಗೆ ೭ ಪಟ್ಟು. ರೂ ೫೦ ಸಾವಿರದಿಂದ ೧ ಲಕ್ಷ ರೂ ಗಳ ವರೆಗೆ ಉತ್ಪನ್ನವಿದ್ದವರಿಗೆ ಉತ್ಪನ್ನದ ೪ ಪಟ್ಟು, ಮತ್ತು ೧ ಲಕ್ಷ ರೂ ಗಳಿಗಿಂತ ಹೆಚ್ಚಿಗೆ ಉತ್ಪನ್ನ ಪಡೆಯುತ್ತಿದ್ದವರಿಗೆ ಉತ್ಪನ್ನದ ೩ ಪಟ್ಟು, ಜಮೀನದಾರರು ಸರಕಾರದವರ ಯೋಜನೆಗೆ ಬಹಳ ವಿರೋಧ ಮಾಡಿದ್ದರಿಂದ ಪರಿಹಾರ-ದ್ರವ್ಯದ ಮಿತಿಯು ಕೊನೆಗೆ ಹೆಚ್ಚಾಯಿತೆಂದು ಹೇಳುತ್ತಾರೆ

— ಇದೇ ಬರುವ ಆಗೋಸ್ತ ತಾ ೧೫ರಂದು ಸ್ವಾತಂತ್ರ್ಯದಿನ ಉತ್ಸವದ ಪ್ರೀತ್ಯರ್ಥ ಹಿಂದುಸ್ಥಾನ ಸರಕಾರವು ಪುಣ್ಯಶ್ಲೋಕ ಮಹಾತ್ಮಾ ಗಾಂಧಿಯವರ ಛಾಯಾಚಿತ್ರವುಳ್ಳ ೩ ಕೋಟಿ ೧೫ ಲಕ್ಷ ಟಪಾಲ ತಿಕೀಟುಗಳನ್ನು ಮಾರಾಟಕ್ಕೆ ಇಡುವದೆಂದು ಜಾಹೀರ ಆಗಿದೆ ಈ ಟಿಕೇಟುಗಳಲ್ಲಿ ಮೇಲ್ಗಡೆಯ ಒಂದು ಮೂಲೆಯಲ್ಲೂ ' ಬಾಪು " ಎಂದು ದೇವನಾಗರಿಯಲ್ಲೂ, ಇನ್ನೊಂದು ಮೂಲೆಯಲ್ಲಿ ಉರ್ದು ಲಿಪಿಯಲ್ಲೂ ಮುದ್ರಿಸಲಾಗಿದೆ. ಛಾಯಾ-ಚಿತ್ರದ ಕೆಳಗಡೆ "ಮಹಾತ್ಮಾ ಗಾಂಧಿ" ಎಂದು ಇಂಗ್ಲಿಶದಲ್ಲಿ ಅಚ್ಚು ಹಾಕಿರುತ್ತಿದ್ದು, ಅದರ ಕೆಳಗಡೆಯೇ ಮಹಾತ್ಮರ ಜನ್ಮತಿಥಿ

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ. ೧೯೩೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ. —

Post Box No. 10,

UDIPI, S Kanara

ಯನ್ನೂ ಪುಣ್ಯ ತಿಥಿಯನ್ನೂ ಕಾಣಿಸಲಾಗಿದೆ ೧। ಆಣೆ, ೩॥ ಆಣೆ, ೧೨ ಆಣೆಯಿಂದ ರೂ ೧೦೦ರ ವರೆಗಿನ ತಿಕೀಟುಗಳು ತಯಾರಾಗಿವೆ ಈ ಆಚ್ಚಾಗಿ ಬಂದಿರುವ ತಿಕೀಟುಗಳ ಅಂತು ಮೊತ್ತ ೭೫ ಲಕ್ಷ ರೂ ಇರುತ್ತದೆ. ಬರುವ ಆಗೋಸ್ತ ೩೧ ೧೫ರಂದು ರವಿವಾರವಿರುತ್ತಿದ್ದರೂ ಈ ತಿಕೀಟುಗಳ ಮಾರಾಟಕ್ಕಾಗಿ ಎಲ್ಲ ಅಂಚೆ ಕಚೇರಿಗಳು ಅಂದು ತೆರೆಯಲ್ಪಡುವವೆಂದು ತಿಳಿಯುತ್ತದೆ

— ಪಾಕಿಸ್ತಾನದಲ್ಲಿ ಸ್ವರ್ಗಸುಖವನ್ನನುಭವಿಸಲ ಹೋದ ಅಸಂಖ್ಯ ಮುಸಲ್ಮಾನರು ಈಗ ಅಲ್ಲಿಂದ ಮರಳಿ ಹಿಂದುಸ್ಥಾನಕ್ಕೆ ಬರಹತ್ತಿದ್ದಾರೆ ಹಿಂದೆ ಪಂಜಾಬದ ಗಡಿಬಿಡಿಯ ಕಾಲಕ್ಕೆ ಪಂಜಾಬ ಸಿಂಧ ಗಡಿನಾಡುಗಳಿಂದ ಹಿಂದುಸ್ಥಾನಕ್ಕೆ ಓಡಿಬಂದ ... ಲಕ್ಷ ನಿರಾಶ್ರಿತರನ್ನು ನಲಿಸುವ ಕಾರ್ಯವಿನ್ನೂ ಅಪೂರ್ಣವಿರುವಾಗ ಈ ಮುಸಲ್ಮಾನರ ಬಂದ ಸೇರಿದರೆ ಕಷ್ಟವಾಗುವದೆಂದು ಭಾವಿಸಿ ಪು_ಪ ಪಾಕಿಸ್ತಾನದ ಇಲ್ಲವೆ ಪಶ್ಚಿಮ ಪಾಕಿಸ್ತಾನಕ್ಕೆ ಹೋದ ಮುಸಲ್ಮಾನರ ತಿರುಗಿ ಹಿಂದುಸ್ತಾನಕ್ಕೆ ಬರುವ ಪೂರ್ವದಲ್ಲಿ ಇಂದಿನಿಂದ ಪುನಃ ಆ... ಯಾಗುವವರೆಗೆ, ಪಾಕಿಸ್ತಾನದಲ್ಲಿರುವ ಹಿಂದೀ ಹೈಕಮಿಶನರರ ಇಲ್ಲವೆ ಡೆಪ್ಯುಟಿ ಹೈ ಕಮಿಶನರರ ಅಪ್ಪಣೆ-ಚೀಟಿ ಪಡಕೊಳ್ಳಬೇಕೆಂದು ಹಿಂದುಸ್ತಾನ ಸರಕಾರವು ಆಜ್ಞೆ ಹೊರಡಿಸಿದೆ ಪೂರ್ವ-ವ್ಯವಹಾರಕ್ಕಾಗಿ ಇಲ್ಲವೆ ಹಿಂದುಸ್ತಾನದೊಳಗಿನ ತಮ್ಮ ಆಸ್ತಿಯ ವಿಲವಾಟ ಮಾಡುವದಕ್ಕಾಗಿ ಭಾರತಕ್ಕೆ ಬರಬಯಸುವ ಮುಸಲ್ಮಾನರಿಗೆ ಕೇಳಿದ ಕೂಡಲೇ ಈ ಅಪ್ಪಣೆ-ಚೀಟಿಗಳನ್ನು ಕೊಡಲಾಗುವದಂತೆ ಪೂರ್ವ ಪಾಕಿಸ್ತಾನಿಗಳಿಗೆ ಈ ಆಜ್ಞೆ ಅನ್ವಯಿಸುವದಿಲ್ಲ

(ಸ್ಥಾನಿಕ ವೃತ್ತಾಂತ ೪ನೇ ಪುಟದಿಂದ ಮುಂದೆ)

ಭಟಕಳ— ತಾ ೧೯ಕ್ಕೆ ಇಲ್ಲಿಯ ಮಾರುತಿ ಮಂದಿರದಲ್ಲಿ ಮಹಾಲಕರ ರಾ॥ ಹೊಸಂಗಡಿ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯಾಯಿತು ಸಭೆಯಲ್ಲಿ ಇಲ್ಲಿಯ ರೇಂಜರ ರಾ॥ ಮಾಂಡಲಿಕ ಇವರು ಮುಂಬರುವ ಸ್ವಾತಂತ್ರ್ಯ-ದಿನ (ತಾ ೧೫ ಆಗೋಸ್ತ) ದ ಕಾಲಕ್ಕೆ ಜನರು ತಮ್ಮ ತಮ್ಮ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ನಾಡಿನ ಉದ್ಧಾರದ ಕಾರ್ಯಕ್ಕೆ ನೆರವಾಗಬೇಕೆಂದು ಬೋಧಿಸಿದರು ಅವರ ಸೂಚನೆಯನ್ನು ಸಮರ್ಥಿಸಿ ಬೇರೆ ಕೆಲವರೂ ಮಾತಾಡಿದ ಮರುದಿನ ವಾಸವ್ಯದ ವಾಚನಾಲಯದಲ್ಲೂ ಒಂದು ಸಭೆ ಕೂಡಿಸಿ ರೇಂಜರರು ವೃಕ್ಷಾರೋಪಣದ ಮಹತ್ವ ತಿಳಿಸಿ ಹೇಳಿದರು

ಇಲ್ಲಿಯ ಅಬಕಾರ್ ಸ್ಟೋರ್ಸ್‌ದವರು ೧೯ ತಾರೀಗೆ ೧ ಟಿಮಣಿ ಎಣ್ಣೆಯ ಡಪ್ಪ ಮಾರಿದ ಬಗ್ಗೆ ಪೋಲೀಸರು ಪಂಚನಾಮೆ ಮಾಡಿ ಸಿಟ್ಟಿ ಹಾಕಿದ್ದಾರೆ

ಜೇನು ಸಂವರ್ಧನ, ಚೇಸಾಯ, ಸಹಕಾರ ಮತ್ತು ಗ್ರಾಮೋದ್ಧಾರ ಹಿತಗಳಲ್ಲಿ ಸದ್ಯಕ್ಕೆ ಒಂದೇ ಜಾತಿಯ ಜನರು ತುಂಬಿದ್ದಾರೆಂದೂ (೧೦೦ಕ್ಕೆ ೭೫ರಷ್ಟು ಜನರು ಈ ಜಾತಿಯವರಾಗಿರುವರಂತೆ!) ಬೇರೆ ಜಾತಿಗಳ ಕರಬೇತಿ ಹೊಂದಿದ ಪಾತ್ರ ಅಸಾಮುಗಳಿಗೆ ಕೂಡ ಈ ಖಾತೆಗಳಲ್ಲಿ ಸೇರುವದು ಅತಿ ಕಷ್ಟವಾಗುತ್ತಿದೆಂದೂ ಒಂದು ದೂರು ಉಂಟು ಜಿಲ್ಲಾಧಿಪರೂ ಸರಕಾರವೂ ಈ ದೂರಿನಲ್ಲಿ ಸತ್ಯಾಂಶವೆಷ್ಟುಂಟೆಂಬದನ್ನು ಪರಿಶೋಧಿಸಿ, ದೂರು ನಿಜವಿದ್ದರೆ ಅದನ್ನು ಪರಿಹರಿಸುವ ವ್ಯವಸ್ಥೆ ಶೀಘ್ರವೇ ಮಾಡಬೇಕಾಗಿ ಅಂತಿಯಿದೆ

ಶಿರ್ಸಿ— (ತಾ ೧೦-೭ ೪೮) ಇಲ್ಲಿಯ ಸಂತೆಗೆ ಹಾಗೇ ಇಲ್ಲಿಂದಲೂ ೩೦೦೦ ಚಕ್ಕಡಿಗಳು ಬರುತ್ತಿವೆ ಅವುಗಳಿಂದ ಮ್ಯುನಿಸಿಪಾಲಿಟಿಗಳಿಗೆ ಹೇರಳ ಸುಂಕದ ಹಣ ಸಿಗುತ್ತಿದೆ ಆದರೂ ಮ್ಯು॥ಯವರು ಗಾಡಿಗಳನ್ನು ಬಿಡಲಿಕ್ಕೆ ಒಂದು ಪ್ರಶಸ್ತ ಸ್ಥಾನ ಕಲ್ಪಿಸಿಕೊಡುವದಿಲ್ಲ! ಹಿಂದಿನ ನಿಲ್ದಾಣ (ಮಾರಿ ಜಾತ್ರೆ) ದಲ್ಲಿ ಈಗ ಒಂದು ಉದ್ಯಾನವಾಗಿರುವದರಿಂದ ಅಲ್ಲಿ ಎತ್ತು ಗಾಡಿಗಳನ್ನು ಬಿಡಲಿಕ್ಕೆ ಅನುಕೂಲವಾಗುವದಿಲ್ಲ ಆದ್ದರಿಂದ ಗಾಡಿಕಾರರು ಎಲ್ಲಾದರೂ ಮಾರ್ಗಗಳ ಮೇಲೆ ಒಂದು ಬದಿಗೆ ತಮ್ಮ ಚಕ್ಕಡಿಗಳನ್ನು ಬಿಡಲೇಬೇಕಾಗುತ್ತಿದೆ ಅದಕ್ಕೆ ಪೋಲೀಸರು ಆಕ್ಷೇಪಿಸುತ್ತಾರೆ! ಪೋಲೀಸ ಕಾಯಿದೆಯಂತೆ ಸಿಟ್ಟು ಹಾಕುತ್ತಾರೆ! ಜಿಲ್ಲಾಧಿಕಾರಿಗಳು ಇತ್ತ ಲಕ್ಷ್ಯವನ್ನು ಕೊಟ್ಟು ಊರಿಗೆ ಬರುವ ಗಾಡಿಗಳ ಬಗ್ಗಾಗಿ ಬೇರೊಂದು ನಿಲ್ದಾಣ ಕಲ್ಪಿಸಿಕೊಡುವಂತೆ ನಗರ ಸಭೆಗೆ ಬುದ್ಧಿ ಹೇಳಬೇಕೆಂಗ ರಾ॥ ನರಸಿಂಹ ರಾಮಯ್ಯ ಹೆಗಡೆ ಇವರು ಬಿನ್ನವಿಸುತ್ತಾರೆ

(ತಾ ೧೯-೭-೪೮) ಕಳೆದ ತಾ ೫ರಿಂದ ಸೀದಾ ಅಂಗಡಿಗಳಲ್ಲಿ ಸೀದಾ ಪರಿಮಾಣದ ಅರ್ಧದಷ್ಟು ಅಕ್ಕಿ ಕೊಡಲಾರಂಭಿಸಿದ್ದಾರೆ ಈ ಬದಲಾವಣೆಯ ಪರಿಣಾಮ ಅಕ್ಕಿಯ ಪೇಟೆಯ ಮೇಲೆ ಚನ್ನಾಗಿ ಆಗಿದ್ದು, ಅಕ್ಕಿಯ ದರಗಳೀಗ ಪಾಯಲಿಯೊಂದಕ್ಕೆ ಸರಾಸರಿ ೬-೭ ಆಣೆಗಳಷ್ಟು ಇಳಿದಿವೆ ಇನ್ನೊಂದು, ತಿಂಗಳಲ್ಲಿ ಅಕ್ಕಿಯು ಇನ್ನೂ ಅಗ್ಗವಾಗುವದೆಂದೂ ಅಕ್ಕಿಯ ಧಾರಣೆ ಪಾಯಲಿಯೊಂದಕ್ಕೆ ರೂ ೧ ... ಕ್ಕೆ ಆಗುವದೆಂದೂ ಅಕ್ಕಿಯ ವಂಸ್ಥಿತಿಯ ಅಭ್ಯಾಸಿಗಳು ಹೇಳುತ್ತಾರೆ

ಈ ತಿಂಗಳ ಚಿಮಣಿ ಎಣ್ಣೆ ಇನ್ನೂ ಮಾರಾಟಕ್ಕೆ ಬಂದಿಲ್ಲ ಈ ತಿಂಗಳಲ್ಲಿ ೧೯ ಬಾಟ್ಲ ಎಣ್ಣೆ ಸಿಗುವದೆಂಬ ಮಾತವಷ್ಟೇ ಜನರು ಕೇಳುತ್ತಿದ್ದಾರೆ ಇದರಲ್ಲಿ ಕಾಲಹರಣ ಮಾಡಬೇಕಾಗಿದೆ!

ಹೊಸ ಫೌಜದಾರ ರಾ॥ ಶಿವಶಂಕರವರು ಮೊನ್ನೆ ಒಂದು ದೊಡ್ಡ ಜುಗಾರ ಮಂಡಕ್ಕೆ ಅನಪೇಕ್ಷಿತವಾಗಿ ಮುತ್ತಿಗೆ ಹಾಕಿ ಮಂಡದಲ್ಲಿದ್ದ ೧೦ ಮಂದಿಯನ್ನು ಹಿಡಿದಿದ್ದಾರೆ ಊರಲ್ಲಿ ಇನ್ನೂ ಕೆಲವು ಮಂಡಗಳವೆಯಂತೆ ಅವನ್ನೂ ಪ್ರಯತ್ನಪಟ್ಟು ರಾ॥ ಶಿವಶಂಕರು ಹಿಡಿಯಬೇಕಾಗಿ ಸೂಚನೆಯಿದೆ

ಬನವಾಸಿ ಗ್ರಾಮದ ಜನಸಂಖ್ಯೆ ೩೦೦೦ದಷ್ಟಿದೆ ಅಲ್ಲೊಂದು ಆಗದರದ ಅಂಗಡಿಯ ಅವಶ್ಯಕತೆಯಿದೆಯೆಂದು ಅಲ್ಲಿಯ ನಾಗರಿಕರೊಬ್ಬರು ಬರೆಯುತ್ತಾರೆ ಜಿಲ್ಹಾಧಿಪರು ಆಕಡೆ ಲಕ್ಷ ಕೊಡಬೇಕು

ಕಾರವಾರ— (ತಾ ೧೭-೭ ೪೮) ಒಳ್ಳಾಯದ ಶಿಕ್ಷಾ ಯೋಜನೆಯನ್ನು ಕಾರವಾರ ನಗರ-ಸಭೆಯ ಕ್ಷೇತ್ರದಲ್ಲೂ ಅಮಲಿನಲ್ಲಿ ತರಬೇಕೆಂದೂ ಅದರ ವೆಚ್ಚದ ಪಾಲನ್ನು ತರಲು ನಗರ ಸಭೆಯು ಒಪ್ಪಿಗೆಯಿದೆಯೆಂದೂ ನಗರ ಸಭೆಯು ಠರಾವಿಸಿದೆ ಈ ಹೆಚ್ಚಿನ ವೆಚ್ಚ ರೂ ೩೦೦೦ದಷ್ಟು ಬರುವದೆಂದು ಅಂದಾಜು ಮಾಡಲಾಗಿದೆ

ಇಲ್ಲಿಯ ಸರಕಾರಿ ಹಾಯಸ್ಕೂಲಿನಿಂದ ಮೆಟ್ರಿಕ್ ಪರೀಕ್ಷೆಗೆ ಕೂತವರಲ್ಲಿ ಮೊದಲನೇ ಬರುವ ವಿಧ್ಯಾರ್ಥಿಗೆ ಬಹುಮಾನ ಕೊಡುವದಕ್ಕೆಂದು ಮುಂಬಯಿಯ ಡಾ॥ ರಾವ ಇವರು ರೂ ೧೦೦೦ ಇಲ್ಲಿಯ ನಗರಸಭೆಗೆ ಈ ಹಿಂದೆ ಒಪ್ಪಿಸಿದ್ದರು ಈ ಹಣದ ಬಡ್ಡಿಯಿಂದ ಬಹುಮಾನ ಕೊಡ ಶಕ್ಯವಿದ್ದುಂಟು ಆದರೆ ಈ ಹಣದ ಬಡ್ಡಿ ತೀರ ಕಡಿಮೆ ಬರುತ್ತಿರುವದರಿಂದ ಡಾ॥ ರಾವರು ಪುನಃ ರೂ ೧೦೦೦ ಕಳಿಸಿಕೊಟ್ಟಿದ್ದಾರೆ

ಜಿಲ್ಹಾ ಮದ್ಯ-ಪ್ರತಿಬಂಧ ಪ್ರಚಾರಕ ಅಧಿಕಾರಿಗಳಾದ ರಾ॥ ಹನುಮಂತರಾವ ಮಾಂಜರೇಕರರು ಬಿನ್ನವಿಸುತ್ತಾರೇನಂದರೆ — (೧) ನಮ್ಮ ಜಿಲ್ಹೆಯಲ್ಲಿ ಮದ್ಯನಿರೋಧನ ಕಾರ್ಯವನ್ನು ಯಶಸ್ವಿ ಮಾಡಲು ಏನು ಉಪಾಯ ಕೈಕೊಳ್ಳಬೇಕೆಂಬುದನ್ನು ಆಸ್ಥೆಯುಳ್ಳವರು ದಯಮಾಡಿ ನನಗೆ ತಿಳಿಸಬೇಕು (೨) ಮದ್ಯ-ನಿರೋಧನ ಪ್ರಚಾರಕ್ಕೆ ಬೇಕಾಗುವ ಕವನ-ಲಾವಣಿಗಳನ್ನೂ ಕತೆಗಳನ್ನೂ ಏಕಾಂಕ ನಾಟಕಗಳನ್ನೂ ಸಾಹಿತಿಗಳು ಬರೆದು ನನ್ನ ಕಡೆಗೆ ಕಳಿಸಿಕೊಡಬೇಕು ಸ್ವೀಕೃತವಾದವುಗಳಿಗೆ ಬಹುಮಾನ ಕೊಡಲಾಗುವದು ಉಳಿದವನ್ನು ಹಿಂದಕ್ಕೆ ಕಳಿಸಿಕೊಡಲಾಗುವದು.

ಯಲ್ಲಾಪುರ— (ತಾ ೨೦-೬-೪೮) ಕೋಡಸಳ್ಳಿ ಗ್ರಾಮದವರು ಇಂದು ರಾ॥ ಗಣಪತಿ ಗಾಂವಕಾರರ ಸೂಚನೆಯಂತ ಸಭೆ ಸೇರಿ, ನಾಳೆಯಿಂದ ತಮ್ಮಲ್ಲಿ ಒಂದು ಗಾಂವಠಿ ಶಾಲೆ ತೆರೆಯಬೇಕೆಂದು ನಿಶ್ಚಯಿಸಿರುವದಲ್ಲದೆ, ಶಾಲೆಯ ವ್ಯವಸ್ಥೆ ಮಾಡಲು ರಾ॥ ರಾಮಚಂದ್ರ ಗಣಪ ಭಟ್ಟ ಪಟೀಲ ಇವರ ಹಿರಿಯತನದಲ್ಲಿ ಒಂದು ಪಂಚಕಮಿಟಿಯನ್ನು ನೇಮಿಸಿದ್ದಾರೆ.

(ಕೇಳಿದ್ದು, ಕಂಡದ್ದು ೩ನೇ ಪುಟದಿಂದ ಮುಂದೆ)

ಕಷ್ಟಗಳನ್ನು ಅನುಭವಿಸುವ ಪ್ರಸಂಗ ಒಂದಿದೆ! ಹಿರಿಯರಂತೆ ನಾವು ಶಕ್ಯವಿದ್ದಲ್ಲೆಲ್ಲ ಹೊನ್ನೆ ಮುಂತಾದ ಉಪಯುಕ್ತ ಎಣ್ಣೆ-ಬೀಜಗಳನ್ನು ಪೂರೈಸುವ ಗಿಡಗಳನ್ನು ನೆಡುವ ಪ್ರಘಾತವನ್ನಿಟ್ಟುಕೊಂಡಿದ್ದರೆ ಮತ್ತು ವಿದೇಶಗಳಿಂದ ಬರುವ ಚಿಮಣಿ ಎಣ್ಣೆಯನ್ನು ನಾವು ಅವಲಂಬಿಸಿಕೊಂಡಿರದಿದ್ದರೆ ಇಂದಿನ ಚಿಮಣಿ ಎಣ್ಣೆಯ ಕಷ್ಟಗಳು ನಮಗೆದುರಾಗುತ್ತಿದ್ದಿಲ್ಲ. ಇತ್ತ ೪-೬ ವರ್ಷಗಳಿಂದ ನಾವು ನಮ್ಮಲ್ಲಿಯ ಸಹಸ್ರಾವಧಿ ಮಾವಿನ ಮರಗಳನ್ನು ಕಡಿದು ತೆಗೆದಿದ್ದೇವೆ ಅದರಿಂದ ನಮ್ಮಲ್ಲಿಯ ಮಾವಿನಕಾಯಿಯ ಉತ್ಪತ್ತಿ ನಿಶ್ಚಿತವಾಗಿಯೂ ಕುಗ್ಗುವದು ಈ ಕೊರತೆಗಳನ್ನು ನೀಗಿಸಿಕೊಳ್ಳುವದಕ್ಕಾಗಿ ಹಾಗೂ ಗಿಡಮರಗಳಿಂದ ಮಾನವನಿಗೆ ಸಿಗುತ್ತಿರುವ ಎಲ್ಲ ಲಾಭ ಪಡೆಕೊಳ್ಳುವದಕ್ಕಾಗಿ ನಮ್ಮ ಜನರು, ಸರಕಾರದ ಅಪೇಕ್ಷೆಯಂತೆ, ಎಲ್ಲೆಲ್ಲೂ ಬರುವ ತಾ ೧೫ಕ್ಕೆ ಸ್ವಾತಂತ್ರ್ಯ-ದಿನದ ಹಬ್ಬದಲ್ಲಿ, ಗಿಡಮರಗಳನ್ನು ನೆಡುವ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕೆಂದು ಅರಿಕೆಯಿದೆ ಈ ಬಗ್ಗೆ ಅವಶ್ಯವುಳ್ಳ ಸಲಹೆಗಳನ್ನೂ ಸಹಾಯವನ್ನೂ ನೀಡಲು ಜಂಗಲ ಇಲಾಖೆಯವರು ಸಿದ್ಧರಿದ್ದಾರೆ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬರ ೧೪೦—೧೯೪೮

ಸೂರ್ನಳ್ಳಿ ರಘುರಾಮ ನಾರಾಯಣ ಪೈ, ವ್ಯಾಪಾರ, ಕುಂದಾಪುರ ಕಸಬಾ } ವಾದಿ

ಬೆಣ್ಣೆ ಹನುಮಂತ ವಾಸುದೇವ ನಾಯಕ, ವ್ಯಾಪಾರಿ, ಕುಮಟಾ ತಾಲೂಕ, ಕುಮಟಾ } ಪ್ರತಿವಾದಿ

ಸದರ ಪ್ರತಿವಾದಿರಿಗೆ—

ಸದರ ವಾದಿರು-ನೀವು ಅವರೊಡನೆ ತಾ ೬-೧೨-೧೯೪೬ರಿಂದ ತಾ ೬-೩-೧೯೪೮ರ ವರೆಗೆ ನಡಿಸಿದ ವ್ಯಾಪಾರ-ವಹಿವಾಟಿನ ಬಾಬತು ನಿಮ್ಮಿಂದ ಅವರಿಗೆ ಸಲ್ಲಬೇಕಾದ ಮೊಬಲಿಗು ರೂ ೩೪೪-೧೪-೩ನ್ನು ಬಡ್ಡಿ ಸಹಿತ ಬರಮಾಡಿಕೊಳ್ಳಲು ನಿಮ್ಮ ಮೇಲೆ ಹಾಕಿದ ಮೇಲ್ಕಂಡ ದಾವೆಯ ನಿಮ್ಮ ಹಾಜರಿ ವ ಉದಾಹರಣೆ ಬಗ್ಗೆ ತಾ ೩-೮-೧೯೪೮ನೇಗೆ ಇಡೋಣಾಗಿದೆ ಆ ಕಾರಣ ನಿಮ್ಮ ತಕ್ರಾರ ಇದ್ದಲ್ಲಿ ಸದರ ದಿವಸ ನೀವು ಸ್ವತಃ ಯಾ ವಕೀಲರ ಮುಖಾಂತರ ಈ ಕೋರ್ಟಿನ ಮುಂದೆ ಹಗಲು ೧೧ ಘಂಟೆಗೆ ಹಾಜರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಅಪರೋಕ್ಷ ದಾವೆ ಫೈಸಲು ಮಾಡಲಾಗುವದು

ಕುಂದಾಪುರ, ತಾ ೧೬-೭-೧೯೪೮

(By order of the Court)

S. N. ACHARYA, B A, LL B
Advocate

ದನ್ನು ಪಾಂಡುರಂಗ ಕೃಷ್ಣ ಕಾನಡಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ " ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ಜಾಹೀರಾತುಗಳ ದರ:-
ಸ್ಥಳಪ್ರಾಕಾರ ಇಂಚಿನ ಮೇಲೆ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸವಿಸ್ತ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

Reg. No. B. 1270 Monday, 26-7-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೪.

ಕುಮಟಾ.- ಸೋಮವಾರ, ತಾ ೨೬—೭—೧೯೪೮

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ,, ೦ ೧-೦
ಹಳೇ ಸಂಚಿಕೆಗೆ ,, ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿಮುಂಗಡ ಕಳಿಸತಕ್ಕದ್ದು

ಕೇಳಿದ್ದು, ಕಂಡದ್ದು.

(ನಿರೀಕ್ಷಕನು ಬರೆದುದು)

ಕೋಡ-ಶಿರಾಲಿ ಮಾರ್ಗ ಇಂಜನೇರ ಇಲಾಖೆಯವರದು ಈ ಮಾರ್ಗದ ಅಗಲಕ್ಕೆ ಕಡಿಮೆ ಪರಸ್ಪರ ವಿರುದ್ಧ ದಿಶೆಗೆ, ಹೋಗುವ ೨ ಬಂಡಿಗಳು ಹಾದಿಯಲ್ಲಿ ಒಟ್ಟಿಗೆ ಕೂಡಿದರೆ ಅವನ್ನು ದಾಟಿಸಿಕೊಂಡು ಹೋಗುವದು ಕಷ್ಟವಾಗುತ್ತದೆ. ಇಂತಹ ಇಕ್ಕಟ್ಟಿನ ಮಾರ್ಗದಲ್ಲಿ ಇಂಜನೇರ ಇಲಾಖೆಯವರು ಇತ್ತ ಕೆಲವು ಕಾಲದಿಂದ ಖಡಿಯನ್ನು ಸಂಗ್ರಹಿಸಿಟ್ಟಿದ್ದಾರೆ! ಅದನ್ನು ಮಾರ್ಗದ ಮೇಲೆ ಹಾಸಿ ಮಾರ್ಗ ಸರಿಪಡಿಸುವದು ಎಂದೋ ಏನೋ! ಅಲ್ಲಿಯ ತನಕ ಈ ಖಡಿಯ ರಾಶಿಗಳು ಅಲ್ಲೇ ಬಿದ್ದುಕೊಳ್ಳುವವು ಮತ್ತು ಬರಹೋಗುವ ಪ್ರಯಾಣಿಕರಿಗೂ ಬಂಡಿಗಳಿಗೂ ಕಷ್ಟ ಕೊಡುತ್ತಲೇಯಿರುವವು! ಇಂಜನೇರ ಇಲಾಖೆಯವರಿಗೆ ಇದರ ಪರಿವೆಯಿಲ್ಲ!

* * *

ಇಂಜನೇರ ಇಲಾಖೆಯವರ ಕಾರ್ಯಪದ್ಧತಿ ಸಮೂದಿ ಸಕ್ಕರಂತಹದಿದೆ. ಯಾವದೊಂದು ಮಾರ್ಗದ ದುರುಸ್ತಿಯನ್ನು ಅವರು ಮಾಡುವದು ನಿಶ್ಚಯವಾದರೆ, ಒಂದು ವರ್ಷ ಅವರು ಆ ಮಾರ್ಗದ ಅಂಚಿಗೆ (ಮತ್ತು ಮಾರ್ಗದ ಅಂಚಿಗೆ ಅನುಕೂಲ ಸ್ಥಳವಿಲ್ಲದಿದ್ದರೆ ಮಾರ್ಗದ ಮೇಲೆ!) ಖಡಿ ತರಿಸಿ ಹಾಕಿಸುತ್ತಾರೆ! ಮಾರು ವರ್ಷ ಈ ಖಡಿಯ ಅಳತೆ ಮೊದಲಾದವುಗಳಾಗುತ್ತವೆ! ಖಡಿ ತಂದು ಪೂರೈಸುವ ಗುತ್ತಿಗೆದಾರನಿಗೆ ಮತ್ತು ಇಲಾಖೆಯ ಅಧಿಕಾರಿಗಳಿಗೆ ಖಡಿಯ ಅಳತೆಯ ಸಂಬಂಧ ಇಲ್ಲವೆ ಅದರ ದಾಖಲೆಯ ಸಂಬಂಧ ವಿವಾದವುಂಟಾದರಂತೂ ಈ ಅವಧಿ ಇನ್ನಷ್ಟು ಬೆಳೆಯುತ್ತವೆ! ಮತ್ತು ಖಡಿ ಬಂದು ಬಿದ್ದ ಮೂರನೇ ಇಲ್ಲವೆ ಐದನೇ ವರ್ಷ ಅದು ರಸ್ತೆಯ ಮೇಲೆ ಹಾಸಲ್ಪಡುತ್ತದೆ! ಖಡಿಯ ರಾಶಿಗಳು ಮಾರ್ಗದ ಅಂಚಿಗೆ ಸುಖ ಕೆಲವು ಸ್ಥಳದಲ್ಲಿ ಹಾಕಲ್ಪಡದೆ ಮಾರ್ಗದ ಮೇಲೆಯೇ ಹಾಕಲ್ಪಟ್ಟಿವೆ! ಈ ೩-೪ ವರ್ಷ ಪ್ರಯಾಣಿಕರೂ ವಾಹನಗಳೂ ಖಡಿರಾಶಿಗಳ ತೊಂದರೆಯನ್ನು ಅನುಭವಿಸುತ್ತಲೇಯಿರಬೇಕು!

* * *

ಇಂಜನೇರ ಇಲಾಖೆಯವರು ಮೇಲ್ಕಾಣಿಸಿದಂತೆ ಖಡಿಯನ್ನು ಮಾರ್ಗದ ಬದಿಯಲ್ಲಿ ಇಲ್ಲವೆ ಮಾರ್ಗದ ಮೇಲೆಯೇ ಒಂದು ಅಂಚಿಗೆ ಹಾಕಿಸುವ ಈ ಕ್ರಮ ಮಿತವ್ಯಯದ ದೃಷ್ಟಿಯಿಂದ ನಡೆದುಬಂದಿರುತ್ತದೆಂದು ಹೇಳಲಾಗುತ್ತದೆ! ಮಾರ್ಗದ ಬದಿಯಲ್ಲಿ ಖಡಿ ಹಾಕಲು ಸ್ಥಳವಿದ್ದರೆ ಇಲಾಖೆಯವರು ಅಲ್ಲಿ ಅದನ್ನು ಹಾಕಿಸಿದಲು ಯಾರದೂ ಆಕ್ಷೇಪವಿಲ್ಲ. 'ಅಂತಹ ಸ್ಥಳವಿಲ್ಲದಿದ್ದರೆ ಪರುಸ್ತಿಯಾಗುವ ಮಾರ್ಗಕ್ಕೆ ಹೊಂದಿ ಕಿರಿದಿರುವ ಯಾವದೊಂದು ಮೈದಾನದಲ್ಲಿ— ಸರಕಾರಿ ಮಾಲ್ಕಿಯ ಸ್ಥಳವಿಲ್ಲದಿದ್ದರೆ ಖಾಸಗಿ ಮಾಲ್ಕಿಯ ಸ್ಥಳವನ್ನು ಭಾಡಿಗೆಗೆ ಪಡೆದುಕೊಂಡು— ಅದನ್ನು ದಾಸ್ತಾನ ಮಾಡಿಸಬೇಕು, ಮತ್ತು ದುರುಸ್ತಿಯ ಕೆಲಸಕ್ಕೆ ಆರಂಭವಾದ ಮೇಲೆ ಅದನ್ನು ಚಕ್ಕಡಿಗಳಲ್ಲಾಗಲಿ, ಸರಕು ಒಯ್ಯುವ ಮೋಟಾರ-ಬಂಡಿಗಳಲ್ಲಾಗಲಿ ಬೇಕಾದಲ್ಲಿ ತರಿಸಿಕೊಳ್ಳಬೇಕು. ಈ ಬಗ್ಗೆ ಇಂದಿಷ್ಟು ವೆಚ್ಚ ಹೆಚ್ಚಿಗೆ ಬರುವದು ನಿಜ. ಆದರೆ ಅದು " ದಯಾಳುಮೇಂ ಮಿಠಾಯಿ " ಕ್ರಿಂತ ಹೆಚ್ಚಿಗೆಯಾಗಲಾರದು! ಇಂಜನೇರ ಇಲಾಖೆಯವರ ದುಂದುಗಾರಿಕೆಯ ಕಾರಭಾರದಲ್ಲಿ ಈ ಅಲ್ಪಸ್ವಲ್ಪ ಖರ್ಚಿನ ಬಗ್ಗೆ ಆಕ್ಷೇಪ ಯಾರೂ ತೆಗೆಯಲಿಕ್ಕಿಲ್ಲ!

* * *

ಮೇಲೆ ಮಾಡಿದ ಸೂಚನೆಯನ್ನು ಇಂಜನೇರ ಇಲಾಖೆಯವರು ಸ್ವೀಕರಿಸಿದರೆಂದು ತಿಳಿ. ಆದರೆ ಅವರು ಸ್ವೀಕರಿಸುವ ಸಂಭವ ತೀರ ಕಡಿಮೆ! ಅಂತಹ ಸಂದರ್ಭದಲ್ಲಿ ಮುಂದೇನು ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ರಸ್ತೆಯ ಒಡೆತನ ಮತ್ತು ಅದರ ವ್ಯವಸ್ಥೆಯ ಅಧಿಕಾರ ಇಂಜನೇರ ಇಲಾಖೆಯವರದಿರುತ್ತಿದ್ದರೂ, ಅದರ ಮೇಲೆ ಜನ-ವಾಹನಗಳ ಸುರಕ್ಷಿತ ಓಡಾಟಕ್ಕೆ ಆತಂಕವಾಗುವಂತೆ ಖಡಿ-ರಾಶಿಗಳನ್ನು ಹಾಕಿಸಲಿಕ್ಕಾಗಲಿ ಬೇರೆ ಬಗೆಯ ಆತಂಕಗಳನ್ನುಂಟುಮಾಡಲಿಕ್ಕಾಗಲಿ ಇಂಜನೇರ ಇಲಾಖೆಯವರಿಗೆ ಹಕ್ಕುಂಟೆಂದು ಹೇಳಲಾಗದು! ಮಾರ್ಗದ ಮೇಲೆ ಓಡಾಡಲು ಹಕ್ಕಿನ ವಾಹನಗಳು ಅನಾವಶ್ಯಕವಾಗಿ ಮಾರ್ಗದಲ್ಲಿ ನಿಂತು, ಬೇರೆ ಜನ-ವಾಹನಗಳ ಸಂಚಾರಕ್ಕೆ ಅಡ್ಡಿಯನ್ನುಂಟುಮಾಡಿದರೆ ಆ ವಾಹನಗಳ ನಿಯಂತ್ರಕರು ಹ್ಯಾಗೆ ಪೋಲೀಸ ಕಾಯದೆಯ ಒಂದನೇ ಕಲಮಿನನ್ವಯ ಗುನ್ಹೆಗಾರರಾಗುತ್ತಾರೋ ಹಾಗೆಯೇ ಇಂಜನೇರ ಇಲಾಖೆಯವರು ಮಾರ್ಗದಲ್ಲಿ ಖಡಿರಾಶಿಗಳನ್ನು ಹಾಕಿ ಸಂಚಾರಕ್ಕೆ ಅಡ್ಡಿಯನ್ನುಂಟುಮಾಡಿದಾಗ್ಯೂ ಪೋಲೀಸ ಕಾಯದೆಯಂತೆ ಅಲ್ಲದಿದ್ದರೂ ಬೇರೊಂದು ಕಾಯದೆಯಂತೆ, ಗುನ್ಹೆಗಾರರಾಗುತ್ತಾರೆಂದು ನನ್ನ ಭಾವನೆಯುಂಟು. ಜಿಲ್ಹಾಧಿಪರು ಈ ವಿಷಯದಲ್ಲಿ ತಮ್ಮ ಕಾಯದೆ ಪಂಡಿತರ ಸಲಹೆ ತಕ್ಕೊಂಡು ಇಂಜನೇರ ಇಲಾಖೆಯವರ ವಿರುದ್ಧ ತಕ್ಕ ಕಾಯದೆ ಕ್ರಮ ನಡೆಸುವ ವ್ಯವಸ್ಥೆ ಮಾಡಬೇಕಾಗಿ ಸೂಚನೆಯಿದೆ.

* * *

ಶಿರ್ಶಿ-ವಿಭಾಗದ ಪ್ರಾಂತ-ಸಾಹೇಬರಾಗಿದ್ದ ರಾ|| ಏ. ಎಸ್. ಐ. ನವಾಬರಿಗೆ ಸರಕಾರವು ಯಾವದೋ ಒಂದು ಕಾರಣದಿಂದ ಡಿ. ಡಿ. ಸಿ. ಶ್ರೇಣಿಯಿಂದ ಕಡಿಮೆ ಮಾಡಿ ಮಾಮಲೇದಾರ ತರಗತಿಯಲ್ಲಿ ಹಾಕಿರುತ್ತದೆಂಬದು ಈಗ ಈ ಜಿಲ್ಹೆಯಲ್ಲಿ ಜನ ಜನಿತವಾಗಿದೆ. ರಾ|| ನವಾಬರನ್ನು ಈಗ ಹೊನ್ನಾವರದ ರೆಸಿಡೆಂಟ ಮೆಜಿಸ್ಟ್ರೇಟರನ್ನಾಗಿ ನೇಮಿಸಿದ್ದಾರೆಂದೂ, ತಾವು ಪ್ರಾಂತ ಸಾಹೇಬರಾಗಿದ್ದ ಪ್ರಾಂತದಲ್ಲಿ ಕೆಳಗಿನ ತರಗತಿಯ ಅಧಿಕಾರಿಯಾಗಿ ಕೆಲಸ ಮಾಡುವ ದುರ್ಧರ ಪ್ರಸಂಗ ಬಂದದ್ದು ಕಂಡು ರಾ|| ನವಾಬರು ಬೆರಗು ಮೇಲೆ ಹೋಗಲಿಚ್ಛಿಸಿದ್ದರೆಂದೂ, ಸರಕಾರವು ಅವರಿಗೆ ರಜೆ ಕೊಡಲು ನಿರಾಕರಿಸಿ ರೆಸಿಡೆಂಟ ಮೆಜಿಸ್ಟ್ರೇಟರಾಗಿ ಅವರು ಕೆಲಸ ಮಾಡಬೇಕೆಂದು ಒತ್ತಾಯಮಾಡುತ್ತಿದೆಯೆಂದೂ ಹೊನ್ನಾವರದಲ್ಲಿ ಒಂದು ಗಾಳಿವಾರ್ತೆ ಹಬ್ಬಿದೆ!

* * *

ಯಾವದೊಂದು ಪ್ರಾಂತದಲ್ಲಿ ಉಚ್ಚ ಅಧಿಕಾರದಲ್ಲಿದ್ದವರಿಗೆ ಅದೇ ಪ್ರಾಂತದಲ್ಲಿ ಕೆಳ-ಅಧಿಕಾರದಲ್ಲಿರುವದು ಒಂದು ಬಗೆಯ ಶಿಕ್ಷೆಯಾಗಿರುತ್ತದೆ. ರಾ|| ನವಾಬರು ಅಂತಹ ಮಾನಭಂಗನೆಗೆ— ತೀವ್ರತರ ಮಾನಭಂಗನೆಗೆ— ಪಾತ್ರರಾಗುವಂತಹ ಯಾವ ಅಪರಾಧ ಮಾಡಿರುವರೋ ನಾವರಿಯೆವು. ಅದರಿಂದ ಸರಕಾರದವರ ಕೃತಿ ರಾ|| ನವಾಬರ ವೈಯಕ್ತಿಕ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಸಮರ್ಥನೀಯ ಇಲ್ಲವೆ ಅಸಮರ್ಥನೀಯವಿರುತ್ತದೆಂಬದನ್ನು ಪರಿಶೀಲಿಸುವ ಗೋಜಿಗೆ ನಾವು ಹೋಗಲಾರೆವು. ಆದರೆ ಸಾರ್ವಜನಿಕ ದೃಷ್ಟಿಯಿಂದ ರಾ|| ನವಾಬರನ್ನು ಈ ಜಿಲ್ಹೆಯಲ್ಲಿ ರೆಸಿಡೆಂಟ ಮೆಜಿಸ್ಟ್ರೇಟರನ್ನಾಗಿಡುವದು ಎಷ್ಟರ ಮಟ್ಟಿಗೆ ಉಚಿತ, ನ್ಯಾಯ್ಯ ಮತ್ತು ಸಯುಕ್ತಿಕವಿರುತ್ತದೆಂಬುದು ಒಂದು ಆಲೋಚನೀಯ ಪ್ರಶ್ನೆ.

* * *

ಮೆಜಿಸ್ಟ್ರೇಟ, ನ್ಯಾಯಾಧೀಶ, ಮಾಮಲೇದಾರ, ಪ್ರಾಂತ ಸಾಹೇಬ, ಜಿಲ್ಹಾಧಿಪತಿ ವಗೈರೆ ಸ್ಥಾನಗಳಲ್ಲಿರುವ ಅಧಿಕಾರಿಗಳ ಬಗ್ಗೆ ಅವರ ಕಾರ್ಯಕ್ಷೇತ್ರದೊಳಗಿನ ಜನತೆಯಲ್ಲಿ ಆದರ, ಗೌರವ ಮತ್ತು ವಿಶ್ವಾಸವು ಇದ್ದರೆ ಮಾತ್ರ ಅವರು ಸರಿಯಾಗಿ ಕೆಲಸ ಮಾಡಬಲ್ಲರೆಂಬುದೊಂದು ಅಬಾಧಿತ ಸಿದ್ಧಾಂತ. ವಿಶೇಷವಾಗಿ ನ್ಯಾಯದಾನ ಮಾಡುವ ಅಧಿಕಾರಿಯ ಬಗ್ಗೆ ಜನರು ಗೌರವ-ವಿಶ್ವಾಸಗಳನ್ನು ತಾಳಬೇಕು. ಅಂದರೆ ಮಾತ್ರ ಅವರ ನ್ಯಾಯದಾನಕ್ಕೆ ಬೆಲೆ ಬರುತ್ತದೆ, ಅವರು ನ್ಯಾಯ ಕೊಟ್ಟಾರೆಂಬ ವಿಶ್ವಾಸ ಜನರಿಗುಂಟಾಗುತ್ತದೆ. ಆ ವಿಶ್ವಾಸ-ಗೌರವವನ್ನು ಕಳಕೊಂಡ ಅಧಿಕಾರಿಯ ನ್ಯಾಯದಾನಕ್ಕೆ ಜನರು ಬೆಲೆ ಕೊಡಲಾರರು. ರಾ|| ನವಾಬರ ಉಚ್ಚಪದ-ಚ್ಯುತಿಯನ್ನು ಕಣ್ಣಾರೆ ಕಂಡ ಜನರು ಅವರ ಬಗ್ಗೆ ಅದೆಷ್ಟು ಗೌರವ ತೋರಿಸ್ಯಾರು, ಎಷ್ಟು ವಿಶ್ವಾಸ ಹಿಡಿದಾರು ಮತ್ತು ಅವರ ಕಡೆಯಿಂದ ನಿರ್ದೋಷ ನ್ಯಾಯದಾನವನ್ನು ಅಪೇಕ್ಷಿಸ್ಯಾರು ಎಂಬುದರ ವಿಚಾರವನ್ನು ಮೇಲಧಿಕಾರಿಗಳು ಮಾಡಿರುವರೋ ಹೇಗೆ? ಇಲ್ಲದಿದ್ದರೆ ಇನ್ನಾದರೂ ಅವರು ಈ ದೃಷ್ಟಿಯಿಂದ ವಿಚಾರ ಮಾಡಿ ರಾ|| ನವಾಬರನ್ನು ಬೇರೊಂದು ಜಿಲ್ಹೆಗೆ ಕಳಿಸಿ, ಹೊನ್ನಾವರದ ರೆಸಿಡೆಂಟ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

(ಶೇರುದಾರರ ಜೊಖೆಗಾರಿಕೆಗೆ ಮಿತಿ ಹಾಕಿ ಹಿಂದುಸ್ತಾನದಲ್ಲಿ ಸಂಘಟಿಸಲ್ಪಟ್ಟದ್ದು)

ಮುಖ್ಯ ಕಚೇರಿ. "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ್, ಕುಂದಾಪುರ.

ತೆತ್ತ ಮೂಲಧನ ರೂ. ೭,೭೧,೦೦೦/— ಕ್ಕೂ ಮಿಕ್ಕಿದೆ

ಕಾಯ್ದಿರಿಸಿಡಲ್ಪಟ್ಟ ನಿಧಿ ರೂ. ೧,೦೦,೦೦೦/— ಕ್ಕೂ ಮಿಗಿಲಾಗಿರುವದು.

೩ ರಿಂದ ೬ ತಿಂಗಳ ಮುದ್ದತ್ತಿನ ಠೇವುಗಳು ಶೇಕಡಾ ೨ರಿಂದ ೩ ರತೆ ಬಡ್ಡಿ ದರಗಳಿಂದ, ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯ ಬಗ್ಗೆ ಮುಖ್ಯ ಕಚೇರಿಗೆ ಯಾ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೧೫-೩-೧೯೪೮ }

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಮೆಜಿಸ್ಟ್ರೇಟರ ಸ್ಥಳಕ್ಕೆ ಬೇರೊಬ್ಬರನ್ನು ನೇಮಿಸಬೇಕಾಗಿ ಅರಿಕೆಯುಂಟು.

***

ಕುಮಟೆಯ ಡಾಂಬರ-ರಸ್ತೆಯನ್ನು (ಕುಮಟೆ ಹೊಳೆಯ ಸಂಕದಿಂದ ಮೋಟಾರ-ಸ್ಟ್ಯಾಂಡದ ವರೆಗಿನ ಮಾರ್ಗವನ್ನು) ರಚಿಸಿದ ಇಂಜನೀರರಿಗೆ ಎಷ್ಟೇ ಧನ್ಯವಾದ ಕೊಟ್ಟರೂ ಕಡಿಮೆಯೇ! ಈ [illegible] ಮೈಲುದ್ದ ರಸ್ತೆಗೆ ಮೂವತ್ತೆಂಟೋ ಮೂವತ್ತೈದೋ ಸಾವಿರ ರೂಪಾಯಿ ವಿನಿಯೋಗವಾಯಿತೆಂದು ಹೇಳುತ್ತಾರೆ! ನಾವು ಬೇರೆ ಎಷ್ಟೋ ಕಡೆ—ಕಾರವಾರದಲ್ಲಿ, ಅಂಕೋಲೆಯಲ್ಲಿ, ಶಿರ್ಸಿಯಲ್ಲಿ ವಗೈರೆ ವಗೈರೆ—ಡಾಂಬರ ರಸ್ತೆಗಳನ್ನು ನೋಡಿದ್ದೇವೆ. ಅವುಗಳಲ್ಲಿ ಯಾವ-ರಸ್ತೆಯೂ ಈ ರಸ್ತೆಯನ್ನು ಸರಿಗಟ್ಟಲಾರವು! ತಪಶ್ಚರ್ಯೆಯ ವಿವಿಧ ಕ್ರಮಗಳಲ್ಲಿ ದೇಹ ದಂಡನೆಯೂ ಒಂದು ಕ್ರಮವಿದೆ. ಅಂಥ ತಪಶ್ಚರ್ಯ ಮಾಡಬಯಸುವವರು ಒಂದು ಸಲ ಈ ರಸ್ತೆಯ ಮೇಲೆ [illegible] ಸವಾರಿ ಮಾಡಿದರೆ ಸಾಕು! ಅವರು ಬೇಕಾದರೆ ಬಂಗಾರದಿಂದ [illegible] ಗಾಡಿಯ ಇಲ್ಲವೆ ಸೈಕಲ್ಲು [illegible] ತಮ್ಮ ಶಾರೀರಿಕ [illegible] ಸವಾರಿಗಳನ್ನು ಉಪಯೋಗ ಮಾಡಿದರೂ ಸವೆದುಹೋಗುವಂತಿಲ್ಲದ ಧರ್ಮ [illegible] ಕೊಡುವ [illegible] ಈ ರಸ್ತೆಯ ಮೇಲೆ ಓಡಾಡುವ ಮೋಟಾರ-ಬಂಡಿಗಳಿಗೆ ಆ ಭಗವಂತನೇ ಕಾಪಾಡಬೇಕಾದರೆ [illegible] ಆಲೋಚನೆ ಮಾಡಬೇಕಾಗಿದೆ! ಅಷ್ಟು ಉತ್ತಮ ಈ ಮಾರ್ಗವು [illegible] ಮಂತ್ರಿಗಳು ಈ ಮಳೆಗಾಲದಲ್ಲಿ ಒಮ್ಮೆ ಕುಮಟೆಗೆ ಬಂದು ಈ ರಸ್ತೆಯನ್ನು ಸ್ವತಃ ನೋಡಿಕೊಳ್ಳಬೇಕು. ಅವರಿಗೂ ನಾವು ಹೇಳಿದುದು ಸಂಪೂರ್ಣ [illegible] ವಿನುತ್ತವೆಂಬುದು ಕಂಡುಬರದಿರದು.

***

ಮಳೆಗಾಲ ತೀರಿದ ಮೇಲೆ ಈ ಮಾರ್ಗದ ಮೇಲೆ ಇಂಜನೀರ ಇಲಾಖೆಯವರು ಉಸುಬು ಹಾಕಿಸುತ್ತಾರಂತೆ. ಆ ಉಸುಬು ಮಾರ್ಗಕ್ಕೆ ಹೇಗೆ ಅಂಟಿಕೊಂಡು ಕೂಡ್ರಬಲ್ಲದದು? ಗಾಳಿ ಬೀಸುತ್ತಲೇ ಇಲ್ಲವೆ ಮಾರ್ಗ ಗುಡಿಸುತ್ತಲೇ ಆ ಉಸುಬು ಎಲ್ಲಿಂದೆಲ್ಲಿಗೋ ಹೋಗಬಹುದಷ್ಟೆ! ಉಸುಬಿನ ಬದಲು ಜಿಗಟು ಇಲ್ಲವೆ ಅಂಟು ಮಣ್ಣು ಮಾರ್ಗದ ಮೇಲೆ ಹರಡಿದರೆ ಅದು ಎದ್ದು ನಿಂತ ಕರೀ ಕಲ್ಲುಗಳ ನಡುವೆ ಸರಿಯಾಗಿ ಕೂಡ್ರುವದೆಂತಲೂ, ಕಲ್ಲು-ಕಲ್ಲುಗಳ ನಡುವಿನ ಸಂದುಗಳು ತುಂಬಿಬರುವವೆಂತಲೂ ಕೆಲ ಅನುಭವಿಕರ ಸೂಚನೆಯುಂಟು. ಈಗ ಮಳೆ ಕಡಿಮೆಯಾದಾಗ ಆ ಮಣ್ಣನ್ನಾದರೂ ಮಾರ್ಗದ ಮೇಲೆ ಹಾಕಿ ಜನರಿಗಾಗುವ ಕಷ್ಟ-ವೇದನೆಗಳನ್ನು ನೀಗಿಸುವ ವ್ಯವಸ್ಥೆಯನ್ನು ಇಂಜನೀರ ಇಲಾಖೆಯವರು ಮಾಡುವರೇ?

***

ಟೆನನ್ಸಿ ಕೋರ್ಟುಗಳಲ್ಲಿ ಕಬಜೆ ದಾವೆಗಳನ್ನು ಮಾಡಿ ಕಬಜ ಕೊಡುವ ಫೈಸಲಿಗಳನ್ನು ಒಡೆಯರಿಗೆ (ಒಮ್ಮೊಮ್ಮೆ ಅನ್ಯಾಯ್ಯವಾಗಿ ಕಬಜೆ ಕಳಕೊಂಡ ಮತ್ತು ಕೆಲವು ಕ್ರ[illegible]ನ್ಯಾಯ ಅರ್ಜಿ ಮಾಡಿದ ರೈತರಿಗೆ) ಕಬಜೆ ಬಿಟ್ಟುಕೊಡದಿರಲು ರೈತರು ಇಷ್ಟು ದಿನ ಒಂದು ಉಪಾಯ ಮಾಡುತ್ತಿದ್ದರು. ನಾವು ಅಪೀಲು ಮಾಡಿದ್ದೇವೆ ಇಲ್ಲವೆ ಅಪೀಲು ಮಾಡುವವರಿದ್ದೇವೆಂದು ಹೇಳಿ ಅವರು ತಮ್ಮ ವಿರುದ್ಧದ ಫೈಸಲಿಯ ಅಮಲಬಜಾವಣೆಗೆ ತಡೆಹಾಕುತ್ತಿದ್ದರು; ಕಬಜೆ ಬಿಟ್ಟುಕೊಡದಿರಲು ಪ್ರಸಂಗವನ್ನು ಹೇಗಾದರೂ ಮುಂದಹಾಕಿ, ಇನ್ನೊಂದು ವರ್ಷದ ಬೆಳೆಯನ್ನು ನುಂಗುವ ಎಂಬುದೇ ಈ ಕುಶಲದ ಆಂತರಿಕ ಉದ್ದೇಶ! ಟೆನನ್ಸಿ ಕೋರ್ಟಿನವರು ಕೂಡ ಈ ಕುಯುಕ್ತಿಗಳಿಗೆ ಅನುಕೂಲರಾಗಿ, ಅಪೀಲ ಎಂಬ ಶಬ್ದ ಕಿವಿಗೆ ಬೀಳುತ್ತಲೆ, ತಮ್ಮ ಫೈಸಲಿಯ ಅಮಲಬಜಾವಣೆಯನ್ನು ತಡೆದಿಡುತ್ತಿದ್ದರು! ಮೇಲಿಂದ "ಸ್ಟೇ ಒರ್ಡರ" ತರಬೇಕೆಂದು ಅವರು ರೈತರಿಗೆ ಹೇಳುತ್ತಿದ್ದಿಲ್ಲ! ಸರಕಾರದವರು ಮೊನ್ನೆ ಒಂದು ಸುತ್ತೋಲೆ ಹೊರಡಿಸಿ ಕುಯುಕ್ತಿಗಳ ಈ ಆಟಕ್ಕೆ ತಡೆಹಾಕಿರುತ್ತಾರೆ! ರೈತರು ಬರೀ ಅಪೀಲು ಮಾಡಿದ್ದೇನೆ ಯಾ ಮಾಡುವವನಿದ್ದೇನೆಂದು ಹೇಳಿದರೆ ಪ್ರಯೋಜನವಿಲ್ಲೆಂದೂ, ಅವರು ಯೋಗ್ಯ ಜಾಮೀನ ಕೊಟ್ಟಲ್ಲಿ ಮಾತ್ರ ಆ ಅಪೀಲಿನ ನಿಕಾಲಿಯ ವರೆಗೆ ಅಮಲಬಜಾವಣಿಯನ್ನು ತಡೆದಿಡತಕ್ಕದ್ದೆಂದೂ ಸರಕಾರವು ಎಲ್ಲ ಟೆನನ್ಸಿ ಕೋರ್ಟುಗಳಿಗೆ ತಿಳಿಸಿದೆಯಂತೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆ ಕಡಿಮೆ. ಇಡೀ ವಾರದಲ್ಲಿ ೭.೭೧ ಇಂಚು ಮಳೆಯಾಗಿದೆ. ಮಳೆಗಾಲದ ಪ್ರಾರಂಭದಿಂದ ಈ ವರೆಗೆ ಬಿದ್ದ ಮಳೆ ೯೬.೯೪ ಇಂಚು. ಊರೊಳಗೆ ಕೆಲವು ಕಡೆ ವಿಷಮ ಜ್ವರದ ಬಾಧೆಯುಂಟು.

ಪಡಿಗಳಲ್ಲಿ ಅಕ್ಕಿಯ ದರ ಕುಗ್ಗುತ್ತ ನಡೆದಿದೆ. ಅಕ್ಕಿಯವರ ದುಕಾನಗಳೊಂದರಲ್ಲಿ ರೂ ೨೬.೨೨ ಹೇಳಿದರೂ ಕೊಳ್ಳುವ ಗಿರಾಕಿಗಳು ಮುಂದೆ ಬರುವದಿಲ್ಲ! ಸೀಧಾ-ಅಂಗಡಿಗಳಲ್ಲಿ ಮಕ್ಕೆಜೋಳದ ಬದಲು ಸಾಮಾಕ್ಕಿ (ವರಯಿ)ಯ ಭತ್ತ ಕೊಡುತ್ತಾರೆ. ರೇಶನ ಗಿರಾಕಿಗಳು ಅದನ್ನು ಕೊಳ್ಳುತ್ತಾರೆ. ಈ ಭತ್ತದಿಂದ ಸಾಮಕ್ಕಿ ತಯಾರಿಸುವ ಶ್ರಮ ಕರಾವಳಿಯ ಜನರಿಗೆ ಗೊತ್ತಿಲ್ಲ. ಗಿರಣಿಗಳಲ್ಲಿ ಕೊಟ್ಟರೆ ಇದೇ ಕಾಳು ಹೊರಡುವ ಬದಲಿಗೆ ಕಾಳಿನ ಕಡಿಯಾಗುತ್ತದೆ! ಅಧಿಕಾರಿಗಳು ಈ ಭತ್ತದಿಂದ ಕಾಳು ತಯಾರಿಸುವ ಕ್ರಮ ಗೊತ್ತಿದ್ದವರ ಕಡೆಯಿಂದ ಕಾಳು ಮಾಡಿಸಿ, ಆ ಮೇಲೆ ಅದನ್ನು ಹಂಚುವ ವ್ಯವಸ್ಥೆ ಮಾಡಿದರೆ ಜನರಿಗೆ ಉಪಕಾರವಾದೀತು.

ಹೆಗಡೆಯಲ್ಲಿ ಕೆಲವು ಭೂಮಾಲೀಕರು ಕೆಲವೊಂದು ಭೂಮಿಯನ್ನು ಸ್ವತಃ ಸಾಗುವಳಿ ಮಾಡುತ್ತಿದ್ದಾರೆ. ಅವರಿಗೆ ಹೊಲ ಹೂಡಿ ಕೊಡಲಿಕ್ಕಾಗಲಿ ನೆಟ್ಟಿ ಮಾಡಿಕೊಡಲಿಕ್ಕಾಗಲಿ ಯಾವ ಒಕ್ಕಲಿಗನೂ ಹೋಗಕೂಡದೆಂದು ರೈತ-ಸಂಘದವರು ಕಟ್ಟು ಮಾಡಿರುವದರಿಂದ ಒಡೆಯರು ಎಲ್ಲ ಕೆಲಸ ತಾವೇ ಮಾಡಬೇಕಾಗಿದೆ! ಅವನ್ನವರು ಆನಂದದಿಂದ ಮಾಡುತ್ತಾರೆ. ಇದನ್ನು ನೋಡಿ ರೈತರ ಹೊಟ್ಟೆಯೊಳಗೆ ಉರಿ ಬೀಳುತ್ತಿದೆ! ಒಡೆಯರ ಈ 'ಸ್ವಂತ ಸಾಗುವಳಿಗೆ' ಹ್ಯಾಗೆ ವಿಘ್ನ ಮಾಡಬೇಕೆಂಬ ಆಲೋಚನೆಯಲ್ಲಿ ಅವರು ಬಿದ್ದಿರುತ್ತಾರೆ! ಕಳೆದ ವಾರ ಒಂದು ದಿನ ರಾತ್ರಿ ಓರ್ವ ಒಡೆಯನು ಬಿತ್ತಿದ ಹೊಲದೊಳಗಿನ ಸಸಿಗಳನ್ನು ಯಾವನೋ ಒಬ್ಬ ಒಕ್ಕಲಿಗನು ದಿನ ಬೆಳಗಾಗುವದರೊಳಗೆ ಕಿತ್ತಿ ಒಯ್ದನೆಂದು ತಿಳಿಯುತ್ತದೆ! ಟೆನನ್ಸಿ ಕಾಯದೆಯ ಪರಿಣಾಮವಿದು!

ಕೆಲವು ದಿನಗಳಿಂದೆ ಮೂರೂರ ಕನ್ನಡ ಶಾಲೆಯೊಳಗಿನ ಓರ್ವ ವಿದ್ಯಾರ್ಥಿಯ ಒಂದು ಬಂಗಾರದ ಒಡವೆ ಕಾಣೆಯಾಗಿತ್ತು. ಅದು ಕುಮಾರ ನಾರಾಯಣ ಗಣಪತಿ ಭಟ್ಟ ಎಂಬ ೮ ವರ್ಷದ ಹುಡುಗನಿಗೆ ಸಿಕ್ಕಿತ್ತಂತೆ. ಅದನ್ನವನು ಪ್ರಾಮಾಣಿಕತನದಿಂದ ತಂದು ಶಿಕ್ಷಕನಿಗೆ ಒಪ್ಪಿಸಿದನು. ಅವನ ಈ ಪ್ರಾಮಾಣಿಕತನಕ್ಕೆ ಮೆಚ್ಚಿ, ಶಾಲೆಯ ಶಿಕ್ಷಕರಾದ ರಾ॥ ಅಡಕೋಳಿಯವರು ಮೊನ್ನೆ ಶುಕ್ರವಾರ ಇಲ್ಲಿಯ ಮಾಮಲೇದಾರ ರಾ॥ ಸಬನೀಸರು ಸದರಿ ಶಾಲೆಗೆ ಭೆಟ್ಟಿ ಕೊಟ್ಟಾಗ ಅವರ ಹಸ್ತದಿಂದ ಸದರಿ ನಾರಾಯಣನಿಗೆ ರೂ ೩ ಬಹುಮಾನ ಕೊಡಿಸಿದರೆಂದು ತಿಳಿಯುತ್ತದೆ.

ಸದರಿ ಮೂರೂರ ಶಾಲೆಯಲ್ಲಿ ಈಗ ವಿದ್ಯಾರ್ಥಿಗಳ ಸಂಖ್ಯೆ ಬಹಳ ಬೆಳೆದಿದ್ದು ಆ ಮಾನದಿಂದ ಶಿಕ್ಷಕರು ಕಡಿಮೆಯುಂಟು. ವಿದ್ಯಾಧಿಕಾರಿಗಳು ಲಕ್ಷ್ಯಗೊಡಿಸಬೇಕಾಗಿ ಸೂಚನೆಯುಂಟು.

ಹೊನ್ನಾವರ— (ತಾ ೨೪-೭-೪೮) ೧೯೪೩ರಲ್ಲಿ ಹೊಸ ಮ್ಯುನಿಸಿಪಾಲಿಟಿ ಬಂದ ಮೇಲೆ ಮ್ಯುನಿಸಿಪಾಲಿಟಿಯ ಕಾರಭಾರದಲ್ಲಿ ಸುಧಾರಣೆಯಾಗುವದೆಂಬುದೊಂದೆ ಅಪೇಕ್ಷೆಯಿತ್ತು. ಆದರೆ ಇನ್ನೂ ವರೆಗೆ ಯಾವ ಸುಧಾರಣೆಯೂ ಕಂಡು ಬರುವದಿಲ್ಲ. ಬಂದರ ನಾಕೆಯು ಅವರೆಗೂ ಜೀರ್ಣವಾಗಿದೆ. ಅದರ ದುರಸ್ತಿಯ ವ್ಯವಸ್ಥೆಯಿಲ್ಲ! ಭಿಕಸ್ಸಾ ನಾಕೆಯು ಅಪಾರತನದಲ್ಲಿ ಕೂಡ್ರಲಿಕ್ಕೆ ಸ್ಥಳವಿಲ್ಲದೆ ನಾಕೆದಾರನು ಒಂದು ಮರದಡಿ ಕೂತು ಕೆಲಸ ಮಾಡಬೇಕಾಗಿದೆ! ಮೀನ ಪೇಟೆಯ ಹತ್ತಿರವಿರುವ ಕಾಲುದಾರಿ ಹಾಳಾಗಿದೆ. ಅದರ ದುರಸ್ತಿಯ ವಿಚಾರವಿಲ್ಲ.

ಸೇಂಟ ಥಾಮಸ್ ಹಾಯಸ್ಕೂಲಿನ ವ್ಯಾಯಾಮ ಶಾಲೆ ಬೀಳಲಿಕ್ಕೆ ತಯಾರಾಗಿದೆ. ಅಲ್ಲಿ ದಿನಾ ನೂರಾರು ಹುಡುಗರು ಆಡುತ್ತಾರೆ. ಅವರು ಹೀಗೆ ಆಡುತ್ತಿರುವಾಗ ಮಾಡು ಕುಸಿದು ಬಿದ್ದರೆ ಅಪಘಾತವಾಗುವ ಭೀತಿಯುಂಟು. ಕೆಲವು ಕಾಲದ ಹಿಂದೆ ಇದೇ ಸ್ಥಳದಲ್ಲಿದ್ದ ಕನ್ನಡ ಶಾಲೆಯು ಕುಸಿದು ಬಿದ್ದು ಒಬ್ಬ ಹುಡುಗನು ಸತ್ತುಹೋಗಿದ್ದನು. ಅದರ ನೆನಪು ಶಾಲಾಧಿಕಾರಿಗಳಿಗೆ ಇಲ್ಲವೇನು?

ಕಡತೋಕಾ ಪೈಕಿ ಹೆಬ್ಬಳೇಕೊಪ್ಪದ ಮಾಚ ಬಿನ್ನ ಗಿಡ್ಡ ಎಂಬಾತನಲ್ಲಿ ೬-೭ ತಿಂಗಳಿಂದ ಒಂದು ಇಬ್ಬಿನ್ನದ, ೩-೪ ಕರು ಹಾಕಿದ, ಕೋಡುಮುಂದಿ ಎಮ್ಮೆಯೊಂದು ಬಂದು ಸೇರಿರುತ್ತದೆಂದೂ, ಕಲ್ಕಾರ ಪೈಕಿ ಹಳೇಮಠದಲ್ಲಿರುವ ಗಣಪತಿ ಸುಬ್ರಾಯ ಹೆಗಡೆ ಎಂಬಾತನಲ್ಲಿ ೪-೫ ತಿಂಗಳಿಂದ ಇಬ್ಬಿನ್ನದ, ಮೇಲೆ ತಿರುವಿದ ನೆಟ್ಟ ಕೋಡುಗಳುಳ್ಳ ಉದ್ದಿಪ್ಪ ಕೊಣೆಯುಳ್ಳ ಒಂದು ಎಮ್ಮೆ ಬಂದು ಸೇರಿದ್ದುಂಟೆಂದೂ ರಾ॥ ಲಕ್ಷ್ಮೀನಾರಾಯಣ ಶಂಭುಭಟ್ಟ ಗುಂಡ್ಲೆ ಇವರು ತಿಳಿಸುತ್ತಾರೆ. ಎಮ್ಮೆ ಕಳಕೊಂಡವರು ಚೌಕಶಿ ಮಾಡಬಹುದು.

ಕರ್ನಾಟಕ ರಾಜೆ —
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಮಳೆ ಬಿದ್ದು ಮಾರ್ಗದಲ್ಲಿ ನೀರು ನಿಂತಾಗ ಇಲ್ಲವೆ ಕೆಸರಾದಾಗ ಕೆಲವು ಮೋಟಾರ ಡ್ರಾಯವ್ಹರರು ಬಾಜೂಕ ಮಾರ್ಗಸ್ಥರ ಮೈಮೇಲೆ ನೀರು-ಕೆಸರು ಹಾರುವಂತೆ ಗಾಡಿ ನಡಿಸುತ್ತಾರೆಂಬ ದೂರು ತಮ್ಮ ಕಡೆಗೆ ಬಂದಿರುತ್ತದೆಂದೂ, ದೂರುಗಾರರು ಹೇಳಿದಂತೆ ಬಾಜೂಕ ನೀರು ಯಾ ಕೆಸರು ಯಾರ ಮೈಮೇಲಾದರೂ ಹಾರಿಸಿದ ಸಂಗತಿಗಳು ತಮ್ಮ ದೃಷ್ಟಿಗೆ ಬಂದರೆ ತಾವು ಆ ಡ್ರಾಯವ್ಹರನ ಮೇಲೆ ಯೋಗ್ಯ ಕಠಿಣ ಕ್ರಮ ನಡಿಸುವೆವೆಂದೂ ಬೆಳಗಾಂವಿಯಲ್ಲಿರುವ ಕರ್ನಾಟಕ ವಿಭಾಗದ ವಾಹನ-ನಿಯಂತ್ರಣಾಧಿಕಾರಿಗಳು ಜಾಹೀರ ಮಾಡಿದ್ದಾರೆ

ಕಕ್ಕೇರಿ, ಹೆಬ್ಬಾನಕೆರೆ, ಉಂಚಗೇರಿ, ಅಂಕಲಿ ಗ್ರಾಮಗಳಿಗೆ ಕಡಕೋಳ ಅಂಚೆ ಕಚೇರಿಯಿಂದ ವಾರದಲ್ಲಿ ೨ ಸಾರೆ ಟಪಾಲ-ಬಟವಡೆಯಾಗುತ್ತಿದೆ. ಅದರ ಬದಲು ೩ ಸಾರೆ ಬಟವಡೆಯಾಗುವಂತೆ ವ್ಯವಸ್ಥೆಯಾಗಬೇಕಾಗಿ ಆ ಸೀಮೆಯವರ ಪ್ರಾರ್ಥನೆಯುಂಟು

ಭಟಕಳ— (ತಾ ೧೮-೭-೪೮) ಸೀಧಾ-ಅಂಗಡಿಗಳಲ್ಲಿ ಈಗ ಮೆಕ್ಕೆ-ಜೋಳದ ಬದಲು ರಾಮುತ್ತಿ(?) ಸಿಗುತ್ತಿದೆ. ಅದರಿಂದೇನು ಮಾಡಬೇಕೆಂದು ಜನಸಾಮಾನ್ಯರಿಗೆ ತಿಳಿಯದು! ಈ ರಾಮುತ್ತಿಯ ಬದಲು ತಮಗೆ ಇತರ ಧಾನ್ಯಗಳನ್ನು ಕೊಡಬೇಕಾಗಿ ಜನರು ಜಿಲ್ಲಾಧಿಕಾರಿಗೆ ಒಂದು ಮನವಿ ಕಳಿಸಿದ್ದಾರೆಂದು ತಿಳಿಯುತ್ತದೆ.

ಮಾವಿನಕಟ್ಟೆ, ಮುಟ್ಟಳ್ಳಿ ಗ್ರಾಮಗಳ ಉಗ್ರಾಣಿಯು ಊರಲ್ಲಿ ಜನರಿಗೆ ಬಹಳ ಪೀಡಿಸುತ್ತಾನೆ. ಎಂದು ಹಲವಾಗಿ ದೂರು ಕೇಳಿ ಬರುತ್ತಿದೆ. ಮೇಲಧಿಕಾರಿಗಳು ಅವನಿಗೆ ತಾಸು ಬುದ್ಧಿ ಕಲಿಸಬೇಕು.

ಶಿರ್ಶಿ— (ತಾ ೨೪-೭-೪೮) ಊಳಿಗಳ ಕಮಾಸರ ಕಮಿಟಿಯ ಕಮ್ಯಾರನು ಸಂಬಳಿಸಿಕೊಟ್ಟ ಕಂಬಳಿ ಮೊದಲಾದವುಗಳನ್ನು ಮಾತ್ರ ಮಾರ್ಕು ಮಾಡುತ್ತಾರೆ ಎಂದು ಮುಖ್ಯವಾಗಿ ಕಳೆದ ವಾರ್ಚ ತಿಂಗಳಲ್ಲಿ "ವೃತ್ತ"ದೊಳಗೆ ಪ್ರಕಟವಾದ ದೂರಿನ ಬಗೆಗೆ ಮೇಲಧಿಕಾರಿಗಳಲ್ಲರು ಇಲ್ಲಿಗೆ ಬಂದಿದ್ದರು. ವ್ಯಾಪಾರಸ್ಥರಿಗೂ ಅವರಿಗೂ ವಿಚಾರವಿನಿಮಯವಾಯಿತು. ಕಂಬಳಿ ಮೊದಲಾದವುಗಳನ್ನು ನೇಕಾರರಿಂದ ಕಮ್ಯಾರನ ಕಡೆಯಿಂದ ಪೂರೈಸಿ ಮಾಡಿಸಿಕೊಳ್ಳಬೇಕಾಗುತ್ತದೆಂದೂ, ಇಲ್ಲಿ ಆ ಕೆಲಸ ಮಾಡುವ ಕಮ್ಯಾರನ್ನಾರೂ ಇಲ್ಲದ್ದರಿಂದ ಕಮಿಟಿಯ ಕಮ್ಯಾರನು ಮನಸ್ಸಿಗೆ ಬಂದ ಕೂಲಿ ಬೇಡುತ್ತಿರುವನೆಂದೂ ಈ ವಿಚಾರವಿನಿಮಯದಲ್ಲಿ ನಿಷ್ಪನ್ನವಾಯಿತು: ಮತ್ತು ಇಲ್ಲಿಯ ಕೆಲವು ಕಮ್ಯಾರರಿಗೆ ದುರುಸ್ತಿಯ ಮಾಹಿತಿಕೊಡಿಸಿ ಅವರ ಹೆಸರು ನೋಂದಿಸಿಕೊಂಡಲ್ಲಿ ಮುಂದೆ ತಕ್ರಾರು ಉಳಿಯಲಿಕ್ಕಿಲ್ಲೆಂದು ನಿರ್ಣಯವಾಯಿತು. ಅದರಂತೆ ಸ್ಥಾನಿಕ ವರ್ತಕರು ಒಟ್ಟುಗೂಡಿ ಇಲ್ಲಿಯ ಕೆಲವು ಕಮ್ಯಾರರಿಗೆ ಕರಬೇಕಾಗಿ ಕಳಿಸಿಕೊಡುವದು ಒಳಿತು.

ಈ ವರೆಗೆ ೬೦ ಇಂಚು ಮಳೆಯಾಗಿದೆ. ಈಗ ಮಾತ್ರ ಮಳೆ ಸುಸು ಕಡಿಮೆಯಾಗಿದೆ.

ಈ ವಾರದಲ್ಲಿ ಚಿಮಣಿ ಎಣ್ಣೆ ಕೊಡಲಾರಂಭಿಸಿದ್ದಾರೆ. ಹಿಂದಿನ ಪ್ರಮಾಣದ ೧/೪ ಪಟ್ಟು ಎಣ್ಣೆ ಕೊಡುತ್ತಾರೆ.

ಕಾರವಾರ— (ತಾ ೨೧-೭-೪೮) ಕಾರವಾರ ತಾಲೂಕಿನ ಶಿರವಾಡ ಗ್ರಾಮದ ದಕ್ಷಿಣಕ್ಕೂ ಪೂರ್ವಕ್ಕೂ ಅಡವಿಯಿದೆ. ಇತ್ತ ಕೆಲವು ಕಾಲದಿಂದ ಈ ಅಡವಿಗಳಲ್ಲಿ ೨-೩ ಹುಲಿ-ಜೋಡಿಗಳು ವಾಸ್ತವ್ಯ ಮಾಡಿಕೊಂಡು ಊರ ದನಗಳ ಸಂಹಾರ ಮಾಡುತ್ತಿವೆ. ಈ ತಿಂಗಳಲ್ಲೇ ೧೪-೧೫ ದನಗಳು ಈ ಹುಲಿಗಳಿಗೆ ಆಹುತಿಯಾಗಿವೆ! ನಿನ್ನೆ ಸಂಜೆಯ ಕಡೆಗೆ ನಿಂಗಾ ಪಾಂಡುರಂಗ ಎಂಬವನ ೩ ಎತ್ತು, ೧ ಆಕಳು ಮತ್ತು ೧ ಆಕಳ-ಕರು ಹೀಗೆ ೫ ದನಗಳನ್ನು ಪೂರ್ವದ ಅಡವಿಯೊಳಗಿನ ಹುಲಿಗಳು ಮುರಿದು ಚೆಲ್ಲಿವೆ! ಅಧಿಕಾರಿಗಳು ಈ ಹುಲಿಗಳ ಬೇಟೆ ಮಾಡಿಸುವ ವ್ಯವಸ್ಥೆ ಬೇಗನೇ ಮಾಡಿ ಗ್ರಾಮದ ಜನರನ್ನು ಕಾಯಬೇಕಾಗಿ ಅರಿಕೆಯುಂಟು.

ಸಿದ್ದಾಪುರ— (ತಾ ೨೪-೭-೪೮) ಕಳೆದ ತಾ ೨೦ ನೇ ಮಂಗಳವಾರ ಸುಮಾರು ಪೇಟಾ ಕಾಂಗ್ರೆಸ ಕಮಿಟಿಯ ಸಭೆಯಾಗಿ ರಾ! ಎ ಜಿ ಬಾಳೆಯವರು ಅಧ್ಯಕ್ಷರಾಗಿಯೂ, ರಾ! ಎ. ಡಿ. ದನಿಾ ಇವರು ಉಪಾಧ್ಯಕ್ಷರಾಗಿಯೂ, ರಾ! ವ್ಹಿ ಟಿ ಪೈ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ. ಕಾರ್ಯಕಾರಿ ಮಂಡಳಕ್ಕೆ ಈ ಅಧಿಕಾರಿಗಳ ಜೊತೆಗೆ ಬೇರೆ ೧೧ ಮಂದಿ ಸದಸ್ಯರು ಚುನಾಯಿಸಲ್ಪಟ್ಟಿದ್ದಾರೆ

ಸುದ್ದಿಗಳ ಸಂಗ್ರಹ.

— ಬರ್ಲಿನದೊಳಗಿನ ದಿಕ್ಕಟ್ಟು ಬಗೆಹರಿಯುವದರ ಬದಲು ಬಿಗಿಯಾಗುತ್ತ ನಡೆದಿದೆ. ಪಾಶ್ಚಿಮಾತ್ಯ ಮಿತ್ರರ ನಿಷೇಧ-ಪತ್ರಗಳಿಗೆ ರಶಿಯರು ಕೊಟ್ಟ ಉತ್ತರದಲ್ಲಿ ಬರ್ಲಿನದ ದಿಗ್ಬಂಧನ ತೆಗೆಯುವ ಆಶ್ವಾಸನೆಯಿಲ್ಲ! ಆದರಿಂದ ಪಾಶ್ಚಿಮಾತ್ಯ ಮಿತ್ರರು ತಮ್ಮ ವಶಕ್ಕಿದ್ದ ಕ್ಷೇತ್ರಕ್ಕೆ ಬೇಕಾದ ಆಹಾರ-ಸಾಮಗ್ರಿ ಮೊದಲಾದ ಅವಶ್ಯಕ ವಸ್ತುಗಳನ್ನು ವಿಮಾನ ಮಾರ್ಗವಾಗಿ ಪೂರೈಸಬೇಕಾಗಿದೆ. ಈ ಬಗ್ಗೆ ಮಿತ್ರರಿಗೆ ಹೇರಳ ವೆಚ್ಚವು ತಗಲುತ್ತಿದೆ. ಮಿತ್ರರ ಕಡೆಗಿರುವ ಎಣ್ಣೆಯ ಸಂಗ್ರಹ ಕಡಿಮೆಯಾಗಬೇಕೆಂದೇ ರಶ್ಯರು ಈ ದಿಗ್ಬಂಧನ ಹಾಕಿದ್ದಾರೆಂದು ಒಂದು ಸುದ್ದಿಯುಂಟು. ವಿಮಾನ-ಹಾದಿಗಳೂ ರಶ್ಯರು ತಡೆ ಹಾಕುವ ಸಂಭವವುಂಟೆಂತೆ! ಮಿತ್ರರ ವಿಮಾನಗಳನ್ನು ಕೆಡವಲಿಕ್ಕೆ ಅವರು ತಮ್ಮ ತೋಪುಗಳನ್ನು ಸಿದ್ಧ ಮಾಡಿಟ್ಟಿದ್ದಾರಂತೆ. ಯೂರೋಪ ಹೊಸ್ತಿಗೆ ಏನಾದೀತೆಂಬ ಚಿಂತೆಯಲ್ಲಿ ಮಿತ್ರರು ಬಂದ ಪ್ರಸಂಗಕ್ಕೆ ಇದಿರಾಗಲು ಬರ್ಲಿನದ ಹೊರ ಪಶ್ಚಿಮ ಜರ್ಮನಿಯಲ್ಲಿ ಬಲ-ಸಂಗ್ರಹ ಮಾಡಲಾರಂಭಿಸಿದ್ದಾರೆ. ಅಮೇರಿಕೆಯು ಮೊನ್ನೆಯೇ ಪಶ್ಚಿಮ ಜರ್ಮನಿಗೆ ೬೦ "ಸುಪರಫೋರ್ಟ್ರೆಸ್" ಎಂಬ ಕ್ರೀಸ್ತ ಕರಗಳ(?) ಯುದ್ಧ-ವಿಮಾನಗಳನ್ನು ಕಳಿಸಿ ಕೊಟ್ಟಿದೆ. ಇವೆಲ್ಲ ತಯಾರಿಯನ್ನೂ, ತೀವ್ರವಾಗುತ್ತ ನಡೆದಿರುವ ಘರ್ಷಣೆಯನ್ನೂ ನೋಡಿದರೆ ತನೇ ಮಹಾಯುದ್ಧ ಅತಿ ಸಮೀಪದ ಬಂದಿರುವಂತೆ ತೋರುತ್ತಿದೆ

— ಮುಂಬಯಿ ಸರಕಾರವು ಈಗಿದ್ದ ಟೆನನ್ಸಿ ಕಾಯಿದೆ ಒಕ್ಕಲಿಗರ ಆನುಕೂಲ್ಯವನ್ನು ಬಹುಗೊಳಿಸಿ, ಅವರ ಸ್ಥಿತಿಯಲ್ಲಿ ಹೊಸ ಕಾನೂನು ರಚಿಸಿಯಾಗಿ, ಅದರ ಮುಸೂದೆಯನ್ನು ಕಳೆದ ವಾರದ ಸರಕಾರ ಗ್ಯಾಝೆಟಿನಲ್ಲಿ ಪ್ರಕಟಿಗೊಳಿಸಿದೆ. ಒಬ್ಬ ಬರುವ ತಿಂಗಳಲ್ಲಿ ಈ ಮುಸೂದೆಯು ಎಸೆಂಬ್ಲಿ-ಕೌನ್ಸಿಲುಗಳ ಮುಂದೆ ಬರುವದು. ಹೊಸ ಮುಸೂದೆಯಲ್ಲಿ ಒಡೆಯ-ಒಕ್ಕಲಿಗರ ಹಕ್ಕು ಬಾಧ್ಯತೆಗಳನ್ನು ಸ್ಪಷ್ಟಪಡಿಸಲಾಗಿದೆ. ಗೇಣಿಯು ಮಾನ ಬೆಳೆಯ ೧/೨ ಯಾ ೧/೩ಕ್ಕಿಂತ ಮಿಕ್ಕಿರಕೂಡದೆಂಬ ನಿರ್ಬಂಧ ಹಾಗೆಯೇ ಇರಲ್ಪಟ್ಟಿದೆ. ತೀರ್ವೆಯ ಪ್ರಮಾಣದ ಮೇಲೆ ಗೇಣಿ ನಿಶ್ಚಯಿಸುವ ಅಧಿಕಾರ ಸರಕಾರಕ್ಕೆ ಕೊಡಲ್ಪಟ್ಟಿದೆ. ಒಕ್ಕಲಿಗರು ಬೆಳಸಬೇಕಾದ ಬೆಳೆಯ ಕನಿಷ್ಠ ಪ್ರಮಾಣ ಸಹ ನಿರ್ಣಯಿಸಲ್ಪಡುವದೆಂದೂ, ಅಷ್ಟು ಬೆಳೆ ಬೆಳೆಸದಿದ್ದ ಒಕ್ಕಲಿಗನು ತನ್ನ ಒಕ್ಕಲತನ ಕಳೆಕೊಳ್ಳುವನೆಂದೂ ಮುಸೂದೆಯಲ್ಲುಂಟು. ಒಕ್ಕಲಿಗನ ಮನೆಯ ಆಸ್ತಿಯನ್ನು ಒಡೆಯನು ಮಾರುವಾದಲ್ಲಿ ಅವನು ಮೊದಲು ಆ ಒಕ್ಕಲಿಗನಿಗೆ ಕೇಳಿ, ಅವನು ಕೊಂಡುಕೊಳ್ಳಲು ನಿರಾಕರಿಸಿದರೆ ಮಾತ್ರ ಬೇರೆಯವರಿಗೆ ಮಾರಬೇಕು, ಯಾವನಿಗೊಬ್ಬ ಒಡೆಯನು ೫೦ ಎಕರೆ ವರೆಗೆ ಭೂಮಿಯನ್ನು ಸ್ವಂತ ಸಾಗುವಳಿಗೆ ಪಡೆಯಬಹುದು. ಸಂರಕ್ಷಿತ ಒಕ್ಕಲಿಗನು ತನ್ನ ಗೇಣಿ ಭೂಮಿಯನ್ನು ಕೊಂಡುಕೊಳ್ಳುವಂತೆ ಏರ್ಪಾಡು ಮಾಡಲಾಗಿದೆ. ಸ್ವಂತ ಸಾಗುವಳಿಗಾಗಿ ಇಲ್ಲವೆ ಬಿನ್-ಶೇತಕಿ ಉಪಯೋಗಕ್ಕೆ ಭೂಮಿಯ ಕಬಜೆ ಪಡೆಯುವ ಅಧಿಕಾರ ಒಡೆಯರಿಗಿದೆ. ಯಾವದೇ ಭೂಮಿ ಸತತ ೩ ವರ್ಷ ಪಡ ಬಿದ್ದರೆ ಅದನ್ನು ಸರಕಾರವು ಸ್ವಾಧೀನಪಡಿಸಿಕೊಳ್ಳಬಹುದು. ಇವೇ ಮೊದಲಾದ ಮುಖ್ಯವಾದ ಅಂಶಗಳು ಹೊಸ ಮಸೂದೆಯಲ್ಲಿವೆ.

— ಮಹಾತ್ಮಾ ಗಾಂಧಿಯವರ ಕೊಲೆಯ ಖಟ್ಲೆಯ ವಿಚಾರ ಇನ್ನೂ ನಡೆದಿದೆ. ಫಿರ್ಯಾದಿ ಪಕ್ಷದ ೧೦೦-೧೫೦ ಸಾಕ್ಷಿಗಳ ವಿಚಾರ ಮುಗಿದಿದೆ. ಮಾಫಿ ಸಾಕ್ಷಿದಾರನಾದ ಬಡಗೆ ಬರೆದ ಜಬಾನಿ ಕಳೆದ ವಾರ ನಡೆಯಿತು. ಅವನ ಮುಮ್ಮ ತಪಾಸಣೆಯೇ ೫ ದಿನ ನಡೆಯಿತು. ನಾಳೆ ಮಂಗಳವಾರದ ವರೆಗೂ ಅವನ ಉಲ್ಟ ತಪಾಸಣೆ ನಡೆಯುವಂತೆ ತೋರುತ್ತಿದೆ. ಈ ಖಟ್ಲೆಯಲ್ಲಿ ಪ್ರತಿದಿನ ಸರಕಾರಕ್ಕೆ (ಮುಮ್ಮ ವಕೀಲರಿಗೆ ರೂ ೧೫೦೦, ಇನ್ನೊಬ್ಬರಿಗೆ ರೂ ೧೦೦೦ ಮತ್ತು ತನೇಯವರಿಗೆ ರೂ ೫೦೦ ಹೀಗೆ ಅಂತು) ರೂ ೩೦೦೦ ವಕೀಲ ಫೀ ಖರ್ಚು ಬರುತ್ತದಂತೆ.

— ಕಾಶ್ಮೀರ ಸಮಿತಿಯು ದಿಲ್ಲಿಯಲ್ಲಿ ತನ್ನ ಕೆಲಸವನ್ನಾರಂಭಿಸಿದೆ. ಪಾಕಿಸ್ತಾನದ ಮುಖ್ಯಸ್ಥರ ಪುರಾವೆಯನ್ನು ಹಿಂದುಸ್ಥಾನ ಸರಕಾರವು ಅವರಿಗೆ ತೋರಿಸಲಾರಂಭಿಸಿದೆ.

— ಹೈದರಾಬಾದ ಪ್ರಕರಣ ಮೆತ್ತಗಾಗುವದರ ಬದಲು ಬಿರುಸಾಗುತ್ತ ನಡೆದಿದೆ. ಹೈದರಾಬಾದಕ್ಕೆ ಹಿಂದಿ ಸರಕಾರವು ಹಾಕಿದ ದಿಗ್ಬಂಧನದ ವಿರುದ್ಧ ಸಂಯುಕ್ತ ರಾಷ್ಟ್ರ ಸಂಘದ ಕಡೆ ದೂರು ಒಯ್ಯುವ ಯೋಜನೆಯೊಂದು ನಡೆದಿದೆಯೆಂದೂ, ಸಂಘಕ್ಕೆ ಸಾದರಗೊಳಿಸಬೇಕಾದ ಅರ್ಜಿಯನ್ನು ವಿಲಾಯತಿಯಲ್ಲಿ ಸರ್ ವಾಲ್ಟರ ಮೊಂಕ್ಟನ್ನರು ತಯಾರಿಸುತ್ತಿದ್ದಾರೆಂದೂ, ರಾಷ್ಟ್ರ ಸಂಘದ ಭದ್ರತಾ ಮಂಡಳದ ಸದಸ್ಯರನ್ನು ನಿಜಾಮರ ಪಕ್ಷಕ್ಕೆ ಅನುಕೂಲ ಮಾಡಿಕೊಳ್ಳುವ ಅಂತರಂಗ ಪ್ರಯತ್ನಗಳು ನಡೆದಿವೆಯೆಂದೂ ಲಂಡನದಿಂದ ಸುದ್ದಿಗಳು ಬರುತ್ತವೆ. ಇತ್ತ ರಝಾಕಾರರ ರಾಕ್ಷಸೀಕೃತ್ಯಗಳು ದಿನೇ ದಿನೇ ಹೆಚ್ಚುತ್ತ ನಡೆದಿವೆ! ಆದರೂ ತಮ್ಮ ಪಕ್ಷ ನಿಷ್ಪಾಪವಿದ್ದುದೆಂದೂ ದೇವರಲ್ಲಿ ತಮ್ಮ ವಿಶ್ವಾಸವುಂಟೆಂದೂ ನಿಜಾಮರ ಮುಮ್ಮ ಮಂತ್ರಿ ಮಿರ ಲಾಯಕ ಅಲ್ಲಿಯವರು ಬೋಧಿಸುತ್ತಾರೆ!! ರಕ್ತ-ಪ್ರಹಾರದ ವಿನಹ ನಿಜಾಮರು ಮಣಿಯುವಂತಿಲ್ಲೆಂದು ಕಾಂಗ್ರೆಸ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ಹೇಳುತ್ತಾರೆ. ನಿಜಾಮರು ಶಾಲ ಮಹಿಮೆಯನ್ನು ತಿಳಿಕೊಂಡು ತಮ್ಮ ಸಂಸ್ಥಾನವನ್ನು, ಇಷ್ಟರ ಸರಸ್ವಾನಿ(?) ಕರಂತೆ, ಹಿಂದುಸ್ಥಾನದಲ್ಲಿ ವಿಲೀನಗೊಳಿಸಲಿಕ್ಕಿದ್ದು ವಿಮ ಸಾಧು ಮಾರ್ಗವೆಂದು (ಅಮೇರಿಕೆಯ) ನ್ಯೂಯಾರ್ಕದೊಳಗಿನ "ಹೆರೊಲ್ಡ-ಟ್ರಾಯಬ್ಯೂನ" ಎಂಬ ನಾಮಾಂಕಿತ ಪತ್ರಿಕೆಯು ನಿಜಾಮರಿಗೆ ಸಲಹೆ ಕೊಟ್ಟಿದೆ.

— ಮಹಾತ್ಮಾ ಗಾಂಧಿಯವರ ಜನನಭೂಮಿಯ ಸ್ಥಳದಲ್ಲಿ ಒಂದು ಉಪವನವನ್ನು ಕಟ್ಟಿಸುವ ವಿಚಾರ ನಡೆದಿದೆ. ಉಪವನದ ಮಧ್ಯಭಾಗದಲ್ಲಿ ಒಂದು ಸ್ತಂಭವನ್ನು ಕಟ್ಟಿಸಿ ಅದರ ಮೇಲೆ ಮಹಾತ್ಮರ ವಿಗ್ರಹವನ್ನಿಡತಕ್ಕದೆಂದೂ ಸಂಕಲ್ಪವಾಗಿದೆ.

— ಹಿಂದುಸ್ಥಾನದೊಳಗೆ ಸುಮಾರು ೪೦೦ ಜವಳೀ ಗಿರಣಿಗಳುಂಟು ಅವು ಆನಿಸಮ ಟೆಲ್ಲನ್ನು ಒಪ್ಪಿಸಿಕೊಂಡವೆಂದು ಹಿಂದುಸ್ಥಾನ ಸರಕಾರಕ್ಕೆ ಗ್ರಹಿಕೆಯಾಗಿ, ಅವುಗಳ ಮೇಲೆ ಕರಿಗೆ ಹೇರುವ ಸಂಕಲ್ಪವಾಗಿರುವಾಗಿ ಅಷ್ಟು ದಾಬಾದ(?) ದೊಳಗೆ ಸುದ್ದಿಯುಂಟು. ವಸ್ತ್ರದ ಮೇಲೆ ನಿಯಂತ್ರಣ ಹೇರಬೇಕೆಂದು ಸರಕಾರದ ಸಂಕಲ್ಪವಿತ್ತು. ಆದರೆ ಈ ಕುರಿತು ಭಿನ್ನಾಭಿಪ್ರಾಯವಾದ್ದರಿಂದ ಆ ವಿಚಾರ ಬಿದ್ದಾಗಿದೆ

— ನಿಜಾಮ ಸರಕಾರದಲ್ಲಿ ವ್ಯಾಪಾರ ಇಲಾಖೆಯ ಮಂತ್ರಿಗಳಾದ ಶ್ರೀ ಜೋಶಿಯವರು ರಾಜೀನಾಮೆ ಕೊಟ್ಟಿರುತ್ತಾರೆ. ನಿಜಾಮ ರಾಜ್ಯದಲ್ಲಿ ನಡೆಯುವ ಅತ್ಯಾಚಾರಗಳನ್ನು ಜೋಶಿಯವರು ತಮ್ಮ ಸಂಚಾರದಲ್ಲಿ ಕೇಳಿಕೊಂಡಿದ್ದರು.

— ಸರದಾರ ವಲ್ಲಭಭಾಯಿ ಪಟೇಲರಿಗೆ ವಿಶ್ರಾಂತಿ ಕೊಡುವ ದೆಸೆಯಿಂದ ಅವರ ಆಡಳಿತೆಯಲ್ಲಿದ್ದ ಗೃಹಖಾತೆಯನ್ನು ಶ್ರೀ ಆಯ್ಯಂಗಾರ(?) ಮುನಶಿಯವರಿಗೂ ಆಕಾಶವಾಣಿ ಖಾತೆಯನ್ನು ಮುಂಬಯಿಯ ಶ್ರೀ ಎಸ್. ಕೆ. ಪಾಟೀಲರವರಿಗೂ ವಹಿಸುವ ಸಂಭವವಿರುವದಾಗಿ ಮುಂಬಯಿಯೊಳಗೆ ವಾರ್ತೆಯುಂಟು

ಜಾಹೀರ ನೋಟೀಸು.

ಮೆಸ್ಸರ್ಸ ಗಣಪತಿ ನಾರಾಯಣ ಭಟ್ಟ ಆಕದಾಸ ಮತ್ತು ಕಂಪನಿ, ದಲಾಲರು ಮತ್ತು ವ್ಯಾಪಾರಿಗಳು, ಶಿರ್ಸಿ, ಜಿ ಉತ್ತರ ಕಾನಡಾ, ಈ ಪೇಢಿಯ ಯಾವತ್ತೂ ಭಾಗೀದಾರರು, ಮೆನೇಜಿಂಗ ಪಾರ್ಟನರ ವಿಷ್ಣು ಅಪ್ಪಯ್ಯಾ ಹೆಗಡೆ ಕಡತೋಕಾ ಮತ್ತು ಈ ಕಂಪನಿಗೆ ಸಂಬಂಧಿಸಿದವರು ಈ ಯಾವತ್ತೂ ಜನರಿಗೆ ಈ ನೋಟೀಸಿನ ಮೂಲಕ ಜಾಹೀರಪಡಿಸುವದೇನಂದರೆ —

ಮೇಲೆ ಕಾಣಿಸಿದ ಕಂಪನಿಯು ತಮಿಯಿಂದ ಶಿರ್ಸಿ ಅರ್ಬನ್ ಕೋ-ಓಪರೇಟಿವ್ಹ ಕ್ರೆಡಿಟ್ ಬ್ಯಾಂಕ ಲಿಮಿಟೆಡ್, ಶಿರ್ಸಿ, ಇದರಲ್ಲಿ ನಡಿಸಿದ ವ್ಯವಹಾರದ ಬಾಬತು ಈ ಕೆಳಗೆ ಕಾಣಿಸಿದಂತೆ ರಕಮುಗಳು ಬಾಕಿಯಲ್ಲಿ ಇರುತ್ತಿದ್ದು, ಸದರಿ ರಕಮುಗಳು ಆಪಸಾತಿನಲ್ಲಿ ಈ ವರೆಗೆ ವಸೂಲ ಬಾರದ್ದರಿಂದ ಈ ಜಾಹೀರ ನೋಟೀಸು ಕೊಟ್ಟದೆ

(೧) ತಾ ೩–೨–೧೯೪೮ಕ್ಕೆ ಕೇತಕಿ ಮುಹಸೂಲುಗಳ ತಾರಣದ ಮೇಲೆ ಪಡೆದ ಗುದಾಮು ಸಾಲ ರೂ ೯೦೦೦ ಮತ್ತು ಸದರಿ ರಕಮಿನ ಮೇಲೆ ಸದರ ತಾರೀಖಿನಿಂದ ದರ ಸಾಲ ದರ ಶೇಕಡಾ ೬ ರಂತೆ ಆಗುವ ಬಡ್ಡಿ,

(೨) ಸದರಿ ಬ್ಯಾಂಕಿನಿಂದ ವಟಾಯಿಸಿದ(discounted) ೬ ದರ್ಶನಿ ಹುಂಡಿಗಳ ಬಾಬತು ಅಂಕು ರೂ ೮೫೦೦/– ಮತ್ತು ಸದರಿ ರಕಮಿನ ಮೇಲೆ ಆಯಾಯ ಹುಂಡಿಗಳನ್ನು ವಟಾಯಿಸಿದ ದಿನದಿಂದ ಶೇಕಡಾ ೯ರಂತೆ ಆಗುವ ಬಡ್ಡಿ ಮತ್ತು ಖರ್ಚು

ಮೇಲೆ ಕಾಣಿಸಿದ ರಕಮುಗಳು ಈ ನೋಟೀಸಿನ ತಾರೀಖಿನಿಂದ ೪೮ ತಾಸುಗಳಲ್ಲಿ, ಅಂದರೆ ತಾ ೨೮—೭—೧೯೪೮ರೊಳಗಾಗಿ ಸದರಿ ಬ್ಯಾಂಕಿನ ಕಚೇರಿಯಲ್ಲಿ ಭರಣಾ ಮಾಡಿ ಪಾವತಿ ಪಡೆಯತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಬ್ಯಾಂಕಿಗೆ ಒತ್ತೆ ಮಾಡಿ ತಾಬಾ ಕೊಟ್ಟಂಥ ಮುಹಸೂಲುಗಳನ್ನು ಜಾಹೀರ ರೀತ್ಯಾ ಸದರಿ ಕಂಪನಿಯ ಖರ್ಚಿನಿಂದಲೇ ವಿಕ್ರಯಿಸಿ ಬಂದ ರಕಮು ಮೇಲೆ ಕಾಣಿಸಿದ ಸಾಲಗಳ ಬಾಕಿಗೆ ಮುಜರಾ ಮಾಡುವದಲ್ಲದೆ ಇನ್ನೂ ಬಾಕಿ ಉಳಿಯಬಹುದಾದ ರಕಮಿನ ಬಗ್ಗೆ ಯೋಗ್ಯ ಕಂಡ ಕ್ರಮ ನಡಿಸಲಾಗುವದು

ಸದರಿ ಕಂಪನಿಯ ಬಗ್ಗೆ ಮೇಲೆ ಕಾಣಿಸಿದ ವ್ಯವಹಾರಗಳನ್ನು ಮಾಡಿದ ಮೆನೇಜಿಂಗ ಪಾರ್ಟನರ ವಿಷ್ಣು ಅಪ್ಪಯ್ಯಾ ಹೆಗಡೆ, ಕಡತೋಕಾ ಇವರ ಠಾವ-ಠಿಕಾಣೆಗಳನ್ನು ಚೌಕಶಿ ಮಾಡಲಾಗಿ ಅವು ತಿಳಿದು ಬಾರದ್ದರಿಂದ ಈ ಜಾಹೀರ ನೋಟೀಸು ಕೊಡುವ ಅಗತ್ಯ ಬಿತ್ತು ತಿಳಿಯುವದು.

ಶಿರ್ಸಿ,
ತಾ. ೨೬–೭–೪೮

V. V. MANJREKAR,
Manager,
The Sirsi Urban Coop
Credit Bank, Ltd.,

ಜಾಹೀರ ನೋಟೀಸು.

ಕುಮಟಾ ತಾಲೂಕ ಹಂದಿಗೋಣ ಗ್ರಾಮದಲ್ಲಿರುವ ಸೀತಾರಾಮ ಪರಮೇಶ್ವರ ಭಾಗ್ವತ ಇವನು ತಿಳಿಸುವದೇನಂದರೆ – ನಾವು ಅಣ್ಣ-ತಮ್ಮಂದಿರು ಒಟ್ಟು ಏಳು ಮಂದಿ ಇದ್ದು ನಮ್ಮೆಲ್ಲರಲ್ಲಿ ಹಿರಿಯವನಾದ ರಾಮಚಂದ್ರ ಪರಮೇಶ್ವರ ಭಾಗ್ವತ ಇವನು, ನಮಗೆ ಯಾವ ತರದ ಸಾಲ ಮಾಡುವ ಪ್ರಸಂಗ ಇಲ್ಲದಿದ್ದರೂ, ಕೆಲವು ದುರಾಭಿಮಾನಿಗಳಿಂದ ಪ್ರೇರಿತರಾಗಿ ದುರ್ವ್ಯಸನಗಳಿಗೆ ತುತ್ತಾಗಿದ್ದು ನಮ್ಮ ಅನುಮತಿ ಇಲ್ಲದೆ ಸಾಲಕ್ಕೆ ಕೈಹೊಡೆದಿದ್ದಾರೆ ಕಾರಣ ಇವರಿಂದ ಆಗುವ ಈ ಸಾಲಕ್ಕೆ ನಾವು ಮತ್ತು ನಮ್ಮ ಬಿರಾಜರ ಆಸ್ತಿಯು ಹೊಣೆಯಾಗಲಾರದು ಇವರು ನಮಗೆ ದಗೆಪಡಿಸುವ ವಿಚಾರದಲ್ಲಿ ಇರುತ್ತಾರೆ ಯಾರಾದರೂ ಇವರಿಗೆ ಸಾಲ ಕೊಟ್ಟಲ್ಲಿ ಅವಕ್ಕೆ ನಾವು ಯಾರೂ ಜವಾಬ್ದಾರರಲ್ಲ ತಿಳಿದಿರಲಿ, ತಾ ೨೧—೭—೪೮

ಸೀತಾರಾಮ ಪರಮೇಶ್ವರ ಭಾಗ್ವತ,
ಹಂದಿಗೋಣ

ಭಟಕಳ ಪೇಠೆಯ ಹಿಂಗಾರಿ ಭತ್ತದ ಬೆಳೆಯ ಮತ್ತು ಕಬ್ಬಿನ ಬೆಳೆಯ ಪ್ರಕಟನೆ.

೧೯೪೭—೪೮ನೇ ಸಾಲಿನದು.

ನಂ ೪೫೨ / ಟಿನನ್ಸಿ — ೧೯೪೭ನೇ ಸಾಲಿನ ಮುಂಬಯಿಯ ಒಕ್ಕಲತನದ ಕಾನೂನಿನ ನಿಯಮಾವಳಿಯ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಪಯೋಗಿಸಿ, ಕಾನಡಾ ಜಿಲ್ಲೆಯ ಭಟಕಳ ಪೇಠೆಯ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ನೆಯ ಸ್ತಂಭದಲ್ಲಿ ಕಾಣಿಸಿರುವ ಸ್ಥಾನಿಕ ಕ್ಷೇತ್ರಗಳೊಳಗಿನ ನೀರಾವರಿಯಿಲ್ಲದ ತರಿ ಭೂಮಿಗಳಲ್ಲಿ ೧೯೪೭-೪೮ನೇ ಸಾಲಿನಲ್ಲಿ ೨ನೆಯ ಸ್ತಂಭದಲ್ಲಿ ತೋರಿಸಿದಷ್ಟು ಪ್ರತಿ ಎಕರೆಗೆ ಸರಾಸರಿ ಹಿಂಗಾರಿ ಭತ್ತದ ಬೆಳೆ ಬಂದಿರುತ್ತದೆಂತಲೂ ಮತ್ತು ೩ನೆಯ ಸ್ತಂಭದಲ್ಲಿ ತೋರಿಸಿದಷ್ಟು ಪ್ರತಿ ಗುಂಟೆಗೆ ಸರಾಸರಿ ಬೆಲ್ಲದ ಉತ್ಪನ್ನ ಬಂದಿರುತ್ತದೆಂತಲೂ ಈ ಮೂಲಕ ಪ್ರಕಟಿಸುತ್ತಾರೆ

ಪರಿಶಿಷ್ಟ.

ಅನುಕ್ರಮಾಂಕ ಮತ್ತು ಸ್ಥಾನಿಕ ಕ್ಷೇತ್ರ (೧)	ಪ್ರತಿ ಎಕರೆಗೆ ಸರಾಸರಿ ಹಿಂಗಾರಿ ಭತ್ತದ ಬೆಳೆ (೨)	ಪ್ರತಿ ಗುಂಟೆಗೆ ಸರಾಸರಿ ಬೆಲ್ಲದ ಉತ್ಪನ್ನ (೩)
೧ ಸರ್ವೇ ಗ್ರೂಪ I —೨೭ ಗ್ರಾಮಗಳು ೧ ಬಸ್ತಿಗಳಮಕ್ಕಿ, ೨ ಬೇಹಳ್ಳಿ, ೩ ಬೆಳ್ನಿ, ೪ ಬೆಂಗ್ರೆ, ೫ ಬ್ಗಾಫಳ, ೬ ಹಡೀನ ೭ ಹೆಬಳೆ ೮ ಜಾಲಿ, ೯ ಜ್ವಾಕಿಣ, ೧೦ ಕಾಶಕಲ್, ೧೧ ಮಾವಳ್ಳಿ, ೧೨ ಮಾವಿನಕುರ್ವೆ, ೧೩ ಮೂಡಭಟಕಳ, ೧೪ ಮುಂಡಳ್ಳಿ, ೧೫ ಮುರ್ಡೇಶ್ವರ, ೧೬ ಪುರವರ್ಗ, ೧೭ ಶಿರಾಲಿ, ೧೮ ಸೂಸಗಡಿ, ೧೯ ತಗರಗೋಡ, ೨೦ ತಲಗೋಡ, ೨೧ ಬೈಲೂರ, ೨೨ ಬೆಳಕೆ, ೨೩ ಬೇಲಿಂಡ, ೨೪ ಹಡೀಲ, ೨೫ ಹಲಿನ, ೨೬ ವೆಂಕಟಾಪುರ, ೨೭ ಯಲವಡಿ ಕವೂರ,	ಬಂಗಾಲಿ ಮಣ ೭½	ಕ್ವಾರ್ಟರ ರತ್ತಲಗಳು ೩ ೨೧ (ಮುದ್ದೆ ಬೆಲ್ಲ)
೨ ಸರ್ವೇ ಗ್ರೂಪ III — ೩ ಗ್ರಾಮಗಳು ೧ ಗೋಳಿಬೀಳೂರ, ೨ ಗೊರಟೆ, ೩ ಹೇರೂರ,	೫	೨ ೧೪ (ಮುದ್ದೆ ಬೆಲ್ಲ)
೩ ಸರ್ವೇ ಗ್ರೂಪ IV ೧೦ ಗ್ರಾಮಗಳು ೧ ಬೇಣಂದೂರ, ೨ ಬೇಲೆ, ೩ ಬೇಲೂರಮನೆ, ೪ ಹಡೀಲ್ರ, ೫ ಶಿರ್ಸಿ, ೬ ಕೊಣಾರ, ೭ ಕೊಪ್ಪ, ೮ ಕೋಟಿಖಂಡ, ೯ ಕುಂಟವಣಿ, ೧೦ ಮಾರುಕೇರಿ	೧೪	೨ ೭ (ಮುದ್ದೆ ಬೆಲ್ಲ)
೪ ಸರ್ವೇ ಗ್ರೂಪ V.— ೧೬ ಗ್ರಾಮಗಳು ೧ ಅಂಕರವಳ್ಳಿ, ೨ ಅರವತ್ತಿ, ೩ ಬಸ್ತಿಗಳಮಕ್ಕಿ, ೪ ಹಾಡವಳಿ, ೫ ಹಲ್ಲಾರಿ, ೬ ಹಲ್ಯಾಣಿ, ೭ ಹೆಜ್ಜಲ, ೮ ಹುಡೀಲ, ೯ ಕಂಗುಂಡಿ, ೧೦ ಕೆಕ್ಕೋಡ, ೧೧ ಕೆರಿಹಿತ್ತಲ, ೧೨ ಮಾಶಾರಿ, ೧೩ ಮುಗಳಿ, ೧೪ ಮೂಡಕೋಡಿ, ೧೫ ನೂಜ, ೧೬ ಓಣಿಬಾಗಿಲ	೧೦	೩ ೭ (ನೀರು ಬೆಲ್ಲ)
೫ ಸರ್ವೇ ಗ್ರೂಪ VI ೭ ಗ್ರಾಮಗಳು ೧ ಅಗಾ, ೨ ಬಡಾಬಾಗ, ೩ ದೇವಸ್ಥಾನಮಕ್ಕಿ, ೪ ಹಸರವಳ್ಳಿ, ೫ ಹೆಂಜಲಿ, ೬ ಕುಳನಾಡಿ, ೭ ಸಾರಂದೂರ,	೯	೨ ೨೧ (ನೀರು ಬೆಲ್ಲ)

ಭಟಕಳ,
ತಾ ೧೮–೭–೪೮

D. B. HOSANGADI,
ಮಾಮಲೇದಾರ, ಭಟಕಳ

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೨೯ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸು:—

Post Box No. 10,
UDIPI, S. Kanara.

ನಾಡವರ ಸಂಘ.

ಮೇಲ್ಕಾಣಿಸಿದ ಸಂಘದಿಂದ ಉಚ್ಚ, ಮಾಧ್ಯಮಿಕ ಹಾಗೂ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ನಾಡವರ ಜಾತಿಯ ವಿದ್ಯಾರ್ಥಿಗಳಿಗೆ ಸಹಾಯ-ಧನ ಕೊಡುವದಕ್ಕಾಗಿ ರೂ ೧೫೦ ತೆಗೆದಿಟ್ಟದ್ದುಂಟು ಸಹಾಯ ಬೇಕಾದವರು ತಾ ೩೧-೮-೧೯೪೮ರೊಳಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ತಲ್ಪುವಂತೆ ಅರ್ಜಿ ಕಳಿಸಬೇಕು.

ಆರ್. ಬಿ. ನಾಯ್ಕ, ವಕೀಲ, ಕುಮಟಾ

ಕೆನರಾ ಕೊಲೇಜ ನಿಧಿ.

ಮೇಲಿನ ನಿಧಿಗೆ ಕಳೆದ ತಿಂಗಳಲ್ಲಿ ಈ ಕೆಳಗಿನಂತೆ ಹಂತಗಳು ವಸೂಲ ಬಂದಿವೆಯೆಂದು ನಿಧಿಯ ಕಾರ್ಯಕರ್ತರು ತಿಳಿಸುತ್ತಾರೆ —

ಕುಮಟಾ ಅರ್ಬನ್ ಸಹಕಾರಿ ಬೇಂಕ್	ರೂ	೨೦೦೦
ಡಾ॥ ಸಾಂತಪ್ಪಾ ಲಕ್ಷ್ಮಣ ಪೈ, ಮಂಗಳೂರ	ರೂ	೧೦೦೧
„ ದಾವೂ ಹಾಜಿ ಇಬ್ರಾಹಿಮ ಪಟೇಲ	„	೫೦೦
„ ಬಾದರಮಿಂ ಉಮರಮಿಂನ ಗೋವಾ	„	೪೦೦
„ ವಿ ಆರ್ ಕಾಮತ, ವಕೀಲ, ಹೊನ್ನಾವರ	„	೩೦೧
„ ಆರ್ ಎಸ್ ಕಾಮತ, ವಕೀಲ, ಹೊನ್ನಾವರ		೩೦೧
„ ಕೇಶವ ಅನಂತ ಕೋಡಕಣಿ, ದಾಂಡೇಲಿ		೩೦೧
„ ಡಾ॥ ವಿ ಕೇ ದ ಬಳಕೂರ, ಹೊನ್ನಾವರ		೨೦೦
„ ರಾ॥ ಚಿದಂಬರ್ ತೇಜಗಿರಿ ಪೈ,	„	೩೦೦
„ ರಾಮಚಂದ್ರ ಶಾನಭಾಗ ಕರ್ಕಿ,	„	೨೫೦
„ ವಿ ಟಿ ನಾವೇಲ್ಕರ, ದಾಂಡೇಲಿ	„	೨೫೦
„ ಗೋಪಾಲ ಭಟ್ಟ ಕಡೆಮನೆ, ಕಡತೋಕಾ		೨೦೦
ಶ್ರೀ ಜಿ. ಜಿ. ಭಟ್ಟ, ಬೈಲಹೊಂಗಲ		೧೫೦
ರಾ॥ ಆಲ್ಫ್ರೆಡ ಫರ್ನಾಂಡೀಸ, ಕುಮಟಾ		೧೦೧
„ ನಾರಾಯಣ ವಿ ಭಟ್ಟ ನವಿಲಗೋಣ		೧೦೧
„ ಅಬದುಲ ಸಕೂರ ಕಾಯುಲ, ಮಂಗಳೂರ		೧೦೧
„ ನರಸಿಂಹ ಪದ್ಮನಾಭ ಭಟ್ಟ, ಹಳದೀಪುರ	„	೧೦೧
„ ಲಕ್ಷ್ಮೀನಾರಾಯಣ ರಾಮಕೃಷ್ಣ ಭಟ್ಟ ಕೋಣ್ಣಣ		೧೦೧
„ ಗೋವಿಂದ ವಿಷ್ಣು ಭಟ್ಟ ಭಡ್ತಿ, ಕಡತೋಕಾ	„	೧೦೧
„ ದತ್ತಾತ್ರಯ ಜಿ ಪ್ರಭು ಬಲ್ಲಾಳ, ಕುಮಟಾ	„	೧೦೧
„ ಪಿ ಎಸ್ ಮಂಕೀಕರ, ಪುಣೆ		೧೦೧
„ ದಾಮೋದರ ವ್ಹಿ ಚಿಕ್ಕಾಲ, ವಕೀಲ, ಧಾರವಾಡ	„	೧೦೧
„ ಎಸ್ ಕೇ ಪಂಡೀಕರ,	„	೧೦೧
„ ಮಲ್ಕ ಸೋಪ ವರ್ಕ್ಸ, ಮಂಗಳೂರ	„	೧೦೧
„ ಜಿ ಪಿ ಮುಡೇಶ್ವರ, ವಕೀಲ, ಮುಂಬಯಿ.	„	೧೦೧
„ ಗೋವಿಂದ ವೆಂಕಪ್ಪ ಪೈ, ಕುಮಟಾ	„	೧೦೦
ರಾ॥ ವ್ಹಿ. ವ್ಹಿ ಪಾಗಳೇ, ಕಾರವಾರ	„	೧೦೦
ಶ್ರೀಮತಿ ಪಾರ್ವತಿ ಬಿ ನಾಡಕರ್ಣಿ, ಧಾರವಾಡ	„	೧೦೦
ರಾ॥ ಮತ್ತು ಸೌ॥ ಕೇ ವಿಶ್ವನಾಥ ಕಾಮತ ಮಂಗಳೂರ	„	೧೦೦

ಚಿಲ್ಲರೆ ಕೂಡಿದ್ದು ರೂ ೧೪೭೧-೨-೪

ಒಂದು ರೂ ೯೨೮೭-೨-೪

ತಾ. ೨೯-೩-೪೮ರ "ವೃತ್ತ"ದಲ್ಲಿ

ಒಪ್ಪಿದ್ದು ರೂ ೧೨೫೬೭-೬-೪

ಅಂತು ಜಾಮುಲಾ ರೂ ೧೩೪೯೬೬-೭-೮

(ಮುಂಬಯಿ ಸಮಿತಿಯವರು ಕೂಡಿಸಿದ ರೂ ೧೫೦೦೦ ಪ್ರತ್ಯೇಕವಿದೆ)

ಜಾಹೀರ ವಿನಂತಿ.

ಶ್ರೀ ಮಾರಿಕಾಂಬಾ ದೇವಸ್ಥಾನದ ಮೊಕ್ತೇಸರರು ಶ್ರೀ ದೇವಿಯ ಹಣ ದುರುಪಯೋಗಪಡಿಸಿದ ಬಗ್ಗೆ ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ನಡಿಸಿದ ದಾವೆ ಸದ್ಯದಲ್ಲಿಯೇ ಪುನಃ ವಿಚಾರ ಆಗುವದಿದೆ ಸದರಿ ದಾವೆಯ ಖರ್ಚಿಗೆ ಹಣದ ಅಗತ್ಯವಿರುವದರಿಂದ ಯಾವತ್ತೂ ಭಕ್ತಜನರು ಮುಕ್ತಹಸ್ತದಿಂದ ಸಹಾಯ ನೀಡಬೇಕು, ಹಣ ಕೊಟ್ಟವರು ಲೇಖೀ ಪಾವತಿ ಪಡಕೊಳ್ಳಬೇಕು ಪರಸ್ಥಳದವರು ಕೆಳಗಿನ ಪತ್ತೆಗೆ ಮನಿ ಆರ್ಡರ ಮೂಲಕ ಧನಸಹಾಯ ಕಳಿಸಬೇಕು. ಶಿರಸಿ, ತಾ. ೧೯—೭—೪೮

ತೋಕದಾರ ಕೃಷ್ಣರಾವ ಮರಾಠೇ.

ಜಿಲ್ಲಾ ಸಮಾಚಾರ.

ಹಳಿಯಾಳ— (ತಾ ೨೯-೬-೪೮) ಸಾಂಬ್ರಾಣಿ ಸೀಮೆಯ ರೇಂಜರ್ ರಾ॥ ಪಡೆಮಿತ ಇವರ ವಿರುದ್ಧ ವಂಚನೆಯ ಆರೋಪಗಳು ಹೊರಿಸಲ್ಪಟ್ಟಿದ್ದು, ಆ ಆರೋಪಗಳ ಚೌಕಶಿಯನ್ನು ಸಬ್-ಡಿ ಎಫ್. ಓ ರಾ॥ ಕುಲಕರ್ಣಿಯವರು ನಡಿಸಿದ್ದಾರೆ ಪಡೆಮಿತರ ವಿರುದ್ಧ ವಂಚನೆಯ ಆರೋಪ ಹೊರಿಸಿದವರು ಬೇರೆ ಯಾರೂ ಅಲ್ಲ, ಜಂಗಲ ಇಲಾಖೆಯ ಓವರ್ ನೌಕರರೇ ಇರುತ್ತಾರೆ (೧) ಓವರ್ ಕಂಟ್ರಾಕ್ಟರನ ಕಡೆಯಿಂದ ಸಾಗವಾನಿ ಎಳೆಗಳು ಬೆಳೆಯುವ (pole area) ಕ್ಷೇತ್ರದೊಳಗೆ ಸಂಗ್ರಹಿಸಿದ ಬೀಜಗಳು ಪಟ್ಟದಿ (High Forest)ಯೊಳಗೆ ಸಂಗ್ರಹಿಸಿದವಿ ರುತ್ತವೆಂದು ಸದರಿ ರೇಂಜರರು ಪ್ರಶಸ್ತಿಪತ್ರ ಕೊಟ್ಟು ಸರಕಾರಕ್ಕೆ ಮೋಸಗೊಳಿಸುವರೆಂದೂ, (೨) ಗುತ್ತಿಗೆಯ ಕಂಟ್ರಾಟಿನ ಮೇಲೆ ಈ ರೇಂಜರರು ಸಸಿಗಳನ್ನು (ನರ್ಸರಿ) ತಯಾರಿಸಿಕೊಂಡಿರುತ್ತಿದ್ದಾಗ್ಯೂ, ತಾವು ಕೂಲಿಗಳನ್ನು ಹಾಕಿ ಅವನ್ನು ತಯಾರಿಸಿರುತ್ತೇವೆಂದು ಹೇಳಿ, ಈ ಬಗ್ಗೆ ಸುಳ್ಳು ಕೂಲಿ ಕೆಲಸದ ಪಟ್ಟಿ (ಮಸ್ಟರ-ರೋಲ) ಇಟ್ಟಿರುತ್ತಾರೆಂದೂ ದೂರುಗಾರ ನೌಕರನ ಆರೋಪಗಳಿವೆ. ಈ ಆರೋಪಗಳ ಚೌಕಶಿಯನ್ನು ಪ್ರಾರಂಭಿಸುವ ಮೊದಲು ಆರೋಪಿ ರೇಂಜರರನ್ನು ಬೇರೊಂದು ಭಾಗಕ್ಕೆ ವರ್ಗ ಮಾಡಬೇಕಾಗಿತ್ತು. ಚೌಕಶಿಯಾಗಕ್ಕೆ ಸ್ಥಳದಲ್ಲೇ ಅವರನ್ನು ಅಧಿಕಾರಸ್ಥರನ್ನಾಗಿಟ್ಟರೆ ಆಧಿಕಾರದ ಬಲದಿಂದ ಮತ್ತು ಪ್ರಭಾವದಿಂದ ಅವರು ಸಾಕ್ಷಿಗಳನ್ನು ತಿರುಗಿಸಬಹುದು ಇಲ್ಲವೆ ಸುಳ್ಳು ಪುರಾವೆಗಳನ್ನು ತಯಾರಿಸಬಹುದು ಎಂಬುದರ ಅರಿವು ಮೇಲಧಿಕಾರಿಗಳಿಗೆ ಇಲ್ಲದಿದ್ದುದು ಸೋಜಿಗ! ಯಾಕಂದರೆ ರಾ॥ ಪಡೆಮಿತರು ಇನ್ನೂ ಸಾಂಬ್ರಾಣಿಯಲ್ಲೇ ರೇಂಜರರಾಗಿರುತ್ತಾರೆ. ಅವರು ತಮ್ಮ ವಿರುದ್ಧ ಬಂದ ಆರೋಪಗಳ ನಿರಾಕರಣ ಮಾಡುವಂತಹ ಪುರಾವೆಯನ್ನು ತಯಾರಿಸುತ್ತಿದ್ದಾರೆಂದೂ ಸುದ್ದಿಯುಂಟು! ಆ ಪುರಾವೆ ತಯಾರಿಸಲಿಕ್ಕೆ ರಾ॥ ಪಡೆಮಿತರಿಗೆ ಸಾಕಷ್ಟು ಅವಕಾಶವೂ ಅನ್ನವೂ ಸಿಗುತ್ತವಂತೆ! ಗದಿಗೊಳ್ಳಿಯ ವಯೋವೃದ್ಧ ಪಟೇಲರ ಕಡೆ ಅಧಿಕಾರಿಗಳು ಚೌಕಶಿ ಮಾಡಿದರೆ ಈ ಮಾತಿನ ಮನವರಿಕೆ ಅವರಿಗೆ ಆಗುವಂತಿದೆ ರಾ॥ ಕುಲಕರ್ಣಿಯವರು ಹೊಸಬರು. ಅವರಿಗೆ ಬೋಕವ್ಯವಹಾರದ ಮಾಹಿತಿ ತೀರ ಕಡಿಮೆ, ಸತ್ಯವನ್ನು ಎಲ್ಲಿ ಹುಡುಕಿ ತೆಗೆಯಬೇಕು, ಯಾರಿಂದ ತಿಳಕೊಳ್ಳಬಹುದು ಅಥವಾ ಹ್ಯಾಗೆ ತಿಳಕೊಳ್ಳಬಹುದು ಎಂಬುವರ ಅನುಭವ ಅವರಿಗೆ ಇರುವದಿಲ್ಲ, ಆದರಿಂದ ಅವರ ಚೌಕಶಿಯಲ್ಲಿ ಸತ್ಯ ಸಂಗತಿಗಳು ಬೆಳಕಿಗೆ ಬರದೆ ಅಸತ್ಯಕ್ಕೇ ಜಯ ಸಿಗುವದೆಂದು ಜನರು ಹೇಳುತ್ತಾರೆ ಅಧಿಕಾರಿಗಳು ರೇಂಜರ ರಾ॥ ಪಡೆಮಿತರಿಗೆ ವರ್ಗ ಮಾಡದೆ ಬದಲಿಗೆ ದೂರುಗಾರ ಫೋರೆಸ್ಟರರಿಗೆ — ಚೌಕಶಿಯೊಳಗಿನ ಮೋಸಗಳನ್ನು ಪುನಃ ಅವರೆಲ್ಲಾದರೂ ಕಂಡು ಹಿಡಿದು ಹೊರಗೆಡಹುವರೆಂಬ ಅಂಜಿಕೆಯಿಂದಲೋ ಏನೋ! — ಬೇರೊಂದು ಕಡೆ ವರ್ಗ ಮಾಡಿದ್ದಾರೆ! ಸರಕಾರವು ಈ ಕಡೆ ಲಕ್ಷ ಪೂರೈಸಿ ಸದರಿ ಪ್ರಕರಣದೊಳಗಿನ ಸತ್ಯ-ಸಂಶೋಧನೆಯ ಕೆಲಸವನ್ನು ಬೇರೊಬ್ಬ ಅನುಭವಿಕರಿಗೆ ಒಪ್ಪಿಸಬೇಕಾದ ಅಗತ್ಯವಿದೆ

ಮುಂಡಗೋಡ— (ತಾ ೩-೭-೪೮) ಮುಂಡಗೋಡವಲ್ಲದೆ ಮಳಗಿಯಲ್ಲೂ ಅಂಗಡಿಕಾರರು ಚಿಮಣಿ ಎಣ್ಣೆಯನ್ನು ನಿಯಂತ್ರಿತ ಬೆಲೆಗಿಂತ ಹೆಚ್ಚಿಗೆ ಬೆಲೆ ತಕ್ಕೊಂಡು ಮಾರುತ್ತಾರೆಂದು ರಾ॥ ಆರ್. ಎಸ್. ನಾಯ್ಕರು ದೂರುತ್ತಾರೆ. ಮಳಗಿ ಸೀಮೆಯೊಳಗಿನ ಯಮಗಳ್ಳಿ, ಗೋಟಗೊಡಿಕೊಪ್ಪ ಗ್ರಾಮಗಳಲ್ಲಂತೂ ಪ್ಯಾಂಟಿಗೆ ೬ ಆಣೆ ತಕ್ಕೊಳ್ಳುತ್ತಾರಂತೆ! ಅಧಿಕಾರಿಗಳು ಚೌಕಶಿ ಮಾಡಬೇಕು

(ತಾ. ೧೯-೭-೪೮) ನೆನ್ನೆ ಶನಿವಾರ ಜಿಲ್ಲಾಧಿಕಾರಿಗಳು ಇಂದೂರ ಗ್ರಾಮಕ್ಕೆ ಭೆಟ್ಟಿ ಕೊಟ್ಟು ಅಲ್ಲಿಯ ಕಾರ್ಯವನ್ನು ನಿರೀಕ್ಷಿಸಿದರು. ೨೫೦ ಎಕರೆ ಭೂಮಿಯಲ್ಲಿ ಬತ್ತ ಬೆಳೆಯಲಾಗಿತ್ತು. ನಿರಾಶ್ರಿತರು ಉತ್ಸಾಹದಿಂದ ಇದ್ದುದು ಕಂಡುಬಂತು

ಮುಂಬಯಿ ಸರಕಾರದ ಅನುಜ್ಞೆಯಂತೆ ಬರುವ ತಾ. ೧೫ಕ್ಕೆ (ಸ್ವಾತಂತ್ರ್ಯ-ದಿನದಂದು) ಎಲ್ಲ ಹಳ್ಳಿಗಳ ಜನರು

BOMBAY SALES TAX
NOTICE.
ಮುಂಬಯಿಯ ಮಾರಾಟಗಳ ಮೇಲಿನ ಕರ
ನೋಟೀಸು.

ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟಿನ ೨ನೇ ಕಲಮಿನ ೪ನೇ ಪೋಟಕಲಮಿನಲ್ಲಿಯ, "ಮೋಹರು ಮಾಡಿದ ಅವರಣಗಳಲ್ಲಿ ಮಾರಾಟ ಮಾಡಲ್ಪಟ್ಟಾಗ ಹೊರತಾಗಿ, ಯಾವತ್ತೂ ತಿನ್ನುವ ಎಣ್ಣೆಗಳ" ಮಾರಾಟಗಳ ಬಗ್ಗೆ ಯಾವದೇ ಕರವು ಬೀಳುವದಿಲ್ಲ

ಸಾರ್ವಜನಿಕ ಮಾಹಿತಿಗೋಸ್ಕರ ಜಾಹೀರ ಮಾಡುವದೇನಂದರೆ— ಸದರ ಅವರಣವು ಕೊಂಡುಕೊಳ್ಳುವವನಿಂದ ಪೂರೈಸಲ್ಪಟ್ಟಾಗ, ಸದರಿ ಆವರಣದಲ್ಲಿ ಎಣ್ಣೆಯನ್ನು ತುಂಬಿದ ನಂತರ ಅದು ಮೋಹರು ಮಾಡಲ್ಪಟ್ಟಾಗ್ಯೂ, ಸದರಿ ಕರವನ್ನು ಮಾರಾಟ ಮಾಡುವವನು ಕೊಡಬೇಕಾಗಿಲ್ಲ ಸದರಿ ಆವರಣವು ಮಾರಾಟ ಮಾಡುವವನಿಂದ ಪೂರೈಸಲ್ಪಟ್ಟ ಬಾಟಲುಗಳಲ್ಲಿ, ಸದರಿ ಆವರಣವು, ಅದು ಬಿರಡೆಯಿಂದ ಅಥವಾ ಮೇಣದಿಂದ ಅಥವಾ ಇತರ ಪದಾರ್ಥದಿಂದ ಭದ್ರಗೊಳಿಸಲ್ಪಡದ ಮತ್ತು ಯಾವದೇ ಕಂತೆಯ ಪಟ್ಟಿಗಳು, ಕೊಂಡಿಯು ಅಥವಾ ಇತರ ಯೋಜನೆಯು ಸಹ ಅದಕ್ಕೆ ಇರದೆ, ಅದು ಬ್ಯಾರೆಲ್ಲಿನ ಬಾಟಲಿನಲ್ಲಿರುವಂತೆ ಒಂದು ಗಟ್ಟಿಯಾದ ಬಿರಡೆಯಿಂದ ಅಥವಾ ಸ್ಕ್ರೂ ಕ್ಯಾಪಿನಿಂದ ಮಾತ್ರ ಬಂದ ಮಾಡಲ್ಪಟ್ಟಿದ್ದರೆ, ಮೋಹರು ಮಾಡಲ್ಪಟ್ಟಿದೆಯೆಂದು ತಿಳಿಯಲ್ಪಡುವದಿಲ್ಲ ಆದರೆ ವ್ಯಾಪಾರಸ್ಥನಿಂದ ಪೂರೈಸಲ್ಪಟ್ಟ ಆವರಣವು ಬಿಸಿಗೆಯನ್ನು ಹಾಕಿ ಬಂದು ಮಾಡಲ್ಪಟ್ಟ ಅಥವಾ ಮೇಣ ಮುಂತಾದವುಗಳಿಂದ ಅಥವಾ ಕಂತೆಯಿಂದ, ಪಟ್ಟಿಯಿಂದ ಅಥವಾ ಇತರ ಯೋಜನೆಯಿಂದ ಭದ್ರಗೊಳಿಸಲ್ಪಟ್ಟ ಬಾಟಲುಗಳಲ್ಲಿ, ಸದರ ಮಾರಾಟಗಳು, ಎಣ್ಣೆಯ ಹಾಗೂ ಆವರಣದ ಸಲುವಾಗಿ ಬೇರೆ ಬೇರೆಯಾಗಿ ಬೆಲೆಗಳು ಆಕರಿಸಲ್ಪಟ್ಟಾಗ್ಯೂ, ಪಡಿಮೂಲಾದ ಒಟ್ಟು ರಕಮಿನ ಮೇಲೆ ಕರ ಕೊಡತಕ್ಕದ್ದು ಶಾಕ್ಯವಾಗುವವು.

ಮುಂಬಯಿ,
ತಾ ೨೦-೭-೧೯೪೮.

V. L. GIDWANI,
ಡೆಪ್ಯುಟಿ ಕಮಿಶನರ ಆಫ್ ಸೇಲ್ಸ ಟೆಕ್ಸ,
ಮುಂಬಯಿ ಪ್ರಾಂತ.

ತರವಿದ್ದ ಸ್ಥಳಗಳಲ್ಲೆಲ್ಲ ಗಿಡಗಳನ್ನು — ಹಣ್ಣುಹಂಪಲದ ಗಿಡಗಳು, ಎಣ್ಣೆಕಾಳಿನ ಗಿಡಗಳು, ಕಟ್ಟಿಗೆ ಪೂರೈಸಬಲ್ಲ ಗಿಡಗಳು—ಇವುಗಳಲ್ಲಿ ಯಾವ ಬೇಕಾದವುಗಳನ್ನು ನೆಡುವ ಕಾರ್ಯಕ್ರಮವನ್ನಿಟ್ಟುಕೊಂಡು, ಅದನ್ನು ಯಶಸ್ವಿಗೊಳಿಸಬೇಕಾಗಿ ಜಿಲ್ಲಾ ಗ್ರಾಮೋದ್ಧಾರ ಮಂಡಳದವರ ಸೂಚನೆಯಿದೆ. ಯಾರಿಗಾದರೂ ಸಸಿಗಳು ಬೇಕಾಗಿದ್ದರೆ ಅವನ್ನು ಬೇಸಾಯ ಇಲಾಖೆಯವರಿಂದ ಇಲ್ಲವೆ ಜಂಗಲ ಇಲಾಖೆಯವರಿಂದ ಪಡಕೊಳ್ಳಬಹುದು

ಯಲ್ಲಾಪುರ— (ತಾ ೨೧-೭-೪೮) ೧೯೪೮ ರ ಫೇಬ್ರುವರಿಯಲ್ಲಿ ಇಡಗುಂದಿಯೊಳಗೆ ವಿವಿಧೋದ್ದೇಶಗಳ ಸಹಕಾರಿ ಸಂಘವೊಂದು ಸ್ಥಾಪನೆಯಾದದ್ದುಂಟು ಯೋಗ್ಯ ಧಾರಣೆಗಳಿಗೆ ಜನರಿಗೆ ಬೇಕಾದ ಕಾಳು-ಕಡಿ ಪೂರೈಸುವದು ಈ ಸಂಘದ ಉದ್ದೇಶವಾಗಿತ್ತು. ಆದರೆ ಆ ಉದ್ದೇಶ ಕೃತಿಯಲ್ಲಿ ಬರಲಿಲ್ಲ ! ಯಲ್ಲಾಪುರ ಪೇಟೆಯ ಧಾರಣೆಗಳಿಗಿಂತ ಈ ಸಂಘದ ಧಾರಣೆಗಳು ೧೦೦ಕ್ಕೆ ೫೦ರಷ್ಟು ಹೆಚ್ಚಿಗೆ ಇರುತ್ತಿದ್ದವು ! ಅದು ಹೋಗಲಿ, ಸಂಘದವರು ತಮ್ಮ ವಾರ್ಷಿಕ ವರದಿಯನ್ನೂ ಲೆಕ್ಕವನ್ನೂ ಇನ್ನೂ ಯಾಕೆ ಪ್ರಕಟಿಸಿರುವದಿಲ್ಲ " ಎಂದು ಸಂಘದ ಸದಸ್ಯರೊಬ್ಬರು ಕೇಳುತ್ತಾರೆ. ಸಂಘಕ್ಕೆ ಸಾಲಕೊಟ್ಟ ಅಧಿಕಾರಿಗಳು ಸಂಘದವರಿಗೆ ಆದರ ಲೆಕ್ಕದ ಆಡಿಟ್ ಮಾಡಿಸಿಕೊಡಲಿಲ್ಲೇಕೆಂದೂ ಅವರು ಪ್ರಶ್ನೆ ಮಾಡುತ್ತಾರೆ

ಮಂಚಿಕೇರಿ— (ತಾ ೨೦-೭-೪೮) ಗದ್ದೆ ಸಾಗುವಳಿ ಕೆಲಸದ ವಿಪರೀತದ ದುಡಿಯುವ ಎತ್ತುಗಳನ್ನು ಕೊಂಡುಕೊಳ್ಳಲಿಕ್ಕೂ ಒಕ್ಕಲಿಗರು ತಗಾವಿ-ಸಾಲ ಬೇಡುತ್ತಾರೆ. ಈ ಸಾಲ ಮೇ ತಿಂಗಳ ಕೊನೆಯೊಳಗಾಗಿ ದೊರೆತರೆ ಮಾತ್ರ ಅದರ ಪೂರ್ಣ ಪ್ರಯೋಜನ ಸಿಗಬಲ್ಲದು. ಹಿಂದೆ ಮೇ ತಿಂಗಳಲ್ಲಿ ಹಣ ಸಿಗದಿದ್ದರೂ ಜೂನ ತಿಂಗಳ ಕೊನೆಯೊಳಗಾಗಿ ಸಿಗುತ್ತಿತ್ತು. ಈ ವರ್ಷ ಅದು ಇನ್ನೂ ಸಿಕ್ಕಿಲ್ಲವಂತೆ ! ಭಾರತವು ಸ್ವತಂತ್ರವಾದುದರ ಫಲವಿದೇ ಎಂದು ಕೆಲವರು ಕೇಳುತ್ತಾರೆ !

ಒಕ್ಕಲಿಗರಿಗೆ ಒಕ್ಕಲ-ಮನೆ ನಿಗ್ಗೆರ ಕಟ್ಟಿಕೊಳ್ಳಲಿಕ್ಕೆ ಕಂಟ್ರೋಲ್‌ರೇಟ ಹಗಡುಗಳು ಸಿಗುವವೆಂದು ಪತ್ರಿಕೆಗಳಲ್ಲಿ ಈ ಸೀಮೆಯವರು ಓದಿಕೊಳ್ಳಬೇಕೇ ವಿನಾ ಅವು ಅವರಿಗೆ ಸಿಗುವ ಲಕ್ಷಣಗಳು ತೋರುವದಿಲ್ಲ !

ಕಾರವಾರ— (ತಾ. ೨೧-೭-೪೮) ಬಿಣಗೆಯ ಮಿನುಗಾರರೆಳೆಯ ಸಹಕಾರಿ ಸಂಘಕ್ಕೆ ೧೫೦ರಿಂದ ೨೦೦ ವರೆಗಿನ ಅಶ್ವಶಕ್ತಿಯುಳ್ಳ ಒಂದು ಯಂತ್ರವನ್ನು ಕರಿದಿಸಿಕೊಳ್ಳುವದಕ್ಕಾಗಿ ಮುಂಬಯಿ ಸರಕಾರವು ರೂ. ೧೯೦೦೦ ದಷ್ಟು ಧನಸಹಾಯವನ್ನೀಯಬೇಕೆಂದಿದ್ದೆಂದು ಮುಂಜೂರ ಮಾಡಿರುವದಲ್ಲದೆ, ಸಂಘದ ಆಸ್ತಿಯ ಒತ್ತೆಯ ಮೇಲೆ ರೂ ೨೪೦೦೦ದಷ್ಟು ಸಾಲ ಕೊಡಬೇಕೆಂದೂ ನಿರ್ಧರಿಸಿದೆ ಈ ಸಾಲವನ್ನು ಸಂಘವು ೩ೀ ಸಲ ಬಡ್ಡಿ ಕೊಡಿಸಿ ೫ ವರ್ಷಗಳಲ್ಲಿ ಮಾಸಿಕ ಕಂತುಗಳಿಂದ ತೀರಿಸತಕ್ಕದ್ದೆಂದು ಸರಕಾರವು ಶರ್ತ ಹಾಕಿದೆ

೨೦೦ಕ್ಕೆ ಮೇಲ್ಪಟ್ಟು ಜನವಸತಿಯುಳ್ಳ ಗ್ರಾಮಗಳಲ್ಲಿದ್ದ ಡಿ ಡಿ ಟಿ ಔಷಧಿಯ ಮದ್ದು ಸಿಂಪಡಿಸುತ್ತಿದೆಂದು ತಾ ೨೪-೬-೪೮ರ " ವೃತ್ತ " ದಲ್ಲಿ (ಸ್ಥಳೀಕ ವಿಷಯಗಳಲ್ಲೊಂದುಕಡೆ) ಪ್ರಕಟವಾದದ್ದು ಸರಿಯಿರುವದಿಲ್ಲೆಂದೂ, ೧೦೦ಕ್ಕೆ ಮೇಲ್ಪಟ್ಟು ಜನಸಂಖ್ಯೆಯುಳ್ಳ ಎಲ್ಲ ಚಳಿಜ್ವರ-ಪೀಡಿತ ಗ್ರಾಮಗಳಲ್ಲಿ ಸದರಿ ಔಷಧಿಯ ಮದ್ದು ಸಿಂಪಡಿಸುತ್ತದೆಂದೂ ಆರೋಗ್ಯ ಇಲಾಖೆಯ ದಾಯರೆಕ್ಟರರು ಬರೆಯುತ್ತಾರೆ [೧೦೦ಕ್ಕೂ ಕಡಿಮೆ ಜನರುಳ್ಳ ಹಳ್ಳಿಗಳಲ್ಲಿ-- ಅಂತಹ ಹಳ್ಳಿಗಳು ಬೆಟ್ಟದ ಪ್ರದೇಶಗಳಲ್ಲಿ ಬಹಳ ಇವೆ — ಡಿ ಡಿ ಟಿ ಪ್ರಯೋಗ ನಡೆಯುವದಿಲ್ಲವಾದರೆ ಜಾಯರೆಕ್ಟರರಿಗೆ ಒಪ್ಪಿಗೆಯುಂಟಿಲ್ಲವೇ ? ಆ ಹಳ್ಳಿಗಳಿಗಿನ ಚಳಿಜ್ವರದ ಪಿಡೆ ಹಿಮ್ಮೆಟ್ಟಿಸುವ ಬಗ್ಗೆ ಆರೋಗ್ಯಾಧಿಕಾರಿಗಳು ಯಾವ ಉಪಾಯ-ಯೋಜನೆ ಮಾಡಿದ್ದಾರೆ ? —ಸಂಪಾದಕ]

೧೯೪೨ ಚಳವಳಿಯದ ಯೋಜನೆಯನ್ವಯ ತಾ ೩೧-೭-೪೮ರ ಪೂರ್ವದಲ್ಲಿ ಹೋರಾಟ ಮಾಡಿದ ನೆರನೆಲ ಸೇವಿಂಗ್ಸ ಸರ್ಟಿಫಿಕೇಟುಗಳ ಮೇಲೆ ದಲಾಲಿ (ಕಮಿಶನ್) ಸಿಗಬೇಕಾದ ಯಾವತ್ತು ಅಧಿಕೃತ ಪ್ರತಿನಿಧಿಗಳು ತಾ ೩೧-೭-೪೮ರೊಳಗಾಗಿ ತಮ್ಮ ದಲಾಲಿಯ ಬೇಡಿಕೆ-ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಒಪ್ಪಿಸಬೇಕೆಂದೂ ಸದರಿ ಅವಧಿಯ ನಂತರ ಸಾದರವಾದ ಬೇಡಿಕೆ-ಪತ್ರಗಳು ತಿರಸ್ಕರಿಸಲ್ಪಡುವವೆಂದೂ ಹಿಂದುಸ್ಥಾನ ಸರಕಾರದ ಪ್ರಕಟನೆ ಹೊರಟಿದೆ

ಈ ಜಿಲ್ಲೆಯ ಸೂಳಂತೆಗಳ ಮಾಲಕರು ಕಾರವಾರದಿಂದ ಬರೆಯುತ್ತಾರೆ - ಸತ್ತ ಬಳಕೆಯಲ್ಲಿರುವ ಕಂಟ್ರೋಲ ರೇಟ ಸೊಡದಂಪತ್ರಗಳು ಸವೆದು ಹೋಗುತ್ತಿವೆ ಪುನಃ ಹಸನಾಗಿ ಮಾಡಿಸಿಕೊಳ್ಳುವ ಕಾಲಕ್ಕೆ ಅವುಗಳನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ ಈ ದುರುಸ್ತಿಯನ್ನು ವ್ಯಾಪಾರಿಗಳು ನೋಂದಿಸಲ್ಪಟ್ಟ ದುರುಸ್ತಿಗಾರರಿಂದ ಮಾಡಿಸಿಕೊಳ್ಳಬೇಕೆಂದು ನಿಯಮವಿದೆ ನೋಂದಿಸಲ್ಪಟ್ಟ ಈ ದುರುಸ್ತಿಗಾರ (ಕಮ್ಮಾರ) ರ ಯಾದಿಯು ನಮ್ಮ ಕಲೆಕ್ಟರ ಆಫೀಸಿನಲ್ಲಿ ಸಿಗುತ್ತದೆ ಆದರೆ ನೋಂದಿಸಲ್ಪಟ್ಟ ಎಲ್ಲ ಕಮ್ಮಾರರು ಈ ದುರುಸ್ತಿಯ ಕೆಲಸವನ್ನು ಕೈಕೊಳ್ಳುವದಿಲ್ಲ ಪ್ರತಿ ತಾಲೂಕಿನಲ್ಲಿ ಈ ಕೆಲಸ ಮಾಡಲು ಸಮರ್ಥರಾದ ೩-೪ ಮಂದಿಯಾದರೂ ಇರುವದು ಒಳಿತು ಹಾಗಿದ್ದಾಗಲೆ ಅವರಲ್ಲಿ ಸ್ಪರ್ಧೆ ನಡೆಯುತ್ತದೆ, ಅವರ ಕೂಲಿಯ ದರವು ಇಳಿಯುತ್ತದೆ ಮೇಲಾಗಿ ಮಾಡುವವರು ಇಲ್ಲದಿದ್ದರೆ ಇದ್ದ ದುರುಸ್ತಿಗಾರರು ಹೇಳಿದಷ್ಟು ಕೂಲಿ ಕೊಡಬೇಕು ! ಕಾರವಾರದಲ್ಲಿಯ ವ್ಯಾಪಾರಿಗಳು ತಮ್ಮ ತಮ್ಮ ೩ ೪ ಸಾರಿ ಕಮ್ಮಾರರಿಗೆ ಈ ಕೆಲಸ ಕೈಕೊಳ್ಳಲು ಪ್ರೋತ್ಸಾಹಿಸಿ, ಅಧಿಕಾರಿಗಳಿಗೆ ಸದ್ಯ ಆ ಕಮ್ಮಾರರ ಅರ್ಜಿಗಳನ್ನು ಕಳಿಸಿಕೊಟ್ಟರೆ ಅವರಿಗೆ ನಾವು ದುರುಸ್ತಿ ಕೆಲಸದ ಪೂರ್ಣ ಮಾಹಿತಿಯನ್ನು ಕೊಡುವೆವು. ಹಾಗೂ ಅವರು ತರಬೇತ ಆದ ಮೇಲೆ ಅವರನ್ನು ಅಧಿಕೃತ ದುರುಸ್ತಿಗಾರರ ಯಾದಿಯಲ್ಲಿ ನೋಂದಿಸಿಕೊಳ್ಳುವೆವು.

ಗೌಡ ಸಾರಸ್ವತ ಬ್ರಾಹ್ಮಣರ ಸಮಾಜ, ಹುಬ್ಬಳ್ಳಿ.

ಮೇಲಿನ ಸಂಸ್ಥೆಯು ಕಟ್ಟಿಸ ಸಂಕಲ್ಪಿಸಿದ " ಸಮಾಜ ಭವನ "ದ ಬಗ್ಗೆ ಸಮಾಜದ ಅಧ್ಯಕ್ಷ ಡಾ|| ಎಸ್ ಎಮ್ ಕಾಮತರು ಅಖಿಯ ವಾರ ಶಿರಸಿಯಲ್ಲಿ ಈ ಕೆಳಗಿನಂತೆ ವಂತಿಗೆಗಳನ್ನು ಕೂಡಿಸಿದ್ದಾರೆ —

ಡಾ|| ಡಾ|| ಅನಂತರಾವ ಕಾಸರಕೋಡ	ರೂ. ೨೦೧
" ವೆಂಕಟೇಶ ಗೋಪಾಳ ಕಾನಡಾಗ	" ೨೦೧
" ಗಜಾನನ ವ್ಹಿ ನಾಡಿಗ, ವಕೀಲ	" ೧೫೧
" ಸುಂದರರಾವ ಪಿ. ಪಂಡಿತ	" ೧೫೧
" ಶೇಷಗಿರಿರಾವ ಎನ್ ಕೇಶವೈನ	" ೧೦೧
" ವೆಂಕಟರಾವ ಕೇ, ಭಾಕಲಪ್ಪ	" ೧೦೧
" ಬಾಲಕೃಷ್ಣ ದುರ್ಗಪ್ಪ ಕಾಮತ	" ೧೦೧
" ಆರ್ ಪಿ ಪ್ರಭು	" ೧೦೧
" ವಿಠ್ಠಲ ರಾಯಪ್ಪ ಅವರ್ಸೇಕರ	" ೧೦೧
" ವೈಕುಂಠ ರಾಯಪ್ಪ ಅವರ್ಸೇಕರ	" ೧೦೧
" ನಾಗೇಶ ರಾಯಪ್ಪ ಅವರ್ಸೇಕರ	" ೧೦೧
" ಪದ್ಮನಾಭ ಬಿ. ಬಾಳಿಗಾ, ವಕೀಲ	" ೫೧
" ಜನಾರ್ದನ ಶ್ರೀನಿವಾಸ ನಾಯಕ	" ೫೧
" ನರಸಿಂಹ ಪಾಂಡುರಂಗ ದೇಸಾಯಿ	" ೫೧
ಜುಮಲಾ ರೂ	೧೫೬೩

ಶಿರಸಿಯ ಜ್ಞಾತಿಬಾಂಧವರು ಮಾಡಿದ ಈ ಸಹಾಯಕ್ಕಾಗಿ ಸಮಾಜವು ಕೃತಜ್ಞತೆಯನ್ನು ಸಲ್ಲಿಸುತ್ತದೆ, ಮತ್ತು ಇದರಂತೆ ಇನ್ನಿತರ ಊರುಗಳ ಜ್ಞಾತಿಬಾಂಧವರೂ ಯಥಾಶಕ್ತಿ ಸಹಾಯ ನೀಡುವರೆಂದು ಆಶಿಸುತ್ತದೆಂದು ಸಮಾಜದ ಕಾರ್ಯದರ್ಶಿಗಳು ಬರೆಯುತ್ತಾರೆ

ಹೊನ್ನಾವರ— (ತಾ ೨೪-೭-೪೮) ಅಕ್ಕಿಯ ದರ ಇಳಿಯುತ್ತದೆ. ಅರ್ಬನ ಬೇಂಕಿನ ಅಕ್ಕಿಯ ದರ ಖಾಯರಿಗೆ ರೂ. ೨ ಉಂಟು. ಇಷ್ಟು ದಿನ ಬೇಂಕಿನವರು ಅಕ್ಕಿ ಕೊಡುವಾಗ ಕೈ ಬಿಗಿಹಿಡಿಯುತ್ತಿದ್ದರು. ಈಗ ಕೈ ಸಡಿಲು ಮಾಡಿದ್ದಾರೆ. ಅಕ್ಕಿಯ ದರ ಬೇಗನೇ ರೂ. ೨ ಕ್ಕಿಂತ ಕಡಿಮೆಯಾದೀತೆಂದೂ, ಅಕ್ಕಿ ಶಿಲ್ಕು ಇಟ್ಟುಕೊಂಡರೆ ತಾವು ಹಾನಿಗೊಳ್ಳಬೇಕಾದೀತೆಂದೂ ದೀರ್ಘಾಲೋಚನೆ ಮಾಡಿ ಅವರು ಕೈ ಸಡಿಲು ಮಾಡಿರುವರೆಂದು ತಿಳಿಯುತ್ತದೆ

ಮ್ಯುನಿಸಿಪಾಲಿಟಿಯವರ ದೀದಿ-ದೀಪಗಳ ವ್ಯವಸ್ಥೆ ಸರಿಯಿಲ್ಲ ಶುಕ್ಲ ಪಕ್ಷದಲ್ಲಿ ದೀಪಗಳನ್ನು ಹಚ್ಚುವದವಶ್ಯವಿಲ್ಲವಂತೆ ! ಮಳೆಗಾಲದೊಳಗೆ ಶುಕ್ಲ ಪಕ್ಷದಲ್ಲಿ ಕೂಡ ಮೋಡಗಳ ಮೂಲಕ ಕತ್ತಲೆಯಾಗುತ್ತದೆಂದು ಇವರು ತಿಳಿಯದಿದ್ದದ್ದು ಸೋಜಿಗವೇ ಸರಿ !

ಗೇರಸಪ್ಪೆ-ಹೂವಿನಗುಂಡಿ ಮಾರ್ಗ ಬಹಳ ಕೆಟ್ಟಿದೆ. ಟಿಪ್ಪು ಕಾಲದ ಮಾರ್ಗದಂತೆ ಕಾಣುತ್ತದೆ ! ಕೆಲವೆಡೆ ಜೀರ್ಣವಾಗಿ ಹಾಳಾದ ಮೋರಿಗಳನ್ನು ಮಾರ್ಗದ ಮೇಲೆ ಸಂಚಾರ ಮಾಡುವ ಗಾಡಿಕಾರರು ದುರುಸ್ತಿ ಮಾಡಿಕೊಂಡಿದ್ದಾರಂತೆ ! ಮಾರ್ಗದ ಮೇಲೆ ಅಲ್ಲಲ್ಲಿ ಬಿದಿ ದಾರಿನಲ್ಲಿ ಕಾಣುತ್ತವೆ ಅವು ಮಾರ್ಗಕ್ಕೆ ಬೇಕಾದವು ೧೯೫೨ ರಲ್ಲೋ, ೧೯೫೭ರಲ್ಲೋ !

ಭೂಮಾಲಕರಲ್ಲಿ ಇಲ್ಲವೆ ಒಕ್ಕಲಿಗರಲ್ಲಿ ಹುಟ್ಟಿರುವ ಅಸಮಾಧಾನದ ಲಾಭ ತೆಕ್ಕೊಂಡು ತಮ್ಮ ಸ್ವಾರ್ಥಸಾಧನೆಗಾಗಿ ಕೆಲವೊಂದು ಜನರು ಇನ್ನು ಆ ವರ್ಗಗಳಲ್ಲಿ ಅಲ್ಲದ ಸಲ್ಲದ ಪ್ರಚಾರ ಮಾಡಿ ಅಸಂತೋಷವನ್ನು ಬೆಳಸುತ್ತಿದ್ದುದು ತಮ್ಮ ದೃಷ್ಟಿಗೆ ಬಂದಿರುತ್ತದೆಂದೂ, ಒಡೆಯ-ಒಕ್ಕಲಿಗರು, ಈ ಪ್ರಚಾರಕ್ಕೆ ತುತ್ತಾಗದೆ ಒಕ್ಕಲತನದ ಕಾನೂನಿನಂತೆ ನಡೆಯಬೇಕೆಂದೂ, ಆ ಕಾಯದೆಯಿಂದ ಸರ್ವರಹಿತವಿದ್ದ ಇಕ್ಕಟ್ಟಿನವರಿಗೂ ಹಿತವಾಗುವದೆಂದೂ ಜಿಲ್ಲಾಧಿಕಾರು ಒಂದು ಪತ್ರಕವ ಹೊರಡಿಸಿ ಜಾಹೀರಪಡಿಸಿದ್ದಾರೆ

ಜಾಹೀರ ನೋಟೀಸು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ, ಲಿಮಿಟೆಡ್, ಕುಮಟಾ ಶಾಖೆ

ಈ ಮೂಲಕ ತಿಳಿಸುವದೇನೆಂದರೆ - ಈ ಕೆಳಗೆ ಹೇಳಿದವರು ನಮ್ಮ ಬೇಂಕಿನಲ್ಲಿ ಚಿನ್ನದ ದಾಗಿನೆಗಳ ಒತ್ತೆಯ ಮೇಲೆ ಪಡೆದ ಸಾಲದ ಅಸಲು ಮತ್ತು ಅದರ ಮೇಲಣ ಬಡ್ಡಿ ಈ ಬೇಂಕಿಗೆ ವಾಯಿದೆಯೊಳಗೆ ಮಸೂಲ ಬಾರದ ಇದ್ದ ಕಾರಣ ಅವರು ಯಾ ಅವರ ವಾರಸುದಾರರು ತಾ. ೭-೮-೪೮ನೇ ಶನಿವಾರ ಅಪರಾಹ್ನ ೧ ಘಂಟೆಯ ಒಳಗೆ ಮಸೂಲ ಕೊಡದೆ ಇದ್ದಲ್ಲಿ, ಸದರಿ ಸಾಲದ ಭದ್ರತೆಯ ಬಗ್ಗೆ ಸದರಿಯವರು ಬೇಂಕಿನಲ್ಲಿ ಒತ್ತೆಯಿಟ್ಟ ನಗಗಳನ್ನು ತಾ ೧೪—೮—೪೮ನೇ ಶನಿವಾರ ಅಪರಾಹ್ನ ೨ ಘಂಟೆಗೆ ಜಾಹೀರ ಲಿಲಾಂವ ಮಾಡಲಾಗುವದು.

ಸಾಲ ಪಡೆದವರ ಹೆಸರು.- (೧) ಮಿ|| ಎಮ್. ಡಿ ಪ್ರಭು ತಾ ೪-೧೨-೪೫ಕ್ಕೆ ಬರತಕ್ಕ ರಕಮು ರೂ ೧೨೫-೦-೦ ಮತ್ತು ತಾ ೪—೧೨—೪೫ರಿಂದ ಅದರ ಬಡ್ಡಿ. (೨) ಮಿ|| ಜಿ. ಎಚ್ ಶಿರೋಡಕರ ತಾ ೩-೨-೪೭ಕ್ಕೆ ಬರತಕ್ಕ ರಕಮು ರೂ. ೧೦೦—೦—೦ ಮತ್ತು ತಾ ೩-೨-೪೭ರಿಂದ ಅದರ ಬಡ್ಡಿ

ಕುಮಟಾ, ತಾ. ೨೪-೭-೪೮.

ಏಜಂಟ, ಕುಮಟಾ

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ಪಾಳಿಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಃಪೂರ್ವಕ ಸ್ವತಃ ಮಾಡಿಸಿಕೊಡುತ್ತೇವೆ ನಮ್ಮಲ್ಲಿಂದ ಪಟ್ಟೆ ಪೀತಾಂಬರ,ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತೂ ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಘತ್ತರಗಲ್ಲಿ, ಬನಾರಸ.

ಇದ ನ್ನು ಪಾಂಡುರಂಗ ಕೃಷ್ಣ ಕಾನಡಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ " ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270. Monday, 2-8-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೫.

ಕುಮಟಾ:- ಸೋಮವಾರ, ತಾ. ೨—೮—೧೯೪೮

ಜಾಹೀರಾತುಗಳ ದರ:-

ಸ್ಥಾನವಿಸ್ತಾರ ೧ ಇಂಚಿನವರೆಗೆ ಒಂದು ಸಾಲಿಗೆ ೮ ಆಣೆಯಂತೆ. ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಪತ್ರ ಇಲ್ಲವೆ ಪತ್ರದ್ವಾರಾ ತಿಳಿಸಲಾಗುವದು.

ವರ್ಗಣಿಯ ದರ:

ಕುಮಟೆಯಲ್ಲಿ

ವರ್ಷಕ್ಕೆ ರೂ. ೨–೪–೦

ಟಪಾಲದ್ವಾರಾ ವರ್ಷಕ್ಕೆ ೩–೧–೦

" ೬ ತಿಂಗಳಿಗೆ ೧–೧೨–೦

ಬಿಡಿ ಸಂಚಿಕೆಗೆ ೦–೧–೦

ಹಳೇ ಸಂಚಿಕೆಗೆ ೦–೪–೦

ವ್ಹಿ.ಪಿ. ಯಿಂದ ಕಳಿಸುವದು

ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು

ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಪತ್ರಕರ್ತರ ನುಡಿಗನ್ನಡಿ.

೧ ಕಾರವಾರ ಬಂದರ ನಿರ್ಮಾಣದಲ್ಲಿ ಗೂಢ ರಾಜಕಾರಣವುಂಟು. ಕಾರವಾರದ ನೆರೆಹೊರೆಯಲ್ಲಿ ಗೋಮಾಂತಕವಿದ್ದು ಆ ಗೋಮಾಂತಕದ ಸುತ್ತುಮುತ್ತಲ ದರ್ದಾದ ಭಾಗ ಸುತ್ತುವರಿಯುತ್ತದೆ ಗೋಮಾಂತಕಕ್ಕೆ ಮರ್ಮಗೋವಾ ಬಂದರದಿಂದ ಪ್ರಾಧಾನ್ಯ ದೊರಕಿದೆ. ಮರ್ಮಗೋವಾದಲ್ಲಿ ಜನವಸತಿಯಿಲ್ಲ, ಪಶ್ಚಿಮಗಳೆಲ್ಲ ಬಂದರು ಪ್ರದೇಶವೇ ಮರ್ಮಗೋವಾ ಎಂದು ಖ್ಯಾತಿಗೊಂಡಿದೆ. ಇದೊಂದು ಬಂದರದಿಂದ ಅರಬೀ ಸಮುದ್ರದ ಕರಾವಳಿಯ ಸಮುದ್ರಗಳವರೆಗೆ ಹಾಯಿ ಹಾಕಲು ಅನುಕೂಲತೆಯುಂಟಾಗಿದೆ. ಕಾರವಾರದ ಭಾಗ್ಯೋದಯಕ್ಕೆ ಮರ್ಮಗೋವಾ ಬಂದರ ಈ ಹಿಂದೆ ಅಡ್ಡ ಬಂದಿತ್ತು! ಬ್ರಿಟಿಶರು ಪೋರ್ಚುಗೀಜ ಮಿತ್ರದೊಳಗಿನ ರಾಜಕಾರಣ ಸ್ವಾರ್ಥಕ್ಕಾಗಿ ಮರ್ಮಗೋವಾದ ಅಭಿವೃದ್ಧಿಗೆ ಕಾರಣರಾದರು. ನಮ್ಮ ಕಾರವಾರ ಬಂದರ ಸೃಷ್ಟಿಸೌಕರ್ಯದಿಂದ ತುಂಬಿತುಳುಕುತ್ತಿದ್ದರೂ ಅದನ್ನು ಉದ್ದೇಶಪೂರ್ವಕವಾಗಿ ಹಿಂದಕ್ಕೆ ಹಾಕಿದರು! ಆದರೆ ಸ್ವತಂತ್ರ ರಾಜ್ಯದಲ್ಲಿ ಕಾರವಾರಕ್ಕಾಗುತ್ತಿದ್ದ ಅನ್ಯಾಯ ಪರಿಹಾರ ಹೊಂದಬೇಕು. ಕಾರವಾರವನ್ನು ಅಭಿವೃದ್ಧಿಗೊಳಿಸುವ ನಿರ್ಧಾರ ಪ್ರಕಟಿಸಿದರೆ ಪೋರ್ಚುಗೀಜ ಸರಕಾರದೊಡನೆ ವ್ಯವಹಾರ ನಡೆಸಬೇಕಾದ ಈ ಸಮಯಕ್ಕೆ ಒಳ್ಳೇ ಬಲವು ದೊರೆಯುವಂತಿದೆ. ಮರ್ಮಗೋವಾ ಬಂದರದ ಪ್ರಾಮುಖ್ಯತೆ ಕಡಿಮೆಯಾದೊಡನೆ ಗೋಮಾಂತಕದ ರಾಜ್ಯಭಾರದಿಂದ ಪೋರ್ಚುಗೀಜರಿಗೆ ಪ್ರಯೋಜನ ದೊರೆಯುವದಿಲ್ಲ. ಪೋರ್ಚುಗಾಲದಿಂದ ಹಣ ತಂದು ಗೋಮಾಂತಕದಲ್ಲಿ ಖರ್ಚು ಮಾಡುವ ಪ್ರಸಂಗ ಬರುವದು. ಅಂಥ ಪ್ರಸಕ್ತಿಯಲ್ಲಿ ಪೋರ್ಚುಗೀಜ ಸರಕಾರವು ಗೋಮಾಂತಕವನ್ನು ತಾನಾಗಿ ಬಿಟ್ಟುಕೊಟ್ಟು, ಗೋಮಾಂತಕ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸುವದು.

೨. ಕಾರವಾರವನ್ನು ಅಭಿವೃದ್ಧಿಗೊಳಿಸಿದರೆ ನಮ್ಮ ಜಿಲ್ಹೆಯು ಅಭಿವೃದ್ಧಿಯಾಗಲು ಒಳ್ಳೇ ಅವಕಾಶ ದೊರೆಯುವಂತಿದೆ. ನಮ್ಮ ಜಿಲ್ಹೆಯೊಳಗೆ ಕಾರಖಾನೆಗಳಿಲ್ಲ. ಆದರೆ ಕಾರಖಾನೆಗಳ ಏರ್ಪಾಟಿಗೆ ಅವಶ್ಯವುಳ್ಳ ಕಚ್ಚಾ–ಸರಕು ಬೇಕಾದಷ್ಟುಂಟು. ಅಡವಿ–ಪ್ರದೇಶದಲ್ಲಿ ಸರಕಾರದ ಕಟ್ಟಿಗೆಯುಂಟು, ಬಿದಿರುಗಳುಂಟು, ಎಣ್ಣೆಯ ಬೀಜಗಳುಂಟು, ಔಷಧ ವನಸ್ಪತಿಗಳುಂಟು. ಖನಿಜ ಸಂಪತ್ತುಳ್ಳ ಗಣಿ–ಪ್ರದೇಶಗಳುಂಟು. ಇವುಗಳನ್ನು ಈ ಪ್ರದೇಶದಲ್ಲಿ ತಜ್ಞರಿಂದ ಪರೀಕ್ಷಿಸಿ ಪ್ರಯೋಜನ ಪಡೆದರೆ ಹಿಂದುಸ್ಥಾನದ ಅಭ್ಯುದಯಕ್ಕೆ ಸಹಾಯವಾಗುವಂತಿದೆ. ನಿಖಿಲ ಹಿಂದುಸ್ಥಾನದಲ್ಲಿ ಅಂಥ ಸೃಷ್ಟಿಸಂಪತ್ತು–ಸೌಕರ್ಯಗಳುಳ್ಳ ಪ್ರದೇಶಗಳು ಎರಡೇ ಇರುತ್ತವೆಂದೂ, ಅವೆರಡರಲ್ಲಿ ಸುಳ್ಯ(?)ದ ಸುತ್ತುಮುತ್ತಲಿನ ಪ್ರದೇಶ ಎರಡನೆಯದೆಂದೂ ತಜ್ಞರ ಅಭಿಪ್ರಾಯವುಂಟು. ನಮ್ಮ ಜಿಲ್ಹೆಯೊಳಗೆ ಅಗ್ರದ ಕಾರಖಾನೆಗಳನ್ನು ಏರ್ಪಡಿಸಲು ಅನುಕೂಲವುಳ್ಳ ಪ್ರದೇಶಗಳನ್ನು ಪರಾಂಬರಿಸಿದರೆ, ಸುಮಾರು ೩–೪ ಕೇಂದ್ರಗಳು ಕಾರವಾರ ಬಂದರಕ್ಕೆ ಅನುಕೂಲವಿವೆ. ಕಾರವಾರ ಬಂದರವನ್ನು ಕಟ್ಟಿಸಿ ಅದರ ಸ್ಥಾನಿಗೆ ಅಳ್ನಾವರದಿಂದಾಗಲಿ ಹುಬ್ಬಳ್ಳಿಯಿಂದಾಗಲಿ ಧಾರವಾಡದಿಂದಾಗಲಿ ಉಗಿಬಂಡಿಯ ಮಾರ್ಗವನ್ನು ಕಟ್ಟಿಸಿದರೆ ಉಗಿಬಂಡಿಯ ಮಾರ್ಗದ ಎರಡೂ ಪಕ್ಕಗಳ ಮೇಲಿನ ನಿರ್ಜನ ಪ್ರದೇಶ ಜನವಸತಿಸ್ಥಾನವಾಗಿ ಪರಿಣಮಿಸುವದು. ಪಟ್ಟಣಗಳಲ್ಲಿ ನವ ಪಟ್ಟಣಗಳು ನಿರ್ಮಾಣ ಹೊಂದುವವು. ಸಂಕಲ್ಪಿತ ಕಾಳೀ ನದಿಯ ವಿದ್ಯುತ್–ಕಾರಖಾನೆ ಪ್ರಾರಂಭವಾದರೆ ಕಾರವಾರ ಬಂದರಕ್ಕೆ ಹತ್ತಿದ ಹಳಿಯಾಳದವರೆಗಿನ ಪ್ರದೇಶ ಮುಂಚಿನ ವೇಗದಿಂದ ಉನ್ನತಿ ಹೊಂದುವದು. ಬಂಜರು ಬಿದ್ದ ಭೂಮಿಗಳು ಸಾಗುವಳಿಯಾಗುವವು. ಹಾಗೆ ಸುರಿಯುವ ಸಹ್ಯಾದ್ರಿ ಉದ್ಯಮಗಳು ಜನವೃದ್ಧಿಯಾಗಿ ಸಮೃದ್ಧಿ ಹೊಂದುವವು. ಭಟಕಳಕ್ಕಿಂತ ಕಾರವಾರ ಬಂದರದಿಂದ ನಮ್ಮ ಜಿಲ್ಹೆಗೆ ಹೆಚ್ಚಿನ ಲಾಭವುಂಟು. ಅಲ್ಲದೆ ಆರಂಭಿಸಿದರೆ, ಅಖಿಲ ಹಿಂದ ರಾಜ್ಯಕ್ಕೂ ಕಾರವಾರ ಬಂದರದಿಂದ ಲಾಭವು ಪ್ರಾಪ್ತವಾಗುವಂತಿದೆ. ಏತನ್ಮಧ್ಯೆ ಕಾರವಾರವನ್ನು ಸರಿಗಟ್ಟುವ ಬೇರೊಂದು ಬಂದರ ಅರಬೀ ಸಮುದ್ರದ ದಂಡೆಯ ಮೇಲೆ ಇರುವದಿಲ್ಲ. ಕಾರವಾರದ ಮುಂಭಾಗದಲ್ಲಿರುವ ದೇವಗಡದ ದೀಪಸ್ತಂಭವನ್ನು ಎಡದಿಂದ ನೋಡಿಕೊಂಡು ಹಡಗಗಳು ಹಿಂದುಸ್ಥಾನದ ಬದಿಗೆ ಪ್ರವಾಸ ಮಾಡುವದು ಯುಕ್ತವೆಂಬುದು ಎಲ್ಲರಿಗೂ ಗೊತ್ತುಂಟು. ಕಾರವಾರವನ್ನು ಭದ್ರಗೊಳಿಸದೆ ಬಿಟ್ಟರೆ ಆ ಬಂದರದ ರಕ್ಷಣೆಗಾಗಿ ಅಲ್ಲಿ ಕಾದಲಿಟ್ಟರೆ ವಿದೇಶ ಹಡಗಗಳಿಗೆ ಹಿಂದುಸ್ಥಾನದ ಮೇಲೆ ದಾಳಿ ಮಾಡುವದಕ್ಕೆ ಸಹ ಅನುವು ದೊರೆಯಲಿಕ್ಕಿಲ್ಲವಾಗಿ ನೌಕಾ ಸೈನ್ಯಾಧಿಪತಿಗಳ ಅಭಿಪ್ರಾಯವುಂಟು. ಬಂದರ ನಿರ್ಮಿಸುವರು ನಿಷ್ಪಕ್ಷಪಾತ ದೃಷ್ಟಿಯಿಂದ ಕಾರವಾರದ ಸೃಷ್ಟಿಗುಣವನ್ನು ಪರಾಂಬರಿಸಿ ಮುನ್ನೋಡಬೇಕಾಗಿ ಈ ಸಾಲದ ಕಾಲೇಜು ಕಾರ್ಯಕರ್ತರಂಥ ಸರ್ವಜನರು ಬಾಧಿಸುವ ಸವ್ಯೋಪದಯ ಸಮಾಜದ ಪ್ರವರ್ತಕರು ಮಾಡಿದ ಪ್ರತಿಪಾದನೆಯನ್ನು ಗ್ರಹಿಸುವರೆಂದು ನಮ್ಮ ಜಿಲ್ಹೆಯವರ ಅಪೇಕ್ಷೆಯುಂಟು. ಈ ಕಾಲೇಜಿನವರಿಗೆ ಪ್ರಾಂತೀಯತೆಯಿಲ್ಲ, ಜಾತೀಯತೆಯಿಲ್ಲ. ವಸ್ತುಗುಣಗಳನ್ನಷ್ಟೇ ನಿಷ್ಪಕ್ಷಪಾತದಿಂದ ಅಭ್ಯಾಸ ಮಾಡಿ ಹೇಳಿದ್ದನ್ನು ಆಯುಷ್ಯ ನಿಃಸ್ವಾರ್ಥ ಪುರುಷರೆಂದು ಈ ಕಾಲೇಜಿನವರ ಖ್ಯಾತಿಯುಂಟು.

೩. ಭಟಕಳ ಬಂದರದ ಅಭಿವೃದ್ಧಿ ಮಾಡಬಾರದೆಂದು ಯಾರದೂ ಅಂಬೋಣವಿಲ್ಲ. ನಮ್ಮ ಜಿಲ್ಹೆಗೆ ಎರಡು ಬಂದರಗಳು ಸಿಗುತ್ತಿದ್ದರೆ ಭಟಕಳವನ್ನು ಇನ್ನೊಂದು ಬಂದರವನ್ನಾಗಿ ಹಿಂದುಸ್ಥಾನ ಸರಕಾರವು ಕೈಕೊಳ್ಳಬೇಕೆಂದು ನಮ್ಮ ಜಿಲ್ಹೆಯವರು ಒತ್ತಿ ಹೇಳುತ್ತಾರೆ. ಭಟಕಳ ಬಂದರದ ಪುರಸ್ಕಾರದಲ್ಲಿ ಬಂದರದ ಗುಣಗಳಿಗಿಂತ ಪ್ರಾಂತೀಯತೆಯುಂಟು! ಮೈಸೂರ ಸೀಮೆಯನ್ನು ಕರ್ನಾಟಕ ಪ್ರಾಂತದಲ್ಲಿ ಎಳೆದುಕೊಳ್ಳುವದಕ್ಕಾಗಿ ಕರ್ನಾಟಕ ಪ್ರಾಂತ ನಿರ್ಮಾಣದ ಈಗಿನ ಸೂತ್ರಚಾಲಕರು ಭಟಕಳ ಪ್ರದೇಶವನ್ನು ಮೈಸೂರ ಸೀಮೆಗೆ ಜೋಡಿಸಲು ಹವಣಿಸುತ್ತಿದ್ದಾರೆ! ನಮ್ಮ ಜಿಲ್ಹೆಯ ಉನ್ನತಿಯ ದೃಷ್ಟಿ ಕರ್ನಾಟಕದ ಈ ನಾಯಕರಿಗೆ ಇರುವದಿಲ್ಲ! ಕಾರವಾರ ಬಂದರ ನಿರ್ಮಾಣ ಹೊಂದಿದರೆ ಅದು ಕರ್ನಾಟಕರಾಜ್ಯದ ಕಡು ವೈರಿಯಾದ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿಹೋಗ ಜಗತ್ತಿಗೆ ಅನರ್ಥವಾಗುವದೆಂದು ಕರ್ನಾಟಕ–ರಾಜ್ಯವಾದಿಗಳು ಬಿಂಬಿಸಿಕೊಂಡಿದ್ದಾರೆ. ಕಾರವಾರಕ್ಕಿಂತ ಭಟಕಳದ ಮೇಲ್ಮೆಂತ್ತ ಕಾಣಲು ಈ ದೃಷ್ಟಿಕೋನವೇ ಕಾರಣ. ನಮ್ಮ ಜಿಲ್ಹೆಯ ಪರಿಸ್ಥಿತಿಯನ್ನು ಪರಾಂಬರಿಸಿ ಅದನ್ನು ಉದ್ಧರಿಸುವ ಸಂಕಲ್ಪ ಮಾಡಿ ಬಂದರ ನಿರ್ಮಾಣದ ಆಲೋಚನೆ ಮಾಡಿದರೆ, ಭಟಕಳ ಬಂದರವನ್ನು ಯಾರೂ ಕೈಕೊಳ್ಳಲಿಕ್ಕಿಲ್ಲ. ಮೇಲಾಗಿ ಭಟಕಳ ಬಂದರದಲ್ಲಿ ಒಂದು ದೊಡ್ಡ ದೋಷವುಂಟೆಂದು ತಜ್ಞರ ಅಭಿಪ್ರಾಯವಿದೆ. ಸಮುದ್ರ ಒಳಸೇರುವಾಗ ಭಟಕಳದಲ್ಲಿ ಉಂಟಾದ ಆಖಾತದ ನಮೂನೆಯ ಪ್ರದೇಶದಲ್ಲಿ ನೀರು ಆಳವಾಗಿ ನಿಲ್ಲುವದಿಲ್ಲವೆಂದೂ ಆ ಪ್ರದೇಶದೊಳಗಿನ ಉಸುಬನ್ನು ತೆಗ್ಗಿಸಿ ನೀರನ್ನು ನಿಲ್ಲಿಸಿದ್ದಲ್ಲಿ ಪರ್ವಾರು ತಿಂಗಳುಗಳೊಳಗೆ ಪುನಃ ಉಸುಬು ತುಂಬಿ ಆ ಪ್ರದೇಶದ ಆಳ ತುಂಬಿ ಬರುತ್ತದೆಂದೂ ಹೇಳುತ್ತಾರೆ. ಇಂಥ ಬಂದರ ದೊಡ್ಡ ದೊಡ್ಡ ಹಡಗಗಳ ನಿಲ್ದಾಣವಾಗಲು ಅನರ್ಹವಿದೆ. ಕಾರವಾರದಲ್ಲಿ ಇಂಥ ಅನಾನುಕೂಲತೆಗಳಿಲ್ಲ. ಬಂದರದ ಆಖಾತ ದೇಶವು ಆಳವಿದ್ದು ದೊಡ್ಡ ದೊಡ್ಡ ಹಡಗಗಳು ಬರುಗಾಳಿಯಲ್ಲಿ ಸಹ ಕಿರಿ–ನೀರಿನಲ್ಲಿಯಂತೆ ಸುರಕ್ಷಿತ ನಿಲ್ಲಬಲ್ಲವು. ಆಖಾತದ ಎರಡೂ ಪಕ್ಕಗಳಲ್ಲಿರುವ ಗುಡ್ಡಗಳು ಹಡಗಗಳನ್ನು ಬಿರುಗಾಳಿಯಿಂದ ರಕ್ಷಿಸುತ್ತವೆ. ಯಾವದೇ ದೃಷ್ಟಿಯಿಂದ ವಿಚಾರಿಸಿದರೂ ಭಟಕಳಕ್ಕಿಂತ ಕಾರವಾರ ಮೇಲು. ಕರ್ನಾಟಕದ ನಾಯಕರು ಪ್ರಾಂತೀಯತೆಯ ಕನ್ನಡಕವನ್ನು ತೆಗೆದಿಟ್ಟು, ನಿಷ್ಪಕ್ಷಪಾತದಿಂದ ಈ ಸಮಸ್ಯೆಯನ್ನು ವಿಚಾರಿಸಿ, ಕಾರವಾರದ ಅಭಿವೃದ್ಧಿಗೂ ಜಿಲ್ಹೆಯ ಅಭಿವೃದ್ಧಿಗೂ ಕಾರಣರಾಗಬೇಕಾಗಿ ನಮ್ಮ ವಿನಂತಿಯಿದೆ.

೪. ಮುಂಬಯಿ ಸರಕಾರವು ಜುಲಾಯಿ ತಾ. ೧೦ಕ್ಕೆ ಒಂದು ಠರಾವನ್ನು ಹೊರಡಿಸಿ, ನಮ್ಮ ಜಿಲ್ಹೆಯ ಶಿಕ್ಷಣ ಕ್ರಮದಲ್ಲಿ ವಿಪರೀತ ಕ್ರಾಂತಿಯನ್ನುಂಟು ಮಾಡಿದೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ. 3/-ರಂತೆ ಬಡ್ಡಿ.

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/–ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೭–೭–೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ.

ಕಾಂಗ್ರೆಸ-ರಾಜಕಾರಣದಲ್ಲಿ ನಮ್ಮ ಜಿಲ್ಲೆ ಕರ್ನಾಟಕ-ವಿಭಾಗಕ್ಕೆ ಸೇರಿಸಲ್ಪಟ್ಟಿತ್ತು, ಆ ಕಾಲದಲ್ಲಿ ಪ್ರಾಂತೀಯತೆಯ ಭಾವನೆಯಿದ್ದಿಲ್ಲ ಸಂಯುಕ್ತ ಕರ್ನಾಟಕ, ವಿಶಾಲ ಕರ್ನಾಟಕ, ನವಕರ್ನಾಟಕ, ಮಹಾ ಕರ್ನಾಟಕ, ಮೊದಲಾದ ಸ್ವತಂತ್ರ ಕರ್ನಾಟಕ ಸಾಮ್ರಾಜ್ಯಸ್ಥಾಪನೆಯ ವಿಚಾರಗಳ ಆಭರ್ಾಟವಿರಲಿಲ್ಲ ನಿಜಕರ್ನಾಟಕಕ್ಕೆ ಈ ಪ್ರದೇಶ ಸಮೀಪವಿದ್ದದರಿಂದ ಈ ಜಿಲ್ಲೆ ಕರ್ನಾಟಕದಲ್ಲಿ ಸೇರಿಸೋಣಾಗಿತ್ತೆಂದು ಸಾಮಾನ್ಯವಾಗಿ ಹೇಳಬಹುದು ರಾಜ್ಯದಾಡಳಿತದಲ್ಲಿ ವ್ಯತ್ಯಾಸವಾಗದ್ದರಿಂದಲೂ, ಇದೇ ಪ್ರಾಂತದಲ್ಲಿ ಮುಂಬಯಿಯಿಂದಲೇ ರಾಜ್ಯಕಾರಭಾರ ನಡೆಯುತ್ತಿದ್ದದರಿಂದಲೂ ಆ ಕಾಲದಲ್ಲಿ ಯಾರೂ ಈ ಸೇರ್ಪಡೆಗೆ ಆಕ್ಷೇಪ ಮಾಡಲಿಲ್ಲ ಆದರೆ ಇತ್ತಲಾಗಿ ಪ್ರಾಂತೀಯ ದುರಭಿಮಾನ ಮಿಗಿಲಾಗಿರುವದರಿಂದ ನಮ್ಮ ಜಿಲ್ಹೆಯವರಿಗೆ ಬಹಳ ಕಷ್ಟವಾಗಹತ್ತಿದೆ ನಮ್ಮ ಜಿಲ್ಹೆಯ ದಕ್ಷಿಣ ಭಾಗದೊಳಗೆ ಕನ್ನಡ ಭಾಷೆಯ ಪ್ರಾಬಲ್ಯವಿದೆ ಉತ್ತರ ಭಾಗದೊಳಗೆ ಕೊಂಕಣಿ-ಮರಾಠಿಗಳ ಪ್ರಾಬಲ್ಯವುಂಟು ಗೋವಾಪ್ರಾಂತಕ್ಕೆ ಸಮೀಪವಿರುವ ಗ್ರಾಮಗಳಲ್ಲಿ ಕನ್ನಡ ಬಲ್ಲವರು ತೀರ ಕಡಿಮೆ ಆ ಕಡೆಯ ಪ್ರದೇಶದಲ್ಲಿ ಮರಾಠಿ ಶಾಲೆಗಳುಂಟು ಇಲ್ಲಿಯ ತನಕ ಮರಾಠಿ ಶಾಲೆಗಳಿವೆ ಹೊಸ ಸರಕಾರದ ಠರಾವಿನಂತೆ ಈ ಶಾಲೆಗಳನ್ನು ಈಗ ಕನ್ನಡ ಶಾಲೆಗಳಾಗಿ ರೂಪಾಂತರ ಹೊಂದಬೇಕಾಗಿದೆ! ಇನ್ನು ಮುಂದೆ ಸರಕಾರಿ ಶಾಲೆಗಳಲ್ಲಿ ಕನ್ನಡ ಭಾಷೆ ಒತ್ತಾಯದಿಂದ ಕಲಿಸಲ್ಪಡುವದು ಕೊಂಕಣಿ ಮರಾಠಿ ಭಾಷೆ ಕಲಿಯಬಯಸುವವರಿಗಾಗಿ ಪ್ರತ್ಯೇಕ ಶಾಲೆ ತೆಗೆದರೂ ಆ ಶಾಲೆಗಳ ಮಕ್ಕಳು ಕನ್ನಡ ಕಲಿತೇ ತೀರಬೇಕೆಂಬ ನಿರ್ಬಂಧ ಮಾಡಲಾಗುತ್ತಿದೆ! ಆದರಿಂದ ಕನ್ನಡ ಕಲಿಯಬಯಸದವರು ಬೇರೆ ಮಹಾರಾಷ್ಟ್ರ ಪ್ರಾಂತಕ್ಕೆ ಗುಳೆ ಹೋಗುವ ಪ್ರಸಂಗ ಬಂದಿದೆ!

ಈ ಪ್ರಸಂಗವನ್ನು ತಪ್ಪಿಸಲು ಸರಕಾರಕ್ಕೆ ಸಾಧ್ಯವುಂಟು ಮುಂಬಯಿ ಪಟ್ಟಣದಲ್ಲಿ ಬೇರೆ ಬೇರೆ ಭಾಷೆಗಳಿರುವದರಿಂದ ಅಲ್ಲಿಯ ಶಿಕ್ಷಣ-ಸಂಸ್ಥೆಗಳಿಗೆ ಈ ಠರಾವು ಅನ್ವಯಿಸುವದಿಲ್ಲವಾಗಿ ಹೇಳಲ್ಪಟ್ಟಿದೆ ಮುಂಬಯಿ ಪಟ್ಟಣದ ಬಗ್ಗೆ ಸರಕಾರವು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲು ಆಲೋಚಿಸಿದ್ದು ನಮ್ಮ ಕಾನಡಾ ಜಿಲ್ಹೆಯ ಪರಿಸ್ಥಿತಿಯಾದರೂ ತಕ್ಕಮಟ್ಟಿಗೆ ಮುಂಬಯಿಯಂತೆಯೇ ಉಂಟು. ಈ ವಿಚಾರವನ್ನು ಸರಕಾರವು ಮಾಡತಕ್ಕದ್ದು ಸರಕಾರವು ಈಗ ಒತ್ತಾಯದ ಶಿಕ್ಷಣವನ್ನು ಪ್ರಚಾರಗೊಳಿಸಿದೆ ಮಕ್ಕಳಿಗೆ ಸ್ವಚ್ಛ ವಿಶದವಾಗಿ ಗ್ರಹಿಸಲು ಅನುಕೂಲವಿದ್ದ ಭಾಷೆಯಲ್ಲಿ ಶಿಕ್ಷಣ ಕೊಡುವದಕ್ಕೆ ಸರಕಾರವು ಕರ್ತವ್ಯಬದ್ಧವಿದೆ. ಕೋಮಲ ಮನಸ್ಸುಗಳಿಗೆ ಪರಭಾಷೆಯನ್ನು ಕಲಿಯುವ ಮನಃಶಕ್ತಿ ಪ್ರಾಪ್ತವಾಗುವದಿಲ್ಲ ಒತ್ತಾಯದ ಶಿಕ್ಷಣದ ಮುನ್ನಂತರದಲ್ಲಿ ಚಿಕ್ಕ ವಯಸ್ಸಿನ ಬಾಲಕರಿಗೆ, ಅವರವರ ಸಂಸ್ಕಾರಗಳಂತೆ, ಸಹಜವಾಗಿ ಬರುವ ಭಾಷೆಯಿಂದ ಶಿಕ್ಷಣ ಕೊಟ್ಟು ಅವರ ಮನಸ್ಸು ಪ್ರಬಲವಾದ ಬಳಿಕವೇ ಅನ್ಯ ಭಾಷೆಗಳನ್ನು ಕಲಿಸುವ ಏರ್ಪಾಟು ಮಾಡುವದು ಹಿತ ಮಾತೃಭಾಷೆಯಿಂದ ಶಿಕ್ಷಣ ಕೊಡಬೇಕೆಂಬ ಪ್ರಚಾರ ಈಗ ಸರ್ವಮಾನ್ಯವಾಗಿದೆ ಮಾತೃಭಾಷೆಯಿಂದ ಕಲಿಸಿದ ವಿಷಯಗಳನ್ನು ಸುಲಭವಾಗಿ ಗ್ರಹಿಸಲು ಅನುಕೂಲವಾಗುತ್ತದೆಂದೂ, ಕಲಿಸಿದ ವಿಷಯಗಳು ಮನೋಭೂಮಿಯಲ್ಲಿ ದೃಢವಾಗಿ ನಾಟುತ್ತವೆಂದೂ ಶಿಕ್ಷಣ-ತಜ್ಞರ ಅಭಿಪ್ರಾಯವಿದೆ, ಇದರಿಂದಲೇ ಇಂಗ್ಲಿಷ ಭಾಷೆಯ ಮಾಧ್ಯಮವನ್ನು ಹಾಯ್ ಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ನಷ್ಟಪಡಿಸುವ ಕ್ರಮವು ಪ್ರಾರಂಭವಾಗಿದೆ ಹೀಗಿರುವಾಗ ಮಾತೃಭಾಷೆಯನ್ನು ಅಲಕ್ಷಿಸಿ ಪ್ರಾದೇಶಿಕ ಭಾಷೆಯನ್ನು ರೂಢಗೊಳಿಸಬೇಕೆಂದೂ, ಪ್ರಾದೇಶಿಕ ಭಾಷೆಯ ವ್ಯಕ್ತಿಯನ್ನು ಗ್ರಹಿಸಿ ಯಾವ

ದೊಂದು ಪ್ರದೇಶದಲ್ಲಿ ಸೇರ್ಪಡೆಯಾದವರೆಲ್ಲ ಒಂದೇ ಭಾಷೆಯವರೆಂದೆಣಿಸಿ ಎಲ್ಲರೂ ಆ ಭಾಷೆಯನ್ನು ಕಲಿಯಲೇಬೇಕೆಂದೂ ಒತ್ತಾಯಪಡಿಸುವದು ಸರಿಯಾಗಲಿಕ್ಕಿಲ್ಲ ಹೀಗೆ ಮಾಡಿದರೆ ಪರಂಪರೆಯಿಂದ ನಡೆದು ಬಂದ ಸಂಸ್ಕೃತಿ ನಾಶವಾಗುತ್ತದೆ ಹಿಂದೆ ಜಾರಿಗೆಬರುವ ಸಂಪ್ರದಾಯವಿತ್ತು ಪೋರ್ತುಗೀಜರು ಹಿಂದುಸ್ಥಾನದ ಮೇಲೆ ದಾಳಿ ಮಾಡಿದಾಗ ಈ ಪ್ರದೇಶದಲ್ಲಿ ಜಾರಿಗೆಬರಹೋಗುತ್ತಿರುವದನ್ನು ಜಾರಿಗೆಟ್ಟವರಿಗೆ " Canarim " ಕೆನರಿಮ್ ಎಂದೂ, ಜಾರಿಗೆಯವರಿಗೆ "ಕೊಂಕಣಿಗ"ರೆಂದೂ ಉಭಯತರು ಆಡುವ ಮೂಲ ಭಾಷೆಗೆ ಕೊಂಕಣಿಯೆಂದೂ ಪೋರ್ತುಗೀಜರು ಹೆಸರಿಟ್ಟರೆಂದು ಗೋವೆಯ ಇತಿಹಾಸ ಸಂಶೋಧಕರಾದ ಶ್ರೀ ಅ ಕಾ ಪ್ರಿಯೋಳಕರು ಬರೆದಿರುತ್ತಾರೆ ಇದರಿಂದ ನಮ್ಮ ಜಿಲ್ಹೆಗೆ ಕೆನರಾ (Canara) ಅಂದರೆ ಜಾರಿಗೆಟ್ಟವರಪ್ರದೇಶ ಎಂಬ ಹೆಸರು ಬಂತು ಈಗಲೂ ದಕ್ಷಿಣ ಕಾನಡಾ ಜಿಲ್ಹೆಯಲ್ಲಿ Canara ಕೆನರಾ ಶಬ್ದವನ್ನು "C" "K" ಶಬ್ದದಿಂದ ಪ್ರಾರಂಭಿಸಿ ಬರೆಯುತ್ತಾರೆ ನಮ್ಮಲ್ಲೂ ಹಿಂದೆ ಇದೇ ಸಂಪ್ರದಾಯವಿತ್ತು, ಆದರೆ ಜಿಲ್ಹೆಯನ್ನು ಇಬ್ಭಾಗಗೊಳಿಸಿ, ಉತ್ತರ ಭಾಗವನ್ನು

ಮುಂಬಯಿ ಅಧಿಕಾರಕ್ಕೆ ಸೇರಿಸಿದಂದಿನಿಂದ 'C' ಅಕ್ಷರದ ಲೋಪವಾಗಿ "K" ಅಕ್ಷರ ಬಂತು ಈ ಅಕ್ಷರ-ವ್ಯತ್ಯಾಸಕ್ಕೆ ಕಾರಣವೇನೆಂದು ತಿಳಿಯುವದಿಲ್ಲ ಕಾನಡಾ ಜಿಲ್ಹೆ ಕನ್ನಡ ಜಿಲ್ಹೆಯಲ್ಲೆಂದೂ ಹಾಗೆ ಹೆಸರಿನ ಅರ್ಥ ಮಾಡುವದು ಅಶುದ್ಧವೆಂದೂ ಈ ವಿವರಣೆಯಿಂದ ಸ್ಪಷ್ಟವಾಗುತ್ತದೆ ನಿಜ ಕರ್ನಾಟಕದಲ್ಲಿ ಕಾನಡಾ ಜಿಲ್ಹೆ ಸ್ವಾಭಾವಿಕವಾಗಿ ಸೇರ್ಪಡೆಯಾಗುವದಿಲ್ಲವೆಂದು ವಿಚಾರವಂತರು ಸಹ ಒಪ್ಪತಕ್ಕ ವಿಷಯ ಪೋರ್ತುಗೀಜ ದಾಳಿಗಾರರ ಕಾಲದಲ್ಲಿ ನಮ್ಮ ಜಿಲ್ಹೆ ಜಾರಿಗೆಟ್ಟ ಪ್ರದೇಶವೆಂದು ಖ್ಯಾತಿಗೊಂಡಿತು ಈಗಿನ ಲೋಕರಾಜ್ಯದ ಕಾರಭಾರದಲ್ಲಿ ನಮ್ಮ ಜಿಲ್ಹೆಯು ಭಾಷೆಗೆಟ್ಟ ಪ್ರದೇಶವಾಗುವ ಭೀತಿಯುಂಟಾಗಿದೆ ರಾಷ್ಟ್ರೀಯ ಸಭೆಯು ಸಕಲ ಸಮಾಜಗಳ ಸಂಸ್ಕೃತಿಗಳನ್ನು ಕಾಪಾಡಲಿಕ್ಕೂ ಅವನ್ನು ಅಭ್ಯುದಯಗೊಳಿಸಲಿಕ್ಕೂ ಬದ್ಧವಿದೆ ಸಕಲರ ಹಿತ-ರಕ್ಷಣೆ ಮಾಡುವದು ರಾಷ್ಟ್ರೀಯ ಸಭೆಯ ಧರ್ಮವಿದೆ ಅಂಥ ಸಭೆಯ ಅಧೀನವಾಗಿರುವ ಕಾಂಗ್ರೆಸ-ರಾಜ್ಯಭಾರದಲ್ಲಿ ಇಂಥ ಬಲಾತ್ಕಾರದ ನಿರ್ಧಾರವಾಗುವದು ಕೇವಲ ಅನುಚಿತ! ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರು ಸಕಲ ಪರಿಸ್ಥಿತಿಯನ್ನು ಆಳವಾಗಿ ಪುನಃ ಪರಾಂಬರಿಸಿ, ಈಗಿನ ಶಿಕ್ಷಣದ ಆಧಳಿತದಲ್ಲಿ ಸಂಸ್ಕೃತಿ ಘಾತಕ, ಪ್ರಾಂತೀಯತೆಯ ವ್ಯತ್ಯಾಸ ಮಾಡುವ ಧೋರಣೆಯನ್ನು ತಡೆಹಿಡಿಯಬೇಕೆಂದು ವಿನಂತಿಯಿದೆ

ಹೊಸ ಒಕ್ಕಲತನದ ಕಾನೂನು.

ಭೂಕಂದಾಯದ ಮಂತ್ರಿಗಳಾದ ಶ್ರೀ॥ ಮುರಾರಜಿ ದೇಸಾಯಿಯವರು ತಾ ೨೨ ೭ ೪೮ನೇಗೆ ತಯಾರಿಸಿದ ಹೊಸ ಒಕ್ಕಲತನದ ಕಾನೂನಿನ ಮಸೂದೆ ತಾ ೨೬ ೭ ೪೮ರ ವಿಶೇಷ ಸರಕಾರಿ ಗ್ಯಾಝೆಟಿನಲ್ಲಿ ಪ್ರಕಟಿಸಲ್ಪಟ್ಟಿದೆ ಅದರ ವಿವರಗಳು ಈ ಕೆಳಗಿನಂತೆ ಇವೆ -

ಬೇಸಾಯದ ಭೂಮಿಗಳ ಒಡೆಯ-ಒಕ್ಕಲಿಗರೊಳಗಿನ ಸಂಬಂಧಗಳನ್ನು ನಿರ್ಣಯಿಸುವದಕ್ಕಾಗಿ, ಒಕ್ಕಲಿಗರ ಆರ್ಥಿಕ, ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಮತ್ತು ಬೇಸಾಯದ ಭೂಮಿಯ ಪೂರ್ಣ ಉಪಯೋಗವನ್ನು ದೃಢಪಡಿಸುವದಕ್ಕಾಗಿ ಮುಂಬಯಿ ಸರಕಾರವು ಬೇಸಾಯದ ಭೂಮಿಗಳ ಆಡಳಿತೆಯನ್ನು ವಹಿಸಿಕೊಳ್ಳುವದು ಯುಕ್ತವೆಂದು ತೋರಿದ್ದರಿಂದ ಆ ಬಗ್ಗೆ ಈ ಕಾನೂನಿನ ಏರ್ಪಾಟು ಮಾಡಲಾಗಿದೆಯೆಂದು ಪ್ರಸ್ತಾವನೆಯಲ್ಲಿ ಹೇಳಲ್ಪಟ್ಟಿದೆ

೧ನೇ ಕಲಮಿನಲ್ಲಿ ಕಾನೂನಿನ ಹೆಸರುಂಟು ಇಡೀ ಮುಂಬಯಿ ಪ್ರಾಂತಕ್ಕೆ ಇದು ಅನ್ವಯಿಸುತ್ತದೆಂಬ ಆಜ್ಞಾಪನೆಯುಂಟು

೨ನೇ ಕಲಮಿನಲ್ಲಿ ಬೇರೆ ಬೇರೆ ಶಬ್ದಗಳ ವ್ಯಾಖ್ಯೆಗಳುಂಟು ಬೇಸಾಯ, ಬೇಸಾಯಗಾರ, ಸಹಕಾರ ಸಂಘ, ಸಾಗುವಳಿ, ಸ್ವಂತ ಸಾಗುವಳಿ, ಭೂ-ಸುಧಾರಣೆ, ಭೂಮಿ, ಭೂ-ಧಾರಣ ಮಾಡುವವ, ಮಾಮಲೇದಾರ, ಇಸಮು, ಬೇಸಾಯದ ಲಾಭ ಸಂರಕ್ಷಿತ ಒಕ್ಕಲಿಗ, ಯೋಗ್ಯ ಗೇಣಿ, ಗೇಣಿ, ಒಕ್ಕಲತನ, ಒಕ್ಕಲಿಗ, ಒಡೆಯ, (ನ್ಯಾಯಾಧಿಕಾರಿಗಳ) ಪಂಚಮಂಡಲ (Tribunal), ವರ್ಷ ಇತ್ಯಾದಿ ಶಬ್ದಗಳ ವ್ಯಾಖ್ಯೆಗಳಿವೆ ಸ್ವತಃ ಸಾಗುವಳಿ ಮಾಡುವವನು ರೈತನೆಂದೂ ಅತನೇ ಒಕ್ಕಲಿಗನಾಗುತ್ತಾನೆಂದೂ ಈ ವ್ಯಾಖ್ಯೆಗಳಲ್ಲಿ ಹೇಳಲ್ಪಟ್ಟಿದೆ ಈ ಎರಡೂ ಕಲಮುಗಳು ೧ನೇ ಭಾಗದಲ್ಲಿವೆ

೨ನೇ ಭಾಗದಲ್ಲಿ ಒಕ್ಕಲತನದ ಸಾಮಾನ್ಯ ವರ್ಣನೆ ಹೇಳಲ್ಪಟ್ಟಿದೆ ಸ್ಥಾವರಾಸ್ತಿಯ ಸಂಬಂಧೀ ನಿಯಮಗಳನ್ನು ನಿಯಂತ್ರಿಸುವ ಹಿಂದುಸ್ಥಾನ ಸರಕಾರದ (ಟ್ರಾನ್ಸಫರ ಆಫ್ ಪ್ರಾಪರ್ಟಿ ಕಾನೂನಿನ ೫ನೇ ಭಾಗದಲ್ಲಿ ಇರುವ, ಒಡೆಯ-ಒಕ್ಕಲಿಗರೊಳಗಿನ ಸಂಬಂಧಗಳನ್ನು ನಿರ್ದಿಷ್ಟಗೊಳಿಸುವ, ಕಾನೂನುಗಳು) ಒಕ್ಕಲತನದ ಕಾನೂನಿನ ಒಡೆಯ ಒಕ್ಕಲಿಗರಿಗೆ ಅನ್ವಯಿಸುತ್ತವೆಂದು ೩ನೇ ಕಲಮಿನಲ್ಲಿ ಹೇಳಲಾಗಿದೆ

೪ನೇ ಕಲಮಿನಲ್ಲಿ ಒಕ್ಕಲಿಗನ ವರ್ಣನೆಯುಂಟು ಭೂಮಿಯ ಉತ್ಪತ್ತಿಯಲ್ಲಿ ಪಾಲು ಪಡೆಯುವ ಮತ್ತು ಸ್ವಂತ ಸಾಗುವಳಿ ಮಾಡುವ ಜನರೆಲ್ಲ ಒಕ್ಕಲಿಗರೆಂದು ಈ ಕಲಮಿನಲ್ಲಿ ಹೇಳಿದೆ

೧೦ ವರ್ಷಗಳಿಗೂ ಕಡಿಮೆಯಾಗಿ ಯಾವದೊಂದು ಒಕ್ಕಲತನವಿರಬಾರದೆಂದು ೫ನೇ ಕಲಮಿನಲ್ಲಿ ವಿಧಿಸಲಾಗಿದೆ ಆದರೆ ಒಕ್ಕಲಿಗನಿಗೆ ಒಕ್ಕಲತನ ಬೇಡವಾದಲ್ಲಿ ಆತನು ಒಡೆಯನಿಗೆ ೧೦ ವರ್ಷಗಳ ಅವಧಿ ತೀರುವ ಮುಂಚೆ ಭೂಮಿ ಒಪ್ಪಿಸಬಹುದು ೧೦ ವರ್ಷಗಳೊಳಗೆ ಒಕ್ಕಲತನ ಅಂತ್ಯಗೊಳಿಸಲು ಒಡೆಯನಿಗೆ ಮಾತ್ರ ಹಕ್ಕಿಲ್ಲ

ನೀರಾವರಿ ಭೂಮಿಯಲ್ಲಿ ೧/೪ಕ್ಕೂ, ಇತರ ಭೂಮಿಗಳಲ್ಲಿ ೧/೩ಕ್ಕೂ ಹೆಚ್ಚಿಗೆ ಉತ್ಪನ್ನವನ್ನು ಗೇಣಿಯೆಂದು ಪಡೆಯಲು ಒಡೆಯನಿಗೆ ಹಕ್ಕಿಲ್ಲೆಂದು ೬ನೇ ಕಲಮಿನಲ್ಲಿ ಹೇಳಿದೆ ಈ ಪ್ರಮಾಣವನ್ನು ಕಡಿಮೆ ಮಾಡಲಿಕ್ಕೆ ಇಲ್ಲವೆ ಗೇಣಿಯ ಮೂಲಾಧಾರವನ್ನು ಬದಲಿಸಲಿಕ್ಕೆ ಪ್ರಾಂತಿಕ ಸರಕಾರಕ್ಕೆ ಹಕ್ಕುಂಟು

೭ನೇ ಕಲಮಿನಲ್ಲಿ ಗೇಣಿಯ ಮೊಬಲಗು ನಿರ್ಣಯಿಸಲ್ಪಟ್ಟಿದೆ ಆದರೆ ಈ ಮೊಬಲಗು ೬ನೇ ಕಲಮಿನಲ್ಲಿ ನಿರ್ದಿಷ್ಟ ಮಾಡಿದ ಪ್ರಮಾಣವನ್ನು ಮಿಕ್ಕಕೂಡದು

ಪಾಲು-ಸಾಗವಳಿಯ ಭೂಮಿಯಲ್ಲಿ ಒಡೆಯನು ಪಡೆಯುವ ಪಾಲನ್ನು ನಗದಿಯಲ್ಲಿ ರೂಪಾಂತರಿಸಲು ಪ್ರಾಂತಿಕ ಸರಕಾರಕ್ಕೆ ೮ನೇ ಕಲಮಿನಲ್ಲಿ, ಅಧಿಕಾರ ಕೊಡಲ್ಪಟ್ಟಿದೆ ಸರಕಾರವು ವಿಧಿಸಿದ ದರಗಳನ್ನು ೫ ವರ್ಷಗಳ ತನಕ ಬದಲಿಸಬರುವದಿಲ್ಲ, ಸರಕಾರವು ನಿರ್ಣಯಿಸಿದ ದರಕ್ಕೂ ಮಿಕ್ಕಿ ಒಡೆಯನು ಒಕ್ಕಲಿಗನಿಂದ ಹಣ ವಸೂಲ ಪಡೆಯಕೂಡದು

ಒಡೆಯನಲ್ಲಿ ಯಾವದೇ ಬಗೆಯ ನೌಕರಿ ಯಾ ಸೇವೆ ಮಾಡುವ ಶರ್ತದ ಮೇಲೆ ಭೂಮಿ ಪಡೆದ ಒಕ್ಕಲಿಗನ ಮಾಮಲೇದಾರಂಗೆ ಅರ್ಜಿ ಮಾಡಿ, ತನ್ನಿಂದ ಸ್ವೀಕರಿಸಾದ ನಗದಿ ಗೇಣಿಯನ್ನು ನಿರ್ಣ

ಸಾಮಾನ್ಯ ಒಕ್ಕಲಿಗರ ಹಕ್ಕು-ಬಾಧ್ಯತೆಗಳು; ದಿವಾಣಿ ಜಜ್ಜರ ಅಧಿಕಾರ ರದ್ದು!

ಯಿಸಿಕೊಳ್ಳಬೇಕೆಂದು ೯ನೇ ಕಲಮಿನಲ್ಲಿ ವಿಧಿಸಿದೆ

ಮೇಲ್ಕಾಣಿಸಿದ ಕಲಮುಗಳಲ್ಲಿ ವಿಧಿಸಿದ ಗೇಣಿಗಿಂತ ಹೆಚ್ಚಿಗೆ ಗೇಣಿಯನ್ನು ಯಾವನೊಬ್ಬ ಒಡೆಯನು ಪಡದರೆ ಹೆಚ್ಚಿಗೆ ಸಂದ ಮೊಬಲಗನ್ನು ನಷ್ಟ ಸಹಿತ ವಸೂಲ ಪಡೆಯಲಿಕ್ಕೆ ಒಕ್ಕಲಿಗನಿಗೆ ೧೦ನೇ ಕಲಮಿನಲ್ಲಿ ಹಕ್ಕು ಕೊಡಲಾಗಿದೆ

ನಿರ್ದಿಷ್ಟ ಗೇಣಿಯ ಹೊರತು ಬೇರೆ ಯಾವದೇ ತರದ ಏನೊಂದೂ ಪ್ರಯೋಜನ ಒಕ್ಕಲಿಗನಿಂದ ಪಡೆಯುವ ಹಕ್ಕು ಒಡೆಯನಿಗೆ ಇರುವದಿಲ್ಲವಾಗಿ ೧೧ನೇ ಕಲಮು ಸಾರುತ್ತಿದೆ

ಯೋಗ್ಯ ಗೇಣಿ ನಿಶ್ಚಯಿಸುವ ಕ್ರಮ ೧೨ನೇ ಕಲಮಿನಲ್ಲಿ ವಿವರಿಸಲ್ಪಟ್ಟಿದೆ ವಿವಾದವುಂಟಾದಲ್ಲಿ ಮಾಮಲೇದಾರರು ಯೋಗ್ಯ ಗೇಣಿಯನ್ನು ನಿಶ್ಚಯಿಸುವರು ನೆರಹೊರೆಯ ಭೂಮಿಯ ಹೊಲಗಳ ಗೇಣಿಯ ಮಾನ, ಬೇಸಾಯದ ಲಾಭ, ಬೆಳೆಗಳ ದರ, ಒಡೆಯನು ಮಾಡಿದ ಭೂ ಸುಧಾರಣೆ, ಭೂಕಂದಾಯ ಮೊದಲಾದವುಗಳನ್ನೆಲ್ಲ ಲಕ್ಷ್ಯಕ್ಕೆ ತಂದು ಮಾಮಲೇದಾರರು ಯೋಗ್ಯ ಗೇಣಿ ನಿಶ್ಚಯಿಸಿ ಕೊಡಬೇಕು ಮಾಮಲೇದಾರರ ಹುಕುಮಿನ ವಿರುದ್ಧ ಕಲೆಕ್ಟರರ ಕಡೆ ಅಪೀಲು ಮಾಡಲಿಕ್ಕೆ ಬರುತ್ತಿದೆ ಈ ನಿರ್ಣಯ ೫ ವರ್ಷಗಳ ವರೆಗೆ ಊರ್ಜಿತವಿರುವದು [ಸದ್ಯದ ಕಾನೂನಿನಲ್ಲಿ ೧ನೇ ವರ್ಗದ ದಿವಾಣಿ ಜಜ್ಜರಿಗಿದ್ದ ಅಪೀಲ ನಿರ್ಣಯದ ಅಧಿಕಾರ ಈ ಹೊಸ ಕಾನೂನಿನಲ್ಲಿ ಕಲೆಕ್ಟರರಿಗೆ ಕೊಡಲ್ಪಟ್ಟಿದೆ]

ಸರಕಾರವು ಭೂಕಂದಾಯವನ್ನು ಯಾವದೊಂದು ಪ್ರಮಾಣದಿಂದ ಸೂಟ ಬಿಟ್ಟಲ್ಲಿ ಒಡೆಯನು ಆ ಪ್ರಮಾಣದಿಂದಲೇ ತನ್ನ ಒಕ್ಕಲಿಗನಿಗೆ ಗೇಣಿಯಲ್ಲಿ ಸೂಟ ಬಿಡಬೇಕು. ಒಡೆಯನು ಹೆಚ್ಚಿಗೆ ಗೇಣಿ ವಸೂಲ ಪಡಕೊಂಡಲ್ಲಿ ಅದನ್ನು ಪರತ ಪಡಕೊಳ್ಳುವ ಹಕ್ಕು, ೧೩ನೇ ಕಲಮಿನಲ್ಲಿ ಒಕ್ಕಲಿಗನಿಗೆ ಕೊಡಲ್ಪಟ್ಟಿದೆ

ಒಕ್ಕಲತನವನ್ನು ಅಂತ್ಯಪಡಿಸಬರುವ ಕಾರಣಗಳನ್ನು ೧೪ನೇ ಕಲಮಿನಲ್ಲಿ ವಿವರಿಸಲಾಗಿದೆ ತೀರ್ವೆಯ ಕೊನೆಯ ಹಪ್ತೆ ವಸೂಲ ಕೊಡುವ ಅವಧಿ ಮುಗಿದ ೧೫ ದಿವಸಗಳಲ್ಲಿ ಗೇಣಿಯನ್ನು ಕೊಡದಿದ್ದರೆ, ಭೂಮಿಯನ್ನು ಹಾಳುಗೆಡವಿದರೆ, ಒಕ್ಕಲಿಗನು ಸ್ವತಃ ಸಾಗುವಳಿ ಮಾಡದೆ ಹೊಲವನ್ನು ಬೇರೆಯವರಿಗೆ ಗೇಣಿಗೆ ಕೊಟ್ಟರೆ ಅಥವಾ ಬಿನ್-ಶೇತಕಿ ಕೆಲಸಕ್ಕೆ ಉಪಯೋಗಿಸಿದರೆ, ಯೋಗ್ಯ ಕಾರಣಗಳಿಲ್ಲದೆ ಸರಕಾರದಿಂದ ನೇಮಕ ಪಡುವ ಅಧಿಕಾರಿಯು ನಿರ್ಣಯಿಸಬಹುದಾದ ವಿಶಿಷ್ಟ ಬೆಳೆಯನ್ನು ಹೊಲದಲ್ಲಿ ಬೆಳಸಲಿಕ್ಕೆ ಒಕ್ಕಲಿಗನು ತಪ್ಪಿದರೆ ಆ ಒಕ್ಕಲಿಗನ ಗೇಣಿ-ನಾತೆಯನ್ನು ಅಂತ್ಯಗೊಳಿಸಲು ಬರುತ್ತದೆ ೧೦ ವರ್ಷದ ಒಕ್ಕಲಿಗನ ಒಕ್ಕಲತನದ ಅವಧಿ ಮುಗಿದ ಕೂಡಲೆ ತಾನಾಗಿ ಅಂತ್ಯವಾಗುತ್ತದೆ ಈ ನಿರ್ಬಂಧಗಳು ಅಪ್ರಾಯಸ್ಥ ಇಲ್ಲವೆ ವ್ಯಂಗ ಒಕ್ಕಲಿಗರಿಗೆ ಅನ್ವಯಿಸಲಾರವು

ಒಕ್ಕಲತನದ ೧೦ ವರ್ಷಗಳು ಮುಗಿದ ಮೇಲೆ ಒಕ್ಕಲಿಗನಿಂದ ಗೇಣಿಯನ್ನು ಪಡೆದರೆ ಆ ಒಕ್ಕಲಿಗನು ತಿರುಗಿ ೧೦ ವರ್ಷಗಳ ತನಕ ಒಕ್ಕಲಿಗನಾಗಿ ಉಳಿಯಲು ಹಕ್ಕುದಾರನಾಗುವನೆಂದು ೧೫ನೇ ಕಲಮಿನಲ್ಲಿ ಹೇಳಲ್ಪಟ್ಟಿದೆ

ಒಕ್ಕಲಿಗನು ತನ್ನ ಖರ್ಚಿನಿಂದ ಕಟ್ಟಿಸಿದ ವಾಸ್ತವ್ಯದ ಮನೆಯೊಳಗಿಂದ ಆತನನ್ನು ಹೊರಹಾಕಲಿಕ್ಕೆ ಬರುವಂತಿಲ್ಲೆಂದು ೧೬ನೇ ಕಲಮಿನಲ್ಲಿ ಹೇಳಿದೆ ಗೇಣಿಯನ್ನು ಕೊಡದಿದ್ದ ಒಕ್ಕಲಿಗನಿಗೂ ಸ್ವಂತ ಸಾಗುವಳಿಗಾಗಿ ಭೂಮಿಯನ್ನು ಒಡೆಯನಿಗೆ ಬಿಟ್ಟುಕೊಡುವ ಒಕ್ಕಲಿಗನಿಗೂ ಈ ಸೌಲಭ್ಯ ಸಿಗಲಾರದು

ಒಕ್ಕಲಿಗನ ಮನೆಯಿರುವ ಭೂಮಿಯನ್ನು ಒಡೆಯನು ಮಾರುವದಾದಲ್ಲಿ, ಅದನ್ನು ಕೊಳ್ಳುವ ಅಗ್ರ ಹಕ್ಕು ಒಕ್ಕಲಿಗನಿಗೆ ಇರುತ್ತದೆ ಪಂಚ ಮಂಡಳವು ನಿರ್ಣಯಿಸಿ ಕೊಡುವ ಬೆಲೆಗೆ ಒಕ್ಕಲಿಗನು ೩ ತಿಂಗಳಲ್ಲಿ ಅದನ್ನು ಕೊಳ್ಳಬೇಕು ಇಲ್ಲದಿದ್ದರೆ ಒಕ್ಕಲಿಗನ ಹಕ್ಕು ರದ್ದಾಗುವದು ಈ ನಿರ್ಬಂಧವನ್ನು ಅಲಕ್ಷಿಸಿ ನಡೆದ ವ್ಯವಹಾರ ಅಸಿಂಧುವಾಗುತ್ತಿದೆ (ಕಲಮು ೧೭)

ಶೇತಕಿ ಕೂಲಿಕಾರರಿಗೂ, ಕೈಗಾರಿಕೆಯವರಿಗೂ ಈ ಹಕ್ಕುಗಳನ್ನು ಕೊಡುವ ಅಧಿಕಾರ ೧೮ನೇ ಕಲಮಿನಿಂದ ಪ್ರಾಂತಿಕ ಸರಕಾರಕ್ಕೆ ಕೊಡಲ್ಪಟ್ಟಿದೆ

ಒಕ್ಕಲಿಗನು ನೆಟ್ಟ ಮರಗಳ ಫಲೋತ್ಪತ್ತಿಯನ್ನೂ ಕಟ್ಟಿಗೆಯನ್ನೂ ಒಕ್ಕಲಿಗನೇ ಪಡೆಯತಕ್ಕದ್ದು ಯೋಗ್ಯ ಗೇಣಿ ನಿರ್ಣಯಿಸುವಾಗ ಒಕ್ಕಲಿಗನು ನೆಟ್ಟ-ಮರಗಳ ಉತ್ಪನ್ನ ಲೆಕ್ಕದಲ್ಲಿ ಹಿಡಿಯಕೂಡದು. (ಕಲಮು ೧೯)

ಸ್ವಾಭಾವಿಕವಾಗಿ ಭೂಮಿಯಲ್ಲಿ ಬೆಳೆದ ಮರಗಳ ಉತ್ಪನ್ನ ಸಹ ಒಕ್ಕಲಿಗನಿಗೇ ಸಲ್ಲಬೇಕು ಅದರೊಳಗೆ ಒಡೆಯನಿಗೆ ಹಕ್ಕಿಲ್ಲ (ಕಲಮು ೨೦)

ಸೈನ್ಯ ಇಲಾಖೆಯಲ್ಲಿ ಕೆಲಸ ಮಾಡುವ ಒಕ್ಕಲಿಗನು ತನ್ನ ಭೂಮಿಯನ್ನು ಸಾಗುವಳಿ ಮಾಡುವದಿಲ್ಲೆಂಬ ಕಾರಣದ ಮೇಲೆ ಆತನ ಒಕ್ಕಲತನವನ್ನು ಅಂತ್ಯಗೊಳಿಸಲಿಕ್ಕೆ ಬರಬಾರದು (ಕಲಮು ೨೧)

ಗೇಣಿಗೊಪ್ಪಿದ ಭೂಮಿಯ ಗಡಿಕಲ್ಲುಗಳನ್ನು ದುರುಸ್ತ ಇಡುವ ಹೊಣೆ ಒಕ್ಕಲಿಗರ ಮೇಲೆ ಹಾಕಲ್ಪಟ್ಟಿದೆ (ಕಲಮು ೨೨)

ಒಡೆಯ-ಒಕ್ಕಲಿಗರೊಳಗಿನ ವಾದ-ವಿವಾದಗಳ ಮೂಲಕ ಗಜನಿ ಭೂಮಿಗಳ ಕಟ್ಟುಗಳು ದುರುಸ್ತಿಯಾಗದೆ ಭೂಮಿಯು ಹಾಳುಬೀಳುವಲ್ಲಿ ಪ್ರಾಂತಿಕ ಸರಕಾರವು ತಮಗ ಇಷ್ಟ ಕಂಡವರಿಗೆ ಹುಕುಮು ಮಾಡಿ ಸರಕಾರಿ ಖರ್ಚಿನಿಂದ ಅವನ್ನು ದುರುಸ್ತ ಮಾಡಿಸಿಕೊಳ್ಳಬಹುದು ಈ ದುರುಸ್ತಿಯ ಖರ್ಚನ್ನು ಸರಕಾರವು ಪ್ರತ್ಯಕ್ಷ ಕಬಜೆ ಮಾಡುವ ಜನರಿಂದ ಭೂಕಂದಾಯ ಮೋಪಾದಿಯಲ್ಲಿ ವಸೂಲ ಮಾಡುವದು ಈ ಹಣ ಕೊಡುವ ಹೊಣೆಯಿಲ್ಲದಿದ್ದರೂ ತನ್ನ ಹಕ್ಕುಗಳ ರಕ್ಷಣೆಗಾಗಿ ಒಕ್ಕಲಿಗನು ಅದನ್ನು ತೆರುವ ಪ್ರಸಂಗ ಬಂದರೆ ಒಕ್ಕಲಿಗನು ಅದನ್ನು ಸಂಬಂಧಪಟ್ಟವರಿಂದ ವಸೂಲ ಪಡೆಯುವ ಕ್ರಮ ೨೩ನೇ ಕಲಮಿನಲ್ಲಿ ವಿವರಿಸಲ್ಪಟ್ಟಿದೆ

ರೈತನು ಭೂಮಿಯನ್ನು ಅರೂಪಗೊಳಿಸಿದ್ದಾನೆಂಬ ಕಾರಣದಿಂದ ಒಡೆಯನು ಕಬಜಾ ಬೇಡುವದಾದಲ್ಲಿ ೧ ವರ್ಷದ ನೋಟೀಸು ಕೊಡಬೇಕು (ಕಲಂ೨೪)

ಗೇಣಿಯನ್ನು ಅವಧಿಯೊಳಗೆ ವಸೂಲ ಕೊಡದ ರೈತನ ಒಕ್ಕಲತನವನ್ನು ಅಂತ್ಯಗೊಳಿಸಿ ಒಡೆಯನ ಕಬಜಾ ಪಡೆಯಲು ದಾವೆ ಮಾಡಿದಾಗ ಮಾಮಲೇದಾರರು ಒಮ್ಮೆಲೇ ಕಬಜಾ ಕೊಡಿಸದೆ, ೧೫ ದಿವಸಗಳೊಳಗೆ ರೈತನು ಗೇಣಿ ಮತ್ತು ದಾವೆಯ ಖರ್ಚು ಕೊಟ್ಟಲ್ಲಿ ಅವನ ಒಕ್ಕಲತನದ ನಾತೆಯನ್ನು ಊರ್ಜಿತವಿಡಬೇಕು ಆದರೆ ೩ ವರ್ಷಗಳ ಕಾಲ ಗೇಣಿಯನ್ನು ಅವಧಿಯಲ್ಲಿ ಸಲ್ಲಿಸದ ರೈತನಿಗೆ ಈ ಸೌಲಭ್ಯ ಸಿಗುವಂತಿಲ್ಲ (ಕಲಮು ೨೫)

ವಸೂಲ ಬಂದ ಗೇಣಿಯ ಬಗ್ಗೆ ಒಡೆಯರು ಒಕ್ಕಲಿಗರಿಗೆ ನಿಯಮಗಳಲ್ಲಿ ವಿಧಿಸಿದ ನಮೂನೆಯ ಪಾವತಿ ಕೊಡಬೇಕೆಂದು ೨೬ನೇ ಕಲಮಿನಲ್ಲುಂಟು

ಗೇಣಿಯ ಭೂಮಿಯನ್ನು ರೈತನು ಒಡೆಯಕೂಡದು, ಪೋಟ ಗೇಣಿಗೆ ಕೊಡಲಾಗದು, ಪರಾಧೀನ ಮಾಡಲಾಗದು ಈ ನಿಬಂಧನೆಗಳನ್ನು ಉಲ್ಲಂಘಿಸಿದವರ ಒಕ್ಕಲತನ ಅಂತ್ಯವಾಗುತ್ತದೆ ಆದರೆ ಸಹಕಾರಿ ಸಂಘಗಳಲ್ಲಿ ಸೇರಿದ ಒಕ್ಕಲಿಗರು ಸಂಘಗಳಿಂದ ತಾವು ಪಡೆದ ಸಾಲಗಳ ಭದ್ರತೆಗಾಗಿ ತಮ್ಮ ಹಕ್ಕು ಪರಾಧೀನ ಮಾಡಲಡ್ಡಿಯಿಲ್ಲ (ಕಲಮು ೨೭)

ಒಕ್ಕಲತನದ ಹಕ್ಕುಗಳನ್ನು ಸಹಕಾರಿ ಸಂಘಗಳ ಸಾಲಗಳಿಗೆ ಭದ್ರತೆಯಾಗಗೊಡುವ ಹಕ್ಕಿನ ಹೊರತು ಬೇರೆ ರೀತಿಯಿಂದ ಪರಾಧೀನ ಮಾಡಬರುವದಿಲ್ಲವಾಗಿ ೨೮ನೇ ಕಲಮು ನಿರ್ಬಂಧ ಹಾಕುತ್ತಿದೆ

ಭೂಮಿಯ ಇಲ್ಲವೆ ಮನೆಯ ಕಬಜೆ ಪಡೆಯಲಿಕ್ಕೆ ಹಕ್ಕುದಾರನಿಲ್ಲದ ಒಡೆಯನು ಒಕ್ಕಲಿಗನಿಂದ ಕಬಜಾ ತಪ್ಪಿಸಿದರೆ ಒಕ್ಕಲಿಗನು ಮಾಮಲೇದಾರರಿಗೆ ಅರ್ಜಿ ಮಾಡಿ,ತಿರುಗಿ ಕಬಜಾ ಪಡಕೊಳ್ಳಬಹುದು (ಕಲಮು ೨೯) ಮಾಮಲೇದಾರರ ಹುಕುಮಿನ ಹೊರತು ಒಡೆಯನು ಭೂಮಿಯ ಕಬಜೆ ಪಡೆಯಲಾರನು ಇಂತಹ ಹುಕುಮಿನ ಹೊರತು ಆತ ಕಬಜಾ ಪಡಕೊಂಡಲ್ಲಿ ಒಕ್ಕಲಿಗನು ಬೆಳೆ ಸಹಿತ ಭೂಮಿಯ ಕಬಜಾ ತಿರುಗಿ ಪಡೆಯಲಿಕ್ಕೆ ಹಕ್ಕುದಾರನಾಗುತ್ತಾನೆ

ಈ ಕಾನೂನಿನಲ್ಲಿ ವಿಧಿಸಿದ್ದಕ್ಕಿಂತ ಒಕ್ಕಲಿಗನಿಗೆ (ಬೇರೆ ಕಾನೂನುಗಳಂತೆ) ಹೆಚ್ಚಿನ ಹಕ್ಕುಗಳಿದ್ದಲ್ಲಿ ಆ ಹಕ್ಕುಗಳು ಊರ್ಜಿತವಿರುವವಾಗಿ ೩೦ನೇ ಕಲಮು ಹೇಳುತ್ತಿದೆ

೩ನೆಯ ಭಾಗದಲ್ಲಿ ಸಂರಕ್ಷಿತ ರೈತರ ಹಕ್ಕುಗಳು ವಿವರಿಸಲ್ಪಟ್ಟಿವೆ ೧೯೩೯ರ ಒಕ್ಕಲತನದ ಕಾನೂನಿನಂತೆ ಸಂರಕ್ಷಿತ ಒಕ್ಕಲಿಗರೆಂದು ದಾಖಲಾದವರು ಈ ಹೊಸ ಕಾನೂನಿನಂತೆಯೂ ಸಂರಕ್ಷಿತ ರೈತರೆಂದು ಎಣಿಸಲ್ಪಡುವರು (ಕಲಮು ೩೧)

ಸಂರಕ್ಷಿತ ರೈತನಿಗೆ ತನ್ನ ಗೇಣಿಯ ಭೂಮಿಯನ್ನು ಒಡೆಯನಿಂದ ಕ್ರಯಕ್ಕೆ ಪಡೆಯುವ ಹಕ್ಕುಂಟು. ಈ ಬಗ್ಗೆ ಕ್ರಯದ ರಕಮು ಕಾಣಿಸಿ ಒಕ್ಕಲಿಗನು ಒಡೆಯನಿಗೆ ನೋಟೀಸು ಕೊಡತಕ್ಕದ್ದು ೩ ತಿಂಗಳಲ್ಲಿ ಒಡೆಯನು ಅದಕ್ಕೆ ಒಪ್ಪದಿದ್ದಲ್ಲಿ, ಒಕ್ಕಲಿಗನು ಪಂಚ ಮಂಡಳಕ್ಕೆ ಅರ್ಜಿ ಮಾಡಿ ಭೂಮಿಯ ಬೆಲೆ ನಿರ್ಧರಿಸಿಕೊಳ್ಳಬೇಕು ಪಂಚಮಂಡಳವು ನಿರ್ಧರಿಸಿದ ಮೊಬಲಗಿಗೆ ಭೂಮಿಯನ್ನು ಕ್ರಯಕ್ಕೆ ಕೊಡಲು ಒಡೆಯನು ಬದ್ಧನಿದ್ದಾನೆ ಆದರೆ ಒಕ್ಕಲಿಗನ ಈ ಹಕ್ಕಿಗೆ ೩ ನಿರ್ಬಂಧಗಳಿವೆ (೧) ಒಕ್ಕಲಿಗನು ಸಾಗುವಳಿ ಮಾಡುವ ಭೂಮಿಯ ವಿಸ್ತಾರ ೫೦ ಎಕರೆಗಳಿಗೆ ಮಿಕ್ಕಿರಕೂಡದು; ಇಲ್ಲವೆ ಮಿಕ್ಕಕೂಡದು (೨) ಒಡೆಯನ ಭೂಮಿಯ ವಿಸ್ತಾರವಾದರೂ ೫೦ ಎಕರೆಗಳಿಗೆ ಕಡಿಮೆಯಾಗಕೂಡದು (೩) ಹಿಂದು ಅವಿಭಕ್ತ ಕುಟುಂಬದಿಂದ ಗೇಣಿಗೆ ಪಡೆದ ಭೂಮಿಯಾಗಿದ್ದರೆ ಆ ಕುಟುಂಬದ ಪ್ರತಿಯೊಂದು ಪಾಲಿಗೆ ೫೦ ಎಕರೆಗಳಿಗಿಂತ ಕಡಿಮೆ ಭೂಮಿ ಬರುವಂತಾಗಬಾರದು (ಕಲಮು ೩೨)

ಭಿನ್ನ ಭಿನ್ನ ಗ್ರಾಮಗಳಲ್ಲಿ ವಾಸಿಸುವ ಸಂರಕ್ಷಿತ ರೈತರು ಮಾಮಲೇದಾರರಿಗೆ ಅರ್ಜಿ ಮಾಡಿ ತಮ್ಮ ಭೂಮಿಗಳನ್ನು ಅದಲುಬದಲು ಮಾಡಿಕೊಳ್ಳಬಹುದು (ಕಲಮು ೩೩)

ನಿಜವಾಗಿಯೂ ತನ್ನ ಭೂಮಿಯನ್ನು ಸ್ವಂತ ಸಾಗುವಳಿಗೆ ಇಲ್ಲವೆ ಬಿನ್-ಶೇತಕಿ ಕೆಲಸಕ್ಕಾಗಿ ಪಡೆಯಬಯಸುವ ಒಡೆಯನು ೧ ವರ್ಷದ

ಸಂರಕ್ಷಿತ-ಒಕ್ಕಲಿಗನಿಗೆ ಒಡೆತನವನ್ನು ಪ್ರಾಪ್ತಿಮಾಡಿಕೊಳ್ಳುವ ಹಕ್ಕು!

ನೋಟೀಸು ಕೊಟ್ಟು ಅದನ್ನು ಪಡೆಯಬಹುದು ಬದರಿ ಆ ಕಾಲದಲ್ಲಿ ಇಂಥ ಒಡೆಯನ ಕಬಜೆಯಲ್ಲಿರುವ ಭೂಮಿ ೫೦ ಎಕರೆಗಳಿಗೆ ಮಿಕ್ಕಿರಬಾರದು. ಅಥವಾ ಮಿಕ್ಕಕೂಡದು. ಹಿಂದು ಅವಿಭಕ್ತ ಕುಟುಂಬವಿದ್ದಲ್ಲಿ ಅದರ ಪ್ರತಿ ಪಾಲಿಗೆ ೫೦ ಎಕರೆಗಳಿಗೆ ಮಿಕ್ಕಿ ಭೂಮಿ ಆಗಕೂಡದು (ಕಲಮು ೩೬)

ಕುಟುಂಬದ ಪಾಲೆಯೆಂದರೆ ಹಿಂದು ಕಾಯದೆಯಲ್ಲಿ ಅಂಶ ಪಡೆಯಲಿಕ್ಕೆ ಹಕ್ಕಿರುವವನಾಗಿ ಹೇಳಿರುವ ಪಾಲೆಯೆಂದು ೩೯ನೇ ಕಲಮಿನಲ್ಲಿ ಹೇಳಲಾಗಿದೆ

ಒಡೆಯನು ಭೂಮಿಯ ಕಬಜಾ ಪಡೆದ ೧ ವರ್ಷದೊಳಗೆ ಕಬಜಾ ತಕ್ಕೊಂಡ ಉದ್ದೇಶದಂತೆ ಆತ ವರ್ತಿಸದಿದ್ದಲ್ಲಿ, ಆ ಭೂಮಿಯನ್ನು ಹಿಂದಿನ ಒಕ್ಕಲಿಗನಿಗೆ, ಮುಂಚಿನ ಶರ್ತುಗಳ ಮೇಲೆಯೇ, ಗೇಣಿಗೆ ಕೊಡಬೇಕೆಂದು ೩೭ನೇ ಕಲಮು ನಿರ್ಬಂಧಿಸುತ್ತದೆ. ೩ ತಿಂಗಳೊಳಗೆ ಒಕ್ಕಲಿಗನು ಹೀಗೆ ಭೂಮಿಯನ್ನು ತಿರುಗಿ ಪಡಕೊಳ್ಳದಿದ್ದಲ್ಲಿ ಒಡೆಯನು ಅದನ್ನು ಬೇರೆಯವರಿಗೆ ಕೊಡಬಹುದು.

ಒಡೆಯನು ಹೊಲದ ಕಬಜಾ ಪಡೆದ ನಂತರ ತೀರಿಕೊಂಡರೆ ಮತ್ತು ಅವನ ವಾರಿಸದಾರರು ವಿಧವೆ, ಅಪ್ರಾಯಸ್ಥ ಮಕ್ಕಳು ಯಾ ವ್ಯಂಗರಿದ್ದಲ್ಲಿ ಅವರು ಸಾಗುವಳಿಯನ್ನು ಬೇರೆಯವರ ಕಡೆಯಿಂದ ಮಾಡಿಸಬಹುದು. (ಕಲಮು ೩೭)

ಸ್ವಂತ ಸಾಗುವಳಿಗಾಗಿ ಪಡಕೊಂಡ ಭೂಮಿಯನ್ನು ಒಡೆಯನು ಸ್ವತಃ ಸಾಗುವಳಿ ಮಾಡದಿದ್ದಲ್ಲಿ ಒಕ್ಕಲಿಗನು ಮಾಮಲೇದಾರರಿಗೆ ಅರ್ಜಿ ಮಾಡಿ ಆ ಭೂಮಿಯ ಕಬಜೆ ತಿರುಗಿ ಪಡೆಯಬಹುದು (ಕಲಮು ೩೮)

ಸ್ವಂತ ಸಾಗುವಳಿಗೆಂದು ಪಡೆದ ಭೂಮಿಯನ್ನು ಒಡೆಯನು ೧೦ ವರ್ಷಗಳ ವರೆಗೆ ಸಾಗುವಳಿ ಮಾಡದಿದ್ದರೆ ಅದು ಸರಕಾರ-ಜಮಾ ಆಗುವದೆಂದು ೩೯ನೇ ಕಲಮಿನಲ್ಲುಂಟು.

ಸಂರಕ್ಷಿತ ರೈತನು ಮೃತಪಟ್ಟಲ್ಲಿ ಆತನ ವಾರಿಸದಾರರಿಗೆ ಒಕ್ಕಲತನದ ಹಕ್ಕು ಒರುತ್ತದೆ. (ಕಲಮು ೪೦) ಗಂಡು ಸಂತತಿಯವರು ವಾರಿಸದಾರರೆಂದೂ, ಗಂಡು ಸಂತತಿಯ ಅಭಾವದಲ್ಲಿ ವಿಧವೆ ವಾರಸದಾರಳೆಂದೂ ವಿವರಿಸಲಾಗಿದೆ ಈ ವಾರಿಸದಾರರು ಸ್ವಂತ ಸಾಗುವಳಿ ಮಾಡುವ ರೈತರಿರಬೇಕೆಂಬ ನಿರ್ಬಂಧ ಉಂಟು.

ಈ ಕಾನೂನಿನಂತೆ ಒಕ್ಕಲತನ ಅಂತ್ಯಗೊಳಿಸುವಾಗ ಸಂರಕ್ಷಿತ ರೈತನು ಭೂಸುಧಾರಣೆಯ ಬಗ್ಗೆ ಮಾಡಿದ ಖರ್ಚನ್ನು ಒಡೆಯನು ಕೊಡಬೇಕು. ಈ ಬಗ್ಗೆ ಮಾಮಲೇದಾರರಿಗೆ ಅರ್ಜಿ ಮಾಡಿ ಭೂಸುಧಾರಣೆಯ ವೆಚ್ಚದ ಮೊಬಲಗನ್ನು ನಿರ್ದಿಷ್ಟಗೊಳಿಸಿಕೊಳ್ಳಬಹುದು (ಕಲಮು ೪೧)

ಕಾನೂನಿನ ನಾಲ್ಕನೇ ಭಾಗದಲ್ಲಿ ಭೂಧಾರಣೆ ಮಾಡುವವರ ಆಸ್ತಿಯ ಆಡಳಿತೆಯ ವ್ಯವಸ್ಥೆ ಹೇಳಲ್ಪಟ್ಟಿದೆ.

ಒಕ್ಕಲಿಗರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಸುಧಾರಿಸುವದಕ್ಕಾಗಿ, ಬೇಸಾಯವನ್ನು ದಕ್ಷತೆಯಿಂದ ನಡಿಸಿ ಕೃಷಿ ಕರ್ಮದ ಪೂರ್ಣ ಪ್ರಯೋಜನ ಪಡೆಯುವದಕ್ಕಾಗಿ ಸರಕಾರವು, ಸರಕಾರಿ ಗಾಝೆಟಿನಲ್ಲಿ ಪ್ರಕಟನೆಯನ್ನು ಹೊರಡಿಸಿ, ಯಾವದೊಂದು ಭೂಮಿಯನ್ನು ತನ್ನ ಕಡೆಗೆ ಒಪ್ಪಿಸಿಕೊಳ್ಳಬಹುದು (ಕಲಮು ೪೩)

ಇಂತಹ ಭೂಮಿಗಳ ಆಡಳಿತೆಯ ಬಗ್ಗೆ ಆಡಳಿತದಾರರನ್ನು ನೇಮಿಸುವ ಅಧಿಕಾರ ಪ್ರಾಂತಿಕ ಸರಕಾರಕ್ಕೆ ಕೊಡಲಾಗಿದೆ (ಕಲಮು ೪೪)

ಸರಕಾರವು ಮೇಲಿನಂತೆ ವಹಿಸಿಕೊಂಡ ಭೂಮಿಯ ಮೇಲೆ ಯಾವದೇ ಪ್ರಕಾರದಿಂದ, ಕೋರ್ಟಿನ ಮುಖಾಂತರ ಇಲ್ಲವೆ ಅಜಿನಾತಿನಲ್ಲಿ, ಕ್ರಮ ನಡಿಸಲಿಕ್ಕೆ ಯಾರಿಗೂ ಹಕ್ಕಿಲ್ಲ (ಕಲಮು ೪೪)

೪೫ನೇ ಕಲಮಿನಲ್ಲಿ ಆಡಳಿತೆದಾರನ ಅಧಿಕಾರದ ವ್ಯಾಪ್ತಿ ವಿವರಿಸಲ್ಪಟ್ಟಿದೆ

ಆಡಳಿತೆ ವಹಿಸಿಕೊಂಡ ಭೂಮಿಯ ಉತ್ಪನ್ನದ ವ್ಯವಸ್ಥೆ ಮಾಡುವ ಕ್ರಮ ೪೬ನೇ ಕಲಮಿನಲ್ಲಿದೆ ಆಡಳಿತೆಯ ಖರ್ಚು, ಸರಕಾರದ ಕಂದಾಯ ಮತ್ತು ಸಾಲಗಳನ್ನು ಮೊದಲು ತೆತ್ತು, ಗೇಣಿ ಸಲ್ಲತಕ್ಕದ್ದಿದ್ದರೆ ಅದನ್ನು ತೆರಬೇಕು. ಆಮೇಲೆ ಕಲೆಕ್ಟರರ ಅಪ್ಪಣೆಯಂತೆ ಭೂಮಿಯೊಡೆಯನ ಕುಟುಂಬದವರಿಗೆ ಜೀವನಾಂಶ ಕೊಡತಕ್ಕದ್ದಿದೆ. ಈ ಖರ್ಚು ಕಳೆದು, ಆಸ್ತಿಯ ಮೇಲೆ ಹೊಣೆಯಿರುವ ಇತರ ಸಾಲಗಳೂ ತೀರಿ, ಏನಾದರೂ ಉಳಿದರೆ ಅದನ್ನು ಒಡೆಯನಿಗೆ ಕೊಡಲಾಗುವದು

ಆಸ್ತಿಯ ಮೇಲೆ ಹಕ್ಕುಳ್ಳವರಿಗೆ ನೋಟೀಸು ಕೊಡುವ ಕ್ರಮ ೪೭ನೇ ಕಲಮಿನಲ್ಲಿ ಕೊಡಲ್ಪಟ್ಟಿದೆ

ಹಕ್ಕುಳ್ಳವರು ತಮ್ಮ ಹಕ್ಕು ತಿಳಿಸುವ ಕ್ರಮ ೪೮ನೇ ಕಲಮಿನಲ್ಲಿದೆ

ನಿರ್ದಿಷ್ಟ ಅವಧಿಯಲ್ಲಿ ತಮ್ಮ ಹಕ್ಕು ಹೇಳದಿದ್ದವರ ಹಕ್ಕು ನಷ್ಟವಾಗುತ್ತದೆಂದು ೪೯ನೇ ಕಲಮಿನಲ್ಲಿ ಹೇಳಿದೆ

ಹಕ್ಕುಗಳನ್ನು ವಿಚಾರಿಸುವ ಅಧಿಕಾರ, ಅವನ್ನು ಕ್ರಮಗೊಳಿಸುವ ಅಧಿಕಾರ, ಆ ಕುರಿತು ಯೋಜನೆ ತಯಾರಿಸುವ ಅಧಿಕಾರ, ಆ ಯೋಜನೆಯ ನಮೂನೆ, ಸಾಲ ನಿವಾರಣೆಗಾಗಿ ಭದ್ರತೆಯುಳ್ಳವರ ಕಬಜಾ ತಪ್ಪಿಸುವ ಅಧಿಕಾರ, ರೈತರ ಹಕ್ಕಿನ ವಿಚಾರ, ಬೇರೆ ರೈತರನ್ನು ನೇಮಿಸುವ ಅಧಿಕಾರ, ಪಾವತಿ ಕೊಡುವ ನಿರ್ಬಂಧ, ಒಡೆಯನ ವಾರಿಸದಾರರ ಹಕ್ಕು, ಆಡಳಿತೆಯನ್ನು ಅಂತ್ಯಪಡಿಸುವ ಕ್ರಮ ಇವನ್ನೆಲ್ಲ ೫೦ ರಿಂದ ೬೦ನೇ ವರೆಗಿನ ಕಲಮುಗಳಲ್ಲಿ ವಿವರಿಸಿದೆ

ಬೇಸಾಯದ ಭೂಮಿಗಳ ಸ್ವಾಧೀನತೆಯ ಮೇಲಿನ ನಿರ್ಬಂಧಗಳೂ ಬಂಜರ ಬಿದ್ದ ಭೂಮಿಗಳ ಆಡಳಿತೆಯ ಕ್ರಮವೂ, ಆಸ್ತಿ ಮತ್ತು ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವೂ ೫ನೇ ಭಾಗದಲ್ಲಿ ಹೇಳಲ್ಪಟ್ಟಿವೆ.

ಸಾಗುವಳಿ ಮಾಡದ ಜನರಿಗೆ ಬೇಸಾಯದ ಭೂಮಿಯನ್ನು ಕ್ರಯ, ಅಡವು, ದಾನ, ಪರಿವರ್ತನೆ, ಮಾಡಿಕೊಡಬಾರದೆಂದೂ, ಗೇಣಿಗೆ ಕೊಡಬಾರದೆಂದೂ ೬೩ನೇ ಕಲಮು ನಿರ್ಬಂಧಿಸುತ್ತಿದೆ. ಇತರರಿಗೆ ಸ್ವಾಧೀನ ಮಾಡುವ ಪ್ರಸಂಗವೇ ಬಂದಲ್ಲಿ ಕಲೆಕ್ಟರರ ಅಪ್ಪಣೆ ಪಡೆಯಬೇಕಾಗುತ್ತದೆ.

ಬೇಸಾಯದ ಭೂಮಿಯ ಮಾರಾಟದ ಕ್ರಮ ೬೪ನೇ ಕಲಮಿನಲ್ಲಿ ವಿವರಿಸಲ್ಪಟ್ಟಿದೆ. ಒಡೆಯನು ಮೊದಲು ಪಂಚ-ಮಂಡಳಕ್ಕೆ ಅರ್ಜಿ ಮಾಡಿ, ಮಾರತಕ್ಕ ಭೂಮಿಯ ಬೆಲೆ ನಿಶ್ಚಯಿಸಿಕೊಳ್ಳಬೇಕು. ಆ ಮೇಲೆ ಆ ರಕಮಿಗೆ ಕೊಳ್ಳುವಂತೆ ಮೊದಲು ಆ ಭೂಮಿಯ ಸಾಗುವಳಿದಾರನಿಗೆ, ಬಳಿಕ ನೆರೆಹೊರೆಯ ಸಾಗುವಳಿದಾರನಿಗೆ, ಇವರ ಅಭಾವದಲ್ಲಿ ಭೂಮಿ ಸಾಗುವಳಿ ಮಾಡುವ ಸಹಕಾರಿ ಸಂಘಕ್ಕೆ, ಸಂಘವು ಒಡಂಬಡದಿದ್ದರೆ ಇತರ ಬೇಸಾಯಗಾರರಿಗೆ, ಇಂಥವರಾರೂ ಇರದಿದ್ದರೆ ಬೇಸಾಯಗಾರನಾಗುತ್ತೇನೆಂದು ಕಲೆಕ್ಟರರಿಂದ ಪ್ರಶಸ್ತಿ ಪಡೆದ ವ್ಯಕ್ತಿಗೆ ಭೂಮಿಯನ್ನು ಮಾರಬೇಕು. ಕ್ರಯದ ಹಣ ಕೊಡಲಿಕ್ಕೆ ೨ ತಿಂಗಳ ಅವಧಿ ಕೊಡಲಾಗುವದು ಈ ನಿರ್ಬಂಧ ಮೀರಿ ಆದ ವ್ಯವಹಾರ ರದ್ದೆಂದು ತಿಳಿಯತಕ್ಕದ್ದು

ಸತತ ೨ ವರ್ಷ ಭೂಮಿಯನ್ನು ಬಂಜರ ಕೆಡವಿದಲ್ಲಿ, ಪ್ರಾಂತಿಕ ಸರಕಾರವು ಯುಕ್ತ ಕಂಡ ಚೌಕಶಿ ನಡಿಸಿ, ಆ ಭೂಮಿಯನ್ನು ವಶಪಡಿಸಿಕೊಂಡು ಅದರ ಆಡಳಿತೆಯನ್ನು ನಡಿಸಬಹುದು.(ಕಲಮು ೬೫)

ಸಾರ್ವಜನಿಕ ಹಿತಕ್ಕಾಗಿ ಬೇಕಾದ ಭೂಮಿಯನ್ನು ಸರಕಾರವು ಸ್ವಾಧೀನಪಡಿಸಿಕೊಂಡು ಹಕ್ಕುಳ್ಳವರಿಗೆ ಪರಿಹಾರ-ದ್ರವ್ಯ ಕೊಡುವ ಕ್ರಮ ೬೬ನೇ ಕಲಮಿನಲ್ಲಿ ವಿವರಿಸಲ್ಪಟ್ಟಿದೆ.

೬ನೇ ಭಾಗದಲ್ಲಿ ನ್ಯಾಯಾಧಿಕಾರಿಗಳ ಕ್ಷೇತ್ರ ಮತ್ತು ಕ್ರಮಗಳು ವಿವರಿಸಲ್ಪಟ್ಟಿವೆ

ಈ ಕಾನೂನಿನಂತೆ ನ್ಯಾಯಗಳ ಕೊನೆಯ ನಿಕಾಲಿ ಮಾಡಲು ಸರಕಾರವು ಬೇಸಾಯ ಭೂಮಿಗಳ ಪಂಚ-ಮಂಡಳವೆಂಬ ನ್ಯಾಯ-ಮಂಡಳವನ್ನು ನೇಮಿಸುವದು. ಈ ಮಂಡಳದಲ್ಲಿ ೩ ಅಥವಾ ಹೆಚ್ಚು ಜನರು ಇರುವರು. ಇವರಲ್ಲೊಬ್ಬರು ನ್ಯಾಯ ಖಾತೆಯಲ್ಲಿ ಕೆಲಸ ಮಾಡಿದವರಾಗಲಿ ೩ ವರ್ಷ ಬ್ಯಾರಿಸ್ಟರ ಎಡ್ವೋಕೇಟ ಯಾ ವಕೀಲರಿದ್ದವರಾಗಲಿ ಇರಬೇಕು ಪಂಚ ಮಂಡಳವಿಲ್ಲದ ಪ್ರದೇಶದಲ್ಲಿ ಮಾಮಲೇದಾರರೇ ನ್ಯಾಯ ಮಂಡಳದ ಕೆಲಸಗಳನ್ನು ಮಾಡುವರು ಅಥವಾ ಪ್ರಾಂತಿಕ ಸರಕಾರವು ಈ ಬಗ್ಗೆ ಬೇರೆ ಅಧಿಕಾರಿಯನ್ನು ನೇಮಿಸಬಹುದು. (ಕಲಮು ೬೭)

೬೮, ೬೯ನೇ ಕಲಮುಗಳಲ್ಲಿ ಪಂಚ ಮಂಡಳದ ಕರ್ತವ್ಯಗಳೂ ಅಧಿಕಾರಗಳೂ, ೭೦ನೇ ಕಲಮಿನಲ್ಲಿ ಮಾಮಲೇದಾರರ ಕರ್ತವ್ಯಗಳೂ ಹೇಳಲ್ಪಟ್ಟಿವೆ ೭೧, ೭೨ನೇ ಕಲಮುಗಳಲ್ಲಿ ವಿಚಾರದ ಕ್ರಮ ವಿವರಿಸಲ್ಪಟ್ಟಿದೆ ೭೩ನೇ ಕಲಮಿನಲ್ಲಿ ಹುಕುಮುಗಳ ಅಮಲು-ಬಜಾವಣೆಯ ಕ್ರಮ ಕೊಡಲ್ಪಟ್ಟಿದೆ ೭೪ನೇ ಕಲಮಿನಲ್ಲಿ ಮಾಮಲೇದಾರರ ಮತ್ತು ನ್ಯಾಯ ಪಂಚ ಮಂಡಳದ ನಿಕಾಲೆಗಳ ವಿರುದ್ಧ ಕಲೆಕ್ಟರರ ಕಡೆ ಅಪೀಲ ಮಾಡುವ ಕ್ರಮ ಕೊಡಲಾಗಿದೆ ಭೂಕಂದಾಯ ಕಾನೂನಿನಂತೆ ಕಲೆಕ್ಟರರು ಮಾಮಲೇದಾರ ಮತ್ತು ಪಂಚಮಂಡಳದ ಮೇಲಧಿಕಾರಿಗಳಾಗುಳಿಯುವರೆಂದು ಹೇಳಲಾಗಿದೆ

ಸರಕಾರವು ಭೂಮಿಯನ್ನು ವಶಪಡಿಸಿಕೊಂಡ ಸಂಗತಿಯಲ್ಲಿ ಕಲೆಕ್ಟರರ ಹುಕುಮಿನ ವಿರುದ್ಧ ಮುಂಬಯಿಯ ರೆವಿನ್ಯೂ ಟ್ರಿಬ್ಯೂನಲ್ಲಿಗೆ ಅಪೀಲ ಮಾಡಲು ೭೫ನೇ ಕಲಮಿನಲ್ಲಿ ಇಂಬುಂಟು ೭೬ನೇ ಕಲಮಿನಲ್ಲಿ, ಕಲೆಕ್ಟರರು ಅಪೀಲಿನಲ್ಲಿ ಮಾಡಿದ ಹುಕುಮುಗಳ ವಿರುದ್ಧ ರೆವಿನ್ಯೂ ಟ್ರಿಬ್ಯೂನಲ್ಲಕ್ಕೆ ಮಾಡತಕ್ಕ ಅರ್ಜಿಯಲ್ಲಿರಬೇಕಾದ ವಿಷಯಗಳನ್ನು ವಿವರಿಸಲಾಗಿದೆ. ಅರ್ಜಿ, ಅಪೀಲು ಮೊದಲಾದವುಗಳಿಗೆ ಹಚ್ಚತಕ್ಕ ಸ್ಟ್ಯಾಂಪುಗಳನ್ನು ನಿರ್ಣಯಿಸುವ ಅಧಿಕಾರವನ್ನು ೭೭ನೇ ಕಲಮು ಪ್ರಾಂತಿಕ ಸರಕಾರಕ್ಕೆ ಕೊಟ್ಟಿದೆ

ಕಲೆಕ್ಟರರ ಮತ್ತು ಮುಂಬಯಿ ರೆವಿನ್ಯೂ ಟ್ರಿಬ್ಯೂನಲ್ಲಿನ ನಿರ್ಣಯಗಳು ಕೊನೆಯ ನಿರ್ಣಯಗಳೆಂದು ೭೮ನೇ ಕಲಮಿನಲ್ಲಿ ಹೇಳಿದೆ. ಅಪೀಲು ಮಾಡುವ ಅವಧಿ ೬೦ ದಿನಗಳೆಂದು ೭೯ನೇ ಕಲಮಿನಲ್ಲಿ ಹೇಳಲ್ಪಟ್ಟಿದೆ.

ಮಾಮಲೇದಾರ ಮೊದಲಾದ ಅಧಿಕಾರಿಗಳು ನಡಿಸುವ ಚೌಕಶಿಯ ಕ್ರಮ ನ್ಯಾಯ-ವಿಚಾರ ಕ್ರಮವೆಂದು ೮೦ನೇ ಕಲಮಿನಲ್ಲಿ ಹೇಳಿದೆ.

೭ನೇ ಭಾಗದಲ್ಲಿ ಗುನ್ಹೆಗಳೂ ಶಾಸನಗಳೂ ಹೇಳಲ್ಪಟ್ಟಿವೆ

೧೦ ವರ್ಷಗಳೊಳಗೆ ಒಕ್ಕಲತನವನ್ನು ಅಂತ್ಯಪಡಿಸಿದ ಒಡೆಯನಿಗೆ, ಸರಕಾರವು ನಿರ್ದಿಷ್ಟಗೊಳಿಸಿದ ಪಾಲಿಗಿಂತ ಹೆಚ್ಚಿಗೆ ಗೇಣಿ ವಸೂಲ ಮಾಡುವ ಒಡೆಯನಿಗೆ, ಒಕ್ಕಲಿಗನಿಂದ ಬಿಟ್ಟಿ ವಗೈರೆ ಮಾ

ಟೆನನ್ಸಿ ಅವ್ವಲಕಾರಕೂನರ ಕೋರ್ಟುಗಳಲ್ಲಿ ಒಡೆಯರಿಗೆ ತಕ್ಕ ಪರಿಹಾರ ದೊರೆಯುವದಿಲ್ಲವಾಗಿ ಒಡೆಯರ ಅಭಿಪ್ರಾಯವಾಗಿದೆ. ಟೆನನ್ಸಿ ಅವ್ವಲ ಕಾರಕೂನರು ಒಕ್ಕಲತನದ ಕಾನೂನಿನ ೬(೧)ನೇ ಕಲಮಿನಲ್ಲಿ ಇದ್ದ 'ಪ್ರಾಮಾಣಿಕತನದಿಂದ' (Bona fide) ಎಂಬ ಶಬ್ದದ ಸರಿಯಾದ ಅರ್ಥ ಗ್ರಹಿಸುವದಿಲ್ಲ. ಅದರಿಂದ ಒಡೆಯ-ಸಮಾಜಕ್ಕೆ ಅನ್ಯಾಯವಾಗುತ್ತಿದೆ. ಅದ್ದರಿಂದ ಟೆನನ್ಸಿ ಕೋರ್ಟಿಗೆ ಇರುವ ಈ ಅಧಿಕಾರವನ್ನು ರದ್ದುಪಡಿಸಿ ದಿವಾಣಿ ಕೋರ್ಟುಗಳಿಗೆ ಕೊಡುವಂತೆ ಒಕ್ಕಲತನದ ಕಾನೂನಿನಲ್ಲಿ ತಿದ್ದುಪಡಿಯಾಗಬೇಕಾಗಿಯೂ ಸರಕಾರವು ಟೆನನ್ಸಿ ಅವಲ್ ಕಾರಕೂನರಿಗೆ ಹೊರಡಿಸಿದ ಗುಪ್ತ ಸರ್ಕ್ಯುಲರುಗಳನ್ನು ರದ್ದುಪಡಿಸಬೇಕಾಗಿಯೂ ಈ ಸಭೆಯು ಸರಕಾರದ ಕಡೆ ವಿನಂತಿ ಮಾಡಿಕೊಳ್ಳುತ್ತದೆ.

೨ ಗೇಣಿ ಕೊಡದೆ ಇದ್ದ ಒಕ್ಕಲಿಗರಿಂದ, ಒಕ್ಕಲತನದ ಕಾನೂನಿನ ೫ನೇ ಕಲಮಿನಂತೆ ಕಬಜಾ ಕೊಡಿಸಲು ಟೆನನ್ಸಿ ಕೋರ್ಟುಗಳಿಗೆ ಅಧಿಕಾರವಿಲ್ಲೆಂದು ಹೇಳಿ ಈಗ ತಿರುಗಿ ಒಕ್ಕಲಿಗರಿಗೆ ಕಬಜಾ ಕೊಡಿಸುವ ಹುಕುಮುಗಳಾದದ್ದು ಕಂಡುಬರುತ್ತದೆ. ಟೆನನ್ಸಿ ಕೋರ್ಟುಗಳಿಗೆ ಇಂಥ ದಾವೆಗಳನ್ನು ಹಿಡಿದು ಹುಕುಮು ಹೊರಡಿಸಲಿಕ್ಕೆ ಅಧಿಕಾರವಿರುತ್ತದೆಂದೂ ೧೯೪೬-೪೭ರ ಗೇಣಿಯು ಬಾಕಿ ಬಿದ್ದ ಕಾರಣದಿಂದ ಕಬಜೆ ಬೇಡುವ ಇಂಥ ದಾವೆಗಳು ತಾ. ೩೧-೩-೪೮ ನೇದರೊಳಗಾಗಿ ದಾಖಲಾಗಬೇಕೆಂದೂ ಸರಕಾರವು ಪ್ರಕಟನೆಯನ್ನು ಹೊರಡಿಸಿತ್ತು. ಜನರು ಸರಕಾರದ ಆ ಪ್ರಕಟನೆಯನ್ನು ನಂಬಿ, ದಾವೆಗಳನ್ನು ದಾಖಲ ಪಡಿಸಿ, ಕಬಜಾ ಪಡೆದು ಅದರಂತೆ ಸಾಗುವಳಿ ಕೆಲಸ ನಡಿಸಿದ ಬಳಿಕ ಟೆನನ್ಸಿ-ಕೋರ್ಟುಗಳಿಗೆ ಇಂಥ ಅಧಿಕಾರವಿಲ್ಲೆಂದೂ ಒಡೆಯರು ಕಬಜಾ ಪಡೆದ ಸ್ಥಳಗಳನ್ನು ತಿರುಗಿ ಕೊಡಬೇಕೆಂದೂ ಹುಕುಮು ಹೊರಡಿಸುವದರಿಂದ ಒಡೆಯ-ಸಮಾಜಕ್ಕೆ ಅನಾವಶಕ ನಷ್ಟ ಪಡಿಸಿದಂತಾಗುತ್ತದೆ. ಅದ್ದರಿಂದ ಹಿಂದೆ ಕಬಜಾ ಕೊಡಿಸಿ ಹೋದ ಪ್ರಕರಣಗಳಲ್ಲಿ ತಿರುಗಿ ಕಬಜಾ ಕೊಡಿಸುವ ಬಗ್ಗೆ ಹುಕುಮು ಸರಕಾರವು ಮಾಡಬಾರದಾಗಿಯೂ, ಇಷ್ಟವೆನಿಸಿದರೆ ಅಧಿಕಾರಪಟ್ಟನ್ಯಾಯಸ್ಥಾನದಲ್ಲಿ ಈ ಕುರಿತು ತಕ್ಕ ಕ್ರಮ ಕೈಕೊಳ್ಳಬೇಕಾಗಿ ಒಕ್ಕಲಿಗರಿಗೆ ಹುಕುಮು ಮಾಡಬೇಕಾಗಿಯೂ ಈ ಸಭೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ.

೩. ಒಕ್ಕಲಿಗರು ಒಡೆಯರಿಗೆ ಸಲ್ಲತಕ್ಕ ಗೇಣಿಯನ್ನು ಕಾಳಿನ ರೂಪದಲ್ಲಿ ಕೊಡುವದಿಲ್ಲ. ಮನಿಯಾರ್ಡರ ಮಾಡಿ ಕಡಿಮೆ ದರದಿಂದ ಹಣ ಕಳಿಸುತ್ತಾರೆ. ಗೇಣಿಯಲ್ಲಿ ವ್ಯತ್ಯಾಸ ಮಾಡುವ ಬಗ್ಗೆ, ಟೆನನ್ಸಿ ಕಾನೂನಿನ ೧೫ನೇ ಕಲಮಿನಂತೆ ಕ್ರಮ ಕೈಕೊಳ್ಳದೆ ತಮ್ಮ ಇಷ್ಟದಂತೆ ಗೇಣಿಯ ಮೊಬಲಗನ್ನು ಇಳಿಸಿ ಕಡಿಮೆ ದರದಿಂದ ಹಣ ಕಳಿಸುತ್ತಾರೆ. ಕೆಲವು ಒಕ್ಕಲಿಗರಂತೂ ಏನೂ ಗೇಣಿ ಕೊಡಲಿಲ್ಲ. ಇದರಿಂದ ಒಡೆಯರಿಗೆ ಜೀವನ ಸಾಗಿಸಲು ಕಷ್ಟವಾಗಿದೆ. ಅದ್ದರಿಂದ ಕಾಳಿನ ರೂಪದಲ್ಲಿ ಗೇಣಿಯನ್ನು ಸಲ್ಲಿಸದ ಒಕ್ಕಲಿಗರು ಗೇಣಿ-ಪತ್ರಿಯದಲ್ಲಿ ಅಂದರೆ ಮೇ ತಿಂಗಳಲ್ಲಿ ಇರುವ ಧಾರಣೆಯಿಂದ ಹಣವನ್ನು ಒಡೆಯರಿಗೆ ಸಲ್ಲಿಸುವಂತೆ ಒಕ್ಕಲತನದ ಕಾನೂನಿನ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕಾಗಿಯೂ, ಈ ಪ್ರಕಾರ ಗೇಣಿಯನ್ನು ಸಲ್ಲಿಸದಿದ್ದ ಒಕ್ಕಲಿಗನ ಮೇಲೆ, ಒಕ್ಕಲತನದ ಕಾನೂನಿನ ೨೨ನೇ ಕಲಮಿಗೆ ಸರಿಹೋಲುವಂತಹದೂ ಕಲಮನ್ನು ಮಾಡಿ, ಬಟ್ಲಿ ಮಾಡುವ ವ್ಯವಸ್ಥೆಯನ್ನು ಮಾಡಬೇಕಾಗಿಯೂ ಈ ಸಭೆಯು ಈ ಮೂಲಕ ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತದೆ.

೪. ಒಡೆಯರಿಂಗೆ ನಷ್ಟಗೊಳಿಸಬೇಕೆಂಬ ಪಾಪಿ ಇರಾದೆಯಿಂದಲ ಉತ್ಪನ್ನ ಕಡಿಮೆ ತೋರಿಸಬೇಕೆಂಬ ಹೇತುವಿನಿಂದಲೂ ಒಕ್ಕಲಿಗರು ಭೂಮಿಗೆ ತಕ್ಕಷ್ಟು ಹೂಟಿ-ಸಾಲು ಮಾಡುವದಿಲ್ಲ; ತಕ್ಕಷ್ಟು ಗೊಬ್ಬರ ಹಾಕುವದಿಲ್ಲ; ಕಂಟಿ-ಕಟ್ಟ್ಯಗಳ ನಿವಾಳಿಕೆ ಮಾಡದೆ ಭೂಮಿಯನ್ನು ಅರೂಪ ಕೆಡವಿದ್ದು ಕಂಡುಬರುತ್ತದೆ; ಕೆಲವು ಕಡೆಗಳಲ್ಲಿ ಒಂಜರು ಹಾಕಿದ್ದೂ ಉಂಟು. ತವಿನ್ಯಂದ ನಷ್ಟ ತುಂಬಿಕೊಳ್ಳಲು ಒಡೆಯರಿಂಗೆ ಹೇಗೂ ಸಾಧ್ಯವಿಲ್ಲೆಂದು ಭಾವಿಸಿ ಒಕ್ಕಲಿಗರು ಈ ಪ್ರಕಾರ ಹಾವಳಿಹ್ಯಾಕಿದುದು ಕಂಡುಬರುತ್ತದೆ. ಗ್ರಾಮಾಧಿಕಾರಿಗಳೂ ಮುಲ್ಕೀ ಅಧಿಕಾರಿಗಳೂ ಗ್ರಾಮ-ಸಂಚಾರ ಮಾಡುವಾಗ ಸಾಗುವಳಿಯ ಸ್ವರೂಪವನ್ನು ತಿಳಕೊಂಡು ತತ್ಪರತೆಯಿಂದ ಕೃಷಿಯಾಗುವಂತೆ ಮೇಲ್ವಿಚಾರ ಇಡುವ ಹಾಗೆ ಹಾಗೂ ಕೃಷಿಯನ್ನು ಸರಿಯಾಗಿ ಮಾಡದ ಮತ್ತು ಅರೂಪ ಕೆಡವಿದ ಒಕ್ಕಲಿಗರಿಗೆ ಶಾಸನ-ವಿಧಿಸುವ ವ್ಯವಸ್ಥೆ ಮಾಡಬೇಕಾಗಿ ಈ ಸಭೆಯು ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತಿದೆ.

೫. ಒಕ್ಕಲತನದ ಕಾನೂನಿನಲ್ಲಿ ತಿದ್ದುಪಡಿ ಮಾಡುವ ಮುಂಬಯಿ ಸರಕಾರವು ಸೂಚನೆಯನ್ನು ಕೊಂಗ್ರೆಸಪಕ್ಷದ ಎಸೆಂಬ್ಲಿ-ಕೌನ್ಸಿಲ ಸಭಾಸದರ ಸಭೆಯಲ್ಲಿ ಚರ್ಚಿಸಿರುವರೆಂದು ಪ್ರಕಟವಾಗಿದೆ. ಈ ಸಭೆ ಗುಪ್ತ ರೀತಿಯಿಂದ ನಡೆದಿತ್ತು. ಆದರಿಂದ ಸರಕಾರದ ಸಂಕಲ್ಪವೇನೆಂದು ಈ ಸಭೆಗೆ ತಿಳಿಯಲಿಲ್ಲ. ಭೂಮಿಯ ಒಡೆತನ ಪ್ರಾಚ್ಯಕಾಲದಿಂದ ನಡೆದು ಬಂದಿರುತ್ತಿದ್ದು, ಅದೊಂದು ಸಮಾಜ-ವ್ಯವಸ್ಥೆಯಾಗಿದೆ. ಆ ವ್ಯವಸ್ಥೆಯಲ್ಲಿ ವ್ಯತ್ಯಾಸ ಮಾಡುವ ಪೂರ್ವದಲ್ಲಿ ಸರಕಾರವು ತನ್ನ ಸಂಕಲ್ಪಿತ ಯೋಜನೆಯನ್ನು ಮೊದಲು ಬಹಿರಂಗಗೊಳಿಸಿ ಗುಣ-ದೋಷಗಳನ್ನು ತಿಳಕೊಳ್ಳುವದು ಅವಶ್ಯವುಂಟು. ಅದರಿಂದ ಸರಕಾರವು ಸಂಕಲ್ಪಿತ ಯೋಜನೆಯನ್ನು ಮೊದಲು ಪ್ರಸಿದ್ಧಿಸಿ, ಅದರ ಮೇಲೆ ಜನಾಭಿಪ್ರಾಯ ಪ್ರಕಟವಾದ ಬಳಿಕ ಪಕ್ಷದ ಸಭೆಯಲ್ಲಿ ವಿಚಾರ ಮಾಡಿ ಆ ಮೇಲೆ ತಕ್ಕ ತಿದ್ದುಪಾಟಗಳನ್ನು ಕೈಕೊಳ್ಳಬೇಕಾಗಿಯೂ, ಪಕ್ಷದ ಸಭೆಯಲ್ಲಿ ಸೂಚಿಸಿದ ತಿದ್ದುಪಡಿಯ ಮಸೂದೆಯನ್ನು ಮೊಟ್ಟಮೊದಲು ಪ್ರಕಟಿಸಬೇಕಾಗಿಯೂ ಈ ಸಭೆಯು ಸರಕಾರಕ್ಕೆ ಸೂಚಿಸುತ್ತದೆ.

ಸುದ್ದಿಗಳ ಸಾರ

— ಗಾಂಧಿ ಸ್ಮಾರಕ ನಿಧಿಯನ್ನು ಒಟ್ಟುಗೂಡಿಸುವ ಕೆಲಸ ಭರದಿಂದ ನಡೆದಿದೆ. ಆಚೆಯ ಗುರುವಾರ ಸ್ಮಾರಕ ಮಂಡಳದ ಸಭೆ ಈವರೆಗಿನ ಲೆಕ್ಕ ತಪಾಸಣೆಯಾಯಿತು ಜುಲೈ ತಾ. ೧೮ನೇ ವರೆಗೆ ರೂ. ೬೪,೦,೦೦,೦೦೦ ಹಣ ಕೂಡಿದೆಂದು ಪ್ರಕಟವಾಗಿದೆ. ಕಾರಖಾನೆಯವರು ಒಟ್ಟುಗೂಡಿ ರೂ ೫೦,೦,೦೦೦೦,೦೦ ಕೂಡಿಸಿ ಕೊಡಬೇಕೆಂದು ತೀರ್ಮಾನವಾಗಿದೆ. ಜವಳಿ ಗಿರಣಿಯವರು ೩|| ಕೋಟಿ ರೂ. ಕೊಡಬೇಕೆಂದು ನಿರ್ಧರಿಸಿದ್ದಾರೆ. ಜವಳಿ-ನಿಯಂತ್ರಣ ರದ್ದಾಗಿ ಈಗ ೩ ತಿಂಗಳುಗಳಾದವು. ಈ ಅವಧಿಯಲ್ಲಿ ರೂ. ೬೦ ಕೋಟಿಗಳನ್ನು ಜವಳಿ ಗಿರಣಿಯವರು ಗಳಿಸಿದರೆಂದೂ ಹೆಚ್ಚಿನ ರಕಮನ್ನು ಅಹಮ್ಮದಾಬಾದ ಜವಳಿ ಗಿರಣಿಯವರೇ ಪಡೆದರೆಂದೂ ಸುದ್ದಿಯುಂಟು. ಗಾಂಧಿ ಸ್ಮಾರಕನಿಧಿಗೆ ಸಾಮಾನ್ಯವಾಗಿ ರೂ. ೫೦ ಕೋಟಿ ವರ್ಗಣಿ ಕೂಡಿಸಬೇಕೆಂದು ಸಂಕಲ್ಪವಾಗಿದೆ. ಮಧ್ಯಪ್ರಾಂತದ ಗವ್ಹರ್ನರರಾದ ಶ್ರೀ|| ಮಂಗಲದಾಸ ಪಕ್ವಾಸಾರವರು ಸ್ಮಾರಕ ನಿಧಿಯ ಆಡಳಿತೆ ಯೋಜನೆಯನ್ನು ತಯಾರಿಸುತ್ತಿದ್ದಾರೆ. ಮೈಸೂರಿನ ಗಾಂಧಿ ಸ್ಮಾರಕ ನಿಧಿಯವರು ಅಲ್ಲಿಯ ಕುದುರೆ ಶರ್ಯತ್ತುಗಳ ಒಂದು ದಿವಸದ ಉತ್ಪನ್ನ ರೂ. ೫೫ ಸಾವಿರ ಪಡೆದಿದ್ದರು ಇದು ಅನುಚಿತವೆಂದು "ಹರಿಜನ" ಪತ್ರಿಕೆಯ ಸಂಪಾದಕರಾದ ಶ್ರೀ|| ಕಿಶೋರಿಲಾಲ ಮಶ್ರುವಾಲಾರವರು ಪ್ರಕಟಿಸುತ್ತಾರೆ.

— ಸಕ್ಕರೆಗೆ ಕೆಲ ಪಟ್ಟಿಗೆ ನಿಯಂತ್ರಣವುಂಟು; ಕೆಲಪಟ್ಟಿಗೆ ನಿಯಂತ್ರಣವಿಲ್ಲ ಹಿಂದೆ ನಿಯಂತ್ರಣದಲ್ಲಿ ಬಂಗಾಲಿ ಮಣ ೧೯ ದರ ರೂ. ೨೦-೧೪-೦ ಇತ್ತು. ಈಗ ರೂ. ೩೫-೬-೦ ಆಗಿರುತ್ತದೆ ಮುಂಬಯಿಯಲ್ಲಿ ರೂ ೪೦-೦-೦ ರಂತೆ ದರ ಕೊಡಮಾಡಿದರೂ ಸಕ್ಕರೆ ಸಿಗುವದಿಲ್ಲ! ವಿದೇಶಿ ಸಕ್ಕರೆ ತರಲಿಕ್ಕೆ ಸರಕಾರವು ಅನುಕೂಲತೆ ಒದಗಿಸಿ ಕೊಟ್ಟರೆ ಬಂಗಾಲಿ ಮಣ ೧ಕ್ಕೆ ರೂ. ೧೬-೦-೦ ರಂತೆ ದರ ಬೀಳುವದಂತೆ. ಸಂಯುಕ್ತ ಪ್ರಾಂತ ಮತ್ತು ಬಿಹಾರ ಪ್ರಾಂತಗಳಲ್ಲಿ ಸಕ್ಕರೆ ಸಂಘಗಳಿದ್ದು, ಹಿಂದುಸ್ಥಾನದಲ್ಲಿ ಬೆಳೆಯುವ ಶೇ ಪಾಲು ಸಕ್ಕರೆ ಈ ಎರಡು ಪ್ರಾಂತಗಳಲ್ಲಿ ಬೆಳೆಯುತ್ತದೆ ಇವೆರಡೂ ಸರಕಾರಗಳು ಒಕ್ಕಟ್ಟಾಗಿ ಹುಟ್ಟಿದ ಸಕ್ಕರೆಯನ್ನು ಮಾರಾಟ ಮಾಡಲು ಕೊಡುವದಿಲ್ಲ! ೧೦೦ರಲ್ಲಿ ೩೫ ರಷ್ಟು ಪಾಲು ಸಕ್ಕರೆ ಮಾತ್ರ ಮಾರಾಟಕ್ಕೆ ಸಿಗು

ತ್ತವೆ. ಸಕ್ಕರೆ ಗಿರಣಿಗಳಲ್ಲಿ ಸಕ್ಕರೆ ರಾಶಿ ರಾಶಿಯಾಗಿ ಬಿದ್ದುಕೊಂಡಿದ್ದರೂ ಉಭಯ ಸರಕಾರಗಳು ಹೇರಿದ ನಿಬಂಧನೆಗಳಿಂದ ಸಕ್ಕರೆ ದರ ಇಳಿಯುವದಿಲ್ಲ ಇದರಿಂದ ಸಕ್ಕರೆ ಕಾರಖಾನೆಗಳವರಿಗೆ ನಿಯಂತ್ರಣ ಹೋದಂದಿನಿಂದ ೩೦ ಕೋಟಿ ರೂ ಲಾಭವಾಗಿದೆ ಈ ನಮೂನೆ ರಾಷ್ಟ್ರೀಯ ಸರಕಾರಕ್ಕೆ ಅನುಚಿತವೆಂದು ಶ್ರೀ|| ಅಶೋಕ ಮೇದಾರವರು ಪ್ರಕಟನೆ ಹೊರಡಿಸಿದ್ದಾರೆ

—ಹಿಂದುಸ್ಥಾನ ಸರಕಾರವು ಎಲ್ಲ ಪ್ರಾಂತಿಕ ಸರಕಾರಗಳಿಗೆ ಒಂದು ಗುಪ್ತ ಪತ್ರವನ್ನು ಬರೆದು, ಪ್ರಾಂತದೊಳಗೆ ವಾಸಿಸುವ ಯುರೋಪಿಯನ್ನರ ಚಟುವಟಿಕೆಗಳನ್ನು ನೋಡುತ್ತಿರಲು ಸೂಚಿಸಿದೆ ಪ್ರಾಂತಿಕ ಸರಕಾರಗಳು ಜಿಲ್ಲಾಧಿಕಾರಿಗಳಿಗೆ ಬರೆದು, ಯುರೋಪಿಯನ್ನರ ಓಡಾಟದ ದಾಖಲೆ ಇಡಲಿಕ್ಕೆ ತಿಳಿಸಿರುತ್ತದಾಗಿ ಅಹಮ್ಮದಾಬಾದದೊಳಗೆ ಸುದ್ದಿಯುಂಟು

—ಮುಂಬಯಿ ಸರಕಾರವು ಒಂದು ಹುಕುಮು ಹೊರಡಿಸಿ ಅಧಿಕಾರಿಗಳು ಕೊಡುವ ಮೇಜವಾನಿಗಳಲ್ಲಿ ಮದ್ಯ ಇಡಕೂಡದೆಂದು ನಿರ್ಬಂಧಿಸಿದೆ ಅಧಿಕಾರಿಗಳಿಗೆ ಜನ ಪ್ರಮುಖರು ಕೊಡುವ ಮೇಜವಾನಿಗಳಲ್ಲಿ ಸಹ ಅವರು ಕುಡಿಯಬಾರದೆಂದು ತಿಳಿಸಲಾಗಿದೆ ಬಹಿರಂಗವಾಗಿ ಖಾನಾವಳಿಗಳಲ್ಲೂ ಅಂಗಡಿಗಳಲ್ಲೂ ಕುಡಿಯಬಾರದೆಂದು ನಿರ್ಬಂಧಿಸಲಾಗಿದೆ ಮದ್ಯಪಾನ ನಿರ್ಬಂಧಿಸುವ ಅಧಿಕಾರಿಗಳು ಕುಡಿದಷ್ಟು ಕಂಡು ಬಂದಲ್ಲಿ ಅವರ ವಿರುದ್ಧ ಕಠೋರ ಕ್ರಮ ಕೈಕೊಳ್ಳಲ್ಪಡುವದಾಗಿ ಎಚ್ಚರಿಕೆ ಕೊಡಲಾಗಿದೆ ಮದ್ರಾಸ ಸರಕಾರವು ಮದ್ಯ ಕುಡಿಯುವ ಅಧಿಕಾರಿಗಳು ಸರಕಾರದಿಂದ ಅಪ್ಪಣೆ ಪಡೆಯಬೇಕೆಂದೂ ಬಹಿರಂಗವಾಗಿ ಅಪ್ಪಣೆ ಬೇಡಲಿಕ್ಕೆ ನಾಚುವ ಅಧಿಕಾರಿಗಳು ಸರಕಾರಕ್ಕೆ ಗೌಪ್ಯದಿಂದ ಬರೆದು ಅನುಜ್ಞೆ ಪಡೆಯಬಹುದೆಂದೂ ಮದ್ರಾಸ ಸರಕಾರವು ಅನುಕೂಲತೆ ಇಟ್ಟಿದೆ ಇಂಥ ಗುಪ್ತ ಕ್ರಮ ಬೇರೆ ಪ್ರಾಂತಿಕ ಸರಕಾರದಲ್ಲಿ ಇರುವದಿಲ್ಲವಾಗಿ ಅಲ್ಲಿಯ ಮುಖ್ಯ ಪ್ರಧಾನರು ಚಾಲೆಂಜಮಾಡಿದವರಿಗೆ ತಿಳಿಸಿದ್ದಾರೆ ಮದ್ಯಪಾನದ ಉಚ್ಚಾಟನದ ಬಗ್ಗೆ ಬದ್ಧಕಂಕಣವಾದ ಮದ್ರಾಸದ ಕಾಂಗ್ರೆಸ ಸರಕಾರವು ತನ್ನ ಅಧಿಕಾರಿಗಳಿಗೆ ಕುಡಿಯಲು ಮತ್ತು ಅಪ್ಪಣೆ ಕೊಡುವದನ್ನು "ಹರಿಜನ"ಕರ್ತರು ನಿಸ್ಸಾರವಾಗಿ ನಿಷೇಧಿಸಿ, ಅಬಕಾರಿ ಇಲಾಖೆಯಲ್ಲಿ ಮದ್ಯ ನಿರ್ಬಂಧದ ಬಗ್ಗೆ ಮದ್ಯ-ವರ್ಜಕರನ್ನಾಗಿ ನೇಮಿಸಬಹುದೆಂದು ಸೂಚಿಸಿದ್ದಾರೆ!

—ಗೋಮಾಂತಕದಲ್ಲಿ ಜನಪ್ರಮುಖರಾದ ಶ್ರೀ|| ರಘುವೀರ ಕಾಮತರಿಗೆ ಸರಕಾರವು ಕೈಸೆರೆಯಲ್ಲಿಟ್ಟದೆ ಅವರು ಉಪೋಷಣ ಮಾಡುತ್ತಿದ್ದಾರೆಂದೂ ಅವರೊಡನೆ ಸಹಾನುಭೂತಿ ಪ್ರದರ್ಶಿಸುವದಕ್ಕಾಗಿ ಇತರ ಕೈದಿಗಳು ಕೂಡ ಉಪವಾಸ ಮಾಡುತ್ತಿದ್ದಾರೆಂದೂ ಮುಂಬಯಿಯೊಳಗೆ ವಾರ್ತೆಯುಂಟು ಮರ್ಮಾಗೋವಾ ಗ್ರಾಮದಲ್ಲಿ ಗೋವಾ ಸರಕಾರವು ತರತರದಿಂದ ಜನರನ್ನು ಪೀಡಿಸುತ್ತಿದ್ದು, ಆ ದುರಾಚಾರಗಳನ್ನು ನಿಲ್ಲಿಸಿದನಕ ತಾವು ಉಪವಾಸ ಬಿಡಲಿಕ್ಕಿಲ್ಲವಾಗಿ ಶ್ರೀ|| ರಘುವೀರ ಕಾಮತರು ನಿರ್ಧಾರಮಾಡಿದ್ದಾರೆ

— ದಿಲ್ಲಿ ಪಟ್ಟಣದಲ್ಲಿ ಹಿಂದಿಯೋಲಗದ ಸಭೆ ಮುಂದಿನ ಸೋಮವಾರದಿಂದ ಸೇರಲಿದೆ ಈ ಸಭೆಯಲ್ಲಿ ಹಿಂದು ಕಾಯಿದೆ ಮೊದಲಾದ ಅನೇಕ ಮಹತ್ವದ ಕಾನೂನುಗಳು ಚರ್ಚೆಗೆ ಬರುವವು

— ಕಾರವಾರ ಬಂದರವನ್ನು ಹಿಂದುಸ್ಥಾನ ಸರಕಾರವು ಒಪ್ಪಿಸಿಕೊಂಡು ಅದನ್ನು ದೊಡ್ಡ ಬಂದರವನ್ನಾಗಿ ಮಾಡಬೇಕೆಂದು ಕಾರವಾರದ ಅಭಿಮಾನಿಗಳ ಪರವಾಗಿ ಮುಂಬಯಿಯಲ್ಲಿ ಶ್ರೀ ಕಾಳೇಲಕರ ಶಿಷ್ಟಮಂಡಳವು ಬಂದರ ಸಮಿತಿಯ ಮುಂದೆ ಪ್ರತಿಪಾದಿಸಿತು ಶ್ರೀ ಕಾಕಾ ಕಾಳೇಲಕರ ಶ್ರೀ|| ಕೃಷ್ಣ ಕುಮಾರ ಕಲ್ಲೂರ, ಶ್ರೀ|| ಪಿ ಕೇ ರಾವ್ ಶ್ರೀ|| ಎಸ್ ನರಸಿಂಹಯ್ಯಾ ಇವರು ಶಿಷ್ಟಮಂಡಳದಲ್ಲಿದ್ದರು ಕಾರವಾರ ಬಂದರದ ಸೃಷ್ಟಿಸೌಂದರ್ಯ ಮತ್ತು ಕಾರವಾರ ಬಂದರದ ಬೆಂಬಲಕ್ಕಿರುವ ಸೃಷ್ಟಿಸಂಪತ್ತುಳ್ಳ ಪ್ರದೇಶಗಳನ್ನು ಶಿಷ್ಟರು ವರ್ಣಿಸಿ, ಕಾರವಾರದ ಅಭಿವೃದ್ಧಿಯಿಂದ ಬಳಿ ಪ್ರದೇಶಕ್ಕೆ ಅಭಿವೃದ್ಧಿ ಹೊಂದಲು ತಕ್ಕ ಅವಕಾಶ ಸಿಗುವದೆಂದೂ ಐಕ್ಯಯು ಅಭಿವೃದ್ಧಿ ಹೊಂದುವದೆಂದೂ ಪ್ರತಿಪಾದಿಸಿದರು ಶ್ರೀ| ಕಾಳೇಲಕರರಂಥ ನಿಃಸ್ಪೃಹ ಮತ್ತು ನಿರ್ಮಲವ ನಸ್ಸಿನವರು ಕಾರವಾರದ ಪುರಸ್ಕಾರ ಮಾಡಿರುವದರಿಂದ ಕಾರವಾರದ ಭಾಗ್ಯೋದಯವಾಗಬಹುದೆಂದು ಅನಿಸುತ್ತದೆ

ಇದನ್ನು ವಂಡರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು

ಕುಮಟಾ ತಾಲೂಕ ತೆಪ್ಪದ ಮರದಲ್ಲಿ ಸೇರಿದ ಭೂಮಿಯೊಡೆಯರ ಸಭೆಯ ತೀರ್ಮಾನಗಳು.

ಕುಮಟಾ ತಾಲೂಕ ತೆಪ್ಪದ ಮರದಲ್ಲಿ ತಾ ೪-೭-೧೯೪೮ನೇಗೆ ಕುಮಟಾ ತಾಲೂಕ ಅಘನಾಶಿನಿ, ಕಾಗಾಲ, ಹುಬ್ಬಣಗೇರಿ ಬಾಡ, ಗುಡೇಅಂಗಡಿ, ಹೊಲನಗದ್ದೆ, ಚಿತ್ರಿಗಿ, ಹಳಕಾರ, ಹೆಗಡೆ ಗ್ರಾಮಗಳ ಭೂಮಾಲಿಕರು ಕೂಡಿ ಕೈಕೊಂಡ ತೀರ್ಮಾನಗಳು

ಅಧ್ಯಕ್ಷರೂ ಕೂಡಿದ ಜನರೂ ಒಕ್ಕಲತನದ ಕಾನೂನಿನಿಂದ ಒಡೆಯರಿಗೆ ಉಂಟಾದ ಕಷ್ಟ-ನಷ್ಟಗಳನ್ನು ವಿವರಿಸಿದರು ಸ್ವಂತ ಸಾಗುವಳಿಯ ಬಗ್ಗೆ ಕಬಜೆ ಬೇಡಿ ಮಾಡಿದ ಅರ್ಜಿಗಳು ಕ್ಷುಲ್ಲಕ ಕಾರಣಗಳಿಂದ ಕಿತ್ತುಹಾಕಲ್ಪಡುತ್ತವೆಂದೂ, ಸ್ವಂತ ಸಾಗುವಳಿಗೆ ಹುಕುಮು ಆದ ಪ್ರಕರಣಗಳಲ್ಲಿ ಒಕ್ಕಲಿಗರು ಅಪೀಲು ಮಾಡಿದ್ದೇವೆಂದು ಹೇಳಿ ಕಬಜಾ ಹುಕುಮುಗಳಿಗೆ ತಡೆ ಹಾಕಿಕೊಳ್ಳುತ್ತಾರೆಂದೂ ಸಾಗುವಳಿಗೆ ಒಡೆಯರಿಗೆ ಭೂಮಿ ಸಿಗಗೊಡುವದಿಲ್ಲವೆಂದೂ, ಸ್ವಂತ ಸಾಗುವಳಿಗೆ ಹುಕುಮು ಆಗಬೇಕಾದರೆ ಬೇಸಾಯಕ್ಕೆ ತಕ್ಕ ಸಾಹಿತ್ಯಗಳಿರುವವೆಂದು ಟೆನನ್ಸಿ ಕೋರ್ಟಿಗೆ ಮನಗಾಣಿಸಬೇಕಾದ್ದರಿಂದ ಕಬಜಾ ಸಿಗದಿದ್ದರೆ ಬೇಸಾಯ-ಸಾಹಿತ್ಯದ ಪೂರೈಕೆ ನಿರರ್ಥಕವಾಗಿ ನಷ್ಟವಾಗುತ್ತದೆಂದೂ ಒಕ್ಕಲಿಗರು ಸರಿಯಾಗಿ ಸಾಗುವಳಿ ಮಾಡದೆ ಭೂಮಿಯನ್ನು ರೂಪಿತ ಇಡದೆ ಒಡೆಯರಿಗೆ ಶಾಶ್ವತವಾದ ನಷ್ಟ ಪಡಿಸುತ್ತಾರೆಂದೂ, ಗೇಣಿ ಕೊಡದ ಬಗ್ಗೆ ಕಬಜಾ ಬೇಡಿದ ಪ್ರಕರಣಗಳ ವಿಚಾರ ಮಾಡಲು ಟೆನನ್ಸಿ ಅವ್ವಲ ಕಾರಕೂನರಿಗೆ ಅಧಿಕಾರವಿಲ್ಲೆಂದು ಸರಕಾರವು ತಿಳಿಸಿದ್ದರಿಂದ, ಕಬಜಾ ಕೊಟ್ಟ ಸಂಗತಿಗಳಲ್ಲಿ ಪುನಃ ಕಬಜಾ ಬಿಟ್ಟುಕೊಡುವ ಪ್ರಸಂಗ ಬಂದಿರುವದೆಂಬ ಸುದ್ದಿ ನಿಜವಿದ್ದರೆ ಒಡೆಯರು ಈ ತನಕ ಸಾಗುವಳಿಗಾಗಿ ಮಾಡಿದ ಕಷ್ಟವೆಲ್ಲ ಒಕ್ಕಲ-ಪಾಲಾಗಿ, ಒಡೆಯರು ಪುನಃ ನಷ್ಟ ಹೊಂದುವ ಕಾಲ ಬಂದಿರುವದೆಂದೂ ಒಕ್ಕಲುಗಳ ಕಡೆಯಿಂದ ಗೇಣಿಯನ್ನು ಇಲ್ಲವೆ ಉತ್ಪನ್ನವನ್ನು ಪಡೆಯಲಿಕ್ಕೆ ಹೇಗೂ ಸಾಧ್ಯವಿಲ್ಲೆಂದೂ, ಒಕ್ಕಲತನದ ಕಾನೂನು, ಆ ಕಾನೂನಿನಂತೆ ಮಾಡಿದ ನಿಯಮಗಳು ಮತ್ತು ಅವುಗಳ ಬಜಾವಣೆಗಾಗಿ ಸರಕಾರವು ಕಾಲ-ಕಾಲಕ್ಕೆ ಹೊರಡಿಸುವ ಹುಕುಮುಗಳು, ಟೆನನ್ಸಿ ಅವ್ವಲ ಕಾರಕೂನರ ಮನೋವೃತ್ತಿ ಮೊದಲಾದವುಗಳಿಂದ ಒಕ್ಕಲು-ಒಡೆಯರೊಳಗೆ ತಪ್ಪು ಭಾವನೆಗೆ ಅವಕಾಶ ದೊರೆತಿರುವದೆಂದೂ, ಸರಕಾರವು ಒಡೆಯರನ್ನು ರಕ್ಷಿಸಬೇಕೆಂದೂ, ಒಡೆಯರು ಸ್ವಂತ ಸಾಗುವಳಿದಾರರಾಗಿ ಸಾಗುವಳಿದಾರರೇ ಒಡೆಯರಾಗಬೇಕೆಂಬ ಸರಕಾರದ ಉದ್ದೇಶವನ್ನು ಸಾರ್ಥಕಗೊಳಿಸಲು ಸಿದ್ಧರಿರುವರೆಂದೂ, ಅನೇಕ ಒಡೆಯರಿಗೆ ಒಕ್ಕಲಿಗರು ಗೇಣಿ ಅಕ್ಕಿ ಕೊಡದೆ ಕಡಿಮೆ ದರದಿಂದ ಮನಿಯಾರ್ಡರ ಮಾಡಿ ಹಣ ಕಳಿಸಿರುವರೆಂದೂ, ಹಲವು ಒಕ್ಕಲಿಗರು ಹಣ ಸಹ ಕಳಿಸಲಿಲ್ಲೆಂದೂ, ಆದರಿಂದ ಜೂಜ್ವಿ ಭೂಮಿಯಿದ್ದ ಒಡೆಯರು ಉಪವಾಸ ತೆಗೆಯುವ ಪ್ರಸಂಗ ಬಂದಿರುವದೆಂದೂ, ಈ ವರ್ಷ ಕಬಜಾ ಸಿಗದಿದ್ದರೆ ಮುಂದಿನ ವರ್ಷ ಚಾಲ್ತಿ ಮಾಡುವದು ಕಠಿಣವೆಂದೂ, ಸರಕಾರವು ಈ ವಿಪತ್ತಿಯೊಳಗಿಂದ ತಮ್ಮನ್ನು ಕಾಯಬೇಕೆಂದೂ ಬೇರೆ ಬೇರೆ ಸಭಿಕರು ವಿವರಿಸಿ ತಮ್ಮ ತಮ್ಮ ಕಷ್ಟಗಳನ್ನು ಹೇಳಿಕೊಂಡ ಬಳಿಕ ಈ ಕೆಳಗಿನ ತೀರ್ಮಾನಗಳು ಕೈಕೊಳ್ಳಲ್ಪಟ್ಟವು —

೧ ಟೆನನ್ಸಿ ಅವ್ವಲ್ ಕಾರಕೂನರು ಸ್ವಂತ ಸಾಗುವಳಿಯ ಬಗ್ಗೆ ಮಾಡಿದ ದಾವೆಗಳನ್ನು ಕ್ಷುಲ್ಲಕ ಕಾರಣಗಳ ಮೇಲಿಂದ ಕಿತ್ತುಹಾಕುತ್ತಾರೆ ಬೇಸಾಯದ ಸಾಹಿತ್ಯಗಳನ್ನು ಪೂರೈಸಿಕೊಂಡಾಗ್ಯೂ ಹಳ್ಳಿಗಳಲ್ಲಿ ಒಡೆಯನದೊಂದು ಸಣ್ಣ ಅಂಗಡಿ ಇರುತ್ತದೆಂಬದರಿಂದ ಸ್ವಂತ ಸಾಗುವಳಿ ಅವನಿಗೆ ಅವಶ್ಯವಿಲ್ಲೆಂದು ತೀರ್ಮಾನಿಸಿದ್ದುಂಟು ಹೆಗಡೆ ಗ್ರಾಮದ ಒಂದು ಪ್ರಕರಣದಲ್ಲಿ ಹೂಡುವ ಎತ್ತು ಯೋಗ್ಯವಿಲ್ಲೆಂಬ ಒಕ್ಕಲಿಗನು ಹೇಳಿದ ಹೇಳಿಕೆ ಪ್ರಮಾಣವೆಂದು ಟೆನನ್ಸಿ ಅವ್ವಲ ಕಾರಕೂನರು ಬರೆದದ್ದುಂಟು.

...ಕೊಳ್ಳುವ ಒಡೆಯನಿಗೆ ಮತ್ತು ಗೇಣಿಗೆ ವಿರುದ್ಧವಾಯ ವಸೂಲ ಮಾಡುವ ಒಡೆಯನಿಗೆ ರೂ ೧೦೦ರಿಂದ ವರೆಗೂ ಗೇಣಿಯ ಪಾವತಿ ಕೊಡದ ಒಡೆಯನಿಗೆ ರೂ. ೧೦೦೦ರ ವರೆಗೂ ದಂಡ ಹೇಳಲಾಗಿದೆ.

೬ನೇ ಭಾಗದಲ್ಲಿ ಸಂಕೀರ್ಣ ವಿಷಯಗಳುಂಟು. ೭೦ನೇ ಕಲಮಿನಲ್ಲಿ ಪ್ರಾಂತಿಕ ಸರಕಾರದ ನಿಯಮ ಮಾಡುವ ಅಧಿಕಾರವೂ, ೭೧ನೇ ಕಲಮಿನಲ್ಲಿ ಪ್ರತಿನಿಧಿಕ ಅಧಿಕಾರಿಗಳನ್ನು ನೇಮಿಸುವ ಅಧಿಕಾರವೂ ಹೇಳಲ್ಪಟ್ಟಿವೆ.

ಅನಧಿಕೃತವಾಗಿ ಆಕ್ರಮಿಸಿಕೊಂಡ ಭೂಮಿಯಿಂದ ಆಕ್ರಮಣಕಾರನನ್ನು ಒಮ್ಮೆಲೇ ಹೊರಡಿಸುವ ಅಧಿಕಾರ ೭೩ನೇ ಕಲಮಿನಿಂದ ಕಲೆಕ್ಟರಿಗೆ ಕೊಡಲಾಗಿದೆ.

ಈ ಕಾನೂನಿನ ಕಕ್ಷೆಯಲ್ಲಿ ಬರುವ ವಿಷಯಗಳ ವಿಚಾರ ಮಾಡುವ ಅಧಿಕಾರ ದಿವಾಣಿ ಕೋರ್ಟುಗಳಿಗೆ ಇಲ್ಲೆಂದು ೭೪ನೇ ಕಲಮಿನಲ್ಲಿ ಹೇಳಿದೆ.

ಮಾಮಲೇದಾರರನ್ನೂ ಕಲೆಕ್ಟರರನ್ನೂ ನಿಯಂತ್ರಿಸುವ ಅಧಿಕಾರ ಪ್ರಾಂತಿಕ ಸರಕಾರಕ್ಕೆ ಕೊಡಲ್ಪಟ್ಟಿದೆ (ಕಲಮು ೭೫)

ಈ ಕಾನೂನಿನಂತೆ ಹೊರಡಿಸಲ್ಪಡುವ ಪ್ರಾಮಾಣಿಕ ಹುಕುಮುಗಳ ಬಗ್ಗೆ ದಿವಾಣಿ ಕೋರ್ಟುಗಳಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ನಡೆಯಲಾರದೆಂದು ೭೬ನೇ ಕಲಮಿನಲ್ಲಿ ಹೇಳಿದೆ.

೭೭ನೇ ಕಲಮಿನಲ್ಲಿ ಈ ಕಾನೂನು ಅನ್ವಯಿಸದ ಭೂಮಿಗಳ ನಿರ್ದೇಶವಿದೆ. ಸರಕಾರದಿಂದ ಇಲ್ಲವೆ ಸಹಕಾರಿ ಸಂಘಗಳಿಂದ ಗೇಣಿಗೆ ಪಡೆದ ಭೂಮಿಗಳು, ಔದ್ಯೋಗಿಕ ಕಾರ್ಯಗಳಿಗಾಗಿ ಇಲ್ಲವೆ ವ್ಯಾಪಾರಕ್ಕಾಗಿ ಗೇಣಿಗೆ ಪಡೆದುಕೊಂಡ ಭೂಮಿಗಳು, ಬೊರೊ ಮ್ಯುನಿಸಿಪಾಲಿಟಿಗಳ ಕಾಯಿದೆಯಂತೆ, ಮ್ಯುನಿಸಿಪಾಲಿಟಿಯ ಚತುಃಸೀಮೆಯಲ್ಲಿರುವ ಮತ್ತು ಆ ಚತುಃಸೀಮೆಯಿಂದ ೨ ಮೈಲುಗಳೊಳಗಿರುವ ಪ್ರದೇಶದಲ್ಲಿರುವ ಭೂಮಿಗಳೂ ಸರಕಾರವು ಬಿನ್-ಶೇತಕಿ ಇಲ್ಲವೆ ಔದ್ಯೋಗಿಕ ಉನ್ನತಿಗಾಗಿ ಕಾದಿಟ್ಟ ಭೂಮಿಗಳೂ ಈ ಕಾನೂನಿನ ಕಕ್ಷೆಯಲ್ಲಿ ಬರುವದಿಲ್ಲ.

ಕೊನೆಯ (೭೭ನೇ) ಕಲಮು ಈಗಿನ ಅಂದರೆ ೧೯೩೯ರಲ್ಲಿ ತಿದ್ದುಪಡಿಹೊಂದಿದ ೧೯೩೯ರ ಒಕ್ಕಲತನ ಕಾನೂನನ್ನು ರದ್ದುಪಡಿಸುತ್ತದೆ. ಆದರೆ ಹಳೆಯ ಕಾನೂನಿನಂತೆ ಪ್ರಾಪ್ತವಾದ ಹಕ್ಕುಗಳೂ ಕೈಕೊಳ್ಳಲ್ಪಟ್ಟ ಕ್ರಮಗಳೂ ರದ್ದಾಗಕೂಡದೆಂದು ಸ್ಪಷ್ಟಪಡಿಸಲಾಗಿದೆ.

ಈ ರೀತಿ ಹೊಸ ಕಾನೂನಿನ ವಿವರಗಳನ್ನು ಕೊಟ್ಟು, ಕೊನೆಗೆ ನಾ|| ಮುರಾರಜಿ ದೇಸಾಯಿಯವರು ಹೊಸ ಕಾನೂನನ್ನು ರಚಿಸುವ ಉದ್ದೇಶವನ್ನೂ ಕಾರಣಗಳನ್ನೂ ಕೊಟ್ಟಿರುತ್ತಾರೆ. ಅವು ಕೆಳಗಿನಂತಿವೆ —

ಉದ್ದೇಶ ಮತ್ತು ಕಾರಣಗಳು

ಮುಂಬಯಿಯ ಒಕ್ಕಲತನದ ಕಾನೂನು ಆಗುವ ಮುನ್ನ ಭೂಕಂದಾಯದ ಕಾನೂನು ಮತ್ತು ಇತರ ಕಾನೂನುಗಳಂತೆ ಒಡೆಯ-ಒಕ್ಕಲಿಗರೊಳಗಿನ ಸಂಬಂಧಗಳು ನಡೆದಿದ್ದವು. ಆಗ ಒಕ್ಕಲಿಗರಿಗೆ ಸಮಾಧಾನಕರ ರಕ್ಷಣೆ ಸಿಕ್ಕುತ್ತಿದ್ದಿಲ್ಲ. ಅವರು ಕೆಲ ತಲೆಗಳಿಂದಲೂ ಉಳುತ್ತ ಪರಂಪರೆಯಿಂದ ಸಾಗುವಳಿ ಮಾಡಿ ಬಂದ ಒಕ್ಕಲಿಗರಿಗೆ ಶಾಶ್ವತ ಹಕ್ಕುಗಳು ಆಗ ಇದ್ದಿಲ್ಲ. ಒಡೆಯರ ಮರ್ಜಿಯಂತೆ ಅವರು ಒಕ್ಕಲಿಗರಾಗುತ್ತಿದ್ದರು; ಒಪ್ಪಂದದ ಆಧಾರದಿಂದ ಒಡೆಯರು ಶಾಶ್ವತ ಒಕ್ಕಲಿಗರನ್ನು ಕೂಡ ಹೊರಹಾಕುತ್ತಿದ್ದರು.

ಒಕ್ಕಲತನ ಈ ಪರಿ ಅಸ್ಥಿರವಾದ್ದರಿಂದ ಭೂಮಿಯ ಉತ್ಪತ್ತಿ ಬೆಳೆಸಲಿಕ್ಕೆ ಒಕ್ಕಲಿಗರಿಗೆ ಸ್ಫೂರ್ತಿ ಸಿಗುತ್ತಿದ್ದಿಲ್ಲ. ಆದರಿಂದ ಕೃಷಿಕರ್ಮ ಅವನತಿಗೆ ಇಳಿಯಿತು. ಬೇಸಾಯದ ಉದ್ದಿಮೆಯ ಬಗ್ಗೆ ಲೋಕದಲ್ಲಿ ತಾತ್ಸಾರ ಹುಟ್ಟಿತು. ಈ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ೧೯೩೯ರಲ್ಲಿ ಮುಂಬಯಿಯ ಒಕ್ಕಲತನದ ಕಾನೂನು ಮಾಡಲ್ಪಟ್ಟಿತು. ಈ ಕಾನೂನು ೧೯೪೦ರಲ್ಲಿ ಕೆಲವೊಂದು ಪ್ರದೇಶಗಳಲ್ಲಿ ಪ್ರಚಾರಗೊಳಿಸಲ್ಪಟ್ಟಿತು. ಮತ್ತು ತಾ ೧೧-೪-೧೯೪೬ಕ್ಕೆ ಇಡೀ ಪ್ರಾಂತದೊಳಗೆ ಜಾರಿಯಲ್ಲಿ ತರಲ್ಪಟ್ಟಿತು. ಅದರ ಅನುಭವದಿಂದ ಕಂಡುಬಂದ ನ್ಯೂನತೆಗಳನ್ನು ನಿವಾರಿಸುವದಕ್ಕಾಗಿ ೧೯೪೬ರಲ್ಲಿ ಕೆಲವು ತಿದ್ದುಪಡಿಗಳು ಮಾಡಲ್ಪಟ್ಟವು. ತಿದ್ದುಪಡಿ ಹೊಂದಿದ ಈ ಹೊಸ ಕಾನೂನು ತಾ ೮-೧೧-೪೬ರಿಂದ ಇಡೀ ಪ್ರಾಂತದಲ್ಲಿ ಅಮಲಿನಲ್ಲಿದೆ.

ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಒಕ್ಕಲತನದ ಪ್ರಕಾರಗಳಿವೆ. ಆದರಿಂದ ಈ ಕಾನೂನಿನ ಅಮಲಿ ಮಾಡುವಾಗ ಕೆಲವು ಅಡಚಣಿಗಳುಂಟಾದವು.

ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿ ಈಗ ಬದಲಾಗಿರುವದರಿಂದ ಭೂಮಿ ಸುಧಾರಣೆಯ ಸಂಬಂಧದಲ್ಲಿ ನಿಶ್ಚಿತ ಧೋರಣ ಕೈಕೊಂಡು, ಒಕ್ಕಲಿಗರ ಹಿತವನ್ನು ಕಾಪಾಡಿ ಬೇಸಾಯದ ಉತ್ಪನ್ನ ಬೆಳೆಸುವ ಉಪಾಯ ಯೋಜನೆ ಮಾಡುವ ಕಾಲ ಬಂದೊದಗಿದೆ. ಈ ಧ್ಯೇಯದ ಸಾಧನೆಗಾಗಿ ಭೂ-ಧಾರಣೆ ಮಾಡುವವರ ಮೇಲೆ ನಿರ್ಬಂಧಗಳನ್ನು ಹಾಕಿ, ಸ್ವತಃ ಒಕ್ಕಲಿಗರೇ ಭೂಮಿಗಳ ಒಡೆಯರಾಗುವಂತೆ ಪ್ರೋತ್ಸಾಹ ಕೊಡುವ ಧೋರಣವನ್ನು ಅನುಸರಿಸಬೇಕಾಗಿದೆ.

೧೯೩೯ರ ಒಕ್ಕಲತನದ ಕಾನೂನನ್ನು ಹೊಸ ಕಾನೂನು ರದ್ದುಗೊಳಿಸುತ್ತದ್ದರೂ ಆ ಹಳೆಯ ಕಾನೂನಿನ ಉಪಯುಕ್ತ ವಿಷಯಗಳೆಲ್ಲ ಈ ಕಾನೂನಿನಲ್ಲಿ ಸೇರಿಸಲ್ಪಟ್ಟಿವೆ.

ಹೀಗೆ ಪ್ರಸ್ತಾವನೆ ಮಾಡಿ, ಮಾನ್ಯ ದೇಸಾಯಿಯವರು ೩, ೬, ೧೦, ೧೨, ೧೩, ೧೪, ೧೫, ೧೮, ೧೯, ೨೦, ೨೩, ೨೬, ೩೨, ೩೩, ೩೪, ೩೫, ೩೬, ೪೦, ೪೨ರಿಂದ ೬೨, ೬೩, ೬೪, ೭೩, ೭೭ನೇ ಕಲಮುಗಳ ಉದ್ದೇಶಗಳನ್ನು ವಿವರಿಸಿದ್ದಾರೆ. ಈ ಉದ್ದೇಶಗಳು ಆಯಾ ಕಲಮುಗಳ ವಿವರಗಳಲ್ಲಿ ಎದ್ದುಕಾಣುತ್ತಿರುವದರಿಂದ ಅವನ್ನು ಇಲ್ಲಿ ಪುನಃ ಕೊಡಲಿಲ್ಲ.

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ಪಿತಾಶ್ರೀ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನೋನುಸಾರ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತು ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಛತ್ರಗಲ್ಲಿ, ಬನಾರಸ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆ ಬಹಳ ಕಡಿಮೆ ಇದೇ ವಾರದಲ್ಲಿ ೩-೪ ಇಂಚು ಮಳೆಯಾಗಿದೆ. ಆದರೂ ಘಟ್ಟ ಪ್ರದೇಶದಲ್ಲಿ ಮಳೆಯಾದ್ದರಿಂದ ಬುಧವಾರ, ಗುರುವಾರ ಅಘನಾಶಿನಿ ನದಿಗೆ ಸಾಧಾರಣ ನೆರೆ ಬಂದಿತ್ತು. ಹೊಲಗಳಿಗೆ, ವಿಶೇಷವಾಗಿ ಮಕ್ಕಿಗದ್ದೆಗಳಿಗೆ ಈಗ ನೀರು ಬೇಕು.

ಇಲ್ಲಿಯ ಮಾಂಬರ-ರಸ್ತೆಯ ಮೇಲೆ ಈಗ ಬಹಳ ಕೆಂಪು ಜನರು ಓಡಾಡುತ್ತಾರೆ. ಆದರಿಂದ ಮಾರ್ಗಸ್ಥರಿಗಾಗುವ ಕಷ್ಟಗಳು ಬಹಳ ಕಡಿಮೆಯಾಗಿವೆ. ಮಾರ್ಗದ ಕೆಲವೊಂದು ಭಾಗಗಳಲ್ಲಿ ದೊಡ್ಡ ಕೊಳ್ಳು ಕಡಿಮೆಯುಂಟು. ಅಧಿಕಾರಿಗಳು ಇತ್ತ ಲಕ್ಷ್ಯ ಹಾಕಿಸಿದರೆ ಒಳ್ಳೇದು.

ತಾ ೩೧-೭-೪೮ಕ್ಕೆ ಅಂತ್ಯವಾಗುವ ತ್ರೈಮಾಸಿಕ ಅವಧಿಯ ನೂಲಿನ ವ್ಯವಹಾರದ ಮಾಹಿತಿ-ಪತ್ರಿಕೆಯನ್ನು ಕಳಿಸುವ ಅವಧಿ ತಾ ೧೦-೮-೪೮ಕ್ಕೆ ಮುಗಿಯುತ್ತದಾಗಿ ಸಂಬಂಧಿಸಿದ ನೂಲು-ನಿಯಂತ್ರಣಾಧಿಕಾರಿಗಳು ತಿಳಿಸುತ್ತಾರೆ.

ಹೊನ್ನಾವರ— ಮಹಾಜಗೀರಿ ಸೀಮೆಯ ಕಾಂಗ್ರೆಸ ಕೃತ ಸಂಘದ ವಿಶೇಷ ಸಾಧಾರಣ ಸಭೆಯೊಂದು ಕಳೆದ ತಾ ೧೫ಕ್ಕೆ ಮಹಾಜಗೀರಿಯಲ್ಲಿ ಕೂಡಿತ್ತು. ಸಭೆಯಲ್ಲಿ ಈ ಕೆಳಗಿನ ಠರಾವುಗಳಾದವೆಂದು ತಿಳಿದುಬಂದಿದೆ- (೧) ರೈತರು ಆದಷ್ಟು ಹೆಚ್ಚಿಗೆ ಬೆಳೆ ಬೆಳೆಸಬೇಕು, ಆದಷ್ಟು ಹೆಚ್ಚಿಗೆ ಕ್ಷೇತ್ರ ಸಾಗುವಳಿಯಲ್ಲಿ ತರಬೇಕು (೨) ಈ ಸೀಮೆಯ ಹಳ್ಳಿಗಳು ಸ್ವಾವಲಂಬಿಯಾಗುವಂತೆ ಒಂದು ಯೋಜನೆಯನ್ನು ರಾಷ್ಟ್ರೀಯ ನಾಯಕರು ಮತ್ತು ಮಾನ್ಯರ ಹೊರತು ಅವರ ಕಡೆಯಿಂದ ತಯಾರಿಸಿಕೊಳ್ಳಬೇಕು. (೩) ನಮ್ಮ ಸೀಮೆಯಲ್ಲಿ ಆಸ್ಪತ್ರೆ, ದವಾಖಾನೆ ಸಮಿತಿಯ ಒಂದು ಕೇಂದ್ರ ತೆರೆಯುವಂತೆ ವಿನಂತಿ ಮಾಡಬೇಕು (೪) ಈ ಸೀಮೆಯಲ್ಲಿ ಪಡ ಜಮೀನುಗಳು ಬಹಳ ಇವೆ. ಅವುಗಳ ಸಾಗುವಳಿಗೆ ಅನುಕೂಲವಾಗುವಂತೆ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ಸರಕಾರವು ಅವನ್ನು ಪ್ರೋತ್ಸಾಹಿಸಬೇಕು (೫) ಸ್ವಚ್ಛತೆ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ-ಜೂಜಾಟ ಪ್ರತಿಬಂಧ ವಗೈರೆ ಆರ್ಥಿಕ, ಸಾಮಾಜಿಕ ಕಾರ್ಯದ ಪ್ರಚಾರ ಮಾಡಲು ಪ್ರತಿ ಹಳ್ಳಿಯಲ್ಲಿ ೨-೨ ಕಾಂಗ್ರೆಸಿಗ ಸ್ವಯಂಸೇವಕರನ್ನು ನೇಮಿಸಿಕೊಳ್ಳಬೇಕು (೬) ಟೆನನ್ಸಿ ಕಾಯಿದೆಯ (೧)ನೇ ಕಲಮನ್ನು ಸರಕಾರವು ರದ್ದುಗೊಳಿಸಬೇಕು. (೭) ನಮ್ಮ ಸಂಘವು ಕಾಂಗ್ರೆಸ್ಸಿನ ನೀತಿಯನ್ನನುಸರಿಸಿಯೇ ನಡೆಯಬೇಕು ಎಂದು ಜಿಲ್ಹಾ ಕಾಂಗ್ರೆಸ ರೈತ ಸಂಘವು ಹೊನ್ನಾವರದ ಸಭೆಯಲ್ಲಿ ಮಾಡಿದ ಗೊತ್ತುವಳಿಗೆ ಸ್ವಾಗತ, (೮) ವ್ಯಾಪಾರಸ್ಥರೂ ಕೆಲವು ದೊಡ್ಡ ಜಮೀನದಾರರೂ ಅಕ್ಕಿಯನ್ನು ಸಂಗ್ರಹಿಸಿ ದರಗಳನ್ನೇರಿಸಿರುವದರಿಂದ ಬಡ ರೈತರಿಗೂ ಕೂಲಿಕಾರರಿಗೂ ಬಹಳಷ್ಟು ಕಷ್ಟವಾಗುತ್ತಿದ್ದುದರಿಂದ ಸರಕಾರವು ಹೆಚ್ಚಿಗೆ ಸಂಗ್ರಹವಿಟ್ಟುಕೊಂಡವರ ಮತ್ತು ವ್ಯಾಪಾರಸ್ಥರ ಅಕ್ಕಿ ಜಪ್ತ ಮಾಡಿ ಯೋಗ್ಯ ದರದ ಅಂಗಡಿಗಳಲ್ಲಿ ಮಾರಾಟಕ್ಕೆ ಇಡಬೇಕು.

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ. ೧೯೩೯ - ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ —

Post Box No 10,
UDIPI, S. Kanara

ಮುರ್ಡೇಶ್ವರ— (ತಾ ೨೮-೭-೪೮) ಈ ಹಿಂದೆ ಕೆಲವು ಕಡೆ ಧಾಳಿ ಮಾಡಿ ಜಪ್ತ ಮಾಡಿಟ್ಟ ೭ ಗಡಿಗೆ ರಸಾಯನವನ್ನು ಭಟಕಳಕ್ಕೆ ಒಯ್ಯಲಾಗಿದೆ ಕಾರಿಯವರು ಅದನ್ನು ಮಾವಳ್ಳಿಯ ಪಟೀಲರಲ್ಲಿಟ್ಟಿದ್ದರು ಮೊನ್ನೆ ರಾತ್ರಿ ಯಾರೋ ಅದನ್ನು ಕಳವು ಮಾಡಿ ಒಯ್ದಿರುವರೆಂದು ಪಟೀಲರು ಅಬಕಾರಿ ಅಧಿಕಾರಿಗಳಿಗೆ ವರದಿ ಕೊಟ್ಟಂತೆ ಅಬಕಾರಿ ಜವಾಬದಾರರು ನಿನ್ನೆ ಮುರ್ಡೇಶ್ವರಕ್ಕೆ ಹೋಗಿದ್ದರು ಅವರು ತಪಾಸಣೆ ಮಾಡುತ್ತಿರುವಾಗ ಮಂಜಪ್ಪ ನಾಯ್ಕ ಎಂಬವನು ಭಟ್ಟಿಯನ್ನಿಟ್ಟು ಸರಾಯಿ ತೆಗೆಯುತ್ತಿರುವಾಗ ಸಿಕ್ಕಿದಂತೆ ಅವನಲ್ಲಿದ್ದ ಒಂದು ಗಡಿಗೆ ಪಟೀಲರ ಮನೆಯಿಂದ ಕಳವಿಗೆ ಹೋದ ಗಡಿಗೆಯಂತೆ ತೋರುತ್ತಿದೆಯಂತೆ ಅಧಿಕಾರಿಗಳು ಮಂಜಪ್ಪನ ಮೇಲೆ ಕೇಸ ಚಾರ್ಜ ಮಾಡಿಕೊಟ್ಟಿದ್ದಾರೆ

ಊರಲ್ಲಿ ಚಿಕ್ಕಪುಟ್ಟ ಕಳವುಗಳಾಗುತ್ತಿವೆ ಬೇಕೆಂದು ಇಟ್ಟ ತೆಂಗಿನ ಕಾಯಿಗಳು ಇದ್ದಲ್ಲೇ ಕಾಣೆಯಾಗುತ್ತಿವೆ !

ಶಿರಾಲಿ— (ತಾ ೨೮-೭-೪೮) ಬರುವ ಸ್ವಾತಂತ್ರ್ಯ-ದಿನದ ಉತ್ಸವದ ಕಾಲಕ್ಕೆ ಜನರು ತಕ್ಕವಿದ್ದಲ್ಲೆಲ್ಲ ಗಿಡ ಮರಗಳನ್ನು ನೆಡಬೇಕೆಂದು ಭಟಕಳದ ರೇಂಜರರು ಪ್ರಚಾರ ಮಾಡುತ್ತಿದ್ದಾರೆ ತಾ ೨೬ಕ್ಕೆ ಇಲ್ಲಿಯೂ ಮರುದಿನ ಮಂಕಿಯಲ್ಲಿಯೂ ಅವರು ಸಭೆಗೂಡಿಸಿ ವೃಕ್ಷಾರೋಪಣದ ಮಹತ್ವವನ್ನು ತಿಳಿಸಿಹೋದರು.

ಭಟಕಳ— (ತಾ. ೨೮-೭-೪೮) ಸ್ಪಿರಿಟು ಮಾರಲು ಇಲ್ಲಿ ಯಾರಿಗೂ ಪರವಾನೆ ಕೊಟ್ಟಿಲ್ಲ. ಸ್ಪಿರಿಟು ಬೇಕಾದವರು ಹೊನ್ನಾವರಕ್ಕೆ ಹೋಗಬೇಕಾಗಿದೆ !

ಮ್ಯುನಿಸಿಪಾಲಿಟಿಯ ಕಚೇರಿಯ ಸಮೀಪವಿರುವ ಎರಡು ಇಮಾರತುಗಳ ಸೋರೆ-ನೀರು ಮಾರ್ಗದ ಮೇಲೆ ಬಿದ್ದು ಕೊಳಕಾಗುತ್ತಿವೆ, ಈ ಅತಿಕ್ರಮಣವನ್ನು ಮ್ಯುನಿಸಿಪಾಲಿಟಿಯವರು ನಿಲ್ಲಿಸಬಾರದೇ ?

(ತಾ ೩೧ ೭ ೪೮) ನಾಳೆಯ ಸೋಮವಾರದಿಂದ ಈ ಪೇಟೆಯವರು ದಾಖಲಪಡಿಸಿದ ಋಣ-ವಿಮೋಚನೆಯ ಅರ್ಜಿಗಳನ್ನು ಸಾಲ ಸಂಬಂಧಿಸುವ ಬೋರ್ಡಿನ ನ್ಯಾಯಾಧೀಶರು ಇಲ್ಲೇ ಕುಳಿತು ವಿಚಾರಿಸುವರೆಂದು ತಿಳಿಯುತ್ತಿದೆ ಈವರೆಗೆ ಈ ಅರ್ಜಿಗಳ ವಿಚಾರ ಹೊನ್ನಾವರದಲ್ಲಿ ನಡೆಯುತ್ತಿತ್ತು.

ಸಿದ್ದಾಪುರ— (ತಾ. ೨೭-೭ ೪೮) ರಾ॥ ಸುಬ್ರಾಯ ತಿಮ್ಮಯ್ಯ ಹೆಗಡೆ ಪಾಟೀಲ, ಇಳಮನೆ ಇವರು ಬರೆಯುತ್ತಾರೆ.- "ಹೊನ್ನಾವರ ದಿವಾಣ ಕೋರ್ಟಿನೊಳಗಿನ ನನ್ನ ವ್ಯವಹಾರಗಳ ಬಾಬತು ಕೆಲವೊಂದು ಮಹತ್ವದ ಮಾಹಿತಿಯನ್ನು ತಿರಿಗಿ ತಿಳಿಸಲು ನನ್ನ ಕುಮುಟೆಯ ವಕೀಲರಿಗೆ ರಾ॥ ತಾ. ೨೨-೬-೪೮ಕ್ಕೆ ಪತ್ರ ಬರೆದಿದ್ದೆ ಅದಕ್ಕೆ ವಕೀಲರು ತಾ ೨೬-೬-೪೮ಕ್ಕೆ ಸವಿಸ್ತಾರ ಉತ್ತರ ಬರೆದು, ಜೊತೆಗೆ ಕೆಲವು ದಾಖಲೆಗಳನ್ನೂ ಕಳಿಸಿದ್ದರು ಆ ಪತ್ರ ನನಗೆ ಬಹಳ ದಿನಗಳ ವರೆಗೆ ಸಿಗಲಿಲ್ಲ! ಅದು ಕ್ಯಾತಗಿಯ ಸಮೀಪ ಮಾರ್ಗದ ಪಕ್ಕದಲ್ಲಿ ಬಿದ್ದಿತ್ತೆಂದು ಹೇಳಿ, ಓರ್ವ ದಾರಿಕಾರನು ಅದನ್ನು ಇಂದು (ತಾ. ೨೭-೭-೪೮ಕ್ಕೆ) ತಂದು ಕೊಟ್ಟಿದ್ದಾನೆ! ಪತ್ರವು ಮಳೆಯಲ್ಲಿ ಬಿದ್ದು ತೊಯ್ದು ಹೋಗಿದೆ ಹಳ್ಳಿಗಳೊಳಗಿನ ಟಪಾಲ ಪೇದೆಗಳು ಮಾಡುತ್ತಿರುವ ಕೆಲಸದ ಮಾದರಿ ಇದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ" ಇತ್ಯಾದಿ

ಮುಠಗಾರ ಗ್ರಾಮದಲ್ಲಿ ೧೯೪೬ರ ನವಂಬರದಿಂದ ಮನಮೋಹನ ವಾಚನಾಲಯವೆಂಬ ವಾಚನಾಲಯ ನಡೆದು ಬಂದಿದೆ. ಹೋದ ವರ್ಷ ಅದು ರಜಿಸ್ಟರ ಆಗಿದೆ ಈ ವರೆಗೆ ಸದರಿ ವಾಚನಾಲಯಕ್ಕಾಗಿ ರೂ ೧೩೫-೩-೬ ಖರ್ಚಾಗಿ, ರೂ ೧೪೦-೧೨-೬ ಜಮೆಯಾಗಿದೆ.

ಮುಂಡಗೋಡ— (ತಾ. ೨೫-೭-೪೮) ಶಿಗ್ಗಾಂವ ತಾಲೂಕ ಮಳಲಿ ಗ್ರಾಮದ ಬೋಪಣಗೌಡಾ ಎಂಬಾತನು ಕಳ್ಳತನದಿಂದ ಗಾಂಜಾ ತಂದು ಇಲ್ಲಿ ಮಾರುತ್ತಿದ್ದಾಗ ಅಬಕಾರಿ ಅಧಿಕಾರಿಗಳಾದ ರಾ॥ ಸಾಳಸಕರರು ಕಳೆದ ಫೆಬ್ರುವರಿಯಲ್ಲಿ ಹಿಡಿದು ಚಾರ್ಜ ಮಾಡಿಕೊಟ್ಟಿದ್ದರು. ಬೋಪಣಗೌಡನಿಗೆ ಮೆಜಿಸ್ಟ್ರೇಟರು ೩ ತಿಂಗಳ ಶಿಕ್ಷೆ, ಮತ್ತು ರೂ. ೧೦೦ ದಂಡ (ದಂಡ ತೆರದಿದ್ದರೆ ಪುನಃ ೧ ತಿಂಗಳ ಶಿಕ್ಷೆ) ವಿಧಿಸಿದ್ದಾರೆ. ೩-೪ ದಿನಗಳ ಹಿಂದೆ ಕಳ್ಳತನದಿಂದ ಗಾಂಜಾ ಮಾರುತ್ತಾನೆಂಬ ಸಂಶಯದಿಂದ ಅದೇ ಅಧಿಕಾರಿಗಳು ಜೋಂಡಲಹಳ್ಳಿಯ ಮಹಾದೇವ ಎಂಬವನನ್ನು ಹಿಡಿದ ಹಾಗೂ ಮರುದಿನ ಮೈನಹಳ್ಳಿಯಲ್ಲಿ ಒಂದು ಕಡೆ ಭಟ್ಟಿ-ಸರಾಯಿ ಮತ್ತು ರಸಾಯನ ಹಿಡಿದ ವಾರ್ತೆಯುಂಟು

ಯಲ್ಲಾಪುರ— (ತಾ ೨೫-೭-೪೮) ರಾಷ್ಟ್ರಹಿತದ ದೃಷ್ಟಿಯಿಂದ ಕಾರವಾರ ಬಂದರವನ್ನು ದೊಡ್ಡ ಬಂದರವನ್ನಾಗಿ ಮಾರ್ಪಡಿಸುವದು ವಿಹಿತವಿರುತ್ತದೆಂತಲೂ, ಕಾರವಾರ ಬಂದರದಲ್ಲಿ ನೈಸರ್ಗಿಕ ಬಂದರ-ಸೌಕರ್ಯಗಳು ಬಹಳ ಇರುವದರಿಂದ ಬಂದರದ ಅಭಿವೃದ್ಧಿಗೆ ಬಹಳಷ್ಟು ವೆಚ್ಚ ಬೇಕಾಗಲಿಕ್ಕಿಲ್ಲೆಂತಲೂ, ಕಾರವಾರದ ಅಭಿವೃದ್ಧಿಯಾದಲ್ಲಿ ಕಾನಡಾ ಜಿಲ್ಲೆಯ ಪ್ರಗತಿಗೆ ಅನುಕೂಲವಾಗುವದೆಂತಲೂ ಇಲ್ಲಿಯ ನಾಗರಿಕರು ರಾ॥ ಅನಂತಭಟ್ಟ ಯಲ್ಲಾಪುರಕರ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಒಂದು ಠರಾವನ್ನು ಮಾಡಿ, ಅದನ್ನು ಪಶ್ಚಿಮ ಕರಾವಳಿಯ ಬಂದರು ಸಮಿತಿಗೆ ಕಳಿಸಿಕೊಟ್ಟಿದ್ದಾರೆ.

ಅಂಕೋಲಾ— (ತಾ. ೩೧-೭-೪೮) ನಾಳೆಯ ಸೋಮವಾರದಿಂದ ಈ ತಾಲೂಕಿನವರು ದಾಖಲಪಡಿಸಿದ ಋಣವಿಮೋಚನ ಕೋರ್ಟಿನ ಅರ್ಜಿಗಳು ಇಲ್ಲೇ ವಿಚಾರಿಸಲ್ಪಡುವವು. ಈ ವರೆಗೆ ಕಾರವಾರದಲ್ಲಿ ಅವುಗಳ ವಿಚಾರ ಆಗುತ್ತಿತ್ತು.

ಜಾಹೀರ ಸುದ್ದಿ.

ಮುನವಳ್ಳಿ ಇಸ್ಮಾಯಿಲಖಾನ, ಕದಂ ಹಾಲಿ ಕುಮುಟಾ ತಾಲೂಕ ಮದ್ಗುಣಿ ಈತನು ಉಳುವರೆ ತಾರಿ ಹತ್ತಿರ ಇರುವ ಫ್ಲೋರೆಸ್ಟ ಗಾರ್ಡ ಗಫಾರ ಇವರ ಮನೆಯ ಹಾದಿಗಿಯ ಕೋಣೆಯೊಳಗಿನ ಹಣವನ್ನು ಕಳವು ಮಾಡಿ ಕುಮುಟೆಯ ಬಾನಿವಾರರಿಗೆ ಮಾರಾಟ ಮಾಡಿದ್ದನಂತೆ. ಅದರೆ ಸದ್ರಿಯವನು ಅಂಕೋಲಾ ಪೋಲೀಸ ಸಬ್ ಇನಸ್ಪೆಕ್ಟರರು ಇಲ್ಲಿಗೆ ಬಂದು ಶೋಧ ನಡಿಸಿ, ಕಳವಿನ ಸಾಮಾನು ಜಪ್ತ ಮಾಡಿ ಸದ್ರಿಯವನಿಗೆ ಸೆರೆಹಿಡಿದಿದ್ದಾರೆ ತಾ॥ ೧-೮-೧೯೪೮

ಬಡೇ ಸಾಹೇಬ ಹುಸೇನ ಸಾಹೇಬ,ಮದ್ಗುಣಿ

BOMBAY SALES TAX NOTICE.

ಮುಂಬಯಿ ಮಾರಾಟಗಳ ಮೇಲಿನ ಕರ.

ನೋಟೀಸು.

ಅನೇಕ ಬಾಬತುಗಳಲ್ಲಿ ವ್ಯಾಪಾರಸ್ಥರು, ಇತರ ನೋಂದಿಸಿದ ವ್ಯಾಪಾರಸ್ಥರಿಗೆ ಸರಕುಗಳನ್ನು ಮಾರಾಟ ಮಾಡುವಾಗ, ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಕಾನೂನುಗಳ ಪೈಕಿ ೨೬ (೩)ನೇ ಕಾನೂನಿನನ್ವಯ ಅವರಿಂದ ದಾಖಲೆಗಳನ್ನು ತೆಗೆದುಕೊಂಡಿಲ್ಲೆಂದು ತೋರುತ್ತದೆ ಯಾವತ್ತೂ ವ್ಯಾಪಾರಸ್ಥರು ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟಿನ ೬ನೇ ಕಲಮಿನನ್ವಯ ಮಾಫಿಯನ್ನು ಪಡೆಯಲು ಇಚ್ಛಿಸಿದರೆ ಅವರು ಇಂಥ ದಾಖಲೆಗಳನ್ನು ದೊರಕಿಸುವದು ಅವಶ್ಯವಿರುತ್ತದೆಂತಲೂ ಅವರು ಹೀಗೆ ಮಾಡಲು ತಪ್ಪಿದರೆ ಇಂಥ ಮಾರಾಟಗಳ ಮೇಲಿನ ಅವರ ಹಕ್ಕುಗಳನ್ನು ಹಾಗೂ ಕರದ ಆಕರಣೆಯನ್ನು ನಾಕರಿಸಲಾಗುವದೆಂತಲೂ ಅವರಿಗೆ ಎಚ್ಚರಿಕೆ ಕೊಡಲಾಗಿದೆ ಈ ದಾಖಲೆಗಳನ್ನು ಯಾವದೇ ಬಾಬತಿನಲ್ಲಿ ಸನ್ ೧೯೪೮ನೇ ಇಸವಿಯ ಅಗಸ್ಟ ತಿಂಗಳ ೧ನೆಯ ತಾರೀಖಿನಿಂದ ನೋಂದಿಸಿದ ವ್ಯಾಪಾರಸ್ಥರಿಗೆ ಮಾರಲಾಗುವ ಯಾವತ್ತೂ ಮಾರಾಟಗಳ ಬಗ್ಗೆ ಪಡೆಯತಕ್ಕದ್ದು

ಸದರಿ ದಾಖಲೆಯು ಈ ಕೆಳಗಿನ ನಮೂನೆಗಳ ಪೈಕಿ ಯಾವದೊಂದು ನಮೂನೆಯಲ್ಲಿರತಕ್ಕದ್ದು, ಮತ್ತು ಅದನ್ನು ಸರಕುಗಳ ವರ್ಣನೆಯು ಹಾಗೂ ಬೆಲೆಯು ಇರುವಂಥ ಸಂಬಂಧಪಟ್ಟ ಇನ್‌ವಾಯ್ಸಿಗೆ, ಬಿಲ್ಲಿಗೆ ಅಥವಾ ಇತರ ದಸ್ತಐವಜಿಗೆ ಜೋಡಿಸತಕ್ಕದ್ದು ಕೊಂಡುಕೊಳ್ಳುವ ವ್ಯಾಪಾರಸ್ಥನಾಗಲಿ ಪೇಢಿಯು ಅಥವಾ ಕಂಪನಿಯು ಪಾಲುಗಾರನು ಅಥವಾ ಮ್ಯಾನೇಜರನಾಗಲಿ ಕೊಂಡುಕೊಳ್ಳುವ ವ್ಯಾಪಾರಸ್ಥನಿಂದ ಯೋಗ್ಯವಾಗಿ ಅಧಿಕಾರ ಕೊಡಲ್ಪಟ್ಟ ಯಾವನೊಬ್ಬ ಜವಾಬದಾರನಾದ ಮನುಷ್ಯನಾಗಲಿ ಅದಕ್ಕೆ ಸಹಿ ಮಾಡತಕ್ಕದ್ದು

(೧) "ದಾಖಲೆ ಕೊಡುವದೇನಂದರೆ ಈ ಸರಕುಗಳು ತಿರುಗಿ ಮಾರಾಟ ಮಾಡುವದರ ಸಲುವಾಗಿ ಖರೀದಿ ಮಾಡಲ್ಪಟ್ಟಿವೆ"

(೨) "ದಾಖಲೆ ಕೊಡುವದೇನಂದರೆ, ಈ ಸರಕುಗಳು ಮಾರಾಟ ಮಾಡಲ್ಪಡಬೇಕಾದ ಸರಕುಗಳನ್ನು ಗಂಟು ಕಟ್ಟುವ ಬಗ್ಗೆ ಖರೀದಿ ಮಾಡಲ್ಪಟ್ಟಿವೆ"

(೩) "ದಾಖಲೆ ಕೊಡುವದೇನಂದರೆ, ಈ ಸರಕುಗಳು ಮಾರಾಟದ ಸಲುವಾಗಿ ಸರಕುಗಳನ್ನು ತಯಾರು ಮಾಡುವದರಲ್ಲಿ ಉಪಯೋಗ ಮಾಡುವ ಬಗ್ಗೆ ಖರೀದಿ ಮಾಡಲ್ಪಟ್ಟಿವೆ ಮತ್ತು ಅವು ಸನ್.. .... ನೇ ಇಸ್ವಿಯ ನೋಂದಣಿಯ ನಂಬರು ...ಇರುವ ನನ್ನ/ನಮ್ಮ ದಾಖಲೆಯಲ್ಲಿ ಸಮಾವಿಷ್ಟವಾಗಿವೆ ".

ಸಹಿ. ....

ತಾರೀಖು — —೧೯೪ . ದರ್ಜೆ... ....

ಯಾವನೊಬ್ಬ ನೋಂದಿಸದ ವ್ಯಾಪಾರಸ್ಥನು ಯಾವದೊಂದು ವರ್ಗದ ಸರಕುಗಳು ತನ್ನ ನೋಂದಿಸಿದ ದಾಖಲೆಯಲ್ಲಿ ದಾಖಲಿಸಲ್ಪಡದಿದ್ದಾಗ್ಯೂ ಅವು ಅದರಲ್ಲಿ ಬರುತ್ತವೆಂದು ಸುಳ್ಳಾಗಿ ತೋರಿಸುವದು, ಅಥವಾ ನೋಂದಿಸಲ್ಪಟ್ಟ ವ್ಯಾಪಾರಸ್ಥನಲ್ಲದ ಯಾವನೊಬ್ಬ ಮನುಷ್ಯನು ಸರಕುಗಳನ್ನು ಕೊಂಡುಕೊಳ್ಳುವಾಗ ತಾನು ನೋಂದಿಸಲ್ಪಟ್ಟ ವ್ಯಾಪಾರಸ್ಥನೆಂದು ಸುಳ್ಳಾಗಿ ತೋರಿಸುವದು ಸದರಿ ಆಕ್ಟಿನ ೨೪ನೆಯ ಕಲಮಿನನ್ವಯ ಅಪರಾಧವಾಗುತ್ತದೆಂದು ಯಾವತ್ತೂ ವ್ಯಾಪಾರಸ್ಥರಿಗೆ ನೆನಪು ಕೊಡಲಾಗಿದೆ ಸಂದೇಹದ ಅಥವಾ ಸಂಶಯದ ಸ್ವರೂಪದಾದರೂ ಬಾಬತುಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ವರದಿ ಮಾಡಬಹುದು

ಓಲ್ಡ ಕಸ್ಟಮ್ಸ್ ಹೌಸ,
ಫೋರ್ಟ, ಮುಂಬಯಿ

V. L. GIDWANI,
ಡೆಪ್ಯುಟಿ ಕಮಿಶನರ ಆಫ್ ಸೇಲ್ಸ ಟೆಕ್ಸ,
ಮುಂಬಯಿ ಪ್ರಾಂತ

ಇದನ್ನು ಪಾಂಡುರಂಗ ಕೃಷ್ಣ ಕಾನಫಾಗ (ಸಂಪಾದಕ) ಇವರು ಕುಮುಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270 | Monday, 9-8-1948.

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೬.

ಕುಮಟಾ- ಸೋಮವಾರ, ತಾ ೯-೮-೧೯೪೮

ಜಾಹೀರಾತುಗಳ ದರ.-

ಸ್ಥಳ [illegible]

ಒಂದು ಸಾಲಿಗೆ ೮ ಆಣೆಯಂತೆ.

ಹೆಚ್ಚು ಅಲ್ಲದೆ ದೀರ್ಘಕಾಲೀನ

ಜಾಹೀರಾತುಗಳ ಬಗ್ಗೆ ಸಮಕ್ಷ

ಇಲ್ಲವೆ ಪತ್ರದ್ವಾರಾ

ತಿಳಿಸಲಾಗುವದು.

ವರ್ಗಣಿಯ ದರ:

ಕುಮಟೆಯಲ್ಲಿ

ವರ್ಷಕ್ಕೆ ರೂ ೨-೪-೦

ಹೊರಊರಿನವರಿಗೆ ವರ್ಷಕ್ಕೆ ೩-೧-೦

" ೬ ತಿಂಗಳಿಗೆ ೧-೧೨-೦

ಬಿಡಿ ಸಂಚಿಕೆಗೆ ೦-೧-೦

ಹಳೇ ಸಂಚಿಕೆಗೆ ,, ೦-೪-೦

ವಿ. ಪಿ. ಯಿಂದ ಹಣ ತರಿಸುವವರು

ವಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ

ಕಳಿಸಬೇಕು

ವರ್ಗಣಿ ಮುಂಗಡ ಕೊಡತಕ್ಕದ್ದು

ನಿಜಾಮರಿಗೆ ಅಳಿಗಾಲ!

(ಸಂಕ್ಷೇಪಕನು ಬರೆದುದು.)

ಹಿಂದ-ಹೈದರಾಬಾದ ಪ್ರಶ್ನೆ ಈಗ ತೀರ ನಿಕಟಕ್ಕೆ ಬಂದಿದೆ. ತಮಗೆ ಬ್ರಿಟಿಶ ಸರಕಾರವೂ ಪಾಕಿಸ್ತಾನ ಸರಕಾರವೂ ನೆರವನ್ನೀಯುವವೆಂದೂ ಅವರ ನೆರವಿನಿಂದ ತಾವು ಹಿಂದ-ಸರಕಾರವನ್ನು ಪ್ರತಿಭಟಿಸುವೆವೆಂದೂ ನಿಜಾಮರು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದರು! ಹಿಂದುಸ್ಥಾನದೊಳಗಿನ ಮುಸಲ್ಮಾನರು ತಮ್ಮ ಪಕ್ಷ ಹಿಡಿದು ಹೋರಾಡುವರೆಂಬ ಆಶೆಯೂ ಅವರಿಗೆ ಇತ್ತು! ಹಿಂದುಸ್ಥಾನ ಸರಕಾರವು ಹೈದರಾಬಾದಕ್ಕೆ ದಿಗ್ಬಂಧನ ಹಾಕಿ ಜಾಗತಿಕ ಶಾಂತಿಗೆ ಗಂಡಾಂತರ ತಂದಿದೆಂಬ ಕೂಗನ್ನು ಸಂಯುಕ್ತ ರಾಷ್ಟ್ರಸಂಘಗಳ ಸಂಘದಲ್ಲಿ ಎಬ್ಬಿಸಿದರೆ ಸಂಘವು ಹಿಂದುಸ್ಥಾನ ಸರಕಾರವನ್ನು ನಿಯಂತ್ರಿಸುವದೆಂಬ ಆಶೆಯನ್ನೂ ಅವರು ಇಟ್ಟುಕೊಂಡಿದ್ದರು! ನಿಜಾಮರ ಈ ಆಶೆ ಅಪೇಕ್ಷೆ-ಕನಸುಗಳೆಲ್ಲ ಈಗ ಗಾಳಿಗೋಪುರಗಳಾಗಿವೆಯೆಂದು ಧಾರಾಳವಾಗಿ ಹೇಳಬಹುದು!

ಬ್ರಿಟಿಶ ಸರಕಾರದ ನಂಬಿಗಸ್ತ ಮಿತ್ರರಾಗಿ ತಾವು ಈ ತನಕ ನಡೆದು ಬಂದಿರುತ್ತೇವೆಂದೂ ಬ್ರಿಟಿಶ ಸರಕಾರವು ತಮ್ಮ ಕೈ ಬಿಡಬಾರದೆಂದೂ ನಿಜಾಮರ ವಾದವಿತ್ತು. ತಾ. ೩-೬-೧೯೪೭ಕ್ಕೆ ಬ್ರಿಟಿಶ ಸರಕಾರವು ಮಾಡಿದ ಘೋಷಣೆಗನುಸಾರವಾಗಿ ೧೯೪೭ರ ಆಗೋಸ್ತ ತಾ. ೧೫ನೇಗೆ ಬ್ರಿಟಿಶರು ಹಿಂದುಸ್ಥಾನದೊಳಗಿನ ತಮ್ಮ ಸತ್ತೆಯನ್ನೂ ಸಾಮ್ರಾಜ್ಯಾಧಿಕಾರವನ್ನೂ ಬಿಟ್ಟುಕೊಟ್ಟಂದಿನಿಂದ ತಾವು ಸ್ವತಂತ್ರರಾದೆವೆಂದೂ, ಆ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಬ್ರಿಟಿಶ ಸರಕಾರವು, ಈ ಹಿಂದೆ ಕಾಲಕಾಲಕ್ಕೆ ಬ್ರಿಟಿಶ ಸರಕಾರದ ಪ್ರತಿನಿಧಿಗಳು ಕೊಟ್ಟ ವಚನಗಳಂತೆ, ತಮಗೆ ಸಹಾಯ ಮಾಡಬೇಕೆಂದೂ ನಿಜಾಮರ ಅಂಬೋಣವಿತ್ತು. ಆದಾಗದಿದ್ದರೆ ತಮ್ಮ ರಾಜ್ಯವನ್ನು ಬ್ರಿಟಿಶ ರಾಜ್ಯ ಚಕ್ರ (ಕೊಮನವೆಲ್ಥ) ದಲ್ಲಿ ಸೇರಿಸಿಕೊಂಡು ಹಿಂದುಸ್ಥಾನ ಸರಕಾರದ ಕಾಟಗಳಿಂದ ತಮ್ಮನ್ನು ಕಾಯಬೇಕೆಂದು ನಿಜಾಮರು ಬ್ರಿಟಿಶರ ಬೆನ್ನು ಹಿಡಿದಿದ್ದರು. ಸದ್ಯಕ್ಕೆ ನಿಜಾಮರು ಈ ಅರ್ಥದ ಒಂದು ಪತ್ರವನ್ನು ಜೋರ್ಜ ಭೂಪತಿಗಳಿಗೆ ಬರೆದು, ಅದನ್ನು, ಭೂಪತಿಗಳಿಗೆ ಸ್ವತಃ ಮುಟ್ಟಿಸುವದಕ್ಕಾಗಿ ಆಗಲೇ ಒಂದು ಗುಪ್ತ ಕಾರ್ಯಕ್ಕಾಗಿ, ವಿಲಾಯತಿಯಿಂದ ಹೈದರಾಬಾದಿಗೆ ಬಂದಿದ್ದ ಸರ್ ವಾಲ್ಟರ ಮೊಂಕಟನ್ನರ ಕಾರ್ಯದರ್ಶಿಗಳ ಕಡೆ ಕೊಟ್ಟಿದ್ದರು. ಆ ಕಾರ್ಯದರ್ಶಿಗಳು ವಿಲಾಯತಿಗೆ ಮರಳಿ ಹೋಗುವಾಗ ದಿಲ್ಲಿಯ ವಿಮಾನ ನಿಲ್ದಾಣದಲ್ಲಿ ಅವರ ಸಾಮಾನಿನ ತಪಾಸಣೆ ಮಾಡುತ್ತಿದ್ದ ಸುಂಕದ ಅಧಿಕಾರಿಗಳಿಗೆ ಆ ಪತ್ರ ಸಿಕ್ಕಿತು. ಸಂಶಯ ಬಂದು ಅವರು ಅದನ್ನು ತೆರೆದು ಓದಿದರು; ಮತ್ತು ತಿರುಗಿ ಕೊಟ್ಟರು ಸುಂಕದ ಅಧಿಕಾರಿಗಳ ಈ ಕೃತಿಯ ವಿರುದ್ಧ ನಿಜಾಮರ ಗೆಳೆಯರು ದೊಡ್ಡ ಕೋಲಾಹಲವನ್ನೆಬ್ಬಿಸಿದರು! ಜೋರ್ಜ ಭೂಪತಿಗಳಿಗೆ ಬರೆದ ಪತ್ರವನ್ನು ಯಃಕಶ್ಚಿತ ಅಧಿಕಾರಿಯು— ಅದರಲ್ಲೂ ಹಿಂದುಸ್ಥಾನದ ಕರೀ ಬಣ್ಣದ ಅಧಿಕಾರಿಯು — ಒಡೆದು ನೋಡುವದು ಅದೊಂದು ಮಹಾಪಾತಕ, ಘೋರತರ ಅಪರಾಧವೆಂದು ಆ ಗೆಳೆಯರು ದೊಡ್ಡ ಆಕ್ರೋಶವನ್ನೇ ಎಬ್ಬಿಸಿದರು! ಆದರೆ ಬ್ರಿಟಿಶ ನರಪತಿಗಳಾಗಲಿ ಬ್ರಿಟಿಶ ಸರಕಾರವಾಗಲಿ ಹಿಂದೀ ಅಧಿಕಾರಿಯ ಈ ಸರಳ ಕೃತಿಯನ್ನು ಎಳ್ಳಷ್ಟೂ ಆಕ್ಷೇಪಿಸಿರುವದಿಲ್ಲ. ನಿಜಾಮರ ಪತ್ರಕ್ಕೆ ಜೋರ್ಜ ಭೂಪತಿಗಳ ಪರವಾಗಿ ಬ್ರಿಟಿಶ ಮುಖ್ಯ ಮಂತ್ರಿ ಮಿ|| ಎಟ್ಲಿಯವರು ಪ್ರತ್ಯುತ್ತರ ಬರೆದು, ನಿಜಾಮರ ಯಾವ ಬೇಡಿಕೆಯನ್ನೂ ಬ್ರಿಟಿಶ ಸರಕಾರವು ಮನ್ನಿಸಲಾರದೆಂದೂ, ನಿಜಾಮರು ಹಿಂದುಸ್ಥಾನ ಸರಕಾರಕ್ಕೆ ಶರಣು ಹೋಗಿ ಹಿಂದೀ ಒಕ್ಕೂಟ (ಸಂಘರಾಜ್ಯ)ದಲ್ಲಿ ಸೇರುವದೊಂದೇ ಶ್ರೇಯಸ್ಕರ-ಮಾರ್ಗವೆಂದೂ ತಿಳಿಸಿರುತ್ತಾರೆಂದು ಲಂಡನದಿಂದ ವಾರ್ತೆ ಪ್ರಕಟವಾಗಿದೆ. ನಿಜಾಮರ ಈ ಪತ್ರದ ಗೌಪ್ಯ ಸ್ಫೋಟವಾದ ಸಮಯದಲ್ಲೇ ನಿಜಾಮರ ಬೆಂಬಲಿಗರಾದ ಮಿ। ಚರ್ಚಿಲ್ಲರು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಹೈದರಾಬಾದದ ಪ್ರಶ್ನೆಯನ್ನೆತ್ತಿ, ಬ್ರಿಟಿಶ ಸರಕಾರವು ನಿಜಾಮರಿಗೆ ನೆರವನ್ನೀಯಬೇಕೆಂದು ವಾದಿಸಿದ್ದರು! ಅವರ ಆ ಕಂಠವಾದಕ್ಕೆ ಮುಖ್ಯ ಮಂತ್ರಿ ಮಿ|| ಎಟ್ಲಿಯವರು ಸಮರ್ಪಕ ಉತ್ತರ ಕೊಟ್ಟು, ಹಿಂದ-ಹೈದರಾಬಾದ ವಾದದಲ್ಲಿ ಬ್ರಿಟಿಶ ಸರಕಾರವು ಕೈ ಹಾಕಬರುವದಿಲ್ಲೆಂದೂ, ಕೈ ಹಾಕಲಾಗದೆಂದೂ, ಹಿಂದುಸ್ಥಾನ ಸರಕಾರದೊಡನೆ "ಯಥಾ-ಸ್ಥಿತಿ" ಒಪ್ಪಂದ ಮಾಡಿಕೊಂಡು ತಮ್ಮ ವಿದೇಶ ಕಾರಣದ ಅಧಿಕಾರವನ್ನು ನಿಜಾಮರು ಹಿಂದುಸ್ಥಾನ ಸರಕಾರಕ್ಕೆ ಒಪ್ಪಿಸಿರುವದರಿಂದ ಅವರು ತಮ್ಮ ದೂರನ್ನು ಸಂಯುಕ್ತ ರಾಷ್ಟ್ರಗಳ ಸಂಘದೆದುರು ಹೇಳಿಕೊಳ್ಳಲಿಕ್ಕೆ ಸಹ ಬರುವಂತಿಲ್ಲೆಂದೂ, ಒಂದೊಮ್ಮೆ ಯಾರ ಕಾಲನ್ನಾದರೂ ಹಿಡಿದು ನಿಜಾಮರು ತಮ್ಮ ಆ ದೂರನ್ನು ಸಂಘದೆದುರು ಒಯ್ದಲ್ಲಿ ಬ್ರಿಟಿಶ ಸರಕಾರವು ನಿಜಾಮರ ಪಕ್ಷವನ್ನೆತ್ತಿ ಹಿಡಿಯಲಾರದೆಂದೂ ಖಂಡತುಂಡವಾಗಿ ಹೇಳಿದ್ದಾರೆ ಅಷ್ಟೇ ಅಲ್ಲದೆ, ಹಿಂದ-ಹೈದರಾಬಾದ ಕದನಪ್ರಸಂಗದಲ್ಲಿ ಯಾವ ಬ್ರಿಟಿಶನೂ ನಿಜಾಮರಿಗೆ ಸಹಾಯ ಮಾಡಕೂಡದೆಂಬ ವಿಚಾರದಿಂದ ನಿಜಾಮರ ಸೇವೆಯಲ್ಲಿರುವ ಎಲ್ಲ ಬ್ರಿಟಿಶರನ್ನೂ ಹೈದರಾಬಾದ ಸಂಸ್ಥಾನದಲ್ಲಿರುವ ಎಲ್ಲ ಬ್ರಿಟಿಶ ಪ್ರಜೆಗಳನ್ನೂ ಬ್ರಿಟಿಶ ಸರಕಾರವು ಹಿಂಗಿಸಿಕೊಳ್ಳುವ ವ್ಯವಸ್ಥೆ ಮಾಡಿರುತ್ತದೆಂಬ ಸುದ್ದಿ ಮೊನ್ನೆಯೇ ಪ್ರಕಟವಾಗಿದೆ. ಬ್ರಿಟಿಶ ಪ್ರಜಾ-ಜನರಲ್ಲೊಬ್ಬನಾದ ಸಿಡ್ನೀ ಕೊಟನ್ ಎಂಬ ವೈಮಾನಿಕನು (ಇವನು ಹುಟ್ಟಿದ್ದು ಆಸ್ಟ್ರೇಲಿಯಾದಲ್ಲಾದರೂ ಇರುವದು ವಿಲಾಯತಿಯಲ್ಲೇ. ಅಲ್ಲೇ ಅವನು ಕಳೆದ ೩೦ ವರ್ಷಗಳಿಂದ ವಿಮಾನೋದ್ಯಾಣದ ಪರವಾನೆ ಪಡೆಯುತ್ತಿದ್ದನಂತೆ.) ಕಳೆದ ಜುಲಾಯಿ ತಾ ೧೫ನೇಗೆ ಕರಾಚಿಯಿಂದ ನೇರವಾಗಿ — ನಡುವೆ ಹಿಂದುಸ್ಥಾನದಲ್ಲೆಲ್ಲೂ ಇಳಿಯದೆ — ಹೈದರಾಬಾದಿಗೆ ತನ್ನ ವಿಮಾನವನ್ನು ಹಾರಿಸಿಕೊಂಡು ಹೋಗಿದ್ದನು! ತಾನು ಔಷಧಗಳನ್ನು ಹೇರಿಕೊಂಡು ಹೋಗಿದ್ದೆನೆಂದು ಕೊಟನ್ನನು ಹೇಳುತ್ತಾನೆ ಆದರೆ ಅವನು ಕಳ್ಳತನದಿಂದ ಕತ್ತಲೆಯಲ್ಲಿ ಹಾರಿಹೋಗಿದ್ದರ ಮೇಲಿಂದ ಅವನ ವಿಮಾನದಲ್ಲಿ ಕಳ್ಳ ಶಸ್ತ್ರಾಸ್ತ್ರಗಳು ಇದ್ದವೆಂದು ತಿಳಿಯಬೇಕಾಗುತ್ತದೆ! ಕೊಟನ್ನನ ಈ ಅತಿಕ್ರಮಣದ ಕಡೆ ಹಿಂದುಸ್ಥಾನ ಸರಕಾರವು ಬ್ರಿಟಿಶ ಸರಕಾರದ ಲಕ್ಷವನ್ನೆಳೆಯುತ್ತಲೇ ಬ್ರಿಟಿಶ ಸರಕಾರವು ಕೊಟನ್ನನ ಕೃತಿಯು ಕಾನೂನ ವಿರುದ್ಧವಿರುತ್ತದೆಂದು ತೀರ್ಮಾನಿಸಿ, ಅವನ ವಿಮಾನೋದ್ಯಾಣದ ಪರವಾನೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದೆ. ಈ ಎಲ್ಲ ಘಟನೆಗಳ ಮೇಲಿಂದ ನಿಜಾಮರಿಗೆ ಬ್ರಿಟಿಶರ ನೆರವು ಖಂಡಿತ ಸಿಗಲಾರದೆಂದು ನಿಚ್ಚಳವಾಗುತ್ತದೆ ನಿಜಾಮರಿಗೂ ಅವರ ಗೆಳೆಯರಿಗೂ ಈ ಮಾತು ಗೊತ್ತಾಗಿದೆ.

ಪಾಕಿಸ್ತಾನದಿಂದಲೂ ನಿಜಾಮರಿಗೆ ಸಹಾಯ ಸಿಕ್ಕೀತೆಂದು ಹೇಳಬರುವಂತಿಲ್ಲ. ಪಾಕಿಸ್ತಾನದ ಮೈಯಲ್ಲಿ ಕಸುವಿದ್ದರೆ ಅದು ನ್ಯಾಯಾನ್ಯಾಯಗಳ ಪರಿವೆ ಹಿಡಿಯದೆ ಹೈದರಾಬಾದಕ್ಕೆ ನೆರವನ್ನೀಯುತ್ತಿತ್ತೆಂಬುದು ನಿಜ ನಿಜಾಮರಿಗೆ ಸ್ವಾತಂತ್ರ್ಯ ಸಾರಲು ಉತ್ತೇಜನ ಕೊಟ್ಟವರು ಬೆ|| ಜಿನ್ನಾರೆಂಬುದು ಈಗ ಎಲ್ಲರಿಗೂ ತಿಳಿದಿದೆ ಕಳೆದ ವರ್ಷ ನಿಜಾಮರು ಸರ್ ಮಿರ್ಝಾ ಇಸ್ಮಾಯಿಲರನ್ನು ತಮ್ಮ ಮುಖ್ಯ ಮಂತ್ರಿಗಳನ್ನಾಗಿ ನೇಮಿಸಿಕೊಂಡಾಗ ಬೆ|| ಜಿನ್ನಾರವರೇ ನಿಜಾಮರಿಗೆ ದುರ್ಮಂತ್ರ ಹೇಳಿ, ಸರ್ ಮಿರ್ಝಾರವರನ್ನು ಓಡಿಸಿ ಬಿಡಲು ಅವರಿಗೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

ಹೆಡ್ ಆಫೀಸು. ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು

ಒಂದು ವರ್ಷಕ್ಕೆ ಸೇಕಡಾ ರೂ. 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/-ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ, ತಾ. ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ

ದುರುಪದೇಶ ಮಾಡಿದ್ದರು! ಭಾರತದ ಹೊಟ್ಟೆಯಲ್ಲೊಂದು ಪಾಕಿಸ್ತಾನ ನಿರ್ಮಿಸಿ, ಭಾರತಕ್ಕೆ ಸಾಕು ಬೇಕು ಮಾಡಿ, ಆಸೇತು-ಹಿಮಾಚಲ ಪಾಕಿಸ್ತಾನಿ ಸಾಮ್ರಾಜ್ಯ ಕಟ್ಟಬೇಕೆಂಬ ದುರಾಶೆ ಜಿ॥ ಜಿನ್ನಾರವರ ಹಾಗೂ ಅವರ ಪ್ರಭಾವಳಿಯೊಳಗಿನ ಹುಂಬರ ತಲೆಯಲ್ಲಿ ಮನೆ ಮಾಡಿಕೊಂಡಿತ್ತೆಂಬುದು ಆಬಾಲವೃದ್ಧ ಭಾರತೀಯರಿಗೆ ತಿಳಿದುಹೋಗಿದೆ. ಆದರೆ ಭಾರತದ ಸುದೈವದಿಂದಲೂ ಪಾಕಿಸ್ತಾನಿಗಳ ದುರ್ದೈವದಿಂದಲೂ ಪಾಕಿಸ್ತಾನದ ಮೈಯ್ಯಲ್ಲೀಗ ಹೈದರಾಬಾದಕ್ಕೆ ಸಹಾಯ ಮಾಡುವಷ್ಟು ಕಸುವಿರಲಿ, ಸಕ್ರಿಯ ಸಹಾನುಭೂತಿಯನ್ನು ತೋರಿಸುವಷ್ಟು ಸಾಮರ್ಥ್ಯ ಸಹ ಉಳಿದಿರುವದಿಲ್ಲ! ಬೇರೊಬ್ಬರಿಗೆ ಸಹಾಯ ಮಾಡಬೇಕಾದರೆ ಸ್ವತಃ ಮೈಯ್ಯಲ್ಲಿ ಸ್ವಾಸ್ಥ್ಯವಿರಬೇಕಲ್ಲವೇ? ಆ ಸ್ವಾಸ್ಥ್ಯ ಇಂದು ಪಾಕಿಸ್ತಾನದಲ್ಲಿಲ್ಲ. ಪಾಕಿಸ್ತಾನವಿಂದು ಅಂತರಿಕ ಹಾಗೂ ಬಾಹ್ಯ ಜಂಜಾಟಗಳಲ್ಲಿ ಸಿಕ್ಕಿ ಬಿದ್ದಿದೆ. ಅತ್ತ ಗಡಿನಾಡಿನಲ್ಲಿ ಶಾಂತಿಯಿಲ್ಲ! ಸ್ವಾಸ್ಥ್ಯವಿಲ್ಲ! ಸುರಕ್ಷಿತತೆಯಿಲ್ಲ! ಗಡಿನಾಡಿನ ಗಡಿಗಳಲ್ಲಿದ್ದ ಇಪಿ ಫಕೀರನ ಅನುಯಾಯಿಗಳು ತನ್ನಲ್ಲಿಯ ಪಠಾಣರನ್ನು ಎಬ್ಬಿಸಿ ಎಲ್ಲಿ ಬಂಡಾಯವನ್ನು ಹೂಡುವರೋ ಎಂಬ ಭೀತಿಯು ಗಡಿನಾಡ ಸರಕಾರವನ್ನು ಆವರಿಸಿದೆ! ಆ ಪ್ರಾಂತದಲ್ಲೀಗ ಕಾಯದೆಯ ರಾಜ್ಯವಿರುವದಿಲ್ಲ! ಅಬ್ದುಲ ಕಾಯೂಮರ ದಂಡದ ಕಾರಭಾರ ನಡೆದಿದೆ! ಪಾಕಿಸ್ತಾನದ ಮುಖಂಡರಿಗೆ ಆ ಪ್ರಾಂತದಲ್ಲಿ ಎಲ್ಲೆಲ್ಲೂ ಪಂಚಮ ದಳದವರು ಕಾಣಹತ್ತಿದ್ದಾರೆ! ಪಾಕಿಸ್ತಾನ ಸರಕಾರದ ಮುಖಪತ್ರವಾದ "ಡೊನ್" ಪತ್ರಿಕೆಯು ಕೆಲವು ದಿನಗಳ ಹಿಂದೆ 'ವೈರಿಗಳ ಹಸ್ತಕರು" ಎಂಬ ತಲೆಬರಹದ ಕೆಳಗೆ ಒಂದು ಲೇಖವನ್ನು ಬರೆದು, ಗಡಿನಾಡಿನ ಪಠಾಣರ ವಿರುದ್ಧ ತನ್ನ ಹೊಟ್ಟೆಯೊಳಗಿನ ಹಾಲಾಹಲವನ್ನೆಲ್ಲ ಕಾರಿದೆ! ಭಾರತ ಸರಕಾರವು ಇಪಿ ಫಕೀರನಿಗೂ ಪಠಾಣರಿಗೂ ವಿಮಾನ-ಮಾರ್ಗವಾಗಿ ಸಹಾಯ ಮುಟ್ಟಿಸುತ್ತಿದೆಂದೂ, ಪಾಕಿಸ್ತಾನದ ವಿರುದ್ಧ ಒಂದು ಹೂಡಿ ಸ್ವತಂತ್ರ ಪಠಾಣಿಸ್ತಾನ ರಚಿಸಿಕೊಂಡು ಇಪಿ ಫಕೀರನಿಗೆ ಅದರ ಪಟ್ಟಗಟ್ಟಲು ಪಠಾಣರಿಗೆ ಪ್ರೋತ್ಸಾಹಿಸುತ್ತಿದೆಂದೂ "ಡೊನ್" ಪತ್ರಿಕೆಯ ಅಂಬೋಣ! ಗಡಿನಾಡಿನ ಪಠಾಣರೆಲ್ಲ ವೈರಿಗಳ ಹಸ್ತಕರಂತೆ! ೨-೩ ವಾರಗಳ ಹಿಂದೆ ಪಾಕಿಸ್ತಾನದ ವಿಮಾನಗಳು ಗಡಿನಾಡಿನ ಆಚೆಗಿರುವ ಸ್ವತಂತ್ರ ಪಠಾಣರ ಪ್ರದೇಶದ ಮೇಲೆ ವಿಮಾನಗಳಿಂದ ಬಾಂಬು-ಗುಂಡುಗಳ ವೃಷ್ಟಿ ಮಾಡಿದ್ದವು ಈ ಸುದ್ದಿ ಸುಳ್ಳೆಂದು "ಡೊನ್"ಕಾರರು ಹೇಳುತ್ತಾರೆ! ಆದರೂ ವಿಮಾನ-ದಾಳಿಗಳಿಂದ ದ್ರೋಹಿಗಳನ್ನೂ ದಂಗೆಗಾರರನ್ನೂ ದಂಡಿಸುವ ವ್ಯವಸ್ಥೆ ಬೇಗನೇ ಆಗುವದಾಗಿ ಅವರು ಬರೆದು, ವಿಮಾನ ದಾಳಿಗಳಿಂದ ಸಂಗತಿಯನ್ನು ಪರ್ಯಾಯದಿಂದ ಒಪ್ಪಿಕೊಂಡಿರುತ್ತಾರೆ. ಗಡಿನಾಡಿನ ಸರಕಾರವು ಒಂದು ರಾಜಶಾಸನ ಹೊರಡಿಸಿ ಹೆಚ್ಚಿನ ಅಧಿಕಾರ ಪಡೆದಿರುತ್ತಿದ್ದರೂ, ಒಳಸಂಚುಗಾರರಿಗೆ ಮರಣ-ದಂಡನೆ ವಿಧಿಸುವ ಕಲಮು ಆ ರಾಜಶಾಸನದಲ್ಲಿ ಇಲ್ಲೆಂದು "ಡೊನ್"ಕಾರರು ಖೇದ ಪ್ರದರ್ಶಿಸಿ, ವೈರಿಗಳ ಹಸ್ತಕರಿಗೆ ಮರಣ-ದಂಡನೆಯೇ ಯೋಗ್ಯ ಶಿಕ್ಷೆ ಎಂದು ಪ್ರತಿಪಾದಿಸಿದ್ದಾರೆ! 'ಡೊನ"ದೊಳಗಿನ ಈ ಬರವಣಿಗೆಯ ಮೇಲಿಂದ ಗಡಿನಾಡಿನಲ್ಲೂ ಅದರ ಅಂಚಿಗಿರುವ ಸ್ವತಂತ್ರ (ಗುಡ್ಡಗಾಡು) ಪಠಾಣರ ಪ್ರದೇಶದಲ್ಲೂ ಪರಿಸ್ಥಿತಿ ಪಾಕಿಸ್ತಾನಿಗಳಿಗೆ ಪ್ರತಿಕೂಲವಾಗುತ್ತ ನಡೆದಿದೆಯೆಂದು ಸಿದ್ಧವಾಗುತ್ತಿದೆ.

ಅಫಗಾಣಿಸ್ತಾನವು ಪಠಾಣಿಸ್ತಾನಕ್ಕೆ ಬೆಂಬಲ ಕೊಡುತ್ತಿದೆ. ಗುಡ್ಡಗಾಡು ಜನರ ಮೇಲೆ ಪಾಕಿಸ್ತಾನ ಸರಕಾರವು ಬಾಂಬಿನ ವೃಷ್ಟಿ ಮಾಡಿದ್ದು ಅನ್ಯಾಯವೆಂದೂ ರಕ್ಕಸತನವೆಂದೂ ಇತ್ತೀಚೆಗೆ ಅಫಗಾಣ ಪತ್ರಿಕೆಗಳು ಸಂತಾಪದಿಂದ ಬರೆದು, ಪಾಕಿಸ್ತಾನದ ಈ ದುಷ್ಕೃತಿಯನ್ನು ಅಫಗಾಣ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಎದುರು ಒಯ್ಯಬೇಕೆಂದೂ, ಪುನಃ ಆ ಪ್ರದೇಶದಲ್ಲಿ ಅತ್ಯಾಚಾರ ಮಾಡಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲೆಂದು ಅಫಗಾಣ ಸರಕಾರವು ಪಾಕಿಸ್ತಾನಕ್ಕೆ ಮುಂಜಾಗ್ರತೆ ಕೊಡಬೇಕೆಂದೂ ಅಫಗಾಣಿಸ್ತಾನದ 'ಅನಿಸ" ಮತ್ತು "ಇಸ್ಲಾಹ' ಪತ್ರಿಕೆಗಳು ಒರಲಿವೆ. ಕಾಶ್ಮೀರದಲ್ಲಿ ಗುಡ್ಡಗಾಡು ಜನರನ್ನು ಮುಂದೆ ಮಾಡಿ ಆಟವಾಡುವ ಪಾಕಿಸ್ತಾನಿಗಳ ಕಾಯುಕ್ತಿಯು ಈಗ ನಿಷ್ಫಲವಾಗಿರುತ್ತಿದ್ದು ಕಾಶ್ಮೀರ-ಕದನವನ್ನು ಸ್ವತಃ ಪಾಕಿಸ್ತಾನವೇ ಮುಂದರಿಸಬೇಕಾಗಿದೆ. ಕಾಶ್ಮೀರ ರಣರಂಗದಲ್ಲಿ ಪಾಕಿಸ್ತಾನಿ ಸೈನ್ಯವು ಪ್ರಾರಂಭದಲ್ಲೇ ಇಳಿದಿತ್ತು. ಈ ಮಾತನ್ನು ಸಿದ್ಧಪಡಿಸಲು ಬೇಕಷ್ಟು ಪುರಾವೆ ಹಿಂದ ಸರಕಾರದ ಕಡೆಗುಂಟು. ಆದರೂ ಕಾಶ್ಮೀರ ದಾಳಿಯಲ್ಲಿ ತಮ್ಮದೇನೂ ಅಂಗವಿಲ್ಲೆಂದು ಪಾಕಿಸ್ತಾನ ಸರಕಾರವು ಇಷ್ಟು ದಿನ ಕೂಗಾಟ ನಡಿಸಿತ್ತು. ಆದರೆ ಭದ್ರತಾ ಮಂಡಳದ ಕಾಶ್ಮೀರ ಸಮಿತಿಯು ಕಾಶ್ಮೀರ ರಣರಂಗವನ್ನು ಸಂದರ್ಶಿಸುವ ಕಾರ್ಯಕ್ರಮವನ್ನಿಟ್ಟುಕೊಂಡ ಕೂಡಲೇ, ಅಲ್ಲಿ ತಮ್ಮ ಸೈನಿಕರು ಸಮಿತಿಯವರ ದೃಷ್ಟಿಗೆ ಬಿದ್ದು ತಮ್ಮ ಕಾರ್ಣವೆಲ್ಲ ಬಯಲಿಗೆ ಬರುವದೆಂದು ಭಾವಿಸಿ, ಜಿ॥ ಜಿನ್ನಾರವರ ಶಿಷ್ಯರು ತಮ್ಮ ಸೈನ್ಯವು ಈಗ ಕಾಶ್ಮೀರ ರಣರಂಗದಲ್ಲಿರುವದು ನಿಜವೆಂದು ಒಪ್ಪಿಕೊಂಡಿದ್ದಾರೆ! ಇಪಿ ಫಕೀರನ ಪಕ್ಷದ ಪಠಾಣರೂ ಹಿಂದುಸ್ತಾನ ಸರಕಾರವೂ ಒಳಸಂಚು ಮಾಡಿ ಪಾಕಿಸ್ತಾನದ ಮೇಲೆ ದಂಡೆತ್ತಿ ಬರುವರೆಂಬ ಸುಳಿವು ಸಿಕ್ಕಿದ್ದರಿಂದ ಇದೇ ಮೇ ತಿಂಗಳಲ್ಲಿ ತಾವು ಕಾಶ್ಮೀರ-ರಂಗಕ್ಕೆ "ಕೇವಲ ಸ್ವಸಂರಕ್ಷಣೆಗಾಗಿ' ಸೈನ್ಯವನ್ನು ಕಳಿಸಬೇಕಾಯಿತೆಂದು ಮೇಲೆ ಅವರು ಭಾಷ್ಯ ಮಾಡುತ್ತಿದ್ದಾರೆ! ಈ ಭಾಷ್ಯ ಮಾಡುವಾಗ ಪಾಕಿಸ್ತಾನಿಗಳು, "ಕೆಲವು ಜನರನ್ನು ಸದಾ ಕಾಲ ವಂಚಿಸಬಹುದು, ಎಲ್ಲ ಜನರನ್ನು ಕೆಲವೇ ಕಾಲ ವಂಚಿಸಬಹುದು, ಆದರೆ ಎಲ್ಲರನ್ನೂ ಎಲ್ಲ ಕಾಲದಲ್ಲೂ ವಂಚಿಸುವದು ಸರ್ವಥಾ ಸಾಧ್ಯವಿಲ್ಲ" ಎಂಬ ಸೂಕ್ತಿಯನ್ನು ಮರೆತಿರುವಂತೆ ತೋರುತ್ತಿದೆ! ಪಾಕಿಸ್ತಾನ ಸರಕಾರದ ಈ ಭಾಷ್ಯವನ್ನು ಪಾಕಿಸ್ತಾನ-ಪಕ್ಷಪಾತಿಗಳಾದ ಬ್ರಿಟಿಶರು ಕೂಡ ನಂಬದವರಾಗಿದ್ದಾರೆ. ಕಳೆದ ಗುರುವಾರವೇ ಲಂಡನದೊಳಗಿನ "ನ್ಯೂ ಸ್ಟೇಟ್ಸಮನ್" ಪತ್ರಿಕೆಯು "ಹೈದರಾಬಾದ-ಕಾಶ್ಮೀರ" ಎಂಬ ವಿಷಯದ ಮೇಲೆ ಒಂದು ಅಸಂದಿಗ್ಧ ಲೇಖವನ್ನು ಬರೆದು, ಕಾಶ್ಮೀರ ರಣರಂಗದಲ್ಲಿ ತನ್ನ ಸೈನ್ಯವನ್ನು ಕಳುಹಿಸಿ ಪಾಕಿಸ್ತಾನವು ಅಂತರ್ರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಮಾಡಿರುತ್ತದೆಂದೂ ಬ್ರಿಟಿಶ ರಾಜ್ಯಚಕ್ರದಿಂದ ಇದನ್ನು ಹೊರತಳ್ಳುವದು ಅವಶ್ಯವಿರುತ್ತದೆಂದೂ ಸಾರಿದೆ. ಭದ್ರತಾ ಮಂಡಳದ ಮುಂದೆ ಪಾಕಿಸ್ತಾನದ ಪಕ್ಷ ಮಂಡಿಸಲು ಹೋದ ಪಾಕಿಸ್ತಾನ ವಿದೇಶ ಮಂತ್ರಿ ಸರ್ ಝಫರುಲ್ಲಾಖಾನರು ಭದ್ರತಾ ಮಂಡಳದದುರಿಗೆ ಕಾಶ್ಮೀರದಲ್ಲಿ ತಮ್ಮ ಸೈನ್ಯವಿಲ್ಲೆಂದು ಪ್ರತಿಜ್ಞಾಪೂರ್ವಕ ಹೇಳಿ, ಒಂದು ವೇಳೆ ಅಲ್ಲಿಯ ಪರಿಸ್ಥಿತಿ ಗಂಭೀರವಾಗಿ ಪಾಕಿಸ್ತಾನವು ಅಲ್ಲಿಗೆ ತನ್ನ ಸೈನ್ಯ ಕಳಿಸುವ ಪ್ರಸಂಗ ಬಂದಲ್ಲಿ ಭದ್ರತಾ ಮಂಡಳಕ್ಕೆ ಆ ಸಂಗತಿ ಮೊದಲು ತಿಳಿಸಿ ಆಮೇಲೆ ಸೈನ್ಯ ಕಳುಹುವದೆಂದು ವಚನ ಕೊಟ್ಟಿದ್ದರಂತೆ. ಒಂದೊಮ್ಮೆ ಪಾಕಿಸ್ತಾನ ಸರಕಾರದ ಮೇಲಿನ ಭಾಷ್ಯ ನಿಜವಿರುತ್ತದೆಂದು ಒಪ್ಪಿಕೊಂಡರೂ, ಮೇ ತಿಂಗಳಲ್ಲಿ ಸೈನ್ಯ ಕಳಿಸುವಾಗ ಪಾಕಿಸ್ತಾನ ಸರಕಾರವು ಈ ವಚನದಂತೆ ಭದ್ರತಾ ಮಂಡಳಕ್ಕೆ ಯಾಕೆ ತಿಳಿಸಲಿಲ್ಲ ಎಂಬ ಪ್ರಶ್ನೆಯುಂಟಾಗುತ್ತಿದೆ! ಆ ಪ್ರಶ್ನೆಗೆ ಪಾಕಿಸ್ತಾನವು ಏನು ಉತ್ತರ ಕೊಡಬಲ್ಲುದು? ಇದಾಯಿತು ಪಾಕಿಸ್ತಾನದ ಬಾಹ್ಯ ಪರಿಸ್ಥಿತಿ! ಅದರ ಅಂತಃಸ್ಥಿತಿಯಾದರೂ ನೆಟ್ಟಗುಂಟೇ? ಮಾತಿನಂತೆ ನಡೆಯದ, "ಆತ್ಮಸಂತೋಷದಿಂದಲೂ ಆತ್ಮಲಹರಿಯಿಂದಲೂ" ಮಾಡಿಕೊಂಡ ಒಪ್ಪಂದಗಳನ್ನು ಪದೇ ಪದೇ ಮುರಿಯುತ್ತಿರುವ ರಾಷ್ಟ್ರದ ಅಂತಃಸ್ಥಿತಿ ಹೇಗೆ ನೆಟ್ಟಗಿರಬಲ್ಲುದು? ಕರಾಚಿಯ ಮಾರ್ಗವಾಗಿ ವಿದೇಶಗಳಿಂದ ಹಿಂದುಸ್ಥಾನಕ್ಕೆ ಬರುತ್ತಿದ್ದ ೫ ಕೋಟಿ ರೂ. ಬೆಲೆ ಬಾಳುವ ಸರಕನ್ನು ಪಾಕಿಸ್ತಾನ ಸರಕಾರವು ಇದೀಗ ಕರಾಚಿಯಲ್ಲಿ ತಡೆದಿಟ್ಟಿದೆ! ಸಿಂಧ-ಜೋಧಪುರ ರೇಲ್ವೆಯ ಕೆಲವೊಂದು ಭಾಗವು ಪಾಕಿಸ್ತಾನದಲ್ಲುಂಟು. ಅದರಬಗ್ಗೆ ಕೊಡಬೇಕಾಗಿರುವ ಹಣವನ್ನು ತೆರದೆ ಆ ಭಾಗವನ್ನು ಸ್ವಾಧೀನಪಡಿಸಿಕೊಳ್ಳುವಹವ್ಯಾಸವನ್ನು ಪಾಕಿಸ್ತಾನ ಸರಕಾರವು ನಡೆಸಿದೆ! ಇದೆಲ್ಲ ನೋಡಿದರೆ ಪಾಕಿಸ್ತಾನದಲ್ಲಿ ನೀತಿಯ ರಾಜ್ಯದ ಬದಲು ಪುಂಡತನದ ರಾಜ್ಯ ನಡೆಯಲಾರಂಭಿಸಿದೇನೋ ಎಂಬ ಸಂಶಯ ಬರುತ್ತಿದೆ! ಪಾಕಿಸ್ತಾನದಿಂದ ಮುಸಲ್ಮಾನರು ಸಾಸಿರ



"ನಾಟಕಿ ಶಾಪ"---
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಸಂಖ್ಯೆಯೊಂದ ಹೊರಬೀಳುತ್ತಿರುವದರ ಮೇಲಿಂದಂತೂ ಈ ಸಂಶಯ ಬಲಗೊಳ್ಳುತ್ತಿದೆ. ಏಕೆಂದು ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ಓಡಿಬರುವ ಮುಸಲ್ಮಾನರ, ಹಿಂದುಸ್ತಾನ ಸರಕಾರದ ಪ್ರತಿನಿಧಿಗಳ ಅಪ್ಪಣೆ-ಚೀಟಿಗಳನ್ನು ಪಡಕೊಂಡು ಬರಬೇಕೆಂದು ಹಿಂದುಸ್ತಾನ ಸರಕಾರವು ಹೋದ ತಿಂಗಳಲ್ಲಿ ಒಂದು ಕಟ್ಟಳೆಯನ್ನು ಹೊರಡಿಸಿತ್ತಷ್ಟೆ. ಈ ಆಜ್ಞೆಯಂತೆ ಹಿಂದುಸ್ತಾನಕ್ಕೆ ಓಡಿಬರುವ ಮುಸಲ್ಮಾನರ ಕಡೆಯಿಂದ ಕರಾಚಿಯೊಂದರಲ್ಲಿ ಪ್ರತಿ ದಿನ ಸರಾಸರಿ ೬೦೦ರಿಂದ ೧೦೦೦ದ ವರೆಗೆ ತಮ್ಮ ಕಡೆಗೆ ಅರ್ಜಿಗಳು ಬರುತ್ತಿವೆಂದೂ ಅವುಗಳನ್ನು ಪರಿಶೀಲಿಸಿ ತಾವು ದಿನಾ ೩೦ ಅಪ್ಪಣೆ ಚೀಟಿಗಳನ್ನು ಕೊಡುತ್ತಿರುವೆನೆಂದೂ ಕರಾಚಿಯಲ್ಲಿರುವ ಹಿಂದೀ ಹಾಯ-ಕಮಿಶನರರ ಕಚೇರಿಯವರು ಪ್ರಸಿದ್ಧ ಮಾಡಿರುತ್ತಾರೆ. ಲಾಹೋರದಿಂದಲೂ ಹಿಂದುಸ್ತಾನಕ್ಕೆ ಬರಬಯಸುವವರ ಸಂಖ್ಯೆ ಹೆಚ್ಚುತ್ತಿಸಂಬ ವಿಶ್ವಸನೀಯ ವಾರ್ತೆಯುಂಟು. ಪಾಕಿಸ್ತಾನದಲ್ಲಿ ಸುಖದಿಂದಲೂ ಮರ್ಯಾದೆಯಿಂದಲೂ ಜೀವನ ಸಾಗಿಸಲು ಬರುವಂತಿದ್ದರೆ ಲಕ್ಷಾವಧಿ ಮುಸಲ್ಮಾನರು ಪಾಕಿಸ್ತಾನ ಬಿಟ್ಟು ಹಿಂದುಸ್ತಾನಕ್ಕೆ ಬರುತ್ತಿದ್ದರೇನು? ಮುಸಲ್ಮಾನರಿಗೂ ಕೂಡ ಬೇಡವಾದ ಪಾಕಿಸ್ತಾನದಲ್ಲಿ ಎಂತಹ ರಾಜ್ಯ ನಡೆದಿರಬೇಕೆಂಬುದನ್ನು ನಾನು ಬಿಡಿಸಿ ಹೇಳಬೇಕೇ? ಮೊನ್ನೆ ಶನಿವಾರ ಲಾಹೋರದಲ್ಲಿ ನಡೆದ ಘಟನೆಯನ್ನೇ ನೋಡಿರಿ. ಅಂದು ಈದ ಪ್ರಾರ್ಥನೆಗಾಗಿ ಬಾದಶಾಹಿ ಮಸೀದೆಯಲ್ಲಿ ಪ್ರಚಂಡ ಜನಸಮುದಾಯ ಕೂಡಿತ್ತು. ಎಲ್ಲರೂ ಮುಸಲ್ಮಾನರೇ. ಪ್ರಾರ್ಥನೆ ಮುಗಿಸಿ ಹೊರಗೆ ಬರುವಾಗ ನೂಗ್ಗಾಟಕ್ಕೆ ಆರಂಭವಾಯಿತು! ಈ ನೂಗ್ಗಾಟದಲ್ಲಿ ೩೩ ಜನರು ಸತ್ತಿರುವರಂತೆ! ಈ ಒಂದೇ ಕಥೆಯ ಮೇಲಿಂದ ಪಾಕಿಸ್ತಾನದ ಜನತೆಯ ನೀತಿಮತ್ತೆಯೂ ಶಾಂತತಾ ಪ್ರೀತಿಯೂ ಎಷ್ಟು ರಸಾತಳಕ್ಕೆ ಮುಟ್ಟಿದೆ ಎಂಬುದರ ಕಲ್ಪನೆ ಯಾರಿಗೂ ಬರುವಂತಿದೆ. ಈ ಪರಿ ಸಂಯುಕ್ತ ರಾಷ್ಟ್ರಸಂಘದ ಮುಂದೆ ಅಪಹೇಲನಕ್ಕೆ ಈಡಾದ, ಬ್ರಿಟಿಶರು ಎಲ್ಲಿ ಕೈ ಬಿಟ್ಟು ತನ್ನನ್ನು ತಮ್ಮ ರಾಜ್ಯ-ಚಕ್ರದೊಳಗೆ ಹೊರನೂಕುತ್ತಾರೋ ಎಂಬ ಭೀತಿಗೆ ಬಲಿಯಾದ, ನೆರೆಯ ರಾಷ್ಟ್ರವಾದ ಅಫಗಾಣಿಸ್ತಾನದ ರೋಷಕ್ಕೆ ಪಾತ್ರವಾದ, ರುಶ್ಯರ ಕಾಕದೃಷ್ಟಿಗೆ ಗುರಿಯಾಗಿರುವ ಮತ್ತು ಸ್ವಂತ ಪ್ರಜೆಗಳಿಗೆ ನೆಮ್ಮದಿಯನ್ನೂ ಸುಖ-ಶಾಂತಿ-ಸುರಕ್ಷಿತತೆಗಳನ್ನೂ ಈಯಲಾಗದ ಪಾಕಿಸ್ತಾನ ಸರಕಾರವು ನಿಜಾಮರಿಗೆ ಅದೆಂತು ಸಹಾಯ ಮಾಡಬಲ್ಲದು? ಸುಮಾರು ೩ ತಿಂಗಳ ಹಿಂದೆ ಹೈದರಾಬಾದದೊಳಗಿನ ಇತ್ತೆ-ಹಾದುಲ್-ಮುಸಲ್ಮೀನ ಸಂಸ್ಥೆಯ ಮುಖಂಡರು ಪಾಕಿಸ್ತಾನ-ಪ್ರಭು ಬ್ಯಾ॥ ಜಿನ್ನಾರವರನ್ನು ಕಾಣಹೋದಾಗ ಜಿನ್ನಾರವರು ಈ ಶಿಷ್ಟರಿಗೆ ದೃಷ್ಟಿ-ಭೆಟ್ಟಿಯನ್ನು ಸಹ ಕೊಟ್ಟಿದ್ದಿಲ್ಲೆಂಬ ಮಾತನ್ನು ನಾವು ಮರೆಯಕೂಡದು. ಅದರಿಂದ ಪಾಕಿಸ್ತಾನವು ತನ್ನ ಸಹಾಯಕ್ಕೆ ಬರುವದೆಂಬ ಆಶೆಯನ್ನು ನಿಜಾಮರು ಹಿಡಿಯಲಾರರು.

ಹಿಂದುಸ್ತಾನದಲ್ಲಿರುವ ೪॥ ಕೋಟಿ ಮುಸಲ್ಮಾನರು ತಮಗೆ ನೆರವನ್ನೀಯುವರೆಂದು ನಿಜಾಮರೂ ಅವರ ಗೆಳೆಯರೂ ತಳೆದಿರುವ ಆಶೆಯೂ ಈಗ ನಿರಾಶೆಯಾಗತೊಡಗಿದೆ. ಸಂಯುಕ್ತ ಬಂಗಾಲ ಪ್ರಾಂತದ ಮುಖ್ಯ ಮಂತ್ರಿಗಳಾಗಿದ್ದ ಜನಾಬ ಸುಹ್ರವರ್ದಿಯವರು ಕೆಲವು ದಿನಗಳ ಹಿಂದೆ ಒಂದು ಪ್ರಕಟನೆಯನ್ನು ಹೊರಡಿಸಿ, ಹಿಂದೀ ಒಕ್ಕೂಟದಲ್ಲಿರುವ ಮುಸಲ್ಮಾನರು ಜಾತ್ಯಂಧ, ಧರ್ಮಾಂಧ ನಿಜಾಮರಿಗೆ ಎಳ್ಳಷ್ಟೂ ಸಹಾನುಭೂತಿಯನ್ನು ತೋರಿಸಕೂಡದೆಂದೂ ತೋರಿಸಲಿಕ್ಕಿಲ್ಲೆಂದೂ ಜಾಹೀರಪಡಿಸಿದ್ದಾರೆ. ಡಾ| ಖಾ| ಮೋಮಿನ ಪಠಾಣರೂ ಕಳೆದ ವಾರ ಒಂದು ಪ್ರಕಟನೆಯನ್ನು ಹೊರಡಿಸಿ, ನಿಜಾಮರು ಅಮಾನಿಕ ಪಿಶಾಚ ನರ್ತನ ನಡೆಸುತ್ತಾರೆಂದೂ, ಧರ್ಮದ ಹೆಸರು ಹೇಳಿ, ತಮ್ಮ ಸತ್ತೆಯನ್ನು ದೃಢಮೂಲ ಮಾಡಲು ಹವಣಿಸುತ್ತಿರುವರೆಂದೂ ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ ಬ್ರಿಟಿಶ ಬಗಲುಗೂಸಾಗಿ ಆ ಸ್ವಾತಂತ್ರ್ಯದ ಹೋರಾಟಕ್ಕೆ ಅಡ್ಡಗಾಲು ಹೊಡೆದ ನಿಜಾಮರಿಗೆ ಸ್ವಾತಂತ್ರ್ಯ ಪ್ರೇಮಿ ಮುಸಲ್ಮಾನರು ಎಂದೆಂದೂ ಸಮಾನುಭೂತಿ ತೋರಿಸಲಿಕ್ಕಿಲ್ಲೆಂದೂ ಖಂಡ ತುಂಡವಾಗಿ ಸಾರಿದ್ದಾರೆ. ಹಿಂದುಸ್ತಾನದಲ್ಲೀಗ ನಿಜಾಮರ ಗುಪ್ತಚಾರರೂ ಹಂಚಮ ದಳದವರೂ ಇಲ್ಲೆಂದು ನಾನು ಹೇಳುವದಿಲ್ಲ. ಇಂತಹ ಪಾಪಿಗಳು ಅಲ್ಲಲ್ಲಿ ಇದ್ದಾರೆ, ಸಾವಿರಗಟ್ಟಲೆ ಇದ್ದಾರೆಂದೂ ನಾನು ಒಪ್ಪುತ್ತೇನೆ. ಆದರೆ ಅಲ್ಲಲ್ಲಿಯ ಪ್ರಾಂತಿಕ ಸರಕಾರಗಳೂ ಸ್ಥಾನಿಕ ಅಧಿಕಾರಿಗಳೂ ಅವರನ್ನೆಲ್ಲ ಹುಡುಕಿ ತೆಗೆದು, ಅವರ ಯೋಗ್ಯ ಪಾರುಪತ್ಯ ಮಾಡುತ್ತಲಿದ್ದಾರೆ. ಅದರಿಂದ ಹಿಂದೀ ಮುಸಲ್ಮಾನರಿಂದ ತಮಗೇನಾದರೂ ಸಹಾಯವಾದೀತೆಂದು ನಿಜಾಮರು ಇನ್ನೂ ಆಶೆಯನ್ನಿಟ್ಟುಕೊಂಡಿದ್ದರೆ ಅದು ಕೇವಲ ಭ್ರಮೆಯಿರುತ್ತದೆಂದು ಹೇಳಬೇಕಾಗಿಯಿಲ್ಲ.

ಹೊರಗಿಂದ ತಮಗೆ ಏನೇನೂ ಸಹಾಯ ಸಿಗುವಂತಿಲ್ಲೆಂಬ ಮಾತು ನಿಜಾಮರಿಗೆ ತಿಳಿದುಬಂದಿತೋ ಏನೋ. ಅವರು ಕಳೆದ ವಾರದ ಪ್ರಾರಂಭಕ್ಕೆ ಪುನಃ ಹಿಂದುಸ್ಥಾನ ಸರಕಾರದೊಡನೆ ಸಂಧಾನದ ಮಾತು ನಡೆಸಲು ಪ್ರವೃತ್ತರಾಗಿದ್ದರು. ಬೇರೆ ಯಾರಿಂದಲೂ ಈ ಮಾತು ಸಾಧ್ಯವಾಗುವಂತಿಲ್ಲೆಂದು ಭಾವಿಸಿ, ನಿಜಾಮರು ಈ ಬಗ್ಗೆ ಸರ್ ಮಿರ್ಝಾ ಇಸ್ಮಾಯಿಲರ ಮೊರೆ ಹೊಕ್ಕು, ಅವರಿಗೆ ಏನಾದರೂ ರಾಜಿ ಮಾಡಿಕೊಡಿರೆಂದು ಬಿನ್ನವಿಸಿದ್ದರು. ಸರ್ ಮಿರ್ಝಾರವರೂ ಒಪ್ಪಿಕೊಂಡು ಸಂಧಾನದ ಮಾತು ನಡೆಸಲಿಕ್ಕೆ ಕಳೆದ ವಾರದ ಪ್ರಾರಂಭಕ್ಕೆ ದಿಲ್ಲಿಗೆ ಪಯಣ ಬೆಳೆಸಿದ್ದರು. ದಿಲ್ಲಿಯಲ್ಲಿಳಿದು ಸರ್ ಮಿರ್ಝಾರವರು ಸಂಸ್ಥಾನ ಖಾತೆಯ ಸಚಿವರಾದ ಸರದಾರ ವಲ್ಲಭಭಾಯಿ ಪಟೇಲರನ್ನು ಪ್ರಥಮತಃ ಕಾಣಹೋದಾಗಲೇ ಸರದಾರರು "ಸಂಧಾನಕ್ಕಾಗಿ ನೀವು ಯತ್ನಿಸಲು ನನ್ನದೇನೂ ಆಕ್ಷೇಪವಿಲ್ಲ. ಆದರೆ ನಿಮಗೆ ಖಂಡಿತವಾಗಿಯೂ ಯಶಸ್ಸು ಸಿಗುವಂತಿಲ್ಲ. ಯಾರ ಪರವಾಗಿ ನೀವು ಸಂಧಾನ ಮಾಡಲು ಬಂದಿರುವಿರೋ ಅವರ ಸ್ವಭಾವ ನಿಮಗೆ ಗೊತ್ತಿಲ್ಲ!" ಎಂದು ಸ್ಪಷ್ಟ ಶಬ್ದಗಳಲ್ಲಿ ಹೇಳಿದ್ದರಂತೆ. ಸರದಾರರ ಈ ಭವಿಷ್ಯವೀಗ ನಿಜವಾಗಿದೆಯೆಂದು ಸರ್ ಮಿರ್ಝಾರವರೇ ಒಪ್ಪಿಕೊಂಡಿದ್ದಾರೆ. ಜೂನ ತಿಂಗಳಲ್ಲಿ ಮೌಂಟಬೆಟನ್ನ ದೊರೆಗಳ ಸಮಕ್ಷ ತಯಾರಾದ ಒಪ್ಪಂದದ ಕರಡನ್ನೇ ಪುನಃ ಊರ್ಜಿತಗೊಳಿಸಿ, — ಏಕೆಂದರೆ ಆ ಕರಡು ಈಗ ರದ್ದಾಗಿರುತ್ತದೆಂದು ಸರದಾರ ಪಟೇಲರು ಕೆಲ ದಿನಗಳಾಚೆ ಬಿಕಾನೇರದಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಹೇಳಿದ್ದರು — ಅದೇ ನೀತಿಕೆಯ ಮಾತುಕತೆಯ ಮೇಲೆ ಮುಂದರಿಸುವಾ, ನಿಜಾಮರ ಅಂಕಿತವನ್ನು ಆ ಕರಡಿಗೆ ದೊರಕಿಸುತ್ತೇವೆ ಎಂದು ಸರ್ ಮಿರ್ಝಾ ಇವರ ಸೂಚನೆಯಿತ್ತು. ಸರದಾರ ಪಟೇಲರು ಈ ಮಾತಿಗೆ ಮರುಳಾಗಲಿಲ್ಲ. ಹೈದರಾಬಾದದಲ್ಲಿ ವಿಶಾರ ಲಾಯಕ ಅಲ್ಲಿಯವರ ಸದ್ಯದ ಮಂತ್ರಿಮಂಡಳವು ಅಧಿಕಾರದಲ್ಲಿರುವಾಗ ಹಿಂದುಸ್ಥಾನ ಸರಕಾರವು ಒಪ್ಪಂದದ ಮಾತುಕತೆ ಪ್ರಾರಂಭಿಸದೆಂದು ಅವರು ಸರ್ ಮಿರ್ಝಾರಿಗೆ ಸ್ಪಷ್ಟ ತಿಳಿಸಿಹೇಳಿದರು. ಗವ್ಹರ್ನರ-ಜನರಲ್ ಶ್ರೀ| ಚಕ್ರವರ್ತಿ ರಾಜಗೋಪಾಲಾಚಾರ್ಯರೂ ಸರದಾರರ ಅಂಬೋಣಕ್ಕೆ ತಲೆದೂಗಿದರು. ಈ ೨-೩ ವಾರಗಳಲ್ಲಿ ಬಹಳ ಸ್ಥಿತ್ಯಂತರಗಳಾಗಿವೆಯೆಂದೂ, ಹಿಂದ-ಹೈದರಾಬಾದಗಳ ಸಂಬಂಧ ಈಗ ಹಿಂದಿನಷ್ಟು ಅಸ್ಪಷ್ಟವುಳಿದಿಲ್ಲೆಂದೂ ಸರದಾರ ಪಟೇಲರು ಸರ್ ಮಿರ್ಝಾರವರಿಗೆ ಸ್ಪಷ್ಟ ತಿಳಿಸಿಹೇಳಿದರೆಂದೂ, ಕಾಶಿಮ ರಝ್ವಿಯ ಇತ್ತೆಹಾದ ಸಂಸ್ಥೆಯನ್ನೂ ರಝಾಕಾರರನ್ನೂ ನಿರ್ಮೂಲಗೊಳಿಸಿ, ಸಂಸ್ಥಾನದಲ್ಲಿ ಪ್ರಜೆಗಳಿಗೆ ಹೊಣೆಗಾರವಿರುವ ಸರಕಾರ ಅಸ್ತಿತ್ವದಲ್ಲಿ ಬಂದನಂತರ ಹಿಂದ ಸರಕಾರವು ಹೈದರಾಬಾದದೊಡನೆ ಪುನಃ ಬಾಂಧವ್ಯ ಜೋಡಿಸಲಿಕ್ಕೆ ಸಿದ್ಧವಾಗುವಂತಿಲ್ಲೆಂದು ಶ್ರೀ| ರಾಜಾಜಿಯವರೂ ಹೇಳಿದರೆಂದು ಸುದ್ದಿಯುಂಟು. ಒಪ್ಪಂದದ ಕರಾರುಗಳನ್ನು ಬೇಕಾದರೆ ಹಿಂದಿನಿಂದ ನಿಶ್ಚಯಿಸುವಾ, ತುರ್ತಕ್ಕೆ ಹೈದರಾಬಾದದಲ್ಲಿ ನಡೆದಿರುವ ಪುಂಡರ ರಾಜ್ಯವನ್ನು ನಿಜಾಮರ ನಿಲ್ಲಿಸಲಿ ಎಂದು ಸಂಸ್ಥಾನ ಖಾತೆಯವರು ಸರ್ ಮಿರ್ಝಾರಿಗೂ ನಿಜಾಮರ ಅಧಿಕೃತ ಪ್ರತಿನಿಧಿಗಳಾದ ನವಾಬ ಝೈನ ಯಾರಜಂಗರಿಗೂ ತಿಳಿಸಿಹೇಳಿದರು. ಹಿಂದುಸ್ಥಾನ ಸರಕಾರದ ಈ ಅಭಿಪ್ರಾಯವನ್ನೂ ವಿಚಾರ-ಪ್ರಣಾಲಿಯನ್ನೂ ನಿಜಾಮರಿಗೆ ತಿಳಿಸಿ ಹೇಳಿ, ಅದರ ಪ್ರತಿಕ್ರಿಯೆ ಏನಾಗುತ್ತದೆಂದು ತಿಳಿಯಲು ಯಾರಜಂಗರು ಗುರುವಾರ ಮುಂಜಾನೆ ಹೈದರಾಬಾದಕ್ಕೆ ಬಂದು ಎಲ್ಲ ಪರಿಸ್ಥಿತಿಯನ್ನು ನಿಜಾಮರಿಗರುಹಿದರು.

ನಿಜಾಮರು ಸರ್ ಮಿರ್ಝಾ ಇಸ್ಮಾಯಿಲರ ಮುಖಾಂತರ ನಡೆಸಿದ ರಾಜಿಯ ಪ್ರಯತ್ನಗಳು ಅವರ ಮುಖ್ಯ ಪ್ರಧಾನ ವಿಶಾರ ಲಾಯಕ ಅಲ್ಲಿಯವರಿಗೆ ಹಾಗೂ ಇತ್ತೆಹಾದ ಸಂಸ್ಥೆಯ ಪ್ರತಿನಿಧಿಗಳಾಗಿ ನಿಜಾಮರ ಮಂತ್ರಿಮಂಡಳದಲ್ಲಿರುವ ಮಂತ್ರಿಗಳಿಗೆ ಒಪ್ಪಿಗೆಯಿದ್ದಿಲ್ಲ! ಸರ್ ಮಿರ್ಝಾರವರ ಆಯ್ಕೆಯೂ ಅವರಿಗೆ ಸರಿದೋರಲಿಲ್ಲ! ಈ ಮಂತ್ರಿಗಳಿಗೆ ಇನ್ನೂ ತಮ್ಮ ಬಾಹುಬಲದಲ್ಲಿ ವಿಶ್ವಾಸವಿದೆ! ರಝಾಕಾರರ ಸಹಾಯದಿಂದಲೂ ಪಾಕಿಸ್ತಾನದ ಹಾಗೂ ಹಿಂದುಸ್ಥಾನದಲ್ಲಿರುವ ಪಾಕಿಸ್ತಾನಿಗಳ ನೆರವಿನಿಂದಲೂ ತಾವು ಹಿಂದಸರಕಾರವನ್ನು ಎದುರಿಸಬಲ್ಲೆವೆಂಬ ಹುಮ್ಮಸು ಅವರಲ್ಲುಂಟು! ನಿಜಾಮರ ಸರಕಾರದಲ್ಲಿ ಇದೀಗ ಈ ಪುಂಡರದೇ ಪ್ರಾಬಲ್ಯವಾಗಿದೆ! ಅದರಿಂದಲೇ ಕಾಶಿಮ ರಝ್ವಿಯ ಹುಚ್ಚು ಒಡಬಡಿಕೆಗಳು ಹೆಚ್ಚಾಗುತ್ತ ನಡೆದಿವೆ, ರಝಾಕಾರರ ಹಾಗೂ ನಿಜಾಮ ಪೋಲೀಸರ ಅತ್ಯಾಚಾರಗಳು ಮಿಗಿಲಾಗುತ್ತ ನಡೆದಿವೆ! ಹೈದರಾಬಾದ ಸಂಸ್ಥಾನದಲ್ಲಿ ಹಿಂದೀ ಒಕ್ಕೂಟಕ್ಕೆ ಸೇರಿದ ಕೆಲವು 'ನಡುಗಡ್ಡೆ' (ನಿಜಾಮ ಪ್ರದೇಶದಿಂದ ಆವರಿಸಲ್ಪಟ್ಟ ಪ್ರದೇಶ)ಗಳಿವೆ. ಈ ನಡುಗಡ್ಡೆಗಳೊಳಗಿನ ಜನರನ್ನು ರಝಾಕಾರರು ಪೀಡಿಸಲಾರಂಭಿಸಿದಾರೆ. ಕಳೆದ ವಾರದ ಪ್ರಾರಂಭಕ್ಕೆ ಸೊಲ್ಲಾಪುರ ಜಿಲ್ಹೆಗೆ ಸೇರಿದ ಇಂತಹದೇ ಒಂದು ನಡುಗಡ್ಡೆ (ಹಡಲಗಿ ಎಂಬ ಗ್ರಾಮ)ಗೆ ರಝಾಕಾರರು ಮುತ್ತಿಗೆ ಹಾಕಿದ್ದರು. ಕೂಡಲೇ ಹಿಂದೀ ಸೈನಿಕರು ರಝಾಕಾರ ಪುಂಡರು ತಳವೂರಿದ ಯಳನಾಂಗ (ಹೈದರಾಬಾದಕ್ಕೆ ಒಪ್ಪಿದ್ದು) ಗ್ರಾಮದ ಮೇಲೆ ಏರಿ ಹೋಗಿ ಆ ರಝಾಕಾರರನ್ನು ಓಡಿಸಿದರು. ಈ ಚಕಮಕಿಯಲ್ಲಿ ೩೫ ರಝಾಕಾರರು ಸಾವಿಗೆ ತುತ್ತಾದ ಸುದ್ದಿಯುಂಟು. ಮೊನ್ನೆ ಮುಂಜಾನೆ ಬೇಜವಾಡದಿಂದ ಹೈದರಾಬಾದಕ್ಕೆ ಹೊರಟ

ಹೆರಟಿ ಜವಾಬು [illegible] ಗಂಗಿ ಸೇನಿ ಎಂಬ ಪಿಲಿ ಣದ ನವಾಬು ರಮಾಕಾಂದರು ದಾಳಿ ಮಾಡಿ, ಪ್ರಯಾಣಿಕರನ್ನು [illegible]ದರೆಂದೂ ಅಂಚೆ ಬಾಲುಗಳಿಂದ ತ[illegible] ವಸ್ತುಗಳನ್ನು ಸುಟ್ಟು ಬೂದಿ ಮಾಡಿದರೆಂದೂ [illegible] ಭನಸಾಲಿಯವರ ಇಸ್ತೀಗ[illegible] ಸಂಚರಿಸತ್ತವಾ[illegible] ಅವರ [illegible] ಇರುವ ಪರ ತರ್ಮ ಅಲ್ಲಿಲ್ಲಿ [illegible] ದೃಷ್ಟಿಗೆ [illegible] ದಮ್ಯಾಚಾರ [illegible] ಈ [illegible] ಆಡಗಿರುವ ಸಾಮಥ್ರ್ಯ ಅಥವಾ [illegible] ಹೈದರಾಬಾದ ಸರಕಾರಕ್ಕಿಲ್ಲ ಅವರ [illegible] ಆವಾಸಗಳಿಂದ [illegible] ರಾಜ್ಯ ನಡೆದಿದೆ [illegible] ಇಂತಹ [illegible] ಇಸ್ಲಾಮಿಕ [illegible] ನವಾಬ [illegible] ಪ್ರಾಗೆ [illegible] ಇಂತಹ ಪರಿಸ್ಥಿತಿಯನ್ನು [illegible] ಅಧಿಕಾರಿಗಳ [illegible] ಸಿಕ್ಕಿ [illegible] ಪುಂಡರೆಂದೇ [illegible] ಪುಂಡರ ಮಾತ [illegible] ಸ್ವತಂತ್ರ ಬುದ್ಧಿಯಿಂದ ನಡೆ[illegible] ಸಿಜಾಮರಿಗೆ ಅವಕಾಶವೇ ಉಳಿದಿರುವದಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಸರ್ [illegible] ಸಂಸ್ಥಾನದ ಪ್ರಯತ್ನಗಳು [illegible] ದಿನ [illegible] ನಿಜಾಮರ ಪ್ರತಿನಿಧಿ (ಏಜಂಟ-ಜನರಲ್) [illegible] ನವಾಬ [illegible] ಯಾರಜಂಗ [illegible] ಪ್ರಸಂಗ ಬಂದರೆ ಅಶ್ಚರ್ಯಪಡಬೇಕಾದ ಕಾರಣ ವಿಲ್ಲ. ನಿಜಾಮರು ಕೂಡ ತಮ್ಮ ಪುಂಡ ಸರಿ[illegible] ದ ಮಾತಿಗೆ ಕಿವಿಗೊಟ್ಟು ಯಾರಜಂಗ ಬಹಾದ್ದೂ ರರ ರಾಜೀನಾಮೆಯನ್ನು ಸ್ವೀಕರಿಸಿ (ಇನ್ನೊಂದು ಭಾಷೆಯಲ್ಲಿ ಹೇಳುವದಾದರೆ ನವಾಬರನ್ನು ಒಡತ ಸ್ತ ಮಾಡಿ!) ಅವರ ಪದಕ್ಕೆ ಇತ್ತೀಚ ವ[illegible] ಪಕ್ಷದ ಎಸ ಎಮ್ ಏ ರಝವಿಯವರನ್ನು ನೇಮಿ ಸಿದ್ದು ನೋಡಿ ನಾವು ಆಶ್ಚರ್ಯಪಡಬೇಕಾದದ್ದೂ ಆವಶ್ಯವಿಲ್ಲ ನಿಜಾಮರ ಸೇನಾಪತಿಗಳಾದ ನೇ|| ಎಲ್ ಎಡ್ರೂಸ ಇವರು ಕೂಡ ತಮ್ಮ ರಾಜೀನಾ ಮೆಯನ್ನು ಬರೆದು ನಿಜ ಮರ ಕೈಯ್ಯಲ್ಲಿಟ್ಟ [illegible] ಯುಂಟು ರಜ್ವಾಕಾರರ ಅತ್ಯಾಚಾರಗಳನ್ನು ಆಡ ಗಿಸುವದಕ್ಕಾಗಿ ಹಿಂದೀ ಸೈನಿಕರು ಆಕ್ರಮಿಸಿರುವ ನಿಜಾಮ ಪ್ರದೇಶದೊಳಗಿ[illegible] ಆ ಸೈನಿಕರನ್ನು ಓಡಿ ಸುವ ವ್ಯವಸ್ಥೆ ಮಾಡಬೇಕೆಂದು ಎಲ್. ಎಡ್ರೂಸ ಇವರಿಗೆ ನಿಜಾಮ ಸರಕಾರದ ಅಪ್ಪ[illegible]ಯಾಗಿತ್ತೆಂದೂ ಇಂತಹ ಅವಿವೇಕದ ಮಾರ್ಗ [illegible] ಒಪ್ಪಿಗೆಯು[illegible] ಎಲ್ ಎಡ್ರೂಸರು ಹೇಳಿ ತಮ್ಮ ಪದಕ್ಕೆ ರಾಜೀನಾಮೆ ಕೊಡಲು ಸಿದ್ಧರಾಗಿದ್ದರೆಂದೂ ತಿಳಿ ಯುತ್ತದೆ ಅವರ ರಾಜೀನಾಮೆ ಕೂಡ ಸ್ವೀಕೃತ ವಾಗಿ, ಅವರ ಸ್ಥಳದಲ್ಲಿ ಕೆಲವೇ ದಿನಗಳಲ್ಲಿ ಕಾಸಿ ಮ ರಜ್ವಿಯು ಸೇನಾಪತಿಯಾದರೂ [illegible] ಒಳುದು! ಇಂತಹ ವಿವೇಕಭ್ರಷ್ಟ ಜನರಿಂದ ತುಂಬಿ ದ ಸರಕಾರವು ಎಷ್ಟು ದಿನ ಬಾಳಬಲ್ಲದು? ಹೈದರಾಬಾದ ಸರಕಾರವನ್ನು ಬಗ್ಗಿಸಲು ಯುದ್ಧ [illegible] ಬೇಕಾಗಿರದಿ[illegible] ಸರಕಾರವನ್ನು ಹಿಡಿತದಲ್ಲಿ ತರುವದಕ್ಕಾಗಿ ಕೈಕೊಳ್ಳಬೇಕಾಗುವ ಪ್ರಮುಖ ಯುದ್ಧವೆಂದು ಪರಿಗಣಿಸುವರು [illegible] ಜಯುಕ್ತ [illegible] ಜಾ[illegible] ಮದ್ರಾಸದೊಳಗಿನ [illegible] ಪಡದಲ್ಲಿ [illegible]

ಆವರು ಹೇಳಿದಂತೆ, ಹೈದರಾಬಾದದೊಳಗಿನ ಪ್ರದೇಶನ್ನು ನಿಯಂತ್ರಿಸುವದಕ್ಕೆ ಯುದ್ಧ ಬೇಕಾ [illegible] ವಿಮಾನ ದಾಳಿಗಳನ್ನು ಮಾಡುವದಗತ್ಯವಿಲ್ಲ, ದೊಡ್ಡ ಪ್ರಮಾಣದ ಸೈನ್ಯ ಚಟುವಟಿಕೆಗಳನ್ನು ನಡಿಸಬೇಕಾದ ಅಗತ್ಯವು ಇಲ್ಲ ರಝಾಕಾರರ [illegible] ಎಷ್ಟೇ ವಲೂ ಪ್ರಕ್ಕರೇ ಸರಿ! ನಿಜಾಮರ [illegible] ಸ್ಥಿತಿಯೂ ಅ[illegible] ಹೈದರಾಬಾದದ ಗಡಿ [illegible] ಈ ಪುಂಡರು ದಾಳಿ ಮಾಡಿದಾಗ ಅಲ್ಲಿರು ವ ಪೋಲೀಸರೂ ಗಡಿರಕ್ಷಕ (ಹೋಮಗಾರ್ಡ ರೂ) ಈ ಪುಂಡರ ಸಮಾಚಾರವನ್ನು ಒಳಿತಾಗಿ ತಕೊಳ್ಳ[illegible] ದಿನಾಲೂ ಒರುತ್ತಿವೆ! ಪ್ರತಿಭಟಿಸುವವರ ಎದುರಿಗೆ ಬರುತ್ತಲೇ ಈ [illegible] ವೀರರು ಕಾಲಿಗೆ ಬುದ್ಧಿ ಹೇಳು ತ್ತಾರೆ! ಇಂಥ ಪುಂಡರ ಆಧಾರದಿಂದ ಹಿಂದ ಸರ ಕಾರಕ್ಕೆ ಯುದ್ಧದ ಆಹ್ವಾನ ಕೊಡುವ ನಿಜಾಮ ರಿಗೂ ಅವರ ಸರಕಾರಕ್ಕೂ ಏನನ್ನಬೇಕೋ ತಿಳಿಯ ದು! ಹೈದರಾಬಾದ ಸ್ವ[illegible] ಆಂದೋಲನವಂತೂ [illegible] ನೋಡಿದರೆ [illegible] ಅವರನ್ನು ಸಂಘಟಿಸಲು ಸಮಾಜದ [illegible] ಪಕ್ಷದವರು [illegible] ಇಲ್ಲ ಆಗು ಹೋಗುಗಳನ್ನು ನೋಡಿ ದರೆ ಪುಸ್ತಿ[illegible] ರಜ್ವಿ [illegible] ರಾಷ್ಟ್ರ [illegible] ಇವರು ನಿಜಾಮರ ಸಂಬಂಧದಲ್ಲಿ ಸದ್ಯ [illegible] ದಿಟ್ಟಾ[illegible] ಎಂಬ ಸಂಶಯ ಒರುತ್ತಿದೆ ಈಗಣ [illegible] ಬರುವ ಅಕ್ಟೋಬರ ತಿಂಗ ಳೊಳಗಿ[illegible] ರಾಜೀನಾಮೆ ಕೊಡುವ [illegible] ಹೇಳುತ್ತಾರೆ ಈಗಣ [illegible] ಕೊನೆಯ ನಿಜಾಮರಾಗುವರೆಂಬ ಹಿಂದಣ ಭವಿಷ್ಯವು ಒಂದುಂಟು ಇಂದಿನ ಪರಿಸ್ಥಿತಿಯನ್ನು ಅಳವಾಗಿ ಪರಾಂಬರಿಸಿದರೆ ಈ ಭವಿಷ್ಯಗಳ ನಿಜವಾಗುವ ಲಕ್ಷಣಗಳು ತೋರುತ್ತಿವೆ ಆದರಿಂದಲೇ ನಾವು ನಮ್ಮ ಈ ಲೇಖಕ್ಕೆ 'ನಿಜಾಮ ರ [illegible] ವೆಂಬ ತಲೆಬರಹವನ್ನು ಕೊಟ್ಟದ್ದೇನೆ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಪ್ರಾರಂಭದಲ್ಲಿ ಮಳೆ ಸ್ವಲ್ಪ ಕಡಿಮೆಯಾಗಿತ್ತು ವಾರದ ನಡುವೆ ಬಿಸಿಲೂ ಬೀಳುತ್ತಿತ್ತು ಆದರೆ ಈಗ ೨ ದಿನಗಳಿಂದ ರೋಹಿಣಿ ಮೇಲೆ ಮಳೆ ಬೀಳುತ್ತಿದೆ ಮಳೆಗಾಲದ ಪ್ರಾರಂಭದಿಂದ (ಜೂನ ತಾ ೧೦ರಿಂದ) ಈ ವರೆಗೆ ಬಿದ್ದ ಅಂತು ಮಳೆ ೧೧೦೭ ಇಂಚು ಆದ

ಬರುವ ರವಿವಾರ ಹಿಂದುಸ್ಥಾನದಲ್ಲೆಲ್ಲ ಸ್ವಾತಂತ್ರ್ಯ ದಿನದ ಉತ್ಸವ ನಡೆಯುವದು ಈ ಉತ್ಸವವನ್ನು ನಿಂ[illegible] ದಂಬರವಾಗಿ ಆಚರಿಸಬೇಕೆಂದು ಹಿಂದುಸ್ಥಾನ ಸರಕಾರದ ಅ[illegible]ಯುಂಟು ಕುಮಟೆಯಲ್ಲಿ ಈ ಉತ್ಸವವನ್ನು ಹ್ಯಾಗೆ ಆಚರಿಸಬೇಕೆಂಬುದರ ಆಲೋಚನೆಗಾಗಿ ಕಳೆದ ಮಂಗಳ ವಾರ ತಾಲೂಕ ಕಚೇರಿಯಲ್ಲಿ ಒಂದು ಸಭೆ ಕೂಡಿತ್ತು ಹಿಂದುಸ್ಥಾನ ಸರಕಾರದ ಅಪೇಕ್ಷೆಯಂತೆ ತಮ್ಮ [illegible] ಸ್ಥಳಗಳಲ್ಲಿ ತಾ ೧೫ರಿಂದ ತಾ ೨೨ರ ವರೆಗೆ [illegible] ಗಳನ್ನು ನಡೆವ ಕಾರ್ಯಕ್ರಮ ನಡೆಸಬೇಕೆಂದು ಎಲ್ಲ ಸರಕಾರಿ ಕಚೇರಿಗಳ ಮುಖ್ಯಸ್ಥರಿಗೂ, ಅರ್ಧ-ಸರಕಾರಿ ಸಂಸ್ಥೆಗಳಿಗೂ ಸಂಘಜನರಿಗೂ ಬಿನ್ನವಿಸಬೇಕೆಂದು ಸಭೆಯಲ್ಲಿ ತೀರ್ಮಾನವಾಯಿತು. ಶಾಲೆ-ಮಾಲೆಗಳ ಸಂ[illegible] ಗಳನ್ನು ನಗರದಲ್ಲಿ ಸುವರು ಜೇಬಿನ [illegible] ಗಳನ್ನು [illegible] ದಿನದಲ್ಲಿ ವ್ಯಯಾಗದ [illegible] ಇಟ್ಟಿದೆ [illegible] ಸಣ್ಣ ಮಕ್ಕಳಿಗೆ [illegible] ಅಗತ್ಯವೆಂದು [illegible] ಈ ಅಧಿಕಾರಿಗಳು ತಮ್ಮ ಕಡೆಗಿನ [illegible] ಗಳನ್ನು ಮೊಲ ಬಿಳಿಸ ಬಾರದು.

ಒಪ್ಪಿಕೊಂಡಿದ್ದಾರೆ ಜಂಗಲ ಇಲಾಖೆಯವರ ಕಡೆಗೆ ಸದ್ಯಕ್ಕೆ ಸಾಗವಾನಿ ಸಸಿಗಳಷ್ಟೇ ಸಿಗಬಲ್ಲವು ಅವನ್ನು ಅವರು ಪುಕ್ಕಟೆ ಕೊಡುತ್ತಾರೆ ಸಸಿಗಳನ್ನು ಪಡೆಯಬಯಸುವವರು ತಮಗೆ ೩ ದಿನ ಮುಂಚಿತವಾಗಿ ತಿಳಿಸಬೇಕೆಂದು ರೇಂಜರರು ತಿಳಿಸಿದ್ದಾರೆ

ಕುಮಟೆಯೊಳಗಿನ ರವಿವಾರದ ಕಾರ್ಯಕ್ರಮವಿಂತಿದೆ ಮುಂಜಾನೆ ಅಕ್ಕ ಕಚೇರಿಯ ಆವಾರದಲ್ಲಿ ಧ್ವಜಾರೋಹಣ, ಧ್ವಜವಂದನೆಗಳಾಗುವವು, ಬಳಿಕ ಪೋಲೀಸ ಕವಾಯತು ಆಗುವವು [illegible] ಕಚೇರಿಯ ಆವಾರದಲ್ಲಿ ವೃಕ್ಷಾರೋಪಣದ ಸಮಾರಂಭ ನಡೆಯುವದು ಈ ಕಾರ್ಯಕ್ರಮದ ಕಾಲಕ್ಕೆ ಹಾಜರ ಇರಲು ಸಾರ್ವಜನಿಕರಿಗೂ ನಿಮಂತ್ರಣ ಕೊಡಬೇಕೆಂದು ನಿಶ್ಚಯಿಸಲಾಗಿದೆ

ಸೀಮೆ-ಎಣ್ಣೆ[illegible] ಡಬ್ಬಿ[illegible]ಗಳನ್ನು ಕೊಳ್ಳಬೇಕೆಂಬ ನಿಗ್ರಹವಿಲ್ಲ ಬೇಕಾದವರು ಅವನ್ನು ಒಯ್ಯಬಹುದು, ಬೇಡದಿದ್ದವರು ಬಿಡಬಹುದು ಅಕ್ಕಿ ಗೋದಿಗಳು ಮಾತ್ರ ಹಿಂದಿನಷ್ಟೇ ಸಿಗುತ್ತವೆ

ಹೊಸ ಕುಮಟಾ ಮ್ಯುನಿಸಿಪಾಲಿಟಿಯು ಮೊದಲನೇ ಸಭೆ ನಾಳೆ ಕೂಡಿ, ಹೊಸ ಅಧ್ಯಕ್ಷ-ಉಪಾಧ್ಯಕ್ಷರನ್ನು ಆರಿಸಲಿದೆ

ಮೊನ್ನೆ ಶನಿವಾರ ಗೋಕರ್ಣದಲ್ಲಿ ಗೋವೆ ಸರಾಯಿ ಹುಂಡಿ [illegible] ಒಂದು ಬೋಣಿ ಸಮುದ್ರದ ಒಂದು ಕಲ್ಲಿನ [illegible] ಮಾರಿಗೆ [illegible] ಈ ಸುದ್ದಿಯನ್ನು [illegible] ಆಬಕಾರಿ [illegible] ಪೂರೈಸಿ ಅದನ್ನು ಹಿಡಿ ದರು ಬೋಣಿಯಲ್ಲಿ [illegible] ಸರಾಯಿ [illegible] ಇದರ ಬೆಲೆ [illegible] ಆಬಕಾರಿಯವರು ಬೋಣಿಯ ಸಹಿತ [illegible] ಬಂದರಿಗೆ [illegible] ಇವರಲ್ಲಿ ಒಬ್ಬನು ಕುಮಟೆಯವನು, ಇನ್ನೊಬ್ಬನು [illegible] ಹೆಂದೂ [illegible] ಈ ಸರಾಯಿಯನ್ನು ಸರಾಯಿಗಳು [illegible] ಮೇಲೆ ತಂದಿದ್ದರೆಂದೂ, [illegible] ಜನ ಪಾಲು ಗಾರರಾಗಿರುವರೆಂದೂ, [illegible] ಈ ಪೀಪಾಯಿಗಳು [illegible] ಕಟ್ಟಿಗೆ ಹೋಗಿರತಕ್ಕವಿದ್ದವೆಂದೂ [illegible] ಬೋಣಿ ಮುಳುಗುವ ಚಿಂತೆಯುಂಟಾದ್ದರಿಂದಲೂ ಬೋಣಿಯು ಗೋಕರ್ಣದಲ್ಲಿ ನಿಲ್ಲಬೇಕಾಯಿತಂತೆ

ಹೊನ್ನಾವರ— (ತಾ ೫ ೮ ೪೮) ಲಂಚ ತಿನ್ನುವರೆಂದು [illegible] ತಿಳಿಸಿದ [illegible] ಪ್ಯಾಲಿಯಿಂದ [illegible] ೫೦ ಲಂಚ ತಕ್ಕೊಂಡ ಆರೋಪ ಬಿಟ್ಟು ಇಲ್ಲಿಯ ಆಬಕಾರಿ [illegible] ಸೇನ ಯಾನೆ [illegible] ಅವನಿಗೆ [illegible] ಆಬಕಾರಿ ಸಬ [illegible] ಮನೆಯಲ್ಲಿ ಸೇರು [illegible] ಪೋಲೀಸರು ಅವನಿಗೆ ಹಿಡಿದು ಧೃಢಪ ಮಾಡಿ [illegible] ಆವನ [illegible] ತಿ ೨೦ ಸಿಕ್ಕವಂತೆ

ಇಲ್ಲಿಯ [illegible] ಒಂದು ದೊಡ್ಡ ಜುಗಾರ ಮಂಡ ನಡೆಯುತ್ತಿದೆ ಮಂಡದಲ್ಲಿ ಜುಗಾರ ವಿಷ್ಣೇ ಅಲ್ಲ, ಸುರಾಪಾನದ ಸಂಗ್ರಹವೂ ನಡೆಯುತ್ತಿದೆ! ಊರೊಳಗಿನ [illegible] ಪ್ರವರ್ತಕರೂ ಈ ಮಂಡವನ್ನು [illegible] ಪೋಲೀಸರು ಈ ಮಂಡವನ್ನು ಹಿಡಿಯುವ ಅವಶ್ಯತೆ ಯನ್ನು ಯಾಕೆ ತಳೆಯುವದಿಲ್ಲೆಂದು ಕೆಲವರ ಪ್ರಶ್ನೆ

ಮ್ಯುನಿಸಿಪಾಲಿಟಿಯವರ ವಾರ್ಷಿಕ ಚುನಾವಣೆಯ ಕೆಲಸಕ್ಕೆ ಇನ್ನೂ ಪ್ರಾರಂಭವಾಗಿಲ್ಲ ಮಳೆ ತೀರಿದ ಮೇಲೆ ಮಾಡುವ ಉದ್ದೇಶ ಆಲೋಚನೆಯಾಗಿದೆಯೋ ಏನು!

ವೈ|| ವಾ|| ಅಮ್ಮೆಂಬಳ ಶ್ರೀನಿವಾಸ ಪೈ

ಮಂಗಳೂರಿನ ಸುಪ್ರಸಿದ್ಧ ಅಮ್ಮೆಂಬಳ ವೈದಿಕನ ಓರ್ವ ಉಜ್ವಲ ವ್ಯಕ್ತಿಗಳೂ ದಕ್ಷಿಣ ಕಾನಡಾ ಜಿಲ್ಲೆಯ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಆದ್ಯಮುಖಂಡ ರೂ ಆಗಿದ್ದ ಶ್ರೀ| ಶ್ರೀನಿವಾಸ ಪೈಗಳು ಇದೇ ಕಳೆದ ಜುಲೈ ಮ ತಾ. [illegible] ತಮ್ಮ [illegible] ದಿವಂಗತರಾದರೆಂದು ತಿಳಿಸಲು ದುಃಖವೆನಿಸುತ್ತದೆ ದಿವಂಗತರು ವಿವಿಧ ಕ್ಷೇತ್ರಗಳಲ್ಲಿ ದುಡಿದು ಶಕ್ತಿಯನ್ನು ಸಮಾಜಸೇವೆಗೆ [illegible] ಮಾಡಿದ್ದಾರೆ ಅವರ ಜೀವನವು ಆದರ್ಶಪ್ರಾಯವಾ[illegible] ದಿವಂಗತ ರ [illegible] ವಾ. ಪ [illegible] ಓರ್ವರು (ಶ್ರೀ| ಏ [illegible] ಪೈ ಇವರು) ಹಿಂದೆ [illegible] ಸರಕಾರದ [illegible] ಮುಖ್ಯ [illegible] ಇನ್ನೊಬ್ಬರು (ಡಾ|| [illegible] ಪೈ ಅವರು) ಮುಂಬಯಿಯಲ್ಲಿ ಡಾಕ್ಟರ [illegible] (ಶ್ರೀ| ಏ ನಾರಾಯಣ ಪೈ) [illegible] ದಿವಂಗತರ ಆತ್ಮಕ್ಕೆ [illegible] ಸದ್ಗತಿಯನ್ನೀಯಲು [illegible]

ಜಿಲ್ಲಾ ಸಮಾಚಾರ

ಅಂಕೋಲಾ— ಈ ತಾಲೂಕಿನಲ್ಲಿ ಸಾಲ ಸಾಲ ಕಾರಣ ಅಧಿಕಾರ ಪಟ್ಟಣಗಳ ... ಈ ಹಿಂದೆ ... ಕಳೆದ ಸೋಮವಾರದಿಂದ ... ನಡೆಯುತ್ತದೆ.

ಕೇಣೀ ಗ್ರಾಮದ ಸುಂದರನಾರಾಯಣ ದೇವಸ್ಥಾನದ ಎದುರಿಗೆ ... ಸ್ಥಳವನ್ನು ... ವಿದ್ಯಾರ್ಥಿಗಳ ... ಈ ಸ್ಥಳದ ... ಸ್ಥಳದ ... ಹಿಂದೆ ... ಸರಕಾರಕ್ಕೆ ... ಜನರಿಗೆ ... ಅತ್ಯಾವಶ್ಯಕ ... [illegible]

ಅತ್ತಲಾಗಿ ... ಹೆಬ್ಬುಗಾತ್ರಾ ... ಜೀವನಾವಶ್ಯಕ ವಸ್ತುಗಳ ಬೆಲೆಗಳು ಈಗ ಹಿಂದಿನ ಬೆಲೆ ... ಆದರಿಂದ ಸರಕಾರವು ... ಮಂಜೂರ ಮಾಡಬೇಕಾಗಿದೆ ... ಸರಕಾರ ... ಕೊಡುವದಿಲ್ಲ! ... ಸೇವಾನಿವೃತ್ತಿ ... ಹಿಂದಿನ ನೌಕರರನ್ನು ... ಜೀವನ ... ನಿವೃತ್ತಿ ... ಸೇವಾನಿವೃತ್ತ ... [illegible]

ಬಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿದ ಹೊನ್ನಪ್ಪಾ ಕೋಂ ರಾಮ ಕೃಷ್ಣ ಭಟ್ಟ ಸಾ॥ ಕೋಣೆಹಳ್ಳಿ, ತಾಲೂಕ ಯಲ್ಲಾಪೂರ (ಪೋಸ್ಟ ಯಲ್ಲಾಪೂರ) ಇವಳು ಈ ಮೂಲಕ ಬಾಹೀರ ಪಡಿಸುವದೇನಂದರೆ — ನನ್ನ ಮೃತ ಪತಿಗಳಾದ ರಾಮಕೃಷ್ಣ ಭಟ್ಟ ಭಟ್ಟ ... ನರಸಿಂಹ ಭಟ್ಟ ... ಕುಟುಂಬದವರಿದ್ದು ಕುಟುಂಬದ ... ಯಲ್ಲಾಪೂರ ತಾಲೂಕ ಕೋಣೆಹಳ್ಳಿ ... ಈ ಗ್ರಾಮಗಳಲ್ಲಿರುವ ಆಸ್ತಿ ... ನರಸಿಂಹ ಭಟ್ಟ ... ಕುಟುಂಬದ ... ನನಗೆ ... ಆಸ್ತಿಗಳನ್ನು ... ಯಾರೂ ... ತೆಗೆದುಕೊಳ್ಳಬಾರದು. ... ತಾ ೧—೬—೪೮

ಈ ಎ. ಜಿ. ಗ. ಹೊನ್ನಪ್ಪಾ ಕೋಂ ರಾಮಕೃಷ್ಣ ಭಟ್ಟ ಇವಳು

ಕಾರವಾರ— (ತಾ. ೩೦—೭—೪೮) ... ರಿಂದ ೧ ಮೈಲು ಅಂತರದಲ್ಲಿರುವ ... ನಡೆದಿದೆಯಂತೆ ... ಮುಖ್ಯ ... ರಿಯಿಂದ ಬರೀ ೧½ ಮೈಲು ಅಂತರದಲ್ಲಿ ಈ ... ರಿಯನ್ನು ತೆರೆಯುವದಕ್ಕೆ ... ಮು ಪ್ರಕಟವಾಗಿದೆ. ಹೀಗೆ ... ಹೊಳೆಯ ... ಬಂದರಿಯ ... ಖಾಡಾ (ಸುಂಕೇರಿ, ಕಡವಾಡ, ಶೇಜವಾಡ ವಗೈರೆ) ಗ್ರಾಮಗಳಿಗೂ ಬಹಳ ಅನುಕೂಲವಾಗುವದು ... ಪ್ರಯತ್ನಮಾಡಬೇಕಾಗಿ ಅಪೇಕ್ಷೆಯುಂಟು.

ಹೊನ್ನಾವರ ತಾಲೂಕಿನ ಹಿಂಗಾರಿ ಭತ್ತದ ಬೆಳೆಯ ಪ್ರಕಟನೆ.

೧೯೪೭ನೇ ಇಸವಿಯ ಮುಂಬಯಿ ಒಕ್ಕಲತನದ ಕಾಯದೆಯ ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ ಕಾ. ಜಿ. ಜಿಲ್ಲೆಯೊಳಗಿನ ಹೊನ್ನಾವರ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ನೇ ಸ್ತಂಭದಲ್ಲಿ ತೋರಿಸಿದ ಗ್ರಾಮಗಳಲ್ಲಿಯ ಭತ್ತದ ಹಿಂಗಾರಿ ಬೆಳೆಯು ಸರಾಸರಿ ಉತ್ಪನ್ನ ೧೯೪೭ನೇ ಸಾಲಿನಲ್ಲಿ ಪ್ರತಿ ಎಕರೆಗೆ ೨ನೇ ಸ್ತಂಭದಲ್ಲಿ ತೋರಿಸಿದಂತೆ ಹುಟ್ಟಿರುತ್ತದೆಂದು ಈ ಮೂಲಕ ಜಾಹೀರಪಡಿಸಿರುತ್ತಾರೆ.

ಪರಿಶಿಷ್ಟ

ಗ್ರಾಮಗಳ ಹೆಸರು	ಪ್ರತಿ ಎಕರೆಯ ಸರಾಸರಿ ಉತ್ಪನ್ನ) ಬಂಗಾಲಿ ಮಣಗಳು)
ಸರ್ವೇ ಗ್ರೂಪ I	
೧ ಅಪ್ಸರಕೊಂಡ, ೨ ಅರೆಹಳ್ಳಿ-ಮಾಂಡಗೋಡ, ೩ ಬೇರೊಳ್ಳಿ, ೪ ಗುಂಡಬಾಳ, ೫ ಹಳದೀಪುರ, ೬ ಹೊನ್ನಾವರ, ೭ ಹೊಸಾಡ, ೮ ಹೊಸಪಟ್ಟಣ, ೯ ಕಾಸರಕೋಡ, ೧೦ ಕರ್ಕಿ, ೧೧ ಕಾಸರಕೋಡ, ೧೨ ಕೆಳಗಿನೂರ, ೧೩ ಕೆಳಗಿನ ಇಡಗುಂಜಿ, ೧೪ ಕುಳಕೋಡ, ೧೫ ಮಾಳಕೋಡ, ೧೬ ಮುಗ್ವಾ, ೧೭ ಮುಂಡಗೋಡ, ೧೮ ಮಹಿಮೆ, ೧೯ ಸಾಲಕೋಡ, ೨೦ ಮುಗ್ವಿ, ೨೧ ಸರಿ, ೨೨ ಚಿಕ್ಕನಕೋಡ, ೨೩ ಹಡಿನಬಾಳ	೭೪
ಸರ್ವೇ ಗ್ರೂಪ II	
೧ ಅನಿಲಗೋಡ, ೨ ಬಳಕೂರ, ೩ ಬೇರಂಕಿ, ೪ ದುಗ್ಗೂರ, ೫ ಹಡಿನಬಾಳ, ೬ ಹೆಗ್ಗಾರ, ೭ ಹಿಸ್ಸೂರ, ೮ ಹೊಸಾಕುಳಿ, ೯ ಜಲವಳ್ಳಿ, ೧೦ ಜಲವಳಕರ್ಕಿ, ೧೧ ಕರ್ಕಿ, ೧೨ ಕಡ್ಲೆ, ೧೩ ಕಾಸರಕೋಡ, ೧೪ ಕಾಸರ್, ೧೫ ಕೆರ್ವಾ, ೧೬ ಕೆಳಗಿನ ಮುಡ್ಕಣಿ, ೧೭ ಕೆಳಗಿನ ಮುಡ್ಕಣಿ, ೧೮ ಕೇರವಳ್ಳಿ, ೧೯ ಮಾಡಗೇರಿ, ೨೦ ಮೇಲಿನ ಇಡಗುಂಜಿ, ೨೧ ನವಿಲಗೋಣ, ೨೨ ಕಿರು ಹೊನ್ನಾವರ, ೨೩ ಖಂಡಾಗ, ೨೪ ಕೊಡ್ಲ	೭೪
ಸರ್ವೇ ಗ್ರೂಪ III	
೧ ಅಡಿಕಾರ, ೨ ಅಂಗಡಿ, ೩ ಬಂಗಣಿಕೋಡ, ೪ ಚಂದಾವರ, ೫ ಚಿಕ್ಕನಕೋಡ, ೬ ಗುಂಡಬಾಳ, ೭ ಹೆರಂಗಡಿ, ೮ ಕೊಡಾಣಿ, ೯ ಮಲ್ಲಾಪುರ, ೧೦ ಮೇಲಿನ ಮುಡ್ಕಣಿ, ೧೧ ಮೇಲಿನ ಮಾಡಗೇರಿ, ೧೨ ಮುಗ್ವಾ, ೧೩ ನೀಲ್ಕೋಡ, ೧೪ ಸಾಲ್ಕೋಡ, ೧೫ ಸಿಕ್ಕೇರಿ, ೧೬ ತಲಗೋಡ, ೧೭ ತುಂಬೊಳ್ಳಿ, ೧೮ ಉಪ್ಪೋಣಿ.	೨೦
ಸರ್ವೇ ಗ್ರೂಪ IV	
೧ ಅರೇಅಂಗಡಿ, ೨ ಬೆಳ್ಕೋಡ, ೩ ಗುಣವಂತೆ, ೪ ಹೆರಾವಲಿ, ೫ ಹೊಸಾಡ, ೬ ಹುಕ್ಕೇರಿ, ೭ ಕೊಟ್ಟ, ೮ ಕುದ್ರಿಗೆ, ೯ ಕುಂಬಾರಕೇರಿ, ೧೦ ಮಹಿಮೆ, ೧೧ ಸಂಶಿ ಕೇರಿ, ೧೨ ಸರಳಿ	೧೦
ಸರ್ವೇ ಗ್ರೂಪ V	
೧ ಬಾಳೇ ಮೆಟ್ಟ, ೨ ಹಡಿಕಲ್, ೩ ಹನೇಹಳ್ಳಿ ಕಟ್ಟಿನಹಕ್ಕಲು, ೪ ಹೊನ್ನ-ಕೆರೆಹಿತ್ಲು, ೫ ಕಡ್ಲೇರು, ೬ ಕೊಡಚಾದ್ರಿ, ೭ ಸಂಶೊಳ್ಳಿ, ೮ ಕಿರಿಕಾಲ, ೯ ಕುಂಬಳ್ಳಿ	೦೬
ಸರ್ವೇ ಗ್ರೂಪ VI	
೧ ಅರೆಕಲ, ೨ ಅರೆಗೆರೆ, ೩ ಬಗೆಹಿ, ೪ ಹಾಡಗೇರಿ, ೫ ಹಿರೇಬೈಲು, ೬ ಹೊಸಕೋಡ, ೭ ಜನ್ನಕಡಕಲ್, ೮ ಕಂಡೋಡಿ	೯

ಹೊನ್ನಾವರ, ತಾ. ೩೦—೬—೪೮ } **G. S. BETIGERI.** ಮಾಮಲೇದಾರ, ಹೊನ್ನಾವರ

THE BANK OF RURAL INDIA LTD.,
(Incorporated in British India, Liability of Members limited.)
HEAD OFFICE — "Satyabhama Bhavan", **KARWAR.** N. K
Offices at.— KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital .. Rs 10,00,000,
Subscribed Capital . Rs 5,00,000;
Paid-up Capital & Reserves .. Rs. 5,08,502-8-0
Rates of Interest on Deposits.

Current a/c @ 1% p. a. ***Savings Bank a/c @ 2½%.***

Fixed Deposits for 3 months @ 3% per annum.
" " for 6 months @ 3½% "
" " for 12 months or more @ 4% "

All kinds of modern Banking business transacted

Karwar, 14-2-1948 } **P X GRACIOUS,** MANAGING DIRECTOR.

16

ಕುಂಟಾ— (ತಾ ೩-೮-೪೮) ಇಲ್ಲಿಯ ಹಿಂದ ವಾಚನಾಲಯದ ಸಾಧಾರಣ ಸಭೆ ನೆರೆದು, ಮುಂದಿನ ವರ್ಷದ ಬಗ್ಗೆ ರಾ॥ ಎ ಪ್ಪಿ ಶೆಣೈ, ಕೆ. ವ್ಹಿ ಹಿತ್ರೇ ಮತ್ತು ಎ ಜ. ಬಾಳಿ ಇವರು ಅನುಕ್ರಮವಾಗಿ ಅಧ್ಯಕ್ಷ ಕಾರ್ಯದರ್ಶಿ, ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟಿರುವರು

ಹಳಿಯಾಳ— (ತಾ. ೪-೮-೪೮) ಇಲ್ಲಿ ಸರಾಯಿಯ ಕಳ್ಳ ವ್ಯಾಪಾರ ದೊಡ್ಡ ಪ್ರಮಾಣದಿಂದ ನಡೆಯುತ್ತಿದೆ ಅಧಿಕಾರಿಗಳೂ ರಾಷ್ಟ್ರ ಸೇವಾದಳದವರೂ ಅದನ್ನು ನಿರ್ಬಂಧಿಸಲು ಮಾಡುವ ಪ್ರಯತ್ನಗಳು ಸ್ಥಾನಿಕ ಕಾಂಗ್ರೆಸ ಭಕ್ತರ ವಿರೋಧದ ಮೂಲಕ ಯಶಸ್ವಿಯಾಗಲೊಲ್ಲವು! ದಳದವರ ಸಹಾಯದಿಂದ ಅಧಿಕಾರಿಗಳು ಹಿಡಿದ ಗುನ್ಹೆಗಾರರನ್ನು ಬಿಡಿಸಿಕೊಳ್ಳಲು ಈ ಕಾಂಗ್ರೆಸ ಭಕ್ತರು ಸರ್ವವಿಧದಿಂದ ನೆರವಾಗುತ್ತಾರೆ! ಅದರಿಂದ ರಾಷ್ಟ್ರ ಸೇವಾದಳದವರ ಹಾಗೂ ಅಧಿಕಾರಿಗಳ ಮನ್ನಸಿನ ನಿವಾರಣದ ಉತ್ಸಾಹ ಕುಗ್ಗಲಾರಂಭಿಸಿದೆ ಎಂದು ಮುಂತಾಗಿ ಓದುಗರು ದೂರುತ್ತಾರೆ

ಯಲ್ಲಾಪುರ— (ತಾ ೪-೮ ೪೮) ಇಲ್ಲಿಯ ಕನ್ನಡ ಶಾಲೆಯ ಮುಖ್ಯಾಧ್ಯಾಪಕ ರಾ॥ ಶೆಟ್ಟಿಯವರಿಗೆ ಅಂಕೋಲೆಯಲ್ಲಿ ಪ್ರೌಢ ಶಿಕ್ಷಣಾಧಿಕಾರಿಗಳಾಗಿ ನೇಮಿಸಿದ್ದಾರೆ ಆದರಿಂದ ಅವರು ತಮ್ಮ ಕಡೆಗೆ ಇರುವ ಶಾಲಾ ಕಟ್ಟಡ ನಿಧಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಅಧ್ಯಕ್ಷ ರಾ॥ ಕುದಳೇಯವರ ಕಡೆ ಒಪ್ಪಿಸಿದ್ದಾರೆ. ಕಟ್ಟಡದ ನಿಧಿಗೆ ಈ ತನಕ ರೂ ೧೪೩೧ ರೊಖ್ಖ ವಸೂಲ ಬಂದಿದ್ದು, ಅದೆಲ್ಲ ಇಲ್ಲಿಯ ದೂರಲ್ ಬೇಂಕಿನಲ್ಲಿಟ್ಟಿದೆ

ಸಿದ್ದಾಪುರ— (ತಾ ೩ ೮ ೪೮) ಬಿಳಗಿ ಸೀಮೆಯ ಅಲಕಾರ ಹವಾಲದಾರ ರಾ॥ ಶೆಟ್ಟಿಯವರು ತಾ ೨೪-೭-೪೮ನೇ ರಾತ್ರಿ ತಮ್ಮ ಪಡೆಯೊಂದಿಗೆ ಇಲ್ಲಿಯ ಪುರಾತನ ಅರಮನೆಗೆ ಮುತ್ತಿಗೆ ಹಾಕಿ, ಅಲ್ಲಿ ಬೆಲ್ಲದಿಂದ ಭಟ್ಟಿ ಸರಾಯಿ ತಯಾರಿಸುತ್ತಿದ್ದ ಮರಿಗಿದ್ದ ತಿಮ್ಮಪ್ಪ ಮತ್ತು ಹಾಲಾ ತಿಮ್ಮಾ ಇವರನ್ನು ಭಟ್ಟಿಯ ಸಾಹಿತ್ಯದೊಂದಿಗೆ ಹಿಡಿದರೆಂದು ತಿಳಿಯುತ್ತದೆ. ಅಲ್ಲೇ ಸಮೀಪದಲ್ಲಿ ಅಡಗಿಸಿಟ್ಟ ಕೆಲವು ಸರಾಯಿಯ ಬಾಟ್ಲಿಗಳೂ ಸಿಕ್ಕವಂತೆ

ಹೊನ್ನಾವರ— (ತಾ ೪-೮-೪೮) ಕುಮಟಾ-ಭಟಕಳ ಮಾರ್ಗದಲ್ಲಿ ಮೋಟಾರ ಗಾಡಿಗಳನ್ನು ನಡೆಸುವ ಒಬ್ಬಿಬ್ಬ ಡ್ರಾಯವ್ಹರರು ದಾರಿಯಲ್ಲಿ ದನಗಳಿದ್ದರೆ ಅವುಗಳನ್ನು ತಪ್ಪಿಸಲು ಯೋಗ್ಯ ಜಾಗ್ರತೆ ತಕ್ಕೊಳ್ಳುವದಿಲ್ಲೆಂಬದೊಂದು ದೂರು ಕೇಳಿಬರುತ್ತಿದೆ ಮೋಟಾರ ಕಂಪನಿಗಳ ಮೇಲಾಧಿಕಾರಿಗಳು ಚೌಕಶಿ ಮಾಡಿ ತಮ್ಮ ಡ್ರಾಯವ್ಹರರಿಗೆ ಮುಂಜಾಗ್ರತೆ ಕೊಡಬೇಕೆಂದು ಸೂಚನೆ

ಭಟಕಳ— (ತಾ ೪-೮-೪೮) ಕೊಡಲಿ ಹಿಂದ ಒಕ್ಕಲಿಗದಲ್ಲಿ ಸೇರ್ಪಡೆಯಾಗಿರೆಂದೂ ಅದರಲ್ಲೇ ನಿಜಾಮರ ಹಾಗೂ ಮುಸಲ್ಮಾನರ ಹಿತವಿದೆಂದೂ ಇಲ್ಲಿಯ ನವಾಯತ ಬಂಧುಗಳು ನಿಜಾಮರಿಗೆ ತಂತಿ ಒಂದು ಕಳಿಸಿದ್ದಾರೆ ಕಾಶಿಮ ರಿಝ್ವಿಯ ಭಾಷಣಗಳು ಮುಸಲ್ಮಾನರ ಸಂಸ್ಕೃತಿಗಳಿಗೆ ವಿರುದ್ಧವಿರುತ್ತವೆಂದೂ ನವಾಯತ ಬಂಧುಗಳ ಅಂಬೋಣವುಂಟು

ಈಗ ಸೀಧಾ-ಅಂಗಡಿಯಲ್ಲಿ ಕಾರ್ಡ್ ತೋರಿಸಬೇಕೆಂಬ ಒತ್ತಾಯವಿಲ್ಲ. ಅವನ್ನು ಬೇಕಾದವರು ಒಯ್ಯಬಹುದ ; ಬೇಡದಿದ್ದವರು ಒಯ್ಯದಿರಬಹುದು ಅವುಗಳ ಬದಲು ಅಕ್ಕಿ ಗೋದಿಗಳು ವಾತ್ರ ಸಿಗುವದಿಲ್ಲ

ಅಗೋಸ್ತ ತಾ ೧೫ರಂದ ಒಂದು ವಾರ ಕೃಷ್ಣಾಜಿ ಗೋಪಾಲ ವಾರವೆಂದು ಆಚರಿಸಿ ಎಲ್ಲೆಲ್ಲೂ ಗಿಡ ಮರಗಳನ್ನು ನೆಡುವ ಕಾರ್ಯಕ್ರಮ ನಡಿಸಬೇಕೆಂದು ಹಿಂದುಸರಕಾರವು ಅಪ್ಪಣೆ ಮಾಡಿರುವಂತೆ ಆ ಕಾರ್ಯಕ್ರಮ ಹೇಗೆ ಯಶಸ್ವಿಗೊಳಿಸಬೇಕೆಂಬುದರ ಆಲೋಚನೆ ಮಾಡಲು ಕಳೆದ ಶನಿವಾರ ಮಧ್ಯಾಹ್ನ ಕಚೇರಿಯಲ್ಲಿ ಊರ ಪ್ರಮುಖರ ಒಂದು ಸಭೆ ನೆರೆತ್ತು

ಊರೊಳಗೆ ನಾಯಿಗಳ ಕಾಟ ಬಹಳವಾಗಿದೆ ಅವನ್ನು ನೀಗಿಸುವ ವ್ಯವಸ್ಥೆಯಾಗಬೇಕು

ಇಲ್ಲಿಯ ಮ್ಯುನಿಸಿಪಲ್ ಸೆಕ್ರೆಟರಿಗಳು ನಾಕೆದಾರರನ್ನು ಆತಿಶಯವಾಗಿ ದಣಿಸುತ್ತಾರಂತೆ ಕೆಲವು ನಾಕೆದಾರರು ದಿನಾಲೂ ೨೪ ತಾಸು ಧಂಧೆಯ ಬೀಳಿ! ಅವರು ಅಸ್ವಸ್ಥರಾಗಿ ರಜೆ ಬೇಡಿದರೂ ಸೆಕ್ರೆಟರಿಗಳು ಅವರಿಗೆ ರಜೆ ಕೊಡುವದಿಲ್ಲ! ಈ ಸೆಕ್ರೆಟರಿಗಳ ಹಾಗೂ ನಾಕಾ ಇನಸ್ಪೆಕ್ಟರರ ಆಪ್ತ ಮಿತ್ರರಾಗಿರುವ ನಾಕೆದಾರರು ಕೆಲಸಕ್ಕೆ ಬರದಿದ್ದರೂ ಅವರಿಗೆ ಕೇಳುವವರಿಲ್ಲ! ಕೆಲವು ನಾಕೆಗಳಲ್ಲಿ ರಾತ್ರಿಯಲ್ಲಿ ಯಾರೂ ಉಳಿಯುವದಿಲ್ಲ! ಆಗ ಬಂದ ಸರಕುಗಳಿಗೆ ಕರ ಮಾಫಿ! ನಗರ ತಾಂತರಿಗೆ ಈ ವಿಷಯಗಳು ಗೊತ್ತಿಲ್ಲೆಂದು ಹೇಳಬರದು ಊರಲ್ಲಿ ಇವರು ತಿರುಗಾಡುವಾಗ ಅವರು ನಾಕೆಗಳನ್ನು ನೋಡುವದಿಲ್ಲೆಂದು ಹೇಳುವದು ಹೇಗೆ? ಇಷ್ಟಿದ್ದರೂ ಅವರ ನಾಕೆಗಳ ಮತ್ತು ನಾಕೆದಾರರ ಸ್ಥಿತಿ ಸುಧಾರಿಸಲಿಕ್ಕೆ ಏನೇನೂ ಪ್ರಯತ್ನ ಮಾಡದಿದ್ದುದನ್ನು ನೋಡಿದರೆ ಈ ಮಹಾಶಯರು ಸೆಕ್ರೆಟರಿಗಳಿಗೆ ಸರ್ವಾಧಿಕಾರ ಕೊಟ್ಟಿರಬೇಕೆಂಬ ಅನುಮಾನ ಹೊರಡುತ್ತದೆ ಜಿಲ್ಲಾಧಿಕಾರಿ ಇತ್ತ ಗಮನಿಸಿ, ಬಡ ನಾಕೆದಾರರ ಕಷ್ಟಗಳನ್ನು ಪರಿಹರಿಸುವ ವ್ಯವಸ್ಥೆ ಮಾಡಬೇಕಾಗಿ ಓದುಗರೊಬ್ಬರು ಬಿನ್ನವಿಸುತ್ತಾರೆ

ಇಲ್ಲಿಯ ಸೆಂಟ್ರಲ್ ಎಕ್ಸಾಯಿಜ ಅಧಿಕಾರಿಗಳು ಕಚೇರಿಯ ಶಿಪಾಯಿಗಳಿಗೆ ತಮ್ಮ ಮನೆ ಕೆಲಸ ಮಾಡಲು ಹೇಳುತ್ತಾರೆಂತಲೂ, ಶಿಪಾಯಿಗಳು ಆ ಕೆಲಸ ಮಾಡಲು ಒಪ್ಪದಿದ್ದರೆ ಮೇಲಧಿಕಾರಿಗಳಿಗೆ ಹೇಳಿ ಕೆಲಸದಿಂದ ತೆಗೆದುಹಾಕಿಸುತ್ತೇವೆಂದು ಬೆದರಿಸುತ್ತಾರೆಂತಲೂ ಒಂದು ದೂರುಂಟು ಮೇಲಧಿಕಾರಿಗಳು ಈ ವಿಷಯವೇನೆಂದು ಚೌಕಶಿ ಮಾಡಬೇಕು

ಮುಂಡೇಶ್ವರ— (ತಾ ೩-೮ ೪೮) ನಿನ್ನೆ ಇಲ್ಲಿಯ ಒಂದು ಜವಳಿ ಅಂಗಡಿಯ ಬೀಗ ಮುರಿದು ಕಳವು ಮಾಡಿ, ಕಳ್ಳರು ಒಳಗಿದ್ದ ಕೆಲವು ಅರಿವೆಯನ್ನು ಮೂಟೆಕಟ್ಟಿಕೊಂಡು ಹೋಗುತ್ತಿದ್ದಾಗ ಅದೇ ಹೊತ್ತಿಗೆ ಅವರ ದುರ್ದೈವದಿಂದ ಇಬ್ಬರು ದೀಪ ತಕ್ಕೊಂಡು ಅದೇ ದಾರಿಯಿಂದ ಬರುತ್ತಿದ್ದವರು ಕಂಡು ಬಂದರು ಆಗ ಕಳ್ಳರು ತಲೆಯ ಮೇಲಿದ್ದ ಗಂಟನ್ನು ಮಾರ್ಗದಲ್ಲೇ ಬೀಸಾಡಿ ಪಲಾಯನ ಮಾಡಿದರಂತೆ. ಕಳ್ಳರು ಒಗೆದ ಗಂಟಿನಲ್ಲಿ ಅರಿವೆಯಿದ್ದುದನ್ನು ಕಂಡು ದೀಪ ತಂದ ಗೃಹಸ್ಥರು ಅಂಗಡಿಯ ಮಾಲಕರಿಗೆ ತಿಳಿಸಿದರು ಪೋಲೀಸರು ಈ ಕಳವಿನ ಚೌಕಶಿ ನಡಿಸಿದ್ದಾರೆ

ಫೌಂಟನ್-ಪೆನ್ನು.

ತಾ ೪-೮-೧೯೪೮ನೇ ಮುಂಜಾನೆ ೧೦-೧೧॥ ಕ್ಕೆ ನಾನು ಕಾವ ಟಿ. ಟಿಪಾಲಕಟ್ಟೆಗೆ ಹೋದಾಗ ಯಾರೋ ನನ್ನ "ಎವ್ವ ಶಾರ್ಪ" ಫೌಂಟನ-ಪೆನ್ನು ಆಕಕೊಂಡಿದ್ದಾರೆ ಕೆಲಸ ತೀರಿದ ಮೇಲೆ ಅವರು ಪೆನ್ನು ತಿರುಗಿ ಕೊಡಲಿಲ್ಲ. 'ಮರೆತು ಹೋಗಿರಬೇಕೆಂದು ನನ್ನ ತರ್ಕ, ಅವರು ಆ ಪೆನ್ನು ತಿರುಗಿ ತಂದು ಕೊಟ್ಟರೆ ಉಪಕಾರ ನಾದೀತು ಈ ಪೆನ್ನಿನ ಮಾಹಿತಿ ಕೊಟ್ಟವರಿಗೆ ರೂ ೫ ಇನಾಮು ಕೊಡಲಾಗುವದು

ಜಗನ್ನಾಥ ಹರಿಹರ ಶಾನಭಾಗ ಹೆಗಡೆಕರ,
ಕೊಪ್ಪಳಕರವಾಡಿ ಕುಮಟಾ.

ಸಾದರ ಸ್ವೀಕಾರ.

ಸಾಧನೆ— ಕಳೆದ ವೈಶಾಖದಿಂದ ಹೊನ್ನಾವರದಿಂದ ಹೊರಡುತ್ತಿರುವ ಪಕ್ಷ ಪತ್ರಿಕೆಯಿದು, "ಶ್ರೀಧರ ಮುದ್ರಣಾಲಯ" ದ ಒಡೆಯರಾದ ರಾ॥ ಗಣಪತಿ ಶಂಕರ ಭಟ್ಟ ಸರ್ಪಕಚೇರಿಕ್ವರ ಇವರು ಈ ಪತ್ರಿಕೆಯ ಮುಖ್ಯ ಪ್ರಧಾನ ಸಂಪಾದಕರಿರುತ್ತಾರೆ. ರಾ॥ ರಾ॥ ವಿಘ್ನೇಶ್ವರ ಶರ್ಮಾ ತದ್ದಲಸೆ ಮತ್ತು ಶಂಭುಶಾಸ್ತ್ರಿ ನಾಜಗಾರ ಇವರು ಉಪಸಂಪಾದಕರಿರುತ್ತಾರೆ! ವಾರ್ಷಿಕ ವರ್ಗಣಿ ಸ್ಥಳಕರಿಗೆ ರೂ ೩, ಪರಸ್ಥಳಕರಿಗೆ ರೂ ೩॥ ಈ ತನಕ ಈ ಪತ್ರಿಕೆಯ ೫ ಸಂಚಿಕೆಗಳು ಹೊರಬಿದ್ದಿವೆ ಪ್ರತಿ ಸಂಚಿಕೆಯಲ್ಲಿ ೧೨"×೯" ಇಂಚು ಆಕಾರದ ೧೪ ಪುಟಗಳಿರುತ್ತವೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿವಿಧ ವಿಷಯಗಳ ಮೇಲೆ ಸುರಸ ಲೇಖನಗಳೂ ಕೆಲವೊಮ್ಮೆ ಜಾರವಾರ್ಥಿಕ ಬರೆವಣಿಗೆಗಳೂ ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ ಪತ್ರಿಕೆಗಳ ಕೊರತೆಯಿರುವ ನಮ್ಮ ಜಿಲ್ಲೆಯಲ್ಲಿ "ಸಾಧನೆ"ಗೆ ತುಂಬ ಪ್ರೋತ್ಸಾಹ ಸಿಗುವದೆಂದು ಆಶಿಸುತ್ತೇವೆ

ನೋಟೀಸು.

ಅಂಕೋಲಾ ರೇಂಜಿನ ಬಾಳೇಗುಳಿಯಲ್ಲಿ ಎರಡು ಗಾರ್ಡ ಜನರ ಸಲುವಾಗಿ ನಾಕಾ ಕಟ್ಟುವ ಬಗ್ಗೆ ಟೆಂಡರು ಕರೆಯಲಾಗಿದೆ ಈ ಕೆಲಸದ ಬಗ್ಗೆ ಮಂಜೂರಾದ ಅಂದಾಜು ಹಣ ರೂ ೫೩೬೧/- ಇರುತ್ತದೆ. ಟೆಂಡರನ್ನು ರಜಿಸ್ಟರ್ ಇಲ್ಲವೆ ಎಕ್ಸಪ್ರೆಸ ಡಿಲಿವ್ಹರಿ ಪೋಸ್ಟ ಮೂಲಕ ರೂ ೨೫೦ ಮುಚ್ಚಳ ಠೇವು ಜಮಾ ಮಾಡಿದ ಟ್ರೆಝರಿ ಚಲನ ಸಹಿತ ತಾ ೨೧-೮-೪೮ ನೇ ದಿವಸ ಮಧ್ಯಾಹ್ನ ೧೨ ಘಂಟೆಯೊಳಗಾಗಿ ಕಾರವಾರದಲ್ಲಿ ಕೆಳಗೆ ಸಹಿ ಮಾಡುವವರಿಗೆ ಮುಟ್ಟುವಂತೆ ಕಳಿಸಬೇಕು ಕೆಲಸವನ್ನು ಮುಗಿಸಬೇಕಾದ ಅವಧಿ ತಾ ೨೮-೨-೧೯೪೯

ಟೆಂಡರನ್ನು ಕೆಳಗೆ ಸಹಿ ಮಾಡುವವರ ಆಫೀಸಿಂದ ಪಡೆಕೊಂಡ ಛಾಪಿ ಫಾರ್ಮಿನಲ್ಲೇ ಕಳಿಸತಕ್ಕದ್ದು

ಹೆಚ್ಚಿನ ವಿವರಗಳನ್ನು ಕೆಳಗಿನವರಿಂದ ಪಡೆಯಬಹುದು.

ಕಾರವಾರ,
ತಾ ೩-೮-೧೯೪೮

ಬಿ. ಎಫ್. ಬ್ರಿಟೋ,
ಡಿವ್ಹಿಜನಲ್ ಫೊರೆಸ್ಟ ಆಫೀಸರ
ಪಶ್ಚಿಮ ಭಾಗ, ಕಾನಡಾ

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ಏಜಂಟರ ಮುಂದಾಗಿ ಬರಕೊಂಡಲ್ಲಿ ಯೋಗ್ಯರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮತಾನುಸಾರ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತು ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಸತ್ತ್ರಗಲ್ಲಿ, ಬನಾರಸ

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನಾಯಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: ೧೯೨೯ — ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ —
Post Box No 10,
UDIPI, S Kanara

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ಸ್ವಾತಂತ್ರ್ಯ-ವರ್ಧಂತಿಯ ಸಂಚಿಕೆ.

Reg. No. B. 1270. Monday, 16-8-1948.

ಕಾನಡಾವೃತ್ತ

ವರ್ಷ ೪೦.] THE KANARA NEWS. [ಸಂಚಿಕೆ ೭.

ಕುಮಟಾ:- ಸೋಮವಾರ, ಶ್ರೀಮನ್ನೃಪ ಶಾಲಿವಾಹನ ಶಕೆ ೧೮೭೦ ಸರ್ವಧಾರಿ ಸಂ|| ಶ್ರಾವಣ ಶು|| ೧೨ ತಾ ೧೬—೮—೧೯೪೮

ಜಯ ಹಿಂದ! ಹಿಂದ-ಸ್ವಾತಂತ್ರ್ಯದೇವಿಗೆ ವಿಜಯವಾಗಲಿ!

ನಿನ್ನೆ ಆಗೋಸ್ತ ೧೫ನೇ ದಿನಾಂಕ ಒಂದು ವರುಷದ ಹಿಂದೆ ಇದೇ ದಿನ ಹಿಂದುಸ್ಥಾನವು ಮಹಾತ್ಮರ ಪುಣ್ಯ-ಪ್ರಭಾವದಿಂದ ಸ್ವತಂತ್ರವಾಗಿ, ಅಂದು ನಮ್ಮ ಪಂಡಿತ ಜವಾಹಿರಲಾಲ ನೆಹರೂರವರು ಹಿಂದುಸ್ಥಾನ ಸರಕಾರದ ಮುಖ್ಯ ಪ್ರಧಾನರಾದರು, ಬ್ರಿಟಿಶ ಸರಕಾರದ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟ ಮೌಂಟಬೆಟನ್ ದೊರೆಗಳು ಪ್ರಜೆಗಳ ಪ್ರತಿನಿಧಿಗಳಾಗಿ ವರ್ತಿಸುವ ಪ್ರತಿಜ್ಞೆಯನ್ನು ಮಾಡಿದರು. ಅಂದಿನಿಂದ ಹಿಂದುಸ್ಥಾನದೊಳಗೆ ಹಿಂದ ಸ್ವಾತಂತ್ರ್ಯ-ದೇವಿಯ ರಾಜ್ಯ ರೂಢವಾಗಿದೆ. ನಿನ್ನೆ ಭಾನುವಾರ ಸ್ವಾತಂತ್ರ್ಯ-ದೇವಿಯ ರಾಜ್ಯಾರೋಹಣದ ಮೊದಲನೇ ವರ್ಧಂತಿ ಈ ಮಹೋತ್ಸವವನ್ನು ಸಕಲ ಹಿಂದೀ ಜನಾಂಗದವರು ಸಂಭ್ರಮದಿಂದ ನೆರವೇರಿಸಿದ್ದಾರೆ. ಅಶೋಕ-ಚಕ್ರಾಂಕಿತ ರಾಷ್ಟ್ರಧ್ವಜವನ್ನು ಅಲ್ಲಲ್ಲಿ, ಎಲ್ಲೆಲ್ಲಿ, ಎಲ್ಲಿ ನೋಡಿದರಲ್ಲಿ, ಹಾರಿಸಿ, ಸ್ವಾತಂತ್ರ್ಯ-ದೇವಿಯ ವರ್ಧಂತಿಯಿಂದ ದೇಶದಲ್ಲಿ ಉಂಟಾದ ಉತ್ಸಾಹಾತಿಶಯವನ್ನು ತೋರ್ಪಡಿಸಿದ್ದಾರೆ. ವೃಕ್ಷಾರೋಪಣ-ವೃಕ್ಷವೃದ್ಧಿಯೊಡನೆ ನಮ್ಮೀ ಸ್ವತಂತ್ರ ಜನಾಂಗದ ವೃದ್ಧಿ, ಸೃಷ್ಟಿಕರ್ತನ ಅನುಗ್ರಹದಿಂದ, ಸ್ವಾಭಾವಿಕವಾಗಿ, ಸ್ಥಿರವಾಗಿ ಒದಗಿಬರಲೆಂದೂ ಸಕಲರ ಅಭಿವೃದ್ಧಿಯಾಗಲೆಂದೂ ಪ್ರಾರ್ಥಿಸಿಕೊಂಡಿದ್ದಾರೆ. ಹೊಸದಾಗಿ ಪ್ರಾರಂಭವಾದ ಸ್ವಾತಂತ್ರ್ಯದ ಮನ್ವಂತರದಲ್ಲಿ ಸ್ವದೇಶದ ಉನ್ನತಿ-ಅಭ್ಯುದಯಗಳು ವಿಶೇಷ ವಿಜೃಂಭಣೆಯಿಂದ ಸಾಗಲೆಂದೂ ಸಕಲರ ಪ್ರಾರ್ಥನೆಯುಂಟು.

ಇಂದಿನ ವರ್ಧಂತಿ ಮಹೋತ್ಸವದ ಸಮಯದಲ್ಲಿ ಸ್ವಾತಂತ್ರ್ಯದೇವಿಗೆ ಒಂದು ದೊಡ್ಡ ವ್ಯಸನವಾಗಿದೆ. ಸ್ವಾತಂತ್ರ್ಯದೇವಿಯ ನಿತಾಂತ ಉಪಾಸಕರಾದ, ಅವಳ ಪ್ರತಿಷ್ಠಾಪನೆಗಾಗಿ ತನು-ಮನ-ಧನವನ್ನು ಅರ್ಪಿಸಿದ ಆ ಪುಣ್ಯಾತ್ಮ, ಆ ಮಹಾತ್ಮ ಪರಮಪೂಜ್ಯ ಗಾಂಧಿಜಿಯವರ ಮೋಹನ ಮೂರುತಿಯು ಕಾಣದಿದ್ದ ಬಗ್ಗೆ ಸಕಲರೂ ಖಿನ್ನಮನಸ್ಕರಾಗುವರು. ನಮ್ಮ ಮಹಾತ್ಮನು ವಿಧಿಘಟನೆಯಂತೆ ಗುಂಡಿನೇಟಿಗೆ ಬಲಿಬಿದ್ದನೇನೋ ಅಹುದು, ಮಹಾತ್ಮರ ಇಚ್ಛೆಯಂತೆ ಮತ್ತು ದೈವಸಂಕಲ್ಪದಂತೆ ಅವರ ಅಂತವಾಗಿದೆ. ಸ್ವದೇಶ ಸ್ವಾತಂತ್ರ್ಯವನ್ನು ಸಂಪಾದಿಸಿ ಕೊಟ್ಟ ಬಳಿಕ ತಮ್ಮ ಕಾರ್ಯಭಾಗ ಮುಗಿಯಿತೆಂದು ಅವನೆಣಿಸಿ ಇಹಲೋಕದ ತ್ಯಾಗ ಮಾಡಿದ್ದನೇನೋ ಅಹುದು, ಆದರೆ ನಮ್ಮಂಥ ಅಜ್ಞಾನಿಗಳಿಗೆ ಮಹಾತ್ಮರ ಅಪೇಕ್ಷೆ ತಿಳಿಯದೆ ನಾವು ದುಃಖಿತರಾಗುತ್ತೇವೆ. ಮಹಾತ್ಮರು ಈಗ ಸ್ವರ್ಗದಲ್ಲಿದ್ದರೂ ದೇಶಬಾಂಧವರ ಸಂಭ್ರಮ ನೋಡಿ ಅವರು ಇಂದು ಸಂತೋಷಸಾಮ್ರಾಜ್ಯದಲ್ಲಿ ತೇಲಾಡುವರೆಂದೂ ಅವರ ನಗೆ-ಮೊಗ ಪ್ರಫುಲ್ಲಿತವಾಗಿ ನಮಗೆಲ್ಲರಿಗೆ ಹರಸುವರೆಂದೂ ನಾವು ಭಾವಿಸಿ ಆ ಪುಣ್ಯವಂತ ಅಹಿಂಸಾ-ಮೂರುತಿಗೆ ವಂದನೆಗಳನ್ನು ಅರ್ಪಿಸಿ, ನಮ್ಮೆಲ್ಲರನ್ನು ಆಶೀರ್ವದಿಸಿ ಕೃತಕೃತ್ಯ ಮಾಡಬೇಕಾಗಿ, ಅನನ್ಯಭಾವದಿಂದ, ತಲೆಬಾಗಿ, ಕೈ ಜೋಡಿಸಿ ಪ್ರಾರ್ಥಿಸಿಕೊಳ್ಳುತ್ತೇವೆ. ಮಹಾತ್ಮರ ಸತ್ಯಸಂಧತೆ, ಅಹಿಂಸಾಪ್ರವೃತ್ತಿ ನಿಃಸ್ಪೃಹತೆಗಳನ್ನು ನಮ್ಮ ದೇಶದ ಜನತೆಯಲ್ಲಿ, ಪ್ರಾಮುಖ್ಯವಾಗಿ ಜನಪ್ರಮುಖರಲ್ಲಿ, ವಿಶೇಷವಾಗಿ ಕೊಂಗ್ರೆಸ ಕಾರ್ಯಕರ್ತರಲ್ಲಿ ಅನುಗ್ರಹಿಸಬೇಕಾಗಿ ನಾವು ಪರಮಾತ್ಮನಲ್ಲಿ ಸೆರಗೊಡ್ಡಿ ಪ್ರಾರ್ಥಿಸಿಕೊಳ್ಳುತ್ತೇವೆ.

ಸ್ವಾತಂತ್ರ್ಯ-ವರ್ಧಂತಿ ಮಹೋತ್ಸವದ ಸಮಯ ನಮ್ಮ ಆತ್ಮನಿರೀಕ್ಷಣೆಯಾಗುವದು ಸ್ವಾಭಾವಿಕವಾದದ್ದು. ಉನ್ನತಿ ಹೊಂದಬಯಸುವವನು ಕಾಲಕಾಲಕ್ಕೆ ಆತ್ಮನಿರೀಕ್ಷಣ ಮಾಡಿಕೊಂಡು ತನ್ನಲ್ಲಿ ಅಡಗಿಕೊಂಡಿದ್ದ ದೋಷವನ್ನು ಪರಿಶೋಧಿಸಿ ನೋಡಿದ ಹೆಚ್ಚೇಕು ತಪ್ಪು ದೋಷಗಳನ್ನು ಕಾಣಾಗಿ ಬೈಲಿಗೆಳೆದು ಪರಿಹಾರ ಮಾಡಿಕೊಳ್ಳಬೇಕು. ಮಹಾತ್ಮರು ಉಚ್ಚ ತರಗತಿಗೆ ಸೇರಲಿಕ್ಕೂ, ಜನಾಂಗದ ಸ್ವಾತಂತ್ರ್ಯವನ್ನು ಸಾಧಿಸಲಿಕ್ಕೂ ಅವರು ಸತತವಾಗಿ ನಡಿಸುತ್ತಿದ್ದ ಆತ್ಮನಿರೀಕ್ಷಣೆಯೇ ಕಾರಣವೆಂದು ನಮೂದಿಸುವದನವಶ್ಯಕ. ರಾಷ್ಟ್ರೀಯ ಸಭೆಯಲ್ಲಿ ಅನೇಕರು ರಾಜ್ಯಭಾರವನ್ನು ಕೈಕೊಂಡು ಜನಹಿತಕ್ಕಿಂತ ಸ್ವಂತ ಸ್ವಾರ್ಥವನ್ನು ಸಾಧಿಸಿದರೆಂಬದೊಂದು ಲೋಕಾಪವಾದವುಂಟು. 'ಹರಿಜನ' ಪತ್ರಿಕೆಯ ಸಂಪಾದಕರಾದ ಶ್ರೀ|| ಕಿಶೋರಿಲಾಲ ಮಶ್ರುವಾಲಾರವರು ರಾಷ್ಟ್ರೀಯ ಸಭೆಯ ಸರಕಾರಗಳಲ್ಲಿ ನಡೆದ ಸ್ವಾರ್ಥದ ಪ್ರಕಾರಗಳನ್ನು ನಮೂದಿಸಿ, ರಾಷ್ಟ್ರೀಯ ಸಭೆಯ ಪುನರ್ಘಟನೆ ಮಾಡುವ ಬಗ್ಗೆ ಸೂಚನೆಗಳನ್ನು ಮಾಡಿದ್ದಾರೆ. ರಾಷ್ಟ್ರೀಯ ಸಭೆಯವರು ಅಧಿಕಾರಲೋಲುಪರಾಗಿರುವರೆಂದೂ, ಹಿಂದೆ ಕಾಲವಶಾತ್, ಪ್ರಸಂಗವಶಾತ್ ಅಥವಾ ಪರಿಸ್ಥಿತಿ-ವಶಾತ್ ಪ್ರಾಪ್ತವಾದ ಕಷ್ಟ-ನಷ್ಟಗಳನ್ನು ಬುದ್ಧಿಪೂರ್ವಕವಾಗಿ ನಡಿಸಿದ ತಮ್ಮ ಸ್ವಾರ್ಥತ್ಯಾಗವೆಂದು ಎಣಿಸಿ, ಆ ಬಂಡವಲಿನ ಆಧಾರದ ಮೇಲೆ ಸಂಪಾದನೆ ಮಾಡತೊಡಗಿದ್ದಾರೆಂದೂ ಶ್ರೀ|| ಕಿಶೋರಿಲಾಲರು ನಿರ್ದಾಕ್ಷಿಣ್ಯದಿಂದ ಬರೆದಿದ್ದಾರೆ. ಮಂತ್ರಿಗಳಂಥ ದೊಡ್ಡ ದೊಡ್ಡ ಮಾರ್ಗದರ್ಶಕ ಅಧಿಕಾರಿಗಳು ಸಹ ಸ್ವಾರ್ಥಲೋಲುಪರಾಗಿದ್ದಾರೆ. ರಾಷ್ಟ್ರೀಯ ಸಭೆಯು ಈತನಕ ಪ್ರಚಾರಗೊಳಿಸಿದ ರಾಷ್ಟ್ರಸೇವಾ-ಧರ್ಮಕ್ಕೂ, ಈಗಿನ ಲೋಕರಾಜ್ಯಕರ್ತರು ನಡಿಸಿರುವ ರಾಜ್ಯಭಾರದ ನಡಾವಳಿಗೂ ಮೇಳಗೂಡುವದಿಲ್ಲ!

ಕೊಂಗ್ರೆಸ ಸರಕಾರಗಳು ಈವಾಗ ಬೇರೆ ಬೇರೆ ಕಾನೂನುಗಳನ್ನು ಏರ್ಪಡಿಸಿ ಜನಾಂಗವನ್ನು ಉದ್ಧರಿಸತೊಡಗಿದ್ದಾವೆ. ಹರಿಜನ ಸಮಾಜದ ಉನ್ನತಿ, ಮದ್ಯಪಾನೋಚ್ಚಾಟನ, ಒಕ್ಕಲಿಗರ ಅಭಿವೃದ್ಧಿ, ಸ್ತ್ರೀಯರ ಅಭ್ಯುದಯ ಇವೇ ಮೊದಲಾದ ಧ್ಯೇಯಗಳನ್ನು ಸಾಧಿಸಲು ಬೇರೆ ಬೇರೆ ಕಾನೂನುಗಳು ರಚಿಸಲ್ಪಡುತ್ತಿವೆ. ಈ ಕಾನೂನುಗಳಿಂದ ಜನರೊಳಗೆ ಏಕಮತ್ಯ-ಸಹಕಾರ-ಸ್ನೇಹ-ಸೌಹಾರ್ದಗಳು ಬೆಳೆಯುವ ಬದಲಿಗೆ, ವರ್ಗ-ಕಲಹ-ವೈಷಮ್ಯಗಳುಂಟಾಗಿರುವದರಿಂದ ಈ ಕೊಂಗ್ರೆಸ ಸರಕಾರಗಳ ಆಡಳಿತೆ ಶೀಘ್ರ ಅಂತ್ಯವಾಗಲೆಂದು ಬಹಳ ಜನರು ಅಪೇಕ್ಷಿಸಹತ್ತಿದ್ದಾರೆ. ಸ್ವಾತಂತ್ರ್ಯದ ಜನ್ಮಕಾಲದಲ್ಲಿ ದೇಶವಿಭಾಗವಾಗಿ ಲಕ್ಷಗಟ್ಟಲೆ ಜನರು ಮನೆಮಾರು ಕಳಕೊಂಡು ನಿರ್ಗತಿಕರಾದರು. ಅವರೆಲ್ಲರನ್ನು ನಮ್ಮ ದೇಶದೊಳಗೆ ನೆಲಿಸುವದೊಂದು ಸಮಸ್ಯೆಯುಂಟಾಯಿತು. ಅಧಿಕಾರಲೋಲುಪರಾಗಿರುವ ಬಹಳ ಕೊಂಗ್ರೆಸ ಪ್ರಮುಖರು ತಮ್ಮ ತಮ್ಮ ಸ್ವತಂತ್ರ ರಾಜ್ಯ ನಿರ್ಮಿಸಿಕೊಳ್ಳಲು ಹವಣಿಸಿ ಭಾಷಾನುಗುಣ ಪ್ರಾಂತ-ಪುನರ್ಘಟನೆಯ ಆಂದೋಲನವನ್ನು ಹೂಡಿದ್ದಾರೆ. ಜೊತೆಗೆ ದೇಶತುಂಬ ಅಲ್ಲಲ್ಲಿ ಹರಡಿಕೊಂಡಿದ್ದ ಸಂಸ್ಥಾನಗಳ ಸಮಸ್ಯೆಯುಂಟಾಯಿತು. ಬ್ರಿಟಿಶರು ಹಿಂದುಸ್ಥಾನವನ್ನು ತೊಲಗಿ ಹೋದೊಡನೆ ಬ್ರಿಟಿಶರ ಸಾರ್ವಭೌಮತನ ಹಿಂದುಸ್ಥಾನ ಸರಕಾರದಲ್ಲಿ ಲೀನವಾಗದೆ ಸಮ್ರಾಟ ಜಾರ್ಜ ಭೂಪತಿಗಳಲ್ಲಿ ಲೀನವಾಗಿ ಮಾಯವಾಯಿತೆಂದೂ, ತಾವು ಸ್ವತಂತ್ರ ರಾಜ್ಯವುಳ್ಳವರಾದೆವೆಂದೂ, ಸ್ವೇಚ್ಛೆಯಂತೆ ವರ್ತಿಸಲು ತಮಗೆ ಅಧಿಕಾರ ಉಂಟೆಂದೂ ಬಹಳ ಸಂಸ್ಥಾನಿಕರು ವಾದಿಸಿ ನಮ್ಮ ಸ್ವಾತಂತ್ರ್ಯದೇವಿಯನ್ನು ನಿರ್ಬಂಧಿಸಲೆಳಸಿದ್ದರು. ಜುನಾಗಢದ ನವಾಬರು ಮೊಟ್ಟಮೊದಲು ದೊಂಬಿಯ ಪತಾಕೆಯನ್ನು ಎತ್ತಿದರು! ಆದರೆ ಸಂಸ್ಥಾನ ಖಾತೆಯ ಸಚಿವರಾದ ಸರದಾರ ವಲ್ಲಭಭಾಯಿ ಪಟೇಲರು ಕುಶಲತೆಯಿಂದ ಜುನಾಗಢವನ್ನೂ, ಬಡೋದಾ, ಇಂದೂರ, ಗ್ವಾಲ್ಹೇರ, ಮೈಸೂರ ಪ್ರಭೃತಿ ಸುಮಾರು ೬೦೦ ಸಂಸ್ಥಾನಗಳನ್ನೂ ನಮ್ಮ ಸ್ವತಂತ್ರ ಹಿಂದ-ಜನಾಂಗದಲ್ಲಿ ಸೇರ್ಪಡಿಸಿಕೊಂಡು ಹಿಂದುಸ್ಥಾನವನ್ನು ಭದ್ರಗೊಳಿಸಿದ್ದಾರೆ. ಹಿಂದದೇಶ ಸ್ವತಂತ್ರವಾದ ೧ ವರ್ಷದೊಳಗೇ ಈ ಪರಿಣತಿಯನ್ನು ಒದಗಿಸಿ ಕೊಂಡ ಬಗ್ಗೆ ನಾವು ಸರದಾರ ವಲ್ಲಭಭಾಯಿ ಪಟೇಲರಿಗೆ ಅಂತಃಕರಣಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಕಾಶ್ಮೀರ ಸಂಸ್ಥಾನದ ಜನರು ಹಿಂದುಸ್ಥಾನದಲ್ಲಿ ಸೇರ್ಪಡೆ ಹೊಂದುವ ನಿರ್ಣಯ ಮಾಡುವವೆಂಬದು ಖಂಡಿತ. ಅದನ್ನು ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಲು ಪಾಕಿಸ್ತಾನದ ಸರ್ವಸೂತ್ರಧಾರಿಗಳಾದ ಬ್ಯಾ|| ಜಿನ್ನಾರವರು ನಡಿಸಿದ ಕಾರಸ್ಥಾನವೆಲ್ಲ ಈಗ ಬಯಲಾಗಿದೆ. ಕಾಶ್ಮೀರದೊಳಗೆ ಆಝಾದ ಕಾಶ್ಮೀರ ಸರಕಾರದ ವೇಷವೆಲ್ಲ ಇಳಿದುಹೋಗಿ, ಪಾಕಿಸ್ತಾನದ ಸೈನ್ಯವು ಈಗ ಕಾಶ್ಮೀರದ ಸಂಗ್ರಾಮ-ಭೂಮಿಯಲ್ಲಿ ಹೋರಾಡುತ್ತದಾಗಿ ಬಹಿರಂಗವಾಗಿದೆ. ಬ್ಯಾ|| ಜಿನ್ನಾರವರ ಪ್ರಕೃತಿ ನೆಟ್ಟಗಿಲ್ಲದ್ದರಿಂದ ಅವರು ಉಪಚಾರಕ್ಕಾಗಿ ಯುರೋಪ ಖಂಡದೊಳಗೆ ಯಾವದೊಂದು ಆರೋಗ್ಯಧಾಮಕ್ಕೆ ಹೋಗಲಿದ್ದಾರೆಂದೂ, ಅವರ ಅಭಾವದಲ್ಲಿ ಪಂಜಾಬದ ಬ್ರಿಟಿಶ ಗವ್ಹರ್ನರ

ಕೊಂಗ್ರೆಸ್ಸಿಗರು ಸ್ವಾರ್ಥಸಾಧನೆ ಬಿಡದಿದ್ದರೆ ಸ್ವಾತಂತ್ರ್ಯದಿಂದ ಲಾಭವೇನು?

ಹಿಂದ ಮಾತೆಗೆ ಸ್ವಾತಂತ್ರ್ಯ ದೊರಕಿಸಿ ಕೊಟ್ಟ ಕಣ್ಣಾರಿಯಾದ
ಮಹಾತ್ಮಾ.



ಸ್ವತಂತ್ರ ಭಾರತದ ರಾಜಮುದ್ರೆ



ಸ್ವತಂತ್ರ ಭಾರತದ ರಾಜ್ಯಧುರೆಯನ್ನು ವಿಶ್ವಸಮ್ಮತ ರೀತಿಯಲ್ಲಿ ನಡಿಸುವ
ಪ್ರಧಾನ ಅಮಾತ್ಯರು.

ಸರ್ ಫ್ರೆನ್ಸಿಸ್ ಮುಡಿ ಇವರು ಸರ್ವಾಧಿಪತಿಗಳಾಗುವರೆಂದೂ ಹೇಳುತ್ತಾರೆ. ಬ್ರಿಟಿಶ ಸರಕಾರವು ಪಾಕಿಸ್ತಾನದ ಅತಿಕ್ರಮಗಳನ್ನು ಬಹಿರಂಗವಾಗಿ ಪುರಸ್ಕರಿಸಲು ನಾಚುತ್ತಿರುವದರಿಂದ, ಕಾಶ್ಮೀರ ಹೋರಾಟದೊಳಗಿನ ಪಾಕಿಸ್ತಾನದ ಅಂಗ ತಾನಾಗಿ ಬಯಲಾಗಿ, ಕಾಶ್ಮೀರ ಸಂಸ್ಥಾನ ನಮ್ಮ ಹಿಂದ-ಸ್ವಾತಂತ್ರ್ಯದೇವಿಯ ಶಾಸನಕ್ಕೆ ಬೇಗನೇ ಒಳಪಡುವದೆಂದು ನಾವು ಎಣಿಸಿ ಸ್ವಾತಂತ್ರ್ಯ-ದೇವಿಯನ್ನು ವಿನಮ್ರಭಾವದಿಂದ ಅಭಿನಂದಿಸುತ್ತೇವೆ. ಮೇಲಾಗಿ ಪಾಕಿಸ್ತಾನ ಸರಕಾರದಲ್ಲಿ ಈಗ ಕಸುವು ಕಡಿಮೆಯುಂಟು. ಗಡಿನಾಡಿನ ಪಠಾಣರು ಇನ್ನುಳಿದ ಮುಸಲ್ಮಾನರಿಗೆ ಅಂಕಿತರಾಗಿ ಉಳಿಯಲು ಎಷ್ಟಕ್ಕೂ ಸಿದ್ಧರಿಲ್ಲ. ಅಫಗಾಣಿಸ್ತಾನಕ್ಕೂ ಪಾಕಿಸ್ತಾನಕ್ಕೂ ತಿಕ್ಕಾಟವುಂಟು. ಗಡಿ-ಪ್ರದೇಶದಲ್ಲಿರುವ ಪಾಳೆಯಗಾರರು ಪಾಕಿಸ್ತಾನಕ್ಕೆ ಉಪದ್ರವ ಕೊಡತೊಡಗಿದ್ದಾರೆ. ಈ ಪಾಳೆಯಗಾರರನ್ನು ಬ್ರಿಟಿಶರು ಹಿಂದೆ ಲಂಚ ಕೊಟ್ಟು ಸಮಾಧಾನಪಡಿಸುತ್ತಿದ್ದರು. ಪಾಕಿಸ್ತಾನ ಸರಕಾರವು ಆ ಪಾಳೆಯಗಾರರಿಗೆ ಕಾಶ್ಮೀರಪ್ರದೇಶದೊಳಗೆ ಲೂಟಿ ಮಾಡಲು ಹುರಿದುಂಬಿಸಿ ಪರಸ್ಪರ ಸಮಾಧಾನ ಮಾಡಲೆತ್ನಿಸಿತು! ಆದರೆ ಹಿಂದೀ ಸೈನಿಕರು ಒಳ್ಳೇ ಪೆಟ್ಟು ಕೊಟ್ಟದ್ದರಿಂದ ಪಾಳೆಯಗಾರರು ಪಲಾಯನ ಮಾಡಿ ಈಗ ಪಾಕಿಸ್ತಾನವನ್ನು ದಣಿಸಲಾರಂಭಿಸಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಪಾಕಿಸ್ತಾನ ಸರಕಾರವು ಕಾಶ್ಮೀರವನ್ನು ತಾನಾಗಿ ಬಿಟ್ಟುಕೊಡುವದೆಂದೂ ಊಹಿಸಲಡ್ಡಿಯಿಲ್ಲ. ಆದರಿಂದ ಈಗ ಹಿಂದುಸ್ಥಾನಕ್ಕೆ ಉಪದ್ರವ ಕೊಡುವ ಒಂದೇ ಒಂದು ಸಂಸ್ಥಾನ ನಿಜಾಮರ ಹೈದರಾಬಾದ! ಈ ನಿಜಾಮರ ಅಳಿಗಾಲ ಸಮಯ ತೀರ ಸಮೀಪಿಸಿ ಬಂದಿದೆಯೆಂದು ದೂರದರ್ಶಿ ಭವಿಷ್ಯವಾದಿಗಳು ಹೇಳುತ್ತಾರೆ. ನಿಜಾಮರು ಯುದ್ಧದ ಭಾಷೆಯನ್ನು ಆಡುತ್ತಿದ್ದರೂ, ಪಂ|| ಜವಾಹಿರಲಾಲ ನೆಹರೂರವರು ನುಡಿದಂತೆ, ಹೈದರಾಬಾದವನ್ನು ಮಣಿಸಲಿಕ್ಕೆ ಯುದ್ಧದ ಸಂಭ್ರಮ ಅನವಶ್ಯಕ. ಪ್ರತ್ಯೇಕ ಹೈದರಾಬಾದ ರಾಜ್ಯದ ಆಯುರ್ದಾಯ ಈವಾಗ ಮುಗಿದಂತೆಯೇ! ೬೦೦ಕ್ಕೆ ಮಿಕ್ಕಿ ಸಂಸ್ಥಾನಗಳು ಒಂದರ ಹಿಂದೊಂದು ಸ್ವತಂತ್ರ ಹಿಂದ-ಜನಾಂಗದ ಮಹಿಮೆಯನ್ನೂ ಕಾಲಮಹಿಮೆಯನ್ನೂ ಅರಿತುಕೊಂಡು ಅದರಲ್ಲಿ ಲೀನವಾದಾಗ, ಹೈದರಾಬಾದವು ಸ್ವತಂತ್ರವಾಗಿ ಹ್ಯಾಗೆ ಉಳಿಯಬಲ್ಲದು? ಈ ಸಮಯದಲ್ಲಿ ಯುಧಿಷ್ಠಿರ ಮಹಾರಾಜರ ವಚನವೊಂದರ ನೆನಪಾಗುತ್ತದೆ. ಪ್ರತಿ ನಿತ್ಯವೂ ನೂರಾರು, ಸಾವಿರಾರು ಪ್ರಾಣಿಗಳು ಯಮಸದನವನ್ನು ಸೇರುತ್ತಿವೆ. ಆದರೂ ಉಳಿದವರು ತಾವು ಶಾಶ್ವತರೆಂದು ಮೆರೆಯುತ್ತಾರೆ! ಇದಕ್ಕಿಂತ ಸೋಜಿಗವೇನಿದೆಂಬುದು ಧರ್ಮರಾಯನ ಪ್ರಶ್ನೆ! ನಿಜಾಮರು ಕೂಡ ಕಾಲಮಹಿಮೆಯನ್ನು ಗ್ರಹಿಸಿ ಹಿಂದ-ಸ್ವಾತಂತ್ರ್ಯದೇವಿಯ ಸಾಮ್ರಾಜ್ಯದಲ್ಲಿ ಸೇರಿದರೆ ಅವರಿಗೆ ಕ್ಷೇಮವಾಗುವದು. ಹೀಗೆ ಎಲ್ಲ ಸಂಸ್ಥಾನಗಳು ಹಿಂದ-ಜನಾಂಗದಲ್ಲಿ ಸೇರ್ಪಡೆ ಹೊಂದಿ ಹಿಂದ-ರಾಜ್ಯವೃಕ್ಷವು ಕಸುವಿನಿಂದ ಬೆಳೆಯುವದೆಂಬ ಶುಭಲಕ್ಷಣಗಳು ತೋರುತ್ತವೆಂದು ನಾವು ಮೊದಲನೇ ಸ್ವಾತಂತ್ರ್ಯ-ವರ್ಧಂತಿಯ ಮಹೋತ್ಸವದ ಕಾಲಕ್ಕೆ ಆನಂದದಿಂದ ನಮೂದಿಸುತ್ತೇವೆ.

ಯಾವದೊಂದು ರಾಜ್ಯದ ಲೋಕಸುಧಾರಣೆಯನ್ನು ಮಹಾತ್ಮರು ಅಳತೆ ಮಾಡುವ ಅಳತೆಗೋಲೊಂದಿತ್ತು. ಜನಸಾಮಾನ್ಯರ ಅಶನ-ವಸನದ ಪೂರೈಕೆಯ ವ್ಯವಸ್ಥೆಯನ್ನು ರಾಜ್ಯಕರ್ತರು ಯಾವ ಪ್ರಮಾಣದಿಂದ ಮಾಡುತ್ತಾರೋ ಆ ಪ್ರಮಾಣದಿಂದ ಅವರ ರಾಜ್ಯಭಾರ ಇಷ್ಟವಾದದ್ದೆಂದು ಮಹಾತ್ಮರ ಅಂಬೋಣವಿತ್ತು. ಆ ದೃಷ್ಟಿಯಿಂದ ವಿಚಾರ ಮಾಡಿದರೆ, ಕಳೆದ ೧ ವರುಷದೊಳಗೆ ಜನಸಾಮಾನ್ಯರಿಗೆ ಅಷ್ಟೇನು ಸುಖವಾಗಿಲ್ಲ. ಇದನ್ನು ನಮೂದಿಸಲು ನಮಗೆ ಅತ್ಯಂತ ಖೇದವಾಗುತ್ತಿದೆ. ನಮ್ಮ ಹಿಂದ-ದೇಶ ಕೃಷಿಪ್ರಧಾನ ದೇಶ; ಸುವರ್ಣ-ಭೂಮಿಯೆಂದು ಲೋಕವಿಖ್ಯಾತಿ ಪಡೆದ ದೇಶ! ಇಂಥ ದೇಶದ ನಿವಾಸಿಗಳು ಸಾಕಷ್ಟು ಅಶನ-ವಸನಗಳಿಗಾಗಿ ಬಳಲಬೇಕಾಗಿದೆ! ಸರಕಾರವು ಹೇರಳ ಅನ್ನ-ಸಾಮಗ್ರಿಯನ್ನು ವಿದೇಶಗಳಿಂದ ತರಿಸಿದರೂ ಅನ್ನ-ಸಾಮಗ್ರಿಗಳ ಬರಗಾಲದ ಪೂರ್ಣ ಪರಿಹಾರ ಮಾಡಲು ಸಾಧ್ಯವಾಗಲಿಲ್ಲ. ಹೆಚ್ಚೆಚ್ಚು ಆಹಾರ ಬೆಳಸಬೇಕಾಗಿ ಮಾಡಿದ ಪ್ರಯತ್ನಗಳಿಗೆ ತಕ್ಕಷ್ಟು ಫಲ ದೊರೆತಿರುವದಿಲ್ಲ! ನಿಯಂತ್ರಣ-ಕಾಲದಲ್ಲಿ ಕಳ್ಳ ಪೇಟೆಗಳ ಹಾವಳಿ ಹೆಚ್ಚಾಯಿತೆಂದು ಸರಕಾರವು, ಮಹಾತ್ಮರ ಸಲಹೆಯ ಮೇರೆಗೆ, ನಿಯಂತ್ರಣವನ್ನು ಅಂತ್ಯಗೊಳಿಸಿತು. ಆ ಮೇಲೆ ಕೆಲ ಕಾಲ ಅನ್ನ-ಧಾನ್ಯಗಳ ದರಗಳು ಇಳಿಮುಖವಾದರೂ, ಕೆಲವು ದಿನಗಳಲ್ಲೇ ಅವು ಪುನಃ ಒಮ್ಮೆಲೇ ಏರತೊಡಗಿ, ಹಿಂದಿನ ಕಳ್ಳ ಪೇಟೆಯ ದರಗಳಿಗೆ ಹಿಂದೆಹಾಕಿ ಮುಂದಾಗತೊಡಗಿವೆ!! ಆದರಿಂದ ಬಡ ಜನರು ತೀರ ಕಂಗೆಟ್ಟಿದ್ದಾರೆ. ವಸನದ ಪಾಡೂ ಇದೇ! ಜವಳಿಯ ಮೇಲಿನ ನಿಯಂತ್ರಣ ರದ್ದಾದ ಬಳಿಕ ಗಿರಣಿಗಳವರು ಸರಕಾರದೊಡನೆ ಸಹಕರಿಸದೆ, ಅಂತರಂಗದಿಂದ ದರಗಳನ್ನು ಏರಿಸಿ ೩ ತಿಂಗಳಲ್ಲಿ ಇಡೀ ೧ ವರುಷದ ಲಾಭಾಂಶವನ್ನು ಗಳಿಸಿ ಬಹಳ ಕೊಬ್ಬಿದ್ದಾರೆ! ಅವರನ್ನು ನಿಯಂತ್ರಿಸುವದಕ್ಕಾಗಿ ಸರಕಾರವು ಪುನಃ ನಿಯಂತ್ರಣ ಹೇರಬೇಕಾಗಿದೆ. ಮನೆ-ಮಠಗಳ ಒಡೆಯರು ಭಾಡಿಗೆಯನ್ನು ಏರಿಸಿ ಬಡ ಭಾಡಿಗೆದಾರರನ್ನು ದಣಿಸಬಾರದೆಂದು ಏರ್ಪಡಿಸಿದ ಭಾಡಿಗೆ-ನಿಯಂತ್ರಣದ ಕಾನೂನಿನಿಂದ "ಪಾಗಡಿಯ ವ್ಯವಹಾರ" ನಿರ್ಮಾಣಹೊಂದಿ, ಭಾಡಿಗೆದಾರರಿಗೆ ಸಂಕಟವಾಗಿದೆ. ಋಣವಿಮೋಚನೆಯ ಕಾನೂನಿನಿಂದ ವ್ಯಾಜ್ಯಗಳಿಲ್ಲದಿದ್ದಲ್ಲಿ ವ್ಯಾಜ್ಯಗಳುದ್ಭವಿಸಿ, ಸಾಲಗಾರರೂ ಸಾವಕಾರರೂ ಕೋರ್ಟ-ಕಚೇರಿಗಳಲ್ಲಿ ಪೇಚಾಡುವ ಪ್ರಸಂಗ ಬಂದಿದೆ. ನಾಡಿನೊಳಗಿನ ಉತ್ಪತ್ತಿ ಬೆಳೆಸುವ ಉದ್ದೇಶದಿಂದ ಸರಕಾರವು ಒಕ್ಕಲತನದ ಕಾಯದೆಯನ್ನು ಘಟಿಸಿತು. ಈ ಕಾನೂನಿನಿಂದ ಒಕ್ಕಲಿಗರಿಗೆ ದೊರೆತ ಸಂರಕ್ಷಣೆಯಿಂದ ಒಕ್ಕಲಿಗರು ಸಂತುಷ್ಟರಾಗಿ ಉತ್ಪತ್ತಿ ಬೆಳಸುವರೆಂದೂ ಒಡೆಯರೊಡನೆ ಸಹಕಾರದಿಂದ ಉಳಿಯುವರೆಂದೂ ಸರಕಾರದ ಭಾವನೆಯಿತ್ತು. ಆದರೆ ಈ ಕಾನೂನಿನಿಂದ ಒಡೆಯರನ್ನು ವಂಚಿಸಲು ತಮಗೆ ಅವಕಾಶ ದೊರೆಯಿತೆಂದು ಒಕ್ಕಲಿಗರು ಭಾವಿಸಿ, ಒಡೆಯರೊಡನೆ ಇಲ್ಲದ ಕಲಹಗಳನ್ನೆಬ್ಬಿಸಿ, ಲೋಕದೊಳಗೆ ಗೊಂದಲವನ್ನೆಬ್ಬಿಸಿದ್ದಾರೆ! ಈ ಕಾನೂನಿನಿಂದ ವರ್ಗಕಲಹ ನಿರ್ಮಾಣ ಹೊಂದಿತೆಂದು ನ್ಯಾ|| ಮೂ|| ಲೋಕೂರ

...ರಂಥ ನಿರ್ಮಲಮನಸ್ಕರು ಅಭಿಪ್ರಾಯಪಟ್ಟಿದ್ದುಂಟು. ಉತ್ಪತ್ತಿಯನ್ನು ಬೆಳಸುವದಕ್ಕಿಂತ ಅದನ್ನು ತಗ್ಗಿಸಿ ಒಡೆಯರನ್ನು ದಣಿಸಬೇಕೆಂಬ ಧೋರಣ ಒಕ್ಕಲಿಗರ ಸಮಾಜದಲ್ಲಿ ಪ್ರಚುರಗೊಂಡಿದೆ! ಸ್ವಾತಂತ್ರ್ಯ-ದೇವಿಯ ರಾಜ್ಯಭಾರದಲ್ಲಿ ಇಂಥ ವಿಕಾಸ್ವಗಳುಂಟಾದುದು ದೈವದುರ್ವಿಲಾಸವೇ ಸರಿ !! ಸರಕಾರವು ಸಕಲ ಜನರನ್ನೂ ಸಂರಕ್ಷಿಸಲು ರಾಜಧರ್ಮದಿಂದ ಬದ್ಧವಿದೆ. "ಸರ್ವೇಜನಾಃ ಸುಖಿನೋ ಭವಂತು ಮಾ ಕಶ್ಚಿದ್ದುಃಖಭಾಗ್ಭವೇತ್॥" (ಸಕಲ ಜನರು ಸುಖಿಯಾಗಿರಲಿ; ಯಾರಿಗೂ ದುಃಖವಾಗದಿರಲಿ!) ಎಂಬ ಸಾಲ ವಿಚಾರದಿಂದ ನಮ್ಮ ಹಿಂದ-ದೇಶದೊಳಗೆ ಸ್ವಾತಂತ್ರ್ಯ-ದೇವಿಯ ರಾಜ್ಯ ನಡೆಯಬೇಕು; ಸಕಲರೂ ಸುರಕ್ಷಿತರಿರಬೇಕು; ಯಾರೂ ಅರಕ್ಷಿತರಿರಬಾರದು; ಎಂಬ ಧ್ಯೇಯ ಮುಂದಿಟ್ಟುಕೊಂಡು ಸ್ವತಂತ್ರ ಹಿಂದ-ದೇಶದ ರಾಜ್ಯಭಾರ ನಡೆದು, ಲೋಕಕ್ಕೆ ನಮ್ಮ ಹಿಂದೂ ದೇಶ ಆದರ್ಶಭೂತವಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಸಮಸ್ತ ಭೂಲೋಕದ ಕಲ್ಯಾಣವನ್ನಪೇಕ್ಷಿಸುವ ನಮ್ಮ ರಾಷ್ಟ್ರದೇವತೆಯು ಮಹಾವಿಭೂತಿಗಳಾದ ಮಹಾತ್ಮರು ತಳೆದಿದ್ದರು. ಆ ಧ್ಯೇಯಕ್ಕೆ ಅನುಗುಣವಾಗಿ ತಮ್ಮ ರಾಜ್ಯಧುರೆಯನ್ನು ನಡೆಸುವ ಸದ್ಬುದ್ಧಿಯನ್ನು ಲೋಕ-ರಾಜ್ಯಕರ್ತರಿಗೆ ಪರಮಾತ್ಮನು ಅನುಗ್ರಹಿಸಲೆಂದು ಈ ವರ್ಧಂತಿ-ಮಹೋತ್ಸವದ ಸಮಯದಲ್ಲಿ ನಾವು ಭಕ್ತಿಭಾವದಿಂದ ಪ್ರಾರ್ಥಿಸುತ್ತೇವೆ.

ಸುದೈವದಿಂದ ನಮ್ಮ ಸರ್ವಾಧಿಪತಿಗಳ ಸ್ಥಾನದಲ್ಲಿ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರಂಥ ಕುಶಲ ದಾರ್ಶನಿಕ ರಾಜಕಾರಣಿಗಳು ವಿರಾಜಮಾನರಾಗಿದ್ದಾರೆ. ಶ್ರೀ॥ ರಾಜಗೋಪಾಲಾಚಾರ್ಯರು ಹಿಂದುಸ್ಥಾನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಷ್ಠಾವಂತ ಸೈನಿಕರಾಗಿ ದುಡಿದವರಿದ್ದಾರೆ; ಕಾಂಗ್ರೆಸ ರಾಜಕಾರಣದ ಸೂತ್ರಗಳನ್ನು ನಡಿಸಿ ನಮ್ಮ ದೇಶದ ಪರಿಸ್ಥಿತಿಯನ್ನು ಒಳಿತಾಗಿ ಕಂಡುಕೊಂಡವರಿದ್ದಾರೆ. ಪಾಕಿಸ್ತಾನವನ್ನು ಲೀಗದ ಮುಸಲ್ಮಾನರಿಗೆ ತುಂಡರಿಸಿಕೊಟ್ಟು ನಾವು ಸುಖವಾಗಿ ಇರೋಣವೆಂದು ದಿಟ್ಟತನದಿಂದ ಮೊದಲು ಹೇಳಿದವರು ಶ್ರೀ॥ ರಾಜಗೋಪಾಲಾಚಾರ್ಯರೇ. ಅವರ ಈ ಸೂಚನೆ ಕಾರಣಾಂತರಗಳಿಂದ ಮುಂದೆ ಅವರ ಸಹಕಾರಿಗಳಿಗೆ ಮಾನ್ಯವಾಯಿತು. ಇಂಥ ದೂರದೃಷ್ಟಿಯುಳ್ಳವರು ನಮ್ಮ ಸ್ವಾತಂತ್ರ್ಯ-ದೇವಿಯ ರಾಜದಂಡವನ್ನು ನಡಿಸತೊಡಗಿದ್ದಾರೆ. ಪಂ॥ ಜವಾಹಿರಲಾಲ ನೆಹರೂ, ಸರದಾರ ವಲ್ಲಭಭಾಯಿ ಪಟೇಲ, ಮೌಲಾನಾ ಅಬುಲ್ ಕಲಾಮ ಅಝಾದ, ಡಾ॥ ರಾಜೇಂದ್ರ ಪ್ರಸಾದರವರಂಥ ನಿತಾಂತ ರಾಷ್ಟ್ರಸೇವಾಸಕ್ತ ಲೋಕನಾಯಕರು ರಾಜಗೋಪಾಲಾಚಾರ್ಯರಿಗೆ ಅನುಕೂಲರಾಗಿ ನಡೆದುಕೊಳ್ಳಲು ಬದ್ಧಕಂಕಣರಾಗಿದ್ದಾರೆ. ಇವರೆಲ್ಲರ ಪ್ರಯತ್ನದಿಂದ ನಮ್ಮ ಹಿಂದ-ದೇಶದೊಳಗೆ ಸ್ಥಾಪನೆಯಾದ ಸ್ವಾತಂತ್ರ್ಯ-ದೇವಿಯ ಸಾಮ್ರಾಜ್ಯದಲ್ಲಿ ಸಮಸ್ತ ಜನಸಾಮಾನ್ಯರಿಗೆ ಹೊಟ್ಟೆತುಂಬ ಅನ್ನವೂ ಮೈತುಂಬ ವಸನವೂ, ತತ್ಪರಿಣಾಮವಾಗಿ ಐಹಿಕ ಸುಖ-ಸಮಾಧಾನಗಳೂ, ದೊರೆತು ಲೋಕ ಸುಖವಾಗಲೆಂದೂ, ಸಕಲ ಸಮಾಜಗಳಿಗೆ ಭೇದ-ಭಾವವಿಲ್ಲದ ಸಂರಕ್ಷಣೆ ಕೊಟ್ಟು ಸುಖ ಕಲ್ಪಿಸಿಕೊಡುವ ನಮ್ಮ ಸ್ವಾತಂತ್ರ್ಯ ದೇವಿಯ ರಾಜ್ಯಭಾರದ ಸಂಗತಿ ಭೂಲೋಕದಲ್ಲೆಲ್ಲ ಹಬ್ಬಿ, ಇಡೀ ಜಗತ್ತಿಗೆ ಶುಭವಾಗುವಂತೆ ಪರಮಾತ್ಮನು ಅನುಗ್ರಹಿಸಲೆಂದೂ ನಾವು ಭಕ್ತಿಪುರಸ್ಸರ ಪ್ರಾರ್ಥಿಸಿ ಹಿಂದ ಸ್ವಾತಂತ್ರ್ಯ-ದೇವಿಗೆ ಸದಾ ವಿಜಯವಾಗಲೆಂಬ ಜಯಘೋಷವನ್ನು ಮಾಡಿ, ಸ್ವಾತಂತ್ರ್ಯ-ದೇವಿಗೆ ನಮ್ಮ ಭಕ್ತಿಯ ಚಿಕ್ಕ ಕಾಣಿಕೆಯನ್ನರ್ಪಿಸುತ್ತೇವೆ.

ಜಯ ಹಿಂದ! ವಂದೇ ಮಾತರಮ್!

ಸರ್ವಾಧಿಪತಿ ಶ್ರೀ॥ ಚಕ್ರವರ್ತಿ ರಾಜಾಜಿಯವರ ಸ್ವಾತಂತ್ರ್ಯ-ದಿನದ ಸಂದೇಶ.

ಸ್ವತಂತ್ರ ಭಾರತದ
ಪ್ರಥಮ ಹಿಂದೀ ಸರ್ವಾಧಿಪತಿ
ಶ್ರೀ ರಾಜಾಜಿಯವರು.

೧೯೪೭ನೇ ಇಸವಿಯ ಆಗೋಸ್ಟ ತಾ. ೧೫ರಂದು ನಮ್ಮ ಸ್ವಾತಂತ್ರ್ಯದ ಒಂದು ವರುಷ ಮುಗಿಯುತ್ತದೆ. ಈ ಅವಧಿಯಲ್ಲಿ ನಾವು ಮಹತ್ತರ ಮತ್ತು ಅನಪೇಕ್ಷಿತ ಗಂಡಾಂತರಗಳನ್ನು ಎದುರಿಸಬೇಕಾಯಿತು. ಅವುಗಳ ಕಾರಣಗಳನ್ನು ನಾವೀಗ ಹುಡುಕಿ ತೆಗೆಯಬಹುದು. ಆದರೆ ಭಾವೀ ಗಂಡಾಂತರಗಳು ಬರುವ ಮುಂಚೆಯೇ ಜಾಣತನದಿಂದ ಪರೀಕ್ಷಿಸುವದು ಬೇರೆ. ನಮ್ಮ ಸರಕಾರವೂ ನಮ್ಮ ಜನರೂ ಅನಿರೀಕ್ಷಿತ ಘಟನೆಗಳನ್ನು ಎದುರಿಸಬೇಕಾಯಿತೆಂಬುದು ನಿರ್ವಿವಾದ ಮಾತು. ನಮ್ಮ ಸರಕಾರವು ರಾಷ್ಟ್ರದ ಮುಂದಾಳುಗಳೂ ಈ ಸಂಕಟಗಳನ್ನು ನಿಸ್ತರಿಸುವ ಕೆಲಸವನ್ನು ಸಮಾಧಾನಕರವಾಗಿ ಮಾಡಿದ್ದಾರೆಂದು ಮುಖಸ್ತುತಿ ಮಾಡುವ ಚಟವಿಲ್ಲದ ಅಂತರರಾಷ್ಟ್ರೀಯ ನಿರೀಕ್ಷಕರು ಕೂಡ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಗಂಡಾಂತರಗಳನ್ನು ಎದುರಿಸುವದರಿಂದಲೇ ರಾಷ್ಟ್ರದ ಶಕ್ತಿ ಬೆಳೆಯುತ್ತದೆ. ಇಲ್ಲದಿದ್ದರೆ ರಾಷ್ಟ್ರದ ಪ್ರಗತಿ ಸಾಧ್ಯವಿಲ್ಲ.

ನಮಗೊದಗಿದ ಅತಿ ದೊಡ್ಡ ಕಷ್ಟವೆಂದರೆ ಗಾಂಧಿಜಿಯವರ ಅಕಾಲಿಕ ನಿಧನ. ಅವರ ಜಾಣತನದ ಮತ್ತು ಸ್ಫೂರ್ತಿದಾಯಕ ಮಾರ್ಗದರ್ಶನ ನಮಗೆ ಅವಶ್ಯವಿದ್ದ ಸಮಯದಲ್ಲೇ ಅವರು ಕಣ್ಮರೆಯಾದರು! ಈ ಅನಿರೀಕ್ಷಿತ ವಿಪತ್ತಿಯ ಮೂಲಕ ನಾವು ನಮ್ಮ ಸ್ವಂತ ಬುದ್ಧಿಯಿಂದಲೇ ಮುಂದುವರಿಯಬೇಕಾಗಿದೆ. ಎಲ್ಲ ಧರ್ಮಶಾಸ್ತ್ರಗಳೊಳಗಿನ ಬೋಧವನ್ನು ಗಾಂಧಿಜಿಯವರು ವೇಗವತ್ತರ ಸಂಸ್ಕೃತಿಯ ನಿತ್ಯದಾಚರಣೆಯ ಕ್ಷೇತ್ರಕ್ಕಿಳಿಸಿ, ಧರ್ಮದ ಬೋಧೆಗೂ ಐಹಿಕ ವ್ಯವಹಾರದ ಜಾಣತನಕ್ಕೂ ಇರುವ ವ್ಯತ್ಯಾಸವನ್ನು ಅಳಿದೊಗೆದಿದ್ದರು. ನಾವು ಅವರ ಬೋಧಾಮೃತವನ್ನು ನಮ್ಮ ವೈಯಕ್ತಿಕ ಅಥವಾ ಸರಕಾರದ ದೈನಂದಿನ ವ್ಯವಹಾರದಲ್ಲಿ ಆಚರಣೆಯಲ್ಲಿ ತರದಿದ್ದರೆ, ಅವರ ಇಚ್ಛೆಯಂತೆಯೇ ನಮ್ಮ ವ್ಯವಹಾರವನ್ನು ನಡಿಸದೆ ಅವರ ಸ್ಮೃತಿಯನ್ನೂ ಉಪದೇಶವನ್ನೂ ಬಾಯಿಂದ ಮಾತ್ರ ಹೊಗಳುತ್ತಲಿದರೆ ಮತ್ತು ಪ್ರತ್ಯಕ್ಷ ರಾಜಕಾರಣಕ್ಕೂ ಅವರು ಕಾಲಕಾಲಕ್ಕೆ ಕಲಿಸಿಕೊಡುತ್ತಿದ್ದ ಸದ್ಗುಣ-ಸಂಯಮಗಳಿಗೂ ನಡುವೆ ಗೋಡೆಯನ್ನು ಕಟ್ಟಿದರೆ ಅವರಿಗೆ ನಾವು ಸಲ್ಲಿಸುತ್ತಿರುವ ಪೂಜೆಯು ನಿರರ್ಥಕ ಢೋಂಗೆಂದೆನಿಸಿಕೊಳ್ಳುವದು. ಆದ್ದರಿಂದ ನಮ್ಮ ನಿತ್ಯದ ವ್ಯವಹಾರದಲ್ಲಿ ಸಂದೇಹ ಇಲ್ಲವೆ ಕಠಿಣ ಪ್ರಸಂಗ ಒದಗಿದಾಗ, ಆ ಸಂಬಂಧದಲ್ಲಿ ಅವರ ಸಲಹೆಯನ್ನು ನಾವು ಕೇಳಿದರೆ ಅವರು ಯಾವ ರೀತಿಯ ಅಭಿಪ್ರಾಯ ಕೊಡುವಂತಿದ್ದರೆಂಬುದನ್ನು ಚನ್ನಾಗಿ ಆಲೋಚಿಸಿ, ಅದರಂತೆ ನಡೆಯಲು ಪ್ರಯತ್ನಿಸುವಾ. ಮಹಾತ್ಮರು ಇನ್ನೂ ಜೀವಂತವಿದ್ದು ನಮ್ಮ ನಡತೆಯನ್ನು ನಿರೀಕ್ಷಿಸುತ್ತಿದ್ದಾರೆಂಬ ಭಾವನೆಯಿಂದಲೇ ನಮ್ಮ ವ್ಯವಹಾರ ನಡಿಸುವಾ.

ಇಂದಿನ ವರೆಗೆ ನಾವು ನಡಿಸಿದ ಸುದೀರ್ಘ ಹೋರಾಟದ ಪರಿಣಾಮವಾಗಿ ನಮ್ಮ ಮನಸ್ಸು ಕೆಲ ಮಟ್ಟಿಗೆ ಕಠಿಣವಾಗುವ ಸಂಭವವುಂಟು; ಹೊಸ ಪರಿಸ್ಥಿತಿಗೆ ತಕ್ಕ ಸಾಧನ-ಸಾಮಗ್ರಿಗಳನ್ನು ಬೆಳಸಿಕೊಳ್ಳಲು ನಾವು ಹಿಂಜರಿಯುವ ಸಂಭವವೂ ಉಂಟು. ನಾವೀಗ ರಚನಾತ್ಮಕ ರೀತಿಯಿಂದ ಆಲೋಚಿಸಲಿಕ್ಕೂ, ನಮ್ಮ ಮುಂದಿರುವ ರಾಷ್ಟ್ರ-ಕಾರ್ಯದ ನಿರ್ವಹಣೆಗೆ ನಾಡಿನಲ್ಲಿರುವ ಎಲ್ಲ ಬುದ್ಧಿಮತ್ತೆ ಹಾಗೂ ಸಾಧನ-ಸಂಪತ್ತಿಯನ್ನು ಸಂಗ್ರಹಿಸಲಿಕ್ಕೂ ಕಲಿಯಬೇಕು.

ನಮ್ಮ ಪ್ರಥಮ ಕಾರ್ಯವೆಂದರೆ ನಾವು ದ್ವೇಷದ ಒಣಹೆಮ್ಮೆಯನ್ನು ತೊರೆಯಬೇಕು. ಯಾಕೆಂದರೆ ದ್ವೇಷದ ಭಾವನೆಯಲ್ಲಿ ಅಥವಾ ಅದನ್ನು ಅನುಸರಿಸುವ ಯೋಜನೆಗಳಲ್ಲಿ ಒಣಹೆಮ್ಮೆಗಿಂತ ಹೆಚ್ಚಿಗೆ ಏನೂ ಇಲ್ಲ. ಭೂತಕಾಲದ ಇತಿಹಾಸವನ್ನು ನಾವು ಬರೇ ಮನರಂಜನೆಗೆಂದು ಓದದೆ, ಏನಾದರೊಂದು ಪ್ರಯೋಜನ ಪಡಕೊಳ್ಳುವ ದೃಷ್ಟಿಯಿಂದ ಅದನ್ನೋದಿದರೆ ಆ ಇತಿಹಾಸವು ಇದನ್ನೇ ನಮಗೆ ಹೇಳುವದು.

ನಮ್ಮ ಎರಡನೇ ಕರ್ತವ್ಯವೆಂದರೆ ಸ್ವಾತಂತ್ರ್ಯವು ಬರೇ ಒಂದು ಸಾಧನವೆಂದು ನಾವು ನೆನಪಿನಲ್ಲಿಡಬೇಕು. ಸಾರ್ವಜನಿಕ ಜೀವನವನ್ನು ನಿರ್ಮಲಗೊಳಿಸಿ ರಚನಾತ್ಮಕ ಕಾರ್ಯದಲ್ಲಿ ನಾವು ಸದಾಕಾಲ ಆಸಕ್ತರಾದರೆ ಮಾತ್ರ, ನಾವು ನಮ್ಮ ರಾಷ್ಟ್ರವನ್ನು ಕಟ್ಟಲಿಕ್ಕೂ, ಅದರ ಭವಿತವ್ಯವನ್ನು ಉಜ್ವಲಗೊಳಿಸಿ ಈ ವರೆಗಿನ ಕಾಲವಿಳಂಬದ ಹಾನಿಯನ್ನು ತುಂಬಿ ತರಲಿಕ್ಕೂ ಸಮರ್ಥರಾದೇವು.

ತನ್ನ ಪ್ರತಿಯೊರ್ವ ಪುತ್ರನೂ ಹಾಗೂ ಪುತ್ರಿಯು ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಂಪೂರ್ಣ ಶಕ್ತಿ ಮತ್ತು ಉತ್ಸಾಹದಿಂದ ದುಡಿಯುವರೆಂದು ಇಂದು ನಮ್ಮ ಮಾತೃಭೂಮಿಯು ಹಾರೈಸುತ್ತಾಳೆ. ಪ್ರತಿಯೊಬ್ಬರಿಂದ ಪರಮಾವಧಿಯ ನಾಗರಿಕ ಪ್ರವೃತ್ತಿಯನ್ನೂ ಸಹಕಾರವನ್ನೂ ಅವಳು ಅಪೇಕ್ಷಿಸುತ್ತಾಳೆ.

ಸಿ. ರಾಜಗೋಪಾಲಾಚಾರಿ.

ನಿನ್ನೆ ಸರ್ವಾಧಿಪತಿ ರಾಜಗೋಪಾಲಾಚಾರ್ಯರು ಸ್ವಾತಂತ್ರ್ಯ ವರ್ಧಂತಿ ಮಹೋತ್ಸವದ ಪ್ರೀತ್ಯರ್ಥ ಪ್ರಧಾನರಿಗೂ ರಾಯಭಾರಿಗಳಿಗೂ ಪ್ರಮುಖರಿಗೂ ನಿಮಂತ್ರಿಸಿ ಉಪಹಾರ ಕೊಟ್ಟರು.

ಸ್ವರ್ಣವಲ್ಲೀ-ಮಠಾಧೀಶರ ಪ್ರಾರ್ಥನೆ.

ಹಿಂದ-ಸ್ವಾತಂತ್ರ್ಯದ ಮೊದಲನೇ ವರ್ಧಂತಿಯ ಕಾಲಕ್ಕೆ ಶ್ರೀ ಸ್ವರ್ಣವಲ್ಲೀ ಮಠದ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳು ತಮ್ಮ ಆರಾಧ್ಯ ದೇವತೆಯಾದ ಶ್ರೀರಾಜರಾಜೇಶ್ವರಿ ಲಕ್ಷ್ಮೀನರಸಿಂಹರ ಚರಣಾರವಿಂದಗಳಲ್ಲಿ ಈ ಕೆಳಗಿನಂತೆ ಪ್ರಾರ್ಥಿಸಿಕೊಂಡಿರುತ್ತಾರೆ:—

"ಅಶೇಷಭಾರತೀಯಾಃ ಭಾರತವಿಭಾಗದರ್ಶಿನಃ [illegible] ಜಗಜ್ಜನ [illegible] ದೇಶಾಂತರೇಷ್ವಪಿ [illegible] ದಿವ್ಯಪ್ರಕಾಶೇನ [illegible] ಸರ್ವೇ [illegible] ಸುಖಿನಃ ಸಂತು [illegible]" (ಭಾರತೀಯರೆಲ್ಲ ಭಾರತಖಂಡದ ವಿಭಾಗವನ್ನು ಮರೆತು ಒಂದಾಗಿ ಭಾರತ ಮಾತೆಯ ಸೇವೆಯಲ್ಲಿ ತೊಡಗಲಿ! ವಿಶ್ವಶಾಂತಿಯು ಸಲುವಾಗಿ ವಿವೇಕವೆಲ್ಲರಿಗೆ ಲಭಿಸಲಿ! ದಿವ್ಯಪ್ರಕಾಶದಿಂದ ಬೆಳಗುತ ಪ್ರತಿಭಾಸಂಪನ್ನರಾಗಲಿ! ಯಾವಾಗಲೂ ದೀರ್ಘಾಯುಷಿಗಳೂ ಆರೋಗ್ಯವಂತರೂ ಸಕಲ ಸಂಪನ್ನರೂ ಆಗಲಿ!)

ಸ್ಥಾನಿಕ ವೃತ್ತಾಂತ.

ಕುಮಟಾ— ಇಂದು ಸಾಯಂಕಾಲ ಸೂರ್ಯನು ಮಘಾಪ್ರವೇಶ ಮಾಡುತ್ತಾನೆ. ಈ ವರ್ಷ ಅಶ್ಲೇಷಾ ನಕ್ಷತ್ರ ಮಾಡಿಕೆಗಿಂತ ಹೆಚ್ಚು ಮಳೆ ಸುರಿದಿದೆ. ಕಳೆದ ವಾರದಿಂದ ಈ ಮಳೆ ಬೇಸರ ಹುಟ್ಟಿಸಿಬಿಟ್ಟಿತು. ನಿನ್ನೆಯಿಂದ ಮೋಡವಿದ್ದರೂ ವಿಶ್ರಾಂತಿ ತೆಗೆದುಕೊಂಡಿದ್ದಾನೆ. ಮಳೆಗಾಲದ ಪ್ರಾರಂಭದಿಂದ ಈವರೆಗೆ ಎದ್ದಮಳೆ ೧೧೧ ಇಂಚು ಆಗಿದೆ. ಊರಲ್ಲಿ ಅಲ್ಲಲ್ಲಿ ಜ್ವರ-ಬೇನೆಗಳು ಕಂಡುಬರುತ್ತವೆ.

ಈ ವೊದಲು ಜಾಹೀರಾದಂತೆ ನಿನ್ನೆ ಮುಂಜಾನೆ ಇಲ್ಲಿಯ ಕಚೇರಿಯಲ್ಲಿ ಧ್ವಜಾರೋಹಣ ಧ್ವಜವಂದನ ಪ್ರೋ [illegible] ಕಚೇರಿಯ ಅಂಗಳದಲ್ಲಿ ತೆಂಗಿನ ಸಸಿ ನೆಡುವ ಸಮಾರಂಭ ನಡೆದವು. ಈ ಸಮಾರಂಭಕ್ಕೆ ಎಲ್ಲ ಶಾಲೆಗಳ ವಿದ್ಯಾರ್ಥಿ-ವಿದ್ಯಾರ್ಥಿನಿಗಳೂ, ಶಿಕ್ಷಕ ಶಿಕ್ಷಕಿಯರೂ ನಾಗರಿಕರೂ ನೆರೆದಿದ್ದರು. ಕಚೇರಿಯೊಳಗಿನ ಕಾರ್ಯಕ್ರಮ ಮುಗಿದ ಮೇಲೆ ಎಲ್ಲರೂ ಮೆರವಣಿಗೆಯಿಂದ ಗಾಂಧಿ-ಚೌಕಿಗೆ ಹೋಗಿ ಅಲ್ಲಿ ಸ್ವಾತಂತ್ರ್ಯಚೌಕದ ಮುಂದೆ ಪುನಃ ಧ್ವಜವಂದನೆಯನ್ನು ನೆರವೇರಿಸಿದರು. ಸಂಜೆ ಪುನಃ ಗಾಂಧಿ ಚೌಕದಲ್ಲಿ ರಾ. [illegible] ಅವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಯಾಗಿ, ಸ್ವಾತಂತ್ರ್ಯದ ಮಹತ್ವ ಹಾಗೂ ಅದರ ರಕ್ಷಣೆಯ ಮಹತ್ವವನ್ನು ಕುರಿತು ಕೆಲವರ ಭಾಷಣಗಳಾದವು. ಊರಲ್ಲೆಲ್ಲ ನಿನ್ನೆ ಕಚೇರಿ [illegible] ಕೆಂಗಿ [illegible] ಸ್ವಾತಂತ್ರ್ಯದಿನಾಚರಣೆಯ ನಿಮಿತ್ತ ಧ್ವಜವಂದನೆ, ವೃಕ್ಷಾರೋಪಣ ಮೊದಲಾದವು ನಡೆದವು. ೧೧ ಘಂಟೆಗೆ ಕುಮಟಾ ಮ್ಯುನಿಸಿಪಾಲಿಟಿಯ ಸಭಾ ಮಂದಿರದಲ್ಲಿ, ಮ್ಯುನಿಸಿಪಾಲಿಟಿಯವರ ಏರ್ಪಾಡಿನಂತೆ, ಇಲ್ಲಿಯ ದಿವಾಣಿ ನ್ಯಾಯಾಧೀಶ ರಾ॥ ಲಿಮಯೇ ಇವರ ಅಧ್ಯಕ್ಷತೆಯಲ್ಲಿ ಊರ ಪ್ರಮುಖರ ಸಭೆ ಕೂಡಿತ್ತು. ಸ್ವಾತಂತ್ರ್ಯದ ಮೊದಲನೇ ವರ್ಷದಲ್ಲಿ ನಾಡಿನ ಆಗು-ಹೋಗುಗಳನ್ನು ಅವಲೋಕನ [illegible] ಹೋಗುವ ಬಗೆಯನ್ನು ಕುರಿತು ರಾ॥ ನರಸಿಂಹ ಶಾನಭಾಗ ವಕೀಲ, ರಾ॥ [illegible] ವಕೀಲ ರಾ॥ [illegible] ಆಲಿಸಾಹೇಬ, ಗಿಬ್ಸ ಹಾಯಸ್ಕೂಲಿನ ಮುಖ್ಯಾಧ್ಯಾಪಕ ರಾ॥ [illegible] ಗಾಂವಕ್ಕರ, ಶಿಕ್ಷಕ ರಾ॥ [illegible] ಕಾಮತ, ಮುತ್ತು ಇಲ್ಲಿಯ [illegible] ಮಾತ್ರ [illegible] ಭಾಷಣಗಳಾದವು. ಮಹಾತ್ಮರ [illegible] ಕಳೆದ ವರ್ಷ ದೇಶದ [illegible] ಮಾಡಿದ್ದೇ ತಪ್ಪಾಯಿತೆಂದೂ ಆ ಭಾವನೆ ತಪ್ಪಿಸಿಗಾಗಿ ನಾವು ಕಳೆದ ವರ್ಷದ ಘೋರತರ ದುರಂತಗಳನ್ನು ಎದುರಿಸಬೇಕಾಯಿತೆಂದೂ, ಇನ್ನಾದರೂ ಹಿಂದು-ಮುಸಲ್ಮಾನರೂ ಇತರರೂ ಒಟ್ಟಾಗಿ ತಮಗೆ ದಕ್ಕಿದ ಸ್ವಾತಂತ್ರ್ಯವನ್ನು ದಕ್ಷತೆಯಿಂದ ಕಾಪಾಡಿಕೊಳ್ಳುವಂತೆ ದೇವರು ಬುದ್ಧಿ ಕೊಡಲೆಂದು ಜನಾಬ ಬಸ್ತಿ ಅಲಿ [illegible] ಅವರ [illegible] ನಮೂದಿಸತಕ್ಕಂಥವು. ಈ ಸಭೆ ಮುಗಿಯುವಷ್ಟರಲ್ಲಿ ಮಧ್ಯಾಹ್ನದ ೧೨ ಘಂಟೆ ಬಡಿಯಿತು. ಆಗ ಮುಂಬಯಿ ಸರಕಾರದ ಅನುಜ್ಞೆಗನುಸಾರವಾಗಿ ಸಭಿಕರೆಲ್ಲರೂ ೨ ಮಿನಿಟ ಎದ್ದು ನಿಂತು ಸ್ವಾತಂತ್ರ್ಯ ಸಂಗ್ರಾಮದಲ್ಲಿ [illegible] ಮಡಿದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಹಾಗೆಯೇ ಸಭಿಕರೆಲ್ಲರೂ ಜ್ಯೋತಿ ಧರ್ಮಶಾಲೆಗೆ ಹೋಗಿ, ಧರ್ಮಶಾಲೆಯ ಆವಾರದ ಬಾಗಿಲಲ್ಲಿ ಎರಡು ಸಾರ್ವಜನಿಕ [illegible]ಗಳನ್ನು ನೆಟ್ಟರು. [illegible] ಉಪ್ಪು [illegible] ಹೆಸರನ್ನು ಇಡಲಾಯಿತು.

ಹಳ್ಳಿಗಳಲ್ಲಿ ಕಳವುಗಳೂ [illegible] ಬಳಿಯ ಮೂರೂರಿನ ರಾತ್ರಿ ಕಳ್ಳಬೀಗದ ವೇ॥ ಅನಂತ ಭಟ್ಟರ ಮನೆಯಲ್ಲಿ ಯಾರೋ ಕಳವು ಮಾಡಿ ೨ ತಾಮ್ರದ ಅಡಕಲ್ಲುಗಳನ್ನು ಎತ್ತಿಕೊಂಡು ಹೋಗಿರುವರೆಂತಲೂ, ಬಂದವರ ಮೇಲೆ [illegible] ಭ ಕ ಎಂಬ ಅಕ್ಷರಗಳನ್ನು ಕೆತ್ತಿದ್ದುಂಟೆಂತ.

ಬಂಧಾರಾ ಯೋಜನೆಯ ಪ್ರಕಟಣೆ, ೧೯೪೮

ಲೆಕ್ಕ ಇಲ್ಲದ ಬಿಕ್ಕ ದಿನಸೂ ಬೋಳಾದ ಮುದ್ದ ಮಾಡಿರಿ ನಿಮ್ಮ ಜನಕ!

ಬಿಕ್ಕ ಬೇಡಿದರೂ ಅಕ್ಕಿ ಸಿಕ್ಕವಲ್ಲದು ನಿಮ್ಮ ಸರಕಾರಕ!

ಕೆಕ್ಕಾಮಾದರೂ ಮಕ್ಕಳೊಳ ತಪ್ಪವಲ್ಲದು ನಿಮ್ಮ ಜನಕ!

ಚಿಕ್ಕ ಕಾಲಕ ಕಟ್ಟಿ ಕಟ್ಟಿಸಿ ನೀರ ಉಳಿಸಿರೂ ನಿಮ್ಮ ಹೊಲಕ'

ರೊಕ್ಕ ಕೊಡತಾರ ಗಟ್ಟಿಯಾಗಿ ಕಟ್ಟಿ ಕಟ್ಟಿದ ನಿಮ್ಮ ಕೆಲಸಕ!

ಎಚ್ಚರಾಗಿ ನಿಚ್ಚಳವಾದ ಅರ್ಜಿ ಮಾಡಿರೂ ಸರಕಾರಕ ಪೌಕ್ಕ ಹಾಕಕ!

ಬಿಕ್ಕದ ಹೆಚ್ಚಿಗೆ ಬೆಳಸಿ ಮುಟ್ಟಿಗರಾಗಿರೂ ಧನಸಹಾಯಕ

ಕುಮಟಾ, ತಾ ೧೨-೬-೧೯೪೮

ವಿ. ಬಿ ಪಾಟಣಕರ,
ಎಗ್ರಿಕಲ್ಚರಲ್ ಆಫೀಸರ, ಬಂಧಾರಾ ಸ್ಕೀಮ, ಕುಮಟಾ

ಅಂಕೋಲಾ ತಾಲೂಕಿನ ತೆಂಗಿನ ಬೆಳೆಯ ಪ್ರಕಟಣೆ.

(೧೯೪೭-೪೮ವೇ ಸಾಲಿನದು.)

ನಂ ೩೨೮ / ತೆಂಗಿನಕಾಯಿ — ೧೯೪೭ನೇ ಇಸವಿಯ ಮುಂಬಯಿ ಬೆಳೆ ಅಂದಾಜಿನ ಕಾನೂನಿನ ೩ಯ ಕಲಮಿನ ೩ನೇ ಪೋಟಕಲಮಿನ ಬಲದಿಂದ ಕಾನಡಾ ಜಿಲ್ಲೆಯ ಅಂಕೋಲಾ ತಾಲೂಕಿನ ಮಾಮಲೇದಾರರು ಈ ಕೆಳಗಿನ ಪರಿಶಿಷ್ಟದ ೧ನೇ ಸ್ತಂಭದಲ್ಲಿ ತೋರಿಸಿದ ಸ್ಥಾನಿಕ ಕ್ಷೇತ್ರಗಳೊಳಗಿನ ನೀರಾವರಿ ಬಾಗಾಯತಗಳಲ್ಲಿ ಇರುವ ಪ್ರತಿ ಫಲ ಬಿಡುವ ತೆಂಗಿನ ಮರಕ್ಕೆ ೧೯೪೭-೪೮ನೇ ಸಾಲಿನಲ್ಲಿ, ೨ನೇ ಸ್ತಂಭದಲ್ಲಿ (ಆಯಾ ಕ್ಷೇತ್ರದ ಎದುರಿಗೆ) ತೋರಿಸಿದಷ್ಟು ತೆಂಗಿನಕಾಯಿಗಳ ಸರಾಸರಿ ವಾರ್ಷಿಕ ಉತ್ಪನ್ನ ಬಂದಿರುತ್ತದೆಂದು ಈ ಮೂಲಕ ಪ್ರಸಿದ್ಧಪಡಿಸುತ್ತಾರೆ.

ಪರಿಶಿಷ್ಟ

ಅನುಕ್ರಮವಾಗಿ ಮತ್ತು ಸ್ಥಾನಿಕ ಕ್ಷೇತ್ರ (೧)	ಫಲಬಿಡುವ ಪ್ರತಿ ಮರಕ್ಕೆ ತೆಂಗಿನಕಾಯಿ ಉತ್ಪನ್ನ (೨)
(ಅ) ಸಮುದ್ರ ದಂಡೆಗೆ ಇಲ್ಲವೆ ಹೊಳೆಯ ಅಂಚಿಗೆ ಇರುವ ಹಳ್ಳಿಗಳು — ಅಡಿಗೋಣ, ಅಗರಗೋಣ, ಅಲಗೇರಿ, ಅವರ್ಸಾ, ಬೆಳಂಬಾರ, ಬಲೇಕೇರಿ, ಭಾವಿಕೇರಿ, ಬೆಳೆಹೊಂಗಿ, ಬೊಬ್ರುವಾಡಾ, ಹಾರವಾಡಾ, ಹಿಚಕಡ, ಹೊನ್ನೆಬೈಲ, ಜೂಗ, ಕಣಗಿಲ, ಕೊಗ್ರೆ, ಅಕ್ಕೋಳ್ಳಿ, ಮಂಜಗುಣಿ, ನದಿಭಾಗ, ಶಿರಕುಳಿ, ಟೊಂಕಣಕೇರಿ, ಶಟಕೇರಿ, ಸಗಡಗೇರಿ, ಶಿರೂರ, ಉಳವರೆ. (೨೪ ಗ್ರಾಮಗಳು)	೪೦ ಕಾಯಿ
(ಬ) ಘಟ್ಟದ ಬದಿಯಲ್ಲಿ ಅಂದರೆ ಗುಡ್ಡಗಳ ಪ್ರದೇಶದಲ್ಲಿರುವ ಹಳ್ಳಿಗಳು:— ಆಂದ್ಲೆ, ಬಳಲೆ, ಬೊಗ್ರಿಬೈಲ, ಮೊಗಟಾ, ಸೀಲಪೇಟ, ಕಳಗದ್ದೆ, ಮಾಕರ ಕುದ್ರಿಗೆ, ಅಡ್ಲೂರ, ಅಗಸೂರ, ಬೆರ್ಡೆ, ಗುಂಡಬಾಳಾ, ವಾಲೇಬೈಲ, ಕೆಂಕಣಶಿವಪೂರ, ಮೊರಳ್ಳಿ, ನವಗದ್ದೆ, ಸಿಲ್ಲೂರ ಕುಂಟನಬೈಲ, ಶಿರಗುಂಜಿ, ಕಕ್ಕರಗೇರಿ, ಡೊಂಗ್ರಿ, ಹೆಬ್ಬುಳ, ಹಿಲ್ಲೂರ, ಕಟ್ಟಿನಹಕ್ಕಲ, ಕೊಡ್ಲಗದ್ದೆ, ಕುಂಟಗಣಿ, ಸುಂಕಸಾಳ, ಅಚ್ಚೆ, ಬ್ರಹ್ಮೂರ, ಗುಳೆ, ಮಳಳ್ಳಿ, ಹೆಗ್ಗಾರಮಕ್ಕಿಗದ್ದೆ, ಹೆಗ್ಗಾರಕೋಟೆಭಾವಿ, ಹೆಗ್ಗಾರ, ಕಬಗಾಲ, ಕಲ್ಲೇಶ್ವರ, ಕವಡ್ಯಾಳ, ಕಂಚಿನಮಾಳೆ, ಕಲವಳ್ಳಿ, ಕೆಂದಿಗೆ, ಲಕ್ಕೇಗುಳೆ, ಮುಲ್ಲಾಪೆ, ಮಾಣಗದ್ದೆ, ಮಾರುಗದ್ದೆ, ಶೇವಕಾರ, ವನಗುಳೆ, ಶಿಕ್ಕಿಕುರ್ಲಿ, ವರೀಲಬೇಣ (೪೬ ಗ್ರಾಮಗಳು)	೩೦ ಕಾಯಿ
(ಕ) (ಅ) ಮತ್ತು (ಬ) ಕ್ಷೇತ್ರಗಳನ್ನು ಬಿಟ್ಟು ಉಳಿದ ಎಲ್ಲ ಹಳ್ಳಿಗಳು:— ಅಂಕೋಲಾ, ಬಾಸಗೋಡ, ಹಡವ, ಬೆಗ್ರಿ, ಭುಜಗೇರಿ, ಶಿರಗೇರಿ, ಶಿಂಗಣಮಕ್ಕಿ, ಸಗಡೆ, ಬಾಡಿಬೊಗ್ರಿ, ವಂದಿಗೆ, ಬೊಳೆ, ದೇವಿಗದ್ದೆ, ಹೊಸಗದ್ದೆ, ಕಾಮಗೆ, ಕೊಡಸಣಿ, ಶಿಬಗೇರಿ, ಬಾಳೇಗುಳಿ, ಬೆಳಸೆ (೧೮ ಗ್ರಾಮಗಳು)	೩೫ ಕಾಯಿ

ಅಂಕೋಲಾ
ತಾ ೨೨-೬-೧೯೪೮

V R Dalvi.
ಮಾಮಲೇದಾರ, ಅಂಕೋಲಾ

ನ್ಯೂ ಒಟೊಮೊಬ್ಯಾಲ ಇಂಜಿನಿಯರಿಂಗ ಕಂಪನಿ, ಲಿ.,

ನೆಲ್ಲಿಕೇರಿ, ಕುಮಟಾ.

ನಮ್ಮಲ್ಲಿ ಶ್ಲಿಂಗ, ವೆಲ್ಡಿಂಗ ಹಾಗೂ ಲೇಥ ಮೇಲೆ ಓರ್ಡರ ಮಾಡುವ ಯಾವತ್ತೂ ಕೆಲಸ ಮತ್ತು ಎಲ್ಲ ತರದ ಮೋಟಾರ ರಿಪೇರ ಕೆಲಸಗಳನ್ನು ಮಾಡಿಕೊಡುತ್ತೇವೆ.

ಒಮ್ಮೆ ಅನುಭವ ಕೊಳ್ಳಿರಿ!　　ಮೆನೇಜರ.

ನಿಜಾಮರ ಪರಿಚಯ.

ನಿಜಾಮರ ಅಳಿಗಾಲ ಸಮೀಪಿಸಿ ಬಂದಾಗ ಅವರ ವ್ಯಕ್ತಿತ್ವದ ಸಾಮಾನ್ಯ ಪರಿಚಯ ಜನರಿಗೆ ಇರುವದು ಉಚಿತ. ನಿಜಾಮರ ಸಾದಾ ಹೆಸರು ಮೀರ ಉಸ್ಮಾನ ಅಲಿ ಎಂದು. ಆದರೆ ಅವರ ಅಧಿಕಾರದ ಹೆಸರು ಈ ರೀತಿಯುಂಟು.— ಹಿಜ್ ಎಕ್ಸಾಲ್ಟೆಡ್ ಹೈನೆಸ್ ರುಸ್ತುಮ-ಇ-ದೌರಾನ, ಅರಸ್ತು-ಇ-ಝಮಾನ, ಲೆಫ್ಟನಂಟ ಜನರಲ್ ಮುಝಫರ-ಉಲ್‌ಮುಲುಕ್ ವಾಲ್ ಮಮಾಲೀಕ, ನವಾಬ ಮೀರ ಉಸ್ಮಾನ ಅಲಿ ಖಾನಬಹಾದ್ದೂರ, ಫತೇಜಂಗ ಸಿಪಾ ಸಾಲಾರ, ಬ್ರಿಟಿಶ ಸರಕಾರದ ನಂಬಿಗಸ್ತ ಸ್ನೇಹಿತ, ನಿಜಾಮ—ಉದ್ದೌಲಾ, ನಿಜಾಮ-ಉಲ್ಮುಲುಕ, ಆಸಫ ಝಾಹ, ರೊಯಲ್ ವಿಕ್ಟೋರಿಯನ್ ಚೇನ್, ಜಿ. ಸಿ. ಎಸ್. ಆಯ್., ಜಿ. ಬಿ. ಈ. ಹೈದರಾಬಾದ ಮತ್ತು ವರ್‍ಹಾಡದ ನಿಜಾಮರು. ಇಷ್ಟು ಉದ್ದಾದ್ದ ಬಿರುದು ನಿಜಾಮರಿಗೆ ಇರುತ್ತದೆ.

ಅವರ ವಯಸ್ಸು ಈಗ ೬೨ ವರುಷ, ಇವರು ಅಶಕ್ತ ಪ್ರಕೃತಿಯವರಂತೆ ತೋರುತ್ತಾರೆ. ಆದರೆ ಅಧಿಕಾರ ದೊಡ್ಡದುಂಟು ಅವರ ಜೀವನ-ಕ್ರಮ ಸಾಧಾರಣವಾದದ್ದು. ಇವರ ಅರಮನೆಗಳು ೬ ಇವೆ ಅವುಗಳಲ್ಲಿ ತೀರ ಚಿಕ್ಕದಾದ ಅರಮನೆಯಲ್ಲಿ ಇವರು ವಾಸಿಸುತ್ತಾರೆ. ಹಳೇ ನಮೂನೆಯ ಟುಪಿಗಳನ್ನು ಧರಿಸುತ್ತಾರೆ; ರುಮಾಲನ್ನು ಕಟ್ಟುತ್ತಾರೆ. ರಾಜ-ದರಬಾರಕ್ಕೆ ಹೋಗುವಾಗ ಉದ್ದನ್ನ ನಿಲುವಂಗಿಯನ್ನು ಧರಿಸಿಕೊಂಡು ಒಂದು ಪದಕವನ್ನು ಹಾಕಿಕೊಳ್ಳುತ್ತಾರೆ ನಿಲುವಂಗಿ ಬಿಳೀ ಬಣ್ಣದ್ದು, ಒಮ್ಮೊಮ್ಮೆ ಕೆಂಪು ಬಣ್ಣದ ನಿಲುವಂಗಿಯನ್ನೂ ಹಾಕಿಕೊಳ್ಳುವ ಪ್ರೀತಿ. 'ದೇವರು ಮಾರ್ಗದರ್ಶಕನಾಗಿರಲಿ' "Heaven's Light Our Guide" ಎಂಬ ವಚನ ಪದಕದ ಮೇಲೆ ಇದೆ.

ನಿಜಾಮರು ನಸುಕು ಹರಿಯುವ ಮುಂಚೆ ಏಳುತ್ತಾರೆ ಮತ್ತು ರತ್ನಕಂಬಳಿ ಹಾಸಿ ಮಕ್ಕಾ ಕ್ಷೇತ್ರದ ಕಡೆಗೆ ಮೋರೆ ತಿರುವಿ ಪ್ರಾರ್ಥನೆ ಮಾಡುತ್ತಾರೆ. ಆ ಮೇಲೆ ಪರಿಮಳಯುಕ್ತ ನೀರಿನಿಂದ ಜಳಕ ಮಾಡುತ್ತಾರೆ. ನಿಜಾಮರು ಸಾಬೂನವನ್ನು ಉಪಯೋಗಿಸುವದಿಲ್ಲ; ಅಟ್ಟೆಣಿಯ ಹಿಟ್ಟಿನಿಂದ ಮೈ ತಿಕ್ಕಿಕೊಳ್ಳುತ್ತಾರೆ ಜಳಕ ಮುಗಿದ ಬಳಿಕ ಒಂದಿಷ್ಟು ಹಾಲು ಕುಡಿದು ಆ ಮೇಲೆ ಅಲ್ಪ ಆಹಾರ ಕೊಳ್ಳುತ್ತಾರೆ ಚಹ-ಕಾಫಿಗಳನ್ನು ನಿಜಾಮರು ಕುಡಿಯುವದಿಲ್ಲ. ಆ ಮೇಲೆ ಬೀಡಿ ಸೇದುತ್ತಾರೆ. ಅವು ಸಾದಾ ಬೀಡಿಗಳು. ದಿನ ೧ಕ್ಕೆ ೨ ಆಣೆ ಖರ್ಚು ಬರುವಂತಹವು. ಅವರು ಸಾಮಾನ್ಯವಾಗಿ ತಿನ್ನುವದು ಮೋಗಲಾಯಿ ಪಿಲಾವ ಮತ್ತು ಕಬಾಬಗಳಂಥ ಸಾಮಾನ್ಯ ಪಕ್ವಾನ್ನಗಳು ಆದರೆ ಸಂಭ್ರಮದ ಭೋಜನಗಳಲ್ಲಿ ಪಾರಿವಾಳ ಮೊದಲಾದ ಪಕ್ಷಿಗಳ ಮಾಂಸಗಳಿಂದ ಮಾಡಿದ ಪಕ್ವಾನ್ನಗಳನ್ನು ತಯಾರಿಸಿ ಬಡಿಸುತ್ತಾರೆ ಪಕ್ವಾನ್ನ ಮಾಡುವ ಮುಂಚಿನ ದಿವಸ ಆ ಪಾರಿವಾಳಗಳಿಗೆ ತಿನ್ನಲಿಕ್ಕೆ ಮುತ್ತು ಕೊಡುವದುಂಟು! ನಿಜಾಮರು ಉಣ್ಣುವದು ಬಂಗಾರದ ಪಾತ್ರೆಗಳಲ್ಲಿ!

ಉಪಹಾರ ಮುಗಿಸಿ ನಿಜಾಮರು ರಾಜ್ಯಕಾರಭಾರವನ್ನು ನಡಿಸತೊಡಗುತ್ತಾರೆ. ಜಗಲಿಯ ಮೇಲೆ ಕೂತುಕೊಂಡು ನಿತ್ಯ-ಪತ್ರಿಕೆಗಳನ್ನು ಓದುತ್ತಾರೆ. ಮಹತ್ವದ ಪತ್ರಗಳಿಗೆ ಸ್ವತಃ ಉತ್ತರ ಬರೆಯುತ್ತಾರೆ, ಪ್ರಧಾನರೊಡನೆ ಆಲೋಚನೆ ಮಾಡುತ್ತಾರೆ, ರಾಜ್ಯಭಾರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಸ್ವತಃ ಅಭ್ಯಸಿಸಿ ನಿರ್ಣಯ ಮಾಡುತ್ತಾರೆ, ಇವೇ ಮೊದಲಾದ ರಾಜ-ಕಾರ್ಯಗಳನ್ನು ನಿಜಾಮರು ಸ್ವತಃ ಮಾಡುತ್ತಾರೆ ಕೆಲಸ ಮುಗಿಯುವನಕ ಅವರು ಅಲ್ಲಿಂದ ಕದಲುವದಿಲ್ಲ.

ಉರ್ದು-ಇರಾಣಿ ಭಾಷೆಗಳಲ್ಲಿ ಲಹರಿ ಬಂದಾಗ ಚಿಕ್ಕ ಪುಟ್ಟ ಕವಿತೆಗಳನ್ನು ನಿಜಾಮರು ಬರೆಯುವದುಂಟು, ಕುದುರೆ-ಸವಾರಿ ಮಾಡುವದುಂಟು ಕುದುರೆ-ಲಾಯದಲ್ಲಿ ತರತರದ ಗಾಡಿಗಳಿವೆ. ಆ ಗಾಡಿಗಳ ಒಳಭಾಗದಲ್ಲಿ ಚಿನ್ನದ ತಗಡುಗಳನ್ನು ಹೊಡೆದಿದ್ದರೂ ಇಷ್ಟು ವೈಭವವಿದ್ದರೂ, ನಿಜಾಮರು ತಿರುಗಾಡುವದು ಸಾಮಾನ್ಯ ಫೋರ್ಡ ಮೋಟಾರಿನಲ್ಲಿ

ಬ್ರಿಟಿಶ ಸರಕಾರಕ್ಕೆ ಮೊದಲನೇ ಮಹಾಯುದ್ಧದ ಕಾಲದಲ್ಲಿ ನಿಜಾಮರು ೩॥ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಮಹಾಯುದ್ಧದಲ್ಲಿ ತುರ್ಕಸ್ಥಾನದ ವಿರುದ್ಧ ನಿಜಾಮರ ಸೈನಿಕರು ಹೋರಾಡಿದ್ದುಂಟು ೨ನೇ ಮಹಾಯುದ್ಧದಲ್ಲಿ ಬ್ರಿಟಿಶ ವೈಮಾನಿಕರ ಸಂರಕ್ಷಣೆಗಾಗಿ ಸ್ವರಾಜ್ಯದೊಳಗಿನ ಮಸೀದೆಗಳಲ್ಲಿ ನಿಜಾಮರ ಅಪ್ಪಣೆಯಂತೆ ಪ್ರಾರ್ಥನೆಗಳಾಗಿದ್ದವು.

ನಿಜಾಮರ ಐಶ್ವರ್ಯಕ್ಕೆ ಮಿತಿಯಿಲ್ಲ ನಿಜಾಮ ರಾಜ್ಯಕ್ಕೆ ವರ್ಷಾಸನ ೧೮ ಕೋಟಿ ರೂ. ಉತ್ಪನ್ನವಿದೆ ೬೫ ಕೋಟಿ ರೂ. ಗಿಂತ ಹೆಚ್ಚಿಗೆ ಬೆಲೆಯುಳ್ಳ ಚಿನ್ನ ನಿಜಾಮರ ತಿಜೋರಿಯಲ್ಲಿ ಉಂಟು ೪೫ ಕೋಟಿ ರೂ. ಬೆಲೆಯ ರತ್ನಗಳುಂಟು. ಇದಲ್ಲದೆ ೪೦ ಅಬ್ಜ ರೂ. ಬೆಲೆಯ ಆಸ್ತಿಯುಂಟು ಇಷ್ಟೆಲ್ಲ ಯಾರಿಗೂ ಸಿಕ್ಕಿಲ್ಲ ಇವೆಲ್ಲ ಅಂದಾಜುಗಳು.

ನಿಜಾಮರು ಇಷ್ಟು ಐಶ್ವರ್ಯವಂತರಾಗಿದ್ದರೂ ಉದಾರ ಸಂಸ್ಥಾನಿಕರಂತೆ ದುಂದುಗಾರರಲ್ಲ. ರೂ. ೧೦೦-೫೦೦-೧೦೦೦ಗಳ ನೋಟುಗಳ ಮೇಲೆ ಭಾರಿ ಹೊಗೆಸೊಪ್ಪು ಹಾಕಿ ಸೇದುವ ವಿಲಾಸಿ ಶ್ರೀಮಂತರಿದ್ದಾರೆ! ಜೂಜಾಡುವ, ಕುದುರೆ ಶರ್ಯತ್ತು ಆಡುವ, ಕೀರ್ತಿ-ಮೇಟಿಯಲ್ಲಿ ಹಣ ಮಾಡುವ ಧನ್ಯ-ಚಕ್ರ ಸಂಸ್ಥಾನಿಕರಿದ್ದಾರೆ! ನಿಜಾಮರಿಗೆ ಆ ಯಾವದೇ ತರದ ದುಶ್ಚಟದ ವ್ಯಸನವಿಲ್ಲ ನಿಜಾಮರಿಗೆ ಒಂದು ಹೆಬ್ಬಯಕೆ ಪೂರ್ಣವಾಗಬೇಕು, ಸರ್ವ-ಸ್ವತಂತ್ರ ಸಾರ್ವಭೌಮ ಅರಸರಾಗಿ ಮೆರೆಯಬೇಕೆಂಬ ಮಹತ್ವಾಕಾಂಕ್ಷೆಯುಂಟು! ೧೯೨೨ನೇ ಇಸ್ವಿಯಲ್ಲಿ ಸ್ವಾತಂತ್ರ್ಯ ಬಿರುದನ್ನು ಇವರು ಪಡೆದುಕೊಂಡಿದ್ದರು. ೨೦೦ ವರುಷಗಳ ಹಿಂದೆ ನಿಜಾಮ-ಉಲ್-ಮುಲುಕನೆಂಬ ಮೊಗಲ ಸುಭೇದಾರನು ಅಸಫ ಜಹಾನನು ಮೊಗಲ ಬಾದಶಹರ ವಿರುದ್ಧ ಬಂಡಾಯ ಹೂಡಿ ನಿಜಾಮ ಮನೆತನವನ್ನು ಸ್ಥಾಪಿಸಿದ್ದರು ಅದರ ಸ್ವಾರ್ಥ ಸ್ವಾತಂತ್ರ್ಯದ ಪಾಲಿಸುವ ಯೋಜನೆಯುಳ್ಳ ಬ್ರಿಟಿಶರು ನಿಜಾಮರಿಗೆ ಸ್ವಾತಂತ್ರ್ಯದ ಆ ಪ್ರಚಾರ ಮಾಡಲು ನಿರ್ಬಂಧಿಸಿದರು. ಬ್ರಿಟಿಶರು ಹಿಂದುಸ್ಥಾನವನ್ನು ಬಿಟ್ಟು ಹೋದ ಬಳಿಕ ತಮ್ಮ ಸ್ವಾತಂತ್ರ್ಯ-ಸ್ವಪ್ನ ನಿಜವಾಗುವ ಕಾಲ ಬಂದಿರುವದೆಂದು ನಿಜಾಮರ ಭಾವನೆಯಾಗಿ ಅದನ್ನು ಸಾಧಿಸಲು ಅವರು ಈಗ ಪ್ರಯತ್ನಿಸುತ್ತಿದ್ದಾರೆ

ನಿಜಾಮರು ತಮ್ಮ ಬಡ ಹಿಂದು ಪ್ರಜೆಗಳಿಗೆ ಶ್ರೀಕ್ಷೇತ್ರ ಕಾಶಿ, ಗಯಾ, ಬದರಿನಾಥ, ರಾಮೇಶ್ವರ ಮೊದಲಾದ ಕಡೆ ಯಾತ್ರೆ ಮಾಡುವ ಹಣದಿಂದ ಹಿಂದೆ ವರ್ಷಾಸನ ರೂ ೫೦೦೦ ಧರ್ಮ ಮಾಡುತ್ತಿದ್ದರು ಹಿಂದುಸ್ಥಾನ ಸರಕಾರದೊಡನೆ ವಿರಸವಾದಬಳಿಕ, ಮುಟ್ಟಿ ೨ ತಿಂಗಳಿಂದ ಈಗ ಆ ರಕಮು ರೂ ೧೦೦೦೦ಕ್ಕೆ ಏ[illegible]ವಾಗಿ ನಿಜಾಮ ಸರಕಾರದ ಪ್ರಕಟನೆ ಹೊರಟಿದೆ.

ನಿಜಾಮ-ವ್ಯಕ್ತಿಯ ಬಗ್ಗೆ ಜನರೊಳಗಿನ ಪ್ರೀತ್ಯಾದರ ಗಳಿಸಿ, ನಿಜಾಮ ರಾಜ್ಯದ ಲೋಕ-ಸಂಖ್ಯೆ [illegible] ಕ್ಷೇತ್ರಫಳ [illegible] ಚದುರ ಮೈಲು

ನಿಜಾಮರಿಗೆ ೨೧ ತೋಫುಗಳ ಸಲಾಮಿ ಪಡೆಯುವ ಗೌರವ ಬ್ರಿಟಿಶ ರಾಜ್ಯದಲ್ಲಿ ಇತ್ತು.

ನಿಜಾಮ ರಾಜ್ಯ ಸ್ಥಾಪನೆಯಾಗಿ ಇಂದಿಗೆ ೨೨೫ ವರ್ಷಗಳಾದವು. ಈಗಿನ ನಿಜಾಮರಾದ ಮೀರ ಉಸ್ಮಾನ ಅಲಿಯವರು ಪಟ್ಟಕ್ಕೆ ಬಂದು ೩೭ ವರ್ಷಗಳಾದವು ಇಂಥ ಸಜ್ಜನ ನಿಜಾಮರಿಗೆ ದುರ್ಜನ ಶಕ್ತಿಯ ರಜವಿಯ ಸಹವಾಸ ಪ್ರಾಪ್ತವಾಗಿ ನಿಜಾಮ-ರಾಜ್ಯ ಅಳಿಯುವಾಗುವ ಕಾಲ ಬಂದೊದಗಿದೆಯೆಂದು ವಿಚಾರವಂತರು ಮರುಗುತ್ತಾರೆ

ನಿಜಾಮ-ರಾಜ್ಯ ಮೊಗಲ ಬಾದಶಹರ ದ್ರೋಹದಿಂದ ಸ್ಥಾಪಿಸಲ್ಪಟ್ಟಿದೆ ಔರಂಗಜೇಬ ಬಾದಶಹನು ನಿಜಾಮ ಮನೆತನದ ಮೂಲಪುರುಷನಿಗೆ ದಕ್ಷಿಣದ ಸುಭೇದಾರನಾಗಿ ೧೭೧೩ರಲ್ಲಿ ನೇಮಿಸಿದ್ದನು. ನಿಜಾಮ ಉಲ್ಮುಲ್ಕ ಎಂಬ ಬಿರುದನ್ನು ಅವರಿಗೆ ಔರಂಗಜೇಬನೇ ಕೊಟ್ಟಿದ್ದನು. ೧೭೪೮ರಲ್ಲಿ ದಿಲ್ಲಿಯ ಪಟ್ಟಕ್ಕಾಗಿ ಕಲಹಗಳುಂಟಾದವು ಆಗ ಬ್ರಿಟಿಶರ ಸಹಾಯದಿಂದ ನಿಜಾಮ ಅಲಿ ಇವರು ಸ್ವತಂತ್ರ ನಿಜಾಮರಾದರು! ಮುಂದೆ ಮೈಸೂರಿನಲ್ಲಿ ಹೈದರನೂ ಟೀಪು-ಸುಲ್ತಾನನೂ ಉದಯ ಹೊಂದಿ ದಕ್ಷಿಣ ಹಿಂದುಸ್ಥಾನವನ್ನು ವ್ಯಾಪಿಸಲಾರಂಭಿಸಿದರು ಆಗ ಬ್ರಿಟಿಶರಿಗೆ ಹಿಂದುಸ್ಥಾನ ಬಿಡುವ ಪ್ರಸಂಗ ಒದಗುತ್ತದೋ ಏನೋ ಎಂಬ ಭೀತಿಯುಂಟಾಯಿತು! ಟೀಪು ಸುಲ್ತಾನನು ಪ್ರಬಲನಾದರೆ ನಿಜಾಮ ರಾಜ್ಯಕ್ಕೆ ಬಾಧೆಯಾಗುವದೆಂದು ಧೂರ್ತ ಬ್ರಿಟಿಶರು ಹೇಳಿದ ಕಿವಿಮಾತನ್ನು ಆ ಕಾಲದ ನಿಜಾಮರು ನಂಬಿ, ಟೀಪು ಸುಲ್ತಾನನ ವಿರುದ್ಧ ಹೋರಾಡಲು ಬ್ರಿಟಿಶರಿಗೆ ಸಹಾಯ ಮಾಡಿದರು! ೧೮೫೭ರಲ್ಲಿ ಹಿಂದು-ಮುಸಲ್ಮಾನರೆಲ್ಲರೂ ಒಕ್ಕಟ್ಟಾಗಿ ಸ್ವಾತಂತ್ರ್ಯ-ಯುದ್ಧ ಸಾರಿದ್ದರು. ಆ ಯುದ್ಧಕ್ಕೆ ಶಿಪಾಯಿಗಳ ಬಂಡಾಯವೆಂದು ಬ್ರಿಟಿಶ ಇತಿಹಾಸಕಾರರು ಹೆಸರಾಕಿಸಿ ಬರೆದಿದ್ದಾರೆ! ಇಡೀ ಹಿಂದೀ ಜನಾಂಗ ಆಗ ಒಕ್ಕಟ್ಟಾಗಿತ್ತು. ಬ್ರಿಟಿಶರು ಆವಾಗಲೇ ಹೊರದೂಡುವ ಪ್ರಸಂಗ ಬಂದಿತ್ತು. ಆದರೆ ನಿಜಾಮರು ಮದ್ದುಗುಂಡುಗಳನ್ನು ಪೂರೈಸದಿದ್ದರೆ ಹಿಂದುಸ್ಥಾನವು ಬ್ರಿಟಿಶರಿಗೆ ದೊರೆಯುವದು ಸಂಶಯವಿತ್ತೆಂದೂ ಬ್ರಿಟಿಶ ಸೇನಾಧಿಪತಿಗಳೆಲ್ಲರೂ ಬರೆದಿಟ್ಟಿದ್ದಾರೆ ನಿಜಾಮರು ಆಗ ಹಿಂದುಸ್ಥಾನದ ದ್ರೋಹ ಮಾಡಿ ಬ್ರಿಟಿಶರಿಗೆ ಸಹಾಯ ನೀಡಿದ ಮತ್ತು ಹಿಂದ-ಭೂಮಿಯನ್ನು ದಾಸ್ಯಕೂಪದಲ್ಲಿ ಕೆಡಹಲು ನೆರವಾದ ಪುಣ್ಯ ಕಟ್ಟಿಕೊಂಡಿದ್ದಾರೆ. ಈಗಿನ ನಿಜಾಮರ ತಂದೆಯವರಾದ ಮೆಹಬೂಬ ಅಲಿ ಖಾನಬಹಾದ್ದೂರರವರು ಬ್ರಿಟಿಶರಿಗೆ ಸಹಾಯ ಮಾಡುವದಕ್ಕಾಗಿ ಸಾಮ್ರಾಜ್ಯ ಸೈನ್ಯ ಪಥಕಗಳನ್ನು ನಿರ್ಮಿಸಲು ಸಹಾಯ ಮಾಡಿದ್ದಲ್ಲದೆ, ಗಡಿನಾಡಿನ ಮುಸಲ್ಮಾನರನ್ನು ನಿರ್ಬಂಧಿಸುವದಕ್ಕಾಗಿ ನಡೆದ ಅಫಗಾನ-ಯುದ್ಧದ ವೆಚ್ಚಕ್ಕೆ ೬೦ ಲಕ್ಷ ರೂ. ಅರ್ಪಿಸಿ ತಮ್ಮ ಸಾಮ್ರಾಜ್ಯ ಭಕ್ತಿಯನ್ನು ವ್ಯಕ್ತಗೊಳಿಸಿದ್ದರು ತಮ್ಮ ಸ್ವಾರ್ಥಕ್ಕಾಗಿ ಹಿಂದೂಗಳಂತೆ ಮುಸಲ್ಮಾನರನ್ನೂ ಇತರರನ್ನೂ ಬಲಿ ಕೊಡಲು ನಿಜಾಮರ ಮನೆತನದವರು ಯಾವಾಗಲೂ ಸಿದ್ಧರಿದ್ದಾರೆ!

ನಿಜಾಮರ ಬಲವನ್ನು ಕುಟಿಲ ಬ್ರಿಟಿಶರು ಚನ್ನಾಗಿ ಅರಿತಿದ್ದಾರೆ. ನಿಜಾಮರೊಡನೆ ಸ್ನೇಹ ಬೆಳಸುತ್ತಿರುವಾಗಲೇ ಅವರ ರಾಜ್ಯವನ್ನು ಸಂಕೋಚಗೊಳಿಸುವ ಪ್ರಯತ್ನಗಳನ್ನು ಬ್ರಿಟಿಶರು ನಡಿಸಿದ್ದರು! ಸೈನ್ಯದ ಖರ್ಚಿನ ನೆವ ಹೇಳಿ ವರ್‍ಹಾಡವನ್ನೂ ಬೇರೆ ಕೆಲವು ಜಿಲ್ಲೆಗಳನ್ನೂ ಬ್ರಿಟಿಶರು ಕಸಿದುಕೊಂಡರು! ಪೂರ್ವ ಸಮುದ್ರದ ದಂಡೆಯ ಮೇಲಾಗಲಿ ಅರಬೀ ಸಮುದ್ರದ ದಂಡೆಯ ಮೇಲಾಗಲಿ ಒಂದು ಬಂದರ ಸಿಗಬೇಕೆಂದು ನಿಜಾಮರು ಬಹಳ ಪ್ರಯತ್ನ ಮಾಡಿದ್ದರು. ಆದರೆ ಬ್ರಿಟಿಶರು ತಮ್ಮ "ನಂಬಿಗಸ್ತ ಗೆಳೆಯನಿಗೆ" ಅದು-ಇದು ಸಿಗಗೊಡಲಿಲ್ಲ! ಬಂದರದ ಅಭಾವದಲ್ಲಿ ನಿಜಾಮರಿಗೆ ಹೊರ ಜಗತ್ತಿನೊಡನೆ ವ್ಯವಹಾರ ಮಾಡುವದಕ್ಕೆ ಅನುವು ಇಲ್ಲ ನಿಜಾಮ ರಾಜ್ಯದ ಆಕಾರ ಈ ಪರಿಯಾಗಿದೆ." ಇಂಥ ರಾಜ್ಯ ಈಗ ಅಳಿಗಾಲ ಹೊಂದುತ್ತಿರುವದು ಸೋಜಿಗವಲ್ಲ ಈ ತನಕ ಅದು ಹಾಗೆ ಉಳಿದದ್ದೇ ಆಶ್ಚರ್ಯ!

ನಿಜಾಮ ರಾಜ್ಯದಲ್ಲಿ ಒಂದು ಆಖ್ಯಾಯಿಕೆಯುಂಟು. ೧೦ನೇ ನಿಜಾಮರ ಕಾಲದಲ್ಲಿ ನಿಜಾಮ ರಾಜ್ಯ ನಷ್ಟವಾಗುತ್ತದೆಂದು ಅಲ್ಲಿಯ ಭಾವಿಕರು ಹೇಳುತ್ತಾರೆ. ಈ ಆಖ್ಯಾಯಿಕೆ ಪರಂಪರೆಯಿಂದ ನಡೆದು ಬಂದಿದೆ. ಈಗಿನ ಅರಸರಾದ ಮೀರ ಉಸ್ಮಾನ ಅಲಿಯವರು ೧೧ನೇ [illegible] ನಿಜಾಮ ರಾಜ್ಯ ಇವರೊಡನೆಯೇ ನಷ್ಟವಾಗುವದೆಂದು ಜನಭಾವನೆಯುಂಟು.

ನಿಜಾಮರಿಗಾದರೂ ಈ ಭೀತಿಯುಂಟಾಗಿರಬಹುದು. ಆದ್ದರಿಂದಲೇ [illegible] ಅಂತೂ, ಸುತ್ತುಮುತ್ತು [illegible], ನಿಜಾಮರು ಸಭ್ಯಸಭ್ಯತೆಯ ಪರಿವೆ ಇಡದ ರೀತಿ ನೀತಿಗಳನ್ನು ಉಲ್ಲಂಘಿಸಿ ನಡೆಯುತ್ತಲಿದ್ದಾರೆ. ಯುರೋಪದಿಂದ [illegible] ೫೦ ಕೋಟಿ ರೂಗಳ ಮದ್ದುಗುಂಡುಗಳನ್ನು ಅವರು ಖರೀದಿ ಮಾಡಿದ್ದಾರೆಂದೂ, ಕಳ್ಳತನದಿಂದ ಹೈದರಾಬಾದದಲ್ಲಿ ಅವನ್ನು ತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದೂ ವಾರ್ತೆಯುಂಟು. ಜಲ, ನೆಲ ಮಾರ್ಗಗಳಿಂದ ಅವನ್ನು ತರಿಸಿಕೊಳ್ಳಲಿಕ್ಕೆ ಶಕ್ಯವಿಲ್ಲ. ಅದರಿಂದ ವಿಮಾನಮಾರ್ಗವಾಗಿ ಆ ಯುದ್ಧ-ಸಾಹಿತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ! ಯುದ್ಧಸಾಹಿತ್ಯ ತರುವ ವಿಮಾನದ ಪ್ರತಿಯೊಂದು ಸಾರಿಗೆ ೧೦-೧೦ ಲಕ್ಷ ರೂಗಳ ಹಣದ ವೇತನ ಕೊಡಲಿಕ್ಕೂ ಅವರು ಸಿದ್ಧರಾಗಿದ್ದಾರೆ! ಕ್ರಮಬದ್ಧ (regular) ಸೈನ್ಯವನ್ನು ಹೆಚ್ಚಿಸಿಕೊಂಡರೆ ಹೆಚ್ಚಿನ ಖರ್ಚು ತಗಲುತ್ತದೆಂದು ರಝಾಕಾರರಿಗೆ ಸೈನ್ಯ ಶಿಕ್ಷಣ ಕೊಡಿಸಿ ೪೦ ಸಾವಿರವಷ್ಟು [illegible] ಸೈನಿಕರನ್ನು ತಯಾರಿಸಿದ್ದಾರೆ. ರಝಾಕಾರರು ಲೂಟಿಗಾರರ ವರ್ಗಕ್ಕೆ ಸೇರಿದವರು! ಕೆಲದಲ್ಲಿ ಅವರೇ ಲೂಟಿ ಮಾಡಿ ತಮ್ಮ [illegible] ಸಾಗಿಸಿಕೊಳ್ಳುತ್ತಾರೆ. ನಿಜಾಮರು ರಝಾಕಾರರ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆಂದೂ, ಅವರಿಗೆ ಸ್ವಂತ ವಿಚಾರದಿಂದ ವರ್ತಿಸುವ ಸ್ವಾತಂತ್ರ್ಯವಿಲ್ಲೆಂದೂ, [illegible] ನಿಜಾಮರಲ್ಲಿಂದ ವಾರ್ತೆಗಳು ಹಬ್ಬಿದ್ದು(?) ಆದರೆ ತಮ್ಮ ರಾಜಕಾರಣದ ಸಕಲ ಸೂತ್ರಗಳನ್ನು ನಿಜಾಮರೇ ನಡೆಸುತ್ತಾರೆಂದೂ, ಪ್ರಸಂಗ ಬಂದಾಗ ಆಕ್ರಮಣಗಳ ಹೊಣೆ ತಪ್ಪಿಸಿಕೊಳ್ಳುವ ದೆಸೆಯಿಂದ ಈ ನಮೂನೆಯ ಮಾಟ ಮಾಡಿದ್ದಾರೆಂದೂ "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಪ್ರತಿನಿಧಿಗಳು ಬರೆಯುತ್ತಾರೆ.

ನಿಜಾಮರು ಮೇಲಿನಂತೆ ಯುದ್ಧದ ತಯಾರಿ ಮಾಡಿದರೂ ಅದಕ್ಕೆ ಹಿಂದುಸ್ಥಾನ ಸರಕಾರವು ಅಷ್ಟು ಮಹತ್ವ ಕೊಡಲು ಸಿದ್ಧವಿಲ್ಲ. ಅದು ಯುದ್ಧವಲ್ಲೆಂದೂ, [illegible] ಒಂದು [illegible] ಘಟನೆಯೆಂದೂ, ಹೈದರಾಬಾದವು ಎಂದೂ ಸ್ವತಂತ್ರ ರಾಜ್ಯವಾಗಿ ವ್ಯವಹರಿಸಲಾರದೆಂದೂ, ಆ ಪ್ರಕಾರ ವ್ಯವಹರಿಸಲಿಕ್ಕೆ [illegible] ಕೊಡಲಿಕ್ಕಿಲ್ಲೆಂದೂ ಪಂ|| ಜವಾಹಿರಲಾಲ ನೆಹರೂರವರು ಸ್ಪಷ್ಟವಾಗಿ ಘೋಷಿಸಿದ್ದಾರೆ. ಶಾಂತತೆಯಿಂದ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಇವರ ಪ್ರಯತ್ನಗಳು ನಡೆದಿವೆ. ನಿಜಾಮ ರಾಜ್ಯದೊಳಗೆ ಈಗ ಗೊಂದಲ ಬಹಳವಾಗಿದೆ. ಯಾರ ಜೀವನಕ್ಕೆ ಸುರಕ್ಷಿತವಿಲ್ಲ! ಇಂಥಲ್ಲಿ ನಾಳೆ, ಹಿಂದೀ ಸೈನ್ಯವು ನಿಜಾಮರ ರಾಜ್ಯವನ್ನು ಆಕ್ರಮಿಸಿ, ಆ ರಾಜ್ಯದಲ್ಲಿ ಸೇರಿದ ಬೇರೆ ಬೇರೆ ಭಾಗಗಳನ್ನು (ಆಂಧ್ರ, ಕರ್ನಾಟಕ, ಮಹಾರಾಷ್ಟ್ರ) ಬೇರ್ಪಡಿಸಿ ಹಿಂದುಸ್ಥಾನಕ್ಕೆ ಸೇರಿಸುವ ಸಂಭವವುಂಟು. ಬರುವ ಒಂದೆರಡು ತಿಂಗಳಲ್ಲಿ ಈ ಪರಿಣಾಮ ಒದಗಿ ಬರಬಹುದು.

ನಿಜಾಮರ ರಾಜ್ಯದಲ್ಲಿ ಈಗ ಯುದ್ಧ ತಯಾರಿ ಭರದಿಂದ ನಡೆದಿದೆ. ಖಾಸಿಮ ರಝ್ವಿಯು ಯುದ್ಧ ತಯಾರಿ ಮಾಡುವದಕ್ಕೆ ಅಲ್ಲಲ್ಲಿ ಮೆರೆಯುತ್ತಿದ್ದಾನೆ! [illegible] ರಝಾಕಾರರ ಸೈನಿಕರಾಗಿದ್ದಾರೆ! [illegible] ಬ್ರಿಟಿಶ್ ಅಧಿಕಾರಿ(?) [illegible] ಇವರಿಗೆ ತಿಂಗಳಿಗೆ ರೂ [illegible] ವರೆಗೆ ಸಂಬಳ ಕೊಡಲಾಗುತ್ತಿದೆ. ಅರಬರ [illegible] ಪಥಕವನ್ನು ಯುರೋಪಿಯನ್ ಅಧಿಕಾರಿಗಳು ತಯಾರಿಸುತ್ತಿದ್ದಾರೆ. ಹೈದರಾಬಾದಕ್ಕೆ ವಿವಿಧ ಸಾಮುಗ್ರಿಗಳನ್ನು ಒಯ್ಯುತ್ತಿರುವೆಂದು ಹೇಳಲಾದ [illegible] ಕಳ್ಳ ವೈಮಾನಿಕ ಸಿಡ್ನೀ ಕಾಟನ್ನನಿಗೆ ನಿಜಾಮರು ೧ ಕೋಟಿ ರೂಪಾಯಿಗಳನ್ನು ಕೊಡಮಾಡಿದ್ದಾರೆಂದೂ, ಯುದ್ಧ ಪ್ರಸಂಗದಲ್ಲಿ ಯುರೋಪದಿಂದ ವಿಮಾನ ಪಡೆಯನ್ನು ನಿಜಾಮರಿಗೆ ಪೂರೈಸುವ ಕರಾರನ್ನು ಆ ಕಳ್ಳನು ಮಾಡಿದ್ದಾನೆಂದೂ ಹೇಳುತ್ತಾರೆ. ಹೈದರಾಬಾದ ಗಡಿ ಪ್ರದೇಶದಲ್ಲಿ ಹಿಂದುಸ್ಥಾನದ ಸೈನ್ಯ ಪಥಕಗಳು ನಿಜಾಮರ ಸೈನ್ಯಕ್ಕೆ ಎದುರಾಳಿಯಾಗಿ ಹೋರಾಡಲು ಸಜ್ಜಾಗಿ ನಿಂತಿವೆ. ನಿಜಾಮರು ತಮ್ಮ ಸೈನ್ಯ ರಣರಂಗಕ್ಕೆ ಕಳಿಸುವ ಮೊದಲು ಸೇನೆಯ ಮುಂಭಾಗದಲ್ಲಿ ಹಿಂದೂ ಜನಸಮುದಾಯವನ್ನು ನಿಲ್ಲಿಸಿ ಅವರನ್ನು ಹಿಂದೀ ಸೈನಿಕರ ಗುಂಡಿಗೆ ಬಲಿ ಕೊಡುವ ಯೋಜನೆ ಮಾಡಿದ್ದಾರಂತೆ! ನಿಜಾಮರ ಮುಸಲ್ಮಾನೇತರ ಪ್ರಜೆಗಳಲ್ಲಿ ಹಿಂದೂ ಸರಕಾರವು ವಿಮಾನ ಮೂಲಕ ಶಸ್ತ್ರಗಳನ್ನು ಪೂರೈಸಿ [illegible] ಹೋರಾಡುವ ಅವಕಾಶವನ್ನು [illegible] ಒಡ್ಡುವ ಯೋಜನೆ [illegible] ಕೆಲವರ ಸಂಶಯವುಂಟು.

ನಿಜಾಮರ ಕೆಲಸಿಗನ ಹೆಸರ [illegible] ಎಂದು. [illegible] ಈತ ಹೇಳುತ್ತಾನೆ. ಮುಂಬಯಿಯ "ಬ್ಲಿಟ್ಜ್" ಪತ್ರಿಕೆಗೆ ಆತನು ಒಂದು ಪತ್ರ ಬರೆದು ನಿಜಾಮರನ್ನು [illegible] ನಡೆಸಿಕೊಳ್ಳಬೇಕೆಂದು ಜವಾಹರಲಾಲ ನೆಹರೂರವರಿಗೆ ಬಿನ್ನವಿಸಿದ್ದಾನೆ. ಹೈದರಾಬಾದದಲ್ಲಿ ಈವಾಗ ನಡೆದಿರುವ [illegible] ಉಸ್ಮಾನ ಖಾಸಿಮ ರಝ್ವಿ ಮತ್ತು ನಿಜಾಮರ [illegible] ಕಾರಣರೆಂದೂ ಸ್ವಂತ ಬುದ್ಧಿಯಿಂದ ವರ್ತಿಸಲು ನಿಜಾಮರಿಗೆ ಬಿಟ್ಟುಕೊಟ್ಟರೆ [illegible] ಈ ಕೆಲಸಿಗನ [illegible]. ನಿಜಾಮ ಗ್ರಹಗತಿ ಈವಾಗ ನೆಟ್ಟಗಿಲ್ಲೆಂದು ಜ್ಯೋತಿಷಿಗಳು ಹೇಳುತ್ತಾರೆ. ಆಗೋಸ್ತು ತಿಂಗಳು ತೀರ ಕೆಟ್ಟದು. ಸಪ್ಟಂಬರ ತಿಂಗಳ ತನಕ ಗ್ರಹಸ್ಥಿತಿ ಪ್ರತಿಕೂಲವಿದೆಯಂತೆ. ನವಂಬರ ತಿಂಗಳಲ್ಲಿ ಎಲ್ಲವೂ ಸರಿಹೋಗುವದಂತೆ. ಯುದ್ಧ [illegible] ನಿಜಾಮರಿಗೆ [illegible] ಜರ್ಮನ್ [illegible] ಒಂದು ೧೦ ಮೈಲುದ್ದ ಭೂಗತ ಮಾರ್ಗವನ್ನು ಕಟ್ಟಿಸಿದ್ದಾರೆ! ಆ ಮಾರ್ಗದಿಂದ ನಿಜಾಮರು ಪಾಕಿಸ್ತಾನಕ್ಕೆ ಹೋಗಲನುಕೂಲವಿದೆಯಂತೆ! ಹೀಗೆ ಸಹ ಕೆಲಸಿಗನು ಬರೆದಿದ್ದಾನೆ.

ನಿಜಾಮರ ಮಕ್ಕಳಿಗೂ ನಿಜಾಮರಿಗೂ ಮನಸ್ಸು ನೆಟ್ಟಗಿಲ್ಲ. ಹಿರಿಯ ಯುವರಾಜರು ನಿಜಾಮರ ಸೈನ್ಯದಲ್ಲಿಯ ಮುಖ್ಯ ಸೇನಾಧಿಪತಿಗಳಾಗಿದ್ದರು. ಅವರು ಮೊನ್ನೆ ರಾಜೀನಾಮೆ ಕೊಟ್ಟಿದ್ದಾರೆ. ನಿಜಾಮರ ಇನ್ನೊಬ್ಬ ಮಗನು [illegible] ಸಂಸ್ಥೆಯ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ನಿಜಾಮರ [illegible] ಒಡಕುಂಟಾಗಿದೆ(?). ಈ ಮಕ್ಕಳು ಹಿಂದುಸ್ಥಾನದ ಪಕ್ಷಪಾತಿಗಳೆಂದು ಹೇಳಲಾಗುತ್ತದೆ.

ಖಾಸೀಮ ರಝ್ವಿಯು ಯಾರು ?

ಇಂದು ಹಿಂದೂ-ಹೈದರಾಬಾದ ಪ್ರಕರಣದಲ್ಲಿ ನಿಜಾಮರಿಗಿಂತ ಖಾಸಿಮ ರಝ್ವಿಯು ಹೆಚ್ಚಿಗೆ [illegible] ಇಂಥ ಪ್ರಸಿದ್ಧ ಪುರುಷನ ಪೂರ್ವ [illegible] ಓದುಗರು [illegible]. ಖಾಸಿಮ ರಝ್ವಿಯು ಸಂಯುಕ್ತ ಪ್ರಾಂತದವನು. [illegible] ಜಮೀನದಾರನ ಮಗನು [illegible] ಕಾಲಕ್ಕೆ ಅವನ ಕುಟುಂಬದವರು ಬಹಳ ನಷ್ಟಪಟ್ಟು ಬಡವರಾದರು. ರಝ್ವಿಯು ತನ್ನ ಪ್ರಾರಂಭಿಕ ಶಿಕ್ಷಣವನ್ನು ಸ್ವಂತ ಊರಿನಲ್ಲಿ ಮುಗಿಸಿ ಉಚ್ಚ ಶಿಕ್ಷಣಕ್ಕಾಗಿ ಅಲಿಗಡ ವಿಶ್ವವಿದ್ಯಾಲಯವನ್ನು ಸೇರಿದನು. ಆಗ ಆ ವಿಶ್ವವಿದ್ಯಾಲಯದಲ್ಲಿ ಮುಸಲ್ಮಾನ ಯುವಕರಲ್ಲಿ ರಾಷ್ಟ್ರೀಯತೆಯು [illegible] ತುಂಬುವ ಪ್ರಯತ್ನಗಳು ಬಹಿರಂಗವಾಗಿ ನಡೆದಿದ್ದವು. ಪಾಕಿಸ್ತಾನದ ಬಹಳಷ್ಟು [illegible] ಕಾಲದಲ್ಲೇ ಅಲಿಗಡ ವಿದ್ಯಾಪೀಠದಲ್ಲಿ ಕಲಿಯುತ್ತಿದ್ದರು. ಖಾಸಿಮ ರಝ್ವಿಯು ಬಿ ಎ ಆಗಿ, ಮುಂದೆ [illegible] ಪರೀಕ್ಷೆಯನ್ನು ಕೊಟ್ಟು ವಕೀಲ-ವ್ಯವಸಾಯ ಮಾಡಲು ಹೈದರಾಬಾದಕ್ಕೆ ಬಂದನು. ಆದರೆ ಖಾಸಿಮ [illegible] ಸ್ವಭಾವಕ್ಕೆ ಮತ್ತು [illegible] ವಕೀಲವೃತ್ತಿಯು ಅಷ್ಟು ರುಚಿಸಲಿಲ್ಲ! ಆಗ ಅವನು [illegible] ದರೋಡೆಗಾರರ ಟೋಳಿಯನ್ನು ಕಟ್ಟಿಕೊಂಡು ಅಲ್ಲಲ್ಲಿ ಲೂಟಿ, ದರೋಡೆ ಕನ್ನ ನಡೆಸುತ್ತಿದ್ದನು! ಈ ಟೋಳಿಯ ಹಾವಳಿ ಹೆಚ್ಚಾದ್ದರಿಂದ ನಿಜಾಮರು ಅದರ ನಾಶಕ್ಕಾಗಿ ವಿಶೇಷ ಪೋಲೀಸ ಪಡೆಯನ್ನು ಕಳಿಸಬೇಕಾಯಿತು. ಖಾಸಿಮ ರಝ್ವಿಯು ಆಗ [illegible]. ಅವನ ಸಹಕಾರಿಗಳನೇಕರು ಸಿಕ್ಕಿಬಿದ್ದರು! ಕೆಲವರು ಸೆರೆಮನೆ ಸೇರಿದರು! ಈ ಪ್ರಕರಣ ಹಳತಾಗಿ ತಣ್ಣಗಾದ ಮೇಲೆ ಖಾಸಿಮನು ಕಳ್ಳನಂತೆ ಹೈದರಾಬಾದ ಸೇರಿ, ಅಲ್ಲಿ ವಕೀಲ-ವೃತ್ತಿಯನ್ನು ಆರಂಭಿಸಿದನು.

ಮುಸಲಿಮ ಇತ್ತೆಹಾದುಲ್-ಮುಸಲ್ಮೀನ ಸಂಸ್ಥೆಯನ್ನು ಕಟ್ಟಿದವನು ಖಾಸಿಮನಲ್ಲ. ೧೯೩೮ರಲ್ಲಿ [illegible] ಸಂಸ್ಥೆಯನ್ನು ಇತ್ತ ೪-೫ ವರ್ಷಗಳ ಹಿಂದೆ ಅವನು [illegible] ವಶಪಡಿಸಿಕೊಂಡಿರುತ್ತಾನೆ, ಮತ್ತು ಅದರ ಅಧ್ಯಕ್ಷನಾಗಿರುತ್ತಾನೆ. ಅವನು ಗಡ್ಡ ಬೋಳಿಸಿಕೊಳ್ಳುವದಿಲ್ಲ. ನೋಡುವವರಿಗೆ [illegible] ಕಾಣುತ್ತಾನೆ. ಹಿಟ್ಲರನಂತೆ ಸ್ವಕೀಯರಿಗೆ [illegible] ಸ್ವಪಕ್ಷಕ್ಕೆ ಸೇರಿಸಿಕೊಳ್ಳುವ ಕಲೆಯಲ್ಲಿ ಖಾಸಿಮ ರಝ್ವಿಯು ನಿಷ್ಣಾತನಿದ್ದಾನೆ. ಇತ್ತ ೨-೩ ವರ್ಷಗಳಲ್ಲೇ ಅವನು ನಿಜಾಮರನ್ನು ತನ್ನ ಬಲೆಯಲ್ಲಿ ಸಿಲುಕಿಸಿಕೊಂಡಿರುತ್ತಾನೆ.

NOTICE.

No 4817/INS/K R of 48
11—8—48

In continuation of this office notice No 4055 INS/KR of [illegible]-6-48 it is further notified that over load of 25% of the carrying capacity of each vehicle is permitted subject to the condition that the maximum laden weight limits of 14500 Lbs prescribed for the main provincial roads and 12500 Lbs on other roads in the mofussil are not exceeded. Owners of such vehicles entitled for this overload are to take if they so desire to carry the above concession temporary insurance cover for the additional load with immediate effect or to intimate in writing their intention of not carrying the above overload

D K Sukhtankar, (Dept)
Regional Transport Officer
Belgaum

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

Reg. No. B. 1270 Monday, 23-8-1948.

ಕಾನಡಾವೃತ್ತ

ವರ್ಷ ೧೦] THE KANARA NEWS. [ಸಂಚಿಕೆ ೮

ಕುಮಟಾ - ಸೋಮವಾರ, ತಾ ೨೩-೮-೧೯೪೮

ಜಾಹೀರಾತುಗಳ ದರ.-
ಮೊದಲನೇ ಸಲ ಕಾಲಮ್ ಉದ್ದ
ಸಾಲಿಗೆ ೮ ಆಣೆಯಂತೆ
ಹೆಚ್ಚು ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವರ್ಗಣಿಯ ದರ:
ಕುಮಟಿಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ,, ೦-೪-೦
ವ್ಹಿ. ಪಿ. ಯಿಂದ ಪಡೆಯತಕ್ಕವರು
ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿಯನ್ನು ಮುಂಗಡ ಕೊಡತಕ್ಕದ್ದು

ಸುದ್ದಿಗಳ ಸಂದೂಕ.

— ನಿಜಾಮರ ಹೈದರಾಬಾದದಲ್ಲಿ ನಿಜಾಮರ ಅರಬ ಸೈನಿಕರೂ, ಪಠಾಣ ಪೋಲೀಸರೂ, ರಝಾಕಾರರೂ ನಡೆಸಿರುವ ರಾಕ್ಷಸೀ ಅತ್ಯಾಚಾರಗಳನ್ನು ನೋಡುತ್ತ ಇಲ್ಲವೆ ಕೇಳುತ್ತ ಹಿಂದುಸ್ಥಾನ ಸರಕಾರವು ತೆಪ್ಪಗೆ ಕುಳಿತುಕೊಂಡರೆ ಮತ್ತು ನಿಜಾಮಿ ಪ್ರಜೆಗಳ ಕೊಲೆಯಾಗಗೊಟ್ಟರೆ ಜಗತ್ತಿನ ನ್ಯಾಯಾಲಯದಲ್ಲಿ ಹಿಂದುಸ್ಥಾನವು ಅಪರಾಧಿಯಾಗುವದೆಂದೂ, ನಿಜಾಮರನ್ನು ಕೂಡಲೇ ರಾಜ್ಯಾಧಿಕಾರದಿಂದ ತಳ್ಳಿ, ಸಂಸ್ಥಾನದಲ್ಲಿ ಜೋಣಗಾರ ಸರಕಾರ ಸ್ಥಾಪಿಸಬೇಕೆಂದೂ ಮಹಮದಾಬಾದದ ಮಹಾರಾಜಕುಮಾರ ಮಹಮ್ಮದ ಅಮೀರ ಅಲಿಖಾನರು ಮೊನ್ನೆ ಒಂದು ಪ್ರಕಟನೆ ಹೊರಡಿಸಿ, ಹಿಂದ-ಸರಕಾರಕ್ಕೆ ವಿನಂತಿ ಮಾಡಿದ್ದಾರೆ ಹಿಂದ-ಸರಕಾರದ ವಿರುದ್ಧ ಸಂಯುಕ್ತ ರಾಷ್ಟ್ರಗಳ ಸಂಘದ ಮುಂದೆ ದೂರುಕೊಳ್ಳಲು ನಿಜಾಮರಿಗೆ ಕಾಯದೆಯಂತಾಗಲಿ ನೀತಿಯಂತಾಗಲಿ ಅಧಿಕಾರವೇ ಇರುವದಿಲ್ಲೆಂದು ಮಹಾರಾಜ ಕುಮಾರರ ಪ್ರತಿಪಾದನೆಯುಂಟು

— ನಿಜಾಮರು ಯುಕ್ತ ರಾಷ್ಟ್ರ-ಸಂಘದ ಮುಂದೆ ತಮ್ಮ ದೂರು ದಾಖಲಪಡಿಸಲು ಬರುವಂತಿಲ್ಲೆಂದು ಬ್ರಿಟಿಶ ಮಹಾ ಪ್ರಧಾನರು ಸ್ಪಷ್ಟವಾಗಿ ತಿಳಿಸಿಹೇಳುತ್ತಿದ್ದರೂ, ನಿಜಾಮರ ಘಟನಾ-ಸಲಹೆಗಾರರಾದ ಸರ್ ವಾಲ್ಟರ ಮೊಂಕಟನ್ನರೂ ಲಂಡನದಲ್ಲಿರುವ ನಿಜಾಮರ ಪ್ರತಿನಿಧಿಗಳೂ ಕೊನೆಗೆ ಮನಸ್ಸು ಗಟ್ಟಿ ಮಾಡಿ ಹಿಂದುಸ್ಥಾನ ಸರಕಾರದ ವಿರುದ್ಧ ನಿಜಾಮರ ದೂರನ್ನು ಮುಂದಿನ ತಿಂಗಳು ಪ್ಯಾರೀಸದಲ್ಲಿ ಕೂಡಲಿರುವ ಯುಕ್ತ ರಾಷ್ಟ್ರ-ಸಂಘದ ಮುಂದೆ ಸಿರಿಯಾ ಸರಕಾರದ ಪ್ರತಿನಿಧಿಯ ಸಹಾಯದಿಂದ ಮಂಡಿಸಬೇಕೆಂದು ಯೋಚಿಸಿದ್ದಾರೆ! ಸಂಘದ ಸಭೆಯಲ್ಲಿ ನಿಜಾಮರ ಪಕ್ಷವನ್ನು ಎತ್ತಿಹಿಡಿಯಲು ಎಲ್ಲ ಮುಹಮ್ಮದೀ ರಾಷ್ಟ್ರಗಳ ಸರಕಾರಗಳ ಮನವೊಲಿಸುವ ಪ್ರಯತ್ನವೂ ನಡೆದಿದೆಯಂತೆ!

— ಹಿಂದೀ ಚಲನು ಸಿಗದೆ ನಿಜಾಮರು ಬಹಳ ಕಷ್ಟದಲ್ಲಿರುವರೆಂದೂ, ಈ ಕಷ್ಟದಿಂದ ಪಾರಾಗಲು ಹಿಂದ ಸರಕಾರದ ರೂ ೧೦೦ರ ನೋಟುಗಳಂತಹ ಖೊಟ್ಟಿ ನೋಟುಗಳನ್ನು ತಯಾರಿಸಲಾರಂಭಿಸಿದ್ದಾರೆಂದೂ ಹೈದರಾಬಾದ ಸಂಸ್ಥಾನ ಕೊಂಗ್ರೆಸ ಕಚೇರಿಯವರು ಬಹಿರಂಗಪಡಿಸಿರುತ್ತಾರೆ ಈ ನೋಟುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವುಗಳ ಮೇಲೆ "ಲಾಹೋರ" ಎಂಬ ಅಕ್ಷರಗಳು ಕಾಣುತ್ತವಂತೆ

— ಹಿಂದ-ಹೈದರಾಬಾದ ಯುದ್ಧವೆಸಗಿದಲ್ಲಿ ಇಜಿಪ್ತ ಸರಕಾರವು ನಿಜಾಮರಿಗೆ ತಾನೊಂದು ಬಾಂಬರ ವಿಮಾನಗಳ ಪಡೆಯನ್ನು ಕಳಿಸಿಕೊಡುತ್ತೇವೆಂದು ತಿಳಿಸಿರುತ್ತದಾಗಿ ಒಂದು ಸುದ್ದಿಯುಂಟು ನಿಜಾಮರು ಈ ಸಹಾಯವನ್ನು ಸ್ವೀಕರಿಸಲಿಲ್ಲವೆಂದೂ ಸುದ್ದಿಯಿದೆ

— ಹೈದರಾಬಾದಕ್ಕೆ ವಿದೇಶಗಳಿಂದ ಇನ್ನೂ ಶಸ್ತ್ರಾಸ್ತ್ರಗಳು ಬರುತ್ತಿರುವ ನಂಬಿಗಸ್ತ ವಾರ್ತೆಗಳು ಬರುತ್ತಿವೆ. ಸ್ವಿತ್ಸರ್ಲಂಡದಲ್ಲಿ ತಯಾರಾದ ಶಸ್ತ್ರಾಸ್ತ್ರಗಳನ್ನು ಹೇರಿಕೊಂಡು ಒಂದು ಬ್ರಿಟಿಶ ಲೆಂಕೆಸ್ಟರ ವಿಮಾನವು ಫ್ರಾನ್ಸದಿಂದ ಸದ್ಯಕ್ಕೆ ಹಾರಿಬಂದಿತ್ತೆಂದೂ ಈ ವಿಮಾನಕ್ಕೆ ಫ್ರೆಂಚ ಸರಕಾರವು ಹ್ಯಾಗೆ ಸಾರಿಗೆಯ ಅನುಮತಿ ಕೊಟ್ಟಿತೆಂಬುದರ ಚೌಕಶಿಯನ್ನು ಬ್ರಿಟಿಶ ಸರಕಾರವು ನಡಿಸಿದೆಯೆಂದೂ ಲಂಡನದಿಂದ ರೊಯ್ಟರ ಸಮಾಚಾರನು ತಿಳಿಸುತ್ತಾನೆ ಇಟೊಲಿಯಿಂದಲೂ ಪ್ರತಿ ರಾತ್ರೆ ಒಂದೊಂದು ವಿಮಾನ ಹೈದರಾಬಾದಕ್ಕೆ ಬರುತ್ತದೆಂದೂ, ಈ ವಿಮಾನಗಳು ಆಕಾಶದೊಳಗ ೮೦೦೦ ಅಡಿ ಎತ್ತರದಿಂದ ಹಾರುತ್ತವೆಂದೂ ಪ್ರತಿ ವಿಮಾನದಲ್ಲಿ ೧೦೦೦ದಷ್ಟು ಉತ್ಕೃಷ್ಟ ಜಾತಿಯ ಸ್ಟೆನ್-ಗನ್ನುಗಳೆಂಬ ಕೋವಿಗಳು ಬರುತ್ತವೆಂದೂ, ನಿಜಾಮರು ಅವುಗಳ ಬೆಲೆಯೆಂದು ತಿರುಗಿ ಚಿನ್ನ ಕಳಿಸುತ್ತಿರುವರೆಂದೂ "ಯುನ್ಯಾಯಿಟೆಡ್ ಪ್ರೆಸ್" ಸುದ್ದಿ ಸಂಸ್ಥೆಯ ಲಂಡನ್ ಪ್ರತಿನಿಧಿಯು ತಿಳಿಸುತ್ತಾನೆ

— ಹೈದರಾಬಾದವು ಹಿಂದುಸ್ಥಾನವನ್ನು ಸೇರಬೇಕೆಂದೂ ಹಿಂದುಸ್ಥಾನ ಸರಕಾರವು ದಕ್ಷತೆಯಿಂದ ಹೈದರಾಬಾದದ ಸಮಾಚಾರ ತಿಳಿಯುವದೆಂದೂ ಜನರು ಆಬಗ್ಗೆ ನಿಶ್ಚಿಂತವಾಗಿರಬೇಕೆಂದೂ, ಸರ್ವಾಧಿಪತಿಗಳಾದ ಶ್ರೀ॥ ರಾಜಾಜಿಯವರು ಬೆಂಗಳೂರಿನಿಂದ ಅಪ್ಪಣೆ ಕೊಟ್ಟಿದ್ದಾರೆ ನಿಜಾಮರನ್ನು ಹಣ್ಣಿಗೆ ತರಲು ಹಿಂದ-ಸರಕಾರವು ಎಲ್ಲ ಸೈನ್ಯ ಸಿದ್ಧತೆಯನ್ನು ಮಾಡಿರುತ್ತವೆಂದೂ, ಸಪ್ಟೆಂಬರ ತಿಂಗಳ ೨ನೇ ವಾರದ ವರೆಗೆ ಮಾತ್ರ ಯಾವದೇ ಕ್ರಮವನ್ನು ಹಿಂದ-ಸರಕಾರವು ಕೈಕೊಳ್ಳಲಿಕ್ಕಿಲ್ಲೆಂದೂ, ಹಿಂದೀ ಸೈನಿಕರು ಆಕ್ರಮಿಸಿಕೊಂಡಿರುವ ನಾನಜ ವಗ್ಯೆರೆ ಪ್ರದೇಶಗಳನ್ನು ಕೈವಶಪಡಿಸಿಕೊಳ್ಳಲು ನಿಜಾಮರ ಸೈನಿಕರು ಮುಂದಾದರೆ ಕೂಡಲೇ ಹಿಂದೀ ಸೈನ್ಯವು ಹೈದರಾಬಾದದಲ್ಲಿ ಒಳಹೊಕ್ಕುವದೆಂದೂ ಮುಂಬಯಿಯಿಂದ ವಾರ್ತೆ ಬಂದಿದೆ ನಿಜಾಮ ಸರಕಾರದ ಸೊಕ್ಕನ್ನು ಕೆಲವೇ ದಿನಗಳಲ್ಲಿ ಮುರಿಯಬರುವಷ್ಟು ಚೊಕ್ಕಟ ವ್ಯವಸ್ಥೆ ಮಾಡಲಾಗುತ್ತಿದೆಯಂತೆ

— ಹೈದರಾಬಾದ ಸಂಸ್ಥಾನದ ಮುಸಲ್ಮಾನೇತರ ಪ್ರಜೆಗಳೂ ಕೂಡ ಈಗ ಉಗ್ರ ರೂಪ ಧರಿಸಿ ನಿಜಾಮರ ಪರಲು ಹರಿದುಕೊಳ್ಳಹತ್ತಿರುತ್ತಾರೆ. ಕಳೆದ ತಾ ೧೫ ನೇ ದಿನ ಹಿಂದ-ಸ್ವಾತಂತ್ರ್ಯ ಜಯಂತಿಯ ಕಾಲಕ್ಕೆ ಗುಲಬರ್ಗಾ ಜಿಲ್ಲೆಯ ೭೫, ನಾಂದೇಡ ಜಿಲ್ಲೆಯ ೧೦, ಮತ್ತು ಔರಂಗಾಬಾದ ಜಿಲ್ಲೆಯ ೫ ಹೀಗೆ ಒಂಟು ೯೦ ಗ್ರಾಮಗಳು ತಮ್ಮ ಸ್ವಾತಂತ್ರ್ಯವನ್ನು ಉದ್ಘೋಷಿಸಿ, ತಮ್ಮಲ್ಲಿ ಹಿಂದೀ ಒಕ್ಕೂಟದ ರಾಷ್ಟ್ರಧ್ವಜವನ್ನು ಹಾರಿಸಿದವೆಂದು ಮದ್ರಾಸದಿಂದ ವಾರ್ತೆ ಬಂದಿದೆ ಉತ್ತರದಲ್ಲಿ ಉಸ್ಮಾನಾಬಾದ ಜಿಲ್ಲೆಯ ೧೦೭ ಹಳ್ಳಿಗಳೂ ಸ್ವತಂತ್ರವಾಗಿರುವವೆಂದು ಬಾರ್ಸಿಯಿಂದ ಇಂಡಿಯನ್ ಪ್ರೆಸ್ ವಾರ್ತಾಸಂಸ್ಥೆಯ ಪ್ರತಿನಿಧಿಯು ತಿಳಿಸುತ್ತಾನೆ ಈ ಹಳ್ಳಿಗಳಲ್ಲಿ ನಿಜಾಮರ ಸತ್ತೆಯನ್ನು ಪುನರೂರ್ಜಿತಗೊಳಿಸುವದಕ್ಕಾಗಿ ಉಸ್ಮಾನಾಬಾದ ಜಿಲ್ಲೆಯ ಕಲೆಕ್ಟರರು ಮುಂದಾಗಿದ್ದಾರೆ ರಝಾಕಾರರ ಸಹಾಯದಿಂದ ತಾವು ಈ ಕಾರ್ಯ ನೆರವೇರಿಸಬಹುದೆಂದು ಅವರು ಯೋಚಿಸಿದ್ದರಂತೆ ಆದರೆ ನಾರಸಿಂಹ ರೂಪವನ್ನು ಧರಿಸಿದ ಹಳ್ಳಿಗರನ್ನು ಎದುರಿಸಲು ರಝಾಕಾರರು ಒಪ್ಪುವದಿಲ್ಲವಾದ್ದರಿಂದ ಕಲೆಕ್ಟರರು ತಣ್ಣಗೆ ಕುಳಿತುಕೊಳ್ಳಬೇಕಾಗಿದೆ!

— ಹೈದರಾಬಾದ ಸಂಸ್ಥಾನಕ್ಕೆ ಈ ವರೆಗೆ ೮ ಲಕ್ಷ ಮುಸಲ್ಮಾನರು ಹಿಂದೀ ಒಕ್ಕೂಟದ ಪ್ರದೇಶಗಳಿಂದ ನಿರ್ಗಮಿಸಿಕೆಂದು ಹೋಗಿರುವರೆಂದೂ, ಅವರಲ್ಲಿ ೧೦,೬೦೦ ಜನರು ನಿಜಾಮರ ಪೋಲೀಸ ಇಲಾಖೆಯಲ್ಲಿ ಸೇರಿರುವರೆಂದೂ ಕೇಂದ್ರ ಕಾನೂನ-ಮಂಡಳದಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಜಾಹೀರಪಡಿಸಿದ್ದಾರೆ

— ಕೆಲವೊಂದು ಸಂಸ್ಥೆಗಳೂ ಶ್ರೀಮಂತ ವ್ಯಕ್ತಿಗಳೂ ಸರಕಾರಕ್ಕೆ ಸಲ್ಲಬೇಕಾಗಿರುವ ಆದಾಯ ತೆರಿಗೆ, ವಿಶೇಷ ಲಾಭದ ತೆರಿಗೆ ಮೊದಲಾದವನ್ನು ತಪ್ಪಿಸಿಕೊಂಡಿರುವ ಸಂಶಯ ಸರಕಾರಕ್ಕೆ ಬಂದು ಇಂತಹ ವ್ಯಕ್ತಿ ಸಂಸ್ಥೆಗಳ ಪ್ರಕರಣಗಳನ್ನು ಪರಿಶೀಲಿಸುವದಕ್ಕಾಗಿ, ೧೯೪೭ರ ಏಪ್ರಿಲದಲ್ಲಿ ಕೇಂದ್ರ ಸರಕಾರವು ಒಂದು ವಿಶೇಷ ಕಾಯದೆಯನ್ನು ಮಾಡಿ ಒಂದು ತಜ್ಞ-ಸಮಿತಿಯನ್ನು ನೇಮಿಸಲು ನಿರ್ಧರಿಸಿತು ಅವರೆ ನಡುವೆ ಭಾರತ-ವಿಚ್ಛೇದನ ಪ್ರಸಂಗ ಬಂದದ್ದರಿಂದ ಸಮಿತಿಯ ನೇಮಣೂಕಿಯನ್ನು ಮಾಡಲು ಕಾಲವಿಲಂಬವಾಯಿತು ಸಮಿತಿಯ ಮುಂದೆ ಇಡಬೇಕಾದ ಪ್ರಕರಣಗಳ ಪೂರ್ವ-ಪರಿಶೀಲನೆಗೂ ತಡವಾಯಿತು ತಾ ೩೧-

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

ಹೆಡ್ ಆಫೀಸು ಕುಂದಾಪುರ, ದ. ಕ.

ಒಂದುವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ
ಅತಿ ಕಡಿಮೆ ಶಿಲಕಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/-ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ, ತಾ. ೨೬-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ್ ಡ್ಯಾರೆಕ್ಟರ

—ಗಳೊಳಗಾಗಿ ಇಂತ ಪ್ರಕರಣಗಳನ್ನು ಸರಕಾರವು ಸಮಿತಿಗೆ ಸಾದರಗೊಳಿಸಬೇಕೆಂದು ಮೇಲೆ ಹೇಳಿರುವ ವಿಶೇಷ ಕಾನೂನಿನಲ್ಲಿ ಹೇಳಲಾಗಿತ್ತು. ಆ ಅವಧಿಯೊಳಗೆ ಎಲ್ಲ ಪ್ರಕರಣಗಳ ಪೂರ್ವ-ಪರಿಶೀಲನೆ ಮುಗಿದಿಲ್ಲವಾದರೂ ಸ್ವತಂತ್ರ ಭಾರತದ ಮೊದಲನೇ ಅರ್ಥ ಮಂತ್ರಿಗಳಾದ ಶ್ರೀ|| ಷಣ್ಮುಖಂ ಚೆಟ್ಟಿಯವರು ಕೊನೆಯ ಅವಧಿ ಸಮೀಪಿಸಿ ಬಂದದ್ದರಿಂದ ಸಮಿತಿಯ ಮುಂದೆ ಇಡಲು ಸಾಕಷ್ಟು ಪುರಾವೆಯಿಲ್ಲದ ಪ್ರಕರಣಗಳನ್ನು ಹಿಂದಿನಿಂದ ಹಿಂತಿರುಗಿಕೊಂಡರಾಯಿತೆಂದು ನಿರ್ಧರಿಸಿ ತಮ್ಮ ಮುಂದಿದ್ದ ಎಲ್ಲ ಪ್ರಕರಣಗಳನ್ನು ಚೌಕಶಿ ಸಮಿತಿಗೆ ಸಾದರಗೊಳಿಸಿಬಿಟ್ಟರು. ಆದೇ ಕಾಲಕ್ಕೆ ಚೌಕಶಿ ಸಮಿತಿಯ ನೇಮಣೂಕಿಯ ಕಾನೂನಿನಲ್ಲಿ ಕಂಡುಬಂದ ಕೆಲವೊಂದು ನ್ಯೂನತೆಗಳನ್ನು ಸರಿಪಡಿಸುವದಕ್ಕಾಗಿ ಶ್ರೀ|| ಚೆಟ್ಟಿಯವರು ಕಳೆದ ಪೆಬ್ರುವರಿಯಲ್ಲಿ ಒಂದು ಮಸೂದೆಯನ್ನೂ ಕಾನೂನ ಮಂಡಳದ ಮುಂದೆ ಇಟ್ಟರು. ಅವಾಗಲೇ ಅವರು ಚೌಕಶಿ-ಸಮಿತಿಯ ಮುಂದಿನ ಕೆಲವೊಂದು ಪ್ರಕರಣಗಳನ್ನು ಸ್ವತಃ ಪರಿಶೀಲಿಸಿ ಸಬಲ ಪುರಾವೆಯಿಲ್ಲೆಂದು ಕಂಡುಬಂದ ೪ ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ಆಜ್ಞೆ ವಿಧಿಸಿದ್ದರೆಂದು ತಿಳಿಯುತ್ತದೆ. ಚೌಕಶಿ-ಸಮಿತಿಯ ಸಮ್ಮತಿಯ ವಿನಹ ಹೀಗೆ ಮಾಡಿದ್ದು ತಪ್ಪೆಂದು ಹಿಂದಿನಿಂದ ಲಕ್ಷಕ್ಕೆ ಬಂದದ್ದರಿಂದ ಶ್ರೀ|| ಚೆಟ್ಟಿಯವರು ಮುಂದೆ ಸಮಿತಿಯ ಸಮ್ಮತಿಯನ್ನೂ ಪಡಕೊಂಡರು. ಈ ಪ್ರಕರಣಕ್ಕೆ ಆಜಯ-ವಾರ ದಿಲ್ಲಿಯಲ್ಲಿ ಕಾನೂನ-ಮಂಡಳದ ಕೆಲವು ಕೊಂಗ್ರೆಸ ಸದಸ್ಯರು ಪುನಃ ಬಣ್ಣ ಬಳಿದು ಶ್ರೀ|| ಚೆಟ್ಟಿಯವರನ್ನು ಕಟುತರವಾಗಿ ಟೀಕಿಸಿದರಂತೆ. ಆದರಿಂದ ಶ್ರೀ|| ಷಣ್ಮುಖಂ ಚೆಟ್ಟಿಯವರು ಕಳೆದ ವಾರ ತಮ್ಮ ಕೈಯಿಂದಾದ ತಪ್ಪು ಒಪ್ಪಿಕೊಂಡು ತಮ್ಮ ಮಂತ್ರಿಪದಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ಮುಖ್ಯ ಪ್ರಧಾನ ಪಂ|| ಜವಾಹರಲಾಲರು ಕೂಡ, ಶ್ರೀ|| ಚೆಟ್ಟಿಯವರ ತಪ್ಪು ಅಷ್ಟು ಮಹತ್ವದ್ದಲ್ಲೆಂದು ಕಂಡುಬಂದರೂ, ಅವರ ರಾಜಿನಾಮೆಯನ್ನು ಸ್ವೀಕರಿಸಿದ್ದಾರೆ. "ತಪ್ಪು ಸಣ್ಣದಿದ್ದರೂ, ಅದಕ್ಕೆ ಪ್ರಾಯಶ್ಚಿತ್ತ ಕೊಡಲೇಬೇಕು." ಎಂದು ಪಂಡಿತಜಿಯವರು ಈ ಸಂಬಂಧದಲ್ಲಿ ಕಾನೂನ-ಮಂಡಳದ ಸಭೆಯಲ್ಲಿ ನುಡಿದ ಮಾತು ನೆನಪಿನಲ್ಲಿಡತಕ್ಕಂತಹದಿದೆ." ಸಿಝರನ ಹೆಂಡತಿಯು ಯಾವಾಗಲೂ ಸಂಶಯಾತೀತಳಾಗಿರಬೇಕು." ಎಂಬಂತೆ ಲೋಕ-ರಾಜ್ಯದೊಳಗಿನ ಮಂತ್ರಿಗಳೂ ಅಪವಾದಾತೀತರಾಗಿರತಕ್ಕದ್ದು. ಎಂಬ ಮನನೀಯ ಆದರ್ಶವನ್ನು ಪಂ|| ನೆಹರೂರವರೂ ಶ್ರೀ|| ಚೆಟ್ಟಿಯವರೂ ಕೃತಿಯಿಂದ ಹಾಕಿಕೊಟ್ಟಿದ್ದಾರೆ. ಮುಂಬಯಿ ಸರಕಾರವೂ ಇನ್ನಿತರ ಪ್ರಾಂತಿಕ ಸರಕಾರಗಳೂ ಈ ಪ್ರಕರಣದಿಂದ ತಕ್ಕ ಬೋಧೆ ಪಡಕೊಂಡು, ತಮ್ಮಲ್ಲಿರುವ ಕಲ್ಮಷವನ್ನು ತೊಳೆದು ತೆಗೆಯುವ ಕಾರ್ಯವನ್ನು ಕೂಡಲೆ ಕೈಕೊಳ್ಳಬೇಕಾಗಿ ಸೂಚನೆಯಿದೆ

-- ಕಳೆದ ಫೆಬ್ರುವರಿ-ಮಾರ್ಚ ತಿಂಗಳಲ್ಲಿ ಮುಂಬಯಿ-ಮದ್ರಾಸ ಮತ್ತು ಮಧ್ಯಪ್ರಾಂತ ಸರಕಾರದವರು ಸಾರ್ವಜನಿಕ ಸುರಕ್ಷಿತತೆಯ ಕಾಯಿದೆಯನ್ವಯ ಎಷ್ಟೋ ಜನರನ್ನು ನಿರ್ಬಂಧಿಸಿಟ್ಟಿದ್ದರು. ಅವರಲ್ಲಿ ಬಹಳ ಜನರು ತಮ್ಮ ತಮ್ಮ ಹಾಯಕೋರ್ಟುಗಳಿಗೆ ಅರ್ಜಿ ಮಾಡಿ ತಮ್ಮ ಬಿಡುಗಡೆ ಮಾಡಿಕೊಂಡರು. ಆಗ ಈ ಸರಕಾರಗಳು ಹೊಸ ಕಾಯಿದೆಗಳನ್ನು ಮಾಡಿ, ಸಾರ್ವಜನಿಕ ಸುರಕ್ಷಾ ಕಾನೂನಿನನ್ವಯ ಬಂಧಿಸಲ್ಪಟ್ಟವರು ಹಾಯಕೋರ್ಟುಗಳಿಗೆ ಮೊರೆ ಹೋಗದಂತೆ ಮಾಡಿಬಿಟ್ಟವು!! ಈ ಕ್ರಮವು ಅಯುಕ್ತವಿರುತ್ತದೆಂತಲೂ, ಹಾಯಕೋರ್ಟುಗಳ ಅಧಿಕಾರಕ್ಕೆ ಯಾ ಗೌರವಕ್ಕೆ ಕುಂದು ಯಾ ಹಾನಿ ತರುವಂತಹ ಕಾಯಿದೆಗಳನ್ನು ಪ್ರಾಂತಿಕ ಸರಕಾರಗಳು ಮಾಡಕೂಡದೆಂತಲೂ ಸದ್ಯಕ್ಕೇ ಹಿಂದ-ಸರಕಾರವು ಒಂದು ಪರಿಪತ್ರ ಹೊರಡಿಸಿದೆ. ಹೊಸ ಒಕ್ಕಲತನದ ಕಾಯಿದೆಯ ಆಧಳತೆಯಲ್ಲಿ ಯಾವದೇ ನ್ಯಾಯಾಸನವು ಕೈಹಾಕವಂತೆ ನಿರ್ಬಂಧ ಹಾಕಲು ಸಿದ್ಧರಾದ ಶ್ರೀ|| ಮುರಾರಜಿ ದೇಸಾಯಿಯವರು ಈ ಪರಿಪತ್ರದಿಂದಲಾದರೂ ಬುದ್ಧಿಗಲಿಯಲೆಂದು ಹಾರೈಕೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮುಂಗಾರು ಮಳೆಯು ಪ್ರಾರಂಭದ ಅಷ್ಟೇನು ಕಂಡು ಬರುವದಿಲ್ಲ. ಕರಾವಳಿಯ ಭಾಗದಲ್ಲಿ ಆಗಾಗ ಮಳೆಯಾಗುತ್ತಿದ್ದರೂ ಅದರ ಪರಿಮಾಣ ಕಡಿಮೆಯುಂಟು. ಘಟ್ಟದ ಪಾರ್ಶ್ವದಲ್ಲಿ ಮಾತ್ರ ಕಳೆದ ವಾರ ವಿಪರೀತ ಮಳೆಯಾಗಿ, ಅಘನಾಶಿನಿ ಹೊಳೆಗೆ ಬಹು ದೊಡ್ಡ ನೆರೆ ಬಂದಿತ್ತು. ದೀವಗಿಯಲ್ಲಿ ಬುಧವಾರ-ಗುರುವಾರ ಟಪಾಲ ಕಟ್ಟೆಯ ಮನೆಯ ತನಕ ನೀರು ಹೋಗಿತ್ತಂತೆ, ಹೆಗಡೆಯಲ್ಲಿ ಶ್ರೀ ಅಮ್ಮನವರ ದೇವಸ್ಥಾನದ ಮುಂದಿನ ರಸ್ತೆಯ ವರೆಗೂ ನೆರೆ ನೀರು ಬಂದಿತ್ತೆಂದೂ, ಇಂತಹ ನೆರೆ ಕಳೆದ ೨೫-೩೦ ವರುಷಗಳಲ್ಲಿ ಎಂದೂ ಬಂದಿಲ್ಲೆಂದೂ ಹೇಳುತ್ತಾರೆ. ಮಳೆಗಾಲದ ಪ್ರಾರಂಭದಿಂದ ಈ ವರೆಗೆ ಬಿದ್ದ ಒಟ್ಟು ಮಳೆ ೧೨೪ ಇಂಚು ಆಗಿದೆ

ಸ್ವಾತಂತ್ರ್ಯ-ವರ್ಧಂತಿಯ ದಿನ ಇಲ್ಲಿಯ ದೇಸಾಯಿ ಶಾಲೆಯವರೂ ವಿಜೃಂಭಣೆಯ ಉತ್ಸವ ಮಾಡಿದರು. ಮುಂಜಾನೆ ಧ್ವಜವಂದನ ಮುಂತಾದ್ದು ನಡೆಯಿತು, ಮಧ್ಯಾನ್ಹದಲ್ಲಿ ಸೂತ್ರ ಯಜ್ಞ, ಆಟ ಪಾಟ ಮೊದಲಾದವುಗಳಾದವು, ಸಂಜೆಯ ಕಡೆ ವಕೀಲ ರಾ|| ನರಸಿಂಹ ಶಾನಭಾಗರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಸಮಯೋಚಿತ ಭಾಷಣಗಳಾದವು

ಹಿಂದೆ ತಿಳಿಸಿದಂತೆ ಕುಮಟಾ ಮ್ಯುನಿಸಿಪಾಲಿಟಿಯ ಹೊಸ ಸದಸ್ಯರು ಕಳೆದ ತಾ ೧೦ನೇ ಮಧ್ಯಾನ್ಹ ರಾ|| ಬಸ್ತಿ ಮಹಮೂದ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ಡಾ|| ಬಾಬಾ ಮ್ಹಾಳಪ್ಪಾಸ್ಯ ಇವರನ್ನು ಅಧ್ಯಕ್ಷರನ್ನಾಗಿಯೂ ರಾ|| ರಾಯಾ ಸುಬ್ಬ ಬಾಳಿಗಿ ಇವರನ್ನು ಉಪಾಧ್ಯಕ್ಷರನ್ನಾಗಿಯೂ ಆರಿಸಿದರು.

ಮುಂಬಯಿಯ ಕಂದಾಯ ಮಂತ್ರಿಗಳು ತಯಾರಿಸಿರುವ ಹೊಸ ಒಕ್ಕಲತನದ ಕಾನೂನಿನ ಮಸೂದೆಯ ಅಂಶಗಳು ಈಗಾಗಲೇ ಪ್ರಕಟವಾಗಿವೆಯಷ್ಟೇ. ಆ ಮಸೂದೆಯ ಬೇರೆ ಬೇರೆ ಅಂಶಗಳ ಸಂಬಂಧದಲ್ಲಿ ತಮ್ಮ ತಮ್ಮ ಆಕ್ಷೇಪಗಳನ್ನೂ ಸೂಚನೆಗಳನ್ನೂ ಅಭಿಮಾನದಾರರೂ ಒಕ್ಕಲಿಗರೂ ತಮಗೆ ಆದಷ್ಟು ತೀವ್ರ ಕಳಿಸಿಕೊಡಬೇಕಾಗಿಯೂ, ತಾವು ಅವನ್ನು ಮಂತ್ರಿಗಳ ಮುಂದಿಡುವೆವಾಗಿಯೂ ನಮ್ಮ ಜಿಲ್ಹೆಯ ಎಸೆಂಬ್ಲಿ-ಸದಸ್ಯರಾಗಿರುವ ರಾ|| ರಾಮಚಂದ್ರ ಮುಕುಂದ ಪ್ರಭು ಶಿರೂರ ಇವರು ತಿಳಿಸುತ್ತಾರೆ

ಹಿರೇಗುತ್ತಿಯಲ್ಲಿ ಕಳೆದ ವಾರ ಸ್ವತಂತ್ರ ಭಾರತ ಗ್ರಂಥಾಲಯವೆಂಬ ಸಂಸ್ಥೆ ಸ್ಥಾಪಿಸಲ್ಪಟ್ಟಿದೆ. ಸಂಸ್ಥೆಗೆ ಈಗಾಗಲೇ ರೂ. ೫೦ ಬೆಲೆಯ ಕನ್ನಡ, ಮರಾಠಿ, ಹಿಂದೀ, ಇಂಗ್ಲೀಷ ಪುಸ್ತಕಗಳು ದೊರೆತಿವೆ. ಸಂಸ್ಥೆಯು ದೈನಿಕ, ಸಾಪ್ತಾಹಿಕ ಪತ್ರಿಕೆಗಳನ್ನೂ ತರಿಸುತ್ತಿದೆ

ಹಿರೇಗುತ್ತಿಯಲ್ಲಿ ಇದೇ ಜೂನ ತಿಂಗಳಲ್ಲಿ ತೆರೆಯಲ್ಪಟ್ಟ ಮಿಡ್ಲ್ಯೇಗಿಲ ವಿದ್ಯಾಶಾಲೆಯಲ್ಲಿ ಈಗಾಗಲೇ ೮೩ ವಿದ್ಯಾರ್ಥಿಗಳು ದಾಖಲ ಆಗಿದ್ದಾರೆ. ಅವರಲ್ಲಿ ೧೩ ಹೆಣ್ಣು ಮಕ್ಕಳು. ಈ ಶಾಲೆಯಲ್ಲೀಗ ೫ ಇಯತ್ತೆಯ ವರೆಗಿನ ಇಂಗ್ಲಿಶ-ಹಿಂದೀ ಕಲಿಸುತ್ತಾರೆ. ಮುಂದೆ ಮೆಟ್ರಿಕ್ ತನಕ ಕಲಿಸುವ ವಿಚಾರದ ಮಾಡುವ ಆಲೋಚನೆ ಚಾಲಕರಲ್ಲಿದೆ. ಓರ್ವ ಗೃಹಸ್ಥರು ಶಾಲೆಗಾಗಿ ೧ ಎಕರೆ ಸ್ಥಳ ದಾನ ಮಾಡಿಕೊಡಲೊಪ್ಪಿದ್ದಾರೆ. ಶಾಲೆಯ ಇಮಾರತು ಮತ್ತು ವಿದ್ಯಾರ್ಥಿ ನಿಲಯದ ಕಟ್ಟಡಗಳಿಗಾಗಿ ರೂ. ೪೦೦ ವೆಚ್ಚ ಮಾಡಲು ಸೊಸ್ಯಾಟಿಯು ಮಂಜೂರ ಕೊಟ್ಟಿದೆಯಂತೆ.

ಅಂತರವಳ್ಳಿಯ ಕಾನಭೋಗರು ಹಳ್ಳಿಯ ಬಡಬಗ್ಗರಿಗೆ ಸೀಧಾ-ಚೀಟಿ ಮಾಡಿಕೊಡಲು ಕಷ್ಟ ಕೊಡುತ್ತಾರೆಂಬದೊಂದು ದೂರು ಬಂದಿದೆ.

ತೊರ್ಕೆಯಲ್ಲಿ ಕಳೆದ ಗುರುವಾರ (ತಾ. ೧೯)ದಿಂದ ತೊರ್ಕೆಯ ಸೇವಾನಿವೃತ್ತ ಶಿಕ್ಷಕ ರಾ|| ಗೋಪಾಳ ಮಾಸ್ತರರು ನಿರಕ್ಷರ ಪ್ರೌಢರನ್ನು ಸಾಕ್ಷರ ಮಾಡುವ ಉದ್ದೇಶದಿಂದ ಒಂದು ರಾತ್ರೆ ಶಾಲೆ ತೆರೆದಿದ್ದಾರೆ. ೪೧ ಮಂದಿ ಯುವಕರು ಈ ಶಾಲೆಯಲ್ಲಿ ತಮ್ಮ ಹೆಸರನ್ನು ದಾಖಲಪಡಿಸಿಕೊಂಡಿರುತ್ತಾರೆ.

ಹೊನ್ನಾವರ— (ತಾ ೨೦-೮-೪೮) ಇಂಜಿನಿಯರ ಇಲಾಖೆಯವರು ತಮ್ಮ ಮಾರ್ಗದಲ್ಲಿ ಮಣ್ಣು ಹಾಕಿಸುತ್ತಿದ್ದಾರೆ. ಆದರೆ ಈ ಕೆಲಸ ಸರಿಯಾಗಿ ನಡೆದದ್ದು ತೋರುವದಿಲ್ಲ.

ಕರ್ಕಿಯ ಯೋಗ್ಯ ದರದ ಅಂಗಡಿಯವರು ಜನರನ್ನು ಬಹಳ ದಣಿಸುತ್ತಾರೆಂಬ ದೂರು ಕೇಳಬರುತ್ತಿದೆ. ಗಿರಾಕಿಗಳು ಬಿಲ್ಲಿವೆ ತಂದರೆ ಇವರು ತಕ್ಕೊಳ್ಳುವದಿಲ್ಲವಂತೆ! ಹೆಂಗಸರ ಹೆಸರಲ್ಲಿ ಸೀಧಾ-ಚೀಟಿಗಳಿದ್ದರೆ ಸೀಧಾ ಒಯ್ಯಲು ಆ ಹೆಂಗಸರೇ ಬರಬೇಕೆಂದು ಆಗ್ರಹಿಸುತ್ತಾರಂತೆ! ಮತ್ತು ನಿರುಪಾಯವಾಗಿ ಆ ಹೆಂಗಸರು ಬಂದರೆ ಅವರನ್ನು ಅಸಭ್ಯ ರೀತಿಯಲ್ಲಿ ನಡಿಸುತ್ತಾರಂತೆ! ಮೇಲಾಧಿಕಾರಿಗಳು ಈ ದೂರುಗಳಲ್ಲಿ ಎಷ್ಟು ತಥ್ಯವುಂಟೆಂಬುದರ ಸ್ವತಂತ್ರ ಚೌಕಶಿ ಮಾಡಿ, ತಥ್ಯವಿದ್ದರೆ ಅಂಗಡಿಕಾರರಿಗೆ ತಕ್ಕ ಪ್ರಾಯಶ್ಚಿತ್ತ ವಿಧಿಸಬೇಕಾಗಿ ಸೂಚನೆಯುಂಟು.

ಇಡಗುಂಜಿಯಿಂದ ಮಂಕಿಯ ವರೆಗೆ ಆ ಸೀಮೆಯ ಜನರು ೨ ವರ್ಷಗಳ ಹಿಂದೆ ಒಂದು ಗಾಡಿ-ರಸ್ತೆ ಮಾಡಿಕೊಂಡಿದ್ದಾರೆ; ಅದನ್ನು ಜಿಲ್ಹಾ ಬೋರ್ಡ ಒಪ್ಪಿಸಿಕೊಳ್ಳಬೇಕಾಗಿ ಅವರ ಬೇಡಿಕೆಯುಂಟು. ಈ ಹಾದಿಯಲ್ಲಿ ಒಂದು ಹಳ್ಳವುಂಟು. ಅದಕ್ಕೊಂದು ಸಂಕ ಕಟ್ಟಬೇಕೆಂದೂ ಅವರು ಪ್ರಾರ್ಥನೆ ಮಾಡುತ್ತಾರೆ.

ಕಳೆದ ಜೂನ ತಾ ೧೮ಕ್ಕೆ ಹೊಸಪಟ್ಟಣದ ಮಂಜು ದೇವ ಗೌಡನ ಮನೆಯಲ್ಲಿ ಅಟಕಾಯಿಯವರು ಝಡತಿ ಮಾಡಿ ಒಂದು ಪಂಚನಾಮೆ ಮಾಡಿಸಿದ್ದರಂತೆ. ಆ ಪಂಚನಾಮೆಯು ಯಾಕೆ ಬೆಳಕಿಗೆ ಬರುವದಿಲ್ಲವೆಂದು ಹೊಸಪಟ್ಟಣದ ಗೌಡರೊಬ್ಬರು ಕೇಳುತ್ತಾರೆ. ಮೇಲಧಿಕಾರಿಗಳು ಇದೇನು ಪ್ರಕರಣವೆಂದು ಚೌಕಶಿ ಮಾಡಬೇಕು.

ಮುಡೇಶ್ವರ— (ತಾ. ೧೭-೮-೪೮.) ಇಲ್ಲಿಯ ಸೇನಾನಿವೃತ್ತ ಶಿಕ್ಷಕ ರಾ|| ಮುಡೇಶ್ವರ ಇವರು ಊರ ಮಧ್ಯಭಾಗದಲ್ಲಿ ಒಂದು ಗಾಂವಠಿ ಶಾಲೆ ತೆರೆದಿದ್ದಾರೆ.

ಶಿರಸಿ— (ತಾ ೧೬-೮-೪೮) ೮-೯ ದಿನಗಳ ಹಿಂದೆ ಸಹಕಾರಿ ಇಲಾಖೆಯ ಓರ್ವ ಅಧಿಕಾರಿಗಳಾಗಿರುವ ರಾ|| ವಿ. ಎಸ್ ಹೆಗಡೆಯವರು ಹೆಗಡೆಕಟ್ಟೆಯ ಸಹಕಾರಿ ಸಂಘದ ಸಭೆಗಾಗಿ ಹೆಗಡೆಕಟ್ಟೆಗೆ ಹೋಗಿದ್ದರು. ಸಂಘದ ಸಭೆ ನಡೆದಾಗ ರಾ|| ಹೆಗಡೆಯವರು ಸಂಘದ ಕಾರ್ಯದರ್ಶಿಗಳಾಗಿರುವ ರಾ|| ಮಾಣ್ಕಳತಾಯಿಮನೆ ಗಣಪತಿ ಹೆಗಡೆ ಇವರಿಗೆ ಬಹಳ ತುಚ್ಛತೆಯಿಂದ ಮಾತಾಡಿದರಂತಲೂ, ತಮ್ಮ ಅಧಿಕಾರದ ದರ್ಪ ತೋರಿಸಿದರೆಂತಲೂ ಓರ್ವ ಅಧಿಕಾರಿಗಳು ಈ ರೀತಿ ಊರೊಳಗಿನ ಓರ್ವ ಪ್ರತಿಷ್ಠಿತರನ್ನು ನಾಲ್ಕು ಜನರ ಮುಂದೆ ಹೀಗಳೆದದ್ದು ಸಹಕಾರದ ಮೂಲತತ್ವದ ದೃಷ್ಟಿಯಿಂದಂತೂ ತೀರ ಅನುಚಿತವಿರುತ್ತದೆಂತಲೂ "ಪ್ರೇಕ್ಷಕ" ರೋರ್ವರು ಬರೆಯುತ್ತಾರೆ.

ಸಿದ್ದಾಪುರ— (ತಾ. ೧೫-೮-೪೮) ಇಂದಿನಿಂದ ಊರೊಳಗೆ ಒಂದು ಗೆಸ್ ದೀಪ ಹಚ್ಚಬೇಕೆಂದು ಗ್ರಾಮಪಂಚಾಯ್ತಿ ತೀರ್ಮಾನಿಸಿದ್ದಾರೆ. ಇದೇ ಮೇರೆಗೆ ಹೊಸ ಪೇಟೆಯ ಮಾರ್ಗದಲ್ಲೂ ಅವರು ೧೨ ಗೆಸ್ ದೀಪಗಳನ್ನು ಹಚ್ಚಿಸಿದರೆ ಜನರಿಗೆ ಬಹಳ ಅನುಕೂಲವಾಗುವದೆಂದೂ ಓರ್ವ ವ್ಯಾಪಾರಸ್ಥರು ತಿಳಿಸುತ್ತಾರೆ

ಸ್ವಾತಂತ್ರ್ಯ–ವರ್ಧಂತಿ.

ಕನ್ನಡ ಜಿಲ್ಲೆಯೊಳಗೆ ಕಳೆದ ೧೫ ನೇ ತಾರೀಖಿನಲ್ಲಿ ನಡೆದ ಸ್ವಾತಂತ್ರ್ಯ ವರ್ಧಂತಿಯ ವರದಿಗಳು ಬಂದಿವೆ. ಎಲ್ಲ ಕಡೆಯಲ್ಲಿಯೂ ಧ್ವಜಾರೋಹಣ–ಧ್ವಜವಂದನೆಗಳು, ಪ್ರಭಾತಫೇರಿ, ಮೆರವಣಿಗೆ, ಸಭೆ, ಸಭೆಯಲ್ಲಿ ಸ್ವಾತಂತ್ರ್ಯದ ಗುಣಗಾನದ ವಿಷಯದ ಭಾಷಣಗಳು ಮುಂತಾದ ಕಾರ್ಯಕ್ರಮಗಳು ನಡೆದಿವೆ. ಅವನ್ನು ಪೃಥಕ್–ಪೃಥಕ್ ನಮೂದಿಸುವದು ಅನವಶ್ಯಕ. ಅಲ್ಲಲ್ಲಿ ನಡೆದ ವಿಶೇಷಗಳನ್ನಷ್ಟೇ ಈ ಕೆಳಗೆ ಕೊಡಲಾಗಿದೆ.

ಗೋಕರ್ಣ— ಧ್ವಜವಂದನೆಯಾದ ಮೇಲೆ ಕೋಟಿ ತೀರ್ಥದ ದಂಡೆಯ ಮೇಲೆ ಧ್ವಜಕ್ಕೆ ನಮಸ್ಕರಿಸಲಾಯಿತು. ಆ ನಂತರ ಮೆರವಣಿಗೆ ಹೊರಟಿತು. ಮೆರವಣಿಗೆಯು ಕ್ಷೇತ್ರದೇವತೆಯಾದ ಶ್ರೀ ಮಹಾಬಲೇಶ್ವರನ ಮಂದಿರಕ್ಕೆ ಬಂದ ಮೇಲೆ ಎಲ್ಲರೂ ಕೂಡಿ, ಈಗ ದೊರೆತಿರುವ ರಾಷ್ಟ್ರ-ಸ್ವಾತಂತ್ರ್ಯವನ್ನು ಚಿರಕಾಲ ಕಾಪಾಡುವಂತೆಯೂ ದೇಶವನ್ನು ಸುಖಿ ಮತ್ತು ಸಮೃದ್ಧ ಮಾಡುವಂತೆಯೂ ಶ್ರೀ ಮಹಾಬಲೇಶ್ವರನ ಕಡೆ ಭಕ್ತಿ-ಭಾವದಿಂದ ಪ್ರಾರ್ಥಿಸಿದರು. ನಂತರ ಮೆರವಣಿಗೆಯು ಸರಕಾರಿ ಚಿಕಿತ್ಸಾಲಯಕ್ಕೆ ಹೋಯಿತು. ಅಲ್ಲಿ ವೇದಮಂತ್ರಗಳೊಂದಿಗೆ ಕಲ್ಪವೃಕ್ಷದ ಆರೋಪಣ–ವಿಧಿಯಾಯಿತು. ಶ್ರೀ ಭದ್ರಕಾಳಿ ಹಾಯಸ್ಕೂಲಿನ ಪಕ್ಕದಲ್ಲಿರುವ ಬೈಲಲ್ಲಿಯೂ ಧ್ವಜಾರೋಹಣ-ಧ್ವಜವಂದನೆಗಳಾದವು. ರಾ|| ಗೋಪಿಯವರು ಧ್ವಜದ ಇತಿಹಾಸವನ್ನೂ ಮಹತ್ವವನ್ನೂ ತಿಳಿಸಿ ಹೇಳಿದರು. ಮಧ್ಯಾಹ್ನದಲ್ಲಿ ಬೇರೆ ಬೇರೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ವಿನೋದಾವಳಿಗಳಾದವು. ಸಂಜೆಯ ಸಾರ್ವಜನಿಕ ಸಭೆಯಲ್ಲಿ ಪುನಃ ರಾಷ್ಟ್ರ-ಧ್ವಜವನ್ನು ಎತ್ತಿ, ಎಲ್ಲಿ ಮತ್ತು ಹ್ಯಾಗೆ ಹಾರಿಸಬೇಕು, ಅದರ ಗೌರವವನ್ನು ಹೇಗೆ ಕಾಪಾಡಬೇಕು ಎಂಬ ವಿಷಯವನ್ನು (ಸರಕಾರವು ಹೊರಡಿಸಿರುವ ಪ್ರಕಟನೆಗನುಸಾರವಾಗಿ) ತಿಳಿಸಿ ಹೇಳಲಾಯಿತು. ರಾತ್ರಿ ರಾ|| ಗೋಪಿಯವರ ಮನೆಯ ಅಟ್ಟದ ಮೇಲೆ ಕನ್ನಡ ಶಾಲಾ-ಶಿಕ್ಷಕ ರಾ|| ಅನಂತ ಭಂಡಾರಿ ಅವರು ರಚಿಸಿದ (ವಾದ್ಯ-ಪ್ರಬಂಧ ಪ್ರಕಾರದ) "ಶಾಂತಿಸದನ" ಎಂಬ ಏಕಾಂಕ ನಾಟಕದ ಪ್ರಯೋಗವನ್ನು ಶಾಲಾ-ವಿದ್ಯಾರ್ಥಿಗಳು ಮಾಡಿ ತೋರಿಸಿದರು.

ನಾಡುಮಾಸ್ಕೇರಿ— ಮುಂಜಾನೆ ಮಾಡಿದ ಉತ್ಸವದಲ್ಲಿ ನೆರೆದಿದ್ದರು.

ಹಿರೇಗುತ್ತಿ— ರಾತ್ರಿ ಹೊಸ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳು ಕೃಷ್ಣಲೀಲಾ ಮತ್ತು ಉದ್ಧಾರ ಎಂಬ ಏಕಾಂಕ ನಾಟಕಗಳನ್ನಾಡಿ ತೋರಿಸಿದರು.

ಬಿಟ್ಕುಳಿ:— ಇಲ್ಲಿಯ ಉರ್ದು ಮತ್ತು ಕನ್ನಡ ಶಾಲೆಗಳ ವಿದ್ಯಾರ್ಥಿಗಳು ಕೂಡಿ ಉತ್ಸವ ಮಾಡಿದರು. ಸಂಜೆಯ ಸಭೆಯಲ್ಲಿ ಉರ್ದು ಶಿಕ್ಷಕ ರಾ|| ಖಾನ ಇವರು ನರಸ್ವರ ಪ್ರೌಢ ಪ್ರೌಢ ಶಾಲೆಯನ್ನು ಸೇರಿ ವಿದ್ಯೆ ಕಲಿಯಬೇಕೆಂದು ಬೋಧಿಸಿದರು. ಉತ್ಸವಕ್ಕೆ ಕೂಡಿದ ಜನರಿಗೆ ಪಂಚಕಜ್ಜಾಯವನ್ನೂ ಶಾಲೆಗಳ ವಿದ್ಯಾರ್ಥಿಗಳಿಗೆ ತಿಂಡಿಯನ್ನೂ ಹಂಚಿದರು. ರಾತ್ರಿ ದೇವಸ್ಥಾನಗಳಲ್ಲಿ ದೀಪಾರಾಧನೆಯಾಯಿತು, ಮತ್ತು ಶ್ರೀ ಅಮ್ಮನವರ ಗುಡಿಯಲ್ಲಿ ಯಕ್ಷಗಾನ-ಪ್ರಸಂಗ ನಡೆಯಿತು.

ಮೂರೂರು— ಧ್ವಜವಂದನೆ ಮುಗಿಯುತ್ತಲೇ ಸಭೆಯಾಯಿತು. ಸಭೆಯಲ್ಲಿ ಬಾಲಕರ ಭಾಷಣ ಸ್ಪರ್ಧೆ ನಡೆದು ೩ ವಿದ್ಯಾರ್ಥಿಗಳಿಗೆ ಇನಾಮುಗಳು ದೊರೆತವು. ವಿದ್ಯಾರ್ಥಿಗಳ ವಿನೋದಾವಳಿಗಳೂ ನಡೆದವು. ವೃಕ್ಷಾರೋಪಣದ ವಿಧಿ ಮಧ್ಯಾಹ್ನದಲ್ಲಾಯಿತು.

ಉಪ್ಪಿನಪಟ್ಟಣ:— ಗ್ರಾಮಸುಧಾರಣಾ ಸಂಘದವರು ಶಾಲಾ-ವಿದ್ಯಾರ್ಥಿಗಳ ಹಾಗೂ ಜನರ ಸಹಕಾರದಿಂದ ಉತ್ಸವವನ್ನಾಚರಿಸಿದರು. ಅಲ್ಲಲ್ಲಿ ಮಾವು, ಸಾಗವಾನಿ ಪಣ್ಣೆ ೨೦೦ ಗಿಡಗಳನ್ನು ನೆಡಲಾಯಿತು.

ಉಂಚಗಿ:— ಗಾಂವಠಿ ಶಾಲೆಯವರು ಉತ್ಸವ ಮಾಡಿ, ಭಾರತ ಮಾತೆಯು ಸ್ವಾತಂತ್ರ್ಯ ಸ್ಥಿರವಾಗಿ ಬಾಳಲೆಂದು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡಿಕೊಂಡರು.

ಊರಕೇರಿ— ಮುಂಜಾನೆ ಧ್ವಜವಂದನೆಯಾದ ಬಳಿಕ ಊರಕೇರಿ ಹಾಗೂ ಕಡವೆ ಶಾಲೆಯ ಶಿಕ್ಷಕರೂ ವಿದ್ಯಾರ್ಥಿಗಳೂ ಜನರೂ ಮೆರವಣಿಗೆಯಿಂದ ಶ್ರೀ ಗಣಪತಿ ದೇವರ ಗುಡಿಗೆ ಹೋಗಿ, ಸಾರ್ವಜನಿಕ ಪ್ರಾರ್ಥನೆ ಮಾಡಿಕೊಂಡರು. ನಂತರ ಶಾಲೆಯಲ್ಲಿ ಸಭೆಯಾಗಿ, ರಾ|| ಗಣಪತಿ ವಿಶ್ವೇಶ್ವರ ಭಟ್ಟ ಅವರ ಸ್ವಾತಂತ್ರ್ಯ ಭಾಷಣವಾಯಿತು.

ಹೊನ್ನಾವರ— ಅಧಿಕಾರಿಗಳೂ ವಿದ್ಯಾರ್ಥಿಗಳೂ ಸಾರ್ವಜನಿಕರೂ ಕೂಡಿ ಉತ್ಸವ ಮಾಡಿದರು.

ಕೆಕ್ಕಾರ— ಸಂಜೆಗೆ ಕೂಡಿದ ಸಭೆಯಲ್ಲಿ ಕೆಲವರ ಭಾಷಣಗಳಾದವು. ರಾ|| ಗಣೇಶ ಭಟ್ಟರು ತಮ್ಮ ಭಾಷಣದಲ್ಲಿ, ಎಲ್ಲರೂ ಜಾತೀಯತೆಯ ದುರಭಿಮಾನ ಬಿಟ್ಟುಕೊಟ್ಟು, ದೇಶಕ್ಕಾಗಿ ಸ್ವಾತಂತ್ರ್ಯ ರಕ್ಷಣೆಗಾಗಿ ತ್ರಿಕರಣಪೂರ್ವಕ ದುಡಿಯುವೆವೆಂದು ಪ್ರತಿಜ್ಞೆ ಕೊಡಬೇಕಾಗಿ ಉಪದೇಶ ಮಾಡಿದರು.

ನವಿಲಗೋಣ:— ಸಾರ್ವಜನಿಕ ಸಭೆ ಕನ್ನಡ ಶಾಲೆಯಲ್ಲಿ ಕೂಡಿತ್ತು. ಸಭೆಯ ಕೆಲಸ ತೀರಿದ ಮೇಲೆ ಅಧ್ಯಾಪಕರಾದ ರಾ|| ರಾಮ ನಾಯಕ ಅವರ ಕೀರ್ತನೆಯಾಯಿತು ಶಾಲಾ ಬಾಲಕರಿಗೆ ಸಿಹಿ ಹಂಚಲಾಯಿತು. ಉತ್ಸವಕ್ಕೆ ಬಂದ ಬಾಲ ಬಾಲಿಕೆಯರಿಗೆ ಸಿಹಿ ಹಂಚಿದರು.

ಹಡಿನಬಾಳ— ಇಲ್ಲಿಯ ಶಾಲೆಯಲ್ಲಿ ವಿದ್ಯಾರ್ಥಿಗಳೂ ಶಿಕ್ಷಕರೂ ಕೂಡಿ ಹಿಂದ-ಮಾತೆಯ ಸ್ವಾತಂತ್ರ್ಯ-ಸಂಪಾದನವನ್ನು ಆಚರಿಸಿದರು. ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಹೊಸಾಕುಳಿ— ಪಟೇಲರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಶಿಕ್ಷಕರು ಸ್ವಾತಂತ್ರ್ಯದ ಮಹತ್ವ ತಿಳಿಸಿ ಹೇಳಿದರು. ಸಂಜೆಯ ಕಡೆ ಊರೊಳಗಿನ ಎಲ್ಲ ಗುಡಿಗಳಲ್ಲಿ ಪೂಜೆಗಳಾದವು. ಸ್ವಾತಂತ್ರ್ಯವು ಎಲ್ಲರಿಗೂ ಸುಖಕರವಾಗಲೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳಲಾಯಿತು.

ಗುಂಡಬಾಳ:— ಮುಂಜಾನೆ ಮೊದಲು ದೇವಸ್ಥಾನದಲ್ಲಿಯೂ ಅಗಸೆಯಲ್ಲಿಯೂ ಪ್ರಾರ್ಥನೆಗಳಾದವು. ಆ ಮೇಲೆ ಧ್ವಜವಂದನಾದಿ ಕಾರ್ಯಕ್ರಮಗಳು ನಡೆದವು. ಸಭೆಯ ಕಾರ್ಯಕ್ರಮವು ಘಾಡ ಪರಿವಾರ ಇವರ ಹಿತ್ತಿಲಿನಲ್ಲಿ ನಡೆಯಿತು. ಶಾಲೆಯ ಆವಾರದಲ್ಲಿಯೂ, ಅಗಸೆಯ ಮಾರ್ಗದಲ್ಲಿಯೂ, ಗುಡಿಗಳ ಎದುರಿನ ಮೈದಾನಗಳಲ್ಲಿಯೂ ವೃಕ್ಷಾರೋಪಣ ಮಾಡಲಾಯಿತು.

ಮುರ್ಡೇಶ್ವರ:— ಮಧ್ಯಾಹ್ನ ಕೂಡಿದ ಸಾರ್ವಜನಿಕ ಸಭೆಯಲ್ಲಿ ಶಾಲೆಯ ಬಾಲ-ಬಾಲಿಕೆಯರ ಆಟಪಾಟಗಳೂ, ನೃತ್ಯ-ನಾಟಕಗಳೂ, ಹಾಸ್ಯ-ಭಾಷಣಗಳೂ ನಡೆದವು. ಶಾಲೆಯ ಆವಾರದಲ್ಲಿ ೫ ಗಿಡಗಳನ್ನು ನೆಡಲಾಗಿದೆ.

ಭಟಕಳ— ಬೇರೆ ಬೇರೆ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಶಾಲೆಗಳ ಧ್ವಜಾರೋಹಣ-ಧ್ವಜವಂದನಾದಿಗಳನ್ನು ಮುಗಿಸಿಕೊಂಡು, ಮೆರವಣಿಗೆಯಿಂದ ಮಾಮಲೇದಾರ ಕಚೇರಿಯ ಧ್ವಜವಂದನೆಗೆ ಹೋಗಿದ್ದರು. ಮಧ್ಯಾಹ್ನದ ಸಭೆ ಮೌಲಾನಾ ಸಾಬ ಮಂದಿರದಲ್ಲಿ ಕೂಡಿತ್ತು. ರಾ|| ಶಮಶುದ್ದೀನ ಜುಕಾಕೋ ಇವರು ಸಭಾಪತಿಗಳಾಗಿದ್ದರು. ಸಭೆಯಲ್ಲಿ ಕೆಲವು ಪ್ರಮುಖರ ಭಾಷಣಗಳಾದವು. ಅವುಗಳಲ್ಲಿ ಎಂಗ್ಲೋ-ಉರ್ದು ಹಾಯಸ್ಕೂಲಿನಲ್ಲಿ ಇತ್ತೀಚೆಗೆ ಶಿಕ್ಷಕರಾಗಿ ಬಂದಿರುವ ರಾ|| ಪರಮೇಶ್ವರ ಇವರ ಭಾಷಣ ಜನರಿಗೆ ತೀರ ವಿಚಿತ್ರ ತೋರಿತು. ನಮಗೆ ಸಿಕ್ಕ ಸ್ವಾತಂತ್ರ್ಯ ಕೊಂಗ್ರೆಸ್ಸ ಪ್ರಯತ್ನದಿಂದ ಸಿಕ್ಕಿದ್ದಿರುವದಿಲ್ಲೆಂತಲೂ ಬೇರೆ ಕಾರಣಗಳಿಂದ ಅದು ಸಿಕ್ಕಿರುತ್ತದೆಂತಲೂ ಅವರು ಪ್ರಸ್ತಾವನೆ ಮಾಡಿ, ಪಂಡಿತ ನೆಹರೂರವರ ಸರಕಾರವು ಕಾಶ್ಮೀರದಲ್ಲಿ ಅನಾವಶ್ಯಕ ಯುದ್ಧ ಹೂಡಿ,

ವಿವಿಧ ಉದ್ದೇಶಗಳ ಸಹಕಾರಿ ಸಂಘ,

ಹನೇಹಳ್ಳಿ--ಮಾಸ್ಕೇರಿ ಗ್ರಾಮ, ಹನೇಹಳ್ಳಿ.

(ಹಿರೇಗುತ್ತಿಯಿಂದ ಗೋಕರ್ಣ, ಗಂಗಾವಳಿ ಹಾದಿ)

ನಮ್ಮ ಸಂಘದ ಅಂಗಡಿಯಲ್ಲಿ ಕೋಲ ಹಚ್ಚುವ ಚಾಕುಗಳು 'ಕಂಟ್ರೋಲ ದರದಲ್ಲಿ ಮಾರಾಟಕ್ಕೆ ಸಿಗುತ್ತವೆ. ಬೇಕಾದವರು ಅರ್ಜಿ ಮಾಡಿಕೊಂಡು ಪಡಕೊಳ್ಳಬಹುದು.

ಹನೇಹಳ್ಳಿ, ತಾ ೨೦–೮–೪೭. } ಎಲ್. ಡಿ. ನಾಯ್ಕ, ಚೇರಮನ್.

Learn Hindi without a Teacher.

Self-Hindi-Teacher (through the medium of English) by a world-famous Hindi scholar Pages nearly 200 Third edition Neatly printed Price **Rs 2/–**

Home Dictionary - English Hindi Contains English words with their meanings in English It contains pronounciation 4th edition Neatly printed and handsomely bound and illustrated Pocket size Pages 1000 Price Rs 3/-

Self-Sanskrit-Teacher - Rs 2/

Practical English-Sanskrit Dictionary-Illustrated and bound Rs 2 -

A complete Sanskrit Grammar.- by Babu Ram Saxena, M A , D Litt Leader in Allahabad University Rs 2

English translation of Ramayana of Tulsidas- By F S Growse, B. C S, M.A., (Oxon) C I E Rs 5

Apply to

SHABBEER BROTHERS.

Booksellers, BHATKAL (N Kanara).

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

(ಸ್ಥಾಪನೆ: ೧೯೩೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡುಪಿ ಆಫೀಸ —

Post Box No 10,

UDIPI, S Kanara.

ದಿನಾಲೂ [illegible] ಒಕ್ಕ ರೂ ದುಂದು ಮಾಡುತ್ತಿರುವರು. ಲಾಂಚವಾಸ್ತವನೆಂದೂ, ನಿಜಾಮರ ಹೈದರಾಬಾದಕ್ಕೆ ಆರ್ಥಿಕ ದಿಗ್ಬಂಧನ ಹಾಕಿರುವ ತಪ್ಪಿಂದೂ ಪ್ರತಿಪಾದಿಸಿದರು! ನಿಜಾಮರಿಗೆ ಭಾರತದ ಸರ್ವಾಧಿಕಾರಿಗಳನ್ನಾಗಿ ಆರಿಸಿದರೆ ಸದ್ಯದ ಎಲ್ಲ ತಂಟೆ-ತಾಪತ್ರಯಗಳು ಒಯ್ಯಲಾಗುವವೆಂದು ರಾ॥ ಘಾರೇಕ್ಸರರು ಕೊನೆಗೊಂದು ಪರಿಹಾರ ಹೇಳಿ ತಮ್ಮ ಭಾಷಣ ಮುಗಿಸಿದರು! ಸಭಾಧ್ಯಕ್ಷರು ತಮ್ಮ ಸಮಾರೋಪದ ಭಾಷಣದಲ್ಲಿ ಈ ಪ್ರಶ್ನದ ಬಗ್ಗೆ ಹೇಳುವರೆಂದು ಸಭಿಕರು ಅಪೇಕ್ಷಿಸಿದ್ದರು ಆದರೆ ಆ ಅಪೇಕ್ಷೆ ವಿಫಲವಾಯಿತು! ಅಧ್ಯಕ್ಷರು ತಮ್ಮ ಹಿಂದೆ ನಿಷ್ಠೆಯನ್ನು ವ್ಯಕ್ತ ಮಾಡಬಹುದಿತ್ತು ಆದನ್ನೂ ಅವರು ಮಾಡಲಿಲ್ಲ! ಸರಕಾರವು ಮುಸಲ್ಮಾನರ ರಾಷ್ಟ್ರನಿಷ್ಠೆಯ ಬಗ್ಗೆ ಅವಿಶ್ವಾಸ ಒಡಿದು ದೇಶದ್ರೋಹಕ್ಕೆ, ಮುಸಲ್ಮಾನರ ವಿರುದ್ಧ ಅಪಪ್ರಚಾರ ಮಾಡಲು ಪತ್ರ-ಪತ್ರಗಳಿಗೆ ಪ್ರೋತ್ಸಾಹನ ಕೊಡುತ್ತದೆಂಬಲೂ ಆರೋಪಗಳನ್ನು ಮಾಡಲು ಅವರು ಮರೆಯಲಿಲ್ಲ!

ಮಹಾಲ ಕಚೇರಿಯವರಿಗೆ ಉತ್ಸವದ ಕಾರ್ಯಕ್ರಮಕ್ಕೆ ಬರಲು ಮಹಾಲಕರಿಗಳು ಸಾರ್ವಜನಿಕರಿಗೆ ಆಮಂತ್ರಿಸದೆ ಕೆಲವೇ ಮಂದಿ ಪ್ರತಿಷ್ಠಿತರಿಗೆ ಮಾತ್ರ ಆಮಂತ್ರಣ ಕೊಟ್ಟಿದ್ದು ತಪ್ಪೆಂದು ಓರ್ವರು ದೂರ ಇದ್ದರೆ ಕಚೇರಿಯಲ್ಲಿ ಆದ ಧ್ವಜವಂದನೆಯ ಕಾಲದಲ್ಲಿ ಈರ್ವ ಪ್ರಮುಖ ಅಧಿಕಾರಿಗಳು ಕಣ್ಣಿಗೆ ಬೀಳಲಿಲ್ಲವೆಂದು ಬೇರೊಬ್ಬರು ದೂರುತ್ತಾರೆ.

ಗೊರಟೆ ಗ್ರಾಮದ ಜನರೂ ವಿದ್ಯಾರ್ಥಿಗಳೂ ಕೂಡಿ ಉತ್ಸವ ಮಾಡಿದರು ಶ್ರೀ ಮಾಸ್ತಿ ದೇವಸ್ಥಾನದಲ್ಲಿ ಅಂದು ಪೂಜೆ-ಪ್ರಾರ್ಥನೆಗಳಾದವು.

ಬನವಾಸಿ— ಶಾಲೆ, ಧರ್ಮಶಾಲೆ, ಚಾವಡಿ, ಗಿರ್ಣಿ ಮೊದಲಾದ ಕಡೆ ಗಿಡಗಳನ್ನು ನೆಡಲಾಯಿತು. ನಾಗರಿಕರು ಬಡವರಿಗೆ ಅಕ್ಕಿ ಹಂಚಿದರು.

ಸೋಂದಾ:— ಗ್ರಾಮಾಧಿಕಾರಿಗಳೂ ಸಾರ್ವಜನಿಕರೂ ಕೂಡಿ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮ ಮುಗಿಸಿ, ಮೆರವಣಿಗೆಯಿಂದ ಹಳೆಯ ಅರಮನೆಗೆ ಹೋಗಿ, ಅಲ್ಲಿ ಧ್ವಜಾರೋಹಣ ಮಾಡಿದರು. ಈ ಧ್ವಜವು ಮುಂಬಯಿ ಸರಕಾರದಿಂದ ಬಂದಿತ್ತು. ಸಂಜೆಯ ಸಭೆಯಲ್ಲಿ ರಾ॥ ಕೇ. ಕೇ. ಕೋಲಾರಿ ಇವರು ರಾಷ್ಟ್ರಧ್ವಜದ ಮಹತ್ವ ಮತ್ತು ಅಸ್ಪೃಶ್ಯತಾ ನಿವಾರಣೆಯ ಆವಶ್ಯಕತೆಯನ್ನು ತಿಳಿಸಿ ಹೇಳಿದರು.

ಕೋಳಿಗಾರ— ಕಳೆದ ವರ್ಷ ಸ್ವಾತಂತ್ರ್ಯ ದಿನದಂದು ಇಲ್ಲಿಯ ಶಾಲಾ-ವಿದ್ಯಾರ್ಥಿಗಳು ತಮ್ಮದೊಂದು ವಾಚನಾಲಯವನ್ನು ತೆರೆದಿದ್ದರು. ಸ್ವಾತಂತ್ರ್ಯ ವರ್ಧಂತಿಯ ದಿನ ಅದರ ವರ್ಧಂತಿಯೂ ನಡೆಯಿತು. ಕಳೆದ ವರ್ಷ ವಾಚನಾಲಯಕ್ಕೆ ಸರಕಾರಿ ಧನಸಹಾಯ ರೂ ೧೮, ಸದಸ್ಯರ ವರ್ಗಣಿ ರೂ. ೫॥ ಮತ್ತು ಇತರ ವಂತಿಗೆಗಳಿಂದ ರೂ [illegible] ದೊರೆತಿದ್ದವು ಉತ್ಸವದ ಕಾಲಕ್ಕೆ ಈ ವಾಚನಾಲಯಕ್ಕೆ ಸರಸ್ವತೀ ವಾಚನಾಲಯವೆಂದು ಹೆಸರಿಟ್ಟು, ಅದರಲ್ಲಿ ಎಲ್ಲರಿಗೂ ಪ್ರವೇಶ ಕೊಡಬೇಕೆಂದು ನಿರ್ಣಯಿಸಲಾಯಿತು.

ಬೆಳನಳ್ಳಿ (ಮುಂಡಗೋಡ ಪೇಟಾ **)—** ರಾ॥ ಕೋರ ಇವರ ಅಧ್ಯಕ್ಷತೆಯಲ್ಲಿ ಎಲ್ಲ ಕಾರ್ಯಕ್ರಮ ನಡೆಯಿತು ಸ್ವಾತಂತ್ರ್ಯದ ಸ್ಮಾರಕವಾಗಿ ಊರ ಶ್ರೀ ದೇವರಲ್ಲಿ ಪ್ರಾರ್ಥಿಸಿಕೊಳ್ಳಲಾಯಿತು ಉತ್ಸವಕ್ಕೆ ಬಂದ ಜನರಿಗೆಲ್ಲ ರಾ॥ [illegible] ಭಟ್ಟರು ಉಪಹಾರವನ್ನಿತ್ತು ಸತ್ಕರಿಸಿದರು.

ಬಿದ್ರಕಾನ— ಮುಂಜಾನೆ ಧ್ವಜವಂದನ ಪ್ರಭಾತಫೇರಿ ಜರಗಿದ ಮೇಲೆ ಶಾಲಾ ವಿದ್ಯಾರ್ಥಿಗಳ ಆಟವಾಯಿತು ಮುಂತಾದ ಶಾರೀರಕ ಚಟುವಟಿಕೆಗಳು ನಡೆದವು. ಮಧ್ಯಾಹ್ನದ ಸಭೆಯಲ್ಲಿ ಶಿಕ್ಷಕ ರಾ॥ ಕರ್ಕಿಕೋಡಿ ಮತ್ತು [illegible] ಎಂ ಹೆಗಡೆ ಇವರು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿಷಯ

[illegible] ಉಪನ್ಯಾಸಗಳನ್ನಿತ್ತರು ಅನೇಕ ಗಾಯನ, ವಾದನ ಮುಂತಾದ ಕಾರ್ಯಕ್ರಮಗಳಾದವು. ದೇವಸ್ಥಾನಕ್ಕೆ ಹೋಗಿ ಸಂಸ್ಕೃತ ಸ್ವಾತಂತ್ರ್ಯ ಪ್ರಾರ್ಥನೆ ಮಾಡಿದರು ಸ್ವಾತಂತ್ರ್ಯ ವರ್ಧಂತಿಯ ಜೊತೆಗೆ [illegible] ವಾಚನಾಲಯದ ವರ್ಧಂತಿಯೂ ನಡೆಯಿತು ಕಳೆದ ವರ್ಷ ಈ ಸಂಸ್ಥೆಗೆ ರೂ ೧೮ [illegible] ಉತ್ಪನ್ನ ಸಿಕ್ಕಿದ್ದು, ರೂ ೧೩೧ [illegible] ಖರ್ಚಾಗಿದೆ. ಸದ್ಯಕ್ಕೆ ವಾಚನಾಲಯದಲ್ಲಿ ೧೯೯ ಪುಸ್ತಕಗಳಿವೆ

ಯಡಳ್ಳಿ— ಇಲ್ಲಿ ಇನ್ನಿತರ ಕಾರ್ಯಗಳಲ್ಲದೆ ಶ್ರೀ [illegible] ದೇವಾಲಯದಲ್ಲಿ ದೀಪಾರಾಧನೆ-ಪೂಜೆಗಳೂ ನಡೆದವು

ಹೊಸಕೋಟೆ— ಮಧ್ಯಾಹ್ನದ ಸಭೆಯಲ್ಲಿ ಹೈದರಾಬಾದ ಸಂಸ್ಥಾನದೊಳಗೆ ನಡೆದಿರುವ ರಾಕ್ಷಸೀ ಕೃತ್ಯಗಳ ನಿಷೇಧ ಮಾಡುವ ಠರಾವು ಪಾಸಾಯಿತು ಅಧ್ಯಕ್ಷ ರಾ॥ [illegible] ಭಟ್ಟರು ತಮ್ಮ ಭಾಷಣದಲ್ಲಿ ಮಹಾತ್ಮರ ವಿಧಾಯಕ ಕಾರ್ಯಕ್ರಮವನ್ನು ತಿಳಿಸಿದರು, ಅದನ್ನು ಆಚರಣೆಯಲ್ಲಿ ತರಲು ಬೋಧಿಸಿದರು.

ಮಸಗಾರ— ಮುಂಜಾನೆಯ ಕಾರ್ಯಕ್ರಮದ ಕೊನೆಗೆ ಎಲ್ಲರೂ ಶ್ರೀ ಗಣಪತಿಯ ಗುಡಿಗೆ ಹೋಗಿ, ದೇಶಕ್ಕೆ ಶಾಂತಿ-ಉನ್ನತಿಗಳನ್ನು ದಯಪಾಲಿಸಲು ಪ್ರಾರ್ಥನೆ ಮಾಡಿದರು. ಮಧ್ಯಾಹ್ನದ ಸಭೆ ಅಶ್ವತ್ಥಮರದ ಶ್ರೀ ಜಯಸ್ತಂಭ ಇವರ ಓಸರಿಯಲ್ಲಿ ನಡೆಯಿತು ವಿದ್ಯಾರ್ಥಿಗಳ ಆಟಪಾಟಗಳೂ ವಿನೋದಪ್ರಸಂಗಗಳೂ ನಡೆದವು ಅವರಿಗೆ ಬಹುಮಾನಗಳನ್ನೂ ಸಿಹಿಯನ್ನೂ ಹಂಚಿದರು

ಕಲಾಚೆ— [illegible] ಶಾಲೆಗಳು, ದೇವಸ್ಥಾನ ಮತ್ತು ಆನವಾನೆ ಊರವರು ಕೂಡಿ ಕಿಲರ ಕಸ್ಬಾ ದ ಶಾಲೆಯಲ್ಲಿ ಉತ್ಸವ ಮಾಡಿದರು. ವಿದ್ಯಾರ್ಥಿಗಳ ಆಟಗಳು ಮತ್ತು ವಿನೋದಾವಳಿಗಳೂ ನಡೆದವು

ಮಳಗಿ— ಸ್ವಾತಂತ್ರ್ಯೋತ್ಸವದೊಂದಿಗೆ ಶಾಲಾ ವಿದ್ಯಾರ್ಥಿಗಳು ಊರ ಸ್ವಚ್ಛತೆಯ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು ವಿದ್ಯಾರ್ಥಿಗಳ ಹಾಡು-ಆಟುವಟಿಕೆಗಳನ್ನು ನೋಡಿ ಸಭಾಧ್ಯಕ್ಷ ರಾ॥ ಶ್ರೀನಿವಾಸರಾವ ನಾಡಿಗ ಇವರು ಅವರಿಗೆ ಮಿಠಾಯಿ ಹಂಚಲು ರೂ ೧೮ ರೊಕ್ಕದ ಕಡೆ ಕೊಟ್ಟರು ರಾ॥ ಆನಂದ ಶೈ ಮಂಗಳೂರು ಇವರು ತಾವು ತಯಾರಿಸಿರುವ ಮಹಾತ್ಮರ ಭಾವಚಿತ್ರವನ್ನು ಬೋರ್ಡ ಹಾಕಿ ಶಾಲೆಗೆ ಕೊಡುತ್ತೇವೆಂದು ವಚನ ಕೊಟ್ಟಿದ್ದಾರೆ

ಓಣಿಕೇರಿ— (ಮುಂಡಗೋಡ ತಾ **)** ಪಟೇಲರೂ ಊರ ಜನರೂ ಕೂಡಿ ಉತ್ಸವ ಮಾಡಿದರು.

ಅಂಕೋಲಾ— ಸ್ವಾತಂತ್ರ್ಯ-ವರ್ಧಂತಿಯ ಶುಭ ಮುಹೂರ್ತದಲ್ಲಿ ೩ನೇ ನಂಬರ ಶಾಲೆಯಲ್ಲಿ ಹರಿಜನರ ಬಗ್ಗೆ ಒಂದು ಪ್ರಾಥಮಿಕ ಶಿಕ್ಷಣದ ವರ್ಗ ತೆರೆಯಲ್ಪಟ್ಟಿತು ಪ್ರಾರಂಭದ ದಿನವೇ ೩೦ ವಿದ್ಯಾರ್ಥಿಗಳು ವರ್ಗದಲ್ಲಿ ಸೇರಿದ್ದಾರೆ.

ಕಾರವಾರ— ಇಲ್ಲಿಯ ಟ್ರೇನಿಂಗ ಕಾಲೇಜದಲ್ಲಿ ಮುಂಜಾನೆ ಸ್ವಚ್ಛತೆಯ ಕಾರ್ಯಕ್ರಮದಿಂದ ಉತ್ಸವದ ಆಚರಣೆಗೆ ಆರಂಭವಾಯಿತು. ಟ್ರೇನಿಂಗ ಕಾಲೇಜು, ಸ. ಹೈಸ್ಕೂಲು, ಹಿಂದು ಹೈಸ್ಕೂಲು, ನಗರ ಸಭೆ ಆವಾರ, ಪೋಲೀಸ ಶಿಬಿರ ಮುಂತಾದ ಸ್ಥಳಗಳಲ್ಲಿ ಜರುಗಿದ ಪ್ರಾಥಮಿಕ ಧ್ವಜವಂದನೆ, ಪ್ರಭಾತಫೇರಿ ವಿಧಿಗಳು ನಡೆದವು. ಮಧ್ಯಾಹ್ನ ಟ್ರೇನಿಂಗ ಕಾಲೇಜದಲ್ಲಿ ಪ್ರಿನ್ಸಿಪಾಲ ರಾ॥ ಜೋಶಿಯವರ ಹಸ್ತದಿಂದ ನೇಯುವ ಮಗ್ಗದ ಉದ್ಘಾಟನೆ, ಸಹಕಾರ್ಯಜ್ಞ, ಶಾಂತಾರಾಮ-ಬಾಯಲ-ಲಾಚನಗಳ ಪದಗಳು, ಸಂಗೀತ ಹಿಂದೀ ಭಾಷೆಯ ಪಾರ್ಲಸ್ಪರ್ಧೆ ವಗೈರೆ ಕಾರ್ಯಕ್ರಮ ನಡೆಯಿತು

ಮರುದಿನ ತಾ ೧೬ಕ್ಕೆ ಶಿರೀನ ಚಿತ್ರಮಂದಿರದಲ್ಲಿ ರಾ॥ ಬಿ॥ ತೆಲಂಗ ರ ಅಧ್ಯಕ್ಷತೆಯಲ್ಲಿ ನಾಗರಿಕರ ಸಭೆಯಾಯಿತು ಸಭೆಯ ಪ್ರಾರಂಭಕ್ಕೆ ಮಹಾತ್ಮರ ನಿಧನದ ಬಗ್ಗೆ ದುಃಖದರ್ಶಕ ಠರಾವಾಯಿತು ಆಮೇಲೆ ಜಿಲ್ಲಾ ಫ.ಕ. ರಾ॥ ರೆಬೆಲೋ, ಗ್ರಾಮೋದ್ಧಾರ ಮಂಡಲದ ಕಾರ್ಯದರ್ಶಿ, ಜ ಪೋ. ಅಧ್ಯಕ್ಷ, ಶಾಲಾ ಬೋರ್ಡಿನ ಆಡಳಿತ ಅಧಿಕಾರಿ, ಮಹಿಳಾ ಮಂಡಲದ ಕಾರ್ಯದರ್ಶಿನಿ, ಸೇವಾದಲದ ಸಂಘಟಕ, ಹಿಂದೀ-ಪ್ರಚಾರಕ ಇವರು ತಮ್ಮ ತಮ್ಮ ವಿಭಾಗಗಳಲ್ಲಿ ಕಳೆದ ವರ್ಷ ಆದ ಪ್ರಗತಿಯನ್ನು, ಕಾರ್ಯವನ್ನೂ ವಿವರಿಸಿದರು ನಮ್ಮ ಜಿಲ್ಲೆ ಸಂಪನ್ನವಿದ್ದರೂ ತೀರ ಹಿಂದುಳಿದಿದೆ. ನಾವು ಅದರ ಏಳ್ಗೆಗಾಗಿ ದುಡಿಯಬೇಕು. ಜಿಲ್ಲೆಯಲ್ಲಿ ಕಳೆದ ವರ್ಷ ೧೫ ಹೊಸ ಚಿಕಿತ್ಸಾಲಯಗಳೂ ೩ ಪಶು-ಚಿಕಿತ್ಸಾಲಯಗಳೂ ತೆರೆಯಲ್ಪಟ್ಟಿವೆ ೪೪ ಗುಡಿಗಳಲ್ಲಿ ಹರಿಜನರಿಗೆ ಪ್ರವೇಶ ದೊರೆತಿದೆ ೯ ವಿನಾಶಗಾರರ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆ ದನಗಳ ಸುಧಾರಣೆಗಾಗಿ ೧೦ ದೊಡ್ಡ ಹೋರಿಗಳನ್ನು ತರಿಸಲಾಗಿದೆ ಎಂದು ಮುಂತಾಗಿ ವಿವರಿಸಿ, ಜಿಲ್ಲಾಧಿಪರು ಇಂಡಸ್ಟ್ರಿ-ಯೋಜನೆ, ಹಿಟ್ಟಿನ ಯೋಜನೆ, ಮದ್ಯನಿರೋಧನ, ಕೊರತಿಗಳ ಪೂರೈಕೆ ವಗೈರೆ ಕೆಲವು ವಿಷಯಗಳನ್ನೂ ಕುರಿತು ಸಂಕ್ಷಿಪ್ತ ಮಾಹಿತಿ ಕೊಟ್ಟರು.

ವಿನಾಯಕನಗರದ ಶಾಲೆಯಲ್ಲೂ ಸ್ಟೈಕರ ಮಂಡಳ(ಬೋರ್ಡ)ದ ವತಿಯಿಂದಲೂ ವಿದ್ಯಾರ್ಥಿಗಳ ಆಟ-ಪಾಟ, ಪಾರ್ಲಸ್ಪರ್ಧೆಗಳು ನಡೆದವು ಸೇವಾದಲದವರು ಅಂದು ಊರಲ್ಲಿ ಗಾಂಧಿ ಸ್ಮಾರಕ ನಿಧಿಗೆ ರೂ ೫೧ ಕೂಡಿಸಿದರು

ಹಳಗೆ-ಜೂಗ— ಇಲ್ಲಿಯ ನಾಗರಿಕರೂ ಶಾಲೆಯವರೂ ವಿಜೃಂಭಣೆಯಿಂದ ಉತ್ಸವ ಮಾಡಿದರು. ಮಧ್ಯಾಹ್ನದ ಸಭೆಯಾಗಿ ವಿದ್ಯಾರ್ಥಿಗಳ ಸ್ಪರ್ಧೆಗಳೂ ಭಾಷಣಗಳೂ ನಡೆದವು ಗೆದ್ದವರಿಗೆ ಇನಾಮುಗಳನ್ನು ಕೊಡಲಾಯಿತು

ಹಳಿಯಾಳ— ಮುಂಜಾನೆ ಪ್ರಭಾತಫೇರಿಯಾಯಿತು. ಅನಂತರ ಧ್ವಜಾರೋಹಣಾದಿ ಕಾರ್ಯಕ್ರಮಗಳು ನಡೆದವು ಜನರು ಕೋಟೆಗೆ ಹೋಗಿ ಅಲ್ಲಿಯ ೧೦೦ ಅಡಿ ಎತ್ತರವಿರುವ ಕಂಬದ ಮೇಲೂ ರಾಷ್ಟ್ರಧ್ವಜವನ್ನೇರಿಸಿದರು ಮಧ್ಯಾಹ್ನದಲ್ಲಿ ಶಿವಾಜಿ ಶಾಲೆಯ ವಿದ್ಯಾರ್ಥಿಗಳ ಆಟಪಾಟ ಮೇಳಾಟಗಳು ನಡೆದವು. ಗೆದ್ದವರಿಗೆ ಉಪಮಾಂ॥ ರಾ॥ ಸ. ದ. ಗಾಂವಕರ ಇವರ ಕಡೆಯಿಂದ ಇನಾಮುಗಳನ್ನು ಕೊಡಿಸಲಾಯಿತು

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", **KARWAR**, N. K

Offices at — KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital	.. Rs 10 00,000,
Subscribed Capital	.. Rs 5 00 000;
Paid-up Capital & Reserves .	Rs. 5,08,002-8-0

Rates of Interest on Deposits:

Current a/c @ 1% p. a, *Savings Bank a c @ 2½%*

Fixed Deposits for 3 months @ 3% per annum.

" " for 6 months @ 3½%

" " for 12 months or more @ 4 " "

All kinds of modern Banking business transacted

Karwar, 14-2-1948

P X GRACIOUS,
MANAGING DIRECTOR

ಜಿಲ್ಲಾ ಸಮಾಚಾರ

ಹೊನ್ನಾವರ— (ತಾ. [illegible]) [illegible]

[illegible]

[illegible]

ಭಟ್ಕಳ— (ತಾ. [illegible]) [illegible]

BY THE R. T. A., K.R., BELGAUM.

NOTICE.

Applications in the prescribed form which can be had from this office for permits to operate stage carriage services on the following routes, are invited from the existing operators on the routes or in the area or others including local bodies in the Karnatak Region.

S No	Name of route
1	Belgaum—Chandgad via Adkur
2	Savanur—Savanur Railway Station.

All applications should be submitted so as to be received in this office on or before 2-9-48 and those received after this date will not be entertained

Applications should clearly state the time table proposed to be maintained and the standard rate of fare proposed to be charged per passenger per mile They should be complete in all respects and if incomplete, they will be treated as invalid

Permits will be granted on a temporary basis in accordance with the existing instructions from Government and issued as and when the petrol quota allotted to this Region permits.

No 4925/4-B KR of 1948
Regional Transport Office,
Belgaum, 18th August, 1948

D. K. SUKHTANKAR, (Capt.)
Secretary,
Regional Transport Authority,
K.R., Belgaum

ಕುಮಟಾ ತಾಲೂಕಿನ ಹಿಂಗಾರಿ ಭತ್ತ ಹಾಗೂ ಕಬ್ಬಿನ ಬೆಳೆಯ ಪ್ರಕಟಣೆ.

(೧೯೪೭—೪೮ನೇ ಸಾಲಿನದು.)

[illegible]

ಪರಿಶಿಷ್ಟ.

ಅನುಕ್ರಮಾಂಕ (೧)	ಸ್ಥಾನಿಕ ಪ್ರದೇಶ ಯಾ ಗ್ರಾಮಗಳು. (೨)	ಭೂಮಿಯ ಜಾತಿ (೩)	ಪ್ರತಿಯೊಂದು ಎಕರೆಗೆ ಸರಾಸರಿ ಬೆಳೆ (ಬಂಗಾಲಿ ಮಣಗಳಲ್ಲಿ) (೪)
೧	ಸರ್ವೇ ಗ್ರೂಪ ೧ರಲ್ಲಿಯ ಗ್ರಾಮಗಳು.	[illegible] ಭೂಮಿಯಲ್ಲಿ	ಹಿಂಗಾರಿ ಭತ್ತ [illegible] ಕಬ್ಬು [illegible]
೨	ಸರ್ವೇ ಗ್ರೂಪ ೨ರಲ್ಲಿಯ ಗ್ರಾಮಗಳು.	— ಡಿ —	ಹಿಂಗಾರಿ ಭತ್ತ ೧೭ ಕಬ್ಬು ೧೬೫
೩	ಸರ್ವೇ ಗ್ರೂಪ ೩ರಲ್ಲಿಯ ಗ್ರಾಮಗಳು.	— ಡಿ —	ಹಿಂಗಾರಿ ಭತ್ತ ೨೦ ಕಬ್ಬು ೧೩೨
೪	ಸರ್ವೇ ಗ್ರೂಪ ೪ರಲ್ಲಿಯ ಗ್ರಾಮಗಳು.	— ಡಿ —	ಹಿಂಗಾರಿ ಭತ್ತ ೧೦ ಕಬ್ಬು ೧೦೭
೫	ಸರ್ವೇ ಗ್ರೂಪ ೫ರಲ್ಲಿಯ ಗ್ರಾಮಗಳು.	— ಡಿ —	ಹಿಂಗಾರಿ ಭತ್ತ ೧ ಕಬ್ಬು ೧೪೭
೬	ಸರ್ವೇ ಗ್ರೂಪ ೬ರಲ್ಲಿಯ ಗ್ರಾಮಗಳು.	— ಡಿ —	ಹಿಂಗಾರಿ ಭತ್ತ ಇಲ್ಲ ಕಬ್ಬು ೪೧

ಕುಮಟಾ,
ತಾ. ೧೬-೭-೧೯೪೮

H. V. Sabnis.
ಮಾಮಲೇದಾರ, ಕುಮಟಾ.

[illegible]

[illegible]

ಪತ್ರಿಕಾ-ಪ್ರಕಟನೆ.

ಮುಂಬಯಿ ಕರ್ನಾಟಕದ ಕಾನಡಾ ಜಿಲ್ಲೆಯ ಅಡವಿ-ಪ್ರದೇಶಗಳಲ್ಲಿ ಬಿದಿರು-ತಿರುಳು ಕಟ್ಟು ಸರಕಿನಿಂದ ತಿರುಳು (pulp) ಕಾಗದವನ್ನು ತಯಾರಿಸುವ ಒಂದು ಯಾ ಹೆಚ್ಚಿಗೆ ಕಾರಖಾನೆಗಳ ಸ್ಥಾಪನೆಗೆ ಅಪ್ಪಣೆ ಕೊಡಲು ಮುಂಬಯಿ ಸರಕಾರವು ಸಿದ್ಧವಾಗಿದೆ. ಸದರಿ ಪ್ರದೇಶದಲ್ಲಿ, ಪ್ರತಿ ವರ್ಷ ಅಜಮಾಸಾಗಿ, ಗಾಳಿಯಿಂದ ಒಣಗಿದ ಬಿದಿರು ಎಷ್ಟು ಸಿಗುವಂತಿರುತ್ತದೆಂಬುದನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ—

ಅನು-ಕ್ರಮಾಂಕ	ಪ್ರದೇಶದ ಹೆಸರು.	ಪ್ರತಿ ವರ್ಷ ಅಜಮಾಸಾ ಗಾಳಿಯಿಂದ ಒಣಗಿದ ಬಿದಿರು ಎಷ್ಟು ಸಿಕ್ಕೀತು?	ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬಹುದಾದ ಗಾಳಿ ಒಣ ಬಿದಿರಿನ ಪ್ರಮಾಣ	ಕಾರಖಾನೆ ಸ್ಥಾಪಿಸಲು ಅನುಕೂಲ ಸ್ಥಳ
೧	ಗಂಗಾವಳಿ ನದಿಯ ಪ್ರದೇಶ	೩೦,೦೦೦ ಟನ್	೫,೦೦೦ ಟನ್	ಗುಂದಬಾಳ
೨	ಕಾಳಿ ನದಿಯ ಪ್ರದೇಶ	೧೪,೦೦೦ ,,	೬,೦೦೦ ,,	ಸುಳಗೇರಿ
೩	ಕಾನಡಾ ಜಿಲ್ಲೆಯ ಪೂರ್ವಭಾಗದ ಮುಂಡಗೋಡ ಪಟ್ಟಿಗಳು	೬೦೦೦೦ ,,	೩೦,೦೦೦ ,,	ಸಿದಲಗುಂದಿ
೪	ಗುಂದ ತಪ್ಪಲು-ಪ್ರದೇಶ	೮೦೦೦ ,,	೧೫,೦೦೦ (೪ ಮತ್ತು ೫ ಕ್ಕೆ ಸೇರಿ)	ದಾಂಡೇಲಿ-ಗುಂದ
೫	ಶಿಂಬಾರೆವಾಡಾ-ಸುಪಾ ಸೀಮೆಯಿಂದ ಉಳವಿಯ ವರೆಗಿನ ಸುಪಾ ಪೇಟೆಯ ದಕ್ಷಿಣ ಭಾಗ	೨೦,೦೦೦ ,,		ರಸ್ತೆಯು ಕಾನೇರಿ ಹೊಳೆ ದಾಟುವ ಸ್ಥಳ
೬	ದಾಂಡೇಲಿ, ವಿರ್ನೋಲಿ, ಕುಳಗಿ ಮತ್ತು ಭಾಗವತಿ ಪಟ್ಟಿಗಳು	೧,೦೦,೦೦೦ ,,	೨೫,೦೦೦ ,, / ೪೫,೦೦೦ ,,	ದಾಂಡೇಲಿ / ಬೊಮ್ಮನಹಳ್ಳಿ
೭	ಸುಪಾ ಪೇಟೆಯ ಉತ್ತರ ಭಾಗ	೨೦,೦೦೦ ,,	ನಿಶ್ಚಿತ ಅಂಕಿ ಹಿಂದಿನಿಂದ ತಿಳಿಯುವದು	ಸುಪಾ

೨ ಮೇಲೆ ಕೊಟ್ಟ ಉತ್ಪನ್ನದ ಅಂಕಿಗಳು ಸದರಿ ಪ್ರದೇಶಗಳೊಳಗಿನ ಪಟ್ಟಿಗಳಲ್ಲಿ ನಡಿಸಿದ ನೋಂದಣಿ ಪರಸ್ಪರ ಪ್ರಾಯೋಗಿಕ ಲೆಕ್ಕದ ಆಧಾರದಿಂದ ಕೊಡಲ್ಪಟ್ಟಿವೆ. ಇವು ನಿಜ ಸ್ಥಿತಿಯನ್ನೇ ತೋರಿಸುತ್ತವೆಂದು ಸರಕಾರದ ನಂಬಿಗೆಯುಂಟು. ಆದರೆ ಆ ಬಗ್ಗೆ ಯಾವದೇ ಬಗೆಯ ಹೊಣೆಯನ್ನು (ಗೆರಂಟಿ) ಸರಕಾರವು ಕೊಡಲಾರದು. ಮೇಲಿನ ಕೋಷ್ಟಕದ ಕೊನೆಯ ಸ್ತಂಭದಲ್ಲಿ ಕಾರಖಾನೆಗಳ ಸ್ಥಾಪನೆಗೆ ಅನುಕೂಲವೆಂದು ಕಾಣಿಸಿದ ಸ್ಥಳಗಳಲ್ಲಿ ನೀರಿನ ವಿಪುಲ ಪೂರೈಕೆಯುಂಟು. ಈ ಸ್ಥಳಗಳು ಸದಾ ಕಾಲ ಹರಿಯುತ್ತಿರುವ ಹೊಳೆಗಳ ಇಲ್ಲವೆ ಹಳ್ಳಗಳ ಅಂಚಿಗೆ ಇವೆ.

೩ ಸದರಿ ಪ್ರದೇಶಗಳಲ್ಲಿ ಪ್ರಾಮುಖ್ಯವಾಗಿ ಈ ಕೆಳಗಿನ ಎರಡು ಜಾತಿಯ ಬಿದಿರುಗಳು ಬೆಳೆಯುತ್ತಿವೆ:— (ಅ) ಮೇದಾರ (ಡೆಂಡ್ರೋಕೆಲಮಸ್ ಸ್ಟ್ರಿಕ್ಟಸ್), (ಬ) ಡೊಗಾ (ಬಾಂಬುಸಾ ಎರುಂಡಿನೆಸಿಯಾ)

ಈ ಬಿದಿರುಗಳ ರಾಸಾಯನಿಕ ಪೃಥಕ್ಕರಣದ ಪ್ರಯೋಗಗಳು ಡೇಹರಾಡೂನದಲ್ಲಿರುವ ಜಂಗಲ ಸಂಶೋಧನ ಸಂಸ್ಥೆಯಲ್ಲಿ ನಡೆದಿವೆ. ಈ ಸಂಬಂಧದ ಮಾಹಿತಿಯನ್ನು ಬೇಕಾದವರು " ಕನ್ಸರ್ವೇಟರ ಒಫ್ ಫೋರೆಸ್ಟ್ಸ, ಯುಟಿಲಿಝೇಶನ್ ಎಂಡ್ ಇಂಜಿನಿಯರಿಂಗ ಸರ್ಕಲ್, ಮುಂಬಯಿ ಪ್ರಾಂತ, ಪುಣೆ ೧ " ಇವರ ಕಡೆಯಿಂದ ಪಡಕೊಳ್ಳಬಹುದು.

೪. ಮೇಲ್ಕಾಣಿಸಿದ ಪ್ರದೇಶಗಳಲ್ಲಿ ಬಿದಿರು-ತಿರುಳಿನ ಇಲ್ಲವೆ ಕಾಗದದ ಕಾರಖಾನೆಯನ್ನು ಯಾ ಕಾರಖಾನೆಗಳನ್ನು ಹಾಕಲಿಚ್ಛಿಸುವ ಸಂಘಗಳು ಯಾ ವ್ಯಕ್ತಿಗಳು, ಈ ಪತ್ರಿಕಾ ಪ್ರಕಟನೆಯು ಹೊರಟ ದಿನ (ತಾ ೧೪-೮-೪೮) ದಿಂದ ೨ ತಿಂಗಳೊಳಗೆ, ಚೀಫ ಕನ್ಸರ್ವೇಟರ ಒಫ್ ಫೋರೆಸ್ಟ್ಸ, ಮುಂ. ಪ್ರಾಂತ, ಪುಣೆ ೧ ಇವರಿಗೆ ಅರ್ಜಿ ಮಾಡಬೇಕು, ಮತ್ತು ತಮ್ಮ ಅರ್ಜಿಯಲ್ಲಿ ಯಾವ ಸ್ಥಾನದ ಮೇಲೆ ತಾವು ಕಾರಖಾನೆಗಳನ್ನು ಸ್ಥಾಪಿಸಬಯಸುತ್ತೇವೆಂಬುದನ್ನು, ಗಾಳಿ-ಒಣ (air dry) ಬಿದಿರುಗಳ ಪ್ರತಿ ಟನ್ನಿಗೆ ಸರಕಾರಕ್ಕೆ ತಾವು ತೀರ ಹೆಚ್ಚೆಂದರೆ ಎಷ್ಟು ರಾಜಾರ್ಥ (royalty) ಕೊಡಲು ಸಿದ್ಧರಿರುತ್ತೇವೆಂಬುದನ್ನು ತೋರಿಸಬೇಕು (೧) ಮೊದಲಿನ ೫ ವರ್ಷಗಳ ಅವಧಿಯಲ್ಲಿ ತಾವು ಅಪೇಕ್ಷಿಸುವ ಸವಲತ್ತಿನ (ರಾಜಾರ್ಥದ) ದರ ಮತ್ತು (೨) ಗುತ್ತಿಗೆಯ ಇನ್ನುಳಿದ ಅವಧಿಯಲ್ಲಿ ಕೊಡಲೊಪ್ಪುವ ನಿಶ್ಚಿತ ದರ ಈ ಎರಡೂ ಬಗೆಯ ದರಗಳನ್ನು ಅರ್ಜಿಯಲ್ಲಿ ನಿರ್ದೇಶಿಸಬೇಕು. ಬಿದಿರಿನ ತಿರುಳನ್ನು ಪರ-ಪ್ರಾಂತಗಳಿಗೆ ಕಳಿಸುವಲ್ಲಿ ಯಾವದೇ ಬಗೆಯ ನಿರ್ಬಂಧಗಳು ಅಡ್ಡ ಬರುವ ಸಂಭವವಿಲ್ಲ. ಆದರೆ ಉತ್ಪನ್ನವಾಗುವ ಕಾಗದದ ಕೆಲವೊಂದು ಅಂಶವನ್ನು ಸರಕಾರದ ಉಪಯೋಗಕ್ಕಾಗಿ ಕೊಡಬೇಕೆಂದು ಮುಂಬಯಿ ಸರಕಾರವು ನಿಗ್ರಹಿಸಬಹುದು. ಸಾಗುವಳಿಯ ಕೆಲಸ ಅಥವಾ ಬೇರೆ ಅವಶ್ಯ ಕರ್ತವ್ಯ-ಕೆಲಸಗಳು ಮುಗಿದ ನಂತರ (ಈ ಕೆಲಸಗಳಿಂದ ಬಿಡುಗಡೆಯಾದ) ಸ್ಥಳಿಕ ಕೂಲಿಕಾರರನ್ನು ಕಾರಖಾನೆಗಳಲ್ಲಿ ನೇಮಿಸಿಕೊಳ್ಳಲು ಅನುಕೂಲವಾಗುವಂತೆ ಬಿದಿರು-ಸಂಗ್ರಹ ಮುಂತಾದ ಕಾರ್ಯಗಳನ್ನು ಕೆಲವೊಂದು ಹಂಗಾಮಿನಲ್ಲಿ ಕೊಡಿಸುವದು ಶಕ್ಯವಾದೀತೋ ಹೇಗೆಂಬುದನ್ನು ಕಾರಖಾನೆಗಳನ್ನು ತೆರೆಯಬಯಸುತ್ತವರು ಆಲೋಚಿಸಬಹುದು. ಕಾರಖಾನೆ ಸ್ಥಾಪಿಸುವವರು ತಮ್ಮ ಕಾರಖಾನೆಯೊಳಗಿನ ಕೆಲಸಗಾರರಿಗೆ ಮುಂಬಯಿ ಸರಕಾರದ ಕೂಲಿಕಾರ ಖಾತೆಯವರ ಶಿಫಾರಸುಗಳಿಗನುಸಾರವಾಗಿ, ನಿವಾಸ-ಸೌಕರ್ಯ, ವೈದ್ಯಕೀಯ ಉಪಚಾರದ ಸೌಕರ್ಯ ಮೊದಲಾದವುಗಳನ್ನು ಪೂರೈಸಲು ಬದ್ಧರಾಗುವರು. ಪಟ್ಟಿಗಳೊಳಗಿನ ಬಿದಿರುಗಳನ್ನು ಕಡಿಕೊಳ್ಳುವ ಹಕ್ಕು ಪ್ರಥಮತಃ ೩೦ ವರುಷಗಳ ಬಗ್ಗೆಷ್ಟೇ ಕೊಡಲ್ಪಡುವದು. ಈ ಅವಧಿಯನ್ನು ಮುಂದೆ ಕಾರಖಾನೆಯವರು ಮುಂಬಯಿ ಸರಕಾರದವರೊಡನೆ ಹೊಸ ಕರಾರು ಮಾಡಿಕೊಂಡು ಬೆಳಸಿಕೊಳ್ಳಬಹುದು. ಜಂಗಲ-ಸವಲತ್ತುಗಳ ನಿಯಮಾವಳಿಯಂತೆ ಸ್ಥಳಿಕ ನಿವಾಸಿಗಳಿಗೆ ಕೊಡಬಹುದಾದ ಯಾವದೇ ಹಕ್ಕು ಸವಲತ್ತುಗಳಿಗೆ ಯಾವದೇ ಬಗೆಯ ಬಾಧೆ ತರಕೂಡದೆಂಬ ಸ್ಪಷ್ಟ ಕರಾರು ಹಾಕಿಯೇ ಸರಕಾರವು ಕಾರಖಾನೆಯವರಿಗೆ ಸವಲತ್ತನ್ನು ಕೊಡುವದೆಂದು ತಿಳಿಯತಕ್ಕದ್ದು.

೫ ಉದ್ಯೋಗಸ್ಥರಿಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಅವರು ಕನ್ಸರ್ವೇಟರ ಒಫ್ ಫೋರೆಸ್ಟ್ಸ, ಯುಟಿಲಿಝೇಶನ್ ಎಂಡ್ ಇಂಜಿನಿಯರಿಂಗ ಸರ್ಕಲ್, ಇವರೊಡನೆ ಸಂಬಂಧ ಬೆಳಸಬೇಕು.

೬ ಸವಲತ್ತಿಗಾಗಿ ಅರ್ಜಿ ಮಾಡುವವರು ತಮ್ಮ ಅರ್ಜಿಯಲ್ಲಿ ಈ ಕೆಳಗಿನ ಮಾಹಿತಿಯನ್ನು ನಮೂದಿಸಬೇಕು.—

( ) ಕಾರಖಾನೆ ಸ್ಥಾಪಿಸಲಿಚ್ಛಿಸುವ ಭಾಗೀದಾರಿ ಸಂಸ್ಥೆಯ, ವ್ಯಕ್ತಿಗಳ ಇಲ್ಲವೆ ವ್ಯಕ್ತಿಯ ಪೂರ್ಣ ಹೆಸರು ಮತ್ತು ವಿಳಾಸ

(೨) ಕಾರಖಾನೆಗಾಗಿ ಉಪಯೋಗಿಸಲ್ಪಡುವ ಭಂಡವಲಿನ ಮೊತ್ತ. ಅರ್ಜಿದಾರನ ಯಾ ಅರ್ಜಿದಾರ-ಸಂಸ್ಥೆಯ ಆರ್ಥಿಕ ಸ್ಥಿತಿ ಹೇಗುಂಟೆಂಬುದನ್ನು ತಿಳಕೊಳ್ಳಲು ಸರಕಾರಕ್ಕೆ ಅನುಕೂಲವಾಗುವಂತೆ ಅರ್ಜಿದಾರನು ತನ್ನ ಬ್ಯಾಂಕಿನ ಹೆಸರು ಅರ್ಜಿಯಲ್ಲಿ ಕಾಣಿಸಬೇಕು.

(೩) ಕಾಗದ-ತಯಾರಿಕೆಯ ಯಾ ಅದಕ್ಕೆ ಸಂಬಂಧಪಟ್ಟ ಉದ್ಯೋಗದ ಅನುಭವ.

(೪) ಯಾವ ದೇಶದಿಂದ ಕಾರಖಾನೆಗೆ ಬೇಕಾಗುವ ಯಂತ್ರ-ಸಾಮಗ್ರಿಯನ್ನು ತರಿಸಿಕೊಳ್ಳಲಾಗುವದೋ ಆ ದೇಶದ ಹೆಸರು

(೫) ಕಾರಖಾನೆಯ ಆವಾರದಲ್ಲಿ ತಲುಪಿಸಲ್ಪಡುವ ಗಾಳಿ-ಒಣ ಬಿದಿರಿನ ಪ್ರತಿ ಟನ್ನಿಗೆ ಜಂಗಲ ಖಾತೆಗೆ ಯಾವ ದರದಿಂದ ರಾಜಾರ್ಥ (royalty) ಕೊಡುವ ವಿಚಾರವುಂಟು ?

೭ ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ ಬ್ಯಾಂಕಿನ ಹುಂಡಿಯ (ಚೆಕ್) ರೂಪದಿಂದ ಇಲ್ಲವೆ ಸರಕಾರಿ ತಿಜೋರಿಯ ಚಲನ-ಪಾವತಿಯ ರೂಪದಿಂದ ರೂ ೧೦,೦೦೦ದ ಇಡುಗಂಟನ್ನು ಕಳಿಸಬೇಕು. ಅರ್ಜಿಯು ನಾಮಂಜೂರ ಆದಲ್ಲಿ ಈ ಹಣ ತಿರುಗಿ ಕೊಡಲ್ಪಡುವದು. ಅರ್ಜಿ ಮಂಜೂರ ಆದ ಮೇಲೆ ಅರ್ಜಿ ಮಾಡಿಕೊಂಡ ವ್ಯಕ್ತಿಯು ಯಾ ವ್ಯಕ್ತಿಗಳು ಅಥವಾ ಸಂಸ್ಥೆಯು (ಕಂಪನಿ) ಗುತ್ತಿಗೆಯ ಷರತ್ತುಗಳಿಗನುಗುಣವಾಗಿ, ಕರಾರು ಬರೆದುಕೊಡಲು ತಪ್ಪಿದರೆ ಅವರ ಇಡುಗಂಟನ್ನು ಸರಕಾರಕ್ಕೆ ಜಮಾ ಮಾಡಲಾಗುವದು. ಯಾವದೇ ಅರ್ಜಿಯನ್ನು, ಆ ಬಗ್ಗೆ ಯಾವದೇ ಕಾರಣ ತಿಳಿಸದೆ, ಮಂಜೂರ ಯಾ ನಾಮಂಜೂರ ಮಾಡುವ ಅಧಿಕಾರವನ್ನು ಸರಕಾರವು ಕಾದಿಟ್ಟುಕೊಂಡಿದೆ

E. T. C VAS.
ಚೀಫ್ ಕನ್ಸರ್ವೇಟರ ಒಫ್ ಫೋರೆಸ್ಟ್ಸ,
ಮುಂಬಯಿ ಪ್ರಾಂತ.

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಸಾನುಸಾರ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತು ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಘತ್ತರಗಲ್ಲಿ, ಬನಾರಸ

ಇದನ್ನು ಪಾಂಡುರಂಗ ಕೃಷ್ಣ ಕಾಣೆಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ " ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

Reg. No. B. 1270 — Monday, 30-8-1948.

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೯.

ಕುಮಟಾ - ಸೋಮವಾರ, ತಾ. ೩೦—೮—೧೯೪೮.

ಜಾಹೀರಾತುಗಳ ದರ:-
[illegible] ಸಾಲಿಗೆ ೮ ಆಣೆಯಂತೆ.
ಇದಕ್ಕೂ ಅಲ್ಲದೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತೀರಿಸಲಾದೀತು.

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ತರಿಸುವವರು ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡ ಕೊಡತಕ್ಕದ್ದು.

ಸುದ್ದಿಗಳ ಸಂದೂಕ.

ಪಾಕಿಸ್ತಾನದೊಳಗೆ ಗಂಭೀರ ಪರಿಸ್ಥಿತಿಯುಂಟಾಗಿದೆಂದು ಸರ್ವಸತ್ತಾಧೀಶರು ಜಾಹೀರನಾಮೆ ಹೊರಡಿಸಿದ್ದಾರೆ. ಪರಿಸ್ಥಿತಿ ಗಂಭೀರವಾದ ಕಾರಣ ಪ್ರಕಟವಾಗಿಲ್ಲ. ಆದರೆ ಬಹುತರವಾಗಿ ಸರ್ವಾಧಿಕಾರಿಗಳಾದ ಕಾಯದೆ-ಆಜಮ್ ಬ್ಯಾ|| ಜಿನ್ನಾರವರ ಅಸ್ವಾಸ್ಥ್ಯದಿಂದ ಪರಿಸ್ಥಿತಿ ಗಂಭೀರವಾಗಿರಬೇಕೆಂದು ಲೋಕಪ್ರವಾದವುಂಟು. ಬ್ಯಾ|| ಜಿನ್ನಾರವರ ರೋಗದ ಸ್ವರೂಪವನ್ನು ಪಾಕಿಸ್ತಾನ ಸರಕಾರವು ಪ್ರಕಟಿಸುವದಿಲ್ಲ! ಅದೊಂದು ರಾಜ-ಗೌಪ್ಯವೆಂದು ಎಣಿಸಲ್ಪಟ್ಟಿದೆ. ಆದರೂ ಬ್ಯಾ|| ಜಿನ್ನಾರವರಿಗೆ ವ್ರಣ (ಕೆನ್ಸರ)ವಾಗಿದೆಂದೂ, ಅದು ನಾಲಿಗೆಗೆ ಆಗಿರುತ್ತದೆಂದೂ ಪುಣೆಯ 'ಕೇಸರಿ' ಪತ್ರಿಕೆಯ ಲಂಡನ್ನಿನ ಪ್ರತಿನಿಧಿಗಳು ಬರೆಯುತ್ತಾರೆ. ಬ್ಯಾ|| ಜಿನ್ನಾರವರು ಈಗ ಗಡಿನಾಡಿನ ಝಿಯಾರತ್ ಎಂಬ ಆರೋಗ್ಯಧಾಮದ ಬಳಿಯಲ್ಲಿ ವಾಸಿಸುತ್ತಾರೆ. ಜುಲಾಯಿ ತಾ. ೧೫ಕ್ಕೆ ಅವರ ಸ್ಥಿತಿ ತೀರ ಚಿಂತಾಜನಕವಾಗಿತ್ತೆಂದೂ, ಪ್ರಾಜ್ಞ ಡಾಕ್ಟರರಿಗೆ ಗಾಬರಿಯು ಹರಿಹೋಯಿತೆಂದೂ, ಅವರೆಲ್ಲ ಪೂರ್ಣ ಪರೀಕ್ಷೆ ಮಾಡಿ ಜಿನ್ನಾರವರನ್ನು ಆಗ ಬದುಕಿಸಿಕೊಳ್ಳುವ ಆಶೆಯನ್ನು ತೊರೆದರೆಂದೂ, ಅಂದಿನಿಂದ ಜಿನ್ನಾರವರ ಪ್ರಕೃತಿಯ ಬಗ್ಗೆ ಏನೊಂದೂ ಸುದ್ದಿ ಪ್ರಕಟವಾಗಿಲ್ಲೆಂದೂ ಮುಂಬಯಿಯ "ಬ್ಲಿಟ್ಸ್" ಪತ್ರಿಕೆಯ ಕ್ವೆಟ್ಟಾದ ಸುದ್ದಿಗಾರರು ತಿಳಿಸುತ್ತಾರೆ. ದುರ್ದೈವದಿಂದ ಬ್ಯಾ|| ಜಿನ್ನಾರವರು ತೀರಿಕೊಂಡರೆ ಪಾಕಿಸ್ತಾನದೊಳಗೆ ಸರ್ವಾಧಿಕಾರದ ಬಗ್ಗೆ ಕಲಹಾಗ್ನಿ ಹುಟ್ಟಿ ಪಾಕಿಸ್ತಾನದ ಸರ್ವನಾಶವಾಗುವದಾಗಿ ಮುಖ್ಯ ಪ್ರಧಾನರಾದ ಲಿಯಾಕತ ಅಲಿಖಾನರು ಭೀತಿಗೊಂಡಿದ್ದಾರೆ. ಮಂಕಿ ಶರೀಫದ ಪೀರರು ತಮ್ಮದೊಂದು ಪ್ರತ್ಯೇಕ ಪಾಳೆಯವನ್ನು ನಿರ್ಮಿಸಿಕೊಂಡು, ಜಿನ್ನಾರವರ ತರುವಾಯ ತಾವೇ ಸರ್ವಾಧಿಕಾರಿಗಳಾಗಲು ಹೊಂಚು ಹಾಕಿದ್ದಾರೆಂದೂ ಸುದ್ದಿ ಹರಡಿದೆ. ಜಿನ್ನಾರ ಲೋಕಪ್ರಿಯತೆಯಿಂದ ಪೀರರ ಆರ್ಭಾಟಕ್ಕೆ ಈತನಕ ತಡೆ ಬಿದ್ದಿದೆ. ಜಿನ್ನಾರವರ ಪ್ರಕೃತಿ ಗಂಭೀರವಾದ ಕಾರಣವಿಂದಲೇ ಪಾಕಿಸ್ತಾನದಲ್ಲಿ ಗಂಭೀರ ಪರಿಸ್ಥಿತಿಯುಂಟಾದ ಜಾಹೀರನಾಮೆ ಹೊರಬಿರಬಹುದೇನೋ ಎಂದು ಅಲ್ಲಲ್ಲಿ ಊಹೆಗಳು ಮಾಡಲ್ಪಡುತ್ತಿವೆ.

— ಅಮೇರಿಕೆಯ ಬೇಸಾಯ ಇಲಾಖೆಯ ಡಾಕ್ಟರ ನೋರ್ಮನ ಎಮರ್ಸನರವರು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ತಿರುಗಾಡಿ, ಅಮೇರಿಕೆಯ ಅಕ್ಕಿಗೆ ಎಲ್ಲೆಲ್ಲಿ ಗಿರಾಕಿಗಳು ಸಿಗಬಹುದೆಂಬುದನ್ನು ನೋಡಿಕೊಂಡಿದ್ದಾರೆ. ಯುದ್ಧ-ಪೂರ್ವ ಕಾಲದಲ್ಲಿ ಹಿಂದುಸ್ಥಾನಕ್ಕೆ ೧೬ ಲಕ್ಷ ಟನ್ನ ಅಕ್ಕಿಯ ಕೊರತೆ ಬೀಳುತ್ತಿತ್ತು. ಹಿಂದುಸ್ಥಾನ ಸರಕಾರವು ಈಗ ಅನ್ನಧಾನ್ಯಗಳ ಉತ್ಪತ್ತಿಯನ್ನು ಬೆಳಸುವ ನಿರ್ಧಾರ ಮಾಡಿರುವದರಿಂದ ಸುಮಾರು ದಶಾಂತರ ಉತ್ಪತ್ತಿ ಹೆಚ್ಚಾಗಬಹುದು. ಆದರೆ ಆ ಅವಧಿಯೊಳಗಾಗಿ ದೇಶದೊಳಗಿನ ಜನಸಂಖ್ಯೆ ೪ ಕೋಟಿಗಳಿಂದ ಬೆಳೆಯುತ್ತದೆ. ಉತ್ಪತ್ತಿಯ ಬೆಳವಣಿಗೆಗೂ ಈ ಜನಸಂಖ್ಯೆಯ ಬೆಳವಣಿಗೆಗೂ ಜೋಡು ಬೀಳುವದಿಲ್ಲ ಆದ್ದರಿಂದ ಯುದ್ಧ-ಪೂರ್ವ ಕಾಲದಷ್ಟೇ ಅಕ್ಕಿಯನ್ನು ಮುಂದೂ ಹಿಂದುಸ್ಥಾನವು ಆಮದು ಮಾಡಲೇಬೇಕಾಗುವದು. ಪಾಕಿಸ್ತಾನದಲ್ಲಿ ಅಕ್ಕಿಯ ಪ್ರಾಪ್ತಿಕೆ ಸಾಕಷ್ಟಿದೆ. ಪರದೇಶಗಳಿಂದ ಅಕ್ಕಿ ತರಿಸಿಕೊಳ್ಳುವ ಪ್ರಸಂಗ ಅದಕ್ಕಿಲ್ಲ.

— ವರಿಷ್ಠ ಕಾಯದೆ ಮಂಡಲದಲ್ಲಿ ವಿವಾಹದ ವಯೋಮರ್ಯಾದೆಯನ್ನು ಕುರಿತು ಕಳೆದ ವಾರ ಮನೋರಂಜಕ ಚರ್ಚೆ ನಡೆಯಿತು. ಈಗ ಹುಡುಗಿಯರಿಗೆ ಮದುವೆ ಮಾಡಬೇಕಾದರೆ ೧೪ ಮತ್ತು ಹುಡುಗರಿಗೆ ಮಾಡಬೇಕಾದರೆ ೧೮ ವರ್ಷ ಆಗಬೇಕೆಂದು ಕಾಯದೆಯುಂಟು. ಈ ಮರ್ಯಾದೆಯನ್ನು ಹುಡುಗಿಯರ ಸಂಬಂಧದಲ್ಲಿ ೧೫ ವರ್ಷಗಳಿಗೂ ಹುಡುಗರ ಸಂಬಂಧದಲ್ಲಿ ೨೦ ವರುಷಗಳಿಗೂ ಏರಿಸಬೇಕಾಗಿ ಸೂಚನೆ ಬಂದಿತ್ತು. ಈ ಕಾನೂನನ್ನು ಉಲ್ಲಂಘಿಸಿ ಮದುವೆಯಾಗುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕಾಗಿ ಕೆಲವರು ಆವೇಶದಿಂದ ಪ್ರತಿಪಾದಿಸಿದರು. ಲಗ್ನದ ವಯೋಮರ್ಯಾದೆ ನಿಶ್ಚಯಿಸುವ ಮುಂಚೆ ಒಂದು ವಿಚಾರ ಮಂಡಳ ನೇಮಿಸಿ ಡಾಕ್ಟರರ ಅಭಿಪ್ರಾಯ ತಿಳಕೊಳ್ಳಲ್ಪಟ್ಟಿತ್ತು. ಹುಡುಗಿಯರಿಗೆ ೧೭ನೇ ವರ್ಷದಿಂದ ಮುಂದೆ ಮತ್ತು ಹುಡುಗರಿಗೆ ೨೦ರಿಂದ ಮುಂದೆ ಸಂತತಿ-ನಿರ್ಮಾಣಕ್ಕೆ ಯೋಗ್ಯ ಕಾಲವೆಂದು ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ. ಹಿಂದುಸ್ಥಾನ ಸರಕಾರವು ಈ ಸೂಚನೆಗೆ ಅನುಕೂಲವಿಲ್ಲ. ಆದರಿಂದ ಮಸೂದೆಯನ್ನು ಚೆನ್ನಾಗಿ ಪರಿಶೋಧಿಸುವದಕ್ಕಾಗಿ ಸಮಿತಿ ನೇಮಿಸಲ್ಪಟ್ಟಿದೆ.

— ಹಿಂದು ಕಾಯದೆಯನ್ನು ಹೊಸ ಕಾಲಮಾನಕ್ಕುಚಿತವಾಗಿ ಸುಧಾರಿಸಲು ರಾವ-ಸಮಿತಿಯವರು ಮಾಡಿದ ಶಿಫಾರಸುಗಳಂತೆ ಒಂದು ಮಸೂದೆ ತಯಾರಾಗಿದೆ. ಈ ಮಸೂದೆಯಿಂದ ಹಿಂದು ಸಮಾಜಕ್ಕೆ ಬಾಧಕವಿರುತ್ತದೆಂದು ಸನಾತನಿ ಪ್ರಮುಖರು ಅಭಿಪ್ರಾಯಪಟ್ಟು, ಈ ಮಸೂದೆಯನ್ನು ಮನ್ನಿಸಬಾರದೆಂದು ಸರಕಾರಕ್ಕೆ ಆಗ್ರಹ ಮಾಡುತ್ತಿದ್ದಾರೆ. ಮಸೂದೆಯನ್ನು ಮನ್ನಿಸಲು ಕಾಲಹರಣ ಮಾಡಬಾರದೆಂದು ಅಖಿಲ ಭಾರತೀಯ ಮಹಿಳಾ ಪರಿಷತ್ತಿನವರು ದಿಲ್ಲಿಯಿಂದ ಪ್ರಕಟನೆ ಹೊರಡಿಸಿದ್ದಾರೆ. ಆದರಿಂದ ಈ ಮಸೂದೆಯನ್ನು ಈಗಿನ ಅಧಿವೇಶನದಲ್ಲಿ ವಿಚಾರಕ್ಕೆ ತಕೊಂಡು, ಮುಂದಿನ ಅಧಿವೇಶನದಲ್ಲಿ ಅದರ ಕೂಲಂಕಷ ಚರ್ಚೆ ಮಾಡಬೇಕೆಂದು ಹಿಂದುಸ್ಥಾನ ಸರಕಾರವು ತೀರ್ಮಾನ ಮಾಡಿದೆ.

— ಭಾಷಾನುಗುಣ ಪ್ರಾಂತ-ನಿರ್ಮಾಣದ ವಿವಾದವೀಗ ವಿಕೋಪಕ್ಕೆ ಮುಟ್ಟಿದೆ. ಬೇರೆ ಬೇರೆ ಪ್ರಾಂತಗಳಲ್ಲಿ ಕಲಹ-ಕಾರಣಗಳುಂಟಾಗಿವೆ! ಕಾನಡಾ ಜಿಲ್ಲೆ ಮತ್ತು ಗೋಮಾಂತಕ ಕರ್ನಾಟಕ ಸಾಮ್ರಾಜ್ಯಕ್ಕೆ ಸೇರಬೇಕೆಂದು ಕರ್ನಾಟಕದ ಅಧಿಕಾರಲೋಲುಪರು ಆಗ್ರಹದಿಂದ ಪ್ರತಿಪಾದಿಸುತ್ತಾರೆ! ಗೋಮಾಂತಕ ಮತ್ತು ಕಾನಡಾ ಜಿಲ್ಲೆಯ ಉತ್ತರ ಭಾಗ ಮಹಾರಾಷ್ಟ್ರಕ್ಕೆ ಸೇರುವದು ಉಚಿತವೆಂದು ಮಹಾರಾಷ್ಟ್ರೀಯ ಸಾಮ್ರಾಜ್ಯವಾದಿಗಳ ಹಟವಿದೆ! ಮುಂಬಯಿ ಪಟ್ಟಣ ಸಹಿತ ಪ್ರತ್ಯೇಕ ಮಹಾರಾಷ್ಟ್ರ ಪ್ರಾಂತ ನಿರ್ಮಿಸತಕ್ಕದ್ದೆಂದು ಹಿಂದುಸ್ಥಾನ ಸರಕಾರದ ಮಂತ್ರಿಗಳಾದ ಮಾನ್ಯ ನಾನಾಸಾಹೇಬ ಗಾಡಗೀಳರವರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಮುಂಬಯಿ ನಗರವದೊಂದು ಪ್ರತ್ಯೇಕ ಪ್ರಾಂತವೆಂದೂ, ಅದನ್ನು ಸದ್ಯಕ್ಕೇ ಸಿದ್ಧವಾಗಿರುವ ಹೊಸ ಯೋಜನೆಯಂತೆ ೧ ಅಬ್ಜ ೧೫ ಕೋಟಿ ರೂಪಾಯಿ ಖರ್ಚು ಮಾಡಿ ವಿಸ್ತರಿಸಿದರೆ, ಅದು ಸ್ವತಂತ್ರ ಪ್ರಾಂತವಾಗಲಿಕ್ಕೆ ಯೋಗ್ಯವಾಗುವದೆಂದೂ ಮುಂಬಯಿಯ ಪ್ರಮುಖರ ಅಂಬೋಣವುಂಟು. ಮುಂಬಯಿ ಪ್ರಾಂತಿಕ ಕೊಂಗ್ರೆಸ ಸಮಿತಿಯವರು ಮುಂಬಯಿ ಪಟ್ಟಣವನ್ನು ಮಹಾರಾಷ್ಟ್ರಕ್ಕೆ ಸೇರಿಸಲು ಎಷ್ಟಕ್ಕೂ ಒಡಂಬಡುವದಿಲ್ಲ. ಹೊಸ ಪ್ರಾಂತಗಳ ನಿರ್ಮಾಣದ ವಿಚಾರವನ್ನೇ ೧೦ ವರ್ಷಗಳತನಕ ಮುಂದೂಡುವದು ಹಿತವೆಂದು ಸಮಿತಿಯ ನಿರ್ಣಯವಾಗಿದೆ. ಪಂ|| ಜವಾಹರ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದುವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ.
ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/-ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ, ತಾ. ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡ್ಯಾರೆಕ್ಟರ.

ಲಾಲರೂ ಶ್ರೀ| ಜಯಪ್ರಕಾಶ ನಾರಾಯಣರವರೂ ಇದೇ ಅಭಿಪ್ರಾಯದವರಿದ್ದರು. ಮುಂಬಯಿ ಸಹಿತ ಕಾನಡಾ ಜಿಲ್ಲೆಯವರೆಗಿನ ಸಮುದ್ರ ಕರಾವಳಿ ಪ್ರದೇಶವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಮಾಡಿ ಅದನ್ನು ಸಮುದ್ರಮಾರ್ಗವಾಗಿ ಒದಗುವ ಪರಚಕ್ರ[illegible]ಯಿಂದ ರಾಷ್ಟ್ರರಕ್ಷಣೆಯನ್ನೂ [illegible] ಸಂರಕ್ಷಣೆಯನ್ನೂ ಮಾಡುವದನ್ನು ಪ್ರಬಲ ಮಾಡಬೇಕೆಂದು "ಮುಂಬಯಿ ಕ್ರಾನಿಕಲ್" ಪತ್ರಿಕೆಯಲ್ಲಿ "ರಾಷ್ಟ್ರೀಯ" ಲೇಖಕರೊಬ್ಬರು ಬರೆಯುತ್ತಾರೆ. ಮದ್ರಾಸ ಪಟ್ಟಣ ತಮ್ಮ [illegible] ಆಂಧ್ರ-ರಾಜ್ಯ ಸ್ಥಾಪಕರ ನಿಗ್ರಹ! ಮದ್ರಾಸದ [illegible] ಆಂಧ್ರರಿಗೆ ಏನೂ ಹಕ್ಕು ಹೇಳಬಾರದೆಂ[illegible]ವಾಗಿ ತಮಿಳುನಾಡಿನವರು ಆಗ್ರಹ[illegible] ಪ್ರಾಂತಗಳ ಅವಶ್ಯಕವೆಂದೂ ಪ್ರತ್ಯೇಕ ಪ್ರಾಂತಿಕ ಸರಕಾರಗಳ ಅವಶ್ಯಕತೆಯಿರುವದಿಲ್ಲವೆಂದೂ ಇಡೀ ದೇಶಕ್ಕೆ ಒಂದೇ ಒಂದು ಸರಕಾರವಿರಬೇಕೆಂದೂ ಜಿಲ್ಲೆಗಳೇ ಮಧ್ಯವರ್ತಿ ಸರಕಾರದ ಘಟಕಗಳಿರಬೇಕೆಂದೂ ಶ್ರೀ ಮನು ಸುಭೇದಾರರವರು ಮುಂಬಯಿಯ "ಸಂಡೇ ನ್ಯೂಸ" ಪತ್ರಿಕೆಯಲ್ಲಿ ಪ್ರಕಟವಾದ ಒಂದು [illegible]ದಲ್ಲಿ ಬರೆದಿದ್ದಾರೆ. ಈ ಪ್ರಕಾರ ಅನುಕೂಲ ಪ್ರತಿಕೂಲ ವಾದಗಳ ಗೊಂದಲ ಇರುವದರಿಂದಲೂ ಅಧಿಕಾರದ ಅಭಿಲಾಷೆಯಿಂದ ಗಡಿ ಪ್ರದೇಶಗಳ ಬಗ್ಗೆ ಜಗಳ ನಡೆಯುತ್ತಿರುವದರಿಂದಲೂ ಈ ವಿಷಯವನ್ನು ಮುಂದೂಡುವ ಸೂಚನೆಯೇ ಕೊನೆಗೆ ಮಾನ್ಯವಾಗುವ ಲಕ್ಷಣಗಳು ಕಾಣುತ್ತಿವೆ.

— ನಮ್ಮ ಕಾನಡಾ ಜಿಲ್ಲೆಯೊಳಗೆ ಕಾಗದ ತಯಾರಿಸುವ ಕಾರಖಾನೆಗಳನ್ನು ಸ್ಥಾಪಿಸಬೇಕಾಗಿ ಒಂದು ಆಲೋಚನೆ ನಡೆಯುತ್ತಿದೆ. ಕಾಗದದ ಉದ್ಯಮದ ಮಾಹಿತಿಯುಳ್ಳ ಶ್ರೀ|| [illegible] ರವರು ಒಂದು ಯೋಜನೆಯನ್ನು ತಯಾರಿಸಿದ್ದಾರೆ. ಈ ಯೋಜನೆಯಂತೆ ಕಾರಖಾನೆ ಸ್ಥಾಪಿಸಿ ನಡಿಸಲು ೩|| ಕೋಟಿ ರೂಪಾಯಿ ಬಂಡವಲು ಬೇಕು. ಕಾರಖಾನೆಗೆ ಬೇಕಾಗುವ ಯಂತ್ರ-ಸಾಹಿತ್ಯವನ್ನು ಅಮೇರಿಕೆಯಿಂದ ತರಿಸಬೇಕು. ಮುದ್ದು ಕಾರಖಾನೆ ಪೂರ್ಣವಾಗಲು [illegible] ವರ್ಷಗಳು ತಗಲುವವು. ಕಾಗದ ತಯಾರಿಸಲು ಬೇಕಾಗುವ ಪಲ್ಪ ಯಾನೆ ತಿರುಳನ್ನು ಮುಪ್ಪಿಯನ್ನಷ್ಟೇ ತಯಾರಿಸುವ ಕಾರಖಾನೆಯನ್ನು ಮಾತ್ರ ಈಗಲೇ ಹೊರಡಿಸಬಹುದು. ಅದಕ್ಕಾದರೂ ೬೦ ಲಕ್ಷ ರೂ ಬಂಡವಲು ಬೇಕು. ಇಷ್ಟು ಬಂಡವಲನ್ನು ನಮ್ಮ ಜಿಲ್ಲೆಯಲ್ಲಿ ಕೂಡುವದು ಕಠಿಣ. ಕರ್ನಾಟಕದೊಳಗೆ ಇಂತಹ ಕಾರಖಾನೆಗಳನ್ನು ದಕ್ಷತೆಯಿಂದ ನಡಿಸುವ [illegible] ಸಿಗುವದು ದುಷ್ಕರ. ಆದರಿಂದ ಟಾಟಾ, ಬಿರ್ಲಾ ಡಾಲ್ಮಿಯಾ [illegible] ಕಾರ್ಯದಕ್ಷ [illegible] ಸಹಕಾರದಿಂದ ಕಾಗದದ ಕಾರಖಾನೆಗಳನ್ನು ಹೊರಡಿಸುವ ಆಲೋಚನೆಯನ್ನು ಈ ನಮ್ಮ ಜಿಲ್ಲೆಯ ಕೆಲವು ಪ್ರಮುಖರು ಮಾಡತೊಡಗಿದ್ದಾರೆ.

—ಮಾರ್ಮಗೋವಾ ಮತ್ತು ಕೊಚ್ಚಿ ಬಂದರಗಳ ನಡುವೆ ಒಂದು ಮಹಾ ಬಂದರ ಕಟ್ಟಿಸಬೇಕೆಂಬ ಸಂಕಲ್ಪವಾಗಿದ್ದು ಅದಕ್ಕಾಗಿ ಯಾವ ಬಂದರವನ್ನು ಆರಿಸಬಹುದೆಂಬುದರ ಚೌಕಸಿ [illegible] ನೇಮಿಸಿದ [illegible] ವಿಚಾರಣಾ ಮಂಡಳದವರು ಇನ್ನೂ ನಿಶ್ಚಿತ ನಿರ್ಣಯಕ್ಕೆ ಬಂದಿರುವದಿಲ್ಲ. ಮುಂಡಳದ ವರದಿ ಇನ್ನೂ ಹಿಂದಸ್ಥಾನ ಸರಕಾರದಕಡೆಗೆ ಬ[illegible] ಇಲ್ಲಿಯ ವರಿಷ್ಠ ಕಾರ್ಯದ ಮಂಡಳದಲ್ಲಿ ಮಂತ್ರಿಗಳು [illegible]ಸಿದ್ದಾರೆ.

ಮುಂಬಯಿಯಲ್ಲಿ ಪಾರ್ಸಿ ಪಂಚಾಯತ ಎ ಬ [illegible] ಸಿಕಂದರಾಬಾದ ಹುದ್ದೆಗೆ ಹೆಣಗುವ ದೊಡ್ಡ ಸಂಸ್ಥೆಯುಂಟು. ಈ ಪಂಚಾಯತದವರು [illegible] ಸಮಾಜಕ್ಕೆ ಕರಿ-ಪರಿಯಿಂದ ಸಹಾಯ ಮಾಡುತ್ತಿದ್ದಾರೆ. [illegible] ವರ್ಷ [illegible] ಈ ಸಂಸ್ಥೆ [illegible] ಇದರಲ್ಲಿ [illegible] ಲಕ್ಷ ರೂ [illegible] ಉಪಯೋಗಿಸಲ್ಪಟ್ಟಿತು. [illegible] ಲಕ್ಷ ರೂ [illegible] ಲಕ್ಷ ರೂ [illegible] ಧರ್ಮ [illegible] ಲಕ್ಷ ರೂ [illegible] ಅನ್ಯ[illegible] ಮಾಡಲಿಕ್ಕೆ ವಿನಿಯೋಗಿಸಲ್ಪಟ್ಟಿತು.

[illegible] ದಕ್ಷಿಣ [illegible] ಶ್ರೀ [illegible] ಶ್ರೀ [illegible] ಜಿಲ್ಲೆಗಳಲ್ಲಿ [illegible]

([illegible])

[illegible] ಬೆನ್ನಟ್ಟಿದ್ದಾರೆ.

ಮಂಚಿಕೇರಿ— ([illegible]) [illegible] ಇಲ್ಲಿಂದ [illegible] ದೂರದಲ್ಲಿರುವ ಜೋಗ[illegible] ಕೇರಿಯಲ್ಲಿ ಭಯಂಕರ ದರೋಡೆಯೂ ಕೊಲೆಯ [illegible] ನಡೆದವು. [illegible] ೪೦ [illegible] ದರೋಡೆಗಾರರು [illegible] ಮಹಾಬಲೇಶ್ವರ ಹೆಗಡೆ ಇವರ ಮನೆಯನ್ನು ಮುತ್ತಿ ಒಂದು [illegible] ಬಾಗಿಲು [illegible] ನನ್ನು ಅವರ [illegible] ರಿಗೆ ಬಿಚರಿ [illegible] ಮಹಾಬಲೇಶ್ವರ ಹೆಗಡೆಯವರ ತಮ್ಮ ಗೋವಿಂದ ಹೆಗಡೆ ಇವರು ಅಗ ಎಚ್ಚತ್ತು, ಏನು ಗದ್ದಲವೆಂದು ಕೇಳಲಾಗಿ, ದರೋಡೆ ಮಾಡಲು ಬಂದ ದುಷ್ಕರು ಅವರಿಗೆ ಗುಂಡಿಟ್ಟು ಕೊಂದ [illegible]! ಅವರ ತಾಯಿಗೂ ಗುಂಡ ಹಾಕಿದ್ದರು. ಆದರೆ ಅವಳು ಸತ್ತಿಲ್ಲ. ಅವಳ ಕೈಯೊಂದು ಮುರಿದುಹೋಗಿದೆ. ಕಾಲಿಗೂ ಒಂದು ಗುಂಡು ತಗಲಿದೆ. ದರೋಡೆಗಾರರು [illegible] ಎಷ್ಟೆಲ್ಲ— ಬೆಂಗಾರ ಕೊರಳಲ್ಲಿದ್ದ ಮಂಗಳಸೂತ್ರಗಳನ್ನು ಸಹ ಬಿಡದೆ ದೋಚಿಕೊಂಡು ಹೋಗಿದ್ದಾರೆ! ದರೋಡೆಕಾರರ ಹತ್ತಿರ ಮಳೆಗಾಲದ ನಿಲುವಂಗಿ (ರೇನಕೋಟು) ಗಳೂ ಎತ್ತಿ ಬಣ್ಣದ ಸಮವಸ್ತ್ರಗಳೂ [illegible] ಬಟ್ಟೆ ಬಿಸ್ಕುಟುಗಳೂ ಇದ್ದವೆಂದು ಹೇಳುತ್ತಾರೆ. ಹೆಗಡೆಯ ತಾಯಿಯನ್ನು ಕಾರವಾರ ಆಸ್ಪತ್ರೆಗೆ ಒಯ್ಯಲಾಗಿದೆ. ಪೋಲೀಸ ಅಧಿಕಾರಿಗಳು ಗುನ್ಹೆಯ ತಪಾಸಣೆಯನ್ನು ಜರಿಯಿಂದ ನಡಿಸಿದ್ದಾರೆ. ಇನ್ನೂ ಯಾರ ಪತ್ತೆಯೂ ಹತ್ತಿಲ್ಲ.

ಯಲ್ಲಾಪುರ— ([illegible]) ಕಳೆದ ಮಂಗಳವಾರದಿಂದ ಬಾವಿನಮನೆ ಗ್ರಾಮದ ಮುಲದವ್ಯ [illegible] ಶ್ರೀ [illegible] ಇವರ ಮನೆಯಲ್ಲಿ ಒಂದು ಗಾಂಧಿ [illegible] ಹೆಣ್ಣು [illegible] ಈ ಶಾಲೆಯಲ್ಲಿ ಸೇರಿದ್ದಾರೆ.

ಹಳಿಯಾಳ— ([illegible]) ಇಂದ ಹಳಿಯಾಳ - ಬಂಕ ಕೊಂಗ್ರೆಸ ಸಮಿತಿಯ [illegible] ಅಂಗ ಇವರ ಅಧ್ಯಕ್ಷತೆಯಲ್ಲಿ ಸಭೆಯ [illegible] ವರ್ಷದ

[illegible] ಮಂಡಳದವರಿಗೆ [illegible] ಗೋವಿಂದ ಭಂಡಾರಿಯವರ ಅಧ್ಯಕ್ಷರಾಗಿಯೂ [illegible] ಗೋವಿಂದ [illegible] ಉಪಾಧ್ಯಕ್ಷರಾಗಿಯೂ, [illegible] ಕೊಲಿಗೆ [illegible] ವಿಷಯ ಇವರು [illegible] ನೇಮಿಸಲ್ಪಟ್ಟಿದ್ದಾರೆ. ಈ ಹೊಸ ಕಾರ್ಯಕಾರೀ [illegible] ಎಲ್ಲ [illegible] ವನ್ನುಂಟು ಮಾಡುವರೆಂಬ ಆಶೆಯುಂಟು.

[illegible] ಇನ್ನೂ ನಡೆದಿದೆ!

([illegible]) ಇಲ್ಲಿ ಹೊಸದಾಗಿ ಬಂದಿ[illegible] [illegible] ಅವರು ತಮ್ಮ [illegible] ದಿಂದ [illegible] ಲೋಕಪ್ರಿಯರಾಗಿದ್ದಾರೆ.

ಈಗ [illegible] ಹೊಲಗಳಲ್ಲಿ [illegible]

[illegible] ಇನ್ನು ಸಿಕ್ಕಿಲ್ಲೆಂದು ರೈತರು ಹೇಳು[illegible]

ಜಾತಕೀಯರಾತುಗಳಿಗೆ
ಸುವರ್ಣ ಸಂಧಿ.

[illegible] ಪ್ರಕಾಶಿಸಲ್ಪ[illegible] ಶೀಘ್ರದಲ್ಲಿಯೇ [illegible] ಪ್ರಕಾಶಿಸಲು [illegible] ಶ್ರೀ [illegible] ಜಾತಕಗಳಲ್ಲಿ [illegible] ಕೊಡಲಿಚ್ಛಿಸುವವರು ಶೀಘ್ರ ಕೊಟ್ಟು ಕಳಿಸ[illegible] [illegible] ದರ ಮೊದಲಾದ ಮಾಹಿತಿಯ ಬಗ್ಗೆ [illegible] ಕೆಳಗಿನವರಿಗೆ ಇಂದೇ ಬರೆಯಿರಿ —

ಸಂಪಾದಕ, 'ಸಹಕಾರ,
( ) ಕರ್ನಾಟಕ ಸಹಕಾರಿ [illegible] ಧಾರವಾ[illegible]



ಕೊಪ್ಪೀಕರ ರೋಡ, ಹುಬ್ಬಳ್ಳಿ

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ಸಿದರು [illegible]

[illegible]

ಹೊನ್ನಾವರ— [illegible]

[illegible]

ಜಾಹೀರ ನೋಟೀಸು.

[illegible]

ಏಜಂಟ, ಕುಮಟಾ

ಹೆಗಡೆ ಹಬ್ಬು ಉತ್ತಮ ಬೇಸಾಯದ ಸಹಕಾರಿ ಸಂಘ, ಹೆಗಡೆ

[illegible]

ಹೆಗಡೆ, [illegible] } V V Hegde, ಚೇರಮನ್

Students' Book Depot, Ltd, Ankola, N Kanara

ಜಾಹೀರ ಪ್ರಕಟನೆ.

[illegible]

ಕನ್ನಡ ವಾಚನ ಮಾಲೆಯ ಮೊದಲು ಓದು

[illegible]

K R Hegde,
Managing Director

ಗೇರಸಪ್ಪೆ— (ತಾ ... ೮ ೪೮) ಬೋರ್ ಜಲಪಾತದ ವಿದ್ಯುತ್ಕಾರಖಾನೆಯವರು ತಮ್ಮ ಜಲಾಶಯದೊಳಗಿನ ನೀರ ಬಿಡುವಾಗ ಹೊಳೆಯ ದಂಡೆಯಲ್ಲಿರುವ ಜನರಿಗೆ ಯಾವದೇ ಮುಂಜಾಗ್ರತೆಯನ್ನು ಕೊಡುವದಿಲ್ಲ. ಇಲ್ಲವೆ ಈ ಜನರಿಗೆ ಕಷ್ಟವಾಗದಂತೆ ಬೇಕಾದಷ್ಟು ತಕ್ಕೊಳ್ಳುವದಿಲ್ಲ. ನಿನ್ನೆಯ ಶನಿವಾರ ಸಂಜೆ ಮುಂಜಾನೆ ಹೊಳೆಯಲ್ಲಿ ಅಷ್ಟೇನು ನೀರು ಇದ್ದಿಲ್ಲ. ಮಳೆಯೂ ನಿಂತಿತ್ತು. ಆದರಿಂದ ಜನ... ಯಾಗಿ ತಮ್ಮ ವ್ಯವಹಾರ ಸಾಗಿಸುತ್ತ ನಿಶ್ಚಿಂತರಾಗಿದ್ದರು. ಮಧ್ಯಾಹ್ನ ೩ ಘಂಟೆಯ ಸುಮಾರಿಗೆ ಹೊಳೆಯಲ್ಲಿ ಒಮ್ಮೆಲೇ ನೀರು ... ಅಡಿ ಏರಿತು. ನೋಡ ನೋಡ ವಷ್ಟರಲ್ಲಿ ಬಹಳಷ್ಟು ಏರಿತು!! ಅದರಿಂದ ... ಹೊಳೆ ದಾಟಿ ಹೋದವರು ತಿರುಗಿ ಮನೆಗೆ ಹೋಗುವದು ಕಷ್ಟವಾಯಿತು! ಮುಂಬಯಿ ಸರಕಾರದವರು ಇತ್ತ ಗಮನ ಕೊಟ್ಟು, ಕಾರಖಾನೆಯವರು ನೀರು ಬಿಡುವಾಗ ಎಲ್ಲ ಹಳ್ಳಿಗಳ ಜನರಿಗೆ ಮುಂಚಿತವಾಗಿ ತಿಳಿಸಿ ಮಾತ್ರವಲ್ಲ, ಹೊಳೆಯ ದಂಡೆಯಲ್ಲಿರುವ ಮನೆ ಮಾರುಗಳಿಗೆ ಹಾನಿ ಆಗದಂತೆ ಕ್ರಮದ ನೀರು ಬಿಡುವಂತೆ ಯೂ ವ್ಯವಸ್ಥೆ ಮಾಡಬೇಕಾಗಿ ಆಗ್ರಹ.

ಒತ್ತಾಯದ ಶಿಕ್ಷಣದ ... ಶಾಲೆಗೆ ಹೋಗಬೇಕಾದ ... ಮಂದಿ ಮಕ್ಕಳು ಈ ಊರಲ್ಲಿದ್ದಾರಂತೆ. ಅವರಲ್ಲಿ ಒಟ್ಟು ... ಮಂದಿ ... ಹೋಗುತ್ತಾರೆ! ಎಟೆಂಡೆನ್ಸ ಆಫೀಸರರು ಈ ಕಡೆ ... ಬಾರದಿರುವದರಿಂದಲೇ ಈ ಸ್ಥಿತಿಯುಂಟಾಗಿರ ಬಹುದಂತೆ.

ಭಟಕಳ— (ತಾ ... ೮-೪೮) ಇಲ್ಲಿ ಶ್ರೀ ರಘುನಾಥ ದೇವರ ಗುಡಿಯೊಂದುಂಟು. ಅದರ ಸ್ಥಿತಿಗತಿ ಶೋಚನೀಯವಾಗಿದೆ! ಹೊಕ್ತೇಸರರು ಗುಡಿಯ ಚಂದ್ರಶಾಲೆಗಳ ಜೀರ್ಣೋದ್ಧಾರಕ್ಕೆಂದು ಸರಕಾರದಿಂದ ಅಪ್ಪಣೆ ಪಡೆದು ... ಕಟ್ಟಿಗೆ ಪಡೆದುಕೊಂಡು ಮಾರುತ್ತಾರೆ! ಮತ್ತು ಉಳಿದ ಕಟ್ಟಿಗೆಯನ್ನು ಎಲ್ಲಿಂದಲೋ ಸಂಪಾದಿಸಿ ರೀಪು ಮಾಡಿಸಿಟ್ಟು ಜನರ ಕಣ್ಣಲ್ಲಿ ಮಣ್ಣು ಹಾಕುತ್ತಾರೆ! ಶ್ರೀ ದೇವರ ಬಾಬತ್ತು ಎಷ್ಟೋ ಭೂಮಿಗಳನ್ನು ಇವರು ಮುಸಲ್ಮಾನರಿಗೆ ಮಾರಿ ಗಂಟು ಕಟ್ಟುತ್ತಾರೆಂಬ ಲೋಕ ಪ್ರವಾದವೂ ಕೇಳಿ ಬರುತ್ತಿದೆ. ದೇವಾಲಯ ಮಂಡಳದವರೂ ಸರಕಾರದವರೂ ಈ ದೇವಸ್ಥಾನದ ಹಿಂದಿನ, ಈಗಿನ ಆಸ್ತಿಗಳ ಚೌಕಸಿ ಮಾಡಿಸಿ, ದೇವರ ಆಸ್ತಿಯ ವಂಚನೆಯಾಗದಂತೆ ವ್ಯವಸ್ಥೆ ಮಾಡಬೇಕೆಂದು ಶ್ರೀ ದೇವಸ್ಥಾನದ ಅಭಿಮಾನಿಗಳೆಲ್ಲರೂ ಪ್ರಾರ್ಥಿಸುತ್ತಾರೆ.

ಇಲ್ಲಿಯ ಅಂಜುಮಾನ ಹಾಯಸ್ಕೂಲಿನ ಪ್ರವೇಶ ಸ್ಥಳದಲ್ಲಿ ಹಿಂದೂ-ಹಿತಶತ್ರುಗಳಾದ ಮಿ॥ ವಿನ್‌ಸ್ಟನ್ ಚರ್ಚಿಲರ ಛಾಯಾಚಿತ್ರವನ್ನು ತೂಗಹಾಕಿದ್ದಾರೆಂದೂ ಇದರ ಮೇಲಿಂದ ಶಾಲಾ-ಚಾಲಕರ ರಾಷ್ಟ್ರ-ನಿಷ್ಠೆ ಯಾವ ತರದ್ದಿರುತ್ತದೆಂಬುದನ್ನು ಊಹಿಸಬಹುದೆಂದೂ ಓದುಗರು ತಿಳಿಸುತ್ತಾರೆ.

ಬಸ್ತಿಯಲ್ಲಿ ಇತ್ತಲಾಗಿ ಒಂದು ಗಾಂಧಿ ಶಾಲೆಯಾಗಿದೆ. ಈ ಶಾಲೆಯಲ್ಲಿ ಹಿಂದುಳಿದ ವರ್ಗಗಳ ಹುಡುಗರೇ ಹೆಚ್ಚಿಗೆ ಸೇರಿದ್ದಾರೆ.

ಶಿರಸಿ— ... ಕೋಂದಾದಲ್ಲಿ ಟಪಾಲ ಬಟವಡೆ ಸರಿಯಾಗಿ ನಡೆಯುತ್ತದೆಂದೂ ಶಿರಸಿಯ 'ನವಚೇತನ'ದಲ್ಲಿ ಈ ಬಗ್ಗೆ ಪ್ರಕಟವಾದ ದೂರು ನಿರಾಧಾರವಿರುತ್ತದೆಂದೂ ಕೋಂದೆಯ ... ಮಂದಿ ನಾಗರಿಕರು ಬರೆಯುತ್ತಾರೆ.

ಮುಲೇಕಲ್ಲ ನಾಗರಿಕರೊಬ್ಬರು ಬರೆಯುತ್ತಾರೆ "ಲೋಕಲ್ ಫಂಡು ೧ ಆಣೆಯಿದ್ದದ್ದು ೨ ಆಣೆಯಾಯಿತು, ೨ ಆಣೆಯಿದ್ದದ್ದು ೩ ಆಣೆಯಾಯಿತು! ಆದರೆ ಆ ಮಾನದಿಂದ ಸೌಕರ್ಯಗಳಾಗಲಿ ಜನಾನುಕೂಲತೆಗಳಾಗಲಿ ಬೆಳೆ

ದಿಲ್ಲ! ಬೋರ್ಡಿನ ಸದಸ್ಯರು ಚುನಾವಣೆಯ ಕಾಲಕ್ಕೆ ಮಾತ್ರ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ... ಆಶ್ವಾಸನಗಳನ್ನು ಕೊಡುತ್ತಾರೆ. ಚುನಾವಣೆಯಾದ ಬಳಿಕ ಆ ಆಶ್ವಾಸನೆಗಳು ಅವರ ನೆನಪಿನಲ್ಲೂ ಉಳಿಯುವದಿಲ್ಲ! ಶಿರ್ಸಿಯಿಂದ ಮುಲೇಕಲ್ಲು ವರೆಗಿನ ರಸ್ತೆಯನ್ನೇ ನೋಡಿರಿ. ಈ ರಸ್ತೆ ನೋಡಲಿಕ್ಕೆ ... ಕಾಣುವದಿಲ್ಲ! ಅಷ್ಟು ಚನ್ನಾಗಿದೆ ಈ ರಸ್ತೆ! ರಸ್ತೆಯ ಮೇಲೆ ಬಿದ್ದ ಮರಗಳನ್ನು ತೆಗೆಸುವದಿಲ್ಲ! ರಸ್ತೆಯ ಮೇಲಿನ ಸಂಕಗಳ ಮೇಲಿಂದ ಹಾದು ಹೋಗುವವರು ಜೀವದ ಮೇಲೆ ಆಸೆ ಬಿಟ್ಟುಕೊಂಡು ಹಾದು ಹೋಗಬೇಕು. ಸರಕಾರವು ಜಿಲ್ಲಾ ಬೋರ್ಡನ್ನು ವಿಸರ್ಜಿಸಿ ಅದರ ಕೆಲಸವನ್ನು ದಕ್ಷ ಅಧಿಕಾರಿಗಳಿಗೆ ಒಪ್ಪಿಸುವದೇ ಒಳ್ಳೇದೆಂದು ತೋರುತ್ತದೆ! ಇತ್ಯಾದಿ.

ಮುಂಡಗೋಡ— (ತಾ ೨೬-೮-೧೯೪೮) ತಾ. ೧೫ರಂದು ಇಲ್ಲೂ ಸ್ವಾತಂತ್ರ್ಯ ವರ್ಧಂತಿಯು

ಕಾನಡಾ ಜಿಲ್ಲಾ ಪ್ರಾಥಮಿಕ ಶಿಕ್ಷಕ ಅರ್ಬನ್ ಬೇಂಕ್ ಲಿ ಹೆಡ್ ಆಫೀಸು ಅಂಕೋಲಾ.

ನೋಟೀಸು.

ಈ ಸಂಘದ ೧೯೪೭-೪೮ನೇ ಸಾಲಿನ ವಾರ್ಷಿಕ ಸಾಧಾರಣ ಸಭೆಯನ್ನು ತಾ ೫-೯-೪೮ನೇ ರವಿವಾರ ಮುಂಜಾನೆ ... ಘಂಟೆಗೆ ಅಂಕೋಲಾ ಕನ್ನಡ ... ನೇ ನಂಬರ ಶಾಲೆಯಲ್ಲಿ ಇಟ್ಟಿರುತ್ತದೆ. ಕಾರಣ ಎಲ್ಲ ಮೆಂಬರರು ಸಭೆಗೆ ಅಗತ್ಯವಾಗಿ ಬಂದು ಸಹಕರಿಸಬೇಕಾಗಿ ವಿನಂತಿ.

ವಿಚಾರ ಮಾಡತಕ್ಕ ವಿಷಯಗಳು

(೧) ೧-೧-೪೭ರಿಂದ ... ೩೧-೧೨ರ ವರೆಗಿನ ಸ್ಪೇಶಲ್ ಆಡಿಟ್ ರಿಪೋರ್ಟ ಓದಿ ಅವಶ್ಯ ಕಂಡ ಠರಾವು ಮಾಡುವದು

(೨) ೧೯೪೭-೪೮ನೇ ಸಾಲಿನ ಆಢಾವೆಯನ್ನು ಚರ್ಚಿಸಿ ಮಂಜೂರ ಮಾಡುವದು ಮತ್ತು ಸದರ ಸಾಲಿನ ಲಾಭ ವಿಭಾಗಣೆಯನ್ನು ಮಾಡಿ ೧೯೪೮-೪೯ನೇ ಸಾಲಿನ ಬಗ್ಗೆ ತಯಾರಿಸಿದ ಬಜೆಟ್ಟಿನಲ್ಲಿ ಅವಶ್ಯ ಕಂಡ ದುರುಸ್ತಿ ಮಾಡಿ ಮಂಜೂರ ಮಾಡುವದು

(೩) ೧೯೪೭-೪೮ನೇ ಸಾಲಿನ ಮೆನೇಜಿಂಗ ಕಮಿಟಿಗೆ ಈ ಕೆಳಗಿನ ಐವರು ಮೆಂಬರರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆಂದು ಪ್ರಸಿದ್ಧಿಸುವದು (೧) ಶ್ರೀಯುತ ವೆಂಕಟರಮಣ ಹೊನ್ನಪ್ಪ ನಾಯ್ಕ, (೨) ಶ್ರೀ॥ ಹೊನ್ನಪ್ಪ ವಿರೋಬ ಶೆಟ್ಟಿ, (೩) ಶ್ರೀ॥ ಗುಣೋ ಗೋವಿಂದ ಮಹಾಲೆ, (೪) ಶ್ರೀ॥ ಲಕ್ಷ್ಮಣ ಗೌರಿ ಲಕ್ಷ್ಮೇಶ್ವರ (೫) ಶ್ರೀ ಕೇಶವ ಬೇಡು ನಾಯ್ಕ

(೪) ೧೯೪೮-೪೯ನೇ ಸಾಲಿನ ಬಗ್ಗೆ ಒಬ್ಬ ಕ್ವಾಲಿಫಾಯಿಡ್ ಲೋಕಲ್ ಒಡಿಟರರನ್ನು ನೇಮಿಸುವದು.

(೫) ೧೯೪೮-೪೯ನೇ ಸಾಲಿನ ಬಗ್ಗೆ ಸೆಕ್ರೆಟರಿ, ಕಾರಕೂನರನ್ನು ನೇಮಿಸುವದು ಮತ್ತು ಹೆಡ್ ಆಫೀಸಿನಲ್ಲಿ ಇಂಗ್ಲಿಷ ಬಲ್ಲ ಸ್ವತಂತ್ರ ಕೆಲಸಗಾರರನ್ನು ನೇಮಿಸುವ ಬಗ್ಗೆ ವಿಚಾರ ಮಾಡಿ ಅವರ ಪಗಾರ ನಿಶ್ಚಯಿಸುವದು (೬) ಮುದ್ದತಿ ಮತ್ತು ಚಾಲ್ತಿ ಠೇವಿನ ಬಡ್ಡಿ ದರಗಳನ್ನು ಗೊತ್ತುಪಡಿಸುವದು

(೭) ಭಾಡಿಗ ಮಾನ ದಿನದಿನಕ್ಕೆ ಹೆಚ್ಚುಗುತ್ತ ಹೋದ್ದರಿಂದ ಹೆಡ್ ಆಫೀಸಿಗೆ ಸ್ವತಂತ್ರ ಇಮಾರತಿನ ಬಗ್ಗೆ ವಿಚಾರ ಮಾಡುವದು (೮) ಇದಲ್ಲದೆ ಅಧ್ಯಕ್ಷರ ಪರವಾನಗಿಯಿಂದ ಬರುವ ಇತರ ವಿಷಯಗಳು

ಅಂಕೋಲ ತಾ ೯-೮-೧೯೪೮

ಅನಂತ ಶಿವರಾಮ ಶೆಟ್ಟಿ	ಎಮ್ ಆರ್ ಶೆಟ್ಟಿ
ಸೆಕ್ರೆಟರಿ	ವ್ಹಾಯ್ಸ ಚೆಯರಮನ್

... ಉತ್ಸವ ವಿಜೃಂಭಣೆಯಿಂದ ಜರುಗಿತು. ನಗರ ಸಂಕೀರ್ತನ, ಧ್ವಜವಂದನೆ, ವ್ಯಾಖ್ಯಾನ, ದೀಪೋತ್ಸವ, ಕ್ರೀಡೆ, ಮನೋರಂಜನೆ ... ವಗೈರೆ ಕಾರ್ಯಕ್ರಮಗಳು ನಡೆದವು. ಗಿಡಗಳನ್ನು ... ಬಯಸುವವರಿಗೆ ಮೊದಲೇ ಸಸಿಗಳನ್ನು ಪೂರೈಸಲಾಗಿ...

ಇಲ್ಲಿಯ ಪ್ರಮುಖ ನಾಗರಿಕರಾಗಿದ್ದ ರಾ॥ ... ರವರ ಸ್ಮಾರಕವಾಗಿ ಅವರ ತಮ್ಮ ... ಇಲ್ಲಿಯ ... ಯನ್ನು ಹೊಸ ಪಶು-ಚಿಕಿತ್ಸಾಲಯದ ಉಪಯೋಗಕ್ಕೆ ಕೊಟ್ಟಿರುತ್ತಾರೆ. ಆ ಮನೆಯಲ್ಲಿ ತಾ ... ರಂದು ಜಿಲ್ಲಾ ... ರಾ॥ ರೆಬೆಲೊ ಇವರ ಹಸ್ತದಿಂದ ಪಶು-ಚಿಕಿತ್ಸಾಲಯದ ಉದ್ಘಾಟನೆಯಾಯಿತು.

ಈ ಸಮಾರಂಭದ ಕಾಲಕ್ಕೆ ಮುಂಡಗೋಡ ತಾಲೂಕ ಕೊಂಗ್ರೆಸ ಸಮಿತಿಯವರು ರಾ॥ ರೆಬೆಲೋ ಇವರಿಗೆ ... ವು ಮಾನಪತ್ರವನ್ನಿತ್ತು, ತಮ್ಮ ತಾಲೂಕಿಗೆ ಪಶು-ಚಿಕಿತ್ಸಾಲಯದ ಲಾಭ ದೊರಕಿಸಿಕೊಟ್ಟದ್ದಕ್ಕಾಗಿ ಅವರ ಉಪಕಾರ ಸ್ಮರಿಸಿ, (೧) ತಮ್ಮ ತಾಲೂಕಿನಲ್ಲಿ ಪ್ರತಿ ವರ್ಷ ... ರು ದನಗಳು ಕಾಲುಬಾಯಿಗೆ ಬಿದ್ದು ರೈತವರ್ಗಕ್ಕೆ ... ನಷ್ಟವಾಗುತ್ತಿರುವದರಿಂದ ಕಾಲು-ಬಾಯಿ ವ್ಯವಸ್ಥೆ

(ಮುಂದೆ ೬ನೇ ಪುಟ ನೋಡಿರಿ)

ಪತ್ರಿಕಾ-ಪ್ರಕಟನೆ.

ನಂ ೮

ಮುಂಬಯಿ ಪ್ರಾಂತದೊಳಗೆ (ಬಟ್ಟೆಯ ಮತ್ತು ನೂಲಿನ) ವ್ಯವಹಾರ ಮಾಡುವವರೆಲ್ಲರೂ ತಮ್ಮ ಕಡೆಗಿದ್ದ (ಬಟ್ಟೆಯ ಮತ್ತು ನೂಲಿನ) ಸಂಗ್ರಹದ ಮಾಹಿತಿಯನ್ನು (ಸರಕಾರಕ್ಕೆ ಕೊಡಬೇಕೆ) ತಿಳಿಸಬೇಕೆ ವಿಧಿಸಿದ ಸರಕಾರಿ ಪತ್ರಿಕಾ-ಪ್ರಕಟನೆಯು ಸರಿಯಾಗಿ ... ಅಂದರೆ ವಾರಗಳ ಲೆಕ್ಕದಿಂದ ಬಟ್ಟೆ ಮಾರುತ್ತಿದ್ದೇವೆಂದೂ, ದಿನದಿನಕ್ಕೆ ಮಾರಾಟವಾದ ಬಟ್ಟೆಯ ಪರಿಮಾಣ ತೋರಿಸುವಂತಹ ಲೆಕ್ಕವನ್ನು ತಾವು ಇಟ್ಟಿಲ್ಲೆಂದೂ, ಆದ್ದರಿಂದ ತಾ ೮-೧೯೪೮ಕ್ಕೆ ತಮ್ಮ ಕಡೆಗೆ ಎಷ್ಟು ಸಂಗ್ರಹವಿತ್ತೆಂದನ್ನು (ಈಗ) ತಿಳಿಸುವದು ಅಶಕ್ಯವಿರುತ್ತದೆಂದೂ, ಸಂಗ್ರಹದ ಮಾಹಿತಿ-ಪತ್ರಿಕೆಯನ್ನು ಒಪ್ಪಿಸುವ ದಿನ ಎಷ್ಟು ಸಂಗ್ರಹವಿರುತ್ತದೆಂಬುದನ್ನಷ್ಟೇ ತಾವು ತಿಳಿಸಬಹುದೆಂದೂ ವ್ಯಾಪಾರಿಗಳು ನಮ್ಮ ಕಚೇರಿಗೆ ತಿಳಿಸಿದ್ದುಂಟು.

ಅದೇ ಮೇರೆಗೆ ಸಂಗ್ರಹದ ಮಾಹಿತಿಯನ್ನು ತಿಳಿಸಲು ನಿರ್ದಿಷ್ಟ ಮಾಡಿಕೊಟ್ಟ ಕೊನೆಯ ದಿನ — ತಾ ೨೫-೮-೧೯೪೮ — ತಮಗೆ ಸಾಕಷ್ಟು ಅವಧಿ ... ಮುವದಿಲ್ಲೆಂದೂ (was too early), (ಸಂಗ್ರಹದ ಮಾಹಿತಿಯನ್ನು ಸರಕಾರಕ್ಕೆ ಕೊಡಬೇಕೆಂಬ) ಸುದ್ದಿಯು ... ಜಿಲ್ಲೆಗೆ ಬಹಳ ತಡವಾಗಿ ಬಂದು ತಲ್ಪಿರುವದರಿಂದ (ಮಾಹಿತಿ-ಪತ್ರಿಕೆಯನ್ನು ಒಪ್ಪಿಸುವ) ಅವಧಿಯನ್ನು ಕೆಲ ಸಮಯದ ವರೆಗಾದರೂ ಬೆಳೆಸಿಕೊಡಬೇಕೆಂದೂ ನಮಗೆ ಸೂಚಿಸಲಾಗಿದೆ.

ಆದ್ದರಿಂದ ಈ ತಿಂಗಳ ಕೊನೆಯ ವರೆಗೆ, ಅಂದರೆ ಅಗೋಸ್ತ ತಾ ೩೧ರ ಯಾ ಅದರ ಮುಂಚೆ, ಮಾಹಿತಿ ಪತ್ರಿಕೆಗಳನ್ನು ಒಪ್ಪಿಸಬಹುದೆಂದು ಈಗ ನಿರ್ಣಯಿಸಲಾಗಿದೆ. ಈ ಅವಧಿಯನ್ನು ಇನ್ನು ಪುನಃ ಬೆಳೆಸಿಕೊಡಬಹುದಿಲ್ಲ.

ಅದೇ ರೀತಿ ತಾ. ೨ ೮-೧೯೪೮ಕ್ಕೆ ತಮ್ಮ ಕಡೆಗಿದ್ದ ಸಂಗ್ರಹದ ಮಾಹಿತಿ ಪತ್ರಿಕೆಯನ್ನು ಒಪ್ಪಿಸಲಾಗದ ... ಕೋಳ ಮಾರಾಟಗಾರರು ತಮ್ಮ ಸಂಗ್ರಹದ ಮಾಹಿತಿಯನ್ನು ನಮ್ಮ ಕಚೇರಿಗೆ ಕಳಿಸುವ ದಿನ ತಮ್ಮ ಕೈಯಲ್ಲಿರುವ ಸಂಗ್ರಹವನ್ನು ತಿಳಿಸಬೇಕೆಂದೂ ನಿರ್ಣಯಿಸಲಾಗಿದೆ. ತಾ ೮-೧೯೪೮ನೇ ದಿನದ ಶಿಲ್ಕು-ಸಂಗ್ರಹವನ್ನು ... ಸಾಧ್ಯವಿಲ್ಲದವರು ಆ ದಿನದ ಶಿಲ್ಕನ್ನು ತಿಳಿಸಬೇಕು.

ಕಾರವಾರ ತಾ. ೨೭ ೮ ೪೮	R J Rebello ಜಿಲ್ಲಾ ಮೆಜಿಸ್ಟ್ರೇಟ್, ಕಾನಡಾ

ಇದನ್ನು ಪಾಂಡುರಂಗ ಕೃಷ್ಣ ಕಾನಡೆ(?) (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದ

ಜಾಹೀರಾತುಗಳ ದರ -
ಒಂದು ಇಂಚು ಕಾಲಮ್ ಉದ್ದ
೧ ಸಾರೆಗೆ ೮ ಆಣೆಯಂತೆ
ಮತ್ತು ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಮಿಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

Reg. No. B. 1270 Monday, 6-9-1948.

ಕಾನಡಾವೃತ್ತ

ವರ್ಷ ೩೧] THE KANARA NEWS. [ಸಂಚಿಕೆ ೧೦.

ಕುಮಟಾ ಸೋಮವಾರ, ತಾ ೬-೯-೧೯೪೮

ವರ್ಗಣಿಯ ದರ:
ಕುಮಟಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦ ೧-೦
ಹಳೇ ಸಂಚಿಕೆಗೆ ೦ ೪-೦
ವ್ಹಿ ಪಿ ಯಿಂದ ಹಣ ಕಳುಹುವವರು
ವ್ಹಿ ಪಿ ವೆಚ್ಚ ೬ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

ಸ್ಥಳಿಕ ವಿಷಯಗಳು.

(ಲೇಖಕ - ಸ್ಥಳವಂತಿಕ)

ಉಗ್ರಾಣಿಗಳು ಮುಲ್ಕಿ ಇಲಾಖೆಯಲ್ಲಿ ಕನಿಷ್ಟ ನೌಕರರೆಂದು ಎಣಿಸಲ್ಪಡುತ್ತಾರೆ ಅವರ ಕರ್ತವ್ಯಗಳು ಈ ಕೆಳಗಿನಂತಿವೆಯೆಂದು ಮುಂಬಯಿ ಸರಕಾರವು ಖುಲಾಸೆ ಮಾಡಿದೆ — (೧) ತೆರಿಗೆಯ ವಸೂಲಿಯ ಕಾಲಕ್ಕೆ ಗ್ರಾಮದ ಅಮುಲದಾರರಿಗೆ ಸಹಾಯ ಮಾಡುವದು (೨) ಗ್ರಾಮದಿಂದ ತಾಲೂಕಿನ ಅಥವಾ ಮಹಾಲಿನ ಖಜಾನೆಗೆ ಹಣ ಒಯ್ಯುವಾಗ ಸಂಗಡ ಹೋಗುವದು (೩) ವಾಹನ ಸೌಕರ್ಯವಿಲ್ಲದ ಸ್ಥಳಗಳಲ್ಲಿ ಗ್ರಾಮದ ಮುಕ್ತ ಸಂಚಾರದ ಮೇಲಿರುವ ಅಮುಲದಾರರ ಟಪಾಲನ್ನು ಒಯ್ದು ಮುಟ್ಟಿಸುವದು (೪) ರಸ್ತೆಗಳಿಲ್ಲದಿದ್ದಲ್ಲಿ ಗ್ರಾಮದಿಂದ ಗ್ರಾಮಕ್ಕೆ ಹೋಗುವ ಸಂಚಾರಿ ಅಮುಲದಾರರಿಗೆ ಅಪೇಕ್ಷಿಸುವ ಮುಟ್ಟಿಗೆ ದಾರಿ ತೋರಿಸುವದು (೫) ಊರಲ್ಲಾದ ಜನನ-ಮರಣಗಳ ವರದಿಯನ್ನು ಪಟೇಲರಿಗೆ ತಿಳಿಸುವದು (೬) ಸರಕಾರಿ ಕೆಲಸಕ್ಕೆ ಬೇಕಾದಾಗ ಗ್ರಾಮದ ಜನರನ್ನು ಗ್ರಾಮ ಚಾವಡಿಗೆ ಕರೆಯುವದು (೭) ಹೊಲಗಳ ತಪಾಸಣೆಯ ಕಾಲಕ್ಕೆ ಗ್ರಾಮದ ಅಮುಲದಾರರ ಮತ್ತು ಇತರ ಅಮುಲದಾರರ ಸಂಗಡ ಹೋಗುವದು (೮) ಮೈಲಿ ಚುಚ್ಚುವದಕ್ಕಾಗಿ ಕೂಸುಗಳನ್ನು ಒಟ್ಟುಗೂಡಿಸುವಲ್ಲಿ ಮೈಲಿ ತೆಗೆಯುವವರಿಗೆ ಸಹಾಯ ಮಾಡುವದು. (೯) ಗ್ರಾಮದಿಂದ ತಾಲೂಕಿಗೆ, ತಾಲೂಕಿನಿಂದ ಗ್ರಾಮಕ್ಕೆ ಯಾ ಗ್ರಾಮದಿಂದ ಗ್ರಾಮಕ್ಕೆ ಗ್ರಾಮದ ಕಾಗದ-ಪತ್ರಗಳನ್ನು ಒಯ್ಯುವದು ಈ ಕರ್ತವ್ಯಗಳನ್ನು ನೆರವೇರಿಸಲು ಉಗ್ರಾಣಿಗಳು ಎಷ್ಟು ದಿನ ದುಡಿಯಬೇಕಾಗುತ್ತಿದೆ ಇಲ್ಲವೆ ದಿನದಲ್ಲಿ ಎಷ್ಟು ತಾಸು ದುಡಿಯಬೇಕಾಗುತ್ತಿದೆ ಎಂಬುದನ್ನು ಹೇಳಲಿಕ್ಕೆ ಸರಕಾರಕ್ಕೆ ಶಕ್ಯವಿಲ್ಲವಂತೆ! ಅದು ಕಾಲ-ಪರಿಸ್ಥಿತಿಯನ್ನು ಹೊಂದಿಕೊಂಡಿದೆಂದು ಸರಕಾರದ ಅಂಬೋಣ! ದಿನ-ವೇಳೆ ನಿಶ್ಚಿತವಾಗಿ ಹೇಳಿದರೆ ಇತರರು ವೇತನದೊಡನೆ ತುಲನೆ ಮಾಡುವರೆಂದು ಸರಕಾರವು ಅಂಜಿಕೊಂಡು ಖುಲಾಸೆ ಮಾಡಲು ತಪ್ಪಿಸಿಕೊಳ್ಳುತ್ತದೆಂಬ ಸಂಗತಿ ಸ್ಪಷ್ಟವುಂಟು

* * *

ನಮ್ಮ ಜಿಲ್ಲೆಯೊಳಗಿನ ಉಗ್ರಾಣಿಗಳಿಗೆ ತಿಂಗಳಿಗೆ ರೂ. ೪ರಿಂದ ೧೦ರ ತನಕ ಸಂಬಳ ಮತ್ತು ತುಟ್ಟಿಭತ್ತೆ ರೂ. ೧೫|| ಸಿಗುತ್ತದೆ ಹೀಗೆ ಒಟ್ಟು ಅವರಿಗೆ ತಿಂಗಳಿಗೆ ರೂ. ೨೧|| ಯಾ ೨೫|| ಸಿಗುತ್ತದೆ ಸಮ್ಯಕ್ಕೆ ಅವರ ಕೆಲಸ ಬಹಳ ಬೆಳೆದಿದೆ ಒಕ್ಕಲತನ ಕಾನೂನಿನಂತೆ ದಾಖಲಾದ ದಾವೆಗಳ ನೋಟೀಸುಗಳನ್ನು ಅವರು ಜಾರಿ ಮಾಡಬೇಕು, ಸರವಣೆಗಳನ್ನು ತಲ್ಪಿಸುವ ಕೆಲಸ ಅವರು ಮಾಡಬೇಕು, ದೊಡ್ಡ ದೊಡ್ಡ ಅಧಿಕಾರಿಗಳು ಸಂಚರಿಸಬಂದಾಗ ಅವರ ಸೈನಾತಿ ಮಾಡುವ ಕೆಲಸ ಉಗ್ರಾಣಿಗಳದು ತಾಲೂಕಿನ ಪೇಟೆಗಳು, ಈ ಉಗ್ರಾಣಿಗಳಿಗೆ ಹೆದರಿಸಿ ಅವರಿಂದ ದುಡಿಸಿಕೊಳ್ಳುತ್ತಾರೆ ಟಪಾಲು ಕರ-ಒಯ್ಯಲಿಕ್ಕಾಗಲಿ ತೀರ್ವೆ ಹಣ ಮುಟ್ಟಿಸಲು ಕಚೇರಿಗೆ ಹೋದಾಗಲಿ ಉಗ್ರಾಣಿಗಳನ್ನು ಕಚೇರಿಯವರು ಪುಕ್ಕಟೆಯಾಗಿ ದುಡಿಸಿಕೊಳ್ಳುವದುಂಟು ಶಿರ್ಸಿಯಲ್ಲಿ ಕೆಲವು ಉಗ್ರಾಣಿಗಳು ನೋಟೀಸುಗಳನ್ನು ಜಾರಿ ಮಾಡಲಿಕ್ಕೂ, ಬಂಗಲೆಯಲ್ಲಿಯ ಸಾಹೇಬರ ಕೆಲಸ ಮಾಡಲಿಕ್ಕೂ ಒಡಂಬಡಲಿಲ್ಲೆಂದು ಒಂದು ಪ್ರಕರಣವಾಗಿದೆಯಂತೆ! ದುಡಿಯುವವರಿಗೆ ತಕ್ಕಷ್ಟು ವೇತನ ಕೊಡಬೇಕೆಂದು ಸರಕಾರದ ಸಿದ್ಧಾಂತವುಂಟು ಇತ್ತಲಾಗಿ ಎಲ್ಲ ಸರಕಾರಿ ನೌಕರರ ಸಂಬಳ-ಭತ್ತೆಗಳು ಏರಿಸಲ್ಪಟ್ಟವು, ಆದರೆ ಉಗ್ರಾಣಿಗಳ ವೇತನ ಏರಲೊಲ್ಲದು! ಅನ್ನ-ಧಾನ್ಯಗಳ ಹಾಗೂ ಇತರ ಜೀವನ ಸಾಮಗ್ರಿಗಳ ದರ ವಿಪರೀತ ಏರಿದಾಗ ಬಡ ಉಗ್ರಾಣಿಗಳು ತಮ್ಮ ಪ್ರಪಂಚವನ್ನು, ಸಿಗುವ ಅಲ್ಪ ಸಂಬಳದಿಂದ ಸಾಗಿಸುವದು ಅಸಾಧ್ಯ ಮುಂಬಯಿ ಸರಕಾರವು ಅವರ ಕೆಲಸದ ವಿವರಗಳನ್ನು ಕೊಡುವಾಗ ಅವರು ಕೆಲಸ ಮಾಡುವ ದಿನಗಳನ್ನು ನಿರ್ದೇಶಿಸಲು ಒಡಂಬಡದಿದ್ದದ್ದು ನಮೂದಿಸತಕ್ಕ ಸಂಗತಿ

* * *

ಉಗ್ರಾಣಿಯು ಇಡೀ ತಿಂಗಳ ನೌಕರನಲ್ಲೆಂದು ಸರಕಾರದ ಪ್ರತಿಪಾದನೆ! ಆದರೆ ಸರಕಾರವು ಹೇಳಿದ ಕೆಲಸಗಳನ್ನು ಸಮಾಧಾನಕರವಾಗಿ ಮಾಡಬೇಕಾದರೆ ಉಗ್ರಾಣಿಗೆ ಬಿಡುವು ಎಂದೂ ಸಿಗಲಾರದು! ಗ್ರಾಮಾಧಿಕಾರಿಗಳ ಕರೆ, ಫಿರ್ಕಾ ಅಧಿಕಾರಿಗಳ ಕರೆ ಬರುವ ಸಮಯವನ್ನು ಆತನು ಸದಾ ಕಾಯುತ್ತ ಉಳಿಯಬೇಕು! ಇಂಥ ಇಸಮುಗಳಿಗೆ ಹೊಟ್ಟೆ ತುಂಬುವಷ್ಟು ವೇತನವನ್ನು ಕೊಡಲು ಸರಕಾರವು ಬದ್ಧವಿದೆ ನಾಡಿನೊಳಗಿನ ದರಿದ್ರ-ನಾರಾಯಣನ ಸೇವೆಗಾಗಿ ದುಡಿಯುವ ಜನತಾ ಸರಕಾರವು, ತನ್ನ ಸ್ವಂತ ನೌಕರರನ್ನು ದಣಿಸುವದು ತೀರ ಅನುಚಿತವಾದುದು ಉಗ್ರಾಣಿಗಳು ತೀರ ಹೀನರು, ದೀನರು ಅವರನ್ನು ಸರಕಾರವು ಕಡೆಗಣಿಸಕೂಡದು ಹೊಟ್ಟೆ ತುಂಬುವಷ್ಟು ಪ್ರಾಪ್ತಿ ಅವರಿಗೆ ಇಲ್ಲದಿದ್ದರೆ ಅವರು ಒಂದೇ ಉಪವಾಸ ಸಾಯಬೇಕು ಅಥವಾ ನೌಕರಿ ಬಿಡಬೇಕು ಸಾಮಾನ್ಯವಾಗಿ ಓರ್ವನ ಜೀವನಕ್ಕೆ ರೂ ೫೫ ತಗಲುತ್ತವೆಂದು ಸರಕಾರವು ಲೆಕ್ಕ ಹಾಕಿದ್ದುಂಟು ಮಕ್ಕಳಿಲ್ಲದ ಗಂಡ-ಹೆಂಡರು ಸುಖದಿಂದ ಜೀವನ ಸಾಗಿಸಲಿಕ್ಕೆ ಇಷ್ಟು ಹಣ ಬೇಕು ಸರಕಾರವು ಬಡ ಉಗ್ರಾಣಿಗಳ ಅಂತ ನೋಡುವ ಉಪೇಕ್ಷೆಯನ್ನು ತೊರೆದು ಜೀವನಕ್ಕೆ ತಗಲುವಷ್ಟು ಕನಿಷ್ಠ ಸಂಬಳವನ್ನು ಅವರಿಗೆ ಕೊಡುವ ಏರ್ಪಾಟು ಮಾಡುವದವಶ್ಯವುಂಟು

* * *

ಒಕ್ಕಲತನ ಕಾನೂನಿನ ರಾಜ್ಯದಲ್ಲಿ ಉಂಟಾದ ಅರಾಜಕತೆಯು ಮಾದರಿಯೊಂದು ಹೇಳತಕ್ಕಂತಹದಿದೆ ಹಳಿಯಾಳದ ರಾ। ಶ್ರೀಪಾದರಾವ ದೇಶಪಾಂಡೆ ಇವರ ಮೇಲೆ ಧಾರವಾಡದ ದಿವಾಣಿ ಕೋರ್ಟಿನಲ್ಲಿ ಒಬ್ಬರು ದಾವೆ ದಾಖಲಪಡಿಸಿ, ಸ್ಥಾವರಾಸ್ತಿಯ ಕಬಜೆಯನ್ನು ಬೇಡಿದ್ದರು ಆ ದಾವೆಯಲ್ಲಿ ದೇಶಪಾಂಡೆಯವರು ಹಾಜರಾಗದ್ದರಿಂದ ಅವರ ವಿರುದ್ಧ ಎಕ್ಸ ಪಾರ್ಟಿ ಫೈಸಲೆಯಾಗಿ, ಆ ಫೈಸಲೆಯಂತೆ ವಾದಿಯು ಜಿ.ಪಾ ಆಸ್ತಿಯ ಕಬಜೆ ಪಡೆದ ಬಳಿಕ ರಾ। ದೇಶಪಾಂಡೆಯವರು ದಿವಾಣಿ ಕೋರ್ಟಿಗೆ ಅರ್ಜಿ ಮಾಡಿ, ಎಕ್ಸ ಪಾರ್ಟಿ ಫೈಸಲೆಯನ್ನು ರದ್ದುಪಡಿಸಿಕೊಂಡು, ದಾವೆಯನ್ನು ರೀತಿಯಂತೆ ನಡಿಸಿ ಆ ದಾವೆಯನ್ನು ಗೆದ್ದರು ಆ ಬಳಿಕ ಹಿಂದಾದ ಫೈಸಲೆಯಂತೆ ಪಡೆದ ಆಸ್ತಿಯ ಕಬಜೆಯನ್ನು ವಾದಿಯಿಂದ ತಿರುಗಿ ಕೊಡಿಸಬೇಕಾಗಿ ಅವರು ಅರ್ಜಿ ಮಾಡಿದರು ಈ ಅರ್ಜಿಯ ಕಾಲಕ್ಕೆ ರಾ|| ದೇಶಪಾಂಡೆಯವರ ಪ್ರತಿಪಕ್ಷಗಳು ಒಕ್ಕಲಿಗನ ತಿಖಂಡಿಯನ್ನು ನಿರ್ಮಿಸಿ, ಪ್ರತ್ಯಕ್ಷ ಕಬಜೆ ಬಿಟ್ಟುಕೊಡುವ ಬೇಡಿಕೆಯನ್ನು ವಿರೋಧಿಸಿದರು ದಿವಾಣಿ ನ್ಯಾಯಾಧೀಶರು ಒಕ್ಕಲಿಗನ ಹೇಳಿಕೆಯನ್ನು ಕೇಳಿಕೊಂಡರು ರಾ|| ದೇಶಪಾಂಡೆಯವರಿಂದ ವಾದಿಯು ಕಬಜೆ ಪಡೆಯುವಾಗ ಸ್ಥಳದಲ್ಲಿ ಒಕ್ಕಲಿಗನು ಇದ್ದಿಲ್ಲೆಂದೂ ದಾವೆಯು ನಡೆದ ಬಳಿಕ ನಿರ್ಮಾಣ ಹೊಂದಿದ ಒಕ್ಕಲಿಗನಿಗೆ ರಾ|| ದೇಶಪಾಂಡೆಯವರ ವಿರುದ್ಧ ಹಕ್ಕು ಹೇಳಬರುವದಿಲ್ಲೆಂದೂ ಕಬಜೆ ಕೊಳ್ಳುವಾಗ ಇದ್ದ ಸ್ಥಿತಿಯಲ್ಲಿ ಆಸ್ತಿಯನ್ನು ತಿರುಗಿ ಒಪ್ಪಿಸಲು ಪ್ರತಿಪಕ್ಷಿಯು ಬದ್ಧನೆಂದೂ ನ್ಯಾಯಾಧೀಶರು ತೀರ್ಪು ಕೊಟ್ಟು ಒಕ್ಕಲಿಗನು ಸಹ ರಾ|| ದೇಶ

(ಮುಂದೆ ೫ನೇ ಪುಟ ನೋಡಿರಿ)

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ, ಲಿ.
ಹೆಡ್ ಆಫೀಸು ಕುಂದಾಪುರ, ದ. ಕ.
ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/ ರಂತೆ ಬಡ್ಡಿ
ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು
ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ
ಕುಂದಾಪುರ, ತಾ ೨೭-೭-೧೯೪೮
ಕೇ. ವಿಠ್ಠಲದಾಸ ಶೆಣೈ, ಮೆನೆಜಿಂಗ ಡೈರೆಕ್ಟರ

ಕಾನಡಾವೃತ್ತ.

[illegible] ಸರ್ವಧಾರಿ ಸಂವತ್ಸರ ಭಾದ್ರಪದ ಶು ೪, ಸೋಮವಾರ

ಬಾ, ಗಣರಾಯಾ! ಬೇಗ ಬಾ!

ಬಾ, ಗಣರಾಯಾ, ಬೇಗ ಬಾ! ಅಖಿಲ ಹಿಂದು ಲೋಕವು ನಿನ್ನನ್ನೇ ಪ್ರಾರ್ಥಿಸುತ್ತಿದೆ. ಬುದ್ಧಿದಾಯಕನು ನೀನು, ಸಿದ್ಧಿದಾಯಕನು ನೀನು. ಬುದ್ಧಿ ಸಿದ್ಧಿಗಳ ನಾಯಕನು ನೀನೆ, ಅಷ್ಟಸಿದ್ಧಿಗಳು, ಗಣರಾಯಾ, ನಿನ್ನ ಸ್ವಾಧೀನದಲ್ಲಿವೆ. ಗಣಾಧಿಪನು ನೀನು, ಭಿನ್ನ ಭಿನ್ನ ಪ್ರಕೃತಿಯ, ಭಿನ್ನ ಭಿನ್ನ ಪರಿಸ್ಥಿತಿಯ ಗಣಗಳನ್ನು ಒಂದೆಡೆ ಕೂಡಿಸಿ ಅವರೆಲ್ಲರ ಗುಣಗಳನ್ನು ಗ್ರಹಿಸಿ, ಆ ಗುಣಗಳಿಗೆ ತಕ್ಕ ಸ್ಥಾನಮಾನಗಳನ್ನು ಅವರವರಿಗೆ ಅನುಗ್ರಹಿಸಿ, ಸಂಕಲ್ಪಿತ ಲೋಕಕಾರ್ಯಗಳನ್ನು ಅವರ ಕಡೆಯಿಂದ ಸಾಧಿಸಿ, ಇಡೀ ಭೂಲೋಕಕ್ಕೆ ಮಂಗಳವನ್ನುಂಟು ಮಾಡುವ ಮಂಗಳಮೂರುತಿ ನೀನು! ದುಷ್ಟರ ನಿಗ್ರಹವನ್ನೂ ಶಿಷ್ಟರ ಪಾಲನವನ್ನೂ ಸಾಧಿಸಿ, ನೀನು ಲೋಕದಲ್ಲಿ ಕೀರ್ತಿಯನ್ನು ಪಡೆದಿರುವಿ. ಈ ಹೊತ್ತು ಶುಭದಿನ, ಇದೇ ಭಾದ್ರಪದ ಶು|| ಚವತಿಗೆ ಲೋಕಕಂಟಕ ಗಜಾಸುರನನ್ನು ವಧಿಸಿ ಲೋಕವನ್ನು ಆತನ ಹಾವಳಿಯಿಂದ ಕಾಪಾಡಿದ ಮಹಾಪರಾಕ್ರಮಶಾಲಿ ನೀನು. ಗಜಾಸುರನು ಬಹಳ ಉನ್ಮತ್ತನಾಗಿದ್ದನು. ಭೂಲೋಕ-ದೇವಲೋಕಗಳನ್ನು ಜಯಿಸಿ ಆತನು ಲೋಕಕ್ಕೆ ಭಾರಿಯಾಗಿದ್ದನು. ತನ್ನನ್ನು ಪ್ರತಿಭಟಿಸುವ ಪುರುಷನು ವಿಶಾಲ ಜಗತ್ತಿನಲ್ಲಿ ಯಾರೂ ಇಲ್ಲವೆಂದು ಎಣಿಸಿ, ಆತನು ಸೊಕ್ಕಿ ಆರ್ಭಾಟದಿಂದ ಮೆರೆಯುತ್ತಿದ್ದನು. ಆ ಗಜಾಸುರನನ್ನು, ಗಣರಾಯನೇ ನೀನು ಕ್ಷಣಾರ್ಧದಲ್ಲಿ, ಮಲ್ಲಯುದ್ಧದಲ್ಲಿ ಗೆದ್ದು ಲೋಕವಿಜಯವನ್ನು ಸಂಪಾದಿಸಿ ದಿಗಂತ ಕೀರ್ತಿ ಪಡೆದ ಶುಭದಿನ ಇಂದು! ನಿನ್ನ ಪೂಜೆಯನ್ನು ಅನಾದಿ ಕಾಲದಿಂದ ಸನಾತನಿಗಳು ಭಕ್ತಿಭಾವದಿಂದ ಮಾಡಿಕೊಂಡು ಕೃತಕೃತ್ಯರಾದ ಇತಿಹಾಸ ಭವಿಷ್ಯೋತ್ತರ ಪುರಾಣದಲ್ಲಿ ಲಿಖಿತವಾಗಿದೆ. ಪ್ರತಿಯೊಂದು ಕಾರ್ಯಾರಂಭದಲ್ಲಿಯೂ, ಸಿದ್ಧಿವಿನಾಯಕನೇ, ನಿನಗೆ ಅಗ್ರ-ಪೂಜೆಯ ಮಾನವುಂಟು. ಅಮೃತಮಂಥನಕ್ಕಾಗಿ ದೇವಾಸುರರು ಪಾಲ್ಗಡಲನ್ನು ಕಡೆಯುವಾಗ ಮೊದಲು ನಿನ್ನ ಆರಾಧನೆಯಾಗಿತ್ತು. ದುಷ್ಟ ವೃತ್ರಾಸುರನ ಮೇಲೆ ಸಾಗಿಹೋಗುವ ಪೂರ್ವದಲ್ಲಿ ಸುರಪತಿ ದೇವೇಂದ್ರನು ನಿನ್ನ ಧ್ಯಾನ ಮಾಡಿದ ಸಂಗತಿ ಲೋಕ-ವಿಖ್ಯಾತವಾಗಿದೆ. ಕಲ್ಯಾಣಧಾಮ ರುಕ್ಮಿಣೀದೇವಿಯ ಸ್ವಯಂವರದ ಕಾಲದಲ್ಲಿ ಶ್ರೀ ಕೃಷ್ಣ ಪರಮಾತ್ಮನು ನಿನ್ನನ್ನೇ ಧ್ಯಾನಿಸಿ ನಿನ್ನ ಅನುಗ್ರಹದಿಂದ ರುಕ್ಮಿಣೀದೇವಿಯನ್ನು ಪ್ರಾಪ್ತಮಾಡಿಕೊಂಡ ಕಥೆ ಸರ್ವಶ್ರುತವಿದೆ. ದುಷ್ಟ ತ್ರಿಪುರಾಸುರರು ವಿಪರೀತ ಮದೋನ್ಮತ್ತರಾಗಿ ದೇವಲೋಕಕ್ಕೆ ಸಂಕಟವನ್ನುಂಟುಮಾಡಿದಾಗ ಅವರ ಪಾರುಪತ್ಯ ಮಾಡಲಿಕ್ಕೆ ಹೊರಟ ತ್ರಿಶೂಲಪಾಣಿ ಕೈಲಾಸನಾಥನು ನಿನ್ನನ್ನು ಸಂತೈಸಿ, ತ್ರಿಪುರಾಸುರರಿಗೆ ಜಯಿಸಿ ದೇವಕಾರ್ಯವನ್ನು ಸಾಧಿಸಿದ ಸಂಗತಿ ಜಗತ್ಪ್ರಸಿದ್ಧವಿದೆ. ಧರ್ಮರಾಯನು ದ್ಯೂತಾಸಕ್ತನಾಗಿ ರಾಜ್ಯವನ್ನೂ ಪತ್ನಿಯನ್ನೂ ಕಳಕೊಂಡ ವನವಾಸವನ್ನೂ ಅಜ್ಞಾತವಾಸವನ್ನೂ ಅನುಭವಿಸಿ ಕಳಕೊಂಡ ರಾಜ್ಯವನ್ನು ಪುನಃ ಪ್ರಾಪ್ತಮಾಡಿಕೊಳ್ಳುವದಕ್ಕಾಗಿ ಉಪಾಯವನ್ನು ಯೋಚಿಸುತ್ತಿರುವಾಗ ಗೀತಬೋಧಕ ಕರ್ಮ-ಸಾರಥಿ ಸರ್ವಸೂತ್ರಚಾಲಕ ಭಗವಾನ ಶ್ರೀ ಕೃಷ್ಣ ಪರಮಾತ್ಮನು ಆ ಯುಧಿಷ್ಠಿರನಿಗೆ ಗಣರಾಯಾ ನಿನ್ನನ್ನು ಪೂಜಿಸಲು ಸಲಹೆ ಕೊಟ್ಟನಂತೆ, ಆ ಸಲಹೆಯನ್ನು ಮನ್ನಿಸಿ, ಯುಧಿಷ್ಠಿರನು ಸಿದ್ಧಿವಿನಾಯಕನನ್ನು ಪೂಜಿಸಿ ಮಹಾಭಾರತ ಯುದ್ಧದಲ್ಲಿ ಕೌರವರಿಂದ ಸ್ವರಾಜ್ಯವನ್ನು ಬಿಡಿಸಿ ಪುನಃ ಸಂಪಾದಿಸಿದನೆಂದೂ ಮಹಾಭಾರತದಲ್ಲಿ ವರ್ಣನದಿಂದ ವಿವರಿಸಲ್ಪಟ್ಟಿದೆ. ಈ ಪ್ರಕಾರ ಸಕಲರಿಂದಲೂ ಪೂಜಿಸಲ್ಪಟ್ಟು ಸಕಲರಿಗೂ ಸುಖವನ್ನಿತ್ತು ಭೂ ದೇವಲೋಕಗಳನ್ನು ಸಮೃದ್ಧಿಗೊಳಿಸಿದ ದೇವ ವಿಭೂತಿಯೇ ಬಾ, ಬೇಗನೆ ಬಾ. ನಮ್ಮನ್ನೆಲ್ಲ ಅನುಗ್ರಹಿಸಿ ನಮ್ಮ ಮೇಲೆ ಕಾಲಗತಿಯಿಂದ ಒದಗಿದ ಸಮಸ್ತ ವಿಪತ್ತುಗಳನ್ನು ಪರಿಹರಿಸಿ ನಮ್ಮನ್ನು ಕಾಯಬೇಕಾಗಿ ನಿನ್ನೆಡೆ ಈ ಹೊತ್ತು ನಾವು ತಲೆಬಾಗಿ, ಕೈಜೋಡಿಸಿ ಪ್ರಾರ್ಥಿಸಿಕೊಳ್ಳುತ್ತೇವೆ. ಗಣರಾಯಾ ಪ್ರಸನ್ನವದನನು ನೀನು, ಪ್ರಸನ್ನನಾಗಿ ನಮ್ಮನ್ನು ಅನುಗ್ರಹಿಸಬೇಕು.

ಈವಾಗ ನಮ್ಮ ದೇಶದ ಇಡೀ ಭೂಲೋಕದ ಪರಿಸ್ಥಿತಿ ತೀರ ಕಂಗೆಟ್ಟಿದೆ. ಇದೊಂದು ಸಂಧಿಕಾಲವೆಂದೂ ಇಕ್ಕಟ್ಟಿನ ಸಮಯವೆಂದೂ, ಬಿಕ್ಕಟ್ಟಿನ ಪ್ರಸಂಗವೆಂದೂ ಎಲ್ಲರೂ ಹೇಳತೊಡಗಿದ್ದಾರೆ. ಮೊದಲನೇ ಮಹಾಯುದ್ಧವಾದದ್ದು ಆಗಸ್ಟ ತಿಂಗಳಲ್ಲಿ, ೨ನೇ ಮಹಾಯುದ್ಧವಾದದ್ದು ಸಪ್ಟೆಂಬರ ತಿಂಗಳಲ್ಲಿ ಅಂದರೆ ಇದೇ ಸಮಯದಲ್ಲಿ. ಮಹತ್ವಾಕಾಂಕ್ಷಿ ಹಿಟ್ಲರನು ಯುರೋಪ ಖಂಡದ ಏಕಚಕ್ರಾಧಿಪನಾಗಬೇಕೆಂಬ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ತಳೆದು ಯುದ್ಧಕಹಳೆಯನ್ನು ಊದಿ ಅಭೂತಪೂರ್ವ ಲೋಕಸಂಕಟಕ್ಕೆ ಕಾರಣನಾದನು. ಯುದ್ಧಕಾಲದಲ್ಲಿ ಬಹುಜನಸಮಾಜವು ಬಹು ಪರಿಯಿಂದ ಸಂಕಟವನ್ನು ಅನುಭವಿಸಿತು. ಯುದ್ಧ ಮುಗಿದ ಬಳಿಕ ರಣಸೊಕ್ಕು ಇಳಿಯುವದು, ರಾಷ್ಟ್ರಸೂತ್ರಧಾರರಿಗೆ ಸದ್ಬುದ್ಧಿ ಸೂಚಿಸುವದು, ತತ್ಪರಿಣಾಮವಾಗಿ ಲೋಕಕುಟುಂಬ ಶಾಂತಿಸಾಮ್ರಾಜ್ಯ ಸ್ಥಾಪನೆಯಾಗಿ, ಹೀನ-ದೀನರೆಲ್ಲ ಅಭ್ಯುದಯ ಹೊಂದಿ, ಲೋಕ ಸಮೃದ್ಧಿಯಾಗುವದು, ಎಂಬದೊಂದು ಹಿರಿಯಾಸೆ ಜಗತ್ತನ್ನು ವ್ಯಾಪಿಸಿಕೊಂಡಿತ್ತು. ಆದರೆ ಯುದ್ಧೋತ್ತರ ಘಟನೆಗಳನ್ನು ಪರಾಂಬರಿಸಿದರೆ ಯುದ್ಧಕಾಲದ ದುಃಖ, ಆ ಕಾಲದ ಕಷ್ಟ-ಸಂಕಷ್ಟಗಳೆಲ್ಲ ಅನ್ನೇನು ಕಷ್ಟಕಾರಕವಿದ್ದಿಲ್ಲೆಂದು ಎಣಿಸುವಷ್ಟು ಪರಿಸ್ಥಿತಿ ಈವಾಗ ಕಠಿಣವಾಗಿದೆ. ಸಕಲ ಸಮೃದ್ಧಿಯನ್ನಿತ್ತು ಲೋಕ ಸುಖವನ್ನು ಸಂಕಲ್ಪಿಸುವ ಗಣರಾಯನೇ, ನೀನೇ ನೋಡಿಕೋ, ನೀನರಿಯದ ಸಂಗತಿಯಿಲ್ಲ, ನಿನಗೆ ಗೋಚರವಾಗದ ಘಟನೆಯಿಲ್ಲ.

ಪಾಶ್ಚಿಮಾತ್ಯರು ಬುದ್ಧಿಶಾಲಿಗಳು, ವಿಚಾರವಂತರು, ರಾಜಕಾರಣಧುರಂಧರರು ಮತಭೇದಗಳನ್ನು ಕಾರ್ಯಸಾಧನೆಗಾಗಿ ಮರೆಮಾಡುವ ಕಾರ್ಯಕುಶಲರೆಂದು ಅವರನ್ನು ಹೊಗಳುವವರಿದ್ದಾರೆ. ಆದರೆ ಪ್ರತಿಯೊಬ್ಬನೂ ಲೋಕದೊಳಗೆ ತಾನೇ ಮೇಲಾಗಬೇಕೆಂದೂ ತನಗಾಧೀನವಾಗಿ ಜಗತ್ತಿನ ಸೂತ್ರಗಳು ಓಡಬೇಕೆಂದೂ ಹಾಗಾದರೇನೇ ಜಗತ್ತಿನ ಉದ್ಧಾರವಾಗುವದೆಂದೂ ಎಣಿಸುತ್ತಾರೆ. ಹಿಟ್ಲರನು ನಾಶ ಹೊಂದಿದರೂ, ಆ ವ್ಯಕ್ತಿಯ ಜೊತೆಗೆ ಆ ವ್ಯಕ್ತಿಯಲ್ಲಿದ್ದ ಲೋಕಕಂಟಕ ಪ್ರವೃತ್ತಿ ನಾಶ ಹೊಂದಲಿಲ್ಲ. ಅದು ಬೇರೆ ರೂಪ ತಾಳಿ ಪರಕಾಯ ಪ್ರವೇಶ ಮಾಡಿ, ಅದ್ಭುತ ಸಂಕಟವನ್ನು ನಿರ್ಮಿಸುತ್ತಿದೆ. ಹಿಟ್ಲರನನ್ನು ದಂಡಿಸಿ ಕೃತಾರ್ಥರಾದೆವೆಂದ ಅಭಿಮಾನ ಹಿಡಿದ ಬ್ರಿಟಿಶರೂ ಅಮೇರಿಕೆಯವರೂ, ರುಶ್ಯರೂ ಹಿಟ್ಲರನನ್ನೇ ಹಿಂಬಾಲಿಸುವದನ್ನು ನೋಡಿ ಮನಸ್ಸು ಬೇಸರಗೊಳ್ಳುತ್ತಿದೆ. ಜಗತ್ತಿನ ರಾಜಕಾರಣದಲ್ಲಿ ರುಶ್ಯರದು ಒಂದು ಪಕ್ಷವು, ಬ್ರಿಟಿಶ-ಅಮೇರಿಕೆಯವರು ಇನ್ನೊಂದು ಪಕ್ಷವೂ ಸೇರಿಕೊಂಡು, ಜಗತ್ತಿನ ಪ್ರಭುತ್ವಕ್ಕಾಗಿ ಜಗ್ಗಾಟ ನಡೆಸಿದ್ದಾರೆ. ಬ್ರಿಟಿಶ-ಅಮೇರಿಕೆಯವರು ಯುರೋಪ ಖಂಡದೊಳಗಿಂದ ಕಾಲು ತೆಗೆಯುವಂತೆ ರುಶ್ಯ ಪ್ರಭು ಸ್ಟೆಲಿನ್ನನು ಕಾರಸ್ಥಾನ ಹೂಡಿದ್ದಾನೆ. ಮೊದಲು ಯುರೋಪ ಖಂಡದ ಸ್ವಾಮಿಯಾಗಿ, ಬಳಿಕ ಆ ಒಡೆತನದ ಬೆಂಬಲದಿಂದ ಜಗತ್ಪ್ರಭುವಾಗಿ ಮೆರೆಯಬೇಕೆಂಬ ಅಟ್ಟಹಾಸದಿಂದ ರುಶ್ಯ-ಪ್ರಭು ಸ್ಟೆಲಿನ್ನನು ಜರ್ಮನಿಯೊಳಗೆ ವ್ಯವಹರಿಸುತ್ತಿದ್ದಾನೆ. ಯುರೋಪ ಖಂಡದೊಳಗೆ ಈವಾಗ ಇಬ್ಭಾಗಗಳಾಗಿವೆ. ಪೂರ್ವ ಭಾಗವನ್ನು ರುಶ್ಯರು ವ್ಯಾಪಿಸಿಕೊಂಡಿದ್ದಾರೆ. ಆ ಭಾಗ ರುಶ್ಯರ ಪಾಶದಲ್ಲಿ ಸಿಲುಕಿ ಒಳಲುತ್ತಿದೆ. ಅದನ್ನು ಪ್ರತಿಭಟಿಸುವದಕ್ಕಾಗಿ ಬ್ರಿಟಿಶ-ಅಮೇರಿಕೆಯವರು ಪಶ್ಚಿಮ ಭಾಗವನ್ನು ನಿರ್ಮಿಸಿ, ಆ ಭಾಗದ ಫ್ರಾನ್ಸ ಮೊದಲಾದ ಜನಾಂಗಗಳ ವಿದ್ಯಮಾನ ರುಶ್ಯರನ್ನು ಪ್ರತಿಭಟಿಸುತ್ತಿದ್ದಾರೆ. ಜರ್ಮನಿಯ ರಾಜಧಾನಿಯಾದ ಬರ್ಲಿನ ಪಟ್ಟಣದ ಮೇಲೆ ಯುರೋಪ ಖಂಡದ ಒಡೆತನ ಹೊಂದಿಕೊಂಡಿದೆಯೆಂದು ಸಾಮಾನ್ಯವಾಗಿ ಹೇಳಬಹುದು. ಆ ಪಟ್ಟಣದ ಸರ್ವ ಪಾರುಪತ್ಯವನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ರುಶ್ಯ-ಪ್ರಭು ಸ್ಟೆಲಿನ್ನನು ತರತರದ ಹಂಚಿಕೆಗಳನ್ನು ಹೂಡುತ್ತಿದ್ದಾನೆ. ಬರ್ಲಿನ ಪಟ್ಟಣದ ಜೀವನ ಪೂರ್ವ ಭಾಗದ ಪ್ರದೇಶವನ್ನು ಹೊಂದಿಕೊಂಡಿದೆ. ಬರ್ಲಿನ ಪಟ್ಟಣದ ನಿರ್ವಾಹ ಪ್ರಕ್ರಿಯೆಯನ್ನು ನಿರ್ಬಂಧಿಸಿ, ಆ ಪಟ್ಟಣವನ್ನು ಉಪವಾಸ ಕೆಡವಿ, ಅದನ್ನು ಹಸ್ತಗತ ಮಾಡಿಕೊಳ್ಳುವ ದೆಸೆಯಿಂದ ರುಶ್ಯರು ಕುಟಿಲ ಕಾರಸ್ಥಾನವನ್ನು ಹೂಡಿದ್ದಾರೆ. ಬರ್ಲಿನ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವದಕ್ಕಾಗಿ ಬ್ರಿಟಿಶ ಅಮೇರಿಕೆಯವರೂ ರುಶ್ಯರೂ ಐಕ್ಯದಿಂದ ಚರ್ಚೆ ನಡೆಸುತ್ತಿದ್ದಾರಾದರೂ ಏನೊಂದೂ ನಿರ್ಣಯವಾಗಲೊಲ್ಲದು. ರುಶ್ಯ ದೇಶದ ರಾಜಧಾನಿಯಾದ ಮಾಸ್ಕೋ ಪಟ್ಟಣದಲ್ಲಿ ತ್ರಿರಾಷ್ಟ್ರಗಳ ಪ್ರತಿನಿಧಿಗಳು ತಮ್ಮೊಳಗಿನ ಮತಭೇದಗಳನ್ನು ಪರಿಹರಿಸಿಕೊಳ್ಳಬೇಕೆಂಬ ವಿಚಾರದಿಂದ ಆಪ್ತಾಲೋಚನೆ ಮಾಡುತ್ತಿದ್ದಾಗ್ಯೂ ಆ ಮತಭೇದಗಳು ಪರಿಹಾರ ಹೊಂದುವ ಬದಲಿಗೆ ದಿನೇ ದಿನೇ ಉಗ್ರ ರೂಪ ತಾಳತೊಡಗಿವೆ. ಬೇಗನೆ ಯುದ್ಧಸ್ಫೋಟವಾಗುವದೇನೋ ಎಂಬದೊಂದು

ಸ್ಥಳಿಕ ವಿಷಯಗಳು [೧ನೇ ಪುಟದಿಂದ ಮುಂದೆ]

ಪಾಂಡೆಯವರಿಗೆ ಕಬಜೆ ಒಪ್ಪಿಸಬೇಕೆಂದು ತೀರ್ಮಾನ ಮಾಡಿದರು. ಒಕ್ಕಲಿಗನು ಆಗ ಹಳಿಯಾಳದ ಮಾಮಲೇದಾರರಿಗೆ ಅರ್ಜಿ ಮಾಡಿ, ಧಾರವಾಡದ ದಿವಾಣಿ ನ್ಯಾಯಾಧೀಶರ ಹುಕುಮು ಒಕ್ಕಲತನದ ಕಾನೂನಿಗೆ ಅಸಮ್ಮತವೆಂದು ಸಾಧಿಸಿ, ತನ್ನಿಂದ ಕಬಜೆ ಪಡೆಯದಂತೆ ರಾ|| ದೇಶಪಾಂಡೆಯವರಿಗೆ ನಿರ್ಬಂಧಿಸಬೇಕಾಗಿ ಅರಿಕೆ ಮಾಡಿಕೊಂಡನು. ಮಾಮಲೇದಾರರು ದಿವಾಣಿ ನ್ಯಾಯಾಧೀಶರ ಹುಕುಮು ಬೇಕಾಯದೇಶೀರ ಇರುತ್ತದೆಂದು ನಿರ್ಣಯಿಸಿ, ರಾ|| ದೇಶಪಾಂಡೆಯವರು ಕಬಜಾ ಕೊಳ್ಳದಂತೆ ನಿರ್ಬಂಧಿಸಿದರು. ಮಾಮಲೇದಾರರ ಈ ಹುಕುಮನ್ನು ಆಕ್ಷೇಪಿಸಿ, ರಾ|| ದೇಶಪಾಂಡೆಯವರು ಪ್ರಾಂತ ಸಾಹೇಬರ ಕಡೆ ಮಾಡಿದ ಅಪೀಲ ಅರ್ಜಿ ಸಹ ತಿರಸ್ಕರಿಸಲ್ಪಟ್ಟಿದೆ! ದಿವಾಣಿ ಕೋರ್ಟಿನಿಂದ ತಾವು ಕಬಜಾ ಪಡೆದ ಸ್ಥಳದಲ್ಲಿ ಒಕ್ಕಲಿಗನು ನಾಹಕ್ಕ ಪುಂಡಾಟಿಕೆ ನಡಿಸಿ, ಭೂಮಿಯ ವಹಿವಾಟಿಗೆ ಆತಂಕ ಪಡಿಸುತ್ತಿರುವದರಿಂದ ಅವನನ್ನು ಕ್ರಿಮಿನಲ್ ಪ್ರೊಸಿಜರ ಕೋಡಿನ ೧೪೫ನೇ ಕಲಮಿನನ್ವಯ ನಿರ್ಬಂಧಿಸಬೇಕಾಗಿ ರಾ|| ದೇಶಪಾಂಡೆಯವರು ರೆಸಿಡೆಂಟ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಪ್ರಕರಣ ನಡಿಸಿದ್ದರು. ಅದರ ವಿಚಾರವಾಗಿ ಉಭಯತರೂ ಭೂಮಿಯನ್ನು ಪ್ರವೇಶಿಸಕೂಡದೆಂದು ತಾತ್ಕಾಲಿಕ ಹುಕುಮಾಯಿತು. ಅದನ್ನು ರಾ|| ದೇಶಪಾಂಡೆಯವರು ಮನ್ನಿಸಿದರು. ಒಕ್ಕಲಿಗನು ಅದನ್ನು ಉಲ್ಲಂಘಿಸಿ ಸ್ಥಳದಲ್ಲಿ ಪ್ರವೇಶ ಮಾಡಿ ಪುಂಡಾಟಿಕೆ ನಡಿಸಿದನು. ಈ ಸಂಗತಿಯನ್ನು ದೇಶಪಾಂಡೆಯವರು, ಲೇಖಿ ಅರ್ಜಿ ಕೊಟ್ಟು, ಮಜಿಸ್ಟ್ರೇಟರ ಲಕ್ಷ್ಯಕ್ಕೆ ತಂದಾಗ್ಯೂ ಹುಕುಮು ಕೊಟ್ಟ ಆ ಮೆಜಿಸ್ಟ್ರೇಟರಿಗೆ ತಮ್ಮ ನ್ಯಾಯಾಸನದ ಗೌರವ ಕಾಪಾಡಿಕೊಳ್ಳುವ ಧೈರ್ಯ ಹುಟ್ಟಲಿಲ್ಲ! ಮೆಜಿಸ್ಟ್ರೇಟರು ಮುಂದಿನ ವಿಚಾರ ನಡಿಸಿ ಮಾಮಲೇದಾರರ ಹುಕುಮಿನಂತೆ ಸ್ಥಳದ ಕಬಜೆ ಒಕ್ಕಲಿಗನದೇ ಇರುತ್ತದೆಂದು ಪುನಃ ತೀರ್ಮಾನಿಸಿ ರಾ|| ದೇಶಪಾಂಡೆಯವರಿಗೆ ಭೂಮಿಯಲ್ಲಿ ಪ್ರವೇಶಿಸದಂತೆ ಪ್ರತಿಬಂಧ ಮಾಡಿದ್ದಾರೆ. ದಿವಾಣಿ ನ್ಯಾಯಾಧೀಶರ ಹುಕುಮುಗಳ ಯುಕ್ತಾಯುಕ್ತತೆಯನ್ನು ವಿಚಾರಿಸುವ ಅಧಿಕಾರ ಮಾಮಲೇದಾರರಾದಿ ಮುಲ್ಕೀ ಅಧಿಕಾರಿಗಳಿಗೆ ಬಂತೇನೆಂದು ಜನರು ಊರಲ್ಲೆಲ್ಲ ಕುಚೇಷ್ಟೆ ಮಾಡುತ್ತಾರೆ! ಹಳಿಯಾಳದ ಮಾಮಲೇದಾರರೂ, ಕಾರವಾರದ ಪ್ರಾಂತ ಅಧಿಕಾರರೂ, ಹಳಿಯಾಳದ ರೆಸಿಡೆಂಟ ಮೆಜಿಸ್ಟ್ರೇಟರೂ, ಕೂಡಿ ಕೊಂಗ್ರೆಸ ರಾಜ್ಯದ ಬಗ್ಗೆ ಪ್ರಜಾಜನಕ್ಕೆ ತಿರಸ್ಕಾರವನ್ನುಂಟುಮಾಡಲು ಕಾರಣರಾಗಿದ್ದಾರೆ.

— ಪ್ರಾಂತಿಕ ಆಹಾರದ ಮಂತ್ರಿಗಳಾದ ಶ್ರೀ|| ದಿನಕರರಾವ ದೇಸಾಯಿಯವರು ಮುಂಬಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆಯನ್ನು ಸೇರಿಸಿ, ಬಟ್ಟೆ ಹಂಚುವಿಕೆಯ ವಿವರಗಳನ್ನು ತಿಳಿಸಿದರು. ಪ್ರತಿ ತಾಲೂಕಿನಲ್ಲಿ ೬-೭ರಂತೆ ಜವಳಿ ಅಂಗಡಿಗಳನ್ನು ತೆರೆಯಬೇಕಾಗಿ ಸರಕಾರದ ನಿರ್ಧಾರವಾಗಿದೆ. ಸಾಮಾನ್ಯವಾಗಿ ೧೫ ಸಾವಿರ ಜನಸಂಖ್ಯೆಗೊಂದು ಅಂಗಡಿ ಬರುವದು. ಮುಂಬಯಿಯ ಹೊರಗೆ ತಲೆಗೆ ೧೯ ಗಜ ಬಟ್ಟೆ, ಮುಂಬಯಿಯಲ್ಲಿ ೨೪ ಗಜಗಳಂತೆ ಒಟ್ಟೆ ಸಿಗುವದು. ಗಿರಣಿ ದರಕ್ಕೆ ೧೨|| ಸಲೆ [illegible] ಮಾಡಿಸಿ ಅಂಗಡಿಗಳೊಳಗೆ ಒರಟು ಬಟ್ಟೆಯನ್ನು ೨೦ ಸಲೆ ಹಣ ಕೂಡಿಸಿ ಜನರು ಒಟ್ಟೆಯನ್ನು ಮಾರಬೇಕೆಂದು ಸರಕಾರದ ಅಪ್ಪಣೆಯಿದೆ. ಕಳ್ಳಾಟಿಕೆ ಮಾಡಿದವರಿಗೆ ಉಗ್ರ ಶಿಕ್ಷೆಯಾಗುವದು, ಬಟ್ಟೆ ಜಪ್ತಾಗುವದು.

ಸ್ಥಾನಿಕ ವೃತ್ತಾಂತ.

ಕುಮಟಾ— ಹಿಂದಿನ ನಕ್ಷತ್ರಗಳಂತೆ ಪುಬ್ಬ ನಕ್ಷತ್ರವೂ ತನ್ನ ಪ್ರತಾಪ ತೋರಿಸಹತ್ತಿದೆ. ಕಳೆದ ವಾರ ೬-೭ ಇಂಚು ಮಳೆಯಾಗಿದ್ದು ಜೂನ ತಾ. ೧ರಿಂದ ಈ ವರೆಗೆ ಎಲ್ಲ ಮಳೆ ಸುಮಾರು ೧೪೦ ಇಂಚು ಆಗಿರುತ್ತದೆ. ಊರೊಳಗೆ ಚಳಿಜ್ವರ, ವಿಷಮಜ್ವರ ಮುಂತಾದ ಬೇನೆ ಬೇಸರಿಕೆಗಳಿವೆ.

ಮೊನ್ನೆ ರವಿವಾರ ಇಲ್ಲಿಯ ಗಿಬ್ಬ ಹೈಸ್ಕೂಲಿನ ಥೇಟರ ಸಭಾಮಂದಿರದಲ್ಲಿ ಕೊಂಕಣಿ ಭಾಷೆಯ ಜನರ ಸಭೆ ಕೂಡಿ, ಒಂದು ಕೊಂಕಣಿ ಕಾರ್ಯ ಸಮಿತಿಯನ್ನು ಸ್ಥಾಪಿಸಿದ್ದಾರೆ. ಕೊಂಕಣಿ ಭಾಷೆಯ ಮಕ್ಕಳಿಗಾಗಿ ಕೊಂಕಣಿ ಶಾಲೆಗಳನ್ನು ತೆರೆಯುವಂತೆಯೂ, ಆ ಬಗ್ಗೆ ಕ್ರಮಿಕ ಪುಸ್ತಕಗಳನ್ನು ತಯಾರಿಸುವಂತೆಯೂ ಮುಂಬಯಿ ಸರಕಾರಕ್ಕೆ ವಿನಂತಿ ಮಾಡುವ ಠರಾವುಗಳಾಗಿವೆ. ಇದಲ್ಲದೆ ಕ್ರಮಿಕ ಪುಸ್ತಕಗಳನ್ನು ತಯಾರಿಸುವಲ್ಲಿ ಸರಕಾರಕ್ಕೆ ನೆರವಾಗಲು ಅನುಭವಿಕ ಶಿಕ್ಷಕರ ಮಂಡಳವೊಂದು ನೇಮಿಸಲ್ಪಟ್ಟಿದೆ. ಕೊಂಕಣಿಯ ಪ್ರಚಾರಕ್ಕೆ ಅವಶ್ಯವಿದ್ದ ಯಾವತ್ತೂ ಕ್ರಮ ಕೈಕೊಳ್ಳಲು ಕಾರ್ಯ ಸಮಿತಿಗೆ ಅಧಿಕಾರ ಕೊಡಲಾಗಿದೆ. ಮಾತೃಭಾಷೆಯಿಂದಲೇ ಈ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂದು ಹಿಂದುಸ್ಥಾನ ಸರಕಾರವು ಹೊರಡಿಸಿದ ಗೊತ್ತುವಳಿಯನ್ನು ಉಲ್ಲೇಖಿಸಿ, ಮುಂಬಯಿ ಸರಕಾರವು ಮಕ್ಕಳ ಮೇಲೆ ಪ್ರಾದೇಶಿಕ ಭಾಷೆಯ ಶಿಕ್ಷಣದ ಒತ್ತಾಯ ಮಾಡುವದು ಅನ್ಯಾಯ ಬಲಾತ್ಕಾರವೆಂದು ಸಭಿಕರು ಅಭಿಪ್ರಾಯಪಟ್ಟರು. ಕೊಂಕಣಿ ಭಾಷೆ ಒಂದು ಸಂಸ್ಕೃತಿಯ ದ್ಯೋತಕವೆಂದೂ, ಆ ಭಾಷೆ-ಸಂಸ್ಕೃತಿಗಳನ್ನು ಕಾಪಾಡಿಕೊಳ್ಳುವದಕ್ಕಾಗಿ ಕೊಂಕಣಿ ಭಾಷಿಯರು ಕರ್ಮ ಪ್ರಯತ್ನ ಮಾಡಬೇಕೆಂದೂ, ಕೊಂಕಣಿ ಭಾಷೆ ಸಂಸ್ಕೃತಕ್ಕೆ ತೀರ ಸಮೀಪವಿರುತ್ತದೆಂದೂ, ಕನ್ನಡದಿಂದ ಆ ಮಕ್ಕಳಿಗೆ ವಿಷಯ ಬೋಧೆಯಾಗುವದಿಲ್ಲೆಂದೂ ಕೆಲವು ಉದಾಹರಣಗಳನ್ನು ಕೊಟ್ಟು ಮಾತನಾಡಿದರು. ಕೊಂಕಣಿ ಭಾಷೆಗೆ ಸಮಾಜದಲ್ಲಿಯೂ ಸರಕಾರ ದರಬಾರದಲ್ಲಿಯೂ ಯೋಗ್ಯ ಗೌರವ ಪ್ರತಿಷ್ಠೆಗಳನ್ನು ಸಂಪಾದಿಸಿ ಕೊಡುವದಕ್ಕಾಗಿ ನಿಶ್ಚಿತ ಕ್ರಮ [illegible] ಕಾರವಾರದ ವಕೀಲ ರಾ|| ಮಾಧವ [illegible] ಇವರ ಅಭಿಪ್ರಾಯ ಮನ್ನಿಸುವ ಗೊತ್ತುವಳಿಯೂ ಸಭೆಯಲ್ಲಾಗಿದೆ.

ಹುಬ್ಬಳ್ಳಿಯ ಕರ್ನಾಟಕ ಚೇಂಬರ ಆಫ್ ಕಾಮರ್ಸ (ಯಾನೆ ವರ್ತಕ-ಸಂಘ) ಇವರು ಇತ್ತಲಾಗಿ ಕರ್ನಾಟಕದೊಳಗಿನ ಉದ್ಯೋಗ-ಉದ್ಯಮಗಳ ಮಾಹಿತಿಯನ್ನು ಸಂಗ್ರಹಿಸುವದಕ್ಕಾಗಿ ರಾ|| ಅಚ್ಯುತ ರಾಯ ಶಾನಭಾಗ, ಬಿ. ಎ., ಇವರನ್ನು ನೇಮಿಸಿದ್ದಾರೆ. ರಾ|| ಶಾನಭಾಗರು ಬೆಳಗಾಂವ, ವಿಜಾಪುರ, ಧಾರವಾಡ ಜಿಲ್ಲೆಗಳ ಸಂಚಾರವನ್ನು ಮುಗಿಸಿ ಈಗ ಈ ಜಿಲ್ಲೆಯ ಸಂಚಾರ-ನಿರೀಕ್ಷಣಗಳನ್ನು ಪ್ರಾರಂಭಿಸಿದ್ದಾರೆ. ಜಿಲ್ಲೆಯೊಳಗಿನ ಉದ್ಯೋಗಸ್ಥರೆಲ್ಲ ರಾ|| ಶಾನಭಾಗರಿಗೆ ಎಲ್ಲ ಮಾಹಿತಿಯನ್ನು ಪೂರೈಸಿ ಸಹಕರಿಸಬೇಕಾಗಿ ವರ್ತಕ-ಸಂಘದವರ ಬಿನ್ನಹವಿದೆ.

ಗೋಕರ್ಣದ ಯೋಗ್ಯ ದರದ ಅಂಗಡಿ ಇಲ್ಲಿಯ ಸಹಕಾರಿ ಸಂಘದ ಕಡೆಗುಂಟು. ಇಂಥ ಸಂಘಗಳಲ್ಲಿ ಕಳ್ಳಾಟಿಕೆ ನಡೆಯುವಂತಿಲ್ಲೆಂದು ಜನರ ಹಾಗೂ ಸರಕಾರದ ಭಾವನೆಯುಂಟು. ಆದರೆ ಗೋಕರ್ಣ ಸಂಘದ ಕಾರ್ಭಾರ ನೋಡಿದರೆ ಈ ಭಾವನೆ ಕೇವಲ ನಿರಾಧಾರವಿರುತ್ತದೆಂದು ಯಾರಿಗೂ ಮನವರಿಕೆಯಾಗುವದು. ಸಂಘದ ಅಂಗಡಿಯವರು ಕಳೆದ ಆಗೋಸ್ತ ತಿಂಗಳಲ್ಲಿ ಒಂದ ಬಣಗೆ ಅಕ್ಕಿಯನ್ನು ತಮಗೆ ಬೇಕಾದವರಿಗಷ್ಟೇ ಕೊಟ್ಟು "ಇತರರಿಗೆ ಇಲ್ಲ ಇಲ್ಲ!" ಎಂದು ಹೇಳಿ ಕಳಿಸಿದರು. 'ಅಷ್ಟಕ್ಕೆ' ಅವರ ಕಳ್ಳಾಟಿಕೆ ನಿಲ್ಲಲಿಲ್ಲ! ಅಕ್ಕಿ ಸಿಗದಿದ್ದರೂ ಕೆಲವರು ಇಷ್ಟರ ಧಾನ್ಯ (ಗೋದಿ ವಗೈರೆ) ಗಳನ್ನು ಒಯ್ದರು. ಹಾಗೆ ಇತರ ಧಾನ್ಯಗಳನ್ನು ಒಯ್ದ ನಿದರ್ಶನಗಳ ಕೊಡನಗಳಲ್ಲಿ ಅಂಗಡಿಯವರು ಕೈಬರಹದಿಂದ ಅಕ್ಕಿಯನು ಸಹ ಖರ್ಚು ಬರೆದ ಸಂಗತಿಗಳು ಬೆಳಕಿಗೆ ಬಂದಿವೆ!! ಇಂತಹದೊಂದು ಸಂಗತಿಯನ್ನು ಸಂಘದ ಸುಪರವೈಸರರ ದೃಷ್ಟಿಗೆ ತಂದಾಗ, ಅವರು ಅಂಗಡಿಗೆ ಬಂದು, "ಇಂಥ ಬಡವರಿಗೆ ಹೀಗೆ ಮಾಡುವದೇ? ತಾರತಮ್ಯ ನೋಡಿ ಮಾಡಬೇಕಲ್ಲವೇ?" ಎಂದು ಆ ಮಹಾಶಯರು ಕಾರಕೂನನಿಗೆ ಗದ್ದರಿಸಿದರು. ಅವರು ಆಗ ಉಪಯೋಗಿಸಿದ "ತಾರತಮ್ಯ" ಶಬ್ದವು ಸೂಚಕವಿದೆ. ಕಳ್ಳಾಟಿಕೆ ಮಾಡಲಡ್ಡಿಯಿಲ್ಲ, ಆದರೆ ಸುಮ್ಮಗೆ ಹೋಗುವ ಕೊಡನದಾರರ ವ್ಯವಹಾರದಲ್ಲಿಷ್ಟು ಕಳ್ಳಾಟಿಕೆ ಮಾಡಿರಿ, ಎಂದು ಮಹಾಶಯರು ಕಾರಕೂನನಿಗೆ ಸೂಚಿಸಿದರೆಂದು ಈ 'ತಾರತಮ್ಯ' ಶಬ್ದವು ಹೇಳುವದಿಲ್ಲವೇ? ಸಂಘದವರು ಬೇರೊಂದು ಸ್ವಂತ ಅಂಗಡಿಯನ್ನಿಟ್ಟು ಅಲ್ಲಿ ಕಾಪು ಮಿತಿದಾಟಿದ ಅಕ್ಕಿ ಮಾರುತ್ತಿದ್ದು ಯೋಗ್ಯದರದ ಅಂಗಡಿಯಲ್ಲಿ ಕಳ್ಳಾಟಿಕೆ ಮಾಡಿದ ಅಕ್ಕಿಯು ಈ ಅಂಗಡಿಗೆ ಹೋಗುತ್ತಿರುವಂಟಿಲ್ಲವೋ? ಜಿಲ್ಹಾಧಿಕಾರಿ ಈ ಕಳ್ಳಾಟಿಕೆಯನ್ನು ನಿಲ್ಲಿಸಿ ಜನರಿಗೆ ಕಾಯಬೇಕಾಗಿ ಅರಿಕೆಯಿರುತ್ತದೆ.

ಕುಮಟಾ ಅಂಕೋಲೆ ಸೀಮೆಯಲ್ಲಿ ಸಾವಿರಾರು ಎಕರೆ ಗದ್ದೆ ಭೂಮಿ ಈ ವರ್ಷ ಬಂಜರ ಬಿದ್ದು ಜಿಲ್ಲೆಯಲ್ಲಿ ಕನಿಷ್ಟ ೬೦೦ ಟನ್ನ ಅಕ್ಕಿ ಉತ್ಪನ್ನ ಕಡಿಮೆಯಾಗುವದಾಗಿಯೂ ಸ್ಥಾನಿಕ ಅಧಿಕಾರಿಗಳಾಗಲಿ ಮುಂಬಯಿ ಸರಕಾರದವರಾಗಲಿ ಈ ಆಪತ್ತಿಯನ್ನು ನಿವಾರಿಸುವ ಪ್ರಯತ್ನವೇನೇನೂ ಮಾಡಿಲ್ಲೆಂದೂ ಅಂಕೋಲೆಯವರು ಹಿಂದೆ ಸರಕಾರದ ಆಹಾರ-ಮಂತ್ರಿಗಳಿಗೆ ಕಳಿಸಿದ ತಂತಿಯ ಬೌರ್ಕಿಗಾಗಿ ಮುಂಬಯಿ ಸರಕಾರಕ್ಕೆ ಬಂದಿರುವಂತೆ ತೋರುತ್ತದೆ. ಮೊನ್ನೆ ರವಿವಾರ ಪಾರ್ಲಮೆಂಟರಿ ಸೆಕ್ರೆಟರಿ ರಾ|| ಸ. ಪ. ಗಾಂವಕಾರರೂ ಕೆಲವು ದೇಸಾಯಿ ಅಧಿಕಾರಿಗಳೂ ಕುಮಟೆಯ ಮಾಮಲೇದಾರರೂ ಮಾದನಗೇರಿಯಲ್ಲಿ ಕೂಡಿ ಸಿದ್ದೇಶ್ವರ, ಮೊಳಕೆ ವಗೈರೆ ಈ ವರ್ಷ ಬಂಜರ ಬಿದ್ದ ಗದ್ದೆಗಳ ಒಡೆಯ-ಒಕ್ಕಲಿಗರ ಸಭೆಯನ್ನು ಕರೆದು ಸದರಿ ಗದ್ದೆಗಳು ಬಂಜರ ಬಿದ್ದ ಕಾರಣಗಳನ್ನು ಕೇಳಿಕೊಂಡರೆಂದೂ, ಅವುಗಳ ಸುಧಾರಣೆ ಮಾಡುವ ಯೋಜನೆಗಳನ್ನು ಚರ್ಚಿಸಿದರೆಂತಲೂ ತಿಳಿಯುತ್ತದೆ. ಗದ್ದೆಗಳ ಕಟ್ಟುಗಳು ಸರಿಯಾಗಿ ಇಲ್ಲದ್ದರಿಂದ ಗದ್ದೆಗಳು ಹಾಳಾಗಿವೆ, ಒಕ್ಕಲತನದ ಕಾನೂನು ಹಾಗೂ ಶ್ರೀ|| ಮುಂಡಾಜೆ-ಕಾಂಟೀ ಗಾಂವಕಾರರು ಮಾಡಿದ ಪ್ರೋತ್ಸಾಹನೆಗಳು ಕಾರಣವೆಂದು ಕೆಲವರು ವಾದಿಸಿದರೆಂತಲೂ ತಿಳಿಯುತ್ತದೆ.

ಶಿರಸಿ— (ತಾ. ೩-೯-೪೮) ಕಳೆದ ಏಪ್ರಿಲ್ ತಿಂಗಳಲ್ಲಿ ಹೊನ್ನಾವರದ ಮುಲ್ಕೀ ಪರೀಕ್ಷೆಯಲ್ಲಿ ಶಿರಸಿಯ ಉಪಕೇಂದ್ರದಲ್ಲಿ ಕೂಡ ಶ್ರೀ|| ಮೀನಾಕ್ಷಿ ನಾರಾಯಣರಾಯರ ಇವರೂ ತೇರ್ಗಡೆಯಾಗಿರುವರೆಂದು ವಿದ್ಯಾಧಿಕಾರಿಗಳು ತಿಳಿಸುತ್ತಾರೆ.

ಹುಬ್ಬಳ್ಳಿಯ 'ಗಾಂಧೀಸ್ಮಾರಕ ಬ್ರಾಹ್ಮಣ ನಿಧಿ' ಭವನದ ನಿಧಿಗೆ ಇಲ್ಲಿಯ ಸಾವಕಾರ ರಾ|| ರಾಯಪ್ಪಾ [illegible] ಇವರು ರೂ. ೨೦೦೦ ದಾನ ಕೊಟ್ಟಿದ್ದಾರೆ.

ಜಾಹೀರ ವಿನಂತಿ.

ಜಿಲ್ಲೆಯ ಭೂಮಾಲಿಕರ ಸಭೆ

ಮುಂಬಯಿಯ ಲೋಕನಿಯುಕ್ತ ಮಂತ್ರಿಗಳು ಮುಂದಿನ ವಾರ ಪ್ರಾರಂಭವಾಗಲಿರುವ ಮುಂಬಯಿಯ ಎಸೆಂಬ್ಲಿ ಕೌನ್ಸಿಲಗಳ ಅಧಿವೇಶನದಲ್ಲಿ ಮಂಡಿಸಲೆಂದು ತಯಾರಿಸಿದ ಟೆನನ್ಸಿ ಎಕ್ಟ ಬಿಲ್ಲ ನಂ. ೪೯ ೧೯೪೮ ನೇದರಲ್ಲಿ ಅವಶ್ಯ ಮತ್ತು ಯುಕ್ತವಿರುವ ದುರುಸ್ತಿಗಳನ್ನು ಸೂಚಿಸುವದಕ್ಕಾಗಿ ಮತ್ತು ಆ ಬಗ್ಗೆ ವಿಚಾರ ಮಾಡುವದಕ್ಕಾಗಿ ಕಾರವಾರದ ಹಿಂದು ಹೈಸ್ಕೂಲಿನ ಸಭಾಮಂದಿರದಲ್ಲಿ ಸಪ್ಟೇಂಬರ ೧೯ನೇ ರವಿವಾರ ರಂದು ೪ ಘಂಟೆಗೆ ಜಿಲ್ಲೆಯ ಭೂಮಾಲಿಕರ ಸಭೆಯನ್ನು ಕೂಡಿಸಲು ನಿಶ್ಚಯಿಸಿದ್ದೇನೆ. ಈ ಸಭೆಗೆ ಜಿಲ್ಲೆಯ ಭೂಮಾಲಿಕರೆಲ್ಲ ತಪ್ಪದೆ ಅವಶ್ಯ ಬರಬೇಕಾಗಿ ವಿನಂತಿಯಿದೆ.

ಕಾರವಾರ, **G S Telang,**

ತಾ. ೪-೯-೧೯೪೮ Karwar

ಟೆಂಡರ ನೋಟೀಸು. ನಂ ೭೮

ಕಾನಡಾ ಜಿಲ್ಲೆಯಲ್ಲಿ ಸರಕಾರಿ ಆಹಾರ ಧಾನ್ಯಗಳನ್ನು, ಸರಕು ಒಯ್ಯುವ ಮೋಟಾರಬಂಡಿಗಳ ಮೂಲಕ, ಸ್ಥಳಾಂತರಿಸಿ ಕೊಡುವ ಕೆಲಸವನ್ನು ಗುತ್ತಿಗೆಗೆ ಹಿಡಿಯಬಯಸುವವರು ತಾ ೨೦-೯-೧೯೪೮ರೊಳಗೆ ಯಾ ಅದರ ಮುಂಚೆ ಜಿಲ್ಲಾ ಮೇಜಿಸ್ಟ್ರೇಟ, ಕಾನಡಾ, ಇವರ ಕಚೇರಿಗೆ ತಲ್ಪುವಂತೆ, ತಮ್ಮ ಮೊಹರ ಬಂದ ಟೆಂಡರಗಳನ್ನು ಕಳಿಸಿಕೊಡಬೇಕಾಗಿ ಕವಾರ ಜಿಲ್ಲಾ ಮೆಜಿಸ್ಟ್ರೇಟರು ಈ ಮೂಲಕ ಜಾಹೀರ ಮಾಡುತ್ತಾರೆ

ಟೆಂಡರ ಕಳಿಸುವವರು ಈ ಕೆಲಸದಲ್ಲಿ ಎಷ್ಟು ಬಂಡಿಗಳನ್ನು ಕೊಡಗಿಸಲು ತಮಗೆ ಸಾಧ್ಯವುಂಟೆಂಬುದನ್ನೂ, (೧) ಸರಕಾರಿ ಆಹಾರ ಧಾನ್ಯಗಳನ್ನು ಸ್ಥಳಾಂತರಿಸುವಾಗ ಪ್ರತಿ ಮೈಲಿನ ಪ್ರತಿ ೧ ಟನ್ನ ಸರಕಿಗೆ ಎಷ್ಟು ಚಾರ್ಜ ಮಾಡುವೆವು ಮತ್ತು (೨) ಲೋಡಿ-ಗಾಡಿಯು ಪ್ರತಿಯೊಂದು ಮೈಲು ಸಾರಿಗೆಗೆ ಏನು ಚಾರ್ಜ ಮಾಡುವೆವು ಎಂಬುದನ್ನೂ ಟೆಂಡರ ಪತ್ರದಲ್ಲಿ ನಮೂದಿಸಬೇಕು

ಸರಕಾರಿ ಆಹಾರ-ಧಾನ್ಯಗಳನ್ನು ತರ ಒಯ್ಯುವ ಬಗ್ಗೆ ದರಗಳನ್ನು ನಿರ್ದೇಶಿಸುವಾಗ ಟೆಂಡರ ಕೊಡುವ ಗುತ್ತಿಗೆದಾರರು ಈ ಕರಾರುಗಳನ್ನು ಪಾಲಿಸಬೇಕು

(೧) ಮೋಟಾರ ಬಂಡಿಗಳನ್ನು ನೇಮಿಸಿಕೊಡುವ ಬಗ್ಗೆ ಈ ಕೆಳಗಿನಂತೆ ಜಿಲ್ಲೆಯ ೩ ವಿಭಾಗಗಳನ್ನು (zones) ಕಲ್ಪಿಸಲಾಗುವದು ಯಾವ ವಿಭಾಗದಲ್ಲಿ ಯಾ ವಿಭಾಗಗಳಲ್ಲಿ ತಾವು ಸರಕಾರಿ ಆಹಾರ ಧಾನ್ಯ ತರ-ಒಯ್ಯುವ ಕೆಲಸ ಮಾಡಲು ತಮ್ಮ ಬಂಡಿಗಳನ್ನು ಪೂರೈಸಲಿಚ್ಛಿಸುತ್ತೇವೆಂಬುದನ್ನು ಗುತ್ತಿಗೆದಾರರು ಟೆಂಡರ ಪತ್ರಗಳಲ್ಲಿ ಸ್ಪಷ್ಟಗೊಳಿಸಬೇಕು.

(ಅ) ಹಳಿಯಾಳ, ಯಲ್ಲಾಪುರ, ಅಂಕೋಲಾ ಮತ್ತು ಕಾರವಾರ ತಾಲೂಕುಗಳೂ ಸುಪಾ ಪೇಟೆಯೂ, (ಬ) ಮುಂಡಗೋಡ, ಶಿರಸಿ, ಸಿದ್ದಾಪುರ ತಾಲೂಕುಗಳು (ಕ) ಕುಮಟಾ, ಹೊನ್ನಾವರ ತಾಲೂಕುಗಳೂ ಭಟಕಳ ಪೇಟೆಯೂ.

ಸುಪಾ ಪೇಟೆಯ ಮಾರ್ಗಗಳು ಕೆಟ್ಟಿರುವದರಿಂದ ಆ ಮಾರ್ಗಗಳಲ್ಲಿ ತರ್ಲ್ಪಡಬೇಕಾಗುವ ಸರಕಾರಿ ಆಹಾರ-ಧಾನ್ಯಗಳ ಸಾಗಾಟದ ಬಗ್ಗೆ ಯೋಗ್ಯ ಹೆಚ್ಚಿಗೆ ದರ ಕೊಡಲ್ಪಡುವದು

ಸದರ (ಸುಪಾ) ಮಾರ್ಗಗಳ ಮೇಲಿನ ಸಾರಿಗೆಯ ದರಗಳನ್ನು ಗುತ್ತಿಗೆದಾರರು ಪ್ರತ್ಯೇಕವಾಗಿ ನಿರ್ದೇಶಿಸಬೇಕು.

ಯಾವದೊಂದು ವಿಭಾಗಕ್ಕಾಗಿ ನೇಮಿಸಿಕೊಟ್ಟ ಮೋಟಾರ-ಗಾಡಿಗಳನ್ನು ಆ ವಿಭಾಗದಲ್ಲಿ ಸೇರ್ಪಡೆಯಾಗುವ ಯಾವದೊಂದು ತಾಲೂಕಿನಲ್ಲಿ ಇಡಬೇಕಾಗುವದು. ಗುತ್ತಿಗೆದಾರರು ತಮ್ಮ ಅನುಕೂಲತೆಗಾಗಿ ತಮ್ಮ ಗಾಡಿಗಳನ್ನು ಬೇರೊಂದು ಕಡೆ ಇಟ್ಟರೆ, ಯಾರ ಅಪ್ಪಣೆಯಂತೆ ಆ ಗಾಡಿಗಳು ಕೆಲಸ ಮಾಡತಕ್ಕದ್ದಿರುವದೋ ಆ ಅಧಿಕಾರಿಗಳು ಗಾಡಿಗಳು ಬೇಕೆಂದು ತಿಳಿಸಿದ ಕ್ಷಣದಿಂದ ೨೪ ತಾಸುಗಳಲ್ಲಿ ಅವನ್ನು (ನಿರ್ದಿಷ್ಟ ಸ್ಥಳದಲ್ಲಿ) ಹಾಜರ ಪಡಿಸುವ ಹೊಣೆ ಗುತ್ತಿಗೆದಾರರ ಮೇಲೆ ಇರುವದು. ಯಾವದೊಂದು ನಿರ್ದಿಷ್ಟ ಭಾಗದಲ್ಲಿ ಬರುವ ಯಾವದೇ ತಾಲೂಕಿಗೆ ಇಲ್ಲವೆ ಪೇಟೆಗೆ (ಆ ಭಾಗದ) ಗಾಡಿಗಳನ್ನು ಕಳಿಸಲು ಕಲೆಕ್ಟರ ಸಾಹೇಬರು ಆಜ್ಞೆ ಮಾಡಬಹುದು, ಇಂಥ ಪ್ರಸಂಗದಲ್ಲಿ ಗಾಡಿಗಳು ತಮ್ಮ ನಿಲ್ದಾಣ (station) ವಿದ್ದ ತಾಲೂಕಿನಿಂದ ಯಾ ತಾಲೂಕಿಗೆ ನಿರುಪಯೋಗಿ ಸಾರಿಗೆ ಮಾಡಿದರೆ ಅಬಗ್ಗೆ ಏನೂ ಪ್ರತಿಫಲ ಸಿಗುವದಿಲ್ಲ ಆದರೆ ಒಂದು ವಿಭಾಗದೊಳಗಿನ ಗಾಡಿಗಳು ಇನ್ನೊಂದು ವಿಭಾಗದಲ್ಲಿ ಕೆಲಸ ಮಾಡತಕ್ಕದ್ದೆಂದು ಹುಕುಮಾದಲ್ಲಿ ಹಾಗೂ ಆ ಹೊಸ ವಿಭಾಗದ ಕಾರ್ಯದ ಕೇಂದ್ರವು ಮೂಲ ಕೇಂದ್ರದಿಂದ ೫೦ ಯಾ ಹೆಚ್ಚಿಗೆ ಮೈಲು ದೂರವಿದ್ದಲ್ಲಿ ಮಾತ್ರ ನಿರುಪಯೋಗಿ (ineffective mileage) ಓಡಾಟದ ಬಗ್ಗೆ ತಕ್ಕ ಪ್ರತಿಫಲ ಕೊಡಬೇಕೆಂದು ಗುತ್ತಿಗೆದಾರರು ಕೇಳಬಹುದು

(೨) ಟೆಂಡರ ಕೊಡುವ ಗುತ್ತಿಗೆದಾರನ ಹತ್ತಿರ ಯಾ ಆತನ ಕೈಕೆಳಗೆ ೫ ಯಾ ಹೆಚ್ಚಿಗೆ ಗಾಡಿ (ಟ್ರಕ್ಕು)ಗಳು ಇರಬೇಕು ೫ ಯಾ ಹೆಚ್ಚಿಗೆ ಗಾಡಿ ಇಲ್ಲದ ಮೋಟಾರಮಾಲಿಕರು ಕೆಲಸಕ್ಕೆ ಕೊಡಲು ಒಪ್ಪಬಹುದಾದ ಗಾಡಿಗಳು ಸಾರಿಗೆಯ ಕೆಲಸ ನಿರ್ವಹಿಸಲು ಸಾಲದಾಗದಿದ್ದಲ್ಲಿ ಒಂದು ವೇಳೆ ಬಂದರೆ ೫ಕ್ಕಿಂತ ಕಡಿಮೆ ಗಾಡಿಗಳುಳ್ಳ ಗುತ್ತಿಗೆದಾರರ ಟೆಂಡರ-ಪತ್ರಗಳನ್ನು ಸಹ ಪರಿಶೀಲಿಸಿ, ಕಲೆಕ್ಟರ ಸಾಹೇಬರು ತಮಗೆ ಇಷ್ಟ ಕಂಡಂತೆ ಸ್ಥಾನಿಕ ಸಾರಿಗೆಯ ಕೆಲಸಕ್ಕಾಗಿ ಆ ಟೆಂಡರುಗಳನ್ನು ಸ್ವೀಕರಿಸಬಹುದು

(೩) ಜವಾಬದಾರಿಯಾಗುತ್ತಲೇ ನಡಿಸಲ್ಪಡುವಷ್ಟು ಸುಸ್ಥಿತಿಯಲ್ಲಿ ಮೋಟಾರ-ಬಂಡಿಗಳು ಇರಬೇಕು, ಮತ್ತು ಅವುಗಳ ಬಗ್ಗೆ ನೇಮಿಸಲ್ಪಟ್ಟ ಡ್ರಾಯವ್ಹರ, ಕ್ಲೀನರ ಮೊದಲಾದವರಿರಬೇಕು

(೪) ಉಗ್ರಾಣ (ಗೋಡೌನ)ಗಳಲ್ಲಿ ಸರಕು ಏರಿಳಿಸುವ ಕೆಲಸವನ್ನು ಉಗ್ರಾಣಗಳಿಗೆ ಸಂಬಧಪಟ್ಟ ಸಿಬಂದಿಯು ಮಾಡುವದು.

(೫) ಕೆಲಸವಿದ್ದಾಗಷ್ಟೇ ತರ ಒಯ್ಯುವ ಕೆಲಸ ಮಾಡಬೇಕಾಗುವದರಿಂದ ಮೋಟಾರ-ಬಂಡಿಯನ್ನು ಕೆಲಸವಿಲ್ಲದೆ ಇಟ್ಟುಕೊಳ್ಳಬೇಕಾಯಿತೆಂಬ ದರ ಬಗ್ಗೆ ಗಳಿಗೆ ಬೇರೆ ಕಾರಣಗಳ ಬಗ್ಗೆ ಯಾವ ವೇತನ ಸಿಗುವದಿಲ್ಲ. ಆದರೆ ಸರಕು ಹೇರಿಕೊಂಡು ತಮ್ಮ ಬಂಡಿಗಳು ನ್ಯಾಯವಾದ ಗಳನ್ನಷ್ಟೇ ಮಾಡಬೇಕಾದ ದಿನಗಳಲ್ಲಿ ಪ್ರತಿ ಬಂಡಿಗೆ ಎಷ್ಟು ಕನಿಷ್ಠ ವೇತನ ತಾವು ಬೇಡುವವೆಂಬುದನ್ನು ಗುತ್ತಿಗೆದಾರರು ತಮ್ಮ ಟೆಂಡರ-ಪತ್ರಗಳಲ್ಲಿ ಕಾಣಿಸಬಹುದು ಪ್ರತಿ ಗಾಡಿಗೆ ಪ್ರತಿ ದಿನ ೫೦ ಹೆಚ್ಚಿಗೆಯೆಂದರೆ ರೂ ೧೫ ಕೊಡಬಹುದಾಗಿ ಸರಕಾರದವರು ಈ ಸಂಬಂಧದಲ್ಲಿ ಅಪ್ಪಣೆ ಮಾಡಿರುತ್ತಾರೆ

(೬) ಮಾರ್ಗಕ್ರಮಣ ಮಾಡುತ್ತಿರುವಾಗ ಆಹಾರ-ಧಾನ್ಯವು ಸೋರಿ ಹಾಳಾಗದಂತೆ ಹಾಗೂ ಮಳೆ ಮುಂತಾದವುಗಳಿಂದ ಧಾನ್ಯ ಕೆಡದಂತೆ ಅವಶ್ಯವುಳ್ಳ ಮುಂಜಾಗ್ರತೆಯ ವ್ಯವಸ್ಥೆಯನ್ನು ಗುತ್ತಿಗೆದಾರರು ಮಾಡತಕ್ಕದ್ದು

(೭) ಸರ್ವಸಾಧಾರಣವಾಗಿ, ಧಾನ್ಯ-ಸಂಗ್ರಹಿಸಿರುವ ಸ್ಥಳದಿಂದ ಧಾನ್ಯ ಒಯ್ಯತಕ್ಕ ಸ್ಥಳಕ್ಕೆ ಮೋಟಾರ ಬಂಡಿಯು ಓಡಾಟ ಮಾಡಬೇಕಾಗುವ ಅಂತರದ ಬಗ್ಗೆ ಮಾತ್ರ, ಮುಂಚೂರ ಆದ ಪ್ರಮಾಣದಿಂದ, ಪೆಟ್ರೋಲ ಕೂಪನುಗಳನ್ನು ಕೊಡಲಾದೀತು.

(೮) ಗುತ್ತಿಗೆಯ ಅವಧಿಯು ತಾ ೧-೧೦-೪೮ರಿಂದ ತಾ ೩೧-೧೦-೧೯೪೯ರ ವರೆಗೆ ಇರುವದು, ಮತ್ತು ಯಾರ ಟೆಂಡರು ಸ್ವೀಕರಿಸಲ್ಪಡುವದೋ ಆ ಗುತ್ತಿಗೆದಾರನು ಮೆ॥ ಕಲೆಕ್ಟರ ಸಾಹೇಬರಿಗೆ ಕರಾರು ಬರೆದುಕೊಡಬೇಕಾಗುವದು ಮತ್ತು ಕರಾರಿನ ಶರ್ತಗಳಿಗೊಳಪಟ್ಟು ತಾನು ನಡೆಯುವೆನೆಂಬ ಭರವಸೆ ಕೊಡುವದಕ್ಕಾಗಿ ತನ್ನ ಕಡೆ ೫ ಯಾ ಹೆಚ್ಚಿಗೆ ಗಾಡಿಗಳಿರುವಲ್ಲಿ ರೂ ೨೦೦೦ದ ಮತ್ತು ಅದಕ್ಕಿಂತ ಕಡಿಮೆ ಗಾಡಿಗಳಿರುವಲ್ಲಿ ರೂ. ೧೦೦೦ದ ಇಡುಗಂಟನ್ನು ಮೆ॥ ಕಲೆಕ್ಟರ ಸಾಹೇಬರ ಕಡೆ ಇಡಬೇಕಾಗುವದು

(೯) ಗುತ್ತಿಗೆದಾರರು ತಮ್ಮ ಮೋಟಾರ ಬಂಡಿಗಳ ಸಂಬಂಧದಲ್ಲಿ (ಕಾಯಂ ಯಾ ತಾತ್ಕಾಲಿಕ) "ಪಬ್ಲಿಕ ಕೆರಿಯರ" ಪರವಾನಿಗೆಗಳನ್ನು ಪಡೆದುಕೊಂಡಿರಬೇಕು.

(೧೦) ಮೇಲಿನ ಶರ್ತಗಳಲ್ಲಿ ಯಾವದೇ ಶರ್ತವನ್ನು ಗುತ್ತಿಗೆದಾರರು ಮುರಿದರೆ ಅವರ ಗುತ್ತಿಗೆಯನ್ನು ಅಂತ್ಯಪಡಿಸಬಹುದು, ಮತ್ತು ಅವರಿಟ್ಟ ಇಡೀ ಇಡುಗಂಟನ್ನಾಗಲಿ ಆದರ ಅಂಶವನ್ನಾಗಲಿ ಸರಕಾರ-ಜಮಾ ಮಾಡಲು ಹುಕುಮು ಮಾಡಬಹುದು, ಇಂಥ ಪ್ರಕರಣದಲ್ಲಿ ಮೆ॥ ಕಲೆಕ್ಟರ ಸಾಹೇಬರು ಕೊಡುವ ನಿರ್ಣಯವೇ ಕೊನೆಯ ನಿರ್ಣಯವೆಂದು ತಿಳಿಯತಕ್ಕದ್ದು.

(೧೧) ಟೆಂಡರ ಕಳಿಸಿಕೊಡುವ ಪ್ರತಿಯೊಬ್ಬನೂ ತನ್ನ ಮೊಹರಬಂದ ಟೆಂಡರ-ಪತ್ರದ ಜೊತೆಗೆ, ಬಯಾನಾ ಹಣವೆಂದು ಸರಕಾರಿ ರೂ. ೧೦೦ ಖಜಾನೆಯಲ್ಲಿ ತುಂಬಿ ಆ ಬಗ್ಗೆ ಪಡೆದುಕೊಂಡ ಪಾವತಿಯನ್ನು ಕಳಿಸಿಕೊಡಬೇಕು ಯಾರ ಟೆಂಡರ ತಿರಸ್ಕರಿಸಲ್ಪಡುವದೋ ಅವರ ಬಯಾನಾ ಹಣ ತಿರುಗಿ ಕೊಡಲ್ಪಡುವದು ಯಾರ ಟೆಂಡರ ಸ್ವೀಕರಿಸಲ್ಪಡುವದೋ ಅವರ ಬಯಾನಾ ಹಣವು, ಅವರು ಇಡತಕ್ಕ ಇಡುಗಂಟಿನ ಲೆಕ್ಕಕ್ಕೆ ಜಮೆ ಕೊಳ್ಳಲ್ಪಡುವದು ಅಥವಾ ಅವರಿಗೆ ತಿರುಗಿ ಕೊಡಲ್ಪಡುವದು. ಕಳೆದ ವರ್ಷ ಸರಕಾರಿ ಆಹಾರ-ಧಾನ್ಯಗಳ ಸಾಗಾಟದ ಕೆಲಸ ಕೈಕೊಳ್ಳುವಾಗ ಇಡುಗಂಟನ್ನಿಟ್ಟ ಮೋಟಾರ-ಮಾಲಿಕರು ಈ ಸಲ ಪುನಃ ಬಯಾನಾ ಹಣ ತುಂಬಿ ಪಾವತಿ ಕಳಿಸುವ ಅಗತ್ಯವಿಲ್ಲ. ಅವರ ಇಡುಗಂಟಿನ ಹಣದೊಳಗಿನ ಅಂಶವನ್ನೇ ಅವರ ಬಯಾನಾ ಹಣದ ಲೆಕ್ಕಕ್ಕೆ ಜಮಾ ಮಾಡಲಾಗುವದು

ಕಾರವಾರ, ತಾ. ೩೧-೮-೪೮.

R. J. Rebello,
ಜಿಲ್ಲಾ ಮೆಜಿಸ್ಟ್ರೇಟ್, ಕಾನಡಾ.

Students' Book Depot, Ltd.,
Ankola, N. Kanara.

ಜಾಹೀರ ಪ್ರಕಟನೆ.

ಮುಂಬಯಿ ಪ್ರಾಂತದ ವಿದ್ಯಾ ಖಾತೆಯವರಿಂದ ಪ್ರಕಾಶಿತವಾದ ಪುಸ್ತಕಗಳ ಬಗ್ಗೆ ನಾವು ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟಕಳ (ಪೇಟೆ) ತಾಲೂಕುಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ

"ಕನ್ನಡ ವಾಚನ ಮಾಲೆಯ ಮೊದಲ ಓದು"

ಇದೀಗಲೇ ಮಾರಾಟಕ್ಕೆ ಸಿದ್ಧವಾಗಿದೆ ಬೆಲೆ. ೦ ೨-೯ ಈ ಬೆಲೆಗೆ ನಮ್ಮಲ್ಲಿ ಯಾ ನಮ್ಮ ಈ ಕೆಳಗಿನ ಅಧಿಕೃತ ಏಜಂಟರಲ್ಲಿ ವಿಕ್ರಿಗೆ ಸಿಗುವದು ಯಾರೂ ಹೆಚ್ಚಿಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ

ಏಜಂಟರು – (೧) ಮೆ॥ ಪೂರ್ಣಚಂದ್ರ ಮೆಡಿಕಲ್ ಸ್ಟೋರ್ಸ್, ಗೋಕರ್ಣ (೨) ಮೆ॥ ರಾಮಕೃಷ್ಣ ಗೋವಿಂದ ಭಟ್ಟ, ಕುಮಟಾ. (೩) ಮೆ॥ ಕಾಮತ ಫಾರ್ಮಸೀಸ ಎಂಡ್ ಸ್ಟೋರ್ಸ, ಹೊನ್ನಾವರ. (೪) ಮೆ॥ ರಾಮನಾಥ ವಾಮನ ಶಾನಭಾಗ, ಭಟಕಳ

K. R. Hegde,
Managing Director.

ಅರಿಯದವರು ಮರೆಯದೆ ನೋಡಿ !!

ಹಿಂದೂ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ !

ಬುದ್ಧಿವಂತರು ಪರೀಕ್ಷಿಸುವ ಶ್ರೇಷ್ಠ, ಬಹಳ ಸಂತೋಷವನ್ನೀಯುವ ಪರಿಮಳ !!

	ಚಿಲ್ಲರೆ ವಿಕ್ರಿ ದರ –	ವ್ಯಾಪಾರಸ್ಥರಿಗೆ –
ಮಹಾವೀರ ಅಗರಬತ್ತಿ	ತೊಲೆ ೧ಕ್ಕೆ ೦-೩-೦	ಡಜನಿಗೆ ರೂ. ೬-೦-೦
ಸುರಂಗಿ ಜವಾಜಿ ಬತ್ತಿ	—ಡಿ— ೦ ೩-೬	—ಡಿ— ,, ೨-೦-೮

ಈಗಿನ ಬತ್ತಿಗಳು ಇನ್ನೂ ಶ್ರೇಷ್ಠವಾಗಿ ತಯಾರಿಸಿರುತ್ತವೆ ಒಮ್ಮೆ ಪರೀಕ್ಷಿಸಿ ನೋಡಿ !!

ವ್ಯಾಪಾರಸ್ಥರು (ರೂ ೧-೦-೦೦ ಅಂಚೆ ಚೀಟಿಯೊಂದಿಗೆ) ಮುಂಚಿತವಾಗಿ ಆರ್ಡರ ಕೊಡಿ

ಚಿತ್ತರಂಜನ ಕಂಪನಿ, ಸಂತೆಪೇಟೆ, **ತುಮಕೂರು.** (MYSORE)

ಸಿದ್ಧಿವಿನಾಯಕನೇ, ಸಕಲರಿಗೆ ಸದ್ಬುದ್ಧಿಯಿತ್ತು ಕಾಪಾಡು!

ಘೋರ ರಾಜಕಾರಣಿಗಳನ್ನು ಪೀಡಿಸುತ್ತಿದೆ. ಬರ್ಲಿನ ಬಿಕ್ಕಟ್ಟನ್ನು ಹೇಗೆ ಪರಿಹರಿಸಿಕೊಳ್ಳಬೇಕೆಂಬುದನ್ನು ತಿಳಿಯದೆ, ಸಕಲರೂ ದಿಙ್ಮೂಢರಾಗಿದ್ದಾರೆ. ಬರ್ಲಿನ ಪಟ್ಟಣ ರುಶ್ಯ ದೇಶದ ವಶವಾದರೆ ಹಿಟ್ಲರನಿಗೂ ಮಿಗಿಲಾಗಿ ರುಶ್ಯ ಪ್ರಭುತ್ವ ಪ್ರಬಲನಾಗಿ ಇಡೀ ಭೂಲೋಕಕ್ಕೆ ಭಾರವಾಗುವದು ಖಂಡಿತ. ಆತನು ಸುವಿಚಾರ ಕಳೆದು ಬರ್ಲಿನ ಪ್ರಕರಣವನ್ನು ಬಗೆಹರಿಸಿಕೊಳ್ಳುವ ಲಕ್ಷಣಗಳು ಕಾಣುವದಿಲ್ಲ.

ಅಮೇರಿಕೆಯ ನಾಮಾಂಕಿತ ಪತ್ರಿಕಾ ಲೇಖಕರಾದ ಮಿ|| ಲೂಯಿ ಫಿಶರರು, ರುಶ್ಯದೊಡನೆ ಯುದ್ಧವಾದಲ್ಲಿ ಹಿಂದ-ಜನಾಂಗವು ಅಮೇರಿಕೆಯ ಪಕ್ಷದಿಂದ ಹೋರಾಡುವಂತೆ ಹಿಂದ-ಜನಾಂಗದ ಮನವೊಲಿಸಲೋಸುಗ, ಗಾಂಧಿ-ಚರಿತ್ರೆ ಬರೆಯುವ ನೆವವನ್ನು ಹಾಕಿಕೊಂಡು, ಹಿಂದುಸ್ಥಾನದೊಳಗೆ ಸಂಚರಿಸುತ್ತಿದ್ದಾರೆ. ಬರ್ಲಿನದೊಳಗೆ ಸೆರೆಯಾಳಾದ ಒಬ್ಬ ರುಶ್ಯ ಅಧಿಕಾರಿಗೆ ಬ್ರಿಟಿಶರು ಮದ್ಯ ಕುಡಿಸಿ, ಆತನಿಂದ ರುಶ್ಯ ಸರಕಾರದ ಗೌಪ್ಯಗಳನ್ನು ಪಡೆಕೊಂಡು ಪ್ರಕಟಿಸಿದರೆಂದು, ಬರ್ಲಿನದೊಳಗೆ ರುಶ್ಯ ಸರಕಾರದ ಪರವಾಗಿ ಹೊರಡುವ ಪತ್ರಿಕೆಯೊಂದರಲ್ಲಿ ಆಕ್ರೋಶ ಮಾಡಲಾಗಿದೆ. ಅಣು-ಬಾಂಬಿನ ರಹಸ್ಯವನ್ನು ಅಮೇರಿಕೆಯ ಶಾಸ್ತ್ರಜ್ಞರು ಕೆಲವರು ಅಂತರಂಗದಿಂದ ರುಶ್ಯ ಸರಕಾರಕ್ಕೆ ತಿಳಿಸಿದರೆಂದು ಅಮೇರಿಕೆಯೊಳಗೆ ಸುದ್ದಿ ಹಬ್ಬಿದೆ. ಈ ಕುರಿತು ಸರಕಾರವು ಚೌಕಶಿಯನ್ನು ನಡಿಸಿದೆ. ಬರ್ಲಿನ ಪ್ರಕರಣ ಬಗೆಹರಿಯದಿದ್ದರೆ, ಬ್ರಿಟಿಶರೂ ಅಮೇರಿಕೆಯವರೂ ಒಕ್ಕಟ್ಟಾಗಿ ರುಶ್ಯರನ್ನು ಪ್ರತಿಭಟಿಸುವ ಪ್ರಸಂಗವಿದೆ. ಪುನಃ ಯುದ್ಧವೇ ನಮ್ಮ ಗತಿ ಏನೆಂದು ಜನಸಾಮಾನ್ಯರು ಗಾಬರಿಗೊಂಡು ಕೇಳಿಕೊಳ್ಳುತ್ತಿದ್ದಾರೆ. ಇಂಥ ಕಾಲದಲ್ಲಿ, ಗಣರಾಯಾ, ನಿನ್ನ ವಿಜಯೋತ್ಸವದ ಶುಭ ದಿನ ಪ್ರಾಪ್ತವಾಗಿದೆ. ರುಶ್ಯ-ಪ್ರಭುಗಳಿಗೂ ಬ್ರಿಟಿಶ-ಅಮೇರಿಕೆಯವರಿಗೂ, ಕಾಲಮಾನೋಚಿತವಾಗಿ ಜನಸುಖವಾಗುವಂತೆ, ಸದ್ಬುದ್ಧಿಯನ್ನು ದಯಪಾಲಿಸಿ ಲೋಕರಕ್ಷಣೆ ಮಾಡು. ರುಶ್ಯರಿಗೂ ಬ್ರಿಟಿಶ-ಅಮೇರಿಕೆಯವರಿಗೂ, ಏಕಚಕ್ರಾಧಿಪರಾಗುವ ಹವ್ಯಾಸವನ್ನು ತೊರೆಯುವ ಬುದ್ಧಿಯನ್ನು ಕೊಡು; ಮತ್ತು ಜಗತ್ತಿನ ಪಾರುಪತ್ಯಾಧಿಕಾರವನ್ನು ಪಡೆಯಬೇಕೆಂಬ ಅಧಿಕಾರ-ಲೋಲುಪತೆಯನ್ನು ತ್ಯಜಿಸುವ ಬುದ್ಧಿ ಕೊಡು. ಸಕಲ ಗುಣಗಳನ್ನು ಜನಸೇವೆಗೆ ವಿನಿಯೋಗಿಸಬೇಕೆಂದೂ ಆ ವಿನಿಯೋಗದಿಂದಲೇ ಅವರವರ ಬುದ್ಧಿಬಲಗಳು ಸಾರ್ಥಕವಾಗುವವೆಂದೂ, ಗಣರಾಯಾ, ಅವರೆಲ್ಲರನ್ನು ನೀನು ಮುಂದಾಗಿ ಪ್ರೇರೇಪಿಸು.

ನಮ್ಮ ಹಿಂದುಸ್ಥಾನದ ಅವಸ್ಥೆಯಾದರೂ ಪ್ರಮುಖರ ದುರ್ಬುದ್ಧಿಯಿಂದ ಹಾಳಾಗಿದೆ. ಜನತಾ-ಸರಕಾರಗಳು ಸ್ಥಾಪನೆಯಾಗಿ ಲೋಕರಾಜ್ಯದ ಶಂಕುಸ್ಥಾಪನೆಯಾದರೂ ಲೋಕರಾಜ್ಯಕರ್ತರ ದುರ್ನಡಾವಳಿಯಿಂದ ದರಿದ್ರ-ನಾರಾಯಣನಿಗೆ ಅಪೇಕ್ಷಿಸಿದ ಸುಖ ಪ್ರಾಪ್ತವಾಗಿಲ್ಲ! ಅಶನವಿದ್ದರೆ ವಸನವಿಲ್ಲ, ವಸನವಿದ್ದರೆ ಅಶನವಿಲ್ಲ. ಅಶನ-ವಸನಗಳೆರಡೂ ಇದ್ದಲ್ಲಿ ವಾಸಕ್ಕೊಂದು ಮನೆಯಿಲ್ಲದೆ ಜನಸಾಮಾನ್ಯರು ಅಲ್ಲಿ, ಎಲ್ಲೆಲ್ಲಿ, ದಿಕ್ಕಿಲ್ಲದೆ ಅಲೆದಾಡುವ ಪ್ರಸಂಗ ಪ್ರಾಪ್ತವಾಗಿದೆ! ದೇಶವನ್ನು ಇಬ್ಭಾಗಗೊಳಿಸುವದರಿಂದ ಲೋಕಸುಖ ಪ್ರಾಪ್ತವಾಗುವದೆಂದು ಮಾಡಿದ ಎಣಿಕೆಯ ಪರಿಣಾಮ ವಿಪರೀತವಾಗಿ, ಇಂದಿಗೆ ನಂದನವನವೆಂದು ಖ್ಯಾತಿಗೊಂಡ ಕಾಶ್ಮೀರ ಪ್ರದೇಶದಲ್ಲಿ ಮಿತ್ರ-ಪಾಕಿಸ್ತಾನ ಸರಕಾರದ ಸೈನಿಕರು ಮಿತ್ರ-ಹಿಂದುಸ್ಥಾನ ಸರಕಾರದ ಸೈನಿಕರೊಡನೆ ಬಹಿರಂಗವಾಗಿ ಶಸ್ತ್ರ ಹಿಡಿದು ಯುದ್ಧ ಸಾರಿ, ಹೋರಾಡುತ್ತಿದ್ದಾರೆ.

ಹೈದರಾಬಾದದ ಸಮಸ್ಯೆಯನ್ನು, ಗಣರಾಯಾ, ನೀನು ಅರಿಯದ ವಿಷಯವಲ್ಲ. ನಿಜಾಮ ಸಾಹೇಬರಿಗೆ ಸಾರ್ವಭೌಮತ್ವ ಪಡೆಯುವ ದುರಾಶೆಯುಂಟಾಗಿದೆ! ನಿಜಾಮರು ಹಿಂದೆ ಸಾರ್ವಭೌಮರಿದ್ದಿಲ್ಲ, ಸಾರ್ವಭೌಮರಾಗಬೇಕೆಂಬ ಅಭಿಲಾಷೆಯನ್ನು ನಿಜಾಮರ ಹಿರಿಯರು ಎಂದೂ ತಳೆದಿರಲಿಲ್ಲ. ಮೋಗಲ ಬಾದಶಹರ ಅಧೀನರಾಗಿ ಉಳಿಯಲು ನಿಜಾಮರು ಯಾವಾಗಲೂ ಅಭಿಮಾನಪಡುತ್ತಿದ್ದರೆಂದು ಇತಿಹಾಸವು ಸಾರುತ್ತದೆ. ನಿಜಾಮ ಶಬ್ದ ಸಹ ಅರಸುತನದ ದ್ಯೋತಕವಲ್ಲ. ನಿಜಾಮನು ಅರಸರಿಗೆ ಅಧೀನನಾಗಿ ವ್ಯವಹರಿಸುವ ಅರಸರ ಪ್ರತಿನಿಧಿಯೆಂದು ಇತಿಹಾಸದ ಅಭ್ಯಾಸಿಗಳು ಬರೆದಿದ್ದಾರೆ. ನಿಜಾಮರಿಗೆ ಆತ್ಮಪರೀಕ್ಷಣೆ ಮಾಡಿಕೊಳ್ಳುವ ಸದ್ಬುದ್ಧಿ ಹುಟ್ಟಲೊಲ್ಲದು! ಕುಟಿಲ ಬ್ರಿಟಿಶರು ಕುತಂತ್ರ ಹೂಡಿರಬಹುದು; ಆದರೆ ಪ್ರಸಂಗವನ್ನು ಎದುರಿಸುವ ಹೊಣೆ ಸ್ವತಃ ನಿಜಾಮರ ಮೇಲಿರುವದರಿಂದ ನಿಜಾಮರು ತಾವು ಯಾರೆಂದು ಗ್ರಹಿಸಬೇಕು. ಹಿಂದುಸ್ಥಾನದೊಳಗಿನ ವಿಚಾರವಂತ ಮುಸಲ್ಮಾನರೆಲ್ಲ ನಿಜಾಮರನ್ನು ವಿರೋಧಿಸುತ್ತಾರೆ. ಪ್ರಸಂಗ ಬಿದ್ದಲ್ಲಿ ಹಿಂದುಸ್ಥಾನದೊಳಗಿನ ೪|| ಕೋಟಿ ಮುಸಲ್ಮಾನರು ನಿಜಾಮರ ಸೈನಿಕರೊಡನೆ ಹೋರಾಡಲಿಕ್ಕೆ ಸಿದ್ಧರಿರುವರೆಂದು ಮದ್ರಾಸದ ಮುಸಲ್ಮಾನ ಸಂಘದ ಸಾಹೇಬರಾದ ದಾವುದ ಅಲಿ ಮಿರ್ಝಾ ಇವರು ಮುಂಬಯಿಯಿಂದ ಪ್ರಕಟನೆ ಹೊರಡಿಸಿದ್ದಾರೆ. ಮುಸಲ್ಮಾನ ಸಮಾಜಕ್ಕೆ ಈ ಪ್ರಕಾರ ಮಾರ್ಗದರ್ಶನ ಮಾಡಿಕೊಟ್ಟ ಬಗ್ಗೆ ನಾವು ಸಾಹೇಬರವರನ್ನು ಅಭಿನಂದಿಸುತ್ತೇವೆ. ಸ್ವದೇಶಾಭಿಮಾನದಿಂದ ನಡಕೊಳ್ಳುವ ಮುಸಲ್ಮಾನರ ನಿರ್ಧಾರವನ್ನು ನಿರ್ಮಲಚಿತ್ತದಿಂದ ವಿಮರ್ಶಿಸಿದರೆ, ನಿಜಾಮರಿಗೆ ನೀ ಪ್ರೇರಣೆ, ಸದ್ಬುದ್ಧಿ ಸೂಚಿಸುವದೆಂದು ನಾವು ಹೇಳಬಲ್ಲೆವು.

ನಿಜಾಮರ ರಾಜ್ಯದೊಳಗಿನ ನೂರಾರು ಗ್ರಾಮಗಳು ನಿಜಾಮರ ಒಡೆತನವನ್ನು ಆಭರ್ಟದಿಂದ ನಿರಾಕರಿಸಿ, ಸ್ವಾತಂತ್ರ್ಯದ ಘೋಷಣೆ ಮಾಡತೊಡಗಿವೆ. ಇವನ್ನೆಲ್ಲ ಶಸ್ತ್ರಾಸ್ತ್ರಗಳಿಂದಲೂ ಮಸ್ತ ಗುಂಡುಗಳಿಂದಲೂ ರಜಾಕಾರರಂಥ ಪುಂಡ, ಭ್ರಷ್ಟ ಸೈನಿಕರ ಸಹಾಯದಿಂದಲೂ ದಬ್ಬಿ ನಿಜಾಮರು ಸುರಾಜ್ಯವನ್ನು ನಡಿಸಬಯಸುವದು ದುರ್ಘಟ. ಕೋಟ್ಯಾವಧಿ ರೂಪಾಯಿಗಳನ್ನು ಸಿಡ್ನೀ ಕೊಟನನಂಥ ಆಕಾಶಗಳ್ಳ ವೈಮಾನಿಕರಿಗೆ ಲಂಚ ಕೊಟ್ಟು ಸಾರ್ವಭೌಮತನವನ್ನು ನಿಜಾಮರು ಗಳಿಸಬಯಸುವದು ದಡ್ಡತನವೆಂದು ಈವಾಗ ಸಾಮಾನ್ಯ ವ್ಯವಹಾರಜ್ಞನು ಸಹ ಹೇಳಬಲ್ಲನು. ಕಾಳಿದಾಸನು ಬಾಳಿಯಾನು. ಎಂಬದೊಂದು ಸಿದ್ಧಾಂತವನ್ನು ಗ್ರಹಿಸಿ ಹಿಂದುಸ್ಥಾನ ಸರಕಾರವು ನಿಜಾಮರ ಹುಡುಗಾಟಿಕೆಯನ್ನೂ ಹುಚ್ಚಾಟವನ್ನೂ ಈತನಕ ಸಹಿಸಿಕೊಂಡಿದೆ. ಇಂದಲ್ಲ ನಾಳೆ ನಿಜಾಮರಿಗೆ ವಸ್ತುಸ್ಥಿತಿಯು ಗ್ರಹಿಕೆಯಾಗಿ ಸದ್ಬುದ್ಧಿ ಸೂಚಿಸುವದೆಂದು ಹಿಂದುಸ್ಥಾನ ಸರಕಾರದ ಎಣಿಕೆಯಿದೆ.

ನಿಜಾಮರನ್ನು ನಿರ್ನಾಮಗೊಳಿಸಬೇಕೆಂಬ ಅವಿಚಾರ ಹಿಂದುಸ್ಥಾನ ಸರಕಾರಕ್ಕಿಲ್ಲ. ನಿರಂಕುಶ ಪ್ರಭುತ್ವ ಲೋಕಸುಖಘಾತಕವೆಂದು ಈವಾಗ ಎಲ್ಲರೂ ಅರಿತ ಸಂಗತಿ. ನಿಜಾಮರು ತಮ್ಮ ಸಂಸ್ಥಾನದಲ್ಲಿ ಲೋಕರಾಜ್ಯವನ್ನು ಘೋಷಿಸಿ ಸರಕಾರಕ್ಕೆ ಅನುಕೂಲವಾಗಿ, ಅಧೀನವಾಗಿ ನಡಕೊಳ್ಳಲು ಒಪ್ಪಂಬಡಬೇಕೆಂದು ಹಿಂದುಸ್ಥಾನ ಸರಕಾರದ ನಿಗ್ರಹವುಂಟು. ರಾಜಧರ್ಮದಲ್ಲಾದರೂ ಲೋಕಸೇವೆಯೇ ರಾಜನ ಪರಮ ಧರ್ಮವೆಂದು ಹೇಳಲ್ಪಟ್ಟಿದೆ. ಗಣರಾಯಾ, ನಿಜಾಮ ಸಾಹೇಬರಿಗೆ ಸದ್ಬುದ್ಧಿಯನ್ನಿತ್ತು, ಹೈದರಾಬಾದದ ಸಮಸ್ಯೆಯನ್ನು ಸಾಮೋಪಚಾರದಿಂದ ತ್ವರ್ಯ ಬಗೆಹರಿಯುವಂತೆ ಮಾಡೆಂದು ಸಮಸ್ತ ಹಿಂದವಾಸಿಗಳು ನಿನ್ನೆಡೆ ಏಕೀಭಾವದಿಂದ ಪ್ರಾರ್ಥಿಸಿಕೊಳ್ಳುತ್ತಾರೆ. ರಜಾಕಾರ ರಕ್ಕಸರ ಪಾಳೆಗಾರನಾದ ರಜವಿಯನ್ನು ಗಜಾಸುರನಂತೆ ನಾಶ ಮಾಡಿ ಹೈದರಾಬಾದದೊಳಗಿನ ನಿಷ್ಪಾಪ ಪ್ರಜೆಗಳನ್ನು ಸಲಹಬೇಕೆಂದೂ ನಿನ್ನಲ್ಲಿ ಪ್ರಾರ್ಥನೆಯುಂಟು.

ಕೊನೆಗೆ ನಿನ್ನೆಡೆ ಒಂದು ಪ್ರಾರ್ಥನೆ. ನೀನು ಅರಿಯದ ವಿಷಯವಿಲ್ಲ. ನಮ್ಮೆಲ್ಲರ ಅಂತರಂಗದ ವಿವಿಧ ಮನೋವ್ಯಾಪಾರಗಳನ್ನು ಸರ್ವಾಂತರ್ಯಾಮಿಯಾದ ನೀನು ಬಲ್ಲೆ. ಕಾಲಧರ್ಮದ ರಹಸ್ಯವನ್ನು ಅರಿತುಕೊಂಡು ಅದಕ್ಕನುಗುಣವಾದ ನಡಾವಳಿಯನ್ನಿಡಲು ನಾವು ಶಕ್ತರಲ್ಲ. ಆ ಜ್ಞಾನವನ್ನು ನೀನು ನಮಗೆ ದಯಪಾಲಿಸಿ, ಕಾಲಮಾನಕ್ಕುಚಿತವಾಗಿ ಧರ್ಮ-ಕಾರ್ಯವನ್ನೂ ದೇವ-ಕಾರ್ಯವನ್ನೂ ಲೋಕಕಾರ್ಯವನ್ನೂ ನಮ್ಮಿಂದ ಸಾಧಿಸಿಕೊಂಡು ಲೋಕೋದ್ಧಾರ ಮಾಡು. ನಮ್ಮೆಲ್ಲರಿಗೂ ಲೋಕೋದ್ಧಾರದ ಬುದ್ಧಿ ಕೊಡು. ಸಕಲರಿಗೂ ಸುಖ ಕೊಡು. ಯಾರಿಗೂ ದುಃಖ ಕೊಡಬೇಡ. ಎಲ್ಲರ ದುಃಖವನ್ನು ಪರಿಹರಿಸು. ಭೂಲೋಕವನ್ನು ಸಮೃದ್ಧಗೊಳಿಸು. ಇದೇ ನಿನ್ನ ಚರಣಗಳಲ್ಲಿ ಪ್ರಾರ್ಥನೆ. ಇದಕ್ಕಾಗಿಯೇ ಬಾ, ಗಣರಾಯಾ, ಬೇಗ ಬಾ! ಎಂದು ನಾವು ನಿನ್ನನ್ನು ಇಂದಿಗೆ ಭಕ್ತಿಭಾವದಿಂದಲೂ ಆತ್ಮಾತುರತೆಯಿಂದಲೂ ಸ್ವಾಗತವನ್ನಿತ್ತು ಹರಸಿದ್ದು!

THE BANK OF RURAL INDIA LTD.,

(Incorporated in British India, Liability of Members limited)

HEAD OFFICE — "Satyabhama Bhavan", KARWAR. N. K.

Offices at :- KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	.. Rs. 10,00,000;
Subscribed Capital	.. Rs. 5,00,000;
Paid-up Capital & Reserves ..	Rs. 5,08,602-8-0

Rates of Interest on Deposits:

Current a/c @ 1% p. a. *Savings Bank a/c @ 2½%*

Fixed Deposits for 3 months @ 3% per annum.

" " for 6 months @ 3½% "

" " for 12 months or more @ 4% "

All kinds of modern Banking business transacted

Karwar, 14-2-1948

P. X. GRACIOUS, MANAGING DIRECTOR

ಜಿಲ್ಲಾ ಸಮಾಚಾರ.

ಹಳಿಯಾಳ— ಸಾಯಂಕಾಲದಲ್ಲಿ ತಾ. ೧೫ರಂದು ಸ್ವಾತಂತ್ರ್ಯ ಜಯಂತಿಯ ಉತ್ಸವ ಸಡಗರದಿಂದ ನೆರವೇರಿತು. ಸ್ಥಾನಿಕ ಶಾಲೆಯ ವಿದ್ಯಾರ್ಥಿಗಳೂ, ಊರ ಜನರೂ, ಸ್ಥಾನಿಕ ಅಧಿಕಾರಿಗಳೂ ಕೂಡಿ ಉತ್ಸವ ಮಾಡಿದರು. ಸಬ್‌ಡಿವ್ಹಿಜನಲ್ ಫಾರೆಸ್ಟ ಆಫೀಸರ ರಾ|| ಕುರೇಶಿ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅವರು ಬಡ ವಿದ್ಯಾರ್ಥಿಗಳಿಗೆ ಪಾಟಿ ಪುಸ್ತಕಗಳನ್ನು ಪೂರೈಸುವದಕ್ಕೆಂದು ರೂ ೧೦ ದಾನ ಕೊಟ್ಟರು. ಜಂಗಲ ಅಧಿಕಾರಿಗಳು ವ್ಯಾಪಾರಿಗಳಿಗೆ ಬೇಕಾದ ಸಸಿಗಳನ್ನು ಊರವರಿಗೆ ಪೂರೈಸಿದ್ದರು. ಸಂಜೆ ಗುಡಿಯಲ್ಲಿ ದೀಪೋತ್ಸವ ಮಾಡಿಸಿತು.

ಸೂಪಾ— (ತಾ ೨೧-೮-೪೮) ಗುಂದದಲ್ಲಿ ಸ್ಥಾನಿಕ ಜಂಗಲ ಇಲಾಖೆಯ ಅಧಿಕಾರಿಗಳೂ ಸ್ಥಾನಿಕ ಶಾಲೆಯವರೂ ನೆರೆಯೂರಿನ ಹಳ್ಳಿಗಳ ಜನರೂ ಕೂಡಿ ಸ್ವಾತಂತ್ರ್ಯ-ವರ್ಧಂತಿಯ ದಿನದಂದು ವಿಜೃಂಭಣೆಯ ಉತ್ಸವ ಮಾಡಿದರು. ಮೆರವಣಿಗೆ, ಧ್ವಜವಂದನೆ, ಪ್ರಾಣ್ ... ಮುಂತಾದ ಕಾರ್ಯಕ್ರಮ ಮುಂಜಾನೆ ನಡೆಯಿತು. ಸಂಜೆಯಲ್ಲಿ ಮಹಾತ್ಮಾ ಗಾಂಧಿ ಮತ್ತು ಪಂ|| ಜವಾಹರಲಾಲರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿಟ್ಟು ದೊಡ್ಡ ಉತ್ಸವ ಹೊರಡಿಸಿದ್ದರು. ಉತ್ಸವ ಮುಗಿದ ನಂತರ ರಾ|| ಪಿ. ಏ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಕೆಲವರ ಭಾಷಣಗಳಾದವು. ರಾತ್ರಿ ಮೇಲೆ ಹೇಳಿದ ಪಲ್ಲಕ್ಕಿಯ ಮುಂದೆ ದೀಪಾಂಧನೆಯೂ ಒಂದು ಯಕ್ಷಗಾನ ಆಟವೂ ನಡೆದವು. ಈ ಎಲ್ಲ ಕಾರ್ಯಕ್ರಮದ ಮೇಲೆ ರಾಷ್ಟ್ರದ ಮುಂದಾಳುಗಳಿಗೆ ಆಯುರಾರೋಗ್ಯ ದಯಪಾಲಿಸುವಂತೆ ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ಪ್ರಾತಃಕಾಲದ ಸುಮಾರಿಗೆ ಉತ್ಸವಕ್ಕೆ ಬಂದ ಜನ ಚದರಿಹೋದರು.

ಅಂಕೋಲಾ— (ತಾ ೨೪-೮-೪೮) ಇಂದು ಇಲ್ಲಿಯ ೧ನೇ ನಂಬರ ಕನ್ನಡ ಶಾಲೆಯಲ್ಲಿ ಸ್ಥಾನಿಕ ಗಂಡುಮಕ್ಕಳ ಶಾಲೆಗಳ ಹಾಗೂ ಊರೊಳಗಿನ ಮತ್ತು ನೆರೆಹೊರೆಯ ಹಳ್ಳಿಗಳೊಳಗಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಭೆಯೊಂದು ರಾ|| ಆರ್. ಕೇ. ನಾಯ್ಕರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಹಲವರು ಭಾಷಣಗಳನ್ನು ಮಾಡಿ ಸಾಕ್ಷರತಾ-ಪ್ರಸಾರದ ಮಹತ್ವವನ್ನೂ ಪ್ರೌಢ ಶಿಕ್ಷಣದ ಮಹತ್ವವನ್ನೂ ತಿಳಿಸಿ ಹೇಳಿದರು.

ಅವರ್ಸೆಯಲ್ಲಿ ಹಿಂದೆ ಚಿಮಣಿ ಎಣ್ಣೆಯನ್ನು ಒಂದೇ ಅಂಗಡಿಯವರು ಪೂರೈಸುತ್ತಿದ್ದರು. ಈ ತಿಂಗಳಲ್ಲಿ ೩ ಅಂಗಡಿಗಳಾಗಿವೆ! ಅದರಿಂದ ಜನರಿಗೆ ಎಣ್ಣೆ ಸಿಗುವದು ಕಷ್ಟವಾಗಿದೆ! ಈ ಅಂಗಡಿಯಲ್ಲಿ ಹೋಗಿ ಎಣ್ಣೆ ಕೇಳಿದರೆ ಆ ಅಂಗಡಿಗೆ ಹೋಗೆಂದು ಹೇಳುತ್ತಾರೆ! ಆ ಅಂಗಡಿಗೆ ಹೋದರೆ ಆಚೆಯ ಅಂಗಡಿಯನ್ನು ತೋರಿಸುತ್ತಾರೆ! ಆಚೆಯ ಅಂಗಡಿಯವರು ಈಚೆಯ ಅಂಗಡಿಯ ಕಡೆ ಬೊಟ್ಟು ಮಾಡುತ್ತಾರೆ. ಈ ಗೊಂದಲವನ್ನು ಸುಧಾರಿಸುವವರ್‍ಯಾರು?

ಜಾಹೀರ ನೋಟೀಸು

ಈ ನೋಟೀಸಿನ ಮೂಲಕ ಸರ್ವ ಜನರಿಗೂ ತಿಳಿಸುವದೇನಂದರೆ - ನನ್ನ ಸಹೋದರ ಕೇಶವ ರಾಮಚಂದ್ರ ಕಾಮತ ಈತನು ಕೆಲ ಕಾಲದಿಂದ ಭ್ರಾಂತನಾಗಿರುತ್ತಾನೆ. ಕಾರಣ ಆತನ ಕಡೆಯಿಂದ ಯಾರೂ ಕ್ರಯ, ಅಡವು ಸಾಲ ಯಿಂದ ಆತನ ಆಸ್ತಿ ತಕ್ಕೊಂಡಲ್ಲಿ ಅದು ಕಾಯಿದೆಯಂತೆ ಸಂಧುವಾಗಲಾರದು ತಿಳಿಯುವದು.

ಬೆಳಸ್ಪ್ರಮೆರಾ ಅಂಕೋಲಾ, ತಾ ೩೧-೮-೪೮

ಈ ಎ ಜ ಚಂದ್ರ ಯಮುನಾಬಾಯಿ ಕೋಂ ಅಚ್ಯುತ ಕಾನಭಾಗ ಸಾ|| ಬೊಬ್ರುವಾಡಾ ಇವರದಾಗಿರುತ್ತದೆ

ಪತ್ರಿಕಾ-ಪ್ರಕಟನೆ.

ಉತ್ತರ ಕಾನಡಾ ಜಿಲ್ಲೆಯ ಪಶ್ಚಿಮ ವಿಭಾಗದ ಭಟಕಳ, ಹೊನ್ನಾವರ, ಕುಮಟಾ ಮತ್ತು ಅಂಕೋಲಾ ಸೀಮೆಗಳೊಳಗಿನ ಬೆಟ್ಟಗಳಲ್ಲಿರುವ ಪ್ಲೈ (ಏಶಿಯಾ ಕಟಿಸ್ಸ್ಯ) ಮರಗಳಿಂದ ಕಾಚನ್ನು (ಕಾಥ) ಸಾಧಾರಣ (moderate) ಪ್ರಮಾಣದಿಂದ ತಯಾರಿಸುವ ಒಂದು ಕಾರಖಾನೆಯನ್ನು ತೆರೆಯುವದು ಶಕ್ಯವುಂಟೆಂದು ಕಂಡುಬಂದಿದೆ.

(೨) ಈ ಭಾಗದಲ್ಲಿ ಸರಕು ಸ್ಥಲಾಂತರಿಸಲು ನೆಲಮಾರ್ಗ ಹೊಳೆಯ ಮಾರ್ಗ ಮತ್ತು ಸಮುದ್ರ ಮಾರ್ಗ ಹೀಗೆ ತ್ರಿವಿಧ ಮಾರ್ಗ-ಸೌಕರ್ಯವಿದೆ. ಬಂದರಗಳಿಗೆ ಬಹಳ ದೂರವಿಲ್ಲ ... ಸೌಕರ್ಯವೂ ಉಂಟು. ... ಹೊರಗೆ ಕಳುಹಿಸಲು ... ನಿಯಂತ್ರಣಗಳು ಹಾಕಲ್ಪಟ್ಟಿರುವ ಸಂಭವವಿರುವದಿಲ್ಲ.

(೩) ಮೇಲೆ ಹೇಳಿದಂತಹ ಕಾರಖಾನೆಯನ್ನು ಸ್ಥಾಪಿಸಬಯಸುವವರಿಗೆ ಕೆಲವೊಂದು ಸವಲತ್ತು ಕೊಡುವ ವಿಚಾರ ಮುಂಬಯಿ ಸರಕಾರದಲ್ಲಿ ನಡೆದಿದೆ.

(೪) ಈ ಸಂಬಂಧಿಯ ಲಾಭ ಪಡೆಕೊಳ್ಳಬಿಚ್ಛಿಸುವವರು, ತಮ್ಮ ಅರ್ಜಿಗಳನ್ನು ಚೀಫ್ ಕನ್ಸರ್ವೇಟರ ಆಫ್ ಫಾರೆಸ್ಟ್, ಮುಂಬಯಿ ಪ್ರಾಂತ, ಪುಣೆ ಇವರಿಗೆ ಅರ್ಜಿ ಮಾಡಬೇಕು. ಇತರ ಮಾಹಿತಿಯೊಡನೆ ಅರ್ಜಿದಾರರು ತಮ್ಮ ಅರ್ಜಿಯಲ್ಲಿ (ಎಷ್ಟು ಪ್ರಮಾಣದಲ್ಲಿ) ಈ ಕೆಳಗೆ ಕಾಣಿಸಿದಷ್ಟು ಸುತ್ತಳತೆಯಿರುವ ಪ್ಲೈ (ಕಚ್ಚು) ಮರಗಳಿಗೆ ಸರಕಾರಕ್ಕೆ ತೀರ ಬೇಕಾಗುವ ಎಂದರೆ ಯಾವ ದರದಿಂದ ರಾಜಧನ (Royalty) ಕೊಡಲು ತಮ್ಮ ಒಪ್ಪಿಗೆಯುಂಟೆಂಬುದನ್ನು ನಮೂದಿಸಬೇಕು.

೨೪ ಇಂಚುಗಳಿಂದ ೩೦ ಇಂಚುಗಳೊಳಗೆ ಸುತ್ತಳತೆಯುಳ್ಳ ಮರಗಳು, ಮತ್ತು ೩೦ರಿಂದ ೩೬ ಇಂಚಿನವರೆಗೆ ಸುತ್ತಳತೆಯುಳ್ಳ ಮರಗಳು.

ಎರಡು ಪ್ರಕಾರದಲ್ಲಿ ೩೬ ಇಂಚುಗಳಿಗಿಂತ ಹೆಚ್ಚಿಗೆ ಸುತ್ತಳತೆಯುಳ್ಳ ಮರಗಳು ಕಾಚು ಮಾಡುವ ಉಪಯೋಗಕ್ಕೆ ಬರುವಂತಿಲ್ಲ. ಕಾಚು ಮಾಡತಕ್ಕಂತಹ ಮೇಲಿನ (ಎರಡೂ) ವರ್ಗಗಳ ಮರಗಳು ವರ್ಷಕ್ಕೆ ಸರಾಸರಿ ೧೫೦೦ ರಿಂದ ೨೦೦೦ ವರೆಗೆ ಸಿಗಲಿಕ್ಕುಳ್ಳವು. ಆದರೆ ಕನಿಷ್ಠ ಇಷ್ಟೇ ಇಂತಿಷ್ಟು ಮರಗಳು ನಿಶ್ಚಿತವಾಗಿ ಸಿಗುವವೆಂದು ಖಾತ್ರಿ ಕೊಡಬರುವಂತಿಲ್ಲ. ಆದರೂ ಗುತ್ತಿಗೆ ಅವಧಿಯ ಪ್ರಥಮ ೩ ವರ್ಷಗಳಲ್ಲಿ, ವರ್ಷ ೧ಕ್ಕೆ ೨೦೦೦ಕ್ಕಿಂತ ಹೆಚ್ಚಿಗೆ ಮರಗಳನ್ನು ಕಡಿದು ತೆಗೆಯಲು ಅನುಮತಿ ಸಿಗುವಂತಿಲ್ಲ. ಕಡಿದು ತೆಗೆಯಬಹುದಾದ ಮರಗಳಿಗೆ ಗುರುತು ಹಾಕಿ ಕೊಡುವ ಕೆಲಸವನ್ನು ಜಂಗಲ ಖಾತೆಯವರು ಮಾಡಿ ಕೊಡುವರು.

೫ ೩೦ ವರ್ಷಗಳ ಕಾಲ ಗುತ್ತಿಗೆದಾರರಿಗೆ ಸವಲತ್ತು ಕೊಡಲಾಗುವದು. ಆದರೆ ಪ್ರಾರಂಭಕ್ಕೆ ನಿರೀಕ್ಷಣೆ ಮಾಡಿ ಕೊಟ್ಟ ದರ ೫ ವರ್ಷಗಳ ಕಾಲವಷ್ಟೇ ಅನ್ವಯಿಸುವದು, ಮುಂದೆ ಅದನ್ನು (ರಾಜಧನವನ್ನು) ಹೆಚ್ಚು-ಕಡಿಮೆ ಮಾಡಲಾಗುವದು. ಹೆಚ್ಚಿನ ಮಾಹಿತಿ ಬೇಕಾದವರು ಚೀಫ್ ಕನ್ಸರ್ವೇಟರ ಆಫ್ ಫಾರೆಸ್ಟ್, ಮುಂಬಯಿ ಪ್ರಾಂತ, ಪುಣೆ ಇವರಿಂದ ಪಡೆಕೊಳ್ಳಬೇಕು.

೬ ಕಾರಖಾನೆ ಸ್ಥಾಪಿಸಲಿಚ್ಛಿಸುವವರು ತಮ್ಮ ಅರ್ಜಿಗಳನ್ನು ಸಾದರಗೊಳಿಸುವ ಮೊದಲು (ಪ್ಲೈ ಮರಗಳು ಬೆಳೆಯುವ) ಕ್ಷೇತ್ರಗಳನ್ನು ತಪಾಸಿಸಿ, ತಮಗೆ ಇಷ್ಟವಿದ್ದ ಕಾರ್ಯಕ್ಷೇತ್ರ ಕೆಲಸಗಾರರು ಸಿಗುವಂತಿರುವರೋ ಹೇಗೆ, ಕಾಚಿನ ಉದ್ದಿಮೆಗೆ ಬೇಕಾದ ಉಪ-ಸಾಹಿತ್ಯವಸ್ತುಗಳು ಎಂಬ ಮುಂತಾದ್ದನ್ನು ಪರೀಕ್ಷಿಸಿ, ಸಕಲ ದೃಷ್ಟಿಯಿಂದ ಕಾರಖಾನೆ ಸ್ಥಾಪಿಸುವದು ಎಷ್ಟರ ಮಟ್ಟಿಗೆ ಸಾಧ್ಯವುಂಟೆಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು.

(೭) ತಮ್ಮ ನೌಕರರಿಗೆ, ಮುಂಬಯಿ ಸರಕಾರ ಕೊಡಲಿಕ್ಕಾದ ಜಾತಿಯವರ ಶಿಫಾರಸುಗಳಿಗನುಸಾರವಾಗಿ ವಸತಿಯ ಸೌಕರ್ಯ, ಔಷಧೋಪಚಾರದ ಸೌಕರ್ಯ ಮುಂತಾದ್ದನ್ನು ಪೂರೈಸುವ ಹೊಣೆ ಭಾವೀ ಕಂಪನಿಯ (ಕಾರಖಾನೆಯನ್ನು ಸ್ಥಾಪಿಸುವವರ) ಮೇಲೆ ಇರುವದು.

(೮) ಯಾವನೊಬ್ಬ ಅರ್ಜಿದಾರನ ಅರ್ಜಿಯನ್ನು, ಅದರ ಬಗ್ಗೆ ಕಾರಣಗಳನ್ನು ಕೊಡದೆ, ಸ್ವೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಸರಕಾರವು ಇಟ್ಟುಕೊಂಡಿದೆ.

(೯) ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ, ಬಯಾನಾ ಹಣವೆಂದು, ರೂ ೧೦೦೦ (ಸರಕಾರಿ ಖಜಿನೆಯಲ್ಲಿ ತುಂಬಿ ಪಡೆದಂಥ) ಚಲನ ಪಾವತಿಯನ್ನು ಕಳಿಸಿಕೊಡಬೇಕು. (ಸರಕಾರಿ ಪ್ರಸಿದ್ಧಿ ಇಲಾಖೆಯ ಪ್ರಕಟನೆ)

NOTICE.

SUBJECT **Completion of questionnaire forms by all owners of cars and motor cycles and Goods truck owners holding Private Carriers' permits, drawing petrol-ration in Karnatak Region --- Review of petrol distribution by the Special Committee.**

All the owners of cars, motor cycles, and goods trucks covered by Private Carriers' permits who have been drawing petrol ration in Karnatak Region are hereby informed that a sample printed questionnaire form required to be filled in by them has been sent to them by post which may reach them by 6th September 1948 Special attention is drawn of the owners of the above vehicles who have been drawing Supplementary or special ration (in addition to basic) either in forms of books D, E, or C regarding the completion of such forms and they are informed that if the submission of these forms is unduly delayed (last date to reach this office has been fixed as 12-9-1948), there might be a considerable delay in considering their applications for supplementary ration in the next quarter commencing from 1-10-1948

No Misc – 3525 of 1948
Area Rationing Office,
Belgaum, 1st Sept , 1948

D K SUKHTANKAR,
Area Rationing Authority,
Karnatak Region, Belgaum

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೮-೦
ಟಪಾಲಖರ್ಚಸಹ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ,, ೦-೧-೦
ಹಳೇ ಸಂಚಿಕೆಗೆ ,, ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ ತೆರಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 13-9-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೧೧.

ಕುಮಟಾ - ಸೋಮವಾರ, ತಾ ೧೩—೯—೧೯೪೮.

ಜಾಹೀರಾತುಗಳ ದರ:-
ಕಾಲಮ್‌ದ ... ಅಗಲದ
೧ ಸಾಲಿಗೆ ೪ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಬೆ॥ ಜಿನ್ನಾರ ನಿಯರ್ಾಣ.

ಪಾಕಿಸ್ತಾನದ ಗವ್ಹರ್ನರ ಜನರಲ್ಲರಾದ ಕ್ವೈದ-ಅಝಮ್ ಮಹಮ್ಮದ ಅಲಿ ಜಿನ್ನಾರವರು ಮೊನ್ನೆ ಶನಿವಾರ ರಾತ್ರಿ ೧೦॥ ಘಂಟೆಗೆ "ಹೃದಯ ವಿಕಾರ" ದಿಂದ ಕಾಲಾಧೀನರಾದರೆಂಬ ದುಃಖದ ಆಧಿಕೃತ ವಾರ್ತೆ ಪಾಕಿಸ್ತಾನದ ರಾಜಧಾನಿಯಾದ ಕರಾಚಿಯಿಂದ ಪ್ರಕಟವಾಗಿದೆ ಬೆ॥ ಜಿನ್ನಾ ಇವರು ೧೮೭೬ ನೇ ಇಸವಿಯಲ್ಲಿ ಹುಟ್ಟಿದರು. ಈಗ ಅವರಿಗೆ ೭೩ ನೇ ವರುಷ ನಡೆಯುತ್ತಿತ್ತು ಈ ದೃಷ್ಟಿಯಿಂದ ವಿಚಾರ ಮಾಡಿದರೆ ಅವರ ನಿಧನ ಪರಿಣತ ವಯಸ್ಸಿನಲ್ಲಿ ಸಂಭವಿಸಿದೆ ಆದರೂ ದೇಶಕ್ಕೆ ಮತ್ತು ಸಮಾಜಕ್ಕೆ ಅವರ ನಾಯಕತ್ವದ ಹಾಗೂ ಮಾರ್ಗದರ್ಶಿತ್ವದ ಆವಶ್ಯಕತೆಯಿದ್ದಾಗ ಅವರ ನಿಧನವಾಗಿರುವದರಿಂದ ಅದು ಅಕಾಲಿಕವೆಂದೇ ಹೇಳಬೇಕು

ಕಳೆದ ೪೦ ವರ್ಷಗಳ ಹಿಂದುಸ್ಥಾನದ ರಾಜಕೀಯ ಇತಿಹಾಸದಲ್ಲಿ ಬೆ॥ ಜಿನ್ನಾರವರ ಹೆಸರು ಪ್ರಾಮುಖ್ಯವಾಗಿ ನಿರ್ದೇಶಿಸಲ್ಪಡುವದೆಂದು ಹೇಳಿದರೆ ತಪ್ಪಾಗುವದಿಲ್ಲ. ೧೯೦೬ರಲ್ಲಿ ಅವರು ಪುಣ್ಯಶ್ಲೋಕ ಪ॥ ವಾ॥ ದಾದಾಭಾಯಿ ನವರೋಜಿಯವರ ಕಾರ್ಯದರ್ಶಿಗಳಾಗಿ, ಆ ಮಹಾತ್ಮರ ಕಡೆಯಿಂದ ರಾಷ್ಟ್ರೀಯತ್ವದ ದೀಕ್ಷೆಯನ್ನು ಪಡಕೊಂಡರು. ಅದಾಗಲೇ ಮುಂಬಯಿಯ ವಕೀಲ ಮಂಡಳದಲ್ಲಿ ಅವರು ಕೀರ್ತಿಯನ್ನೂ ಪಡೆದರು ತಮ್ಮ ರಾಜಕೀಯ ಜೀವನದ ಪ್ರಾರಂಭದ ದೆಸೆಯಲ್ಲಿ ಅವರು ಶುದ್ಧ ರಾಷ್ಟ್ರೀಯರಿದ್ದರು ೧೯೦೬-೦೯ರ ಮೋರ್ಲೆ-ಮಿಂಟೋ ಸುಧಾರಣಗಳಲ್ಲಿ ಮುಸಲ್ಮಾನರಿಗಾಗಿ ಪ್ರತ್ಯೇಕ ಮತದಾರ ಸಂಘಗಳ ಏರ್ಪಾಟು ಮಾಡಿದ್ದು ಬೆ॥ ಜಿನ್ನಾ, ಖ್ಯಾತನಾದ ಬೆ॥ ಮಝರುಲ್ಲ ಹಕ್ಕ, ಮಹಮುದಾಬಾದದ ರಾಜಾಸಾಹೇಬ' ವಗೈರೆ ಹಲವು ಪ್ರಮುಖ ಮುಸಲ್ಮಾನರಿಗೆ ಒಪ್ಪಿಗೆಯಾಗಲಿಲ್ಲ. ಅದೇ ಕಾಲಕ್ಕೆ ಜನ್ಮವೆತ್ತ ಮುಸ್ಲಿಮ ಲೀಗು ಹಿಂದೀ ರಾಷ್ಟ್ರೀಯ ಸಭೆಯಿಂದ ದೂರವುಳಿದು ಹಿಂದೀ ಮುಸಲ್ಮಾನರ ರಾಜಕಾರಣವನ್ನು ಪ್ರತ್ಯೇಕವಾಗಿ ರೂಪಿಸುತ್ತಿರುವದೂ ಅವರಿಗೆ ಸೇರಲಿಲ್ಲ. ೧೯೧೫ರಲ್ಲಿ ಈ ಜನರು ಪ್ರಯತ್ನಪಟ್ಟು ಲೀಗಿನ ಮಹಾಸಭೆಯೂ ಹಿಂದೀ ರಾಷ್ಟ್ರೀಯ ಸಭೆಯ ಮಹಾಧಿವೇಶನವೂ ಒಂದೇ ಕಾಲಕ್ಕೆ ಮತ್ತು ಒಂದೇ ಊರಲ್ಲಿ ಕೂಡುವಂತೆ ಮಾಡಿದರು ಹಿಂದು-ಮುಸಲ್ಮಾನರು ಸಹಕಾರದಿಂದಲೂ ಒಕ್ಕಟ್ಟಿನಿಂದಲೂ ದುಡಿದು ಒಂದೇ ರಾಜಕೀಯ ಗುರಿಯನ್ನು ಸಾಧಿಸುವಂತೆ ಕೂಡ ಅವರು ಮುಸ್ಲೀಮ ಲೀಗಿನ ರಾಜಕಾರಣಕ್ಕೆ ಸಂಸ್ಕಾರ ಕೊಟ್ಟಿದ್ದರು. ಮೊದಲನೇ ಮಹಾಯುದ್ಧದ ಕಾಲಕ್ಕೆ ಹಿಂದೀ ಜನರ ರಾಜಕೀಯ ಆಕಾಂಕ್ಷೆಗಳನ್ನು ಪೂರೈಸುವ ಆಶೆಯನ್ನು ಬ್ರಿಟಿಶ ಸಾಮ್ರಾಜ್ಯ ಸರಕಾರವು ತೋರಿಸಿದಾಗ ಕಾಂಗ್ರೆಸ್ಸು ಹಾಗೂ ಮುಸ್ಲಿಮ ಲೀಗು ಕೂಡಿಯೇ ತಮ್ಮ ರಾಜಕೀಯ ಆಕಾಂಕ್ಷೆಗಳ ಯೋಜನೆಯನ್ನು ತಯಾರಿಸಿ ಬ್ರಿಟಿಶ ಸರಕಾರಕ್ಕೆ ಒಪ್ಪಿಸಿದ್ದರೆಂಬುದನ್ನು ಮರೆಯಲಾಗದು ಈ ಯೋಜನೆಗೆ ಹಿಂದೀ ರಾಜಕಾರಣದ ಇತಿಹಾಸದಲ್ಲಿ ೧೯೧೬ರ "ಕೊಂಗ್ರೆಸ-ಲೀಗ ಯೋಜನೆ" ಎಂಬ ಹೆಸರುಂಟು ೧೯೧೫ ರಿಂದ ೧೯೩೪ರ ವರೆಗೆ ಮುಸ್ಲಿಮ ಲೀಗಿನ ರಾಜಕಾರಣವು ಕೊಂಗ್ರೆಸ್ಸಿನ ರಾಜಕಾರಣದಿಂದ ಬೇರೆಯಾಗಿದ್ದಿಲ್ಲ ಮನುಷ್ಯನನ್ನು ಅವನ ನೆರಳು ಹಿಂಬಾಲಿಸುವಂತೆಯೇ ಲೀಗಿನ ರಾಜಕಾರಣವು ಕೊಂಗ್ರೆಸ್ಸಿನ ರಾಜಕಾರಣವನ್ನು, ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತ ಅನುಸರಿಸುತ್ತಿತ್ತು. ಈ ಪರಿಣತಿಯ ಶ್ರೇಯಸ್ಸು ಬಹ್ವಂಶದಿಂದ ಬೆ॥ ಜಿನ್ನಾರವರಿಗೆ ಸಲ್ಲಬೇಕೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ೧೯೧೮-೩೦ ರ ವರೆಗೆ ಬೆ॥ ಜಿನ್ನಾರವರು ಹಿಂದೀ ರಾಷ್ಟ್ರೀಯ ಸಭೆಯ ವೇದಿಕೆಯ ಅಗ್ರಭಾಗದಲ್ಲಿ ವಿರಾಜಿಸುತ್ತಿದ್ದರು ಆ ಕಾಲದಲ್ಲಿ ನಮ್ಮ ಮುಂಬಯಿ ಪಟ್ಟಣಾತ್ತು ಮಿತವಾದಿಯಾನೆ ಮವಾಳ ರಾಜಕಾರಣಿಗಳ ಪ್ರಭಾವಕ್ಕೆ ಒಳಪಟ್ಟಿದ್ದಿತ್ತು ಅವರ ಆ ಪ್ರಭಾವವನ್ನು ಕುಗ್ಗಿಸಿ, ಅಲ್ಲಿಯ ಜನತೆಗೆ ತೀವ್ರವಾದಿ ರಾಜಕಾರಣದ ದೀಕ್ಷೆ ಕೊಟ್ಟ ಶ್ರೇಯಸ್ಸು ಬೆ॥ ಜಿನ್ನಾರವರಿಗೆ ಸಲ್ಲುತ್ತಿದೆ. ೧೯೧೫ರಿಂದ ೧೯೩೦ರ ವರೆಗೆ ಮುಂಬಯಿಯ ಕೊಂಗ್ರೆಸ್ಸಿಗರ ಧುರೀಣತ್ವದ ಧುರೆಯು ಬೆ॥ ಜಿನ್ನಾರವರ ಕೈಯಲ್ಲೇ ಇತ್ತು ಹಿಂದೆ ಬಂದ ಬಂದ ಪ್ರಾಂತಾಧಿಪರೂ ಸರ್ವಾಧಿಪತಿಗಳೂ ತಮ್ಮ ಆಧಿಕಾರಾವಧಿಯನ್ನು ಮುಗಿಸಿ ಮರಳಿ ಸ್ವದೇಶಕ್ಕೆ ಹೋಗುವಾಗ, ಮುಂಬಯಿಯ ನಾಗರಿಕರ ಪರವಾಗಿ ಅವರಿಗೆ ಪ್ರಶಂಸಾಪರ ಮಾನಪತ್ರವನ್ನು ಕೊಡುವದೂ ಅವರದೊಂದು ಸ್ಮಾರಕವನ್ನು ಹಾಕುವದೂ ಮಿತವಾದಿ ರಾಜಕಾರಣಿಗಳದೊಂದು ಪದ್ಧತಿಯಾಗಿತ್ತು ಈ ಪ್ರಥೆಯು ರಾಷ್ಟ್ರೀಯತೆಗೆ ಘಾತಕವಿರುತ್ತದೆಂದೂ ರಾಷ್ಟ್ರೀಯ ಸ್ವಾಭಿಮಾನಕ್ಕೆ ಮಾರಕವಿರುತ್ತದೆಂದೂ ಬೆ॥ ಜಿನ್ನಾರವರೂ "ಮುಂಬಯಿಯ ಕ್ರೊನಿಕಲ್" ಪತ್ರಿಕೆಯ ಆ ಕಾಲದ ತೇಜಸ್ವಿ ಸಂಪಾದಕರಾಗಿದ್ದ ಶ್ರೀ॥ ಬಿ. ಜಿ. ಹೋರ್ನಿಮನ್ನರೂ ಭಾವಿಸಿ, ೧೯೧೮ರ ಕೊನೆಗೆ ಮುಂಬಯಿಯ ಪ್ರಾಂತಾಧಿಪತಿಗಳ ಗದ್ದುಗೆಯನ್ನು ಬಿಟ್ಟು ಹೋಗುತ್ತಿದ್ದ "ವಿಲಿಂಗಡನ್ ದೊರೆಗಳಿಗೆ ಮುಂಬಯಿಯ ನಾಗರಿಕರ ಪರವಾಗಿ" ಮಾನಪತ್ರ ಸಮರ್ಪಿಸಕೂಡದೆಂದೂ ಅವರ ಸ್ಮಾರಕವನ್ನು ರಚಿಸಕೂಡದೆಂದೂ ಅತಿದೊಡ್ಡ ಅಂದೋಲನವನ್ನೆಬ್ಬಿಸಿದ್ದರು ಈ ಆಂದೋಲನದ ಧುರೀಣತ್ವವನ್ನು ಬೆ॥ ಜಿನ್ನಾರವರು ಯಶಸ್ವಿಯಾಗಿ ವಹಿಸಿದ್ದರು. ಆ ಆಂದೋಲನದ ಹಾಗೂ ಬೆ॥ ಜಿನ್ನಾರವರ ಧುರೀಣತ್ವದ ಸ್ಮಾರಕ ವಿಂದು "ಜಿನ್ನಾ ಹೊಲ" ಎಂಬ ನಾಮಾಭಿಧಾನದಿಂದ ಇಂದಿಗೂ ರಾರಾಜಿಸುತ್ತಿದೆ ಆ ಕಾಲದಲ್ಲಿ ಬೆ॥ ಜಿನ್ನಾರವರ ಹೆಸರು ರಾಷ್ಟ್ರೀಯ ಅಧ್ಯಕ್ಷಪದಕ್ಕಾಗಿ ಸೂಚಿಸಲ್ಪಡುತ್ತಿತ್ತು ಆದರೆ ಮುಂದೆ ೧೯೩೦ರಲ್ಲಿ ಮಹಾತ್ಮಾ ಗಾಂಧಿಯವರು ಕೊಂಗ್ರೆಸ್ಸಿನ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಂಡ ಮೇಲೆ, ಮಹಾತ್ಮರ ತತ್ವಗಳು ತಮಗೆ ಒಪ್ಪಿಗೆಯಾಗದ್ದರಿಂದಲೂ, ಅವುಗಳಂತೆ ನಡೆಯುವದು ಅಸಾಧ್ಯವಾದ್ದರಿಂದಲೂ ಬೆ॥ ಜಿನ್ನಾರವರು ಕೊಂಗ್ರೆಸನ್ನು ಬಿಟ್ಟು ಹೊರಗುಳಿದರು ಆದರೂ ೧೯೩೭ರ ತನಕ ಅವರು ರಾಷ್ಟ್ರೀಯರಾಗಿಯೇ ಉಳಿದಿದ್ದರು. ದಿಲ್ಲಿಯ ವರಿಷ್ಠ ಕಾಯದೆ ಮಂಡಳದಲ್ಲಿ ಅವರು ಸ್ವತಂತ್ರರಾಗಿ ವರ್ತಿಸುತ್ತಿದ್ದರೂ ರಾಷ್ಟ್ರೀಯತೆಯನ್ನೇ ಆಗಾಗ ಎತ್ತಿ ಹಿಡಿಯುತ್ತಿದ್ದರು. ೧೯೩೭ರ ದುಂಡು ಮೇಜಿನ ಪರಿಷತ್ತಿಗೆ ಹೋದಾಗಲೇ ವಿಲಾಯತಿಯಲ್ಲಿ ಮೊಟ್ಟಮೊದಲು ಅವರ ಮತಪರಿವರ್ತನೆಯಾಯಿತು ಆ ಕಾಲದಲ್ಲಿ ಮುಸ್ಲಿಮ್ ಲೀಗು ಕೂಡ ನಿರ್ಜೀವ ಮತ್ತು ನಿರ್ಬಲವಾಗಿತ್ತು ಬೆ॥ ಜಿನ್ನಾರವರು ಅದರ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಂಡು, ಅದರ ಧುರೀಣರಾಗಿ, ಅದಕ್ಕೆ ನಿತಾಂತ ಜಾತೀಯತೆಯ ಮದಿರೆಯನ್ನು ಕುಡಿಸಿ, ಅದನ್ನು ಪೂರ್ಣವಾಗಿ ತಮ್ಮ ಅಂಕೆಯಲ್ಲಿ ತಕ್ಕೊಂಡರು ಪ್ರಥಮತಃ ಅವರು ಮುಸಲ್ಮಾನರಿಗಾಗಿ ಹೆಚ್ಚಿಚ್ಚು ಅಧಿಕಾರಗಳನ್ನೂ ಭದ್ರತೆಗಳನ್ನೂ ಕೇಳಲಾರಂಭಿಸಿದರು ಮುಂದೆ ಕ್ರಮೇಣ ಅವರ ಬೇಡಿಕೆಗಳ ಬಾಲ ಬೆಳೆಯುತ್ತ ಹೋಯಿತು! ೧೯೪೦ರ ಸುಮಾರಿಗೆ ಅವರು ದ್ವಿರಾಷ್ಟ್ರ-ವಾದವನ್ನು ಮುಂದೊಡ್ಡಿ ಪಾಕಿಸ್ತಾನ ರಚನೆಯ ಬೀಜಾರೋಪಣ ಮಾಡಿದರು ಮತ್ತು ತಮ್ಮ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,
ಹೆಡ್ ಆಫೀಸು. ಕುಂದಾಪುರ, ದ. ಕ.
ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ
ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.
ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ
ಕುಂದಾಪುರ, ತಾ. ೨೭-೭-೧೯೪೮
ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಹಟವಾದಿತ್ವದಿಂದ ಅದನ್ನು ಸಾಧಿಸಿಯೇ ಬಿಟ್ಟರು ಪಾಕಿಸ್ತಾನ-ಕಲ್ಪನೆಯ, ಅದರ ಬೆಳವಣಿಗೆಯ ಹಾಗೂ ಅದರ ಸಾಧನೆಯ ಇತಿಹಾಸವನ್ನು "ವೃತ್ತ"ದ ಓದುಗರು ಚನ್ನಾಗಿ ಅರಿತಿರುವದು ಆದ್ದರಿಂದ ಅದರ ವರ್ಣನೆಯನ್ನು ಇಲ್ಲಿ ವಿಸ್ತಾರವಾಗಿ ಕೊಡುವ ದವಶ್ಯವಿಲ್ಲ

ಬೆ|| ಜಿನ್ನಾರವರ ಮೇಲಿನ ಕ್ರಾಂತಿಕಾರಕ ಮತ ಪರಿವರ್ತನೆಗೆ ಕಾರಣವೇನಾಯಿತೆಂಬುದು ಒಂದು ಗೂಢ ಸಮಸ್ಯೆಯಾಗದೆ ಶುದ್ಧ ರಾಷ್ಟ್ರೀಯತೆಯ ವೇದಿಕೆಯಿಂದ ಅವರು ಅರಾಷ್ಟ್ರೀಯ ಜಾತೀಯತೆ ಯತ್ತ— ಅದು ಕೂಡ ಪರಿಣತ ವಯಸ್ಸಿನಲ್ಲಿ! ಹೇಗೆ ಹೊರಳಿದರೆಂಬುದು ಒಂದು ಗಮನಾರ್ಹ ಪ್ರಶ್ನೆ ಯೇ ಸರಿ ಬೇರೆ ಬೇರೆ ಜನರು ಈ ಪ್ರಶ್ನೆಯನ್ನ ಬೇರೆ ಬೇರೆ ಬಗೆಯಿಂದ ಬಿಡಿಸಲೆತ್ನಿಸಿದ್ದಾರೆ. ಮೊನ್ನೆಯೇ ಶ್ರೀ|| ವ್ಹಿ. ಎಸ್ ನಾಯಿಕ ಎಂಬವರು "ಮಿ|| ಜಿನ್ನಾ -ಏ ಪೊಲಿಟಿಕಲ್ ಸ್ಟಡಿ" ಎಂಬ ದೊಂದು ಗ್ರಂಥವನ್ನು ಪ್ರಕಟಿಸಿದ್ದಾರೆ. ಬೆ|| ಜಿನ್ನಾರವರ ಮತಪರಿವರ್ತನೆಗೆ ಮಹಾತ್ಮಾಜಿಯವರ ತತ್ವಜ್ಞಾನವೂ ೧೯೩೭—೩೯ರೊಳಗೆ ಅಧಿಕಾರಾರೂಢವಾಗಿದ್ದ ಕೊಂಗ್ರೆಸ ಮಂತ್ರಿಮಂಡಲಗಳ ರ ಜನೀತಿಯೂ ಕಾರಣವಾದವೆಂದು ಅವರು ಪ್ರತಿಪಾದಿಸಿದ್ದಾರೆ ಹಿಂದೂ ಮಹಾಸಭೆಯ ಜಾತೀಯತೆಯಿಂದ ಮುಸ್ಲಿಮ್ ಲೀಗಿನ ಜಾತೀಯತೆಗೆ ಪುಟ ಸಿಕ್ಕಿತೆಂದು ವಾದಿಸುವವರೂ ಕೆಲವರಿದ್ದಾರೆ. ಅದೇನಿದ್ದಾಗ್ಯೂ ಬೆ|| ಜಿನ್ನಾರವರ ಹಟವಾದಿತ್ವದಿಂದ ದೇಶ-ವಿಚ್ಛೇದನೆ ಮಾಡುವ ಪ್ರಸಂಗ ಬಂತೆಂಬುದೂ, ಅದರಿಂದ ದೇಶದಲ್ಲಿ ಬಹಳ ಅನರ್ಥವುಂಟಾಯಿತೆಂಬುದೂ ಆ ಅನರ್ಥವು ಇನ್ನೂ ಪಾಕಿಸ್ತಾನ-ಹಿಂದುಸ್ಥಾನಗಳೆರಡನ್ನೂ ಕಾಡುತ್ತಿದೆಯೆಂಬುದೂ ನಿರ್ವಿವಾದವಿದೆ.

"ಮರಣಾಂತಾನಿ ವೈರಾಣಿ" ಎಂಬುದೊಂದು ನಮ್ಮ ಹಿರಿಯರ ಸೂಕ್ತಿಯುಂಟು ಅದರಿಂದ ಜಿನ್ನಾರವರ ಇತ್ತೀಚಿನ ರಾಜಕಾರಣದ ಬಗ್ಗೆ ನಮ್ಮಲ್ಲಿ ಎಷ್ಟೇ ತ್ವೇಷ-ದ್ವೇಷಗಳಿದ್ದಾಗ್ಯೂ ಅವನ್ನೆಲ್ಲ ಈಗ ನಾವು ಮರೆತು ಅವರು ಹಿಂದ ಮಾಡಿದ ಭಾರತ ಸೇವೆಗಾಗಿ ಅವರಿಗೆ ತಕ್ಕ ಗೌರವವನ್ನು ಸಲ್ಲಿಸುವದು ನಮ್ಮ ಕರ್ತವ್ಯವಿದೆ ಬೆ|| ಜಿನ್ನಾರವರ ನಿಧನದಿಂದ ಭಾರತದ ಒರ್ವ ತೇಜಸ್ವಿ, ಓಜಸ್ವಿ ವರ್ಚಸ್ವಿ ಪುತ್ರನು ಕಣ್ಮರೆಯಾಗಿರುತ್ತಾನೆಂದೂ, ಪಾಕಿಸ್ತಾನವಂತು ತೀರ ಅನಾಥವಾಗಿದೆಂದೂ ಹೇಳಲಡ್ಡಿಯಿಲ್ಲ ಬೆ|| ಜಿನ್ನಾರವರು ಇನ್ನೂ ಕೆಲವು ವರ್ಷ ಬದುಕಬೇಕಿತ್ತು ಹಾಗೆ ಅವರು ಬದುಕಿದ್ದರೆ ಪಾಕಿಸ್ತಾನ ನಿರ್ಮಿತಿಯಿಂದ ಉಂಟಾದ ಹಿತಾಹಿತಗಳನ್ನೂ ಲಾಭಾಲಾಭಗಳನ್ನೂ ಅವರು ಚನ್ನಾಗಿ ತೂಗಿ ನೋಡಿ, ಸಾರಾಸಾರ ವಿಚಾರ ಮಾಡಿ, ತಿರುಗೊಮ್ಮೆ ತಮ್ಮ ಮತಗಳನ್ನು ಪರಿವರ್ತಿಸಿ, ಪಾಕಿಸ್ತಾನ-ಹಿಂದುಸ್ಥಾನಗಳನ್ನು ಪುನಃ ಜೋಡಿಸಿ ಅಖಂಡ ಭಾರತವನ್ನು ನಿರ್ಮಿಸಲು ಮುಂದಾಗುತ್ತಿದ್ದರೆಂದು ನಮ್ಮದೊಂದು ಭಾವನೆಯಿತ್ತು. ಬೆ|| ಜಿನ್ನಾರವರಲ್ಲದೆ ಈ ಪರಿಣತಿಯನ್ನು ಸಾಧಿಸುತ್ತಿದ್ದರು ಬೆ|| ಜಿನ್ನಾರವರ ಆಕಲ್ಪಿತ ಮತ್ತು ಅನಪೇಕ್ಷಿತ ನಿಧನದಿಂದ ನಮ್ಮ ಆ ಆಶೆ ಇಂದು ನಿರಾಶೆಯಾಗಿದೆಯೆಂದು ನಮೂದಿಸಲು ನಮಗೆ ತೀವ್ರ ವೇದನೆಯಾಗುತ್ತಿದೆ.

[illegible]

- ಕಳೆದ ಶುಕ್ರವಾರದಿಂದ ಮುಂಬಯಿ ಅಸೆಂಬ್ಲಿಯ ಮಳೆಗಾಲದ ಅಧಿವೇಶನಕ್ಕೆ ಪ್ರಾರಂಭವಾಗಿದೆ ಸರಕಾರ ಕಂದಾಯ ಮಂತ್ರಿಗಳು ತಮ್ಮ ಹೊಸ ಒಕ್ಕಲತನದ ಕಾನೂನಿನ ಮಸೂದೆಯನ್ನು ಮಂಡಿಸಿದರು ೬೩ ಸದಸ್ಯರು ನೂತಾವಿ ಅದಕ್ಕೆ ಬೆಂಬಲ ಕೊಟ್ಟರು

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆ ತೀರ ಕಡಿಮೆ. ಇಡೀ ವಾರದಲ್ಲಿ ೧ ೧|| ಇಂಚು ಮಳೆಯಾಗಿರಬಹುದು ಹವೆಯ ಮಾನ ನೋಡಿದರೆ ಮಳೆ ನಿಂತಂತೆ ತೋರುತ್ತದೆ ಆದರೆ ಮುಕ್ಕಿ ಗದ್ದೆಗಳಿಗೂ ಬೇಣ-ಬಾಗಾಯತಗಳಿಗೂ ಇನ್ನೂ ೩ ೪ ವಾರ ತುಸು ತುಸು ಮಳೆ ಬೇಕು

ಕಳೆದ ಶುಕ್ರವಾರ ರಾತ್ರಿ ಬಸ್ಸ್ಟೇಟ ರಸ್ತೆಯೊಳಗಿನ (ಮಾರೀದೆಯ ಸಮೀಪವಿರುವ) ಮನೆಯೊಂದರಲ್ಲಿ ಮಲಗಿಕೊಂಡ ಭಂಡಾರಿ (ವಾದ್ಯದ) ಜಾತಿಯ ತರುಣನೋರ್ವನು ಹೊಟ್ಟೆಯಲ್ಲಿ ಕ್ಷೌರ-ಕತ್ತಿ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು ಆತ್ಮಹತ್ಯೆಯ ಕಾರಣ ಮಾತ್ರ ತಿಳಿಯಲಿಲ್ಲ.

ಇದೇ ಬರುವ ಶುಕ್ರವಾರ (ತಾ ೧೭)ದಿಂದ ಈ ಕರಾವಳಿಯಲ್ಲಿ ಸರಕು ಒಯ್ಯುವ ಹಡಗಗಳ ಸಾರಿಗೆಗೂ ಇದೇ ತಾ ೩೦ ರಿಂದ ಪ್ರಯಾಣಿಕರ ಹಡಗಗಳ ಓಡಾಟಕ್ಕೂ ಪ್ರಾರಂಭವಾಗುವದೆಂದು ತಿಳಿಯುತ್ತದೆ

ಶಾಲೆಗಳಿಗಾಗಿ ಇಮಾರತುಗಳು ಬೇಕಾದಲ್ಲಿ ಅವನ್ನು ಕಟ್ಟಿಸುವ ವ್ಯವಸ್ಥೆ ಮಾಡಲು ಸರಕಾರದವರು ಪ್ರತಿ ಜಿಲ್ಲೆಯಲ್ಲಿ ಒಂದು ಸಮಿತಿ ನೇಮಿಸಿದ್ದಾರೆ ಶಾಲೆಮನೆಯ ಅಗತ್ಯವಿರುವ ಊರ ಜನರು ಅದರ ಖರ್ಚಿನ ೩ ಪಾಲು ವನ್ನು ತೆರಬೇಕಲ್ಲದೆ ಅವಶ್ಯವಿರುವ ಸ್ಥಳವನ್ನು ಕೂಡ ಮೋಫತ ಕೊಡಬೇಕಾಗಿ ಸರಕಾರದ ನಿಗ್ರಹವುಂಟು ಒಂದೊಮ್ಮೆ ಖರ್ಚಿನ ಆ ಪಾಲು ಪೂರೈಸಲು ಊರವರಿಗೆ ಸಾಧ್ಯವಿಲ್ಲದಿದ್ದರೆ ಸರಕಾರದ ಸಾಲಿನ ರೂಪದ ಹಣವನ್ನು ಅವರು ತೆಗೆದುಕೊಂಡು ಶಾಲಾ ಇಮಾರತು ಕಟ್ಟಿಸಿಕೊಡುವ ಗುತ್ತಿಗೆಯನ್ನು ಹಿಡಿಯಬೇಕು. ಒಬ್ಬ ಶಿಕ್ಷಕನ ಒಗ್ಗಾಗಿ ಬೇಕಾಗುವ ಕೋಣೆಯೊಂದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ರೂ ೪೪೧೦ ಬೇಕಾಗುತ್ತದೆಂದು ಸರಕಾರದವರು ಅಂದಾಜು ಮಾಡಿದ್ದಾರೆ. ಈ ಹೊಸ ಯೋಜನೆಯ ಲಾಭ ಪಡೆಕೊಳ್ಳುವ ಇಚ್ಛೆಯುಳ್ಳ ಗ್ರಾಮಗಳ ಜನರು ಬೇಗನೇ ಜಿಲ್ಲಾ ಬೋರ್ಡಿನ ಆಡಳಿತ ಅಧಿಕಾರಿಗಳಿಗೆ ಅರ್ಜಿ ಮಾಡಿಕೊಳ್ಳಬೇಕಾಗಿ ಸೂಚನೆಯಿದೆ

ಅಂತ್ರವಳ್ಳಿ—ಹೊಂಡದಕ್ಕಲ—ಸೊಂಡಿಹಿತ್ಲ ಮಾರ್ಗ ಜಿಲ್ಲಾ ಬೋರ್ಡಿಗೆ ಒಪ್ಪಿದ್ದಿರುತ್ತದೆ. ಈ ವರ್ಷ ಆ ಮಾರ್ಗದ ದುರುಸ್ತಿಯಾಗಿಲ್ಲೆಂದೂ ರಸ್ತೆಯ ಮೇಲೆ ತಿರುಗಾಡುವದು ಕಷ್ಟವಾಗಿದೆಂದೂ ಅಂತ್ರವಳ್ಳಿಯವರೋರ್ವರು ದೂರುತ್ತಾರೆ ಬೋರ್ಡಿನವರು ಅತ್ತ ಲಕ್ಷ ಕೊಡಬೇಕಾಗಿ ಸೂಚನೆಯಿದೆ

ಅಂತ್ರವಳ್ಳಿಯ ಯೋಗ್ಯದರದ ಅಂಗಡಿಯಲ್ಲಿ ಬಡವರಿಗೆ ಅಕ್ಕಿ ಸರಿಯಾಗಿ ಸಿಗುವದಿಲ್ಲೆಂದು ಇನ್ನೋರ್ವರು ದೂರುತ್ತಾರೆ

ಕಳೆದ ವಾರದ "ವೃತ್ತ"ದಲ್ಲಿ ತಮ್ಮ ಯೋಗ್ಯ ದರದ ಅಂಗಡಿಯ ವಿರುದ್ಧ ಬಂದ ಟೀಕೆಯು ನಿರಾಧಾರ ವಿರುತ್ತದೆಂದು ಗೋಕರ್ಣದೊಳಗಿನ ಯೋಗ್ಯ ಧಾರಣೆಯ ಅಂಗಡಿಯ ವ್ಯವಸ್ಥಾಪಕರು ಬರೆಯುತ್ತಾರೆ.

ಹೊನ್ನಾವರ— (ತಾ. ೧—೯—೧೯೪೮) ಕೊಡಾಣಿ ಫಿರ್ಕೆಯಲ್ಲಿ ೪—೫ ಗ್ರಾಮಗಳಿವೆ. ಆ ಎಲ್ಲ ಗ್ರಾಮಗಳಿಗೆ ಶಾನಭೋಗರೊಬ್ಬರೇ ಸದರಿ ಫಿರ್ಕೆಯ ಶಾನಭೋಗರು ಫಿರ್ಕೆಯಲ್ಲಿರದೆ ಹೊನ್ನಾವರದಲ್ಲಿರುತ್ತಾರೆಂತಲೂ ಮೇಲಾಧಿಕಾರಿಗಳು ಫಿರ್ಕೆಗೆ ಬರುತ್ತಿರುವ ಸಮಯದಲ್ಲಿ ಮಾತ್ರ ಫಿರ್ಕೆಯಲ್ಲಿ ಬಂದು ಹಾಜರಾಗುತ್ತಾರೆಂತಲೂ ಫಿರ್ಕೆಯ ಜನರಿಗೆ ಶಾನಭೋಗರ ಕಡೆ ಕೆಲಸವಿದ್ದರೆ ಅವರು ಹೊನ್ನಾವರ ಯಾತ್ರೆ ಮಾಡಬೇಕಾಗುತ್ತದೆಂತಲೂ ಶಾನಭೋಗರು ಗ್ರಾಮಗಳಲ್ಲಿರುವದಿಲ್ಲವಾದ್ದರಿಂದ ಜನರಿಗೆ ಕಷ್ಟವಾಗುತ್ತದೆಂತಲೂ ಹಿನ್ನಾರ ಗ್ರಾಮದವರೊಬ್ಬರು ದೂರುತ್ತಾರೆ

ಶಿರಾಲಿ— (ತಾ ೧—೯—೧೯೪೮) ಬೆಂಗ್ರೆಯ ಪರಸ್ಪರ ಸಹಕಾರಿ ಸಂಘದವರು ಹಿಂದೆ ಸ್ವಾತಂತ್ರ್ಯ ದಿನದ್ದಾಗ ಯೋಗ್ಯ ಧಾರಣೆ ಅಂಗಡಿಯನ್ನು ಪಡೆಕೊಂಡು ನಡೆಸಿದ್ದರು ಅದರ ಲೆಕ್ಕ ಇನ್ನೂ ಪೂರ್ಣವಾಗಿಲ್ಲವಂತೆ ಕಾರ್ಯಕಾರಿ ಮಂಡಳದವರಿಗೂ ಅಧ್ಯಕ್ಷರಿಗೂ ಮತಭೇದಗಳುಂಟಾಗಿರುವದರಿಂದ ಲೆಕ್ಕ ಪೂರ್ಣವಾಗಿಲ್ಲೆಂದು ಹೇಳುತ್ತಾರೆ. ಹಿಂದಿನ ಕಥೆ ಹೀಗಿರುವಾಗ ಅಧ್ಯಕ್ಷರು ಸಂಘದವರ ಮಂಜೂರಿ ಸಮ್ಮತಿ ಇಲ್ಲದೆ ಅಪ್ಪಣೆ ಪಡೆಕೊಳ್ಳದೆ ಸಂಘದ ಹೆಸರಲ್ಲಿ ಈಗಿನ ಯೋಜನೆಯ ಅಗ್ಗ ದರದ ಅಂಗಡಿಯನ್ನು ಪಡೆಕೊಂಡಿದ್ದಾರೆ! ಈ ಗೊಂದಲವನ್ನು ಸಹಕಾರ ಇಲಾಖೆಯವರು ಸುಧಾರಿಸಬೇಕಾಗಿ ಸಂಘದ ಸದಸ್ಯರು ಬಿನ್ನವಿಸುತ್ತಾರೆ

ಶಿರಾಲಿ ಗ್ರಾಮಪಂಚಾಯತದವರು ನಡೆಸಿದ ಸೀಧಾ ಅಂಗಡಿಯ ಕಾರಭಾರದಲ್ಲಿಯೂ ಗೊಂದಲವಾಗಿರುವದೆಂದು ತಿಳಿಯುತ್ತದೆ. ಸರಕಾರಕ್ಕೆ ತುಂಬಬೇಕಾದ ಕೆಲವು ಹಣ ಇನ್ನೂ ಬಾಕಿಯುಳ್ಳುಂಟಂತೆ.

ಇಲ್ಲಿಯ ಟಪಾಲಕಟ್ಟೆಯಲ್ಲಿ ಟಪಾಲ ಬಟವಡೆ ತಡ ಮಾಡಿ ಆಗುತ್ತಿದೆಂಬದೊಂದು ದೂರುಂಟು ಟಪಾಲ ಬಂದ ಕೂಡಲೇ ತಮ್ಮದೇನಾದರೂ ಟಪಾಲ ಬಂದಿದ್ದರೆ ಕೊಡಿರೆಂದು ಜನರು ಹೇಳಿದರೆ, ಟಪಾಲ ಒಡೆಯಲಿಕ್ಕೆ ತಡವುಂಟು, ಹಿಂದಿನಿಂದ ಬರ್ರಿ ಎಂದು ಟಪಾಲ ಕಟ್ಟೆಯವರು ಹೇಳುತ್ತಾರಂತೆ!

ಬಾಡ (ಕಾರವಾರ) — (ತಾ ೪—೯—೪೮) ಇಲ್ಲಿಯ ಪ್ರೌಢ ಶಿಕ್ಷಣ ವರ್ಗದ ಪ್ರಥಮ ವಾರ್ಷಿಕ ಸಮ್ಮೇಲನವು ಇಂದು ರಾ|| ಶಂಕರರಾವ ಸಾಳಸಕರ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರೂ ಬೇರೆ ಕೆಲವರೂ ಶಿಕ್ಷಣದ ಮಹತ್ವವನ್ನು ಕುರಿತು ಭಾಷಣಗಳನ್ನು ಕೊಟ್ಟರು

ತಾಯಿಯ ಆರೋಗ್ಯಕ್ಕಾಗಿ

ಸಾಂಡೂ

ಬಾಳಂತ ಕಾಢಾ

ಬಾಣಂತಿಯರ ನಲಿವಾಗಿ ಉತ್ತಮ



ಡಿ.ಕೆ. ಸಾಂಡೂ ಬ್ರದರ್ಸ

ಚೆಂಬೂರ್

ಮುಂಬಾಯಿ

ಕರ್ನಾಟಕ ಶಾಖೆ —
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಜಿಲ್ಲಾ ಸಮಾಚಾರ.

ಭಟಕಳ— (ತಾ ೧-೯-೧೯೪೮) ಭಟಕಳದ ಹಿಂದುಸ್ಥಾನದ ಸ್ವಾತಂತ್ರ್ಯ-ವರ್ಧಂತಿಯ ಸಭೆಯ ಸಂಬಂಧದಲ್ಲಿ ತಾ. ೨೩-೮ ೪೮ರ "ವೃತ್ತ"ದಲ್ಲಿ ಪ್ರಕಟವಾದ ವರದಿಯು ವಿಪರ್ಯಸ್ತ ಮತ್ತು ನಿರಾಧಾರವಿರುತ್ತದೆಂತಲೂ, ತಮ್ಮ ಬಾಯಲ್ಲಿ ತಾವು ಹೇಳದ ಮಾತುಗಳನ್ನು ಹಾಕಿ ವರದಿಗಾರರು ತಮ್ಮ ಮೇಲೆ ಅಸಂಬದ್ಧ ಟೀಕೆ ಮಾಡಿರುವರೆಂತಲೂ ಸದರಿ ಸಭೆಯ ಅಧ್ಯಕ್ಷರಾಗಿದ್ದ ರಾ॥ ಖತೀಬ ಶಮಸುದ್ದೀನ ಇವರು ತಿಳಿಸುತ್ತಾರೆ "ವೃತ್ತ"ದೊಳಗಿನ ವರದಿಯಿಂದ ಸಾರ್ವಜನಿಕರ ಮೇಲೆ ಉಂಟಾಗಬಹುದಾದ ಪ್ರತಿಕ್ರಿಯೆಯನ್ನು ಹೋಗಲಾಡಿಸುವ ಬಗ್ಗೆ ಅವರು ಅನ್ನೂ ಬರೆಯುವದೇನಂದರೆ — "ನಾನು ನನ್ನ ಅಧ್ಯಕ್ಷೀಯ ಭಾಷಣದಲ್ಲಿ ಸರಕಾರದ ಯಾವದೇ ಕೃತಿಯನ್ನು ಖಂಡಿಸಿರುವದಿಲ್ಲ, ಯಾ ಮುಸಲ್ಮಾನರ ರಾಜ್ಯನಿಷ್ಠೆಯ ಬಗ್ಗೆ ಸಂಶಯ ತಾಳಿ ಅವರನ್ನು ಸರಕಾರವು ಕಾಯುತ್ತದೆಂತು ಹೇಳಿದ್ದೂ ಇರುವದಿಲ್ಲ. ಅಂದಿನ ಪವಿತ್ರ ಸಮಯದಲ್ಲಿ ದೇವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಿ, ಕಳೆದ ವರ್ಷದ ಕಾರ್ಯದ ಆಢಾವೆಯನ್ನು ತೆಗೆದು, ಮುಂದಿನ ದೇಶಕಾರ್ಯದ ಸಂಕಲ್ಪ ಮಾಡತಕ್ಕದ್ದೆಂದು ನಾನು ಪ್ರಸ್ತಾವನೆ ಮಾಡಿ, ಈಗಿನ ಪ್ರಾಂತಿಕ ಹಾಗೂ ಕೇಂದ್ರ ಸರಕಾರಗಳು ಜನತೆಯ ಉದ್ಧಾರಕ್ಕಾಗಿ ತಮ್ಮ ಕೈಯಿಂದ ಆಗುವಷ್ಟು ಪ್ರಯತ್ನ ಮಾಡುತ್ತಿರುವದರಿಂದ ಅವುಗಳ ಲೋಪದೋಷಗಳ ಬಾಹುಳ್ಯ ಮಾಡದೆ, ಅವುಗಳಿಗೆ ಸಂಕಲ್ಪಿತ ಕಾರ್ಯ ಈಡೇರಿಸುವದಕ್ಕೆ ಸಾಕಷ್ಟು ಸಮಯ ಕೊಡಬೇಕೆಂದೂ, ಸದ್ಯಕ್ಕೆ ಅಧಿಕಾರದಲ್ಲಿರುವ ಮುಂದಾಳುಗಳಿಗಿಂತ ಹೆಚ್ಚಿನ ಯೋಗ್ಯತೆಯ ಅಥವಾ ವಿಶ್ವಾಸಪಾತ್ರ ನಾಯಕರು ದೇಶಕ್ಕೆ ಸಿಗಲಾರರೆಂದೂ ನಾನು ವಿವರಿಸಿದ್ದೆ. ಕೆಲವೊಂದು ಪತ್ರಿಕೆಗಳಲ್ಲಿ ಬರುವ ಟೀಕೆಯನ್ನು ನಂಬಿ ಸರಕಾರದ ಸದ್ಭಾವನೆಯ ಬಗ್ಗೆ ವಿರುದ್ಧ ಅಭಿಪ್ರಾಯ ಮಾಡಿಕೊಳ್ಳಬೇಡಿರೆಂದೂ ಪ್ರತಿಯೊಂದು ವಿಷಯದಲ್ಲಿ ಸರಕಾರಕ್ಕೆ ಸಹಕಾರವನ್ನು ನೀಡಿರೆಂದೂ ನಾನು ಬೋಧಿಸಿದ್ದೆ. ಮುಸಲ್ಮಾನರು ತಮ್ಮ ಉಕ್ತಿಯಿಂದಲೂ ಕೃತಿಯಿಂದಲೂ ಸರಕಾರ-ನಿಷ್ಠೆಯನ್ನು ತೋರಿಸಬೇಕೆಂದು ಉಪದೇಶ ಮಾಡಿದ್ದೆ. ಒಳಗೊಂದು ಹೊರಗೊಂದು ರೀತಿ ಧರಿಸುವದು ಇಸ್ಲಾಮುಧರ್ಮಕ್ಕೆ ಅನುಚಿತವೆಂದೂ ನಾನು ಪ್ರತಿಪಾದಿಸಿದ್ದೆ. ಅದೇ ವೇಳೆಗೆ ಸರಳತನ ಮತ್ತು ಪ್ರಾಮಾಣಿಕತನ ಇವು ಮುಸಲ್ಮಾನರ ಸ್ವಭಾವ ಧರ್ಮವಾಗಿರುವದರಿಂದ ಮುಸಲ್ಮಾನರು ವ್ಯಕ್ತಗೊಳಿಸುವ ದೇಶನಿಷ್ಠೆಯ ಬಗ್ಗೆ ಏನೊಂದೂ ಸಂದೇಹಗೊಳ್ಳಬೇಡಿರೆಂದೂ ಮುಸಲ್ಮಾನೇತರರಿಗೆ ವಿನ್ನವಿಸಿದ್ದೆ. ಸಂದರ್ಭವಶಾತ್ ಹಿಂದ ಪಾಕಿಸ್ತಾನಗಳ ನಡುವೆ ಒಡಂಬಡಿಕೆಯು ಜಾರಿ ಆಗಿರುವಾಗ ಪಾಕಿಸ್ತಾನವು ಹಿಂದ-ಹಿತಶತ್ರುಗಳಿಗೆ ಆಶ್ರಯವನ್ನೀಯುವದು ತಪ್ಪೆಂದೂ ಹಾಗೆ ಮಾಡುವದು ಇಸ್ಲಾಮು ಧರ್ಮತತ್ತ್ವಗಳಿಗೆ ವಿರುದ್ಧವಿರುತ್ತದೆಂತಲೂ ನಾನು ನುಡಿದಿದ್ದೆ. ರಾ॥ ಧಾರೇಶ್ವರರ ಭಾಷಣವನ್ನು ನಾನು ಖಂಡಿಸಿಲ್ಲೆಂಬ ಆರೋಪಕ್ಕೆ ನನ್ನ ಉತ್ತರವಿಷ್ಟೇ ಅವರು ಅಸಂಬದ್ಧ ಮಾತುಗಳನ್ನಾಡತೊಡಗಿದ ಕೂಡಲೇ ನಾನು ಅವರಿಗೆ ಎಚ್ಚರಿಕೆ ಕೊಟ್ಟಿದ್ದರಿಂದಲೂ, ಆದರಿಂದ ಅವರು ತಮ್ಮ ಭಾಷಣವನ್ನು ನಡುವೆಯೇ ನಿಲ್ಲಿಸಿ ಆಸನಸ್ಥರಾದ್ದರಿಂದಲೂ ಅವರ ವಾದವನ್ನು ಮಾತಿನಿಂದ ಪುನಃ ಖಂಡಿಸಬೇಕಾದದು ಅವಶ್ಯವಿದ್ದಿಲ್ಲ. ನಾನು ಅವರ ಬಾಯಿಗೆ ಬೀಗ ಹಾಕಿದ್ದರ ಮೇಲಿಂದಲೇ ಅವರ ಮಾತುಗಳನ್ನು ನಾನು ಎಳ್ಳಷ್ಟೂ ಒಪ್ಪಲಿಲ್ಲೆಂಬುದು ಸ್ಪಷ್ಟಗೊಂಡಿದ್ದಂತಾಗುವದಿಲ್ಲವೇ?" ಇತ್ಯಾದಿ ತಾವು ಮಾತಾಡಿದ್ದು ಅಂಶತಃ ಉರ್ದು ಭಾಷೆಯಿಂದ ಮತ್ತು ಅಂಶತಃ ಇಂಗ್ಲಿಷ ಭಾಷೆಯಿಂದ ಇರುತ್ತದೆಂತಲೂ ಆ ಎರಡೂ ಭಾಷೆಗಳು "ವೃತ್ತ"ದ ಸುದ್ದಿಗಾರರಿಗೆ ಅವಗತವಿಲ್ಲದ್ದರಿಂದಲೇ ಅವರು ತಪ್ಪು ತಿಳುವಳಿಕೆ ಮಾಡಿಕೊಂಡು, ತಪ್ಪು ವರದಿ ಕಳಿಸಿರಬೇಕೆಂದೂ ರಾ॥ ಶಮಸುದ್ದೀನರು ಕೊನೆಗೊಂದು ಸಾಲು ಬರೆದಿರುತ್ತಾರೆ.

(ತಾ ೧೦-೯-೧೯೪೮) ಇಲ್ಲಿ ಮಹಾಲಕರಿಗಳಾಗಿದ್ದ ರಾ॥ ಹೊಸಂಗಡಿಯವರಿಗೆ ಬೇರೆ ಕಡೆಗೆ ವರ್ಗವಾಗಿ, ರಾ॥ ಮುಹಾಜನರು ಇಲ್ಲಿ ಮಹಾಲಕರಿಗಳಾಗಿ ಬಂದಿರುತ್ತಾರೆ.

ವಾಡಿಕೆಯಂತೆ ಶ್ರೀ ಹನುಮಂತ ದೇವಸ್ಥಾನದಲ್ಲಿ ಈ ವರ್ಷವೂ ಸಾರ್ವಜನಿಕ ಗಣಪತಿಯ ಉತ್ಸವ ನಡೆಯಿತು. ಮಂಗಳ-ಬುಧವಾರ ಶ್ರೀ ಗಣಪತಿಯ ಮುಂದೆ ರಾ॥ ಶೀಕಾಗಿರಿ ಮಾಸ್ತರರ ಕೀರ್ತನೆಗಳಾದವು, ಗುರುವಾರ ನ್ಯೂ ಇಂಗ್ಲಿಷ ಶಾಲೆಯ ಮುಖ್ಯಾಧ್ಯಾಪಕ ರಾ॥ ಮೂಡಭಟಕಳ ಇವರು ಒಂದು ಪ್ರವಚನ ಕೊಟ್ಟು ಶ್ರೀ ಗಣಪತಿಯ ಮಹಾತ್ಮೆಯನ್ನು ತಿಳಿಸಿಕೊಟ್ಟರು. ಆ ಮೇಲೆ ಮೆರವಣಿಗೆಯಿಂದ ಮಂಗಲ ಮೂರುತಿಯನ್ನು ನದಿಯ ದಂಡೆಗೆ ಒಯ್ದು ಅಲ್ಲಿ ಅದನ್ನು ವಿಸರ್ಜಿಸಲಾಯಿತು.

ರಾತ್ರಿ ಕಾಲದಲ್ಲಿ ಸಹ ರಸ್ತೆಯಲ್ಲಿ ಕೆಲವು ತುಂಟ ದನಗಳು ತಿರುಗುತ್ತಿರುವದರಿಂದ ದಾರಿಕಾರರಿಗೆ ಕಷ್ಟವಾಗುತ್ತದೆ. ದನ ಸಾಕುವವರು ಇದನ್ನು ತಡೆಯಬೇಕು. ಇಲ್ಲದಿದ್ದರೆ ಪೋಲೀಸರು ಯುಕ್ತ ಕ್ರಮ ಕೈಕೊಂಡು ಅವರಿಗೆ ಬುದ್ಧಿ ಕಲಿಸಬೇಕಾಗುವದು.

ಹೊನ್ನಾವರ— (ತಾ ೧೧-೯-೪೮) ಇಲ್ಲಿಯ ಜವಳಿ-ವ್ಯಾಪಾರಸ್ಥರು ಮೊನ್ನೆ ರಾ॥ ಪಾಂಡುರಂಗ ಭಗತ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ತಮ್ಮದೊಂದು ಸಂಘ ಸ್ಥಾಪಿಸಿದ್ದಾರೆ. ರಾ॥ ಎಸ್. ಎನ್. ಕಾಮತರು ಸಂಘದ ಅಧ್ಯಕ್ಷರಾಗಿಯೂ, ರಾ॥ ವಿ. ಆರ್. ಕಾಮತ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ. ಬೇಗನೆ ಬರಲಿರುವ ನಿಯಂತ್ರಿತ ಬಟ್ಟೆಯ ವ್ಯವಹಾರವನ್ನು ತಮ್ಮ ಸಂಘಕ್ಕೆ ಒಪ್ಪಿಸಬೇಕೆಂದೂ, ಮೊನ್ನೆಯೇ ಜನ್ಮತಾಳಿದ, ಅನುಭವಶೂನ್ಯ ಸಹಕಾರ ಸಂಘಗಳಿಗೆ ಅದನ್ನು ಒಪ್ಪಿಸಿದರೆ ಅನವಸ್ಥೆಯಾಗುವದೆಂದೂ ಸಂಘದವರು ಸರಕಾರಕ್ಕೆ ಮನವಿ ಕಳಿಸಿದ್ದಾರೆಂದು ತಿಳಿಯುತ್ತದೆ.

ಇಲ್ಲಿ ಶ್ರೀ ಮಹಾಕಾಳಿ-ಅಮ್ಮನವರದೊಂದು ಹೊಸ ಗುಡಿಯಾಗಿದೆ. ಅಮ್ಮನವರ ಪೂಜೆ ಮಾಡುವ ಪಾಂಡುರಂಗನ ಮೈಯಲ್ಲಿ ದೇವಿಯ ಸಂಚಾರವಾಗುತ್ತದೆಂದು ಜನಭಾವನೆಯುಂಟು. ಪ್ರತಿ ಮಂಗಳವಾರ, ಶುಕ್ರವಾರ ಈ ಗುಡಿಯಲ್ಲಿ ದರ್ಶನ ಜರುಗುತ್ತದೆ ಆಗ ಜನರು ಗುಡಿಯಲ್ಲಿ ಕೂತು ತಮ್ಮ ಕಷ್ಟಪರಿಹಾರದ ಉಪಾಯಗಳನ್ನು ಕೇಳಿಕೊಳ್ಳುತ್ತಾರೆ ಕಳೆದ ಮಂಗಳವಾರದಿಂದ ಶುಕ್ರವಾರದ ವರೆಗೆ ಈ ಗುಡಿಯಲ್ಲಿ ವಾಸ್ತುಹವನ, ದುರ್ಗಾಸ್ತವನ, ಸಪ್ತಶತೀ-ಪಾರಾಯಣ, ನವಚಂಡಿ ಹವನ, ಪುಷ್ಪಪೂಜಾ ವಗೈರೆ ವೈದಿಕ ವಿಧಾನಗಳೂ ಉತ್ಸವಗಳೂ ನಡೆದವು. ಈ ಉತ್ಸವದ ಕಾಲಕ್ಕೆ ಅಲ್ಲಿ ಅನ್ನ-ಸಂತರ್ಪಣೆಯಾಗುತ್ತಿತ್ತು. ಈ ಅನ್ನ-ಸಂತರ್ಪಣೆಯಲ್ಲಿ, ೨೪ ಮಂದಿಗಿಂತ ಹೆಚ್ಚಿಗೆ ಜನರಿಗೆ ಬಡಿಸಕೂಡದೆಂಬ ಆಹಾರ-ನಿಯಂತ್ರಣದ ಆಜ್ಞೆಯ ಉಲ್ಲಂಘನೆಯಾಗುತ್ತಿರಬೇಕೆಂಬ ಸಂಶಯದಿಂದ ಪೋಲೀಸರು ಶುಕ್ರವಾರ ಗುಡಿಗೆ ಬಂದು ತಪಾಸಣೆ ಮಾಡಿಕೊಂಡು ಹೋದರೆಂದು ತಿಳಿಯುತ್ತದೆ.

ಹೊನ್ನಾವರದ ಜೇನು ಸಾಕುವವರ ಸಹಕಾರಿ ಸಂಘದ ೧೯೪೭-೪೮ರ ವರದಿಯೂ ಲೆಕ್ಕವೂ ಪ್ರಕಟವಾಗಿವೆ. ವರದಿಯ ವರುಷದಲ್ಲಿ ಸಂಘಕ್ಕೆ ಕೊಟ್ಟ ಜೇನು-ಗೂಡುಗಳ ಸಂಖ್ಯೆ ೨೭೬ರಿಂದ ಬೆಳೆದು ೨೭೫೧ ಆಗಿದೆ, ಮತ್ತು ಜೇನಿನ ಉತ್ಪನ್ನ ೧೬೯೯ ರತ್ತಲಿನಷ್ಟು ಸಿಕ್ಕಿದೆ. ಸಂಘಕ್ಕೆ ಈ ವರ್ಷ ರೂ ೧೫೯೪-೯-೬ ನಿವ್ವಳ ಲಾಭವಾಗಿದೆ.

ಹೊನ್ನಾವರದವರ ಉರುವಲ ಕಷ್ಟ ಇನ್ನೂ ತೀರಲ್ಲಿ! ಜನರು ಎಷ್ಟೇ ಬೈದರೂ ಉಗ್ರಾಣದವರು ತಮ್ಮ ಕ್ರಮವನ್ನು ಸುಧಾರಿಸದೆ, ಹಾಳಾದ ಹಳೆಯ ನಾಟಿಗಳನ್ನು ಕೊಯ್ದು ಮಾರುತ್ತಾರೆ! ಹೆಗ್ಗಾರಗತ್ತ ಬೆಟ್ಟದ ೩೦೦ ಟನ್ನ ಉರುವಲ ಬೆಟ್ಟದ ಹೊರಗೆ ಕಡಿದಿಟ್ಟಿದ್ದಾರೆ. ಅದು ಹೊನ್ನಾವರ ಉಗ್ರಾಣದ ಬಗ್ಗೆಯೇ ಕೊಟ್ಟಿದ್ದಿರುತ್ತದೆ! ಆದರೂ ಅದನ್ನು ಉಗ್ರಾಣದವರು ತರಿಸುವದಿಲ್ಲ! ಮಳೆಗಾಲ ಓಸರಿಕೆ ಪ್ರಾರಂಭವಾಗುತ್ತಲೇ ಅದನ್ನು ಹರಬಂದವರಿಗೆ ಕಳಿಸಿಕೊಡುವ ಆಲೋಚನೆಯಲ್ಲಿ ಇದ್ದಾರಂತೆ! ಇಂತಹ ಈ ಭ್ರಷ್ಟತ್ವ ವರ್ತನೆಗೆ ಮುಂದಿನ ವರ್ಷದ ಉಗ್ರಾಣದ ಮುಕ್ತಿಯನ್ನೂ ಸರಕಾರದವರು ಕೊಟ್ಟಿದ್ದಾರೆಂದು ಇದೀಗ ಸುದ್ದಿ ಬಂದಿದೆ! ಹಾಗೆಯೇ ವಿಚಾರ ಮಾಡಿದರೆ ಈ ಘಟನೆಯಲ್ಲಿ ಆಶ್ಚರ್ಯ ಪಡತಕ್ಕದ್ದೇನೂ ಇಲ್ಲ. ಲೋಕಲ್ ಬೋರ್ಡಿನ ಜಂಗಲ ಇಲಾಖೆಯವರಿಗೆ ಇಂತಹ ಪುಣ್ಯಾತ್ಮರೇ ಗಂಟು ಬೀಳದೇ ಇಲ್ಲದೆ ಮತ್ಯಾರು ಸಿಗುವರು?

ಜಾಹೀರ ನೋಟೀಸಿಗೆ ಉತ್ತರ.

ಕೇಶವ ರಾಮಚಂದ್ರ ಕಾಮತ ಇವನು ಈ ಮೂಲಕ ತಿಳಿಸುವದೇನಂದರೆ.—

ಯಮುನಾಬಾಯಿ ಕೋಂ ಅಚ್ಯುತ ಕಾನಭಾಗ ಇವಳು ತಾ. ೭-೯-೧೯೪೮ ರ "ಕಾನಡಾವೃತ್ತ"ದ ಸಂಚಿಕೆಯಲ್ಲಿ ಕೊಟ್ಟ ನೋಟೀಸಿನ ಮಜಕೂರು ತೀರ ಸುಳ್ಳು ಇದೆ ನಾನು ಎಂದೂ ಭ್ರಾಂತನಾಗಿದ್ದಿಲ್ಲ ನನ್ನ ಹಿತಾಹಿತ ತಿಳಿಕೊಳ್ಳುವ ಶಕ್ತಿ ನನ್ನಲ್ಲುಂಟು. ಯಮುನಾಬಾಯಿ ಕೋಂ ಅಚ್ಯುತ ಕಾನಭಾಗ ಇವಳು ತನ್ನ ಗಂಡನನ್ನು ಬಿಟ್ಟು ನನ್ನ ಮನೆಯಲ್ಲಿ ಉಳಕೊಂಡಿದ್ದಾಳೆ. ಇವಳಿಗೆ ನನ್ನ ಆಸ್ತಿಯಲ್ಲಿ ಏನೂ ಹಕ್ಕು ಸಂಬಂಧವಿಲ್ಲ. ನಾನು ನನ್ನ ಆಸ್ತಿ ಪರಾಧೀನ ಮಾಡುವ ಆಲೋಚನೆಯಲ್ಲಿಲ್ಲ ವ ನನಗೆ ಹಾಗೆ ಮಾಡುವ ಗರಜು ಸಹ ಇಲ್ಲ. ನನ್ನ ಆಸ್ತಿ ಎತ್ತಿಹಾಕುವ ದುರಾಶೆಯಿಂದ ಸದ್ರಿಯವಳು ಈ ನೋಟೀಸು ಕೊಟ್ಟಿರುತ್ತಾಳೆ. ತಿಳಿಯುವದು.

ಕೇಶವ ರಾಮಚಂದ್ರ ಕಾಮತ.
ಅಂಕೋಲಾ, ತಾ. ೧೦-೯-೧೯೪೮.

MUJUMDAR & KASBEKAR BROS.,

BOOK SELLERS & GENERAL MERCHANTS,

KARWAR (N K)

ಜಾಹೀರ ಸೂಚನೆ.

ಮುಂಬಯಿ ಪ್ರಾಂತದ ವಿದ್ಯಾ ಖಾತೆಯವರಿಂದ ಪ್ರಕಾಶಿತವಾದ ಪುಸ್ತಕಗಳ ಬಗ್ಗೆ ನಾವು ಕಾರವಾರ, ಯಲ್ಲಾಪುರ ಹಳಿಯಾಳ, ಮುಂಡಗೋಡ ಮತ್ತು ಸುಪಾ (ಪೇಟೆ) ತಾಲೂಕುಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ "ಕನ್ನಡ ವಾಚನ ಮಾಲೆಯ ಮೊದಲು ಐದು" ಇದೀಗಲೇ ಮಾರಾಟಕ್ಕೆ ಸಿದ್ಧವಾಗಿವೆ. ಬೆಲೆ ... ಈ ಬೆಲೆಗೆ ನಮ್ಮಲ್ಲಿ ಯಾ ಆಯಾ ತಾಲೂಕಿನ ಪುಸ್ತಕದ ಅಂಗಡಿಯಲ್ಲಿ ವಿಕ್ರಿಗೆ ಸಿಗುವವು. ಯಾರೂ ಹೆಚ್ಚಿಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ. ಚಿಲ್ಲರೆ ವ್ಯಾಪಾರಸ್ಥರಿಗೆ ಕಮಿಶನ್ ಕೊಡಲಾಗುವದು. ಬರೆಯಿರಿ.

D. D KASBEKAR, B A.,
PARTNER

ಈಗೊಂದು ವರ್ಷದಿಂದ ಕರ್ಕಿಯಲ್ಲಿ ಒಂದು ಜೂಗಾರ ಮಂಡ ನಡೆಯುತ್ತಿದೆಂದೂ ಕೆಲವು ಪ್ರತಿಷ್ಠಿತರು ಅದರ ಬೆಂಬಲಕ್ಕಿರುವದರಿಂದ ಸ್ಥಾನಿಕ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿರುವರೆಂದೂ ಕರ್ಕಿಯವರೊಬ್ಬರು ದೂರುತ್ತಾರೆ ಕಳೆದ ೬೦ ಎಲ್ಕೆ ಪೋಲೀಸರು ಈ ಮಂಡವನ್ನು ಮುತ್ತಿ ಒಂದು ಪಂಚನಾಮೆ ಮಾಡಿ ಪೋಲೀಸ_ಪಟೇಲರ ಕಡೆ ಕೊಟ್ಟ ಸುದ್ದಿಯುಂಟು ಆ ಪಂಚನಾಮೆಯನ್ನು ಪಟೇಲರು ಯೋಗ್ಯ ಅಧಿಕಾರಿಗಳ ಕಡೆಗೆ ಕಳಿಸಿ ಮುಂದಿನ ವ್ಯವಸ್ಥೆ ಮಾಡಿಸುತ್ತಾರೋ ಅಥವಾ ಪ್ರಕರಣವನ್ನು ಒಳಗಿಂದೊಳಗೆ ಅಳಿದು ಬಿಡುತ್ತಾರೋ ಎಂಬುದನ್ನು ದೂರುಗಾರರು ನಿರೀಕ್ಷಿಸುತ್ತಾರೆ

ಗೇರಸಪ್ಪೆಯ ರಾ॥ ಅಣ್ಣಪ್ಪ ತಿಮ್ಮಣ್ಣ ನಾಯ್ಕ ಇವರು ಬಸ್ತಿಕೇರಿಯಲ್ಲಿರುವ ತಮ್ಮ ಹೊಲಗಳ ಅಂಚಿಗಿರುವ ಬೆಟ್ಟದ ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಲು ಅಪ್ಪಣೆ ಕೊಡಬೇಕೆಂದು ೭_೮ ವರ್ಷಗಳಿಂದ ಅರ್ಜಿ ಮಾಡುತ್ತಿದ್ದಾರೆ ಇನ್ನೂ ಅವರಿಗೆ ಪರವಾನಗಿ ಸಿಗುವದಿಲ್ಲ! ೨ ತಿಂಗಳ ಹಿಂದೆ ಗ್ರಾಂಟ ಸಾಹೇಬರಿಗೆ ಅವರು ಪುನಃ ಮನವಿ ಮಾಡಿಕೊಂಡದ್ದರಂತೆ ಇದಕ್ಕೂ ಉತ್ತರ ಒಂದಿಲ್ಲವಂತೆ! ಈ ಪರವಾನಗಿಯು ಯಾವಾಗ ಸಿಗುವದೋ ? ಎಂದು ಬಂಧೀತು ಮತ್ತು ಸದರಿ ಬೆಟ್ಟದಿಂದ ಕಾಡು ಪಶುಗಳು ಬಂದು ತಮ್ಮ ಬೆಳೆಯನ್ನು ನಾಶ ಮಾಡುವದು ಎಂದು ನಿಂತೀತು ? ಎಂದು ರಾ॥ ನಾಯ್ಕರು ಪ್ರಶ್ನೆ ಕೇಳಿದ್ದಾರೆ ಯಾರಾದರೂ ಜವಾಬ್ದಾರಿಗಳು ಅವರ ಪ್ರಶ್ನೆಗೆ ಉತ್ತರ ಕೊಡುವ ಕೃಪೆ ಮಾಡುವರೇ ?

ತಮ್ಮ ಬದಿಯ ಟಪಾಲ ಬಟವಡೆಯ ಕೆಲಸ ಸರಿಯಾಗಿ ನಡೆಯುವದಿಲ್ಲೆಂದೂ ಟಪಾಲ ಬಟವಡೆ ಸಮಾಯಕ್ಕೆ ಹಳ್ಳಿಗರ ಪತ್ರಗಳನ್ನು ಅವರವರಿಗೆ ತಲ್ಪಿಸಲೆಂದು ಹಾದಿಯ ಮೇಲಿನ ಯಾರೊಬ್ಬರ ಹಸ್ತಕ ಕೊಟ್ಟು ಹೋಗುತ್ತಾನೆಂದೂ ಮರ್ವ ಗ್ರಾಮದ ರಾ॥ ತಿಮ್ಮಪ್ಪ ಹೆಗಡೆ ಇವರು ದೂರುತ್ತಾರೆ

ತಾ ೩೦-೮_೧೯೪೮ ರ ' ವೃತ್ತ ' ದಲ್ಲಿ ಹೊನ್ನಾವರದೊಳಗಿನ ಯೋಗ್ಯ ಧಾರಣೆಯ ಅಂಗಡಿಯ ಸಂಬಂಧದಲ್ಲಿ ಬರೆಯುವಾಗ ಪ್ರಯತ್ನ ಮಾಡಿದರೂ ತನ್ನ ಅಯೋಗ್ಯತೆಯ ಮೂಲಕ ಅಂಗಡಿ ಸಿಗದಿದ್ದ ಸಂಘದ ಹೆಸರು ಪಠಾಣರ ಸೊಸಾಯಟಿ ಎಂದು ತಪ್ಪಿನಿಂದ ಬರೆದು ಹೋಗಿದೆ. ಆ ಸಂಘದ ಹೆಸರು ಹೊನ್ನಾವರ ವಿವಿಧೋದ್ದೇಶಗಳ ಸಹಕಾರಿ ಸಂಘವೆಂದು ತಿಳಿಯತಕ್ಕದ್ದು

ತಳಿದ ತಾ ೩ರಿಂದ ಮುಂಕಿಯ ಹಿಂದು_ಮುಸಲ್ಮಾನರು ಪರಸ್ಪರ ಸಹಕಾರದಿಂದ ಊರಲ್ಲಿ ಒಂದು ಸಾರ್ವಜನಿಕ ವಾಚನಾಲಯವನ್ನು ತೆರೆದಿದ್ದಾರೆ.

ಮುಂಕಿ ಶಾಲೆಗೆ ಸದ್ಯದ ಶಿಕ್ಷಕರು ಬಂದಂದಿನಿಂದ ಶಾಲೆ ಹಾಳು ಬಿದ್ದಿದೆಂದೂ, ಮಕ್ಕಳು ಕೂಡ ಶಾಲೆಗೆ ಸರಿಯಾಗಿ ಬರುವದಿಲ್ಲೆಂದೂ, ೧೫ ದಿವಸಗಳ ಹಿಂದೆ ಎಟೆಂಡೆನ್ಸ ಒಫೀಸರರು ಸದರಿ ಶಾಲೆಯನ್ನು ಸಂದರ್ಶಿಸಿದಾಗ ಶಾಲೆಯಲ್ಲಿ ಒಂದೇ ಒಂದು ಹುಡುಗನು ಇದ್ದನೆಂದೂ ಮುಂಕಿಯ ರಾ॥ ಸುಬ್ರಾಯ ಶೆಟ್ಟಿ ತಾಳಮಕ್ಕಿ ಇವರು ತಿಳಿಸುತ್ತಾರೆ ಹೀಗೆ ಅವ್ಯವಸ್ಥೆಯಾಗಲು ಕಾರಣವೇನೆಂದು ಮೇಲಧಿಕಾರಿಗಳು ಚೌಕಶಿ ಮಾಡಬಾರದೇ ?

ಶಿರಸಿ— (ತಾ ೨-೯_೪೮) ನಮ್ಮ ಜಿಲ್ಲೆಯಲ್ಲಿ ಕಾಗದದ ಕಾರಖಾನೆಯೊಂದು ತೆರೆಯುವ ಯೋಜನೆಯ ಪ್ರಚಾರ ಮಾಡಲು ಎಸೆಂಬ್ಲಿಯ ಸದಸ್ಯರಾದ ರಾ॥ ದಯಾನಂದ ಪ್ರಭು ಶಿರೂರ ಇವರು ಮೊನ್ನೆ ಇಲ್ಲಿ ಬಂದು ಪ್ರಮುಖರದೊಂದು ಸಭೆ ಕೂಡಿಸಿ, ರಾ॥ ಕೋಟಿಭಾಸ್ಕರ ಇವರು ತಯಾರಿಸಿರುವ ಯೋಜನೆಯನ್ನು ವಿವರಿಸಿದರು ಸಭಿಕರೆಲ್ಲ ಆ ಯೋಜನೆಯನ್ನು ಸ್ವಾಗತಿಸಿ, ಅದನ್ನು ಕಾರ್ಯಕಾರಿ ಮಾಡಲು ತಮ್ಮಿಂದಾದಷ್ಟು ಸಹಾಯ ಮಾಡುವೆವೆಂದು ಆಶ್ವಾಸನೆ ಕೊಟ್ಟರು ಕೋಟಿಭಾಸ್ಕರರ ಯೋಜನೆಗೆ ಸಾಕಷ್ಟು ಬಂಡವಲು ಈ ಜಿಲ್ಲೆಯಲ್ಲಿ ಕೂಡುವದು ಅಶಕ್ಯವಿರುವದರಿಂದ ಹೊರಗಿನ ಧನಿಕರ ಸಹಾಯ ಪಡೆಯುವದವಶ್ಯವಿರುತ್ತದೆಂದು ಸಭಿಕರ ಅಭಿಪ್ರಾಯವಾಯಿತು

(ತಾ. ೩-೯-೧೯೪೮) ಸರಾಯಿಗುತ್ತಿಗೆ ಹಾವಳಿ ಕಡಿಮೆಯಾಗಿಲ್ಲ ಹಳ್ಳಿಗಳಲ್ಲಿ ಕಳ್ಳ ಸರಾಯಿಯ ವ್ಯಾಪಾರ ಹಬ್ಬಿದೆ ಅಬಕಾರಿ ಅಧಿಕಾರಿಗಳು ೮_೧೦ ದಿನಗಳ ಹಿಂದೆ ಆಲೇಸರ ಬೆಟ್ಟದಿಂದ ೨ ಕೊಡ ಸರಾಯಿಯನ್ನೂ ಬಸಿಯುವ ಪಾತ್ರೆಗಳನ್ನೂ ಕಬ್ಜಾಕ್ಕೆ ತೆಗೆದುಕೊಂಡಿದ್ದರು. ಮರುದಿನ ಶಿರಸಿ ಪೇಟೆಯಲ್ಲಿ ಸರಾಯಿ ಕುಡಿದು ಗೊಂದಲ ಹಾಕುತ್ತಿದ್ದ ವನೊಬ್ಬನು ಸಿಕ್ಕನು ನಿನ್ನೆ ಕರಸುಳ್ಳಿಯ ಓರ್ವ ಹೆಗಡೆಯ ಮತ್ತು ಇನ್ನೊಬ್ಬನ ಮನೆಯಲ್ಲಿ ತಪಾಸಣೆ ಮಾಡಿದಾಗ ಕೆಲವು ಸರಾಯಿ ಸಿಕ್ಕ ಸುದ್ದಿಯುಂಟು ಅವರ ಮನೆಗಳ ಸಮೀಪದಲ್ಲಿರುವ ಬೆಟ್ಟದಲ್ಲಿಯೂ ಅದೇ ಆಗ ತಯಾರಾದ ಬಿಸಿ ಬಿಸಿ ರಸಾಯನವು ಸಿಕ್ಕಿದೆಯಂತೆ! ನಿನ್ನೆ ಸಂಜೆ ಶಹರದಲ್ಲಿಯೂ ಒಂದೆರಡು ಕಡೆ ಸರಾಯಿ ಹಿಡಿದ ವಾರ್ತೆಯಿದೆ.

ಇದೇ ಬರುವ ನವಂಬರ ತಿಂಗಳ ಮೊದಲನೇ ವಾರದಲ್ಲಿ ಧಾರವಾಡದೊಳಗೆ ಮುಂಬಯಿ ಕರ್ನಾಟಕದೊಳಗಿನ ಗ್ರಂಥಾಲಯ- ವಾಚನಾಲಯಗಳ ಪ್ರತಿನಿಧಿಗಳ ಸಮ್ಮೇಲನವೊಂದನ್ನು ಕೂಡಿಸಬೇಕೆಂದು ಇದೇ ಕಳೆದ ತಾ ೨೮ಕ್ಕೆ ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಕಚೇರಿಯಲ್ಲಿ ಕೂಡಿದ ಧಾರವಾಡ ಜಿಲ್ಲೆಯ ಗ್ರಂಥಾಲಯಗಳ ಪ್ರತಿನಿಧಿಗಳು ನಿರ್ಧರಿಸಿ, ಸಮ್ಮೇಲನದ ತಯಾರಿಯನ್ನು ಮಾಡಲಿಕ್ಕೆ ಒಂದು ಸ್ವಾಗತ ಸಮಿತಿಯನ್ನು ಈ ತಿಂಗಳ ಕೊನೆಯೊಳಗಾಗಿ ರಚಿಸುವ ಸಂಕಲ್ಪ ಮಾಡಿರುತ್ತಾರೆ

(ತಾ ೯-೯-೪೮) ಕೋಣೆಗಾರ ಶಾಲೆಯ ವಿದ್ಯಾರ್ಥಿಗಳೂ ಶಿಕ್ಷಕರೂ ಸಹಕರಿಸಿ, ಶಾಲೆಯಲ್ಲಿ ಶ್ರೀ ಗಣೇಶ ಉತ್ಸವ ಮಾಡಿದ ವರದಿ ಬಂದಿದೆ

ತಾ. ೨೩-೮-೪೮ರ " ವೃತ್ತ ' ದಲ್ಲಿ ಪ್ರಕಟವಾದ ಹೆಗಡೆಕಟ್ಟೆ ಸಹಕಾರಿ ಸಂಘದ ಸಭೆಯಲ್ಲಿ ರಾ॥ ವಿ. ಎಸ್ ಹೆಗಡೆಯವರು ಸಂಘದ ಕಾರ್ಯದರ್ಶಿಗಳಾದ ರಾ॥ ಗಣಪತಿ ಹೆಗಡೆಯವರಿಗೆ ಅಸಭ್ಯ ಮಾತುಗಳನ್ನಾಡಿದ್ದು ಇರುವದಿಲ್ಲವಾಗಿ ಸದರಿ ಸಂಘದ ಅಧ್ಯಕ್ಷ ರಾ॥ ಪರಮೇಶ್ವರ ಹೆಗಡೆ ಇವರು ಬರೆಯುತ್ತಾರೆ ರಾ॥ ವಿ. ಎಸ್. ಹೆಗಡೆಯವರು ಎಲ್ಲರನ್ನೂ ಗೌರವದಿಂದ ನಡಿಸುತ್ತಾರೆಂದೂ ಅಧ್ಯಕ್ಷರು ಹೊಗಳುತ್ತಾರೆ

ಇನ್ನೊಂದು ವರದಿಯೂ ಬಂದಿದೆ ತಾ. ೨೩-೮-೪೮ರ 'ವೃತ್ತ' ಕೈಸೇರಿದ ಮೇಲೆ ರಾ॥ ವಿ ಎಸ್ ಹೆಗಡೆಯವರು ಮುಕ್ತಾಗರುತ್ತಾರೆಂದೂ ಸೌಜನ್ಯದಿಂದ ನಡೆಯಲಾರಂಭಿಸಿದ್ದಾರೆಂದೂ ಹೆಗಡೆಕಟ್ಟೆ ಸೀಮೆಯವರೊಬ್ಬರು ತಿಳಿಸಿದ್ದಾರೆ

ದಿ ಅಂಕೋಲಾ ಅರ್ಬನ್ ಕೋ-ಓಪರೇಟಿವ್ ಕ್ರೆಡಿಟ್ ಬ್ಯಾಂಕ, ಲಿ., ಅಂಕೋಲಾ.

ಸದಸ್ಯರಿಗೆ ಸೂಚನೆ.

ಮೇಲಿನ ಬೇಂಕಿನ ವಾರ್ಷಿಕ ಸಾಧಾರಣ ಸಭೆಯು ತಾ ೨೬-೯-೧೯೪೮ನೇ ರವಿವಾರ ಅಪರಾಹ್ನ ೪ ಘಂಟೆಗೆ ಸರಿಯಾಗಿ ಬೇಂಕಿನ ಇಮಾರತಿನಲ್ಲಿ ಜರಗುವದು. ಸಭೆಯ ಕಾರ್ಯಕ್ರಮವನ್ನು ವಾರ್ಷಿಕ ವರದಿಯನ್ನು ಮುದ್ರಿಸಿ ಸದಸ್ಯರಿಗೆ ಕಳಿಸಿದ್ದಲ್ಲದೆ, ಬೇಂಕಿನ ಕಚೇರಿಯಲ್ಲಿರುವ ಬೋರ್ಡಿನಲ್ಲಿಯೂ ಅಂಟಿಸಲಾಗಿದೆ ಬೇಂಕಿನ ಸದಸ್ಯರು ಸಭೆಗೆ ಬಂದು ಸಭೆಯ ಕೆಲಸವು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ವಿನಂತಿ

ಅಂಕೋಲಾ, ತಾ. ೧೧ ೯-೧೯೪೮ }

R. H. Shetti
ಚೇರಮನ್.

ಮುಂಬೈ ಗೇಣಿದಾರಿಕೆ ಕಾಯ್ದೆ ಆಧೀನತದ ವಿಷಯದಲ್ಲಿ ಜುಲೈ ತಿಂಗಳ ಬಾಬತು ಮಾಹಿತಿ ತೋರಿಸುವ ಪತ್ರಿಕೆಯು

ಕಾನಡಾ ಜಿಲ್ಲಾ

	ವಿಷಯಗಳು	ಜುಲಾಯಿ ತಿಂಗಳು ೧೯೪೮
(೧)	ತಿಂಗಳ ಮೊದಲಿಗೆ ಶಿಲ್ಕು ಉಳಿದ ಟೆನ್ಸಿ ಅರ್ಜಿಗಳ ಸಂಖ್ಯೆ . ..	೯೯೫೬
(೨)	ಹೊಸದಾಗಿ ಬಂದ ಅರ್ಜಿಗಳು	೩೮೦
(೩)	ಈ ತಿಂಗಳಲ್ಲಿ ನಿಕಾಲಿ ಕೊಟ್ಟ ಅರ್ಜಿಗಳ ಸಂಖ್ಯೆ ..	೧೩೫೩
(೪)	ಈ ತಿಂಗಳ ಆಖೈರಿಗೆ ಶಿಲ್ಕು ಉಳಿದ ಅರ್ಜಿಗಳ ಸಂಖ್ಯೆ . ..	೩೬೮೩
(೫)	ಒಡೆಯರಿಗೆ ಕಬಜಾ ಕೊಡಿಸಿ ನಿಕಾಲಿ ಕೊಟ್ಟ ಅರ್ಜಿಗಳ ಸಂಖ್ಯೆ	೧೨೬
(೬)	ರೈತರಿಗೆ ಕಬಜಾ ದಿಡಿಸಿ ಕೊಟ್ಟು ನಿಕಾಲಿ ಮಾಡಿದ ಅರ್ಜಿಗಳ ಸಂಖ್ಯೆ . .	೫೭೪
(೭)	ಒಡೆಯರಿಗೆ ಗೇಣಿ ವಸೂಲ ಕೊಡಿಸಿದ ಅರ್ಜಿಗಳ ಸಂಖ್ಯೆ	೩೦೧
(೮)	ಮೇಲಿನಂತೆ ವಸೂಲ ಕೊಡಿಸಿದ ಗೇಣಿಯ ಮೊಬಲಗು ...	ರೂ ೧೭೩—೧೦—೨

ಶರಾ — ಕಾರವಾರ, ಹೊನ್ನಾವರ ಮತ್ತು ಶಿರಸಿ ತಾಲೂಕುಗಳ ಹೊರತಾಗಿ ಉಳಿದ ತಾಲೂಕುಗಳಿಂದ ಬಂದ ಸಂರಕ್ಷಿತ ಹಾಗೂ ಸಾದಾ ರೈತರ ಬಗ್ಗೆ ಮಾಹಿತಿ ಈ ಕೆಳಗಿನಂತೆ ಆದೆ —

ಸಂರಕ್ಷಿತ ರೈತರು	ಸಾದಾ ರೈತರು
೩೩೧೯೮	೯೦೭೦

ಇವುಗಳ ಹೊರತಾಗಿ ಅಂಕೋಲಾ, ಯಲ್ಲಾಪುರ, ಮುಂಡಗೋಡ ತಾಲೂಕುಗಳಲ್ಲಿಯೂ ಭಟಕಳ ಪೇಟೆಯಲ್ಲಿಯೂ ೧೨೪೩೧ ಸ್ವಂತ ಸಾಗುವಳಿ ಜಮೀನದಾರರು ಇರುತ್ತಾರೆ ಉಳಿದ ಕಡೆಯಿಂದ ಈ ಬಗ್ಗೆ ಮಾಹಿತಿ ಬಂದಿರುವದಿಲ್ಲ.

ಅಂಕೋಲಾ, ಕುಮಟಾ ಹಾಗು ಸಿದ್ದಾಪುರ ತಾಲೂಕುಗಳಲ್ಲಿ ಕೆಲವು ರೈತರು ತಾವಾಗಿ ಜಮೀನದಾರರಿಗೆ ಕಬಜಾ ಬಿಟ್ಟುಕೊಟ್ಟಿರುತ್ತಾರೆ

ಗೇಣಿದಾರಿಕೆ ಕಾಯಿದೆಯ ೧೨ ನೆ ೧೪ ಆ ಕಲಮಿನನ್ವಯ ದಾಖಲಾದ ೧೪ ದಾವೆಗಳಲ್ಲಿ ಯೋಗ್ಯ ಗೇಣಿಯನ್ನು ನಿಶ್ಚಯಿಸಿ ಕೊಟ್ಟಿರುತ್ತಾರೆ

ಸ್ವಂತ ಸಾಗುವಳಿಗೆ ಭೂಮಿ ಬೇಡಿದ ಅಂಕೋಲಾ ತಾಲೂಕಿನ ೬೧ ಅರ್ಜಿದಾರರ ಪೈಕಿ ೩೧ ಅರ್ಜಿದಾರರಿಗೆ ಹಾಗೂ ಹೊನ್ನಾವರ ತಾಲೂಕಿನಲ್ಲಿ ಒಂದು ಅರ್ಜಿದಾರನಿಗೆ ಕಬಜಾ ಕೊಡಿಸಿರುತ್ತಾರೆ

ಕಾರವಾರ, ತಾ. ೩೧-೮-೧೯೪೮ }

R. J. Rebello,
ಕಲೆಕ್ಟರ, ಕಾನಡಾ

ಮಂಚಿಕೇರಿ— (ತಾ ೨-೯-೪೮) ಸಾಗುವಳಿಯ ಬಗ್ಗೆ ರೈತರು ಮಾಡಿದ ಅರ್ಜಿಗಳ ವಿಲೇವಾರಿ ಶೀಘ್ರವಾಗಿ ಆಗುವದಿಲ್ಲವೆಂದು ತಾ. ೨೩-೭-೪೮ರ "ವೃತ್ತ"ದಲ್ಲಿ ಪ್ರಕಟವಾದ ಟೀಕೆಯಲ್ಲಿ ಸತ್ಯಾಂಶವಿಲ್ಲೆಂದು ಯಲ್ಲಾಪುರ ಮಾಮಲೇದಾರರು ವರದಿ ಮಾಡಿದ್ದಾರೆ. ಈ ಸೀಮೆಯಿಂದ ಮೇ ತಿಂಗಳ ಕೊನೆಯ ವರೆಗೆ ೪೩, ಜೂನ ತಿಂಗಳಲ್ಲಿ ೪೪ ಮತ್ತು ಜುಲಾಯಿ ತಿಂಗಳಲ್ಲಿ ೭ ಸಾಗುವಳಿ-ಅರ್ಜಿಗಳು ಬಂದಿದ್ದವಂತೆ. ಅವುಗಳಲ್ಲಿ ಜೂನದಲ್ಲಿ ೩೫ ಮತ್ತು ಜುಲಾಯಿಯಲ್ಲಿ ೨೦, ಹೀಗೆ ಜುಲಾಯಿ ಕೊನೆಯ ವರೆಗೆ ೫೫ ಅರ್ಜಿಗಳ ವಿಲೇವಾರಿಯಾಗಿದೆಯಂತೆ, ಮತ್ತು ಅವುಗಳ ಅರ್ಜಿದಾರರಿಗೆ ೭೧ ಎಕರೆ ಜಮೀನು ತಾ. ೯-೭-೪೮ರ ಪೂರ್ವದಲ್ಲೇ ಒಪ್ಪಿಸಲಾಗಿರುತ್ತದೆ. ಇದೇ ಯಲ್ಲಾಪುರ ತಾಲೂಕಿನಲ್ಲಿ ಈ ವರ್ಷ ೨೩೦ ಸಾಗುವಳಿ-ಅರ್ಜಿಗಳು ಬಂದಿದ್ದವೆಂತಲೂ ಅವುಗಳಲ್ಲಿ ೨೧೬ ಅರ್ಜಿಗಳ ವಿಲೇವಾರಿಯೇ ಆಗಿರುತ್ತದೆಂತಲೂ ಮಾಮಲೇದಾರರು ತಿಳಿಸಿದ್ದಾರೆ. ರೈತರೇ ಕಳವಳಿ ಅರ್ಜಿ ಮಾಡುತ್ತಾರೆಂದು ಅವರ ಹೇಳಿಕೆಯುಂಟು. ಆದರೂ ಅವರ ಅರ್ಜಿಗಳ ವಿಲೇವಾರಿ ಶೀಘ್ರವಾಗಿ ಆಗಬೇಕೆಂದು ನಾವು ಜಂಗಲ ಹಾಗೂ ಮಿಡಾನಿಯ ಅವ್ವಲ ಕಾರಕೂನರಿಗೆ ಮುಖ್ಯ ಮುಖ್ಯ ಕೇಂದ್ರ ಹಳ್ಳಿಗಳಿಗೆ ಹೋಗಿ ಅಲ್ಲಿ ಅರ್ಜಿ ತೆಗೆಯುವದ ಚೌಕಶಿ ಮಾಡಿಸುತ್ತೇವೆಂದೂ, ಅದರಿಂದ ಮೊದಲು ಮುಂಜೂರಾಗಿ ಬಂದ ರೂ ೨೫೦೦೦ ದೊಳಗೆ ತಾ ೯-೭-೧೯೪೮ರೊಳಗಾಗಿ, ಹಿಂದಿನಿಂದ ಮಂಜೂರಾಗಿ ಬಂದ ರೂ ೩೦೦೦ ಮಂಜೂರಿ ಬಂದ ೧ ವಾರದೊಳಗೂ ಬಟವಡೆಯಾಗಿ ಹೋಯಿತೆಂದು ಮಾಮಲೇದಾರರು ತಿಳಿಸಿದ್ದಾರೆ.

ಹಳಿಯಾಳ— (ತಾ. ೩-೯-೧೯೪೮) ಕಳೆದ ಸೋಮವಾರ ತಾ ೩೦ನೇ ಮಧ್ಯಾಹ್ನ ಮಂಗಳವಾರದಲ್ಲಿ ಮರಾಠಾ ಸಮಾಜದ ಅಧ್ಯಕ್ಷರೂ ಜಿಲ್ಲಾ ಬೋರ್ಡಿನ ಸದಸ್ಯರೂ ಆಗಿರುವ ರಾ॥ ಎಚ್ ಕೆ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಈ ತಾಲೂಕಿನ ಮರಾಠಾ ಜನರ ಪರಿಷತ್ತೊಂದು ಸೇರಿತ್ತು. ಬೇರೆ ಬೇರೆ ಹಳ್ಳಿಗಳಿಂದ ಸುಮಾರು ೫೦೦ ಪ್ರತಿನಿಧಿಗಳು ಸಭೆಗೆ ಬಂದಿದ್ದರು. ಸಭೆಯಲ್ಲಿ ಈ ಕೆಳಗಿನ ಕೆಲವು ಗೊತ್ತುವಳಿಗಳಾಗಿವೆ - (೧) ಈ ತಾಲೂಕಿನಲ್ಲಿ ಮರಾಠಿ ಭಾಷೆಯವರು ಬಹುಸಂಖ್ಯರಿದ್ದಾಗ್ಯೂ ಸರಕಾರದವರು ಮರಾಠಿ ಶಾಲೆಗಳನ್ನು ತೆರೆಯದೆ ಕನ್ನಡ ಕಲಿಯಲು ಜನರಿಗೆ ಬಲಾತ್ಕಾರ ಮಾಡುತ್ತಿದ್ದಾರೆ. ಈ ಬಲಾತ್ಕಾರ ಕೂಡಲೇ ನಿಲ್ಲಬೇಕು (೨) ತಾಲೂಕಿನೊಳಗಿನ ಕನ್ನಡ ಶಾಲೆಗಳನ್ನು ಮುಚ್ಚಿ ಎಲ್ಲ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಮರಾಠಿಯಿಂದ ಶಿಕ್ಷಣ ಕೊಡುವ ವಿಚಾರ ಮಾಡಬೇಕು (೩) ತಾಲೂಕಿನ ಸರಕಾರಿ ಕಚೇರಿಗಳಲ್ಲಿ ಮರಾಠಿಯಲ್ಲೇ ಎಲ್ಲ ವ್ಯವಹಾರ ನಡೆಯಬೇಕು (೪) ಭಾಷಾನ್ವಯ ಪ್ರಾಂತರಚನೆ ಮಾಡುವದಾದಲ್ಲಿ ಹಳಿಯಾಳ ಮತ್ತು ಕಾರವಾರ ತಾಲೂಕುಗಳನ್ನೂ ಸುಪಾ ಪೇಟೆಯನ್ನೂ ಸೇರಿಯೇ ಮಹಾರಾಷ್ಟ್ರಕ್ಕೆ ಜೋಡಿಸಬೇಕು (೫) ಸ್ವತಂತ್ರ ಮಹಾರಾಷ್ಟ್ರ ಪ್ರಾಂತ ನಿರ್ಮಾಣವಾಗುವ ವರೆಗೆ ಸರಕಾರದವರು ಕಾನಡಾ ಜಿಲ್ಲೆಯ ಕನ್ನಡೇತರ ಪ್ರದೇಶಗಳಾದ ಕಾರವಾರ-ಹಳಿಯಾಳ ತಾಲೂಕುಗಳನ್ನೂ ಸುಪಾ ಪೇಟೆಯನ್ನೂ ಬೆಳಗಾಂವ ಜಿಲ್ಲೆಗೆ ಜೋಡಿಸಿ, ಈ ಪ್ರದೇಶದೊಳಗಿನ ಸರಕಾರಿ ಕೆಲಸವನ್ನೆಲ್ಲ ಮರಾಠಿಯಿಂದ ನಡೆಸುವಂತೆ ಏರ್ಪಾಟು ಮಾಡಬೇಕಾಗಿ ಸರಕಾರಕ್ಕೆ ಬಿನ್ನಹ.

ಹಳಿಯಾಳದ ನಾಗರಿಕರು ಸರಕಾರದಿಂದ ಅರ್ಜಿ ಕೊಟ್ಟು ಹಳಿಯಾಳ ಮುನಸಿಪಾಲಿಟಿಯನ್ನು ರದ್ದುಗೊಳಿಸಿದ್ದು ಬಹಳ ಅನ್ಯಾಯವೆಂದೂ, ಮತ್ತೆ ಅದನ್ನು ಕೂಡಲೇ ಪುನಃ ಸ್ಥಾಪಿಸಬೇಕೆಂದೂ ಬಿನ್ನವಿಸಿದ್ದಾರೆ. ನಮ್ಮ ಜಿಲ್ಲೆಯ ಎಸೆಂಬ್ಲಿ ಸದಸ್ಯರು ಈ ಅನ್ಯಾಯದ ನಿವಾರಣೆಗಾಗಿ ಪ್ರಯತ್ನ ಮಾಡಬೇಕಾಗಿಯೂ ನಾಗರಿಕರ ವಿನಂತಿಯುಂಟು.

ಇಲ್ಲಿಯ ಮ್ಯುನಿಸಿಪಾಲಿಟಿಯ ಹರಿಜನ ನೌಕರರು ತಮ್ಮ ಕೆಲಸ ಬಿಟ್ಟು ಹೋಗುತ್ತೇವೆಂಬುದೊಂದು ಭೀತಿಯುಂಟಾಗಿದೆ. ಮ್ಯುನಿಸಿಪಾಲಿಟಿಯ ಆರೋಗ್ಯಾಧಿಕಾರಿಯು ಅವರಿಗೆ ಬಹಳ ಕಾಡುತ್ತಾನಂತೆ! ದಣಿಸುತ್ತಾನಂತೆ! ಆರೋಗ್ಯಾಧಿಕಾರಿ ಎನಿಸಿಕೊಳ್ಳುವ ಈ ಅಧಿಕಾರಿಯು ಆರೋಗ್ಯಶಾಸ್ತ್ರದ ಇಲ್ಲವೆ ಆರೋಗ್ಯ-ರಕ್ಷಣ ಶಾಸ್ತ್ರದ ಯಾವ ಅಭ್ಯಾಸವನ್ನೂ ಮಾಡಿದ್ದು ಕಾಣುವದಿಲ್ಲ. ಹಿಂದಿನ ಮ್ಯುನಿಸಿಪಾಲಿಟಿಯವರು ಅವನಿಗೆ ಬಡತರ್ಫ ಮಾಡಿದ್ದರು. ಮುಂದೆ ಅವನು ಡಾ॥ ಮುಹಾಜನರ ಕಾಲುಹಿಡಿದು ಪುನಃ ನೇಮಣೂಕಿ ಹೊಂದಿದನು! ಇತ್ತೀಚೆಗೆ ಅವನ ದರ್ಪ ಬಹಳವಾಗಿದೆ! ಅವನನ್ನು ನಿಯಂತ್ರಿಸದಿದ್ದರೆ ಮ್ಯುನಿಸಿಪಾಲಿಟಿಯ ಅಥವಾ ಅಧಿಕಾರಿಗಳು ಒಂದು ದಿನ ತಲೆ ಭಂಗಿ ಹಾಗೂ ಊರಲ್ಲಿ ಕಸಗುಡಿಸುವ ಕೆಲಸ ಮಾಡುವ ಪ್ರಸಂಗ ಬರುವದು ಖಂಡಿತ!

ಕಾರವಾರ— (ತಾ ೩-೯-೧೯೪೮) ಕರ್ನಾಟಕ ಏಕೀಕರಣವಾದಿಗಳು ಇತ್ತಲಾಗಿ ಕಾರವಾರ ತಾಲೂಕಿನಲ್ಲಿ ಕನ್ನಡಿಗರದೇ ಹೆಚ್ಚಳವುಂಟೆಂದು ಸಾಧಿಸಲು ಕೆಲವೊಂದು ಸಂಶಯಾಸ್ಪದ ಅಂಕಿ-ಸಂಖ್ಯೆಗಳನ್ನು ಪ್ರಕಟಿಸಿದ್ದಾರೆ. ಒತ್ತಾಯದ ಶಿಕ್ಷಣದ ಯೋಜನೆಯಂತೆ ಈ ತಾಲೂಕಿನಲ್ಲಿ ನೊನ್ನೆ ನೊನ್ನೆ ನಡೆಸಿದ ಮಕ್ಕಳ ಗಣನೆಯ ಕಾಲಕ್ಕೆ ಹೆಚ್ಚಿನ ಮಕ್ಕಳ ಪಾಲಕರು ತಮ್ಮ ಮಕ್ಕಳಿಗೆ ಕನ್ನಡ ಶಿಕ್ಷಣ ಬೇಕೆಂದು ಹೇಳಿದ್ದಾರೆಂದೂ, ಇದರ ಮೇಲಿಂದ ಕಾರವಾರ ತಾಲೂಕಿನಲ್ಲಿ ಕನ್ನಡದ ಪ್ರಾಬಲ್ಯವೇ ಹೆಚ್ಚಿಗೆಯಿದೆಯೆಂದು ಸಿದ್ಧವಾಗುತ್ತದೆಂದೂ ಈ ಏಕೀಕರಣವಾದಿ ಕನ್ನಡಿಗರು ಅಧಿಕಾರದಿಂದ ಪ್ರತಿಪಾದಿಸುತ್ತಿದ್ದಾರೆ. ಏಕೀಕರಣವಾದಿಗಳ ಈ ... ನ ದಣಿವನ್ನು ಖಂಡಿಸಲಿಕ್ಕೂ ಇವರ ಪ್ರತಿಪಾದನೆಯ ಪೊಳ್ಳುತನ ಬಯಲಿಗೆಳೆಯಲಿಕ್ಕೂ ಕಾರವಾರದೊಳಗಿನ ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಯದರ್ಶಿಗಳಾಗಿದ್ದ ರಾ॥ ಡಿ ಎಮ್ ಕುಲಕರ್ಣಿ, ವಕೀಲ, ಇವರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಅವರು ಆ ಪ್ರಕಟನೆಯಲ್ಲಿ ಬರೆಯುತ್ತಾರೇನಂದರೆ — ಕಾರವಾರ ತಾಲೂಕಿನ ೩/೪ ಜನರು ಕೊಂಕಣ ಇಲ್ಲವೆ ಮರಾಠಿ ಮಾತಾಡುವವರಿರುತ್ತಾರೆಂದು ನಮ್ಮ ಸಮಿತಿಯು ಅಂಕಿ-ಸಂಖ್ಯೆಗಳಿಂದ ಸಿದ್ಧ ಮಾಡುತ್ತಲೇ ಕನ್ನಡಿಗರು ನೊನ್ನೆ ನಡೆದ ಮಕ್ಕಳ ಶಿರೋಗಣತಿಯ ಅಂಕಿ ಸಂಖ್ಯೆಗಳನ್ನು ಮುಂದೆ ಮಾಡಲಾರಂಭಿಸಿದ್ದಾರೆ! ಈ ಶಿರೋಗಣನೆ ಮಾಡಿದವರು ಕನ್ನಡ ಶಿಕ್ಷಕರಿರುತ್ತಾರೆಂದೂ ಈ ಶಿಕ್ಷಕರು ಬಾದ್ಯತೆ ವಸ್ತುಸ್ಥಿತಿಯ ವಿಪರ್ಯಾಸ ಮಾಡಿರುತ್ತಾರೆಂದೂ ಹುಬ್ಬಳ್ಳಿಯ ಕನ್ನಡಿಗರಿಗೆ ಹೇಗೆ ಗೊತ್ತಾಗಬೇಕು? ಹಳ್ಳಿಗರ ಅಜ್ಞಾನದ ಲಾಭ ತೆಗೆದುಕೊಂಡು ಕೆಲವು ಶಿಕ್ಷಕರು ಶಿರೋಗಣನೆಯಲ್ಲಿ ಒಂದಕ್ಕೊಂದು ಬರೆದುಕೊಂಡಿರುತ್ತಾರೆಂಬುದನ್ನು ನಾವು ಆಗಲೇ ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಿಗೆ ತಿಳಿಸಿದ್ದುಂಟು, ಶಿಕ್ಷಣ ಖಾತೆಯ ಮೇಲಧಿಕಾರಿಗಳಿಗೂ ತಿಳಿಸಿದ್ದುಂಟು, ಇತ್ತೀಚೆಗೆ ಈ ಜಿಲ್ಲೆಯ ವಿದ್ಯಾಧಿಕಾರಿಗಳು ಮರಾಠಿ ಶಾಲೆಗಳನ್ನು ನಿರ್ದಯತನದಿಂದ ಮುಚ್ಚಿ (ಹಿಂದೆ ಔರಂಗಜೇಬನಂಥ ಧರ್ಮಾಂಧ ಮುಸಲ್ಮಾನ ರಾಜರು ಹಿಂದುಗಳ ದೇವಸ್ಥಾನಗಳನ್ನು ಮುರಿದು ಅವುಗಳ ಸ್ಥಳದಲ್ಲಿ ಮಸೀದೆಗಳನ್ನು ಕಟ್ಟಿಸಿದಂತೆ) ಅವುಗಳ ಸ್ಥಳದಲ್ಲಿ ಕನ್ನಡ ಶಾಲೆಗಳನ್ನು ತೆರೆಯುತ್ತಿದ್ದಾರೆ! ಹೀಗಾದ ಮೇಲೆ ಜನರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸಿಕೊಡದೆ ಮಾಡುವದೇನು? ಮೇಲಾಗಿ ಈ ಮರಾಠಿ ಭಾಗದಲ್ಲಿ ಕೂಡ ಸರಕಾರದವರು ತಮ್ಮ ಸರಕಾರ-ದರಬಾರದಲ್ಲಿ ಕನ್ನಡಕ್ಕೇ ಪ್ರಾಶಸ್ತ್ಯ ಕೊಡುತ್ತಿದ್ದಾರೆ. ಅದರಿಂದ ಸರಕಾರ-ದರಬಾರದಲ್ಲಿ ವ್ಯವಹರಿಸಲು ಕನ್ನಡದ ಜ್ಞಾನವನ್ನು ಮಾಡಿಕೊಳ್ಳಬೇಕಾಗಿದೆ. ಹೀಗೆ ನಿರುಪಾಯವೆಂದಾಗಲಿ ಸ್ವಾರ್ಥಸಂಧಿಗೆಂದಾಗಲಿ ಕನ್ನಡ ಕಲಿಯುವ ಈ ಜನರನ್ನು ಯಾರಾದರೂ ಪರೀಕ್ಷಿಸಿ ನೋಡಿದರೆ ಅವರಿಗೆ ಮರಾಠಿಯು ಮತ್ತು ಮರಾಠಿಯ ವಾಙ್ಮಯದ ದರ್ಶನ ಪರಿಚಯ ಮತ್ತು ಪ್ರೇಮವಿರುತ್ತಿದ್ದುದು ಕಂಡು ಬರದೆ ಇರಲಾರದು. ಏಕೀಕರಣವಾದಿಗಳು ಮುಂದೆ ಮಾಡಿದ ಅಂಕಿ-ಸಂಖ್ಯೆಗಳು ನಿಜವಾದುವೆಂದು ಒಂದೊಮ್ಮೆ ಒಪ್ಪಿಕೊಂಡರೂ, ಮರಾಠಿಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂದು ಹೇಳುವ ಜನರಿಗಾಗಿ ವಿದ್ಯಾಧಿಕಾರಿಗಳು ಎಷ್ಟು ಮರಾಠಿ ಶಾಲೆಗಳನ್ನು ತೆರೆದಿದ್ದಾರೆಂಬುದನ್ನು ಏಕೀಕರಣವಾದಿಗಳು ಚೌಕಶಿ ಮಾಡಿರುವರೇನು? ಬಹು ಭಾಷಾತ್ಮಕ ಮುಂಬಯಿ ಪ್ರಾಂತದ ಸದ್ಯದ ಅವ್ಯವಸ್ಥೆಯಲ್ಲಿ ಕೊಂಕಣ-ಮರಾಠಿಗರಿಗೆ ಇಷ್ಟು ಅನ್ಯಾಯವಾಗುತ್ತಿರುವಾಗ, ಅಲ್ಪ-ಕನ್ನಡ ಭಾಷೆಯ ಸ್ವತಂತ್ರ ಕರ್ನಾಟಕದಲ್ಲಿ ಅವರ ಪಾಡೇನಾಗುವದೆಂದು ಬಿಡಿಸಿ ಹೇಳಬೇಕಾದುದರ ಅಗತ್ಯವಿಲ್ಲದೆ? ಗೋವೆಯಲ್ಲಿರುವ ಕೊಂಕಣಿ ಮಕ್ಕಳೂ ನಿಜಾಮರ ಹೈದರಾಬಾದದಲ್ಲಿರುವ ಮರಾಠಿಗರ ಮತ್ತು ಕನ್ನಡಿಗರ ಮಕ್ಕಳೂ ಪರಿಸ್ಥಿತಿಯ ಒತ್ತಾಯದಿಂದ ಅನುಕ್ರಮವಾಗಿ ಪೋರ್ಚುಗೀಜ ಮತ್ತು ಉರ್ದು ಕಲಿಯುತ್ತಿದ್ದಾರೆಂಬುದು ಲೋಕವಿಖ್ಯಾತವಿದೆ. ಅಷ್ಟರಿಂದಲೇ ಅವರು ಪೋರ್ಚುಗೀಜ ಮತ್ತು ಉರ್ದು ಭಾಷೆಯ ಜನರೆಂದು ಎಣಿಸಲ್ಪಡುವರೇ? ನ್ಯಾಯ್ಯ ಮತ್ತು ಬುದ್ಧಿಮಾನ್ಯವಾಗುವದೇನು? ಕನ್ನಡಿಗರು ನಿರ್ವಿಕಾರ ಬುದ್ಧಿಯಿಂದ ವಿಚಾರ ಮಾಡಲು ಕಲಿಯಬೇಕಾಗಿ ನನ್ನ ವಿನಂತಿಯಿದೆ. ಸ್ವತಂತ್ರ ಕರ್ನಾಟಕ ಪ್ರಾಂತದ ಅವರ ಬೇಡಿಕೆಗೆ ನಮ್ಮ ವಿರೋಧವಿಲ್ಲ. ಅದನ್ನು ದೊರಕಿಸಲು ಅವರಿಗೆ ನಾವು ಬೇಕಾದ ಸಹಾಯ ಮಾಡಲಿಕ್ಕೂ ಸಿದ್ಧರಿದ್ದೇವೆ. ಸ್ವತಂತ್ರ ಕರ್ನಾಟಕದ ಗಡಿಗಳನ್ನು ನಿಶ್ಚಯಿಸುವಾಗ ಅವರು ಕಾರವಾರ ಜಿಲ್ಲೆಯ ಕೊಂಕಣ ಮರಾಠಿ ಜನರನ್ನೂ ಪ್ರದೇಶಗಳನ್ನೂ ತಮ್ಮಲ್ಲಿ ಎಳೆದುಕೊಳ್ಳುವ ಹವ್ಯಾಸಕ್ಕೆ ಹೋಗಬಾರದೆಂದಿಷ್ಟೇ ನಮ್ಮ ಸೂಚನೆಯಾದೆ. ಕನ್ನಡದ "ಸಾಮ್ರಾಜ್ಯ" ಕಟ್ಟುವ ಹಂಬಲವನ್ನು ಅವರು ಸಂಪೂರ್ಣ ತೊರೆಯತಕ್ಕದ್ದು. ಯಾವದೇ ಬಗೆಯ 'ಸಾಮ್ರಾಜ್ಯ'ಗಳಿಗೆ ಈಗಿನ ಪ್ರಜಾಪ್ರಭುತ್ವದ ಮತ್ತು ಸ್ವಯಂನಿರ್ಣಯದ ಮನ್ವಂತರದಲ್ಲಿ ಸ್ಥಾನವಿಲ್ಲೆಂದು ಅವರು ಚನ್ನಾಗಿ ಅರಿತಿರಬೇಕು. ಇತ್ಯಾದಿ.

ಬೆಳಗಾಂವ ನಗರ ಸಭೆಯು ಸದ್ಯದಲ್ಲೇ ಒಂದು ಠರಾವ ಮಾಡಿ, ಬೆಳಗಾಂವವನ್ನು ಸಂಯುಕ್ತ ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ತಮ್ಮ ಮತ ವ್ಯಕ್ತ ಮಾಡಿರುತ್ತಾರೆ. ನಗರ ಸಭೆಯ ಈ ಗೊತ್ತುವಳಿಯು ಕರ್ನಾಟಕ ಏಕೀಕರಣವಾದಿಗಳ ತಲೆ ತಿರುಗಿಸಿದೆ. ಬೆಳಗಾಂವ ಜಿಲ್ಲಾ ಕೊಂಗ್ರೆಸ ಸಮಿತಿಯ ಅಧ್ಯಕ್ಷ ರಾ॥ ಸುತಗಟ್ಟಿ ಇವರು ಒಂದು ಪ್ರಕಟನೆ ಹೊರಡಿಸಿ, ನಗರ ಸಭೆಯ ಅಭಿಪ್ರಾಯ ಲೋಕಾಭಿಪ್ರಾಯವಲ್ಲೆಂದು ಖಂಡಿತವಾಗಿ ಟೀಕಿಸಿದ್ದಾರೆ! ಬೆಳಗಾಂವಿಯ ನಾಗರಿಕರು ನ್ಯಾಯ ಸಮ್ಮತ ರೀತಿಯಿಂದ ಆರಿಸಿದ ನಗರಪಾಲರು ಲೋಕ-ಪ್ರತಿನಿಧಿಗಳಲ್ಲೆಂದು ರಾ॥ ಸುತಗಟ್ಟಿಯವರು ವಾದಿಸುವದನ್ನು ನೋಡಿದರೆ ಅವರಿಗೆ ಲೋಕ-ಪ್ರಾತಿನಿಧ್ಯದ ಅರ್ಥವಾದರೂ ಗೊತ್ತಿದೆಯೋ ಹೇಗೆಂಬ ಸಂಶಯ ಬರುತ್ತದೆ. ಜಿಲ್ಲಾ ಕೊಂಗ್ರೆಸ ಸಮಿತಿಯ ಅಧ್ಯಕ್ಷನಾತೆಯಿಂದ ಅವರು ಸ್ಥಾನಿಕ ನಗರ ಸಭೆಯ ಕಾರಭಾರದಲ್ಲಿ ಕೈಹಾಕಿದ್ದು ಅಸಮರ್ಥನೀಯ ಮತ್ತು ನಿಂದ್ಯವಿರುತ್ತದೆಂದು ಇಲ್ಲಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯು ಅಭಿಪ್ರಾಯಪಟ್ಟು ರಾ॥ ಸುತಗಟ್ಟಿಯವರ ನಡತೆಯನ್ನು ನಿಷೇಧಿಸುವ ಠರಾವು ಮಾಡಿದ್ದಾರೆ.

Students' Book Depot, Ltd.,
Ankola, N. Kanara
ಜಾಹೀರ ಪ್ರಕಟನೆ.

ಮುಂಬಯಿ ಪ್ರಾಂತದ ವಿದ್ಯಾ ಖಾತೆಯವರಿಂದ ಪ್ರಕಾಶಿತವಾದ ಪುಸ್ತಕಗಳ ಬಗ್ಗೆ ನಾವು ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟಕಳ (ಪೇಟೆ) ತಾಲೂಕುಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ

"ಕನ್ನಡ ವಾಚನ ಮಾಲೆಯ ಮೊದಲು" ಓದು

ಇದೀಗಲೇ ಮಾರಾಟಕ್ಕೆ ಸಿದ್ಧವಾಗಿದೆ ಬೆಲೆ ೦-೨-೯ ಈ ಬೆಲೆಗೆ ನಮ್ಮಲ್ಲಿಯೂ ನಮ್ಮ ಈ ಕೆಳಗಿನ ಅಧಿಕೃತ ಏಜಂಟರಲ್ಲಿ ವಿಕ್ರಿಗೆ ಸಿಗುವದು. ಯಾರೂ ಹೆಚ್ಚಿಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ

ಏಜಂಟರು - (೧) ಮೆ॥ ಪೊಪ್ಯುಲರ ಮೆಡಿಕಲ್ ಸ್ಟೋರ್ಸ್, ಗೋಕರ್ಣ. (೨) ಮೆ॥ ರಾಮಕೃಷ್ಣ ಗೋವಿಂದ ಭಟ್ಟ, ಕುಮಟಾ. (೩) ಮೆ॥ ಕಾಮತ ಫಾರ್ಮಸೀಸ ಎಂಡ್ ಸ್ಟೋರ್ಸ್, ಹೊನ್ನಾವರ. (೪) ಮೆ॥ ರಾಮನಾಥ ವಾಮನ ಶಾನಭಾಗ, ಭಟಕಳ

K R. Hegde,
Managing Director

ಪತ್ರಿಕಾ-ಪ್ರಕಟನೆ.

ಕಾನಡಾ ಜಿಲ್ಲೆಯು ಅಡವಿಯು ಯಲ್ಲಾಪುರ ಡಿವಿಜನ್ನಿನಲ್ಲಿ ತೆಳ್ಳನ್ನ ಹಲಿಗೆಯ ಕಡ್ಡಿ (splint) ಗಳನ್ನು ತಯಾರಿಸುವ ಒಂದು ಕಾರಖಾನೆಯನ್ನು ಸ್ಥಾಪಿಸಲಿಕ್ಕೆ ಪರವಾನಗಿ ಕೊಡಲು ಮುಂಬಯಿ ಸರಕಾರವು ಸಿದ್ಧವಾಗಿದೆ. ಕಾರಖಾನೆ ಸ್ಥಾಪಿಸಬಯಸುವವರು ಬೆಂಕಿಪೆಟ್ಟಿಗೆಗಳಿಗೆ ಬೇಕಾಗುವ ತೆಳ್ಳನ್ನ ಹಲಿಗೆ ಕಡ್ಡಿಗಳನ್ನಷ್ಟೇ ತಯಾರಿಸುವ ಯೋಜನೆಯನ್ನು ಕೈಕೊಳ್ಳಲಿಕ್ಕಾಗುತ್ತದೆ. ಇಂತಹ ಕಾರಖಾನೆಗೆ ಡಿವಿಜನ್ನು ಅತಿ ಅನುಕೂಲ ಸ್ಥಳವಿರುತ್ತದೆಂದು ಹೇಳಬಹುದು. ಯಾಕೆಂದರೆ ಬೇಗನೇ ಡಿವಿಜನ್ನಿನಲ್ಲಿ ಜೋಗ ಜಲಪಾತದಿಂದ ವಿದ್ಯುಚ್ಛಕ್ತಿ ಸಿಗುವ ಸಂಭವವುಂಟು. ಇದಲ್ಲದೆ ಕಾರಖಾನೆ ಸ್ಥಾಪಿಸಬಯಸುವವರು ಬರೇ ಕಡ್ಡಿ ಹಲಿಗೆಗಳನ್ನಷ್ಟೇ ಅಲ್ಲದೆ ಬೆಂಕಿ-ಪೆಟ್ಟಿಗೆಗಳನ್ನು ತಯಾರಿಸುವ ಪೂರ್ಣ ಕಾರಖಾನೆಯನ್ನು ತೆರೆಯಬಯಸುತ್ತಿರುವರಾದರೆ, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ನಡುವೆ, ರೇಲ್ವೆ ನಿಲ್ದಾಣಕ್ಕೆ ಸಮೀಪವಿರುವ ಯಾವದೊಂದು ಸ್ಥಳದಲ್ಲಿ, ಅದನ್ನು ತೆರೆಯುವದು ಬಹಳ ಅನುಕೂಲವಾಗುವದು. ಸರಕಾರದವರು ಸದರ ಕ್ಷೇತ್ರಗಳಲ್ಲಿ ಮಾಡಿಸಿದ ಪರೀಕ್ಷಣೆ ಮತ್ತು ಶೋಧನೆಯ ಮೇಲಿಂದ, ಸದರ ಕ್ಷೇತ್ರಗಳಲ್ಲಿರುವ ಕಟ್ಟಿಗೆಗಳಲ್ಲಿ ಬೆಂಕಿ-ಪೆಟ್ಟಿಗೆಗಳ ತಯಾರಿಕೆಗೆ ಅನುಕೂಲವೆಂದು ಕಂಡುಬಂದಿರುವ ಈ ಕೆಳಗಿನ ೪ ಜಾತಿಗಳ ಕಟ್ಟಿಗೆಯು ಪ್ರತಿವರ್ಷ ೧೬೦೦ ಟನ್ನುಗಳಷ್ಟು ಸರಾಸರಿಯಾಗಿ ಸಿಗುವದೆಂದು ಕಂಡುಬಂದಿದೆ —

೧ ಬೊಂಬೆಕ್ಸ ಮಾಲಬಾರಿಕಮ್

೨ ಮೆಂಗಿಫೇರಾ ಇಂಡಿಕಾ

೩. ಎಲ್‌ಸ್ಟೋನಿಯಾ ಸ್ಕೊಲೆರಿಸ್.

೪ ಬೊಲಿಗರ್ನ ಸ್ಪೀಸಿಸ್

ಸಂಕಲ್ಪಿತ ಕಂಪನಿ (ಕಾರಖಾನೆ) ಯವರು ಅವಶ್ಯವುಳ್ಳ ಸಂಶೋಧನೆಯನ್ನು ನಡಿಸಿ, ಈ ಭಾಗದಲ್ಲಿ ಸಿಗುವ ಇನ್ನಿತರ ಜಾತಿಯ ಕಟ್ಟಿಗೆಯೂ ಬೆಂಕಿ-ಪೆಟ್ಟಿಗೆಯ ಹಲಿಗೆಗಳನ್ನು ತಯಾರಿಸುವ ಉಪಯೋಗಕ್ಕೆ ಬರುವಂತಿದೆಯೋ ಹ್ಯಾಗೆಂಬುದರ ಪ್ರಯೋಗಗಳನ್ನು ಮಾಡಿಸಿದರೆ ಬೆಂಕಿ-ಪೆಟ್ಟಿಗೆಗಳ ಕಡ್ಡಿ ಹಲಿಗೆಗಳ ಉಪಯೋಗಕ್ಕೆ ಬರುವಂತಹ ಇನ್ನೂ ಹೆಚ್ಚಿಗೆ ಕಟ್ಟಿಗೆ ಸಿಗಬಹುದೆಂದು ಅನಿಸುತ್ತದೆ.

೨ ಉಪಯುಕ್ತವಿರುವ ಮರಗಳಿಗೆ ಛಪ್ಪೆ ಹಾಕಿ, ಅವನ್ನು ಕಡಿಸಿ ಕಾರಖಾನೆಯ ಸ್ಥಳಕ್ಕೆ ಮುಟ್ಟಿಸುವ ವ್ಯವಸ್ಥೆಯನ್ನು ಜಂಗಲ ಖಾತೆಯವರು ಮಾಡುವರು. ದಕ್ಷಿಣ ಭಾಗ (ಸರ್ಕಲ) ದ ಕಾಮಗಾರಿ ಯೋಜನೆಗಳ ಮೇಲ್ವಿಚಾರಣೆ ಮಾಡುವ ಡಿವಿಜನಲ್ ಫೊರೆಸ್ಟ ಆಫಿಸರರು ಹಾಕಿಕೊಟ್ಟ ಸುತ್ರಕ್ರಮತೆಯ ಹಾಗೂ ಇತರ ನಿಯಮಗಳಿಗನುಸಾರವಾಗಿ ಖಾತೆಯವರು ಮರಗಳಿಗೆ ಛಪ್ಪೆ ಹಾಕಿ ಕೊಡುವರು. ಕಾರಖಾನೆಗೆ ಬೇಕಾದ ಕಟ್ಟಿಗೆಯು ಸರಾಗವಾಗಿ ಸಿಗುವ ಹಾಗೆ, ಸುಮಾರು ೨೫ ವರ್ಷಗಳ ವರೆಗಿನ ಮರ ಕಡಿಯುವ ಕಾಲ-ಪಟ್ಟಿ ತಯಾರಿಸಿ, ಸದರಿ ಅಧಿಕಾರಿಯು ಅನುಕ್ರಮವಾಗಿ ಕಟ್ಟಿಗೆ ಕಡಿಯಬೇಕಾದ ಜಂಗಲ-ವಿಭಾಗಗಳ ಪಟ್ಟಿಯನ್ನು ತಯಾರಿಸಿ ಕೊಡುವರು. ಮೇಲಿನಂತೆ ಮರಗಳಿಗೆ ಛಪ್ಪೆ ಹಾಕಿಕೊಡುವದು, ಮರಗಳನ್ನು ಕಡಿಸುವದು ಮತ್ತು ಕಟ್ಟಿಗೆಯನ್ನು ಕಾರಖಾನೆಯ ಆವಾರಕ್ಕೆ ಒಯ್ದು ಮುಟ್ಟಿಸುವದು ಈ ಕೆಲಸಗಳಿಗೆ ತಗಲುವ ಪ್ರತ್ಯಕ್ಷ ವೆಚ್ಚವನ್ನಲ್ಲದೆ, ಈ ಕೆಲಸಗಳನ್ನು ಮಾಡಿಸಲಿಕ್ಕೂ ಅವುಗಳ ಮೇಲ್ವಿಚಾರಣ ನಡಿಸಲಿಕ್ಕೂ ಜಂಗಲ ಖಾತೆಯವರಿಗೆ ಕೊಡಬೇಕೆಂದು ಕಾರಖಾನೆಯ ಚಾಲಕರೂ ಸದರ ಖಾತೆಯ ಅಧಿಕಾರಿಗಳೂ ತಮ್ಮೊಳಗೆ ಗೊತ್ತು ಮಾಡಿಕೊಂಡು ಒಪ್ಪುವ ಹಣವನ್ನೂ —ಆದರೆ ಈ ಹಣ ಮೇಲೆ ಹೇಳಿದ ಪ್ರತ್ಯಕ್ಷ ವೆಚ್ಚದ ೧೦% ವನ್ನು ಮೀರತಕ್ಕದ್ದಲ್ಲ— ಕಾರಖಾನೆಯವರು ಜಂಗಲ ಖಾತೆಗೆ ಕೊಡಬೇಕಾಗುವದು.

ಕಾರಖಾನೆ ಸ್ಥಾಪಿಸಬಯಸುವ ಜನರ ಮಾಹಿತಿಗಾಗಿ ಈ ಕೆಳಗಿನ ಮಾಹಿತಿಯನ್ನು ಇಲ್ಲಿ ನಮೂದಿಸಬಹುದು.

ಸದ್ಯಕ್ಕೆ ೧ ಟನ್ನ ಕಟ್ಟಿಗೆಯನ್ನು ಕಡಿಸಿ ೧೦ ಮೈಲು ಅಂತರದಲ್ಲಿ ಗಾಡಿಗಳಿಂದ ಒಯ್ದು ಕೊಡಲಿಕ್ಕೆ ಅಜಮಾಸ ರೂ ೩೦ ಮತ್ತು ಅಷ್ಟೇ ಕಟ್ಟಿಗೆಯನ್ನು ಕಡಿಸಿ ೪೦ ಮೈಲು ದೂರ ಒಯ್ದು ಕೊಡಲಿಕ್ಕೆ ರೂ ೪೫ರಿಂದ ೫೦ರ ವರೆಗೆ ಖರ್ಚು ಬೀಳುತ್ತದೆ.

೩ ಪ್ರಾಂತದೊಳಗಿನ ಬೇರೆ ಬೆಂಕಿ ಪೆಟ್ಟಿಗೆಗಳ ಕಾರಖಾನೆಗಳಿಗೆ ಕಡ್ಡಿ ಹಲಿಗೆಗಳನ್ನು ಮಾರಾಟ ಮಾಡುವದಕ್ಕೆ ಪ್ರತಿಬಂಧ ಇಲ್ಲವೆ ಮರ್ಯಾದೆ (restrictions) ಹಾಕಲ್ಪಡುವ ಸಂಭವವಿರುವದಿಲ್ಲ. ಆದರೆ ಪ್ರಾಂತದ ಹೊರಗೆ ಕಡ್ಡಿ ಹಲಿಗೆಗಳನ್ನು ಕಳಿಸಿಕೊಡುವ ಬಗ್ಗೆ ಕರಾರು ಬೇಕಾಗುವ ಪರವಾನಗಿಗೆ ಚೀಫ ಕನ್ಸರ್ವೇಟರ ಆಫ ಫೊರೆಸ್ಟ್ಸ, ಮುಂಬಯಿ ಪ್ರಾಂತ, ಇವರ ಮುಖಾಂತರ ಮುಂಬಯಿ ಸರಕಾರದ ಸಮ್ಮತಿಯನ್ನು ಪಡಕೊಳ್ಳಬೇಕಾಗುವದು.

೪ ಸ್ಥಾನಿಕ ಕೂಲಿಯಾಳುಗಳು ಹೊಲ-ಸಾಗುವಳಿಯ ಇಲ್ಲವೆ ಇನ್ನಿತರ ಅವಶ್ಯಕ ಕೆಲಸಗಳಲ್ಲಿ ತೊಡಗಿರದಿದ್ದಾಗ ಅವರನ್ನು ಕಾರಖಾನೆಯ ಕೆಲಸಕ್ಕೆ ತಕ್ಕೊಳ್ಳಬರುವಂತೆ ಕೆಲವೊಂದು ಹಂಗಾಮುಗಳಲ್ಲಿಷ್ಟೇ ಕಾರಖಾನೆಯ ಕೆಲಸ ನಡಿಸಲು ಸಾಧ್ಯವಾಗುವಂತುಂಟೋ ಎಂಬುದನ್ನು ಭಾವೀ ಕಂಪನಿ (ಕಾರಖಾನೆ) ಯವರು ಪರೀಕ್ಷಿಸಿ ನೋಡಬೇಕು. ಕಾರಖಾನೆಯಲ್ಲಿ ಕೆಲಸ ಮಾಡುವ ಕಾಮಗಾರರು, ಮುಂಬಯಿ ಸರಕಾರದ ಕೂಲಿಕಾರ ಖಾತೆಯವರು ಕಾಲಕಾಲಕ್ಕೆ ಮಾಡುವ ನಿಯಮಗಳನುಸಾರವಾಗಿ ಪಗಾರ, ಆರೋಗ್ಯ, ಜೀವನ ಮತ್ತು ಕ್ಷೇಮಸಂಬಂಧದ ಸೌಕರ್ಯಗಳನ್ನು ಪೂರೈಸುವ ಹೊಣೆಯನ್ನು ಭಾವೀ ಕಂಪನಿಯವರು ಹೊರಬೇಕಾಗುವದು.

೫ (ಸರಕಾರದವರೂ ಕಂಪನಿಯವರೂ) ಪರಸ್ಪರರ ಒಪ್ಪಿಗೆಯಿಂದ ನಿಶ್ಚಿತ ಮಾಡುವ ದಿನದಿಂದ ಕಾರಖಾನೆಯು (ಕಡ್ಡಿ ಹಲಿಗೆಗಳ) ಉತ್ಪಾದನೆಯನ್ನು ಪ್ರಾರಂಭಿಸಬೇಕಾಗುವದು. ಸದರ ದಿನವು ಕರಾರಿಗೆ ಸಹಿಯಾದ ದಿನದಿಂದ ೨ ವರ್ಷಗಳ ಹೊರಗೆ ಇರಕೂಡದು.

೬ ಕಾರಖಾನೆಯ ಆವಾರದಲ್ಲಿ ಕಂಡು (ಸರಕಾರದವರು) ಒಪ್ಪಿಸುವ, ಮೈ ಸವರಿಸದಿದ್ದ (in the round) ಪ್ರತಿಯೊಂದು ಟನ್ನ (= ೫೦ ಘನ ಫೂಟು) ಕಟ್ಟಿಗೆಯ ಬಗ್ಗೆ ರೂ ೨ರಕ್ಕೆ ಕಡಿಮೆಯಿರದಷ್ಟು ೧ ಬಾಬ್ತುವನ್ನು ಭಾವೀ ಕಂಪನಿಯವರು ಜಂಗಲ ಇಲಾಖೆಗೆ ಕೊಡಬೇಕಾಗುವದು. ಪ್ರಥಮತಃ ನಿಶ್ಚಯಿಸಿದ ಈ ದರವನ್ನು ಗುತ್ತಿಗೆಯ ಮೊದಲಿನ ೫ ವರುಷಗಳ ಬಗ್ಗೆ ನಿರ್ಧರಿಸಲಾಗುವದು. ಮುಂದೆ ಪ್ರತಿ ೫ ವರುಷಗಳಿಗೊಮ್ಮೆ ಅದನ್ನು ಹೆಚ್ಚು-ಕಡಿಮೆ ಮಾಡಬಹುದು. ಆದರೆ ಪ್ರತಿಯೊಂದು ತಿದ್ದುಪಡಿಯ ಕಾಲಕ್ಕೆ ಹೆಚ್ಚಿಸಲ್ಪಟ್ಟ ಧಾರಣೆಯು ಮೇಲೆ ಹೇಳಿದ ಧಾರಣೆಯ ೧೦ ಪಟ್ಟಿಗೆ ಏರಕೂಡದು ಮೀರಬಾರದು.

೭ ಮೇಲಿನ ಯೋಜನೆಯ ಬಗ್ಗೆ ಆಸ್ಥೆಯುಳ್ಳ ಉದ್ಯೋಗಸ್ಥರು ತಮ್ಮ ಟೆಂಡರ-ಪತ್ರಗಳನ್ನು ತಾ ೩೦-೯-೧೯೪೮ನೇ ದಿನ ಮಧ್ಯಾಹ್ನ ೧೨ ಘಂಟೆಗೆ (ಇದೇ ಕೊನೆಯ ಅವಧಿ) ಯೂ ಆದರ ಮುಂಚೆ ಚೀಫ ಕನ್ಸರ್ವೇಟರ ಆಫ ಫೊರೆಸ್ಟ್ಸ, ಮುಂಬಯಿ ಪ್ರಾಂತ, ಪುಣೆ ೧ ಇವರಿಗೆ ಕಳಿಸಿಕೊಡಬೇಕು ಇಲ್ಲವೆ ಒಪ್ಪಿಸಬೇಕು.

ಟೆಂಡರ-ಪತ್ರ ಒಪ್ಪಿಸುವವರು ಈ ಕೆಳಗಿನ ಮಾಹಿತಿಯನ್ನು ಟೆಂಡರ ಪತ್ರದಲ್ಲಿ ನಮೂದಿಸಬೇಕು —

(೧) ಕಾರಖಾನೆ ತೆರೆಯಬಯಸುವ ಭಾಗೀದಾರಿಕ ವ್ಯಕ್ತಿಯ ಇಲ್ಲವೆ ವ್ಯಕ್ತಿಗಳ ಪೂರ್ಣ ಹೆಸರು (ಅರ್ಜಿದಾರನು ಒಂದು ಕಂಪನಿಯಾಗಿರುತ್ತಿದ್ದಲ್ಲಿ ಅದು ಹಿಂದಿ ಒಕ್ಕೂಟದ ನಾಗರಿಕರ (nationals) ಒಡೆತನಕ್ಕೆ ಸೇರಿದ್ದು, ಅವರಿಂದಲೇ ನಿಯಂತ್ರಿಸಲ್ಪಟ್ಟದ್ದು ಮತ್ತು ಅವರೇ ನಡಿಸಿದ್ದು ಇರಬೇಕು, ಅಥವಾ ಆ ಕಂಪನಿಯ ಕನಿಷ್ಠ ಪಕ್ಷ ಮುಕ್ಕಾಲು ಪಾಲು ಭಂಡವಾಳವೂ ಆಡಳಿತೆಯೂ ಭಾರತೀಯರದಿರಬೇಕು.

(೨) ಕಾರಖಾನೆಯಲ್ಲಿ ತೊಡಗಿಸಲ್ಪಡುವ ಭಂಡವಾಳದ ಪರಿಮಿತಿ. ಅರ್ಜಿದಾರ ವ್ಯಕ್ತಿಯ, ವ್ಯಕ್ತಿ ಸಮೂಹದ ಅಥವಾ ಭಾಗೀದಾರಿಯ ಸಾಂಪತ್ತಿಕ ಸ್ಥಿತಿ ಹ್ಯಾಗುಂಟೆಂಬುದು ಸರಕಾರವು ತಿಳಕೊಳ್ಳಬಯಸುತ್ತಿದ್ದರೆ ಆ ಬಗ್ಗೆ ಚೌಕಸಿ ಮಾಡಲು ಅನುಕೂಲವಾಗುವಂತೆ ಅರ್ಜಿದಾರನು ತನ್ನ ಬ್ಯಾಂಕಿನ ಹೆಸರು ನಮೂದಿಸಬೇಕು.

(೩) ಈ ಉದ್ದಿಮೆಯಲ್ಲಿ ಹಾಗೂ ಅದಕ್ಕೆ ನಿಕಟಸಂಬಂಧವಿರುವ ಉದ್ದಿಮೆಗಳಲ್ಲಿ ಅರ್ಜಿದಾರನಿಗಿರುವ ಪೂರ್ವಾನುಭವ

(೪) ಕಾರಖಾನೆಗೆ ಅವಶ್ಯವುಳ್ಳ ಯಂತ್ರ-ಸಾಮಗ್ರಿಯನ್ನು ಎಲ್ಲಿಂದ ತರಿಸಿಕೊಳ್ಳಲಾಗುವದೋ ಆ ದೇಶದ (ಯಂತ್ರವನ್ನು ಉತ್ಪಾದಿಸಿದ ಮೂಲ ದೇಶದ) ಹೆಸರು

(೫) ಪ್ರತಿ ೧ ಟನ್ನಿಗೆ ರೂ ೨ರಂತಿರುವ ರಾಜಾರ್ಥದ ಮೂಲ ದರಕ್ಕೂ ಹೆಚ್ಚಿಗೆಯಾಗಿ ಯಾವ ದರದಿಂದ ಅರ್ಜಿದಾರನು ತನ್ನ ಕಾರಖಾನೆಯ ಸ್ಥಳಕ್ಕೆ ಕಂಡು ಒಪ್ಪಿಸಲ್ಪಡುವ ಪ್ರತಿಯೊಂದು ಟನ್ನ ಕಟ್ಟಿಗೆಯ ಬಗ್ಗೆ ಜಂಗಲ ಇಲಾಖೆಗೆ ರಾಜಾರ್ಥ ಕೊಡಲು ಒಪ್ಪುತ್ತಾನೆ ಎಂಬುದನ್ನು ನಮೂದಿಸಬೇಕು. ಮೇಲೆ ೨ನೇ ಪಂಕ್ತಿಯಲ್ಲಿ ಹೇಳಿದಂತೆ ಕಡಿಯತಕ್ಕ ಮರಗಳಿಗೆ ಛಪ್ಪೆ ಹಾಕುವದು, ಅವನ್ನು ಕಡಿಸುವದು, ಗಾಡಿಯಲ್ಲಿ ಹಾಕಿ ಸ್ಥಳಾಂತರಿಸುವದು ಮತ್ತು ಈ ಎಲ್ಲ ಕೆಲಸಗಳ ಮೇಲ್ವಿಚಾರಣೆ ಮಾಡುವದು ಇವುಗಳ ಬಗ್ಗಾಗಿ ತಗಲುವ ವೆಚ್ಚ ಕೊಟ್ಟು ಮೇಲೆ ಈ ರಾಜಾರ್ಥ ಕೊಡತಕ್ಕದ್ದಿರುತ್ತದೆಂಬುದನ್ನು ಮರೆಯತಕ್ಕದ್ದಲ್ಲ.

(೬) ಕಾರಖಾನೆ ಸ್ಥಾಪಿಸಬಯಸುವವರಿಗೆ ಇಷ್ಟವಾಗುವ ಇತರ ಮಾಹಿತಿ.

೮ ಟೆಂಡರ-ಪತ್ರ ಒಪ್ಪಿಸುವ ಪ್ರತಿಯೊಬ್ಬ ಅರ್ಜಿದಾರನು ಸರಕಾರಿ ಖಜಾನೆಯಲ್ಲಿ ರೂ ೧೦೦೦ವನ್ನು ಬಯಾನಾ ಇಡುಗಂಟೆಂದು ತುಂಬಿ, ಆ ಬಗ್ಗೆ ತಕ್ಕೊಂಡ ಚಲನ-ಪಾವತಿಯನ್ನು ಟೆಂಡರ-ಪತ್ರದ ಜೊತೆಗೆ ಕಳಿಸಬೇಕು. ಅರ್ಜಿ ಸ್ವೀಕರಿಸಲ್ಪಡದಿದ್ದಲ್ಲಿ ಈ ಹಣ ತಿರುಗಿ ಕೊಡಲಾಗುವದು. ಆದರೆ ಅರ್ಜಿ ಸ್ವೀಕರಿಸಲ್ಪಟ್ಟಾಗ ಟೆಂಡರ ಕೊಟ್ಟ ಅರ್ಜಿದಾರನು ಯಾ ಅರ್ಜಿದಾರರು ಗುತ್ತಿಗೆಯ ಕರಾರುಗಳಿಗನುಸಾರವಾಗಿ ನಡೆಯುತ್ತೇನೆಂದು ಸರಕಾರಕ್ಕೆ ಕರಾರು ಬರೆಕೊಡಲು ತಪ್ಪಿದಲ್ಲಿ ಈ ಹಣ ಸರಕಾರ ಜಮಾ ಮಾಡಲಾಗುವದು. ಯಾವದೇ ಟೆಂಡರ ಅರ್ಜಿಯನ್ನು, ಆ ಬಗ್ಗೆ ಕಾರಣ ತಿಳಿಸದೆ, ತಿರಸ್ಕರಿಸುವ ಇಲ್ಲವೆ ಸ್ವೀಕರಿಸುವ ಹಕ್ಕನ್ನು ಸರಕಾರವು ಕಾಯ್ದಿಟ್ಟುಕೊಂಡಿದೆ.

E. T. C. Vas,

ಪುಣೆ ೧, ಚೀಫ ಕನ್ಸರ್ವೇಟರ ಆಫ

ತಾ ೩೧-೭-೧೯೪೮ ಫೊರೆಸ್ಟ್ಸ, ಮುಂಬಯಿ ಪ್ರಾಂತ

ಬೊಂಬೇ ಸ್ಟೀಮ ನೆವ್ಹಿಗೇಶನ್ ಕಂಪನಿ, ಲಿಮಿಟೆಡ್.

ಮುಂಬಯಿ-ಮಂಗಳೂರ ಲ್ಯಾನ.

ಪ್ರವಾಸಿಕರ ಹಡಗ ಮುಂಬಯಿಯಿಂದ ಪ್ರತಿ ವಾರಕ್ಕೆ ಹೊರಡುವದು.

ನಮ್ಮ ಮುಂಬಯಿ-ಮಂಗಳೂರ ಕರಾವಳಿಯಲ್ಲಿ ಪ್ರವಾಸಿಗಳ ಹಡಗಗಳ ವ್ಯವಹಾರಕ್ಕೆ ಇದೇ ಬರುವ ಸಪ್ಟಂಬರ ತಾರೀಖು ೨ನೇ ಗುರುವಾರದಿಂದ ಪ್ರಾರಂಭವಾಗುವದು. ತದನಂತರ ಹಡಗವು ಹಿಂದಿನಂತೆ ಮುಂಬಯಿಯಿಂದ ಮಂಗಳವಾರ ಹೊರಡದೆ, ಪ್ರತಿ ಗುರುವಾರ ಮಧ್ಯಾಹ್ನ ೧೨ಕ್ಕೆ ಮುಂಬಯಿ ಬಿಟ್ಟು, ಮಾರ್ಮಗೋವಾ, ಕಾರವಾರ, ಕುಮಟಾ, ಭಟಕಳ, ಮಲ್ಪೆ ಬಂದರಗಳಲ್ಲಿ ಒಂದರ ಮಾಡಿ, ಶನಿವಾರ ಪ್ರಾತಃಕಾಲದ ೭ಕ್ಕೆ ಮಂಗಳೂರಿಗೆ ಮುಟ್ಟುವದು, ಮತ್ತು ಅಂದೇ ಅಪರಾಹ್ನ ೧೧॥ ಘಂಟೆಗೆ ಮಂಗಳೂರ ಬಿಟ್ಟು, ಮೇಲಿನ ಬಂದರಗಳನ್ನು ಸಂದರ್ಶಿಸಿ ಸೋಮವಾರ ಬೆಳಿಗ್ಗೆ ಮಾರಳ ಮುಂಬಯಿ ಸೇರುವದು

ತಾ ೧೧-೮-೧೯೪೮ ಸಿಂಧ್ಯಾ ಸ್ಟೀಮ ನೆವ್ಹಿಗೇಶನ್ ಕಂ., ಲಿ

ಮೆನೇಜಿಂಗ ಏಜಂಟ್ಸ.

ಇದನ್ನು ಪಾಂಡುರಂಗ ಕೃಷ್ಣ ಕಾನಡಿ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

Reg. No. B. 1270 Monday, 20-9-1948.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ ೧೨.

ಕುಮಟಾ - ಸೋಮವಾರ,, ತಾ ೨೦—೯—೧೯೪೮

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲಖರ್ಚು ಸಹ ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ಹಳೆ ಸಂಚಿಕೆಗೆ ೦-೪-೦
ವ್ಹಿ.ಪಿ. ಯಿಂದ ತರಿಸುವವರು
ವ್ಹಿ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿಯು ಮುಂಗಡವಾಗಿ ಸಲ್ಲತಕ್ಕದ್ದು

ಜಾಹೀರಾತುಗಳ ದರ:-
ಸ್ಥಳ ಲಭ್ಯ ... ಗಳಿಗೆ ಅನುಸರಿಸಿ
೧ ಸಾಲಿಗೆ ೬ ಆಣೆಯಂತೆ
ವಿಶಿಷ್ಟ ಅಲ್ಪ ದೀರ್ಘ ಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಥವಾ ಪತ್ರದ್ವಾರಾ
ತಿಳಿಸಲಾಗುವದು.

ನಿಜಾಮಶಾಹಿ ನಷ್ಟವಾಯಿತು !!

ಹೈದರಾಬಾದದಲ್ಲೀಗ ಹಿಂದೀ ಸೇನಾಪತಿಗಳ ರಾಜ್ಯ.

ಕಾಸಿಮ ರಜವಿಯ ಪತ್ತೆಯಿಲ್ಲ !!

(ಸಂಪಾದಕನು ಬರೆದುದು)

ನಿಜಾಮರ ಸೈನಿಕರ, ಪೋಲೀಸರ ಮತ್ತು ರಝಾಕಾರರ ರಾಕ್ಷಸೀ ಅತ್ಯಾಚಾರಗಳು ಮೇರೆದಪ್ಪಿದ್ದರಿಂದಲೂ, ಈ ಅತ್ಯಾಚಾರಗಳ ಪ್ರತಿಕ್ರಿಯೆ ಹಿಂದುಸ್ಥಾನದಲ್ಲಾಗಿ ಹಿಂದುಸ್ಥಾನದ ಶಾಂತಿ-ಸುರಕ್ಷಿತತೆಗಳಿಗೂ ಬಾಧೆಯುಂಟಾಗುವ ಭೀತಿಯುಂಟಾಗಿರುವದರಿಂದಲೂ ಹಿಂದುಸ್ಥಾನ ಸರಕಾರವು ಇನ್ನು ಸ್ವಸ್ಥ ಕುಳಿತುಕೊಳ್ಳುವದು ಸಾಧ್ಯವಿಲ್ಲೆಂತಲೂ ನಾನು ಈ ಹಿಂದೆ ತಿಳಿಸಿದ್ದೆ. ಹಿಂದುಸ್ಥಾನ ಸರಕಾರವು ಹೈದರಾಬಾದದ ಸಮಾಚಾರ ತಕ್ಕೊಳ್ಳಲು ಸಕಲ ಸನ್ನಾಹಗಳನ್ನು ಮಾಡಿರುತ್ತದೆಂದೂ ಸಪ್ಟಂಬರ ೨ನೇ ವಾರದಲ್ಲಿ ಹಿಂದೀ ಸೈನ್ಯವು ಹೈದರಾಬಾದದ ಮೇಲೆ ದಂಡೆತ್ತಿಹೋಗುವ ಸಂಭವವುಂಟೆಂದೂ ನಾನು ಮೊದಲೇ ನಮೂದಿಸಿದ್ದೆ. ಆದರೆ ಹಿಂದ-ಹೈದರಾಬಾದ ಪ್ರಕರಣದಲ್ಲಿ ಮಿಂಚಿನ ವೇಗದಿಂದ ಸ್ಥಿತ್ಯಂತರಗಳುಂಟಾಗಿ, ಮಿಂಚಿಗಿಂತ ಮಿಗಿಲಾದ ವೇಗದಿಂದ ಹೈದರಾಬಾದವು ಹಿಂದೀ ಸೇನಾಧಿಕಾರಿಗಳ ವಶಕ್ಕೆ ಬರುವದೆಂದಾಗಲಿ, ವಿಶೇಷ ರಕ್ತಪಾತವಿಲ್ಲದೆ ನಿಜಾಮರು ಹಿಂದುಸ್ಥಾನ ಸರಕಾರಕ್ಕೆ ಶರಣು ಬರುವರೆಂದಾಗಲಿ ನಾನು ಕನಸಿನಲ್ಲಿ ಕೂಡ ಭಾವಿಸಿದ್ದಿಲ್ಲ ನಿಜಾಮರ ಭವಿಷ್ಯವನ್ನು ವರ್ಣಿಸಿದ ಹಲವಾರು ಹೆಸರಾಂತ ಜ್ಯೋತಿಷಿಗಳು ಕೂಡ ಹಿಂದ-ಹೈದರಾಬಾದ ಹೋರಾಟದ ಆರಂಭವೂ ಅಂತವೂ ಒಂದೇ ವಾರದಲ್ಲಿ ಆಗುವದೆಂದು ಹೇಳಿದ್ದಿಲ್ಲ. ಕನಿಷ್ಠ ಎರಡು-ಮೂರು ತಿಂಗಳಾದರೂ ಈ ಕದನವು ನಡೆಯುವದೆಂದೂ, ಈ ಕದನ ನಡೆಯುತ್ತಿರುವಾಗ ಕೆಲವೊಂದು ಅನಪೇಕ್ಷಿತ ಪರಿಣಾಮಗಳುಂಟಾಗಿ ಕಷ್ಟವಾಗುವದೆಂದೂ ನಾನೂ, ನನ್ನಂತೆ ಇತರರೂ ಭಾವಿಸಿದ್ದರು. ಸ್ವತಂತ್ರ ಭಾರತದ ಸುದೈವದಿಂದ ನಮ್ಮ ಆ ಭಾವನೆಗಳೂ ಅಪೇಕ್ಷೆಗಳೂ ಸುಳ್ಳಾಗಿ ಕಳೆದ ಶುಕ್ರವಾರ ಸಂಜೆ ಸೂರ್ಯಾಸ್ತಸಮಯದಲ್ಲಿ ಇಡೀ ಹೈದರಾಬಾದ ಸಂಸ್ಥಾನವು ಹಿಂದುಸ್ಥಾನ ಸರಕಾರದ ಪರವಾಗಿ ಹಿಂದೀ ಸೇನಾಧಿನಾಯಕರ ಸ್ವಾಧೀನವಾಯಿತೆಂದು ತಿಳಿಸಲು ನನಗೆ ಅತ್ಯಾನಂದವಾಗುತ್ತಿದೆ.

ಹೈದರಾಬಾದದಲ್ಲಿ ರಝಾಕಾರರು ನಿಜಾಮ ಸರಕಾರದ ಪ್ರತ್ಯಕ್ಷ ಸಹಾಯದಿಂದ ಇಲ್ಲದಿದ್ದರೂ ಮೂಕ ಸಮ್ಮತಿಯಿಂದ ಹಾಕುತ್ತಿದ್ದ ಹಾವಳಿಯನ್ನೂ, ಅವರು ನಡಿಸಿದ್ದ ಕೊಲೆ-ಕೊಳ್ಳೆ-ಸುಲಿಗೆಗಳನ್ನೂ ಸ್ತ್ರೀಯರ ಮೇಲೆ ಆಗುತ್ತಿದ್ದ ಅತ್ಯಾಚಾರಗಳನ್ನೂ, ನಿಜಾಮ ಸರಕಾರವು ಹಿಂದ-ಹಿತಶತ್ರುಗಳೊಡನೆ ನಡಿಸಿದ್ದ ಒಳಸಂಚುಗಳನ್ನೂ ಕಾರಸ್ಥಾನಗಳನ್ನೂ ಕಂಡು ಯಾ ಕೇಳಿ ಬೇಸತ್ತು, ಹೋದ ಪ್ರಕ್ಷುಬ್ಧ ಹಿಂದುಸ್ಥಾನವು, ಹಿಂದ ಸರಕಾರವು ವಿನಾಕಾರಣ ಮಾಡುತ್ತ ಕುಳಿತಿದ್ದುದು ಅನುಚಿತವೆಂತಲೂ ಅಸಮರ್ಥತೆಯ ದ್ಯೋತಕವೆಂತಲೂ ಹಗಲಿರುಳು ದೂರಲಾರಂಭಿಸಿತ್ತು. ಕಳೆದ ತಿಂಗಳಲ್ಲಿ ನಡೆದ ಮಧ್ಯವರ್ತಿ ಕಾನೂನ ಮಂಡಳದಲ್ಲಿಯೂ ಈ ಪ್ರಕ್ಷೋಭದ ಪ್ರತಿಧ್ವನಿಯ ಕೇಳಬರಲಾರಂಭಿಸಿ ದಿನೇ ದಿನೇ ಹೆಚ್ಚುತ್ತಿರುವ ಈ ಜನ ಸಂತಾಪವನ್ನು ಶಾಂತಗೊಳಿಸಿ, ಧೈರ್ಯ ಕೊಡುವದಕ್ಕಾಗಿ ಕೊನೆಗೆ ಹಿಂದ ಸರಕಾರದ ಪ್ರಧಾನ ಮಂತ್ರಿ ಪಂ| ಜವಾಹರಲಾಲರು ಕಾನೂನ ಮಂಡಳದ ಅಧಿವೇಶನದ ಅವಧಿಯನ್ನು ಸಪ್ಟಂಬರ ತಾ ೭ ರ ವರೆಗೆ ಬೆಳಸಿ, ಅಂದು ಕಾಶ್ಮೀರ ಮತ್ತು ಹೈದರಾಬಾದ ಪ್ರಕರಣಗಳ ಸಂಬಂಧದಲ್ಲಿ ಹಿಂದ ಸರಕಾರದ ಧೋರಣೆ ಏನುಂಟೆಂಬುದನ್ನು ವಿಸ್ತಾರವಾಗಿ ಮಂಡಳದೆದುರು ವಿವರಿಸಿದರು ಹೈದರಾಬಾದವೊಳಗಿನ ಹಾವಳಿಯು ಸಹನೆಯ ಎಲ್ಲ ಎಲ್ಲೆಗಳನ್ನು ದಾಟಿಹೋಗಿರುತ್ತದೆಂಬುದನ್ನು ಅವರು ತಮ್ಮ ಭಾಷಣದಲ್ಲಿ ಪ್ರಾಂಜಲತನದಿಂದ ಒಪ್ಪಿಕೊಂಡು, ಹೈದರಾಬಾದದಲ್ಲಿ ಶಾಂತಿ-ಸುರಕ್ಷಿತತೆಗಳನ್ನು ಪುನಃ ನೆಲೆಗೊಳಿಸುವದಕ್ಕಾಗಿ ಹಿಂದಿನಂತೆ ಸಿಕಂದರಾಬಾದದಲ್ಲಿ ಹಿಂದೀ ಸೈನ್ಯವನ್ನು ಇಡಬೇಕೆಂದು ಹಿಂದ ಸರಕಾರವು ನಿರ್ಧರಿಸಿರುತ್ತದೆಂದೂ, ಹೈದರಾಬಾದದ ಸ್ವತಂತ್ರಾಸಕ್ತ ಪ್ರಜೆಗಳ ರಕ್ಷಣೆಯ ಬಗ್ಗೆ ಅವಶ್ಯವುಳ್ಳ ಎಲ್ಲ ಉಪಾಯಗಳನ್ನು ಯೋಜಿಸಲು ನಿರ್ಧರಿಸಿರುತ್ತದೆಂದೂ ಅವರು ಆಶ್ವಾಸನೆ ಕೊಟ್ಟರು ಈ ಆಶ್ವಾಸನೆಯನ್ನು ಕೊಟ್ಟು ಹಿಂದ ಸರಕಾರವು ಸ್ವಸ್ಥ ಕೂಡ್ರಲಿಲ್ಲ ತನ್ನ ನಿರ್ಧಾರವನ್ನು ತಂತಿಯಿಂದ ನಿಜಾಮರಿಗೆ ತಿಳಿಸಿತು. ಆದರೆ "ವಿನಾಶ ಕಾಲೇ ವಿಪರೀತ ಬುದ್ಧಿ"ಗೀಡಾದ ನಿಜಾಮರಿಗೆ ಹಿಂದುಸ್ಥಾನ ಸರಕಾರದ ಬುದ್ಧಿಮಾತುಗಳಿಗೆ ಕಿವಿಗೊಡುವ ಅಥವಾ ಮನ್ನಣೆ ಕೊಡುವ ಸುವಿಚಾರವೆಲ್ಲಿಂದ ಬರಬೇಕು? ಹಿಂದುಸ್ಥಾನ ಸರಕಾರದ ಸೂಚನೆಯನ್ನು ಅವರು ನಿರಾಕರಿಸಿದರು! ಆಗ ಹಿಂದ ಸರಕಾರವು ತಡ ಮಾಡದೆ ಹೈದರಾಬಾದದ ಮೇಲೆ ದಂಡೆತ್ತಿ ಹೋಗಿ ಸಿಕಂದರಾಬಾದವನ್ನು—ಈ ನಗರವು ಹೈದರಾಬಾದಕ್ಕೆ ತೀರ ಸಮೀಪ ಪೂರ್ವದಲ್ಲಿರುತ್ತದೆಂಬುದನ್ನೂ, ಹಿಂದೆ ಅಲ್ಲಿ ಬ್ರಿಟಿಶರ ಹಿಂದೀ ಸೈನ್ಯದಾಣ್ಯವಿತ್ತೆಂಬುದನ್ನೂ, ಕಳೆದ ವರ್ಷ ನಿಜಾಮರೊಡನೆ "ಯಥಾ ಸ್ಥಿತಿ ಒಪ್ಪಂದವಾದ ನಂತರ ಆ ಒಪ್ಪಂದಕ್ಕನುಸಾರವಾಗಿ ಇದೇ ಕಳೆದ ಜನವರಿಯಲ್ಲಿ ಹಿಂದ ಸರಕಾರವು ಆ ಸೈನ್ಯವನ್ನು ಹಿಂತೆಗೆದುಕೊಂಡಿತ್ತೆಂಬುದನ್ನೂ ಓದುಗರು ನೆನಪಿನಲ್ಲಿಟ್ಟುಕೊಳ್ಳಬೇಕು—ಆಕ್ರಮಿಸಲು ಮತ್ತು ಹಾದಿಯಲ್ಲಿ ಅಡ್ಡ ಬರುವವರನ್ನು ತುಂಡರಿಸಲು ದಕ್ಷಿಣ ಹಿಂದುಸ್ಥಾನದಲ್ಲಿರುವ ತನ್ನ ಸೈನ್ಯದಲಗಳಿಗೆ ಆಜ್ಞೆಯನ್ನಿತ್ತಿತು ಈ ಎಲ್ಲ ಸೈನ್ಯದಲಗಳ ಅಧಿಪತ್ಯವು ನವಾನಗರ ಸಂಸ್ಥಾನದ ರಾಜಮನೆತನದ ಲೆಪ್ಟನಂಟ ಜನರಲ್ಲ ಮಹಾರಾಜ ರಾಜೇಂದ್ರ ಸಿಂಹಜೀ ಇವರ ಕಡೆಗಿತ್ತು. ಇವರು ಕಳೆದ ಮಹಾಯುದ್ಧದ ಕಾಲಕ್ಕೆ ಉತ್ತರ ಆಫ್ರಿಕೆಯ ರಣರಂಗದಲ್ಲಿ ಜರ್ಮನ ಮತ್ತು ಇಟಾಲಿಯ ಸೈನಿಕರೊಡನೆ ಯಶಸ್ವಿಯಾಗಿ ಹೋರಾಡಿ ಕೀರ್ತಿ ಸಂಪಾದಿಸಿದವರಾಗಿದ್ದಾರೆ. ಮೇಜರ ಜನರಲ್ಲ ಚೌಧರಿ, ಮೇ|| ಜ|| ಅಜಿತ ರುದ್ರ, ಮೇ|| ಜ|| ಬ್ರಾರ, ಬ್ರಿಗೇಡಿಯರ ಶಿವದತ್ತ ಸಿಂಗ ಮತ್ತು ವಿಮಾನ-ದಲಪತಿಗಳಾದ ಏರ-ವ್ಹಾಯ್ಸ ಮಾರ್ಶಲ ಮುಖರ್ಜಿ ಇವರಂತಹ ನುರಿತ ವೀರರು ಬೇರೆ ಬೇರೆ ರಂಗಗಳಲ್ಲಿ ನಿಯೋಜಿತರಾಗಿದ್ದರು ಕಳೆದ ಸೋಮವಾರ ಮುಂಜಾನೆ ೪ ಘಂಟೆಗೆ ಈ ದಲಪತಿಗಳು ತಮ್ಮ ತಮ್ಮ ಸೈನ್ಯಗಳೊಡನೆ ಹಿಂದ ಗಡಿಯನ್ನು ದಾಟಿ ಹೈದರಾಬಾದ ಸಂಸ್ಥಾನದ ಮೇಲೆ ದಂಡೆತ್ತಿ ಹೋದರು ಈಶಾನ್ಯದಲ್ಲಿ ಚಾಂದಾ ಕಡೆಯಿಂದ, ವಾಯುವ್ಯದಲ್ಲಿ ದೌಲತಾಬಾದ ಜಿಲ್ಹೆಯ ಮೇಲೆ, ಪಶ್ಚಿಮದಲ್ಲಿ ಸೊಲ್ಲಾಪುರದಿಂದ ಹಾಗೂ ದಕ್ಷಿಣದಲ್ಲಿ

(ಮುಂದೆ ೩ನೇ ಪುಟ ನೋಡಿರಿ)

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ
ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ ೨೭-೭-೧೯೪೮

ಕೇ ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಪ್ರಾರಂಭದಲ್ಲಿ ಏನೇನೂ ಮಳೆಯಾಗಿದ್ದಿಲ್ಲ ಆದರೆ ಶುಕ್ರವಾರ ಸಂಜೆಯಾದ ಮೇಲೆ ಒಂದು ಅರ್ಧ ತಾಸು ಚಲೋ ಮಳೆ ಸರಿಯಿತು ಆ ನಂತರ ಆಗಾಗ ತುಸು ತುಸು ಮಳೆಯಾಗುತ್ತಿದೆ ಮೇಘರಾಜನು ಹೀಗೆಯೇ ಕೃಪೆ ಮಾಡಬೇಕೆಂದು ಒಕ್ಕಲಿಗರು ಹಾರೈಸುತ್ತಾರೆ

ಕಳೆದ ಮಂಗಳವಾರ ಸಂಜೆ ನಗರಾಧ್ಯಕ್ಷ ಡಾ॥ ಬಾ. ವ್ಹಾ ಕಪ್ಪ ಪೈ ಇವರು ಈ ಊರಲ್ಲಿ ಒಂದು "ವಿಮೆನ್ಸ ಹೋಮ್" ಯಾನೆ ಸ್ತ್ರೀ ಸಂರಕ್ಷಿತ ಆಶ್ರಮ ಸ್ಥಾಪಿಸುವ ಆಲೋಚನೆ ಮಾಡುವದಕ್ಕಾಗಿ ಊರ ಪ್ರತಿಷ್ಠಿತರದೊಂದು ಸಭೆಯನ್ನು ನಗರ ಸಭೆಯ ಸಭಾ ಮಂದಿರದಲ್ಲಿ ಕರೆದಿದ್ದರು ಸುಮಾರು ೫೦ ಗೃಹಸ್ಥರು - ಕೆಲವು ಮಂದಿ ಭಗಿನಿಯರು ಕೂಡ—ಸಭೆಗೆ ಬಂದಿದ್ದರು ಮಾಮಲೇದಾರ ರಾ॥ ಸಬನೀಸ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ನಗರಾಧ್ಯಕ್ಷರ ಮತ್ತು ಸಭಾಧ್ಯಕ್ಷರ ಪ್ರಾಸ್ತಾವಿಕ ಭಾಷಣಗಳ ಬಳಿಕ ನಂತರ ಕಾರವಾರದೊಳಗಿನ ಹಾಕ್ಟರ ಸುಧಾರಣೆಯ ಆಶ್ರಮದ ಸಂಚಾಲಕರಾದ ರಾ॥ ಬಿ ಎನ್ ಪುರಾಣಿಕ ಇವರು ಆಶ್ರಮದ ಮಹತ್ವವನ್ನೂ ಉಪಯುಕ್ತತೆಯನ್ನೂ ಸೋದಾಹರಣವಾಗಿ ತಿಳಿಸಿ ಹೇಳಿದರು ಮುಂಬಯಿಯ ಮಕ್ಕಳ ಕಾನೂನು (ಚಿಲ್ಡ್ರನ್ಸ್ ಎಕ್ಟ) ದಲ್ಲಿ ಈ ಆಶ್ರಮದ ಯೋಜನೆಯೆಂದು ಕೊಡಲ್ಪಟ್ಟಿದೆ ಇಂತಹ ಆಶ್ರಮಗಳು ಅನಾಥ, ಬಿಕ್ಕೆ ಬೇಡುವ, ಯೋಗ್ಯ ಸಂರಕ್ಷಕರಿಲ್ಲದ, ಅನೀತಿಯ ಮಾರ್ಗಕ್ಕೆ ಹೋಗಲುಳ್ಳ ಗಂಡ ಹೆಣ್ಣು ಮಕ್ಕಳನ್ನು ಕಾಪಾಡಿ ಸದ್ವರ್ತನಕ್ಕೆ ಹಚ್ಚುತ್ತವೆಯೆಂದೂ ಸಮಾಜಕ್ಕೆ ಅದರಿಂದ ಹಿತವುಂಟೆಂದೂ ಅವರು ವಿವರಿಸಿದರು. ವೇಶ್ಯಾವೃತ್ತಿಯ ನರಕದಲ್ಲಿ ಬೀಳತಕ್ಕವರಾದ ಹೆಣ್ಣುಮಕ್ಕಳನ್ನು ಆ ಮಾರ್ಗದಿಂದ ಪರಾವರ್ತಿಸಿ, ಅವರನ್ನು ಮದುವೆ ಮಾಡಿ ಕೊಡುವ ವ್ಯವಸ್ಥೆಯನ್ನೂ ಈ ಆಶ್ರಮಗಳು ಮಾಡಬಹುದು. ದುರ್ಮಾರ್ಗಕ್ಕೆ ಬಿದ್ದ ಮತ್ತು ಪ್ರೌಢ ಪ್ರಾಯದಲ್ಲಿ ಗಂಡ-ಪುಂಡರಾಗಲಿ ಗುನ್ಹೆಗಾರರಾಗಲಿ ಆಗಬಹುದಾದ ಚಿಕ್ಕ ಮಕ್ಕಳನ್ನು ಸನ್ಮಾರ್ಗಕ್ಕೆ ಹಚ್ಚುವ ಯೋಜನೆ ಈ ಆಶ್ರಮಗಳಲ್ಲಿದೆ ಇಂತಹ ರಾಷ್ಟ್ರೋಪಕಾರ ಮತ್ತು ಸಮಾಜೋದ್ಧಾರದ ಕಾರ್ಯಕ್ಕೆ ಸರಕಾರದ ಸಹಾಯ ಮಾಡಬೇಕು. ಇಂತಹ ಆಶ್ರಮಗಳ ವೆಚ್ಚದಲ್ಲಿ ಸಾಮಾನ್ಯವಾಗಿ ಅರ್ಧಾಂಶವನ್ನು ಸರಕಾರವು ಸಹಿಸುತ್ತಿದೆ, ಉಳಿದ ಅರ್ಧಾಂಶವನ್ನು ಸ್ಥಾನಿಕ ಸಂಸ್ಥೆಗಳೂ ದಾನಿಗಳೂ ಕೊಡಬೇಕು ಇಂತಹ ಧನಸಹಾಯ, ಅನುಕೂಲ ಇದ್ದವರ ಮತ್ತು ಸಾರ್ವಜನಿಕರ ಸಹಾಯ ಇವೇ ಆಶ್ರಮ-ಸ್ಥಾಪನೆಗೆ ಅಡಿಗಲ್ಲುಗಳು ಈ ಊರಲ್ಲೊಂದು ಆಶ್ರಮ ತೆರೆಯಬೇಕಾದರೆ ಅದಕ್ಕೆ ನೂರೈವತ್ತರೊಳಗಿನ ೫೦೦೦ದಷ್ಟು ನಿಧಿಯ ಸ್ಥಾಪನೆಯೂ ಕೂಡಿಸಬೇಕಾಗುವದು ಅಷ್ಟು ನಿಧಿಯನ್ನು ಕುಮಟೆಯಂತಹ ವ್ಯಾಪಾರದ ಕೇಂದ್ರದಲ್ಲಿ ಕೂಡಿಸುವದು ಕಷ್ಟವಾಗುವದಿಲ್ಲ ಎಂದು ಮುಂತಾಗಿ ರಾ॥ ಪುರಾಣಿಕರು ಹೇಳಿದ ಮೇಲೆ ೧೨ ಸದಸ್ಯರುಳ್ಳ ಆಶ್ರಮ-ಸಮಿತಿಯನ್ನು ನಿಯೋಜಿಸಲಾಯಿತು ಮಾಮಲೇದಾರರು ಸಮಿತಿಯ ಅಧ್ಯಕ್ಷರಿರುತ್ತಾರೆ ಈ ಸಮಿತಿಯು ನಿಧಿಸಂಗ್ರಹ ಮಾಡಿ ಆಶ್ರಮಸ್ಥಾಪನೆಯ ಹಾಗೂ ಅದರ ಚಾಲನೆಯ ವ್ಯವಸ್ಥೆ ಮಾಡತಕ್ಕದ್ದೆಂದು ಗೊತ್ತಾಗಿದೆ.

ಕಳೆದ ಸೋಮವಾರ ಹಿಂದೀ ಸ್ವೈಸ್ವ ನ್ಯಾಯಾಲಯದ ಸಂಸ್ಥಾನದ ವಿರುದ್ಧ ಪಾದಯಾತ್ರೆಯನ್ನು ಪ್ರಾರಂಭಿಸುತ್ತಲೇ ಇನ್ನಿತರ ಕಡೆಯಂತೆ ಇಲ್ಲಿಯ ಗೋಕರ್ಣದಲ್ಲೂ ಶ್ರೀ ಪ್ರೊ. ಕೋಡಿನ ೧೪ನೇ ಕಲಮಿನನ್ವಯ ಜಿಲ್ಹಾ ಮೆಜಿಸ್ಟ್ರೇಟರು ಒಂದು ಸಾರ್ವಜನಿಕ ಹುಕುಮು ಜಾರಿ ಮಾಡಿ, ಜಿಲ್ಹಾಧಿಪರ ಇಲ್ಲವೆ ಜಿಲ್ಹಾ ಪೋಲೀಸ ಸಾಹೇಬರ ಅಪ್ಪಣೆಯ ವಿನಹ ಮೆರವಣಿಗೆಗಳನ್ನು ಹೊರಡಿಸಕೂಡದು, ಸಾರ್ವಜನಿಕ ಸಭೆಗಳನ್ನು ಕೂಡಿಸಕೂಡದು, ಪತ್ರಿಕಾಪತ್ರಗಳಿಗೆ ಹಿರುಗಕೂಡದು, ಆಕ್ಷೇಪ ಹೆಚ್ಚಿಗೆ ಜನರು ಗುಂಪುಗಟ್ಟಿಕೊಂಡು ತಿರುಗಾಡಕೂಡದು ಎಂದು ಮುಂತಾಗಿ ನಿರ್ಬಂಧಗಳನ್ನು ಹಾಕಿದ್ದಾರೆ ಈ ನಿರ್ಬಂಧದ ಮೂಲಕ ನೇಹದ ಅನಂತ ೧೪ನೇ ದಿನ ಪಾಡಿಗೆಯಂತೆ ವಿಷ್ಣು ತೀರ್ಥದಿಂದ ಶ್ರೀಮಠದ ಯಮುನೆಯ ಕಳಶವನ್ನು ಪಲ್ಲಕ್ಕಿಯಲ್ಲಿಟ್ಟು ವಾದ್ಯವೃಂದದಿಂದ ತರಬೇಕೆ ಜಿಲ್ಹಾಧಿಕಾರಿಗಳ ಅಪ್ಪಣೆ ತರಬೇಕೇ? ಇಂತಹ ನಿರುಪದ್ರವಿ ಉತ್ಸವ ಮೆರವಣಿಗೆಗಳಿಗೆ ಇಲ್ಲವೆ ಜನರನ್ನು ಲೀನಗೊಳಿಸ ಸುಲಭವಾಗಿ ಅಪ್ಪಣೆ ಸಿಗುವಂತೆ ಅಪ್ಪಣೆ ಕೊಡುವ ಅಧಿಕಾರವನ್ನು ತಾಲೂಕ ಅಧಿಕಾರಿಗಳಿಗೆ ಕೊಡುವದು ಏನುಚಿತವಲ್ಲವೇ ?

ಕುಮಟಾ ಮ್ಯುನಿಸಿಪಾಲಿಟಿಯವರು ತಮ್ಮ ಪಾಲಿನ ಹಣ ಕೊಡದೆ ಇಟ್ಟು ತಮ್ಮ ಕ್ಷೇತ್ರದಲ್ಲಿಯ ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ಜಾರಿ ಮಾಡಲು ಜಿಲ್ಹಾ ಲೋಕಲ್ ಬೋರ್ಡಿಗೆ ತಿಳಿಸಿದ್ದಾರೆಂದು ತಿಳಿಯುತ್ತದೆ ಹೆಣ್ಣು ಮಕ್ಕಳ ಪೇಟೆಶಾಲೆಯ ಜೀರ್ಣೋದ್ಧಾರ ಮಾಡುವ ಬಗ್ಗೆ ಬೋರ್ಡಿಗೆ ಮ್ಯುನಿಸಿಪಾಲಿಟಿಯವರು ಬರೆದು ಹಾಕಿದ್ದಾರಂತೆ ಆ ಕಟ್ಟಡದ ವಿಷಯನಲ್ಲಿಯೂ ಮ್ಯುನಿಸಿಪಾಲಿಟಿಯವರು ಅರ್ಧ ಪಾಲು ಕೊಡಬೇಕಾಗುತ್ತದೆ

ಅಂಕೋಲೆಯ ಭೂಮಾಲೀಕರ ಸಂಘದಂತೆ ಇಲ್ಲಿಯ ಭೂಮಾಲೀಕರ ಸಂಘದವರೂ ಸರ್ಕಾರದ ಪ್ರಭುತ್ವಗಳಿಗೆ ಕೊಂಕಣವಾದಿ, ನಾ ೦ಬಯಿ ಸರಕಾರದ ಒಕ್ಕಲುತನದ ಸುಧಾರಣೆಯ ಯೋಜನೆಗಳಿಂದ ಅವ್ಯವಸ್ಥೆಯಾಗಿದೆ, ಭೂಮಾಲೀಕರ ಹಕ್ಕುಗಳಿಗೆ ಧಕ್ಕೆ ಮುಟ್ಟುಗಿಸುತ್ತವೆಂದೂ, ಇಂತಹ ಕ್ರಾಂತಿಕಾರಿ ಯೋಜನೆಗಳನ್ನು ಕೈಕೊಳ್ಳುವ ಇದು ಕಾಲ ಸಮಯವಲ್ಲದಿದ್ದರೂ " ಅಧಿಕಾರ-ಮತ್ತ " ರಂತಾಯಿ ಮಂತ್ರಿ ಮಾನ್ಯ ಮುರಾರಜಿಯವರು ತಮ್ಮ ಹೊಸ ಸಾಹಸ ವೆಯನ್ನು ಗಾಬರಿಯಿಂದ ಮಂಜೂರ ಮಾಡಿಕೊಳ್ಳಲು ಹೊರಟಿರುವರೆಂದೂ ನನೂದಿಸಿ, ಈ ಮಂತ್ರಿಗಳನ್ನು ನಿಯಂತ್ರಿಸಿ ಒಕ್ಕಲುತನದ ಶಾಸನಾತ್ಮಕ ಕಾರ್ಯಾಚರಣೆ ತಡೆಹಾಕಬೇಕೆಂದು ವಿನ್ನವಿಸಿಕೊಂಡಿದ್ದಾರೆ

ಯೋಗ್ಯ ದರದ ಅಂಗಡಿಗಳಲ್ಲಿ ಈಗ ವಾರದ ಸೀಧೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ ಆಯಾ ವಾರದ ಸೀಧೆಯನ್ನು ಆಯಾಯ ವಾರದಲ್ಲೇ ಒಯ್ಯಬೇಕಂತೆ ತಪ್ಪಿದರೆ ಆ ವಾರದ ಸೀಧೆ ಮುಂದೆ ಸಿಗಲಿಕ್ಕಿಲ್ಲ.

ಕುಮಟೆಯ ಜವಳಿ ವ್ಯಾಪಾರಸ್ಥರೂ "ಕುಮಟಾ ಕ್ಲಾಥ ಮರ್ಚಂಟ್ಸ ಎಸೋಸಿಯೇಶನ್" ಎಂಬ ಹೆಸರಿಟ್ಟು ತಮ್ಮದೊಂದು ಸಂಘ ಸ್ಥಾಪಿಸಿದ್ದಾರೆ. ಊರೊಳಗಿನ ಹದಿನಾಲ್ಕು ಜವಳಿ ಅಂಗಡಿಕಾರರು ಅದರ ಸದಸ್ಯರಾಗಿದ್ದಾರೆ. ಜನಾಬ ಹಾಜಿ ಅಬ್ದುಲ ಹುಸೆನಸಾಹೇಬ ಸಿದ್ದಿಕಿ ಇವರು ಸಂಘದ ಅಧ್ಯಕ್ಷರಾಗಿಯೂ ರಾ॥ ಭಿಕ್ಕು ಶೈಣೈ ರಾಮಕರ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಧಾರೇಶ್ವರದೊಳಗಿನ ಕರ್ನಾಟಕ ಸರಕಾರಿ ಶಾಲೆಯ ರಾ ಕಳೆದ ಜುಲಾಯಿ ತಿಂಗಳ ಪ್ರಾರಂಭಕ್ಕೆ ನಡೆದ "ಡಿಪ್ಲೋಮಾ ಸರ್ಟಿಫಿಕೇಟ" ಪರೀಕ್ಷೆಗೆ ಕೂತ ೨೫ರ ಹಿಯಲ್ಲಿ ೧೭ ಮಂದಿ ಉತ್ತೀರ್ಣರಾಗಿದ್ದಾರೆ ಆದರಾ॥ ಎಸ್ ಬಿ ಗಾಂವಕಾರ ಮತ್ತು ಟಿ ಆರ್, ಕಾಇವರಿದ್ದರು

ಹೊನ್ನಾವರ—(ತಾ ೧೯-೯-೪೪) ಕಳೆದ ಹೊನ್ನಾವರ ತಾಲೂಕ ಖಾನಾವಳಿ ಸಂಘದವರ, ಸೇ, ಈ ತೆಲಗಿನ ಆಠಮಾರ ಒಂದು ಗೊತ್ತುವಳಿಯನ್ನು ಮಾಡಿರುತ್ತಾರೆ, ಸದ್ಯದ ಮುಂಬಯಿ ಮಂತ್ರಿಮಂಡಳ, ಮಾಡಿದ ರಹವಾಸಕ್ಕಾಗಿ ಕಾರ್ಯ ಅನ್ವಯಿಸ್ಸಿ. ಒಕ್ಕಲು ಶಾಸನಾಸಂಗತ ಕೆಲವು ಅಪಾಯಕರ ಶಾಸನಾಗುವ ಮಾಡಿ ಅದು ಸರಾಜನರೊಳಗೆ ಒಡಕು, ವರ್ಗಕಲಹ ಇ. ತಾದ ಅನಿಷ್ಟ ಪ್ರವೃತ್ತಿಗಳನ್ನು ಹುಟ್ಟಿಸಿರುತ್ತದೆ ಹಾಗ್ಗೆ ಜುಮಾನಯ ಘೋರತರವಾಗಿ ಖಾನಾವಳಿಯನ್ನು ಸ ಗೊಳಿಸುವ ಸಂಕಲ್ಪ ಹಾಕಿದ ಮಾಡಿರುತ್ತದ್ದರಿಂದ ಸ ಹೊಂದುವ ಖಾನಾವಳಿಯರಿಗೆ ನ್ಯಾಯ್ಯ ಪರಿಹಾರ ಕೊಡಬೇಕಾಗುವದೆಂದು ಖಂಡಿತವಾಗಿ ಹೇಳಿ ಆ ಶಾಸನ ಮುಂಬಯಿ ಸರಕಾರವು ಸಂಪೂರ್ಣ ಮರೆತು, ಸ. ಪರಿಹಾರ ಕೊಡದೆ ಜನರನ್ನು ಹುಳುಗಿಸಬಯಸುತ್ತದೆ ಈ ಜನಾಪಕಗಳು ರಾಷ್ಟ್ರಸ್ವಾತಂತ್ರ್ಯ ಸಂಪಾದಿಸಬೇಕೆ ಒಂದೇ ಒಂದು ತತ್ವದಿಂದ ನಡೆದಿದ್ದವು. ಆ ಸ್ವಾತಂತ್ರ್ಯ ಎಂದು ಹಕ್ಕುಗಳವಾಗಿರುವದರಿಂದ ಈಗಿನ ಕಾನೂನ ಗಳಿಗಲಿ ಮಂತ್ರಿ ಮಂಡಳಗಳಿಗಲಿ ಅನ್ಯಾ ಆತ್ಮೀಯತ್ವ ಯಿಲ್ಲದಿರುವ ಸದ್ಯದ ಮುಂಬಯಿ ಮಂತ್ರಿಮಂಡಳದ ತನ್ನ ಸ್ವಚ್ಛಂದ ವರ್ತನೆಯಿಂದ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದೆ ಇಂತಹ ಸರಕಾರವು ಹೊಸ ಒಕ್ಕಲು...

Students' Book Depot, Ltd
Ankola, N. Kanara.

ಜಾಹೀರ ಪ್ರಕಟನೆ.

ಮುಂಬಯಿ ಪ್ರಾಂತದ ವಿದ್ಯಾ ಖಾತೆಯವರಿಂದ ಪ್ರಕಟವಾದ ಪುಸ್ತಕಗಳ ಬಗ್ಗೆ ನಾವು ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟಕಳ (ಪೇಟೆ) ತಾಲೂಕಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ "ಕನ್ನಡ ವಾಚನ ಮಾಲೆಯ ಮೊದಲು" ಓದು ಇದೀಗಲೇ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೦-೨-೦ ಈ ಬೆಲೆಗೆ ನಮ್ಮಲ್ಲಿ ಹಾಗೂ ನಮ್ಮ ಈ ಕೆಳಗಿನ ಅಧಿಕೃತ ಏಜಂಟರಲ್ಲಿ ವಿಕ್ರಿಗೆ ಸಿಗುವದು ಯಾರೂ ಹೆಚ್ಚಿಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ.

ಏಜಂಟರು:- (೧) ಮೆ॥ ಫೋರ್ಟಪೇಟ ಮೆಡಿಕಲ್ ಸ್ಟೋರ್‍ಸ್ ಗೋಕರ್ಣ. (೨) ಮೆ॥ ರಾಮಕೃಷ್ಣ ಗೋವಿಂದ ಭಟ್ ಕುಮಟಾ. (೩) ಮೆ॥ ಶಾಮಕ ಫಾರ್ಮಸೀಜ ಎಂಡ ಸ್ಟೋರ್‍ಸ್, ಹೊನ್ನಾವರ. (೪) ಮೆ॥ ರಾಮನಾಥ ವಾ. ನ ಶಾನಭಾಗ್, ಭಟಕಳ.

K. R Hegde,
Managing Director.

ಬಿರ್ಲಾ ಬ್ರದರ್ಸ ಲಿ., ಕಲಕತ್ತಾ

ಇವರ ಸುಪ್ರಸಿದ್ಧ

ಜಯಶ್ರೀಯ ಉತ್ತಮ ಮಿಶ್ರಿತ **ಚಹಾ**

ಫೆನ್ನಿಂಗ, ಲೀಫ್ ಮತ್ತು ಡಸ್ಟ

ಚಿಲ್ಲರೆಯಾಗಿ ಹಾಗೂ ಪೆಕೆಟ್ಟುಗಳಲ್ಲಿ ದೊರೆಯುತ್ತವೆ.

ವ್ಯಾಪಾರಿ ಮಾಹಿತಿ ಬಗ್ಗೆ ಬರೆಯಿರಿ:- **L. G. MAHALE.**
Merchant & Agent,
ANKOLA (N. K.)

[illegible]ಯುಂತಹ [illegible] ಕಾನಡಾದವರನ್ನು [illegible] ಹೊರಟಿದ್ದ [illegible] ಅಲ್ಲಿಂದ ಕೂಡಲೇ [illegible]ಮಾಡುತ್ತಿದ್ದು, ಕಾನಡಾದ ಮುಂದಾಳುಗಳನ್ನು ಬಿಡಬೇಕು, ಹೊಸ ಚುನಾವಣೆಗಳನ್ನು ನಡೆಯಿಸಬೇಕು [illegible] ಮುಂಬಯಿ ಮಂತ್ರಿ ಮಂಡಳಕ್ಕೆ ಆಗ್ರಹಿಸುತ್ತಿ[illegible]

[illegible] ೫ ೧೨ನೇಗೆ [illegible] ಶ್ರೀ ಗಣೇಶ [illegible]ಲಯದಲ್ಲಿ [illegible] ಭಾಷಣ[illegible] ಶ್ರೀ ದೇಶಪಾಂಡೆ ವಕೀಲರ ಅಧ್ಯಕ್ಷತೆಯಲ್ಲಿ ಸಭೆ [illegible], ಒಕ್ಕಲತನದ ಕಾನಡಾದಿಂದ ಒದಗಬಹುದ [illegible]ಗಳನ್ನು ವಿವರಿಸಿದರು [illegible] ನಿರ್ಮಾಣ ಮಾಡುವಾಗ [illegible] [illegible] ಪ್ರತಿಯೊಂದು ಭಾಗದ [illegible] ಬೆಳೆಯನ್ನು ನಿರ್ಧರಿಸಬೇಕೆಂದು [illegible] ಅಭಿಮಾನದವರು ಮಾಡಿದ [illegible] ಭಾಗಗಳಲ್ಲಿ [illegible] [illegible] ಲಕ್ಷದಲ್ಲಿ [illegible] ಎಂದು [illegible] ಠರಾವು [illegible] ಅಸ್ತಿತ್ವ [illegible] ಒಕ್ಕಲತನದ [illegible] [illegible] ಮಾಡಬೇಕೆಂತಲೂ [illegible] ಠರಾವು [illegible]

[illegible] ವಿವಿಧ [illegible] ಸಂಘದವರು ಯೋಗ್ಯ [illegible] ಅಂಗಡಿಯನ್ನು ತೆರೆಯಲಿಕ್ಕೆ [illegible] "ವೃತ್ತ" ದಲ್ಲಿ ಪ್ರಕಟವಾದದ್ದನ್ನು ಅನುಲಕ್ಷಿಸಿ, [illegible] ಸಂಘದ [illegible] ಅವರು ಸ್ವತಂತ್ರವಾಗಿ ಬೇರೆಯೆಂದು, [illegible] [illegible]ಯನ್ನು [illegible], ಅಂಗಡಿಯನ್ನು ಎತ್ತ[illegible], [illegible]ದವರು ಅಯೋಗ್ಯರೆಂದು ಹೇಳಿಸಿಕೊಳ್ಳುತ್ತಿರೆಂದೂ [illegible], ಜಲವಳ್ಳಿ ಗ್ರಾಮಗಳ ಜನರು ಬರೆಯುತ್ತಾರೆ

ತಾ ೧೩-೯-೪೮ರ "ವೃತ್ತ" ದಲ್ಲಿ ಪ್ರಕಟವಾದ [illegible] ಶಾಲೆಯ ಸುದ್ದಿಯು [illegible] ಶಾಲೆಗೆ ಸಂಬಂಧಪಟ್ಟದ್ದಾಗಿರದೆ [illegible] ಶಾಲೆಗೆ ಸಂಬಂಧಪಟ್ಟದ್ದಲ್ಲ.

ಮುರ್ಡೇಶ್ವರ— (ತಾ ೧೮ ೯-೪೮) [illegible] ಇಲ್ಲಿಯ [illegible] ರಾ|| [illegible] ಅವರ [illegible]ದಲ್ಲಿ ಸಭೆ ಸೇರಿದ್ದರು [illegible] ಹಾಗೂ ಹೊಸ ಒಕ್ಕಲತನದ ಕಾನೂನುಗಳ [illegible]ಗಳನ್ನು [illegible] ಚರ್ಚೆಯಾಯಿತು ಒಡೆಯರ [illegible] ಹಕ್ಕುಗಳನ್ನು [illegible] ಹೊಸ ಒಕ್ಕಲತನದ [illegible] ತಿದ್ದುಪಡಿಗಳಾಗಬೇಕಾಗಿ ಸಭೆಯಲ್ಲಿ ಒಂದು ಠರಾವಾಯಿತು [illegible] ಮಂತ್ರಿಗಳ [illegible] ಸಭೆಯಲ್ಲಿ [illegible] [illegible] ಕಾಯ್ದೆಯನ್ನು ತಪ್ಪಿಸಬೇಕೆಂದೂ, ಹೊಸ ಒಕ್ಕಲತನದ ಕಾಯದೆಯು [illegible] [illegible]ರುವದರಿಂದ ಅವರ ಬಗ್ಗೆ [illegible] [illegible] [illegible]ಲವಾಗುವಂತೆ, [illegible] [illegible]-ಸಭೆಗಳನ್ನು [illegible], ಹೊಸ ಚುನಾವಣೆಗಳನ್ನು ನಡೆಸಬೇಕೆಂದೂ [illegible] ಪ್ರಾಂತಾಧಿಕಾರಿಗಳೂ ಮುಖ್ಯ ಮಂತ್ರಿಗಳೂ [illegible]ಯಿಂದ ಬಿನ್ನವಿಸಬೇಕೆಂದು ಸರ್ವಾನುಮತದಿಂದ ಠರಾವಾಯಿತು

ಕಾರವಾರ— (ತಾ. ೧೮-೯-೪೮) ಹಿಂದೆ ಇಲ್ಲಿ [illegible] ಲೀಗ ಶಾಖೆಯ ಕಾರ್ಯದರ್ಶಿಗಳಾಗಿದ್ದ ರಾ|| [illegible] ಇವರನ್ನು [illegible] ರಾ| [illegible] [illegible]ಲರನ್ನು ಬೇರೆ [illegible] ಸಾರ್ವಜನಿಕ ಸುರಕ್ಷಾ ಕಾಯದೆಯನ್ವಯ ಬಂಧಿಸಿ ಇಲ್ಲಿ ಬಂಧನದಲ್ಲಿಟ್ಟಿದ್ದಾರೆ

[illegible]ನಗಿಷ್ಟವಿಲ್ಲದ ಒಬ್ಬಾಕೆಯೊಡನೆ ತನ್ನ ಮಗನು [illegible] [illegible]ಗ ಹೊರಟಿದ್ದು ನೋಡಿ, ಕ್ರೋಧಾವೇಶದಿಂದ ಆತನನ್ನು [illegible] ಕೊಂದುಹಾಕಿದ ಇಲ್ಲಿಯ [illegible] [illegible], [illegible] ವೇದಗೆ (ವಯಸ್ಸು ವರ್ಷ ೬೦) ಸೆಶನ್ಸ ಜಡ್ಜ ರಾ|| [illegible] [illegible] ಶಿಕ್ಷೆ ವಿಧಿಸಿದ್ದಾರೆ.

[illegible] [illegible] ಮುಂದಿರದವರಿಂದ [illegible] [illegible] ವಿಷ್ಣು [illegible] ಇವನಿಗೆ [illegible] [illegible] ೬ ತಿಂಗಳ ಶಿಕ್ಷೆಯನ್ನೂ ೫೦೦ ರೂ ದಂಡವನ್ನೂ ಸೆಶನ್ಸ ಜಡ್ಜರು ಅಪೀಲಿನಲ್ಲಿ ದೃಢಪಡಿಸಿದ್ದಾರೆ

[illegible]ಗೋವಾಗಡಿಯಲ್ಲಿ ಕಳ್ಳತನದಿಂದ ಶಸ್ತ್ರಾಸ್ತ್ರಗಳನ್ನು ಒಯ್ಯುತ್ತಿದ್ದ ಓರ್ವ ಮುದಿಕ್ಕನಿಗೆ ಪೋಲೀಸರು ಸೆರೆಹಿಡಿದು ತಂದಿದ್ದಾರೆ ತಾನು ಕೆಲಸ ಹುಡುಕಲು ಗೋವೆಗೆ

ಪೊರಟಿತ್ತೆಂದೂ ಆ ಮನುಷ್ಯನು ಹೇಳುತ್ತಿದ್ದನಂತೆ

ಸಂಕೇಶ್ವರ— [illegible] ಸಹಕಾರ [illegible] ೧೯೪೭ರಂತೆ ಈ ವರ್ಷ [illegible] [illegible] [illegible] -ಗೆ ಪ್ರತಿ [illegible] [illegible] [illegible] [illegible] ಮಾಡಿದ್ದಾರೆ.

ನಿಜಾಮಶಾಹಿ ಸಮಾಪ್ತವಾಯಿತು,

(೧ನೇ ಪುಟದಿಂದ ಮುಂದುವರಿದುದು)

ಬೀಜವಾಡ ಮತ್ತು ಕರ್ನೂಲದಿಂದ ಹೀಗೆ ೫ ಕಡೆಯಿಂದ ಹಿಂದೀ ಸೇನೆಯು ಹೈದರಾಬಾದ ಸಂಸ್ಥಾನದ ಮೇಲೆ ದಂಡೆತ್ತಿ ಹೋಯಿತು ಎಲ್ಲ ದಳಗಳೂ ಸಿಕಂದರಾಬಾದ ದಿಕ್ಕಿನಿಂದ ಕೂಚು ಮಾಡಲಾರಂಭಿಸಿದವು ಹಿಂದೀ ಸೈನ್ಯಗಳ ಸಕಲ ಸನ್ನಾಹಗಳನ್ನೂ ಪ್ರತಾಪವನ್ನೂ ಕಂಡು ನಿಜಾಮರ ಸೈನಿಕರೂ ರಝಾಕಾರರೂ ಎಲ್ಲೆಲ್ಲೂ ಕಾಲಿಗೆ ಬುದ್ಧಿ ಹೇಳುತ್ತ ಓಡಿಹೋದರು! ಹಿಂದೀ ಸೇನೆಗೆ ಹೇಳತಕ್ಕ ನಿರೋಧ-ಪ್ರತಿರೋಧಗಳು ಯಾವ ರಂಗದಲ್ಲೂ ಬರಲಿಲ್ಲ! ಹಿಂದೀ ವಿಮಾನಗಳು ನಿಜಾಮರ ವಿಮಾನ ಠಾಣ್ಯಗಳ ಮೇಲೆ ಬಾಂಬವೃಷ್ಟಿ ಮಾಡಿ ಅವನ್ನಷ್ಟು ಧ್ವಂಸಗೊಳಿಸಲಾರಂಭಿಸಿದವು. ಸೊಲ್ಲಾಪುರ ಬದಿಯಿಂದ ಸಿಕಂದರಾಬಾದ ಕಡೆಗೆ ಹೊರಟ ಮೇ|| ಜ|| ಚೌಧರಿಯವರ ಸೇನೆಯು ಗುರುವಾರ ಸಂಜೆಯೊಳಗಾಗಿ ೧೧೦ ಮೈಲುದ್ದ ಹಾದಿಯನ್ನು ಆಕ್ರಮಿಸಿ ಸಿಕಂದರಾಬಾದದಿಂದ ೬೦ ಮೈಲುಗಳಷ್ಟು ಸಮೀಪ ಮುಟ್ಟಿತು. ವಾಯುವ್ಯದಲ್ಲಿ ದೌಲತಾಬಾದ ಜಿಲ್ಲೆಯು ಮಂಗಳವಾರವೇ ಹಿಂದೀ ಸೈನ್ಯದ ಕೈವಶವಾಯಿತು. [illegible] ಸಮುದ್ರದಂತೆ ಉಕ್ಕಿಬರುತ್ತಿರುವ ಈ ಸೇನಾ ಸಮುದ್ರವನ್ನು ಕಂಡು ಗರ್ಭಗಲಿತರಾದ ನಿಜಾಮ ಲಾಯಿಕ ಅಲಿಯವರು ಗುರುವಾರ ಆಕಾಶವಾಣಿಯ ದ್ವಾರಾ—ಏಕೆಂದರೆ ತಂತಿ, ಟೆಲಿಫೋನ ವಗೈರೆ ಇತರ ಸಂಪರ್ಕ ಸಾಧನಗಳೆಲ್ಲ ಮುಚ್ಚಲ್ಪಟ್ಟಿದ್ದವು. ಪಂ|| ನೆಹರೂರ ಕಡೆ ಒಪ್ಪಂದದ ಭಿಕ್ಷೆಯನ್ನು ಬೇಡಲಾರಂಭಿಸಿದರು. ತಾನೊಬ್ಬ ಮರಿ—ಹಿಟ್ಲರನೆಂದು ನಟಿಸುತ್ತ ಕಾಶಿಮ ರಝ್ವಿಯ ಸದ್ದಂತೂ ಕಳೆದ ವಾರ ಎಲ್ಲೂ ಕೇಳಬರಲಿಲ್ಲ ಪಾಕಿಸ್ತಾನದಿಂದಲೂ ಬ್ರಿಟನದಿಂದಲೂ ತಮಗೇನಾದರೂ ಸಹಾಯ ಬಂದೀತೆಂದು ನಿಜಾಮರು ಭಾವಿಸಿರಬಹುದು ಆದರೆ ಆ ಸಹಾಯ ಬರಲಿಲ್ಲ! ಬುಧವಾರ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲ ಪಕ್ಷದ ಮಿ|| ಎಂಥೋನಿ ಈಡನ್ನರು ಹೈದರಾಬಾದ ಪಕ್ಷವನ್ನು ಎತ್ತಿಹಿಡಿದು, ಸಂಯುಕ್ತ ರಾಷ್ಟ್ರಗಳ ಸಂಘದ ಎದುರು ನಿಜಾಮರ ಪಕ್ಷವನ್ನು ಬ್ರಿಟಿಶ ಸರಕಾರವು ಎತ್ತಿಹಿಡಿಯಬೇಕಾಗಿ ಪ್ರತಿಪಾದಿಸಿದರು. ಆದರೆ ಭದ್ರತಾ ಮಂಡಳದ ಮುಂದೆ ನಿಜಾಮರ ಪ್ರಶ್ನೆ ಎತ್ತಲಿಕ್ಕೆ ಬರುತ್ತದೋ ಇಲ್ಲವೋ ಎಂಬುದನ್ನು ಆ ಮಂಡಳವೇ ನಿರ್ಣಯಿಸಲೆಂದು ಬ್ರಿಟಿಶ ವಿದೇಶ ಮಂತ್ರಿಗಳು ಉತ್ತರವಿತ್ತು ಪಾರಾದರು. ನಿಜಾಮರ ಲಂಡನ ಪ್ರತಿನಿಧಿಗಳಂತೂ ತಂತಿಯ ಮೇಲೆ ತಂತಿ ಕಳಿಸಿ ಕಳೆದ ಗುರುವಾರವೇ ನಿಜಾಮರ ದೂರು ಕೇಳಿಕೊಳ್ಳಲಿಕ್ಕೆ ಭದ್ರತಾ ಮಂಡಳವು ಸಭೆ ಸೇರುವಂತೆ ಪ್ರಯತ್ನ ನಡೆಸಿದರು. ಅದರಂತೆ ಗುರುವಾರ ಮಂಡಳದ ಸಭೆಯೂ ಕೂಡಿತು; ಮತ್ತು ನಿಜಾಮರ ಪ್ರತಿನಿಧಿಗಳ ಹಾಗೂ ಹಿಂದುಸ್ಥಾನದ ಪ್ರತಿನಿಧಿಗಳಾದ ಸರ್ ಎ ಮುದಲಿಯಾರ ಇವರ ಪಕ್ಷ-ಪ್ರತಿಪಕ್ಷಗಳನ್ನು ಕೇಳಿಕೊಂಡು ಮುಂದಿನ ವಿಚಾರವನ್ನು ೨ ಈ ಹೊತ್ತಿನ ವರೆಗೆ ಮುಂದೂಡಿತು. ತಮಗೆ ಕೂಡಲೇ ಸೈನಿಕ ಸಹಾಯ ಕಳಿಸಿಕೊಡಬೇಕಾಗಿ ನಿಜಾಮರು ಬ್ರಿಟಿಶ ಸರಕಾರಕ್ಕೂ ನೆರೆರಾಷ್ಟ್ರಗಳಿಗೂ ದೈನ್ಯಗೊಂಡು ತಂತಿಯಿಂದ ಮನವಿ ಮಾಡಿಕೊಂಡಿದ್ದರೆಂದು ತಿಳಿಯುತ್ತದೆ. ಹಿಂದೀ ಸೈನ್ಯವು ಹೈದರಾಬಾದದ ಮೇಲೆ ದಂಡೆತ್ತಿಹೋದ ಸುದ್ದಿ ಪ್ರಕಟವಾದೊಡನೆ ಕರಾಚಿ, ಲಾಹೋರ ಮುಂತಾದ ಕೆಲವು ಪಾಕಿಸ್ತಾನ ಕೇಂದ್ರಗಳಲ್ಲಿ ಹೈದರಾಬಾದ ಪಕ್ಷಪಾತಿ ಜನರು ಬಹಳ ಗದ್ದಲವನ್ನೆಬ್ಬಿಸಿ, ಪಾಕಿಸ್ತಾನ ಸರಕಾರವು ಕೂಡಲೇ ಹಿಂದುಸ್ಥಾನದ ಮೇಲೆ ದಾಳಿ ಮಾಡಬೇಕಾಗಿ ಪ್ರತಿಪಾದಿಸಿದರೆಂಬ ವಾರ್ತೆಗಳು ಪ್ರಕಟವಾಗಿವೆ ಹೈದರಾಬಾದ ಹೋರಾಟವು ಇನ್ನೂ ಕೆಲವು ವಾರಗಳ ವರೆಗೆ ನಡೆದಿದ್ದರೆ ಪಾಕಿಸ್ತಾನವು ಏನಾದರೂ ಅನಾಹುತ ಮಾಡಲು ತಯಾರಾಗುತ್ತಿದ್ದಿತೆಂದು ಹೇಳಬರುವದಿಲ್ಲ ಆದರೆ ಅದಕ್ಕೆ ತಯಾರಿ ಬೇಡವೇ? ಹೀಗಾಗಿ ಪಾಕಿಸ್ತಾನದಿಂದಲೂ ನಿಜಾಮರಿಗೆ ಸಹಾಯ ಬರಲಿಲ್ಲ! ಹಿಂದುಸ್ಥಾನದೊಳಗಿನ ಮುಸಲ್ಮಾನರು ಅಲ್ಲಲ್ಲಿ ಗಲಭೆ-ಗೊಂದಲಗಳನ್ನೆಬ್ಬಿಸಿ ತಮಗೆ ನೆರವನ್ನೀಯುವರೆಂಬ ಮಂಡಿಗೆಯನ್ನೂ ನಿಜಾಮರು ಮನಸ್ಸಿನಲ್ಲಿ ತಿನ್ನುತ್ತಿದ್ದರು ಅಲ್ಲೂ ಅವರಿಗೆ ನಿರಾಶೆಯಾಯಿತು! ಬಹಳಷ್ಟು ಮುಸಲ್ಮಾನರು ಹಿಂದುಸ್ಥಾನ ಸರಕಾರದ ಕೃತಿಯನ್ನೂ ನೀತಿಯನ್ನೂ ಸಮರ್ಥಿಸಿ, ಸರಕಾರಕ್ಕೆ ಬೆಂಬಲವನ್ನೀಯಲು ಎಲ್ಲರಿಗೂ ಬಿನ್ನವಿಸಿದರು. ಇದರಿಂದ ಹತಾಶರಾದ ನಿಜಾಮರು ಶುಕ್ರವಾರ ಸಂಜೆ [illegible] ಸ್ವತಃ ನಭೋವಾಣಿಯ ದ್ವಾರಾ ಮಾತಾಡಿ, ಯುದ್ಧ ನಿಲ್ಲಿಸಲು ತಮ್ಮ ಸೈನಿಕರಿಗೆ ಆಜ್ಞೆಯನ್ನಿತ್ತರು, ಲಾಯಿಕ ಅಲಿಯವರ ಮಂತ್ರಿಮಂಡಳವನ್ನು ಬಡತರ್ಫ ಮಾಡಿದರು, ರಝಾಕಾರ ಸಂಸ್ಥೆ ಅಕ್ರಮವೆಂದು ಸಾರಿದರು ಬಂಧನದಲ್ಲಿದ್ದ ಸಂಸ್ಥಾನ ಕಾಂಗ್ರೆಸ್ಸಿಗರ ಬಿಡುಗಡೆಯ ಬಗ್ಗೆ ಆಜ್ಞೆಗಳನ್ನು ಹೊರಡಿಸಿದರು; ರಾಷ್ಟ್ರ-ಸಂಘದ ಮುಂದೆ ದಾಖಲಪಡಿಸಿದ ತಮ್ಮ ದಾವೆಯನ್ನು ಹಿಂತೆಗೆದುಕೊಳ್ಳಲಿಕ್ಕೂ ತಮ್ಮ ಪ್ರತಿನಿಧಿಗಳಿಗೆ ತಿಳಿಸಿದರು ಸಂಸ್ಥಾನದ ಆಡಳಿತೆಯನ್ನು ಸ್ವತಃ ತಾವೇ ನಡೆಸುವೆವೆಂದೂ ಆದರಿಂದ ಹಿಂದುಸ್ಥಾನ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳಲು ಸುಗಮವಾಗುವದೆಂದೂ ಅವರು ಸಾರಿದ್ದರು. ಆದರೆ ನಿಜಾಮರ ಕೊನೆಯ ಈ ಮಾತು ಹಿಂದ ಸರಕಾರಕ್ಕೆ ಒಪ್ಪಿಗೆಯಾಗಲಿಲ್ಲೆಂಬಂತೆ ತೋರುತ್ತಿದೆ. ನಿಜಾಮರ ಶರಣಾಗತಿಯನ್ನು ಅವರು ಒಪ್ಪಿಕೊಂಡು, ಹೈದರಾಬಾದ ಸಂಸ್ಥಾನದ ಆಡಳಿತೆಯನ್ನು ವಹಿಸಿಕೊಳ್ಳಲು ಮೇ|| ಚೌಧರಿಯವರಿಗೆ ಹುಕುಮು ಮಾಡಿರುತ್ತಾರೆ ಅದರಂತೆ ಮೊನ್ನೆ ಶನಿವಾರದಿಂದ ಹೈದರಾಬಾದದಲ್ಲಿ ಚೌಧರಿಯವರು ಸಂಸ್ಥಾನ ಸರಕಾರದ ಸಕಲ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಂಡು ಹಿಂದಿನ ಮಂತ್ರಿಗಳನ್ನೆಲ್ಲ ಬಂಧಿಸಿಟ್ಟಿದ್ದಾರೆ; ನಿಜಾಮರ ಅರಮನೆಯ ಸುತ್ತಲೂ ಹಿಂದೀ ಸೈನಿಕರ ಕಾವಲನ್ನಿಟ್ಟಿದ್ದಾರೆ; ಕಾಶಿಮ ರಝ್ವಿಯ ಶೋಧ ನಡೆಸಿದ್ದಾರೆ. ಕಾಶಿಮ ರಝ್ವಿಯು ಕರಾಚಿಗೆ ಪಲಾಯನ ಮಾಡಿರುತ್ತಾನೆ, ಗಡ್ಡ ಬೋಳಿಸಿಕೊಂಡು ಭೂಗತನಾಗಿದ್ದಾನೆ, ಹಿಟ್ಲರನಂತೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಎಂದು ಮುಂತಾಗಿ ಬಗೆಬಗೆಯ ವಾರ್ತೆಗಳು ಬರುತ್ತಿವೆ. ಅವನನ್ನು ಸೆರೆಹಿಡಿದಿದ್ದಾರೆಂಬ ಗಾಳಿ-ವಾರ್ತೆಯೂ ಉಂಟು

NOTICE.

Applications are invited for the post of a Chief Executive Officer for Halival Municipality from graduates and matriculates knowing Kannad. Those with experience of Municipal accounts, sanitation and public work will be preferred and given a higher start. The scale of pay is 70-5/2-100 plus D.A.

Applications stating age, qualifications etc should reach the undersigned by 1-10-1948. Applicants called for interview shall have to present themselves at their own cost.

B. K. Potdar,
Administrator,
18-9-48. Haliyal Municipality

ಜಿಲ್ಲಾ ಸಮಾಚಾರ.

ಕಾರವಾರ— (ತಾ ೧೩-೯-೪೮) ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ರಾ. ರಬಿಲೋ ಇವರಿಗೆ ಇತ್ತೀಚೆಗೆ ಮುಂಬಯಿಯ ಸೆಕ್ರೆಟರಿಯೇಟಕ್ಕೆ ವರ್ಗವಾಗಿದ್ದು, ಅವರ ಸ್ಥಳದಲ್ಲಿ ಹಿಂದೆ ಇಲ್ಲಿ ಜಿಲ್ಲಾ ಪ್ರಾಂತಿಕ ಅಧಿಕಾರಿಗಳಾಗಿದ್ದ ಮತ್ತು ಸದ್ಯಕ್ಕೆ ಬೆಳಗಾಂವಿಯಲ್ಲಿ ಅಸಿಸ್ಟಂಟ ಕಮೀಶನರರಾಗಿದ್ದ ರಾ|| ಸಾಠೆಧಾನಾ ಇವರು ಇಲ್ಲಿ ಜಿಲ್ಲಾಧಿಕಾರಿಗಳಾಗಿ ಬಂದಿದ್ದಾರೆ.

ಮೊನ್ನೆ ಸಂಜೆ ಇಲ್ಲಿಯ ಹಿಂದು ಹಾಯಸ್ಕೂಲಿನ ಸಭಾಮಂದಿರದಲ್ಲಿ ನವಿನ್ಯಾ ಒಕ್ಕಲ ಹೊಲದೊಡೆಯರ ಕೂಟದ ವಕೀಲ ರಾ| ನಾಡಕರ್ಣಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇದೀಗ ಮುಂಬಯಿ ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡುತ್ತಿರುವ ಹೊಸ ಒಕ್ಕಲತನ ಕಾಯದೆಯ ಮಸೂದೆಯ ಸಂಬಂಧದಲ್ಲಿ ಈ ಕೆಳಗಿನ ಸಾಧಿತ ಠರಾವುಗಳನ್ನು ಮಾಡಿರುತ್ತಾರೆ. (೧) ೧೯೪೮ರಲ್ಲಿ ತಿದ್ದುಪಡಿ ಹೊಂದಿದ ೧೯೩೯ರ ಒಕ್ಕಲತನದ ಕಾನೂನಿನ ಪ್ರಕಾರ ಮಾಲಿಕರ ಅಥವಾ ಹೊಲದೊಡೆಯರ ಹಕ್ಕುಗಳನ್ನು ಆ ಕಾಯದೆಯು ಸಂರಕ್ಷಿಸದೆ ಇದ್ದುದರಿಂದ ಹೊಲಗಳ ಸುಧಾರಣೆಯ ಕಡೆಗೆ ಅವರ ಮನಸ್ಸು ಹೋಗುವದಿಲ್ಲ. ಹೊಲಗಳ ಉತ್ಪತ್ತಿಯನ್ನು ಕಾಗದಿ ಹೋಗಿಸಿದರೆ ಗೇಣಿಯ ಮಾನ ಇಳಿಯುವದೆಂಬ ಅರಿವಿನಿಂದ ಒಕ್ಕಲಿಗರೂ ಕೂಡ ಹೊಲಗಳಿಗೆ ಸರಿಯಾಗಿ ಗೊಬ್ಬರ ಹಾಕದೆ ಅವುಗಳ ಮಶಾಗತಿ ಕೆಲಸಗಳನ್ನು ಸರಿಯಾಗಿ ಮಾಡದೆ ನಾಗವಳ್ಳಿಯ ಕಡೆಗೆ ದುರ್ಲಕ್ಷ ಮಾಡುತ್ತಿದ್ದಾರೆ. ಅದರಿಂದ ನಾಡಿನೊಳಗಿನ ಆಹಾರೋತ್ಪತ್ತಿಯನ್ನು ಹೆಚ್ಚಿಸಬೇಕು ಮತ್ತು ಒಕ್ಕಲಿಗರ ಬಾಳ್ವೆಯನ್ನು ಸುಧಾರಿಸಬೇಕು ಎಂಬ ಕಾನೂನು-ಕರ್ತರ ಉದ್ದೇಶಗಳು ವಿಫಲವಾಗಿವೆ. ಅದ್ದರಿಂದ ಹೊಸ ಕಾನೂನು ರಚಿಸುವ ಮೊದಲು ಹಳೆಯ ಕಾನೂನಿನ ಪರಿಣಾಮವೇನಾಗಿದೆಯೆಂಬುವದರ ಕೂಲಂಕಷ ಸಂಶೋಧನೆ ಮಾಡಿಸುವ ವ್ಯವಸ್ಥೆಯನ್ನು ಸರಕಾರವು ಮಾಡಬೇಕಾಗಿ ಸೂಚನೆ. (೨) ಒಕ್ಕಲತನದ ಕಾನೂನಿನ ಅಮಲಬಜಾವಣೆ ಮಾಡುವ ಅಧಿಕಾರವನ್ನು ದಿವಾಣಿ ಕಾಯದೆಗಳ ಪರಿಚಯವಿಲ್ಲದ ಮಾಮ್ಲೇದಾರ ಅಧಿಕಾರಿಗಳಿಗೆ ಸರ್ವಥಾ ಒಪ್ಪಿಸಕೂಡದು. ಮೇಲಿಂದ ಮೇಲೆ ಮೇಲಧಿಕಾರಿಗಳೂ ಸರಕಾರದವರೂ ಹೊರಡಿಸುತ್ತಿರುವ ಪರಿಪತ್ರಗಳಿಂದಲೂ ಸೂಚನಾ-ಪತ್ರಗಳಿಂದಲೂ ಅವರು ಗೊಂದಲದಲ್ಲಿ ಬಿದ್ದು ಕಿಂಕರ್ತವ್ಯ-ಮೂಢರಾಗುತ್ತಾರೆ. ಭೂಮಿಗಳಿಗೆ ಸಂಬಂಧಪಟ್ಟ ವಿವಾದಗಳು ದಿವಾಣಿ ಸ್ವರೂಪದವಿರುವದರಿಂದ ಅವನ್ನು ನಿರ್ಣಯಿಸಲು ದಿವಾಣೀ ನ್ಯಾಯಾಸನಗಳೇ ಸಮರ್ಥವಿರುತ್ತವೆ. (೩) ಕಂದಾಯ ಮಂತ್ರಿಗಳು ಈಗ ಎಸೆಂಬ್ಲಿಯಲ್ಲಿ ಮಂಡಿಸಿರುವ ಮಸೂದೆಯೊಳಗಿನ ಕೆಲವೊಂದು ಅಂಶಗಳು ಅನವಶ್ಯಕವಾಗಿ ಕಠೋರವಿರುತ್ತವೆಂತಲೂ ಭೂಮಾಲಿಕರ ಮೂಲಕ ಹಕ್ಕುಗಳನ್ನು ಮುಳುಗಿಸುವಂತಹವಿರುತ್ತವೆಂತಲೂ ಈ ಸಭೆಯು ವಿಚಾರಿಸಿದೆ. ಒಕ್ಕಲಿಗರು ಲಾವಣಿಯ ಭೂಮಿಗಳಲ್ಲಿ ನೆಡಬಹುದಾದ ಮರಗಳ ಉತ್ಪತ್ತಿಯಲ್ಲಿ ಒಡೆಯರಿಗೆ ಅಂಶ ಸಿಗುವಂತಿಲ್ಲ. ಲಾವಣಿ ಭೂಮಿಗಳಲ್ಲಿ ತಾನಾಗಿ ಹುಟ್ಟಿ ಬೆಳೆಯುವ ಮರಗಳ ಉತ್ಪತ್ತಿಯಲ್ಲೂ ಅವರಿಗೆ ಪಾಲು ದೊರೆಯುವಂತಿಲ್ಲ. ಒಕ್ಕಲತನದ ಕೂಲಿಯಾಳುಗಳು ಇಲ್ಲವೆ ಕೈಗಾರಿಕೆಯವರು ಎಂದು ಹೇಳಿಕೊಳ್ಳುವ ಜನರಿಗೆ ಗ್ರಾಮದೊಳಗಿನ ಧರ್ಮಾದಾಯದ ಹಕ್ಕುಗಳನ್ನು ಕೈವಶಪಡಿಸಿಕೊಳ್ಳಲು (ಹೊಸ ಮಸೂದೆಯಲ್ಲಿ) ಅವಕಾಶ ಮಾಡಿಕೊಡಲಾಗಿದೆ. ಒಡೆಯರ ಹೊಲಗಳನ್ನು ಕೆಡಿಸಿ ತಾವು ಕೊಂಡು ಅವರ ಹಾಗೂ ಅವರ ಸಂತತಿಯವರ ಜೀವನದ ಮಾರ್ಗವನ್ನು ಕಟ್ಟಿ ಮಾಡುವ ಹಕ್ಕು ಒಕ್ಕಲಿಗ

(ಮನೇ ಸಾಹಿನ ೩ನೇ ಕಾಲಂ ನೋಡಿರಿ)

SALES TAX NOTICE.

(Goods despatched or removed Outside the Province of Bombay)

ಮಾರಾಟಗಳ ಮೇಲಿನ ಕರದ ಸಂಬಂಧದ ನೋಟೀಸು.

ಮುಂಬಯಿ ಪ್ರಾಂತದ ಹೊರಗೆ ಕಳುಹಿಸಲಾದ ಅಥವಾ ಒಯ್ಯಲಾದ ಸರಕುಗಳು

ಇದರ ಮೂಲಕ ಯಾವತ್ತೂ ವ್ಯಾಪಾರಸ್ಥರ ಹಾಗೂ ಇತರ ಸಂಬಂಧಪಟ್ಟ ಜನರ ಮಾಹಿತಿಗೋಸ್ಕರ ಜಾಹೀರ ಮಾಡಲಾಗುವದೇನಂದರೆ ಈ ಕೆಳಗಿನ ಹಿಂದೀ ಸಂಸ್ಥಾನಗಳು ಇದರಡಿ ನಿರ್ದಿಷ್ಟ ಮಾಡಲಾದ ತಾರೀಖುಗಳಿಂದ ಮುಂಬಯಿ ಪ್ರಾಂತಕ್ಕೆ ಸೇರಿಕೊಂಡಿವೆ ಮತ್ತು ಅದರ ಭಾಗವಾಗಿವೆ. ಸದರೀ ನಿರ್ದಿಷ್ಟ ಮಾಡಲಾದ ತಾರೀಖುಗಳ ದಿವಸ ಅಥವಾ ಅವುಗಳ ನಂತರ ಈ ಕ್ಷೇತ್ರಗಳಲ್ಲಿರುವ ಸ್ಥಳಗಳಿಗೆ ಒಯ್ಯಲ್ಪಟ್ಟಂಥ ಯಾವದೇ ಸರಕುಗಳ ಮಾರಾಟಗಳು, ಸನ್ ೧೯೪೬ನೇ ಇಸ್ವಿಯ ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟಿನ ೬(೪)ನೇ ಕಲಮಿನ (೩)ನೇ ಕಾನೂನಿನನ್ವಯ ಮಾರಾಟಗ ಮೇಲಿನ ಕರದಿಂದ ಮಾಫ ಮಾಡಲ್ಪಡಲು ಅರ್ಹವಾಗಿರುವದಿಲ್ಲ.

(೧) ಸನ್ ೧೯೪೮ನೇ ಇಸವಿಯ ಜನವರಿ ತಿಂಗಳ ೧೯ನೇ ತಾರೀಖಿನಿಂದ —

(ಅ) ಅಹಮ್ಮದಾಬಾದ ಜಿಲ್ಲೆಯ ಭಾಗವಾಗಿರುವಂಥ ಗೋಧಾ ಫೋರ್ಸ ಹಾಗೂ ವೋರವಾಡ ಇವುಗಳ ಇಸ್ಟೇಟುಗಳು

(ಬ) ಖೇಡಾ ಜಿಲ್ಲೆಯ ಭಾಗವಾಗಿರುವಂಥ ಕೇಡ್ಪೂರ ಮಾಂಡ, ಪೋರ್ಸ ಹಾಗೂ ಧಾಣಾ ಇವುಗಳ ಇಸ್ಟೇಟಗಳು

(ಕ) ಹೊಸ ಏರಿಯಾಗಳ ಇಬಿ ಎಂದು ಕರೆಯಲ್ಪಟ್ಟಿರುವಂಥ ಪಾಂಗಳು ಎಂದು ಕರೆಯಲ್ಪಡುವ ಕ್ಷೇತ್ರವು

(೨) ಸನ್ ೧೯೪೮ನೇ ಇಸವಿಯ ಜೂನ ತಿಂಗಳ ೧೦ನೇ ತಾರೀಖಿನಿಂದ —

(ಅ) ಖೇಡಾ ಜಿಲ್ಲೆಯ ಭಾಗವಾಗಿರುವಂಥ ಬಾಲಾಸಿನೋರ ರಾಜ್ಯ (ಇದರಲ್ಲಿ ಅಂಥದ ಥಾಣೆ, ಮೇಘದ, ಧಾಂಬ ರಾಜ್ಯದ ಗೋಧಾ ಗೋಧ್ರಾ ಕಸಬಾ, ಪೋಯಿಬಾ ಅಹವಾದ, ಮಕ್ತಪೂರ ಏನೋರವಾಲ ಗೋಕವಾಡಿ ಪಾದರಾ ಗಿರಿ ಮಾಲವಾ ಪೋರೆ ಏನೋರ ಉಜಪುರ, ಗೋಮಗ, ಅಮರಾಪೂರ ಜೇಸ ನ ಅಲ್ಲಾ ನಾಗಿನ ಮಾಡ್ಲಾ ವೀನ ಏನೋರ, ನ ಪರಾ ಇವು ಸೇರಿರುತ್ತವೆ) ಮತ್ತು ಅಮೋದ ಧೋಲಿಯಾರ ಹಾಗೂ ಸಿಹೋರಾ ತಾಲೂಕುಗಳು ಇವುಗಳನ್ನೊಳಗೊಂಡ ಕ್ಷೇತ್ರಗಳು

(ಬ) ಪಂಚಮಹಾಲುಗಳ ಜಿಲ್ಲೆಯ ಭಾಗವಾಗಿರುವಂಥ ಸಾಂಖೇಡಾ ಮೇವಾಸ (ಇದರಲ್ಲಿ ನೋರಾ ಅಗಮಾ ಪಾಲನ, ಜೀರಪೂರ, ಮಾಸನ ನೋವಡಾ, ನೋಡುಗಳ ವನಮಾಲ ಭಿಲೋಡಿಯಾ, ಸಿರಭಯಾಪೂರ, ಜೀರಾ ಕೆಂಪೋಳ ರಾಮಪೂರ ಪಂಚವಾದ ಜಿನಗಾಮ, ಚೂಡೇಸ್ವರಭಜೋರಾ, ಬಿಂಗನೋನಾಕಿಯಾ ಮಾಡಿಯಾ ವಿರಾಮಪೂರ ದೂಧಪೂರ, ಇವು ಸೇರಿರುತ್ತವೆ) ಮತ್ತು ಅಗರ ಗಾದನಾ ಬೋರಿಯಾದ ಮಾಂಡವಾ ಸನವಾಡಿ, ವಾಸ್ನೇ ಏನೋರ, ಉಚ್ಚದ ಹಾಗೂ ಪಡೇರಿಯಾ ಇವುಗಳ ಅಂಶಃ ಹುಕುಮಾತಿನ ಸಂಸ್ಥಾನಗಳ ಇವುಗಳನ್ನೊಳಗೊಂಡ ಕ್ಷೇತ್ರಗಳು

(ಕ) ಪಾಲಜ ತಾಲೂಕು ಹಾಗೂ ಅಹಮ್ಮದಾಬಾದ ಜಿಲ್ಲೆಯ ವಿರಮಗಾಂವ ತಾಲೂಕಿನ ಭಾಗವಾಗಿರುವಂಥ ಕಾಟೋಸಣ ರಾಜ್ಯ (ಮಾಗುಡಾ ಪೇಥಾಪುರ ರಾಮಪುರಾ ಕೇಸರಪೂರ, ವಿರಸೋಡಾ, ಕಾಸಲಪುರ ರಾಜೇಪುರ, ಮೋಮಾಡಪುರಾ, ಇಜಪೂರಾ (ಜೇಥಾಜೀ) ಇಜಪುರಾ (ಬರೋಟಿನಾ) ಇವುಗಳು ಇದರಲ್ಲಿ ಸೇರಿರುತ್ತವೆ) ಇವುಗಳನ್ನೊಳಗೊಂಡ ಕ್ಷೇತ್ರಗಳು

(ಡ) ಬೆಳಗಾಂವ ಜಿಲ್ಲೆಯು (ಪಾಲನಪೂರ ಸಂಸ್ಥಾನ ರಾಧನಪೂರ ಸಂಸ್ಥಾನ, ವಾವ, ಧಾರಾದಿ ಇವುಗಳ ಹೊರತಾಗಿ)

(ಇ) ಮಹೀಕಾಂಠಾ ಜಿಲ್ಲೆ (ಇಡರ ಸಂಸ್ಥಾನ ವಿಜಯನಗರ ಸಂಸ್ಥಾನ ಅಂಬ ಲಿಯಾರಾ, ಇಲೋಳ, ಮಾಲಪೂರ ಮೋಹನಪುರ, ರಣಾಸಣ, ಸೂಡಾಸಣ ಹಾಗೂ ವಾಲಾಸಣ, ಇವುಗಳ ಹೊರತಾಗಿ)

೩ ಸನ್ ೧೯೪೬ನೇ ಇಸವಿಯ ಮುಂಬಯಿ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟು ಮುಂಬಯಿ ಪ್ರಾಂತದಲ್ಲಿ ಕೂಡಿಕೊಂಡ ಈ ಕೆಳಗಿನ ಹಿಂದೀ ಸಂಸ್ಥಾನಗಳಿಗೆ ಸಹ ಲಾಗೂ ಮಾಡಲ್ಪಟ್ಟಿದೆ ಮತ್ತು ಈ ಸಂಸ್ಥಾನಗಳ ವ್ಯಾಪಾರಸ್ಥರು ಸನ್ ೧೯೪೮ನೇ ಇಸವಿಯ ಅಕ್ಟೋಬರ ತಿಂಗಳ ೧ನೇ ತಾರೀಖಿನಿಂದ ಮಾರಾಟಗಳ ಮೇಲಿನ ಕರವನ್ನು ಕೊಡಬೇಕಾಗುವದು. ಸನ್ ೧೯೪೮ನೇ ಇಸವಿಯ ಸಪ್ಟೆಂಬರ ತಿಂಗಳ ೩೦ನೇ ತಾರೀಖಿನೊಳಗಾಗಿ ಈ ಸಂಸ್ಥಾನಗಳೊಳಗೆ ಒಯ್ಯಲ್ಪಟ್ಟಿರುವಂಥ ಯಾವದೇ ಸರಕುಗಳ ಮಾರಾಟಗಳು ಸನ್ ೧೯೪೬ನೇ ಇಸವಿಯ ಮುಂಬಯಿ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟಿನ ೬(೩)ನೇ ಕಲಮಿನ ೧(೩)ನೇ ಕಾನೂನಿನನ್ವಯ ಮಾಫ ಮಾಡಲ್ಪಡಲು ಅರ್ಹವಿರುವದಿಲ್ಲ.

(೧) ದಕ್ಷಿಣ ಸಂಸ್ಥಾನಗಳು

ಅಕ್ಕಲಕೋಟ,	ಮಿರಜ (ಕಿರಿ),	ಔಂಧ,	ಮುಧೋಳ
ಭೋರ	ಫಲ್ಟನ	ಜಮಖಂಡಿ	ರಾಮದುರ್ಗ
ಜತ್ತ	ಸಾಂಗಲಿ	ಕುರಂದವಾಡ (ಹಿರೇ)	ಸವಣೂರ
ಕುರಂದವಾಡ (ಕಿರಿ)	ಸಾವಂತವಾಡಿ	ಮಿರಜ (ಹಿರೇ)	ವಾಡೀ ಜಹಾಗೀರ

(೨) ಜಂಜೀರಾ

(೩) ಗುಜರಾಥ ಸಂಸ್ಥಾನಗಳು

ಧರಮಪುರ	ಧ್ರಾಂಗ	ವಾಡಾಸಿನೋರ	ಬಾದೇವಾರ
ಛೋಟಾ ಉದೇಪೂರ	ಮೋಹನಪೂರ	ಲುಣಾವಾಡಾ	ಪಾಲಪೂರ
ರಾಜಪಿಪ್ಲಾ (ನೋಂಗಟಾಂ ಸಹಿತ)	ಮಾಣಸಾ	ಬಾರಿಯಾ	ವಾವ್ರೋ
ಖಾಕ್ಸಲ	ಓಡಾಳ	ಸಂತ	ಘೋಡಸಾರ
ಖಂಬಾಯತ	ವಾಸಣಾ	ಇಡರ	ಕಾಟೋಸಣ
ಜವ್ಹಾರ	ಸುಡಾಸಣಾ	ವಿಜಯನಗರ	ರಣಾಸಣಾ
ಸಾಚೀನ	ವಸೋಡಾ	ರಾಧನಪೂರ	ಅಂಬಾಲಿಯಾರಾ
ಪಾಲನಪೂರ	ಪುನದ್ರಾ	ಜಾಂಬುಘೋಡಾ	ಇಲೋಳ
ಬಾಲಾಸಿನಾ	ಸುರಗಾ	ಸಂಜೇಲಿ	

ಓಲ್ಡ ಕಸ್ಟಮ ಹೌಸ,
ಫೋರ್ಟ ಮುಂಬಯಿ
ತಾ ೩೧—೮—೧೯೪೮

ವ್ಹಿ ಎಲ್. ಗಿಡವಾನಿ,
ಡೆಪ್ಯುಟಿ ಕಮಿಶನರ ಆಫ ಸೇಲ್ಸ ಟ್ಯಾಕ್ಸ
ಮುಂಬಯಿ ಪ್ರಾಂತ

ಪ್ರಕಟಣೆ ನಂ ೧

ಕಾನಡಾ ಜಿಲ್ಲೆಯ ಒಕ್ಕಲತನ, ದನಗಳ ಹಾಗೂ ಗ್ರಾಮೋದ್ಯೋಗ ಪ್ರದರ್ಶನ.

ಕಾನಡಾ ಜಿಲ್ಲಾ ಗ್ರಾಮೋದ್ಧಾರ ಮಂಡಳವು ೧೯೪೯ನೇ ಇಸ್ವಿ ಜನವರಿಯಲ್ಲಿ ಶಿರಸಿಯಲ್ಲಿ ಒಕ್ಕಲತನದ ಪ್ರದರ್ಶನವನ್ನು ನೆರವೇರಿಸುವದನ್ನು ನಿಶ್ಚಯಿಸಿದೆ ಈ ಬಗ್ಗೆ ಪೂರ್ವಸಿದ್ಧತೆಯು ಕೈಕೊಳ್ಳಲಾಗಿದೆ. ಒಕ್ಕಲತನದ ಪ್ರದರ್ಶನಗಳು ಇತ್ತೀಚೆಗೆ ಕಾನಡಾ ಜಿಲ್ಲೆಯಲ್ಲಿ ಜರುಗಲಿಲ್ಲ. ದೇಶದ ಅಭಿವೃದ್ಧಿಗೆ ಮುಖ್ಯವಾಗಿ ಹಾಗೂ ಪ್ರಾಂತಿಕ ಸರಕಾರಗಳು ಹಲವು ಪ್ರಕಾರದ ಸಹಾಯ ನೀಡಿ ಕೊಡಲು ಮುಂದಾಗಿರುವದು ಒಕ್ಕಲತನದಲ್ಲಿ ಸಾಧ ನೆಯಿಂದ ಸುಧಾರಣೆ ಬೇಸಾಯವೇ ನಮ್ಮ ಜಿಲ್ಲೆಯ ಪ್ರಧಾನ ಧಂದೆಯಾದ್ದರೂ ಅದ ಸ್ವಾವಲಂಬಿಯಾಗಿರುವದಿಲ್ಲ ಎಂದು ಹೊಸದ ಪರಿಸ್ಥಿತಿಯೂ ಅದರಂತೇ ಇದೆ. ದೇಶವು ಸ್ವಾವಲಂಬಿಯಾಗುವಂತೆ ಪ್ರಯತ್ನಿಸಲು ಮುಖ್ಯವಾಗಿ ಹೊಸ ಪ್ರಾಂತಿಕ ಸರಕಾರಗಳು ಕಂಕಣಬದ್ಧವಾಗಿವೆ. ಇದಕ್ಕಾಗಿ ಎಷ್ಟೋ ಯೋಜನೆಗಳ ವಿಚಾರವು ಆಗಿವೆ. ಅವುಗಳ ಮಹತ್ವವನ್ನು ಒಕ್ಕಲಿಗರ ಪ್ರದರ್ಶನಕ್ಕೆ ತಂದು ಜನತೆಯಲ್ಲಿ ಜಾಗೃತಿಯುಂಟಾಗಬೇಕೆಂಬ ಉದ್ದೇಶದಿಂದ ಈ ಪ್ರದರ್ಶನವು ಜರುಗಿಸಲ್ಪಡುತ್ತದೆ. ಈ ಪ್ರದರ್ಶನದಲ್ಲಿ ಅನೇಕ ವಿಭಾಗಗಳ ಸಮಾವೇಶವಾಗುವದು. ದನಗಳು, ವಿಭಾಗ ಗ್ರಾಮೋದ್ಯೋಗ, ಕೈಗಾರಿಕೆ, ಕಲಾ ವಿಭಾಗ ಇತ್ಯಾದಿಗಳು.

ಈ ಪ್ರದರ್ಶನವು ಎಲ್ಲ ಉದ್ದಿಮೆದಾರರಿಗೂ ತಮ್ಮ ಚಾತುರ್ಯವನ್ನು ತೋರಿಸುವದಕ್ಕೆ ಸುಸಂಧಿಯಾಗಿರುವದು. ಪ್ರದರ್ಶನಕ್ಕೆ ಬರುವ ವಸ್ತುಗಳಲ್ಲಿ ಪ್ರಶಸ್ತಿ ಹೊಂದುವಂಥವುಗಳಿಗೆ ಯೋಗ್ಯ ಇನಾಮುಗಳನ್ನು ಕೊಡುವ ನಿರ್ಧಾರ ಮಾಡಲಾಗಿದೆ.

ಪ್ರದರ್ಶನವು ಯಶಸ್ವಿಯಾಗುವದಕ್ಕೆ ಎಲ್ಲರ ಸಹಾಯ-ಸಹಾನುಭೂತಿ ಅವಶ್ಯ ಬೇಕು. ಕಾರಣ ಎಲ್ಲ ಉದ್ದಿಮೆದಾರರು ಪ್ರದರ್ಶನಕ್ಕೆ ಕಳಿಸತಕ್ಕ ವಸ್ತುಗಳನ್ನು, ವಿಗಳನ್ನು ಈಗಿನಿಂದಲೇ ತಯಾರಿಸುವಂತೆ ಮುಂದಾಗ್ರತೆ ವಹಿಸಬೇಕು.

ಈ ಪ್ರದರ್ಶನವು ವ್ಯಾಪಾರೋದ್ಯೋಗಿಗಳಿಗೂ ಸುಸಂಧಿಯಾಗಿರುವದು. ಸ್ಟಾಲುಗಳು ಭಾಗ ವಹಿಸಿ ಜಿಲ್ಲಾ ಗ್ರಾಮೋದ್ಧಾರ ಮಂಡಳದವರು ಕೈಕೊಂಡ ಮಹತ್ಕಾರ್ಯವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ಪತ್ತೆಗೆ ಬರೆಯಬಹುದು.

V. S HABBU,
ಸೆಕ್ರೆಟರಿ, ಪ್ರದರ್ಶನ ಕಮಿಟಿ, ಶಿರಸಿ
ತಾ. ೧೪-೯-೧೯೪೮ ಮತ್ತು ಜಿಲ್ಲಾ ಒಕ್ಕಲತನ ಅಧಿಕಾರಿ ಕಾರವಾರ

ಬೊಂಬೇ ಸ್ಟೀಮ ನೆವ್ಹಿಗೇಶನ್ ಕಂಪನಿ, ಲಿಮಿಟೆಡ್.

ಮುಂಬಯಿ-ಮಂಗಳೂರ ಲ್ಯಾನ

ಪ್ರವಾಸಿಕರ ಹಡಗ ಮುಂಬಯಿಯಿಂದ ಪ್ರತಿ ವಾರಕ್ಕೆ ಹೊರಡುವದು

ನಮ್ಮ ಮುಂಬಯಿ-ಮಂಗಳೂರ ಕರಾವಳಿಯಲ್ಲಿ ಪ್ರವಾಸಿಗಳ ಹಡಗಗಳ ವ್ಯವಹಾರಕ್ಕೆ ಇದೇ ಬರುವ ಸಪ್ಟೆಂಬರ ತಾರೀಖು ೩೦ನೇ ಗುರುವಾರದಿಂದ ಪ್ರಾರಂಭವಾಗುವದು ತದನಂತರ ಹಡಗವು ಹಿಂದಿನಂತೆ ಮುಂಬಯಿಯಿಂದ ಮಂಗಳವಾರ ಹೊರಡದೆ, ಪ್ರತಿ **ಗುರುವಾರ ಮಧ್ಯಾಹ್ನ ೧೨ಕ್ಕೆ ಮುಂಬಯಿ ಬಿಟ್ಟು,** ಮಾರ್ಮಗೋವಾ, ಕಾರವಾರ, ಕುಮಟಾ, ಭಟಕಳ, ಮಲ್ಪೆ ಬಂದರಗಳಲ್ಲಿ ಬಂದರ ಮಾಡಿ, ಶನಿವಾರ ಪ್ರಾತಃಕಾಲದ ೭ಕ್ಕೆ ಮಂಗಳೂರಿಗೆ ಮುಟ್ಟುವದು, ಮತ್ತು ಅಂದೇ ಅಪರಾಹ್ನ ೧೨॥ ಘಂಟೆಗೆ ಮಂಗಳೂರ ಬಿಟ್ಟು ಮೇಲಿನ ಬಂದರಗಳನ್ನು ಸಂದರ್ಶಿಸಿ, ಸೋಮವಾರ ಬೆಳಿಗ್ಗೆ ೮ಕ್ಕೆ ಮುಂಬಯಿ ಸೇರುವದು

ತಾ. ೧೧-೯-೧೯೪೮ ಸಿಂಧ್ಯಾ ಸ್ಟೀಮ ನೆವ್ಹಿಗೇಶನ್ ಕಂ, ಲಿ
ಮೆನೇಜಿಂಗ ಏಜಂಟ್ಸ

MUJUMDAR & KASBEKAR BROS.

BOOK SELLERS & GENERAL MERCHANTS,
KARWAR (N K)

ಜಾಹೀರ ಸೂಚನೆ.

ಮುಂಬಯಿ ಪ್ರಾಂತದ ವಿದ್ಯಾಖಾತೆಯವರಿಂದ ಪ್ರಕಾಶಿತವಾದ ಪುಸ್ತಕಗಳ ಬಗ್ಗೆ ನಾವು ಕಾರವಾರ, ಯಲ್ಲಾಪುರ, ಹಳಿಯಾಳ, ಮುಂಡಗೋಡ ಮತ್ತು ಸುಪಾ (ಪೇಟೆ) ತಾಲೂಕುಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ. "ಕನ್ನಡ ವಾಚನ ಶಾಲೆಯ ನೋಡಲು ಓದು" ಇದೀಗಲೇ ಮಾರಾಟಕ್ಕೆ ಸಿದ್ಧವಾಗಿವೆ. ಬೆಲೆ ... ಈ ಬೆಲೆಗೆ ನಮ್ಮಲ್ಲಿ ಯಾ ಆಯಾ ತಾಲೂಕಿನ ಪುಸ್ತಕದ ಅಂಗಡಿಯಲ್ಲಿ ವಿಕ್ರಿಗೆ ಸಿಗುವದು. ಯಾವತ್ತ ಶಾಲೆಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ. ಶಿಕ್ಷಕರಿಗೆ ವ್ಯಾಪಾರಕ್ಕಾಗಿ ಕಮಿಶನ್ ಕೊಡಲಾಗುವದು. ಬರೆಯಿರಿ

D D KASBEKAR, B A,
PARTNER

(೪ನೇ ಪಾನಿನಿಂದ ಮುಂದರಿಸಿದ್ದು)

ರಿಗೆ ಕೊಡಲಾಗಿದೆ. ಒಡೆಯರ ಕಪ್ಪುಕಾಯಿಲ್ಲದ ಭೂಮಿಗಳನ್ನು ಅವಲು ಬದಲು ಮಾಡಿಕೊಂಡು ಒಡೆಯರನ್ನು ತೀರಿಸಲಿಕ್ಕೆ ಒಕ್ಕಲಿಗರಿಗೆ ಅವಕಾಶ ಕೊಡಲಾಗಿದೆ, ಪ್ರತಿ ಕೈಸನ ವಾರಿಸದಾರರನ್ನು ಹಾಯಿತ ಕೆಗೆಯುವ ಹಕ್ಕನ್ನು ಒಡೆಯರ ಮೇಲೆ ಹಾಕಲಾಗುತ್ತದೆ, ಇವೇ ಮೊದಲಾದ ಅಂಶಗಳು. ಒಡೆತನವನ್ನು ನಷ್ಟ ಮಾಡುವಂತಹವೂ ಕಷ್ಟದಾಯಕವೂ ಇರುತ್ತವೆ. ಕೊರ್ಗೊಡೆಯರ ಭೂಮಿಗಳ ವಹಿವಾಟು ಮಾಡಲು ಅಧಿಕ ಅಧಿಕಾರಗಳನ್ನು ಪ್ರಯೋಜಿಸುವ ಯೋಜನೆಯಂತೆ ಲಂಚಗೊಳಿಸುವದಕ್ಕೆ ಆಸ್ಪದ ಕೊಟ್ಟಂತಾಗುವದೆಂದು ಈ ಸಭೆಗನಿಸುತ್ತದೆ. ರೈತರ ಹಕ್ಕುಗಳಿಗಾಗಿ ಒಡೆಯರ ವಹಿವಾಟನ್ನು ಸರಕಾರವು ವಸೂಲಿಪಡಿಸುವ ವಿಚಾರವಂತೂ ಅವಿಚಾರದ್ದು, ಮಾಸಲೆಯು ೫ನೇ ಅಧ್ಯಾಯದಂತೂ ಒಡೆಯರಿಗೆ ಅಪಕ್ವಾಲದಲ್ಲಿ ತಮ್ಮ ಜಮೀನುಗಳನ್ನು ಒಪ್ಪಿದ ರೀತಿಯಿಂದ ಪಡೆದ ತಮ್ಮ ಅಧಿಕಾರಗಳನ್ನು ಸಾಧಿಸಿಕೊಳ್ಳುವ ಇಲ್ಲವೆ ತಮ್ಮ ಆಶ್ರಿತರಿಗೆ ಯಾ ಧರ್ಮಸಂಸ್ಥೆಗಳಿಗೆ ಕೊಡುವದು ಅಷ್ಟೇ ಅಲ್ಲದೆ ನ ಮಾಡಿಕೊಡುವ ಸೌಲಭ್ಯವನ್ನೂ ಕೊಡುವದಿಲ್ಲ, ಅದರೊಳಗಿನ ನಿರ್ಬಂಧಗಳ ಪರಿಣಾಮವಾಗಿ ಜನರ ಸ್ವಾಧೀನತೆಗಳನ್ನು ಮುರಿಯುಗುವವು. ಹೊಸ ಕಾಯಿದೆಯೊಳಗಿನ ಈ ಅಂಶಗಳು ಚಿಕ್ಕ ಚಿಕ್ಕ ಜಮೀನುದಾರರಿಂದ ಕೂಡಿದ ಗ್ರಾಮೀಣ ಮಧ್ಯಮ ವರ್ಗವನ್ನು ನಷ್ಟಗೊಳಿಸುವದೆಂದು ಸಭೆಗೆ ಅಂಜಿಕೆಯುಂಟಾಗಿದೆ. ಒಕ್ಕಲಿಗರ ಪಕ್ಷ ಹಿಡಿದು ಶಾಂತತಾ-ಭಂಗ ಮತ್ತು ಸುಸಂಸ್ಕೃತವಾದ ಈ ಮಧ್ಯಮ ವರ್ಗದ ವಿರುದ್ಧ ತಕ್ಕ ಹಿಗ್ಗುವ ಮೊದಲು ಸರಕಾರವು ತ್ರಿವಾರ ಆಲೋಚಿಸಬೇಕಾಗಿ ಈ ಸಭೆ ವಿನಂತಿಸುತ್ತದೆ (೪) ಹೊಸ ಕಾಯಿದೆಯ ಹಲವಾರು ಕಲಮುಗಳಿಗೆ ಒಳಪಟ್ಟಿಯ ಮೇಲೆ ರಾಜಿ ನೆರೆಸಿದ ಕಾನಭಾಗದ ಸಾಧಿಸಿರುವ ತಿದ್ದುಪಡಿಗಳನ್ನೂ, ಅವುಗಳಿಗೆ ಪೂರಕವಾಗಿ ಅಂಕೋಲಾ, ಹಳಿಯಾಳ, ಕಾರವಾರ ತಾಲೂಕುಗಳ ಭೂಮಾಲೀಕರ ಸಂಘಗಳೂ ಸೇರಿ, ಶಿರಾಲಿ ಗ್ರಾಮದ ಕೊಂಗರಕೊಡೆಯರೂ ಸೂಚಿಸಿರುವ ತಿದ್ದುಪಡಿಗಳನ್ನೂ ಸರಕಾರವು ಸ್ವೀಕರಿಸಬೇಕಾಗಿ ಸವಿನಯ ಸೂಚನೆ (೫) ಭಾರತ ಸ್ವಾತಂತ್ರ್ಯದ ಸ್ವಾತಂತ್ರ್ಯ ೧೯೪೭-೪೮ರ ಭೂಕಂದಾಯದಲ್ಲಿ ೧೦ನೇ ೧ ಆ ಅಂಶವನ್ನು ಸರಕಾರವು ಸೂಟ ಬಿಟ್ಟಿದ್ದು ಈ ಸೂಟಿನ ಪರಿಣಾಮವಾಗಿ ಭೂಮಾಲೀಕರು ತಮ್ಮ ಒಕ್ಕಲಿಗರಿಗೆ ಅವರ ಗೇಣಿಯ ೧೦ನೇ ೧ ಅಂಶವನ್ನು ಸೂಟ ಬಿಡಬೇಕೆಂದು ಆಗ್ರಹಿಸುವದೂ ಸರಕಾರದ ಅಧಿಕಾರದ ಹೊರಗಿನದೂ ಕಾನೂನ-ಬಾಹಿರವೂ ಇರುತ್ತದೆಂದು ಈ ಸಭೆಯ ಅಭಿಪ್ರಾಯವಿದೆ. ಈ ವಿಷಯವನ್ನು ನ್ಯಾಯಾಲಯಗಳ ಮುಂದೆ ಮಂಡಿಸಿ, ರೈತರಿಂದ ಪೂರ್ಣ ಗೇಣಿ ವಸೂಲ ಪಡೆಯುವ ತಮ್ಮ ಹಕ್ಕನ್ನು ಸರಕಾರ ಹುಕುಮಿನಿಂದ ಮುಳುಗುವಂತಿದ್ದೆಂದು ನಿರ್ಣಯ ತೆಗೆದುಕೊಳ್ಳಬೇಕಾಗಿ ಜಿಲ್ಲೆಯ ಹೊಲದೊಡೆಯರಿಗೆ ಸೂಚನೆ (೬) ಮೇಲಿನ ಗೊತ್ತುವಳಿಗಳನ್ನು ಸರಕಾರದವರ ಹಾಗೂ ಜನತೆಯ ಕಣ್ಣರ ಮುಂದೆ ಮಂಡಿಸಲು ಶಿಷ್ಟರನ್ನು ಕಳಿಸಿ ಕೊಡಬೇಕಾಗಿ ನಿರ್ಣಯ (೭) ಈ ಜಿಲ್ಲೆಯ ಎಸೆಂಬ್ಲಿ-ಕೌನ್ಸಿಲುಗಳೊಳಗಿನ ಪ್ರತಿನಿಧಿಗಳು ತಮ್ಮ ಮತದಾರರಾದ ಭೂಮಾಲೀಕರ ಹಿತಸಂಬಂಧಗಳನ್ನು ಸಂರಕ್ಷಿಸಲು ಈ ವರೆಗೆ ಏನೂ ಪ್ರಯತ್ನ ಮಾಡಿಲ್ಲೆಂದು ನಮೂದಿಸಲು ವಿಷಾದವಾಗುತ್ತದೆ. ಹೊಸ ಮಸೂದೆಯು ಚರ್ಚೆಯಾಗುವ ವೇಳೆಯಲ್ಲಿ ಬರೂ ತಮ್ಮ ಮತದಾರರು ಸೂಚಿಸಿರುವ ತಿದ್ದುಪಡಿಗಳನ್ನು ಮಂಡಿಸುವ ಮತ್ತು ಜಿಲ್ಲೆಯ ಹೊಲದೊಡೆಯರ ಹಿತರಕ್ಷಣೆ ಮಾಡುವ ಪ್ರಯತ್ನ ಅವರು ಮಾಡಬೇಕು. ಅಲ್ಲದಿದ್ದರೆ ಜಿಲ್ಲೆಯ ಭೂಮಾಲೀಕರ ವಿಶ್ವಾಸವನ್ನು ಅವರು ಕಳಕೊಳ್ಳುವರು (೮) ಮೇಲಿನ ಗೊತ್ತುವಳಿ

[illegible]

ಅಂಕೋಲಾ— [illegible]

[illegible]

ಡಿಸ್ಟ್ರಿಕ್ಟ ಬೋರ್ಡ ಆಫ್ ಸುಪೆರವಾಯಜಿಂಗ ಯೂನಿಯನ್ಸ ಲಿ., ಎಜ್ಯುಕೇಶನ ಕಮಿಟಿ, ಕುಮಟಾ ಉ ಕನ್ನಡ,

ತಾ ೧೫-೯-೪೮

ಸರಕ್ಯೂಲರ ನಂ. ೫

[illegible]

R V Pandit,

[illegible]

NOTICE.

Four candidates are to be selected for appointment as clerks on purely temporary basis Qualified candidates should apply to the District Judge, Kanara, at Karwar before 1st October, 1948

District Court of Kanara, Karwar, 16-9-1948	**R. H MIRAJKAR,** District Judge, Kanara

Notice to Motor Owners in the Karnatak Region

Owners of Motor vehicles residing in the Karnatak Region are informed that the tax for III Quarterending 31-12-48 in the current financial year has to be paid so as to reach this office on or before 15-10-48, in respect of motor vehicles bearing regional registration marks and on or before 30-9-48 in respect of vehicles registered elsewhere Tax can be paid in (1) Cash, (2) Crossed cheques drawn on the Imperial Bank of India Belgaum only (3) Chalans or by (4) Money Orders Cash will be accepted at the Regional Transport Office, Belgaum between 11 A M & 3 P M on week days and between 9-30 to A M on Saturdays

2 Payment of tax should be accompanied by (1) Registration Certificate of the vehicle (2) Certificate of Insurance as required by Chapter VIII of the Indian Motor Vehicles Act 1939 in respect of all types of vehicles either registered in this Province or elsewhere covering third party risks and (3) a declaration in form AT or 'FT' as the case may be No tax tokens or discs will be issued nor the registration certificates endorsed unless the above requirements are duly complied with

3 Non-use intimation of vehicles which are kept idle should be submitted before the date on which the Tax tokens or discs already issued for such vehicles expires as required by Rule 26 of the B M V Tax Rules 1940 failing which owners will be liable to pay tax and penalty due until the date they notify the non-use of their vehicles to this office

No 5451 3-P KR of 1948 Regional Transport Office, Belgaum 11-9 48	**D K. SUKHTANKAR,** Capt, Regional Transport Officer Karnatak Region, Belgaum

The Kanara District Central Co operative Bank Limited

SIRSI N Kanara

NOTICE

Notice is hereby given that the Twenty-eighth Ordinary General Meeting of the Bank will be held at the REGISTERED OFFICE of the Bank at Sirsi, on Thursday the 30th September 1948, at 4-0 P M (S T) If there is no quorum, the meeting will be adjourned and postponed to the 7th October 1948 (Thursday) and the business of the meeting will be carried out at the same hour and place mentioned above

S P Pandit,
Chairman.

ಇದನ್ನು [illegible] ಕೃಷ್ಣ [illegible] (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ವರ್ಗಣಿಯ ದರ
ಮುಂಗಡವಾಗಿ
ವರ್ಷಕ್ಕೆ ರೂ ೩-೪-೦
ವಿದ್ಯಾರ್ಥಿಗಳಿಗೆ ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ ಪಿ ಯಿಂದ ತರಿಸುವವರು
ವ್ಹಿ ಪಿ ವೆಚ್ಚ ಬೇರೆ ಕೊಡಬೇಕು
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

Reg. No. B 1270 — Monday, 27-9-1948.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ ೧೩

ಕುಮಟಾ - ಸೋಮವಾರ, ತಾ ೨೭-೯-೧೯೪೮

ಜಾಹೀರಾತುಗಳ ದರ -
ಸ್ಥಳ ಮತ್ತು ಕಾಲಗಳನ್ನು ಅವಲಂಬಿಸಿ
ರುವವು. ದೀರ್ಘಕಾಲದ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಮಾಡಿರಿ
ವ್ಯವಸ್ಥಾಪಕರು

ಸುದ್ದಿಗಳ ಸಂದೂಕ.

— ಹೈದರಾಬಾದದ ನಿಜಾಮರು ಕಳೆದ ಗುರುವಾರ ರಾತ್ರಿ ಹೈದರಾಬಾದದ ಆಕಾಶವಾಣಿಯಲ್ಲಿ ಒಂದು ಚಿಕ್ಕ ಭಾಷಣ ಮಾಡಿ ಹೈದರಾಬಾದ ಸಂಸ್ಥಾನದಲ್ಲಿ ಇತ್ತೀಚೆಗೆ ನಡೆದ ದುರ್ಘಟನೆಗಳ ಮತ್ತು ರಾಜ್ಯದ ದುರಂತದ ಸಂಪೂರ್ಣ ಹೊಣೆಯನ್ನು ಕಾಸಿಮ ರಝ್ವಿ ಮತ್ತು ಮೀರ ಲಾಯಕ ಅಲಿಯವರ ಮೇಲೆ ಹಾಕಿದ್ದಾರೆ। ಕಳೆದ ನವೆಂಬರ ತಿಂಗಳಲ್ಲಿ ಇತ್ತೆಹಾದುಲ್ ಮುಸಲ್ಮೀನ ಸಂಸ್ಥೆಯ ಕೆಲವರು ತಮ್ಮ ದಿವಾನರಾಗಿದ್ದ ಛತ್ತಾರಿಯ ನವಾಬ ಮತ್ತು ಸಲಹೆಗಾರ ಸರ್ ವಾಲ್ಟರ ಮೊಂಕ್ಟನ್ ಇವರ ನಿವಾಸಗಳನ್ನು ಮುತ್ತಿ, ನವಾಬರಿಂದ ಮುಖ್ಯ ಮಂತ್ರಿಪದದ ರಾಜೀನಾಮೆಯನ್ನು ಬರೆಸಿಕೊಂಡು, ಮೀರ ಲಾಯಕ ಅಲಿಯನ್ನು ಮುಖ್ಯ ಮಂತ್ರಿಗಳನ್ನಾಗಿ ನೇಮಿಸಿಕೊಂಡರೆಂತಲೂ, ಅಂದಿನಿಂದ ತಾವು ಬಂದಿವಾಸದಲ್ಲಿದ್ದಂತೆ ಅಸಹಾಯರಾಗಿ, ರಝಾಕಾರರ ರಾಕ್ಷಸೀ ಚಟುವಟಿಕೆಗಳನ್ನೂ, ಮೀರ ಲಾಯಕ್ ಅಲಿಯವರು ಹೈದರಾಬಾದದಲ್ಲಿ ಏಕತಂತ್ರ ಅಧಿಕಾರವನ್ನು ಸ್ಥಾಪಿಸಲು ನಡೆಸಿದ ಹೊಂಚನ್ನೂ ಮೂಕ ಸಾಕ್ಷಿ ನೋಡುತ್ತಲಿರಬೇಕಾಯಿತೆಂದೂ, ಈಗ ತಾವು ಭಾರತ ಸರಕಾರದ ಕೃಪೆಯಿಂದ ಸ್ವತಂತ್ರ ಮತ್ತು ನಿರ್ಭಯರಾದೆವೆಂದೂ ನಿಜಾಮರು ಹೇಳಿದ್ದಾರೆ। ನಿಜಾಮರ ಈ ಮಾತುಗಳಲ್ಲಿ ಸತ್ಯಾಂಶ ಕಡಿಮೆಯೆಂದು ಅನೇಕರ ಅಂಬೋಣ. ಎಲ್ಲ ಪಾಪದ ಹೊಣೆ ಹಾರಿಸಿಕೊಂಡು ತಮ್ಮ ತಲೆ ಉಳಿಸಿಕೊಳ್ಳುವ ಬಗ್ಗೆಗಾಗಿ ನಿಜಾಮರು ಹೂಡಿದ ಕಪಟ ನಾಟಕವಿದೆಂದು ಅವರು ವಾದಿಸುತ್ತಾರೆ

— ಹೊಸ ಒಕ್ಕಲತನದ ಕಾನೂನಿನ ಮಸೂದೆಯ ದ್ವಿತೀಯ ವಾಚನವೀಗ ನಡೆದಿದೆ. ಈ ಮಸೂದೆಯನ್ನು ಪರಿಶೀಲಕ ಸಮಿತಿಗೆ ಕಳಿಸಿಕೊಡಬೇಕೆಂದು ಕೇರವಾಡಾದ ದಾಸರ ಸಾಹೇಬರು ತಂದ ಸೂಚನೆಯು ನಿರಾಕರಿಸಲ್ಪಟ್ಟಿತು. ಎರಡನೇ ವಾಚನದಲ್ಲಿ ಮಸೂದೆಯ ಒಂದೊಂದೇ ಕಲಮಿನ ಚರ್ಚೆ ವಿಮರ್ಶೆ, ಸ್ವೀಕಾರಗಳಾಗುತ್ತಿವೆ. ಇದರಂತೆ ಕಳೆದ ವಾರ ೩ ಕಲಮುಗಳ ಚರ್ಚೆಯಾಗಿ ಅವು ಸ್ವೀಕರಿಸಲ್ಪಟ್ಟಿವೆ. ಒಡೆಯರ ಹಿತರಕ್ಷಣೆಗಾಗಿ ಸೂಚಿಸಲ್ಪಟ್ಟ ಎಲ್ಲ ಉಪಸೂಚನೆಗಳು ಬಿದ್ದವೆಂದು ನಮೂದಿಸುವದವಶ್ಯಕ. ೩ನೇ ಕಲಮಿನಲ್ಲಿ ಮಾತ್ರ ಕೆಲವು ದೂರಗಾಮಿ ತಿದ್ದುಪಡಿಗಳಾಗಿವೆ. ಅವಿಭಕ್ತ ಕುಟುಂಬದ ಪ್ರತಿಯೊಂದು ಶಾಖೆಗೆ ೫೦ ಎಕರೆಗಳಂತೆ ಭೂಮಿ ಬಿಟ್ಟು ಉಳಿದ ಭೂಮಿಯನ್ನಷ್ಟೇ 'ಸಂರಕ್ಷಿತ ವೃತ್ತ' ವು ಕೊಂಡುಕೊಳ್ಳಬೇಕಾಗಿ ಮೂಲ ಮಸೂದೆಯಲ್ಲಿತ್ತು. ಇದರಿಂದ ಹೇರಳ ಶಾಖೆಗಳಿರುವ ಯಾವದೊಂದು ಅವಿಭಕ್ತ ಕುಟುಂಬಕ್ಕೆ ೨೦೦ಕ್ಕಿಂತಲೂ ಹೆಚ್ಚು ಎಕರೆ ಭೂಮಿಯನ್ನಿಟ್ಟುಕೊಳ್ಳಲು ಬರುವ ಹಾಗಿತ್ತು. ಈಗ ಈ ಪರವಾನಗಿಯ ಮಿತಿಯನ್ನು ೨೦೦ ಎಕರೆಗಳಿಗೆ ಮಿತಗೊಳಿಸಲಾಗಿದೆ. ೨೦೦ ಎಕರೆ ಮಿತಿಗೂ ಕಡಿಮೆ ಎಕರೆಗಳ ಈ ಮಿತಿಯನ್ನು ಕೂಡಿಸಿದ ಪ್ರಕರಣಗಳಲ್ಲಿ ಇಳಿಸುವ ಅಧಿಕಾರವನ್ನು ಸರಕಾರವು ಪಡೆದಿದೆ. ಇನ್ನೊಂದು ಸುಧಾರಣೆಯು ಇದರಿಂದ, ಹಿಂದೂ ಕಾಯದೆಯಂತೆ ಅವಿಭಕ್ತ ಕುಟುಂಬದ ಪಿತೃ-ಪುತ್ರರಿಗಲ್ಲದೆ ಸಹೋದರರಿಗಾಗಲಿ ಪಾಲು ಮಾಡಿಕೊಳ್ಳಲು ಹೊರ ಬಾಗ ಕುಟುಂಬದೊಳಗಿನ ಕೆಲವು ಸ್ತ್ರೀಯರಿಗೂ (ತಾಯಿ, ಅಜ್ಜಿ ವಗೈರೆ) ಪಾಲು ಸಿಗುತ್ತಿದ್ದ ಕಾರಣ ಪಾಲು ಪಡೆಯಲು ಹಕ್ಕುದಾರರಾದ ಜೊತೆಗಾರರು ಕುಟುಂಬದ ಶಾಖೆಗಳಲ್ಲವೆಂದು ಸ್ವೀಕರಿಸಲು ಮಾಡುವ ಉಪಕಲಮೊಂದು ಹೊಸದಾಗಿ ಜೋಡಿಸಲ್ಪಟ್ಟಿದೆ

— ಮಹಾತ್ಮಾ ಗಾಂಧಿಯವರ ಜಯಂತಿಯಾದ ಅಕ್ಟೋಬರ ತಾ ೨ ರಂದು ಮುಂಬಯಿ ಸರಕಾರವು ಸಾರ್ವಜನಿಕ ಸೂಟಿ ಕೊಡಬೇಕೆಂದು ವಿಧಿಸಿದೆ

— ಮುಂಬಯಿಯ ಶೇತ್ಕರ ಸಾಲ ಪರಿಹಾರದ ಕಾನೂನಿನೊಳಗಿನ 'ಸಾಲ' ಶಬ್ದದ ವ್ಯಾಖ್ಯೆಯಲ್ಲಿ ಭೋಗ್ಯಾದಿ ಕರಾರುಗಳೂ ಬರುವಂತೆ ಒಂದು ದುರುಸ್ತಿಯನ್ನು ಹಾಗೂ ಸದರಿ ಕಾಯದೆಯ ಅಮಲಿನಲ್ಲಿ ಕಂಡು ಬಂದ ಕೆಲವೊಂದು ಕೊರತೆಗಳನ್ನು ಹೋಗಲಾಡಿಸುವ ಕೆಲವು ಕಿರಕೋಳ ದುರುಸ್ತಿಗಳನ್ನು ಮಾಡುವದಕ್ಕಾಗಿ ಮಸೂದೆಯನ್ನು ಸರಕಾರವು ತಯಾರಿಸಿ, ತಾ ೨೦ ೯-೧೯೪೮ ರ ಸರಕಾರಿ ಗ್ಯಾಝೆಟ್ಟಿನಲ್ಲಿ ಪ್ರಕಟಿಸಿದೆ

— ಸದ್ಯದ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರವು ಪ್ರಾಂತಿಕ ಸರಕಾರಗಳಿಗೆ ಹೆಚ್ಚಿಗೆ ಆರ್ಥಿಕ ಸಹಾಯ ಮಾಡುವಂತಿಲ್ಲವಾದ್ದರಿಂದ ಪ್ರಾಂತಿಕ ಸರಕಾರಗಳು ಪಾನ-ನಿರೋಧನ ಮತ್ತು ಜಮೀನದಾರಿಯ ಉಚ್ಚಾಟನದ ಕಾರ್ಯಕ್ರಮವನ್ನು ತಡೆಹಿಡಿಯಬೇಕೆಂದು ಹಿಂದ ಸರಕಾರವು ಸೂಚಿಸಿತ್ತು. ಆದರೂ ಮುಂಬಯಿ ಸರಕಾರವು ಪಾನ-ನಿರೋಧನದ ಮೂಲ ಕಾರ್ಯಕ್ರಮವನ್ನು ಬದಲಿಸಲೊಪ್ಪುವದಿಲ್ಲೆಂದು ಪ್ರಕಟವಾಗಿದೆ. ಈ ಕಾರ್ಯಕ್ರಮಗಳ ನಿರ್ವಹಣಕ್ಕಾಗಿ ಕೇಂದ್ರ ಸರಕಾರದ ಧನಸಹಾಯತೆ ಬೇಕಾಗಿಲ್ಲೆಂದು ಸರಕಾರದ ಅಂಬೋಣ ಫ್ರಂಟ

— ಶ್ರೀ|| ಷಣ್ಮುಖಮ್ ಚೆಟ್ಟಿಯವರ ರಾಜೀನಾಮೆಯಿಂದ ತೆರವಾದ ಹಿಂದ ಸರಕಾರದ ಅರ್ಥಮಂತ್ರಿಯ ಸ್ಥಳದಲ್ಲಿ ಈಗ ಡಾ|| ಜಾನ್ ಮಥಾಯಿ ಇವರ ನೇಮಣೂಕಿಯಾಗಿದೆ. ೧೯೪೬ರಲ್ಲಿ ಪಂ|| ಜವಾಹರಲಾಲರು ಅಧಿಕಾರ ಸ್ವೀಕಾರ ಮಾಡಿದಾಗ ಅರ್ಥ ಮಂತ್ರಿಪದವು ಇವರಿಗೇ ಕೊಡಲ್ಪಟ್ಟಿತ್ತು. ಮುಸ್ಲಿಮ್ ಲೀಗಿನವರು ಆ ಸರಕಾರದಲ್ಲಿ ಪ್ರವೇಶ ಮಾಡಿದ ಮೇಲೆ ಆ ಸ್ಥಾನವನ್ನು ಮಥಾಯಿಯವರು ಜನಾಬ ಲಿಯಾಕತ ಅಲಿ ಯವರಿಗೆ ಬಿಟ್ಟುಕೊಟ್ಟು, ಸಾರಿಗೆ ಖಾತೆ ಒಪ್ಪಿಸಿಕೊಂಡಿದ್ದರು. ಈಗ ಅವರ ಸಾರಿಗೆ ಖಾತೆಯನ್ನು ಶ್ರೀ|| ಗೋಪಾಲಸ್ವಾಮಿ ಅಯ್ಯಂಗಾರರು ಒಪ್ಪಿಸಿಕೊಂಡಿರುತ್ತಾರೆ

— ರಾಷ್ಟ್ರಸಂಘದ ಮುಂದೆ ದಾಖಲಾದ ನಿಜಾಮರ ದೂರನ್ನು ಹಿಂತೆಗೆದುಕೊಳ್ಳಬೇಕೆಂದು ನಿಜಾಮರು ಶರಣಾಗತಿಯ ದಿನವೇ ಹಿಂದ ಸರಕಾರದ ಮುಖಾಂತರ ತಮ್ಮ ಪ್ರತಿನಿಧಿಗಳಿಗೆ ತಿಳಿಸಿದಾಗ್ಯೂ ಕಳೆದ ಸೋಮವಾರ ನಿಜಾಮರ ಪ್ರತಿನಿಧಿಗಳು ತಮಗೆ ನಿಜಾಮರಿಂದ ಏನೂ ಬರೆದು ಬಂದಿಲ್ಲೆಂದು ಭದ್ರತಾ ಮಂಡಳದ ಮುಂದೆ ಹೇಳಿದರು. ಅದರಿಂದ ಆ ಪ್ರಕರಣದ ವಿಚಾರ ಮುಂದೆ ಬಿದ್ದಿತು. ಈಗ ನಿಜಾಮರು ಭದ್ರತಾ ಮಂಡಳದ ಅಧ್ಯಕ್ಷರಿಗೆ ಒಂದು ಜಲ-ತಂತಿ ಕಳಿಸಿ ಭದ್ರತಾ-ಮಂಡಳದ ಮುಂದಿನ ತಮ್ಮ ಸರಕಾರದ ದೂರನ್ನು ಮುಂದುವರಿಸುವದಿಲ್ಲೆಂದು ತಿಳಿಸಿದ್ದಾರೆ

— ವಿದೇಶಗಳೊಳಗಿರುವ ತಮ್ಮ ಪ್ರತಿನಿಧಿಗಳಿಗೆ ತಮ್ಮ ಹಣ ಕೊಡಕೂಡದೆಂದು ನಿಜಾಮರು ಪರರಾಷ್ಟ್ರೀಯ ಬ್ಯಾಂಕುಗಳಿಗೆ ತಿಳಿಸಿದ್ದಾರೆ

— ಕಾಶ್ಮೀರ ಸಮಿತಿಯವರು ಮೊನ್ನೆ ಜಿನೀವ್ಹಾಕ್ಕೆ ತಿರುಗಿಹೋಗಿದ್ದಾರೆ. ಪಾಕಿಸ್ತಾನವು ತಮ್ಮ ಯುದ್ಧ ತಹಕೂಬಿಯ ಸೂಚನೆಯನ್ನು ಸ್ವೀಕರಿಸಲಿಲ್ಲೆಂದು ಸಮಿತಿಯವರು ವ್ಯಸನಪೂರ್ವಕ ನಮೂದಿಸಿ, ಇನ್ನಾದರೂ ಪಾಕಿಸ್ತಾನ ಸರಕಾರವು ಪುನರಾಲೋಚನೆ ಮಾಡಲೆಂದು ಸೂಚಿಸಿದ್ದಾರೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರ 3/- ರಂತೆ ಬಡ್ಡಿ

ತೀರ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆ ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/ ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಎತ್ತ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ. ೨೨ ೭-೧೯೪೮

ಕೆ. ವಿಟ್ಠಲದಾಸ ಶೆಣೈ,
ಮೇನೇಜಿಂಗ್ ಡೈರೆಕ್ಟರ

— ಜವಳಿ ನಿಯಂತ್ರಣ ತೆಗೆದಾಯಿತು ಅಕ್ಕಿ, ಭತ್ತ, ಗೋಧಿ, ರಾಗಿ, ಜೋಳ, ಮೊದಲಾದ ಆಹಾರ ಧಾನ್ಯಗಳ ವ್ಯಾಪಾರ ಮತ್ತು ಹಂಚುವಿಕೆಯನ್ನು ನಿಯಂತ್ರಿಸಬೇಕೆಂದು ಹಿಂದ ಸರಕಾರವು ನಿರ್ಧರಿಸಿದೆ ಹಿಂದಿನಂತೆ ದೇಶದಲ್ಲಿ ಪುನಃ ನಿಃ ಪದ್ಧತಿಯನ್ನು ರೂಢಿಗೆ ತಳಿಸುವ ವಿಚಾರವು ಇಂದು

— ರಾಷ್ಟ್ರಧ್ವಜವದೊಂದು. ರಾಷ್ಟ್ರದ ಪ್ರತೀಕ ನಾವು ದೇವತಾ-ಪ್ರತೀಕಗಳನ್ನು ಹೇಗೆ ನಿಕೃಷ್ಟ ಸ್ಥಳದಲ್ಲಿ ಹೊರಗೆ ತೆಗೆಯುವದಿಲ್ಲ ಅಥವಾ ನಿಕೃಷ್ಟ ಸ್ಥಳದಲ್ಲಿ ಇಡುವದಿಲ್ಲವೋ ಹಾಗೆಯೇ ರಾಷ್ಟ್ರಧ್ವಜವನ್ನು ಎಲ್ಲ ಬೇಕಾದಲ್ಲಿ ಅಥವಾ ಎಂದು ಬೇಕಾದಾಗ ಹಾರಿಸತಕ್ಕದ್ದಲ್ಲ ಕೆಲವೊಂದು ವಿಶಿಷ್ಟ ಅಧಿಕಾರಿಗಳ ನಿವಾಸಸ್ಥಾನದ ಮೇಲೆ, ಕೆಲವೊಂದು ಕಚೇರಿಗಳ ಮೇಲೆ ಅಥವಾ ಕೆಲವು ಉನ್ನತ ಅಧಿಕಾರಿಗಳ ಮೋಟಾರು ಗಾಡಿಗಳ ಮೇಲೆ ಮಾತ್ರ ಅದನ್ನು ಸದಾಕಾಲ ಹಾರಿಸಬಹುದು ಸಾರ್ವಜನಿಕರು ಅದನ್ನು ರಾಷ್ಟ್ರೀಯ ಮಹೋತ್ಸವಗಳ ಕಾಲಕ್ಕೆ ಹಾರಿಸಬೇಕು ಮತ್ತು ಆ ಮಹೋತ್ಸವ ಮುಗಿಯುತ್ತಲೇ ಧ್ವಜವನ್ನು ಜತನದಿಂದ ತೆಗೆದಿಡಬೇಕು. ಅದನ್ನು ಹಾಗೆಯೇ ಬಿಟ್ಟುಬಿಡುವದು ಅಥವಾ ಹಳ್ಳ ಹಿಡಿದ ಸರಕಾರಿ ಗಳಲ್ಲಿ ಹಾರಿಸುವದು ಧ್ವಜದ ಅಪಮಾನವು ಗುತ್ತದೆ ಎಂದು ಮುಂಬಯಿ ಸರಕಾರವು ಸಾರ್ವಜನಿಕರ ಅನುಗ್ರಹಕ್ಕಾಗಿ ಒಂದು ಪ್ರಕಟನೆ ಹೊರಡಿಸಿದೆ

— ಹರಿಜನರಿಗೆ ಪ್ರವೇಶ ಕೊಡದ ಮಂದಿರಗಳಿಗೆ ತಸ್ತೀಕ ಹಣ ಕೊಡುವದನ್ನು ನಿಲ್ಲಿಸುವ ವಿಚಾರವು ಮುಂಬಯಿ ಸರಕಾರದಲ್ಲಿ ನಡೆದಿದೆಯೆಂದು ವಿಶ್ವಸನೀಯ ವಾಗಿ ತಿಳಿಯುತ್ತದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲಿಗೆ ಪ್ರಖರ ಬಿಸಿಲು ಬೀಳು ತ್ತಿದ್ದರೂ ರಾತ್ರಿಯ ಕಾಲಕ್ಕೆ ಆಗಾಗ ಮಳೆಯೂ ಗುತ್ತಿದೆ ಕಳೆದ ವಾರದ ನಡುವೆ ಒಂದು ದಿನ ಮಾತ್ರ ಬಿದ್ದ ಮಳೆ — ೩ ಇಂಚುಗಳಷ್ಟು — ಈ ವರ್ಷ ಮಳೆಗಾಲದ ಪ್ರಾರಂಭದಿಂದ ಈ ವರೆಗೆ ಬಿದ್ದ ಮಳೆ ೧೪೭ ಇಂಚು ಆದೆ.

ಕಳೆದ ವಾರ ಕೊಂಕಣ ಪಟ್ಟಿಯ ಸಮುದ್ರದಲ್ಲಿ ಮಳೆಯಾಗುತ್ತಿದ್ದುದರಿಂದ ಮುಂಬಯಿಯಿಂದ ಬರಬೇಕಾದ ಸರಕಿನ ಹಡಗವು ಮುಂಬಯಿಯನ್ನು ಬಿಡಲೇ ಇಲ್ಲ ಅದು ಈ ವಾರ ಬರುವದೆಂದು ನಿರೀಕ್ಷಿಸಲಾಗುತ್ತದೆ

ಹೊಸ ಜಿಲ್ಲಾಧಿಕಾರಿಗಳಾದ ರಾ॥ ಎಲ್ ಎಫ್ ಕಾಲ್ಡರ ಇವರು ಇಲ್ಲಿಯ ತಾಲೂಕ ತಪಾಸಣೆಗಾಗಿ ಅಕ್ಟೋಬರ ತಾ ೧೩ರಿಂದ ತಾ ೨೨ರ ವರೆಗೆ ಈ ಊರಲ್ಲಿ ಮುಕ್ಕಾಮು ಮಾಡುವರೆಂದೂ, ಆ ನಂತರ ೫ ದಿನ ವಾಡದನಗರಿಯಲ್ಲಿ ಮುಕ್ಕಾಮು ಮಾಡಿ ತಂಗಳ ಕೊನೆಯ ಕುಮಾರಗೆ ಕಾರವಾರಕ್ಕೆ ಮರಳುವರೆಂದೂ ತಿಳಿಯುತ್ತದೆ

ಕುಮಟಾ ಅರ್ಬನ ಬ್ಯಾಂಕಿನ ವಾರ್ಷಿಕ ಸಭೆ ಆದಿತ್ಯವಾರ ಕೂಡಿತ್ತು. ಬ್ಯಾಂಕಿಗೆ ಕಳೆದ ವರ್ಷ ರೂ ೭೬೭೧ ರಷ್ಟು ಲಾಭವಾಗಿದೆ ಅದರಿಂದ ೭॥ ಸಕ್ಕೆಯಂತೆ ಶೇರುದಾರರಿಗೆ ಲಾಭಾಂಶ ಹಚ್ಚಬೇಕೆಂದು ಕೆಲವು ಸಭಿಕರು ವಾದಿಸಿದರು ಆದರೆ ಇಷ್ಟು ದೊಡ್ಡ ಪ್ರಮಾಣದಿಂದ ಲಾಭಾಂಶ ಹಚ್ಚಲಿಕ್ಕೆ ಸಹಕಾರಿ ಇಲಾಖೆಯು ಪರಿಸ್ಥಿತಿ ಅನುಕೂಲವಿಲ್ಲೆಂದು ಹೇಳಿ ಚಾಲಕರು ಆ ಸೂಚನೆಯನ್ನು ನಿರಾಕರಿಸಿದರು! ೬॥ ಸಕ್ಕೆಯಂತೆ ಲಾಭಾಂಶ ಹಂಚುವ ಸೂಚನೆ ಸಭೆಯಲ್ಲಿ ಮಂಜೂರಾಗಿದೆ

ಗ್ರಾಮ ಸುಧಾರಣೆಯ ಕಾರ್ಯವನ್ನು ಒತ್ತರದಿಂದ ಮುಂದರಿಸುವ ಉದ್ದೇಶದಿಂದ ಮುಂಬಯಿ ಸರಕಾರವು ಪ್ರತಿ ವರ್ಷ ಪೂಜ್ಯ ಗಾಂಧೀಜಿಯವರ ಜಯಂತಿಯ ಕಾಲಕ್ಕೆ 'ಗ್ರಾಮ-ಸುಧಾರ ಸಪ್ತಾಹ'ವನ್ನು ಆಚರಿಸಬೇಕೆಂದು ನಿರ್ಧರಿಸಿದೆ ಅದರಂತೆ ಇದೇ ಬರುವ ತಾ ೨ ೧೦-೪೮ (ಗಾಂಧಿ ಜಯಂತಿಯ ದಿನ)ರಿಂದ ತಾ ೧೨-೧೦-೪೮ರ ವರೆಗೆ ಮುಂಬಯಿ ಪ್ರಾಂತದಲ್ಲೆಲ್ಲ ಈ ವಾರದ ಆಚರಣೆಯಾಗುವದು ಅಲ್ಲಲ್ಲಿಯ ಗ್ರಾಮೋದ್ಧಾರ ಕಾರ್ಯಕರ್ತರೂ ಗ್ರಾಮೀಣ ಕಾರ್ಯಕರ್ತರೂ ಒಂದಿಗೊಂದು ಬಗೆಯ ಗ್ರಾಮೀಣ ಕಾರ್ಯವನ್ನು ಕೈಕೊಂಡು ಸರಕಾರಕ್ಕೆ ಸಹಕರಿಸಬೇಕಾಗಿ ಸರಕಾರದವರ ಅಪೇಕ್ಷೆಯಿದೆ ಈ ಕುಮಟಾ ತಾಲೂಕಿನಲ್ಲಿ ಯಾವ ಬಗೆಯ ಕಾರ್ಯಕ್ರಮ ನಿಶ್ಚಯಿಸಬೇಕೆಂಬುದನ್ನು ನಿರ್ಧರಿಸಲು ತಾಲೂಕಾಧಿಕಾರಿಗಳು ನಾಳೆ ಸಂಜೆ ಕಚೇರಿಯಲ್ಲಿ ಸಭೆಯೊಂದನ್ನು ಕರೆದಿರುತ್ತಾರೆ

ಸಾರ್ವಜನಿಕ ಗಣೇಶೋತ್ಸವದ ಶ್ರೀ | ರಾಘವೇಂದ್ರ ಮೊದಲಾದ ಸದ್ಗೃಹಸ್ಥರ ನೇತೃತ್ವವಾಗಿ, ಜಾಮಸ್ಥರ ರಂಗಮಂದಿರದ ಸಭಾಂಗಣವನ್ನು ಅತ್ಯಂತ ಉತ್ಸಾಹದಿಂದ ಬಗೆಬಗೆ ಕೊಟ್ಟು ಬಗೆ, ಇಲ್ಲಿಯ ನಾಗರಿಕರು ನಗರಾಧ್ಯಕ್ಷ ಡಾ॥ ... ಇವರ ನಿವಾಸದಿಂದ ಮೆರವಣಿಗೆಯಂತೆ ಸಣ್ಣ ಸಂಜೆಯ ಕಡೆಗೆ ಶ್ರೀ ಅಮ್ಮನವರ ದೇವಸ್ಥಾನದಲ್ಲಿ ಸೇರಿ, ದೇವರಿಗೆ ಪುಷ್ಪಹಾರಗಳನ್ನು ಸಲ್ಲಿಸಿದರು ಆ ಕಾಲಕ್ಕೆ ಡಾ॥ ಪೈ ಡಾ॥ ನಾಗವೇಣಿ ... ರಾ॥ ರಾ॥ ವಿಶ್ವೇಶ್ವರ ಹೆಗಡೆ, ಗೋವಿಂದ ಕಾಮತ್, ಶ್ರೀಧರ ಪೈ ಇವರ ಸಮಯೋಚಿತ ಭಾಷಣಗಳ ನಂತರ ಕೊನೆಗೆ "ಜನ ಮನ ಗಣ" ಗೀತೆಯನ್ನು ಹಾಡಿ ಸಭಿಕರು ಚದರಿದರು

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ಹುಟ್ಟುಹಬ್ಬವು ತಾ ೧೨-೧೦-೪೮ನೇ ಮಂಗಳವಾರ ಮಧ್ಯಾಹ್ನ ಹೆಗಡೆ ಗ್ರಾಮದ ಮೋಹನಕೇರಿಯಲ್ಲಿರುವ ಶ್ರೀ ನರಸಿಂಹ ದೇವರ ಗುಡಿಯಲ್ಲಿ ಜರಗುವದೆಂದೂ, ಆ ಕಾಲಕ್ಕೆ ಸಂಘದ ಸದಸ್ಯರೆಲ್ಲ ಬರಬೇಕೆಂದೂ ಸಂಘದ ಅಧ್ಯಕ್ಷರು ಬಿನ್ನವಿಸುತ್ತಾರೆ

ಹೊನ್ನಾವರ— (ತಾ ೨೬-೯-೪೮) ಹೊನ್ನಾವರ ಅರ್ಬನ ಸಹಕಾರಿ ಬ್ಯಾಂಕಿಗೆ ಕಳೆದ ವರ್ಷ (೧೯೪೭-೪೮) ರೂ ೪೪೬೧ ಲಾಭವಾಗಿದೆ. ಈ ಲಾಭದೊಳಗಿಂದ ೫ ಸಕ್ಕೆಯಂತೆ ಶೇರುದಾರರಿಗೆ ಲಾಭಾಂಶ ಹಂಚಲು ರೂ ೧೪೭೧ ವಿನಿಯೋಗಿಸಬೇಕೆಂದೂ, ರೂ ೨೧೨೦ನ್ನು ಸುಧಾರಣಾ ನಿಧಿಯೆಂದು ಪ್ರತ್ಯೇಕಿಸಿಟ್ಟು ಅದರೊಳಗಿಂದ ರೂ ೧೦೦೦ ಕೆನರಾ ಕಾಲೇಜ ನಿಧಿಗೂ ರೂ ೧೦೦೦ ಇಲ್ಲಿಯ ನ್ಯೂ ಇಂಗ್ಲಿಶ ಸ್ಕೂಲನ್ನು ನಡೆಸುತ್ತಿರುವ ಎಜ್ಯುಕೇಶನ್ ಸೊಸೈಟಿಗೂ ದಾನವಾಗಿ ಕೊಡಬೇಕೆಂದು ಚಾಲಕರು ಮಹಾಸಭೆಗೆ ಶಿಫಾರಸು ಮಾಡಿದ್ದರು ಮಹಾಸಭೆಯು ಇಂದು ಸಂತೆ ಕೊಡಲಿದೆ

ಕಳೆದ ರವಿವಾರ ಇಲ್ಲಿ ಒಂದು ದುರ್ಮರಣ ಸಂಭವಿಸಿತು. ಸಾಂತಾ ರಗ್ಗಲ ಎಂಬುವನಲ್ಲಿ ಕಡಗಲ್ಲು ತೆಗೆದ ಒಂದು ಹೊಂಡದಲ್ಲಿ ನೀರು ತುಂಬಿತ್ತು ಅಲ್ಲೇ ಕೆಲವು ಹುಡುಗರು ಆಡುತ್ತಿದ್ದರು ಅವರ ಕೋಲೊಂದು ಹಾರಿ ಆ ನೀರಿನಲ್ಲಿ ಬಿತ್ತಂತೆ ಆ ಕೋಲನ್ನು ತೆಗೆಯಹೋದ ಹುಡುಗನು ಕಾಲು ಜಾರಿ ನೀರಲ್ಲಿ ಮುಳುಗಿದನು ಅವನನ್ನು ಮೇಲೆ ತಂದು ಎಷ್ಟು ಪ್ರಯತ್ನಿಸಿದರೂ ಬದುಕಿಸಲಾಗಲಿಲ್ಲ

ಅರ್ಬನ ಬ್ಯಾಂಕಿನಲ್ಲಿ ಸ್ಟಾಂಪ ಸಿಗದಿರುವದರಿಂದ ಅದರಿಂದ ಬ್ಯಾಂಕಿನಲ್ಲಿ ವ್ಯವಹಾರ ಮಾಡಬೇಕಾದ ಜನರಿಗೆ ತೊಂದರೆಯಾಗುತ್ತದೆಂದೂ ಕೆಲವರ ದೂರುಂಟು

ಭಟಕಳ— ಹೈದರಾಬಾದವು ಹಿಂದಿ ಸರಕಾರಕ್ಕೆ ಶರಣು ಬಂದ ಮರು ದಿವಸವೇ ಶಾರದಾ ಹಾಲ್‌ದಲ್ಲಿ ಸಮ್ಮೇಲನವನ್ನು ನೆರವೇರಿಸಿ ಇಲ್ಲಿಯ ರಾ॥ ಶಮಸುದ್ದೀನ ಮತ್ತು ದಾಮೋದರ ಸಾಹೇಬರಿಗೂ ಅಭಿನಂದನೆಯ ಮಹಾಪೂರ ಗೃಹಸ್ಥರಿಗೂ ಸ ಕಾರವು ಬಿಟ್ಟುಕೊಟ್ಟಿದೆ

ಅಂಕೋಲೆ— ಅವರ್ಸೆಯಲ್ಲೀಗ ೫ ಅಂಗಡಿಗಳಲ್ಲಿ ಬೆಲ್ಲದ ಕಳ್ಳ ಮಾರಾಟವಾಗುತ್ತಿದೆಂದೂ ಜನರಿಗೆ ಸಕ್ಕರೆಯ ಸುದ್ದಿ ಸಿಕ್ಕಿಲ್ಲೆಂದೂ ಅವರ್ಸೆಯ ಕೆಲವರು ಬರೆಯುತ್ತಾರೆ

☞ ಈ ಹೊತ್ತಿನ ಪುರವಣಿ ನೋಡಿರಿ

ಹಳಿಯಾಳ— (ತಾ ೧೪ ೯-೪೮) ಕಳೆದ ಶನಿವಾರ ಇಲ್ಲಿ ಶಿವಾಜಿ ವಿದ್ಯಾಲಯದಲ್ಲಿ ಹರಿಜನರ ಬಗ್ಗೆ ಒಂದು ರಾತ್ರಿ ಶಿಕ್ಷಣ ವರ್ಗವು ಪ್ರಾಂತ ಸಾಹೇಬರ ಹಸ್ತದಿಂದ ಉದ್ಘಾಟಿಸಲ್ಪಟ್ಟಿತು ಆಗ ತಾಲೂಕ ಶಾಲೆಯ ಮುಖ್ಯಾಧ್ಯಾಪಕ ರಾ॥ ಸರದೇಸಾಯಿ ಒಂದು ಸಾದರ ಭಾಷಣ ಕೊಟ್ಟು ಶಿಕ್ಷಕರನ್ನು ಸುಲಭವಾಗಿ ಸಾಕ್ಷರರನ್ನಾಗಿ ಮಾಡುವ ಒಂದು ಕ್ರಮವನ್ನು ತೋರಿಸಿಕೊಟ್ಟರು

NOTICE

Applications are invited for the post of a Chief Executive Officer for Haliyal Municipality from graduates and matriculates knowing Kannad Those with experience of Municipal accounts, sanitation and public work will be preferred and given a higher start The scale of pay is 70-5/2-100 plus D A

Applications stating age, qualifications etc should reach the undersigned by 1-10-1948 Applicants called for interview shall have to present themselves at their own cost

B K Potdar,
Administrator,
18 9 48 Haliyal Municipality

ಕರ್ನಾಟಕ ಶಾಖೆ — ಕೊಪ್ಪೀಕರ ರೋಡ, ಹುಬ್ಬಳ್ಳಿ.

ಕೇಳಿದ್ದು, ಕಂಡದ್ದು.

(ಜಿಲ್ಲಾ–ಸಂಚಾರಿಯು ಬರೆದುದು)

ಮುಂಬಯಿಯ ರಾ॥ ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ ಅವರ ಕಚೇರಿಯಲ್ಲಿ ತಾ ೨೮–೮–೪೭ನೇ ದಿನ ಸಂಜೆ ಓರ್ವ "ಕನ್ನಡಿಗ"ರು ಪ್ರವೇಶ ಮಾಡಿದರು. ಅವರ ಕೈಯಲ್ಲಿ ಒಂದು ಪತ್ರಿಕೆಯಿತ್ತು. ಪ್ರಾಂತಗಳ ಪುನರ್ರಚನೆಯಾಗುವದಾದಲ್ಲಿ ಕಾನಡಾ ಜಿಲ್ಲೆಯ ಶಿರ್ಸಿ ಮತ್ತು ಸಿದ್ದಾಪುರ ತಾಲೂಕುಗಳನ್ನು ಬಿಟ್ಟು ಉಳಿದ ಭಾಗಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಯಾವದೋ ಸಂಸ್ಥೆಯವರು ಮಾಡಿದ ಠರಾವಿನ ವರದಿಯೊಂದು ಆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದರಿಂದ ನಮ್ಮ "ಕನ್ನಡಿಗ"ರ ಪಿತ್ತ ಕೆರಳಿ ಹೋಗಿತ್ತು. ಕರ್ಕಿಯವರ ಕಚೇರಿಯಲ್ಲಿ ಕಾಲಿಡುವಾಗ ಅವರು ಬಡಬಡಿಸುತ್ತಿದ್ದರು! "ಸಿದ್ದಾಪುರ, ಶಿರ್ಸಿ ತಾಲೂಕ ಬಿಟ್ಟು ಬಾಕಿ ಎಲ್ಲ ನಮ್ಮ ತಾಲೂಕುಗಳು ಮಹಾರಾಷ್ಟ್ರದಲ್ಲಿ ಸೇರಬೇಕೆಂದು ಠರಾವು ಮಾಡಿದ್ದಾರೆ! ಏನಿದು! ಈ ಬಗ್ಗೆ ಈ ॥ ಗೋಕುಲ್ಯ ವರಿಗೆ ಸ್ಟೇಟಮೆಂಟ ಕೊಡಲಿಕ್ಕೆ ಬರೆಯುತ್ತೇನೆ!" ಎಂದು ಮುಂತಾಗಿ ಅವರ ಬಾಯಿಂದ ಆವೇಶದ ಉದ್ಗಾರಗಳು ಹೊರಸೂಸುತ್ತಿದ್ದವು! ಆಗ ಕಚೇರಿಯಲ್ಲಿ ನಮ್ಮ ಕಡೆಯ ವೃದ್ಧರೋರ್ವರು ಕೂತಿದ್ದರು. "ಕನ್ನಡಿಗ"ರ ಈ ಆವೇಶವನ್ನೂ ಉದ್ಗಾರಗಳನ್ನೂ ನೋಡಿ ಅವರು ಬೆರಗುಗೊಂಡರು, ಮತ್ತು "ಠರಾವು ಮಾಡಿದರು, ಹೌದು! ಅದರಿಂದೇನಾಯಿತು?" ಎಂದು ಶಾಂತ ರೀತಿಯಿಂದ 'ಕನ್ನಡಿಗ'ರಿಗೆ ಪ್ರಶ್ನೆ ಮಾಡಿದರು. 'ಕನ್ನಡಿಗ'ರ ಪಿತ್ತ ಇನ್ನಷ್ಟು ಕ್ಷೋಭೆಗೊಂಡಿತು! "ಅವರಿಗೆ ಶೂಟ ಮಾಡಬೇಕು! (ಗುಂಡು ಹಾಕಿ ಕೊಲ್ಲಬೇಕು!)" ಎಂದು ಅವರು ಹಾರಿದರು! "ನನ್ನನ್ನು ಕೊಲ್ಲುವ ವಿಚಾರ ನಿಮ್ಮಂಥವರಿಗೆ ಶೋಭಿಸುತ್ತದೋ! ನಿಮ್ಮ ತಲೆಯ ಮೇಲೆ ಗಾಂಧಿ ಟೊಪ್ಪಿಗೆಯುಂಟು! ಮೈಮೇಲೆ ಖಾದಿ ತೊಟ್ಟಿರುವಿರಿ! ಇಂಥ ಅಹಿಂಸಾಸೂಚಕ ವೇಷ ಧರಿಸಿಕೊಂಡು ಮನಸ್ಸಿನಲ್ಲಿ ಹಿಂಸೆಯ ವಿಚಾರವನ್ನಿಟ್ಟುಕೊಳ್ಳುವದು ಸಭ್ಯತೆಯ ಅಥವಾ ಸತ್ಪ್ರವೃತ್ತಿಯ ಲಕ್ಷಣವೇನು! ನನಗೆ ಶೂಟ ಮಾಡಿದರೆ ನಿಮಗಾಗುವ ಲಾಭವೇನು?" ಎಂದು ವೃದ್ಧರು ಆ ಸಂತಪ್ತ "ಕನ್ನಡಿಗ"ರಿಗೆ ಪ್ರತಿಪ್ರಶ್ನೆ ಮಾಡಿದರು. ವೃದ್ಧರು ಹೇಳಿದ ಈ ಬುದ್ಧಿಯ ಮಾತಿನಿಂದಲೂ "ಕನ್ನಡಿಗ"ರಿಗೆ ವಿವೇಕೋದಯವಾಗಲಿಲ್ಲ! ಅಥವಾ ಅವರ ಪಿತ್ತ ಶಾಂತವಾಗಲಿಲ್ಲ! ನಿಮ್ಮಂಥ ಸಭಿಕರಿಂದ ಖಾದಿ ಉಡುಪು ಧರಿಸಿದ "ಗಾಂಧೀ–ಭಕ್ತ"ರ ಬಾಯಿಂದ "ಶೂಟ ಮಾಡಬೇಕು" ಎಂದು ಮುಂತಾಗಿ ಹಿಂಸಾ–ಪ್ರಚೋದಕ ಶಬ್ದಗಳು ಹೊರಬೀಳುತ್ತಿದ್ದುದು ಗಾಂಧೀ–ಭಕ್ತಿಗೂ ಕಾವೃಟ್ಟ ಖಾದಿಗೂ ಅಪಮಾನವನ್ನು ತರುತ್ತದೆ ಎಂಬ ವಿಚಾರವೂ ಆ "ಕನ್ನಡಿಗ"ರಿಗೆ ಬರಲಿಲ್ಲ! "ನಿಮ್ಮನ್ನು ಕೊಲ್ಲಬೇಕೆಂದು ನಾನು ಹೇಳಲಿಲ್ಲ. ನಿಮ್ಮಂಥವರಿಗೆ (ಕಾರವಾರ ಜಿಲ್ಲೆಯನ್ನು ಕರ್ನಾಟಕದ ಸೇರಿಸದೆ ಮಹಾರಾಷ್ಟ್ರದಲ್ಲಿ ಸೇರಿಸಬೇಕೆನ್ನುವವರ ಮಾತನ್ನು ಶಾಂತ ರೀತಿಯಿಂದ ಕೇಳಿಕೊಳ್ಳುವವರಿಗೆ ಎಂದರ್ಥವಿರಬಹುದು) ಗುಂಡು ಹಾಕಿ ಕೊಲ್ಲಬೇಕು, ಎಂದು ನಾನು ಹೇಳಿದ್ದು!" ಹೀಗೆ ಕನ್ನಡಿಗರು ತಮ್ಮ ನೊಣಲವಾಕಿನ ಭಾಷ್ಯ ಮಾಡಿದರು! ವೃದ್ಧ–ಕನ್ನಡಿಗರೊಳಗೆ ಇನ್ನೂ ಕೆಲವು ಕಾಲ ವಾದ ನಡೆಯಿತು. ಆದರೆ ಅದನ್ನೆಲ್ಲ ಇಲ್ಲಿ ನಮೂದಿಸುವದಿಲ್ಲ.

* *

ಮೇಲಿನ ಕಥೆಯೊಳಗಿನ ಕನ್ನಡಿಗರು ದಿಸಿ ನೆಕ್ಸರದ ಬುದ್ಧಿಯ ಮತ್ತು ಹೊಣೆಗಾರಿಕೆಯಿಲ್ಲದ ಯಾರೊಬ್ಬ ಸಾಮಾನ್ಯ ತರುಣನಿರಬಹುದೆಂದು ಓದುಗರು ತಿಳಿಯಕೂಡದು. ಈ ಕನ್ನಡಿಗರು ತಮ್ಮ ಪ್ರಾಯದ ೬೦ನೇ ವರುಷ ವನ್ನು ಎಂದೋ ದಾಟಿರುವ ಮತ್ತು ಈಗ ೨೫ ವರ್ಷಗಳಿಂದ ಮುಂಬಯಿ ಸರಕಾರದ ಓರ್ವ ಉಪಮಂತ್ರಿಗಳಾಗಿರುವ ನಮ್ಮ ರಾ॥ ಸ ಪ ಗಾಂವಕಾರರಾಗಿದ್ದಾರೆ! ಕಾರವಾರ ಜಿಲ್ಲೆಯನ್ನೊಳಗೊಂಡು ಪ್ರತ್ಯೇಕ ಕರ್ನಾಟಕ ಪ್ರಾಂತವಾದಲ್ಲಿ ಆ ಪ್ರಾಂತದ ಸರಕಾರದೊಳಗೆ ತಮಗೊಂದು ಮಂತ್ರಿಪದ ದೊರೆಯುವದೆಂಬ ಕನಸನ್ನೂ ಅವರು ಕಾಣುತ್ತಿದ್ದಾರೆ! ಇಂಥ ವಯೋವೃದ್ಧ, ಜೊತೆಗಾರ ಸ್ಥಳದಲ್ಲಿರುವ ಮತ್ತು ಯಾವಾಗಲೂ ಗಾಂಧೀಜಿಯವರ ನಾಮ–ಸಂಕೀರ್ತನೆ ಮಾಡುವ ಗೃಹಸ್ಥರು ಮೇಲೆ ವಿವರಿಸಿದಂತೆ ಯದ್ವಾ ತದ್ವಾ ಮಾತಾಡಬಹುದೇನು ಎಂಬದೊಂದು ಪ್ರಶ್ನೆ!

* *

ನಮ್ಮ ಜಿಲ್ಲೆಯ ಉಗ್ರಾಣಿಗಳ ಕೆಲಸದ ಮಿತಿ, ಸಂಬಳ, ಭತ್ತೆ ಮುಂತಾದವುಗಳ ಬಗ್ಗೆ ರಾ॥ ರಾಮಚಂದ್ರ ಪ್ರಭು ಇವರು ಕೇಳಿದ ಪ್ರಶ್ನೆಗೆ ಎಸೆಂಬ್ಲಿಯಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆನಂದರೆ — "ಕಾನಡಾ ಜಿಲ್ಲೆಯೊಳಗಿನ ಉಗ್ರಾಣಿಗಳು ಇಡೀ ದಿವಸ ಸರಕಾರಿ ನೌಕರಿ ಮಾಡುವದಿಲ್ಲ. ಕೆಲವೊಮ್ಮೆ ಮಾತ್ರ (ಇಂತಹ ಪ್ರಸಂಗಗಳು ಅಪರೂಪ) ಅವರು ಇಡೀ ದಿವಸ ದುಡಿಯಬೇಕಾಗುತ್ತದೆ. ಇದ್ದರಿಂದಲೇ ಅವರು ಸಾರ್ವಕಾಲಿಕ (whole time) ಸರಕಾರಿ ನೌಕರರಾಗಿರುವದಿಲ್ಲ. ಇಡೀ ದಿನ ಈ ಜನರಿಂದ ದುಡಿಸಿಕೊಳ್ಳದಿರುವದರಿಂದ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವಂತೆ ಬೇರೆ ವ್ಯವಸಾಯ ಮಾಡಲಿಕ್ಕೆ ಕೆಲವೊಂದು ಫುರಸೊತ್ತು (some spare time) ಅವರಿಗೆ ವಾಡಿಕೆಯಾಗಿ (normally) ಕೊಡಬೇಕೆಂದೂ ಕಾನಡಾ ಜಿಲ್ಲೆಯ ಜಿಲ್ಲಾಧಿಪರಿಗೆ ಸ್ಪಷ್ಟ ತಿಳಿಸಿದ್ದುಂಟು. ಉಗ್ರಾಣಿಗಳಿಗೆ ನೇಮಿಸಿಕೊಟ್ಟಿರುವ ಕೆಲಸಗಳನ್ನು ನೋಡಿದಲ್ಲಿ ಅವರಿಗೆ ವರ್ಷದ ಹನ್ನೆರಡೂ ತಿಂಗಳಲ್ಲಿ (all the vear round) ಇಡೀ ದಿನ ಅವರಿಗೆ ಸರಕಾರಿ ಕೆಲಸಕ್ಕೆ ಕರೆಯುವದು ಅವಶ್ಯವಿರುವದಿಲ್ಲವಾಗಿಯೂ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರಿಗೆ ತಿಳಿಸಿಯದೆ. ಉಗ್ರಾಣಿಗಳಿಂದ ಕೆಲಸ ಮಾಡಿಸಿಕೊಳ್ಳುವ ಗ್ರಾಮಸ್ಥರೂ ಅಧಿಕಾರಿಗಳೂ ಮಾನ್ಯ ಮಂತ್ರಿಗಳ ಈ ಉತ್ತರವನ್ನು ಚೆನ್ನಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿ ಸೂಚನೆಯಿದೆ. ಉಗ್ರಾಣಿಗಳು ಕೂಡ ಬರೇ ಸರಕಾರಿ ವೇತನದಿಂದಲೇ ತಮ್ಮ ಸಂಸಾರ ಸಾಗಿಸುವೆವೆಂಬ ವಿಚಾರವನ್ನು ಬಿಟ್ಟು, ಬೇರೆ ಹೋದಿಗೆಗಳನ್ನು ಕೈಕೊಳ್ಳಬೇಕು, ಮತ್ತು ಆ ಹೋದಿಗೆಗಳ ನಿರ್ವಹಣಕ್ಕಾಗಿ ಅವಶ್ಯವುಳ್ಳ ಫುರಸೊತ್ತನ್ನು ಹಕ್ಕಿನಿಂದ ಪಡೆದುಕೊಳ್ಳಬೇಕು. ಇಡೀ ದಿನ ಅಥವಾ ಪ್ರತಿ ದಿನ ಸರಕಾರಿ ಕೆಲಸಕ್ಕೆ ಹೋಗಲು ಅವರು ಒಪ್ಪಕೂಡದು. ತಮ್ಮ ಇತರ ಉದ್ಯೋಗವನ್ನು ಸಾಗಿಸಿಕೊಂಡು ಹೋಗಲು ವ್ಯತ್ಯಯವಾಗದಷ್ಟೇ ಹೊತ್ತು ಸರಕಾರಿ ಕೆಲಸ ಮಾಡಬೇಕು. ಹೀಗೆ ಮಾಡಿದರೆ ಮಾತ್ರ ಉಗ್ರಾಣಿಗಳ ಕೆಲಸದ ಮಹತ್ವವೂ ಅವರಿಗೆ ತಕ್ಕ ಸಂಬಳ ಕೊಡಬೇಕೆಂಬುದರ ಮಹತ್ವವೂ ಸರಕಾರಕ್ಕೆ ತಿಳಿಯುವದು.

* *

ಕುಮಟಾ ತಾಲೂಕಿನಲ್ಲಿ ಒಕ್ಕಲತನದ ಕಾನೂನಿನಿಂದ ಬೆಳೆ ಹೆಚ್ಚಾಗಿದೆಯೋ ಕಡಿಮೆಯಾಗಿದೆ ಎಂದು ರಾ॥ ಗೋಕುಲ್ಯವರು ಕೌನ್ಸಿಲಿನಲ್ಲಿ ಮಾನ್ಯ ಕಂದಾಯ ಮಂತ್ರಿಗಳಿಗೆ ಒಂದು ಪ್ರಶ್ನೆ ಮಾಡಿದ್ದರು. ಆ ಪ್ರಶ್ನೆಯ ಉಪಾಂಗವಾಗಿ ರಾ॥ ಗೋಕುಲ್ಯವರು ಈ ಮುಂದಿನ ಉಪ ಪ್ರಶ್ನೆಗಳನ್ನು ಕೇಳಿದ್ದರು – "(ಕ) ೧೯೪೭ರಲ್ಲಿ ಕುಮಟಾ ತಾಲೂಕಿನಲ್ಲೂ ಕಾನಡಾ ಜಿಲ್ಲೆಯ ಬೇರೆ ತಾಲೂಕುಗಳಲ್ಲೂ ಬೆಳೆ ಕೊಯ್ಯುವ ಬೆಳೆಯ ಮಾನ ಕಂಡುಹಿಡಿಯಲು ನಡೆಸಿದ ಪ್ರಯೋಗಗಳ ಫಲಕ್ಕೆ ಒಂದೇ ಪ್ರದೇಶದೊಳಗೆ ಒಕ್ಕಲಿಗನು ಸಾಗು ಮಾಡಿದ ಹೊಲದ ಪ್ರತಿ ಎಕರೆಯ ಸರಾಸರಿ ಬೆಳೆಯು ಆದರ ನೆರೆಹೊರೆಯಲ್ಲೇ ಹೊಲದೊಡೆಯರು ಸಾಗುವಳಿ ಮಾಡಿದ ಹೊಲದ ಬೆಳೆಗಿಂತ ಕಡಿಮೆ ಇದ್ದುದು ಕಂಡು ಬಂದಂಥ ಸಂಗತಿ ಸರಕಾರದ ನಿದರ್ಶನಕ್ಕೆ ಬಂದಿದೆಯೆ ಹೇಗೆ? (ಖ) ಇಲ್ಲದಿದ್ದರೆ ಈ ಮಾತಿನ ಸತ್ಯತೆ ತಿಳಕೊಳ್ಳುವದಕ್ಕಾಗಿ ಹಿರೇಗುತ್ತಿ ಗ್ರಾಮದಲ್ಲಿ ಸ್ವತಃ ಜಿಲ್ಲಾಧಿಪರು ನಡಿಸಿದ ಪ್ರಯೋಗಗಳ ಮಾಹಿತಿಯನ್ನು ತರಿಸಿ ಸರಕಾರವು ಪರಿಶೀಲಿಸುವದೇ?" ಮಾನ್ಯ ಮುಂದಾರಜಿಯವರು ಈ ಉಪ–ಪ್ರಶ್ನೆಗಳಿಗೆ ಉತ್ತರ ಕೊಡುವದನ್ನೇ ತಪ್ಪಿಸಿಕೊಂಡಿದ್ದಾರೆ! "Cases are also not uncommon where the yield of land cultivated by long term tenants is more than that of lands cultivated by landlords and short term tenants" (ದೀರ್ಘಾವಧಿಯ ಲಾವಣಿಗೆ ಹೊಲ ಹಿಡಿದು ಸಾಗುವಳಿ ಮಾಡಿದ ರೈತರ ಬೆಳೆಯ ಮಾನವು ಸ್ವಂತ ಒಡೆಯರು ಮತ್ತು ಅಲ್ಪಾವಧಿಯ ಲಾವಣಿದಾರರು ಮಾಡಿಕೊಂಡ ಒಕ್ಕಲಿಗರು ಸಾಗು ಮಾಡಿದ ಹೊಲದ ಬೆಳೆಯ ಮಾನಕ್ಕಿಂತ ಹೆಚ್ಚಿಗೆ ಇರುವ ಉದಾಹರಣೆಗಳು ಅಷ್ಟೇನೂ ವಿರಳ ಅಥವಾ ಅಪರೂಪವಾದುವದಿಲ್ಲ) ಎಂದವರು ಅಸಂಬದ್ಧ ಉತ್ತರವನ್ನಷ್ಟೇ ಕೊಟ್ಟಿದ್ದಾರೆ! ಶ್ರೀ ಮ.ರಾ.

ಮಹಾಲಕ್ಷ್ಮೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಕುಂದಾಪುರ

ನಮ್ಮಲ್ಲಿ ೧೯೪೮ನೇ ಇಸವಿಯ ಶಕ್ತಿ, ಹೊಸ ಆಕಾರದ ಪೋಕೆಟ್ ಡ್ಯಾರಿಗಳು ಬರುವ ನವಂಬರ ತಿಂಗಳ ೩೦ ತಾರೀಕಿನೊಳಗೆ ತಯಾರಾಗುವವು. ಹೆಚ್ಚಿಗೆ ಡ್ಯಾರಿಗಳಿಗೆ ಒರ್ಡರ್ ಕೊಟ್ಟಲ್ಲಿ ಯೋಗ್ಯ ಕಮಿಶನ್ ಕೊಡಲಾಗುವದು.

ಸಿಗುವ ಸ್ಥಳ —

ಮಹಾಲಕ್ಷ್ಮಿ ಬುಕ್–ಡಿಪೋ,
ಕುಂದಾಪುರ

ಬೊಂಬೇ ಸ್ಟೀಮ ನೆವ್ಹಿಗೇಶನ್ ಕಂಪನಿ, ಲಿಮಿಟೆಡ್.

ಮುಂಬಯಿ–ಮಂಗಳೂರ ಲ್ಯಾನ.

ಪ್ರವಾಸಿಕರ ಹಡಗ ಮುಂಬಯಿಯಿಂದ ಪ್ರತಿ ವಾರಕ್ಕೆ ಹೊರಡುವದು.

ನಮ್ಮ ಮುಂಬಯಿ–ಮಂಗಳೂರ ಕಿಂದಾರೆಯಲ್ಲಿ ಪ್ರವಾಸಿಗಳ ಹಡಗಗಳ ವ್ಯವಹಾರಕ್ಕೆ ಇದೇ ಬರುವ ಸಪ್ಟಂಬರ ತಾರೀಖು ೨೫ನೇ ಗುರುವಾರದಿಂದ ಪ್ರಾರಂಭವಾಗುವದು. ತದನಂತರ ಹಡಗವು ಹಿಂದಿನಂತೆ ಮುಂಬಯಿಯಿಂದ ಮಂಗಳವಾರ ಹೊರಡದೆ, ಪ್ರತಿ **ಗುರುವಾರ ಮಧ್ಯಾನ್ಹ ೧೨ಕ್ಕೆ ಮುಂಬಯಿ ಬಿಟ್ಟು**, ಮಾರ್ಮಗೋವಾ, ಕಾರವಾರ, ಕುಮಟಾ, ಭಟಕಳ, ಮಲ್ಪೆ ಬಂದರಗಳಲ್ಲಿ ಬಂದರ ಮಾಡಿ, ಶನಿವಾರ ಪ್ರಾತಃಕಾಲದ ೬ಕ್ಕೆ ಮಂಗಳೂರಿಗೆ ಮುಟ್ಟುವದು, ಮತ್ತು ಅಂದೇ ಅಪರಾಹ್ನ ೧೧॥ ಘಂಟೆಗೆ ಮಂಗಳೂರ ಬಿಟ್ಟು, ಮೇಲಿನ ಬಂದರಗಳನ್ನು ಸಂದರ್ಶಿಸಿ, ಸೋಮವಾರ ಬೆಳಗ್ಗೆ ಮರಳಿ ಮುಂಬಯಿ ಸೇರುವದು.

ತಾ ೧೭–೯–೧೯೪೭.

ಸಿಂಧ್ಯಾ ಸ್ಟೀಮ ನೆವ್ಹಿಗೇಶನ್ ಕಂ, ಲಿ
ಮೆನೇಜಿಂಗ ಏಜಂಟ್ಸ

ಶ್ರೀ ಗೋಕರ್ಣ ಮಠಾಧೀಶರ ಯೋಗಕ್ಷೇಮ ವಾರ್ತೆ

ಮಂಗಳೂರು, ೩೦-೯-೪೮

ಹಿಂದೆ ತಿಳಿಸಿದಂತೆ ಶ್ರೀ ರಾಮನವಮಿಯ ಉತ್ಸವ ತೀರಿಸಿ ಪರ್ತಗಾಳಿಯಿಂದ ಮಾರ್ಚ ೩೧ನೇ ದಿವಸ ಹೊರಟು [illegible] ಗಳ ಅನುಕೂಲತೆಗಾಗಿಯೂ [illegible] ಸ ಭಾರದಿಗಾಗಿಯೂ (ಮಂಗಳೂರ ನಗರದ ಪರಿಸರದಲ್ಲಿರುವ) ಕೊಂಚಾಡಿಯ ಆಶ್ರಮದಲ್ಲಿ ಇಳಕೊಂಡ ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶ ಶ್ರೀಮದ್ ದ್ವಾರಕಾನಾಥ ತೀರ್ಥ ಗುರುಗಳು ಮಂಗಳೂರು ಮಹಾಜನರ ಅಪೇಕ್ಷೆಯಂತೆ ಮಳೆಗಾಲಕ್ಕೆ ಪ್ರಾರಂಭವಾದ ಮೇಲೆ ಈ ನಗರದಲ್ಲಿಗಳ ತನ್ನ ಸ್ವಂತ [illegible] ಚಿತ್ತೈಸಿ, ಅಲ್ಲೇ ಮುಂದೆ ಕಳೆದ ಆಷಾಢ ಶು ೧೫ ಯ ಮೇಗೆ ಚಾತುರ್ಮಾಸ್ಯ ವ್ರತವನ್ನು ಪ್ರಾರಂಭಿಸಿದ್ದರು.

ಈ ಚಾತುರ್ಮಾಸ್ಯ ಕಾಲದಲ್ಲಿ ಮಠದೊಳಗೆ ನಿಯತ ರೀತಿಯಂತೆ ವಿದ್ಯಾದಾನ ನಡೆಯುತ್ತಿತ್ತು, ಸಾಯಂಕಾಲಕ್ಕೆ ಪುರಾಣ-ಪ್ರವಚನಗಳೂ, ಭಜನೆ ಪ್ರಾರ್ಥನೆಗಳೂ [illegible] ಯುತ್ತಿದ್ದವು. ದಿನಾಲೂ ಭಕ್ತ-ಜನರ ಸಂದಣಿ [illegible] ತ್ತಿತ್ತು.

ಮಠದಲ್ಲಿ ಸ್ವಾಮಿಗಳ ಚೌಕ-ಪಟ್ಟದ ವ್ರತವು [illegible] ನೆರವೇರಿತು. ಅದಕ್ಕಾಗಿ ೭ ಅಡಿ ಎತ್ತರವಾದ ಭವ್ಯ ಮತ್ತು ಸುಂದರ ಗರುಡಾಕಾರದ ಮೂರ್ತಿಯನ್ನು ತಯಾರಿಸಿದ್ದರು. ಇಷ್ಟು ದೊಡ್ಡ ಆಕೃತಿಯನ್ನು ಹಿಂದೆಂದೂ ಕಂಡು ನೋಡಿದ್ದಿಲ್ಲವೆಂದು ಇಲ್ಲಿಯ ಜನರು ಹೇಳುತ್ತಾರೆ. ಭಾದ್ರಪದ ಶು ೪ ನೆಯ ದಿನ ಬಲು ವಿಜೃಂಭಣೆಯಿಂದ ಶ್ರೀ ಮಂಗಲಮೂರ್ತಿಯನ್ನು ಶ್ರೀ ವೆಂಕಟರಮಣ ದೇವರ ಕೆರೆಗೆ ಒಯ್ದು ವಿಸರ್ಜಿಸಲಾಯಿತು.

ನೂಲ್ಹುಣ್ಣಿಮೆಯ ದಿನ ಶ್ರೀಗಳ ಚಾತುರ್ಮಾಸ್ಯ ವ್ರತದ ಸಮಾಪ್ತಿಯಾಯಿತು. ಅಂದು ಮಹಾಸಮಾರಾಧನೆ ಜಾಳಿಸಿದರು. ಶ್ರೀ ಮಠದ ಸಂಪ್ರದಾಯದಂತೆ ಸಂಪ್ರದಾಯದಂತೆ ಅನ್ನ-ಸಂತರ್ಪಣೆ ಜಾಳಿಸಿತ್ತು. ಸಾಯಂಕಾಲದಲ್ಲಿ ಸೀಮೋಲ್ಲಂಘನೆಯ ಉತ್ಸವದ ಮೆರವಣಿಗೆ ಹೊರಡಿಸಲಿಕ್ಕೆ (ಯಾಕೆಂದರೆ ಇನ್ನು ಕಡೆ ಕಡೆಗಳಂತೆ ಹಿಂದು-ಮುಸ್ಲಿಂ ದಂಗೆಯ ಕದನಕ್ಕಾರಂಭವಾದ ಕೊಡದೇ ಇಲ್ಲಾಧಿಕಾರಿ) ಅಲ್ಲಿಯ ಕ್ರಿ. ಪ್ರೀ. ಕೋರ್ಟಿನ ನಿಷೇಧ ಇಂದಿನವರೆಗೂ ಒಂದು ಆಜ್ಞೆ ಹೊರಡಿಸಿ ಮೆರವಣಿಗೆ ಮುಂತಾದವುಗಳನ್ನು ಪ್ರತಿಬಂಧಿಸಿದ್ದರು. ಸರಕಾರದಿಂದ ವಿಶೇಷ ಅಪ್ಪಣೆಯನ್ನು ಪಡಕೊಳ್ಳಲಾಗಿತ್ತು. ಮೆರವಣಿಗೆಯ ಸಂತರ್ಪಣೆಯಲ್ಲಿ ಸುಮಾರು ೩-೩ ಸಾವಿರ ಜನರಿಗೆ ಬಡಿಸಲಾಯಿತು.

ಸಾಯಂಕಾಲದಲ್ಲಿ ಸೀಮೋಲ್ಲಂಘನೆಯ ಉತ್ಸವವಾಯಿತು. ಈ ಉತ್ಸವಕ್ಕಾಗಿ ಕೊಡ ಹೊರಟ ಶ್ರೀ ಗುರುವರ್ಯರು ಶ್ರೀ ವೆಂಕಟರಮಣ ದೇವರ ಮಂದಿರಕ್ಕೆ ಚಿತ್ತೈಸಿ, ಅಲ್ಲಿ ಮಂದಿರದ ಮಹಾದ್ವಾರದ ಸ್ಥಾಪನೆ ಮಾಡಿಕೊಡಬೇಕೆಂದೂ, ಮಂದಿರದ ಒಳಗೆ ಮಂಟಪದಲ್ಲಿ ಒಂದು ಪ್ರವಚನವನ್ನಿತ್ತು, ತಮ್ಮೆಲ್ಲರನ್ನು ಅನುಗ್ರಹಿಸಬೇಕೆಂದೂ ಶ್ರೀ ವೆಂಕಟರಮಣ ದೇವಸ್ಥಾನದ ಮಹಾಜನರ ಪ್ರಾರ್ಥನೆಯಾಗಿತ್ತು.

ಸೀಮೋಲ್ಲಂಘನೆಯ ಮೆರವಣಿಗೆಯ ವೈಭವವನ್ನು ಬಣ್ಣಿಸಲಸದಳ. ೬-೭ ಸಾವಿರ ಸ್ತ್ರೀ-ಪುರುಷ ಭಕ್ತರು ಈ ಉತ್ಸವದಲ್ಲಿ ನೆರೆದಿದ್ದರು. ಶ್ರೀ ಗುರುಗಳು ಪುಷ್ಪಾಲಂಕೃತ ಪಾಲಕಿ-ಬಂಡಿಯಲ್ಲಿ ಆರೂಢರಾಗಿದ್ದರು. ಮೆರವಣಿಗೆಯು ಸಿದಾನಂತರ ಶ್ರೀ ವೆಂಕಟರಮಣ ದೇವರ ಕೆರೆಯ ಕಡೆ ಸಾಗಿತು. ಅಲ್ಲಿ ಶ್ರೀ ಗುರುಗಳು ಮೃತ್ತಿಕಾ-ವಿಸರ್ಜನೆಯೊಂದಿಗೆ ಚಾತುರ್ಮಾಸ್ಯ-ವ್ರತದ ಪರಿಸಮಾಪ್ತಿಯನ್ನು ಮಾಡಿ, ಕಾಗಿಯೇ ಮೆರವಣಿಗೆಯಿಂದ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಚಿತ್ತೈಸಿದರು. ಅಲ್ಲಿ ಪೂರ್ವಸಂಕೇತದಂತೆ ಗುರುಗಳ ಪವಿತ್ರ ಕರಕಮಲಗಳಿಂದ ಮಹಾದ್ವಾರದ ಸ್ಥಾಪನೆಯಾಯಿತು. ಈ ವಿಧಿಯನ್ನು ಮುಗಿಸಿ, ಶ್ರೀಗಳವರು ದೇವದರ್ಶನ ತೆಗೆದುಕೊಂಡು, ಸಭಾಸ್ಥಾನಕ್ಕೆ ಬಂದರು. ಗುರುಗಳು ಪೀಠಸ್ಥರಾದ ಬಳಿಕ ಶ್ರೀ ಮಂದಿರದ ಮಹಾಜನರ ಪಾದ ಪೂಜೆಯಾಯಿತು. ಆ ವೇಳೆ ಪ್ರವಚನವಾಯಿತು. ಗುರುಗಳ ಪಟ್ಟಗಳು ನೀಡಿದ ಪ್ರವಚನದ ಸಾರ ಮುಂದಿನಂತೆ. ಕೇಳಿಸುಕೊಳುವ ಗುರುಲತೆ ಮಹಾಜನರ ಹರ್ಷ-ಧ್ವನಿ-ಕ್ಷೇಮದ ಯಂತ್ರವನ್ನು ತಣಿಸಿಬಿಟ್ಟರು.

ಶ್ರೀಪಾದಂಗಳ ಭಾಷಣ

ಶ್ರೀಗಳ ಭಾಷಣದ ಸಾರಾಂಶ ಇಂತಿದೆ — ಅಖಿಲ ಮಾನವ ಜಾತಿಯ ಉದ್ಧಾರವನ್ನು ಗುರಿಯಾಗಿಟ್ಟುಕೊಂಡು ಜನರಿಗೆ ಧರ್ಮದ ಬೋಧನೆ ಮಾಡುತ್ತ, ಸಂಚಾರ ಮಾಡುವ ಕರ್ತವ್ಯವುಳ್ಳ ನಮ್ಮಂತಹ ಸನ್ಯಾಸಿಗಳ ಕರ್ತವ್ಯವಿದೆ. ಆದರೆ ಮಳೆಗಾಲದ ೪ ತಿಂಗಳುಗಳು ಸಂಚಾರಕ್ಕೆ ಅನುಕೂಲವಾಗುವದಿಲ್ಲ. ಪರಮಾತ್ಮನು ಕರುಣಿಸಿದ ಈ ೪ ತಿಂಗಳಲ್ಲಿ ಕೇವಲ ಯಾಗಾದಿ ಕರ್ಮಗಳು ನಡೆದು ಪುರಾಣಗಳಲ್ಲಿ ಹೇಳಿದ ಪರಮಾತ್ಮನ ಲೀಲೆ ಯ [illegible] ಉಪದೇಶ ಮಾಡಬೇಕೆಂದು ಶಾಸ್ತ್ರಗಳು ಹೇಳುತ್ತವೆ. ಇಂತಹ ಸದ್ಯದಲ್ಲಿ ಸನ್ಯಾಸಿಗಳು ಕೂಡ ಒಂದೇ ಸ್ಥಳದಲ್ಲಿದ್ದು ಧರ್ಮಜಾಗೃತಿಯ ಕಾರ್ಯ ಮುಂದರಿಸಬೇಕೆಂದು ಹೇಳಲಾಗಿದೆ.

ಧರ್ಮೋ ರಕ್ಷತಿ ರಕ್ಷಿತಃ

ನಾವು ಧರ್ಮವನ್ನು ಪಾಲಿಸಿದರೆ ಅದು ನಮ್ಮ ಸಂರಕ್ಷಣೆ ಮಾಡುತ್ತದೆ. ಕಾರಣ ಪ್ರತಿಯೊಬ್ಬರೂ ಧರ್ಮವನ್ನು ಆಚರಿಸಬೇಕು. ಆದರದ ಧರ್ಮವನ್ನು ಬೋಧಿಸುವುದಕ್ಕೆ ಸನ್ಯಾಸಿಗಳಿರುವದು ನಮ್ಮ ಧರ್ಮ. ಇಂತಹ ಧರ್ಮಬೋಧನೆಗೆ ಅನುಕೂಲ ಸ್ಥಳವೇ ಬೇಕು.

ಮಠ ಮಂದಿರಗಳ ಪ್ರಯೋಜನ

ಆದಕ್ಕಾಗಿಯೇ ಮಠ-ಮಂದಿರಗಳು ನಿರ್ಮಾಣ ಹೊಂದಿವೆ. ದೇವರು ಸರ್ವವ್ಯಾಪಿಯು, ಮೇಲಾಗಿ ಪ್ರತಿ ಮನೆಯಲ್ಲೂ ದೇವರ ಪ್ರತಿಷ್ಠೆಯಿದ್ದರೂ ಹೀಗಿರುವಾಗ ಊರಲ್ಲಿ ಸಾವಿರಾರು ಖರ್ಚುಮಾಡಿ ದೊಡ್ಡ ದೊಡ್ಡ ಮಠ-ಮಂದಿರಗಳನ್ನು ಯಾಕೆ ಕಟ್ಟಬೇಕು? ಎಂಬ ದೊಂದು ಪ್ರಶ್ನೆ ಯಾರಿಗಾದರೂ ಹುಟ್ಟುತ್ತದೆ. ಆದರ ಕಾರಣವಿಷ್ಟೇ: ಊರ ಜನರು ಒಟ್ಟುಗೂಡಿ, ಒಂದು ದೇವ, ಮತ್ತು ಧರ್ಮ ಚರ್ಚೆ, ಧರ್ಮ ಬೋಧೆ ಕೇಳಿಕೊಳ್ಳಲಿಕ್ಕೆ, ಸಾಮುದಾಯಿಕ ಉತ್ಸವಗಳನ್ನು ಆಚರಿಸಲಿಕ್ಕೆ, ಸಹಕಾರದಿಂದ ಸಮಾಜದ ಕಾರ್ಯವನ್ನು ನಿರ್ವಹಿಸಲಿಕ್ಕೆ ಪವಿತ್ರ ಸಾರ್ವಜನಿಕ ಸ್ಥಾನ ಬೇಕು. ಅವಶ್ಯಕತೆಯೇ ಇಂತಹ ಮಠ-ಮಂದಿರಗಳ ಅಸ್ತಿತ್ವದಲ್ಲಿ ಬಂದಿವೆ. ಇಂತಹ ಸ್ಥಳಗಳಲ್ಲಿ ಸನ್ಯಾಸಿಗಳ ಪ್ರವಚನಗಳು, ಕೀರ್ತನಕಾರರ ಕೀರ್ತನೆಗಳು, ಪುರಾಣಿಕರ ಪುರಾಣಗಳು ನಡೆಯತಕ್ಕದ್ದರಿಂದ ಸರ್ವರಿಗೆ ಅನುಕೂಲವಾಗುತ್ತದೆ. ದೇವಸ್ಥಾನಗಳೆಂದರೆ ದೇವರ ಮೂರ್ತಿಗಳನ್ನಿಡುವ ಮನೆಗಳೆಂದು ತಿಳಿಯತಕ್ಕದ್ದು. ಅವು ಧರ್ಮ ಪ್ರಸಾರದ ಮತ್ತು ಸಮಾಜೋನ್ನತಿಯ ಕೇಂದ್ರಗಳಾಗಬೇಕು. ಅವುಗಳ ಪಾವಿತ್ರ್ಯವನ್ನು ರಕ್ಷಿಸುವದು ಪ್ರತಿಯೊಬ್ಬನ ಕರ್ತವ್ಯವಿದೆ.

"ಗುರ್ವಾಜ್ಞಾ ಹ್ಯವಿಚಾರಣೀಯಾ" (?) [illegible]

ಆದರೆ ಸದ್ಯದ ಕಾಲದಲ್ಲಿ ಅಂಥವರ ಆಂಧರೆ ಬಾಧ್ಯಯಿಲ್ಲ, ವಿವೇಕಿ ಜನಗಳು ಬೋಧೆ ಮಾಡಿ ಅವರನ್ನು ಕರ್ತವ್ಯಪಥದಲ್ಲಿ ತರಬೇಕು. ಮುಖ್ಯ ಜನರನ್ನು ಅಂಕೆಯಲ್ಲಿಟ್ಟುಕೊಳ್ಳುವದು ನಮ್ಮಂಥ ಸನ್ಯಾಸಿಗಳ ಕರ್ತವ್ಯ. ರಾಜಶಕ್ತಿಯೇ ಅವರನ್ನು ನಿಯಂತ್ರಿಸಬಲ್ಲದು. ಹೀಗೆ ಪ್ರತಿಯೊಬ್ಬನು, ಧರ್ಮಶ್ರದ್ಧೆಯಿಂದಾಗಲಿ ರಾಜದಂಡದ ಭೀತಿಯಿಂದಾಗಲಿ, ತನ್ನ ತನ್ನ ಕರ್ತವ್ಯವನ್ನು ತಿಳಕೊಂಡು ಅದನ್ನು ಸರಿಯಾಗಿ ಪಾಲಿಸಬೇಕು. ಆ ಆ ವ್ಯಕ್ತಿಯ ಉದ್ಧಾರದಲ್ಲಿಯೇ ಸಮಾಜದ ಉದ್ಧಾರವೂ ರಾಷ್ಟ್ರದ ಉನ್ನತಿಯೂ ಕಾಣಬರುತ್ತದೆಂಬುದರಲ್ಲಿ ಸಂದೇಹವಿಲ್ಲ. ಇಂಥ ಕರ್ತವ್ಯ-ಕರ್ಮದ ಅರಿವು ಬುದ್ಧಿಯನ್ನು ನಿಮಗೆ ದಯಪಾಲಿಸಿ ನಿಮ್ಮ ಕಲ್ಯಾಣ ಮಾಡೆಂದು ನಾವು ಶ್ರೀ ರಾಮದೇವ ಶ್ರೀ ವೀರವಿಠ್ಠಲನ ಪಾದಾರವಿಂದಗಳಲ್ಲಿ ಪ್ರಾರ್ಥನೆ ಸಲ್ಲಿಸುವೆವು ಅನಂದದಿಂದ ಆಶೀರ್ವದಿಸುತ್ತೇವೆ.

ಮೇಲಿನಂತೆ ಕೂಡಿದ ಜನರಿಗೆ ಧರ್ಮಬೋಧೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿ, ಶ್ರೀ ಗುರುಗಳು ತಮ್ಮ ಮಠಕ್ಕೆ ಮರಳಿದರು. ಅಲ್ಲಿ ಪುನಃ ಮಹಾಜನರ ಪಾದಪೂಜೆ ಪ್ರಾರ್ಥನೆಗಳೂ, ಶ್ರೀಪಾದಂಗಳ ಆಶೀರ್ವಚನದ ಬಳಿಕ, ಸಕಲರಿಗೂ ಫಲ-ಮಂತ್ರಾಕ್ಷತೆಗಳನ್ನು ಕೊಡಲಾಯಿತು.

ಗುರುಗಳ ಚಾತುರ್ಮಾಸ್ಯದ ಸಕಲ ವ್ಯವಸ್ಥೆಗಳನ್ನು ಮಂಗಳೂರಿನ [illegible] ನಡೆಸಿ ಒಂದು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯ ಒಳ್ಳೇ ಕಳಕಳಿಯಿಂದ ಕಾಲಕಾಲಕ್ಕೆ ಎಲ್ಲ ವ್ಯವಸ್ಥೆಗಳನ್ನು ಮಾಡಿ ಸಮಸ್ತರ ಅಭಿನಂದನೆಗಳನ್ನು ಸಂಪಾದಿಸಿದೆ.

ಶ್ರೀ ಗುರುಗಳ ಪ್ರಕೃತಿ ಸುಸ್ಥವಿದೆ.

ಶ್ರೀ ಗುರುಗಳ ಪ್ರಕೃತಿಯನ್ನು ಸದ್ಯಕ್ಕೇ ಈ ನಾಡಿನ ಪ್ರಖ್ಯಾತ ಡಾಕ್ಟರರಾಗಿರುವ ಡಾ॥ ಮಂಗೇಶರಾವ ನಾಡಕರ್ಣಿ, ಡಾ॥ ಎಮ್ ಕೇಶವ ಪೈ, ಡಾ॥ ಪಾಂಡುರಂಗ ಪೈ, ಡಾ॥ ಎಮ್ ಜಿ ಕಿಣಿ, ಡಾ॥ ವಾಸುದೇವರಾವ ಕಾಮತರು ಡಾ॥ ಬಾಬ ಪೈ ಇವರೆಲ್ಲರೂ ಸಾಕ್ಷಿಸಿ, ಗುರುಗಳ ಪ್ರಕೃತಿ ಈಗ ನೆಟ್ಟಗಾಗುತ್ತಿರುವದು ಅಭ್ಯಾಸಿಯ ಶಕ್ತಿಯಾಗುತ್ತಿರುವದರಲ್ಲಿ ಯಾವದೇ ಬೇಸರವಿಲ್ಲ; ತಲೆ ಚಕ್ಕಾಗಿದೆ, ಪ್ರಕೃತಿ ಬಹಳ ಸುಧಾರಿಸಿದೆ, ಎಂದು ಅವರು ಹೇಳುತ್ತಾರೆ. ಶ್ರೀಗಳನ್ನು ಮುಂಗಳೂರಿಗೆ ಬರಮಾಡಿಕೊಂಡು, ಅವರಿಗೆ ಈಗಾಗ ತಕ್ಕ ಔಷಧೋಪಚಾರ ಮಾಡುತ್ತ, ಅವರ ಪ್ರಕೃತಿಯನ್ನು ಸುಧಾರಿಸಿದ ಶ್ರೇಯಸ್ಸು ವಿಖ್ಯಾತ ವೈದ್ಯರಾದ ಶ್ರೀ ಟಿ ಎಲ್ ಪಂಡಿತ [illegible] ಮಂಗಳೂರಿನ ಮಹಾಜನರಿಗೂ ಸಲ್ಲುತ್ತದೆಂದು ಹೇಳಬೇಕು.

THE BANK OF RURAL INDIA LTD.,

(Incorporated in British India, Liability of Members limited)

HEAD OFFICE — "Satyabhama Bhavan", KARWAR. N K

Offices at — KARWAR, KUMTA SIRSI, HONAVAR, YELLAPUR, BHATKAL SIDDAPUR ANKOLA HUBLI & DHARWAR

Authorised Capital	Rs 10,00,000,
Subscribed Capital	Rs 5,00,000,
Paid-up Capital & Reserves	Rs. 5,08,602-8-0

Rates of Interest on Deposits

Current a/c @ 1% p. a., Savings Bank a/c @ 2½%

Fixed Deposits for 3 months @ 3% per annum,

" " for 6 months @ 3½% ,

" " for 12 months or more @ 4% ,

All kinds of modern Banking business transacted

Karwar, 11-2-1948

P X GRACIOUS, MANAGING DIRECTOR

ಹೊನ್ನಾವರ ನಗರ ಸಭೆಯ 1946-47ನೇ ಸಾಲಿನ ಲೆಕ್ಕ ತಪಾಸಕರ ಯಾದಿಯೊಳಗಿನ ಮಹತ್ವದ ತಕರಾರುಗಳಿಗೆ ನಗರ ಸಭೆಯವರು ಕೊಟ್ಟ ಜವಾಬು.

*

ಲೋಕಲ ಫಂಡ ಆಡಿಟ ಎಕ್ಟ ಕಲಂ 9 (ಅ)ದಂತೆ ಬರುವ ಆಕ್ಷೇಪಗಳು.

ಪೆರಾ 27

ನಗರ ಸಭೆಯ ಸಾರ್ವಜನಿಕ ಕಾಮಗಿರಿ ಶಿಬಂದಿಯು ಕಾಮಗಿರಿ ದೇಖರೇಖ ಮಾಡುವ ಬಗ್ಗೆ ಮಿ|| ಎಮ್ ಆರ್ ಶಾನಭಾಗ ಇವರು ಸಹಜವಾಗಿ ಅರ್ಹರಲ್ಲದಿದ್ದರೂ ಅವರ ನೇಮಣೂಕಿಯಾಗಿ ಅವರಿಗೆ ರೂಪಾಯಿ 220/ ವೇತನವೆಂತ ವೌಚರ ನಂಬರ 127 ತಾ 5-8-1946ದೇ ದಿವಸ ತಿಂಗಳಿಗೆ ರೂ 10/-ರಂತೆ ತಾ 1-2-1946 ರಿಂದ ಇದುವರೆ ತಿಂಗಳ ಬಗ್ಗೆ ಕೊಡಲ್ಪಟ್ಟಿತು ಈ ಬಿಂಬೆ ಸಹ ಅವರು ಇಂಥ ಕೆಲಸಕ್ಕೆ ಕಲ ಕಾಲ ನೇಮಿಸಲ್ಪಟ್ಟು ಆ ಬಗ್ಗೆ ಸರಿಯಾಗಿ ವೇತನ ಕೊಡಲ್ಪಟ್ಟಿರುತ್ತದೆ ಮ್ಯುನಿಸಿಪಾಲಿಟಿ ನೌಕರರ ಶೆಡ್ಯೂಲದಲ್ಲಿ ಮೇಸ್ತ್ರಿ ಯಾ ಸಬ್ ಓವರಸೀಯರ ಜಾಗೆ ಇಲ್ಲದ್ದರಿಂದಲೂ ಸದ್ಯ ಇಂಥ ಕೆಲಸ ಕೈಕೊಳ್ಳಲು ಸದ್ರಿ ಮಿ|| ಶಾನಭೋಗರು ಯೋಗ್ಯರಿರದ ಮೂಲಕ ಬೇಕಾಯದೆಶೀರ ನೇಮಣೂಕಿ ಪ್ರಶ್ನೆ ತಪ್ಪಿಸಿಕೊಳ್ಳುವ ಇರಾದೆಯಿಂದ ಸದರ ಬಟವಾಡೆಗಳು "ರಿಮ್ಯುನರೇಶನ್" ಅದವಾ ಗೌರವ ವೇತನವೆಂತ ಮಾಡಲ್ಪಟ್ಟಿವೆ ಇವುಗಳ ಹೊರತಾಗಿ ಕಾಮಗಿರಿ ಬಗ್ಗೆ ಅವರಿಂದ ತಯಾರಿಸಲ್ಪಟ್ಟ ಎಸ್ಟಿಮೇಟುಗಳಿಗ ಈ ಕೆಳಗೆ ನಮೂದಿಸಿದಂತೆ ಪ್ರತ್ಯೇಕವಾಗಿ ಮಂಜೂರಿ ಎಂತ ಕೊಟ್ಟಿದ್ದಿರುತ್ತದೆ

ವೌಚರ ನಂಬರ,	ತಾರೀಖು	ರಖಂ
172	23-11-1945	90-14 0
254	4-3-1946	85-13-3
35	4-5-1946	40-10 0
44	17 5-1946	24 2 0
198	25-11-1946	32-11-0

ಮಿ|| ಶಾನಭಾಗ ಇವರು ಕಾಮಗಿರಿಗಳ ದೇಖರೇಖ ಬಗ್ಗೆ ನೇಮಕ ಹೊಂದಿದ್ದು ಸದರಿ ನೇಮಣೂಕಿ ಅವಧಿಯಲ್ಲಿ ಕಾಮಗಿರಿಗಳ ಎಸ್ಟಿಮೇಟ ತಯಾರಿಸುವದು ವಾಸ್ತವಿಕವಾಗಿ ಅವರ ಕರ್ತವ್ಯಕರ್ಮಗಳಲ್ಲಿ ಬರುತ್ತಿದ್ದು ಅವರಿಗೆ ಎಸ್ಟಿಮೇಟ ತಯಾರಿಸಿದ ಕೆಲಸಗಳ ಬಗ್ಗೆ ಪ್ರತ್ಯೇಕ ಮಂಜೂರಿ ಕೊಟ್ಟಿದ್ದು ಯುಕ್ತ ತೋರುವದಿಲ್ಲ ಸದ್ರಿಯವರ ನೇಮಣೂಕಿ ಅವಧಿ ಲೆಕ್ಕ ಮಾಡಿ ಪೆರಾ ೨೦ರಲ್ಲಿ ಸೂಚಿಸಿದಂತೆ ಮೆ|| ಕಮಿಶನರ ಸಾಹೇಬರ ಮಂಜೂರಿ ದೊರಕಿಸಬೇಕು ಅನಕ ವರೆಗೆ ಈ ಬಗ್ಗೆ ಅವರಿಗೆ ಕೊಡಲಾದ ರಕಂ ಆಡಿಟ ಆಕ್ಷೇಪದಿಂದ ಬಿಡಲು ಬರುವಂತೆ ಇಲ್ಲ. ಇವರು ಸದರ ಕೆಲಸ ಕೈಕೊಳ್ಳಲು ಅರ್ಹತೆ ಪಡಕೊಳ್ಳದ್ದರ ಸಂಬಂಧಿ ಸದ್ರಿಯವರ ದೇಖರೇಖದಲ್ಲಿ ನಡೆದ ಯಾವತ್ತೂ ಕೆಲಸಗಳ ಅಂದಾಜ ಸರ್ಟಿಫಿಕೇಟ ಕೊಳ್ಳುವ ಬಗ್ಗೆ ಸರಕಾರಿ ಇಂಜನಿಯರ ಖಾತೆಯವರಿಗೆ ಬರೆದು ಹೋಗಬೇಕಾಯಿತು

ಮ್ಯುನಿಸಿಪಾಲಿಟಿಯ ಉತ್ತರ

ಮೆ|| ಕಮಿಶನರ ಸಾಹೇಬರಿಗೆ ಕಳಿಸಿದ ನಿಮ್ಮ ಪತ್ರ ನಂಬರ L'೨-೪-೬ ತಾ ೨೨-೪-೪೮ ವ ಕಮಿಶನರ ಸಾಹೇಬರ ಸೂಚನೆ ನಂಬರ ADP. ತಾ ೨೭/೩೦-೪-೧೯೪೮ನೇದರ ಮೇಲೆ ನಿಮ್ಮ ಲಕ್ಷ ಎಳಯಲು ಇಚ್ಛಿಸುತ್ತೇವೆ ಆದರಲ್ಲಿ ಸೂಚಿಸಿದಂತೆ ತಾ ೨೦-೬-೧೯೪೮ನೇ ದಿನ ಕೂಡಿದ ಮ್ಯುನಿಸಿಪಾಲಿಟಿ ಬೋರ್ಡ ಮಿಟಿಂಗದಲ್ಲಿ ಸದ್ರಿ ಮಾಧವ ರಾಮಚಂದ್ರ ಶಾನಭಾಗರಿಗೆ ಕೊಡಲಾದ ಯಾವತ್ತೂ ರಕಮುಗಳಿಗೆ ಅಂದರೆ ಕಾಮಗಿರಿ ದೇಖರೇಖ ಬಗ್ಗೆ ಕೊಟ್ಟ ರಕಂ ಹಾಗೂ ಎಸ್ಟಿಮೇಟ ತಯಾರಿಸುವ ಬಗ್ಗೆ ಕೊಟ್ಟ ರಕಮುಗಳಿಗೆ ಮಂಜೂರಿ ಕೊಡಲು ವಿನಂತಿ ಮಾಡಿಕೊಳ್ಳಲಾಗಿದೆ ಠರಾವಿನ ನಕಲು ಮೆ|| ಕಮಿಶನರ ಸಾಹೇಬರಿಗ ಮಂಜೂರಿ ಬಗ್ಗೆ ಕಳಿಸಿದ್ದು ಸದ್ರಿಯವರ ಮಂಜೂರಿ ನಿರೀಕ್ಷಣೆಯಲ್ಲಿರುತ್ತದೆ

ಲೋಕಲ ಫಂಡ ಆಡಿಟ ಎಕ್ಟ ಕಲಂ 9 (B) ಕೆಳಗೆ ಬರುವ ಆಕ್ಷೇಪಗಳು.

ಪೆರಾ 28

(i) ತಾ ೧ ೩-೧೯೪೬ನೇ ದಿವಸ ಕೂಡಿದ ಜನರಲ ಬೋರ್ಡ ಠರಾವ ನಂಬರ 1ನೇದರಂತೆ ಬಂದರ ಧರ್ಮಶಾಲೆ ಕಟ್ಟಡ ಕಟ್ಟುವ ಎಸ್ಟಿಮೇಟ ರಕಮು ರೂಪಾಯಿ ೪೪೭೦/-ರ ಬಗ್ಗೆ ಎಸ್ಟಿಮೇಟ ರಕಮಿಗೆ ಶೇಕಡಾ ೫ರಂತೆ ಕಡಿಮೆ ದರದ ಮೇಲೆ ಮಿ|| ಮಂಜನಾಥ ಅಣ್ಣಪ್ಪ ಪ್ರಭು ಇವರ ಟೆಂಡರ ಅರ್ಜಿ ಸದರಿ ಇಮಾರತು ಕಟ್ಟಿಕೊಡುವ ಬಗ್ಗೆ ಸ್ವೀಕರಿಸಲ್ಪಟ್ಟಿತು ಸದ್ರಿಯವರ ಟೆಂಡರ ಅರ್ಜಿ ಸ್ವೀಕಾರ ಮಾಡಿದ ನಂತರ ಅವರು ಸದರ ಕೆಲಸ ಮುದ್ದತ್ತಿನಲ್ಲಿ ಪೂರ್ಣತೆ ಮಾಡಿ ಕೊಡುವದು ತನ್ನಿಂದ ಸಾಧ್ಯವಿಲ್ಲಾ ಎಂತ ಅವರ ಜಾಹೀರಿಯಂತೆ ಅವರ ಕಂಟ್ರಾಕ್ಟ ರದ್ದುಪಡಿಸಿ ಸದರ ಕಾಮಗಿರಿಯನ್ನು ಎಸ್ಟಿಮೇಟ ರಖಮಿಗೇ ತಿಮ್ಮಪ್ಪಾ ದೇವಪ್ಪಾ ಆಚಾರಿ ಎಂಬವರಿಗೆ ಮ್ಯುನಿಸಿಪಾಲಿಟಿಗೆ ಆ ಸಮ್ಬಂಧ ಆಗುವ ಲುಕ್ಸಾನಿನ ಗ್ರಹಿಕೆ ಹಿಡಿಯದೆ ವಹಿಸಿಕೊಟ್ಟರು ಟೆಂಡರ ಮಂಜೂರ ಮಾಡುವಾಗ ಜಾಹೀರನಾಮೆ ಶರ್ತುಗಳಂತೆ ಟೆಂಡರ ಕೊಟ್ಟವರು ಕಂಟ್ರಾಕ್ಟ ತೆಗೆದುಕೊಂಡ ನಂತರ ಅವುಗಳಂತೆ ವರ್ತಿಸಬೇಕಾಗಿ ಬೋರ್ಡಿನವರ ಕ್ರಮಪ್ರಾಪ್ತ ಕರ್ತವ್ಯವಿರುತ್ತದೆ ಕಂಟ್ರಾಕ್ಟ ರದ್ದುಪಡಿಸುವಲ್ಲಿ ಮ್ಯುನಿಸಿಪಾಲಿಟಿಗೆ ಏನೊಂದು ಲುಕ್ಸಾನುಆಗಲಿಕ್ಕಿಲ್ಲವೆಂತ ನೋಡಿಕೊಳ್ಳಬೇಕಾಗಿತ್ತು ಟೆಂಡರ ಹಾಜರ ಮಾಡುವಾಗವಾಗಲಿ ಯಾ ತದನಂತರ ಬೋರ್ಡಿನ ಹಿತದ ಭದ್ರತೆ ಬಗ್ಗೆ ಏನೊಂದು ಅನಾಮತ (Deposit) ಹಣ ಟೆಂಡರದಾರರಿಂದ ಪಡಕೊಳ್ಳಲಿಲ್ಲ ಕಾರಣ ಶೇಕಡಾ ೫ರಂತೆ ಕಡಿಮೆ ದರದಂತೆ ರೂಪಾಯಿ ೨೯೭-೮-೦ ಸದರ ಕಟ್ಟಡ ಕಟ್ಟಿ ಪೂರ್ಣಪಡಿಸಲಿಕ್ಕೆ ತಗಲಿದ ರಕಮು ರೂಪಾಯಿ ೪೩೫೦/-ರ ಮೇಲೆ ಲುಕ್ಸಾನು ಬಂದಿರುತ್ತದೆ ಈ ರಕಮು ಕಂಟ್ರಾಕ್ಟರಿಂದಾಗಲೀ ಯಾ ಈ ತಪ್ಪಿಗೆ ಹೊಣೆಗಾರರಾದವರ ಕಡೆಯಿಂದ ವಸೂಲ ಮಾಡಬೇಕು

(ii) ಇದೇ ಪ್ರಕಾರ ಮ್ಯುನಿಸಿಪಾಲಿಟಿ ಆಫೀಸ ಕಟ್ಟಡ ವಾಢ್ವಿಸುವ ಕೆಲಸ ಕೈಕೊಳ್ಳಲು ಸಹ ಇದೇ ಮಂಜನಾಥ ಅಣ್ಣಪ್ಪ ಪ್ರಭು ಇವರ ಟೆಂಡರ ಅರ್ಜಿ ಎಸ್ಟಿಮೇಟ ರಖಮಿಗೆ ಶೇಕಡಾ ಐದು ರೂಪಾಯಿ ಕಡಿಮೆ ದರವಿದ್ದು ಅವರ ಟೆಂಡರ ಅರ್ಜಿ ಮಂಜೂರ ಆಗಿ ಅವರು ಕಂಟ್ರಾಕ್ಟ ಪಡಕೊಂಡಿದ್ದರೂ ಅದು ನಂತರ ರದ್ದುಪಡಿಸಿ ಸದರ ಕೆಲಸವನ್ನು ಮಿ|| ಎನ್ ಎಲ್ ಆಚಾರಿ ಎಂಬವರಿಗೆ ಎಸ್ಟಿಮೇಟ ರಖಮಿಗೇ ತಾ 15-3-1946ನೇ ದಿವಸ ಕೂಡಿದ ಮೆನೆಜಿಂಗ ಕಮೀಟಿಯಲ್ಲಿ ಠರಾವ ನಂಬರ ೧ನೇದರಂತೆ ಒಪ್ಪಿಸಲ್ಪಟ್ಟಿತು ಲುಕ್ಸಾನು ಈ ಕೆಳಗಿನಂತೆ

ಕಾಮಗಿರಿಗೆ ನಿಕ್ಕಿ ತಗಲಿದ ವೆಚ್ಚ ರೂ 1879-8-9

ತಪಾಸಣೆಯಲ್ಲಿ ಸ್ವೀಕರಿಸದೆ ಇದ್ದ ರಖಂ ಪೆರಾ 28(iii) ಕೆಳಗೆ ತೋರಿಸಿದ ಪ್ರಕಾರ ವಜಾ	186-8-0
	1693-0-9

ಶೇಕಡಾ 5 ರಂತೆ ಕಡಿಮೆ ದರದ ಪ್ರಕಾರ ಲುಕ್ಸಾನು ರೂಪಾಯಿ 84 11 0 ಈ ಲುಕ್ಸಾನು ತಪ್ಪಿಗೆ ಹೊಣೆಗಾರ ಜನರಿಂದ ವಸೂಲ ಮಾಡಿಕೊಳ್ಳಬೇಕು

(iii) ಮೇಲಿನ ರಖಂ ರೂಪಾಯಿ 1819-8-9 ಕಂಟ್ರಾಕ್ಟರ ಮಿ|| ಎನ್ ಎಲ್ ಆಚಾರಿ ಇವರಿಗೆ ಸಂದಿದ್ದು ಇದ್ದು ಆ ರಖಮಿನಲ್ಲಿ ಮ್ಯುನಿಸಿಪಾಲಿಟಿ ಆಫೀಸ ವಾಢ್ವಿಸುವ ಹೆಚ್ಚಿನ ಕೆಲಸ ಮಾಡಿದ್ದರ ಬಗ್ಗೆ ತಗಲಿದ ರಖಂ ರೂಪಾಯಿ 186-8 0 ಸಹಾ ವೇಶವಾಗಿರುತ್ತದೆ ಸದರ ಕೆಲಸದ ಎಸ್ಟಿಮೇಟ ಒಟ್ಟು ರೂಪಾಯಿ 1873/- ಇರುತ್ತಿದ್ದು ಅದನ್ನು ಜನರಲ್ ಕಮಿಟಿಯವರು ತಾ 1 3-1946ನೇ ದಿನ ಮಂಜೂರಿ ಕೊಟ್ಟಿರುತ್ತಾರೆ ನಿಕ್ಕಿ ಮಾಡಿದ ಕೆಲಸ ರೂಪಾಯಿ 1693-0-9ರದಿರುತ್ತದೆ ಹಿಂದಿನಿಂದ ಸದರ ಎಸ್ಟಿಮೇಟಿಗೆ ಹೆಚ್ಚಿನ ಕೆಲಸದ ಬಗ್ಗೆ ಎಂತ ಪುರವಣಿ ಕಾಗದ (Abstract sheet) ಜೋಡಿಸಿದ್ದಿರುತ್ತದೆ ಅದು ಬೋರ್ಡಿನವರಿಂದಾಗಲೀ, ಯಾ ಯಾವದೇ ಕಮೀಟಿಯವರಿಂದಾಗಲಿ ಇಲ್ಲವೆ ಪ್ರೆಸಿಡೆಂಟರಿಂದಾಗಲಿ ಮಾನ್ಯತೆ ಪಡಕೊಂಡದ್ದು ಇರುವದಿಲ್ಲ ಹೆಚ್ಚಿಗಾದ ಕೆಲಸ ಮೆಜರಮೆಂಟ ಪುಸ್ತಕದಲ್ಲಿ ನಮೂದ ಇಲ್ಲ ಈ ಕೆಲಸ ಕೈಕೊಳ್ಳಲು ಯಾವದೇ ಅಧಿಕಾರಸ್ಥರ ಅನುಮತಿ ಇಲ್ಲದ ಮೂಲಕವೂ ಸದರ ಕೆಲಸ ಮಾಡಿದ ಬಗ್ಗೆ ಪೂರ್ಣ ಮಾಹಿತಿ ಮೆಜರಮೆಂಟ ಬೂಕಿನಲ್ಲಿ ಇಲ್ಲಾದ್ದರಿಂದಲೂ ಈ ಬಗ್ಗೆ ತಗಲಿದ ರಖಂ ರೂಪಾಯಿ 186-8-0 ತಪಾಸಣಿ ಯಾದಿಯಿಂದ ಬಿಡಲು ಬರಲಾರದು ಈ ರಖಂ ಸಂಬಂಧಪಟ್ಟವರಿಂದ ವಸೂಲ ಮಾಡಬೇಕು

ಮ್ಯುನಿಸಿಪಾಲಿಟಿಯ ಉತ್ತರ

ಪೆರಾ 28 (i) & (ii) ಈ ಬಗ್ಗೆ ತಗಲಿದ ಲುಕ್ಸಾನು ಕಂಟ್ರಾಕ್ಟದಾರ ಮಂಜನಾಥ ಅಣ್ಣಪ್ಪ ಪ್ರಭು ಇವರಿಂದ ಕಾಯದೇಶೀರ ರೀತಿಯಿಂದ ವಸೂಲ ಮಾಡಬೇಕಾಗಿ ಮ್ಯುನಿಸಿಪಾಲಿಟಿಯವರು ಠರಾಯಿಸಿದ್ದಾರೆ ಹಾಗೂ ಸದರಿಯವರಿಗೆ ಮ್ಯುನಿಸಿಪಾಲಿಟಿಯಿಂದ ಅಧಿಕಾರಪಟ್ಟ ವಕೀಲರಿಂದ ಕೂಡಲೆ ಲುಕ್ಸಾನು ತುಂಬಲು ನೋಟೀಸಿನ ಮೂಲಕ ತಿಳಿಸಿಯದೆ ಮುಂದಿನ ಪರಿಣಾಮ ತಿಳಿಸಲಾಗುವದು

(iii) ಹೆಚ್ಚಿನ ಕಾಮಗಿರಿ ಕೈಕೊಂಡಿದ್ದಕ್ಕೆ ತಾ. 6-8-1948ನೇ ದಿನ ಕೂಡಿದ ಮೆನೆಜಿಂಗ ಕಮಿಟಿ ಠರಾವ ನಂಬರ 1a (i) ದ ರಂತೆ ಮಾನ್ಯತೆ ದೊರಕಿವೆ ಸದರಿ ಹೆಚ್ಚಿನ ಕೆಲಸ ಕೈಕೊಂಡಿದ್ದನ್ನು ಪುರವಣಿ ಪತ್ರದಲ್ಲಿ ನಮೂದಿಸಲಟ್ಟಿವೆ ಮೂಲ

ಎಸ್ಟಿಮೇಟದಂತೆ ಇರುವ ಕಾಮಗಿರಿ ಮೆಜರಮೆಂಟ ಮ ಹೆಚ್ಚಿಗೆ ಕೆಲಸ ಮಾಡಿದ್ದನ್ನ ಈ ಕೆಳಗಿನ ಮಾಹಿತಿಯಿಂದ ಅವಲೋಕನೆ ಮಾಡಬಹುದು.

ಅ ನಂ	ಕೆಲಸದ ತಪಶೀಲ	ಮೂಲ ಎಸ್ಟಿಮೇಟ ಪ್ರಕಾರ	ಹೆಚ್ಚಿನ ಕೆಲಸ ಕೂಡಿಸಿ ಒಟ್ಟು
(1)	ಪಾಯಾ ಅಗಿಯುವದು	316 CFt	364 C Ft
(2)	ಪಾಯಾ ಭರ್ತಿ ಮಾಡುವದು	244 C Ft	259 C Ft
(3)	ಕಟಗಲ್ಲಿನ ನೆಲಗಟ್ಟು ತಯಾರಿಸುವದು	310 C Ft	352 50 C Ft
(4)	ನೆಲಗಟ್ಟಿನ ಮೇಲಿಯದಲ್ಲಿ ಜಲೋಜತಿ ಮುರಮು ಭರ್ತಿ ಮಾಡುವದು	1497 50 C Ft	1725 50 C Ft
(5)	ಸುಣ್ಣದ ಗಚ್ಚಿನಿಂದ ಕಡಗಲ್ಲಿನ ಎಂಡರಾಮ	316 C Ft	388 C Ft
(6)	ಕಟ್ಟಿಗೆ ಕೆಲಸ	75 C Ft	78 61 C Ft.
(7)	ಮಂಗಳೂರ ಹಂಚಿನ ಹೊದಿಕೆ	912 Sq Ft	1000-65 Sq.Ft
(8)	ಸಿಮೆಂಟ ಕೊಂಕ್ರೀಟ ನೆಲ	137 C Ft	157 C Ft
(9)	ಸುಣ್ಣದ ಗಿಲಾವು	704 Sq Ft	917 Sq Ft
(10)	ಹೊಸ ಮಂಗಳೂರ ಹಂಚಿನ ಹೊದಿಕೆ ಹಾಕಿ ಮಾಡಿಗೆ		123 Sq Ft.

ಲೋಕಲ ಫಂಡ ಆಡಿಟ ಎಕ್ಟ ಕಲಂ 9 (ಡ) ಕೆಳಗೆ ಬರುವ ಆಕ್ಷೇಪಗಳು

ಪೆರಾ 31

1948-49ನೇ ಸಾಲಿನಿಂದ ಅನುಲಿನಲ್ಲಿ ಬರತಕ್ಕ ಚತುರ್ವಾರ್ಷಿಕ ಮನೆ ತೆರಿಗೆ ಆಕರಣೆ ಪಟ್ಟಿಯನ್ನು ತಿದ್ದುಪಡಿಸುವ ಕೆಲಸ ಮುಗಿದ್ದಿತು. ವರ್ಕಿಸ್ಕ್ತ ಇಸವಿಗೆ ಕೊಟ್ಟದ್ದು ಅವರು 1947 48ನೇ ಸಾಲಿನಲ್ಲಿ ರೀತಿಯಂತೆ ಆಕರಣೆ ಪಟ್ಟಿ ತಿದ್ದುಪಡಿ ಮಾಡಿದ್ದು ಬೋರ್ಡಿನವರ ಮಂಜೂರಿಗೆ ಕೊಟ್ಟಿರುತ್ತಾರೆ ಅವರು ಹೊಸ ಆಕರಣೆಯನ್ನು ಹಿಂದಿನ ರೂಪಾಯಿ 1935 ರಿಂದ ರೂಪಾಯಿ 7121 ಕ್ಕೆ ಏರಿಸಿದ್ದರೂ ಕೂಡ ಹೆಚ್ಚಿಸಿದ ತೆರಿಗೆಯು ಹೆಚ್ಚಾಗಿ ಹೊಸ ಇಮಾರತಗಳಿಗೂ ಹಿಂದಿನ ವರ್ಷಗಳಲ್ಲಿ ಅತಿ ಕಡಿಮೆಯಾಗಿ ಆಕರಣೆ ಮಾಡಿದ ಕೆಲ ಮನೆಗಳಿಗೆ ಅನ್ವಯಿಸಿರುತ್ತದೆ ಈಗಿನ ದಿನಮಾನಗಳಲ್ಲಿ ಆಸ್ತಿಯ ಬೆಲೆ ವಿಪರೀತ ಏರಿದ್ದು ಲಕ್ಷದಲ್ಲಿ ತಂದರೆ ಹೆಚ್ಚಿಸಿದ ತೆರಿಗೆ ಮಾನವು ಈ ಕೆಳಗೆ ಕೊಟ್ಟ ಕಾರಣಗಳ ಮೂಲಕ ಏರಿಸಿದ್ದು ಅಷ್ಟು ಸಮಾಧಾನಕರ ತೋರುವದಿಲ್ಲ

ಒಟ್ಟು 2008 ಮನೆಗಳಲ್ಲಿ ಕೆಲವು ತೆರಿಗೆ ಆಕರಣೆಯಿಂದ ಮಾಫ ಮಾಡಲಟ್ಟಿವೆ 75 ಮನೆಗಳಿಗೆ ತೆರಿಗೆ ಮಾನ ಅತಿಶಯ ಕಡಿಮೆ ಹಿಡಿಯಲ್ಪಟ್ಟಿದೆ 1569 ಮನೆಗಳಿಗೆ ಅಂದರೆ ಶೇಕಡಾ 19ರ ತೆರಿಗೆ ಮಾನ ವರ್ಷಕ್ಕೆ ರೂಪಾಯಿ 50-ರ ಕೆಳಗೆ ಹಿಡಿಯಲ್ಪಟ್ಟಿದೆ 223 ಮನೆಗಳ ತೆರಿಗೆ ಆಕರಣೆ ವರ್ಷಕ್ಕೆ ರೂಪಾಯಿ 100/-ಕ್ಕಿಂತ ಕಡಿಮೆ ಹಿಡಿಯಲ್ಪಟ್ಟಿದೆ ಒಟ್ಟೇ 80 ಮನೆಗಳು ಮಾತ್ರ ವರ್ಷಕ್ಕೆ 100ರ ಮೇಲೆ ಭಾಡಿಗೆ ಮಾನ ಹಿಡಿದು ಆಕರಣೆಯಾಗಿವೆ ಕಾರಣ ಯಾದಿಯು ಕಡಿಮೆಯಾಗಿ ತೋರುತ್ತದೆ.

ಮ್ಯುನಿಸಿಪಾಲಿಟಿ ಸಭಾಸದರು ವಾಸ್ತವ್ಯ ಮಾಡುವ ಇಮಾರತುಗಳು ಭಾಡಿಗೆ-ಮಾನದಿಂದ ತೆರಿಗೆ ಆಕರಣೆ ಹೆಚ್ಚಿಸಿದ್ದು ಬಹುತರ ಕಾಣುವದಿಲ್ಲ ಇದೇ ಯಾದಿಯು ಪುರವಣಿ 'B' ದಲ್ಲಿ ಕೆಲವು ಉದಾಹರಣಗಳು ಕೊಟ್ಟಿವೆ.

ಬಟಕಳವು ಈ ಶಹರಕ್ಕಿಂತ ಚಿಕ್ಕದಿದ್ದರೂ ಅಲ್ಲಿ ಮೊದಲಿದ್ದ ಆಕರಣೆಯನ್ನ ರೂಪಾಯಿ 3000-ರಿಂದ ಹೆಚ್ಚಿಸಿ ರೂಪಾಯಿ 10000-ಕ್ಕಿಂತ ಹೆಚ್ಚು ಒಯ್ದು ಕೂಡ್ರಿಸಲ್ಪಟ್ಟಿದೆ

ಕಾರಣ ತೆರಿಗೆ ಆಕರಣೆಯು ನಿರ್ಭೀಡೆಯಿಂದಲೂ ಯಾರ ದಾಕ್ಷಿಣ್ಯಕ್ಕೆ ಒಳಗಾಗದೆ ಆಗುವದು ಅವಶ್ಯವಿರುತ್ತದೆ.

ಪುರವಣಿ 'B'

ಮನೆ ನಂಬರು	ವಾಸಿಸುವವರು	ತೆರಿಗೆ ಮಾನ 1943-44 ರೂ.	1946-47 ರೂ.	1948-49 ರೂ.
497	ದೊಡ್ಡ ಮನೆ ಮಿ॥ ವಿ ಆರ್. ಕಾಮತ (ಪ್ರೆಸಿಡೆಂಟ)	32	44	44
527	— ಡಿ —	60	60	60
473	” ಡಾ॥ ವಿ ಕೆ. ಬಳಕೂರ (ಚೇರಮನ M C)	90	47	49
414	” — ಡಿ —	90	72	90
474	” — ಡಿ —	90	68	68
1178	ಮಿ॥ ಯು ಎಸ್ ಹಳದೀಪೂರ (ವ್ಹಾಯಿಸಪ್ರೆಸಿಡೆಂಟ)	3	2	2
1179	— ಡಿ —	56	47	47
665	” ವಿ ಆರ್ ನಾಯ್ಕ (ಸಭಾಸದರು)	42	40	40
1896	” ಎ ಪಿ ಮಹಾಲೆ ”	17	17	17
1019	” ಜಿ ಡಿ ನಾಯ್ಕ ”	24	18	18
1130	ಶ್ರೀಮತಿ. ಪಂಢರಿಬಾಯಿ	11	41	43

ಮ್ಯುನಿಸಿಪಾಲಿಟಿಯ ಉತ್ತರ

ತೆರಿಗೆ ಆಕರಣೆ ಪಟ್ಟಿ ಸುಧಾರಿಸುವ ಕೆಲಸ ಓರ್ವ ನಿವೃತ್ತ ಮಾಮಲೇದಾರರಿಗೆ ಕೊಡಲ್ಪಟ್ಟಿತ್ತು ಅವರು ಸದರ ಆಕರಣೆಯನ್ನು ರೂಪಾಯಿ 7429/-ಕ್ಕೆ ಕೂಡ್ರಿಸಿದ್ದರು. ಆದರೆ ಮ್ಯುನಿಸಿಪಾಲಿಟಿ ಬೋರ್ಡಿನಿಂದ ನೇಮಕಹೊಂದಿದ ಕಮೀಟಿಯವರ ಅಪೀಲ ಅರ್ಜಿ ನಿಕಾಲೆಯಿಂದ ತೆರಿಗೆ ಆಕರಣೆಯನ್ನು ರೂಪಾಯಿ 7100/-ಕ್ಕೆ ತಂದಿರುತ್ತಾರೆ ಕರ ಏರಿಸಿದ ಬಗ್ಗೆ 454 ಅಪೀಲ ಅರ್ಜಿಗಳು ದಾಖಲಾಗಿದ್ದು ಅವೆಲ್ಲ ನಿಕಾಲೆಯಾಗಿವೆ.

ಇದರ ಮೇಲಿಂದ ಮೊದಲಿನ ಆಕರಣೆಗಿಂತ ಶೇಕಡಾ 40 ದರದಂತೆ ಏರಿದ್ದು ತೋರುತ್ತಿದೆ ಈ ಮ್ಯುನಿಸಿಪಾಲಿಟಿ ಹದ್ದಿನಲ್ಲಿ ಬಹುತೇಕ ಹುಲ್ಲು ಛಾವಣಿಯ ಮನೆಗಳು ಇರುತ್ತವೆ ಪುರವಣಿ 'B'ದಲ್ಲಿ ತೋರಿಸಿದ ಮನೆಗಳಲ್ಲಿ ಕೆಲವು ಸಹ ಹುಲ್ಲು ಹೊದಿಕೆಯವು ಇರುತ್ತವೆ ಈಗಿನ ದಿನಮಾನಗಳಲ್ಲಿ ಆಸ್ತಿ ಬೆಲೆ ಏರಿದ್ದು ಕಬೂಲ ಇದ್ದರೂ ಅವುಗಳ ವಾರ್ಷಿಕ ರಿಪೇರಿ ಮ ಹುಲ್ಲು ಛಾವಣಿ ಖರ್ಚು ಸಹ ವಿಪರೀತ ಏರಿದ್ದು ಲಕ್ಷದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ

V. R KAMATH,

ತಾ ೧-೯-೪೯ ಪ್ರೆಸಿಡೆಂಟ,

ಹೊನ್ನಾವರ ಮ್ಯುನಿಸಿಪಾಲಿಟಿ.

ವಾರ್ತೆಗಳು

— ಕಾಯದೆ ಆಝಮ ಜಿನ್ನಾರವರ ತರುವಾಯ ಅವರ ಸಹೋದರಿಯಾದ ಕುಮಾರಿ ಫಾತಿಮಾ ಜಿನ್ನಾ ಇವಳನ್ನು ಪಾಕಿಸ್ತಾನದ ಸರ್ವಾಧಿಪತಿ ಸ್ಥಳಕ್ಕೆ ಆರಿಸಬಹುದೆಂಬ ಸೂಚನೆಯೂ ಜಿನ್ನಾರವರು ತೀರಿಕೊಂಡ ದಿನ ರಾತ್ರೆ ಕೂಡಿದ ಪಾಕಿಸ್ತಾನ ಮಂತ್ರಿಮಂಡಳದ ಮುಂದೆ ಬಂದಿತ್ತಂತೆ ಫಾತಿಮಾ ಇವರು ಆ ಸ್ಥಾನವನ್ನು ಸ್ವೀಕರಿಸಲು ನಿರಾಕರಿಸಿ ಪೂರ್ವ ಬಂಗಾಲದ ಮುಖ್ಯ ಮಂತ್ರಿಗಳಾಗಿದ್ದ ಖ್ವಾಜಾ ನಾಝಿಮುದ್ದೀನರ ಹೆಸರನ್ನು ಸೂಚಿಸಿದಂತಾಗಿಯೂ, ಮಿ॥ ಜಿನ್ನಾರವರು ಕೂಡ ತಮ್ಮ ಹಿಂದೆ ನಾಝಿಮುದ್ದೀನರು ಸರ್ವಾಧಿಪತಿಗಳಾಗಬೇಕೆಂದು ಬಯಸಿದ್ದರೆಂದು ಮಂತ್ರಿ ಮಂಡಳಕ್ಕೆ ತಿಳಿಸಿದಂತಾಗಿಯೂ, ಅಂತೆಯೇ ಕೊನೆಗೆ ನಾಝಿಮುದ್ದೀನರು ಆರಿಸಲ್ಪಟ್ಟರಾಗಿಯೂ ತಿಳಿಯುತ್ತದೆ

— ಹಿಂದುಸ್ಥಾನ ಸರಕಾರದಲ್ಲಿ ರಾಜಕುಮಾರಿ ಅಮೃತ ಕೌರ ಇವಳಿಗೆ ಆರೋಗ್ಯ ಮಂತ್ರಿಪದಕ್ಕೆ ನೇಮಿಸಿಕೊಂಡಿರುವಂತೆ ಕುಮಾರಿ ಫಾತಿಮಾ ಜಿನ್ನಾ ಇವಳನ್ನು ಪಾಕಿಸ್ತಾನ ಸರಕಾರದ ಆರೋಗ್ಯ ಮಂತ್ರಿಗಳನ್ನಾಗಿ ಮಾಡಬೇಕು ಇಲ್ಲವೆ ಶ್ರೀಮತಿ ಸರೋಜನಿ ನಾಯುಡು ಇವಳನ್ನು ಪ್ರಾಂತಾಧಿಪ-ಪಟ್ಟದ ಮೇಲೆ ಕೂಡ್ರಿಸಿರಂತೆ ಫಾತಿಮಾರಿಗೆ ಯಾವದೊಂದು ಪ್ರಾಂತದ ಗವ್ಹರ್ನರರನ್ನಾಗಿ ಮಾಡಬೇಕು ಎಂಬ ವಿಚಾರ ಪಾಕಿಸ್ತಾನದ ಪರಿಷದಲ್ಲಿ ನಡೆದಿದೆ ಎಂಬ ಸುದ್ದಿಯುಂಟು

— ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ತಂಬಾಕನ್ನು ದೊಡ್ಡ ಪ್ರಮಾಣದ ಮೇಲೆ ಬೆಳಸುತ್ತಾರೆ ಧೂಮ್ರಪಾನದ ಚಟವೂ ಆ ದೇಶದವರಿಗೆ ಅತಿ ದೊಡ್ಡ ಪ್ರಮಾಣದಲ್ಲಿ ಅಂಟಿಕೊಂಡಿದೆ ಆದರೆ ಆ ಜನರೊಳಗೆ ಒಂದು ಶಿಸ್ತಿನ ಕಟ್ಟುಂಟು. ಸಿನೆಮಾ ಮಂದಿರಗಳಲ್ಲಿ, ನಾಟ್ಯಗೃಹಗಳಲ್ಲಿ, ಪ್ರದರ್ಶನಾಲಯಗಳಲ್ಲಿ (ಧೂಮ್ರಪಾನ ಮಾಡದಂತಹ ಜನರು ಹತ್ತಿರ ಕೂತುಕೊಂಡಿದ್ದರೆ ಅವರಿಗೆ ಹೇಸಿಗೆ ಎನಿಸಬಾರದೆಂದು) ಜನರು ಎಂದೂ ಬತ್ತಿ ಇಲ್ಲವೆ ಸಿಗರೇಟಗಳನ್ನು ಸೇದುವದಿಲ್ಲ ಸೇದಕೂಡದೆಂದು ನಿಯಮವುಂಟು ಭಾರತೀಯರು ಇಂತಹದೊಂದು ಕಟ್ಟು ಮಾಡಿಕೊಂಡು ಪಾಲಿಸುವದುಚಿತ.

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

...ವರು ೧೦-೧೨ ವರ್ಷಗಳ ಕಾಲ ಮಾಜಿ ...ಟಿಂದ್ವರಂತೆ ಇಷ್ಟು ದೀರ್ಘ ಅವಧಿಯಲ್ಲಿ ಕೂಡ ...ಗೆ ಸರ್ಕಾರಕ್ಕೆ ಉತ್ತರ ಕೊಡಲಿಕ್ಕಿದ್ದಂಬುದನ್ನಾಗಲಿ, ...ನ ಪ್ರಶ್ನೆಗೆ ಯಾವ ಉತ್ತರ ಸಮರ್ಪಕವಾಗುತ್ತದೆಂ ...ಬನ್ನಾಗಲಿ ಅವರು ಕಲಿತಿಲ್ಲೆಂಬಂತೆ ತೋರುತ್ತದೆ! ...ಗೋಪಿಯವರ ಪ್ರಶ್ನೆಗೆ ಸರಳ ಮತ್ತು ಸಮರ್ಪಕ ...ತ್ತರ ಕೊಟ್ಟರೆ ತಮ್ಮ ಕೈತ ಪಕ್ಷಪಾತ ಮಾದ-ಸರಣಿಯ ...ಲ್ಯನವೆಲ್ಲ ಪರದೆ ಹೊರಬಿದ್ದು ಘಾತವಾದೀತೆಂದು ...ರು ಬೆದರುತ್ತಿರುವದಿಲ್ಲವಷ್ಟೇ ?

* *

...ರು ಗೋಪಿಯವರು, ಇನ್ನೊಂದು ಪ್ರಶ್ನೆಯಲ್ಲಿ, ಒಕ್ಕ...ಸದ ಕಾನೂನಿನ ನಿಯಮಾವಳಿಯ ೧೦ನೇ ನಿಯಮದ ...ಯ ಸರಕಾರ ಬೇರೆಯ ಪ್ರಮಾಣವನ್ನು ಕಂಡುಹಿಡಿ...ಯುವ ಕಲೆಕ್ಟರಾಧಿಕಾರಿಗಳಿಗೆ ಮಾರ್ಗದರ್ಶನ ಮಾಡುವದ...ಗಿ ಸರಕಾರದವರು ಏನಾದರೂ ನಿಯಮಗಳನ್ನು ಮಾಡಿ...ದ್ದರೆ ಅವುಗಳ ಪ್ರತಿಯೊಂದನ್ನು ಕೌನ್ಸಿಲ-ಸಭೆಯ ...ಮುಂದೆ (ಬೇಕಾದ ಸದಸ್ಯರು ಅವನ್ನು ನೋಡಿಕೊಳ್ಳಲು ...ನುಕೂಲವಾಗುವಂತೆ ಒಂದು ಮೇಜಿನ ಮೇಲೆ) ಇಡಬಹು...ದೆಂದು ಕೇಂದ್ರ ಮಂತ್ರಿ ಮಾನ್ಯ ಮುರಾರಜಿಯವರಿಗೆ ...ಕೇಳಿದ್ದರು. ಸಚಿವೋತ್ತಮರು ತಮ್ಮ ಉತ್ತರದಲ್ಲಿ, ...ಮಾಮಲೇದಾರರ ಮಾರ್ಗದರ್ಶನಕ್ಕಾಗಿ ನಿಯಮಗಳನ್ನು ...ರಕಾರವು ರಚಿಸಿ ಕಳಿಸಿಕೊಟ್ಟ ಸಂಗತಿಯನ್ನು ಒಪ್ಪಿ, ...ಅಧಿಕಾರಿಗಳ ಮಾರ್ಗದರ್ಶನಕ್ಕಾಗಿಯೇ ಸರಕಾರದವರು ...ಹೊರಡಿಸಿದ ಈ ಆದೇಶಗಳು ಕಾರ್ಯಕಾರಿ ಸ್ವರೂಪದವು (of executive nature) ಇರುತ್ತಿರುವದರಿಂದ ...ವನ್ನು ಕೌನ್ಸಿಲ ಸಭೆಯ ಮುಂದೆ ಇಡಬರುವದಿಲ್ಲ"ಂದು ...ಳಿರುತ್ತಾರೆ! ಹಿಂದಣ ನೌಕರಶಾಹಿಯ ರಾಜ್ಯದಲ್ಲಿ ...ಕೂಡ ಎಸೆಂಬ್ಲಿ-ಕೌನ್ಸಿಲುಗಳ ಸಭಾಸದರಿಗೆ ಇಂತಹ ಉತ್ತರಗಳನ್ನು ಕೊಡಲು ಆಳರಸರು ಎದೆಗುಂದುತ್ತಿದ್ದ...ರು ಆದರೆ ಮಾನ್ಯ ಮುರಾರಜಿಯವರಿಗೆ ಮೇಲಿನ ಉತ್ತ...ರ ಕೊಡುವಾಗ ಯಾವ ನಾಚಿಕೆಯೂ ಎನಿಸಲಿಲ್ಲ! ಯಾವ ಸಭ್ಯತನದ ಕಟ್ಟುಗಳೂ ಅಡ್ಡ ಬರಲಿಲ್ಲ! ಮುರಾರಜಿಯವರು ಪ್ರಜಾರಾಜ್ಯದ ತತ್ವಗಳನ್ನೂ ಸಭ್ಯತೆ-ಸೌಜನ್ಯಗಳ ಬಂಧನಗಳನ್ನೂ ಗಂಟು ಕಟ್ಟಿ ಬೀಗ-ಬೇ ಕೊಳ್ಳಿಯಲ್ಲಿ ...ಲ್ಲದರೂ ಒಗೆದಿರಬೇಕೆಂಬ ಸಂಶಯ ಬರುತ್ತದೆ! ಸರಕಾರದ ಕೆಲವೊಂದು ಕೃತಿಗಳನ್ನು ರಾಜ್ಯದ ಇಲ್ಲವೆ ಪ್ರಜೆಗಳ ಸುರಕ್ಷಿತತೆಯ ದೃಷ್ಟಿಯಿಂದ ಗುಪ್ತವಿಡಬೇಕಾಗುತ್ತದೆ ನಿಜ. ಇಂತಹ ಸಂಗತಿಗಳೆಂದರೆ ವಿದೇಶ ಕಾರ್ಯಕ್ಕೆ ಸಂಬಂಧಪಟ್ಟವು, ಯುದ್ಧಕಾಲದಲ್ಲಿ ಅಥವಾ ಅಂತಹ ಗಂಡಾಂತರದ ಸಮಯದಲ್ಲಿ ಸೈನ್ಯ ಇಲಾಖೆಯವರ ಚಲನ-ವಲನ, ಸನ್ನಾಹ ಇಲ್ಲವೆ ಕಾರ್ಯಯೋಜನೆಗಳಿಗೆ ಸಂಬಂಧಪಟ್ಟವುಗಳು ಅಥವಾ ಅಂತಹ ಸ್ವರೂಪದವು ಮೊದಲು ಇತರ ವಿಷಯಗಳಲ್ಲ 'ನಮ್ಮ ಆಜ್ಞೆ-ಆದೇಶಗಳು ಕಾರ್ಯಕಾರಿ ಸ್ವರೂಪದವಿರುವದರಿಂದ ಅವನ್ನು ಹೊರಗೆಡಹಲಿಕ್ಕೆ ಬರುವಂತಿಲ್ಲ'ಂದು ಪ್ರಜಾರಾಜ್ಯದೊಳಗಿನ ಕಾನೂನ-ಮಂಡಳಗಳಿಗೆ ಹಾಗೂ ಕಾನೂನ ಮಂಡಳಗಳ ದ್ವಾರಾ ಜನತೆಗೆ ಜವಾಬದಾರನಾಗಿರುವ ಯಾವ ಮಂತ್ರಿಯೂ ಹೇಳುವಂತಿಲ್ಲ. ಜಿಲ್ಲಾಧಿಕಾರಿಗಳೂ ತಾಲೂಕಾಧಿಕಾರಿಗಳೂ ಬೆಳೆಯ ಮಾಪ ಸರಿಯಾಗಿ ಕಂಡುಹಿಡಿಯುವದಕ್ಕೆಂದು ಕೊಟ್ಟ ಮಾರ್ಗದರ್ಶನದ ಆದೇಶಗಳನ್ನು ಕೇಂದ್ರ ಮಂತ್ರಿಗಳು ತಮ್ಮ ನಿಯಂತ್ರಕರಾದ ಕಾನೂನು ಮಂಡಳದ ಸದಸ್ಯರಿಗೆ ತೋರಿಸಿ ಬಹಿರಂಗಗೊಳಿಸಿದರೆ ಯಾವ ರಾಜ್ಯ ಮುಳುಗುತ್ತಿತ್ತು ? ಅಥವಾ ಎಲ್ಲಿಯ ಜನರ ವಿತ್ತಜೀವಿತಗಳು ಅಪಾಯಕ್ಕೊಳಗಾಗುತ್ತಿದ್ದವೆಂದು ಶ್ರೀ ಮುರಾರಜಿಯವರು ಹೇಳುವ ಧೈರ್ಯ ಮಾಡುವರೇ ? ಸರಕಾರದವರು ಕಾಯದೆಯಂತೆ ಇಲ್ಲವೆ ಕಾಯದೆಯ ತತ್ವಗಳಿಗೆ ಅನುಸಾರವಾಗಿ ಕಾರ್ಯಕಾರಿ ಹುಕುಮುಗಳನ್ನು ಹೊರಡಿಸಿರುವರೋ ಯಾ ಸ್ವಚ್ಛಂದವಾಗಿ ವರ್ತಿಸುತ್ತಿರುವರೋ ಎಂದು ತಿಳಿಕೊಳ್ಳುವ ಅಧಿಕಾರ ಕಾಯದೆ ಮಂಡಳಕ್ಕೆ ಇಲ್ಲೆಂದು ಮುರಾರಜಿಯವರ ಅಂಬೋಣವಿರುತ್ತದೆಯೋ ? ನಮಗಂತೂ ಮುರಾರಜಿಯವರು ಕಾಯದೆಗೂ ನೀತಿಗೂ, ಸರಕಾರವು ಬಹಿರಂಗವಾಗಿ ಆಡುತ್ತಿರುವ ಮಾತುಗಳಿಗೂ ವಿಸಂಗತವಿರುವಂತಹ ಆದೇಶಗಳನ್ನು ಕೊಟ್ಟಿರಬೇಕೆಂದೂ ತಮ್ಮ ಆ ಕಪಟತನ ಅಥವಾ ಸುಳ್ಳುಗಾರಿಕೆ ಬಯಲಾದರೆ, ಜನ-ಘಾತಕ ಅಥವಾ ರಾಷ್ಟ್ರಘಾತಕವೆಲ್ಲದಿದ್ದರೂ, ತಮ್ಮ ಸ್ವಂತ ಘಾತವಾದೀತೆಂಬ ಅಂಜಿಕೆಯಿಂದಲೇ ಅವರು ಆ ಆದೇಶಗಳನ್ನು ಬಹಿರಂಗ... ...ಪಡಿಸುತ್ತಿರುವರೆಂದೂ ಸಂಶಯ ಬರುತ್ತದೆ ಕೊಂಗ್ರೆಸ್ಸಿನ— ಸತ್ಯಸಂಧ ಗಾಂಧಿಜಿಯವರ ಕೊಂಗ್ರೆಸ್ಸಿನ— ಹೆಸರಲ್ಲಿ ಇಂತಹ ಕಪಟಗಳು ನಡೆಯುತ್ತಿರುವವೆಂದು ತೀರ ಶೋಚನೀಯ ಸಂಗತಿ !

* *

ಇತ್ತೀಚಿಗೆ ಪ್ರತಿ ತಾಲೂಕಿನಲ್ಲಿ ೪-೫ ಮಂದಿ ಕಾರಕೂನರನ್ನು ಟೆನನ್ಸಿ ಅವ್ವಲ ಕಾರಕೂನರನ್ನಾಗಿ ನೇಮಿಸಿರುತ್ತಾರೆ ಅವರ ಪಾತ್ರತೆಯೇನಿರುತ್ತದೆಂಬುದು ಆ ಕಾರಕೂನರಿಗೇ ಗೊತ್ತು. ಅವರನ್ನು ನೇಮಿಸಿರುವ ಮೇಲಧಿಕಾರಿಗಳಿಗೇ ಗೊತ್ತು ! ಟೆನನ್ಸಿ ಅವ್ವಲ ಕಾರಕೂನರಾಗಿ ನೇಮಿಸಲ್ಪಟ್ಟವರ ಪೈಕಿ ಅನೇಕರು ಮೋತ್ರಗತಿಯನ್ನು ಸಾಬೀತಾದರೆ ಕೊಡಬೇಕಾಗುವ ಪಾತ್ರತೆಯ ಪರೀಕ್ಷೆ (qualifying test) ಕೊಟ್ಟವರಿರುವದಿಲ್ಲ, ಸರ್ವೇ ವಿಷಯದ ಶಿಕ್ಷಣವನ್ನು ಪಡೆದವರೂ ಇರುವದಿಲ್ಲ ! ಸಂಕೀರ್ಣ ಅಥವಾ ಜಟಿಲ ಸ್ವರೂಪದ ಒಕ್ಕಲತನದ ದಾವೆಗಳನ್ನು ನಿರ್ಣಯಿಸಲು ಬೇಕಾದ ಅರೆ ಸಾಮಾನ್ಯ ಕಾಯದೆಗಳ ಜ್ಞಾನವು ಕೂಡ ಈ ಇಸಮುಗಳಿಗಿರುವದಿಲ್ಲ ! ಈ ಮಾತನ್ನು ಶ್ರೀ ಗೋಪಿಯವರು ಒಂದು ಪ್ರಶ್ನೆಯ ರೂಪದಿಂದ ಮಾನ್ಯ ಮುರಾರಜಿಯವರ ಲಕ್ಷ್ಯಕ್ಕೆ ತಂದಿದ್ದರು. ಮಾನ್ಯ ಕೇಂದ್ರ ಮಂತ್ರಿಗಳು ಉತ್ತರ ಕೊಟ್ಟಿರುತ್ತಾರೇನೆಂದರೆ "ಇಲ್ಲ (ಟೆನನ್ಸಿ ಅವ್ವಲ ಕಾರಕೂನರು ಜಟಿಲ-complicated- ಸ್ವರೂಪದ ಒಕ್ಕಲತನದ ದಾವೆಗಳನ್ನು ಸರಿಯಾಗಿ ತೀರ್ಮಾನಿಸುವಷ್ಟು ಯೋಗ್ಯತೆಯುಳ್ಳವರಿರುವದಿಲ್ಲೆಂಬ ಸಂಗತಿ ಸರಕಾರದ ತಿಳುವಳಿಕೆಗೆ ಬಂದಿಲ್ಲ) ಆದರೂ ಒಕ್ಕಲತನದ ಕಾನೂನಿನ ಅಳವಡಿಕೆಗಾಗಿ ನೇಮಕಪಟ್ಟ ಅವ್ವಲ ಕಾರಕೂನರಿಗೆ ಮುಂಬಯಿಯ ಒಕ್ಕಲತನದ ಕಾನೂನಿನನ್ವಯ ದಾಖಲ ಆದ ಎಲ್ಲ ದಾವೆಗಳನ್ನು ಒಪ್ಪಿಸಕೊಡದೆ ಮತ್ತು, ಕೆಲ್ಯವಿದ್ವತ್ಕರ ಪಾಟ್ಟಿಗೆ, ಸವರ ಕಾಯದೆಗೆ ಸಂಬಂಧಪಟ್ಟ ಜಟಿಲಸ್ವರೂಪದ ಮತ್ತು ಮಹತ್ವದ ದಾವೆಗಳನ್ನು ಮಾಮಲೇದಾರ ಮಹಾಲಕರಿಗಳು ಸ್ವತಃ ತೀರಿಸಿಕೊಂಡು ನಿರ್ಣಯಿಸಬೇಕು ಎಂಬರ್ಥದ ಅವಶ್ಯಕ ಆಜ್ಞೆಗಳನ್ನು ಸರಕಾರವು ಹೊರಡಿಸಿದೆ." ಅವ್ವಲ ಕಾರಕೂನರು ಜಟಿಲ ಸ್ವರೂಪದ ದಾವೆಗಳನ್ನು ನಿರ್ಣಯಿಸಲು ಪಾತ್ರರಿರುವದಿಲ್ಲವಾದರೆ ಮತ್ತು ಅಪಾತ್ರರಿರುತ್ತಾರೆಂಬ ಸಂಗತಿ ಸರಕಾರದ ನಿದರ್ಶನಕ್ಕೆ ಬಂದಿಲ್ಲವಾದರೆ, ಇಂತಹ ಸ್ವರೂಪದ ದಾವೆಗಳನ್ನು ಮಾಮಲೇದಾರ-ಮಹಾಲಕರಿಗಳೇ ನಿರ್ಣಯಿಸಬೇಕೆಂದು ಸರಕಾರವು ಆಜ್ಞೆ ಮಾಡಲು ಕಾರಣವೇನಾಯಿತೆಂಬುದನ್ನೂ ಸಂಕೀರ್ಣ ಸ್ವರೂಪದ ಹಾಗೂ ಮಹತ್ವದ ದಾವೆಗಳನ್ನು ಮಾಮಲೇದಾರ ಮಹಾಲಕರಿಗಳೇ ನಿರ್ಣಯಿಸತಕ್ಕದ್ದೆಂಬ ತತ್ವವನ್ನು ಒಮ್ಮೆ ಮುಂದಿಟ್ಟುಕೊಂಡ ಮೇಲೆ ಆ ತತ್ವಕ್ಕೆ ಅಂಟಿಕೊಂಡಿರದೆ, "ಕಲ್ಯವಿದ್ವತ್ಕರ ಪಾಟ್ಟಿಗೆ" ಎಂಬ ಕಳ್ಳ ಗಂಡಿಯನ್ನು ನಿರ್ಮಿಸಿಟ್ಟಿದ್ದೇಕೆಂಬುದನ್ನೂ ಕೇಂದ್ರ ಮಂತ್ರಿಗಳು ತಿಳಿಸಿ ಹೇಳಿದ್ದರೆ ಒಳಿತಾಗುತ್ತಿತ್ತು.

* *

ಜೋಗ ಜಲಪಾತದ ವಿದ್ಯುತ್ತನ್ನು ಕಾನಡಾ ಜಿಲ್ಲೆಯವರಿಗೆ ಪೂರೈಸುವ ಕಲ್ಪನೆಯನ್ನು ಸರಕಾರವು ಬಿಟ್ಟುಕೊಟ್ಟಿಲ್ಲ ಇಲ್ಲವೆ ಮುಂದೂಡಿಲ್ಲೆಂದು ಡಾ|| ಗಿಲ್ಡರರು ರಾ|| ಪ್ರಭುರವರ ಪ್ರಶ್ನೆಗೆ ಉತ್ತರ ಕೊಡುತ್ತ ತಿಳಿಸಿದ್ದಾರೆ. ಜೋಗದಲ್ಲಿ ದೊರೆಯುವ ವಿದ್ಯುಚ್ಛಕ್ತಿಯನ್ನು ಕಾನಡಾ ಜಿಲ್ಲೆಯೊಂದರಲ್ಲೇ ಪೂರೈಸಲು ೫೧ ಲಕ್ಷ ರೂ ಬಂಡವಾಳ ತೊಡಗಿಸಬೇಕಾಗುವದೆಂದೂ, ವಿದ್ಯುಚ್ಛಕ್ತಿಯ ಯೂನಿಟ್ಟೊಂದಕ್ಕೆ ೯ ೧೭ ಆಣೆ ಆಕರಣಿ ಮಾಡಿದಲ್ಲಿ ೧೦ ವರ್ಷಗಳಲ್ಲಿ ೧೭ ಲಕ್ಷ ರೂ ಹಾನಿ ಬರುವದೆಂದೂ ಸರಕಾರದವರ ತಜ್ಞರು ಲೆಕ್ಕ ಹಾಕಿರುತ್ತಾರಂತೆ. ಜೋಗದೊಳಗಿನ ವಿದ್ಯುತ್ತನ್ನು ಹಿರೇಯ ಮೇಲಿಂದ ಬೆಳಗಾಂವ, ಹುಬ್ಬಳ್ಳಿ, ಗದಗ ನಗರಗಳಿಗೆ ಒಯ್ಯುವದಾದರೆ ಈಗಿನ ಲೆಕ್ಕದಂತೆ ೨೭೦ ಲಕ್ಷ ರೂ ಬಂಡವಾಳ ಮಿರ್ಗ ಬರುವದಂತೆ ವಿದ್ಯುತ್ತಿನ ಉಪಯೋಗ ಹೇಗೆ ಮತ್ತು ಎಲ್ಲಿ ಮಾಡಿಕೊಳ್ಳಬೇಕೆಂಬ ಪ್ರಶ್ನೆಯನ್ನು ಸರಕಾರವು ಇನ್ನೂ ಆಲೋಚಿಸುತ್ತದೆಯೆಂದು ಮಾನ್ಯ ಡಾ|| ಗಿಲ್ಡರರು ಹೇಳಿದ್ದಾರೆ.

* *

ಮುಂಡಗೋಡಿಯಲ್ಲಿ ಕಳೆದ ತಿಂಗಳಲ್ಲಾದ ದರೋಡೆ ವರೋಡೆ ಮತ್ತು ಕೊಲೆಪಾತಕಗಳ ಪರಿಣಾಮವಾಗಿ, ಕೈಯಲ್ಲೇನಾದರೂ ಹಣ ಕಾಸುಳ್ಳ ಜನರು ಹಳ್ಳಿಗಳನ್ನು ಬಿಟ್ಟು ಶಹರಗಳಿಗೆ ಹೋಗುತ್ತಿದ್ದಾರೆ! ಈಗ ಆ ಸೀಮೆಯ ಹಳ್ಳಿಗಳಲ್ಲಿ ಹೋಗಿ ಮನೆಗಳಲ್ಲಿ ಝಡತಿ ಮಾಡಿದರೆ ಯಾರ ಮನೆಯಲ್ಲೂ ೧ ತೊಲೆ ಚಿನ್ನ ಸಿಗಲಿಕ್ಕಿಲ್ಲ, ೧೦ ರೂಪಾಯಿಗಳಷ್ಟು ನಗದಿ ಹಣವೂ ಸಿಗುವಂತಿಲ್ಲ ! ಹಣವಿದ್ದಲ್ಲಿ ದರೋಡೆ

ಬಿಳಗಿಯಲ್ಲಿ ಸಂತೆ.

ಸಿದ್ದಾಪುರ ತಾಲೂಕ ಬಿಳಗಿಯಲ್ಲಿ ಇದೇ ತಾ. ೭—೧೦—೪೮ನೇಯಿಂದ ಪ್ರತಿ ಗುರುವಾರ ಸಂತೆ ಕೂಡಿಸಲು ಜಿಲ್ಲಾಧಿಕಾರಿಯಿಂದ ಮಂಜೂರಿ ಸಿಕ್ಕಿರುತ್ತದೆ ಸಾರ್ವಜನಿಕರು ಇದರ ಲಾಭ ಹೊಂದಬೇಕು.

ಕಾರ್ಯದರ್ಶಿ,
ಸಂತೆ ಸಮಿತಿ, ಬಿಳಗಿ.

MUJUMDAR & KASBEKAR BROS.,
BOOK SELLERS & GENERAL MERCHANTS,
KARWAR. (N K.)

ಜಾಹೀರ ಸೂಚನೆ.

ಮುಂಬಯಿ ಪ್ರಾಂತದ ವಿದ್ಯಾ ಖಾತೆಯವರಿಂದ ಪ್ರಕಾಶಿತವಾದ ಪುಸ್ತಕಗಳ ಬಗ್ಗೆ ನಾವು ಕಾರವಾರ, ಯಲ್ಲಾಪುರ ಹಳಿಯಾಳ, ಮುಂಡಗೋಡ ಮತ್ತು ಸುಪಾ (ಪೇಠೆ) ತಾಲೂಕುಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ "ಕನ್ನಡ ವಾಚನ ಮಾಲೆಯ ಮೊದಲು ಓದು" ಇದೀಗಲೇ ಮಾರಾಟಕ್ಕೆ ಸಿದ್ಧವಾಗಿವೆ. ಬೆಲೆ ೦-೨-೯ ಈ ಬೆಲೆಗೆ ನಮ್ಮಲ್ಲಿ ಯಾ ಆಯಾ ತಾಲೂಕಿನ ಪುಸ್ತಕದ ಅಂಗಡಿಯಲ್ಲಿ ವಿಕ್ರಿಗೆ ಸಿಗುವವು. ಯಾರೂ ಹೆಚ್ಚಿಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ. ಚಿಲ್ಲರೆ ವ್ಯಾಪಾರಸ್ಥರಿಗೆ ಕಮಿಶನ್ ಕೊಡಲಾಗುವದು ಬರೆಯಿರಿ

D. D. KASBEKAR, B.A.,
PARTNER

ಗಳು ಬರುತ್ತವೆ, ಕೊಲೆಗಳು ಸಂಭವಿಸುತ್ತವೆಂಬುದೊಂದು ಸಿದ್ಧಾಂತ ತಪ್ಪಿನ ಕಳೆಯಲ್ಲಿ ಭದ್ರವಾಗಿ ಊರಿಕೊಂಡಿದೆ ಆದರೂ ಅವರ ಮನಸ್ಸಿನೊಳಗಿನ ಭೀತಿ ಹೋಗಿಲ್ಲ. ಅದೂ ಸಹಜವೇ. ಮನೆಯಲ್ಲಿ ಬೆಳ್ಳಿ ಬಂಗಾರವಿಲ್ಲ, ನಗದಿ ಹಣವೂ ಇಲ್ಲ ಎಂಬ ಸಂಗತಿ ದರೋಡೆ ಮಾಡಬರುವ ದಸ್ಯುಗಳಿಗೆ ಎಲ್ಲಿಂದ ಗೊತ್ತಾಗಬೇಕು? ಮತ್ತು ಅವರು ಪುನಃ ದರೋಡೆ ಹಾಕಲು ಬರಲಿಕ್ಕಿಲ್ಲೆಂದು ಯಾರು ಬಂದು ಹೇಳಬೇಕು? ದರೋಡೆಗಾರರ ಈ ಅಂಜಿಕೆಯು ಮೂಲಕ ರಾತ್ರಿ ಹೊತ್ತಿನಲ್ಲಿ ಮಂಚಿಕೇರಿ ಸೀಮೆಯಲ್ಲಿ ಎಲ್ಲಾ ಗಂಡಸರು ಮನೆ ಬಿಟ್ಟು ಹೊರಗೆ ಇರುವುದಿಲ್ಲ! ಭದ್ರವಾಗಿ ಮನೆಯ ಬಾಗಿಲುಗಳನ್ನು ಮುಚ್ಚಿ ಒಳಗೇ ಉಳಿಯುತ್ತಾರೆ' ಅಷ್ಟು ಆ ಸೀಮೆಯ ಜನ ಕಂಗಾಲಾಗಿದ್ದಾರೆ!

* *

ಮಂಚಿಕೇರಿಯಲ್ಲಾದ ದರೋಡೆ ಅದೊಂದು ಕಾದಂಬರಿಯ ಕಥೆಯೆಂದು ತಿಳಿಯಕೂಡದು. ದರೋಡೆಯು ಕೂಲಂಕಷ ದರೋಡೆ ಮಾಡಬಂದ ಜನರ ಶಸ್ತ್ರಸಜ್ಜ ಶಸ್ತ್ರಾಸ್ತ್ರಗಳನ್ನು, ಬಟರಿ, ಟಾರ್ಚ ಲೈಟ್, ಮರೆಯಾಗಿ, ಮೊದಲಾದ ಸನ್ನಾಹಗಳನ್ನು ನೋಡಿದರೆ ಈ ದರೋಡೆಗಾರರ ನಾಯಕತ್ವವು ಯಾವನೊಬ್ಬ ಸುಶಿಕ್ಷಿತ ಮತ್ತು ಸಂಪನ್ನ ಮನುಷ್ಯನ ಕಡೆಗಿರಬೇಕೆಂಬ ಸಂಶಯ ಬರುತ್ತದೆ. ಮಂಚಿಕೇರಿಯ ಜನರಿಗೂ ಹಾಗೆಯೇ ಅನಿಸುತ್ತದೆ. ಮಂಚಿಕೇರಿಯಲ್ಲಾದ ದರೋಡೆಯನ್ನು ಪೋಲೀಸರು ಪತ್ತೆ ಹಚ್ಚದಿದ್ದರೆ, ಸದರಿ ದರೋಡೆಗಾರರು ತಮ್ಮ ಈ ದುಷ್ಟ ವ್ಯವಸಾಯವನ್ನು ಮುಂದರಿಸುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹಾಗಾದರೆ ಮಂಚಿಕೇರಿ ಸೀಮೆಯ ಹಳ್ಳಿಗಳು ಬೇಗನೇ ನಿರ್ಜನವಾಗುವವೆಂದು ತಿಳಿಯಬೇಕು. ಕಾರಣ ಸರಕಾರದವರು ತ್ವರಿತ ಮತ್ತು ಕುಶಲ ಗುಪ್ತ ಪೋಲೀಸರನ್ನು ಕಳಿಸಿಕೊಟ್ಟು ಮಂಚಿಕೇರಿಯ ಪರಿಸರಕ್ಕೆ ಕಾಡುಗಳ್ಳ ದಾನವರ ನಿರ್ದಾಲನ ಮಾಡುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಅಪೇಕ್ಷೆಯಿದೆ.

* *

ಶಿರಸಿಯ 'ಗುರ್ಜ ಟ್ರಾನ್ಸಪೋರ್ಟ ಕಂಪನಿ, ಲಿ' ಕಂಪನಿಗೆ ಕೊಟ್ಟ ಪಬ್ಲಿಕ ಕೆರಿಯರ ಪರವಾನಿಗೆಯನ್ನು ತಾ ೧೦-೮ ೧೯೪೮ನೇ ದಿನ ಬೆಳಗಾಂವಿಯಲ್ಲಿ ಕೂಡಿದ ಪ್ರಾದೇಶಿಕ ಸಾರಿಗೆ ನಿಯಂತ್ರಕ ಮಂಡಳದವರು ರದ್ದುಗೊಳಿಸಬೇಕೆಂದು ನಿರ್ಣಯ ಕೊಟ್ಟಂತೆ ಶಾಸನ ನಿಯಂತ್ರಣಾಧಿಕಾರಿಗಳು ಆ ಕಂಪನಿಯ ಪರವಾನಿಗೆಯನ್ನು ರದ್ದುಗೊಳಿಸಿದ್ದಾರೆ. ಶಿರಸಿ ನಗರ ಸಭೆಯ ಅಧ್ಯಕ್ಷ ರಾ॥ ನಾಯಿಕ, ಶಿರಸಿ ತಾಲೂಕ ಕೊಂಗ್ರೆಸ ಸಮಿತಿಯ ಅಧ್ಯಕ್ಷ ರಾ॥ ಮೋಟೆಬೆನ್ನೂರ ತಿಮ್ಮಪ್ಪ ಜೋಗಳೆ, ನಗರ ಸಭೆಯ ಉಪಾಧ್ಯಕ್ಷ ರಾ॥ ಮುಸ್ಕಿರೆನ್ಹಾಸ, ರಾ॥ ಟಿ॥ ಸರಶೆಟ್ಟಿ, ಶಿವನಂದ, ಮಹಾಲಿಂಗಣ್ಣನವರ ಪ್ರಭೃತಿ ಶಿರಸಿಯ ಸಾರ್ವಜನಿಕ ಜೀವನದಲ್ಲಿ ಪ್ರತಿಷ್ಠೆ ಸಂಪಾದಿಸಿದ ಜೊತೆಗಾರ ವ್ಯಕ್ತಿಗಳು ಈ ಕಂಪನಿಯ ಡಾಯರೆಕ್ಟರರಿದ್ದಾರೆ. ಪೆಟ್ರೋಲ-ವಂಚನೆಯ ಕಾರಸ್ಥಾನದಲ್ಲಿ ಇಂತಹ ಜನರ ಅಂಗವಿತ್ತೆಂದು ಹೇಳುವದು ಧಾಷ್ಟ್ಯವಲ್ಲವೇ? ಸಾರಿಗೆ ನಿಯಂತ್ರಣ ಮಂಡಳದವರು ತಮ್ಮ ನಿರ್ಣಯ ಕೊಡುವಾಗ ಡಾಯರೆಕ್ಟರರ ಪ್ರತಿಷ್ಠೆಯನ್ನು ಗಣಿಸದಿದ್ದದ್ದು ತೀರ ತಪ್ಪೆಂದು ಲೋಕಭಾವನೆಯಿದೆ.

* *

ಸದರಿ 'ಜಿ ಟಿ' ಕಂಪನಿಯ ವಿರುದ್ಧ ಸಾರಿಗೆ ನಿಯಂತ್ರಣ ಮಂಡಳದವರು ಹೊರಿಸುವ ಕೆಲವು ಆರೋಪಗಳು ಇಂತಿವೆ — (೧) ಕಂಪನಿಯು ೮ ಗಾಡಿಗಳದೊಂದು ಪರವಾನಿಗೆ ಪಡೆಕೊಂಡಿತ್ತು. ಆದರೆ ಕಂಪನಿಯ ಕಡೆ ಪ್ರತ್ಯಕ್ಷ ಇದ್ದ ಗಾಡಿಗಳು ಆರು! ತಮ್ಮ ಕಡೆ ಇಲ್ಲದ ಎರಡು ಗಾಡಿಗಳನ್ನು ಕಂಪನಿಯವರು ಪರವಾನಿಗೆಯಲ್ಲಿ ಸೇರಿಸಿಕೊಂಡಿದ್ದರು (೨) ಅಸ್ತಿತ್ವದಲ್ಲಿದ್ದ ಗಾಡಿಗಳನ್ನು ತಪಾಸಣೆಗೆ ಕೂಲಂಕಷ ಕಂಪನಿಯವರು ಹ್ಯಾಗೆ ತಪಾಸಣೆಗೆ ಹಾಜರಪಡಿಸದೆ ಮತ್ತು ತಪಾಸಿಸಿಕೊಂಡರು ಎಂಬುದನ್ನು ಮಾತ್ರ ಸಾರಿಗೆ ನಿಯಂತ್ರಣಾಧಿಕಾರಿಗಳು ಆರೋಪ ಪಟ್ಟಿಯಲ್ಲಿ ಸ್ಪಷ್ಟಪಡಿಸಿಲ್ಲ. ಅಸ್ತಿತ್ವದಲ್ಲಿಲ್ಲದ ಗಾಡಿಗಳ ಬದಲು ಬೇರೆ ಗಾಡಿಗಳನ್ನು, ನಂಬರ ಪ್ಲೇಟುಗಳನ್ನು ಬದಲಿಸಿ ತಪಾಸಣೆಗೆ ಹಾಜರಪಡಿಸಿರಬಹುದು ಅಥವಾ ಎಂದೋ ಮುರಿದುಹೋಗಿದ್ದ ಆ ಗಾಡಿಗಳ ಅವಶೇಷಗಳನ್ನು ಬೇರೊಂದು ಗಾಡಿಯ ಭಾಗ (ಮೇಲಿನ ಬಾಡಿ ಮುಂತಾದವು) ಗಳನ್ನು ಒಟ್ಟುಗೂಡಿಸಿ ತಾತ್ಕಾಲಿಕವಾಗಿ ತೋರಿಕೆಯ ಗಾಡಿಗಳನ್ನು ರಚಿಸಿ ತೋರಿಸಿರಬಹುದು ಎಂದು ಅಧಿಕಾರಿಗಳು ಇಟ್ಟಿರುವ ಆರೋಪಗಳಷ್ಟೇ ಆರೋಪಗಳ ಪಟ್ಟಿಯಲ್ಲಿ ಕೊಟ್ಟಿದ್ದಾರೆ.

* *

ಮೇಲಿನ ಆರೋಪಗಳಿಗೆ ಕಂಪನಿಯವರು ಕೊಟ್ಟ ಉತ್ತರ ಅವರ ವಕೀಲರ ಪ್ರತಿಪಾದನೆ ಮತ್ತು ಸ್ವಂತ ಸಾರಿಗೆ ನಿಯಂತ್ರಣ ಕಚೇರಿಯ ರಾ॥ ಎಸ್. ಜಿ. ನಾಯ್ಕ ಇವರು ಚೌಕಶಿ ಮಾಡಿ ಒಪ್ಪಿಸಿದ ವರದಿ ಇವುಗಳನ್ನು — ಕಂಪನಿಯವರು ಸ್ವತಃ ಮುಂತಾದವುಗಳಿಗೆ ಕಳಿಸಿಕೊಟ್ಟ ವರದಿಯ ಆಧಾರಗಳನ್ನು ಚೆನ್ನಾಗಿ ಪರಿಶೀಲಿಸಿ ಮಂಡಳವು ನಿರ್ಣಯ ಕೊಟ್ಟಿರುತ್ತದೆ ಎಂದರೆ — ಕಂಪನಿಯು ೬ ಬಸ್ ಇದ್ದಾಗ ೮ ಗಾಡಿಗಳ ಬಲದ ಮೇಲೆ ಪೆಟ್ರೋಲ ಪಡೆಯುತ್ತಿತ್ತು. ಸಾರಿಗೆ ಮಂಡಳಿಯ ಸರ್ವ ಅಂಗದ ತಪಾಸಣೆಯು ಅಪೂರ್ಣವಾಗಿ ಮಾಡಲ್ಪಟ್ಟಿದೆ. ಸಾರಿಗೆ ಸಂಪೂರ್ಣ ಪುನರ್ವಿಚಾರಣೆಯಾಗಿದೆ. ಕಂಪನಿಯು ಎಲ್ಲ ಗಾಡಿಗಳ ಪರವಾನಿಗೆಗಳನ್ನು ರದ್ದುಗೊಳಿಸುವದೇ ಈ ಅಪರಾಧಕ್ಕೆ ತಕ್ಕ ಶಿಕ್ಷೆ ಎಂದು ನಮ್ಮ ಮತ. ಕಂಪನಿಯ ಡಾಯರೆಕ್ಟರರು ಪ್ರತಿಷ್ಠಿತ ಗೃಹಸ್ಥರಿರಬಹುದು. ಆದರೆ ಯುದ್ಧಕಾಲದ ಪರಿಸ್ಥಿತಿಯಲ್ಲಿ ನಡೆದ ಈ ವಂಚನೆಯನ್ನು ತಡೆಯಲು ಯಾವ ಡಾಯರೆಕ್ಟರನೂ ಮುಂದಾಗದಿದ್ದುದರಿಂದ ನಮ್ಮ ಈ ಮತಕ್ಕೆ ಎಳ್ಳಷ್ಟು ಬಲಿ ಕೊಡಲಾರೆವು. ಅದರಿಂದ ಈ ಕಂಪನಿಗೆ ಕೊಟ್ಟ ಎಲ್ಲ ಪರವಾನಿಗೆಗಳನ್ನು ರದ್ದುಗೊಳಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

* *

ಕಂಪನಿಯವರ ಮೋಸಗಾರಿಕೆಗೆ ತಕ್ಕ ಶಿಕ್ಷೆಯನ್ನು ವಿಧಿಸುವಾಗ ಸಾರಿಗೆ ನಿಯಂತ್ರಣ ಮಂಡಳದವರು, ಈ ಮೋಸಗಾರಿಕೆಯನ್ನು ನಡೆಸಗೊಟ್ಟು, ಅಸ್ತಿತ್ವದಲ್ಲಿಲ್ಲದ ಗಾಡಿಗಳನ್ನು ತಪಾಸಣೆ ಮಾಡಿ "O K" ಎಂದು ಶಿಫಾರಸು ಮಾಡಿದ ಮತ್ತು ನೋಂದಣಿಯಾಗದ ಗಾಡಿಗಳಿಗೂ ಕೂಡ ಪೆಟ್ರೋಲ-ಕೋಟಾ ಸಿಗುವಂತೆ ಅನುಕೂಲ ಮಾಡಿಕೊಟ್ಟ ಲಂಚಕೋರ ಅಧಿಕಾರಿಗಳಿಗೆ ಯಾವ ಶಾಸನವನ್ನೂ ವಿಧಿಸದಿದ್ದುದು ಅಥವಾ ಅವರ ವಿರುದ್ಧ ಕ್ರಮ ಕೈಕೊಳ್ಳಬೇಕೆಂದು ಶಿಫಾರಸು ಸಹ ಮಾಡದೆ ಇದ್ದುದು ವಿಚಿತ್ರವೆನಿಸುತ್ತದೆ! ಕಂಪನಿಯವರು ಮೋಟಾರ ಇನ್ಸಪೆಕ್ಟರ ಮಿ॥ ಇಲೇವ್ಹಿಯಾ ಇವರ ಕಣ್ಣಲ್ಲಿ ಧೂಳು ಹಾಕಿ ಅಸ್ತಿತ್ವದಲ್ಲಿಲ್ಲದ ಗಾಡಿಗಳನ್ನು ತಪಾಸ ಮಾಡಿಕೊಂಡಿರಬಹುದು! ಆದರೆ ಮಿ॥ ಇಲೇವ್ಹಿಯಾ ಇವರ ಕಣ್ಣಲ್ಲಿ ಹಾಕಿದ ಧೂಳು ಮಾರ್ಗದ ಮೇಲಿನ ಧೂಳೋ ಅಥವಾ ರಾಜಮುದ್ರೆಯುಳ್ಳ ಕಾಗದಗಳ ಧೂಳೋ ಎಂಬುದನ್ನು ತಿಳಕೊಳ್ಳಲು ಸಾರ್ವಜನಿಕರು ಆತುರರಾಗಿದ್ದಾರೆ. ಮೋಟಾರ-ತಪಾಸಕ ಮಿ॥ ಇಲೇವ್ಹಿಯಾ ಇವರ ಅಂಗ, ಸಹಾಯ ಮತ್ತು ಸಹಕಾರ ವಿದ್ದ ಹೊರತು ಕಂಪನಿಯು ಮೋಸದಿಂದ ಡ್ಯಾರೆಕ್ಟರರ ವಂಚನೆ ಎಂದೂ ಫಲಕಾರಿಯಾಗುವಂತಿಲ್ಲೆಂದು ಒಂದು ಚಿಕ್ಕ ಮಗುವೂ ಕೂಡ ಹೇಳಬಲ್ಲದು. ನಂಬರ-ಪ್ಲೇಟ ಬದಲಿಸಿ ತಂದ ಗಾಡಿಗಳನ್ನು ಗುರುತಿಸಲಾರದಷ್ಟು ಮಿ॥ ಇಲೇವ್ಹಿಯಾ ಇವರು ಅಜ್ಞರು ಅಥವಾ ಬುದ್ಧಿಹೀನರು ಇರುತ್ತಾರೆಂದು ಸಾರಿಗೆ ನಿಯಂತ್ರಣ ಮಂಡಳದವರು ತಿಳಿಯುತ್ತಾರೇನು? ಹಾಗಾದರೆ ಅವರು ಇಲೇವ್ಹಿಯಾ ಇವರಿಗೆ ಮೋಟಾರ-ತಪಾಸಣೆಯ ಕೆಲಸದಿಂದ ರಜೆ ಮಾಡಿ ಅವರ ಬುದ್ಧಿಮಾಂದ್ಯಕ್ಕೆ ಒಪ್ಪುವಂತಹ ಸ್ಥಳಕ್ಕೆ ವರ್ಗಾಯಿಸುವ ವ್ಯವಸ್ಥೆಯನ್ನಾದರೂ ಮಾಡಬೇಕಿತ್ತಲ್ಲವೇ?"

* *

ಮಿ॥ ಇಲೇವಿಯಾ ಇವರ ತಪ್ಪುಗಾರಿಕೆಯನ್ನು—ಅಪರಾಧವನ್ನು ಬಯಲಿಗೆ ತರದಿರುವದರಲ್ಲಿ ಬೆಳಗಾಂವಿ ಪ್ರಾಂತದ ನಿಯಂತ್ರಣಾಧಿಕಾರಿಗಳ ಕಚೇರಿಯವರ ಸ್ವಾರ್ಥವುಂಟೆಂದೇ ಹೇಳಬೇಕು. ರಜಿಸ್ಟರ ಆಗದಿದ್ದ ಗಾಡಿಗಳಿಗೆ ಅವರು ಪೆಟ್ರೋಲ-ಕೋಟಾ ತೆಗೆಸಿಕೊಟ್ಟಿಲ್ಲವೇ? ಎಷ್ಟು ಗಾಡಿಗಳು ಚಲಾವಣೆಯಲ್ಲಿವೆ, ಎಷ್ಟು ಗಾಡಿಗಳು ನಾಶವಾಗಿ ಮುರುಕು ಕಾರಖಾನೆಯನ್ನು ಸೇರಿವೆ ಎಂಬುದರ ಚೌಕಶಿಯನ್ನೂ ಮಾಡದೆ ಆ ಗಾಡಿಗಳ ಉಪಯೋಗಕ್ಕೆಂದು ಕಂಟ್ರೋಲ ಪೆಟ್ರೋಲ ಕೂಪನುಗಳನ್ನು ಕೊಟ್ಟ ಇವರುಗಳು ಪ್ರಾಮಾಣಿಕತನದಿಂದ ವರ್ತಿಸಿರುತ್ತಾರೆಂದು ತಿಳಿಯುವಷ್ಟು ಜಗತ್ತು ಮೂರ್ಖವಾಗಿಲ್ಲವೆಂಬುದನ್ನು ಸಾರಿಗೆ ನಿಯಂತ್ರಣಾಧಿಕಾರಿಗಳೂ ಮಂಡಳವೂ ನೆನಪಿನಲ್ಲಿಡಬೇಕು. ಲಂಚಗೊಳಿತನದ ನಿರ್ಮೂಲನದ ಮೇಲೆ ಕಟಾಕ್ಷವನ್ನಿಟ್ಟ ಮುಂಬಯಿ ಸರಕಾರವು ಸಾರಿಗೆ ನಿಯಂತ್ರಣ ಇಲಾಖೆಯ ಸಂಬಂಧವಿಲ್ಲದ ಓರ್ವ ಸ್ವತಂತ್ರ ಅಧಿಕಾರಿಯನ್ನು ನೇಮಿಸಿ "ಜಿ ಟಿ" ಕಂಪನಿಯವರ ವಂಚನೆ ನಡೆಯಗೊಟ್ಟ ಅಧಿಕಾರಿಗಳ ನಡೆತೆಯ ಕೂಲಂಕಷ ಚೌಕಶಿ ಮಾಡಿ ಎಲ್ಲ ಕಳ್ಳರನ್ನು ಬಯಲಿಗೆ ಎಳೆಯುವ ಏರ್ಪಾಟು ಮಾಡಬೇಕೆಂದು ಸಾರ್ವಜನಿಕರು ಅಪೇಕ್ಷಿಸುತ್ತಾರೆ.

ಗೇಣಿದಾರಿಕೆ ಕಾಯಿದೆಯ ಅಮಲಬಜಾವಣಿ ಕಾನಡಾ ಜಿಲ್ಹೆಯಲ್ಲಿ ಹೇಗೆ ನಡೆದಿದೆ?

(೧)	ಆಗಸ್ಟ ತಿಂಗಳ ಆರಂಭದಲ್ಲಿ ಶಿಲ್ಕಿದ್ದ ಟೆನನ್ಸಿ ಅರ್ಜಿಗಳು	೩೬೮೪
(೨)	ಆಗಸ್ಟ ತಿಂಗಳಲ್ಲಿ ದಾಖಲಾದ ಅರ್ಜಿಗಳ ಸಂಖ್ಯೆ	೩೮೩
(೩)	ಆಗಸ್ಟ ತಿಂಗಳಲ್ಲಿ ನಿಕಾಲಿ ಕೊಟ್ಟ ಅರ್ಜಿಗಳ ಸಂಖ್ಯೆ	೧೭೩೫
(೪)	ತಿಂಗಳ ಕೊನೆಯಲ್ಲಿ ಶಿಲ್ಕು ಬಿದ್ದ ಅರ್ಜಿಗಳು	೨೩೩೨
(೫)	ಭೂಮಾಲಿಕರಿಗೆ ಕಬ್ಜಾ ಕೊಡಿಸಿ ನಿಕಾಲಿಯಾದ ಅರ್ಜಿಗಳು	೧೪೭
(೬)	ರೈತರ ಹತ್ತಿರ ಕಬಜಾ ಇಡಿಸಿ ನಿಕಾಲಿ ಕೊಟ್ಟ ಅರ್ಜಿಗಳ ಸಂಖ್ಯೆ	೩೩೩
(೭)	ಒಡೆಯರಿಗೆ ಗೇಣಿ ಮಂಜೂರ ಮಾಡಿದ ಅರ್ಜಿಗಳ ಸಂಖ್ಯೆ	೧೦೩

ಸಂರಕ್ಷಿತ ರೈತರು, ಸಾದಾ ರೈತರು ಮತ್ತು ಸ್ವಂತ ಸಾಗುವಳಿದಾರರ ಮಾಹಿತಿ ಈ ಕೆಳಗಿನಂತೆ ಅದೆ —

ಸಂರಕ್ಷಿತ ರೈತರು	೪೩,೮೧೯	ಶಿರಸಿ ಮತ್ತು ಕಾರವಾರ ತಾಲೂಕಿನಿಂದ ಸಂರಕ್ಷಿತ ರೈತ
ಸಾದಾ ರೈತರು (೧೦ ವರ್ಷದ ಅವಧಿಯ ರೈತರು)	೯೫೯೭	ಸಾದಾ ರೈತರ ಮಾಹಿತಿ ಇನ್ನೂ ಬರತಕ್ಕದ್ದಿದೆ. ಸ್ವಂತ ಸಾಗುವಳಿ ಬಗ್ಗೆ ಕಾರವಾರ, ಕುಮಟಾ, ಸಿದ್ದಾಪೂರ, ಶಿರಸಿ, ಯಲ್ಲಾಪೂರ, ಹಳಿಯಾಳ ಮತ್ತು ಸುಪಾ ಪೇಟೆಗಳಿಂದ ಇನ್ನೂ ಮಾಹಿತಿ ಬರತಕ್ಕದ್ದಿದೆ
ಸ್ವಂತ ಸಾಗುವಳಿದಾರರು	೧೨,೩೩೫	

ಅಂಕೋಲಾ ತಾಲೂಕಿನಲ್ಲಿ ೩೩ ರೈತರು ತಾವಾಗಿ ಭೂಮಿಯ ಕಬ್ಜಾ ಒಡೆಯರಿಗೆ ಬಿಟ್ಟುಕೊಟ್ಟಿದ್ದಾರೆ ಹಾಗೂ ಸ್ವಂತ ಸಾಗುವಳಿ ಬಾಬಿನ ೬೫ ಅರ್ಜಿಗಳು ನಿಕಾಲಿಯಾಗಿ, ೩೨ ಅರ್ಜಿಗಳಲ್ಲಿ ಒಡೆಯರಿಗೆ ಕಬ್ಜಾ ಕೊಡಿಸಿರುತ್ತದೆ. ೧೩ ಅರ್ಜಿಗಳಲ್ಲಿ ಯೋಗ್ಯ ಗೇಣಿ ಎಷ್ಟೆಂಬುದನ್ನು ಠರಾಯಿಸಿರುತ್ತದೆ. ಹೆಚ್ಚಿಗೆ ಸಂದ ಗೇಣಿಯ ಮೊಬಲಗು ರೈತರಿಗೆ ಮುಂದಿನ ಗೇಣಿಯಲ್ಲಿ ಮುಜರೆ ಕೊಡುವಂತೆ ಯಾ ಅವರಿಗೆ ರಕ್ಕಮ ಕೊಡುವಂತೆ ೧೫ ಅರ್ಜಿಗಳಲ್ಲಿ ನಿಕಾಲಿ ಕೊಟ್ಟಿರುತ್ತದೆ. ಶಾನಕೂಡದ ಗೇಣಿ ತಕರಾರಿನ ಬಗ್ಗೆ ೨ ಜನ ಒಡೆಯರ ಮೇಲೆ ಖಟ್ಲೆ ಹಾಕಿ ಶಿಕ್ಷೆ ವಿಧಿಸಿತ್ತು. ಅಪೀಲಿನಲ್ಲಿ ಅವರ ದಂಡದ ರಕಮು ಕಡಿಮೆಯಾಗಿ ಮೂಲ ತೀರ್ಪು ಕಾಯಮ ಆಗಿದೆ.

ಕಾರವಾರ, ತಾ ೧೬-೯ ೧೯೪೮ }

ಎಲ್. ಎಸ್. ಸಾಲ್ಡಾನ್ಹಾ,
ಕಲೆಕ್ಟರ

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

Reg. No. B 1270 Monday, 4-10-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೧೪.

ಕುಮಟಾ - ಸೋಮವಾರ, ತಾ ೪—೧೦- ೧೯೪೮

ವರ್ಗಣಿಯ ದರ

ಕುಮಟೆಯಲ್ಲಿ

ವರ್ಷಕ್ಕೆ ರೂ ೨-೪-೦

[illegible] ೧-೧-೦

[illegible] ೧-೧-೦

ಬಿಡಿ ಸಂಚಿಕೆಗೆ ೦-೧-೬

[illegible] ೦-೪-೦

[illegible]

ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

ಜಾಹೀರಾತುಗಳ ದರ.-

[illegible]

[illegible]

[illegible]

ಜಾಹೀರಾತುಗಳ ಬಗ್ಗೆ ವಿಚಾರಿಸಿ

ಇಲ್ಲವೆ ಪತ್ರವ್ಯವ.

ತಿಳಿಸಲಾಗುವದು

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ [illegible] ಗಳಿಗೆ [illegible], ಅವರ ರಾತ್ರಿಯಲ್ಲಿ [illegible]

[illegible] ಗಾಂಧೀ-ಜಯಂತಿಯ ಕಾರ್ಯಕ್ರಮ [illegible] ಮ್ಯುನಿಸಿಪಾಲಿಟಿಯ ಅಧ್ಯಕ್ಷರು [illegible] ಒಂದು ವಿಶಿಷ್ಟ ಕಾರ್ಯಕ್ರಮ [illegible] ಕಾರ್ಯಕ್ರಮದ [illegible] ಜನರಿಗೆ [illegible] ಗಾಂಧೀ [illegible] ಯೋಜನೆಗಳನ್ನು ಮ್ಯುನಿಸಿಪಾಲಿಟಿಯು [illegible] ಎಂದು [illegible] ತಿಳಿಯುತ್ತದೆ.

[illegible] ಮುಂಜಾನೆ ಪ್ರಭಾತ [illegible] ಗಾಂಧೀ-[illegible] ಜಗನ್ನಾಥ [illegible] ಗಾಂಧೀ-ಮಾರ್ಗದ [illegible]

[illegible] ಸರಕಾರದ [illegible]

[illegible]

[illegible]

[illegible] ಸಂಘದ [illegible]

[illegible]

ಹೊನ್ನಾವರ— (೩ ೨೯-೯-೪೮) [illegible]

[illegible]

[illegible] ಸಂಘದ [illegible]

[illegible]

[illegible]

(ತಾ ೨ ೧೦-೪೮) [illegible] ಗಾಂಧೀ-ಜಯಂತಿಯನ್ನು [illegible]

ಸಿದ್ದಾಪುರ— (ತಾ ೨೮-೯-೪೮) [illegible] (revised pocket edition) [illegible]

[illegible]

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು. ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ. ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ

ಮಹಾತ್ಮರು ತೋರಿಸಿಕೊಟ್ಟ ಮಾರ್ಗವೇ ಭಾರತದ ಮಾರ್ಗವಾಗಬೇಕು.

ಕಾನಡಾವೃತ್ತ.

ಶಕೆ ೧೮೭೦ ಸರ್ವಧಾರಿ ಸಂ|| ಆಶ್ವಿನ ಶು|| ೨

ಗಾಂಧಿ-ಜಯಂತಿಯನ್ನು ಆಚರಿಸುವ ಬಗೆ

ಮೊನ್ನೆ ಶನಿವಾರ ಭಾರತದಲ್ಲಿ— ಭಾರತದ ಹೊರಗೆ ಹಿಂದೀಯರಿದ್ದಲ್ಲೆಲ್ಲ ಕೂಡ— ಅತ್ಯಂತ ವಿಜೃಂಭಣೆಯಿಂದ ಪರಮ ಪೂಜ್ಯ ಮಹಾತ್ಮಾ ಗಾಂಧಿಯವರ ಜಯಂತಿಯ ಉತ್ಸವವಾಯಿತು. ಭಾರತ ಸರಕಾರವು ಅಂದು ಸಾರ್ವಜನಿಕ ಬಿಡುವನ್ನು ಕೊಟ್ಟಿತ್ತು. ಆದರಿಂದ ಎಲ್ಲ ಕಚೇರಿಗಳ ಜನರೂ ಶಾಲಾ-ವಿದ್ಯಾರ್ಥಿಗಳೂ ಜಯಂತಿಯ ಉತ್ಸವದಲ್ಲಿ ಆನಂದದಿಂದಲೂ ಉತ್ಸಾಹದಿಂದಲೂ ಸೇರಿದರು. ಎಲ್ಲ ಸಣ್ಣ ದೊಡ್ಡ ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಈ ಉತ್ಸವದ ಆಚರಣೆಯಾಯಿತು. ಎಲ್ಲೆಲ್ಲೂ ಸಭೆಗಳಾಗಿ, ಮಹಾತ್ಮಾಜಿಯವರ ಗುಣಗಾನವಾಯಿತು. ಅವರು ಕಲಿಸಿಕೊಟ್ಟ ಪವಿತ್ರ ತತ್ವಗಳ ವಿವರಣೆಯಾಯಿತು, ಅವರ ಹೆಸರಿನ ಜಯ ಘೋಷವಾಯಿತು; ಕೆಲ ಕಡೆ ಅವರ ಭಾವಚಿತ್ರಗಳ ಇಲ್ಲವೆ ಅನ್ಯ ಬಗೆಯ ಸ್ಮಾರಕಗಳ ಉದ್ಘಾಟನೆಯಾಯಿತು. ಇನ್ನೂ ಕೆಲವೆಡೆ ಅವರ ಪ್ರೀತ್ಯರ್ಥ ಗೀತಾ-ಕುರಾಣ-ಬೈಬಲ್ ವಗೈರೆ ಪವಿತ್ರ ಧರ್ಮಗ್ರಂಥಗಳ ಪಠನ-ಪಾರಾಯಣಗಳಾದವು, ಬೇರೆ ಹಲವೆಡೆ ಸೂತ್ರಯಜ್ಞ, ನಗರ-ಸ್ವಚ್ಛತೆ ವಗೈರೆ ಬಗೆ ಬಗೆಯ "ರಚನಾತ್ಮಕ" ಕಾರ್ಯಕ್ರಮಗಳನ್ನು ಜನರು ನೆರವೇರಿಸಿದರು. ಅಂತು ಸರ್ವತ್ರ ಜಯಂತಿ-ಉತ್ಸವದ ಸಂಭ್ರಮ ಬಹಳ ಸಂಭ್ರಮದಿಂದಲೂ ಸಡಗರದಿಂದಲೂ ನಡೆಯಿತು. ಮುಂಬಯಿ ಸರಕಾರವಂತೂ ಈ ಜಯಂತಿಯ ಉತ್ಸವವನ್ನು ಮೊನ್ನೆಯಿಂದ ಬರುವ ದಸರೆ ಹಬ್ಬದ ವರೆಗೆ ೧೧ ದಿನ ಆಚರಿಸಿ ಪ್ರಾಂತದಲ್ಲೆಲ್ಲ "ಗ್ರಾಮ ಸುಧಾರಣಾ ವಾರ" ವನ್ನು ಆಚರಿಸಬೇಕೆಂದು ಅಪ್ಪಣೆ ಹೊರಡಿಸಿದೆ; ಮತ್ತು ಆ ಅಪ್ಪಣೆಗನುಸಾರವಾಗಿ ಅಲ್ಲಲ್ಲಿಯ ಅಧಿಕಾರಿಗಳೂ ಅಧಿಕಾರೇತರ ಜನರೂ ಕೂಡಿ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಗ್ರಾಮೋದ್ಧಾರ ಕಾರ್ಯದ ಪ್ರಚಾರವನ್ನು ಮಾಡಬೇಕೆಂದು ನಿಶ್ಚಯಿಸಿರುತ್ತಾರೆ.

ಇದೆಲ್ಲ ಸ್ಪೃಹಣೀಯವೇ ಸರಿ. ಆದರೆ ನಮ್ಮ ಸರ್ವಾಧಿಪತಿಗಳಾದ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮೊನ್ನೆಯೇ ಈ ಜಯಂತ್ಯುತ್ಸವದ ಸಂಬಂಧದಲ್ಲಿ ಹೊರಡಿಸಿದ ತಮ್ಮ ಸಂದೇಶದೊಳಗೆ ಹೇಳಿರುವರಂತೆ, ಮಹಾತ್ಮರನ್ನು ನಾವು ಬರೇ ದೇವರಂತೆ ಪೂಜಿಸಿ, ಇಲ್ಲವೆ ಅವರನ್ನು ಮೂವತ್ತುಮೂರು ಕೋಟಿ ದೇವತೆಗಳ ವರ್ಗದಲ್ಲಿ ಮೂವತ್ತುಮೂರು ಕೋಟಿ ಒಂದನೆಯ ದೇವರನ್ನಾಗಿ ಸೇರಿಸಿ, ಅವರ ನಾಮಸಂಕೀರ್ತನೆ ಅಥವಾ ಜಯಜಯಕಾರವನ್ನು ಮಾಡಿ ಪ್ರಯೋಜನವಿಲ್ಲ, ಅವರು ತಮ್ಮ ಜೀವಮಾನದಲ್ಲಿ ಸಂತತವಾಗಿ ಕಲಿಸಿಕೊಡುತ್ತ ಬಂದಿರುವ ಮತ್ತು ಸ್ವಂತ ಆಚರಣೆಯಿಂದಲೂ ಉದಾಹರಣೆಗಳಿಂದಲೂ ಮನದಟ್ಟು ಮಾಡಿಕೊಟ್ಟಿರುವ ತತ್ವಗಳಂತೆ ಸದಾಕಾಲ ನಡೆಯುವ ಪ್ರತಿಜ್ಞೆಯನ್ನು ನಾವು ಈ ಜಯಂತ್ಯುತ್ಸವದ ಕಾಲಕ್ಕೆ ಮಾಡಬೇಕಲ್ಲದೆ, ಈ ಉತ್ಸವದ ಸಮಯದಲ್ಲಿ, ಹಿಂದಿನ ವರ್ಷ ನಮ್ಮ ಕಡೆಯಿಂದ ಆ ತತ್ವಗಳ ಆಚರಣೆ ಎಷ್ಟರಮಟ್ಟಿಗೆ ಆಯಿತು, ಎಲ್ಲೆಲ್ಲಿ ಚ್ಯುತಿಯಾಯಿತು ಎಂಬುದರ ಆಢಾವೆಯನ್ನೂ ನಾವು ತೆಗೆಯಬೇಕು, ಮತ್ತು ಆ ತತ್ವಗಳಿಂದ ಚ್ಯುತರಾದದ್ದು ಕಂಡು ಬಂದಲ್ಲಿ ಚ್ಯುತಿಯನ್ನು ಸುಧಾರಿಸಿಕೊಳ್ಳುವ ಮತ್ತು ಸನ್ಮಾರ್ಗದಿಂದ ಹೋಗುವ ನಿರ್ಧಾರವನ್ನೂ ದೃಢನಿಶ್ಚಯವನ್ನು ಮಾಡಬೇಕು. ಹಾಗೆ ಮಾಡಿದರೆ ಮಾತ್ರ ನಾವು ಮಹಾತ್ಮರಿಗೆ ನಮ್ಮ ನಿಜವಾದ ಶ್ರದ್ಧಾಂಜಲಿಯನ್ನು ಕಾಣಿಕೆಯನ್ನೂ ಸಲ್ಲಿಸಿದಂತಾಗುವದು.

ಹೀಗಿರುವಂತೆ ಮೊನ್ನೆಯ ಜಯಂತಿಯ ಉತ್ಸವದ ಕಾಲಕ್ಕೆ ನಾವು ಆತ್ಮನಿರೀಕ್ಷಣೆಯನ್ನೂ ದೇಶದೊಳಗೆ ನಡೆಯುತ್ತಿರುವ ಬೇರೆ ಬೇರೆ ಚಟುವಟಿಕೆಗಳ ನಿರೀಕ್ಷಣೆಯನ್ನೂ ಬೇರೆ ಬೇರೆ ಸರಕಾರಗಳು ಅನುಸರಿಸುತ್ತಿರುವ ನೀತಿ ಧೋರಣೆಗಳ ಪರೀಕ್ಷಣವನ್ನೂ ಮಾಡಿದರೆ, ನಾವಿಂದು ಗಾಂಧೀಜಿಯವರ ತತ್ವಗಳಿಗೆ ಬಾಯಿಂದಷ್ಟೇ ಮನ್ನಣೆ ಕೊಡುತ್ತಿದ್ದೇವೆ, ಕೃತಿಯಿಂದಲ್ಲ ಎಂದು ನಮಗೆ ಕಂಡು ಬಾರದಿರದು. ಕೆಲವೇ ಉದಾಹರಣೆಗಳನ್ನು ಇಲ್ಲಿ ನಾವು ನಮೂದಿಸಬಹುದು. ಬ್ರಿಟಿಶರ ಕಾಲಕ್ಕೇರ್ದಿಯಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಪಡೆಯುತ್ತಿದ್ದ ದೊಡ್ಡದೊಡ್ಡ ತನಖೆ-ಸಂಬಳಗಳ ಬಗ್ಗೆ ಮಹಾತ್ಮರ ಆಕ್ಷೇಪವಿತ್ತು. ನಮ್ಮಂಥ ಬಡ ಜನರ ದೇಶದಲ್ಲಿ ಅಧಿಕಾರಿಗಳು ಭಾರಿ ಸಂಬಳಗಳನ್ನು ಪಡೆಯುತ್ತಿರುವದು ಒಂದು ಬಗೆಯ ಸುಲಿಗೆ ಎಂದು ಅವರು ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸುವ ಮುಂಚೆ ಆ ಕಾಲದ ಭಾರತದ ಸರ್ವಾಧಿಪತಿಗಳಾದ ಇರ್ವಿನ್ (ಈಗ ಹೆಲಿಫ್ಯಾಕ್ಸ) ದೊರೆಗಳಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಧ್ವನಿಸಿದ್ದರು. ಹಿಂದೀ ಜನರ ಸರಾಸರಿ ವಾರ್ಷಿಕ ಉತ್ಪನ್ನಕ್ಕೆ ಅನುಗುಣವಾಗಿಯೇ ಅಧಿಕಾರಿಗಳ ಸಂಬಳ, ಭತ್ತೆ ಮೊದಲಾದವಿರಬೇಕೆಂದು ಅವರ ನಿಶ್ಚಿತ ಅಭಿಪ್ರಾಯವಿತ್ತು. ಅದರಂತೆ ೧೯೩೧ರಲ್ಲಿ ಕರಾಚಿಯೊಳಗೆ ಕೂಡಿದ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ, ಯಾವದೇ ಸರಕಾರಿ ಅಧಿಕಾರಿಯ ಮಾಸಿಕ ಸಂಬಳ ರೂ. ೫೦೦ಕ್ಕೆ ಮಿಕ್ಕಬಾರದೆಂಬ ಠರಾವೂ ಕೂಡ ಆಗಿತ್ತು. ಇಂದು ಆ ಗೊತ್ತುವಳಿಯು ಕೃತಿಯಲ್ಲಿ ಬಂದಿದೆಯೇ? ಸದ್ಯದ ಹಿಂದೀ ಸರ್ವಾಧಿಪತಿಗಳಾದ ಶ್ರೀ|| ರಾಜಾಜಿಯವರಿಗೆ ಹಿಂದಿನ ಬ್ರಿಟಿಶ ಸರ್ವಾಧಿಪತಿಗಳಿಗೆ ಸಲ್ಲುತ್ತಿದ್ದಷ್ಟೇ ಸಂಬಳ, ಭತ್ತೆ, ಮೊದಲಾದವು ಸಲ್ಲುತ್ತಿವೆಯೆಂದು ಸದ್ಯಕ್ಕೆ ಬೆಳಕಿಗೆ ಬಂದಿದೆ. ವಿದೇಶಗಳೊಳಗಿನ ನಮ್ಮ ಕೆಲವು ರಾಯಭಾರಿಗಳು ಮಾಡುತ್ತಿರುವ ವೆಚ್ಚವಂತೂ ಹಿಂದುಸ್ಥಾನದ ಸದ್ಯದ ಸಾಂಪತ್ತಿಕ ದೃಷ್ಟಿಯಿಂದ ಕಳವಳ ಹುಟ್ಟಿಸುವಂತಿದೆ ...

ಸ್ವತಂತ್ರ ಭಾರತದ ಗುರು.



ಸ್ವತಃ ಮಹಾತ್ಮಾಜಿಯವರು ೧೯೩೧ರ ದುಂಡು ಮೇಜಿನ ಪರಿಷತ್ತಿಗೆ ಹಿಂದೀ ರಾಷ್ಟ್ರೀಯ ಸಭೆಯ ಅರ್ಥಾತ್ ಅಖಿಲ ಹಿಂದುಸ್ಥಾನದ ಪ್ರತಿನಿಧಿಯಾಗಿ ಹೋಗಿದ್ದರು. ಆಗ ಅವರು ತಮ್ಮ ಬಡ ರಾಷ್ಟ್ರದ ಬಡತನಕ್ಕೆ ಒಪ್ಪುವಂತಹ ರೀತಿಯಲ್ಲೇ ತಾವು ನಡೆಯುವೆವೆಂದು ಪ್ರತಿಜ್ಞೆ ಮಾಡಿ ಅದರಂತೆಯೇ ನಡೆದಿದ್ದರೆಂಬುದನ್ನು ಮರೆಯಕೂಡದು. ಮನೆಯಲ್ಲಿ ದಾರಿದ್ರ್ಯವು ಮನೆಮಾಡಿಕೊಂಡಿರುವಾಗ ಹೊರನಾಡುಗಳಲ್ಲಿ ನಾವು ಶ್ರೀಮಂತಿಕೆಯ ನಟನೆಯನ್ನು ಮಾಡಕೂಡದೆಂದು ಅವರು ನಮಗೆ ಹಗಲಿರುಳು ಕಲಿಸುತ್ತಿದ್ದರು. ಅವರ ಆ ಅಮೂಲ್ಯ ತತ್ವದ ಆಚರಣೆ ಇಂದು ರಾಷ್ಟ್ರದಲ್ಲಿ ಎಂತು ನಡೆದಿದೆ ಎಂಬುದನ್ನು ಓದುಗರೇ ಊಹಿಸಲಿ.

ಸಮಸ್ತ ಮಾನವರು ಜಾತಿ-ಮತ-ಪಂಥ-ವರ್ಣಾದಿ ಭೇದಗಳನ್ನು ಮರೆತು ಬಾಂಧವ್ಯದಿಂದಲೂ ಪ್ರೇಮದಿಂದಲೂ ವಿಶ್ವಾಸದಿಂದಲೂ ನಡೆಯತಕ್ಕದ್ದೆಂದು ಅವರು ನಮಗೆ ಸಾಯುವ ವರೆಗೆ ಕಲಿಸಿದರು. ಜಾತೀಯತೆಯನ್ನು ಪ್ರತಿಭಟಿಸುತ್ತಿರುವಾಗ ತಮ್ಮ ಪ್ರಾಣದ ಬೆಲೆಯನ್ನೂ ತೆತ್ತರು. ಆ ಜಾತೀಯತೆಯನ್ನು ನಾವು ಪೂರ್ಣವಾಗಿ ಬಿಟ್ಟುಕೊಟ್ಟಿರುತ್ತೇವೇನು? ಇಲ್ಲಿ ನಾವು ಜಾತೀಯತೆಯ ಶಬ್ದಾರ್ಥವನ್ನಷ್ಟೇ ಪರಿಗ್ರಹಿಸಕೂಡದು. ಅದರ ಲಕ್ಷ್ಯಾರ್ಥವನ್ನೂ ಪರಿಗ್ರಹಿಸಬೇಕು. ಪ್ರಾಂತೀಯತೆ, ಮತೀಯತೆ, ಸಂಸ್ಥಾನೀಯತೆ ಇವೂ ಕೂಡ ಮಹಾತ್ಮರು ವಿದ್ವೇಷಿಸುತ್ತಿದ್ದ ಮತ್ತು ತ್ಯಾಜ್ಯವೆಂದು ನಿಷೇಧಿಸುತ್ತಿದ್ದ "ಜಾತೀಯತೆ"ಯಲ್ಲಿ ಸೇರುತ್ತವೆಂದು ಓದುಗರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಇಂದು ನಾಡಿನಲ್ಲಿ ಆ ದುಷ್ಟ ಜಾತೀಯತೆ ಕಡಿಮೆಯಾಗಿದೆಯೇ? ನಮಗಂತೂ ಈ ಸಂಕುಚಿತ ಭಾವನೆಯ ಪ್ರವೃತ್ತಿಗಳು ಇತ್ತೀಚೆಗೆ ನಾಡಿನೊಳಗೆ ವೃದ್ಧಿಯಾಗುತ್ತಿವೆಂದು ಅನಿಸುತ್ತಿದೆ. ಕರ್ನಾಟಕದಲ್ಲಿ ನೋಡಿರಿ, ಮದ್ರಾಸಿನಲ್ಲಿ ನೋಡಿರಿ, ಬಂಗಾಲ-ಬಿಹಾರಗಳಲ್ಲಿ ನೋಡಿರಿ, ಎಲ್ಲಿ ನೋಡಿದಲ್ಲಿ ಪ್ರಾಂತೀಯತೆಯ ವಿಘಾತಕ ಮತ್ತು ವಿಘಟಕ (disruptive) ಭಾವನೆಗಳು ಅಶಾಂತಿಯನ್ನೂ, ದ್ವೇಷಾಸೂಯೆಗಳನ್ನೂ, ಮದ-ಮಾತ್ಸರ್ಯಗಳನ್ನೂ ಹುಟ್ಟಿಸತೊಡಗಿವೆ! ಮುಂಬಯಿ ನಗರದ ಬಗ್ಗೆ ಗುಜರಾಥ-ಮಹಾರಾಷ್ಟ್ರಗಳ ನಡುವೆ ಕಲಹ, ಮದ್ರಾಸ ಪಟ್ಟಣದ ಬಗ್ಗೆ ತೆಲಗು-ತಮಿಳರೊಳಗೆ ವಾದ, ಗೋವಾ ಮತ್ತು ಗೋವೆಗೆ ಹೊಂದಿಕೊಂಡಿರುವ ಬೆಳಗಾಂವ, ಕಾರವಾರ ಜಿಲ್ಲೆಗಳ ಭಾಗಗಳು ಇವು

ಗಳ ಬಗ್ಗೆ ಮರಾಠಿ-ಕನ್ನಡಿಗರೊಳಗೆ ಕರ್ನಾಟಕದ ಪ್ರಸ್ತಾವದ ಪೂರ್ವತಯಾರಿ, ಮಂಗಳೂರ ಜಿಲ್ಹೆಯ, ದಕ್ಷಿಣ ಭಾಗದ ಸಂಬಂಧವಾಗಿ ಕನ್ನಡ-ಕೇರಳೀಯರೊಳಗೆ ತಾಗಿದ ಸ್ಪರ್ಧೆ, ಬಂಗಾಲ-ಬಿಹಾರ ಗಡಿನಾಡಿನ ಕೆಲವೊಂದು ಪ್ರದೇಶಗಳ ಬಗ್ಗೆ ಬಿಹಾರಿ ಬಂಗಾಲಿಗಳೊಳಗೆ ವಿತಂಡವಾದ, ಹೀಗೆ ಒಂದಲ್ಲ, ಎರಡಲ್ಲ ಹಲವಾರು ಕಲಹಗಳು ದೇಶದಲ್ಲಿ ಉದ್ಭವಿಸಿ, ನಾಡಿನ ಶಾಂತತೆಯನ್ನು ಭಂಗಗೊಳಿಸುತ್ತಿವೆ! ಈ ವಾದ-ಕಲಹ-ಜಗಳ-ಕಾಳಗ-ಕದನಗಳೆಲ್ಲ ಮಹಾತ್ಮರು ನಮಗೆ ಕಲಿಸಿಕೊಟ್ಟಿರುವ ನಿರುಪಾಧಿಕ ಪ್ರೇಮ-ಬಾಂಧವ್ಯಗಳ ದಿವ್ಯ ತತ್ವಕ್ಕೆ ಸರಿಬೀಳುತ್ತವೇನು? 'ನಮ್ಮ ಸಂಸ್ಕೃತಿ ಬೇರೆ, ನಮ್ಮ ಇತಿಹಾಸ ಬೇರೆ, ನಮ್ಮ ಪರಂಪರೆ ಬೇರೆ, ನಮ್ಮ ಭಾಷೆ ಬೇರೆ, ಕಾರಣ ನಮಗೊಂದು ಪ್ರತ್ಯೇಕ ಪ್ರಾಂತ ಬೇಕು." ಎಂಬೀ ಮಾತುಗಳು ಗಾಂಧೀ-ತತ್ವಜ್ಞಾನಕ್ಕೆ ಸರಿ ವಿರುದ್ಧವಿರುತ್ತವೆಂದು ನಮ್ಮ ಪ್ರಾಂಜಲ ಮತವಿದೆ. ಆದರಿಂದ ಜಾತೀಯತೆ, ಪ್ರಾಂತೀಯತೆ, ಮತೀಯತೆಗಳ ನಿರ್ಮೂಲನದ ಕಾರ್ಯದಲ್ಲೂ ನಾವು ಮಹಾತ್ಮರ ಬೋಧಾಮೃತವನ್ನು ಕಾರ್ಯಾಚರಣೆಯಲ್ಲಿ ತಂದಿಲ್ಲೆಂದು ಹೇಳಿದರೆ ತಪ್ಪಾಗುವಂತಿಲ್ಲ.

ಮಹಾತ್ಮಾಜಿಯವರು ತಮ್ಮ ಆಯುಷ್ಯದ ಕೊನೆಯ ಭಾಗದಲ್ಲಿ ಎಲ್ಲ ಬಗೆಯ ನಿಯಂತ್ರಣಗಳನ್ನು ಪ್ರತಿಭಟಿಸಿದ್ದರು ಮತ್ತು ಅವರ ಪ್ರತಿಭಟನೆಯ ಪರಿಣಾಮವಾಗಿ ಮಹತ್ವದ ಕೆಲವು ನಿಯಂತ್ರಣಗಳು ಕೂಡ ರದ್ದಾಗಿದ್ದವು. ಈಗ ನಾವು ಆ ಮಾರ್ಗ ಬಿಟ್ಟು 'ಘೂಮ ಜಾವ" ಅಥವಾ "ರಾಂಡ ಎಬೌಟ ಟರ್ನ". ಮಾಡಲಾರಂಭಿಸಿದ್ದೇವೆ. ಹಿಂದ ಸರಕಾರವು ಪುನಃ ಜವಳಿಯ ನಿಯಂತ್ರಣವನ್ನೂ, ಅದರ ಹಿಂದೆ ಆಹಾರಧಾನ್ಯಗಳ ನಿಯಂತ್ರಣವನ್ನೂ ಹೇರಲು ಮುಂದಾಗಿದೆ. ಹಿಂದ ಸರಕಾರದ ಈ ನಿರ್ಣಯವನ್ನೂ ಅನೇಕರು ಮಹಾತ್ಮರ ಹೆಸರಲ್ಲಿ ಕಟುತರವಾಗಿ ಟೀಕಿಸುತ್ತಿದ್ದಾರೆ. ಆದರೆ ಮಹಾತ್ಮರ ಅಪೇಕ್ಷೆಯನ್ನೂ ಬೋಧವನ್ನೂ ತಾವು ಸ್ವತಃ ಎಷ್ಟರ ಮಟ್ಟಿಗೆ ಅನುಸರಿಸುತ್ತಿದ್ದೇವೆ ಎಂಬುದನ್ನು ಆ ಟೀಕಾಕಾರರು ಕೊಂಚವಾದರೂ ಆಲೋಚಿಸಿರುವರೇ? ನಿಯಂತ್ರಣಗಳನ್ನು ತೆಗೆದೊಗೆಯುತ್ತಲೇ ಉತ್ಪಾದಕರೂ ವ್ಯಾಪಾರಿಗಳೂ ಜೀವನಾವಶ್ಯಕ ವಸ್ತು-ಒಡವೆಗಳ ಧಾರಣೆಗಳನ್ನು ಇಮ್ಮಡಿ, ಮುಮ್ಮಡಿ, ನಾಲ್ಮಡಿ, ಐದುಮಡಿ ಏರಿಸಬಹುದೆಂದು ಮಹಾತ್ಮರು ನಿರೀಕ್ಷಿಸಿದ್ದರು ಅಥವಾ ಅಪೇಕ್ಷಿಸಿದ್ದರೇನು? ಉತ್ಪಾದಕ-ವ್ಯಾಪಾರಿಗಳು ದುಡ್ಡಿನ ದುರಾಶೆಯನ್ನು ತೊರೆದು ಜನ-ಸಾಮಾನ್ಯರಿಗೆ ಸಂರಕ್ಷಿಸುವ ಹೊಣೆಯನ್ನು ಹೊಂದಬೇಕೆಂದು ಮಹಾತ್ಮರು ಕಲಿಸಿಕೊಟ್ಟಿದ್ದಿಲ್ಲವೇ? ಮಹಾತ್ಮರ ಆ ಅಮೃತತುಲ್ಯ ಉಪದೇಶವನ್ನು ಉತ್ಪಾದಕರೂ ಉದ್ದಿಮೆದಾರರೂ ವರ್ತಕರೂ ಸಂಪೂರ್ಣ ಮರೆತು ಹೋದ್ದರಿಂದಲೇ ಭಾರತ ಸರಕಾರವು ನಿರುಪಾಯವಾಗಿ ಪುನಃ ನಿಯಂತ್ರಣಗಳನ್ನು ಹೇರಬೇಕಾದ ಪ್ರಸಂಗ ಬಂದಿದೆ ಎಂಬುವದನ್ನು ನಾವು ಮರೆಯತಕ್ಕದ್ದಲ್ಲ. ಮಹಾತ್ಮರ ತತ್ವಗಳನ್ನು ಕ್ಷೇತ್ರದಲ್ಲೂ ನಾವು ಕಡೆಗಾಣಿಸುತ್ತೇವೆ.

ಇನ್ನು ನಮ್ಮ ಮುಂಬಯಿ ಸರಕಾರದ ಆಚರಣೆಯನ್ನು ತುಸು ಪರಿಶೀಲಿಸಿರಿ. ಮಕ್ಕಳ ಶಿಕ್ಷಣ ಮಾತೃಭಾಷೆಯಿಂದಲೇ ನಡೆಯಬೇಕೆಂದು ಮಹಾತ್ಮರು ಯಾವಾಗಲೂ ಹೇಳುತ್ತಿದ್ದರು. ಪರಕೀಯ ಭಾಷೆಯಿಂದ ಕಲಿಸುವದು ಅನೈಸರ್ಗಿಕವೆಂದು ಅವರು ವಾದಿಸುತ್ತಿದ್ದರು. ಕನ್ನಡ ನಾಡಿನಲ್ಲಿರುವ ಮರಾಠಿ ಮಕ್ಕಳಿಗೆ ಕನ್ನಡದಿಂದ ಕಲಿಸುವದೂ, ಪ್ರಾದೇಶಿಕ ಭಾಷೆಯಿಂದಾಗಲಿ ಪ್ರಾಂತೀಯ ಭಾಷೆಯಿಂದಾಗಲಿ ಚಿಕ್ಕ ಪ್ರಾಯದಲ್ಲಿ ಕನ್ನಡ ಕಲಿಯಬೇಕೆಂಬ ಒತ್ತಾಯ ಮಾಡುವದೂ ಮಹಾತ್ಮಾಜಿಯವರು ನಮಗೆ ಕಲಿಸಿಕೊಟ್ಟ ಈ ತತ್ವಕ್ಕೆ ಎಷ್ಟರ ಮಟ್ಟಿಗೆ ಒಪ್ಪುತ್ತಿದೆಯೆಂಬುದನ್ನು ಮಹಾತ್ಮಾಜಿಯವರ ನಿಷ್ಠಾವಂತ ಅನುಯಾಯಿಗಳಾದ ಮಾನ್ಯ ಬಾಳಾಸಾಹೇಬ ಖೇರರು ಆಲೋಚಿಸಿರುವರೇನು! ಸುಶಿಕ್ಷಿತರು ಶಹರಗಳಲ್ಲಿ ನೆಲಸದೆ ಗ್ರಾಮಗಳಿಗೆ ತಿರುಗಿ ಹೋಗಿ ಅಲ್ಲೇ ನೆಲಸಿ ಗ್ರಾಮಸೇವೆ ಮಾಡಬೇಕೆಂದು ಮಹಾತ್ಮರದೊಂದು ಸರ್ವ-ಸಾಮಾನ್ಯ ತತ್ವವಿತ್ತು. "Go back to the villages" (ಹಳ್ಳಿಗಳಿಗೆ ಮರಳಿ ಹೋಗಿರಿ) ಎಂದು ಅವರು ಪುನಃ ಉಪದೇಶಿಸುತ್ತಿದ್ದರು. ಆದರೆ ಹೊಸ ಒಕ್ಕಲತನದ ಕಾನೂನವನ್ನು ರಚಿಸುವಾಗ ನಮ್ಮ ಸರ್ವಜ್ಞರೆಂದಾದ ಮಂತ್ರಿಗಳು ಸುಶಿಕ್ಷಿತರೂ ಶಹರವಾಸಿಗಳೂ ಹಳ್ಳಿಗಳಿಗೆ ತಿರುಗಿ ಹೋಗದಂತೆ ಮಾಡಿಬಿಟ್ಟಿದ್ದಾರೆ! ಶಹರವಾಸಿಗಳೂ ಸುಶಿಕ್ಷಿತರೂ, ಜೀವನೋಪಾಯಗಳನ್ನು ಹುಡುಕುತ್ತ ಹುಡುಕುತ್ತ ಹಳ್ಳಿಗಳನ್ನು ಬಿಟ್ಟು ಹೋದವರೂ ಬೇಸಾಯಗಾರರಾಗಿ ಉಳಿಯಬಾರದೆಂಬುದೂ ಬೇಸಾಯಗಾರರಲ್ಲೆಂಬುದೂ ಸ್ವಯಂಸಿದ್ಧ ಮಾತು. ಈ ಜನರು ಶಹರವಾಸಕ್ಕೆ ಬೇಸತ್ತು ಇಲ್ಲವೆ ಗ್ರಾಮಗಳಿಗೆ ತಿರುಗಿ ಹೋಗಿ ಗ್ರಾಮಸೇವೆ ಮಾಡುವಾ ಎಂಬ ವಿಚಾರ ಮಾಡಿ ಅವರು ತಿರುಗಿ ಹಳ್ಳಿಗಳ ಹಾದಿ ಹಿಡಿದರೆ, ಅಲ್ಲಿ ಅವರಿಗೆ ಮನೆ ಕಟ್ಟಿ ಉಳಿಯಲು ಅಥವಾ ಬೇಸಾಯದ ಉದ್ಯೋಗ ಕೈಕೊಳ್ಳಲು ಒಂದು ಬಾಗಾಯತು ಅಥವಾ 'ಭೂಮಿ ಸಿಗುವಂತಿಲ್ಲ!' ಸಿಗದಂತೆ ಮಾನ್ಯ ಮುರಾರಜಿಯವರು ಮಾಡಿ, ಹಳ್ಳಿಗಳ ಮಾರ್ಗಗಳಮೇಲೆಲ್ಲ "Road closed to non-agriculturists" (ಬೇಸಾಯಗಾರರಲ್ಲದವರು ಈ ಹಾದಿಯನ್ನು ತುಳಿಯಕೂಡದು) ಎಂದು ದೊಡ್ಡಕ್ಷರಗಳ ಹಲಿಗೆಗಳನ್ನು ಹಚ್ಚುವ

ಉತ್ತರ ಕಾನಡಾ ಜಿಲ್ಹಾ ಭೂಮಿಗಳೊಡೆಯರ ಕಡೆಗೆ ವಿನಂತಿ.

ಮುಂಬಯಿ ಸರಕಾರವು ಒಕ್ಕಲಿಗರನ್ನು ರಕ್ಷಿಸುವ ನೆವದಿಂದ ಭೂಮಿಗಳ ಒಡೆಯರ ನ್ಯಾಯ್ಯ ಮತ್ತು ಸಮಂಜಸ ಹಕ್ಕುಗಳನ್ನು ಅಪಹರಿಸುವ ಒಂದು ಕಾನೂನನ್ನು ಮಾಡತೊಡಗಿದೆ. ಯೋಗ್ಯ ಪರಿಹಾರ ಕೊಡದೆ ಭೂಮಿಗಳೊಡೆಯರ ಆಸ್ತಿಗಳನ್ನು ಅಪಹರಿಸಲಿಕ್ಕೆ ಸರಕಾರಕ್ಕೆ ಹಕ್ಕಿಲ್ಲ. ಬೇರೆ ಪ್ರಾಂತಿಕ ಸರಕಾರಗಳು ಈ ಸಂಬಂಧದಲ್ಲಿ ವಿಚಾರ ಮಾಡುತ್ತಿರುವಾಗಲೇ ನಮ್ಮ ಮುಂಬಯಿ ಸರಕಾರವು ಸಾಧಕ-ಬಾಧಕ ವಿಚಾರಕ್ಕೆ ಅವಕಾಶ ಕೊಡದೆ, ವಿಚಾರಾರ್ಹ ವಿರೋಧವನ್ನು ಸಹ ಗಣಿಸದೆ ಆ ಕಾನೂನನ್ನು ಲಗುಬಗೆಯಿಂದ ನಿರ್ಮಿಸಹತ್ತಿದೆ. ಆದರಿಂದ ಭೂಮಿಗಳ ಒಡೆಯರು ಸಂಘಟಿತರಾಗಿ, ಸನದಶೀರ ರೀತಿಯಿಂದ ಹೋರಾಡಿ, ತಮ್ಮ ಆಸ್ತಿಗಳನ್ನು ರಕ್ಷಿಸಿಕೊಳ್ಳಬೇಕಾದ ಪ್ರಸಂಗವೂ ಅವಶ್ಯಕತೆಯೂ ಉಂಟಾಗಿದೆ. ಈ ಬಗ್ಗೆ ಸಾಮಾನ್ಯವಾಗಿ ರೂ. ೫೦೦೦ದ ಮಟ್ಟಿಗೆ ನಿಧಿಯನ್ನು ಒಟ್ಟುಗೂಡಿಸುವದು ಅವಶ್ಯವುಂಟು.

ನಮ್ಮ ಜಿಲ್ಹೆಯ ಸಮಸ್ಯೆಗಳು ಇತರ ಜಿಲ್ಹೆಗಳ ಸಮಸ್ಯೆಗಳಿಗಿಂತ ಪ್ರತ್ಯೇಕವಿರುತ್ತವೆ. ನಮ್ಮ ಜಿಲ್ಹೆಯಲ್ಲಿ ದೊಡ್ಡ ದೊಡ್ಡ ಜಮೀನದಾರರ ಸಂಖ್ಯೆ ತೀರ ಕಡಿಮೆ. ಇದೇ ಜಿಲ್ಹೆಯಲ್ಲಿ ೬೮೦೦೦ದಷ್ಟು ಖಾತೆದಾರರು ಇರುತ್ತಿದ್ದು, ಅವರಲ್ಲಿ ೬೫೦೦೦ ಮಂದಿ ೫ ಎಕರೆಗಳಿಗಿಂತ ಕಡಿಮೆ ಭೂಮಿಯುಳ್ಳವರಿರುತ್ತಾರೆಂದೂ, ೫ರಿಂದ ೧೦ ಎಕರೆ ತನಕ ಭೂಮಿಯುಳ್ಳವರು ೮೯೮೯ ಜನರಿರುತ್ತಾರೆಂದೂ ಸರಕಾರವು ಕೌನ್ಸಿಲಿನಲ್ಲಿ ಹೇಳಿದೆ. ಇಂಥ ಬಡ ಒಡೆಯರನ್ನು ಕೂಡ ಈಗಿನ ಒಕ್ಕಲತನದ ಕಾನೂನಿನ ಕಕ್ಷೆಯಲ್ಲಿ ಸೇರಿಸಿದ್ದು ತೀರ ಅನ್ಯಾಯ. ಕಾರಣ ಈ ಕಾನೂನಿನ ವಿರುದ್ಧ ಮೋಠ್ಠನಕ ಚಳವಳಿ ಮಾಡುವದು ಅವಶ್ಯವಿದೆ. ಹಿಂದುಸ್ತಾನ ಸರಕಾರದ ಕಡೆ ಸಹ ನಮ್ಮ ಜಿಲ್ಹೆಯ ತರ್ಫೆನಿಂದ ಒಂದು ಶಿಷ್ಟ ಮಂಡಳವನ್ನು ಕಳಿಸಬೇಕಾದೀತು. ಇದರ ಖರ್ಚಿಗೆ ಹಣ ಕೂಡಿಸಬೇಕಾಗಿದೆ. ಕಾರಣ ಈ ನಿಧಿಗೆ ಎಲ್ಲ ಭೂಮಾಲಿಕರು ತಮ್ಮ ತಮ್ಮ ಗ್ರಾಮಗಳಲ್ಲಿ ವಂತಿಗೆಗಳನ್ನು ಕೂಡಿಸಿ, ಕೂಡಿದ ಹಣವನ್ನು ತಮ್ಮ ತಾಲೂಕುಗಳಲ್ಲಿ ಒಡೆಯರ ಸಂಘಗಳಿದ್ದರೆ ಅವಕ್ಕೆ ಕಳಿಸಬೇಕು, ಇಂಥ ತಾಲೂಕ ಸಂಘಗಳಿಲ್ಲದಿದ್ದಲ್ಲಿ ಕೂಡಿದ ಹಣವನ್ನು ಜಿಲ್ಹಾ ಭೂಮಾಲಿಕರ ಸಂಘದ ಕೋಶಪಾಲಕರಾದ ಶ್ರೀ|| ದಾಮೋದರ ತಿಮ್ಮಪ್ಪ ಕಾಮತ, ಕುಮಟಾ ಇವರ ಕಡೆ ಕಳಿಸಬೇಕಾಗಿ ವಿನಂತಿಯಿದೆ.

ತಾ ೪-೧೦-೪೮.

ಅಣ್ಣಪ್ಪಾ ರಾಮಚಂದ್ರ ಪೈ,
ಅಧ್ಯಕ್ಷ, ಜಿಲ್ಹಾ ಭೂಮಿಗಳೊಡೆಯರ ಸಂಘ, ಕುಮಟಾ.

ಗಣೇಶ ಗಣಪತಿ ಭಟ್ಟ ಚಿತ್ರಿಗಿ,
ಅಧ್ಯಕ್ಷ, ಕುಮಟಾ ತಾಲೂಕ ಹೊಲದೊಡೆಯರ ಸಂಘ, ಕುಮಟಾ.

ವಿಶ್ವನಾಥ ಪಾಂಡುರಂಗ ಪ್ರಭು,
ಅಧ್ಯಕ್ಷ, ಅಂಕೋಲಾ ತಾಲೂಕ, ಭೂಮಿಗಳೊಡೆಯರ ಸಂಘ, ಅಂಕೋಲಾ.

ಶಾಂತಾರಾಮ ಸದಾಶಿವರಾವ ಹುಣ್ಸವಾಡಕರ,
ಹಳಿಯಾಳ ತಾಲೂಕ ಭೂಮಿಗಳೊಡೆಯರ ಸಂಘ, ಹಳಿಯಾಳ.

ಗಣಪತರಾವ ಶಂಕರರಾವ ತೇಲಂಗ,
ಅಧ್ಯಕ್ಷ, ಕಾರವಾರ ತಾಲೂಕ ಹೊಲದೊಡೆಯರ ಸಂಘ, ಕಾರವಾರ

ಆಭಾರ-ಮನ್ನಣೆ.

ಕಾನಡಾ ಜಿಲ್ಹೆಯಲ್ಲಿ ನಾನು ಜಿಲ್ಹಾ ಬೇಸಾಯದ ಅಧಿಕಾರಿಯೂ ಒಡ್ಡಿನ ಯೋಜನೆಯ ಅಧಿಕಾರಿಯೂ ಎಂದು ಆಫೀಸರ ಕೆಲಸ ಮಾಡುತ್ತಿದ್ದಾಗ ನನಗೆ ಅನೇಕ ಜನರು ಸಹಾಯ-ಸಹಕಾರಗಳನ್ನು ನೀಡಿ ಉಪಕರಿಸಿದ್ದುಂಟು. ನಾನು ಈಗ ಈ ಜಿಲ್ಹೆಯಿಂದ ವರ್ಗವಾಗಿ ಹೋಗುತ್ತಿದ್ದೇನೆ. ಆದ್ದರಿಂದ ಸದರಿ ಸಹಾಯಕರ್ತರಿಗೆಲ್ಲ ನನ್ನ ಹಾರ್ದಿಕ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇನೆ.

ಎ. ಬಿ. ಪಾಟಣಕರ,
ಕುಮಟಾ, ಎಗ್ರಿಕಲ್ಚರಲ್ ಆಫೀಸರ,
೩೦-೯-೪೮ ಬಂಧಾರಾ ಸ್ಕೀಮ, ಕುಮಟಾ

ಏರ್ಪಾಡು ಮಾಡಿದ್ದಾರೆ! ಹೇ.ಅವೇ.ಪಯರ ಹಕ್ಕುಗಳನ್ನು ಮುಳಗಿಸಿ ಅವರನ್ನು ಕಂಠವಿಲ್ಲ ನಾಶಕೊಳ್ಳುತ್ತಿದ್ದಾರೆ! ಲಕ್ಷಾವಧಿ ಹಣ್ಣು ಹಣ್ಣು ಹೋಲಸಿದವೆಯರು ತಮ್ಮ ಜೀವನೋಪಾಯವನ್ನು ಕಳಕೊಂಡ ಹೊಟ್ಟೆ ಹೊರಕೊಳ್ಳುವವರಿಗಾಗಿ ಸ[illegible]ಗೆ ಓಡಿ ಹೋಗುವಂತೆ ವ್ಯವಸ್ಥೆ ಮಾಡಿದ್ದಾರೆ! ಪ[illegible] ಶಹರವಾಸಿಗಳಿಗೆ "Go back to the village" ಎಂದು ಹೇಳುತ್ತಿದ್ದಾರೆ ಮಾನ್ಯ ಮುರಾ[illegible] ಯಾಯುವರು Quit the villages ಎಂದು ಅಸಂಖ್ಯಜನರಿಗೆ ಒತ್ತಾಯ ಮಾಡ[illegible]ದೇ ಇದೇ ಅವರ ಗಾಂಧಿ-ಭಕ್ತಿ ಮತ್ತು ಗಾಂಧಿ ಮಾರ್ಗಾನುಸರಣ! ಒ[illegible]ದ ಮಾತ್ರ [illegible] ಪೂಜ್ಯ ಗಾಂಧೀಜಿಯವರ ತತ್ವಗಳಂತೆ ನಡೆಯಬೇಕೆಂದು ಬೋಧಿಸುತ್ತಾರೆ! ಈ ಬೋಧನೆಗಳ [illegible]ಕೆಯನ್ನು ನಾವು ಬೆಳಸುತ್ತ ಹೋಗಲಿಕ್ಕೆ ಬೇಕಿಲ್ಲ ದಿಗ್ದರ್ಶನಕ್ಕಾಗಿ ಕೆಲವೇ ಉದಾಹರಣೆಗಳನ್ನು ಮಾತ್ರ ಕೊಟ್ಟಿದ್ದೇವೆ

ಈ ರೀತಿ ನಾವು ಬ[illegible] ಮಹಾತ್ಮರ ತತ್ವಗಳ ಪರಿಶೀಲನೆ ಮಾಡುತ್ತ, ಕಾಯಾಚರಣೆಯ ಕಾಲಕ್ಕೆ ಅವನ್ನು ಮರೆತು ಹೋಗುವದಾದರೆ ಗಾಂಧಿ ಜಯಂತಿಯನ್ನು ನಾವು ಆಚರಿಸಿ ಪ್ರಯೋಜನವೇನು? ಅಥವಾ ಅವರ ನಾಮದ ಜಯಜಯಕಾರ ಮಾಡುವದರಿಂದಲೂ [illegible]? ಮಹಾತ್ಮರನ್ನು ನಾವು ನಿಜವಾಗಿಯೂ ಪೂಜಿಸುತ್ತಿದ್ದರೆ ನಿಜವಾಗಿಯೂ ಅವರ ಅನುಯಾಯಿಗಳೆಂದು ಹೇಳಿಸಿಕೊಳ್ಳಲಿಚ್ಛಿಸುತ್ತಿದ್ದರೆ ಸ್ವಾತಂತ್ರ್ಯೋತ್ಸವದ ಕಾಲಕ್ಕೆ ಸನ್ಮಾನ್ಯ ಶ್ರೀ ರಾಜಗೋಪಾಲಾಚಾರ್ಯರು ಹೊರಡಿಸಿದ ಸಂದೇಶದಲ್ಲಿ ಹೇಳಿದಂತೆ, ನಾವು ಪ್ರತಿಯೊಂದು ಘೋಷಣೆ ಅಥವಾ ಯೋಜನೆಯನ್ನು ರೂಪಿಸುವಾಗ, ಈ ಕೃತಿ, ಈ ಯೋಜನೆ ಈ ಘೋಷಣೆ ಮಹಾತ್ಮರಿಗೆ ಸಮ್ಮತವಾಗುತ್ತಿತ್ತೇ? ಅವರು ಎಂತಹ ಸಲಹೆ ಕೊಡುತ್ತಿದ್ದರು? ಎಂಬುದರ ಆಳವಾದ ವಿಚಾರವನ್ನು ಮಾಡಿ ನಾವು ನಮ್ಮ ನಿರ್ಣಯಗಳನ್ನು ಕೈಕೊಳ್ಳಬೇಕು ಮತ್ತು ಅವನ್ನು ಕಾರ್ಯರಂಗಕ್ಕೆ ಇಳಿಸಬೇಕು ಮಹಾತ್ಮರ ಜಯಂತಿಯ ಕಾಲದಲ್ಲಿ ಅವರ ತತ್ವಗಳ ಚಿಂತನೆ ಮಾಡಿ, ಆ ತತ್ವಗಳ ಒರೆಗಲ್ಲಿನ ಮೇಲೆ ನಮ್ಮ ಕಾರ್ಯವನ್ನು ಒರೆಗೆ ಹಚ್ಚಿ ನೋಡಬೇಕು, ಆಗ ಏನಾದರೂ ದೋಷಗಳು ಕಂಡು ಬಂದರೆ ಅವನ್ನು ಕೂಡಲೆ ತಿದ್ದಿಕೊಳ್ಳಬೇಕು ಗಾಂಧಿ ಜಯಂತಿಯನ್ನು ಆಚರಿಸುವ ಯೋಗ್ಯ ಮಾರ್ಗವಿದೇ

ಸ್ಥಾನಿಕ ವೃತ್ತಾಂತ

(೧ನೇ ಪುಟದಿಂದ ಮುಂದರಿಸಿದ್ದು)

ಗ್ರಾಮ-ಸುಧಾರಣಾ ಕಾರ್ಯಕ್ರಮಗಳ ಪ್ರಚಾರ ಮಾಡಲು ಜಿಲ್ಲಾ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿ ರಾ|| ಸೂಳಗಾರ ಹೆಗಡೆಯವರು ಆಳಿದ [illegible] ದಿನಕ್ಕೆ ಇಲ್ಲಿಗೆ ಬಂದಿದ್ದರು ಅಂದು ವಿವಿಧೋದ್ದೇಶಗಳ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯಿತ್ತು ಸಭೆಯ ಅಧ್ಯಕ್ಷಸ್ಥಾನವನ್ನು ರಾ! ಹೆಗಡೆಯವರಿಗೇ ಅರ್ಪಿಸಲಾಯಿತು ಸಭೆಯ [illegible] ಕಾರ್ಯಕ್ರಮ ಮುಗಿದ ಮೇಲೆ ರಾ|| ಹೆಗಡೆಯವರು ಗ್ರಾಮ ಸುಧಾರಣೆಗಾಗಿ ಸರಕಾರದವರು ಕೈಕೊಂಡ ವಿವಿಧ ಯೋಜನೆಗಳನ್ನು ವಿವರಿಸಿ, ಅವುಗಳ ಲಾಭವನ್ನು ಹಳ್ಳಿಗರು ಜನರು ಮಾಡಿಕೊಳ್ಳಬೇಕೆಂದು ಬೋಧಿಸಿದರು ಇನ್ನು ಬರುವ ಮುಂಜೆ ರಾ|| ಹೆಗಡೆಯವರು [illegible] ಎಂದಿ [illegible] [illegible], ಇಂದೂರ, ಹಾಲ್, ಮುಂಡಗೋಡ ಮುಂತಾದ ಹಳ್ಳಿಗಳಲ್ಲಿ ಇದೇ ಬಗೆಯ ಪ್ರಚಾರ [illegible] ಸಾಧ್ಯವುಂಟು

[illegible] ಗ್ರಾಮದಲ್ಲಿ ಪ್ರತಿ [illegible] ಸಂತೆ ಕೂಡಿಸಲು [illegible]ಧಿಕಾರ ಅಪ್ಪಣೆ ದೊರೆತಿದೆ ಇದೇ ಬರುವ ತಾ ೭-೧೦-೪೮ ರಿಂದ ಈ ಸಂತೆಗಳು ಕೂಡ ನ[illegible]

(೧-೧೦-೪೮) ಸಿದ್ದಾಪುರ ತಾಲೂಕಿನ [illegible] ಗ್ರಾಮದ [illegible] ಕಳೆದ [illegible] ದಿನಗಳಿಂದ ಒಂದು [illegible] ಸವಾಳ [illegible] ಬಂದ, ಸುಮಾರು [illegible] ಜನಗಳು ಸತ್ತು ಹೋಗಿ ಈ ರೋಗದ [illegible] ಗಳು [illegible] ಸಲು [illegible] ದ[illegible] ಅವರು ಸತ್ತ ದಿನಗಳ [illegible] ದಿನಗಳ ಬಗ್ಗೆ [illegible] ಮಾಡಿ [illegible] ರೋಗವನ್ನು [illegible]" ಎಂದು ಹೇಳುವದಂತೆ [illegible] ಆ ಮಾತು ನಂಬಿ [illegible] ಕೆಲವು ಗಳನ್ನೂ [illegible] ಅವರಿ ಅದರಿಂದ [illegible] ಜನರಲ್ಲಿ ರೋಗವು [illegible] [illegible] ಅವರಿಂದ ರೋಗದ [illegible] ಅದರಿಂದ ಅವರು ಸತ್ತ ದಿನಗಳ ಮಾಂಸವನ್ನು [illegible] ಸಿದ್ದಾಪುರಕ್ಕೆ [illegible] ಅವುಗಳ ಪೃಥಕ್ಕರಣಕ್ಕೆ ಮಾಡಿದರು ಅವರೂ ರೋಗದ [illegible] [illegible] ಕನ್ನಡ್ಕೇ ರೋಗವು ನೆಟ್ಟೋದ ಹಳ್ಳಿಗೆ [illegible] ದಿನಾಲೂ ಜನರು [illegible] ಸತ್ತ [illegible] ಅದ [illegible] ಜಿಲ್ಲಾ [illegible] ಕೂಡ [illegible] [illegible] [illegible] ಇದು ತುರ್ತು [illegible], [illegible] [illegible] [illegible] ರೋಗ [illegible] ವ್ಯವಸ್ಥೆ ಮಾಡಬೇಕೆಂದೂ [illegible] ಮಾಡಬೇಕೆಂದೂ [illegible] [illegible] ಬಿನ್ನವಿಸುತ್ತಾರೆ

ಮುಂಡಗೋಡ— (ತಾ ೨೧-೯-೪೮), ಇಲ್ಲಿಯ [illegible] ಇವರಿಗೆ ಬೇರೊಂದೆಡೆ ವರ್ಗವಾದ ಸುದ್ದಿ ಕೇಳಿ ಇಲ್ಲಿಯ ಜನರ! ಅದೇಕೋ ಆನಂದವಾಗಿತ್ತು ಹಿಂದಿನಿಂದ [illegible] ರದ್ದುಪಡಿಸುವದು ಕೇಳಿ ಅವರಿಗೆ ವ್ಯಸನವಾಗುತ್ತಿದೆ ರಾ| ಗೋರವನಕೊಳ್ಳರು ತಪ್ಪುಗಾರರಲ್ಲ ಯಾ ಜನರು ಅವರ ಬಗ್ಗೆ ತಪ್ಪು ತಿಳುವಳಿಕೆ ಮಾಡಿ[illegible]ಕೊಂಡಿದ್ದರಲ್ಲಿ, ಅವರ [illegible] ಇಲ್ಲಿಯ ಜನರಲ್ಲಿ ಅಸ್ತೀಯುಂಟಾಗಿರುವುದು ಸರಿಯಾದ ಕಾರಣ ಮೇಲಾಧಿಕಾರಿಗಳು ರಾ|| ಗೋರವನಕೊಳ್ಳರನ್ನು ಬೇಗನೆ ವರ್ಗಾಯಿಸುವದುಚಿತ

ಅಂಕೋಲಾ— (ತಾ ೨೧-೯-೪೮) [illegible] ಹಳವಳ್ಳಿ ಗ್ರಾಮದ [illegible] ರಾ|| [illegible] ಇವರ ಅಧ್ಯಕ್ಷತೆಯಲ್ಲಿ ಗ್ರಾಮ ಸುಧಾರಣಾ ಮಂಡಳದ [illegible] ಕೆಳಗಿನಂತೆ ಠರಾವುಗಳು ಈ ಕಳಗಿನಂತಿವೆ —(೧) ರಾಮನ [illegible] [illegible] ತೋರುತ್ತಿರುವ ಗ್ರಾಮ [illegible] ಒಂದು ಮನೆ ಕಟ್ಟಿ ಕೊಡುವ ವಿಷಯ [illegible] ಒಂದು [illegible] ನೇಮಿಸಲ್ಪಟ್ಟಿತು (೨) [illegible] ಶಿವ ಭಟ್ಟ [illegible] ಅವರ ಅಧ್ಯಕ್ಷರು ( ) [illegible] ಸರಕಾರದ [illegible] ೪ ಆಣೆ [illegible] ಕೊಡು [illegible] ಬರುವ ಡಿಸೆಂಬರ ಕೊನೆಯ ವರೆಗೆ ಹೊಸ ಸದಸ್ಯರನ್ನು [illegible] ಕೊಂಡು ಜನವರಿ ಕೊನೆಗೆ ಮಂಡಳದ [illegible] ಕರೆಯಬೇಕೆಂದು ನಿಶ್ಚಯವಾಯಿತು (೩) [illegible] ತೆರೆ[illegible] [illegible] [illegible] [illegible] [illegible] ಗ [illegible] [illegible] ಧನಸಹಾಯ [illegible] [illegible] ಈ [illegible] ತಮ್ಮ [illegible] ಕೊಂಡಿಗಳನ್ನು [illegible] ರೋಗದಿಂದ [illegible] ಕೊಡಬೇಕೆಂದು [illegible] [illegible] ಬಿನ್ನವಿಸಿದರು ಅವರು [illegible] [illegible] ಉತ್ತರ ಕೊಡದಿದ್ದುದರ ನಿಷೇಧ (೫) [illegible] [illegible] ಕೊಡುವಂತಹ ಪ್ರಕಟನೆ [illegible] ಮುಂತಾದವುಗಳನ್ನು ಹಳ್ಳಿಗರ ತಿಳುವಳಿಕೆಗಾಗಿ ಗ್ರಾಮ ಸುಧಾರಣಾ ಮಂಡಳಕ್ಕೆ ಕಳುಹಿಸಬೇಕೆಂದು ವಿನಂತಿ

ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್
ಕುಂದಾಪುರ

[illegible] ೧೯೪೮ನೇ ಇಸವಿಯ [illegible] ಆಕಾರದ ಪೋಕೆಟ್ ಡೈರಿಗಳು ಬರುವ ನವಂಬರ ತಿಂಗಳ ೧೫ರಿಂದ ತಯಾರಾಗುವವು ಹೆಚ್ಚಿಗೆ ಡೈರಿಗಳ ಆರ್ಡರ್ ಕೊಟ್ಟಲ್ಲಿ ಧಾರಾಳ ಕಮಿಶನ್ ಕೊಡಲಾಗುವದು ಸಿಗುವ ಸ್ಥಳ —

ಮಹಾಲಕ್ಷ್ಮಿ ಬುಕ್-ಡಿಪೋ
ಕುಂದಾಪುರ

MUJUMDAR & KASBEKAR BROS.
BOOK SELLERS & GENERAL MERCHANTS,
KARWAR (N K)

ಜಾಹೀರ ಸೂಚನೆ.

ಮುಂಬಯಿ ಪ್ರಾಂತದ ವಿದ್ಯಾ ಖಾತೆಯವರಿಂದ ಪ್ರಕಾಶಿತವಾದ ಪುಸ್ತಕಗಳ ಬಗ್ಗೆ ನಾವು ಕಾರವಾರ, ಯಲ್ಲಾಪುರ ಹಳಿಯಾಳ ಮುಂಡಗೋಡ ಮತ್ತು ಸಿರಸಿ (ಸೋದೆ) ತಾಲೂಕುಗಳ ಬಗ್ಗೆ ಅಧಿಕೃತ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ "ಕನ್ನಡ ವಾಚನ ಮಾಲೆಯ ಮೊದಲು ಓದು" ಇದೀಗಲೇ ಮಾರಾಟಕ್ಕೆ ಸಿದ್ಧವಾಗಿವೆ [illegible] ಈ ಬೆಲೆಗೆ ನಮ್ಮಲ್ಲಿ ಯಾ ಆಯಾ ತಾಲೂಕಿನ ಸ್ಥಳೀಯ ಅಂಗಡಿಯಲ್ಲಿ ವಿಕ್ರಿಗೆ ಸಿಗುವದು ಯಾರೂ ಹೆಚ್ಚಿಗೆ ಬೆಲೆ ಕೊಟ್ಟು ಕೊಳ್ಳಬಾರದಾಗಿ ವಿನಂತಿ ಶಿಕ್ಷಕರಿಗೆ ವ್ಯಾಪಾರಸ್ಥರಿಗೆ ಕಮಿಶನ್ ಕೊಡಲಾಗುವದು ಬರೆಯಿರಿ

D D KASBEKAR B A,
PARTNER

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ; ಲಿಮಿಟೆಡ್

(ಸ್ಥಾಪನೆ ೧೯೨೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ —

Post Box No 10,
UDIPI, S Kanara

ಸುದ್ದಿಗಳ ಸಂದೂಕ.

[illegible]

ಮಹಾಜನರು ಮತ್ತು ಭಜಕರಲ್ಲಿ ವಿನಂತಿ.

[illegible]

ಜಾಹೀರ ನೋಟೀಸು

[illegible]

NOTICE.

No O/1585

Karwar 30-9-1948

Applications are invited from pleaders practising in the Kanara District for the post of Assistant Government Pleader and Assistant Public Prosecutor, Kanara which is now vacant Applications should reach the undersigned not later than 20-10-1948 and should contain the following among other particulars—

(1) Full Name and place of residence
(2) Date of birth
(3) Qualifications
(4) Years of practice — criminal and civil

Applicants will not be called for an interview The appointment will be made by Government

L F SALDANHA
District Magistrate Kanara

ಬಜಾರದ ಉಪಯೋಗಗಳಿಗೂ ಅವಕ್ಕೆ ಬಿಡ್ಡ ಒರ್ಕರ್ಸ (?) ಜಾಮೀನುಗಳನ್ನು ರಶಿಯದಲ್ಲಿ ಕೊಂಡುಕೊಳ್ಳದ ಒಬ್ಬನ ದಲ್ಲಿರುವ ತನ್ನ ಮನೆಯಿಂದ ಒಯ್ಯಕೊಳ್ಳಬೇಕಾಯಿತಂತೆ! ಇನ್ನೊಂದು ಮಹತ್ವದ ಸಂಗತಿಯೆಂದರೆ ಶ್ರೀಮತಿಗಳು ಭಾರತದ ರಾಯಭಾರಿಯಾಗಿ ಮಾಸ್ಕೋಕ್ಕೆ ಹೋಗಿ ಈಗ ೧||-೧ ವರ್ಷವಾಗುತ್ತ ಬಂದರೂ ಇನ್ನೂ ಅವರಿಗೆ ರುಷ್ಯ-ಪ್ರಧಾನಿ ಸ್ಟಾಲಿನ್ನರ ದರ್ಶನ ಆಗಿಲ್ಲ! ಸ್ಟಾಲಿನ್ನರು ಅಷ್ಟು ಭದ್ರವಾದ ಕಾವಲಿನಲ್ಲಿರುತ್ತಾರೆ! ಆ ದುರ್ಗದೊಳಗಿಂದ ಅವರು ಹೊರಬೀಳುವದು ಅತಿ ಅಪರೂಪವಂತೆ!! ದುರ್ಗದೊಳಗಿಂದ ಹೊರಗೆ ಬಿದ್ದರೆ ತಮ್ಮ ಪ್ರಾಣಕ್ಕೆ ಅಪಾಯವಾದೀತೆಂಬ ಹೆದರಿಕೆಯಿದ್ದುದರಿಂದಲೇ ಇಷ್ಟು ಎಚ್ಚರಿಕೆಗಾರರಾಗಿರುವರೆಂದು ಊಹಿಸಲಾಗುತ್ತದೆ. ಇದು "ಜನತಾ-ರಾಜ್ಯ"ದೊಳಗಿನ "ರಾಜ" ಪ್ರಜೆಗಳೊಳಗಿನ ಸಂಬಂಧವಿದು!!

— ಈ ವರ್ಷದ ರಾಷ್ಟ್ರೀಯ ಸಭೆಯ ಅಧಿವೇಶನವು ಡಿಸೆಂಬರ ತಿಂಗಳಲ್ಲಿ ಜಯಪುರ ಸಂಸ್ಥಾನದ ರಾಜಧಾನಿಯಾದ ಜಯಪುರದಲ್ಲಿ ಕೂಡುವದು. ಆದರೆ ಅಧ್ಯಕ್ಷಸ್ಥಾನಕ್ಕೆ ಉಮೇದವಾರರನ್ನು ಸೂಚಿಸುವ ಕೊನೆಯ ದಿನ ಇಂದು. ಈತನಕ ಅಧ್ಯಕ್ಷ ಪದಕ್ಕೆ ಶ್ರೀ|| ಪಟ್ಟಾಭಿ ಸೀತಾರಾಮಯ್ಯ, ಶ್ರೀ|| ಶಂಕರರಾವ ದೇವ, ಶ್ರೀ ಪುರುಷೋತ್ತಮದಾಸ ಟಂಡನ್ (ಸಂ|| ಪ್ರಾಂ|| ಎಸೆಂಬ್ಲಿ ಅಧ್ಯಕ್ಷರು), ಮತ್ತು ಹಿಂದೆ ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳಾಗಿದ್ದ ಡಾ|| ಪ್ರಫುಲ್ಲಚಂದ್ರ ಘೋಷ ಇವರ ಹೆಸರುಗಳು ಸೂಚಿಸಲ್ಪಟ್ಟಿವೆ. ಸದ್ಯದ ಕಠಿಣ ಪರಿಸ್ಥಿತಿಯಲ್ಲಿ ಡಾ|| ರಾಜೇಂದ್ರ ಪ್ರಸಾದರೇ ಇನ್ನೊಂದು ವರ್ಷ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಉಳಿಯುವದು ಒಳಿತೆಂಬ ಅಭಿಪ್ರಾಯ ಕಾಂಗ್ರೆಸ ವರಿಷ್ಠರದಿರುತ್ತದೆಂದೂ ಅವರು ಹಾಗೆ ರಾಜೇಂದ್ರ ಪ್ರಸಾದರನ್ನು ಒಪ್ಪಿಸಿಕೊಳ್ಳುವ ಸಂಭವವುಂಟೆಂದೂ ಒಂದು ಸುದ್ದಿಯುಂಟು.

— ೧೪ ದಿನಗಳ ಘನ-ಘೋರ ಚರ್ಚೆಯ ನಂತರ ಮುಂಬಯಿ ಸರಕಾರದ ಹೊಸ ಒಕ್ಕಲತನದ ಮಸೂದೆಗೆ ಕಳೆದ ಗುರುವಾರ ಎಸೆಂಬ್ಲಿಯ ಒಪ್ಪಿಗೆ ಸಿಕ್ಕಿತು. ಅಂದು ಮಸೂದೆಯ ೩ನೇ ವಾಚನವಾಯಿತು. ಈ ಮಸೂದೆಯ ೨ನೇ ವಾಚನ (ಕಲಮುವಾರ ಚರ್ಚೆ) ನಡೆದಾಗ ೩೦೦ಕ್ಕಿಂತ ಹೆಚ್ಚು ತಿದ್ದುಪಡಿಗಳು ಸೂಚಿಸಲ್ಪಟ್ಟಿದ್ದವು. ಕೆಲವು ತಿದ್ದುಪಡಿಗಳು ಮಸೂದೆಯ ಕೆಲವು ಮಹತ್ವದ ಕಲಮುಗಳನ್ನು ಅಳಿದೊಗೆಯಬೇಕೆಂದು ಸೂಚಿಸಿದರೆ, ಬೇರೆ ಕೆಲವು ತಿದ್ದುಪಡಿಗಳು ಮಸೂದೆಯೊಳಗಿನ ಕೆಲವೊಂದು ಅಧ್ಯಾಯಗಳನ್ನೇ ಬಿಟ್ಟುಬಿಡಬೇಕೆಂದು ಸೂಚಿಸಿದ್ದವು. ಸರಕಾರದ ಪಕ್ಷದಿಂದಲೂ ಸುಮಾರು ೩೫ ಉಪಸೂಚನೆಗಳು ಸೂಚಿಸಲ್ಪಟ್ಟವು. ಒಕ್ಕಲತನದ ಕಾಯದೆಯ ಅಳತೆಯಲ್ಲಿ ದಿವಾಣಿ ನ್ಯಾಯಾಸನಗಳು ಕೈಹಾಕಕೂಡದ್ದಕ್ಕೆ, ಅಥವಾ ಒಕ್ಕಲತನದ ಕಾನೂನಿನ ಅಳತೆಯಲ್ಲಿ ಮಾಮಲೇದಾರ-ಕಲೆಕ್ಟರರು, ಪಂಚ ಮಂಡಳದವರು ಯಾ ಸರಕಾರದವರು ಕೊಡುವ ನಿರ್ಣಯಗಳ ನ್ಯಾಯಾನ್ಯಾಯ್ಯತೆಯನ್ನು ನಿರ್ಣಯಿಸಕೂಡದ್ದಕ್ಕೆ, ಅಥವಾ ಈ ಕಾನೂನಿನ ಆಧಾರತೆಯನ್ನು ಪ್ರಶ್ನಿಸುವಾಗಿನಿಂದ (?) ನಡೆಸುವ ಯಾವದೇ ವ್ಯಕ್ತಿಯ ವಿರುದ್ಧ ದಿವಾಣಿ ಯಾ ಫೌಜದಾರಿ ಕ್ರಮ ನಡೆಯಗೊಡಕೂಡದ್ದಕ್ಕೆ, ಎಂಬರ್ಥದ ಕಲಮು ಕೂಡ ವಿರೋಧಕರ ವಿರೋಧವನ್ನು ಲೆಕ್ಕಿಸದೆ ಬಹುಮತದಿಂದ ಸ್ವೀಕರಿಸಲ್ಪಟ್ಟಿತು. ಎಸೆಂಬ್ಲಿಯ ಮನ್ನಣೆ ಹೊಂದಿದ ಒಂದು ಮಹತ್ವದ ತಿದ್ದುಪಡಿಯೆಂದರೆ, ರೈತನು ತನ್ನ ಸಾಗುವಳಿ ಭೂಮಿಯಲ್ಲಿ ನಿರ್ದಿಷ್ಟ ಪ್ರಮಾಣದ ಕನಿಷ್ಠ ಬೆಳೆಯನ್ನು ಬೆಳೆಸದಿದ್ದರೆ ತನ್ನ ಒಕ್ಕಲತನವನ್ನು ಕಳಕೊಳ್ಳುವನು ಎಂದು ವಿಧಿಸಿದ ಕಲಮನ್ನು ಪೂರ್ಣವಾಗಿ ಅಳಿದೊಗೆದದ್ದು! ಈ ಮಸೂದೆಗೆ ಪ್ರಾರಂಭದಿಂದ ಕೊನೆಯ ತನಕ ವಿರೋಧ ಮಾಡಿದವರೆಂದರೆ ಕೇರವಾಡದ ಠಾಕೂರ ಸಾಹೇಬರೊಬ್ಬರೇ. "ಇಂತಹ ಕಾಯದೆಗಳನ್ನು ಮಾಡುವದಕ್ಕಿಂತ ಹೊಲಗಳ ಒಡೆಯರ ಭೂಮಿಗಳನ್ನೇ ಸರಕಾರವು ಕೊಂಡುಕೊಳ್ಳುವದೊಳಿತು, ಭೂಮಾಲೀಕರನ್ನು ಹೀಗೆ ದಣಿಸುವದಕ್ಕಿಂತ ಅವರನ್ನು ಒಮ್ಮೆಲೇ ಸಿಮಾರಿಸಿಬಿಡಿರಿ (?) ತನ್ನ ಬೇಟೆಯ ಮೇಲೆ ಒಮ್ಮೆಲೇ ಜಿಗಿದು ಅದನ್ನು ಕೊಂದುಬಿಡುವ ಹುಲಿಯ ಗುಣವು, ಇಲಿಯನ್ನು ಸಾವಕಾಶವಾಗಿ ಕೊಲ್ಲುವ ಬೆಕ್ಕಿನ ರೀತಿಗಿಂತ ಹೆಚ್ಚು ದಯಾಪೂರ್ಣವಿರುತ್ತದೆಂಬುದನ್ನು ಮರೆಯಬೇಡಿರಿ" ಎಂದು ಅವರು ತೃತೀಯ ವಾಚನದ ಕಾಲಕ್ಕೆ ಎದೆ ಕರಗುವಂತೆ ನುಡಿದಿದರು. ಆದರೆ ಅವರ ವಾಗ್ವಾದವೆಲ್ಲ "ಬೋರಲ್ಗಲ್ಲ ಮೇಲೆ ನೀರು" ಹರಿದಂತಾಯಿತು!

ಹೊಸ ಒಕ್ಕಲತನದ ಕಾಯದೆಗೆ ಎಸೆಂಬ್ಲಿಯು ಮೇಲಿನಂತೆ ತನ್ನ ಕೊನೆಯ ಒಪ್ಪಿಗೆಯನ್ನು ಕೊಟ್ಟ ಬಳಿಕ ಸ್ಥಾನಿಕ ಸ್ವರಾಜ್ಯ ಖಾತೆಯ ಮಂತ್ರಿಗಳಾದ ಮಾನ್ಯ ವರ್ತಕರು ಗಜನಿ ಭೂಮಿಗಳ ಸುಧಾರಣೆ ಮತ್ತು ಸಂಪಾದನೆಯ ಮಸೂದೆಯನ್ನು ಎಸೆಂಬ್ಲಿಯ ಮುಂದಿಟ್ಟರು. ಪ್ರಾಂತದೊಳಗಿನ ಗಜನಿ ಭೂಮಿಗಳ ಸುಧಾರಣೆ, ಸಂಪಾದನೆ ಮುಂತಾದವುಗಳ ಯೋಜನೆ ಕಾರ್ಯರೂಪಕ್ಕೆ ಒಂದು "ಗಜನಿ ಸುಧಾರಣಾ ಮಂಡಳ"ವನ್ನು ನೇಮಿಸುವದೇ ಈ ಮಸೂದೆಯ ಮುಖ್ಯ ಉದ್ದೇಶವಿರುತ್ತದೆ. ಗಜನಿಗಳಲ್ಲಿ ನೀರು ಹಿಡಿಯುವ ಪಕ್ಕನ್ನು (?) ಈ ಮಂಡಳವು ನಿಯಂತ್ರಿಸುವದು. ಗಜನಿಗಳ ಸುಧಾರಣೆಯ ವೆಚ್ಚವನ್ನು ಸರಕಾರವು, ಒಡೆಯರು ಮತ್ತು ರೈತರು ೨:೨:೧ ಪ್ರಮಾಣದಿಂದ ಕೊಡಬೇಕೆಂದೂ ಈ ಮಸೂದೆಯಲ್ಲಿ ಹೇಳಲಾಗಿದೆ.

— ಇತ್ತೀಚೆ ಎರಡು ತಿಂಗಳಲ್ಲಿ ಮುಂಬಯಿಯ ಸರಕಾರ 'ಇಂಡಿಯನ ಕೊ-ಒಪರೇಟಿವ್ ಸ್ಟೀಮ ನೆವಿಗೇಶನ್' ಕಂಪನಿಯ ರಾಮದಾಸ ಎಂಬ ಹಡಗವು ಮುಳುಗಿ ೫೦೦ಕ್ಕಿಂತ ಹೆಚ್ಚಿಗೆ ಪ್ರವಾಸಿಗಳು ಜಲಸಮಾಧಿಯನ್ನು ಹೊಂದಿದ್ದರಷ್ಟೇ. ಈ ಅಪಘಾತ ಹೇಗಾಯಿತು, ಅದಕ್ಕೆ ಜವಾಬದಾರರಾರು, ಇಂತಹ ಅಪಘಾತಗಳು ಮುಂದಾಗದಂತೆ ಏನು ಮುಂಜಾಗ್ರತೆಗಳನ್ನು ಕೈಕೊಳ್ಳಬೇಕು ಎಂಬೀ ಪ್ರಶ್ನೆಗಳ ಚೌಕಶಿ ಮಾಡಲು ಸರಕಾರವು ಮುಂಬಯಿಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ ಮಿ|| ಬ್ರೌನ್ (?) ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯ ವರದಿಯನ್ನು ಪರಿಶೀಲಿಸಿ, ಹಿಂದುಸ್ಥಾನ ಸರಕಾರವು 'ರಾಮದಾಸ' ಹಡಗದ ಕಪ್ತಾನರ ಹಾಗೂ ಮುಖ್ಯ ಅಧಿಕಾರಿಗಳ ಮಾನ್ಯತಾ-ಪತ್ರಗಳನ್ನು, ಆ ಅಧಿಕಾರಿಗಳು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸಲಿಲ್ಲೆಂದು ಸಮಿತಿಯು ವರದಿ ಮಾಡಿರುವದರಿಂದ, ರದ್ದುಗೊಳಿಸಿದೆ. ಹಾಗೂ ಕರಾವಳಿಯಲ್ಲಿ ಓಡಾಡುವ ಹಡಗಗಳಲ್ಲೂ ಕಡಿಮೆ ತಂತಿಯಿಲ್ಲದ ಸಂದೇಶವಾಹಕ ಯಂತ್ರವನ್ನು ಇಡುವ ವ್ಯವಸ್ಥೆಯನ್ನು ಕಡ್ಡಾಯ ಮಾಡಬೇಕೆಂದೂ, ಹಡಗಗಳಲ್ಲಿ ಮಿತಿಮೀರಿ ಪ್ರಯಾಣಿಕರನ್ನು ತುಂಬಿಕೊಳ್ಳಕೂಡದೆಂದೂ, ಹೆಚ್ಚು ಪ್ರಾಣರಕ್ಷಕ ಕವಚ (ಜಾಕೆಟ್ಸ) ಗಳನ್ನು ಹಡಗದಲ್ಲಿ ಇಟ್ಟುಕೊಳ್ಳಬೇಕೆಂದೂ ಆಜ್ಞೆ ಹೊರಡಿಸಿದೆ.

— ಹೈದರಾಬಾದದ ಕಾಶಿಮ ರಝ್ವಿಯನ್ನು ಈಗ ಎಲ್ಲಿಟ್ಟಿದ್ದಾರೆಂಬ ದರ ಪತ್ತೆ, ಯಾರಿಗೂ ಗೊತ್ತಿಲ್ಲ! ಹೈದರಾಬಾದ ಸಂಸ್ಥಾನದಲ್ಲಿ ಅವನನ್ನು ಇಟ್ಟಿಲ್ಲೆಂಬುದು ಮಾತ್ರ ನಿಶ್ಚಿತ. ಅವನ ಬಂಧನವಾದ ಕೂಡಲೆ ವಿಮಾನ ಮಾರ್ಗವಾಗಿ ಅವನನ್ನು ಸಂಸ್ಥಾನದ ಹೊರಗೆ ಸಾಗಿಸಲಾಗಿತ್ತು. ದಿಲ್ಲಿಯ ಕೆಂಪು ಕೋಟೆಯನ್ನು ಅವನಿಗೆ ಕಾಣಿಸಲಾಗುವದೆಂದು ಕೆಲವು ಅಧಿಕಾರಿಗಳು ವಿನೋದದಿಂದ ಹೇಳುತ್ತಿದ್ದರೇನೋ ನಿಜ. ಆದರೆ ಅವನು ಇನ್ನೂ ದಿಲ್ಲಿಗೆ ತಲ್ಪಿಲ್ಲೆಂದು "ಕೇಸರಿ" ಪತ್ರಿಕೆಯ ದಿಲ್ಲಿಯ ಪ್ರತಿನಿಧಿಗಳು ತಿಳಿಸುತ್ತಾರೆ. ರಝ್ವಿಯನ್ನು ಅಹಮ್ಮದನಗರದ ಕಿಲ್ಲೆಯ ವಿಜಾಪುರ ಸುರಂಗದಲ್ಲಿ ಇಟ್ಟಿರಬೇಕೆಂದು ಬೇರೊಂದು ಪತ್ರಿಕೆಯು ತರ್ಕಿಸಿದೆ. ಅವನಿಗೆ ಏಕಾಂತ ಸ್ಥಳದಲ್ಲಿ ಇಟ್ಟಿರುವರೆಂದೂ, ಅಲ್ಲಿ ಮೇಲಿಂದ ಮೇಲೆ ಚಹಾ ಕುಡಿಯುವದು, ಸಿಗರೇಟು ಸೇದುವದು (ದಿನಾ ಅವನಿಗೆ ೫೦ ಸಿಗರೇಟು ಕೊಡುತ್ತಾರಂತೆ.) ಮತ್ತು ಕುರಾಣವನ್ನು ಓದುವದು ಇದೇ ಅವನ ನಿತ್ಯಕ್ರಮವಾಗಿದೆಯೆಂದೂ ಹೇಳುತ್ತಾರೆ.

— ಪೊನ್ನೆ ಗಾಂಧಿ-ಜಯಂತಿಯ ದಿನದಿಂದ ಇಡೀ ಮದ್ರಾಸ ಪ್ರಾಂತವು ನಿರ್ಮದ್ಯವಾಗಿದೆ. ಮದ್ಯಪ್ರತಿಬಂಧದಿಂದ ಸರಕಾರದ ಉತ್ಪನ್ನ ಕಡಿಮೆಯಾಗಿ ಮದ್ರಾಸ ಸರಕಾರವು ಹಿಂದ-ಸರಕಾರದ ಕಡೆ ಆರ್ಥಿಕ ಸಹಾಯ ಬೇಡಿದಂತಿತ್ತು (?). ಸದ್ಯಕ್ಕೆ ಅಂಥ ಸಹಾಯವನ್ನು ಹಿಂದ ಸರಕಾರವು ನೀಡುವ ಪರಿಸ್ಥಿತಿಯಲ್ಲಿ ಇರುವದಿಲ್ಲವಾದ್ದರಿಂದ ಮದ್ಯಪಾನ ನಿರೋಧನದ ಕಾರ್ಯಕ್ರಮವನ್ನು "ಅಸ್ತೇ ಅಸ್ತೇ" ಅನುಸರಿಸಲು ಪಂ|| ಜವಾಹರಲಾಲರು ಉಪದೇಶಿಸಿದ್ದರಂತೆ. ಆದರೂ ಮದ್ರಾಸ ಸರಕಾರವು ಮನಸ್ಸು ಗಟ್ಟಿ ಮಾಡಿ ಪೂರ್ವಸಂಕಲ್ಪದಂತೆ ಪೊನ್ನೆಯಿಂದಲೇ ಉಳಿದ ಮದ್ಯ ನಿಷೇಧವಿಲ್ಲದ ಅವಶಿಷ್ಟ ೮ ಜಿಲ್ಲೆಗಳಲ್ಲೂ ಮದ್ಯ-ಪ್ರತಿಬಂಧವನ್ನು ಜಾರಿಯಲ್ಲಿ ತಂದುಬಿಟ್ಟಿದೆ.

— ರಝಾಕಾರರ ಪೀಡೆಯನ್ನು ತಾಳಲಾರದೆ ಲಕ್ಷಾವಧಿ ಹಿಂದುಗಳು ಹೈದರಾಬಾದ ಸಂಸ್ಥಾನ ಬಿಟ್ಟು ನೆರೆಯ ಹಿಂದ ಪ್ರಾಂತಗಳಲ್ಲಿ ಸೇರಿದ್ದರಷ್ಟೇ. ನಮ್ಮ [illegible] ಪ್ರಾಂತಕ್ಕೆ ಓಡಿಬಂದ ಇಂಥ ನಿರಾಶ್ರಿತರ ಸಂಖ್ಯೆ ೫೦೦೦೦ಕ್ಕೆ ಮಿಕ್ಕಿದ್ದಂತೆ. ಈಗ ಹೈದರಾಬಾದ ಸಂಸ್ಥಾನವು ನಿಷ್ಕಂಟಕವಾಗಿರುವದರಿಂದ ಆ ಜನರು ತಮ್ಮ ತಮ್ಮ ನಾಡಿಗೆ ಹೊರಟು ಹೋಗಬೇಕೆಂದು ಮುಂಬಯಿ ಸರಕಾರವು ಬಯಸಿದೆ, ಮತ್ತು ಹೀಗೆ ತಮ್ಮ ಊರಿಗೆ ಮರಳಿ ಹೋಗುವವರಿಗೆ ಪುಕ್ಕಟೆ ರೇಲ್ವೆ ತಿಕೀಟುಗಳನ್ನೂ ೭-೭ ದಿನಗಳ ಶಿಧಾ-ಸಾಮಗ್ರಿಯನ್ನೂ ಸರಕಾರವು ಪೂರೈಸುವದೆಂದು ಜಾಹೀರಪಡಿಸಿದೆ.

— ಪಾಕಿಸ್ತಾನ-ಪ್ರಧಾನಿ ಡಾ|| ಜಿನ್ನಾರವರೂ, ಅವರ ಮುಖ್ಯಮಂತ್ರಿ ಮಿ|| ಲಿಯಾಕತ ಅಲಿಖಾನರೂ ಹಿಂದುಸ್ಥಾನಕ್ಕೆ ಜೀವದಾಸೆಗೆ ಓಡಿಬಂದ ಹಿಂದುಗಳು ಮರಳಿ ಪಾಕಿಸ್ತಾನಕ್ಕೆ ಬರಬೇಕೆಂದೂ ಅವರ ವಿತ್ತ-ಜೀವಿತಗಳನ್ನು ಸರಕಾರವು ಸಂರಕ್ಷಿಸುವದೆಂದೂ ಕೊಟ್ಟ ಆಶ್ವಾಸನವನ್ನು ನಂಬಿ ಸಿಕ್ಕರದ ಕೆಲವು ಹಿಂದು ಕುಟುಂಬಗಳು ಸಕ್ಕರಕ್ಕೆ ತಿರುಗಿ ಹೋಗಿದ್ದವು. ಇದೇ ಕಳೆದ ತಾ ೧೩ನೇ ರಾತ್ರಿ ಮುಸಲ್ಮಾನ ಪುಂಡರ ದೊಡ್ಡದೊಂದು ಸಮುದಾಯವು ಆ ಕುಟುಂಬಗಳ ಮನೆಗಳನ್ನು ಮುತ್ತಿ ಎಲ್ಲ ಹಿಂದುಗಳನ್ನು ತುಂಡರಿಸಿದವೆಂದೂ ಅಲ್ಲಿದ್ದ ಹಿಂದುಗಳ ಮಂದಿರವನ್ನು [illegible] ತೆಗೆದವೆಂದೂ ದಿಲ್ಲಿಯಿಂದ ಈಗ ಒಂದು ವಾರ್ತೆ ಪ್ರಕಟವಾಗಿದೆ. ಪಾಕಿಸ್ತಾನ ಸರಕಾರವು ಈ ಸುದ್ದಿಯನ್ನು ಬಚ್ಚಿಟ್ಟಿತ್ತು! ಆದರೆ ಪಾಪವನ್ನು ಬಹಳ ದಿನ ಬಚ್ಚಿಡಲಾಗುತ್ತದೆಯೇ? ಸಕ್ಕರದ ಪುಂಡರು ತುಂಡರಿಸಿ ಸಿಂಧೂ ನದಿಯಲ್ಲಿ ಚೆಲ್ಲಿದ ಅನೇಕ ಹೆಣಗಳು ಎರಡು ದಿನಗಳ ವರೆಗೆ ಹೊಳೆಯ ನೀರಿನಲ್ಲಿ ತೇಲಾಡುತ್ತಿದ್ದವಂತೆ!

— ಸಂಯುಕ್ತ ಪ್ರಾಂತದ ಕರ್ನಲ್‌ಗಂಜ ಗ್ರಾಮದವರು ಒಂದು ಆದರ್ಶ ಹಾಕಿಕೊಟ್ಟಿದ್ದಾರೆ. ಆ ಗ್ರಾಮದವರು ಒಂದು ಪ್ರತಿಜ್ಞಾಪತ್ರ ತಯಾರಿಸಿ ಅದರ ಮೇಲೆ ನಾಗರಿಕರ ಸಹಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. "ನಮ್ಮ ನಮ್ಮ ಮನೆಗಳಲ್ಲಿ ನಾವು ಸ್ವಚ್ಛತೆ ಇಡುವೆವು, ಮನೆಯಲ್ಲಿ ಸಾಂಸರ್ಗಿಕ ರೋಗ ಉದ್ಭವಿಸಿದ್ದರೆ ಆರೋಗ್ಯಾಧಿಕಾರಿಗಳಿಗೆ ತಿಳಿಸುವೆವು" ಎಂದು ಮುಂತಾಗಿ ಆ ಪತ್ರದಲ್ಲಿದೆ. ಈ ಪ್ರತಿಜ್ಞಾ-ಪತ್ರದಂತೆ ನಡೆಯಲು ನಾಗರಿಕರು ನಿರ್ಧಾರವನ್ನು ಮಾಡುತ್ತಿದ್ದಾರೆ.

ಇದನ್ನು ಪಾಂಡುರಂಗ ಕೃಷ್ಣ ಕಾನಡೆಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆರ್ಟ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
೩ ತಿಂಗಳಿಗೆ ,, ೦-೧೦-೦
ಬಿಡಿ ಸಂಚಿಕೆಗೆ ,, ೦-೧-೦
೨ ಕ್ಕಿಂತ ಹೆಚ್ಚು ಪ್ರತಿಗಳು
೨ ಕ್ಕಿಂತ ಹೆಚ್ಚು ೬ ಆಣೆ ಕಳಿಸ
ಬೇಕು
ವರ್ಗಣಿಯು ಮುಂಗಡ ಕಳಿಸತಕ್ಕದ್ದು

Reg. No. B. 1270

Monday, 11-10-1948.

ಕಾನಡಾವೃತ್ತ.

ವರ್ಷ ೩೧.] THE KANARA NEWS. [ಸಂಚಿಕೆ ೧೫.

ಕುಮಟಾ:- ಸೋಮವಾರ, ತಾ. ೧೧-೧೦-೧೯೪೮

ಜಾಹೀರಾತುಗಳ ದರ:-
ಒಂದು ಕಾಲಮ್ ಇಂಚಿಗೆ
೧ ಸಾಲಿಗೆ ೮ ಆಣೆಯಂತೆ.
ವಿಶೇಷ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು

ಸ್ಥಳಿಕ ವಿಷಯಗಳು.

(ಲೇಖಕ:- ಸ್ಥಳವಂತಿಕ.)

ಶ್ರೀ|| ಮಹಾಬಲೇಶ್ವರ ಗಣಪತಿ ಭಟ್ಟ ಗೋಪಿ ಇವರು ಮುಂಬಯಿಯ ವರಿಷ್ಠ ಕಾನೂನ ಮಂಡಳದ ಮೀಟಿಂಗಿನಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಕಾರದವರು ಕೊಟ್ಟ ಉತ್ತರಗಳೊಳಗಿನ ಕೆಲವು ಮಾಹಿತಿ ವಿಚಾರಾರ್ಹವಿದೆ. ನಮ್ಮ ಜಿಲ್ಲೆಯೊಳಗೆ ಇರುವ ಒಟ್ಟೂ ಖಾತೆದಾರರ ಸಂಖ್ಯೆ ೮೩೯೯೫ ಅವರಲ್ಲಿ ಗಂಡಸರು ೭೧೭೩೩; ಹೆಂಗಸರು ೧೨೬೦೦. ಈ ಖಾತೆದಾರರಲ್ಲಿ ೫ ಎಕರೆಗಿಂತ ಕಡಿಮೆ ಭೂಮಿಯುಳ್ಳವರು ೬೩೦೮೬, ೫ರಿಂದ ೧೦ ಎಕರೆ ಭೂಮಿಯುಳ್ಳವರು ೮೯೮೯, ೧೦ರಿಂದ ೧೫ ಎಕರೆ ಭೂಮಿಯುಳ್ಳವರು ೩೭೫೦; ೧೫ರಿಂದ ೨೦ ಎಕರೆ ಭೂಮಿಯುಳ್ಳವರು ೧೬೭೯; ೨೦ರಿಂದ ೨೫ ಎಕರೆ ಭೂಮಿಯುಳ್ಳವರು ೧೦೦೬; ೨೫ರಿಂದ ೫೦ ಎಕರೆ ಭೂಮಿಯುಳ್ಳವರು ೧೪೮೬. ೨೭೦೯೧ ಮಂದಿ ಖಾತೆದಾರರು ತಮ್ಮ ಭೂಮಿ ತಾವೇ ಸಾಗುವಳಿ ಮಾಡುತ್ತಾರೆ. ಸ್ವಂತ ಭೂಮಿಯಿಲ್ಲದ ಸಾಗುವಳಿ-ಒಕ್ಕಲಿಗರು ೪೪೮೪೩. ೫ ಎಕರೆಗಿಂತ ಕಡಿಮೆ ಹೊಲ ಸಾಗುವಳಿ ಮಾಡುವ ಒಕ್ಕಲಿಗರು ೫೦೭೯೬; ೧೦ ಎಕರೆ ತನಕ ಸಾಗುವಳಿ ಮಾಡುವ ಒಕ್ಕಲಿಗರು ೬೨೬೩, ೧೫ ಎಕರೆ ತನಕ ಭೂಮಿ ಸಾಗು ಮಾಡುವವರು ೧೫೫೨, ೨೦ ಎಕರೆ ತನಕ ಸಾಗು ಮಾಡುವವರು ೭೫೧ ೨೫ ಎಕರೆ ತನಕ ಸಾಗು ಮಾಡುವವರು ೧೫೧; ೨೫ರಿಂದ ೫೦ ಎಕರೆ ತನಕ ಸಾಗುವಳಿ ಮಾಡುವವರು ೫೯

* * *

ಇಡೀ ಕಾನಡಾ ಜಿಲ್ಲೆಯೊಳಗೆ ಗೇಣಿ ಬಾಕಿ ಇಟ್ಟುಕೊಂಡ ರೈತರಿಂದ ಕಬಜೆ ಕೊಡಿಸಬೇಕಾಗಿ ೫೬೦೪ ದಾವೆಗಳು ದಾಖಲು ಆಗಿದ್ದವು. ಅವುಗಳಲ್ಲಿ ೩೬೬೯ ದಾವೆಗಳು ನಿಕಾಲೆಯಾದವು. ೫೮೯ ದಾವೆಗಳಲ್ಲಿ ಕಬಜಾ ಕೊಡಿಸಲ್ಪಟ್ಟಿದೆ. ದಾವೆಗಳನ್ನು ನಿರ್ಣಯಿಸುವ ಕ್ರಮವನ್ನು ಅಮಲದಾರರಿಗೆ ತಿಳಿಸಿಹೇಳುವ ಬಗ್ಗೆ ಸರಕಾರದಿಂದ ೨೮, ಜಿಲ್ಲಾಧಿಕಾರಿಂದ ೮, ಹೀಗೆ ೩೬ ಸೂಚನಾ-ಪತ್ರಗಳು ಹೊರಡಿಸಲ್ಪಟ್ಟವು. ಅವುಗಳಲ್ಲಿ ೪ ಪತ್ರಗಳು ಗುಪ್ತ ಪತ್ರಗಳು. ಈ ೪ ಪತ್ರಗಳಲ್ಲಿ ೨ ಸರಕಾರದಿಂದ ಹೊರಟವು ಇರುತ್ತವೆ. ಅವುಗಳ ಪ್ರತಿಗಳನ್ನು ತನಗೆ ಪೂರೈಸಬೇಕಾಗಿ ಎಸೆಂಬ್ಲಿಯ ಸಭಾಸದರಾದ ಶ್ರೀ|| ಶಾಸ್ತ್ರಿಯವರು ಸರಕಾರಕ್ಕೆ ತಾ. ೨೪-೯-೪೭ಕ್ಕೆ ಪತ್ರ ಬರೆದಿದ್ದರು. ಅದಕ್ಕೆ ಸರಕಾರವು ತಾ. ೨೫-೧೧-೪೭ಕ್ಕೆ ಉತ್ತರ ಕೊಟ್ಟಿತು. ಈ ಸೂಚನಾ-ಪತ್ರಗಳು ಅಧಿಕಾರಿಗಳ ಮಾರ್ಗದರ್ಶನಕ್ಕಾಗಿ ಹೊರಡಿಸಿದವುಗಳಿರುವದರಿಂದ ಅವನ್ನು ಬಹಿರಂಗಗೊಳಿಸಲಿಕ್ಕೆ ಬರುವದಿಲ್ಲೆಂದೂ, ಅವನ್ನು ಪ್ರಸಿದ್ಧಿಸಬೇಕಾಗಿ ಸರಕಾರಕ್ಕೆ ತೋರಿದರೆ ಸರಕಾರವು ಆ ಬಗ್ಗೆ ಪ್ರಕಟನೆಗಳನ್ನು ಹೊರಡಿಸುತ್ತದೆಂದೂ, ಇಂಥ ಪ್ರಕಟನೆಗಳನ್ನು ಎಸೆಂಬ್ಲಿಯ ಸದಸ್ಯರಿಗೆ ಪೂರೈಸಲಾಗುತ್ತದೆಂದೂ ಸರಕಾರವು ಶ್ರೀ|| ಶಾಸ್ತ್ರಿಯವರಿಗೆ ಬರೆದ ಪತ್ರದಲ್ಲಿ ಉಂಟು. ಒಕ್ಕಲತನದ ಕಾನೂನಿನ ಅಫಲತೆಯ ಸ್ವರೂಪ ಈ ಪ್ರಶ್ನೋತ್ತರಗಳಿಂದ ಸ್ಪಷ್ಟವಾಗುತ್ತದೆ.

* * *

ನಮ್ಮ ಜಿಲ್ಲೆಯೊಳಗೆ ಬಹುಸಂಖ್ಯಾತರು ಸಣ್ಣ ಸಣ್ಣ ಭೂಮಾಲಿಕರೆಂಬ ಮಾತು ಸಿದ್ಧವಿದೆ. ಜಿಲ್ಲೆಯೊಳಗೆ ಕಾರಖಾನೆಗಳಿಲ್ಲ, ಉದ್ದಿಮೆಗಳಿಲ್ಲ, ಬಡತನದಿಂದ ಪ್ರಪಂಚ ನಡೆಸಿ, ಏನಾದರೊಂದು ಉದ್ಯೋಗ ಮಾಡಿ, ಪ್ರಪಂಚಕ್ಕೆ ಅನುಕೂಲವಾಗುವದೆಂಬ ಆಶೆಯಿಂದ ತಮ್ಮ ಹೊಲಭೂಮಿಗಳಲ್ಲಿ ಸುಧಾರಣೆ ಮಾಡಿ ಅವನ್ನು ಸಾಗುವಳಿಗಾಗಿ ಒಕ್ಕಲಿಗರಿಗೆ ಕೊಡುವದೊಂದು ಪದ್ಧತಿಯುಂಟು. ಒಡೆಯ-ಒಕ್ಕಲಿಗರೂ, ಬುದ್ಧಿಜೀವಿ ಶ್ರಮಜೀವಿಗಳೂ ಒಕ್ಕಟ್ಟಿನಿಂದ ನಡಕೊಂಡು, ಉಭಯತರೂ ಚಂದದಿಂದ ಸಂಸಾರ ಸಾಗಿಸಿಕೊಂಡು ಹೋಗುತ್ತಾರೆ. ಪ್ರತಿಯೊಂದು ಕೆಲಸದಲ್ಲಿ ಉಭಯತರೂ ಸಹಕರಿಸುತ್ತಾರೆ. ಈಗಿನ ಹೊಸ ಯೋಜನೆಗಳಂತೆ, ಗಿರಣಿಯ ಉದ್ಯೋಗದಲ್ಲಿ ತೊಡಗಿಸಿದ ಬಂಡವಲದ ಮೇಲೆ ನೂರಕ್ಕೆ ೬ರ ಸಲೆಯಂತೆ ಬಡ್ಡಿ ಮೊದಲು ತೆಗೆದಿಟ್ಟು ಆಮೇಲೆ ಉಳಿದ ಹಣವನ್ನು ಗಿರಣಿಗಳ ಒಡೆಯರೂ ಕೂಲಿಕಾರರೂ ಹಂಚಿಕೊಳ್ಳಬೇಕೆಂಬ ಯೋಜನೆಯಾಗುತ್ತಿದೆ. ಈ ಯೋಜನೆ ಭೂಮಿಯ ಉದ್ಯೋಗದ ಮಟ್ಟಿಗೆ ನಮ್ಮಲ್ಲಿ ಹಿಂದಿನಿಂದ ರೂಢಿಯಲ್ಲುಂಟು. ಸರಕಾರವು ಒಕ್ಕಲತನದ ಕಾನೂನಿನಿಂದ ಒಡೆಯ-ಒಕ್ಕಲಿಗರೊಳಗೆ ಇರುವ ಸಂಬಂಧವನ್ನು ಒಮ್ಮೆಲೇ ತುಂಡರಿಸಿ, ನಾಡಿನಲ್ಲಿ ವರ್ಗಕಲಹಗಳನ್ನುಂಟುಮಾಡಿದೆ. ಒಕ್ಕಲಿಗರು ಧಾನ್ಯರೂಪದಿಂದ ಗೇಣಿ ಕೊಡಲು ಒಡಂಬಡುವದಿಲ್ಲ. ಒಡೆಯರು ಇಚ್ಛಿಸಿದಂತೆ ಸ್ವಂತ ಸಾಗುವಳಿಗೆ ಭೂಮಿಗಳ ಕಬಜೆ ಪಡೆಯುವ ಅನುಕೂಲತೆ ಕಾನೂನಿನಲ್ಲಿ ಉಂಟು. ಆದರಂತೆ ಭೂಮಿಯನ್ನು ಸ್ವಂತ ಸಾಗುವಳಿಗೆ ಬೇಡಿದರೆ, ಟೆನನ್ಸಿ ಅವ್ವಲ ಕಾರಕೂನರು, ಸರಕಾರದ ಗುಪ್ತ ಸೂಚನೆಗಳನ್ನು ಮನ್ನಿಸಿ, ಕಬಜೆ ಕೊಡಿಸುವದಿಲ್ಲ. ಮೇಲಾಗಿ ನಿರ್ದಿಷ್ಟ ಗೇಣಿ ಹೆಚ್ಚಿದುತ್ತದೆಂದೂ, ಹೊಲದಲ್ಲಿ ಉತ್ಪತ್ತಿಯಾಗುವದಿಲ್ಲೆಂದೂ, ಒಕ್ಕಲಿಗರಿಂದ ಬಂದ ಆಕ್ಷೇಪಗಳನ್ನು ಮಾಮಲೇದಾರರು ಮನ್ನಿಸಿ, ಸ್ವೇಚ್ಛೆಯಿಂದ ಪಂಚನಾಮೆ ಗೇಣಿಯನ್ನು ನಿರ್ಣಯಿಸುತ್ತಾರೆ! ಆ ಗೇಣಿ ಸಹ ಸುಸೂತ್ರ ಸಿಗುವದಿಲ್ಲ! ಪ್ರತಿಯೊಂದು ವರ್ಗ ಸರಾಸರಿಯುಂಟು! ಬೆಳೆಯ ನಿರ್ಣಯಕ್ಕೆ ಸರಾಸರಿ ತೆಗೆಯಬೇಕು! ದರದ ನಿರ್ಣಯಕ್ಕೆ ಸರಾಸರಿ ತೆಗೆಯಬೇಕು; ಗೇಣಿಯ ಪ್ರಮಾಣ ನಿರ್ಧರಿಸಲಿಕ್ಕೆ ಸರಾಸರಿ ಲೆಕ್ಕವಾಗಬೇಕು. ಮುಖ್ಯ ಬೆಳೆ, ಗೌಣ ಬೆಳೆ, ಸ್ವಾಭಾವಿಕ ಬೆಳೆ, ಹೀಗೆ ಬೆಳೆಗಳಲ್ಲಿ ವರ್ಗವಾರಿ ಮಾಡಿ ಮುಖ್ಯ ಬೆಳೆಯ ಮುಖ್ಯಾಂಶ ಮಾತ್ರ ಲೆಕ್ಕಕ್ಕೆ ಹಿಡಿಯುತ್ತಾರೆ! ಮುಖ್ಯ ಬೆಳೆ ಭತ್ತವಾದರೆ ಸರಾಸರಿ ಬೆಳೆಯಲ್ಲಿ ಭತ್ತ ಮಾತ್ರ ಬರುತ್ತದೆ, ಹುಲ್ಲು ಬರುವದಿಲ್ಲ! ಸರಾಸರಿ ಬೆಳೆ ಹೆಚ್ಚಾದರೆ ಅದನ್ನು ಕಡಿಮೆ ಮಾಡಿಕೊಳ್ಳಲಿಕ್ಕೆ ಕಾನೂನಿನಲ್ಲಿ ಒಕ್ಕಲಿಗರಿಗೆ ಅವಕಾಶ ಕೊಟ್ಟಿದೆ. ಭೂಮಿಯು ಉಚ್ಚ ತರಗತಿಯದಿದ್ದು ಬೆಳೆಯ ಪ್ರಮಾಣ ಸರಾಸರಿಗೆ ಮಿಕ್ಕುತ್ತಿದ್ದರೆ ಅದನ್ನು ಹೆಚ್ಚಿಸಿಕೊಳ್ಳಲಿಕ್ಕೆ ಒಡೆಯರಿಗೆ ಶಕ್ಯವಿಲ್ಲ! ಭೂಮಿಯನ್ನು ಸುಧಾರಿಸಲಿಕ್ಕೆ ಕಬಜೆದಾರರು ವಿಶೇಷ ಹಣ ತೊಡಗಿಸಿ, ಭೂಮಿಯನ್ನು ಸುಧಾರಿಸಿದರೆ ಆ ಭೂಮಿಗೆ ಹೆಚ್ಚಿನ ರಾಜಾರ್ಥವನ್ನು ಹೇರಬಾರದಾಗಿ ಭೂಕಂದಾಯದ ೮ ನೂನಿನ ೧೦೬ನೇ ಕಲಮಿನಲ್ಲಿ ವಿಧಿಸಲ್ಪಟ್ಟಿದೆ. ಇಂಥ ಭೂಮಿಗಳ ಉತ್ಪತ್ತಿಯನ್ನು ಮಾಮಲೇದಾರರು ತೀರ್ಪೆಯಿಂದ ನಿಶ್ಚಯಿಸಿ ಒಡೆಯರನ್ನು ಸುಲಿಯುತ್ತಾರೆ! ಹೀಗೆ ಹಲವು ಪ್ರಕಾರದಿಂದ ಒಡೆಯರಿಗೆ ಕಾನೂನಿನಂತೆ ಸಿಗತಕ್ಕ ಪ್ರತಿಫಲ ಸಿಗದಂತೆ ಒಕ್ಕಲತನದ ಕಾನೂನಿನ ಆಡಳಿತೆ ನಡೆದಿದೆ! ಸರಕಾರದ ಹುಕುಮುಗಳು ಗುಪ್ತವಾಗಿರುವದರಿಂದ ಬಡ ಒಡೆಯರಿಗೆ ಬಲು ಕಷ್ಟವಾಗತೊಡಗಿದೆ. ಭೂಮಿಯನ್ನು ಸ್ವತಃ ಸಾಗುವಳಿ ಮಾಡಿ ಜೀವನೋಪಾಯವನ್ನು ಸುಖಗೊಳಿಸುವಾ ಎಂದರೆ ಅದನ್ನು ಮಾಡಲಿಕ್ಕೂ ಅನುಕೂಲವಾಗುವದಿಲ್ಲ! ಬಡವರಿಗೆ ಕಾಯುವದು ಸರಕಾರದ ಧರ್ಮವುಂಟು. ಜಮೀನ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು· ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ. 3/-ರಂತೆ ಬಡ್ಡಿ.

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೭-೭-೧೯೪೮.

ಕೆ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡೈರೆಕ್ಟರ

ದಾರರನ್ನು ಸರಕಾರವು ನಿರ್ಮೂಲಿಸಬಹುದು ಆದರೆ ನಮ್ಮ ಜಿಲ್ಹೆಯಲ್ಲಿ ಜಮೀನದಾರರು ಇರುವದಿಲ್ಲ. ಸಣ್ಣ ಭೂಧಾರಣ ಮಾಡುವ ಜನರೇ ಬಹುಸಂಖ್ಯರಿದ್ದಾರೆ ಅವರಿಗೆ ಜಮೀನದಾರರೆಂದು ದೊಡ್ಡವರಲ್ಲಿ ಸೇರಿಸಿ, ಆ ದೊಡ್ಡವರು ಮಾಡಿದ ಅಥವಾ ಮಾಡುತ್ತಿರುವ ಅಥವಾ ಮಾಡುತ್ತಾರೆಂದು ಕಲ್ಪಿಸಿದ ಪಾಪಗಳ ಬಗ್ಗೆ ಶಿಕ್ಷೆಯನ್ನು ದಣಿಸುವದು ವಿಚಾರಹೀನ ಕೆಲಸ ರಾಜಕಾರಣದಲ್ಲಿ ಜಾಂಟು ವಂತನೋಟದಿಯಲ್ಲಿರುವ ಮತ್ತು ಪೇಲ್ಮನೆಯ ಸದಸ್ಯರಾಗಿರುವ ಶ್ರೀ|| ದತ್ತೋಪಂತ ಬೆಳವಿಯವರು ಮಾತಿನ ಭರದಲ್ಲಿ ನಮ್ಮ ಕಂದಾಯ ಮಂತ್ರಿಗಳಿಗೆ "ಕಾಡು ಪಶು"ಗಳೆಂದು ಅಧಿಕ್ಷೇಪಿಸಿದ್ದು ಸಭೆಯ ರೀತಿ-ನೀತಿಗಳಿಗೆ ವಿರುದ್ಧವಾದದ್ದೆಂಬದು ನಿಜ ಆದರೆ ಒಕ್ಕಲತನದ ಕಾನೂನಿನ ಅಧೋತೆಯಿಂದ ಉಂಟಾದ ದುರವಸ್ಥೆಯ ವಿಚಾರ ಮಾಡಿದರೆ ಶ್ರೀ|| ಬೆಳವಿಯವರ ಬಾಯಿಂದ ಹೊರಬಿದ್ದ ವಿಶೇಷಣ ಅಪ್ರಶಸ್ತವೆಂದು ಹೇಳಬರಲಾರದು ವಿಚಾರಹೀನರಾಗಿ, ವಿಕಾರವಶರಾಗಿ, ನ್ಯಾಯ ರೀತಿಗಳನ್ನು ಅಲಕ್ಷಿಸಿ, ಒಕ್ಕಲಿಗರಿಗೆ ಮುದ್ದು ಮಾಡಿ ಒಡೆಯರನ್ನು ದಣಿಸುವದು ಪಶುತುಲ್ಯ ಆಚಾರವೆಂದು ವಿಚಾರವಂತರು ಒಪ್ಪಲೇಬೇಕು ಸರಕಾರವು ಒಕ್ಕಲತನದ ಕಾನೂನಿನ ಕಕ್ಷೆಯೊಳಗಿಂದ ೧೫ ಎಕರೆಗೆ ಮಿಕ್ಕಿ ಭೂಮಿಯುಳ್ಳ ಒಡೆಯರನ್ನು ತಪ್ಪಿಸಬೇಕು ಅವರಿಗೆ ಒಕ್ಕಲಿಗರೊಡನೆ ಸ್ವತಂತ್ರವಾಗಿ ವ್ಯವಹಾರ ಮಾಡಲು ನಿರ್ಬಂಧವಿರಕೂಡದು ಈ ಒಡೆಯರಿಗೆ ಸ್ವಂತ ಜೀವನ ನಡಿಸಿಕೊಂಡು ಹೋಗುವದು ಈಗಿನ ದಿನಮಾನದಲ್ಲಿ ಸಂಕಟಕಾರಕವಿದೆ ಒಕ್ಕಲಿಗರನ್ನು ದಣಿಸುವ ಸಾಮರ್ಥ್ಯ ಇವರಲ್ಲಿ ಇಲ್ಲ

* * *

ಗಾಂಧಿ ಜಯಂತಿಯ ಪ್ರೀತ್ಯರ್ಥ ಗ್ರಾಮೋದ್ಧಾರದ ಜಾಹೀರಾತುಗಳು ಅಲ್ಲಲ್ಲಿ ಹಚ್ಚಲ್ಪಟ್ಟಿವೆ ನಮ್ಮ ಜಿಲ್ಹೆಯೊಳಗೆ ಗ್ರಾಮೋದ್ಧಾರವಾಗಬೇಕಾದರೆ ಸರಕಾರವು ಒಂದು ಯೋಜನೆಯನ್ನು ತಯಾರಿಸುವದು ಅಗತ್ಯವುಂಟು ಗ್ರಾಮಗಳು ನಿರ್ಜನವಾಗಲು ಅಲ್ಲಿಯ ಹವಾಮಾನ ಮುಖ್ಯ ಕಾರಣ ನೆರೆಹೊರೆಯಲ್ಲಿರುವ ಅಡವಿ-ಪ್ರದೇಶದ ಮೂಲಕ ಚಳಿಜ್ವರ ಹಬ್ಬಿ ಜನರಿಗೆ ಕ್ಷೇಮ ಜೀವನ ಮಾಡಲು ಸಾಧ್ಯವಿಲ್ಲ. ಡಿ, ಡಿ, ಟಿಯ ಪ್ರಯೋಗದಿಂದ ಹಳ್ಳಿಗಳಲ್ಲಿ ಹಬ್ಬುತ್ತಿರುವ ರೋಗದ ವಾತಾವರಣ ಕುಗ್ಗಿಲ್ಲ ರೋಗಿಗಳಿಗೆ ಉಪಚಾರ ಪಡೆಯಲು ಯಾವದೇ ಅನುಕೂಲತೆಗಳಿಲ್ಲ ಸರಕಾರವು ಸ್ಥಾಪಿಸಿದ ಹಳ್ಳಿ-ಚಿಕಿತ್ಸಾಲಯಗಳಲ್ಲಿ ಡಾಕ್ಟರಿದ್ದರೆ ಔಷಧವಿಲ್ಲ! ಔಷಧಗಳಿದ್ದರೆ ಡಾಕ್ಟರಿಲ್ಲ! ಗರ್ಭಿಣಿಗಳ ಸುಖಪ್ರಸವವಾಗುವದು ದುರ್ಘಟವಾದದ್ದು ಸರಿತ ಇಲ್ಲವೆ ತಜ್ಞ ಸೂಲಗಿತ್ತಿಗಳಪೂರೈಕೆ ಇಲ್ಲದ್ದರಿಂದ ಎಷ್ಟೋ ಬಾಣಂತಿಗಳಿಗೆ ಕಷ್ಟವಾಗಿ ಅವರು ಅಪಮೃತ್ಯುಗಳಿಗೀಡಾದ ಉದಾಹರಣೆಗಳುಂಟು ಹಳ್ಳಿಗಳಲ್ಲಿ ಎಷ್ಟೋ ಕೆರೆಗಳುಂಟು ಈ ಕೆರೆಗಳ ನೀರಿನ ಬಗ್ಗೆ ಸರಕಾರವು ಹಿಂದಿನಿಂದ ನೀರ-ತೆರಿಗೆಯೆಂದು ಆಕರಿಸಿ ಹೆಚ್ಚಿನ ಭೂಕಂದಾಯ ವಸೂಲ ಮಾಡುತ್ತಿದೆ ಆದರೆ ಆ ಕೆರೆಗಳಿಗೆ ಆಗಾಗ ದುರುಸ್ತಿ ಮಾಡುವ ವ್ಯವಸ್ಥೆ ಮಾತ್ರ ಇಲ್ಲ! ಆದರಿಂದ ಅವುಗಳಿಂದ ತಕ್ಕಷ್ಟು ನೀರು ಬೇಸಾಯಕ್ಕೆ ಸಿಗದೆ ನಷ್ಟವಾಗುತ್ತಿದೆ ಕೆರೆಯಲ್ಲಿದ್ದ ನೀರೂ ನಾರಿ, ಅದರಲ್ಲಿ ಕ್ರಿಮಿ ಕೀಟಕಗಳಾಗಿ ರೋಗ ಉದ್ಭವಿಸುತ್ತಿದೆ ಗಾಂಧೀ-ಜಯಂತಿಯ ಉತ್ಸವ ಕಾಲಕ್ಕೆ ಗ್ರಾಮಗಳನ್ನು ಸ್ವಚ್ಛಗೊಳಿಸಿದ ಮಾತ್ರಕ್ಕೆ ಗ್ರಾಮಗಳ ಸ್ವಚ್ಛತೆಯಾಗಲಾರದು ಗ್ರಾಮಗಳ ಉದ್ಧಾರವಾಗಬೇಕಾದರೆ, ಗ್ರಾಮಗಳಲ್ಲಿ ಜನವಸತಿ ನೆಲಿಸಬೇಕಾದರೆ, ಗ್ರಾಮಗಳು ಜನರಿಂದ ನಲಿಯಬೇಕಾದರೆ ಜನಾರೋಗ್ಯಕ್ಕೆ ಭಂಗ ತರುತ್ತಿರುವ ಕಾರಣಗಳನ್ನು ಪರಿಶೋಧಿಸಿ, ಸರಕಾರವು ಮೊಟ್ಟಮೊದಲು ಅವನ್ನು ಪರಿಹರಿಸಬೇಕು ಜನತಾ ಸರಕಾರದಿಂದ ಜನರು ಜನಹಿತದ ಸಕ್ರಿಯ ಯೋಜನೆಗಳನ್ನು ಅಪೇಕ್ಷಿಸುತ್ತಾರೆ ಮಹಾತ್ಮರಾದರೂ ಅದೇ ವಿಚಾರದವರಿದ್ದರು ಬರೇ ಜಾಹೀರಾತುಗಳಿಂದ ಗ್ರಾಮಗಳ ಉದ್ಧಾರವಾಗಲಾರದು ಸರಕಾರವು ನಿಜವಾದ ಕಾರ್ಯಕಾರಿ ಯೋಜನೆಯನ್ನು ಕೈಕೊಂಡು ಪುರಸ್ಕರಿಸತೊಡಗಿದರೆ ನಮ್ಮ ಜಿಲ್ಹೆಯವರು ಸರಕಾರದೊಡನೆ ಸಂಪೂರ್ಣವಾಗಿ ಸಹಕರಿಸುವರು

* * *

ನಮ್ಮ ಮುಂಬಯಿ ಸರಕಾರವು ಒಕ್ಕಲಿಗರಿಂದ ಒಡೆಯರು ಪಡೆಯತಕ್ಕ ಗೇಣಿಯನ್ನು ನಗದಿಯಿಂದ ಪಡೆಯುವಂತೆ ಏರ್ಪಾಟು ಮಾಡುವ ವಿಚಾರದಲ್ಲಿ-ಟು ಕಾಳಿನ ದರದಲ್ಲಿ ಒಡೆಯರಿಗೆ ವಿನಾ ದರೊ ಪ್ರಯೋಜನ ಸಿಕ್ಕಿದರೆ ಪಾತಕವಾದೀತೆಂದು ಸರಕಾರವು ಅಂಜುತ್ತಿದೆ! ಇಂಥ ಸಮಯದಲ್ಲಿ ಮಹಾತ್ಮರ "ಹರಿಜನ" ಪತ್ರಿಕೆಯಾ ಶ್ರೀ ಕಿಶೋರಿಲಾಲ ಮಶ್ರುವಾಲಾರವರು ಭೂಕಂದಾಯವನ್ನು ಸರಕಾರವು ಕಾಳಿನ ರೂಪದಲ್ಲಿ ಪಡೆಕೊಳ್ಳಬೇಕೆಂದೂ, ಒಕ್ಕಲಿಗರು ಒಡೆಯರಿಗೆ ಕಾಳಿನ ರೂಪದಿಂದ ಗೇಣಿಯನ್ನು ಕೊಡಬೇಕೆಂದೂ ಪ್ರತಿಪಾದಿಸಿದ್ದಾರೆ ಈ ಪದ್ಧತಿ ನಾಡಿನೊಳಗೆ ರೂಢವಾದಲ್ಲಿ ದೇಶದೊಳಗೆ ಹುಟ್ಟುವ ಕಾಳಿನ ಕೆಲವು ಅಂಶ ಸರಕಾರದ ಕಡೆಗೆ, ಕೆಲವು ಒಡೆಯರ ಕಡೆಗೆ ಮತ್ತು ಕೆಲವು ಒಕ್ಕಲಿಗರ ಕಡೆಗೆ ಹಂಚಿ ಹೋಗುವದರಿಂದ ದೇಶದೊಳಗಿನ ಸಾಂಪತ್ತಿಕ ಸ್ಥಿತಿ ಸಮತೋಲವಾಗಿರಲು ಅನುಕೂಲವಾಗುವದೆಂದೂ ಶ್ರೀ|| ಮಶ್ರುವಾಲಾರವರು ಅಭಿಪ್ರಾಯ ಪಡುತ್ತಾರೆ

* * *

ಅಂಕೋಲಾ ತಾಲೂಕಿನ ಹಿಲ್ಲೂರಿನಲ್ಲಿ ಸುಮಾರು ೩೨೦ ಎಕರೆ ಭೂಮಿಯನ್ನು ಸಾಗುವಳಿಯಲ್ಲಿ ತರುವ ಉದ್ದೇಶದಿಂದ ಸರಕಾರವು ರೂ ೬೦೦೦೦ಗಳ ಮಟ್ಟಿಗೆ ಹಣ ಖರ್ಚು ಮಾಡಲು ತಯಾರಾಗಿ, ಅದರಂತೆ ಸುಮಾರು ೩೮ ಕುಟುಂಬಗಳಿಗೆ ಈಗಾಗಲೇ ೧೫೦ ಎಕರೆ ಭೂಮಿಯನ್ನು ಹಂಚಿ, ಸಾಗುವಳಿ ಕೆಲಸ ಮಾಡಿಸಿದೆ ಒಬ್ಬೊಬ್ಬರಿಗೆ ಸರಾಸರಿ ರೂ ೬೦೦-೭೦೦ರ ಮಟ್ಟಿಗೆ ಸರಕಾರವು ಹಣ ಕೊಟ್ಟಿದೆ ಈ ಹಣದಲ್ಲಿ ಬಹು ಭಾಗವನ್ನು ದೇಶಭಕ್ತಿಯ ಸೋಗು ಹಾಕಿಕೊಂಡ ಮಧ್ಯಸ್ಥರು ನುಂಗಿರುವರೆಂದು ಒಂದು ಲೋಕಪ್ರವಾದವುಂಟು ಸರಕಾರದ ಯೋಜನೆಯಂತೆ ಊರೊಳಗಿನ ಗಿಡಗಂಟಿಗಳನ್ನು ತೆಗೆದಿರುವದಿಲ್ಲ ಬಾವಿಗಳನ್ನು ತೋಡಿರುವದಿಲ್ಲ, ಮನೆಗಳನ್ನು ಕಟ್ಟಿಸಿರುವದಿಲ್ಲ ಇವೇ ಮೊದಲಾದ ದೂರುಗಳು ಕೇಳಬರುತ್ತಿವೆ ಸರಕಾರವು ಹಂಚಿಕೊಟ್ಟ ೧೫೦ ಎಕರೆ ಭೂಮಿಯಲ್ಲಿ ಬರೇ ೫೦ ಎಕರೆ ಭೂಮಿ ಮಾತ್ರ ಈ ವರ್ಷ ಬೆಳೆಯಾಗಿರುವದೆಂದೂ ಅದು ಸಹ ಕನಿಷ್ಠ ತರಗತಿಯದೆಂದೂ ನೋಡಿದ ಜನರು ಹೇಳುತ್ತಾರೆ ಈ ಯೋಜನೆಯಂತೆ ಸಾಗುವಳಿಯಾಗುವ ಭೂಮಿಯ ಮೇಲೆ ಬೇಸಾಯ ಇಲಾಖೆಯ ಅಧಿಕಾರಿಗಳ ದೇಖರೇಖಿ ಅವಶ್ಯವುಂಟು ಹಿಲ್ಲೂರಿನ ಯೋಜನೆಯಿಂದ ವಿವೇಕ ಪುಣ್ಯಗಳ ಪರವೆಯಿಲ್ಲದ ಮಧ್ಯಸ್ಥರಿಗಷ್ಟೆ ಸರಕಾರದ ಹಣ ಎತ್ತಿಹಾಕಲಿಕ್ಕೆ ಅನುಕೂಲವಾಯಿತೆಂದು ಅಂಕೋಲಾ ತಾಲೂಕಿನ ಜನರನ್ನು ತ್ರಾಣಿ ಕೊಂಗ್ರೆಸ ಕಾರ್ಯಕರ್ತರು ಅಧಿಕಾರಿಗಳ ಮೇಲೆ ತಮ್ಮ ವರ್ಚಸ್ಸನ್ನು ಬೀರಿ ಅಯೋಗ್ಯ ಪ್ರಯೋಜನ ಪಡೆದ ಅನೇಕ ಉದಾಹರಣೆಗಳುಂಟೆಂದು "ಹರಿಜನ" ಪತ್ರಿಕೆಯಲ್ಲಿ ಶ್ರೀ|| ಕಿಶೋರಿಲಾಲ ಮಶ್ರುವಾಲಾ ಇವರು ಬರೆದಿದ್ದಾರೆ ರಾಜಾಶ್ರಯದಿಂದ ಸಾಗುವಳಿಯಾಗುವ ಭೂಮಿಯ ಉತ್ಪನ್ನದಲ್ಲಿ ರಾಜಾಂಶವೆಂದು ಷಷ್ಠಾಂಶ ಪಡೆಯುವ ಹಕ್ಕು ಸರಕಾರಕ್ಕುಂಟು ಸರಕಾರವು ಈ ಯೋಜನೆಗಾಗಿ ತಗಲಿದ ವೆಚ್ಚದ ಮತ್ತು ಈ ಯೋಜನೆಯಿಂದ ಸಾಧಿಸಿದ ಕಾರ್ಯಭಾಗಗಳ ವಿವರಗಳನ್ನು ಪ್ರಕಟಿಸುವದೊಳಿತು

* * *

ನಮ್ಮ ಜಿಲ್ಹೆಯೊಳಗೆ ಒಂದು ಕಾಗದದ ಕಾರಖಾನೆಯನ್ನು ಸ್ಥಾಪಿಸಲು ತಜ್ಞರು ತಯಾರಿಸಿದ ಯೋಜನೆಯ ವಿವರಗಳು ಹೀಗಿವೆ ಕಾಗದ ತಯಾರಿಸುವ ತಿರುಳನ್ನೂ (ಪಲ್ಪ) ಕಾಗದವನ್ನೂ ತಯಾರಿಸಲು ದಾಂಡೇಲಿಯ ಬಳಿ ಬಹಳ ಅನುಕೂಲತೆಯಿದೆ ಕಾಗದದ ಕಾರಖಾನೆ ಸ್ಥಾಪನೆ ಹೊಂದಿದರೆ ಅದಕ್ಕೆ ಪೋಷಕವಾಗಿ ಬೇರೆ ಚಿಕ್ಕ ಪುಟ್ಟ ಉದ್ದಿಮೆಗಳನ್ನು ಹೊರಡಿಸಲು ಅನುಕೂಲ ಉಂಟು ಕಾರಖಾನೆಗೆ ಬೇಕಾಗುವ ಬಂಡವಾಳದ ನಾಲ್ಕನೇ ಒಂದಂಶವನ್ನು ಪೂರೈಸಲು ಸರಕಾರದ ಮನವೊಲಿಸಬಹುದು ಪೂರ್ಣ ಕಾಗದದ ಕಾರಖಾನೆಗೆ ೧|| ಕೋಟಿಯಿಂದ ೨|| ಕೋಟಿ ರೂ ತನಕ ಬಂಡವಾಳ ತಗಲುತ್ತಿದ್ದರೂ, ಪ್ರಾರಂಭಕ್ಕೆ ತಿರುಳಿನ ಕಾರಖಾನೆಯನ್ನಷ್ಟೇ ಹೊರಡಿಸಿದರೆ ಒಮ್ಮೆಲೇ ಅಷ್ಟು ಬಂಡವಾಳ ಒಟ್ಟುಗೂಡಿಸುವದಗತ್ಯವಿಲ್ಲ ಸರಾಸರಿ ೨೪೦೦೦ ಟನ್ನ ತಿರುಳನ್ನು ಪ್ರತಿ ವರ್ಷ ತಯಾರಿಸಬಹು-

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", **KARWAR.** N. K

Offices at :— KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital .. Rs 10,00,000;
Subscribed Capital .. Rs 5,00,000,
Paid-up Capital & Reserves .. Rs. 5,08,502-8-0

Rates of Interest on Deposits

Current a/c @ 1% p. a. ***Savings Bank a/c @ 2½%***

Fixed Deposits for 3 months @ 3% per annum.
,, ,, for 6 months @ 3½% ,
,, , for 12 months or more @ 4% ,

All kinds of modern Banking business transacted

Karwar 14-2-1948 **P X GRACIOUS.** MANAGING DIRECTOR

ಬಂದು ಅಂದಾಜು ಕಟ್ಟಲಾಗಿದೆ. ಇದರಿಂದ ೩೬೦೦೦ ಟನ್ನ ಕಾಗದ ತಯಾರಿಸಬಹುದು. ಈಗಿನ ಕಾಲಮಾನದಲ್ಲಿ ಕಾಗದದ ಕೊರತೆ ದಿನಂಪ್ರತಿ ಹೆಚ್ಚುತ್ತಿದೆ. ಹಿಂದುಸ್ಥಾನದೊಳಗೆ ಹುಟ್ಟಿದ ಕಾಗದದಿಂದ ದ ಸ್ವನದ ನಿರ್ವಾಹವಾಗುವದಿಲ್ಲ. ವಿದೇಶಗಳಿಂದ ಹೇರಳ ಕಾಗದ ತರಿಸಿಕೊಳ್ಳಬೇಕಾಗುತ್ತಿದೆ. ಕಾಗದ ತಯಾರಿಸಲು ಬೇಕಾಗುವ ಬಿದಿರು ನಮ್ಮ ಜಿಲ್ಲೆಯೊಳಗಿನ ಅಂಕೋಲಾ, ಹಳಿಯಾಳ ತಾಲೂಕುಗಳಲ್ಲೂ ಸುಪಾ ಪೇಟೆಯಲ್ಲೂ ಸುಮಾರು ೨ ಲಕ್ಷ ಟನ್ನ ಸಿಗುವದೆಂದು ಮುಂಬಯಿ ಸರಕಾರವು ಪ್ರಕಟಿಸಿದೆ. ಕಾಗದದ ಒಂದು ಕಾರಖಾನೆಯನ್ನು ಸ್ಥಾಪಿಸುವ ಆಲೋಚನೆಯನ್ನು ಜಿಲ್ಲೆಯ ಕೆಲವು ಪ್ರಮುಖರು ಮಾಡಿದ್ದಾರೆ. ಜಿಲ್ಲೆಯವರು ಅವರಿಗೆ ಬೆಂಬಲ ಕೊಟ್ಟು ಕಾರಖಾನೆಗೆ ಬೇಕಾಗುವ ಭಂಡವಾಲವನ್ನು ಪೂರೈಸಬೇಕು. ನಮ್ಮ ಜಿಲ್ಲೆಯವರು ಉದಾಸೀನರಾದರೆ ಈ ಉದ್ದಿಮೆ ಜಿಲ್ಲೆಯವರ ಕೈತಪ್ಪಿ ಹೋಗುವದು. ನಮ್ಮಲ್ಲಿ ಕಾಗದದ ಉದ್ದಿಮೆ ಹೊರಟರೆ ನಮ್ಮ ಅಡವಿಗಳೊಳಗಿನ ಬಹಳಷ್ಟು ಮೊಬಲಗು ಸಾಯುವಾಗಿ ಆ ಪ್ರದೇಶ ಜನತೆಗೆ ಅನುಕೂಲವಾಗುವ ಹಾಗಿದೆ. ಉದ್ಯೋಗವಿಲ್ಲದೆ ಹೊಟ್ಟೆಪಾಡಿಗಾಗಿ ಜಿಲ್ಲೆಯವರು ದೇಶಾಂತರ ಮಾಡುವ ಪ್ರಸಂಗವೂ ತಪ್ಪುವಂತಿದೆ.

***

ಸರಕಾರವು ಆಹಾರ ಸಾಮಗ್ರಿಗಳ ಮೇಲೆ ತಿರುಗಿ ನಿಯಂತ್ರಣ ಹೇರಬೇಕೆಂದು ನಿರ್ಧರಿಸಿದೆ. ಆ ಸಂಬಂಧದ ಆಜ್ಞೆಗಳು ಸಧ್ಯಕ್ಕೇ ಹೊರಡಲಿವೆ. ನಮ್ಮ ಜಿಲ್ಲೆಯೊಳಗೆ ಅಕ್ಕಿ ಮತ್ತು ಇತರ ಆಹಾರ ಧಾನ್ಯ ಹುಟ್ಟುವ ಕ್ಷೇತ್ರ [illegible] ಎಕರೆಗಳಷ್ಟಿದೆಯೆಂದು ೧೯೪೬-೪೭ನೇ ಸಾಲಿನ ವರದಿಯಲ್ಲಿ ನಮೂದಿಸಿದೆ. ಜಿಲ್ಲೆಯ ಜನಸಂಖ್ಯೆ [illegible]ರಷ್ಟುಂಟು. ಈ ಅಂಕಿಗಳು ನಿಜವಿರುತ್ತಿದ್ದರೆ ಜಿಲ್ಲೆಯ ಜನರ ನಿರ್ವಾಹದ ಬಗ್ಗೆ ಹೊರ ಪ್ರದೇಶದಿಂದ ಅಕ್ಕಿ ತರಿಸುವ ಪ್ರಸಂಗವಿರಬಾರದು. ಒಕ್ಕಲಿಕೆಯ ಕಾನೂನಿನ ಪರಿಣಾಮವಾಗಿ ಒಕ್ಕಲಿಗರು ಬೆಳೆಯ ಪ್ರಮಾಣ ಹೆಚ್ಚಿಸಿದ್ದಾರೆಂದು ಸರಕಾರದ ಹೇಳಿಕೆಯುಂಟು. ೧೯೪೬-೪೭ನೇ ವರ್ಷದಲ್ಲಿ ಎಕರೆ ೧ಕ್ಕೆ ೩೫ ಮಣ ಭತ್ತ ಹುಟ್ಟಿತೆಂದು ಸರಕಾರದ ಪ್ರಕಟನೆಯಿತ್ತು. ೧೯೪೭-೪೮ರಲ್ಲಿ ಈ ಬೆಳೆಯ ಮಾನ ಇಳಿತ್ತು ಏನಿಸಲ್ಪಟ್ಟಿತು. ಈ ವರುಷದ ಪ್ರಯೋಗಗಳಲ್ಲಿ ಎಷ್ಟು ಬೆಳೆ ಬರುತ್ತದೆಂಬುದನ್ನು ನೋಡಬೇಕು. ಭಾರತವು ಆಹಾರದ ಮಟ್ಟಿಗೆ ಸ್ವಯಂಪೂರ್ಣವಾಗಬೇಕಾದರೆ ಈಗಿನ ಬೆಳೆಯ ೩ ಪಟ್ಟು ಬೆಳೆಯನ್ನು ಒಕ್ಕಲಿಗರು ಹುಟ್ಟಿಸಬೇಕೆಂದು ಹಿಂದುಸ್ಥಾನ ಸರಕಾರದ ಆಹಾರ-ಮಂತ್ರಿಗಳು ಹೇಳುತ್ತಾರೆ. ಮತ್ತು ಬೆಳೆಯನ್ನು ಹೆಚ್ಚಿಸುವದಕ್ಕಾಗಿ ಹಿಂದುಸ್ಥಾನ ಸರಕಾರವು ಅತಿಪ್ರಯತ್ನ ಮಾಡುತ್ತಿದೆ. ಒಕ್ಕಲತನದ ಕಾನೂನಿನ ಅಫಲತೆಯ ಪರಿಣಾಮವಾಗಿ ಬೆಳೆಯ ಮಾನ ಇಳಿದಿದೆಯೆಂಬ ಆರೋಪ ಕೇಳಬರುತ್ತಿದೆ. ಬೆಳೆಯ ಮಾನ ಕಂಡು ಹಿಡಿಯುವಾಗ ಮಾಮಲೇದಾರರು ಬೇಸಾಯ ಇಲಾಖೆಯ ಅಧಿಕಾರಿಗಳನ್ನು ಜೊತೆಗೆ ಒಯ್ಯುವಂತೆ ಸರಕಾರವು ವಿಧಿಸಬೇಕು. ಪ್ರಯೋಗಗಳ ಬಗ್ಗೆ ಹೊಲಗಳನ್ನು ಆರಿಸುವಾಗ, ಅವುಗಳ ಒಡೆಯನಾಗಲಿ ಒಕ್ಕಲಿಗನಾಗಲಿ ಸರಿಯಾಗಿ ಕೃಷಿ ಕಷ್ಟ ಮಾಡಿರುತ್ತಾನೋ ಎಂಬುದನ್ನು ಮೊಟ್ಟಮೊದಲು ನಿರ್ಧರಿಸಿಕೊಂಡು, ಆಮೇಲೆ ಬೆಳೆ ಕೊಯ್ದು ಅಳತೆ ಮಾಡಬೇಕು. ಸರಾಸರಿ ಉತ್ಪನ್ನವನ್ನು ಈಗಿನಂತೆ ನಿರ್ಧರಿಸುವ ಕ್ರಮ ಶಾಸ್ತ್ರಶುದ್ಧವಲ್ಲ. ಹೀನ ಬೆಳೆ, ಪೂರ್ಣ ಬೆಳೆ ಇವುಗಳ ಬೇರೀಜು ಮತ್ತು ಭಾಗಾಕಾರ ರಗಳೆಯಿಂದ ಸರಾಸರಿ ಬೆಳೆಯನ್ನು ಹೊರಡಿಸುವ ಕ್ರಮ ತೀರ ಅಸಂಬದ್ಧವಿದೆ. ಬೆಳೆಯ ಮಾನವನ್ನು ವಿಚಾರಿಸಿ, ಸಾಮಾನ್ಯವಾಗಿ ಒಕ್ಕಲಿಗನಿಂದ ಅಪೇಕ್ಷಿಸಬಹುದಾದ ಕೃಷಿಕರ್ಮವನ್ನು ಆತ ನಡಿಸಿದಲ್ಲಿ ಹುಟ್ಟಬಹುದಾದ ಬೆಳೆಯನ್ನು ನಿರ್ಧರಿಸಬೇಕೆಂದು ಕಾನೂನಿನ ಉದ್ದೇಶವಿದೆ. ನ್ಯಾಗಳ ತನಖೆಯಿಂದ ತಿಳಿದಿದೆ. ಉದಾಸೀನತೆಯಿಂದ ಸಾಗುವಳಿ ಮಾಡಿದ ಹೊಲಗಳನ್ನು ಬೆಳೆಯ ಪ್ರಯೋಗಕ್ಕೆ ಆರಿಸಿದರೆ ನ್ಯಗಸ್ತಿತನದ ಕೃಷಿಗೆ ಉತ್ತೇಜನ ಕೊಟ್ಟಂತಾಗುವದು. ಪ್ರಯೋಗಗಳ ಕಾಲದಲ್ಲಿ ಮಾಮಲೇದಾರ ಮಹಾಲಕರಿಗಳು ಸೋಮಾರಿ ಒಕ್ಕಲಿಗರ ಪಕ್ಷ ಹಿಡಿದು ವರ್ತಿಸಿದ ಉದಾಹರಣೆಗಳುಂಟು. ಬೆಳೆಯ ಮಾನ ಹೆಚ್ಚಿಸುವ ಒಳ್ಳೆಂದು ರಚಿಸಲ್ಪಟ್ಟ ಕಾನೂನನ್ನು ಸರಕಾರವು ಪ್ರಾಮಾಣಿಕತನದಿಂದ ಪಾಲಿಸುವದಿಲ್ಲೆಂದು ತೋರಿಸುವದಕ್ಕಿಷ್ಟು ರೀತಿಯಂತೆ ಬೆಳೆ ಬೆಳೆದ ಒಕ್ಕಲಿಗರಿಗೆ ರಾಜಾಶ್ರಯ ಸಿಗಕೂಡದು. ಹೊಸ ಕಾನೂನಿನಲ್ಲಿ, ಒಕ್ಕಲಿಗನು ಬೆಳೆಸಬೇಕೆಂದು ಗೊತ್ತುಮಾಡಿದ ಬೆಳೆಯನ್ನು ಬೆಳೆಸದಿದ್ದರೆ ಆತನ ಒಕ್ಕಲತನ ರದ್ದಾಗುವದೆಂಬುದಾಗಿ ವಿಧಿಸುವ ಕಲಮನ್ನು ಸರಕಾರವು ಬಿಟ್ಟುಬಿಟ್ಟಿದೆ! ಒಕ್ಕಲಿಗರಂತೆ ಒಡೆಯರ ಹಿತರಕ್ಷಣೆಗಾಗಿ ಈ ಕಲಮು ಅಳಿಸಲ್ಪಟ್ಟಿದೆಂದು ಕಂದಾಯ-ಮಂತ್ರಿಗಳು ಆಡಿದ ಮಾತು ಕೇಳಿ ಜನರು ಪರಿಹಾಸ್ಯ ಮಾಡುತ್ತಾರೆ. ಅಂತರಂಗದಿಂದಲೂ ಬಹಿರಂಗದಿಂದಲೂ ಒಡೆಯರ ಹಿತಘಾತ ಮಾಡಹತ್ತಿದ ಕಂದಾಯ ಮಂತ್ರಿಗಳಿಗೆ, ಒಕ್ಕಲಿಗರು ಬೆಳೆಸಬೇಕಾದ ಬೆಳೆಯನ್ನು ನಿರ್ಧರಿಸುವ ಕಲಮಿನ ವಿಚಾರದ ಕಾಲಕ್ಕೆ ಒಡೆಯರ ಹಿತದ ಸ್ಮರಣೆಯಾದದ್ದು ವಿಚಿತ್ರವೆಂದು ಜನರಾಡುತ್ತಾರೆ. ಒಕ್ಕಲಿಗನು ಕಾನೂನಿನಿಂದ ಯಾವದೇ ಬಗೆಯಿಂದ ಬದ್ಧನಾಗಿರಬಾರದು, ಆತನು ಬೆಳೆ ಬೆಳೆಸಲಿ ಯಾ ಹೊಲವನ್ನು ಹಾಳುಗೆಡಹಲಿ, ಆತನ ಹಕ್ಕು ಸುರಕ್ಷಿತವಿರಬೇಕು, ಎಂಬ ಆಲೋಚನೆಯಿಂದ ಕಂದಾಯ ಮಂತ್ರಿಗಳು ಸದರಿ ನಿರ್ಬಂಧವನ್ನು ಅಳಿದೊಗೆದಿದ್ದಾರೆಂಬದು ಸ್ಪಷ್ಟವಿದೆ. ಸಭೆಯೊಳಗೆ ಸುಳ್ಳಾಡಬಾರದೆಂಬ ಸುಭಾಷಿತ ಕಂದಾಯ ಮಂತ್ರಿಗಳಿಗೆ ಅನ್ವಯಿಸುವದಿಲ್ಲವೇನೆಂದು ಕೆಲವು ಜನರು ಕೇಳುತ್ತಾರೆ.

***

ಪ್ರಾಂತಿಕ ಸರಕಾರವು ಗ್ರಾಮೋದ್ಧಾರವನ್ನು ಸಾಧಿಸಬಯಸುತ್ತದೆ. ಆದರೆ ಗ್ರಾಮಾಧಿಕಾರಿಗಳನ್ನು ಸಂತುಷ್ಟ ಇಡಬಯಸುವದಿಲ್ಲ. ಗ್ರಾಮಾಧಿಕಾರಿಗಳು ಅಸಂತುಷ್ಟರಿರುವಾಗ ಗ್ರಾಮ ಜೀವನ ಸುಖಕರವಾಗುವದು ಕಠಿಣ. ಕಷ್ಟದಲ್ಲಿರುವ ಗ್ರಾಮಾಧಿಕಾರಿಗಳು ಗ್ರಾಮ-ನಿವಾಸಿಗಳನ್ನು ಕಷ್ಟದಲ್ಲಿ ನೂಕುವದು ಸಾಹಜಿಕ. ಗ್ರಾಮಸ್ಥರ ವೇತನ ಕೆಲಮಟ್ಟಿಗೆ ಏರಿಸಲ್ಪಟ್ಟಿದೆ ನಿಜ. ಆದರೆ ಆ ಏರಿಕೆ ತಕ್ಕಷ್ಟಿಲ್ಲೆಂಬ ದೂರುಂಟು. ಆ ಏರಿದ ಸಂಬಳ ಸಹ ಅವರ ಕೈಯಲ್ಲಿ ಬೀಳಲೊಲ್ಲದು! ಉಗ್ರಾಣಿಗಳ ಸ್ಥಿತಿಯಂತೂ ತೀರ ಕರುಣಾಸ್ಪದವಾಗಿದೆ. ೨೪ ತಾಸು ದುಡಿದರೂ ಅವರ ಕೆಲಸ ತೀರುವದಿಲ್ಲ! ಆದರೂ ಕೆಲವೇ ಹೊತ್ತು ದುಡಿಯುವ ನೌಕರರೆಂದು ಅವರನ್ನೆಣಿಸಿ, ಸರಕಾರವು ಅವರ ಕೆಲಸಕ್ಕೆ ತಕ್ಕ ಸಂಬಳವನ್ನು ಕೊಡುವದಿಲ್ಲ! ಗೇಣಿ ಬಾಕಿ ದಾವೆ, ಮಹಿವಾಟಿ ದಾವೆ, ಮುಂತಾದ ದಾವೆಗಳಲ್ಲಿ ಸರಕಾರವು ನೋಟೀಸ ಜಾರಿ ಮಾಡುವ ಶುಲ್ಕವನ್ನು ವಸೂಲ ಮಾಡುತ್ತದೆ. ಈ ನೋಟೀಸುಗಳನ್ನು ಜಾರಿ ಮಾಡುವ ಕೆಲಸ ಉಗ್ರಾಣಿಗಳದಲ್ಲ. ಆದರಿಂದ ಹಿಂದೆ ಕೆಲ ಕಾಲ ಈ ನೋಟೀಸುಗಳನ್ನು ಜಾರಿ ಮಾಡಲು ಬೇರೆ ಜನರನ್ನು ನೇಮಿಸಿಕೊಳ್ಳುತ್ತಿದ್ದರು. ಆ ಕ್ರಮವನ್ನು ಈಗ ಸರಕಾರವು ನಿಲ್ಲಿಸಿ ಉಗ್ರಾಣಿಗಳ ಕಡೆಯಿಂದ ಈ ಕೆಲಸ ಪುಕ್ಕಟೆಯಾಗಿ ಮಾಡಿಸಿಕೊಳ್ಳುತ್ತಿದೆ! ಪಕ್ಷಗಾರರಿಂದ ವಸೂಲಾದ ಭತ್ತೆಯ ಮೊಬಲಗಿನೊಳಗಿಂದ ಹೆಚ್ಚಿನ ಅಂಶ ಉಗ್ರಾಣಿಗಳಿಗೆ ಸಲ್ಲಬೇಕು. ಈಗಿನ ಕಠಿಣ ದಿನಮಾನದಲ್ಲಿ ತಾವೂ ಬಡವರ ಬಂಧು ಎಂದು ಬಡಿವಾರ ಬಡಿಯುವ ಸರಕಾರವು ಬಡ ಉಗ್ರಾಣಿಗಳನ್ನು ಅನ್ಯಾಯದಿಂದ ನಡಿಸಿಕೊಳ್ಳಬಾರದೇ? ಇಂಜಿನೀರ ಖಾತೆಯವರು ತಮ್ಮ ದಿನಗೂಲಿಯ ಆಳುಗಳಿಗೆ ಕೂಡ ತುಟ್ಟಿ ಭತ್ತೆ ಕೊಡುವ ಏರ್ಪಾಟು ಮಾಡಿದ್ದಾರೆ. ಈ ಆಳುಗಳಿಗೆ ದಿನದ ಸಂಬಳ ೭ ಆಣೆ, ತುಟ್ಟಿ ಭತ್ತೆ ೧೭ ಆಣೆ, ಹೀಗೆ ಪ್ರತಿ ದಿನ ತಲಾ ರೂ ೧|| ರಂತೆ ಸಂಬಳ ಸಿಗುತ್ತದೆ. ಉಗ್ರಾಣಿಗಳು ಈ ದಿನಗೂಲಿಯ ಆಳುಗಳಿಗಿಂತ ಹೀನರಲ್ಲ. ಅವರು ಮಾಡುವ ಕೆಲಸ ಗ್ರಾಮದ ಆಡಳಿತೆಯ ತಳಹದಿಯಾಗಿರುತ್ತದೆ. ಅವರು ಪ್ರಾಮಾಣಿಕತನದಿಂದಲೂ ತತ್ಪರತೆಯಿಂದಲೂ ದುಡಿದರೆ ಮಾತ್ರ ಜನತಾ ಸರಕಾರದ ರಾಜ್ಯದಾಡಳಿತೆಯು ಹಳ್ಳಿಯ ಜನತೆಗೆ ಸುಖಕರವಾಗಬಲ್ಲದು. ಉಗ್ರಾಣಿಗಳ ವೇತನದ ಸಮಸ್ಯೆ ನಮ್ಮ ಜಿಲ್ಲೆಗೆ ಮಾತ್ರ ಅನ್ವಯಿಸುತ್ತಿದೆ. ಉಳಿದ ಜಿಲ್ಲೆಗಳಲ್ಲಿ ಇಂತಹ ನೌಕರರಿಗೆ ಉಂಬಳಿಗಳನ್ನು ಬಿಟ್ಟಿದ್ದುಂಟು. ನಮ್ಮ ಜಿಲ್ಲೆಯೊಳಗೆ ೭೦೦ ಮಂದಿ ಉಗ್ರಾಣಿಗಳಿದ್ದಾರೆ. ಇವರು ಮಾಡುವ ಕೆಲಸದಿಂದ ಸರಕಾರಕ್ಕೆ ಸಿಗುವ ಪ್ರಾಪ್ತಿಯ ವಿಚಾರ

ತಾಯಿಯ ಆರೋಗ್ಯಕ್ಕಾಗಿ

ಸಾಂಡೂ

ಬಾಳಂತಕಾಢಾ

ಬಾಳಂತಿಯರ ನಲುವಾಗಿ ಉತ್ತಮ



ಡಿ. ಕೆ. ಸಾಂಡೂ ಬ್ರದರ್ಸ್ ... ಮುಂಬಯಿ

ಕರ್ನಾಟಕ ಶಾಖೆ —
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಮಾಡಿದರೂ ಪ್ರತಿ ಉಗ್ರಾಣಿಗೆ ದಿನ ೧ಕ್ಕೆರೂ ೩ರಂತೆ ವೇತನ ಕೊಡಲಿಕ್ಕಿಯಿಲ್ಲ ಸರಕಾರವು ಉಗ್ರಾಣಿಗಳಿಗೆ ಪೀಡಿಸಿದರೆ ಕ್ಷೇಮವಾಗುವಂತಿಲ್ಲ ಸಂಸಾರಕ್ಕೆ ಸಾಕಷ್ಟು ಪ್ರಾಪ್ತಿ ನೀತಿಯಿಂದ ಸಿಗದಿದ್ದರೆ ಉಗ್ರಾಣಿಗಳು ಅನೀತಿಯ ಮಾರ್ಗವನ್ನು ಅನುಸರಿಸುವರೆಂಬುದು ಸಹಜ ಹಾಗಾದರೆ ರಾಜ-ಪ್ರಜೆಗಳು ಭಯತರಿಗೂ ಹಾನಿಯಾಗುವದು ಸರಕಾರವು ಗ್ರಾಮಾಧಿಕಾರಿಗಳನ್ನು ಸಂತೈಸುವ ಕ್ರಮವನ್ನು ತ್ವರ್ಯವೇ ಕೈಕೊಳ್ಳಬೇಕು

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಸಂಕಂತಿಯೇ ಸರಿ ಹಗಲು ಚಳಿಯೇ ಕಳೆಯಾಗುತ್ತಿದೆ, ರಾತ್ರಿಯಲ್ಲಿ ಮಂಜು ಬೀಳುತ್ತಿದೆ ಕೆಲವು ಕಡೆ ಮಾತ್ರ ಗದ್ದೆ ಕೊಯಲು ಈಗಾಗಲೇ ಆಗಿದೆ ಸರ್ವಸಾಮಾನ್ಯ ಕೊಯಲಿಗೆ ಮುಹೂರ್ತ ಸುಮಾರಿಗೆ ಪ್ರಾರಂಭವಾಗುವದಂತೆ

ಕಳೆದ ತಾ ೧೧ರಿಂದ ಹಿಂದಿನ ಸೀಘಾ-ಚೀಟಿಗಳು ರದ್ದಾಗಿವೆ ಸೀಘಾ-ಚೀಟಿಗಳುಳ್ಳವರು ಪುನಃ ತಮ್ಮ ಚೀಟಿಗಳ ವಾಯಿದೆ ಬೆಳಸಿಕೊಳ್ಳಬೇಕಂತೆ. ಆದರೆ ಎಲ್ಲರಿಗೂ ಅಧಿಕಾರಿಗಳು ವಾಯಿದೆ ಬೆಳಸಿಕೊಡುವದಿಲ್ಲ ೧೧ರಂತೆ ತಿಂಗಳಿಗೆ ಚೀಟಿದಾರರಿಗೆ ಸೀಘಾ ಧಾನ್ಯ ಸಿಗದಿದ್ದರೆ ಅವರು ಗುರಿಯಾಗುವರೆಂದು ತಿಳಿದಿರುವ ಜನರು ಗಷ್ಟೇ— ವಾಯಿದೆ ಬೆಳಸಿ ಕೊಡಬೇಕೆಂದು ಜಿಲ್ಲಾಧಿಕಾರ ಆಜ್ಞೆಯಾಗಿದೆಯಂತೆ

ಸಮುದ್ರದಲ್ಲಿ ಮಳೆಯಾಗುವ ಲಕ್ಷಣಗಳು ತೋರಿಬಂದದ್ದರಿಂದ ಬಿ ಎಸ್ ಎನ್ ಕಂಪನಿಯ ಮುಂಬಯಿ-ಮಂಗಳೂರ ಆಗಬೋಟುಗಳ ಓಡಾಟಕ್ಕೆ ಇನ್ನೂ ಪ್ರಾರಂಭವಾಗಿಲ್ಲ ಗುರುವಾರ ತಾ ೨೧-೧೦ ಆದಿಂದ ಅವು ಹೊರಡುವವೆಂದು ತಿಳಿಯುತ್ತದೆ

ಈ ಪಾರ ಅಲ್ಲಲ್ಲಿಯ ಶಾಲೆಗಳಲ್ಲಿ ಶಾರದಾ-ಪೂಜೆಯ ಸಂಭ್ರಮಗಳಾಗಲಿವೆ. ಕೆಲವು ಕಡೆ ೧-೨ ದಿನದ ಕಾರ್ಯಕ್ರಮಗಳಿದ್ದರೆ, ಕೆಲವು ಕಡೆ ೩-೪ ದಿನದ ಕಾರ್ಯಕ್ರಮಗಳುಂಟು. ಹುಡುಗರ ವಿನೋದಾವಳಿಗಳು, ನಾಟಕಗಳು ಮೊದಲಾದ ಕಾರ್ಯಕ್ರಮಗಳಿಟ್ಟುಕೊಂಡಿದ್ದಾರೆ ೯ರಿಕೇಟಿಗೆ ವಿಶ್ವ ಬಾಲಕಾಲಯದವರು ಇದರಿಂದ ಹಿಸ್ಸೆ ವರಿಗೂ ಉತ್ಸವ ಮಾಡುವರಂತೆ ಮಿಡಲ್ ಸ್ಕೂಲ ಶಾಲೆಯಲ್ಲಿ ದಸರೆಯ ದಿನ ಉತ್ಸವವಾಗುವದು. ರಾ ಕೆಕ್ಕಾರ ಗಣೇಶಭಟ್ಟರು ಅಧ್ಯಕ್ಷರಾಗಲು ಒಪ್ಪಿರುವರಂತೆ

ಒಕ್ಕಲುತನದ ಕಾನೂನಿನ ಅಂಶಗಳನ್ನು ೧೮ ಎಕರೆಗಳಿಗಿಂತ ಕಡಿಮೆ ಭೂಮಿ ಧಾರಣ ಮಾಡುವ ಬಡ ಜನರಿಗಾದರೂ ಅನ್ವಯಿಸಬೇಡಿರೆಂದೂ, ಹಾಗೆ ಹೊಸ ಕಾನೂನಿನಲ್ಲಿ ತಿದ್ದುಪಡಿ ಮಾಡಿರೆಂದೂ ಜಿಲ್ಲಾ ಕೋಂಗ್ರೆಸದಿಯ ಶಿಂಧಿದವರು ಮುಂಬಯಿ ಸರಕಾರಕ್ಕೆ ಮುಂಬಯಿ ಕಾನೂನಿನ ಮಂಡಳದ ಸೋಲ್ಪನೆಯ ಕೆಲವು ಪ್ರಮುಖ ಸದಸ್ಯರಿಗೂ ತಂತಿಯಿಂದ ಬಿನ್ನವಿಸಿದ್ದಾರೆ.

ಗಾಂಧೀ-ಜಯಂತಿಯ ದಿನ ಕಡಮೆ ಗ್ರಾಮದವರು ತಮ್ಮಲ್ಲಿ ಒಂದು "ಗಾಂಧಿ ಸಾರ್ವಜನಿಕ ವಾಚನಾಲಯ" ಎಂಬ ಹೆಸರಿನ ವಾಚನಾಲಯವನ್ನು ತೆರೆದಿದ್ದಾರೆ.

ನಾಡುಮಾಸ್ಕೇರಿಯಲ್ಲಿ ಶಾಲೆಯವರೂ ಊರ ಜನರೂ ಕೂಡಿ ತಾ. ೨ಕ್ಕೆ ಗಾಂಧಿ-ಜಯಂತಿ ಉತ್ಸವವನ್ನು ಗ್ರಾಮ ಸುಧಾರಣಾ ಸಪ್ತಾಹದ ಪ್ರಾರಂಭವನ್ನು ಮಾಡಿದ ವರದಿ ಬಂದಿದೆ.

ಹಿಯಂತ್ರಿತ ಪದಾರ್ಥಯನ್ನು ಮಾರಲು ಪರವಾನಿಗೆದಾರ ಹಾಕುತ್ತಾ ತಾಲೂಕಿನಲ್ಲಿ ೫ ಅಂಗಡಿಗಳಿನ್ನು ತೆರೆಯಲಿದ್ದರೆ ಅವುಗಳಲ್ಲಿ ೪ ಅಂಗಡಿಗಳು ತಾಲೂಕಿನ ದಕ್ಷಿಣ ಭಾಗದಲ್ಲಿ ತೆರೆಯಲ್ಪಡುತ್ತವೆ, ೧ ಅಂಗಡಿ ಜನತ್ತ ಗೋಕರ್ಣದಲ್ಲಿರುವದು ಗೋಕರ್ಣದಿಂದ ಉತ್ತರಕ್ಕೆ ೧೧ಂಗಾವಳಿ ಪೂರ್ವಕ್ಕೆ ಮಾದನಗೇರಿ ಮತ್ತು ದಕ್ಷಿಣಕ್ಕೆ ತದಡಿ ವರೆಗಿನ ವಿಶಾಲ ಸೀಮೆಯವರು ಈ ಒಂದೇ ಅಂಗಡಿಯಿಂದ ನಿರ್ವಾಹ ಮಾಡಿಕೊಳ್ಳುವದು ಕಠಿಣವೆಂದೂ ಬಂಕಿಕೊಡ್ಲದಲ್ಲಿ ಇನ್ನೊಂದು ಅಂಗಡಿಯನ್ನಿಟ್ಟರೆ ಜನರಿಗೆ ಅನುಕೂಲವಾಗುವದೆಂದೂ ಜನರೂ ತಮ್ಮ ಬಂಕಿಕೊಡ್ಲ ಜನರು ಜಿಲ್ಲಾಧಿಪರಿಗೆ ಅರಿಕೆ ಮಾಡಿಕೊಂಡಿದ್ದಾರೆ

ಹೊನ್ನಾವರ— ಗೇರಸೊಪ್ಪೆಯ ಕಡೆಗಿನ ಬಂಯಲ್ಲಿರುವ ವಿದ್ಯುತ್-ಕಾರಖಾನೆಯವರು ೧೯೪೭ರ ಮಳೆಗಾಲದ ನಂತರ ತಮ್ಮ ಜಲಾಶಯದೊಳಗಿಂದ ಬಿಟ್ಟುಕೊಟ್ಟ ಉಳಕ ನೀರಿನ ಪ್ರವಾಹದಿಂದ ಶರಾವತೀ ನದಿಯ ದಂಡೆಗುಂಟ ಇರುವ ಹಳ್ಳಿಗಳಿಗೆ ಆದ ಹಾನಿಯ ಕೆಲವು ವಿವರಗಳು ತಾ. ೧೭-೧೧-೪೭ರ "ವೃತ್ತ"ದಲ್ಲಿ ಪ್ರಕಟವಾಗಿವೆಯಷ್ಟೇ "ವೃತ್ತ"ದೊಳಗಿನ ಸದರಿ ಟೀಕೆಯ ಕಡೆ ಮೈಸೂರು ಸರಕಾರದ ಲಕ್ಷ ಹೋಗಿರುತ್ತದೋ ಹೇಗೆ? ಹೋಗಿದ್ದರೆ ಸರಕಾರವು ಸದರಿ ಪ್ರವಾಹದಿಂದ ಹಾನಿಗೊಂಡ ಜನರಿಗೆ ಏನು ಪರಿಹಾರ ಕೊಟ್ಟಿದೆ? ಎಂದು ಮೇಲ್ಮನೆಯ ಸದಸ್ಯ ಶ್ರೀ ಗೋವಿಂದರು ಕೇಳಿದ ಪ್ರಶ್ನೆಗೆ ಸರಕಾರಕ್ಕೆ ಒಂದು ಪ್ರಶ್ನೆ ಕೇಳಿದ್ದರು. ಆ ಪ್ರಶ್ನೆಗೆ ಮುಖ್ಯ ಮಂತ್ರಿಗಳವರು ಮಾನ್ಯ ಖೇರರವರು ಕೊಟ್ಟ ಉತ್ತರ ಕೆಳಗಿನಂತಿದೆ — (೧) "ಕಾನಡಾವೃತ್ತ"ದೊಳಗಿನ ವರದಿಯನ್ನು ಸರಕಾರವು ನೋಡಿದೆ (೨) ಕಾರಖಾನೆಯವರು ಬಿಟ್ಟ ನೀರಿನ ಪ್ರವಾಹದಿಂದ ಹೊಳೆಯ ಅಂಚಿಗಿರುವ ಗ್ರಾಮಗಳಿಗೆ ೧೯೪೭ರ ಸಗಳಿಗೆ ನಷ್ಟವಾಗಿದೆ (೩) ಯೋಗ್ಯ ಮರ್ಯಾದೆಯ ವರೆಗೆ (to a reasonable extent) ಕೆರೆಯಲ್ಲಿ ಸೂಟು ಕೊಟ್ಟು ಹಾನಿಗೊಂಡ ರೈತರಿಗೆ ನಷ್ಟ ತುಂಬಿಕೊಡಬೇಕೆಂದು ಸರಕಾರದ ಸೂಚನೆಯಾಗಿದೆ ಹಾನಿಗೊಂಡ ಜನರಿಗೆ ನಷ್ಟ ತುಂಬಿ ಕೊಡಲು ಮೈಸೂರ ಸರಕಾರಕ್ಕೂ ಬಿನ್ನವಿಸಿದ್ದೇವೆ (೪) ಇನ್ನು ಮುಂದೆ ಹೊಸ್ತಾ ವರ ಮಾಮಲೇದಾರರಿಗೆ ಮುಂಚಿತವಾಗಿ ತಿಳಿಸದೆ ಒಮ್ಮೆಲೇ ನೀರು ಬಿಡಬಾರದೆಂದು ಜೋಗ-ವಿದ್ಯುತ್-ಕಾರಖಾನೆಯ ಇಂಜನಿಯರರಿಗೆ ನಿರ್ಧರಿಸಬೇಕೆಂದು ಮೈಸೂರ ಸರಕಾರಕ್ಕೆ ಸೂಚನೆ ಕೊಟ್ಟಿದ್ದೇವೆ ಹೊಳೆಯ ದಂಡೆಗಳ ಮೇಲಿರುವ ಜನರಿಗೂ ಅಗ್ರಿಗೂ ಅಪಾಯವಾಗುವಂತೆ ನೀರು ಬಿಡುವದನ್ನು ತಪ್ಪಿಸಬೇಕೆಂದೂ ತಿಳಿಸಿದ್ದೇವೆ

ಸಂತಿಯ ಉದರ ಶಾಲೆಯಲ್ಲಿ ಈಗ ೧೫೦ ಮಕ್ಕಳು ಕಲಿಯುತ್ತಾರೆಂದೂ, ಈ ಮಕ್ಕಳಿಗೆ ಮುದ್ದಾಮ ಕಲಿಸುವದು ೩ ಮಂದಿ ಶಿಕ್ಷಕರಿಂದ ಅಶಾಧ್ಯವಿರುತ್ತದೆಂದೂ ತಂತಿಯ ಮುಖಿಲಿನ ಅಧ್ಯಕ್ಷರು ಹೇಳುತ್ತಾರೆ

ಮುರುಡೇಶ್ವರ— (ತಾ ೮-೧೦-೪೮) ಇಲ್ಲಿಯ ಗಂಡು ಮಕ್ಕಳ ಶಾಲೆಯವರು ಕಳೆದ ಶನಿವಾರ ಗಾಂಧಿ ಜಯಂತಿಯ ಉತ್ಸವ ಮಾಡಿದರು, ಹಾಗೂ ನಿನ್ನೆ ಈ ಶಾಲೆಯ ಶಿಕ್ಷಕರು ಶಾಲೆಯ ಮಕ್ಕಳಿಗೆಲ್ಲ ಬಸ್ತಿಯಲ್ಲಿರುವ ಹರಿಜನರ ಕೇರಿಗೆ ಕರೆಕೊಂಡು ಹೋಗಿ, ಅಲ್ಲಿ ಸ್ವಚ್ಛತೆಯ ಕೆಲಸ ಮಾಡಿದರು

ಶಿಕ್ಷಕರು ಹಿನ್ನೆಯ ಕಾರ್ಯಕ್ರಮ ಕೈಕೊಳ್ಳುವಾಗ ಊರ ಪ್ರಮುಖರ ಸಲಹೆಯನ್ನಾಗಲಿ ಅನುಮತಿಯನ್ನಾಗಲಿ ಪಡೆಕೊಂಡಿದ್ದಿಲ್ಲ. ಅದರಿಂದ ಊರಲ್ಲಿ ಬಹಳ ಅಸಮಾಧಾನವುಂಟಾಗಿದೆ. ಬಾಲಕರ ತಮ್ಮ ತಾಯಿಯ್ಲಿದೆ ಅವರ ಹುಡುಗರನ್ನು ಒತ್ತಾಯದಿಂದ ಹರಿಜನರ ಕೇರಿಗೆ ಕರೆದೊಯ್ದದ್ದು ಅವರಿಗೆ ಹರಿಜನರ ಮನೆ ಹಿತ್ತಲು ಮುಂತಾದವುಗಳನ್ನು ಪಡನ ಮಾಡಿಸಿದ್ದಕ್ಕೂ ಅಸಮಾಧಾನ ಮತ್ತು ಅಶ್ರುವಿಟ್ಟಿಕ್ಕೆಂದೂ ಊರ ಪ್ರಮುಖರೆನೇಕರ ಅಭಿಪ್ರಾಯವಾಗಿದೆ ಊರ ಜನರ ಪೈಕಿ ೩-೪ ಮಂದಿ ಗೃಹಸ್ಥರು ಶಾಲಾಶಿಕ್ಷಕರಿಗೆ ಬೆಟ್ಟಿಯಾಗಿ "ಹೀಗೇಕೆ ಮಾಡಿದಿರಿ?" ಎಂದು ಕೇಳಲಾಗಿ, ಶಿಕ್ಷಕರು, "ನಾವು ಸೇರಿದ ಹುಡುಗರನ್ನು ಹರಿಜನರ ಕೇರಿಗೆ ಒಯ್ಯುತ್ತೇವೆ, ನಿಮ್ಮ ಅನುಮತಿ ಕೇಳಬೇಕೆಂದು ಕಟ್ಟಳೆಯಿಲ್ಲ" ಎಂದು ಉತ್ತರ ಕೊಟ್ಟರೆಂದು ಆ ಪ್ರಮುಖರು ಹೇಳುತ್ತಾರೆ. ಶಾಲೆಯ ಮಕ್ಕಳನ್ನು ಈ ಶಿಕ್ಷಕರ ಬಗ್ಗೆ ಅಪ್ರೀತಿಯುಂಟಾಗಿದ್ದು ಇಂಥ ಬರುತ್ತಿದ್ದ ಪಾಲಕರ ಇಚ್ಛೆಯ ವಿರುದ್ಧ ಮಕ್ಕಳಿಂದ ಕೆಲಸ ಮಾಡಿಸಿಕೊಳ್ಳುವದು ಅನುಚಿತವೆಂದು ತಿಳಿಯದಷ್ಟು ಶಿಕ್ಷಕರು ಮೂಢರಾದುದು ವಿಚಿತ್ರವೇ ಸರಿ.

ಶಿರಾಲಿ— ಇಲ್ಲಿಯ ಕನ್ನಡ ಶಾಲೆಯಲ್ಲಿ ತಾ ೨ಕ್ಕೆ ಗಾಂಧಿ-ಜಯಂತಿಯ ಉತ್ಸವವಾಯಿತು ಶಿಕ್ಷಣ ವಿಭಾಗದ ಪ್ರಾಂತ ಸಾಹೇಬರೂ ಉತ್ಸವಕ್ಕೆ ಬಂದಿದ್ದರು. ರಾ ಕೇ. ಶಂಕೇಶ್ವರಾಯರು ಕೀರ್ತನ ಮಾಡಿ ಮಹಾತ್ಮರ ಗುಣಾನುವಾದ ಮಾಡಿದ್ದರಿಂದ ಉತ್ಸವ ಬಹು ಚಂದವಾಯಿತು.

ಚಿತ್ರಾಪುರ ಶಾಲೆಯಲ್ಲೂ ಸಡಗರದಿಂದ ಗಾಂಧಿ-ಜಯಂತಿಯ ಉತ್ಸವ ಮಾಡಿದರು ರಾ ಶೆಟ್ಟಿ, ಗುಲವಾಡಿ ವೆಂಕಟರಾವರು ಗಾಂಧೀಜಿಯವರ ಮಹಾತ್ಮ್ಯೆಯನ್ನು ಬಣ್ಣಿಸಿದರು

ಶಿರಾಲಿಯ ಉತ್ಸವಕ್ಕೆ ಊರ ಪ್ರಮುಖರು ಬರಲಿಲ್ಲವೆಂದು ದೂರುಂಟು. ೧೯೪೭ರ ಸ್ವಾತಂತ್ರ್ಯೋತ್ಸವದ ಕಾಲಕ್ಕೆ ಕೂಡಿಸಿದ ಹಣದ ಲೆಕ್ಕವನ್ನು ಯಾರಾದರೂ ಕೇಳ್ಯಾರೆಂಬ ಭೀತಿಯಿಂದ ಅವರು ಹಿಂದುಳಿದಿರಬೇಕೆಂದು ಅನೇಕರು ಹಾಸ್ಯ ಮಾಡುತ್ತಾರೆ!

ಭಟಕಳ— ಗಾಂಧಿ-ಜಯಂತಿಯ ಕಾಲಕ್ಕೆ "ಗ್ರಾಮ ಸುಧಾರಣಾ ಸಪ್ತಾಹ"ವನ್ನು ಆಚರಿಸಬೇಕೆಂದು ಕೆಲ ಜೀಳಲು ಜಿಲ್ಲಾಧಿಕಾರಿಗಳು ತಾ. ೨ಕ್ಕೆ ಊರ ಪ್ರಮುಖರೆಡೂಂದು ಸಭೆಯನ್ನು ಕರೆದಿದ್ದರು. ಸಭೆಯಲ್ಲಿ ಸಪ್ತಾಹದಲ್ಲಿ ಏನೇನು ಮಾಡಬೇಕು, ಮಾಡಬಹುದು ಎಂಬುದಾಗಿ ಗ್ರಾಮೋದ್ಧಾರ ಮಂಡಳಿಯಿಂದ ಬಂದ ಪರಿಪತ್ರಕವನ್ನೋದಿ ಓದಿಹೇಳಲಾಯಿತು. ಆದರೆ ಊರಲ್ಲಿ ಜಯಂತಿಯ ದಿನ ಇಲ್ಲವೆ ಅನಂತರ ವಿಶೇಷ ಕಾರ್ಯವೇನೂ ನಡೆದದ್ದು ಕೇಳಿದಲ್ಲ. ಸರಕಾರ ಛಟ್ಟಿ ಜಗಳಲ್ಲಿ ರಾಷ್ಟ್ರಧ್ವಜಗಳನ್ನು ಏರಿಸಲ್ಪಟ್ಟಿದ್ದು ಕಂಡಿತು. ಕನ್ನಡ ಶಾಲೆಯಲ್ಲಿ ಶಿಕ್ಷಕರು ಹುಡುಗರನ್ನು ಸಭೆಗಳಿಸಿ ಅವರಿಗೆ ಮಹಾತ್ಮರ ತತ್ವಗಳನ್ನು ತಿಳಿಸಿಕೊಟ್ಟರು. ಹರಿಜನ-ಸ್ವಚ್ಛತೆ ವಗೈರೆ ವಿಧಾಯಕ ಕಾರ್ಯಕ್ರಮಗಳನ್ನು ಜಾರಿಗೆ ಎಲ್ಲೂ ತಂದಿರಲಿಲ್ಲ

ಇಲ್ಲಿಯ ಮುಸಾಫಿರಖಾನೆ ಮುನಿಸಿಪಾಲಿಟಿಗೆ ಕೊಡಲು ಮಾಮಲೇದಾರರ ಕ್ಷೇಕಕ್ಕೆ ಜಾಗವಾಗಿದೆ. ಇದರಿಂದ ರಾ ಪರಿಷದವರು ಅಲ್ಲಿ ಮುನಿಸಿಪಾಲಿಟಿಗಾಗಿ ಬರುತ್ತಾರಂತೆ.

ಶಿರಸಿ— (ತಾ. ೨-೧೦-೪೮) ಬನವಾಸಿಯಿಂದ ಬಹಳಷ್ಟು ಅಕ್ಕಿಯು ಪ್ರತಿ ರಾತ್ರಿ ಎಂಬಂತೆ ಸೊರಬದ ದಿಕ್ಕಿನಿಂದ ಅಲ್ಲಿಂದ ಮುಂದೆ ಹಡಗದಿಂದ ಶಿವಮೊಗ್ಗಕ್ಕೆ ಮುಂದೆ ಗೋವೆಗೂ ಹೋಗುತ್ತದೆಂದು ಜನಪ್ರತೀತಿಯುಂಟು. ಬನವಾಸಿಯ ಮುಸಾಫರ ಮುಸಾಫರ ಕೋಂಗ್ರೆಸ ಭಕ್ತರೂ ರೈತ-ಸಂಘದ ಧುರೀಣರೂ ಸ್ಥಳೀಯ ಅಧಿಕಾರಿಗಳೂ ಈ ಅಕ್ಕಿ ವ್ಯಾಪಾರದಲ್ಲಿ ಶಾಮೀಲಾದರೆಂದು ಅಪವಾದ ಇದೆ! ಈ ಅಕ್ಕಿ ಸಾಗಣೆ ಪ್ರಾರಂಭವಾದಂದಿನಿಂದ ಬನವಾಸಿ ಸೀಮೆಯಲ್ಲಿ ಅಕ್ಕಿಯ ಧಾರಣೆ ಏರುತ್ತ ನಡೆದು, ಈಗ ಬಾಯಿಗೆ ೧೭ರ ವರೆಗೆ ಆಗಿದೆ! ಬಡ ಬಗ್ಗರು ಇದರಿಂದ ಕಂಗಾಲಾಗಿದ್ದಾರೆ. ಊರಲ್ಲಿ ಕೆಲವು ಪುಢಾರಿಗಳು ಸ್ಥಳೀಯ ಹೊಸಗಾರ ಅಧಿಕಾರಿಗಳು ವರ್ಗ ಮತ್ತು ಓಕ್ಟ್ರಾಯ ಪೋಲೀಸ ಅಧಿಕಾರಿಗಳನ್ನು ಇಲ್ಲಿ ಗಟ್ಟು ಈ ಅನ್ಯಾಯವನ್ನು ಕಟ್ಟೆಚ್ಚರದಿಂದ ತಡೆಯಲು ವಿಸ್ತರೆ ಬನವಾಸಿ ಸೀಮೆಯಲ್ಲಿ ಬರಗಾಲ ಒದಗಬಹುದೆಂದು ಆ ಸೀಮೆಯವರು ಬರೆಯುತ್ತಾರೆ.

ಒಲೆಕ್ಕೆ ಗ್ರಾಮದ ಶ್ರೀ ದುರ್ಗಾದೇವಿ ಅಮ್ಮನವರ ಗುಡಿಯಲ್ಲಿ ನವರಾತ್ರಿಯಂತೆ ನವರಾತ್ರಿ ಉತ್ಸವವಾಗುವದು.

(ಒಂದೇ ಪುಟ ನೋಡಿರಿ)

ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ

ಮಂಗಳೂರಿನ ಕುಬುದ್ಧರ ವಿರೋಧ

[illegible]

BY THE REGIONAL TRANSPORT AUTHORITY,
KARNATAK REGION, BELGAUM.

NOTICE.

Applications in the prescribed form which can be had from this Office, for permits to cooperate stage carriage services on the following routes, are invited from the existing operators on the routes or in the area or from the Joint Stock Companies of all or majority of the existing operators operating in or around the area or area for which application is made or others including local bodies in the Karnatak Region

S. No.	Name of routes.
1.	Supa-Yellapur via Haliyal.
2.	Nipani-Sangli via Akol, Sadalga, Kurundwad and Jayasingpur.

All applications should be submitted so as to be received in this office on or before 21-10-48 and those received after this date will not be entertained

Applications should clearly state the time-table proposed to be maintained and the standard rate of fare proposed to be charged per passenger per mile They should be complete in all respects and if incomplete, they will be treated as invalid.

Permits will be granted on a temporary basis in accordance with the existing instructions from Government and issued as and when the petrol quota allotted to this Region permits.

No. 5989/4-B/KR.
Regional Transport Office,
Belgaum, 6th October, 1948

D K. SUKHTANKAR, Capt.,
Secretary,
Regional Transport Authority,
Karnatak Region, Belgaum.

ಎಂದಾದರೂ ಹೊಸ ಪ್ರಾಂತಗಳನ್ನು ನಿರ್ಮಿಸಬೇಕೆಂಬ ಸರ್ಕಾರ ಬಂದರೆ, ಈ ಕೆಳಗೆ ನಿರ್ದೇಶಿಸಿದ ಪ್ರದೇಶಗಳನ್ನು ಒಳಗೊಳ್ಳುವಂತಹ ಒಂದು ಪ್ರತ್ಯೇಕ ಕೊಂಕಣ ಪ್ರಾಂತವನ್ನು ರಚಿಸಬೇಕೆಂದು ನಾನು ಸೂಚಿಸುತ್ತೇನೆ, ಮತ್ತು ನನ್ನ ಈ ಮತವು ಪಶ್ಚಿಮ ಕರಾವಳಿಯ ಕೊಂಕಣ ದೇಶದ ಲಕ್ಷಗಟ್ಟಲೆ ಜನರ ಮತವಿರುತ್ತದೆಂಬುದನ್ನು ಸಮಿತಿಯ ಲಕ್ಷಕ್ಕೆ ತರಬಯಸುತ್ತೇನೆ

ಕೊಂಕಣ ಪ್ರಾಂತದ ರೂಪರೇಷೆ.

ಮುಂಬಯಿ ಪ್ರಾಂತದ ಠಾಣಾ, ಕೊಲಾಬಾ, ರತ್ನಾಗಿರಿ ಜಿಲ್ಲೆಗಳು, ಗೋವಾ ಪ್ರಾಂತ ಮತ್ತು ಉತ್ತರ ಕಾನಡಾ ಜಿಲ್ಲೆಯ ಕರಾವಳಿ ಭಾಗವಾದ ಕುಮಟಾ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟಕಳ ತಾಲೂಕ ಪೇಟೆಗಳು.

ಮದ್ರಾಸ ಪ್ರಾಂತದ ದಕ್ಷಿಣ ಕಾನಡಾ ಜಿಲ್ಲೆ

ಪೋರ್ತುಗೀಜರು ಇಂದಲ್ಲ ನಾಳೆ ಗೋವೆಯನ್ನು ಹಿಂದುಸ್ಥಾನಕ್ಕೆ ಬಿಟ್ಟುಕೊಡಲೇ ಬೇಕು ಭೌಗೋಲಿಕ, ಭಾಷಿಕ, ಪ್ರಾದೇಶಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದಲೂ ವ್ಯಾಪಾರೋದ್ಯೋಗಗಳ ದೃಷ್ಟಿಯಿಂದಲೂ ಮೇಲೆ ಹೇಳಿದ ಭಾಗಗಳು ಒಂದೇ ಸ್ವಯಂಪೂರ್ಣ ಮತ್ತು ಸ್ವಾವಲಂಬಿ ಘಟಕ ಪ್ರಾಂತವಾಗಬಲ್ಲವೆಂದು ನಾನು ವಿಸ್ತಾರವಾಗಿ ವಿವರಿಸಬೇಕಾಗಿಲ್ಲ ಈ ನಾಡಿನ ಜನರು ಸಾಹಸಿಗರೂ ವ್ಯಾಪಾರದಲ್ಲಿ ನುರಿತವರೂ ಇರುತ್ತಾರೆ, ಮತ್ತು ಇದೇ ನಾಡಿನಲ್ಲಿ ಸಮುದ್ರ ಮಾರ್ಗವಾಗಿಯೂ ನೆಲ ಮಾರ್ಗವಾಗಿಯೂ ಸಾಗಾಟ–ಸಂಪರ್ಕಗಳ ಅನುಕೂಲತೆಯುಂಟು ಸ್ವತಂತ್ರ ಪ್ರಾಂತವಾಗಲು ಕೊಂಕಣ ದೇಶವು ಪೂರ್ಣ ಪಾತ್ರವಿದೆಂಬುದನ್ನು ನಾನು ಒತ್ತಿ ಹೇಳಬಲ್ಲೆನು.

* * *

ಬೆಳಗಾಂವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಬೆಳಗಾಂವ ನಗರ ಸಭೆಯವರು ಠರಾವು ಪಾಸು ಮಾಡಿದ್ದಾರೆ ನಿಪ್ಪಾಣಿ ನಗರಸಭೆಯವರೂ ಇದೇ ತರದ ಗೊತ್ತುವಳಿ ಮಾಡಿದ್ದಾರೆ ಈ ಎರಡೂ ಠರಾವುಗಳನ್ನು ವಿರೋಧಿಸಿ ಬೆಳಗಾಂವ ಜಿಲ್ಲಾ ಕೊಂಗ್ರೆಸ ಸಮಿತಿಯ ಅಧ್ಯಕ್ಷ ರಾ॥ ವೀರಪ್ಪಾ ಸುತಗಟ್ಟಿಯವರು ಒಂದು ಪ್ರಕಟನೆ ಹೊರಡಿಸಿದ್ದಾರೆ; ಮತ್ತು ಬೆಳಗಾಂವ ಪಟ್ಟಣ ಸಹಿತ ಪೂರ್ಣ ಬೆಳಗಾಂವ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಬೇಕಾಗಿ ತೀವ್ರ ಕೊಟ್ಟಿದ್ದಾರೆ! ರಾ॥ ಸುತಗಟ್ಟಿಯವರು ಹೊರಡಿಸಿದ ಪ್ರಕಟನೆ ಅಧಿಕ–ಪ್ರಸಂಗವೆಂದೂ, ಮ್ಯುನಿಸಿಪಾಲಿಟಿಗಳ ಅಧಿಕಾರದಲ್ಲಿ ಕೈ ಹಾಕಲಿಕ್ಕೆ ಕೊಂಗ್ರೆಸ ಅಧ್ಯಕ್ಷರಿಗೆ ಅಧಿಕಾರವಿಲ್ಲೆಂದೂ ಬೆಳಗಾಂವಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಯಕಾರಿ ಮಂಡಳದವರು ಟೀಕಿಸಿ, ಕೊಂಗ್ರೆಸ ಸಂಸ್ಥೆಯ ಶಿಸ್ತನ್ನು ಉಲ್ಲಂಘಿಸಿದ ಬಗ್ಗೆ ಸುತಗಟ್ಟಿಯವರ ವಿರುದ್ಧ ಕ್ರಮ ಕೈಕೊಳ್ಳಬೇಕೆಂದೂ ಡಾ॥ ರಾಜೇಂದ್ರ ಪ್ರಸಾದ ಪ್ರಭೃತಿ ಕೊಂಗ್ರೆಸ್ಸಿನ ವರಿಷ್ಠರಿಗೆ ವಿನಂತಿ ಮಾಡಿಕೊಂಡಿದ್ದಾರೆ. ಇದೊಂದು ಪ್ರಾಂತೀಯತೆಯ ವಿಕಟ ಸ್ವರೂಪದ ದರ್ಶನ!

* * *

ಜಾಹೀರ ಪ್ರಕಟನೆ.

ನಮ್ಮಲ್ಲಿ ಗಾಡಿ–ಹಾರಿ, ಹಳೆ, ಕಾಳಿನ ದಬ್ಬಿ, ಹತ್ತಿಗೆ ಪ್ಯಾಕದ ಕಬ್ಬಿಣದ ಸರಕುಗಳು ಬಂದಿರುತ್ತವೆ ಮಾಯಾಸ ಇರುವ ಕುಮಟಾ, ಚಿತ್ರಗಿ (ಹೆಗಡಾರ ಬಿಟ್ಟು), ಕಲಭಾಗ, ಕಡೇಕೋಡಿ, ಹೊಳೆಗದ್ದೆ, ಊರಕೇರಿ, ಕೂಜಳ್ಳಿ, ಮಾಲಗಳ್ಳಿ, ಹೊಸಹೇರವಟ್ಟಿ, ಮೂರೂರ, ದೀವಳ್ಳಿ, ಕಲವೆ ಈ ಊರುಗಳವರ ಫಿರ್ಕಾ ರೈತರು ಗ್ರಾಮಸ್ಥರ ಪ್ರಶಸ್ತಿಪತ್ರದೊಡನೆ ನಮ್ಮ ಕಡೆಗೆ ಅರ್ಜಿ ಕೊಟ್ಟು ಮಾಲು ಪಡಕೊಳ್ಳಬಹುದು ತಾ. ೧೦–೧೦–೪೮

ಮೆನೇಜಿಂಗ ಡೈರೆಕ್ಟರ,

ಅದಿಕೆ ಸೊಸೈಟಿ, ಕುಮಟಾ

ರಾ॥ ಗಾಂವಕಾರರ ಸ್ಪಷ್ಟೀಕರಣ.

ತಾ. ೨೭–೯ ರ 'ವೃತ್ತ'ದಲ್ಲಿ ತಮ್ಮನ್ನುದ್ದೇಶಿಸಿ "ಜಿಲ್ಲಾ–ಸಂಚಾರ" ಯು ಬರೆದ ಟೀಕೆಗೆ ಪ್ರತ್ಯುತ್ತರವೆಂದು ರಾ॥ ಸ. ಪ. ಗಾಂವಕಾರರು ಒಂದು ಉದ್ದ ಪತ್ರ ಬರೆದಿದ್ದಾರೆ ಅದರೊಳಗಿನ ಅಪ್ರಸ್ತುತ ಭಾಗಗಳನ್ನು ಬಿಟ್ಟು ಪ್ರಸ್ತುತ ವಿಷಯಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿದೆ

ರಾ॥ ಗಾಂವಕಾರರು ಬರೆಯುವದೇನೆಂದರೆ — ತಾ. ೨೮–೮–೪೮ನೇಗೆ ನಾನು ರಾ॥ ಶರ್ಮರವರಲ್ಲಿ ಬಂದಿದ್ದಾಗ ಹಾದಿಯಲ್ಲಿ ಒಬ್ಬರು "ಹಿಂದೂಸ್ತಾನ ಸ್ಟ್ಯಾಂಡರ್ಡ" ಪತ್ರಿಕೆಯ ಪ್ರತಿಯೊಂದನ್ನು ನನಗೆ ಕೊಟ್ಟು, "ನೋಡಿ, ನಿಮ್ಮ ಕಾರವಾರ ಜಿಲ್ಲೆ ಹೋಗಿದೆ!" ಎಂದು ಆಡಿಕೊಂಡರು ಈ ಪತ್ರದಲ್ಲಿ ಶಿರ್ಸಿ, ಸಿದ್ದಾಪುರ ತಾಲೂಕುಗಳನ್ನು ಬಿಟ್ಟು ಕಾನಡಾ ಜಿಲ್ಲೆಯ ಉಳಿದ ಭಾಗಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಬರೆದಿತ್ತು ಅದನ್ನೋದಿ ನನಗೆ ಕಡುಕೋಪ ಬಂತು. ಮುಂದೆ ನಾನು ಶರ್ಮರಲ್ಲಿ ಹೋದೆ ಅಲ್ಲಿ ಕೆಲವು ಕರ್ನಾಟಕದವರು ಇದ್ದರು. ಅವರ ಕೂಡ 'ಹಿಂದೂಸ್ತಾನ ಸ್ಟ್ಯಾಂಡರ್ಡ' ಪೇಪರಿನ ಹೇಳಿಕೆಯ ವರದಿಯನ್ನು ಕುರಿತು ಸಹಜ ಪ್ರಸ್ತಾಪ ತೆಗೆದೆ ಆಗ ಅಲ್ಲೇ ಕೂತಿದ್ದ ರಾ॥ ಗಣಪತಿ ಶಾಸ್ತ್ರಿಯವರು (ನನ್ನಷ್ಟೇ ವೃದ್ಧರು) "ಆ ಪತ್ರಿಕೆಯಲ್ಲಿ ಬರೆದದ್ದು ಸರಿಯಿದೆ' ಎಂದು ಒತ್ತಿ ಹೇಳಿದರು 'ಕನ್ನಡಿಗರಿಂದ ಏನಾಗಬಲ್ಲದು?' ಎಂದೂ ಹೀಯಾಳಿಸಿದರು! ಅಂಥವರಿಗೆ ಗುಂಡು ಹಾಕಬೇಕು, ನೋಡಿ ಎಂದು ಆಗ ನಾನು ಉದ್ವೇಗಪೂರ್ವಕ ಅಂದೆ ನಾನು ಈ ಮಾತು ಬುದ್ಧಿಪೂರ್ವಕ ಹೇಳಲಿಲ್ಲ. ಗಣೇಶ ಶಾಸ್ತ್ರಿಯವರು ಮಾತ್ರ 'ನಿಮಗೆ ಗುಂಡು ಹಾಕಬೇಕು" ಎಂದು ಶಾಂತವಾಗಿ ಮನಸ್ಸಿಗೆ ಬಂದಂತೆ ಏನೇನೋ ಹೇಳಿದರು ನಾನು ಅವರ ಮಾತಿಗೆ ಹೋಗಲಿಲ್ಲ ನಡುನಡುವೆ ಒಂದು ಶಬ್ದ ಹೇಳಿದ್ದೆನಷ್ಟೇ ಶಾಸ್ತ್ರಿಯವರೊಡನೆ ವಾದಿಸುತ್ತಿದ್ದವರು ಅಲ್ಲಿದ್ದ ತರುಣರೇ ಈ ವಾದ ನಡೆದಾಗ ರಾ॥ ಶಿವರಾಮ ಶಾಸ್ತ್ರಿಗಳು ಬಂದು ತಲ್ಪಿದರು ಅವರು ನಡೆದದ್ದೆಲ್ಲ ಕೇಳಿಕೊಂಡು, "ಶಾಸ್ತ್ರಿಗಳೇ, ಗಾಂವಕಾರರು ಮನಸ್ಸಿನಿಂದ ನಿಮಗೆ ಹಾಗೆ (ಗುಂಡು ಹಾಕಬೇಕೆಂದು) ಹೇಳಿಲ್ಲ ನೀವು ಅಪಾರ್ಥ ಮಾಡಿಕೊಳ್ಳಬೇಡಿರಿ" ಎಂದು ಗಣೇಶಶಾಸ್ತ್ರಿಗಳಿಗೆ ಸಮಾಧಾನ ಮಾಡಿದರು ಕೆಲ ಹೊತ್ತಿನ ಮೇಲೆ ಅಲ್ಲಿಂದ ನಾವು ಹೊರಡಲು ಸಿದ್ಧರಾದಾಗ, ನಾನು ಕೂಡ ಗಣೇಶಶಾಸ್ತ್ರಿಗಳಿಗೆ "ಮನಸ್ಸಿನಿಂದ ನಿಮಗೆ ಹೇಳಲಿಲ್ಲ ನಿಮಗೆ ಬೇಸರವಾದರೆ ಕ್ಷಮಿಸಿ" ಎಂದು ಕೈಮುಗಿದೆ ಅವರೂ ಕೂಡ ಕ್ಷಮೆ ಮಾಡಿರೆಂದು ನಮಸ್ಕರಿಸಿದರು ನಡೆದ ಕಥೆ ಹೀಗಿದೆ ಇದರ ವಿಪರ್ಯಾಸ ವರದಿಯು "ವೃತ್ತ" ದಲ್ಲಿ ಪ್ರಕಟವಾದದ್ದು ಕಂಡು ಬಹಳ ಕೆಡಕೆನಿಸುತ್ತದೆ. ಇತ್ಯಾದಿ.

ಒಂದು ಕರುಣಾಜನಕ ದೃಶ್ಯ.

ಗಾಂಧಿ ಜಯಂತಿಯ ದಿನ ಅಖಿಲ ಭಾರತೀಯ ಅಸ್ಪೃಶ್ಯ ವಾಣಿಯೊಳಗೆ ಮಹಾತ್ಮರ ಆಶ್ರಂದಿಂದಾಗ ಶ್ರೀಮತಿ ಕಾಲಿಯಾ ಬೀನರವರದೊಂದು ಭಾಷಣವಾಯಿತು. ಇವರ ವಯಸ್ಸು ೮೦ ವರ್ಷಕ್ಕೆ ಮೇಲ್ಪಟ್ಟಿದೆ. "ನನ್ನ ತಮ್ಮನು ತೀರಿಕೊಂಡನು" ಎಂದು ಅವರು ಮಾತು ಪ್ರಾರಂಭಿಸಿದಾಗ ಅವರ ಕಂಠ ಬಿಗಿದು ಬಂತು. ಮಹಾತ್ಮರ ಗುಣಗಾನ ಮಾಡುವಾಗ ಅವಳು ನಡುನಡುವೆ ಅಳುತ್ತಿದ್ದರು "ತನ್ನಿಂದ ತಪ್ಪಾದರೆ ನೋಹನನು ಒಪ್ಪಿಕೊಳ್ಳುತ್ತಿದ್ದನ, ಸಂಕ್ರಾಂತಿ ಅಂಜುತ್ತಿದ್ದನು, ಎಂದೂ ಸುಳ್ಳು ಮಾತಾಡುತ್ತಿರಲಿಲ್ಲ ಸತ್ಯವನ್ನೇ ಆಡುವ ಧೈರ್ಯ ಎಳ್ಳುದಿಂದಲೂ ಅಳವಡಿಸಿಕೊಂಡಿತ್ತು" ಎಂದು ಭಾವಂತಾಗಿ ಶ್ರೀ॥ ಕಾಳಿಯಾ ಬೀನರು ತಮ್ಮ ತಮ್ಮನ ಪ್ರಶಂಸೆ ಮಾಡಿದರು ಅವರ ಈ ಭಾಷಣ ಕೇಳುವಾಗ ಕೇಳುವವರ ಕಣ್ಣಲ್ಲೂ ನೀರ ಬರದೆ ಇರಲಿಲ್ಲ

ಸ್ಥಾನಿಕ ವೃತ್ತಾಂತ

(೪ನೇ ಪುಟದಿಂದ ಮುಂದರಿಸಿದ್ದು)

ಉತ್ಸವದಲ್ಲಿ ರಾ॥ ಪಂಢರಿಂಗ ವೆಂಕಟರಮಣ ಭಟ್ಟರ ಕೀರ್ತನೆಗಳೂ ನಡೆಯುವವಂತೆ

ಶೀಗೇಹಳ್ಳಿಯ ಪರಮಾನಂದ ಮಂದಿರದಲ್ಲೂ ನವರಾತ್ರಿಯ ಉತ್ಸವವಿದ್ದು ಅಲ್ಲಿ ಅಘನಾಶಿನಿಯ ರಾ॥ ನಾರಾಯಣ ಇವರ ಕೀರ್ತನೆಗಳಾಗುವವೆಂದು ತಿಳಿಯುತ್ತದೆ

(ತಾ. ೩ ೧೦–೪೮) ಗಾಂಧಿ–ಜಯಂತಿಯ ದಿನ ಮೊನ್ನೆ ಗ್ರಾಮದವರು ಉತ್ಸವ ಮಾಡಿ, ಮಹಾತ್ಮರ ಸ್ಮಾರಕ ನಿಧಿಗೆ ಕೆಲವು ಹಣವನ್ನು ಕೂಡಿಸಿದ್ದಾರೆಂದು ವರದಿ ಬಂದಿದೆ

ಪುಟಾಣಿನಳ್ಳಿ ಶಾಲೆಯ ವಿದ್ಯಾರ್ಥಿನಿಯರೂ ಶಿಕ್ಷಕರೂ ಕೂಡಿ ಉತ್ಸಾಹದಿಂದಲೂ ಭಕ್ತಿಯಿಂದಲೂ ಊರ ಪ್ರಮುಖರ ನೆರವಿನಿಂದಲೂ ಗಾಂಧಿ–ಜಯಂತಿ ಉತ್ಸವ ಮಾಡಿದರು ಮೆರವಣಿಗೆ–ಧ್ವಜವಂದನೆಗಳಲ್ಲದೆ, ಶಾಲೆಯಲ್ಲಿ ಆಟ–ಪಾಟ ಮೇಲಾಟ–ಭಾಷಣ ಮುಂತಾದ ವಿನೋದಗಳೂ ನಡೆದವು

ಸಿದ್ದಾಪುರ— (ತಾ ೮–೧೦–೪೮) ಕಳೆದ ತಾ ೪ರ "ವೃತ್ತ"ದಲ್ಲಿ ಸಿದ್ದಾಪುರದ ಮಾಮಲೇದಾರ ರಾ॥ ಪಿ. ಪಿ. ಜೋಶಿಯವರ ವಿರುದ್ಧ ಪ್ರಕಟವಾದ ಟೀಕೆಯನ್ನು ಅನುಲಕ್ಷಿಸಿ, ಸಿದ್ದಾಪುರದ ನಾಗರಿಕರೋರ್ವರು ಮತ್ತು ಮತ್ತೀಹಳ್ಳಿಯವರೋರ್ವರು ರಾ॥ ಜೋಶಿಯವರು ಜನರೊಡನೆ ಬೆರೆತು ನಿಜವಾದ ಲೋಕಸೇವಕರಂತೆ ವರ್ತಿಸುತ್ತಿರುವರೆಂದೂ, ಆದರಿಂದ ಹಳೆಯ ಕಾಲದ ಕಾರಕೂನ–ಶಾನಭೋಗರಿಗೆ ಅವರು ಕಂಟಕಪ್ರಾಯರಾಗಿರುವರೆಂದೂ ರಾ॥ ಜೋಶಿಯವರನ್ನು ಉಗ್ರತೆಯಿಂದ ಟೀಕಿಸಿದ್ದು ಅಯುಕ್ತವೆಂದೂ ಬರೆದಿರುತ್ತಾರೆ. ಸಿದ್ದಾಪುರ ತಾಲೂಕಿನ ಶಾನಭೋಗರು ಸೆಟ್ಟಾಗಿ ಸಿದ್ದಾಪುರದಲ್ಲಾದರು ವ್ಯಾಜ್ಯ ಮುಂತಾದವುಗಳನ್ನು ಮಾಡುತ್ತಾರೆ; ಹಳ್ಳಿಯವರು ಅವರಲ್ಲಿ ಕೆಲಸಕ್ಕಾಗಿ ಬಂದರೆ ೨–೩ ದಿನಗಳವರೆಗೆ ಅವರ ದರ್ಶನವಾಗುವದಿಲ್ಲ, ಈ ಶಾನಭೋಗರೂ ಕಾರಕೂನರೂ ಆಲಸಿಗ, ಸ್ವಾರ್ಥಿ, ಸೋಮಾರಿಯಾದದ್ದು ಕಂಡು ಮಾಮಲೇದಾರರು ಬೇಸರಗೊಳ್ಳುತ್ತಾರೆ. ಎಂದು ಮುಂತಾಗಿ ಮತ್ತೀಹಳ್ಳಿಯವರ ಅಂಬೋಣವಿದೆ. ಕಳೆದ ಗಾಂಧೀ ಜಯಂತಿಯ ದಿನ ರಾ॥ ಜೋಶಿಯವರು ಊರೊಳಗಿನ ಸ್ವಚ್ಛತೆಯ ಕಾರ್ಯಕ್ರಮದ ಆಚರಣೆಯಲ್ಲಿ ಅಗ್ರಭಾಗ ವಹಿಸಿದ್ದರೆಂದೂ, ಅವರ ಆಚರಣೆಯನ್ನು ಕಂಡು ಉಳಿದವರು "ನಿರುಪಾಯರಾಗಿ" ಕಾರ್ಯಪ್ರವೃತ್ತರಾಗಬೇಕಾಯಿತೆಂದೂ ಸಿದ್ದಾಪುರದವರು ಹೇಳುತ್ತಾರೆ ಕೈಕೆಳಗಿನವರಿಗೆ ಕರ್ತವ್ಯದಕ್ಷರಾಗಿರಲು ರಾ॥ ಜೋಶಿಯವರು ಕಲಿಸಿ ಕೊಡುತ್ತಾರೆಂದೂ, ಅವರ ಈ ಕ್ರಮಕ್ಕೆ "ಬ್ಯಾಗಳ ಮಾಳ" ಯೆಂದು ಸಂಬೋಧಿಸಿದ್ದು ಅನುಚಿತವೆಂದೂ ಅವರ ಪ್ರತಿಪಾದನೆಯುಂಟು

ಕೋಲಶಿರ್ಸಿಯಲ್ಲಿ ಗಾಂಧಿ–ಜಯಂತಿಯ ಉತ್ಸವ ವಿಜೃಂಭಣೆಯಿಂದ ನಡೆದ ವರದಿಯುಂಟು

ಅಂಕೋಲಾ— (ತಾ ೩–೧೦–೪೮) ಶಿರೂರ ಕನ್ನಡ ಶಾಲೆಯಲ್ಲಿ ಊರವರೂ ಶಾಲೆಯವರೂ ಕೂಡಿ ಭಕ್ತಿಯಿಂದಲೂ ಉತ್ಸಾಹದಿಂದಲೂ ಇಂದು ಗಾಂಧಿ–ಜಯಂತಿಯ ಉತ್ಸವ ಮಾಡಿದರು.

ಇಲ್ಲಿಯ ಡಿ. ಕೇ. ಮೋಟರ್ಸ್ ಕಂಪನಿಯ ಕಚೇರಿಯ ಏಜಂಟರು ಜನರಿಗೆ ಸರಿಯಾಗಿ ಮಾಹಿತಿ ಕೊಡುವದಿಲ್ಲೆಂದೂ ಸೌಜನ್ಯದಿಂದ ನಡಿಸುವದಿಲ್ಲೆಂದೂ ಬಹಳ ಜನರ ತಕ್ರಾರುಂಟು ಕಂಪನಿಯ ವ್ಯವಸ್ಥಾಪಕರು ಇತ್ತ ಗಮನ ಲಕ್ಷ ಕೊಡಬೇಕು

ಮಹಾಲಕ್ಷ್ಮೀ ಪ್ರಿಂಟಿಂಗ್ ವರ್ಕ್ಸ ಲಿಮಿಟೆಡ್, ಕುಂದಾಪುರ

ನಮ್ಮಲ್ಲಿ ೧೯೪೯ನೇ ಇಸವಿಯ ತಿಥಿ, ಜೋತಿಷ ಆಕಾರದ ಪೋಕೆಟ್ ಪ್ಯಾಂಗಳು ಬರುವ ನವೆಂಬರ ತಿಂಗಳು ತಾ. ೧೫ರೊಳಗೆ ತಯಾರಾಗುವವು ಹೆಚ್ಚಿಗೆ ಪ್ಯಾಂಗಳಿಗೆ ಒಡರ್ ಕೊಟ್ಟಲ್ಲಿ ಧಾರಾಳ ಕಮಿಶನ್ ಕೊಡಲಾಗುವದು ತಿಳಿಯಿರಿ —

ಮಹಾಲಕ್ಷ್ಮಿ ಬುಕ್–ಡಿಪ್ಪೊ,

ಕುಂದಾಪುರ

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ, ಪ್ರಕಟಿಸಿದರು

ವರ್ಗಣಿಯ ದರ:
ಮುಂಗಡವಾಗಿ
ವರ್ಷಕ್ಕೆ ರೂ ೨-೪-೦
ವಿದ್ಯಾರ್ಥಿಗಳಿಗೆ ವರ್ಷಕ್ಕೆ ೨-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ...೦-೧-೦
ಹಳೇ ಸಂಚಿಕೆಗೆ .. ೦-೪-೦
ವಿ. ಪಿ. ಯಿಂದ ತರಿಸುವವರು
ವಿ. ಪಿ. ವೆಚ್ಚ ಬೇರೆ ಕೊಡಬೇಕು
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

Reg. No. B. 1270

Monday, 18-10-1948.

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೧೬.

ಕುಂದಾಪುರ - ಸೋಮವಾರ, ತಾ ೧೮-೧೦-೧೯೪೮

ಜಾಹೀರಾತುಗಳ ದರ:-
ಕಾಲಂ ಅಗಲದ ಒಂದು ಇಂಚು
೧ ಸಾರಿಗೆ ೮ ಆಣೆಯಂತೆ.
ವಿಶೇಷ ಇದ್ದರೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಕಮ್ಮಿ
ಇದ್ದರೆ ಪತ್ರದ್ವಾರಾ
ತಿಳಿಸಲಾಗುವುದು.

ಸುದ್ದಿಗಳ ಸಂದೂಕ.

ಅಕ್ಕಿಯ ಕೊರತೆ ಜಗತ್ತಿನಲ್ಲಿ ಇನ್ನೂ ಕೆಲವು ವರ್ಷ ಬಾಧಿಸುವದಾಗಿ ೧೮ ದೇಶಗಳಲ್ಲಿ ಸಂಚರಿಸಿದ ಮತ್ತು ಅಲ್ಲಿಯ ಅಕ್ಕಿಯ ಪರಿಸ್ಥಿತಿಯ ಅಭ್ಯಾಸ ಮಾಡಿದ ವಿದೇಶ ಬೇಸಾಯ ಕಚೇರಿಯ ಡಾ|| ಇಪರಸನ್‌ರವರು ಪ್ರಕಟಿಸುತ್ತಾರೆ. ೧೯೪೮ರಲ್ಲಿ ಸುಮಾರು ೪೦ ಲಕ್ಷ ಟನ್ನು ಅಕ್ಕಿಯ ಕೊರತೆ ಬೀಳುವದೆಂದು ಅವರ ಹೇಳಿಕೆ. ಅಂದರೆ ೧೯೪೭ಕ್ಕಿಂತ ಈ ವರ್ಷ ೧೦ ಲಕ್ಷ ಟನ್ನು ಅಕ್ಕಿಯ ಬೆಳೆ ಕಡಿಮೆಯಾಗುವದು ಬ್ರಹ್ಮದೇಶ, ಸಯಾಮ ಮತ್ತು ಇಂಡೋ-ಚೀನ ಈ ದೇಶಗಳಿಂದ ೧೦೦ಕ್ಕೆ ೯೦ರಷ್ಟು ಅಕ್ಕಿ ಹಿಂದೆ ಯುದ್ಧ ಪೂರ್ವದಲ್ಲಿ ಬೇರೆ ಬೇರೆ ದೇಶಗಳಿಗೆ ಪೂರೈಕೆಯಾಗುತ್ತಿತ್ತು ೧೯೪೮ರಲ್ಲಿ ಈ ದೇಶಗಳೊಳಗೆ ಭತ್ತದ ಬೆಳೆ ಒಳ್ಳೇದಾಗಿದೆ ಅದರಿಂದ ಅಲ್ಲಿಂದ ಹೆಚ್ಚು ಅಕ್ಕಿ ನಿರ್ಯಾತವಾಗುವ ಸಂಭವವುಂಟು. ಮೇಲಾಗಿ ಹಿಂದೆ ಅಕ್ಕಿ ಉಪಯೋಗಿಸುತ್ತಿದ್ದ ಜನರು ಇತ್ತಲಾಗಿ ಬೇರೆ ಅನ್ನ-ಧಾನ್ಯಗಳನ್ನು ಉಪಯೋಗಿಸತೊಡಗಿದ್ದಾರೆ ಆದರಿಂದಲೂ ಅಕ್ಕಿಯ ಬೇಡಿಕೆ ಕಡಿಮೆಯಾಗುವ ಸಂಭವವಿದೆ. ಮಲಾಯಾ, ಜಾವಾ, ಹಿಂದುಸ್ಥಾನ ಮತ್ತು ಚೀನ ಈ ದೇಶಗಳಲ್ಲಿ ಅಕ್ಕಿಯ ಉತ್ಪತ್ತಿ ಹೆಚ್ಚಿಸುವ ಯೋಜನೆಗಳಾಗತೊಡಗಿವೆ. ರಷ್ಯ ದೇಶದ ಸೈಬೇರಿಯಾ, ಯುಕ್ರೇನ, ಕ್ರಿಮಿಯಾ ಮತ್ತು ಉತ್ತರ ಕೊಕೆಸಸ್ ಪ್ರಾಂತಗಳಲ್ಲಿ ಈ ವರುಷ ಚಲೋ ಬೆಳೆಯಾಗಿದೆ. ಜಪಾನ ದೇಶದಲ್ಲೂ ಈ ವರ್ಷ ಹೆಚ್ಚಿನ ಬೆಳೆ ಬಂದಿರುವದೆಂದು ಜಪಾನದ ಬೇಸಾಯ ಇಲಾಖೆಯವರು ಪ್ರಕಟಿಸಿದ್ದಾರೆ ಹಿಂದುಸ್ಥಾನದಲ್ಲಿ ಮಾತ್ರ ಈ ವರ್ಷ ಅಕ್ಕಿಯ ಬೆಳೆ ಕಡಿಮೆಯುಂಟು. ೧೯೪೬ರಲ್ಲಿ ೭,೦೯,೮೭,೦೦೦ ಎಕರೆ ಪ್ರದೇಶದಲ್ಲಿ ೧,೯೮,೫೬,೦೦೦, ಟನ್ನು ಅಕ್ಕಿಯಾಗಿತ್ತು ೧೯೪೭ರಲ್ಲಿ ೫,೯೬,೫೬,೦೦೦ ಎಕರೆ ಕ್ಷೇತ್ರದಲ್ಲಿ ೧,೮೭,೬೦,೦೦೦ ಟನ್ನು ಅಕ್ಕಿಯಾಗಿತ್ತು ಡಾ|| ಇಪರಸನ್‌ರವರ ಎಣಿಕೆಯಂತೆ ಅಕ್ಕಿಯ ಕೊರತೆ ಒಂದೂವೇಳೆ ಆದರೂ ಅಕ್ಕಿಯ ದರ ಅಷ್ಟು ಏರಲಿಕ್ಕಿಲ್ಲೆಂದು ತಜ್ಞರ ಅಭಿಪ್ರಾಯವುಂಟು

— ನಿಜಾಮ ರಾಜ್ಯದಲ್ಲಿ ನಿಜಾಮರಿಗೆ ಸರ್ವಸ್ವಾತಂತ್ರ್ಯವಿತ್ತು ನಿಜಾಮರಿಗೆ ಗಂಡು ಶಿಶು ಹುಟ್ಟಿದರೆ ಆ ಬಗ್ಗೆ ಹೈದರಾಬಾದ ಸರಕಾರವು ಒಂದು ದಿನ ರಜೆ ಕೊಡುತ್ತಿತ್ತು. ಕಳೆದ ಸೋಮವಾರ ನಿಜಾಮರಿಗೆ ಒಂದು ಗಂಡು ಶಿಶು ಹುಟ್ಟಿದೆ ಆದರೆ ಹಳೆಯ ಪದ್ಧತಿಯಂತೆ ಈ ಸಾರೆ ರಜೆ ಫರ್ಮಾನು ಹೊರಟಿಲ್ಲ.

— ನಿಜಾಮರ ರಾಜ್ಯದಲ್ಲಿ ದೊಡ್ಡ ಭೂಮಾಲಿಕರು ಸ್ವತಃ ನಿಜಾಮರೇ ಸರಿ ಹೈದರಾಬಾದದೊಳಗೆ ೧೭ ಜಿಲ್ಹೆಗಳೂ, ೧೭೫ ತಾಲೂಕುಗಳೂ ೨೨೦೦೦ ಗ್ರಾಮಗಳೂ ಉಂಟು ಸಂಸ್ಥಾನದ ಒಟ್ಟು ಕ್ಷೇತ್ರಫಲ ೮೨೬೯೮ ಚದುರ ಮೈಲು ಇದೆ ಅದರಲ್ಲಿ ೮೦೦೦ ಚದುರ ಮೈಲು ಪ್ರದೇಶ ನಿಜಾಮರ ಸ್ವಂತ ಸ್ವಾಮಿತ್ವದ್ದು, ಇದರಿಂದ ನಿಜಾಮರಿಗೆ ಪ್ರತಿ ವರ್ಷ ೩|| ಕೋಟಿ ರೂ ಗಳಷ್ಟು ಪ್ರಾಪ್ತಿಯುಂಟು ಇದಲ್ಲದೆ ಸರಕಾರದ ಬೊಕ್ಕಸದೊಳಗಿಂದ ನಿಜಾಮರ ಖರ್ಚಿಗೆಂದು ಪ್ರತಿ ವರ್ಷ ೫೦ ಲಕ್ಷ ರೂ ಸಿಗುತ್ತದೆ

— ನಿಜಾಮ ರಾಜ್ಯದೊಳಗೆ ಒಮ್ಮೆಲೆ ಅನಾಚಾರಗಳು ನಡೆದದ್ದರಿಂದ ನಿಜಾಮರು ದುಷ್ಟರಿದ್ದಾರೆಂಬ ಭಾವನೆ ಲೋಕದಲ್ಲಿ ಉಂಟಾಗುವದು ಸಹಜ ಆದರೆ ವಸ್ತುಸ್ಥಿತಿ ಹಾಗಿರುವದಿಲ್ಲ ನಿಜಾಮರು ದಯಾವಂತರಿದ್ದಾರೆ ೧೯೧೧ರಲ್ಲಿ ಪಟ್ಟಕ್ಕೆ ಬಂದಂದಿನಿಂದ ಇತ್ತನಕ ಈಗಣ ನಿಜಾಮರು ಒಬ್ಬರಿಗೂ ಗಲ್ಲಿಗೇರಿಸಗೊಡಲಿಲ್ಲ ಗಲ್ಲಿನ ಶಿಕ್ಷೆಯಾದವರಿಗೆಲ್ಲ ಅವರು ಶಿಕ್ಷೆ ಕಡಿಮೆ ಮಾಡಿ ಕಾರಾಗೃಹವಾಸದ ಶಿಕ್ಷೆ ವಿಧಿಸಿದ್ದಾರೆ ಸದ್ಯಕ್ಕೇ ನಿಜಾಮರ ಮೋಟಾರ ಬಂಡಿಯ ಮೇಲೆ ಬಾಂಬು ಗುಂಡು ಒಗೆದ ಇಸಮಿಗೆ ಹೈದರಾಬಾದ ಹ್ಯಾಕೋರ್ಟಿನವರು ಮರಣ ದಂಡನೆಯನ್ನು ವಿಧಿಸಿದ್ದರು ಆತನಿಗೆ ಸಹ ನಿಜಾಮರು ಗಲ್ಲಿಗೇರಿಸಗೊಡಲಿಲ್ಲ ಆತನು ಕಾರಾಗೃಹವಾಸವನ್ನು ಅನುಭವಿಸಿ ಪಾಪಕ್ಷಾಲನೆ ಮಾಡಿಕೊಳ್ಳಬೇಕೆಂದು ನಿಜಾಮರು ಅಪ್ಪಣೆ ಮಾಡಿದರು.

— ನಿಜಾಮರ ಬಂಟನಾಗಿದ್ದ ಕಾಸಿಮ ರಜ್ವಿಯು ಒಂದು ರೀತಿ ಉಲ್ಲೇಖನೀಯವಿದೆ ರಜ್ವಿಯು ನಿಗ್ರಹ ಪ್ರಾಣಿ, ವಿಲಾಸವನ್ನು ಆತ ದ್ವೇಷಿಸುತ್ತಾನೆ ಮಹಾತ್ಮರನ್ನು ಆತ ಯಾವಾಗಲೂ ಹೊಗಳುತ್ತಿದ್ದನೆಂದು ಕಾನಪುರದ "ನೇಶನಲ್ ಫ್ರಂಟ" ಪತ್ರಿಕೆಯಲ್ಲಿ 'ಸ್ಪೆಕ್ಟೇಟರ' ಎಂಬ ಲೇಖಕರು ಬರೆದಿದ್ದಾರೆ ಅಹಿಂಸಾ ಮೂರ್ತಿಯಾದ ಮಹಾತ್ಮರ ಈ ಪ್ರಶಂಸಕನು ನಾಡಿನಲ್ಲಿ ಹಿಂಸಾ-ಪ್ರವೃತ್ತಿಯನ್ನು ಹಬ್ಬಿಸಿ, ಪಾಶವೀ ಅತ್ಯಾಚಾರಗಳನ್ನು ಮಾಡಿಸಿದ್ದು ಒಂದು ದೊಡ್ಡ ವಿಚಿತ್ರವೇ ಸರಿ !

— ಪಾಕಿಸ್ತಾನದ ನಾಯಕರಾದ ಬ್ಯಾ|| ಜಿನ್ನಾರವರು ೬೦ ಲಕ್ಷ ರೂ ಬೆಲೆ ಬಾಳುವ ತಮ್ಮ ಆಸ್ತಿಯನ್ನು ತಮ್ಮ ಮರಣಶಾಸನದಿಂದ ಬೇರೆ ಬೇರೆ ಸಂಸ್ಥೆಗಳಿಗೆ ಹಂಚಿಕೊಟ್ಟಿದ್ದಾರೆ - ಅಲಿಗಡ ವಿದ್ಯಾಪೀಠ, ಪೇಶಾವರದೊಳಗಿನ ಇಸ್ಲಾಮಿಯಾ ಕಾಲೇಜ ಮತ್ತು ಕರಾಚಿಯ ಮುಸ್ಲಿಮ ಲೀಗ ಈ ೩ ಸಂಸ್ಥೆಗಳಿಗೆ ೨೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಮುಂಬಯಿ ವಿಶ್ವವಿದ್ಯಾಲಯಕ್ಕೆ ಅರ್ಧ ಲಕ್ಷ ರೂ ಕೊಟ್ಟಿದ್ದಾರೆ; ಮುಂಬಯಿಯ ಅಂಜುಮಾನ ಇಸ್ಲಾಮ ಸಂಸ್ಥೆಗೆ ೫೦ ಸಾವಿರ ರೂ. ಕೊಟ್ಟಿದ್ದಾರೆ ಇನ್ನೂ ಹಲವಾರು ಸಂಸ್ಥೆಗಳಿಗೆ ಬ್ಯಾ|| ಜಿನ್ನಾರವರು ಉಂಬಳಗಳನ್ನು ಕೊಟ್ಟಿದ್ದಾರೆ. ಸಾರ್ವಜನಿಕ ಕಾರಣಗಳಿಗಾಗಿ ೮೪ ಲಕ್ಷ ರೂ ಗಳಷ್ಟು ನಿಧಿಯನ್ನು ಬ್ಯಾ|| ಜಿನ್ನಾರವರು ಕೂಡಿಸಿದ್ದರು ಆ ನಿಧಿಯನ್ನು ಮುಸ್ಲಿಮ ಲೀಗ ಮತ್ತು ಇತರ ಮುಸ್ಲಿಮ ಸಂಸ್ಥೆಗಳಿಗೆ ಅರ್ಪಿಸತಕ್ಕದ್ದಾಗಿ ಅವರು ತಮ್ಮ ಮೃತ್ಯುಪತ್ರದಲ್ಲಿ ಬರೆದಿಟ್ಟಿದ್ದಾರೆ

— ಸಂಯುಕ್ತ ಪ್ರಾಂತದ ಜುವಾ ಸಂಸ್ಥಾನದ ಅಧಿಪತಿಗಳಾಗಿದ್ದ ಶ್ರೀ|| ದಿಗ್ವಿಜಯ ಚಂದ್ರರವರಿಗೆ ಹಿಂದುಸ್ಥಾನ ಸರಕಾರವು ವ್ಯಾಪಾರ ಇಲಾಖೆಯಲ್ಲಿ ಸರಕು ನಿರ್ಯಾತ ಶಾಖೆಯ ಮುಖ್ಯಾಧಿಕಾರಿಯಾಗಿ ನೇಮಿಸಿದೆ ಈ ಹುದ್ದೆಗೆ ಒಳ್ಳೇ ಸಂಬಳ ಸಿಗುತ್ತಿದೆ. ಆದರೆ ಶ್ರೀ|| ದಿಗ್ವಿಜಯ ಚಂದ್ರರಿಗೆ ವರ್ಷಂಪ್ರತಿ ೨೪ ಲಕ್ಷ ರೂ ಗಳ ಉತ್ಪನ್ನ ಬರುವ ಆಸ್ತಿಯುಂಟು ಅದರಿಂದ ಅವರು ತಮಗೆ ವೇತನ ಬೇಡೆಂದು ಹೇಳಿದರು. ಸರಕಾರವು ಈಗ ಅವರ ವೇತನವನ್ನು ತಿಂಗಳಿಗೆ ರೂ. ೧ ಎಂದು ನಿಶ್ಚಯಿಸಿದೆ ಸರಕಾರದ ಕೆಲಸ ಮಾಡುವವರಿಗೆ ಸಂಬಳ ಕೊಡಲೇ ಬೇಕೆಂದು ಕಾಯದೆಯ ಒತ್ತಾಯ ಇರುವದರಿಂದ ರೂ. ೧ ಸಂಬಳ ಕೊಡಬೇಕೆಂದು ನಿಶ್ಚಯವಾಗಿದೆ

— ಬಿಹಾರ ಪ್ರಾಂತದ (ಶುಕಸ್ಥಳ)ದಲ್ಲಿ ಸಪ್ತಭುವನ ಯಜ್ಞಶಾಲೆಯ ಅಡಿಗಲ್ಲು ಇಡುವ ಸಮಾರಂಭವನ್ನು ಹಿಂದುಸ್ಥಾನ ಸರಕಾರದ ಗಣಿ ಇಲಾಖೆಯ ಮಂತ್ರಿಗಳಾದ ಶ್ರೀ|| ಕಾಕಾಸಾಹೇಬ ಗಾಡಗೀಳರವರು ಸದ್ಯಕ್ಕೇ ನೆರವೇರಿಸಿದರು. ಇದೇ ಶುಕಸ್ಥಳದಲ್ಲಿ ಹಿಂದೆ ಪರೀಕ್ಷಿತ್ ರಾಜನಿಗೆ ಶುಕ ಮಹಾಮುನಿಗಳು ಶ್ರೀ ಭಾಗವತ ಪುರಾಣವನ್ನು ಹೇಳಿದ್ದರೆಂದು ಆಖ್ಯಾಯಿಕೆಯುಂಟು ಈ ಪುರಾಣ ಹೇಳಲ್ಪಟ್ಟಿತ್ತೆಂಬ ಸ್ಥಳದಲ್ಲೇ ಯಜ್ಞಶಾಲೆಯನ್ನು ಕಟ್ಟುವ ಯೋಜನೆಯಾಗಿದೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟ ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡೈರೆಕ್ಟರ.

— ವಾಯವ್ಯ ಗಡಿನಾಡ ಪ್ರಾಂತದ (ಪಾಕಿಸ್ತಾನ) ಮರ್ದಾನ ಪಟ್ಟಣದಲ್ಲಿ ಒಂದು ಅತಿ ದೊಡ್ಡ ಸಕ್ಕರೆ ಕಾರಖಾನೆ ರಚಿಸುವ ಕೆಲಸ ರಭಸದಿಂದ ನಡೆದಿದೆ. ಇಂಗ್ಲಂಡದಿಂದ ಈ ಬಗ್ಗೆ ಯಂತ್ರ ಸಾಮಗ್ರಿ ಬರತೊಡಗಿದೆ. ಕಾರಖಾನೆಗೆ ೨ ಕೋಟಿ ರೂಪಾಯಿ ಭಂಡವಲು ತಗಲುವದು. ೨೫ ಲಕ್ಷ ರೂ ಪಾಕಿಸ್ತಾನ ಸರಕಾರವು ತೆರಲೊಪ್ಪಿದೆ. ಉಳಿದ ೧| ಕೋಟಿ ರೂಗಳನ್ನು ಶೇರುಗಳಿಂದ ಒಟ್ಟುಗೂಡಿಸುವ ಕ್ರಮ ನಡೆದಿದೆ. ಈ ಕಾರಖಾನೆ ತಯಾರಾದಲ್ಲಿ ಪ್ರತಿ ವರ್ಷ ೫೦ ಸಾವಿರ ಟನ್ನು ಸಕ್ಕರೆ ತಯಾರಾಗುವದಂತೆ. ಪಾಕಿಸ್ತಾನಕ್ಕೆ ಸಂಪ್ರತಿ ಇಷ್ಟೇ ಸಕ್ಕರೆ ತಗಲುತ್ತಿದ್ದು ಕಾರಖಾನೆಯು ಚಾಲ್ತಿಯಾದಲ್ಲಿ ಸಕ್ಕರೆಯ ಮಟ್ಟಿಗೆ ಪಾಕಿಸ್ತಾನವು ಸ್ವಯಂಪೂರ್ಣವಾಗುವದು.

— ಇದೇ ಬರುವ ನವಂಬರ ತಿಂಗಳ ತಾ ೬ ಕ್ಕೆ ಧಾರವಾಡದಲ್ಲಿ ಕರ್ನಾಟಕ ವಕೀಲರ ಪರಿಷತ್ತು ಸೇರಲಿದೆ. ಇಷ್ಟು ದಿನ ಈ ಪರಿಷತ್ತಿನ ವ್ಯಾಪ್ತಿ ಮುಂಬಯಿ ಕರ್ನಾಟಕಕ್ಕಷ್ಟೇ ನಿಗದಿತವಾಗಿತ್ತು. ಪರಿಷತ್ತಿನ ಚಾಲಕರು ಈಗ ಆ ವ್ಯಾಪ್ತಿಯನ್ನು ವಿಸ್ತರಿಸಿ, ಇಡೀ "ಕರ್ನಾಟಕ ಯುನಿಯನ್ನಿ"ನ ಪರಿಷತ್ತು ಕೂಡಿಸಬೇಕೆಂದು ಗೊತ್ತುಪಡಿಸಿದ್ದಾರೆ. ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಮಂಗಳೂರಿನ ಪ್ರಮುಖ ವಕೀಲರೂ ಮದ್ರಾಸ ಸರಕಾರದ ಪ್ರಕಾಶಂ ಮಂತ್ರಿ ಮಂಡಳ"ದಲ್ಲಿ ಅರ್ಥ ಸಚಿವರೂ ಆಗಿದ್ದ ಶ್ರೀ|| ಕೇ. ಆರ್. ಕಾರಂತ ಇವರನ್ನು ಆರಿಸಲಾಗಿದೆ. ಪರಿಷತ್ತಿನ ಉದ್ಘಾಟನೆ ಮಾಡಿಕೊಡಲಿಕ್ಕೆ ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶ ನ್ಯಾ|| ಮೂ|| ಛಾಗಲಾ ಇವರನ್ನು ಬಿನ್ನವಿಸಲಾಗಿದೆಯೆಂದು ತಿಳಿಯುತ್ತದೆ. (೧) ಅಲ್ಲಲ್ಲಿ ನಾಗರಿಕ ಸ್ವಾತಂತ್ರ್ಯ ರಕ್ಷಣ ಮತ್ತು ಕಾಯದೆ ಸಲಹೆ ಸಂಘಗಳನ್ನು ತೆರೆಯುವದು (೨) ವಕೀಲರ ಕುಟುಂಬಗಳ ಸಾಂಪತ್ತಿಕ ಭದ್ರತಾ ಯೋಜನೆಯೊಂದನ್ನು ಸಿದ್ಧಪಡಿಸುವದು, (೩) ಶೀಘ್ರವಾಗಿ ಮತ್ತು ಪಕ್ಷಗಾರರು ಶಕ್ತಿಯ ಹೊರಗೆ ಖರ್ಚು ಮಾಡುವ ಪ್ರಸಂಗವಿಲ್ಲದೆ ನ್ಯಾಯದಾನ ಮಾಡಲು ಅನುಕೂಲವಾಗುವಂತೆ ಮುಂಬಯಿ ಹಾಯಕೋರ್ಟ ಸರ್ಕಿಟ (ಸಂಚಾರಿ) ಹಾಯಕೋರ್ಟಿನಲ್ಲಿ ರೂಪಾಂತರ ಹೊಂದಿ, ಒಬ್ಬಿಬ್ಬ ನ್ಯಾಯಾಧೀಶರನ್ನು ಕರ್ನಾಟಕಕ್ಕೆ ಕಳಿಸಿ ಕರ್ನಾಟಕದಲ್ಲಿಯೇ ಈ ಭಾಗದ ವ್ಯವಹರಣೆಗಳ ತೀರ್ಮಾನ ಮಾಡುವಂತೆ ಸರಕಾರವು ಏರ್ಪಾಟು ಮಾಡಬೇಕೆಂದು ಸೂಚಿಸಿ ಆ ಸೂಚನೆಯನ್ನು ಮನ್ನಿಸಿಕೊಳ್ಳುವದು, (೪) ವಕೀಲರನ್ನೂ ಕೋರ್ಟುಗಳನ್ನೂ ಬದಿಗಿಟ್ಟು ಅದಾಲತೆ ನಡಿಸಬೇಕೆಂಬ ಹೊಸ ಅಪಾಯಕರ ಪ್ರವೃತ್ತಿಯನ್ನು ಪ್ರತಿಭಟಿಸಲಿಕ್ಕೂ ನ್ಯಾಯಾಸನಗಳ ಹಾಗೂ ವಕೀಲ ವರ್ಗದ ಪ್ರತಿಷ್ಠೆ, ಗೌರವ ಮತ್ತು ಹಕ್ಕುಗಳನ್ನು ಕಾಯ್ದುಕೊಳ್ಳಲಿಕ್ಕೂ ವಕೀಲರ ಸಂಘಟನೆ ಮಾಡಿ, ಇಡೀ ಕರ್ನಾಟಕದ ವಕೀಲ ಸಂಘವೊಂದನ್ನು ಸ್ಥಾಪಿಸುವದು, ಇವೇ ಮೊದಲಾದ ಮಹತ್ವದ ವಿಷಯಗಳು ಈ ಪರಿಷತ್ತಿನಲ್ಲಿ ಚರ್ಚೆಗೆ ಬರುವವೆಂದೂ ತಿಳಿಯುತ್ತದೆ.

— ಹಿಂದಿ ರಾಷ್ಟ್ರೀಯ ಸಭೆಯ ೫೫ನೇ ಮಹಾಧಿವೇಶನವು ಇದೇ ಬರುವ ಡಿಸೆಂಬರ ತಿಂಗಳಲ್ಲಿ ಜಯಪುರದಲ್ಲಿ ಸೇರಲಿದೆಯಷ್ಟೇ. ಸ್ವಾಗತ ಸಮಿತಿಯು ಈ ಅಧಿವೇಶನದ ಸಿದ್ಧತೆಗಳನ್ನು ಭರದಿಂದ ಮಾಡತೊಡಗಿದೆ. ಅಧಿವೇಶನದ ಮಂಟಪವನ್ನೂ ಪ್ರೇಕ್ಷಕ ಪ್ರತಿನಿಧಿಗಳ ಬಿಡಾರಗಳನ್ನೂ ಜಯಪುರ ಮತ್ತು ಝಾಲನಾ ಗ್ರಾಮ ಇವುಗಳ ನಡುವಿನ ಬೆಟ್ಟದ ಪ್ರದೇಶದಲ್ಲಿ ಕಟ್ಟುವ ಯೋಜನೆಯಾಗಿದೆ. ನೂತನವಾಗಿ ನಿರ್ಮಾಣವಾಗುವ ಈ ನಗರವನ್ನು "ಗಾಂಧಿ ನಗರ" ವೆಂದು ಸಂಬೋಧಿಸಲಾಗುವದು. ಬೆಟ್ಟದಲ್ಲಿ ಅವಶ್ಯವುಳ್ಳ ರಸ್ತೆಗಳನ್ನೂ ನಳಗಳನ್ನೂ ವಿದ್ಯುತ್ತಿನ ಪೂರೈಕೆ ಕೇಂದ್ರಗಳನ್ನೂ ಕಟ್ಟಿಸಲಾಗುವದು. ಈ ನೂತನ ನಗರದ ನಿರ್ಮಾಣಕ್ಕೆ ೫೦ ಲಕ್ಷ ರೂ ವೆಚ್ಚ ಬರುವದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಜಯಪುರ ಸರಕಾರವು ೨೦ ಲಕ್ಷ ರೂಗಳನ್ನು ಪೂರೈಸುವದು. ಈ ಗಾಂಧಿ-ನಗರವು ನಾಲ್ಕು ದಿನಗಳ ಮಾಯಾನಗರಿಯಾಗಿದೆ. ರಾಷ್ಟ್ರೀಯ ಸಭೆಯ ಅಧಿವೇಶನ ಮುಗಿದ ನಂತರ ಸಹಸ್ರಾವಧಿ ನಿರಾಶ್ರಿತರನ್ನು ನೆಲಿಸಲಿಕ್ಕೆ ಇದೊಂದು ಶಾಶ್ವತ ಪಟ್ಟಣವಾಗುವದು. ಈ ಪಟ್ಟಣದಲ್ಲಿ ನಿರಾಶ್ರಿತರನ್ನು ನೆಲಿಸುವ ಯೋಜನೆಗಾಗಿ ಹಿಂದ ಸರಕಾರವು ೩೬ ಲಕ್ಷ ರೂಗಳನ್ನು ಈಗಾಗಲೇ ಮಂಜೂರ ಮಾಡಿದೆ. ಗಾಂಧಿ ನಗರದೊಳಗಿನ ಕೊಂಗ್ರೆಸ ಅಧಿವೇಶನ ಮಂಟಪವು ೬ ಲಕ್ಷ ಪ್ರೇಕ್ಷಕ ಪ್ರತಿನಿಧಿಗಳನ್ನು ಹಿಡಿಯುವಷ್ಟು ವಿಶಾಲವಾಗುವದಂತೆ. ಮಂಟಪದ ಹೊರಗೆ ಸಹ ೨೦ ಲಕ್ಷ ಜನರು ನಿಲ್ಲುವಷ್ಟು ವಿಶಾಲ ಬೈಲು ತಯಾರಿಸಲ್ಪಡುವದೆಂದೂ ಅಲ್ಲಿ ಕೂಡ ಧ್ವನಿವರ್ಧಕಗಳನ್ನು ನಿಲ್ಲಿಸಿ ಗಾಂಧಿ ನಗರದಲ್ಲಿ ಎಲ್ಲ ಕಡೆಗಳಲ್ಲೂ ಅಧಿವೇಶನದ ಕಾರ್ಯಕಲಾಪಗಳು ಕೇಳಬರುವಂತೆ ಏರ್ಪಾಟು ಮಾಡಲಾಗುವದೆಂದೂ ಸ್ವಾಗತ ಸಮಿತಿಯ ಕಾರ್ಯವಾಹಕರು ಹೇಳುತ್ತಾರೆ. ಕೊಂಗ್ರೆಸ ಅಧಿವೇಶನದ ಕಾಲಕ್ಕೆ ೬ ಲಕ್ಷ ಜನರಿಗೆ ಅನ್ನ ಪೂರೈಕೆ ಮಾಡುವ ವ್ಯವಸ್ಥೆಯೂ ಮಾಡಲ್ಪಡುವದಂತೆ.

PRESS NOTE.

The Census of Refugees from West Pakistan shall be taken from 25th to 30th of October 1948 (both days inclusive) For the Refugees residing in the areas indicated below, centres have been opened at the places shown against them The heads of families of Refugees residing in the respective areas are requested to present themselves at the centres set up for the Census between 25th and 30th of October 1948 and get themselves and members of their families enumerated

Area	Place of Centre
Karwar Town	Mamlatdar s office Karwar
Siddapur Town	Mamlatdar s office Siddapur
Mundgod Town	Mamlatdar s office Mundgod
Indoor Village	Chavdi (Patel s House) at Indoor
Haliyal Town	Mamlatdar s office Haliyal
Supa Town	Mahalkary s office Supa

Karwar 8 10-1948

L F SALDANHA
Collector of Kanara

— ಅತಿ-ಪ್ರಸರಣವನ್ನು ಎದುರಿಸುವ ಒಂದು ಉಪಾಯವೆಂದು ಹಿಂದ ಸರಕಾರವು ಎಲ್ಲ ಪ್ರಾಂತಿಕ ಸರಕಾರಗಳಿಗೆ ತಮ್ಮ ತಮ್ಮ ಆಡಳಿತೆಯ ಖರ್ಚಿನಲ್ಲಿ ಶಕ್ಯವಿದ್ದಷ್ಟು ಕತ್ತರಿ ಮಾಡಬೇಕೆಂದು ವಿಧಿಸಿದೆ. ಈ ಆದೇಶಕ್ಕನುಸಾರವಾಗಿ, ಖರ್ಚಿನ ಉಳಿತಾಯದ ಪ್ರಥಮ ಹೆಜ್ಜೆಯೆಂದು ಮಧ್ಯಪ್ರಾಂತ ಸರಕಾರವು ಪ್ರಾಂತದೊಳಗಿನ ನಾಲ್ಕು ಕಮಿಶನರ-ಕಚೇರಿಗಳನ್ನೂ ಹುದ್ದೆಗಳನ್ನೂ ಇದೇ ನವಂಬರ ತಿಂಗಳ ಪ್ರಾರಂಭದಿಂದ ಮುಚ್ಚುವ ತೀರ್ಮಾನ ಮಾಡಿದೆ.

ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆ

ಮುಂಬಯಿ ಕೆಸಲ್
ತಾ ೨೧-೮-೧೯೪೮

ಆಜ್ಞೆ.

ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು ೧೯೪೬

ನಂ ೨೯೮-೩ — ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬ರ ಮುಂಬಯಿಯ ೨೨ನೇ ಕಾನೂನಿನ) ೪ನೇ ಕಲಮಿನಲ್ಲಿಯ ದೊರೆತ ಅಧಿಕಾರವನ್ನು ಉಪಯೋಗಿಸಿ ಹಾಗೂ ತಾ ೯-೧-೧೯೪೭ರ ಪುನರ್ರಚನೆ ಖಾತೆಯವರು ಹೊರಡಿಸಿದ ೯೨೫೬/೨೪ನೇ ನಂಬರದ ಸರಕಾರ ಆಜ್ಞೆಯನ್ನು ರದ್ದುಗೊಳಿಸಿ, ಮುಂಬಯಿ ಸರಕಾರವು ಈ ಮೂಲಕ ಆಜ್ಞೆ ವಿಧಿಸುತ್ತದೇನೆಂದರೆ ರವಿವಾರ ತಾ ೨೯-೮-೧೯೪೮ರಿಂದ ಮುಂದೆ ಯಾರೂ ಈ ಕೆಳಗೆ ಕೊಟ್ಟ ಜಾತಿ ಮತ್ತು ವರ್ಗಗಳಲ್ಲಿ ಬರುವ ಯಾವದೇ ದನವನ್ನು ಕೊಲ್ಲಕೂಡದು, ಕೊಲ್ಲಿಸಕೂಡದು ಕೊಲ್ಲುವ ಸಲುವಾಗಿ ಸಂಪಾದಿಸಕೂಡದು ಅಥವಾ ಕೊಲ್ಲುವ ಬಗ್ಗೆ ಪುನರ್ವಿಕ್ರಯಿಸಕೂಡದು —

(೧) ಗಾಡಿ, ನೇಗಿಲು ಮೊದಲಾದವುಗಳನ್ನು ಎಳೆಯಲು (for draught) ಉಪಯೋಗಕ್ಕೆ ಒಳಪಡ ಯೋಗ್ಯವಾದ ಎತ್ತು-ಕೋಣಗಳಂತೆ ಉಪಯೋಗಿಸಲ್ಪಡುವ ಅಥವಾ ಮುಂದೆ ಈ ಉಪಯೋಗಗಳಿಗೆ ಬರುವಂಥ ಗೂಳಿಗಳು, ಎತ್ತುಗಳು ಮತ್ತು ಕೋಣಗಳು ಹಾಗೂ ಈ ಜಾತಿಯ ಗಂಡು ಕರುಗಳು, ಅಥವಾ

(೨) ಹಾಲು ಹಿಂಡಲಿಕ್ಕೆ ಅಥವಾ ಕರುಗಳನ್ನು ಹಾಕಲಿಕ್ಕೆ ಉಪಯುಕ್ತವಿರುವ ಯಾ ಮುಂದೆ ಉಪಯುಕ್ತವಾಗಬಹುದಾದಂತಹ ಆಕಳುಗಳು, ಎಮ್ಮೆಗಳು ಮತ್ತು ಕಡಸುಗಳು (heifers) ಹಾಗೂ ಈ ಜಾತಿಗಳ ಹೆಣ್ಣು ಕರುಗಳು

ಆದರೆ ಈ ಆಜ್ಞೆಯು ಯಾವದೇ ಅಂಶವು—

(ಅ) ಪ್ರಾಮಾಣಿಕತನದ ಧಾರ್ಮಿಕ ವಿಧಿಗಳಲ್ಲಿ ಕೊಲ್ಲುವ ಬಗ್ಗೆ ಮಾಡಲ್ಪಡುವ ದನಗಳ ಸಂಪಾದನೆಗಾಗಲಿ, ವಧೆಗಾಗಲಿ,

(ಬ) ಮೈಲಿ ಬೇನೆಯ ದುಗ್ಧರಸ (lymph) ವನ್ನು ತೆಗೆಯುವದಕ್ಕಾಗಿ ಬೆಳಗಾಂವದಲ್ಲಿರುವ ವೆಕ್ಸಿನ ಇನ್ಸ್ಟಿಟ್ಯೂಟಿನ ಉಪಯೋಗದ ಸಲುವಾಗಿ ಕೊಲ್ಲಲ್ಪಡುವ ದನಗಳ ಸಂಪಾದನೆಗಾಗಲಿ, ವಧೆಗಾಗಲಿ ಅನ್ವಯ ಆಗುವದಿಲ್ಲ

ವಿವರಣೆ ಈ ಆಜ್ಞೆಯ ಸಂಬಂಧದಲ್ಲಿ ವಧೆ (ಅಥವಾ ಕೊಲ್ಲುವಿಕೆ) ಯೆಂದರೆ ಮಾಂಸದ ಮಾರಾಟಗಾರ (butcher) ನು ಮಾಂಸವನ್ನು ದೊರಕಿಸುವದಕ್ಕಾಗಿ ಮಾಡಲ್ಪಡುವ ವಧೆ ಎಂದು ತಿಳಿಯತಕ್ಕದ್ದು.

ಮುಂಬಯಿಯ ಗವರ್ನರರ ಅಪ್ಪಣೆಯಂತೆ

D. N MAHTA
ಸರಕಾರದ ಕಾರ್ಯದರ್ಶಿ

ಸ್ಥಳಿಕ ವಿಷಯಗಳು.

(ಲೇಖಕ ಸ್ಥಳವಂತಿಕ)

ಕಾಯದೆ ಮಂಡಳಗಳಲ್ಲಿ ಕಲವೊಂದ ಮಹತ್ವದ ಸಾರ್ವಜನಿಕ ವಿಷಯಗಳನ್ನು ಚರ್ಚಿಸಬಯಸಿ ಠರಾವುಗಳನ್ನು ತಾವು ಮಂಡಿಸುವೆವೆಂದು ಸರಕಾರೇತರ ಸದಸ್ಯರು ಸರಕಾರಕ್ಕೂ ಕಾಯದೆ ಮಂಡಳಗಳ ಅಧ್ಯಕ್ಷರಿಗೂ ಮೊದಲಾಗಿ ಸೂಚನೆ ಕೊಟ್ಟು ಅವುಗಳ ಮಸೂದೆಗಳನ್ನೂ ಕಳಿಸಿಕೊಡುತ್ತಾರೆ. ಆದರೆ ಹೀಗೆ ಕಳಿಸಿದ ಠರಾವುಗಳ ಚರ್ಚೆಗೆ ಅವಕಾಶ ದೊರೆಯುವದು ಕಷ್ಟ. ಸರಕಾರಿ ಕೆಲಸದಲ್ಲೇ ಸಭೆಗಳ ಹೊತ್ತು ಕಳೆಯುತ್ತಿದೆ. ಆದರಿಂದ ಸರಕಾರವು ಇಂಥ ಠರಾವುಗಳೊಳಗಿನ ಸೂಚನೆಗಳ ಸಂಬಂಧದಲ್ಲಿ ತಮ್ಮ ನಿಲುಮೆಯೇನೆಂದು ಕೌನ್ಸಿಲ ಎಸೆಂಬ್ಲಿಗಳ ಅಧಿವೇಶನದ ಪ್ರಾರಂಭದಲ್ಲಿ ಒಂದು ದಿನ ಪ್ರಸಿದ್ಧಿಸಬೇಕು. ಅಂದರೆ ಠರಾವುಗಳನ್ನು ತಿಳಿಸಿದ ಸದಸ್ಯರಿಗೆ ಕೆಲ ಮಟ್ಟಿಗಾದರೂ ಸಮಾಧಾನವಾಗುವಂತಿದೆ. ಉದಾಹರಣೆಗಾಗಿ, ನಮ್ಮ ಜಿಲ್ಲೆಯ ಕೌನ್ಸಿಲ ಸಭಾಸದರಾದ ಶ್ರೀ|| ಮಹಾಬಲೇಶ್ವರ ಭಟ್ಟ ಗೋಪಿಯವರು ಈ ಅಧಿವೇಶನದಲ್ಲಿ ೪ ಠರಾವುಗಳನ್ನು ಕಳಿಸಿದ್ದರು (೧) ಅಖಿಲ ಭಾರತೀಯ ದೃಷ್ಟಿಯಿಂದ ಒಕ್ಕಲತನದ ಸುಧಾರಣೆಯ ಯೋಜನೆಯೊಂದನ್ನು ರೂಪಿಸುವ ಬಗ್ಗೆ ಅ|| ಭಾ|| ಕಾಂ| ಸಮಿತಿಯು ನೇಮಿಸಿರುವ ಉಪಸಮಿತಿಯು ತನ್ನ ವರದಿಯನ್ನು ಒಪ್ಪಿಸುವ ತನಕ ಹೊಸ ಒಕ್ಕಲತನದ ಕಾನೂನಿನ ಮಸೂದೆಯ ಚರ್ಚೆಯನ್ನು ತಡೆಹಿಡಬೇಕು (೨) ಈಗ ಅಮಲಿನಲ್ಲಿರುವ ಒಕ್ಕಲತನದ (ಹಳೆಯ) ಕಾನೂನಿನ ಉದ್ದೇಶ ಎಷ್ಟರ ಮಟ್ಟಿಗೆ ಸಾರ್ಥಕವಾಗಿರುತ್ತದೆಂಬುದರ ಚೌಕಶಿ ಮಾಡಲಿಕ್ಕೂ ಯುಕ್ತ ಸೂಚನೆಗಳನ್ನು ಮಾಡಲಿಕ್ಕೂ ಅಧಿಕಾರಿಗಳ ಹಾಗೂ ಅಧಿಕಾರೇತರರ ಒಂದು ಚೌಕಶಿ ಸಮಿತಿಯನ್ನು ನೇಮಿಸಬೇಕು (೩) ಹೊಲಗಳ ಸರಾಸರಿ ಉತ್ಪತ್ತಿಯನ್ನು ನಿರ್ಣಯಿಸಲು ಯಾವದೊಂದು ಶಾಸ್ತ್ರಶುದ್ಧ ಕ್ರಮವನ್ನು ಸರಕಾರವು ಕೈಕೊಳ್ಳಬೇಕು (೪) ಕಾನಡಾ ಮತ್ತು ಧಾರವಾಡ ಜಿಲ್ಲೆಗಳೊಳಗಿನ ಮಲೆನಾಡು ಪ್ರದೇಶಗಳಿಗೆ ಮೈಸೂರ ಸರಕಾರದ ಮಲೆನಾಡಿನ ಅನುಕೂಲತೆಗಳನ್ನು ಸರಕಾರವು ಒದಗಿಸಿಕೊಡಬೇಕು. ಇವೇ ಶ್ರೀ|| ಗೋಪಿಯವರು ಕಳಿಸಿಕೊಟ್ಟ ಸೂಚನೆಗಳಾಗಿದ್ದವು. ನ್ಯಾಯ ಮತ್ತು ಅಮಲಬಜಾವಣಿ ವಿಭಾಗಗಳನ್ನು ಕೂಡಲೇ ಬೇರ್ಪಡಿಸಬೇಕಾಗಿ ಎಸೆಂಬ್ಲಿಯ ಸಭಾಸದ ಶ್ರೀ|| ಜ.ಕಾ.ಕೋ. ಶಮಸುದ್ದೀನರೂ ಒಂದು ಠರಾವಿನ ಸೂಚನೆ ಕೊಟ್ಟಿದ್ದರು. ಇವುಗಳಲ್ಲಿ ಯಾವದೇ ಠರಾವು ಈ ಅಧಿವೇಶನದಲ್ಲಿ ಇಲ್ಲವೆ ಮುಂದಿನ ಆಯವ್ಯಯ ಪತ್ರಿಕೆಯ ಅಧಿವೇಶನದಲ್ಲಿ ಚರ್ಚೆಗೆ ಬರುವ ಸಂಭವ ತೋರುವದಿಲ್ಲ. ಆದರಿಂದ ಈ ಸೂಚನೆಗಳ ಬಗ್ಗೆ ಸರಕಾರದ ಅಭಿಪ್ರಾಯವೇನೆಂಬುದು ಜನರಿಗೆ ತಿಳಿಯುವಂತಿರದು. ಶ್ರೀ|| ಗೋಪಿ-ಶಮಸುದ್ದೀನರ ಠರಾವುಗಳೊಳಗಿನ ವಿಷಯಗಳು ಜನಹಿತ-ಸಾಧನೆಗೆ ನಿಕಟ ಸಂಬಂಧವುಳ್ಳವುಗಳಾಗಿರುತ್ತವೆ. ಈ ವಿಷಯಗಳ ಸಂಬಂಧದಲ್ಲಿ ಸರಕಾರದ ಮನದೊಲವು ಜನರಿಗೆ ತಿಳಿಯುವದು ಅಗತ್ಯವುಂಟು. ಆದರಿಂದ ಕಾನೂನ ಮಂಡಳಗಳ ಅಧಿವೇಶನ ನಡೆಯುವದರೊಳಗಾಗಿ ಬೇರೆ ಬೇರೆ ಸಭಾಸದರು ಸೂಚಿಸಿದ ಬೇರೆ ಬೇರೆ ಠರಾವುಗಳ ಸಂಬಂಧದಲ್ಲಿ ತಮ್ಮ ಅಂಬೋಣವೇನಿರುತ್ತದೆಂದು ಸರಕಾರವು ಅವಶ್ಯ ಪ್ರಕಟಿಸಬೇಕು.

* * *

ಒಕ್ಕಲತನದ ಸುಧಾರಣೆಯಾಗಬೇಕೆಂಬ ಮಾತು ಎಲ್ಲರಿಗೂ ಒಪ್ಪಿಗೆಯುಂಟು. ಈ ಬಗ್ಗೆ ಅಖಿಲ ಭಾರತೀಯ ದೃಷ್ಟಿಯಿಂದ ಒಂದು ಸರ್ವಸಾಮಾನ್ಯ ಯೋಜನೆ ಸಿದ್ಧವಾಗಬೇಕಾಗಿದೆ. ಇಡೀ ಹಿಂದುಸ್ಥಾನ ದೇಶವನ್ನು ಒಂದುಗೂಡಿಸುವದಕ್ಕಾಗಿ ಹಿಂದ ಸರಕಾರವು ಪ್ರಯತ್ನಪಡುತ್ತಿರುವಾಗ ಒಕ್ಕಲತನವನ್ನು ಪುನರ್ಘಟಿಸುವದಕ್ಕಾಗಿ ಕೆಲವು ಸಾಮಾನ್ಯ ಮೂಲತತ್ವಗಳನ್ನು ಕಂಡುಹಿಡಿಯಬೇಕಾದದ್ದು ಅಪರಿಹಾರ್ಯ. ಒಕ್ಕಲತನದಲ್ಲಿ ವಿವಿಧ ಪ್ರಕಾರಗಳವ ಒಡೆಯರೆಲ್ಲ ಜಮೀನದಾರರೆಂದೂ ಒಕ್ಕಲಿಗರೆಲ್ಲ ರೈತರೆಂದೂ, ಜಮೀನದಾರರೆಲ್ಲ ರೈತರ ಕಷ್ಟದಿಂದ ಪುಷ್ಟರಾಗುವ ಸೋಮಾರಿ ವ್ಯಕ್ತಿಗಳೆಂದೂ ಗ್ರಹಿಕೆ ಮಾಡಿಕೊಂಡು, ಎಲ್ಲರನ್ನೂ ಒಂದೇ ಪಂಕ್ತಿಯಲ್ಲಿ ಸೇರಿಸಿ ದಣಿಸುವದು ತರವಲ್ಲ. ಸಂಯುಕ್ತ ಪ್ರಾಂತದ ಸರಕಾರವು ಈ ಬಗ್ಗೆ ಒಂದು ಸಮಿತಿಯನ್ನು ನೇಮಿಸಿ, ಅದರ ವರದಿಯನ್ನು ತರಿಸಿಕೊಂಡು ಪ್ರಾಂತದೊಳಗಿನ ಜಮೀನದಾರಿಯನ್ನು ನಷ್ಟಗೊಳಿಸುವ ಕಾನೂನನ್ನು ಮಾಡಲಿಕ್ಕಿದೆ. ಈ ಕಾನೂನಿನಲ್ಲಿ ಸಹ "ಸೀರ ಮತ್ತು ಖುದ್ದ ಕಷ್ಟ ಭೂಮಿಗಳನ್ನು ಜಮೀನದಾರರ ಕಡೆಗೆ ಇರಗೊಡಬೇಕಾಗಿ ಸರಕಾರವು ನಿರ್ಣಯಿಸಿದೆ. ಖುದ್ದ ಕಷ್ಟ" ಅಂದರೆ ಜಮೀನದಾರರ ಸ್ವಂತ ಸಾಗುವಳಿಯಲ್ಲಿರುವ ಭೂಮಿಗಳನ್ನು ಸರಕಾರವು ಪಡೆಯಬಯಸುವದಿಲ್ಲ. ನಮ್ಮ ಮುಂಬಯಿ ಸರಕಾರದ ಒಕ್ಕಲತನದ ಕಾನೂನು ಕೂಡ ಸ್ವಂತ ಸಾಗುವಳಿಯ ಭೂಮಿಗಳಿಗೆ ಅನ್ವಯಿಸುವದಿಲ್ಲ. ನಮ್ಮಲ್ಲಿಯ ಚಾಲಗೇಣಿಯ ಒಕ್ಕಲತನ ಮತ್ತು ಸಂಯುಕ್ತ ಪ್ರಾಂತದೊಳಗಿನ "ಸೀರ" ಒಕ್ಕಲತನ ಒಂದೇ ಮಾರಿಯವಿರುತ್ತವೆ. ಸೀರ ಒಕ್ಕಲಿಗನನ್ನು ಬೇಕಾದಾಗ ಬಿಡಲಿಕ್ಕೂ, ಬೇರೊಬ್ಬನಿಗೆ ನೇಮಿಸಲಿಕ್ಕೂ, ಇಷ್ಟವಿದ್ದಾಗ ಹೊಲವನ್ನು ಸ್ವಂತ ಕಬಜೆಯಲ್ಲಿ ತೆಗೆದುಕೊಳ್ಳಲಿಕ್ಕೂ, ಗೇಣಿಯಲ್ಲಿ ವ್ಯತ್ಯಾಸ ಮಾಡಲಿಕ್ಕೂ ಜಮೀನದಾರನಿಗೆ ಹಕ್ಕುಂಟು. ಸಂಯುಕ್ತ ಪ್ರಾಂತದ ಕಾನೂನಿನಲ್ಲಿ ಆ ಹಕ್ಕು ಊರ್ಜಿತವಿಡಲ್ಪಟ್ಟಿವೆ. ಆದರೆ ಮುಂಬಯಿ ಪ್ರಾಂತದಲ್ಲಿ ಚಾಲಗೇಣಿ ರೈತರಿಗೆ ಸಂರಕ್ಷಣೆ ಕೊಡುವ ನೆವದಿಂದ ಒಡೆಯನಿಗೆ ಸಂಬಂಧಪಟ್ಟ ಯಾವತ್ತೂ ಹಕ್ಕುಗಳು ಸೆಳೆಕೊಳ್ಳಲ್ಪಟ್ಟಿವೆ! ಹಿಂದಿನ ಮುಂದಿನ ಗೇಣಿ ಕರಾರುಗಳೆಲ್ಲ ರದ್ದು ಮಾಡಲ್ಪಟ್ಟಿವೆ! ಹೊಲದ ಉತ್ಪತ್ತಿಯನ್ನು ಸರಕಾರವು ನಿರ್ಧರಿಸುವದು. ಗೇಣಿಯನ್ನು ಸರಕಾರವು ನಿರ್ಧರಿಸುವದು, ಆ ಗೇಣಿಯ ಬೆಲೆಯನ್ನು ಸರಕಾರವು ನಿರ್ಧರಿಸುವದು! ಒಡೆಯನನ್ನು ತಿರಸ್ಕರಿಸಿ ಹೊಲಗಳ ಸಂಪೂರ್ಣ ಉತ್ಪತ್ತಿ ಪಡೆಯುವ ಸರ್ವಾಧಿಕಾರ ಒಕ್ಕಲತನದ ಕಾನೂನಿನಿಂದ ಒಕ್ಕಲಿಗರಿಗೆ ಕೊಡಲ್ಪಟ್ಟಿದೆ! ಸಂಯುಕ್ತ ಪ್ರಾಂತದಲ್ಲಿ ಒಂದು ನಮೂನೆಯಾದರೆ ಮುಂಬಯಿ ಪ್ರಾಂತದಲ್ಲಿ ಅದಕ್ಕೆ ಸರಿ ವಿರುದ್ಧವಿರುವ ನಮೂನೆ ನಡೆಯುತ್ತಿದೆ! ಎರಡೂ ಪ್ರಾಂತಗಳು ಒಂದೇ ಹಿಂದುಸ್ಥಾನ ಸರಕಾರದ ಅಧಿಸತ್ತೆಗೆ ಒಳಪಟ್ಟಿರುವಾಗ ಒಕ್ಕಲತನದ ಕಾನೂನುಗಳಲ್ಲಿ ಹೀಗೆ ಅಜಗಜಾಂತರ ಭೇದಗಳಾಗುವದು ವಿಚಾರದ ಮುಂದೆಯ ವಲ್ಲ. ಆಯಾ ಪ್ರಾಂತಿಕ ಸರಕಾರಗಳಿಗೆ ತಮ್ಮ ತಮ್ಮ ಪ್ರಾಂತಗಳ ಪರಿಸ್ಥಿತಿಗನುಗುಣವಾದ ಕಾನೂನುಗಳನ್ನು ಮಾಡುವ ಅಧಿಕಾರವಿರಬೇಕ, ನಿಜ. ಆದರೆ ಆ ಅಧಿಕಾರಕ್ಕಾದರೂ ಕೆಲವೊಂದು ಸ್ವಾಭಾವಿಕ ನಿರ್ಬಂಧಗಳಿರಬೇಕು. ಈ ದೃಷ್ಟಿಯಿಂದ ಶ್ರೀ|| ಗೋಪಿಯವರ ಸೂಚಿಸಿದ ಮೊದಲನೇ ಠರಾವಿನ ಚರ್ಚೆ ನಡೆಯುವದು ಯುಕ್ತವಿತ್ತು. ಚರ್ಚೆಯಲ್ಲಿ ಮುಂಬಯಿ ಸರಕಾರದ ಅಂಬೋಣವೇನೆಂಬುದು ಬಯಲಿಗೆ ಬರುತ್ತಿತ್ತು. ಈಗಾದರೂ ಸರಕಾರವು ಈ ಎಲ್ಲ ಠರಾವುಗಳ ಸಂಬಂಧದಲ್ಲಿ ತಮ್ಮ ನಿಲುಮೆಯನ್ನು ಪ್ರಕಟಗೊಳಿಸಬೇಕಾಗಿ ಸೂಚನೆಯಿದೆ.

* * *

ಒಡೆಯರು ಸ್ವಂತ ಸಾಗುವಳಿಯ ಬಗ್ಗೆ ಭೂಮಿ ಬೇಡಿ ಮಾಡಿದ ದಾವೆಗಳನ್ನು ಕಿತ್ತಿ ಹಾಕಲು ಟೆನನ್ಸಿ ಅವ್ವಲ ಕಾರಕೂನರು ಈಗ ಹೊಸದೊಂದು ಕಾರಣ ಹುಡುಕಿ ತೆಗೆದಿದ್ದಾರೆ! ಒಡೆಯನು ಪ್ರಾಮಾಣಿಕತನದಿಂದ ಸ್ವಂತ ಸಾಗುವಳಿಗೆ ಹೊಲ ಬೇಕೆಂದು ಬೇಡಿದರೆ ಅದನ್ನು ಕೊಡಿಸಬೇಕಾಗಿ ಕಾನೂನಿನಲ್ಲಿದೆ. ಆದರೆ ಪ್ರಾಮಾಣಿಕತನದ ವ್ಯಾಖ್ಯೆ ಕಾನೂನಿನಲ್ಲಾಗಲಿ ನಿಯಮಗಳಲ್ಲಾಗಲಿ ಕೊಟ್ಟಿಲ್ಲ. ಈ ತನಕ ಒಡೆಯನ ಸಾಗುವಳಿಯ ವಿಚಾರದಿಂದ ಟೆನನ್ಸಿ ಅವ್ವಲ ಕಾರಕೂನರು ಅವನ ಪ್ರಾಮಾಣಿಕತೆಯನ್ನು ನಿರ್ಣಯಿಸುತ್ತಿದರು. ಒಡೆಯನಿಗೆ ಬೇರೆ ಜೀವನೋಪಾಯ ಉಂಟೋ ಹ್ಯಾಗೆ, ಒಡೆಯನ ಕಡೆ ಕೃಷಿಕರ್ಮಕ್ಕೆ ಅವಶ್ಯವುಳ್ಳ ಸಾಹಿತ್ಯ ಉಂಟೋ ಹ್ಯಾಗೆ, ಸಾಗುವಳಿಗೆ ಬೇಡಿದ ಭೂಮಿಯಿದ್ದ ಗ್ರಾಮದಲ್ಲಿ ಒಡೆಯನ ವಾಸ್ತವ್ಯ ಉಂಟೋ ಹ್ಯಾಗೆ ಎಂದೀ ಪ್ರಶ್ನೆಗಳನ್ನು ಮಾಡಿ, ಒಂದಿಲ್ಲೊಂದು ನ್ಯೂನತೆಯನ್ನು ಕಂಡುಹಿಡಿದು ಸ್ವಂತ ಸಾಗುವಳಿಯ ದಾವೆಗಳನ್ನು ಟೆನನ್ಸಿ ಅವ್ವಲ ಕಾರಕೂನರು ತಿರಸ್ಕರಿಸುತ್ತಿದ್ದರು. ಒಡೆಯರು ಈ ನಿರ್ಣಯಗಳಿಂದ ಜಾಣರಾಗಿ ಅವರ ಆ ಎಲ್ಲ ಶರ್ತಗಳನ್ನು ಪಾಲಿಸತೊಡಗಿದರು. ಆದರಿಂದ ಟೆನನ್ಸಿ ಅವ್ವಲ ಕಾರಕೂನರಿಗೆ ಸಂಕಟವಾಗಹತ್ತಿತು! ಸ್ವಂತ ಸಾಗುವಳಿಯ ದಾವೆಗಳನ್ನು ಆದಷ್ಟರ ಮಟ್ಟಿಗೆ ತಿರಸ್ಕರಿಸಬೇಕೆಂದು ಸರಕಾರದವರ ಧೋರಣವಿದೆ. ಒಡೆಯರಿಗೆ ಹೊಲಗಳ ಕಬಜೆ ಕೊಡಿಸಿದರೆ ಹಿಂಬಡತೆಯಾದೀತೆಂಬ ಭೀತಿ ಈ ಕಾರಕೂನರನ್ನು ಬಾಧಿಸುತ್ತಿದೆ! ಆದರಿಂದ ಅವರು ಈಗ ಹೊಸದೊಂದು ಕುಯುಕ್ತಿಯನ್ನು ಹುಡುಕಿ ತೆಗೆದಿದ್ದಾರೆ! ಒಡೆಯರ ಅಪೇಕ್ಷೆಯಂತೆ ಭೂಮಿಯನ್ನು ಒಡೆಯರಿಗೆ ಒಪ್ಪಿಸಿದರೆ ಒಕ್ಕಲಿಗನಿಗೆ ಜೀವನ ಸಾಗಿಸಲು ಬೇರೊಂದು ಮಾರ್ಗವುಳಿಯುವದಿಲ್ಲವಾದ್ದರಿಂದ ಕಬಜೆ ಕೊಡಿಸಲಿಕ್ಕೆ ಬರುವದಿಲ್ಲವಾಗಿ ಟೆನನ್ಸಿ ಅವ್ವಲ ಕಾರಕೂನರು ನಿರ್ಣಯಿಸಿ, ದಾವೆಗಳನ್ನು ಕಿತ್ತೊಗೆಯಲಾರಂಭಿಸಿದ್ದಾರೆ! ಭೂಮಿಯ ಕಬಜೆ ಸಿಗದಿದ್ದರೆ ಒಡೆಯನ ಜೀವನ ಸಾಗಬಲ್ಲದೇನೆಂಬ ಪ್ರಶ್ನೆ ಈ ಕಾರಕೂನರಿಗೆ ಸೂಝುವದಿಲ್ಲ! ಒಕ್ಕಲಿಗರ ಜೀವನಕ್ಕೆ ಅವಶ್ಯವಿರುವ ಕ್ಷೇತ್ರದ ಪರಿಮಾಣ ನಿಶ್ಚಿತವಿಲ್ಲ. ಒಡೆಯನ ಪ್ರಾಮಾಣಿಕತೆಯು ಒಕ್ಕಲಿಗನ ಅವಶ್ಯಕತೆಯನ್ನು ಹೊಂದಿಕೊಂಡಿರಬೇಕೆಂದು ಹೇಳಿದರೆ ಒಡೆಯನ ಪ್ರಾಮಾಣಿಕತನ ಎಂದೂ ಸಿದ್ಧವಾಗುವಂತಿಲ್ಲ! ಒಕ್ಕಲಿಗನಿಗೆ ಸಾಕಷ್ಟು ಭೂಮಿ ಬಿಟ್ಟು ಉಳಿದ ಭೂಮಿಯನ್ನಷ್ಟೇ ಒಡೆಯನಿಗೆ ಒಪ್ಪಿಸಬೇಕೆಂದು ನಿಯಮ ಮಾಡಿದರೆ ಒಡೆಯನಿಗೆ ಭೂಮಿ ಎಂದೂ ಸಿಗಲಾರದು!! ಒಕ್ಕಲಿಗನಿಗೆ ಇರುವ ಭೂಮಿಯ ವ್ಯಾಪ್ತಿಗೂ ಒಡೆಯನ ಪ್ರಾಮಾಣಿಕತನಕ್ಕೂ ಗಂಟುಹಾಕುವ ಟೆನನ್ಸಿ ಅವ್ವಲ ಕಾರಕೂನರನ್ನು ಕೊಂಡಾಡಿದಷ್ಟು ಕಡಿಮೆಯೇ ಸರಿ!

ಮೊದಲೇ ಮಂಗ, ಅದಕ್ಕೆ ಪುನಃ ಸರಾಯಿ ಕುಡಿಸಿದರೆ ಅದರ ಮಂಗಚೇಷ್ಟೆಗಳಿಗೆ ಇತಿಮಿತಿ ಉಳಿಯಲಾರದೆಂದು ಓರ್ವ ಕವಿಯು ಹೇಳಿದ್ದಾನೆ. ಅದೇ ರೀತಿ ಒಕ್ಕಲಕಸದ ಕಾನೂನು ಮೊದಲೇ ತೀರ ವಿಕ್ಷಿಪ್ತವಾದದ್ದು. ಮೇಲೆ ಅದರ ಆಡಳಿತೆ ಮಾಡುವವರಿಗೆ ಸರಕಾರದ ಗುಪ್ತ ಸೂಚನಾ ಪತ್ರಗಳ ಸಹಾಯವೂ ಅಮಲು ಸಿಗುತ್ತಿದೆ! ಇಂದ ಮೇಲೆ ಟೆನನ್ಸಿ ಅಸ್ವಲ ಕಾರಕೂನರ ಮರ್ಕಟ ಚೇಷ್ಟೆಗಳಿಗೆ ಮಿತಿ ಹೇಗುಳಿದೀತು? ಅವರ ಈ ಲೀಲೆಗಳ ಮೂಲಕ ಒಕ್ಕಲಿಗರ ಲೋಕದಲ್ಲಿ ಪ್ರಳಯತನ ಹುಟ್ಟಿದರೆ ಆಶ್ಚರ್ಯಪಡಬೇಕಾದ ಕಾರಣವಿಲ್ಲ. ದಿವಾನಿ ನ್ಯಾಯಾಧೀಶರ ಅಂಕುಶವಿದ್ದರೆ ಟೆನನ್ಸಿ ಅಸ್ವಲ ಕಾರಕೂನರಾಗಲಿ ಮುಂಬಯಿ ಸರಕಾರವಾಗಲಿ ಅಡ್ಡ ಮಾರ್ಗ ಹಿಡಿಯಲು ಧೈರ್ಯಪಡುತ್ತಿದ್ದಿಲ್ಲ. ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಮುಂಬಯಿ ಸರಕಾರದ ಈ ಲೋಕಕಂಟಕ ವ್ಯವಹಾರವನ್ನು ನಿರ್ಬಂಧಿಸಲು ತಕ್ಕ ಉಪಾಯಯೋಜನೆ ಮಾಡದಿದ್ದರೆ ರಾಷ್ಟ್ರೀಯ ಸಭೆಯ ಕೀರ್ತಿಗೆ ಕಲಂಕ ಬರುವದು ಖಂಡಿತ.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಯಿಲ್ಲ. ಬಹಳ ಸೆಕೆಯಾಗುತ್ತಿದೆ. ಈ ಸೆಕೆ ನೋಡಿದರೆ ಬೇಗನೆ ಪುನಃ ಮಳೆಯಾಗುವದೆಂದು ತೋರುತ್ತಿದೆ.

ಭತ್ತ ಬೆಳೆಯುವ ಪ್ರದೇಶಗಳಲ್ಲಿ ಬೇಗನೇ ಒತ್ತಾಯದ ಖರೀದಿ(ಲೆವ್ಹಿ)ಯ ಕ್ರಮ ಜಾರಿಯಲ್ಲಿ ಬರುವದಾಗಿ ಮುಂಬಯಿ ಸರಕಾರದ ಆಹಾರ ಮಂತ್ರಿಗಳಾದ ಮಾನ್ಯ ದಿನಕರರಾವ ದೇಸಾಯಿಯವರು ಆಟಿಯ ೩ನೇ ಸಪ್ಟೆಂಬ್ರದಲ್ಲಿ ಜಾಹೀರಪಡಿಸಿದ್ದರ ಪರಿಣಾಮವಾಗಿಯೋ ಮಾರಾಟಕ್ಕೆ ತೆಗೆಯದೆ ಇಷ್ಟು ದಿನ ಬಚ್ಚಿಟ್ಟ ಅಕ್ಕಿ–ಭತ್ತಗಳನ್ನು ಇನ್ನೂ ಹಾಗೆಯೇ ಇಟ್ಟರೆ ಅವು ಹಾಳಾಗಿ ನಷ್ಟವಾದೀತೆಂಬ ಅಂಜಿಕೆಯುಂಟಾದ್ದರಿಂದಲೋ ಯಾ ಹೊಸ ಬೆಳೆ ಬಳಿತಿರುವದರಿಂದ ಮುಂದೆ ದರಗಳು ಇಳಿಯುವವೆಂಬ ಕಲ್ಪನೆಯುಂಟಾದ್ದರಿಂದಲೋ ಸಂಗ್ರಹಕಾರರು ತಮ್ಮ ಅಕ್ಕಿ–ಭತ್ತಗಳನ್ನು ಈಗ ಭರಭರನೆ ಪೇಟೆಗೆ ಕಳಿಸಲಾರಂಭಿಸಿದ್ದಾರೆ. ಅದರಿಂದ ಅಕ್ಕಿಯ ದರಗಳೀಗ ಭರಭರನೆ ಇಳಿಯುತ್ತಿವೆ. ೮-೧೦ ದಿನಗಳ ಹಿಂದೆ [illegible] ರೂ.ಗೆ ಒಂದು ಖಂಡಿಯಂತೆ ಮಾರಾಟವಾಗುತ್ತಿದ್ದ ಅಕ್ಕಿಯು ಈಗ ರೂ. [illegible]ಕ್ಕೊಂದು ಖಂಡಿಯಂತೆ ಸಿಗುತ್ತಿದೆ. ಇನ್ನೂ ಈ ದರಗಳು ಇಳಿಯುವ ಲಕ್ಷಣಗಳು ತೋರುತ್ತವೆ. ಘಟ್ಟದ ಮೇಲ್ಭಾಗಗಳಲ್ಲಿ ಅಕ್ಕಿಯ ದರಗಳು ಇಳಿದಂತೆ ರಾಗಿ, ಜೋಳ ಮೊದಲಾದ ಆಹಾರ-ಧಾನ್ಯಗಳ ಧಾರಣೆಗಳೂ ಇಳಿಯುತ್ತಿವೆ.

ಗದ್ದೆ ಕೊಯಿಲಿಗೆ ಆರಂಭವಾದಂತೆ ಬೆಳೆಯ ಮಾನ ಕಂಡು ಹಿಡಿಯುವ ಪ್ರಯೋಗಗಳೂ ಆರಂಭವಾಗುತ್ತಿದೆ. ಕುಳ್ವಾರ ಖನ್ನಳ್ಳಿ ಗ್ರಾಮದಲ್ಲಿ ಪ್ರಯೋಗವಾದ ಸುದ್ದಿಯುಂಟು.

ಸಮಾಧಿಸ್ಥ ಶ್ರೀ ಗೋಕರ್ಣ ಮಠಾಧೀಶ ಶ್ರೀ ಮದಿಂದಿರಾಕಾಂತ ತೀರ್ಥ ಗುರುಗಳ ಆಶೀರ್ವಾದದಿಂದ ಮತ್ತು ಅಪೇಕ್ಷೆಯಂತೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುತ್ತ ಬಂದಿರುವ ಶ್ರೀಮನ್ಮಧ್ವಾಚಾರ್ಯರ ಜಯಂತ್ಯುತ್ಸವವು ಕಳೆದ ವಿಜಯಾದಶಮಿಯ ದಿನ ವಿಜೃಂಭಣೆಯಿಂದ ನಡೆಯಿತು. ಸಂಜೆಯಲ್ಲಿ ದೇವರ ಮುಂದೆ ಅಷ್ಟಾವಧಾನ ಸೇವೆ, ಪ್ರವಚನಗಳು ಮೊದಲಾದ ಕಾರ್ಯಕ್ರಮ ನಡೆಯಿತು.

ಈ ಹಿಂದೆ ತಿಳಿಸಿದಂತೆ ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ಹುಟ್ಟು ಹಬ್ಬ ಕಳೆದ ಮಂಗಳವಾರ ಹೆಗಡೆಯ ಶ್ರೀ ನರಸಿಂಹ ದೇವರ ಗುಡಿಯೊಳಗೆ ರಾ॥ ಗೋಪಾಲಕೃಷ್ಣ ಕೃಷ್ಣ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಘದ ಅಧ್ಯಕ್ಷರಾದ ರಾ॥ ನಾರಾಯಣ [illegible] ಹೆಗಡೆ ಇವರು ಸಂಘದ ನಿಧಿ ಇನ್ನೂ ಬೆಳೆಯಬೇಕೆಂದೂ ಸರಕಾರಿ, ನಿಮ ಸರಕಾರಿ ಯಾ ಖಾಸಗಿ ನೌಕರಿಯಲ್ಲಿರುವ ಕುಲಬಾಂಧವರು ತಮ್ಮ ಒಂದು ತಿಂಗಳ ವೇತನವನ್ನು ಕಳಿಸಬೇಕೆಂದೂ [illegible] ಸಂಘಕ್ಕೆ ಒಪ್ಪಿಸಬೇಕೆಂದೂ ಅವರು ನಿರೀಕ್ಷೆ ಮಾಡಿದರು. ಸಂಘದ ವಿದ್ಯಾರ್ಥಿಗಳಿಗೆ [illegible] ಸಂಘದ ಧ್ಯೇಯ ಪೂರ್ಣವಾಗಿ ನೆರವೇರಲೆಂದೂ ತಮ್ಮ ಭಾಷಣದಲ್ಲಿ ಹೇಳಿದರು. ಅಧ್ಯಕ್ಷರ ಸಮಾರೋಪ ಮತ್ತು ಮಂಗಳಾಚರಣೆಯೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬಡಾಳದಲ್ಲಿ ಕಳವುಗಳು ಹೆಚ್ಚಾಗಿವೆಯೆಂದೂ ಪೋಲೀಸರು ತಮಗೆ ಕಾಯಬೇಕೆಂದೂ ಬಡಾಳದ ಒಬ್ಬ ಸಜ್ಜನರು ಬರೆಯುತ್ತಾರೆ.

ಹೊನ್ನಾವರ— (ತಾ ೧೬-೧೦-೪೮) ಇಲ್ಲಿಯೂ ಅಕ್ಕಿಯ ದರ ಇಳಿಯುತ್ತಿದೆ, ದಿನ ಬಿಸಿ ಇಳಿಯುತ್ತ ನಡೆದಿದೆ.

ನಿನ್ನೆ ಸಂಜೆ ೬ ಘಂಟೆ ಸುಮಾರಿಗೆ ಕರ್ನಲ್ ವ್ಯಾಸಿಪರ್ ಸಂಕದ ಕಟ್ಟೆಯ ಹತ್ತಿರ ಒಂದು ಶೋಚನೀಯ ಅನಾಹುತವಾಯಿತು. ಶ್ರೀ ಚಿತ್ರಾಪುರ ಮಠಾಧೀಶರ ಮೋಟರ ಬಂಡಿಯು ಹೊರಗಿಂದ ಹೊನ್ನಾವರಕ್ಕೆ ಬರುತ್ತಿತ್ತು. ಆಗ [illegible] ವೇಣಿ ಎಂಬ ಭಟ್ಟರೊಬ್ಬರ ಹೆಂಡತಿಯು ಕಾಲ್ನಡಿಗೆಯಿಂದ ಹೊನ್ನಾವರಕ್ಕೆ ಬರುತ್ತಿದ್ದರು. ಸಂಕದ ಕಟ್ಟೆಯ ಸಮೀಪ ಶ್ರೀಗಳ ಬಂಡಿಯ ಮಡಗಾರ್ಡು ಭಟ್ಟರ ಹೆಂಡತಿಗೆ ಅಪ್ಪಳಿಸಿತು. ಕೂಡಲೇ ಅವಳು ಎಚ್ಚರದಪ್ಪಿ ನೆಲಕ್ಕೆ ಬಿದ್ದಳು. ಅವಳನ್ನು ಅದೇ ಬಂಡಿಯಲ್ಲಿ ಹಾಕಿ ಇಲ್ಲಿಯ ಚಿಕಿತ್ಸಾಲಯಕ್ಕೆ ತಂದು ಉಪಚರಿಸಲಾಯಿತು. ಆದರೂ ಅವಳನ್ನು ಬದುಕಿಸಲಾಗಲಿಲ್ಲ. ತಮ್ಮ ಬಂಡಿಯಿಂದ ಇಂಥ ಅನಾಹುತವಾಯಿತಲ್ಲ ಎಂದು ಶ್ರೀ ಗುರುಗಳು ಬಹಳ ನೊಂದುಕೊಂಡಿದ್ದಾರೆ.

ಈ ತಿಂಗಳಿಂದ ೧೦೦ಕ್ಕೆ ೭೦ರಷ್ಟು ಸೀಧಾ ಕಾರ್ಡುಗಳನ್ನು ರದ್ದುಗೊಳಿಸಬೇಕೆಂದು ಜಿಲ್ಹಾಧಿಪರ ಹುಕುಮು ಮಾಡಿದಂತೆ ಇಲ್ಲಿಯ ಹಂಚಿಕೆ ಅಧಿಕಾರಿಗಳು ಬಹಳಷ್ಟು ಸೀಧಾ ಚೀಟಿಗಳನ್ನು ರದ್ದುಗೊಳಿಸಿದ್ದಾರೆ. ಹೀಗೆ ಮಾಡುವಾಗ ಅವರು ಬಹಳ ಪಕ್ಷಪಾತ ಮತ್ತು ಅನ್ಯಾಯ ಮಾಡಿರುತ್ತಾರೆಂಬುದೊಂದು ದೂರು ಅಲ್ಲಲ್ಲಿ ಕೇಳಿ ಬರುತ್ತಿದೆ. ಯಾರ ಸೀಧಾ–ಚೀಟಿಗಳನ್ನು ರದ್ದುಗೊಳಿಸತಕ್ಕದ್ದೆಂಬ ಬಗ್ಗೆ ಈ ಅಧಿಕಾರಿಗಳಿಗೆ ಪಕ್ಕಾ ಮತ್ತು ಸ್ಪಷ್ಟ ನಿಯಮಗಳನ್ನು ಜಿಲ್ಹಾಧಿಕಾರಿಗಳು ಹಾಕಿ ಕೊಟ್ಟಿಲ್ಲೆಂದು ತೋರುತ್ತಿದೆ. ಅದರಿಂದ ಅಧಿಕಾರಿಗಳು ತಮಗೆ ಇಷ್ಟವಿಲ್ಲದವರ ಚೀಟಿಗಳನ್ನು ರದ್ದುಗೊಳಿಸಿದ್ದಾರೆ! ತಮಗೆ ಬೇಕಾದವರ ಮತ್ತು ತಮ್ಮ ಇಷ್ಟ–ಮಿತ್ರ–ನೆಂಟರ ಚೀಟಿಗಳನ್ನು—ಅವರಿಗೆ ರೂ ೧೦೦ ರೂ ಗಳಂತ್ಯೂ ಹೆಚ್ಚಿಗೆ ಮಾಸಿಕ ವೇತನ ಯಾ ಉತ್ಪನ್ನ ಸಿಗುತ್ತಿದ್ದಾಗ್ಯೂ—ಊರ್ಜಿತವಿಟ್ಟಿದ್ದಾರೆ!! ಹೀಗೇಕೆ ಮಾಡಿದ್ದೀರೆಂದು ಯಾರಾದರೂ ಕೇಳಿದರೆ "ಅವರ ಕುಟುಂಬ ದೊಡ್ಡದು. ಅವರ ಸಂಸಾರ ಬಹಳ ದೊಡ್ಡದು" ಎಂದು ಉತ್ತರಿಸಿ ಜಾರಿಕೊಳ್ಳುತ್ತಾರೆ! ಕಡಿಮೆ ಸಂಬಳವುಳ್ಳ ಜನರು ಸೀಧಾ–ಚೀಟಿಗಳನ್ನು ಬೇಡಿದರೆ "ನಿಮಗೆ ಸಂಬಳ ಸಿಗುವದಿಲ್ಲವೇ?" ಎಂದು ದಬಾಯಿಸುತ್ತಾರೆ! ಜಿಲ್ಹಾಧಿಕಾರಿಗಳು ಇತ್ತ ಲಕ್ಷ್ಯಗೊಟ್ಟು ಬಡ ಸರಕಾರಿ ನೌಕರರಿಗಾಗುವ ಅನ್ಯಾಯವನ್ನು ಪರಿಹರಿಸಬೇಕು ಎಂದು ಪರಿಣಾಮಗೊಂಡ ಓರ್ವ ಸರಕಾರಿ ನೌಕರರು ತಿಳಿಸುತ್ತಾರೆ.

ಮುಂಬಯಿ ಕರ್ನಾಟಕದ ಆಯುರ್ವೇದಿಕ ಎಲ್ ಎಮ್ ಪಿ ವೈದ್ಯರ ಪ್ರಥಮ ಸಮ್ಮೇಲನವು (ಈ ಹಿಂದೆ ನಿರ್ಣಯವಾದಂತೆ ಗೋಕರ್ಣದಲ್ಲಿ ಜರುಗದೆ) ಇದೇ ಬರುವ ಮಂಗಳವಾರ ತಾ ೨೬–೧೦–೪೮ಕ್ಕೆ ಬೆಳಗಾಂವಿಯಲ್ಲಿ ಕೂಡಿ ನಡೆಯಲಿದೆ. ಅದೇ ಸಮಯದಲ್ಲಿ ಬೆಳಗಾಂವಿಯಲ್ಲಿ ಕೂಡುವ ಸಮಗ್ರ ಕರ್ನಾಟಕ ಆಯುರ್ವೇದಿಕ ಸಮ್ಮೇಲನದ ಅಧ್ಯಕ್ಷರೇ ಈ ಸಮ್ಮೇಲನದ ಅಧ್ಯಕ್ಷರಾಗುವರೆಂದೂ ಕರ್ನಾಟಕದೊಳಗಿನ ಎಲ್ಲ ಎಲ್ ಎಮ್ ಪಿ ಗಳು ಸಮ್ಮೇಲನಕ್ಕೆ ಬಂದು, ಅದನ್ನು ಯಶಸ್ವಿಗೊಳಿಸಬೇಕೆಂದೂ ಮಂಗಳೂರ ಚಿಕಿತ್ಸಾಲಯದ ಆಯುರ್ವೇದಿಕ ವೈದ್ಯರಾಗಿರುವ ರಾ॥ ಎಸ್ ಆರ್ ಆಚಾರ್ಯರು ವಿನ್ನವಿಸುತ್ತಾರೆ.

ಶಿರಾಲಿ— (ತಾ ೧೦–೧೦–೪೮) ಒಕ್ಕಲಕಸದ ಕಾನೂನಿನಿಂದ ಒಕ್ಕಲಿಗರ ಸವಲತ್ತುಗಳಿಂದಲೂ ಈ ಕಡೆಯ ಉದ್ದಾನು ಒಕ್ಕಲಿಗರ ಸಮಾಧಾನವಾಗಿಲ್ಲ! ಅವರು ಕಾಯಿದೆ–ಕಾನೂನುಗಳನ್ನು ಕಾಲಡಿ ತುಳಿದು ಹೊಲಗಳ ಬೆಳೆಯನ್ನು ತಾವೇ ಎತ್ತಿಹಾಕಿ ಒಡೆಯರನ್ನು ಪಡಿಸಲಾರಂಭಿಸಿದ್ದಾರೆ. ಬೆಂಗ್ರೆಯ ಓರ್ವ ಖಾತೆದಾರರಿಗೆ ಟೆನನ್ಸಿ ಕೋರ್ಟಿನ ತೀರ್ಮಾನದಂತೆ ಕಳೆದ ಜೂನ ತಿಂಗಳ ಅವರ ಹೊಲಗಳ ಕಬಜೆ ಗ್ರಾಮಸ್ಥರ ಮುಖಾಂತರ ಸಿಕ್ಕಿತ್ತು. ಸಾಗುವಳಿ ಮಾಡಿ ಈ ಸಾರೆ ಬೆಳೆಯನ್ನೂ ತಯಾರಿಸಿದ್ದರು. ಆ ಬೆಳೆಯನ್ನು ಕಳೆದ ಬುಧವಾರ ಕಬಜಾ ತಪ್ಪಿಸಿದ ಕೃಷಿಕನು ೧೦–೧೧ ಮಂದಿ ಕೂಡಿಕೊಂಡು ಕೊಯ್ದು ಒಯ್ದು ಸುದ್ದಿ ಬಂದಿದೆ! ಪ್ರಾಯಃ ಹೊಲದ ಖಾತೆದಾರರು ಅವರಿಗೆ ಆತಂಕ ಮಾಡಲಿಲ್ಲ. ಅವರು ಮಾಡಿದ್ದರೆ ಅವರ ಜೀವ ಹೋಗುವ ಸಂಭವವಿತ್ತು. ಮುರ್ಡೇಶ್ವರ ಗ್ರಾಮದೊಳಗಿನ ಒಂದು ಹೊಲದ ಕಬಜೆ ಹಿಂದಾಲಯ ಓರ್ವ ಭೂಮಾಲಿಕರಿಗೆ ಸಿಕ್ಕಿತ್ತು. ಹೊಲದ ಬೆಳೆಯನ್ನು ಕೊಯ್ಯಲು ನಿನ್ನೆ ಅವರು ಕೆಲವು ಆಳುಗಳನ್ನು ಹಾಕಿದ್ದರು. ಆಗ ಕಬಜಾ ಬಿಡಿಸಿದ ಒಕ್ಕಲಿಗನು ಆ ಆಳುಗಳಿಗೆ, ಹೊಲದಲ್ಲಿ ಇಳಿಯಬೇಡಿರೆಂದೂ ಇಳಿದರೆ ಕಾಲು ಮುರಿಯುವೆನೆಂದೂ ಬಹಳ ಬೆದರಿಸಿದನಂತೆ! ಆದರೆ

ವಿಮೆ ತೆಗೆಯಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ ೧೯೩೯ – ಧಾರವಾಡದಲ್ಲಿ)

ಇವರ ಉಡುಪಿ ಆಫೀಸಿಗೆ ಬರೆಯಿರಿ.

ಉಡ್ಪಿ ಆಫೀಸ —

Post Box No 10,
UDIPI, S Kanara

[illegible]

ಅಲ್ಲಲ್ಲಿಯ ಶಾರದೋತ್ಸವಗಳೂ ನಾಡಹಬ್ಬಗಳೂ.

ಗೋಕರ್ಣ— [illegible]

ಮೂರೂರು— [illegible]

ಬಗೀರ— [illegible]

ಉಂಚಗಿ— [illegible]

ಹಳದೀಪೂರ— [illegible]

ಕೆಕ್ಕಾರ— [illegible]

ಗೋಕರ್ಣ— [illegible]

ದೇವರಕೊಪ್ಪ— [illegible]

ದೊಡ್ಮನೆ— [illegible]

ಜಗೇ— [illegible]

ಯಲ್ಲಾಪುರ— [illegible]

ಮುಂಡಗೋಡ— [illegible]

ಯಲ್ಲಾಪುರ— [illegible]

ಅಲ್ಲಲ್ಲಿ ಗಾಂಧಿ-ಜಯಂತಿ.

ಮಂಚಿಕೇರಿ— [illegible]

ಕಡಬಾಳ— [illegible]

ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ ಲಿಮಿಟೆಡ್, ಕುಂದಾಪುರ

[illegible]

ಮಹಾಲಕ್ಷ್ಮಿ ಬುಕ್ ಡಿಪೋ, ಕುಂದಾಪುರ

ಜಿಲ್ಲಾ ಸಮಾಚಾರ.

ಕಾರವಾರ— ಸಪ್ಟೆಂಬರ ತಿಂಗಳ ಸರಕಾರವು ಬ್ರಿಟಿಶ ಸರಕಾರದಿಂದ ಪಡೆಕೊಂಡ "ದಿಲ್ಲಿ ಯುದ್ಧ ಹಡಗವು ಇದೇ ಬರುವ ತಾ ೨೨-೧೦-೪೮ಕ್ಕೆ ಇಲ್ಲಿಗೆ ಬಂದು ಒಂದು ದಿನ ಇಲ್ಲಿದ್ದು ಮರುದಿನ ಮುಂದೆ ಹೊರಟು ಹೋಗುವದೆಂದು ಪ್ರಕಟವಾಗಿದೆ ಈ ಹಡಗವನ್ನು ನೋಡ ಬಯಸುವವರು ತಾ ೨೨ನೇ ಮಧ್ಯಾಹ್ನ ... ದಿಂದ ಸಂಜೆ ೫॥ ವರೆಗೆ ನೋಡಿಕೊಳ್ಳಬಹುದೆಂದೂ ಈ ಅವಧಿಯಲ್ಲಿ ಸಾರ್ವಜನಿಕರಿಗೆ ಹಡಗ ನೋಡಲು ಮುಕ್ತ ದ್ವಾರ ತೊರೆಯಲಾಗುವದೆಂದೂ ಜಿಲ್ಲಾಧಿಕಾರಿ ತಿಳಿಸುತ್ತಾರೆ."

ಆಟಿಯ ವಾರದ ಕೊನೆಗೆ ಕರ್ನಾಟಕ ಏಕೀಕರಣ ಸಮಿತಿಯ ಮತ್ತು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾಗಿರುವ ಶ್ರೀ॥ ಎಸ್. ನಿಜಲಿಂಗಪ್ಪಾ ಇವರು ಶ್ರೀ॥ ದತ್ತಾತ್ರೇಯ ಕರಮರಕರ, ಸಬ ಗಂಗಾಧರ ಮತ್ತು ಗೋವಿಂದ ಟಿ ರೇವಣಕರ ಇವರೊಡನೆ ಈ ಜಿಲ್ಲೆಯಲ್ಲಿ ಕರ್ನಾಟಕದ ಏಕೀಕರಣ ಪ್ರಚಾರ ಮಾಡಲಿಕ್ಕೆ ಇತ್ತ ಕಡೆಗೆ ಸಂಚಾರಕ್ಕೆ ಬಂದಿದ್ದರು ಇಲ್ಲಿಯ ಕರ್ನಾಟಕ ಸಂಘದವರ ನಡೆಸಲ್ಪಟ್ಟ ಉತ್ಸವದಲ್ಲಿ ಅವರ ವ್ಯಾಖ್ಯಾನಗಳಾದವು ಸ್ಥಾನಿಕ ಕೊಂಕಣಿ ಪ್ರಮುಖರನ್ನು ಮತ್ತು ರಾಷ್ಟ್ರ ಏಕೀಕರಣ ಸಮಿತಿಯ ಪ್ರಮುಖರನ್ನು ಕರ್ನಾಟಕ ಸಂಘದ ಪ್ರಮುಖರನ್ನೂ ಒಟ್ಟುಗೂಡಿಸಿ ಅದರ ಚರ್ಚೆ ಮಾಡಿದರು ಈ ಚರ್ಚೆ ವಿಚ್ಛಿನ್ನ ಮನಸ್ಸಿನಿಂದ ನಡೆಯಿತೆಂದೂ ಉತ್ತರ ಕಾನಡಾ ಜಿಲ್ಲೆಯು ಕರ್ನಾಟಕ ಪ್ರಾಂತಕ್ಕೆ ಸೇರಿದರೆ ಮಾತ್ರ ಅದರ ಆರ್ಥಿಕ ಅಭ್ಯುದಯವಾಗುತ್ತದೆ, ಕರ್ನಾಟಕದಲ್ಲಿ ಕೊಂಕಣಿ ಭಾಷೆಯ ಇಲ್ಲವೆ ಕೊಂಕಣಿ ಜನರ ಹಿತ ಸಂಬಂಧಗಳು ಸುರಕ್ಷಿತವಾಗುವವು ಎಂದು ಆ ಪ್ರಮುಖರಿಗೆ ಮನಗಾಣಿಸಿ ಕೊಟ್ಟಿರುವೆಂದೂ ಶ್ರೀ॥ ನಿಜಲಿಂಗಪ್ಪನವರು ಹೇಳುತ್ತಾರೆ ಶ್ರೀ॥ ನಿಜಲಿಂಗಪ್ಪನವರೂ ಅವರ ಸಂಗಡಿಗರೂ ಅಂಕೋಲಾ, ಯಲ್ಲಾಪುರ, ಹಳಿಯಾಳ ಮತ್ತು ಶಿರಸಿ ಪಟ್ಟಣಗಳಲ್ಲಿಯೂ ಸಂಚಾರ ಮಾಡಿ ಕರ್ನಾಟಕ ಏಕೀಕರಣದ ಬಗ್ಗೆ ಲೋಕಜಾಗೃತಿ ಮಾಡಿರುತ್ತಾರೆ

ಅಂಕೋಲಾ— ಇಲ್ಲಿಯ ಟಿನ್ನು ಅಪ್ಪಲ ಕಾರ ಕೊನೆಯ ಅವರಿಗೆ ಹೋದಾಗ ಶ್ರೀ ವೆಂಕಟ್ರಾಮನ ದೇವಸ್ಥಾನದ ಅಗ್ರ-ಶಾಲೆಯ ಮೇಲೆ ಕಚೇರಿ ಮಾಡುತ್ತಾರೆ ಅವರ ಈ ಕಚೇರಿಯೆಂಬುದು ದೇವಸ್ಥಾನದ ಅರ್ಚಕರಿಗೂ ಭಜಕರಿಗೂ, ದೇವರಿಗೂ ಕೂಡ ಬಹಳ ತ್ರಾಸದಾಯಕ (nuisance) ಆಗಿದೆಯಂತೆ! ಈ "ಟಿನ್ನು ಮಾಮಲೇದಾರ" ಕಚೇರಿ ನಡೆದಾಗ ಗುಡಿಯಲ್ಲಿ ದೇವದರ್ಶನಕ್ಕೆ ಬಂದ ಭಜಕರು ಘಂಟೆ ಬಾರಿಸಬಾರದಂತೆ! ದೇವರ ಆರತಿಯಾಗುತ್ತಿದ್ದರೂ ಘಂಟೆ ಜಾಂಗಟೆಗಳನ್ನು ಬಾರಿಸಕೂಡ ದಂತೆ! ವಾದ್ಯ ಬಾರಿಸಿದರೆ ಈ ಅಧಿಕಾರಿಗಳ ಕೆಲಸಕ್ಕೆ ವ್ಯತ್ಯಯ ವಾಗುತ್ತದಂತೆ! ಅದರಿಂದ ಅರ್ಚಕರು ಗುಡಿಯ ಬಾಗಿಲುಗಳನ್ನು ಮುಚ್ಚಿ— ಆರತಿ-ಅಭಿಷೇಕಗಳ ಕಾಲಕ್ಕೆ ಬಾರಿಸುವ ಘಂಟೆಯ ಸಪ್ಪಳ ಹೊರಬೀಳದ ಮಾಮಲೇದಾರ-ಮಹಾಶಯರ ಮಹತ್ವದ ಕೆಲಸಕ್ಕೆ ವ್ಯತ್ಯಯವಾಗಬಾರದೆಂದು—ಪೂಜೆ ಮಾಡುವ ಪ್ರಸಂಗ ಬಂದಿದೆ ಅದರಿಂದ ಈ ಸೀಡಿಯನ್ನು ದೇವರ ಪೋಷಕರೇ ದೇವಸ್ಥಾನದಲ್ಲಿ ಏಕೆ ಬರಮಾಡಿಕೊಳ್ಳುತ್ತಾರೋ ಎಂದು ಜನರು ಕೇಳುತ್ತಿದ್ದಾರೆ ಜಿಲ್ಲಾಧಿಕಾರಿ ಇತ್ತ ಕಡೆ ಗಮನ ಕೊಟ್ಟು ಸದರಿ ಟಿನ್ನು ಅಪ್ಪಲ ಕಾರಕೂನರಿಗೆ ಕಚೇರಿ ಮಾಡುವ ಬಗ್ಗೆ ಗುಡಿಯ ಹೊರತಾಗಿ ಬೇರೆ ಏಕಾಂತ ಸ್ಥಳದಲ್ಲಿ ಒಂದು ಅಪ್ಪರ ಹಾಕಿಸಿಕೊಡಬೇಕಾಗಿ ಅಪೇಕ್ಷೆಯಿದೆ

ಆಡಳಿತ ಟಿನ ಆ ಕಲ್ಪಿತ ಪರಿಸ್ಥಿತಿಯನ್ನು ಈಗ ಏಂಕಟಾದ್ರಿ ಮತ್ತು ಗಿರಿ ಬಾಲು ೨ ಬಟವಡೆ ಕಿಸಾಯಿಗಳನ್ನು ನೇಮಿಸಿದ್ದಾರೆ ಇವರ ಪಗಾರವು ಅವರಿಗೆ ಉದರಪೋಷಣಾರ್ಥವಾಗುವ ಬದಲು ಅಪರಾಧಕವಾಗಿದೆ! ಹುಬ್ಬಳ್ಳಿಯ ಟಪಾಲು ಇಲ್ಲಿ ಮಧ್ಯಾಹ್ನ ೫ ಘಂಟೆಗೆ ತಲ್ಪುತ್ತದೆ ಒಂದೆ ಆ ಟಪಾಲು ಜನರಿಗೆ ಸಂಜೆಗೇ ಸಿಗುತ್ತಿತ್ತು ಇತ್ತ ಬೇರೆ ನೇಮಕವಾದ ನಂತರ ಆ ಟಪಾಲು ಮರುದಿನ ಮುಂಜಾನೆ ೮–೯ ಘಂಟೆಯ ವರೆಗೂ ಜನರಿಗೆ ಸಿಗುವದಿಲ್ಲ ...ದ ಅಧಿಕಾರಿಗಳು ಹೊಸ ಸುಧಾರಣೆಯನ್ನು ಮಾಡಿ ಹಿಂದಿನ ವ್ಯವಸ್ಥೆಯನ್ನೇ ಜಾರಿಗೆ ತಂದರೆ ಒಳ್ಳೆಯದೆಂದು ಜನರ ಹೇಳಿಕೆ ...

ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಈ ವರ್ಷ ನವರಾತ್ರಿಯ ಉತ್ಸವಕ್ಕೆ ಬಂದಿದ್ದ ... ಯವರ ಬಗೆ ಜನರಲ್ಲಿ ಅಸಮಾಧಾನವುಂಟಾಗಿದೆ ... ಯ ಬಹುಭಾಗ ಕೇಳದವರಿದ್ದನ್ನು ಕಂಡು ಕೆಲವರು ಅವರಿಗೆ jack of all trades ಎಂದು ಹೆಸರಿಟ್ಟರು ! ... ಗುಣ ... ಮಾಡುವ ... ಗಳ ...

ಶಿರಸಿ ಕನ್ನಡ ಶಾಲೆಯಲ್ಲಿ ಕಳೆದ ತಾ ೧೧ಕ್ಕೆ ... ಪೂಜೆಯು ಮಹೋತ್ಸವವಾಯಿತು ... ಶ್ರಮಕರ ಅಧ್ಯಕ್ಷತೆಯಲ್ಲಿ ಸಂಜೆ ಸಾರ್ವಜನಿಕ ಸಭೆಯಾಗಿ ... ಕಗಳ ವಿನೋದ ಜರುಗಿದವು

ಹಳಿಯಾಳ— (ತಾ. ... ೪೮) ಹಳಿಯಾಳ ನಗರ ಸಭೆಯು ಅಧಿಕಾರ ಸೂತ್ರಗಳು ಈಗ ಹೊಸ ಬಾಡಿಯ ಕೈಯಲ್ಲಿ ಸಿಕ್ಕಂತಾಗಿದೆ ಏಕೆಂದರೆ ಸರಕಾರವು ನೇಮಿಸಿದ ಅಡ್ಮಿನಿಸ್ಟ್ರೇಟರ ರಾ ಅಪ್ಪಾಜಿ ರಾ॥ ನಾಗಿ ಕಿತ್ತೂರರನ್ನೂ ಅವರ ಪರಿವಾರದವರನ್ನೂ ಮೇಲಿಂದ ಮೇಲೆ ಕಂಡು, ನಗರಸಭೆಯ ಆಡಳಿತೆಯ ವಿಷಯದಲ್ಲಿ ಅವರ ಸಲಹೆ ಸೂಚನೆಗಳನ್ನು ಪಡೆಕೊಳ್ಳುತ್ತಿದ್ದಾರೆ! ಈಗ ತೆರವಾಗಿರುವ ಚೀಫ ಆಫೀಸರ ಸ್ಥಳದಲ್ಲಿ ಪುನಃ ಹಿಂದಿನ ಆಫೀಸರ ರಾ॥ ಧೋಂಡೇ (ಇವರು ಕಿತ್ತೂರರ ಅಧಿಕಾರದಲ್ಲಿದ್ದಾಗ ಕಾನೂನುಬದ್ಧವಾಗಿ ನಗರಾಧ್ಯಕ್ಷರಾಗಿ ಆರಿಸಲ್ಪಟ್ಟ ಮತ್ತು ಶಿಕ್ಷಣವ್ಯಾಪ್ತ ಮಾರ್ಗದಿಂದ ನಗರ ಸಭೆಯು ಕಿರುಕುಳವನ್ನು ಸಹಿಸಿಕೊಳ್ಳಲು ಮುಂದಾದ ಡಾ॥ ಮಾನ್ಯತೆಯ ಮರ್ಯಾದೆಯನ್ನು ಕೊಡದೆ, ಅವರ ಆಜ್ಞೆಗಳನ್ನು ಕಡೆ, ಮಹಾಸಭೆಯವರಿಂದ ಕೊನೆಗೆ ಬಹಿಷ್ಕಾರ ಹಾಕಲ್ಪಟ್ಟಿದ್ದರು!) ಇವರನ್ನು ನೇಮಿಸಿಕೊಳ್ಳಲು ಪ್ರಯತ್ನ ಮಾಡಿರುವರೆಂದು ಒಳಗುಟ್ಟು ಜನರು ಹೇಳುತ್ತಾರೆ' ಕಿತ್ತೂರ ಧೋಂಡೆಯವರ ಕೈಯ ಮ್ಯುನಿಸಿಪಾಲಿಟಿಯ ಕಾರಭಾರ ನಡೆಯುವದನ್ನು ಸರಕಾರದವರು ಈ ಜೋಡಿಗೇ ಅದರ ಅಧಿಕಾರವನ್ನು ಒಪ್ಪಿಸಿಕೊಟ್ಟು ಬಿಡಬಾರದೇಕೆ? ... ತವಾದರೂ ಬೇರೆ ಹೇಳುವದೇನಿದೆ?

(ತಾ ೧೪—೧೦—೪೮) ಗಾಂಧಿ-ಜಯಂತಿ ... ಗ್ರಾಮಸುಧಾರಣಾ ಸಪ್ತಾಹವನ್ನು ಆಚರಿಸಲಿಕ್ಕೆ ಈ ತಾಲೂಕಿನಲ್ಲಿ ಪ್ರಮುಖರದೊಂದು ಸಮಿತಿ ನೇಮಿಸಲ್ಪಟ್ಟು ಕಳೆದ ತಾ. ೧ನೇಯ ಸಮಿತಿಯ ಕಾರ್ಯಕಾರಿ ... ಲಿಯಲ್ಲಿ ...ಯ ಸಭೆ ... ಅಂದು ತಾಲೂಕ ... ದ ಥೇಲಿಸಿ ಜಂಗಲ ಕೂಟ (ಫೊರೆಸ್ಟ ಕ್ಲಬ) ... ಸಭೆ ಕರೆಯುವ ವ್ಯವಸ್ಥೆ ಮಾಡಲಾಯಿತು ಮಾಮಲೇದಾರರು ಗ್ರಾಮ ಪ್ರಮುಖರಿಗೂ ದಾಂಡೇಲಿಯ ಜಂಗಲ ಅಧಿಕಾರಿಗಳಿಗೂ ತಿಳಿಸಿದ್ದರು ಅದರಂತೆ ಆ ದಿನ ಸಂಜೆ ಮಾಮಲೇದಾರರೂ ಸಮಿತಿಯ ಸದಸ್ಯರೂ ದಾಂಡೇಲಿಗೆ ಮುಟ್ಟಿದರು ಆದರೆ ಅಲ್ಲಿಗೆ ಜಂಗಲ ಖಾತೆಯ ಯಾವ ನೌಕರನೂ ಕಾಣಬರಲಿಲ್ಲವಂತೆ! ಕರೆದು ಕರೆ ಕಳಿಸಿದರೂ ಕೂಡ ಯಾವ ಅಧಿಕಾರಿ ಸಭಾಸ್ಥಾನಕ್ಕೆ ಬರಲಿಲ್ಲವಂತೆ! ಅವರ ಹಾದಿ ನೋಡಿ ನೋಡಿ ಬೇಸತ್ತು, ಸಮಿತಿಯವರು ಸಭೆ ನಡೆಸಿ ಸಕ್ಕರೆ ನಾಲ್ಕು ಕಾಣಿಸುವರುಗಳನ್ನು ಹಾಗೂ ಕೆಲವನ್ನು ಕಾಣಿಸಿ ಹೋಗಾದರೂ ಸಭೆಯ ಕಾರ್ಯ ಮುಗಿಸಿದರು ' ಸರಕಾರದವರ ಕಾರ್ಯಕ್ರಮದಲ್ಲಿ ಜಂಗಲ ಅಧಿಕಾರಿಗಳು ತೋರ್ಪಡಿಸಿದ ಆಸ್ಥೆಯೂ ಆ ಕಾರ್ಯವನ್ನು ಆಚರಿಸುವಲ್ಲಿ ನೀಡಿದ ಸಹಕಾರವೂ ದಾಂಡೇಲಿಯಲ್ಲಿ ಒಳಿತಾಗಿ ಅನುಭವಕ್ಕೆ ಬಂದವು!

ಮುಂಬಯಿ ಸರಕಾರದ ಆಶ್ರಯದಲ್ಲಿ

ನೇತ್ರದಾನ ಯಜ್ಞ

ತಾ ೨೪—೧೦ ೧೯೪೮ರಿಂದ ತಾ. ೨೬—೧೦—೧೯೪೮ರ ವರೆಗೆ

(ಪರೀಕ್ಷಾ ಮತ್ತು ಶಸ್ತ್ರಕ್ರಿಯೆ)

ಸ್ಥಳ:— ಲೆಮಿಂಗಟನ್ ಹಾಯಸ್ಕೂಲ, ಹುಬ್ಬಳ್ಳಿ.

ಮೋತಿಬಿಂದು ಅಥವಾ ಕಣ್ಣಾಲಿಯ ಪರಿ, ಕಾಚಬಿಂದು, ಕರಗುಡ್ಡೆಯ ಮೇಲಿನ ಹೂವು, ಆರಿ, ಕುಣಿಕಿ-ಹುಣ್ಣು, ಕಣ್ಣಿನ ರೆಪ್ಪೆಗಳ ಬೇನೆ ಮೊದಲಾದ ನೇತ್ರವಿಕಾರಗಳ ಮೇಲೆ ಪ್ರಖ್ಯಾತ ನೇತ್ರಚಿಕಿತ್ಸಕರು ಪುಕ್ಕಟೆಯಾಗಿ ಉಪಚಾರ ಮಾಡುವರು ಕಣ್ಣಿನ ಮೇಲೆ ಶಸ್ತ್ರಕ್ರಿಯೆ ಅವಶ್ಯವಿದ್ದಲ್ಲಿ ಅದನ್ನೂ ಪುಕ್ಕಟೆಯಾಗಿ ಮಾಡಲಾಗುವದು ಕಣ್ಣಿನ ವಿಷಯದಲ್ಲಿ ಕೇವಲ ಸಲಹೆ ಬೇಕಾಗಿದ್ದರೆ ಅದೂ ಸಿಗುವದು ಈ ಕಾರ್ಯಕ್ಕಾಗಿ ಮುಂಬಯಿಯಿಂದ ಪ್ರಖ್ಯಾತ ನೇತ್ರಚಿಕಿತ್ಸಕರು ಬರಲಿದ್ದಾರೆ

ಶಸ್ತ್ರಕ್ರಿಯೆ ಮಾಡಿಸಿಕೊಂಡ ರೋಗಿಗಳು ೧೦ರಿಂದ ೧೫ ದಿವಸಗಳ ವರೆಗೆ ಹುಬ್ಬಳ್ಳಿಯಲ್ಲಿರಬೇಕಾಗುವದು ತೀರ ಬಡಬಗ್ಗರಿಗೆ ಈ ಅವಧಿಯಲ್ಲಿ ಧರ್ಮಾರ್ಥ ಊಟ-ವಸತಿಗಳ ಏರ್ಪಾಡು ಮಾಡಲಾಗುವದು ಈ ಅಮೂಲ್ಯ ಸುಸಂಧಿಯ ಲಾಭವನ್ನು ಜನತೆಯು ತೆಗೆದುಕೊಳ್ಳಬೇಕಾಗಿ ಬಿನ್ನಹವಿದೆ

ಸೂಚನೆ — ಪ್ರತಿಯೊಬ್ಬ ರೋಗಿಯು ತನ್ನ ಹಾಸಿಗೆ ಹೊದಿಕೆ, ತಾಟು, ಕಂಬಿಗೆ, ಬಟ್ಟಲು ಮೊದಲಾದ ಅವಶ್ಯಕ ಸಾಮುಗ್ರಿಗಳನ್ನು ಸಂಗಡ ತರಬೇಕು

(೨) ಜನ್ಮಾಂಧರು, (ಬೆಳಕು ಸಹ ಕಾಣದಿದ್ದ) ಸಂಪೂರ್ಣ ಕುರುಡರು, ಕಣ್ಣಿನ ಕಂಗುಡ್ಡಿ ಪೂರ್ಣ ಬೆಳ್ಳಗಾದವರು ಅಥವಾ ಪೆಟ್ಟಿನಿಂದ ಕಣ್ಣು ಒಳಿದುಕೊಂಡವರು ದಯವಿಟ್ಟು ಉಪಚಾರಕ್ಕಾಗಿ ಬರಕೂಡದು

(೩) ರೋಗಿಗಳು ತರಾತ ಅರಿವೆ ಅಂಚಡಿಗಳು ಸ್ವಚ್ಛವಾಗಿರಬೇಕು

(೪) ಹುಬ್ಬಳ್ಳಿಗೆ ಪ್ರಯಾಣ ಮಾಡುವ ಮೊದಲು ರೋಗಿಗಳು ಸ್ಥಾನಿಕ ಅಥವಾ ಸಮೀಪ ಇರುವ ಸರಕಾರಿ ಡಾಕ್ಟರರಿಗೆ ಕಣ್ಣು ತೋರಿಸಿ ಉಪಯೋಗವಾಗುವ ಪಕ್ಷದಲ್ಲಿ ಮಾತ್ರ ಬರಬೇಕು

(೫) ರೋಗಿಗಳ ಸಂಗಡ ಬರುವ ಜನರ ಸಲುವಾಗಿ ಊಟಕೊಡುವ ವ್ಯವಸ್ಥೆ ಬೇರೆ ಇರಲಾರದು ಮಾಡಿರುವದರಿಂದ ಸದರಿ ಜನರು ತಮ್ಮ ತಮ್ಮ ನಿಜದ ವ್ಯವಸ್ಥೆ ಮಾಡುವದಕ್ಕಾಗಿ ಸ್ವತಃ ತಮ್ಮ ತಂದಿರಬೇಕಾದವುಗಳನ್ನು ತರಬೇಕು

ಸಿವ್ಹಿಲ್ ಸರ್ಜನ್, ಧಾರವಾಡ

ಜನೆನ್ನು ಪಾಲಿಸುವಂಗ ಕೃಷ್ಣ ಕಾಶಿನಾಥ (ಸಂಪಾದಕ) ಇವರು ಕಾರವಾರದಲ್ಲಿರುವ ತಮ್ಮ ಸ್ವಂತ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದ

ವರ್ಗಣಿಯ ದರ:
...ಟಿಯಲ್ಲಿ
ವರ್ಷಕ್ಕೆ ರೂ ೨-೪-೦
...ಲ್ಯಾರ್ಥಿಗಳಿಗೆ ವರ್ಷಕ್ಕೆ ೧-೧-೦
೬ ತಿಂಗಳಿಗೆ ೧ ೧೦-೦
ಸಂಚಿಕೆಗೆ ೦ ೧-೦
ಸಂಚಿಕೆಗೆ .. ೦-೪-೦
ಯಿಂದ ಹಣ ಕಳುಹುವವರು
ನೆಟ್ಟ ೬ ಆಣೆ ಹೆಚ್ಚಿಗೆ
ಕಳುಹಿಸಬೇಕು
...ವಣಿಯುಂಗಡವಾಗಿ ಕೊಡತಕ್ಕದ್ದು

Reg. No. B. 1270 Monday, 25-10-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೦೭.

ಕುಮಟಾ - ಸೋಮವಾರ, ತಾ ೨೫--೧೦--೧೯೪೮

ಜಾಹೀರಾತುಗಳ ದರ.-
ಒಂದು ಬಾರಿ ...
೧ ಸಾಲಿಗೆ ೮ ಆಣೆಯಂತೆ.
ವಿಶೇಷ ... ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಥವಾ ಪತ್ರದ್ವಾರಾ
ತಿಳಿಸಲಾಗುವುದು

THE NEW

Bombay Tenancy Bill

A new Tenancy Act embodying ...-reaching changes is about to be ...cted by the Government of Bombay ...me of its provisions have caused ...at dissatisfaction to the landlords ...e act of 1939 too was not well ...eived by them, with the result that ...re has been abundant litigation ...ween landlords and tenants in ...plementing its provisions The ...ect of the new measure is to give ...ler protection to the actua tillers ...the soil

...hri Khushalbhai Morarji Patel is ...eading landlord of Bardoli He has ...rked for several years under ...rdar Patel as a soldier He has ...o helped him in raising the various ...hrams of the Bardoli Taluka He ...s not desire to preserve any of ... unjust rights or privileges that ...y have been enjoyed hitherto by ... land-owners, But his complaint ...hat the new Tenancy Act deprives ...ople like him of even their just ...hts

...he following is a summary of his ...in complaints —

...t is but proper that the Government ...uld take steps to protect the ...erests of tenants but in taking ...h steps due care should be taken ...t landlords who were unable to ...m their lands for a period under ...uliar circumstances are not ...possessed

...he new Act will wipe out indis-...minately even those land-owners ...o are themselves descendants of ...mers who have personally culti-...ed land for generations, and who ... eager to return to the land as ...n as convenient but happen to be ...dlords wholly or in part at the ...sent time under unavoidable ...umstances They are agriculturists ... wish to remain so, but will be ...vented from doing so by the new ... This should be prevented

...ome of these enterprising farmers ...t abroad to cities or foreign ...ntries under trying conditions and invested the money earned there in lands at home and made them more paying This must not be regarded as an offence on their part deserving to be penalized, At least they should be given a chance, if they want to return to their land as actual agriculturists

Moreover, some landlords have put in their money and years of labour in clearing jungles in Indian States and have converted them into fertile fields Some of these lands are now leased out by them to tenants on a partnership basis They too will be deprived of the fruits of their hard labour and enterprise if the law is immediately applied to these areas on the ground that they have now merged into the Province This would be not only a great tragedy but will also kill all enterpise from their genius

The Act again seeks to take away the right of resorting to civil courts and to give finality to decisions of Specia. Tribunals working under the Executive.

The main demands submitted by the class of cultivators repressented by Shri Khushalbhai Patel are

1 Undue haste should not be made in enacting the law and sufficient opportunity should be given to hear the side adversely affected by it

2 The word agriculturist should be defined as one who is a hereditary agriculturist and has cultivated land either personally or with the help of labourers, for a long time If he happens to be a landlord now, he must be given an opportunity to become an agriculturist before giving over his land to tenants

3 The limit of maximum holding should be increased from 50 to 100 acres

4. The shares recognized under Hindu Law be recognized and not *per sterpes* as suggested in clause 35

5 The value of the landlord's share in the crop should not be converted into money payment

6 The right to lease out the land under peculiar circumstances should be recognized

7. The right of appeal to the High Court be not abrogated.

There are a few other demands of minor importance

Some of the above demands seem to be just Some need further examination and a few appear to be controversial I have not sufficient knowledge or acquaintance with the problems to take up their detailed examination But I hope that the legislators will duly and dispassionately consider these grievances.

What I propose to do is to enunciate in a separate article the broad principles that should guide us in viewing this problem from the point of village economy as a whole I believe that reforms made consistently with these principles would have to be regarded as just, even if they cause some loss to particular individuals or class. The loss would be unavoidable in the present, but would enhance *Sarvodaya* (the well-being of all), including ultimately the immediate losers

K G MASHRUWALA

(from "Harijan" of 17-10-1948)

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಸಲ್ಪಡುವದು

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ, ತಾ ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ

ಹೊಸ ಒಕ್ಕಲತನದ ಕಾನೂನು.

ಮಹಾತ್ಮರ "ಹರಿಜನ" ಪತ್ರಿಕೆಯಲ್ಲಿ ಸದ್ಯಕ್ಕೆ ಸಂಪಾದಕ ಶ್ರೀ|| ಕಿಶೋರಿಲಾಲ ಮಶ್ರುವಾಲಾ ಇವರು ಹೊಸ ಒಕ್ಕಲತನದ ಕಾನೂನಿನ ಬಗ್ಗೆ ಎರಡು ಲೇಖಗಳನ್ನು ಬರೆದಿದ್ದಾರೆ. ಅವು ಬಹಳ ಬೋಧಪ್ರದವಿರುವದರಿಂದ ಅವುಗಳ ಕನ್ನಡ ರೂಪಾಂತರಗಳನ್ನು ಈ ಕೆಳಗೆ ಕೊಡಲಾಗಿದೆ:

(೧)

ಮೊದಲನೇ ಲೇಖದಲ್ಲಿ ಮಶ್ರುವಾಲಾ ಇವರು ಬರೆಯುವದೇನಂದರೆ:— ಮುಂಬಯಿ ಇಲಾಖೆಯ ಒಕ್ಕಲತನದ ಕಾನೂನಿನಿಂದ ಒಡೆಯ ಸಮಾಜದಲ್ಲಿ ತೀವ್ರ ಅಸಮಾಧಾನವಾಗಿದೆ. ಒಡೆಯ-ಒಕ್ಕಲಿಗರೊಳಗೆ ಬಹಳ ವ್ಯಾಜ್ಯಗಳುಂಟಾಗಿವೆ. ಬಾರ್ಡೋಲಿಯೊಳಗೆ ಶ್ರೀ|| ಖುಶಾಲಭಾಯಿ ಮಹಾರಾಜ ಪಟೇಲ ಎಂಬ ಸ್ನೇಹಿತ ಭೂಮಾಲಿಕರಿದ್ದಾರೆ. ಸರದಾರ ವಲ್ಲಭಭಾಯಿ ಪಟೇಲರ ಕೈಕೆಳಗೆ ಇವರು ಬಹಳ ವರ್ಷಗಳಿಂದ ದುಡಿದಿದ್ದಾರೆ. ಬಾರ್ಡೋಲಿ ತಾಲೂಕಿನಲ್ಲಿ ಅನೇಕ ಆಶ್ರಮಗಳನ್ನು ಸ್ಥಾಪಿಸಲು ಇವರು ಸರದಾರ ಪಟೇಲರಿಗೆ ನೆರವಾಗಿದ್ದಾರೆ. ಅನ್ಯಾಯದ ಹಕ್ಕುಗಳನ್ನು ಕಾಯ್ದಿಟ್ಟುಕೊಳ್ಳಲು ಇವರು ಬಯಸುವದಿಲ್ಲ. ಆದರೆ ಒಕ್ಕಲತನದ ಕಾನೂನಿನಿಂದ ನ್ಯಾಯ್ಯ ಹಕ್ಕುಗಳು ಕೂಡ ಅಪಹರಿಸಲ್ಪಡುತ್ತವೆಂದು ಅವರ ದೂರುಂಟು.

ಒಕ್ಕಲಿಗರ ಹಿತಸಂಬಂಧಗಳನ್ನು ರಕ್ಷಿಸುವದಕ್ಕಾಗಿ ಸರಕಾರವು ಜಾಗ್ರತೆ ಕೊಳ್ಳುವದು ಯೋಗ್ಯವೇ ಸರಿ. ಆದರೆ ಕಾರಣಾಂತರಗಳಿಂದ ಸ್ವಂತ ಸಾಗುವಳಿ ಮಾಡಲಾಗದ ಒಡೆಯರ ಕೈಯೊಳಗಿಂದ ಅವರು ಭೂಮಿ ತಪ್ಪಿಸುವದು ಯೋಗ್ಯವಲ್ಲ.

ಅಪರಿಹಾರ್ಯ ಕಾರಣಗಳಿಂದ ಬೇರೆ ವ್ಯವಸಾಯಗಳನ್ನು ಕೈಕೊಂಡ ಬೇಸಾಯಗಾರ ಪರಂಪರೆಯ ಜನರು ಮುಂದೆಂದೂ ಬೇಸಾಯಗಾರರಾಗದಂತೆ ಹೊಸ ಕಾನೂನು ನಿರ್ಬಂಧಿಸುತ್ತದೆ. ಈ ಬೇಸಾಯಗಾರರು ಕಠಿಣ ಪರಿಸ್ಥಿತಿಯಲ್ಲಿ ಪರದೇಶಕ್ಕೆ ಹೋಗಿ, ಅಲ್ಲಿ ದೊರೆತ ಪ್ರಾಪ್ತಿಯನ್ನು ತಮ್ಮ ಗ್ರಾಮದೊಳಗಿನ ಭೂಮಿಯಲ್ಲಿ ಉತ್ಪನ್ನ ಹಾಕಿ ಬೆಳೆಸಿದ್ದಾರೆ. ಹೀಗೆ ಮಾಡಿದ್ದು ಅಪರಾಧವೆಂದೆಣಿಸಿ ಆ ಬಗ್ಗೆ ಶಾಸನ ಮಾಡಕೂಡದು. ತಮ್ಮ ಭೂಮಿಯನ್ನು ಸಾಗುಮಾಡಲು ಅವರಿಗೆ ಅವಕಾಶ ಕೊಡಬೇಕು.

ಇದಲ್ಲದೆ ಸಂಸ್ಥಾನಗಳಲ್ಲಿ ಅಡವಿ ಕಡಿದು, ವರ್ಷಾವಧಿ ಕಷ್ಟ ಮಾಡಿ, ಹಣ ತೊಡಗಿಸಿ, ಭೂಮಿಯಲ್ಲಿ ಉತ್ಪತ್ತಿ ಬರುವಂತೆ ಏರ್ಪಾಟು ಮಾಡಿದವರಿದ್ದಾರೆ. ಹೀಗೆ ತಯಾರಿಸಿದ ಭೂಮಿಗಳನ್ನು ಆ ಜನರು ಪಾಲುಗಾರಿಕೆಯ ಮೇಲೆ ಒಕ್ಕಲಿಗರಿಗೆ ಸಾಗುವಳಿಗೆ ಕೊಟ್ಟಿದ್ದಾರೆ. ಹೊಸ ಒಕ್ಕಲತನದ ಕಾನೂನು ಇಂಥ ಒಡೆಯರಿಗೆ ತಮ್ಮ ಕಷ್ಟದ ಫಲ ಉಣ್ಣಗೊಡುವದಿಲ್ಲ. ಇದರಿಂದ ಸಾಹಸಿಗತನ ನಷ್ಟವಾಗುವದು. ಇದಲ್ಲದೆ ಹೊಸ ಕಾನೂನಿನಿಂದ ದಿವಾಣಿ ನ್ಯಾಯಾಧೀಶರ ಹಕ್ಕು ರದ್ದುಗೊಳಿಸಲ್ಪಟ್ಟಿದೆ. ಹೀಗೆ ಪ್ರಸ್ತಾವನೆ ಮಾಡಿ, ಶ್ರೀ|| ಖುಶಾಲಭಾಯಿ ಪಟೇಲರು ಸೂಚಿಸುವದೇನಂದರೆ:—

(೧) ಈ ಕಾಯಿದೆ ಮಾಡಲು ಗಾಬರಿಪಡಲಾಗದು. ಈ ಕಾಯಿದೆಯ ಬಾಧೆಯಾಗುವ ಜನರಿಗೆ ತಮ್ಮ ಅಂಬೋಣವನ್ನು ಜನತೆಯ ಮುಂದಿಡಲು ತಕ್ಕ ಅವಕಾಶ ಕೊಡಬೇಕು.

(೨) "ರೈತ" ಶಬ್ದದ ವ್ಯಾಖ್ಯೆಯಲ್ಲಿ ತಿದ್ದುಪಡಿ ಮಾಡಬೇಕು. ಪರಂಪರೆಯಿಂದ ರೈತ-ಕಸಬು ಮಾಡಿ ಬಂದ ಇಲ್ಲವೆ ದೀರ್ಘ ಕಾಲದಿಂದ ರೈತತನ ಮಾಡಿ ಬಂದ ಜನರಿಗೆ ರೈತರೆಂದು ಎಣಿಸಬೇಕು. ಈಗ ಅವರು ರೈತತನ ಬಿಟ್ಟರೂ ಹಿಂದಿನಿಂದ ಪುನಃ ರೈತರಾಗಲು ಅವರಿಗೆ ಅವಕಾಶ ಕೊಡಬೇಕು.

(೩) ಯಾವನೊಬ್ಬನು ಧಾರಣ ಮಾಡಬಹುದಾದ ಪರಮಾವಧಿ ಕ್ಷೇತ್ರ ೫೦ ಎಕರೆಗಳಿಂದ ೧೦೦ ಎಕರೆಗೆ ಏರಿಸಬೇಕು.

(೪) ಹಿಂದು ಕಾಯಿದೆಯಲ್ಲಿ ಮನ್ನಿಸಲ್ಪಟ್ಟ ಅಂಶಗಳನ್ನು ಈ ಕಾಯಿದೆಯಲ್ಲಿ ಮನ್ನಿಸಬೇಕು. ಹೊರತು ೩೪ನೇ ಕಲಮಿನಲ್ಲಿ ಹೇಳಿದಂತೆ ಕುಟುಂಬದ ಶಾಖೆಗಳನ್ನು ಅಂಶಗಳು ಎಂದು ಎಣಿಸಕೂಡದು.

(೫) ಒಡೆಯನ ಬೆಳೆಯ ಅಂಶವನ್ನು ನಗದಿಯಲ್ಲಿ ರೂಪಾಂತರಿಸಬಾರದು.

(೬) ವಿಶಿಷ್ಟ ಪರಿಸ್ಥಿತಿಯಲ್ಲಿ ಭೂಮಿಯನ್ನು ಗೇಣಿಗೆ ಕೊಡುವ ಹಕ್ಕು ಇರಬೇಕು.

(೭) ಹಾಯಕೋರ್ಟಿಗೆ ಅಪೀಲು ಮಾಡುವ ಹಕ್ಕನ್ನು ರದ್ದುಪಡಿಸಕೂಡದು.

ಇನ್ನು ಕೆಲವು ಸೂಚನೆಗಳನ್ನು ಅವರು ಮಾಡಿರುತ್ತಾರೆ. ಅವು ಅಷ್ಟು ಮಹತ್ವದವಲ್ಲ.

ಮೇಲ್ಕಾಣಿಸಿದ ಸೂಚನೆಗಳಲ್ಲಿ ಕೆಲವು ನ್ಯಾಯ್ಯವಿವೆ. ಕೆಲವು ಸೂಚನೆಗಳ ಸಂಬಂಧದಲ್ಲಿ ಇನ್ನೂ ವಿಚಾರ ಮಾಡಬೇಕಾಗಿದೆ. ಇನ್ನು ಕೆಲವು ಸೂಚನೆಗಳು ವಿವಾದಾಸ್ಪದ ತೋರುತ್ತಿವೆ. ಅವುಗಳನ್ನು ವಿಸ್ತಾರವಾಗಿ ವಿಮರ್ಶಿಸಲು ಆವಶ್ಯವುಳ್ಳ ವಿಷಯಜ್ಞಾನ ನನಗಿಲ್ಲ. ಆದರೂ ಕಾನೂನ-ಕರ್ತರು ನಿಷ್ಪಕ್ಷಪಾತ ಬುದ್ಧಿಯಿಂದ ಈ ದೂರುಗಳ ಯೋಗ್ಯ ಪರಾಮರ್ಶೆ ತಕ್ಕೊಳ್ಳುವರೆಂದು ನಾನು ಆಶಿಸುತ್ತೇನೆ.

ಸಮಗ್ರ ಗ್ರಾಮದ ಜೀವನದ ದೃಷ್ಟಿಯಿಂದ ಈ ಸಮಸ್ಯೆಯನ್ನು ಆಲೋಚಿಸುವಾಗ ನಾವು ಲಕ್ಷ್ಯದಲ್ಲಿಡಬೇಕಾದ ಕೆಲವು ಮೂಲ ತತ್ವಗಳನ್ನು ನಾನು ಬೇರೊಂದು ಲೇಖದಲ್ಲಿ ಪ್ರತಿಪಾದಿಸಬಯಸುತ್ತೇನೆ. ಆ ತತ್ವಗಳಿಗನುಸಾರವಾಗಿಯೇ ಮಾಡಿದ ಗ್ರಾಮಸುಧಾರಣೆಯು, ಕೆಲವರಿಗೆ ಯಾ ಕೆಲವೊಂದು ವರ್ಗಕ್ಕೆ ಅದರಿಂದ ಹಾನಿಯಾಗುತ್ತಿದ್ದರೂ, ನ್ಯಾಯಸಮ್ಮತವಿರುತ್ತದೆಂದು ತಿಳಿಯಬೇಕು. ಸದ್ಯಕ್ಕೆ ಆ ಹಾನಿಯಾಗುವದು ಅನಿವಾರ್ಯ. ಆದರೆ ಮುಂದೆ ಅದರಿಂದ ಸರ್ವೋದಯವಾಗುವದು; ಅಂದರೆ ಸರ್ವರಿಗೂ, ಈಗ ನಷ್ಟ ಪಡುವವರಿಗೂ ಕೂಡ ಹಿತವಾಗುವದು.

ಹೀಗೆ ಶ್ರೀ|| ಮಶ್ರುವಾಲಾ ಇವರು ಸಂಕ್ಷೇಪದಲ್ಲಿ ತಮ್ಮ ಮೊದಲನೆಯ ಲೇಖವನ್ನು ಮುಗಿಸಿದ್ದಾರೆ.

(೨)

ಮೇಲಿನ ಲೇಖದ ಕೊನೆಗೆ ಹೇಳಿದ ಬೇರೊಂದು ಲೇಖದಲ್ಲಿ ಶ್ರೀ|| ಮಶ್ರುವಾಲಾರವರು ತಮ್ಮ ವಿಚಾರಗಳನ್ನು ದಿಗ್ದರ್ಶಿಸಿದ್ದಾರೆ. ಗ್ರಾಮಗಳಲ್ಲಿ ಸರ್ವರೂ ಏಕತ್ರ ದುಡಿಯಬೇಕೆಂದೂ, ಒಬ್ಬನ ದುಡಿತದಲ್ಲಿ ಇನ್ನೊಬ್ಬನಿಗೆ ಅಂಶ ಸಿಗಬೇಕೆಂದೂ, ಉದ್ಯೋಗಸ್ಥರು ಕೂಡ ಪೃಥಕ್ಕಾಗಿರಬಾರದೆಂದೂ ನಮೂದಿಸಿದ್ದಾರೆ. ವಿಶಾಲ ವಿಚಾರ ಹಿಡಿಯದೆ ಇಂದು ನಾವು ಜೀವನವನ್ನು ಸಂಕುಚಿತ ದೃಷ್ಟಿಯಿಂದ ನೋಡುತ್ತಿರುವದರಿಂದ ಸಮಾಜದಲ್ಲಿ ಬಗೆಬಗೆಯ ಅನ್ಯಾಯಗಳಾಗುತ್ತಿವೆ. ಒಬ್ಬನು ಒಡೆಯನಾಗುತ್ತಾನೆ; ಮತ್ತೊಬ್ಬನು ಒಕ್ಕಲಿಗನಾಗುತ್ತಾನೆ ಇಲ್ಲವೆ ಆಳಾಗುತ್ತಾನೆ. ಒಕ್ಕಲಿಗನು ಸ್ವಂತ ಕಷ್ಟದಿಂದ ಬೆಳಸಿದ ಬೆಳೆಯಲ್ಲಿ ಅಂಶ ಪಡೆಯಲಿಕ್ಕೆ ಒಡೆಯನು ನ್ಯಾಯದಂತೆ ಹಕ್ಕುದಾರನೆಂದು ದೀರ್ಘ ಕಾಲದಿಂದ ಎಣಿಸಲ್ಪಟ್ಟಿದೆ. ಕೃಷಿಕಷ್ಟವನ್ನು ಒಕ್ಕಲಿಗನಿಗೆ ಬಿಟ್ಟು ಬೇರೊಂದು ಉದ್ಯಮ ಮಾಡಲಿಕ್ಕೆ ಒಡೆಯನಿಗೆ ಅವಕಾಶ ದೊರೆಯುತ್ತದೆ ಆದರೆ ಆ ಪ್ರಾಪ್ತಿಯಲ್ಲಿ ಮಾತ್ರ ಒಕ್ಕಲಿಗನಿಗೆ ಅಂಶ ಸಿಗುವದಿಲ್ಲ ಈ ಅನ್ಯಾಯವನ್ನು ದೂರಪಡಿಸುವದಕ್ಕಾಗಿ ಪರಸ್ಥಳಗಳಲ್ಲಿರುವ ಒಡೆಯರ ಒಡೆತನವನ್ನು ನಿರ್ಮೂಲಿಸುವ ಯೋಜನೆಯಾಗಿದೆ. ಒಡೆಯನು ತನ್ನ ಭೂಮಿಯನ್ನು ಸಾಗು ಮಾಡಿ ಒಂದೇ ಸಂಪೂರ್ಣ ಬೇಸಾಯಗಾರನಾಗಬೇಕು; ಅದಾಗದಿದ್ದರೆ ಅವನು ಭೂಮಿಯೊಳಗಿನ ಹಿತ-ಸಂಬಂಧಗಳನ್ನು ತೊರೆಯಬೇಕು; ಎಂದು ಈ ಯೋಜನೆ ಹೇಳುತ್ತಿದೆ. ಸಮಾಜದೊಳಗಿನ ಅನ್ಯಾಯವನ್ನು ಹೋಗಲಾಡಿಸಲು ಈ ಯೋಜನೆ ಸರಿಯಾದದ್ದಲ್ಲ.

ಈ ರೀತಿ ಶ್ರೀ|| ಕಿಶೋರಿಲಾಲ ಮಶ್ರುವಾಲಾರವರು ಪ್ರಸ್ತಾವನೆ ಮಾಡಿ, ಗ್ರಾಮದವರೆಲ್ಲರೂ ಒಂದೇ ಕುಟುಂಬದ ಜನರಂತೆ ನಡೆಕೊಳ್ಳುವ ಹಾಗೆ ಸಮಾಜದ ಪುನರ್ಘಟನೆಯಾಗಬೇಕಾಗಿ ಬರೆದಿದ್ದಾರೆ. ಪುರಾತನ ಕಾಲದಲ್ಲಿ ಒಂದೊಂದು ಕುಟುಂಬದೊಳಗೆ ೨೦೦-೩೦೦ ಜನರಿರುತ್ತಿದ್ದರು. ಅವರಲ್ಲಿ ಕೆಲವರು ಬೇಸಾಯ ಮಾಡುತ್ತಿದ್ದರು, ಕೆಲವರು ವ್ಯಾಪಾರ ಮಾಡುತ್ತಿದ್ದರು, ಬೇರೆ ಕೆಲವರು ಕಲಾಕೌಶಲ್ಯದ ಕೈಗಾರಿಕೆ ಮಾಡುತ್ತಿದ್ದರು. ಹೀಗೆ ಕುಟುಂಬದವರು ಬೇರೆ ಬೇರೆ ಉದ್ಯೋಗಗಳನ್ನು ಮಾಡಿ ಪ್ರಾಪ್ತಿ ಮಾಡುತ್ತಿದ್ದಾಗ್ಯೂ ಪ್ರತಿಯೊಬ್ಬನ ಪ್ರಾಪ್ತಿಯಲ್ಲಿ ಎಲ್ಲರಿಗೂ ಪಾಲು ಸಿಗುತ್ತಿತ್ತು. ಅಂತೆಯೇ ಒಂದು ಗ್ರಾಮದಲ್ಲಿ ವಾಸಿಸುವ ಸಮಸ್ತ ಜನರು ತಮ್ಮ ಪ್ರಾಪ್ತಿಯನ್ನು ಹಂಚಿಕೊಂಡು ಸರ್ವೋದಯ ಸಾಧಿಸುವಂತೆ ವ್ಯವಸ್ಥೆಯಾಗಬೇಕೆಂದೂ ಒಕ್ಕಲತನದ ಕಾನೂನು ಆ ದೃಷ್ಟಿಯಿಂದ ರಚಿಸಲ್ಪಡಬೇಕೆಂದೂ ಶ್ರೀ|| ಮಶ್ರುವಾಲಾ ಇವರ ಅಂಬೋಣವಿದೆ. ಹೊಲಗಳ ವಿಸ್ತಾರ ೧೦೦-೨೦೦ ಎಕರೆಗಳಷ್ಟಿದ್ದರೆ ಅವನ್ನು ಸಾಗುವಳಿ ಮಾಡಲಿಕ್ಕೆ ಹೆಚ್ಚಿನ ಅನುಕೂಲತೆಯುಂಟು. ಸಹಕಾರದಿಂದ ಜನರು ಸಾಗುವಳಿ ಮಾಡಬೇಕು. ಒಕ್ಕಲತನದ ಕಾನೂನಿನಲ್ಲಿ ಈ ದೋಷವಿದ್ದರೆ ಅದರ ಪರಿಹಾರವಾಗಬೇಕು. ಈ ಪ್ರಕಾರ ಸಮಾಜದ ಪುನರ್ಘಟನೆಯ ಸ್ವರೂಪವನ್ನು ಶ್ರೀ|| ಮಶ್ರುವಾಲಾರವರು ಬಣ್ಣಿಸಿ ದಿವಾಣಿ ನ್ಯಾಯಸ್ಥಾನಗಳ ಅಧಿಕಾರದ ಆವಶ್ಯಕತೆಯನ್ನು ಮುಂದಿನಂತೆ ಪ್ರತಿಪಾದಿಸಿದ್ದಾರೆ:— ನ್ಯಾಯದಾನ ಶೀಘ್ರವಾಗಬೇಕೆಂಬ ಮಾತು ನಿಜ. ಆದರೆ ವಿವಾದ-ವಿಷಯಗಳನ್ನು ದಿವಾಣಿ ನ್ಯಾಯಸ್ಥಾನಗಳ ಕಕ್ಷೆಯಿಂದ ಹೊರಪಡಿಸುವ ಕ್ರಮ ಕ್ಷೇಮಕಾರಕವಲ್ಲ. ಸರಕಾರದ ಅಮಲಬಜಾವಣಿ ಅಧಿಕಾರಿಗಳ ಕೈಯಲ್ಲಿ ನ್ಯಾಯದಾನದ ಅಧಿಕಾರವಿರತಕ್ಕದ್ದಲ್ಲೆಂಬ ಬೇಡಿಕೆಯ ಉದ್ದೇಶ ವಿಶೇಷ ನ್ಯಾಯಾಸನಗಳ ನಿರ್ಮಾಣದಿಂದ ನಿರರ್ಥಕವಾಗುತ್ತಿದೆ. ಪುರಾವೆಯ ಯೋಗ್ಯಾಯೋಗ್ಯತೆಯನ್ನು ವಿಚಾರಿಸಿ ಕಾನೂನಿನ ಅರ್ಥಕತೆಯನ್ನು ನ್ಯಾಯದೃಷ್ಟಿಯಿಂದ ನಡೆಸುವ ಯೋಗ್ಯತೆ ದಿವಾಣಿ ನ್ಯಾಯಾಸನಗಳಿಗುಂಟು. ಅವುಗಳ ಅಧಿಕಾರವನ್ನು ಕಸಕೊಂಡರೆ ಸರಕಾರದ ನೈತಿಕ ಅಧಃಪಾತವಾಗುವದು.

ಒಡೆಯನಿಗೆ ಸಲ್ಲತಕ್ಕ ಉತ್ಪತ್ತಿಯ ಪಾಲನ್ನು ನಗದಿಯಲ್ಲಿ ರೂಪಾಂತರಿಸುವ ಪದ್ಧತಿ ತೋರಗಾಣಿಕೆಗೆ ಅನುಕೂಲ ಕಾಣುತ್ತದೆ. ಆದರೆ ನಿಜವಾಗಿಯೂ ಈ ಪದ್ಧತಿ ಬಹಳ ಅನ್ಯಾಯದ್ದು. ಒಡೆಯನ ಅಂಶವನ್ನು ಪ್ರತಿವರ್ಷಕ್ಕೆ ಬದಲುವ ೪ ಇಲ್ಲವೆ ೫ ಎಂದು ನಿರ್ಣಯಿಸುವದಕ್ಕಿಂತ ಕೆಲವೊಂದು ವರ್ಷಗಳ ತನಕ ೫ ಮಣ, ೧೦ ಮಣ ಹೀಗೆ ಯಾವ

आजि शनिवार ता. ४-९-४८ दीसु कुमटेचे गिब्ब हायस्कूलचे थैंपे सभा मंदिरांतु भरिले कोंकणि उलवचे लोकाले सभेचि हकिकत.

सभेक आरंभु करतानां श्री० वैकुंठ श्रीनिवास प्रभु हांनि आमंत्रणाक मानु दीवनु आयिले पुरायि लोकांले आभार स्वागतपूर्वक मानले, आनि अशी उद्गार काडले— कोंकणि उलवचले चेरडुवांक कोंकणि भाषेन शिकयिल्यारि मात्र विद्यु कळता, आत्तांनशेक कानडीन शिकयचे पद्धतीन चेरडांक विद्यु कळणा, तांचेरि पुष्कळ ताण पडता. तेंमितिं आंमि योग्य प्रयत्नु करका. अशि म्हणु आयिलें सभेक श्री० नरसिंह गोविंद शानभाग, वकील हे अध्यक्ष जावकाचि अशें म्हणु सुचयिलें. तें सूचनेक श्री० श्रीधर कृष्ण पै, संपादक नागरीक कुमटा, हांनि अनुमोदन दिलें. नंतर श्री० न. गो. शानभाग हांनि अध्यक्ष जावनु सान भाषण केलें.

ते म्हळाले— सक्तीन सान चेरडांक शिक्षण दीवका अशी सरकारालो आग्रहु आसा. आनि हें शिक्षण प्रादेशिक भाषेन दीयका म्हणुवि सरकारान हुकुम काडल्या. सक्ति शिक्षणाचें कायद्या प्रकार चेरडांनि सरकारमान्य शाळेंतुंचि शीकका पडता. आमगेलि प्रादेशिक भास कानडि म्हणु सरकारानचि ठरयिल्या. आंमि आसुचो प्रदेशु हो कानडि भाषेचो नहिं. ताकशि कोंद्रेसान आंमकां कर्नाटकांतुं भरलें. आंमि ते वेळारि तांजो विशेषु मानिलोना. कारण आमगेले वेवारांतु ताजेमिति कांयीं जास्ति कंमि जाहिना. आमकां कर्णाटकांतु घालेमिति आमचेरि नि आमचे चेरडांचेरि कानडीचो बलात्कारु जाता जाल्यारि आमकां तो कर्नाटक प्रांतुचि नाका. पुण ही गोष्टि ते थाराक पावचि ना अशी दिसता. सक्ति शिक्षण मातृभाषेनचि दीवका अशो हिंदुस्तान सरकारान आदेशु काडला. ताका मानु दीवनु प्रांतिक सरकारान चलका. कोंकणि भास ही संस्कृताक भयु लागि आस. आजि-काल्लि टीका मात्र करनु रावूं नज. शिकवचि पुस्तकं तयार करचे कामाक लागका. कोंकणि भाषेंतुं क्रमिक पुस्तकं तयार नांति. तीं आंमि तयार करनु सरकाराकडेचान मान्यता घेवका. अशि म्हणु तांनि कोंकणि भाशे बद्दल उलयिलल्यांक उलवचें खातिरि विनंति केलि.

ते नंतर श्री० मुकुंद दास पै कुळिगद्दे हांनि भाषण केलें. कोंकणि भास संस्कृताक अगदि लागि आस, हिंदीपाशि, मराठिपाशि ती लागि आस अशि म्हणु तांनि दोन तीन शब्द दाकवनु प्रतिपादन केलें. श्री० गोविंद विठ्ठल कामत हांनि भाषण करनु कोंकणि भास ही एक्कि संस्कृति आस, ही भास गेल्यारि आमगेलि संस्कृतीचि वत्ता. ती राकूनु घेवचाक कोंकणि भाशेचे लोकांनि प्रयत्नु करका म्हणु प्रतिपादन केलें.

नंतर ठराव मांडचाक अरंभु जालो.

ठरावु १.

कुमटेचे कोंकणि लोकांलि ही सभा आमगेले मातृभाषे ब[illegible] अजून पर्यंत काम केलेले सर्व लोकांलि प्रशंसा करता. आनि विशेष करनु कारवारचे वकील श्री० माधव मंजुनाथ शानभाग, M.A.,LL.B., हांकां कृतज्ञ आसा; कोंकणि भाशेचे प्रचारा बद्दल तांनि घेतिले परिश्रमान सानंद स्फुरण पावता.

सूचक— श्री० वैकुंठ श्रीनिवास प्रभु. अनुमोदक— गोविंद विठ्ठल कामत.

हो ठरावु सर्वानुमतान स्वीकारलो.

ठरावु २.

मुंबयि सरकारान सद्या सक्ति शिक्षणाचो क्रमु हातांतु घेतला. सक्ति शिक्षण मातृभाषेन दीवका ही सूचना हिंदुस्तानचे सरकारान प्रांतिक सरकाराक केल्या. शाळो काडचाक जायि तितलि कोंकणि चेरडं मेळचे गावांतुं कोंकणि शाळो सरकारान काडकाति. आनि हे शाळांतुं चेरडांनि प्रादेशिक भाषा शिकका म्हणु सरकारान आग्रहु करनये.

सूचक— श्री० श्रीधर कृष्ण पै. अनुमोदक— बाळकृष्ण श्रीनिवास शानभाग.

हो ठरावु सर्वानुमतान स्वीकारलो.

ठरावु ३.

सक्ति शिक्षण मुंबयि सरकारान सुरु केल्यां. कोंकणि भाशेचे चेरडांक कोंकणि भाशेनचि शिक्षण दीवचें अवश्य आस. प्रौढांले साक्षरता प्रसाराचे योजने प्रमाणें अक्षरज्ञान करनु दीवचें अवश्य. अमके भाशेन अक्षरज्ञान जावका अशो आग्रहु ना. चेरडुवांतुं साक्षरता प्रसार करचे खातिरि अवश्य ते नमून्यांचि क्रमिक पुस्तकं तयार करचें कर्तव्य सरकाराले आस. तेंमितिं कोंकणि भाशेचे तज्ञ लोकालें मंडळ नेमनु क्रमिक पुस्तकं तयार करकाति, म्हणु ही सभा सरकाराक आग्रहान विनंति करता.

हो ठरावु अध्यक्षालींचि अध्यक्षस्थानाथावनु सुचवनु सर्वानुमतान मंजूर करनु घेतलो.

ठरावु ४.

क्रमिक पुस्तकं तयार करचे विषयांतुं सरकाराक सहाय करचेखातिरि आनि चेरडांक जायितलिं पुस्तकं तयार करचे खातिरि एक मंडळ नेमका. ते मंडळांतुले सभासदांलिं नांव—

१ श्री० वैकुंठ श्रीनिवास प्रभु (चेयरमन).

२ ,, मुकुंद दास पै.

३ ,, के. गोपाळ राव, B.A.,B.T.

४ ,, बाबु गणपति पै, B.Sc., B.T.

५ ,, बाळकृष्ण श्रीनिवास शानभाग, M.A.

६ ,, रामचंद्र मंजुनाथ कामत (कार्यदर्शि)

हो ठरावु श्री० हरि कृष्ण शानभाग, वकील, हांनि मांडलो. सुचयितानां तांनि स्वाभिमानपूर्वक थोडे विषय प्रतिपादन केले. कोंकणि भाषेक लिपि ना अशी एकु आरोपु आसा. कोंकणीक प्रत्येकि लिपि ठराचि अवश्य ना. संस्कृताक जी लिपि तीचि कोंकणीक. शिवायि कोंकणि भाषेक लिपि ठरका, लिपि

आस यार मात्र त भाशेन शिक्षण दीवका म्हण आग्रह धरच चूक मातृभाषेक (Mother tongue) मान्यता म्हणनाति हाजो अर्थ उलयचि भास अशि म्हण जाता उत्राचे भौतिक लिपीवरूड कोंकणि मराठी अस हाचे बद्दल आमि अता मात्र ठराव केला जाल्यारि, तितल्यान आमि समाधान पावनयं सरकार मराठी कोडता तीं मरक्यूराची असल्यान हाल्नले अधिकार कोंकणीक विरोध करनाति म्हण ते मरक्यूराप्रमाण कामा जायनाति क्रमिक पुस्तका सरकारान करका न करनले म्हण आमि नवीन वरन्यार काथाथ काम करनीं ना म्हण आमि एक स्वतंत्र मंडळ नेमच अगत्य आस क्रमिक पुस्तक सरकारान तयार करनाजाल्यार आमि तयार काक तयार करना न जाल्यारि आमि सरकाराक साहाय्य करका अशि दोन नमुन्यान काम करचें म्हणतर हाव हो ठराव सुचयता आस विषयक काम कोंकणि भाषचानि केलेशिवाय कोंकणि भाषेचो उद्धार जावचो कठिण आस

सचक —श्री० हरि कृष्ण शानभाग, अनुमोदक — डा० बाबा म्हाळप्पा पै (हो ठरावु सर्वानुमतान स्वीकारलो)

ठरावु ५

हे कोंकणि सभेचे ठराव सरकारान मनाव करचे बद्दल सरकार नि लोक हाय सामति व्यवहार चालू करका म्हण सुमारि वाकथिले लोकांच एकि कार्यकारि समिति ही सभा नेमता

१ श्री० नरसिंह गोविंद शानभाग, B A LL B (अध्यक्ष) २ डा० बाबा म्हाळप्पा पै, L.M P

३ रे० फादर दिवेगा, ४ श्री० मंजुनाथ पद्मनाभ दीवगि, B.A ,LL.B ,

५ श्री० हरि कृष्ण शानभाग, B A ,LL B , ६ डा० रामचंद्र श्याम भट,

७ श्री० श्रीधर कृष्ण प ८ श्री० नारायण केशव पै, B A , LL B , (कार्यदर्शि)

सचक— श्री० हरि राम प्रभु अनुमोदक—- श्री० राया सुब्बराय बाळगि, (हो ठरावु सर्वानुमतान स्वीकारलो)

हे नंतर अध्यक्षाल समारोपात्मक भाषण जालें श्री० वैकुंठ श्रीनिवास प्रभु हानि सर्वांलो आभार मानलो सर्वानि उबें रावन ' जनगणमन " हे राष्ट्रगीत म्हळें मागिर सभेच काम समाप्त जालें

कोंकणी भाषा प्रचार मंडळ, कुमटा.

ता ४-९-४८च्या सभेन नेमिलें कार्यकारि मंडळाचि सभा ता १४ १० ४८साक भरिलि ते सभेन एक **कोंकणी भाषा प्रचार मंडळ** नेमून कोंकणी भाषेच प्रचाराच कार्य करका अश ठरलें हे मंडळाचे खर्चाक पैसो जाय ता देणगि मेळवन वा वर्गणीन मेळवक अशीय ठरलें दिवाळि परबेचे कालांतरि प्रचारक नेमून वर्गणी नि देणगि एकडे करचें काम कार्यदर्शी कडेन दीलें आनिक तेबद्दल एक विनंतीपत्र सुद्धा तयार केलें तुर्त सान चेरडाक जाय तीं क्रमिक पुस्तकां तयार करचें काम हातान घेवका अशेंचि ठरलें ते शिवाय आज पर्यंत तयार जालिल्या कोंकणी वाङ्मयाचो शोध करन, ताजो संग्रह करचो नि कालमानपरिस्थितीक योग्य पुस्तकां तयार करचीं अशय ठरलें

सभेक हाजर आशिल्यालि नावां — श्री॥ नरसिंह गोविंद शानभाग वकील (अध्यक्ष), मंजुनाथ पद्मनाभ, दिवगि वकील, डॉ॥ बाबा माळप्पा पै (नगराध्यक्ष), डा॥ राम श्याम भट्ट श्री॥ श्रीधर कृष्ण पै (कानरिक संपादक), हरि कृष्ण शानभाग वकील वैकुंठ श्रीनिवास प्रभु, मुकुंद दास पै कुळिगद्दे, रामचंद्र मंजुनाथ कामत, बाळकृष्ण श्रीनिवास शानभाग, नारायण केशव पै (कार्यदर्शि)

विनंती-पत्र.

कोंकणी भाषेचे लोकांकडेन विनति.

कोंकणी भाषा प्रचार मंडळ, कुमटा.

चेरडाक आपल मायभाषेनचि शिक्षण दीवका आनि तशीं दिल्यार मात्र चेरडाक विषयज्ञान मुळभरीतीन जाता अशी जाणते लोकाली म्हण्णी आसा. सरकाराक ती म्हण्णी मान्य जाल्या कोंकणी उलवचें सान चेरडाक कोंकणीनचि शिक्षण दिवका त्याखातीर जाय तो प्रचार करका, त्या भाषेचा वाङ्मयेचो प्रचार करन ते भाषेक मानाचें स्थान मेळवन दिवका असो विचार करन आमि कुमट्यांत कोंकणी भाषा प्रचार मंडळ ही संस्था स्थापन केल्या हे बद्दल भरिले सभेचि हकीकत प्रकट केल्या

संस्थेचो उद्देश सार्थक जावका जाल्यार ताका जनाचो नि धनाचो सहाय्य अवश्य आसा कोंकणी उलवच नि कोंकणि भाषेच अभिमान्यांनी भाषेचे प्रचाराच काम आपलचि अशें समजून तवतावळि अवश्य दिसिल काम स्फूर्तीनि करका तुर्त पैसो एकड करका पडला कोंकणी उलवच लोकांत सधन लोक पुष्कळ आसति दिवाळीच परबे वेळार तांनीं उदार मनान आनि अभिमानान मंडळाच पावन कामाक देणगी दिवन सहाय्य करका अशी आम्हांचीं विनति आसा कुमटा, ता १४ १० १९४८

नरसिंह गोविंद शानभाग मंजुनाथ पद्मनाभ दीवगि, बाबा म्हाळप्पा पै, राम श्याम भट श्रीधर कृष्ण प हरि कृष्ण शानभाग वैकुंठ श्रीनिवास प्रभु मुकुंद दास पै कुळिगद्द, रामचंद्र मंजुनाथ कामत बाळकृष्ण श्रीनिवास शानभाग नारायण केशव पै (कार्यदर्शि)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ದೊಂದು ನಿಶ್ಚಿತ ಪರಿಮಾಣ ನಿಶ್ಚಯಿಸುವದು ಯೋಗ್ಯ ತೋರುತ್ತದೆ. ಯಾವದೊಂದು ವರ್ಷದಲ್ಲಿ ಬೆಳೆ ಕೆಟ್ಟುಹೋದರೆ ನಿಶ್ಚಯಿಸಿದ ಗೇಣಿಯ ಪರಿಮಾಣವನ್ನು ಭೂಕಂದಾಯ ಕಡಿಮೆ ಮಾಡಿಸುವಂತೆ ಕಡಿಮೆ ಮಾಡಬಹುದು.

ಸ್ಥಳಿಕ ವಿಷಯಗಳು.

(ಲೇಖಕ ಸ್ಥಳವಾರ್ತಿಕ)

ನಿಯಂತ್ರಣದ ಯುಕ್ತಾಯುಕ್ತತೆಯ ವಿಚಾರ ಇದೊಂದು ಪ್ರತ್ಯೇಕವುಂಟು. ನಿಯಂತ್ರಣದಿಂದ ಜೀವನದ ವಸ್ತುಗಳ ದರಗಳು ನಿಯಂತ್ರಣ ಹೊಂದುವ ಬದಲು ಅನಿಯಂತ್ರಿತವಾಗಿ ಲೋಕ-ಸಂಕಟವಾಗುತ್ತದೆಂಬದೊಂದು ಅನುಭವ ಜನರಿಗುಂಟು. ಕಳ್ಳ ಪೇಟೆ, ಸುಳ್ಳ ಪೇಟೆ, ಕಳ್ಳ-ಸುಳ್ಳರ ಭೋಗಸ ವ್ಯಾಪಾರ-ವ್ಯವಹಾರ ಮೊದಲಾದವು ನಿರ್ಮಾಣ ಹೊಂದಿ, ಕಳ್ಳ-ಸುಳ್ಳರಿಗೆ ಜನರನ್ನು ಸುಲಿಯಲು ಅವಕಾಶ ದೊರೆತು ಲೋಕತುಂಬ ಅನೀತಿಯ ಸೋಂಕು ಹಬ್ಬಿ ಜನ-ಕಷ್ಟವಾದ ಉದಾಹರಣೆಗಳುಂಟು. ಇದೀಗ ಹೊಸ ನಿಯಂತ್ರಣದಿಂದ ಅನಪೇಕ್ಷಿತವಾದ ಸಂಕಟಗಳು ಉಂಟಾಗಿರುವವೆಂಬ ಮಾತು ನಿಜ. ಸರಕಾರದ ಕಡೆ ಸಾಕಷ್ಟು ಅಕ್ಕಿ ಭತ್ತಗಳ ಶಿಲ್ಕು ಇಲ್ಲದ್ದರಿಂದ ಜನರಿಗೆ ಕೊಟ್ಟ ಸೀದಾ ಚೀಟಿಗಳ ಸಂಖ್ಯೆ ಕಡಿಮೆ ಮಾಡಲ್ಪಟ್ಟಿತು, ಸೀಧಾ ಪರಿಮಾಣವೂ ತಗ್ಗಿಸಲ್ಪಟ್ಟಿತು. ಸೀಧಾ-ಪಡೆಯುವವರ ಸಂಖ್ಯೆ ಸಾಮಾನ್ಯವಾಗಿ ೧೦೦ಕ್ಕೆ ೩೦ರಷ್ಟು ಉಂಟು, ಅದಕ್ಕೂ ಕತ್ತರಿ ಹಾಕಲ್ಪಟ್ಟಿದೆ. ಆದರಿಂದ ಹಳ್ಳಿಗರು ಪಟ್ಟಣಗಳಿಗೆ ಹೋಗಿ ತಮಗ ಬೇಕಾದ ಅಕ್ಕಿ-ಭತ್ತಗಳನ್ನು ಖರೀದಿ ಮಾಡಿ ಒಯ್ಯುತ್ತಿದ್ದರು. ಗ್ರಾಮಾಂತರ ನಿರ್ಬಂಧ, ತಾಲೂಕಾಂತರ ನಿರ್ಬಂಧ ಜಿಲ್ಲಾಂತರ-ನಿರ್ಬಂಧಗಳು ಒಮ್ಮೆಲೇ ಹೇರಲ್ಪಟ್ಟದ್ದರಿಂದ ಎಲ್ಲ ಅವ್ಯವಸ್ಥೆಯಾಗಿದೆ. ಧಾರವಾಡ ಜಿಲ್ಲೆಯ ಹಾನಗಲ್ಲ ಸೀಮೆಯಿಂದ ಪಶ್ಚಿಮ ಉತ್ತರಕಡೆಗೆ ಅಕ್ಕಿ ಭತ್ತಗಳು ಬರಲಾರಂಭಿಸಿದ್ದರಿಂದ ದರಗಳು ಇಳಿವ ಮುಖವಾಗಿದ್ದವು. ಪಾಯಲಿಗಕ್ಕೆ ರೂ ೩॥ ಇದ್ದದರ ರೂ ೩ಕ್ಕೆ ಇಳಿದಿತ್ತು. ದಿನಂಪ್ರತಿ ದರ ಇಳಿಯುತ್ತಿತ್ತು. ಪಾಯಲಿಗಕ್ಕೆ ರೂ ೧॥ರ ತನಕ ಆಗುವದಾಗಿ ಎಣಿಕೆಯಿತ್ತು. ಆದರಿಂದ ಬಡವರು ದರ ಇಳಿದ ಬಳಿಕ ಅಕ್ಕಿ-ಭತ್ತಗಳನು ಕೊಂಡುಕೊಳ್ಳುವ ಎಂಬ ವಿಚಾರದಲ್ಲಿದ್ದರು. ಆದರೆ ನಡುವೆಯೇ ನಿಯಂತ್ರಣದ ಅನಿರೀಕ್ಷಿತ ಆಜ್ಞೆಗಳು ಬಂದದ್ದರಿಂದ ಜನರು ಸಂಕಟದಲ್ಲಿ ಬಿದ್ದಿದ್ದಾರೆ. ಪೇಟೆಗಳಿಗೆ ಬರುತ್ತಿದ್ದ ಅಕ್ಕಿ-ಭತ್ತಗಳು ಮುಖ್ಯವು ಕಾಣದೆ ನಡುಹಾದಿಯಲ್ಲಿ ಬಿದ್ದುಕೊಂಡಿವೆ! ಇ ರಸ್ತೆಯು ಇಲ್ಲದ ಊರಿಗೆ ಪಾಕ್ಕಿ ಅಕ್ಕಿ-ಭತ್ತ ಒಯ್ಯಲಿಕ್ಕೆ ಪರ್ಮನೆ ಅಡ್ಡಿಯುಂಟಾದ್ದರಿಂದ ಪಟ್ಟಣದಲ್ಲಿದ್ದ ಅಕ್ಕಿ ಗ್ರಾಮದವರ ಕೈಗೆ ಸಿಲುಕದಂತಾಗಿದೆ. ಸರಕಾರದವರ ಅಂಗಡಿಗಳಲ್ಲಿ ಅಕ್ಕಿ ಶಿಲ್ಕು ಇಲ್ಲ! ಅಕ್ಕಿ ಶಿಲ್ಕು ಇದ್ದರೆ ಸೀಧಾ-ಚೀಟಿಗಳಿಲ್ಲ! ಮೇಲಾಗಿ ಈಗಿನ ಸರಕಾರಿ ಅಂಗಡಿಗಳಿಂದ ಜನರಿಗೆ ಸೀಧಾ ಪೂರೈಕೆಯಾಗಬೇಕೆಂಬ ವಿಧಿಯಿಲ್ಲ. ಈಗಿನ ಅಂಗಡಿಗಳನ್ನು ಸರಕಾರವು ಧರ್ಮ ಬುದ್ಧಿಯಿಂದ ನಡಿಸಿದೆ. ಪರವಾನೆದಾರರಿಗೆ ಅಕ್ಕಿ ಮಾರಲು ನಿರ್ಬಂಧವಿಲ್ಲ ನಿಜ. ಅವರೆ ಆ ಅಕ್ಕಿ ಗ್ರಾಮಕ್ಕೆ ಒಯ್ಯಬೇಕಾದರೆ ಮಾಮಲೇದಾರರ ಅಪ್ಪಣೆ ಬೇಕು. ಆ ಅಪ್ಪಣೆ ಬೇಡಿದರೆ ತಮಗೆ ಇನ್ನೂ ಸ್ಪಷ್ಟ ಹುಕುಮುಗಳಿಲ್ಲೆಂದು ಹೇಳಿ ಮಾಮಲೇದಾರರು ಅಪ್ಪಣೆ ಕೊಡುವದಿಲ್ಲ. ದಿನಂಪ್ರತಿ ೨-೩ ಸೇರು ಅಕ್ಕಿ ಒಯ್ದು ನಿರ್ವಾಹ ಮಾಡಲು ಜನರಿಗೆ ಸ್ವಾತಂತ್ರ್ಯವಿಲ್ಲ. ಪೋಲೀಸರಿಗೆ ಇದೊಂದು ಸುಗ್ಗಿ! ಪರವಾನೆದಾರರ ಅಂಗಡಿಗಳ ಅಕ್ಕಿ ಸುಟಿ ಕೊಂಡು ಅಕ್ಕಿ ಒಯ್ಯುವವರಿಗೆ ಹಿಡಿಯುವ ಹೆದರಿಕೆ ಹಾಕಿ ಅವರು ಲಂಚ ಪಡೆಯತೊಡಗಿದ್ದಾರೆ. ಸರಕಾರವು ಜಿಲ್ಲಾ ನಿರ್ಬಂಧಗಳನ್ನು ಹಾಕಲಿ, ತಾಲೂಕ ನಿರ್ಬಂಧಗಳನ್ನೂ ಬೇಕಾದರೆ ಹಾಕಲಿ, ಆದರೆ ಗ್ರಾಮಾಂತರ-ನಿರ್ಬಂಧಗಳನ್ನಿಡುವದರಿಂದ ಅಜ್ಞ ದುರ್ಬಲ ಬಡ ಜನರಿಗೆ ಬಲು ಸಂಕಟವಾಗುತ್ತದೆ. ಅವರನ್ನು ಸುಲಿಯಲು ಪೋಲೀಸರಿಗೂ, ಸೀಧಾ-ಅಧಿಕಾರಿಗಳಿಗೂ ಒಳ್ಳೇ ಅನುವು ದೊರೆಯುತ್ತದೆ. ಲಂಚ ತಿನ್ನಬಾರದೆಂದು ಹೇಳುವ ಸರಕಾರದ ರಾಜ್ಯಭಾರದಲ್ಲೇ ಲಂಚಗುಳಿತನ ಸೂಕ್ಷ್ಮದಿಂದ ಒಳಿಯುತ್ತದೆಂದು ಕಲಕತ್ತೆಯ ಮಾಡರ್ನ್ ರಿವ್ಯು ಪತ್ರಿಕೆಯವರು ಟೀಕಿಸಿದ್ದಾರೆ. ಲಂಚ ತಿನ್ನುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಲಂಚ ತಿನ್ನಬಾರದೆಂದೂ ಲಂಚ ತಿಂದರೆ ಶಿಕ್ಷೆಯಾಗುವದೆಂದೂ ಸರಕಾರವು ವಿಧಿಸುವದರಿಂದ ಲಂಚ ನಿರ್ಮೂಲನ ಆಗಲಾರದು. ಅಧಿಕಾರಿಗಳಿಗೂ ಕೂಡ ಲಂಚ ತಿನ್ನುವ ಬಯಕೆಯಾಗುತ್ತದೆ! ಗ್ರಾಮದವರು ಅಜ್ಞರಿರುವದರಿಂದ ತಮ್ಮ ತೊಂದರೆಯನ್ನು ಪರಿಹರಿಸಿಕೊಳ್ಳಲು ಪೋಲೀಸರಿಗೆ ಲಂಚ ಕೊಡುವ ಬುದ್ಧಿ ಅವರಿಗುಂಟಾಗುತ್ತದೆ. ಸಿಗುವ ವೇತನ ಜೀವನಕ್ಕೆ ಕಡಿಮೆ ಬೀಳುವದರಿಂದ ಪೋಲೀಸರಿಗೂ ಲಂಚ ತಕ್ಕೊಳ್ಳಬೇಕೆಂಬ ಬುದ್ಧಿಯುಂಟಾಗುತ್ತದೆ. ಆದರಿಂದ ಗ್ರಾಮಾಂತರ-ನಿರ್ಬಂಧವನ್ನು ಸರಕಾರವು ನಿಯಂತ್ರಣದ ಕಾನೂನಿನೊಳಗಿಂದ ಲೋಪ ಮಾಡುವದೊಳಿತು.

* *

ಹೊನ್ನಾವರದ ದಿವಾಣಿ ನ್ಯಾಯಾಧೀಶರು ಕರ್ಕಿಯ ರಾ॥ ಶಂಕರ ಕೃಷ್ಣ ಭಟ್ಟ ಇವರ ದಾವೆಯಲ್ಲಿ ಕಳೆದ ತಾ ೧೫-೧೦-೪೮ನೇಯ ಕೊಟ್ಟ ತೀರ್ಪನ್ನು ಮುಂಬಯಿ ಸರಕಾರವು ನಿರ್ವಿಕಾರ ಚಿತ್ತದಿಂದ ಪರಾಂಬರಿಸಬೇಕು. ಸ್ವಂತ ಸಾಗುವಳಿ ಭೂಮಿಯನ್ನು ಕೊಡಿಸುವ ದಾವೆಗಳ ವಿಚಾರ ಮಾಡುವ ಅಧಿಕಾರ ದಿವಾಣಿ ನ್ಯಾಯಸ್ಥಾನಗಳಿಗೆ ಇರುವದಿಲ್ಲೆಂದು ಸಾಮಾನ್ಯ ಭಾವನೆಯಿತ್ತು. ಮುಂಬಯಿ ಒಕ್ಕಲತನದ ಕಾನೂನಿನಂತೆ ನೇಮಿಸಲ್ಪಟ್ಟ ಟೆನನ್ಸಿ ಅವ್ವಲ ಕಾರಕೂನರಿಗಷ್ಟೇ ಆ ಅಧಿಕಾರವಿರುತ್ತದೆಂದು ಎಣಿಸಲಾಗಿತ್ತು. ಆ ಪ್ರಕಾರ ಕರ್ಕಿಯ ರಾ॥ ಶಂಕರ ಭಟ್ಟರು ಹೊನ್ನಾವರದ ಟೆನನ್ಸಿ ಅವ್ವಲ ಕಾರಕೂನರ ಕಚೇರಿಯಲ್ಲಿ ಸ್ವಂತ ಸಾಗುವಳಿಯ ಬಗ್ಗೆ ತಮ್ಮ ಹೊಲ ಬೇಡಿ ಅರ್ಜಿ ಮಾಡಿದ್ದರು. ಆ ಅರ್ಜಿಯನ್ನು ಟೆನನ್ಸಿ ಅವ್ವಲ ಕಾರಕೂನರು, ವಾದಿಕಯ ಕಾರಣಗಳನ್ನು ಕೊಟ್ಟು ಕಿತ್ತುಹಾಕಿದ್ದರು. ಒಡೆಯನಿಗೆ ಸಾಕಷ್ಟು ವರಮಾನವುಂಟು, ಭಟ್ಟರ ಭೂಮಿ ಬಿಟ್ಟುಕೊಟ್ಟಲ್ಲಿ ಒಕ್ಕಲಿಗನು ಬಹಳ ಕಷ್ಟಪಡುವದು ಕಷ್ಟವಾದೀತು. ಆದರಿಂದ ಶಂಕರ ಭಟ್ಟರು ಪ್ರಾಮಾಣಿಕತನದಿಂದ ಸ್ವಂತ ಸಾಗುವಳಿಗೆ ಭೂಮಿ ಪಡೆಯಬಯಸುತ್ತಾರೆಂದು ತಾವು ಎಣಿಸುವದಿಲ್ಲ ಎಂದು ಟೆನನ್ಸಿ ಅವ್ವಲ ಕಾರಕೂನರು ತೀರ್ಪು ಕೊಟ್ಟು ಶಂಕರ ಭಟ್ಟರ ದಾವೆಯನ್ನು ಕಿತ್ತುಹಾಕಿದ್ದರು. ಹೊನ್ನಾವರದ ದಿವಾಣಿ ನ್ಯಾಯಸ್ಥಾನದಲ್ಲಿ ರಾ॥ ಶಂಕರ ಭಟ್ಟರ ಪ್ರತಿವಾದಿಗಳಾದ ಕರಿಯಣ್ಣ ಮತ್ತು ಮಾಸ್ತಿ ಗೌಡರು, ಟೆನನ್ಸಿ ಅವ್ವಲ ಕಾರಕೂನರ ತೀರ್ಪಿನಿಂದ ರಾ॥ ಶಂಕರ ಭಟ್ಟರು ಬರೆದಿಂದೂ ಇಂಥ ದಾವೆಗಳನ್ನು ವಿಚಾರಿಸಲು ದಿವಾಣಿ ನ್ಯಾಯಸ್ಥಾನಕ್ಕೆ ಅಧಿಕಾರವಿಲ್ಲೆಂದೂ ವಾದಿಸಿದರು. ಈ ಎರಡು ಆಕ್ಷೇಪಗಳನ್ನು ಹೊನ್ನಾವರದ ದಿವಾಣಿ ನ್ಯಾಯಾಧೀಶರು ಸಾವಧಾನಚಿತ್ತದಿಂದ ಪರಾಂಬರಿಸಿ, ಅವುಗಳಲ್ಲಿ ಹುರುಳಿಲ್ಲೆಂದು ತೀರ್ಮಾನಿಸಿ ರಾ॥ ಶಂಕರ ಭಟ್ಟರಿಗೆ ದಾವೆಯಲ್ಲಿ ಕೇಳಿದಂತೆ ಸ್ವಂತ ಸಾಗುವಳಿಗಾಗಿ ಸ್ಥಳಗಳ ಕಬಜೆಯನ್ನು ಕೊಡಿಸಿರುತ್ತಾರೆ. ಒಕ್ಕಲತನದ ಕಾನೂನಿನಂತೆ ಟೆನನ್ಸಿ ಅವ್ವಲ ಕಾರಕೂನರಿಗಾಗಲಿ ಮಾಮಲೇದಾರರಿಗಾಗಲಿ ಸ್ವಂತ ಸಾಗುವಳಿಯ ಬಗ್ಗೆ ಭೂಮಿಗಳ ಕಬಜ ಬೇಡುವ ದಾವೆಗಳನ್ನು ವಿಚಾರಿಸಲಿಕ್ಕೆ ಹಕ್ಕಿಲ್ಲೆಂಬದು ದಿವಾಣಿ ನ್ಯಾಯಾಧೀಶರು ಕಾನೂನಿನ ಬೇರೆ ಬೇರೆ ಕಲಮುಗಳನ್ನು ಸೂಲಂಕಷವಾಗಿ ಪರಾಂಬರಿಸಿ ನಿರ್ಧರಿಸಿದ್ದಾರೆ. ಟೆನನ್ಸಿ ಅವ್ವಲ ಕಾರಕೂನರ ತೀರ್ಪು ಅಧಿಕಾರ ಬಾಹ್ಯವೆಂದೂ, ಆದರಿಂದ ಯಾರೂ ಒಪ್ಪಬೇಕಿಲ್ಲೆಂದೂ ನ್ಯಾಯಾಧೀಶರ ನಿರ್ಣಯವಾಗಿದೆ. ಇಂತಹ ದಾವೆಗಳ ವಿಚಾರದಲ್ಲಿ ಒಡೆಯನ ಪ್ರಾಮಾಣಿಕತನಕ್ಕೂ ಒಕ್ಕಲಿಗನ ಬಾಳ್ವೆಗೂ ಗಂಟು ಹಾಕುವದು ಅಸಂಬದ್ಧ (absurd) ವೆಂದೂ ನ್ಯಾಯಾಧೀಶರು ಬರೆದಿರುತ್ತಾರೆ. ಒಡೆಯನ ಹೇಳುವನ್ನಾಗಲಿ ಆತನ ಸಂಪತ್ತನ್ನಾಗಲಿ ವಿಪತ್ತನ್ನಾಗಲಿ ಇಂಥ ದಾವೆಗಳಲ್ಲಿ ವಿಚಾರಿಸಬೇಕೆಂದು ಕಾನೂನಿನಲ್ಲಿ ವಿಧಿಸಿಲ್ಲ. ಕಬಜೆಯನ್ನು ಕೊಡಿಸುವದರಿಂದ ಒಕ್ಕಲಿಗನಿಗುಂಟಾಗುವ ಕಷ್ಟದ ಪರಿಸ್ಥಿತಿಯನ್ನು ಸಹ ಲೆಕ್ಕಿಸತಕ್ಕದ್ದಿಲ್ಲ. ಹೀಗೆ ಸಹ ದಿವಾಣಿ ನ್ಯಾಯಾಧೀಶರ ನಿಶ್ಚಿತ ಅಭಿಪ್ರಾಯವಾಗಿದೆ. ಮುಂಬಯಿ ಸರಕಾರವು ಈ ತೀರ್ಪನ್ನು ಆಲೋಚಿಸಿ ತಕ್ಕ ಹುಕುಮುಗಳನ್ನು ಹೊರಡಿಸುವದು ಶ್ರೇಯಸ್ಕರವಾದದ್ದು. ಟೆನನ್ಸಿ ಅವ್ವಲ ಕಾರಕೂನರು ಅವಿಚಾರಕ್ಕೀಡಾಗಿ ಅನೇಕ ದಾವೆಗಳನ್ನು ಕಿತ್ತುಹಾಕಿ ಬಡ ಒಡೆಯರಿಗೆ ಸಂಕಟ ಗೊಳಿಸಿದ್ದಾರೆ. ಮಾಮಲೇದಾರರ ಮೇಲಧಿಕಾರಿಗಳಾದ ಜಿಲ್ಹಾಧಿಪರೂ, ಪ್ರಾಂತಾಧಿಪರೂ ಟೆನನ್ಸಿ ಅವ್ವಲ ಕಾರಕೂನರ ಅಸಂಬದ್ಧ ಹುಕುಮುಗಳನ್ನು ಎತ್ತಿಹಿಡಿದದ್ದರಿಂದ ಟೆನನ್ಸಿ ಅವ್ವಲ ಕಾರಕೂನರ ಅಸಂಬದ್ಧ ಪ್ರಕಾರಗಳಿಗೆ ಇತಿಮಿತಿ ಇಲ್ಲದಂತಾಗಿದೆ. ಸಾವಿರಾರು ಒಡೆಯರು ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡುವ ಪ್ರಸಂಗವುಂಟು. ಜನತಾ ಸರಕಾರವೆಂದು ಬಡಿವಾರ ಬಡಿಯುವ ಸರಕಾರವು ಒಕ್ಕಲತನದ ಕಾನೂನಿನಿಂದ ಜನರೊಳಗಿದ್ದ ಸ್ನೇಹ ಸಂಬಂಧಗಳನ್ನು ತುಂಡರಿಸಿ, ಹಗೆತನ ಹಬ್ಬಿಸಿದ್ದರಿಂದ ಉಭಯತರೊಳಗೆ ಮತ್ಸರಪ್ರೇರಿತ ವ್ಯಾಜ್ಯಗಳುಂಟಾಗಿವೆ. ಈಗಲಾದರೂ ಸರಕಾರವು ತನ್ನ ಸುವಿಚಾರ ತಳೆಯಬಹುದು. ಗುಪ್ತ ಹುಕುಮುಗಳನ್ನು ಹೊರಡಿಸಿ ದಿವಾಣಿ ನ್ಯಾಯಸ್ಥಾನಗಳ ಅಧಿಕಾರವನ್ನು ಅಂತ್ಯ ಪಡಿಸಿ ಒಡೆಯರ ನ್ಯಾಯವಾದ ಹಕ್ಕುಗಳನ್ನು ಅಪಹರಿಸಬಯಸುವದು ಅನೀತಿಯದೆಂದು ಮಹಾತ್ಮರ 'ಹರಿಜನ' ಪತ್ರಿಕೆಯ ಸಂಪಾದಕರಾದ ಶ್ರೀ॥ ಕಿಶೋರಲಾಲ ಮಶ್ರುವಾಲಾರವರು ಬರೆಯುತ್ತಾರೆ. ಸರದಾರ ವಲ್ಲಭಭಾಯಿ ಪಟೇಲರ ಸ್ವತಂತ್ರ ಸೇನೆಯಲ್ಲಿ ಸೈನಿಕರಾಗಿ ದುಡಿದ ಬಾರಡೋಲಿಯ ಶ್ರೀ॥ ಖುಶಾಲಭಾಯಿ ಪಟೇಲರು ಒಕ್ಕಲತನದ ಕಾನೂನಿನಿಂದ ಒಡೆಯರ ನ್ಯಾಯ್ಯ ಹಕ್ಕುಗಳನ್ನು ಅಪಹರಿಸುವದು ಅನ್ಯಾಯವೆಂದು ದೂರುತ್ತಾರೆ. ಇವರ ದೂರುಗಳು ವಿಚಾರಾರ್ಹವಿರುತ್ತವೆಂದು ಶ್ರೀ॥ ಮಶ್ರುವಾಲಾರವರ ಅಂಬೋಣವುಂಟು.

ಮುಂಬಯಿ ಕಾಯಿದೆ ಕೌನ್ಸಿಲಿನ ಮೇಲ್ಮನೆಯಲ್ಲಿ ಕೊಂಗ್ರೆಸ ಪಕ್ಷದ ೨೨ ಮಂದಿ ಸಭಾಸದರಿದ್ದಾಗ್ಯೂ ಅವರಲ್ಲಿ ಒರೇ ೧೦ ಮಂದಿ ಒಕ್ಕಲಿಗರ ಕಾನೂನಿಗೆ ಅನುಕೂಲ ಮತ ಕೊಟ್ಟಿದ್ದಾರೆ. ಪ್ರತಿಕೂಲ ಮತ ಕೊಟ್ಟವರು ೨ ಮಂದಿಯಾದ್ದರಿಂದ ಈ ಕಾನೂನು ಮೇಲ್ಮನೆಯಲ್ಲಿ ಮಂಜೂರಾಗಿರುತ್ತದೆ. ಜನತಾ ಸರಕಾರವು ಇನ್ನಾದರೂ ಅವಿಚಾರವನ್ನು ತೊರೆಯಬೇಕು. ಕಾಂಗ್ರೆಸ ಪಕ್ಷವು ಬಹುಮತದ ಬಲದಿಂದ ಸಾಮಾನ್ಯ ಜನರನ್ನು ಕಂಡಕೂಡದು. ಸಕಲರಿಗೆ ರಕ್ಷಿಸಲು ಧರ್ಮದಿಂದ ಬದ್ಧವಾದ ಸರಕಾರವು ಪ್ರಜೆಗಳಲ್ಲಿ ಭೇದಗಳನ್ನು ಕಲ್ಪಿಸಿ ಪಕ್ಷಪಾತ ಮಾಡಲಾರಂಭಿಸಿದರೆ ಆ ಜಾತಿಕಲಹ ಅಂತ್ಯವಾಗಿರಲಿಕ್ಕೆ ಸಂಭವಿಸುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ 'ವೃತ್ತ' ದಲ್ಲಿ ಪ್ರಸಿದ್ಧಿಸಿದಂತೆ ಮಂಗಳವಾರ ರಾತ್ರಿ ಸುಮಾರು ... ಜವನ್ನಾಗಿ ಮಳೆ ಸುರಿಯಿತು. ... ಈ ವರ್ಷ ಬೆಳೆಯು ... ಹಾನಿಯಾಗುವದೆಂದು ತಿಳಿದು ಒಕ್ಕಲಿಗರು ಗದ್ದೆ ಕೊಯ್ಯುವ ... ತೊಡಗಿದ್ದಾರೆ.

ಅಕ್ಕಿಯ ದರಗಳು ಕಳೆದ ವಾರ ಹೇಳಿದಂತೆ ಏರುತ್ತ ನಡೆದಿದ್ದವು ಅದನ್ನು ಕಂಡು ಜನಸಾಮಾನ್ಯರು ತರ್ಕ ಮಾಡತೊಡಗಿದ್ದರು. ಇದು ನಮ್ಮ ಸರಕಾರಕ್ಕೆ ಸೇರಲಿಲ್ಲವೇನೋ! ಶುಕ್ರವಾರದಿಂದ ಅವರು ಹಳ್ಳಿಯಿಂದ ಹಳ್ಳಿಗೆ ಗ್ರಾಮದಿಂದ ಗ್ರಾಮಕ್ಕೆ ಒಂದು ತಾಲೂಕಿನಿಂದ ಇನ್ನೊಂದ ತಾಲೂಕಿಗೆ ಮಾಮಲೇದಾರ ಮಹಾಲಕರಿಗಳ ಅಥವಾ ಜಿಲ್ಹಾಧಿಕಾರ ಅಪ್ಪಣೆಯಿಲ್ಲದೆ ಅಕ್ಕಿ, ಭತ್ತ, ನುಚ್ಚು ಮುಂತಾದ ಆಹಾರ ಧಾನ್ಯಗಳನ್ನು ಒಯ್ಯಕೂಡದೆಂದು ನಿರ್ಬಂಧ ಹೇರಿ ... ಹೊರಡಿಸಿದ್ದಾರೆ! ಅದರಿಂದ ಅಕ್ಕಿಯ ದರಗಳು ಪುನಃ ಹಿಂದಿನ ... ಹೋಗಲಾರಂಭಿಸಿವೆ! ಈ ಎರಡು ದಿನಗಳಲ್ಲೇ ಅಕ್ಕಿಯ ದರಗಳು ಪ್ರತಿ ... ಒಂದೊಂದು ... ಇಳಿದಿವೆ! ಇನ್ನೂ ಇಳಿಯುವ ಲಕ್ಷಣಗಳು ತೋರುತ್ತಲಿವೆ. ಈ ಪರಿಸ್ಥಿತಿಯನ್ನು ಕಂಡು ಬಡಬಗ್ಗರು ಈ ನಿಯಂತ್ರಣ ಹಾಕಿದ ಸರಕಾರವನ್ನೂ ಸರಕಾರಿ ಅಧಿಕಾರಿಗಳನ್ನೂ ಹೊಗಳಲಾರಂಭಿಸಿದ್ದಾರೆ. ಆಯಾ ಊರಲ್ಲಿ ಸಾಕಷ್ಟು ಅಕ್ಕಿ-ಭತ್ತಗಳ ಸಂಗ್ರಹ ಮಾಡದೆ, ಜನರಿಗೆ ಕಡಿಮೆ ದರಗಳಿಂದ ಅವು ಸಿಗುವಂತೆ ವ್ಯವಸ್ಥೆ ಮಾಡದೆ ಮುಕ್ತ ದರಗಳು ಏರದಂತೆ ಯೋಗ್ಯ ನಿರ್ಬಂಧ ಹಾಕದೆ ಈ ವ್ಯವಸ್ಥೆಗಳಾಗುವ ಪೂರ್ವದಲ್ಲಿ ದ್ರವ್ಯಾಂತರದ ... ಹೇರುವ ನಿಯಂತ್ರಣಾಧಿಕಾರಿಗಳ ಕಡೆಯಿಂದ ಲೋಕರಕ್ಷಣೆಯಾಗುವದು ಶಕ್ಯವಿಲ್ಲೆಂದು ಜನರು ಮುಚ್ಚುಮರೆಯಿಲ್ಲದೆ ಆಡುತ್ತಿದ್ದಾರೆ. ನಿಯಂತ್ರಣಾಧಿಕಾರಿಗಳು ಆ ಮಾತುಗಳನ್ನು ಆಲಿಸಬೇಕು.

ಕಳೆದ ಆಗೋಸ್ತ ತಿಂಗಳಲ್ಲಿ ಜರುಗಿದ ... ಲೋವರ್ ಸೆಕ್ರೆಟರಿಗಳ ಪರೀಕ್ಷೆಯಲ್ಲಿ ಈ ಕೆಳಗಿನವರು ಉತ್ತೀರ್ಣರಾಗಿರುವರೆಂದು ಜಿಲ್ಲಾ ಸಹಕಾರಿ ಶಿಕ್ಷಣ ಸಮಿತಿಯವರು ತಿಳಿಸುತ್ತಾರೆ — ೧ನೇ ವರ್ಗ — ೧ ಪಿಟ್ಕೆ ಮುಳ್ಳಗಿರಿ ಭಟ್ಟ. ೨ನೇ ವರ್ಗ — ೧ ಎಸ್ ಜಿ ... ೨ ವಿ ಎನ್ ... ೩ ಕೆ ಎನ್ ... ೪ ವಿ ಎಸ್ ... ೫ ಎಮ್ ಎಸ್ ... ೬ ಎಸ್ ಆರ್ ಹೆಗಡೆ.

ಸಾಧಾರಣ ಉತ್ತೀರ್ಣರ ವರ್ಗ — ೧ ಎಸ್ ಎಮ್ ... ೨ ಪಿ ಎಸ್ ಭಟ್ಟ, ೩ ... ಭಟ್ಟ ೪ ಬಿ ಜೀ ನಾಯ್ಕ ೫ ಪಿ ಆರ್ ಭಟ್ಟ ೬ ಎಸ್ ಆರ್ ಹೆಗಡೆ ೭ ಟಿ ಜಿ ಹೆಗಡೆ ೮ ಎನ್ ಎಸ್ ... ೯ ಜಿ ಆರ್ ಭಟ್ಟ ೧೦ ಕೆ ಕೆ ... (ಎಲ್ಲ ಹೆಸರುಗಳು ... ಕೊಡಲ್ಪಟ್ಟಿವೆ)

ಈ ವರೆಗೆ ಆಗಿರುವ ಸರಕಾರದವರ ಬೆಳೆಯ ... ಪ್ರಯೋಗಗಳ ಅನುಭವ ನೋಡಿದರೆ ಈ ವರ್ಷ ... ಬೆಳೆಯು ... ಬರುತ್ತದೆಂದು ತೋರುತ್ತದೆ.

ಕಳೆದ ಮಂಗಳವಾರ ... ಚೌ ... ಉತ್ಸವ ... ಜನರು ... ನೋಡಿದ್ದರು ... ವೆಂಕಟರಮಣ ಹೆಗಡೆಯವರು ... ನಾಟಕ.

ದಿ ... ಸ್ಥಳದ ... ಸ್ಮಾರಕ ... ಬಂಧುಭಗಿನಿಯರ ... ಅವುಗಳನ್ನು ... ಉಳಿಸಿಕೊಳ್ಳಲು ... ಉಪದೇಶ ಮಾಡಿದರು ... ನಡೆದವು.

... ಸುಮಾರು ... ಅಧ್ಯಕ್ಷರಾಗಿದ್ದರು.

ಮುಂದಿನ ... ಸ್ಥಾನದ ... ಶಿಷ್ಯ ವೃಂದಕ್ಕೆ ... ದಲ್ಲಿ ನಡೆಯುವ ... ಕೊಡಬಯಸುವ ವಿದ್ಯಾರ್ಥಿಗಳು ... ಇವರಿಗೆ ... ಅರ್ಜಿಗಳನ್ನು ... ಕಳಿಸಬೇಕೆಂದೂ ... ಜಾಹೀರಾತಿನ ... ತಿಳಿಸುತ್ತಾರೆ.

ಹಾರ್ಸಿಕಟ್ಟೆ ... ಪ್ರಯೋಗಗಳ ... ಈ ಪ್ರಯೋಗಗಳ ... ಪ್ರಯೋಗ ಮಾಡಬೇಕು ... ತೋರಿಸಿದ ಒಂದು ಉತ್ತಮ ... ಪ್ರಯೋಗ ... ಗದ್ದೆಯನ್ನು ... ಆ ಗದ್ದೆಯನ್ನು ... ಬೆಳೆದಂತೆ!

ಅಂಕೋಲಾ— (ತಾ ... ೧೯೪೮) ಮುಂಬಯಿ ಸರಕಾರದ ... ಒಕ್ಕಲಿಗರ ... ಕಾನೂನಿನ ... ಗಳನ್ನು ... ದಿಂದಲೂ ... ನೇ ... ಕಾನೂನಿಗೆ ವಿರುದ್ಧ ... ದಿಂದಲೂ ... ಕಾನೂನಿಗೆ ... ಈ ... ಸರಕಾರದ ... ಮುಂಬಯಿ ...

ಅಲ್ಲಲ್ಲಿ ಗಾಂಧಿ ಜಯಂತಿ

ಬಟಕಳ— ತಾ ೧ ರಂದು ಗಾಂಧಿ ... ಕನ್ನಡ ... ಶಾಲೆಯಲ್ಲಿ ... ಅಧ್ಯಕ್ಷತೆಯಲ್ಲಿ ... ಸಮಾರಂಭ ... ಜರುಗಿತು.

ಶಿರಾಲಿ— ತಾ ೧ ರಂದು ಇಲ್ಲಿಯ ಕನ್ನಡ ಶಾಲೆಯವರು ಹಳ್ಳಿಗಳಲ್ಲಿ ಸಂಚರಿಸಿ ... ಕಾರ್ಯ ಮಾಡಿದರು.

ಬೇಂಗ್ರೆ— ತಾ ೨ರಂದು ... ಗಾಂಧಿ ... ಯ ಹುಡುಗರೂ ಶಿಕ್ಷಕರೂ ಕೂಡಿ ಸ್ವಚ್ಛತೆಯ ಕಾರ್ಯ ಮಾಡಿದರಲ್ಲದೆ ತಾ ೧೭ರಂದು ಶಾಲೆಯ ... ವಿಜೃಂಭಣೆಯಿಂದ ನೆರವೇರಿಸಿದರು.

ಮಂಕಿ— ತಾ ೭ರಂದು ಗಾಂಧಿ-ಜಯಂತಿ ... ನಿಮಿತ್ತವಾಗಿ ಸಾರ್ವಜನಿಕ ಸಭೆ ಕೂಡಿತು. ... ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಗಾಂಧಿಜಿಯವರ ತತ್ವಗಳನ್ನು ವಿವರಿಸಿ ಹೇಳಿದ್ದಲ್ಲದೆ, ... ಸಂಘಟನೆಯ ಮಹತ್ವವನ್ನೂ ತಿಳಿಸಿ ಹೇಳಿದರು.

ಇಡಗುಂಜಿ— ತಾ ೯ರಂದು ಗಾಂಧಿ ಜಯಂತಿಯು ... ಅಂಗವಾಗಿ ಶಾಲೆಯ ... ೧೧ ... ಪಂಡಿತರ ... ಸಭೆಯಾಯಿತು. ಅಧ್ಯಕ್ಷರೂ ಬೇರೆ ಕೆಲವರೂ ... ಗ್ರಾಮೋದ್ಧಾರದ ವಿವಿಧ ... ಗಳನ್ನು ವಿವರಿಸಿ ಹೇಳಿದರು. ... ಯಲ್ಲಿ ಗಾಂಧಿಜಿಯವರ ... ಭಾವಚಿತ್ರವನ್ನೊಂದು ... ಕೊಡಲಾಗಿದೆ ಎಂದು ಗೊತ್ತಾಯಿತು.

WANTED

An English knowing experienced Secretary with thorough knowledge of Book-keeping, Correspondence and General office routine work. Pay Rs 40/- plus dearness allowance not less than Rs 10/. Applications should reach us before 31-10-1948.

Chairman,
Blacksmiths & Carpenters Society
2?-10-1948 Ltd Honavar

THE BANK OF RURAL INDIA LTD.,

(Incorporated in British India, Liability of Members limited)

HEAD OFFICE — Satyabhama Bhavan KARWAR. N K

Offices at — KARWAR KUMTA SIRSI HONAVAR YLLAPUR BHATKAL SIDDAPUR ANKOLA HUBLI & DHARWAR

Authorised Capital	**Rs 10 00,000**
Subscribed Capital	**Rs 5 00 000,**
Paid-up Capital & Reserves	**Rs. 5 08,502-8-0**

Rates of Interest on Deposits

Current a/c @ 1% p a, ***Savings Bank a/c @ 2½%***

Fixed Deposits for 3 months @ 3% per annum.
" for 6 monnths @ 3½%
" for 12 months or more @ 4%

All kinds of modern Banking business transacted

Karwar
14-2-1948

P X GRACIOUS
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಿನಭಾಗ (ಸಂಪಾದಕ) ಇವರ ಕುಮಟೆಯಲ್ಲಿರುವ ತಮ್ಮ "ಸ್ವಾಧೀನ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B. 1270 Monday, 1-11-1948.

ಕಾನಡಾವೃತ್ತ

THE KANARA NEWS

Extracts from the Judgment of the Civil Judge at Honavar in Civil suit No 36 of 1948 delivered on 13th October 1948

1

Jurisdiction of Tenancy Aval Karkuns under the Bombay Tenancy Act 1939

14 Plaintiff claims possession of the property on the ground that he has terminated the tenancy of the defendants under Section 7 (1) of the Tenancy Act This section states that not-with-standing anything contained in Section 5 a landlord may terminate the tenancy of a protected tenant by giving him a year's notice in writing stating therein the reasons for such termination if the landlord bona fide requires the land for any of the following purposes, viz, (A) for cultivating personally or using personally the land for any agricultural purpose or (B) for any non-agricultural purpose Now in the present case Plaintiff has given 1 year's notice under Section 7 (1) of the Tenancy Act informing the defendants that he wants the suit property for personal cultivation Plaintiff has entered the witness-box and says on oath that he wants the suit property for personal cultivation I do not see any reason to disbelieve his statement

15 Now it is contended on behalf of the defendants that the Tenancy Court has dismissed the application made by the plaintiff for possession of the property on the ground that he wanted the suit property for personal cultivation and that therefore it is not open to the plaintiff to base his claim on the same cause of action I do not see any substance in this contention The Tenancy Aval Karkun has no jurisdiction to try an application for possession of the property under Section 7 (1) of the Tenancy Act It appears that the plaintiff made an application to the Tenancy Court in ignorance of the law on this point As the Tenancy Aval Karkun had no jurisdiction whatever order is passed by him has no value at all That will not come in the way of the plaintiff in seeking possession of the property by filing a suit in the Civil Court It is also contended before me that the landlord has to make an application to the Mamlatdar to recover possession of the property under Section 7 (1) of the Tenancy Act and that the Civil Court has no jurisdiction to adjudicate upon such matters This contention also cannot be accepted Section 13 of the Tenancy Act mentions the applications to be made to the Mamlatdar under the provisions of the Tenancy Act That Section does not mention that an application under Sec. 7 (1) is to be made to the Mamlatdar It is therefore clear that the Mamlatdar while acting in his capacity as a Mamlatdar as distinguished from his capacity while presiding over the Mamlatdar's Court has no jurisdiction to try a matter under Section 7 (1) of the Tenancy Act It is also clear from the wording of the proviso to section 7 (1) that it is only the Civil Court and the Mamlatdar's Court that have jurisdiction to adjudicate upon a controversy under section 7 (1) This proviso states that no compensation shall be awarded under this sub-section to a tenant whose tenancy was terminated under a decree or order of a competent court if such court has recorded a finding at the time of Passing such a decree or order that the land was required bona fide by the landlord for any of the purposes mentioned in sub-section (1) The word decree in this proviso refers to a decree of the Civil Court and the word order refers to an order made by the Mamlatdar's Court It is, therefore clear from the section itself that the Civil Court has jurisdiction to try a suit under section 7 (1) of the Tenancy Act A Tenancy Aval Karkun cannot preside over the Mamlatdar's Court It is therefore clear from this section also that the so called Tenancy Court has no jurisdiction to try a suit under section 7 (1) of the Tenancy Act I have no doubt that the Civil Court has the jurisdiction to try the suit in the present form

2

Significance of the word bona fide in Section 7 (1) of the Bombay Tenancy Act 1948

16 The next contention of the defendant is that the plaintiff does not want the land bona fide for personal cultivation There is a good deal of controversy as to what is the significance of the word bona fide appearing in section 7 (1) The words 'bona fide' qualifies the word requires the land So what the landlord is expected to show under this sub-section is that he really wants the land to use it for any of the two purposes mentioned therein The 'bona fides' refer to the requiring the property for the particular uses mentioned there It has nothing to do with the ultimate effect that may be caused to the tenant It is urged before me that plaintiff is a big landlord and that his income would be sufficient for his maintenance and therefore it

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,
ಹೆಡ್ ಆಫೀಸು ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಡೇಪೋಜಿಗಳು ...
ಒಂದು ವರ್ಷಕ್ಕೆ ಸೇಕಡಾ ರೂ 3/ ರಂತೆ ಬಡ್ಡಿ
... ಸೇವಿಂಗ್ಸ್ ... ಸೇಕಡಾ 2/- ...

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು

ಕುಂದಾಪುರ,
ತಾ. ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ್ ಡೈರೆಕ್ಟರ

would not be necessary for him to personally cultivate the suit property Further it is said that if the defendants are ousted from the property they will have no other means of livelihood and therefore they would very much suffer It is therefore contended that the plaintiff has failed to prove the bona fides as contemplated under section 7 (1) of the Bombay Tenancy Act It is further contended before me that the Plaintiff's motive in bringing the suit is to cause distress to the defendants and the fact that he does not require the land bona fide for personal cultivation It appears to me that this contention is not sound If the above argument is to be accepted then it means that the bona fides for land lord depend upon the necessities of the tenant and upon his financial condition Such a proposition is absurd We are not to make comparisons between the incomes of the landlords and those of the tenant There is no law that a person who has sufficient means for his livelihood should not work more and should not try to increase his income If by taking possession of the property the tenant is affected the landlord cannot help it It does not amount to saying that the landlord does not want the land bona fide for personal cultivation The tenant has no vested right in the property and he cannot insist upon the landlord not to oust him as it would cause him great inconvenience and loss The motive of the landlord in evicting his tenant is in my opinion not at all material while considering the question under section 7 (1) of the Tenancy Act I may give here an instance Suppose a landlord has more than sufficient income for his livelihood Still he wants to personally cultivate some land with the full knowledge that by doing so he would be ruining his tenant Now all that can be said in this case is that the landlord is a very selfish fellow and that he does not care for the poorer classes. But at the same time he really wants the property for personal cultivation I think under the circumstances it cannot be said that the landlord has failed to prove that he bona fide requires the land for personal cultivation Now suppose that in the same case the tenant is a very troublesome person The landlord wants to oust him at any cost and for that very purpose he wants to cultivate the land personally We may take it that his sole motive in personally cultivating the property is to oust him and to harm him Even then I think that under section 7 (1) such a landlord would be entitled to get possession of the property from the tenant What we have to see is whether the landlord wants the land for personal cultivation and if that is proved the provisions of section 7(1) are deemed to be complied with

17 I may give here some more instances to show as to what is the significance of the word bona fides appearing in the sub section It is urged before me that if a person is already personally cultivating some of his properties and if it would not be possible for him to cultivate any more then it should be deemed that the landlord does not want the land bona fide for personal cultivation I am unable to accept this contention also The Tenancy Act defines what is meant by the phrase **to cultivate personally** To cultivate personally means to cultivate on ones own account by ones own labour, or by the labour of any member of ones family or by servants or hired labour under ones personal supervision or the supervision of any member of one's family A person can get the land cultivated through servants under his personal supervision to any extent It is not necessary that he should personally labour in all the lands cultivated by him So if a person who actually works in the land also wants to get some more lands to cultivate through servants then it cannot be said that he does not want the land bona fide for personal cultivation All that we have to see is whether the landlord wants the land to cultivate it personally within the meaning of the Tenancy Act If that is so then we cannot attribute mala fides to him simply because he already cultivates some other lands

18 Now suppose a landlord cultivates many lands personally and that it is not possible for him to cultivate any more Under such circumstances, he wants to evict a tenant of his and wants his land to cultivate personally He also intends at the same time to lease some of his other lands to other tenants so that he would be able to cultivate personally the land held by the tenant whom he wants to evict Can the landlord succeed under section 7 (1) of the Tenancy Act under such circumstances? I think he should succeed It is true that a particular tenant may be put to a loss But at the same time some other person is going to be benefitted I do not see any mala fides in any such action A person is allowed to manage his affairs in the way which is best in his opinion If a landlord is really going to cultivate those lands personally then I think he complies with the provisions of section 7 (1) of the Act and such a person is entitled to get possession of the property from his tenant even though that particular tenant may be left without any means of livelihood

19 It is next urged before me that if a person who uptil now was not a personal cultivator or who has no agricultural implements gives a notice to terminate the tenancy on the ground of personal cultivation then it should be deemed that he may not require the land bona fide within the meaning of the Tenancy Act and such a person would not be entitled to evict his tenant I do not see any substance in this argument also Due to the changed circumstances, a person may think of starting the new occupation of agriculture We cannot attribute mala fides to him under such circumstances We cannot judge his bona fides or mala fides from his previous conduct

---

— R —

ಮುಂಬಯಿ (ಪ್ರಾಂತದ) ಅರಣ್ಯ ಖಾತೆಯಿಂದ ಹೊರಡಿಸಿದ ಕಟ್ಟಿಗೆಯ ಸಂಬಂಧದ ಆಜ್ಞೆಯು ಮುಂಬಯಿ ಸರಕಾರದ ಗೆಝೆಟಿನಲ್ಲಿ ಪ್ರಕಟವಾಗಿರುತ್ತದೆ, ಅದು ಕೂಡಲೆ ಅಮಲಿನಲ್ಲಿ ಬರುತ್ತದೆ. ಆ ಆಜ್ಞೆಯಂತೆ, ಸರಕಾರದವರು ಆ ಮುಂದೆ ಜಾಹೀರ ಮಾಡುವ ದಿನದಿಂದ ಪರವಾನ ಪಡೆಯದೆ ಯಾವದೇ ವ್ಯಾಪಾರಿಯು ಅಲ್ಲದೆ ಬೇರೆ ವ್ಯಕ್ತಿಯು ಹಿಂದೀ ಗಿರಣಿಗಳಿಗೆ ಸಿದ್ಧವಾದ ಕಟ್ಟಿಗೆಯ ವ್ಯಾಪಾರ-ವ್ಯವಹಾರ ಮಾಡಲಾರನು, ಮತ್ತು ಅಂತಹ ಪರವಾನಗಿಗಳು ಮುಂಬಯಿಯ ಇಲಾಖೆ-ವಿತರಣದ ಯೋಜನೆಯನ್ನು ಅನುಮೋದಿಸಲ್ಪಟ್ಟ (approved) ರೀತಿ ಮತ್ತು ಶಿರಸಿಯ ಹಂಚುವಿಕೆಗಾರರಿಗಷ್ಟೇ ಕೊಡಲ್ಪಡುವವು. ಪ್ರೈಸ್-ಮುಂಬಯಿಯಲ್ಲಿ ಪರವಾನೆ ಕೊಡುವ ಅಧಿಕಾರವು ಪ್ರಾಂತಿಕ ಟಿಂಬರ್ ಕಂಟ್ರೋಲರ ಗೂ, ಇತರ ಜಿಲ್ಲೆಗಳಲ್ಲಿ ಆ ಅಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ ಕೊಡಲ್ಪಟ್ಟಿದೆ. ಪರವಾನಗಿ ಇಲ್ಲದ ವ್ಯಾಪಾರಿಗಳ ಕಟ್ಟಿಗೆ ಸರಕಾರದ್ದು ಮತ್ತು ಸಾಗಿಸುವ ವಾಹನದ ಮುಂದೆ ಹಿಂದೀ ಗಿರಣಿಗಳಲ್ಲಿ ಕಟ್ಟಿಗೆಯ ಯಾವದೇ ಬಗೆಯ ಅದಲು-ಬದಲುಗಳನು ಮಾಡುವ ಅಧಿಕಾರ ಯಾರಿಗೂ ಇರಲಾರದೆಂದು ಈ ಮೂಲಕ ಎಲ್ಲ ಜನರ ವ್ಯಾಪಾರಿಗಳ ಅರಿವಿಗೆ ತರಲಾಗುತ್ತದೆ. ಇದೇ ಪ್ರಾಂತದಲ್ಲಿ ಸರಕಾರದವರು ಆಗ ಇದ್ದ ಕೊಡಲ್ಪಡುವ ಪರವಾನಗಿಗಳ ಬಗ್ಗೆ ಅರ್ಜಿ ಗಳನ್ನು ಕರೆಯಲಾಗುತ್ತದೆ, ಅವರು ಮಾಡತಕ್ಕದ್ದು

20 The learned pleader for the defendants relies upon Ambu Amma Vs Kunapadi Kalan A I R 1946 Madras 229 That was a case under the Malabar Tenancy Act wherein also there is a similar provision as under section 7 (1) of the Bombay Tenancy Act The facts in that case can be easily distinguished Under the Malabar Tenancy Act also it is necessary for the landlord to establish affirmatively that he requires the holding bona fide for his own cultivation or for any member of Tarwad or Tazavi who had a proprietory and beneficiary interst in it The burden of proving it lies upon the landlord There is no doubt that even under the Bombay Tenancy Act the burden is upon the landlord to show that he bona fide wants the land for personal cultivation. Now in the Madras case the plaint recited that the land was required for personal cultivation Mere recital in the plaint is no evidence at all It has to be corroborated by leading proper evidence In that case a person on *behalf of the plaintiff who had no* personal knowledge at all was examined His lordship said that there was entirely no evidence at all to show that Plaintiff wanted the land for personal cultivation The reason is that the recital in the plaint has no value and the evidence on behalf of the plaintiff was useless But such is not the position in the present case Plaintiff has come into the witness box and has stated that he wants the land for personal cultivation The landlord in the Madras case tried to rely upon a stray statement in the evidence of Defendant that it would be convenient *for the plaintiff to look after the* property if he got possession of it His Lordship observes that the test of convenience is not the one that the law has prescribed and what has to be proved is that the holding is actually required for cultivation by the family itself bona fide This means that we cannot assume that the landlord wants a particular property for personal cultivation simply because it would be convenient for him to cultivate the land The landlord must affirmatively prove that he actually wants the land for cultivation Similarly from this ruling we can say the test of *motive of the landlord or the con*veniences of the tenant is not the one that the law has prescribed

21 All that the section wants is that the landlord should require the land for personal cultivation I think if he wants it whether with good or bad motive he would be entitled to recover possession of the property from the tenant As has been stated so often in the legislature the intention of the Act is to have peasant proprietorship The person who actually tills the land should be its owner There are two possibilities The actual cultivator may try to become the owner of the property or the owner of the property may become the actual cultivator thereof The Act encourages the owners of the property to personally cultivate their lands I think therefore the various considerations suggested by the learned pleader for the *defendant* do not count in considering the question as to whether the tenancy comes to *an end* under section 7 (1) of the Tenancy Act

[illegible]

[illegible]

[illegible] A I R 1946 Madras 229 [illegible]

([illegible])

ಸ್ಥಳಿಕ ವಿಷಯಗಳು.

(ಲೇಖಕ - ಸ್ಥಳವಂತಿಕ.)

ಅಂಕೋಲಾ ತಾಲೂಕಿನ ಬೇಲಂಬಾರ ಗ್ರಾಮದ ಪ್ರಿಂದು ಗ್ರಾಮ ಸುಧಾರಣಾ ಮಂಡಳಿಯಿಂದು ಕೊಂಪಾ ಯೋಸು ದಾಸಗೌಡ ಎಂಬವನು ಈ ಮಂಡಳದ ಮುಖ್ಯಾಧಿಕಾರಿ ಮಂಡಳವು ೧೯೪೬ನೇ ಸಾಲಿನಲ್ಲಿ ಮಾಡಿರುವ ಗ್ರಾಮ-ಸುಧಾರಣಾ ಕಾರ್ಯಕ್ಕೆ ಮುಂಬಯಿ ಸರಕಾರವು ಪೆಬ್ರುವರಿ ೧೯೪೭ರ ಜನವರಿಯಲ್ಲಿ ಅದಕ್ಕೆ ರೂ ೧೦೦೦ ರ ಇನಾಮು ಕೊಟ್ಟಿದೆ ಸುಧಾರಣೆಯು ಸಾಮಾನ್ಯಗೆಯಮ್ನೇರಿದ ಇಂತಹ ಗ್ರಾಮದೊಳಗೆ ಗ್ರಾಮ-ಸುಧಾರಣಾ ಮಂಡಳದ ಮುಖ್ಯಾಧಿಕಾರಿ ಕೊಂಪಾ ಯೋಸು ದಾಸಗೌಡಾ ಮತ್ತು ಅಂಕೋಲೆಯ ಕಾಂಗ್ರೆಸ ಕಾರ್ಯಕರ್ತರೆಂದೂ ಸಮಾಜಸೇವಕರೆಂದೂ ಖ್ಯಾತಿಗೊಂಡ ರಾ। ಗಣಪತಿ ಮಾಧವ ಕಾಮತ ಮತ್ತು ರಾಮರಾವ ಕೃಷ್ಣ ಶೆಣ್ವಿ ಇವರ ದುಃಪ್ರೇರಣೆಯಿಂದ ಅಕ್ಷಿಯ ಖಾರ್ವಿ ಸಮಾಜದಲ್ಲಿರುವ ೨ ಪಕ್ಷಗಳಲ್ಲಿ ಒಂದು ಪಕ್ಷದವರು (ಗಣು ಇವನ ಪಕ್ಷದವರು) ಇನ್ನೊಂದು (ಪುತ್ತು ಎಂಬವನ) ಪಕ್ಷದವರ ಮೇಲೆ ಅತ್ಯಾಚಾರಗಳನ್ನು ಆಚರಿಸತೊಡಗಿದರು ಮನೆಗಳ ಮೇಲೆ ಕಲ್ಲು ಎಸೆದು ಹಂಚು ಒಡೆದು ಹಾಕುವದು, ಕಳ್ಳತನದಿಂದ ಮರ ಹತ್ತಿ ತೆಂಗಿನಕಾಯಿ ಕದಿಯುವದು, ಮೀನು ದೋಣಿಗಳಲ್ಲಿದ್ದ ಹಲಿಗೆ ಮುಂತಾದವುಗಳನ್ನು ಅಪಹರಿಸುವದು ದೊಣ್ಣೆ ಹಿಡಕೊಂಡು ತಿರುಗಾಡಿ ವಿರುದ್ಧ ಪಕ್ಷದವರನ್ನು ಹಿಂಸಿಸುವದು, ಇವೇ ಮೊದಲಾದ ಅತ್ಯಾಚಾರಗಳಿಗೆ ತೊಡಗಿದರು. ಆದರಿಂದ ಪುತ್ತು ಪಕ್ಷದ ನಾಲ್ವರು ಊರು ಬಿಟ್ಟು ಹೋದರು। ಇಡೀ ಗ್ರಾಮದಲ್ಲಿ ಅಶಾಂತತೆಯುಂಟಾಯಿತು। ಪೋಲೀಸರು ಆಗ ಅಲ್ಲಿ ಒಂದು ಪೋಲೀಸ ದಲವನ್ನು ಇಡಬೇಕಾಯಿತು. ಗಣು ಪಕ್ಷದ ಪ್ರಮುಖರ ಮೇಲೆ ಅವರು ಚಾರ್ಜಶೀಟು ಖಟ್ಲೆಯನ್ನೂ ಹಾಕಿದರು. ಈ ಖಟ್ಲೆಯನ್ನು ಅಂಕೋಲೆಯ ೧ನೇ ವರ್ಗದ ಮೆಜಿಸ್ಟ್ರೇಟರು ಸವಿಸ್ತಾರ ವಿಚಾರಿಸಿ, ಗಣು ಮತ್ತು ಆತನ ಪಕ್ಷದ ೮ ಜನರ ಮೇಲೆ ಹಿಂಸಾಚಾರದ ಆರೋಪಗಳನ್ನು ಹೊರಿಸಿ, ಅವರಲ್ಲಿ ಪ್ರತಿಯೊಬ್ಬರು ಒಂದು ವರ್ಷದ ಅವಧಿಯ ಶಾಂತ ನಡತೆಯ ಕರಾರು ಬರಕೊಟ್ಟು ರೂ. ೨೦೦ ರ ಜಾಮೀನು ಸಹ ಕೊಡಬೇಕಾಗಿ ಇದೇ ಕಳೆದ ಅಕ್ಟೋಬರ ತಾ. ೪ಕ್ಕೆ ಅಪ್ಪಣೆ ವಿಧಿಸಿರುತ್ತಾರೆ. ಈ ಪ್ರಕರಣದಲ್ಲಿ ಮುಖ್ಯ ದುಷ್ಪ್ರೇರಕರೆಂದು ತೀರ್ಮಾನಿಸಲ್ಪಟ್ಟಿರುವ ಕೊಂಪಾ ದಾಸಗೌಡನಷ್ಟೇ ಅಂಕೋಲೆಯ ರಾ॥ ಗಣಪತಿ ಮಾಧವ ಕಾಮತ ಮತ್ತು ರಾಮರಾವ ಶೆಣ್ವಿ ಇವರೂ ದೋಷಿಗಳಿರುತ್ತಾರೆಂದೂ ಅವರನ್ನು ಪೋಲೀಸರು ದಾಕ್ಷಿಣ್ಯದಿಂದ ಬಿಟ್ಟುಕೊಟ್ಟಿರಬೇಕೆಂದೂ ಮೆಜಿಸ್ಟ್ರೇಟರು ಅಭಿಪ್ರಾಯ ವ್ಯಕ್ತಗೊಳಿಸಿ ಕೊಂಪ ಗೌಡನನ್ನು ಖಟ್ಲೆಯಿಂದ ಬಿಡುಗಡೆ ಮಾಡಿದ್ದಾರೆ. ರಾ॥ ಕಾಮತ-ಶೆಣ್ವಿಯವರ ಹೀಗೆ ಪ್ರೇರಣೆ ಕೊಟ್ಟರು, ಪುತ್ತು ಪಕ್ಷದವರನ್ನು ಪಣಿಸಲು ಕಾರಣರಾದರು, ಖೊಟ್ಟಿ ಕಾಗದ ನಿರ್ಮಿಸಿದರು, ಅಸಭ್ಯ ಪ್ರಕಾರಗಳನ್ನು ಕೈಕೊಂಡರು, ಇವರ ನಡಾವಳಿ ಹೀನ ತರಗತಿಯದು; ಇವರ ಮನೋವೃತ್ತಿ ಲೋಕಘಾತಕವಾದದ್ದು; ಹೀಗೆ ಸಹ ಮೆಜಿಸ್ಟ್ರೇಟರು ತಮ್ಮ ತೀರ್ಪಿನಲ್ಲಿ ನಮೂದಿಸಿದ್ದಾರೆ. ಕೊಂಪಾ—ಕಾಮತ—ಶೆಣ್ವಿಯವರು ಹೊಸ ಸ್ವಾತಂತ್ರ್ಯದ ಮನ್ವಂತರದಲ್ಲಿ ಸಹ ಪೋಲೀಸರೊಡನೆ ಸಹಕರಿಸದೆ ಪ್ರತಿಸರಕಾರವನ್ನು ಸ್ಥಾಪಿಸಲು ಹವಣಿಸುತ್ತಾರೆಂದೂ ಈ ಚಟುವಟಿಕೆ ನಿಷೇಧಾರ್ಹವಿರುತ್ತದೆಂದೂ ಮೆಜಿಸ್ಟ್ರೇಟರು ಸ್ಪಷ್ಟ ಬರೆದಿದ್ದಾರೆ ಅಂಕೋಲೆಯ ಮುಖ್ಯ ಕಾಂಗ್ರೆಸ ಕಾರ್ಯಕರ್ತರೆಂದು ಮೆರೆಯುವ ರಾ॥ ರಾಮರಾವ ಶೆಣ್ವಿಯವರಿಗೆ ಅನೇಕ ವರ್ತಕರನ್ನು ವಂಚಿಸಿದ ಮೋಸಗಾರರೆಂದು ಮೆಜಿಸ್ಟ್ರೇಟರು ಪ್ರಶಸ್ತಿಪತ್ರ ಕೊಟ್ಟಿದ್ದರೆ ಮತ್ತು ಗಣು ಪಕ್ಷದ ಪರವಾಗಿ ಶೆಣ್ವಿಯವರು ನುಡಿದ ಸಾಕ್ಷಿ ನಂಬಿಗೆಗೆ ಅನರ್ಹವೆಂದು ಸ್ಪಷ್ಟ ಹೇಳಿದ್ದಾರೆ. ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಸರಕಾರವೂ ಈ ಕುರಿತು ಹೆಚ್ಚಿನ ಚೌಕಶಿ ಮಾಡಿ ಅಂಕೋಲೆಯ ಕಾಂಗ್ರೆಸ ಸಂಸ್ಥೆಯೊಳಗಿನ ಕೊಳೆಯನ್ನು ತೊಳೆಯಲು ತಕ್ಕ ಕ್ರಮ ಕೈಕೊಳ್ಳತಕ್ಕದ್ದು.

***

ಬೇಲಂಬಾರ ಗ್ರಾಮದಲ್ಲಿ ಅಶಾಂತಿಗೆ ಪ್ರಾರಂಭವಾದದ್ದು ೧೯೪೭ರ ಮಳೆಗಾಲದಲ್ಲಿ ಅದೇ ವರುಷದ ಗ್ರಾಮ ಸುಧಾರಣೆಯ ಕಾರ್ಯದ ಬಗ್ಗೆ ಆ ಗ್ರಾಮಕ್ಕೆ ಇನಾಮು ಕೊಡಲ್ಪಟ್ಟಿದೆ! ಗ್ರಾಮದೊಳಗೆ ಸಮಾಜಘಾತಕ ಪುಂಡಾಟಿಕೆಗಳನ್ನು ಪ್ರಾರಂಭಿಸಿ, ಪಕ್ಷ ಜಗಳಗಳನ್ನು ನಿರ್ಮಿಸಿ, ಅತ್ಯಾಚಾರಗಳನ್ನು ಪುರಸ್ಕರಿಸಿದ ಗ್ರಾಮ ಸುಧಾರಣಾ ಮಂಡಳದವರ ಕೆಲಸ ಜನಕ್ಕೆ ಸರಕಾರದ ಮೆಚ್ಚಿಗೆಯನ್ನು ಹೇಗೆ ಪಡೆಯಿತೆಂಬುದೊಂದು ಸಮಸ್ಯೆಯುಂಟಾಗಿದೆ ಮಾಮಲೇದಾರರೂ, ಜಿಲ್ಲಾಧಿಪರೂ, ಗ್ರಾಮೋದ್ಧಾರ ಮಂಡಳದವರೂ, ಬೆಲಂಬಾರ ಗ್ರಾಮಕ್ಕೆ ಪ್ರಶಸ್ತಿಪತ್ರ ಕೊಟ್ಟದ್ದರ ಕಾರಣವೇನೆಂದು ಜನರಿಗೆ ತಿಳಿಯದಾಗಿದ ಅಂಕೋಲೆಯ ಕಾಂಗ್ರೆಸ ಕಾರ್ಯಕರ್ತರು ತಮ್ಮ ಪಾಪವನ್ನು ಮುಚ್ಚಿಕೊಳ್ಳುವದಕ್ಕಾಗಿ ಮತ್ತು ಕೊಂಪ ಗೌಡನಿಗೆ ಮೇಲ್ಮೆಯನ್ನು ಸಂಪಾದಿಸಿಕೊಟ್ಟು ಗಣು ಪಕ್ಷದ ಅಪಕೃತ್ಯಗಳಿಗೆ ರಾಜಮಾನ್ಯತೆಯನ್ನು ಸಂಪಾದಿಸಿಕೊಡುವದಕ್ಕಾಗಿ ಗ್ರಾಮ ಸುಧಾರಣೆಯ ಇನಾಮನ್ನು ಕೊಂಪ ಗೌಡನ ಗ್ರಾಮ ಸುಧಾರಣಾ ಮಂಡಳಕ್ಕೆ ಕೊಡಿಸಿರಬೇಕೆಂದು ಕೆಲವರು ಊಹಿಸುತ್ತಾರೆ. ವರ್ತಕರನ್ನು ಮೋಸಗೊಳಿಸುವ ಇಸಮಿಗೆ ಸರಕಾರವು ಪ್ರಾಂತಿಕ ಮದ್ಯಪಾನೋಚ್ಚಾಟನ ಮಂಡಳದಲ್ಲಿ ಜಿಲ್ಲೆಯ ಪ್ರತಿನಿಧಿಯಾಗಿ ನೇಮಿಸುವ ಬಗೆ ಹೇಗೆಂದು ತಿಳಿಯ ಜನರು ಕುತೂಹಲಪಡುತ್ತಾರೆ.

***

ಮುಂಬಯಿಯ ಕಂದಾಯ ಮಂತ್ರಿಗಳು ಸೂಚಿಸಿದ ಒಕ್ಕಲತನದ ಕಾಯದೆಯ ಮಸೂದೆಯ ಮುಖ್ಯಾಂಶಗಳು ತಾ ೨-೮-೪೮ರ "ವೃತ್ತ"ದಲ್ಲಿ ಪ್ರಕಟವಾಗಿವೆಯಷ್ಟೇ ಈ ಮಸೂದೆಯಲ್ಲಿ ಎಸೆಂಬ್ಲಿಯು ಕೆಲವು ಚಿಕ್ಕ ಪುಟ್ಟ ತಿದ್ದುಪಡಿಗಳನ್ನು ಮಾಡಿದೆ ಅವು ಈ ಕೆಳಗಿನಂತಿವೆ:— (೧) ಮಸೂದೆಯ ಪ್ರಸ್ತಾವನೆಯಲ್ಲಿ "ಒಡೆಯ-ಒಕ್ಕಲಿಗರೊಳಗಿನ ವಿವಾದಗಳ ಮೂಲಕ ಸಾಗುವಳಿ ಕೆಲಸದ ಕಡೆ ದುರ್ಲಕ್ಷವಾದ್ದರಿಂದ" ಎಂಬ ಶಬ್ದಗಳು ಸೇರಿಸಲ್ಪಟ್ಟಿವೆ (೨) ವ್ಯಾಖ್ಯೆಗಳ ಕಲಮಿನಲ್ಲಿ, 'ಸಹಕಾರಿ ಸಾಗುವಳಿಯ ಸಂಘ' ವೆಂಬ ಶಬ್ದ ಸೇರಿಸಲ್ಪಟ್ಟಿದೆ (೩) ಭೂಮಿಯ ವ್ಯಾಖ್ಯೆಯಲ್ಲಿ ಸಾಗುವಳಿಗಾಗಿ ಕಟ್ಟಿಸಿದ ಇಮಾರತುಗಳೂ ಸೇರಿಸಲ್ಪಟ್ಟಿವೆ. (೪) ೬ನೇ ಕಲಮಿನಲ್ಲಿ "ಒಟ್ಟು ಉತ್ಪತ್ತಿ" ಎಂಬ ಶಬ್ದಸಮುಚ್ಚಯವಿತ್ತು, ಅದರ ಬದಲು "ಬೆಳೆ" ಎಂಬ ಶಬ್ದ ಸೇರಿಸಿ, ಬೆಳೆಯ ೩ನೇ ೧ ಅಂಶ ಪಡೆಯಲಿಕ್ಕೆ ಒಡೆಯನು ಹಕ್ಕುದಾರನೆಂದು ಹೇಳಲಾಗಿದೆ (೫) ೧೧ನೇ ಕಲಮಿನಲ್ಲಿ "ಯಾವದೇ ಸ್ವರೂಪದ ಚಾಕರಿ" ಎಂಬ ಶಬ್ದಗಳನ್ನು ಸೇರಿಸಿ ಒಕ್ಕಲಿಗನ ಕಡೆಯಿಂದ ಒಡೆಯನು ಯಾವದೇ ಸ್ವರೂಪದ ಚಾಕರಿಯನ್ನು ಮಾಡಿಸಿಕೊಳ್ಳಕೂಡದೆಂದು ವಿಧಿಸಲಾಗಿದೆ (೬) ಪ್ರಾಂತಿಕ ಸರಕಾರವು ವಿಧಿಸಿದ ಕನಿಷ್ಠ ಬೆಲೆಯನ್ನು ಬೆಳೆದಿದ್ದ ಒಕ್ಕಲಿಗನ ಒಕ್ಕಲತನವನ್ನು ರದ್ದುಪಡಿಸುವ ವ್ಯವಸ್ಥೆ ಮೂಲ ಮಸೂದೆಯ ೧೪ನೇ ಕಲಮಿನಲ್ಲಿತ್ತು. ಆ ನಿರ್ಬಂಧ ಈಗ ಅಳಿದೊಗೆಯಲ್ಪಟ್ಟಿದೆ (೭) ಗೇಣಿ ಸ್ಥಳವನ್ನು ಪಾಲು ಮಾಡುವ ಮತ್ತು ಒಳಗೇಣಿ ಕೊಡುವ ಹಕ್ಕು ಮೂಲಗೇಣಿದಾರರಿಗೆ ಇರುವದೆಂದು ೨೭ನೇ ಕಲಮಿನಲ್ಲಿ ಸ್ಪಷ್ಟ ಮಾಡಲ್ಪಟ್ಟಿದೆ (೮) ಮಾಮಲೇದಾರರ ಅಪ್ಪಣೆಯಿಲ್ಲದೆ ಸಾಗುವಳಿ ಭೂಮಿಯ ಕಬಜೆ ಪಡೆಯುವ ಒಡೆಯನ ವಿರುದ್ಧ ಖಟ್ಲೆ ಹಾಕಿ ರೂ ೧೦೦೦ದ ತನಕ ದಂಡ ವಿಧಿಸುವ ಕಲಮೊಂದು ೨೯ನೇ ಕಲಮಿನಲ್ಲಿ ಸೇರಿಸಲ್ಪಟ್ಟಿದೆ. (೯) ೫೦ ಎಕರೆ ಭೂಮಿಯ ಮಿತಿ ಹಾಕಿರುವಲ್ಲಿ ಯಾವದೊಂದು ಅವಿಭಕ್ತ ಹಿಂದು ಕುಟುಂಬದ ಭೂಮಿಯ ಮಿತಿ ಯಾವದೇ ಪ್ರಸಂಗದಲ್ಲಿ ೨೦೦ ಎಕರೆಗಳಿಗೆ ಮಿಕ್ಕಕೂಡದೆಂದು ನಿರ್ಬಂಧಿಸಲಾಗಿದೆ (೧೦) ಕುಟುಂಬದಲ್ಲಿ ೪ ಶಾಖೆಗಳಿಗೆ ಮಿಕ್ಕಿ ಎಷ್ಟು ಶಾಖೆಗಳು ಇದ್ದಾಗ್ಯೂ ಆ ಕುಟುಂಬದ ಭೂಮಿ ೨೦೦ ಎಕರೆಗಳಿಗೆ ಮಿಕ್ಕಬಾರದೆಂದು ವಿಧಿಸಲ್ಪಟ್ಟಿದೆ. ಸ್ವಂತ ಸಾಗುವಳಿಗೆ ಭೂಮಿ ಪಡೆಯುವಾಗಲೂ ಕ್ಷೇತ್ರ-ಪರಿಮಿತಿಯ ಈ ನಿರ್ಬಂಧ ಅನ್ವಯಿಸುತ್ತದೆ. (೧೧) ೫೦ ಎಕರೆಗಳ ಸದರಿ ಮಿತಿಯನ್ನು ಸಾಮಾನ್ಯವಾಗಿ ಇಲ್ಲವೆ ಕೆಲವೊಂದು ಕ್ಷೇತ್ರಗಳಲ್ಲಿ ಕಡಿಮೆ ಮಾಡುವ ಸರ್ವಾಧಿಕಾರ ಪ್ರಾಂತಿಕ ಸರಕಾರಕ್ಕೆ ೩೬ ನೇ ಕಲಮಿನಲ್ಲಿ ಹೊಸದಾಗಿ ಕೊಡಲ್ಪಟ್ಟಿದೆ. (೧೨) ಒಡೆಯನು ಸ್ವಂತ ಸಾಗುವಳಿಗಾಗಿ ಕಬಜೆಗೆ ಪಡೆದ ಭೂಮಿಯನ್ನು ಸಾಗುವಳಿ ಮಾಡದಿದ್ದರೆ ಒಕ್ಕಲಿಗನಿಗೆ ಅದನ್ನು ತಿರುಗಿ ಕೊಡಬೇಕೆಂದೂ, ಒಕ್ಕಲಿಗನಿಗೆ ಆಗಬಹುದಾದ ನಷ್ಟವನ್ನು ತುಂಬಿಕೊಡಬೇಕೆಂದೂ ೩೭ನೇ ಕಲಮಿನಲ್ಲಿ ದುರುಸ್ತಿ ಮಾಡಲ್ಪಟ್ಟಿದೆ. (೧೩) ಸಂರಕ್ಷಿತ ಕೃಷಕನು ತೀರಿಕೊಂಡರೆ ಆತನ ವಾರಸದಾರರಿಗೆ ಒಡೆಯನು ಒಕ್ಕಲತನವನ್ನು ಕೊಡತಕ್ಕದ್ದು. ಈ ವಿಷಯದಲ್ಲಿ ವಿವಾದವುಂಟಾದರೆ ಜಿಲ್ಲಾಧಿಪರು ಅದನ್ನು ನಿರ್ಣಯಿಸುವರೆಂದು ೪೦ನೇ ಕಲಮಿನಲ್ಲಿ ವಿಧಿಸಲ್ಪಟ್ಟಿದೆ. (೧೪) ಸಂರಕ್ಷಿತ ಕೃಷಕರಿಗೆ ತಮ್ಮ ಲಾವಣಿಯ ಭೂಮಿಯಲ್ಲಿ ಒಕ್ಕಲತನಕ್ಕೆ ಅವಶ್ಯವುಳ್ಳ ಇಮಾರತುಗಳನ್ನು ಕಟ್ಟಿಸುವ ಸ್ವತಂತ್ರ ಅಧಿಕಾರ ಕೊಡುವ ೪೨ನೇ ಕಲಮು ಸೇರಿಸಲ್ಪಟ್ಟಿದೆ. (೧೫) ಸಂರಕ್ಷಿತ ಕೃಷಕನು ಒಡೆಯನಿಂದ (ಈ ಕಾನೂನಿನಂತೆ) ಕ್ರಯಕ್ಕೆ ಪಡಕೊಂಡ ಆಸ್ತಿಯನ್ನು ಪ್ರಾಂತಿಕ ಸರಕಾರದ ಅನುಮತಿಯಿಲ್ಲದೆ ಪರಾಧೀನ ಮಾಡಕೂಡದೆಂದು ೬೩ನೇ ಕಲಮಿನಲ್ಲಿ ವಿಧಿಸಲ್ಪಟ್ಟಿದೆ (೧೬) ಪ್ರತಿಬಂಧಿಸಲ್ಪಟ್ಟ ವಿಕ್ರಯಗಳ ವ್ಯಾಖ್ಯೆಯಲ್ಲಿ ದಿವಾಣಿ ಕೋರ್ಟಿನ ಲಿಲಾವುಗಳು, ಭೂಕಂದಾಯದ ವಸೂಲಿ ವಗೈರೆ ಕಾರಣಗಳಿಂದ ಮುಲ್ಕಿ ಇಲಾಖೆಯವರು ನಡಿಸುವ ಲಿಲಾಂವುಗಳು ಸಹ ಸೇರಿಸಲ್ಪಟ್ಟಿವೆ. ಆದರೆ ಬೇಸಾಯದ ಕೂಲಿಕಾರನಿಗಾಗಲಿ ಕೈಗಾರಿಕೆಯವನಿಗಾಗಲಿ ತನ್ನ ವಾಸ್ತವ್ಯದ ಮನೆ ಅಥವಾ ಮನೆದಾಣ ಸ್ಥಳ ಬೇಕಾದ ರೀತಿ ಪರಾಧೀನ ಮಾಡಲಿಕ್ಕೆ ಪೂರ್ಣ ಅಧಿಕಾರ ಕೊಡಲ್ಪಟ್ಟಿದೆ. ಪರಾಧೀನ ಮಾಡುವ ತಕರಾರುಗಳಲ್ಲಿ ಸಹಕಾರಿ ಸಾಗುವಳಿ ಸಂಘವೂ ಸೇರಿಸಲ್ಪಟ್ಟಿದೆ ಒಕ್ಕಲಿಗನು ಪ್ರತ್ಯಕ್ಷ ಕಬಜೆ ಮಾಡುವವನಿರಬೇಕೆಂಬ

[illegible] ಹಾಕಲಾಗಿದೆ. ಮತ್ತು ಮನೆಯಿಲ್ಲದ [illegible] ಅಥವಾ ಮನೆಯಿಲ್ಲದ ವ್ಯಕ್ತಿಗೆ ಮನೆ [illegible] ಇಲ್ಲವೆ ಮನೆದಾಣ ಸ್ಥಳವನ್ನು ಪಡಾಧೀ [illegible] ಹೇಳಲ್ಪಟ್ಟಿದೆ. (೧೭) ಮಾತಃ [illegible] ಮೊದಲಾದ ಅಧಿಕಾರಿಗಳಿಗೆ ಮಾಡತಕ್ಕ [illegible] ಹೆಸರು, ವಯಸ್ಸು, ಧರ್ಮ, ಉದ್ಯೋಗ [illegible] ನಮೂದಿಸಬೇಕೆಂದು ಹೀಗೆ [illegible] ಇದರೊಳಗಿಂದ ಧರ್ಮದ ಸದ [illegible] ಒಳನೇ ಕಲಮಿನಲ್ಲಿ ತಿದ್ದುಪಡಿ [illegible] (ಧರ್ಮಲೋಪದ ಈ ತಿದ್ದುಪಡಿಯನ್ನು [illegible] ಬಳ್ಳ ಉಪಮಂತ್ರಿಗಳಲ್ಲಿ [illegible] ಇವರೊಬ್ಬರಿದ್ದರು). (೧೮) [illegible] ಇಲ್ಲವೆ [illegible] ಕಲಮ [illegible] ವಿಚಾರಕ್ಕಾಗಿ ಶಿಲ್ಕು ಇರುವ ಪ್ರಕರಣಗಳು [illegible] ಜಾರಿಯಲ್ಲಿ ಬಂದ ಬಳಿಕ, ಈ ಕಾನೂ [illegible] ನಡೆಯಬೇಕಾಗಿಯೂ, ಉಳಿದ ಎಲ್ಲ ಪ್ರಕ [illegible] ಈಗ ಜಾಲೂ ಇರುವ ಒಕ್ಕಲತನದ [illegible] ವಿಚಾರ ಮಾಡಬೇಕಾಗಿಯೂ [illegible] ಕಲಮಿನಲ್ಲಿ ವಿಧಿಸಿದೆ. ಈ ಎಲ್ಲ ತಿದ್ದು [illegible] ಮೂಲಕ ಮೂಲತಃ [illegible] ಕಲ [illegible] ಮಸೂದೆಯಲ್ಲಿ ಈಗ [illegible] ಕಲಮುಗಳು [illegible] ಈ ರೀತಿ ತಿದ್ದುಪಡಿ ಹೊಂದಿದ ಮಸೂದೆಯು [illegible] ಹೋದಾಗ ಅಲ್ಲೂ ಕೆಲವು ತಿದ್ದುಪಡಿ [illegible] (೧೯) ಪಾಲಿಗಾಗಿ ಬೆಳೆದ ಮರಗಳ ಉತ್ಪ [illegible] ಉತ್ಪತ್ತಿ ಒಕ್ಕಲಿಗನಿಗೆ ಸಿಗಬೇಕಾಗಿ [illegible] ಪಡಿಯಾಗಿದೆ. (೨೦) ರಶೀದಿಯನ್ನು ಒಡೆಯ [illegible] ವಸೂಲ ಬಂದ ಕಾಲಕ್ಕೇ ಕೊಡಬೇಕೆಂ [illegible] ಕಲಮಿನಲ್ಲಿ ವಿಧಿಸಿದೆ (೨೧) ಒಕ್ಕಲಿ [illegible] ಸಹಕಾರಿ ಸಾಗುವಳಿ ಸಂಘದ ಸಭಾಸದ [illegible] ಅವನ ಸಾಗುವಳಿ ನಾತೆಯನ್ನು ಅಂತ್ಯ [illegible] ಒಡೆಯನಿಗೆ ಹಕ್ಕಿಲ್ಲೆಂದು [illegible] ಕಲಮ [illegible] ತಿದ್ದುಪಡಿಯಾಗಿದೆ. ಈ ಪ್ರಕಾರ ತಿದ್ದುಪಡಿ [illegible] ಒಕ್ಕಲತನದ ಕಾನೂನು ಈಗ ಧಾರಸಭ [illegible] ಧಿಪತಿಗಳ ಮಂಜೂರಿಯ ಬಗ್ಗೆ ಕಳಿಸಲ್ಪಟ್ಟಿದೆ.

* *

[illegible] ಮಸೂದೆಯನ್ನು ಬಲವಾಗಿ ವಿರೋಧಿಸಿದ [illegible] ಸದರಲ್ಲಿ ಬೆಳಗಾಂವಿಯ ಶ್ರೀ|| ದತ್ತಾತ್ರೇಯ [illegible] ಯವರು ಪ್ರಮುಖರು. ಅವರು ಸುಮಾರು [illegible] ಮಾತಾಡಿ, ಕಂದಾಯ ಮಂತ್ರಿಗಳ [illegible] ವನ್ನು ವಿಸ್ತಾರವಾಗಿ ಖಂಡಿಸಿದರು. [illegible] ಅನಾಚಾರ ಕಂಡು ಉದ್ವಿಗ್ನರಾದ [illegible] ಮಂತ್ರಿಗಳಿಗೆ "ಜಾಡು ಪಡು" ಗಳೆಂದು [illegible] ಈ ಶಬ್ದಕ್ಕೆ ಆಕ್ಷೇಪ ಬಗೆದಾಗಿ, [illegible] ಅಧ್ಯಕ್ಷರು ಈ ಶಬ್ದ ಉಪಯೋಗಿಸಿದಬಗ್ಗೆ [illegible] ಹೋಗಬೇಕೆಂದು ಅಪ್ಪಣೆ ಕೊಟ್ಟರೆ ತಾವು [illegible] ಸಿದ್ಧರಿದ್ದೇವೆಂದೂ ಶಬ್ದವನ್ನು [illegible] ದಿಲ್ಲವೆಂದೂ, ಶ್ರೀ|| ದೇವಿಯವರು [illegible] ಅರಿಕೆ ಮಾಡಿಕೊಂಡರು. ಅಧ್ಯಕ್ಷರು [illegible] ಮಧ್ಯಸ್ಥಿಕೆ ಮಾಡಿ, ಕಂದಾಯ ಮಂತ್ರಿಗಳ [illegible] ಒಬ್ಬ ಪಡುವಿನ ನಡಾವಳಿಯಂತೆ ಇದು [illegible] ಶ್ರೀ|| ದೇವಿಯವರು. ಹೇಳಿದರೆ ತಮ್ಮ [illegible] ದೆಂದು ಹೇಳಿದ ಮೇರೆಗೆ ಶ್ರೀ|| ದೇವಿಯ [illegible] ತಮ್ಮ ಮಾತಿನಲ್ಲಿ ತಿದ್ದುಪಡಿ ಮಾಡಿದರು. [illegible] ಪುರದ ಶ್ರೀ|| ನರಸಿಂಗರಾವ ದೇಸಾಯಿ, ಶ್ರೀ|| [illegible] ಚಂದ್ರ ನಾರಾಯಣ ಮಾಂಡಲಿಕ, ಶ್ರೀ|| ಕರಂ [illegible] ಇವರೂ ಮಸೂದೆಯನ್ನು ವಿರೋಧಿಸಿದರು [illegible] ಜಿಲ್ಲೆಯ ಶ್ರೀ|| ಮಹಾಬಲೇಶ್ವರ ಗೋಪಿಯ [illegible] ಆವೇಶದಿಂದ ಮಾತಾಡಿದರು. ಆದರೆ ಅ

ವರೆ ಅವರಲ್ಲಿ ಜೀವವಿದ್ದಿಲ್ಲ! ತಾವು ಸ್ವತಃ ವ್ಯಕ್ತಿಶಃ ಕಾನೂನನ್ನು ವಿರೋಧಿಸುವವರಲ್ಲವಾಗಿಯೂ, ತಮ್ಮ ಮತದಾರರ ಅಭಿಪ್ರಾಯವನ್ನಷ್ಟೇ ತಾವು ಸಭೆಯ ಮುಂದಿಡುತ್ತೇನೆ ಎಂದೂ ಅವರು ಹೇಳಿದ್ದರಿಂದ ಈ ಮಹಾಶಯರು ಕಾಡು-ಬೆಡು ಧೋರಣದವರೆಂದು ಕಾಳಿದವರಿಗೆ ಅನಿಸಿ ಬೇಸರವಾಯಿತು! ಮೇಲ್ಮನೆ ಯಲ್ಲಿ ಈ ಮಸೂದೆಗೆ ಸುಮಾರು ೨೦೦ ತಿದ್ದುಪಡಿ ಗಳು ಸೂಚಿಸಲ್ಪಟ್ಟಿದ್ದವು. ಅವುಗಳಲ್ಲಿ ೩೦-೪೦ ಸೂಚನೆಗಳು ರಾ|| ಗೋಪಿಯವರದಿದ್ದವು ಆದರೆ ಒಂದೂ ಉಪಸೂಚನೆಯನ್ನು ಅವರು ಮುಂದಿಸ ತಕ್ಕದ್ದಿಲ್ಲವಾಗಿ ಕೊಂಗ್ರಸ ನಾಯಕರು ಕಟ್ಟಪ್ಪಣೆ ಮಾಡಿದ್ದರಿಂದಲೂ, ತಮ್ಮ ಸೂಚನೆಗಳ ಅವಶ್ಯಕತೆ ಯನ್ನು ಮನಗಾಣಿಸುವಷ್ಟು ಕೌಶಲ್ಯ ಯಾ ಸ್ಥೈರ್ಯ-ಧೈರ್ಯ ರಾ|| ಗೋಪಿಯವರಲ್ಲಿ ಇಲ್ಲದ್ದ ರಿಂದಲೂ ಅವರ ಸೂಚನೆಗಳು ಜಾಗದಲ್ಲೇ ಉಳಿ ದವು! ಶ್ರೀ|| ದೇವಿ ಮೊದಲಾದವರು ಮಾತ್ರ ತಮ್ಮ ಸೂಚನೆಗಳನ್ನು ಮುಂದಿಸಿ ಬಿಟ್ಟರು ಆದರೆ ಮಂತ್ರಿಗಳು ಒಂದೂ ಸೂಚನೆಯನ್ನು ಮನ್ನಿಸಲಿಲ್ಲ! ಅಧಿಕಾರ ಎಲ್ಲಿ! ಸೂಚನೆಗಳು ಎಲ್ಲಿ! ಈ ಮೇಲ್ಮನೆಯಲ್ಲಿ ಅಂತು ೩೦ ಮಂದಿ ಸಭಾಸದರಿದ್ದಾರೆ. ಅವರಲ್ಲಿ ೨೨ ಮಂದಿ ಕೊಂಗ್ರೆಸ ಪಕ್ಷದವರು;೮ ಮಂದಿ ಇತರರು ಅವರಲ್ಲಿ ಶ್ರೀ|| ದೇವಿ ಪ್ರಭೃತಿ ೫ ಸಭಾಸದರು ಒಂದು ಬದಿಗೆ, ಕಂದಾಯ ಮಂತ್ರಿ ವಗೈರೆ ೨೫ ಸಭಾಸದರು ಇನ್ನೊಂದು ಬದಿಗೆ ಹೀಗೆ ಮತಗಣನೆಯಾಗಿ ಶ್ರೀ|| ದೇವಿ ಪ್ರಭೃತಿಗಳ ವಿರೋಧ ನಿಷ್ಫಲವಾಯಿ ತು. ಈ ಹೊಸ ಕಾನೂನಿನಿಗೆ ಪ್ರಾಂತಾಧಿಪರು ಮನ್ನ ಣೆ ಕೊಡತಕ್ಕದೆಂದು ಶ್ರೀ|| ದೇವಿಯವರು ಅರಿಕೆ ಮಾಡಿಕೊಂಡಿದ್ದಾರಾಗಿ ತಿಳಿಯುತ್ತದೆ. ಕೊಂಗ್ರಸ ಅಧ್ಯಕ್ಷರ ಕಡೆಗೂ ಈ ದೂರು ಕಳೆದ ವಾರ ಹೋಗಿ ರಿಕ್ಕತ್ತು. ಸರ್ವಾಧಿಪತಿಗಳ ಕಡೆಗೂ ಒಂದು ಶಿಷ್ಟ ಮಂಡಳವನ್ನೊಯ್ಯುವ ವಿಚಾರ ನಡೆದಿದೆ

ಟೆಂಡರ ನೋಟೀಸು.

ನಂ. ೭೫— ಸರಕಾರಿ ಭತ್ತದಿಂದ ಗಿರಣಿಯಕ್ಕಿ ಅಕ್ಕಿ— [illegible] ಬಗ್ಗೆ— ದಾವಿ ಕೊಡ ಲಿಚ್ಛಿಸುವವರು ತಾ. ೧೫-೧೧-೧೯೪೮ಕ್ಕೆ ಯಾ ಅದರ ಮುಂಚೆ ನಮ್ಮ ಕಚೇರಿಗೆ ತಲ್ಪುವಂತೆ ತಮ್ಮ ಮೊಹರ- ಬಂದ ಟೆಂಡರ-ಪತ್ರಗಳನ್ನು ಕಳಿಸಿಕೊಡಬೇಕಾಗಿ ಕಾನಡಾ ಜಿಲ್ಲೆಯ ಕಲೆಕ್ಟರರು ಈ ಮೂಲಕ ಬಿನ್ನವಿಸುತ್ತಾರೆ

ಟೆಂಡರ-ಪತ್ರ ಕಳಿಸುವವರು, ಪಾಲಿ ಮಾಲಿಗೆ ಕಾಳ ಬಿಟ್ಟು, ೧೬೮ ರತ್ತಲ ತೂಕದ ಭತ್ತಕ್ಕೆ ಪ್ರತಿ ಮಾಲಿಗೆ ಎಷ್ಟು ಸೇರಿಗೆ [illegible] ತಾವು ಅರೆದುಕೊಡುವೆವೆಂಬುದನ್ನು, ಗಿರಣಿಗೆ

[illegible] ಭತ್ತದಿಂದ ೧೬೮ ರತ್ತಲ ತೂಕದ ಎಷ್ಟು ಬೀಳ ಅಕ್ಕಿ (ಶೇಕಡ ಪ್ರಮಾಣದಿಂದ) ತಯಾರಿಸಿ ಕೊಡುವೆವೆಂ ಬುದನ್ನೂ ಪತ್ರದಲ್ಲಿ ನಮೂದಿಸಬೇಕು

ಕೆಳಗಿನ ಅಕ್ಕಿಯ ಪ್ರಕಾರ ನಮೂದಿಸುವಾಗ ಈ ಕೆಳಗಿನ ಶರ್ತುಗಳನ್ನು ಲಕ್ಷ್ಯದಲ್ಲಿಡಬೇಕು —

೧. ಪಾಲಿ ಗೋಣಿ ಮಾಲಿಗೆ ಕಾಳ ಬಿಟ್ಟು ಪ್ರತಿ ಮಾಲಿಗೆ ೧೬೮ ರತ್ತಲ ಭತ್ತ ಹಾಕಿ ಕಾನಿಗೆಕಟ್ಟಿ ಪ್ರತಿ ೧೦೦ ಮಾಲ ಭತ್ತದಿಂದ ಸರಬರಾಯಿ ಮಾಡುವ ಕಾಳ ಬಿಟ್ಟು ಪ್ರತಿ ಮಾಲಿನಲ್ಲಿ ೧೬೮ ರತ್ತಲ ಅಕ್ಕಿಯುಳ್ಳ ಎಷ್ಟು ಮಾಲ ಅಕ್ಕಿ ತಯಾರಿಸಿ ಕೊಡಬಹುದೆಂಬುದನ್ನು ತೋರ ಬೇಕು.

೨. ಕೊಡಲಿಚ್ಛಿಸುವ ಅಕ್ಕಿ ಪ್ರಮಾಣವನ್ನು ಕೊಟ್ಟ ಸಂತರ, ಅವರ ಅದನ್ನು ಹೆಚ್ಚಿಗೆ ಅಕ್ಕಿ ಬಂದಲ್ಲಿ ಅದ ನ್ನು ಸರಕಾರಕ್ಕೆ ಕೊಡಬೇಕಾಗುವದು. ಅಕ್ಕಿಯ ತಯಾ ರಿಕೆಯನ್ನು ಸರಕಾರವು ಮಿಲ್ಲಿಂಗ ಸುಪರವೈಜರರನ್ನು ನೇಮಿಸಿದರೆ ಅವರ ಸಮಕ್ಷ ಇಲ್ಲವೆ ತಾಲೂಕಿನ ಅಧಿಕಾರ ಪಡೆದ ಬೇರೆ ಅಧಿಕಾರಿಯ ಸಮಕ್ಷ ಮಾಡಿಕೊಡಬೇಕಾ ಗುವದು.

೩. ಈ ಕೆಳಗಿನ ಪ್ರತಿಯೊಂದು ಜಾತಿಯ ಭತ್ತದಿಂ ದ ಯಾವ ಪ್ರಮಾಣದಿಂದ ಬೆಸ್ತಗೆ ಹಾಗೂ ಕಾಳ್ಬಗೆ ಅಕ್ಕಿ ತಯಾರಿಸಿ ಕೊಡಬಹುದೆಂಬುದನ್ನು ಬೇರೆ ಬೇರೆಯಾ ಗಿ ತಿಳಿಸಬೇಕು:—

(ಅ) ಸಣ್ಣಕ್ಕಿಯ ಭತ್ತ.
(ಬ) ೧ನೇ ದರ್ಜದ ದಪ್ಪ ಭತ್ತ (ಭಟ್ಟದ ಮೋಟಿಸಿದು)
(ಕ) ೧ನೇ ದರ್ಜದ ದಪ್ಪ ಭತ್ತ (ಭಟ್ಟದ ಕೆಂಗಿನದು)
(ಡ) ೨ನೇ ದರ್ಜದ ದಪ್ಪ ಭತ್ತ (ಭಟ್ಟದ ಮೋಟಿಸಿದು)
(ಕ) ೨ನೇ ದರ್ಜದ ದಪ್ಪ ಭತ್ತ (ಭಟ್ಟದ ಕೆಂಗಿನದು).
(ಪ) ಭಟ್ಟಕ ಪೇಟೆಯ ಇನ್ನು ಯಾವ ಜಾತಿಯದ್ದು.

೪. ಗಿರಣಿಯಾಡುವ ಸ್ಥಳದ ತಿಳುವಳಿಕೆ ಸದರೀ ಟೆಂಡರ-ಪತ್ರದಲ್ಲಿರಬೇಕು.

ಭತ್ತವನ್ನು (ಪಾಲಿ ಮಾಲಿಗೆ ಕಾಳ ಬಿಟ್ಟು) ಪ್ರತಿ ಮಾಲಿನಲ್ಲಿ ೧೬೮ ರತ್ತಲ ಹಾಕಿ, ಮಾಲಿಗಳಲ್ಲಿ ಗಿರಣಿಯ ಅವರಿಗೆ ಒಪ್ಪಿಸಲಾಗುವದು; ಅದೇ ಮೇರೆಗೆ ತಯಾರಾದ ಅಕ್ಕಿಯನ್ನು, (ಪಾಲಿ ಮಾಲಿಗೆ ಕಾಳ ಬಿಟ್ಟು) ಪ್ರತಿ ಮಾಲಿನಲ್ಲಿ ೧೬೮ ರತ್ತಲ ಅಕ್ಕಿಯುಳ್ಳ ಮಾಲಿಗಳಲ್ಲಿ ಗಿರಣಿಯ ಅವರಿಂದಲ್ಲಿ ತಯಾರಾದ ಅಕ್ಕಿಯನ್ನು ತಾನಿ ಮುಖ್ಯ ಹೊಂದು, ೧೬೮ ರತ್ತಲ ತೂಕದ ಪ್ರಮಾಣದ (standard) ಮಾಲಿಗಳಲ್ಲಿ ಸರಕಾರಕ್ಕೆ ಒಪ್ಪಿಸುವ ಅವಶ್ಯಕತೆಯು ಗಿರಣಿಯವರ ಮೇಲಿರುವದು.

ಗುತ್ತಿಗೆಯ ಅವಧಿಯು ತಾ. ೧೫-೧೧-೧೯೪೮ರಿಂದ ತಾ. ೧೫-೧೧-೧೯೪೯ರ ವರೆಗೆ (ಈ ಎರಡೂ ದಿನಗಳನ್ನು

THE BANK OF RURAL INDIA LTD.

(*Incorporated in British India, Liability of Members limited.*)

HEAD OFFICE :— "Satyabhama Bhavan", **KARWAR.** N. K

Offices at :— KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital .. Rs. 10,00,000;
Subscribed Capital .. Rs 5,00,000;
Paid-up Capital & Reserves .. Rs. 5,08,502-8-0

Rates of Interest on Deposits:

Current a/c @ 1% p. a. Savings Bank a/c @ 2½%.

Fixed Deposits for 3 months @ 3% per annum.
" " for 6 monnths @ 3½% "
" " for 12 monhs or more @ 4% "

All kinds of modern Banking business transacted

Karwar, 14-2-1948

P. X GRACIOUS.
MANAGING DIRECTOR

ಹಿಡಿದು) ಇರುವದು ಮತ್ತು ಯಾರ ಟೆಂಡರ ಪತ್ರ ಸ್ವೀಕರಿಸಲ್ಪಡುವದೋ ಅವರು ಕಚೇರಿಯವರಿಗೆ ಕರಾರು ಬರೆದುಕೊಟ್ಟು, ಕರಾರಿನ ಶರ್ತಗಳಂತೆ ಕಾರ್ಯ ನಡೆಸುವೆನೆಂಬ ಭರವಸೆ ಕೊಡುವದಕ್ಕಾಗಿ ರೂ ೧೦೦ ದ ಇಸಾಗಂಟನ್ನು ಅವರ ಕಡೆಗೆ ಒಪ್ಪಿಸಬೇಕಾಗುವದು

ಯಾವದೊಂದು ನಿರ್ದಿಷ್ಟ ಕ್ಷೇತ್ರದೊಳಗಿನ ನಿರ್ದಿಷ್ಟ ಜಾತಿಯ ಭತ್ತದ ಅಕ್ಕಿ ಮಾಡಿಕೊಡುವ ಬಗ್ಗೆ ಯಾರೊಬ್ಬರು ವಿಶೇಷ ಟೆಂಡರ ಕೊಟ್ಟರೂ ನಡೆಯುವಂತಿದೆ

೫ ತನ್ನ ಗಿರಣಿಗೆ [illegible] ಕೊಡುತ್ತಿದ್ದುದಲ್ಲದೆ ಅಥವಾ ಅದು (ಗಿರಣಿಯು) ಎಷ್ಟು ಪ್ರಮಾಣದ ಯಂತ್ರವುಳ್ಳದ್ದೋ ಎಂಬುದನ್ನು ಟೆಂಡರ ಪತ್ರ ಕೊಡುವವನು ಸ್ಪಷ್ಟ ನಮೂದಿಸಬೇಕು

೬ ಟೆಂಡರ ಪತ್ರ ಕಳಿಸಿಕೊಡುವವನು ಬಯಾನಾ ಹಣವೆಂದು [illegible] ರೂ ೧೦೦ ಕಟ್ಟಿ ಆ ಬಗ್ಗೆ ಕಚೇರಿಯಿಂದ [illegible] ಪಾವತಿಯನ್ನು ತನ್ನ ಮೇಲೆ ಹೇಳಿದ ಟೆಂಡರ ಪತ್ರದೊಂದಿಗೆ ಕಳಿಸಿಕೊಡಬೇಕು ಟೆಂಡರ ಪತ್ರ ಸ್ವೀಕೃತವಾಗದಿದ್ದರೆ ಈ ಬಯಾನಾ ಹಣ ತಿರುಗಿ ಕೊಡಲ್ಪಡುವದು ಯಾರ ಟೆಂಡರ ಸ್ವೀಕೃತವಾಗುವದೋ ಅವರ ಬಯಾನಾ ಹಣವು ಬಂದೇ ಅವರಿಂದ ಕಟ್ಟಿಸಿಕೊಳ್ಳಬೇಕಾಗುವ ಇಸಾಗಂಟಿನ ಲೆಕ್ಕಕ್ಕೆ ಜಮಾ ಮಾಡಲ್ಪಡುವದು [illegible] ಅವರು [illegible] ಕರಾರನ್ನು ಬರೆದುಕೊಟ್ಟ ಮೇಲೆ ಅವರಿಗೆ ತಿರುಗಿ ಕೊಡಲ್ಪಡುವದು ಅವರು ಕರಾರು ಪಾಲಿಸದಿದ್ದರೆ ಈ ಹಣ ಸರಕಾರ ಜಮಾ ಮಾಡಲ್ಪಡಬಹುದು

ಕಾರವಾರ
ತಾ [illegible]
L F Saldanha
ಕಲೆಕ್ಟರ ಕಾನಡಾ ಜಿಲ್ಲೆ

ಸ್ಥಾನಿಕ ವೃತ್ತಾಂತ.

ಕುಮಟಾ— ಇನ್ನೂ ಚಳಿ ಬೀಳಲು ಆರಂಭವಾಗಿಲ್ಲ ಹವೆಯಲ್ಲಿ ಉಷ್ಣತೆ ಹೆಚ್ಚಿದೆ ಗದ್ದೆ ಕೊಯಿಲು ಭರದಿಂದ ಸಾಗಿದೆ

ಎಲ್ಲೆಲ್ಲೂ ಜನರು ಸರಕಾರದವರ ನಿಯಂತ್ರಣವನ್ನು ಟೀಕಿಸುತ್ತಿದ್ದಾರೆ. ಈ ನಿಯಂತ್ರಣ (ಗ್ರಾಮಾಂತರ ನಿರ್ಬಂಧದ ನಿಯಂತ್ರಣ)ದ ಮೂಲಕ ಅವಲಕ್ಕಿ ತಯಾರಿಸುವ ಗ್ರಾಮಗಳೊಳಗಿನ ಅವಲಕ್ಕಿಯು ಪೇಟೆಗೆ ಬಾರದಂತಾಗಿದೆ! ಆದ್ದರಿಂದ ಜನರು ಅವಲಕ್ಕಿಯಿಲ್ಲದೆ ದೀಪಾವಳಿ ಹಬ್ಬ ಊಡುವ ಪ್ರಸಂಗ ಬಂತು! ಹಬ್ಬಕ್ಕಾಗಿ ಅವಲಕ್ಕಿ ತಯಾರಿಸಿಟ್ಟ ಜನರು ತಮ್ಮ ಅವಲಕ್ಕಿ ಪಾಲಿಗೆ ಹೋಗಗೊಡದಲ್ಲ ಎಂದು ಅಳುವ ಪ್ರಸಂಗ ಬಂದಿದೆ! ಹಳ್ಳಿಗಳಲ್ಲಿ ಕೆಲವೊಂದು ಜನರಿಗೆ ರೂಪಾಯಿನ ಕಾಲಕ್ಕೆ ಒಕ್ಕಲಿಗರಿಂದ ೬ ಪಾಯಲಿ ಭತ್ತ ಸಿಗುತ್ತದಷ್ಟೇ ಆ ಭತ್ತವನ್ನು ಮನೆಗೆ ಒಯ್ಯಲಿಕ್ಕೆ ಆಗದೆ ಆ ಜನರು ಪೇಚಾಡುತ್ತಿದ್ದಾರೆ! ಅಕ್ಕಿಯ ದರವಂತೂ ದಿನದಿನಕ್ಕೆ ಏರುತ್ತಲಿದೆ! ಸರಕಾರದವರ ಅಕ್ಕಿ ಡಿಸೆಂಬರ ತಿಂಗಳ ೧೫ ರ ವರೆಗೆ ಬರುವಂತಿಲ್ಲ! ಅಕ್ಕಿ ಭತ್ತಗಳ ಏರಿಳಿಯ ಕೆಲಸ ಮಂದ ಗತಿಯಿಂದ ಸಾಗಿದರೆ ಅದು ಮಾರಾಟಕ್ಕೆ ಬರಲು ೧-೨ ವರ್ಷವೂ ಕಡ ಆಗುವದೆಂದು ಸರಕಾರದವರು ಹೇಳುತ್ತಾರೆ! ಅಂತು ಇಂತು ಕಾಂತೀ ಮಕ್ಕಳಿಗೆ ವನವಾಸವೆಂಬಂತೆ ಹೊಲ ಭೂಮಿಗಳಿಲ್ಲದ ಜನರು ಈ ಎರಡು ತಿಂಗಳು ಉಪವಾಸ ಇರುವ ಪ್ರಸಂಗ ಬಂದಿದೆಯೆಂದು ಹೇಳಬಹುದು

ಕಳೆದ ವಾರ ಜಿಲ್ಹಾ ನ್ಯಾಯಾಧೀಶ ರಾ| ಮಿರಜಕರರು ಇಲ್ಲಿಯ ದಿವಾಣಿ ಕೋರ್ಟಿನ ತಪಾಸಣೆ ಮಾಡಲು ಇಲ್ಲಿ ಬಂದಿದ್ದರು ಆಗ ಅವರು ಕೆನರಾ ಕಾತೋಲಿಕ ಸ್ಥಳವನ್ನೂ ಸಮಕ್ಕೆ ಅಲ್ಲಿ ತಯಾರಾಗಿರುವ ಕಟ್ಟಿಣಗಳನ್ನೂ ಕಂಡು ಸಮಾಧಾನ ವ್ಯಕ್ತಗೊಳಿಸಿದರು

ತಾ ೮ ರ ಶನಿವಾರದ ಆ ಕಾರಿ [illegible] ಪುನರ್ರಚನೆ ಇಲಾಖೆಗಳ ಮಂತ್ರಿಗಳಿಂದ ಮಾನ್ಯ ಲಕ್ಷ್ಮಣರಾವ ಪಾಟೀಲರೂ ಧ್ವನಿಕ ಪ್ರಚಾರ ಇಲಾಖೆಯ ಮಂತ್ರಿಗಳಾದ ಮಾನ್ಯ ಗೋಪಿನಾಥರಾವ ಪತಕರರೂ ಈ ತಿಂಗಳ ಮಧ್ಯದ ೫ ನೆಯ ತಾರೀಖಿಗೆ ಈ ಜಿಲ್ಹೆಗೆ ಬರಲಿದ್ದು, ಅವರು ಅನುಕ್ರಮವಾಗಿ ೩ ಮತ್ತು ೬ ದಿನ ಜಿಲ್ಹೆಯಲ್ಲಿ ಸಂಚರಿಸುವರೆಂದು ಪ್ರಕಟವಾಗಿದೆ

ಇಲ್ಲಿಯ ಗಿರಿಯಮಿಯಲ್ಲಿ ದೆಕ್ಕೆಗಳ ಅಂಚಿಗೆ ಮಲ ವಿಸರ್ಜನೆ ಮಾಡುವ ದೃಶ್ಯ [illegible] ಮ್ಯುನಿಸಿಪಾಲಿಟಿಯವರು ಪೋಲೀಸರ ಸ್ಹಾಯ್ಯ ಪಡೆದು ಈ ದುರ್ವ್ಯಾಪಾರವನ್ನು ನಿಲ್ಲಿಸಬೇಕಾಗಿ ಸೂಚಿಸಿರುತ್ತಾರೆ

ಅಕ್ಕಿ ಸೋಸಿ ಮತ್ತು ಕಿರಿಸೋಸಿ [illegible] ಗಳನ್ನು ತಮ್ಮ ಕಡೆಗಿದ್ದ [illegible]ಗಳನ್ನು ತಾ ೧೫ ೧೧ ೪೮ ರ ಒಳಗೆ ಅನಿರ್ಬಂಧವಾಗಿ ಮಾರಾಟ ಮಾಡಬಹುದೆಂದು ಸರಕಾರವು ಪ್ರಕಟಿಸಿದೆ ಸದರಿ ಮಿತಿಯ ನಂತರ ಮಾತ್ರ ಅವರು ಮಾರಾಟವನ್ನು ನಿಲ್ಲಿಸತಕ್ಕದ್ದು ಆಗ ಕಿಲ್ಲಕ್ಕಿ ಇದ್ದ ಆ ಅಕ್ಕಿ ಭತ್ತಗಳನ್ನು ಸರಕಾರವು ತನ್ನ ದರದಿಂದ ಕೊಂಡುಕೊಳ್ಳುವದು ವ್ಯಾಪಾರಿಗಳು ಇತ್ತ ಲಕ್ಷ ಕೊಡಬೇಕು.

ಅಪಮೃತ್ಯುವಾದ ಹಿಲೆಯಲ್ಲಿ ಈ ವರ್ಷ ಅನಾವೃಷ್ಟಿಯಿಂದ ಮೇವಿನ ಬರಗಾಲವುಂಟಾಗಿದೆ ಆದರಿಂದ ಅಲ್ಲಿಯ ಕೆಲವು ಗೋರಕ್ಷಕರು ಸಂಬಂಧ ಪೋಲೀಸರೂ ತಮ್ಮಲ್ಲಿಯ ಕಂಕ್ರೀಜ ಜಾತಿಯ ದನಕರುಗಳನ್ನು ಇವನ್ನು ೫ ರೂಪಾಯಿಗೆ ಧರ್ಮಾರ್ಥ ಕೊಡಲು ಸಿದ್ಧರಾಗಿದ್ದಾರೆ ಆ ಹಸುವಿನ ದರದಿಂದ ೧ ಆಕಳನ್ನು ನಮ್ಮ ಜಿಲ್ಹೆಗೆ ತರಲಿಕ್ಕೆ ಸರಾಸರಿ [illegible] ರೂ ಖರ್ಚು ಬೀಳುವದು ಈ ದನಗಳು ಹೆಚ್ಚಾಗಿ ಥಟ್ಟಿದ ಹವೆಯಲ್ಲಿ ಚನ್ನಾಗಿ ಬಾಳುವವು ಈ ದನಗಳನ್ನು ಪಡೆಯಬಯಸುವವರು ಮುಂಬಯಿಯೊಳಗಿನ ಜೀವದಯಾ ಸಂಘ (೧೯೯, ಸರ ಫಿರೋಜಶಹಾ ಮೆಹತಾ ರಸ್ತೆ)ದ ಕಾರ್ಯದರ್ಶಿಗಳಿಗೆ ಬರೆಕೊಳ್ಳಬಹುದು

ಕೊಲ್ಲಾಪುರ ಬೆಳಗಾಂವ ಜಿಲ್ಹೆಯ ರಾಮದುರ್ಗ ಗಳಲ್ಲಿ ಮಾಡಿದಂತೆ ನಿ ದತ್ತ ಪಂತ ವಾಮನ್ [illegible] ಗೋಕರ್ಣ ಇವರು ಕಳೆದ ವಾರ ಗೋಕರ್ಣದಲ್ಲಿ ಒಂದು ವೇದ ಪಾಠಶಾಲೆ ಕೇಂದ್ರವನ್ನು ತೆರೆದಿದ್ದಾರೆ ಕೆಲವು ಪುರದ ಪಂ॥ ಜ [illegible] ಮುಂಬೇರಕರ ಇವರ ಹಸ್ತದಿಂದ ಕೇಂದ್ರದ ಉದ್ಘಾಟನೆಯಾಯಿತು ಈ ಕೇಂದ್ರದಲ್ಲಿ ಪ್ರತಿ ಏಕಾದಶಿಯ ದಿವಸ ವೇದಪಾರಾಯಣಗಳು ನಡೆಯುವವಂತೆ ವೇ॥ ಬಾಳಕೃಷ್ಣ ಭಟ್ಟ ಜೋಗಳೇಕರ ಮತ್ತು ಗಣಪತಿ ಭಟ್ಟ [illegible] ಇವರು ಅನುಕ್ರಮವಾಗಿ ಗೋಕರ್ಣ ಕೇಂದ್ರದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುತ್ತಾರೆ

ನಮ್ಮ ಜಿಲ್ಹೆಯ ಕರಾವಳಿಯಲ್ಲಿ ತಾಪಿ ಪಟ್ಟಿಗಳ ಬೆಳೆಯನ್ನು ಹೆಚ್ಚಿಸಲು ೧೯೪೮—೪೯೦೦ ೧೯೫೦ — ೫೧ ಎರಡಿನ ೪ ವರ್ಷಗಳಲ್ಲಿ ೩೫೦೦೦ ರೂ ಖರ್ಚು ಮಾಡ ೨ ಮುಂಬಯಿ ಸರಕಾರವು ಸಂಕಲ್ಪಿಸಿದೆ ಒಕ್ಕಲಿಗರಿಗೆ ಬೇಕಾದ ಬೀಜ ಪೂರೈಸಲು ರೂ ೫೦೦೦ ಮತ್ತು ಗೊಬ್ಬರ ಪೂರೈಸಲು ರೂ ೩೦೦೦೦ ವಿನಿಯೋಗಿಸಲ್ಪಡುವವು ಕನಿಷ್ಠ ೧೦೦೦೦ ಎಕರೆ (ಈ ಹಿಂದೆ ಈ ಯಿಯಲ್ಲಿ ಬೆಳೆಸದಿದ್ದ) ಭೂಮಿಯಲ್ಲಿ ಬೆಳೆ ಬರೋಳಗೆ ಆಯಿತ ಬೀಳಿಸುವ ವ್ಯವಸ್ಥೆ ಮಾಡಬೇಕೆಂದು ಸರಕಾರದವರ ಸಂಕಲ್ಪವುಂಟು

ಹೊನ್ನಾವರ ಹಳೆದ ವಾರ ೬-೭ ತರಿ ಗದ್ದೆಗಳಲ್ಲಿ ಬೆಳೆಯ ಪ್ರಮಾಣ ಕಂಡು ಹಿಡಿಯುವ ಪ್ರಾತ್ಯಕ್ಷಿಕೆಗಳಾದವು. ಒಡೆಯರ ಸ್ವಂತ ಸಾಗುವಳಿಗೂ ರೈತರ ಸಾಗುವಳಿಗೂ ಇರುವ ವ್ಯತ್ಯಾಸ ಈ ಪ್ರಾತ್ಯಕ್ಷಿಕೆಗಳಲ್ಲಿ ಒಳಿತಾಗಿ ಬೆಳಕಿಗೆ ಬಂದಿತು. ರಾ. ಗೋಪಾಲಕೃಷ್ಣ ಶಾಸ್ತ್ರಿ ಹೆಗಡೆಯವರು ಸ್ವತಃ ಸಾಗುವಳಿ ಮಾಡಿಸಿದ ಸಗಿ ನಂ॥ ೧೫೬೭ರಲ್ಲಿ ಗುಂಟೆಗಕ್ಕೆ ೨೧ ಪಾಯಲಿಯಂತೆ ಭತ್ತ ಹುಟ್ಟಿರುತ್ತದೆ, ರೈತರು ಸಾಗುವಳಿ ಮಾಡಿದ ಗದ್ದೆಗಳಲ್ಲಿ ಗುಂಟೆ ಗಕ್ಕೆ ಸಾ ಸಾ ೧೮ ಪಾಯಲಿ ಭತ್ತ ಹುಟ್ಟಿದೆ ಕಂದಾಯ ಮಂತ್ರಿಗಳಿಗಿಂತ ಧಿಪರು ಈ ಮಾತನ್ನು ತಿಳಿಸುವ ಧೈರ್ಯ ಬೇಕಾಗಿ ಅಂತೆಯಿದೆ

ಮೊಳಿಗದ್ದೆಯ ರೈತ ಸಂಘದವರು ತಮ್ಮದೇ ಒಂದು ಠರಾವನ್ನು ಪಾಸ ಮಾಡೋಳಗಿನ ರೈತರಿಲ್ಲ ಅಲ್ಲದೆ ತಮ್ಮ ಬಡಿಗಳನ್ನು ಹಾಕಬೇಕೆಂದು ತರಾಸ ಮಾಡಿದ್ದರು ಯಾರು ಈ ಕ್ರಮ ವಿರೋಧಿಸಿ, ಹಿಂದಿನಂತೆಯೇ ನಡೆಯಕೆಂದು ತನ್ನ ತನ್ನ ವ್ಯವಹರಿಗೆ ತಿಳಿಸಿದರು ಸಂಘದ ಆಗ ದೊಡ್ಡ ಹಿಂದು ಕಟ್ಟಿಕೊಂಡು ಕುಮಟಾ ತಾಲೂಕ ಕಚೇರಿಗೆ ಬಂದು ಊರಲ್ಲಿ ಶಾಂತತಾಭಂಗವುಂಟಾಗುವ ಭಯವುಂಟೆಂದೂ ತಮಗೆ ಪೋಲೀಸರ ಸಹಾಯ ಬೇಕೆಂದೂ ಮಾಮಲೇದಾರರ ಕಡೆ ಅರಿಕೆ ಮಾಡಿಕೊಂಡರು ಮಾಮಲೇದಾರರು ಆಗ ಅವರಿಗೆ, ಬೆಳೆಯ ಒಕ್ಕಲಿಗರಂತೆ ಒಡೆಯರ ಹಿತಸಂಬಂಧವೂ ಇರುವದರಿಂದ ಒಡೆಯರ ಒಪ್ಪಿಗೆಯಿಲ್ಲದ ಸ್ಥಳದಲ್ಲಿ ಗೆರೆಹಾಕಿ ದಾಕಲು [illegible] ಹಿಂದಿನ ಸ್ಥಳಗಳಲ್ಲಿ ಗೇಣಿದಾರರು ಒಕ್ಕಲಿಗರ ಒಪ್ಪಿಗೆ ಇಲ್ಲದಿದ್ದರೆ ಅಯಾ ಒಕ್ಕಲಿಗರಲ್ಲೇ ಹಾಕಬಹುದು ಒಳಿತೆಂದೂ ಸಂಘದವರಿಗೆ ಬುದ್ಧಿ ಹೇಳಿ ಕಳಿಸಿಕೊಟ್ಟರು

ಮುರ್ಡೇಶ್ವರ— ಗಾಂಧಿ ಜಯಂತಿಯ ಕಾರ್ಯಕ್ರಮ ರಾಮ್ರಯಿ ಸಾಗ, ತಮ್ಮ ತಮ್ಮ ಮನೆ ಹಿತ್ತಲನ್ನು ಸ್ವಚ್ಛಗೊಳಿಸಲು ಶಾಲೆಯ ಹುಡುಗರಿಗೆ ತಿಳಿಸಿದೆ ಬೇಕೆಂದಿಷ್ಟೇ ಹಾವು ಬೋಧಿಸಿದ್ದೆವೆಂಬಲ್ಲ, ಗ್ರಾಮದ ಬಡ ಕೇರಿಯ ಹರಿಜನರ ಮನೆಗಳನ್ನು ಸ್ವಚ್ಛಗೊಳಿಸಲು ಮುರ್ಡೇಶ್ವರ ಶಾಲೆಯ ವಿದ್ಯಾರ್ಥಿಗಳನ್ನು ಕಳಿಸಬೇಕೆಂದು ತಾವು ಕನಸು ಮನಸಿನಲ್ಲಿ ಕೂಡ ಹೇಳಿರಲಿಲ್ಲವೆಂದೂ, ಮುರ್ಡೇಶ್ವರ ಶಾಲೆಯ ಮುಖ್ಯಾಧ್ಯಾಪಕ ಹೇಳುವದು ಹಸೀ ಸುಳ್ಳಿರುತ್ತದೆಂಬಲ್ಲ ಮಾನ್ಯ ಸದಸ್ಯರು ಬರೆಯುತ್ತಾರೆ

ಇಲ್ಲಿಯ ಯಾದವ ಶಾರಕೋನರ ಬಗ್ಗೆ ತಾ ೧೮-೧೧ ೪೮ ರ "ನವ್ಯಕನ್ನಡ"ದಲ್ಲಿ ಬಂದ ಟೀಕೆ ನಿರಾಧಾರವಿರುತ್ತದೆ ರಾ॥ ಜಿ ಎಮ್ ಕಾಮತ ಎಂಬವರು ತಿಳಿಸುತ್ತಾರೆ

ಶಿರಾಲಿ— (ತಾ ೧೮-೧೦ ೪೮) ಚಿತ್ರಾಪುರ ಶಾಲೆಯಲ್ಲಿ ತಾ ೧೦ಕ್ಕೆ ನಡೆಗರದ ಶಾಲೆ ಪ್ರಾರಂಭವಾಯಿತು. ತಾ ೧೧ಕ್ಕೆ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರಿಯರೂ ಕೂಡಿ ಗಾಂಧಿಜಯಂತಿಯ ಸಪ್ತಾಹದ ಕೊನೆಯ ದಿನದ ಕಾರ್ಯಕ್ರಮ ನಡೆಸಿದರು

ಕಳೆದ ೧೦ರ ಬುಧವಾರ ದಿನ ಶ್ರೀ ಶಾಂತಾದುರ್ಗಾ ದೇವಿಯ ಗುಡಿಯಲ್ಲಿ ಹೊನ್ನಾವರ ಸಪ್ತಪ್ರಹರ ಭಜನೆ ಉತ್ಸವ ನಡೆದು, ಮರುದಿನ ಮಂಗಲೋತ್ಸವ ಮಾಡಿದ ರಾತ್ರೆಯಲ್ಲಿ ರಾಮ ಕೀರ್ತನೆ ಪ್ರವಚನ ಕೀರ್ತನೆಯಾಯಿತು

ವಿಜಯಾ ದಶಮಿಯ ದಿನ ಶ್ರೀ ಚಿತ್ರಾಪುರ ಮಠಾಧಿಪತಿಗಳು ವೆಂಕಟಾಪುರಕ್ಕೆ ಹೋಗಿ ಗಂಗಾಪೂಜೆಯ ವಿಧಿ ಮಾಡಿದರು ಅಲ್ಲಿಂದ ಮಾರಿ ಮಾರಿಕ್ಕೆ ಬಂದ ಮೇಲೆ ಶ್ರೀ ದೇವರೊಂದು ಪ್ರವಚನವಾಯಿತು ಶ್ರೀಗಳು ಧರ್ಮದ ಮೇಲೆ ತಿಳಿಸಿಕೊಟ್ಟರು

(೩ನೇ ಪುಟದಿಂದ ಮುಂದುವರಿದುದು)

ಪಡೆಯಬಹುದಿದೆ ಸದರಿ ಮಸುದ್ದೆಯ ಚರ್ಚೆಯ ಕಾಲಕ್ಕೆ ಸಭೆಯೊಳಗಿನ ಪ್ರತಿನಿಧಿಯೊಬ್ಬರು ಒಂದೆ ಗೆಸ್ಟೇ ಸ್ವಂತ ಸಾಗುವಳಿಯ ಉಲ್ಲೇಖ ಮಸುದ್ದೆಯ ದಿಯ ಕರ್ಮೆನಿಂದ ಕಾಣು ಕೊಟ್ಟಿದ್ದರೆ ಸ್ವಂತ ಸಾಗುವಳಿಯನ್ನು ಇಲ್ಲಿಲ್ಲ ಆದರಿಂದ ಸ್ವಂತ ಸಾಗುವಳಿ ಹೊಲ ಬೇಕೆಂಬುವರ ಪ್ರಾರ್ಥನೆಯಾಗಬೇಕೆಂದು ಕೇಳಿದ ನ ಅಭಿಪ್ರಾಯವಾಯಿತು ಪ್ರಸ್ತುತ ಪ್ರಕರಣದಲ್ಲಿ ಹಸಿ ಅಲ್ಲ ವಾದಿಯು ಇಚ್ಛಿಸಿದ ಕೊಟ್ಟು ಸ್ವಂತ ಸಾಗುವಳಿಗಾಗಿ ಭೂಮಿ ಬೇಕೆಂದು ಹೇಳಿದ್ದುಂಟು

೨ಾ ಸಾಲದಿಂದ ಒಡೆಯನು ಸ್ವಂತ ಸಾಗುವಳಿ ಹೊಲ ಬೇಕಾದೆಂದು ಪುರಾವೆ ಮಾಡಿದರೆ ಸಾಕು ಈ ಸಂಗತಿಗಳನ್ನು ನಾವು ಸೋಂಕಬೇಕಾಗಿಲ್ಲ ಒಕ್ಕಲಿಗನ ಕೋಲದ ಒಡೆಯನ ಗಟೇಕೆಂದು ಪುನಃ ಪುನಃ ಈ ಪುಂದಳದಲ್ಲಿ ಹೇಳಲಾಗಿದೆ ಇಷ್ಟರಿಂದ ಈ ಸ್ವಂತ ಸಾಧಿಸಬಹುದಿದೆ ಬಂದೇ ಊಳಿಗದವನು ಹೊಲವ ಯಜಮಾನಿಕೆಗೆ ಇಲ್ಲವೆ ಒಡೆಯನು ಸ್ವತಃ ಸಾಗುವಳಿ ಮಾಡಬೇಕು ಭೂಮಿಗಳ ಒಡೆಯರು ಸ್ವಂತ ಸಾಗುವಳಿಗೆ ಕೊಳ್ಳಬೇಕೆಂದು ಒಕ್ಕಲಿಗನ ಕಾನೂನು ಪ್ರಕಾರ ಅದ್ದರಿಂದ ಪ್ರಕಾರದಿಂದ ಪರವಾಗಿ ಹುಂಡಿ ಲೆಸ್ಟರ ಬೇರೆ ಬೇರೆ ಪ್ರತಿವಾದಿಗಳಲ್ಲಿ ಹುಟ್ಟಿದ ಕಾಲದಿಂದ ಪಾಡವಿರುತ್ತದೆ

ಇದನ್ನು ಪಾಂಡುರಂಗ ಕೃಷ್ಣ ಕಾನಫಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ ಸ್ವಾರ ಆಫ್ ಕೆನರಾ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಮುಂಗಡವಾಗಿ
ವರ್ಷಕ್ಕೆ ರೂ ೩-೪-೦
ಅರ್ಧವರ್ಷಕ್ಕೆ ೧-೧೦-೦
೩ ತಿಂಗಳಿಗೆ ೧ ೦-೦
ಸಂಚಿಕೆಗೆ ೦ ೧ ೮
... ಸಂಚಿಕೆಗೆ ೦ ೪-೦
... ಯಿಂದ ಹಣ ಕಳಿಸುವವರು
... ಹೆಚ್ಚಿಗೆ ಕಳಿಸಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270 Monday, 8-11-1948.

ಕಾನಡಾವೃತ್ತ

ವರ್ಷ ೩೭.] THE KANARA NEWS. [ಸಂಚಿಕೆ ೧೯.

ಕುಮಟಾ - ಸೋಮವಾರ, ತಾ ೮—೧೧—೧೯೪೮

ಜಾಹೀರಾತುಗಳ ದರ.-
ಒಂದು ಕಾಲಮ್ಮಿನ ೧ ಇಂಚಿಗೆ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಅಲ್ಪವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲವೆ ಪತ್ರದ್ವಾರಾ
ತಿಳಿಸಲಾದೀತು

ಡಾ|| ಪಟ್ಟಾಭಿ ಸೀತಾರಾಮಯ್ಯಾ

ಆಂಧ್ರ ನಾಡಿನ ಮುಂದಾಳುಗಳಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಈದೀ ಡಿಸಂಬರದೊಳಗೆ ಜಯಪುರದಲ್ಲಿ ಸೇರಲಿರುವ ರಾಷ್ಟ್ರೀಯ ಸಭೆಯ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಇವರ ಪ್ರತಿಸ್ಪರ್ಧಿಗಳಾದ ಸಂಯುಕ್ತ ಪ್ರಾಂತದ ಶ್ರೀ|| ಪುರುಷೋತ್ತಮ ದಾಸ ಟಂಡನರವರಿಗಿಂತ ಇವರಿಗೆ ... ಮತಗಳು ಹೆಚ್ಚಿಗೆ ಬಿದ್ದಿದ್ದವು. ಕಾಂಗ್ರೆಸ ವರಿಷ್ಠರು ಈ ಚುನಾವಣೆಯಿಂದ ಅಲಿಪ್ತರಿದ್ದರೆಂದು ತೋರಗಾಣಿಕೆಗೆ ತೋರುತ್ತಿದ್ದರೂ ಡಾ|| ರಾಜೇಂದ್ರಪ್ರಸಾದರು ಡಾ|| ಪಟ್ಟಾಭಿಯವರ ಪಕ್ಷ ಎತ್ತಿ ಹಿಡಿದರೆಂಬುದೂ ಸರದಾರ ವಲ್ಲಭಭಾಯಿ ಪಟೇಲರು ಶ್ರೀ|| ಟಂಡನರನ್ನು ಎತ್ತಿಹಿಡಿದಿದ್ದರೆಂಬುದೂ ಸಾಕ್ಷ್ಯ...ಗಳಿಗೆ ಕಾಣದೆ ಹೋಗಲಿಲ್ಲ. ಸಂಯುಕ್ತ ಪ್ರಾಂತದಲ್ಲಿ ಶ್ರೀ|| ಟಂಡನರಿಗೆ ಮತ್ತು ತೆಲಗು-ತಮಿಳು ನಾಡುಗಳಲ್ಲಿ ಡಾ|| ಪಟ್ಟಾಭಿಯವರಿಗೆ ಹೆಚ್ಚಿಗೆ ಮತಗಳು ಬಿದ್ದದ್ದು ಸ್ವಾಭಾವಿಕ. ಆದರೆ ಡಾ|| ರಾಜೇಂದ್ರಪ್ರಸಾದರ ಬಿಹಾರ ಪ್ರಾಂತದಲ್ಲಿ ಡಾ|| ಪಟ್ಟಾಭಿ ಸೀತಾರಾಮಯ್ಯನವರಿಗೆ ಹೆಚ್ಚಿಗೆ ಮತಗಳು ಬಿದ್ದದ್ದು ಮತ್ತು ಸರದಾರ ಪಟೇಲರ ಗುಜರಾಥದಲ್ಲಿ ಶ್ರೀ|| ಟಂಡನರಿಗೆ ಹೆಚ್ಚಿನ ಬೆಂಬಲ ದೊರೆತದ್ದು ವಿಶೇಷ ಗಮನಿಸತಕ್ಕ ಸಂಗತಿಯಾಗಿರುತ್ತದೆ. ಡಾ|| ಪಟ್ಟಾಭಿ ಸೀತಾರಾಮಯ್ಯನವರು ಭಾಷಾನುಗುಣ ಪ್ರಾಂತರಚನೆಯೂ ಬೇಕೆನ್ನುವವರ ಅಗ್ರೇಸರರಾಗಿದ್ದಾರೆ. ಈ ಪಕ್ಷಕ್ಕೆ ನಾಡಿನಲ್ಲಿ ತಕ್ಕಷ್ಟು ವಿರೋಧ ಉಂಟೆಂಬುದು ಈ ಚುನಾವಣೆಯಲ್ಲಿ ಸಿದ್ಧವಾಯಿತೆಂದೂ ಹೇಳಬಹುದು. ಮೊನ್ನೆಯೇ ನಾಗಪುರದಲ್ಲಿ ಸರದಾರ ವಲ್ಲಭಭಾಯಿ ಪಟೇಲರು ತಮ್ಮದೊಂದು ಭಾಷಣದಲ್ಲಿಗೆ, ಭಾಷಾನುಗುಣ ಪ್ರಾಂತ ನಿರ್ಮಾಣದ ಅವಸರತೆಯನ್ನು ತೋರಿಯುವದೊಳ್ಳೆಯದೆಂದು ತಮ್ಮ ...ತಬಾಂಧವರಿಗೆ ಪ್ರಕಟ ಸೂಚನೆ ಕೊಟ್ಟಿದ್ದಾರೆ. ಪ್ರಾಂತಗಳ ಪುನರ್ರಚನೆಯ ಆಂದೋಲನವು ಸ್ವತಂತ್ರ ಹಿಂದುಸ್ಥಾನದ ಭದ್ರತೆಗೂ ಪ್ರಗತಿಗೂ ಮಾರಕವಾಗುತ್ತದೆಂದು ಸರದಾರರ ಅಭಿಪ್ರಾಯವಿರುತ್ತದೆ. ಡಾ|| ಪಟ್ಟಾಭಿಯವರ ಆಯ್ಕೆಯನ್ನು ಸರದಾರರು ವಿರೋಧಿಸಲಿಕ್ಕೆ ಇದೇ ಕಾರಣ. ಭಾಷಾನುಗುಣ ಪ್ರಾಂತರಚನೆಯ ಪುರಸ್ಕಾರವೂ ಈ ಚುನಾವಣೆಯಿಂದ ... ಹೇಳಿದರೆ ತಪ್ಪಾಗಲಾರದಲ್ಲ.

ಭಾವಿ ರಾಷ್ಟ್ರಪತಿಗಳಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರ ಜೀವನ-ಚರಿತ್ರೆ ಇಂತಿದೆ — ಇವರ ಪೂರ್ಣ ಹೆಸರು ಡಾ|| ಭೋಗರಾಜು ಪಟ್ಟಾಭಿ ಸೀತಾರಾಮಯ್ಯಾ ಎಂದಿರುತ್ತದೆ. ಇವರ ಜನ್ಮ ೨೪—೧೧—೧೮೮೦ರಲ್ಲಿ ಆಯಿತು. ೧೯೦೦ರಲ್ಲಿ ಇವರು ಮದ್ರಾಸ ವಿಶ್ವವಿದ್ಯಾಲಯದ ಪದವೀಧರರಾಗಿ ಆ ಮೇಲೆ ವೈದ್ಯವಿದ್ಯಾಭ್ಯಾಸ ಮಾಡಿ ೧೯೦೬ ಎಮ್. ಬಿ., ಸಿ. ಎಮ್. ಪರೀಕ್ಷೆ ಕೊಟ್ಟು, ೧೯೦೬ರಲ್ಲಿ ವೈದ್ಯಕೀಯ ವ್ಯವಸಾಯವನ್ನು ಪ್ರಾರಂಭಿಸಿದರು. ಅದರಲ್ಲಿ ಅವರಿಗೆ ಒಳ್ಳೇ ಯಶಸ್ಸೂ ಪ್ರಸಿದ್ಧಿಯೂ ಸಿಕ್ಕಿತು. ೧೨ ವರ್ಷ ಈ ವ್ಯವಸಾಯ ನಡಿಸಿ ೧೯೧೮ರಲ್ಲಿ ಅದಕ್ಕೆ ಶರಣು ಹೊಡೆದರು.

ಡಾ|| ಪಟ್ಟಾಭಿಯವರಿಗೆ ಮೊದಲಿನಿಂದಲೂ ರಾಜಕಾರಣದಲ್ಲಿ ಆಸಕ್ತಿ ಹೆಚ್ಚು. ೧೯೦೫-೧೯೦೬ರಲ್ಲಿ ನಡೆದ ಸ್ವದೇಶಿಯ ಚಳವಳಿಯಲ್ಲಿ ಇವರು ಉತ್ಸಾಹದಿಂದ ದುಡಿದಿದ್ದರು. ಡಾಕ್ಟರಿ ಧಂದೆ ನಡೆಸುವಾಗಲೂ ಇವರು ದೇಶದೊಳಗಿನ ರಾಜಕಾರಣವನ್ನು ಒಳ್ಳೇ ಹುರುಪಿನಿಂದ ಅಭ್ಯಸಿಸುತ್ತಿದ್ದರು. ೧೯೧೬ರಲ್ಲಿ ಅವರು ರಾಷ್ಟ್ರೀಯ ಸಭೆಯನ್ನು ಸೇರಿದರು. ಆ ವರ್ಷ ಮುಂಬಯಿಯಲ್ಲಿ ಕಾಂಗ್ರೆಸಿನ ಅಧಿವೇಶನವಿತ್ತು. ಇವರು ಅದರಲ್ಲಿ ಸೊಗಸಾದ ಉಡಿಗೆ-ತೊಡಿಗೆಗಳನ್ನು ತೊಟ್ಟುಕೊಂಡು ಆ ಅಧಿವೇಶನದ ವ್ಯಾಸಪೀಠದ ಮೇಲಿನ ಆಸನಸ್ಥರಿಂದ ಕೆಲವು ಮುಖಂಡರನ್ನು ಇವರು ಆಕ್ಷೇಪಿಸಿದ ಕಥೆ ಚಿರಸ್ಮರಣೀಯವಿದೆ. ೧೯೧೯ರಲ್ಲಿ ಇವರು ಅಖಿಲ ಭಾರತೀಯ ಕಾಂಗ್ರೆಸ ಸಮಿತಿಯ ಸದಸ್ಯರಾದರು. ಅಂದಿನಿಂದಲೇ ಅವರು ಭಾಷಾನುಗುಣ ಪ್ರಾಂತರಚನೆಯ ವಿಚಾರವನ್ನು ಪುರಸ್ಕರಿಸುತ್ತಿದ್ದಾರೆ. ೧೯೧೭ರಲ್ಲೇ ಅವರು ತಮ್ಮ ಆಂಧ್ರನಾಡಿನ ಸಲುವಾಗಿ ಪ್ರತ್ಯೇಕ ಪ್ರಾಂತಿಕ ಕಾಂಗ್ರೆಸ ಸಮಿತಿಯನ್ನು ನಿರ್ಮಿಸಿಕೊಂಡರು. ೧೯೧೯ರಲ್ಲಿ ಅಮೃತಸರದೊಳಗೆ ಕೂಡಿದ ಕಾಂಗ್ರೆಸ್ಸಿನ ವಿಷಯ-ನಿಯಾಮಕ ಮಂಡಳದಲ್ಲಿ ನಡೆದ ಒಂದು ಚರ್ಚೆಯಲ್ಲಿ ಲೋಕಮಾನ್ಯ ಬಾಳ ಗಂಗಾಧರ ಟಿಳಕರಿಗೂ ಡಾ|| ಪಟ್ಟಾಭಿ ಸೀತಾರಾಮಯ್ಯನವರಿಗೂ ಒಳ್ಳೇ ವಿವಾದ ನಡೆಯಿತೆಂದೂ, ಅದರಲ್ಲಿ ಡಾ|| ಪಟ್ಟಾಭಿಯವರು ಗೆದ್ದರೆಂದೂ, ಡಾ|| ಪಟ್ಟಾಭಿ ಸೀತಾರಾಮಯ್ಯನವರ ಆ ವಿದ್ವತ್ತೆ ನೋಡಿ ಮಹಾತ್ಮರಿಗೆ ಸಂತೋಷವಾಯಿತೆಂದೂ, ಅಂದಿನಿಂದ ಡಾ|| ಪಟ್ಟಾಭಿಯವರನ್ನು ಮಹಾತ್ಮರು ತಮ್ಮ ಸಂಪದವಲ್ಲಿ ಸೇರಿಸಿಕೊಂಡರೆಂದೂ ಒಂದು ಆಖ್ಯಾಯಿಕೆಯುಂಟು. ೧೯೨೦ರ ಕಲಕತ್ತೆಯ ವಿಶೇಷ ಅಧಿವೇಶನದಲ್ಲಿ ಕಾಂಗ್ರೆಸ್ಸು ಪ್ರಾರಂಭಿಸಿದ ಅಸಹಕಾರದ ಆಂದೋಲನದಲ್ಲಿ ಡಾ|| ಪಟ್ಟಾಭಿಯವರು ಉತ್ಸಾಹದಿಂದ ಸೇರಿ, ತಮ್ಮ ಪ್ರಾಂತದಲ್ಲೆಲ್ಲ ಗಾಂಧಿಯವರ ಅಸಹಯೋಗದ ಪ್ರಚಾರವನ್ನು ಮಾಡಿದರು. ೧೯೨೦ರ ಡಿಸೆಂಬರದೊಳಗೆ ನಾಗಪುರದಲ್ಲಿ ಸೇರಿದ ರಾಷ್ಟ್ರೀಯ ಸಭೆಯ ಆ ಬಳಿಕ ಬ್ರಿಟಿಶ ಕೂಲಿಕಾರ ಪಕ್ಷದ ಕರ್ನಲ್ ವೆಜವುಡ್ಡರಿಗೂ ಡಾಕ್ಟರರಿಗೂ ಗಾಂಧಿ-ವಾದದ ಮೇಲೆ ಆವೇಶದ ಚರ್ಚೆ ನಡೆದು ಅದರೊಳಗೆ ಗಾಂಧಿವಾದಕ್ಕೆ ಡಾಕ್ಟರರು ಯಶಸ್ಸು ಸಂಪಾದಿಸಿದ್ದರು. ೧೯೨೧ರಿಂದ ೧೯೩೦ರ ತನಕ ಮಹಾತ್ಮರ ಆದೇಶದಂತೆ, ಡಾಕ್ಟರ ಪಟ್ಟಾಭಿಯವರು ವಿಧಾಯಕ ಕಾರ್ಯಕ್ರಮವನ್ನು ಪ್ರಚುರಗೊಳಿಸುತ್ತಿದ್ದರು. ಇದರಿಂದ ಪ್ರಸನ್ನಗೊಂಡ ಮಹಾತ್ಮರು ಆಂಧ್ರದೇಶದೊಳಗೆ ಖಾದಿಯ ಸಂಘಟನೆ ಮಾಡುವ ಅಧಿಕಾರವನ್ನು ಪಟ್ಟಾಭಿಯವರಿಗೇ ಒಪ್ಪಿಸಿದರು. ೧೯೨೯ರಿಂದ ೧೯೪೬ರ ವರೆಗೆ ಡಾ|| ಪಟ್ಟಾಭಿಯವರು ಕಾಂಗ್ರೆಸ ಕಾರ್ಯಕಾರಿ ಮಂಡಳದ ಸದಸ್ಯರಾಗಿದ್ದರು. ೧೯೩೦ರಿಂದ ೧೯೪೫ರ ವರೆಗಿನ ೧೫ ವರ್ಷಗಳಲ್ಲಿ ಅವರು ನಾಲ್ಕು ಸಲ ಸೆರೆಮನೆ ಕಂಡಿದ್ದಾರೆ. ಅಂತೂ ೭ ವರುಷಗಳನ್ನು ಅವರು ಸೆರೆಮನೆಯಲ್ಲಿ ಕಳೆದಿದ್ದಾರೆ. ೧೯೩೬ರಲ್ಲಿ ಇವರು ಅಖಿಲ ಭಾರತೀಯ ಸಂಸ್ಥಾನ ಪ್ರಜಾ ಪರಿಷತ್ತಿನ ಅಧ್ಯಕ್ಷರಾದರು. ಅಂದಿನಿಂದ ಈ ವರೆಗೆ ಅವರು ಸಂಸ್ಥಾನಿ ಪ್ರಜೆಗಳ ಸಲುವಾಗಿ ಹೋರಾಡುತ್ತಿದ್ದಾರೆ. ಹೈದರಾಬಾದದ ನಿಜಾಮರು ಭಾರತಕ್ಕೆ ಶರಣು ಬಂದ ಬಳಿಕ ಪ್ರಜಾ ಪರಿಷತ್ತಿನ ಕಾರ್ಯ ಮುಗಿಯಿತೆಂದು ಡಾ|| ಪಟ್ಟಾಭಿಯವರು ಮದ್ರಾಸದೊಳಗೆ ಮುಖ್ಯ ಪ್ರಧಾನರು ಕೊಟ್ಟ ಸತ್ಕಾರ ಕೂಟದಲ್ಲಿ ಉದ್ಗರಿಸಿದ್ದುಂಟು.

೧೯೧೦ರಲ್ಲಿ ಮಚಲೀಪಟ್ಟಣದೊಳಗೆ ಡಾ|| ಪಟ್ಟಾಭಿಯವರು ಆಂಧ್ರ ಕಲಾಶಾಲೆಯನ್ನೂ ೧೯೨೩ರಲ್ಲಿ ಆಂಧ್ರ ಬ್ಯಾಂಕನ್ನೂ, ೧೯೨೫ರಲ್ಲಿ ಆಂಧ್ರ ವಿಮಾ ಕಂಪನಿಯನ್ನೂ ಸ್ಥಾಪಿಸಿ ತಮ್ಮ ನಾಡಿನ ಆರ್ಥಿಕ ಉನ್ನತಿಯನ್ನು ಸಾಧಿಸಿದ್ದಾರೆ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು;
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬ್ಯಾಂಕು ವ್ಯವಹಾರ ನಡೆಯಿಸಲ್ಪಡುವದು

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ ೨೨-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಈ ಎಲ್ಲ ಸಂಸ್ಥೆಗಳು ದಿನೇ ದಿನೇ ಪ್ರಗತಿಹೊಂದುತ್ತಿವೆ ೧೯೧೯ರಲ್ಲಿ ಡಾಕ್ಟರರು "ಜನ್ಮ ಭೂಮಿ"ಯೆಂಬ ಇಂಗ್ಲಿಶ ವಾರ-ಪತ್ರಿಕೆಯನ್ನು ಹೊರಡಿಸಿ, ಸತತ ೧೨—೧೩ ವರ್ಷಗಳ ವರೆಗೆ ಆ ಪತ್ರಿಕೆಯ ದ್ವಾರಾ ದಕ್ಷಿಣ ಹಿಂದುಸ್ತಾನದಲ್ಲಿ ಗಾಂಧಿ-ರಾಜಕಾರಣದ ಯಶಸ್ವಿ ಪ್ರಚಾರ ಮಾಡಿದ್ದರು ೧೯೩೫ರಲ್ಲಿ ಪ್ರಕಟವಾದ ಅವರ ಕೊಂಗ್ರೆಸ್ಸಿನ ಇತಿಹಾಸ ಲೋಕವಿಸ್ರುತವಿದೆ ಆ ಮಹಾಗ್ರಂಥವನ್ನು ಅವರು ಎರಡೇ ತಿಂಗಳಲ್ಲಿ ಬರೆದು ಮುಗಿಸಿದ್ದರಂತೆ ಇದರ ಮೇಲಿಂದ ಅವರ ಬುದ್ಧಿವೈಭವದ ಕಲ್ಪನೆ ಮಾಡಿಕೊಳ್ಳಬಹುದು ಬರೆಯುವಾಗ ಅವರು ಒಂದೂ ಸಂದರ್ಭ-ಗ್ರಂಥವನ್ನು ತಿರುವಿಕೊಳ್ಳಲಿಲ್ಲೆಂದೂ ಬರೇ ಸ್ಮರಣಶಕ್ತಿಯಿಂದಲೇ ಎಲ್ಲ ವಿವರಗಳನ್ನು ಬರೆದರೆಂದೂ ಬಲ್ಲವರು ಹೇಳುತ್ತಾರೆ

೧೯೩೯ರ ತ್ರಿಪುರಿ ಕೊಂಗ್ರೆಸ್ಸಿನ ಅಧ್ಯಕ್ಷ ಸ್ಥಾನಕ್ಕೆ ಡಾ| ಪಟ್ಟಾಭಿಯವರನ್ನಾರಿಸಬೇಕೆಂದು ಮಹಾತ್ಮರ ಅಭಿಲಾಷೆಯಿತ್ತು ಆದರೆ ಶ್ರೀಮಾನ್ ಸುಭಾಷಚಂದ್ರ ಬೋಸರು ಚುನಾವಣೆಗೆ ನಿಂತು ಡಾಕ್ಟರರ ಪ್ರತಿಸ್ಪರ್ಧಿಗಳಾಗಿ ಹೋರಾಡಿದ್ದರಿಂದ ಮಹಾತ್ಮರ ಮನೋರಥ ಸಿದ್ಧವಾಗಲಿಲ್ಲ ಸುಭಾಷರೇ ಆ ಚುನಾವಣೆಯನ್ನು ಗೆದ್ದರು ಆದರೆ ಈ ವರ್ಷದ ಚುನಾವಣೆಯಲ್ಲಿ ಡಾ|| ಪಟ್ಟಾಭಿಯವರು ಗೆದ್ದಿದ್ದಾರೆ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನದ ಬಗ್ಗೆ ಈ ತನಕ ಎರಡೇ ಹೋರಾಟದ ಚುನಾವಣೆಗಳಾಗಿವೆ ಈ ಎರಡೂ ಹೋರಾಟಗಳಲ್ಲಿ ಡಾ|| ಪಟ್ಟಾಭಿ ಸೀತಾರಾಮಯ್ಯನವರೇ ಗುರಿಯಾಳುಗಳಾಗಿ ಹೋರಾಡಬೇಕಾಯಿತು ೧೮೯೧ರಲ್ಲಿ ಆಂಧ್ರ ದೇಶದ ದಿವಂಗತ ಆನಂದ ಚಾರ್ಲುರವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ಆ ಪದವನ್ನು ಪಡೆದ ೨ನೇ ಆಂಧ್ರರು ಡಾ|| ಭೋಗರಾಜು ಪಟ್ಟಾಭಿ ಸೀತಾರಾಮಯ್ಯನವರೇ.

ಡಾ|| ಪಟ್ಟಾಭಿ ಸೀತಾರಾಮಯ್ಯನವರಿಗೆ ಅಧಿಕಾರ ಲಾಲಸೆಯಿಲ್ಲ ಜನಸೇವೆ ಮಾಡಬಯಸುವವರು ವಿರೋಧಿ ಪಕ್ಷದಲ್ಲುಳಿದು ಅಧಿಕಾರಿಗಳೊಡನೆ ಹೋರಾಡಬೇಕೆಂದು ಅವರ ಅಂಬೋಣವುಂಟು ದಿವಂಗತ ದೇಶಬಂಧು ಚಿತ್ತರಂಜನ ದಾಸರವರು ಒಮ್ಮೆ ಡಾ|| ಪಟ್ಟಾಭಿಯವರ ಈ ಅಧಿಕಾರ-ಸ್ವೀಕಾರ ವಿರೋಧದ ಬಗ್ಗೆ ಪರಿಹಾಸ್ಯ ಮಾಡಿದ್ದರು "ಏನು? ಪಟ್ಟಾಭಿಯವರೇ, ನೀವು ಯಾವಾಗಲೂ ಅಧಿಕಾರವನ್ನು ನಿರಾಕರಿಸುತ್ತೀರಿ! ಪ್ರಧಾನರಾಗಲಿಕ್ಕೂ ನಿರಾಕರಿಸುವಿರಿ! ಮುಖ್ಯ ಪ್ರಧಾನರಾಗಲಿಕ್ಕೂ ನಿರಾಕರಿಸುವಿರಿ! ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ನಮಗೆ ಕೊಡಮಾಡಿದರೆ ಅದನ್ನೂ ನಿರಾಕರಿಸುವಿರಾ?" ಹೀಗೆ ದೇಶಬಂಧು ದಾಸರು ತಮಗೆ ಚೇಷ್ಟೆ ಮಾಡಿದ ಸಂಗತಿಯನ್ನು ಡಾ|| ಪಟ್ಟಾಭಿಯವರು ಮದ್ರಾಸದ ಮುಖ್ಯ ಮಂತ್ರಿಗಳು ಕೊಟ್ಟ ಸತ್ಕಾರ ಕೂಟದಲ್ಲಿ ವಿನೋದದಿಂದ ಉಲ್ಲೇಖಿಸಿ, ಸಂಸ್ಥಾನಿ ಪ್ರಜಾ ಪರಿಷತ್ತಿನ ಕಾರ್ಯವೀಗ ಮುಗಿದದ್ದರಿಂದಲೇ ತಾವು ಈ ಬಾರಿ ಕೊಂಗ್ರೆಸ್ಸಿನ ಅಧ್ಯಕ್ಷರಾಗಲು ಒಪ್ಪಿಕೊಂಡೆವೆಂದು ಹೇಳಿರುತ್ತಾರೆ ಇವರು ದೇಶ-ಕಾಲ ಪರಿಸ್ಥಿತಿಗೆ ಅನುಗುಣವಾಗಿ ದೇಶಕ್ಕೆ ಮಾರ್ಗದರ್ಶನ ಮಾಡುವರೆಂದು ಆಶಿಸಲಾಗಿದೆ

—ಜವಳಿಯ ದರ ಇಳಿಯಬಹುದು ಜಪಾನ ದೇಶದಿಂದ ೩೦ ಕೋಟಿ ಗಜ ಅರಿವೆ ಇನ್ನು ೧-೨ ತಿಂಗಳುಗಳಲ್ಲಿ ಆಮದಾಗುತ್ತದೆ ಬ್ರಹ್ಮದೇಶ ಮತ್ತು ಮಲಯಾ ದೇಶಗಳಲ್ಲಿ ಅಶಾಂತತೆ ಇದ್ದುದರಿಂದ ಆ ಕಡೆಗೆ ಹೋಗುತ್ತಿದ್ದ ಬ್ರಿಟಿಶ ಜವಳಿ ಸಹ ಹಿಂದುಸ್ಥಾನಕ್ಕೆ ಆಮದಾಗುವ ಸಂಭವವಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆಯೊಳಗಿನ ಉಷ್ಣತೆ ಇನ್ನೂ ಕಡಿಮೆಯಾಗಿಲ್ಲ ಆದರಿಂದ ಇನ್ನೂ ಮಳೆಯಾಗುವ ಭೀತಿಯುಂಟು ಕಳೆದ ಗುರುವಾರ ರಾತ್ರಿ ಸುಮಾರು ಒಂದು ತಾಸಿನ ಕಾಲ ಚಿಕ್ಕ ಮಳೆ ಸುರಿಯಿತು ಆ ನಂತರವಾದರೂ ಒಮ್ಮೊಮ್ಮೆ ಹನಿಗಳು ಉದುರುತ್ತಿವೆ

ಪೇಟೆಯಲ್ಲೀಗ ಅಕ್ಕಿ, ಅವಲಕ್ಕಿ, ಮುಂತಾದ್ದುಗಳ ಕೊರತೆಯಾಗುತ್ತಿದೆ ಕಾಳಸಂತೆಯಲ್ಲಿಯ ಮಾಲುಗಳು ಸಿಗುವದು ದುಸ್ತರವಾಗಿರುವದರಿಂದಲೂ ಒಂದೊಮ್ಮೆ ಧೈರ್ಯ ಮಾಡಿ ಕಂಡ ಧಣಿಗಳು ಅಕ್ಕಿಯು ತಾ ೧೫ ೧೧ ಳಿಂದೊಳಗಾಗಿ ಖಾಲಿಯಾಗದೆ ಉಳಿಸಲ್ಲಿವದನ್ನು ಹೊರಗೆ ಸಾಗಿಸಲು ಕೊಡುವ ಪ್ರಸಂಗ ಬರುವ ಭೀತಿಯಿರುವದರಿಂದಲೂ ಸ್ಥಾನಿಕ ವ್ಯಾಪಾರಿಗಳು ಘಟ್ಟದ ಮೇಲಿಂದ ಅಕ್ಕಿ ತರಿಸಲು ಒಪ್ಪುವುದಿಲ್ಲ ಸದ್ಯಕ್ಕೆ ವ್ಯಾಪಾರಿಗಳ ಕಡೆ ಇರುವ ಕೆಲವು ಅಕ್ಕಿ ಇಲ್ಲ ಆದುದರಿಂದ ಅಕ್ಕಿಯ ದರಗಳು ಎಷ್ಟೂ ಸ್ಥಿರವಿಲ್ಲ! ಈ ಪರಿಸ್ಥಿತಿ ಎಂದು ಸುಧಾರಿಸುವದು ಎಂದು ಎಲ್ಲರೂ ಆತುರತೆಯಿಂದ ಕೇಳುತ್ತಿದ್ದಾರೆ ಅವಲಕ್ಕಿಯ ಕೊರತೆ ಈಗ ಸಿಗುವದು ಕಠಿಣವಾಗಿದೆ! ಅವಲಕ್ಕಿ ತಯಾರಾಗುವಲ್ಲಿಂದ ಕುಮಟಾ ಪೇಟೆಗೆ ಬರುತ್ತಿದ್ದ ಅವಲಕ್ಕಿ ಮುಂತಾದ್ದುಗಳನ್ನು ಗ್ರಾಮಸ್ಥರೂ ಪೋಲೀಸರೂ ಹಾದಿಯಲ್ಲಿ ಹಿಡಿದು ಜಪ್ತ ಮಾಡುತ್ತಿದ್ದಾರೆ! ಅದರಿಂದ ಅವಲಕ್ಕಿ ತಯಾರಿಸಿ ಜೀವನ ಸಾಗಿಸುವ ಜನರು ಘೋರ ಸಂಕಟದಲ್ಲಿ ಬಿದ್ದಿದ್ದಾರೆ! ನಿಯಂತ್ರಣದ ನಿಯಮಗಳನ್ನು ಕಟ್ಟಳೆಗಳನ್ನು ಅಧಿಕಾರಿಗಳು ಸ್ಥಾನಿಕ ಪರಿಸ್ಥಿತಿಗೆ ಅನುರೂಪವಾಗಿ ಮತ್ತು ಜನಸಾಮಾನ್ಯರ ಅವಶ್ಯಕತೆಗಳನ್ನು ಲಕ್ಷದಲ್ಲಿಟ್ಟು ಜಾರಿಗೊಳಿಸದಿದ್ದರೆ ಈ ಲೋಕರ ಸಂಕಟವು ದಿನೇ ದಿನೇ ತೀವ್ರವಾಗಿ ನಾಡಿನಲ್ಲಿ ಹಾಹಾಕಾರವೇಳುವದೆಂಬ ಮಾತನ್ನು ಇಲ್ಲಾಧಿಕಾರೂ ಸರಕಾರವೂ ಮರೆಯಕೂಡದು

ಮುಂಬಯಿ ಸರಕಾರದ ಸ್ಥಾನಿಕ ಸ್ವರಾಜ್ಯ ಖಾತೆಯ ಮಂತ್ರಿಗಳಾದ ಮಾನ್ಯ ಗೋವಿಂದರಾವ ವರ್ತಕರವರು ಮುಂದಿನ ವಾರ ಈ ಜಿಲ್ಲೆಯಲ್ಲಿ ಸಂಚರಿಸುತ್ತ ತಾ ೧೯ಕ್ಕೆ ಇಲ್ಲಿಗೆ ಬರುವರೆಂದು ತಿಳಿಯುತ್ತದೆ ಆಗ ಅವರಿಗೆ ಕುಮಟಾ ನಗರ ಸಭೆಯವರು ಒಂದು ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದು ನಿರ್ಣಯಿಸಿರುತ್ತಾರೆ

ಕೆನರಾ ಕೊಲೇಜಿನ ಆವಾರದಲ್ಲಿ, ಕೊಲೇಜು ನಡೆಸುವ ಸಂಸ್ಥೆಯ—ಪ್ರಾಕೃತಿ ಮುಂತಾದವುಗಳ ಸಮಾರಂಭಕ್ಕಾಗಿ ಮುಂಬಯಿ ವಿಶ್ವವಿದ್ಯಾಲಯದ ಶಿಕ್ಷಕರು ಇದೇ ಬರುವ ತಾ ೨೯ಕ್ಕೆ ಇಲ್ಲಿಗೆ ಬರುವವರಿದ್ದಾರೆಂದು ಸುದ್ದಿಯುಂಟು

ಮುಂಬಯಿಯಲ್ಲಿ ಬಹಳ ವರ್ಷಗಳಿಂದ ಅಡಿಕೆ ವ್ಯಾಪಾರದ ದಲಾಲಿಯನ್ನು ಮಾಡುತ್ತಿದ್ದ ಇಲ್ಲಿಯ ನಾಗರಿಕರಾದ ರಾ|| ತಮ್ಮಣ್ಣ ವಾಮನ ಬಾಳಗಿಯವರು ಕಳೆದ ಗುರುವಾರ ಶ್ರೀ ಕ್ಷೇತ್ರ ನಾಸಿಕದಲ್ಲಿ ವೃದ್ಧಾಪ್ಯದ ಅಶಕ್ತಿಯಿಂದ ವೈಕುಂಠವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಪರಮಾತ್ಮನು ಅವರಿಗೆ ಸದ್ಗತಿಯನ್ನೀಯಲಿ!

ಹೊನ್ನಾವರ— (ತಾ ೫-೧೧-೪೮) ಇಲ್ಲಿಯ ರಾಮತೀರ್ಥದ ದುರುಸ್ತಿ ಕಾಮಗಾರಿಯನ್ನು ಇಲ್ಲಿಯ ನಗರ ಸಭೆಯವರು ಮಾಡುತ್ತಿದ್ದಾರೆ ಆದರೂ ಕೆಲವರು ರಾಮತೀರ್ಥ ದುರುಸ್ತಿಗೆ ನಿಧಿ ಸಂಗ್ರಹಿಸುವ ಸೋಗು ಹಾಕಿಕೊಂಡು, ಮುದ್ರಿತ ಪಾವತಿ ಪುಸ್ತಕಗಳನ್ನು ತಕ್ಕೊಂಡು ಹಳ್ಳಿಗರು ಜ್ಞಾನವಿಲ್ಲದ ವರ್ತಕರ ಜನರಿಂದ ವಂತಿಗೆಗಳನ್ನು ವಸೂಲ ಮಾಡುವ ಉದ್ಯೋಗ ನಡೆಸಿದ್ದಾರೆ. ತಿಳಿದ ಬಂದಿದೆ ಜನರು ಈ ಜನರ ಮಾತಿಗೆ ಮರುಳಾಗದ ಮೋಸಹೋಗಬಾರದೆಂದು ನಗರ ಸಭೆಯವರು ನಾಗರಿಕರಿಗೆ ಎಚ್ಚರಿಕೆ ಕೊಡುತ್ತಾರೆ

ಭಟ್ಕಳ ಅಕ್ಕಿಯ ಕಳ್ಳ ವ್ಯಾಪಾರಕ್ಕೆ ಪ್ರಾರಂಭವಾಗಿದೆ ಊರಲ್ಲಿ ಅಕ್ಕಿಯಿಲ್ಲೆಂದೂ, ಘಟ್ಟದ ಮೇಲಿಂದ ಅಕ್ಕಿ ತಂದು, ವಿಶೇಷ ಮುನಾಫೆಯನ್ನು ಪಡೆಯದೆ ಅಗ್ಗ ದರದಿಂದ ಅಕ್ಕಿ ಮಾರಿ ಜನರನ್ನು ಹೇಗಾದರೂ ಕಾಯಬೇಕೆಂದೂ ಹೇಳಿ ಅಕ್ಕಿಯ ಆಮದು-ರಫ್ತಿನ ಪರವಾನಿಗೆಗಳನ್ನು ಪಡೆಕೊಂಡು ಕಳ್ಳ ಪೇಟೆ ನಿರ್ಮಿಸಲು ಪ್ರಯತ್ನಿಸುವವರ ಉದ್ಯೋಗವೀಗ ಆರಂಭವಾಗಿದೆ ಪೇಟೆಯಲ್ಲಿ ನಾಲ್ಕು ಜನರ ಮುಂದೆ ಅಗ್ಗ ದರದಿಂದ ಕೆಲವು ಜನರಿಗೆ ಕೆಲವೊಂದು ಪಾಯಲಿ ಅಕ್ಕಿ ಮಾರಿ, ರಾತ್ರಿಗತ್ತಲೆ ಇಲ್ಲವೆ ಬೇರೆಗತ್ತಲೆ ಅಕ್ಕಿಯನ್ನು ಮುಡಿ ೧ಕ್ಕೆ ರೂ ೩೨-೩೩ ದರದಿಂದ, ಕಳ್ಳಲಿಯಲ್ಲಿದ್ದ ಬೆನೆಯವರಿಗೆ ಕೊಡುವ ಮಹಾನುಭಾವರೂ ತಮ್ಮ ಆಟವನ್ನು ಹೂಡಿದ್ದಾರೆ ಈ ಜಂಜಾಟದಲ್ಲಿ ಜನ-ಸಾಮಾನ್ಯರ ಗತಿಯೇನಾಗುವದೆಂದು ಊಹಿಸುವದು ಕಠಿಣ! ಸದ್ಯಕ್ಕೆ ಬನವಾಸಿಯ ಅಕ್ಕಿ ೧೯ಮುಡಿ ೨೦೦ ಚೀಲ ಅಕ್ಕಿಯನ್ನು ತಂದು ಇಲ್ಲಿ ಮಾರಾಟಕ್ಕಿಟ್ಟಿದ್ದಾರೆ ರೂ ೨೯ ೧ ಪಾಯಲಿಯಂತೆ ಮಾರಬೇಕೆಂದು ಮಾಮಲೇದಾರರೇನೋ ಅವರಿಗೆ ದರ ನಿಶ್ಚಯಿಸಿಕೊಟ್ಟಿದ್ದಾರಂತೆ ಆ ದರ ತಮಗೆ ಪೂರೈಸುವದಿಲ್ಲೆಂದು ಗಿರಣಿಯವರ ಅಂಬೋಣ ಹೆಚ್ಚೆಚ್ಚು ವರ್ತಕರಿಗೆ ಘಟ್ಟದ ಮೇಲಿಂದ ಅಕ್ಕಿ ತರಿಸುವ ಅಪ್ಪಣೆ-ಚೀಟಿಗಳನ್ನು ಕೊಟ್ಟರೆ, ಅವರಲ್ಲಿ ಪೈಪೋಟಿ ನಡೆದು, ಅಕ್ಕಿಯ ಧಾರಣೆ ಅಳತೆಯಲ್ಲುಳಿಯುವವೆಂದು ವ್ಯಾಪಾರಿ-ವರ್ಗದವರನ್ನುತ್ತಾರೆ

ಪತ್ರಿಕಾ ಪ್ರಕಟನೆ.

ಯಾವತ್ತೂ ಬಟ್ಟೆಯ ಮತ್ತು ನೂಲಿನ ವ್ಯಾಪಾರಿಗಳಿಗೆ ಹಿಂದುಸ್ಥಾನ ಸರಕಾರವು ಹೊರಡಿಸಿರುವ ಮತ್ತು ತಾ ೩೦-೧೦-೧೯೪೮ನೇಗೆ ಪ್ರಕಟವಾಗಿರುವ ಪತ್ರಿಕಾ-ಪ್ರಕಟನೆಯತ್ತ ಲಕ್ಷ ಕೊಡಬೇಕಾಗಿ ಸೂಚನೆಯಿದೆ ತಾ ೧-೮-೧೯೪೮ರ ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ತಯಾರಾದ ಹಾಗೂ ಗಂಟು ಕಟ್ಟಿದ (packed) ಗಿರಣಿ ಬಟ್ಟೆಯನ್ನೂ ನೂಲನ್ನೂ ವ್ಯಾಪಾರಸ್ಥರು ತಾ ೩೦-೧೧-೧೯೪೮ರ ತನಕ ತಮ್ಮ ಕಡೆಗೆ ಇಟ್ಟುಕೊಂಡು ಮಾರಾಟ ಮಾಡಲು ಅಡಿಯಾಗದಂತೆ ೧೯೪೮ರ ಅರಿವೆ ಬಟ್ಟೆ ಮತ್ತು ನೂಲಿನ (ನಿಯಂತ್ರಣದ) ಆಜ್ಞೆಯಂತೆ ಹಿಂದುಸ್ಥಾನ ಸರಕಾರವು ತಿದ್ದುಪಡಿ ಮಾಡಿರುತ್ತದೆಂದು ಸದರಿ ಪತ್ರಿಕಾ-ಪ್ರಕಟನೆಯಲ್ಲಿ ಜಾಹೀರ ಮಾಡಲಾಗಿದೆ ಇನ್ನು ಪುನಃ ಸರಕಾರವು ಅವಧಿಯನ್ನು ಬೆಳಿಸಿಕೊಡಲಿಕ್ಕಿಲ್ಲೆಂದೂ ಹಳೆಯ ಸಂಗ್ರಹವನ್ನು ತಾ ೩೦-೧೧-೧೯೪೮ರೊಳಗಾಗಿ ವಿಕಾಲಿ ಮಾಡಬೇಕೆಂದೂ ಸಂಬಂಧಪಟ್ಟ ಸಕಲರಿಗೂ ಈ ಮೂಲಕ ಎಚ್ಚರಿಕೆ ಕೊಡುವದರಲ್ಲಿ ಬರುತ್ತದೆ. ಈ ತಾರೀಖಿನ ನಂತರ ವ್ಯಾಪಾರಸ್ಥರ ಕಡೆ ಅಂಥ ಸಂಗ್ರಹ ಶಿಲ್ಕು ಉಳಿದರೆ, ಬೃಹನ್-ಮುಂಬಯಿಯಲ್ಲಿರುವ ವ್ಯಾಪಾರಸ್ಥರು ಮುಂಬಯಿಯಲ್ಲಿರುವ ಪ್ರಾಂತಿಕ ಟೆಕ್ಸ್‌ಟೈಲ ಕಂಟ್ರೋಲರರಿಗೂ, ಪ್ರಾಂತದ ಇನ್ನಿತರ ಭಾಗಗಳಲ್ಲಿರುವ ವ್ಯಾಪಾರಸ್ಥರು ತಮ್ಮ ತಮ್ಮ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರಿಗೂ ತಾ ೧-೧೨-೧೯೪೮ರ ಪೂರ್ವದಲ್ಲಿ ತಮ್ಮ ಶಿಲ್ಕು ಸಂಗ್ರಹವನ್ನು ಪ್ರತಿಜ್ಞಾ ಪೂರ್ವಕವಾಗಿ ತಿಳಿಸಬೇಕು

(ಜಿಲ್ಲಾಧಿಕಾರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ನಮ್ಮಲ್ಲಿ ದೊರೆಯುವವು.

ಪೈಸಾ ಫಂಡ ಗ್ಲಾಸ ವರ್ಕ್ಸ.

ಇವರ ಲಾಟೀನ್, ಚಿಮಣಿ, ಹೂದಾನಿ, ಉಳಿದ ನಮೂನೆಗಳೂ ಗ್ಲಾಸ ಮತ್ತು ಚೀನಿ ಭರಣಿಗಳೂ

೨ ಶ್ರೀ ಲಕ್ಷ್ಮೀ ಸ್ಲೇಟ ವರ್ಕ್ಸ ಇವರ ಅತ್ಯುತ್ತಮವಾದ "ಓಂ" ಮಾರ್ಕಿನ ಸ್ಕೂಲ ಸ್ಲೇಟುಗಳೂ

ಕಾರವಾರ ಜಿಲ್ಲೆಯ ಏಜಂಟರು } S G Mahale & Sons Ankola N Kanara

[illegible]

ಸಮಾಜಾಧಿಪತಿಗಳಿಗೆ ಕಳಿಸಿದ ತಂತಿಯ ಆಶಯ

[illegible]

[illegible]

ಶಿರಾಲಿ— (ತಾ. ೯-೧೧-೪೮) [illegible]

WANTED

An experienced Secretary having thorough knowledge of Book-keeping, Accountancy and Correspondence Salary Rs 50 - plus dearness allowance of Rs 10 - Applications should reach before the 15th inst Selected candidate will have to furnish a security bond for Rs 1000

Blacksmiths & Carpenters' Society, Ltd., Honavar.
6-11-48

ಕರ್ನಾಟಕ ಏಜೆಂಟ—
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಜಿಲ್ಲಾ ಸಮಾಚಾರ.

ಕಾರವಾರ— (ತಾ. ೨೩-೧೦-೪೮) ಮೊದಲೇ ಪ್ರಕಟವಾದಂತೆ ಸ್ವತಂತ್ರ ಭಾರತದ ಪ್ರಮುಖ ಯುದ್ಧ ಹಡಗವಾದ "ದಿಲ್ಲಿ"ಯು ನಿನ್ನೆ ಮಧ್ಯಾಹ್ನ ೨ಕ್ಕೆ ಇಲ್ಲಿ ಬಂದು ತಲ್ಪಿತು. ಅದರೊಂದಿಗೆ "ಕಾವೇರಿ" ಹಡಗವೂ ಬಂದಿತ್ತು. ಎರಡೂ ಹಡಗಗಳು ದಂಡೆಯಿಂದ ಸುಮಾರು ೨॥ ಮೈಲು ದೂರಗೆ ನಿಂತುಕೊಂಡವು.

"ದಿಲ್ಲಿ"ಯನ್ನು ನೋಡುವ ಉತ್ಸುಕತೆಯಿಂದ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದಲೂ, ಬೆಳಗಾಂವ, ಧಾರವಾಡ, ಹುಬ್ಬಳ್ಳಿ ಮುಂತಾದ ಪಟ್ಟಣಗಳಿಂದಲೂ ಸಾವಿರಾರು ಜನರು ಇಲ್ಲಿ ಬಂದಿದ್ದರು.

"ದಿಲ್ಲಿ"ಯನ್ನು ನೋಡಬಯಸುವವರು ಪರವಾನೆ-ಚೀಟಿ (ಪಾಸ) ಗಳನ್ನು ಪಡೆಯಬೇಕೆಂದು ಮೊದಲು ನಿರ್ಣಯ ವಾಗಿತ್ತು. ಅದರಂತೆ ೧೦೦೦ದಷ್ಟು ಪರವಾನೆ-ಚೀಟಿಗಳು ಕೊಡಲ್ಪಟ್ಟಿದ್ದವು. ಆದರೆ ಪರವಾನೆ-ಚೀಟಿಗಳನ್ನು ಪಡೆದುಕೊಂಡವರಿಗೆ 'ದಿಲ್ಲಿ'ಗೆ ಮುಟ್ಟಿಸುವ ಇಲ್ಲವೆ ಅವರನ್ನು ದಿಲ್ಲಿಯಿಂದ ತಿರುಗಿ ದಂಡೆಗೆ ಮುಟ್ಟಿಸುವ ವ್ಯವಸ್ಥೆಯನ್ನು ಸ್ಥಾನಿಕ ಅಧಿಕಾರಿಗಳು ಮಾಡಿದ್ದಿಲ್ಲ! "ದಿಲ್ಲಿ"ಯ ಜನತೆಗೆ ಬರುವ ಕಿರು-ಹಡಗ (ಲಾಂಚು) ಗಳೇ ಈ ಕೆಲಸ ಮಾಡುವವೆಂದು ಅವರು ಎಣಿಸಿದ್ದರೋ ಏನೋ! ಆದರೆ ಬಂದ ಹಡಗಗಳ ಜನರು ತಮ್ಮ "ಕಿರಿ ಹಡಗ"ಗಳನ್ನು ದೊರೆಗಿನ ಜನ ಉಪಯೋಗಕ್ಕೆ ಕೊಡಲು ಸಮ್ಮತಿಸಲಿಲ್ಲ. ಅದರಿಂದ "ದಿಲ್ಲಿ"ಯನ್ನು ನೋಡಬಯಸುವವರನ್ನು "ದಿಲ್ಲಿ"ಗೆ ತಲ್ಪಿಸುವ ಭಾರವನ್ನು ಸರಾಹಿಗಳ ತಾರಿಯೊಳಗಿನ ಖಾಸಗಿ ದೋಣಿಗೇ ಮಾಡಬೇಕಾಯಿತು. ಈ ದೋಣಿಯವರು ತಲಾ ಆರಾಣೆಗಳಂತೆ ತಾಸಲು ಪಸೂಲ ಮಾಡಿದರು. ಈ ದೋಣಿ ಸದಾಶಿವಗಡದಿಂದ ಬಂದು ಮುಟ್ಟುವಷ್ಟರಲ್ಲಿ ಗಡಿಯಾರದಲ್ಲಿ ೩ ಬಡೆದಿತ್ತು. ಆಗ ದಂಡೆಯ ಮೇಲೆ "ದಿಲ್ಲಿ" ನೋಡಬಯಸುವ ಜನರ ಸಂಖ್ಯೆ ಸುಮಾರು ೪೦೦೦ಕ್ಕೆ ಮುಟ್ಟಿತ್ತು. ಪರವಾನೆ-ಚೀಟಿಯುಳ್ಳವರಷ್ಟೇ ದಿಲ್ಲಿಯನ್ನು ನೋಡಬೇಕೆಂದು ಹೇಳಿದರೆ ಇವರು ಕೇಳಿಕೊಳ್ಳುವ ಸ್ಥಿತಿಯಲ್ಲಿದ್ದಿಲ್ಲ. ಪರವಾನೆ-ಚೀಟಿಯುಳ್ಳವರಿಗಿಂತ ಇವರೇ ದೋಣಿಗಳನ್ನು ಮೊದಲು ಆಕ್ರಮಿಸಿಬಿಟ್ಟರು! ಅದರಿಂದ ಯಾರು ಬೇಕಾದವರು ಹೋಗಬಹುದು, ಪರವಾನೆ ಚೀಟಿಯ ನಿರ್ಬಂಧವಿಲ್ಲೆಂದು ಅಧಿಕಾರಿಗಳು ಸಾರಬೇಕಾದರು. ಅದರಿಂದ ಸ್ವಲ್ಪಜನರಿಗಷ್ಟೇ ದಿಲ್ಲಿಯ ದರ್ಶನವಾಯಿತು. ಉಳಿದವರು ದಂಡೆಯ ಮೇಲಿಂದಲೇ ದಿಲ್ಲಿಯನ್ನು ನೋಡಿ ಸಮಾಧಾನಪಡ ಬೇಕಾಯಿತು!

"ದಿಲ್ಲಿ"ಯು ಒಂದು ತುದಿಯಿಂದ ಇನ್ನೊಂದು ತುದಿಗೆ ೫೫೦ ಅಡಿಗಳಷ್ಟು ಉದ್ದವಿದೆ (ಅಂದರೆ ಅದರ ಅಂತು ಸುತ್ತಳತೆ ೧೧೦೦ ಅಡಿಗಳಷ್ಟಾಯಿತು) ಹಡಗದ ಮೇಲೆ ೫೦ ಅಧಿಕಾರಿಗಳೂ ೬೦೦ ನಾವಿಕರೂ ಇದ್ದರು (ಅಂತಹ ಪ್ರಸಂಗದಲ್ಲಿ ಅದು ೩೦೦೦ ಜನರನ್ನು ಒಯ್ಯಬಲ್ಲದಂತೆ) ಈ ಹಡಗದ ಬೆಲೆ ೨ ಕೋಟಿ ೬೫ ಲಕ್ಷ ರೂ. ಇರುತ್ತದಂತೆ. ಹಡಗದಲ್ಲಿ ಹಲವಾರು ಜಲ-ಬಾಣ (ಪಾಣದ ಗತಿಯಿಂದ ಜಲದೊಳಗಿಂದ ಸಾಗಿ ವೈರಿಯ ಹಡಗವನ್ನು ಭೇದಿಸಬಲ್ಲ "ಟಾರ್ಪೆಡೋ" ಯಂತ್ರ) ಗಳೂ, ಆಕಾಶಗಾಮಿ ಹಡಗಗಳ ವಿನಾಶಕಗಳೂ, ಇನ್ನಿತರ ಯುದ್ಧ-ಸಾಹಿತ್ಯಗಳೂ ಇದ್ದವು.

"ದಿಲ್ಲಿ"ಯ ಜನರು ಉಲ್ಲಾಸಿತರಾಗಿದ್ದರು. ಪ್ರೇಕ್ಷಕರನ್ನು ಅವರು ಆನಂದದಿಂದ ಸ್ವಾಗತಿಸಿ, ಅವರಿಗೆ ಎಲ್ಲ ಭಾಗಗಳನ್ನೂ ತೋರಿಸಿದರು, ಕೇಳಿದ ಎಲ್ಲ ಮಾಹಿತಿಯನ್ನೂ ಕೊಟ್ಟರು. ಹಡಗದ ಅಧಿಕಾರಿಗಳಲ್ಲಿ ೩ ೪ ಜನರು ಗೌಡ-ಸಾರಸ್ವತರಿದ್ದರು. ಅವರಾದರೂ ಸೌಜನ್ಯದಿಂದಲೂ ಸೌಹಾರ್ದದಿಂದಲೂ ಪ್ರೇಕ್ಷಕರನ್ನು ಸ್ವಾಗತಿಸುತ್ತಿದ್ದರು.

"ದಿಲ್ಲಿ"ಯ ಮೇಲೆ ಎಲ್ಲ ಬಗೆಯ ಆಧುನಿಕ ಸೌಕರ್ಯಗಳಿವೆ. ೨ ಮೋಟಾರ ಬಂಡಿಗಳಿವೆ, ಶಾಲೆಯಿದೆ, ಆಗಸದ ಕೆಲಸ ಮಾಡುವ ಕಾರ್ಯಾಲಯವಿದೆ, ರುಗ್ಣಾಲಯವಿದೆ, ವಾಚನಾಲಯವಿದೆ, ಗ್ರಂಥಾಲಯವಿದೆ, ಚಲಚ್ಚಿತ್ರಗಳನ್ನು ತೋರಿಸುವ ಚಿತ್ರಮಂದಿರವಿದೆ, ರೇಡಿಯೋ ಇದೆ, ತಂತಿ ಯಿಲ್ಲದ ತಂತಿಯ ಸಂದೇಶ ಕಳಿಸುವ ಯಂತ್ರವಿದೆ, ಟೆಲಿಫೋನ ಟೆಲಿಪ್ರಿಂಟರಗಳೂ ಇವೆ. ಹಡಗದ ಮೇಲೆ ಎಲ್ಲೆಲ್ಲೂ ವಿದ್ಯುದ್ದೀಪಗಳು ಮತ್ತು ವಿದ್ಯುತ್ತಿನ ಬೀಸಣಿಗೆಗಳು ಕಂಗೊಳಿಸುತ್ತಿದ್ದವು. ಹಡಗದ ಮೇಲೆ ಬೈಲಾಟ (out-door games) ಗಳನ್ನಾಡುವ ಕ್ರೀಡಾಂಗಣಗಳೂ ಉಂಟು.

"ದಿಲ್ಲಿ" ಹಡಗಕ್ಕೆ ೬ ಅಂತಸ್ತುಗಳುಂಟು. ಕೆಳಗಿನ ೫ ಅಂತಸ್ತುಗಳನ್ನು ಪ್ರೇಕ್ಷಕರು ನೋಡಿದರು. ೬ನೇ ಅಂತಸ್ತನ್ನು ಮಾತ್ರ ಅವರು ನೋಡಲು ಶಕ್ಯವಾಗಲಿಲ್ಲ. ಸಾಮಾಜಿಕರಿಗೆ ಅಲ್ಲಿ ಹೋಗಗೊಡಬಾರದೆಂಬ ನಿಯಮವುಂಟಂತೆ. ಇದೇ ಹಡಗಕ್ಕೆ ಶುಭ್ರ ಬಣ್ಣ ಬಳಿಸಿರುವದರಿಂದ ದೂರದಿಂದ ನೋಡುವವರಿಗೆ ಅದೊಂದು 'ಸ್ಫಟಿಕ ಬಂಗಲೆ'ಯಂತೆ ಕಾಣುತ್ತಿತ್ತು.

ದಿಲ್ಲಿಯ ನಾವಿಕರಿಗೂ ಇಲ್ಲಿಯ ಸ್ಥಾನಿಕ (ಪೋಲೀಸರು, ಗೃಹರಕ್ಷಕರು ಮತ್ತು ಸಾರ್ವಜನಿಕರು ಇವರೊಳಗಿಂದ ಆರಿಸಿದ) ಆಟಗಾರರಿಗೂ ನಿನ್ನೆ ಸಂಜೆ ಹಾಕಿ ಪಂದ್ಯ ಜರುಗಿತು. ನಾವಿಕರು ಚೆಂಡನ್ನು ಮುಂದೊತ್ತಿ ಗುರಿ-ದ್ವಾರದಿಂದ ಸಾಗಿಸಿ ಸ್ಥಾನಿಕ ಕ್ರೀಡಾ-ಪಟುಗಳನ್ನು ಸೋಲಿಸಿದರು.

ಸಂಧ್ಯಾಕಾಲ ಮುಗಿದ ಬಳಿಕ "ದಿಲ್ಲಿ"ಯ ಅಧಿಕಾರಿಗಳ ಸತ್ಕಾರಕ್ಕಾಗಿ ಕಿಲ್ಲೆಯ ಚಿತ್ರಮಂದಿರದಲ್ಲಿ ಸತ್ಕಾರ ಸಭೆಯಾಯಿತು. ನಗರಾಧ್ಯಕ್ಷ ರಾ॥ ಶಿವಶೇಖರ, ಮಾಹಿಮ ಮಂಡಳದ ಅಧ್ಯಕ್ಷ ಮೊದಲಾದವರು ಮಾತಾಡಿ "ದಿಲ್ಲಿ"ಯ ಜನರನ್ನು ಸ್ವಾಗತಿಸಿದರು. ಈ ಎಲ್ಲ ಭಾಷಣಗಳಲ್ಲಿ ವಕೀಲ ಕೃಷ್ಣರಾವ ಹಳದೀಪುರಕರ ಇವರ ಭಾಷಣವು ಬಹಳ ಮನೋರಂಜಕವಾಯಿತು. "ಪರಂಗಿಯರ ಕಾಲದಿಂದ ದಿಲ್ಲಿಯು ನಮಗೆ ಅಗಮ್ಯ ಇಲ್ಲವೆ ದುರ್ಗಮವಾಗಿತ್ತು. ಇಂದು ನಮ್ಮ ಸುದೈವದಿಂದ ಆ ದಿಲ್ಲಿಯು ತಾನಾಗಿ ನಾವಿದ್ದಲ್ಲಿ ಬಂದು ನಮಗೆ ದರ್ಶನವನ್ನು ಕೊಡುತ್ತಿದೆ" ಎಂದು ಅವರು ಅಲಂಕಾರಿಕ ಭಾಷೆಯಿಂದ ತಮ್ಮ ಭಾಷಣವನ್ನು ಪ್ರಾರಂಭಿಸಿ, ಕಾರವಾರದ ಸಕಲ ಸೌಂದರ್ಯವನ್ನೂ ನಿಸರ್ಗನಿರ್ಮಿತ ಸೌಕರ್ಯಗಳನ್ನೂ ಬಣ್ಣಿಸಿ ಇಂಥ ಕೊಂಡಿರುವ "ದಿಲ್ಲಿ"ಯ ಅಧಿಕಾರಿಗಳು, ಸರಕಾರದ ಪರವಾಗಿ ಬಂದರ ಅಭಿವೃದ್ಧಿಯ ದೃಷ್ಟಿ-ಕೋನವುಳ್ಳ ರಾಜಕೀಯ ನಾಯಕರು ಬಂದರವು ನಾವಿಕರ ದೃಷ್ಟಿಯಿಂದ ಉತ್ಕೃಷ್ಟವಿರುವದೆಂದು ಎಂದಾದರೂ ಪ್ರಶ್ನೆ ಕೇಳಿದಲ್ಲಿ, ಸರಕಾರಕ್ಕೆ ಯಾ ಸಮಿತಿಗೆ ಕಾರವಾರದ ಬಗ್ಗೆ ತಮ್ಮ ಸಕಾರಾತ್ಮಕ ಅಭಿಪ್ರಾಯವನ್ನು ಒದಗಿಸಬೇಕೆಂಬ ವಿನಂತಿಯೊಡನೆ ಅದನ್ನು ಮುಗಿಸಿದರು. ಸಭೆಯಾದ ಮೇಲೆ "ದಿಲ್ಲಿ"ಯ ಅಭ್ಯಾಗತರಿಗೆ ರಾ॥ ಹಳದೀಪುರರ ಬಂಧುಗಳು ಅಲ್ಪೋಪಹಾರವನ್ನಿತ್ತು ಸತ್ಕರಿಸಿದರು.

ಇಂದು ಮುಂಜಾನೆ ದಿಲ್ಲಿ-ಕಾವೇರಿಗಳು ಕೊಚಿನಕ್ಕೆ ತೆರೆಳಿ ಹೊರಟು ಹೋದವು.

(ತಾ ೫-೧೧-೪೮) ಜಿಲ್ಲಾ ನ್ಯಾಯಾಧೀಶ ರಾ॥ ಮಿರಜಕರರಿಗೆ ವರ್ಗವಾಗಿ ಅವರ ಸ್ಥಳದಲ್ಲಿ ರಾ॥ ಪಂಜೀಕರರು ನ್ಯಾಯಾಧೀಶರಾಗಿ ಬರುತ್ತಾರೆಂದು ಸುದ್ದಿ ಬಂದಿದೆ.

ಇಲ್ಲಿ ನೆನ್ನೆಯೇ ಜಿಲ್ಲಾಧಿಪರಾಗಿ ಬಂದಿದ್ದ ರಾ॥ ಪಾಲ ಧೋನ ಇವರಿಗೆ ಬೃಹನ್-ಮುಂಬಯಿ ಜಿಲ್ಲೆಗೆ ವರ್ಗ ಮಾಡಿ, ಸರಕಾರದವರು ರಾ॥ ಪಾಟೀಲರ ಇವರನ್ನು ಇಲ್ಲಿ ನೇಮಿಸಿದ್ದಾರೆ. ಈ ವರ್ಗಾವರ್ಗಿಗಳಲ್ಲಿ ಹಿಂದಿನಿಂದ ಪ್ರಸಂಗವಶಾತ್ತಾಗಿ, ಹಿಂದೆ ೧೯೪೫-೪೬ರಲ್ಲಿ ಕುಮಟೆಯ ಮಾಮಲೇದಾರರಾಗಿದ್ದ ರಾ॥ ಆಲ್ಮೇಲಕರ ಇವರನ್ನು ಜಿಲ್ಲಾಧಿಪರನ್ನಾಗಿ ಕಳಿಸಿಕೊಟ್ಟಿದ್ದಾರೆ.

ಸಂಕೇರಿಯ ರಾ॥ ಬಾಲಮುಕುಂದಾಚಾರ್ಯರ ಕೀರ್ತಿ ಭಾವಗೀತೆಗಳನ್ನು ಕೊಲಂಬಿಯಾ ಗ್ರಾಮೋಫೋನ ಕಂಪನಿಯವರು ರಿಕಾರ್ಡ ಮಾಡಿರುತ್ತಾರೆಂದೂ ಅವುಗಳ ಪ್ಲೇಟುಗಳು ಬೇಗನೇ ಮಾರಾಟಕ್ಕೆ ಬರುವವೆಂದೂ ರಾ॥ ವ್ಹಿ. ಬಿ. ಕೇಣಿಯವರು ತಿಳಿಸುತ್ತಾರೆ.

ಹಳಗ-ಜೂಗ ಗ್ರಾಮದಲ್ಲಿ ಓರ್ವರು ಟಿನ್ನಿನ ಡಬ್ಬ ಮಾಡಿ ತಮ್ಮ ಭೂಮಿಯನ್ನ ಬೆಳೆಯಲ್ಲಿ ಕಳ್ಳರಿಂದು ಈ ವರ್ಷ ಪಾಪೇನ್ನತ ಸಾಗುವಳಿ ಮಾಡಿಸಿದ್ದರು; ಮತ್ತು ಬೆಳೆ ತಯಾರಾದ ಮೇಲೆ ಅದನ್ನು ಕೊಯ್ದು ಖಳದಲ್ಲಿ ಹಾಕಿದ್ದರು. ಒಂದು ದಿನ ರಾತ್ರಿ ೨೦-೨೫ ಮಂದಿ ಪುಂಡರು ಕಾವಲಿಗಾಗಿ ಖಳದಲ್ಲಿ ಮಲಗಿದ್ದ ಜನರ ಮೈಮೇಲೆ ಬಿದ್ದು, ಅವರಿಗೆ ಬಹಳ ಥಳಿಸಿದರೆಂಬ ಸುದ್ದಿ ಬಂದಿದೆ. ೪-೬ ಜನರಿಗೆ ಚಳೊ ಪೆಟ್ಟಾಗಿದೆಯಂತೆ. ಈಮ್ಮುನ್ನೆ ಪಕ್ಷದ ಮುಂದಾಳುಗಳ ತಂತ್ರದಿಂದ ಈ ಅತ್ಯಾಚಾರ ವಾಯಿತೆಂದು ಊರವರ ಅಂಬೋಣವಿದೆ.

ಹಳಗೆಯಲ್ಲಿ ರಾ॥ ವಿಷ್ಣು ಶೈವಿಂದ ರೂ ೩೦, ರಾ॥ ಎಸ್. ವ್ಹಿ. ಬಾಯಿಕೇರಿಕರ, ವ್ಹಿ ವ್ಹಿ. ಬಾಯಿಕೇರಿಕರ, ಎಸ್. ಎಸ್ ಗಾಯತೊಂಡೆ, ಎಸ್ ಡಿ. ಗಾಯತೊಂಡೆ ಇವರಲ್ಲಿ ಪ್ರತಿಯೊಬ್ಬರಿಂದ ರೂ ೨೫, ರಾ॥ ಏ ಎಸ್ ಕೊಳವೇಕರರಿಂದ ರೂ. ೧೫, ರಾ॥ ಏ ಎಸ್. ದೇಸಾಯಿ, ಬಾ ಏ ನಾಯ್ಕ ಮತ್ತು ಶ್ರೀಮತಿ ಮಿತ್ರಾಬಾಯಿ ನಾಕ ಇವರಲ್ಲಿ ಪ್ರತಿಯೊಬ್ಬರಿಂದ ರೂ ೫ ಮತ್ತು ಇಲ್ಲಿಯವರೆಗೆ ರೂ. ೧೫೫ ಹೀಗೆ ಒಟ್ಟು ರೂ. ೧೮೫ ಗಾಂಧಿ ಸ್ಮಾರಕ ನಿಧಿಗೆ ಕೊಡಿಸಿಯೆಂದು ರಾ॥ ಶಾಮರಾವ ವಿಠಾಕರ ಗಣಿಯು ಕೋಣೆಯವರು ತಿಳಿಸುತ್ತಾರೆ.

ಹಳಿಯಾಳ— (ತಾ ೨-೧೧-೪೮) ದಾಂಡೇಲಿ ಯಲ್ಲಿ ಸರಕಾರದವರು ಇದಕ್ಕ ಕಾಮಗಾರಿಯನ್ನೊಂದು ಗಿರಣಿಯನ್ನು ಸ್ಥಾಪಿಸಿದ್ದಾರೆ. ಈ ಗಿರಣಿಯ ಕಾರಭಾರದಲ್ಲಿ ಏನೇನೂ ವ್ಯವಸ್ಥೆಯಿಲ್ಲ! ಸರಕಾರದ್ದೇ ಕಟ್ಟಿಗೆ, ಸರಕಾರಕ್ಕೇ ಕೊಡುವ ಕಟ್ಟಿಗೆ ಪೂರೈಸುವದು, ಸರಕಾರದ ಜಂಗಲ ಖಾತೆಯವರೇ ಕೆಲಸ ನಡೆಸುವವರು ಹೀಗೆ ಸ್ಥಿತಿಯಿರುವದರಿಂದ ಈ ಅವ್ಯವಸ್ಥೆ ಮುಚ್ಚಿಕೊಳ್ಳುತ್ತಿದೆ. ಗಿರಣಿಯ ಲೆಕ್ಕವನ್ನು ಪ್ರತ್ಯೇಕವಾಗಿಟ್ಟು, ಅದರ ಲಾಭಹಾನಿಯ ಪತ್ರಿಕೆ ಹಚ್ಚಿನೋಡಿದರೆ ಈ ಅವ್ಯವಸ್ಥೆಯು ಕಣ್ಣಿಗೆ ಕಟ್ಟಿದಂತೆ ಬೀಳುತ್ತಿತ್ತು. ಖಾಸಗಿ ಸಾಹುಕಾರ ಕಂಪನಿಯೊಂದು ಈ ಗಿರಣಿಯನ್ನು ಇದೇ ರೀತಿ ನಡೆಸುತ್ತಿದ್ದರೆ ಅದು ಎಂದೋ ದಿವಾಳಿ ತೆಗೆಯುತ್ತಿತ್ತು! ಈ ಗಿರಣಿಯ ಆಡಳಿತ ಆಸ್ತವ್ಯಸ್ತತೆಯಿಂದಲೂ ಬಾಕಿಯುಳಿಯುವದರಿಂದಲೂ ನಡೆದಿದೆ! ಗಿರಣಿಗೆ ಕಟ್ಟಿಗೆ ನಾಟುಗಳಂತೆ ಸರಕಾರಕ್ಕೆ ಬೇಕಾದ ಮಾಲು ನಷ್ಟೇ ತಯಾರಾಗಿ, ಇತರ ಕಟ್ಟಿಗೆಯನ್ನು — ಅದರಿಂದ ಸರ ಪೇಟೆಯಲ್ಲಿ ಮಾರಾಟವಾಗುವಂತಹ ಮಾಲು ತಯಾರಾಗುವಂತಿದ್ದರೂ ಕೂಡ — ಸುಳ್ಳೇ ಒಲೆಗೆ ಒಗೆಯುತ್ತಾರೆ!

ಮೊದಲಿಗೆ ಈ ಗಿರಣಿಯ ಕಾರಭಾರದ ಮೇಲ್ವಿಚಾರ ಮಾಡಲಿಕ್ಕೆ ಡಿ ಎಫ್ ಓ ತರಗತಿಯ ಭಾರಿ ಸಂಬಳದ ಒಬ್ಬ ಅಧಿಕಾರಿಯನ್ನು ನೇಮಿಸಿದ್ದಾರೆ! ಅವರೂ ಮತ್ತೆ ನ್ಯಾಯದ ಜಾಗದಲ್ಲಿ ಬರಿ ಕೂಲಿಕಾರರನ್ನು ಕೆಲಸದಿಂದ ತೆಗೆದು ಹಾಕುತ್ತಿದ್ದಾರೆ! ಇನ್ನೊಕ್ಕೇ ೨೬ ಕೂಲಿಯಾಳುಗಳನ್ನು ಮನೆಗೆ ಕಳಿಸಿದ್ದಾರೆ! ಕೆಲಸವಿಲ್ಲೆಂದು ಕೂಲಿಯಾಳುಗಳಿಗೆ ಕಡಿಮೆ ಮಾಡಿದ್ದಾರೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ದಾಂಡೇಲಿ ಗಿರಣಿಯಲ್ಲಿ ಕೆಲಸ ಸಾಗುವದಿಲ್ಲೆಂದು ತಿರುಪತಿ ಮತ್ತು ಅನಂತಪುರದಲ್ಲಿರುವ ಖಾಸಗಿ ಗಿರಣಿಗಳಿಗೆ ಕೆಲಸ ಕೊಡುತ್ತಿದ್ದಾರೆ! ಬೇರೆಕಡೆಯಲ್ಲಿದ್ದ ಅಂತಹ ದೊಂದುಗಾರಿಕೆಯೂ ಅವ್ಯವಸ್ಥಿತ ಕಾರ್ಭಾರವೂ ನಡೆಯು

[illegible]

ಯಲ್ಲಾಪುರ— [illegible]

NOTICE

In order to ensure good and cordial relationship between the Police and the Public, the District Superintendent of Police, Kanara has fixed Tuesday as a day in every week to hear complaints and grievances from the Public if any. All members of the Public are therefore requested to see the *District Superintendent of Police* or in his absence the Home Inspector of Police on Tuesday in his office at 11 A M. If any Tuesday happens to be a public holiday the District Superintendent of Police or the Home Inspector of Police, as the case may be, will hear complaints and grievances on the day following.

Members of the Public desiring to approach the local Police Sub-Inspectors with any complaints and grievances against the Police should do so on every Tuesday at 11 A M in the office of the Sub-Inspectors concerned. In the absence of the Sub-Inspector the Station House Officer may be approached.

Karwar, 11-1948 **W. G J McKenzie,** District Superintendent of Police, Kanara

[illegible]

ಕುಮಟಾ ಶ್ರೀ ವೆಂಕಟರಮಣ ದೇವಸ್ಥಾನದ

ಹತ್ತು ಸಮಸ್ತರಲ್ಲಿ ವಿನಂತಿ.

[illegible]

ಕುಮಟಾ. **Annapa R Pai,**

[illegible]

[illegible]

ಜಾಹೀರ ನೋಟೀಸು.

[illegible] (villages with contiguous Village Sites) [illegible]

ಕಾರವಾರ, **G S Bhat,**
Kekkar,

[illegible]

ಕೆನರಾ ಕೊಲೇಜ ನಿಧಿ.

[illegible]

ಕೊಲೇಜಿನ ಕೆಲಸ ಎಲ್ಲಿ ಮುಟ್ಟಿದೆ?

[illegible]

ಮಾರುವದಿದೆ!

[illegible]

4-11-48

P DSouza
Rose Dale, Kajubag
KARWAR

TENDER NOTICE

No 75 The Collector of Kanara hereby invites sealed tenders so as to reach this office on or before 15-11 1948 for conversion of Government paddy into rice raw as well as boiled - by milling

Tenderers should quote the conversion charges per **bag** of 168 lbs of paddy excluding the weight of empty gunnies and also the minimum outturn of rice in bags of 168 lbs for the paddy milled

The following conditions should be observed while quoting the outturn

1 The outturn quoted should be in terms of **bags** of 168 lbs of rice each exclusive of weight of gunny for every 100 bags of paddy each weighing 168 lbs exclusive of weight of empty gunnies.

2 The outturn quoted should be the minimum and the excess received if any shall also have to be given to Government Milling will have to be done in the presence of Milling Supervisors if any appointed or such other officers as may be authorised from time to time The rice should be unpolished

3 The quotations should be separate for **raw and boiled** rice for the following varieties of paddy -

(a) Small grain paddy
(b) Big grain I class paddy (aboveghat)
(c) Big grain I class paddy (belowghat)
(d) Big grain II class variety (aboveghat)
(e) Kagga variety (belowghat)
(f) Jaddu or Karebhatta in Bhatkal petha

4 The premises where the mill is situated should be quoted

Paddy will be supplied in bags of 168 lbs (each exclusive of weight of empty gunny) at mill premises and the outturn will be taken delivery of in bags of 168 lbs (each exclusive of weight of empty gunny) at mill premises It will be the responsibility of the miller to deliver the outturn in standard, bags of 168 lbs. duly weighed and stitched at the mill premises

The contract will commence from 16-11-1948 and will be valid upto 15-11-1949 (both days inclusive) and the contractor, if his tender is accepted will have to execute an agreement with the Collector and deposit a sum of Rs 1000/- as a guarantee for observance of the terms of the contract

Special quotation may be given for any specific variety of paddy grown in any specific area

5 The tenderer should state whether his mill is fitted with a huller or plant type of machine

6 The tenderer should enclose along with the sealed tender a Treasury Challan for having credited Rs 100/- as earnest money which will be returned to the tenderer if his tender is not accepted The earnest money will be treated as a part of the deposit or will be refunded in the case of successful tenderers if and after the prescribed agreement is executed Otherwise it will be -- liable to forfeiture to Government

KARWAR
26-10-1948

L F SALDANHA
Collector of Kanara

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ, (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ವ-ಲಕ್ಷ್ ಕೆನರಾ ಪ್ರೆಸ್ಸಿ' ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:-
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲಿನಿಂದ ವರ್ಷಕ್ಕೆ ೩-೧೨-೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ...೦-೧-೦
ಹಳೇ ಸಂಚಿಕೆಗೆ ... ೦-೩-೦
ಮುಂದ ಹಣ ಕೊಡುವವರು
ವರ್ಷ ಆದ ಕೂಡಲೆ ತೆರಬೇಕು
ವರ್ಗಣಿಯು ಮುಂಗಡ ಕಳಿಸತಕ್ಕದ್ದು

Reg. No. B. 1270 Monday, 15-11-1948.

ಕಾನಡಾವೃತ್ತ.

ವರ್ಷ ೩೧.] THE KANARA NEWS [ಸಂಚಿಕೆ ೨೨

ಕುಮಟಾ - ಸೋಮವಾರ, ತಾ ೧೫-೧೧-೧೯೪೮

ಜಾಹೀರಾತುಗಳ ದರ:-
ಸ್ಥಳ ಮತ್ತು ಕಾಲಾವಧಿಯ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಥವಾ ಪತ್ರದ್ವಾರಾ
ತಿಳಿಸಲಾಗುವದು

ವಿವಿಧ ವಿಷಯಗಳು.

ಸಂಯುಕ್ತ ಪ್ರಾಂತದ ಸರಕಾರವು ಎಸೆಂಬ್ಲಿ-ಸದಸ್ಯರ ಯಾದಿಯನ್ನೊಂದು ತಯಾರಿಸತೊಡಗಿರುತ್ತಾಗಿ "ಗ್ಲೋಬ" ವಾರ್ತಾ ಸಂಸ್ಥೆಯವರು ಪ್ರಕಟಿಸುತ್ತಾರೆ. ಎಸೆಂಬ್ಲಿ-ಸದಸ್ಯರು ತಮ್ಮ ಸ್ಥಾನಬಲದಿಂದ ಅಧಿಕಾರಿಗಳ ಮೇಲೆ ಪ್ರತಿಷ್ಠೆ ನಡಿಸಿ, ಲಂಚ ತಿಂದು ಅಯೋಗ್ಯ ಪ್ರಯೋಜನ ಪಡಕೊಂಡಿದ್ದಾರೆಂದೂ, ಸ್ವಂತ ಅಭ್ಯುದಯ ಮಾಡಿಕೊಂಡಿದ್ದಾರೆಂದೂ ಸಂಯುಕ್ತ ಪ್ರಾಂತದ ಸರಕಾರದ ಕಡೆ ದೂರು ಬಂದಿರುವದರಿಂದ, ಕಳ್ಳ ಸುಳ್ಳಾಟಿಕೆ ನಡಿಸಿ ಲಾಭ ಪಡೆಯುವ ಎಸೆಂಬ್ಲಿ-ಸಭಾಸದರ ಮೇಲೆ ಸರ್ಗಾವಲು ಇಡುವಂತೆ ಗುಪ್ತ ಪೋಲೀಸರ ಇಲಾಖೆಗೆ ಆ ಸರಕಾರವು ಆಜ್ಞೆಯನ್ನಿತ್ತಿರುವದಾಗಿ ತಿಳಿಯುತ್ತದೆ. ರಾಜ್ಯದಾಡಳಿತೆಯಲ್ಲಿ ಲಂಚಗೋಳಿತನ ವ್ಯಾಪಿಸಿದೆ. ಅದನ್ನು ಬುಡಗೂಡಿ ನಿರ್ಮೂಲಿಸಲೋಸುಗ ವಿಶೇಷ ಪೋಲೀಸ-ಶಿಬಂದಿಯನ್ನು ನೇಮಿಸಬೇಕೆಂದು ಹಿಂದ ಸರಕಾರವು ನಿರ್ಣಯಿಸಿದೆ. ಎಸೆಂಬ್ಲಿ-ಸದಸ್ಯರ ಸಂಪದಭ್ಯುದಯದ ಜೊತೆಗೆ ಕೊಂಗ್ರೆಸ ಕಾರ್ಯಕರ್ತರ ಹಾಗೂ ಕೊಂಗ್ರೆಸ ಸಮಿತಿಗಳ ಅಧಿಕಾರಿಗಳ ವಿಚಾರವೂ ಆಗುವದವಶ್ಯವುಂಟು. ಬೇರೆ ಬೇರೆ ಕೊಂಗ್ರೆಸ ಸಮಿತಿಗಳಲ್ಲಿ ಸಭ್ಯರಿಗಿಂತ ಊರೊಳಗಿನ ಪೋಲಿಗಳು ಸೇರಿಕೊಂಡು ಪ್ರಯೋಜನ ಪಡೆಯುತ್ತಿದ್ದಾರೆ! ಲೋಕಶಾಹಿಯವರಿಗಾಗಿ ರಾಜಾಶ್ರಯದಲ್ಲಿ ನೇಮಿಸಲ್ಪಟ್ಟ ಬೇರೆ ಬೇರೆ ಮಂಡಳದಲ್ಲಿ ಈಗ ಇಂತಹ ಸ್ವಾರ್ಥಸಾಧಕರದೇ ಹೆಚ್ಚಳವಾಗಿದೆ! ಕೊಂಗ್ರೆಸ ಸಮಿತಿಗಳ ಅಧಿಕಾರಿಗಳೂ, ಕೊಂಗ್ರೆಸ ಕಾರ್ಯಕರ್ತರೆಂದು ಹೇಳಿಸಿಕೊಂಡವರೂ, ಎಸೆಂಬ್ಲಿ-ಕೌನ್ಸಿಲುಗಳ ಸಭಾಸದರೂ ಕೊಂಗ್ರೆಸ ರಾಜ್ಯ ಬರುವ ಮುಂಚೆ ಯಾವ ಸ್ಥಿತಿಯಲ್ಲಿದ್ದರು, ಏನು ಪ್ರಾಪ್ತಿ ಮಾಡುತ್ತಿದ್ದರು, ಅವರಿಗೆ ಏನು ಖರ್ಚು ಇರುತ್ತಿತ್ತು, ಈ ೩-೪ ವರ್ಷಗಳಲ್ಲಿ ಅವರ ಪ್ರಾಪ್ತಿ ಒಮ್ಮೆಲೇ ಏರಲು ಕಾರಣವೇನು, ಈಗ ಸಾಂಪತ್ತಿಕ ಸ್ಥಿತಿ ಹೇಗಿದೆ, ಇತ್ತಲಾಗಿ ಅವರು ಕೈಕೊಂಡ ಕೊಂಗ್ರೆಸ ಉದ್ಯೋಗ ಯಾವದು, ಇವರ ಆಪ್ತೇಷ್ಟರ ಸ್ಥಿತಿ ಈಗ ಹೇಗಿದೆ, ಆ ಆಪ್ತೇಷ್ಟರು ಮುಂಚೆ ಹ್ಯಾಗಿದ್ದರು, ಈ ಎಲ್ಲ ಸಂಗತಿಗಳನ್ನು ಕುರಿತು ಆಳವಾದ ಚೌಕಶಿ ನಡಿಸಿದರೆ ಅದ್ಭುತ ಘಟನೆಗಳು ಬೆಳಕಿಗೆ ಬರುವಂತಿವೆ. ತಿಂಗಳೊಂದಕ್ಕೆ ರೂ ೧೦ರಷ್ಟು ಪ್ರಾಪ್ತಿಯಿಲ್ಲದ ಕೊಂಗ್ರೆಸ ಕಾರ್ಯಕರ್ತರು ದಿನಾ ೫-೧೦ ರೂ ಸಹ ಖರ್ಚುಮಾಡಲು ಕೊಂಗ್ರೆಸ ರಾಜ್ಯಭಾರದಲ್ಲಿ ಅಂಜುವದಿಲ್ಲ! ಅವರ ಪ್ರಾಪ್ತಿಗೂ ಖರ್ಚಿಗೂ ಮೇಳಗೂಡಿ, ನೀಲಿ ಮನೆಗೆ ಹಂಚು ಬೀಸುವ ಚಮತ್ಕಾರ ಹೇಗೆ ಒದಗಿಬರುತ್ತಿದೆ ಎಂಬುದರ ವಿಚಾರವಾಗಬೇಕು. ಕೊಂಗ್ರೆಸ ಕಾರ್ಯಕರ್ತರು ಮಂತ್ರಿಗಳನ್ನು ಪ್ರಸನ್ನಗೊಳಿಸಿ, ಜಂಗಲ ಇಲಾಖೆಯಿಂದಲೂ ಮುಲ್ಕಿ ಇಲಾಖೆಯಿಂದಲೂ ಪಡಕೊಂಡ ಅನುಕೂಲತೆಗಳ ವಿಚಾರವಾಗಬೇಕು. ಅಧಿಕಾರಿಗಳ ಲಂಚಗೋಳಿತನದ ಜೊತೆಗೆ ದೇಶಸೇವೆ-ಲೋಕಸೇವೆಗಳ ಸೋಗು ಹಾಕಿಕೊಂಡು ಅನಾಚಾರ ನಡಿಸಿ ಅನ್ಯಾಯದ ಪ್ರಯೋಜನ ಪಡೆಯುವ ಹೀನ ಮನೋವೃತ್ತಿಯ ಇಸಮುಗಳನ್ನು ಕಂಡುಹಿಡಿದು ಶಾಸನ ಮಾಡಬೇಕಾದ ಪ್ರಸಂಗ ಬಂದಿದೆ. ಲೋಕಸೇವಕರ ಲೋಕೋಪದ್ರವದಿಂದ ಲೋಕವನ್ನು ರಕ್ಷಿಸಿಕೊಳ್ಳುವ ಕಠಿಣ ಪ್ರಸಂಗ ಲೋಕಸರಕಾರದ ಮೇಲೆ ಬಂದೊದಗಿದೆ.

* * *

ಅಕ್ಕಿಯ ಬೆಳೆ ಈಗ ಕಕ್ಕ ಮಟ್ಟಿಗೆ ಸುಧಾರಿಸಿದೆಂದು ಹೇಳುತ್ತಾರೆ ಅಮೇರಿಕೆಯ ಬೇಸಾಯ ಇಲಾಖೆಯವರು. ಈ ವರ್ಷ ಜಗತ್ತಿನ ಅಕ್ಕಿಯ ಬೆಳೆಯು ಯುದ್ಧಪೂರ್ವಕಾಲದ ಬೆಳೆಯನ್ನು ಸರಿಗಟ್ಟುವದಾಗಿ ಅಂದಾಜು ಮಾಡಿದ್ದಾರೆ. ಕಳೆದ ವರ್ಷ ೭೧ ಲಕ್ಷ ಬುಶೆಲ್ಲು ಅಕ್ಕಿ ಬೆಳೆದಿತ್ತು. ಈ ವರ್ಷ ೭೩ ಲಕ್ಷ ಬುಶೆಲ್ಲ ಬೆಳೆ ಬಂದಿರುವದಂತೆ. ಯುದ್ಧ-ಪೂರ್ವಕಾಲದಲ್ಲಿ ಇಡೀ ಜಗತ್ತಿನೊಳಗೆ ೭೪-೭೫ ಲಕ್ಷ ಬುಶೆಲ್ಲು ಅಕ್ಕಿ ಬೆಳೆಯುತ್ತಿತ್ತೆಂದು ಅಂಕಿ-ಸಂಖ್ಯೆಗಳು ಹೇಳುತ್ತಿವೆ. ಅಕ್ಕಿ ಬೆಳೆಯುವ ಕ್ಷೇತ್ರಫಲ ಬೆಳೆದದ್ದರಿಂದ ಉತ್ಪತ್ತಿ ಹೆಚ್ಚಾಯಿತೆಂದು ಹೇಳುತ್ತಾರೆ. ಜಯಾಮದೊಳಗೆ ಹಿಂದ ೧೫ ಲಕ್ಷ ಟನ್ ಅಕ್ಕಿ ಬೆಳೆಯುತ್ತಿತ್ತು, ಈ ವರ್ಷ ಸಾಮಾನ್ಯವಾಗಿ ಅಷ್ಟೇ ಅಕ್ಕಿ ತಯಾರಾಗುವದಾಗಿ ಲಂಡನ್ನಿನ "ಟಯಿಮ್ಸ" ಪತ್ರಿಕೆಯ ಬಾತಮೀದಾರರು ತಿಳಿಸುತ್ತಾರೆ. ಈ ಹೊತ್ತು ನವಂಬರ ತಾ. ೧೫ಕ್ಕೆ ಅಮೇರಿಕೆಯ ರಾಜಧಾನಿಯಾದ ವಾಶಿಂಗಟನ್ನದೊಳಗೆ ಜಾಗತಿಕ ಆಹಾರ ಮತ್ತು ಬೇಸಾಯ ಸಂಘದ ಆಹಾರ ಸಭೆ ಸೇರಲಿದೆ. ಆ ಸಭೆಯಲ್ಲಿ ಹಿಂದುಸ್ಥಾನದ ಪ್ರತಿನಿಧಿಗಳು ವಿದೇಶಗಳಿಂದ ಭಾರತಕ್ಕೆ ಹೆಚ್ಚಿಗೆ ಅಕ್ಕಿ ಸಿಗಬೇಕೆಂದು ವಾದಿಸತಕ್ಕವರಿದ್ದಾರೆ. ಸಾಮಾನ್ಯವಾಗಿ ಹಿಂದುಸ್ಥಾನಕ್ಕೆ ವರ್ಷಕ್ಕೆ ೧೫ ಲಕ್ಷ ಟನ್ ಅಕ್ಕಿ ಹೊರಗಿಂದ ತರಿಸಬೇಕಾಗುತ್ತಿದೆ. ಈ ವರ್ಷ ಡಿಸಂಬರ ಕೊನೆಯೊಳಗಾಗಿ ೮ ಲಕ್ಷ ೩೦ ಸಾವಿರ ಟನ್ ಅಕ್ಕಿ ಹಿಂದುಸ್ಥಾನಕ್ಕೆ ಕೊಡಬೇಕೆಂದು ನಿರ್ಣಯವಾಗಿತ್ತು. ಅದರೊಳಗೆ ೬॥ ಲಕ್ಷ ಟನ್ ಅಕ್ಕಿ ಮಾತ್ರ ಬಂದು ತಲ್ಪಿದೆ. ಉಳಿದ ಅಕ್ಕಿ ಇನ್ನು ೧॥ ತಿಂಗಳಲ್ಲಿ ಬಂದು ತಲ್ಪುವ ಹಾಗಿಲ್ಲ. ಬ್ರಹ್ಮದೇಶ, ಮಲಾಯಾ, ಜಯಾಮ ಮೊದಲಾದ ಪೌರ್ವಾತ್ಯ ದೇಶಗಳಲ್ಲಿ ರಷ್ಯ ಪಂಥ (ಕಮ್ಯುನಿಸ್ಟ) ದ ಪ್ರಚಾರ ಪ್ರಬಲವಾಗಿ ನಾಡು ತುಂಬ ದೊಂಬಿಗಳಾಗತೊಡಗಿವೆ. ಅವನ್ನು ನಿರ್ಬಂಧಿಸಲು ಅಲ್ಲಿಯ ಸರಕಾರಗಳಿಗೆ ಅಶಕ್ಯವಾಗಿದೆ. ಚೀನ ದೇಶವು ರಷ್ಯ ದೇಶದ ಮಾಂಡಲಿಕ ರಾಜ್ಯವಾಗುವ ಭೀತಿಯುಂಟೆಂದು ಹೇಳುತ್ತಾರೆ. ಅಮೇರಿಕೆಯ ಸರಕಾರವು ಚೀನದ ಚಾಂಗ-ಕೈ-ಶೇಕರ ಸರಕಾರಕ್ಕೆ ನೆರವಾಗಲು ಈಗ ಒಡಂಬಡುವದಿಲ್ಲ. ಚಾಂಗ-ಕೈ-ಶೇಕರಿಗೆ ಕೊಟ್ಟ ದ್ರವ್ಯಸಹಾಯವೂ ಸಾಹಿತ್ಯಸಂಗ್ರಹವೂ ಕಳ್ಳತನದಿಂದ ರಷ್ಯ ಪಕ್ಷಪಾತಿಗಳಿಗೆ ತಲ್ಪುತ್ತದೆಂದು ಅಮೇರಿಕೆ ಸರಕಾರಕ್ಕೆ ಮನದಟ್ಟಾಗಿದೆ. ಟ್ರೂಮನ್‌ರು ಆರಿಸಿ ಬರದೆ ಅವರ ಪ್ರತಿಪಕ್ಷಿಗಳು ಅಮೇರಿಕೆಯ ಅಧ್ಯಕ್ಷರಾಗಿ ಆರಿಸಿ ಬಂದಿದ್ದರೆ ಟ್ರೂಮನ್ ಸರಕಾರದ ಧೋರಣೆ ಬದಲಿ, ಚಾಂಗ-ಕೈ-ಶೇಕರಿಗೆ ಸಂಕಟ ಕಾಲದಲ್ಲಿ ಸಹಾಯ್ಯ ಸಿಗುವದೆಂಬ ಆಶೆ ಇತ್ತು. ಆದರೆ ಅಮೇರಿಕೆಯ ಅಧ್ಯಕ್ಷ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಥೊಮನ್ ಡ್ಯೂವಿಯವರು ಸೋತರು, ಟ್ರೂಮನ್‌ರು ಗೆದ್ದರು. ಅಂದಿನಿಂದ ಚೆಂಗ-ಕೈ ಶೇಕರು ಹೊರಗಿನ ಸಹಾಯವಿಲ್ಲದೆ ರಷ್ಯ ಪಕ್ಷದವರೊಡನೆ ಹೋರಾಡಬೇಕಾಗಿದೆ. ಈ ಹೋರಾಟದಲ್ಲಿ ಚಾಂಗ-ಕೈ ಶೇಕರು ಯಶಸ್ವಿಯಾಗುವ ಸಂಭವ ಕಡಿಮೆ. ಚೀನದೊಳಗಿನ ಕ್ರಾಂತಿಯ ಗಾಳಿ ದಕ್ಷಿಣಕ್ಕೆ ಮಲಾಯಾ, ಬ್ರಹ್ಮದೇಶ ಮೊದಲಾದ ದೇಶಗಳಿಗೆ ಈಗಾಗಲೇ ಹಬ್ಬಿದೆ. ಇನ್ನೂ ಮುಂದೆ ಅದು ಹಬ್ಬುವ ಲಕ್ಷಣಗಳಿವೆ. ಅದು ಹಾಗೆ ಹಬ್ಬಿದರೆ ಅಲ್ಲಿ ಅಕ್ಕಿ ವಿಪುಲವಾಗಿ ಬೆಳೆದರೂ ಅದು ಹಿಂದುಸ್ಥಾನಕ್ಕೆ ಸಿಗುವದು ಕಷ್ಟವಾಗುವದು. ಜಗತ್ತಿನ ಬೇರೆ ಬೇರೆ ದೇಶ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು!

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಗಳಿಂದ ೩ ಕೋಟಿ ೮೦ ಲಕ್ಷ ಮೆಟ್ರಿಕ್ ಟನ್ನ ಅಕ್ಕಿ ಏಷ್ಯಾ ದೇಶಗಳಿಗೆ ದೊರೆಯಬಹುದು (ಮೆಟ್ರಿಕ್ ಟನ್ನಿಗೂ ನಮ್ಮಲ್ಲಿಯ ಟನ್ನಿಗೂ ಹೆಚ್ಚಿನ ಅಭ್ಯಂತರವಿಲ್ಲ. ೧ ಟನ್ನ ೨೨೪೦ ರತ್ತಲು ಇರುತ್ತದೆ. ಅಮೇರಿಕೆ ಟನ್ ಮಾತ್ರ ಸ್ವಲ್ಪ ಸಣ್ಣದು, ಅದು ೨೦೦೦ ರತ್ತಲು ತೂಕವಿರುತ್ತದೆ) ರಷ್ಯದ ಆಕ್ರಮಕ ಧೋರಣದ ಮೂಲಕ ಹಿಂದುಸ್ಥಾನದೊಳಗೆ ಅಕ್ಕಿಯ ಕೊರತೆಯಾಗುವ ಸಂಭವವುಂಟು. ಗೋದಿಯ ಬೆಳೆ ಮಾತ್ರ ವಿಪುಲವುಂಟು. ಅಮೇರಿಕಾ, ಅರ್ಜೆಂಟಾಯಿನ್, ಆಸ್ಟ್ರೇಲಿಯಾ ದೇಶಗಳಲ್ಲಿ ಈ ವರ್ಷ ಗೋದಿಯ ಬೆಳೆ ಒಳ್ಳೇಯದಾಗಿರುವದೆಂದು ವರದಿಗಳು ಬಂದಿವೆ. ಅಮೇರಿಕೆಗಿಂತ ಆಸ್ಟ್ರೇಲಿಯಾ ದೇಶದಿಂದ ಗೋದಿ ತರಿಸುವದು ಹಿಂದುಸ್ಥಾನ ದೇಶಕ್ಕೆ ಹೆಚ್ಚಿಗೆ ಅನುಕೂಲ. ಅಕ್ಕಿಯ ಕೊರತೆಯನ್ನು ಗೋದಿಯಿಂದ ತುಂಬಿತರಬಹುದು. ಅಂತು ಅಕ್ಕಿಯ ಬೆಳೆ ಸುಧಾರಿಸಿದ್ದರೂ ಹಿಂದುಸ್ಥಾನದೊಳಗಿನ ಅಕ್ಕಿಯ ಬರಗಾಲ ನೀಗುವ ಲಕ್ಷಣಗಳಿಲ್ಲ. ನಿಯಂತ್ರಣದ ಕಾಲದಲ್ಲಿ ಸರಕಾರವು ತಕ್ಕಷ್ಟು ಅಕ್ಕಿಯನ್ನು ಪೂರೈಸಲು ಸಮರ್ಥವಾಗುವಂತಿಲ್ಲ. ಅಕ್ಕಿಯ ಖರೀದಿಯ ದರವನ್ನು ಸರಕಾರವು ಏರಿಸಿದ್ದರಿಂದ ಕಳ್ಳಪೇಟಿಯಲ್ಲೂ ದರ ಹೆಚ್ಚಾಗುವ ಸಂಭವವುಂಟು.

* * *

ಒಕ್ಕಲತನದ ಕಾನೂನಿನ ಅಧಳತೆಯಲ್ಲಿ ಒಂದು ವಿವಾದವುಂಟಾಗಿದೆ. ಸ್ವಂತ ಸಾಗುವಳಿಯ ದಾವೆಗಳನ್ನು ವಿಚಾರಿಸಲು ಟೆನನ್ಸಿ ಅವ್ವಲ ಕಾರಕೂನರಿಗೆ ಹಕ್ಕಿಲ್ಲವಾಗಿ ಹೊನ್ನಾವರದ ದಿವಾಣಿ ನ್ಯಾಯಾಧೀಶರು ತೀರ್ಮಾನಿಸಿದಾರೆ. ಟೆನನ್ಸಿ ಅವ್ವಲ ಕಾರಕೂನರ ವಿಕ್ಷಿಪ್ತ ಹುಕುಮುಗಳಿಂದ ದಿಕ್ಕುತಪ್ಪಿದ ಒಡೆಯರಿಗೆ ದಿವಾಣಿ ನ್ಯಾಯಾಸನದ ಬಾಗಿಲುಗಳು ಈ ಪರಿ ಥಕ್ಕನೆ ತೆರೆದದ್ದರಿಂದ ಆ ನ್ಯಾಯಾಲಯಗಳಲ್ಲಿ ನೂರಾರು ದಾವೆಗಳು ದಾಖಲಾಗತೊಡಗಿವೆ. ಹೊನ್ನಾವರದ ದಿವಾಣಿ ನ್ಯಾಯಾಧೀಶರ ತೀರ್ಪಿನ ವಿರುದ್ಧ ಜಿಲ್ಹಾ ನ್ಯಾಯಸ್ಥಾನದಲ್ಲಿ ಅಪೀಲಾಗುವದು ಖಂಡಿತ. ಜಜ್ಜ ಕೋರ್ಟಿನ ನಿರ್ಣಯ ವಿರುದ್ಧ ಮುಂದೆ ಮುಂಬಯಿಯ ಹೈಕೋರ್ಟಿಗೂ ಬಹುಶಃ ಅಪೀಲಾಗುವದು. ಇಷ್ಟೆಲ್ಲ ವ್ಯವಹರಣೆ ಮುಗಿಯಲಿಕ್ಕೆ ಸಾಮಾನ್ಯವಾಗಿ ೩-೪ ವರ್ಷಗಳಾದರೂ ತಗಲುವವು. ಅಲ್ಲಿಯ ವರೆಗೆ ನೂರಾರು ದಾವೆಗಳು ದಾಖಲಾಗಿ ಲಕ್ಷಾವಧಿ ರೂಪಾಯಿಗಳು ವೆಚ್ಚವಾಗುವವಲ್ಲದೆ ಜಿಲ್ಹೆ ತುಂಬ ವ್ಯಾಜ್ಯದ ವಾತಾವರಣ ಹಬ್ಬಿ ಅನರ್ಥವಾಗುವದು. ಆದರಿಂದ ಈ ವಿಷಯದ ಕೊನೆಯ ನಿರ್ಣಯವಾಗುವದು ಅವಶ್ಯವುಂಟು. ಹಿಂದೊಮ್ಮೆ ಸರಕಾರವು ಮೂಲಿ ನಂಬರದ ಪದ್ಧತಿಯಲ್ಲಿ ತಿದ್ದುಪಡಿ ಮಾಡಿ ಸರ್ವೇ ನಂಬರದ ಪದ್ಧತಿಯನ್ನು ಪ್ರಚುರಗೊಳಿಸಿದಾಗ ಸರಕಾರಕ್ಕೆ ಆ ಪ್ರಕಾರ ಮಾಡಬರುವದಿಲ್ಲೆಂದು ಸಾಧಿಸಿ ಜಿಲ್ಹಾ ಜಜ್ಜ ಕೋರ್ಟಿನಲ್ಲಿ ಸುಮಾರು ೧೦೦೦ ದಾವೆಗಳು ದಾಖಲಾಗಿದ್ದವಂತೆ. ಮುಂಬಯಿ ಹೈಕೋರ್ಟಿನವರು ಆಗ ೧ ದಾವೆಯನ್ನು ತಾವೇ ವಿಚಾರಕ್ಕೆ ತಕ್ಕೊಂಡು, ಅದರೊಳಗೆ ಕೊಟ್ಟ ನಿರ್ಣಯದಂತೆ ಜಜ್ಜ ಕೋರ್ಟಿನಲ್ಲಿ ದಾಖಲಾದ ಬೇರೆ ಯಾವತ್ತೂ ದಾವೆಗಳನ್ನು ತೀರ್ಮಾನಿಸಬೇಕಾಗಿ ನಿರ್ಣಯಿಸಿದ್ದರೆ. ಮುಂಬಯಿ ಹೈಕೋರ್ಟು ಅದೇ ರೀತಿ ಸ್ವಂತ ಸಾಗುವಳಿಗೆ ಹೊಲಗಳ ಕಬಜೆ ಬೇಡುವ ಈ ದಾವೆಗಳ ವಿಚಾರವನ್ನು ಮಾಡುವದು ಒಳಿತು. ಈ ದಾವೆಗಳಲ್ಲಿ ನಿರ್ಣಯಿಸಬೇಕಾದ ವಿಷಯಗಳು ಎರಡೇ ಇವೆ. ಈ ದಾವೆಗಳನ್ನು ವಿಚಾರ ಮಾಡಲು ದಿವಾಣಿ ನ್ಯಾಯಸ್ಥಾನಗಳಿಗೆ ಹಕ್ಕಿರುವದೋ ಹೇಗೆ? ಮುಂಬಯಿ ಸರಕಾರವು ಇಂಥ ದಾವೆಗಳ ನಿರ್ಣಯದ ಅಧಿಕಾರವನ್ನು ಟೆನನ್ಸಿ ಅವ್ವಲ ಕಾರಕೂನರಿಗೆ ಒಪ್ಪಿಸಿದೆ. ಇದು ಕಾಯದೆಗೆ ಸಮ್ಮತವಿರುತ್ತದೋ ಹೇಗೆ? (೨) 'Bona fide' ಅಂದರೆ ಪ್ರಾಮಾಣಿಕ ಎಂಬ ಶಬ್ದದ ಅರ್ಥವೇನು? ಒಡೆಯನ ಪ್ರಾಮಾಣಿಕತನದಲ್ಲಿ ಸೇರ್ಪಡೆಯಾಗುವ ವಿಷಯಗಳು ಯಾವವು? ಟೆನನ್ಸಿ ಅವ್ವಲ ಕಾರಕೂನರೂ ಅವರ ವರಿಷ್ಠರೂ ಈ ಪ್ರಾಮಾಣಿಕ ಶಬ್ದದ ಅರ್ಥವನ್ನು ಮನಸ್ವಿ ಮಾಡಿ ಸ್ವಂತ ಸಾಗುವಳಿಯ ದಾವೆಗಳನ್ನು ಬಂಭಣೆ ತಿರಸ್ಕರಿಸುತ್ತಿದ್ದಾರೆ! ಒಂದು ವೇಳೆ ಇವರು ಕಬಜೆ ಕೊಡಿಸಿದರೆ ಮುಂದೆ ಸರಕಾರವು ಅವರ ನಿಕಾಲೆಯನ್ನು ರದ್ದುಗೊಳಿಸುತ್ತಿದೆ! ಬೇನಾಮದ ಸಾಹಿತ್ಯಗಳು ಒಕ್ಕಲಿಗನ ಕಡೆ ಎಷ್ಟಿವೆ ಎಂಬುವದರ ವಿಚಾರ ನಡೆಯುವದಿಲ್ಲ. ಹೆಚ್ಚೆಚ್ಚು ಬೆಳೆ ಬರುವಂತೆ ಸಾಗುವಳಿ ಮಾಡಲು ಆತನಿಗೆ ಎಷ್ಟು ಸಾಮರ್ಥ್ಯ ಇದೆಯೆಂಬುದರ ವಿಚಾರವಾಗುವದಿಲ್ಲ. ಒಡೆಯನ ಕಡೆಗಿರುವ ಬೇನಾಮೆ ಸಾಹಿತ್ಯದ, ಹೂಡುವ ಎತ್ತುಗಳ ವಿಚಾರ ಮಾತ್ರ ಜಾಗ್ರತೆಯಿಂದ ನಡೆಯುತ್ತಿದೆ! ಈ ವಿಷಯದ ಸಮಾಧಾನವಾದರೆ ಮಾತ್ರ ಒಡೆಯನ ಪ್ರಾಮಾಣಿಕತನ ಸಾಮಾನ್ಯವಾಗಿ ಸಿದ್ಧವಾಯಿತೆಂಬೆನಿಸಿ, ಒಕ್ಕಲಿಗನ ಪರಿಸ್ಥಿತಿಯ ವಿಚಾರ ನಡೆಯುತ್ತಿದೆ. ಭೂಮಿಯನ್ನು ಸಾಗುವಳಿ ಮಾಡುತ್ತಿರುವಾಗ ಹೊಟ್ಟೆ ತುಂಬ ಉಣ್ಣದೇ ಕಷ್ಟಪಡುವ ಒಕ್ಕಲಿಗನು ಭೂಮಿ ತಪ್ಪಿಸಿದ ಬಳಿಕ ಸಂಪೂರ್ಣವಾಗಿ ಸಾಯುವನೆಂದು ದಯಾಘನ ಟೆನನ್ಸಿ ಅವ್ವಲ ಕಾರಕೂನರು ಸಿದ್ಧಾಂತ ಮಾಡಿ, ಸ್ವಂತ ಸಾಗುವಳಿ-ದಾವೆಗಳನ್ನು ತಿರಸ್ಕರಿಸುತ್ತಿರುವದು ಒಡೆಯನ ಅಪ್ರಾಮಾಣಿಕತನದ ಲಕ್ಷಣವೋ ಟೆನನ್ಸಿ ಅವ್ವಲ ಕಾರಕೂನರ ಅಪ್ರಾಮಾಣಿಕತನದ ಲಕ್ಷಣವೋ ಎಂಬುದರ ನಿರ್ಣಯವಾಗಬೇಕಾಗಿದೆ. ಪ್ರಾಮಾಣಿಕ ಶಬ್ದದ ಅರ್ಥ ಮಾಡುವಾಗ ಬಹಳ ಅಪ್ರಾಮಾಣಿಕತನ ನಡೆಯುತ್ತದೆಂದು ಲೋಕಪ್ರವಾದವುಂಟು. ಸರಕಾರದ ಒಳ-ಹುಕುಮುಗಳ ಪತ್ತೆ ದೊರೆಯುವದಿಲ್ಲ! ಕಾಯದೆ-ಕೌನ್ಸಿಲುಗಳಲ್ಲಿ ಈ ಕುರಿತು ಪ್ರಶ್ನೆ ಮಾಡಿದಾಗ ಕಂದಾಯ ಮಂತ್ರಿಗಳು ಅವುಗಳನ್ನು ಬಹಿರಂಗಗೊಳಿಸಲು ನಿರಾಕರಿಸಿದ್ದಾರೆ! ಇಂತಹ ಒಳ-ಹುಕುಮುಗಳ ಆಧಾರ ಹೇಳಿ ಟೆನನ್ಸಿ ಅವ್ವಲ ಕಾರಕೂನರಿಗೆ ದರ್ಪ ತೋರಿಸಲು ಬಹಳ ಅನುಕೂಲವಾಗಿದೆ! ಒಕ್ಕಲಿಗರು ಅಜ್ಞಾನಿಗಳಿರುವದರಿಂದ ಭೂಮಿ ಸ್ವಾಧೀನವಿಟ್ಟುಕೊಳ್ಳಲು ಒಡೆಯರ ವಿರುದ್ಧ ಟೆನನ್ಸಿ ಅವ್ವಲ ಕಾರಕೂನರು ಅವರಿಗೆ ನೆರವಾಗುತ್ತಾರೆಂಬ ನಂಬಿಕೆ ಉತ್ಪನ್ನ ಮಾಡಿ ಲಂಚ ತಿನ್ನಲಿಕ್ಕೆ ಸುಸಂಧಿ ದೊರೆತಿದೆ! ಟೆನನ್ಸಿ ಅವ್ವಲ ಕಾರಕೂನರ ಯೋಗ್ಯತೆ ಎಷ್ಟೆಂದು ಹೇಳಬೇಕಾಗಿಲ್ಲ! ಕಂದಾಯ ಮಂತ್ರಿಗಳು ಎಸೆಂಬ್ಲಿಯಲ್ಲಿ ಶ್ರೀ|| ರಾಮಚಂದ್ರ ಮುಕುಂದ ಪ್ರಭು ಇವರ ಪ್ರಶ್ನೆಗೆ ಉತ್ತರ ಕೊಡುವಾಗ, ಟೆನನ್ಸಿ ಕಾರಕೂನರಾಗಿ ನೇಮಿಸಲ್ಪಟ್ಟ ೧೧ ಇಸಮುಗಳು ಹಿರಿಯ ಕಾರಕೂನರಿರುತ್ತಾರೆಂದೂ ಅವರಲ್ಲಿ ೯ ಮಂದಿ ಮುಲ್ಕಿ ಇಲಾಖೆಯ ಪರೀಕ್ಷೆಗೆ ಕೂತರೂ ತೇರ್ಗಡೆಯಾಗಲಿಲ್ಲೆಂದೂ ತಿಳಿಸಿದ್ದಾರೆ. ಈ ೧೧ ಮಂದಿಗಳಲ್ಲಿ ಮೂವರು ಮೆಟ್ರಿಕ್ ಸಹ ಆಗಿಲ್ಲ! ಇಂಥವರ ಕಡೆ ಒಡೆಯನ ನ್ಯಾಯ ವ್ಯವಸ್ಥೆಯನ್ನು ಒಪ್ಪಿಸುವ ದೃಶ್ಯ ಮುಂಬಯಿ ರಾಜ್ಯದಲ್ಲಿ ಮಾತ್ರ ಕಣ್ಣಿಗೆ ಬೀಳುವದು!! ಈ ಯೋಗ್ಯತಾಹೀನ ಟೆನನ್ಸಿ ಅವ್ವಲ ಕಾರಕೂನರ ದರ್ಪ ನೋಡಿದರೆ ಮನಸ್ಸು ದಂಗುಬಡಿಯುತ್ತಿದೆ! ಇವರಿಗೆ ಗ್ರಾಮ ಸಂಚಾರವನ್ನು ವಿಧಿಸಿದ್ದರಿಂದ ಗ್ರಾಮಗಳಲ್ಲಿ ಇವರೇ ಸರ್ವಾಧಿಪತಿಗಳಾಗಿದ್ದಾರೆ. ಸಂಭಾವನೆಯನ್ನು ಎತ್ತುವಳಿ ಮಾಡಲು ಅವರಿಗೆ ಅನುಕೂಲ ಸಂಧಿ ದೊರೆತಿದೆ! ಟೆನನ್ಸಿ ಅವ್ವಲ ಕಾರಕೂನರಿಗೆ ಸಿಗುವ ವೇತನ-ಭತ್ತೆಗಳನ್ನೂ, ಅವರು ಮಾಡುವ ಖರ್ಚನ್ನೂ, ಅವರು ಉಳಿಸುವ ಉಳಿತಾಯಗಳನ್ನೂ ಸೌಕ್ಷ್ಮ್ಯದಿಂದ ತಾಳೆ ಮಾಡಿದರೆ ಆ ಮಹಾನುಭಾವರು ಎಷ್ಟು ಪವಿತ್ರರಿದ್ದಾರೆಂಬದು ಸರಕಾರಕ್ಕೆ ತಿಳಿದುಬರುವಂತಿದೆ.

* * *

ಸಹಕಾರಿ ಸಂಸ್ಥೆಗಳನ್ನು ಹೆಚ್ಚಿಸಿ ಲೋಕೋದ್ಧಾರ ಮಾಡಬೇಕೆಂಬ ಹೊಸ ಸರಕಾರಿ ಧೋರಣದ ಪ್ರಯೋಜನವನ್ನು ಸ್ವಾರ್ಥ ಸಾಧಕರು ಪಡಕೊಳ್ಳತೊಡಗಿದ್ದಾರೆ. ವ್ಯಕ್ತಿಗಳನ್ನು ಅಲಕ್ಷಿಸಿ ಸಂಸ್ಥೆಗಳನ್ನೇ ಪುರಸ್ಕರಿಸುವ ಧೋರಣ ಕ್ಷೇಮಕರವೆಂದು ಎಣಿಸುವದು ದಡ್ಡತನ. ಸಂಸ್ಥೆಯ ಚಾಲಕರಿಗೆ ಸ್ವಂತ ಪ್ರಯೋಜನವಿಲ್ಲದ್ದರಿಂದ ಅವರಲ್ಲಿ ಹೊಣಗೇಡಿತನದ ಪ್ರವೃತ್ತಿಯುಂಟಾಗುತ್ತಿದೆ. ಕೆಲವುಸಲ ಕಳ್ಳ ವ್ಯಾಪಾರಗಳೂ ನಡೆಯುತ್ತಿವೆ! ಉತ್ತರ ಕಾನಡಾ ಜಿಲ್ಹೆಯ ಔದ್ಯೋಗಿಕ ಸಂಘವೆಂಬ ದೊಡ್ಡ ಹೆಸರನ್ನಿಟ್ಟುಕೊಂಡ ಹೊನ್ನಾವರದೊಳಗಿನ ಸಂಸ್ಥೆಯ ಕಾರ್ಯವನ್ನು ಸರಕಾರವು ಪರಾಂಬರಿಸಬಹುದು. ಈ ಸಂಘದವರ ಹತ್ತಿರ ಬಂಡವಲು ಇಲ್ಲ. ಉದ್ದ ಹೆಸರಿನ ಉದ್ದ ಪಾಟಿಯೇ ಅದರ ಏಕಮಾತ್ರ ಬಂಡವಲು! ಪ್ರಾಂತಿಕ ಸರಕಾರವು ಈ ಸಂಘಕ್ಕೆ ಕೊಟ್ಟ ನೂಲನ್ನು ಕ್ಲಿಷ್ಟ ಕಾಲದಲ್ಲಿ ಮುಂಬಯಿಯಿಂದ ತರಿಸಲು ಅದಕ್ಕೆ ಸಾಧ್ಯವಾಗುವದಿಲ್ಲ! ೭ ದಿನಗಳಲ್ಲಿ ಅದನ್ನು ಒಯ್ಯುತಕ್ಕದ್ದಾಗಿ ಸರಕಾರವು ಜಾಗ್ರತೆ ಕೊಡುತ್ತಿದ್ದರೂ ನೂಲು ತರಿಸುವ ಶಕ್ತಿ ಇಲ್ಲದ್ದರಿಂದ ಮುಂಬಯಿಯಲ್ಲೇ ಆ ನೂಲು ಬಿದ್ದುಕೊಂಡು ಉಳಿಯುತ್ತಿದೆ! ಈ ಸಂಘದವರು ನೂಲು ತಂದು ಹಂಚುವ ಮಕ್ತೆ ಪಡಕೊಂಡಿರುವದರಿಂದ ಬೇರೆ ಕೈಮಗ್ಗದವರಿಗೆ ನೂಲು ತರಿಸಬರುವದಿಲ್ಲ! ಆದರಿಂದ ಕೈಮಗ್ಗದವರು ಈಗ ಉಪವಾಸ ಬೀಳುವ ಪ್ರಸಂಗ ಬಂದಿದೆ. ಸರಕಾರವು ಸದರಿ ಸಂಘದ ಹಿಶೇಬನ್ನು ಪರಿಶೀಲಿಸಿಕೊಳ್ಳಬೇಕು. ಸಂಘದಿಂದ ಲೋಕಪ್ರಯೋಜನವಾಗದಿದ್ದರೆ ಅದನ್ನು ಚವರಿಸುವ ಕ್ರಮ ಕೈಕೊಳ್ಳಬೇಕು. ಮುಂಬಯಿಯಲ್ಲಿ ತಿಲ್ಯ ಬಿದ್ದ ನೂಲನ್ನು ತರಿಸುವ ಅಧಿಕಾರವನ್ನು ಜಿಲ್ಹೆಯೊಳಗೆ ನೂಲು ಹಂಚುವ ಸಂಸ್ಥೆಗಾಗಲಿ ವ್ಯಕ್ತಿಗಾಗಲಿ ಕೊಟ್ಟು, ಅಲ್ಲಿಂದ ಹೆಚ್ಚೆಚ್ಚು ನೂಲು ತರಿಸುವ ಏರ್ಪಾಟು ಮಾಡಬೇಕು. ಜೇನುತುಪ್ಪದ ವ್ಯಾಪಾರ-ವ್ಯವಹಾರದಲ್ಲೂ ವಂಚನೆಯಾಗುತ್ತದಾಗಿ ಲೋಕಪ್ರವಾದವುಂಟು. ಜೇನುತುಪ್ಪದ ಸಂಘದವರು ಜನರಿಂದ ರೂ ೧ಕ್ಕೆ ೧ ರತ್ತಲಿನಂತೆ ತುಪ್ಪವನ್ನು ಖರೀದಿ ಮಾಡುತ್ತಾರೆ, ಮತ್ತು ಅದನ್ನು ಪ್ರಾಂತಿಕ ಸಂಘಕ್ಕೆ ರೂ ೧ ೯-೦ ಕ್ಕೆ ೧ ರತ್ತಲಿನಂತೆ ಮಾರುತ್ತಾರೆ. ಆದರೂ ಈ ವ್ಯವಹಾರದಲ್ಲಿ ಸಾವಿರಾರು ರೂಪಾಯಿಗಳ ಹಾನಿ ಬರುತ್ತದೆಂದು ಹೇಳಿ ಸಂಘವು ಸರಕಾರದಿಂದ ದ್ರವ್ಯಸಹಾಯ ಪಡೆಯುತ್ತಿದೆ! ಖರ್ಚಿನ ಬಗ್ಗೆ ಪ್ರತಿ ರತ್ತಲಿಗೆ ಸಾಮಾನ್ಯವಾಗಿ ೧ ಆಣೆ ತಗೆದರೂ, ಪ್ರತಿ ರತ್ತಲಿನ ಮೇಲೆ ಸಿಗುವ ೬ ಆಣೆ ಮುನಾಫೆಯು ಸಿಬಂದಿಯ ಖರ್ಚಿಗೆ ಸಾಲುವದಿಲ್ಲೆಂದ ಬಳಿಕ ನಡುವೆ ಕಳ್ಳಾಟಿಕೆ ಉಂಟೆಂದು ತಾನೇ ಸಿದ್ಧವಾಗುತ್ತದೆ. ಪ್ರಾಂತಿಕ ಸಂಘದಲ್ಲೂ ಕಳ್ಳಾಟಿಕೆ ನಡೆಯುತ್ತದೆಂದು ದೂರುಂಟು. ಜೇನುತುಪ್ಪ ಕೊಂಡುಕೊಳ್ಳುವ ಮುಂಬಯಿ

ಯ ವರ್ತಕರು ರೂ ೩ಕ್ಕೆ ೧ ರತ್ತಲಿನಂತೆ ಹೊಸ್ತಾವಾರದಲ್ಲಿ ಕೇಳಲು ಒಡಂಬಡುತ್ತಿದ್ದರೂ ಜೇನುಕುಪ್ಪ ಸಂಘದ ಚಾಲಕರು ಮುಂಬಯಿ ತವಕ ಅದನ್ನು ಒಯ್ದು ಅಲ್ಲಿ ರೂ ೧-೯-೦ಕ್ಕೆ ೧ ರತ್ತಲಿನಂತೆ ಕೊಡುವ ಕರಾರು ಮಾಡುತ್ತಾರೆ!! ಈ ವ್ಯವಹಾರದೊಳಗಿನ ಕಾರಸ್ಥಾನವನ್ನು ಅಂಚೆ ನಿಮ್ಮೂರಲನ ಖಾತೆಯವರು ಚೌಕಶಿ ಮಾಡಬೇಕು. ಈ ಕುಪ್ಪದ ದರ ಮುಂಬಯಿ ಪೇಟೆಯಲ್ಲಿ ರತ್ತಲಿಗೆ ೨ ರೂ ೩ಕ್ಕಿಂತ ಹೆಚ್ಚಿಗೆ ಇದ್ದಾಗ್ಯೂ ಮುಂಬಯಿ ಸಂಘದವರು ಇದನ್ನು ರೂ ೧-೧೦-೦ಕ್ಕೆ ಯಾರೊಬ್ಬ ಸಭ್ಯರ ಹೆಸರಿಗೆ ಖರ್ಚು ಬರೆದು, ಮುಂದೆ ಪೇಟೆಯಲ್ಲಿ ಪೇಟೆಯ ದರದಿಂದ ಮಾರಿ ಪ್ರಯೋಜನ ಪಡೆಯುತ್ತಾರೆಂಬ ಲೋಕಾಪವಾದವುಂಟು. ಪ್ರಾಂತಿಕ ಸಂಘದ ವ್ಯವಸ್ಥಾಪನ ಮಾಂತ್ರಿಕವಾದ ಹೊನ್ನಾವರದ ಜೇನುಕುಪ್ಪ ಎಲ್ಲಿ ಹೋಗುತ್ತದೆಂಬುದರ ಪತ್ತೆಯನ್ನು ಅಂಚೆ ನಿಮ್ಮೂರಲನ ಖಾತೆಯವರು ಹಿಡಿಯಬೇಕು. ಪ್ರಾಂತಿಕ ಸಂಘದ ಲೆಕ್ಕದ ಪುಸ್ತಕಗಳಲ್ಲಿ ತೋರುವ ಖರೀದಿದಾರರ ಪತ್ತೆ ಮಾಡಿ, ಅವರ ವಿದ್ಯಮಾನ ನಡೆಯುವ ಕಳ್ಳಾಟಿಕೆಯನ್ನು ಅವರು ಕಂಡು ಹಿಡಿಯಬೇಕು. ಸಹಕಾರಿ ಸಂಘಗಳ ಚಳವಳಿ ಇತ್ತೀಚೆಗೆ ಮಿತಿಮೀರಿದೆ. ಅದನ್ನು ತಕ್ಕ ಕಾಲದಲ್ಲಿ ನಿಯಂತ್ರಿಸದಿದ್ದರೆ ಸಹಕಾರದಿಂದ ಜನರ ಘಾತವಾಗುವ ಸಂಭವವಿದೆ, ಸಹಕಾರ ಸಂಘಗಳಿಗೂ ಅವುಗಳ ಚಾಲಕರಿಗೂ ಸರಕಾರವು ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಕೊಡಲೊಡಂಬಡುವದಿಲ್ಲವಾಗಿ ಲೋಕಗ್ರಹಿಕೆಯುಂಟು. ಅದನ್ನು ಹೋಗಲಾಡಿಸಬೇಕು

ಸುದ್ದಿಗಳ ಸಂದೂಕ.

ಸ್ಥಾನಿಕ ಸ್ವರಾಜ್ಯ ಮಂತ್ರಿಗಳ ಸಂಚಾರ

ಮುಂಬಯಿ ಸರಕಾರದ ಸ್ಥಾನಿಕ-ಸ್ವರಾಜ್ಯ ಖಾತೆಯ ಮಂತ್ರಿಗಳಾದ ಮಾನ್ಯ ವರ್ತಕರು ಈ ವಾರ ನಮ್ಮ ಜಿಲ್ಲೆಯಲ್ಲಿ ಸಂಚಾರ ಮಾಡುವವರಿದ್ದಾರೆ ನಾಳೆ ಬುಧವಾರ ಅವರು ಹುಬ್ಬಳ್ಳಿಯಿಂದ ಯಲ್ಲಾಪುರ ಮಾರ್ಗವಾಗಿ ಸಂಜೆಗೆ ಕಾರವಾರಕ್ಕೆ ತಲ್ಪುವರು ಗುರುವಾರ ಮುಂಜಾನೆ ೮||ಗೆ ಕಾರವಾರ ಮ್ಯುನಿಸಿಪಾಲಿಟಿಯುವರೂ ಜಿಲ್ಲಾ ಲೋಕಲ್ ಬೋರ್ಡಿನವರೂ ಅವರಿಗೆ ಮಾನಪತ್ರ ಕೊಡುವರು ಆ ಮೇಲೆ ಮಂತ್ರಿಗಳು ಕಾರವಾರ ಅರ್ಬನ್ ಬೇಂಕಿನ ಕಚೇರಿಗೆ ಹೋಗಿ, ಅಲ್ಲಿ ಮಹಾತ್ಮರ ಭಾವಚಿತ್ರದ ಅನಾವರಣ ಮಾಡುವರು. ಆ ಮೇಲೆ ಅರ್ಧ ತಾಸು ಕಾರವಾರ ನಗರಾಧ್ಯಕ್ಷರಿಗೂ ಜಿಲ್ಲಾ ಬೋರ್ಡಿನ ಅಧ್ಯಕ್ಷರಿಗೂ ಸಂದರ್ಶನವನ್ನೀಯುವರು ಮಧ್ಯಾಹ್ನದ ಊಟ-ವಿಶ್ರಾಂತಿಗಳನ್ನು ಕಾರವಾರದಲ್ಲೇ ಮುಗಿಸಿ, ೨||ಗೆ ಕಾರವಾರದಿಂದ ಹೊರಟು ೩||ಗೆ ಅಂಕೋಲೆಗೆ ತಲ್ಪುವರು ಅಲ್ಲಿ ಗ್ರಾಮ-ಪಂಚಾಯತದವರೊಡನೆಯೂ ಸ್ಥಾನಿಕ ಕಾರ್ಯಕರ್ತರೊಡನೆಯೂ ಮಾತುಕತೆಯಾಡಿ ೪ಕ್ಕೆ ಗೋಕರ್ಣಕ್ಕೆ ಹೊರಡುವರು ಸಂಜೆ ೬||ಗೆ ಗೋಕರ್ಣದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಂತ್ರಿಗಳ ಭಾಷಣವಾಗುವದು

ಶುಕ್ರವಾರ ಮಧ್ಯಾಹ್ನ ೩||ಗೆ ಗೋಕರ್ಣದಿಂದ ಹೊರಟು ಮಂತ್ರಿಗಳು ೪||ಗೆ ಕುಮಟೆಗೆ ತಲ್ಪುವರು. ಕುಮಟೆಯಲ್ಲಿ ಸಂಜೆ ೫|| ಯಿಂದ ೭|| ತನಕ ಸಾರ್ವಜನಿಕ ಸಭೆ, ನಗರ ಸಭೆಯವರ ಮಾನಪತ್ರದ ಸ್ವೀಕಾರ ಮತ್ತು ನಗರ ಸಭೆಯವರು ತೆರೆಯುವ ನಭೋವಾಣಿ ಶ್ರುತಿ-(ರೇಡಿಯೋ) ಯಂತ್ರದ ಉದ್ಘಾಟನೆ ಹೀಗೆ ಕಾರ್ಯಕ್ರಮವಿದೆ

ಶನಿವಾರ ಮುಂಜಾನೆ ಮಂತ್ರಿಗಳು ಕುಮಟೆಯಿಂದ ಹೊರಟು ಶಿರ್ಸಿಗೆ ಹೋಗುತ್ತಾರೆ ಅಲ್ಲಿ ಜಿಲ್ಲಾ ಕೊಂಗ್ರೆಸ ಸಮಿತಿಯ ಕಚೇರಿಗೆ ಭೆಟ್ಟಿ, ನಗರ ಸಭೆಯ ಸದಸ್ಯರೊಡನೆ ಮಾತುಕತೆ ಇವಿಷ್ಟೇ ಕಾರ್ಯಕ್ರಮಗಳಿವೆ ಮಧ್ಯಾಹ್ನದ ಊಟ-ವಿಶ್ರಾಂತಿಗಳನ್ನು ಮುಗಿಸಿ ಸಂಜೆ ೪ಕ್ಕೆ ಸಿದ್ದಾಪುರಕ್ಕೆ ತಲ್ಪುವರು. ಅಲ್ಲಿ ೫||ಯ ವರೆಗೆ ಗ್ರಾಮ-ಪಂಚಾಯತದವರೊಡನೆ ಚರ್ಚೆ ಮತ್ತು ಸಾರ್ವಜನಿಕ ಸಭೆಯ ಕಾರ್ಯಕ್ರಮಗಳು ನಡೆಯುವವು. ಈ ಕಾರ್ಯಕ್ರಮ ಮುಗಿಸಿ ಮಂತ್ರಿಗಳು ಸಂಜೆ ೬ರ ಸುಮಾರಿಗೆ ಜೋಗ-ಜಲಪಾತಕ್ಕೆ ಮುಟ್ಟುತ್ತಾರೆ ರವಿವಾರ ಜೋಗದಲ್ಲಿಯೇ ಉಳಿದು, ಸೋಮವಾರ ಅವರು ಅಲ್ಲಿಂದ ನೆಟ್ಟಗೆ ಹುಬ್ಬಳ್ಳಿಗೆ ಹೊರಟು ಹೋಗುವರು.

— ಈ ಹಿಂದೆ ತಿಳಿಸಿದಂತೆ ಮುಂಬಯಿ ಕರ್ನಾಟಕದ ಆಯುರ್ವೇದಿಕ ಎಸ್ ಎಮ್ ಪಿ (ಸರಕಾರದ ಆಶ್ರಯದಿಂದ ಹಳ್ಳಿಗಳಲ್ಲಿ ವೈದ್ಯಕ-ವೃತ್ತಿ ನಡೆಸುವವರು) ಗಳ ಸಮ್ಮೇಲನವು ಕಳೆದ ತಾ ೨೭ಕ್ಕೆ ಬೆಳಗಾಂವಿಯ ಲಿಂಗರಾಜ ಕೊಲೇಜಿನಲ್ಲಿ, ತಾ ೨೮-೨೯ಕ್ಕೆ ಅಲ್ಲೇ ಜರುಗಿದ ನಿಖಿಲ ಕರ್ನಾಟಕ ಆಯುರ್ವೇದಿಕ ಸಮ್ಮೇಲನದ ಅಧ್ಯಕ್ಷರಾಗಿದ್ದ ವೈದ್ಯ ಗುರು ಶ್ರೀ ಹಲಸೀಕರರ ಅಧ್ಯಕ್ಷತೆಯೊಳಗೆ ಜರುಗಿತು ಎಸ್ ಎಮ್ ಪಿ ಗಳ ಸಂಘವೊಂದು ಈ ಸಭೆಯಲ್ಲಿ ಸ್ಥಾಪಿಸಲ್ಪಟ್ಟು, ಬರುವ ವರ್ಷದಲ್ಲಿ ಶ್ರೀ|| ಪದ್ಮನಾಭ ಹೈಗುಂದ ಇವರು ಅಧ್ಯಕ್ಷರಾಗಿಯೂ ಶ್ರೀ|| ರಷ್ಟೀಕಲ್ಲಿ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ ಇವರಲ್ಲದೆ ಜಿಲ್ಲೆಗಳಿಂದ ೪ ಮಂದಿ ೪ ಕಾರ್ಯಕಾರಿ ಮಂಡಳದ ಸದಸ್ಯರಾಗಿ ಚುನಾಯಿಸಲ್ಪಟ್ಟಿದ್ದಾರೆ. ಕರ್ನಾಟಕದೊಳಗಿನ ಎಲ್ಲ ವಿದ್ಯಾಪೀಠಗಳ ಹಾಗೂ ಅಖಿಲ ಭಾರತೀಯ ಆಯುರ್ವೇದ ವಿದ್ಯಾಪೀಠದ ಪದವಿಗಳನ್ನು ಮುಂಬಯಿ ಸರಕಾರವು ಮಾನ್ಯ ಮಾಡಬೇಕು. ಎಲ್ಲರಿಗೂ ಸಮಾನತೆಯಿಂದ ನಡೆಸಬೇಕು, ಗ್ರಾಮ ಚಿಕಿತ್ಸಾಲಯಗಳಿಗೆ ಬೇಕಾದ ಕುರ್ಚಿ, ಮೇಜು, ಕಪಾಟು ಮುಂತಾದ ಸಾಹಿತ್ಯಗಳನ್ನೂ, ಶಿಪಾಯಿಗಳನ್ನೂ ಪೂರೈಸಬೇಕಲ್ಲದೆ ಸರಕಾರವು ಚಿಕಿತ್ಸಕರಿಗೆ ಮನೆಗಳನ್ನೂ, ದೊರಕಿಸಿ ಕೊಡಬೇಕು, ಎಂದು ಮುಂತಾಗಿ ಕೆಲವು ತೀರ್ಮಾನಗಳೂ ಈ ಸಮ್ಮೇಲನದಲ್ಲಾಗಿವೆ

— ಗಾಂಧಿ ರಾಷ್ಟ್ರೀಯ ಸ್ಮಾರಕನಿಧಿಗೆ ಶಿರ್ಸಿಯ ಶ್ರೀ ಮಾರಿಕಾಂಬಾ ದೇವಸ್ಥಾನದ ಭಂಡಾರದಿಂದ ರೂ ೨೦೦೦ ಮತ್ತು ಶಿರ್ಸಿಯ ಅರ್ಬನ ಸಹಕಾರಿ ಬೇಂಕಿನಿಂದ ರೂ ೧೦೦೦ ಹೀಗೆ ರೂ ೩೦೦೦ ಆಚೆಯು ವರವಸೂಲ ಬಂದಿದ್ದು, ಜಿಲ್ಲೆಯವರಿಂದ ತಾ ೯-೧೧-೪೮ರ ತನಕ ಅಂತು ರೂ ೧೦೩೭೬-೧೪- ಈ ನಿಧಿಗೆ ಕೂಡಿರುವದಾಗಿ ಉತ್ತರ ಕಾನಡಾ ಜಿಲ್ಲಾ ನಿಧಿ ಸಮಿತಿಯ ಅಧ್ಯಕ್ಷ ಶ್ರೀ|| ಕೇಶವೈನ ತಿಳಿಸುತ್ತಾರೆ

— ಇದೇ ಕಳೆದ ಸಪ್ಟಂಬರ ತಿಂಗಳಲ್ಲಿ ಕಾರವಾರದಲ್ಲಾದ ಶಾನಭೋಗಿ ಪರೀಕ್ಷೆಯಲ್ಲಿ ಈ ಕೆಳಗಿನವರು ಉತ್ತೀರ್ಣರಾಗಿದ್ದಾರೆ (ಹೆಸರುಗಳು ಗುಣಾನುಕ್ರಮವಾಗಿ ಕೊಡಲ್ಪಟ್ಟಿವೆ) — ೧ ಗೋವಿಂದರಾವ ಗುನಗಾ ೨ ನಾರಾಯಣ ಲಕ್ಷ್ಮಣ ೩ ಅನಂತ ನಾರಾಯಣ ಪೈ ೪ ಶೇಕ ಹುಸೇನ ಶೇಕ ಹೈದರ ೫ ರಾಮಚಂದ್ರ ಕಾಮತ ೬ ನಾಗಯ್ಯಾ ಮಡಿವಾಳ ೭ ನಾರಾಯಣ ಗಣಪಯ್ಯಾ ಶೆಟ್ಟಿ ೮ ಭಗವಂತ ವೆಂಕಟರಮಣ ಶೆಟ್ಟಿ ೯ ಸಾವೇರ ಅಂತೋನ ಅಲ್ಮೇಡಾ ೧೦ ಅನಂತ ಲಕ್ಷ್ಮಣ ಮಹಾಲೇ ೧೧ ಕೇ ಜಿ ಭಟ್ಟ ೧೨ ಉಮಾಕಾಂತ ದೇಸಾಯಿ ೧೩ ದಾದಾ ರಾಮ ನಾಯಕ ೧೪ ಅಬದುಲ್ಲಾ ಖುದೂಸ ಮ|| ಹುಸೇನಸಾಬ ೧೫ ಆರ್ ಡಿ ಸಾವಕರ ೧೬ ಸೋಮಾ ಶಿವ ಅಮದಳ್ಳಿ ೧೭ ಉತ್ತಮ ಸವಾಲಿ ೧೮ ದತ್ತ ಕೊಯಂಡೆ ಸಾವಂತ ೧೯ ಗೋವಿಂದ ನಾರಾಯಣ ಮಹಾಲೇ ೨೦ ವಾಸುದೇವ ಗಣಪತಿ ಮಡಿವಾಳ ೨೧ ಪಾಂಡು ಬಾಬಾಶೇಟ ೨೨ ನಾರಾಯಣ ಉಮಾ ನಾಯ್ಕ ೨೩ ಬಿ ಎಮ್ ಡಿಸೋಜಾ ೨೪ ಫ್ರಾನ್ಸಿಸ್ ಫರ್ನಾಂಡಿಸ್ ೨೫ ಶಿವರಾಮ ಕೃಷ್ಣ ದೇಸಾಯಿ ೨೬ ರಾಮಾ ಪಾವಟೋ ಕದಮ ೨೭ ಶ್ರೀಕಾಂತ ಶಿವರಾಮ ಶೇಟ ೨೮ ಜೇಕಬ ಫ್ರಾನ್ಸಿಸ ರೋಡ್ರಿಗ್ಸ ೨೯ ಜಾಫರ ಖಾನ್ ಹಸನಖಾನ ೩೦ ಕುಪ್ಪಯ ಚಿಕ್ಕಯ್ಯಾ ಶೆಟ್ಟಿ ೩೧ ಕನ್ನಾ ರಾಮ ನಾಯ್ಕ ೩೨ ಲಕ್ಷ್ಮೀನಾರಾಯಣ ಹಬ್ಬು ೩೩ ನೀಲಕಂಠ ಎಸ ನಾಯ್ಕ ೩೪ ಬುದ್ವಂತ ವಾಮನ ನಾಯ್ಕ ೩೫ ವಿನಾಯಕ ಪಿ ಶೇಟ ೩೬ ಕನ್ಯಾ ಗಣಪು ಮಾವಿಕುರ್ವೆ ೩೭ ನಾಗೇಶ ಹಿರಿಯಣ್ಣ ಭಟ್ಟ ೩೮ ರಾಮ ಲಕ್ಷ್ಮಣ ನಾಯ್ಕ ೩೯ ನಾರಾಯಣ ಎಸ್. ಆಚಾರಿ ೪೦ ಅಣ್ಣಪ್ಪಾ ಎಸ್ ನಿಲೇಕಣಿ

— ಹಿಂದುಸ್ಥಾನ ಸರಕಾರದ ಬಂದರ-ಅಭಿವೃದ್ಧಿ ಸಮಿತಿಯವರು ಕರಾವಳಿಯೊಳಗಿನ ಬಂದರಗಳನ್ನು ನೋಡಿಕೊಂಡು ಹೋಗಿ ಬಹಳ ದಿನಗಳಾದವು ಅವರ ವರದಿ ತಯಾರಾಗಿದೆಯೋ ಹೇಗೆಂಬುದು ತಿಳಿದಿಲ್ಲ ಕಾರವಾರ, ಭಟಕಳ, ಮಲ್ಪೆ, ಮಂಗಳೂರು ಬಂದರಗಳ ಪರೀಕ್ಷಣವನ್ನು ಇಂಜಿನಿಯರರ ಕಡೆಯಿಂದ ಮಾಡಿಸಬೇಕೆಂದು ಸರಕಾರದವರು ನಿಶ್ಚಯಿಸಿರುವರೆಂದೂ, ಮಲ್ಪೆ-ಮಂಗಳೂರ ಬಂದರಗಳ ಪರೀಕ್ಷಣವನ್ನು ಮಾಡಿಸಲು ಮದ್ರಾಸ ಸರಕಾರವು ವ್ಯವಸ್ಥೆ ಮಾಡಿಸಿದೆಂದೂ, ಮುಂಬಯಿ ಸರಕಾರವು ಕಾರವಾರ-ಭಟಕಳ ಬಂದರಗಳ ಪರೀಕ್ಷಣಕ್ಕೆ ತಜ್ಞ ಇಂಜಿನೀಯರರನ್ನು ಕಳಿಸುವದೆಂದೂ ಈಗ ಪ್ರಕಟವಾಗಿದೆ

THE BANK OF RURAL INDIA LTD.

[Incorporated in British India, Liability of Members limited]

HEAD OFFICE — "Satyabhama Bhavan , **KARWAR.** N K

Offices at — KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital . Rs 10,00,000,

Subscribed Capital . Rs 5,00 000,

Paid-up Capital & Reserves , Rs. 5,08,502-8-0

Rates of Interest on Deposits

Current a/c @ 1% p a. *Savings Bank a/c @ 2½%*

Fixed Deposits for 3 months @ 3% per annum.

" for 6 monnths @ 3½% .

" " for 12 monhs or more @ 4% "

All kinds of modern Banking business transacted

Karwar, 14-2-1948 } **P. X GRACIOUS,** MANAGING DIRECTOR

— ಬೆಳಗಾಂವಿಯಲ್ಲಿ ಕಳೆದ ತಿಂಗಳ ಕೊನೆಯ ವಾರದಲ್ಲಿ ಕೂಡಿದ ನಿಖಿಲ ಕರ್ನಾಟಕ ಆಯುರ್ವೇದಿಕ ಸಮ್ಮೇಲನದ ಕಾಲಕ್ಕೆ ಜರುಗಿದ ಪ್ರದರ್ಶನದಲ್ಲಿ ಬಗೆಬಗೆಯ ವನಸ್ಪತಿಗಳನ್ನು ಒಟ್ಟುಗೂಡಿಸಿದ ಬಗ್ಗೆ ಶಿರಸಿಯ ವೈದ್ಯ ಶ್ರೀ|| ಗಣಪತರಾವ ಪಟವರ್ಧನ ಇವರಿಗೆ ಸುವರ್ಣ-ಪದಕ ಸಹಿತ ಪ್ರಶಸ್ತಿ ಪತ್ರ ದೊರೆತಿದೆ. ಗಣಪತರಾಯರು ಒಂದು ಉಪಯುಕ್ತ ವೈದ್ಯಕ ಗ್ರಂಥವನ್ನು ಬರೆದಿದ್ದಾರೆ.

— ರಾ| ಅಘನಾಶಿನಿ ಕಂಕರ ಇವರು ಇದೇ ಕಳೆದ ತಾ ೩೧ರಿಂದ ಶಿರಸಿಯಿಂದ ಕಿ ಣ ಎಂಬ ಕನ್ನಡ ವಾರ ಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ ಈ ಪತ್ರಿಕೆಯ ಪ್ರಾರಂಭೋತ್ಸವವು ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಬೆಳಗುತ್ತಿರುವ ರಾ ಗಣಪತರಾಯ ತಾಂಡೇಶ್ವರ ಇವರ ಹಸ್ತದಿಂದ ನಡೆಯಿತು ತಿರಣಾದ ಬಿಡಿ ಸಂಚಿಕೆಯ ಬೆಲೆ ೨ ಆಣೆ

ಸ್ಥಾನಿಕ ವೃತ್ತಾಂತ.

ಕುಮಟಾ—ಈ ಆರನ್ನು ಕಡಿಮೆಯಾಗಿದ್ದ ಕಳೆದ ಮಂಗಳವಾರ ಮತ್ತು ಗುರುವಾರ ಮಳೆಯಾದದ್ದುಂಟು ಇನ್ನು ಮಳೆಯಾಗುವ ಚಿನ್ಹೆಗಳುಂಟು

ಅಂದಿನಿಂದ ಸರಕಾರದ ಅಕ್ಕಿಯ ವ್ಯಾಪಾರ ನಿಲ್ಲಬೇಕು ನಿಲ್ಲುವದು. ಆ ಮೇಲೆ ಏನ ಗತಿ ಎಂಬುದು ಯಾರಿಗೂ ತಿಳಿಯದು! ಕೈಯಲ್ಲಿ ಹಣವಿದ್ದವರು ಕೆಲವೊಂದು ಅಕ್ಕಿಯನ್ನು ಸಂಗ್ರಹಿಸಿಟ್ಟುಕೊಳ್ಳಬಹುದು. ಅಂಥವರು ತೀರ ವಿರಳರು. ಇತರರು ವಿಶೇಷವಾಗಿ ಹೊಟ್ಟೆಯೊಸ್ಕರಗಿ ಅಕ್ಕಿ ತಂದು ಜೀವನ ಸಾಗಿಸಬೇಕಾದವರು, ಈಗ ಎಲ್ಲಿಂದ ಅಕ್ಕಿ ತರಬೇಕು? ಎಂಬುದೇ ಈಗ ಉತ್ಪನ್ನವಾದ ಪ್ರಶ್ನೆ. ಕೇಳಿಬರುತ್ತಿದೆ. ಸರಕಾರದವರ ಸೀಧಾ-ಹಂಚುವಿಕೆಗೆ ಎಂದು ಆರಂಭವಾಗುವದೆಂದು ದೇವರಿಗೇ ಗೊತ್ತು. ಸೀಧಾ-ಪದ್ಧತಿಯನ್ನು ಇಲ್ಲವೆ ಅದೇ ಬಗೆಯ ಬೇರೊಂದು ಪದ್ಧತಿಯನ್ನು ಅಮಲಿನಲ್ಲಿ ತರುವ ಯಾವದೇ ವ್ಯವಸ್ಥೆಯನ್ನು ಅವರು ಮಾಡಿದ್ದುದು ಕಂಡುಬರುವದಿಲ್ಲ! ಯಾವ ಪೂರ್ವ-ತಯಾರಿಕೆಯನ್ನೂ ಅವರು ಮಾಡಿದ್ದುದು ದೃಷ್ಟಿಗೂ ಬೀಳುವದಿಲ್ಲ! ಕಿವಿಗೂ ಬೀಳುವದಿಲ್ಲ! ಇಂಥ ಪರಿಸ್ಥಿತಿಯಲ್ಲಿ ಜನರು ಕಂಗಾಲಾಗಿ ನಿಯಂತ್ರಣವನ್ನೂ ನಿಯಂತ್ರಣ ಹೇರುವ ಸರಕಾರವನ್ನೂ ಬಾಯಿಗೆ ಬಂದಂತೆ ಬಯ್ಯಲು ಪ್ರಾರಂಭಿಸಿದರೆ ಅವರ ಬಾಯಿ ಕಟ್ಟುವದೆಂತು? ಅವರಿಗೆ ಏನು ಸಮಾಧಾನ ಹೇಳಬೇಕು?

ಮಂಗಳೂರಿನಲ್ಲಿ ಕಳೆದ ತಾ ೪ನೇಗೆ 'ನಾಡಹಬ್ಬ'ದ ನಿಮಿತ್ತವಾಗಿ ರಾ|| ವಿಶ್ವೇಶ್ವರ ಹೆಗಡೆ ಇವರ ಅಧ್ಯಕ್ಷತೆಯಲ್ಲಿ, ಕನ್ನಡ ಶಾಲೆಯೊಳಗಿನ ವಿದ್ಯಾರ್ಥಿಗಳ ಹಾಗೂ ಊರವರ ಸಭೆಯಾಗಿ, ಅಲ್ಲಿಯ ಏಳಿಗೆಗೆ ಸಂಬಂಧಪಟ್ಟ ಬೇರೆ ಬೇರೆ ವಿಷಯಗಳ ಮೇಲೆ ಬೇರೆ ಬೇರೆ ಜನರ ಭಾಷಣಗಳೂ, ಕೊನೆಗೆ ವಿದ್ಯಾರ್ಥಿಗಳ "ಚತ್ರಾಂಗದಾ" ನಾಟಕವೂ ಆದವು

ಅರಣ್ಯದ ಅಂಕೋಲಾ ಕುಮಟಾ ಮತ್ತು ಭಟಕಳ ಇಲ್ಲಿಯ ಬೇಸಾಯಗಾರರ ಸಹಕಾರ ಸಂಘಗಳಿಗೆ ಇಲ್ಲಿ ಸುಪರವೈಸರರನ್ನು ನೇಮಿಸಿ ತಿಂಗಳು ಸಂಬಳ ಕೊಡಬೇಕು ಸಂಘಗಳ ಕೆಲಸದ ಮಾಹಿತಿಯುಳ್ಳ ಅವರು ಅರ್ಜಿ ಮಾಡಬೇಕೆಂದು ಬೆಳಗಾಂವಿಯಲ್ಲಿರುವ ಸಹಕಾರಿ ಸಂಘಗಳ ಡೆಪ್ಯುಟಿ ರಜಿಸ್ಟ್ರಾರರು ಜಾಹೀರು ಹೊರಡಿಸಿದ ಮೇರೆಗೆ ಕರಾವಳಿಯ ಕೆಲವರು ಅರ್ಜಿ ಹಾಕಿದ್ದರು ಅವರಿಗೆ ಸಮಕ್ಷ ಭೆಟ್ಟಿಗಾಗಿ ಕಳೆದ ತಾ ೨೮ಕ್ಕೆ ಬೆಳಗಾಂವಿಗೆ ಕರೆಯಿಸಲಾಗಿತ್ತು. ಅದರಂತೆ ೧೩ ಮಂದಿ ಉಮೇದವಾರರು ಬೆಳಗಾಂವಿಗೆ ಹೋಗಿ ಡೆಪ್ಯುಟಿ ರಜಿಸ್ಟ್ರಾರರನ್ನು ಭೆಟ್ಟಿಯಾದವರು ೩ ದರಿ ಈಗ ಪ್ರತ್ಯಕ್ಷ ನೇಮಣೂಕಿಯಾದವರಲ್ಲಿ ಇಬ್ಬರು (೧ ಸುಪರವೈಸರ ಮತ್ತು ೧ ಕಾರಕೂನ) ಭೆಟ್ಟಿಗೆ ಹೋಗದವರಾಗಿದ್ದಾರೆ! ಸುಪರವೈಸರ ಸ್ಥಳಕ್ಕೆ ಅರ್ಜಿ ಮಾಡುವವರು ಕನಿಷ್ಠ ಕನ್ನಡ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದವರಿರಬೇಕೆಂದು ಹೇಳುವ ಡೆ| ರಜಿಸ್ಟ್ರಾರರು ಮಂಲ್ಕೀ ಪಾಸಾಗದವನೊಬ್ಬನಿಗೆ ಸುಪರವೈಸರ ನೇಮಿಸಿದ್ದಾರೆ! ೩-೪, ೪ ೪ ವರ್ಷ ಬೇಸಾಯ ಸಂಘಗಳಲ್ಲಿ ಕೆಲಸ ಮಾಡಿದ ಅನುಭವಿಕ ಉಮೇದವಾರರು ತಮ್ಮ ಮುಂದಿರುವಾಗ ಹೊಸ್ತಿಲನ್ನೇ ಈ ಕ್ಷೇತ್ರದಲ್ಲಿ ಪ್ರವೇಶ ಮಾಡಿಯಿರದ ಒಬ್ಬನಿಗೆ ಕಾರಕೂನನನ್ನಾಗಿ ನೇಮಿಸಿದ್ದಾರೆ! ಒಟ್ಟಿನಮೇಲೆ ಸಂಬಂಧದಲ್ಲಿ ನಮ್ಮ ನ್ಯಾಯವೇ ಸಿಕ್ಕಬೇಕೆಂದಿರದ ವರಂತೆ! ಹೀಗೆ ಪರೀಕ್ಷೆಯಿಂದ ನೇಮಣೂಕಿಗಳಾಗುತ್ತಿರುವಲ್ಲಿ ಹಲವಾರು ಜನರಿಂದ ಡೆಪ್ಯುಟಿ ರಜಿಸ್ಟ್ರಾರ ಅರ್ಜಿಗಳನ್ನು ಬರೆಮಾಡಿಕೊಳ್ಳುವದೇಕೆ ಸಮಕ್ಷ ಭೆಟ್ಟಿಗಾಗಿ ಅನೇಕರಿಗೆ ಬೆಳಗಾಂವಿ-ಯಾತ್ರೆಯು — ಅದೂ ಇಂದಿನ ತುಟ್ಟಿಯ ದಿನಗಳಲ್ಲಿ — ಶ್ರಮ ಕೊಡುವದೇಕೆ? ಎಂದು 'ಗುಟ್ಟು ಬಲ್ಲವ' ರೊಬ್ಬರು ಬರೆಯುತ್ತಾರೆ

ಹೊನ್ನಾವರ—(ತಾ ೧೦ ೧೧ ೪೮) ಪ್ರಾಥಮಿಕ ಶಾಲಾ-ಶಿಕ್ಷಕರಿಗೆ ತಾತ್ಕಾಲಿಕ ಶಿಕ್ಷಣ ಪದ್ಧತಿ ಕಲಿಸುವ ಬಗ್ಗೆ ಇಲ್ಲಿಯ ಸೆಂಟ್ರಲ ಫಾರ್ಮ ಶಾಲೆಯಲ್ಲಿ ನಕ್ಷೆ ಶಿಕ್ಷಣಾಧಿಕಾರಿಗಳು ಒಂದು ಆರು ಅವಧಿಯ ವರ್ಗವನ್ನು ತೆರೆದಿದ್ದಾರೆ ಈ ವರ್ಗ ೩ ತಿಂಗಳು ನಡೆಯುವದಂತೆ. ವರ್ಗದ ಪ್ರಾರಂಭೋತ್ಸವವು ಇಂದು ಮಧ್ಯಾಹ್ನ ಶ್ರೀ ಶಿವರಾವ ಕಾಸ್ಟಾರು ಅಧ್ಯಕ್ಷತೆಯಲ್ಲಿ ನಡೆಯಿತು

ತಾ ೧೮-೧ ೪೮ರ ವೃತ್ತ"ದಲ್ಲಿ ಹೊನ್ನಾವರ ಸೀಧಾ-ಕಚೇರಿಯವರ ವಿರುದ್ಧ ಪ್ರಕಟಿಸಿದ ಟೀಕೆ ಸರಿಯಾಗಿರುವದಿಲ್ಲೆಂದು ಓರ್ವರು ಬರೆಯುತ್ತಾರೆ ಅಕ್ಟೋಬರ ೨ ತಿಂಗಳಿಂದ ಸೀ ಧಾ ಚೀಟಿಗಳಲ್ಲಿ ಕಡಿತ ಮಾಡಿ ೧೦೦ಕ್ಕೆ ೩೦ರಷ್ಟು ಮಾತ್ರ ಊರ್ಜಿತವಿರಬೇಕೆಂದು ಕಲೆಕ್ಟರರ ಆಜ್ಞೆ ಇತ್ತೆಂದೂ ಹೀಗಾದಾಗ್ಯೂ ಊರಲ್ಲಿ ಬಡವರ ಸಂಖ್ಯೆ ಹೆಚ್ಚಿಗೆಯಿರುವದರಿಂದ ಸೀಧಾ-ಅಧಿಕಾರಿಗಳು ೧೦೦ಕ್ಕೆ ೭೦ರಷ್ಟು ಸೀಧಾ ಚೀಟಿಗಳನ್ನು ಊರ್ಜಿತಗೊಳಿಸಿರುವರೆಂದೂ, ಸುಳ್ಳು ಮಾಹಿತಿ ಕೊಟ್ಟು ಸೀಧಾ ಪಡೆಯುತ್ತಿದ್ದ ಕೆಲವರ ಚೀಟಿಗಳನ್ನು ಅಧಿಕಾರಿಗಳು ಶಿಕ್ಷಿಸುವದರಿಂದ, ಹಾಗೆ ಸೀಧಾ ಚೀಟಿ ರದ್ದಾದವರು ಇಲ್ಲದ ಸಲ್ಲದ ದೂರುಗಳನ್ನು ಎಬ್ಬಿಸಿರುವರೆಂದೂ "ವೃತ್ತ"ದಲ್ಲಿ ಪ್ರಕಟವಾದ ಹೇಳಿಕೆ ಅವರ ಪ್ರತಿಧ್ವನಿಯಾಗಿರುವದೆಂದೂ ಅವರ ಅಂಬೋಣವಿದೆ

(ತಾ ೧೪-೧೧ ೪೮) ೩ ೪ ದಿನಗಳ ಹಿಂದೆ ಕಾಸರಕೋಡಿನಲ್ಲಿ ಸಣ್ಣದೊಂದು ದೊಂಬಿಯೆದ್ದು ಬಂದು ಇರಿದ ಪ್ರಸಂಗವುಂಟು. ಈ ದೊಂಬಿ ಬರುವ ಅವಮಾನವನ್ನು ಕಾಸರಕೋಡಿನ ಪಟೇಲರೂ ಹಾಗೂ ಇತರರೂ ಇಲ್ಲಿಯ ಪೋಲೀಸ ಕಚೇರಿಗೆ ಮುಂದಾಗಿ ತಿಳಿಸಿ, ಹಾನಿ ದೊಂಬಿಗಳವರನ್ನು ಹಿಡಿಯಲು ತಮಗೆ ಸಹಾಯ ಮಾಡುವದಕ್ಕೆ ಕೆಲವೊಂದು ಪೋಲೀಸರನ್ನು ಕಳಿಸಿಕೊಡಬೇಕಾಗಿ ವಿನಂತಿ ಮಾಡಿದ್ದರಂತೆ ಅದರಂತೆ ಇಲ್ಲಿಂದ ಪೋಲೀಸರು ಕಾಸರಕೋಡಿಗೆ ಹೋಗಿದ್ದರು ಆದರೆ ಅಷ್ಟರಲ್ಲಿ ಸಣ್ಣಯ ದೊಂಬಿಯು ಬಂದಿರದು ಸರಾಯಿಯ ವ್ಯವಸ್ಥೆ ಮುಗಿದುಹೋಗಿತ್ತಂತೆ! ಈ ಕರಂಗದಲ್ಲಿ ಪಟೇಲರಿಗೂ ಹವಾಲದಾರರಿಗೂ ಹೊಡೆದ ಎದ್ದು ಸಿದ್ಧಿಯಾದ ಕೃತಿ ನಡೆದು ಆಕೆ ಪೋಲೀಸ ಸರಾಯಿಗಳೆಲ್ಲರು ಈ ಅಧಿಕಾರಿಗಳು ಒಂದು ಮನೆಯ ಸ್ಥಳಕ್ಕೆ ಕರೆಕೊಂಡು ಹೋಗಿ, ಅಲ್ಲಿ ಕೈಯಲ್ಲಿ ಹಣವಿದ್ದವರ ಒದಲು ತಲೆಯ ಮೇಲೆ ಬಡಿಗೆಯ ಏಟು ಕೊಟ್ಟರೆಂದು ಹೇಳುತ್ತಾರೆ!

ಶಿರಸಿ—(ತಾ ೧೩-೧೧-೪೮) ಇಲ್ಲಿಯ ಒತೆಯ ಒಕ್ಕಲಿಗರು ಕಳೆದ ವರ್ಷ ಹಿಂದಿನ ಮಾಮಲೇ ಸ್ಥಳಗಳಲ್ಲಿ ಬೆಳೆಯ ಕೆತ್ತಗಳನ್ನು ಹಾಕಿ ತಮ್ಮೊಕ್ಕಲಿನ ವಿನಾವನ್ನು ಬಗೆಹರಿಸಿಕೊಂಡಿದ್ದರು ಕೃಷಿಸಂಘದ ಮುಂದಾಳುಗಳು ಹೇಳಿಸಿಕೊಳ್ಳುವ ಪೋಲೀಸರಿಗೆ ಈ ವ್ಯವಸ್ಥೆ ಒಪ್ಪಿಗೆಯಾಗಲಿಲ್ಲವಂತೆ ಕೃಷಿಸಂಘ ಕೂಡಿ ಒಂದು ಬಳ ಸಮರದಿಂದಲೆ ಎಲ್ಲ ಕೃಷಿಕರು ಅಲ್ಲಿ ತಮ್ಮ ಕೆತ್ತಗಳನ್ನು ಬಿಡಬೇಕೆಂದೂ ಅವರು ಠರಾವು ಮಾಡಿದ್ದಾರೆಂದು ತಿಳಿಯುತ್ತದೆ. ಒಡೆಯ ಜನರಿಗೆ ಈ ಹೊಸ ವ್ಯವಸ್ಥೆ ಒಪ್ಪಿಗೆಯಾಗಲಿಲ್ಲ. ಈ ವಿವಾದ ಮುಂದೆ ಇಲ್ಲಿಯ ಮಾಮಲೇದಾರರ ಎದುರಿಗೆ ಬಂತು. ಆಗ ಮಾಮಲೇದಾರರು ಮಾಮಲೇದಾರರು ನಡೆಯುತ್ತದೆ ಆಗದಿದ್ದರೆ ಗ್ರಾಮ ಪಂಚಾಯತಿಯ ಬಳಿ ಬೆಳೆಯ ಕೆತ್ತಗಳನ್ನು ಹಾಕಬೇಕೆಂದೂ ಒಕ್ಕಲಿಗರಿಗೆ ಬೋಧಿಸಿದರು ಕೃಷಿಕರಿಗೆ ಈ ವ್ಯವಸ್ಥೆಯೂ ಒಪ್ಪಿಗೆಯಾಗಲಿಲ್ಲ! ಈ ಕದನದಲ್ಲಿ ಬೆಳೆಯು ಘಣಿಯಾಗುವದೆಂಬ ಭೀತಿಯುಂಟಾಯಿತು. ಒಡೆಯ ಒಕ್ಕಲಿಗರೊಳಗೆ ಎಲ್ಲಿ ಹೊಡೆದಾಟವಾಗುತ್ತದೋ ಎಂಬ ಆಂಜಿಕೆಯೂ ಉಂಟಾಯಿತು, ಅದರಿಂದ ಅಧಿಕಾರಿಗಳು ಬೆಳೆಯ ಕಾಯಲು ಮಾತ್ರ ಪಹರೆಗಾಗಿ ಪೋಲೀಸ ಪಡೆಯನ್ನು ಕಳಿಸಿಕೊಡುವ ಪ್ರಸಂಗ ಬಂತು! ಹೀಗೆ ಒಡೆಯ ಒಕ್ಕಲಿಗರ ಅಂಟಿನ ಮುಂಚಿನ ಬೆಳೆ ಗದ್ದೆಯೊಳಗೇ ಉಳಿದು, ಆಗಾಗ ಬೀಳುತ್ತಿರುವ ಮಳೆಯಿಂದ ಮಣ್ಣು ಪಾಲಾಗುವ ಪ್ರಸಂಗ ಬಂದಿದೆ!

ಭಟಕಳ—(ತಾ ೮-೧೧-೪೮) ಪೇಟೆಯಲ್ಲಿ ಧೂಳಿನ ಉಪದ್ರವಕ್ಕೆ ಆರಂಭವಾಗಿದೆ ಮ್ಯುನಿಸಿಪಾಲಿಟಿಯವರು ನೀರು ಹಾಕಿಸುವ ವ್ಯವಸ್ಥೆ ಮಾಡಬೇಕು

ಲಕ್ಷ್ಮೀವಿಲಾಸ ಚಹಾ ಕಂಪನಿಯ ಇಲ್ಲಿಯ ಏಜಂಟರಾಗಿದ್ದ ರಾ| ಜೋಯಿಸರು ಕಂಪನಿಗೂ ಕೆಲವು ಗಿರಾಕಿಗಳಿಗೂ ವಂಚಿಸಿ ಫರಾರಿಯಾಗಿದ್ದಾರೆ ಕಂಪನಿಯ ಇನ್ಸಪೆಕ್ಟರರು ತನಿಖೆಗೆ ಬಂದಾಗ ರಾ| ಜೋಯಿಸರ ಕಡೆಗಿದ್ದ ಕೆಲವು ಚಹಾ ಪೆಟ್ಟಿಗೆಗಳಲ್ಲಿ ಚಹಾ ತೆಗೆದು ಬದಲು ರದ್ದಿ ತುಂಬಿಟ್ಟದ್ದು ಕಂಡುಬಂತಂತೆ! ಇನ್ಸಪೆಕ್ಟರರು ಆಗ ಈ ಪ್ರಕರಣವನ್ನು ಪೋಲೀಸರ ವಶಕ್ಕೆ ಒಪ್ಪಿಸದೆ, ಕೊರತೆ ಬೀಳುವ ಚಹಾ ಕೊಟ್ಟಿನ ಹಣವನ್ನು ತುಂಬಲು ಜೋಯಿಸರಿಗೆ ತಿಳಿಸಿದರಂತೆ ಆಗ ಹಣ ತುಂಬಬೇಕೆಂದು ರಾ| ಜೋಯಿಸರು ಕೆಲವು ಮಿತ್ರರ ಕಡೆಯಿಂದ ರೂ ಅಂದಾಜು ಒಟ್ಟುಗೂಡಿಸಿದ್ದರು, ಆದರೆ ಮುಂದೆ ಅವರ ಪತ್ತೆಯೇ ಇಲ್ಲ!

ಇಲ್ಲಿಯ ಮ್ಯುನಿಸಿಪಾಲಿಟಿಯ ಕಾರಭಾರದಲ್ಲಿ ಪಕ್ಷಪಾತ ಬಹಳವಾಗಿದೆಂದು ಜನರು ದೂರುತ್ತಾರೆ "ನಮ್ಮವರು" ಮ್ಯುನಿಸಿಪಾಲಿಟಿಯ ಕಚೇರಿಯ ಸಮೀಪ ಅತಿಕ್ರಮ ಮಾಡಿ ಅಂಗಡಿ ಕಟ್ಟಿಸಿದರೆ ಅಲ್ಲದೆ ಪಾಲಿಟೆಕ್ಟಿಯಿಂದ ರಸ್ತೆಗಳಿಕ್ಕೆ ಹೋಗುವ ರಸ್ತೆಯ ಅಂಚಿಗೆ ಹೊಲಸು ನೀರು ಬಿಟ್ಟರೆ ಮ್ಯುನಿಸಿಪಾಲಿಟಿಯು ಯಾವದೇ ಕ್ರಮ ಕೈಕೊಳ್ಳುವದಿಲ್ಲ! ಜನರ ಕಡೆಯಿಂದ ಅರ್ಜಿಗಳು ಬಂದರೂ ನಗರಾಧ್ಯಕ್ಷರು ಅವನ್ನು ಮೂಲೆಗೆ ಎಸೆಯುತ್ತಾರೆ

ಶಿರಸಿ— ಇಲ್ಲಿಯ ಶ್ರೀ ಮಾರಿಕಾಂಬಾ ಹೈಸ್ಕೂಲಿನ ಶಿಕ್ಷಕ ವರ್ಗದಲ್ಲಿ ಯಾವಾಗಲೂ ಬದಲುಗಳ ನಡೆಯುತ್ತಿರುವದರಿಂದ ಶಾಲೆಯ ಶಿಕ್ಷಣದ ಮೇಲೂ ಶಾಲೆಯೊಳಗಿನ ವಾತಾವರಣದ ಮೇಲು ಬಹಳ ಕೆಟ್ಟ ಪರಿಣಾಮಗಳಾಗುತ್ತಿದ್ದವ ಶಾಲೆಯ ಮುಖ್ಯಾಧ್ಯಾಪಕರು ಹಾಗೇ ಶಾಲೆಯ ಸಂಚಾಲಕರು ತಮ್ಮಂತೆ ಇತರ ಶಿಕ್ಷಕರು ನಡೆಯಬೇಕೆಂದೂ ಹಾರೈಸುತ್ತಿದ್ದರು, ಕೆಲವು ಮಂದಿ ಶಿಕ್ಷಕರು ಈ ಮಾತಿಗೆ ವಿರೋಧ ಮಾಡಿ ಶಿಕ್ಷಕರ ಬಹುಮತದಂತೆ ಶಾಲೆಯ ಕಾರಭಾರ ಸಾಗಬೇಕೆಂದು ಪ್ರತಿಪಾದಿಸುತ್ತಿದ್ದರು ಈ ಪ್ರಕರಣವನ್ನು ಈಗ ಮ್ಯುನಿಸಿಪಾಲಿಟಿ ಶಾಲಾ ಬೋರ್ಡಿನವರು ಸಮಾಧಾನಕರವಾಗಿ ಬಗೆಹರಿಸಿದ್ದಾರೆಂದು ತಿಳಿಯುತ್ತದೆ. ಕೆಲವೊಂದು ಅಧಿಕಾರಿಗಳನ್ನು ... ತಮ್ಮ ಕೈಯಲ್ಲಿಟ್ಟುಕೊಂಡು, ...

(ಮುಂದೆ ೭ನೇ ಪುಟ ನೋಡಿರಿ)

ಪ್ರಾಂತ ಸಮಾಚಾರ.

ಅಂಕೋಲಾ— (ತಾ ೨೪ ೧೦-೪೮) [illegible]

[illegible]

ಯಲ್ಲಾಪುರ— [illegible]

[illegible]

[illegible]

ಶಿರಸಿ— [illegible]

[illegible]

ಮುಂಡಗೋಡ— [illegible]

ಅರ್ಜಿ.

[illegible]

L F Saldanha,
ಹಳ್ಳ ಮಾರ್ಕೆಟ, ಕಾರವಾರ.

ಪತ್ರಿಕಾ-ಪ್ರಕಟನೆ.

ಆಹಾರ-ಧಾನ್ಯಗಳ ಮೇಲಿನ ಪುನಃ ನಿಯಂತ್ರಣವನ್ನು [illegible] ಈ ಕೆಳಗೆ ಕಾಣಿಸಿದ ಅರ್ಥದ ಪ್ರತಿಬಂಧಕಾಜ್ಞೆಗಳನ್ನು ಹೊರಡಿಸಿದೆ —

(೧) ಜಿಲ್ಲೆಗಳೊಳಗಿನ ಭತ್ತ ಬೆಳೆಯುವ ಪ್ರದೇಶಗಳೊಳಗಿಂದ ಭತ್ತ, ಅಕ್ಕಿ ಯಾ ಅವುಗಳ ಪದಾರ್ಥಗಳನ್ನು ಯಾರೂ ಹೊರಗೆ ಒಯ್ಯ ಕೂಡದು.

(೨) ಅಕ್ಕಿ-ಭತ್ತಗಳನ್ನಾಗಲಿ ಅವುಗಳ ಪದಾರ್ಥಗಳನ್ನಾಗಲಿ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಯಾರೂ ಒಯ್ಯಕೂಡದು.

(೩) ಈ ಕೆಳಗೆ ಹೇಳಿದ ಪ್ರಸಂಗಗಳನ್ನು ಹೊರತು ಬೇರೆ ಯಾರೂ ಖಾಸಗಿ ರೀತಿಯಿಂದ ಅಕ್ಕಿ-ಭತ್ತಗಳನ್ನು ಅಥವಾ ಅವುಗಳ ಪದಾರ್ಥಗಳನ್ನು ಕೊಂಡುಕೊಳ್ಳಕೂಡದು ಯಾ ಮಾರಕೂಡದು.

ಅಪವಾದ ಪ್ರಸಂಗಗಳು.

(೧) ಯಾವನೊಬ್ಬ ಬೇಸಾಯಗಾರನು—(ಅ) [illegible] (approved) [illegible] (other accretion) [illegible] (superior holder) [illegible]

[illegible]

ಭತ್ತದ ಜಾತಿ	ಪ್ರತಿ ಖಂ. ಮಾರದ ಬೆಲೆ
[illegible] ಜಾತಿಯ ಭತ್ತ	ರೂ [illegible]
ಮಧ್ಯಮ ಜಾತಿಯ ಭತ್ತ	ರೂ [illegible]
[illegible] ಜಾತಿಯ ಭತ್ತ	ರೂ [illegible]

[illegible]

[illegible]

[illegible] ಉತ್ತರಕೆಗಾಗಿ, ಕೆಲವು ಪಟ್ಟಿಗಳನ್ನು [illegible] ಶಿಕ್ಷಕರದೊಂದು ಮಂಡಳಿಯು ಆ ಪಟ್ಟಿಗಳನ್ನು [illegible] ಭಾಷೆಯ ಅರ್ಥಕ ನಡೆಸಬೇಕೆಂದು ಗೊತ್ತಾಗಿದೆ.

ಕೆಂಗ್ರಿ [illegible] ಆಟದಿಂದ [illegible] ಬಹಳ [illegible] ಅದರ [illegible] ಪ್ರಶಸ್ತಿಯಲ್ಲಿಂದಲೂ [illegible] ಕೇಳಿದ್ದಾರೆ. [illegible] ನಾವು [illegible] ಅದರ ಪ್ರಯೋಜನ [illegible] ಏನೇನೂ [illegible] ಆ ಭಾಗದ [illegible] ಜನರ ದೂರುಂಟು.

ಸಿದ್ಧಾಪುರ— (ತಾ. ೯-೧೧-೪೮) [illegible] ದಕ್ಷಿಣ ಭಾಗ [illegible] ಮಧ್ಯಮಾ [illegible] ಪರೀಕ್ಷೆಗಳಿಗೆ [illegible] ಹಿಂದೀ ಪ್ರಚಾರದಿಂದ ಅನುಕ್ರಮವಾಗಿ [illegible] ಅವರಲ್ಲಿ ಅನುಕ್ರಮವಾಗಿ [illegible] ವಿದ್ಯಾರ್ಥಿಗಳು [illegible] ಹೊಂದಿದ್ದಾರೆ. ಅವರ ಶ್ರೇಯಸ್ಸು ಹಿಂದೀ ಪ್ರಚಾರಕರಾದ ರಾ॥ [illegible] ಭಟ್ಟ [illegible] ಸಲ್ಲುತ್ತದೆ.

[illegible] ಯೋಗ್ಯ ದರದ ಅಂಗಡಿಯವರು [illegible] ಬಗ್ಗೆ ಕೊಟ್ಟ [illegible] ಗಳನ್ನು [illegible] ಕೆಲವರಿಗೆ ಮಾತ್ರ ಅರ್ಧ [illegible] ಎಷ್ಟು ಕೊಟ್ಟರೆ [illegible] ಅಂಗಡಿಯವರಿಗೆ ಆಹಾರ ಧಾನ್ಯಗಳ [illegible] ಜನರು ಸಂಕಟದಲ್ಲಿ [illegible]

ಮುಂಡಗೋಡ— (ತಾ. ೬-೧೧-೧೯೪೮) ಇಲ್ಲಿಯ [illegible] ರಾ॥ [illegible] ಅವರಿಗೆ [illegible] ಅದರಿಂದ ಜನರು [illegible] ರಾ॥ [illegible] ಅವರಿಗೆ [illegible] ಸಭೆಯಲ್ಲಿ ಹಲವರು [illegible] ರಾ॥ [illegible] ಗುಣಗಾನ ಮಾಡಿದರು.

ಕಾರವಾರ— ಇಲ್ಲಿಯ [illegible] ಬಂದಿದ್ದಾರೆ. [illegible]

[illegible] ಕಾರವಾರ, ಅಂಕೋಲಾ [illegible] ಶಿಕ್ಷಕರಿಗೆ [illegible] ಶಿಕ್ಷಣ [illegible] ಉದ್ಘಾಟನೆಯು [illegible]

ಇಲ್ಲಿಯ [illegible] ಉತ್ಸವ [illegible] ಹರಿಜನ ವಿದ್ಯಾರ್ಥಿ [illegible] ಉದ್ಘಾಟನೆ [illegible] ಗುರುವಾರ [illegible] ಸ್ವಾತಂತ್ರ್ಯದ [illegible] ಆಚರಿಸಲಾಗಿದೆ.

[illegible] ದಿನ [illegible]

ಇಲ್ಲಿಯ [illegible] ಆಸಿಸ್ಟಂಟ [illegible] ಸುದ್ದಿ ಬಂದಿದೆ.

ವಾರ್ತೆಗಳು

—ಕಳೆದ ವಾರದಿಂದ ಬೆಳಗು ಮುಂಜಾನೆಯಲ್ಲಿ ಆಗ್ನೇಯ ದಿಕ್ಕಿನಲ್ಲಿ ಒಂದು ಧೂಮಕೇತು ಕಾಣಿಸ ಹತ್ತಿದೆ ಇದು ಆಸ್ಟ್ರೇಲಿಯಾದವರಿಗೆ ಪ್ರಥಮತಃ ದೃಷ್ಟಿಗೆ ಬಿದ್ದಿತು ಹಿಂದುಸ್ಥಾನದಲ್ಲೂ ಬಹಳ ಕಡೆ ಅದನ್ನು ಜನರು ನೋಡಿದ್ದಾರೆ (ನೊಕ್ಕೆ ಹೆಗಡೆಯ ಜನರು ನೋಡಿದ ಸುದ್ದಿ ಬಂದಿದೆ) ಈ ಧೂಮಕೇತುವು ಬೆಡ್ಮಿಂಟನ್ ಆಟಸೋಳಿಗೆ ಉಪಯೋಗಿಸುತ್ತಿರುವ [illegible] (ಶಟ್ಲಕೋಕ) ಆಕಾರದ್ದಿರುತ್ತದೆ ಅದರ ಬಾಲ ಉತ್ತರಕ್ಕಿಂಟಿದೆ ಧೂಮಕೇತುವಿನ ದರ್ಶನವು ಅನಿಷ್ಟ-ಸೂಚಕವೆಂದು [illegible] ಲೋಕಾನುಭವವುಂಟು ೭ನೇ ಎಡ್ವರ್ಡ ಬಾದಶಹರ [illegible] ಸಮಯದಲ್ಲಿ, ೫ನೇ ಜಾರ್ಜ ಭೂಪತಿಗಳ ನಿರ್ಯಾಣದ ಕಾಲಕ್ಕೂ, ೨ನೇ ಮಹಾಯುದ್ಧ ಒದಗಿದ ಕಾಲಕ್ಕೂ, ಕಳೆದ ವರ್ಷ ಜಗದ್ವಂದ್ಯ ಮಹಾತ್ಮರ ಅವಸಾನ ಸಮಯಗಳಲ್ಲಿ ಧೂಮಕೇತುವಿನ ದರ್ಶನವ ದಾಖಲೆ [illegible] ಪ್ರಸ್ತುತ ಧೂಮಕೇತುವಿನ ದರ್ಶನದಿಂದ ಆಗಬಹುದಾದ ಅನಿಷ್ಟಗಳನ್ನು ಕೆಲವು ಜ್ಯೋತಿಷಿಗಳು ವರ್ತಿಸಿದ್ದಾರೆ ಭಾರತೀಯ ಜ್ಯೋತಿಃಶಾಸ್ತ್ರದಂತೆ ಸದ್ಯದ ಧೂಮಕೇತುವು ಕನ್ಯಾ-ರಾಶಿಯಲ್ಲಿ ಉದಯ ಹೊಂದಿದೆ, ಕ್ಷಿತಿಜದಿಂದ ಇದು ೮-೧೦ ಅಂಶಗಳಲ್ಲಿ ಕಾಣುತ್ತಿರುವದರಿಂದ ಜ್ಯೋತಿಶ್ಶಾಸ್ತ್ರದ ಪ್ರಕಾರ ಇದು ಸಂವರ್ತ ಧೂಮಕೇತುವಾಗುತ್ತದೆ ಇದರ ದರ್ಶನದ ಫಲವಾಗಿ ಹಿಂದುಸ್ಥಾನ-ಪಾಕಿಸ್ಥಾನಗಳ ನಡುವೆ ಯುದ್ಧವೇರ್ಪಡಬಹುದೆಂದೂ, ಯುದ್ಧವಾದರೆ ಪಾಕಿಸ್ತಾನವು ೧ ಸಿಗೊಳ್ಳುವದೆಂದೂ ಅನುಭವಿಕ ಜ್ಯೋತಿಷಿಗಳು ಭವಿಷ್ಯ ವರ್ತಿಸಿದ್ದಾರೆ. ಕೆಲ್ಲಿಪೋರ್ನಿಯಾದ ಸಿಬ್ಸನ ಆರ್ಕ ಜೋತಿರ್ವೀಕ್ಷಕ ಕೇಂದ್ರದವರು ಅದರ ಛಾಯಾಚಿತ್ರ ತೆಗೆದಿಟ್ಟಿದ್ದಾರೆ

—ಹಿಂದುಸ್ಥಾನ-ಪಾಕಿಸ್ಥಾನಗಳೊಳಗಿನ ವಿತುಷ್ಟವು ಬೇಗನೇ ಯುದ್ಧದಲ್ಲಿ ರೂಪಾಂತರ ಹೊಂದುವ ಲಕ್ಷಣಗಳು ತೋರುತ್ತಿವೆ ಕಾಶ್ಮೀರ ಜಮ್ಮು ಪ್ರದೇಶಗಳಲ್ಲಿ ಪಾಕಿಸ್ಥಾನದ ಸೈನಿಕರು ಸೇರಬಹುದೆಂದೂ ಪಾಕಿಸ್ಥಾನದ ವೈಮಾನಿಕ ಸೈನಿಕರು ಆ ಪಾರ್ಶ್ವದಲ್ಲಿ ಹೋರಾಡಬಹುದೆಂದೂ ನಿರೀಕ್ಷಕರು ಹೇಳುತ್ತಾರೆ. ಪಾಕಿಸ್ಥಾನವು ಅತಿಕ್ರಮ ಮಾಡಿದರೆ, ಹಿಂದುಸ್ಥಾನವು ಪಾಕಿಸ್ಥಾನದ ವಿರುದ್ಧ ಯುದ್ಧ ಸಾರಿ ಜಾಹೀರ, ಸಿಯಾಲಕೋಟ, [illegible] ಭಾಗಗಳಲ್ಲಿ ತನ್ನ ಸೈನ್ಯವನ್ನು ಒಳನುಗ್ಗಿಸುವದು ಅನಿವಾರ್ಯವೆಂದು [illegible] ಪಾಕಿಸ್ತಾನ ಸೈನಿಕರು ರಾತ್ರಿಗೆಯುದ್ಧಕ್ಕಾಗಿ ಸರದಾರ ಪಟೇಲರು ಸದ್ಯಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ ಆ ಪ್ರಕಾರ ಪ್ರಸಂಗ ಬಂದರೆ ಹೈದರಾಬಾದದಂತೆಯೇ ಪಾಕಿಸ್ಥಾನದ ವಿರುದ್ಧ ಕ್ರಮ ಕೈಕೊಳ್ಳಬಾರದೇಕೆಂದೂ ಅವರು ಸೂಚಿಸಿದ್ದಾರೆ. ದಿಲ್ಲಿಯೊಳಗೆ ಪಂ॥ ನೆಹರುಂವರೂ ಹಿಂದುಸ್ಥಾನ ಸರಕಾರದವರೂ ಸೇನಾಪತಿಗಳೂ ಸೈನ್ಯ [illegible] ಈ ವಿಷಯವನ್ನು ಗಾಂಭೀರ್ಯದಿಂದ ಆಲೋಚಿಸುತ್ತಿರಾಗಿ ದಿಲ್ಲಿಯ ವಾರ್ತೆಯುಂಟು ಬಹುಶಃರವಾಗಿ ಸದ್ಯಕ್ಕೇ ಯಾವದೊಂದು ನಿರ್ಣಯವಾಗುವದು. ಪಾಕಿಸ್ತಾನ ಸರಕಾರವು ತನ್ನ ನಡತೆಯನ್ನು ಸುಧಾರಿಸಿಕೊಳ್ಳದಿದ್ದರೆ ಹಿಂದುಸ್ಥಾನವು ಅದಕ್ಕೆ ನಿರುಪಾಯವಾಗಿ ಬುದ್ಧಿ ಕಲಿಸುವ ಮಾರ್ಗ ಕೈಕೊಳ್ಳದಾಗುವದೆಂದು ಹೇಳಲಾಗುತ್ತಿದೆ

— ಮಹಾತ್ಮಾಜಿಯವರ ಕೊಲೆಯ ಖಟ್ಲೆಯಲ್ಲಿ ಫಿರ್ಯಾದಿ ಪಕ್ಷದ ಸಾಕ್ಷಿ-ಪುರಾವೆಗಳು ಮುಗಿದು ಕಳೆದ ಸೋಮವಾರದಿಂದ ಆರೋಪಿತರ ಹೇಳಿಕೆಗಳನ್ನು ಬರೆದುಕೊಳ್ಳಲು ಪ್ರಾರಂಭವಾಗಿದೆ. ಮಹಾತ್ಮರ ಕೊಲೆ ಪ್ರತ್ಯಕ್ಷ ಮಾಡಿದ ೧ನೇ ಆರೋಪಿ ನಾಥೂರಾಮ ಗೋಡಸೆಯು ತನ್ನ ಹೇಳಿಕೆಯನ್ನು ಸುದೀರ್ಘ ಬರವಣಿಗೆಯಲ್ಲಿ ಒಪ್ಪಿಸಿದನು. ಅದು [illegible] ಹಾಳೆಗಳಲ್ಲಿತ್ತು ಅದನ್ನು ಓದಲು ನಥೂರಾಮನಿಗೆ ೫ ತಾಸುಗಳು ತಗಲಿದವು ನಡುವೆ ನಥೂರಾಮನು ನೀರು ಕುಡಿದು ದಣಿವಾರಿಸಿಕೊಳ್ಳುತ್ತಿದ್ದನು. [illegible] ಬಿದ್ದನು. ಅದರಿಂದ ನ್ಯಾಯಾಧೀಶರು ಕೂತು ಕೊಂಡೇ ತನ್ನ ಹೇಳಿಕೆಯನ್ನು ಓದಲು ಅವನಿಗೆ ಅಪ್ಪಣೆ ಕೊಟ್ಟರು ನಥೂರಾಮನು ಈ ಹೇಳಿಕೆಯಲ್ಲಿ ಮಹಾತ್ಮರ ಕೊಲೆಯ ಪೂರ್ಣ ಜವಾಬದಾರಿಯನ್ನು ತನ್ನೊಬ್ಬನ ತಲೆಯ ಮೇಲೆಯೇ ಹೊತ್ತುಕೊಂಡು, ಈ ಕೃತ್ಯವು ಬೇರೆಯವರೊಡನೆ ಒಳಸಂಚು ನಡೆಸಿಯಾಗಲಿ, ಇತರರ ಸಹಾಯ-ಸಲಹೆಗಳನ್ನು ಪಡೆದಾಗಲಿ ಇಲ್ಲೆಂದು ನಮೂದಿಸಿರುತ್ತಾನೆ. ತನ್ನ ಕೃತಿಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಅತನು ಮಾಡಿರುತ್ತಾನೆ. ಅವನ ಹೇಳಿಕೆಯ ವಿಸ್ತೃತ ಘೋಷವಾರೆಯು ದಿನಪತ್ರಿಕೆಗಳಲ್ಲಿ ಆದಾಗಲೆ ಪ್ರಕಟವಾಗಿವೆ. ಆದರೂ ಈ ಹೇಳಿಕೆಯು ಹಿಂಸೆಯನ್ನು ಪ್ರೋತ್ಸಾಹಿಸುವಂತಹದಿರುತ್ತದೆಂದು ವಿಚಾರಗೊಂಡು ಅದನ್ನು ವಿಸ್ತಾರವಾಗಿ ಇಲ್ಲವೆ ಅಂಶತಃ ಯಾರೂ ಪ್ರಕಟಿಸಕೂಡದೆಂದು ಬೇರೆ ಬೇರೆ ಪ್ರಾಂತಿಕ ಸರಕಾರಗಳು ಸಾರ್ವಜನಿಕ ಸುರಕ್ಷತೆಯ ಕಾನೂನಿನನ್ವಯ ಪ್ರತಿಬಂಧಕ ಆಜ್ಞೆಗಳನ್ನು ಹೊರಡಿಸಿವೆ ಮಂಗಳವಾರ ನಥೂರಾಮನಿಗೂ ನ್ಯಾಯಾಧೀಶರಿಗೂ ಪ್ರಶ್ನೋತ್ತರಗಳಾದವು. ಅನಂತರ ಮತ್ತು ಬುಧವಾರ ೨ನೇ ಆರೋಪಿಯಾದ ನಾರಾಯಣ ಆಪ್ಟೇ ಇವನ ಹೇಳಿಕೆಯಾಯಿತು ಇವನೂ ತನ್ನ ಹೇಳಿಕೆಯನ್ನು ಲೇಖರೂಪದಿಂದ ಒಪ್ಪಿಸಿದನು ಗೋಡಸೆಯು ಮಾಡಿದ ಕೊಲೆಯಲ್ಲಾಗಲಿ, ಮದನಲಾಲನು ಎಸೆದ ಬಾಂಬು ಗುಂಡಿನ ಪ್ರಕರಣದಲ್ಲಾಗಲಿ ತನ್ನ ಅಂಗವೇನೂ ಇಲ್ಲೆಂದೂ, ಮಹಾತ್ಮಾಜಿಯವರು ಮುಸಲ್ಮಾನ ಪಕ್ಷ ಹಿಡಿದು ಹಿಂದುಗಳ ಕಿರುಕುಳ ಮಾಡುತ್ತಿರುವದನ್ನು ಕಂಡು ತಾನು ಬರೀ ನಿಷೇಧ ಪ್ರದರ್ಶನಕ್ಕಾಗಿ ದಿಲ್ಲಿಗೆ ಹೋಗಿದ್ದನೆಂದೂ ಅತ ಹೇಳಿದ್ದಾನೆ. ಇಷ್ಟರಲ್ಲಿಯೂ ನ್ಯಾಯಾಧೀಶ ಶ್ರೀ॥ ಆತ್ಮಾಚರಣ ಇವರು ಬೇರೆ ಬೇರೆ ಪ್ರಶ್ನೆಗಳನ್ನು ಮಾಡಿ ಫಿರ್ಯಾದಿ ಪಕ್ಷದ ಬೇರೆ ಬೇರೆ ಸಾಕ್ಷಿದಾರರು ಕೊಟ್ಟಿರುವ ಪುರಾವೆ ಸಂಬಂಧದಲ್ಲಿ ಅವನ ಖುಲಾಸೆಯೇನೆಂಬುದನ್ನು ಕೇಳಿಕೊಂಡರು. ಗೋಡಸೆ, ಆಪ್ಟೆ ಇವರಿಬ್ಬರ ತಾಸು ಬಚಾವೆಯು ಪೂರ್ಣವಾಗಿ ಹೊರಡಬಹುದಾಗಿದೆಯೆಂದು ಹೇಳಲಾಗುತ್ತದೆ. ಇನ್ನುಳಿದ (೬) ಆರೋಪಿಗಳ ಜಬಾನಿಗಳು ಈ ವಾರ ಬರೆಯಲ್ಪಡುತ್ತವೆ.

ಬ್ರಹ್ಮದೇಶದೊಳಗೆ ಕಮ್ಯುನಿಸ್ಟರ ಉಪಟಳದ ಮೂಲಕ ಆ ದೇಶದಿಂದ ರಫ್ತಾಗತಕ್ಕ ಅಕ್ಕಿ ಹೊರಗೆ ಹೋಗಲಾರದು ಆದರಿಂದ ಅಕ್ಕಿಯ ದರ ಏರುವದಾಗಿ ಎಣಿಸಲಾಗಿದೆ

ಅಂಕೋಲಾ—ಕುಮಟಾ ಹೊತುತು ಮೊಟ

ಅಂಕೋಲೆಯಿಂದ ತಾ. ೧೪-೧೧-೧೯೪೮ ರಿಂದ [illegible] ಘಂಟೆಗೆ [illegible] ಕುಮಟಾದಿಂದ [illegible]

Captain

ಇದನ್ನು [illegible] ಕೃಷ್ಣ [illegible] (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "[illegible]" ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಮುಂಗಡ ಕೊಡತಕ್ಕದ್ದು
ವರ್ಷಕ್ಕೆ ರೂ ೩-೪-೦
ಬಿಡಿ ಪ್ರತಿಗೆ ...-೧-೦
ವರ್ಗಣಿಯು ಮುಂಗಡವಾಗಿ ಕಳಿಸತಕ್ಕದ್ದು

Reg. No. B. 1270.

Monday, 22-11-1948.

ಕಾನಡಾವೃತ್ತ.

ವರ್ಷ ೨೨.] THE KANARA NEWS [ಸಂಚಿಕೆ ೨೧

ಕುಮಟಾ - ಸೋಮವಾರ, ತಾ ೨೨-೧೧-೧೯೪೮.

ಜಾಹೀರಾತುಗಳ ದರ:-
ಕಡ್ಡಾಯವಾಗಿ ಮುಂಗಡವಾಗಿ ಕೊಡತಕ್ಕದ್ದು.
ಪತ್ರಿಕೆಯಲ್ಲಿನ ಜಾಹೀರಾತುಗಳ ಬಗ್ಗೆ ವ್ಯವಸ್ಥಾಪಕರಿಗೆ ಬರೆಯಬೇಕು.

ವಿವಿಧ ವಿಷಯಗಳು.

ಪುಣೆಯಲ್ಲಿ ಭಾಂಡಾರಕರ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯೆಂಬದೊಂದು ಸಂಸ್ಥೆಯಿದೆ ಈ ಸಂಸ್ಥೆಯವರು ಮಹಾಭಾರತ ಗ್ರಂಥವನ್ನು ಸಂಶೋಧಿಸಿ ಪ್ರಕಟಿಸುತ್ತಿದ್ದಾರೆ ಆದಿಪರ್ವದಿಂದ ಸ್ತ್ರೀಪರ್ವದವರೆಗಿನ ೧೧ ಪರ್ವಗಳನ್ನು ಈ ಮಂಡಳದವರು ಈಗಾಗಲೇ ಪ್ರಕಟಿಸಿರುತ್ತಾರೆ ಕಳೆದ ೩೦ ವರ್ಷಗಳಿಂದ ಈ ಮಹಾಕಾರ್ಯ ನಡೆದಿದೆ ಈಗ ಶಾಂತಿಪರ್ವ ಮುದ್ರಣದ ಕಾರ್ಯ ನಡೆದಿದೆ ಶಾಂತಿಪರ್ವದ ಪುರಾತನ ಪ್ರತಿ ನೇಪಾಳದಲ್ಲುಂಟು. ಅಲ್ಲಿ ಇವನ್ನು ದರಬಾರದ ಪುಸ್ತಕ ಸಂಗ್ರಹಾಲಯದಲ್ಲಿ ಇರಿಸಿಟ್ಟಿದ್ದಾರೆ ೧೫೧೬ನೇ ಇಸವಿಯಲ್ಲಿ ಇದು ಬರೆದದ್ದೆಂದು ತಿಳಿಯುತ್ತದೆ ಇದು ತಾಳವಾಲೆಗಳ ಮೇಲೆ ಬರೆದದ್ದುಂಟು ಈ ಗ್ರಂಥವನ್ನು ನೇಪಾಳ ಸರಕಾರವು ಬಹು ಜತನದಿಂದ ಕಾದಿಟ್ಟಿದೆ. ರಾಜವಂಶಕ್ಕೆ ಪರಂಪರೆಯಿಂದ ಪ್ರಾಪ್ತವಾದ ಅಮೂಲ್ಯ ಆಸ್ತಿಯಿದೆಂದು ನೇಪಾಳದ ಅರಸರು ಎಣಿಸುತ್ತಾರೆ. ಅದನ್ನು ಪುಸ್ತಕ ಸಂಗ್ರಹಾಲಯದಿಂದ ಹೊರಗೊಯ್ಯಕೊಡುವದಿಲ್ಲ. ಪ್ರಾಚ್ಯ ವಿದ್ಯಾಸಂಶೋಧನ ಮಂಡಳದವರಿಗೆ ಈ ಪ್ರತಿಯನ್ನು ನೋಡುವದವಶ್ಯವೆನಿಸಿತು. ಅದರದೊಂದು ಯಥಾ ಪ್ರತಿಯನ್ನು ಸಂಶೋಧನ ಮಂಡಳದ ಗ್ರಂಥಭಾಂಡಾರದಲ್ಲಿ ಇಟ್ಟುಕೊಳ್ಳಬೇಕೆಂದು ಸಂಶೋಧನ ಮಂಡಳದ ಡಾ|| ಬೆಲವಲಕರ, ಪ್ರಾಧ್ಯಾಪಕ ಭಟ ಮತ್ತು ಅಭ್ಯಂಕರ ಹೀಗೆ ಮೂವರು ನೇಪಾಳಕ್ಕೆ ಹೋಗಿ, ಅಲ್ಲಿಯ ಪ್ರತಿಯ ಛಾಯಾಚಿತ್ರಗಳನ್ನು ತೆಗೆದುಕೊಂಡು ಸದ್ಯಕ್ಕೆ ಪುಣೆಗೆ ಮರಳಿ ಬಂದಿದ್ದಾರೆ ಮುಂಬಯಿ ವಿಶ್ವವಿದ್ಯಾಲಯದವರು ಈ ಕಾರ್ಯಕ್ಕಾಗಿ ಸಂಶೋಧನ ಮಂಡಳದವರಿಗೆ ರೂ ೧೦೦೦ ಕಾಣಿಕೆ ಕೊಟ್ಟಿದ್ದಾರೆ ಮಂಡಳದಲ್ಲಿ ನಿಪುಣರಾದ ಪ್ರಾಚ್ಯ ವಿದ್ವಾಂಸರಿದ್ದು, ಅವರು ತಯಾರಿಸುವ ಮಹಾಭಾರತ ಗ್ರಂಥ ಅಪೂರ್ವವಾಗುವದೆಂದು ಎಣಿಸಲಾಗಿದೆ ಪ್ರಾಚ್ಯ ವಿದ್ಯಾಭಿಮಾನಿಗಳೆಲ್ಲರೂ ಈ ಗ್ರಂಥ ಕಾರ್ಯಕ್ಕೆ ಪ್ರೋತ್ಸಾಹ ಕೊಡಬೇಕು.

* * *

ಹಿಂದುಸ್ತಾನ ಸರಕಾರವು ಒಂದು ರಾಜಶಾಸನವನ್ನು ಹೊರಡಿಸಿ, ಆಹಾರ ಧಾನ್ಯಗಳ ನಿಯಂತ್ರಣದ ಕುರಿತು ಹೊರಡಿಸಿದ ಹುಕುಮುಗಳನ್ನು ಉಲ್ಲಂಘಿಸಿದವರಿಗೆ ೩ ವರ್ಷಗಳವರೆಗೆ ಶಿಕ್ಷೆ ಮತ್ತು ದಂಡ ವಿಧಿಸಬೇಕೆಂದು ಆಜ್ಞೆ ಮಾಡಿದೆ ಶಿಕ್ಷೆ ವಿಧಿಸದೆ ದಂಡ ಮಾತ್ರ ವಿಧಿಸಿದರೆ ನ್ಯಾಯಾಧೀಶರು ಆ ಬಗ್ಗೆ ಕಾರಣಗಳನ್ನು ಕೊಡಬೇಕೆಂದು ಸರಕಾರವು ಆಜ್ಞೆ ಮಾಡಿದೆ ಇದಲ್ಲದೆ ಗುನ್ಹೆಯಲ್ಲಿ ಸಿಕ್ಕಿದ ಮಾಲನ್ನು ಸರಕಾರ ಜಪ್ತ ಮಾಡಬೇಕೆಂದೂ ರಾಜಶಾಸನದಲ್ಲಿ ಹೇಳಲ್ಪಟ್ಟಿದೆ ನಿಯಂತ್ರಣದಿಂದ ಜನಸಾಮಾನ್ಯರಲ್ಲಿ ಅಸಂತೃಪ್ತಿ ಹಬ್ಬಿರುವದು ಗುಜರಾಥದೊಳಗಿನ ಜೈನ ಸಾಧು ಸಂತ ಶಾಂತಿಬಾಲರವರು ಅಭಿಪ್ರಾಯಪಡುತ್ತಾರೆ ನಿಯಂತ್ರಣದಿಂದಾಗಲಿ ವಿನಿಯಂತ್ರಣದಿಂದಾಗಲಿ ಲೋಕದ ನಾಗರಿಕರ ಸಮಸ್ಯೆ ಬಗೆಹರಿಯದೆಂದು ಜಾರಿ ಮಾಡಿದ್ದು ಹಸ್ತಿಕೆಂದೂ 'ಹರಿಜನ' ಪತ್ರಿಕೆಯ ಶ್ರೀ ಕಿಶೋರಲಾಲ ಮಶ್ರುವಾಲರವರು ಒಳಿಯು ಕಾರಿ ನಿಯಂತ್ರಣ ತೆಗೆದಂತೆ ಸರಕಾರದ ಮನ ಒಲಿಸಬೇಕೆಂಬ ಶ್ರೀ ಶಾಂತಿಬಾಲರವರ ಅಭಿಪ್ರಾಯವಿದೆ ಸರಕಾರವು ನಿಯಂತ್ರಣ ಶಾಸನಗಳನ್ನು ಹಾಕಿದರೂ, ಕಠೋರ ಶಿಕ್ಷೆಯನ್ನು ವಿಧಿಸುವ ಏರ್ಪಾಡು ಮಾಡಿದರೂ, ಅನ್ನಧಾನ್ಯಗಳ ವ್ಯವಹಾರ ಜೋರಾಗಿ ನಡೆದಿದೆ ಯಾವ ಭೀತಿಯುಂಟು ಸರಕಾರವು ಅನ್ನಧಾನ್ಯಗಳ ಪೂರೈಕೆ ಮಾಡದೆ ಕೇವಲ ನಿರ್ಬಂಧಗಳನ್ನಷ್ಟೇ ಏರ್ಪಡಿಸುವದರಿಂದ ಗುಪ್ತ ವ್ಯವಹಾರ ಇನ್ನೂ ರಹಸ್ಯದಿಂದ ನಡೆದು ಸೌಕ್ಯ ಲಕ್ಷಣ ಮಾತ್ರಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತದೆ, ಲೋಕಸಂಕಟ ಹೆಚ್ಚಾಗುತ್ತದೆ. ಬಡಬಗ್ಗರಿಗೆ ಪ್ರಾಣಸಂಕಟವಾಗುತ್ತದೆ. ಈಗ ನಿಯಂತ್ರಣದ ಸಂಕ್ರಮಣಕಾಲದಲ್ಲಿ ಅಕ್ಕಿ ಬೇಕಾದವರಿಗೆಲ್ಲ ದೊರೆಯುತ್ತಿಲ್ಲ. ರೇಶನಗಳನ್ನು ಹಂಚಲು ಇನ್ನೂ ವಿಳಂಬ ಉಂಟು. ಎಷ್ಟೋ ಜನರು ಕೆಲವು ದಿನಗಳವರೆಗೆ ತಮ್ಮ ಜೀವನದ ವ್ಯವಸ್ಥೆಯನ್ನು ಮಾಡಿಕೊಂಡಿಟ್ಟಿರಬಹುದು ಆದರೆ ಹೊತ್ತುಹೊತ್ತಿಗೆ ಅಕ್ಕಿ ತಂದು ಊಟ ಮಾಡುವ ಬಡಬಗ್ಗರ ಕಷ್ಟ ಹೇಳಲಾಗಲ್ಲ! ಕರಾವಳಿಯಲ್ಲಿ ಅಕ್ಕಿಯ ಕೊರತೆಯುಂಟು ಅಕ್ಕಿ ತರ-ಒಯ್ಯಲಿಕ್ಕೆ ನಿಯಂತ್ರಣವಿರುವದರಿಂದಲೂ ತುದಿಗೆ ಉಪವಾಸ ಸಾಯುವ ಪ್ರಸಂಗವಿರುವದರಿಂದಲೂ ಕಳ್ಳಪೇಟೆಯು ಹೆಚ್ಚುತ್ತಿದೆ ಸಮಾಧಾನಕರವಾಗುವದಿಲ್ಲವಾದ್ದರಿಂದಲೂ ಧಾನ್ಯದ ವ್ಯವಹಾರಗಳು ಜನಸಾಮಾನ್ಯರ ಸಮಾಧಾನದ ಭೀತಿಯಿಂದ ಮತ್ತು ಭ್ರಷ್ಟ ಅಧಿಕಾರಿಗಳ ಸಹಾಯದಿಂದ ನಡೆದ ರೀತಿ ನಿಯಂತ್ರಣದಿಂದ ಈ ಪ್ರಕಾರ ಅನರ್ಥವುಂಟು ಮಹಾತ್ಮರ ನೀತಿಯಂತೆ ನೀತಿ ನಿಷ್ಠರಾಗಿ ಹತೋಟಿಯುಳ್ಳ ಸಚಿವರು ನಿಯಂತ್ರಣದ ಅನೀತಿಯನ್ನು ಸ್ವೀಕರಿಸಿ ಶ್ರೀ ರಾಜಾಜಿ ಉತ್ಸಾಹದಿಂದ ಹಿಂದುಸ್ತಾನ ಸರಕಾರದವರು ನಿಯಂತ್ರಣವನ್ನು ಕಡಿಮೆಗೊಳಿಸಿದ್ದಾರೆ. ಪುನಃ ಅದೇ ನಿಯಂತ್ರಣ, ಅದೇ ನಿರ್ಬಂಧ ಹೆಚ್ಚಿನ ಕಠೋರತನದಿಂದ ಹೇರಲ್ಪಟ್ಟಿವೆ! ಸರಕಾರವು ಹೊಟ್ಟೆ ತುಂಬ ಅನ್ನ ಪೂರೈಸುವದಿಲ್ಲ! ಪೂರೈಸಬಲ್ಲವರಿಗೂ ಅವಕಾಶ ಕೊಡುವದಿಲ್ಲ! ಅಕ್ಕಿ ತುಟ್ಟಿಯಾಗಲಿ, ಅಗ್ಗವಾಗಲಿ, ನಿರ್ಭೀತಿಯಿಂದ ತರುವುದಕ್ಕೆ ಇದ್ದ ಅವಕಾಶ ನಿಯಂತ್ರಣದಿಂದ ರದ್ದಾಗಿದೆ ಇದ್ದ ಅಕ್ಕಿ ಉಣ್ಣಬೇಕಾದರೆ ಮನಸ್ಸು ಹದರುತ್ತದೆ ಲೋಕತುಂಬ ಭೀತಿ-ಕಳ್ಳಪೇಟೆಗಳು ಹಬ್ಬಿಕೊಂಡಿವೆ. ಕಳ್ಳಪೇಟೆಯಿಂದ ತಂದ ಅನ್ನದಿಂದ ಜನರೊಳಗೆ ಸಭ್ಯ ಮತ್ತು ಶಿಷ್ಟ ಪ್ರವೃತ್ತಿ ಸಿಂಬಡಿಸಿ ಜನಾಂಗ ಪತನವಾಗುವ ಭೀತಿಯುಂಟು ಹಿಂದುಸ್ತಾನ ಸರಕಾರವೂ ಪ್ರಾಂತಿಕ ಸರಕಾರಗಳೂ ಜನತಾ ಸರಕಾರಗಳೆಂದು ಹೇಳಿಕೊಳ್ಳುತ್ತಿವೆ ಜನತಾ ಸರಕಾರದ ಮನ್ವಂತರದಲ್ಲಿ ಒದಗುವ ಜನ ಘಾತವನ್ನು ಸರಕಾರವು ಸುದೀರ್ಘವಾಗಿ ಸುಧಾರಿಸಿ, ಅನ್ನ-ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವಂತೆ ಉಪಾಯ ಯೋಜನೆ ಮಾಡಬೇಕು. ಹಿಂದಿನ ನಿರ್ಬಂಧಗಳನ್ನು ಪುನಃ ಎತ್ತರಿಸುವದರಿಂದ ಶ್ರೀ ಜಾಯಪ್ರುಂಟು ಅಪಾಯವನ್ನು ಪರಿಹರಿಸಿಕೊಂಡು ಲೋಕಸುಖವನ್ನು ಯೋಜಿಸುವ ಸೂಚನೆ ಸರಕಾರಕ್ಕೆ ಸೂಚಿಸದಿದ್ದರೆ ನಿಯಂತ್ರಣವನ್ನು ರದ್ದುಗೊಳಿಸುವದು ಶ್ರೇಯಸ್ಕರ

* * *

ನಮ್ಮ ಮುಂಬಯಿ ಪ್ರಾಂತವು ಅನ್ನಧಾನ್ಯಗಳ ಕೊರತೆಯ ಪ್ರದೇಶ ಆದರೆ ಅದನ್ನು ಸುಧಾರಿಸಲು ಸಹ ತಕ್ಕ ಪ್ರಯತ್ನಗಳನ್ನು ನಮ್ಮ ಪ್ರಾಂತಿಕ ಸರಕಾರವು ನಡಿಸುವದಿಲ್ಲ ಒಕ್ಕಲತನದ ಕಾನೂನನ್ನು ಏರ್ಪಡಿಸಿ ಒಕ್ಕಲಿಗರಿಗೆ ಒಡೆಯರ ವಿರುದ್ಧ ದೊಂಬಿಯನ್ನೆಬ್ಬಿಸಲು ಇದು ಪ್ರೋತ್ಸಾಹಿಸಿತು. ! ಹೊರತು ಬೆಳೆಯ ಮಾನವನ್ನು ಏರಿಸಲು ಇದರಿಂದಾಗಲಿಲ್ಲ ಒಕ್ಕಲಿಗರು ಬೆಳೆಸಬೇಕಾದ ಉತ್ಪತ್ತಿಯ ಪರಿಮಾಣವನ್ನು ಸಹ ಹೊಸ ಒಕ್ಕಲತನದ ಕಾನೂನಿನೊಳಗೆ ಲೋಕ ಮಾಡಿ ಉತ್ಪತ್ತಿಯು ಒಗ್ಗೂಡುವಂತೆ ಸರಕಾರವು ದುರ್ಲಕ್ಷ್ಯ ಮಾಡುತ್ತದೆ ದೂ ಒಡೆಯರನ್ನು ಪ್ರತಿಭಟಿಸುವದಕ್ಕಾಗಿ ಒಕ್ಕ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಮತ್ತು ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.,

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಸೇವಿಂಗ್ಸ್ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳ ತ ಕೊಡಲಾಗುವದು

ಎಲ್ಲಾ ತರದ ಬ್ಯಾಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ ೨೨-೭-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ

ಲಿಗರನ್ನು ರಕ್ಷಿಸಬಯಸುತ್ತದೆಂದೂ ಸಿದ್ಧಪಡಿಸಿದ ಕುಮಟೆಯ ದಿವಾಣಿ ಕೋರ್ಟಿನಲ್ಲಿ ನಡೆದ ಒಂದ ವ್ಯಾಜ್ಯದೊಳಗ ನ್ಯಾಯಾಧೀಶರು ತೀರ್ಪು ಬರೆಯು ವಾಗ, ಒಕ್ಕಲತನದ ಕಾನೂನಿನ ಪರಿಣಾಮವಾಗಿ ಪರಸ್ಪರ ವಿರುದ್ಧವಾದ ಒಡೆಯ-ಒಕ್ಕಲಿಗ ವರ್ಗಗ ಳು ನಿರ್ಮಾಣ ಹೊಂದುತ್ತವೆಂದೂ, ಉಭಯ ತರೂ ಪರಸ್ಪರರ ಮೇಲೆ ಹಗೆ ಸಾಧಿಸುತ್ತವೆಂದ , ಈ ಪರಿಣಾಮ ಒಕ್ಕಲತನದ ಕಾನೂನಿನ ಸದುದ್ದೇ ಶಕ್ಕೆ ವಿರುದ್ಧವಾಗಿರುತ್ತದೆಂದೂ ಒದವದು ಮು ಇದರ ಮೂಲಿಂದ ಒಕ್ಕಲತನದ ಕಾನೂನು ಕ್ಷೇಮ ಕರವಲ್ಲೆಂದೂ, ಅದರಿಂದ ಉತ್ಪತ್ತಿ ಬೆಳೆಯು ವದಿಲ್ಲೆಂ ದೂ ತಾನೇ ಸಿದ್ಧವಾಗುತ್ತದೆ ಉತ್ಪತ್ತಿ ಹೆಚ್ಚಿಸುವ ರೀತಿಯನ್ನು ಸಂಯುಕ್ತ ಪ್ರಾಂತ ಸರಕಾರವು ಕೈ ಕೊಂಡಿದೆ ಸಂಯುಕ್ತ ಪ್ರಾಂತದಲ್ಲಿ ದೊಡ್ಡ ದೊಡ ಜಮೀನದಾರರಿದ್ದಾರೆ ಅವರ ಸರ್ವನಾಶ ಮಾಡುವ ಯೋಜನೆಗಿಂತ ಮುಂಚಿತವಾಗಿ ಅನ್ನಧಾನ್ಯಗಳನ ಬೆಳೆಸುವ ಯೋಜನೆಯಾಗಿದೆ ಸಂಯುಕ್ತ ಪ್ರಾಂತ ಸರಕಾರವು ನೈನಿತಾಲ ತೆರಾಯಿ, ಗಂಗಾಖಾದರ, ಬುಂದೇಲಖಂಡ ಜಿಲ್ಲೆಗಳಲ್ಲಿ ಬಂಜರ ಇರುವ ಪ್ರ ದೇಶವನ್ನು ಸಾಗುವಳಿ ಮಾಡುವ ಯೋಜನ ಮಾಡಿ ದೆ ೧೯೫೧ನೇ ಇಸವಿಯೊಳಗೆ ಒಂದು ತಸು ಭೂಮಿ ಸಹ ಬಂಜರ ಉಳಿಯದಂತೆಯೂ ಎಲ್ಲ ಭೂಮಿ ಸಂಪೂರ್ಣವಾಗಿ ಸಾಗುವಳಿಯಾಗುವಂತೆಯೂ ಯೋಜನೆ ಮಾಡಿದೆ ಅದಕ್ಕಾಗಿ ಸರಕಾರವು ೧೫ ಟ್ರಾಕ್ಟರುಗಳನ್ನು ತರಿಸಿ, ಅವುಗಳನ್ನು ಒಂದು ಶಿಬಂದಿಗೆ ಒಪ್ಪಿಸಿದೆ ಈ ಶಿಬಂದಿಯವರು ಬಂಜರ ಪ್ರದೇಶಗಳಿಗೆ ಹೋಗಿ, ಈತನಕ ೩೦ ಸಾವಿರ ಎಕರೆ ಪ್ರದೇಶವನ್ನು ಸಾಗುವಳಿ ಮಾಡಿದ್ದಾರೆ. ಈ ವರ್ಷ ಇನ್ನೂ ೧೦ ಸಾವಿರ ಎಕರೆ ಪ್ರದೇಶ ಸಾಗುವಳಿ ಮಾಡಲ್ಪಡುವದು ಇನ್ನೂ ೩೦೦ ಟ್ರಾಕ್ಟರಗಳನ್ನು ತರಿಸಿ ಸರಕಾರವು ೧೯೫೧ ಇಸವಿಯ ಅಂತ್ಯವಾಗುವದರೊಳಗೆ ೪೦ ಸಾವಿರ ಟನ್ನು ಅನ್ನ ಧಾನ್ಯ ಬೆಳೆಸುವ ಸಂಕಲ್ಪ ಮಾಡಿರುತ್ತದೆ ಈ ಬಗ್ಗೆ ಉಳಿದ ಬೇಸಾಯ ಹೊಲಗಳು ಹೊರ ಡಿಸಲ್ಪಟ್ಟಿವೆ ಈ ಎಲ್ಲ ಹೊಲಗಳಲ್ಲಿ ಹೂಡೋಣ ದಿಂದ ಕೊಯ್ಯೋಣವರೆಗಿನ ಯಾವತ್ತು ಕೃಷಿ-ಕರ್ಮಗಳು ಯಂತ್ರಸಹಾಯದಿಂದ ಮಾಡಲ್ಪಡು ತ್ತವೆ. ಈ ಬಗ್ಗೆ ಸರಕಾರವು ೫೦ ಲಕ್ಷ ರೂಪಾಯಿ ಗಳನ್ನು ಮಂಜೂರ ಮಾಡಿದೆ ಈ ಕಾರ್ಯಕ್ಕೆ ಇನ್ನೂ ಹಣ ಬೇಕಾದಲ್ಲಿ ಹೆಚ್ಚಿಗೆ ರಕಮನ್ನು ಮಂಜೂರ ಮಾಡುವ ತಯಾರಿಯುಂಟು ಬಂಜರ ಭೂಮಿಯನ್ನು ಸಾಗುವಳಿ ಮಾಡುವ ಶಿಬಂದಿಯ ಮಂತ್ರಿಗಳ ಭೂಸೇನೆಯೆಂದು ಸಂಯುಕ್ತ ಪ್ರಾಂತ ದೊಳಗೆ ಖ್ಯಾತಿ ಹೊಂದಿದೆ ನಮ್ಮ ಮುಂಬಯಿ ಸರ ಕಾರವು ಪ್ರಾಮಾಣಿಕತನದಿಂದ ಭೂಮಿಯ ಉತ್ಪ ತ್ತಿಯನ್ನು ಬೆಳೆಸಲು ಹವಣಿಸುತ್ತಿದ್ದರೆ ಬಂಜರ ಭೂಮಿಯನ್ನು ಸಾಗುವಳಿ ಮಾಡಲು ತೊಡಗ ಬೇಕು ನಮ್ಮ ಜಿಲ್ಲೆಯೊಳಗೆ ವಿಸ್ತೀರ್ಣವಾದ ಬಂಜರ ಭೂಪ್ರದೇಶವಿದ್ದರೂ ಅದನ್ನು ಸಾಗುವಳಿ ಮಾಡಿ ಪ್ರಯೋಜನ ಪಡೆಯಬೇಕೆಂಬ ಹಂಬಲ ಸರ ಕಾರಕ್ಕಿರುವದಿಲ್ಲ! ಮಂತ್ರಿಗಳು ಹರಿದಾಸ ರಂತೆ ಸೃಷ್ಟಿಸೊಬಗನ್ನು ವರ್ಣಿಸಿ ಗೇರಸಪ್ಪೆಯ ಜಡ ಸಲನ್ನು ನೋಡಿಕೊಂಡು ಸ್ವಸ್ಥಾನಕ್ಕೆ ಮರಳುತ್ತಾ ರೆ ಕೊಂಗ್ರೆಸ ಕಾರ್ಯಕಾರಿ ಮಂಡಳದವರಾಗಲಿ ಅಖಿಲ ಭಾರತೀಯ

ರಾಗಲಿ ಹಿಂದುಸ್ಥಾನ ಸರಕಾರವಾಗಲಿ ನಮ್ಮ ಮಂ ತ್ರಿಮಂಡಳಕ್ಕೆ ತಕ್ಕ ಬುದ್ಧಿ ಹೇಳಬೇಕಾಗಿ ಸೂಚನೆ

ಆಹಾರ ಧಾನ್ಯಗಳನ್ನು ಉತ್ಪತ್ತಿ ಮಾಡುವ ದಕ್ಷತೆ ಮಂತ್ರಿ-ಮಂಡಳಕ್ಕೆ ಇಲ್ಲವಾದರೆ ಮಂತ್ರಿ-ಮಂಡಳ ವನ್ನು ವಿಸರ್ಜಿಸಿ ಪ್ರಾಂತಾಧಿಪರು ಎಲ್ಲ ರಾಜ್ಯಸೂತ್ರವ ನು ತಾವೇ ವಹಿಸಿಕೊಂಡು ಅನ್ನಧಾನ್ಯದ ಉತ್ಪತ್ತಿ ಯನ್ನು ಬೆಳೆಸುವ ಯೋಜನೆ ಮಾಡಬೇಕು ಮಂತ್ರಿ ಮಂಡಳವನ್ನು ವಿಸರ್ಜಿಸಿದರಿಂದ ಜನರಲ್ಲಿ ಅಸಂ ತೋಷವಾಗುವ ಸಂಭವವಿಲ್ಲ, ಕೊಂಗ್ರೆಸ ರಾಜ್ಯ ಭಾರದಿಂದ ಅಪೇಕ್ಷಿಸಿದ ಸುಖ ಜನಸಾಮಾನ್ಯರಿಗೆ ದೊರಕಲಿಲ್ಲ ಆದರಿಂದ ಜನರು ವಿಮನಸ್ಕರಾಗಿದ್ದಾರೆ ಅನ್ನ-ಧಾನ್ಯಗಳ ಉತ್ಪತ್ತಿ ಈಗಿನ ಕಾಲವಾರದಲ್ಲಿ ತೀರ ಅಗತ್ಯದ ರಾಜಧರ್ಮವಿದ್ದದರಿಂದ ಆ ಬಗ್ಗೆ ಪ್ರಾಂತಾಧಿಪರೂ, ಹಿಂದುಸ್ಥಾನ ಸರಕಾರವೂ ತಕ್ಕ ಉಪಾಯಗಳನ್ನು ಕೈಕೊಳ್ಳಬೇಕು ಪ್ರಧಾನ ಮಂಡಳವು ತನ್ನ ಕರಕಿರದಿಯಲ್ಲಿ ಆಹಾರ-ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸದೆ ತನ್ನ ಅಯೋಗ್ಯತೆ ಯನ್ನು ಸಿದ್ಧಪಡಿಸಿದ್ದರಿಂದ ಅದನ್ನು ಕೂಡಲೇ ಅಧಿ ಕಾರದಿಂದ ತಪ್ಪಿಸುವದು ವಿಹಿತವಿದೆ

***

ಇತ್ತಲಾಗಿ ಕೊಂಗ್ರೆಸ ಸರಕಾರಗಳಿಗೆ ದಿವಾಣಿ ನ್ಯಾಯಸ್ಥಾನಗಳ ಹೆದರಿಕೆಯುಂಟಾಗಿದೆ ದಿವಾಣಿ ನ್ಯಾಯಾಲಯಗಳ ಅಧಿಕಾರಕಕ್ಷೆಯೊಳಗಿಂದ ವಿಚಾ ರವಿಷಯಗಳನ್ನು ಒಂದೊಂದಾಗಿ ಬೇರೆ ಮಾಡ ಲು ಈ ಸರಕಾರಗಳು ಯತ್ನಿಸುತ್ತಿವೆ ಹಿಂದುಸ್ಥಾ ನ ಸರಕಾರವು ಪ್ರಾಂತಿಕ ಸರಕಾರಗಳಿಗೆ ಈ ಪ್ರಕಾ ರವರ್ತಿಸದಂತೆ ಏನೂ ಹೇಳಿದೆ ಆದಾಗ್ಯೂ ಪ್ರಾಂ ತಿಕ ಸರಕಾರಗಳಿಗ ವಿಚಾರವಿಲ್ಲ! ನಮ್ಮ ಮುಂಬ ಯಿ ಸರಕಾರವು ಸದ್ಯಕ್ಕೆ ನಿರ್ಮಿಸ ತೊಡಗಿದ ಹೊಸ ಒಕ್ಕಲತನದ ಕಾನೂನಿನಲ್ಲಿ, ಒಡೆಯ ಒಕ್ಕ ಲಿಗರೊಳಗಿನ ವಿವಾದ ವಿಷಯಗಳನ್ನು ತೀರ್ಮಾನಿ ಸಲಿಕ್ಕೆ ದಿವಾಣಿ ನ್ಯಾಯಸ್ಥಾನಗಳಿಗೆ ಅಧಿಕಾರವಿ ಲ್ಲೆಂದು ನಾಚಿಕೆ ಬಿಟ್ಟು ವಿಧಿಸಿದೆ! ರಾಷ್ಟ್ರೀಯ ಸಭೆ ಯವರು ರಾಜ್ಯಾಧಿಕಾರವನ್ನು ಪಡೆಯುವ ಪೂರ್ವ ದಲ್ಲಿ ಬ್ರಿಟಿಶ ಸರಕಾರವು ನ್ಯಾಯಸ್ಥಾನಗಳಿಗೆ ಗೌರ ವಿಸುವದಿಲ್ಲವೆಂದೂ ನ್ಯಾಯ-ವಿಚಾರದ ಸಂಪೂರ್ಣ ಅಧಿಕಾರ ನ್ಯಾಯ-ಸ್ಥಾನಗಳಿಗಿರಬೇಕೆಂದೂ ಕಂಠೋಕ್ತವಾಗಿ ವಾದಿಸುತ್ತಿದ್ದುದನ್ನು ಎಲ್ಲರೂ ಅರಿತಿ ರುವರು ಕಾಯದೆಗಳನ್ನು ನಿರ್ಮಿಸುವ ಕರ್ತವ್ಯ ಮಾತ್ರ ಕಾನೂನುಮಂಡಳದ್ದಿರುತ್ತದೆ ಅವುಗಳ ಅರ್ಥವಿವರಣೆ, ಹಕ್ಕು ಬಾಧ್ಯತೆಗಳ ವಿವರಣೆ ಪೂರ್ಣ ವಾಗಿ ನ್ಯಾಯಸ್ಥಾನಗಳಿಗೆ ಹೊಂದಿಕೊಂಡಿದೆಂದೂ ಸರಕಾರವು ಈ ವಿಷಯಗಳಲ್ಲಿ ಕೈಹಾಕಕೂಡದೆಂದೂ ಮಹಾತ್ಮರು ಅನೇಕ ಬಾರಿ ಕೊಂಗ್ರೆಸ ಸರಕಾರ ಗಳಿಗೆ ಎಚ್ಚರಿಕೆ ಕೊಟ್ಟಿದ್ದುಂಟು ಆದರೂ ಕೊಂಗ್ರೆ ಸ ಸರಕಾರಗಳು, ಬಾಯಿಯಿಂದ ಮಹಾತ್ಮರ ಮೇಲೆ ಸಿದ್ಧಾಂತಶ್ರದ್ಧೆಯನ್ನು ಪ್ರದರ್ಶಿಸಿ ಅವರ ತತ್ವಗಳನ್ನು ಅವಮಾನ್ಯ ಮಾಡತೊಡಗಿವೆ ಬಿಹಾರ ಪ್ರಾಂತದ ಪಾಟ್ನಾ ಹೈಕೋರ್ಟು ಬಿಹಾರ ಸರಕಾರದ ಅಸಭ್ಯ ನಡಾವಳಿಯನ್ನು ಸದ್ಯಕ್ಕೇ ಉಗ್ರವಾಗಿ ಟೀಕಿಸಿರು ತ್ತದೆ ೧೯೪೭ನೇ ಇಸವಿಯ ಮಾರ್ಚ ತಿಂಗಳಲ್ಲಿ ಅಕ್ಕಿ ಕಳವು ಮಾಡಿದ ಆರೋಪವಿಟ್ಟು ೭ ಜನರ ಮೇಲೆ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಪೋಲಿಸರು ಖಟ್ಲೆ ಮಾಡಿ ಕೊಟ್ಟರು ಇಬ್ಬರು ಆರೋಪಿಯರು ನೇರವಾಗಿ ಮುಖ್ಯ ಮಂತ್ರಿಗಳಿಗೆ ಅರ್ಜಿ ಮಾಡಿ, ಮೆಜಿಸ್ಟ್ರೇಟ ಕೋರ್ಟಿ ನಿಂದ ಪ್ರಕರಣವನ್ನು ಒಯ್ದು ಪರಾಂಬರಿಸಿ ತಮ್ಮನ್ನು ಬಿಡುಗಡೆ ಮಾಡಬೇಕಾಗಿ ಬಿನ್ನಹ ಮಾಡಿಕೊಂಡರು ಖಟ್ಲೆಯು ವಿಚಾರ ಕೋರ್ಟಿನಲ್ಲಿ ನಡೆಯುತ್ತಿರುವಾಗ ಕೋರ್ಟಿನ ವಿಚಾರ ಕ್ರಮದಲ್ಲಿ ಕೈಹಾಕಕೂಡದೆ ೭

ಸಾಮಾನ್ಯ ವ್ಯವಹಾರಿಕರಿಗೆ ಇರುವ ಜ್ಞಾನ ಬಿಹಾರ ದ ಕೊಂಗ್ರೆಸ ಮುಖ್ಯ ಪ್ರಧಾನರಿಗೆ ಇರಲಿಲ್ಲ! ಮುಖ್ಯ ಪ್ರಧಾನರು ಮೆಜಿಸ್ಟ್ರೇಟ ಕೋಟಿನಲ್ಲಿ ಖಟ್ಲೆ ವಿಚಾರಕ್ಕೆ ತಡೆ ಹಾಕಿ, ಪ್ರಕರಣವನ್ನು ಆರೋಪಿಗಳ ದೃಷ್ಟಿಯಿಂದ ಪರಾಂಬರಿಸಿ, ಅವರ ಮೇಲಿನ ಖಟ್ಲೆ ಯನ್ನು ರದ್ದುಪಡಿಸಿ ಹುಕುಮುಗಳನ್ನು ಹೊರಡಿಸ ಬೇಕಾಗಿ ಜಿಲ್ಹಾಧಿಕಾರಿ ಡೆಪ್ಯುಟಿ ಕಮಿಶನರರಿಗೆ ಆಜ್ಞೆ ಮಾಡಿದರು! ಪೋಲೀಸರು ಈ ಬಗ್ಗೆ ಹೈಕೋರ್ಟಿಗೆ ಅರ್ಜಿ ಮಾಡಿದ ಮೇರೆಗೆ ಇಬ್ಬರು ಆರೋಪಿಗಳಿಗೂ ಡೆಪ್ಯುಟಿ ಕಮಿಶನರರಿಗೂ ಖಟ್ಲೆ ವಿಚಾರವನ್ನು ಮುಂದ ರಿಸಲು ಯಾಕೆ ಹುಕುಮು ಮಾಡಬಾರದೆಂದು ಕಾರಣ ತೋರಿಸಲು ಪಾಟ್ನಾ ಹಾಯಕೋರ್ಟಿನವರು ಆಜ್ಞೆ ಮಾಡಿದರು ಈ ಪ್ರಕರಣವನ್ನು ನಿರ್ಣಯಿಸುವಾಗ ಮುಖ್ಯ ನ್ಯಾಯಾಧೀಶರೂ ಇನ್ನಿಬ್ಬ ನ್ಯಾಯಾಧೀಶರೂ ಪ್ರಾಂತಿಕ ಸರಕಾರದ ವರ್ತನವನ್ನು ಬಲವಾಗಿ ನಿಷೇಧಿಸಿದ್ದಾರೆ! 'ಮುಖ್ಯ ಮಂತ್ರಿಗಳಿಗೆ ಬರೆದ ಅರ್ಜಿಯನ್ನು ವಕೀಲರು ತಯಾರಿಸಿದ್ದರು ಇದರ ಮೇಲಿಂದ ನ್ಯಾಯವಿಚಾರದ ಅಧಿಕಾರ ಮುಖ್ಯಮಂತ್ರಿ ಗಳಿಗೆ ಕೈಹಾಕಲು ಅಧಿಕಾರವಿರುತ್ತದೆಂಬ ಗ್ರಹಿಕೆ ಲೋಕತುಂಬ ಹಬ್ಬಿದೆಂದು ಸ್ಪಷ್ಟವಾಗುತ್ತದೆ ಈ ಪ್ರಕಾರ ನಂಬಿಗೆಯನ್ನುಂಟುಮಾಡಲು ಸರ ಕಾರವು ತಕ್ಕಷ್ಟು ಆಧಾರಗಳನ್ನು ಪೂರೈಸಿದೆ ಆದರಿಂದ ನ್ಯಾಯಸ್ಥಾನದ ಆಜ್ಞೆಯಲ್ಲಿ ಸರಕಾರ ಅಧಿಕಾರಿಗಳಿಗಾಗಲಿ, ಸರಕಾರಕ್ಕಾಗಲಿ ಕೈಹಾಕಲು ಎಷ್ಟುಕೂಡ ಅಧಿಕಾರವಿಲ್ಲೆಂದು ನಾವು ಸಾರು ತ್ತೇವೆ ಮುಖ್ಯ ಪ್ರಧಾನರಿಗಾಗಲಿ ಸಾಮಾನ ಪ್ರಧಾನರಿಗಾಗಲಿ ಸರಕಾರದ ಮೇಲಧಿಕಾರಿಗಳಿಗೂ ಮೆಜಿಸ್ಟ್ರೇಟ ಕೋರ್ಟಿನಿಂದ ಖಟ್ಲೆಯನ್ನು ಹಿಂತೆಗೆ ದು ಕೊಳ್ಳಲು ಬರುವದಿಲ್ಲ ಸರಕಾರಿ ವಕೀಲರ ಕೋರ್ಟಿಗೆ ಅರಿಕೆ ಮಾಡಿಕೊಂಡು ಕೋರ್ಟಿನ ಅಪ್ಪಣೆ ಪಡೆದು ಖಟ್ಲೆಯನ್ನು ಹಿಂತೆಗೆದುಕೊಳ್ಳಲು ಕಾಯದೆಯಲ್ಲಿ ಅವಕಾಶ ಕೊಡೋಣವಾಗಿದೆ ಆದರೆ ಕೋರ್ಟಿನ ಪರೋಕ್ಷ ಖಟ್ಲೆ ನಿಕಾಲೆಯಲ್ಲಿ ತರಲಿಕ್ಕೆ ಈ ಅವಕಾಶದಿಂದ ಸಾಧ್ಯವಿಲ್ಲ ಜಿಲ್ಹಾಧಿಪರು ಮೆಜಿಸ್ಟ್ರೇಟರಿಂದ ಖಟ್ಲೆ-ಪ್ರಕರಣಗಳನ್ನು ತರಿಸಿಕೊಂ ಡು ನಿಕಾಲೆಯಲ್ಲಿ ತರುವ ಕ್ರಮ ಆಕ್ಷೇಪಾರ್ಹ ವಿದೆ ಪ್ರಕರಣಗಳನ್ನು ಕೋರ್ಟಿನಿಂದ ತರಿಸ ಲಿಕ್ಕೆ ಪ್ರಾಂತಿಕ ಸರಕಾರವು ಹುಕುಮುಗಳನ್ನು ಹೊರಡಿಸಕೂಡದು ಖಟ್ಲೆ ವಿಚಾರದ ಪ್ರಕರಣವನ್ನು ಇಟ್ಟುಕೊಳ್ಳುವ ಹೊಣೆ ಮೆಜಿಸ್ಟ್ರೇಟರದು ಇದ ಸರಕಾರದ ಹುಕುಮಿನಂತೆ ಖಟ್ಲೆಯ ವಿಚಾರವನು ನಡೆಸಲಿಕ್ಕೆ ಮೆಜಿಸ್ಟ್ರೇಟರು ಬದ್ಧರಲ್ಲ ಈ ಪ್ರಕರಣ ಮೇಲಿಂದ ನ್ಯಾಯಸ್ಥಾನ ಉಳಿದ ಎಲ್ಲ ಜವಾಬದಾರ ಅಧಿ ಕಾರಿಗಳಿಂದ ಸಂಪೂರ್ಣವಾಗಿ ಪೃಥಕ್ಕಾಗಬೇಕೆಂಬ ಸಿದ್ಧಾಂತ ಸ್ಪಷ್ಟವಾಗುತ್ತದೆ" ಈ ಪ್ರಕಾರ ಪಾಟ್ನಾ ಹೈಕೋರ್ಟು ಬಿಹಾರ ಸರಕಾರದ ನಡಾವಳಿಯನ್ನು ಆಕ್ಷೇಪಿಸಿದೆ ಹಿಂದುಸ್ಥಾನ ಸರಕಾರವು ಕೊಂಗ್ರೆ ಸ ಕಾರ್ಯಕಾರಿ ಮಂಡಳವೂ ಕೊಂಗ್ರೆಸ ಸರಕಾರ ಗಳಿಗೆ ಲೋಕಶಾಹಿ ಆಡಳಿತೆಯ ಮೂಲ ತತ್ವಗಳ ನ್ನು ತಿಳಿಸುವದು ಅಗತ್ಯವುಂಟು ಲೋಕಶಾಹಿಯ ರಾಜ್ಯಾಂತರದಲ್ಲಿ ಲೋಕಕ್ಕೆ ನ್ಯಾಯ ದೊರೆಯುವಂತೆ ಏರ್ಪಾಟಾಗಬೇಕು

***

ಮುಂಬಯಿ ಸರಕಾರವು ತಕ್ಕ ಬೋಧ ಪಡೆಯು ವ ಲಕ್ಷಣಗಳು ವ್ಯಕ್ತವಾಗದೆ ಮುಂಬಯಿ ಸರಕಾರವು ಪ್ರಾಂತದೊಳಗಿನ ಸಮಸ್ತ ಭೂಮಿಯ ಒಡೆಯನಾಗಿ ಪರಿಣಮಿಸಿದೆ ಬೇಸಿಗೆ ಅವ್ವಲ ಕಾರಕೂನರಂತ

ಹ ನ್ಯಾಯವಿಚಾರಣೆಯ ಯೋಗ್ಯತೆ ಇಲ್ಲದ ಇವನ ರಿಂದ ಒಡೆಯ ಒಕ್ಕಲಿಗರೊಳಗಿನ ವಿವಾದಗಳನ್ನು ತೀರ್ಮಾನಿಸಬಯಸುವದು ದಕ್ಷತನ " ಕೋಳಿ ಕೂಗದ ಊರಲ್ಲಿ ಇದ್ದು ಕೆಟ್ಟೆ, ವಿಚಾರವಿಲ್ಲದ ಸರಕಾರದಲ್ಲಿ ಇದ್ದು ಕೆಟ್ಟೆ " ಎಂಬವೊಂದು ಪುರಾತನ ಕಾಲದ ನಾಣ್ಣುಡಿಯುಂಟು. ಟೆನನ್ಸಿ ಅವಲ ಕಾರಕೂನರ ನಿರ್ಣಯಗಳು ಆ ಕಾಲದ ಘಟನೆಗಳಂತೆ ಭಾಸವಾಗುತ್ತವೆ. ಕಂದಾಯ ಮಂತ್ರಿಗಳಿಗೆ ತುಂಬಿದ ಕೌನ್ಸಿಲ್‌ಸಭೆಯಲ್ಲಿ ಕಾಡುಬಿಡುವೆದು ಶ್ರೀ|| ದತ್ತೋಪಂತ ಬೆಳವಿಯವರಂಥ ವಿಚಾರವಂತ, ಗಂಭೀರ ರಾಜಕಾರಣಿಗಳು ಸಂಬೋಧಿಸಲಿಕ್ಕೆ ಈ ಅವಿಚಾರದ ಸಡಳತೆಯೇ ಕಾರಣವಾಗಿದೆ. ಒಡೆಯರಿಗೆ ಸ್ವಂತ ಸಾಗುವಳಿಗೆ ಭೂಮಿ ಪಡೆಯಲು ಕಾನೂನಿನಿಂದ ಹಕ್ಕು ಕೊಡಲ್ಪಟ್ಟದೆ ಒಡೆಯರ ಸ್ವಾಸ್ತಿಯನ್ನು ಒಕ್ಕಲಿಗನ ಕೈಯಲ್ಲಿ ಸರಕಾರವು ವರ್ಗಾಯಿಸಲಿಲ್ಲ. ಅಂದ ಬಳಿಕ ಒಡೆಯನಿಗೆ ಸ್ವಂತ ಸಾಗುವಳಿಯ ಭೂಮಿ ಕೊಡಲು ಸರಕಾರವು ನಿರಾಕರಿಸ ಕೂಡದು. ಕೇಣಿ ಕೊಡದಿದ್ದರೆ ಭೂಮಿಯ ಕಬಜೆಯನ್ನು ಟೆನನ್ಸಿ ಅವಲಕಾರಕೂನರು ಕೊಡುತ್ತಾರೆಂದು ಮೊದಲು ಪ್ರಕಟನೆ ಹೊರಡಿಸಿ, ಸಾವಿರಾರು ದಾವೆಗಳನ್ನು ದಾಖಲ ಮಾಡಿಸಿಕೊಂಡು, ಅವೇಳೆ ಟೆನನ್ಸಿ ಅವಲಕಾರಕೂನರಿಗೆ ಇಂಥ ದಾವೆಗಳನ್ನು ವಿಚಾರಿಸಲಿಕ್ಕೆ ಅಧಿಕಾರವಿಲ್ಲೆಂದು ಹುಕುಮು ಹೊರಡಿಸಿ ಎಲ್ಲ ದಾವೆಗಳನ್ನು ತಿರಸ್ಕರಿಸ ಹಚ್ಚಿ, ಅವನ್ನು ಹೊಸದಾಗಿ ಮಾಮಲೇದಾರ ಕೋರ್ಟಿನಲ್ಲಾಗಲಿ ದಿವಾಣಿ ಕೋರ್ಟಿನಲ್ಲಾಗಲಿ ದಾಖಲ ಮಾಡಿಸಬೇಕೆಂದು ಮಾಮಲೇದಾರ ಕೋರ್ಟಿನಲ್ಲಿ ದಾವೆ ದಾಖಲ ಮಾಡಿಸುವ ಅವಧಿ ತೀರಿದ ಬಳಿಕ ತಿಳಿಸಲಾಯಿತು! ಕಬಜೆ ಕೊಡಿಸಿದ ಸಂದರ್ಭಗಳಲ್ಲಿ ಒಕ್ಕಲಿಗರಿಗೆ ತಿರುಗಿ ಕಬಜೆ ಕೊಡಿಸಲ್ಪಟ್ಟಿತು! ಸಾಗುವಳಿ ಮಾಡಿದವರು ಒಡೆಯರು, ಬೆಳೆ ಕೊಯ್ದವರು ಒಕ್ಕಲಿಗರು ಈ ಪ್ರಕಾರ ವೈಷಮ್ಯ ಘಟಿಸಿದ್ದುಂಟು. ಒಡೆಯನ ಕಡೆ ಎತ್ತು ಇಲ್ಲ, ಬೇಸಾಯ ಸಾಧನವಿಲ್ಲ, ಇದ್ದ ಎತ್ತು ಗಟ್ಟಿಯಿಲ್ಲ, ಭೂಮಿಯ ಕಬಜೆ ಕೊಡಿಸಿದರೆ ಒಕ್ಕಲಿಗನ ಜೀವನಕ್ಕೆ ತೊಂದರೆಯಾಗುವದು, ಸ್ವಂತ ಸಾಗುವಳಿಗೆ ಅಪೇಕ್ಷಿಸಿದ ಭೂಮಿ ಇದ್ದ ಗ್ರಾಮದಲ್ಲಿ ಒಡೆಯನ ವಾಸ್ತವ್ಯವಿಲ್ಲ, ಇವೇ ಮೊದಲಾದ ಕಾರಣಗಳ ಜೊತೆಗೆ ಒಡೆಯನ ಬಗೆ ವರ್ತನೆ ಒರಟು (rude) ಇರತ್ತದೆಂದೂ ಒಡೆಯನು ಒಕ್ಕಲಿಗ ಸಾಗುವಳಿದಾರನಲ್ಲೆಂದೂ ಟೆನನ್ಸಿ ಅವ್ವಲ ಕಾರಕೂನರು ಅಭಿಪ್ರಾಯ ಕೊಟ್ಟು, ಒಡೆಯನು ಅಪ್ರಮಾಣಿಕನೆಂದು ನಿರ್ಣಯಿಸಿ, ಸ್ವಂತ ಸಾಗುವಳಿಯ ದಾವೆಗಳನ್ನು ತಿರಸ್ಕರಿಸಿದ ಉದಾಹರಣೆಗಳುಂಟು! ಒಕ್ಕಲಿಗನು ಹೇಗೆ ಸಾಗುವಳಿ ಮಾಡುತ್ತಾನೆ? ಆತನ ಸಾಗುವಳಿಯಿಂದ ಉತ್ಪತ್ತಿ ಎಷ್ಟಾಗುತ್ತದೆ? ಒಡೆಯನ ಒರಟು ನಿಂಗ ವರ್ತನೆಯಿಂದ ಆಗುವ ಉತ್ಪತ್ತಿ ಎಷ್ಟು? ಎಂಬ ವಿಚಾರ ಟೆನನ್ಸಿ ಅವ್ವಲ ಕಾರಕೂನರಿಗೆ ಸೋಂಕುವದಿಲ್ಲ! ವಿಚಾರಶಕ್ತಿ ಅವರಲ್ಲಿಲ್ಲದ್ದರಿಂದ ಅವರಿಗೆ ಹೀಯಾಳಿಸಿ ಪ್ರಯೋಜನವಿಲ್ಲ. ಭೂಮಿ ಸ್ಥಾವರ ಸ್ವತ್ತು, ಆದರೊಳಗ ಪ್ರಾಪ್ತಿಯನ್ನು ತೊಡಗಿಸಿದರೆ ಯಾವಾಗಲೂ ಸುರಕ್ಷಿತ, ಭೂಮಿಯಷ್ಟೇ ಭದ್ರ ಎಂಬವೊಂದು ಭಾವನೆ ಪ್ರಾಚೀನಕಾಲದಿಂದ ನಡೆದು ಬಂದಿದೆ. ಈಗಿನ ವಿಚಾರವಿಲ್ಲದ ಸರಕಾರದಲ್ಲಿ ಭೂಮಿ ಇದ್ದು ನಾವು ಕೆಟ್ಟೆವೆಂಬುದಾಗಿಯೂ ಆದರೊಳಗಿಂದ ಬರಲಾಗುವ ಒಳಿ ಹೇಗೆಂದೂ ಒಡೆಯರಿಗೆ ಕಾಣದೇ ಒಡೆಯರು ಕಂಗೆಟ್ಟಿದ್ದಾರೆ. ಹಿಂದುಸ್ಥಾನ ಸರಕಾರವು ಒಡೆಯರನ್ನು ಕಾಪಾಡಬೇಕು. ಆಸ್ತಿಯನ್ನು ಸರಕಾರವು ಅವಶ್ಯ ಕಂಡಲ್ಲಿ ವಶಪಡಿಸಿಕೊಳ್ಳಬಹುದು. ಆದರೆ ಟೆನನ್ಸಿ ಅವಲ ಕಾರಕೂನರಂಥ ಅಲ್ಪ ಅಧಿಕಾರಿಗಳ ದರ್ಪದಿಂದಲೂ ಒಕ್ಕಲಿಗರ ಗೊಂಬಿಯಿಂದಲೂ ಒಡೆಯರನ್ನು ಸರಕಾರವು ರಕ್ಷಿಸಬೇಕು. ಒಕ್ಕಲಿಗರ ರಕ್ಷಣೆಯಿಂದ ಒಡೆಯರು ಪ್ರಾಣಕ್ಕೆ ಎರವಾಗಿದ್ದಾರೆ.

ಪೈಗಂಬರವಾಸಿ

ಬಸ್ತಿ ಮಹಮೂದ ಸಾಹೇಬ

ಸಾವಂತೆಯ ಸಾರ್ವಜನಿಕ ಜೀವನದಲ್ಲಿ ಪ್ರಸಿದ್ಧಿಗೆ ಬಂದ ಬೆಳಗಾವಿಯ ಜನಾಬ ಬಸ್ತಿ ಮಹಮೂದ ಅಲಿ ಸಾಹೇಬ ಇವರು ನಿನ್ನೆ ಮುಂಜಾನೆ ಸಂಜೆಯ ಕಾಲಕ್ಕೆ ಅಕಸ್ಮಾತವಾಗಿ ಪೈಗಂಬರವಾಸಿಗಳಾದರೆಂದು ತಿಳಿಸಲು ಬಹಳ ದುಃಖವಾಗುತ್ತದೆ. ವೃದ್ಧಾಪ್ಯದ ನಿಮಿತ್ತ ಪಕ್ಷಘಾತ ಬಂದು ಬಹು ಆಗಿತ್ತು. ಸ್ಥಾನಿಕ ಡಾಕ್ಟರರು ಎಷ್ಟು ಉಪಚಾರ ಮಾಡಿದರೂ ಅದರ ವೇದನೆಗಳನ್ನು ತಡೆಯಲು ಮಾಡಲಾಗಲಿಲ್ಲ. ಆದರಿಂದ ನಿನ್ನೆ ಕಾರವಾರದಿಂದ ಮಿಲಿಟರಿ ಸರ್ಜನರನ್ನು ಕರೆಸಲಾಗಿತ್ತು. ಅವರು ಬಂದು ಶಸ್ತ್ರಕ್ರಿಯೆ ಮಾಡಿದರು. ಆದರೆ ದುರ್ದೈವದಿಂದ ಶಸ್ತ್ರಕ್ರಿಯೆಯಾದ ಕೆಲ ಹೊತ್ತಿನಲ್ಲೇ ಮಹಮೂದ ಸಾಹೇಬರು ಇಹಲೋಕವನ್ನು ಬಿಟ್ಟು ನಡೆದರು. ಶ್ರೀ ಮಹಮೂದ ಸಾಹೇಬರು ಇತ್ತ ೧೭ ವರ್ಷಗಳಿಂದ ಕಾರವಾರ ನಗರ ಸಭೆಯ ಸದಸ್ಯರಾಗಿದ್ದರು. ಎರಡು ವರ್ಷ ಅದರ ಅಧ್ಯಕ್ಷರೂ ಆಗಿದ್ದರು. ಜಿಲ್ಲಾ ಲೋಕಲ್ ಬೋರ್ಡಿನ ಸದಸ್ಯರಾಗಿ ಅವರು ಜಿಲ್ಲೆಯ ಸೇವೆಯನ್ನು ಮಾಡಿದ್ದುಂಟು. ಅವರು ತಮ್ಮ ಸದ್ವರ್ತನೆಯಿಂದ ಸ್ವ-ಪರ ಸಮಾಜಗಳಲ್ಲಿ ಒಳ್ಳೇ ಲೋಕಪ್ರಿಯತೆಯನ್ನು ಸಂಪಾದಿಸಿದ್ದರು. ಸದ್ಯ ವೃದ್ಧಾಪ್ಯದಲ್ಲಿ ಅವರ ಅವಸಾನವಾದದ್ದು ತೀರ ಶೋಚನೀಯ. ಅವರ ಹಿಂದೆ ಹಿರಿಯ ಮಗನಿದ್ದಾನೆ. ಅವರ ಅಕಾಲಿಕ ಮರಣವು ಅವರ ಕುಟುಂಬದ ಮೇಲೆ ಇಡೀ ಊರಿಗೆ ಅಘಾತ. ಅವರ ಕುಟುಂಬಕ್ಕೆ ಬಂದ ದುಃಖದಲ್ಲಿ ನಾವು ಸಮಭಾಗಿಗಳು. ಮೃತರ ಬಂಧು-ಬಳಗದವರು ಮಿತ್ರರು ಸಮಾಧಾನ ಮಾಡಿಕೊಳ್ಳಬೇಕು. ಮೃತಾತ್ಮರಿಗೆ ಸದ್ಗತಿಯಾಗಲಿ!

ಸ್ಥಾನಿಕ ವೃತ್ತಾಂತ.

ನವಂಬರ— ಕಳೆದ ಅನೇಕ ಕಾರ್ತಿಕ ಮಾಸದ ವರುಷದಂತೆ ಈ ವರ್ಷವೂ ಗುರುವಾರ ಮತ್ತು ಶನಿವಾರ ಕಾರ್ತಿಕ ಶುದ್ಧ ದಶಮಿ ನಂತರ ಬಹಳ ಮಳೆ ಸುರಿದು ಈ ಮಳೆ ನಮ್ಮ ಜಿಲ್ಲೆ ಕಾರವಾರ (ನೆರೆಯ ಧಾರವಾಡ, ಮಂಗಳೂರ ಜಿಲ್ಲೆಗಳಲ್ಲಿಯೂ ಕೂಡ) ಬಿದ್ದ ಮಳೆ ತೆರೆಗಳ ಅನೇಕ ಕಾರಣಗಳ ವರ್ತಮಾನಗಳುಂಟು.

ಇಲ್ಲಿಯ ಮಾರ್ಗದ ಶ್ರೀ ವೆಂಕಟರಮಣ ದೇವರ ವನಭೋಜನದ ಉತ್ಸವವು ಮಳೆಯ ಕಾರಣ ನಿಲ್ಲಿಸಲಾಗಿ ಈ ವರ್ಷದ ಉತ್ಸವ ನಡೆಯಿತು. ಸಂಜೆಯ ಕಡೆಗೆ ಮಳೆಯ ಭೀತಿಯುಂಟಾಗಿದ್ದರೂ ದೇವರ ಕೃಪೆಯಿಂದ ಮಳೆಯಾಗದೆ ನಗರ ಪ್ರದಕ್ಷಿಣೆಯ ಕ್ರಿಯೆ ಉತ್ಸವ ಉತ್ಸಾಹದಿಂದ ನಡೆಯಿತು.

ಕಳೆದ ವರ್ಷ ದೀಪನ್ ಪದ್ಧತಿ ಅಮಲಿನಲ್ಲಿದ್ದ (ಕಾರವಾರ, ಗೋಕರ್ಣ, ಕುಮಟಾ, ಹೊನ್ನಾವರ, ಭಟಕಳ, ಶಿರಸಿ) ಊರುಗಳಲ್ಲಿ ಪುನಃ ಆ ಪದ್ಧತಿ ಜಾರಿಗೆ ಬರಲಿಲ್ಲ. ಆದರಂತೆ ಸರಕಾರದವರು ಆ ಆ ಊರುಗಳ ಬಗ್ಗೆ ಸೀಧಾ-ಅಧಿಕಾರಿಗಳನ್ನು ಈಗಾಗಲೇ ನೇಮಿಸಿರುತ್ತಾರೆ, ಜನಗಣತಿ, ಸೀಧಾ-ಚೀಟಿಗಳ ತಯಾರಿ ಮುಂತಾದ ಕ್ರಮವೂ ನಡೆಯಲಾರಂಭಿಸಿದೆ. ಸೀಧಾ ಪದ್ಧತಿ ಪೂರ್ಣವಾಗಿ ಅಮಲಿನಲ್ಲಿ ಬರುವವರೆಗಿನ ಮಧ್ಯಂತರದ ಕಾಲದಲ್ಲಿ ಈ ಸೀಧಾ-ಅಧಿಕಾರಿಗಳೇ ಸೀಧಾ ಚೀಟಿಗಳಿಲ್ಲದ ಮತ್ತು ಈಗ ಅವುಗಳ ಅಗತ್ಯವಿರುವ ಜನರಿಗೆ ತಾತ್ಪೂರ್ತಿಕ ಸೀಧಾ ಚೀಟಿಗಳನ್ನು ಕೊಡತಕ್ಕದ್ದು.

ಸೀಧಾ-ಅಂಗಡಿಗಳಲ್ಲಿ ಈಗ ಗೋಧಿ ಮತ್ತು ಜೋಳ ಸಿಗುವದಿಲ್ಲ. ಅಕ್ಕಿ ಮತ್ತು ಬಾಜರಿ (ಸಜ್ಜೆ) ಯು ಇದ್ದು ಸೀಧಾ ಕೊಡುತ್ತಾರೆ. ಅಕ್ಕಿಯ ಪ್ರಮಾಣ ಇನ್ನು ವಾರಕ್ಕೆ ೩೦ ತೊಲೆ (ಅಂದರೆ ತಿಂಗಳಿಗೆ ೧ ಮಣ ಅಥವಾ ೩೦ ಸೇರು) ಉಂಟು. ಈ ಅಕ್ಕಿಯಿಂದ ಜನರ ತಿಂಗಳಿಗೆ ಹೇಗಾಗಬೇಕು? ಎಲ್ಲೆಲ್ಲೂ ಈಗ ಇದೇ ಪ್ರಶ್ನೆ!

ಪ್ರಕಟವಾದ ಶಾಸನಸಭೆಯ ಕಾರ್ಯಕ್ರಮದಂತೆ ಸ್ಥಾನಿಕ ಸ್ವರಾಜ್ಯ ಖಾತೆಯ ಮಂತ್ರಿಗಳಾದ ಮಾನ್ಯ ವರ್ತಕರು ಮುಂಬಯಿಯಿಂದ ಗಂಜೆ ಹಕ್ಕೆ ಸಮುದ್ರಮಾರ್ಗವಾಗಿ ಇಲ್ಲಿ ತಲ್ಪಿದರು. ಮುನಸಿಪಾಲಿಟಿ ಬಂದರದ ನೌಕೆ ಬಂದು ನಗರದ ಜನರು ವಿಶ್ರಾಂತಿ ತಕ್ಕಂತೆ ಅವರು ತಮ್ಮ ಸ್ವಾಗತ ಗಾಂಧೀ ಚೌಕದಲ್ಲಿ ಏರ್ಪಡಿಸಿದ ಸಭೆಗೆ ಬಂದರು. ಅಲ್ಲಿ ಮುನಸಿಪಾಲಿಟಿಯ ಪರವಾಗಿ ನಾಗರಿಕರ ಪರವಾಗಿ ನಗರಾಧ್ಯಕ್ಷರು ಮಂತ್ರಿಗಳಿಗೆ ಮಾನಪತ್ರವನ್ನರ್ಪಿಸಿ ಮ|| ಖಾಡಿ ಅವರು ಕರೆಸಿರುವ ನಿಧಿ ಕೂಡಿಸುವ ಉದ್ಘಾಟನೆ ಮಾಡಲು ಅವರಿಗೆ ವಿನಂತಿಸಿದರು. ಮಂತ್ರಿಗಳು ಆಮೇಲೆ ೧-೦ ತಾಸು ಭಾಷಣ ಮಾಡಿ, ನಗರಸಭೆಯು ಮಾನಪತ್ರಕ್ಕೆ ಉತ್ತರ ಕೊಟ್ಟಿರಲ್ಲದೆ, ಪ್ರಜೆಗಳ ಸುಖಕ್ಕಾಗಿ ಮುಂಬಯಿ ಸರಕಾರವು ತೆರೆದಿರುವ ಆರೋಗ್ಯ-ಶಿಕ್ಷಣೆಯನ್ನು ಕುರಿತು ಸರಕಾರಕ್ಕಾಗಿ ಕೈಕೊಂಡಿರುವ ಹಲವಾರು ಯೋಜನೆಗಳನ್ನು ತಿಳಿ ಹೇಳಿದರು, ಮತ್ತು ಸಭೆಯಲ್ಲಿ ಧನನಿಧಿಯ ಉದ್ಘಾಟನೆಯನ್ನು ಮಾಡಿದರು. ಈ ಸಭೆಯನ್ನು ಮುಗಿಸಿ ಮಂತ್ರಿಗಳು ನಗರಾಧ್ಯಕ್ಷ ರಾ|| ಬಾಲ ಪೈ ಕೊಡಿಸಿದ ಅಲ್ಲಿಯ ಸರಕಾರಿ ದವಾಖಾನೆಗೆ ಭೆಟ್ಟಿ ಕೊಟ್ಟು, ದವಾಖಾನೆಯ ವಿಸ್ತರಣೆಯ ಅವಶ್ಯಕತೆಯನ್ನು ಸ್ವತಃ ನೋಡಿಕೊಂಡರು. ಶನಿವಾರ ಮುಂಜಾನೆ ಮಂತ್ರಿಗಳು ಬಸ್ಸಿನಿಂದ ಧಾರವಾಡದ ಕಡೆಗೆ ಹೊರಟು ಹೋದರು (ಮಂತ್ರಿಗಳ ಸಂಭಾಷಣದ ಕೆಲ್ಸದ ವಿವರಗಳು ಹಿಂದಿನಿಂದ ಪ್ರಕಟವಾಗುವವು)

(ದಕ್ಷಿಣ ಕನ್ನಡ ಜಿಲ್ಲೆಯೊಳಗಿನ) ಶ್ರೀ ಸುಬ್ರಹ್ಮಣ್ಯ ಮಠದ ಶಿಷ್ಯ-ಸ್ವಾಮಿಗಳು ಇತ್ತೀಚೆಗೆ ಸಂಚಾರ ಮಾಡುತ್ತ ಜಯ ರವಿವಾರ ಈ ಊರಿಗೆ ಬಂದಿದ್ದರು. ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಅವರ ಮುಕ್ಕಾಮು ಆ ದಿನ ಇದ್ದಿತು. ಶ್ರೀ ಗುರುಗಳು ಮುಂದೆ ಶ್ರೀ ಕ್ಷೇತ್ರ ಗೋಕರ್ಣಕ್ಕೆ ತೆರಳಿದರು.

ದೇಶ ಸಂಚಾರ ಮಾಡುತ್ತ ವೈದಿಕರ ಸೇವೆಯ ಓದು ಘನ ವಿದ್ವಾಂಸರಾದ ಶ್ರೀ|| ಗೋಪಾಲ ಸ್ವಾಮಿ ಅಯ್ಯಂಗಾರರು ಇವರು ಕಳೆದ ಸೋಮವಾರ ಈ ಊರಿಗೆ ಬಂದಿದ್ದರು. ಶ್ರೀ|| ಅಯ್ಯಂಗಾರರು ವೇದ-ವೇದಾಂತ ಮತ್ತು ಯೋಗ ಶಾಸ್ತ್ರಗಳ ಗಾಢ ಅಭ್ಯಾಸ ಮಾಡಿದವರಾಗಿದ್ದಾರೆ. ಭಗವದ್ಗೀತೆಯ ಅಭ್ಯಾಸವನ್ನಂತೂ ಅವರು ಬಹಳ ವಿಶಾಲ ಮತ್ತು ಆಳವಾಗಿ ಮಾಡಿದವರಾಗಿದ್ದಾರೆ. " ಸರ್ವ-ಶಾಸ್ತ್ರಮಯೀ ಗೀತಾ " ಎಂಬ ವಾಕ್ಯವು ಯಥಾರ್ಥವಿರುತ್ತದೆಂಬುದಾಗಿ ಅವರ ಸಕಲ ಶಾಸ್ತ್ರಗಳಿಂದ ಸಿದ್ಧ ಮಾಡಿ ತೋರಿಸುವ ಸಂಗ್ರಹ ವಿಮರ್ಶೆ ಅವರ ದಿನಚರಿ ಯಾಗಿಯೂ ಜನರಿಗೆ ತಿಳಿಯುವಂತೆಯೂ ಪ್ರತಿಪಾದಿಸುತ್ತಾರೆ. ಇಂಗ್ಲಿಷ, ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಮೇಲೆ ಅವರ ಪ್ರಭುತ್ವವುಂಟು. ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸೋಮವಾರದಿಂದ ಗುರುವಾರದ

ವರೆಗೆ ಅವರು ೪ ಪ್ರವಚನಗಳನ್ನು ಕೊಟ್ಟು ಗೀತಾ ಅಭ್ಯಾಸದ ಒಂದು ಹೊಸ ಮಾರ್ಗವನ್ನು ತೋರಿಸಿಕೊಟ್ಟರು. ಶ್ರೀ|| ಅಯ್ಯಂಗಾರರು ಮುಂದಿನ ತಿಂಗಳ ಅಂತ್ಯಕ್ಕೆ ಪ್ರಯಾಗದಲ್ಲಿ ಕೂಡಲಿರುವ ಶಾಸ್ತ್ರಜ್ಞರ ಪರಿಷತ್ತಿನಲ್ಲಿ ಭಾಗ ವಹಿಸಲು ಹೊರಟಿರುತ್ತಾರೆ ಅಲ್ಲಿಂದ ಮರಳಿ ಬರುವಾಗ ಪುನಃ ಈ ಊರಿಗೆ ಆಗಮನ ಮಾಡಬೇಕೆಂದು ಅವರ ಕಡೆ ಕೇಳಿಕೊಳ್ಳಲಾಗಿದೆ

ರಾ|| ಬಸ್ತಿ ಮಹದೇವ ಸಾಹೇಬರ ಆಕಸ್ಮಿಕ ನಿಧನದಿಂದಲೂ ಅವರ ಶವದ ದರ್ಶನದಿಂದಲೂ ಹೃದಯ ತೀವ್ರ ವೇದನೆಗೊಳ್ಳುಟ್ಟಿಗ [illegible] ಆಸ್ಮಿಕ್ ಪ್ರವೃತ್ತಿಯ [illegible] ಇಲ್ಲಿಯ [illegible] ವ್ಯಾಪಾರಿಗಳಾದ ರಾ| ರಹಿಮಾನ ಸಾಹೇಬರ ನಿನ್ನೆ ರಾತ್ರಿ ಪೈಗಂಬರವಾಸಿಗಳಾದರೆಂದು ಸಮೂದಿಸಲು ವ್ಯಸನವಾಗುತ್ತದೆ

ಶಾಗಿಲದೊಳಗಿನ ಶ್ರೀ ವೆಂಕಟರಮಣ ಮತ್ತು ಶ್ರೀ ದೇವಕೀಕೃಷ್ಣ ದೇವರ ವನಭೋಜನದ [illegible] ಕಳೆದ ಗುರುವಾರ ಜರುಗಿತು ಆ ರಾತ್ರಿ ಊರಿನಲ್ಲಿ ಕಳ್ಳತನವಾಗಿ ಮೆರವಣಿಗೆಯಲ್ಲಿದ್ದರೂ ಈ ಉತ್ಸವ ನಡೆದ ಶಾಗಿಲ ಗ್ರಾಮದ ಉತ್ಸವದಲ್ಲಿ [illegible] ಮನೆಯಾಗಲ್ಲಿ [illegible] ಸಮೂದಿಸತಕ್ಕ ಸಂಗತಿಯಾಗಿದೆ

ಶಿರ್ಶಿ— (ತಾ ೧೮-೧೧-೪೮) ಇಲ್ಲಿಯ ಪೋಲೀಸ ಫೌಜದಾರ ರಾ|| ಸೀತಾರಾಮ ನಾಯ್ಕ ಅವರು ನಿನ್ನೆ [illegible] ಓರ್ವನಿಂದ ರೂ ೪೦ ಲಂಚ ಪಡೆಕೊಂಡಾಗ ಲಂಚನಿರ್ಮೂಲನ ಖಾತೆಯು ಇನ್ಸಪೆಕ್ಟರ ರಾ| [illegible] ಅವರು ಹಿಡಿದು ಪಂಚನಾಮೆ ವಗೈರೆ ಮಾಡಿರುತ್ತಾರೆ

ಸಿದ್ದಾಪುರ— (ತಾ ೨೦-೧೧-೪೮) ಕಳೆದ ವಾರದ "ವೃತ್ತ"ದಲ್ಲಿ ಸೀಮೆಎಣ್ಣೆ [illegible] ದರದ ಅಂಗಡಿಯ ವಿರುದ್ಧ ಟೀಕೆ ಎತ್ತಿಯ ಸಂಬಂಧದಲ್ಲಿ, ಬಂದ ಟೀಕೆ ಸಮಯೋಚಿತವಾಗಿರುವದಿಲ್ಲೆಂದು ರಾ|| ಚನ್ನಬಸಪ್ಪ ಗೌಡರು ತಿಳಿಸುತ್ತಾರೆ ಹಿಂದೆ ಈ ಅಂಗಡಿಗೆ ಪ್ರತಿ ತಿಂಗಳಿಗೆ [illegible] ಸಿಗುತ್ತಿತ್ತು ಈಗ ಸೀಮೆ ಟೀಟಿಯನ್ನು [illegible] ಎಷ್ಟೆ ಕೊಡಲ್ಪಡುತ್ತಿತ್ತು. ಆದರೆ ಕಳೆದ ಅಕ್ಟೋಬರ ತಿಂಗಳಲ್ಲಿ ಈ ಅಂಗಡಿಗೆ ಬರೀ [illegible] ಡಬ್ಬಿಗಳು ದೊರೆತವು ಆದರಿಂದ ಚೀಟಿಯೊಂದಕ್ಕೆ [illegible] ಎಷ್ಟೆ ಕೊಡಬೇಕಾಯಿತು ಇದರಲ್ಲಿ ಕಳ್ಳಪೇಟೆಯೇನೂ ಇರುವದಿಲ್ಲ ಎಂದು ಮುಂತಾಗಿ ಅವರು ಬರೆದಿದ್ದಾರೆ

ಕಾರವಾರ— (ತಾ ೨೧ ೧೧-೪೮) ಕಳೆದ ವಾರ ಇಲ್ಲಿ ಕೊಂಕಣಿ ಭಾಷೆಯವರದೊಂದು ಸಂಸತ್ತು [illegible] ರಾ|| [illegible] ನಾಡಕರ್ಣಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು ಭಾಷಾವಾರು ಪ್ರಾಂತರಚನೆಯ ವಿಷಯದ ಮೇಲೆ ಈ ಪರಿಷತ್ತಿನಲ್ಲಿ ಕೂಲಂಕಷ ಚರ್ಚೆಯಾಗಿ, ಇಂತಹ ಪ್ರಾಂತ ರಚನೆಯು ದೇಶದ ಸದ್ಯದ ಪರಿಸ್ಥಿತಿಯಲ್ಲಿ ಅನಿಷ್ಟವಿರುತ್ತದೆಂದೂ, ಈ ಪ್ರಶ್ನೆಯನ್ನು ಸರಕಾರವು ಮುಂದೂಡಬೇಕೆಂದೂ, ಒಂದು ವೇಳೆ ಪ್ರಾಂತಗಳ ಪುನರ್ರಚನೆಯನ್ನು ಮಾಡುವದೇ ಆದಲ್ಲಿ ಉತ್ತರಕ್ಕೆ ಮುಂಬಯಿಯಿಂದ ದಕ್ಷಿಣಕ್ಕೆ ಮಂಗಳೂರ ಜಿಲ್ಲೆಯ ಕಾಸರಗೋಡ ತಾಲೂಕಿನವರೆಗಿನ ಕರಾವಳಿಯ ಭಾಗವನ್ನು ಬೇರ್ಪಡಿಸಿ 'ಕೊಂಕಣ' ಪ್ರಾಂತವನ್ನು ರಚಿಸುವದು ಅವಶ್ಯವಿರುತ್ತದೆಂದೂ ತೀರ್ಮಾನವಾಯಿತು

ಈ ತಾಲೂಕಿನಿಂದ ನೂರಾರು ದನಗಳು ಕಳ್ಳತನದಿಂದ ಗೋವೆಗೆ ಸಾಗುತ್ತಿರುವವೆಂಬ ದೂರು ಕೇಳಬರುತ್ತಿದೆ ಅಧಿಕಾರಿಗಳು ಈ ಬಗೆ ತನಿಖೆ ಮಾಡುತ್ತಿದ್ದಾರೆ ಕೆಲವು ದಿನಗಳ ಹಿಂದೆ ಸಾಬ್ಬ್ಯಪ್ಪ [illegible] ಸಾಹೇಬ ಎಂಬವನು ಹೀಗೆಯೇ ೧೯ ದನಗಳನ್ನು ಹೊಡಕೊಂಡು ಹೋಗುತ್ತಿರುವಾಗ ಗೋವಸರಹದ್ದಿಯ ಸಮೀಪ ಅವನ ದನಗಳನ್ನು ಕೇಂದ್ರ ಸರಕಾರದ ಅಬಕಾರಿ ಅಧಿಕಾರಿಗಳು ಹಿಡಿದಿದ್ದಾರೆ.

[illegible] ಜೊತೆಗಿರುವ ಓರಿ ಹೋದರಂತೆ ಇಷ್ಟು ಮಾಡಿದ ದನಗಳು ಈಗ ಗೋವೆಯ ಪಟೇಲರಕಡೆಗಿವೆ

ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮದಲ್ಲಿ ಕಾರ್ಯ ಮಾಡುತ್ತಿರುವ ಗ್ರಾಮ ಸೇವಾ ಸಮಿತಿಯ ವ್ಯವಸ್ಥಾಪಕರಾಗಿರುವ ರಾ| ಹುಬ್ಬಳ್ಳಿ [illegible] ಕಳೆದ ವಾರ ಅತ್ತಿಮತ್ತೂರಿನ ಕೆಲವು ಬೇಡರ ಕುಟುಂಬಗಳ ಸಹಿತ ಅಂಕೋಲೆಯ ಗ್ರಾಮಸೇವಾ ಸಮಿತಿಯ ಕೆಲಸ ನೋಡಲು ಬಂದಿದ್ದರು [illegible] ಬಂದ ಅವರು ಈ ಊರಿಗೂ ಬಂದಿದ್ದರು ಆಗ ಇಲ್ಲಿಯ ತಾಲೂಕ ಕಾಂಗ್ರೆಸ ಸಮಿತಿಯವರು ಪರಶಂತ್ರ [illegible] ಒಂದು ಸಭೆಯನ್ನು ಏರ್ಪಡಿಸಿದ್ದರು ರಾ| ಹುಬ್ಬಳ್ಳಿಯವರು ಆ ಸಭೆಯಲ್ಲಿ ಗ್ರಾಮಸೇವೆಯ ಮಹತ್ವವನ್ನು ಒಳ್ಳೆತಾಗಿ ತಿಳಿಸಿ, ಬೇಡರಂತಹ ಹಿಂದುಳಿದ ಜನರನ್ನು ಸುಧಾರಿಸಿ ಮುಂದಕ್ಕೆ ತರುವ ರೀತಿಯನ್ನು ಸೋದಾಹರಣವಾಗಿ ವಿವರಿಸಿದರು

ಯಲ್ಲಾಪುರ— (ತಾ ೧೮ ೧೧-೪೮) ಮುಳಗಾಲದೊಳಗೆ [illegible] ಈಗ ಮೇಲಿಂದ ಮೇಲೆ! ಮುಳೆಯಾಗಹತ್ತಿದೆ! ಆದರಿಂದ ಕೊಯ್ಯದೆ ಬಿದ್ದಿರುವ ಭತ್ತದ ಬೆಳೆ ಕೆಟ್ಟು ಹೋಗುವ ಪ್ರಸಂಗವಿದೆ!

ಮಾನ್ಯ ಮಂತ್ರಿಗಳಾದ ಶ್ರೀ|| ವರ್ತಕರು ನಿನ್ನೆ ಸಂಜೆಯ ಸುಮಾರಕ್ಕೆ ಇಲ್ಲಿಗೆ ಬಂದಿದ್ದರು ಶ್ರೀ|| ಕೇಶವ್ಯ, ಶಿವರಾಮ ಶಾಸ್ತ್ರಿ ವಗೈರೆ ಪ್ರಮುಖ ಕಾಂಗ್ರೆಸ್ಸಿಗರೂ ಸ್ಥಾನಿಕ ಪ್ರಮುಖರೂ ಅವರನ್ನು ಸ್ವಾಗತಿಸಿ ಬಂಗಲೆಗೆ ಕರೆಕೊಂಡು ಹೋದರು ಅಲ್ಲಿ ಅಲ್ಪೋಪಹಾರವಾಯಿತು ಶ್ರೀ|| ಅನಂತ ಭಟ್ಟರು ಮಂತ್ರಿಗಳ ಮುಂದೆ ಯಲ್ಲಾಪುರ ತಾಲೂಕಿನ ಭೂಗೋಲವನ್ನು ಬಿಚ್ಚಿ, ತಾಲೂಕಿನ ಸ್ಥಿತಿಗತಿಯನ್ನೂ, ಸರಕಾರದ ದುರ್ಲಕ್ಷವನ್ನೂ ಮಾರ್ಮಿಕವಾಗಿ ಬಣ್ಣಿಸಿದ್ದರು ಈ ತಾಲೂಕಿನ ಜನಸಂಖ್ಯೆ ಹಿಂದೆ ೩೩೦೦೦ ಇತ್ತು, ಈಗ ೧೯೦೦೦ಕ್ಕೆ ಇಳಿದಿದೆ ಜನಸಂಖ್ಯೆಯ ಮಾನದಿಂದ ಸರಕಾರವು ಬೇರೆ ಬೇರೆ ಸೌಕರ್ಯಗಳನ್ನು ಒದಗಿಸುತ್ತಿರುವದರಿಂದ ಈ ತಾಲೂಕಿಗೆ ಅನ್ಯಾಯವಾಗುತ್ತಿದೆ. ಹಳ್ಳಿಗಳಲ್ಲಿ ಜನರು ಕಷ್ಟಪಟ್ಟು ರಸ್ತೆಗಳನ್ನು [illegible] ದಕ್ಷ ವಹಿಸಿಕೊಳ್ಳಲಿಲ್ಲ ಪಿ ಡಬ್ಲ್ಯು ಡಿ ಯ ಪ್ರಯೋಗಗಳು ತಾಲೂಕಿನ [illegible] ಗ್ರಾಮಗಳಲ್ಲಷ್ಟೇ ನಡೆಯುತ್ತಿರುವದರಿಂದ ತಾಲೂಕಿನ ಬಹುಭಾಗಕ್ಕೆ ಅದರ ಪ್ರಯೋಜನ ಸಿಗದಂತಾಗಿದೆ ತಾಲೂಕಿನಲ್ಲಿ ಬಾವಿಗಳ ಕೊರತೆಯುಂಟು, ಸರಕಾರವು ಕೊಡಲು ಸಂಕಲ್ಪಿಸಿದ ಬಾವಿಗಳ ಕೆಲಸ ಕಾಲದಲ್ಲಿ ಆಗುವದಿಲ್ಲ, ಹಿಟ್ಟಿನ ರಾಜರ ಕೊಟ್ಟು ಕೂಲಿಯಾಳುಗಳನ್ನು ತರಿಸಿಕೊಳ್ಳುವ ಯೋಜನೆಯಾಗದಿದ್ದರೆ ಮುಂದೂ ಇದೇ ಹಾದಿಯಾಗುವದು, ಸಿಮೆಂಟ ನಳಿಗೆಗಳ ಬಾವಿಗಳನ್ನು ನಿರ್ಮಿಸುವ ಯೋಜನೆಯಾಗುವದೊಳಿತು ಈ ತಾಲೂಕಿನಲ್ಲಿ ನಾಲ್ಕು ಸರಕಾರಿ ದವಾಖಾನೆಗಳಿವೆ ಆದರೆ ಅವುಗಳಲ್ಲಿ ಡಾಕ್ಟರರಿದ್ದರೆ ಔಷಧಗಳಿಲ್ಲ ಔಷಧಗಳಿದ್ದರೆ ಡಾಕ್ಟರರಿರುವದಿಲ್ಲ! ಹೀಗೆ ಉಪಚಾರದ ವ್ಯವಸ್ಥೆಯಿಲ್ಲದ್ದರಿಂದ ಬಹಳಷ್ಟು ಬಾಳಂತಿಗಳು ಸಾಯುತ್ತಾರೆ! ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆ, ಎಂದು ಕಿವಿಯಿಂದ ಕೇಳುತ್ತಿದೆಯೇ ವಿನಹ ಆ ಸ್ವಾತಂತ್ರ್ಯದ ಅಥವಾ ಕಾಂಗ್ರೆಸ ರಾಜ್ಯದ ದೃಶ್ಯ ಫಲಗಳೇನೂ ನಮ್ಮಲ್ಲಿ ಕಣ್ಣಿಗೆ ಬೀಳುವದಿಲ್ಲ ಎಂದು ಮುಂತಾಗಿ ರಾ| ಭಟ್ಟರು ದೂರಿಕೊಂಡರು ಮಂತ್ರಿಗಳು ಅದನ್ನು ತಿಳಿಗೊಟ್ಟು ಕೇಳಿಕೊಂಡು, ತಾಲೂಕಿನ ಅಡಚಣಗಳನ್ನು ಸುಧಾರಿಸುವ ಪ್ರಯತ್ನ ಮಾಡಲಾಗುವದೆಂದು ಆಶ್ವಾಸನೆಕೊಟ್ಟರು, ಆಯಾ ತಾಲೂಕಿನಲ್ಲಿ ವಸೂಲ ಬರುವ ಲೋಕಲ ಫಂಡಿನ ಮುಕ್ಕಾಲು ಹಣವನ್ನು ಆಯಾ ತಾಲೂಕಿನಲ್ಲೇ ವಿನಿಯೋಗಿಸಬೇಕೆಂದು ಸರಕಾರವು ನಿಶ್ಚಯಿಸಿ [illegible] ಹೊರಡಿಸಿದೆಂದು ಅದರಿಂದ ರಾ| ಭಟ್ಟರು ಮುಂದಿಟ್ಟ ಕೆಲವು ಕಷ್ಟಗಳು ಕೆಲಮಟ್ಟಿಗಾದರೂ ಪರಿಹಾರ ಹೊಂದುವವೆಂದೂ ಅವರು ನುಡಿದರು ಮತ್ತು ೫|| ಯ ಸುಮಾರಿಗೆ ಸಹಪರಿವಾರವಾಗಿ ಕಾರವಾರಕ್ಕೆ ಹೊರಟು ಹೋದರು

ಕುಮಟಾ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಭಜಕರಲ್ಲಿ ವಿನಂತಿ

ಮೇಲ್ಕಾಣಿಸಿದ ದೇವಸ್ಥಾನದ ಗರ್ಭಗುಡಿ, ಸಂಧ್ಯಾಮಂಟಪ ಮತ್ತು ಸಭಾಮಂಟಪಗಳ ಮೇಲ್ಮಾಡಿನ ಜೀರ್ಣೋದ್ಧಾರ ಮಾಡಿ, ದೇವಸ್ಥಾನದ ಎದುರು ಒಂದು ರೇಜೆ ಯಾನೆ ಮುಖಮಂಟಪ ಕಟ್ಟಿಸಬೇಕಾಗಿ ಇದೇ ಕಳೆದ ನವರಾತ್ರಿಯ ಹುಣ್ಣಿಮೆಯ ದಿನ ದೇವರ ಭಜಕರ ಮಹಾಸಭೆಯಲ್ಲಿ ನಿರ್ಣಯವಾದಂತೆ, ದೇವಸ್ಥಾನದ ಕಾರ್ಯಕಾರಿ ಮಂಡಳದ ಅಧ್ಯಕ್ಷ ರಾ|| ಮಾಧವ ವಿಠೋಬ ಶಾನಭಾಗರೂ ಅರ್ಚಕರೂ ಬೇರೆ ಕೆಲವರೂ ಇದೇ ಬರುವ ಮಾರ್ಗಶೀರ್ಷ ಶು|| ೫ ಮಿಯ ದಿನ ದೇವರ ಪ್ರಸಾದ ತೆಕ್ಕೊಂಡು, ಸದರಿ ಜೀರ್ಣೋದ್ಧಾರಕ್ಕಾಗಿ ದೇವರ ಕುಳಾವಿಗಳಿಂದ ನಿಧಿ ಕೂಡಿಸಲು ಹೊರಡುವವರಿದ್ದಾರೆ ಶ್ರೀ ದೇವರ ಭಜಕರೆಲ್ಲರೂ ಅವರಿಗೆ ಯಥಾಶಕ್ತಿ ಕಾಣಿಕೆ-ವಂತಿಕೆಗಳನ್ನು ಕೊಟ್ಟು, ಸದರಿ ಜೀರ್ಣೋದ್ಧಾರ ಕಾರ್ಯವು ಶ್ರೀ ದೇವರ ಕೀರ್ತಿಗೆ ಒಪ್ಪುವಂತೆ ನೆರವೇರುವ ಹಾಗೆ ಸಹಾಯ ಮಾಡಿ ಶ್ರೇಯೋಭಾಗಿಗಳಾಗಬೇಕಾಗಿ ಅರಿಕೆಯಿದೆ

ತಾ ೨೨-೧೧-೪೮ **ಮಾಧವ ವಿಠೋಬ ಶಾನಭಾಗ**
ಕಾರ್ಯಕಾರಿ ಮಂಡಳದ ಅಧ್ಯಕ್ಷ

ವಾರ್ತೆ

— ಮಹಾತ್ಮರ ಕೊಲೆಯ ಖಟ್ಲೆಯಲ್ಲಿ ಕಳೆದ ಸೋಮವಾರದಿಂದ ಮೊನ್ನೆಯವರೆಗೆ ಇನ್ನುಳಿದ ಆರೋಪಿಗಳ ಜಬಾನಿಗಳಾದವು ಬಹುತೇಕ ಆರೋಪಿಗಳು ತಮ್ಮ ಹೇಳಿಕೆಯನ್ನು ಬರೆದು ಕೊಟ್ಟಿದ್ದಾರೆ ಮಾಫೀ ಸಾಕ್ಷಿದಾರ ಬಡಗೆಯ ತೆಲಗ, ನೌಕರನಾದ ಶಂಕರ ಕಿಷ್ಟಯ್ಯ ಇವನು ಮಾತ್ರ ನ್ಯಾಯಾಧೀಶರ ಪ್ರಶ್ನೆಗಳಿಗೆ ವಿಸ್ತೃತ ಉತ್ತರಗಳನ್ನಿತ್ತು ಬಡಗೆಯು ಹೇಳಿದ ಕಥೆಯನ್ನು ಬಹ್ವಂಶದಿಂದ ಪುಷ್ಟೀಕರಿಸಿದ್ದಾನೆ. ಇನ್ನಿತರ ಆರೋಪಿಗಳು ಕೊಲೆಯಲ್ಲಾಗಲಿ ಕೊಲೆಯ ಒಳಸಂಚಿನಲ್ಲಾಗಲಿ ತಮ್ಮದೇನೂ ಅಂಗವಿಲ್ಲೆಂದೂ ಕೆಲವು ಸಾಕ್ಷಿಗಾರರು ಪೋಲೀಸರ ಭೀತಿಯಿಂದ ಸುಳ್ಳು ಸಾಕ್ಷಿ ಹೇಳಿರುವರೆಂದೂ ಹೇಳಿದ್ದಾರೆ ತಾ. ೨೦ನೇಗೆ ಬಾಂಬು ಗುಂಡು ಒಗೆದ ಮದನಲಾಲನು ನಿರಾಶ್ರಿತರ ಕಡೆ ಮಹಾತ್ಮರ ಲಕ್ಷವನ್ನೆಳೆಯಲಷ್ಟೇ ತಾನು ಬಾಂಬು ಒಗೆದದ್ದೆಂದು ಪ್ರತಿಪಾದಿಸಿದ್ದಾನೆ ಎಲ್ಲ ಆರೋಪಿಗಳು ಒಚಾಪೆಯ ಪುರಾವೆಯಿಲ್ಲೆಂದು ಹೇಳಿರುವದರಿಂದ ಈ ವಾರದಿಂದ ವಕೀಲರ ಪ್ರತಿವಾದನೆಗಳಿಗೆ ಆರಂಭವಾಗುವದು

Again After Eight Long Years

World famous **PFAFF** German Make Sewing Machine

Available

Register Your Orders Immediately

ಜಗತ್ಪ್ರಸಿದ್ಧವಾದ ಜರ್ಮನ ತಯಾರಿಯ ಫ್ಯಾಫ್ ಹೊಲಿಗೆಯ ಯಂತ್ರಗಳು ಈಗ ದೊರೆಯುತ್ತವೆ ತಮ್ಮ ಬೇಡಿಕೆಯನ್ನು ಬೇಗನೆ ನೋಂದಾಯಿಸಿ [illegible]

ಉತ್ತರ ಕನ್ನಡ ಜಿಲ್ಲೆಗಾಗಿ ಏಜಂಟರು { **S G Mahale & Sons, Ankola, N Kanar**

ಹ ನ್ಯಾಯ ವಿಚಾರಣೆಯ ಯೋಗ್ಯತೆ ಇಲ್ಲದ ಇಸಮುಗಳಿಂದ ಒಡೆಯ ಒಕ್ಕಲಿಗರೊಳಗಿನ ವಿವಾದಗಳನ್ನು ತೀರ್ಮಾನಿಸಬಯಸುವದು ದಡ್ಡತನ. "ಕೋರ್ಟಿನ ಬಾಗಿಲಿಗೆ ಹೋದರೆ ಕಷ್ಟ, ಕೆಟ್ಟೆ. ವಿಚಾರವಿಲ್ಲದ ಸರಕಾರದಲ್ಲಿ ಇದ್ದು ಕೆಟ್ಟೆ" ಎಂಬದೊಂದ ಹೊಡೆದ ಕಾಲದ ನಾಣ್ಣುಡಿಯುಂಟು. ಟೆನನ್ಸಿ ಆಕ್ಟ ಕಾಯದೆಗಳ ನಿರ್ಣಯಗಳು ಆ ಕಾಲದ ಘಟನೆಗಳಂತೆ ಭಾಸವಾಗುತ್ತವೆ. ಕಂದಾಯ ಮಂತ್ರಿಗಳಿಗೆ ತುಂಬಿದ ಕೌನ್ಸಿಲ ಸಭೆಯಲ್ಲಿ ಕಾಡುತ್ತಿರುವೆಂದು ಶ್ರೀ|| ದತ್ತೋಪಂತ ಬೆಳವಿಯವರಂಥ ವಿಚಾರವಂತ, ಗಂಭೀರ ರಾಜಕಾರಣಿಗಳು ಸಂಬೋಧಿಸಲಿಕ್ಕೆ ಈ ಟಿಪಿಕಲ್ ರದ ಆಡಳಿತೆಯೇ ಕಾರಣವಾಗಿದೆ. ಒಡೆಯರಿಗೆ ಸ್ವಂತ ಸಾಗುವಳಿಗೆ ಭೂಮಿ ಪಡೆಯಲು ಕಾನೂನಿನಿಂದ ಹಕ್ಕ ಕೊಡಲ್ಪಟ್ಟಿದೆ. ಒಡೆಯರ ಸ್ವಾಮಿತ್ವವನ್ನು ಒಕ್ಕಲಿಗನ ಹಂತದಲ್ಲಿ ಸರಕಾರವು ವರ್ಗಾಯಿಸಲಿಲ್ಲ. ಅಂದ ಬಳಿಕ ಒಡೆಯನಿಗೆ ಸ್ವಂತ ಸಾಗುವಳಿಯಾಗಿ ಭೂಮಿ ಕೊಡಲು ಸರಕಾರವು ನಿರಾಕರಿಸ ಕೂಡದು. ಗೇಣಿ ಕೊಡದಿದ್ದರೆ ಭೂಮಿಯ ಕಬಜೆಯನ್ನು ಟೆನನ್ಸಿ ಅವಲಕಾರಿಕೂನನು ಕೊಡುತ್ತಾರೆಂದು ಮೊದಲು ಪ್ರಕಟನೆ ಹೊರಡಿಸಿ, ಸಾವಿರಾರು ದಾವೆಗಳನ್ನು ದಾಖಲ ಪಡಿಸಿಕೊಂಡು, ಆನಂತರ ಟೆನನ್ಸಿ ಅವಲಕಾರಕೂನರಿಗೆ ಇಂಥ ದಾವೆಗಳನ್ನು ವಿಚಾರಿಸಲಿಕ್ಕೆ ಅಧಿಕಾರವಿಲ್ಲೆಂದು ಹುಕುಮು ಹೊರಡಿಸಿ, ಎಲ್ಲ ದಾವೆಗಳನ್ನು ತಿರಸ್ಕರಿಸ ಹಚ್ಚಿ, ಇವನ್ನು ಹೊಸದಾಗಿ ಮಾಮಲೇದಾರ ಕೋರ್ಟಿನಲ್ಲಾಗಲಿ ದಿವಾಣಿ ಕೋರ್ಟಿನಲ್ಲಾಗಲಿ ದಾಖಲ ಪಡಿಸಬೇಕೆಂದು ಮಾಮಲೇದಾರ ಕೋರ್ಟಿನಲ್ಲಿ ದಾವೆ ದಾಖಲ ಪಡಿಸುವ ಅವಧಿ ತೀರಿದ ಬಳಿಕ ತಿಳಿಸಲಾಯಿತು. ಕಬಜೆ ಕೊಡಿಸಿದ ಸಂದರ್ಭಗಳಲ್ಲಿ ಒಕ್ಕಲಿಗರಿಗೆ ತಿರುಗಿ ಕಬಜೆ ಕೊಡಿಸಲ್ಪಟ್ಟಿತು. ಸಾಗುವಳಿ ಮಾಡಿದವರು ಒಡೆಯರು, ಬೆಳೆ ಕೊಯ್ಯುವವರು ಒಕ್ಕಲಿಗರು ಈ ಪ್ರಕಾರ ವೈಷಮ್ಯ ಘಟಿಸಿದ್ದುಂಟು. ಒಡೆಯನ ಕಡೆ ಎತ್ತು ಇಲ್ಲ, ಬೇಕಾದ ಸಾಮಗ್ರಿಯಿಲ್ಲ, ಇದ್ದ ಎತ್ತು ಗಟ್ಟಿಯಿಲ್ಲ, ಭೂಮಿಯ ಕಬಜೆ ಕೊಡಿಸಿದರೆ ಒಕ್ಕಲಿಗನ ಜೀವನಕ್ಕೆ ತೊಂದರೆಯಾಗುವದು, ಸ್ವಂತ ಸಾಗುವಳಿಗೆ ಅಪೇಕ್ಷಿಸಿದ ಭೂಮಿ ಇದ್ದ ಗ್ರಾಮದಲ್ಲಿ ಒಡೆಯನ ವಾಸ್ತವ್ಯವಿಲ್ಲ, ಇವೇ ಮೊದಲಾದ ಕಾರಣಗಳ ಜೊತೆಗೆ ಒಡೆಯನ ಸಾಗುವಳಿ ಒರಟು (crude) ಇರತಕ್ಕದೆಂದೂ ಒಡೆಯನು ಒಳ್ಳೇ ಸಾಗುವಳಿದಾರನಲ್ಲೆಂದೂ ಟೆನನ್ಸಿ ಅವ್ವಲ ಕಾರಕೂನರು ಅಭಿಪ್ರಾಯ ಕೊಟ್ಟು, ಒಡೆಯನು ಅಪ್ರಮಾಣಿಕನೆಂದು ನಿರ್ಣಯಿಸಿ, ಸ್ವಂತ ಸಾಗುವಳಿಯ ದಾವೆಗಳನ್ನು ತಿರಸ್ಕರಿಸಿದ ಉದಾಹರಣೆಗಳುಂಟು! ಒಕ್ಕಲಿಗನು ಹೇಗೆ ಸಾಗುವಳಿ ಮಾಡುತ್ತಾನೆ? ಅವನ ಸಾಗುವಳಿಯಿಂದ ಉತ್ಪತ್ತಿ ಎಷ್ಟಾಗುತ್ತದೆ? ಒಡೆಯನ ಒರಟು ಸಾಗುವಳಿಯಿಂದ ಆಗುವ ಉತ್ಪತ್ತಿ ಎಷ್ಟು? ಎಂಬ ವಿಚಾರ ಟೆನನ್ಸಿ ಅವ್ವಲ ಕಾರಕೂನರಿಗೆ ಹೊಳೆಯುವದಿಲ್ಲ! ವಿಚಾರಶಕ್ತಿ ಕವರಸ್ಥಳಿಸ್ಸರಿಂದ [illegible] ಅವರಿಗೆ ಹೇಳಿದರೂ ಪ್ರಯೋಜನವಿಲ್ಲ. ಭೂಮಿ ಸ್ಥಾವರಸ್ಥಿತಿ, ಅದರೊಳಗಿನ ಪ್ರಾಪ್ತಿಯನ್ನು ತೋಡಿಗಿಸಿದರ ಯಾವಾಗಲೂ ಸುರಕ್ಷಿತ, ಭೂಮಿಯಷ್ಟೇ ಭದ್ರ ಎಂಬದೊಂದು ಭಾವನೆ ಪ್ರಾಚೀನಕಾಲದಿಂದ ನಡೆದು ಬಂದಿದ. ಈಗಿನ ವಿಚಾರವಿಲ್ಲದ ಸರಕಾರದಲ್ಲಿ ಭೂಮಿ ಇದ್ದು ನಾವು ಕೆಟ್ಟೆವೆಂಬುದಾಗಿಯೂ ಅದರೊಳಗಿಂದ ಪಾರಾಗುವ ಬಗೆ ಹೇಗೆಂದೂ ಒಡೆಯರಿಗೆ ಕಾಣದೇ ಒಡೆಯರು ಕಂಗೆಟ್ಟಿದ್ದಾರೆ. ಇಂದು ಸ್ಥಾನ ಸರಕಾರವು ಒಡೆಯರನ್ನು ಕಾಯಬೇಕು. ಆಸ್ತಿಯನ್ನು ಸರಕಾರವು ಅವಶ್ಯ ಕಂಡಲ್ಲಿ ವಶಪಡಿಸಿಕೊಳ್ಳಬಹುದು. ಆದರೆ ಟೆನನ್ಸಿ ಅವ್ವಲ ಕಾರಕೂನರಂಥ ಅಲ್ಪ ಅಧಿಕಾರಿಗಳ ದರ್ಪದಿಂದಲೂ ಒಕ್ಕಲಿಗರ ದೊಂಬಿಯಿಂದಲೂ ಒಡೆಯರನ್ನು ಸರಕಾರವು ರಕ್ಷಿಸಬೇಕು. ಒಕ್ಕಲಿಗರ ರಕ್ಷಣೆಯಿಂದ ಒಡೆಯರು ಸಂಪೂರ್ಣ ಬಡವಾಗಿದ್ದಾರೆ.

ಸ್ವರ್ಗಂಬರನಾದ

ಬಸ್ತ್ರ ಮಹಮೂದ ಸಾಹೇಬ

ಕುಮಟೆಯ ಸಾರ್ವಜನಿಕ ಜೀವನದಲ್ಲಿ ಪ್ರಾಮುಖ್ಯದಿಂದ ಬೆಳಗುತ್ತಿದ್ದ ಜನಾಬ ಬಸ್ತಿ ಮಹಮೂದ ಅಲಿ ಸಾಹೇಬ ಅವರು ನಿನ್ನೆ ಮುಂಜಾನೆ ಸಂಜೆಯ ಕಡೆ ಅಕಸ್ಮಾತ್ತಾಗಿ [illegible] ಸಮಾಧಿಸಲು ಬಹು ವ್ಯಸನವಾಗುತ್ತದೆ. ವ್ಯಾಪಾರಿಗಳಾಗಿಯೂ ಹಲವು ಎಂದು ಬಂದು ಆಗಿದ್ದ ಸ್ನೇಹಿತ ಸಾಕ್ಷರರು. ಎಷ್ಟು ಉದಾರ ಮನಸಿನವರೂ ಅವರ ವೇದನೆಗಳನ್ನು [illegible] ಮಾಡಲಾಗಲಿಲ್ಲ. ಅದರಿಂದ ಇನ್ನೆ ಬಾವಾಜಾರದಿಂದ ಎಲ್ಲ ಸಜ್ಜನರನ್ನು ಕರೆಸಲಾಗಿತ್ತು. ಅವರು ಒಂದು ಶಸ್ತ್ರಕ್ರಿಯೆ ಮಾಡಿದರು. ಆದರೆ ದುರ್ದೈವದಿಂದ ಶಸ್ತ್ರಕ್ರಿಯೆ ಮಾಡಿದ ಕೆಲ ತಾಸಿನಲ್ಲೇ ಮಹಮೂದ ಸಾಹೇಬರು ಇಹಲೋಕವನ್ನು ಬಿಟ್ಟು ನಡೆದರು. ಶ್ರೀ|| ಮಹಮೂದ ಸಾಹೇಬರು ಹಲವು ವರ್ಷಗಳಿಂದ ಕುಮಟೆ ನಗರಸಭೆಯ ಸದಸ್ಯರಾಗಿದ್ದರು. ಎರಡು ವರ್ಷ ಅದರ ಅಧ್ಯಕ್ಷರೂ ಆಗಿದ್ದರು. ಲೋಕಲ್ ಬೋರ್ಡಿನ ಸದಸ್ಯರಾಗಿ ಅವರು ಹಲವು ಸೇವೆಯನ್ನು ಮಾಡಿದ್ದುಂಟು. ಅವರು ತಮ್ಮ [illegible] ಸರ್ವ ಸಮಾಜಗಳಲ್ಲಿ ಒಳ್ಳೇ ಲೋಕಪ್ರಿಯತೆಯನ್ನು ಸಂಪಾದಿಸಿದ್ದರು. ನಮ್ಮ ಕಾರ್ಯಾಲಯದ ಆದರ ಅಭಿಮಾನವಿದ್ದು ತೀರ ಹೋಚಿಸಿದ್ದು. ಅವರ ವಯೋವೃದ್ಧ ತಂದೆಯವರ ಮೇಲೆ ಇದೊಂದು ವಜ್ರಾಘಾತವೇ ಸರಿ. ಆದರೆ ಈಶ್ವರೇಚ್ಛೆಯ ಮುಂದೆ ಯಾರ ಉಪಾಯವಿಲ್ಲ! ಈ ಮಾತನ್ನು ಲಕ್ಷದಲ್ಲಿಟ್ಟುಕೊಂಡು ಮೃತರ ಬಂಧು-ಬಳಗದವರೂ ಮಿತ್ರರೂ ಸಮಾಧಾನ ಮಾಡಿಕೊಳ್ಳಬೇಕು. ಮೃತಾತ್ಮರಿಗೆ ಸದ್ಗತಿಯಾಗಲಿ!

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಇನ್ನೂ ನಿಂತಿಯಾಗಿಲ್ಲ. ನಡುನಡುವೆ ಮಳೆಯೂ ದೀಪಾವಳಿ ಗುರುವಾರ ಮತ್ತು ಶನಿವಾರ ಮಧ್ಯರಾತ್ರಿಯ ನಂತರ ಬಹಳ ಮಳೆ ಸುರಿದಿತು. ಈ ಮಳೆ ನಮ್ಮ ಪಶ್ಚಿಮ ಕಾಂಟ (ನೆರೆಯ ಧಾರವಾಡ, ಮಂಗಳೂರ ಜಿಲ್ಲೆಗಳಲ್ಲಿ ಕೂಡ) ಬಿದ್ದ ಬಗ್ಗೆ ವರ್ತಮಾನ [illegible] ಸುದ್ದಿಗಳುಂಟು.

ಕಳೆದ ಮಂಗಳವಾರ ಶ್ರೀ|| ವೆಂಕಟರಮಣ ದೇವರ ವನಭೋಜನದ ಉತ್ಸವವು ಪದ್ಧತಿಯಂತೆ ನಿರ್ವಿಘ್ನವಾಗಿ ಜರುಗಿತು. ಸಂಜೆಯ ಕಡೆಗೆ ಮಾಗಿಲೆಡೆಗೆ ಬಿಟ್ಟ ಮೋಡಗಳಿಂದ ಮಳೆಯಾಗುವ ಭೀತಿಯುಂಟಾಗಿದ್ದರೂ ದೇವರ ಕೃಪೆಯಿಂದ ಮಳೆಯಾಗದೆ ನಗರ-ಪ್ರದಕ್ಷಿಣೆಯ ರಾತ್ರಿಯ ಉತ್ಸವವು ಉತ್ಸಾಹದಿಂದ ನಡೆಯಿತು.

ಕಳೆದ ವರ್ಷ ಡಿಸೆಂಬರ ತಿಂಗಳ ಅಮಲಿನಲ್ಲಿದ್ದ (ಕಾರವಾರ, ಗೋಕರ್ಣ, ಕುಮಟಾ, ಹೊನ್ನಾವರ, ಭಟಕಳ, ಶಿರಸಿ) ಊರುಗಳಲ್ಲಿ ಪುನಃ ಆ ತಿಂಗಳ ೮ನೇ ತಾರೀಖಿನಲ್ಲಿ ಬರಲಿದ [illegible] ಸರಕಾರದವರು ಆ ಊರುಗಳ ಬಗೆ ಸಿಥಾ-ಅಧಿಕಾರಿಗಳನ್ನು ನೇಮಿಸಿರುತ್ತಾರೆ. ಜನಗಳಿಗೆ ಸಿಥಾ ಚೀಟಿಗಳ ತಯಾರಿ ಮುಂತಾದ ಕ್ರಮವೂ ನಡೆಯಲಾರಂಭಿಸಿದೆ. ಸಿಥಾ-ಪದ್ಧತಿ ಜಾರಿಯಾಗಿ ಅದರಲ್ಲಿ ಬರುವವರೆಗಿನ ಮಧ್ಯಂತರದ ಕಾಲದಲ್ಲಿ ಆ ಸಿಥಾ-ಅಧಿಕಾರಿಗಳೇ ಸಿಥಾ-ಚೀಟಿಗಳಲ್ಲದ ಮತ್ತು ಈಗ ಅವುಗಳ ಅಗತ್ಯವಿರುವ ಜನರಿಗೆ ತಾತ್ಪೂರ್ತಿಕ ಸಿಥಾ ಚೀಟಿಗಳನ್ನು ಕೊಡತಕ್ಕದ್ದು.

ಸಿಥಾ ಅಂಗಡಿಗಳಲ್ಲಿ ಈಗ ಗೋಧಿ ಮತ್ತು ಜೋಳ ಸಿಗುತ್ತದೆ. ಅಕ್ಕಿ ಮತ್ತು ಜಾಮೃತ (ಪರಾಯ್) ಯ ಧಾನ್ಯ ಮಾತ್ರ ಕೊಡುತ್ತಾರೆ. ಅಕ್ಕಿಯ ಪ್ರಮಾಣ ಇನ್ನೂ ವಾರಕ್ಕೆ ೫ ರತ್ತಲು (ಅಂದರೆ ತಿಂಗಳೊಂದಕ್ಕೆ ೨೦ ರತ್ತಲು ಅಥವಾ ೫ ಶೇರ) ಉಂಟು. ಈ ಅಕ್ಕಿಯಿಂದ ಜನರ ಜೀವನ ಹೇಗಾಗಬೇಕು? ಎಲ್ಲೆಲ್ಲೂ ಈಗ ಇದೇ ಪ್ರಶ್ನೆ!

ಕೃಷಿಮಂತ್ರಿ [illegible] ಸ್ವಾಗತ ಕಾರ್ಯದ ಮಂತ್ರಿಗಳಾದ ದಾಸಪ್ಪ ವರ್ತಕರು ಶುಕ್ರವಾರ ಸಂಜೆ ಇಲ್ಲಿಗೆ ಬಂದರು. ಮುಕ್ಕಾಮು ಬಾಗಲೆಯ ಮೇಲೆ ಒಂದು ಗಳಿಗೆ ತೊಕ್ಕು ವಿಶ್ರಾಂತಿ ತೆಗೆದುಕೊಂಡು ಅವರು ಶ್ರೀ|| ಗಾಂಧೀ ಚೌಕದಲ್ಲಿ ಏರ್ಪಡಿಸಿದ ಸಭೆಗೆ ಬಂದರು. ಅಲ್ಲಿ ಮ್ಯುನಿಸಿಪಾಲಿಟಿಯ ಹಾಗೂ ನಾಗರಿಕರ ಪರವಾಗಿ ನಗರಾಧ್ಯಕ್ಷರು ಮಂತ್ರಿಗಳಿಗೆ ಮಾನಪತ್ರವನ್ನಿತ್ತರು. ಮ್ಯು|| ಹಾಲ ಕಟ್ಟಿಸುವ ಸಭೋದ್ಘಾಟನೆ ಮಂತ್ರಿಗಳ ಉದ್ಘಾಟನೆ ಮಾಡಲು ಅವರಿಗೆ ಬಿನ್ನವಿಸಿದರು. ಮಂತ್ರಿಗಳು ಆಮೇಲೆ [illegible] ನಗರಸಭೆಯ ಮಾನಪತ್ರಕ್ಕೆ ಉತ್ತರ ಕೊಟ್ಟರಲ್ಲದೆ, ಪ್ರಚಲಿತ [illegible] ಕಾರ್ಯಕ್ರಮದ ಧೋರಣೆಯನ್ನೂ ಬೇರೆ ಮುಖ್ಯ ಯೋಜನೆಗಳನ್ನೂ ತಿಳಿಸಿದರು. ಮತ್ತು ಸಭೋದ್ಘಾಟನೆಯನ್ನು ಮಾಡಿದರು. ಈ ಸಭೆಯನ್ನು ಮುಗಿಸಿ ಮಂತ್ರಿಗಳು ನಗರಾಧ್ಯಕ್ಷ ರಾ|| ಬಾಳ [illegible] ಅವರ ಜೊತೆ ಆಸ್ಪತ್ರೆಗೆ ಭೇಟಿ ಕೊಟ್ಟು, ದವಾಖಾನೆಯ ವಿಸ್ತರಣದ ಆವಶ್ಯಕತೆಯನ್ನು ಸ್ವತಃ ನೋಡಿಕೊಂಡರು. ಶನಿವಾರ ಮುಂಜಾನೆ ಮಂತ್ರಿಗಳು ಇಲ್ಲಿಂದ ಕಾರವಾರ ಕಡೆಗೆ ಹೊರಟು ಹೋದರು. (ಮಂತ್ರಿಗಳ ಸಂಬಂಧದ ಹೆಚ್ಚಿನ ವಿವರಗಳು ಹಿಂದಿನಿಂದ ಪ್ರಕಟವಾಗುವವು)

(ದಕ್ಷಿಣ ಕಾನಡಾ ಜಿಲ್ಲೆಯೊಳಗಿನ) ಶ್ರೀ ಸುಬ್ರಹ್ಮಣ್ಯ ಮಠದ ಶಿಷ್ಯ-ಸ್ವಾಮಿಗಳು ಉತ್ತರಕಡೆಗೆ ಸಂಚಾರ ಮಾಡುತ್ತ ಆಚೆಯ ರವಿವಾರ ಈ ಊರಿಗೆ ಬಂದಿದ್ದರು. ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಅವರ ಮುಕ್ಕಾಮು [illegible] ದಿನ ಇಲ್ಲಿದ್ದು ಶ್ರೀ ಗುರುಗಳು ಮುಂದೆ ಶ್ರೀ ಕ್ಷೇತ್ರ ಗೋಕರ್ಣಕ್ಕೆ ತೆರಳಿದರು.

ದೇಶ ಸಂಚಾರ ಮಾಡುತ್ತ, ವ್ಯಾಸಪರ [illegible] ಪ್ರವಚನ ವಿದ್ವಾಂಸರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ ಅವರು ಕಳೆದ ಸೋಮವಾರ ಈ ಊರಿಗೆ ಬಂದಿದ್ದರು. ಶ್ರೀ|| ಅಯ್ಯಂಗಾರರು ವೇದ-ವೇದಾಂತ ಮತ್ತು ಯೋಗಶಾಸ್ತ್ರಗಳ ಗಾಢ ಅಭ್ಯಾಸ ಮಾಡಿದವರಿರುತ್ತಾರೆ. ಭಗವದ್ಗೀತೆಯ ಅಭ್ಯಾಸವನ್ನಂತೂ ಅವರು ಬಹಳ ವಿಶಾಲ ಮತ್ತು ಆಳವಾಗಿ ಮಾಡಿದವರಿರುತ್ತಾರೆ. "ಸರ್ವ-ಶಾಸ್ತ್ರಮಯೀ ಗೀತಾ" ಎಂಬ ನಾಣ್ಣುಡಿ ಯಥಾರ್ಥವಿರುವದೆಂತಲೂ, ಗೀತೆಯು ಸಕಲ ಶಾಸ್ತ್ರಗಳದೆಂದು ಶ್ರೀ [illegible] ಇಲ್ಲವೆ ಸಂಗ್ರಹವಿರುವದೆಂದು ಅವರು ದೃಢವಾಗಿಯೂ ಮನದಟ್ಟಾಗುವಂತೆಯೂ ಪ್ರತಿಪಾದಿಸುತ್ತಾರೆ. ಇಂಗ್ಲಿಷ, ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಮೇಲೆ ಅವರ ಪ್ರಭುತ್ವವುಂಟು. ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸೋಮವಾರದಿಂದ ಗುರುವಾರದ

ವರೆಗೆ ಅವರು ೪ ಪ್ರವಚನಗಳನ್ನು ಕೊಟ್ಟು, ಗೀತೆಯ ಅಭ್ಯಾಸದ ಒಂದು ಹೊಸ ಮಾರ್ಗವನ್ನು ತೋರಿಸಿಕೊಟ್ಟರು. ಶ್ರೀ॥ ಅಯ್ಯಂಗಾರರು ಮುಂದಿನ ತಿಂಗಳ ಅಂತ್ಯಕ್ಕೆ ಪ್ರಯಾಗದಲ್ಲಿ ಕೂಡಲಿರುವ ತತ್ವಜ್ಞರ ಪರಿಷತ್ತಿನಲ್ಲಿ ಭಾಗ ವಹಿಸಲು ಹೊರಟಿರುತ್ತಾರೆ ಅಲ್ಲಿಂದ ಮರಳಿ ಬರುವಾಗ ಪುನಃ ಈ ಊರಿಗೆ ಅನುಗ್ರಹ ಮಾಡಬೇಕೆಂದು ಅವರ ಕಡೆ ಕೇಳಿಕೊಳ್ಳಲಾಗಿದೆ

ರಾ॥ ಬಸ್ತಿ ಮಹಮೂದ ಸಾಹೇಬರ ಆಕಸ್ಮಿಕ ನಿಧನದಿಂದಲೂ ಅವರ ಶವದ ದರ್ಶನದಿಂದಲೂ ಹೃದಯಕ್ಕೆ ತೀವ್ರ ವೇದನೆಗಳುಂಟಾಗಿ ಪ್ರತ್ಯಕ್ಷ ಕಣ್ಣಾರೆ ನೋಡಿದ ವ್ಯಕ್ತಿಯು ನಿಂತ ಇಲ್ಲಿಯ ಮಣ್ಣವರಿ ವ್ಯಾಪಾರಿಗಳಾದ ರಾ॥ ರಹಿಮಾನ ಸಾಹೇಬರು ನಿನ್ನೆ ರಾತ್ರಿ ಸ್ವರ್ಗಸ್ಥರಾದರೆಂಬುದು ನಮೂದಿಸಲು ವ್ಯಸನವಾಗುತ್ತದೆ

ಶಾಗಾಲದೊಳಗಿನ ಶ್ರೀ ವೆಂಕಟರಮಣ ಮತ್ತು ಶ್ರೀ ದೇವಕೀಕೃಷ್ಣ ದೇವರ ವನಭೋಜನದ ಉತ್ಸವ ಕಳೆದ ಗುರುವಾರ ಜರುಗಿತು ಆ ರಾತ್ರಿ ಊರೆಲ್ಲ ಕಡೆ ವಿಶೇಷ ಮಳೆಯಾಗಿರುತ್ತಿದ್ದರೂ ಈ ಉತ್ಸವ ನಡೆದ ಶಾಗಾಲ ಗ್ರಾಮದ ಉತ್ತರಾರ್ಧದಲ್ಲಿ ಏನೇನೂ ಮಳೆಯಾಗಲಿಲ್ಲೆಂಬ ವಿಶೇಷ ನಮೂದಿಸತಕ್ಕ ಸಂಗತಿಯಾಗಿದೆ

ಶಿರಸಿ— (ತಾ ೧೮ ೧೧ ೪೮) ಇಲ್ಲಿಯ ಪೋಲೀಸ ಫೌಜದಾರ ರಾ॥ ಸೀತಾರಾಮ ನಾಯ್ಕ ಇವರು ನಿನ್ನೆ ಮುಂಜಾನೆ ಓರ್ವನಿಂದ ರೂ ೪೦ ಲಂಚ ಪಡೆಕೊಂಡಾಗ ಲಂಚ_ನಿರ್ಮೂಲನ ಖಾತೆಯ ಇನ್ಸ್‌ಪೆಕ್ಟರ ರಾ॥ ಶೇಠ ಇವರು ಹಿಡಿದು ಪಂಚನಾಮೆ ವಗೈರೆ ಮಾಡಿರುತ್ತಾರೆ

ಸಿದ್ದಾಪುರ— (ತಾ ೨೦-೧೧-೪೮) ಕಳೆದ ವಾರದ "ವೃತ್ತ"ದಲ್ಲಿ ಸೀಮೆಎಣ್ಣೆದೊಳಗಿನ ಯೋಗ್ಯ ದರದ ಅಂಗಡಿಯ ವಿರುದ್ಧ, ಚಿಮಣಿ ಎಣ್ಣೆಯ ಸಂಬಂಧದಲ್ಲಿ, ಬಂದ ಟೀಕೆ ಸಯುಕ್ತಿಕವಿರುವದಿಲ್ಲೆಂದು ರಾ॥ ತಮ್ಮಣ್ಣ ಗೌಡರು ತಿಳಿಸುತ್ತಾರೆ ಹಿಂದೆ ಈ ಅಂಗಡಿಗೆ ಪ್ರತಿ ತಿಂಗಳಿಗೆ ೨೫ ಡಬ್ಬಿ ಸಿಗುತ್ತಿತ್ತು ಆಗ ಸೀಧಾ_ಚೀಟಿಯೊಂದಕ್ಕೆ ೨ ೩ ಗ್ಯಾಲಂಟ ಎಣ್ಣೆ ಕೊಡಲ್ಪಡುತ್ತಿತ್ತು ಆದರೆ ಕಳೆದ ಅಕ್ಟೋಬರ ತಿಂಗಳಲ್ಲಿ ಈ ಅಂಗಡಿಗೆ ಬರೇ ೬ ಡಬ್ಬಿಗಳು ದೊರೆತವು ಆದ್ದರಿಂದ ಚೀಟಿಯೊಂದಕ್ಕೆ ೩ ಬಾಟ್ಲಿಯಂತೆ ಎಣ್ಣೆ ಕೊಡಬೇಕಾಯಿತು ಇದರಲ್ಲಿ ತಪ್ಪೇನೂ ಇರುವದಿಲ್ಲ ಎಂದು ಮುಂತಾಗಿ ಅವರು ಬರೆಯುತ್ತಾರೆ

ಕಾರವಾರ— (ತಾ ೨೧-೧೧-೪೮) ಕಳೆದ ವಾರ ಇಲ್ಲಿ ಕೊಂಕಣಿ ಭಾಷೆಯವರದೊಂದು ಪರಿಷತ್ತು ಆಯಿತು ರಾ॥ ಯಶವಂತರಾವ ನಾಡಕರ್ಣಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು ಭಾಷಾನುಗುಣ ಪ್ರಾಂತರಚನೆಯ ವಿಷಯದ ಮೇಲೆ ಈ ಪರಿಷತ್ತಿನಲ್ಲಿ ಕೂಲಂಕಷ ಚರ್ಚೆಯಾಗಿ, ಇಂತಹ ಪ್ರಾಂತರಚನೆಯು ದೇಶದ ಸದ್ಯದ ಪರಿಸ್ಥಿತಿಯಲ್ಲಿ ಅನಿಷ್ಟವಿರುತ್ತದೆಂದೂ, ಈ ಪ್ರಶ್ನೆಯನ್ನು ಸರಕಾರವು ಮುಂದೂಡಬೇಕೆಂದೂ, ಒಂದು ವೇಳೆ ಪ್ರಾಂತಗಳ ಪುನರ್‍ರಚನೆಯನ್ನು ಮಾಡುವದೇ ಆದಲ್ಲಿ ಉತ್ತರಕ್ಕೆ ಮುಂಬಯಿಯಿಂದ ದಕ್ಷಿಣಕ್ಕೆ ಮಂಗಳೂರ ಜಿಲ್ಲೆಯ ಕಾಸರಗೋಡ ತಾಲೂಕಿನವರೆಗಿನ ಕರಾವಳಿಯ ಭಾಗವನ್ನು ಬೇರ್ಪಡಿಸಿ 'ಕೊಂಕಣ' ಪ್ರಾಂತವನ್ನು ರಚಿಸುವದು ಅವಶ್ಯವಿರುತ್ತದೆಂದೂ ತೀರ್ಮಾನವಾಯಿತು

ಈ ತಾಲೂಕಿನಿಂದ ನೂರಾರು ದನಗಳು ಕಳ್ಳತನದಿಂದ ಗೋವೆಗೆ ಸಾಗುತ್ತಿರುವವೆಂಬ ದೂರು ಕೇಳಬರುತ್ತದೆ ಅಧಿಕಾರಿಗಳು ಈ ಬಗ್ಗೆ ತಪಾಸಣೆ ಮಾಡುತ್ತಿದ್ದಾರೆ ಕೆಲವು ದಿನಗಳ ಹಿಂದೆ ಪಾಚ್ಛಾಪುರದ ದಾದಾ ಸಾಹೇಬ ಎಂಬವನು ಹೀಗೆಯೇ ೧೯ ದನಗಳನ್ನು ಹೊಡಕೊಂಡು ಹೋಗುತ್ತಿರುವಾಗ ಗೋವಸರಹದ್ದಿಯ ಸಮೀಪ ಅವನ ದನಗಳನ್ನು ಕೇಂದ್ರ ಸರಕಾರದ ಅಬಕಾರಿ ಅಧಿಕಾರಿಗಳು ಹಿಡಿದಿದ್ದಾರೆ.

ದಾದಾ ಸಾಹೇಬನ ಜೊತೆಗಾರರು ಓಡಿ ಹೋದರಂತೆ ಜಪ್ತಿಮಾಡಿದ ದನಗಳು ಈಗ ಗೋವಸರಹದ್ದಿಯ ಪಟೇಲರ ಕಡೆಗಿವೆ

ಬೆಂಗಳೂರ ಜಿಲ್ಲೆಯ ಹುದಲಿ ಗ್ರಾಮದಲ್ಲಿ ಕಾರ್ಯ ಮಾಡುತ್ತಿರುವ ಗ್ರಾಮ ಸೇವಾ ಸಮಿತಿಯ ವ್ಯವಸ್ಥಾಪಕರಾಗಿರುವ ರಾ॥ ಮಾಳಗಲ ಇವರು ಕಳೆದ ವಾರ ಅತ್ರಮಾಕೊಪ್ಪದ ಕೆಲವು ಬೀಡರ ಕುಟುಂಬಗಳ ಸಹಿತ ಅಂಕೋಲೆಗೆ ಗ್ರಾಮಸೇವಾ ಸಮಿತಿಯ ಕೆಲಸ ನೋಡಲು ಬಂದಿದ್ದರು ಅಲ್ಲಿಂದ ಮುಂದೆ ಅವರು ಈ ಊರಿಗೂ ಬಂದಿದ್ದರು ಆಗ ಇಲ್ಲಿಯ ತಾಲೂಕ ಕೊಂಗ್ರೆಸ ಸಮಿತಿಯು ಅವರ ಸಲುವಾಗಿ ಕಚೇರಿಯಲ್ಲಿ ಒಂದು ಸಭೆಯನ್ನು ಏರ್ಪಡಿಸಿದ್ದರು ರಾ॥ ಮಾಳಗಲಿಯವರು ಆ ಸಭೆಯಲ್ಲಿ ಗ್ರಾಮಸೇವೆಯ ಮರ್ಮವನ್ನು ಒಳಿತಾಗಿ ತಿಳಿಸಿ, ಬೇಡರಂತಹ ಹಿಂದುಳಿದ ಜನರನ್ನು ಸುಧಾರಿಸಿ ಮುಂದಕ್ಕೆ ತರುವ ರೀತಿಯನ್ನು ಸೋದಾಹರಣವಾಗಿ ವಿವರಿಸಿದರು

ಯೆಲ್ಲಾಪುರ— (ತಾ ೧೮ ೧೧ ೪೮) ಮಳೆಗಾಲದೊಳಗೆ ಬೀಳುವಂತೆ ಈಗ ಮೇಲಿಂದ ಮೇಲೆ ಮಳೆಯಾಗುತ್ತಿದೆ! ಆದ್ದರಿಂದ ಕೊಯ್ಯದೆ ಬಿದ್ದಿರುವ ಭತ್ತದ ಬೆಳೆ ಕೆಟ್ಟು ಹೋಗುವ ಪ್ರಸಂಗವಿದೆ!

ಮದ್ರಾಸ ಮಂತ್ರಿಗಳಾದ ಶ್ರೀ॥ ವರ್ಣಕರು ನಿನ್ನೆ ಸಂಜೆ ೪ರ ಸುಮಾರಕ್ಕೆ ಇಲ್ಲಿಗೆ ಬಂದರು ಶ್ರೀ॥ ಕೇಶವ್ಯ, ಶಿವರಾಮ ಶಾಸ್ತ್ರಿ ವಗೈರೆ ಪ್ರಮುಖ ಕೊಂಗ್ರೆಸ್ಸಿಗರೂ ಸ್ಥಳಿಕ ಪ್ರಮುಖರೂ ಅವರನ್ನು ಸ್ವಾಗತಿಸಿ ಬಂಗಲೆಗೆ ಕರಕೊಂಡು ಹೋದರು ಅಲ್ಲಿ ಅಲ್ಪೋಪಹಾರವಾಯಿತು ಶ್ರೀ॥ ಅನಂತ ಭಟ್ಟರು ಮಂತ್ರಿಗಳ ಮುಂದೆ ಯಲ್ಲಾಪುರ ತಾಲೂಕಿನ ಪುರಾಣವನ್ನು ಬಿಚ್ಚಿ ತಾಲೂಕಿನ ಸ್ಥಿತಿಗತಿಯನ್ನೂ, ಸರಕಾರದ ದುರ್ಲಕ್ಷ್ಯವನ್ನೂ ಮನವಿಕರವಾಗಿ ಬಣ್ಣಿಸಿದ್ದರು ಈ ತಾಲೂಕಿನ ಜನಸಂಖ್ಯೆ ಹಿಂದೆ ೩೬೦೦೦ ಇತ್ತು, ಈಗ ೧೬೦೦೦ಕ್ಕೆ ಇಳಿದಿದೆ ಜನಸಂಖ್ಯೆಯ ಮಾನದಿಂದ ಸರಕಾರವು ಬೇರೆ ಬೇರೆ ಸೌಕರ್ಯಗಳನ್ನು ಒದಗಿಸುತ್ತಿರುವದರಿಂದ ಈ ತಾಲೂಕಿಗೆ ಅನ್ಯಾಯವಾಗುತ್ತದೆ ಹಳ್ಳಿಗಳಲ್ಲಿ ಜನರು ತಯಾರಿಸುವ ರಸ್ತೆಗಳನ್ನು ಜಿಲ್ಲಾ ಬೋರ್ಡ ತನ್ನ ವಶಕ್ಕೆ ತೆಗೆದುಕೊಳ್ಳುವದಿಲ್ಲ ಪಿ ಡಬ್ಲ್ಯು ಡಿಯ ಪ್ರಯೋಗಗಳು ತಾಲೂಕಿಗೆ ವಿಕ್ರಿ ಜನರುಳ್ಳ ಗ್ರಾಮಗಳಲ್ಲಿಷ್ಟೇ ನಡೆಯುತ್ತಿರುವದರಿಂದ ತಾಲೂಕಿನ ಬಹುಭಾಗಕ್ಕೆ ಅದರ ಪ್ರಯೋಜನ ಸಿಗದಂತಾಗಿದೆ. ತಾಲೂಕಿನಲ್ಲಿ ಬಾವಿಗಳ ಕೊರತೆಯುಂಟು, ಸರಕಾರವು ತೋಡಲು ಸಂಕಲ್ಪಿಸಿದ ಬಾವಿಗಳ ಕೆಲಸ ಸಕಾಲದಲ್ಲಿ ಆಗುವದಿಲ್ಲ, ಹೆಚ್ಚಿನ ಮಜೂರಿ ಕೊಟ್ಟು ಕೂಲಿಯಾಳುಗಳನ್ನು ತರಿಸಿಕೊಳ್ಳುವ ಯೋಜನೆಯಾಗಿದ್ದರೆ ಮುಂದೂ ಇದೇ ಹಾಡಾಗುವದು, ಸಿಮೆಂಟ ನಳಿಗೆಗಳ ಬಾವಿಗಳನ್ನು ನಿರ್ಮಿಸುವ ಯೋಜನೆಯಾಗುವದೊಳಿತು ಈ ತಾಲೂಕಿನಲ್ಲಿ ನಾಲ್ಕು ಸರಕಾರಿ ದವಾಖಾನೆಗಳಿವೆ ಆದರೆ ಅವುಗಳಲ್ಲಿ ಡಾಕ್ಟರಿದ್ದರೆ ಔಷಧಗಳಿಲ್ಲ, ಔಷಧಗಳಿದ್ದರೆ ಡಾಕ್ಟರಿರುವದಿಲ್ಲ! ಹೀಗೆ ಉಪಚಾರದ ವ್ಯವಸ್ಥೆಯಿಲ್ಲದ್ದರಿಂದ ಬಹಳಷ್ಟು ಬಾಳಂತಿಗಳು ಸಾಯುತ್ತಾರೆ! ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಕಿವಿಯಿಂದ ಕೇಳುತ್ತಿದೆಯೇ ವಿನಹ ಆ ಸ್ವಾತಂತ್ರ್ಯದ ಅಥವಾ ಕೊಂಗ್ರೆಸ ರಾಜ್ಯದ ದೃಶ್ಯ ಫಲಗಳೇನೂ ನಮ್ಮಲ್ಲಿ ಕಣ್ಣಿಗೆ ಬೀಳುವದಿಲ್ಲ ಎಂದು ಮುಂತಾಗಿ ರಾ॥ ಭಟ್ಟರು ದೂರಿಕೊಂಡರು ಮಂತ್ರಿಗಳು ಅದನ್ನು ತಿಳಿಗೊಟ್ಟು ಕೇಳಿಕೊಂಡು, ತಾಲೂಕಿನ ಅಡಚಣಿಗಳನ್ನು ಸುಧಾರಿಸುವ ಪ್ರಯತ್ನ ಮಾಡಲಾಗುವದೆಂದು ಆಶ್ವಾಸನೆಕೊಟ್ಟರು, ಆಯಾ ತಾಲೂಕಿನಲ್ಲಿ ವಸೂಲ ಬರುವ ಲೋಕಲ್ ಫಂಡಿನ ಮುಕ್ಕಾಲು ಹಣವನ್ನು ಆಯಾ ತಾಲೂಕಿನಲ್ಲೇ ವಿನಿಯೋಗಿಸಬೇಕೆಂದು ಸರಕಾರವು ಸದ್ಯಕ್ಕೆ ಠರಾವು ಹೊರಡಿಸಿದೆಂದು ಅದರಿಂದ ರಾ॥ ಭಟ್ಟರು ಮುಂದಿಟ್ಟ ಕೆಲವು ಕಷ್ಟಗಳು ಕೆಲಮಟ್ಟಿಗಾದರೂ ಪರಿಹಾರ ಹೊಂದುವವೆಂದೂ ಅವರು ನುಡಿದರು ಮತ್ತು ಜಿ॥ ಯ ಸುಧಾರಣೆಗೆ ಸಹಕಾರವಾಗಿ ಕಾರವಾರಕ್ಕೆ ಹೊರಟು ಹೋದರು.

ಕುಮಟಾ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಭಜಕರಲ್ಲಿ ವಿನಂತಿ

ಮೇಲ್ಕಾಣಿಸಿದ ದೇವಸ್ಥಾನದ ಗರ್ಭಗುಡಿ, ಧ್ಯಾಮಂಟಪ ಮತ್ತು ಸಭಾಮಂಟಪಗಳ ಮೇ... ದಿನ ಜೀರ್ಣೋದ್ಧಾರ ಮಾಡಿ, ದೇವಸ್ಥಾನದ ... ರು ಒಂದು ಪೇಜೆ ಯಾನೆ ಮುಖಮಂಟಪ ಕ... ಬೇಕಾಗಿ ಇದೇ ಕಳೆದ ನವರಾತ್ರಿಯ ಹುಣ್ಣಿಮೆ ದಿನ ದೇವರ ಭಜಕರ ಮಹಾಸಭೆಯಲ್ಲಿ ನಿರ್ಣ... ವಾದಂತೆ, ದೇವಸ್ಥಾನದ ಕಾರ್ಯಕಾರಿ ಮಂಡ... ಅಧ್ಯಕ್ಷ ರಾ॥ ಮಾಧವ ವಿಠೋಬ ಶಾನಭಾಗ ... ಆರ್ಚಕರೂ ಬೇರೆ ಕೆಲವರೂ ಇದೇ ಬರುವ ಮಾ... ಶೀರ್ಷ ಶು॥ ೫ ಮಿಯ ದಿನ ದೇವರ ಪ್ರಸಾ... ತಕೊಂಡು, ಸದರಿ ಜೀರ್ಣೋದ್ಧಾರಕ್ಕಾಗಿ ದೇ... ಕುಳ ವಿಗಳಿಂದ ನಿಧಿ ಕೂಡಿಸಲು ಹೊರಡುವ... ದ್ದಾರೆ ಶ್ರೀ ದೇವರ ಭಜಕರೆಲ್ಲರೂ ಅವರಿಗೆ ಯ... ಶಕ್ತಿ ಕಾಣಿಕೆ-ವಂತಿಕೆಗಳನ್ನು ಕೊಟ್ಟು, ಸ... ಜೀರ್ಣೋದ್ಧಾರ ಕಾರ್ಯವು ಶ್ರೀ ದೇವರ ಕೀರ್ತಿ... ಒಪ್ಪುವಂತೆ ನೆರವೇರುವ ಹಾಗೆ ಸಹಾಯ ಮಾ... ಶ್ರೇಯೋಭಾಗಿಗಳಾಗಬೇಕಾಗಿ ಅರಿಕೆಯಿದೆ

ತಾ ೨೨-೧೧-೪೮ **ಮಾಧವ ವಿಠೋಬ ಶಾನಭಾ...**

ಕಾರ್ಯಕಾರಿ ಮಂಡಳದ ಅಧ್ಯಕ್ಷ

ವಾರ್ತೆ

— ಮಹಾತ್ಮರ ಕೊಲೆಯ ಖಟ್ಲೆಯಲ್ಲಿ ಕಳೆ... ಸೋಮವಾರದಿಂದ ಮೊನ್ನೆಯವರೆಗೆ ಇನ್ನುಳಿ... ಆರೋಪಿಗಳ ಜಬಾನಿಗಳಾದವು ಬಹುತೇಕ ಆರೋಪಿಗಳು ತಮ್ಮ ಹೇಳಿಕೆಯನ್ನು ಬರೆದು ಕೊಟ್ಟಿದ್ದಾರೆ ಮಾಫೀ ಸಾಕ್ಷಿದಾರ ಬಡಗೆಯ ತೆಲಗು ನೌಕನಾದ ಶಂಕರ ಕಿಷ್ಟಯ್ಯ ಇವನು ಮಾತ್ರ ನ್ಯಾಯಾಧೀಶರ ಪ್ರಶ್ನೆಗಳಿಗೆ ವಿಸ್ತೃತ ಉತ್ತರಗಳನ್ನಿಷ್ಟೆ ಕೊಟ್ಟು ಬಡಗೆಯು ಹೇಳಿದ ಕಥೆಯನ್ನು ಬಹ್ವಂಶದಿಂದ ಪುಷ್ಟೀಕರಿಸಿದ್ದಾನೆ. ಇನ್ನಿತರ ಆರೋಪಿಗಳು ಕೊಲೆಯಲ್ಲಾಗಲಿ ಕೊಲೆಯ ಒಳಸಂಚಿನಲ್ಲಾಗಲಿ ತಮ್ಮದೇನೂ ಅಂಗವಿಲ್ಲೆಂದೂ ಕೆಲವು ಸಾಕ್ಷಿಗಾರರು ಪೋಲೀಸರ ಭೀತಿಯಿಂದ ಸುಳ್ಳು ಸಾಕ್ಷಿ ಹೇಳಿರುವರೆಂದೂ ಹೇಳಿದ್ದಾರೆ ತಾ. ೨೦ನೇಗ ಬಾಂಬು ಗುಂಡು ಒಗೆದ ಮದನಲಾಲನು ನಿರಾಶ್ರಿತರ ಕಡೆ ಮಹಾತ್ಮರ ಲಕ್ಷವನ್ನೆಳೆಯಲಷ್ಟೇ ತಾನು ಬಾಂಬು ಒಗೆದದ್ದೆಂದು ಪ್ರತಿಪಾದಿಸಿದ್ದಾನೆ ಎಲ್ಲ ಆರೋಪಿಗಳ ಜಬಾನಿಯ ಪುರಾವೆಯಿಲ್ಲೆಂದು ಹೇಳಿರುವದರಿಂದ ಈ ವಾರದಿಂದ ವಕೀಲರ ಪ್ರತಿಪಾದನೆಗಳಿಗೆ ಆರಂಭವಾಗುವದು

Again After Eight Long Years

World famous **PFAFF** German Make Sewing Machines

Available

Register Your Orders Immeditoly

ಜಗತ್ಪ್ರಸಿದ್ಧವಾದ ಜರ್ಮನ ಕಂಪನಿಯ **ಫೊಫ್** ಹೊಲಿಗೆಯ ಯಂತ್ರಗಳು ಈಗ ದೊರೆಯುತ್ತವೆ ಪಂಚಿ... ವಾಗಿ ಒರ್ಡರ ರಜಿಸ್ಟರ ಮಾಡಿರಿ ಕೋಟಾ ಪದ್ಧತಿಯಿಂದ ದೊರೆಯುವವು

ಕಾರವಾರ ಜಿಲ್ಲೆಯ ಏಜಂಟರು. { **S G Mahale & Sons, Ankola, N. Kanara**

ಜಿಲ್ಲಾ ಸಮಾಚಾರ.

ಹಳಿಯಾಳ— (ತಾ. ೧೪-೧೧-೪೮) [illegible] ಬಗ್ಗೆ [illegible] ಅದಿವೆಷ್ಟು [illegible] ವರ್ಷಗಳ [illegible] ನ್ಯಾಯಾಧಿಶರೇ [illegible] ಪಕ್ಷಗಳು [illegible] ಮಾರಿತು ಒಂದಾದಪರೆಂದು [illegible] ಪಕ್ಷದ ಜನರು [illegible] ಅರ್ಜಿ ಮಾಡಿ, [illegible] ಹಾಕಬೇಕೆಂದು ಬೇಡಿಕೊಂಡಿದ್ದರ [illegible] ಮೇಲೆ ಏನು ಪ್ರತಿಕ್ರಿಯೆಯೂ [illegible] ಇನ್ನೂ ತಿಳಿದು ಬಂದಿಲ್ಲ.

ಇಲ್ಲಿಯ ಪ್ರಸಿದ್ಧ [illegible] ಮಧ್ಯರಾತ್ರಿಯ ಸುಮಾರಿಗೆ [illegible] ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. [illegible] ಸಂಸ್ಥೆ, ನಗರಸಭೆ ಮುಂತಾದ [illegible] ಸಂಸ್ಥೆಗಳಲ್ಲಿ ಪ್ರಮುಖರು [illegible] ಸೋಮವಾರ ಪೇಟೆಯ [illegible] ಅಂದು ಸಂಜೆ [illegible] ರಾಣಿ [illegible] ಅಧ್ಯಕ್ಷತೆಯಲ್ಲಿ [illegible] ಮೃತರಾದರ [illegible] ಬಗ್ಗೆ ಶೋಕವನ್ನು [illegible]

ಇಲ್ಲೊಂದು [illegible] (ಪ್ರಸೂತಿಗೃಹ) ಬೇಕೆಂದು [illegible] ಊರ [illegible] ಹಣ [illegible] ರೂ. ೨೦೦೦೦ ನಗದಿ [illegible] ರೂ. ೧೨೦೦೦ ದ [illegible]

[illegible] ರೂ. ೪೨೦೦೦ [illegible] ಕುಳ್ಳಿರಿಸಿ [illegible] ವಿಶ್ವಾಸ [illegible] ಗ್ರಾಮ-ಪಂಚಾಯತಿ [illegible] ಪ್ರಶ್ನೆಗಳನ್ನು ಮಾಡಿದ [illegible] ಮತ್ತು [illegible] ಬೇರೆ [illegible]

[illegible]

ಯಲ್ಲಾಪುರ— (ತಾ. ೧೨-೧೧-೪೮) [illegible] ಗ್ರಾಮದ [illegible] ಶ್ರೀ [illegible] ದೇವರ [illegible] ಭಜನೆ [illegible] ಮಂಗಲ [illegible] ಭಜನೆಯು [illegible] ಉತ್ಸಾಹದಿಂದ [illegible]

ಸಿದ್ದಾಪುರ— (ತಾ. ೧೯-೧೧-೪೮) [illegible] ಪೋಲೀಸರು [illegible] ಸ್ಕೂಲ [illegible] ಸ್ಕೂಲ [illegible] ಹುಡುಗಿಯು [illegible] ಸ್ಕೂಲ [illegible] ಮಧ್ಯಾಹ್ನ [illegible] ಮತ್ತು [illegible] ಸ್ಕೂಲ [illegible] ಪೋಲೀಸರನ್ನು [illegible] ಇಲ್ಲ [illegible]

[illegible]

ಕರ್ನಾಟಕ ಶಾಖೆ —
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಕಟ್ಟಿಗೆ-ಮಾರಾಟದ ನೋಟೀಸು.

ಪಶ್ಚಿಮ ಭಾಗ ಕಾನಡಾ ಡಿವ್ಹಿಜನದಲ್ಲಿ ಕೆಳಗೆ ಕಾಣಿಸಿದಂತೆ [illegible] ಕಟ್ಟಿಗೆಯು [illegible] ಲಿಲಾವು [illegible]

[illegible] ಡಿಪೋದ ಹೆಸರು	ಲಿಲಾವಿನ ತಾರೀಖು ಮತ್ತು ವೇಳೆ	[illegible] ಕಟ್ಟಿಗೆ	[illegible]
[illegible]	೧೯-೧೨-೧೯೪೮ನೇ, [illegible]	೧೨೪ ಟನ್ನ [illegible]	೪೮ ಟನ್ನ
		[illegible] I [illegible]	
		[illegible] II "	
		[illegible] III "	
[illegible]	೧೮-೧೨-೧೯೪೮ನೇ [illegible]	೮೦ ಟನ್ನ [illegible]	೬೭ ಟನ್ನ [illegible]

[illegible] ಮಾರಾಟದ [illegible] ಹೆಚ್ಚಿನ ವಿವರಗಳ ಬಗ್ಗೆ ಕೆಳಗೆ ಸಹಿ ಮಾಡುವವರಿಗೆ ಬರೆದು ಕೇಳಿಕೊಳ್ಳಬಹುದು.

ಬಿ. ಎಫ್. ಬ್ರಿಟೊ,
ಡಿವ್ಹಿಜನಲ್ ಫಾರೆಸ್ಟ ಆಫೀಸರ,
ಪಶ್ಚಿಮ ಭಾಗ, ಕಾನಡಾ

ಕಾರವಾರ,
ತಾ. [illegible] ೧೧-೧೯೪೮

ನ್ನರು ಉಪವಾಸ ಬೀಳುವ ಹೊತ್ತು ಬಂದಿದೆ! ನಿಯಂತ್ರಣವೇ, ಎಷ್ಟು ಜನರ ಬಲಿ ತೆಗೆದುಕೊಳ್ಳುವ ಇಚ್ಛೆಯುಂಟು ನಿನಗೆ?

ನವಂಬರ ತಿಂಗಳು ಮುಗಿಯುತ್ತ ಬಂದರೂ ಇನ್ನೂ ಬೆಳೆಗಳ [illegible] ಆರಂಭವಾಗಿಲ್ಲ! [illegible] ಮಳೆಯಾಗುತ್ತಿದೆ! [illegible] ಹಾನಿಯಾಗುತ್ತಿದೆ.

ಗೇರಸೊಪ್ಪೆ— ([illegible]) [illegible] ಸಪ್ಪೆಯು ದೊಡ್ಡ ವ್ಯಾಪಾರದ ಸ್ಥಳವಾಗಿತ್ತಲ್ಲದೆ ಹೊನ್ನಾವರ ತಾಲೂಕಿನ ಪೂರ್ವ ಭಾಗದ ಕೇಂದ್ರ [illegible] ಸ್ಥಳದಲ್ಲಿ [illegible] ವನ್ನು ಎಂದೋ [illegible] ಗುರಿ ಎಂದು [illegible] ಈ ಚಿಕಿತ್ಸಾಲಯವು [illegible] ಬರುವ ರೋಗಿಗಳ [illegible] ಈ ಚಿಕಿತ್ಸಾಲಯ [illegible] ಡಾಕ್ಟರರ ಆವಶ್ಯಕತೆಯು [illegible] ಹೊನ್ನಾವರಕ್ಕೆ ಹೋಗಬೇಕು! [illegible] ದಿಂದ! ಈ ಹೊಳೆಯ [illegible] ಮೇಲೂ [illegible] ಯಾರಾದ್ದನು [illegible] ಹೊನ್ನಾವರದಿಂದ ಡಾಕ್ಟರರನ್ನು [illegible] ಸ್ಥಳದ [illegible] ದೊಂದು [illegible] ಮುಂಬಯಿ ಆಲ್ಲಿಯ [illegible] ([illegible]) [illegible] ಆದಕ್ಕೆ [illegible] ಹೊನ್ನಾವರಕ್ಕೆ ಹೋಗಿ ಡಾಕ್ಟರರನ್ನು ಕರೆತರಬೇಕಾಗಿದೆ. ಆ [illegible] ಬರುವ [illegible] ಇಲ್ಲಿ [illegible] ದಿನ್ನು ಅನುಗ್ರಹ ಮಾಡಿ [illegible] ಲಯವನ್ನಾದರೂ [illegible]?

ಇಲ್ಲಿಯ [illegible] ಇನ್ನು [illegible] ದೆ! [illegible] ದರೆ [illegible]!

ಧಾರೇಶ್ವರ— ([illegible]) ಇಂದು ಇಲ್ಲಿ [illegible] ಸ್ವಾಮಿಗಳು [illegible] “ [illegible] ” [illegible]

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಉತ್ತರ ಕಾನಡಾ ಜಿಲ್ಲೆಯವರ ಕಾಣಿಕೆಗಳು

ತಾ [illegible] ರಿಂದ ತಾ [illegible] ರ ವರೆಗೆ ಉತ್ತರ ಕಾನಡಾ ಜಿಲ್ಲೆಯ ಗಾಂಧಿ ಸ್ಮಾರಕ ನಿಧಿಗೆ ಈ ಕೆಳಗಿನಂತೆ ಕಾಣಿಕೆಗಳು ವಸೂಲ ಬಂದಿರುತ್ತವೆಂದು [illegible] ಅಧ್ಯಕ್ಷರು ತಿಳಿಸುತ್ತಾರೆ — [illegible]

ಕಳಿಸಿದ್ದು ರೂ		೧೬೦೦
[illegible]	[illegible]	೧೦೦೧
[illegible]	[illegible]	೧೦೮
,, [illegible]	,,	೫೨೧
,, [illegible]	,,	೯೧
,, [illegible]	,,	೨೫
,, [illegible]		
[illegible]	[illegible]	೫೧
,, [illegible]	,,	೨೭೧
,, [illegible]	,,	೫
,, [illegible]		
[illegible]		೨೭
[illegible]		೨೫೧
[illegible]	,,	೨೫೬
,, [illegible]	,,	೨೦
,, [illegible]		೧೨
,, [illegible]		೧೦೧
,, [illegible]		೧೧
,, [illegible]		೧೭೧
,, [illegible]		೨೫
,, [illegible]		೨೭
,, [illegible]		೨೫
,, [illegible]		೨೫
,, [illegible]		೨
,, ಗಣಪತಿ [illegible]		೧೫
,, ಗುಡಿಗಾರ [illegible]		೧೫
,, [illegible]		೧೦
,, [illegible]		೧೦
ಇತರರಿಂದ		೫

ಒಟ್ಟು ರೂ. [illegible]

ಹಿಂದೆ ಕಳಿಸಿದ್ದು ರೂ [illegible]

ಒಟ್ಟು ರೂ. [illegible]

ಜಾಹೀರ ಪ್ರಕಟನೆ.

ಈ ಕೆಳಗಿನ [illegible] ಹೊನ್ನಾವರ [illegible] ಗೋಕರ್ಣ [illegible] ಸೀದಾ [illegible] ಬರುವ [illegible] ಜನರಿಗೆ ಸಂಬಂಧಪಟ್ಟ [illegible] ಸಿಗುವವು. [illegible] ಕೊಂಡು [illegible] ಕೊಂಡು, [illegible] ಸೀದಾ [illegible] ಕೊಡಲ್ಪಡುವವು.

M Allahbaksh.

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ, ಕಾರವಾರ,

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆದುಕೊಂಡಲ್ಲಿ ಯೋಗ್ಯ [illegible] ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು [illegible] ನಮ್ಮಲ್ಲಿಂದ [illegible] ರುದ್ರಾಕ್ಷಿ ವಗೈರೆ [illegible] ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ, [illegible] ಘಾಟ, ಬನಾರಸ

ಕುಮಟಾ ತಾಲೂಕಿನ ಹಿಂಗಾರಿ ಭತ್ತ, ಕಬ್ಬಿನ ಬೆಳೆಯ ಪ್ರಕಟನೆ.

(೧೯೪೭—೪೮ನೇ ಸಾಲಿನದು)

ಸಂ [illegible] ನೇ ಇಸವಿಯ [illegible] ೧೦ನೇ ನಿಯಮದನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಲೆಯ ಕುಮಟಾ ತಾಲೂಕಿನ ಮಾಮಲೇದಾರರು ಈ ಕೆಳಗಿನ [illegible] ನೇ ಸ್ತಂಭದಲ್ಲಿ ತೋರಿಸಿದ ಕ್ಷೇತ್ರಗಳೊಳಗಿನ [illegible] ನೇ ಸ್ತಂಭದಲ್ಲಿ ನಮೂದಿಸಿದ [illegible] ಭೂಮಿಗಳಲ್ಲಿ, ೧೯೪೭—೪೮ನೇ ಸಾಲಿನಲ್ಲಿ, ಪ್ರತಿಯೊಂದು ಎಕರೆಗೆ [illegible] ನೇ ಸ್ತಂಭದಲ್ಲಿ ತೋರಿಸಿದಷ್ಟು [illegible] ಹಿಂಗಾರಿ ಭತ್ತ ಹಾಗು ಕಬ್ಬಿನ ಬೆಳೆ ಬಂದಿರುತ್ತದೆಂದು [illegible] ಮಾಡಿ ಈ ಮೂಲಕ ಜಾಹೀರ ಮಾಡುತ್ತಾರೆ

ಅನುಕ್ರಮ ನಂಬರ (೧)	ಸ್ಥಾನಿಕ ಪ್ರದೇಶ ಯಾ ಗ್ರಾಮಗಳು (೨)	ಭೂಮಿಯ ಜಾತಿ (೩)	ಪ್ರತಿಯೊಂದು ಎಕರೆಗೆ ಸರಾಸರಿ ಬೆಳೆ (ಬಂಗಾಲಿ ಮಣಗಳಲ್ಲಿ) (೪)
೧	ಸರ್ವೇ ಗ್ರೂಪ ೧ ರಲ್ಲಿಯ ಗ್ರಾಮಗಳಲ್ಲಿ	ಸಿಂಚನ ಭೂಮಿ	ಹಿಂಗಾರಿ ಭತ್ತ [illegible] ಕಬ್ಬು [illegible]
೨	ಸರ್ವೇ ಗ್ರೂಪ ೨ ರಲ್ಲಿಯ ಗ್ರಾಮಗಳಲ್ಲಿ	— ಡಿ —	ಹಿಂಗಾರಿ ಭತ್ತ ೧೬ ಕಬ್ಬು ೧೬೫
೩	ಸರ್ವೇ ಗ್ರೂಪ ೩ ರಲ್ಲಿಯ ಗ್ರಾಮಗಳಲ್ಲಿ	— ಡಿ —	ಹಿಂಗಾರಿ ಭತ್ತ [illegible] ಕಬ್ಬು ೧೨೨
೪	ಸರ್ವೇ ಗ್ರೂಪ ೪ ರಲ್ಲಿಯ ಗ್ರಾಮಗಳಲ್ಲಿ	— ಡಿ —	ಹಿಂಗಾರಿ ಭತ್ತ [illegible] ಕಬ್ಬು ೧೨೬
೫	ಸರ್ವೇ ಗ್ರೂಪ ೫ ರಲ್ಲಿಯ ಗ್ರಾಮಗಳಲ್ಲಿ	— ಡಿ —	ಹಿಂಗಾರಿ ಭತ್ತ ೧೪ ಕಬ್ಬು [illegible]
೬	ಸರ್ವೇ ಗ್ರೂಪ ೬ ರಲ್ಲಿಯ ಗ್ರಾಮಗಳಲ್ಲಿ	— ಡಿ —	ಹಿಂಗಾರಿ ಭತ್ತ [illegible]

ಕುಮಟಾ, ತಾ [illegible] ೧೯೪೮

H V Sabnis

ಮಾಮಲೇದಾರ, ಕುಮಟಾ

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ಕೊಡುವವರು ಪ್ರತಿ ವರ್ಷ ೬ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿಯು ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 29-11-1948.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೨೨

ಕುಮಟಾ:- ಸೋಮವಾರ, ತಾ ೨೯--೧೧--೧೯೪೮.

ಜಾಹೀರಾತುಗಳ ದರ:
ಒಂದಾವರ್ತಿಗೆ ಹಾಕುವದಾದರೆ
೧ ಸಾಲಿಗೆ ೪ ಆಣೆಯಂತೆ.
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವಿವಿಧ ವಿಷಯಗಳು.

ಮೊನ್ನೆ ಶುಕ್ರವಾರ ಶ್ರೀಕಾಶೀಕ್ಷೇತ್ರದಲ್ಲಿ ಪೂರ್ವ ಸಂಯುಕ್ತ ಪ್ರಾಂತದ ಕೊಂಗ್ರೆಸ ಕಾರ್ಯಕರ್ತರ ಸಭೆ ಸೇರಿತ್ತು. ಆ ಸಭೆಗೆ ಸುಮಾರು ೮೦೦ ಮಂದಿ ಕಾರ್ಯಕರ್ತರು ಕೂಡಿದ್ದರು. ಸರದಾರ ವಲ್ಲಭಭಾಯಿ ಪಟೇಲರು ಅಧ್ಯಕ್ಷರಾಗಿದ್ದರು. ಮಹಾತ್ಮರು ಹಾಕಿಕೊಟ್ಟ ಸತ್ಯ ಮತ್ತು ಅಹಿಂಸೆಯ ದಾರಿಯಿಂದ ಕಾರ್ಯಕರ್ತರು ಚ್ಯುತಿ ಹೊಂದಿದ್ದಾರೆಂದೂ ತಪ್ಪು ಮಾರ್ಗ ಹಿಡಿದಿದ್ದಾರೆಂದೂ ಎಲ್ಲರೂ ಕೂಡಿ ಒಕ್ಕಟ್ಟಿನಿಂದ ಜನ ಸೇವೆ ಮಾಡುವ ಬದಲಿಗೆ ತಮ್ಮ ತಮ್ಮೊಳಗೆ ಜಗಳಾಡಿಕೊಳ್ಳುತ್ತಿದ್ದಾರೆಂದೂ ಈ ಪ್ರವೃತ್ತಿ ಆಕ್ಷೇಪಾರ್ಹವಾದದ್ದೆಂದೂ ಸರದಾರರು ಸ್ಪಷ್ಟವಾಗಿ ಕೂಡಿದ ಕಾರ್ಯಕರ್ತರ ವಿದ್ಯಮಾನ ದೇಶತುಂಬ ರಾಷ್ಟ್ರೀಯ ಸಭೆ ಹೆಸರಿನಿಂದ ಸ್ವಾರ್ಥ ಸಾಧಕರಾಗಿ ದುಡಿಯುವ ಕೊಂಗ್ರೆಸ ಕಾರ್ಯಕರ್ತರೆನಿಸಿಕೊಂಡ ದೇಶಭಕ್ತರೆಂದು ಮೆರೆಯುವ ಜನಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ; ಆತ್ಮನಿರೀಕ್ಷಣೆ ಮಾಡಬೇಕಾಗಿಯೂ ಪರಿಸ್ಥಿತಿಗೆ ತಕ್ಕದ್ದಾಗಿ ವರ್ತಿಸಬೇಕಾಗಿಯೂ ಸರದಾರರ ಸದ್ಬೋಧೆಯುಂಟು. ದೇಶತುಂಬ ಅನ್ನ-ವಸ್ತ್ರದ ಕ್ಷಾಮವುಂಟು ಅದನ್ನು ಪರಿಹರಿಸುವದಕ್ಕಾಗಿ ಸಕಲ ಕೊಂಗ್ರೆಸ ಕಾರ್ಯಕರ್ತರು ಶಕ್ತಿಮೀರಿ ದುಡಿಯಬೇಕಾಗಿದೆಂದೂ ಸರದಾರರು ಎಚ್ಚರಿಕೆ ಕೊಟ್ಟಿದ್ದಾರೆ. ಜನಸಾಮಾನ್ಯರಲ್ಲಿ ಬೆರೆತು ಹೋಗಿರಿ, ಜನಸಾಮಾನ್ಯರ ಕಷ್ಟನಷ್ಟಗಳನ್ನು ಅರಿತುಕೊಳ್ಳಿರಿ; ಆರಿವೆ ಹೆಚ್ಚಿದ್ದ ಸ್ಥಳದಿಂದ ಕೊರತೆಯುಳ್ಳ ಪ್ರದೇಶಕ್ಕೆ ಒಯ್ದು ಅಗತ್ಯವುಳ್ಳವರಿಗೆ ಹಂಚಿಕೊಡಿರಿ, ಆಹಾರ ಧಾನ್ಯ ಬೆಳಸುವವರೊಡನೆ ಆತ್ಮತ್ವ ಬೆಳಸಿರಿ; ಹುಟ್ಟಿದ ಆಹಾರ-ಧಾನ್ಯ ನಾಶವಾಗದಂತೆ ಜಾಗ್ರತೆ ಕೊಳ್ಳಿರಿ; ಆಹಾರ-ಧಾನ್ಯವುಳ್ಳ ರೈತರಿಂದ ಕೊರತೆಯುಳ್ಳ ಜನ-ಪ್ರದೇಶಗಳಿಗೆ ಆಹಾರ-ಧಾನ್ಯವನ್ನು ಒಯ್ದು ಹಂಚಿ ದೇಶಬಾಂಧವರನ್ನು ಕಾಪಾಡಿರಿ; ಹೀಗೆ ಸಹ ಸರದಾರರು ನುಡಿದು ಸರಕಾರಕ್ಕೆ ಸಕಲರೂ ಸಹಾಯ ನೀಡಬೇಕಾಗಿ ಅಪ್ಪಣೆ ಕೊಟ್ಟಿದ್ದಾರೆ. ಸರದಾರರು ಕೊಂಗ್ರೆಸ ಕಾರ್ಯಕರ್ತರಿಗೆ ಕೊಟ್ಟ ಪ್ರಶಸ್ತಿ-ಪತ್ರವನ್ನು ಸಕಲರೂ ಪರಾಂಬರಿಸತಕ್ಕದ್ದು. ನಿಜವಾಗಿ ನೋಡಿದರೆ ಈಗಿನ ಕೊಂಗ್ರೆಸ ಕಾರ್ಯಕರ್ತರು ಪತಿತರಾಗಲು ಕಾರಣಗಳುಂಟು. ಸೆರೆಮನೆಗೆ ಹೋದವರು ದೇಶಭಕ್ತರೆನಿಸಿಕೊಳ್ಳುತ್ತಾರೆ ದೇಶತುಂಬ ಸ್ವಾತಂತ್ರ್ಯದ ತೆರೆ ಉಕ್ಕೇರಿಬಂದಾಗ [illegible] ಜೊತೆಗೆ ಅಸಭ್ಯರೂ ಊರ-ಪೋಲಿಗಳೂ ಎಂಡಾಡಿಗರೂ ಒಂದಿಲ್ಲೊಂದು ಕಾರಣದಿಂದ ಒಂದಿನೊಂದು ದಿನ ಕಾರಾಗೃಹವಾಸವನ್ನು ಅನುಭವಿಸುವಂಥ ಸಮಾಜಘಾತಕ ಕಾರ್ಯ-ಪೋಕರು ರಾಷ್ಟ್ರೀಯ ಸಭೆಯ ಆಂದೋಲನದಲ್ಲಿ ಸೇರಿಕೊಂಡದರಿಂದ ಈ ಅನಿಷ್ಟ ಪರಿಣಾಮ ಉಂಟಾಗಿದೆ. ಕಾರಾಗೃಹವಾಸದ ಬಂಡವಲಿನಿಂದ ಪ್ರಧಾನ ಮಂಡಳಿಗಳೊಡನೆ ಸಂಬಂಧವಿರುವದಾಗಿ ಜನರಿಗೆ ನಂಬಿಸಿ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದಾರೆ. ಪ್ರತ್ಯಕ್ಷ ಪ್ರಧಾನರೊಡನೆ ಸಂಬಂಧ ಬೆಳಸಿಕೊಂಡು ಪ್ರಯೋಜನ ಪಡೆಯುವವ ಮಹಾನುಭಾವರ ಇದ್ದಾರೆ. ಪ್ರಧಾನರಿಗೆ ಆಡಳಿತೆಯ ಅನುಭವವಿಲ್ಲದ್ದರಿಂದಲೂ ತಮ್ಮೊಡನೆ ಆಪ್ತತ್ವ ಬೀರುವ ಜನಗಳ ಗುಣದೋಷಗಳನ್ನು ಕಂಡು ಹಿಡಿಯುವ ಬುದ್ಧಿಶಾಲಿತನವಿಲ್ಲದ್ದರಿಂದಲೂ ಪೋಲಿ ಕೊಂಗ್ರೆಸ ಕಾರ್ಯಕರ್ತರ ಉಪಟಳ ಏರಲಾಗಿದೆ. ಈ ಸ್ವಾತಂತ್ರ್ಯಾಂತರಕ್ಕೆ ಅಧಿಕಾರಾರೂಢವಾಗಿರುವ ಮಂಡಳದ ರಾಜ್ಯದಾಡಳಿತೆಯ ಧೋರಣವೇ ಕಾರಣ ಉಂಟು ಸ್ಥಳಿಕ ಅಧಿಕಾರಿಗಳನ್ನು ಅಲಕ್ಷಿಸಿ ಅವರ ಆಲೋಚನೆ ಪಡೆಯದೆ ಸೆರೆಮನೆಗೆ ಹೋಗಿ ಬಂದಿದ್ದಾರೆ ಇವರು ಪ್ರಾಮಾಣಿಕರೆಂದೂ ಸ್ಥಳಿಕ ಅಧಿಕಾರಿಯು ಸರಿಯಾಗಿ ನಡೆಕೊಳ್ಳುವದಿಲ್ಲವೆಂದೂ ಕೂತಲ್ಲಿ ಪ್ರಧಾನರು ತೀರ್ಮಾನ ಮಾಡಿ ಪೋಲಿ ಇಸಮುಗಳಿಗೆ ಇಲ್ಲದ ಪ್ರಾಧಾನ್ಯ ಕೊಟ್ಟು ರಾಷ್ಟ್ರೀಯ ಸಭೆಯ ಗೌರವ ಇಳಿಸಲು ಕಾರಣರಾಗಿದ್ದಾರೆ. ಈ ಧೋರಣದಿಂದ ಸ್ಥಳಿಕ ಅಧಿಕಾರಿಗಳಿಗೆ ಇರಬೇಕಾದ ಸ್ಥಿರತೆ, ದೃಢತೆಗಳು ಇರುವದಿಲ್ಲ ಸೆರೆಮನೆಗೆ ಕಳಿಸುವ ಹೆದರಿಕೆ ಹಾಕುವ ಅಧಿಕಾರಿಗಳು ಸೆರೆಮನೆಗೆ ಹೋಗಿ ಬಂದ ಪೋಲಿ ಇಸಮುಗಳಿಗೆ ಹೆದರಿ ವರ್ತಿಸುವ ಕಾಪುಕಾಲ ಪ್ರಾಪ್ತವಾಗಿದೆ. ಬಿಹಾರ ಪ್ರಾಂತದೊಳಗೆ ೧ ಕಂಟ್ರೋಲ ಪರಮಿಟ್ಟುಗಳನ್ನು ಕೊಡುವಾಗ ಮಂತ್ರಿಗಳೂ ಉಪಮಂತ್ರಿಗಳೂ ಎಸೆಂಬ್ಲಿ ಸಭಾಸದರೂ ಬಹಳ ಪರಿಯಿಂದ ಭ್ರಷ್ಟತೆ ನಡಿಸಿದರೆಂದೂ ಬಹಳ ಪ್ರಯೋಜನ ಪಡಕೊಂಡರೆಂದೂ ಕಳೆದ ವರ್ಷ ಬಿಹಾರ ಪ್ರಾಂತ ತುಂಬ ಗಲಭೆ ಎದ್ದಿತ್ತು. ಆದರಿಂದ ಆಪಾದನೆ ಮತ್ತು ತನಿಖೆ ನಾಡು ಕೊಂಗ್ರೆಸ ಕಮಿಟಿಯವರು ಒಂದು ತೀರ್ಮಾನ ಮಾಡಿ ಸರಕಾರದಿಂದ ಲಾಯಸನ್ಸ ಅಥವಾ ಪರ್ಮಿಟ ಪಡೆಯುವ ವ್ಯಾಪಾರ-ವ್ಯವಹಾರಗಳನ್ನು ಕೊಂಗ್ರೆಸ ಮಂಡಳಿಗಳ ಅಧಿಕಾರಿಗಳು ಕೈಕೊಳ್ಳಬಾರದೆಂದೂ ಕೊಂಗ್ರೆಸ ಎಸೆಂಬ್ಲಿ ಸಭಾಸದರು ಸಹ ಇಂಥ ವ್ಯವಹಾರಗಳಿಗೆ ಸೇರ ಕೂಡದೆಂದೂ ವಿಧಿಸಿದ್ದಾರೆ. ರಾಷ್ಟ್ರೀಯ ಸಭೆಯ ಕಾರ್ಯಕರ್ತರೊಳಗೆ ನಿರ್ಮಲತೆಯನ್ನು ನಿರ್ಮಿಸುವದಕ್ಕಾಗಿ ಈ ಉಪಾಯ ಯೋಜಿಸಲಾಗಿದೆ. ದೇಶಭಕ್ತಿಯ ಜನಸಾಮಾನ್ಯರು ಸೋಗು ಹಾಕಿಕೊಂಡ ಕೊಂಗ್ರೆಸ ಕಾರ್ಯಕರ್ತರ ಪೂರ್ವಾಪರವನ್ನು ವಿಚಾರಿಸಿ ಅಡ್ಡ ಮಾರ್ಗದಿಂದ ಅಯೋಗ್ಯ ಪ್ರಯೋಜನ ಪಡೆಯುವ ಅಭಿಲಾಷೆಯನ್ನು ತೋರಿದರು ಸರಕಾರಕ್ಕೆ ನೆರವಾಗತಕ್ಕದ್ದು. ಮಂತ್ರಿಗಳು ಇಂಥ ಕೊಂಗ್ರೆಸ ಕಾರ್ಯಕರ್ತರಿಗೆ ಬಲವಾಡಿಕೊಂಡು ಅವಿಚಾರಾಲೋಚನೆ ಮಾಡುವ ಧೋರಣವನ್ನು ತ್ಯಜಿಸಿ ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಪುರಸ್ಕಾರ ಮಾಡುವ ಧೋರಣವನ್ನು ಸ್ವೀಕರಿಸತಕ್ಕದ್ದು. ಪೋಲಿ ಇಸಮುಗಳಿಗೆ ಯಾವದೇ ರೀತಿ ಪಾರುಪತ್ಯ ದೊರೆಯದಂತೆಯೂ ಆಡಳಿತೆ

ಕುಮಟಾ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಭಜಕರಲ್ಲಿ ವಿನಂತಿ

ಮೇಲ್ಕಾಣಿಸಿದ ದೇವಸ್ಥಾನದ ಗರ್ಭಗುಡಿ, ಸಂಧ್ಯಾಮಂಟಪ ಮತ್ತು ಸಭಾಮಂಟಪಗಳ ಮೇಲ್ಮಾಡಿನ ಜೀರ್ಣೋದ್ಧಾರ ಮಾಡಿ, ದೇವಸ್ಥಾನದ ಎದುರು ಒಂದು ಸ್ಟೇಜ್ ಯಾನೆ ಮುಖಮಂಟಪ ಕಟ್ಟಿಸಬೇಕಾಗಿ ಇದೇ ಕಳೆದ ನವರಾತ್ರಿಯ ಹುಣ್ಣಿಮೆಯ ದಿನ ದೇವರ ಭಜಕರ ಮಹಾಸಭೆಯಲ್ಲಿ ನಿರ್ಣಯವಾದಂತೆ, ದೇವಸ್ಥಾನದ ಕಾರ್ಯಕಾರಿ ಮಂಡಳದ ಅಧ್ಯಕ್ಷ ರಾ|| ಮಾಧವ ವಿಠೋಬ ಶಾನಭಾಗರೂ ಅರ್ಚಕರೂ ಬೇರೆ ಕೆಲವರೂ ಇದೇ ಬರುವ ಮಾರ್ಗಶೀರ್ಷ ಶು|| ೫ ಮಿಯ ದಿನ ದೇವರ ಪ್ರಸಾದ ತಕ್ಕೊಂಡು, ಸದರಿ ಜೀರ್ಣೋದ್ಧಾರಕ್ಕಾಗಿ ದೇವರ ಭಜಕರಿಂದ ನಿಧಿ ಕೂಡಿಸಲು ಹೊರಡುವವರಿದ್ದಾರೆ. ಶ್ರೀ ದೇವರ ಭಜಕರೆಲ್ಲರೂ ಅವರಿಗೆ ಯಥಾಶಕ್ತಿ ಕಾಣಿಕೆ-ವಂತಿಕೆಗಳನ್ನು ಕೊಟ್ಟು, ಸದರಿ ಜೀರ್ಣೋದ್ಧಾರ ಕಾರ್ಯವು ಶ್ರೀ ದೇವರ ಕೀರ್ತಿಗೆ ಒಪ್ಪುವಂತೆ ನೆರವೇರುವ ಹಾಗೆ ಸಹಾಯ ಮಾಡಿ ಶ್ರೇಯೋಭಾಗಿಗಳಾಗಬೇಕಾಗಿ ಅರಿಕೆಯಿದೆ.

ಮಾಧವ ವಿಠೋಬ ಶಾನಭಾಗ,
೨೭-೧೧-೪೮ ಕಾರ್ಯಕಾರಿ ಮಂಡಳದ ಅಧ್ಯಕ್ಷ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ.

ಅತಿ ಕಡಿಮೆ ಬೇಲೆನ್ಸಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೬-೭-೧೯೪೮

ಕೇ. ವಿಟ್ಠಲದಾಸ ಶೆಣ್ವೈ,
ಮೆನೇಜಿಂಗ ಡೈರೆಕ್ಟರ

ಯಲ್ಲಿ ಪ್ರಯೋಜನ ಸಿಗದಂತಾಯಿತು ಎಂಬ ಕಟುವಾದ ನಿಜ ಕಾಂಗ್ರೆಸ ಕಾರ್ಯಕರ್ತರಿಗೆ ಆತ್ಮನಿರೀಕ್ಷಣೆ ಮಾಡಿಕೊಳ್ಳುವ ಸುಬುದ್ಧಿ ಸೂಚಿಸುವಂತಿಲ್ಲ

***

ಸರಕಾರವು ಕೈಕೊಂಡ ಅನ್ನ ನಿಯಂತ್ರಣದ ಧೋರಣ ವಿಕ್ಷಿಪ್ತವಾದದ್ದು ಈ ನಿಯಂತ್ರಣದ ಕಕ್ಷೆಯಲ್ಲಿ ಹಿಂದೆ ಸ್ವಾತಂತ್ರ್ಯದೊಳಗಿನ ದರದೇಗಳಲ್ಲಿ ತಯಾರಾಗುವ ನೂಲು ಮತ್ತು ಅಂಬಾಡಿ ಮುಂತಾದ ಯಾಗುತ್ತಿವ ಉಣ್ಣೆಯ ವಸ್ತ್ರ, ರೇಶಿಮೆ ವಸ್ತ್ರ ಕೈಮಗ್ಗದ ವಸ್ತ್ರ ಇವುಗಳಿಗೆ ನಿಯಂತ್ರಣದ ನಿರ್ಬಂಧಗಳಿಲ್ಲ. ಇದಲ್ಲದೆ ವಿದೇಶಿ ಅರಿವೆಗೂ ನಿಯಂತ್ರಣ ಅನ್ವಯಿಸುವದಿಲ್ಲ. ಆದರಿಂದ ಹಿಂದೆ ಸ್ವಾತಂತ್ರ್ಯದೊಳಗೆ ವಿದೇಶಗಳಿಂದ ಹೇರಳ ಅರಿವೆ ಬರುತ್ತಾಗತೊಡಗಿದೆ ವರ್ತಕರು ಈ ಅರಿವೆಯನ್ನು ಇನ್ನು ಹೆಚ್ಚಿಚ್ಚಾಗಿ ತರಿಸತಕ್ಕವರಿದ್ದಾರೆ ಆದರಿಂದ ಹಿಂದು ಸ್ತಾನದೊಳಗಿನ ಗಿರಣಿಯ ಅರಿವೆ ನಿಯಂತ್ರಣ ಸಾರ್ವಜನಿಕವಾಗುವ ಬಗೆ ತೋರುವದಿಲ್ಲ ಮಲ್ಲಾಗಿ ವಿದೇಶಿ ಅರಿವೆ ಹೆಚ್ಚೆಚ್ಚಾಗಿ ಆಮದಾಗಿ ಇಲ್ಲಿಯ ಗಿರಣಿಗಳಿಗೆ ಹಾನಿಯಾಗುವಂತಿದೆ ಮಹಾತ್ಮರು ವಿದೇಶಿ ಅರಿವೆಯ ಹೋಳಿಗಳನ್ನು ಮಾಡಿ ಖಾದಿಯನ್ನು ಪ್ರಚುರಗೊಳಿಸಿದ್ದರು ಸ್ವಾತಂತ್ರ್ಯ ದೊರೆತ ಬಳಿಕ ಸರಕಾರವು ಕೈಕೊಂಡ ಧೋರಣದಿಂದ ವಿದೇಶಿ ಅರಿವೆಯ ಪ್ರಸಾರಕ್ಕೆ ಸ್ಫುಟ ದೊರೆಯುತ್ತಿದೆ ನಿಯಂತ್ರಣದ ಹುಕುಮುಗಳಂತೆ ಕೊಟ್ಟ ಅರಿವೆ ಜನರಿಗೆ ಸಾಲುವದಿಲ್ಲ ಅರಿವೆಯ ನಿಯಂತ್ರಣದಲ್ಲಿ ಗಂಡಸು, ಹೆಂಗಸು ಎಂಬ ಲಿಂಗಭೇದವಿಲ್ಲ ಅದು ವರ್ಷಕ್ಕೆ ವಿಶ್ಲೇದವರಲ್ಲರೂ ಮಕ್ಕಳು ಆ ವಯಸ್ಸು ಏಕೈದವರು ಪ್ರೌಢರು ಹಳ್ಳಿಯವರಿದ್ದರೆ ವರ್ಷಕ್ಕೆ ...ಗಜ ಮತ್ತು ಪಟ್ಟಣಿಗರಿದ್ದರೆ ...ಗಜ ಅರಿವೆ ಒಂದು ಇಸವಿಗೆ ಸಿಗುತ್ತಿದ್ದ ಅರಿವೆಯಲ್ಲಿ ಜನರು ಒರಟು ಹೇಗೆ ಎಂದು ಭೇದಗಳುಂಟು ಸಿದ್ಧ ಪದ್ಧತಿಯಿಂದ ಸಿಗುವ ೧೨ ಗಜ ಇಲ್ಲವೆ ೧೨ ಗಜ ಅರಿವೆ ಒಂಟಾಗಿರುತ್ತದೆ ಜನರು ಅದನ್ನು ಬೇಕಾದರೆ ಇದರ ಅರ್ಧದಷ್ಟು ಕೊಳ್ಳಬೇಕು ಇಷ್ಟು ಅರಿವೆ ಈಗ ಜನರಿಗೆ ಸಾಲುವದಿಲ್ಲ ಆದರಿಂದ ಜನರು ಕಳ್ಳಪೇಟೆಗೆ ಹೋಗಬೇಕು ಇಲ್ಲವೆ ಇತರ ಅರಿವೆಗಳನ್ನು ಕೊಂಡುಕೊಳ್ಳಬೇಕು ಗಿರಣಿ ಅರಿವೆಯ ಅಭ್ಯಾಸವಿದ್ದವರು ವಿದೇಶಿ ಅರಿವೆಯನ್ನು ಕೊಂಡುಕೊಳ್ಳುವ ಪ್ರಸಂಗವುಂಟು ಇದಲ್ಲದೆ ನಿಯಂತ್ರಣದ ಬಟ್ಟೆ ಮಾರಾಟ ಮಾಡುವ ಅಂಗಡಿಗಳ ಸಂಖ್ಯೆ ತೀರ ಕಡಿಮೆ ಜವಳಿ ವರ್ತಕರನ್ನು ಗಿರಣಿ ಜವಳಿಯ ವ್ಯಾಪಾರದಿಂದ ಹೊರ ಮಾಡಿ ಸಹಕಾರಿ ಸಂಘಗಳಿಗೆ ಜವಳಿ ವರ್ತಕರನ್ನಾಗಿ ಮಾರ್ಪಡಿಸುವ ಧೋರಣದಿಂದ ಜವಳಿ ವರ್ತಕರಿಗೆ ವಿದೇಶಿ ಅರಿವೆ ತರಿಸಲಿಕ್ಕೂ ಅದಕ್ಕೆ ಗಿರಾಕಿ ಹುಟ್ಟಿಸಲಿಕ್ಕೂ ಸರಕಾರವು ಹೇಳಿದಂತಾಗಿದೆ! ಜವಳಿ ವರ್ತಕರು ತಮ್ಮ ಉದ್ಯೋಗವನ್ನು ಕಾಪಾಡುವದಕ್ಕಾಗಿ ವಿದೇಶಿ ಅರಿವೆಯನ್ನು ಮಾರಾಟ ಮಾಡಬೇಕಾದ ಪ್ರಸಂಗವುಂಟು ನಿಯಂತ್ರಣದ ಪದ್ಧತಿಯನ್ನು ಪಾಲಿಸಿ ಸಿದ್ಧ ಅಂಗಡಿಗಳಿಂದ ಅರಿವೆ ತರುವ ಕಷ್ಟ ಕೈಕೊಳ್ಳಲು ಜನಸಾಮಾನ್ಯರಿಗೆ ಸಾಧ್ಯವಿಲ್ಲ ಈ ಎಲ್ಲ ಕಾರಣಗಳ ಮೂಲಕ ಒಟ್ಟಿಯ ನಿಯಂತ್ರಣ ೩ ತಿಂಗಳು ಸಹ ಬಾಳಬಾರದೆಂದು ಮುಂಬಯಿಯ ಜವಳಿ ಪೇಟೆಯವರು ಭವಿಷ್ಯ ಮಾಡಿದ್ದಾರೆ ಕಣ್ಣಷ್ಟು ಗಿರಣಿ ಜವಳಿಯನ್ನು ಹಂಚಬೇಕಾದ ಸರಕಾರವು ನಿಯಂತ್ರಣವನ್ನು ಕೈಕೊಂಡದ್ದು ಸರಿಯಲ್ಲವೆಂದು ಹೇಳಿ ಬರುತ್ತದೆ ಮಹಾತ್ಮರ "ಹರಿಜನ" ಪತ್ರಿಕೆಯ ಸಂಪಾದಕರಾದ ಶ್ರೀ॥ ಕಿಶೋರಲಾಲ ಮಶ್ರುವಾಲಾರವರು ನಿಯಂತ್ರಣದ ಆಜ್ಞೆಗಳನ್ನು ವಿಧೇಯತನದಿಂದ ಪಾಲಿಸಬೇಕಾಗಿ ಬೋಧಿಸುತ್ತಾರೆ ಆದರಿಂದ ಸರ್ಪೋರ್ಣನ್ನತಿಯಾಗುವದೆಂದೂ ಸರ್ವೋದಯವಾಗುವದೆಂದೂ ಹೇಳುತ್ತಾರೆ ಆದರೆ ನಿಯಂತ್ರಣದ ಆಜ್ಞೆಗಳನ್ನು ಪಾಲಿಸಲು ಸಾಮಾನ್ಯರಿಗೆ ಸಾಮಾನ್ಯ ಪ್ರಯತ್ನದಿಂದ ಸಾಧ್ಯವಾಗದಿದ್ದರೆ ಮತ್ತು ಅವುಗಳ ಪಾಲನೆಗಾಗಿ ವಿಶೇಷ ಪ್ರಯತ್ನಗಳನ್ನು ಕೈಕೊಳ್ಳಬೇಕಾಗುತ್ತಿದ್ದರೆ ಸಾಮಾನ್ಯ ವ್ಯವಹಾರಕ್ಕೆ ಪರಿಹಾರ ಏನೆಂತೆ ಆ ಆಜ್ಞೆಗಳಲ್ಲಿ ತಿದ್ದುಪಡಿಯಾಗಬೇಕಲ್ಲವೆ? ಜನಸಾಮಾನ್ಯರಲ್ಲಿ ನಿತಾಂತ ಶ್ರದ್ಧೆಯ ವಿಚಾರ ವಿವೇಕವೆಂಬುದನ್ನು ಮರೆಯಲಾಗದು

***

ಕಳೆದ ವಾರದ ಆರಂಭಕ್ಕೆ ನಾಡಿನಲ್ಲೆಲ್ಲ ಬೀಸಿದ ಸುಂಟರಗಾಳಿಯಿಂದ ಘೋರ ಅನರ್ಥವಾಗಿದೆ ಈ ಬಿರುಗಾಳಿಯ ಮೂಲ ಬಂಗಾಲದ ಉಪಸಾಗರದಲ್ಲಿದೆ ಪಟಣಾ ನಗರದ ಬಳಿ ಗಂಡಕೀ ನದಿ ಗಂಗಾ ನದಿಗೆ ಕೂಡುವಲ್ಲಿ ಸೋನಪೂರ ಕ್ಷೇತ್ರವುಂಟು ಇದೊಂದ ಪುರಾಣಪ್ರಸಿದ್ಧ ಕ್ಷೇತ್ರ ಮೊಸಳೆಯ ಬಾಯಲ್ಲಿ ಸಿಲುಕಿದ ಗಜೇಂದ್ರನು ಪರಮಾತ್ಮನ ಸ್ತೋತ್ರ ಮಾಡಿ ಮೋಕ್ಷ ಹೊಂದಿದ ಪವಿತ್ರ ಸ್ಥಳ ವಿದೆಂದು ಹೇಳುತ್ತಾರೆ ಇಲ್ಲಿ ಪ್ರತಿವರ್ಷ ಪ್ರಚಂಡ ಜಾತ್ರೆ ನೆರೆಯುತ್ತದೆ ಭೂಮಂಡಳದಲ್ಲಿ ಸೇರುತ್ತಿರುವ ದೊಡ್ಡ ದೊಡ್ಡ ಜಾತ್ರೆಗಳಲ್ಲಿ ಸೋನಪೂರ ಜಾತ್ರೆಯ ಗಣನೆಯಾಗುತ್ತದೆ ಈ ಜಾತ್ರೆಯಲ್ಲಿ ಎಂದು ಸೂಜಿಯಿಂದ ಸೂಕ್ಷ್ಮ ವಸ್ತುವಿನಿಂದ ಆನೆಯಂತಹ ಸ್ಥೂಲ ವಸ್ತುವಿನ ವರೆಗೆ ಸಕಲ ಬಗೆಯ ವಸ್ತುಗಳು ಸಿಗುತ್ತವೆ ಬಿಹಾರ ಪ್ರಾಂತದೊಳಗಿನ ಐಶ್ವರ್ಯವಂತರೂ ವಿಲಾಸಿಗಳೂ ಯುರೋಪಿಯನ್ನರೂ ಕೂಡ ಈ ಜಾತ್ರೆಯ ಸಮಯದಲ್ಲಿ ಕುದುರೆ ಬೂಜಿನಿಂದ ಇತರ ಆಟಗಳನ್ನೂ ಆಡುತ್ತಾರೆ ಆ ಸಮಯದಲ್ಲಿ ವಿಶೇಷ ಉಗಿಬಂಡಿಗಳಿಂದಲೂ ಹಡಗಗಳಿಂದಲೂ ಜನರು ಬಂದು ಸೇರುತ್ತಾರೆ ಈ ವರ್ಷದ ಈ ಜಾತ್ರೆ ಮುಗಿದು ಜನರು ಮರಳುವಾಗ ಸುಂಟರಗಾಳಿ ಬೀಸಿತು ೬-೭ ನೂರು ಪ್ರಯಾಣಿಕರಿಂದಲೂ ಸುಮಾರು ಎಂಟರಷ್ಟು ದನಗಳಿಂದಲೂ ತುಂಬಿದ ನಾರಾಯಣಿ ಎಂಬ ಉಗಿಹಡಗವು ಗಂಗಾ ನದಿಯಲ್ಲಿ ಜಲಸಮಾಧಿ ಹೊಂದಿತು ಗಾಳಿಯ ಅಭ್ಬರ ಬಾ ನೋಡಿ ಕಂಗೆಟ್ಟ ಪ್ರಯಾಣಿಕರು ಹಡಗದ ಒಂದು ಬದಿಯಲ್ಲಿ ಸೇರಿದರು, ಆದರಿಂದ ಹಡಗವು ಒಂದು ಮಗ್ಗುಲಿಗೆ ವಾಲಿ ಮುಳುಗಿತಂತೆ ಆದರಲ್ಲಿದ್ದ ಹಲವು ಪ್ರಯಾಣಿಕರು ದಡ ಸೇರಿದರು, ಉಳಿದವರು ಜಲಸಮಾಧಿ ಹೊಂದಿದರು ಈ ಬಿರುಗಾಳಿಯು ಮುಂದೆ ಬಂಗಾಲದ ಉಪಸಾಗರದಲ್ಲಿಂದ ಹಾಯ್ದು, ಶ್ರೀಲಂಕೆಯನ್ನು ಸುತ್ತಿ, ಪಶ್ಚಿಮ ಕರಾವಳಿಯ ಗುಂಟ ಮುಂಬಯಿ ಸೀಮೆಯನ್ನು ಹೊಕ್ಕಿತು ಮುಂಬಯಿಯಲ್ಲಿ ಸೋಮವಾರ ಬೆಳಗಾಗುವ ವರೆಗೂ ಸಕಲ ಲೋಕವ್ಯವಹಾರಗಳು ಸುಸೂತ್ರ ನಡೆದಿದ್ದವು ಮಾತ್ರ ರಭಸದಿಂದ ಬೀಸುತ್ತಿತ್ತು ರವಿವಾರ ಮಧ್ಯರಾತ್ರಿ ತಾಸಿಗೆ ೭೦ ಮೈಲು ವೇಗದಿಂದ ಬೀಸುತ್ತಿದ್ದ ಗಾಳಿ ಸೋಮವಾರ ಪ್ರಾತಃಕಾಲದಲ್ಲಿ ಮೈಲು ವೇಗದಿಂದ ಬೀಸತೊಡಗಿತು! ಆಗ ನಗರದೊಳಗೆಲ್ಲ ಹಾಹಾಕಾರವೆದ್ದಿತು ದೊಡ್ಡ ದೊಡ್ಡ ಮರಗಳು ಕಿತ್ತು ಬಿದ್ದವು! ವಿದ್ಯುತ್-ಪ್ರವ

ಶಿಕ್ಷಕರ ನೆರವಿಲ್ಲದೆ
ಹಿಂದೀ ಕಲಿಯಿರಿ!

ಹಿಂದೀ-ಕನ್ನಡ ಸ್ವಯಂ-ಶಿಕ್ಷಕ— ವಿದ್ವಾಂಸ ಶ್ರೀ ನ್ಯಾಯ-ಕಾವ್ಯತೀರ್ಥ ಪಠ್ಠರದಾಸ ಶಾಸ್ತ್ರಿಗಳು ಬರೆದುದು ಪುಟಗಳು ೩೦೦ ಅಂದವಾಗಿ ಅಚ್ಚು ಹಾಕಿ ಸುಂದರ ಹೊತ್ತಿಗೆ. ಅಭ್ಯಾಸಿಯಾಗ್ರ ಗ್ರಂಥ ಬೇಗ ಬರಲಿದೆ ಬೆಲೆ ರೂ ೩

ರಚನಾ ರತ್ನಾಕರ— ಶ್ರೀ ಬಿ ಕವಾಕ ಪ್ರ ಪಿ ಎಚ್ ಶಾಸ್ತ್ರಿಗಳು ರಚಿಸಿದ ಹಿಂದೀ ಲೇಖನ ಪದ್ಧತಿ ಪುಟಗಳು ೩೨೫ ಬೆಲೆ ರೂ ೨-೨

ಇಂಗ್ಲಿಷ-ಹಿಂದೀ ಶಬ್ದಕೋಶ (ಗೃಹೋಪಯೋಗಿ)— ಇಂಗ್ಲಿಶ ಶಬ್ದಗಳ ಹಿಂದೀ ಅರ್ಥವುಳ್ಳಷ್ಟು ಸಣ್ಣ (ಪೋಕೆಟ್) ಆಕಾರದ ಪುಟಗಳು ೧೦೩೬ ಅಂದ ಅಚ್ಚಿನ ಚೆಂದ ಗ್ರಂಥ. ಬೆಲೆ ರೂ ೩

ಲೋಕೋಕ್ತಿಯಾಂ— ಈ ಪುಸ್ತಕದಲ್ಲಿ ಹಿಂದೀ ಭಾಷೆಯೊಳಗೆ ರೂಢವಿರುವ ಭಾಷಾ-ಪ್ರಯೋಗಗಳನ್ನು ಪದಪ್ರಯೋಗಗಳನ್ನು ಸಂಗ್ರಹಿಸಿ, ಸಾದಾ ಕನ್ನಡ ಹಿಂದಿ ಭಾಷೆಯ ಅರ್ಥ ಸಹಿತ, ಕೊಡಲಾಗಿದೆ ಬೆಲೆ ಆಣೆ ೧೪

ಸಂಸ್ಕೃತ ಭಾಷೆಯ ಸ್ವಯಂ-ಶಿಕ್ಷಕ— ಇಂಗ್ಲಿಷ ಭಾಷೆಯ ದ್ವಾರಾ ಸ್ವತಃ ಸಂಸ್ಕೃತ ಕಲಿಯಲು ಬರ ಸಹಾಯಕವಾಗಿದೆ ಬರೆದವರು ಸಂಸ್ಕೃತ ಶಿಕ್ಷಕ ಶ್ರೀ॥ ಸರದಾರಾಂ, ಎಮ್ ಎ, ಇವರು ಬರೆದದ್ದು ಬೆಲೆ ರೂ ೨

ಬೇಕಾದವರು ನಮಗೆ ಬರೆಯಿರಿ

ಶಬ್ಬೀರ ಬ್ರದರ್ಸ್,
ಬುಕ್ ಸೆಲರ್ಸ್, ಭಟಕಳ (ಉ ಕ)

THE BANK OF RURAL INDIA LTD.

(Incorporated in British India Liability of Members Limited)

Head Office — 'Satyabhama Bhavan', KARWAR. N K

Offices at — KARWAR KUMTA SIRSI, HONAVAR, YELLAPUR BHATKAL SIDDAPUR ANKOLA HUBLI & DHARWAR

Authorised Capital	Rs	10 00 000,
Subscribed Capital	Rs	5,00 000
Paid-up Capital & Reserves	Rs,	5,08,502-8-0

Rates of Interest on Deposits

Current a/c @ 1% p a, *Savings Bank a c @ 2½%*

Fixed Deposits for 3 months @ 3 per annum

for 6 monnths @ 3 %

for 12 monhs or more @ 4

All kinds of modern Banking business transacted

Karwar,
14-2-1948

P X GRACIOUS,
MANAGING DIRECTO

ಂತ್ರಾಹೋಯಿತು! ಸುಮಾರು ೫ ಸಾವಿರ ಮರ ಮುರಿದು ಬಿದ್ದವು! ನೂರಾರು, ಸಾವಿರಾರು ಕಂಬಗಳು ಬಿದ್ದು ವಿದ್ಯುತ್-ತಂತಿಗಳು ಹರಿದು ಹೋದವು! ವಿದ್ಯುತ್ತಿನ ಸಹಾಯದಿಂದ ನಡೆಯುವ ಕಾರಖಾನೆಗಳೂ ಯಂತ್ರಗಳೂ ಒಮ್ಮೆಲೇ ನಿಂತುಹೋದವು! ವಿದ್ಯುತ್-ದೀಪಗಳು ಆರಿಹೋಗಲು ಜನರು ಮೇಣಬತ್ತಿಗಳನ್ನು ಕೊಂಡುಕೊಳ್ಳಬೇಕಾಯಿತು. ಅದರಿಂದ ಮೇಣಬತ್ತಿಗಳ ದರ ಏರಿತು! ದಾದರ, ಲಕ್ಷ್ಮೀ, ಸತ್ಯಪತಿ ಹಾಗು ಮತ್ತಿತರ ಗಿರಣಿಗಳು ಎಷ್ಟೋ ಚಾಳಿಗಳೂ ಉರುಳಿ ನೀರಿನಲ್ಲಿ ಮುಳುಗಿಹೋದವು. ಎಷ್ಟೋ ಮನೆಗಳ ಛಪ್ಪರುಗಳೂ ಹಾರಿಹೋಗಿವೆ! ಇಡೀ ಸೋಮವಾರ ಮುಂಬಯಿ ನಗರದ ತುಂಬ ಅನರ್ಥ, ಅವ್ಯವಸ್ಥೆ! ಗಾಡಿ, ಟ್ರಾಮು, ಮೋಟಾರ ಮುಂತಾದ ವಾಹನಗಳ ಓಡಾಟವೆಲ್ಲ ನಿಂತುಹೋಯಿತು. ಟಪಾಲು ತಂತಿ ವ್ಯವಹಾರಕ್ಕೂ ತಡೆಬಿತ್ತು. ಸೋಮವಾರ ಸಂಜೆ ಈ ಬಿರುಗಾಳಿ ನಿಂತಿತು. ಈ ಬಿರುಗಾಳಿಯಿಂದ ಆದ ನಷ್ಟ ಅಪರಿಮಿತವು! ಸುಮಾರು ೫ ಕೋಟಿ ರೂ. ಗಳಷ್ಟು ನಷ್ಟವಾಗಿದೆ. ನಗರದೊಳಗಿನ ಪ್ರಾಣಹಾನಿ ೨೦ರೊಳಗಿದೆ. ೬೦ ಜನರು ಸಮುದ್ರದಲ್ಲಿ ಮುಳುಗಿ ಸತ್ತರು. ಆದರೆ ನಿಕ್ಕಿ ಅಂಕಿಗಳು ಸಿಗಲು ಇನ್ನೂ ದಿನ ಬೇಕು. ಚೆಂಬೂರಿನಲ್ಲಿದ್ದ ನಿರಾಶ್ರಿತರ ನಿವಾಸಗಳ ಮೇಲ್ಛಾವಣಿಗಳು ಹಾರಿಹೋಗಿ ಅವರು ಪುನಃ ನಿರಾಶ್ರಿತರಾದರು. ಮುಂಬಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ನ್ಯಾ|| ಛಾಗ್ಲಾರವರ ಬಂಗಲೆಯ ಸುತ್ತಮುತ್ತ ಮರಗಳು ಬಿದ್ದದ್ದರಿಂದ ಅವರು ಸಕಾಲವಾಗಿ ಮನೆಯಿಂದ ಹೊರಬೀಳಲಿಲ್ಲ. ಟೆಲಿಫೋನ ಮಾಡಿ ಹೈಕೋರ್ಟಿಗೆ ಸೋಮವಾರ ರಜೆ ಕೊಡಲು ಇತರ ನ್ಯಾಯಾಧೀಶರಿಗೆ ತಿಳಿಸಿದರು. ಗಿರಣಿಗಳು ನಿಂತದ್ದರಿಂದ ಸುಮಾರು ೧ ಕೋಟಿ ಗಜ ಅರಿವೆಯ ಉತ್ಪತ್ತಿ ಕಡಿಮೆಯಾಗಿದೆಯಂತೆ. ಮುಂಬಯಿಯ ಸುತ್ತಮುತ್ತ ೫೦ ಮೈಲು ವಿಸ್ತೀರ್ಣ ಪ್ರದೇಶದಲ್ಲಿ ಈ ಬಿರುಗಾಳಿಯು ಹಾವಳಿ ಹಾಕಿದೆ. ರಾಣಿಯಬಾಗಿನಲ್ಲಿ ಒಂದು ಅಶ್ವತ್ಥ ಮರ ಕಿತ್ತುಬೀಳುವಾಗ ಅದರ ಬುಡದಲ್ಲಿದ್ದ ಹನುಮಂತ ದೇವರ ಗುಡಿಯೂ ಉರುಳಿ ಬಿದ್ದಿದೆ. ಇಷ್ಟು ಭೀಷಣ ಬಿರುಗಾಳಿಯು ಕಳೆದ ೫೦ ವರ್ಷಗಳಲ್ಲಿ ತಾವು ಎಂದೂ ನೋಡಿಲ್ಲೆಂದು ಹಿರಿಯರು ಹೇಳುತ್ತಾರೆ. ಈ ಬಿರುಗಾಳಿಯಿಂದ ವಿಪನ್ನರಾದವರಿಗೆ ಸಹಾಯ ಮಾಡಲು ಮುಂಬಯಿ ಸರಕಾರವು ಸರ್ವಪ್ರಯತ್ನ ಮಾಡುತ್ತಿದೆ. ಟಾಟಾ ಧರ್ಮ ಸಂಸ್ಥೆಯವರು ರೂ. ೧೦೦೦೦ ಸಂತ್ರಸ್ತರ ಸಹಾಯಕ್ಕಾಗಿ ಕೊಟ್ಟಿರುತ್ತಾರೆ. ಈ ಬಿರುಗಾಳಿಯಿಂದ ಪಶ್ಚಿಮ ಮಹಾರಾಷ್ಟ್ರದಲ್ಲೂ ಕೊಂಕಣ ಪಟ್ಟಿಯಲ್ಲೂ ಅನಪೇಕ್ಷಿತವಾಗಿ ಬಹಳ ಮಳೆ ಸುರಿದು ನಷ್ಟವ ಗಿರುತ್ತದೆ. ಕೊಯ್ಯುದ ಉಳಿದ ಭತ್ತದ ಬೆಳೆ ಹಾಳಾಗಿದೆ. ಹಿಂಗಾರಿ ಬೆಳೆಗೂ ಬಹಳ ಹಾನಿಯಾಗಿದೆ. ಚಳಿ ಬೀಳಬೇಕಾದ ಈ ಸಮಯದಲ್ಲಿ ಇಷ್ಟು ಮಳೆ ಎಂದೂ ಬಿದ್ದಿದ್ದಿಲ್ಲೆಂದು ಹೇಳುತ್ತಾರೆ. ಈ ಬಿರುಗಾಳಿಯ ಪೂರ್ವ ಸೂಚನೆಯನ್ನೊಂದು ಇಲ್ಲಿ ನಮೂದಿಸಬಹುದು. ಮುಂಬಯಿಯೊಳಗೆ ಆಜಿಯ ವಾರ ಮೀನು ವಿಪರೀತ ಸಿಗುತ್ತಿತ್ತು. ಸೋಮವಾರದಿಂದ ಗುರುವಾರದವರೆಗಿನ ೪ ದಿವಸಗಳಲ್ಲಿ ಎಲ್ಲಿ ನೋಡಿದಲ್ಲಿ ಮೀನೇ ಮೀನು! ಸುಮಾರು ಒಂದೊಂದು ಲಕ್ಷ ಮೀನು ಇರುವ ಗುಂಪು ಲೊಂಚುಗಳು ಸೋಮವಾರ ಬಂದಿದ್ದವು. ಇದೇ ರೀತಿ ಗುರುವಾರ ತನಕ ಮೀನಿನ ತುಂಬಿದ ಲೊಂಚುಗಳೂ ದೋಣಿಗಳೂ ಒಂದರ ಹಿಂದ ಒಂದು ಬರುತ್ತಿದ್ದವು! ಅದರ ಪರಿಣಾಮವಾಗಿ ಕೊಂಡಿಯೊಂದಕ್ಕೆ ರೂ ೧೬ರಿಂದ ೨೨ರ ವರೆಗೆ ಮಾರಾಟವಾಗುತ್ತಿದ್ದ ಪ್ರೊಂಪ್ಲೆಟ (ಪಾಪಲೆಟ) ಮೀನು ರೂ ೩ಕ್ಕೊಂದು ಕೊಂಡಿಯಂತೆ ಕೊಟ್ಟರೂ ಕೊಳ್ಳುವವರು ಸಿಗಲಿಲ್ಲ! ವಿಮಾನ ಪೇಟೆಗೆ ಬಂದ ಎಲ್ಲ ಮೀನು ಮಾರಾಟವಾಗುತ್ತಿದ್ದಿಲ್ಲ. ಆದರಿಂದ ಮೀನುಗಾರರು ಹೊರೆ ಮೀನನ್ನು ತಿರುಗಿ ಸಮುದ್ರದಲ್ಲಿ ಚೆಲ್ಲಬೇಕಾಯಿತು! ಪೇರಳ ಮೀನು ಕೊಳೆತು ಹೋಯಿತು! ಅಂಬಿಗರಿಗೆ ಈ ರೀತಿ ಮೀನು ಶಿಕಾರಿ ಹಿಂದೆಂದೂ ಸಿಕ್ಕಿದ್ದಿಲ್ಲವಂತೆ. ಇಷ್ಟೆಲ್ಲ ಮೀನು ಹೇಗೆ ಒಟ್ಟುಗೂಡಿತೆಂಬುದೊಂದು ವಿಚಿತ್ರ ಸಮಸ್ಯೆಯಾಗಿದೆ. ಮೀನ ಇಲಾಖೆಯ ಮಂತ್ರಿಗಳಾದ ಶ್ರೀ|| ತಪಾಸೆಯವರು ಮೀನು ಪೇಟೆಗಳನ್ನು ಸಂಚರಿಸಿ ಸರಕಾರದಿಂದ ಏನು ಸಹಾಯ ಬೇಕಾಗಿ ಮೀನುಗಾರರಿಗೆ ಕೇಳಿದ್ದಕ್ಕೆ "ಮನುಷ್ಯ ಪ್ರಯತ್ನದಿಂದ ನಮ್ಮ ಕಷ್ಟನಿವಾರಣೆಯಾಗುವಂತಿಲ್ಲ! ಇದೊಂದು ದೈವೀ ಘಟನೆ!" ಎಂದು ಆ ಜನರು ಹೇಳಿದರೆಂದು ಸದ್ದಿಯಿರುತ್ತದೆ. ಈ ಘಟನೆಯಾದ ೩—೪ ದಿವಸಗಳಲ್ಲಿ ಬಿರುಗಾಳಿ ಬಂತು! ಸೃಷ್ಟಿಯಲ್ಲಿ ಏನೋ ವಿಕಾರ ಉಂಟಾಗಿರುವಂತೆ ತೋರುತ್ತಿದೆ. ವಿಚಾರಕ್ಕಿಂತ ವಿಕಾರವೇ ಈಗಿನ ಕಾಲಧರ್ಮವಾಗಿ ರಬಹುದೇನೆಂದು ತಿಳಿಯದೆ ವಿಚಾರವಂತರು ವ್ಯಾಕುಲಗೊಳ್ಳುತ್ತಾರೆ.

**

ದಿಲ್ಲಿಯೊಳಗೆ ಘಟನಾ ಸಮಿತಿಯು ಹಿಂದೀ ರಾಜ್ಯ ಘಟನೆಯ ಚರ್ಚೆ ನಡೆಸಿದೆ. ಈಗಿನಂತೆಯೇ ಚರ್ಚೆ ನಡೆದರೆ ಘಟನೆ ಸಂಪೂರ್ಣ ತಯಾರಾಗಲಿಕ್ಕೆ ಮೂರ್ನಾರು ತಿಂಗಳು ತಗಲುವವು. ಅದರಿಂದ ಸಭಾಸದರು ಸೂಚಿಸಿದ ಹತ್ತುಸಾವಿರ ತಿದ್ದುಪಡಿಗಳ ಗುಣದೋಷಗಳನ್ನು ಅಧ್ಯಕ್ಷರು ಪರಾಂಬರಿಸಿ ಅವುಗಳ ಯುಕ್ತಾಯುಕ್ತತೆಯ ನಿರ್ಣಯ ಮಾಡತಕ್ಕದ್ದೆಂದಾಗಿ ಘಟನಾ ಸಮಿತಿಯಲ್ಲಿ ನಿರ್ಧಾರವಾಗಿದೆ. ಮುಖ್ಯ ಮುಖ್ಯ ತಿದ್ದುಪಡಿಗಳನ್ನಷ್ಟೇ ಚರ್ಚಿಸತಕ್ಕದ್ದಾಗಿಯೂ ನಿರ್ಣಯವಾಗಿದೆ. ಪ್ರಯತ್ನ ಮಾಡಿ ಕಾಂಗ್ರೆಸ್ಸು ಸ್ವಾತಂತ್ರ್ಯದ ಘೋಷಣೆ ಮಾಡಿದ ಜನವರಿ ೨೬ನೇ ತಾರೀಖಿನೊಳಗೆ ಇಡೀ ರಾಜ್ಯಘಟನೆಯ ವಿಚಾರ ಪೂರ್ಣವಾಗಬೇಕೆಂದು ಕಾಂಗ್ರೆಸ ಪಕ್ಷದ ಸಭೆಯಲ್ಲಿ ನಿರ್ಧಾರವಾಗಿದೆ. ಅನಾವಶ್ಯಕ ಚರ್ಚೆಗೆ ಆಸ್ಪದ ಕೊಡದ ಕ್ಲಿಪ್ತ ಕಾಲದಲ್ಲಿ ತಿದ್ದುಪಡಿಗಳ ಚರ್ಚೆ ಮುಗಿಸಬೇಕಾಗಿಯೂ ನಿರ್ಣಯವಾಗಿದೆ. ಅವಶ್ಯವೆಂದಲ್ಲಿ ರಾತ್ರಿ ಸಹ ಘಟನಾ ಸಮಿತಿಯ ಸಭೆ ಕೂಡಿಸಬೇಕಾಗಿಯೂ ನಿರ್ಣಯವಾಗಿದೆ. ಕಳೆದ ವಾರದಲ್ಲಿ ಕೆಲವು ಮುಖ್ಯ ಕಲಮು ಸ್ವೀಕೃತವಾಗಿವೆ. ಇಡೀ ಹಿಂದುಸ್ಥಾನದ ಜನಾಂಗಕ್ಕೆ ಧರ್ಮ – ಜಾತಿ ಭೇದಗಳನ್ನಲ್ಲದೆ, ಸ್ತ್ರೀಯ ಮತ್ತು ಪುರುಷರ ಹಕ್ಕಿನ ಸಂಬಂಧವಲ್ಲ ಒಂದೇ ಬಗೆಯ ಕಾನೂನು ಇರಬೇಕಾಗಿ ಸ್ವೀಕಾರವಾಗಿದೆ. ಇದಲ್ಲದೆ ನ್ಯಾಯ ಇಲಾಖೆಯನ್ನು ಕಾರ್ಯಕಾರಿ ಇಲಾಖೆಯಿಂದ ಕೂಡಲೇ ಬೇರ್ಪಡಿಸಬೇಕೆಂದೂ ಸರಕಾರಕ್ಕೆ ನ್ಯಾಯ ಇಲಾಖೆಯಲ್ಲಿ ಕೈಹಾಕಲಿಕ್ಕೆ ಎಷ್ಟಕ್ಕೂ ಅವಕಾಶ ಇರಕೂಡದೆಂದೂ ನಿರ್ಣಯವಾಗಿದೆ. ಡಾ|| ಅಂಬೇಡಕರರು ತಯಾರಿಸಿದ ಘಟನೆಯ ಮಸೂದೆಯಲ್ಲಿ, ನ್ಯಾಯ ಇಲಾಖೆಯನ್ನು ಸ್ವತಂತ್ರಗೊಳಿಸಲು ೩ ವರುಷಗಳ ಅವಕಾಶ ಕೊಟ್ಟಿತ್ತು. ಅವಧಿಯ ಈ ನಿರ್ಬಂಧ ತೆಗೆದು ಆದಷ್ಟು ತ್ವರೆಯ ನ್ಯಾಯ ಇಲಾಖೆಯನ್ನು ಸ್ವತಂತ್ರಗೊಳಿಸಬೇಕೆಂದು ಈಗ ನಿರ್ಣಯವಾಗಿದೆ. ಪಂ|| ಜವಾಹರಲಾಲರವರು ಈ ವಿಷಯದಲ್ಲಿ ವಿಶೇಷವಾಗಿ ಮನಸ್ಸು ಹಾಕಿದ್ದರಿಂದ ಈ ಪ್ರಕಾರ ನಿರ್ಣಯವಾಗಿದೆ. ಪ್ರಾಂತಿಕ ಸರಕಾರವೂ, ಕೇಂದ್ರ-ಸರಕಾರವೂ ನ್ಯಾಯ ಇಲಾಖೆಯ ಅಧಿಕಾರಗಳನ್ನು ಕಸಕೊಳ್ಳಬಾರದಾಗಿ ಈ ತಿದ್ದುಪಡಿಯಿಂದ ನಿಶ್ಚಿತವಾಗಿದೆ. ಘಟನಾ ಸಮಿತಿಯ ಈ ಆದೇಶದ ಮೂಲಕ,ದಿವಾಣಿ ನ್ಯಾಯಸ್ಥಾನಗಳ ಹಕ್ಕು ಅಪಹರಿಸುವಂಥ ಕಾನೂನುಗಳನ್ನಲ್ಲ ಪಾಸು ಆಗದ ಹಾಗೆ ದಿವಾಣಿ ನ್ಯಾಯಸ್ಥಾನಗಳ ಅಧಿಕಾರ ಅಬಾಧಿತವಾಗಿರುವಂತೆ ಯುಕ್ತ ಕ್ರಮ ಕೈಕೊಳ್ಳುವ ಯೋಜನೆಯಾಗತಕ್ಕದ್ದಿದೆ. ಮುಂಬಯಿ ಸರಕಾರವು ಹೊಸದಾಗಿ ಘಟಿಸಿದ ಒಕ್ಕಲತನದ ಕಾನೂನಿನಲ್ಲಿ ದಿವಾಣಿ ನ್ಯಾಯಸ್ಥಾನಗಳ ಅಧಿಕಾರವನ್ನು ಸಂಪೂರ್ಣವಾಗಿ ರದ್ದುಪಡಿಸಿರುವದರಿಂದ ಆ ಕಾನೂನಿನಲ್ಲಿ ತಿದ್ದುಪಡಿ ಮಾಡುವ ಪ್ರಸಂಗ ಬಂದಿದೆ. ಘಟನಾ ಸಮಿತಿಯ ಆದೇಶವನ್ನು ಉಲ್ಲಂಘಿಸುವ ಈ ಕಾನೂನಿಗೆ ಸಮ್ಮತಿ ಪತ್ರಗಳು ಸಮ್ಮತಿ ಕೊಡಲಿಕ್ಕಿಲ್ಲೆಂದು ಅನಿಸಲಾಗಿದೆ. ಇನ್ನೊಂದು ಮಹತ್ವದ ತಿದ್ದುಪಡಿಯನ್ನೂ ಘಟನಾ ಸಮಿತಿಯು ಕೈಕೊಂಡಿದೆ. ಗೋವು ಮೊದಲಾದ ಪ್ರಜಾ-ಜೀವನಕ್ಕೆ ಅವಶ್ಯವಿರ್ವ ದನ-ಕರುಗಳನ್ನು ಕೊಲ್ಲಕೂಡದೆಂದು ನಿರ್ಬಂಧಿಸಲಾಗಿದೆ. ಮದ್ಯಪಾನವನ್ನು ಸಂಪೂರ್ಣವಾಗಿ ನಿರೋಧಿಸುವದು ಹಿಂದುಸ್ಥಾನ ಸರಕಾರದ ಕರ್ತವ್ಯವೆಂದು ಇನ್ನೊಂದು ರೂಪದಿಂದ ಸ್ಪಷ್ಟಪಡಿಸಲ್ಪಟ್ಟಿದೆ. ಈ ತಿದ್ದುಪಡಿಗಳ ಮೂಲಕ ಹಿಂದುಸ್ಥಾನ ಜನಾಂಗದ ಆಶೆ-ಆಕಾಂಕ್ಷೆಗಳ ಕಲ್ಪನೆ ಜನಸಾಮಾನ್ಯರಿಗೆ ದೊರೆಯುತ್ತದೆ.

**

ಕಾಶ್ಮೀರ ರಣರಂಗದಲ್ಲಿ ಹಿಂದುಸ್ಥಾನದ ಪ್ರಗತಿಯಾಗುತ್ತಿದೆ. ಹಿಂದೀ ಸೈನಿಕರು ಪಾಕಿಸ್ತಾನದಿಂದ ತಂದುಗಟ್ಟಿದ ಒಂದು ದಾಳಿಯಗಾರರನ್ನು ಸಂಹರಿಸಿ ಕಾಶ್ಮೀರದೊಳಗಿಂದ ಹೊರಹಾಕುತ್ತಿದ್ದಾರೆ. ಅದರಿಂದ ಪಾಕಿಸ್ತಾನ ಸರಕಾರವು ರೇಗಿಗೆದ್ದಿದೆ! ಹಿಂದುಸ್ಥಾನ ಸರಕಾರವು ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳದಿದ್ದರೆ ಪ್ರಚಂಡ ಪ್ರಮಾಣದ ಮೇಲೆ ತಾವು ಯುದ್ಧ ಹೂಡುವೆವಾಗಿ ಪಾಕಿಸ್ತಾನ ಸರಕಾರದ ವಿದೇಶ ಮಂತ್ರಿಗಳಾದ ಜಾಫರುಲ್ಲಾ ಖಾನರು ಗರ್ಜಿಸುತ್ತಾರೆ! ಇಂಥ ಬೆದರಿಕೆಗಳಿಗೆ ಹಿಂದುಸ್ಥಾನ ಸರಕಾರವು ಸೊಪ್ಪುಹಾಕುವದಿಲ್ಲ ಮಾತ್ರ. ಕಾಶ್ಮೀರದಲ್ಲಿ ಹೊಕ್ಕಿದ ದಾಳಿಯಗಾರರು ಸಂಪೂರ್ಣವಾಗಿ ಕಾಶ್ಮೀರದಿಂದ ಕಾಲು ತೆಗೆಯುವ ತನಕ ಹಿಂದುಸ್ಥಾನ ಸರಕಾರವು ಹೋರಾಡುವದಾಗಿಯೂ ಸರದಾರ ವಲ್ಲಭಭಾಯಿ ಪಟೇಲರು ತ್ರಿಚನಾಪಳ್ಳಿಯಲ್ಲಿ ನೆರೆದ ಪ್ರಚಂಡ ಸಭೆಯಲ್ಲಿ ಘೋಷಿಸಿದ್ದಾರೆ. ಕಾಶ್ಮೀರ ಸಂಸ್ಥಾನವನ್ನು ಇಬ್ಭಾಗ ಮಾಡಿ ಹಂಚಿಕೊಳ್ಳಬೇಕೆಂಬ ಬ್ರಿಟಿಷ ರಾಜಕಾರಣಿಗಳ ಹೂಟ ಇನ್ನೂ ಉಳಿದಿದೆ. ಮುಂಬಯಿ ಕ್ರೊನಿಕಲ್ ಪತ್ರಿಕೆಯು ಬರೆಯುತ್ತಿದೆ: ಪಾಕಿಸ್ತಾನದ ಮೇಲಿನ ಮಮತೆ ಅಂದರೆ ಸ್ವಾರ್ಥಪರಾಯಣತೆ ಬ್ರಿಟಿಶರನ್ನು ಬಿಡುವದಿಲ್ಲ, ಹಿಂದುಸ್ಥಾನದ ಮೇಲಿನ ಹಗೆಯೂ ಅವರನ್ನು ತೊರೆಯುವದಿಲ್ಲ! ಕಾಶ್ಮೀರ ಸಂಸ್ಥಾನವನ್ನು ಅಖಂಡವಾಗಿ ಕಾಪಾಡಿಕೊಂಡು, ಅದರ ಅಖಂಡತೆಯನ್ನು ಹಿಂದುಸ್ಥಾನಕ್ಕೆ ಅಧೀನವಾಗಿ ನಡೆಸಬೇಕೆಂದು ಹಿಂದುಸ್ಥಾನ ಸರಕಾರದ ನಿರ್ಧಾರವಾಗಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ನೀರೀಕ್ಷಿಸಿದಂತೆ ಕಳೆದ ಸೋಮವಾರ ಒಹಳ ಮಳೆ ಸುರಿಯಿತು. ಆ ನಂತರ ಸಹ ೧ ೨ ದಿವ ಮಳೆ ಬಿತ್ತು. ಈಗ ಮುಂಜಾವಿನಲ್ಲಿ ಸುಸಾ ಚಳಿ ಬೀಳುತ್ತಿದೆ ಆದರೂ ಹವೆಯೊಳಗಿನ ಉಷ್ಣತೆಯು ಅಂಶ ನೋಡಿದರೆ ಮಳೆ ಪೂರ್ಣ ನಿಂತಿದೆಂದು ಹೇಳಬರುವದಿಲ್ಲ

ಇಲ್ಲಿಯ ಮಾಮಲೇದಾರ ರಾ॥ ಸಬನೀಸರಿಗೆ ಜಂಟಿ ಸ್ಥಾನದ (ಇವು ಮುಂಬಯಿ ಪ್ರಾಂತದಲ್ಲಿ ವಿಲೀನವಾಗಿವೆ) ಜೊತೆ ಅಧಿಕಾರ ...

ಮಹಾತ್ಮಾ ಗಾಂಧಿಯವರ ರಾಷ್ಟ್ರೀಯ ಸ್ಮಾರಕ ನಿಧಿ ...

ಮಾರ್ಕೆಟಿನಲ್ಲಿ ಸದ್ಯಕ್ಕೆ ಪ್ರಯೋಗಾರ್ಥ ಒಂದು ಹಾಲು ಅಂಗಡಿ ತೆರೆಯಲ್ಪಟ್ಟಿದೆ

ಕೊಂಕಣಿಯವರ ... ಹಾಗೂ ... ಕಳೆದ ... ನಿರ್ಣಯಿಸಿದ ವರದಿಯುಂಟು

ಭಟಳ, ಹೊನ್ನಾವರ ಕಡೆ ಟಪಾಲು ... ಬಹಳ ಅನಿಯಮಿತವಾಗಿ ಬರುತ್ತಿದೆ ... ಟಪಾಲು ... ಮಾಡಬೇಕು

ಗೋಕರ್ಣ ಮ್ಯುನಿಸಿಪಾಲಿಟಿಯು ... ಮ್ಯುನಿಸಿಪಾಲಿಟಿಯಾಗಿರುವದಿಲ್ಲ ಆದರ ಸದಸ್ಯರನ್ನು ಸರಕಾರವೇ ನೇಮಿಸುತ್ತದೆ ...

ದಾರರಕೇರಿಯ ದೊರೆತ್ವಾರೆ ಮನೆತನಗೆಯು ... ನ್ಯಾಯ ಸದಸ್ಯರ ಯಾ ಅವರ ಸಮಾಜದ ... ನೋಡಿಕೆ ಸಂಬಂಧಿಸದ ... ಗಮನಿಸಿಲ್ಲ ... ಸಿಟ್ಟು ... ಸದನದಲ್ಲಿ ಹರಡಿರುವ ... ಗಾಳಿ ... ಆಪ್ತರಿಗೆ ... ನ್ಯಾಯ ... ಒಂದು ಸಂಜೆ ...

ಹೊನ್ನಾವರ— (ತಾ ೨೪ ೧೧ ೪೮) ಇಲ್ಲಿಯ ಮಾಮಲೇದಾರ ರಾ॥ ... ಇವರಿಗೆ ಜಿಲ್ಲಾ ಪ್ರಾಶ್ನಿಕ ಅಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ... ನಾಯಕ ಇವರು ಇಲ್ಲ ಮಾಮಲೇದಾರರಾಗಿ ಬಂದಿದ್ದಾರೆ

ಭಟಳದ ಹರಿಜನ ಮಹಿಳೆಯೊಳಗೆ ನೋಟುಗಳನ್ನು ... ರೂ ೮೦೦೦ ದ ನೋಟುಗಳನ್ನು ... ಗಾಂಧಿ ರಾ॥ ... ಕೇಸು ... ರೂ ೧೦೦೦ ದ ದಂಡವನ್ನೂ ವಿಧಿಸಿದ್ದಾರೆ

ಕಳೆದ ಸೋಮವಾರ ಮುಂಬಯಿಯಲ್ಲಿ ... ಮಸೂದೆಗಳು ... ರೂ ೧೦೦೦೦ ... ಬೇಕೆಂದು ... ಆದರೆ ... “ ... ” ... ಇಂದ ... ಬಂದಿದೆ

ಉತ್ತರ ಸಹ ... ನ್ಯಾಯ ... ಶಿಕ್ಷೆಯನ್ನು ... ಅಗ್ನಿಹೋತ್ರಿಯವರು ತಮ್ಮ ಸ್ವಂತ ... ಪರೀಕ್ಷಿಸಬೇಕಾಗಿ ...

ಅರ್ಜ ಕೊಡಿದ್ದರು ಅದರಂತೆ ರಾ॥ ನಾಡಕರ್ಣಿ ಮತ್ತು ... ಇವರು ಬಂದು ಬೆಳೆ ಕೊಯ್ಯು ಪಂಚನಾಮೆ ಮಾಡಿಕೊಂಡು ಹೋಗಿದ್ದಾರಂತೆ ಅಗ್ನಿಹೋತ್ರಿಯವರ ಗದ್ದೆಯಲ್ಲಿ ಗುಂಪಿನೊಂದಿಗೆ ... ಭತ್ತ ಹುಟ್ಟಿದ್ದು ... ವಾಗಿ ತಿಳಿಯುತ್ತದೆ

ಹೊಸಪಟ್ಟಣ ಗ್ರಾಮದವರ ... ಬಟ್ಟೆಯು ... ಸ್ಥಳೀಯ ಪಟೇಲರು ... ಬರಬೇಕೆಂದು ... ಎಷ್ಟು ... ಬಂದರೆ ತಿಂಗಳು ... ಹೋಗುವದೆಂದು ಆ ಊರ ಜನ ಹೇಳುತ್ತಾರೆ

ಭಟಕಳ— (ತಾ ೧೬-೧೧-೪೮) ಇಲ್ಲಿಯ ... ಕೋರ್ಟಿನಲ್ಲಿ ... ಕೇಸು ... ಕೋರ್ಟಿನಲ್ಲಿ ... ಅರ್ಜಿ ... ನ್ಯಾಯಾಲಯದ ... ರೂ ... ಸಾಕ್ಷಿದಾರರು ... ನ್ಯಾಯಾಧೀಶರಿಗೆ ... ಪರಿಹರಿಸಬೇಕಾಗಿ ಸೂಚನೆಯಿದೆ

ಇಲ್ಲಿಯ ... ಕೆಲಸ ಹೇಳಿ ... ಸರಕಾರ ... ಮಾಡಬೇಕೆಂತ, ... ಅನಕೂಲ ... ಉದ್ದಿಮೆ ... ನ್ನು ... ಸೂಚನೆಯಿದೆ

ಇಲ್ಲಿಯ ಸವಾಯಿಕರ ಕೇರಿಯಲ್ಲಿ ... ಯುಕ್ತ ಮತ್ತು ಹೆಂಗಸರ ... ಬರುತ್ತಿರುವ ... ಬಟ್ಟೆಗೆ ... ಸಂಭವವಿರುವದರಿಂದ ... ಇಲ್ಲಿ ... ಅವಶ್ಯವಿರುತ್ತದಾಗಿ ... ಬಂಧುಗಳು ಹೇಳುತ್ತಾರೆ ... ಗಮನ ಕೊಡಬೇಕು

ಕೃತಜ್ಞತಾ-ಸಮರ್ಪಣೆ

ತಮ್ಮ ಜ್ಯೇಷ್ಠ ಮಕ್ಕಳಂದ ... ಅಲಿ ಸಾಹೇಬರ ನಿಧನದ ಬಗ್ಗೆ ಸಹಾನುಭೂತಿ ಪ್ರದರ್ಶಿಸಿದ, ಸಾಂತ್ವನ-ಸಂದೇಶ ಕಳಿಸಿದ ... ಗುಣಗಾನ ಮಾಡಿದ ... ಪ್ರಾರ್ಥನೆ ಸಲ್ಲಿಸಿದ ಸಕಲ ಅಪ್ತೇಷ್ಟರಿಗೂ ಗೆಳೆಯರಿಗೂ ... ಅಲಿ ಸಾಹೇಬ ... ಇವರು ಈ ಮೂಲಕ ತಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ ಮತ್ತು ವ್ಯಕ್ತಿಶಃ ಪತ್ರ ಬರೆದು ಕೃತಜ್ಞತೆ ಸಲ್ಲಿಸಲಾಗದ ಬಗ್ಗೆ ವಿಷಾದಪಡುತ್ತಾರೆ

ಕಾರವಾರ— (ತಾ ೨೬-೧೧-೪೯) [illegible]

ಕಳೆದ ಸೋಮವಾರ ಇಲ್ಲಿ ಬಹಳ ಮಳೆ ಸುರಿಯಿತು! ! ಇಂತಹ [illegible] ಮಳೆಯಾಗಿದೆಯಂತೆ ! [illegible] ನೀರು ನಿಂತಿದೆ [illegible]

— R —

೧೯೪೮ನೇ ಇಸವಿಯ ಅರಳೆ ನೂಲು-ಬಟ್ಟೆಗಳ (ನಿಯಂತ್ರಣದ) ಆಜ್ಞೆಯ ೨೫ (೧)ನೇ ಕಲಮಿನ ಅಂತರ್ಗತ [illegible] ಯಾವದೇ ವ್ಯಾಪಾರಿಗಾದರೂ ತಯಾರಕನಿಗಾದರೂ (ಇವರಲ್ಲಿ ಬಟ್ಟೆಗೆ ಕಲಾತ್ಮಕ ರೂಪ ಕೊಡುವವರು (processors) ಅಚ್ಚು ಹಾಕುವವರು, "ಟಿಪ್ಪು" ಜನರು, [illegible] ತಯಾರಾದ ಬಟ್ಟೆಗಳನ್ನು ತಯಾರಿಸುವವರು ಇವರೆಲ್ಲರೂ ಸೇರುತ್ತಾರೆ) ತಾ ೩೦—೧೧—೧೯೪೮ರ ನಂತರ ಹಿಂದುಸ್ಥಾನದಲ್ಲಿ ತಯಾರಾದ [illegible] ೧೯೪೮ರ [illegible] ಗಂಟು ಕಟ್ಟಿದ (packed) ಯಾವದೇ ಬಟ್ಟೆಯನ್ನು ಅಥವಾ ನೂಲನ್ನು ಕೊಂಡುಕೊಳ್ಳಕೂಡದು, [illegible] ಇಟ್ಟುಕೊಳ್ಳಕೂಡದೆಂದು [illegible] ಇಂತಹ ಬಟ್ಟೆಯನ್ನು ಅಥವಾ ನೂಲನ್ನು [illegible] ೩೦—೧೨—೧೯೪೮ರ ನಂತರ ಇಂತಹ ಬಟ್ಟೆ ಅಥವಾ ನೂಲನ್ನು [illegible] ಕೊಂಡುಕೊಳ್ಳುವದು ಅಥವಾ ಇಟ್ಟುಕೊಳ್ಳುವದು [illegible] ಸಂಬಂಧಪಟ್ಟ ಎಲ್ಲರಿಗೂ [illegible] ೩೦-೧೧-೧೯೪೮ರ ನಂತರ ಇಂತಹ ಬಟ್ಟೆ ಯಾ ನೂಲು [illegible]

[illegible]

ಅಂಕೋಲಾ— (ತಾ ೨೬-೧೧-೪೯) [illegible]

[illegible]

ಮಂಚಿಕೇರಿ— (ತಾ ೨೬-೧೧-೪೯) [illegible]

[illegible]

ಸಿದ್ದಾಪುರ— (ತಾ [illegible]) [illegible]

[illegible]

ಮುಂಡಗೋಡ— (ತಾ ೧೬-೧೧-೪೯) [illegible] ಸಂದರ್ಭ [illegible] ಗಾಂಧಿ ರಾಷ್ಟ್ರೀಯ [illegible] ಕೊಟ್ಟಿದ್ದಾರೆ.

ವಾರ್ತೆಗಳು

ಮಲಾಯಾ ದೇಶದಿಂದ ಹಿಂದುಸ್ಥಾನಕ್ಕೆ ೮೦೦೦ ಟನ್ ಕೊಬ್ಬರಿ ಎಣ್ಣೆ ಆಮದಾಗಲಿಕ್ಕಿದೆ ಇದರಿಂದ ತೆಂಗಿನ ಎಣ್ಣೆಯ ದರ ಇಳಿಯಬಹುದು

— ಜಯಪುರದ ರಾಷ್ಟ್ರೀಯ ಸಭೆಯ ಅಧಿವೇಶನ ಡಿಸೆಂಬರ ತಾ ೧೮-೧೯-೧೪-೧೯ ಹೀಗೆ ೪ ದಿನ ನಡೆಯುವದು ಗತ್ತುವರ್ಷದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಡಿಸಂಬರ ತಾ ೧೦ನೇಗೆ ದಿಲ್ಲಿಯಲ್ಲಿ ಸೇರಲಿದೆ

— ಮುಂಬಯಿಯ ಬಂದರಿನಲ್ಲಿ ೮೦೦೦ ಡಬ್ಬ ಎಣ್ಣೆ ಡಬ್ಬಿ ತುಂಬಿದ ೧ ಹಡಗ ಮುಳುಗಿತು ಪೋಲೀಸರು [illegible] ಡಬ್ಬಿಗಳನ್ನು ಸಮುದ್ರದೊಳಗಿಂದ ತೆಗೆದರು ಎಣ್ಣೆಯು ಸರಕಾರದ ನಿಯಂತ್ರಣಕ್ಕೆ ಒಳಪಟ್ಟದ್ದು ಇಷ್ಟು ದೊಡ್ಡ ಪ್ರಮಾಣದಿಂದ ಈ ಡಬ್ಬಿಗಳನ್ನು ಯಾರು ಹೇಗೆ ಬಚ್ಚಿಟ್ಟಿದ್ದರೆಂದು ಪೋಲೀಸರು [illegible] ಮಾಡುತ್ತಿದ್ದಾರೆ ಈ ಪ್ರಕರಣದಲ್ಲಿ ಪೋಲೀಸರು ೭೨ ಮಂದಿಯನ್ನು ಹಿಡಿದಿದ್ದಾರೆ

— ಅಮೇರಿಕೆಯ ಬ್ಲೂಮ್ ಫೋಂಟೆನ ಎಂಬಲ್ಲಿ ಹೊಸದೊಂದು ಧೂಮಕೇತು ಕಾಣುತ್ತಿದೆ. ಇದು ಕಣ್ಣಿಗೆ ಕಾಣುವದಿಲ್ಲ ದೂರದರ್ಶಕ ಯಂತ್ರದಿಂದ ಇದನ್ನು ಹಾರವರ್ಡ ವಿಶ್ವವಿದ್ಯಾಲಯದವರು ನೋಡಿ ಕಳೆದ ಮಂಗಳವಾರ ಇದರ ಛಾಯಾಚಿತ್ರವನ್ನು ತೆಗೆದಿದ್ದಾರೆ

ನೋಟೀಸು.

[illegible] ಎಚ್. ಅಬ್ದುಲ ಗಫೂರ ಸಾಹೇಬ, [illegible] ಭಟಕಳ [illegible] ಈ ನೋಟೀಸು [illegible] ನನ್ನ [illegible] ಭಟಕಳ ಮ್ಯುನಿಸಿಪಲ್ ಮನೆ ನಂಬರ [illegible] ಮನೆ ನಿಮಗೆ ಬಾಡಿಗೆಗೆ ಇದ್ದು [illegible] ಬಾಕಿಯುಂಟು. ಅದನ್ನು ನೀವು [illegible] ಕೊಡದೆ, [illegible] ತಾ ೧೫-೧೧-೪೯ರ "[illegible]"ದಲ್ಲಿ ಪ್ರಕಟವಾಗಿರುವ [illegible] ನೀವು [illegible] ತಾ ೧೫-೧೨-೪೯ರೊಳಗೆ ನೀವು [illegible] ಬಾಡಿಗೆ [illegible] ಮನೆಯನ್ನು [illegible], ಹಾಗೆ ಮಾಡದಿದ್ದಲ್ಲಿ ತಾ ೧೫-೧೨-೪೯ರ ನಂತರ [illegible] ನಿಮ್ಮ [illegible] ವ್ಯಕ್ತಿ [illegible] ಸಂಬಂಧ [illegible] ನೀವು [illegible] ತಾ ೧೫-೧೧-೪೯ಕ್ಕೆ [illegible] ನೋಟೀಸು ಕೊಟ್ಟು [illegible] ತಾ ೧-೧೨-೪೯ರೊಳಗಾಗಿ ನೀವು [illegible] ತಾ ೧-೧೨ [illegible] ನಾನು [illegible] ಮನೆಯ [illegible]

ಭಟಕಳ, ತಾ ೨೭ ೧೧-೧೯೪೯

M H Abdul Gafoor

ಪೊಪ್ಯುಲರ ಇನ್ಸೂರನ್ಸ ಕಂಪನಿ, ಲಿ, ಮಂಗಳೂರ

ಮೇಲಿನ ವಿಮಾ-ಸಂಸ್ಥೆಯು ೪ನೇ ಪಂಚವಾರ್ಷಿಕ (೧೯೪೩-೧೯೪೭) ಮೌಲ್ಯ-ನಿರ್ಧಾರಣದ ವರದಿಯು ಇತ್ತೀಚೆ ಪ್ರಕಟವಾಗಿದೆ. ಮುಂಬಯಿಯ ಪ್ರಸಿದ್ಧ ವಿಮಾ ಗಣಿತ-ಪಂಡಿತರಾದ ಶ್ರೀ ಬಿ. ಕೇ. ಅಯ್ಯರ ಇವರು ಸಂಸ್ಥೆಯ ಎಲ್ಲ ವಿಮಾಪತ್ರಗಳನ್ನೂ ಅವುಗಳ ವಿವರಗಳನ್ನು ಲೆಕ್ಕ-ಪತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಮತ್ತು ದೀರ್ಘಾನುಭವದಿಂದ ಸಾಧ್ಯವೆಂದು ಕಂಡು ಬಂದ ಲೆಕ್ಕದ ನಿಯಮಗಳಿಗನುಸಾರವಾಗಿ ಸಂಸ್ಥೆಯ ಜವಾಬ್ದಾರಿ, ಸಾಲ, ಜಿಂದಗಿ ಮತ್ತು ನಿತ್ಯನೈಮಿತ್ತಿಕ ಖರ್ಚು ಇವುಗಳ ಅಂಕಿ ಸಂಖ್ಯೆಗಳನ್ನು ನಿರ್ದಿಷ್ಟಪಡಿಸಿ, ಈ ಪಂಚವಾರ್ಷಿಕ ಅವಧಿಯಲ್ಲಿ ಸಂಸ್ಥೆಗೆ ರೂ ೪೮,೪೨೧ ನಿವ್ವಳ ಮುನಾಫೆ ಉಳಿದಿರುತ್ತದೆಂದು ಕಂಡುಹಿಡಿದಿದ್ದಾರೆ ಮತ್ತು ಸದರಿ ಅವಧಿಯಲ್ಲಿ ಊರ್ಜಿತವಿದ್ದ ವಿಮಾಪತ್ರಗಳ ಮೊಬಲಗಿನ ಪ್ರತಿ ಸಾವಿರ ರೂ ಗಳಿಗೆ ಪ್ರತಿ ವರ್ಷಕ್ಕೆ ರೂ ೪ ರಂತೆ 'ರಿವ್ಹರ್ಶನರಿ ಬೋನಸ್' ಹಂಚಲು ಶಿಫಾರಸು ಮಾಡಿದ್ದಾರೆ. ಕಂಪನಿಯ ಆಡಳಿತವು ಅತ್ಯಂತ ಜಾಣ್ಮೆಯಿಂದಲೂ ಮಿತವ್ಯಯದಿಂದಲೂ ನಡೆದಿರುತ್ತದೆಂತಲೂ ಜನತೆಯ ಪ್ರೇಮ ವಿಶ್ವಾಸಾರ್ಹತೆಗಳಿಗೆ ಕಂಪನಿಯು ಪಾತ್ರವಿರುತ್ತದೆಂತಲೂ ಶ್ರೀ ಅಯ್ಯರರವರು ವರದಿಯಲ್ಲಿ ನಮೂದಿಸಿದ್ದಾರೆ. ಕಂಪನಿಯು ಇದೇ ರೀತಿ ಉತ್ತರೋತ್ತರ ಪ್ರಗತಿ ಮಾಡಿ ಸುಭದ್ರವಾಗಲೆಂದು ನಾವೂ ಹಾರೈಸುತ್ತೇವೆ.

ಕರ್ನಾಟಕ ಸಹಕಾರಿ ಶಾಲಾ, ಧಾರವಾಡ.

ಈ ಶಾಲೆಯು ತಾ ೩-೧-೧೯೪೯ನೇ ದಿನ ೧೧-೩೦ ಘಂಟೆಗೆ ಪುನಃ ತೆರೆಯಲ್ಪಡುವದು.

ಸದರಿ ಶಾಲೆಯಲ್ಲಿ ಅಸಿಸ್ಟಂಟ ಕೋ ಆಪರೇಟಿವ ಆಫೀಸರರು ಬೇರೆ ಇನಸ್ಪೆಕ್ಟರ ಸುಪರವೈಜರ, ಮುಂತಾದ ವಿವಿಧ ಉದ್ಯೋಗಗಳಲ್ಲಿ, ಸಹಕಾರಿ ಸಂಘಗಳ ಸಿಕ್ರೇಟರಿ ಜನರು ಉತ್ಪಾದಕ ಸಂಘಗಳ ಮತ್ತು ಕಾಲೋನಿಗಳಿಗೆ ಸಂಬಂಧಪಟ್ಟ ಕೈಯ. ನಿರ್ಯಾತ ಸಂಘಗಳ ಸಿಕ್ರೇಟರಿ ಜನರ ಮೊದಲಾದವರಿಗೆ ತರಬೇತಿ ಮಾಡಲಾಗುವದು. ಶಿಕ್ಷಣದ ಅವಧಿ ೬ ತಿಂಗಳವದು (ತಾತ್ವಿಕ ಶಿಕ್ಷಣ ೪ ತಿಂಗಳು ಮತ್ತು ವ್ಯವಹಾರಿಕ ಶಿಕ್ಷಣ ೨ ತಿಂಗಳು) ಇರುತ್ತದೆ. ಕನ್ನಡದಲ್ಲಿಯೇ ಎಲ್ಲ ಶಿಕ್ಷಣ ಕೊಡಲಾಗುವದು. ಶಾಲೆಯ ಶಿಕ್ಷಕರು ನುರಿತವರಿರುತ್ತಾರೆ.

ಈ ಶಾಲೆಯಲ್ಲಿ ಕಲಿಯಬೇಕೆನ್ನುವವರು ಶಾಲೆಯ ಸುಪರಿಂಟೆಂಡೆಂಟರಿಗೆ ತಾ ೧೫-೧೨-೪೮ ರೊಳಗಾಗಿ ತಮ್ಮ ಪೂರ್ಣ ಹೆಸರು ಮತ್ತು ವಿಳಾಸ, ವಯಸ್ಸು, ಧರ್ಮ ಶೈಕ್ಷಣಿಕ ಯೋಗ್ಯತೆ ಅನುಭವ ಮುಂತಾದ ಪೂರ್ಣ ಮಾಹಿತಿ ಸಹಿತ ಅರ್ಜಿ ಮಾಡತಕ್ಕದ್ದು. ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ಸಂಘಗಳ ಮುಖಾಂತರ ಅರ್ಜಿ ಕಳಿಸತಕ್ಕದ್ದು ಮತ್ತು ಯಾವದೇ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡದಿರುವವರು ಕನಿಷ್ಠ ಪಕ್ಷ ಮೆಟ್ರಿಕ್ ಯಾ ತತ್ಸಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಇರಬೇಕು. ಈ ಶಾಲೆಯಲ್ಲಿ ಶಿಕ್ಷಣ ಪಡೆದವರಿಗೆ ಬೇರೆ ಕಡೆಗಳಲ್ಲಿ, ಸಹಕಾರಿ ಸಂಸ್ಥೆಗಳಲ್ಲಿ ನೌಕರಿ ಸಿಗುವ ಅನುಕೂಲತೆಗಳು ಸಾಕಷ್ಟು ಇವೆ.

ಈ ಶಾಲೆಯಲ್ಲಿ ಸೇರುವ ಪ್ರತಿಯೊಬ್ಬರು ಮೇಲೆ ಹೇಳಿದ ಶಿಕ್ಷಣದ ಪೂರ್ಣ ಅವಧಿಗೆ ರೂ ೩೦ ರಂತೆ ಶುಲ್ಕ ಕೊಡಬೇಕಾಗುವದು. ಇದರ ಹೊರತಾಗಿ ಪರೀಕ್ಷೆಯ ಶುಲ್ಕ ರೂ ೫ ಕೊಡುವದು. ಹೆಚ್ಚಿನ ಮಾಹಿತಿ ಬೇಕಾದವರು ಶಾಲೆಯ ಸುಪರಿಂಟೆಂಡೆಂಟರಿಗೆ ಬರೆದು ತಿಳಿಕೊಳ್ಳಬಹುದು.

ಜಿ. ಆರ್. ನಲವಡಿ,
ಧಾರವಾಡ, ಚೇರಮನ್
ತಾ ೩-೧೧-೪೮ ಕರ್ನಾಟಕ ಡಿವ್ಹಿಜನಲ್ ಬೋರ್ಡ

ಪ್ರಾಥಮಿಕ ಉರ್ದು ಪುಸ್ತಕಗಳು

ನಮ್ಮಲ್ಲಿ ಎಲ್ಲ ಬಗೆಯ ಶಾಲೋಪಯೋಗಿ
ಉರ್ದು ಪುಸ್ತಕಗಳು ದೊರೆಯುತ್ತವೆ
ಕಬ್ಬೇರ ಬ್ರದರ್ಸ,
ಬುಕ್-ಸೆಲರ್ಸ, ಭಟಕಳ (ಉತ್ತರ ಕಾನಡಾ

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಸಾನುಸಾರ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾವತ್ತೂ ಸಾಮಾನುಗಳು ಯೋಗ್ಯದರದಲ್ಲಿ ಪೂರೈಸಲ್ಪಡುವವು
ಗೋಕರ್ಣ ಗಣಪತಿ ವಾಸುದೇವ ಭಟ,
ಪತ್ತಂಗಲ್ಲಿ, ಬನಾರಸ

ನಾಲ್ಕನೇ ಎಕ್ಚುವೇರಿಯಲ್ ಪರಿಶೋಧನೆಯಲ್ಲಿ

'ಪೊಪ್ಯುಲರ್' ಮತ್ತೊಮ್ಮೆ ತನ್ನ ಸುಭದ್ರ ಮತ್ತು ಸರ್ವತೋಮುಖ ಅಭಿವೃದ್ಧಿಯ ಸ್ಥಿತಿಯನ್ನು ವ್ಯಕ್ತಪಡಿಸಿದೆ. ಈ ಪರಿಶೋಧನೆಯಲ್ಲಿ ಹಂಚಲು ಒರುವ ರೂ ೪೮,೪೨೧ ರಷ್ಟು ಮಿಗಿತಾಯ ಕಂಡು ಬಂದಿದ್ದು, ಕಂಪೆನಿಯು **ಪ್ರತಿ ಸಾವಿರದ ಪೊಲಿಸಿಗಳಿಗೆ** ೧೯೪೩-೪೭ರ ಅವಧಿಯ **ಪ್ರತಿ ವರ್ಷಕ್ಕೆ ರೂ. ೪ ರಂತೆ ರಿವ್ಹರ್ಶನರಿ** ಬೋನಸ್ ಮಂಜೂರು ಮಾಡಿರುತ್ತದೆ.

ಕಂಪೆನಿಯು ಕಾರ್ಯಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸುವ, ಸಂಸ್ಥೆಯನ್ನು ಇನ್ನಷ್ಟು ಬಲಪಡಿಸುವ ಕಾರ್ಯಕ್ರಮವು ನಿರ್ಧರಿಸಲ್ಪಟ್ಟಿದೆ. ಈ ವರೆಗೆ ಪ್ರಾತಿನಿಧ್ಯವಿಲ್ಲದ ಕ್ಷೇತ್ರಗಳ ಆಕರ್ಷಕ ಶರ್ತುಗಳ ಮೇಲೆ ಚೀಫ್ ಮತ್ತು ಸ್ಪೇಶಲ್ ಏಜನ್ಸಿಗಳು ತೆರೆಯಲ್ಪಟ್ಟಿವೆ. ಒರ್ಗನೈಜರರ ನೇಮಕವನ್ನೂ ಮಾಡಲಾಗುವದು

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಚೇರಿ: ಮಂಗಳೂರು. (ದಕ್ಷಿಣ ಹಿಂದುಸ್ಥಾನ)

ಸ್ಥಾಪನೆ. 1929

ಮದ್ರಾಸ ಶಾಖೆ
"ವಿಶ್ರಾಮ", ಲಲಿತ ನಗರ,
ಮದ್ರಾಸ 4

ಮುಂಬಯಿ ಶಾಖೆ:
ಪ್ರೊಸ್ಪೆಕ್ಟ ಚೇಂಬರ್ಸ,
ಹೊರ್ನಬಿ ರೋಡ,
ಮುಂಬಯಿ 1

ಕರ್ನಾಟಕ ಚೀಫ್ ಏಜನ್ಸಿ
ಮೆಸರ್ಸ ಚಿತ್ರಾಲ ಎಂಡ್ ಕೋ,
ಸುಭಾಸ್ ರೋಡ್, ಧಾರವಾಡ

ಇದನ್ನು ಪಾಂಡುರಂಗ ಕೃಷ್ಣ ಕಾನಡಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಹೊರಊರು ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೨-೦
೩ ತಿಂಗಳಿಗೆ ೦ ೧ ೦
ಬಿಡಿ ಸಂಚಿಕೆಗೆ ೦ ೪-೦
ಮುಂದ ಹಣತೆರುವದು
ವರ್ಷ ೬ ತಿಂಗಳ ಕಳ್ಳಿಗ
ತರಬೇಕು
ವರ್ಗಣಿಮುಂಗಡಕೊಟ್ಟಿತಕ್ಕದ್ದು

Reg. No. B 1270 Monday, 6-12-1948.

ಕಾನಡಾವೃತ್ತ

ವರ್ಷ ೩೭] THE KANARA NEWS [ಸಂಖೆ ೨೩

ಕುಮಟಾ - ಸೋಮವಾರ, ತಾ ೬-೧೨-೧೯೪೮

ಜಾಹೀರಾತುಗಳ ದರ.
ಸ್ಥಳಾವಕಾಶಾನುಸಾರ
೧ ಸಾಲಿಗೆ ೮ ಆಣೆಯಂತೆ
ವಿಶೇಷ ಇದ್ದವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಕಾರವಾರದ ಸುದ್ದಿಯೋಲೆ.

(ನಮ್ಮ ಬಾತ್ಮಿಗಾರರಿಂದ)

ಕಾರವಾರ, ತಾ ೪-೧೨-೪೮

ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ|| ಮುಹಮ್ಮದ ಅಲ್ಲಿ ಛಾಗಲಾರವರು ನಿನ್ನೆ ಸರಿಯಾಗಿ ಅಪರಾಹ್ನ ೩ ಘಂಟೆಗೆ ದೀಪಾವತಿ ಹಡಗದಿಂದ ಇಲ್ಲಿ ಬಂದಿಳಿದರು ನ್ಯಾಯಮೂರ್ತಿಗಳಿಗೆ ಇಲ್ಲಿಯ ಜಿಲ್ಲಾ ಜಡ್ಜರಾದ ಶ್ರೀ ಮ ಜೇಶ್ವರರವರು ಸ್ವಾಗತ ಮಾಡಿ ಜಿಲ್ಲಾ ಮಾಜಿಸ್ಟ್ರೇಟ, ಪೋಲೀಸ ಸುಪರಿಂಟೆಂಡೆಂಟ, ಸಿವ್ಹಿಲ್ ಸರ್ಜನ್ ಎಗ್ಜಿಕ್ಯೂಟಿವ್ ಇಂಜನಿಯರ, ಮ್ಯುನಿಸಿಪಾಲಿಟಿ ಅಧ್ಯಕ್ಷ, ಇಲ್ಲಿಯ ಸಿವ್ಹಿಲ್ ಜಡ್ಜ ಮತ್ತು ಸರಕಾರಿ ವಕೀಲ ಇವರ ಪರಿಚಯ ಮಾಡಿಕೊಟ್ಟರು. ಪೋಲೀಸರು ಮುಖ್ಯ ನ್ಯಾಯಾಧೀಶರಿಗೆ ರಾಜವಂದನೆಗಳನ್ನು ಸಮರ್ಪಿಸಿ ಸತ್ಕರಿಸಿದರು ಬಳಿಕ ಮುಖ್ಯ ನ್ಯಾಯಾಧೀಶರು ಜಿಲ್ಲಾ ಜಡ್ಜರ ನಿವಾಸ-ಸ್ಥಾನಕ್ಕೆ ತೆರಳಿದರು ಅಲ್ಲಿ ತಾಸು ವಿಶ್ರಾಂತಿ ಪಡೆದು ಜಿಲ್ಲಾ ಮಾಜಿಸ್ಟ್ರೇಟ, ಪೋಲೀಸ ಸುಪರಿಂಟೆಂಡೆಂಟ, ಕಾರವಾರ ಮತ್ತು ಶಿರ್ಸಿ ವಿಭಾಗಗಳ ಸಬ್‌ಡಿವ್ಹಿಜನಲ್ ಮಾಜಿಸ್ಟ್ರೇಟ, ಕಾರವಾರದ ರೆಸಿಡೆಂಟ ಮೆಜಿಸ್ಟ್ರೇಟರವರೊಡನೆ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ತಿಳಕೊಂಡರು ಬಳಿಕ ಉಪಹಾರ ಸ್ವೀಕರಿಸಿ ಮಿತ್ರಸಮಾಜ ಮಂದಿರದಲ್ಲಿ ಮ್ಯುನಿಸಿಪಾಲಿಟಿಯ ಮಾನಪತ್ರವನ್ನು ಸ್ವೀಕರಿಸಲು ಸಪತ್ನೀಕರಾಗಿ ಹೋದರು

ಮಿತ್ರಸಮಾಜದಲ್ಲಿ ಮುಖ್ಯ ನ್ಯಾಯಾಧೀಶರನ್ನು ಬರಮಾಡಿಕೊಳ್ಳುವದಕ್ಕಾಗಿ ಮ್ಯುನಿಸಿಪಾಲಿಟಿಯವರು ಒಳ್ಳೇ ಸಂಭ್ರಮ ಮಾಡಿದ್ದರು. ಸುಮಾರು ೫೦೦—೬೦೦ ಜನರು ಸಭಾಸ್ಥಾನದಲ್ಲಿ ಸೇರಿದ್ದರು. ಮುಖ್ಯ ನ್ಯಾಯಾಧೀಶರು ಜಿಲ್ಲಾ ಜಡ್ಜರ ಸಹಿತ ಸಭಾ ಸ್ಥಾನಕ್ಕೆ ತಲ್ಪಿದೊಡನೆ, ಪೋಲೀಸರ ಬೇಂಡು ವಾದ್ಯವಾಯಿತು ಜನರೆಲ್ಲರೂ ನ್ಯಾಯಾಧೀಶರ ದರ್ಶನ ಪಡೆಯಲು ಉತ್ಸುಕರಾದರು. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ|| ಮಾಧವ ಕಸಬೇಕರರವರು ಮಹಾದ್ವಾರದಲ್ಲಿ ಮುಖ್ಯ ನ್ಯಾಯಾಧೀಶರನ್ನು ಸ್ವಾಗತ ಮಾಡಿ ಉಚ್ಚಾಸನಕ್ಕೆ ಕರೆದೊಯ್ದರು ಸಕಲರೂ ಎದ್ದುನಿಂತು ನ್ಯಾಯಾಧೀಶರನ್ನು ಆದರದಿಂದ ಸ್ವಾಗತಿಸಿದರು ನ್ಯಾಯಾಧೀಶರೂ ಅವರ ಪತ್ನಿಯವರೂ ಆಸನಸ್ಥರಾದ ಬಳಿಕ ಹುಡುಗಿಯರು ಇಂಪಾಗಿ ಸ್ವಾಗತ ಪದ್ಯ ಹಾಡಿದರು ಬಳಿಕ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಮಾನಪತ್ರವನ್ನು ಓದಿದರು – ನ್ಯಾಯಾಧೀಶರು ಈ ಚಿಕ್ಕ ಊರಿಗೆ ಸಪತ್ನೀಕರಾಗಿ ಆಗಮಿಸಿದ ಬಗ್ಗೆ ಬಹಳ ಆನಂದವಾಗುತ್ತದೆ, ಇದೊಂದು ಅಭೂತಪೂರ್ವ ಯೋಗ, ಸ್ವಾತಂತ್ರ್ಯದ ಮನ್ವಂತರದಲ್ಲಿ ಮುಂಬಯಿ ಪ್ರಾಂತದ ಮುಖ್ಯ ನ್ಯಾಯಾಧೀಶ ಹುದ್ದೆಯನ್ನು ಹಿಂದೀಯರಿಂದ ತಾವು ಪಡೆದು ದೇಶ ಸ್ವಾತಂತ್ರ್ಯದ ಸಾಕ್ಷಿಯಾಗಿದ್ದೀರಿ, ಬೇರೆ ಬೇರೆ ರಾಷ್ಟ್ರೀಯ ಆಂದೋಲನಗಳನ್ನೂ ನಡಿಸಿ ದೇಶಸೇವೆಯನ್ನೂ ನಡಿಸಿ ಕೀರ್ತಿವಂತರಾಗಿದ್ದೀರಿ ತಾವು ಹಿಂದೀಯ ರಾಷ್ಟ್ರಭಾವನೆ ಹಿಡಿದ ನಡತೆಯುಳ್ಳವರಿದ್ದೀರಿ, ತಮ್ಮಿಂದ ಇನ್ನೂ ವಿಶೇಷ ದೇಶ-ಸೇವೆಯಾಗ ಬಹುದಾಗಿ ನಮ್ಮ ನಂಬಿಗೆಯುಂಟು ಇಲ್ಲಿಯ ಬಹುಜನ ಸಮಾಜ ಕೊಂಕಣಿ ಭಾಷೆಯದು, ಸಾಕ್ಷಿಗಳನ್ನು ನುಡಿಯುವಾಗ ಮತ್ತು ಬರಕೊಳ್ಳುವಾಗ ಕೊಂಕಣಿ ಪಕ್ಷಗಾರರಿಗೂ ಸಾಕ್ಷಿದಾರರಿಗೂ ಬಹು ಕಷ್ಟವಾಗುತ್ತದೆ ಕೊಂಕಣಿ ಸಾಕ್ಷಿಯನ್ನು ಕನ್ನಡದಲ್ಲಿ ಭಾಷಾಂತರಿಸಿ ಬರಕೊಳ್ಳಬೇಕಾಗುತ್ತದೆ ಆದರಿಂದ ಸಾಕ್ಷಿಗಾರನ ಮೂಲ ಹೇಳಿಕೆಯ ಪೂರ್ಣ ಅರ್ಥ ನ್ಯಾಯಾಧೀಶರಿಗೆ ಗ್ರಹಿಕೆಯಾಗುವದಿಲ್ಲ ಆದರಿಂದ ಕೊಂಕಣಿಯಲ್ಲಿ ಸಾಕ್ಷಿಗಳನ್ನು ಬರಕೊಳ್ಳುವಂತೆ ವ್ಯವಸ್ಥೆಗಳಾಗಬೇಕು ಇದಲ್ಲದೆ ಈಗಿನ ಸರಕಾರವು ಮುಂಬಯಿ ಒಕ್ಕಲತನದ ಕಾನೂನು ಮತ್ತು ಋಣವಿಮೋಚನ ಕಾನೂನುಗಳಂತೆ ನಡೆಯುವ ಪ್ರಕರಣಗಳಲ್ಲಿ ವಕೀಲರಿಗೆ ನೇಮಿಸಲು ಪ್ರತಿಬಂಧಿಸಿದೆ ಪಕ್ಷಗಾರರಿಗೆ ತಮ್ಮ ಹೇಳಿಕೆಯನ್ನು ಅರಿಕೆ ಮಾಡಿಕೊಳ್ಳಲಿಕ್ಕೆ ಇದರಿಂದ ಕಷ್ಟವಾಗಿದೆ ಇದನ್ನು ತಾವು ಪರಿಹರಿಸಬೇಕು. ಇನ್ನೊಂದು ಸಂಗತಿ ಏನೆಂದರೆ — ಜನರ ನಾಗರಿಕ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ನ್ಯಾಯಸ್ಥಾನಗಳು ಸ್ವತಂತ್ರವಿರಬೇಕು. ಈಗಿನ ಸರಕಾರವು ನಾಗರಿಕ ಹಕ್ಕುಗಳನ್ನು ಅತಿಕ್ರಮಿಸತೊಡಗಿದೆ ನ್ಯಾಯ ಇಲಾಖೆಯ ಆಢಳಿತೆಯಲ್ಲಿ ರಾಜಕೀಯ ಪಕ್ಷವಿಚಾರಗಳು ತಲೆದೋರುತ್ತವೆ ಇದರಿಂದ ನ್ಯಾಯಾಧೀಶರ ಸ್ವಾತಂತ್ರ್ಯಕ್ಕೂ ನ್ಯಾಯದಾನದ ಪಾವಿತ್ರ್ಯಕ್ಕೂ ಭಂಗ ಬರುತ್ತದೆ. ನ್ಯಾಯ ಇಲಾಖೆಯನ್ನು ಆಡಳಿತೆ ನಡಿಸುವ ಸರಕಾರದ ಪಕ್ಷ ಸಂಘಗಳ ಆಚಾರ-ಪಕ್ಷಯಲ್ಲಿ ಸೇರದಂತೆ ಬೇರ್ಪಡಿಸುವದು ಅತ್ಯವಶ್ಯ ಉಂಟು, ತಾವು ಸಹ ಅದೇ ವಿಚಾರದವರಿದ್ದದರಿಂದ ತಮ್ಮಿಂದ ಈ ಸಂಕಲ್ಪಿತ ಪರಿಣತಿ ಶೀಘ್ರವೇ ಒದಗಿ ಬರುವದೆಂದು ನಾವು ನಂಬಿಕೊಂಡಿದ್ದೇವೆ, ಕೊನೆಗೆ ಅಧ್ಯಕ್ಷರು ಮುಖ್ಯ ನ್ಯಾಯಾಧೀಶರಿಗೂ ಅವರ ಪತ್ನಿಯವರಿಗೂ ಆಯುರಾರೋಗ್ಯಗಳನ್ನು ಬಯಸಿ ಮಾನಪತ್ರವನ್ನು ಸಮರ್ಪಿಸಿದರು, ಮತ್ತು ಉಭಯತರಿಗೆ ಪುಷ್ಪಹಾರಗಳನ್ನು ಸಮರ್ಪಿಸಿದರು ಆ ಬಳಿಕ ಮುಖ್ಯ ನ್ಯಾಯಾಧೀಶರು ಮಾನಪತ್ರಕ್ಕೆ ಕೆಳಗಿನಂತೆ ಉತ್ತರ ಕೊಟ್ಟರು

ನಿಮ್ಮ ಊರಿನ ಸೃಷ್ಟಿ-ಸೊಬಗನ್ನು ನೋಡಿ ನಾನು ಸಂತೋಷಭರಿತನಾಗಿದ್ದೇನೆ ಈ ಊರಿಗೆ ನಾನು ಮೋಹಪರವಶನಾಗಿದ್ದೇನೆ ಮೊದಲು-ಭೆಟ್ಟಿಯಲ್ಲುಂಟಾದ ಪ್ರೇಮ (love at first sight) ಬಹುಕಾಲ ಬಾಳುವದಿಲ್ಲೆಂದು ಹೇಳುತ್ತಾರೆ ಆದರೆ ಈ ಊರಿನ ಮುಟ್ಟಿಗೆ ನನ್ನಲ್ಲುಂಟಾದ ಪ್ರಥಮ ಪ್ರೇಮವು ಈ ಮಾತಿಗೆ ಅಪವಾದವಾಗುವದೆಂದು ನಿಮಗೆ ನಾನು ಆಶ್ವಾಸನ ಕೊಡುತ್ತೇನೆ ನಿಮ್ಮ ಊರು ಚಿಕ್ಕದೆಂದು ನೀವು ಹಳಹಳಿಸಿಕೊಳ್ಳುವ ಕಾರಣವಿಲ್ಲ ಈ ಊರು ಚಿಕ್ಕದಲ್ಲ ಸಾಕಷ್ಟು ದೊಡ್ಡದಿದೆ ಜಿಲ್ಲೆಯ ಮುಖ್ಯ ಸ್ಥಳವಿದಾಗಿದೆ ಅಭಿವೃದ್ಧಿ ಹೊಂದುವ ಶಕ್ತಿ ಈ ಪ್ರದೇಶದಲ್ಲುಂಟು ಇಷ್ಟು ಸಾಮರ್ಥ್ಯವುಳ್ಳ ಪ್ರದೇಶದಲ್ಲಿ ವಾಹನ-ಸೌಕರ್ಯಗಳ ಅಭಾವವಿದ್ದುದು ನೋಡಿ ನನಗೆ ಸೋಜಿಗವಾಗಿದೆ, ಇಲ್ಲಿ ಸುಗಟಂಡಿಗಳಿಲ್ಲ ನಿಜ, ಆದರೆ ನೀವು ಆಕಾಶಮಾರ್ಗಗಳ ಉಪಯೋಗ ಮಾಡಿಕೊಳ್ಳಲು ಬೇಕಷ್ಟು ಅವಕಾಶ ಉಂಟು ಗೇರಸಪ್ಪೆಯ ಧಬಧಬೆಯಲ್ಲಿ ಹುಟ್ಟಿದ ವಿದ್ಯುತ್ತಿನಿಂದ ಇಡೀ ಭಾರತವನ್ನು ಬೆಳಗಿಸಲು ಸಾಧ್ಯವಿದೆ ಆ ವಿದ್ಯುತ್ತಿನ ಪ್ರಾಪ್ತಿಕೆ ನಿಮ್ಮ ಜಿಲ್ಲೆಯಲ್ಲುಂಟು ಈ ಸುಂದರ ಜಿಲ್ಲೆಯಲ್ಲಿ ಒಂದೂ ಆರ್ಟ್ಸ ಕೊಲೇಜು ಇರದಿದ್ದುದನ್ನು ಕೇಳಿ ನನಗೆ ಪರಮಾಶ್ಚರ್ಯವಾಯಿತು ಉಚ್ಚ ವಿದ್ಯಾಭ್ಯಾಸದ ವಿದ್ಯಾನಿಲಯವನ್ನೊಂದು ನೀವು ಹೊರಡಿಸಿ ವಿದ್ಯಾಕಾಂಕ್ಷಿಗಳಿಗೆ ವಿದ್ಯಾರ್ಜನ ಮಾಡಲು ಅನುಕೂಲತೆ ಮಾಡಿಕೊಡಬೇಕು. ನಾನು ಇದೇ ಈಗ ನಿಮ್ಮ ಜಿಲ್ಲಾ ಮಾಜಿಸ್ಟ್ರೇಟರ ಕಡೆಗೂ ಪೋಲೀಸ ಸುಪರಿಂಟೆಂಡೆಂಟರ ಕಡೆಗೂ ಮಾತಾಡಿಕೊಂಡು ಬಂದಿದ್ದೇನೆ ನೀವು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ
ಅತಿ ಕಡಿಮೆ ಶಿಲ್ಲಕಿನಲ್ಲಿ ಸೇವಿಂಗ ಖಾತೆಗಳು ತೆರೆಯಲ್ಪಟ್ಟ ಬಡ್ಡಿ ಸೇಕಡಾ 2/ ರೂಪಾಯಿಗಳಂತೆ ಕೊಡಲಾಗುವದು
ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ, ತಾ ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೇನೇಜಿಂಗ ಡೈರೆಕ್ಟರ

ಲೋಕಸ್ವಾತಂತ್ರ್ಯ ಊರ್ಜಿತ ಉಳಿಯಬೇಕಾದರೆ ನ್ಯಾಯ-ಸ್ವಾತಂತ್ರ್ಯ ಕಾಪಾಡುವದವಶ್ಯ.

ಕಾನೂನಿನ ಪಾಲಕರಿದ್ದೀರೆಂದು ತಿಳಿದು ನನಗೆ ಸಂತೋಷವಾಯಿತು ಬೇರೆ ಬೇರೆ ಸಮಾಜಗಳವರು ಈ ಜಿಲ್ಹೆಯಲ್ಲಿ ಒಮ್ಮನಸ್ಸಿನಿಂದ ಕೂಡಿಕೊಂಡು ನಡೆಯುತ್ತಾರೆಂದು ತಿಳಿದು ಆನಂದವಾಯಿತು ನೀವು ಇಡೀ ದೇಶಕ್ಕೆ ಮಾದರಿ ಹಾಕಿಕೊಟ್ಟದ್ದೀರೆಂದು ನಾನು ಎಣಿಸಿ ನಿಮಗೆ ಹರಸುತ್ತೇನೆ ಕೊಂಕಣಿ ಭಾಷೆಯ ಸಂಬಂಧದಲ್ಲಿ ನೀವು ಮಾಡಿದ ಸೂಚನೆಯನ್ನು ನಾನು ವಿಚಾರಿಸುವೆನು ಆ ಜನಸಮಾಜವು ಮಾತಾಡುವ ಭಾಷೆಯಲ್ಲಿ ನ್ಯಾಯಸ್ಥಾನದ ಕೆಲಸ ನಡೆಯಬೇಕೆಂಬ ಮಾತು ನನಗೆ ಒಪ್ಪಿಗೆಯಿದೆ ಮುಂಬಯಿಗೆ ಮರಳಿದ ಮೇಲೆ ಈ ಮಾತನ್ನು ನಾನು ಅವಶ್ಯ ವಿಚಾರ ಮಾಡುವೆನು ವಕೀಲರನ್ನು ನೇಮಿಸಬಾರದೆಂದು ಪಕ್ಷಗಾರರನ್ನು ನಿರ್ಬಂಧಿಸುವ ಈಗಿನ ಧೋರಣವನ್ನು ಬೇರೆ ಬೇರೆ ಕಡೆಯ ವಕೀಲ ಮಂಡಳಗಳು ಆಕ್ಷೇಪಿಸಿದ್ದುಂಟು. ತಮಗೆ ಇಷ್ಟವಿರುವ ಜನರ ಸಹಾಯದಿಂದ ತಮ್ಮ ರಕ್ಷಣೆ ಮಾಡಿಕೊಳ್ಳುವ ಹಕ್ಕು ಅದೊಂದು ನಾಗರಿಕತನದ ಹಕ್ಕು. ಅದನ್ನು ನಿರ್ಬಂಧಿಸುವದಾಗಲಿ ನಿಯಂತ್ರಿಸುವದಾಗಲಿ ಮುಹಾಪಾಪ ಕಾಯದೆ ಮಂಡಳಗಳು ಇಂಥ ಧೋರಣವನ್ನು ಕೈಕೊಳ್ಳಲಾಗದು ಈ ಕನಕ ವಕೀಲರೇ ಈ ಕುರಿತು ಆಕ್ಷೇಪ ಮಾಡುತ್ತಿದ್ದುದರಿಂದ ವಕೀಲರು ಸ್ವಾರ್ಥಕ್ಕಾಗಿ ಚಡಪಡಿಸುತ್ತಾರೆಂದು ಆಕ್ಷೇಪಿಸುವ ಪ್ರಘಾತವಿತ್ತು ಈಗ ನಿಮ್ಮ ಮ್ಯುನಿಸಿಪಾಲಿಟಿಯವರು ● ದೂರು ಮುಂದೊಡ್ಡಿ ಈಗಿನ ಸರಕಾರದ ಧೋರಣೆ ನಾಗರಿಕರಿಗೆ ಕೂಡ ಮಾನ್ಯವಿಲ್ಲೆಂದು ಸಿದ್ಧ ಮಾಡಿದ್ದಾರೆ. ಸರಕಾರಕ್ಕೆ ನಾನು ಈ ಸಂಗತಿಯನ್ನು ತಿಳಿಸಿ, ನಾಗರಿಕರ ಹಕ್ಕನ್ನು ಕಾಪಾಡಲು ಸೂಚಿಸುವೆನು ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕಾದರೆ ನ್ಯಾಯಸ್ಥಾನಗಳು ಸಂಪೂರ್ಣ ಸ್ವತಂತ್ರವಾಗಿರಬೇಕು. ನ್ಯಾಯಾಧೀಶರು ತಮ್ಮ ಮನೋದೇವತೆಯನ್ನಷ್ಟೇ ಸಾಕ್ಷಿಯಾಗಿಟ್ಟು ನ್ಯಾಯ-ನಿರ್ಣಯಗಳನ್ನು ಕೊಡುವಂಥ ನಿರ್ಭಯ ಪರಿಸ್ಥಿತಿ ನಿರ್ಮಿಸಲ್ಪಡಬೇಕು ಅಂದರೆ ಮಾತ್ರ ಪ್ರಜಾಪ್ರಭುತ್ವವು ಸುರಕ್ಷಿತವಾಗಿ ನಮ್ಮ ದೇಶ ಅಭಿವೃದ್ಧಿ ಗೈಯ್ಯಬಲ್ಲದು. ನ್ಯಾಯದಾನದ ಇಲಾಖೆಯು. ಸ್ವತಂತ್ರವಾಗಿರಬೇಕೆಂದು ನೀವು ಹೇಳಿದ ಮಾತು ನನಗೆ ಸಂಪೂರ್ಣವಾಗಿ ಒಪ್ಪಿಗೆ ಇದೆ. ಮ್ಯುನಿಸಿಪಾಲಿಟಿಯಂಥ ನಾಗರಿಕ ಸಂಸ್ಥೆಯು ನ್ಯಾಯ ಇಲಾಖೆಯನ್ನು ಸತಂತ್ರಗೊಳಿಸಬೇಕೆಂದ ಸೂಚಿಸಿದ್ದು ಕೇಳಿ ನನಗೆ ಪರಮ ಹರುಷವಾಗಿದೆ ನಿಮಗೆ ಸಕಲರಿಗೂ ಶುಭವಾಗಲಿ! ಈ ಸೊಬಗಿನ ಪ್ರದೇಶ ಉತ್ತರೋತ್ತರ ಅಭಿವೃದ್ಧಿಗೈಯ್ಯಲಿ! ನಾನು ಇಲ್ಲಿ ಬಂದದ್ದು ಇದೇ ಮೊದಲು. ಈ ಮೊದಲನೇ ಭೆಟ್ಟಿಯೇ ಕೊನೆಯ ಭೆಟ್ಟಿಯಾಗದಿರಲಿ, ಇನ್ನೊಮ್ಮೆ ಇತ್ತ ಕಡೆಗೆ ಬರುವ ಸುಯೋಗ ನನಗೆ ದೊರೆಯಲಿ, ನೀವಿತ್ತ ಸ್ವಾಗತ-ಸತ್ಕಾರಕ್ಕಾಗಿ ನಾನೂ ನನ್ನ ಪತ್ನಿಯೂ ಕೃತಜ್ಞರಾಗಿದ್ದೇವೆ

ಮುಖ್ಯ ನ್ಯಾಯಾಧೀಶರು ಚಪ್ಪಾಳೆಗಳ ಘೋಷದಲ್ಲಿ ತಮ್ಮ ಭಾಷಣವನ್ನು ಮುಗಿಸಿದನಂತರ ಹುಡುಗಿಯರ " ಜನ ಮನ ಗಣ ಮನ " ಗೀತವಾಗಿ ಸಮಾರಂಭದ ಸಮಾಪ್ತಿಯಾಯಿತು

ನ್ಯಾಯಾಧೀಶರು ಸಭಾಸ್ಥಾನದಿಂದ ನೆಟ್ಟಗೆ ಕೋಡಿಬಾಗಕ್ಕೆ ಹೋಗಿ ಅಲ್ಲಿ ಕಾಳೀನದಿಯಲ್ಲಿ ೧—೨ ತಾಸು ನೌಕಾ-ವಿಹಾರ ಮಾಡಿ ಮರಳಿದರು ರಾತ್ರೆಯ ಊಟ ವಿಶ್ರಾಂತಿಗಳು ಜಿಲ್ಹಾ ಜಜ್ಜರ ವಾಸಸ್ಥಾನದಲ್ಲಾದವು

ಶನಿವಾರ ಮುಂಜಾನೆ ೯ ಘಂಟೆಗೆ ನ್ಯಾಯಮೂರ್ತಿಗಳು ಸಪತ್ನೀಕರಾಗಿ ಕಾರವಾರದ ವೃಂದಾವನವನ್ನು ಸಂದರ್ಶಿಸಿದ ಬಳಿಕ ಸಾಬ ಗಲಾಂಪರ ಸ್ತ್ರೀಯರು ಏರ್ಪಡಿಸಿದ ಸಮಾರಂಭವನ್ನು ನೆರವೇರಿಸಲು ಹೊರಟು ಹೋದರು ಮುಖ್ಯ ನ್ಯಾಯಾಧೀಶರು ಜಿಲ್ಹಾ ಜಜ ಕೋರ್ಟಿಗೆ ಬಂದು, ಆ ಕೋರ್ಟನ್ನು ನೋಡಿಕೊಂಡು, ಸಿವ್ಹಿಲ್ ಜಜ್ಜ ಕೋರ್ಟಿಗೆ ತೆರಳಿದರು ಆ ಕೋರ್ಟ ಇಮಾರತವನ್ನು ನೋಡಿಕೊಂಡು, ಒಂದು ಗಳಿಗೆ ಹೊತ್ತು ಅಲ್ಲಿಯ ವಿಚಾರ ಕ್ರಮವನ್ನೂ ನೋಡಿಕೊಂಡರು ಆ ಕಾಲದಲ್ಲಿ ಸಿವ್ಹಿಲ್ ಜಜ್ಜ ಶ್ರೀ ರಣಸುಭೆಯವರು ಸಿದ್ದರದ ಶ್ರೀ ನರಸಿಂಹ ನಾರಾಯಣ ದೇವಸ್ಥಾನದ ದಾವೆಯ ವಿಚಾರ ನಡಿಸಿದ್ದರು ಕಾರವಾರ ದೇವಾಲಯ ಮಂಡಳದ ವಹಿವಾಟಿಯನ್ನು ಕೇಳಿಕೊಳ್ಳುತ್ತಿದ್ದ ವಾದಿ ಮೊಕ್ತೇಸರರ ಜಬಾನಿ ಕೊಂಕಣಿ ಭಾಷೆಯಿಂದ ನಡೆದಿತ್ತು. ೧೦ ನಿಮಿಷ ಈ ಜಬಾನಿ ಕೇಳಿಕೊಂಡ, ಮುಖ್ಯ ನ್ಯಾಯಾಧೀಶರು ಎದ್ದು ಶಿರಮನೆಯ ತಪಾಸಣೆ ಮಾಡಲು ಹೊರಟರು. ಅಲ್ಲಿಂದ ನೆಟ್ಟಗೆ ವಕೀಲರ ಮಾನಪತ್ರವನ್ನು ಸ್ವೀಕರಿಸಲು ಜಜ್ಜ ಕೋರ್ಟಿಗೆ ಮರಳಿ ಬಂದರು ಆಗ ಸರಿಯಾಗಿ ೧೧ ಘಂಟೆಯಾಗಿತ್ತು. ಜಜ್ಜರು ನ್ಯಾಯಸ್ಥಾನದ ಆಸ್ಥಾನಕ್ಕೆ ಬಂದೊಡನೆ ಸಕಲರೂ ಎದ್ದುನಿಂತು ವಂದಿಸಿದರು ಹಿರಿಯ ವಕೀಲರಾದ ಶ್ರೀ|| ಜೋಶಿಯವರು ವೃದ್ಧಾಪ್ಯದ ಮೂಲಕ ಮಾನಪತ್ರ ಓದಿ ಹೇಳಲು ಅಸಮರ್ಥರಾದ್ದರಿಂದ, ಅವರ ಅಪೇಕ್ಷೆಯಂತೆ ಶ್ರೀ|| ಮುರ್ಡೇಶ್ವರ ವಕೀಲರು ಅದನ್ನು ಓದಿ ಹೇಳಿದರು ಅದರ ಸಾರಾಂಶವಿಂತಿದೆ — ಸ್ವತಂತ್ರ ಹಿಂದುಸ್ಥಾನದ ಹಿಂದೀ ಮುಖ್ಯ ನ್ಯಾಯಾಧೀಶರನ್ನು ಸ್ವಾಗತಿಸುವ ಭಾಗ್ಯ ದೊರೆತದ್ದಕ್ಕಾಗಿ ಕಾರವಾರದ ವಕೀಲ ಸಂಘದವರು ಉಲ್ಲಸಿತರಾಗಿದ್ದಾರೆ. ನಮ್ಮೂರಲ್ಲಿ ವಿಪುಲ ಸೃಷ್ಟಿಸಂಪತ್ತುಂಟು. ಮುಬಾ ಬಂದರವಾಗುವ ಎಲ್ಲ ಅನುಕೂಲತೆಗಳೂ ಇವೆ ನಮ್ಮ ಜಿಲ್ಹೆಯಲ್ಲಿ ಒಂದು ಚಿಕ್ಕ ಆರ್ಟ್ಸ ಕೋಲೇಜು ಇಲ್ಲದಿದ್ದರೂ ನಮ್ಮ ಜಿಲ್ಹೆಯವರು ಕಾಯದೆ-ಪಾಂಡಿತ್ಯದಲ್ಲಿ ಬುದ್ಧಿಶಾಲಿತನವನ್ನು ತೋರ್ಪಡಿಸಿದ್ದಾರೆ ಕೈ|| ವಾ|| ಶಾಮರಾವ ವಿಠ್ಠಲ ಕಾಯ್ಕಿಣಿ ಮತ್ತು ಸರ್ ನಾರಾಯಣ ಗಣೇಶ ಚಂದಾವರಕರ ಇವರು ತಮ್ಮ ಬುದ್ಧಿವೈಭವದಿಂದ ಲೋಕಮಾನ್ಯತೆಯನ್ನೂ ರಾಜಮಾನ್ಯತೆಯನ್ನೂ ಪಡೆದಿದ್ದಾರೆ ಆದರೂ ವಕೀಲಿಯ ವ್ಯವಸಾಯವು ನಮ್ಮ ಜಿಲ್ಹೆಯೊಳಗೆ ಇತ್ತಲಾಗಿ ಬಹಳ ಆಕರ್ಷಕವಾಗಿರುವದಿಲ್ಲ, ಪ್ರಜಾಪ್ರಭುತ್ವದಲ್ಲಿ ನ್ಯಾಯಾಧೀಶರು ಸ್ವತಂತ್ರರಾಗಿರಬೇಕೆಂಬ ಬಗ್ಗೆ ನೀವು ಮಾಡುತ್ತಿರುವ ಪ್ರಯತ್ನಗಳನ್ನು ಕೇಳಿ ನಮಗೆ ಸಂತೋಷವಾಗುತ್ತದೆ, ಸ್ವಾತಂತ್ರ್ಯಯುಗದಲ್ಲಿ ನ್ಯಾಯಾಸನಗಳು ಸ್ವತಂತ್ರವಾಗಿರುವದು ಅವಶ್ಯವುಂಟು, ಕಾರಭಾರಿ ಇಲಾಖೆಯವರಿಂದ ನ್ಯಾಯ ಇಲಾಖೆ ಪ್ರತ್ಯೇಕವಾಗಿರಬೇಕು, ಈಗಿನ ಕಟ್ಟಳೆಗಳಲ್ಲಿ ವಕೀಲರನ್ನು ವರ್ಜಿಸುವ ಪ್ರವೃತ್ತಿಯನ್ನು ನೋಡಿ ನಾವು ದಿಗ್ಭ್ರಮೆಗೊಂಡಿದ್ದೇವೆ ಇವರಿಂದ ನಾಗರಿಕರಿಗೆ ಏನು ಲಾಭವಾಗುವದೆಂಬುದು ಮುಂದೆ ಕಂಡು ಬರಬೇಕು ತಾಪ್ರ ವಕೀಲ ವರ್ಗದ ಹಿತರಕ್ಷಣೆಯ ಬಗ್ಗೂ ಅದರ ಉನ್ನತಿಯ ಬಗ್ಗೂ ನಡಿಸಿರುವ ಬೇರೆ ಬೇರೆ ಪ್ರಯತ್ನಗಳಿಂದ ಪರಿಸ್ಥಿತಿ ಸುಧಾರಿಸುವದೆಂದು ನಮಗೊಂದು ಆಶೆಯುಂಟು, ವಕೀಲರಿಗೆ ಈಗಿನ ಕಾಲಮಾನಕ್ಕೆ ತಕ್ಕ ವೇತನಸಿಗುವದಿಲ್ಲ ಹ್ಯಾಕೋರ್ಟಿನಲ್ಲಿ ವಕೀಲರ ಫೀ ರೂ ೩೦೦ರಿಂದ ರೂ ೪೫೦ಕ್ಕೆ ಏರಿಸಲ್ಪಟ್ಟಿದೆ ಅದೇ ಪ್ರಕಾರ ಮೂಲ ಮತ್ತು ಕೆಳ ಅಪೀಲ ಕೋರ್ಟುಗಳಲ್ಲಿಯೂ ವಕೀಲ ಫೀ ದರವನ್ನು ಏರಿಸಬೇಕು ಅಪೀಲ ಕೋರ್ಟಿನಲ್ಲಿ ಅದನ್ನು ಮೊದಲು ಏರಿಸಿ ಪ್ರಾರಂಭ ಮಾಡಬೇಕು ಹಳಿಯಾಳ ತಾಲೂಕು ಮುಲ್ಕಿ ಮತ್ತು ಫೌಜದಾರಿ ಅಡಳಿತೆಗಳ ಮಟ್ಟಿಗೆ ನಮ್ಮ ಜಿಲ್ಹೆಯಲ್ಲಿ ಸೇರುತ್ತದೆ ಆದರೆ ದಿವಾಣಿ ವ್ಯವಹಾರದ ಬಗ್ಗೆ ಧಾರವಾಡ ಜಿಲ್ಹೆಯ ಭಾಗವೆಂದೆಣಿಸಲ್ಪಡುತ್ತದೆ. ಧಾರವಾಡ ಪಟ್ಟಣ ಹಳಿಯಾಳಕ್ಕೆ ಸಮೀಪವಿದ್ದುದರಿಂದ, ವಾಹನ ಸೌಕರ್ಯಗಳ ಅಭಾವವಿದ್ದಾಗ, ಈ ವ್ಯವಸ್ಥೆ ಯೋಗ್ಯವಿತ್ತು. ಆದರೆ ಈಗ ವಾಹನ-ಸೌಕರ್ಯಗಳ ಅನುಕೂಲತೆಗಳುಂಟಾದಾಗ ಈ ವಿಪರೀತ ಕ್ರಮವನ್ನು ಮುಂದರಿಸುವದು ಯೋಗ್ಯವಲ್ಲ. ದಿವಾಣಿ ಆಡಳಿತೆಯ ಬಗ್ಗೆ ಹಳಿಯಾಳ ತಾಲೂಕನ್ನು ನಮ್ಮ ಜಿಲ್ಹೆಯಲ್ಲೇ ಸೇರಿಸಬೇಕೆಂದು ನಮ್ಮ ಅಂಬೋಣವುಂಟು

ಮಾನಪತ್ರವನ್ನೋದಿಯಾದ ಮೇಲೆ ನ್ಯಾಯಮೂರ್ತಿಗಳಿಂದ ಹ್ಯಾಕೋರ್ಟಿನ ಕೀರ್ತಿ ಮಿಗಿಲಾಗಲೆಂದು ಶ್ರೀ|| ಮುಡೇಶ್ವರರು ಉದ್ಗರಿಸಿ ಸ್ವಾಸನಸ್ಥರಾದರು ಶ್ರೀ|| ಜೋಶಿಯವರು ಆಗ ಮಾನಪತ್ರವನ್ನು ನ್ಯಾಯಮೂರ್ತಿಗಳಿಗೆ ಒಪ್ಪಿಸಿ ಅವರಿಗೆ ಪುಷ್ಪಹಾರ ಹಾಕಿದರು. ಆ ಬಳಿಕ ನ್ಯಾಯಮೂರ್ತಿಗಳು ಉತ್ತರ ಕೊಟ್ಟದ್ದೇನಂದರೆ —

ನೀವು ಇತ್ತ ಸೌಹಾರ್ದದ ಸ್ವಾಗತಕ್ಕಾಗಿ ನಾನು ಋಣಿಯಿರುವೆನು. ಮನೋರಮ ಸನ್ನಿವೇಶದಲ್ಲಿದ್ದ ನಿಮ್ಮ ಕೋರ್ಟುಗಳನ್ನು ಕಂಡು ನೀವೆಲ್ಲ ಭಾಗ್ಯವಂತರೆಂದು ನನಗೆ ಎನಿಸಿತು. ಇಂಥ ನಿಸರ್ಗರಮ್ಯ ಪ್ರದೇಶದಲ್ಲಿ ನಿಜವಾದ ನ್ಯಾಯವನ್ನು ನಿರ್ಣಯಿಸಲು ನ್ಯಾಯಾಧಿಕಾರಿಗಳಿಗೆ ಪ್ರೇರಣೆಯಾಗುತ್ತಿದೆ ವಕೀಲರನ್ನೂ ನಾನು ಅಭಿನಂದಿಸುತ್ತೇನೆ ಇಂಥ ಚಿತ್ತವೇಧಕ ವಾತಾವರಣದಲ್ಲಿ ತನ್ನ ಪಕ್ಷಗಾರರ ಪಕ್ಷ ಪ್ರತಿಪಾದಿಸುವ ವಕೀಲನು ಭಾಗ್ಯವಂತನೇ ಸರಿ ಇಂಥ ಹಿನ್ನೆಲೆ ನನಗ ದೊರೆತಿದ್ದರೆ ನನ್ನ ತರ್ಕಗಳಿಗೆ ಹೆಚ್ಚಿನ ಕಳೆ ಏರುತ್ತಿತ್ತು ನಿಮ್ಮಲ್ಲಿಯ ಜನರು ಕುಶಾಗ್ರ ಬುದ್ಧಿಯವರಾಗಿದ್ದರೆ, ಕಾಯದೆಯಲ್ಲಿ ವಿಶೇಷ ಪ್ರಾವೀಣ್ಯ ತೋರ್ಪಡಿಸಿದ್ದರೆ ಆಶ್ಚರ್ಯವಿಲ್ಲ ಇಲ್ಲಿಯ ನೈಸರ್ಗಿಕ ಸನ್ನಿವೇಶದಲ್ಲಿ ಬುದ್ಧಿ ನಿರ್ಮಲವಾಗುತ್ತಿರಬೇಕು ನ್ಯಾಯಸ್ಥಾನಗಳು ಸ್ವತಂತ್ರವಾಗಿರಬೇಕೆಂಬ ಮಾತು ನನಗೂ ಸಂಪೂರ್ಣ ಸಮ್ಮತವಿದೆ ಪ್ರಜಾಪ್ರಭುತ್ವ ದೃಢವಾಗಬೇಕಾದರೆ, ದೃಢಮೂಲವಾಗಬೇಕಾದರೆ ನ್ಯಾಯಸ್ಥಾನಗಳು ಸ್ವತಂತ್ರವಾಗಿರಬೇಕು. ನ್ಯಾಯಸ್ಥಾನವು ಪ್ರಬಲವಾಗಿ ಸ್ವತಂತ್ರವಾಗಿ ವ್ಯವಹರಿಸಬೇಕಾದರೆ ವಕೀಲರು ಅಷ್ಟೇ ಪ್ರಬಲರೂ ಸ್ವತಂತ್ರರೂ ಇರಬೇಕು ಪ್ರಬಲ ವಕೀಲವರ್ಗವೇ ನ್ಯಾಯಸ್ಥಾನವನ್ನು ಪ್ರಬಲಗೊಳಿಸಬಲ್ಲದು ಆದರಿಂದ ವಕೀಲರನ್ನು ನಿರ್ಬಲಗೊಳಿಸುವ ಯೋಜನೆಗಳನ್ನು ಲೋಕರಾಜ್ಯದಲ್ಲಿ ಎಷ್ಟು ಕೂಡ ಪುರಸ್ಕರಿಸಕೂಡದು ಸದ್ಯದ ರಾಜ್ಯಕರ್ತರ ಪ್ರವೃತ್ತಿ ವಕೀಲರಿಗೆ ಅನುಕೂಲವಿಲ್ಲ ಆ ಬಗ್ಗೆ ನನಗೆ ಬಹಳ

ವಸನವಾಗುತ್ತಿದೆ. ನಾನು ಈ ಸಂಗತಿಯನ್ನು ಸರಕಾರಕ್ಕೆ ತಿಳಿಸಿದ್ದೇನೆ. ವಕೀಲರ ಅಭಾವದಲ್ಲಿ ಪ್ರಕರಣಗಳನ್ನು-ವಿಚಾರಿಸಲು ಕಠಿಣವಾಗುತ್ತದಾಗಿ ಪ್ರತಿಯೊಬ್ಬ ನ್ಯಾಯಾಧೀಶನೂ ನನ್ನ ಕಡೆ ದೂರಿಕೊಂಡಿದ್ದಾನೆ. ಬಡ ಸಾಲಗಾರನಿಗೆ ತನ್ನ ಅಂಬೋಣವನ್ನು ಕೋರ್ಟಿಗೆ ಸರಿಯಾಗಿ ಅರಿಕೆ ಮಾಡಿಕೊಳ್ಳಲಾಗುವದಿಲ್ಲ. ವಕೀಲರನ್ನು ಬಹಿಷ್ಕರಿಸುವ ಹೊಸ ಸುಧಾರಣೆಯು ತೀರ ಅನಿಷ್ಟವಾದದ್ದು. ಇಷ್ಟ ಕಂಡವರನ್ನು ಸಹಾಯಕ್ಕೆ ತಕ್ಕೊಂಡು ಆತ್ಮರಕ್ಷಣ ಮಾಡಿಕೊಳ್ಳುವ ಹಕ್ಕು ನಾಗರಿಕನ ಮೂಲಭೂತ ಹಕ್ಕು. ಅದನ್ನು ಅಲ್ಲಗಳೆಯಲು ಸರಕಾರಕ್ಕೆ ಹಕ್ಕಿಲ್ಲ. ವಕೀಲರ ವೇತನವನ್ನು ಏರಿಸಿ ಅವರ ಸಾಂಪತ್ತಿಕ ಸುಧಾರಣೆಗೆ ನೆರವಾಗಬೇಕೆಂಬ ತತ್ವವನ್ನು ನಾನು ಒಪ್ಪುತ್ತೇನೆ. ಡಾಕ್ಟರರೂ, ಇಂಜಿನಿಯರರೂ, ಇತರ ವ್ಯವಸಾಯದವರೂ ತಮ್ಮ ವೇತನವನ್ನು ಹೆಚ್ಚಿಸಿಕೊಂಡಿದ್ದಾರೆ. ಈ ಬಗ್ಗೆ ನಾನು ಸರಕಾರಕ್ಕೆ ಮಾಡಿದ ಸೂಚನೆಗಳನ್ನು ಸರಕಾರವು ಆಲೋಚಿಸುತ್ತಿದೆ. ವಕೀಲರಿಗೆ ಇತ್ತಲಾಗಿ ತಕ್ಕ ಮರ್ಯಾದೆ ಸಿಗುವದಿಲ್ಲ. ದೇಶದೊಳಗೆ ನಡೆದಿರುವ ಬೇರೆ ಬೇರೆ ಸಮಾಜ-ಸುಧಾರಣೆಯ ಆಂದೋಲನಗಳಲ್ಲಿಯೂ ರಾಷ್ಟ್ರಸುಧಾರಣೆಯ ಕಾರ್ಯಕ್ರಮಗಳಲ್ಲಿಯೂ ವಕೀಲರು ಮುಂದಾಗಿ ಹೋರಾಡಿ ದೇಶಸೇವೆ ಮಾಡಿದ್ದಾರೆ. ವಕೀಲರ ಮನೋಭೂಮಿ ವಿಶಿಷ್ಟ ಸಂಸ್ಕಾರದ್ದಿರುವದರಿಂದ ಸಮಾಜೋನ್ನತಿಯ ಮಾರ್ಗಗಳಲ್ಲಿ ಅವರು ಯಾವಾಗಲೂ ಮುಂದುವರಿಯುತ್ತಾರೆ. ಅಂಥ ವರ್ಗದ ಅಪಕರ್ಷವಾಗದಂತೆ ಜಾಗ್ರತೆ ಕೊಳ್ಳುವದು ಸರಕಾರದ ಕರ್ತವ್ಯವಿದೆ. ಹಳಿಯಾಳ ತಾಲೂಕಿನ ವಿಷಯ ವಿವಾದಾಸ್ಪದವಿದೆ. ಒಂದೆ ಜಿಲ್ಹಾ ಜಜ್ಜರೂ ಸರಕಾರವೂ ಈ ವಿಷಯದಲ್ಲಿ ಒಂದೇ ಅಭಿಪ್ರಾಯದವರಾಗಲಿಲ್ಲ. ಆದರೆ ನಿಮ್ಮ ಅಂಬೋಣ ತೀರ ತರ್ಕಶುದ್ಧವಿದೆ (extremely logical) ನಾನು ಮುಂಬಯಿಗೆ ಮರಳಿ ಹೋದ ಬಳಿಕ ಈ ವಿಷಯದ ಅಭ್ಯಾಸ ಮಾಡಿ, ನಿರ್ಣಯ ಕೊಡುವೆನು. ಈಗ ವಾಹನ-ಸೌಕರ್ಯ ಉಂಟಾದ್ದರಿಂದ ಹಿಂದಿನ ಪರಿಸ್ಥಿತಿ ಈಗ ಬದಲಿದೆಂದು ನಾನು ಒಪ್ಪುತ್ತೇನೆ. ಮಾನಪತ್ರದೊಳಗಿನ ಮುದ್ದೆಗಳಿಗೆ ಈ ರೀತಿ ಪ್ರತ್ಯುತ್ತರ ಕೊಟ್ಟು ನ್ಯಾಯಾಧೀಶರು ತಮಗೆ ಇಂದು ಪರಮ ಸಂತೋಷವಾಗಿದೆಂದೂ, ತಾವು ಈಗ ಮುಖ್ಯ ನ್ಯಾಯಾಧೀಶರಾದಾಗ್ಯೂ ಹಿಂದೆ ತಾವು ವಕೀಲರಿದ್ದೆವೆಂಬ ನೆನಹು ತಮಗುಂಟೆಂದೂ, ವಕೀಲರೊಳಗೆ ಸೇರಿ ಅವರು ನೀಡಿದ ಸತ್ಕಾರ ಸ್ವೀಕರಿಸಲು ಸಂತೋಷವಾಗುತ್ತದೆಂದೂ, ತಾವು ಈ ಪ್ರದೇಶವನ್ನು ಎಂದಿಗೂ ಮರೆಯಲಿಕ್ಕಿಲ್ಲೆಂದೂ ನುಡಿದು ಸಮಾರಂಭವನ್ನು ಸಮಾಪ್ತಗೊಳಿಸಿದರು. ಆಮೇಲೆ ವಕೀಲರ ಪರಿಚಯ ಮಾಡಿಕೊಂಡು, ತಮ್ಮನ್ನು ಕಾಣುವದಕ್ಕಾಗಿ ಬಂದಿದ್ದ ಜಿಲ್ಹೆಯೊಳಗಿನ ಎಲ್ಲ ನ್ಯಾಯಾಧೀಶರೊಡನೆ ಕೆಲ ಹೊತ್ತು ಸಂಭಾಷಣ ಮಾಡಿ, ಸುಮಾರು ೧॥ ಘಂಟೆಗೆ ಜಿಲ್ಹಾ ನ್ಯಾಯಾಧೀಶರ ಬಂಗಲೆಗೆ ಹೋದರು.

ಇಂದು ಅಪರಾಹ್ನದಲ್ಲಿ ಜಿಲ್ಹಾ ಮೆಜಿಸ್ಟ್ರೇಟರ ನಿವಾಸದಲ್ಲಿ ಚಹಾಪಾನವಾಯಿತು. ಸಂಜೆ ನ್ಯಾಯಮೂರ್ತಿಗಳು ಸಮುದ್ರದಲ್ಲಿ ನೌಕಾವಿಹಾರ ಮಾಡ ಹೋಗಿದ್ದರು. ರಾತ್ರಿ ಕಾರವಾರದ ಕ್ಲಬ್ಬಿನಲ್ಲಿ ಭೋಜನ ಸಮಾರಂಭ ನಡೆಯಿತು.

ನಾಳೆ ರವಿವಾರ ನ್ಯಾಯಮೂರ್ತಿಗಳು ಅಂಕೋಲೆಯ ಸಾಲವಿಮೋಚನ ಕೋರ್ಟಿನ ನ್ಯಾಯಾಧೀಶರಲ್ಲಿ ಉಪಹಾರ ಸ್ವೀಕರಿಸಿ, ವಿಜಾಪೂರ-ಹೊನ್ನಾವರ ಮಾರ್ಗವಾಗಿ ಶಿರಸಿಗೆ ಹೋಗಿ, ಅಲ್ಲಿಂದ ಮಧ್ಯಾಹ್ನ ೧॥ಯ ಸುಮಾರಿಗೆ ಜೋಗಕ್ಕೆ ತಲ್ಪುವರು. ನಾಡದು ಅವರು ಶಿರಸಿಗೆ ಮರಳಿ ಬಂದು, ಅಲ್ಲಿ ಕೋರ್ಟ ತಪಾಸಣೆ ಮಾಡಿ, ವಕೀಲ ಸಂಘದ ಮಾನಪತ್ರವನ್ನು ಸ್ವೀಕರಿಸಿ, ಸಂಜೆ ೪॥ಗೆ ಧಾರವಾಡಕ್ಕೆ ಹೊರಡುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ.

ನ್ಯಾ| ಛಾಗ್ಲಾರವರು ಇಂದು ಬೆಳಿಗ್ಗೆ ಕೊನ್ವೆಂಟ ಹಾಯಸ್ಕೂಲಿಗೆ ಭೆಟ್ಟಿ ಕೊಟ್ಟರು, ಸಿವ್ಹಿಲ್ ಅಸ್ಪತ್ರೆಗೂ ಹೋಗಿ ಅಲ್ಲಿಯ ವ್ಯವಸ್ಥೆಯನ್ನು ನೋಡಿದರು, ಮತ್ತು ಅಲ್ಲಿಂದ ಮುಂದೆ ಶಿರೀನ ಚಿತ್ರಮಂದಿರಕ್ಕೆ ಹೋಗಿ ಅಲ್ಲಿ ಮಹಿಳಾ ಮಂಡಳದವರು ಏರ್ಪಡಿಸಿರುವ ಪ್ರದರ್ಶನದ ಪ್ರಾರಂಭೋತ್ಸವ ಮಾಡಿಕೊಟ್ಟರು.

ಸ್ಥಾನಿಕ ವೃತ್ತಾಂತ.

ಕುಮಟಾ— ೨-೩ ದಿನಗಳಿಂದ ಚಳಿಯುಂಟಾಗಿದೆ. ಹಳೆಯ ಮಾಮಲೇದಾರರು ಹೊರಟು ಹೋದರು. ಹೊಸ ಮಾಮಲೇದಾರರು ರಾವ ಕುಲಕರ್ಣಿಯವರು ಇನ್ನೂ ಬಂದು ತಲ್ಪುದುವದಿಲ್ಲ.

ವಾಡಿಕೆಯಂತೆ ಬರುವ ೧೧ನೇ ರವಿವಾರ ಇಲ್ಲಿಯ ಗೀತಾ-ಪ್ರವಚನ ಮಂಡಳದವರು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಗೀತಾ ಜಯಂತಿಯ ಉತ್ಸವ ಜರುಗಿಸಲಿದ್ದಾರೆ. ಭಜನೆ, ನಾಮಸ್ಮರಣೆ, ಸಂಜೆಯಲ್ಲಿ ಸಭೆ ಪ್ರವಚನಾದಿಗಳು ನಡೆಯುವವು. ರಾ| ವೈಕುಂಠ ಶ್ರೀನಿವಾಸ ಪ್ರಭು ಇವರು ಅಧ್ಯಕ್ಷರಾಗಲು ಒಪ್ಪಿರುವರು. ಅಘನಾಶಿನಿಯ ಶ್ರೀ ರಾಮೇಶ್ವರ ಗವಿಯಲ್ಲೂ ಗೀತಾ ಜಯಂತಿಯು ಉತ್ಸವವಾಗುವದೆಂದು ತಿಳಿಯುತ್ತದೆ.

ಇಲ್ಲಿನ ಧರ್ಮಶಾಲೆಯ ಮಾಳಿಗೆಯ ಮೇಲಿರುವ ಗ್ರಂಥಾಲಯವೇ ಈ ಊರಲ್ಲಿರುವ ಸಾರ್ವಜನಿಕ ಗ್ರಂಥಾಲಯ. ಅದರಲ್ಲಿರುವ ಎಷ್ಟೋ ಪುಸ್ತಕಗಳು ಹಳೆಯವಾಗಿರುವದರಿಂದಲೂ ಸಂಸ್ಥೆಯ ಪುಸ್ತಕ-ಭಂಡಾರವನ್ನು ಬೆಳೆಸಲಿಕ್ಕಾಗಲಿ, ಹೊಸಹೊಸ ಪತ್ರಿಕೆಗಳನ್ನು ತರಿಸಲಿಕ್ಕಾಗಲಿ ಬೇಕಾದ ಧನಸಹಾಯ ಸಿಗುತ್ತಿದ್ದಿಲ್ಲವಾದ್ದರಿಂದಲೂ ಸಂಸ್ಥೆಯು ಇತ್ತಲಾಗಿ ಬಹಳ ಶೋಚನೀಯ ಅವಸ್ಥೆಗೆ ತಲ್ಪಿತ್ತು. ಇತ್ತ ೧-೨ ವರುಷಗಳಿಂದ ಕೆಲವು ತರುಣರು ಅದರ ಸುಧಾರಣೆ ಮಾಡಲು ಹೆಣಗುತ್ತಿದ್ದಾರೆ. ಸುದೈವದಿಂದ ಅದಕ್ಕೆ ಸರಕಾರವೂ ಸ್ಥಾನಿಕ ನಗರ ಸಭೆಯೂ ಸಕಾಲದಲ್ಲಿ ನೆರವನ್ನಿತ್ತಿದೆ. ನಗರ ಸಭೆಯು ಈ ವರ್ಷ ಗ್ರಂಥಾಲಯಕ್ಕೆ ರೂ ೧೦೦ರ ಧನಸಹಾಯವನ್ನಿತ್ತಿದೆ. ಸರಕಾರದವರೂ ಕೂಡ ಈ ವರ್ಷ ಮತ್ತು ಮುಂದಿನ ವರ್ಷ ರೂ. ೭೫೦ ರಂತೆ ಧನಸಹಾಯ ಕೊಟ್ಟು, ಈ ಗ್ರಂಥಾಲಯವನ್ನು, ತಮ್ಮ ಪ್ರಾಂತವ್ಯಾಪಿ ಗ್ರಂಥಾಲಯ ಸಂಘಟನೆಯ ಯೋಜನೆಯಂತೆ, ಕುಮಟಾ ತಾಲೂಕಿನ ಕೇಂದ್ರ-ಗ್ರಂಥಾಲಯವನ್ನಾಗಿ ಮಾರ್ಪಡಿಸಲು ಬಯಸಿರುವರೆಂದು ತಿಳಿಯುತ್ತದೆ. ಸಾರ್ವಜನಿಕರು ಇದೇ ಸಮಯದಲ್ಲಿ ತಮ್ಮ ಕೈಯ ವಾಚನಾಲಯವನ್ನು ಸರ್ವರಿಗೆ ಸುಂದರ ಮಾಡಲು ನೆರವಾಗಬೇಕು. ಊರಿಗೊಂದು ಭೂಷಣಭೂತ ಗ್ರಂಥಾಲಯ ನಾಗುವದೆಂದೂ, ಗ್ರಂಥಾಲಯದ ಹಳೆಯ ಪುಸ್ತಕಗಳನ್ನು ಇಟ್ಟುಕೊಂಡವರು ಅವನ್ನು ಮರಳಿ ತಂದು ಕೊಟ್ಟು ಉಪಕಾರ ಮಾಡಬೇಕೆಂದೂ ಗ್ರಂಥಾಲಯದ ಕಾರ್ಯಕರ್ತರು ಬಿನ್ನವಿಸುತ್ತಾರೆ. ಈ ಗ್ರಂಥಾಲಯದ ವಾರ್ಷಿಕ ಸಾಧಾರಣ ಸಭೆ ಇದೇ ಬರುವ ರವಿವಾರ ಕೂಡ ನಡೆಯುವದೆಂದೂ ಅವರು ತಿಳಿಸುತ್ತಾರೆ.

ಈಗ ಸೀಧಾ ಅಂಗಡಿಗಳಲ್ಲಿ ಅಕ್ಕಿಯ ಪ್ರಮಾಣ ಹೆಚ್ಚಿಸಿದ್ದಾರೆ. ಅಂತು ಕೊಡಕೆಲ್ಲ ಅರ್ಧ ಧಾನ್ಯದ ಪ್ರತಿ ಅಕ್ಕಿ ಕೊಡುತ್ತಾರೆ. ನ್ಹಿ ಗೋದಿ ಕೊಡಲು ಸುರುಮಾಡಿದ ಮುಂತ ಅದರ ಗೋದಿ ಸಿಕ್ಕುತ್ತಿಲ್ಲ.

ಹೊಳೆಹಳ್ಳಿಗಳಿಗೆ ಒಡ್ಡುಗಳನ್ನು ಹಾಕಿ ಹಿಂಗಾರಿ ಬೆಳೆ-ಭತ್ತ, ಉದ್ದು, ಹೆಸರು ಮುಂತಾದ ಧಾನ್ಯಗಳನ್ನು ಬೆಳೆಸುವದಕ್ಕೆ ಹೊಸ ಪ್ರೋತ್ಸಾಹದಿಂದ ಈ ವರ್ಷವೂ ಸರಕಾರವು ಧನಸಹಾಯ ಕೊಡುವದೆಂದೂ, ಮಿಶ್ರ ಗೊಬ್ಬರ [illegible] ಹಿಂಗಾರಿ ಬೆಳೆ ಬೆಳೆಸಬೇಕೆಂದೂ ಜಿಲ್ಹಾ ಒಕ್ಕಲತನದ ಅಧಿಕಾರಿಗಳು ಬಿನ್ನವಿಸುತ್ತಾರೆ. ಈ ಗೊಬ್ಬರ ರೂ ೧೯ಕ್ಕೊಂದು ಟನ (೧೬೦ ರತ್ತಲ) ಸಿಗುತ್ತದಂತೆ.

ಇಲ್ಲಿನ ಕಾಲೇಜಿನ ಸ್ಥಳ-ಅವಶ್ಯಕತೆಗಳ ಬಗ್ಗೆ ತಯಾರಿಯ ತಪಾಸಣೆಗಾಗಿ ಮುಂಬಯಿ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಪುಣೆಯ ಫರ್ಗ್ಯುಸನ್ ಕಾಲೇಜಿನ ಪ್ರಧಾನಾಧ್ಯಾಪಕ ಪ್ರಾ| ಕಾನಿಟಕರ, ಪ್ರಾ| ಆಪ್ಟೆ, ಪ್ರಾ| ದೀಕ್ಷಿತ ಮತ್ತು ಪ್ರಾ| ದಾಂಡೇಕರ ಇವರು ಶನಿವಾರ ಇಲ್ಲಿ ಬಂದು ತಪಾಸಣೆ ಮಾಡಿ ಹೋಗಿದ್ದಾರೆ. ಕಾಲೇಜಿನ ಸ್ಥಳವನ್ನೂ ಸುತ್ತಮುತ್ತಲಿನ ಸನ್ನಿವೇಶದ ಸೌಂದರ್ಯವನ್ನೂ ನೋಡಿ ಅವರು ತುಂಬ ಸಮಾಧಾನ ವ್ಯಕ್ತಗೊಳಿಸಿದರು. ಕಾಲೇಜ ಸ್ಥಳದ ಹಿಂಬದಿಯ ಗುಡ್ಡ ನೋಡಿ ಅವರಿಗೆ ಫರ್ಗ್ಯುಸನ್ ಕಾಲೇಜಿನ ಸನ್ನಿವೇಶದ ನೆನಪಾಯಿತು. ಉತ್ತರ ಕನ್ನಡ ಜಿಲ್ಹೆಯ ಶ್ರೀಮಂತರು ಮುಂಬಯಿ, ಹುಬ್ಬಳ್ಳಿ, ಬೆಂಗಳೂರ ಮುಂತಾದ ಪಟ್ಟಣಗಳಲ್ಲಿ ಇರುವಾಗ ಅವರು ಮುಂದಾಗಿ ಕಾಲೇಜಿಗೆ ಬೇಕಾದ ಧನ ಸಂಗ್ರಹವನ್ನು ಮಾಡುವದಿಲ್ಲೆಂದು ಅವರು ಪ್ರಶ್ನೆ ಮಾಡಿದರು. ಕಾಲೇಜಿನ ಕಾರ್ಯ ಪ್ರಾರಂಭವಾಗಲು ಇನ್ನೂ ೨ ಲಕ್ಷ ರೂ ಬೇಕಾಗುವದೆಂದು ಅವರ ಅಂದಾಜು.

೨ ತಿಂಗಳ ಹಿಂದೆ ಗೋಕರ್ಣದಲ್ಲಿ ಒಂದು ಕೊಲೆಯಾದ ಸಂಗತಿ ಬೆಳಕಿಗೆ ಬಂದಿದೆ. ಅಲ್ಲಿ ಕಟ್ಟಿಸಲ್ಪಡುತ್ತಿರುವ ಲಿಂಗಾಯತ ಮಠದ ಮನೇಜರರು ಕಳೆದ ನವರಾತ್ರಿಯಲ್ಲಿ ಒಂದು ದಿನ ಹಣ ತಕ್ಕೊಂಡು ಗೋಕರ್ಣಕ್ಕೆ ಬಂದಿದ್ದರು, ಕೆಲವು ಹಣದ ಬಟವಡೆಯನ್ನೂ ಅವರು ಮಾಡಿದ್ದರು. ಮುಂದೆ ಅವರ ಪತ್ತೆಯೇ ತಿಳಿಯಲಿಲ್ಲ! ಅದರಿಂದ ಮಠದ ಸ್ವಾಮಿಯವರು ಅವರ ಬಗ್ಗೆ ಶೋಧ ಮಾಡಲಾರಂಭಿಸಿದರು. ಪತ್ರಿಕೆಗಳಲ್ಲಿ ಪ್ರಕಟನೆ ಕೊಟ್ಟರು, ಗೋಕರ್ಣಕ್ಕೆ ಬಂದು ತಪಾಸಣೆಯನ್ನೂ ಮಾಡಿದರು. ಆದರೆ ಮೇನೇಜರರ ಗತಿ ಏನಾಯಿತೆಂಬುದು ಅವರಿಗೆ ಇದುವರೆಗೆ ಏನೇನೂ ಪತ್ತೆ ಹತ್ತಲಿಲ್ಲ. ಆಚೆಯ ವಾರ ಕೆಲವರು ಊರ ಹೊರಗಿನ [illegible] ಕೆರೆಯ ಸಮೀಪದಲ್ಲಿರುವ ಕಟ್ಟೆಯ ಮೇಲೆ ತಿರುಗಾಡುತ್ತಿರುವಾಗ ಅವರಿಗೆ ಒಂದು ತರದ ಅಸಹ್ಯ ವಾಸನೆ ಬರಹತ್ತಿತು. ಆಗ ಅವರು ಕೆರೆಯ ಒಳ ನೋಡಿದಾಗ ಅದರಲ್ಲಿ ಪ್ರೇತ ಮನುಷ್ಯನೋರ್ವನ ಅವಶೇಷಗಳು ಕಣ್ಣಿಗೆ ಬಿದ್ದವು. ಕೂಡಲೆ ಅವರು ಪೋಲೀಸಠಾಣೆಗೆ ವರದಿ ಕೊಟ್ಟರು. ಅವರನ್ನು ಕರೆತಂದರು. ಪೋಲೀಸರು ಪ್ರಯತ್ನಪಟ್ಟು ಕೆರೆಯೊಳಗಿನ ಅವಶೇಷಗಳನ್ನು ಹೊರಗೆ ತೆಗೆಸಿದರು. ಆ ಅವಶೇಷಗಳ ಮೇಲಿಂದ ಅವು ಕಾಣೆಯಾಗಿದ್ದ ಮೇನೇಜರರವೇ ಇರಬೇಕೆಂದು ನಿರ್ಣಯವಾಯಿತು. ಯಾರೋ ದುರಾತ್ಮರು ಹಣದಾಶೆಗಾಗಿ ಮೇನೇ

FOR SALE — One double sound Harmonium and one old style type-writer for sale for Rs 73/- & 81/- reespectively

Apply to-

X C/o Postmaster Hervatta, N, K

ಅವರನ್ನು [illegible]

[illegible]

ಬಂಕಿಕೋಡ್ಲ [illegible]

ಕುಮಟಾ-ಹೊನ್ನಾವರ [illegible]

ಹೊನ್ನಾವರ— [illegible]

ಮುರುಡೇಶ್ವರ— [illegible]

[illegible]

ಭಟಕಳ— (ತಾ. ೩-೧೨-೪೫) [illegible]

[illegible] ಪ್ರಕಟನೆ ಮಾಡಿದ್ದಾರೆ.

[illegible]

ಶಿರಸಿ— (ತಾ. ೩-೧೨-೪೫) [illegible]

[illegible]

ಸಿದ್ದಾಪುರ— (ತಾ. ೨-೧೨-೪೫) [illegible]

[illegible]

[illegible] ಅಂಗಡಿಯು [illegible]

ಸಮಸ್ತ ಪ್ರಾಮಾಣಿಕ ವ್ಯಾಪಾರಿ [illegible]

ಕಾರವಾರ— (ತಾ. ೪-೧೨-೪೫) [illegible]

[illegible]

[illegible] (Splints) [illegible]

— R —

[illegible]

ಹಿಂದುಸ್ಥಾನ ಸರಕಾರವು [illegible] "R" [illegible]

ನಮ್ಮಲ್ಲಿ ಕತ್ತದ ಚಕ್ರಾ ಹುರಿ ಮತ್ತು ಬಾವಿ ಹಗ್ಗಗಳು ಯೋಗ್ಯ ದರದಲ್ಲಿ ಸಿಗುತ್ತವೆ.

ಬೆಳಂಬಾರ್, ಕತ್ತದ ಸೊಸೈಟಿ ಲಿಮಿಟೆಡ್,
ಹೊನ್ನಾವರ (ಉ. ಕ)

ಜಾಹೀರನಾಮೆ.

ಕಾರವಾರ ಜಿಲ್ಹಾ ಲೋಕಲ್‌ಬೋರ್ಡ ಕಚೇರಿಯಿಂದ—

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದರಲ್ಲಿ ಬರುತ್ತದಲ್ಲಾ ಏನಂದರೆ:—

ಈ ಕೆಳಗೆ ನಮೂದಿಸಿರುವ ಲೋಕಲ್‌ಬೋರ್ಡ ಕಾಮಗಾರಿಗಳನ್ನು ಕಂಟ್ರಾಕ್ಟಿಗೆ ಕೊಡಲಿಕ್ಕಿದ್ದಿರುತ್ತದೆ. ಸದರಿ ಕಾಮಗಾರಿಗಳನ್ನು ಕಂಟ್ರಾಕ್ಟಿಗೆ ಪಡೆಯ ಇಚ್ಛಿಸುವವರು ಇದೇ ಬರುವ ತಾ ೨೦—೧೨—೪೮ನೇ ಸೋಮವಾರ ಸಾಯಂಕಾಲ ೪ ಘಂಟೆಯೊಳಗೆ ಈ ಕೆಳಗೆ ಸಹಿ ಮಾಡುವವರ ಕಚೇರಿಯಲ್ಲಿ ಮೋಹರಬಂದ ಮಾಡಿದ ಟೆಂಡರುಗಳನ್ನು ಕಂಟ್ರಾಕ್ಟ ರಕಮಿನ ಮೇಲೆ ಶೇಕಡಾ ೧/- ರಂತೆ "ಅರ್ನೆಸ್ಟ ಮನಿ" ಸಹಿತ ತಂದುಕೊಡಬೇಕು. ಅವನ್ನು ಈ ಕೆಳಗೆ ಸಹಿ ಮಾಡುವವರು ತಾ. ೨೧—೧೨—೪೮ನೇ ಮಂಗಳವಾರ ದಿವಸ ಬೆಳಿಗ್ಗೆ ೯ ಘಂಟೆಗೆ ಒಡೆದು ಅವಶ್ಯವಾದ ಮಂಜೂರಿ ಬಗ್ಗೆ ಕಾನಡಾ ಜಿಲ್ಹಾ ಲೋಕಲ್ ಬೋರ್ಡಿನ ಮುಂದೆ ಇಡುವರು. ಟೆಂಡರ ಕೊಟ್ಟವರ ಕಂಟ್ರಾಕ್ಟ ಮಂಜೂರ ಮಾಡುವದು ಯಾ ಬಿಡುವದು ಕಾನಡಾ ಜಿಲ್ಹಾ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟದ್ದಿರುವದು. ನಾಮಂಜೂರ ಮಾಡಿದ ಅರ್ಜಿಯ ಬಾಬತು ಕಾರಣ ತಿಳಿಸಲಿಕ್ಕೆ ಅವರು ಬದ್ಧರಾಗಲಿಕ್ಕಿಲ್ಲ. ಕಾಮಗಾರಿ ಮಂಜೂರಾದ ಕೂಡಲೆ ಮಂಜೂರಾದ ಟೆಂಡರ ಅರ್ಜಿದಾರರಿಗೆ ತಿಳಿಸಲಾದೀತು ವ ಅವರು ಶೇಕಡಾ ರೂ ೧೦/- ರಂತೆ ಆಗುವ ಸೆಕ್ಯೂರಿಟಿ ಡಿಪೋಝಿಟ್ ರಕಮನ್ನು ಮಂಜೂರಿಯ ಹುಕುಮು ತಪ್ಪಿದ ೭ ದಿವಸದೊಳಗೆ ಹಾಜರ ಮಾಡಬೇಕು ಮತ್ತು ಸ್ಟ್ಯಾಂಪ ಕಾಗದದ ಮೇಲೆ ಕಾಯಿದೇಶೀರ ಕರಾರ ಸಹ ಬರೆಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅಂಥವರ ಟೆಂಡರ ಕೂಡಲೆ ರದ್ದು ಮಾಡಲಾದೀತು ಮತ್ತು ಕಟ್ಟಿದ ಅರ್ನೆಸ್ಟ ಮನಿ ಫೋರಫೀಟ ಮಾಡಲಾದೀತು.

ಪ್ಲೆನ ಎಸ್ಟಿಮೇಟು ವ ಕರಾರ-ಶರ್ತ ವಗೈರೆ ಬೇಕಾದ ಮಾಹಿತಿಯನ್ನು ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಇಂಜನಿಯರರ ಕಚೇರಿಯಲ್ಲಿ ಯಾ ಸಂಬಂಧಪಟ್ಟ ಆಯಾ ಲೋಕಲ್ ಬೋರ್ಡ ಡಿವಿಜನಲ್ಲಿ ಓವ್ಹರಸೀಯರರ ಕಚೇರಿಯಲ್ಲಿ ಪಡಕೊಳ್ಳಬಹುದು.

ಕಾಮಗಾರಿಗಳ ವಿವರ:—

ಅ ನಂ	ಕಾಮಗಾರಿಗಳ ಹೆಸರು.	ಎಸ್ಟಿಮೇಟಿನ ಪೂರ್ಣ ರಕಂ.
	ಕಾರವಾರ ಡಿವ್ಹಿಜನ	
	ಕಾರವಾರ ತಾಲೂಕ	
೧	ಕಾರವಾರ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಅಫೀಸ ಇಮಾರತಿನ ಮಾಳಿಗೆಯ ಸ್ಪೇಶಲ್ ರಿಪೇರಿ	೭೯೮೮
೨	ಮಲ್ಲಾಪುರ-ಇಡಗುಂದಿ ರಸ್ತೆಯ ಮೈ. ನಂ. ೩/೮ರ ಕಟ್ಟೆಗೆಯ ಮುಚ್ಚಳದ ಮೋರಿಯ ಸ್ಪೇಶಲ್ ರಿಪೇರಿ	೧೪೧೦
೩	ಸದರ ರಸ್ತೆಯ ಮೈ. ನಂ, ೧೨/೪ರಲ್ಲಿಯ ತಕ್ಕ್ಯಾ ಹಾಪಸ ಮೋರಿಯನ್ನು ತಿರುಗಿ ಕಟ್ಟುವದು .	೨೫೦೦
೪	ಸದರ ರಸ್ತೆಯ ಮೈ. ನಂ ೧/೮ ರಲ್ಲಿರುವ ಕಮಾನಿನ ಮೋರಿಗಳ ಅರ್ಜಂಟ ಸ್ಪೇಶಲ್ ರಿಪೇರಿ	೧೮೯೦
೫	ಸದರ ರಸ್ತೆಯ ಮೈ. ನಂ ೩/೩ರಲ್ಲಿರುವ ಧಾಪೆಕಲ್ಲಿನ ಮೋರಿಗಳ ಸ್ಪೇ. .	೧೬೫
೬	ಅಂಗಡಿ-ಚಿತಾಕುಲಾ ರಸ್ತೆಯ ಮೈ ನಂ ೦/೬ರ ೧/೧ರ ಭಾಗದಲ್ಲಿ ಖಡಿ ಹಾಕುವದು. ...	೧೨೫೦
೭	ಮಾಜಾಳಿ-ಅಸನೋಟಿ ರಸ್ತೆಯ ಮೈ. ನಂ ೧/೧ರ ಸ್ಪೇಶಲ್ ರಿಪೇರಿ	೫೦೦
೮	ಹಳಗಾ-ಧೋಳವಾಡ ರಸ್ತೆಯ ಮೈಲ ನಂ ೦/೨ರಲ್ಲಿ ರಿಟೇನಿಂಗ ವಾಲ ಕಟ್ಟುವದು.	೯೨೪
೯	ಕದ್ರಾದಲ್ಲಿರುವ ೨ನೇ ನಂಬರ ಧರ್ಮಶಾಲಾ ಇಮಾರತಿನ ಸ್ಪೆ ರಿ.	೧೦೩೫
೧೦	ಚೆಂಡಿಯ ಧರ್ಮಶಾಲಾ ಇಮಾರತಿನ ಸ್ಪೆ ರಿ	೭೮೮
೧೧	ಕಾರವಾರ ಲೋ॥ ಬೋ॥ ಅಫೀಸ ಇಮಾರತಿಗೆ ಜಾದಾ ಕರಂಟ ರಿಪೇರಿ ಮಾಡುವದು	೨೧೦
೧೨	ಕಾರವಾರ ತಾಲೂಕದೊಳಗಿನ ಧರ್ಮಶಾಲಾ ಇಮಾರತುಗಳ ಸ್ಪೇ ರಿ.	೨೩೫
೧೩	ಕೋಡೀಬಾಗ-ಶೇಜವಾಡ ರಸ್ತೆಯ ಮೈ ನಂ ೦/೭ರ ರಿಟೇನಿಂಗ ವಾಲದ ಸ್ಪೇ ರಿ	೬೦
	ಅಂಕೋಲಾ ತಾಲೂಕ	
೧೪	ಅಂಕೋಲಾ ಆಸ್ಪತ್ರೆ ಇಮಾರತುಗಳ ಸ್ಪೆ ರಿಪೇರಿ (ಎಡ್ಡಿಶನ್ಸ ಆಲ್ಟರೇಶನ್ಸ)	೮೭೪
೧೫	ಅಂಕೋಲಾ ಲೋ ಬೋ ಅಫೀಸ ಲಗತಿನ ಹೊರಗಿನ ಮನೆಯ ಸ್ಪೇ ರಿ ..	೬೮೦
೧೬	ಹಟ್ಟಿಕೇರಿ ಬೇಲೇಕೇರಿ ರಸ್ತೆಯ ಮೈ ನಂ ೦/೫ ರಿಂದಾ ೦/೮ರ ವರೆಗಿನ ಸ್ಪೇ ರಿ ..	೨೫೧೦
೧೭	ಬೆಳಸೆ-ಚಂದೂಮಠ ರಸ್ತೆಯ ಮೈ ನಂ. ೦/೭ರ ಡ್ರೇನಿನ ಸ್ಪೇ. ರಿ.	೮೪೦
೧೮	ಹೊಸಾಕಂಬಿ ಚನ್ನಗಾರ ರಸ್ತೆಯ ಬಾಜುವಿನ ಕಿರಝಾಡಿಗಳನ್ನು ಕಡಿದು ತೆಗೆದು ಸಫಾ ಮಾಡುವದು	೩೩೦
೧೯	ಕೇಣಿ-ಕುಮಟಾ ಕೋಸ್ಟ ರಸ್ತೆಯ ಮೈ. ನಂ. ೧೭/೩ ವ ನಂ ೨೦/೨ರಲ್ಲಿ ಖಡಿ ಹಾಕುವದು ...	೧೩೫೦
೨೦	ಅಂಕೋಲಾ ಬಾಳೇಗುಳಿ ರಸ್ತೆಯ ಮೈ. ನಂ ೦/೩ ರಲ್ಲಿರುವ ಧಾಪೆಕಲ್ಲಿನ ಡ್ರೇನಿನ ಸ್ಪೇ. ರಿ ...	೧೨೬೦
೨೧	ಸದರ ರಸ್ತೆಯ ಮೈ. ನಂ ೦/೭ರ ಸ್ಪೇಶಲ್ ರಿಪೇರಿ	೩೩೦
೨೨	ಹೊಸಾಕಂಬಿ ಚನ್ನಗಾರ ರಸ್ತೆಯ ಮೈ. ನಂ ೦/೪ ರಲ್ಲಿರುವ ಕಟ್ಟೆಗೆ ಮುಚ್ಚಳದ ಮೋರಿಯನ್ನು ತಿರುಗಿ ಕಟ್ಟುವದು ..	೧೦೨೫
೨೩	ಅಂಕೋಲಾ ಕೆಂಕಣಕೇರಿ ರಸ್ತೆಯ ಮೈ. ನಂ. ೦/೩ ವ ನಂ ೦/೪ರಲ್ಲಿ ಕಬಿಂಗ ಕಟ್ಟುವದು. ..	೧೩೩೦
೨೪	ಅವರ್ಸಾ ಕರಂಗ ಮೇಟ ರಸ್ತೆ ಮೈ. ನಂ ೦/೮ ವ ೧/೧ ರಲ್ಲಿಯ ಸ್ಪೇ. ರಿ	೯೬೦
೨೫	ಅಂಕೋಲಾ ಬೊಬ್ರುವಾಡಾ ರಸ್ತೆಯ ಸ್ಪೇ ರಿಪೇರಿ	೪೦೦
೨೬	ಹಟ್ಟಿಕೇರಿ ಧರ್ಮಶಾಲಾ ಇಮಾರತಿನ ಮೇಲಭಾವಣಿಯ ಸ್ಪೆ ರಿ ...	೧೬೫೫
೨೭	ಅಂಕೋಲಾ ಆಸ್ಪತ್ರೆ ಇಮಾರತುಗಳ ಜಾದಾ ಕ ರಿ. ...	೧೩೫
೨೮	ಅಂಕೋಲಾ ತಾಲೂಕಿನೊಳಗಿನ ೩ ಧರ್ಮಶಾಲಾ ಇಮಾರತುಗಳ ಜಾದಾ ಕ. ರಿ ...	೨೨೫
೨೯	ಅಂಕೋಲಾ ಕಸಬಾ ಧರ್ಮಶಾಲಾ ಇಮಾರತಿನ ಜಾದಾ ಕರಂಟ ರಿಪೇರಿ. .	೬೫
	ಸೂಪಾ ಪೇಟಾ:—	
೩೦	ಸೂಪಾ ದವಾಖಾನೆ ಇಮಾರತುಗಳ ಸ್ಪೆ ರಿ.	೬೧೮
೩೧	ಸೂಪಾ ಡಾಕ್ಟರರ ಕ್ವಾರ್ಟರ್ಸದ ಹತ್ತಿರ ೧ ಪಾಯಖಾನೆ ಕಟ್ಟುವದು	೨೬೪
೩೨	ಸೂಪಾ ಲೋ ಬೋ ಅಫೀಸಿನ ಸುತ್ತಲೂ ಕಂಪೌಂಡ ಗೋಡೆ ಕಟ್ಟುವದು ..	೧೩೭೪
೩೩	ದಾಂಡೇಲಿ ರಸ್ತೆಯ ಮೇಲಿನ ಕಟ್ಟೆಗೆಯ ಮುಚ್ಚಳದ ಮೋರಿ ತಿರುಗಿ ಕಟ್ಟುವದು	೧೬೯೦
೩೪	ಜಿಂವೋಳ್ಳಿ ಸಿನ್ನೈ ರಸ್ತೆ ಮೈ ನಂ. ೭ರಿಂದ ೧೦ ರ ವರೆಗಿನ ಭಾಗದಲ್ಲಿ ಡಬ್ಬಲ್ಲ ಗಟರ (ಕೇಚವ್ಹಾಟರ ಡ್ರೇನ್ಸ) ತಯಾರಿಸುವದು	೮೩೨
೩೫	ಕುಂಭಾರವಾಡಾ ಉಳವಿ ರಸ್ತೆಯ ಮುರಿಗಳನ್ನು ಸುಧಾರಿಸುವದು	೧೬೮೫

೩೬	ಸೊಪ್ಪಾ ಪೇಠಾದೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೬೭೯
೩೭	ಜಗಲ್‌ಬೇಟ ಸ್ಪ್ರಿಂಗಡ ಸ್ಪೇ ರಿ	೬೬೮
೩೮	ಶಿಂದೊಳ್ಳಿ ಶಿನ್ನೆ ರಸ್ತೆಗೆ ಚಾಂದವಾಡಿ ತಾರಿ ಆಚೆಗ ಸ್ಪೇ ರಿ ಮಾಡುವದು	೯

ಹೊನ್ನಾವರ ಡಿವ್ಹಿಜನ

ಕುಮಟಾ ತಾಲೂಕ

೩೯	ಗೋಕರ್ಣ ಆಸ್ಪತ್ರೆ ಇಮಾರತುಗಳ ಸ್ಪೇಶಲ್ ರಿಪೇರಿ	೩೦
೪೦	ಕುಮಟಾ ಸಿದ್ದಾಪುರ ರಸ್ತೆ ಮೈ ನಂ ೧೩ರಲ್ಲಿರುವ ಮೋರಿಯನ್ನು ಹಾಕಿ ಮೋರಿಯಲ್ಲಿ ರೂಪಾಂತರಿಸುವದು	೩೦
೪೧	ಸದರ ರಸ್ತೆಯ ಮೈ ನಂ ೧೧ರ ಸ್ಪೇ ರಿ	೬೬
೪೨	ಕೇಣಿ ಕುಮಟಾ ಕೋಸ್ಟ ರಸ್ತೆಯ ಮೈ ನಂ ೨/೨ ರಿಂದಾ ೨/೪ರ ವರಿಗೆ ಖಡಿ ಹಾಕಿ ದುರುಸ್ತ ಮಾಡುವದು	೧೮೦
೪೩	ಹೊಲನಗದ್ದೆ ಸಾಯಡಿಗೆ ಸದರ ರಸ್ತೆಯ ಸೋ ಗುಂಡಗಲ್ಲುಗಳನ್ನು ಹಾಕಿ ದುರುಸ್ತಿ ಮಾಡುವದು	೨೫೦೦
೪೪	ಕುಮಟಾ ಸಿದ್ದಾಪುರ ರಸ್ತೆ ಮೈ ನಂ ೧೨/೧ರ ಕಟ್ಟಿಗೆ ಮುಚ್ಚಳದ ಮೋರಿಯನ್ನು ತಿರುಗಿ ಕಟ್ಟುವದು	೭೫೦೦
೪೫	— ಡಿ — ಮೈ ನಂ ೧೫/೩ರ ಮೋರಿಯನ್ನು ತಿರುಗಿ ಕಟ್ಟುವದು	೧೬೦೦
೪೬	ಉಪ್ಪಿನಪಟ್ಟಣ ಸಿರಗುಂಜಿ ರಸ್ತೆಯ ಮೈ ನಂ ೦/೧ ರಿಂದಾ ೦/೩ರ ವರೆಗಿನ ಭಾಗದ ಸ್ಪೆ ರಿ	೨೧೦೦
೪೭	ಮೊರಬಾ ರಸ್ತೆಯ ಸ್ಪೆಶಲ್ ರಿಪೇರಿ	೭೯
೪೮	ಮುಂಕಿಟ್ಟೆಲ ತಾರಿ ವಿಶ್ರಾಂತಿ ಮನೆಯ ಸ್ಪೆ ರಿ	೨೫೫
೪೯	ಸಾಂತಗಲ್ ಬಂಗ್ಲೆಯ ಜಾದಾ ಕರಂಟ ರಿಪೇರಿ	೬೫
೫೦	ಕುಮಟಾ ತಾಲೂಕಿನೊಳಗಿನ ಧರ್ಮಶಾಲೆಗಳ ಜಾದಾ ಕರಂಟ ರಿಪೇರಿ	೬೭೯

ಹೊನ್ನಾವರ ತಾಲೂಕ

೫೧	ಹೊನ್ನಾವರ ಲೋ|| ಬೋ|| ಆಫೀಸ ಇಮಾರತಿನ ಲಗತ್ ಇರುವ ಹೊರಗಿನ ಮನೆಯ ಸ್ಪೇ ರಿ (store house)	೨೯೫
೫೨	ಕತ್ತಗಾಲ ಹೊನ್ನಾವರ ರಸ್ತೆಯ ಮೈ ನಂ ೯/೮, ೧೦/೪,ಶಿವ ೧೦/೫ರ ಸ್ಪೇ ರಿ	೨೪೯೦
೫೩	ಹೆಬ್ಬಾನಕೇರಿ-ಸಾಂತಗಲ್ ರಸ್ತೆಯ ಮೈ ನಂ ೨/೧ ರಿಂದ ೨/೩ರ ವರಿಗೆ ಮತ್ತು ೩/೧ರಿಂದ ೩/೩, ೪/೭ ವ ೪/೮ರ ಸ್ಪೇ ರಿ	೧೭೯೫
೫೪	ಹಳದೀಪುರದ ಬ್ಯಾನಕೇರಿ ರಸ್ತೆಯ ಸ್ಪೆ ರಿ	೯೫೦
೫೫	ಕೆಕ್ಕಾರ ಚಂದಾವರ ರಸ್ತೆಯ ಸ್ಪೆ ರಿ	೪೫೦
೫೬	ಶ್ರೀ ಕರಿಕಾಲಮ್ಮನವರ ದೇವಸ್ಥಾನಕ್ಕೆ ಹೋಗುವ ರಸ್ತೆಯ ಸ್ಪೆ. ರಿ	೫೦೦
೫೭	ಹಳದೀಪುರ ಧರ್ಮಶಾಲಾ ಇಮಾರತಿನ ಸ್ಪೆ ರಿ	೭೬೦
೫೮	ಹೊನ್ನಾವರ ಲೋ ಬೋ ಆಫೀಸ ಇಮಾರತಿನ ಜಾದಾ ಕರಂಟ ರಿಪೇರಿ	೧೦೦
೫೯	ಹೊನ್ನಾವರ ತಾಲೂಕಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೨೨೫

ಭಟಕಳ ಪೇಠಾ

೬೦	ಮುಂಡಳ್ಳಿ ರಸ್ತೆಯ ಮೇಲೆ ಒಂದು ರೀನ್‌ಫೋರ್ಸ್ಡ ಸಿಮೆಂಟ ಕಾಂಕ್ರೀಟ ಮೋರಿ ಕಟ್ಟುವದು	೩೬೫
೬೧	ಶಟ್ಟಿಹಕ್ಕಲ ಅಟಗಾರ ರಸ್ತೆಯ ಸ್ಪೆ ರಿ ಚಿತ್ರಾಪುರ ಸ್ಕ್ವಾಡಿಗೆ	೬೦೦
೬೨	—ಡಿ— —ಡಿ— ಪಳ್ಳಿಹಳ್ಳಿ ಸ್ಕ್ವಾಡಿಗೆ	೪೧೦
೬೩	ಕಾಸರಕೋಡ ತೇರ್ನಮಕ್ಕಿ ರಸ್ತೆಯ ಸ್ಪೆ ರಿ	೯೯೮
೬೪	ಮುಡೇಶ್ವರ ಕೇರೀಕಟ್ಟಾ ರಸ್ತೆಯ ಸ್ಪೆ ರಿ	೯೦೦
೬೫	ಭಟಕಳ ಪೇಠಾದೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೧೫೦

ಸಿದ್ದಾಪುರ ಡಿವ್ಹಿಜನ್

ಸಿದ್ದಾಪುರ ತಾಲೂಕ

೬೬	ಸಿದ್ದಾಪುರ ಆಸ್ಪತ್ರೆ ಇಮಾರತಿನ ಮುಂಭಾಗದ ವೆ ಟಿಂಗ ರೂಮು ಮಾಡಾಯಿಸುವದ	೯೦೫
೬೭	— ಡಿ — ಇಮಾರತ ಗಳ ಸುತ್ತಲೂ ಬೇಲೀ ತಯಾರಿಸುವದ	೩೬೫
೬೮	ಸಿದ್ದಾಪುರ ಮೈಸೂರ ಫ್ರಂಟಿಯರ ರಸ್ತೆಯ ಮೈ ನಂ ೧/೨ರ ಕಲ್ವರ್ಟದ ಸ್ಪೆ ರಿ	೧೩೨೪
೬೯	ಸಿದ್ದಾಪುರ ಶಹರದೊಳಗಿನ ಕೊಂಡ್ಲಿ ರಸ್ತೆಯ ಮೇಸ್ತ ಪೂರ ಗಟರದ ಸ್ಪೆ ರಿ	೨೬೦೦
೭೦	ಕರ್ಕಿಸವಲ ಡೆಮಾರ್ಕೇಶನ್ ರಸ್ತೆ ಮೈ ನಂ ೧/೭ರ ಕಲ್ವರ್ಟದ ಸ್ಪೆ ರಿ	೯೨೫
೭೧	— ಡಿ — — ಡಿ — ಮೈ ನಂ ೧/೭ ಸ್ಪೆ ರಿ	೮೫೦
೭೨	ಸಿದ್ದಾಪುರ ಮನಮನೆ ರಸ್ತೆಯ ಮೈ ನಂ ೩/೮ ರಿಂದಾ ೪/೨ರ ವರೆಗಿನ ಸ್ಪೆ ರಿ	೩೪೨೬
೭೩	ಕುಮಟಾ ಸಿದ್ದಾಪುರ ರಸ್ತೆ ಮೈ ನಂ ೩೯ ವ ೪೦ರ ಸ್ಪೇ ರಿ	೭೧೬೭
೭೪	ಮುಂಡ್ಲಿಕೊಪ್ಪ ಹೆಗ್ಗೋಡಮನೆ ರಸ್ತೆಯ ಮೇಲಿನ ಮೋರಿ ತಿರುಗಿ ಕಟ್ಟುವದು ..	೭೦೦
೭೫	ಸಿದ್ದಾಪುರ ಮುಂಕಿಟ್ಟೆಲ ರಸ್ತೆ ಮೈ ನಂ ೮ ವ ೧೪ರಲ್ಲಿ ಖಡಿ ಹಾಕುವದು	೩೦೦೬
೭೬	ಸಿದ್ದಾಪುರ ಶಹರ ಧರ್ಮಶಾಲಾ ಇಮಾರತಿನ ಸ್ಪೆ ರಿ	೧೭೬೦
೭೭	ಆಸ್ಪತ್ರೆ ಇಮಾರತಿನ ಜಾದಾ ಕರಂಟ ರಿಪೇರಿ	೧೨೫
೭೮	ಸಿದ್ದಾಪುರ ತಾಲೂಕಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕ ರಿ	೧೬೫೦

ಸಿರ್ಸಿ ಡಿವ್ಹಿಜನ

ಸಿರ್ಸಿ ತಾಲೂಕ

೭೯	ಕೊಳಗೀಬೀಸ ಹೇರೂರ ರಸ್ತೆಯ ಮೈ ನಂ ೬/೭ ವ ೫/೭ರ ಡಿಪ್ಪಿನ ಸ್ಪೇ ರಿ	೧೩೨
೮೦	ಸಿರ್ಸಿ ಸೋಂದಾ ವ್ಹಾಯಾ ಹುಲೇಕಲ್ಲ ರಸ್ತೆಯ ಸ್ಪೇ ರಿ	೬೩೨೨
೮೧	ಸಿರ್ಸಿ ದೇವನಳ್ಳಿ ರಸ್ತೆಯ ಸ್ಪೇಶಲ್ ರಿಪೇರಿ	೨೫೫೦
೮೨	ಹಲಸಗಿ ಬಸ್ಸನಳ್ಳಿ ರಸ್ತೆಯ ಸ್ಪೇಶಲ್ ರಿಪೇರಿ	೧೦೦೦
೮೩	ಹನುಮಂತಿ ಧರ್ಮಶಾಲಾ ಇಮಾರತಿನ ಸ್ಪೆ ರಿ	೨೩೦೦
೮೪	ಹೆಗಡೇಕಟ್ಟೆ ಧರ್ಮಶಾಲಾ —ಡಿ—	೨೦೪೭
೮೫	ಸಿರ್ಸಿ ತಾಲೂಕ ಹದ್ದಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೭೭೦
೮೬	(ಅ) ಬನವಾಸಿ ಮಳಗಿ ರಸ್ತೆ ಮೈ ನಂ ೩/೧ ವ ೬/೩ರ ಸ್ಪೆ ರಿ	೨೭೦

ಹಳಿಯಾಳ ಡಿವ್ಹಿಜನ್

ಯಲ್ಲಾಪುರ ತಾಲೂಕ

೮೭	ಯಲ್ಲಾಪುರ ಆಸ್ಪತ್ರೆ ಇಮಾರತ ಗಳ ಸ್ಪೆಶಲ್ ರಿಪೇರಿ ಸ್ಕ್ಯಾಯಲೈಟ್ಸ ಹಾಕುವದು ಸಹಿತ	೪೫೦
೮೮	ಯಲ್ಲಾಪುರ ಡಾಕ್ಟರ್ಸ ಕ್ವಾರ್ಟರ್ಸದ ಸ್ಪೆಶಲ್ ರಿಪೇರಿ	೭೬೦
೮೯	ಮಂಚಿಕೇರಿ ಆಸ್ಪತ್ರೆಯ ಸುತ್ತಲೂ ಬೇಲಿ ಕಟ್ಟುವದು	೫೫೨
೯೦	ಯಲ್ಲಾಪುರ ಹರಿಜನ ತಾಲೂಕ ಇಮಾರತನ್ನು ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಆಫೀಸ ಎಗ್ಗೆ ರೂಪಾಂತರಿಸುವದು	೧೭೦೦
೯೧	ಯಲ್ಲಾಪುರ ಕತಗುಂದಿ ರಸ್ತೆಯ ಮೈ ನ ೩೬/೧ರ	

ಸದರ ರಸ್ತೆಯ ನ್ಯೆ ನಂ ... ರಲ್ಲಿಯ ಕಲ್ವರ್ಟ ಬಾಗಿ ಕಟ್ಟುವದು	[illegible]
ಹಿಕ್ಲಕಾರಗದ್ದೆ ... ರಸ್ತೆಯ ನ್ಯೆ ನಂ ... ರಲ್ಲಿಯ ಪೂಲಿನ ಸ್ಪೇ ...	[illegible]
ಯಲ್ಲಾಪುರ ತಾಲೂಕ ಆಸ್ಪತ್ರೆ ಇಮಾರತುಗಳ ಜಾದಾ ಕರಂಟ ರಿಪೇರಿ (ಮಂಚಿಕೇರಿ)	[illegible]
ಯಲ್ಲಾಪುರ ತಾಲೂಕ ಧರ್ಮಶಾಲಾ ಇಮಾರತುಗಳ ... (...)	[illegible]

ಮುಂಡಗೋಡ ತಾಲೂಕ

ಮುಂಡಗೋಡ ಆಸ್ಪತ್ರೆ ಇಮಾರತಗಳ ಸ್ಪೆಶಲ್ ರಿಪೇರಿ	[illegible]
ಮುಂಡಗೋಡ ... ರಸ್ತೆಯ ನ್ಯೆ ನಂ ... ರಲ್ಲಿ ಒಂದು ಹ್ಯೂಮ ಪಾಯಿಪ ಕ್ರೇನು ಕಟ್ಟುವದು	[illegible]
ಮಳಗಿ ಬದನಗೋಡ ರಸ್ತೆಯ ಸ್ಪೇ ...	[illegible]
ಮುಂಡಗೋಡದೊಳಗಿನ ಧರ್ಮಶಾಲಾ ಇಮಾರತು ...	[illegible]
ಮುಂಡಗೋಡ ಆಸ್ಪತ್ರೆ ಇಮಾರತುಗಳ ಜಾದಾ ಕರಂಟ ...	[illegible]
ಮುಂಡಗೋಡ ತಾಲೂಕದೊಳಗಿನ ಧರ್ಮಶಾಲೆಗಳ ಜಾದಾ ಕರಂಟ ರಿಪೇರಿ	೩,೦೦

ಹಳಿಯಾಳ ತಾಲೂಕ

ಹಳಿಯಾಳ ... ರಸ್ತೆ ನ್ಯೆ ನಂ ... ಕಲ್ವರ್ಟ ತಿರುಗಿ ಕಟ್ಟುವದು	[illegible]
ಸದರ ರಸ್ತೆಯ ನ್ಯೆ ನಂ ... ರಿಂದ ... ವರೆಗಿನ ...	[illegible]
ಹಳಿಯಾಳ ... ರಸ್ತೆ ನ್ಯೆ ನಂ ... ಸ್ಪೇ ...	[illegible]
... ಸ್ಪೆಶಲ್ ರಿಪೇರಿ	[illegible]
... ರಸ್ತೆಯ ನ್ಯೆ ನಂ ... ಸ್ಪೇ ...	[illegible]
... ರಸ್ತೆಯ ನ್ಯೆ ನಂ ... ಸ್ಪೆಶಲ್ ರಿ ...	[illegible]
ಹಳಿಯಾಳ ... ರಸ್ತೆಯ ನ್ಯೆ ನಂ ... ಸ್ಪೆಶಲ್ ರಿಪೇರಿ	[illegible]
... ಧರ್ಮಶಾಲಾ ಇಮಾರತಿನ ಸ್ಪೆಶಲ್ ರಿ ...	[illegible]
ಹಳಿಯಾಳ ತಾಲೂಕಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೩,೦೦

ಕಾರವಾರ ... -೧೯೪೮ — ಡಿ. ಎಸ್. ನಾಯಕ್, ಅಧ್ಯಕ್ಷ ಜಿಲ್ಲಾ ಲೋಕಲ್ ಬೋರ್ಡ, ಕಾನಡಾ

— R —

[illegible]

NOTICE

The District School Board Kanara intends to fill up a temporary post of a clerk sanctioned for work in connection with the District Building Committee in the School Board Office Karwar. The intending candidates should see the Administrative Officer D S B Kanara for an interview with an application written in their own hand along with testimonials and certificates in original, on 15-12-1948 at 11-30 A M in the Office at their cost. Candidates who are less than 18 years and more then 25 years of age on 1 12 1948 will not ordinarily be appointed.

Particulars to be furnished in the application

1. Name and address of the candidate (in full)
2. Caste
3. Date of birth
4. Educational qualifications
5. Languages known
6. Previous experience if any
7. Speed in typing

Scale of pay of the post

For persons who have passed the Matriculation or S L C Examination — Rs 46-3-85 E B-4-125-5-139 plus Dearness Allowance

Office of the D S B Kanara
Karwar, 1-12-1948

G S BHAT, KEKKAR
Chairman
District School Board Kanara

ಜಾಹೀರ ವಿನಂತಿ.

[illegible]

ದಾಮೋದರ ... ಶೈ

[illegible]

ಪತ್ರಿಕಾ-ಪ್ರಕಟನೆ.

[illegible] (processors) [illegible] (packed) [illegible]

(...)

೩೬	ಸೂಪಾ ಪೇಟಾದೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೬೭೫
೩೭	ಜಗಲ್‌ಬೇಟ ಸ್ಪ್ರಿಂಗದ ಸ್ಪೇ. ರಿ. .	೬೬೮
೩೮	ಶಿರಗೊಳ್ಳಿ ತಿನ್ನೈ ರಸ್ತೆಗೆ ಚಾಂದವಾಡಿ ತಾರಿ ಆಚೆಗೆ ಸ್ಪೇ. ರಿ. ಮಾಡುವದು.	[illegible]

ಹೊನ್ನಾವರ ಡಿವ್ಹಿಜನ

ಕುಮಟಾ ತಾಲೂಕ

೩೯	ಗೋಕರ್ಣ ಆಸ್ಪತ್ರೆ ಇಮಾರತುಗಳ ಸ್ಪೇಶಲ್ ರಿಪೇರಿ	೩೦೮
೪೦	ಕುಮಟಾ ಶಿದ್ದಾಪುರ ರಸ್ತೆ ಮೈ ನಂ ೧೩ ಇದರಲ್ಲಿರುವ ಮೋರಿಯನ್ನು ಹಾಕಿ ಮೋರಿಯಲ್ಲಿ ರೂಪಾಂತರಿಸುವದು	೩೫೦
೪೧	ಸದರ ರಸ್ತೆಯ ಮೈ ನಂ. ೧೦ರ ಸ್ಪೇ. ರಿ	೨೦೦
೪೨	ಕೇಣಿ ಕುಮಟಾ ಕೋಪ್ಪ ರಸ್ತೆಯ ಮೈ ನಂ ೨/೩ ರಿಂದಾ ೨೫/೪೮ ವರೆಗೆ ಖಡಿ ಹಾಕಿ ದುರುಸ್ತ ಮಾಡುವದು.	೯೮೧೦
೪೩	ಹೊಲನಗದ್ದೆ ಸಾಯಿಡಿಗೆ ಸದರ ರಸ್ತೆಯ ಮೇಲೆ ಗುಂಡಗಲ್ಲುಗಳನ್ನು ಹಾಕಿ ದುರುಸ್ತಿ ಮಾಡುವದು	೨೫೦೦
೪೪	ಕುಮಟಾ ಸಿದ್ದಾಪುರ ರಸ್ತೆ ಮೈ ನಂ ೧೨/೬ರ ಕಟ್ಟೆಗೆ ಮುಚ್ಚಳದ ಮೋರಿಯನ್ನು ತಿರುಗಿ ಕಟ್ಟುವದು	೧೨೦೦
೪೫	-- ಡಿ — ಮೈ ನಂ ೧೫,೩ರ ಮೋರಿಯನ್ನು ತಿರುಗಿ ಕಟ್ಟುವದು	೧೬೦೦
೪೬	ಉಪ್ಪಿನಪಟ್ಟಣ ಶಿರಗುಂಜಿ ರಸ್ತೆಯ ಮೈ ನಂ ೦/೧ ರಿಂದಾ ೦/೩ರ ವರೆಗಿನ ಭಾಗದ ಸ್ಪೆ ರಿ	೨೧೦೦
೪೭	ಮೊರಬಾ ರಸ್ತೆಯ ಸ್ಪೆಶಲ್ ರಿಪೇರಿ	೩೦೦
೪೮	ಮಂಕಿಬೈಲ ತಾರಿ ವಿಶ್ರಾಂತಿ ಮನೆಯ ಸ್ಪೆ ರಿ .	೬೨೫
೪೯	ಸಾಂತಗಲ್ ಬಂಗ್ಲೆಯ ಜಾದಾ ಕರಂಟ ರಿಪೇರಿ	೬೫
೫೦	ಕುಮಟಾ ತಾಲೂಕಿನೊಳಗಿನ ಧರ್ಮಶಾಲೆಗಳ ಜಾದಾ ಕರಂಟ ರಿಪೇರಿ .	೬೬೫

ಹೊನ್ನಾವರ ತಾಲೂಕ

೫೧	ಹೊನ್ನಾವರ ಲೋ॥ ಬೋ॥ ಆಫೀಸ ಇಮಾರತಿನ ಲಗತ್ ಇರುವ ಹೊರಗಿನ ಮನೆಯ ಸ್ಪೇ. ರಿ. (store house).	೨೮೫
೫೨	ಕತ್ತಗಾಲ ಹೊನ್ನಾವರ ರಸ್ತೆಯ ಮೈ ನಂ ೯/೮, ೧೦/೪,೬ಮ ೧೦/೫ರ ಸ್ಪೇ ರಿ	೨೪೯೦
೫೩	ಹೆಬ್ಬಾನಕೇರಿ–ಸಾಂತಗಲ್ ರಸ್ತೆಯ ಮೈ ನಂ ೨/೧ ರಿಂದ ೨/೩ರ ವರೆಗೆ, ಮತ್ತು ೩/೧ರಿಂದ ೩/೩, ೪/೭ ವ ೪/೮ರ ಸ್ಪೇ. ರಿ	೧೭೯೫
೫೪	ಹಳದೀಪುರದ–ಬ್ಬಾನಕೇರಿ ರಸ್ತೆಯ ಸ್ಪೆ ರಿ ...	೯೫೦
೫೫	ಕೆಕ್ಕಾರ ಚಂದಾವರ ರಸ್ತೆಯ ಸ್ಪೆ. ರಿ. ..	೪೫೦
೫೬	ಶ್ರೀ ಕರಿಕಾಲಮ್ಮನವರ ದೇವಸ್ಥಾನಕ್ಕೆ ಹೋಗುವ ರಸ್ತೆಯ ಸ್ಪೆ. ರಿ .	೫೦೦
೫೭	ಹಳದೀಪುರ ಧರ್ಮಶಾಲಾ ಇಮಾರತಿನ ಸ್ಪೆ ರಿ ...	೬೬೦
೫೮	ಹೊನ್ನಾವರ ಲೋ ಬೋ ಒಫೀಸ ಇಮಾರತಿನ ಜಾದಾ ಕರಂಟ ರಿಪೇರಿ. ..	೧೦೦
೫೯	ಹೊನ್ನಾವರ ತಾಲೂಕಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ ...	೬೬೫

ಭಟಕಳ ಪೇಟಾ

೬೦	ಮುಂಡಳ್ಳಿ ರಸ್ತೆಯ ಮೇಲೆ ಒಂದು ರೇನ್‌ಫೋರ್ಸ್ಡ ಸಿಮೆಂಟ ಕೊಕ್ರೀಟ ಮೋರಿ ಕಟ್ಟುವದು ...	೩೪೫೫
೬೧	ತಟ್ಟಿಹಕ್ಕಲ ಕಟಗಾರ ರಸ್ತೆಯ ಸ್ಪೆ. ರಿ .	೪೦೦
	ಚಿತ್ರಾಪುರ ಸ್ವಾಡಿಗೆ	
೬೨	—ಡಿ— —ಡಿ— ಪಳ್ಳಿಹಳ್ಳಿ ಸ್ವಾಡಿಗೆ .	೪೦೦
೬೩	ಕಾಸರಕೋಡ ತೇರ್ನಮಕ್ಕಿ ರಸ್ತೆಯ ಸ್ಪೆ ರಿ ..	೯೯೮
೬೪	ಮುರ್ಡೇಶ್ವರ ಕೆರೇಕಟ್ಟಾ ರಸ್ತೆಯ ಸ್ಪೆ. ರಿ .	೯೦೦
೬೫	ಭಟಕಳ ಪೇಟಾದೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ. .	೧೫೦

ಸಿದ್ದಾಪುರ ಡಿವ್ಹಿಜನ್

ಸಿದ್ದಾಪುರ ತಾಲೂಕ

೬೬	ಸಿದ್ದಾಪುರ ಆಸ್ಪತ್ರೆ ಇಮಾರತಿನ ಮುಂಭಾಗದ ವೆ ಟಿಂಗ ರೂಮು ವಾಢಾಯಿಸುವದು. .	೯೦೫
೬೭	—ಡಿ— ಇಮಾರತುಗಳ ಸುತ್ತಲೂ ಬೇಲೀ ತಯಾರಿಸುವದು	೩೬೫
೬೮	ಸಿದ್ದಾಪುರ ಮೈಸೂರ ಫ್ರಂಟಿಯರ ರಸ್ತೆಯ ಮೈ ನಂ ೧ ೬ರ ಕಲ್ವರ್ಟದ ಸ್ಪೆ. ರಿ ...	೧೩೬೪
೬೯	ಸಿದ್ದಾಪುರ ಶಹರದೊಳಗಿನ ಕೊಂಡ್ಲಿ ರಸ್ತೆಯ ಮೇಸ್ತ್ರಿ ಪ್ಲಾಂಗ ಗಟರದ ಸ್ಪೆ ರಿ	೨೬೦೦
೭೦	ಕರ್ಕಸವಲ ಡಿವಿಯೇಶನ್ ರಸ್ತೆ ಮೈ ನಂ ೧/೮೦ ಕಲ್ವರ್ಟದ ಸ್ಪೆ ರಿ ...	೯೨೫
೭೧	— ಡಿ — — ಡಿ — ಮೈ ನಂ. ೧/೭ ಸ್ಪೆ ರಿ.	೮೫೦
೭೨	ಸಿದ್ದಾಪುರ ಮನಮನೆ ರಸ್ತೆಯ ಮೈ. ನಂ ೩/೮ ರಿಂದಾ ೪/೨ರ ವರೆಗಿನ ಸ್ಪೆ. ರಿ ...	೩೪೨೬
೭೩	ಕುಮಟಾ–ಸಿದ್ದಾಪುರ ರಸ್ತೆ ಮೈ ನಂ. ೩೯ ವ ೪೦ರ ಸ್ಪೆ. ರಿ. ..	೬೯೬೪
೭೪	ಮಂಡ್ಲಿಕೊಪ್ಪ ಹೆಗ್ಗೋಡಮನೆ ರಸ್ತೆಯ ಮೇಲಿನ ಮೋರಿ ತಿರುಗಿ ಕಟ್ಟುವದು ...	೬೦೦
೭೫	ಸಿದ್ದಾಪುರ ಮಂಕಿಬೈಲ ರಸ್ತೆ ಮೈ. ನಂ. ೮ ವ ೧೪ರಲ್ಲಿ ಖಡಿ ಹಾಕುವದು.	೬೦೦೬
೭೬	ಸಿದ್ದಾಪುರ ಶಹರ ಧರ್ಮಶಾಲಾ ಇಮಾರತಿನ ಸ್ಪೆ ರಿ	೧೩೩೦
೭೭	ಆಸ್ಪತ್ರೆ ಇಮಾರತಿನ ಜಾದಾ ಕರೆಂಟ ರಿಪೇರಿ ..	೧೬೫
೭೮	ಸಿದ್ದಾಪುರ ತಾಲೂಕಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕ. ರಿ ...	೧೫೫೦

ಸಿರ್ಸಿ ಡಿವ್ಹಿಜನ

ಸಿರ್ಸಿ ತಾಲೂಕ

೭೯	ಕೊಳಗೀಬೀಸ ಹೇರೂರ ರಸ್ತೆಯ ಮೈ. ನಂ. ೪/೬ ವ ೫/೮ರ ಡಿಸ್ಪಿನ ಸ್ಪೇ. ರಿ.	೧೩೭
೮೦	ಸಿರ್ಸಿ ಸೋಂದಾ ವ್ಹಾಯಾ ಹುಲೇಕಲ್ಲ ರಸ್ತೆಯ ಸ್ಪೇ ರಿ.	೬೩೨೨
೮೧	ಸಿರ್ಸಿ ದೇವನಳ್ಳಿ ರಸ್ತೆಯ ಸ್ಪೇಶಲ್ ರಿಪೇರಿ.	೨೫೫೦
೮೨	ಹಲಸಗಿ ಬಪ್ಪನಳ್ಳಿ ರಸ್ತೆಯ ಸ್ಪೇಶಲ್ ರಿಪೇರಿ	೧೦೦೦
೮೩	ಹನುಮಂತಿ ಧರ್ಮಶಾಲಾ ಇಮಾರತಿನ ಸ್ಪೆ ರಿ	೨೩೦೦
೮೪	ಹೆಗಡೇಕಟ್ಟೆ ಧರ್ಮಶಾಲಾ —ಡಿ—	೨೦೮೬
೮೫	ಸಿರ್ಸಿ ತಾಲೂಕ ಹದ್ದಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ.	೬೫೦
೮೫	(ಅ) ಬನವಾಸಿ ಮಳಗಿ ರಸ್ತೆ ಮೈ.ನಂ. ೩/೪ ವ ೬/೩ ರ ಸ್ಪೆ ರಿ.	೭೬೦

ಹಳಿಯಾಳ ಡಿವ್ಹಿಜನ್

ಯಲ್ಲಾಪುರ ತಾಲೂಕ.

೮೬	ಯಲ್ಲಾಪುರ ಆಸ್ಪತ್ರೆ, ಇಮಾರತುಗಳ ಸ್ಪೆಶಲ್ ರಿಪೇರಿ ಸ್ಕ್ಯಾಯಲೈಟ್ಸ ಹಾಕುವದು ಸಹಿತ	೪೫೦
೮೭	ಯಲ್ಲಾಪುರ ಡಾಕ್ಟರ್ಸ ಕ್ವಾರ್ಟರ್ಸದ ಸ್ಪೆಶಲ್ ರಿಪೇರಿ	೬೬೦
೮೮	ಮಂಚಿಕೇರಿ ಆಸ್ಪತ್ರೆಯ ಸುತ್ತಲೂ ಬೇಲಿ ಕಟ್ಟುವದು.	೩೫೨
೮೯ ೯೦	ಯಲ್ಲಾಪುರ ಹರಿಜನ ಶಾಲಾ ಇಮಾರತನ್ನು ಆಸ್ಪತ್ರೆಯ ಲೋಕಲ್ ಬೋರ್ಡ ಆಫೀಸ ಬಗ್ಗೆ ರೂಪಾಂತರಿಸುವದು. ..	೧೬೦೦
೯೧	ಯಲ್ಲಾಪುರ ಅತಗುಂಡಿ ರಸ್ತೆಯ ಮೈ ನ ೩೪/೧ರ	

...ವದು	
ಸದರ ರಸ್ತೆಯ ಮೈ ನಂ ೩೩/೪ರಲ್ಲಿಯ ಕಲ್ವರ್ಟ ತಿರುಗಿ ಕಟ್ಟುವದು.	೭೧೫೦
ಹಿಕ್ಲಿಕಾರಗದ್ದೆ ಮುಂಡಗೋಡ ರಸ್ತೆಯ ಮೈ ನಂ. ೫/೭ರಲ್ಲಿಯ ಪೂಲಿನ ಸ್ಪೇ ರಿ	೫೭೭೦
ಯಲ್ಲಾಪುರ ತಾಲೂಕ ಆಸ್ಪತ್ರೆ ಇಮಾರತುಗಳ ಜಾದಾ ಕರಂಟ ರಿಪೇರಿ (ಮಂಚಿಕೇರಿ)	೧೦೩೮೦
ಯಲ್ಲಾಪುರ ತಾಲೂಕ ಧರ್ಮಶಾಲಾ ಇಮಾರತುಗಳ ಕ ರಿ (ಜಾದಾ ಕ. ರಿ)	೧೨೫

ಮುಂಡಗೋಡ ತಾಲೂಕ

ಮುಂಡಗೋಡ ಆಸ್ಪತ್ರೆ ಇಮಾರತುಗಳ ಸ್ಪೆಶಲ್ ರಿಪೇರಿ	೩೫೦
ಮುಂಡಗೋಡ ಆಗಡಿ ರಸ್ತೆಯ ಮೈ ನಂ. ೬/೪ರಲ್ಲಿ ಒಂದು ಹ್ಯೂಮ ಪಾಯಿಪ ಡ್ರೇನು ಕಟ್ಟುವದು.	೧೨೩೦
ಮಳಗಿ ಬಡನಗೋಡ ರಸ್ತೆಯ ಸ್ಪೆ ರಿ	೫೪೦
ಮುಂಡಗೋಡದೊಳಗಿನ ಧರ್ಮಶಾಲಾ ಇಮಾರತಿನ ಸ್ಪೆ ರಿ	೩೭೦೦
ಮುಂಡಗೋಡ ಆಸ್ಪತ್ರೆ ಇಮಾರತುಗಳ ಜಾದಾ ಕ ರಿ,	೨೧೪೩
ಮುಂಡಗೋಡ ತಾಲೂಕದೊಳಗಿನ ಧರ್ಮಶಾಲೆಗಳ ಜಾದಾ ಕರಂಟ ರಿಪೇರಿ	೧೨೫ / ೩೦೦

ಹಳಿಯಾಳ ತಾಲೂಕ

೧೦೩	ಹಳಿಯಾಳ ಕಾವಲವಾಡ ರಸ್ತೆ ಮೈ ನಂ ೩/೬ರ ಕಲ್ವರ್ಟ ತಿರುಗಿ ಕಟ್ಟುವದು	
೧೦೪	ಸದರ ರಸ್ತೆಯ ಮೈ ನಂ ೨/೪ ರಿಂದ ೧೦/೭೨ ವರೆಗಿನ ಭಾಗದಲ್ಲಿ ಖಡಿ ಹಾಕುವದು	೩೬೭೯
೧೦೫	ಹಳಿಯಾಳ ಸಾತಮಾಣ ರಸ್ತೆ ಮೈ. ನಂ ೦/೬, ೦/..., ../.. ವರೆಗಿನ ಸ್ಪೆ. ರಿ	೧೯೭೪
೧೦೬	ಕವಗಿ ರಸ್ತೆಯ ಸ್ಪೆಶಲ್ ರಿಪೇರಿ	೩೨೭೦
೧೦೭	ಧುಪಗೀ ರಸ್ತೆಯ ಮೈ ನಂ ೦/೩ ವರೆಗಿನ ಸ್ಪೆ ರಿ.	೭೮೩
೧೦೮	ಮುದನಳ್ಳಿ ರಸ್ತೆಯ ಮೈ ನಂ ೦/೧೦ ಸ್ಪೆಶಲ್ ರಿ	೭೯೩
೧೦೯	ಹಳಿಯಾಳ ಕಾವಲವಾಡ ರಸ್ತೆಯ ಮೈ. ನಂ ೫/೬ ರಿಂದ ೭ ವರೆಗಿನ ಸ್ಪೆಶಲ್ ರಿಪೇರಿ	೨೫೪
೧೧೦	ಕಾವಲವಾಡ ಧರ್ಮಶಾಲಾ ಇಮಾರತಿನ ಸ್ಪೆಶಲ್ ರಿ.	೧೯೭೭
೧೧೧	ಹಳಿಯಾಳ ತಾಲೂಕಿನೊಳಗಿನ ಧರ್ಮಶಾಲಾ ಇಮಾರತುಗಳ ಜಾದಾ ಕರಂಟ ರಿಪೇರಿ	೧೦೯೫ / ೩೦೦

ಕಾರವಾರ, ೨ ೧೨-೧೯೪೮

ಡಿ. ಎಸ್. ಪಾಯ್ಯ,
ಅಧ್ಯಕ್ಷ, ಜಿಲ್ಲಾ ಲೋಕಲ್ ಬೋರ್ಡ, ಕಾನಡಾ.

— R —

೧೯೪೮ರ ಮುಂಬಯಿಯ ಅಂಕಿ ಪಟ್ಟಿಯ ವ್ಯಾಪಾರಿಗೆ ಪರವಾನೆ ಕೊಡುವ ಆಜ್ಞೆಯ ೫ನೇ ಕಲಮಿನ ಉಪಕಲಮುಗಳನ್ನು ತಾ. ೧-೧೨-೧೯೪೮ರಿಂದ ಮುಂಬಯಿ ಪ್ರಾಂತದಲ್ಲಿ ಜಾರಿಯಲ್ಲಿ ತರಲು ಮುಂಬಯಿ ಸರಕಾರವು ನಿರ್ಧರಿಸಿದೆ. ಸದರಿ ಆಜ್ಞೆಯಂತೆ ಪರವಾನೆ ಪಡಕೊಂಡ ಹೊರತು ಯಾವದೇ ವ್ಯಾಪಾರಿಯು ಅಥವಾ ಬೇರೆ ವ್ಯಕ್ತಿಯು ಒಂದೇ ಗಿರಣಿಗಳಲ್ಲಿ ತಯಾರಾದ ಬಟ್ಟೆಯನ್ನು ಮಾರಕೂಡದು ಯಾ ಮಾರಾಟಕ್ಕಾಗಿ ಸಂಗ್ರಹಿಸಕೂಡದೆಂದು ಸದರಿ ಕಲಮು ವಿಧಿಸುತ್ತದೆ. ಸದರಿ ಆಜ್ಞೆಯಂತೆ ಕೊಡತಕ್ಕ ಪರವಾನಗೆಗಳನ್ನು ಸರಕಾರವು ಅರಿತಿರುವ ಕೆಲವು ಟೆಕ್ಸಟೈಲ ಕಂಟ್ರೋಲರರಿಗೆ ಕೊಡಬೇಕೆಂದು ಸರಕಾರದ ಅಧಿಕಾರವಾಗಿದೆ. ಆದರೆ ಪರವಾನೆಯು ಇಲ್ಲದ ಯಾವನೊಬ್ಬನು ಒಂದೇ ಗಿರಣಿಗಳ ಬಟ್ಟೆಯನ್ನು ತಾ. ೧-೧೨-೧೯೪೮ರಿಂದ ಮುಂದೆ ಮಾರಿದರೆ ಅವನು ಅಪರಾಧಿಯಾಗುವನು.

ಜಾಹೀರ ವಿನಂತಿ.

ಕುಮಟಾ ಶ್ರೀ ರಾಮೇಶ್ವರ ಕಾಮಾಕ್ಷಿ ಕಾಲಭೈರವ ದೇವರ ಛಾಳ ದಿನ್ನು ಅಭಿಮಾನಿಗಳಲ್ಲಿ ವಿನಂತಿಯೇನಂದರೆ, ಶ್ರೀ ರಾಮೇಶ್ವರ, ಕಾಲಭೈರವ, ಬ್ರಹ್ಮದೇವರ ದೇವಸ್ಥಾನಗಳ ಜೀರ್ಣೋದ್ಧಾರದ ಕೆಲಸವನ್ನು ಬೇಗನೇ ಮುಗಿಸಿ ಇದೇ ಸರ್ವಧಾರಿ ಸಂವತ್ಸರ ಫಾಲ್ಗುಣ ಶುದ್ಧ ೬ ಸೋಮವಾರ (ತಾ. ೭—೩—೪೯)ನೇ ದಿನ ಪ್ರತಿಷ್ಠೆಯು ... ಮಾಡಬೇಕಾಗಿ ನಿಶ್ಚಯಿಸಲಾಗಿದೆ. ಈ ಕಾರ್ಯಕ್ಕೆ ... ಸುಮಾರು ರೂ. ೧೦೦೦೦ ಬೇಕಾಗುವದೆಂದು ತಜ್ಞರು ಅಂದಾಜು ಮಾಡಿದ್ದಾರೆ. ಈ ಹಣವನ್ನು ಪ್ರತಿಷ್ಠೆಯ ... ಗಳನ್ನು ಹಾಗೂ ದೇವರ ಅಭಿಮಾನಿಗಳನ್ನು ... ಬೇಗನೇ ದೇವಸ್ಥಾನದ ಕೆಲಸವು ಆಗ... ಸದ್ಯ ... ನಿಧಿ ಸಂಗ್ರಹಕ್ಕಾಗಿ ... ಪಂಚಗ್ರಾಮ ಮುಂತಾದ ಕಡೆ ಸಂಚಾರ... ಆಗ ಅವರಿಗೆ ಭಕ್ತರು ಯಥಾಶಕ್ತಿ ಕಾಣಿಕೆಗಳನ್ನು ಕೊಟ್ಟು ಕೃತಾರ್ಥರಾಗಬೇಕಾಗಿ ... ಸರ್ವಧಾರಿ ಸಂ॥ ಮಾರ್ಗಶೀರ್ಷ ಶುದ್ಧ ...

ದಾಮೋದರ ಅಚ್ಯುತ ಶೆಟ್ಯೆ,
ಶ್ರೀ ದೇವಸ್ಥಾನದ ಪಂಚರು ಪರ್ಯೋ...

NOTICE.

The District School Board, Kanara intends to fill up a temporary post *of a clerk sanctioned for work in connection with the District Building* Committee, in the School Board Office, Karwar The intending candidates should see the Administrative Officer, D S B, Kanara for an interview with an application written in their own hand, along with testimonials and certificates in original, on 15-12-1948 at 11-30 A M in the Office, at their cost Candidates who are less than 18 years and more then 25 years of age on 1-12-1948 will not ordinarily be appointed

Paticulars to be furnished in the application.

1. Name and address of the candidate (in full)
2. *Caste*
3. Date of birth·
4. Educational qualifications
5. Languages known
6. Previous experience if any·
7. Speed in typing

Scale of pay of the post

For persons who have passed the Matriculation or S L C Examination	Rs 46-3-85-E B -4-125-5-130, plus Dearness Allowance

Office of the
D S. B, Kanara,
Karwar, 1-12-1948

G S. BHAT, KEKKAR
Chairman,
District School Board Kanara.

ಪತ್ರಿಕಾ-ಪ್ರಕಟನೆ.

೧೯೪೮ನೇ ಇಸವಿಯ ಅರಳೆ ನೂಲು-ಬಟ್ಟೆಗಳ (ನಿಯಂತ್ರಣದ) ಆಜ್ಞೆಯ ೨೫ (೧)ನೇ ಕಲಮಿನ ಅಂಕಗಳ ಕಡೆ ಸಾರ್ವಜನಿಕರ ಲಕ್ಷ ಸೆಳೆಯಲಾಗಿದೆ. ಯಾವದೇ ವ್ಯಾಪಾರಿಗಾರನಾಗಲಿ ತಯಾರಕನಾಗಲಿ (ಇದರಲ್ಲಿ ಬಟ್ಟೆಗೆ ಕಲರ್ ಬಣ್ಣ ಕೊಡುವವರು (processors) ಅಚ್ಚು ಹಾಕುವವರು, "ಚಿರ್ಕ" ಹಾಕುವವರು, ಬಣ್ಣ ಕೊಡುವವರು ಹಾಗೂ ತಯಾರ ಬಟ್ಟೆಗಳನ್ನು ಶೃಂಗರಿಸುವವರು ಇವರೆಲ್ಲರೂ ಸೇರುತ್ತಾರೆ) ತಾ. ೩೦—೧೧—೧೯೪೮ರ ನಂತರ ಹಿಂದೂಸ್ಥಾನದಲ್ಲಿ ತಯಾರಾದ ಮತ್ತು ೧-೮-೧೯೪೮ರ ಪೂರ್ವದಲ್ಲಿ ಗಂಟು ಕಟ್ಟಿದ (packed) ಯಾವದೇ ಬಟ್ಟೆಯನ್ನು ಅಥವಾ ನೂಲನ್ನು ಕೊಂಡುಕೊಳ್ಳಕೂಡದು, ಮಾರಕೂಡದು ಅಲ್ಲದೆ ತನ್ನ ಕಬಜೆಯಲ್ಲಿ ಇಟ್ಟುಕೊಳ್ಳಕೂಡದೆಂದು ಸದರಿ ಕಲಮಿನಲ್ಲಿ ವಿಧಿಸಲಾಗಿದೆ. ಇಂತಹ ಬಟ್ಟೆಯನ್ನು ಅಥವಾ ನೂಲನ್ನು ಮಾರಾಟ ಮಾಡುವದಕ್ಕಾಗಿ ಇನ್ನು ಪುನಃ ಅವಧಿಯನ್ನು ಬೆಳೆಸಲಾಗಲಿಕ್ಕಿಲ್ಲವಾದ್ದರಿಂದ, ತಾ. ೩೦—೧೧—೧೯೪೮ರ ನಂತರ ಇಂತಹ ಬಟ್ಟೆ ಅಥವಾ ನೂಲನ್ನು ಮಾರುವವನು, ಕೊಂಡುಕೊಳ್ಳುವವನು ಅಥವಾ ಇಟ್ಟುಕೊಳ್ಳುವವನು ಅಪರಾಧಿಯಾಗುವನೆಂದೂ ಸಂಬಂಧಪಟ್ಟ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತದೆ. ಈ ... ೩೦-೧೧-೧೯೪೮ರ ನಂತರ ಇಂತಹ ಬಟ್ಟೆ ಯಾ ನೂಲು ಯಾರ ಕಬಜೆಯಲ್ಲಿ ಮಾರಾಟವಾಗದೆ ಉಳಿದರೆ, ಅವರು ತಾ ೭-೧೨-೧೯೪೮ರೊಳಗಾಗಿ, ಸದರಿ ಅರಳೆ ಬಟ್ಟೆ ನೂಲುಗಳ (ನಿಯಂತ್ರಣದ) ಆಜ್ಞೆಯ ೨೯ (೨)ನೇ ಕಲಮಿನಲ್ಲಿ ವಿಧಿಸಿದಂತೆ, ಮುಂಬಯಿಯಲ್ಲಿರುವ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರಿಗೆ ತಮ್ಮ ಕಡೆಗಿರುವ ಸಂಗ್ರಹದ ವಿವರಗಳನ್ನು ಪ್ರತ್ಯಕ್ಷ ಪೂರ್ವಕ ಕಳಿಸಿ, ಸದರಿ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರು ಸದರಿ ರೂಪ ಸಂಗ್ರಹದ ವಿಲ್ಲೇವಾರಿಯ ಸಂಬಂಧದಲ್ಲಿ ಕೊಡಬಹುದಾದ ಆದೇಶದಂತೆ ಆ ಶಿಲ್ಕು ಸಂಗ್ರಹದ ಸಂಗ್ರಹ, ವಿಲೇವಾರಿ ಅಥವಾ ವಿಕ್ರಯ ಸಂಬಂಧದಲ್ಲಿ ಕೊಡಬಹುದಾದ ಆದೇಶದಂತೆ ಆ ಸಂಗ್ರಹದ ವ್ಯವಸ್ಥೆ ಮಾಡಬೇಕು. ಶಿಲ್ಕು-ಸಂಗ್ರಹವನ್ನು ಪ್ರತ್ಯಕ್ಷ-ಪೂರ್ವಕ ತಿಳಿಸುವ ಮಾಹಿತಿ ಪತ್ರದ ಮಾದರಿಗಳು ಈ ಪ್ರಕಟನೆಗೆ ಜೋಡಿಸಲ್ಪಟ್ಟಿವೆ. ಮೇಲಿನಂತೆ ಶಿಲ್ಕು ಸಂಗ್ರಹದ ಮಾಹಿತಿ ಒದಗಿಸಲು ತಪ್ಪಿದವರು ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರು ಕೊಡುವ ಆಜ್ಞೆಗಳನ್ನು ಉಲ್ಲಂಘಿಸಿದವರೂ ಶಿಕ್ಷೆಗೆ ಗುರಿಯಾಗುವರು.

(ಮಾಹಿತಿ ಪತ್ರಗಳ ಮಾದರಿಗಳನ್ನು ೬ನೇ ಪುಟದಲ್ಲಿ ಕೊಡಲಾಗಿದೆ)

ಮಾದರಿ ಅ.

ತಾ ೩೦-೧೧-೧೯೪೮ನೇ ದಿನ ಮಧ್ಯರಾತ್ರಿಯ ವಿಲೆಯಾಗದೆ ಉಳಿದ ಜವಳಿಯ ಸಂಗ್ರಹದ ಮಾಹಿತಿ ಪತ್ರಿಕೆ.

ಹೆಸರು — ವಿಳಾಸ —

ಪತ್ರಕ ಒಪ್ಪಿಸುತ್ತವರು ರೋಕ ವ್ಯಾಪಾರಿಯೋ ಕಿರಕೋಳ ವ್ಯಾಪಾರಿಯೋ ಅಥವಾ ದಲಾಲನೋ ?
(ಹಿಂದೆ ಪರವಾನೆ ಪಡೆದಿದ್ದರೆ ಅದರ ನಂಬರ)

ಗಂಟ್ಟು (bales) ಗಳಲ್ಲಿರುವ ಸಂಗ್ರಹ

ಬಟ್ಟೆಯ ವರ್ಣನೆ	ಗಂಟ್ಟುಗಳ ಸಂಖ್ಯೆ	ಸಣ್ಣ ಗಂಟ್ಟುಗಳಲ್ಲಿ ಎಷ್ಟು ಬಟ್ಟೆಯುಂಟು.	ತುಕಡಿಗಳ (pieces) ಸಂಗ್ರಹದ ಅಥವಾ ಕುಂಡು ಬಟ್ಟೆಗಳ (cut pieces) ಪ್ರಮಾಣ	ಒಟ್ಟು ಬೇರೀಜು ಅಂಕಿ ಗಜ	ಮಿಲ್ಲು ಮಾರ್ಕ ನಂಬರ	ಗಂಟು ಕಟ್ಟಿದ ತಾರೀಖು
೧	೨	೩	೪	೫	೬	೭
(೧) (ಅ) ವಾಡಿಕೆಯಾಗಿ ವಾರ ಸಂಖ್ಯೆಯಿಂದ ಮಾರಲ್ಪಡುವ ಎಲ್ಲ ಬಗೆಯ ಹಿಂದೀ ಗಿರಣಿಯ ಬಟ್ಟೆ ಸ್ವಂತದ್ದಾಗಿಟ್ಟುಕೊಂಡದ್ದು	ಗಂಟ್ಟುಗಳು	ನಂ.ರ	ನಂ.ತ	ಗಜ		
(i) ಜನುಗು						
(ii) ಮಧ್ಯಮ						
(iii) ಒರಟು						
(ಬ) ಬೇರೊಬ್ಬರ ಪರ್ಫವಾಗಿ ಇಟ್ಟುಕೊಂಡದ್ದು.						
(i) ಜನುಗು						
(ii) ಮಧ್ಯಮ						
(iii) ಒರಟು						
(೨) ಧೋತರಗಳೂ ಸಾಡಿ (ಸೀರೆ)ಗಳೂ						
(ಅ) ಸ್ವಂತದ್ದಾಗಿ ಇಟ್ಟುಕೊಂಡದ್ದು						
(i) ಜನುಗು						
(ii) ಮಧ್ಯಮ						
(iii) ಒರಟು.						
(ಬ) ಬೇರೊಬ್ಬರ ಬಗೆ ಇಟ್ಟುಕೊಂಡದ್ದು						
(i) ಜನುಗು						
(ii) ಮಧ್ಯಮ						
(iii) ಒರಟು						
(೩) ವಾಡಿಕೆಯಾಗಿ ನಗಗಳ ಸಂಖ್ಯೆಯಿಂದ ಮಾರಲ್ಪಡುವ ಬೇರೆ ಎಲ್ಲ ಬಗೆಯ ಬಟ್ಟೆ. ಉದಾ: ಹಾಸುಗೆ (sheet) ಗಳು, ಚಾದರಗಳು, ಟುವಾಲುಗಳು ಇತ್ಯಾದಿ						
(ಅ) ಸ್ವಂತದ್ದಾಗಿ ಇಟ್ಟುಕೊಂಡದ್ದು.						
(ಬ) ಬೇರೊಬ್ಬರ ಬಗ್ಗೆ ಇಟ್ಟುಕೊಂಡದ್ದು.						
(೪) ಮೇಲಿನ ವರಗಗಳಲ್ಲಿ ಬಾರದಿರುವಂತಹ ಬಟ್ಟೆ ಉದಾ: ಫೆಂಟುಗಳು						

ಊರು & ತಾರೀಖು (ಮಾಹಿತಿ ಪತ್ರಕ ಒಪ್ಪಿಸುವ ವ್ಯಾಪಾರಿಯ ಸಹಿ)

ಮಾದರಿ ಬ

ತಾ.೩೦-೧೧-೧೯೪೮ಕ್ಕೆ ವಿಲೆಯಾಗದೆ ಉಳಿದಿರುವ ನೂಲಿನ ಸಂಗ್ರಹದ ಮಾಹಿತಿ ಪತ್ರಿಕೆ

ಹೆಸರು & ವಿಳಾಸ — ಪರವಾನೆ ನಂ —

ನೂಲಿನ ಸಂಬಂಧದ ಗಂಟ್ಟುಗಳೂ ರಟ್ಟಲುಗಳೂ ಒಂಟಿ/ಫ್ಲೋಲ್ಡ್

ನೂಲಿನ ವರ್ಣನೆ	೧ರಿಂದ ೧೦ನಂ	೧೧ ರಿಂದ ೨೦ ನಂ	೨೧ ರಿಂದ ೩೦ ನಂ	೩೧ ರಿಂದ ೪೦ ನಂ.	೪೦ ರಿಂದ ಮೇಲಿನ ನಂ	ಟೆಕ್ಸ ಮಾರ್ಕ ನಂ	ಗಂಟು ಕಟ್ಟಿದ ತಾರೀ.
೧ ಬೂದಿ ಬಣ್ಣದ್ದು ಗ್ರೇ							
೨ ಬಿಳಿಪದ್ದು (ಬ್ಲೀಚ್ಡ್)							
೩ ರಂಗಿನ							
೪ ಹುರಿಯ ನೂಲು							
೫ ಅನಿರ್ದಿಷ್ಟ ನೂಲು unspecified							

ಊರು & ತಾರೀಖು (ಪರವಾನೆಧಾರಿಯ ಸಹಿ)

ಕುಮಟಾ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಭಜಕರಲ್ಲಿ ವಿನಂತಿ

ಮೇಲ್ಕಾಣಿಸಿದ ದೇವಸ್ಥಾನದ ಗರ್ಭಗುಡಿ, ಸಂಧ್ಯಾಮಂಟಪ ಮತ್ತು ಸಭಾಮಂಟಪಗಳ ಮೇಲ್ಮಾಡಿನ ಜೀರ್ಣೋದ್ಧಾರ ಮಾಡಿ, ದೇವಸ್ಥಾನದ ಎದುರು ಒಂದು ಕೇಂಚಿ ಯಾನೆ ಮುಖಮಂಟಪ ಕಟ್ಟಿಸಬೇಕೆಂದು ಇದೇ ಕಳೆದ ನವರಾತ್ರಿಯ ಹುಣ್ಣಿಮೆಯ ದಿನ ದೇವರ ಭಜಕರ ಮಹಾಸಭೆಯಲ್ಲಿ ನಿರ್ಣಯವಾದಂತೆ, ದೇವಸ್ಥಾನದ ಕಾರ್ಯಕಾರಿ ಮಂಡಳದ ಅಧ್ಯಕ್ಷ ರಾ॥ ಮಾಧವ ವಿಠೋಬ ಶಾನಭಾಗರು ಅರ್ಚಕರೂ ಬೇರೆ ಕೆಲವರೂ ಇದೇ ಬರುವ ಮಾರ್ಗಶೀರ್ಷ ಶು॥ ೫ ಮಿಯ ದಿನ ದೇವರ ಪ್ರಸಾದ ತಕ್ಕೊಂಡು, ಸದರಿ ಜೀರ್ಣೋದ್ಧಾರಕ್ಕಾಗಿ ದೇವಕುಳಾವಿಗಳಿಂದ ನಿಧಿ ಕೂಡಿಸಲು ಹೊರಡುವವರಿದ್ದಾರೆ. ಶ್ರೀ ದೇವರ ಭಜಕರೆಲ್ಲರೂ ಅವರಿಗೆ ಯಥಾಶಕ್ತಿ ಕಾಣಿಕೆ-ವಂತಿಕೆಗಳನ್ನು ಕೊಟ್ಟು, ಸದರಿ ಜೀರ್ಣೋದ್ಧಾರ ಕಾರ್ಯವು ಶ್ರೀ ದೇವರ ಕೀರ್ತಿಗೆ ಒಪ್ಪುವಂತೆ ನೆರವೇರುವ ಹಾಗೆ ಸಹಾಯ ಮಾಡಿ ಶ್ರೇಯೋಭಾಗಿಗಳಾಗಬೇಕಾಗಿ ಅರಿಕೆಯಿದೆ.

ಮಾಧವ ವಿಠೋಬ ಶಾನಭಾಗ,
ತಾ.೨೨-೧೧-೪೮ ಕಾರ್ಯಕಾರಿ ಮಂಡಳದ ಅಧ್ಯಕ್ಷ

ಶಿಕ್ಷಕರ ನೆರವಿಲ್ಲದೆ ಹಿಂದೀ ಕಲಿಯಿರಿ!

ಹಿಂದೀ-ಕನ್ನಡ ಸ್ವಯಂ-ಶಿಕ್ಷಕ— ವಿದ್ಯಾಮಂದಿರ ಸ್ವಾಮಿ ನ್ಯಾಯ-ಕಾವ್ಯತೀರ್ಥ ವರ್ಧಮಾನ ಶಾಸ್ತ್ರಿಗಳು ಬರೆದುದು ಪುಟಗಳು ೩೦೦. ಅಂದವಾಗಿ ಅಚ್ಚಾದಾಕಿಡ ಸುಂದರ ಹೊತ್ತಿಗೆ. ಅತ್ಯುಪಯುಕ್ತ ಗ್ರಂಥ. ಬೇಡಿಕೆ ಬಹಳವಿದೆ ಬೆಲೆ ರೂ ೩

ರಚನಾ ರತ್ನಾಕರ— ಶ್ರೀ ಬಿ ಕೃಷ್ಣ ಶಾಸ್ತ್ರಿ ಎಮ್ ಶಾಸ್ತ್ರಿಗಳು ರಚಿಸಿದ ಹಿಂದೀ ಲೇಖನ ಪದ್ಧತಿ ಪುಟಗಳು ೩೨೫. ಬೆಲೆ ರೂ ೨-೨-೦

ಇಂಗ್ಲಿಷ-ಹಿಂದೀ ಶಬ್ದಕೋಶ (ಗೃಹೋಪಯೋಗಿ)— ಇಂಗ್ಲಿಷ ಶಬ್ದಗಳ ಹಿಂದೀ ಅರ್ಥವುಳ್ಳದ್ದು. ಸಣ್ಣ (ಪೊಕೆಟ್) ಆಕಾರದ್ದು ಪುಟಗಳು ೧೦೩೬. ಅಂದ ಅಚ್ಚಿನ ಚಂದ ಗ್ರಂಥ. ಬೆಲೆ ರೂ ೩

ಲೋಕೋಕ್ತಿಯಾಂ— ಈ ಪುಸ್ತಕದಲ್ಲಿ ಹಿಂದೀ ಭಾಷೆಯೊಳಗೆ ರೂಢವಿರುವ ಭಾಷಾ-ಪ್ರಯೋಗಗಳನ್ನೂ ಪದಪ್ರಯೋಗಗಳನ್ನೂ ಸಂಗ್ರಹಿಸಿ, ಸಾದಾ ಸುಗಮ ಹಿಂದೀ ಭಾಷೆಯ ಅರ್ಥ ಸಹಿತ, ಕೊಡಲಾಗಿದೆ ಬೆಲೆ ಆ ೧೪

ಸಂಸ್ಕೃತ ಭಾಷೆಯ ಸ್ವಯಂ-ಶಿಕ್ಷಕ— ಇಂಗ್ಲಿಷ ಭಾಷೆಯ ದ್ವಾರಾ ಸ್ವತಃ ಸಂಸ್ಕೃತ ಕಲಿಯಲು ಬಹಳ ಸಹಾಯಕಾರಿಯಾಗಿದೆ ಪಂಡಿತ ಅನಂತಾಚಾರಿ ಮತ್ತು ಸಂಸ್ಕೃತ ಶಿಕ್ಷಕ ಶ್ರೀ ವರದಾಚಾರ ಎಮ್. ಎ. ಇವರು ರಚಿಸಿದ್ದು ಬೆಲೆ ರೂ. ೨

ಬೇಕಾದವರು ನಮಗೆ ಬರೆಯಿರಿ

SHEBBEER BROTHERS.
Book-sellers Bhatkal (N K)

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ಬಳಿಯಲ್ಲಿ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಃಪೂರ್ವಕ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ, ರುದ್ರಾಕ್ಷಿ ವಗೈರೆ ಯಾತ್ರಿಕರ ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು

ಗೋಕರ್ಣ ಗಣಪತಿ ವಾಸುದೇವ ಭಟ,
ಘಸ್ತಿರಗಲ್ಲಿ, ಬನಾರಸ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ, (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್ಸ್" ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270 Monday, 13-12-1948.

ವರ್ಗಣಿಯ ದರ:
[illegible]

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೨೮.

ಕುಮಟ:- ಸೋಮವಾರ, ತಾ ೧೩—೧೨—೧೯೪೮.

ಜಾಹೀರಾತುಗಳ ದರ:
[illegible]

ವಿವಿಧ ವಿಷಯಗಳು

ನಾಳಿನ ಶನಿವಾರ (ತಾ ೧೮) ಮತ್ತು ರವಿವಾರ (ತಾ ೧೯)ನೇಗೆ ಜಯಪುರದಲ್ಲಿ ರಾಷ್ಟ್ರೀಯ ಸಭೆಯ ೫೫ನೇ ಅಧಿವೇಶನ ಜಯಪುರ ಸಂಸ್ಥಾನದ ರಾಜಧಾನಿಯಾದ ಜಯಪುರದಲ್ಲಿ ಶ್ರೀ|| ಭೋಗರಾಜು ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರುತ್ತದೆ. ಈ ಪಟ್ಟಣ ಚರಿತ್ರಾ-ಪ್ರಸಿದ್ಧವಾದದ್ದು. ಇದನ್ನು ೨ನೇ ಜಯಸಿಂಗನು ೧೭೨೮ನೇ ಇಸವಿಯಲ್ಲಿ ಕಟ್ಟಿಸಿದನು. ಜಯಸಿಂಗನು ಯಂತ್ರಶಾಸ್ತ್ರ, ಗಣಿತ ಶಾಸ್ತ್ರ, ರಸಾಯನ ಶಾಸ್ತ್ರಗಳಲ್ಲಿ ವಿಶಾರದನು. ದಿಲ್ಲಿ, ಶ್ರೀಕ್ಷೇತ್ರ ಕಾಶಿ ಮತ್ತು ಜಯಪುರಗಳಲ್ಲಿ ಜ್ಯೋತಿಷ ಸಂಶೋಧನ ಶಾಲೆಗಳನ್ನು ಕಟ್ಟಿಸಿ ಪ್ರಸಿದ್ಧಿ ಪಡೆದಿದ್ದಾರೆ. ಯುದ್ಧದಲ್ಲಿ ಶೌರ್ಯದಿಂದ ಹೋರಾಡಿ ವೀರ ಭಟರೆಂದು ಕೀರ್ತಿ ಪಡೆದಿದ್ದಾನೆ. ಜಯಪುರ ಪಟ್ಟಣವೂ ಸಂಸ್ಥಾನವೂ ಹಿಂದುಸ್ಥಾನದ ಕೇಂದ್ರ ಪ್ರದೇಶವಾಗಿದೆ. ಉಗಿಬಂಡಿ ಮಾರ್ಗ [illegible]ಗಳಿಂದ ಹಿಂದುಸ್ಥಾನದೊಳಗೆ ವ್ಯವಹಾರ ನಡಿಸಲು ಅನುಕೂಲವುಂಟು. ಇಲ್ಲಿ ಧರ್ಮದ್ವೇಷವಿಲ್ಲ, ಭಿನ್ನ ಭಿನ್ನ ಸಮಾಜಗಳೊಳಗೆ ಐಕ್ಯತೆಯುಂಟು. ದೇಶದಲ್ಲಿ ಹಿಂದು-ಮುಸಲ್ಮಾನರೊಳಗೆ [illegible] ನಡೆದಾಗ ಜಯಪುರ ಸಂಸ್ಥಾನ ಪ್ರಶಾಂತವಿತ್ತು. ಸಂಸ್ಥಾನದೊಳಗಿನ ಪ್ರಜೆಗಳು ಪ್ರೀತಿಯಿಂದ ಕೂಡಿಕೊಂಡು ನಡೆಯುತ್ತಿದ್ದರು. ಇಲ್ಲಿಯ ಸಂಸ್ಥಾನಿಕರು ಕಛ್ಛವಾ ರಜಪೂತ ಕುಲದವರೆಂದು ಹೇಳಿಸಿಕೊಳ್ಳುತ್ತಾರೆ. ಇವರು ಅಯೋಧ್ಯಾಧಿಪತಿ ಶ್ರೀ ರಾಮ ದೇವರ ಎರಡನೇ ಮಗ ಕುಶನ ವಂಶಜರೆಂದು ಹೇಳುತ್ತಾರೆ. ಕುಶನು ಕೋಸಲ ದೇಶದಿಂದ ಸೋಣ ನದಿಗೆ ಒಂದು ರೋಹಿತಸ ದುರ್ಗವನ್ನು ಕಟ್ಟಿಸಿ ಜಯಪುರ ಸಂಸ್ಥಾನವನ್ನು ಸ್ಥಾಪಿಸಿದನು. ಇದೇ ವಂಶದ ನಳ ರಾಜನು ರೋಹಿತಸದಿಂದ ನಾರವರ ಪಟ್ಟಣಕ್ಕೆ ಮೂರನೇ ಶತಮಾನದಲ್ಲಿ ರಾಜಧಾನಿಯನ್ನು ಒಯ್ದನೆಂದೂ ಆ ಪಟ್ಟಣವನ್ನು ಯವನರು ೧೦ನೇ ಶತಮಾನದಲ್ಲಿ ಮುತ್ತಿದ ಬಳಿಕ ಸಂಸ್ಥಾನಿಕರು ೯೬೭ರಲ್ಲಿ ಅಂಬರ ಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಸಿ ಗಾದಿಯನ್ನು ನಡಿಸಿದರೆಂದೂ ಹೇಳುತ್ತಾರೆ. ಮುಸಲ್ಮಾನರ ರಾಜ್ಯದಲ್ಲಿ ಈ ಸಂಸ್ಥಾನಿಕರು ಮೊದಲು ಹೋರಾಡಿದರೂ ಸೋತ ಬಳಿಕ ಮುಸಲ್ಮಾನರೊಡನೆ ಶರೀರ ಸಂಬಂಧ ಬೆಳಸಿ ಅವರೊಡನೆ ಕೂಡಿನಡೆದು, ಅವರ ನೆಂಟರಾದರು. ಬಿಹಾರಿಮಾಲ ಅರಸರು ಮುಸಲ್ಮಾನ ದಾಳಿಗಾರರನ್ನು ಪ್ರತಿಭಟಿಸಿದವರು; ಅವರ ಮಗ ಭಗವಾನದಾಸನು ಮುಸಲ್ಮಾನ ಹುಡುಗಿಯನ್ನು ಮದುವೆ ಮಾಡಿಕೊಂಡು, ಅಕಬರ ಬಾದಶಹರ ಮರ್ಜಿ ಸಂಪಾದಿಸಿದನು. ಅವನ ಮಗ ಮಾನಸಿಂಗನು ಅಕಬರ ಬಾದಶಹರ ಸೇನಾಪತಿಯಾಗಿ ಬಹಳ ಕಾರಭಾರ ನಡಿಸಿದ ಇತಿಹಾಸವುಂಟು. ಔರಂಗಜೇಬ ಬಾದಶಹನ ಕಾರಕೀರ್ದಿಯಲ್ಲಿ ಶಿವಾಜಿ ಮಹಾರಾಜನ ಉದಯವಾಯಿತು. ಆಗ ೧ನೇ ಜಯಸಿಂಗನು ಜಯಪುರದ ಗಾದಿಯ ಮೇಲಿದ್ದನು. ಅವನು ಶಿವಾಜಿ ಮಹಾರಾಜನಿಗೆ ಅನುಕೂಲನಾಗಿದ್ದನು. ತಂದೆಗೆ [illegible] ಸಂಸ್ಥಾನದ ಪಟ್ಟಕ್ಕೆ ಕೂಡ್ರಿಸುತ್ತೇನೆಂದು ಔರಂಗಜೇಬನು ಜಯಸಿಂಗನ ಹಿರಿ ಮಗ ಕೀರ್ತಿಸಿಂಗನಿಗೆ ನೋಚಿಸಿ, ಜಯಸಿಂಗನ ಕೊಲೆಯನ್ನು ಮಾಡಿಸಿದನು. ಜಯಸಿಂಗನಿಗೆ ಅಫೀಮಿನ ವ್ಯಸನವಿತ್ತು. ಅಫೀಮಿನಲ್ಲಿ ವಿಷ ಕಲಿಸಿ ಕೀರ್ತಿಸಿಂಗನು ತಂದೆಯ ಕೊಲೆ ಮಾಡಿ, ವಚನದಂತೆ ಜಯಪುರದ ರಾಜ್ಯ ಕೊಡಬೇಕೆಂದು ಔರಂಗಜೇಬ ಬಾದಶಹನ ಕಡೆ ಕೇಳಿಕೊಳ್ಳಲು, ಔರಂಗಜೇಬನು ಕೀರ್ತಿಸಿಂಗನಿಗೆ ಒಂದು ಜಹಗೀರಿಯನ್ನಷ್ಟೇ ಕೊಟ್ಟು ಉಳಿದ ಸಂಪೂರ್ಣ ರಾಜ್ಯವನ್ನು ಹಿರಿಯ ಮಗನಾದ ರಾಮಸಿಂಗನಿಗೆ ಕೊಟ್ಟು ಸಂಸ್ಥಾನದ ಪಟ್ಟಗಟ್ಟಿದನು! ರಾಮಸಿಂಗನ ತರುವಾಯ ಬಿಷನಸಿಂಗನು ಬಂದನು. ಆದರೆ ಬಿಷನಸಿಂಗನ ಮಗನಾದ ೨ನೇ ಜಯಸಿಂಗನೇ ಕೀರ್ತಿವಂತನು! ಆತನೇ ಅಂಬರ ರಾಜಧಾನಿಯನ್ನು ಬಿಟ್ಟು ಜಯಪುರವನ್ನು ಕಟ್ಟಿಸಿದನು. ಜಯಸಿಂಗನ ತರುವಾಯ ಮಾಧೋಸಿಂಗನು ಬಂದನು. ೧೮೦೩ನೇ ಇಸವಿಯಲ್ಲಿ ಜಯಪುರ ಸಂಸ್ಥಾನಕ್ಕೆ ಬ್ರಿಟಿಶ ಸರಕಾರದ ಕರಾರಾಯಿತು. ಮುಂದೆ ೩ನೇ ಜಯಸಿಂಗನು ಪಟ್ಟಕ್ಕೆ ಬಂದನು. ಆತನ ಅಕಾಲ ನಿಧನದ ಮೂಲಕ ಚಿಕ್ಕವಯಸ್ಸಿನ ರಾಮಸಿಂಗನಿಗೆ ಪಟ್ಟಗಟ್ಟಿದರು. ಇವನ ಕಾಲದಲ್ಲಿ ಸಂಸ್ಥಾನದೊಳಗೆ ವಿದ್ಯಾಸಂಸ್ಥೆಗಳಾದವು. ವಾಹನ ಸಾರಿಗೆಯ [illegible]ಗಳುಂಟಾದವು. ಇವನ ತರುವಾಯ ಬಂದ ಸಂಸ್ಥಾನಿಕರೆಲ್ಲರೂ ಸಾರ್ವಭೌಮ ಬ್ರಿಟಿಶರ ಮಾಂಡಲಿಕ ಅರಸರಾಗಿ ಆಳಿ ಬಂದರು. ೧೯೪೩ನೇ ಇಸವಿಯಲ್ಲಿ ಬಂಗಾಲ ಬಿದ್ದಾಗ ರೂ. [illegible] ಲಕ್ಷಗಳನ್ನು ಖರ್ಚು ಮಾಡಿ ಸಂಸ್ಥಾನಿಕರು ಪ್ರಜೆಗಳನ್ನು ಕಾಪಾಡಿಕೊಂಡಿದ್ದಾರೆ. ಬ್ರಿಟಿಶರಿಗೆ ಎರಡೂ ಮಹಾಯುದ್ಧಗಳಲ್ಲಿ, ಕೊಡುಗೈಯಿಂದ ನೆರವಿತ್ತಿದ್ದಾರೆ; ಜನ ಧನ ಸಹಾಯಗಳನ್ನು ಉಲ್ಲಾಸದಿಂದ ಅರ್ಪಿಸಿದ್ದಾರೆ. ಆದರೂ ಸಂಸ್ಥಾನಿಕರು ಸ್ವಧರ್ಮಾಭಿಮಾನಿಗಳು, ಸ್ವದೇಶ ಸ್ವಾತಂತ್ರ್ಯ ಘೋಷಣೆಯಾಗಿ ಹಿಂದುಸ್ಥಾನ ಜನಾಂಗ ಸ್ವತಂತ್ರವಾದ ಬಳಿಕ ಜಯಪುರ ಸಂಸ್ಥಾನಿಕರು ಹಿಂದೀ ಜನಾಂಗದೊಡನೆ ಸ್ವಸಂತೋಷದಿಂದ ಕೂಡಿಕೊಂಡು ಘಟನಾ ಸಮಿತಿಯ ಚುನಾವಣೆಯ ಪ್ರಕಟಣೆಯನ್ನು ಮೊಟ್ಟಮೊದಲು ಹೊರಡಿಸಿದರು. ಶ್ರೀ [illegible] ಪರಂಪರೆಯುಳ್ಳ ಹಿಂದು-ಮುಸಲ್ಮಾನ ಐಕ್ಯತೆಯ ಹಿನ್ನೆಲೆಯುಳ್ಳ ಜಯಪುರ ಸಂಸ್ಥಾನದಲ್ಲಿ ಈ ಸಲದ ರಾಷ್ಟ್ರೀಯ ಸಭೆ ಸೇರುತದೆ. ಈಗಿನ ಕಾಲಮಾನಕ್ಕುಚಿತವಾಗಿ ರಾಷ್ಟ್ರೀಯ ಸಭೆಯು ಮಾರ್ಗದರ್ಶನ ಮಾಡುವದೆಂದು ಜನಾಂಗದ ಅಪೇಕ್ಷೆಯುಂಟು.

ಘಟನಾ ಸಮಿತಿಯಲ್ಲಿ ನಮ್ಮ ಹಿಂದೀ ಜನಾಂಗದ ರಾಜ್ಯಭಾರವನ್ನು ನಡಿಸುವ ಮೂಲ ತತ್ವಗಳ ಬಗ್ಗೆ ಈಗ ಕೈಕೊಳ್ಳಲ್ಪಟ್ಟಿದೆ. ಅವುಗಳಲ್ಲಿ ಎರಡು ವಿಷಯಗಳನ್ನು ನಮೂದಿಸಬಹುದು:- (೧) ದಿವಾಣಿ ನ್ಯಾಯಸ್ಥಾನಗಳ ಅಧಿಕಾರವನ್ನು ಸಂಕೋಚಗೊಳಿಸಲಾಗದು, ದಿವಾಣಿ ನ್ಯಾಯಸ್ಥಾನಗಳ ಅಧಿಕಾರ ಊರ್ಜಿತವಿಡಬೇಕು; ಅದನ್ನು ಹೆಚ್ಚಿಗಾಗಿ ವಿಸ್ತಾರಗೊಳಿಸಬೇಕು; ನ್ಯಾಯಸ್ಥಾನದ ಶಕ್ತಿ ವಿಸ್ತರಿಸಬೇಕು. (೨) ಜನರಿಗೆ ಆಸ್ತಿ ಸಂಪಾದಿಸಲು ಪೂರ್ಣ ಅವಕಾಶ ಕೊಡಬೇಕು. ಸಂಪಾದಿಸಿದ ಆಸ್ತಿಯನ್ನು ಸಂಪಾದನೆ ಮಾಡಿದವರು ಇಷ್ಟವಿದ್ದ ರೀತಿಯಲ್ಲಿ ವ್ಯವಸ್ಥೆ ಮಾಡುವಲ್ಲಿ ಅತಂಕವಿರಕೂಡದು. ರಾಜ್ಯಭಾರ ಸಂಪತ್ತಿ ಸಂಪಾದನೆಗೆ ಘಾತಕವಾಗಬಾರದು; ಪ್ರೋತ್ಸಾಹಕಾರಿಯಾಗಬೇಕು. ಸಂಪತ್ತಿ-ಸಂಪ್ರಾಪ್ತಿಗೆ ರಕ್ಷಣೆ ದೊರೆಯದಿದ್ದರೆ ಪ್ರಾಪಂಚಿಕ ಮಾನವನಿಗೆ ಆಸಕ್ತಿಯಿಂದ ಪ್ರಪಂಚದಲ್ಲಿ ವ್ಯವಹರಿಸಲು ಸ್ಫೂರ್ತಿ ದೊರೆಯುವದಿಲ್ಲ. ಒಕ್ಕಲತನದ ಕಾನೂನು ಇವೇ ಮೂಲತತ್ವಗಳನ್ನು ಉಲ್ಲಂಘಿಸುತ್ತದೆ. ಒಡೆಯ-ಒಕ್ಕಲಿಗರೊಳಗಿನ ವಿವಾದಗಳನ್ನು ತೀರ್ಮಾನಗೊಳಿಸಲು ದಿವಾಣಿ ಕೋರ್ಟುಗಳಿಗೆ ಅಧಿಕಾರವಿಲ್ಲೆಂದು ನಮ್ಮ ಪ್ರಾಂತಿಕ ಜನತಾ ಸರಕಾರವು ವಿಧಿಸಿ ಜನಕ್ಷೋಭೆಗೆ ಕಾರಣವಾಗಿದೆ. ಆದರೆ ಈಗ ಸರಕಾರಕ್ಕೆ ಸದ್ಬುದ್ಧಿ ಸೂಚಿಸಿ ಆಡಳಿತೆಯ ಅಧಿಕಾರಿಗಳಿಗಿದ್ದ ನ್ಯಾಯ ವಿಚಾರದ ಹಕ್ಕನ್ನು ತೆಗೆದು ನ್ಯಾಯ ಕಚೇರಿಯನ್ನು ಬೇರ್ಪಡಿಸುವ ಕಾನೂನನ್ನು ಸಂಘಟಿಸಲು ಮುಂಬಯಿ ಸರಕಾರವು ಯೋಜಿಸಿರುವದಾಗಿ ಪ್ರಕಟವಾಗಿದೆ. ಈ ಪ್ರಕಾರ ಸರಕಾರವು ಕಟ್ಟಳೆ ಮಾಡಿದ್ದಲ್ಲಿ ಒಕ್ಕಲತನದ ಕಾನೂನಿನ ಮೇರೆಗೆ ನೇಮಿಸಲ್ಪಟ್ಟ ಟೆನನ್ಸಿ [illegible] ಕೇವಲ ಕಾರಕೂನರ ಉಪದ್ರವದಿಂದ ಒಡೆಯ ಸಮಾಜಕ್ಕೆ ರಕ್ಷಣೆ ಸಿಗುವದು. ಒಕ್ಕಲತನದ ಕಾನೂನಿನಲ್ಲಿ ಪ್ರತಿಫಲವನ್ನು ನಿರ್ಣಯಿಸುವ ಸಂಪೂರ್ಣ ಅಧಿಕಾರ ಸರಕಾರದ್ದು; ಅಂದರೆ ಮಾಮಲೇದಾರರದು, ಅಂದರೆ ಬೆಳೆ ಕೊಯ್ಯುವ ಪ್ರಯೋಗ ಮಾಡಹೋದ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ. 3/-ರಂತೆ ಬಡ್ಡಿ

ಅತಿ ಕಡಿಮೆ ನೋಟಿಸಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟ ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೩ ೭-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ ಡೈರೆಕ್ಟರ

ಅಲ್ಪ ಯೋಗ್ಯತೆಯುಳ್ಳ, ಇಲ್ಲವೆ ಯೋಗ್ಯತೆಯಿಲ್ಲದ, ಮತ್ತು ಅನ್ಯಾಯ ಮಾಡಲು ಹೇಸದ ಕಾರಕೂನರದು. ಆಸ್ತಿಯ ಬೆಲೆ ನಿರ್ಣಯಿಸುವ ನಿರಂಕುಶ ಅಧಿಕಾರ ಸಹ ಮಾಮಲೇದಾರರದೇ, ಅಂದರೆ ಅವರ ಕೈಕೆಳಗಿನ ಕಾರಕೂನ ಮಂಡಳದ್ದು. ಸ್ವಾಸ್ತಿಯ ಸಮಿತಿಯನ್ನು ಸರಕಾರವು ನಿರ್ಣಯಿಸಿದ ಸಮಿತಿಯು ನ್ನು ಮಿಕ್ಕುಳಿ ಆಸ್ತಿಯನ್ನು ಯಾರಿಗೆ ಪರಾಧೀನ ಮಾಡತಕ್ಕದ್ದೆಂದು ನಿರ್ಣಯಿಸುವ ಹಕ್ಕು ಸರಕಾರದ್ದು. ಪರಾಧೀನ ಮಾಡತಕ್ಕ ಆಸ್ತಿಯನ್ನು ನಿರ್ಣಯಿಸುವ ಹಕ್ಕು ಸ್ವಾಸ್ತಿ ಮಾಡಿದ ಒಡೆಯನವಲ್ಲ, ಅದನ್ನು ಪಡೆಯುವ ಇನಾಮದಾರನದು! ಆ ಆಸ್ತಿ ಕೊಂಡುಕೊಳ್ಳಬೇಕೆಂಬ ಒತ್ತಾಯ ಕೊಂಡುಕೊಳ್ಳುವ ವ್ಯಕ್ತಿಯ ಮೇಲಿಲ್ಲ! ಕೊಂಡುಕೊಳ್ಳುವ ಸ್ಥಳ ಮತ್ತು ಕಾಲ ನಿರ್ಣಯಿಸುವ ಸಂಪೂರ್ಣ ಪ್ರಭುತ್ವ ಆ ವ್ಯಕ್ತಿಯದು. ಹೊರತು ಸ್ವಾಸ್ತಿಯಿದ್ದ ಜನಕ್ಕೆ ಆ ಸ್ವಾಸ್ತಿಯ ಪ್ರತಿಫಲ ಪಡೆಯುವಲ್ಲಾಗಲಿ ಪರಾಧೀನ ಮಾಡುವಲ್ಲಾಗಲಿ ಯಾವದೇ ಬಗೆಯ ಸ್ವಾತಂತ್ರ್ಯವಿರುವದಿಲ್ಲ! ಸ್ವಾಸ್ತಿ-ಪ್ರಾಪ್ತಿಯಿಂದ ಆತ ಸಂಪೂರ್ಣ ಪರತಂತ್ರನಾಗಿದ್ದಾನೆ! ಭೂಮಿಯೊಡೆಯನು ಪತಿತನೆಂದೂ ಘಾತಕಿಯೆಂದೂ ಪಾಪಿಯೆಂದೂ ಒಕ್ಕಲತನದ ಕಾನೂನು ಎಣಿಸಿ ಆತನ ಹೆಡಮುರಿಗೆ ಕಟ್ಟಿದೆ. ಈ ಕಾನೂನು ಘಟನಾ ಸಮಿತಿಯು ಘಟನೆಯಲ್ಲಿ ಸೇರ್ಪಡಿಸಿರುವ ಎರಡೂ ಮೂಲ ತತ್ವಗಳನ್ನು ಉಲ್ಲಂಘಿಸಿ ಘಟಿಸಲ್ಪಟ್ಟಿದೆ. ಘಟನೆಯೊಳಗಿನ ಮೂಲ ತತ್ವಗಳನ್ನು ಮನ್ನಿಸಿ ನಡಕೊಳ್ಳಲು ಪ್ರಾಂತಿಕ ಸರಕಾರವು ಬದ್ಧವಿದೆ, ಮೂಲ ಘಟನೆಯನ್ನು ಮೀರಿ ನಡೆಯಲು ಪ್ರಾಂತಕ್ಕಾಗಲಿ ದೇಶಕ್ಕಾಗಲಿ ಅಧಿಕಾರವಿಲ್ಲ. ಅದು ಕಾರಣ ಮುಂಬಯಿ ಸರಕಾರವು ತನ್ನ ಹಟಮಾರಿತನವನ್ನು ತೊರೆದು, ಹೊಸ ಹಾಗು ಹಳೆಯ ಒಕ್ಕಲತನದ ಕಾನೂನುಗಳನ್ನು ರದ್ದುಪಡಿಸಿ, ಭೂಮಿಯೊಡೆಯರನ್ನು ರಕ್ಷಿಸಬೇಕು. ಪ್ರಾಂತಾಧಿಪರಾದ ರಾಜಾ ಮಹಾರಾಜಸಿಂಗರವರೂ ಸರ್ವಾಧಿಪತಿಗಳಾದ ಶ್ರೀ|| ರಾಜಗೋಪಾಲಾಚಾರ್ಯರೂ ಘಟನಾ ಸಮಿತಿಯ ತತ್ವಗಳನ್ನು ಉಲ್ಲಂಘಿಸಿ ಘಟಿಸಿದ ಒಕ್ಕಲತನದ ಕಾನೂನನ್ನು, ಅಬಗ್ಗೆ ಅವಶ್ಯ ಕಂಡರೆ ಒಂದು ರಾಜಶಾಸನವನ್ನು ಹೊರಡಿಸಿ, ಇದೀಗಲೇ ರದ್ದುಪಡಿಸಿ, ಟೆನನ್ಸಿ ಅವಲ ಕಾರಕೂನರ ಕಿಡಿಗೇಡಿ ವ್ಯಾಪಾರಗಳಿಂದ ಭೂಮಿಯೊಡೆಯರನ್ನು ರಕ್ಷಿಸಬೇಕಾದ ಪ್ರಸಂಗ ಬಂದಿದೆ

* * *

ಆಹಾರ ಧಾನ್ಯಗಳ ನಿಯಂತ್ರಣವನ್ನು ಇನ್ನೂ ಬಿಗಿ ಮಾಡಬೇಕೆಂದು ಹಿಂದುಸ್ಥಾನ ಸರಕಾರದ ಧೋರಣವುಂಟು. ಮುಂದಿನ ವರುಷದಲ್ಲಿ ನಮ್ಮ ಹಿಂದುಸ್ಥಾನಕ್ಕೆ ೨ ಕೋಟಿ ಟನ್ ಅಕ್ಕಿ ಮತ್ತು ೧ ಕೋಟಿ ಟನ್ನ ಇತರ ಧಾನ್ಯ ಕಡಿಮೆ ಬೀಳುವದೆಂದು ಹಿಂದುಸ್ಥಾನ ಸರಕಾರವು ಅಂದಾಜು ಮಾಡಿದೆ. ಮುಂಬಯಿ ಪ್ರಾಂತದಲ್ಲಿ ಫೆಬ್ರುವರಿ ತಿಂಗಳೊಳಗೆ ಸಂಪೂರ್ಣ ನಿಯಂತ್ರಣ ರೂಢಗೊಳಿಸಬೇಕೆಂದು ಹಿಂದುಸ್ಥಾನ ಸರಕಾರದ ಆಜ್ಞೆಗಳಾಗಿವೆ. ಮುಂಬಯಿ ಪ್ರಾಂತಕ್ಕೆ ಹಿಂದುಸ್ಥಾನ ಸರಕಾರವು ೯೨ ಸಾವಿರ ಟನ್ನ ಅನ್ನ-ಧಾನ್ಯಗಳನ್ನು ಜನವರಿ ತಿಂಗಳೊಳಗೆ ಕೊಡಬೇಕೆಂದು ಗೊತ್ತಾಗಿದೆ. ೧ ಅಬ್ಜ ರೂಪಾಯಿ ಖರ್ಚು ಮಾಡಿ ಮುಂದಿನ ವರ್ಷ ವಿದೇಶಗಳಿಂದ ಅನ್ನಧಾನ್ಯಗಳನ್ನು ತರಿಸಿಕೊಳ್ಳಬೇಕು. ಬೇಕಷ್ಟು ಅಕ್ಕಿಯನ್ನು ಪೂರೈಸಿಕೊಳ್ಳುವದು ತೀರ ಕಠಿಣ ಪ್ರಶ್ನೆಯಾಗಿ ಗಕಾಂತಿ ನೆರಿಸವಿದರಿಂದ ಜಿಲ್ಲೆಯಿಂದ ವಿಶೇಷ ಅಕ್ಕಿ ರಫ್ತಾಗಲಿಕ್ಕಿಲ್ಲವು ಹೇಳುತ್ತಾರೆ. ಗುಜರಾತದೊಳಗೆ ಬರಗಾಲದ ಪರಿಸ್ಥಿತಿಯುಂಟು. ಮುಂಬಯಿ ಪ್ರಾಂತಕ್ಕೆ ಹೆಚ್ಚಿಗೆ ಅನ್ನಧಾನ್ಯಗಳು ಬೇಕಾಗಿವೆ. ಹಿಂದುಸ್ಥಾನ ಸರಕಾರದ ಆಹಾರ ಮಂತ್ರಿಗಳಾದ ಶ್ರೀ|| ಜಯರಾಮದಾಸ ದೌಲತರಾಮರವರು ಸ್ವತಃ ಮುಂಬಯಿಗೆ ಬಂದು, ಸಕಲ ಪರಿಸ್ಥಿತಿಯನ್ನು ತಿಳಿಕೊಂಡಿದ್ದಾರೆ. ಆಹಾರ-ಧಾನ್ಯಗಳಿಗಾಗಿ ವಿದೇಶಗಳ ಕಡೆ ಯಾಚನೆ ಮಾಡುವ ಪ್ರಸಂಗ ನ ಬರಗೊಡತನದೆಂದೂ, ಪ್ರತಿಯೊಬ್ಬರು ಆಹಾರ-ಧಾನ್ಯಗಳನ್ನು ಹೆಚ್ಚಾಗಿ ಬೆಳಸಲು ಪ್ರಯತ್ನ ಪಡಬೇಕೆಂದೂ, ೨ ವರ್ಷಗಳೊಳಗೆ ನಮ್ಮ ದೇಶಕ್ಕೆ ಅವಶ್ಯವಿರುವ ಯಾವತ್ತೂ ಆಹಾರ ಸಾಮುಗ್ರಿಗಳನ್ನು ನಾವು ಬೆಳಸಿಕೊಂಡು ಸ್ವಯಂಪೂರ್ಣರಾಗುವಂತೆ ಸರಕಾರವು ಏರ್ಪಾಟು ಮಾಡಬಯಸುತ್ತದೆಂದೂ ಶ್ರೀ|| ಜಯರಾಮದಾಸರು ಹೇಳುತ್ತಾರೆ. ನಿಯಂತ್ರಣದ ಅವಧಿಯಲ್ಲಿ ವರ್ತಕರನ್ನು ಸೇರಿಸಿಕೊಳ್ಳಲಾಗುವದೆಂದೂ ಇವರು ಆಶ್ವಾಸನ ಕೊಟ್ಟಿದ್ದರೂ ನಮ್ಮ ಮುಂಬಯಿ ಪ್ರಾಂತದಲ್ಲಿ ನಡೆಯುವಂತೆ ಸಹಕಾರಿ ಸಂಘಗಳ ಗಡೋಣಗಳನ್ನು ಪರಿವಾಡಿ ಅವುಗಳಿಗೆ ಆಶ್ರಯ ಕೊಡುವದರಿಂದ ಜನರಿಗೆ ಅನುಕೂಲತೆಯಾಗಲಿ ಸೌಕರ್ಯ ದೊರೆಯುವದಿಲ್ಲ. ಅಂಕೋಲಾ ತಾಲೂಕಿನ ಒಂದು ಸಹಕಾರಿ ಸಂಘದ ಮುಖ್ಯಸ್ಥರು ಕಳ್ಳಪೇಟೆಗೆ ಸಾಗಿಸುವದು ಕಂಡುಬಂದದ್ದರಿಂದ ಆ ಸಂಘದ ನಿಯಂತ್ರಿತ ಅಂಗಡಿಯನ್ನು ಹಿಂದೆ ತೆಗೆದು ಬೇರೆ ವರ್ತಕರಿಗೆ ಕೊಡಲಾಗಿತ್ತು. ಆ ಸಂಘದವರ ನಡತೆ ಸುಧಾರಿಸದಿದ್ದರೂ, ಅವರು ಪುನಃ ಕಳ್ಳಪೇಟೆ ನಡಿಸಲಿಕ್ಕಿಲ್ಲೆಂದು ಯೋಗ್ಯ ಭದ್ರತೆ ಸಿಗದಿದ್ದರೂ ಸರಕಾರದವರು ಆ ಸಂಘಕ್ಕೇ ತಿರುಗಿ ನಿಯಂತ್ರಣ ಅಂಗಡಿಯನ್ನು ಕೊಟ್ಟಿದ್ದಾರೆ! ಭಟಕಳ ಪೇಟೆಯಲ್ಲಿ ಒಂದು ಕಡೆ, ತಂದೆ ಅಧ್ಯಕ್ಷನಾಗಿರುವ ಮತ್ತು ಮಗ ಕಾರ್ಯದರ್ಶಿಯಾಗಿರುವ ಒಂದು ಸಹಕಾರಿ ಸಂಘವಿದೆ! ಅದರ ಅಪಕೀರ್ತಿಯನ್ನು ಬಣ್ಣಿಸಲು ಅಸದಳ! ಸಂಘವು ಕೊಟ್ಟ ಸಾಲ ವಸೂಲ ಬರುವದಿಲ್ಲ; ಜನರಿಟ್ಟ ಠೇವು ಹಣ ತಿರುಗಿ ಕೊಡಲು ಶಕ್ತಿಯಿಲ್ಲ' ಸಹಕಾರಿ ಸಂಘಗಳ ತಪಾಸಕರು ಸಂಘದವರಿಂದ ಸರಬರಾಯಿ ಪಡೆದು ಸಂಘದ ಅಕ್ರಮಗಳನ್ನು ಮುಚ್ಚಿಡುತ್ತಾರೆಂದೂ ಯೋಗ್ಯ ಕ್ರಮ ಕೈಕೊಳ್ಳುವದಿಲ್ಲೆಂದೂ ಭಟಕಳ ಪೇಟೆಯವರು ಹೇಳಾಡುತ್ತಾರೆ. ಹೊನ್ನಾವರ ತಾಲೂಕಿನ ಒಂದು ಸಹಕಾರಿ ಸಂಘಕ್ಕೆ ನಿಯಂತ್ರಣ ದರದಿಂದ ರೈತರಿಗೆ ಮಾರಲೆಂದು ಕೊಟ್ಟ ಉಕ್ಕಿನ ತಗಡುಗಳು ಧಾರವಾಡ ಜಿಲ್ಲೆಯ ಯಲ್ಲಾಪೂರ ಗ್ರಾಮಕ್ಕೆ ಹೋಗುತ್ತಿದ್ದಾಗ, ಅಂಕೋಲೆಯ ಸಹಕಾರಿ ಸಂಘದವರು ಅವನ್ನು ನಡುಹಾದಿಯಲ್ಲಿ ಹಿಡಿದಿಟ್ಟ ಸುದ್ದಿಯಿದೆ. ಹೊನ್ನಾವರದ ಜೇನು ಸಂಘದವರು ಈಗ ಜೇನು ತುಪ್ಪವನ್ನು ಸದಸ್ಯರಿಂದ ಕೊಂಡುಕೊಳ್ಳುವ ಬೆಲೆಯನ್ನು ೪ ಆಣೆಯಿಂದ ಏರಿಸಿ, ರತ್ತಲ ೧ರ ಖರೇದಿಯ ದರ ರೂ ೧-೪-೦ ಇಟ್ಟಿರುತ್ತಾರಂತೆ. ಇದರ ಮೊದಲಿಂದ ಅತನಕ ಈ ಸಂಘದವರು ತುಪ್ಪ ಕೊಂಡುಕೊಳ್ಳುತ್ತಿದ್ದ ಬಡ ಜನರಿಗೆ ಮೋಸಪಡಿಸುತ್ತಿದ್ದರೆಂದು ಸಿದ್ಧವಾಗುತ್ತದೆ. ಪ್ರಾಂತಿಕ ಸಹಕಾರಿ ಸಂಘಕ್ಕೆ ತುಪ್ಪದ ರತ್ತಲ ೧ಕ್ಕೆ ರೂ ೧-೯-೦ ಕ್ಕಿಂತ ಹೆಚ್ಚಿಗೆ ಬೆಲೆ ಕೊಡಲು ಹಿಂದೆ ಪೂರೈಸದಿದ್ದ ಕಾರಣಗಳನ್ನೂ ಈಗ ರೂ. ೧-೧೪-೦ ಕೊಡಲು ಹೇಗೆ ಪೂರೈಸುತ್ತದೆಂಬುದರ ಕಾರಣಗಳನ್ನೂ ಸರಕಾರವು ವಿಚಾರಿಸಬೇಕು. ಸಹಕಾರಿ ಸಂಘಗಳ ನಡಾವಳಿಯನ್ನೂ ಅಧಿಕಾರಿಗಳ ನಡತೆಯನ್ನೂ ವಿವೇಸದೆ ವ್ಯಕ್ತಿಗಳೆಲ್ಲ ಕಳ್ಳತನ ಮಾಡುತ್ತಾರೆಂತಲೂ ಸಹಕಾರಿ ಸಂಘಗಳೆಲ್ಲ ಸಭ್ಯವಿರುತ್ತವೆಂತಲೂ ಗೃಹೀತ ಹಿಡಿಯುವದು ಘೋರ ತಪ್ಪು. ಆಹಾರ ಮಂತ್ರಿಗಳಾದ ಶ್ರೀ|| ಜಯರಾಮದಾಸ ದೌಲತರಾಮರವರು ಮುಂಬಯಿಯ ವರ್ತಕ ಸಂಘದ ಸಭೆಯಲ್ಲಿ ಜಾಹೀರಪಡಿಸಿದ ಧೋರಣವನ್ನು ಮುಂಬಯಿ ಸರಕಾರವು ಲಕ್ಷಕ್ಕೆ ತಂದು, ಸಹಕಾರಿ ಸಂಘಗಳ ಬಗ್ಗೆ ಅವಾಸ್ತವ ಅಭಿಮಾನವನ್ನು ಬಿಟ್ಟುಕೊಟ್ಟು, ನಿಯಂತ್ರಣ ಆಡಳಿತೆಯಲ್ಲಿ ವ್ಯಾಪಾರ-ವ್ಯವಹಾರದ ಪೂರ್ಣ ಅನುಭವವುಳ್ಳ ವರ್ತಕ ಜನರಿಗೆ ಸೇರಿಸಿಕೊಳ್ಳುವದು ಹಿತಕರವಿರುತ್ತದೆ. ಸಹಕಾರಿ ಸಂಘಗಳಲ್ಲಿ ನಡೆಯುತ್ತಿರುವ ದುರ್ವ್ಯಾಪಾರಗಳನ್ನು ಪಾರಿಮಾಡುವದರಿಂದ ಆಡಳಿತೆಯ ನೀತಿಯು ಮಟ್ಟು ಕೆಟ್ಟುಹೋಗಿ ಭ್ರಷ್ಟಾಚಾರಗಳು ತಲೆದೋರುತ್ತವೆಂಬುದನ್ನು ಮರೆಯಲಾಗದು. ಈಗ ರಾಜ್ಯದಾಡಳಿತೆಯಲ್ಲಿ ನೀತಿಮತ್ತೆಗೆ ಬೆಲೆಯಿಲ್ಲದ್ದು ಲೋಕಾಭಿಪ್ರಾಯವಾಗುವದು ತರವಲ್ಲ.

ಜಾಹೀರ ನೋಟೀಸು.

ಶ್ರೀನಿವಾಸ ನಾಗಪ್ಪ ನಾಯ್ಕ ನಗರಬಸ್ತಿಕೇರಿ, ಆದ ನಾನು ಯಾವತ್ತೂ ಜನರಿಗೆ ಈ ನೋಟೀಸ ಮೂಲಕ ತಿಳಿಸುವದೇನಂದರೆ.— ನನ್ನ ಮಾಲ್ಕಿಯ ಹೊನ್ನಾವರ ತಾಲೂಕ ನಗರಬಸ್ತಿಕೇರಿ ಗ್ರಾಮ ಸರ್ವೆ ನಂಬರ ೨೯೭/೬ ವ ೩೦೯/೬ ಹೀಗೆ ಎರಡು ಸ್ಥಳಗಳನ್ನು ನನಗೆ ಬರತಕ್ಕ ಕುಂದಿ ತಕಾವಂತ ಅಪ್ಪ ರಾವ ಶ್ಯಾನಭಾಗ ಕೊಟ್ಟವರಿಗೆ ಕ್ರಯಕ್ಕೆ ಕೊಟ್ಟು ಸದರಿ ಸ್ಥಳವನ್ನು ನಾನು ಮೂಗೇಣಿಗೆ ಪಡಕೊಂಡಿದ್ದು ಸದರಿ ಸ್ಥಳವನ್ನು ಮೇಲಿನ ಖರೇದಿದಾರರು ನನಗೆ ಪರತ ಕ್ರಯ ಮಾಡಿಕೊಳ್ಳುವದೆ ಹೇಳಿದಂತೆ, ನಾನು ಅವರಿಗೆ ಸಲ್ಲಿಸಬೇಕಾದ ಅಸಲ ಬಡ್ಡಿ ಹಣದ ರೂ. ೮೦೦/- (ಎಂಟು ನೂರು) ರೂಪಾಯಿ ಜವಾಬ ಮಾಡಿ, ನಾನು ಕಾಲಗೆರನಾಸ್ತರಿಂದ ನನ್ನ ಹೆಂಡತಿ ತಂದೆ ನಾಗಪ್ಪ ವೆಂಕಟೇಶ ನಾಯ್ಕ ಇವರ ಹೇಳಿಕೆಯಂತೆ ವಿಶ್ವಾಸದಿಂದ ಅವರ ಎರಡು ಜನ ಅಳಿಯಂದಿರ ಮುಖಾಂತರ ಸದರಿ ೮೦೦/- ರೂಪಾಯಿಯನ್ನು ನಾನು ಮೇಲಿನ ಕ್ರಯದಾರನಿಗೆ ಕೊಟ್ಟು ಕ್ರಯದಸ್ತ ಮಾಡಿಸಿದ್ದೆ. ಈಗ ನನ್ನ ಮಾವ ನಾಗಪ್ಪ ನಾಯ್ಕರು ನನಗೆ ಈಗ ವಂಚನೆ ಮಾಡುವ ದುರ್ಹೇತುವಿನಿಂದ ಸದರಿ ಆಸ್ತಿಗಳನ್ನು ಕ್ರಯಕ್ಕೆ ಕೊಡುವರೆ ಗಿರಾಕಿ ಹುಡುಕುತ್ತಾರೆ. ಕಾರಣ ಸದರಿ ಆಸ್ತಿಯನ್ನು ಯಾರಾದರೂ ಖರೇದಿ ಮಾಡಿಕೊಂಡಲ್ಲಿ ನನ್ನ ಮಾಲ್ಕಿ ಹಕ್ಕಿಗೆ ಏನೊಂದೂ ಬಾಧೆ ಬರಲಿಕ್ಕಿಲ್ಲ. ಖರೇದಿದಾರರು ವೃಥಾ ಲುಕ್ಸಾನಿಗೆ ಬೀಳಬೇಕಾದೀತು. ತಾರೀಖ ತಾ ೧೧—೧೨—೧೯೪೮.

ಶ್ರೀನಿವಾಸ ನಾಗಪ್ಪ ನಾಯ್ಕ,
ನಗರಬಸ್ತಿಕೇರಿ, ತಾ ಹೊನ್ನಾವರ

ಜಾಹೀರ ವಿನಂತಿ.

ಕುಮಟಾ ಶ್ರೀ ರಾಮೇಶ್ವರ ಕಾಮಾಕ್ಷಿ ಕಾಲಭೈರವ ದೇವರ ಭಕ್ತ ಮತ್ತು ಅಭಿಮಾನಿಗಳಲ್ಲಿ ವಿನಂತಿಯೇನೆಂದರೆ, ಶ್ರೀ ರಾಮೇಶ್ವರ, ಕಾಲಭೈರವ, ಬ್ರಹ್ಮದೇವರ ದೇವಸ್ಥಾನಗಳ ಜೀರ್ಣೋದ್ಧಾರದ ಕೆಲಸವು ಬೇಗನೇ ಮುಗಿಸಿ ಇದೇ ಸರ್ವಧಾರಿ ಸಂವತ್ಸರದ ಫಾಲ್ಗುಣ ಶು|| ೭ ಸೋಮವಾರ (ತಾ. ೭—೩—೪೯)ನೇ ದಿವಸ ಪ್ರತಿಷ್ಠಾ ಕಾರ್ಯ ಮಾಡಬೇಕಾಗಿ ನಿಶ್ಚಯಿಸಲಾಗಿದೆ. ಈ ಕಾರ್ಯಕ್ಕೆ ಅಜಮಾಸು ರೂ. ೧೦೦೦೦ ಬೇಕಾಗುವದೆಂದು ತಜ್ಞರು ಅಂದಾಜು ಮಾಡಿದ್ದಾರೆ. ಈ ಹಣವನ್ನು ಶ್ರೀ ಸ್ಥಳದ ಭಕ್ತ ಕಾಳಜಿಗಳನ್ನು ಹಾಗೂ ಈ ದೇವರ ಅಭಿಮಾನಿಗಳನ್ನು ಹೊಂದಿದೆ. ಬೇಗನೇ ದೇವಸ್ಥಾನದ ಕಮಿಟಿಯ ಅಧ್ಯಕ್ಷರೂ ಸದಸ್ಯರೂ ಮೊಕ್ತೇಸರರೂ ನಿಧಿ ಸಂಗ್ರಹಕ್ಕಾಗಿ ಮುಂಬಯಿ, ಪಂಚಗ್ರಾಮ ಮುಂತಾದ ಕಡೆ ತಿರುಗುವರು. ಆಗ ಅವರಿಗೆ ಭಕ್ತರು ಯಥಾಶಕ್ತಿ ಕಾಣಿಕೆ-ವಂತಿಗೆಗಳನ್ನು ಕೊಟ್ಟು ಕೃತಾರ್ಥರಾಗಬೇಕಾಗಿ ಅರಿಕೆ. ಕುಮಟಾ ಸರ್ವಧಾರಿ ಸಂ|| ಮಾರ್ಗಶೀರ್ಷ ಶು|| ೮ ಶನಿ

ದಾಮೋದರ ಅಚ್ಯುತ ಪೈ,
ಶ್ರೀ ದೇವಸ್ಥಾನದ ಕಮಿಟಿ ಮೊಕ್ತೇಸರ

ಸ್ಥಾನಿಕ ವೃತ್ತಾಂತ.

ಕುಮಟಾ— ಈ ತಿಂಗಳು [illegible] ನಡೆದಿದೆ.

[illegible] ಎಂಬುವವರ ಅವಧಿಯಲ್ಲಿ ಬರುವದೆಂದು ನಿಶ್ಚಿತವಾಗಿ ತಿಳಿಯಬರುವದಿಲ್ಲ. ಫೆಬ್ರುವರಿ ಪ್ರಾರಂಭದಿಂದ ಪ್ರಾರಂಭವಾದೀತೆಂದು ಕೆಲವರ ಊಹೆ.

ಇಲ್ಲಿಯ ಒಕ್ಕಲಿಗರ ಶಾಲೆಯಲ್ಲಿ ಶಿಕ್ಷಣದ ವ್ಯವಸ್ಥೆ [illegible] ಬಂದಿದೆ [illegible] [illegible] ಅಲ್ಲಿಯ ಬೇರೆ [illegible] [illegible] [illegible] ಸೇರಿಸಿಕೊಂಡಿರುವರೆಂತೆ. ಈ ಶಾಲೆಯಲ್ಲಿ ಕಲಿಸಬೇಕೆಂದು [illegible] [illegible] [illegible] ಕೋಣೆಯಿಂದ ಅವರು ಕಲಿತ [illegible] [illegible] ಬೇರೆ [illegible] ಸಂಬಂಧವಿಲ್ಲ ಮತ್ತು ಊರಲ್ಲಿರುವ ಬೇರೆ ಶಾಲೆ ಇವರಿಗಾಗುವದು ಅವರು ಶಾಲೆಯಲ್ಲಿ ಬಂದೆಂದು ತಾವು ಕಲಿಸಿದೆಂದು ಹೇಳಬಹುದಾಗಿತ್ತು. ಅವರ [illegible] [illegible] ಆ ಜನರ ಅಸಭ್ಯರೀತ

[illegible] ಅಲ್ಲದೆ ಸೋಮವಾರಗಳಲ್ಲಿ ಸಂಕ್ಷೇಪದಿಂದ ಅವರು ಕಲಿಸಲು ಸಿದ್ಧರಿದ್ದಾರೆಂದು [illegible] ಯುಂಟು. ಆದರೆ [illegible] ಅವರಿಗೆ ಈ [illegible] [illegible] ಸಿದ್ಧರಿಲ್ಲ! ಆ ಜನರು ಶಾಲೆಯಲ್ಲಿ [illegible] [illegible] [illegible] ಅಧಿಕಾರಕ್ಕೆ ಎಲ್ಲಾದರೂ [illegible] ಇಲ್ಲಿನ [illegible] [illegible] [illegible] ನಮ್ಮ [illegible] [illegible] [illegible] [illegible] ಅವರು ನಮ್ಮ [illegible] [illegible] [illegible] ತಿಳಿಸಲು [illegible] [illegible]! ಮೇಲಾಗಿ ಇವರು ನಮ್ಮ [illegible] ಸಹಕಾರದಿಂದ, ಭ್ರಾತೃಭಾವದಿಂದ ಮತ್ತು ಪ್ರೇಮದಿಂದ [illegible] [illegible] [illegible] [illegible] [illegible] ಎಂಬುದು

ಪರಮಾತ್ಮನಿಗೇ ಗೊತ್ತು! ಊರೆಲ್ಲ ಕಥೆಯ [illegible] [illegible] 'ಗೆಝೆಟೆಡ್' ಆಫೀಸರರಾದ್ದರಿಂದ ತಾವಿರುವಲ್ಲಿ ಅವರಿಗೆ ಆ ಶಾಲೆ ಇನ್ನೂ ನಿಶ್ಚಿತವಂತೆ, ಆ ಶಾಲೆಗೆ ಇನ್ನೂ ಶಿಕ್ಷಕರ [illegible] ಕಾರಣದಿಂದ ಒಳಗಿಂತಲೂ [illegible] [illegible] [illegible] ಅವರು ವಿಶ್ವಸ್ತರಾಗಿ [illegible] [illegible] [illegible] [illegible] ಅವರ [illegible] [illegible] [illegible] [illegible] [illegible] ಇದೆಯೆಂಬುದು [illegible] [illegible] ಆದಷ್ಟು ಶೀಘ್ರದಲ್ಲಿ [illegible] [illegible] ಬರುತ್ತದೆ.

ಈ ಊರಲ್ಲಿ ಒಂದು ಟ್ಯಾಕ್ಸಿ (Taxi) ಮೋಟಾರ ಆವಶ್ಯಕತೆ ಬಹಳವುಂಟು. ಮೋಟಾರ್ ಚಾಲಕರು [illegible] [illegible] ಸಂಬಂಧವಿಲ್ಲದಿರುವ ಹಳ್ಳಿಗಳಿಗೆ ಅಗತ್ಯದ ಔಷಧೋಪಚಾರಕ್ಕಾಗಿ [illegible] ಹೋಗುವ ಪ್ರಸಂಗವಿದ್ದರೆ ಅಂಥವರು [illegible] [illegible] [illegible] [illegible] [illegible] ಅಂಥವರು ಟ್ಯಾಕ್ಸಿ [illegible] [illegible] [illegible] ಬೆಳಗಾಂವಿಯಲ್ಲಿರುವ ಪ್ರಾದೇಶಿಕ ವಾಹನ ನಿಯಂತ್ರಣ ಅಧಿಕಾರಿಗಳು ಇವರಿಗೆ ಅವಶ್ಯವಿರುವ ಪರವಾನೆ ಮುಂತಾದವುಗಳನ್ನು ಕೊಡಬೇಕಾಗಿದ್ದದಿಲ್ಲವಂತೆ! ಪ್ರಾಂತಿಕ ಸರಕಾರವು ಈ ಅಧಿಕಾರಿಗಳಿಗೆ ತುಸು ಸಾರಾಸಾರ-ಯುಕ್ತಾಯುಕ್ತ ವಿವೇಕಬುದ್ಧಿಯನ್ನು ದಯಪಾಲಿಸಿದರೆ ಬಹಳ ಉಪಕಾರವಾಗುವದು.

ಸುದ್ದಿ-ಪತ್ರಗಳನ್ನು ಕಳಿಸುವವರಿಗೆ ವಿನಂತಿ.

(೧) ತಮ್ಮ ದೂರುಗಳನ್ನು ತಮ್ಮಲ್ಲಿಯ ಸುದ್ದಿಗಳನ್ನು "ವೃತ್ತ" ಕ್ಕೆ ಕಳಿಸಿಕೊಡುವ ಮಹನೀಯರು ಸ್ಪಷ್ಟವಾಗಿ ಮತ್ತು ಸುವಾಚ್ಯವಾಗಿ ಓಳಿಗಳನ್ನು ಬರೆಯತಕ್ಕದ್ದು. ಕಾಗದದ ಒಂದೇ ಮಗ್ಗಲಿಗೆ ಬರೆಯುವದು ಒಳಿತು. ಕಾಗದದ ಅಂಚಿನ್ನೂ [illegible] ಹೆಚ್ಚಾಗಿ ಬರೆದ ಓಳಿಗಳನ್ನು ಓದುವದು ಕಷ್ಟವಾಗುತ್ತಿರುವದರಿಂದ ನಾವು ಅವನ್ನು ಒಮ್ಮೊಮ್ಮೆ ಬದಿಗೊತ್ತಬೇಕಾಗುತ್ತದೆ.

(೨) ಸುದ್ದಿಯೋಲೆಗಳಲ್ಲಿ ನಡೆದ ಸಂಗತಿಗಳನ್ನಷ್ಟೇ ಸುದ್ದಿಗಾರರು ಬರೆಯತಕ್ಕದ್ದು. ಅವನ್ನು ಪುನಃ ಪೂರ್ಣ ವಿವರಗಳೊಂದಿಗೆ, ಓದುಗರಿಗೆ ಸ್ಥಿತಿಯ ಯಥಾರ್ಥ ಅರಿವಾಗುವಂತೆ, ಬರೆಯಬೇಕು. ಬಣ್ಣ ಹಚ್ಚುವ ಗೋಜಿಗೆ ಸುದ್ದಿಗಾರರು ಹೋಗಕೂಡದು. ಸುದ್ದಿಯೋಲೆಗಳಲ್ಲಿ ಟೀಕೆಯ ಅಂಶವೂ ಇರಕೂಡದು. ಆ ಟೀಕೆ ಬೇಕಾದಲ್ಲಿ ನಾವು ಸೇರಿಸುವೆವು.

(೩) ಸುದ್ದಿಗಾರರ ಹೆಸರುಗಳನ್ನು ಬೇಕಾದರೆ ನಾವು ಗುಪ್ತವಿಡುವೆವು. ಆದರೆ ಸುದ್ದಿಗಾರರ ಪೂರ್ಣ ಹೆಸರು ಮತ್ತು ವಿಳಾಸ ನಮಗೆ ತಿಳಿಯಬೇಕು. "ಓರ್ವ ನಾಗರಿಕ" "ಸತ್ಯ ಸಂಚಾರ" ಎಂದು ಮುಂತಾಗಿ ಹೆಸರು ಕೊಟ್ಟ ಸುದ್ದಿಗಾರರ ಸುದ್ದಿ-ಪತ್ರಗಳನ್ನು, ತಮ್ಮ ಸರಿಯಾದ ಹೆಸರು ಪತ್ರಗಳಲ್ಲಿ ಕೊಡದೆ ಅನಾಮಧೇಯವಾಗಿ ಬಂದ್ದಿತಲ್ಲಿ ಯಾವ ಲಕ್ಷ್ಯವಲ್ಲ [illegible] [illegible] [illegible] ಪತ್ರಗಳನ್ನು, ಅವುಗಳೊಳಗಿನ ಮಜಕೂರು ಸತ್ಯ, ಆಧಾರ ಮತ್ತು ಖಾತ್ರಿಯದ್ದು ಇರುತ್ತದೆಂದು ಕಂಡು ಬಂದರೂ, ನಾವು ಗಮನಿಸುವದಿಲ್ಲ "ವೃತ್ತ" ಕಾರರಿಗೆ ಅಪರಿಚಿತರಿರುವ ವ್ಯಕ್ತಿಗಳು ತಮ್ಮ ವರದಿ ಇಲ್ಲವೆ ಸುದ್ದಿಯೋಲೆಗಳೊಳಗಿನ ಮಜಕೂರು ಸತ್ಯವಿರುತ್ತದೆಂದು ಯಾರಾದರೂ ಖಾತೆ [illegible] [illegible] ಯನ್ನು ಪತ್ರದಲ್ಲಿ ಕಳಿಸತಕ್ಕದ್ದು. ಹೀಗೂ, [illegible] [illegible], ಅನಾಮಧೇಯ [illegible] ಇಲ್ಲವೆ ಬರೆದವರಾರೆಂಬ ಪತ್ತೆಯಾಗದಂಥ ಸುದ್ದಿಯೋಲೆಗಳು ಹೆಚ್ಚಾಗಿ ಬರುತ್ತಿರುವದರಿಂದ ನಾವು ಈ ಪ್ರಕಟ ವಿನಂತಿಯನ್ನು ಮಾಡಬೇಕಾಗಿದೆ.

— ಸಂಪಾದಕ

ಅವಧಿ ಬೆಳೆಯಿತು.

ಕಾನಡಾ ಜಿಲ್ಲೆಯಲ್ಲಿ ಬೆಂಕಿ-ಪೆಟ್ಟಿಗೆಗಳ ತಯಾರಿಕೆಗೆ ಅವಶ್ಯವಿದ್ದ ಕಡ್ಡಿ ಮತ್ತು ಪೆಟ್ಟಿಗೆ ಹಲಗೆಗಳನ್ನು (ಸ್ಪ್ಲಿಂಟ್ಸ) ತಯಾರಿಸುವ ಕಾರಖಾನೆಯನ್ನು ಸ್ಥಾಪಿಸ ಬಯಸುವವರು ಸರಕಾರಕ್ಕೆ ತಮ್ಮ ಟೆಂಡರ-ಪತ್ರ ಕಳಿಸುವ ಅವಧಿಯನ್ನು ತಾ ೩೧-೧೨-೧೯೪೮ರ ವರೆಗೆ ಬೆಳೆಸಲಾಗಿದೆ. (ಸರಕಾರಿ ಪ್ರಕಟನೆ)

ನೋಟೀಸು

ಮೋಟಾರ ವಾಹನಗಳ ತಪಾಸಣೆಯ ವಿಷಯದಲ್ಲಿ ಇಲ್ಲಿಯ ವರೆಗೆ ಜಾರಿಯಲ್ಲಿದ್ದ ಕಾರ್ಯಕ್ರಮದಲ್ಲಿ ಕೆಲ ಸಂತೆ ಬದಲಾವಣೆಗಳನ್ನು ಮಾಡಿದ್ದು ಈ ಹೊಸದು ಇದೇ ಬರುವ ಜನವರಿ ೧ನೇ ತಾರೀಖಿನಿಂದ ಅಮಲಿನಲ್ಲಿ ಬರುತ್ತದೆ. ಈ ಕಾರ್ಯಕ್ರಮದಂತೆ ನಮ್ಮ ಖಾತೆಯ ಇನ್‌ಸ್ಪೆಕ್ಟರರು ಪ್ರತಿ ತಿಂಗಳ ನಿರ್ದಿಷ್ಟವಾದ ಸ್ಥಳಗಳಲ್ಲಿ ಮತ್ತು ಆ ಆ ದಿವಸಗಳಲ್ಲಿ ಮೋಟಾರ ಗಾಡಿಗಳ ತಪಾಸಣೆಯನ್ನು ಮಾಡುತ್ತಾರೆ. ಮೋಟಾರುಗಳ ತಪಾಸಣೆಯು ಪ್ರತಿ ದಿವಸ ಮುಂಜಾನೆ ೮ರಿಂದ ೧೨-೩೦ರ ವರೆಗೆ, ಆಫೀಸಿನ ಕೆಲಸ ಮತ್ತು ಪೆಟ್ರೋಲ ಕೂಪನುಗಳ ಹಂಚಿಕೆ ೧೧ರಿಂದ ೧ ಘಂಟೆಯ ವರೆಗೆ, ಡ್ರಾಯವ್ಹರ ಮತ್ತು ಕಂಡಕ್ಟರರ ಟೆಸ್ಟು ೩ ಘಂಟೆಯಿಂದ ೪ ಘಂಟೆಯ ವರೆಗೆ, ಗಾಡಿಗಳ ಪುನಃ ತಪಾಸಣೆ ೪ರಿಂದ ೫ ಘಂಟೆಯ ವರೆಗೆ.

ವಿಜಾಪೂರ ಜಿಲ್ಲೆ

ಮೊದಲನೇ	ಸೋಮವಾರ, ಮಂಗಳವಾರ	ಪ್ರತಿ ತಿಂಗಳ— — — —	ಬಾಗಲಕೋಟೆ
"	ಬುಧವಾರ, ಗುರುವಾರ, ಶುಕ್ರವಾರ	—ಸದರಿ— — — — — —	ವಿಜಾಪೂರ
"	ಶನಿವಾರ	—ಸದರಿ— — — — — —	ಅಥಣಿ

ಕಾರವಾರ ಜಿಲ್ಲೆ

ಎರಡನೇ	ಸೋಮವಾರ, ಮಂಗಳವಾರ	ಪ್ರತಿ ತಿಂಗಳ— — .. — ...	ಕಾರವಾರ
"	ಬುಧವಾರ, ಗುರುವಾರ, ಶುಕ್ರವಾರ	—ಸದರಿ— — — — — —	ಕುಮಟಾ
"	ಶನಿವಾರ, ರವಿವಾರ	—ಸದರಿ— — — — — —	ಶಿರಸಿ
ಮೂರನೇ	ಸೋಮವಾರ	—ಸದರಿ— — — —	ಶಿರಸಿಯಿಂದ ದಾಂಡೇಲಿಗೆ ಪ್ರಯಾಣ
"	ಮಂಗಳವಾರ	—ಸದರಿ— — — — — —	ದಾಂಡೇಲಿ

ಧಾರವಾಡ ಜಿಲ್ಲೆ

ಮೂರನೇ	ಸೋಮವಾರ, ಮಂಗಳವಾರ, ಬುಧವಾರ	ಪ್ರತಿ ತಿಂಗಳ — — — — —	ಗದಗ
"	ಗುರುವಾರ, ಶುಕ್ರವಾರ	—ಸದರಿ— — — — — —	ಹಾವೇರಿ
"	ಶನಿವಾರ, ಆದಿತ್ಯವಾರ	—ಸದರಿ— — — — — —	ಹುಬ್ಬಳ್ಳಿ
ನಾಲ್ಕನೇ	ಸೋಮವಾರ, ಮಂಗಳವಾರ	(ಸದರಿ)	ಹುಬ್ಬಳ್ಳಿ
"	ಬುಧವಾರ, ಗುರುವಾರ	—ಸದರಿ— — — — —	ಧಾರವಾಡ

ಬೆಳಗಾಂವ ಜಿಲ್ಲೆ

ನಾಲ್ಕನೇ	ಸೋಮವಾರ, ಮಂಗಳವಾರ	ಪ್ರತಿ ತಿಂಗಳ — — — —	ನಿಪ್ಪಾಣಿ
"	ಬುಧವಾರ	—ಸದರಿ— — — — —	ಚಿಕ್ಕೋಡಿ
"	ಗುರುವಾರ, ಶುಕ್ರವಾರ	—ಸದರಿ— — — — — —	ಗೋಕಾಕ

ತಾ. ೯-೧೨-೪೮.

Capt. **D. K. Sukhtankar,**
ರೀಜನಲ್ ಟ್ರಾನ್ಸಪೋರ್ಟ ಆಫೀಸರ, ಬೆಳಗಾಂವ

[illegible]

Again After Eight Long Years

World famous PFAFF German Make Sewing Machines

Available

Register Your Orders Immediately

[illegible]

Sole Agents— BELL & Co Bombay

S. G. Mahale & Sons, Ankola, N. Kanara

[illegible]

ಕುಮಟಾ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಭಜಕರಲ್ಲಿ ವಿನಂತಿ

[illegible]

ಮಾಧವ ವಿಠೋಬ ಕಾನಭಾಗ,

[illegible] ಕಾರ್ಯಕಾರಿ ಮಂಡಳದ ಅಧ್ಯಕ್ಷ



[illegible]

ಕೊಪ್ಪೀಕರ ರೋಡ, ಹುಬ್ಬಳಿ

NOTICE.

Applications for the following temporary posts are invited so as to reach the District Magistrate, Kanara (Supply) not later than 15th December 1948

(1) **Supply Head Karkuns-** Scale Rs. 100-8-140 plus Permanent Travelling Allowance of Rs 40/- and Dearness Allowance Minimum qualification required - Graduate of any recognised Indian University.

(2) **Office Superintendents in the Rationing Offices-** Scale Rs. 100-3 140 plus Dearness Allowance. Qualification as in the case of category No (1) above

(3) **Deputy Chief Inspectors-** Scale Rs. 92-8-140-10-150 plus Dearness Allowance. Minimum Qualification- Matriculation or equivalent examination of the Bombay University. Men with higher qualifications will be given preference

(4) **Rationing Inspectors-** Scale Rs 60-4-100 plus Dearness Allowance. Minimum qualification as in the case of category No. (3)

(5) **Clerks for Rationing Officers-** Scale Rs 46-3 85 E. B. -4-125-5-130 plus dearness allowance. Minimum qualification - Matriculation or any such equivalent examination.

(6) **Godown Keepers-** Scale Rs. 46-3-85 plus Dearness Allowance, Minimum qualification— Kannada P. S. L. C. with knowledge of English. Matriculates will be preferred

Preference will be given to those who have previous experience of supply matters and restrictions of qualification will be relaxed in the case of experienced candidates. Applicants called for interview will have to come to Karwar at their own expense and rejected applicants will not be given reply. Applications should be sent by registered post or presented in person, written in the applicant's own handwriting stating clearly his full name, age, caste, educational qualifications and past, experience, if any. Applications received prior to the issue of this notice and after 15-12-1948 will not be considered and replied.

Karwar,
01—2—1948

M. ALLAHBAKSH,
District Magistrate, Kanara.

ವಾರ್ತೆಗಳು

— ನವೆಂಬರದಿಂದ ಸುಮಾರು ೧೦ ಕೋಟಿ ಬೆಲೆಯ ವಿದೇಶಿ ಅರಿವೆ ಮುಂಬಯಿ ಬಂದರದಲ್ಲಿ ಇಳಿದಿದೆ ಈ ತಿಂಗಳ ಕೊನೆಯೊಳಗೆ ಇನ್ನು ೪ ಕೋಟಿ ಬೆಲೆಯ ಜವಳಿ ಅಲ್ಲಿಂದ ಬರಲಿಕ್ಕಿದೆಯಾಗಿ ತಿಳಿಯುತ್ತದೆ. ಮುಂಚೆಕ್ಕಿಂತಲೂ ಇನ್ನೂ ಹೆಚ್ಚಿನ ಬೆಲೆಯ ಜವಳಿ ಆಮದಾಗುವ ಲಕ್ಷಣಗಳಿವೆ, ಅಲ್ಲಿಯ ಜವಳಿಗೆ ಇಲ್ಲಿಯ ಗಿರಾಕಿ ಬಹಳ ಮೆಚ್ಚಿಗೆಯು ಸೂಚಿಸುತ್ತದೆ. ನಮ್ಮಲ್ಲಿಯ ಗಿರಣಿಗಳು ಇಲ್ಲಿಯ ಗಿರಾಕಿಗೆ ತಕ್ಕ ಜವಳಿಯನ್ನು ತಯಾರಿಸದೆ ಇರುವ ಕಾರಣ ತಿಳಿಯುವದಿಲ್ಲ.

— ದಿಲ್ಲಿಯೊಳಗೆ ಘಟನಾ ಸಮಿತಿಯ ಕೆಲಸ ಅಪೇಕ್ಷಿತ ರಭಸದಿಂದ ನಡೆಯುವದಿಲ್ಲ. ಸಗಳೆ ಬಲು ಸಾವಕಾಶ ನಡೆದಿದೆ ಅದರಿಂದ ಜನವರಿ ೨೬ ನೇ ತಾರೀಖಿನೊಳಗೆ ಘಟನಾ ಸಮಿತಿಯ ಕಾರ್ಯ ಪೂರ್ಣವಾಗುವದು ಅಶಕ್ಯವುಂಟು. ಅಷ್ಟರೊಳಗೆ ಮುಗಿಯದಿದ್ದರೆ ಮೂರು ತಿಂಗಳ ತನಕ ಆ ಸಮಿತಿಯ ಕೆಲಸ ಪುನಃ ಪ್ರಾರಂಭಿಸಲಾಗುವದಿಲ್ಲ ಯಾಕೆಂದರೆ ಫೆಬ್ರುವರಿ ತಾ ೧ನೇ ಯಿಂದ ಎಪ್ರಿಲ್ ತಾ ೧ನೇ ವರೆಗೆ ಮಧ್ಯವರ್ತಿ ಕಾಯದೆ ಕೌನ್ಸಿಲಿನ ಅಧಿವೇಶನ ಜಮಾ-ಖರ್ಚ ಪತ್ರಿಕೆಗಳ ಚರ್ಚೆಯಾಗಲಿದೆ. ಇದಲ್ಲದೆ ಕೆಲವು ಹೊಸ ಕಟ್ಟಳೆಗಳೂ ಆಗಲಿವೆ. ಆನಂತರ ಹೊಸ ಇಲೆಕ್ಶನ್ನುಗಳನ್ನು ನಡೆಸಲಿಕ್ಕೆ ಅವಶ್ಯವಿದ್ದಷ್ಟು ಘಟನೆಯ ಭಾಗಗಳನ್ನು ಮೊದಲು ಘಟನಾ ಸಮಿತಿಯಲ್ಲಿ ಮನ್ನಿಸಿಕೊಂಡು ಬರುವ ಆಕ್ಟೋಬರ ತಿಂಗಳೊಳಗೆ ಹೊಸ ಇಲೆಕ್ಶನ್ನು ಆಗುವಂತೆ ಏರ್ಪಾಟು ಮಾಡಬೇಕೆಂಬ ವಿಚಾರ ನಡೆದಿದೆ ಪಂಡಿತ ಜವಾಹರಲಾಲ ಮೊದಲಾದ ಲೋಕನಾಯಕರು ಘಟನೆಯನ್ನು ಸ್ವೀಕರಿಸಲು ಉತ್ಸುಕರಾಗಿದ್ದಾಗ್ಯೂ ಇನ್ನೊಂದು ವರ್ಷದ ತನಕ ಘಟನಾ ಸಮಿತಿಯ ಕಾರ್ಯ ಪೂರ್ಣವಾಗುವ ಹಾಗಿಲ್ಲ. ಘಟನಾ ಸಮಿತಿಯ ಸಭೆಗೆ ದಿನ ಒಂದಕ್ಕೆ ರೂ. ೨೫೦೦೦ದಂತೆ ಖರ್ಚ ತಗಲುತ್ತದೆ

— ದಿಲ್ಲಿಯೊಳಗೆ ಗುರುವಾರ (ತಾ ೨) ಅಪರಾಹ್ನ ಸಣ್ಣ ಭೂಕಂಪವಾಯಿತು. ಅದೇ ೩ ದಿವಸಗಳ ಹಿಂದೆ ಅಂದರೆ ಸೋಮವಾರ (ತಾ. ೨೯) ಬೆಳಗಿನ ೩ ಗಂಟೆಗೆ ಆಸಾಮು ಪ್ರಾಂತದ ಗೌಹತಿಯಲ್ಲಿ ೨ ಸಾರೆ ಭೂಮಿ ಕಂಪಿಸಿತು. ಢಾಕಾದಲ್ಲಿ ಬುಧವಾರ ತಾ ೮ ನಸುಕಿಗೆ ಭೂಕಂಪವಾಯಿತು. ಮನೆಗಳು ನಡುಗಿದವು. ಜನರು ನಿದ್ದೆಗಣ್ಣಿನಿಂದ ಎದ್ದು ಬಯಲಿಗೆ ಓಡಿದರು ಅದೇ ದಿನ ಗೌಹತಿಯಲ್ಲಿಯೂ ಅದೇ ಸಮಯ ಗುಡುಗಿನ ನಮೂನೆಯ ಸಪ್ಪಳವಾಗಿ ಭೂಮಿ ನಡುಗಿತು. ಶಿಲ್ಲಾಂಗದಲ್ಲಿ ಅದೇ ದಿನ ಭೂಕಂಪವಾಯಿತಾಗಿ ಮುಂಬಯಿ ವೇಧಶಾಲೆಯವರು ಪ್ರಕಟಿಸುತ್ತಾರೆ. ರುಕ್ಯ ದೇಶದಲ್ಲಿ ಮಂಗಳವಾರ (ತಾ ೩೦) ಧೂಮಕೇತು ದರ್ಶನವಾಯಿತು. ಸೂರ್ಯಬಿಂಬದ ಸಮೀಪವೇ ಧೂಮಕೇತು ನಸುಕಿಗೆ ಬರಿಗಣ್ಣಿಗೆ ಕಾಣಿಸುವಂತೆ ಪ್ರಕಟವಾಗಿದೆ. ಇಷ್ಟು ಪ್ರಕಾಶವುಳ್ಳ ಧೂಮಕೇತು ಕಳೆದ ೧೨ ವರ್ಷಗಳಲ್ಲಿ ಯಾರೂ ಕಂಡಿದ್ದಿಲ್ಲವೆಂದು ಅಲ್ಲಿಯ ಜನರ ಅಂಬೋಣ! ಸಿದ್ಧವಾಗುವದಿಲ್ಲವಾಗಿ ಪಂಡಿತ ಜವಾಹರಲಾಲ ಪ್ರಭೃತಿ ರಾಜಕಾರಣಿಗಳ ಅಂಬೋಣವಿದೆ ಹಾಗಿದ್ದರೆ ಈ ಚರಿತ್ರ ಸೂಚನೆಗಳು ಯಾವ ಅರಿಷ್ಟದ ದ್ಯೋತಕವೆಂದು ತಿಳಿಯುವದಿಲ್ಲ.

— ಮೈಸೂರ ಸರಕಾರವು ೩ ಲಕ್ಷ ರೂಪಾಯಿಗಳಿಂದ ೧೦ ಮೈಲು ದೂರವಿರುವ ಹೆಸರಘಟ್ಟ ಗ್ರಾಮದಲ್ಲಿ ಹಾಲಿನ ಕೇಂದ್ರವನ್ನು ಸ್ಥಾಪಿಸಿದೆ ಈ ಕೇಂದ್ರಕ್ಕಾಗಿ ೩೦೦೦ ಎಕರೆ ಹುಲ್ಲು ಬೆಳೆಯುವ ಭೂಮಿಯನ್ನು ಮೈಸೂರ ಸರಕಾರವು ಕೊಟ್ಟಿದೆ ಇನ್ನು ೫ ವರ್ಷಗಳಲ್ಲಿ ೧೨ ಸಾವಿರ ಹಾಲು ಹಿಂಡುವ ದನಗಳನ್ನು ಈ ಕೇಂದ್ರದಲ್ಲಿ ಸಾಕಿ ನಗರದ ಜನರಿಗೆ ಹಂಚಬೇಕೆಂಬ ಯೋಜನೆಯಾಗಿದೆ. ಜಾತಿವಂತ ದನಗಳ ಬೆಳವಣಿಗೆ ಮಾಡುವದಕ್ಕಾಗಿ ಸರಕಾರವು ಬೆಂಗಳೂರ-ಮೈಸೂರುಗಳಲ್ಲಿ ದನಗಳ ಚಿಕಿತ್ಸಾಲಯಗಳಲ್ಲಿ ಪ್ರಯೋಗಗಳನ್ನು ನಡೆಸುತ್ತಿದೆ ಮೈಸೂರಿನಲ್ಲಿ ಹೆಸರಾದ ದನಗಳ ಜಾತಿಗಳೆರಡು — (೧) ಹಳ್ಳಿಕಾರ, (೨) ಅಮೃತಮಹಾಲ ಈ ಎರಡು ಜಾತಿಯ ದನಗಳ ಪೀಳಿಗೆಯನ್ನು ಸುಧಾರಿಸುವದಕ್ಕಾಗಿ ಈ ಕೇಂದ್ರಗಳು ಪ್ರಯತ್ನಿಸುತ್ತವೆ ಸಾಮಾನ್ಯ ಊರ ದನಗಳ ಉತ್ಪಾದನೆಯಲ್ಲಿ ಸಂಶೋಧನ ನಡೆಸಿ, ಅವು ಹೆಚ್ಚೆಚ್ಚು ಹಾಲು ಹಿಂಡುವಂತೆ ಪ್ರಯೋಗಗಳು ಸಹ ನಡೆದಿವೆ ಜನತೆಯ ಆರೋಗ್ಯವೃದ್ಧಿಯನ್ನು ಹೊಂದಿಸಿಕೊಂಡಿದೆಂದು ಮೈಸೂರ ಸರಕಾರವು ಧಾರಾಳವಾಗಿ ನಂಬಿಕೊಂಡಿದೆ.

— ಬೆಂಗಳೂರಿನ ವಿಧಾನ ಸಭೆಯ ಸಾಲಿನಲ್ಲಿ ಬೇಸಾಯದ ವಾರ್ಷಿಕ ಸಮ್ಮೇಳನ ನಡೆಯಿತು. ಬೇಸಾಯದ ಮಂತ್ರಿಗಳಾದ ಶ್ರೀ|| ಚನ್ನಯ್ಯನವರು ಅಧ್ಯಕ್ಷರಾಗಿದ್ದರು. ಬೇಸಾಯ ಸುಧಾರಣೆಗಾಗಿ ಮುಂದಿನ ವರುಷದಲ್ಲಿ ರೂ ೫೦ ಲಕ್ಷ ಮೈಸೂರ ಸರಕಾರವು ಖರ್ಚ ಮಾಡಬಯಸುತ್ತದೆಂದರು ೫ ವರ್ಷಗಳಲ್ಲಿ ರೂ ೧೪ ಕೋಟಿಗಳನ್ನು ಖರ್ಚ ಮಾಡಿ ೩ ಲಕ್ಷ ಎಕರೆ ಭೂಪ್ರದೇಶವನ್ನು ಮೈಸೂರ ಸರಕಾರವು ನೀರಾವರಿಗೆ ತರುವದಾಗಿ ಮಾಡಬಯಸುತ್ತದೆಂದರು

ನೋಟೀಸು.

ಗುರುನಾಥ ವೆಂಕಟೇಶ [illegible] ಕೆಳಗೆ ಸೂಚಿಸಿದ [illegible]

[illegible]

ಹಿಸ್ಸಾ ನಂ. [illegible] ೧+೧೨+ ೨೫+೨೫೦/೧+೨೫೦+೪+೧೪೦/೧+೧೫೪/೧+ ೧೩೪+೨೪೭/೧.

[illegible] — ೩೪೭/ ೨+೧/೬ + ೧೨

[illegible]

ತಾ ೨೫-೧೧-೧೯೪೮.

ಗುರುನಾಥ ವೆಂಕಟೇಶ ಜಗಳಿ, ಹರಿಹರ

THE REGIONAL TRANSPORT AUTHORITY,

KARNATAK REGION, BELGAUM.

NOTICE.

Applications in the prescribed form which can be had from this office for permits to operate Stage Carriage Service o i the following routes, are invited from the existing operators on the routes or in the area or from the joint stock Companies of all majority of the existing operators operat-ing in or around the area or route for which application is made or others including Local Bodies in the Karnatak Region.

S.No.	Name of Route.
1.	Byadgi—Sirsi via Havasbhavi, Tilvalli, Samasgi.
2.	Chikodi Road—Mudhol
3.	Mudhol-Bagalkot via Lokapur.
4	Mudhol—Bagalkot via Aligundi.

All applications should be submitted so as to be received in this office on or before 21-12-1948 and those received after this date will not be entertained.

Applications should clearly state the time-table proposed to be maintained and the standard rate of fare proposed to be charged per passenger per mile. They should be complete in all respects and if incomplete, they will be treated as invalid.

Permits will be granted on a temporary basis in accordance with the existing instructions from Government and issued as and when the petrol quota allotted to this Region permits.

No 7422 /4-B/KR of 1948
Regional Transport Office, K.R.,
Belgaum, 6-12-1948

D K SUKHTANKAR, CAPT.
Secretary,
Regional Transport Authority,
Karnatak Region, Belgaum

ಇದಲ್ಲದೆ ರೂ ೧ ಕೋಟಿ ಖರ್ಚು ಮಾಡಿ ಕೃಷಿ ಶಾಸ್ತ್ರ ಸಂಶೋಧನ ನಡೆಯುವದೆಂದು ಶ್ರೀ|| ಸಿದ್ಧಯ್ಯನವರು ಘೋಷಿಸಿದರು

— ಸಯಾಮು ದೇಶದಿಂದ ೭೩೦೦ ಟನ್ ಅಕ್ಕಿ ಹಿಂದುಸ್ಥಾನಕ್ಕೆ ಹೊರಟಿದೆ ಈ ವರುಷ ಸಯಾಮು ದೇಶದಲ್ಲಿ ಅಕ್ಕಿ ವಿಪುಲ ಹುಟ್ಟಿದೆ ಜಗತ್ತಿನೊಳಗೆ ಅಕ್ಕಿಯ ಬೆಳೆ ಸಾಮಾನ್ಯವಾಗಿ ಈ ವರುಷ ಸಮಾಧಾನಕರವಾಗುವದೆಂದೂ ಅಕ್ಕಿ ಕಿನ್ನವ ದೇಶಗಳಿಗೆ ಅಕ್ಕಿ ಪೂರೈಸಲು ಹೆಚ್ಚಿನ ಅನುಕೂಲವಾಗುವದೆಂದೂ ಅಂತರ್‌ರಾಷ್ಟ್ರೀಯ ಆಹಾರ ಸಂಘದವರು ಕಳೆದ ಸೋಮವಾರ ತಾ ೨೯ನೇಗೆ ಸೇರಿದ ಸಭೆಯಲ್ಲಿ ಘೋಷಿಸಿದ್ದಾರೆ ಈ ವರುಷದಂತೆ ಮುಂದಿನ ವರುಷ ಬೆಳೆಯಾಗುವ ಲಕ್ಷಣಗಳಿಲ್ಲವಾದ್ದರಿಂದ ಜನರು ಜಾಗ್ರತೆಯಿಂದ ಅಕ್ಕಿಯ ಉತ್ಪತ್ತಿ ಬೆಳೆಸಲು ಹೆಚ್ಚೆಚ್ಚಿನ ಪರಿಶ್ರಮ ಮಾಡಬೇಕಾಗಿ ಸಹ ಈ ಸಭೆ ಮುಂಜಾಗ್ರತೆ ಕೊಟ್ಟಿದೆ ಸಯಾಮು ದೇಶದವರು ದಿಲ್ಲಿಯಲ್ಲಿ ಸರ್ವಾಧಿಪತಿ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ಕಂಚು ಒಂದು ಅಕ್ಕಿ ತುಂಬಿದ ಕಲಶವನ್ನು ಅರ್ಪಿಸಿದರು ಸಯಾಮು ದೇಶದಂತೆ ಹಿಂದುಸ್ಥಾನದಲ್ಲೂ ಅಕ್ಕಿ ಪವಿತ್ರವೆಂದೆಣಿಸುವದರಿಂದ ಎರಡೂ ರಾಷ್ಟ್ರಗಳು ಹಿಂದಿನಂತೆ ಮುಂದೆಯೂ ಸ್ನೇಹದಿಂದ ಉಳಿದು ಪರಸ್ಪರ ಸಹಕಾರ ಮಾಡುವವೆಂದು ಶ್ರೀ|| ರಾಜಗೋಪಾಲಾಚಾರಿಯವರು ಸಯಾಮುದ ಪ್ರತಿನಿಧಿಗಳಿಗೆ ಆಶ್ವಾಸನವನ್ನಿತ್ತರು

— ಪಾಕಿಸ್ತಾನದೊಳಗೆ ಇನ್ನೂ ಹಿಂದುಸ್ಥಾನದ ಬಗ್ಗೆ ಸ್ನೇಹಭಾವ ಉಂಟಾಗಿಲ್ಲ ಪೋರ್ತುಗೀಜ ಸರಕಾರದ ಸಹಾಯದಿಂದ ಹಿಂದುಸ್ಥಾನದ ಪಶ್ಚಿಮ ದಂಡೆಗುಂಟ ಪ್ರದೇಶದ ಮೇಲೆ ದಾಳಿ ಮಾಡಬೇಕೆಂಬ ಅಭಿಲಾಷೆ ಪಾಕಿಸ್ತಾನಕ್ಕುಂಟೆಂದು ತೋರುತ್ತದೆ. ಹಿಂದುಸ್ಥಾನ ಸರಕಾರದ ಪರವಾಗಿ ಹೈದರಾಬಾದದ ಮೇಲೆ ದಂಡೆತ್ತಿಕೊಂಡು ಹೋದ ಸೇನಾಪತಿ ರಾಜೇಂದ್ರ ಸಿಂಗಜಿಯವರನ್ನು ಪಶ್ಚಿಮದ ದಂಡೆಯ ರಕ್ಷಣೆಗಾಗಿ ನೇಮಿಸಿರುವದಾಗಿ ತಿಳಿಯುತ್ತದೆ. ಕಚ್ಛ ದೇಶಕ್ಕೆ ಸೇನಾಪತಿ ರಾಜೇಂದ್ರ ಸಿಂಗಜಿಯವರು ಹೋಗಿ ಅಲ್ಲಿ ಸೈನ್ಯ ಠಾಣ್ಯವನ್ನು ಇಡುವಂತೆ ಏರ್ಪಾಟು ಮಾಡಿ ಬಂದರೆಂದು ಪ್ರಕಟವಾಗಿದೆ. ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಶ್ರೀ|| ಮೊರಾರಜಿ ದೇಸಾಯಿಯವರೂ ಆ ಕಡೆ ಕಳೆದ ವಾರ ಸಂಚರಿಸಹೋಗಿದ್ದರು ಇನ್ನೊಂದು ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳೂ ಪಾಕಿಸ್ತಾನ ಸರಕಾರದ ಪ್ರತಿನಿಧಿಗಳೂ ದಿಲ್ಲಿಯಲ್ಲಿ ಆಲೋಚನೆ ಮಾಡಿ ವಿವಾದ ವಿಷಯಗಳನ್ನು ಬಗೆಹರಿಸಲೆತ್ನಿಸಿದ್ದಾರೆ ಈ ವಿವರಗಳನ್ನು ತಿಳಕೊಂಡು ತಕ್ಕ ಕ್ರಮ ಕೈಕೊಳ್ಳುವ ದೆಸೆಯಿಂದ ಉಭಯ ಸರಕಾರಗಳ ಬೇರೆ ಬೇರೆ ಇಲಾಖೆಗಳ ಕಾರ್ಯದರ್ಶಿಗಳು ನೇಮಿಸಲ್ಪಟ್ಟಿದ್ದಾರೆ ಅಂತು ಏಳು ವಿಚಾರ ಮಂಡಳಿಗಳು ಸ್ಥಾಪಿಸಲ್ಪಟ್ಟಿವೆ

— ಕಲಕತ್ತೆಯ "ಅಮೃತ ಬಝಾರ ಪತ್ರಿಕೆ"ಯಲ್ಲಿ ಒಂದು ವಿಚಿತ್ರ ಸಂಗತಿ ಪ್ರಕಟವಾಗಿದೆ ೨೩ ವರ್ಷ ಪ್ರಾಯದ ಮದುವೆಯಾದ ಹೆಂಗಸು ಗಂಡಸಾಗಿ ರೂಪಾಂತರ ಹೊಂದತೊಡಗಿದ್ದಾಳೆ! ಅವಳು ಮದುವೆಯಾಗಿ ೮ ವರ್ಷಗಳಾದವು ಅವಳಲ್ಲಿ ಸಂತತಿ ಇಲ್ಲ. ಇತ್ತ ೭-೮ ತಿಂಗಳುಗಳಿಂದ ಅವಳ ದೇಹಪ್ರಕೃತಿಯಲ್ಲಿ ವ್ಯತ್ಯಾಸವಾಗತೊಡಗಿತು ಪುರುಷ ಲಕ್ಷಣಗಳು ಮೂಡತೊಡಗಿದವು, ಸ್ತ್ರೀ ಅವಯವಗಳು ಕ್ರಮವಾಗಿ ಮಾಯವಾಗಿ ಪುರುಷ ಅವಯವಗಳು ಉದ್ಭವಿಸಹತ್ತಿವೆ. ಕಲಕತ್ತೆಯ ಚಿಕಿತ್ಸಾಲಯದಲ್ಲಿ ಅವಳು ಈಗ ಉಪಚಾರ ಹೊಂದುತ್ತಿದ್ದಾಳೆ ಇದೊಂದು ವಿಚಿತ್ರ ಪ್ರಕರಣವೆಂದೂ ಇಂಥ ಘಟನೆಯನ್ನು ತಾವೆಂದೂ ಕಾಣಲಿಲ್ಲವೆಂದೂ ಡಾಕ್ಟರರು ಅಭಿಪ್ರಾಯಪಡುತ್ತಾರೆ.

— ಕರ್ನಾಟಕದ ಮುಂದಾಳುಗಳಾದ ಶ್ರೀ|| ದಿವಾಕರ ರಂಗನ ಧರಾಯರಿಗೆ ಹಿಂದುಸ್ಥಾನ ಸರಕಾರದ ಪ್ರಸಿದ್ಧಿ ಮತ್ತು ಆಕಾಶವಾಣಿ ಇಲಾಖೆಗಳ ಮಂತ್ರಿಗಳಾಗಿ ನೇಮಿಸಲಾಗಿದೆ.

ಹಿಂದುಸ್ಥಾನದ ಸೇನಾಪತಿಗಳಾದ ಬುಚರ್‌ರವರು ಇದೇ ಬರುವ ಜನವರಿ ತಿಂಗಳೊಳಗೆ ನಿವೃತ್ತರಾಗುತ್ತಾರೆ ಅವರ ಸ್ಥಳದಲ್ಲಿ ಬ್ರಿಗೇಡಿಯರ್ ಕರಿಯಪ್ಪನವರು ಸೇನಾಪತಿಗಳಾಗಬೇಕೆಂದು ಹಿಂದುಸ್ಥಾನ ಸರಕಾರವು ಪ್ರಕಟನೆಯನ್ನು ಹೊರಡಿಸಿದೆ ಸೇನಾಪತಿ ಬ್ರಿಗೇಡಿಯರರವರು ಜನವರಿ ತಾ ೧೫ನೇಗೆ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ ಸುಭಾಷ ಸೇನೆಯ ಶಹಾನವಾಜ, ಸೈಗಲ ಮತ್ತು ಧಿಲನರವರ ಮೇಲೆ ನಡೆದ ಖಟ್ಲೆಯಲ್ಲಿ ಲಷ್ಕರೀ ನ್ಯಾಯಾಧೀಶರಾಗಿ ಕರಿಯಪ್ಪನವರು ನೇಮಿಸಲ್ಪಟ್ಟಿದ್ದರು. ಶಹಾನವಾಜ ಮೊದಲಾದ ಮೂವರನ್ನು ಕರಿಯಪ್ಪನವರು ಬಿಡುಗಡೆ ಮಾಡಿದ್ದಾರೆ ಈ ಖಟ್ಲೆಯಲ್ಲಿ ದಿವಂಗತ ಶ್ರೀ|| ಭುಲಾಭಾಯಿ ದೇಸಾಯಿಯವರು ಮಾಡಿದ ಪ್ರತಿಪಾದನೆಯನ್ನು ಎಲ್ಲರೂ ಬಲ್ಲಾದ ವಿಷಯ.

— ಮಹಾತ್ಮರ ಕೊಲೆಯ ಖಟ್ಲೆಯಲ್ಲಿ ಸರಕಾರಿ ವಕೀಲರಾದ ಶ್ರೀ|| ದಪ್ತರಿಯವರ ಪ್ರತಿಪಾದನೆ ಶುಕ್ರವಾರ ಮುಗಿಯಿತು ಶ್ರೀ|| ದಪ್ತರಿಯವರು ಎಲ್ಲ ಆರೋಪಿಗಳ ಮೇಲೆ ಆಪಾದನೆಯನ್ನು ಹೊರಿಸುವ ಪುರಾವೆ ಮತ್ತು ದಾಖಲೆಗಳನ್ನು ನ್ಯಾಯಾಧೀಶರಿಗೆ ತಿಳಿಸಿಹೇಳಿದರು ಶನಿವಾರದಿಂದ ಆರೋಪಿ ಕಡೆ ವಕೀಲರು ತಮ್ಮ ಅಂಬೋಣ ಕೋರ್ಟಿಗೆ ಅರಿಕೆ ಮಾಡಿಕೊಳ್ಳುವರು ಈ ತಿಂಗಳೊಳಗೆ ಎಲ್ಲ ಪ್ರತಿಪಾದನೆಗಳು ಮುಗಿದು ಹೋಗುವವವೆಂದು ಎಣಿಸಲಾಗಿದೆ ಮಹಾತ್ಮರ ಕೊಲೆಯಾದದ್ದು ತಾ. ೩೦ನೇ ಜನವರಿಗೆ, ಆ ತಾರೀಖಿನೊಳಗೆ ನ್ಯಾಯಾಧೀಶರಾದ ಶ್ರೀ|| ಆತ್ಮಚರಣರು ತೀರ್ಪು ಕೊಡಬಹುದೆಂದು ತೋರುತ್ತದೆ ಈ ಖಟ್ಲೆಯ ವಿಚಾರಕ್ಕೆ ಸಾಧಾರಣ ರೂ ೫ ಲಕ್ಷ ಖರ್ಚು ಬರಬಹುದು. ಆರೋಪಿ ತರ್ಫೆನಿಂದ ನ್ಯಾಯ ಸಹಾಯಕ ನಿಧಿಯೊಂದು ಕೂಡಿಸಲಾಗಿದೆ. ಅದಕ್ಕೆ ಸುಮಾರು ಮುಕ್ಕಾಲು ಲಕ್ಷ ರೂ. ಕೂಡಿವೆ ಆರೋಪಿಗಳಲ್ಲಿ ಶ್ರೀ|| ವಿನಾಯಕ ದಾಮೋದರ ಸಾವರಕರರು ನ್ಯಾಯಾಸನಕ್ಕೆ ಒಪ್ಪಿಸಿದ ೫೭ ಪುಟಗಳ ಇಂಗ್ಲಿಷ ಕೈಫಿಯತನ್ನು ಪುಣೆಯ 'ಮರಾಠಾ' ಎಂಬ ಇಂಗ್ಲಿಷ ವಾರಪತ್ರಿಕೆಯು ಪೂರ್ಣವಾಗಿ ಪ್ರಕಟಿಸಿದೆ ಈ ಖಟ್ಲೆಯ ನಿರ್ಣಯದಲ್ಲಿ ಅಖಿಲ ಭಾರತೀಯ ಹಿಂದೂ ಮಹಾಸಭೆಯ ಭೂಮಿಕೆಯ ಗುಣದೋಷಗಳು ನಿರ್ಣಯವಾಗಲಿಕ್ಕಿವೆ

— ಪಾಕಿಸ್ತಾನದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ|| ಖುರ್ಶೀದರವರು ಬಹಳ ಲಂಚಗುಳಿತನ ನಡಿಸಿದರೆಂದೂ ತಮ್ಮವರಿಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಕೊಟ್ಟು ಸ್ವಾರ್ಥ ಸಾಧಿಸಿದರೆಂದೂ ಆಪಾದನೆ ಹೊರಿಸಿ ಅವರ ಮೇಲೆ ವಿಚಾರ ನಡಿಸಲು ಹಿಂದಿನ ಪಾಕಿಸ್ತಾನದ ಸರ್ವಾಧಿಕಾರಿಗಳಾದ ಮಹಮ್ಮದ ಅಲಿ ಜಿನ್ನಾರು ಚೌಕಶಿ ಮಂಡಳ ನೇಮಿಸಿದ್ದರು ಈ ಮಂಡಳದಲ್ಲಿ ಖುರ್ಶೀದ ಪರವಾಗಿ ಹಿಂದೆ ಅಲಹಾಬಾದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ|| ಮಹಮ್ಮದ ಇಕ್ಬಾಲರವರು ಕೆಲಸ ನಡಿಸಿದರು ಈಗ ವಿಚಾರ ಮುಗಿದಿದೆ. ಖಟ್ಲೆ ವಿಚಾರದ ಬಗ್ಗೆ ಪಾಕಿಸ್ತಾನ ಸರಕಾರಕ್ಕೆ ರೂ. ೩೦ ಲಕ್ಷ ಖರ್ಚು ತಗಲಿತು, ನಡುಮಧ್ಯದಲ್ಲಿ ಖುರ್ಶೀದರವರು ಸಿಂಧ ಮುಸ್ಲಿಮ ಲೀಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು ಚೌಕಶಿ ಮಂಡಳದ ನಿರ್ಣಯವಾದನಂತರ ತಾವು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವದು ಉಚಿತವಲ್ಲೆಂದು ಖುರ್ಶೀದರವರು ಪ್ರಕಟಣೆಯನ್ನು ಹೊರಡಿಸಿ, ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ! ಹಾಗೆ ಖುರ್ಶೀದರವರ ವಿಚಾರವಿದ್ದಿದ್ದರೆ, ಅವರು ಉಮೇದ್ವಾರ-ಪತ್ರಿಕೆಯನ್ನು ದಾಖಲಪಡಿಸಿದ ಕಾರಣ ಜನರಿಗೆ ತಿಳಿಯುವದಿಲ್ಲ.

ನಮ್ಮಲ್ಲಿ ಕತ್ತದ ಚಕಾರ ಹುರಿ ಮತ್ತು ಬಾವಿ ಹಗಗಳು

ಯೋಗ್ಯ ದರದಲ್ಲಿ ಸಿಗುತ್ತವೆ.

ಚೇರಮನ್, ಕತ್ತದ ಸೊಸೈಟಿ ಲಿಮಿಟೆಡ್.
ಹೊನ್ನಾವರ (ಉ. ಕ)

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ತೀರ್ಥಕ್ಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯುಳ್ಳ ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಅನುಕೂಲದ ಪ್ರಕಾರ ಮಾಡಿಸಿಕೊಡುತ್ತೇವೆ ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ ರುದ್ರಾಕ್ಷಿ ಇತ್ಯಾದಿ ಯಾತ್ರಾ ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಘಟ್ಟಗಲ್ಲಿ, ಬನಾರಸ

THE BANK OF RURAL INDIA LTD.

(Incorporated in British India, Liability of Members limited)

HEAD OFFICE.— "Satyabhama Bhavan", KARWAR. N K

Offices at.— KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital .. Rs. 10,00,000;
Subscribed Capital .. Rs 5,00,000;
Paid-up Capital & Reserves .. Rs. 5,08,502-8-0

Rates of Interest on Deposits

Current a/c @ 1% p. a. Savings Bank a/c @ 2½%

Fixed Deposits for 3 months @ 3% per annum.
" " for 6 months @ 3½% "
" " for 12 months or more @ 4% "

All kinds of modern Banking business transacted

Karwar, 14-2-1948

P X GRACIOUS,
MANAGING DIRECTOR

ಇದನ್ನು ಸದಾಶಿವ ರಂಗ ಕೃಷ್ಣ ಶಾನಭಾಗ, (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಹೊರಊರುಗಳವರಿಗೆ ವರ್ಷಕ್ಕೆ ೩-೧-೦
ಆರು ತಿಂಗಳಿಗೆ ೧-೧೨-೦
ಒಂದು ಸಂಚಿಕೆಗೆ ...೦-೧-೦
ಹಳೇ ಸಂಚಿಕೆಗೆ ...೦-೪-೦
ವರ್ಷಾರಂಭದಿಂದ ಹಣ ತೆರುವವರು
ವರ್ಷದ ಆರಂಭಕ್ಕೆ ಹಣ ಕಳಿಸಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 20-12-1948.

ಕಾನಡಾ ವೃತ್ತ

ವರ್ಷ ೩೧] THE KANARA NEWS [ಸಂಚಿಕೆ ೩೪.

ಕುಮಟಾ.- ಸೋಮವಾರ, ತಾ ೨೦-೧೨-೧೯೪೮.

ಜಾಹೀರಾತುಗಳ ದರ:
ಸ್ಥಳ ಲಭ್ಯತೆ ಮತ್ತು ಅವಧಿ
ಜಾಹೀರಾತುಗಳ ಬಗ್ಗೆ ಸಮಗ್ರ
ಪ್ರತ್ಯೇಕ ಪತ್ರದ್ವಾರಾ
ತಿಳಿಸಲಾಗುವದು.

ಕೇಳಿದ್ದು, ಕಂಡದ್ದು.

(ಜಿಲ್ಲಾ-ಸಂಚಾರಿಯು ಬರೆದುದು)

ಕಾರವಾರ ತಾಲೂಕಿನಲ್ಲಿ ಕನ್ನಡೇತರರು ಬಹುಸಂಖ್ಯರೋ ಕನ್ನಡಿಗರು ಬಹುಸಂಖ್ಯರೋ ಎಂಬ ವಾದ ಈಗ ಕೆಲವು ದಿವಸಗಳಿಂದ ನಡೆದಿದೆ. ಸದ್ಯದ ಜನಗಣತಿಗಳ ಆಧಾರದಿಂದ ಹಾಗೂ ಅನುಭವದ ಆಧಾರದಿಂದ ಕಾರವಾರ ತಾಲೂಕಿನಲ್ಲಿ ಕನ್ನಡ ಆಡುವವರು ಅಲ್ಪಸಂಖ್ಯರಿರುತ್ತಾರೆಂದು ಕಾರವಾರದೊಳಗಿನ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ವಾದಿಸಿದರೆ, ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಗನುಸಾರವಾಗಿ ಕಳೆದ ವರ್ಷ ಶಿಕ್ಷಣಾಧಿಕಾರಿಗಳು ನಡೆಸಿದ ಶಾಲಾ-ಶಿಕ್ಷಣ-ಪಾತ್ರ ಮಕ್ಕಳ ಗಣತಿಯ ಆಧಾರದಿಂದ ಕಾರವಾರ ತಾಲೂಕಿನಲ್ಲಿ ಕನ್ನಡಿಗರದೇ ಹೆಚ್ಚಳವಿರುತ್ತದೆಂದು ಕರ್ನಾಟಕ ಏಕೀಕರಣವಾದಿಗಳು ಪ್ರತಿವಾದಿಸುತ್ತಾರೆ. ಸ್ಥಾನಿಕ ಕೊಂಕಣಿ-ಮರಾಠೀ ಭಾಷೆ ಕನ್ನಡದಿಂದ ಬಹಳ ಭಿನ್ನವಾಗಿರುವದರಿಂದಲೂ ಆ ಕಾರಣದಿಂದ ಕನ್ನಡ ಕಲಿಯುವದು ಅಗತ್ಯವಿರುತ್ತದಾದ್ದರಿಂದಲೂ, ಊರಲ್ಲಿ ಕನ್ನಡ ಶಾಲೆಯ ಹೊರತು ಬೇರೆ ಶಾಲೆಯಿರುವದಿಲ್ಲಾದ್ದರಿಂದಲೂ ಕೊಂಕಣಿಗರೂ ಮರಾಟಿಗರೂ ತಮ್ಮ ಮಕ್ಕಳನ್ನು ನಿರುಪಾಯವಾಗಿ ಕನ್ನಡ ಶಾಲೆಗೆ ಕಳಿಸಿಕೊಡಬೇಕಾಗತ್ತದಾದ್ದರಿಂದಲೂ ಕನ್ನಡ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯು ಮೇಲಿಂದ ಕಾರವಾರ ತಾಲೂಕಿನಲ್ಲಿ ಕನ್ನಡಿಗರ ಹೆಚ್ಚಳವುಂಟೆಂದು ಪ್ರತಿಪಾದಿಸುವದರಲ್ಲಿ ಏನೇನೂ ತಥ್ಯವಿಲ್ಲೆಂದು ಕನ್ನಡೇತರ ಭಾಷಾವಾದಿಗಳು ಹೇಳುತ್ತಾರೆ. ಅದಲ್ಲದೆ ಮಕ್ಕಳ ಗಣತಿ ಮಾಡುವಾಗ ಗಣತಿ ಮಾಡುವ ಶಿಕ್ಷಕರು ಒಂದಕ್ಕೊಂದು ಬರಕೊಂಡು ಕಾರವಾರ ತಾಲೂಕಿನಲ್ಲಿ (ಮತ್ತು ಅದರಂತೆ ಕುಮಟಾ ಪೇಟೆಯಲ್ಲೂ ಹಳಿಯಾಳ ತಾಲೂಕಿನಲ್ಲೂ) ಕನ್ನಡವನ್ನಾಡುವವರೇ ಬಹುಸಂಖ್ಯರಿದ್ದಾರೆಂಬ ಆಭಾಸವನ್ನುಂಟು ಮಾಡಿದ್ದಾರೆಂದೂ, ಕರ್ನಾಟಕ ಏಕೀಕರಣದ ಅಭಿಮಾನವುಳ್ಳ ಕುತಂತ್ರಿ ವಿದ್ಯಾಧಿಕಾರಿಗಳು ಈ ಶಿಕ್ಷಕರಿಗೆ ಪ್ರೋತ್ಸಾಹ ಕೊಡುತ್ತಿದ್ದರೆಂದೂ ಒಂದು ಆಕ್ಷೇಪವಿದೆ. ಅದರ ಸಾಧಾರ ಕಿರಿದಾ ಪ್ರಾಥಮಿಕ ಶಾಲಾ ಶಿಕ್ಷಕರು ಇಂತಹ ಕುತಂತ್ರವನ್ನು ಹ್ಯಾಗೆ ನಡಿಸ್ಯಾರೆಂಬುವೊಂದು ಪ್ರಶ್ನೆ ನನ್ನನ್ನ ಕಾಡುತ್ತಿತ್ತು. ಕನ್ನಡೇತರರ ಆಕ್ಷೇಪವನ್ನು ನಂಬಲಿಕ್ಕೆ ನಾನು ಈ ಕನಕ ಹಿಂಜರಿಯುತ್ತಿದ್ದೆ.

* * *

ಆದರೆ ಕುಮಟೆಯೊಳಗೆ ಸದ್ಯಕ್ಕೇ ನಡೆದ ಮಕ್ಕಳ ಗಣತಿಯ ನಮೂನೆ ನೋಡಿ ನನ್ನ ಭ್ರಮದ ನಿರಸನವಾಗಿದೆ. ಮಕ್ಕಳ ಗಣತಿಯ ಬಗ್ಗೆ ಶಿಕ್ಷಣಾಧಿಕಾರಿಗಳು ತಯಾರಿಸಿರುವ ಪತ್ರಕದ ೮ನೇ ಸ್ತಂಭದಲ್ಲಿ ಆಯಾ ಹುಡುಗನ ಇಲ್ಲವೆ ಹುಡುಗಿಯ "ಮಾತೃಭಾಷೆ" ಯನ್ನು ತೋರಿಸಬೇಕಾಗಿದೆ. ಕುಮಟಾ ಶಹರದಲ್ಲಿ (ನಗರಸಭೆಯ ಕ್ಷೇತ್ರದಲ್ಲಿ) ಕೊಂಕಣಿಗರ ಪ್ರಾಬಲ್ಯವುಂಟೆಂಬುದನ್ನು ಒಂದು ಚಿಕ್ಕ ಮಗುವಾದರೂ ಹೇಳುವದು. ಆದರೆ ಶಾಲಾ ಶಿಕ್ಷಕರು ಮಾಡಿದ ಗಣತಿಯ ಪತ್ರಕಗಳನ್ನು ನಿರೀಕ್ಷಿಸಿದರೆ ಈ ಊರಲ್ಲಿ ಕನ್ನಡದ್ದೇ ಪ್ರಾಬಲ್ಯವಿದೆ. ಕನ್ನಡಿಗರದೇ ಹೆಚ್ಚಳವಿದೆ ಎಂಬ ಭ್ರಾಂತಿಯುಂಟಾಗುತ್ತದೆ! ಕೊಂಕಣಿ ತಾಯ್ನುಡಿಯ ಮಕ್ಕಳ ಮಾತೃಭಾಷೆಯನ್ನು ಗಣತಿ ಮಾಡಿದ ಶಿಕ್ಷಕರು ಕನ್ನಡವಿರುತ್ತದೆಂದೇ ಬರೆಕೊಂಡಿರುತ್ತಾರೆ! ಮತ್ತು ತಮ್ಮ ಮಾತೃಭಾಷೆ ಕೊಂಕಣಿಯಿರುತ್ತದೆಂದು ಹೇಳಿದ ಮಕ್ಕಳ ಮುಂದೆ "ಕನ್ನಡ (ಕೊಂ)" ಎಂದು ಬರೆದಿದ್ದಾರೆ! ಈ 'ಕನ್ನಡ (ಕೊಂ)'ವೆಂಬುದರ ಅರ್ಥವೇನೆಂದು ಯಾರಿಗೂ ತಿಳಿಯದು. ಕೊಂಕಣಿಯು ಕನ್ನಡದ ಒಂದು ಉಪಾಂಗವೆಂದು ಇದರ ಅರ್ಥವಾಗಬಹುದು, ಇಲ್ಲವೆ ಕೊಂಕಣಿ-ಪ್ರಧಾನ ಕನ್ನಡ ಭಾಷೆಯೊಂದುಂಟು, ಆ ಕನ್ನಡ ಭಾಷೆ ಆಯಾ ಹುಡುಗನ ಇದವಾ ಹುಡುಗಿಯ ಮಾತೃಭಾಷೆಯಾಗಿರುತ್ತದೆ ಎಂಬ ಅರ್ಥವೂ ಆಗಬಹುದು. ಆದರೆ ಈ ಎರಡೂ ಮಾತುಗಳು ಅಸಂಬದ್ಧವಿರುತ್ತವೆಂಬುದಕ್ಕೆ ಸಂದೇಹವಿಲ್ಲ. ಕೊಂಕಣಿಯು ಕನ್ನಡ ಭಾಷೆಯ ಅಂಗವಿರುತ್ತದೆಂದು ಇಲ್ಲವೆ ಕೊಂಕಣಿ ಪ್ರಧಾನ ಕನ್ನಡ ಭಾಷೆಯೊಂದುಂಟೆಂದು ಓರ್ವ ಹುಚ್ಚನು ಸಹ ಹೇಳುವಂತಿಲ್ಲ! ಕೊಂಕಣಿ ಭಾಷೆಯು ಮಕ್ಕಳ ಮಾತೃಭಾಷೆಯನ್ನು ಕೊಂಕಣಿ ಎಂದು ಬರೆಕೊಳ್ಳದೆ "ಕನ್ನಡ (ಕೊಂ)" ಎಂದು ಯಾಕೆ ಬರೆದುಕೊಂಡಿದ್ದೀರೆಂದು ಗಣತಿ ಮಾಡಿದ ಶಿಕ್ಷಕರಿಗೆ ಕೇಳಿದರೆ, ತಾವು ಎಜ್ಯುಕೇಶನ್ ಆಫೀಸರ ರಾ। ಜಿ. ಜಿ. ಹೆಗಡೆಯವರ ಆದೇಶದಂತೆ ಬರೆಕೊಂಡಿದ್ದೇವೆಂದು ಹೇಳುತ್ತಾರೆ. ಆಯಾ ಹುಡುಗನು ಯಾವ ಶಾಲೆಗೆ ಕಳಿಸಲ್ಪಡುವನೋ ಆ ಶಾಲೆಯ ಭಾಷೆಯನ್ನು "ಮಾತೃಭಾಷೆ"ಯ ಸದರಿನಲ್ಲಿ ಬರೆಯಬೇಕೆಂದೂ, ಕೊಂಕಣಿ ರು ಅಂಥ ಅಕ್ಷೇಪ ತಕ್ಕೊಂಡರೆ ಶಾಲ-ಭಾಷೆಯ ಮುಂದುಗಡೆ (ಕೊಂ)ಎಂದು ಕಂಸದಲ್ಲಿ ತೋರಿಸಬೇಕೆಂದೂ ಸದರಿ ಜಿ. ಜಿ. ಹೆಗಡೆರು ಗಣತಿ ಮಾಡಹೊರಟ ಶಿಕ್ಷಕರಿಗೆ ಹೇಳಿಕೊಟ್ಟಿದ್ದರೆಂದು ತಿಳಿಯುತ್ತದೆ. ಕುಮಟೆಯಲ್ಲಿ ಕೊಂಕಣಿ ಅಥವಾ ಮರಾಠಿ (ಗಂಡು ಮಕ್ಕಳ) ಶಾಲೆಯಿಲ್ಲದ್ದರಿಂದ ಕೊಂಕಣಿ ಹುಡುಗರು ಕನ್ನಡ ಶಾಲೆಗೆ ಹೋಗಬೇಕಾಗುವದೆಂಬುದು ನಿಜ. ಆದರೆ ಆ ಕಾರಣದಿಂದ ಆ ಹುಡುಗರ "ಮಾತೃಭಾಷೆ"ಯನ್ನು ಕನ್ನಡವೆಂದು ಬರೆಕೊಳ್ಳಬೇಕೇ? ರಾ। ಹೆಗಡೆಯವರಿಗ ಅಥವಾ ಅವರ ನೇತೃತ್ವದಲ್ಲಿ ಕೆಲಸ ಮಾಡಿದ ಶಿಕ್ಷಕರಿಗೆ "ಮಾತೃಭಾಷೆ" ಎಂಬ ಪದದ ಅರ್ಥ ಸಹ ತಿಳಿಯುವದಿಲ್ಲದು ನಾವು ತಿಳಿಯಬೇ? ಶಿಕ್ಷಣಾಧಿಕಾರಿಗಳು ತಿಳಿಯಬಯಸುವದು ಆಯಾ ಹುಡುಗನ ಅಥವಾ ಹುಡುಗಿಯ ಮಾತೃಭಾಷೆಯನ್ನು ಹೊರತು ಅವರು ನಿರುಪಾಯವಾಗಿ ಇಲ್ಲವೆ ಸ್ವೇಚ್ಛೆಯಿಂದ ಪ್ರಾಥಮಿಕ ಶಾಲೆಯಲ್ಲಿ ಕಲಿಯಬಯಸುವ ಭಾಷೆಯನ್ನಲ್ಲ. ಶಿಕ್ಷಣಾಧಿಕಾರಿಗಳಿಗೆ ಹುಡುಗರು ಕಲಿಯಬಯಸುವ ಭಾಷೆಯನ್ನು ತಿಳಕೊಳ್ಳುವ ಅಪೇಕ್ಷೆಯಿರುತ್ತಿದ್ದರೆ ಅವರು ಮಾತೃಭಾಷೆಯ ಸ್ತಂಭಕ್ಕೆ ಹೊಂದಿ ಬೇರೊಂದು ಸ್ತಂಭದಲ್ಲಿ ಆ ಮಾಹಿತಿಯನ್ನು ನಮೂದಿಸಲು ತಿಳಿಸುತ್ತಿದ್ದರು. ಇಲ್ಲವೆ ಗಣತಿ-ಪತ್ರಕದ ೮ನೇ ಸ್ತಂಭದ ಶೀರ್ಷಕದಲ್ಲಿ "ಕಲಿಯಬಯಸುವ ಭಾಷೆ" ಎಂದು ಬರೆಯುತ್ತಿದ್ದರು. ಆ ಶೀರ್ಷಕದಲ್ಲಿ "ಮಾತೃಭಾಷೆ" ಎಂಬ ಸ್ಪಷ್ಟಾರ್ಥದ ಸಂಜ್ಞೆ ಪದವಿರುವಾಗ ಕೊಂಕಣಿ ತಾಯ್ನುಡಿಯ ಮಕ್ಕಳ ಭಾಷೆಯನ್ನು "ಕನ್ನಡ"ವೆಂದು ಬರಕೊಳ್ಳುವದಾಗಲಿ ಬರೆಯಿಸಿಕೊಳ್ಳುವದಾಗಲಿ ಅಧಿಕ-ಪ್ರಸಂಗವಲ್ಲವೇ? ಕರ್ನಾಟಕ ಏಕೀಕರಣ-ವಾದಿಗಳ ಇಂತಹ ಕುತಂತ್ರಿ ಪ್ರವೃತ್ತಿಯನ್ನು ಕಂಡೇ ನಮ್ಮ ಜಿಲ್ಹೆಯ ಜನರು ಸ್ವತಂತ್ರ ಕರ್ನಾಟಕದಲ್ಲಿ ಸೇರಬಯಸುವದಿಲ್ಲೆಂಬುದನ್ನು ಕರ್ನಾಟಕ ಏಕೀಕರಣ ಮತ್ತು ಪ್ರಾಂತೀಕರಣ ವಾದಿಗಳು ನೆನಪಿನಲ್ಲಿಡಬೇಕು.

* * *

ಗಣತಿ ಮಾಡಿದ ಕೆಲವು ಶಿಕ್ಷಕರು ಕೊಂಕಣಿ ಮಾತಿನ ಎಲ್ಲ ಮಕ್ಕಳ ಹೆಸರುಗಳ ಮುಂದೆ ಸಹ "ಕನ್ನಡ (ಕೊಂ)" ಎಂದು ಬರದಿರುವದಿಲ್ಲೆಂದು ಕೇಳುತ್ತೇನೆ. ಶುದ್ಧ ಕೊಂಕಣಿ ಮಾತಿನ ಮಡಿವಾಳ, ಕಾಡಕೊಂಕಣಿ ವಗ್ಯೆರೆ ಜಾತಿಯ ಕೆಲವು ಮಕ್ಕಳ ಮಾತೃಭಾಷೆ ಕನ್ನಡವೆಂದೇ ಕೆಲಗೇಡಿ ಶಿಕ್ಷಕರು ದಾಖಲುಪಡಿಸಿರುವರಂತೆ! ವಿದ್ಯಾ ಇಲಾಖೆಯಂತಹ ಪವಿತ್ರ ಕ್ಷೇತ್ರದಲ್ಲಿ ಇಂತಹ ಕುಹಕ-ಕುತಂತ್ರಗಳೂ ಮೋಸಗಾರಿಕೆಯೂ ನಡೆಯುತ್ತಿದ್ದುದು ಅತ್ಯಂತ ಶೋಚನೀಯವೇ ಸರಿ.

* * *

ಆಹಾರ-ನಿಯಂತ್ರಣದ ಒಂದು ಅಂಗವೆಂದು ಸಮಾರಾಧನೆ-ಸಂತರ್ಪಣಗಳ ಪ್ರತಿಬಂಧದ ಆಜ್ಞೆಯೊಂದು ಇತ್ತ ೪-೫ ವರ್ಷಗಳಿಂದ ಜಾರಿಯಲ್ಲಿಂಟಷ್ಟೇ. ಶ್ರೀಮಂತ-ವಿಲಾಸಿ ಜನರಿಗೆ ಔತಣಗಳನ್ನು ಕೊಟ್ಟಲ್ಲಿ ಅನ್ನ-ಸಾಮಗ್ರಿಯ ಅಪವ್ಯಯವಾಗುತ್ತ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ
ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ್ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು
ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ,
ತಾ. ೨೨-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೇಜಿಂಗ್ ಡೈರೆಕ್ಟರ

ದೆಂಬ ವಿಷಯವನ್ನು ನಾನು ಒಪ್ಪುತ್ತೇನೆ. ಔತಣಕ್ಕೆ ಬರುವಾಗ ಈ ಜನರು ಮನೆಯಲ್ಲಿ ಉಂಡುಕೊಂಡು ಬರುತ್ತಾರೆ. ಇವರ ಶ್ರೀಮಂತಿಕೆಯನ್ನು ನೋಡಿ ಸಮಾರಂಭಕರ ಹರಿವಾಣದವರಾದರೂ ಇವರ ಒಬ್ಬೊಬ್ಬರಲ್ಲಿ ಇಟ್ಟಿವೆ ಎಲೆಯ ಮೇಲೆ ಒಂದು ಪದಾರ್ಥಗಳನ್ನು ಬಡಿಸುತ್ತಾರೆ. ಈ ಶ್ರೀಮಂತರು ಅವುಗಳಲ್ಲಿ ಕೆಲವು ಪದಾರ್ಥಗಳನ್ನು ಮುಟ್ಟುವದಿಲ್ಲ, ಕೆಲವನ್ನು ಅರ್ಧ ಮರ್ಧ ತಿನ್ನುತ್ತಾರೆ! ಹೀಗಾಗಿ ಅವರು ಬಿಟ್ಟ ಎಲೆಗಳಲ್ಲಿ ಹೊರಗಟ್ಟಲೆ ಅನ್ನವುಳಿಯುತ್ತದೆ! ಇಂತಹ ಜನರಿಗೆ ಸಂತರ್ಪಣೆ ಹಾಕಕೂಡದೆಂದು ಹೇಳುವದು ಒಂದು ವೇಳೆ ಸರಿಯಾದೀತು. ಆದರೆ ಜನಸಾಮಾನ್ಯರಿಗೆ ಇಲ್ಲವೆ ಬಡವರಿಗೆ ಅನ್ನ-ಸಂತರ್ಪಣೆ ಹಾಕಕೂಡದೆಂಬ ನಿಯಮದಲ್ಲಿ ಏನೇನೂ ಸ್ವಾರಸ್ಯವಿಲ್ಲ, ಸಯುಕ್ತಿಕತೆಯಿಲ್ಲ. ಅನ್ನ-ಸಂತರ್ಪಣೆಗೆ ಬರುವ ಈ ಜನರು ಮನೆಯಲ್ಲಿ ಊಟ ಮಾಡಿ ಬರುವದಿಲ್ಲ; ತಮ್ಮ ಎಲೆಗಳಲ್ಲಿ ಅನ್ನ ಬಿಟ್ಟು ಅದನ್ನು ಹಾಳು ಮಾಡುವದೂ ಇಲ್ಲ. ಮೇಲಾಗಿ ಇಂತಹ ಸಾಮುದಾಯಿಕ ಸಮಾರಂಭದ ಪಾಕಗಳಲ್ಲಿ ವೈಯಕ್ತಿಕ ಪಾಕಗಳಲ್ಲಿ ಖರ್ಚಾಗುವ ಅನ್ನ ಸಾಮಗ್ರಿಗಿಂತ ಕಡಿಮೆ ಸಾಮಗ್ರಿ ಖರ್ಚಾಗುತ್ತದೆಂದು ಅನುಭವಿಕರ ಅನುಭವವುಂಟು. ಆದ್ದರಿಂದ ಅನ್ನಸಂತರ್ಪಣೆಯ ಮೇಲಿನ ನಿರ್ಬಂಧವನ್ನು ಊರ್ಜಿತವಿಟ್ಟು ಕೊಂಗ್ರೆಸ ಸರಕಾರವು ಯಾವ ಪುಣ್ಯವನ್ನೂ ಗಳಿಸುವದಿಲ್ಲ. ಬಡವರಿಗೆ ಸಿಗಬಹುದಾಗಿದ್ದ ಅನ್ನ-ಧರ್ಮವನ್ನಷ್ಟು ತಪ್ಪಿಸಿದ ಪಾಪ ಮಾತ್ರ ಅದರ ಕೊರಳಿನಲ್ಲಿ ಬಿದ್ದಿದೆ!

* * *

ಮೇಲಾಗಿ ಈ ಆಜ್ಞೆಯ ವ್ಯಾಪ್ತಿ ಅತಿ ವಿಶಾಲವಾಗಿದೆ. ಈ ಆಜ್ಞೆಯಂತೆ ಯಾವನೊಬ್ಬನು ೨೪ ಮಂದಿಗಿಂತ ಹೆಚ್ಚಿಗೆ ಜನರಿಗೆ ಯಾವದೇ ಬಗೆಯ ಖಾದ್ಯವನ್ನು — ದೇವಸ್ಥಾನಗಳಲ್ಲಿ ನಡೆಯುವ ಪೂಜೆಗಳ ಸಮಾರಂಭಗಳಲ್ಲಿ ಹಂಚಲ್ಪಡುವ ಪಂಚಕಜ್ಜಾಯವೂ, ಸಂಕ್ರಾಂತಿಯ ಕಾಲಕ್ಕೆ ಹಂಚಲ್ಪಡುವ ಎಳ್ಳು-ಬೆಲ್ಲ ಇಲ್ಲವೆ "ತಿಳಗುಳ"ವೂ ಈ "ಖಾದ್ಯ" ಶಬ್ದದಲ್ಲಿ ಸೇರ್ಪಡೆಯಾಗುತ್ತವೆಂಬುದನ್ನು ಮರೆಯಕೂಡದು! — ಹಂಚಲು (distribute) ಇಲ್ಲವೆ ಬಡಿಸಲು ಬರುವದಿಲ್ಲ. ಈ ಆಜ್ಞೆಯನ್ನು ಅಕ್ಷರಶಃ ಪಾಲಿಸಬೇಕಾದರೆ ನಮ್ಮಲ್ಲಿಯ ಎಷ್ಟೋ ನಿತ್ಯನೈಮಿತ್ತಿಕ ವ್ಯವಹಾರಗಳನ್ನು ನಿಲ್ಲಿಸಬೇಕಾಗುವದು! ಈ ವ್ಯವಹಾರಗಳನ್ನು ವಾಡಿಕೆಯಂತೆ ನಡಿಸಬಯಸುವವರು ಆಜ್ಞೆಯನ್ನು ಕಡೆಗಣಿಸಿಯೇ ತೀರಬೇಕು. ಕೆಲವು ದಿನಗಳ ಹಿಂದೆ ಕಾರವಾರದೊಳಗಿನ ಹೆಣ್ಣುಮಕ್ಕಳ ಶಾಲೆಯದೊಂದು ವಾರ್ಷಿಕ ಸಮಾರಂಭವಿತ್ತು. ಈ ಸಮಾರಂಭದ ಕಾಲಕ್ಕೆ ಶಾಲೆಯ ಹುಡುಗಿಯರಿಗೆ ಎಳ್ಳುಂಡೆಗಳನ್ನು ಹಂಚುವ ರೂಢಿಯುಂಟು. ಈ ಬಗ್ಗೆ ಕೆಲವು ಗೃಹಸ್ಥರು ಕಾರವಾರ ನಗರ ಸಭೆಯ ಕಡೆ ಹಣ ಸಹ ಕಟ್ಟಿದ್ದರಂತೆ. ಆದಂತೆ ಮೇಲ್ಕಾಣಿಸಿದ ಸಮಾರಂಭದಲ್ಲಿ ಎಳ್ಳುಂಡೆಗಳನ್ನು ಹಂಚಿದರೆ ಸದರಿ ಆಜ್ಞೆಯ ಉಲ್ಲಂಘನೆಯಾಗುವದೆಂಬದೊಂದು ಆಕ್ಷೇಪ ಕಾರವಾರ ನಗರ ಸಭೆಯ ಅಧಿಕಾರಿಗಳ ಮುಂದೆ ಬಂತು. ಈ ನಗರ ಸಭೆಯಲ್ಲಿ ೨ ಪಕ್ಷಗಳವೆ. ಅಧಿಕಾರ ಪಕ್ಷದವರು ಆಜ್ಞೆಯನ್ನು ಕಡೆಗಣಿಸಿ ನಡೆಸಿದರೆ ವಿರೋಧ ಪಕ್ಷದವರು ಅದರದೇ ಬಾಹುಲ್ಯ ಮಾಡಿ ತಮಗೆಲ್ಲಿ ಪರಿಣಾಮ ಕಾಯಿದೆಭಂಗ ಮಾಡ್ಯಾರೆಂಬ ಅಂಜಿಕೆ ಅಧಿಕಾರಿಗಳಿಗುಂಟಾಯಿತು. ಆದ್ದರಿಂದ ಅವರು ಶಾಲೆಯಲ್ಲಿ ರೀತಿಯಂತೆ ಎಳ್ಳುಂಡೆಗಳನ್ನು ಹಂಚಲು ತಮಗೆ ಪರವಾನಗಿ ಕೊಡಬೇಕೆಂದು ಜಿಲ್ಹಾಧಿಕಾರಿ ಕಡೆ ಮನವಿ ಮಾಡಿಕೊಂಡರಂತೆ. ಜಿಲ್ಹಾಧಿಕಾರಿಗಳಾದ ರಾ|| ಶೆಲ್ಡಾಬಕ್ಕರ ಆ ಮನವಿಯನ್ನು ತಿರಸ್ಕರಿಸಿಬಿಟ್ಟರು. ಆದಂತೆ ಈ ವರ್ಷದ ಶಾಲಾ-ಸಮಾರಂಭವನ್ನು ಹುಡುಗಿಯರ ಬಾಯಿಗಳನ್ನು ಸಿಹಿಗೊಳಿಸದೆಯೇ ಮುಗಿಸಿಕೊಳ್ಳುವ ಪ್ರಸಂಗ ಬಂತು! ಲೋಕ-ವ್ಯವಹಾರವನ್ನು ಲಕ್ಷಿಸ ಕಾರದೆ ರಚಿಸಿದ ಆಜ್ಞೆಗಳ ಪರಿಣಾಮ ಹೀಗಾಗುತ್ತದೆ!!

* * *

ಅಕ್ಕಿ-ಭತ್ತಗಳ ವ್ಯವಹಾರವನ್ನು ನಿರ್ಬಂಧಿಸಿ ಇತ್ತೀಚೆ ಹೊರಟ ಆಜ್ಞೆಯಲ್ಲಂತೂ ಕೂಡ ಲೋಕ-ವ್ಯವಹಾರಕ್ಕೆ ಇಲ್ಲವೆ ಲೋಕ ಪರಿಸ್ಥಿತಿಗೆ ಸಂಬಂಧಿಸುವ ಅಂಶಗಳ ಅನ್ವವಿದೆ. ಅಕ್ಕಿ-ಭತ್ತಗಳನ್ನು ಬೆಳಿಸುವ ರೈತನು ಒಂದು ಸೇರು ಅಕ್ಕಿ-ಭತ್ತ ಸಹ ಯಾರಿಗೂ ಮಾರಬರುವದಿಲ್ಲ! ಒಡೆಯನಿಗೆ ಸಲ್ಲಬೇಕಾದ ಗೇಣಿಯನ್ನೂ ಅತ ಕೊಡಕೂಡದು! ಆದರಿಂದ ಭೂಮಿಯುಳ್ಳ ಭೂಮಾಲಿಕನು ಕೂಡ ತನ್ನ ಜೀವನಕ್ಕೆ ಅವಶ್ಯ ಬೇಕಾದ ಅಕ್ಕಿಯನ್ನು ಸೀಧಾ-ಅಂಗಡಿಯಿಂದಲೇ ಪಡೆಯಬೇಕಾಗಿದೆ! ಯಾರೊಬ್ಬರು ಗ್ರಾಮ ಸಂಚಾರಕ್ಕೆ ಹೋಗುವಾಗ ಬಗಲೊಳಗಿಷ್ಟು ಅಕ್ಕಿಯನ್ನು ಕಟ್ಟಿಕೊಂಡು ಹೋಗಬೇಕಾಗಿದೆ! ಇಲ್ಲದಿದ್ದರೆ ಅವನು ಉಪವಾಸ ಬೀಳುವ ಪ್ರಸಂಗ ಬರುತ್ತದೆ! ಕೆಲ ದಿನಗಳ ಹಿಂದೆ ಅಂಕೋಲೆಯ ಬೆಳಸೆ ಅವ್ವಲ ಕಾರಕೂನರೊಬ್ಬರು ಅವರ್ಸೆಗೆ ಹೋಗಿದ್ದರಂತೆ! ಹೋಗುವಾಗ ಅವರು ಅಕ್ಕಿಯನ್ನು ತಕ್ಕೊಂಡು ಹೋಗಿದ್ದಿಲ್ಲ. ಆದರಿಂದ ಅವರಿಗೆ ಊರಲ್ಲಿ ಅಕ್ಕಿ ದೊರಕಿಸಬೇಕಾಯಿತು. ಆದರೆ ಅಕ್ಕಿ ಎಲ್ಲಿಂದ ಸಿಗಬೇಕು? ಅಂಗಡಿಗಳಲ್ಲಿ ಅಕ್ಕಿ ಸಿಗುವಂತಿಲ್ಲ. ಅಕ್ಕಿ ಮಾರಲಿಕ್ಕೆ ಪ್ರತಿಬಂಧವಾದ ಮೇಲೆ ಅಂಗಡಿಯವರು ಅಕ್ಕಿಯನ್ನು ತಂದಿಡುವದಾದರೂ ಹೇಗೆ? ಮಾರುವದಾದರೂ ಹೇಗೆ? ಊರೊಳಗಿನ ಕೆಲ ಸಭ್ಯರಲ್ಲಿ ಈ ಕಾರಕೂನರು ಅಕ್ಕಿಯನ್ನು ಹುಡುಕಿದರು. ಆದರೆ ಅಕ್ಕಿ-ವ್ಯವಹಾರದ ನಿರ್ಬಂಧದ ಪರಿಣಾಮವಾಗಿ ಆ ಸಭ್ಯರಲ್ಲೂ ಅಕ್ಕಿಯ ಕೊರತೆಯುಂಟಾಗಿತ್ತು! ಆದರಿಂದ ಕಾರಕೂನರಿಗೆ ಒಂದಿಷ್ಟು ಅಕ್ಕಿಗಾಗಿ ಮನೆಮನೆ ತಿರುಗುವ ಪ್ರಸಂಗ ಬಂತಂತೆ!! ಸೀಧಾ ಅಂಗಡಿಯಲ್ಲಿ ಅಕ್ಕಿಯಿತ್ತು. ಆದರೆ ಸೀಧಾ-ಚೀಟಿಯಿಲ್ಲದ ಜನರಿಗೆ ಅಲ್ಲಿ ಅಕ್ಕಿ ಕೊಡುವವರಾರು? ಹೀಗಾಗಿ ಧರ್ಮ ಬೆಳೆಯುವ ಅವರ್ಸೆ ಊರಲ್ಲಿ ಒಂದಿಷ್ಟು ಅಕ್ಕಿಗಾಗಿ ಅವ್ವಲ ಕಾರಕೂನರು ಬಹಳಷ್ಟು ಕಷ್ಟ ಪಡಬೇಕಾಯಿತು! ಲೋಕ-ವ್ಯವಹಾರವನ್ನು ಸಂಪೂರ್ಣ ಕಡೆಗಣಿಸಿ ಹೊರಡಿಸಿದ ನಿಯಂತ್ರಣಾಜ್ಞೆಗಳಿಂದ ಜನರಿಗೆ ಎಷ್ಟು ಕಷ್ಟವಾಗುತ್ತವೆಂಬುದಕ್ಕೆ ಈ ಕಥೆಯೊಂದು ಒಳ್ಳೇ ಉದಾಹರಣೆಯಾಗಿದೆ.

* * *

ಕಳೆದ ನವಂಬರ ತಿಂಗಳಲ್ಲಾದ ಅಕಾಲವೃಷ್ಟಿಯಿಂದಲೂ, ಬೀಸಿದ ಬಿರುಗಾಳಿಯಿಂದಲೂ, ಘಟ್ಟದ ಮೇಲೆ ಬಹಳ ಕಡೆ ಭತ್ತದ ಬೆಳೆಗೆ ಪೆಟ್ಟಾಗಿದೆ. ಗೊಣಬೆ ಹಾಕಿದ ಬೆಳೆಯಲ್ಲಿ ಕೆಲವು ಹಾಳಾಗಿ ಹೋಯಿತು, ಉಳಿದದ್ದು ಮಳೆನೀರಿನಿಂದ ಕೊಯ್ದು ನೆನೆದು ಹಾಳಾದವು, ಕೊಯ್ಯದೆ ಹಾಗೆಯೇ ಗದ್ದೆಯಲ್ಲಿ ಉಳಿದ ಬೆಳೆಯು ಭತ್ತ ಉದುರಿ ಬಿದ್ದು ಹೋಗಿ ನಾಶವಾಗಿದೆ. ಆದರಿಂದ ಈ ಮಳೆಯಾಗುವ ಮುಂಚೆಯೇ ಆದ ಅಣೇವಾರಿಯಲ್ಲಿ ಲೆಕ್ಕ ಹಾಕಿದಷ್ಟು ಬೆಳೆ ಒಕ್ಕಲಿಗರ ಕೈಸೇರುವಂತಿಲ್ಲ. ಆದರಿಂದ ಸಿದ್ಧಾಪುರ ತಾಲೂಕಿನ ರೈತರು ತಮಗೆ ಲೇವಿಯಲ್ಲಿ ಅರ್ಧಾಂಶ ಸೂಟು ಸಿಗಬೇಕೆಂಬ ಬೇಡಿಕೆಯನ್ನು ಮುಂದೊಡ್ಡಿದ್ದಾರೆ. ಆದರೆ ಈ ಬೇಡಿಕೆಗೆ ಒಡೆಯ-ವರ್ಗದ ಬೆಂಬಲವಿಲ್ಲ, ಬೆಂಬಲ ಸಿಗುವಂತೆಯೂ ಇಲ್ಲ. ಸರಕಾರವು ಲೇವಿಯಲ್ಲಿ ಸೂಟು ಕೊಟ್ಟರೆ ಒಡೆಯರು ಆ ಪ್ರಮಾಣದಿಂದ ಗೇಣಿಯಲ್ಲಿ ಸೂಟು ಬಿಡಬೇಕಾಗುತ್ತದೆ. ಒಡೆಯರು ಆ ಹಾನಿಯನ್ನು ಹೇಗಾಗಿ ಯಾಕೆ ಬರಮಾಡಿಕೊಳ್ಳುವರು! ಆದರಿಂದ ಬೆಳೆಯು ಅಷ್ಟೇನು ಹಾಳಾಗಿಲ್ಲೆಂದೂ ತಮಗೆ ಸರಕಾರದಿಂದ ಪರಿಹಾರ ಬೇಕಾಗಿಲ್ಲೆಂದೂ ಅವರು ವಾದಿಸುತ್ತಾರೆ. ಹೊಸ ಒಕ್ಕಲತನದ ಕಾನೂನಿನ ಪರಿಣಾಮ ಎಲ್ಲಿಗೆ ಮುಟ್ಟಿದೆ ನೋಡಿರಿ!

* * *

ನಿಯಂತ್ರಣಗಳು ಬೇಕಾದವು ಹೆಚ್ಚಾಗಿ ಮಧ್ಯಮ ವರ್ಗದ ಹಾಗೂ ಬಡವರ ರಕ್ಷಣೆಯ ಬಗ್ಗೆ. ಅನ್ನ ಧಾನ್ಯಗಳ ಹಾಗೂ ಇತರ ಮುಖ್ಯವಾದ ಜೀವನಾವಶ್ಯಕ ವಸ್ತುಗಳ ಬೆಲೆಗಳು ಈ ವರ್ಗಗಳ ಅವರ ಕೊಂಡುಕೊಳ್ಳುವ ಶಕ್ತಿಯ ಹೊರಗೆ ಹೋಗುತ್ತಿರುವದರಿಂದಲೇ ನಿಯಂತ್ರಣ ಬೇಕಾಗಿದೆಯೆಂದು ಸರಕಾರವು ಹೇಳುತ್ತದೆ. ಈ ಮಾತು ನಿಜವಿರುತ್ತಿದ್ದರೆ ಸರಕಾರವು ಹಿಂದೀ ಗಿರಣಿಗಳಲ್ಲಿ ವಿಪುಲ ಅವರ ಸಲುವಾಗಿ ಇಲ್ಲವೆ ಶ್ರೀಮಂತರ ಬಗ್ಗೆ ತಯಾರಾಗುತ್ತಿರುವ ಜಿನಸು ಮತ್ತು ಅತಿ ಜಿನಸು ಅವುಗಳನ್ನು ತನ್ನ ನಿಯಂತ್ರಣದ ಕಕ್ಷೆಯಲ್ಲಿ ಸೇರಿಸಿ, ಅವುಗಳ ನಿಯಂತ್ರಣದ ಆಗಳಿಕೆಯಲ್ಲಿ ಯಾಕೆ ಅನಾವಶ್ಯಕ ತೊಂದರೆಗಳನ್ನು ಒಡ್ಡುವದೋ ತಿಳಿಯದು. ಮೊನ್ನೆಯೇ ಆದ ನಿಯಂತ್ರಿತ ಅವಳಿಯ ಬಟವಡೆಯಲ್ಲಿ ಕುಮಟಾ ಅರ್ಬನ ಬೇಂಕಿಗೆ ೮೦ ಜಿನಸು ಧೋತರ-ಜೋಡಿಗಳು ಸಿಕ್ಕವೆಯಂತೆ. ಬೇಂಕಿನವರು ಕುಮಟಾ ೫೦೦ ಸೀಧಾ-ಧಾರಕರಿಗೆ ಅವುಗಳನ್ನು ಹಂಚಲಿಕ್ಕಿದ್ದರು. ಈ ೮೦ ಧೋತರ ಜೋಡಿಗಳನ್ನು ಆ ೫೦೦ ಚೀಟಿ-ಧಾರರಿಗೆ ಹ್ಯಾಗೆ ಹಂಚಬೇಕೆಂಬದೊಂದು ಸಮಸ್ಯೆ ಬೇಂಕಿನವರಿಗೆ ಉಂಟಾಗಿದೆಯಂತೆ. ನೇಮದಂತೆ ನಡೆಯುವದಾದರೆ ಮೊದಲು ಬಂದ ಗಿರಾಕಿಗಳು ಆ ಧೋತರಗಳನ್ನು ಬೇಡಿದರೆ, ಬೇಡಿದಷ್ಟು (ಸೀಧಾ ಚೀಟಿಗಳಲ್ಲಿ ನಮೂದಿಸಿದ ಪರಿಮಾಣದೊಳಗೆ) ಧೋತರಗಳನ್ನು ಬೇಂಕಿನವರು ಕೊಡಬೇಕು. ಮನೆಯಲ್ಲಿ ಹತ್ತಿಪ್ಪತ್ತು ಜನರುಳ್ಳ ೮-೧೦ ಸೀಧಾ-ಚೀಟಿಧಾರರು ಬಂದು ಆ ಧೋತರಗಳನ್ನು ಬೇಡಿದರೆ ಈ ಎಂಬತ್ತೂ ಧೋತರ-ಜೋಡಿಗಳು ಬಂದು ಒಂದೆರಡು ದಿನಗಳಲ್ಲಿ ಎದ್ದು ಹೋಗುವವು! ಹಿಂದಿನಿಂದ ಬಂದವರಿಗೆ ಅವು ಸಿಗುವಂತಿಲ್ಲ! ಆಗ ಬೇಂಕಿನವರ ಮೇಲೆ ಇಲ್ಲದ ಸಲ್ಲದ ಆರೋಪ ಮಾಡಲಿಕ್ಕೊಂದು ಜನರಿಗೆ ಆಸ್ಪದವಾಗುವದು. ಇನ್ನೊಂದು ಮಾತೆಂದರೆ ಇಂತಹ ಜಿನಸು ಮತ್ತು ಅತಿ ಜಿನಸು ಹಾಗೆ ಬಂದಾಗಲೇ ಸೀಧಾ-ಅಂಗಡಿಗಳಲ್ಲಿ ಕಳ್ಳ ಸಂತೆ ಮಾಡಲು ಇಂಬು ಸಿಗುತ್ತದೆ. ಸರಕಾರದವರು ಈ ಜಿನಸು ಅವುಗಳನ್ನು ನಿಯಂತ್ರಣದಿಂದ ಹೊರಪಡಿಸಿ ಮುಕ್ತ ಮಾಡಿ ಒರಟು ಬಟ್ಟೆಯನ್ನಷ್ಟೇ ನಿಯಂತ್ರಣಕ್ಕೊಳಪಡಿಸಿದರೆ ನಡೆಯುವಂತಿಲ್ಲವೇ?

ಜಾಹೀರ ನೋಟೀಸು.

ನಮ್ಮ ಚಿಗಪ್ಪ ಕೃಷ್ಣಪ್ಪ ಪಾಂಡುರಂಗ ಪ್ರಭು ಇವರ ಹೆಸರಿನಲ್ಲಿ ನಮ್ಮ ಅವಿಭಕ್ತ ಕುಟುಂಬಕ್ಕೆ ಒಪ್ಪಿದ ಹೇರಳ ಸ್ಥಿರ-ಚರ ಆಸ್ತಿಯು ಇರುತ್ತದೆ. ಸದರಿಯವರು ಈಗ ಏದಾರು ತಿಂಗಳಿಂದ ಅಸ್ವಸ್ಥರಿದ್ದು, ತಮ್ಮ ಹಿತಾಹಿತ ತಿಳಿಯುವ ಪರಿಸ್ಥಿತಿಯಲ್ಲಿರುವದಿಲ್ಲ. ಅವರ ಗೈರ ಫಾಯದೆ ತೆಗೆದುಕೊಂಡು, ಕೆಲವು ಸ್ವಾರ್ಥಿಗಳು ನಮ್ಮ ಅವಿಭಕ್ತ ಕುಟುಂಬಕ್ಕೆ ಒಪ್ಪಿದ ಮತ್ತು ಅವರ ಹಾಬಿಯಿರುವ ಸ್ಥಿರ-ಚರ ಸೊತ್ತು ಎತ್ತಿಹಾಕುವ ಯೋಚನೆಯಲ್ಲಿದ್ದಾರೆಂದು ತಿಳಿಯುತ್ತದೆ. ಸದರಿಯವರಿಂದ ಬರೆಸಿಕೊಳ್ಳಲಾಗುವ ಯಾವದೇ ಪರಾಧೀನತೆಯು ನಮ್ಮ ಹಕ್ಕಿಗೆ ಬಾಧಕವಾಗದು. ತಿಳಿದಿರಲಿ.

ಹೊನ್ನಾವರ, ತಾ. ೯-೧೨-೧೯೪೬.

ಪಾಂಡುರಂಗ ನರಸಿಂಹ ಪ್ರಭು.
ಶೇಷಗಿರಿ ನರಸಿಂಹ ಪ್ರಭು.
ಸುಬ್ರಾಯ ನರಸಿಂಹ ಪ್ರಭು.

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ಹಿರಿಯರ ಮುಂದಾಗಿ ಬರಕೊಂಡಲ್ಲ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಸೋಕ್ತ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ಶಿವಪಂಚಾಯತನ ರುದ್ರಾಕ್ಷಿ ವಗೈರೆ ಯಾವತ್ತು ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಫತ್ರಂಗಲ್ಲಿ, ಬನಾರಸ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಶುಕ್ರವಾರದ ವರೆಗೆ ಚಳಿಯ ಜೋರು ಬೀಳುತ್ತಿತ್ತು. ಶನಿವಾರದಿಂದ ಚಳಿ ಕಡಿಮೆಯಾಗಿದೆ.

ಈ ಹಿಂದೆ ತಿಳಿಸಿದಂತೆ ಆಚೆಯ ರವಿವಾರ ಶ್ರೀ [illegible] ಮಂದಿರದಲ್ಲಿ ಪಾಡಿಕೆಯಂತೆ ಗೀತಾ-ಜಯಂತಿಯ ಉತ್ಸವವು ಉತ್ಸಾಹದಿಂದ ನೆರವೇರಿತು. [illegible]

[illegible]

ಹೊನ್ನಾವರ— (ತಾ. ೧೬-೧೨-೪೮) [illegible]

[illegible]

ಮುರ್ಡೇಶ್ವರ— (ತಾ. ೯—೧೨—೪೮) [illegible]

[illegible]

ಬೈಲೂರ— (ತಾ. ೧೭-೧೨-೪೮) [illegible]

[illegible]

ಶಿರಾಲಿ— (ತಾ. ೧೪-೧೨-೪೮) [illegible]

[illegible]

ಭಟಕಳ— (ತಾ. ೬-೧೨-೪೮) [illegible]

[illegible]

(ತಾ. ೧೪-೧೨-೪೮) [illegible]

[illegible]

— R —

ಕೋಳಿ-ಮಾಂಸದ ಪದಾರ್ಥವನ್ನ ಬಡಿಸುವದು.

[illegible]

ಜಯಪುರ ಕೊಂಗ್ರೆಸ.

ಹಿಂದೀ ರಾಷ್ಟ್ರೀಯ ಸಭೆಯ ೫೫ನೇ ಮಹಾಧಿವೇಶನವು ಮೊನ್ನೆ ಮತ್ತು ನಿನ್ನೆ ಆಂಧ್ರ-ರತ್ನ ಡಾ|| ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನ ಕೂಡುವದು ಇದೇ ಮೊದಲನೇ ಸಲವಾಗಿರುವದರಿಂದಲೂ, ಸ್ವಾತಂತ್ರ್ಯ-ಪ್ರಾಪ್ತಿಯಿಂದಲೂ ಉದ್ಭವಿಸಿದ ಹೊಸ ಪರಿಸ್ಥಿತಿಯಲ್ಲಿ ಕೊಂಗ್ರೆಸ್ಸು ಅನುಸರಿಸಬೇಕಾಗಿರುವ ಹೊಸ ಮಾರ್ಗಗಳ ಮತ್ತು ಹೊಂದಬೇಕಾಗಿರುವ ಹೊಸ ಹೊಣೆಗಳ ಚರ್ಚೆ ನಿರ್ಣಯಗಳು ಈ ಅಧಿವೇಶನದಲ್ಲಿ ಆಗಲಿದ್ದುದರಿಂದ ಅದಕ್ಕೆ ಅಪೂರ್ವ ಮಹತ್ವವುಂಟಾಗಿತ್ತು ಜನತೆಯಲ್ಲೂ ಇದರ ಬಗ್ಗೆ ಉತ್ಸಾಹವುಂಟಾಗಿತ್ತು

ಈ ಅಧಿವೇಶನಕ್ಕಾಗಿ ಇತಿಹಾಸ-ಪ್ರಸಿದ್ಧ ರಾಜಧಾನಿಯಾದ ಜಯಪುರದ ಗಡಿಯಲ್ಲಿರುವ ಉಪ್ಪಿನ ಬೈಲಲ್ಲಿ ೪ ಚದುರ ಮೈಲು ವಿಸ್ತಾರವಾದ ಕುದುರೆಯ ನಾಲಿನ ಆಕಾರದ "ಗಾಂಧಿ-ನಗರ" ರಚಿಸಲ್ಪಟ್ಟಿದೆ ಅಧಿವೇಶನದ ಮುಖ್ಯಮಂಟಪ, ವಿಷಯ-ವಿಚಾರ ಸಮಿತಿಯ ಮಂಟಪ, ಸರ್ವೋದಯ ಪ್ರದರ್ಶನದ ಮಂಟಪ, ಪ್ರತಿನಿಧಿಗಳ ನಿವಾಸಸ್ಥಾನಗಳು, ಮುಂದಾಳುಗಳ ಒಗ್ಗೆ ಬಿಡಾರುಗಳು ಹೀಗೆ ಈ ಬೈಲಲ್ಲಿ ವಿಶಾಲವಾದ ಹಂಗಾಮಿ ಕಟ್ಟಡಗಳು ಕಣ್ಣಿಗೆ ಬೀಳುತ್ತಿವೆ ಈ "ಗಾಂಧಿ ನಗರ"ವನ್ನು ಮುಂದೆ ಸರಕಾರವು ನಿರಾಶ್ರಿತರ ಪುನರ್ನಿವೇಶನಕ್ಕಾಗಿ ಉಪಯೋಗಿಸಿಕೊಳ್ಳಲಿರುವದರಿಂದ ನಗರದ ಹಾಗೂ ಅವರ ಮಾರ್ಗ ಮುಂತಾದವುಗಳ ರಚನೆಯು ಭದ್ರ ತಳಹದಿಯ ಮೇಲೆ ಮಾಡಲ್ಪಟ್ಟಿವೆ.

ರಾಷ್ಟ್ರೀಯ ಸಭೆಯ ನಿಯೋಜಿತ ಅಧ್ಯಕ್ಷ ಡಾ|| ಪಟ್ಟಾಭಿಯವರು ಬುಧವಾರ ತಾ. ೧೫ ನೇ ಅಪರಾಹ್ನ ೨ ಘಂಟೆಗೆ ದಿಲ್ಲಿಯಿಂದ ವಿಶೇಷ ಉಗಿಬಂಡಿಯೊಳಗೆ ಜಯಪುರಕ್ಕೆ ಕುಟುಂಬ ಸಹಿತ ಬಂದು ತಲ್ಪಿದರು. ರೇಲ್ವೆ ನಿಲ್ದಾಣದಲ್ಲಿ ಸ್ವಾಗತ ಸಮಿತಿಯವರು ಅವರಿಗೆ ವೈಭವದ ಸ್ವಾಗತವನ್ನಿತ್ತರು. ಹಾಗೆಯೇ ನಿಲ್ದಾಣದ ಹೊರಗೆ ಬಂದು, ರಾಷ್ಟ್ರಪತಿ ಪಟ್ಟಾಭಿಯವರು ಅಲ್ಲಿ ನಿಲ್ಲಿಸಲ್ಪಟ್ಟ ಮಹಾತ್ಮಾ ಗಾಂಧಿಯವರ ಮೂರ್ತಿಯ ಅನಾವರಣ ಮಾಡಿದರು ಸಂಜೆಯಲ್ಲಿ ಜಯಪುರ ಪಟ್ಟಣದ ಮುಖ್ಯ ಮುಖ್ಯ ರಸ್ತೆಗಳೊಳಗಿಂದ ರಾಷ್ಟ್ರಪತಿಗಳ ವೈಭವದ ಮೆರವಣಿಗೆಯಾಯಿತು ರಾಷ್ಟ್ರಪತಿಗಳಿಗಾಗಿ ಬೆಳ್ಳಿಯ ರಥ ತಯಾರಿಸಲ್ಪಟ್ಟಿತ್ತು. ೪ ಬಿಳೀ ಎತ್ತುಗಳು ಅದನ್ನು ಎಳೆಯುತ್ತಿದ್ದವು. ರಾಷ್ಟ್ರಪತಿಗಳು ತಮ್ಮ ಕುಟುಂಬದವರೊಡನೆ ಅದರಲ್ಲಿ ಕುಳಿತಿದ್ದರು ಈ ಮೆರವಣಿಗೆಯಲ್ಲಿ ಮುಂದೆ ಆನೆಗಳು ಅವುಗಳ ಹಿಂದೆ ೧೦೦ ಮಂದಿ ಅಶ್ವಾರೂಢ ಸ್ವಯಂಸೇವಕರು, ಅವರ ಹಿಂದೆ ಅಲಂಕೃತ ಒಂಟೆಗಳು, ಅವುಗಳ ಹಿಂದೆ ೧೦೦೦ ರಜಪೂತ ಸ್ವಯಂಸೇವಿಕೆಯರು (ಇವರಲ್ಲಿ ಪುನಃ ಕೆಲವರು ಕುದುರೆಗಳ ಮೇಲೆ ಆರೂಢರಾಗಿದ್ದರು.) ಹೀಗೆ ವ್ಯವಸ್ಥೆಯಿದ್ದದರಿಂದ ಮೆರವಣಿಗೆಯ ನೋಟ ಬಹಳ ಆಕರ್ಷಕವಾಗಿತ್ತು. ಮೆರವಣಿಗೆ ನೋಡನಿಂತ ಜನರಿಂದ ರಸ್ತೆಗಳೆಲ್ಲ ತುಂಬಿ ತುಳುಕುತ್ತಿದ್ದವು ಇಷ್ಟು ದೊಡ್ಡ ಜನಸಮ್ಮರ್ದವನ್ನು ಜಯಪುರವು ಹಿಂದೆಂದೂ ನೋಡಿದ್ದಿಲ್ಲ

ಗುರುವಾರ ಮುಂಜಾನೆ ೮|| ಘಂಟೆಗೆ ಗಾಂಧಿನಗರದಲ್ಲಿ ರಾಷ್ಟ್ರಪತಿಗಳ ಹಸ್ತದಿಂದ ಧ್ವಜಾರೋಹಣವಾಯಿತು ಆ ಕಾಲಕ್ಕೆ ಡಾ|| ಪಟ್ಟಾಭಿಯವರು ಚಿಕ್ಕದೊಂದು ಭಾಷಣ ಮಾಡಿ, ಧ್ವಜದೊಳಗಿನ ರಾಟೆಯು (ಚರಖಾ) ಗಾಂಧಿಜಿಯವರ ಸಂದೇಶವನ್ನು ಸಾರುತ್ತದೆಂತಲೂ, ಹಳ್ಳಿಗಳ ಉದ್ಧಾರವಾದರೆನೇ ದೇಶದ ಉದ್ಧಾರವಾಗುವದೆಂದು ಮಹಾತ್ಮರು ಹೇಳಿಕೊಟ್ಟ ಮಾತನ್ನು ನೆನೆದು ಕೊಂಗ್ರೆಸು ಮುಂದರಿಯಬೇಕೆಂದೂ ಬೋಧಿಸಿದರು

ಗುರುವಾರ ಪೂರ್ವಾಹ್ಣದಲ್ಲಿ ದಿಲ್ಲಿಯಿಂದ ಪಂ|| ನೆಹರು, ಸರದಾರ ಪಟೇಲ, ಮೌಲಾನಾ ಆಝಾದ ವಗೈರೆ ಮುಂದಾಳುಗಳು ಬಂದು ತಲ್ಪಿದರು ಮಧ್ಯಾಹ್ನ ೧೨ ಗೆ ಕಾರ್ಯಕಾರಿ ಮಂಡಳವು ಪುನಃ ಕೂಡಿ (ವಾರದ ಪ್ರಾರಂಭಕ್ಕೆ ದಿಲ್ಲಿಯಲ್ಲಿ ಸಭೆ ಸೇರಿ ಮಂಡಳವು ೯ ಗೊತ್ತುವಳಿಗಳ ಮಸೂದೆಗಳನ್ನು ತಯಾರಿಸಿತ್ತು) ರಾಷ್ಟ್ರೀಯ ಸಭೆಯ ಆಂತರಿಕ ವ್ಯವಸ್ಥೆ, ರಚನಾತ್ಮಕ ಕಾರ್ಯಕ್ರಮ, ಕೊಂಗ್ರೆಸ ಸಮಿತಿಗಳಿಗೂ ಕೊಂಗ್ರೆಸ-ಮಂತ್ರಿಮಂಡಳಗಳಿಗೂ ಇರಬೇಕಾದ ಸಂಬಂಧದ ಇತಿ-ಮಿತಿಗಳು ಮೊದಲಾದ ಕೆಲವು ವಿಷಯಗಳನ್ನು ಚರ್ಚಿಸಿತು

ಮಧ್ಯಾಹ್ನ ೩ಕ್ಕೆ ವಿಷಯ-ವಿಚಾರ ಸಮಿತಿಯ ಮಂಟಪದಲ್ಲಿ ಅ|| ಭಾ|| ಕೊಂಗ್ರೆಸ ಸಮಿತಿಯ ಸಭೆಗೆ ಆರಂಭವಾಯಿತು. ಸಮಿತಿಯ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಅಸ್ವಾಸ್ಥ್ಯದ ಮೂಲಕ ಜಯಪುರಕ್ಕೆ ಬಾರದಿದ್ದುದರಿಂದ ಸರದಾರ ಪಟೇಲರು ಅಧ್ಯಕ್ಷಸ್ಥಾನ ವಹಿಸಿದ್ದರು. ಮಿರತ ಕೊಂಗ್ರೆಸ ಅಧಿವೇಶನದಿಂದ ಈ ವರೆಗೆ ನಡೆದ ಕಾರ್ಯದ ವರದಿಯನ್ನೂ ಸಮಿತಿಯ ಜಮಾ-ಖರ್ಚಿನ ಲೆಕ್ಕವನ್ನೂ ಸಮಿತಿಯು ಕೇಳಿಕೊಂಡು ಮಂಜೂರ ಮಾಡಿತು. ಆ ಮೇಲೆ ಸರದಾರ ಪಟೇಲರು ಡಾ|| ಪಟ್ಟಾಭಿಯವರಿಗೆ ಅಧ್ಯಕ್ಷಸ್ಥಾನ ಬಿಟ್ಟುಕೊಟ್ಟರು ಆಗ ಸಮಿತಿಯು ವಿಷಯ-ವಿಚಾರ-ಸಮಿತಿಯಲ್ಲಿ ಪರಿವರ್ತನೆ ಹೊಂದಿ, ಕಾರ್ಯಕಾರಿ ಮಂಡಳವು ಸಿದ್ಧಗೊಳಿಸಿದ ಗೊತ್ತುವಳಿಗಳ ಚರ್ಚೆಯನ್ನು ಆರಂಭಿಸಿತು.

ಮಹಾತ್ಮಾಜಿಯವರ ನಿಧನದಬಗ್ಗೆ ಸಂತಾಪವನ್ನು ವ್ಯಕ್ತಗೊಳಿಸಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಗೊತ್ತುವಳಿಯೂ, ಬ್ಯಾ|| ಜಿನ್ನಾ, ಹರಿಮನ, ಹೋರ್ನಿಮನ್ ಇವರ ನಿಧನದ ಬಗ್ಗೆ ದುಃಖ ಪ್ರದರ್ಶಿಸುವ ಗೊತ್ತುವಳಿಯೂ, ಸ್ವಾತಂತ್ರ್ಯ ಸಮರದಲ್ಲಿ ಪ್ರಾಣಾರ್ಪಣೆ ಮಾಡಿದ ಸಕಲರಿಗೆ ವಂದನೆಗಳನ್ನರ್ಪಿಸುವ ಗೊತ್ತುವಳಿಯೂ ಅವಿರೋಧ ಸ್ವೀಕೃತವಾದವು. ಆಮೇಲೆ 'ರಾಷ್ಟ್ರೀಯ ಸಭೆಯ ಸಂದೇಶ"ವನ್ನು ಸಾರುವ ಗೊತ್ತುವಳಿಯನ್ನು ಶ್ರೀ|| ಶಂಕರರಾವ ದೇವರು ಮಂಡಿಸಿದರು ಇದಕ್ಕೆ ಅನೇಕ ತಿದ್ದುಪಡಿಗಳು ಸೂಚಿಸಲ್ಪಟ್ಟವು ಗವ್ಹರ್ನರ ಜನರಲ್ಲರ ಸಂಬಳವನ್ನು ಇಳಿಸಿ, ಅವರ ಭವ್ಯ ನಿವಾಸವನ್ನು ನಿರಾಶ್ರಿತ ಸ್ತ್ರೀ-ಬಾಲಕರ ಉಪಯೋಗಕ್ಕೆ ಇಲ್ಲವೆ ಒಂದು ರುಗ್ಣಾಲಯದ ಉಪಯೋಗಕ್ಕೆ ಒಪ್ಪಿಸಬೇಕೆಂಬರ್ಥದ ಉಪಸೂಚನೆಯನ್ನು ಡಾ|| ಚೋಯಿಥರಾಮ ಗಿಡವಾನಿಯವರು ಸೂಚಿಸಿದ್ದರು. ಪಂಡಿತ ನೆಹರುರವರು ಈ ಬಗ್ಗೆ ಮುಂದೆ ಖುಲಾಸೆ ಮಾಡುವರೆಂದು ಹೇಳಿ ಅಧ್ಯಕ್ಷರು ಗಿಡವಾನಿಯವರ ಉಪಸೂಚನೆಯನ್ನು ನಿಯಮಬಾಹ್ಯವಿರುತ್ತದೆಂದು ತಿರಸ್ಕರಿಸಿದರು. ಈ ಗೊತ್ತುವಳಿಯ ಮೇಲಿನ ಚರ್ಚೆಗೆ ವಿಸ್ತೃತ ಉತ್ತರ ಕೊಡುವಾಗ ಪಂಡಿತ ನೆಹರುರವರು ರಾಷ್ಟ್ರೀಯ ಸ್ವಯಂಸೇವಕ ಸಂಘದವರ ನಡತೆಯ ಬಗ್ಗೆ ವಿಷಾದ ವ್ಯಕ್ತಗೊಳಿಸಿ, ರಾಷ್ಟ್ರೀಯ ಸಭೆಯೊಂದೇ ರಾಷ್ಟ್ರಕ್ಕೆ ಸರಿಯಾದ ಮಾರ್ಗದರ್ಶನ ಮಾಡಬಲ್ಲ ಸಂಸ್ಥೆಯಾಗಿರುತ್ತದೆಂದರು ಗವ್ಹರ್ನರ ಜನರಲ್ಲ ಶ್ರೀ|| ರಾಜಾಜಿಯವರೇ ಸ್ವತಃ ತಮಗೆ ಭಾರಿ ಸಂಬಳ ಬೇಕಾಗಿಲ್ಲೆಂದು ಹೇಳಿದ್ದರಿಂದ, ಭಾರತ ಮಂತ್ರಿ ಮಂಡಳವು ಕಳೆದ ವಾರವೇ ಆ ಬಗ್ಗೆ ವಿಚಾರ ಮಾಡಿ, ಗವ್ಹರ್ನರ ಜನರಲ್ಲರಿಗೆ ತಿಂಗಳೊಂದರ ರೂ. ೫೫೦೦ ಅಂದರೆ ವರ್ಷ ೧ರ ರೂ. ೬೬,೦೦೦ ವೇತನ ಕೊಡತಕ್ಕದ್ದೆಂದೂ ಈ ಸಂಬಳದೊಳಗಿಂದ ಪ್ರಾಪ್ತಿಯ ತೆರಿಗೆಯನ್ನು ವಸೂಲ ಮಾಡತಕ್ಕದ್ದಲ್ಲೆಂದು ಠರಾಯಿಸಿದೆಂದೂ ಜಾಹೀರಪಡಿಸಿದರು. (ರಾಜಾಜಿಯವರಿಗೆ ಈ ಹಿಂದೆ ತಿಂಗಳೊಂದಕ್ಕೆ ರೂ ೨೦೦೦೦ ಸಲ್ಲುತ್ತಿದ್ದರೂ ಅದರೊಳಗಿಂದ ಪ್ರಾಪ್ತಿಯ ಕರ ಮತ್ತು ಹೆಚ್ಚಿಗೆ ಪ್ರಾಪ್ತಿಯ ತೆರಿಗೆ ವಜಾ ಹೋಗಲಾಗಿ ತಿಂಗಳೊಂದಕ್ಕೆ ರೂ ೭೧೫೮| ಮಾತ್ರ ಅವರ ಕೈಸೇರುತ್ತಿತ್ತು.) ಸರ್ವಾಧಿಪತಿಗಳ ಭವ್ಯ ನಿವಾಸಸ್ಥಾನವನ್ನು ಇಡಿಯಾಗಿ ರಾಜಾಜಿಯವರು ತಮ್ಮ ಖಾಸಗಿ ಉಪಯೋಗಕ್ಕೆ ಉಪಯೋಗಿಸಿಕೊಳ್ಳುವದಿಲ್ಲೆಂದೂ, ಅದರೊಳಗಿನ ಎಷ್ಟೋ ಭಾಗಗಳು ಪ್ರದರ್ಶನ ಮುಂತಾದ ಸಾರ್ವಜನಿಕೋಪಯುಕ್ತ ಕಾರ್ಯಗಳಿಗಾಗಿ ಉಪಯೋಗಿಸಲ್ಪಡುತ್ತಿವೆಯೆಂದೂ ಪಂಡಿತಜಿಯವರು ತಿಳಿಸಿಹೇಳಿದರು. ಸರದಾರ ಪಟೇಲರೂ ಈ ಗೊತ್ತುವಳಿಯನ್ನು ಸಮರ್ಥಿಸುವಾಗ ರಾ. ಸ್ವ ಸಂಘದವರ ಪಾತಾಳಯಂತ್ರವನ್ನೆಲ್ಲ ವಿಸ್ತಾರವಾಗಿ ಬಣ್ಣಿಸಿ, ಸಂಘದವರ "ಸತ್ಯಾಗ್ರಹ"ವನ್ನು ಸರಕಾರದವರು ನಿರ್ಧಾರದಿಂದ ಬಗ್ಗು ಬಡಿಯುವರೆಂದು ಉದ್ಗರಿಸಿದರು ಉಪಸೂಚನೆಗಳೆಲ್ಲ ನಿರಾಕೃತವಾಗಿ, ಮೂಲ ಗೊತ್ತುವಳಿಯು ಸ್ವೀಕೃತವಾಯಿತು. ಆ ಮೇಲೆ ಭಾರತದ ವಿದೇಶ ನೀತಿಯನ್ನು ವಿವರಿಸುವ ಗೊತ್ತುವಳಿಯನ್ನು ಪಂ|| ಗೋವಿಂದ ವಲ್ಲಭಪಂತರು ಸಮಿತಿಯ ಮುಂದಿಟ್ಟರು ಭಾರತ ಸರಕಾರದ ಮುಖ್ಯಮಂತ್ರಿ ಪಂ|| ನೆಹರೂರವರು ಅನುಸರಿಸುವ ವಿದೇಶ-ಕಾರಣದ ನೀತಿಯನ್ನೇ ಈ ಗೊತ್ತುವಳಿಯು ಎತ್ತಿಹಿಡಿಯುತ್ತಿದೆ. ಈ ಗೊತ್ತುವಳಿಗೂ ೧-೨ ಉಪಸೂಚನೆಗಳಿದ್ದವು ಬ್ರಿಟಿಶ ರಾಷ್ಟ್ರಕೂಟದ (ಕೊಮನವೆಲ್ಥ) ಸರಲನ್ನೇ ಭಾರತವು ಹರಕೊಳ್ಳಬೇಕೆಂದು ಈ ತಿದ್ದುಪಡಿಗಳ ಆಶಯವಿತ್ತು ಜಾಗತಿಕ ರಾಷ್ಟ್ರ ಸಂಘದಲ್ಲಿ ಉತ್ಪನ್ನವಾಗಿರುವ ಎರಡೂ ಪಕ್ಷಗಳಿಂದ ಭಾರತವು ಅಲಿಪ್ತವುಳಿಯಬೇಕೆಂದೂ ಉಪಸೂಚನೆಗಳ ಸೂಚಕರು ವಾದಿಸಿದರು ಪಂ|| ನೆಹರುರವರು ಚರ್ಚೆಗೆ ಉತ್ತರ ಕೊಡುವಾಗ, ಭಾರತವು ಅಲಿಪ್ತವುಳಿಯುವದು ಎಂದೂ ಸಾಧ್ಯವಿಲ್ಲೆಂದೂ, ತನ್ನ ಸ್ವಾತಂತ್ರ್ಯವನ್ನೂ ಅಭಿಮಾನವನ್ನೂ ಕಳಕೊಳ್ಳದೆ ಜಾಗತಿಕ ಶಾಂತಿ ಪ್ರಗತಿಗಳಿಗಾಗಿ ಅನ್ಯರೊಡನೆ ಸಹಕರಿಸಬೇಕೆಂದೂ ವಾದಿಸಿದರು. ಕೊನೆಗೆ ಉಪಸೂಚನೆಗಳೆಲ್ಲ ಬಿದ್ದು ಹೋಗಿ ಮೂಲ ಗೊತ್ತುವಳಿಯು ಮಾನ್ಯವಾಯಿತು

ಶುಕ್ರವಾರ ಮತ್ತು ಶನಿವಾರ ಮುಂಜಾನೆ ಪುನಃ ವಿಷಯ-ವಿಚಾರ ಸಮಿತಿಯು ಕೂಡಿ, ರಾಷ್ಟ್ರೀಯ ಸಭೆಯ ಆರ್ಥಿಕ ಧೋರಣೆ, ಸಾರ್ವಜನಿಕರ ನಡಾವಳಿಯ ರೀತಿ, ಭಾಷಾನುಗುಣ ಪ್ರಾಂತರಚನೆಯ ವಿಷಯದ ವಿಚಾರ ಮಾಡಿ ವರದಿಯನ್ನೊಪ್ಪಿಸಲು ಪಂ|| ನೆಹರು, ಸರದಾರ ಪಟೇಲ ಮತ್ತು ಡಾ|| ಪಟ್ಟಾಭಿ ಈ ತ್ರಿಮೂರ್ತಿಗಳ ಸಮಿತಿಯ ನೇಮಣೂಕಿ (ಯಾಕೆಂದರೆ ಘಟನಾ ಸಮಿತಿಯು ನೇಮಿಸಿದ ದರ-ಸಮಿತಿಯು ಸದ್ಯದ ಪರಿಸ್ಥಿತಿಯಲ್ಲಿ ಭಾಷಾನುಗುಣ ಪ್ರಾಂತ-ರಚನೆಯು ಇಷ್ಟವಲ್ಲೆಂದು ವರದಿ ಮಾಡಿದೆ ಮತ್ತು ಆ ವರದಿಯಿಂದ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ಕೇರಳಗಳಲ್ಲಿ ತೀವ್ರ ಅಸಂತೋಷವೂ ಉದ್ವೇಗವೂ ಉಂಟಾಗಿವೆ) ಮೊದಲಾದ ಮಹತ್ವದ ಗೊತ್ತುವಳಿಗಳು ಸ್ವೀಕೃತವಾಗಿವೆ

ಶನಿವಾರ ಅಪರಾಹ್ನ ೩ ಘಂಟೆಗೆ ಮಹಾಧಿವೇಶನಕ್ಕೆ ಪ್ರಾರಂಭವಾಯಿತು ಸುಮಾರು ೨ ಲಕ್ಷ ಜನರು ಈ ಅಧಿವೇಶನ ನೋಡಲು ಸೇರಿದ್ದರು ಮಧ್ಯ ವೇದಿಕೆಯ ಮೇಲೆ ಅಧ್ಯಕ್ಷ ಮತ್ತು ಕಾರ್ಯಕಾರಿ ಮಂಡಳದ ಸದಸ್ಯರಲ್ಲದೆ, ಅ|| ಭಾ|| ಕೊಂಗ್ರೆಸ ಸಮಿತಿಯ ಸದಸ್ಯರೂ ನೂರಾರು ಪ್ರತಿಷ್ಠಿತ ಪ್ರೇಕ್ಷಕರೂ ವಿರಾಜಮಾನರಾಗಿದ್ದರು ಅಂದು ಸ್ವಾಗತಾಧ್ಯಕ್ಷರ ಹಾಗೂ ಅಧ್ಯಕ್ಷರ ಭಾಷಣಗಳಾದ ಮೇಲೆ ಕೆಲವು ಗೊತ್ತುವಳಿಗಳೂ ಸ್ವೀಕರಿಸಲ್ಪಟ್ಟವು (ಶುಕ್ರವಾರ, ಶನಿವಾರ, ರವಿವಾರಗಳ ವಿಸ್ತೃತ ವೃತ್ತಾಂತವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು)

ರಾಷ್ಟ್ರೀಯ ಸಭೆಯ ಮುಂದಿನ ಅಧಿವೇಶನಕ್ಕೆ ಕರ್ನಾಟಕದಿಂದಲೂ ತಮಿಳ ನಾಡಿನಿಂದಲೂ ನಿಮಂತ್ರಣಗಳಾಗಿವೆ. ಯಾರ ನಿಮಂತ್ರಣ ಸ್ವೀಕರಿಸಲ್ಪಡುತ್ತದೋ ನೋಡಬೇಕು

ಜಿಲ್ಲಾ ಸಮಾಚಾರ

[illegible]

ಅಂಕೋಲಾ— [illegible]

ಮುಲ್ಲಾಪುರ— [illegible]

ಹಳಿಯಾಳ— [illegible]

Notice to Motor Owners in the Karnatak Region.

Owners of motor vehicles residing in the Karnatak Region are informed that the tax for the IV Quarter ending 31-3-49 in the current financial year has to be so paid as to reach this office on or before 15-1-49 in respect of motor vehicles bearing regional registration marks of the Province of Bombay, and on or before 31-12-48 in respect of vehicles registered outside the Province of Bombay. Tax can be paid (1) in Cash, (2) **by Crossed cheques drawn on the Imperial Bank of India, Belgaum only**, (3) by Chalan or (4) by Money Orders Cash will be accepted at the Regional Transport Office, Belgaum between 11 A.M. & 3 P.M. on week days and between 9-30 A.M. & 11 A.M. on Saturdays.

2. Payment of tax should be accompanied by (1) Registration Certificate of the vehicle, (2) Certificate of Insurance as required by Chapter VIII of the Indian Motor Vehicles Act 1939 in respect of all types of vehicles either registered in this province or elsewhere, covering third party risks and (3) a declaration in form 'AT' or 'FT' as the case may be. No tax tokens or discs will be issued nor the registration certificates endorsed unless the above requirements are duly complied with.

3. Non use intimation of vehicles which are kept idle should be submitted before the date on which the tax tokens or discs already issued for such vehicles expire as required by Rule 26 of the B.M.V. Tax Rules, 1940, failing which owners will be liable to pay tax and penalty due until the date they notify the non-use of their vehicles to this office.

D. K. SUKHTANKAR, Capt.,
Regional Transport Officer,
Karnatak Region, Belgaum

Regional Transport Office,
Belgaum, 13-12-48

[illegible]

[illegible]

[illegible]

NOTICE.

All the Owners of motor cars and goods trucks (Public as well as private carriers) are hereby informed that an ad-hoc relief of 4 gallons per car and 24 gallons per goods truck has been sanctioned to them for **December 1948** The same is being issued and will be sent to their addresses by post in due course, on the strength of their applications on which they have already drawn their normal basic ration, for the current quarter They are however, requested to arrange to get the additional issues endorsed in their Registration Certificate(s) without fail when applying for ration for the ensuing quarter, either at the distribution centres or in this Office Those persons requiring ration immediately may come to the Office of the Area Rationing Authority, Belgaum and obtain their ration in person

D K SUKHTANKAR,
Capt
Area Rationing Authority
Karnatak Region, Belgaum.

Belgaum,
14-12-48

ನಮ್ಮಲ್ಲಿ ಕತ್ತದ ಚೆಕ್ರಾ ಹುರಿ
ಮತ್ತು ಬಾವಿ ಹಗ್ಗಗಳು
ಯೋಗ್ಯ ದರದಲ್ಲಿ ಸಿಗುತ್ತವೆ.
ಬೆಳಂಬಾ, ಕತ್ತದ ಸೊಸ್ಯಾಟಿ ಲಿಮಿಟೆಡ್
ಹೊನ್ನಾವರ (ಉ. ಕ.)

ಇದನ್ನು ಪಾಂಡುರಂಗ ಕೃಷ್ಣ ಶಿನಭಾಗ, (ಸಂಪಾದಕ) ಇವರ ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸಿ" ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
ಆರು ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೩-೦
ವಿ. ಪಿ. ಯಿಂದ ತರಿಸುವವರು
ವಿ. ಪಿ. ವೆಚ್ಚ ಕೊಡತಕ್ಕದ್ದು
ವರ್ಗಣಿಯು ಮುಂಗಡವಾಗಿಯೇ ಕೊಡತಕ್ಕದ್ದು

Reg. No. B 1270 Monday, 27-12-1948.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ ೨೬

ಕುಮಟಾ ಸೋಮವಾರ, ತಾ ೨೭—೧೨—೧೯೪೮

ಜಾಹೀರಾತುಗಳ ದರ.
ಸ್ಥಳವನ್ನಾಶ್ರಯಿಸಿರುವದು
೧ ಸಾಲಿಗೆ ೪ ಆಣೆಯಂತೆ
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಜಯಪುರ ಕೊಂಗ್ರೆಸ

ಜಯಪುರ ರಾಷ್ಟ್ರೀಯ ಸಭೆಯ ಗುರುವಾರದ ವರೆಗಿನ ವೃತ್ತಾಂತ ಕಳೆದ ಸಂಚಿಕೆಯಲ್ಲಿ ಕೊಟ್ಟಿದೆ. ಶುಕ್ರವಾರ ತಾ ೧೭ ದಿನ ವಿಷಯ-ಚರ್ಚಾ ಸಮಿತಿಯು ಒಂದು ಹಾಗು ಚರ್ಚೆ ಮಾಡಿ ಕಲವು ಗೊತ್ತುವಳಿಗಳನ್ನು ಮಂಜೂರ ಮಾಡಿತು. ಇವುಗಳಲ್ಲಿ ಸಂಸ್ಥಾನಗಳ ಸಂಬಂಧದ ಗೊತ್ತುವಳಿಯು ಮೇಲೂ ಸಾರ್ವಜನಿಕರ ನಡಾವಳಿಯ ಸಂಬಂಧದ ಗೊತ್ತುವಳಿಯ ಮೇಲೂ ತೀವ್ರ ಚರ್ಚೆಯಾಯಿತು. ಸಂಸ್ಥಾನಗಳ ಪ್ರಶ್ನೆಯ ಮೇಲೆ ಚರ್ಚೆಯಲ್ಲಿ ಉತ್ಪನ್ನವಾದ ಶಂಕೆ-ಕುಶಂಕೆಗಳಿಗೆ ಸಂಸ್ಥಾನ ಖಾತೆಯ ಸಚಿವರಾದ ಸರದಾರ ಪಟೇಲರು ಸಮರ್ಪಕ ಪ್ರತ್ಯುತ್ತರ ಕೊಟ್ಟ ಮೇಲೆ ಗೊತ್ತುವಳಿಯು ಸಮ್ಮತವಾಯಿತು. ಸಾರ್ವಜನಿಕರ ನಡಾವಳಿಯ ಸಂಬಂಧದ ಗೊತ್ತುವಳಿಯಲ್ಲಿ "ಮಂತ್ರಿಗಳು ಸಹ ತಮ್ಮ ವರ್ತನೆಯನ್ನು ಪರಿಶುದ್ಧವಾಗಿಟ್ಟುಕೊಂಡು ಜನರಿಗೆ ಆದರ್ಶ ಹಾಕಿಕೊಡಬೇಕು" ಎಂಬರ್ಥದ ಉಪವಾಕ್ಯವನ್ನು ಸೇರಿಸುವ ತಿದ್ದುಪಡಿಯು ಬಹುಮತದಿಂದ ಮಾನ್ಯವಾಯಿತು. ಆ ಕಾಲಕ್ಕೆ ಪಂ|| ಜವಾಹರಲಾಲರಾಗಲಿ ಸರದಾರ ಪಟೇಲರಾಗಲಿ ಸಭೆಯ ಇದ್ದಿಲ್ಲ. ಇತರ ಕಾರ್ಯಕ್ರಮಗಳನ್ನು ನೆರವೇರಿಸಲು ಬೇರೆಡೆಗೆ ಹೋಗಿದ್ದರು. ಕಾರ್ಯಕಾರಿ ಮಂಡಳದ ಮಸೂದೆಯಲ್ಲಿ ಈ ಮಹತ್ವದ ತಿದ್ದುಪಡಿಯಾದ ಸುದ್ದಿ ಅವರಿಗೆ ರಾತ್ರಿ ತಿಳಿಯುತಂತೆ ಈ ತಿದ್ದುಪಡಿಗೆ ಅವರಿಬ್ಬರೂ ಆಕ್ಷೇಪ ತಕ್ಕೊಂಡರು. ಮರ ದಿನ ಮುಂಜಾನೆ ಪುನಃ ಸಮಿತಿಯ ಸಭೆ ಸೇರುತ್ತಲೇ ಮುನ್ನಿನ ದಿನ ಸ್ವೀಕೃತವಾದ ಗೊತ್ತುವಳಿಯಲ್ಲಿ ಪುನಃ ತಿದ್ದು-ಪಡಿಯನ್ನು ಸೂಚಿಸಲು ತಮಗೆ ಅಪ್ಪಣೆ ಕೊಡಬೇಕಾಗಿ ಸಭಿಕರಲ್ಲಿ ಬೇಡಿಕೊಂಡರು. ಮುನ್ನಿನ ದಿನ ಸ್ವೀಕೃತವಾದ ತಿದ್ದುಪಡಿ ಹಾಗೆಯೇ ಉಳಿದರೆ ಸದ್ಯದ ಮಂತ್ರಿಗಳು ತಮ್ಮ ನಡತೆಯನ್ನು ಪರಿಶುದ್ಧವಾಗಿಟ್ಟುಕೊಂಡಿಲ್ಲೆಂದು ಹೇಳಿದಂತಾಗುತ್ತದೆಂದೂ, ತಮ್ಮ ಮಂತ್ರಿ-ಮಂಡಳದಲ್ಲಿ ರಾಷ್ಟ್ರೀಯ ಸಭೆಯವರಿಗೆ ವಿಶ್ವಾಸವಿರುವದಿಲ್ಲವಾದರೆ ಹಾಗೆ ಸ್ಪಷ್ಟವಾಗಿ ಹೇಳಬೇಕೆಂದೂ, ಅನ್ಯಮಾರ್ಗದಿಂದ ಹಾಗೆ ಸೂಚಿಸುವದು ಉಚಿತವಲ್ಲೆಂದೂ ಪಂಡಿತಜಿಯವರು ಆವೇಶಯುಕ್ತ ಭಾಷಣ ಮಾಡಿದರು. ಸರದಾರ ಪಟೇಲರೂ ಅವರ ಹಿಂದಿನಿಂದ ಮಾತಾಡಿ ಮೊದಲಿನ ಒಂದು ಗೊತ್ತುವಳಿಯಲ್ಲಿ ಸರಕಾರದಲ್ಲಿ ವಿಶ್ವಾಸ ಪ್ರದರ್ಶಿಸಿ ಪ್ರಸ್ತುತ ಗೊತ್ತುವಳಿಯಲ್ಲಿ ಇನ್ನೊಂದು ಧ್ವನಿಯನ್ನು ಹೊರಡಿಸುವದು ಅಸಂಗತವಿರುತ್ತದೆಂದು ಹೇಳಿದರು. ಮುಂದೆ ಪಂಡಿತ ನೆಹರೂರವರಲ್ಲಿ ಸಂಪೂರ್ಣ ವಿಶ್ವಾಸ ವ್ಯಕ್ತಗೊಳಿಸಿ ಅವರ ಬಲವನ್ನು ಬೆಳಸಿರೆಂದು ಒತ್ತಾಯಿಸಿದರು. ಆ ಮೇಲೆ ಪಂ|| ನೆಹರೂರವರಿಗೆ ತಮ್ಮ ತಿದ್ದುಪಡಿಯನ್ನು — ಮುನ್ನಿನ ದಿನ ಸೇರಿಸಿದ ಹೊಸ ಶಬ್ದಗಳನ್ನು ಅಳಿಸಿಹೊಗೆಯಬೇಕೆಂಬ ಸೂಚನೆಯನ್ನು — ಮಂಡಿಸಲು ಸಭೆಯು ಅಪ್ಪಣೆ ಕೊಟ್ಟು, ಕೆಲ ಕಾಲ ಅದನ್ನು ಚರ್ಚಿಸಿ, ಪ್ರಚಂಡ ಬಹುಮತದಿಂದ ಈ ಹೊಸ ತಿದ್ದುಪಡಿಯನ್ನು ಸ್ವೀಕರಿಸಿತು. ಕೊಂಗ್ರೆಸ್ಸಿನ ಘಟನೆಯಲ್ಲೂ ಕೆಲವು ತಿದ್ದುಪಡಿಗಳನ್ನು ಮಾಡುವ ಗೊತ್ತುವಳಿಯಾಗಿ ಸಭೆಯ ಮುಕ್ತಾಯವಾಯಿತು.

ರಾಷ್ಟ್ರೀಯ ಸಭೆಯ ಬಹಿರಂಗ ಅಧಿವೇಶನ.

ಕೊಂಗ್ರೆಸ್ಸಿನ ಬಹಿರಂಗ ಅಧಿವೇಶನಕ್ಕೆ ಶನಿವಾರ ತಾ ೧೮ ನೇ ಅಪರಾಹ್ನ ೩ಕ್ಕೆ ಪ್ರಾರಂಭವಾಯಿತು. ಇದಕ್ಕಾಗಿ ರಚಿತವಾದ ಮಂಟಪವು ೩ ಲಕ್ಷ ಪ್ರೇಕ್ಷಕ-ಪ್ರತಿನಿಧಿಗಳನ್ನು ಹಿಡಿಯುವಷ್ಟು ವಿಶಾಲವಿತ್ತು. ಮಧ್ಯ ವೇದಿಕೆಯ ಮೇಲೆ ಅಧ್ಯಕ್ಷರು, ಕಾರ್ಯಕಾರಿ ಮಂಡಳದ ಸದಸ್ಯರು, ಅ| ಭ || ಕೊಂಗ್ರೆಸ ಸಮಿತಿಯ ಸಭಾಸದರು ಮತ್ತು ಪ್ರತಿಷ್ಠಿತ ಪ್ರೇಕ್ಷಕರು— ಎಲ್ಲರೂ ಕೂಡಿ ಸುಮಾರು ೧೦೦೦ ಜನರು— ಕೂಡ್ರುವ ವ್ಯವಸ್ಥೆಯಿತ್ತು. ಅದರೂ ಅಧಿವೇಶನಕ್ಕೆ ಪ್ರಾರಂಭವಾಗುವ ಮುಂಚೆ ಜನರ ಗಲಾಟೆ ಜೋರಾಗಿ ಸಭೆಯ ವ್ಯವಸ್ಥೆ ಮುರಿದು ಹೋಗುತ್ತದೋ ಏನೋ ಎಂಬ ಚಿಂತೆಯುಂಟಾಗಿತ್ತು. ಸ್ವಾಗತ ಸಮಿತಿಯವರು ಅದನ್ನು ಚಾತುರ್ಯದಿಂದ ಸಂಭಾಳಿಸಿ ಎಲ್ಲವನ್ನು ವ್ಯವಸ್ಥಿತಗೊಳಿಸಿದರು. ಪತ್ರಿಕಾ-ಪ್ರತಿನಿಧಿಗಳ ಬಗ್ಗೆ ಮಾಡಿದ ಏರ್ಪಾಟು ಸಮರ್ಪಕವಿಲ್ಲೆಂಬದೊಂದು ದೂರೂ ನಡುವೆ ಉದ್ಭವಿಸಿ, ಪತ್ರಿಕಾ ಪ್ರತಿನಿಧಿಗಳು ಸಭೆಯಿಂದ ಎದ್ದು ಹೋಗುವ ಬೆದರಿಕೆಯನ್ನು ಹಾಕಿದ್ದರು. ಅಧ್ಯಕ್ಷರೂ ಸ್ವಾಗತ ಸಮಿತಿಯವರೂ ಅವರಿಗೆ ಸಮಾಧಾನ ಹೇಳಿ, ಮರು ದಿನ ಎಲ್ಲ ವ್ಯವಸ್ಥೆಯನ್ನೂ ಸರಿಗೊಳಿಸಿ ಕೊಡಲಾಗುವದೆಂದು ಆಶ್ವಾಸನೆ ಕೊಟ್ಟರು. ಈ ಅಧಿವೇಶನಕ್ಕಾಗಿ ಬಂದ ಪತ್ರಿಕಾ-ಸುದ್ದಿಗಾರರ ಸಂಖ್ಯೆ ೧೦೦ಕ್ಕೂ ಹೆಚ್ಚಿತ್ತು.

ರಾಷ್ಟ್ರಪತಿಗಳ ಸಿಂಹಾವಲೋಕನ.

ರಾಷ್ಟ್ರಗೀತ, ಸ್ವಾಗತಪದ, ಸ್ವಾಗತಾಧ್ಯಕ್ಷ ಶ್ರೀ|| ಗೋಕುಲಭಾಯಿ ಭಟ್ಟರ ಸ್ವಾಗತ ಭಾಷಣ ಮತ್ತು ಸಭೆಗೆ ಬಂದ ಸಂದೇಶಗಳ ವಾಚನಗಳಾದ ಮೇಲೆ ಅಧ್ಯಕ್ಷ ಡಾ|| ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷೀಯ ಭಾಷಣವಾಯಿತು. ಡಾಕ್ಟರರು ಮೊದಲು ೩೦ ನಿಮಿಷಗಳ ವರೆಗೆ ಅಸ್ಖಲಿತ ಮತ್ತು ಶುದ್ಧ ಹಿಂದುಸ್ಥಾನಿ ಭಾಷೆಯಲ್ಲಿ ತಮ್ಮ ಇಂಗ್ಲಿಷ ಭಾಷಣದ ಸಾರವನ್ನು ಹೇಳಿ, ಆಮೇಲೆ ತಮ್ಮ ಇಂಗ್ಲಿಷ ಭಾಷಣವನ್ನು ಹೇಳಿದರು. ಅದರ ಸಾರ ಇಂತಿದೆ —

೩ ವರ್ಷಗಳ ನಂತರ ನಾವು ಪುನಃ ಸೇರಿದ್ದೇವೆ. ವಿಸಾರತದಲ್ಲಿ ಸೇರಿದಾಗ ಪರಕೀಯ ಪ್ರಭುತ್ವದ ವಿರುದ್ಧ ಹೋರಾಡುವ ಸಿದ್ಧತೆ ಮಾಡಲು ಸೇರಿದ್ದೆವು. ಈಗ ದೊರೆತ ಸ್ವಾತಂತ್ರ್ಯವನ್ನು ಸುದೃಢಪಡಿಸಲು ಸೇರಿರುವೆವು. ಇಂತಹ ಸಮಯದಲ್ಲಿ ಸ್ವಾತಂತ್ರ್ಯ ದೊರಕಿಸಿಕೊಟ್ಟ ರಾಷ್ಟ್ರಪಿತನು ನಮ್ಮೊಳಗೆ ಇಲ್ಲದಿದ್ದುದು ದುರ್ದೈವ. ಆದರೂ ಅವರ ಆತ್ಮವು ನಮ್ಮಲ್ಲಿರುವದು. ಮಹಾತ್ಮಾ ಗಾಂಧಿಯವರು ಒಂದು ಅವತಾರಿ ಪುರುಷರಾಗಿದ್ದರು. ವಚನ-ಪರಿಪಾಲನೆ, ಸಚ್ಚಾರಿತ್ರ್ಯಗಳಿಂದ ಅವರು ಶ್ರೀರಾಮನಾಗಿದ್ದರು, ತ್ಯಾಗದಲ್ಲಿ ಬುದ್ಧನಾಗಿದ್ದರು, ತ್ಯಾಗ-ಸೇವೆಗಳಲ್ಲಿ ಕ್ರಿಸ್ತರಾಗಿದ್ದರು.

ಹಿಂದೆ ನಮ್ಮ ಹೋರಾಟ ವಿದೇಶಿ ಪ್ರಭುತ್ವದೊಡನಿತ್ತು. ಆದರಿಂದ ಜಗತ್ತಿನಲ್ಲಿ ನಡೆದ ಸ್ವಾತಂತ್ರ್ಯದ ಆಂದೋಲನಗಳ ಕಡೆ ನಮ್ಮ ಸಹಾನುಭೂತಿಇತ್ತು. ಅದೇ ತತ್ವವನ್ನು ಈಗಲೂ ನಾವು ಅನುಸರಿಸಬೇಕು. ಅಂದರೆ ಎಲ್ಲ ಬಗೆಯ ಸಾಮ್ರಾಜ್ಯವಾದಿತ್ವದ ಪರಿಸಮಾಪ್ತಿ, ದಾಸ-ರಾಷ್ಟ್ರಗಳ ವಿಮೋಚನೆ, ವರ್ಣದ್ವೇಷಗಳ ನಿರ್ಮೂಲನ, ಜಾಗತಿಕ ಶಾಂತಿ, ರಾಷ್ಟ್ರ-ರಾಷ್ಟ್ರಗಳೊಳಗೆ ಸಮಾನತೆ ಮತ್ತು ಸೌಹಾರ್ದ ಇವೇ ನಮ್ಮ ವಿದೇಶ-ನೀತಿಯಾಗಬೇಕು. ಜಗತ್ತಿನೊಳಗೆ ನಾವು ಏಕಾಕಿಯಾಗಿ, ಅಲಿಪ್ತವಾಗಿ ಉಳಿಯಲಾರೆವು. ಇತರರೊಡನೆ ಸ್ನೇಹ-ಸಂಬಂಧ ಇಟ್ಟುಕೊಳ್ಳುವದು ಅವಶ್ಯವುಂಟು. ಜಗತ್ತು ಇಂದು ೩ನೇ ಮಹಾಯುದ್ಧದತ್ತ ಸಾಗಿದೆ. ಆ ಮಹಾಸಂಕಟವನ್ನು ತಪ್ಪಿಸುವ ಪ್ರಯತ್ನ ನಾವು ಮಾಡಬೇಕು.

ಬ್ರಿಟಿಶ ರಾಷ್ಟ್ರಕೂಟದೊಡನೆ ಭಾರತ ಸಂಬಂಧವೆಂತಿರಬೇಕೆಂಬುದೊಂದು ಸದ್ಯದ ಸಮಸ್ಯೆ. ಪರಸ್ಪರ ಅನುಕೂಲತೆಗಾಗಿ ಸ್ವತಂತ್ರ ರಾಷ್ಟ್ರಗಳೊಡನೆ ಸ್ವತಂತ್ರತೆಯ ಸಂಬಂಧವನ್ನಿಟ್ಟುಕೊಳ್ಳಲು

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/ ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ
ತಾ ೨೭-೬-೧೯೪೮

ಕೇ. ವಿಟ್ಠಲದಾಸ ಶೆಣೈ.
ಮೆನೆಜಿಂಗ್ ಡೈರೆಕ್ಟರ

ಅಸ್ತಿಯಿಲ್ಲೆಂದು ನನ್ನ ಅಭಿಪ್ರಾಯ ಅದರ ವಿಧ್ವಂಸಕ ಶಕ್ತಿಗಳೊಡನೆ ನಾವು ಸಂಬಂಧ ಬೆಳಸಿಕೊಳ್ಳಬೇಕು, ವಿಧ್ವಂಸಕ ಶಕ್ತಿಗಳೊಡನೆ ಅಲ್ಲ

ಇನ್ನು ನಮ್ಮ ಅಂತರಿಕ ಸಮಸ್ಯೆಗಳ ವಿಚಾರ ಮಾಡುವ. ಸ್ವಾತಂತ್ರ್ಯದ ಕಾಲವಿನ್ನೂ ಮುಗಿಯಿತು ಹೊಸ ರಾಷ್ಟ್ರವನ್ನು ಕಟ್ಟುವ ಪುನರ್ರಚನೆಯ ಯುಗವು ಪ್ರಾರಂಭವಾಗಿದೆ. ಹಿಂದೆ ನಾವು ಜನಸಾಮಾನ್ಯರ ಸೇವೆಯ ಸತ್ಯದಲ್ಲಿ ನಮೂದಿಸಿದ ತತ್ವಗಳನ್ನು ಕೈಬಿಡುವುದಿಲ್ಲ. ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳಿಗೆ ಬಿಕ್ಕಟ್ಟು ಎದುರಾಗುತ್ತಿದೆ. ಆದರೆ ಈಗ ಪರಿಸ್ಥಿತಿ ಬದಲಾಗಿದೆ ಪ್ರತಿಕೂಲವಾಗಿದೆ. ಪ್ರಧಾನ ಉದ್ಯೋಗಗಳ ರಾಷ್ಟ್ರೀಯೀಕರಣ ಮಾಡುವದು ಸುಲಭವಲ್ಲ ಉದ್ಯೋಗಗಳನ್ನು ಬೆಳಸಲಿಕ್ಕೂ ಅನೇಕ ತೊಂದರೆಗಳಿವೆ ಯಂತ್ರಸಾಮಗ್ರಿಗಳು ಸಿಗುವದು ಕಷ್ಟವಾಗಿದೆ ರಾಜ್ಯದಾಡಳಿತದಲ್ಲಿ ಉದ್ಭವಿಸುವ ಎತ್ತರದ ಸಮಸ್ಯೆಗಳನ್ನು ಬಿಡಿಸುವದರಲ್ಲೇ ಸರಕಾರಗಳ ಕಾಲ ಶಕ್ತಿಗಳ ವ್ಯಯವಾಗುತ್ತಿದೆ ಲಂಚಗುಳಿತನವೂ ಕಳ್ಳ ಪೇಟೆಯೂ ಇಂದು ಏನೇನೂ ಕಡಿಮೆಯಾಗಿಲ್ಲ ಅದಕ್ಕೆ ಲಂಚ ಕೊಡುವ ಮತ್ತು ಕಳ್ಳ ಪೇಟೆಯಲ್ಲಿ ಸಾಮಾನು ಕೊಳ್ಳುವ ಜನರೇ ಹೊಣೆಗಾರರು ಸರಕಾರದ ನಿಯಂತ್ರಣ ರೀತಿಯ ಬಗ್ಗೆಯೂ ಟೀಕೆಯುಂಟು. ಪರಿಸ್ಥಿತಿ ಹಾಗಾಗಿದೆ ಆದರೂ ಕೂಲಿಕಾರರ ಹಿತವನ್ನೂ, ನಿರಾಶ್ರಿತರ ಸಮಸ್ಯೆಯನ್ನೂ, ನಾಡಿನ ಸುಧಾರಣೆಯನ್ನೂ, ನೀರಾವರಿಗಳ ಯೋಜನೆಯನ್ನೂ ಸರಕಾರವು ಸಾಧಿಸಿದೆ, ಆರೋಗ್ಯ, ಶಿಕ್ಷಣಗಳ ಕಡೆ ವಿಶೇಷ ಲಕ್ಷ ಪೂರೈಸಿದೆ, ಸೈನ್ಯಬಲ ಸಂವರ್ಧಿಸಿದೆ, ಸಂಸ್ಥಾನಗಳ ಸಮಸ್ಯೆಯನ್ನು ಸಮಾಧಾನಕರವಾಗಿ ಬಿಡಿಸಿದೆ ಬ್ರಿಟಿಶರು ಹೊರಟು ಹೋಗುವಾಗ ಸಂಸ್ಥಾನಗಳ ಸ್ವಾತಂತ್ರ್ಯದ ಸುರಂಗಗಳನ್ನು ನೆಟ್ಟು ಹೋಗಿದ್ದರು ಸರದಾರ ಪಟೇಲರು ಚಾತುರ್ಯದಿಂದ ಅವನ್ನು ಹಾರಿಸಿಬಿಟ್ಟಿದ್ದಾರೆ ಹೈದರಾಬಾದ, ಕಾಶ್ಮೀರ ಸಮಸ್ಯೆಗಳು ಕೂಡ ಬೇಗನೆ ಬಿಡುವವು

ನಮ್ಮಲ್ಲಿ ಭಾಷೆಗಳು ಬಹಳವಾಗಿವೆ. ಆದರಿಂದ ರಾಷ್ಟ್ರದ ಸಭೆಗಳ ಕಾರ್ಯ ಸಮಾಧಾನಕರವಾಗಿ ಸಾಗುವದಿಲ್ಲ ಭಾಷಾನುಗುಣ ಪ್ರಾಂತರಚನೆಯೇ ಅದಕ್ಕೆ ಸರಿಯಾದ ಮದ್ದು ಈ ಪ್ರಾಂತೀಕರಣದ ಬೇಡಿಕೆ ಅರಾಷ್ಟ್ರೀಯವಿರುತ್ತದೆಂದು ನಾನು ಒಪ್ಪಲಾರೆ ಈ ಪ್ರಶ್ನೆಯನ್ನು ಮುಂದೂಡುವದು ತರವಲ್ಲ

ಗ್ರಾಮೋದ್ಯೋಗಗಳನ್ನು ನಾವು ಪುನರ್ಘಟಿಸಬೇಕು. ಅಂದರೆ ಮಾತ್ರ ದೇಶದೊಳಗಿನ ನಿರುದ್ಯೋಗಿತನ ಅಳಿಯುವದು ಈ ಕಾರ್ಯದಲ್ಲಿ ಜಪಾನದ ಉದಾಹರಣೆ ನಮಗೆ ಮಾರ್ಗದರ್ಶಕವಿದೆ

ರಾಷ್ಟ್ರಭಾಷೆಯದೊಂದು ವಾದವೆದ್ದಿದೆ ಉತ್ತರದ ಹಿಂದುಸ್ಥಾನದ ಜನಸಾಮಾನ್ಯರು ಆಡುವ ಸರಳ ಹಿಂದುಸ್ಥಾನಿಯೇ ನಮ್ಮ ರಾಷ್ಟ್ರಭಾಷೆಯಾಗಬೇಕೆಂದು ನನ್ನ ಮತವುಂಟು

ಕೊಂಗ್ರೆಸ ಮತ್ತು ಸರಕಾರ ಇವುಗಳ ಸಂಬಂಧವು ಮಾನವದೇಹದೊಳಗಿನ ಶುದ್ಧ ರಕ್ತ ಪೂರೈಸುವ ಹೃದಯ ಮತ್ತು ನಾಡಿಗಳೊಳಗಿನ ಸಂಬಂಧದಂತಿರಬೇಕು ಜನತೆ ಮತ್ತು ಸರಕಾರ ಇವುಗಳೊಳಗೆ ಸಾಮರಸ್ಯವನ್ನುಂಟು ಮಾಡುವದೇ ಕೊಂಗ್ರೆಸ್ಸಿನ ಕಾರ್ಯ

ಇನ್ನು ನಾವು ನಮ್ಮಲ್ಲಿಯ ಸಂಪತ್ತಿಗಳನ್ನು ಉಪಯೋಗಿಸಿಕೊಂಡು, ಸಕಲರಿಗೂ ಅನ್ನ, ಬಟ್ಟೆ, ಶಿಕ್ಷಣ ಸಿಗುವಂತೆ ಮಾಡಿ, ಮಹಾತ್ಮರ "ರಾಮರಾಜ್ಯ" ಕಟ್ಟಲು ಪ್ರಯತ್ನಿಸೋಣ ಪ್ರಗತ ರಾಷ್ಟ್ರಗಳ ಪಂಕ್ತಿಯಲ್ಲಿ ಸ್ಥಾನ ಸಂಪಾದಿಸಲು ನಾವು ಬಹಳ ಅಂತರ ಕ್ರಮಿಸಬೇಕಾಗಿದೆ ಪ್ರಾಮಾಣಿಕರಾಗಿ, ನಿಸ್ವಾರ್ಥಿಗಳಾಗಿ ದುಡಿದರೆ ಮಾತ್ರ ಅದು ಸಾಧ್ಯವಿದೆ ನಾವಿಂದು ಒಂದು ಸಂಧಿ ಕಾಲದಲ್ಲಿದ್ದೇವೆ ನಮ್ಮ ಕೈಯೊಳಗಿನ ಉಜ್ವಲ ಜ್ಯೋತಿಯನ್ನು ನಾವು ಕಿರಿಯರ ಕೈಯಲ್ಲಿ ಕೊಟ್ಟು ಅವರಿಗೆ ಸಹಾಯ ಮಾಡೋಣ

ಅಧ್ಯಕ್ಷರ ಭಾಷಣವಾದ ಮೇಲೆ ವಿಷಯ ಚರ್ಚಾಸಮಿತಿಯವರು ತಯಾರಿಸಿದ ಗೊತ್ತುವಳಿಗಳು ಒಂದೊಂದೇ ಸಭೆಯಲ್ಲಿ ಬಂದು ಸ್ವೀಕರಿಸಲ್ಪಟ್ಟವು. ರವಿವಾರ ಮಧ್ಯಾನ್ಹ ಪುನಃ ಅಧಿವೇಶನ ಕೂಡಿ ರಾತ್ರೆ ೧೦ರ ತನಕ ನಡೆಯಿತು ಎಲ್ಲ ಗೊತ್ತುವಳಿಗಳು ವಿಶೇಷ ವಿರೋಧವಾಗದೆ ಸ್ವೀಕರಿಸಲ್ಪಟ್ಟವು. ಕೊನೆಗೆ ಶ್ರೀ ಜವಾಹರಲಾಲ ನೆಹರೂರವರ ಸ್ವಾಗತ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸಿದರು ರಾಷ್ಟ್ರಪತಿಗಳ ಸಮಾರೋಪವಾಗಿ, ೯ ಗಂಟೆಗೆ ಅಧಿವೇಶನವು ಮುಕ್ತಾಯವಾಯಿತು

ರಾ. ಶ್ರೀ ಇನಾಮು!!

ನನ್ನ ಸ್ವಂತ ಮನೆಯು ಎತ್ತು ಮತ್ತು ಎಮ್ಮೆಯು ಮಾಳಕ ಹತ್ತಿರ ... ದಿವಸ ಮನೆಗೆ ಬರಲಿಲ್ಲ ಕಳೆದ ಎಲ್ಲ ಕಡೆ ಹುಡುಕಿಯು ಕಾಣಸಿಕ್ಕಲಿಲ್ಲ ಯಾರಿಗಾದರೂ ಸಿಕ್ಕರೆ ತಿಳಿಸಿದ ಜನಕ್ಕೆ ತಂದುಕೊಟ್ಟರೆ ಅಥವಾ ... ಕಾಣದ ಎತ್ತು ಕೊಡಬೇಕು ... ಎನ್ನಲು ಕರೆದು ಸಹ ... ಕಾಣದಿದ್ದರೆ ಈ ಸಾರಿ ... ಕೊಡಬೇಕು ಎಂದು ... ಎಂದು ಬೇಕಾದರೆ ಕೆಲಸ ... ಎನ್ನುವ ಹೆಸರು ... ಕೊಡುವದಿಲ್ಲ ... ವಿಳಾಸ ... ೬ ವರ್ಷ ಪ್ರಾಯ ಸ್ವಲ್ಪ ಮಂದಿ, ಶುಕ್ರಗಿಯು ಕೆಳ ಭಾಗದಲ್ಲಿ ಬಿಳೇ ಗೆರೆಯಿರುವದು ಬಣ್ಣ ಇಷ್ಟಾಗಿ.

ಮುಕ್ಕಾಮ, ತಾ ೨೬-೧೨-೪೮

ವಿನಾಯಕ ವಿಷ್ಣು ಭಟ್ಟ, ಕೊಂಡೆಕೆರೆ

ನಾಗರಿಕ ಪೂರೈಕೆ ಖಾತೆ

ಮುಂಬಯಿ ಕೋಟೆ, ತಾ ೧೭-೧೨-೧೯೪೮

ಪತ್ರಿಕಾ-ಪ್ರಕಟನೆ

ಮುಂಬಯಿ ಸರಕಾರದವರು ಸನ್ನಿ ತಾ ೧೬ನೇಗೆ ೨ ಹೊಸ ನಿಯಂತ್ರಣಾಜ್ಞೆಗಳನ್ನು ಹೊರಡಿಸಿದ್ದಾರೆ ಅವುಗಳು ಮುಖ್ಯಾಂಶಗಳು ಈ ಕೆಳಗಿನಂತಿವೆ —

(೧) ಮುಖ್ಯ ಆಹಾರ-ಧಾನ್ಯಗಳನ್ನು, ಅಂದರೆ ಅಕ್ಕಿ (ಭತ್ತ ಸಹಿತ), ಗೋದಿ, ಜೋಳ, ಬಾಜರಿ, ಬಾರ್ಲಿ ಮತ್ತಿವುಗಳ) ವಾಗ್ಯ ಗೋವಿನ ಜೋಳ ಇವುಗಳನ್ನು ಜಿಲ್ಲಾ ಮೆಜಿಸ್ಟ್ರೇಟರ (ಯಾವದೊಂದು ಸಂಸ್ಥಾನ ಪ್ರದೇಶದಿಂದ ಇವನ್ನು ಸಾಗಿಸುವದಿದ್ದಲ್ಲಿ ಆ ಪ್ರದೇಶದ ಚೀಫ ಎಡ್ಮಿನಿಸ್ಟ್ರೇಟರರ) ಅಪ್ಪಣೆ-ಚೀಟಿಯಿಲ್ಲದೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಒಯ್ಯುಕೊಳ್ಳುವದನ್ನು ಮೊದಲನೇ ಆಜ್ಞೆಯು ನಿರ್ಬಂಧಿಸುತ್ತದೆ

(೨) ಮೇಲ್ಕಾಣಿಸಿದ ಧಾನ್ಯಗಳನ್ನು, ಕೆಲವೊಂದು ಅಪವಾದಗಳನ್ನು ಬಿಟ್ಟು, ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಅಪ್ಪಣೆ ಚೀಟಿಯಿಲ್ಲದೆ ಒಯ್ಯಕೂಡದೆಂದು ಎರಡನೇ ಆಜ್ಞೆಯು ವಿಧಿಸುತ್ತದೆ ಇಂಥ ಅಪ್ಪಣೆ ಚೀಟಿಗಳನ್ನು ಕೊಡುವ ಅಧಿಕಾರ ಸಾಮಾನ್ಯವಾಗಿ ಜಿಲ್ಲಾ ಮೆಜಿಸ್ಟ್ರೇಟರದಿರುತ್ತದೆ ಆದರೆ ಕೆಲವೊಂದು ಸಂದರ್ಭಗಳಲ್ಲಿ ಸಂಬಂಧಪಟ್ಟ ಮಾಮಲೇದಾರರೂ ಗ್ರಾಮಸ್ಥರೂ ಈ ಅಪ್ಪಣೆ ಚೀಟಿಗಳನ್ನು ನೀಡಬಹುದು

(೩) ಕೆಲವೊಂದು ಅಪವಾದಾತ್ಮಕ ಪ್ರಸಂಗಗಳನ್ನು ಬಿಟ್ಟು, ಮೇಲಿನ ಧಾನ್ಯಗಳನ್ನು ಯಾವಾತನೂ ಸರಕಾರದ ವಿನಹ ಬೇರೆ ಯಾರಿಗೂ ಮಾರಕೂಡದೆಂದೂ ಇನ್ನಿತರ ರೀತಿಯಿಂದ ಪರಾಧೀನಗೊಳಿಸಕೂಡದೆಂದೂ ಎರಡನೇ ಆಜ್ಞೆಯಲ್ಲಿ ಇನ್ನೊಂದು ಪ್ರತಿಬಂಧವೂ ಉಂಟು ಆದರೂ ಸದ್ಯಕ್ಕೆ ಆಹಾರ ಧಾನ್ಯಗಳ ರೀಟೇಲ ಇಲ್ಲವೆ ಹೋಲ್‌ಸೇಲ್ ವ್ಯಾಪಾರ ಮಾಡಲು ಪರವಾನೆಯುಳ್ಳ ಜನರಿಗೆ ಈಗ ತಮ್ಮ ಸಂಗ್ರಹದಲ್ಲಿರುವ ಆಹಾರ ಧಾನ್ಯಗಳನ್ನು ಮಾರಾಟ ಮಾಡಲು ಈ ಆಜ್ಞೆಯು ಅಡ್ಡಿ ಮಾಡುವದಿಲ್ಲ ಆದರೆ ಈ ಸವಲತ್ತು ಇನ್ನೊಂದು ತಿಂಗಳು ಅಂದರೆ ತಾ ೧೫—೧—೧೯೪೯ರ ತನಕ ಮಾತ್ರ ಕೊಡಲ್ಪಟ್ಟಿದೆ ಈ ಮಿತಿಯ ತರುವಾಯ ಸದರಿ ಪರವಾನೆ-ಧಾರಕರಿಗೂ ಕೂಡ ಮಾರಾಟ-ಪ್ರತಿಬಂಧಕ ಹುಕುಮು ಅನ್ವಯಿಸುವದು ಸದರಿ ಮಿತಿಗೆ ವ್ಯಾಪಾರಿಗಳಕಡೆಗೆ ಇರಬಹುದಾದ ಸಂಗ್ರಹವನ್ನು ಸರಕಾರದವರ ಖರೇದಿಯ ಧಾರಣೆಗಳಂತೆ ಸರಕಾರವೇ ಕೊಂಡುಕೊಳ್ಳಬಹುದು ಈ ಆಜ್ಞೆಯ ಮಿತಿಯಿಂದ ಉಪರ್ಯುಕ್ತ ಪರವಾನೆಧಾರಿ ವ್ಯಾಪಾರಿಗಳು ಕೂಡ ಸದರಿ ಆಹಾರಧಾನ್ಯಗಳನ್ನು ವ್ಯಾಪಾರಕ್ಕೆಂದು ಹೊಸದಾಗಿ ಕೊಂಡುಕೊಳ್ಳಕೂಡದೆಂದು ಪ್ರತಿಬಂಧ ಹಾಕಲಾಗಿದೆ ಅಷ್ಟೇ ಅಲ್ಲ, ಈಗ ಅವರ ಸಂಗ್ರಹವು ಯಾವ ಪಟ್ಟಣದಲ್ಲಿ ಯಾ ಗ್ರಾಮದಲ್ಲಿ ಇರುವದೋ ಆ ಗ್ರಾಮ ಯಾ ಪಟ್ಟಣದಿಂದ ಅದನ್ನು ಅವರು ಸ್ಥಳಾಂತರಿಸಬಾರದೆಂತಲೂ ಸದರಿ ಆಜ್ಞೆಯಲ್ಲಿ ಸ್ಪಷ್ಟ ಹೇಳಲಾಗಿದೆ ಈ ನಿರ್ಬಂಧ ಅಕ್ಕಿ ಬೆಳೆಯುವ ಪ್ರದೇಶಗಳಲ್ಲಿ ಅಕ್ಕಿ ಭತ್ತಗಳ ವ್ಯಾಪಾರಕ್ಕೆ ಮತ್ತು ಪಂಚಮಹಾಲ ಹಾಗೂ ಸಾಬರಕಾಂಠಾ ಜಿಲ್ಲೆಗಳಲ್ಲಿ ಗೋವಿನ ಜೋಳದ (maize) ವ್ಯಾಪಾರಕ್ಕೆ ಈಗಾಗಲೇ ಅನ್ವಯಿಸುತ್ತಿರುವದನ್ನು ಜನರು ಅರಿತಿರುವರು ಉಪರ್ಯುಕ್ತ ಪ್ರದೇಶಗಳ ಮಟ್ಟಿಗೆ ಪರವಾನೆಧಾರಿ ವ್ಯಾಪಾರಿಗಳು ತಮ್ಮ ಕಡೆಗಿದ್ದ ಈ ಎರಡು ಜಾತಿಯ ಆಹಾರ ಧಾನ್ಯಗಳ ಸಂಗ್ರಹವನ್ನು ಮಾರಿಬಿಡಬಹುದಾದ ಅವಧಿಯು ಈ ಹಿಂದೆಯೇ ಕಳೆದು ಹೋಗಿದೆ, ಮತ್ತು ಆ ಪ್ರದೇಶಗಳಲ್ಲಿ ಅಕ್ಕಿ ಭತ್ತ ಮತ್ತು ಗೋವಿನ ಜೋಳಗಳ ಮಾರಾಟದ ಮೇಲಿನ ಪೂರ್ಣ ಪ್ರತಿಬಂಧ ಈ ಹಿಂದೆಯೇ ಅಮಲಿನಲ್ಲಿ ಬಂದಿದೆ

ಜಿಲ್ಲೆಯೊಳಗಿನ ಆಹಾರಧಾನ್ಯಗಳನ್ನು ಹೊರಗೆ ಸಾಗಿಸತಕ್ಕದ್ದಲ್ಲೆಂದು ಪ್ರತಿಬಂಧ ಹಾಕುವ ಈ ವಿಶಾಲ ಆಜ್ಞೆ ಈಗ ಹೊರಟಿರುವದರಿಂದ, ಮೇಲ್ಕಾಣಿಸಿದ ಧಾನ್ಯಗಳಲ್ಲಿ ಯಾವದೊಂದು ಜಾತಿಯ ಧಾನ್ಯವನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಒಯ್ಯಕೂಡದೆಂದು ಅಥವಾ ಪ್ರತಿ ಜಿಲ್ಲೆಯ ಅಕ್ಕಿ ಬೆಳೆಯುವ ಪ್ರದೇಶದಿಂದ ಆ ಪ್ರದೇಶದ ಹೊರಗಿನ ಭಾಗಕ್ಕೆ ಅಕ್ಕಿಯನ್ನು ಒಯ್ಯಕೂಡದೆಂದು ವಿಧಿಸಲು ಈ ಹಿಂದೆ ಹೊರಟ ಹಲವಾರು ಆಜ್ಞೆಗಳೂ, (೧) ಗುಜರಾಥ ವಿಭಾಗದಿಂದ ಸೌರಾಷ್ಟ್ರ (ಸುರಾಷ್ಟ್ರ) ಮತ್ತು ಕರ್ನಾಟಕ ಜಿಲ್ಲೆಗಳಿಗೆ ಅಥವಾ ಈ ಜಿಲ್ಲೆಗಳಿಂದ ಗುಜರಾಥಕ್ಕೆ ಆಹಾರ ಧಾನ್ಯಗಳನ್ನು ನಿರ್ಯಾತ ಮಾಡತಕ್ಕದ್ದಲ್ಲೆಂದೂ (೨) ಮಧ್ಯ ಪ್ರಾಂತ, ಹೈದರಾಬಾದ ಸಂಸ್ಥಾನ, ಮದ್ರಾಸ ಪ್ರಾಂತ ಮತ್ತು ಗೋವೆಗಳಿಗೆ ಹೊಂದಿಕೊಂಡಿರುವ ಗಡಿಯುದ್ದಕ್ಕೂ ೧೦ ಮೈಲು ಅಗಲಕೆಯ ಪಟ್ಟೆಯಲ್ಲಿ ಆಹಾರ ಧಾನ್ಯಗಳ ವ್ಯಾಪಾರ ಇಡಲಿಕ್ಕಾಗಲಿ ಸಾಗಿಸತಕ್ಕದ್ದಲ್ಲೆಂದೂ ಪ್ರತಿಬಂಧಿಸುವ ಆಜ್ಞೆಗಳೂ ಕೂಡ ಈಗ ರದ್ದಾಗಿವೆ.

೩ ಈ ಆಜ್ಞೆಗಳ ಸಂಬಂಧದ ಸಂಪೂರ್ಣ ಮಾಹಿತಿ ಬೇಕಾದರೆ ಇಷ್ಟವಿದ್ದವರು ತಾ ೧೬ ೧೨-೧೯೪೮ರ ಮುಂಬಯಿ ಸರಕಾರದ ಗಾಝೆಟಿನ ವಿಶೇಷಾಂಕವನ್ನು ನೋಡಿಕೊಳ್ಳಬಹುದು ಮೇಲೆ ಹೇಳಿದ ಎರಡೂ ಆಜ್ಞೆಗಳು ಆ ಗಾಝೆಟಿನಲ್ಲಿ ಪ್ರಕಟಿಸಲ್ಪಟ್ಟಿವೆ

(ಜಿಲ್ಲಾಧಿಪರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ಸಾರುವದಿದೆ ಎಂಬ ಜಾಹೀರಾತಿಗೆ ಪ್ರತ್ಯುತ್ತರ.

ತಾ ೮—೧೧—೧೯೪೮ರ "ಕಾನಡಾ ವೃತ್ತ" ದಲ್ಲಿ ಹೊನ್ನಾವರ ಕಸಬಾ ಸರ್ವೇ ನಂ ೨೪೧ನೇದನ್ನು ಮಾರುವದಿದೆ ಎಂದು ಪಿ ಡಿಸೋಜಾ ಇವರು ಕೊಟ್ಟ ಜಾಹೀರಾತು ಪ್ರಕಟವಾಗಿದೆಯಷ್ಟೇ

ಈ ಕೆಳಗೆ ಸಹಿ ಮಾಡಿದ ಇಜಿಕೆರೋಜ ಮೊತ್ತಿನ ಅಲ್ವಾರೀಸ ಇವನ ತಂದೆ ಮೊತ್ತಿನ ಅಲ್ವಾರೀಸ ಇವನು ತಾ ೧೬—೧೨—೧೯೧೭ಕ್ಕೆ ಸದರಿ ಸ್ಥಳದೊಳಗಿನ ತನ್ನ ಸದಗಿ ಹಕ್ಕನ್ನು ರೂ ೨೫೦ಕ್ಕೆ ಅದವು ತಂಗಿಕ ಮೆಯ್ವ ಪತ್ರ ಕ್ರಯಕ್ಕೆ ಕೊಟ್ಟಿದ್ದಿರುತ್ತಿದ್ದು, ಸದರಿ ಮೊತ್ತಿನನ ಮರಣದ ನಂತರ ಅವನ ವಾರಿಸದಾರ ನಾತೆಯಿಂದ ಅವನ ಹುಡುಗರಾದ ನಾನು, ಜ್ಯೂನ ಬಾಪ್ಟಿಸ್ ಮತ್ತು ಲುವಿಸ ಹಾಗೂ ಹುಡುಗಿಯಾದ ಜುಜೆಪಿನ ಇವರು ಅದನ್ನು ಅಡವಿನಿಂದ ಬಿಡಿಸಿಕೊಳ್ಳಲು ಹಕ್ಕುದಾರರಿದ್ದೇವೆ. ಈಬಗ್ಗೆ ಸದರಿ ಮಿಸಸ್ ಪಾವಲಿನ್ ಡಿಸೋಜಾ ಮತ್ತು ಸಯ್ಯಿಕ್‌ಗೆ ಹೊನ್ನಾವರ ದಿವಾಣಿ ಕೋರ್ಟಿನಲ್ಲಿ ಮೂಲ ದಾವೆ ನಂ ೬೯—೧೯೪೬ನೇ ವ್ಯವಹರಣೆ ನಡೆದು ಅದರಲ್ಲಾದ ನಿಕಾಲೆಯ ಮೇಲೆ ಅಪೀಲ ನಡೆದದ್ದು ಇರುತ್ತದೆ ಅದಲ್ಲದೆ ಹೊನ್ನಾವರ ಮುಣಸಿಫೋಜನೆಯ ನ್ಯಾಯಾಸನದಲ್ಲಿ ಸದರಿ ಮೂಲ ವ್ಯವಹಾರವನ್ನು ಕುರಿತು ಅರ್ಜಿ ದಾಖಲಾಗಿದ್ದು, ಅದು ಇನ್ನು ಬಾಕಿಯಲ್ಲಿದೆ ಅದ್ದರಿಂದ ಸದರಿ ಸ್ಥಳ ಕ್ರಯಕ್ಕೆ ಪಡಕೊಳ್ಳಬಯಸುವ ಜನರು ಮೊದಲು ನಮ್ಮ ಅಗ್ರಹಕ್ಕಿನ ಬಗ್ಗೆ ಖಾತ್ರಿ ಮಾಡಿ ನೋಡಬೇಕು ಸರಕಾರದವರು ನಿರ್ದಿಷ್ಟ ಪಡಿಸಬಹುದಾದ ಬೆಲೆಗೆ ಈ ಆಸ್ತಿ ಪಡಕೊಳ್ಳಲಿಕ್ಕೆ ನಾವೂ ತಯಾರ ಇದ್ದೇವೆ ಈ ಮಾತು ಎಲ್ಲರೂ ತಿಳಿದಿರಲಿ

ಹೊನ್ನಾವರ, ತಾ. ೧೦—೧೧—೧೯೪೮

E. M. Alvares.

ಜಿಲ್ಲಾ ಸಮಾಚಾರ

ಕುಮಟಾ— [illegible]

ಹೊನ್ನಾವರ— [illegible]

ಮುರ್ಡೇಶ್ವರ— [illegible]

ಬೈಲೂರ— [illegible]

ಕಾರವಾರ— [illegible]

ಅವರ್ಸಾ— [illegible]

ಜಾಹೀರ ಲಿಲಾಂವು.

[illegible]

L. S. Kamat,

[illegible]

Excellent Agar-Batties ! Try Once !!

ಸುಗಂಧದ ಸುಖವನ್ನು ಸವಿಸಿರಿ !

೧ ಮಹಾಪೀರ ಅಗರ ಬತ್ತಿ
೨ ಸುಂದರ ಮೈಸೂರು ಬತ್ತಿ
೩ ಸುರಂಗಿ ಜವಾಜಿ ಬತ್ತಿ

[illegible]

ಚಿತ್ತರಂಜನ ಕಂಪನಿ, ಸಂತೆ-ಪೇಟೆ, ತುಮಕೂರು. (MYSORE)

[illegible]

ಯಾಪಲ್ಲಪುರ— [illegible]

ಮಂಚಿಕೇರಿ— [illegible]

[illegible]

ಗೋಕರ್ಣ— [illegible]

Office of the Area Rationing Authority, K R,
Belgaum, 21st December, 1948

NOTICE

TO ALL OWNERS OF MOTOR VEHICLES IN THE KARNATAK REGION.

Subject: Issue of basic petrol ration for the Jan-Mar 1949 Quarter.

Basic petrol ration for the motor vehicles for the January-March 1949 quarter will be issued at the following centres on the dates and at the places shown against each centre —

Dist	Centre.	Location	Date	o ssue
Karwar	Karwar	Dist Bungalow	26th, & 27th Dec 48.	11-30 a m. to 4-30 p.m
Dharwar.	Hubli	Travellers' Bungalow.	28th, 29th, 30th & 31st Dec 1948	-do-
Bijapur	Bijapur	Inspection, Bungalow	30th & 31st Dec 48	-do-
Belgaum.	Belgaum	A R A s office	28th Dec onwards.	-do-

Petrol ration will be issued, even if tax for the ensuing quarter (Jan-March 1949) has not been paid at the time of delivery of coupons But the coupons shall be returned to this office in full, if tax is not paid by the 15th of January 1949 Extra provincial vehicles will however obtain their ration after payment of tax

Prescribed application forms can be had from each distribution centre or from the office of the **Area** Rationing Authority, Belgaum.

Regarding submission of application for issue of ration, usual procedure should please be followed. Copy of log account in respect of goods vehicles and taxi cabs should be submitted separately for each vehicle, duly signed by the registered owner(s), without fail Log account of the stage carriage services should be submitted duly signed by the Managing Director of the Company or other responsible person, authorised by the Company

Issue of supplementary ration for cars and motor cycles will be made at the head office, Belgaum Applications in form K with registration certificate and copy of log account should be submitted Those who have not submitted the questionnaire forms already called for, should please arrange for submission of the same as otherwise issue may not be made. Questionnaire forms submitted incomplete shall not be entertained

Applications signed by the persons othe than regd owners of M Vs will not be accepted, under any circumstances, as already intimated from time to time For impersonation, this office will not be responsible

D K SUKHTANKAR, Capt
Area Rationing Authority,
Karnatak Region, Belgaum,

SALES TAX NOTICE.

ಮಾರಾಟಗಳ ಮೇಲಿನ ಕರದ ವಿಷಯದ ನೋಟೀಸು.

ಇದರ ಮೂಲಕ ಯಾವತ್ತೂ ವ್ಯಾಪಾರಸ್ಥರ ಮಾಹಿತಿಗೋಸ್ಕರ ಜಾಹೀರು ಮಾಡುವದೇನಂದರೆ, ಈ ಕೆಳಗಿನ ಹಿಂದೀ ಸಂಸ್ಥಾನಗಳು, ಇದರಡಿ ನಿರ್ದಿಷ್ಟ ಮಾಡಲಾದ ತಾರೀಖುಗಳಿಂದ ಮುಂಬಯಿ ಪ್ರಾಂತದೊಳಗೆ ವಿಲೀನವಾಗಿರುತ್ತವೆ ಮತ್ತು ಅದರ ಭಾಗವಾಗಿರುತ್ತವೆ.

೧ **ಸನ್ ೧೯೪೮ನೇ ಇಸವಿಯ ಜಾನೇವಾರಿ ತಿಂಗಳ ೧೯ನೇ ತಾರೀಖಿನಿಂದ:—**

(ಅ) **ಅಹಮ್ಮದಾಬಾದ** ಜಿಲ್ಲೆಯ ಭಾಗವಾಗಿರುವಂಥ ಗೇಡ, ಪ್ರೋಲಾಜಪೂರ, ಹಾಗೂ ಮಾನ್ಸಾಡ ಇಸ್ಟೇಟುಗಳು.

(ಬ) **ಖೇಡಾ** ಜಿಲ್ಲೆಯ ಭಾಗವಾಗಿರುವಂಥ ಕೋಪರಪ್ಪೂರ, ಮಹಿಸಾ, ಪೂಡಾಲ, ಹಾಗೂ ಢಾಸಾ ಇಸ್ಟೇಟುಗಳು.

(ಕ) **ಹೊಸ** ಡಾಂಗಗಳ ಜಿಲ್ಲೆ ಎಂದು ರಚಿಸಲ್ಪಟ್ಟಿರುವಂಥ "ಡಾಂಗಗಳು" ಎಂದು ಕರೆಯಲ್ಪಡುವ ಕ್ಷೇತ್ರವು.

೨ **ಸನ್ ೧೯೪೮ನೇ ಇಸವಿಯ ಜೂನ ತಿಂಗಳ ೧೦ನೇ ತಾರೀಖಿನಿಂದ:—**

(ಅ) **ಖೇಡಾ** ಜಿಲ್ಲೆಯ ಭಾಗವಾಗಿರುವಂಥ ಪಾಂಡು ಮೇವಾಸ ಥಾಣಾ (ಇದರಲ್ಲಿ ಅಂಧ್ಯಾರ, ಪಾಂಡೂ ಮೇವಲಿ, ಢಾರಿ, ರಾಯಿಕಾ, ಡೋಢಾಕಾ, ಗೋಥಡಾ, ಕನೋಡಾ, ಪೋಯಿಛಾ, ಇಟವಾಡ, ವಖ್ತಾಪೂರ, ಮನೋರಲಮಾಲ, ಗೊಟಡಿ, ಮೇರಾ, ವಾಗಿಸುಮೌಡಾ, ಮೋಟಮನೋರಲಿ, ರಾಜಪೂರ, ಜೇಸರ, ಅಮ್ರಾಪೂರ, ಜಮುಬಾಕಸ್ಲಾ, ವಾಗಿನುಮೌಡಾ, ನಾನಿಮನೋಂಲಿ ಹಾಗೂ ನಹಾರಾ ಇವು ಸೇರಿರುತ್ತವೆ) ಮತ್ತು ಉಮೇತ, ಛಾಲಿಯಾರ, ಹಾಗೂ ಸಿಹೋರಾ ತಾಲೂಕುಗಳು, ಇವುಗಳನ್ನೊಳಗೊಂಡ ಕ್ಷೇತ್ರಗಳು.

(ಬ) **ಪಂಚಮಹಾಲುಗಳ** ಜಿಲ್ಲೆಯ ಭಾಗವಾಗಿರುವಂಥ ಸಂಖೇಡ ಮೇವಾಸ (ಇದರಲ್ಲಿ ಸೇರಾ ಅಲ್ವಾಮಾಸಣ, ವೀರಪೂರ, ವಾಸಣ, ಸೇವಡಾ, ಚೋರಾಂಗಳಾ, ವನಮಾಲಾ, ಭಿಲೋದಿಯಾ, ಸಿಂಧಿಯಾಪುರಾ, ಅಂತೊಲಾವತಿ, ನಾನಗಾಮ ಚೂಡೇಶ್ವರ, ಬಿಹೋರಾ, ಬೆಂಗನ, ನಾಲಿಯಾ, ಮಥಿಯಾ, ವಿರಂಪುರ, ಹಾಗೂ ದೂಧಪೂರ, ಇವು ಸೇರಿರುತ್ತವೆ.) ಇದನ್ನು ಮತ್ತು ಅಗಾರ ಗಡಬೋರಿಯಾದ, ಮಾಂಡವಾ, ನಸವಾಡಿ, ಪಲಾಸಣಿ, ಶಾನೋರ, ಉಛಾಡ ಹಾಗೂ ವಜೀರಿಯ ಇವುಗಳ ಅರ್ಧ ಹುಕುಮತಿನ ಸಂಸ್ಥಾನಗಳನ್ನು ಒಳಗೊಂಡ ಕ್ಷೇತ್ರಗಳು.

(ಕ) ಅಹಮ್ಮದಾಬಾದ ಜಿಲ್ಲೆಯ ವಿರಮಗಾಂವ ತಾಲೂಕಿನ ಭಾಗವಾಗಿರುವಂಥ ಪಾಲಜ ತಾಲೂಕು ಹಾಗೂ ಕಟೋಸಣ, ಥಾಣಾ, (ಇದರಲ್ಲಿ ಮಾಗುನಾ ದೇಲೋಲಿ, ರಾಮಪುರಾ, ತೇಜಪುರಾ, ವೀರಸೋದ, ದಲಸಪೂರಾ, ರಾಣಿಪೂರ, ಮೋಹಮದಪೂರ, ಇಜಪುರಾ (ಜೇರಾಜಿನಾ) ಇಜಪೂರಾ (ಬಾರೋಟನ) ಇವು ಸೇರಿರುತ್ತವೆ) ಇವುಗಳನ್ನು ಒಳಗೊಂಡ ಕ್ಷೇತ್ರಗಳು.

(ಡ) ಬನಾಸಕಾಂಠಾ, ಜಿಲ್ಲೆಯು (ಪಾಲನಪೂರ ಸಂಸ್ಥಾನ ರಾಧನಪೂರ ಸಂಸ್ಥಾನ, ವಾವೋ, ಹಾಗೂ ಥರಾದ ಇವುಗಳ ಹೊರ್ತಾಗಿ),

(ಇ) ಮಹಿಕಾಂಠಾ ಜಿಲ್ಲೆಯು (ಇದರ ಸಂಸ್ಥಾನ ವಿಜಯನಗರ ಸಂಸ್ಥಾನ, ಆಂಬಲಿಯಾರ, ಕತೋಲ, ಮಾಲಪೂರ, ಮೋಹನಪೂರ, ರಣಾಸಣ, ಸುದಾಸಣಾ, ಹಾಗೂ ವಾಲಾಸಣಾ ಇವುಗಳ ಹೊರ್ತಾಗಿ)

ಈ ಸಂಸ್ಥಾನಗಳಲ್ಲಿಯ ವ್ಯಾಪಾರಸ್ಥರು ತಮ್ಮ ಕ್ಷೇತ್ರವು ಮುಂಬಯಿ ಪ್ರಾಂತದೊಳಗೆ ವಿಲೀನವಾದ ತಾರೀಖಿನಿಂದ ಮುಂಬಯಿ ಮಾರಾಟಗಳ ಮೇಲಿನ ಕರದ ವಿಷಯದ ಆ್ಯಕ್ಟಿಗೆ ಒಳಪಟ್ಟಿದ್ದಾರೆ

೩ ಈ ಕೆಳಗಿನ ಹಿಂದೀ ಸಂಸ್ಥಾನಗಳು ಮುಂಬಯಿ ಪ್ರಾಂತದೊಳಗೆ ಸೇರಿಸಿಕೊಳ್ಳಲ್ಪಟ್ಟಿರುತ್ತವೆ. ಮತ್ತು ಈ ಸಂಸ್ಥಾನಗಳಲ್ಲಿಯ ವ್ಯಾಪಾರಸ್ಥರು ಸನ್ ೧೯೪೮ನೇ ಇಸವಿಯ ಆಕ್ಟೋಬರ ತಿಂಗಳ ೧ನೇ ತಾರೀಖಿನಿಂದ ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆ್ಯಕ್ಟಿನನ್ವಯ ಕರವನ್ನು ಕೊಡಲು ಪಾತ್ರರಾಗಿದ್ದಾರೆ.

೧

ದಕ್ಷಿಣ ಸಂಸ್ಥಾನಗಳು

ಅಕ್ಕಲಕೋಟ	ಔಂಧ	ಭೋರ
ಜಮಖಂಡಿ	ಜತ್ತ	ಕುರುಂದವಾಡ (ಹಿರೀ)
ಕುರುಂದವಾಡ (ಕಿರಿ)	ಮಿರಜ (ಹಿರೀ)	ಮಿರಜ (ಕಿರಿ)
ಮುಧೋಳ	ಫಲ್ಟಣ	ರಾಮದುರ್ಗ
ಸಾಂಗಲಿ	ಸವಣೂರ	ಸಾವಂತವಾಡಿ ವಾಡಿ ಜಹಾಗೀರ

೨

ಜಂಜೀರಾ ಸಂಸ್ಥಾನ

೩

ಗುಜರಾಥ ಸಂಸ್ಥಾನಗಳು

ಧರಮಪೂರ	ಬಾಲಾಸಿನೋರ	ಛೋಟಾ ಉದೇಪೂರ
ಲುಣಾವಾಡಾ	ರಾಜಪಿಪ್ಪಳಾ (ಸೇಗಬಾರಾ ಸಹಿತ)	
ಬಾರಿಯಾ	ವಾಂಸಡಾ	ಸಂತ
ಖಂಬಾಯತ	ಇಡರ	ಜವ್ಹಾರ
ವಿಜಯನಗರ	ಪಟ್ಟಣ	ರಾಧನಪೂರ
ಪಾಲನಪೂರ	ಜಂಬುಘೋಡಾ	ಸುಂಗಣಾ
ಥರಾದ	ಥಾದೆವಾರ	ಮೋಹನಪೂರ
ಮಾಲಪೂರ	ಮಾನಸಾ	ವಾವೋ
ಖಡಾಲ	ಧರಾದ	ಘೋಡಾಸರ
ವಾಸಣಾ	ಇಲ್ಲೋಲಣ	ಸುದಾಸಣಾ
ವಾಲಾಸಣಾ	ರಣಾಸಣ	ಮಗೋಡಾ
ಆಂಬಲಿಯಾರಾ	ಪುನಾದ್ರಾ	ಕತ್ತೋಲ
ಸಂಜೇಲಿ		

೪ ಅದ್ದರಿಂದ ಯಾರ ರೋಕ ಉತ್ಪನ್ನವು ತಾರೀಖು ೧—೪—೧೯೪೭ರಿಂದ ತಾರೀಖು ೩೧—೩—೧೯೪೮ರ ವರೆಗಿನ ವರ್ಷದಲ್ಲಿ ಅಥವಾ ೧—೪—೧೯೪೮ರಿಂದ ೩೧—೫—೧೯೪೮ರ ವರೆಗಿನ ಅಥವಾ ತದನಂತರದ ಯಾವದೇ ತಿಂಗಳ ಕೊನೆಯ ತಾರೀಖಿನ ವರೆಗಿನ ಅವಧಿಯಲ್ಲಿ ನಿರ್ದಿಷ್ಟಪಡಿಸಲಾದ ಮರ್ಯಾದೆಗಳಿಗೆ ಮೀರಿರುವದೋ ಅಂಥ ಯಾರಾದರೂ ವ್ಯಾಪಾರಸ್ಥರು ಮಾರಾಟಗಳ ಮೇಲಿನ ಕರವನ್ನು ಕೊಡಲು ಪಾತ್ರರಾಗಿರುತ್ತಾರೆ ಮತ್ತು ನೋಂದಿಸಿಕೊಳ್ಳಲು ಬದ್ಧರಿರುತ್ತಾರೆ.

ನಿರ್ದಿಷ್ಟಪಡಿಸಲಾದ ಮರ್ಯಾದೆಗಳು ಯಾವವೆಂದರೆ:—

(ಅ) ಹೊರಗಿನ ಸ್ಥಳಗಳಿಂದ ಮುಂಬಯಿ ಪ್ರಾಂತದ ಹಾಗೂ ಸದರೀ ಸಂಸ್ಥಾನಗಳ ಕ್ಷೇತ್ರದೊಳಗೆ ಸರಕುಗಳನ್ನು ತರುವಂಥ ವ್ಯಾಪಾರಸ್ಥನ ಬಾಬತಿನಲ್ಲಿ (ಆದರೆ ಇಂಥ ಸರಕುಗಳ ಉತ್ಪನ್ನವು ೧೦೦೦ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ)...೧೦,೦೦೦

(ಬ) ಸರಕುಗಳನ್ನು ತಯಾರು ಮಾಡುವವನ ಅಥವಾ ತಯಾರ ಮಾಡುವ ಕ್ರಿಯೆಯನ್ನು ಮಾಡುವವನ ಬಾಬತಿನಲ್ಲಿ... ೧೦,೦೦೦

(ಕ) ಇತರ ಯಾವನೇ ವ್ಯಾಪಾರಸ್ಥನ ಬಾಬತಿನಲ್ಲಿ... ೩೦,೦೦೦

ಇನ್ನೂ ವರೆಗೆ ನೋಂದಿಸಿಕೊಳ್ಳಲ್ಪಡದಿದ್ದಂಥ ವಿಲೀನವಾದ ಹಾಗೂ ಸೇರಿಸಿಕೊಂಡ ಸಂಸ್ಥಾನಗಳಲ್ಲಿಯ ಇಂಥ ಯಾವತ್ತೂ ವ್ಯಾಪಾರಸ್ಥರಿಗೆ ತಮ್ಮ ಕ್ಷೇತ್ರದ ಸೇಲ್ಸ ಟ್ಯಾಕ್ಸ ಆಫೀಸರನ ಕಡೆಗೆ ೨ನೇ ನಮೂನೆಯಲ್ಲಿ ನೋಂದಣಿ ಗೋಸ್ಕರ ಕೂಡಲೆ ಹಾಗೂ ಯಾವದೇ ಬಾಬತಿನಲ್ಲಿ ತಾರೀಖು ೩೧—೧೨—೪೮ಕ್ಕಿಂತ ತಡವಾಗದ ಹಾಗೆ ಅರ್ಜಿಯನ್ನು ಮಾಡಿಕೊಳ್ಳಲು ಸಲಹೆ ಕೊಡಲಾಗಿದೆ ಈ ತಾರೀಖಿನ ಒಳಗಾಗಿ ಹಾಗೆ ಮಾಡಲು ಯಾವನಾದರೂ ತಪ್ಪಿದರೆ ಅವನ ಮೇಲೆ ಕಾಯಿದೆಯ ಪ್ರಕಾರ ಅವಶ್ಯವಿರುವ ಕ್ರಮಗಳನ್ನು ಕೈಕೊಳ್ಳುವ ಬಗ್ಗೆ ವಿಚಾರ ಮಾಡಲಾಗುವದು

ಕರವನ್ನು ಕೊಡಲು ಪಾತ್ರನಿದ್ದಾಗ್ಯೂ ಯಾವನೇ ವ್ಯಾಪಾರಸ್ಥನು ನೋಂದಿಸಿಕೊಳ್ಳಲು ತಪ್ಪಿದರೆ ಅವನು ತನ್ನ ವ್ಯವಹಾರವನ್ನು ಕಾಯಿದೇಶೀರ ರೀತಿಯಿಂದ ನಡೆಸಲಾರನು. ಮತ್ತು (೧) ಅವನು ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆ್ಯಕ್ಟಿನ ೨೪ (೧) (ಅ) ಕಲಮಿನನ್ವಯ ಖಟ್ಲೆ ಮಾಡಲು ಪಾತ್ರನಾಗುತ್ತಾನೆ. (೨) ಅವನು ನೋಂದಿಸಿಕೊಂಡಿರದಿದ್ದಾಗ್ಯೂ ಅವನು ತನ್ನ ಯಾವತ್ತೂ ಮಾರಾಟಗಳ ಮೇಲಿನ ಕರವನ್ನು ಕೊಡಲು ಪಾತ್ರನಾಗಿ ಉಳಿಯುವನು. ಮತ್ತು ಅವನು ಇತರ ವ್ಯಾಪಾರಸ್ಥನ ಕಡೆಯಿಂದ ಕರ ಮಾಫಿಯಾಗಿ ಸರಕುಗಳನ್ನು ಸಹ ಪಡೆಯಲಾರನು; ಮತ್ತು ಅವನು ಇದಲ್ಲದೆ (೩) ನೋಂದಿಸಿಕೊಳ್ಳುವವರೆಗೆ ಅವನಿಂದ ಸಲ್ಲತಕ್ಕ ಕರದ ೧೪ ಪಟ್ಟಿಗೆ ಸರಿಯಾಗುವ ದಂಡವನ್ನು ಕೊಡಲು ಪಾತ್ರನಾಗುವನು.

ವ್ಹಿ. ಎಲ್. ಗಿಡವಾನಿ,
ಡೆಪ್ಯುಟಿ ಕಮಿಶನರ ಆಫ್ ಸೇಲ್ಸ ಟ್ಯಾಕ್ಸ,
ಮುಂಬಯಿ ಪ್ರಾಂತ

ಮುಂಬಯಿ,
ತಾ. ೭-೧೨-೪೮

ಪತ್ರಿಕಾ—ಪ್ರಕಟಣೆ

ನಿಯಂತ್ರಣ ಹೋಗುವದೆಂಬ ಸುದ್ದಿ ಸುಳ್ಳು ಉಳಿತ ಯಾದ ಭತ್ತ ಸರಕಾರಕ್ಕೆ ಮಾರಿರಿ

ಕಾನಡಾ ಜಿಲ್ಲೆಯ ಭತ್ತ ಬೆಳೆಯುವ ಪ್ರದೇಶದಲ್ಲಿ [illegible]

೨ ಭತ್ತ ಬೆಳೆಯುವ ಪ್ರದೇಶಗಳಲ್ಲಿ ಭತ್ತದ ಬೆಳೆಯ [illegible]

[illegible] ಪ್ರಯೋಜನಕಾರಿಯಾಗಿದೆ

೩ ಭತ್ತ ಬೆಳೆಯುವ ಪ್ರದೇಶ [illegible] (requisitioned) [illegible]

[illegible] (ಸರಕಾರ ಪ್ರಕಟಣೆ)

ಜಾಹೀರ ನೋಟೀಸು

ತಾ ೧೬-೧೨-೧೯೪೮ಕ್ಕೆ [illegible] 941102ನೇ ನಂಬರದ ೧೦೦ ರೂಪಾಯಿಗಳ ಇಡೀ ನೋಟು [illegible] ಯಾರಾದರೂ ಪತ್ತೆ ಮಾಡಿಕೊಟ್ಟರೆ ಅವರಿಗೆ ರೂ ೧೦ ಇನಾಮು ಕೊಡಲಾಗುವದು.

ಸುಬ್ರಾಯ ತಿಮ್ಮಣ್ಣ ಪಂಡಿತ, ಮಾಲಗೆಳ್ಳಿ,
ತಾಲೂಕ ಕುಮಟಾ, ತಾ ೨೪-೧೨-೪೮

ಜಾಹೀರ ನೋಟೀಸು.

ಈರು ಗೋಳಿ ಗೌಡಾ, ಹಾಲಕ್ಕಿ ಸಾ॥ ಉಳ್ಳೂರ [illegible] ಈ ಮೂಲಕ ಜಾಹೀರ ಮಾಡುವದೇನಂದರೆ —

ನನ್ನ ಹೆಂಡತಿ ನಾಗಮ್ಮಾ ಎಂಬವಳು [illegible] ವರ್ಷಗಳ ಹಿಂದೆಯೇ ನನ್ನ ಮನೆ ಬಿಟ್ಟು ಅಂದಿನಿಂದ [illegible] ಕುಮಟಾ [illegible] ಇರುತ್ತಾಳೆ [illegible] ವರ್ಷಗಳಲ್ಲಿ ನನಗೆ ಯಾ ನನ್ನ ಮನೆಯವರಿಗೆ ಮತ್ತು ಅವಳಿಗೆ ಯಾವದೇ [illegible] ಸಂಬಂಧ ಇಲ್ಲವೇ ಮಾತಾಡಿ [illegible] ಗರ್ಭಿಣಿ ಇದ್ದು ಅವಳಿಗೆ [illegible] ಹುಟ್ಟುವ ಮಕ್ಕಳಿಗೆ ಅನ್ನ ನನ್ನ ಕುಟುಂಬದ ಯಾವದೇ ಹಕ್ಕು-ಸಂಬಂಧ ಯಾ ಸ್ಥಾನ ಸಿಗುವದಿಲ್ಲ [illegible]

ಕುಮಟಾ ಉಳ್ಳೂರ,
ತಾ ೨೫-೧೨-೪೮ ಈರು ಗೋಳಿ ಗೌಡಾ

ಜಾಹೀರ ನೋಟೀಸು.

ಕಾನಡಾ ಜಿಲ್ಲಾ ಕೋರ್ಟಿನಿಂದ—

ಮುಂಬಯಿ ಪ್ರಾಂತದ ಋಣ-ವಿಮೋಚನ ಕಾಯದೆ [illegible] (Bombay Agricultural Debtors Relief Act) ದಾಖಲಾಗಿದ್ದ ಎಲ್ಲ ಅರ್ಜಿಗಳಲ್ಲಿ [illegible] ನೋಟೀಸು [illegible] ಕೋರ್ಟ ಫೀ ಸ್ಟ್ಯಾಂಪನ್ನು [illegible] ಮುಂಬಯಿಯ [illegible] ಹೈಕೋರ್ಟಿನವರು ಒಂದು ಆಜ್ಞೆ ಹೊರಡಿಸಿದ್ದಾರೆ

ಅದ್ದರಿಂದ ಈ ಮೂಲಕ ಸಂಬಂಧಪಟ್ಟ ಯಾವತ್ತು ಜನರಿಗೆ ತಿಳಿಸುವದೇನಂದರೆ ೧೯೪೯ನೇ ಇಸವಿ [illegible] ಕೋರ್ಟಿನವರು ವಿಧಿಸಿದ್ದ ದಿನಾಂಕದೊಳಗಾಗಿ ಸಂಬಂಧಪಟ್ಟವರು ಆಯಾ ಕೋರ್ಟಿಗೆ ಹೋಗಿ, ಕೋರ್ಟು [illegible] ತಪ್ಪಿದಲ್ಲಿ, ಕೋರ್ಟಿನ [illegible] ದಿನ [illegible] ಮಾಡಲಾಗುವದು

ಕಾನಡಾ ಜಿಲ್ಲಾ ಕೋರ್ಟ
ಕಾರವಾರ,
ತಾ ೨೦-೧೨-೧೯೪೮

V V Bhat
Clerk of the Court

SALES TAX NOTICE.

ವ್ಯಾಪಾರಗಳ ಮೇಲಿನ ಕರದ ವಿಷಯದ ನೋಟೀಸು.

ಮುಂಬಯಿ ಪ್ರಾಂತದಲ್ಲಿಯ ಹಾಗೂ ಸಂಮಿಲಿತ ಸಂಸ್ಥಾನಗಳಲ್ಲಿಯ ವ್ಯವಹಾರದ ಯಾವ ತತ್ರ ಸ್ಥಳಗಳ ಬಗ್ಗೆ ಯಾವನೇ ನೋಂದಿಸಲ್ಪಡದಿದ್ದ ವ್ಯಾಪಾರಸ್ಥನ ರೋಖ ಉತ್ಪನ್ನವು ಸನ್ ೧೯೪೮ನೇ ಇಸವಿಯ ಏಪ್ರಿಲ ತಿಂಗಳ ೧ನೇ ತಾರೀಖಿನಿಂದ ಸನ್ ೧೯೪೮ನೇ ಇಸವಿಯ ನವಂಬರ ತಿಂಗಳ ೩೦ನೇ ತಾರೀಖಿನ ವರೆಗಿನ ಅವಧಿಯಲ್ಲಿ—

(೧) ಆಮದು ಮಾಡುವವನ ತಯಾರುಮಾಡುವವನ ಅಥವಾ ತಯಾರು ಮಾಡುವ ಕೃತಿಯನ್ನು ಮಾಡುವವನ ಬಾಬತಿನಲ್ಲಿ ೧೦,೦೦೦ ರೂಗಳಿಗೆ—

ಅಥವಾ

(೨) ಇತರ ಯಾವನೇ ವ್ಯಾಪಾರಸ್ಥನ ಬಾಬತಿನಲ್ಲಿ ೩೦,೦೦೦ ರೂಪಾಯಿಗಳಿಗೆ—

ಮೀರಿದರೆ ಅವನು ಸನ್ ೧೯೪೯ನೇ ಇಸವಿಯ ಫೆಬ್ರುವರಿ ತಿಂಗಳ ೧ನೇ ತಾರೀಖಿನಿಂದ ತನ್ನ ವ್ಯಾಪಾರಗಳ ಮೇಲೆ ವ್ಯಾಪಾರಗಳ ಕರವನ್ನು ಕೊಡಲು ಪಾತ್ರನಾಗುವನು ಮತ್ತು ಅವನು ಸನ್ ೧೯೪೮ನೇ ಇಸವಿಯ ಡಿಸೆಂಬರ ತಿಂಗಳ ೩೦ನೇ ತಾರೀಖಿನ ಮುಂಚೆ ತನ್ನ ವಾರ್ಡಿನ/ಪಟ್ಟಣದ ಜಿಲ್ಹೆಯ ಸೇಲ್ಸ ಟ್ಯಾಕ್ಸ ಆಫಿಸರ ಕಡೆಗೆ ತನ್ನ ನಾವನೋಂದಣಿಯ ಸಲುವಾಗಿ ಅರ್ಜಿಯನ್ನು ಮಾಡತಕ್ಕದ್ದು

ಯಾವನ ರೋಖ ಉತ್ಪನ್ನವು ಯಾವದೇ ವರ್ಷದಲ್ಲಿ ೧೦,೦೦೦ ರೂಪಾಯಿಗಳಿಗೆ ಮೀರಿರುವದೋ ಅಥವಾ ಮೀರಿರುವ ಸಂಭವವಿರುವದೋ ಅಂಥ ಯಾವನೇ ವ್ಯಾಪಾರಸ್ಥನು ಸಹ ಇಚ್ಛಿತವಾಗಿ ನೋಂದಿಸಿಕೊಳ್ಳಬಹುದು

ತಾರೀಖು ೧—೧೨—೧೯೪೮

ಸಹಿ ಎಲ್. ಗಿಡವಾನಿ,
ಡೆಪ್ಯುಟಿ ಕಮಿಶನರ ಆಫ ಸೇಲ್ಸ ಟ್ಯಾಕ್ಸ, ಮುಂಬಯಿ ಪ್ರಾಂತ

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯ ಶಿವ ತಮ್ಮ ಸ್ವಂತ "ಕಾನಡಾ ಪ್ರೆಸ" ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಈ ಮುಖೆಯಲ್ಲಿ
ವರ್ಷಕ್ಕೆ ರೂ ೨-೪-೦
ಬ್ರಹ್ಮದೇಶಕ್ಕೆ ೩-೧-೦
ಬಿಡಿ ಸಂಚಿಕೆಗೆ ೦-೧-೦
ವರ್ಗಣಿಯು ಮುಂದಾಗಿ ಬರತಕ್ಕದ್ದು

Reg. No. B. 1270 Monday, 3-1-1949.

ಕಾನಡಾವೃತ್ತ

ವರ್ಷ ೩೧] THE KANARA NEWS [ಸಂಚಿಕೆ ೨೬

ಕುಮಟಾ - ಸೋಮವಾರ, ತಾ ೩-೧-೧೯೪೯

ಜಾಹೀರಾತುಗಳ ದರ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಅಕ್ಷರದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಪತ್ರದ್ವಾರಾ
ತಿಳಿಸಲಾಗುವದು.

ವಿವಿಧ ವಿಷಯಗಳು

ಜಯಪುರದ ರಾಷ್ಟ್ರೀಯ ಸಭೆಯ ಅಧಿವೇಶನದ ಸಮಯ ಚರ್ಚಾ ಸಭೆಯಲ್ಲಿ ರಾಷ್ಟ್ರೀಯ ಸಭೆಯ ಮುಖ್ಯವಾಗಿ ಕಾಂಗ್ರೆಸ ಪಕ್ಷದ ಎಸಾಂಬ್ಲಿ-ಕೌನ್ಸಿಲ ಸಭಾಸದರ ಮತ್ತು ಪ್ರಧಾನರ ನಡಾವಳಿಯ ಸಂಬಂಧವಲ್ಲಿ ತೀವ್ರ ಚರ್ಚೆ ಜರುಗಿತು. ದೇಶದ ಆಳಿಕೆಯಲ್ಲಿ ಕಂಡು ಬರುವ ಬಹಳಷ್ಟು ಭ್ರಷ್ಟಾಚಾರಗಳಿಗೆ ಕಾಂಗ್ರೆಸ ಪಕ್ಷದ ಪ್ರಮುಖರೇ ಕಾರಣರೆಂದೂ, ಅವರು ತಮ್ಮ ನಡಾವಳಿಯನ್ನು ಸುಧಾರಿಸಿಕೊಂಡು ಇತರರಿಗೆ ಮಾದರಿ ಹಾಕಿಕೊಡಬೇಕೆಂದೂ ಸಭೆಯಲ್ಲಿ ಕೆಲವು ಪ್ರತಿನಿಧಿಗಳು ಸಿಟ್ಟಿನಿಂದ ಉಗ್ಗರಿಸಿದರು. ಮಂಗಳವಾರ (ತಾ ?) ಸರ್ವೋದಯ ಪ್ರದರ್ಶನವನ್ನು ತೆರೆಯುವಾಗ ಶ್ರೀ|| ವಿನೋಬಾ ಭಾವೆಯವರು, ಲೋಕಸೇವೆಯ ಸೋಗು ಹಾಕಿಕೊಂಡು ರಾಷ್ಟ್ರೀಯ ಸಭೆಯವರೆಂದು ಮೆರೆಯುವವರನ್ನು ಈ ರೀತಿ ನಿಷೇಧಿಸಿದ್ದಾರೆ — "Congressmen today are selling their old sacrifices There is no urge for any kind of sacrifice among them There is no place for truth in the Congress today Scramble for power and jealousy are being practised among them to-day" (ರಾಷ್ಟ್ರೀಯ ಸಭೆಯವರು ತಮ್ಮ ಹಿಂದಿನ ತ್ಯಾಗಗಳನ್ನು ಮಾರಾಟಕ್ಕೆ ತೆಗೆದಿದ್ದಾರೆ ಅವರಲ್ಲಿ ಯಾವದೇ ಬಗೆಯ ತ್ಯಾಗದ ಪ್ರವೃತ್ತಿ ಇಂದು ಕಂಡ ಬರುವದಿಲ್ಲ ರಾಷ್ಟ್ರೀಯ ಸಭೆಯಲ್ಲಿ ಸದ್ಯಕ್ಕೆ ಸತ್ಯಕ್ಕೆ ಅವಕಾಶವಿಲ್ಲ ಅಧಿಕಾರ-ಪ್ರಾಪ್ತಿಗಾಗಿ ಜಗ್ಗಾಟ ಮತ್ತು ಮತ್ಸರ ಈ ದುರ್ಗುಣಗಳು ಅವರಲ್ಲಿ ಉದ್ಭೂತವಾಗಿವೆ) ಬಿಹಾರದ ಶ್ರೀ|| ಮಹೇಶಪ್ರಸಾದ ಸಿಂಹ ಎಂಬ ಕಾಂಗ್ರೆಸ ಪಕ್ಷದ ಸಭಾಸದರು ನಡಿಸಿದ ಅತಿಕ್ರಮಗಳು ಪಾಟಣಾ ಹಾಯ-ಕೋರ್ಟಿನಲ್ಲಿ ಬಯಲಿಗೆ ಬಂದಿವೆ ಮುಝಫರಪುರದವರೊಬ್ಬರು ಸರಕಾರಿ ಅಧಿಕಾರಿಗೆ ಲಂಚ ಕೊಡುವಾಗ ಸಿಕ್ಕಿ ಬಿದ್ದರು ಅವರ ಮೇಲೆ ಖಟ್ಲೆಯಾಯಿತು ಆಗ ಶ್ರೀ|| ಸಿಂಹರವರು ಜಿಲ್ಹಾಧಿಪತಿಗಳಿಗೆ ಒಂದು ಕಾಗದ ಬರೆದು, ಸದರಿ ಖಟ್ಲೆಯನ್ನು ಹಿಂತೆಗೆದುಕೊಳ್ಳಲು ಹುಕುಮು ಮಾಡಿಸಿದರು ಮುಂದೆ ಪ್ರಾಂತಿಕ ಸರಕಾರದ ಆಜ್ಞೆಯಂತೆ ಖಟ್ಲೆ ಪುನಃ ಪ್ರಾರಂಭವಾಯಿತು ಆಗ ಶ್ರೀ|| ಸಿಂಹರು ಖಟ್ಲೆ ವಿಚಾರ ಮಾಡುತ್ತಿದ್ದ ಮೆಜಿಸ್ಟ್ರೇಟರಿಗೆ ಪತ್ರ ಬರೆದು ಸದರಿ ಖಟ್ಲೆಯನ್ನು ತಿರಸ್ಕರಿಸಿಕೊಂಡರು ಈ ಪ್ರಕಾರ ನ್ಯಾಯವಿಚಾರದ ಕ್ರಮದಲ್ಲಿ ಶ್ರೀ|| ಸಿಂಹರು ಕೈಹಾಕಿ ತೊಡಕುಗಳನ್ನುಂಟು ಮಾಡಿದುದಕ್ಕಾಗಿ, ಪಾಟಣಾ ಹಾಯಕೋರ್ಟಿನಲ್ಲಿ ಪ್ರಕರಣ ನಡೆದಿದೆ ಶ್ರೀ|| ಮಹೇಶಪ್ರಸಾದ ಸಿಂಹರವರು ಬರೆದ ಪತ್ರಗಳನ್ನು ಹಾಜರಪಡಿಸಬೇಕಾಗಿ ಜಿಲ್ಹಾಧಿಪತಿಗಳಿಗೂ ಖಟ್ಲೆ ವಿಚಾರ ಬಿಟ್ಟುಬಿಟ್ಟ ಮೆಜಿಸ್ಟ್ರೇಟರಿಗೂ ನ್ಯಾಯಮೂರ್ತಿಗಳು ಹುಕುಮು ಮಾಡಿದ್ದಾರೆ ನಮ್ಮ ಮುಂಬಯಿ ಸರಕಾರದ ಮಂತ್ರಿಗಳೂ ಇತ್ತೀಚಿನ ಮಂತ್ರಿಗಳ ಸಭಾಸದರೂ ಹೆಚ್ಚು ಕಡಿಮೆ ಇದೇ ರೀತಿ ವರ್ತಿಸತೊಡಗಿದ ಉದಾಹರಣೆ ಬಯಲಿಗೆ ಬಂದಿದೆ ಅಂಕೋಲಾ ತಾಲೂಕಿನ ಬೇಲೆಕೇರಿಯ ಬಿ. ಪಿ. ಜೋಶಿಯವರ ಮೇಲೆ ನಡೆದ ಸಾಂಡಗಾಯಿಯ ಪ್ರಕರಣದಲ್ಲಿ ಸಾಕ್ಷಿ ಕೊಟ್ಟ, ಅಂಕೋಲಾ ಕಾಂಗ್ರೆಸ ಪ್ರಮುಖರ ವಿರುದ್ಧ ಪಟ್ಟಿಯಲ್ಲಿ ಹೊರಿಸಿದ್ದ ಹಲವು ದುಸ್ಸಂಗತಿಗಳನ್ನು ಅನುಲಕ್ಷಿಸಿ ಅವರ ಸಾಕ್ಷಿಯ ಬೆಲೆ ನಿರ್ಣಯಿಸುವಾಗ ಮೆಜಿಸ್ಟ್ರೇಟರು ಮಾಡಿದ ಟೀಕೆ ಹಿಂದೆ 'ವೃತ್ತ'ದಲ್ಲಿ ಪ್ರಕಟವಾಗಿದೆ ಆ ಟೀಕೆಯನ್ನು ಆಕ್ಷೇಪಿಸಿ ನಮ್ಮ ಜಿಲ್ಲೆಯ ಓರ್ವ ಎಸೆಂಬ್ಲಿ ಸಭಾಸದರು ಸದರಿ ಮೆಜಿಸ್ಟ್ರೇಟರ ವಿರುದ್ಧ ಮಂತ್ರಿಗಳಿಗೆ ಅರ್ಜಿ ಮಾಡಿದ್ದಾರೆಂದೂ ಮಂತ್ರಿಗಳು ತಮ್ಮ ಅಧಿಕಾರವನ್ನು ಚಲಾಯಿಸಿ, ಆ ತೀರ್ಪಿನ ಕಾಗದಪತ್ರ ಬದಲಿಸುವಂತೆ ಪ್ರಕರಣ ಕಳಿಸಿಕೊಡಲು ಹುಕುಮು ಮಾಡಿಸಿದ್ದಾರೆಂದೂ ತಿಳಿಯುತ್ತದೆ ಮೆಜಿಸ್ಟ್ರೇಟರ ತೀರ್ಪಿನ ವಿರುದ್ಧ ಸೆಶನ್ಸ ಕೋರ್ಟಿನಲ್ಲಿ ಸ್ಪೆಶಲ್ ಅಪೀಲು ನಡದಿದೆ ಆ ಕೋರ್ಟಿನ ನಿರ್ಣಯದ ವಿರುದ್ಧ ಹಾಯಕೋರ್ಟಿಗೂ ಅಪೀಲು ಹೋಗುವ ಸಂಭವವುಂಟು ಈ ಕೋರ್ಟುಗಳಲ್ಲಿ ಆಕ್ಷೇಪಕರಿಗೆ ನ್ಯಾಯ ದೊರಕಿಸಲು ರಾಜಮಾನ್ಯ ಮಾರ್ಗವಿರುವಾಗ ಪ್ರಮುಖ ಕಾಂಗ್ರೆಸ್ಸಿಗರೆನಿಸಿಕೊಳ್ಳುವ ಮಹಾನುಭಾವರು ಅಡ್ಡ ಮಾರ್ಗ ಹಿಡಿಯುವದೂ ಅಂಥ ಕ್ರಮಗಳ ಪ್ರಸಾರವನ್ನು ವಿಚಾರಿಸದೆ ಮಂತ್ರಿಗಳು ಹುಕುಮುಗಳನ್ನು ಮಾಡುವದೂ ಗರ್ಹಣೀಯವಾದದ್ದು ಇಂತಹ ಪ್ರಸಂಗಗಳಿಂದ ಸ್ಥಳಿಕ ಅಧಿಕಾರಿಗಳಿಗೆ ದಕ್ಷತೆಯಿಂದ ಕಾರ್ಯ ಮಾಡಲು ಉತ್ಸಾಹ ಉಳಿಯದು ಕಾಂಗ್ರೆಸ ವೇಷ ಹಾಕಿಕೊಂಡ ಪುಂಡರಿಗೂ ಚೋರ ಪೋಕರಿಗೂ ಲೋಕಸಂಕಟವನ್ನು ನಿರ್ಮಿಸಲು ಮಾತ್ರ ತುಂಬಾ ಅವಕಾಶ ದೊರೆಯುತ್ತಿದೆ ಮಂತ್ರಿಗಳು ತಮ್ಮ ಅಧಿಕಾರಸ್ಥಾನದ ಹೊಣೆಯನ್ನು ಗ್ರಹಿಸಬೇಕು ಕಾಂಗ್ರೆಸ ಸಂಸ್ಥೆಗಳಲ್ಲಿ ಆಶ್ರಯ ಹೊಂದಿದ ಪೋಕರಿಗಳನ್ನು ಕಂಡುಹಿಡಿದು, ಅವರಿಗೆ ತಕ್ಕದ್ದಾದ ಸ್ಥಾನ ಕೊಟ್ಟು, ತಾವು ವ್ಯವಹಾರ-ಚತುರರೆಂದು ಬಹುಜನ ಸಮಾಜಕ್ಕೆ ಮನಗಾಣಿಸಿ ಕೊಡಬೇಕು ಮಹಾತ್ಮರ ಶರಣಪದಿಯಲ್ಲಿ ತಯಾರಾದ ಮತ್ತು ರಾಷ್ಟ್ರೀಯ ಸಭೆಯ ಬಗ್ಗೆ ನಿತಾಂತ ಅಭಿಮಾನ ತಳೆಯುತ್ತಿರುವ ಶ್ರೀ|| ಭಾವೆಯವರಂತಹ ಮಹಾಸಾಧುಗಳು ರಾಷ್ಟ್ರೀಯ ಸಭೆಯವರಲ್ಲಿ ತೋರಿಸಿಕೊಟ್ಟ ದೋಷಗಳನ್ನು ಪರಿಹರಿಸಲು ರಾಷ್ಟ್ರೀಯ ಸಭೆಯು ನೇಮಿಸಿದ ರಾಜದಂಡ ನಡಿಸುವ ರಾಜ್ಯಕರ್ತರು ಮುಂದಾಗಿ ತಮ್ಮ ನಡಾವಳಿಯನ್ನು ಸುಧಾರಿಸಿಕೊಳ್ಳದಿದ್ದರೆ ಲೋಕರಾಜ್ಯದಲ್ಲಿ ಲೋಕಸಭೆ ? ನ್ಯಾಯಾಸನಗಳಾದರೂ ಇಂಥ ಉಪಟಳಗಳಿಗೆ ಸಿಕ್ಕು ಪಾರಾಗದು ನ್ಯಾಯಾಸನಗಳು ಲೋಕರಾಜ್ಯದ ಆಧಾರಸ್ತಂಭಗಳೆಂದು ಎಷ್ಟೋ ? ಈ ವಿಷಯಕ್ಕೆ ತಕ್ಕಂತೆ ಧೈರ್ಯದಿಂದ ಸ್ಥೈರ್ಯದಿಂದಲೂ ವರ್ತಿಸಿ, ಅವು ಜನರಿಗೆ ಸುರಕ್ಷಿತತೆಯ ಆಶ್ವಾಸನವನ್ನು ಕೊಡತಕ್ಕದ್ದೆಂದು ಮುಂಬಯಿ ಹಾಯಕೋರ್ಟಿನವರು ತಿಕ್ಕಿ ಹಾಕಿಕೊಟ್ಟಿದ್ದಾರೆ ನಾವು ದಾರ ಮುಂಬಯಿ ಹಾಯಕೋರ್ಟಿನ ನ್ಯಾಯಮೂರ್ತಿ ಶ್ರೀ|| ಮೋಹನಲಾಲ ದೇಸಾಯಿಯವರು ? ಧ್ವಾರಾತ್ರಿ ಒಂದು ಮನೆಯ ಕಬಜೆ ಮಾಡಿಕೊಳ್ಳದಂತೆ ಮುಂಬಯಿ ಸರಕಾರದ ವಿರುದ್ಧ ಒಂದು ಪ್ರತಿಬಂಧಕ ಆಜ್ಞೆ ಹೊರಡಿಸಿದ್ದಾರೆ ಅದೇ ರೀತಿ ನ್ಯಾಯಮೂರ್ತಿ ತೆಂಡೂಲಕರರು ನಾತಾಳದ ರಜೆಯಲ್ಲಿ ಕೂಡ ಒಂದು ಹುಕುಮನ್ನು ಹೊರಡಿಸಿ ಮುಂಬಯಿ ಸರಕಾರವು ಇನ್ನೊಂದು ಮನೆಯ ಕಬಜೆ ತಕ್ಕೊಳ್ಳದಂತೆ ತಡೆ ಹಾಕಿದ್ದಾರೆ ನಾಡಿನೊಳಗಿನ ನ್ಯಾಯಾಧೀಶರೆಲ್ಲರೂ ಈ ಉದಾಹರಣೆಗಳಿಂದ ತಕ್ಕ ಬೋಧ ಪಡೆದು ಮಂತ್ರಿಗಳ, ಎಸೆಂಬ್ಲಿ-ಕೌನ್ಸಿಲುಗಳ ಸಭಾಸದರ ಇದ್ದವ ಕಾಂಗ್ರೆಸ ಸಂಸ್ಥೆಗಳ ಅಧಿಕಾರಿಗಳಿಗೆ ನಡೆಯುವ ಜನರ ಬೆದರಿಕೆಗೆ ಬಿಕ್ಕದೆ ದಾಕ್ಷಿಣ್ಯಕ್ಕೆ ಒಳಗಾಗಿ ವರ್ತಿಸಲಿಕ್ಕಿಲ್ಲೆಂದು ಆಶಿಸಬಹುದಲ್ಲವೇ? ನ್ಯಾಯಾಧೀಶರು ನಿರ್ಭಯರಾಗಿ, ನಿಃಸ್ಪೃಹರಾಗಿ ಮನಸಾಕ್ಷಿಯಂತೆ ನ್ಯಾಯದಾನ ಮಾಡಿದರೆ ಮಾತ್ರ ಪ್ರಜಾ-ಸ್ವಾತಂತ್ರ್ಯವು ನಿಜವಾದ ಸ್ವಾತಂತ್ರ್ಯವಾಗಬಲ್ಲದು ಇಲ್ಲದಿದ್ದರೆ ಸ್ವಾತಂತ್ರ್ಯವು ಗುಲಾಮಗಿರಿಗೂ ಕಡೆಯಾಗುವದು

* * *

ಭಾಷಾನುಗುಣ ಪ್ರಾಂತ-ರಚನೆಯ ವಿಚಾರ ಮಾಡಲು ನೇಮಿಸಲ್ಪಟ್ಟ ದಾರ ಸಮಿತಿಯವರ ವರದಿ ಕಳೆದ ತಿಂಗಳ ತಾ ೧೩ನೇಗೆ ಪ್ರಕಟವಾಯಿತು. ಈಗಿನ ಕಾಲಮಾನದಲ್ಲಿ ಭಾಷೆಗಳ ತಳಹದಿಯ ಮೇಲೆ ಪ್ರಾಂತಗಳನ್ನು ರಚಿಸಹೋದರೆ ರಾಷ್ಟ್ರದ ಸುರಕ್ಷಿತತೆಗೆ ಬಾಧೆ ಬರುವದಾಗಿ ಸಮಿತಿಯ ಅಭಿ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು
ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ
ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು
ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು
ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ

ಕುಂದಾಪುರ
ತಾ ೨೨-೫-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ್